ಕರ್ನಾಟಕ ವಿಧಾನಸಭೆಯ ನಡೆವಳಿಕೆಗಳು
KARNATAKA LEGISLATIVE ASSEMBLY DEBATES

(B) 025205

ಅಧಿಕೃತ ವರದಿ
OFFICIAL REPORT

Part 'A'

ವಿಧಾನಸಭೆಯ ಮೂರನೆಯ ಅಧಿವೇಶನ
THIRD SESSION OF THE TENTH LEGISLATIVE ASSEMBLY

ಸಂಪುಟ - ೮ (ಕ್ರಮಾಂಕ ೧ ರಿಂದ ೩)

VOLUME VIII - (NOS. 1 TO 3)

(೭ನೇ ಸೆಪ್ಟೆಂಬರ್ ೧೯೯೫ ರಿಂದ ೮ನೇ ಸೆಪ್ಟೆಂಬರ್ ೧೯೯೫ ರ ವರೆಗೆ

ಮತ್ತು ೧೧ನೇ ಸೆಪ್ಟೆಂಬರ್ ೧೯೯೫ ರವರೆಗೆ)

(7th September 1995 to 8th September 1995

and 11th September 1995)

ಕರ್ನಾಟಕ ವಿಧಾನ ಮಂಡಲದ ಕಾರ್ಯಾಲಯ, ಬೆಂಗಳೂರು

Karnataka Legislature Secretariat, Bangalore

CONTENTS

TO THE

KARNATAKA LEGISLATIVE ASSEMBLY DEBATES

Volume - VIII (Nos. 1 to 5)

(೭ನೇ ಸೆಪ್ಟೆಂಬರ್ ೧೯೯೫ ರಿಂದ ೮ನೇ ಸೆಪ್ಟೆಂಬರ್ ೧೯೯೫ರವರೆಗೆ ಮತ್ತು ೧೧ನೇ ಸೆಪ್ಟೆಂಬರ್ ೧೯೯೫ ರಿಂದ ೧೩ನೇ ಸೆಪ್ಟೆಂಬರ್ ೧೯೯೫ರವರೆಗೆ)

ಗುರುವಾರ, ೭ನೇ ಸೆಪ್ಟೆಂಬರ್ ೧೯೯೫

1) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು 1-34

2) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು 34-86

3) ಸಭೆಯ ಮುಂದಿಡಲಾದ ಕಾಗದ ಪತ್ರಗಳು 86-87

4) ಅರ್ಜಿಯನ್ನೊಪ್ಪಿಸುವುದು 87-88

5) ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು 88

   1) ಮುಖ್ಯಮಂತ್ರಿಗಳ ಹಾಜರಾತಿ ಬಗ್ಗೆ 88-97

   2) ಪುತ್ತೂರು ತಾಲ್ಲೂಕಿನ ಗುಂತೂರು ಗ್ರಾಮದಲ್ಲಿ ಕುಮಾರಧಾರ ಜಲವಿದ್ಯುತ್ ಯೋಜನೆ 97-99

   3) ಕಬ್ಬಿನ ಬೆಲೆ ಬಗ್ಗೆ 100-101

   4) ಗಣಪತಿ ವಿಸರ್ಜನೆ ಮಾಡುತ್ತಿರುವ ಪದ್ಧತಿ 101-104

   5) ರಿಸರ್ವೇಷನ್ ಬಗ್ಗೆ ಕುರಿತು 104-112

6) ನಿಯಮ 60ರ ಅಡಿಯಲ್ಲಿ ಚರ್ಚೆ 113

   ಅ) ಚುನಾಯಿತ ಪ್ರತಿನಿಧಿಗಳಾಗಿ ನಮ್ಮ ಕರ್ತವ್ಯವನ್ನು ನಿರ್ವಹಿಸುವುದಕ್ಕೆ ಇರತಕ್ಕ ತೊಂದರೆ 113-124

7) ಗಮನ ಸೆಳೆಯುವ ಸೂಚನೆಗಳು 124

(1) ಕುಷ್ಟಗಿ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜಿನ ಬಗ್ಗೆ 124-125

(2) ಆಲಮಟ್ಟಿ ಜಲಾಶಯದಲ್ಲಿ ಮುಳುಗಡೆಯಾದ ಪ್ರದೇಶದ ಜನರಿಗೆ ಪುನರ್ವಸತಿ ಕಲ್ಪಿಸದಿರುವ ಹಾಗೂ ಪರಿಹಾರ ಧನವನ್ನು ನೀಡದಿರುವುದು 125-135

(3) ಬೆಂಗಳೂರು ನಗರದ ಶ್ಯಾಮಲಾರೆಡ್ಡಿ ದಂತ ಮಹಾವಿದ್ಯಾಲಯದಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿಂದ ವಿದ್ಯಾರ್ಥಿಗಳಿಗೆ ಉಂಟಾಗಿರುವ ತೊಂದರೆ ಬಗ್ಗೆ 135-145

8) ನಿಯಮ 351ರ ಮೇರೆಗೆ 145

ಅ) ರಾಜ್ಯದಲ್ಲಿ ವಿಧವಾ ವೇತನ ಕುರಿತು 145-146

ಆ) ವಾಹನ ಮುಂಗಡ ಹಣ ಬಿಡುಗಡೆಯಾಗದಿರುವುದು 146

ಇ) ತುಮಕೂರು ಜಿಲ್ಲಾ ಶಿರಾ ತಾಲ್ಲೂಕಿನಲ್ಲಿ ವಿದ್ಯುತ್ ಅಭಾವ 146-147

ಈ) ತುಳು ಸಾಹಿತ್ಯ ಹಾಗೂ ಕೊಂಕಣಿ ಸಾಹಿತ್ಯ ಕುರಿತು 147

ಉ) ಕರ್ನಾಟಕ ಸರ್ಕಾರಿ ಸಾಬೂನು ಕಾರ್ಖಾನೆಯ ಪುನರುಜ್ಜೀವನ ಕುರಿತು 147-148

9) ಶಾಸನ ರಚನಾ ಕಾರ್ಯಕಲಾಪಗಳು 149

(ಎ) ವಿಧೇಯಕಗಳ ಮಂಡನೆ 149

ಅ) ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ) (ಎರಡನೇ ತಿದ್ದುಪಡಿ) ವಿಧೇಯಕ 1995. 149

ಆ) ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) (ಎರಡನೇ ತಿದ್ದುಪಡಿ) ವಿಧೇಯಕ 1995 149-150

ಇ) ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ವಿಧೇಯಕ 1995 150

(ಬಿ) ಪರ್ಯಾಲೋಚನಾ ಪ್ರಸ್ತಾಪ 150

ಅ) ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದ್ದುಪಡಿ) ವಿಧೇಯಕ 1995 150-184

10) ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವ ವಿಷಯ 184

ಅ) ಕಂದಾಯ ಸಚಿವರಿಂದ ಉತ್ತರ 184-210

11) ಅನುಬಂಧಗಳು I, II, III 210-223

ಶುಕ್ರವಾರ, ೮ನೇ ಸೆಪ್ಟೆಂಬರ್ ೧೯೯೫

1) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು 225-261

2) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು 261-291

3) ಜಂಟಿ ಸಲಹಾ ಸಮಿತಿ ರಚನೆ (ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವುದು) 291-292

4) ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು : 293

ಅ) ಜೂನ್ ತಿಂಗಳಲ್ಲಿ ಬೆಂಕಿ ಆಕಸ್ಮಿಕದಿಂದ 11-12 ಗುಡಿಸಲುಗಳು ಬಳ್ಳಾರಿಯಲ್ಲಿ ಸುಟ್ಟು ಹೋಗಿರುವುದು 293

ಆ) ಪಿ.ಯು.ಸಿ. ಪರೀಕ್ಷೆಯಲ್ಲಿ ನಕಲಿ ಅಂಕಪಟ್ಟಿ 293-294

ಇ) ಬೆಂಗಳೂರು ಬಂದ್‌ಗೆ ಕರೆ 294-295

ಈ) ಮೈಸೂರು ಜಿಲ್ಲೆಯ [illegible]ನ ಶಾಸಕರುಗಳಿಗೆ ಆಗಸ್ಟ್ 15ರಂದು ಮಲತಾಯಿಧೋರಣೆ ತೋರಿಸಿರುವ ಬಗ್ಗೆ 295-296

ಉ) ಮಾಜಿ ಮುಖ್ಯಮಂತ್ರಿ ಸಾಗರವಳ್ಳಿ ರೇವಣ್ಣನವರನ್ನು ಜೈಲಿನಿಂದ ಬಿಡುಗಡೆ ಮಾಡುವ ಬಗ್ಗೆ 296-297

ಊ) ದಿನಾಂಕ 10-8-95ರಂದು ಪೂಣಜೂರಿನಲ್ಲಿ ದಂತ ಚೋರ ವೀರಪ್ಪನ್‌ನಿಂದ 11 ಜನರ ಕೊಲೆ 297-309

5) ಗಮನ ಸೆಳೆಯುವ ಸೂಚನೆಗಳು : 310

ಅ) ಕೊಪ್ಪಳ ತಾಲ್ಲೂಕಿನಲ್ಲಿ ಪ್ರಾರಂಭಿಸಲಾಗಿರುವ ಏತ ನೀರಾವರಿ ಯೋಜನೆ 310

ಆ) ಗ್ರಾಮೀಣ ಪ್ರದೇಶದಲ್ಲಿ ಸಾರಾಯಿ ಅಂಗಡಿ ತೆರೆಯಲು ಗ್ರಾಮ ಪಂಚಾಯಿತಿಯಿಂದ ಲೈಸನ್ಸ್ ತೆಗೆದುಕೊಳ್ಳುವುದು 310-315

6) ನಿಯಮ 351ರ ಮೇರೆಗೆ ಚರ್ಚೆ 315

ಅ) ಬೆಂಗಳೂರು ನಗರ ಕಾರ್ಪೊರೇಷನ್ ಮಿತಿಯಲ್ಲಿ ಬರುವ ಮಡಿವಾಳ ಮುಖ್ಯ ರಸ್ತೆ ದುರಸ್ತಿ 315-316

ಆ) ಬಂಟ್ವಾಳಕ್ಕೆ ಸಂಚಾರಿ ಪೋಲೀಸ್ ಠಾಣೆ 316

ಇ) ಸಾತನೂರು ವ್ಯಾಪ್ತಿಯಲ್ಲಿ ಹೂಕುಂದ ಗ್ರಾಮದ ಪಂಚಾಯಿತಿ ಅಧ್ಯಕ್ಷರ ಸ್ಥಾನ ಇರುವ ಬಗ್ಗೆ 317-318

ಈ) ದಕ್ಷಿಣ ಕನ್ನಡ ಜಿಲ್ಲಾ ಗ್ರಾಹಕರ ದೂರು ಪರಿಹಾರ ವೇದಿಕೆ 318

ಉ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರಸಣ್ಣ ಜಾತಿಯ ಬಗ್ಗೆ 318-319

ಊ) ಧಾರವಾಡ ಜಿಲ್ಲಾ ಹಿರೇಕೆರೂರು ತಾಲ್ಲೂಕು ಕಡೂರು ಗ್ರಾಮದಲ್ಲಿ ಕುಡಿಯುವ ನೀರಿನ ತೀವ್ರ ಸಮಸ್ಯೆ 319

ಋ) ಬಿಜಾಪುರ ನಗರದಲ್ಲಿರುವ ನೀರಿನ ಅಭಾವ 320

ೠ) ಹುಬ್ಬಳ್ಳಿ-ಧಾರವಾಡ ಮಹಾ ನಗರದಲ್ಲಿ ಸತತ ಮಳೆಯಿಂದ ರಸ್ತೆಗಳ ದುರಸ್ತಿ 321

ಎ) ದಕ್ಷಿಣ ಕನ್ನಡ ಪ್ರದೇಶಕ್ಕೆ ಸಾರಿಗೆ ವ್ಯವಸ್ಥೆ 321-322

7) ಶಾಸನ ರಚನಾ ಕಾರ್ಯಕಲಾಪಗಳು 322

(1) ಪರ್ಯಾಲೋಚನಾ ಪ್ರಸ್ತಾವ 322

ಅ) ಕರ್ನಾಟಕ ನೀರಾವರಿ ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ (ಎರಡನೇ ತಿದ್ದುಪಡಿ) ವಿಧೇಯಕ 1995 322-325

ಆ) ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) (ಎರಡನೇ ತಿದ್ದುಪಡಿ) ವಿಧೇಯಕ 1995 325-339

8) ವಾಸುದೇವನ್ ಪ್ರಕರಣ 339-354

9) ವಿತ್ತೀಯ ಕಾರ್ಯಕಲಾಪಗಳು 354

1995-96ನೇ ಸಾಲಿನ ಬೇಡಿಕೆಗಳ ಮೇಲೆ ಚರ್ಚೆ (ಮುಂದುವರದಿದ್ದು) 354-377

ಸೋಮವಾರ, ೧೧ನೇ ಸೆಪ್ಟೆಂಬರ್ ೧೯೯೫

1) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು 379-417

2) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು 417-467

3) ಪ್ರಕಟಣೆ 467-469

4) ಗೈರು ಹಾಜರಿಗೆ ಅನುಮತಿ 470

5) ವರದಿಗಳನ್ನೊಪ್ಪಿಸುವುದು 470

6) ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು 470

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಥಾಪನೆಗೊಂಡಿರ ತಕ್ಕಂತಹ ಎಂ.ಆರ್.ಪಿ.ಎಲ್. ಹಾಗೂ ಇನ್ನು ಸ್ಥಾಪನೆಗೊಳ್ಳಲಿರುವ ಕೊಜೆಂಟ್ರಿಕ್ಸ ಸಹಿತ ಇತರ ಬೃಹತ್ ಕೈಗಾರಿಕೆಗಳಿಗೆ ಸಂಬಂಧಪಟ್ಟ ಹಾಗೆ 470

ಆ) ರಾಜ್ಯದ ಗ್ರಾನೈಟ್ ಅವ್ಯವಹಾರದ ಬಗ್ಗೆ ಜಂಟಿ ಸದನ ಸಮಿತಿಯ ರಚನೆ 471-474

ಇ) ಶಿವಮೊಗ್ಗದಲ್ಲಿ ಮತ್ತು ಕುಣಿಗಲ್‌ನಲ್ಲಿ ನಡೆದಂತಹ ಘಟನೆ ಮತ್ತು ಬೆಳಗಾಂನಲ್ಲಿ ಗಣಪತಿ ಉತ್ಸವದಲ್ಲಿ ಆದ ಗಲಾಟೆ ಬಗ್ಗೆ 475-488

ಈ) ಶಿಕ್ಷಕರ ನೇಮಕಾತಿ ಬಗ್ಗೆ 488-490

7) ನಿಯಮ 351ರ ಮೇರೆಗೆ : 490

ಅ) ಬಾದಾಮಿ ಮತ್ತು ಗುಳ್ಳೇದಗುಡ್ಡ ಸಮುದಾಯ ಆರೋಗ್ಯ ಕೇಂದ್ರದ ಬಗ್ಗೆ 490-491

ಆ) ವರ್ಗಾವಣೆಯಿಂದ ಖಾಲಿ ಆಗಿರುವ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಹುದ್ದೆ	.....	491
ಇ) ಶಿವಮೊಗ್ಗ ವಿದ್ಯುತ್ ಇಲಾಖೆಯ ಎಂ.ಆರ್.ಎ.ನಿಂದ ತೀರ್ಥಹಳ್ಳಿ ತಾಲ್ಲೂಕಿನ ಮಂಡಗದ್ದೆವರೆಗೆ ವಿದ್ಯುತ್ ಸೌಲಭ್ಯ	.....	491-492
ಈ) ದಕ್ಷಿಣ ಕನ್ನಡ ಜಿಲ್ಲೆಯ ಲ್ಯಾಂಪ್ಸ್ ಸೊಸೈಟಿಗಳಲ್ಲಿ ನಷ್ಟ	.....	492-493
ಉ) ರಾಜ್ಯ ಸರ್ಕಾರದವರು ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸುವುದರ ಬಗ್ಗೆ	.....	493-494
ಊ) ಧಾರವಾಡ ಜಿಲ್ಲೆಯ ಗದಗ್ ತಾಲ್ಲೂಕಿನ ಹೊಂಬಳದಲ್ಲಿ ಬಸ್‌ನಿಲ್ದಾಣ ನಿರ್ಮಾಣ	.....	494-495
ಋ) ಬಂಟ್ವಾಳ ಮತ್ತು ಪುತ್ತೂರು ತಾಲ್ಲೂಕಿನ ಭೂಮಿಯನ್ನು ಮೀಸಲು ಅರಣ್ಯವೆಂದು ಘೋಷಿಸಲು ನಿರ್ಧಾರ	.....	495-496
ೠ) ಅಬಲೂರು-ಹಿರೇಕೆರೂರು ಕೂಡುವ ರಸ್ತೆ ದುರಸ್ತಿ	.....	496-497
ಎ) ಗುಬ್ಬಿ ತಾಲ್ಲೂಕು ಹೊಸಕೆರೆಗೆ ಬಾಲಕಿಯರ ಪ್ರೌಢಶಾಲೆಯ ಮಂಜೂರು	.....	497
8) ಗಮನ ಸಳೆಯುವ ಸೂಚನೆ	.....	497
ಅ) ಹುಬ್ಬಳ್ಳಿ-ಧಾರವಾಡ ನಗರದಲ್ಲಿ ಕುಡಿಯುವ ನೀರಿನ ತೊಂದರೆ	.....	497-500
9) ಶಾಸನ ರಚನಾ ಕಾರ್ಯಕಲಾಪಗಳು.	.....	500
ಅ) ಕರ್ನಾಟಕ ಪುರಸಭೆಗಳ (ತಿದ್ದುಪಡಿ) ವಿಧೇಯಕ 1995	.....	500-552
10) ಪ್ರಕಟಣೆ	.....	552
11) ವಿತ್ತೀಯ ಕಾರ್ಯಕಲಾಪಗಳು.	.....	552
1995-96ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ (ಶಿಕ್ಷಣ, ಯುವಜನಸೇವೆ, ಕಾರ್ಮಿಕ, ವಿದ್ಯುತ್ ಯೋಜನೆ, ಕೃಷಿ, ಪಶು ಸಂಗೋಪನೆ ಇಲಾಖಾ ಬೇಡಿಕೆ)	.....	552-626

ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಗುರುವಾರ 7ನೇ ಸೆಪ್ಟೆಂಬರ್ 1995ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10.10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : ಶ್ರೀ ರಮೇಶ್ ಕುಮಾರ್ ಅವರು ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಸಹಾಯಕ ಕಾರ್ಮಿಕ ಆಯುಕ್ತರ ಕಛೇರಿಯಿಂದ ಕಾಂಟ್ರ್ಯಾಕ್ಟ್ ಲೈಸೆನ್ಸ್ ಕೋರಿದ ಅರ್ಜಿಗಳು

2044- ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *1994-95ನೇ ಸಾಲಿನಲ್ಲಿ ಮೈಸೂರು ವಿಭಾಗದ ಸಹಾಯಕ ಕಾರ್ಮಿಕ ಆಯುಕ್ತರಲ್ಲಿ ಕಾಂಟ್ರಾಕ್ಟ್ ಲೈಸೆನ್ಸ್ ಕೋರಿದ ಅರ್ಜಿದಾರರ ಸಂಖ್ಯೆ ಎಷ್ಟು?*

ಆ) *ಇವುಗಳ ಪೈಕಿ ಬಾಕಿ ಇಟ್ಟಿರುವ ಸಂಖ್ಯೆ ಎಷ್ಟು? (ಪಟ್ಟಿ ನೀಡುವುದು)*

ಇ) *ಈ ಅರ್ಜಿದಾರರಿಗೆ ಕಾಂಟ್ರಾಕ್ಟ್ ಲೈಸೆನ್ಸ್ ನೀಡಲು ಬೇಕಾಗುವ ಅವಧಿ ಎಷ್ಟು?*

ಶ್ರೀ ಸಿ. ಗುರುನಾಥ್ (ಕಾರ್ಮಿಕ ಸಚಿವರು) :

ಅ) 181

ಆ)1) ನೋಂದಾವಣೆಗಾಗಿ ಮೂಲ ಮಾಲೀಕರಿಂದ ಬಂದ ಅರ್ಜಿಗಳಾವುವು ಬಾಕಿ ಇರುವುದಿಲ್ಲ.

2) ಹೊಸದಾಗಿ ಲೈಸೆನ್ಸ್‌ಗಾಗಿ ಗುತ್ತಿಗೆದಾರರಿಂದ ಬಂದ ಅರ್ಜಿಗಳ ಪೈಕಿ ಬಾಕಿ ಇರುವ ಅರ್ಜಿಗಳು ಈ ಕೆಳಕಂಡಂತೆ ಇವೆ.

1) ಶ್ರೀ ಎಂ. ವೆಂಕಟೇಶ್, ಶಿವಮೊಗ್ಗ ಸ್ಟೀಲ್ಸ್ ಕೆಆರ್‌ಎಸ್ ರಸ್ತೆ, ಮೈಸೂರು.
2) ಶ್ರೀ ಬೋರಯ್ಯ, ಮೈಶುಗರ್ ಕಂಪೆನಿ ಮಂಡ್ಯ
3) ಶ್ರೀ ಎಸ್. ಕೆಂಪರಾಜು ಬಿನ್ ನಂಜಪ್ಪ, ಶಿವಮೊಗ್ಗ ಸ್ಟೀಲ್ಸ್ ಮೈಸೂರು.
4) ಸುಭಾಷ್, ಸನ್ ಆಫ್ ಕುಳ್ಳೇಗೌಡ, ಶಿವಮೊಗ್ಗ ಸ್ಟೀಲ್ಸ್, ಮೈಸೂರು
5) ಸಿಬ್ಬಾಚಾರಿ, ಶಿವಮೊಗ್ಗ ಸ್ಟೀಲ್ಸ್ ಮೈಸೂರು
6) ರವಿಶಂಕರ್ ಪ್ರಿಸಿಷನ್ ಅಂಡ್ ಪ್ಯಾನೆಲ್ ವರ್ಕ್ಸ್ ನಂಜನಗೂಡು
7) ಶ್ರೀ ಕಾಳೇಗೌಡ, ಶಿವಮೊಗ್ಗ ಸ್ಟೀಲ್ಸ್ ಮೈಸೂರು
8) ಶ್ರೀ ಬಿ.ಎಂ. ಮಾಲೇಗೌಡ, ದನ್‌ಫೋರ್ಡ್ ಫ್ಯಾಬ್ರಿಕ್ಸ್, ತಾಂಡವಪುರ, ನಂಜನಗೂಡು

3) ಲೈಸೆನ್ಸ್ ನವೀಕರಣಕ್ಕಾಗಿ ಬಾಕಿ ಇರುವ ಅರ್ಜಿಗಳು

1) ಎಸ್‌ವಿ ಇಂಜಿನಿಯರ್ಸ್, ವಿಕ್ರಾಂತ್ ಟೈರ್ಸ್ ಮೈಸೂರು

2) ನಟೇಶಮೂರ್ತಿ, ಬಿಇಎಂಎಲ್, ಮೈಸೂರು

3) ದೊರೆಸ್ವಾಮಿ, ಶಿವಮೊಗ್ಗ ಸ್ಟೀಲ್, ಮೈಸೂರು

ಇ) ಅವಶ್ಯಕವಾದ ಎಲ್ಲಾ ಮಾಹಿತಿಯನ್ನು ಅರ್ಜಿದಾರರು ಒದಗಿಸಿದರೆ, ಒಂದು ವಾರ ಅವಧಿ ಬೇಕಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ : ಸಭಾಧ್ಯಕ್ಷರೇ, ನನ್ನ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ನಾನು ಅದರಲ್ಲಿ ಸ್ಪಷ್ಟೀಕರಣ ಮಾತ್ರ ಕೇಳುವುದಕ್ಕೆ ಇಚ್ಛೆ ಪಡುತ್ತೇನೆ. 181 ಅಪ್ಲಿಕೇಷನ್ಸ್ 1994-95ರಲ್ಲಿ ಬಂದಿರತಕ್ಕಂಥದ್ದು. ಅದು ನಿಮ್ಮಲ್ಲಿ ಪೆಂಡಿಂಗ್ಸ್ ಯಾವುದೂ ಇಲ್ಲ, ಎಲ್ಲವನ್ನೂ ಕೊಟ್ಟಿದ್ದೇವೆ ಎಂಬ ಮಾತನ್ನು ಹೇಳಿದ್ದೀರಿ. ಸಂತೋಷ ಕೊಟ್ಟಿದ್ದರೆ. ಈಗ ತಾವು ಲೈಸನ್ಸ್ ಕೊಡಬೇಕಾದರೆ ಕೊಡತಕ್ಕಂತಹ ಕಾಂಪಿಟೆಂಟ್ ಆದಂತಹ ಆಫೀಸರ್ಸ್ ಯಾರು ಮತ್ತು ಯಾವ ಮಾದರಿಯಲ್ಲಿ ಯಾವ ವಿಧಿ ವಿಧಾನಗಳನ್ನು ಅನುಸರಿಸಿ ನೀವು ಲೈಸೆನ್ಸ್‌ಗಳನ್ನು ಕೊಡುತ್ತೀರಿ ಎನ್ನತಕ್ಕಂಥದನ್ನು ದಯವಿಟ್ಟು ಹೇಳುತ್ತೀರೋ ?

ಶ್ರೀ ಸಿ. ಗುರುನಾಥ್ : ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ಕೇಳತಕ್ಕಂತಹ ಪ್ರಶ್ನೆ ಏನು ಇದೆ, ನಮ್ಮ ಇಲಾಖೆಗೆ ಸಂಬಂಧಪಟ್ಟಂತಹ ಅಸಿಸ್ಟೆಂಟ್ ಲೇಬರ್ ಕಮಿಷನರ್ ಇದಕ್ಕೆ ಕಾಂಪಿಟೆಂಟ್ ಆಥಾರಿಟಿ ಆಗಿರುತ್ತಾರೆ. ಗುತ್ತಿಗೆ ಕಾಯಿದೆ ಏನಿದೆ 1970ರ ಕಾಯಿದೆ ಅಡಿಯಲ್ಲಿ ಅವರೆಲ್ಲಾ ಗುತ್ತಿಗೆದಾರರಿಗೆ ಲೈಸನ್ಸ್ ಕೊಡುತ್ತಾರೆ. ಲೈಸನ್ಸ್ ಕೊಟ್ಟ ನಂತರ, ಲೈಸನ್ಸ್ ಕೊಡುವಾಗ ಫಾರಂ ನಂ. 4 ಮತ್ತು ಆ ಕಾರ್ಖಾನೆಯ ಸಂಬಂಧಪಟ್ಟಂತಹ ಮಾಲೀಕರ ಪರವಾಗಿ ಯಾರು ಲೈಸನ್ಸ್ ಕೇಳುವುದಕ್ಕೆ ಇಚ್ಛೆ ಪಡುತ್ತಾರೆ, ಅವರು ಫಾರಂ ನಂ. 4ರಲ್ಲಿ ನಮ್ಮ ಇಲಾಖೆಯ ಕಮಿಷನರ್‌ರವರಿಗೆ ಅರ್ಜಿ ಕೊಡಬೇಕು.

ಆಮೇಲೆ ಅರ್ಜಿ ಕೊಟ್ಟನಂತರ ನಮ್ಮ ಇಲಾಖೆಯ ಕಾರ್ಮಿಕ ಆಯುಕ್ತರು ಫಿಸಿಕಲ್ ಆಗಿ ಆ ಕಾರ್ಖಾನೆಗೆ ಭೇಟಿ ಕೊಟ್ಟು ಅಲ್ಲಿರತಕ್ಕಂಥ ಕಾರ್ಖಾನೆಯ ನಿಯಾಮಾವಳಿ ? ಏನಿದೆ, ಕೆಲಸಗಾರರಿಗೆ ಕೊಡತಕ್ಕಂಥ ಸೌಲಭ್ಯ, ಸುರಕ್ಷತೆ ನೀಡುವುದು, ಅವರಿಗೆ ಇಷ್ಟು ಗಂಟೆಗಳ ಕಾಲ ಕೆಲಸ ಕೊಡುವುದು ಹಾಗೂ ಓವರ್ ಟೈಂ ಇವುಗಳನ್ನು ಅನುಸರಿಸಿದ್ದಾರೆಯೇ ಇಲ್ಲವೇ ಎಂಬುದನ್ನು ನೋಡಿ ಕಾಯಿದೆ ಪ್ರಕಾರ ಅವರಿಗೆ ಲೈಸೆನ್ಸ್ ಕೊಡುತ್ತಾರೆ ಎಂದು ಹೇಳಲು ಇಚ್ಛೆಪಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನಾನು ಮುಖ್ಯವಾಗಿ ಪ್ರಶ್ನೆ ಹಾಕಿದ ಉದ್ದೇಶವೇನೆಂದರೆ ತಾವು ಉತ್ತರದಲ್ಲಿ ಒಂದು ವಾರದಲ್ಲಿ ಈ ಲೈಸೆನ್ಸ್ ವಿಚಾರದಲ್ಲಿ ಇತ್ಯರ್ಥ ಮಾಡುತ್ತೇವೆ ಎಂದು ಹೇಳಿದ್ದೀರಿ. ಆದರೆ ವಾಸ್ತವಿಕವಾಗಿ ನಡೆಯುತ್ತಿರತಕ್ಕಂಥಾದ್ದು ಏನೆಂದರೆ ಲೈಸೆನ್ಸ್‌ಗಾಗಿ ತಮ್ಮ ಆಫೀಸಿಗೆ ಬಂದರೆ ಸಾವಿರಾರು, ಲಕ್ಷಾಂತರ ರೂಪಾಯಿಗಳು ಖರ್ಚಾಗತಕ್ಕಂಥ ಪರಿಸ್ಥಿತಿ ಇದೆ. ನಿಮ್ಮ ಕಂಡೀಷನ್ಸ್ ಅನ್ನು ಏನು ಫುಲ್‌ಫಿಲ್ ಮಾಡಬೇಕು ಎಂದು ಹಾಕಿದ್ದೀರಿ ಅದನ್ನು ಯಾರೂ ಕೂಡ ಫುಲ್‌ಫಿಲ್ ಮಾಡುವುದಕ್ಕೆ ಆಗುವುದಿಲ್ಲ. ಅಂತಹ ಕಂಡೀಷನ್ಸ್ ಇರುವುದರಿಂದ ಅದು ಏನಾಗುತ್ತದೆ ಎಂದರೆ ಅಲ್ಲಿ ಭ್ರಷ್ಟಾಚಾರ ಆಗಲೇಬೇಕಾಗುತ್ತದೆ. ಆ ಪರಿಸ್ಥಿತಿ ಇರುವುದರಿಂದ ನಿಮ್ಮ ಕಂಡಿಷನ್ಸ್‌ನಲ್ಲಿ ಇರತಕ್ಕಂಥಾದ್ದನ್ನು ಏನಾದರೂ ನೀವು ಸಡಿಲ ಮಾಡುವುದಕ್ಕೆ ಸಾಧ್ಯವಿದೆಯೇ ? ಅಲ್ಲಿ ವ್ಯಾಪಕವಾಗಿ ನಡೆಯುತ್ತಿರತಕ್ಕಂಥ ಭ್ರಷ್ಟಾಚಾರವನ್ನು ತಗ್ಗಿಸುವುದಕ್ಕೆ ಏನಾದರೂ ಕೂಡ ಚಿಂತನೆ ಮಾಡುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಸಿ. ಗುರುನಾಥ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆಗೆ ಹೇಳುವುದಾದರೆ ಇದರಲ್ಲಿ ಲೈಸೆನ್ಸ್ ಪಡೆಯದೆ ಕೆಲವರಿಗೆ ತೊಂದರೆಯಾಗಿರಬಹುದು. ಇದರಲ್ಲಿ ಹಲವಾರು ಕಾರಣಗಳಿರಬಹುದು. ಷೆಡ್ಯೂಲ್ ನಾಲ್ಕರಲ್ಲಿ ಕೇಳಿರತಕ್ಕಂಥ ವಿಚಾರಕ್ಕೆ ಹಾಗೂ ಲೈಸೆನ್ಸ್ ಪಡೆಯಬೇಕಾದರೆ ಅವರಿಗೆ ಕೆಲವೊಂದು ನಿಯಮಾವಳಿಗಳನ್ನು ಅನುಸರಿಸಬೇಕಾಗುತ್ತದೆ. ಅಲ್ಲಿರತಕ್ಕ ಕಂಡೀಷನ್ಸ್ ಏನಿದೆ ಅದನ್ನು ಫುಲ್‌ಫಿಲ್ ಮಾಡಿದರೆ ಲೈಸೆನ್ಸ್‌ನ್ನು ಬೇಗನೆ ಕೊಡುತ್ತಾರೆ. ಅದರಲ್ಲಿ ಯಾವುದೇ ಅವ್ಯವಹಾರ ಆಗುವುದಿಲ್ಲ ಎಂದು ಹೇಳುವುದಕ್ಕೆ ನಾನು ಇಚ್ಛಿಪಡುತ್ತೇನೆ.

ಅಧ್ಯಕ್ಷರು : ಮಾನ್ಯ ಸದಸ್ಯರು ಏನು ಹೇಳುತ್ತಾರೆಂದರೆ ನಿಮ್ಮ ಪ್ರೊಸೀಜರ್ ಏನಿದೆ ಅದು ಬಹಳ ಕಾಂಪ್ಲೀಕೇಟೆಡ್ ಆಗಿರುವುದರಿಂದ ಅದರ ನೆಪ ಮಾಡಿಕೊಂಡು ಬಹಳ ಡಿಲೇ ಮಾಡಿ ಹೆರ್ಯಾಸ್ ಮಾಡುತ್ತಾರೆ ಎಂದು. You examine whether you can further relax those conditions and make the process easier. His intentions are clear.

ಶ್ರೀ ಸಿ. ಗುರುನಾಥ್ : ಆಯಿತು, ಮಾಡುತ್ತೇನೆ.

ಕುಂದಾಪುರ ಭೂ ನ್ಯಾಯ ಮಂಡಳಿಯ ಅಧಿಕಾರಾವಧಿ

2459 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ಭೂ ನ್ಯಾಯ ಮಂಡಳಿಯು ಅಧಿಕಾರಾವಧಿ ಮುಕ್ತಾಯಗೊಂಡ ದಿನಾಂಕ ಯಾವುದು;

ಆ) ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರದಲ್ಲಿ ಭೂ ನ್ಯಾಯ ಮಂಡಳಿಯ ಅಧಿಕಾರಾವಧಿ ಮುಕ್ತಾಯಗೊಂಡ ಮೇಲೆ ಯಾವುದಾದರೂ ತೀರ್ಪನ್ನು ನೀಡಲಾಗಿದೆಯೇ?

ಇ) ಅರ್ಜಿ ನೀಡದೆ ಇದ್ದವರಿಗೆ ಪರವಾಗಿ ಭೂ ನ್ಯಾಯ ಮಂಡಳಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಸರ್ಕಾರದ ಗಮನಕ್ಕೆ ಬಂದಿದ್ದಲ್ಲಿ ತಪ್ಪಿತಸ್ಥ ಅಧಿಕಾರಿಯ ಮೇಲೆ ತೆಗೆದುಕೊಳ್ಳಲಾಗುವ ಕ್ರಮಗಳೇನು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಸರ್ಕಾರ ದಿನಾಂಕ 11-10-94ರಂದು ನಿರ್ದೇಶನ ಹೊರಡಿಸಿ, ಯಾವುದೇ ಭೂ ನ್ಯಾಯ ಮಂಡಳಿಗಳು ಕಾರ್ಯವನ್ನು ನಿರ್ವಹಿಸಬಾರದೆಂದು ತಿಳಿಸಿದೆ.

ಆ) ಇಲ್ಲ

ಇ) ಇಲ್ಲ

ಈ) ಉದ್ಭವಿಸುವುದಿಲ್ಲ

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೆ, ನಾನು ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ಭೂ ನ್ಯಾಯ ಮಂಡಲಿಯ ಅಧಿಕಾರಾವಧಿ ಮುಕ್ತಾಯಗೊಂಡ ದಿನಾಂಕವನ್ನು ನಾನು ಕೇಳಿದ್ದೆ. ಅದಕ್ಕೆ ಗೌರವಾನ್ವಿತ ಕಂದಾಯ ಸಚಿವರು ಉತ್ತರವಾಗಿ ದಿ: 11.10.94ರಂದು ಸರ್ಕಾರ ನಿರ್ದೇಶನವನ್ನು ಹೊರಡಿಸಿ ಯಾವುದೇ ಭೂ ನ್ಯಾಯ ಮಂಡಲಿಗಳು ಕಾರ್ಯವನ್ನು ನಿರ್ವಹಿಸಬಾರದೆಂದು ತಿಳಿಸಿದ್ದಾರೆ. ಅದರ ಜೊತೆಗೆ ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರದಲ್ಲಿ ಭೂ ನ್ಯಾಯ ಮಂಡಳಿ ಅಧಿಕಾರಾವಧಿ ಅವಧಿ ಮುಕ್ತಾಯಗೊಂಡ ಮೇಲೆ ಎಂದರೆ ತಾರೀಖು 24.10.94ರಂದು

ಟಿಆರ್ಐ ಸಂಖ್ಯೆ: 10341ರ ಬಗ್ಗೆ ಯಾವುದೇ ಆದೇಶ ನೀಡಿರುವುದಿಲ್ಲ ಎಂದು ಕುಂದಾಪುರದ ಉಪವಿಭಾಗಾಧಿಕಾರಿಗಳು ಹಿಂಬರಹ ಕೊಟ್ಟಿದ್ದಾರೆ. ಇದನ್ನು ಗಮನದಲ್ಲಿಟ್ಟುಕೊಂಡು ಸಂಬಂಧಪಟ್ಟ ನರಸಿಂಹನ್ ಎಂಬ ವ್ಯಕ್ತಿ 20.7.95ರಂದು, ಟಿಆರ್ಐ : 10341ರ ಬಗ್ಗೆ ದಾಖಲೆ ಪಡೆಯುವುದಕ್ಕೆ ಹೋದಾಗ 19.8.94ರಂದು ಆದೇಶ ನೀಡಿದ ಬಗ್ಗೆ ಪ್ರತಿ ನೀಡಿದ್ದಾರೆ. ಈ ಬಗ್ಗೆ ಸರ್ಕಾರದ ಗಮನವನ್ನು ಶ್ರೀ ನರಸಿಂಹನ್ ಸೆಳೆದಿದ್ದಾರೆ. ಆ ಅರ್ಜಿಯನ್ನು ಮಾನ್ಯ ಕಂದಾಯ ಸಚಿವರು ತನಿಖೆ ಮಾಡಿದ್ದಾರೆಯೇ?

ಅಧ್ಯಕ್ಷರು : ಮಾನ್ಯ ಸಭಾಪತಿಯವರೇ, ನಿಮ್ಮ ಪ್ರಶ್ನೆಗೆ ಇವರು ಸರಿಯಾದ ಉತ್ತರ ಕೊಟ್ಟಿದ್ದಾರೆ. 11.10.94ರಂದು ಆದೇಶ ಹೊರಡಿಸಿ ಎಲ್ಲಾ ಕಾರ್ಯ ಸ್ಥಗಿತ ಮಾಡಬೇಕು ಎಂದು ಹೇಳಿದ್ದಾರೆ. 11.10.94ರ ನಂತರ ಯಾವುದಾದರೂ ತೀರ್ಪನ್ನು ಭೂನ್ಯಾಯ ಮಂಡಳಿಗೆ ಕೊಟ್ಟಿದ್ದರೆ, ಅದರ ಬಗ್ಗೆ ಮಾಹಿತಿ ನಿಮ್ಮ ಹತ್ತಿರ ಇದ್ದರೆ ಅದನ್ನು ಸಚಿವರ ಗಮನಕ್ಕೆ ತಂದರೆ ಅವರು ತಕ್ಷಣ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೆ, 11.8.95ರಂದು ಸರ್ಕಾರದ ಗಮನವನ್ನು ಸಂಬಂಧಪಟ್ಟ ವ್ಯಕ್ತಿಗಳು ತನಿಖೆಗೆ ಮಾಡಬೇಕು ಎಂದು ಹೇಳಿದ್ದಾರೆ.

ಅಧ್ಯಕ್ಷರು : ಯಾವ ವಿಚಾರದಲ್ಲಿ, ಹಾಗೂ ಏನೆಂದು ಕೇಳಿದ್ದಾರೆ.

ಶ್ರೀ ಯು.ಆರ್. ಸಭಾಪತಿ : ಇದೇ ವಿಚಾರದಲ್ಲಿ ಮಾಡಿದ್ದಾರೆ. ಏಕೆಂದರೆ 24.10.94ರಂದು ಸಂಬಂಧಪಟ್ಟ ಕಡತದ ಮೇಲೆ ಯಾವುದೇ ಆದೇಶ ನೀಡಿಲ್ಲ ಎಂದು ಹೇಳಿ ಉಪ ವಿಭಾಗಾಧಿಕಾರಿಗಳು ಹಿಂಬರಹ ಕೊಟ್ಟ ಮೇಲೆ ಈಗ ಆದೇಶ ಕೊಡುವಂಥದ್ದು ಹೇಗೆ ಬಂತು?

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ನನಗೆ ಅವರ ಪ್ರಶ್ನೆಯೇ ಅರ್ಥವಾಗಲಿಲ್ಲ.

ಅಧ್ಯಕ್ಷರು : ಈಗ ಸಮಸ್ಯೆ ಏನು ಹೇಳಿ?

ಶ್ರೀ ಆರ್.ಎಲ್. ಜಾಲಪ್ಪ : ಈಗ ಯಾರ್‍ಯಾರು ಇಂಡಿವಿಜ್ಯುಯಲ್ ಕೇಸ್‌ನಲ್ಲಿ ವ್ಯತ್ಯಾಸವಾಗಿದ್ದರೆ, ಅವರು ನನ್ನ ಗಮನಕ್ಕೆ ತಂದರೆ ನಾನು ಕ್ರಮ ತೆಗೆದು ಕೊಳ್ಳುತ್ತೇನೆ.

ಅಧ್ಯಕ್ಷರು : ಅಂತಹ ಕೇಸಸ್ ಇದ್ದರೆ ತೆಗೆದುಕೊಂಡು ಬನ್ನಿ; ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ. ಸಭಾಪತಿಯವರೇ, ತಮಗೆ ತೃಪ್ತಿಯಾಗಲಿಲ್ಲ ಎಂದರೆ ಪ್ರಶ್ನೆಯನ್ನು ಕೇಳಿ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೇ, ದಿನಾಂಕ 11.10.1994ಕ್ಕೆ ನಂತರ ಭೂ ನ್ಯಾಯ ಮಂಡಳಿ ಅಧಿಕಾರದಲ್ಲಿ ಇರುವುದಿಲ್ಲ ಎಂದು ಆದೇಶ ಹೊರಡಿಸಿದ್ದಾರೆ. ದಿ: 24.10.94ಕ್ಕೆ ಸಂಬಂಧಪಟ್ಟ ಒಂದು ಕಡತ ಟಿಆರ್ಐ ಸಂ: 10341 ಇದರ ಬಗ್ಗೆ ಕುಂದಾಪುರ ಉಪವಿಭಾಗಾಧಿಕಾರಿಗಳು ಯಾವುದೇ ಆದೇಶ ಭೂನ್ಯಾಯ ಮಂಡಳಿ ನೀಡಿಲ್ಲ ಎಂದು ಹಿಂಬರಹ ಕೊಟ್ಟಿದ್ದಾರೆ. ಆದರೆ 19.8.94 ಹೆಸರಿನಲ್ಲಿ ಪುನಃ ಆದೇಶವನ್ನು ದಿ: 20.7.95ಕ್ಕೆ ನೀಡಿದ್ದಾರೆ.

ಅಧ್ಯಕ್ಷರು : ದಯಮಾಡಿ ತಾವು ಆ ಸ್ಪೆಸಿಫಿಕ್ ಕೇಸ್ ಯಾವುದಿದೆ ಅದರ ಬಗ್ಗೆ ಖಚಿತವಾಗಿ ಮಾಹಿತಿಯನ್ನು ಮಾನ್ಯ ಸಚಿವರ ಗಮನಕ್ಕೆ ತೆಗೆದುಕೊಂಡು ಬನ್ನಿ. ಅವರು ತಕ್ಷಣ ಕ್ರಮ ತೆಗೆದುಕೊಳ್ಳುತ್ತಾರೆ.

ಕುಮ್ಕಿ ಸ್ಥಳದಲ್ಲಿ ಒತ್ತುವರಿ ಭೂಮಿಯನ್ನು ಕ್ರಮಬದ್ಧಗೊಳಿಸುವುದು

2435 - ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕುಮ್ಕಿ ಸ್ಥಳದಲ್ಲಿ ಆಕ್ರಮಣ ಮಾಡಿದವರ ಭೂಮಿಯನ್ನು ಸಕ್ರಮ ಮಾಡುವ ಯೋಜನೆ ಸರಕಾರದ ಮುಂದಿದೆಯೇ?

ಆ) ಮಾಡದೇ ಇದ್ದಲ್ಲಿ 20 ವರ್ಷಗಳಿಂದ ವಾಸ್ತವ್ಯ ಹೂಡಿ, ಕೃಷಿ ಮಾಡಿದ ರೈತರಿಗೆ ಅನಾನುಕೂಲವಾಗುವುದಿಲ್ಲವೇ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಪರಿಶೀಲನೆಯಲ್ಲಿದೆ

ಆ) ಪರಿಶೀಲನೆಯ ನಂತರ ತೆಗೆದುಕೊಳ್ಳಲಾಗುವ ನಿರ್ಧಾರವನ್ನು ಅವಲಂಬಿಸಿದೆ.

ಅಧ್ಯಕ್ಷರು : ಪ್ರತಾಪ ಚಂದ್ರ ಶೆಟ್ಟಿಯವರೇ, ನಿನ್ನೆ ನೀವು ಅಬ್‌ಸೆಂಟ್ ಆಗಿದ್ದೀರಿ. ನಿನ್ನೆ ತಮ್ಮದು ಒಂದು ಪ್ರಶ್ನೆ ಇತ್ತು.

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಈ ಕುಮ್ಕಿ ಸ್ಥಳ ಎಂದು ತಾವು ಏನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೇಳುತ್ತಿದ್ದೇವೆ ಅದೇ ರೀತಿ ಮಡಕೇರಿಯಲ್ಲಿ ಬಾಣೆ ಹಳೇಮೈಸೂರಿನಲ್ಲಿ ಸೊಪ್ಪಿನ ಬೆಟ್ಟ ಸ್ಥಳಗಳನ್ನು ಸಕ್ರಮ ಮಾಡುತ್ತೀರಾ ಎನ್ನುವ ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ ಪರಿಶೀಲನೆಯಲ್ಲಿದೆ ಎನ್ನುವ ಉತ್ತರವನ್ನು ಕೊಟ್ಟಿದ್ದೀರಿ. ಕುಮ್ಕಿ ಜಮೀನನ್ನು ಬಹಳ ವರ್ಷಗಳಿಂದ ಒತ್ತುವರಿ ಮಾಡಿಕೊಂಡಿದ್ದಾರೆ. ಹಾಗೂ ಅಲ್ಲಿರುವಂತಹ ಮರ ಹಾಗೂ ಕಾಡನ್ನು ರಕ್ಷಣೆ ಮಾಡಿದ್ದಾರೆ. ಅಲ್ಲಿ ಗದ್ದೆ ಮಾಡಿದ್ದಾರೆ, ಮನೆ ಕಟ್ಟಿಕೊಂಡಿದ್ದಾರೆ ಹಾಗೂ ಬೇರೆ ಬೇರೆ ರೀತಿಯ ಒತ್ತುವರಿ ಇದೆ. ಅವುಗಳನ್ನು ತಾವು ಸಕ್ರಮ ಮಾಡದೇ ಇದ್ದರೆ ಅಥವಾ ಅವುಗಳ ರಕ್ಷಣೆ ಮಾಡದೇ ಇದ್ದರೆ ಇದರಿಂದ ರೈತರಿಗೆ ಅನ್ಯಾಯವಾಗುತ್ತದೆ. ಒಂದು ಕಡೆ ನಗರ ಪ್ರದೇಶಗಳಲ್ಲಿ ಎಲ್ಲಿಂದಲೋ ಬಂದವರಿಗೆ ಒತ್ತುವರಿ ಭೂಮಿಯನ್ನು ಸಕ್ರಮ ಮಾಡುತ್ತೀರಿ. ಆದರೆ ಬಹಳಷ್ಟು ವರ್ಷಗಳಿಂದ ಅಕ್ರಮ ಮಾಡಿದಂತಹ ರೈತರ ಭೂಮಿಯನ್ನು ಅಥವಾ ಕುಮ್ಕಿ ಸ್ಥಳವನ್ನು ಸಕ್ರಮ ಮಾಡುವುದಿಲ್ಲ. ಹಿಂದಿನ ಸರ್ಕಾರ ಈ ಬಗ್ಗೆ ಒಂದು ಆಶ್ವಾಸನೆಯನ್ನು ಈ ಸದನದಲ್ಲಿ ಕೊಟ್ಟಿದೆ. ಕುಮ್ಕಿ ಸ್ಥಳವನ್ನು ಸಕ್ರಮ ಮಾಡುತ್ತೇವೆ ಎನ್ನುವಂತಹ ಆಶ್ವಾಸನೆ ಕೊಟ್ಟಿದೆ. ಅದು ಏನಾಗಿದೆ ಎನ್ನುವುದನ್ನು ನಾನು ಕೇಳಬಯಸುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ಕಾಫಿಯನ್ನು ನಾವು ಅಕ್ರಮ ಮಾಡಬೇಕು ಎನ್ನುವ ತೀರ್ಮಾನ ತೆಗೆದುಕೊಳ್ಳುತ್ತಿರುವಾಗ ಇದನ್ನು ಸಹ ಜೊತೆಯಲ್ಲಿ ಒಂದು ತೀರ್ಮಾನ ತೆಗೆದುಕೊಳ್ಳಬೇಕು ಎಂದು ಸಚಿವ ಸಂಪುಟದ ಉಪಸಮಿತಿಯ ಮುಂದೆ ಇದೆ. ಅದು ಕುಮ್ಕಿ ಆಗಿರಬಹುದು, ಸೊಪ್ಪಿನ ಬೆಟ್ಟ ಆಗಿರಬಹುದು, ಅಥವಾ ಜಮ್ಮ ಭೂಮಿಯಾಗಿರಬಹುದು ಅಥವಾ ಬಾಣೆ ಭೂಮಿಯಾಗಿರಬಹುದು, ನಾನಾ ವಿಧದ ಜಮೀನು ಇದೆ. ಇದನ್ನು ಕೂಡ ನಾವು ಏಕೆ ಸಕ್ರಮಗೊಳಿಸಬಾರದು ಎಂದು ಈ ವಿಚಾರವನ್ನು ಸಚಿವ ಸಂಪುಟದ ಉಪಸಮಿತಿಯ ಮುಂದೆ ಇದೆ. ಅದರ ಬಗ್ಗೆ ಶೀಘ್ರದಲ್ಲೇ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ : ಸನ್ಮಾನ್ಯ ಅಧ್ಯಕ್ಷರೇ, ಈ ಕುಮ್ಕಿ ಜಮೀನು ನಮ್ಮ ಭಾಗದಲ್ಲಿ ಬರದೇ ಇದ್ದರೂ ಕೂಡ certain lands not coming under the purview of unauthorised cultivation ಎನ್ನುವುದರಲ್ಲಿ ನಮ್ಮ ಭಾಗದಲ್ಲಿ ಬರತಕ್ಕಂಥಾದ್ದು ಎಕ್ಸೈಜ್ ಲ್ಯಾಂಡ್ಸ್ ಇದೆ. ಎಕ್ಸೈಜ್ ಲ್ಯಾಂಡ್, ಸೊಪ್ಪಿನ ಬೆಟ್ಟ,

ಕುಮ್ಕಿ ಇವೆಲ್ಲಾ ಒಂದೇ ಕ್ಲಾಸಿಫಿಕೇಷನ್‌ನಲ್ಲಿ ಬರತಕ್ಕಂಥಾದ್ದು ಕೂಡ ಆಗಿದೆ. ಹಿಂದೆ ಈ ವಿಚಾರದಲ್ಲಿ ಸರ್ಕಾರದ ತೀರ್ಮಾನ ಕೂಡ ಆಗಿ ಒಂದು ಆರ್ಡಿನೆನ್ಸ್ ತರಬೇಕು ಎನ್ನುವ ಹಂತದಲ್ಲಿ ಇದ್ದಾಗ ಆ ಪ್ರಕ್ರಿಯೆ ನಿಂತುಹೋಯಿತು. ಈಗ ನಾನು ಒಂದು ಮಾತು ಹೇಳುತ್ತೇನೆ, ನನ್ನ ಒಂದು ಕ್ಷೇತ್ರಕ್ಕೆ ಸುಮಾರು 14 ಸಾವಿರ ಎಕರೆ ಎಕ್ಸೈಜ್ ಲ್ಯಾಂಡ್ ಇದ್ದು ಬಗರ್ ಹುಕುಂ ಸಾಗುವಳಿದಾರರು ಅರ್ಜಿ ಹಾಕಿರತಕ್ಕಂಥಾದ್ದು, ಅದು ಹಾಗೆ ಸ್ಥಗಿತವಾಗಿ, ಆ ವಿಚಾರ ಕಮಿಟಿಯ ಮುಂದೆ ಇದೆ. ಈಗ ಕುಮ್ಕಿ ಲ್ಯಾಂಡ್ ಅನ್ನು ಕೊಡುವಂತಹ ಸಂದರ್ಭದಲ್ಲಿ, ಈ ವಿಚಾರ ಸಬ್ ಕಮಿಟಿ ಮುಂದೆ ಇರುವಂತಹ ಸಂದರ್ಭದಲ್ಲಿ ಎಕ್ಸೈಜ್ ಲ್ಯಾಂಡ್ ಅನ್ನು ಕೂಡ ಅದೇ ರೀತಿಯಾಗಿ ಕನ್ಸಿಡರ್ ಮಾಡಿದರೆ ಬಹುಶಃ ಬಹಳಷ್ಟು ಜನಕ್ಕೆ ಎಂದರೆ, "ತುಮಕೂರು ಜಿಲ್ಲೆ ಒಂದಕ್ಕೆ 50 ಅಥವಾ 60 ಸಾವಿರ ಎಕರೆ ಜಮೀನನ್ನು ರೈತರಿಗೆ ಕೊಟ್ಟ ಹಾಗೆ ಆಗುತ್ತದೆ. ಅಲ್ಲಿ ಸುಮಾರು 20-30 ವರ್ಷದಿಂದ ಸಾಗುವಳಿ ಮಾಡಿಕೊಂಡಿದ್ದಾರೆ. ಆಗಲೇ ಅಲ್ಲಿ ತೆಂಗು ಫಸಲು ಬಿಡುತ್ತಿದೆ. ಎಕ್ಸೈಜ್‌ರವರ ಕಾಟದಿಂದ ಅವರು ಇವತ್ತು ಬದುಕುವುದು ಕಷ್ಟವಾಗತಕ್ಕಂಥ ಪರಿಸ್ಥಿತಿ ಇದೆ. ದಯಮಾಡಿ ಇದರ ಬಗ್ಗೆ ಹಿಂದಿನ ಸರ್ಕಾರ ಒಂದು ತೀರ್ಮಾನವನ್ನು ತಂದಿತ್ತು. ಆ ವಿಚಾರ ಸಬ್ ಕಮಿಟಿ ಮುಂದೆ ಇದೆ ಎನ್ನುವ ಮಾತನ್ನು ಹೇಳುತ್ತಿದ್ದೀರಿ. ತಾವು ಎಕ್ಸೈಜ್ ಲ್ಯಾಂಡ್‌ನ್ನು ಕೂಡ ಕುಮ್ಕಿ ಮಾದರಿಯಲ್ಲೇ ಪರಿಗಣನೆ ಮಾಡುತ್ತೀರಾ ಎನ್ನುವ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ಸದ್ಯಕ್ಕೆ ಸರ್ಕಾರದ ಮುಂದೆ ಆ ಯೋಚನೆ ಇಲ್ಲ. ಈಗ ಕೆಲವು ಕಡೆಯಿಂದ ಬೇಡಿಕೆಗಳು ಬಂದಿದೆ. ಈಚಲ ವನದಲ್ಲಿ ಖಾಲಿಯಿರುವ ಕಡೆ ಸೈಟ್‌ಗಳನ್ನು ಮಾಡುವುದಕ್ಕೆ ಪರ್ಮಿಷನ್ ಕೊಡಿ ಎಂದು ಕೇಳಿದ್ದಕ್ಕೆ 2-3 ಎಕರೆಗೆ ಪರ್ಮಿಷನ್ ಕೊಟ್ಟಿದ್ದೇವೆ. ಈಗ ಲಾರ್ಜರ್ ಸ್ಕೇಲ್‌ನಲ್ಲಿ ಇದನ್ನು ಸಕ್ರಮಗೊಳಿಸಬಹುದೇ ಎನ್ನುವುದರ ಬಗ್ಗೆ ಇನ್ನೂ ತೀರ್ಮಾನ ತೆಗೆದುಕೊಂಡಿಲ್ಲ. ಅದರ ಯೋಚನೆ ಕೂಡ ಇಲ್ಲ. ಇದನ್ನು ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಚರ್ಚೆ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಅವರು ಕೇಳಿದ್ದೇನೆಂದರೆ ಎಕ್ಸೈಜ್ ಕರಾಬ್ ಲ್ಯಾಂಡ್ ಏನಿದೆ ಅದರಲ್ಲೂ ವಿಶೇಷವಾಗಿ ತುಮಕೂರು, ಚಿತ್ರದುರ್ಗ ಇಂತಹ ಕಡೆ ಆ ಲ್ಯಾಂಡ್ ಇದೆ. ಅದು ಅವರಿಗೆ ಗೊತ್ತಿದೆ. ಅಂತಹ ಲ್ಯಾಂಡ್‌ನ್ನು ರೆಗ್ಯುಲರೈಸ್ ಮಾಡುವುದಕ್ಕೆ ಪ್ರಾವಿಷನ್ ಇಲ್ಲ ಅಥವಾ ಅಂತಹ ವಿಷಯ ನಮ್ಮ ಗಮನದಲ್ಲಿ ಇಲ್ಲ ಎಂದು ಹೇಳಿದರು. ಇದಕ್ಕೂ ರೆಗ್ಯುಲರೈಸ್ ಮಾಡಬೇಕಾದರೆ ಅದಕ್ಕೆ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿ ಮಾಡುತ್ತೇನೆ ಎಂದು ಹೇಳುತ್ತಾರೆ.

ಶ್ರೀ ಆರ್.ಎಲ್. ಜಾಲಪ್ಪ : ಹೌದು. Don't try to read in between the lines. It is a policy matter. It has to go before the Cabinet.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದರ ಬಗ್ಗೆ ನೀವು ಕಾನೂನು ಪ್ರಕಾರ ಪರಿಶೀಲನೆ ಮಾಡಿ ಅಥವಾ ಎಕ್ಸಾಮಿನ್ ಮಾಡಿ ಮಾಡುತ್ತೇವೆ ಎನ್ನುವುದನ್ನು ಬೇರೆ. ಪ್ರತಿಯೊಂದಕ್ಕೂ ನಾನು ಮುಖ್ಯಮಂತ್ರಿಯವರನ್ನು ಕೇಳಿ ನೋಡುತ್ತೇನೆ ಎಂದರೆ ಹೇಗೆ. ನಿನ್ನೆಯೂ ಕೂಡ ಅದೇ ರೀತಿ ಹೇಳಿದಿರಿ.

ಅಧ್ಯಕ್ಷರು : ಹಾಗಾದರೆ ನೀವು ಒಂದು ಕೆಲಸ ಮಾಡಿ. ಹೈಕಮಾಂಡ್ ಕೇಳಿ ಮಾಡುತ್ತೇನೆ ಎಂದು ಹೇಳಿ.

ಶ್ರೀ ಆರ್.ಎಲ್. ಜಾಲಪ್ಪ : ಅಂದರೆ ಡೆಲ್ಲಿ ಹೈಕಮಾಂಡ್‌ಗೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಎಂದೂ ಕೂಡ ಆರ್ಡಿನನ್ಸ್‌ಅನ್ನು ಹೈ ಕಮಾಂಡಿಗೆ ಕೇಳಿಲ್ಲ. ರಾಜ್ಯದ ಹಿತದೃಷ್ಟಿಯಿಂದ ಅನೇಕ ಕಾನೂನುಗಳನ್ನು ತರಬೇಕಾದರೆ ನಾವು ಮಾಡಿದ್ದೇವೆ. ಯಾವುದು ಕೇಳಬೇಕೋ ಅದನ್ನು ಕೇಳುತ್ತೇವೆ. ಅವರಿಗೆ ಹೈ ಕಮಾಂಡ್ ಇಲ್ಲವಲ್ಲಾ, ಇದ್ದಾಗ ಅವರೂ ಹಾಗೆ ಮಾಡಿದರು. ಮಾನ್ಯ ರಾಮಕೃಷ್ಣ ಹೆಗಡೆಯವರನ್ನು ಮಾಡಿದಾಗ ಹೈಕಮಾಂಡ್‌ನಿಂದ ಮಾಡಿದ್ದರೋ ಲೋ ಕಮಾಂಡ್‌ನಿಂದ ಮಾಡಿದಿರೋ. ಅವಾಗ ಓರಿಸ್ಸಾದ ಮುಖ್ಯಮಂತ್ರಿ ಮಾನ್ಯ ಬಿಜುಪಟ್ನಾಯಕ್‌ರವರು ಅಲ್ಲಿಗೆ ಬಂದು ಕುಳಿತಿದ್ದರು ಆಗ ಮಾಡಿದ್ದೀರಿ.

ಶ್ರೀ ಎಸ್.ಆರ್. ಲಕ್ಷ್ಮಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ರಾಮಕೃಷ್ಣ ಹೆಗಡೆಯವರ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಬಾರದು. ಅವರ ಕಾಲದಲ್ಲಿ ಮಾಡಿದಂತಹ ಕೆಲಸಗಳನ್ನು ಅವರೂ ಮರೆಯುವ ಆಗಿಲ್ಲ, ನಾವೂ ಮರೆಯುವ ಆಗಿಲ್ಲ.

ಅಧ್ಯಕ್ಷರು : ಕ್ವೊಶ್ಚನ್ ಅವರ್ ಆಗಲಿ, ಆಮೇಲೆ ನಿಮಗೆ ಅವಕಾಶ ಇದೆ, ಕೊಡುತ್ತೇನೆ.

ಶ್ರೀ ಡಿ.ವಿ. ಸದಾನಂದ ಗೌಡ : ಮಾನ್ಯ ಅಧ್ಯಕ್ಷರೆ, ಈಗಾಗಲೇ ತಾಲ್ಲೂಕು ಕಛೇರಿಯಿಂದ ಅಕ್ರಮ ಮತ್ತು ಸಕ್ರಮ ವ್ಯಾಪ್ತಿಯಲ್ಲಿ ಕೊಟ್ಟಂತಹ ಅರ್ಜಿಗಳ ಬಗ್ಗೆ ಕುಮ್ಕಿ ಜಾಗಗಳನ್ನು ಸಕ್ರಮ ಮಾಡುವುದಕ್ಕೆ ಆಗುವುದಿಲ್ಲವೆಂದು ಹಿಂಬರಹಗಳನ್ನು ಈಗಾಗಲೇ ತಹಶೀಲ್ದಾರರು ಎಲ್ಲರಿಗೂ ಕೊಟ್ಟಿದ್ದಾರೆ. ಸರ್ಕಾರ ಒಂದು ವೇಳೆ ಇದನ್ನು ಪರಿಶೀಲನೆ ಮಾಡುವ ಸಂದರ್ಭದಲ್ಲಿ ಅಕ್ರಮದ ಭೂಮಿಯನ್ನು ಸಕ್ರಮೀಕರಣದ ವ್ಯಾಪ್ತಿಯೊಳಗೆ ಕೊಟ್ಟಂತಹ ಅರ್ಜಿಗಳಿಗೆ ಹಿಂಬರಹವನ್ನು ಕೊಟ್ಟು ನಿಮಗೆ ಕೊಡುವುದಕ್ಕಾಗುವುದಿಲ್ಲವೆನ್ನುವುದನ್ನು ಪುನರ್‌ಪರಿಶೀಲನೆ ಮಾಡಿ ಕುಮ್ಕಿ ಜಾಗಗಳನ್ನು ಸಕ್ರಮೀಕರಣ ಮಾಡುವುದಕ್ಕೆ ಕೊಟ್ಟಂತಹ ಅರ್ಜಿಗಳನ್ನು ಪುನಃ ಪರಿಗಣನೆ ಮಾಡುತ್ತದೆಯೆ ಎಂಬುದನ್ನು ಸರ್ಕಾರ ಸ್ಪಷ್ಟಿಕರಣ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ನಾವು ಸಕ್ರಮ ಮಾಡಬೇಕೆಂದು ತೀರ್ಮಾನವನ್ನು ತೆಗೆದುಕೊಂಡರೆ, ಈಗ ಯಾರು ಯಾರಿಗೆ ಹಿಂಬರಹವನ್ನು ಕೊಟ್ಟಿದ್ದೇವೋ ಅದನ್ನು ಮತ್ತೆ ರಿ-ಕನ್ಸಿಡರ್ ಮಾಡುತ್ತೇವೆ,

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ತಾವು ಕುಮ್ಕಿ ಹಕ್ಕನ್ನು ಖಾಯಂ ಮಾಡುವುದಾದರೆ ಪುನಃ ಅರ್ಜಿಗಳನ್ನು ಕೊಡುವಂತಹ ಅವಕಾಶವನ್ನು ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಏನಾಗುತ್ತದೆಂದರೆ ಕುಮ್ಕಿಗೆ ಅರ್ಜಿಯನ್ನು ಕೊಡದೆ ಇರತಕ್ಕಂಥ ಸಂದರ್ಭದಲ್ಲಿ ಕೊಟ್ಟಂತಹ ಅರ್ಜಿಗಳನ್ನು ಮಾತ್ರ ಪರಿಗಣಿಸಬೇಕಾದಂತಹ ಪರಿಸ್ಥಿತಿ ಬರುತ್ತದೆ. ಆದುದರಿಂದ ಕುಮ್ಕಿ ಜಾಗಗಳನ್ನು ಸಕ್ರಮ ಮಾಡುವಂಥ ಸಂದರ್ಭದಲ್ಲಿ ವಿಶೇಷವಾಗಿ ಅದಕ್ಕೋಸ್ಕರ ಅರ್ಜಿಯನ್ನು ಕರೆಯಬೇಕು.

ಶ್ರೀ ಆರ್.ಎಲ್. ಜಾಲಪ್ಪ : ಸಕ್ರಮಗೊಳಿಸುವುದರ ಬಗ್ಗೆ ತೀರ್ಮಾನ ತೆಗೆದುಕೊಂಡರೆ ನೋಟಿಫೈ ಮಾಡುತ್ತೇವೆ, ಮತ್ತು ಅವರಿಗೆ ಸಮಯವನ್ನು ಕೊಡುತ್ತೇವೆ. ಬೇರೆ ಏನೇನು ಷರತ್ತುಗಳಿವೆ ಅದನ್ನು ಅವರಿಗೆ ತಿಳಿಸಿ ಪ್ರೊಸಸ್ ಮಾಡುತ್ತೇವೆ.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಪ್ರಸ್ತಾಪ ಮಾಡುತ್ತಾ ವಿವಿಧ ಹೆಸರುಗಳಲ್ಲಿ ಇಟ್ಟಿರತಕ್ಕಂಥ ಭೂಮಿ ಕೊಡಗಿನಲ್ಲಿ ಜಮ್ಮಾ ಎಂದು ಇಟ್ಟಿರುತ್ತಾರೆ. ಅದೂ ಕೂಡ ತಾವು ಯೋಚನೆ ಮಾಡುತ್ತಿದ್ದೇವೆಂದು ಪ್ರಸ್ತಾಪ ಮಾಡಿದರು. ಜಮ್ಮಾ ಎಂದು ಹೇಳತಕ್ಕಂಥಾದ್ದು ಕೊಡಗಿಗೆ ಮಾತ್ರ ಸೀಮಿತವಾಗಿರತಕ್ಕಂಥದ್ದು. ಒಂದು ಕಮ್ಯೂನಿಟಿಗೆ ಸಂಪೂರ್ಣ ಜಮ್ಮಾ ಮತ್ತು ಕೆಲವು ಪ್ರಮುಖರಿಗೆ ಜಮ್ಮಾ

ಕೊಟ್ಟಿರುವಂಥಾದ್ದು ಕೊಡಗಿನಲ್ಲಿ ಮಾತ್ರ. ಬರೀ ಜಮ್ಮಾ ಭೂಮಿಗೆ ಮಾತ್ರ ಸೀಮಿತವಲ್ಲ, ಅನೇಕ ತರಹದ ಪ್ರಿವಿಲೇಜಸ್ ಕೂಡ ಜಮ್ಮಾಕ್ಕೆ ಒಳಗೊಂಡಿರುವಂತಹ ವ್ಯಕ್ತಿಗಳಿಗೆ ಇರುವಂತಹ ಸಂದರ್ಭದಲ್ಲಿ ತಾವು ಜಮ್ಮಾ ಭೂಮಿಗೆ ಮಾತ್ರ ಕೈ ಹಾಕಿದರೆ ಇತರೆ ಪ್ರಿವಿಲೇಜ್‌ಗಳ ಬಗ್ಗೆ ಕೂಡ ತಾವು ಯೋಚಿಸಬೇಕಾಗುತ್ತದೆ. ಆದುದರಿಂದ ಕೊಡಗಿನ ಜಮ್ಮಾ ಬಗ್ಗೆ ಪ್ರಸ್ತಾಪ ಮಾಡಬೇಕಾದರೆ ಪ್ರತ್ಯೇಕವಾಗಿ ಅದನ್ನು ಪ್ರಸ್ತಾಪ ಮಾಡತಕ್ಕಂಥದ್ದು ಒಳ್ಳೆಯದೆಂದು ನನ್ನ ಸಲಹೆಯಾಗಿದೆ. ಇದನ್ನು ಒಟ್ಟಿಗೆ ಸೇರಿಸಿಕೊಂಡರೆ ಒಂದು ರೀತಿಯ ಗೊಂದಲವುಂಟಾಗುವುದೆಂಬ ನನ್ನ ಅನಿಸಿಕೆಯನ್ನು ತಮ್ಮ ಮುಂದಿಡುತ್ತಿದ್ದೇನೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಶಿವಪ್ಪನವರು ಹೇಳುವಂಥಾದ್ದು ಸರಿಯಾಗಿದೆ, ಈಗಾಗಲೇ ಗೊಂದಲ ಪ್ರಾರಂಭವಾಗಿದೆ. ಇದರ ಬಗ್ಗೆ ಈಗಾಗಲೇ ಹೈಕೋರ್ಟಿನಿಂದ ಒಂದು ತೀರ್ಮಾನ ಕೂಡ ಬಂದಿದೆ. ಹಿಂದೆ ಸಕಾಲದಲ್ಲಿ ಇದರ ಬಗ್ಗೆ ಅಪೀಲು ಹಾಕಿರಲಿಲ್ಲ. ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡು ಅಂತಿಮವಾಗಿ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಜಯರಾಂ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ರೈತರಿಗೆ ಇರತಕ್ಕಂಥ ಕುಮ್ಕಿ ಹಕ್ಕನ್ನು ಸರ್ಕಾರವು ಮನೆ ನಿವೇಶನಗಳಿಗೆ ಹಂಚಿಕೊಳ್ಳುತ್ತಿದೆ. ಈ ಕಡೆ ರೈತರಿಗೆ ಅದನ್ನು ಕೃಷಿಗೋಸ್ಕರ, ಸೊಪ್ಪನ್ನು ಉಪಯೋಗಿಸಿಕೊಳ್ಳಲು ಬಿಡುವುದಿಲ್ಲ. ಅದನ್ನು ಮನೆ ನಿವೇಶನಗಳಿಗೆ ಉಪಯೋಗಿಸಿಕೊಳ್ಳುತ್ತಾರೆ. ಎರಡನೆಯದಾಗಿ ಉಳ್ಳಾಲ ವಿಧಾನಸಭಾ ಕ್ಷೇತ್ರದ ಗ್ರಾಮಾಂತರ ಪ್ರದೇಶದಲ್ಲಿ ಇರುವ ಮಂಗಳೂರು ಮಹಾನಗರ ಪಾಲಿಕೆಗೆ ಒಳಪಟ್ಟಿದೆ ಎಂದು ಯಾವುದೇ ಅಕ್ರಮ ಜಮೀನನ್ನು ಸಕ್ರಮ ಮಾಡುವಂಥ ಯಾವುದೇ ಅರ್ಜಿಯನ್ನು ತೆಗೆದುಕೊಳ್ಳುತ್ತಿಲ್ಲ. ಆದುದರಿಂದ ಗ್ರಾಮಾಂತರ ಪ್ರದೇಶದ ಮಂಗಳೂರು ಮಹಾನಗರ ಪಾಲಿಕೆಯಿಂದ ಹೊರಗೆ ಉಂಟು. ಈ ಪ್ರದೇಶದಿಂದ ಯಾರು ಅಕ್ರಮ ಜಮೀನು ಸಕ್ರಮಕ್ಕಾಗಿ ಅರ್ಜಿಯನ್ನು ಹಾಕಿದ್ದಾರೆ, ಅವರನ್ನೆಲ್ಲಾ ಈ ಅಕ್ರಮ ಸಕ್ರಮ ಕಾಯಿದೆಯಡಿ ತೆಗೆದುಕೊಳ್ಳಬೇಕೆಂದು ನಾನು ಸರ್ಕಾರದವರಲ್ಲಿ ವಿನಂತಿಸುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಇದು ನನಗೆ ಬರುವುದಿಲ್ಲ, ಹೆಚ್.ಯು.ಡಿ.ಗೆ ಹೋಗುತ್ತದೆ. ಆದರೂ ನಾನು ಹೇಳುತ್ತೇನೆ. ಆ ರೀತಿಯ ಒಂದು ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ, ಅದು ಕಷ್ಟವಾಗುತ್ತದೆ.

ಅಧ್ಯಕ್ಷರು : ಮಾನ್ಯ ಬಿ. ಸತ್ಯನಾರಾಯಣರವರೇ, ನಿಮ್ಮ ಪ್ರಶ್ನೆಗೆ ಸರ್ಕಾರದವರು ಸ್ವಲ್ಪ ಸಮಯವನ್ನು ಕೇಳಿದ್ದಾರೆ. ಆದುದರಿಂದ ನಿಮ್ಮ ಪ್ರಶ್ನೆಯನ್ನು ನಿಧಾನವಾಗಿ ತೆಗೆದುಕೊಳ್ಳುತ್ತೇವೆ.

ಹೊಸಪೇಟೆ ನಗರಕ್ಕೆ ಹೆಚ್ಚಿನ ಬಸ್‌ಗಳನ್ನು ಒದಗಿಸುವುದು

2022 - ಶ್ರೀ ಜಿ. ಶಂಕರಗೌಡ (ಹೊಸಪೇಟೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೊಸಪೇಟೆ ನಗರವು ಬೃಹದಾಕಾರವಾಗಿ ಬೆಳೆದಿದ್ದು 2 ಲಕ್ಷ ಜನಸಂಖ್ಯೆಯನ್ನೊಳಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸದರಿ ನಗರದಲ್ಲಿ ಸಾರಿಗೆ ಸೌಲಭ್ಯ ಬಹಳ ಅತ್ಯಲ್ಪವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಸದರಿ ನಗರದ ಹಾಗೂ ಗ್ರಾಮೀಣ ಪ್ರದೇಶಗಳ ಸಾರಿಗೆ ಅನುಕೂಲಕ್ಕಾಗಿ ಹೆಚ್ಚಿನ ಬಸ್ಸುಗಳನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) 1991 ಜನಗಣತಿಯ ಪ್ರಕಾರ ಹೊಸಪೇಟೆ ನಗರದ ಜನಸಂಖ್ಯೆ 1,34,934 ಇರುತ್ತದೆ.

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಹೊಸಪೇಟೆ ನಗರದಲ್ಲಿ ನಗರ ಸಾರಿಗೆಗಳನ್ನು ಕಾರ್ಯಾಚರಣೆ ಮಾಡುತ್ತಿರುವುದಿಲ್ಲ.

ಇ) ಅಗತ್ಯಕ್ಕನುಗುಣವಾಗಿ ಗ್ರಾಮೀಣ ಸಾರಿಗೆಗಳ ಮೂಲಕ ಹೊಸಪೇಟೆ ಗ್ರಾಮೀಣ ಪ್ರದೇಶದಲ್ಲಿ ಸಾರಿಗೆಗಳನ್ನು ಓಡಿಸಲಾಗುತ್ತಿದೆ.

ಶ್ರೀ ಜಿ. ಶಂಕರಗೌಡ : ಮಾನ್ಯ ಅಧ್ಯಕ್ಷರೆ, ನಗರ ಸಾರಿಗೆ ಸರ್ಕಾರದ ಗಮನದಲ್ಲಿದೆಯೆ ಎಂದು ಕೇಳಿದ್ದೆ. ಅದಕ್ಕೆ ಸರಿಯಾದ ಉತ್ತರವನ್ನು ಕೊಟ್ಟಿಲ್ಲ. ಆದುದರಿಂದ ಮಾನ್ಯ ಮಂತ್ರಿಯವರು ಸರಿಯಾದ ಉತ್ತರವನ್ನು ಕೊಡಬೇಕೆಂದು ಕೇಳುತ್ತೇನೆ. ಮೊದಲನೆಯದಾಗಿ ಅನೇಕ ಕಡೆ ಅಮಾಯಕ ಶಾಲಾಮಕ್ಕಳು ಬಸ್ ಪಾಸನ್ನು ಕಳೆದುಕೊಂಡ ಮೇಲೆ ಅವರು ಮತ್ತೆ ಬಸ್‌ಪಾಸ್‌ಗೆ ಅಪ್ಲೈ ಮಾಡಿದರೆ ಅವರಿಗೆ ಬಸ್ ಪಾಸನ್ನು ಕೊಡುವುದಿಲ್ಲವೆಂದು ಹೇಳುತ್ತಾರೆ. ಕಾರಣವೇನು? ಅವರು ಕೇಳಬೇಕಾದರೆ ಹೊಸ ಬಸ್ ಪಾಸನ್ನು ಕೇಳುತ್ತಿಲ್ಲ. ಈಗಾಗಲೇ ಒಂದು ಬಸ್‌ಪಾಸ್ ಮಾಡಿಕೊಂಡಿರುತ್ತಾರೆ. ಇದರಿಂದ ಫೋಟೋ ಮತ್ತಿತರ ದಾಖಲೆಗಳಿರುತ್ತವೆ. ಬಸ್‌ಪಾಸ್ ಕೊಡುವುದಕ್ಕೆ ಇಲಾಖೆಗೆ ಏನು ಕಷ್ಟವೆಂದು ಹೇಳುತ್ತಿದ್ದೇನೆ. ಹೊಸಪೇಟೆ ತಾಲ್ಲೂಕ್‌ನಲ್ಲಿ ಎಷ್ಟು ಖಾಸಗಿ ಬಸ್‌ಗಳಿಗೆ ಪರವಾನಗಿಯನ್ನು ಕೊಟ್ಟಿದ್ದೀರಿ. ಖಾಸಗಿ ಬಸ್‌ಗಳು ಓಡುವಂತಹ ಜಾಗದಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್‌ಗಳನ್ನು ಏಕೆ ಓಡಿಸುವುದಿಲ್ಲವೆಂಬುದನ್ನು ತಾವು ತಿಳಿಸಬೇಕೆಂದು ಅಧ್ಯಕ್ಷರ ಮುಖಾಂತರ ತಮ್ಮನ್ನು ಕೇಳಲಿಚ್ಛಿಸುತ್ತೇನೆ.

ಶ್ರೀ ಕೆ.ಎಸ್. ಬೀಳಗಿ : ಮಾನ್ಯ ಅಧ್ಯಕ್ಷರೆ, ಅವರ ಕಡೆಯ ಎರಡು ಪ್ರಶ್ನೆಗಳಿಗೆ ಖಾಸಗಿ ಬಸ್‌ಗಳನ್ನು ಓಡಿಸುವಂಥಾದ್ದು ಬೇರೆ ಲೆಕ್ಕಪತ್ರ ಅದನ್ನು ತಕ್ಷಣಕ್ಕೆ ಹೇಳುವುದಕ್ಕಾಗುವುದಿಲ್ಲ. ಅದರ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಕೊಡುತ್ತೇನೆ. ಇನ್ನು ಖಾಸಗಿ ಬಸ್‌ಗಳನ್ನು ಓಡಿಸುವಂತಹ ಜಾಗದಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್‌ಗಳನ್ನು ಏಕೆ ಓಡಿಸುವುದಿಲ್ಲವೆಂದರೆ ಈ ಹೊಸಪೇಟೆ ನ್ಯಾಷನಲೈಸ್ಡ್ ಸ್ಕೀಮ್‌ನಲ್ಲಿ ಬರುವುದಿಲ್ಲ. ಆದುದರಿಂದ ಖಾಸಗಿ ಬಸ್‌ಗಳಿಗೆ ಪರ್ಮಿಟ್ ಕೊಟ್ಟಂತಹ ಜಾಗದಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್‌ಗಳನ್ನು ಓಡಿಸಬೇಕಾದರೆ ತಾಂತ್ರಿಕ ತೊಂದರೆಗಳಿವೆ. ಆದುದರಿಂದ ಆ ಸೌಲಭ್ಯಗಳನ್ನು ಒದಗಿಸುವುದಕ್ಕೆ ಅನುಕೂಲವಾಗುವುದಿಲ್ಲ. ನಿಮ್ಮ ಎರಡನೆಯ ಪ್ರಶ್ನೆಗೆ ಸದರಿ ನಗರದಲ್ಲಿ ಸಾರಿಗೆ ಸೌಲಭ್ಯ ಬಹಳ ಅತ್ಯಲ್ಪವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ಎಂದು ಕೇಳಿದ್ದೀರಿ. ನಾವು ಹೊಸಪೇಟೆಯಲ್ಲಿ ನಗರ ಸಾರಿಗೆಯನ್ನು ಓಡಿಸುತ್ತಿಲ್ಲ. ಮಫ್ಯೂಸಿಲ್ ಸಾರಿಗೆಯನ್ನೇ ನಾವು ಓಡಿಸುವಂಥಾದ್ದು, ಆದುದರಿಂದ ಆ ರೀತಿಯಲ್ಲಿ ಉತ್ತರವನ್ನು ಕೊಡಲಾಗಿದೆ. ಇನ್ನು ನಿಮ್ಮ ಮೊದಲನೆಯ ಪ್ರಶ್ನೆ ವಿದ್ಯಾರ್ಥಿಗಳ ಬಸ್‌ಪಾಸ್ ಬಗ್ಗೆ ಹೇಳಿದ್ದೀರಿ. ಅದು ಪರಿಶೀಲನೆಯಲ್ಲಿದೆ. ತಾವು ಹೇಳಿದಂತೆ ಆಗಿದ್ದಲ್ಲಿ ಅದನ್ನು ಪರಿಶೀಲನೆ ಮಾಡಿ ಅನುಕೂಲ ಮಾಡಿಕೊಡಲು ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಜಿ. ಶಂಕರಗೌಡ : ಗ್ರಾಮಾಂತರ ಪ್ರದೇಶಗಳಲ್ಲಿ ಪರ್ಮಿಟ್‌ಗಳಿಲ್ಲದೆ ಖಾಸಗಿ ಬಸ್‌ಗಳು ಓಡುತ್ತಿವೆ. ನಾನು ಆ ಪ್ರಶ್ನೆಯನ್ನು ಕೇಳಿದ್ದುದು. ಸರ್ಕಾರಿ ಬಸ್ಸುಗಳು ಕಡಿಮೆ ಇರುವಂತಹ ಜಾಗದಲ್ಲಿ ಅಂತಹ ಬಸ್ಸುಗಳು ಓಡಿಸುವುದಕ್ಕಾಗುವುದಿಲ್ಲ. ಅಂತಹ ಜಾಗದಲ್ಲಿ ಖಾಸಗಿ ಬಸ್‌ಗಳು ಓಡುತ್ತವೆ. ಅಂತಹ ಕಡೆ ಕೆ.ಎಸ್.ಎಸ್.ಆರ್.ಟಿ.ಸಿ. ಬಸ್‌ಗಳನ್ನು ಏಕೆ ಓಡಿಸಬಾರದು ಎಂದು ನಾನು ಕೇಳಿದ್ದು. ಅದಕ್ಕೆ ಹೇಳಬೇಕೆಂದರೆ ಈ ವಿಚಾರದಲ್ಲಿ ಅಲ್ಲಿ ಡ್ರೈವರ್‌ಗಳು, ಕಂಟಕ್ಟರ್‌ಗಳು ಖಾಸಗಿ ಬಸ್ಸುಗಳ ಮಾಲಿಕರೊಡನೆ

ಶಾಮೀಲಾಗಿ ದುಡ್ಡು ಪಡೆದು ಆ ರಸ್ತೆಗಳಿಗೆ ಬಸ್ಸುಗಳನ್ನು ಬಿಡುತ್ತಿಲ್ಲವೆಂಬುದು ನನ್ನ ಗಮನಕ್ಕೆ ಬಂದಿದೆ.

ಶ್ರೀ ಕೆ.ಎಸ್. ಬೀಳಗಿ : ಆ ರೀತಿ ಏನೂ ಇಲ್ಲ, ತಮಗೆ ನಾನು ಉತ್ತರ ಹೇಳಿದೆ. ಇದು ನ್ಯಾಷನಲೈಜ್ ಆದಂತಹ ಏರಿಯಾ ಅಲ್ಲ, ನ್ಯಾಷನಲೈಸ್ ಏರಿಯಾವಲ್ಲದಂತಹ ಜಾಗಗಳಿಗೆ ನಾವು ಖಾಸಗಿಯವರಿಗೆ ಪರ್ಮಿಟ್ ಕೊಡುತ್ತೇವೆ. ನಾವು ಪರ್ಮಿಟ್ ಕೊಟ್ಟನಂತರ ಬಸ್ಸುಗಳು ಓಡದೇ ಇದ್ದಲ್ಲಿ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಅವರು ಪರ್ಮಿಟ್ ಪ್ರಕಾರ ಸರ್ವಿಸ್ ಕೊಡುವಂತೆ ಮಾಡಲು ನಮಗೆ ಪವರ್ ಇದೆ. ಆದರೆ ಅಲ್ಲಿ ಕಡಿಮೆ ಬಸ್ ಇದೆ ಎಂದು ಕೆ.ಎಸ್.ಆರ್.ಟಿ.ಸಿ. ಬಸ್‌ಗಳನ್ನು ಓಡಿಸಬೇಕಾದರೆ ತಾಂತ್ರಿಕ ತೊಂದರೆ ಇದೆ ಮತ್ತು ಸ್ಪೆಷಲ್ ಪರ್ಮಿಟ್ ತೆಗೆದುಕೊಳ್ಳಬೇಕೆಂದು ಮತ್ತಿತರ ಸಮಸ್ಯೆಗಳು ಬರುತ್ತವೆ. ಆದುದರಿಂದ ಈಗ ಖಾಸಗಿಯವರು ಯಾರು ಪರ್ಮಿಟ್ ತೆಗೆದುಕೊಂಡಿದ್ದಾರೆ, ಅವರು ತಮ್ಮ ಸೇವೆಯನ್ನು ಸರಿಯಾದ ರೀತಿಯಲ್ಲಿ ಪರ್ಮಿಟ್ ಕಂಡೀಷನ್ಸ್ ಪ್ರಕಾರ ಕೊಡುವಂತೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ಶಂಕರಗೌಡ : ಗ್ರಾಮಾಂತರ ಪ್ರದೇಶದಲ್ಲಿ ಮೊದಲು ನಿಮ್ಮ ಇಲಾಖೆಯ ಬಸ್ಸುಗಳು ಓಡುತ್ತಿದ್ದವು. ಈ ನಿಮ್ಮ ಇಲಾಖೆಯನ್ನು ಕೇಳಲು ಬಸ್ಸುಗಳು ಕಡಿಮೆ ಇರುವ ಕಾರಣವೆಂದು ಹೇಳುತ್ತಿದ್ದಾರೆ. ಅದಕ್ಕಾಗಿ ಖಾಸಗಿಯವರು ಅಲ್ಲಿ ಬಸ್ಸುಗಳನ್ನು ಓಡಿಸುತ್ತಿದ್ದಾರೆ.

ಶ್ರೀ ಕೆ.ಎಸ್. ಬೀಳಗಿ : ಅಲ್ಲಿ ಬಸ್ಸುಗಳು ಕಡಿಮೆ ಇಲ್ಲ, ಬಸ್ಸುಗಳು ಸಾಕಷ್ಟು ಇದೆ. ಆದರೆ ಸರಿಯಾದ ಕಂಡೀಷನ್‌ನಲ್ಲಿಲ್ಲ, ಅದಕ್ಕಾಗಿ ಅವುಗಳನ್ನು ರೀ-ಪ್ಲೇಸ್ ಮಾಡುವುದಕ್ಕೆ ಹೊಸದಾಗಿ ಯೋಜನೆಗಳನ್ನು ಹಾಕಿಕೊಂಡಿದ್ದೇವೆ.

ಅಧ್ಯಕ್ಷರು : ಮಾನ್ಯ ಬೀಳಗಿಯವರೆ, ಮಾನ್ಯ ಸದಸ್ಯರು ಸರಿಯಾಗಿ ಸಮಸ್ಯೆಯನ್ನು ಕೇಳುತ್ತಿಲ್ಲ. ಅನೇಕ ಕಡೆಗಳಲ್ಲಿ ಜನರು ಬಯಸಿದಂತೆ ಹಳ್ಳಿಗಳಲ್ಲಿ ಬಸ್ಸುಗಳನ್ನು ಓಡಿಸಲು ನಿಮ್ಮಲ್ಲಿ ಸ್ಟ್ರೆಂಗ್ತ್ ಇಲ್ಲ, ಫ್ಲೀಟ್ ಇಲ್ಲ. ನಿಮ್ಮ ಇಲಾಖೆಯವರು ಅದನ್ನು ಹೇಳುತ್ತಾರೆ. ಯಾವಾಗ ನೀವು ಬಸ್ಸುಗಳನ್ನು ಓಡಿಸುವುದಿಲ್ಲ. ಅವೆಲ್ಲಾ ನ್ಯಾಷನೈಲ್ಸ್ಡ್ ಪಾಕೆಟ್ಸ್; ಲೆಜಿಟಿಮೇಟಾಗಿ ಅವರಿಗೆ ಪರ್ಮಿಟ್ ಕೊಡುವುದಕ್ಕೆ ನಮ್ಮ ರೂಲ್ಸ್‌ನಲ್ಲಿ ಅವಕಾಶವಿಲ್ಲ, ಇಲ್ಲೆಜಿಟಿಮೇಟ್ ಟ್ರಾನ್ಸ್‌ಪೋರ್ಟ್ ಆಗುತ್ತಿದೆ. ಕಾನೂನು ಬಾಹಿರವಾಗಿ ಟೆಂಪೊಗಳು, ಖಾಸಗಿ ಬಸ್ಸುಗಳು, ಮಿನಿ ಲಾರಿಗಳಲ್ಲಿ ಜನರನ್ನು ತುಂಬಿಕೊಂಡು ಹೋಗುವುದು, ಇವೆಲ್ಲಾ ನಡೆಯುತ್ತದೆ. ಆದ್ದರಿಂದ ಅವರು ಹೇಳುವಂಥಾದ್ದು ತಾವು ಸಾಕಷ್ಟು ಕೆ.ಎಸ್.ಆರ್.ಟಿ.ಸಿ. ಬಸ್ಸುಗಳನ್ನು ಹಾಕಿ, ಇಲ್ಲಿ ನಿಮ್ಮ ನೀತಿಯನ್ನು ಸಡಿಲಗೊಳಿಸಿ ಎಂದು ಕೇಳುತ್ತಾರೆ. ಮಾನ್ಯ ಸದಸ್ಯರೇ ನೀವು ಕೇಳಿದ್ದು ಅದೇ ಅಲ್ಲವೇ? ನೀವು ಕೇಳುವುದನ್ನು ಸರಿಯಾಗಿ ಕೇಳಬೇಕು. ಈಗ ನಾನು ಕೇಳಿದರೆ ಅವರು ಏನು ತಿಳಿದುಕೊಳ್ಳುತ್ತಾರೆ. ಈಗ ನಮ್ಮೂರಲ್ಲೂ ಅದೇ ಕಷ್ಟ, ನೀವು ಬಸ್ಸು ಹಾಕುವುದಿಲ್ಲ, ಅವರ ಬಸ್ಸು ಬಿಡುವುದಿಲ್ಲ, ಜನರು ನಮ್ಮ ಬೆನ್ನು ಹತ್ತಿದ್ದಾರೆ.

ಶ್ರೀ ಕೆ.ಎಸ್. ಬೀಳಗಿ : ಸನ್ಮಾನ್ಯ ಅಧ್ಯಕ್ಷರು ಹೇಳಿದಂತಹ ಮಾತಿನಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಬಸ್ಸುಗಳ ಸಂಖ್ಯೆ ಸ್ವಲ್ಪ ಕಡಿಮೆ ಇದೆ ಎನ್ನುವ ಮಾತನ್ನು ನಾನು ಒಪ್ಪುತ್ತೇನೆ. ಆದರೆ ಅದಕ್ಕೆ ಒಂದು ವಿಶೇಷವಾದಂಥ ವ್ಯವಸ್ಥೆಯನ್ನು ನಾವು ಹಾಕಿಕೊಂಡಿದ್ದೇವೆ. ಪ್ರತಿಯೊಂದು ಗ್ರಾಮಕ್ಕೂ ಬಸ್ಸು ಸೌಲಭ್ಯವನ್ನು ಕಲ್ಪಿಸುವ ಸಲುವಾಗಿ ಡಬಲ್ ಡೋರ್‌ಗಳಿರುವಂತಹ ಬಸ್ಸುಗಳನ್ನು ಪ್ರತಿ ತಾಲ್ಲೂಕಿಗೂ ಕೊಡುವಂತಹ ವ್ಯವಸ್ಥೆಯನ್ನು ನಾವು ಮಾಡುತ್ತಿದ್ದೇವೆ. ಈ ತಿಂಗಳಲ್ಲಿ ಪ್ರತಿ ತಾಲ್ಲೂಕಿಗೂ ಎರಡರೆಡು ಡಬಲ್ ಡೋರ್‌ಗಳಿರುವಂತಹ ಬಸ್‌ಗಳನ್ನು ಕೊಡುವಂತಹ ಯೋಜನೆ ಇದೆ.

10.40 ಎ.ಎಂ.

ಆ ಪ್ರಕಾರ ಬಳ್ಳಾರಿ ಜಿಲ್ಲೆಗೆ ಹೆಚ್ಚಿನ ಸೌಲಭ್ಯವನ್ನು ಕಲ್ಪಿಸುವ ಸಲುವಾಗಿ ಡಬಲ್ ಡೋರ್ ಬಸ್ಸನ್ನು ಕೊಡುವುದಲ್ಲದೆ ಇಪ್ಪತ್ತೆರಡು ಹೊಸ ಬಸ್ಸುಗಳನ್ನು ಕೊಡುತ್ತೇವೆ. ಕೆಟ್ಟು ಹೋದಂಥ ಓಡಲಿಕ್ಕೆ ಕಂಡೀಷನ್ ಸರಿಯಾಗಿ ಇಲ್ಲದೆ ಇರುವಂಥ, ಬಸ್ಸುಗಳನ್ನು ರೀಪ್ಲೇಸ್ ಮಾಡಲಿಕ್ಕೆ 42 ಬಸ್ಸುಗಳನ್ನು ಕೊಡುವಂಥ ಯೋಜನೆಯನ್ನು ನಾವು ಹಾಕಿಕೊಂಡಿದ್ದೇವೆ, ಆ ವ್ಯವಸ್ಥೆಯನ್ನು ಸರಿಪಡಿಸುತ್ತೇವೆ

ಶ್ರೀ ಚಂದ್ರಶೇಖರ ಸಿ. ಮಾಮನಿ : ಮಾನ್ಯ ಸಭಾಧ್ಯಕ್ಷರೇ, ಮಕ್ಕಳ ಬಸ್‌ಪಾಸ್ ಬಗ್ಗೆ ಹೇಳುವುದಾದರೆ, ಈಗ ಅವರಿಗೆ 40 ಕಿಲೋಮೀಟರ್ ಅಂತರದ ಮೇಲೆ ಬಸ್‌ಪಾಸನ್ನು ಕೊಡುತ್ತಿದ್ದಾರೆ. ತಾಲ್ಲೂಕಾಪ್ಲೇಸಿಗೆ ಹತ್ತಿರವಿರುವಂಥ ಗ್ರಾಮಗಳು ಎರಡುಮೂರು ಕಿಲೋಮೀಟರ್ ಅಂತರದಿಂದ ಶಾಲೆಗೆ ಬರುವಂಥ ಮಕ್ಕಳಿದ್ದಾರಲ್ಲಾ ಅವರಿಗೆ ನೀವು ಬೇರೆ ಗ್ರಾಮದವರು ಅದಕ್ಕೆ ನಿಮಗೆ ಬಸ್‌ಪಾಸನ್ನು ಕೊಡುವುದಿಲ್ಲ ಎಂದು ಅಧಿಕಾರಿಗಳು ಹೇಳುತ್ತಾರೆ. ಅದಕ್ಕೆ ಮಕ್ಕಳು ನಮ್ಮ ಗ್ರಾಮ ಎರಡು ಕಿಲೋಮೀಟರ್ ದೂರವಿದ್ದರೂ ಕೂಡ ನಾವು ಬಸ್ಸನ್ನು ಸವದತ್ತಿಯಲ್ಲೇ ಹತ್ತುತ್ತೇವೆ ಆದರೂ ನಮಗೆ ಸವದತ್ತಿಯಿಂದ ಬಸ್ಸನ್ನು ಹತ್ತುವುದಕ್ಕೆ ಪರವಾನಿಗೆಯನ್ನು ಕೊಡಿ ಎಂದರೆ ಅಲ್ಲಿಯ ಅಧಿಕಾರಿಗಳು ಸಹಕರಿಸುತ್ತಿಲ್ಲ ಅದಕ್ಕೆ ದಯಮಾಡಿ ನಾನು ತಮ್ಮ ಮುಖಾಂತರ ಸಾರಿಗೆ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಅವರು ನಲವತ್ತು ಕಿಲೋಮೀಟರ್ ದೂರದಿಂದ ತಾಲ್ಲೂಕಾಪ್ಲೇಸಿಗೆ ಬಂದಮೇಲೆ ಅವರಿಗೆ ಬಸ್‌ಪಾಸ್ ಕೊಡುವಂಥ ವ್ಯವಸ್ಥೆಯನ್ನು ಅವರು ಮಾಡಬೇಕು. ಮಾಡಲಿಲ್ಲ ಅಂದರೆ ನಮ್ಮ ತಾಲ್ಲೂಕಿನೊಳಗೆ ಅವರು 15ನೇ ತಾರೀಖಿನಿಂದ ಧರಣಿಯನ್ನು ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಅದಕ್ಕೆ ದಯಮಾಡಿ ಈ ಬಗ್ಗೆ ಒಂದು ನಿಖರವಾದ ಉತ್ತರವನ್ನು ಕೊಡಬೇಕೆಂದು ತಮ್ಮ ಮುಖಾಂತರ ನಾನು ಕೇಳುತ್ತಿದ್ದೇನೆ.

ಶ್ರೀ ಕೆ.ಎಸ್. ಬೀಳಗಿ : ಸನ್ಮಾನ್ಯ ಅಧ್ಯಕ್ಷರೆ, ಈ ಸಮಸ್ಯೆ ಇದೆ ಈಗ ನಾವು ಒಂದು ಲಿಮಿಟ್ ಹಾಕಿ ಬಸ್‌ಪಾಸನ್ನು ಕೊಟ್ಟಿರುತ್ತೇವೆ ಅದನ್ನು ಹೊರಡುವ ಜಾಗದಿಂದ ಕಾಲೇಜ್‌ನವರೆಗೆ, ಸ್ಕೂಲ್‌ನವರೆಗೆ 40 ಕಿಲೋಮೀಟರ್ ಒಳಗೆ ನಾವು ಬಸ್‌ಪಾಸನ್ನು ಕೊಡುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳುವುದು 42 ಕಿಲೋಮೀಟರ್ ಅಂತರವಿದ್ದವರಿಗೂ ಕೊಡಿ ಎಂದು. 40ರೊಳಗೆ ಬಂದು ಅಲ್ಲಿಯತನಕ ಪಾಸ್ ತೆಗೆದುಕೊಂಡು ಹೋಗುತ್ತಾರೆ ಅಲ್ಲಿಗೇ ಕೊಡಿ ಎನ್ನುವಂಥ ವಾದ ಬಹಳ ಕಡೆಯಿಂದ ಬರುತ್ತಾ ಇದೆ. ಅದರ ಬಗ್ಗೆ ನಾವು ವಿಚಾರಣೆಯನ್ನು ನಡೆಸಿದ್ದೇವೆ. ಆ ದಿಸೆಯಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಯಾವುದಾದರೂ ಸೂಕ್ತ ಕ್ರಮವನ್ನು ತೆಗೆದುಕೊಂಡು ವ್ಯವಸ್ಥೆಯನ್ನು ಮಾಡುತ್ತೇವೆ ಎಂದು ಹೇಳಬಯಸುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ : ಮಾನ್ಯ ಅಧ್ಯಕ್ಷರೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೈಂದೂರಿನಿಂದ ಕೆಲವು ಬಸ್ ಪ್ರಾರಂಭವಾಗಿವೆ, ಕುಂದಾಪುರದಿಂದ ಕೆಲವು ಬಸ್ಸುಗಳು ಬರುತ್ತಾ ಇದೆ, ಅದೇ ರೀತಿ ಉಡುಪಿಯಿಂದ ಕೆಲವು ಬಸ್ಸುಗಳು ಬರುತ್ತಿದೆ ಮತ್ತು ಮಂಗಳೂರಿನಿಂದ ಪ್ರಾರಂಭವಾಗುತ್ತದೆ. ಹೀಗೆ ಬರುವಂಥ ಎಲ್ಲಾ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವಂಥ ಬಸ್ಸುಗಳು ಕಂಡಂ ಆಗಿವೆ, ತಾವು ದಯವಿಟ್ಟು ನಮ್ಮ ದಕ್ಷಿಣ ಜಿಲ್ಲೆಗೆ ಈ ಬೈಂದೂರು, ಕುಂದಾಪುರ, ಉಡುಪಿ ಮತ್ತೆ ಮಂಗಳೂರು ಹಾಗೂ ಪುತ್ತೂರುಗಳಲ್ಲಿ ಸಂಚರಿಸುವಂಥ ಬಸ್ಸುಗಳು ಕಂಡಂ ಆಗಿರುವುದರಿಂದ ಅದರ ಬದಲಿಗೆ ಹೊಸ ಬಸ್ಸುಗಳನ್ನು ಹಾಕುವುದಕ್ಕೆ ತಾವು ಏರ್ಪಾಡು ಮಾಡಲು ಪ್ರಯತ್ನ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕೆ.ಎಸ್. ಬೀಳಗಿ : ಖಂಡಿತ ಆ ಬಗ್ಗೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ.ಎಸ್. ಪಾಟೀಲ್ : ಮಾನ್ಯ ಸಚಿವರು ಮಾತನಾಡುವಂತಹ ಸಂದರ್ಭದಲ್ಲಿ ಬಳ್ಳಾರಿ ಜಿಲ್ಲೆಗೆ ಹೆಚ್ಚಿನ ಬಸ್ಸುಗಳನ್ನು ಒದಗಿಸಿಕೊಡುತ್ತೇವೆಂದು ಹೇಳಿದರು. ಹಾಗೆಯೇ ಬಿಜಾಪುರದಲ್ಲೂ ಸರಿಯಾದ ಬಸ್ಸಿನ ವ್ಯವಸ್ಥೆ ಇಲ್ಲ, ಕೆಲವೊಂದು ಇಂಟೀರಿಯರ್ ಪೋರ್ಷನ್‌ನಿಂದ ಬಸ್ ಹೋಗುವುದಿಲ್ಲ, ಅಲ್ಲಿನ ಜಿಲ್ಲಾಧಿಕಾರಿಗಳಿಗೆ ನಾವು ಸಾಕಷ್ಟು ಮನವಿಯನ್ನು ಮಾಡಿಕೊಂಡರೂ ಬಸ್ಸು ಇಲ್ಲ, ಚಾಲಕರಿಲ್ಲ, ನಿರ್ವಾಹಕರಿಲ್ಲ ಏನು ಮಾಡುವುದು ಎಂದು ಕೇಳುತ್ತಾರೆ. ಆದುದರಿಂದ ಇದನ್ನೂ ಸರಿಪಡಿಸುವ ದಿಸೆಯಲ್ಲಿ ವಿಚಾರ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಬೀಳಗಿ : ಮಾನ್ಯ ಅಧ್ಯಕ್ಷರೇ, ಈ ಒಳ್ಳೆಯ ಪರಿಸ್ಥಿತಿಯಲ್ಲಿ ಇಲ್ಲದಂಥ ಬಸ್ಸುಗಳನ್ನು ರಿಪ್ಲೇಸ್ ಮಾಡಿ ಇಡೀ ರಾಜ್ಯದಲ್ಲಿ ಈಗ ನಾವು ಖರೀದಿ ಮಾಡುವಂಥ 1500 ಬಸ್ಸುಗಳಲ್ಲಿ 1050 ಬಸ್ಸುಗಳನ್ನು ಇಂತಹ ಕೆಟ್ಟ ಪರಿಸ್ಥಿತಿಯಲ್ಲಿರುವಂಥ ಬಸ್ಸುಗಳನ್ನು ಇಂತಹ ಕೆಟ್ಟ ಪರಿಸ್ಥಿತಿಯಲ್ಲಿರುವಂಥ ಬಸ್ಸುಗಳನ್ನು ಬದಲಾಯಿಸುವ ಸಲುವಾಗಿಯೇ ಉಪಯೋಗ ಮಾಡುವಂಥ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಅದರಲ್ಲಿ ಬಿಜಾಪುರ ಜಿಲ್ಲೆಯೂ ಸೇರಿಕೊಳ್ಳುತ್ತದೆ. ಇಷ್ಟೇ ಅಲ್ಲ ಇನ್ನೂ 500 ಬಸ್ಸುಗಳನ್ನು ಹೆಚ್ಚಿನ ಒಂದು ಸೇವೆಯನ್ನು ಒದಗಿಸಲಿಕ್ಕಾಗಿ ಇಟ್ಟುಕೊಂಡಿದ್ದೇವೆ, ಆ ಒಂದೂ ಸೇವೆಯೂ ಕೂಡ ಅವರಿಗೆ ಸಿಗುತ್ತದೆ. ಜೊತೆಗೆ ಪ್ರತಿಯೊಂದು ತಾಲ್ಲೂಕಿಗೆ ಡಬಲ್ ಡೋರ್ ಬಸ್ಸುಗಳನ್ನು ಕೊಡುವಂಥ ಯೋಜನೆಯೂ ಇದೆ.

ಅಧ್ಯಕ್ಷರು : ವಾಟಾಳ್‌ನಾಗರಾಜ್‌ರವರೇ, ತಮ್ಮ ಮುಜರಾಯಿ ಇಲಾಖೆಗೆ ಸಂಬಂಧಿಸಿದ ಪ್ರಶ್ನೆಗೆ ಕಂದಾಯ ಮಂತ್ರಿಗಳು ಸ್ವಲ್ಪ ಸಮಯವನ್ನು ಬಯಸಿದ್ದಾರೆ....

ಶ್ರೀ ವಾಟಾಳ್ ನಾಗರಾಜ್ : ಇದರಲ್ಲಿ ಸಮಯ ಕೇಳುವಂಥದ್ದು ಕಂದಾಯ ಸಚಿವರು ಏಕೆ ತೆಗೆದುಕೊಂಡರೋ ಗೊತ್ತಿಲ್ಲ, ಏಕೆಂದರೆ ನಾನು ಕೇಳಿದ್ದುದು, ಈ ರಾಜ್ಯದಲ್ಲಿ ಮುಜರಾಯಿ ಇಲಾಖೆಗೆ ಸೇರಿದಂಥ ದೇವಸ್ಥಾನಗಳು ಇರಲಿ,

ಅಧ್ಯಕ್ಷರು : ಅವರು ಸ್ವಲ್ಪ ಸಮಯವನ್ನು ಕೇಳಿದ್ದಾರೆ, ಜಾಲಪ್ಪನವರ ವಿಷಯ ನಿಮಗೆ ಗೊತ್ತಿಲ್ಲವೇ, ಅವರು ಸರಿಯಾದಂಥ ಉತ್ತರವನ್ನು ಕೊಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಅವರ ಬಗ್ಗೆ ನನಗೆ ಅಪಾರವಾದ ಗೌರವ ಇದೆ, ಅದರಲ್ಲಿ ಎರಡನೆ ಅಭಿಪ್ರಾಯ ಇಲ್ಲ... ಬೇರೆ ಮಾತೇ ಇಲ್ಲ...

ಶ್ರೀ ಹೆಚ್.ಎನ್. ನಂಜೇಗೌಡ : ಈಗ ವಾಟಳ್‌ರು ಯಾರ ಬಗ್ಗೆ ಅಪಾರವಾದ ಗೌರವವನ್ನು ಇಟ್ಟುಕೊಂಡಿಲ್ಲ ಎಂಬುದು ನನಗೆ ಅನುಮಾನವಾಗಿದೆ. ಎಲ್ಲರ ಬಗ್ಗೆ ಇಟ್ಟುಕೊಂಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಅಲ್ಲ ಇದು ಬಹಳ ಪ್ರಮುಖವಾದ ಪ್ರಶ್ನೆ....

ಅಧ್ಯಕ್ಷರು : ಬರುತ್ತದೆ, ಅದಕ್ಕೆ ನಾನು ವ್ಯವಸ್ಥೆಯನ್ನು ಮಾಡಿಸಿಕೊಡುತ್ತೇನೆ.

ಕೆರೆಕಲ್ ಹಳ್ಳಿ ಕೆರೆಯನ್ನು ಒತ್ತುವರಿ ಮಾಡಿಕೊಂಡು ನಿವೇಶನ ರಚನೆ

2125 - ಶ್ರೀಮತಿ ಜ್ಯೋತಿರೆಡ್ಡಿ (ಗೌರಿಬಿದನೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗೌರಿಬಿದನೂರು ತಾಲ್ಲೂಕು ಕರೆಕಲ್ಲ ಹಳ್ಳಿಯ ಸೈಟ್ ನಂಬರ್ 129ರಲ್ಲಿ ಕೆರೆಯನ್ನು ಖಾಸಗಿಯವರು ಒತ್ತುವರಿ ಮಾಡಿಕೊಂಡು ನಿವೇಶನ ಮಾಡಿ ಮಾರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರಕಾರ ಕೈಗೊಂಡ ಕ್ರಮಗಳೇನು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಬಂದಿದೆ.

ಆ) ಕೋಲಾರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು ಕರೆಕಲ್ಲಹಳ್ಳಿ ಗ್ರಾಮದ ಸರ್ವೆ ನಂ. 129 ರ 38 ಎಕರೆ 25 ಗುಂಟೆ ಜಮೀನು ಸರ್ಕಾರಿ ಕೆರೆ ಅಂಗಳದ ಜಮೀನಾಗಿರುತ್ತದೆ. ಗೌರಿಬಿದನೂರಿನ ನಿವಾಸಿಯಾದ ಶ್ರೀ ಇಸ್ತೂರಿ ಸುಬ್ಬಯ್ಯ ಶೆಟ್ಟಿ ಇವರ ಹೆಸರಿಗೆ ಮಾಡಲ್ಪಟ್ಟಿರುವ ಖಾತೆಯನ್ನು ಜಿಲ್ಲಾಧಿಕಾರಿಗಳು ಕೋಲಾರ ಇವರ ಕಛೇರಿಯ ನ್ಯಾಯಾಲಯದ ಆದೇಶದ ಸಂಖ್ಯೆ ಆರ್‌ಆರ್‌ಟಿ:ಸಿಆರ್ 310:90-91, ದಿನಾಂಕ 18-1-1991ರಲ್ಲಿ ವಜಾ ಮಾಡಿದ್ದರು. ಜಿಲ್ಲಾಧಿಕಾರಿಗಳ ಆದೇಶದ ವಿರುದ್ಧ ಪ್ರತಿವಾದಿಯಾದ ಶ್ರೀ ಇಸ್ತೂರಿ ಸುಬ್ಬಯ್ಯ ಶೆಟ್ಟಿ ಇವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 2573:91ನ್ನು ಸಲ್ಲಿಸಿದ್ದು, ಉಚ್ಚ ನ್ಯಾಯಾಲಯವು ಜಿಲ್ಲಾಧಿಕಾರಿಗಳ ದಿನಾಂಕ 18-1-91ರ ಆದೇಶವನ್ನು ರದ್ದುಗೊಳಿಸಿದ್ದರ ಮೇರೆಗೆ ಸರ್ಕಾರಿ ವಕೀಲರು ಸಿವಿಲ್ ಪಿಟಿಷನ್ ದಾಖಲು ಮಾಡಿದ್ದು ಪ್ರಕರಣವು ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ. ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣವನ್ನು ಆದಷ್ಟು ಬೇಗ ಇತ್ಯರ್ಥ ಮಾಡಲು ಕ್ರಮ ಕೈಗೊಳ್ಳುವಂತೆ ಸರ್ಕಾರಿ ವಕೀಲರನ್ನು ಕೋರಲಾಗಿದೆ.

ಶ್ರೀಮತಿ ಜ್ಯೋತಿರೆಡ್ಡಿ : ಮಾನ್ಯ ಅಧ್ಯಕ್ಷರೆ, ಸರ್ವೆ ನಂ. 129, ಕರೆಕಲ್ಲಹಳ್ಳಿ ಕೆರೆಯನ್ನು ಒಬ್ಬ ಖಾಸಗಿ ವ್ಯಕ್ತಿ ಶ್ರೀ ಸುಬ್ಬಯ್ಯ ಶೆಟ್ಟಿ ಎನ್ನುವವರು ಈಗಲೂ ಸಹ ಸೈಟುಗಳನ್ನು ಮಾಡಿ, ಮೂರು ದಿವಸದ ಹಿಂದೆಯೂ ಸಹ ಕೆಲವರಿಗೆ ಮಾರಿರುವಂಥ ಪ್ರಕರಣ ಇದೆ. ಆ ಬಗ್ಗೆ ನ್ಯಾಯಾಲಯದಲ್ಲಿ ಪಬ್ಲಿಕ್ ಇಂಟರೆಸ್ಟ್ ಪಿಟಿಷನ್ ಅನ್ನು ಹಾಕಿಕೊಂಡಿದ್ದೇವೆ. ಆದರೂ ಅದನ್ನು ಅವರು ಅಂಗೀಕರಿಸದೆ ಈ ಕೆರೆಯಲ್ಲಿ ಸೈಟುಗಳನ್ನು ಮಾಡಿ ಮಾರುವಂತಹ ಪ್ರಕರಣ ಈಗಲೂ ನಡೆಯುತ್ತಿದೆ ಇದರ ಬಗ್ಗೆ ಕಂದಾಯ ಮಂತ್ರಿಗಳು ತಿಳಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ಬಹುಶಃ ನನಗಿಂತಲೂ ನಿಮಗೆ ಈ ವಿಷಯದಲ್ಲಿ ಹೆಚ್ಚಾಗಿ ಗೊತ್ತಿದೆ, ಇದರಲ್ಲಿ ಹೇಗೋ ಮಾಡಿ ಅವರ ಹೆಸರಿಗೆ ಖಾತೆಯನ್ನು ಮಾಡಿಸಿಕೊಂಡು ಬಿಟ್ಟಿದ್ದರು. ಇದನ್ನು ಕೋಲಾರ ಜಿಲ್ಲೆಯ ಡೆಪ್ಯೂಟಿ ಕಮಿಷನ್‌ರವರು, ಇವರು ಮಾಡುತ್ತಿರುವುದು ಅನ್ಯಾಯ ಎಂದು ಹೇಳಿ ಅದನ್ನು ವಜಾ ಮಾಡಿದರು. ವಜಾ ಮಾಡಿದ 15 ದಿವಸದೊಳಗಾಗಿ ಪಾಪ ಅವರನ್ನು ಅಲ್ಲಿಂದ ವರ್ಗಾವಣೆ ಮಾಡಿದರು, ನಾನೇ ಅವತ್ತು ಈ ಸದನದಲ್ಲಿ ಈ ತರಹ ಅವರನ್ನು ವಜಾ ಮಾಡಿದ್ದಾರೆ ಇದು ಕೋಟ್ಯಾಂತರ ರೂಪಾಯಿಯ ಆಸ್ತಿ, ಅವರು ಮಾಡಿರುವುದು ಸರಿಯಾಗಿದೆ ಏತಕ್ಕೆ ಹೀಗೆ ಮಾಡಿದಿರಿ ಎಂದು ಕೇಳಿದ್ದಕ್ಕೆ ಉತ್ತರವನ್ನೂ ಕೊಟ್ಟರು. ಆಯಿತು. ಅದಾದ ಮೇಲೆ ಅದನ್ನು ವಿರೋಧಿಸಿ ಹೈಕೋರ್ಟಿಗೆ ಬಂದು ಅವರು ಒಂದು ಕೇಸ್ ಹಾಕಿದರು. ಅಲ್ಲಿ ಆ ಡೆಪ್ಯೂಟಿ ಕಮಿಷನರ್ ಮಾಡಿದಂತಹ ಆರ್ಡರನ್ನು ಸೆಟ್‌ಅಸೈಡ್ ಮಾಡಿದರು. ಅದಕ್ಕೆ ಮತ್ತೆ ಒಂದು ಸಿವಿಲ್ ಪಿಟಿಷನ ಹಾಕಿ ಅದೇ ಜಡ್ಜ್ ಮುಂದೆ ಆ ಕೇಸ್ ಇನ್ನೂ ಇದೆ. ನಾವು 24-4-95ರಲ್ಲಿ ಅಡ್ವೋಕೇಟ್ ಜನರಲ್‌ರವರಿಗೆ ಒಂದು ಪತ್ರವನ್ನು ಬರೆದು ತಾವೇ ಇದನ್ನು ಆಸಕ್ತಿವಹಿಸಿ ಈ ಕೇಸ್ ಬಂದಾಗ ಆರ್ಗ್ಯುಮೆಂಟ್ ಮಾಡಬೇಕೆಂದು ಹೇಳಿದ್ದೇವೆ. ನಾವು ಸರ್ವ ಪ್ರಯತ್ನ ಮಾಡಿ ಈ ಜಮೀನನ್ನು ಸರ್ಕಾರಕ್ಕೆ ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಪಡುತ್ತೇನೆ ಎಂದು ಈ ಸಮಯದಲ್ಲಿ ನಾನು ಆಶ್ವಾಸನೆಯನ್ನು ಕೊಡುವುದಕ್ಕೆ ಬಯಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಂರೆಡ್ಡಿ : ಮಾನ್ಯ ಅಧ್ಯಕ್ಷರೆ, ಇದರಲ್ಲಿ ಎರಡು ಪ್ರಶ್ನೆಗಳು ಇವೆ. ಅದಕ್ಕೆ ಮಾನ್ಯ ಕಂದಾಯ ಸಚಿವರು ಗಮನಹರಿಸಬೇಕಾಗುತ್ತದೆ. ಈ

ಉಚ್ಛನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿಯ ರಿಟ್ ಅರ್ಜಿ ಹಾಕಿದೆ. ಆ ರಿಟ್ ಪಿಟಿಷನ್‌ನಿಂದಲೇ ನಾವು ಸ್ಟೇ ಮಾಡಿಸಿದ್ದುದು. ಅದರ ಮೇಲೆ ಅವರು ಮತ್ತೆ ಸ್ಟೇ ಮಾಡಿಸಿರತಕ್ಕಂಥದ್ದು. ಆದರೆ ಸರ್ಕಾರ ತಾನಾಗಿ ತಾನು ಆ ಸ್ಟೇಯನ್ನು ವೆಕೇಟ್ ಮಾಡಿಸಲಿಕ್ಕೆ ಪ್ರಯತ್ನ ಮಾಡಲಿಲ್ಲ. ಮತ್ತು ಸರ್ಕಾರದ ವಕೀಲರು ಅದನ್ನು ಮಾಡಲಿಲ್ಲ. ಅದಕ್ಕೋಸ್ಕರ ನಾನು ಕೇಳುವುದು ಹೈಕೋರ್ಟಿನಲ್ಲಿ ತಡೆಯಾಜ್ಞೆ ಏನು ಇದೆ ಅದನ್ನು ತೆರವು ಮಾಡಿಸಲಿಕ್ಕೆ ಸರ್ಕಾರದವರು ಪಿಟಿಷನ್ ಹಾಕಿಲ್ಲ. ಅದು ಸಾರ್ವಜನಿಕ ಹಿತಾಸಕ್ತಿಯ ರಿಟ್ ಅರ್ಜಿ ಮಾತ್ರ ಉಚ್ಛನ್ಯಾಯಾಲಯದ ಮುಂದೆ ಇದೆ ಅನ್ನತಕ್ಕಂಥದ್ದು ಒಂದು ಪ್ರಶ್ನೆ. ಆದರೆ ನಾನು ಕೇಳತಕ್ಕಂಥದ್ದು, ಸರ್ಕಾರ ತಾನೂ ಕೂಡ ಸ್ವತಃ ಆ ಸ್ಟೇಯನ್ನು ತೆರವು ಮಾಡಿಸಲಿಕ್ಕೆ ಒಂದು ಅರ್ಜಿಯನ್ನು ಹಾಕಬೇಕು. ಇದು ಒಂದು. ಎರಡನೆಯದು, ಈಗ ಅಲ್ಲಿ ಏನಾಗಿದೆ ಅಂದರೆ ಅನಧಿಕೃತವಾಗಿ ಆತ ಮಾರಾಟ ಮಾಡುತ್ತಿದ್ದಾನೆ. ಆ ರೀತಿ ಮಾರಾಟ ಮಾಡಿ ಕೆಲವರಿಗೆ ಗುಡಿಸಲು ಹಾಕಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾನೆ. ಅದನ್ನು ತಡೆಯಲಿಕ್ಕೆ ಸರ್ಕಾರ ಏನು ಕ್ರಮವನ್ನು ತೆಗೆದುಕೊಂಡಿದೆ? ಇದು ಅನಧಿಕೃತವಾಗಿ ಮಾರಾಟವಾಗುತ್ತಿದೆ, ಅಲ್ಲಿ ಸುಮಾರು ವರ್ಷಗಳಿಂದ ದೊಡ್ಡ ಹೋರಾಟ ನಡೆಯುತ್ತಿದೆ, ಅದಕ್ಕೋಸ್ಕರ ನಾನು ಕಂದಾಯ ಮಂತ್ರಿಗಳನ್ನು ಕೇಳತಕ್ಕಂಥದ್ದು, ಅದು ಬಹಳ ಬೆಲೆ ಬಾಳತಕ್ಕಂಥ ಜಮೀನು ಸುಮಾರು 38 ಎಕರೆಯಷ್ಟು ಅದು ಇದೆ. ಆದರಿಂದ ಈ ಮೂರು ಪ್ರಶ್ನೆಗಳಿಗೆ ಕಂದಾಯ ಮಂತ್ರಿಗಳು ಉತ್ತರಿಸುವ ಅಗತ್ಯ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಹೇಳಿದ ಹಾಗೆ ಏನು ರಿಟ್ ಪಿಟಿಷನ್‌ನ್ನು ಫೈಲ್ ಮಾಡಿದ್ದರು ಮೊದಲು, ಆ ರಿಟ್ ಪಿಟಿಷ್‌ನನ್ನು ಎತ್ತಿಹಿಡಿದು ಜಿಲ್ಲಾಧಿಕಾರಿಗಳ ಒಂದು ಆಜ್ಞೆಯನ್ನು ಸೆಟ್ ಅಸೈಡ್ ಮಾಡಿದರು. ಪುನಃ ಸರ್ಕಾರದವರೇ ಒಂದು ಸಿವಿಲ್ ಪಿಟಿಷನನ್ನು ಫೈಲ್ ಮಾಡಿ ಆ ಕೇಸನ್ನು ರಿಓಪನ್ ಮಾಡಿಸಿದ್ದೇವೆ ಈಗ ಅದು ಜಡ್ಜ್ ಮುಂದೆ ಇದೆ. ಸನ್ಮಾನ್ಯ ಶ್ರೀರಾಂರೆಡ್ಡಿಯವರು ಹೇಳುವುದನ್ನು ವಾಸ್ತವಿಕವಾಗಿ ನಾನು ಒಪ್ಪಿಕೊಳ್ಳುತ್ತೇನೆ. ಅದು ಬಹಳ ಬೆಲೆಯುಳ್ಳಂಥ ಜಮೀನು. ಇದು ಹಲವಾರು ಕಾರಣಗಳಿಂದ ಇದನ್ನು ಹೇಳುವುದು ಅನಾವಶ್ಯಕ, ನಾನು ಹೇಳುವುದಕ್ಕೂ ಇಷ್ಟಪಡುವುದಿಲ್ಲ. ಆದರೆ ಒಂದು ಮಾತನ್ನು ಹೇಳುತ್ತೇನೆ. ಇದನ್ನು ನಾನು ಕೂಡಲೇ ಸನ್ಮಾನ್ಯ ಅಡ್ವೋಕೇಟ್ ಜನರಲ್‌ರವರ ಹತ್ತಿರ ಮಾತನಾಡಿ ಬೇಗ ಇತ್ಯರ್ಥಗೊಳಿಸುವುದಕ್ಕೆ ಸಾಧ್ಯ ಇದೆ ಎಂಬುದರ ಬಗ್ಗೆ ನಾನು ಕ್ರಮ ಕೈಗೊಳ್ಳುತ್ತೇನೆ.

ಮಾರಾಟ ತಡೆಗಟ್ಟುವ ಬಗ್ಗೆಯೂ ಕೂಡ ಮಾನ್ಯ ಸದಸ್ಯರು ಹೇಳಿದ್ದಾರೆ. ಅದರ ಬಗ್ಗೆ ಕೂಡ ನಾನು ಅಡ್ವೋಕೇಟ್ ಜನರಲ್ ಅವರೊಡನೆ ಚರ್ಚೆ ಮಾಡುತ್ತೇನೆ. ಕಾನೂನು ಮಂತ್ರಿಗಳೂ ಸೇರಿದಂತೆ 3-4 ಜನ ಕುಳಿತು ಈ ಬಗ್ಗೆ ಚರ್ಚೆ ಮಾಡೋಣ.

ಬೆಂಗಳೂರಿನಲ್ಲಿ ಪಶು ವಿಶ್ವವಿದ್ಯಾಲಯ ಸ್ಥಾಪನೆ

158 - ಶ್ರೀ ಆರ್. ಕೃಷ್ಣಪ್ಪ (ಜಯಮಹಲ್) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಪಶುವೈದ್ಯ ಕಾಲೇಜುಗಳೆಷ್ಟು?

ಆ) ಬೆಂಗಳೂರಿನಲ್ಲಿ ಪಶು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಇ) ಹಾಗಿದ್ದಲ್ಲಿ ಯಾವಾಗ ಈ ಉದ್ದೇಶಿತ ಪಶು ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗುವುದು;

ಈ) ಇದಕ್ಕಾಗಿ ತಗಲುವ ವಾರ್ಷಿಕ ಖರ್ಚು ಎಷ್ಟು?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) ಎರಡು. ಒಂದು ಬೆಂಗಳೂರಿನಲ್ಲಿ ಮತ್ತೊಂದು ಬೀದರಿನಲ್ಲಿದೆ.

ಆ) ಪರಿಶೀಲನೆಯಲ್ಲಿಲ್ಲ

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

ಶ್ರೀ ಆರ್. ಕೃಷ್ಣಪ್ಪ : ಸನ್ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಒಟ್ಟು 7 ವಿಶ್ವವಿದ್ಯಾನಿಲಯಗಳಿವೆ. ಬೆಂಗಳೂರು, ಮೈಸೂರು, ಗುಲ್ಬರ್ಗಾ, ಧಾರವಾಡ, ಮಂಗಳೂರು, ಕುವೆಂಪು ಹಾಗೂ ಕನ್ನಡ ವಿಶ್ವವಿದ್ಯಾನಿಲಯಗಳಿವೆ. ಇದರ ಜೊತೆಗೆ ಎರಡು ಕೃಷಿ ವಿಶ್ವವಿದ್ಯಾನಿಲಯಗಳಿವೆ. ಆದರೆ ಒಂದೂ ಪಶು ವಿಶ್ವವಿದ್ಯಾನಿಲಯ ಇಲ್ಲ. ಡೆನ್ಮಾರ್ಕ್ ಹಾಗೂ ಆಸ್ಟ್ರೇಲಿಯಾದಂತಹ ದೇಶಗಳಲ್ಲಿ ಪಶುಸಂಗೋಪನೆಗೆ ಹೆಚ್ಚಿನ ಗಮನ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ರೈತನ ಉಪ ಕಸುಬುಗಳಾದ ಪಶು ಸಂಗೋಪನೆಗೆ ಹೆಚ್ಚು ಮಹತ್ವ ನೀಡುವುದು ಅಗತ್ಯವಲ್ಲವೇ? ರೈತರ ಬೆಳೆಗಿಂತಲೂ ಹೆಚ್ಚು ಮಹತ್ವ ಇರುವಂತಾದ್ದು ಇದು. ಇದರಿಂದ ರೈತನಿಗೆ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳುತ್ತದೆ. ಇತ್ತೀಚೆಗೆ ಪ್ರಾಣಿಗಳಿಗೆ ಹಲವಾರು ಬಗೆಯ ಖಾಯಿಲೆಗಳು ಬರುತ್ತಿವೆ. ಖಾಯಿಲೆಗಳಿಂದ ಹಲವಾರು ಪ್ರಾಣಿಗಳು ಸಾಯುತ್ತಿವೆ. ಆದುದರಿಂದ ಪ್ರಾಣಿ ಸಾಕಾಣಿಕೆದಾರರಿಗೆ ಬಹಳ ನಷ್ಟವುಂಟಾಗುತ್ತಿದೆ. ಇದರಿಂದ ಪಶು ಸಂಗೋಪನಾ ವಿಭಾಗದಲ್ಲಿ ಸಂಶೋಧನೆಯನ್ನು ಅಭಿವೃದ್ಧಿಗೊಳಿಸಲು ಪಶು ವಿಶ್ವವಿದ್ಯಾನಿಲಯ ನಮಗೆ ಬೇಕೇ ಬೇಕು. ದೇಶದಲ್ಲಿ ಮೊದಲ ಬಾರಿಗೆ ಇಂತಹ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿ, ಜನತಾದಳ ಸರ್ಕಾರಕ್ಕೆ ಹೆಸರು ಪಡೆಯಲು ಕ್ರಮ ಕೈಗೊಳ್ಳುವುದು ಸೂಕ್ತ. ಈ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದರೆ ಪಶು ಸಂಗೋಪನಾ ಕ್ಷೇತ್ರದಲ್ಲಿ ಹೆಚ್ಚಿನ ಅಭಿವೃದ್ಧಿ ಸಾಧಿಸಬಹುದು. ಕೇಂದ್ರ ಸರ್ಕಾರ ಹಾಗೂ ಹೊರ ದೇಶಗಳ ನೆರವನ್ನು ಪಡೆಯಲೂ ಸಹಾ ಸಾಧ್ಯವಾಗುತ್ತದೆ. ಇದರ ಬಗ್ಗೆ ಸರ್ಕಾರ ದಯವಿಟ್ಟು ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಈಗ ನಮ್ಮ ವೈದ್ಯರು ಎಷ್ಟು ಅವಶ್ಯಕ ಇದ್ದಾರೋ, ಅಷ್ಟು ಅವಶ್ಯಕತೆಗೆ....

ಅಧ್ಯಕ್ಷರು : ಮಾನ್ಯ ಸದಸ್ಯರ ಪ್ರಶ್ನೆಯ ಮುಖ್ಯ ಉದ್ದೇಶ ಇಷ್ಟೆ. ರಾಜ್ಯದಲ್ಲಿ ವಿಶ್ವವಿದ್ಯಾನಿಲಯ ಇದೆ, ರೆಗ್ಯುಲರ್ ವಿಶ್ವವಿದ್ಯಾನಿಲಯಗಳಿವೆ, ಪಶು ವೈದ್ಯಕೀಯ ವಿಶ್ವವಿದ್ಯಾನಿಲಯವನ್ನು ರಾಜ್ಯದಲ್ಲಿ ಸ್ಥಾಪಿಸುವ ಉದ್ದೇಶವಿದೆಯೇ ಎಂದು ಮಾನ್ಯ ಸದಸ್ಯರು ಸರ್ಕಾರವನ್ನು ಕೇಳುತ್ತಿದ್ದಾರೆ. ಇದೊಂದು ಉತ್ತಮವಾದ ಸಲಹೆಯಾಗಿದೆ. ಆ ರೀತಿ ಪಶು ವಿಶ್ವವಿದ್ಯಾನಿಲಯ ಸ್ಥಾಪಿಸುವ ಸಾಧ್ಯತೆ ಇದ್ದರೆ, ಆಯಿತು ನಾವು ಮಾಡುತ್ತೇವೆ ಎಂದು ಹೇಳಿ, ಇಲ್ಲದಿದ್ದರೆ ಹಣಕಾಸಿನ ತೊಂದರೆ ಇದೆ ಎಂದು ಉತ್ತರ ಹೇಳಿ.

ಶ್ರೀ ಸಿ. ಬೈರೇಗೌಡ : ಈಗ ಅವಶ್ಯಕತೆಗೆ ತಕ್ಕಂತೆ ಪಶು ವೈದ್ಯರು ಎರಡು ವಿಶ್ವವಿದ್ಯಾನಿಲಯಗಳ ವ್ಯಾಪ್ತಿಯಲ್ಲಿ ಬರತಕ್ಕಂಥ ಕಾಲೇಜುಗಳಿಂದ ಹೊರ ಬರುತ್ತಿದ್ದಾರೆ.

ಈಗಿನ ಅವಶ್ಯಕತೆಯನ್ನು ಗಮನಿಸಿದರೆ, ಪ್ರತ್ಯೇಕವಾಗಿ ಪಶು ವಿಶ್ವವಿದ್ಯಾನಿಲಯವನ್ನು ತೆರೆಯಬೇಕಾದ ಅವಶ್ಯಕತೆ ಉದ್ಭವವಾಗುವುದಿಲ್ಲ.

ತಡೆರಹಿತ ಬಸ್ಸುಗಳು ಹೆದ್ದಾರಿ ಹೋಟೆಲ್ ಬಳಿ ನಿಲುಗಡೆಯಾಗುತ್ತಿರುವುದು

1706 - ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರಿನಿಂದ ಮೈಸೂರಿಗೆ, ಮೈಸೂರಿನಿಂದ ಬೆಂಗಳೂರಿಗೆ ಓಡಾಡುವ ತಡೆರಹಿತ ಬಸ್ಸುಗಳು ಸ್ವಚ್ಛತೆ ಇಲ್ಲದೆ ತಿಂಡಿಕೊಡುವ ಹೆದ್ದಾರಿಯ ಹೋಟೆಲ್‌ಗಳ ಬಳಿ ನಿಲ್ಲಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ವಿಷಯದಲ್ಲಿ ಕೈಗೊಂಡ ಕ್ರಮಗಳೇನು?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ಹೌದು

ಆ) ಬಸ್ಸುಗಳನ್ನು ಅನಧಿಕೃತ ಸ್ಥಳಗಳಲ್ಲಿ ನಿಲ್ಲಿಸುವುದನ್ನು ತಡೆಗಟ್ಟಲು ಆಗಿಂದಾಗ್ಗೆ ತಪಾಸಣೆ ಮಾಡಲಾಗುತ್ತಿದೆ. ಹಾಗೂ ಅನಧಿಕೃತ ಸ್ಥಳಗಳಲ್ಲಿ ಬಸ್ಸುಗಳನ್ನು ನಿಲ್ಲಿಸುವ ಸಿಬ್ಬಂದಿಗಳ ಮೇಲೆ ಕ್ರಮ ಜಾರಿಗೊಳಿಸಲಾಗುತ್ತಿದೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಒದಗಿಸಿರುವ ಉತ್ತರದ ಪ್ರಕಾರ, ಮೈಸೂರು ಮತ್ತು ಬೆಂಗಳೂರು ಹೆದ್ದಾರಿಗಳಲ್ಲಿ ಓಡಾದತಕ್ಕಂಥ ಬಸ್ಸುಗಳೇನಿವೆ, ಅವುಗಳು ನಾಯಿಕೊಡೆಗಳಂತೆ ಬೆಳೆದಿರತಕ್ಕ ದಾಬಾ ಹೋಟೆಲ್‌ಗಳ ಮುಂದೆ ಊಟಕ್ಕಾಗಿ ನಿಲ್ಲಿಸಿ, ಜನರು ದಾಬಾಗಳಲ್ಲಿರುವ ಆರೋಗ್ಯ ಇಲ್ಲದಿರತಕ್ಕಂಥ ತಿಂಡಿ ತಿನಿಸುಗಳನ್ನು ತಿನ್ನುವಂತಾಗಿದೆ. ದಾಬಾಗಳಲ್ಲಿ ತಿಂಡಿ ನಿಂತು ನನಗೂ ಕೂಡ ಅನಾರೋಗ್ಯವಾಗಿ 15 ದಿವಸಗಳ ಕಾಲ ನರಳಬೇಕಾಯಿತು.

ಅಧ್ಯಕ್ಷರು : ತಾವು ಕಾರಿನಲ್ಲಿ ಬರುತ್ತಿರಲ್ಲವೇ?

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಇಲ್ಲಾ ಸಾರ್. ನಾವುಗಳು ಬಸ್ಸಿನಲ್ಲಿಯೇ ಬರುತ್ತೇವೆ.

ಅಧ್ಯಕ್ಷರು : ಮಾನ್ಯ ಸಾರಿಗೆ ಮಂತ್ರಿಗಳೇ, ಒಂದು ಕೆಲಸ ಮಾಡಿ. ಮಾನ್ಯ ಸದಸ್ಯರಾದ ಶಂಕರಲಿಂಗೇಗೌಡರವರು ಇರುವ ಬಸ್ಸನ್ನು, ಅವರು ಸೂಚಿಸಿದ ಸ್ಥಳದಲ್ಲೇ ಊಟಕ್ಕಾಗಿ ನಿಲ್ಲಿಸುವಂತೆ ಡ್ರೈವರ್‌ಗೆ ಸೂಚಿಸಿ. ಡ್ರೈವರ್ ಇಷ್ಟ ಬಂದ ಜಾಗದಲ್ಲಿ ಊಟಕ್ಕಾಗಿ ಬಸ್ಸು ನಿಲ್ಲಿಸುವುದು ಬೇಡ.

(ನಗು)

ಶ್ರೀ ವಿ. ಮಾರುತಿರಾವ್ ಪವಾರ್ : ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ನಾನು ಸಾರಿಗೆ ಮಂತ್ರಿಗಳಲ್ಲಿ ಒಂದು ಮನವಿಯನ್ನು ಮಾಡಿಕೊಳ್ಳುತ್ತೇನೆ. ಇವಕ್ಕೆ ಒಂದು ಪರಿಹಾರ ಕಂಡು ಹಿಡಿಯಬಹುದೆಂದು ನನ್ನ ಭಾವನೆಯಾಗಿದೆ. ಈಗಾಗಲೇ ಮೈಸೂರು ಬೆಂಗಳೂರು ಹೆದ್ದಾರಿಗಳಲ್ಲಿ ತಲೆ ಎತ್ತಿರುವ ಹೋಟೆಲ್‌ಗಳ ಬದಲಾಗಿ ತಾವು ಸರ್ಕಾರದಿಂದಲೇ ಒಂದು ಸುಸಜ್ಜಿತವಾದಂತಹ, ವ್ಯವಸ್ಥಿತವಾದಂತಹ, ಎಲ್ಲಾ ರೀತಿ ಅಚ್ಚುಕಟ್ಟಾಗಿರುವ ಸೌಲಭ್ಯಗಳಿರತಕ್ಕ ಒಂದು ಹೋಟೆಲ್ ಅನ್ನು ಮಾಡಿ. ಈ ರೀತಿ ಹೋಟೆಲ್‌ಗಳನ್ನು ಮಾಡುವುದಕ್ಕೆ ತಡವಾದರೆ, ಈಗ ಸರ್ಕಾರಿ ಬಸ್ಸು ಸ್ಟ್ಯಾಂಡ್‌ಗಳಲ್ಲೇ ಹೋಟೆಲ್‌ಗಳಿವೆ.

ಅಧ್ಯಕ್ಷರು : ಈಗಾಗಲೇ ಹೆಚ್ಚಿನ ಸಮಯವಾಯಿತು. ಆ ವಿಚಾರ ಇರ್ಲಿ ಬಿಡಿ. ತಾವು ತಮ್ಮ ಸಲಹೆಯನ್ನು ಕೊಟ್ಟಿರಲ್ಲಾ.

ಶ್ರೀ ವಿ. ಮಾರುತಿರಾವ್ ಪವಾರ್ : ಹೋಟೆಲ್‌ಗಳಲ್ಲಿ ಲೋಟ ತೊಳೆಯುವುದಿಲ್ಲ. ಅಲ್ಲಿದ್ದ ತಿಂಡಿಯನ್ನೇ ತಿನ್ನಬೇಕು, ನೀರನ್ನು ಕುಡಿಯಬೇಕು. ಅದರ ಬಗ್ಗೆ ಈಗಾಗಲೇ ನಾವು ಕ್ರಮ ಜರುಗಿಸಿದ್ದೇವೆ ಎಂಬ ಮಾತನ್ನು ಮಾನ್ಯ ಸಾರಿಗೆ ಮಂತ್ರಿಗಳು ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ. ಅವರು ಯಾರ್‍ಯಾರ ಮೇಲೆ ಕ್ರಮ ಜರುಗಿಸಿದ್ದಾರೆ ಎಂಬುದನ್ನು ತಿಳಿಸಬೇಕು.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೇ, ಸರ್ಕಾರವು ಉತ್ತರವನ್ನು ಯಾವ ರೀತಿ ಬೇಕಾದರೂ ಹೇಳಲಿ. ಅದರ ಬಗ್ಗೆ ನಾವೇನೂ ಹೇಳುತ್ತಿಲ್ಲ. ಆದರೆ ನಮ್ಮ ಸರ್ಕಾರಕ್ಕೆ ಭೂತಕಾಲಕ್ಕೂ, ವರ್ತಮಾನಕಾಲಕ್ಕೂ ವ್ಯತ್ಯಾಸ ಗೊತ್ತಾಗಿಲ್ಲವಲ್ಲಾ ಎಂದು ನಮಗನಿಸುತ್ತದೆ. ಕೈಗೊಂಡಿರುವ ಕ್ರಮಗಳೇನು ಎಂದು ಪ್ರಶ್ನೆಯನ್ನು ಕೇಳಿದ್ದಾರೆ. 'ಅಲ್ಲಿ ತಪಾಸಣೆ ಮಾಡುತ್ತಿದ್ದೇವೆ,' ಎಂದು ಉತ್ತರಿಸಿದ್ದಾರೆ. ಅಂದರೆ ಅದರ ಅರ್ಥ ನಿಮ್ಮ ಪ್ರಶ್ನೆಗೆ ಉತ್ತರ ಕೊಡಬೇಕಾಗಿಲ್ಲ, ತಪಾಸಣೆ ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ.

ಅಧ್ಯಕ್ಷರು : ನೀವು ಹೇಳುವುದು ಸರಿ. ಪ್ರೈಮರಿ ಸ್ಕೂಲ್‌ಗಳಲ್ಲಿ 'ಇವತ್ತು ವ್ಯಾಕರಣ ಹೇಳಿಕೊಡಲಿಕ್ಕೆ ಉಪಾಧ್ಯಾಯರುಗಳೇ ಇಲ್ಲ. ಏನು ಮಾಡುವುದಕ್ಕಾಗುತ್ತದೆ?

ಶ್ರೀ ಎ. ರಾಮದಾಸ್ : ಕ್ರಮವನ್ನು ಕೈಗೊಳ್ಳುತ್ತಿದ್ದೇವೆ' ಎಂದರೆ ಏನರ್ಥ? 'ಎಲ್ಲಿಯವರೆಗೆ ಬೇಕಾದರೂ ಕ್ರಮ ಕೈಗೊಳ್ಳುತ್ತೇವೆ ಎಂದು ಅರ್ಥ. ಸ್ಪಷ್ಟವಾದ ಉತ್ತರವೇ ಇಲ್ಲಿಲ್ಲ.

ಅಧ್ಯಕ್ಷರು : ಈಗ ಕನ್ನಡದ ವ್ಯಾಕರಣವನ್ನು ಸರಿಯಾಗಿ ಕಲಿಸುವಂತಹ ವ್ಯವಸ್ಥೆಯನ್ನು ಮಾಡೋಣ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಾರಿಗೆ ಮಂತ್ರಿಗಳು 'ಕ್ರಮ ತೆಗೆದುಕೊಂಡಿದ್ದೇವೆ' ಎಂದು ಹೇಳಿದ್ದಾರೆ. ಎಷ್ಟು ಜನರ ಮೇಲೆ ಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ಅವರು ತಿಳಿಸಲಿ. ಖಂಡಿತವಾಗಿಯೂ ಯಾರ ಮೇಲೂ ಕ್ರಮ ತೆಗೆದುಕೊಂಡಿಲ್ಲ. ಅವರು ಕೊಡತಕ್ಕಂಥ 50 ಅಥವಾ 100 ರೂ.ಗಳ ಆಮಿಷಕ್ಕಾಗಿ ಹೆದ್ದಾರಿಯಲ್ಲಿರುವ ಕೆಟ್ಟ ಹೋಟೆಲ್‌ಗಳ ಬಳಿ ಊಟಕ್ಕಾಗಿ ಬಸ್ಸು ನಿಲ್ಲಿಸಿ, ಜನರ ಆರೋಗ್ಯವನ್ನು ಕೆಡಿಸತಕ್ಕಂಥ ಈ ಒಂದು ಪ್ರವೃತ್ತಿ ಬಿಡಬೇಕು. ಈಗಾಗಲೇ ಮದ್ದೂರು ಹಾಗೂ ಚನ್ನಪಟ್ಟಣಗಳ ಬಸ್‌ಸ್ಟ್ಯಾಂಡ್‌ಗಳಲ್ಲಿ ನಮ್ಮ ಸರ್ಕಾರದ ಹೋಟೆಲ್‌ಗಳಿವೆ. ಆ ಹೋಟೆಲ್‌ಗಳನ್ನು ಶುಚಿತ್ವಗೊಳಿಸಿ ಆ ಹೋಟೆಲ್‌ಗಳ ಮುಖಾಂತರ ಒಳ್ಳೆಯ ಆಹಾರ ಕೊಡಲಿಕ್ಕೆ ವ್ಯವಸ್ಥೆ ಮಾಡಿ. ಹೆದ್ದಾರಿಗಳಲ್ಲಿರುವ ಹೋಟೆಲ್‌ಗಳಿಂದ ನಾಗರೀಕರಿಗೆ ಅನುಕೂಲವಾಗುವುದಿಲ್ಲ ಎಂಬ ಮಾತನ್ನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ.

ಅಧ್ಯಕ್ಷರು : ಮಾನ್ಯ ಸಾರಿಗೆ ಮಂತ್ರಿಗಳು, ತಾವು ನೀಡಿರುವ ಎಲ್ಲಾ ಸಲಹೆಗಳನ್ನೂ ಪರಿಶೀಲನೆ ಮಾಡುತ್ತಾರೆ.

ಶ್ರೀ ಕೆ.ಎಸ್. ಬೀಳಗಿ : ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ಅನೇಕ ಕಾರ್ಯಕ್ರಮಗಳನ್ನು ನಾವು ಜರುಗಿಸಿದ್ದೇವೆ. ಚಾಲಕರುಗಳ 204 ಪ್ರಕರಣಗಳಲ್ಲಿ, 21 ಚಾಲಕರುಗಳ ಇಂಕ್ರಿಮೆಂಟ್ ಅನ್ನು ತಡೆಹಿಡಿಯಲಾಗಿದೆ. ಕಂಡಕ್ಟರ್‌ಗಳ ಮೇಲೆ ಇರುವ 500 ಪ್ರಕರಣಗಳಲ್ಲಿ, ಪ್ರತಿಯೊಬ್ಬರಿಗೆ 500 ರೂ.ನಂತೆ ದಂಡ ವಸೂಲಿ ಮಾಡಿದ್ದೇವೆ. ಇನ್ನೂ ಕೆಲವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಈಗಾಗಲೇ ಎಲ್ಲಾ ಕಂಡಕ್ಟರ್ ಮತ್ತು ಡ್ರೈವರ್‌ಗಳಿಗೆ ಮದ್ದೂರು ಬಸಸ್ಟ್ಯಾಂಡ್‌ನಲ್ಲೇ ಬಸ್ಸು ಅನ್ನು ನಿಲ್ಲಿಸಬೇಕೆಂದು ಕಟ್ಟುನಿಟ್ಟಾದ ಆದೇಶಗಳನ್ನು ಹೊರಡಿಸಿದ್ದೇವೆ. ತಾವು ಹೇಳಿದಂತೆ, ಈ ಒಂದು ಒಳ್ಳೆಯ ರೀತಿಯ ಬಸ್‌ಸ್ಟ್ಯಾಂಡಿನಲ್ಲಿರತಕ್ಕ ಕ್ಯಾಂಟೀನ್ ಏನಿದೆ, ಇದು ಸರಿಯಾದ ರೀತಿಯಲ್ಲಿ ಒಳ್ಳೆಯ ಕ್ವಾಲಿಟಿ ಆಹಾರ ಕೊಡುವುದಿಲ್ಲ ಎಂಬ ದೂರುಗಳು ಬಂದಿದ್ದರಿಂದ

ಅವನಿಗೂ ಸಹ ನಾವು ಸರಿಯಾದ ರೀತಿಯಲ್ಲಿ ಒಳ್ಳೆಯ ಗುಣಮಟ್ಟದ ಆಹಾರವನ್ನು ಒದಗಿಸುವಂತೆ ಸೂಚಿಸಿದ್ದೇವೆ. ಇದನ್ನು ಇನ್ನೂ ಸುಧಾರಣೆ ಮಾಡಲಿಕ್ಕೆ ಏನೇನು ಅವಶ್ಯಕತೆಗಳಿವೆಯೋ ಅದನ್ನೆಲ್ಲಾ ನಾವು ಮಾಡುತ್ತಿದ್ದೇವೆ. ಸರ್ಕಾರದ ವತಿಯಿಂದ ಒಳ್ಳೆಯ ಹೋಟೆಲ್ ಅನ್ನು ತೆರೆಯಬೇಕೆಂಬ ತಮ್ಮ ಸಲಹೆ ಏನಿದೆ, ಅದನ್ನು ಪರಿಶೀಲಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶಂಕರಲಿಂಗೇಗೌಡರು ಬಹಳ ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಮೈಸೂರಿನಿಂದ ಬೆಂಗಳೂರಿನವರೆಗೂ ಎಲ್ಲಾ ಕಡೆ ಅನಾರೋಗ್ಯಕರವಾದಂತಹ ತಿಂಡಿಗಳೇ ಸಿಗುತ್ತವೆ ಎಂದು ಹೇಳಿದರು. ಮದ್ದೂರು ವಡೆ ಎಷ್ಟು ರುಚಿಯಾಗಿದೆ. ಮೈಸೂರು ರಸ್ತೆ ಅಂದಾಕ್ಷಣ ಈಗ ನಮಗೆ ಬಾಯಿಯಲ್ಲಿ ನೀರು ಬರುತ್ತಿದೆ. ಮದ್ದೂರು ವಡೆ ಅಷ್ಟು ರುಚಿಯಾಗಿದೆ. ಮಾನ್ಯ ಸದಸ್ಯರು ಅನೇಕ ಸಲ ಅಲ್ಲಿ ತಿಂದಿದ್ದಾರೆ. ಹೀಗಿರುವಾಗ, ಅಲ್ಲಿ ಒಳ್ಳೆಯ ಹೋಟೆಲ್‌ಗಳೇ ಇಲ್ಲ, ಎಲ್ಲಾ ಅನಾಗರೀಕ ಹೋಟೆಲ್‌ಗಳೇ ಎಂದು ಮಾನ್ಯ ಸದಸ್ಯರು ಹೇಳುವುದಕ್ಕೆ ಶುರು ಮಾಡಿದರೆ, ಪರಿಸ್ಥಿತಿ ಏನು?

ಶ್ರೀ ವಿ. ಮಾರುತಿರಾವ್ ಪವಾರ್ : ಕಾರಿನಿಂದ ಬರುವವರಿಗೆ ಮಾತ್ರ ಆ ರೀತಿಯ ಪೋಟೆಲ್‌ಗಳ ಅನುಕೂಲತೆ ಇದೆ. ಬಸ್ಸುಗಳಲ್ಲಿ ಬರುವವರಿಗೆ ಈ ರೀತಿಯ ಅನುಕೂಲತೆ ಇಲ್ಲ.

ಶ್ರೀ ವಿ. ಮಾರುತಿರಾವ್ ಪವಾರ್ : ಕಾರಿನಿಂದ ಬರುವವರಿಗೆ ಮಾತ್ರ ಆ ರೀತಿಯ ಹೋಟೆಲ್‌ಗಳ ಅನುಕೂಲತೆ ಇದೆ. ಬಸ್ಸುಗಳಲ್ಲಿ ಬರುವವರಿಗೆ ಆ ರೀತಿಯ ಅನುಕೂಲತೆ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಈಗ ಅನೇಕ ಹೋಟೆಲ್‌ಗಳಿವೆ. ನಮಗೆ ಹೋಟೆಲ್‌ಗಳು ಬೇಕು. ಈಗ ಸರ್ಕಾರ ತಾನೇ ಹೋಟೆಲ್ ಇಡುವ ಬಗ್ಗೆ ಪರಿಶೀಲಿಸುತ್ತೇನೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಯಾವ ಜನಕ್ಕೆ ಇವರು ಪರಿಶೀಲನೆ ಮಾಡುವುದು? ಸರಿಯಾಗಿ ಬಸ್ಸುಗಳನ್ನು ಓಡಿಸಲಿಕ್ಕೇ ಸಾರಿಗೆ ಇಲಾಖೆಗೆ ಸಾಧ್ಯವಾಗುತ್ತಿಲ್ಲ, ಹೀಗಿರುವಾಗ ಇವರು ಹೋಟೆಲ್ ಮಾಡಿ ಅಲ್ಲಿ ವಡೆ ಮಾಡಿ, ಇಡ್ಲಿ ಮಾಡಿ, ಸಾಂಬಾರ್ ಮಾಡಿ ಜನಕ್ಕೆ ರುಚಿಕರವಾದ ತಿಂಡಿಗಳನ್ನು ಒದಗಿಸುವುದು ಯಾವಾಗ? ಈ ರೀತಿ ಮಾಡಲು ಅವರಿಗೆ ಸಾಧ್ಯವಾಗುವುದಿಲ್ಲ. ನೀವು ಮೊದಲು ಬಸ್ಸುಗಳನ್ನು ಸರಿಪಡಿಸಿ. ಈಗಿರುವ ಹೋಟೆಲ್‌ಗಳನ್ನೇ ಚೆನ್ನಾಗಿ ನಡೆಯುವಂತೆ ಮಾಡಿ. ನಮ್ಮ ಸರ್ಕಾರದ್ದೇ ಪ್ರವಾಸಿ ಹೋಟಲ್‌ಗಳಿವೆ. ಆ ಪ್ರವಾಸೋದ್ಯಮ ಹೋಟೆಲ್‌ಗಳು ಹೇಗೆ ನಡೆಯುತ್ತಿವೆ ಎಂದು ನೋಡಿದ್ದೇವೆ. ಮೊನ್ನೆ ನಾನು ಮತ್ತು ಮಾನ್ಯ ನಂಜೇಗೌಡರು ಹೋಗಿದ್ದೆವು. ಏಕೆ ಆ ಪ್ರವಾಸೋದ್ಯಮದ ಹೋಟೆಲ್ ಅಲ್ಲಿದೆಯೋ ನನಗಂತೂ ಗೊತ್ತಾಗಲಿಲ್ಲ, ಅದನ್ನು ನೋಡಿ ನನಗಂತೂ ಬಹಳ ನಾಚಿಕೆಗೇಡಿನ ಪರಿಸ್ಥಿತಿಯಾಯಿತು. ಅಲ್ಲಿರುವ ಪ್ರವಾಸೋದ್ಯಮ ಹೋಟೆಲ್‌ಗಳಲ್ಲಿ ಕೊಡತಕ್ಕ ತಿಂಡಿಯಲ್ಲಿ ನೊಣ, ಸೊಳ್ಳೆ ಇದ್ದವು. ಪ್ರವಾಸೋದ್ಯಮ ನಡೆಸುವ ಹೋಟೆಲ್‌ಗಳ ಹಣೆಬರಹವೇ ಈ ರೀತಿ ಆಗಿರುವಾಗ, ಸಾರಿಗೆ ಇಲಾಖೆಯವರು ಹೋಟೆಲ್‌ಗಳನ್ನು ನಡೆಸಲಿಕ್ಕೆ ಹೋದರೆ, ನಿಮ್ಮ ಹೋಟೆಲ್‌ಗಳಿಗೂ ಇದೇ ಹಣೆಬರಹವಾಗುತ್ತದೆ. ಆದುದರಿಂದ ರುಚಿಕರವಾದ ತಿಂಡಿಗಳನ್ನು ಕೊಡತಕ್ಕ ಹೋಟೆಲ್‌ಗಳನ್ನು ನಡೆಸತಕ್ಕ ಖಾಸಗಿಯವರಿಗೆ ತಾವು ಎಲ್ಲಾ ರೀತಿಯ ಬೆಂಬಲ, ಸಹಕಾರ ಕೊಟ್ಟು ಈಗಿರುವ ವ್ಯವಸ್ಥೆ ಸರಿ ಮಾಡಿಸುತ್ತೀರಾ ಎಂದು ನಾನು ನಿಮಗೆ ಕೇಳುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಹುಬ್ಬಳ್ಳಿಯವರು, ಅವರಿಗೆ ರೊಟ್ಟಿ ಬಗ್ಗೆ ಮಾತ್ರ ಗೊತ್ತು. ಮದ್ದೂರು ವಡೆ ಬಗ್ಗೆ ಅವರಿಗೆ ಏನು ಗೊತ್ತು?

ಶ್ರೀ ಬಿ.ಬಿ. ಶಿವಪ್ಪ : ಮದ್ದೂರು ತನ್ನ ಹೆಸರನ್ನು ಉಳಿಸಿಕೊಂಡಿದೆ, ಆದರೆ ವಡೆ ಅದರ ರುಚಿ ಉಳಿಸಿಕೊಂಡಿಲ್ಲ.

ಭೂದಾಖಲೆಗಳನ್ನು ಪಡೆದುಕೊಳ್ಳಲು ರೈತರಿಗೆ ಆಗುತ್ತಿರುವ ತೊಂದರೆ ಬಗ್ಗೆ

1802 - ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೈತರು ಅವರ ಸ್ವಂತ ಜಮೀನಿನ ಹದ್ದುಬಸ್ತು ಅಳತೆಗೋಸ್ಕರ ವರ್ಷಾನುಗಟ್ಟಲೆ ಕಾದರು ಅಳತೆಯಾಗದೆ ತೊಂದರೆಯಾಗುತ್ತಿರುವುದು ಸರ್ಕಾರಕ್ಕೆ ಬಂದಿದೆಯೇ?

ಆ) ಭೂದಾಖಲೆಗಳನ್ನು ಪಡೆದುಕೊಳ್ಳಲು ಸಹ ರೈತರು ಹಲವಾರು ಬಾರಿ ಅಲೆದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಮೇಲ್ಕಂಡ ತೊಂದರೆಗಳನ್ನು ತಪ್ಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಮತ್ತು ಆ) ಭೂಮಾಪನ ಇಲಾಖೆಯಲ್ಲಿ ಸಾಕಷ್ಟು ಭೂಮಾಪಕರ ಹುದ್ದೆಗಳು ಖಾಲಿ ಇರುವುದರಿಂದ ಸಾರ್ವಜನಿಕರಿಗೆ ಸ್ವಲ್ಪ ಮಟ್ಟಿಗೆ ತೊಂದರೆಯಾಗಿದೆ.

ಇ) ಇಲಾಖೆಯಲ್ಲಿ ಖಾಲಿ ಇರುವ ಭೂಮಾಪಕರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಇದರಿಂದಾಗಿ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ ನಿವಾರಣೆಯಾಗುವುದು.

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಈಗ ಕಂದಾಯ ಇಲಾಖೆಯಲ್ಲಿ ಸಾಕಷ್ಟು ಜನ ಭೂಮಾಪಕರು ಇಲ್ಲದೇ ರೈತರ ಜಮೀನಿನ ಹದ್ದುಬಸ್ತನ್ನು ಅಳತೆ ಮಾಡಲಿಕ್ಕೆ ಆಗಿಲ್ಲ, ರೈತರಿಗೆ ತೊಂದರೆಯಾಗಿದೆ ಎನ್ನತಕ್ಕಂಥ ಉತ್ತರವನ್ನು ಅವರು ಕೊಟ್ಟಿದ್ದಾರೆ. ಈ ಒಂದು ತೊಂದರೆಯನ್ನು ಇನ್ನು ಎಷ್ಟು ದಿನದಲ್ಲಿ ನಿವಾರಣೆ ಮಾಡುತ್ತೀರಿ ಎಂಬ ಬಗ್ಗೆ ಸರ್ಕಾರ ಒಂದು ಸ್ಪಷ್ಟವಾದ ಉತ್ತರವನ್ನು ಕೊಡಬೇಕು. ಎರಡನೆಯದಾಗಿ, ಈಗ ರೈತರು ಅವರ ಭೂ ದಾಖಲೆಗಳನ್ನು ಪಡೆದುಕೊಳ್ಳಲಿಕ್ಕೆ ಹಲವಾರು ಬಾರಿ ತಾಲ್ಲೂಕು ಕಛೇರಿಗಳನ್ನು ಸುತ್ತಾಡುತ್ತಿದ್ದಾರೆ. ಅವರ ಭೂ ದಾಖಲಾತಿಗಳನ್ನು ತೆಗೆದುಕೊಳ್ಳಲಿಕ್ಕೆ ಅವರಿಗೆ ಶೋಷಣೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ, ಆ ಶೋಷಣೆಯನ್ನು ತಪ್ಪಿಸಲಿಕ್ಕೆ ಸರ್ಕಾರ ಏನು ಕ್ರಮ ಕೈಗೊಂಡಿದೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ನಮ್ಮಲ್ಲಿ ಈಗ ಸುಮಾರು ಎರಡೂವರೆ ಲಕ್ಷ ಅರ್ಜಿಗಳು ಪೆಂಡಿಂಗ್ ಇವೆ. ಇದರಲ್ಲಿ ಸುಮಾರು 38 ಸಾವಿರದಷ್ಟು ಬಾಂಡ್ ಫಿಕ್ಸ್ ಮಾಡುವಂತಹ ಅರ್ಜಿಗಳೇ ಪೆಂಡಿಂಗ್ ಇವೆ. 1,350 ಜನ ಸರ್ವೇಯರ್ಸ್ ಇಲಾಖೆಯಲ್ಲಿ ಕಡಿಮೆ ಇದ್ದಾರೆ. ಮತ್ತು ಬಾಂಡ್ ಜವಾನರು 700 ಜನ ಕಡಿಮೆ ಇದ್ದಾರೆ. ಇನ್ನು ಒಂದೆರಡು ತಿಂಗಳೊಳಗಾಗಿ ಈ ಹುದ್ದೆಗಳನ್ನು ನಾವು ತುಂಬಲಿದ್ದೇವೆ. ರೈತರು ತಮ್ಮ ಅರ್ಜಿಗಳನ್ನು ಕೊಟ್ಟಾಗ,ಅದು ಇಂತಿಷ್ಟು ದಿನಗಳಲ್ಲಿ ವಿಲೇಯಾಗಬೇಕೆಂದು ನಾವು ಅಧಿಕಾರಿಗಳಿಗೆ ಸುತ್ತೋಲೆ ಕೊಟ್ಟಿದ್ದೇವೆ. ಈ ಬಗ್ಗೆ ಸ್ವಲ್ಪ ಎಚ್ಚರಿಕೆಯಿಂದ ಇರಬೇಕೆಂದು 12.6.95ರಲ್ಲಿ ಸುತ್ತೋಲೆ ಕಳುಹಿಸಿದ್ದೇವೆ. ಈಗಿರುವ ಪೆಂಡೆನ್ಸಿಯನ್ನು ಕ್ಲಿಯರ್ಮಾಡಲು ಇನ್ನೂ ಸುಮಾರು ಒಂದು ವರ್ಷ ತೆಗೆದುಕೊಳ್ಳಬಹುದೆಂದು ನಾನು ತಿಳಿಸಬಯಸುತ್ತೇನೆ.

ಶ್ರೀ ಎ.ಟಿ. ರಾಮಸ್ವಾಮಿ : ಸಭಾಧ್ಯಕ್ಷರೆ, ಇನ್ನೊಂದಕ್ಕೆ ಮಂತ್ರಿಗಳು ಉತ್ತರವನ್ನು ಕೊಡಲಿಲ್ಲ. ಈಗ ರೈತರು ಅವರ ಜಮೀನಿನ, ಅವರ ಸ್ವಂತ ದಾಖಲೆಗಳನ್ನು ತೆಗೆದುಕೊಳ್ಳುವುದಕ್ಕೆ ಹಲವಾರು ಬಾರಿ ರೆವಿನ್ಯೂ ಕಛೇರಿಗಳಿಗೆ ಸುತ್ತಿದ್ದಾರೆ. ಅವರು ಇವತ್ತು ರೆವಿನ್ಯೂ ಅಧಿಕಾರಿಗಳ ಹತ್ತಿರ ಹೋಗಿ ಭಿಕ್ಷೆ ಬೇಡಬೇಕಾಗಿದೆ. ಅವರ ದಾಖಲೆಗಳನ್ನು ತೆಗೆದುಕೊಳ್ಳುವುದಕ್ಕೆ ಆ ದಿಕ್ಕಿನಲ್ಲಿ ಒಂದು ಶೋಷಣೆಯಾಗುತ್ತಿದೆ. ಆ ಶೋಷಣೆಯನ್ನು ಯಾವಾಗ ತಪ್ಪಿಸುತ್ತೀರಿ? ತಪ್ಪಿಸುವುದಕ್ಕಾಗುವುದಿಲ್ಲವೇ? ಮತ್ತೆ ಈ ಗ್ರಾಮ ಲೆಕ್ಕಾಧಿಕಾರಿಗಳು ತಮ್ಮ ಕೇಂದ್ರ ಸ್ಥಾನದಲ್ಲಿ ಅವರು ವಾಸವಾಗಿಲ್ಲ, ಅವರನ್ನು ಹುಡುಕಿಕೊಂಡು ರೈತರು ಅಲೆಯಬೇಕಾಗಿದೆ. ಅವರು ಕೇಂದ್ರ ಸ್ಥಾನದಲ್ಲಿ ವಾಸ ಮಾಡಲು ಸರ್ಕಾರ ಏನಾದರೂ ಕಟ್ಟುನಿಟ್ಟಿನ ಆದೇಶವನ್ನು ಮಾಡುತ್ತೀರೋ?

ಶ್ರೀ ಆರ್.ಎಲ್. ಜಾಲಪ್ಪ : ಶೋಷಣೆ ಅಲ್ಲಿ ಇಲ್ಲಿ ಇದೆ. ಶೋಷಣೆ ಇಲ್ಲವೆಂದು ನಾನು ಹೇಳುವುದಕ್ಕೆ ನಾನು ತಯಾರಾಗಿಲ್ಲ. ಇದರಲ್ಲಿ ನಮ್ಮ ರೈತರೂ ಕೂಡ ಸ್ವಲ್ಪ ಬುದ್ಧಿವಂತರಾಗಬೇಕು. ಒಂದು ಸಮಯ ರೆವಿನ್ಯೂ ಅಧಿಕಾರಿಗಳು ತಾವು ಕೇಳಿದ ದಾಖಲೆಗಳನ್ನು ಒದಗಿಸುವುದಕ್ಕೆ ತಡಮಾಡುತ್ತಾರೆ, ಅಂತಹ ಸಮಯವಲ್ಲಿ ಅವರಿಗಿಂತ ಮೇಲ್ಪಟ್ಟಂಥ ಅಧಿಕಾರಿಗಳಿಗೆ ತಿಳಿಸುವುದಾಗಲಿ ಅಥವಾ ನಮಗಾಗಲಿ ತಿಳಿಸಿದರೆ ತಕ್ಷಣ ಅದನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ. ಎಲ್ಲಿಯವರೆಗೆ ಲಂಚವನ್ನು ಕೊಡುವವರು ಇರುತ್ತಾರೋ ಅಲ್ಲಿಯವರೆಗೆ ಲಂಚ ತೆಗೆದುಕೊಳ್ಳುವವರು ಇರುತ್ತಾರೆ. ಇವರು, ನಾನು ಏತಕ್ಕೆ ನಿನಗೆ ಲಂಚ ಕೊಡಬೇಕೆಂದು ಪ್ರತಿಭಟನೆ ಮಾಡಿದರೆ ಸ್ವಲ್ಪ ಕಡಿಮೆಯಾಗುತ್ತದೆ.

ಶ್ರೀ ಎ.ಟಿ. ರಾಮಸ್ವಾಮಿ : ಗ್ರಾಮ ಲೆಕ್ಕಾಧಿಕಾರಿಗಳು ತಮ್ಮ ಕೇಂದ್ರಸ್ಥಾನದಲ್ಲಿ ವಾಸ ಮಾಡುತ್ತಿಲ್ಲ, ರೈತರು ಅವರನ್ನು ಹುಡುಕಿಕೊಂಡು ತಿರಗಬೇಕಾಗಿದೆ. ಅವರು ತಮ್ಮದೇ ಆದ ಕೇಂದ್ರಸ್ಥಾನದಲ್ಲಿ ವಾಸ ಮಾಡಿಲಿಕ್ಕೆ ಕಟ್ಟುನಿಟ್ಟಾದ ಆದೇಶವನ್ನು ಕೊಡುತ್ತೀರಾ? ಎಲ್ಲರೂ ಕೂಡ ಹೇಳಿಕೊಂಡೇ ಬಂದಿದ್ದಾರೆ. ನೀವೂ ಅದನ್ನೇ ಹೇಳುತ್ತೀರಾ ಅಥವಾ ತಾವೇನಾದರೂ ಕಟ್ಟುನಿಟ್ಟಿನ ಆದೇಶವನ್ನು ಕೊಡುತ್ತೀರೋ?

ಅಧ್ಯಕ್ಷರು : ಗ್ರಾಮ ಲೆಕ್ಕಧಿಕಾರಿಗಳು ಕೇಂದ್ರ ಸ್ಥಾನದಲ್ಲಿ ಇರುವುದಿಲ್ಲ, ಎಲ್ಲರೂ ಹೇಳಿಕೊಂಡೇ ಬಂದಿದ್ದಾರೆ ಅಂದರೆ, ಮೊದಲು ಕಾಂಗ್ರೆಸ್ಸವರು ಇದ್ದರಲ್ಲಾ ಅವಾಗಿನಿಂದ, ಅದನ್ನೇನಾದರೂ ಬದಲಾವಣೆ ಮಾಡಿಸುತ್ತೀರಾ ಎಂದು ಅವರು ಕೇಳುತ್ತಿದ್ದಾರೆ.

ಶ್ರೀ ಆರ್.ಎಲ್. ಜಾಲಪ್ಪ : ಸ್ವಾಮಿ, ಇದಕ್ಕೆ ಹಲವಾರು ಕಾರಣಗಳಿವೆ. ಅದರಲ್ಲೂ ಈ ವರ್ಷ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ಒಂದು ತಾಲ್ಲೂಕಿಗೆ, ಅವರಿಗೆ 10ಕೊಠಡಿಗಳನ್ನಾದರೂ ಕಟ್ಟಿಸಿಕೊಡಬೇಕೆಂದು ಯೋಚನೆ ಮಾಡಿದ್ದೇವೆ. ಇನ್ನೊಂದು ಯೋಜನೆ ಹತ್ತತ್ತು ಮನೆಯನ್ನೇ ಕಟ್ಟಿಸಬೇಕೆಂದು, ಅಂದರೆ ಅದಕ್ಕೆ ಮನೆ ಕಟ್ಟಿಸಬೇಕಾದರೆ ವೆಚ್ಚ ಒಂದೂವರೆ ಲಕ್ಷ ರೂಪಾಯಿಗಳವರೆಗೆ ಆಗುತ್ತದೆ. ಅದರ ಬದಲು ಸುಮಾರು ನಲ್ವತ್ತರಿಂದ ನಲ್ವತ್ತೈದು ಸಾವಿರ ರೂಪಾಯಿಗಳಿಗೆ ಒಂದು ಕೊಠಡಿಯನ್ನು ಕಟ್ಟಿಸಿ ಅಲ್ಲಿ ಅವರು ವಾಸವಾಗಿರುವಂತೆ ಒಂದು ವ್ಯವಸ್ಥೆ ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ಅಧ್ಯಕ್ಷರೇ, ತಮಗೆ ಗೊತ್ತಿದೆ, ಗ್ರಾಮ ಲೆಕ್ಕಿಗರನ್ನು ಆಯಾ ಜಿಲ್ಲೆಗೆ ಎಂದು ನೇಮಕಾತಿ ಮಾಡಿದರು.

ಶ್ರೀ ಬಿ.ಎಸ್. ಯಡಿಯೂರಪ್ಪ : ಬಹಳ ವರ್ಷಗಳಿಂದ ಅನುಭವವಿರುವಂತಹ ತಾವೇ ಸಚಿವರಾಗಿದ್ದೀರಿ ಈ ಗ್ರಾಮಲೆಕ್ಕಿಗರು ರೆವಿನ್ಯೂ ಇನ್ಸ್ಪೆಕ್ಟರುಗಳು ನಮ್ಮಂತೆ ಸಾಮಾನ್ಯ ಮನೆಗಳಿಂದ ಬಂದಂತಹವರು, ಹಳ್ಳಿಯ ಜೀವನ ಗೊತ್ತಿರುವಂತಹವರು. ಬೇಕಾದರೆ, ಗ್ರಾಮಲೆಕ್ಕಿಗ, ಗ್ರಾಮೀಣ ಪ್ರದೇಶದಲ್ಲಿ ವಾಸಮಾಡುತ್ತೇನೆ, ನೆಲೆಸುತ್ತೇನೆಂದು ಇಚ್ಛೆಸಿದಾಗ ಬಾಡಿಗೆ ಮನೆಗಳಿಗೇನೂ ಕೊರತೆ ಇಲ್ಲ, ಗ್ರಾಮಲೆಕ್ಕಿಗನನ್ನು ರೆವಿನ್ಯೂ

ಇನ್ಸ್‌ಪೆಕ್ಟರನ್ನು ಪೂಜೆ ಮಾಡಿ, ಅವನ ಮನೆಗೆ ತರಕಾರಿಯನ್ನು ತೆಗೆದುಕೊಂಡು ಹೋಗಿ ಕೊಟ್ಟು ಜೀತ ಮಾಡುವುದಕ್ಕೆ ಈ ನಮ್ಮ ಹಳ್ಳಿಯ ಜನ ತಯಾರಾಗಿರುವಂತಹ ಈ ಕಾಲದಲ್ಲಿ ಇರುವ ಬಾಡಿಗೆ ಮನೆಯನ್ನು ಉಪಯೋಗಿಸಿಕೊಂಡು ನೀನು ಅಲ್ಲಿಯೇ ವಾಸ ಮಾಡಬೇಕೆಂದು ಆದೇಶ ಹೊರಡಿಸುವ ಬದಲು, ಇವರೇನು ಆಕಾಶದಿಂದ ಇಳಿದು ಬಂದವರೇ ಇವರೆಲ್ಲರಿಗೂ ಮನೆ ಬಂಗಲೆ ಕಟ್ಟಿಕೊಡುವುದಕ್ಕೆ ನಮ್ಮಲ್ಲಿ ದುಡ್ಡಿಲ್ಲದೆ. ರಸ್ತೆ ಇಲ್ಲ, ದೀಪ ಇಲ್ಲ, ಕುಡಿಯುವುದಕ್ಕೆ ನೀರಿಲ್ಲ, ಖಂಡಿತಾ ಆ ಸಾಹಸವನ್ನು ತಾವು ಮಾಡಬೇಡಿ. ಗ್ರಾಮಲೆಕ್ಕಿಗ, ನನ್ನ ಕೇಂದ್ರ ಸ್ಥಾನದಲ್ಲಿ ಹೋಗಿ ಬಡವರ ಮಧ್ಯೆ ವಾಸ ಮಾಡುವಂತೆ ಆದೇಶ ಕೊಡಿ. ನಿಜವಾಗಿಯೂ ಅದು ನಿಮ್ಮಂತಹವರು ಮಾಡಬೇಕಾದಂಥ ಕೆಲಸ. ದುಡ್ಡು ಬಂದಾಗ ಬೇಕಾದರೆ ಕಟ್ಟಿಸಿಕೊಡೋಣ.

ಶ್ರೀ ಆರ್.ಎಲ್. ಜಾಲಪ್ಪ : ಅಧ್ಯಕ್ಷರೇ, ಆ ಎಲ್ಲಾ ಆದೇಶಗಳನ್ನು ಕೊಟ್ಟಿದ್ದೇವೆ. ಈಗ ಬಹಳ ಜನ ಗ್ರಾಮಲೆಕ್ಕಗರನ್ನು ಅಮಾನತ್ತಿನಲ್ಲೂ ಕೂಡ ಇಟ್ಟಿದ್ದೇವೆ. ಎಷ್ಟು ಜನ ಎಂದು ಅಮಾನತ್ತಿನಲ್ಲಿ ಇಡುವುದಕ್ಕಾಗುತ್ತದೆ? ಅವರೂ ಕೂಡ ನಮ್ಮ ಜೊತೆಯಲ್ಲಿ ಹಳ್ಳಿಗಳಲ್ಲೆ ಹುಟ್ಟಿ ಬೆಳೆದಿರುತ್ತಾರೆ, ಅವರು ಗ್ರಾಮಲೆಕ್ಕಿಗರಾಗಿ ನೇಮಕಾತಿಯಾಗಿ, ಅವರ ಕೈಗೆ ಸ್ವಲ್ಪ ಹಣ ಸಿಕ್ಕಾಗ ಅವರ ಚರ್ಯೆನೇ ಬದಲಾಗುತ್ತದೆ. ಇದಕ್ಕೆ ನಮ್ಮ ಕಾನೂನಿನಲ್ಲಿ ಸ್ವಲ್ಪ ತೊಡಕುಗಳಿವೆ. ಗ್ರಾಮಲೆಕ್ಕಿಗರನ್ನು ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ವರ್ಗಾವಣೆ ಮಾಡುವುದಕ್ಕೆ ಅವಕಾಶವಿಲ್ಲ, ಎರಡನೆಯದಾಗಿ ಅವರನ್ನು ದ್ವಿತೀಯ ದರ್ಜೆಯ ಗುಮಾಸ್ತರಾಗಿ ಪೋಸ್ಟ್ ಮಾಡುವುದಕ್ಕೂ ಕೂಡ ಈಗ ಅವಕಾಶವಿರಲಿಲ್ಲ. ಈಗ ಒಂದು ಕಾನೂನನ್ನು ಮಾಡಿ ಇದನ್ನು ಅಳವಡಿಸಿಕೊಳ್ಳಬೇಕೆಂದು ಪ್ರಯತ್ನ ಪಡುತ್ತಿದ್ದೇವೆ. ಸಾಧ್ಯವಾದಷ್ಟು ಸೌಲಭ್ಯಗಳನ್ನು ಗ್ರಾಮಲೆಕ್ಕಿಗರಿಗೆ ಕೊಟ್ಟು ಅವರು ಕೇಂದ್ರ ಸ್ಥಾನದಲ್ಲಿ ಇರುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಡಿ.ಆರ್. ಪಾಟೀಲ್ : ಭೂಮಾಪಕರ ಕೊರತೆಯನ್ನು ನಿವಾರಿಸಿಕೊಳ್ಳುವ ಸಲುವಾಗಿ, ಇಂಜಿನಿಯರಿಂಗ್ ಕಾಲೇಜಿನಲ್ಲಿ ಸರ್ವೇ ಒಂದು ಕಡ್ಡಾಯ ವಿಷಯವಾಗಿರುತ್ತದೆ, ಆ ವಿದ್ಯಾರ್ಥಿಗಳ ಹಾಗೂ ಪ್ರಾಧ್ಯಾಪಕರ ಸಹಾಯವನ್ನು ಪಡೆದುಕೊಂಡು ಈ ವಿವಾದದಿಂದ ಕೂಡಿರುವ ಲ್ಯಾಂಡ್‌ಗಳನ್ನು ಸರ್ವೇ ಮಾಡಬೇಕಾದಂತ ಪ್ರಕರಣಗಳನ್ನು ಅವರಿಗೆ ರೆಫರ್ ಮಾಡುವುದರ ಮೂಲಕ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸರ್ಕಾರ ಏನಾದರೂ ಕ್ರಮವನ್ನು ತೆಗೆದುಕೊಳ್ಳುತ್ತದೆಯೇ?

ಅಧ್ಯಕ್ಷರು : ಇದೊಂದು ಒಳ್ಳೆಯ ಸಲಹೆ.

ಶ್ರೀ ಆರ್.ಎಲ್. ಜಾಲಪ್ಪ : ಈಗ ಎಲ್ಲೆಲ್ಲಿ ಈ ಐ.ಟಿ.ಐ.ಗಳಲ್ಲಿ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಸರ್ವೇ ವಿಷಯವನ್ನು ತೆಗೆದುಕೊಂಡು ಪರೀಕ್ಷೆಯಲ್ಲಿ ಯಾರು ಪಾಸಾಗಿದ್ದಾರೆ, ಅವರು ನೇಮಕಾತಿ ಮಾಡುವಾಗ ಅವರೆಲ್ಲರನ್ನೂ ನೇಮಕಾತಿ ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಎರಡನೆಯದಾಗಿ, ಕಳೆದ ಎರಡು ಮೂರು ವರ್ಷಗಳಿಂದ ಯಾರು ನಿವೃತ್ತಿ ಹೊಂದಿದ್ದಾರೆ ಕೆಲಸ ಮಾಡುವುದಕ್ಕೆ ಯಾರಿಗೆ ಶಕ್ತಿ ಇದೆ ಅವರಿಗೆ ಒಂದು ಪ್ರಕರಣಕ್ಕೆ ಇಷ್ಟು ಹಣವೆಂದು ಕೊಟ್ಟು ಕಾಂಟ್ರಾಕ್ಟ್ ಮೇರೆಗೆ ಕೂಡ ಅವರನ್ನು ತೆಗೆದುಕೊಳ್ಳಬೇಕೆಂದು ಈ ದಿಶೆಯಲ್ಲಿ ಈಗಾಗಲೇ ನಮ್ಮ ಅಧಿಕಾರಿಗಳಿಗೆ ಪ್ರಸ್ತಾವನೆಯನ್ನು ನನಗೆ ಕಳುಹಿಸಿಕೊಡಬೇಕೆಂದು ಹೇಳಿದ್ದೇನೆ.

ಶ್ರೀ ಅರಗ ಜ್ಞಾನೇಂದ್ರ : ಸರ್ಕಾರದ ಇಲಾಖೆಯಲ್ಲಿ ಎರಡು ಇಲಾಖೆಗಳು ಅತ್ಯಂತ ಸುವ್ಯವಸ್ಥಿತವಾಗಿ ನಡೆಯುತ್ತಿವೆ. ಒಂದು ಮೋಜಣಿ ಇಲಾಖೆ ಮತ್ತೊಂದು ಈ ಆರ್.ಟಿ.ಓ. ಇಲಾಖೆ. ಈ ಎರಡು ಇಲಾಖೆಗಳ ಬಗ್ಗೆ ಹೆಚ್ಚು ದೂರುಗಳು

ಬರುವುದಿಲ್ಲ, ಏಕೆಂದರೆ, ಅಲ್ಲಿ ಇಷ್ಟೇ ಹಣವನ್ನು ಕೊಟ್ಟರೆ ಇಂತಹದೇ ಪದಾರ್ಥಗಳನ್ನು, ಸರ್ವೇ ಸ್ಕೇಚ್ಗಳನ್ನು ಕೊಡಬಹುದೆಂದು ನಿಗದಿಯಾಗಿದೆ. ಹಾಗಾಗಿ ದಯಮಾಡಿ ಇದನ್ನು ತಮ್ಮ ಕಾಲದಲ್ಲಾದರೂ ಕೂಡ ತಾವು ಪರಿವರ್ತನೆ ಮಾಡುತ್ತೀರೋ? ರೈತರಿಗೆ, ಹಣ ಕೊಡದೆ ಅವರು ಹೋದ ತಕ್ಷಣವೇ ಭೂದಾಖಲೆಗಳು ಇತರೆ ದಾಖಲೆಗಳು ಸಿಗುವ ಹಾಗೆ ಈಗ ಅಲ್ಲಿರುವಂಥ ವ್ಯವಸ್ಥೆಯನ್ನು ಬದಲಾವಣೆ ಮಾಡುವುದಕ್ಕೆ ತಾವು ಏನಾದರೂ ವ್ಯವಸ್ಥಿತವಾದಂಥ ಪ್ರಯತ್ನವನ್ನು ಮಾಡುತ್ತೀರೋ? ಇನ್ನೊಂದು ಅಣ್ಣ ತಮ್ಮಂದಿರಲ್ಲಿ ಮನೆಗಳು ಭಾಗವಾಗಿರುವಂತಹದಕ್ಕೆ ಪೋಡಿ ಶುಲ್ಕವನ್ನು ಕಟ್ಟಿಸಿಕೊಂಡು ಬಹಳ ವರ್ಷಗಳಾಗಿವೆ.

ಅಧ್ಯಕ್ಷರು : ಈಗ ನೀವು ಒಂದು ಕೆಲಸವನ್ನು ಮಾಡಿ, ನೀವಿಬ್ಬರೂ ಜವಾಬ್ದಾರಿಯನ್ನು ವಿಭಾಗ ಮಾಡಿಕೊಳ್ಳಿ. ಜನರು ಹಣ ಕೊಡದಂತೆ ನೀವು ಅವರಿಗೆ ಶಿಕ್ಷಣವನ್ನು ಕೊಡಿ, ಹಣ ತೆಗೆದುಕೊಂಡವರು ಯಾರಾದರೂ ಇದ್ದರೆ ಅವರಿಗೆ ಇವರು ಶಿಕ್ಷೆಯನ್ನು ಕೊಡುತ್ತಾರೆ. ಎಲ್ಲವನ್ನೂ ಅವರ ಮೇಲೆ ಹಾಕಿದರೆ ಹೇಗೆ? ಎಲ್ಲಿಯವರೆಗೆ ಕೊಡುವ ಜನರಿರುತ್ತಾರೋ ಅಲ್ಲಿಯವರೆಗೆ ತೆಗೆದುಕೊಳ್ಳುವವರು ಇರುತ್ತಾರೆ. ಅದನ್ನು ಕಂದಾಯ ಮಂತ್ರಿಗಳು ಆಗಲೇ ಹೇಳಲಿಲ್ಲವೇ?

ಶ್ರೀ ಅರಗ ಜ್ಞಾನೇಂದ್ರ : ಅವರು ಪ್ರತಿಭಟಿಸಿದರೆ, ತಿರಸ್ಕರಿಸಿದರೆ, ಅವರಿಗೆ ಖಂಡಿತವಾಗಿಯೂ ಶಿಕ್ಷೆಯನ್ನು ಕೊಡುತ್ತಾರೆ. ಅದರಲ್ಲಿ ಆ ವ್ಯವಸ್ಥೆ ಇದೆ.

ಅಧ್ಯಕ್ಷರು : ನೀವಿಬ್ಬರೂ ಆ ಜವಾಬ್ದಾರಿಯನ್ನು ಹಂಚಿಕೊಳ್ಳಿ. ಕಂದಾಯ ಮಂತ್ರಿಗಳು ಉತ್ತರ ಹೇಳಿ.

ಶ್ರೀ ಆರ್.ಎಲ್. ಜಾಲಪ್ಪ : ಯಾವುದೇ ಸರ್ಕಾರದಲ್ಲಿ ಅವರನ್ನು, ನೀವು ಹಣ ತೆಗೆದುಕೊಳ್ಳಿ ಎಂದು ಮುಕ್ತವಾಗಿ ಬಿಟ್ಟಿದ್ದುದು ನನಗೆ ಗೊತ್ತಿಲ್ಲ. ಎಲ್ಲರೂ ಕೂಡ ರೈತರಿಗೆ ಅನುಕೂಲವಾಗಬೇಕು ಮತ್ತು ಯಾವ ಅಧಿಕಾರಿಗಳು ಲಂಚವನ್ನು ತೆಗೆದುಕೊಳ್ಳುತ್ತಾರೆ ಅವರಿಗೆ ಶಿಕ್ಷೆಯನ್ನು ಕೊಡಬೇಕೆಂದು ಎಲ್ಲಾ ಸರ್ಕಾರಗಳು ಪ್ರಯತ್ನ ಪಟ್ಟಿವೆ. ಅದೇ ರೀತಿ ನಾನೂ ಕೂಡ ಪ್ರಯತ್ನ ಪಡುತ್ತಿದ್ದೇನೆ. ಅಳಿಲು ಸೇವೆ ಎಂದು, ನಮ್ಮ ಕೈಯಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನು ಸ್ವಲ್ಪ ಕಡಿಮೆ ಮಾಡುವುದಕ್ಕೆ ಪ್ರಯತ್ನಪಡುತ್ತಿದ್ದೇವೆ.

ಮಂಗಳೂರು ವಿಭಾಗದ ಕ.ರಾ.ರ. ಸಾರಿಗೆ ಸಂಸ್ಥೆ ಕುರಿತು

2170 - ಶ್ರೀ ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಮಂಗಳೂರು ವಿಭಾಗ 1995 ಏಪ್ರಿಲ್ನಿಂದ ಜೂನ್ ತಿಂಗಳೊಳಗೆ ಒಂದು ಕೋಟಿ ಮಿಕ್ಕ ಲಾಂಭಾಂಶ ಪಡೆದರೂ ಆ ವಿಭಾಗಕ್ಕೆ ಅತೀ ಅವಶ್ಯಕ ಸಿಬ್ಬಂದಿ ನೇಮಕ ಹಾಗೂ ಇತರೆ ಸೌಲಭ್ಯ ಒದಗಿಸದಿರಲು ಕಾರಣವೇನು?

ಆ) ಸಿಬ್ಬಂದಿಗಳನ್ನು ಕೂಡಲೇ ನೇಮಕಾತಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ, ಹಾಗಿದ್ದಲ್ಲಿ, ಯಾವಾಗ ನೇಮಕಾತಿ ಮಾಡಲಾಗುವುದು?

ಇ) ಮಂಗಳೂರು ವಿಭಾಗದ ಸಾರಿಗೆ ಸಂಸ್ಥೆಯ ಕಾರ್ಯವನ್ನು ಇನ್ನೂ ಹೆಚ್ಚಿನ ಪ್ರಯಾಣಿಕರನ್ನು ಆಕರ್ಷಿಸಲು ನಾಗರೀಕ ಸಲಹಾ ಸಮಿತಿಯನ್ನು ರಚಿಸಲು ಸರ್ಕಾರವು ಉದ್ದೇಶಿಸಿದೆಯೇ? ಹಾಗಿದ್ದಲ್ಲಿ ಯಾವಾಗ ರಚಿಸಲಾಗುವುದು?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಮಂಗಳೂರು ವಿಭಾಗ ಅತೀ ಅವಶ್ಯಕ ಹುದ್ದೆಗಳಾದ ಚಾಲಕ, ನಿರ್ವಾಹಕ ಮತ್ತು ತಾಂತ್ರಿಕ ಹುದ್ದೆಗಳ ಕಾರ್ಯನಿರ್ವಹಣೆ ಪರಿಸ್ಥಿತಿ ಈ ಕೆಳಕಂಡಂತೆ ಇರುತ್ತದೆ.

ಕ್ರ ಸಂ	ಹುದ್ದೆ	ಮಂಜೂರಾತಿ	ನಿರ್ವಹಿಸುತ್ತಿರುವವರು ಖಾಯಂ		ತಾತ್ಕಾಲಿಕ		ಒಟ್ಟು		
1)	ಚಾಲಕ	781	769	+	62	=	831	+	50
2)	ನಿರ್ವಾಹಕ	761	716	+	56	=	772	+	11
3)	ತಾಂತ್ರಿಕ ಸಿಬ್ಬಂದಿ	653	467	+	-	=	467	-	186

ಅ) ಮೇಲ್ಕಂಡ ವಿವರಗಳನ್ನು ಅವಲೋಕಿಸಿದಾಗ ಚಾಲಕ ಹುದ್ದೆಯಲ್ಲಿ ಹುದ್ದೆಗಳು ಖಾಲಿಯಿರುವುದಿಲ್ಲ ಮೇಲಾಗಿ 50 ಅಭ್ಯರ್ಥಿಗಳು ಹೆಚ್ಚುವರಿಯಾಗಿ ಕೆಲಸ ಮಾಡುತ್ತಿದ್ದಾರೆ.

ಆ) ಅದೇ ರೀತಿ ನಿರ್ವಾಹಕ ವೃಂದದಲ್ಲಿಯೂ ಸಹ 11 ನಿರ್ವಾಹಕ ಅಭ್ಯರ್ಥಿಗಳು ಹೆಚ್ಚುವರಿಯಾಗಿ ಕೆಲಸ ಮಾಡುತ್ತಿದ್ದಾರೆ.

ಇ) ತಾಂತ್ರಿಕ ವರ್ಗದಲ್ಲಿ 186 ಹುದ್ದೆಗಳು ಖಾಲಿ ಇದ್ದು ಅವುಗಳ ಪೈಕಿ 178 ತಾಂತ್ರಿಕ ಶಿಶಿಕ್ಷುಗಳನ್ನು ನೇಮಕ ಮಾಡಿಕೊಂಡು ತರಬೇತಿ ನೀಡುವ ಜೊತೆಗೆ ವಾಹನ ನಿರ್ವಹಣೆ ಮತ್ತು ದುರಸ್ಥಿ ಕಾರ್ಯವನ್ನು ಮಾಡಲಾಗುತ್ತದೆ.

ಆ) ಈಗಾಗಲೇ, ಮೇಲೆ ವಿವಸಿರುವಂತೆ ಮಂಗಳೂರು ವಿಭಾಗದಲ್ಲಿ ಚಾಲಕ, ನಿರ್ವಾಹಕ ಹುದ್ದೆಗಳು ಖಾಲಿಯಿರುವುದಿಲ್ಲ. ಅದಾಗ್ಯೂ ಮಂಗಳೂರು ವಿಭಾಗಕ್ಕೆ ಮುಂದಿನ ಕಾರ್ಯ ಯೋಜನೆಗೆ ಬೇಕಾದ 81 ನಿರ್ವಾಹಕ ಹಾಗೂ 55 ಚಾಲಕ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ. ನೇಮಕಾತಿ ಪ್ರಕ್ರಿಯೆ ಈಗಾಗಲೇ ಪ್ರಾರಂಭವಾಗಿದ್ದು, ಶೀಘ್ರದಲ್ಲಿಯೇ ನೇಮಕಾತಿ ಪೂರ್ಣಗೊಳ್ಳುವುದು. ತಾಂತ್ರಿಕ ಸಿಬ್ಬಂದಿಯನ್ನು ಅವಶ್ಯಕ ತದನುಗುಣವಾಗಿ ನೇಮಕಾತಿ ಮೂಲಕ ಭರ್ತಿ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಇ) ಪರಿಶೀಲನೆಯಲ್ಲಿದೆ.

ಶ್ರೀ ಎನ್. ಯೋಗೀಶ್ ಭಟ್ : ಅಧ್ಯಕ್ಷರೆ, ಮಂಗಳೂರು ವಿಭಾಗವು ಇಡೀ ರಾಜ್ಯದಲ್ಲಿ ಲಾಭದಿಂದ ಕೆಲಸ ಮಾಡುತ್ತಿದೆ ಎನ್ನುವುದು ಒಂದು ಸಂತೋಷದ ಸಂಗತಿ. ಆದರೆ ಈ ವಿಭಾಗವು ಒಂದು ಕೋಟಿಗಿಂತ ಹೆಚ್ಚಿನ ಲಾಭವನ್ನು ಮಾಡಿದೆ ಎಂದು ಇದ್ದರೂ ಕೂಡ ಅದಕ್ಕೂ ಈ ಹಳೆಯ ಬಸ್ಸಳಿಗೂ ಏನಾದರೂ ನೆಂಟು ಇವೆಯಾ? ಏಕೆಂದರೆ, ಹೊಸ ಬಸ್ಸಗಳನ್ನು ಈ ವಿಭಾಗದಲ್ಲಿ ಹಾಕಿದರೆ ನಷ್ಟವಾಗುತ್ತದೆನ್ನುವುದಕ್ಕೋಸ್ಕರ ಹೊಸ ಬಸ್ಸಗಳನ್ನು ಹಾಕಿಲ್ಲವೇ ಎನ್ನುವ ಒಂದು ಪ್ರಶ್ನೆಯನ್ನು ನಾನು ಹಾಕುತ್ತಿದ್ದೇನೆ. ಅದರ ಜೊತೆಗೆ ಕೆ.ಎಸ್.ಆರ್.ಟಿ.ಸಿ. ಯ ಡೀಲಕ್ಸ್, ಸೂಪರ್ ಡಿಲಕ್ಸ್, ಅಲ್ಟಾ ಡೀಲಕ್ಸ್ ಬಸ್ಸಳಲ್ಲೂ ಕೂಡ ಅನೇಕ ಸಾರಿ ನಾವು ಊರಿಗೆ ಹೋಗುವುದಕ್ಕೆ ರಾತ್ರಿ ಹೊತ್ತು ಪ್ರಯಾಣ ಮಾಡುತ್ತಿರುತ್ತೇವೆ. ಅಂತಹ ಸಂದರ್ಭದಲ್ಲಿ, ಮಳೆ ಬಂದಾಗ ಬಸ್ಸಳ ಮಾಡಿನಿಂದ ನೀರು ಸೋರುವುದು ತಮ್ಮ ಗಮನಕ್ಕೆ ಬಂದಿದೆಯೇ? ಅನೇಕ ಸಾರಿ ಬಸ್ಸಿನ ಮಾಡಿನಿಂದ ನೀರು ಸೋರುತ್ತಿರುವಂತಾಗಿದೆ. ಆ ಬಸ್ಸಳ ಗಾಜಿನ ಕಿಟಕಿಯನ್ನು ಬಾಗಿಲನ್ನು ಹಾಕುವಂತ ಸ್ಥಿತಿಯಲಿಲ್ಲ. ಮೊನ್ನೆಯಂತೂ ಬಾಗಿಲನ್ನು ಹಾಕಲು ಸಾಧ್ಯವಾಗದಂಥ ಸ್ಥಿತಿಯಲ್ಲಿ

ಡ್ರೈವರ್ ಹಾಗೂ ಕಂಡಕ್ಟರ್ ಪರದಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ? ಇದು ಎರಡನೆಯ ಪ್ರಶ್ನೆ. ಅದರ ಜೊತೆಗೆ ಖಾಸಗಿ ಬಸ್ಸುಗಳು ಎಲ್ಲೆಲ್ಲಿ ಓಡಾಡುತ್ತಿವೆಯೋ ಅಲ್ಲೆಲ್ಲಾ ಜನತೆಗೆ ಹೆಚ್ಚಿನ ಅನುಕೂಲತೆ ಕಂಡು ಬಂದಿದೆ. ವಿಶೇಷವಾಗಿ, ಉಡುಪಿ, ಕುಂದಾಪುರ, ಬೈಂದೂರು ಕಡೆಗಳಲ್ಲಿ ಬಸ್ಸುಗಳು ಎರಡು ನಿಮಿಷಕ್ಕೆ ಒಂದು ಸಾರಿ ಮಂಗಳೂರಿನಿಂದ ಓಡಾಡುತ್ತಿರುತ್ತವೆ. ಆದರೆ ಕೆ.ಎಸ್.ಆರ್.ಟಿ.ಸಿ.ಯ ಬಸ್ ರೂಟ್ಗಳು ಎಲ್ಲೆಲ್ಲಿ ಇವೆ, ಅಲ್ಲೆಲ್ಲಾ ಜನತೆ ಸಾಕಷ್ಟು ತೊಂದರೆಯನ್ನು ಅನುಭವಿಸುತ್ತಿದ್ದಾರೆ. ವಿಶೇಷವಾಗಿ ಪುತ್ತೂರು, ಸುಳ್ಯ, ಸುಬ್ರಮಣ್ಯ ಆ ಕಡೆ ಹೋಗುವಂಥ ಬಸ್ಸುಗಳಲ್ಲಿ ಇವತ್ತು ಹೆಚ್ಚಾಗಿ ಟ್ಯಾಕ್ಸಿಗಳು ಓಡಾಡುವಂತಹದ್ದು ತಮ್ಮ ಗಮನಕ್ಕೆ ಬಂದಿದೆಯೇ? ಇದಕ್ಕೆ ಸರಿಯಾದ ಒಂದು ಸಲಹಾ ಸಮಿತಿಯನ್ನು ಮಾಡಿಕೊಂಡು ಹೆಚ್ಚಿನ ಬಸ್ಸುಗಳನ್ನು ಹಾಕಿ ಯಾವ ರೂಟ್ಗಳಲ್ಲಿ ಬಸ್ಸುಗಳನ್ನು ಕೊಟ್ಟರೆ ಹೆಚ್ಚು ಲಾಭವನ್ನು ಗಳಿಸಬಹುದು ಹಾಗೂ ಜನರಿಗೆ ಅನುಕೂಲವನ್ನು ಕಲ್ಪಿಸಿಕೊಡುವ ನಿಟ್ಟಿನಲ್ಲಿ ತಾವು ಶೀಘ್ರವೇ ಒಂದು ಸಲಹಾ ಸಮಿತಿಯನ್ನು ರಚಿಸುವಂತಹ ವ್ಯವಸ್ಥೆಯನ್ನು ಮಾಡುತ್ತೀರೋ?

ಅಧ್ಯಕ್ಷರು : ಅವರ ಪ್ರಶ್ನೆಯ ಒಟ್ಟಾರ್ಥ ಇಷ್ಟೆ, ಅವರದು ಮಂಗಳೂರು ಭಾಷೆ, ನಿಮ್ಮದು ಧಾರವಾಡದ ಭಾಷೆ, ಮತ್ತೆ ಮತ್ತೆ ಕೇಳುವುದು ಬೇಡ. ಮಂಗಳೂರು ವಿಭಾಗದಿಂದ ಲಾಭ ಕೊಡುತ್ತಿದ್ದಾರೆ, ಆದರೂ ನೀವು ಅವರಿಗೆ ಹೊಸ ಬಸ್ಸುಗಳನ್ನು ಕೊಡುತ್ತಿಲ್ಲ. ಆದುದರಿಂದ ಹೊಸ ಬಸ್ಸುಗಳನ್ನು ಮಂಗಳೂರು ವಿಭಾಗಕ್ಕೆ ಕೊಡುತ್ತೀರಾ ಎಂದು ಕೇಳುತ್ತಿದ್ದಾರೆ.

ಶ್ರೀ ಕೆ.ಎಸ್. ಬೀಳಗಿ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳುವಂತೆ ಇದು ಸಂತೋಷದ ಸಂಗತಿ. ಮಂಗಳೂರು ವಿಭಾಗವು ಒಳ್ಳೆಯ ರೀತಿಯಲ್ಲಿ ಲಾಭವನ್ನು ಗಳಿಸುತ್ತಿದೆ. ಆದರೆ ಮಂಗಳೂರು ರೂಟ್ ಪೂರ್ಣ ರಾಷ್ಟ್ರೀಕರಣವಾದಂಥ ರೂಟ್ ಅಲ್ಲದಿದ್ದರೂ ಸಹಿತ, ಕೆಲವೇ ಪ್ರದೇಶಗಳಲ್ಲಿ ನಾವು ಬಸ್ಸುಗಳನ್ನು ಓಡಿಸುತ್ತಿದ್ದರೂ ಕೂಡ ಅಲ್ಲಿಯ ನಮ್ಮ ಸಿಬ್ಬಂದಿಗಳು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿ ಲಾಭವನ್ನು ಗಳಿಸುತ್ತಿದ್ದಾರೆ. ಆದರೆ ಮಾನ್ಯ ಸದಸ್ಯರು ಏನೊಂದು ಒಳ್ಳೆಯ ಸ್ಥಿತಿಯಲ್ಲಿ ಇಲ್ಲದೇ ಇರತಕ್ಕಂತಹ ಬಸ್ಸುಗಳನ್ನು ಬದಲು ಮಾಡಿ ಹೊಸ ಬಸ್ಸುಗಳನ್ನು ಕೊಡುತ್ತೀರಾ ಎಂದು ಕೇಳಿದ್ದಾರೆ. ಆ ವಿಚಾರದ ಬಗ್ಗೆ ನಾವು ಈಗಾಗಲೇ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಹೊಸ ಬಸ್ಸುಗಳನ್ನು ಕೊಡುತ್ತೇವೆ. ಇಷ್ಟೇ ಅಲ್ಲ, ಇನ್ನೂ ನಿಮಗೆ ಹೆಚ್ಚಿನ ಮಾರ್ಗಗಳಲ್ಲಿ ಬಸ್ಸುಗಳನ್ನು ಓಡಿಸುವುದಲ್ಲದೆ ಅಗ್ಮೆಂಟೇಷನ್ ಆಫ್ ರೂಟ್ಸ್ ಸಲುವಾಗಿ ನಾವು ಹೆಚ್ಚಿನ ಬಸ್ಸುಗಳನ್ನು ಕೊಡುತ್ತೇವೆ ಎನ್ನುವ ಮಾತನ್ನು ಹೇಳುತ್ತೇನೆ. ಈಗ ಮಾನ್ಯ ಸದಸ್ಯರು ಒಂದು ನಾಗರೀಕ ಸಲಹಾ ಸಮಿತಿಯನ್ನು ನೇಮಿಸುತ್ತೀರಾ ಎಂದು ವಿಶೇಷವಾದಂಥ ಮುಖ್ಯವಾದ ಪ್ರಶ್ನೆಯನ್ನು ಕೇಳಿದ್ದಾರೆ. ಈ ವಿಚಾರದ ಬಗ್ಗೆ ನಾವು ಈಗಾಗಲೇ ವಿಚಾರ ಮಾಡುತ್ತಿದ್ದೇವೆ. ಆದಷ್ಟು ಬೇಗ ಆ ಸಲಹಾ ಸಮಿತಿಗಳನ್ನು ನೇಮಿಸುತ್ತೇವೆ.

11.10 ಎ.ಎಂ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸಾರಿಗೆ ಮಂತ್ರಿಗಳಿಗೆ ಒಂದು ಉಪ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಅದೇನೆಂದರೆ ಬಸ್ಸನ್ನು ಎಷ್ಟು ವರ್ಷಗಳಿಗೆ ಹಾಗೂ ಎಷ್ಟು ಕಿ.ಮೀಟರ್ಗಳಿಗೆ ಕಂಡೆಮ್ ಮಾಡುತ್ತಾರೆ. ಕಾರವೇನೆಂದರೆ ಕೊಡಗಿನಲ್ಲಿ ಬಹಳ ಹಳೆಯ ಬಸ್ಸುಗಳು ಇವೆ. ಅವುಗಳು ಹೆಚ್ಚು ಓಡಾಡಿರುವುದರಿಂದ ದಿನೇ ದಿನೇ ರಸ್ತೆಗಳಲ್ಲಿ ನಿಲ್ಲುತ್ತಿವೆ. ಅದರ ಬಗ್ಗೆ ಸನ್ಮಾನ್ಯ ಸಚಿವರು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಬೀಳಗಿ : ಸನ್ಮಾನ್ಯ ಅಧ್ಯಕ್ಷರೇ, ಬಸ್ಸುಗಳನ್ನು 7 ಲಕ್ಷ 50 ಸಾವಿರ ಕಿ.ಮೀ. ಓಡಿದ ಮೇಲೆ ಒಂದು ಲೆಕ್ಕಾಚಾರದ ಮೇಲೆ ಸ್ಕ್ರಾಪ್

ಮಾಡಲಾಗುತ್ತಿದೆ. ಅದಕ್ಕಿಂತ ಹೆಚ್ಚು ಓಡಿದಂಥ ಬಸ್ಸುಗಳ ಕಂಡಿಷನ್ ಒಂದು ವೇಳೆ ಚೆನ್ನಾಗಿದ್ದರೆ ಅವುಗಳನ್ನು ಓಡಾಡಿಸುತ್ತೇವೆ. ಅದಕ್ಕಾಗಿ 7 ಲಕ್ಷ 50 ಸಾವಿರಕ್ಕಿಂತ ಹೆಚ್ಚು ಓಡಾಡಿದಂಥ ಬಸ್ಸುಗಳಲ್ಲಿ ಒಳ್ಳೆಯ ಕಂಡಿಷನ್ ಇದ್ದಂಥ ಬಸ್ಸುಗಳನ್ನು ಬಿಟ್ಟು ಉಳಿದ ಬಸ್ಸುಗಳನ್ನೆಲ್ಲಾ ತೆಗೆದು ಹೊಸ ಬಸ್ಸುಗಳನ್ನು ಹಾಕಲಿಕ್ಕೆ ನಾವು ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಅದೇ ತರಹ ಕೊಡಗಿಗೂ ಸಹ ಗಮನಹರಿಸಿ ಹಳೆ ಬಸ್ಸುಗಳನ್ನು ತೆಗೆದು ಹೊಸ ಬಸ್ಸುಗಳನ್ನು ಹಾಕಲಿಕ್ಕೆ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಆಗ್ಮೆಂಟೇಷನ್ ಸಲುವಾಗಿ ಕೂಡ ಬಸ್ಸುಗಳನ್ನು ಕೊಡುತ್ತಿದ್ದೇವೆ. ಅದೇ ರೀತಿ ತಾಲ್ಲೂಕುಗಳಲ್ಲಿ ಡಬಲ್ ಡೋರ್ ಬಸ್ಸುಗಳನ್ನು ಕೊಡುವಂಥ ಯೋಜನೆಯನ್ನು ಕೂಡ ನಾವು ಇಟ್ಟುಕೊಂಡಿದ್ದೇವೆ.

ಶ್ರೀ ಡಿ. ನಾರಾಯಣ ದಾಸ್ : ಸರ್ಕಾರದವರು ಸುಮಾರು ಒಂದು ಸಾವಿರ ಹೊಸ ಬಸ್ಸುಗಳನ್ನು ಕೊಂಡುಕೊಳ್ಳುತ್ತೇವೆ ಎಂದು ಹೇಳಿದ್ದೀರಿ. ಅದು ಏನಾಯಿತು? ಏಕೆಂದರೆ ಒಂದೊಂದು ತಾಲ್ಲೂಕಿಗೆ ಮೂರು, ನಾಲ್ಕು ಐದು ಬಸ್ಸುಗಳನ್ನು ಕೊಡುತ್ತೇವೆ ಎಂದು ತಾವು ಹೇಳಿದ್ದೀರಿ. ಈಗಾಗಲೇ ಬಸ್ಸಿನ ತೊಂದರೆ ಬಹಳವಾಗಿದೆ. ಕೊಡಿಗೇ ಹಳ್ಳಿಯಲ್ಲಿ ಇವೊತ್ತು ಇದ್ದವರು ಬೆಳಿಗೆ ತಾಲ್ಲೂಕು ಹೆಡ್ ಕ್ವಾರ್ಟರ್ಸ್ಗೆ ಹೋಗಿ ಪುನಃ ರಾತ್ರಿ ವಾಪಸ್ಸು ಬರುವುದಕ್ಕಾದರೂ ಒಂದು ಬಸ್ಸು ಬೇಕಾಗುತ್ತದೆ. ಅದಕ್ಕಾಗಿ ಈ ಹೊಸ ಬಸ್ಸುಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೀರಾ? ಒಂದೊಂದು ತಾಲ್ಲೂಕಿಗೆ ನಾಲ್ಕು - ಐದರ ಹಾಗೆ ಬಸ್ಸನ್ನು ಕೊಡುತ್ತೀರೋ?

ಶ್ರೀ ಕೆ.ಎಸ್. ಬೀಳಗಿ : ಸನ್ಮಾನ್ಯ ಅಧ್ಯಕ್ಷರೇ, ಹೊಸ ಬಸ್ಸುಗಳನ್ನು ನಾವು ಖರೀದಿ ಮಾಡುವುದಿಲ್ಲ. ಚಾಸಿಗಳನ್ನು ಖರೀದಿ ಮಾಡಿ ಬಸ್ಸುಗಳ ಬಾಡಿ ಬಿಲ್ಡಿಂಗ್ ಮಾಡುತ್ತೇವೆ. ಆ ಕೆಲಸ ಪ್ರೊಸೆಸ್ನಲ್ಲಿ ಇದೆ. ಈಗಾಗಲೇ ಕೆಲವು ಬಸ್ಸುಗಳು ತಯಾರಾಗಿವೆ. ಬಸ್ಸುಗಳನ್ನು ಅವಶ್ಯಕತೆಗನುಗುಣವಾಗಿ ಎಲ್ಲಿ ಅತೀ ಅವಶ್ಯಕವಿದೆ ಅಲ್ಲಿ ಹೊಸ ಬಸ್ಸುಗಳನ್ನು ಕಳುಹಿಸಿ ಕೊಟ್ಟಿದ್ದೇವೆ. ನಿಮ್ಮ ಇಲಾಖೆಗೆ ಹಾಗೂ ನಿಮ್ಮ ಕ್ಷೇತ್ರಕ್ಕೂ ಸಹ ಹೊಸ ಬಸ್ಸುಗಳು ಬರುತ್ತವೆ ಪ್ರತಿಯೊಂದು ತಾಲ್ಲೂಕಿಗೆ ಡಬಲ್ ಡೋರ್ಬಸ್ಸುಗಳನ್ನು ತಯಾರು ಮಾಡಲಿಕ್ಕೆ ಪ್ರಯತ್ನಿಸುತ್ತಿದ್ದೇವೆ. ಕೂಡಲೇ ಪ್ರತಿಯೊಂದು ತಾಲ್ಲೂಕಿಗೆ ಡಬಲ್ ಡೋರ್ ಎರಡೆರಡು ಬಸ್ಸುಗಳು ಬರುತ್ತವೆ.

ಶ್ರೀ ಸಿ.ಎಸ್. ಪುಟ್ಟೇಗೌಡ : ಮಾನ್ಯ ಸಭಾಧ್ಯಕ್ಷರೇ, ಹಾಸನ ಬೆಂಗಳೂರು ರಸ್ತೆ ಖಾಸಗೀಯವರಿಗೆ ಮಾನೊಪಲಿಯಾಗಿದೆ. ಅಲ್ಲಿ ಡ್ರೈವರ್ ಯಾರೂ ಕ್ಲೀನರ್ ಯಾರೂ ಗೊತ್ತಿಲ್ಲ, ನಿನ್ನೆ ಕ್ಲೀನರ್ ಆದವನು ಇವೊತ್ತು ಡ್ರೈವರ್ ಆಗಿ ಬಸ್ಸು ಓಡಿಸುತ್ತಾನೆ. ಮೊನ್ನೆ 21ನೇ ತಾರೀಖು ನನ್ನ ಕ್ಷೇತ್ರದಲ್ಲಿ ಒಂದು ದೊಡ್ಡ ಅಪಘಾತವಾಗಿದೆ. ಹನ್ನೊಂದು ಜನ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸತ್ತವರನ್ನು ನೋಡುವುದಕ್ಕೆ ಪ್ರೈವೇಟ್ ಬಸ್ಸವರು ಬರುವುದಿಲ್ಲ, ಪಾಪ ಅವರ ಬಸ್ಸಿನ ರಕ್ಷಣೆಗಾಗಿ ಈ ಫೈರ್ ಫೋರ್ಸ್ನವರು ಓಡಾಡುತ್ತಾರೆ. ಅಪಘಾತದಲ್ಲಿ ಸತ್ತವರ ಬಾಡಿಯನ್ನು ರಕ್ಷಣೆ ಮಾಡುವುದು ಹಾಗೂ ಬದುಕುಳಿದವರನ್ನು ಆಸ್ಪತ್ರೆಗೆ ಸೇರಿಸುವ ಕಾರ್ಯವನ್ನು ನನ್ನ ಕ್ಷೇತ್ರದಲ್ಲಿ ಈ ಫಯರ್ ಫೋರ್ಸ್ನವರು ಮಾಡುವುದಿಲ್ಲ, ಕೋಳಿ ಕುರಿಯಾಗಿಬಿಟ್ಟಿದೆ. ಮನುಷ್ಯರನ್ನು ನಮ್ಮ ರಸ್ತೆಯಲ್ಲಿ ಕೋಳಿಕುರಿ ಮಾಡಿಕೊಂಡು ಬಿಟ್ಟಿದ್ದಾರೆ. ನಮ್ಮ ರೋಡ್ನಲ್ಲಿ ಒಂದು ಲೈಸೆನ್ಸ್ ಇದ್ದರೆ ನಾಲ್ಕು ಟ್ರಿಪ್ ಓಡಿಸುತ್ತಾರೆ. ಅದನ್ನು ಹದ್ದುಬಸ್ತಿನಲ್ಲಿಡಬೇಕು.

ಅಧ್ಯಕ್ಷರು : ಪ್ರಶ್ನೆ ಬಹಳ ಒಳ್ಳೆಯದು. ಆದರೆ ಅದು ಈ ಪ್ರಶ್ನೆಗೆ ಸಂಬಂಧಿಸಿದ್ದಲ್ಲ. ಅದು ಬೇರೆ. ಸೂಕ್ತ ಸಮಯದಲ್ಲಿ ನಾನು ಕರೆಯುತ್ತೇನೆ. ತಾವು ಎಲ್ಲಿಯೂ ಹೋಗದ ಹಾಗೆಯೇ ಇರಿ. ನಾನು ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಐ.ಎಂ. ಜಯರಾಮ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ನಮ್ಮ ಬೈಂದೂರು ಕ್ಷೇತ್ರದಲ್ಲಿ ಕೆಲವು ರಸ್ತೆಗಳಲ್ಲಿ ಸಾರಿಗೆ ಸಂಪರ್ಕ ವ್ಯವಸ್ಥೆ ಸರಿಯಾಗಿಲ್ಲ. ಅಲ್ಲಿ ಸರಿಯಾದ ಸಮಯಕ್ಕೆ ಬಸ್ಸುಗಳು ಗ್ರಾಮಾಂತರ ಪ್ರದೇಶಕ್ಕೆ ಹೋಗದೇ ಇರುವುದರಿಂದ ಅಲ್ಲಿಯ ಕಾಲೇಜು ಮತ್ತು ಶಾಲೆಯ ಮಕ್ಕಳಿಗೆ ತುಂಬಾ ಉಪದ್ರವ ಆಗುತ್ತಿದೆ. ಅದೂ ಅಲ್ಲದೇ ಬೈಂದೂರು ದಕ್ಷಣ ಕನ್ನಡ ಜಿಲ್ಲೆಯಲ್ಲಿನ ಒಂದು ಮುಖ್ಯ ಕ್ಷೇತ್ರವಿದ್ದು ಅಲ್ಲಿ ಹೆಚ್ಚು ಕಡಿಮೆ ನೂರು ಬಸ್ಸುಗಳು ಓಡಾಡಿದರೂ ಸಹಿತ ನಮ್ಮ ಬೈಂದೂರು ಕ್ಷೇತ್ರದಿಂದ ಒಂದು ಬಸ್ಸೂ ಸಹಿತ ಬೆಂಗಳೂರಿಗೆ ಬರುವಂಥದ್ದಿಲ್ಲ. ಇದರ ಬಗ್ಗೆ ನಾನು ಎರಡು ಮೂರು ಸಾರಿ ಕಾಗದ ಬರೆದೆ ಅದಕ್ಕೆ ಸರಿಯಾದ ವ್ಯವಸ್ಥೆ ಮಾಡದಿರುವುದರಿಂದ ನಮ್ಮ ಬೈಂದೂರು ಕ್ಷೇತ್ರಕ್ಕೆ ಈ ಕೆ.ಎಸ್.ಆರ್.ಟಿ.ಸಿ. ಯಿಂದ ತುಂಬಾ ಅನ್ಯಾಯವಾಗುತ್ತದೆ ಎಂದು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ.

ಶ್ರೀ ಕೆ.ಎಸ್. ಬೀಳಗಿ : ಆ ವಿಚಾರವಾಗಿ ಪರಿಶೀಲಿಸಿ ಸೂಕ್ತ ವ್ಯವಸ್ಥೆ ಮಾಡಲಾಗುತ್ತದೆ.

ವಿಜಾಪುರ ಜಿಲ್ಲೆಯಲ್ಲಿರುವ ಸಾರಿಗೆ ಚೆಕ್ಪೋಸ್ಟಿಂದ ವಾರ್ಷಿಕ ಆದಾಯ

2408 - ಶ್ರೀ ಬಸನಗೌಡ ಪಾಟೀಲ್ (ವಿಜಾಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ಜಿಲ್ಲೆಯಲ್ಲಿರುವ ಸಾರಿಗೆ ಚೆಕ್ ಪೋಸ್ಟಿಂದ ವಾರ್ಷಿಕ ಆದಾಯವೆಷ್ಟು?

ಆ) ಈ ಚೆಕ್ಪೋಸ್ಟಿಂದ ಸರ್ಕಾರಕ್ಕೆ ಬರುವ ಆದಾಯದಲ್ಲಿ ಸೋರಿ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಮಂತ್ರಿಗಳು) :

ಅ) ವಿಜಾಪುರ ಜಿಲ್ಲೆಯಲ್ಲಿ ಝುಳಕಿಯಲ್ಲಿರುವ ಸಾರಿಗೆ ಇಲಾಖೆಯ ಚೆಕ್ಪೋಸ್ಟಿಂದ 1994-95ನೇ ಸಾಲಿನಲ್ಲಿ ರೂ. 1,70,76,435-00 ವಾರ್ಷಿಕ ಆದಾಯ ಬಂದಿರುತ್ತದೆ.

ಆ) ಇಲ್ಲ

ಇ) ಹೌದು.

ಶ್ರೀ ಬಸನಗೌಡ ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ, ಬಿಜಾಪುರ ಜಿಲ್ಲೆಯ ಜಳಕಿ ಚೆಕ್‌ಪೋಸ್ಟಿಂದ ಒಂದು ಕೋಟಿ ಎಪ್ಪತ್ತು ಲಕ್ಷ ರೂಪಾಯಿ ಸಾರಿಗೆ ಆದಾಯ ಬಂದಿದೆ. ಎಂದು ಮಾನ್ಯ ಸಚಿವರು ಉತ್ತರದಲ್ಲಿ ಹೇಳಿದ್ದಾರೆ. ಆದರೆ ಅಲ್ಲಿ ನಡೆಯುತ್ತಿರುವಂಥ ಭ್ರಷ್ಟಾಚಾರ ಹಾಗೂ ಅವ್ಯವಹಾರದ ಬಗ್ಗೆ ಏನಾದರೂ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದಕ್ಕೆ "ಇಲ್ಲ" ಎಂದು ಉತ್ತರ ಕೊಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೇ, ಈ ಒಂದು ಚೆಕ್ ಪೋಸ್ಟ್ ಭ್ರಷ್ಟಾಚಾರದ ವೈಪರೀತ್ಯ ಮುಟ್ಟಿದೆ. ಇದರಿಂದ ಸರ್ಕಾರಕ್ಕೆ ಬರುವಂಥ ಸುಮಾರು ಒಂದು ಲಕ್ಷ ರೂಪಾಯಿನಷ್ಟು ಆದಾಯದಲ್ಲಿ ಸೋರಿಹೋಗುವಂಥ ಕೆಲಸವನ್ನು ಅಲ್ಲಿನ ಅಧಿಕಾರಿಗಳು ಮಾಡುತ್ತಿದ್ದಾರೆ. ಅಲ್ಲಿಯ ಅಧಿಕಾರಿಗಳು ಅನಧಿಕೃತವಾಗಿ ನಮ್ಮ ರಾಜ್ಯದಲ್ಲಿ ನುಸುಳಿ ಬರುತ್ತಿರುವ ವಾಹನಗಳನ್ನು ತಡೆಯದೆ ಬಿಡುತ್ತಾರೆ. ಅದಕ್ಕೆ ಪರ್ಮಿಟ್ ಸಹ ಇರುವುದಿಲ್ಲ. ಹಾಗೂ ಆ ವಾಹನಗಳಲ್ಲಿ ವಿಶೇಷವಾಗಿ ಅತೀ ಭಾರವಿದ್ದು ಓವರ್ ಟನ್ನೇಜ್ ಇದ್ದು ನಮ್ಮ ರಾಜ್ಯದ ಅನೇಕ ಸೇತುವೆಗಳು, ಹಾಗೂ ರಸ್ತೆಗಳು ಕೆಡಲಿಕ್ಕೆ ಕಾರಣವಾಗಿದೆ. ಅದಕ್ಕೆ ಅನೇಕ ನಿದರ್ಶನಗಳಿವೆ. ಸುಮಾರು ಹತ್ತು ಟನ್ ಭಾರವನ್ನು ಹಾಕಬೇಕು ಎಂದು ನಿಯಮವಿದ್ದರೂ ಸಹಿತ ಸುಮಾರು ಹದಿನೈದರಿಂದ ಇಪ್ಪತ್ತು ಟನ್ ಹಾಕಿಕೊಂಡು ಬರುವಂಥ ಬೇರೆ ರಾಜ್ಯದ ವಾಹನಗಳಿಂದ ಹಾನಿಯಾಗುತ್ತಿದ್ದರೂ

ಸಹಿತ, ಲೈಸೆನ್ಸ್ ಇಲ್ಲದೆ ಅನೇಕ ವಾಹನಗಳು ಇವೊತ್ತು ನಮ್ಮ ರಾಜ್ಯದಲ್ಲಿ ಬರುವುದರ ಮುಖಾಂತರ ಭ್ರಷ್ಟಾಚಾರ ಅಲ್ಲಿ ನಡೆದಿದೆ. ಅದಕ್ಕೆ ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಮತ್ತು ತಪಾಸಣಾ ಕೇಂದ್ರ ಎಲ್ಲಿ ಇರುತ್ತದೆ ಅದರ ನಂತರ ವಿಚಕ್ಷಣ ದಳಗಳನ್ನು ಅನೇಕ ರಸ್ತೆಗಳಲ್ಲಿ ಇಟ್ಟರೆ ಆ ರೀತಿ ಬರುವಂಥ ವಾಹನಗಳನ್ನು ಪರೀಕ್ಷೆ ಮಾಡಿದಾಗ ಸರ್ಕಾರಕ್ಕೆ ಸೋರಿ ಹೋಗುವಂಥ ಹಣವನ್ನು ಹಿಡಿಯಲು ಸಾಧ್ಯವಿದೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಕೆ.ಎಸ್. ಬೀಳಗಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳುವಂಥ ಮಾತು ಪೂರ್ಣ ಸತ್ಯವೆಂದು ಹೇಳದಿದ್ದರೂ ಸಹ ಇಂತಹ ವಿಚಾರದಲ್ಲಿ ನಾವು ಈಗ ಕಟ್ಟುನಿಟ್ಟಾದ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ರೆಗ್ಯೂಲರ್ ಚೆಕ್ ಅಲ್ಲದೇ ತಾವು ಹೇಳಿದ ಹಾಗೆ ವಿಚಕ್ಷಣ ದಳಗಳನ್ನೂ ಸಹ ನೇಮಿಸಿದ್ದೇವೆ. ಚೆಕ್ ಪೋಸ್ಟ್ನಳಲ್ಲಿ ಅವರು ಏನಾದರೂ ವ್ಯವಹಾರ ಮಾಡಿ ಹೊರಗೆ ಬಂದರೆ ಮಧ್ಯದಲ್ಲಿ ಮತ್ತೆ ಅವರ ಮೇಲೆ ಚೆಕ್ ಆಗುವುದರಿಂದ ಹೆಚ್ಚು ತಪ್ಪಿಸಿಕೊಂಡು ಹೋಗುವುದಕ್ಕೆ ಅವಕಾಶ ಇರುವುದಿಲ್ಲ. ಆದರೂ ತಾವು ಹೇಳುವಂಥ ವಿಚಾರದಲ್ಲಿ ಇನ್ನೂ ಹೆಚ್ಚಿನ ಕ್ರಮ ತೆಗೆದುಕೊಂಡು ಪರ್ಮಿಟ್ ಇಲ್ಲದೆ ಓಡಾಡುವ ಬಸ್ಸುಗಳ ಮೇಲೆ ಅಥವಾ ಪರ್ಮಿಟ್ ಕಂಡೀಷನ್ಸ್ ಮುರಿದಂಥ ಬಸ್ಸುಗಳ ಮೇಲೆ ಈಗಾಗಲೇ ನಾವು ಅನೇಕ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಹಾಗೂ ಅದರಿಂದ ಒಂಭತ್ತು ಕೋಟಿ ದಂಡದ ರೂಪದಲ್ಲಿ ವಸೂಲು ಮಾಡಿದ್ದೇವೆ. ಇದರಿಂದ ತಮಗೆ ಕಲ್ಪನೆ ಆಗಬಹುದು ನಾವು ಯಾವ ರೀತಿ ಕ್ರಮ ಕೈಗೊಳ್ಳುತ್ತಿದ್ದೇವೆಂದು. ಇನ್ನೂ ಹೆಚ್ಚು ಪ್ರಬಲವಾಗಿ ಚೆಕ್ಪೋಸ್ಟ್‌ನಳಲ್ಲಿ ಹಾಗೂ ಮಧ್ಯದಲ್ಲಿ ನಡೆಯುತ್ತಿರುವ ಅವ್ಯವಹಾರಗಳನ್ನು ಸರಿಪಡಿಸಲಿಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಲು ನಮ್ಮ ಡಿಪಾರ್ಟ್ಮೆಂಟ್ನವರಿಗೆ ಸೂಕ್ತ ಆದೇಶ ನೀಡುತ್ತೇನೆ.

ಅಧ್ಯಕ್ಷರು : ಡಾ ಯು. ಚಿತ್ತರಂಜನ್ರವರ ಪ್ರಶ್ನೆಯನ್ನು ಅವರ ಪರವಾಗಿ ಶ್ರೀ ಸದಾನಂದಗೌಡರವರು ಕೇಳುತ್ತಾರೆ.

ಸಹಕಾರಿ ಸಂಘಗಳ ಚುನಾವಣೆಗಳು.

2455 - ಡಾ॥ ಯು. ಚಿತ್ತರಂಜನ್ (ಭಟ್ಕಳ್) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅನೇಕ ಸಹಕಾರಿ ಸಂಘಗಳು ಈಗಾಗಲೇ ಚುನಾವಣೆ ಪ್ರಕ್ರಿಯೆ ಪ್ರಾರಂಭಿಸಿ ದಿನಾಂಕಗಳನ್ನು ಕೂಡಾ ಪ್ರಕಟಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಕೊನೆಯ ಗಳಿಗೆಯಲ್ಲಿ ಎಲ್ಲಾ ಚುನಾವಣೆಗಳನ್ನು ಮುಂದೂಡುವ ವಿಚಾರ ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ?

ಇ) ಈ ಚುನಾವಣೆಗಳು ಕ್ಲುಪ್ತ ಸಮಯಕ್ಕೆ ನಡೆಯುವಂತೆ ಸರ್ಕಾರ ಭರವಸೆ ನೀಡಿ ಕ್ರಮ ಕೈಗೊಳ್ಳುವುದೇ?

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :

ಅ) ಹೌದು

ಆ) ಸರ್ಕಾರವು ಈಗಾಗಲೇ ಅಧಿಸೂಚನೆ ಸಂಖ್ಯೆ ಸಿಎಂಡಬ್ಲ್ಯೂ 118, ಸಿಎಲ್ಎಂ 95, ದಿನಾಂಕ 30-08-1995 ಮತ್ತು ಇದೇ ಸಮ ಸಂಖ್ಯೆಯ ತಿದ್ದುಪಡಿ ದಿನಾಂಕ 31-08-1995ರಲ್ಲಿ ಸಹಕಾರ ಸಂಘಗಳ ಚುನಾವಣೆಗಳನ್ನು ಮುಂದೂಡಿ ದಿನಾಂಕಗಳನ್ನು ನಿಗಧಿಪಡಿಸಿದೆ.

ಇ) ಸರ್ಕಾರಿ ಅಧಿಸೂಚನೆ ಸಂಖ್ಯೆ ಸಿಎಂಡಬ್ಲ್ಯೂ 118 ಸಿಎಲ್ಎಂ 95, ದಿನಾಂಕ 30-08-1995ರಲ್ಲಿ ವಿವಿಧ ವರ್ಗಗಳ ಸಹಕಾರ ಸಂಘಗಳ ವಾರ್ಷಿಕ ಮಹಾಸಭೆ

ಮತ್ತು ಚುನಾವಣೆಗಳನ್ನು ನಡೆಸಲು ದಿನಾಂಕಗಳನ್ನು ನಿಗಧಿಪಡಿಸಿದೆ. ಅದರಂತೆ ಸಹಕಾರ ಸಂಘಗಳ ಚುನಾವಣೆಗಳನ್ನು ಡಿಸೆಂಬರ್ ಮಾಹೆ 1995ರೊಳಗೆ ನಡೆಸಲಾಗುವುದು.

ಶ್ರೀ ಡಿ.ವಿ. ಸದಾನಂದಗೌಡ (ಡಾ॥ ಯು. ಚಿತ್ತರಂಜನ್ ಅವರ ಪರವಾಗಿ) : ಮಾನ್ಯ ಅಧ್ಯಕ್ಷರೇ, ಹೊಸ ಅಧಿಸೂಚನೆಯಲ್ಲಿ ದಿನಾಂಕಗಳನ್ನು ನಿಗದಿಪಡಿಸಲಾಗಿದೆ. ಪ್ರಾಥಮಿಕ ಸಹಕಾರಿ ಸಂಘಗಳಿಗೆ ಅಕ್ಟೋಬರ್ ಒಂದರಿಂದ 31ರೊಳಗೆ, ತಾಲ್ಲೂಕು ಮಟ್ಟದ ಸಹಕಾರಿ ಸಂಘಗಳಿಗೆ ನವೆಂಬರ್ 15ರಿಂದ 30ರೊಳಗೆ, ಹಾಗೂ ಜಿಲ್ಲಾ ಮಟ್ಟದ ಮತ್ತು ಅದಕ್ಕಿಂತ ಮೇಲ್ಪಟ್ಟ ಸಹಕಾರಿ ಸಂಘಕ್ಕೆ ಡಿಸೆಂಬರ್ 15ರಿಂದ 30ರೊಳಗೆ ಮಾಡಿದ್ದಾರೆ. ಆದರೆ ಕರ್ನಾಟಕ ರಾಜ್ಯದಲ್ಲಿ ಹಲವಾರು ಪ್ರಾಥಮಿಕ ಸಹಕಾರ ಸಂಘಗಳು ಹಾಗೂ ತಾಲ್ಲೂಕು ಮಟ್ಟದ ಸಹಕಾರಿ ಸಂಘಗಳು ಈಗಾಗಲೇ ಚುನಾವಣೆಗಳನ್ನು ನಡೆಸಿವೆ. ಈ ಚುನಾವಣೆಗಳಿಗೆ ಈ ಅಧಿಸೂಚನೆ ಲಾಗು ಆಗುತ್ತದೆಯೇ? ಇನ್ನು ಎರಡನೆಯದಾಗಿ ಈಗಾಗಲೇ ಹಲವಾರು ಸಹಕಾರಿ ಸಂಘಗಳು ಚುನಾವಣೆ ದಿನಾಂಕಗಳನ್ನು ನಿಗದಿಪಡಿಸಿವೆ ಈ ದಿನಾಂಕದ ನಂತರ ಬಂದ ಈ ಅಧಿಸೂಚನೆಯಿಂದ ಈ ಒಂದು ಸರ್ಕ್ಯೂಲರ್ದಿಂದಾಗಿ ಆ ದಿನಾಂಕಗಳನ್ನು ಬದಲಾವಣೆ ಮಾಡುವ ಅಗತ್ಯ ಇದೆಯೇ? ಬದಲಾವಣೆ ಮಾಡಿದರೆ ಅದಕ್ಕೆ ಆಗುವಂಥ ಖರ್ಚನ್ನು ಆ ಸಹಕಾರಿ ಸಂಘಕ್ಕೆ ಸರ್ಕಾರ ಭರಿಸುವುದೇ ಎಂದು ಎರಡನೆಯ ಪ್ರಶ್ನೆ. ಇನ್ನು ಮೂರನೆಯದಾಗಿ ಕ್ಲಿಪ್ತ ಸಮಯಕ್ಕೆ ಚುನಾವಣೆ ನಡೆಸದಿದ್ದರೆ ಅಂತಹ ಆಡಳಿತ ಮಂಡಳಿಗಳನ್ನು ಸರ್ಕಾರ ವಜಾ ಮಾಡುವುದೇ ಎನ್ನುವುದು ಮೂರನೇ ಪ್ರಶ್ನೆ. ಕೊನೆಯದಾಗಿ ಅತ್ಯಂತ ಮಹತ್ವದ್ದಾದ ಪ್ರಶ್ನೆ ಸಹಕಾರಿ ಸಂಘದ ಸೆಕ್ಷನ್ 29(ಡಿ) ಪ್ರಕಾರ ಈಗಾಗಲೇ ಚುನಾವಣೆ ನಡೆಯದೆ ಹಲವಾರು ವರ್ಷವಾಗಿದ್ದು ಅದರಲ್ಲಿ ಆರು ವರ್ಷ ಅವಧಿ ಮಾತ್ರ ಎಂದು ಅಧ್ಯಕ್ಷರಿಗೆ ಇದ್ದಾಗ ಸಮಿತಿ ಅದರಿಂದಾಗಿ ಮುಂಚಿತವಾಗಿ ಅಧ್ಯಕ್ಷರ ಸ್ಥಾನಕ್ಕೆ ಚುನಾವಣೆ ನಡೆಸದೆ ಮುಂದೂಡುವಂಥ ಹಲವು ಅಧ್ಯಕ್ಷರ ಬಗ್ಗೆ ಈ ಸರ್ಕಾರ ಏನಾದರೂ ಕ್ರಮ ಕೈಗೊಳ್ಳುವುದೇ? ಇದನ್ನು ಸರ್ಕಾರ ಸ್ಪಷ್ಟೀಕರಣಪಡಿಸಬೇಕೆಂದು ಈ ಸಂದರ್ಭದಲ್ಲಿ ಕೇಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಚುನಾವಣೆಗಳು ಮುಗಿದಂಥ ಸಂಘಗಳಿಗೆ ಈ ಒಂದು ನಮ್ಮ ಸರ್ಕ್ಯೂಲರ್ ಲಾಗೂ ಆಗುವುದಿಲ್ಲ. ಚುನಾವಣೆ ಮುಗಿದಿದ್ದರೇ ಮುಗಿದುಹೋಯಿತು. ಈಗಾಗಲೇ ಕೆಲವು ಚುನಾವಣೆಗಳು ಪ್ರೊಸೆಸ್ನಲ್ಲಿ ಇವೆ. ಅಂತಹ ಸಂಘಗಳು ಈಗ ಏನಾದರೂ ನಡೆಯುತ್ತಿದ್ದರೆ ಈ ಸರ್ಕ್ಯೂಲರ್ ಪ್ರಕಾರ ಅವೆಲ್ಲಾ ಮುಂದೆ ಹೋಗುತ್ತವೆ. ಇನ್ನು ಆರು ವರ್ಷ ಅಧ್ಯಕ್ಷರ ಅವಧಿ ಮುಗಿದು ಅವರು ಇನ್ನೂ ಮುಂದುವರಿಯುತ್ತಿದ್ದಾರೆ. ಅವರಿಗೆ ಸೆಕ್ಷನ್ 29ರ ಪ್ರಕಾರ ಮುದ್ದತ್ ಕೊಡುತ್ತೀರಾ ಎಂದು ಕೇಳಿದ್ದಾರೆ. ಅವರಿಗೆ ಮುದ್ದತ್ ಕೊಡುವ ಪ್ರಶ್ನೆ ಇಲ್ಲ. ಎಲ್ಲಾ ಅಧ್ಯಕ್ಷರ ಚುನಾವಣೆ ಮಾಡುವಂಥ ವ್ಯವಸ್ಥೆ ಮಾಡುತ್ತೇವೆ. ಈಗ ಯಾವುದಕ್ಕೂ ಕೊಟ್ಟಿಲ್ಲ.

ಶ್ರೀ ಡಿ.ವಿ. ಸದಾನಂದಗೌಡ : ಈಗಾಗಲೇ ನೀವು ಕೊಟ್ಟಂಥ ಸರ್ಕ್ಯೂಲರ್ ಪ್ರಕಾರ ಪುನಃ ಮೊನ್ನೆ ದಿನಾಂಕ ಕೊಟ್ಟನಂತರ ನಿಮ್ಮ ದಿನಾಂಕದ ಮಧ್ಯದಲ್ಲಿ ಚುನಾವಣೆಯನ್ನು ನಡೆಸಬೇಕು ಎಂದು ಹೇಳುವಂಥ ದೃಷ್ಟಿಯಿಂದ ಹಲವಾರು ರೂಪಾಯಿಗಳನ್ನು ಖರ್ಚು ಮಾಡಿ, ಮಹಾ ಸಭೆಯನ್ನು ವ್ಯವಸ್ಥೆ ಮಾಡಿರುತ್ತಾರೆ. ಹಲವಾರು ಸಹಕಾರಿ ಸಂಘಗಳಿಗೆ ತೊಂದರೆಯಾಗಿದೆ. ಅಂತಹ ಸಂದರ್ಭದಲ್ಲಿ ಅದಕ್ಕೆ ಆಗುವಂಥ ನಷ್ಟವನ್ನು ಸರ್ಕಾರ ಭರಿಸುವುದೇ? ಸರ್ಕಾರ ಭರಿಸಬೇಕು ಎಂದು ಹೇಳುವ ಆಗ್ರಹವನ್ನು ನಾನು ಮಾಡುತ್ತಿದ್ದೇನೆ. ಇಲ್ಲದಿದ್ದರೆ ಅವರು ಕೊಟ್ಟಂತಹ ದಿನಾಂಕದಂದೇ ಅವರು ಚುನಾವಣೆ ನಡೆಸಲಿಕ್ಕೆ ಸರ್ಕಾರ ಒಪ್ಪಿಗೆ ಕೊಡಬೇಕು ಎಂದು ನಾನು ಆಗ್ರಹಪಡಿಸುತ್ತಿದ್ದೇನೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಈಗ ಏನು ಸಂಘಗಳು ಚುನಾವಣೆಯನ್ನು ನಡೆಸುತ್ತವೆ ಅದರ ಖರ್ಚನ್ನು ನಾವು ಭರಿಸುವುದಿಲ್ಲ. ಆ ಪದ್ಧತಿ ಇಲ್ಲ. ಆದರೆ ಅನೇಕ ಸಂಘಗಳು ಉದಾಹರಣೆಗೆ ಅರ್ಬನ್ ಬ್ಯಾಂಕುಗಳು ಇರುತ್ತವೆ ಅವರು ಈಗಾಗಲೇ ಚುನಾವಣೆಗೆ ಖರ್ಚು ಮಾಡಿರುವುದರಿಂದ ಅವರು ಬಂದರೆ ನಾವು ಅವರಿಗೆ ನಡೆಸಲಿಕ್ಕೆ ಅನುಮತಿ ಕೊಟ್ಟಿದ್ದೇವೆ. ಆದರೆ ಪ್ರಾಥಮಿಕ ಸಂಘಗಳು ಬೇರೆ ಸಂಘಕ್ಕೆ ಆರಿಸಿ ಹೋಗತಕ್ಕಂಥ ಸಂಘಗಳು ಏನಿದ್ದಾವೆ ಆ ಸಂಘಗಳು ಚುನಾವಣೆಯನ್ನು ನಾವು ಮುಂದೆ ಹಾಕಿದ್ದೇವೆ. ಅವುಗಳಿಗೆ ಮಾತ್ರ ಚುನಾವಣೆ ನಡೆಯಲೇ ಬೇಕು.

ಶ್ರೀ ಡಿ.ಆರ್. ಪಾಟೀಲ್ : ಈ ಸಹಕಾರಿ ಸಂಘಗಳ ಚುನಾವಣೆಯನ್ನು ಮುಂದಕ್ಕೆ ಹಾಕುವಂಥ ಸರ್ಕಾರದ ವಿಚಾರ ಏನಿದೆ ಇದನ್ನು ದಯವಿಟ್ಟು ಇನ್ನು ಮೇಲೆ ಬಂದ್ ಮಾಡುತ್ತೀರಾ? ಒಂದು ವೇಳೆ ನಿಮಗೆ ಅತಿ ಒತ್ತಾಯ ಬಂದು ಚುನಾವಣೆಯನ್ನು ಮುಂದಕ್ಕೆ ಹಾಕಲು ರಾಜಕೀಯ ಕಾರಣ ಇದ್ದರೆ ಕಡೇ ಪಕ್ಷ ಜನರಲ್ ಬಾಡಿಯವರೇ ನಡೆಸಲಿಕ್ಕೆ ಹೇಳಿ. ಏಕೆಂದರೆ ಜನರಲ್ ಬಾಡಿಯೊಳಗೆ ನಾವು ಆಡಿಟ್ ರಿವ್ಯೂ ಮಾಡುತ್ತೇವೆ, ಬಜೆಟ್ ಅಪ್ರೂವ್ ಮಾಡಬೇಕಾಗುತ್ತದೆ. ಅದನ್ನಾದರೂ ನಡೆಸಲಿಕ್ಕೆ ನೀವು ಅನುಮತಿಯನ್ನು ಕೊಡಲಿಕ್ಕೆ ನಿಮಗೆ ಏನು ತೊಂದರೆಯಾಗಿದೆ?

ಶ್ರೀ ಎಸ್.ಎಸ್. ಪಾಟೀಲ್ : ಮುಂದೆ ಹಾಕಿದರೂ ಕೂಡ ವೇಳೆಯನ್ನು ನಿಗದಿ ಮಾಡಿಬಿಟ್ಟಿರುತ್ತೇವೆ. ಪ್ರಾಥಮಿಕ ಸಂಘಗಳಲ್ಲಿ ಅಕ್ಟೋಬರ್‌ನಲ್ಲಿ ಮುಗಿಯಬೇಕು. ತಾಲ್ಲೂಕು ಮಟ್ಟದ ಸಂಘಗಳಲ್ಲಿ ನವೆಂಬರ್‌ನಲ್ಲಿ ಮುಗಿಯಬೇಕು, ಜಿಲ್ಲಾ ಮಟ್ಟದಲ್ಲಿ ಡಿಸೆಂಬರ್‌ನಲ್ಲಿ ಮುಗಿಯಬೇಕು, ಆದ್ದರಿಂದ ಜನರಲ್ ಬಾಡಿಯನ್ನು ತಾವು ಮಾಡಬಹುದು.

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೇ, ಈ ಚುನಾವಣೆಯನ್ನು ನಡೆಸುವುದಕ್ಕಿಂತ ಮುಂಚೆ ಎಷ್ಟು ನಾಮಿನಿಯನ್ನು ಹಾಕುತ್ತೇವೆ ಎಂಬುದನ್ನು ಸರ್ಕಾರ ಮುಂಚಿತವಾಗಿ ನಮಗೆ ತಿಳಿಸಬೇಕು. ಏಕೆಂದರೆ ಈ ಚುನಾವಣೆ ನಡೆದರೂ ಕೂಡ ಯಾವುದೇ ಕಡೆ ಬೆಂಬಲ ಜಾಸ್ತಿ ಇದ್ದರೂ ಕೂಡ ಈ ನಾಮಿನಿಯನ್ನು ಹಾಕಿ ಬೆಂಬಲ ಇಲ್ಲದೇ ಇರತಕ್ಕಂಥವರಿಗೆ ಅಧಿಕಾರವನ್ನು ನೀಡತಕ್ಕಂಥ ಒಂದು ವ್ಯವಸ್ಥೆ ನಡೆಯುತ್ತಿದೆ. ಆದುದರಿಂದ ಚುನಾವಣೆಯನ್ನು ನಡೆಸುವುದಕ್ಕಿಂತ ಮುಂಚೆಯೇ ಇಂಥವರನ್ನು ನಾಮಿನಿಯಾಗಿ ಹಾಕುತ್ತೇವೆ ಎಂದು ಹೇಳಿದರೆ ಅದಕ್ಕೆ ಸರಿಯಾದಂಥ ಅಸ್ತ್ರವನ್ನು ಉಪಯೋಗಿಸುವುದಕ್ಕೆ ಆಗುತ್ತದೆ. ನಾಮಿನಿಯಾದಂಥ ಮನುಷ್ಯರು ಅಧ್ಯಕ್ಷರಾಗಲು ಅರ್ಹರೇ ಮಾನ್ಯ ಅಧ್ಯಕ್ಷರೇ?

ಶ್ರೀ ಎಸ್.ಎಸ್. ಪಾಟೀಲ್ : ಈಗಿರುವ ಕಾಯಿದೆ ಪ್ರಕಾರ ಆಗಬಹುದು.

ಶ್ರೀ ಹೆಚ್.ಸಿ. ಬಾಲಕೃಷ್ಣ : ಆದರೂ ಎಷ್ಟು ಜನರನ್ನು ನಾಮಿನಿಯನ್ನಾಗಿ ಹಾಕುತ್ತೀರಿ ಎಂಬ ವಿಷಯ ನಮಗೆ ಸ್ಪಷ್ಟವಾಗಿ ಗೊತ್ತಾಗುವುದಿಲ್ಲ, ನಮಗೆ ಮೊದಲೇ ಹೇಳುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ಕೆಲಸ ಮಾಡಬೇಕು. ಚುನಾಯಿತ ಪ್ರತಿನಿಧಿಗಳು ಅಧಿಕಾರ ವಹಿಸಬೇಕು. ಅಧ್ಯಕ್ಷರಾಗಬೇಕು, ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಬೇಕು ಈ ಸಹಕಾರ ಸಂಘಗಳಲ್ಲಿ ಎನ್ನುವ ಪದ್ಧತಿ ಇದೆ. ಜನ ಸರ್ಕಾರದ ಮೇಲೆ ತಿರುಗಿ ಬಿದ್ದು ಗೆಲ್ಲುವುದಕ್ಕೆ ಆಗದೇ ಇದ್ದ ಕಾಲದಲ್ಲಿ ನಾಮಿನಿ ಮಾಡಿ ಅವನನ್ನೇ ಅಧ್ಯಕ್ಷನನ್ನಾಗಿ ಮಾಡುವುದಾದರೆ ಈ ಚುನಾವಣೆ ಪದ್ಧತಿಯನ್ನೇ ಕೈ ಬಿಟ್ಟು ನೀವು ಯಾರನ್ನು ಬೇಕಾದರೂ ನಾಮಿನೇಟ್ ಮಾಡಿಕೊಂಡು ಅವರನ್ನೇ ಅಧ್ಯಕ್ಷರನ್ನಾಗಿ ಮಾಡಿ ಡೊಂಬರಾಟ ನಡೆಸಿ ಯಾರು ನಿಮಗೆ ಬೇಡ ಎಂದು ಹೇಳುತ್ತಾರೆ. ಏಕೆ

ಇದು? ಚುನಾಯಿತ ಪ್ರತಿನಿಧಿಗಳ ಹೆಸರಿನಲ್ಲಿ ಈ ರೀತಿಯ ಹಲ್ಲೆ ಬೇಡ. ತಮಗೆ ಖುಷಿ ಬಂದ ಹಾಗೆ ಮಾಡಿ, ನಾವೇನೂ ನಿಮಗೆ ಅಡ್ಡಿ ಬರುವುದಿಲ್ಲ. ಈಗ ಇದನ್ನು ನೀವು ಮಾಡುತ್ತಿದ್ದೀರಿ, ನಾವೇಕೆ ಅಡ್ಡಿ ಬರೋಣ, ನೀವು ಹೊಸ ಪದ್ಧತಿ ಜಾರಿಗೆ ತೆಗೆದುಕೊಂಡು ಬನ್ನಿ, ದೇಶದ ಜನ ನಿಮ್ಮನ್ನು ಅಪ್ರೀಷಿಯೇಟ್ ಮಾಡುತ್ತಾರೆ.

ಶ್ರೀ ಎಸ್.ಎಸ್. ಪಾಟೀಲ್ : ಇದೇನೂ ಹೊಸದಾಗಿ ಮಾಡತಕ್ಕಂಥ ಪದ್ಧತಿ ಏನೂ ಅಲ್ಲ, ಅದರ ಕಾಯಿದೆಯನ್ನು ಸಮಗ್ರವಾಗಿ ತಿದ್ದುಪಡಿ ಮಾಡುವಾಗ ಮಾನ್ಯ ವಿರೋಧ ಪಕ್ಷದ ನಾಯಕರ....

ಅಧ್ಯಕ್ಷರು : ಅವರು ಪ್ರಶ್ನೆಯನ್ನು ಕೇಳಿದ್ದುದು ಖರ್ಗೆಯವರನ್ನು ನಿಮ್ಮನ್ನಲ್ಲ, ನೀವು ಆ ಕಡೆ ಇದ್ದಿರಿ ಖರ್ಗೆಯವರೇ, ಕೋ-ಅಪರೇಷನ್ ಪ್ರಶ್ನೆಯನ್ನು ಯಡಿಯೂರಪ್ಪನವರು ನಿಮ್ಮನ್ನು ಕೇಳುತ್ತಿದ್ದರೆ, ನೀವು ಆ ಕಡೆ ತಿರುಗಿ ಕೊಂಡಿದ್ದಿರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸಚಿವರು ಆತ್ಮಸಾಕ್ಷಿಯಾಗಿ ಹೇಳಲಿ, ನಾವು ಹಿಂದೆ ಏನು ಅನುಸರಿಸಿಕೊಂಡು ಚುನಾವಣೆಯನ್ನು ಮಾಡುತ್ತಿದ್ದರೋ ಅದೇ ರೀತಿಯಲ್ಲಿ ನಾವು ಮಾಡುತ್ತೇವೆ ಎಂದು ಆತ್ಮಸಾಕ್ಷಿಯಾಗಿ ಅವರು ಹೇಳಲಿ, ನಾನು ಒಪ್ಪಿಕೊಂಡು ಬಿಡುತ್ತೇನೆ. ಚುನಾವಣೆಯನ್ನು ನಿಲ್ಲಿಸಿಬಿಡೋಣ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ವಿರೋಧ ಪಕ್ಷದ ನಾಯಕರು ಆತ್ಮಸಾಕ್ಷಿ ಎಂದು ಏನು ಹೇಳುತ್ತಾರೆ, ಈಗಾಗಲೇ ಸಾರ್ವಜನಿಕವಾಗಿ ಹೇಳಿದ್ದೇನೆ, ನಾಮಕರಣ ಸದಸ್ಯರು ಅಧ್ಯಕ್ಷರಾಗುವುದು ತಪ್ಪು ಎಂದು ಹೇಳಿದ್ದೇನೆ. ಅದನ್ನು ಒಪ್ಪಿಕೊಂಡಿದ್ದೇನೆ. ಇದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದೇನೆ, ಸಮಗ್ರವಾಗಿ ಕಾಯಿದೆಯನ್ನು ತಿದ್ದುಪಡಿ ಮಾಡುವ ಮುನ್ನ ಆಗಲೂ ಕೂಡ ಇದನ್ನು ಪರಿಶೀಲನೆ ಮಾಡೋಣ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, ಮಾನ್ಯ ಸಚಿವರಲ್ಲಿ ನಾನು ಕೇಳಿಕೊಳ್ಳತಕ್ಕಂಥದ್ದು ಇಷ್ಟೇ. ಈಗಾಗಲೇ ಒಂದು ತಿದ್ದುಪಡಿ ಮಸೂದೆ ಅವರ ಮುಂದೆ ಇದೆ. ಅದನ್ನು 9 ತಿಂಗಳಾದರೂ ಏಕೆ ತರುತ್ತಿಲ್ಲವೋ ನನಗೆ ಗೊತ್ತಾಗುತ್ತಿಲ್ಲ. ಎರಡನೆಯದಾಗಿ ನಾಮಿನೇಷನ್ ಸಂಪೂರ್ಣವಾಗಿ ಬೇಡ ಎನ್ನತಕ್ಕಂಥವರು ಇದ್ದಾರೆ, ಬೇಕು ಎನ್ನತಕ್ಕಂಥವರು ಇದ್ದಾರೆ. ಅದಕ್ಕೆ ಕಾರಣ ಏನು ಎಂದರೆ ಸ್ವಾತಂತ್ರ್ಯ ಸಿಕ್ಕಮೇಲೆ ಯಾರ ಕೈಯಲ್ಲಿ ಕೋ-ಅಪರೇಟಿವ್ ಮೂಮೆಂಟ್ ಸಿಕ್ಕಿತ್ತೋ ಅದು ಕೊನೆಯವರೆಗೂ ಅವರ ಕೈಯಲ್ಲಿ ಉಳಿದುಕೊಂಡಿತು. ಜಸ್ಟ್‌ಕ್ ಪ್ರೈವೇಟ್ ಪ್ರಾಪರ್ಟಿ ಆದ ಹಾಗೆ ಆಯಿತು. ಅದಕ್ಕೆ ಈ ಸದನದಲ್ಲಿ ಹಲವಾರು ಮಾನ್ಯ ಸದಸ್ಯರು ಹೇಳುತ್ತಾ ಇದು ಕೆಲವು ವೆಸ್ಟೆಡ್ ಇಂಟರಸ್ಟ್ ಕ್ಲಾಸ್ ಕೈಯಲ್ಲಿ ಸಿಕ್ಕಿದೆ, ಇದಕ್ಕೆ ಅಟ್ಲೀಸ್ಟ್ ಬೇರೆಯವರೂ ಕೂಡ ಇದರಲ್ಲಿ ಇನ್ವಾಲ್ವ್ ಆಗ ಬೇಕಾದರೆ ಕನಿಷ್ಟ ಒಂದೆರಡು ಮೂರಾದರೂ ನಾಮಿನೇಷನ್ ಮಾಡಬೇಕು ಎನ್ನತಕ್ಕಂಥ ನಾದ ಬಂದ ಮೇಲೆ ಅಮೆಂಡ್ಮೆಂಟ್ ತಂದು ಆಗ ಮಾಡಿದ್ದು ಅದು 74ರಿಂದ ಇಲ್ಲಿಯವರೆವಿಗೂ ಕಂಟಿನ್ಯೂ ಇದೆ. ಇದನ್ನು ಯಾರೂ ಹೊಸದಾಗಿ ತಕ್ಷಣ ಮಾಡಿದಂಥದ್ದಲ್ಲ ಅಥವಾ ಹೋದ ಸರ್ಕಾರ ಮಾಡಿದ್ದಲ್ಲ, ಅಧ್ಯಕ್ಷರೇ, ಕೆಲವು ಸೊಸೈಟಿಗಳಲ್ಲಿ ಸದಸ್ಯರೇ ಮಾಡಿಕೊಳ್ಳುವುದಿಲ್ಲ, ಕೊನೆಗೆ ನಾನೇ ಡೈರಕ್ಷನ್ ಕೊಟ್ಟು ಸರ್ಕಾರದೇ ದುಡ್ಡು ಕೊಟ್ಟು ನೀವು ಇಷ್ಟು ಜನರನ್ನು ಸದಸ್ಯರನ್ನಾಗಿ ಮಾಡಲೇಬೇಕು ಎಂದು ಹೇಳಿ ಸುಮಾರು 2-3 ಕೋಟಿ ರೂ.ಗಳನ್ನು ನಾನು ಸರ್ಕಾರದಿಂದ ರಿಲೀಸ್ ಮಾಡಿದೆ. ಅಂದರೆ ಈ ಮನೋಭಾವನೆ ಇದ್ದಾಗ ನೀವು ಮೆಂಬರ್ ಮಾಡಿಕೊಳ್ಳುವುದಕ್ಕೂ ತಯಾರಿಲ್ಲ, ಡೈರೆಕ್ಟರನ್ನು ನೀವು ಎಲ್ಲಿ ಮಾಡುತ್ತೀರಿ? ಆಗ ಏನಾಗುತ್ತದೆಂದರೆ ಈ ನಾಮಿನೇಷನ್ ಪ್ರಶ್ನೆ ಬರುತ್ತದೆ. ನಾಮಿನೇಷನ್ ಸರಿಯೆಂದು ನಾನು ವಾದ ಮಾಡುತ್ತಿಲ್ಲ. ಯಾವಾಗ

ನಿಮ್ಮ ಆ್ಯಟಿಟ್ಯೂಡ್ ಈ ರೀತಿ ಇರುತ್ತದೆಯೋ ಆಗ ಬೇರೆಯವರನ್ನು ಸರ್ಕಾರ ಇನ್ವಾಲ್ವ್ ಮಾಡಬೇಕಾದರೆ ಆ ಹಣವನ್ನು ಬೇರೆಯವರಿಗೆ ಕೊಡಬೇಕಾದರೆ ಇದನ್ನು ಮಾಡುವುದು ಸರಿ ಎಂದು ಹೇಳಿ ಕೆಲವು ಸಲ ಈ ರೀತಿ ಮಾಡಿದ್ದಾರೆ. ನೀವು ಬೇಕಾದರೆ ಯಾವ ಕ್ಲಾಸ್ಗೆ ಆಗಲೀ ರೆಪ್ರೆಸೆಂಟೇಷನ್ ಇಲ್ಲ ಅಂಥಹ ಕ್ಲಾಸ್ಗೆ ಮಾತ್ರ ನಾಮಿನೇಷನ್ ಮಾಡುತ್ತೇವೆ ಎಂದು ಹೇಳಿದರೆ ಸ್ವಾಗತ. ಆದರೆ ಅವುಗಳಿಗೆ ಬೇಡವೇ ಬೇಡ ನಾವೇ ಇಟ್ಟುಕೊಳ್ಳುತ್ತೇವೆ ಎಂದು ಹೇಳಿದರೆ ಪುನಃ ಈ ಪ್ರಶ್ನೆ ಬರುತ್ತದೆ, ಬೇರೆಯವರು ಎಜಿಟೇಟ್ ಮಾಡುತ್ತಾರೆ.

ಅಧ್ಯಕ್ಷರು : ಈಗ ಹೆಚ್.ಸಿ. ಬಾಲಕೃಷ್ಣರವರು ಕಂದಾಯ ಮಂತ್ರಿಗಳನ್ನು ಪ್ರಶ್ನೆ ಕೇಳಿ.

ಮಾಗಡಿ ಸೋಮೇಶ್ವರ ದೇವಸ್ಥಾನದ ಜೀರ್ಣೋದ್ಧಾರ ಕುರಿತು

2369 - ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ಸೋಮೇಶ್ವರ ದೇವಸ್ಥಾನವು ಪುರಾತನವಾದ ಮಹತ್ವವಾದ ಇತಿಹಾಸವನ್ನು ಹೊಂದಿದ್ದು, ಇಂದು ಶಿಥಿಲಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಶಿಥಿಲಗೊಂಡಿರುವ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಎಷ್ಟು ವೆಚ್ಚವಾಗಬಹುದು ಎಂಬುದನ್ನು ಸರ್ಕಾರ ಅಂದಾಜಿಸಿದೆಯೇ?

ಇ) ಈ ಪುರಾತನವಾದ ಮಹತ್ವವಾದ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಶೀಘ್ರದಲ್ಲಿಯೇ, ಶೀಘ್ರ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಬಂದಿದೆ.

ಆ) ಪ್ರಾಚ್ಯವಸ್ತು ಸಂಗ್ರಹಾಲಯ ಮತ್ತು ನಿರ್ದೇಶನಾಲಯ ಇವರು ತಯಾರಿಸಿದ ಅಂದಾಜಿನ ಪ್ರಕಾರ ಸುಮಾರು 15.00 ಲಕ್ಷ ರೂ.

ಇ) ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಅಧ್ಯಕ್ಷರೇ, ಸೋಮೇಶ್ವರ ಸ್ವಾಮಿ ದೇವಸ್ಥಾನದ ಬಗ್ಗೆ ಒಂದು ಪ್ರಶ್ನೆಯನ್ನು ಕೇಳಿದ್ದಾರೆ. ಇದನ್ನು ನಾವು ಮೊದಲೇ ರಾಜ್ಯದ ಪ್ರಾಚೀನ ವಸ್ತು ಸಂಗ್ರಹಾಲಯದ ಅಧಿಕಾರಿಗಳಿಗೆ ಪತ್ರವನ್ನು ಬರೆದಿದ್ದೇವೆ. ಅವರಿಂದ ಇದಕ್ಕೆ ಉತ್ತರವಾಗಿ ಒಂದು ಪತ್ರ ಕೂಡ ನಮಗೆ ಬಂದಿದೆ. ಅವರು ಕಾಗದದಲ್ಲಿ 10 ಲಕ್ಷ ರೂ.ಗಳು ಗೋಪುರ ಕಟ್ಟುವುದಕ್ಕೆ ಬೇಕಾಗುತ್ತದೆ ಎಂದು ಬರೆದಿದ್ದಾರೆ. ಇದರ ಸಲುವಾಗಿ ಅಂದಾಜು ಪಟ್ಟಿಯನ್ನೂ ಕೂಡ ಕಳುಹಿಸಿದ್ದಾರೆ, ಇದರ ಜೊತೆಗೆ ಸುತ್ತಮುತ್ತ ಶಿಥಿಲವಾದ ಗೋಡೆಗಳನ್ನು ಕಟ್ಟುವುದಕ್ಕೆ 5 ಲಕ್ಷ ರೂ.ಗಳು ಬೇಕು, ಒಟ್ಟು 15 ಲಕ್ಷ ಲಕ್ಷ ರೂಪಾಯಿ ಬೇಕಾಗುತ್ತದೆಂದು ತಿಳಿಸಿದ್ದಾರೆ. ಈಗ ಅಷ್ಟು ಹಣವನ್ನು ಸರ್ಕಾರದಿಂದ ಕೊಡುವುದಕ್ಕೆ ಕಷ್ಟವಾಗುತ್ತದೆ. ನಮಗೆ ಇರುವ ಒಂದು ಕೋಟಿ ರೂ.ಗಳಲ್ಲಿ ಒಂದೇ ದೇವಸ್ಥಾನಕ್ಕೆ 15 ಲಕ್ಷ ರೂ.ಗಳನ್ನು ಕೊಡುವುದಕ್ಕೆ ಕಷ್ಟವಾಗುತ್ತದೆ. ಆದರೂ ಇದು ಒಂದು ಪುರಾತನವಾದ ದೇವಸ್ಥಾನ. ಇದನ್ನು ಉಳಿಸಿಕೊಳ್ಳಬೇಕಾದುದು ಕೂಡ ನಮ್ಮ ಕರ್ತವ್ಯ. ಇದಕ್ಕೋಸ್ಕರ ಒಂದು ಸಮಿತಿಯನ್ನೂ ಕೂಡ ರಚಿಸಿದ್ದೇನೆ. ಜನಗಳಿಂದ ಹಣವನ್ನು ಸಂಗ್ರಹ ಮಾಡುವುದಕ್ಕೆ ಈ ಸಮಿತಿಯನ್ನು ಮಾಡಿದೆ, ಈ ಸಮಿತಿಯಲ್ಲಿ ಮಾನ್ಯ ಸದಸ್ಯರು ಕೂಡ ಇದ್ದಾರೆ, ಹಾಗೆ ಹಿಂದಿನ ಮಾಜಿ ಮಂತ್ರಿಗಳು ಕೂಡ ಇದ್ದಾರೆ. ತಹಸೀಲ್ದಾರರ ಅಧ್ಯಕ್ಷತೆಯಲ್ಲಿ ಈ ವಂತಿಗೆಯನ್ನು ವಸೂಲು ಮಾಡುವುದಕ್ಕೆ

ಮಾಡಿದ್ದಾರೆ. ಇದರಲ್ಲಿ ವಂತಿಗೆ ಎಷ್ಟು ವಸೂಲು ಆಗುತ್ತದೆ ಎಂಬುದನ್ನು ನೋಡಿಕೊಂಡು ನಮ್ಮ ಕೈಯಲ್ಲಿ ಎಷ್ಟು ಆಗುತ್ತದೆಯೋ ಅಷ್ಟನ್ನು ಈ ವರ್ಷ ಒದಗಿಸಿ ದುರಸ್ತಿ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೇ, ಈ ಹಿಂದೆ ವಿಧಾನ ಪರಿಷತ್ತಿನಲ್ಲಿ ಇದೇ ವಿಚಾರವಾಗಿ ಸನ್ಮಾನ್ಯ ಟಿ.ಎ. ರಂಗಯ್ಯನವರು ಪ್ರಸ್ತಾಪ ಮಾಡಿದ್ದಾಗ ಹಿಂದೆ ಇದ್ದಂಥ ಮಂತ್ರಿಗಳಾದ ಶ್ರೀ ರಾಜಾ ಅಮರೇಶ್ ನಾಯಕ್ರವರನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿ ಸಭೆಯನ್ನೂ ಕೂಡ ಮಾಡಿ ಅವರು ಒಂದು ಆಶ್ವಾಸನೆಯನ್ನೂ ಕೊಟ್ಟಿದ್ದರು. ಆ ಆಶ್ವಾಸನೆ ಏನಾಗಿದೆ, ಯಾವ ಹಂತದಲ್ಲಿದೆ, ಮಂತ್ರಿಗಳು ಅವೊತ್ತು ಕೆಲಸವನ್ನು ಇನ್ನೇನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದರು. ಆದ್ದರಿಂದ ಕೆಲಸ ಯಾವ ಹಂತದಲ್ಲಿದೆ ಎನ್ನುವುದು ನಮಗೆ ಬೇಕು. ಮತ್ತೆ ಇನ್ನೊಂದು ವಿಚಾರ. ನೀವು ಸರ್ಕಾರದ ವತಿಯಿಂದ ಪರಿಶೀಲನೆ ಮಾಡುತ್ತೇವೆ ಎನ್ನುವ ಉತ್ತರವನ್ನು ಕೊಟ್ಟಿದ್ದೀರಿ, ಬಹುಶಃ ಇದೇ ರೀತಿ ಪರಿಶೀಲನೆ ಮಾಡುತ್ತೇವೆ ಎಂದು ಹೀಗೆ ಕೆಲವು ದಿವಸಗಳನ್ನು ಬಿಟ್ಟರೆ ಅಲ್ಲಿ ಗೋಡೆಯೆಲ್ಲಾ ಕುಸಿದು ಹೋಗಿ ಅಲ್ಲಿ ಏನೂ ಇರಲಿಲ್ಲವೇನೋ ಎನ್ನುವ ರೀತಿಯಲ್ಲಿ ಆಗುತ್ತದೆ. ಆದುದರಿಂದ ಸರ್ಕಾರ ನಿಖರವಾಗಿ ಎಷ್ಟು ದಿವಸಗಳಲ್ಲಿ ಎಷ್ಟು ಹಣವನ್ನು ನಾವು ಇದಕ್ಕಾಗಿ ಖರ್ಚು ಮಾಡುತ್ತೇವೆ ಎಂಬ ಉತ್ತರವನ್ನೂ ಮಾನ್ಯ ಕಂದಾಯ ಸಚಿವರು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಈ ಹಿಂದೆ ಏನು ಆಶ್ವಾಸನೆಯನ್ನು ಕೊಟ್ಟಿದ್ದರು ಎಂಬುದು ನನಗೆ ಗೊತ್ತಿಲ್ಲ, ಸರ್ಕಾರ ಒಂದೇ ಬಾರಿಗೆ 15 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಕಷ್ಟವಾಗುತ್ತದೆ. ಸನ್ಮಾನ್ಯ ಸದಸ್ಯರು ಈಗ ಏನು ಒಂದು ಸಮಿತಿಯಲ್ಲಿ ಇದ್ದಾರೆ, ಅವರು ಎಷ್ಟು ಬೇಗ ವಂತಿಗೆಯನ್ನು ವಸೂಲು ಮಾಡುತ್ತಾರೆ ಅಷ್ಟು ಬೇಗ ಈ ಕೆಲಸವನ್ನು ಕೈಗೆತ್ತಿಕೊಳ್ಳುತ್ತೇವೆ ಎಂದು ಹೇಳುತ್ತೇನೆ.

ಅನುಸೂಚಿತ ಉದ್ದಿಮೆಗಳ ಸಂಖ್ಯೆ

1086 - ಶ್ರೀ ಐಯನೂರು ಮಂಜುನಾಥ (ಹೊಸನಗರ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕನಿಷ್ಟ ವೇತನ ಕಾಯ್ದೆ 1948ರ ಅಡಿಯಲ್ಲಿ ಬರುವ ಅನುಸೂಚಿತ ಉದ್ದಿಮೆಗಳು ಎಷ್ಟು?

ಆ) ಈ ಅನುಸೂಚಿತ ಉದ್ದಿಮೆಗಳಲ್ಲಿ ಅಪಾಯಕಾರಿ ಉದ್ದಿಮೆಗಳು ಎಷ್ಟು?

ಇ) ಈ ಉದ್ದಿಮೆಗಳಲ್ಲಿ ಬಾಲ ಕಾರ್ಮಿಕರ ನಿಷೇಧ ಮತ್ತು ನಿಯಂತ್ರಣ ನಿಯಮಗಳನ್ನು ಜಾರಿಗೊಳಿಸಲಾಗಿದೆಯೇ?

ಈ) ಹಾಗಾದರೆ ಕಾರ್ಮಿಕ ಕಾಯ್ದೆಗಳೊಂದಿಗೆ ಸದರಿ ನಿಯಮಗಳನ್ನು ಜಾರಿಗೊಳಿಸಲಾಗುತ್ತಿದೆಯೇ?

ಶ್ರೀ ಸಿ. ಗುರುನಾಥ್ (ಕಾರ್ಮಿಕ ಸಚಿವರು) :

ಅ) 61 (ಅರವತ್ತೊಂದು)

ಆ) 3 (ಮೂರು)

(1) ನಿರ್ಮಾಣ ಹಾಗೂ ರಸ್ತೆಗಳ ನಿರ್ವಹಣೆ ಅಥವಾ ಕಟ್ಟಡ ನಿರ್ಮಾಣ

(2) ಹೊಗೆಸೊಪ್ಪು (ಬೀಡಿ ಸುತ್ತುವುದು)

(3) ಟ್ಯಾನರೀಸ್ ಉದ್ಯಮ

ಇ) ಹೌದು

ಈ) ಹೌದು

ಶ್ರೀ ಆಯನೂರು ಮಂಜುನಾಥ್ : ಮಾನ್ಯ ಅಧ್ಯಕ್ಷರೇ, ಕನಿಷ್ಠ ವೇತನ ಕಾಯ್ದೆಯಡಿಯಲ್ಲಿ 61 ಅನ್ನು ಷೆಡ್ಯೂಲ್ ಎಂಪ್ಲಾಯ್ಮೆಂಟ್ ಎಂದು ಹೇಳಿ ಗುರುತಿಸಿದ್ದೇವೆ ಎಂದು ಹೇಳಿದ್ದಾರೆ. ಅದರಲ್ಲಿ ಎಷ್ಟಕ್ಕೆ ಕನಿಷ್ಠ ವೇತನವನ್ನು ನಿಗದಿ ಮಾಡಿದ್ದೀರಿ ಎನ್ನುವುದು ಒಂದು ಪ್ರಶ್ನೆ. 1967ನೇ ಇಸವಿಯಲ್ಲಿ ಟೆಕ್ಸ್‌ಟೈಲ್ ಇಂಡಸ್ಟ್ರೀ, ಸಿಲ್ಕ್ ನಿಗದಿ ಆದಂಥ ಕನಿಷ್ಠ ವೇತನವನ್ನು ಇದುವರೆಗೂ ಏಕೆ ಪುನರ್ ವಿಮರ್ಷೆಯನ್ನು ಮಾಡಲಿಕ್ಕೆ ಆಗಲಿಲ್ಲ ಎನ್ನುವುದು ಎರಡನೆಯ ಪ್ರಶ್ನೆ. ಮೂರನೆಯದು ಬಾಲ ಕಾರ್ಮಿಕರ ವಿಚಾರದಲ್ಲಿ ಹೊಗೆಸೊಪ್ಪು ನಿರ್ಮಾಣ ಕಾಮಗಾರಿಗಳನ್ನು ಹೆಸಾರ್ಡ್ಸ್ ಇಂಡಸ್ಟ್ರಿಗಳೆಂದು ಗುರುತಿಸಿದ್ದೇವೆ ಎಂದು ತಿಳಿಸಿದ್ದೀರಿ. ಇದಕ್ಕೆ ಸಂಬಂಧಪಟ್ಟಂತೆ ನನ್ನ ಪ್ರಶ್ನೆ ಏನೆಂದರೆ, ಕ್ವಾರಿಗಳಲ್ಲಿ ಕೆಲಸ ಮಾಡತಕ್ಕಂಥವರು, ಸಾರಾಯಿಯನ್ನು ತುಂಬತಕ್ಕಂಥ ಇಂಡಸ್ಟ್ರೀಗಳಲ್ಲಿ ಕೆಲಸ ಮಾಡತಕ್ಕಂಥ ಹೆಣ್ಣುಮಕ್ಕಳು, ಇವೆಲ್ಲಾ ಇಂಡಸ್ಟ್ರೀಗಳು ಹೆಸಾರ್ಡ್ಸ್ ಇಂಡಸ್ಟ್ರೀಗಳು ಅಲ್ಲವೇ? ಮ್ಯಾಂಗನೀಸ್ ಇಂಡಸ್ಟ್ರೀಗಳನ್ನು ಅಂದರೆ ಮ್ಯಾಂಗನೀಸನ್ನು ಬಳಸತಕ್ಕಂಥ ಕೈಗಾರಿಕೆಗಳಲ್ಲಿ ಕೆಲಸ ಮಾಡತಕ್ಕಂಥ ಮಕ್ಕಳ ಪಾಲಿಗೆ ಇವೆಲ್ಲಾ ಹೆಸಾರ್ಡ್ಸ್ ಆಗುವುದಿಲ್ಲವೇ ಪ್ರಶ್ನೆಯನ್ನು ತಮಗೆ ಕೇಳುತ್ತಿದ್ದೇನೆ.

ಶ್ರೀ ಸಿ. ಗುರುನಾಥ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆ ಎಂದರೆ ಷೆಡ್ಯೂಲ್ಡ್ ಇಂಡಸ್ಟ್ರೀಸ್ನಲ್ಲಿ ಕೆಲವು ಕನಿಷ್ಠ ವೇತನದ ಬಗ್ಗೆ ನಮ್ಮ ಕರಡು ಪತ್ರಿಕೆ ಹೊರಡಿಸಿದ್ದೇವೆ. ಅದರಲ್ಲಿ ಟೆಕ್ಸ್‌ಟೈಲ್ ಇಂಡಸ್ಟ್ರೀಸ್ ಇರಬಹುದು. ಅವರು ಕೇಳತಕ್ಕ ಮಾಹಿತಿಯನ್ನು ನಾನು ವಿಸ್ತಾರವಾಗಿ ಅನಂತರ ಮಾನ್ಯ ಸದಸ್ಯರಿಗೆ ಒದಗಿಸುತ್ತೇನೆ.

ಎರಡನೆಯದಾಗಿ, ಬಾಲಕಾರ್ಮಿಕರ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪಿಸಿದ್ದಾರೆ. ಬಾಲ ಕಾರ್ಮಿಕರನ್ನು ಕೆಲವೊಂದು ಅಪಾಯಕಾರಿ ಕಾರ್ಖಾನೆಗಳಲ್ಲಿ ಆಗಲಿ ಗಣಿಗಳಲ್ಲಾಗಲಿ ಕೆಲಸಕ್ಕೆ ತೆಗೆದುಕೊಳ್ಳಬಾರದೆಂಬ ಕಾಯಿದೆ ಇದೆ. ಅದರ ಪ್ರಕಾರ ಎಲ್ಲೂ ಕೂಡ ಬಾಲ ಕಾರ್ಮಿಕರನ್ನು ಕೆಲಸಕ್ಕೆ ಸೇರಿಸಿಕೊಳ್ಳುತ್ತಿಲ್ಲ. ಒಂದು ವೇಳೆ ಯಾವುದಾದರೂ ಕಾರ್ಖಾನೆಯಲ್ಲಾಗಲಿ, ಗಣಿಯಲ್ಲಾಗಲಿ ಬಾಲಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಂಡಿರುವ ನಿದರ್ಶನಗಳಿದ್ದರೆ ಅದನ್ನು ನಮ್ಮ ಗಮನಕ್ಕೆ ತಂದರೆ ಅಂಥಾದ್ದನ್ನು ಈ ಕಾಯಿದೆಯ ಅಡಿಯಲ್ಲಿ ನಿಷೇಧ ಮಾಡೋಣವೆಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಶ್ರೀ ಆಯನೂರು ಮಂಜುನಾಥ್ : ಮಾನ್ಯ ಅಧ್ಯಕ್ಷರೆ, 61 ಷೆಡ್ಯೂಲ್ ಎಂಪ್ಲಾಯ್ಮೆಂಟ್ಗಳಲ್ಲಿ ಎಷ್ಟಕ್ಕೆ ತಾವು ಕನಿಷ್ಠ ವೇತನವನ್ನು ನಿಗದಿಮಾಡಿದ್ದೀರಿ? ಇನ್ನುಳಿದವುಗಳಿಗೆ ಇನ್ನೂ ಏತಕ್ಕೆ ನಿಗದಿ ಮಾಡಿಲ್ಲ? ನನ್ನ ಮಾಹಿತಿಯ ಪ್ರಕಾರ ಇಡೀ ರಾಜ್ಯದಲ್ಲಿ 55 ಸಾವಿರ ಹೋಟೆಲ್ಗಳಿವೆ. ಅಲ್ಲಿ ಸುಮಾರು 16 ರಿಂದ 18 ಗಂಟೆಗಳವರೆಗೂ ಮಕ್ಕಳು ಕೆಲಸ ಮಾಡುತ್ತವೆ. ಅವರ ರಕ್ಷಣೆಗಾಗಿ ತಾವು ಏನೇನು ಕ್ರಮಗಳನ್ನು ಕೈಗೊಳ್ಳುತ್ತಿದ್ದೀರಿ? ನಾವು ಯಾವಾಗ ಹೋಗಿ ನೋಡಿದರೂ ಆ ಮಕ್ಕಳು ಕೆಲಸ ಮಾಡುತ್ತಲೇ ಇರುತ್ತವೆ. ಇದೊಂದು ಸಾಮಾಜಿಕ ಸಮಸ್ಯೆ ಎಂಬುದನ್ನು ಒಪ್ಪಿ ತಮಗೆ ಒಂದು ಪ್ರಶ್ನೆಯನ್ನು ಕೇಳಬಯಸುತ್ತೇನೆ. ತಾವು ಚೈಲ್ಡ್ ಲೇಬರ್ ಅಬಾಲಿಷ್ ಆಕ್ಟನ್ನು ಜಾರಿಗೆ ತಂದಮೇಲೆ ಅದಕ್ಕೆ ಪರಿಹಾರವಾಗಿ ಯಾವ ಯಾವ ಯೋಜನೆಗಳನ್ನು ಸರ್ಕಾರ ಕೈಗೊಂಡಿದೆ ಮತ್ತು ಜಾರಿ ಮಾಡಿದೆ?

ಶ್ರೀ ಸಿ. ಗುರುನಾಥ್ : ಈಗಾಗಲೇ ಮಾನ್ಯ ಸದಸ್ಯರು ಕೇಳಿದಂಥ ಷೆಡ್ಯೂಲ್ಡ್ ಇಂಡಸ್ಟ್ರೀಯಲ್ಲಿ ಕನಿಷ್ಠ ವೇತನ ಕಾಯಿದೆಯ ಅಡಿಯಲ್ಲಿ ಕನಿಷ್ಠ ವೇತನ ಸಲಹಾ ಮಂಡಲಿಯ ಸಲಹೆಯನ್ನು ತೆಗೆದುಕೊಳ್ಳುವಂಥ ನಿರ್ಧಾರವನ್ನು ಸರ್ಕಾರ ಇನ್ನೂ ತೆಗೆದುಕೊಂಡಿಲ್ಲ. ಕನಿಷ್ಠ ವೇತನ ಸಲಹಾ ಮಂಡಲಿ ರಚನೆಯಾದನಂತರ ಈ

ಪ್ರಸ್ತಾವನೆ ಮಾಡಿರತಕ್ಕಂಥ ಎಲ್ಲಾ ಷೆಡ್ಯೂಲ್ಡ್ ಇಂಡಸ್ಟ್ರೀಸ್ ಅಡಿಯಲ್ಲಿ ಬರತಕ್ಕ ಎಲ್ಲಾ ಡೆಸಿಗ್ನೇಟೆಡ್ ವರ್ಕ್ಮೆನ್ ಏನಿದ್ದಾರೆ ಅದರ ಬಗ್ಗೆ ಹೇಳುತ್ತಿದ್ದೇನೆ. ಅಂದಾಜು 37ಕ್ಕೆ ಆಗಿರಬಹುದೆಂದು ಹೇಳಬಯಸುತ್ತೇನೆ.

ಅಧ್ಯಕ್ಷರು : ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, 1995ನೇ ಸೆಪ್ಟೆಂಬರ್ 7ರಂದು 17ನೇ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ 61 ಪ್ರಶ್ನೆಗಳ ಪೈಕಿ 38 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ರಾಜ್ಯದಲ್ಲಿರುವ ಗ್ರಾಮ ಸಹಾಯಕರು

1958 - ಶ್ರೀ ಅಯನೂರು ಮಂಜುನಾಥ್ (ಹೊಸನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಗ್ರಾಮಸಹಾಯಕರುಗಳ ಸಂಖ್ಯೆ ಎಷ್ಟು?

ಆ) ಗ್ರಾಮ ಸಹಾಯಕರು ಎಷ್ಟು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ, ಅವರಿಗೆ ನಿಗಧಿ ಮಾಡಲಾಗಿರುವ ವೇತನ ಎಷ್ಟು? ಅವರ ವೇತನ ಶ್ರೇಣಿ ಎಷ್ಟು?

ಇ) ಇವರಲ್ಲಿ ಎಷ್ಟು ಜನ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಾಗೂ ಹಿಂದುಳಿದ ಮತ್ತು ಅಲ್ಪ ಸಂಖ್ಯಾತ ಗ್ರಾಮ ಸಹಾಯಕರು ಎಷ್ಟಿದ್ದಾರೆ?

ಈ) ಇವರ ಸೇವೆಯನ್ನು ಕುರಿತಂತೆ ಪರಿಶೀಲಿಸಲು 11.10.94ರಂದು ಸರ್ಕಾರ ಸಮಿತಿಯನ್ನು ರಚಿಸಿರುವುದು ನಿಜವೇ? ಸಮಿತಿ ವರದಿಯ ಸಾರಾಂಶವೇನು?

ಉ) ವರದಿಯ ಆಧಾರದ ಮೇಲೆ ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಮಂತ್ರಿಗಳು) :

ಅ) 10450

ಆ) 1978 ರಿಂದ ನಿಗದಿತ ಸಂಭಾವನೆ ಮಾಸಿಕ ರೂ. 800.00 ರಂತೆ ನೀಡಲಾಗುತ್ತಿದೆ.

ಇ) 90 ಭಾಗ ಪರಿಶಿಷ್ಠ ಜಾತಿ : ಪರಿಶಿಷ್ಟ ಪಂಗಡಕ್ಕೆ ಸೇರಿದವರು, ಉಳಿದವರು ಹಿಂದುಳಿದ ವರ್ಗಕ್ಕೆ ಸೇರಿದವರಾಗಿರುತ್ತಾರೆ.

ಈ) ನಿಜ. ಯಥಾಸ್ಥಿತಿಯಲ್ಲಿ ಮುಂದುವರಿಯುವಂತೆ ತೀರ್ಮಾನಿಸಲಾಗಿದೆ.

ಉ) ಈ ವಿಷಯದ ಬಗ್ಗೆ ಉಚ್ಚನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 29424:94 ಬಾಕಿ ಇರುವುದರಿಂದ ರಿಟ್ ಅರ್ಜಿಯ ಇತ್ಯರ್ಥವಾದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಅಂಗವಿಕಲ ನಿರುದ್ಯೋಗಿಗಳ ಕುರಿತು

2089 - ಶ್ರೀ ಅಶೋಕ ಕಾಟವೆ (ಹುಬ್ಬಳ್ಳಿ ನಗರ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಅಂಗವಿಕಲ ನಿರುದ್ಯೋಗಿಗಳು ದಾಖಲಿಸಿಕೊಂಡಿದ್ದವರ ಸಂಖ್ಯೆ ಎಷ್ಟು?

ಆ) ಇವರಿಗಾಗಿ ಉದ್ಯೋಗ ವಿನಿಮಯ ಕೇಂದ್ರ ಯಾವ ಯಾವ ಖಾಸಗಿ ಉದ್ದಮೆ ಸಂಸ್ಥೆ : ಸರ್ಕಾರಿ ಇಲಾಖೆಗಳಿಗೆ ವರದಿ ಸಲ್ಲಿಸಿ ಉದ್ಯೋಗಕ್ಕೆ ಮಾರ್ಗದರ್ಶನ ಮಾಡಿದೆ?

ಇ) ಹಾಗಿದ್ದಲ್ಲಿ ಉದ್ಯೋಗ ದೊರಕಿರುವವರ ಸಂಖ್ಯೆ ಎಷ್ಟು?

ಶ್ರೀ ಸಿ. ಗುರುನಾಥ್ (ಕಾರ್ಮಿಕ ಸಚಿವರು) :

ಅ) 1364

ಆ) ಸೆಪ್ಟೆಂಬರ್ 93ರಿಂದ ಆಗಸ್ಟ್ 95ರ ವರೆವಿಗೆ 66 ಸಂಸ್ಥೆಗಳಿಗೆ 295 ಅಭ್ಯರ್ಥಿಗಳನ್ನು ಪುರಸ್ಕರಿಸಲಾಗಿದೆ. ಪಟ್ಟಿ ಲಗತ್ತಿಸಿದೆ.

ಇ) 48.

ವಿಧಾನಸಭಾ ಸದಸ್ಯರಾದ ಶ್ರೀ ಅಶೋಕ ಕಾಟವೆ (ಹುಬ್ಬಳ್ಳಿ ಶಹರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2089 -ಇದರ ಉತ್ತರಕ್ಕೆ ಅನುಬಂಧ

ಕ್ರಮ ಸಂಖ್ಯೆ	ನಿಯೋಜಕರ ಹೆಸರು ಮತ್ತು ವಿಳಾಸ	ಪುರಸ್ಕರಿಸಲ್ಪಟ್ಟ ಅಭ್ಯರ್ಥಿಗಳ ಸಂಖ್ಯೆ
1	2	3
1.	ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ಧಾರವಾಡ	4
2.	ಡೈರೆಕ್ಟರ್ ಜನರಲ್ ಆಫ್ ಪೋಲೀಸ್, ಬೆಂಗಳೂರು	1
3.	ಹುಲಕೋಟಿ ಸಹಕಾರ ಶಿಕ್ಷಣ ಸಂಸ್ಥೆ, ಹುಲಕೋಟೆ	1
4.	ಎಲ್.ಐ.ಸಿ. ಎನ್ನಿಎಂ, ಹುಬ್ಬಳ್ಳಿ	5
5.	ಚೀಫ್ ಇಂಜಿನೀಯರ್, ಪಿಡಬ್ಲ್ಯುಡಿ, ಬೆಂಗಳೂರು	3
6.	ಎಲ್.ಐ.ಸಿ, ಲ್ಯಾಮಿಂಗ್ಟನ್ ರಸ್ತೆ, ಹುಬ್ಬಳ್ಳಿ	1
7.	ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ಹುಬ್ಬಳ್ಳಿ	1
8.	ಎಲ್.ಐ.ಸಿ, ಹಾವೇರಿ	6
9.	ಎಲ್.ಐ.ಸಿ., ಹಾವೇರಿ	2
10.	ಎಲ್.ಐ.ಸಿ., ಧಾರವಾಡ	5
11.	ಕ.ರಾ. ವಿಮಾ ಯೋಜನೆ, ಬೆಂಗಳೂರು	1
12.	ಉಪ ನಿರ್ದೇಶಕರು, ಪಶುಪಾಲನೆ ಇಲಾಖೆ, ಧಾರವಾಡ	6
13.	ಎಲ್.ಐ.ಸಿ. ಗದಗ್	2
14.	ಭವಿಷ್ಯ ನಿಧಿ ನಿಗಮ, ಹುಬ್ಬಳ್ಳಿ	1
15.	ಬ್ಯಾಂಕ್ ಆಫ್ ಮಹಾರಾಷ್ಟ್ರ, ಹುಬ್ಬಳ್ಳಿ	2
16.	ಎಲ್.ಐ.ಸಿ., ಹುಬ್ಬಳ್ಳಿ	1

17.	ದೇನಾ ಬ್ಯಾಂಕ್, ಧಾರವಾಡ	1
18.	ಎಲ್.ಐ.ಸಿ., ಹುಬ್ಬಳ್ಳಿ	1
19.	ಕಾರ್ಪೋರೇಷನ್ ಬ್ಯಾಂಕ್, ಹುಬ್ಬಳ್ಳಿ	3
20.	ಅಂಚೆ ಕಛೇರಿಗಳ ಅಧೀಕ್ಷಕರು, ಹಾವೇರಿ	1
21.	ಕೆ.ಇ.ಬಿ. ಬೆಂಗಳೂರು	53
22.	ಜಿಲ್ಲಾ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಇಲಾಖೆ, ಧಾರವಾಡ	15
23.	ಎಲ್.ಐ.ಸಿ., ರಾಣೆಬೆನ್ನೂರು	1
24.	ಎಲ್.ಐ.ಸಿ., ಸಿಟಿಬ್ರ್ಯಾಂಚ್, ಹುಬ್ಬಳ್ಳಿ	2
25.	ಎಲ್.ಐ.ಸಿ., ಗದಗ್	2
26.	ಟಿ.ಎಂ.ಸಿ. ನರಗುಂದ	1
27.	ಕಾರ್ಪೋರೇಷನ್ ಬ್ಯಾಂಕ್, ಎನ್ ಸಿ ಎಂ. ಹುಬ್ಬಳ್ಳಿ	2
28.	ದುರ್ಗಾದೇವಿ ವಿದ್ಯಾಸಂಸ್ಥೆ, ಹಿರೇಕೆರೂರು	5
29.	ಸಬ್ ಡಿವಿಜನ್ ಇನ್ಸ್‌ಪೆಕ್ಟರ್ (ಪೋಸ್ಟಲ್), ಧಾರವಾಡ. 1	
30.	ಎಲ್.ಐ.ಸಿ., ನವಲಗುಂದ	3
31.	ಎಲ್.ಐ.ಸಿ., ಧಾರವಾಡ	1
32.	ಡೆಪ್ಯೂಟಿ ಡೈರೆಕ್ಟರ್, ಪವಮಾನ ಇಲಾಖೆ, ಮದ್ರಾಸ್	2
33.	ಇ.ಎಸ್.ಐ., ಹುಬ್ಬಳ್ಳಿ	3
34.	ಎಲ್.ಐ.ಸಿ. ಕಾಲೇಜ್ ರಸ್ತೆ, ಧಾರವಾಡ	2
35.	ಜಿ.ಎಫ್. ವಿದ್ಯಾ ಸಮಿತಿ, ಬೆಳ್ಳಟ್ಟಿ	1
36.	ಸ್ಟೇಷನ್ ಇಂಜಿನಿಯರ್, ಡಿ.ಡಿ. ಸೆಂಟರ್, ಹೊಸಪೇಟೆ	3
37.	ಡೆಪ್ಯುಟಿ ಕಮೀಷನರ್ ಆಫ್ ಇನ್‌ಕಂ ಟ್ಯಾಕ್ಸ್, ಹುಬ್ಬಳ್ಳಿ	2
38.	ಆರ್ಯವೈಶ್ಯ ಬ್ಯಾಂಕ್, ಹುಬ್ಬಳ್ಳಿ	1
39.	ತಹಶೀಲ್ದಾರ್, ಶಿರಹಟ್ಟಿ	2
40.	ಜಿಲ್ಲಾ ಖಜಾನೆ, ಧಾರವಾಡ	1
41.	ಡೆಪ್ಯುಟಿ ಕಮೀಷನರ್, ಇನ್‌ಕಂಟ್ಯಾಕ್ಸ್ ಹುಬ್ಬಳ್ಳಿ	2
42.	ಎಲ್.ಐ.ಸಿ. ನವಲಗುಂದ	1
43.	ಎಲ್.ಐ.ಸಿ. ಲ್ಯಾಮಿಂಗ್ ಟನ್ ರಸ್ತೆ, ಹುಬ್ಬಳ್ಳಿ	9
44.	ವಿಜಯ ಬ್ಯಾಂಕ್, ಹುಬ್ಬಳ್ಳಿ	1
45.	ಕಾರ್ಪೋರೇಷನ್ ಬ್ಯಾಂಕ್, ಧಾರವಾಡ	2

46.	ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿ, ಧಾರವಾಡ	1
47.	ಎಲ್.ಐ.ಸಿ. ಗದಗ್	2
48.	ಎಲ್.ಐ.ಸಿ. ಹಾವೇರಿ	1
49.	ಯು.ಟಿ.ಐ. ಮದ್ರಾಸ್	1
50.	ವಿಜಯ ಬ್ಯಾಂಕ್, ಹುಬ್ಬಳ್ಳಿ	1
51.	ಜಿಲ್ಲಾ ಖಜಾನೆ ಕಛೇರಿ, ಹುಬ್ಬಳ್ಳಿ	1
52.	ಕೆ.ಎಂ.ಸಿ. ಹುಬ್ಬಳ್ಳಿ	15
53.	ಸ್ಟೇಷನ್ ಶಿಕ್ಷಣ ಸಂಸ್ಥೆ, ಧಾರವಾಡ	11
54.	ಸೀನಿಯರ್ ಸೂಪರಿಂಟೆಂಡೆಂಟ್ ಆಫ್ ಪೋಸ್ಟ್‌ಆಫೀಸ್, ಧಾರವಾಡ	1
55.	- " - ಗದಗ್	1
56.	ಮೆಂಟಲ್ ಆಸ್ಪತ್ರೆ, ಧಾರವಾಡ	2
57.	ಹೆಚ್.ಎ.ಎಲ್. ಬೆಂಗಳೂರು	5
58.	ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಹುಬ್ಬಳ್ಳಿ	12
59.	ಜಿಲ್ಲಾಧಿಕಾರಿಗಳು, ಧಾರವಾಡ	2
60.	ಕರ್ನಾಟಕ ಆಟೋಮೋಟಿವ್ ಟ್ಯೂಬ್ಸ್, ಹುಬ್ಬಳ್ಳಿ	4
61.	ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಹಣಕಾಸು ಸಂಸ್ಥೆ, ಬೆಂಗಳೂರು	46
62.	ಮೈಕ್ರೋಫಿನಿಷ್ ವಾಲ್ವ್ಸ್, ಹುಬ್ಬಳ್ಳಿ	5
63.	ಕಿರ್ಲೋಸ್ಕರ್ ಎಲೆಕ್ಟ್ರಿಕಲ್ಸ್, ಹುಬ್ಬಳ್ಳಿ	4
64.	ಬಿ.ಡಿ.ಕೆ. ಇಂಜಿನಿಯರ್ಸ್, ಹುಬ್ಬಳ್ಳಿ	1
65.	ಯೂನಿವರ್ಸಲ್ ಪ್ರಿಸಿಷನ್ಸ್ ಟೂಲ್ಸ್, ಹುಬ್ಬಳ್ಳಿ	12
66.	ಅಂಚೆ ಕಛೇರಿಗಳ ಅಧೀಕ್ಷಕರು, ಹಾವೇರಿ	1
	ಒಟ್ಟು	295

ಧಾರವಾಡ ಜಿಲ್ಲೆಯಲ್ಲಿ ಟ್ರೈಸಂ ಸ್ಕೀಂನಲ್ಲಿ ಸ್ಥಾಪಿಸಲಾದ ಘಟಕಗಳು

1978 - ಶ್ರೀ ಅಶೋಕ್ ಕಾಟವೆ (ಹುಬ್ಬಳ್ಳಿ ನಗರ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿ ಟ್ರೈಸಂ ಸ್ಕೀಂನಲ್ಲಿ ಎಷ್ಟು ಉದ್ಯೋಗ ಘಟಕ ಸ್ಥಾಪಿಸಲಾಗಿದೆ? ಎಷ್ಟು ಫಲಾನುಭವಿಗಳು ಪ್ರಯೋಜನ ಪಡೆದಿರುತ್ತಾರೆ? ಇದಕ್ಕಾಗಿ ಮಾಡಿದ ಖರ್ಚು ಎಷ್ಟು?

ಆ) ಧಾರವಾಡ ಜಿಲ್ಲಾ ಗಿರಣಿಗಳಲ್ಲಿರುವ ಕಾರ್ಮಿಕ ಕಲ್ಯಾಣ ಅಧಿಕಾರಿಗಳ ಸಂಖ್ಯೆ ಎಷ್ಟು? ಹಾಗೂ ಅವರ ವಿದ್ಯಾರ್ಹತೆ ಬಗ್ಗೆ ಸರ್ಕಾರ ಗಮನವಿರಿಸಿದೆಯೇ; ಅಂಥ ಕಾರ್ಮಿಕ ಕಲ್ಯಾಣ ಅಧಿಕಾರಿಗಳು ಸರ್ಕಾರದೊಂದಿಗೆ ನೇರವಾಗಿ ಕಾರ್ಮಿಕರ ಕುರಿತು ವ್ಯವಹರಿಸಲು ಸಾಧ್ಯವೇ, ಸಾಧ್ಯವಿದ್ದಲ್ಲಿ ಕಳೆದೆರಡು ವರ್ಷಗಳಿಂದ ಪಡೆದ ವರದಿಯ ವಿವರ ನೀಡುವುದು.

ಇ) ಕಾರ್ಖಾನೆಗಳಲ್ಲಿ ಬಾಲ ಕಾರ್ಮಿಕರು ದುಡಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದರ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಸಿ. ಗುರುನಾಥ್ (ಕಾರ್ಮಿಕ ಸಚಿವರು) :

ಅ) ಸರ್ಕಾರದವತಿಯಿಂದ ಧಾರವಾಡ ಜಿಲ್ಲೆಯಲ್ಲಿ ಟ್ರೈಸಂ ಯೋಜನೆಯಡಿಯಲ್ಲಿ ಯಾವುದೇ ಉದ್ಯೋಗ ಇರುವುದಿಲ್ಲ. ಆದರೆ 1990-91ರಿಂದ 1994-95ನೇ ಸಾಲಿನ ಅವಧಿಯಲ್ಲಿ 1804 ಯುವಜನರು ಸ್ವಯಂ ಉದ್ಯೋಗಿಗಳಾಗಿರುತ್ತಾರೆ.

1990-91ರಿಂದ 1994-95ನೇ ಸಾಲಿನ ಅವಧಿಯಲ್ಲಿ ಟ್ರೈಸಂ ಯೋಜನೆಯಡಿ ಒಟ್ಟು 5055 ಯುವಜನರು ಧಾರವಾಡ ಜಿಲ್ಲೆಯಲ್ಲಿ ವಿವಿಧ ವೃತ್ತಿಗಳಲ್ಲಿ ತರಬೇತಿ ಪ್ರಯೋಜನ ಹೊಂದಿರುತ್ತಾರೆ.

1990-91ರಿಂದ 1994-95ನೇ ಸಾಲಿನ ಅವಧಿಯಲ್ಲಿ ಟ್ರೈಸಂ ತರಬೇತಿಗಾಗಿ ಧಾರವಾಡ ಜಿಲ್ಲೆಯಲ್ಲಿ 148.782 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ.

ಆ) 13 ಜನ ಕಾರ್ಮಿಕ ಕಲ್ಯಾಣ ಅಧಿಕಾರಿಗಳನ್ನು ನೇಮಿಸಿಕೊಂಡಿದ್ದಾರೆ. ಹೌದು.

ಕಾರ್ಮಿಕ ಕಲ್ಯಾಣ ಅಧಿಕಾರಿಗಳು ನೇರವಾಗಿ ಸರ್ಕಾರವನ್ನು ಸಂಪರ್ಕಿಸಲು ಸಾಧ್ಯವಿರುವುದಿಲ್ಲ, ಆದ್ದರಿಂದ ವರದಿ ವಿವರ ಒದಗಿಸುವ ಬಗ್ಗೆ ಉದ್ಭವಿಸುವುದಿಲ್ಲ.

ಇ) ಈ ತರಹದ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ರಾಜ್ಯದಲ್ಲಿರುವ ಗೋಮಾಳ ಮತ್ತು ಹುಲ್ಲುಗಾವಲು ಕ್ಷೇತ್ರ

297 - ಶ್ರೀ ಯು.ಬಿ. ಬಣಕಾರ (ಹಿರೇಕೆರೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಗೋಮಾಳ ಹಾಗೂ ಹುಲ್ಲುಗಾವಲುಗಳ ಕ್ಷೇತ್ರವೆಷ್ಟು? (ತಾಲ್ಲೂಕುವಾರು ವಿವರ ನೀಡಬೇಕು)

ಆ) ಈಗಿರುವ ಗೋಮಾಳ ಹಾಗೂ ಹುಲ್ಲುಗಾವಲು ಕ್ಷೇತ್ರ ಆಯಾ ತಾಲ್ಲೂಕುಗಳ ಜಾನುವಾರಗಳ ಸಂಖ್ಯೆಗೆ ಅನುಗುಣವಾಗುತ್ತದೆಯೇ?

ಇ) ಕಡಿಮೆಯಾಗುತ್ತಿದ್ದರೆ, ಗ್ರಾಮಗಳಲ್ಲಿಯ ದನಕರು, ಕುರಿ, ಎಮ್ಮೆಗಳು, ಮೇಯಲು ಸರಕಾರ ಮಾಡುವ ವ್ಯವಸ್ಥೆಗಳೇನು?

ಈ) ಗೋಮಾಳ ಹಾಗೂ ಹುಲ್ಲುಗಾವಲಿನ ಜಮೀನಿನಲ್ಲಿ ಅಕ್ರಮ ಸಾಗುವಳಿ ಮಾಡುವವರ ಮೇಲೆ ಸರಕಾರ ಕ್ರಮ ಕೈಗೊಳ್ಳಲಾಗಿದೆಯೇ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಒಟ್ಟು ಕ್ಷೇತ್ರ 21,93,465 ಎಕರೆಗಳು (ತಾಲ್ಲೂಕುವಾರು ಮಾಹಿತಿ ಲಭ್ಯವಿಲ್ಲ ಜಿಲ್ಲಾವಾರು ಮಾಹಿತಿ ಅನುಬಂಧದಲ್ಲಿ ನೀಡಲಾಗಿದೆ)

ಆ) ಇಲ್ಲ

ಇ) ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 97(2)ರನ್ವಯ ಗೋಮಾಳ ಜಮೀನನ್ನು ಮಿತಿಗಿತ ಕಡಿಮೆ ಇರುವ ಗ್ರಾಮಗಳಲ್ಲಿ ಸುತ್ತಮುತ್ತಲಿರುವ ಅರಣ್ಯ ಜಮೀನುಗಳಲ್ಲಿ ಜಾನುವಾರುಗಳು ಮೇಯಲು ಅವಕಾಶ ನೀಡಲಾಗಿರುತ್ತದೆ.

ಈ) 1991ರ ನಂತರ ಆದ ಗೋಮಾಳ ಜಮೀನುಗಳ ಒತ್ತುವರಿಗಳನ್ನು ಒಕ್ಕಲೆಬ್ಬಿಸಲು ಈಗಾಗಲೇ ಎಲ್ಲಾ ಕಂದಾಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನವನ್ನು ನೀಡಲಾಗಿದೆ.

ಅನುಬಂಧ

ರಾಜ್ಯದಲ್ಲಿರುವ ಗೋಮಾಳ ಜಮೀನಿನ (ವಿಸ್ತೀರ್ಣ) ವಿವರ

ಕ್ರ.ಸಂ.	ಜಿಲ್ಲೆ	ವಿಸ್ತೀರ್ಣ (ಎಕರೆಗಳಲ್ಲಿ)
1.	ಬೆಂಗಳೂರು (ನಗರ)	ಶೂನ್ಯ
2.	ಬೆಂಗಳೂರು (ಗ್ರಾಮಾಂತರ)	1,34,244-22
3.	ತುಮಕೂರು	1,49,177-35
4.	ಕೋಲಾರ	2,09,095-18
5.	ಶಿವಮೊಗ್ಗ	4,74,866-00
6.	ಚಿತ್ರದುರ್ಗ	2,01,627-15
7.	ಮೈಸೂರು	61,430-16
8.	ಮಂಡ್ಯ	1,10,978-16
9.	ಚಿಕ್ಕಮಗಳೂರು	1,60,593-15
10.	ಕೊಡಗು	ಶೂನ್ಯ
11.	ದಕ್ಷಿಣ ಕನ್ನಡ	56,658-700
12.	ಹಾಸನ	1,49,000-00
13.	ಬೆಳಗಾಂ	45,557-00
14.	ಕಾರವಾರ	4,837-21
15.	ಬಿಜಾಪುರ	32,793-70
16.	ಧಾರವಾಡ	69,189-08
17.	ಗುಲ್ಬರ್ಗಾ	1,27,284-38
18.	ಬೀದರ್	95,584-10
19.	ಬಳ್ಳಾರಿ	1,160-68
20.	ರಾಯಚೂರು	49,389-00
	ಒಟ್ಟು	21,93,465-22

ವಿಜಾಪುರ ಜಿಲ್ಲೆಯಲ್ಲಿ ಬಸ್ಸುಗಳು ಸಮಯಕ್ಕೆ ಸರಿಯಾಗಿ ಓಡದಿರುವ ಬಗ್ಗೆ

790 - ಶ್ರೀ ಬಸನಗೌಡ ಪಾಟೀಲ್ (ವಿಜಾಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ಜಿಲ್ಲೆಯಲ್ಲಿ ಮತ್ತು ನಗರ ಪ್ರದೇಶಗಳಲ್ಲಿ ಓಡಾಡುವ ಬಸ್ಸುಗಳು ಸಮಯಕ್ಕೆ ಸರಿಯಾಗಿ ಓಡಾಡುವುದಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಮಂತ್ರಿಗಳು) :

ಅ) ಸಾರಿಗೆಗಳ ಅನಿಯಮಿತ ಕಾರ್ಯಾಚರಣೆಯ ಬಗ್ಗೆ ಕೆಲವು ದೂರುಗಳು ಬಂದಿರುತ್ತದೆ.

ಆ) ಸಾರಿಗೆಗಳ ನಿಯಮಿತವನ್ನು ಉತ್ತಮಪಡಿಸಲು ಕ್ರಮ ಕೈಗೊಳ್ಳಲಾಗಿದೆ.

ಅಸಂಘಟಿತ ಕಾರ್ಮಿಕರ ಅನುಕೂಲಕರ ಯೋಜನೆಯ ಬಗ್ಗೆ

2406 - ಶ್ರೀ ಬಸನಗೌಡ ಪಾಟೀಲ್ (ವಿಜಾಪುರ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಸಂಘಟಿತ ಕಾರ್ಮಿಕರ ಅನುಕೂಲಕರ ಯೋಜನೆಗಳಾವುವು?

ಆ) ನಿವೇಶನ ರಹಿತ ಅಸಂಘಟಿತ ಕಾರ್ಮಿಕರಿಗೆ ಮನೆಗಳನ್ನು ಕಟ್ಟಿಸಿ ಕೊಡಲು ಸರ್ಕಾರದ ಯೋಜನೆಗಳೇನು?

ಶ್ರೀ ಸಿ. ಗುರುನಾಥ್ (ಕಾರ್ಮಿಕ ಸಚಿವರು) :

ಅ) ರಾಜ್ಯದಲ್ಲಿ ಕಾರ್ಮಿಕ ಇಲಾಖೆಯ ಮೂಲಕ ಜಾರಿಗೊಳ್ಳುವ ಅಸಂಘಟಿತ ಕಾರ್ಮಿಕರ ಅನುಕೂಲಕರ ಯೋಜನೆಗಳು ಯಾವುದು ಇರುವುದಿಲ್ಲ.

ಆ) ಈ ಬಗ್ಗೆ ರಾಜ್ಯ ಸರ್ಕಾರದ ಯೋಜನೆಗಳು ಯಾವುದೂ ಇರುವುದಿಲ್ಲ.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅವ್ಯವಹಾರಗಳು

2133 - ಶ್ರೀ ಜಿ. ಚಂದ್ರಣ್ಣ (ದೇವನಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದಲ್ಲಿ ಎರಡು ಗುಂಪುಗಳ ನಡುವೆ ಒಳಜಗಳ ಹಾಗೂ ಸಂಘರ್ಷಣೆಯಿಂದ ಸಂಘದ ವ್ಯವಹಾರಗಳು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಇ) ಸಂಘದಲ್ಲಿ ಲಕ್ಷಾಂತರ ರೂ.ಗಳ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ಬಗ್ಗೆ ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು ಸರ್ಕಾರಕ್ಕೆ ವರದಿ ಸಲ್ಲಿಸಿರುವುದು ನಿಜವೆ. ಹಾಗಿದ್ದಲ್ಲಿ ಕ್ರಮ ಕೈಗೊಳ್ಳಲು ಸರ್ಕಾರದ ವಿಳಂಬಕ್ಕೆ ಕಾರಣಗಳೇನು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಎರಡು ಗುಂಪುಗಳ ನಡುವೆ ಒಳಜಗಳ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಸಂಘಗಳ ನೋಂದಣಾಧಿಕಾರಿಗಳಿಂದ ದಿನಾಂಕ 22-3-95ರಂದು ವರದಿ ಪಡೆದಿದ್ದು, ಈ ಸಂಘಕ್ಕೆ ಒಬ್ಬ ಆಡಳಿತಾಧಿಕಾರಿಯನ್ನು ನೇಮಕ ಮಾಡುವ ಬಗ್ಗೆ ನಿಯಮಾನುಸಾರ ಪೂರ್ವಭಾವಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಇ) ಹಣ ದುರುಪಯೋಗವಾಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ ಎಂದು ಜಿಲ್ಲಾ ನೋಂದಣಾಧಿಕಾರಿಗಳು ವರದಿ ಮಾಡಿರುತ್ತಾರೆ.

ಈ) ಸಂಘಗಳ ನೋಂದಣಾಧಿಕಾರಿಗಳಿಂದ ದಿನಾಂಕ : 22-3-95ರಂದು ವರದಿ ಪಡೆದಿದ್ದು, ಆ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಕ ಮಾಡುವ ಮುನ್ನ ನಿಯಮಾನುಸಾರ ಪೂರ್ವಭಾವಿ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ಗೇರು ಕೃಷಿಗೆ ಪ್ರೋತ್ಸಾಹ ಹಾಗೂ ಸಬ್ಸಿಡಿ ಕುರಿತು

2454 - ಡಾ|| ಯು. ಚಿತ್ತರಂಜನ್ (ಭಟ್ಕಳ್) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಗೇರು ಅಭಿವೃದ್ಧಿಗಾಗಿ 1995-96ನೇ ಸಾಲಿಗೆ ಸರ್ಕಾರದವರು ಮೀಸಲಿರಿಸಿದ ಹಣ ಎಷ್ಟು?

ಆ) ಈ ಹಣದಲ್ಲಿ ಗೇರು ಸಸಿಗಳ ಬಗ್ಗೆ ಇರುವ ಸಬ್ಸಿಡಿ ಎಷ್ಟು? ಇತರೆ ಸಬ್ಸಿಡಿ ಎಷ್ಟು? ಹಾಗೂ ಗೊಬ್ಬರ ರೂಪದಲ್ಲಿ ನೀಡುವ ರಿಯಾಯಿತಿ ಎಷ್ಟು?

ಇ) ಉತ್ತರ ಕನ್ನಡದಲ್ಲಿ ಈಗ ಎಷ್ಟು ಮಂಜೂರಾಗಿದೆ? ಮತ್ತು ಎಷ್ಟು ಖರ್ಚಾಗಿದೆ. ವಿವರ ಒದಗಿಸುವುದು.

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :

ಅ) ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ ಉತ್ತರ ಈ ರೀತಿ ಇದೆ

ಉತ್ತರ ಕನ್ನಡ ಜಿಲ್ಲೆಯಲ್ಲಿ ಸಮಗ್ರ ಗೇರು ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ 1995-96ನೇ ಸಾಲಿಗೆ 70.69 ಲಕ್ಷ ರೂ. ವಿವಿಧ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಒದಗಿಸಿದೆ.

ಆ) ಈ ಹಣದಲ್ಲಿ ಗೇರು ಸಸಿಗಳಿಗೆ ಇರುವ ಸಬ್ಸಿಡಿ ಹಣ14.28 ಲಕ್ಷ ರೂ.

ಇತರೇ ಸಬ್ಸಿಡಿ (ಸಸ್ಯ ಸಂರಕ್ಷಣೆಗೆ) 26.26 ಲಕ್ಷ ರೂ.

ಗೊಬ್ಬರ ರೂಪದಲ್ಲಿ ರಿಯಾಯಿತಿ 28.17 ಲಕ್ಷ ರೂ.

ಇ) ಉತ್ತರ ಕನ್ನಡ ಜಿಲ್ಲೆಗೆ 70.69 ಲಕ್ಷ ಮಂಜೂರಾಗಿದೆ. 55.19 ಲಕ್ಷ ಬಿಡುಗಡೆಯಾಗಿದೆ. ರೂ. 9,36,524.00 ಆಗಸ್ಟ್ ತಿಂಗಳ ಅಂತ್ಯದವರೆಗೆ ಖರ್ಚಾಗಿದೆ.

ರಾಜ್ಯದಲ್ಲಿರುವ ಬಾಲಕಾರ್ಮಿಕರ ಶೋಷಣೆಯನ್ನು ತಪ್ಪಿಸುವ ಬಗ್ಗೆ ಕೈಗೊಂಡ ಕ್ರಮಗಳು

1939 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಬಾಲ ಕಾರ್ಮಿಕರ ಗಣತಿಯನ್ನು ಮಾಡಲಾಗಿದೆಯೇ? ಹಾಗಿದ್ದಲ್ಲಿ ಇವರುಗಳ ಸಂಖ್ಯೆ ಎಷ್ಟು?

ಆ) ಇವರುಗಳ ಸ್ಥಿತಿ ಅತ್ಯಂತ ಚಿಂತಾಜನಕವಾಗಿದ್ದು ಇವರುಗಳ ಶೋಷಣೆಯಾಗುತ್ತಿರುವುದರಿಂದ ಇವರುಗಳ ಶೋಷಣೆಯನ್ನು ತಪ್ಪಿಸಲು ಸರ್ಕಾರ ಯೋಜನೆಯನ್ನೇನಾದರೂ ರೂಪಿಸಿದೆಯೇ?

ಇ) ರೂಪಿಸಿದ್ದಲ್ಲಿ, ಆ ಯೋಜನೆಗಳ ವಿವರಗಳೇನು?

ಶ್ರೀ ಸಿ. ಗುರುನಾಥ್ (ಕಾರ್ಮಿಕ ಸಚಿವರು) :

ಅ) 1961ರ ಜನಗಣತಿಯ ಪ್ರಕಾರ ಕರ್ನಾಟಕದಲ್ಲಿ ಒಟ್ಟು 116.17 ಲಕ್ಷ ಬಾಲ ಕಾರ್ಮಿಕರಿದ್ದಾರೆ. 1991ರ ಜನಗಣತಿಯ ಅಂಕಿಅಂಶಗಳು ಇನ್ನೂ ಪ್ರಕಟವಾಗಿಲ್ಲ. ರಾಜ್ಯದಲ್ಲಿ ಪ್ರತ್ಯೇಕವಾಗಿ ಬಾಲ ಕಾರ್ಮಿಕರ ಗಣತಿ ಆಗಿಲ್ಲ.

ಆ) ಹೌದು, ಕರ್ನಾಟಕ ಸರ್ಕಾರವು ಬಹುಮುಖ ರೂಪವಿರುವ ಬಾಲ ಕಾರ್ಮಿಕ ಸಮಸ್ಯೆಯನ್ನು ತೊಡೆದು ಹಾಕುವ ಸಲುವಾಗಿ, ಹಲವು ಇಲಾಖೆಗಳನ್ನೊಳಗೊಂಡಂತೆ, ಆರೋಗ್ಯ, ಕಾರ್ಮಿಕ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಇತರೆ ಮಕ್ಕಳಿಗಾಗಿ ಕ್ರಿಯಾ ಯೋಜನೆಯನ್ನು ರೂಪಿಸಿದೆ.

ಇ) ಮಕ್ಕಳಿಗಾಗಿ ಕ್ರಿಯಾ ಯೋಜನೆಯ ಅಡಿಯಲ್ಲಿ ಕಾರ್ಮಿಕ ಇಲಾಖೆಯು 2000 ಇಸವಿಯ ವೇಳೆಗೆ 2 ಗುರಿಗಳನ್ನು ಹೊಂದಿದೆ.

1) ಅಪಾಯಕಾರಿ ಉದ್ದಿಮೆಗಳಲ್ಲಿ ತೊಡಗಿರುವ 14 ವರ್ಷದೊಳಗಿನ ಬಾಲ ಕಾರ್ಮಿಕರನ್ನು ತೊಡೆದು ಹಾಕುವುದು, ಮತ್ತು
2) ಅಪಾಯಕಾರಿಯಲ್ಲದ : ಸಾಂಪ್ರದಾಯಕವಲ್ಲದ (ಇನ್‌ಫಾರ್ಮಲ್) ಚಟುವಟಿಕೆಗಳಲ್ಲಿ ತೊಡಗಿರುವ ಮತ್ತು ಗೃಹ ಆಧಾರಿತ ಕೈಗಾರಿಕೆಗಳಲ್ಲಿ ತಾತ್ಕಾಲಿಕ :: ಪಾರ್ಟ್ ಟೈಂ (ಅರೆ ಕಾಲಿಕ) ಚಟುವಟಿಕೆಗಳಲ್ಲಿ ತೊಡಗಿರುವ ಬಾಲ ಕಾರ್ಮಿಕರನ್ನು ನಿಯಂತ್ರಿಸುವುದು.

ರಾಜ್ಯದಾದ್ಯಂತ ಓಡಾಡುವ ಸೂಪರ್ ಡೀಲಕ್ಸ್ ಬಸ್ಸುಗಳ ಸಂಖ್ಯೆ

1942 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಾದ್ಯಂತ ಹಾಲಿ ಓಡಾಡುತ್ತಿರುವ ಸೂಪರ್ ಡೀಲಕ್ಸ್ ಬಸ್ಸುಗಳ ಸಂಖ್ಯೆ ಎಷ್ಟು?

ಆ) ಎಷ್ಟು ಕಿ.ಮೀ. ಓಡಿದ ಬಳಿಕ, ಈ ಬಸ್ಸುಗಳನ್ನು ಬದಲಾಯಿಸಲಾಗುತ್ತಿದೆ?

ಇ) ಈಗ ಸಂಚಾರ ಮಾಡುತ್ತಿರುವ ಬಹುತೇಕ ಸೂಪರ್ ಡೀಲಕ್ಸ್ ಬಸ್ಸುಗಳು ಹಳೆಯದಾಗಿದ್ದು, ಆಗಾಗ ದುರಸ್ತಿಯಾಗುತ್ತಿದ್ದು, ಇದರಿಂದಾಗಿ ಪ್ರಯಾಣಿಕರಿಗೆ ತೊಂದರೆಯಾಗುತ್ತಿರುವುದರಿಂದ ಕೂಡಲೇ ಹಳೆಯದಾಗಿರುವ ಸೂಪರ್ ಡೀಲಕ್ಸ್ ಬಸ್ಸುಗಳನ್ನು ಬದಲಾಯಿಸಿ ಹೊಸ ಸೂಪರ್ ಡೀಲಕ್ಸ್ ಬಸ್‌ಗಳನ್ನು ಓಡಿಸಲಾಗುವುದೇ?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಮಂತ್ರಿಗಳು) :

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಒಟ್ಟಾರೆ 260 ಸುವಿಹಾರಿ ವಾಹನಗಳು ಕಾರ್ಯಾಚರಣೆ ಮಾಡುತ್ತಿವೆ.

ಆ) ಈ ವಾಹನಗಳನ್ನು ಸಾಮಾನ್ಯವಾಗಿ 3.5 ಲಕ್ಷ ಕಿ.ಮೀ. ಕ್ರಮಿಸಿದ ನಂತರ ಬದಲಿಸುವ ವ್ಯವಸ್ಥೆ ಇದೆ, ಹಾಗೂ ಈ ವಾಹನಗಳನ್ನು ಗ್ರಾಮಾಂತರ ನಗರ, ಪುಷ್ಪಕ್ ವಾಹನಗಳನ್ನಾಗಿ ಪರಿವರ್ತಿಸುವ ಪದ್ಧತಿ ನಿಗಮದಲ್ಲಿದೆ.

ಇ) ಹಳೆಯ ಸುವಿಹಾರಿ ವಾಹನಗಳು ನಿಗದಿತ 3.5 ಲಕ್ಷ ಕಿ.ಮೀ. ಕ್ರಮಿಸಿದ ನಂತರ ಬದಲಾಯಿಸಲಾಗುವುದು. ಹಾಗಿದ್ದರೂ ಕೆಲವು ವಾಹನಗಳನ್ನು ಅವುಗಳ ಕವಚ ಸ್ಥಿತಿಗತಿ ಹಾಗೂ ಕುಂದುಕೊರತೆಗಳ ದೂರುಗಳಿಲ್ಲದೆ ಸಮಾಧಾನಕರವಾಗಿದ್ದರೆ ಮಾತ್ರ ಅಂತಹ ವಾಹನಗಳ ಕಾರ್ಯಾಚರಣೆಯನ್ನು ಮುಂದುವರೆಸಲಾಗುವುದು,

ನಿಗಮವು 1995-96ನೇ ಸಾಲಿನಲ್ಲಿ 135 ಸುವಿಹಾರಿ ವಾಹನಗಳನ್ನು ಒದಗಿಸುವ ವಾರ್ಷಿಕ ಕಾರ್ಯ ಯೋಜನೆ ಇದೆ.

ಗ್ರಾಮ ಸಹಾಯಕರ ಹುದ್ದೆಗಳ ಸಂಖ್ಯೆ

2372 - ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇರುವ ಗ್ರಾಮ ಸಹಾಯಕರ ಹುದ್ದೆ ಎಷ್ಟು?

ಆ) ಇವರ ಸೇವಾ ನಿಯಮದ ಬಗ್ಗೆ ಸರ್ಕಾರದ ಧೋರಣೆಯೇನು?

ಇ) ಇವರ ಸೇವೆಯನ್ನು ಖಾಯಂಗೊಳಿಸುವ ವಿಚಾರ ಸರ್ಕಾರಕ್ಕಿದೆಯೇ?

ಈ) 1994ರಲ್ಲಿ ಗ್ರಾಮ ಸಹಾಯಕರ ಸೇವಾ ಖಾಯಂ ಬಗ್ಗೆ ರಚಿಸಿದ ಸಮಿತಿಯ ವರದಿಯ ಅಭಿಪ್ರಾಯವೇನು? ಹಾಗೂ ಆ ವರದಿಯನ್ನು ಸರ್ಕಾರ ಜಾರಿಗೊಳಿಸುತ್ತದೆಯೇ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಮಂತ್ರಿಗಳು) :

ಅ) 10450

ಆ) ಯಥಾಸ್ಥಿತಿಯಲ್ಲಿ ಮುಂದುವರಿಸಲಾಗುತ್ತಿದೆ.

ಇ) ಇದರ ಬಗ್ಗೆ ರಚಿಸಿದ ಸಮಿತಿಯ ವರದಿಯ ಪ್ರಕಾರ ಯಥಾಸ್ಥಿತಿಯಲ್ಲಿ ಮುಂದುವರಿಸುವಂತೆ ತೀರ್ಮಾನಿಸಲಾಗಿದೆ.

ಈ) ಸಮಿತಿಯು ಯಥಾಸ್ಥಿತಿಯಲ್ಲಿ ಮುಂದುವರಿಸುವಂತೆ ವರದಿ ನೀಡಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾಹನ ತೆರಿಗೆಯಿಂದ ರಸ್ತೆಗಳ ದುರಸ್ತಿ

2134 - ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೋಟಾರು ವಾಹನ ತೆರಿಗೆಯಿಂದ ಸರ್ಕಾರಕ್ಕೆ ಬರುವ ಆದಾಯವೆಷ್ಟು, ಈ ಜಿಲ್ಲೆಯಲ್ಲಿ ಎಷ್ಟು ಮೋಟಾರು ವಾಹನಗಳು ನೋಂದಾಯಿಸಲ್ಪಟ್ಟಿದೆ?

ಆ) ಜಿಲ್ಲೆಯಲ್ಲಿ ಮೇಲಿನ ಆದಾಯದಲ್ಲಿ ಸರ್ಕಾರ ರಸ್ತೆ ರಿಪೇರಿ ಡಾಂಬರೀಕರಣಕ್ಕಾಗಿ ಖರ್ಚು ಮಾಡಿದ ಹಣ ಎಷ್ಟು?

ಇ) ಈಗಾಗಲೇ ಜಿಲ್ಲೆಯಲ್ಲಿ ರಸ್ತೆಗಳು ಪೂರ್ಣ ಹಾಳಾಗಿದ್ದು ವಾಹನ ಸಂಚಾರಕ್ಕೆ ತೊಂದರೆಯಾಗಿರುವುದರಿಂದ ವಾಹನ ಸಂಚಾರ ಕೆಲವೆಡೆ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಯಾವಾಗ ದುರಸ್ಥಿ ಮಾಡಿಸಲಾಗುವುದು?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೋಟಾರು ವಾಹನ ತೆರಿಗೆಯಿಂದ ಸರ್ಕಾರಕ್ಕೆ ಆರ್ಥಿಕ ವರ್ಷ 1994-95ರಲ್ಲಿ ರೂ. 19,90,15,494.00 ಆದಾಯ ಬಂದಿರುತ್ತದೆ. ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ ದಿನಾಂಕ 31.3.1995ರ ಅಂತ್ಯದವರೆಗೆ 1,34,052 ವಾಹನಗಳು ನೋಂದಾಯಿಸಿ ಉಪಯೋಗದಲ್ಲಿರುತ್ತದೆ.

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೋಟಾರು ವಾಹನ ತೆರಿಗೆಯಿಂದ ಬಂದಂತಹ ಆದಾಯದಲ್ಲಿ ರಸ್ತೆ ರಿಪೇರಿ ಹಾಗೂ ಡಾಂಭೀಕರಣಕ್ಕಾಗಿ ಯಾವುದೇ ಅನುದಾನವನ್ನು ನಿರ್ದಿಷ್ಟವಾಗಿ ನೀಡಿರುವುದಿಲ್ಲ.

ಇ) ಹೌದು

ಈ) ಈ ರಸ್ತೆಯಲ್ಲಿ ಉಂಟಾಗಿರುವ ಗುಂಡಿ ಹಾಗೂ ತಗ್ಗುಗಳನ್ನು ಶೀಘ್ರವಾಗಿ ತುಂಬಿ, ರಸ್ತೆಯನ್ನು ಲಭ್ಯವಿರುವ ಅನುದಾನದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಸುಸ್ಥಿತಿಯಲ್ಲಿಡುವಂತೆ ಮುಖ್ಯ ಇಂಜಿನಿಯರ್‌ರವರಿಗೆ ಸೂಚನೆಗಳನ್ನು ನೀಡಲಾಗಿದೆ.

ದ.ಕನ್ನಡ ಜಿಲ್ಲೆಯ ವಿಧವಾವೇತನ ವೃದ್ಧಾಪ್ಯಾವೇತನ ಕುರಿತು

2135 - ಶ್ರೀ ಕೆ. ಜಯರಾಂ ಶೆಟ್ಟಿ (ಉಳ್ಳಾಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವಿಧವಾ ವೇತನ, ಅಂಗವಿಕಲ ವೇತನ, ವೃದ್ಧಾಪ್ಯ ವೇತನ ಪಡೆಯುವವರ ಸಂಖ್ಯೆ ಎಷ್ಟು? ಎಷ್ಟೆಷ್ಟು ವೇತನ ಪಡೆಯುತ್ತಾರೆ?

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಸಂಖ್ಯೆ ಎಷ್ಟು ಮತ್ತು ಅವರಿಗೆ ವರ್ಷಕ್ಕೆ ಎಷ್ಟು ಮೊತ್ತ ಬಿಡುಗಡೆಯಾಗುತ್ತದೆ?

ಇ) ಕಳೆದ ಆರು ತಿಂಗಳಿಂದ ಜಿಲ್ಲೆಯಲ್ಲಿ ಯಾರಿಗೂ ಯಾವುದೇ ತರಹದ ವೇತನದ ಮೊತ್ತ ಬಿಡುಗಡೆಯಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮವೇನು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ರಾಜ್ಯದಲ್ಲಿ ವಿಧವಾ ವೇತನ ಅಂಗವಿಕಲ ವೇತನ, ವೃದ್ಧಾಪ್ಯ ವೇತನ ಪಡೆಯುವವರ ಸಂಖ್ಯೆ ಈ ಕೆಳಕಂಡಂತಿದೆ.

ವೃದ್ಧಾಪ್ಯ ವೇತನ	4,91,551
ಅಂಗವಿಕಲ ವೇತನ	2,87,412
ವಿಧವಾ ವೇತನ	4,82,954

ಆ) ಈ ಎಲ್ಲಾ ಪಿಂಚಣಿದಾರರಿಗೂ ಪ್ರತಿ ಮಾಹೆಯ 75 ರೂಪಾಯಿಗಳಂತೆ ವೇತನವನ್ನು ಪಾವತಿಸಲಾಗುತ್ತಿದೆ.

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವವರ ಸಂಖ್ಯೆ ಈ ಕೆಳಕಂಡಂತಿದೆ

ವೃದ್ಧಾಪ್ಯ ವೇತನ ಸಂಖ್ಯೆ	15099
ಅಂಗವಿಕಲ ವೇತನ ಸಂಖ್ಯೆ	15733
ವಿಧವಾ ವೇತನ ಸಂಖ್ಯೆ	34242
ಒಟ್ಟು	65074

ಇ) ಈ ವಿಷಯವು ಸರ್ಕಾರದ ಗಮನಕ್ಕೆ ಬಂದಿದ್ದು, ಬಾಕಿ ಹಣ ಬಿಡುಗಡೆ ಮಾಡಲು ಈಗಾಗಲೇ ಸೂಕ್ತ ಕ್ರಮ ತೆಗೆದುಕೊಳ್ಳಲಾಗಿದೆ.

ದ.ಕನ್ನಡ ಜಿಲ್ಲೆಯಲ್ಲಿ ಸುಂಟರಗಾಳಿಯಿಂದ ಆದ ಅನಾಹುತ

2052 - ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಜುಲೈ ತಿಂಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಂದ ಭೀಕರ ಸುಂಟರಗಾಳಿಯಿಂದ ಆದ ಅನಾಹುತಗಳಿಂದ ಮನೆ ಕಳೆದುಕೊಂಡವರ ಸಂಖ್ಯೆ ಎಷ್ಟು?

ಆ) ಎಷ್ಟು ಜನರಿಗೆ ಇದರಿಂದಾಗಿ ತೊಂದರೆಯಾಗಿದೆ (ಅಂಕಿ-ಅಂಶಗಳೊಂದಿಗೆ) ಮತ್ತು ಒಟ್ಟು ನಷ್ಟ ಎಷ್ಟು?

ಇ) ಸರ್ಕಾರ ಈ ಜನರಿಗೆ ಪುನರ್‌ವಸತಿ ಅಥವಾ ವ್ಯವಸ್ಥೆಗೋಸ್ಕರ ಎಷ್ಟು ಜನರಿಗೆ ಎಷ್ಟೆಷ್ಟು ಪರಿಹಾರದ ಮೊತ್ತ ಒದಗಿಸಿದೆ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) 313 ಮನೆಗಳು ಭಾಗಶಃ ಮತ್ತು 8 ಮನೆಗಳು ಪೂರ್ಣವಾಗಿ, ಹೀಗೆ ಒಟ್ಟು 321 ಮನೆಗಳು ಹಾನಿಗೊಂಡಿದೆ.

ಆ) 331 ಕುಟುಂಬಗಳಿಗೆ ತೊಂದರೆಯಾಗಿದೆ. ಹಾನಿಯ ವಿವರ ಕೆಳಕಂಡಂತಿದೆ

(ರೂ. ಲಕ್ಷಗಳಲ್ಲಿ)

			ಲುಕ್ಸಾನು
1.	ಪೂರ್ಣ ಮನೆ ಹಾನಿ	-8	2.70
2.	ಭಾಗಶಃ ಮನೆ ಹಾನಿ	313	16.65
3.	ಜಾನುವಾರು ಹಟ್ಟಿಹಾನಿ	9	0.37
4.	ನೀರಾವರಿ ಪಂಪ್‌ಸೆಟ್ ಹಾನಿ	1	0.02
	ಒಟ್ಟು	331	19.74

ಇ) ನಿಯಮಾನುಸಾರ ಈವರೆಗೆ 242 ಜನರಿಗೆ ರೂ. 4,64,354.00ಗಳ ಪರಿಹಾರವನ್ನು ನೀಡಲಾಗಿದೆ. ಅಲ್ಲದೇ, ಸುಂಟರಗಾಳಿಯಿಂದ ಹೆಚ್ಚಿನವು ಹೆಂಚು ಹಾರಿ ಹೋಗಿರುವ ಪ್ರಕರಣಗಳಾಗಿದ್ದು, 28,200 ಹೆಂಚುಗಳನ್ನು ಸಂತ್ರಸ್ಥರ ಮನೆಗಳಿಗೆ ತಲುಪಿಸಿ, ಸರ್ಕಾರದಿಂದ ಹೆಂಚು ಹೊದಿಸುವ ವ್ಯವಸ್ಥೆಯನ್ನು ಮಾಡಲಾಗಿದೆ.

ಬಸ್ಸಿನ ಬಾಡಿ ಕಟ್ಟುವುದರ ಬಗ್ಗೆ

2323 - ಡಾ|| ಎಂ.ಪಿ. ಕರ್ಕಿ (ಕುಮಟ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರ ಖರೀದಿಸಲು ನಿಶ್ಚಯಿಸಿದ 1500 ಬಸ್ ಛಾಸಿಗಳಲ್ಲಿ ಎಷ್ಟು ಛಾಸಿಗಳನ್ನು ಕಳೆದ 9 ತಿಂಗಳಲ್ಲಿ ಖರೀದಿಸಿದೆ?

ಆ) ಎಷ್ಟು ಛಾಸಿಗಳಿಗೆ ಬಾಡಿ ಕಟ್ಟಿ ಯಾವ ಡಿವಿಶನ್‌ಗಳಿಗೆ ಕಳಿಸಿದೆ, ಇವುಗಳಲ್ಲಿ ಸಾಧಾ ಅರೆಸುಖಾಸೀನ, ಸುಖಾಸೀನ, ಅತ್ಯಂತ ಸುಖಾಸೀನ ಬಸ್ಸುಗಳ ಸಂಖ್ಯೆ ಎಷ್ಟು, (ವಿವರ ಒದಗಿಸುವುದು)

ಇ) ಉತ್ತರ ಕನ್ನಡ ಸಿರ್ಸಿ ಡಿವಿಶನ್‌ನಲ್ಲಿ ಯಾವ ವಿಧದ ಬಸ್ಸುಗಳಿಗೆ ಎಷ್ಟು ಬೇಡಿಕೆಗಳಿವೆ?

ಈ) ಸಿರ್ಸಿ ಡಿವಿಶನ್‌ನಲ್ಲಿ 8 ಲಕ್ಷಕ್ಕೂ ಹೆಚ್ಚು ಕಿ.ಮೀ. ಸಂಚರಿಸಿದ ಬಸ್ಸುಗಳ ವಿವರ ಒದಗಿಸುವುದು?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) 1995-96ನೇ ಹಣಕಾಸು ವರ್ಷದಲ್ಲಿ ಏಪ್ರಿಲ್ ತಿಂಗಳಿನಿಂದ ದಿನಾಂಕ 31-8-1995ರವರೆಗೆ ಈ ವರ್ಷದಲ್ಲಿ ಖರೀದಿಸಲು ಉದ್ದೇಶಿಸಲಾಗಿರುವ 1500 ಛಾಸಿಗಳ ಪೈಕಿ 479 ಹೊಸ ಛಾಸಿಗಳನ್ನು ಖರೀದಿಸಲಾಗಿದೆ.

ಆ) ವಿಭಾಗವಾರು ಕೊಡಲಾದ ವಿವಿಧ ರೀತಿಯ ವಾಹನಗಳ ವಿವರವು ಈ ಕೆಳಕಂಡಂತಿದೆ

ಕ್ರ ಸಂ	ವಿಭಾಗ	ಯೋಜನೆ ಪ್ರಕಾರ	ಈ ತನಕ ವಿತರಿಸಲಾದ ವಾಹನಗಳ ಸಂಖ್ಯೆ					
			ಸುವಿ	ಅ.ಸು	ಪುಷ್ಪಕ್	ಗ್ರಾ	ನಸಾ	ಒಟ್ಟು
1)	ಬೆಂ(ಕೇ)	52	8	4	-	23	-	35
2)	ಬೆಂ(ಗ್ರಾ)	52	-	-	-	20	-	20
3)	ಕೋಲಾರ	85	-	-	-	33	-	33
4)	ಮೈಸೂರು	111	2	6	2	43	4	57
5)	ಹಾಸನ	67	-	-	-	26	-	26
6)	ಗುಲ್ಬರ್ಗಾ	81	-	-	-	31	-	31
7)	ರಾಯಚೂರು	50	2	2	-	24	-	28
8)	ಮಂಗಳೂರು	62	1	4	-	22	-	27
9)	ಹುಬ್ಬಳ್ಳಿ	113	2	1	1	44	7	55
10)	ಗದಗ	70	-	-	-	27	-	27
11)	ಉ.ಕ(ಸಿರ್ಸಿ)	72	-	5	-	20	-	25
12)	ದಾವಣಗೆರೆ	43	-	-	-	18	-	18
13)	ಬೆಳಗಾಂ	119	2	4	-	48	2	56
14)	ಬಿಜಾಪುರ	84	-	-	-	32	-	32
15)	ಬಾಗಲಕೋಟೆ	38	2	-	-	22	-	24
16)	ಬಳ್ಳಾರಿ	63	-	-	-	24	-	24
17)	ಬೀದರ್	43	-	2	-	16	-	18
18)	ಬೆನಸಾ	295	-	-	48	-	22	70
	ಒಟ್ಟು	1500	19	28	51	473	35	606

ಇ) ಅವಶ್ಯಕತೆ ಇರುವ ವಿವಿಧ ಮಾದರಿಯ ವಾಹನಗಳ ವಿವರ ಈ ಕೆಳಕಂಡಂತಿದೆ

ಕ್ರ ಸಂ	ಮಾದರಿ ವಾಹನಗಳು	ಒಟ್ಟಾರೆ ಅವಶ್ಯಕತೆ	ವಾಹನಗಳ	ನೀಡಿದ ವಾಹನಗಳು	ಬಾಕಿ
1)	ಸುವಿಹಾರಿ	2	ಹೊಸ ಮಾರ್ಗಕ್ಕಾಗಿ	-	-
		2	ಬದಲಾವಣೆಗಾಗಿ	-	-
	ಒಟ್ಟು	4			4
2)	ಅರೆಸುವಿಹಾರಿ	9		2	7
3)	ಗ್ರಾಮಾಂತರ	52	ಬದಲಾವಣೆ	25	47
		20	ಹೊಸ ಮಾರ್ಗಕ್ಕಾಗಿ		
	ಒಟ್ಟು	72			

ಉಳಿದ ವಾಹನಗಳನ್ನು ಕಾರ್ಯ ಯೋಜನೆಯ ಪ್ರಕಾರ ಮಾರ್ಚ್ 1996ರ ಒಳಗಾಗಿ ಹಂತ ಹಂತವಾಗಿ ನೀಡಲಾಗುವುದು.

ಇ) ಸಿರ್ಸಿ ವಿಭಾಗದಲ್ಲಿ 33 ವಾಹನಗಳು 8 ಲಕ್ಷಕ್ಕೂ ಹೆಚ್ಚು ಕ್ರಮಿಸಿರುವ ವಾಹನಗಳು ಇವೆ. ಘಟಕವಾರು ಇರುವ ವಾಹನಗಳ ವಿವರ ಈ ಕೆಳಕಂಡಂತಿದೆ.

ಘಟಕ	ವಾಹನಗಳು
ಸಿರ್ಸಿ	11
ಕುಮ್ಟ	04
ಕಾರವಾರ	12
ಹಳಿಯಾಳ	02
ಭಟ್ಕಳ	04
ಒಟ್ಟು	33

ಗ್ರಾಮ ಸಹಾಯಕ ಹುದ್ದೆ ಖಾಯಂ

2244 - ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಬೇಲೂರು) : ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಾದ್ಯಂತ ಗೌರವ ಧನ ಪಡೆದು ಕೆಲಸ ಮಾಡುತ್ತಿರುವ ಗ್ರಾಮ ಸಹಾಯಕರ ನೇಮಕಾತಿಯನ್ನು ಸರ್ಕಾರ ಖಾಯಂ ಮಾಡುವುದೇ?

ಆ) ಖಾಯಂ ಮಾಡಲು ಆಗಿರುವ ವಿಳಂಬಕ್ಕೆ ಕಾರಣಗಳೇನು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಮಂತ್ರಿಗಳು) :

ಅ) ಇಲ್ಲ

ಆ) ಈ ವಿಷಯದ ಬಗ್ಗೆ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 29424:94 ಬಾಕಿ ಇರುವುದರಿಂದ ರಿಟ್ ಅರ್ಜಿಯು ಇತ್ಯರ್ಥವಾದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಸರಕಾರಿ ಖಾಲಿ ಜಾಗವನ್ನು ಸ್ಟಾಕ್ ಎಕ್ಸ್‌ಚೇಂಜ್‌ಗೆ ನೀಡಿರುವುದು

2026 - ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸುರತ್ಕಲ್ ವಿಧಾನ ಸಭಾ ಕ್ಷೇತ್ರಕ್ಕೆ ಒಳಪಟ್ಟ ಬಂಗ್ರ ಕೂಳೂರು ಹತ್ತಿರ ಸರಕಾರದ ಖಾಲಿ ಜಾಗವನ್ನು ಸ್ಟಾಕ್-ಎಕ್ಸಚೇಂಜ್ ಕಛೇರಿಯ ಕಟ್ಟಡ ಕಟ್ಟಲು ನೀಡಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಎಷ್ಟು ಸ್ಥಳವನ್ನು ನೀಡಲಾಗಿದೆ, ಸರ್ವೆ ನಂಬರು ವಿವರವನ್ನು ಒದಗಿಸುವುದು;

ಇ) ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಸರಕಾರಿ ಸ್ಥಳವನ್ನು ಯಾವ ಷರತ್ತಿನ ಮೇಲೆ ನೀಡಲಾಗಿದೆ?

(ವಿವರಗಳನ್ನು ಒದಗಿಸುವುದು)

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಕಟ್ಟಡ ಕಟ್ಟಲು ಜಾಗವನ್ನು ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಪ್ರಶ್ನೆ (ಇ)ಗೆ ನೀಡಿರುವ ಉತ್ತರದ ವಿವರಗಳಂತೆ ಜಮೀನು ಪ್ರವೇಶಿಸಲು ಅನುಮತಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಉದ್ಭವಿಸುವುದಿಲ್ಲ

ಇ) ಬಂಗ್ರ ಕೂಳೂರು ಗ್ರಾಮದ ಸರ್ವೆ ನಂ. 38:1ಎ1ಎ ರಲ್ಲಿನ ಒಟ್ಟು 12-58 ಎಕರೆ ಜಮೀನು ಹಿನ್ನೀರಿನಿಂದ ಜಲಾವೃತವಾಗಿದ್ದು, ಬೇರೆ ಯಾವುದೇ ಉದ್ದೇಶಕ್ಕೆ ಉಪಯೋಗಿಸಲು ಸಾಧ್ಯವಿಲ್ಲದ ಕಾರಣ ಈ ಪೈಕಿ 6-00 ಎಕರೆ ಪ್ರದೇಶವನ್ನು ಪೂರ್ಣವಾಗಿ ಅಭಿವೃದ್ಧಿ ಪಡಿಸಿಕೊಟ್ಟರೆ ಮಾತ್ರ 2-50 ಎಕರೆ ಪ್ರದೇಶವನ್ನು ಮಂಗಳೂರು ಸ್ಟಾಕ್ ಎಕ್ಸ್‌ಚೇಂಜ್‌ಗೆ ನೀಡುವುದಾಗಿ ಷರತ್ತು ವಿಧಿಸಿ ಜಮೀನು ಪ್ರವೇಶ ಮಾಡಲು ಅನುಮತಿ ನೀಡಲಾಗಿದೆ. ಹಾಗೂ ಉಳಿದ 3-50 ಎಕರೆ ಜಮೀನು ಅಭಿವೃದ್ಧಿ ಪಡಿಸಿದ ನಂತರ ಸರ್ಕಾರಿ ಕಛೇರಿಗೆ ಉಪಯೋಗಿಸಲಾಗುವುದು. ಮಂಗಳೂರು ಸ್ಟಾಕ್ ಎಕ್ಸ್‌ಚೇಂಜ್‌ನವರು ಜಮೀನು ಅಭಿವೃದ್ಧಿ ಪಡಿಸಿ ಕೊಟ್ಟ ನಂತರ ಅವರಿಗೆ ಸರ್ವೆ ನಂ. 38:1ಎ1ಎ ರಲ್ಲಿ 2-50 ಎಕರೆ ಜಮೀನು ಮಂಜೂರು ನೀಡುವ ಬಗ್ಗೆ ಪರಿಶೀಲಿಸಲಾಗುವುದು.

ಟೀ ನರಸೀಪುರ ತಾಲ್ಲೋಕಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸ್ಮಶಾನಗಳಿಲ್ಲದಿರುವ ಬಗ್ಗೆ

2328 - ಶ್ರೀ ಎಸ್. ಕೃಷ್ಣಪ್ಪ (ಬನ್ನೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಟಿ. ನರಸೀಪುರ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸ್ಮಶಾನಗಳಿಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಆ ಊರುಗಳಾವುವು, ಅವುಗಳಿಗೆ ಸ್ಮಶಾನ ಜಾಗ ಕೊಡಲು ತೆಗೆದುಕೊಂಡಿರುವ ಕ್ರಮಗಳೇನು ಯಾವಾಗ ಸ್ಮಶಾನ ಜಾಗ ತೆಗೆದುಕೊಳ್ಳಬಹುದು, ಅವುಗಳಾವುವು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಹೌದು

ಆ) 107 ಗ್ರಾಮಗಳಲ್ಲಿ ಸ್ಮಶಾನದ ಸೌಕರ್ಯವಿಲ್ಲದಿರುವುದು ಅನುಬಂಧ 1 ರಲ್ಲಿ ಕಾಣಿಸಲಾಗಿದೆ. ಸ್ಮಶಾನದ ಉದ್ದೇಶಗಳಿಗಾಗಿ ಸರ್ಕಾರಿ ಭೂಮಿ ಲಭ್ಯವಿಲ್ಲದಿದ್ದಲ್ಲಿ ಖಾಸಗಿಯವರ ಭೂಮಿಯನ್ನು ಆಶ್ರಯ ಯೋಜನೆ ಮಾದರಿ ಖರೀದಿಸಲು ಸರ್ಕಾರವು ಒಂದು ರೂಪುರೇಷೆಯನ್ನು ತಯಾರಿಸಲಾಗುತ್ತದೆ. ಈ ಕೆಳಕಂಡ 5 ಗ್ರಾಮಗಳಲ್ಲಿ ಭೂಸ್ವಾಧೀನಪಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ.

1. ಮಲಿಯೂರು ಗ್ರಾಮ ಸ.ನಂ. 179:1, 199:2 ರ 3-35 ಎಕರೆ
2. ಬೈರಾಪುರ ಗ್ರಾಮ ಸ.ನಂ. 129:2 ರ 1-27 ಎಕರೆ
3. ಸೋಸಲೆ ಗ್ರಾಮ ಸ.ನಂ. 234ರ ಪೈಕಿ 4.00 ಎಕರೆ ತರಿ ಜಮೀನು
4. ದೊಡ್ಡ ಬಾಗಿಲು ಗ್ರಾಮ ಸ.ನಂ. 109 ರ ಪೈಕಿ 2-00 ಎಕರೆ
5. ಹುಣಸೂರು ಗ್ರಾಮದ 1-25 ಎಕರೆ ಜಮೀನು

ಅನುಬಂಧ-1

ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡದವರಿಗೆ ಸ್ಮಶಾನವಿಲ್ಲದ ಗ್ರಾಮಗಳ ವಿವರ ಟಿ. ನರಸೀಪುರ ತಾ :

ಕ್ರಮ ಸಂಖ್ಯೆ	ಗ್ರಾಮ
1.	**ಕಸಬಾ ಹೋಬಳಿ**
1.	ಬನ್ನಹಳ್ಳಿ
2.	ಹೊಸಪೇಟೆ
3.	ರಂಗಸಮುದ್ರ
4.	ರಂಗನಾಥಪುರ
5.	ತುಂಬಲ
6.	ಮುತ್ತತ್ತಿ
7.	ಬೊಮ್ಮನಾಯ್ಕನಹಳ್ಳಿ
8.	ಹಿಟ್ಟುವಳ್ಳಿ
9.	ಹಸುಗನಹಳ್ಳಿ
10.	ಕುಪ್ಯ
11.	ಆಲಗೂಡು
12.	ಕಿರಗಸೂರು
13.	ಬಿಳಿಗೆರೆಹುಂಡಿ
14.	ಕೂಡ್ಲೂರು

2. **ಸೋಸಲೆ ಹೋಬಳಿ**

15. ಸೋಸಲೆ
16. ಸಿದ್ದನಹುಂಡಿ
17. ಎಸ್.ಕೆ.ಪಿ. ಅಗ್ರಹಾರ
18. ಹಸುವಟ್ಟಿ
19. ಬೇವಿನಹಳ್ಳಿ
20. ಸೋಮನಾಥಪುರ
21. ಗಾಣಿಗನಕೊಪ್ಪಲು
22. ಸೇನಾಪತಿಹಳ್ಳಿ
23. ಬಿನಕನಹಳ್ಳಿ
24. ಚಿಕ್ಕಬೂವಳ್ಳಿ
25. ಮುತ್ತಲವಾಡಿ
26. ಎಸ್. ಮೇಗಡಹಳ್ಳಿ
27. ದೊಡ್ಡಬಾಗಿಲು
28. ಉಕ್ಕಲಗೆರೆ
29. ಮದ್ದಗಾರಲಿಂಗನಹುಂಡಿ
30. ಕಳ್ಳೀಪುರ
31. ತಮ್ಮಡಿಪುರ
32. ಚಿಕ್ಕಲಕ್ಷ್ಮೀಪುರ
33. ಕನ್ನಾಯ್ಕನಹಳ್ಳಿ
34. ಕೋಣಗಹಳ್ಳಿ
35. ನೆರಗ್ಯಾತನಹಳ್ಳಿ
36. ನಾಗಲಗೆರೆ
37. ಬೂದಹಳ್ಳಿ
38. ಹಲವಾರ
39. ಕೊಳತ್ತೂರು
40. ಹೊರಳಹಳ್ಳಿ
41. ಕೈಯಂಬಳ್ಳಿ
42. ಕಾರಗಹಳ್ಳಿ
43. ಚಿದರವಳ್ಳಿ
44. ಮುಡುಕನಪುರ

(B) 025205

45. ಬೊಮ್ಮನಹಳ್ಳಿ
46. ಕೆಂಪನಪುರ
47. ರಾಮೇಗೌಡನಪುರ
48. ಚಿಮಲಿ
49. ಎಸ್. ದೊಡ್ಡಪುರ

3. ಮೂಗೂರು ಹೋಬಳಿ

50. ಮೂಗೂರು
51. ನಿಲಸೋಗೆ
52. ಚೌಹಳ್ಳಿ
53. ಹ್ಯಾಕನೂರು
54. ಆದಿಬೆಟ್ಟಹಳ್ಳಿ
55. ಹೊಸಹಳ್ಳಿ
56. ಸುಜ್ಜಲೂರು
57. ಕರೋಹಟ್ಟಿ
58. ಕೇತಹಳ್ಳಿ
59. ಕುರುಬೂರು
60. ಕೊತ್ತೇಗಾಲ
61. ಮಾದ್ರಹಳ್ಳಿ
62. ಕನ್ನಹಳ್ಳಿ
63. ವಾಳು
64. ಯರಗನಹಳ್ಳಿ
65. ಹಿರಿಯೂರು
66. ಹೊಸಪುರ

4. ಬನ್ನೂರು ಹೋಬಳಿ

67. ಬನ್ನೂರು ಟೌನ್
68. ಜಾಮನಹಳ್ಳಿ
69. ಯಾಬೇನಹಳ್ಳಿ
70. ಬಸವನಹಳ್ಳಿ
71. ಬಿ.ಸಿ. ಹಳ್ಳಿ
72. ಹುಣಸಗಳ್ಳಿ
73. ಕೊಡಗಹಳ್ಳಿ

74. ಅರವಟ್ಟಿಗೆ ಕೊಪ್ಪಲು
75. ಬೀಚನಹಳ್ಳಿ
76. ಯಡಹಳ್ಳಿ
77. ದೊಡ್ಡಮಲಗೂಡು
78. ಮೆಣಸಿಕ್ಯಾತನಹಳ್ಳಿ
79. ಅಂಕನಹಳ್ಳಿ
80. ತುರುಗನೂರು
81. ಗುರುವನಹಳ್ಳಿ
82. ಹನುಮನಾಳು
83. ಮಾರಗೌಡನಹಳ್ಳಿ
84. ಮಾದಿಗಳ್ಳಿ
85. ಮಲಿಯೂರು
86. ಟಿ. ಬೆಟ್ಟಹಳ್ಳಿ
87. ಕುಂತನಹಳ್ಳಿ
88. ಅತ್ತಹಳ್ಳಿ

5. ತಲಕಾಡು ಹೋಬಳಿ

89. ತಲಕಾಡು
90. ವಿಜಾಪುರ
91. ಕೊಪ್ಪಾಳು
92. ಕುಕ್ಕೂರು
93. ಟಿ. ಬೆಟ್ಟಹಳ್ಳಿ
94. ವಡೆಯಾಂಬಳ್ಳಿ
95. ಮಾಡಾಪುರ
96. ಮರಡೇಪುರ
97. ಅಕ್ಕೂರು
98. ಹೆಮ್ಮಿಗೆ
99. ಮಾರನಪುರ
100. ಟಿ. ದೊಡ್ಡಪುರ
101. ತೊಟ್ಟವಾಡಿ
102. ಹೊಳೆಸಾಲು
103. ಮಡಿವಾಡಿ

104. ಚಂದಹಳ್ಳಿ

105. ಮಾವಿನಹಳ್ಳಿ

106. ಕಲಿಯೂರು

107. ಮಾಲಂಗಿ

ರಾಜ್ಯದಲ್ಲಿರುವ ಒಟ್ಟು ಆರ್.ಎಂ.ಸಿಗಳ ಸಂಖ್ಯೆ

2331 - ಶ್ರೀ ಎಸ್. ಕೃಷ್ಣಪ್ಪ (ಬನ್ನೂರು) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಒಟ್ಟು ಆರ್.ಎಂ.ಸಿ.ಗಳೆಷ್ಟು, ಅವುಗಳಾವುವು;

ಆ) ಯಾವ ಯಾವ ಆರ್.ಎಂ.ಸಿ.ಗಳು ವಹಿವಾಟು ನಡೆಸುತ್ತಿವೆ, ಅವುಗಳ ಉತ್ಪತ್ತಿ ಎಷ್ಟು;

ಇ) ಆರ್.ಎಂ.ಸಿ.ಯಿಂದ ಬರುವ ವರಮಾನದಲ್ಲಿ ರಸ್ತೆಗೆ ಹಣ ಕೊಡಲಾಗುವುದೇ, ಇಲ್ಲಿಯವರೆಗೆ ಎಷ್ಟು ಕೊಡಲಾಗಿದೆ. (ಸ್ಥಳಗಳಾವುವು)?

ಶ್ರೀ ಬಿ.ಬಿ. ನಿಂಗಯ್ಯ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) 124 ಪಟ್ಟಿ ಲಗತ್ತಿಸಿದೆ

ಆ) ರಾಜ್ಯದಲ್ಲಿರುವ 124 ಮಾರುಕಟ್ಟೆ ಸಮಿತಿಗಳಲ್ಲಿ ಅಧಿಸೂಚಿತ ಕೃಷಿ ಉತ್ಪನ್ನಗಳ ಸಗಟು ವ್ಯವಹಾರ ನಡೆಯುತ್ತಿವೆ. 1994-95ನೇ ಸಾಲಿನಲ್ಲಿ ಈ ಆದಾಯ ಬಂದಿರುತ್ತದೆ.

ಇ) ಇಲ್ಲ. ಉದ್ಭವಿಸುವುದಿಲ್ಲ.

List of main and Sub-Markets in Karnataka as on 31-07-1995

MMs- 124
SMs- 323

Sl. No.	Name of the Main Market		Name of the sub-market		Market Area (Taluk)
1	2		3		4
Bangalore Urban:					
1.	Bangalore	1.	K.R. Puram.	1.	Bangalore North
		2.	Chandapur	2.	Bangalore south
		3.	Anekal		Anekal
		4.	Jigani		
2.	Bangalore (Fruits & Vegetables Special)	-		1.	Bangalore North
				2.	Bangalore South, Anekal.
Bangalore Rural :					
3.	Channapatna	1.	Ramanagaram	1.	Channapatana
		2.	Dasavara	2.	Ramanagara
		3.	Hunsanahalli	3.	Magadi

VIII F-

		4.	Doddamudavadi	4.	Kanakapaura
		5.	Kanakapura		
		6.	Magadi		
		7.	Kudar.		
4.	Doddaballapur	1.	Tubagere	1.	Doddaballapur
		2.	Nelamangala	2.	Hoskote
		3.	Devenahalli	3.	Devanahalli
		4.	Hoskote	4.	Nelamangala
		5.	Vijayapura		
Chitradurga Dist :					
5.	Chitradurga	1.	Bheemasamudra	1.	Chitradurga
		2.	Bharamasagar		
		3.	Tutuvanur		
6.	Challakere	1.	Molkalmur	1.	Challakere
		2.	Rampur	2.	Molkalmur
7.	Davanagere	1.	Jagalur	1.	Davanagere
		2.	Hebbal	2.	Jagalur
		3.	Mayakonda		
		4.	Hadadi		
8.	Harihar	1.	Malebennur	1.	Harihar
9.	Hiriyur	1.	Dharmapura	1.	Hiriyur
10.	Hosadurga	1.	Belagur	1.	Hosdurga
		2.	Chickjajur	2.	Holalkere.
		3.	Srirampura		
		4.	Holalkere		
Kolar District :					
11.	Kolar	-		1.	Kolar
12.	Malur	-		2.	Malur
13.	Chickballapur	1.	Peresandra	1.	Chikkaballapur
		2.	Chelur	2.	Bagepalli
		3.	Siddalghatta	3.	Siddlaghatta
4.	Melur				
		5.	Bagepalli		
		6.	Gulur		
14.	Chintamani	1.	Iragampalli	1.	Chintamani
15.	Bangarpet	1.	K.G.F.	1.	Bangarpet
		2.	Bethamangala		

16.	Gauribidnur	1.	Gudibande	1.	Gauribidnur
		2.	Manachenahalli	2.	Gudibande
17.	Mulbagal	1.	Talyalur	1.	Mulbagal
18.	Srinivasapura	1.	Gounipalli	1.	Srinivasapur
		2.	Yaldur		
Shimoga District:					
19.	Shimoga	1.	Thirthahalli	1.	Shimoga
		2.	Koppa	2.	Thirthahalli
		3.	Ayanur	3.	Sringeri
		4.	Holalur	4.	koppa
		5.	Sringeri		
20.	Channagiri	1.	Basavapatna	1.	Channagiri
		2.	Santhebennur		
		3.	Nellur		
21.	Sagar	1.	Sorba	1.	Sagar
		2.	Hale Sorba	2.	Sorba
		3.	Annavatti	3,	Hosanagara
		4.	Rippenpet		
		5.	Talguppa		
		6.	Hosanagara		
		7.	Anandapuram		
		8.	Jade		
22.	Shikaripura	1.	Shiralakoppa	1.	Shikaripura
		2.	Tadagani		
23.	Bhadravthi	1.	Holehonnur	1.	Bhadravathi
24.	Honnali	1.	Nyamathi	1.	Honnali
Tumkur District:					
25.	Tumkur	1.	Akkirampur	1.	Tumkur
		2.	Kyatasandra	2.	Kortagera
		3.	Kortagere		
26.	Gubbi	1.	Chelur	1.	Gubbi
		2.	K.G.Temple		
		3.	Kondi Cross		
		4.	M.kote		
		5.	Nittur		
27.	C.N.Halli	-		1.	C.N.Halli (2)Huliar Hobli
28.	Huliyar			1.	Huliar Hobli
				2.	C.N.Halli.

29.	Kunigal	1.	Amruthur	1.	Kunigal
		2.	Yadiur		
30.	Madhugiri	1.	Byala	1.	Madhugiri
		2.	Badavanahalli		
		3.	Chandrabavi		
		4.	Hosakere		
31.	Pavagada	1.	Y.N.Hosakote	1.	Pavagada
32.	Sira	1.	Kallambella	1.	Sira
33.	Turuvekera	1.	Sampige	1.	Turuvekere
34.	Tiptur	1.	Karadalu	1.	Tiptur
		2.	Konehalli		
		3.	Bellekere		
Mysore District :					
35.	Mysore	1.	Kadakola	1.	Mysore
36.	Chamarajanagar	1.	Santhemarallii	1.	Chamarajanagar
				2.	Yelandur
37.	K.R.Nagara	1.	Saligrama	1.	K.R. Nagara
38.	Hunsur	1.	Rathnapuri	1.	Hunsur
39.	Periyapatna	1.	Bettadapura	1.	Periyapatna
40.	Kollegal	1.	Hanur	1.	Kollegal
41.	T.Narsipura	1.	Bannur	1.	T.Narasipura
42.	Nanjangud	1.	Gundlupet	1.	Nanjangud
		2.	Santhesargur	2.	H.D.Kote
		3.	H.D. Kote	3.	Gundlupet
		4.	Terakanambi		
South Canara					
43.	Mangalore	1.	Mudabidre	1.	Mangalore
		2.	Belthangadi	2.	Bantwala
		3.	Bantwala	3.	Blthangadi
		4.	Shivapura	4.	Karkala
		5.	Kutchur		
		6.	Hebbri		
		7.	Vitla		
44.	Puttur	1.	Sulya	1.	Puttur
				2.	Sulya
45.	Udupi	1.	Kundapura	1.	Udupi
				2.	Kundapura

Coorg District :					
46.	Madikeri	-		1.	Madikeri
47.	Somavarpet	1.	Somavarpet	1.	Somavarpet
		2.	S.Shanthe		
48.	Gonikoppal	1.	Makutta	1.	Virajpet
Chickmagalur District :					
49.	Kadur	1.	Panchanhalli	1.	Kadur
		2.	Beerur		
		3.	Antaragatte		
50.	Chickmagalur	1.	Mudigere	1.	Chickmagalur
				2.	Mudigere
51.	Tarikere	1.	N.R. Pura	1.	Tarikere
		2.	Shivani	2.	N.R. Pura
		3.	Ajjampura		
Hassan District :					
52.	Hassan	1.	Hanike	1.	Hassan
		2.	Dudda	2.	Belur
				3.	Alur
53.	Arsikere	1.	D.Kerke	1.	Arasikere
		2.	Gandasi		
		3.	Javagal		
54.	Holenarsipura	1.	Doddahalli	1.	Holenarsipura
		2.	Konanur	2.	Arakalagd
		3.	Mallipatna		
		4.	Arakalgud		
55.	C.R.Patna	1.	Didige	1.	C.R.Patna
		2.	Juttanahalli		
		3.	Nuggehalli		
		4.	Sravana Belagola		
56.	Sakaleshpur	-		1.	Sakaleshpur
Mandya District					
57.	Mandya	-			
58.	Maddur	1.	Kirugavalu	1.	Maddur
		2.	Mallavalli	2.	Malavalli
		3.	Nidaghatta		
59.	K.R.Pet	1.	Kadaballi	1.	K.R. Pet
		2.	Pandavapura	2.	Pandavapura
		3.	Kikkeri	3.	Nagamangala

		4.	Bendiganvile		
		5.	S. Bagchalli		
		6.	Nagamangala		
Belgalum District:					
60.	Belgaum	1.	Hirebagewadi	1.	Belgaum
61.	Athani	1.	Kagwad	1.	Athani
62.	Bailhongal	1.	Kittur	1.	Bailhongal
		2.	Nesargi		
		3.	Doddavada		
63.	Gokak	1.	Ghataprabha	1.	Gokak
		2.	Ankalgi		
		3.	Mudalgi		
64.	Kudchi	1.	Harugeri	1.	Raibag
		2.	Raibag		
65.	Nandagad	1.	Bidi	1.	Khanapur
		2.	Itagi		
		3.	Khanapur		
		4.	Halshgi		
66.	Nippani	1.	Chikkodi	1.	Chikkodi
		2.	Nippani		
67.	Ramdurga	1.	Katkol	1.	Ramadurga
		2.	Hulgund		
		3.	Sureban		
68.	Soundatti	1.	Yeragatti	1.	Soundatti
		2.	Murgod		
		3.	Shivapur		
		4.	Munoli		
		5.	Ugargol		
69.	Sankeshwar	1.	B.Bagewadi	1.	Hukkeri
		2.	Paschapur		
		3.	Hukkeri		
		4.	Y.Maradi		
		5.	D.Marawadi		
		6.	Hebbal		
Bijapur District					
70	Bijapur	1.	Chadachan	1.	Bijapur, Indi
		2.	Indi	2.	Sindgi
		3.	Sindagi	3.	Bagewadi

		4.	B.Bagewadi		
		5.	Mortagi		
		6.	Alamela		
		7.	D.Hipparagi		
		8.	Golasangi		
		9.	Hippargi		
71.	Bagalkote	1.	Kaladagi	1.	Bagalkote
		2.	Biligi	2.	Biligi
		3.	Galagalli		
72.	Badami	1.	Kulgeri Cross	1.	Badami
		2.	Kerur		
		3.	Halihal		
		4.	Nandikeshwar		
		5.	Guledaguda		
73.	Hungund	1.	Ilkal	1.	Hungund
		2.	Aminagad		
		3.	Gudur		
74.	Jamkhandi	1.	Terdal	1.	Jamkhandi
		2.	Savalgi		
75.	Manalingapur	1.	Mudhol	1.	Mudhol
		2.	Lokapur		
76.	Talikote	1.	Muddebihal	1.	Muddebihal
		2.	Nalatwad		
Dharwar Disrict:					
77.	Dharwar	1.	Alanavara	1.	Dharwad
78.	Annigeri	1.	Navalgund	1.	Navalgund
		2.	Morab		
		3.	Alagavadi		
		4.	Hebbal		
		5.	Shalavadi		
79.	Byadgi	1.	Chikkabasur	1.	Byadgi
		2.	Motebennur		
80.	Gadag	1.	Hulkoti	1.	Gadag
		2.	Mulagund		
		3.	Kurhakoti		
		4.	Hombal		
		5.	Kotavumachegi		
		6.	Soratur		

81.	Haveri	1.	Guttal	1.	Haveri
		2.	Keragagi		
82.	Hangal	1.	Akki Alur	1.	Hangal
83.	Hirekerur	1.	Haunsabhavi	1.	Hirekerur
		2.	Masur		
		3.	Rattihalli		
84.	Hubli	-		1.	Hubli
85.	Shiggaon	1.	Kalaghetgi	1.	Shiggaon
				2.	Kalaghatagi
86.	Nargund	1.	Shirol	1.	Nargund
		2.	Konnur		
		3.	C.Nargund		
87.	Kundagol	1.	Gudigeri	1.	Kundgol
		2.	Saunshi		
88.	Laxmeshwar	1.	Shrihatti	1.	Shirhatti
		2.	Shigali		
		3.	Bellatti		
89.	Mundargi	1.	Dambal	1.	Mundargi
90.	Hole Alur(Ron)	1.	Naregal	1.	Ron
		2.	Gajendragad		
		3.	Ron		
		4.	Sudi		
91.	Ranebennur	1.	Halgeri	1.	Ranebennur
		2.	Tumminakatti		
92.	Savanur	1.	Yalavigi	1.	Savanur
North Canara District					
93.	Haliyal	1.	Dandeli	1.	Haliyal
94.	Kumta	1.	Gokarna	1.	Kumta
		2.	Sakalabena		
		3.	Katagal		
95.	Honnavar	1.	Bhatkal	1.	Honnavar
		2.	Bilalakanda		
		3.	Idagunji		
96	Siddapur	1.	Analebail	1.	Siddapur
		2.	Terehallikansur		
		3.	Manamane		
97.	Yellapur	1.	Kiravatti	1.	Yellapur
98.	Sirsi	1.	Bisalkoppa	1.	Sirsi

		2.	Yadahalli	2.	Mundgod
		3.	Banavasi		
		4.	Dasankoppa		
		5.	Chipagi		
		6.	Mudagad		
99.	Karwar	1.	Sadashivagada	1.	Karwar
		2.	Binaga	2.	Ankola
		3.	Chandya		
		4.	Arega		
		5.	Amadelli		
		6.	Kadra		
		7.	Majali		
		8.	Ankola		
Bellary District :					
100.	Bellary	1.	Moka	1.	Bellary
		2.	Kudithini	2.	Sandur
		3.	Kurugodu		
		4.	Sandur		
101.	Kottur	1.	Harapanahalli	1.	Kudalgi
		2.	Kudalgi	2.	Harapanahalli
		3.	C. Jogihalli		
102.	Hospet	1.	Kampli	1.	Hospet
		2.	Mariyamanahalli		
103.	H.B. Halli	-		1.	H.B. Halli
104.	Hadagali	1.	Holalu	1.	Hadagali
105.	Siruguppa	1.	Tekkalakote	1.	Siraguppa
		2.	Karur		
		3.	Sirigere		
		4.	Hetcholli		
Bidar District :					
106.	Bidar	1.	Manohalli	1.	Bidar
107.	Humnabad	1.	Chitaguppa	1.	Humanabad
		2.	Dubbalgundi		
		3.	Haiikhed		
108.	Basavakalyan	1.	Hulusur	1.	Basavakalyan
109.	Bhalki	1.	Khanapur	1.	Bhalki
110.	Aurad	1.	Kamalangar		
		2.	Jamgi		

		3.	Thanakushar	1.	Aurad
Raichur District :					
111.	Raichur	1.	Deodurga	1.	Raichur
		2.	Halahalli	2.	Deodurga
112.	Gangavathi	1.	Kanakagiri	1.	Gangavathi
		2.	Karatagi		
		3.	Sriramanagar		
113.	Koppal	1.	Ginigeri	1.	Koppal
		2.	Alwandi		
		3.	Kukanapalli		
114.	Kuknur (Yelburga)	1.	Bhanapur	1.	Yelburga
		2.	Yelburga		
115.	Kustagi	1.	Tavarekere	1.	Kustagi
		2.	Hanumasagar		
116.	Sindhanur	1.	Turuvihal	1.	Sindhanur
		2.	Balaganur		
		3.	Jawavalagere		
117.	Lingasugar	1.	Mudgal	1.	Lingasugur
		2.	Maski		
118.	Manvi	1.	Sirvar	1.	Manvi
		2.	Kallur		
		3.	Kavital		
		4.	Halapur		
Gulbarga District :					
119.	Gulbarga	1.	Aland	1.	Gulbarga
		2.	Afzalpur	2.	Afzalpur
		3.	Jevargi	3.	Aland
		4.	Devalagnagapur	4.	Jevargi
		5.	(M. Hippargi)		
		6.	Yedrami		
		7.	Kamalapur		
120.	Chittapur	1.	Nalwar	1.	Chittapur
		2.	Shahabad		
		3.	Wadi		
		4.	Kollur		
121.	Shahapur	1.	Gogi	1.	Shahapur
		2.	Sagara		

122.	Shorapur	1.	Unsagi	1.	Shorapur
		2.	Kembhavi		
		3.	Khanapur		
123.	Sedam	1.	Maikhed	1.	Sedam
		2.	Chincholi		
		3.	Mudhol		
		4.	Sulepet		
124.	Yadgir	1.	Gurumitkal	1.	Yadgir
		2.	Saidapur		

Abstract

Total No. of Main market-124 Total No. of sub markets 323

As on 31-07-1995

Sl. No.	Name of the District	No. of Main Markets	No. of Sub - Markerts
1.	Bangalore Urban	02	04
2.	Bangalore Rural	02	12
3.	Chitradurga	06	15
4.	Shimoga	06	20
5.	Tumkur	10	20
6.	Kolar	08	14
7.	Dharwar	16	37
8.	Bijapur	07	26
9.	North Canara	07	25
10.	Belgaum	10	30
11.	Bellary	06	14
12.	Gulbarga	06	22
13.	Bidar	05	09
14.	Raichur	08	21
15.	Mysore	08	11
16.	Hassan	05	14

17.	Coorg	03	03
18.	South Canara	03	10
19.	Mandya	03	09
20.	Chickmagalur	03	07

ಹಾಪ್‌ಕಾಮ್ಸ್‌ನಲ್ಲಿರುವ ಸಿಬ್ಬಂದಿಯ ಸಂಖ್ಯೆ

73 - ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಪ್‌ಕಾಮ್ಸ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಉದ್ಯೋಗಸ್ಥರ ಸಂಖ್ಯೆ ಎಷ್ಟು?

ಆ) ರಾಜ್ಯದಲ್ಲಿ ಹಾಪ್‌ಕಾಮ್ಸ್ ವಹಿವಾಟು ಎಷ್ಟು?

ಇ) ರೈತರಿಗೆ ಯಾವ ರೀತಿ ಸಹಾಯವಾಗಿದೆ?

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಉದ್ಯೋಗಸ್ಥರ ಸಂಖ್ಯೆ :1578

ಆ) 31.54 ಕೋಟಿ ರೂ.ಗಳು (1994-95ರ ವಹಿವಾಟಿನ ಪ್ರಕಾರ)

ಇ) ಹಣ್ಣು ತರಕಾರಿಗಳನ್ನು ನೇರವಾಗಿ ರೈತರಿಂದ ಸಂಘವು ಪಡೆಯುತ್ತಿದೆ.

ರೈತರಿಗೆ ಲಾಭದಾಯಕವಾದ ಬೆಲೆಯನ್ನು ನೀಡುತ್ತಿದೆ.

ರೈತರಿಗೆ ಬೀಜ, ಗೊಬ್ಬರ, ಸಸ್ಯ ಸಂರಕ್ಷಣಾ ಔಷಧಿಗಳು, ತೋಟಗಾರಿಕೆ ಸಲಕರಣೆಗಳನ್ನು ಒದಗಿಸಲು 11 ಮಾರಾಟ ಮಳಿಗೆಗಳನ್ನು ತೆರೆದಿದೆ.

11 ಸಂಗ್ರಹಣಾ ಕೇಂದ್ರಗಳನ್ನು ತೆರೆದಿದ್ದು, ಅವುಗಳ ಸುತ್ತಮುತ್ತಲಿನ ರೈತರಿಂದ ಹಣ್ಣು, ತರಕಾರಿಗಳನ್ನು ಸಂಗ್ರಹಿಸಲಾಗುತ್ತಿದೆ ಹಾಗೂ ಸ್ಥಳದಲ್ಲಿ ಹಣ ಪಾವತಿ ಮಾಡಿ ರೈತರ ಹಣ್ಣು, ತರಕಾರಿಗಳ ಸಾಗಾಣಿಕೆ ತೊಂದರೆ ಹಾಗೂ ಮಾಲು ನಷ್ಟವನ್ನು ಕಡಿಮೆ ಗೊಳಿಸುತ್ತಿದೆ.

ರೈತರಿಗೆ ಇತರೇ ರಾಜ್ಯಗಳಲ್ಲಿ ಅಧ್ಯಯನ ಪ್ರವಾಸವನ್ನು ಏರ್ಪಡಿಸಲಾಗುತ್ತಿದೆ.

ರೈತರಿಗೆ ತಂಗಲು ರೈತ ಭವನದ ನಿರ್ಮಾಣ ಕೆಲಸವು ಮುಂದುವರಿಯುತ್ತಿದೆ. ಸಂಘವು ಮೇಲ್ಕಂಡ ಎಲ್ಲಾ ಅನೂಕೂಲಗಳನ್ನು ರೈತರಿಗೆ ಮಾಡುತ್ತಿದೆ.

ರಾಜ್ಯದಲ್ಲಿರುವ ಗೃಹ ನಿರ್ಮಾಣ ಸಂಘಗಳ ಬಗ್ಗೆ

74 - ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಗೃಹ ನಿರ್ಮಾಣ ಸಹಕಾರ ಸಂಘಗಳ ಒಟ್ಟು ಸಂಖ್ಯೆ ಎಷ್ಟು?

ಆ) ಜಿ.ವಿ.ಕೆ. ರಾವ್ ವರದಿ ಜಾರಿಗೆ ಬಂದಿದೆಯೇ?

ಇ) ಗೃಹ ನಿರ್ಮಾಣ ಸಹಕಾರ ಸಂಘಗಳ ಅವ್ಯವಹಾರಗಳ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :

ಅ) 1,606

ಆ) ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ಕಲಂ 64.ರಡಿಯಲ್ಲಿ ಬೆಂಗಳೂರು ನಗರದಲ್ಲಿರುವ 98 ಗೃಹ ನಿರ್ಮಾಣ ಸಹಕಾರ ಸಂಘಗಳ ವ್ಯವಹಾರದ ಬಗ್ಗೆ ವಿಚಾರಣೆ ಮಾಡಲು ಶ್ರೀ ಜಿ.ವಿ.ಕೆ. ರಾವ್, ಹಿಂದಿನ ನಿಯಂತ್ರಕರು, ತೂಕ ಮತ್ತು ಅಳತೆ, ಬೆಂಗಳೂರು, ಇವರಿಗೆ ವಹಿಸಲಾಗಿದ್ದು 90 ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ವಿಚರಣಾ ವರದಿ ಸಲ್ಲಿಸಿದ್ದಾರೆ. ಈ ವರದಿಯನ್ನು ಅನುಸರಿಸಿ ಕ್ರಮ ತೆಗೆದುಕೊಳ್ಳಲಾಗಿದೆ.

ಇ) ಅವ್ಯವಹಾರಗಳು ಕಂಡು ಬಂದ ಗೃಹ ನಿರ್ಮಾಣ ಸಹಕಾರ ಸಂಘಗಳ ಮೇಲೆ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ಮತ್ತು ನಿಯಮಗಳಡಿಯಲ್ಲಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ತಾಳೆಎಣ್ಣೆ ಘಟಕಗಳು

1914 - ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಮಂಜೂರು ಮಾಡಲಾದ ತಾಳೆಎಣ್ಣೆ ಘಟಕಗಳೆಷ್ಟು? (ಸಂಸ್ಥೆಗಳ ದಿನಾಂಕವನ್ನು ತಿಳಿಸುವುದು.)

ಆ) ಮಂಡ್ಯದ ಎನ್.ಡಿ.ಡಿಬಿ.ಯವರಿಗೆ ಯಾವಾಗ ಮಂಜೂರು ಮಾಡಲಾಗಿದೆ? ಹಾಗೂ ಯಾವ ಹಂತದಲ್ಲಿದೆ?

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಸರ್ಕಾರಿ ಆಜ್ಞೆ ಸಂಖ್ಯೆ : ಎಹೆಚ್‌ಡಿ 16 ಹೆಚ್‌ಪಿಪಿ 92 ದಿನಾಂಕ : 4-6-93 ರಂತೆ ರಾಜ್ಯದಲ್ಲಿ ಕೆಳಕಂಡ ಎಂಟು ಸಂಸ್ಥೆಗಳಿಗೆ ತಾಳೆಎಣ್ಣೆ ಘಟಕಗಳನ್ನು ಮಂಜೂರು ಮಾಡಲಾಗಿತ್ತು.

1)	ಮೆ: ಎಸ್.ಅಂಡ್ ಎಸ್ ಎಂಟರ್ ಪ್ರೈಸಸ್	:	ಘಟಪ್ರಭಾ ಮತ್ತು ಮಲಪ್ರಭ ಪ್ರದೇಶ
2)	ಮೆ: ಲಕ್ಷ್ಮಿ ಮೆಷಿನ್ ವರ್ಕ್ಸ್ ಲಿ.	:	ಭದ್ರ ಅಚ್ಚುಕಟ್ಟು ಪ್ರದೇಶ 2ನೇ ವಿಭಾಗ
3)	ಮೆ: ಕರ್ನಾಟಕ ಓಸ್ವಾಲ್ ಆಯಿಲ್ ಪಾಮ್ಸ್ ಲಿ.	:	ಭದ್ರಾ ಅಚ್ಚುಕಟ್ಟು ಪ್ರದೇಶದ ಮೊದಲನೇ ವಿಭಾಗ.
4)	ಮೆ: ಐ.ಟಿ.ಸಿ. ಆಗ್ರೋ ಸಂಸ್ಥೆ	:	ಮೈಸೂರು ಜಿಲ್ಲೆ ಹಾಗೂ ಹಾಸನ ಜಿಲ್ಲೆಯ ಹೊಳೆನರಸೀಪುರ ಮತ್ತು ಅರಕಲಗೂಡು (ತಾಲ್ಲೂಕು)
5)	ರಾಷ್ಟ್ರೀಯ ಹೈನು ಅಭಿವೃದ್ಧಿ ನಿಗಮ (ಎನ್.ಡಿ.ಡಿ.ಬಿ)	:	ಮಂಡ್ಯ ಜಿಲ್ಲೆ
6)	ಮೆ: ಡಂಕನ್ಸ್ ಯೋಟೆಕ್ ಲಿ	:	ಬಳ್ಳಾರಿ ಜಿಲ್ಲೆ
7)	ಮೆ: ಹೆಚ್.ಆರ್.ಬಿ. ಅಸೋಶಿಯೇಟ್ಸ್	:	ರಾಯಚೂರು ಜಿಲ್ಲೆಯ ರಾಯಚೂರು ಮತ್ತು ಮಾನ್ವಿ ತಾಲ್ಲೂಕುಗಳು
8)	ಮೆ: ವಿಮ್ಕೋ ಲಿಮಿಟೆಡ್	:	ರಾಯಚೂರು ಜಿಲ್ಲೆಯ ಗಂಗಾವತಿ ವಿಭಾಗ

ಆ) ಮಂಡ್ಯ ಜಿಲ್ಲೆಯಲ್ಲಿ ತಾಳೆಬೆಳೆ ವಿಸ್ತೀರ್ಣ ಕೈಗೊಂಡ ಸಂಸ್ಕರಣಾ ಘಟಕ ಸ್ಥಾಪಿಸಲು ದಿನಾಂಕ: 4-8-93 ರಂದು ಸರ್ಕಾರದ ಆದೇಶ ಹೊರಡಿಸಲಾಗಿದೆ. ಈ ಸಂಸ್ಥೆಯು ಇದುವರೆವಿಗೂ ಬೆಳೆ ವಿಸ್ತೀರ್ಣವನ್ನು 25 ಎಕರೆ ಪ್ರದೇಶದಲ್ಲಿ ಮಾತ್ರ

ತೆಗೆದುಕೊಂಡಿರುತ್ತದೆ. ಸಾತನೂರಿನಲ್ಲಿ 60.00 ಲಕ್ಷ ರೂ. ವೆಚ್ಚದಲ್ಲಿ ಒಂದು ನರ್ಸರಿಯನ್ನು ಪ್ರಾರಂಭಿಸುತ್ತದೆ.

ಕಾಡುಕೊತ್ತನ ಹಳ್ಳಿಯಲ್ಲಿ ಹರಿಜನರಿಗೆ ನಿವೇಶನಗಳನ್ನು ಹಂಚುವುದು

2226 - ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಡ್ಯ ಜಿಲ್ಲೆ ಸಿ.ಎ. ಕೆರೆ ಹೋಬಳಿ ಕಾಡುಕೊತ್ತನಹಳ್ಳಿ ಸ.ನ. 209 ರಲ್ಲಿನ ಜಮೀನನ್ನು 20ವರ್ಷಗಳಿಂದ ನಿವೇಶನವಿಲ್ಲದೆ ಇರುವ ಪರಿಶಿಷ್ಟಜಾತಿಯವರಿಗೆ ಹಂಚಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಆ) ಕೆಲವು ಎಕರೆಯನ್ನು ಸ್ಮಶಾನಕ್ಕೆ ಈಗಾಗಲೇ ಬಿಟ್ಟಿರುವುದು ನಿಜವೇ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಪ್ರಸ್ತಾಪಿತ ಜಮೀನು ಸರ್ಕಾರಿ ಕೆರೆ ಅಂಗಳವಾಗಿದ್ದು ಜೌಗಿನಿಂದ ಕೂಡಿದ ಜಮೀನಿನಲ್ಲಿ ಕಟ್ಟಡ ನಿರ್ಮಿಸಲು ಯೋಗ್ಯವಾಗಿರುವುದಿಲ್ಲ. ಆದಕಾರಣ, ಸದರಿ ಜಮೀನಿನಲ್ಲಿ, ನಿವೇಶನ ಹಂಚುವ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

ಆ) ಹೌದು. ಸದರಿ ಜಮಿನಿನಲ್ಲಿ 2-00 ಎಕರೆಯನ್ನು ಹರಿಜನರ ಸ್ಮಶಾನಕ್ಕಾಗಿ ಕಾಯ್ದಿರಿಸಿದೆ.

ಬಿಜಾಪುರ ಕೈಗಾರಿಕಾ ಸಹಕಾರಿ ಬ್ಯಾಂಕ್‌ನ ಸಿಬ್ಬಂದಿ

2206 - ಶ್ರೀ ಜೆ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಮಾಪನೆಗೊಂಡ ದಿ ಬಿಜಾಪುರ ಕೈಗಾರಿಕಾ ಸಹಕಾರ ಬ್ಯಾಂಕ್ ನಿ, ಬಾಗಲಕೋಟೆ ಇದರ 10 ಜನ ಸಿಬ್ಬಂದಿಗಳು ಇಂದು ಬೀದಿ ಪಾಲಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ಸಿಬ್ಬಂದಿಗೆ ಸರ್ಕಾರದ ಯಾವುದೇ ಇಲಾಖೆಯಲ್ಲಾಗಲೀ ಅಥವಾ ನಿಗಮಗಳಲ್ಲಾಗಲೀ ಅಥವಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಾಗಲೀ ಉದ್ಯೋಗ ದೊರಕಿಸಿಕೊಡುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಇ) ಈ ಬಗ್ಗೆ ಇದುವರೆವಿಗೂ ಕ್ರಮ ತೆಗೆದುಕೊಳ್ಳದಿದ್ದಲ್ಲಿ ಯಾವಾಗ ಕ್ರಮ ತೆಗೆದುಕೊಳ್ಳಲಾಗುವುದು?

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :

ಅ) ದಿ ಬಿಜಾಪುರ ಕೈಗಾರಿಕಾ ಸಹಕಾರ ಬ್ಯಾಂಕನ್ನು ದಿನಾಂಕ 31-08-1994ರಂದು ಸಮಾಪನೆಗೊಳಿಸಲಾದ ಕಾರಣ ದಿನಾಂಕ 30-4-1995ರಂದು ನೌಕರರನ್ನು ಬ್ಯಾಂಕಿನ ಸೇವೆಯಿಂದ ತೆಗೆದು ಹಾಕಲಾಗಿದೆ.

ಆ) ಸಮಾಪನೆಗೊಂಡ ಸಹಕಾರ ಬ್ಯಾಂಕಿನ ನೌಕರರು ಸರ್ಕಾರದ ನೌಕರರಲ್ಲವಾದ್ದರಿಂದ ಯಾವುದೇ ಸರ್ಕಾರಿ ಇಲಾಖೆಯಲ್ಲಾಗಲೀ ಅಥವಾ ನಿಗಮಗಳಲ್ಲಾಗಲೀ ಉದ್ಯೋಗ ದೊರಕಿಸಿಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳೂ ಸಹ ಸ್ವತಂತ್ರ ಸಂಸ್ಥೆಗಳಾದ್ದರಿಂದ ಅಲ್ಲಿಯೂ ಉದ್ಯೋಗ ದೊರಕಿಸಿಕೊಡುವ ಸಾಧ್ಯತೆ ಇಲ್ಲ. ಯಾವುದೇ ಸಂಸ್ಥೆ ಸಮಾಪನಾ ಸ್ಥಿತಿಗೆ ಬರುವುದರಲ್ಲಿ ನೌಕರರ ಪಾತ್ರ ಗಣನೀಯವಾಗಿರುತ್ತದೆ ಎಂಬ ಅಂಶವನ್ನು ಮನಗಾಣಬಹುದು. ಆದಾಗ್ಯೂ ಈ ನೌಕರರು ಅರ್ಜಿ ಹಾಕಿಕೊಂಡಲ್ಲಿ ಮತ್ತು ಸೂಕ್ತರು ಎಂದು ಕಂಡು ಬಂದಲ್ಲಿ ಮಾನವೀಯ ದೃಷ್ಟಿಯಿಂದ ಈ ನೌಕರರನ್ನು ನೇಮಕ ಮಾಡಿಕೊಳ್ಳಲು ಹೊಸದಾಗಿ

ನೋಂದಣಿಯಾಗಿರುವ ಪಟ್ಟಣ ಸಹಕಾರ ಬ್ಯಾಂಕುಗಳನ್ನು ಸಹಕಾರ ಸಂಘಗಳ ನಿಬಂಧಕರು ತಮ್ಮ ಪತ್ರ ಸಂ. ಯುಬಿಸಿ :58 : ಯುಎಂಸಿ-1:94-95 : ದಿನಾಂಕ 6-12-94ರ ಮೂಲಕ ಕೋರಿರುತ್ತಾರೆ.

ಇ) ಕಂಡಿಕೆ 'ಅ' ಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಕೃಷಿ ಮಾರುಕಟ್ಟೆಗಳಲ್ಲಿ ದಲಾಲರಿಂದ ರೈತರಿಗೆ ತಕ್ಷಣ ಹಣ ಸಂದಾಯ

1666 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೃಷಿ ಮಾರುಕಟ್ಟೆಗಳಲ್ಲಿ ಕಾನೂನು ಪ್ರಕಾರ ಮಾರಾಟ ಮಾಡಿದ ರೈತರಿಗೆ ಅಂದೇ ಹಣ ಸಂದಾಯ ಮಾಡುವುದು ದಲಾಲರ ಜವಾಬ್ದಾರಿ ಅಲ್ಲವೇ, ಅದೇ ರೀತಿ ವ್ಯಾಪಾರಸ್ಥರು, ತಾವು ಖರೀದಿಸಿದ ಮಾಲಿನ ಹಣವನ್ನು 7 ದಿವಸಗಳ ಒಳಗಾಗಿ ದಲಾಲರಿಗೆ ಸಂದಾಯ ಮಾಡುವುದು ಕಾನೂನಿನ್ವಯ ಅವರ ಜವಾಬ್ದಾರಿ ಅಲ್ಲವೇ.

ಆ) ಜವಾಬ್ದಾರಿಯನ್ನು ನಿಭಾಯಿಸಲು ವಿಫಲರಾದ ದಲಾಲರ ಮತ್ತು ವ್ಯಾಪಾರಸ್ಥರ ಸಂಖ್ಯೆ ಎಷ್ಟು. ಇದು ಒಟ್ಟು ದಲಾಲರ - ವ್ಯಾಪಾರಸ್ಥರ ಸಂಖ್ಯೆಯ ಪ್ರತಿ ಶತ ಎಷ್ಟು? (ಎಪಿಎಂಸಿವಾರು ಒದಗಿಸುವುದು)

ಇ) ಈ ರೀತಿ ಕಾನೂನು ಬಾಹಿರ ಕ್ರಮ ನಿಲ್ಲಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು? ಅವುಗಳನ್ನು ಕಟ್ಟುನಿಟ್ಟಾಗಿ ಎಷ್ಟು ದಿನಗಳಲ್ಲಿ ಅನುಷ್ಠಾನಗೊಳಿಸಲಾಗುವುದು?

ಶ್ರೀ ಬಿ.ಬಿ. ನಿಂಗಯ್ಯ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಹೌದು

ಮಾರುಕಟ್ಟೆ ಸಮಿತಿಗಳ ಉಪ ನಿಯಮಗಳಲ್ಲಿ ನಿಗದಿಪಡಿಸಿರುವಂತೆ 7 ರಿಂದ 15 ದಿನಗಳವರೆಗೆ ಖರೀದಿದಾರರು ದಲಾಲರಿಗೆ ಸಂದಾಯ ಮಾಡಲು ಅವಕಾಶವಿದೆ.

ಆ) ಎ.ಪಿ.ಎಂ.ಸಿ. ವಾರು ತಃಖ್ತೆ ಲಗತ್ತಿಸಿದೆ.

ಇ) ಹತ್ತಿ ಹೊರತುಪಡಿಸಿ, ಉಳಿದ ಅಧಿಸೂಚಿತ ಕೃಷಿ ಉತ್ಪನ್ನಗಳ ಮಾರಾಟದ ಹಣವನ್ನು ನಿಗಧಿತ ಅವಧಿಯೊಳಗೆ ಸಂದಾಯ ಮಾಡಲಾಗುತ್ತಿದೆ. ಹತ್ತಿ ಮಾರಾಟ ವ್ಯವಹಾರದಲ್ಲಿ ಈ ನಿಯಮ ಜಾರಿಗೊಳಿಸಲು ನಷ್ಟ ಸಾಧ್ಯವಾಗಿದೆ. ದಲಾಲರು ರೈತರಿಂದ ಅನಧಿಕೃತವಾಗಿ ರಿವಾಜುಗಳನ್ನು ಸಮುರಿದುಕೊಳ್ಳುವುದನ್ನು ತಪ್ಪಿಸಲು, ದಲಾಲರ ಬದಲು ಮಾರುಕಟ್ಟೆ ಸಮಿತಿಗಳ ಮೂಲಕ ಹಣ ಪಾವತಿ ಮಾಡಲು ಸಾಂಸ್ಥಿಕ ವ್ಯವಸ್ಥೆ ಕಲ್ಪಿಸಬೇಕೆಂಬ ಬೇಡಿಕೆ ಬಗ್ಗೆ ಸಹಕಾರ ಇಲಾಖೆಯ ವಿಷಯ ಸಮಿತಿ ಮಾಡಿರುವ ಶಿಫಾರಸ್ಸುಗಳಿಗೆ ಅನುಗುಣವಾಗಿ ಇತರೆ ರಾಜ್ಯಗಳಲ್ಲಿನ ಮಾರುಕಟ್ಟೆ ಪರಿಸ್ಥಿತಿಯನ್ನು ಅಧ್ಯಯನ ಮಾಡಿ ವರದಿ ಸಲ್ಲಿಸಲು ವಿಷಯ ಸಮಿತಿ ಸದಸ್ಯರನ್ನು ಒಳಗೊಂಡ ನಿಯೋಗ ಹೋಗಲು ತೀರ್ಮಾನಿಸಿದೆ. ಈ ನಿಯೋಗವು ಸರ್ಕಾರಕ್ಕೆ ಸಲ್ಲಿಸುವ ವರದಿಯನ್ನು ಅನುಸರಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

1994-95ನೇ ಸಾಲಿನಲ್ಲಿ ರಾಜ್ಯದ ಮಾರುಕಟ್ಟೆ ಸಮಿತಿಗಳಲ್ಲಿರುವ ದಲಾಲರು, ಖರೀದಿದಾರರ ಸಂಖ್ಯೆ ಹಾಗೂ ನಿಯಮ ಪ್ರಕಾರ ಹಣ ಪಾವತಿಯಲ್ಲಿ ವಿಫಲರಾದ ದಲಾಲರ ಖರೀದಿದಾರರ ವಿವರದ ತಃಖ್ತೆ

ಕ್ರ. ನಂ.	ಮಾರುಕಟ್ಟೆ ಸಮಿತಿಯ ಹೆಸರು	ಒಟ್ಟು ದಲಾಲರು	ಒಟ್ಟು ಖರೀದಿ ದಾರರು	ವಿಫಲರಾದ ದಲಾಲರು	ವಿಫಲರಾದ ವ್ಯಾಪಾರಸ್ಥರು
1	2	3	4	5	6
1.	ಬೆಂಗಳೂರು	787	949	ಇಲ್ಲ	ಇಲ್ಲ
2.	ಬೆಂಗಳೂರು (ಹಣ್ಣು ಮತ್ತು ತರಕಾರಿಗಳ ವಿಶೇಷ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ)	577	245	"	"
3.	ಚನ್ನಪಟ್ಟಣ	130	148	"	"
4.	ದೊಡ್ಡಬಳ್ಳಾಪುರ	6	122	"	"
5.	ಚಿತ್ರದುರ್ಗ	252	256	"	"
6.	ಚಳ್ಳಕೆರೆ	142	197	"	"
7.	ದಾವಣಗೆರೆ	391	570	"	"
8.	ಹರಿಹರ	47	77	"	"
9.	ಹಿರಿಯೂರು	68	121	"	"
10.	ಹೊಸದುರ್ಗ	25	69"	"	
11.	ಕೋಲಾರ	128	113	"	"
12.	ಮಾಲೂರು	3	16	"	"
13.	ಚಿಕ್ಕಬಳ್ಳಾಪುರ	40	249	"	"
14.	ಚಿಂತಾಮಣಿ	112	172	"	"
15.	ಬಂಗಾರಪೇಟೆ	24	126	"	"
16.	ಗೌರಿಬಿದನೂರು	ಇಲ್ಲ	83	"	"
17.	ಮುಳುಬಾಗಿಲು	11	28	"	"
18.	ಶ್ರೀನಿವಾಸಪುರ	2	47	"	"
19.	ಶಿವಮೊಗ್ಗ	129	437	"	"
20.	ಚೆನ್ನಗಿರಿ	15	88	"	"
21.	ಸಾಗರ	30	291	"	"
22.	ಶಿಕಾರಿಪುರ	5	72	"	"
23.	ಭದ್ರಾವತಿ	22	69	"	"
24.	ಹೊನ್ನಾಳಿ	-	45	"	"
25.	ತುಮಕೂರು	220	343	"	"
26.	ಗುಬ್ಬಿ	32	32	"	"
27.	ಸಿ.ಎನ್. ಹಳ್ಳಿ	4	36	"	"
28.	ಹುಳಿಯಾರ್	17	39	"	"
29.	ಕುಣಿಗಲ್	-	21	"	"
30.	ಮಧುಗಿರಿ	40	51	"	"
31.	ಪಾವಗಡ	45	116	"	"

32.	ಶಿರಾ	53	56	"	"
33.	ತುರುವೇಕೆರೆ	22	28	"	"
34.	ತಿಪಟೂರು	240	124	"	"
35.	ಮೈಸೂರು	161	563	"	"
36.	ಚಾಮರಾಜನಗರ	78	81	"	"
37.	ಕೆ.ಆರ್. ನಗರ	2	12	"	"
38.	ಹುಣಸೂರು	-	15	"	"
39.	ಪಿರಿಯಾಪಟ್ಟಣ	-	33	"	"
40.	ಕೊಳ್ಳೇಗಾಲ	4	76	"	"
41.	ಟಿ. ನರಸೀಪುರ	4	77	"	"
42.	ನಂಜನಗೂಡು	1	99	"	"
43.	ಮಂಗಳೂರು	103	782	"	"
44.	ಪುತ್ತೂರು	6	250	"	"
45.	ಉಡುಪಿ	-	205	"	"
46.	ಮಡಿಕೇರಿ	-	30	"	"
47.	ಸೋಮವಾರಪೇಟೆ	-	86	"	"
48.	ಗೋಣಿಕೊಪ್ಪಲು	11	42	"	"
49.	ಕಡೂರು	16	231	"	"
50.	ಚಿಕ್ಕಮಗಳೂರು	-	124	"	"
51.	ತರೀಕೆರೆ	4	79	"	"
52.	ಹಾಸನ	45	213	"	"
53.	ಅರಸೀಕೆರೆ	99	117	"	"
54.	ಹೊಳೆನರಸೀಪುರ	2	47	"	"
55.	ಸಿ.ಆರ್. ಪಟ್ಟಣ	4	104	"	"
56.	ಸಕಲೇಶಪುರ	3	40	"	"
57.	ಮಂಡ್ಯ	108	161	"	"
58.	ಮದ್ದೂರು	-	74	"	"
59.	ಕೆ.ಆರ್. ಪೇಟೆ	-	32	"	"
60.	ಬೆಳಗಾಂ	176	202	01 (0.57%)	09 (4.45%) (ಬೆಲ್ಲ ವಹಿವಾಟು)
61.	ಅಥಣಿ	25	80	04 (16%) (ಹತ್ತಿ ವಹಿವಾಟಿಗೆ ಸಂಬಂಧಿಸಿದಂತೆ)	03 (3.75%)
62.	ಬೈಲಹೊಂಗಲ	197	88	197 (100%) (ಹತ್ತಿ ವಹಿವಾಟಿಗೆ ಸಂಬಂಧಿಸಿದಂತೆ)	88(100%)
63.	ಗೋಕಾಕ್	124	214	ಇಲ್ಲ	ಇಲ್ಲ

VIII F-

64.	ಕುಡಚಿ	13	76	"	"
65.	ನಂದಗಡ	01	16	"	"
66.	ನಿಪ್ಪಾಣಿ	04	32	"	"
67.	ರಾಮದುರ್ಗ	93	130	"	"
68.	ಸೌಂದತ್ತಿ	204	98	"	"
69.	ಸಂಕೇಶ್ವರ	15	224	"	"
70.	ಬಿಜಾಪುರ	195	542	"	"
71.	ಬಾಗಲಕೋಟೆ	59	174	"	"
72.	ಬಾದಾಮಿ	32	63	"	"
73.	ಹುನಗುಂದ	43	84	"	"
74.	ಜಮಖಂಡಿ	26	164	"	"
75.	ಮಹಾಲಿಂಗಪುರ	88	80	"	"
76.	ತಾಳಿಕೋಟೆ	137	204	"	"
77.	ಧಾರವಾಡ	120	193	120 (100%) (ಹತ್ತಿ ವಹಿವಾಟಿಗೆ ಸಂಬಂಧಿಸಿದಂತೆ)	193 (100%)
78.	ಬ್ಯಾಡಗಿ	180	137	"	"
79.	ಗದಗ್	190	371	01 (0.53%)	"
80.	ಅಣ್ಣಿಗೇರಿ	24	54	ಇಲ್ಲ	ಇಲ್ಲ
81.	ಹಾವೇರಿ	128	117	"	"
82.	ಹಾನಗಲ್	1	59	"	"
83.	ಹಿರೇಕೆರೂರು	21	22	"	"
84.	ಹುಬ್ಬಳ್ಳಿ	475	682	08(1.68%)	"
85.	ಶಿಗ್ಗಾಂವ್	43	50	ಇಲ್ಲ	"
86.	ನರಗುಂದ	66	70	66 (100%) (ಹತ್ತಿ ವಹಿವಾಟಿಗೆ ಸಂಬಂಧಿಸಿದಂತೆ)	70(100%)
87.	ಕುಂದಗೋಳ್	07	25	ಇಲ್ಲ	ಇಲ್ಲ
88.	ಲಕ್ಷ್ಮೇಶ್ವರ	30	66	"	"
89.	ಮುಂಡರಗಿ	18	23	"	"
90.	ಹೊಳೆಆಲೂರು(ರೋಣ)	65	85	"	"
91.	ರಾಣೆಬೆನ್ನೂರು	468	180	"	"
92.	ಸವಣೂರು	37	25	"	"
93.	ಹಳಿಯಾಳ	12	125	"	"
94.	ಕುಮುಟಾ	15	183	"	"
95.	ಹೊನ್ನಾವರ	3	72	"	"
96.	ಸಿದ್ದಾಪುರ	3	154	"	"
97.	ಯಲ್ಲಾಪುರ	7	214	"	"

98.	ಶಿರಸಿ	31	277	"	"
99.	ಕಾರವಾರ	61	-	-	-
100.	ಬಳ್ಳಾರಿ	336	374	"	"
101.	ಕೊಟ್ಟೂರು	73	128	"	"
102.	ಹೊಸಪೇಟೆ	57	86	"	"
103.	ಹೆಚ್.ಬಿ. ಹಳ್ಳಿ	35	66	"	"
104.	ಹಡಗಲಿ	12	54	"	"
105.	ಸಿರಗುಪ್ಪ	07	62	"	"
106.	ಬೀದರ್	110	150	ಇಲ್ಲ	ಇಲ್ಲ
107.	ಹುಮನಾಬಾದ್	4	44	"	"
108.	ಬಸವಕಲ್ಯಾಣ	22	49	"	"
109.	ಭಾಲ್ಕಿ	102	60	"	"
110.	ಔರಾದ್	42	144	"	"
111.	ರಾಯಚೂರು	325	433	"	"
112.	ಗಂಗಾವತಿ	423	373	"	"
113.	ಕೊಪ್ಪಳ	104	134	"	"
114.	ಕುಕನೂರು (ಯಲ್ಬುರ್ಗಾ)	23	38	"	"
115.	ಕುಷ್ಟಗಿ	105	103	"	"
116..	ಸಿಂಧನೂರು	140	134	"	"
117.	ಲಿಂಗಸೂಗೂರು	63	72	"	"
118.	ಮಾನ್ವಿ	02	31	"	"
119.	ಗುಲ್ಬರ್ಗಾ	179	374	"	"
120.	ಚಿತ್ತಾಪುರ	4	63	"	"
121.	ಶಹಾಪುರ	13	42	"	"
122.	ಶೋರಾಪುರ	48	42	"	"
123.	ಸೇಡಂ	23	37	"	"
124.	ಯಾದಗೀರ್	97	115	"	"

ಟಿಪ್ಪಣಿ : ಹತ್ತಿ ವ್ಯವಹಾರದಲ್ಲಿ ರೈತ ಮಾರಾಟಗಾರರಿಗೆ ಕೂಡಲೇ ಹಣ ಪಾವತಿ ಮಾಡುವ ನಿಯಮವನ್ನು ನೂರಕ್ಕೆ ನೂರರಷ್ಟು ಜಾರಿಗೆ ನೀಡಲು, ಹತ್ತಿ ವಹಿವಾಟಿನಲ್ಲಿ ಒಳಗೊಂಡಿರುವ ಮೊತ್ತ ಅಗಾಧವಾಗಿದ್ದು, ಈ ಉತ್ಪನ್ನದ ವಹಿವಾಟಿನ ಸ್ವರೂಪವು ಹಲವು ಹಂತಗಳನ್ನು ಒಳಗೊಂಡಿರುವುದರಿಂದ ಹಣ ಪಾವತಿ ಕೂಡಲೇ ಮಾಡಲು ಸಾಧ್ಯವಾಗುತ್ತಿಲ್ಲ. ಹಣ ಪಾವತಿಯಲ್ಲಿ ವಿಳಂಬವಾಗಿದೆ ಎಂದು ರೈತರಿಂದಾಗಲೀ ಅಥವಾ ಖರೀದಿದಾರರಿಂದ ಹಣ ಬಂದಿಲ್ಲವೆಂದು ದಲಾಲರಾಗಲಿ ಮಾರುಕಟ್ಟೆ ಸಮಿತಿಗಳಿಗೆ ದೂರು ನೀಡುತ್ತಿರುವುದಿಲ್ಲ. ಈ ಪರಿಸ್ಥಿತಿಯನ್ನು ಸುಧಾರಿಸಲು ಸಹಕಾರ ಸಂಘಗಳು, ಕೇಂದ್ರ ಮತ್ತು ರಾಜ್ಯ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಮಾರುಕಟ್ಟೆ ಪ್ರಾಂಗಣಗಳಲ್ಲಿ ಕೃಷಿ ಉತ್ಪನ್ನಗಳನ್ನು ಖರೀದಿಸುವ ವ್ಯವಸ್ಥೆ ಸಮರ್ಪಕವಾಗಿ ಮಾಡಿದಲ್ಲಿ, ಖಾಸಗಿ ವರ್ತಕರ ಏಕಸ್ವಾಮ್ಯವನ್ನು ತಹಬಂದಿಯಲ್ಲಿ ತರಲು ಸಾಧ್ಯವಾಗುತ್ತದೆ.

ರಾಜ್ಯದಲ್ಲಿ ಕೃಷಿ ಸಾಗುವಳಿಯ ವಿಸ್ತೀರ್ಣ

1681 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಕೃಷಿ ಸಾಗುವಳಿಯಾಗುತ್ತಿರುವ ಒಟ್ಟು ಕ್ಷೇತ್ರವೆಷ್ಟು? ಇದರಲ್ಲಿ ಫ್ಲೋಇರಿಗೇಷನ್ (ಹರಿ ನೀರಾವರಿ) ಯಿಂದ ಸಾಗುವಳಿಯಾಗುತ್ತಿರುವ ಕ್ಷೇತ್ರವೆಷ್ಟು? ಏತ ನೀರಾವರಿಯಿಂದ ಸಾಗುವಳಿಯಾಗುತ್ತಿರುವುದು ಎಷ್ಟು? ಬಾವಿಗಳಿಂದ ನೀರು ಉಣ್ಣುತ್ತಿರುವ ಕ್ಷೇತ್ರವೆಷ್ಟು? ಕೇವಲ ಮಳೆಯಾಧಾರದ ಅವಲಂಬನೆಯಾಗಿರುವ ಕ್ಷೇತ್ರವೆಷ್ಟು?

ಆ) ಹರಿ ನೀರಾವರಿ ಮತ್ತು ಏತ ನೀರಾವರಿಗಾಗಿ ಇಲ್ಲಿಯವರೆಗೆ ಮಾಡಿದ ವೆಚ್ಚವೆಷ್ಟು? ಇದು ಪ್ರತಿ ಎಕರೆಗೆ ಸರಾಸರಿ ಎಷ್ಟು?

ಇ) ಒಣ ಬೇಸಾಯದ ಅಡಿಯಲ್ಲಿ ಅಳವಡಿಸಿರುವ ಜಮೀನುಗಳಲ್ಲಿ ಮಳೆಯಿಂದಾದ ನೀರನ್ನು ಹಿಡಿದಿಡಲು ಹಾಗೂ ಮಣ್ಣನ್ನು ತಡೆಹಿಡಿಯಲು ಇಲ್ಲಿಯವರೆಗೆ ಮಾಡಿದ ವೆಚ್ಚವೆಷ್ಟು?

ಈ) ಹರಿ ನೀರಾವರಿ ಮತ್ತು ಏತ ನೀರಾವರಿಗಾಗಿ ಸರ್ಕಾರ ಮಾಡಿದ ಹಣದ ವೆಚ್ಚವೆಷ್ಟು?

ಉ) ಮಳೆಯಿಂದ ಬಿದ್ದ ನೀರನ್ನು ಅಲ್ಲಿಯೇ ಹಿಡಿಯಲು ಹಾಗೂ ಭೂ ಸವೆತ ತಡೆಯಲು ವಿವಿಧ ಯೋಜನೆಗಳಲ್ಲಿ ಈ ವರ್ಷ ಮಾಡುವ ಅಂದಾಜು ವೆಚ್ಚವೆಷ್ಟು? ಅದರಿಂದ ಲಾಭಗೊಳ್ಳುವ ಕ್ಷೇತ್ರವೆಷ್ಟು? ಈ ರೀತಿ ಅನುಕೂಲತೆಗಳನ್ನು ಪಡೆದುಕೊಂಡು ಮಳೆಯಾಶ್ರಿತ ಜಮೀನುಗಳಲ್ಲಿ ಉತ್ಪಾದನೆಯ ಹೆಚ್ಚಳ ಎಷ್ಟು?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) ರಾಜ್ಯದಲ್ಲಿ ಕೃಷಿ ಸಾಗುವಳಿಯಾಗುತ್ತಿರುವ ಒಟ್ಟು ಕ್ಷೇತ್ರವು 1,07,89,535 ಹೆಕ್ಟೇರ್ ಇದರಲ್ಲಿ ಫ್ಲೋ ಇರಿಗೇಷನ್ (ಹರಿ ನೀರಾವರಿ) ಯಿಂದ ಸಾಗುವಳಿಯಾಗುತ್ತಿರುವ ಕ್ಷೇತ್ರ 9,34,475 ಹೆಕ್ಟೇರ್‌ಗಳು. ಏತ ನೀರಾವರಿಯಿಂದ 1,34,683 ಹೆಕ್ಟೇರ್‌ಗಳು ಸಾಗುವಳಿಯಾಗುತ್ತಿದ್ದು 4,87,447 ಹೆಕ್ಟೇರ್ ಪ್ರದೇಶವು ಬಾವಿಯಿಂದ ನೀರಾವರಿಯಾಗಿದೆ. ಮಳೆಯಾಧಾರದ ಮೇಲೆ ಅವಲಂಬಿತ ಕ್ಷೇತ್ರವು 84,62,342 ಹೆಕ್ಟೇರ್‌ಗಳು.

ಆ) ನೀರಾವರಿ ಯೋಜನೆಗಳ ಮೇಲೆ ಮಾರ್ಚಿ 95ರ ಅಂತ್ಯದವರೆಗೆ ಒಟ್ಟು 5055.21 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದ್ದು ಅದರಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗೆ 4463.69 ಕೋಟಿ ರೂ.ಗಳು ಮತ್ತು ಸಣ್ಣ ನೀರಾವರಿ ಯೋಜನೆಗಳಿಗೆ (ಮೇಲ್ಮೈಜಲ) 591.52 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿರುತ್ತದೆ. ಇದು ಪ್ರತಿ ಎಕರೆಗೆ ಸರಾಸರಿ ವೆಚ್ಚ 8367 ರೂ.ಗಳಾಗುತ್ತದೆ.

ಇ) ಒಣ ಬೇಸಾಯದ ಅಡಿಯಲ್ಲಿ ಇಲ್ಲಿಯವರೆಗೆ ಸುಮಾರು 38 ಲಕ್ಷ ಎಕರೆಗಳಲ್ಲಿ ಜಲಾನಯನ ಆಧಾರದ ಮೇಲೆ ಜಮೀನುಗಳಲ್ಲಿ ಮಳೆಯಿಂದ ನೀರನ್ನು ತಡೆಹಿಡಿದಿಡಲು ಮತ್ತು ಮಣ್ಣನ್ನು ತಡೆಯಲು ಇಲ್ಲಿಯವರೆಗೆ ಮಾಡಿರುವ ವೆಚ್ಚ ರೂ. 278.28 ಕೋಟಿ ಇದರಿಂದಾಗಿ ಪ್ರತಿ ಎಕರೆಗೆ ಸರಾಸರಿ ತಗಲುವ ವೆಚ್ಚ ರೂ. 723.

ಈ) ಪ್ರಶ್ನೆ 2ಕ್ಕೆ ನೀಡಲಾಗಿರುವ ಉತ್ತರದಂತೆ.

ಉ) ಮಳೆಯಿಂದ ಬಿದ್ದ ನೀರನ್ನು ಅಲ್ಲಿಯೇ ಹಿಡಿದಿಡಲು ಹಾಗೂ ಭೂ ಸವೆತ ತಡೆಯಲು ವಿವಿಧ ಜಲಾನಯನ ಯೋಜನೆಗಳಡಿಯಲ್ಲಿ ಈ ವರ್ಷ ಮಾಡುವ ಅಂದಾಜು ವೆಚ್ಚ ರೂ. 52.28 ಕೋಟಿ, ಈ ರೀತಿ ಅನುಕೂಲತೆಗಳನ್ನು ಪಡೆಯುವ ಪ್ರದೇಶ 2,24,000 ಹೆಕ್ಟೇರ್‌ಗಳಾಗುವುದು. ಇದರಿಂದಾಗಿ ಮಳೆಯಾಶ್ರಿತ ಪ್ರದೇಶದಲ್ಲಿನ ಬೆಳೆಗಳಲ್ಲಿ ಶೇ. 10 ರಿಂದ 25 ರಷ್ಟು ಉತ್ಪಾದನೆಯ ಹೆಚ್ಚಳ ಸಾಧ್ಯವೆಂದು ನಂಬಲಾಗಿದೆ.

ಕುಂದಾಪುರ ತಾಲ್ಲೂಕಿನ ಕೃಷಿ ಇಲಾಖೆಯ ಕಟ್ಟಡಗಳು

2434 - ಶ್ರೀ ಕೆ. ಪ್ರತಾಪ್ ಚಂದ್ರಶೆಟ್ಟಿ (ಕುಂದಾಪುರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕಿನಲ್ಲಿ ಕೃಷಿ ಇಲಾಖೆಯವರು ಕೃಷಿ ಸಹಾಯಕರ ಹಾಗೂ ಸಹಾಯಕ ಕೃಷಿ ಅಧಿಕಾರಿಯವರ ಉಪಯೋಗಕ್ಕಾಗಿ ಕಟ್ಟಿಸಿದ ಬೇರೆ ಬೇರೆ ಪಂಚಾಯಿತಿಗಳಲ್ಲಿ ಕಟ್ಟಿಸಿದ ಕಟ್ಟಡಗಳ ಸಂಖ್ಯೆ ಎಷ್ಟು, (ಸಂಪೂರ್ಣ ವಿವರ ನೀಡುವುದು).

ಆ) ಕೆಲವು ಕಡೆಗಳಲ್ಲಿ ಇಲಾಖೆಯವರು ವಾಸ್ತವ್ಯ ಇಲ್ಲದೇ ಕಿಟಕಿಗಳನ್ನು ಬಾಗಿಲುಗಳನ್ನು ಕಳಚಿಕೊಂಡು ಹೋಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ಬಗ್ಗೆ ಸರಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) ಕುಂದಾಪುರ ತಾಲ್ಲೂಕಿನಲ್ಲಿ ಕೃಷಿ ಇಲಾಖೆಯಿಂದ ನಿರ್ಮಿಸಲಾದ ಕಟ್ಟಡಗಳ ವಿವರ..

1.	ಕೃಷಿ ಸಹಾಯಕರ ನಿವಾಸ	7
2.	ಸಹಾಯಕ ಕೃಷಿ ಅಧಿಕಾರ ನಿವಾಸ	3
	ಒಟ್ಟು	**10**

ಕೃಷಿ ಸಹಾಯಕರ ವಸತಿ ಗೃಹಗಳು

1. ಶಿರೂರು
2. ಸಿದ್ದಾಪುರ
3. ಗೋಣಿಹೊಳೆ
4. ಹಾಲಾಡಿ
5. ಕಾಲ್ತೋಡು
6. ಕಿರುಮಂಜೇಶ್ವರ
7. ಉಪ್ಪುಂದ

ಸಹಾಯಕ ಕೃಷಿ ಅಧಿಕಾರಿಗಳ ವಸತಿ ಗೃಹಗಳು :

1. ಬಡ್ಕಲ್ ಕಟ್ಟೆ
2. ಶಂಕರನಾರಾಯಣ
3. ವಂಡ್ಸೆ.

ಆ) ಹೌದು

ಇ) ದಕ್ಷಿಣ ಕನ್ನಡ ಜಿಲ್ಲಾ ಪಂಚಾಯಿತಿಗೆ ವಿವರವಾದ ವರದಿಯನ್ನು ಸಲ್ಲಿಸಿದ್ದು ಕೂಡಲೇ ದುರಸ್ತಿಪಡಿಸಿಕೊಡಲು ಕೇಳಿಕೊಳ್ಳಲಾಗಿದೆ.

ಪ್ರಾಥಮಿಕ ಸಹಕಾರಿ ಸಂಸ್ಥೆಗಳಲ್ಲಿ ಮಹಿಳೆಗೆ ಉಚಿತ ಸದಸ್ಯತ್ವ

2433 - ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ (ಕುಂದಾಪುರ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪ್ರಾಥಮಿಕ ಸಹಕಾರಿ ಸಂಘಗಳಲ್ಲಿ ಮಹಿಳೆಯರಿಗೆ ಉಚಿತ ಸದಸ್ಯತ್ವ ಕೊಡುವ ಯೋಜನೆ ಸರ್ಕಾರದ ಮುಂದಿದೆಯೇ?

ಆ) ಯೋಜನೆಯಲ್ಲಿ ಕಳೆದ 2 ವರ್ಷಗಳಿಂದ ಉಚಿತವಾಗಿ ನೊಂದಾಯಿಸಲಾದ ಮಹಿಳಾ ಸದಸ್ಯರ ಸಂಖ್ಯೆ ಎಷ್ಟು?

ಇ) ಕುಂದಾಪುರ ತಾಲ್ಲೂಕಿನಲ್ಲಿ ಕಳೆದ 2ವರ್ಷಗಳಿಂದ ಉಚಿತವಾಗಿ ನೊಂದಾಯಿಸಲಾದ ಮಹಿಳಾ ಸದಸ್ಯರ ಸಂಖ್ಯೆ ಎಷ್ಟು?

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :

ಅ) ಇಲ್ಲ, ಆದರೆ ಸಹಕಾರ ಸಂಘಗಳಲ್ಲಿ ಮಹಿಳೆಯರನ್ನು ಸದಸ್ಯರನ್ನಾಗಿ ನೊಂದಾಯಿಸಿಕೊಳ್ಳಲು ಸರ್ಕಾರ ಒಂದು ಷೇರಿನ ಮೌಲ್ಯದ ಪೂರ್ಣ ಹಣವನ್ನು ಸಹಾಯಧನ ರೂಪದಲ್ಲಿ ಒದಗಿಸುವ ಯೋಜನೆ ಇದೆ.

ಆ) ಉದ್ಭವಿಸುವುದಿಲ್ಲ, ಪ್ರಶ್ನೆ 'ಅ'ದಲ್ಲಿ ವಿವರಿಸಿರುವ ಯೋಜನೆಯಂತೆ ರಾಜ್ಯದಲ್ಲಿ 1993-94 ಮತ್ತು 1994-95ನೇ ಸಾಲುಗಳಲ್ಲಿ ಒಟ್ಟು 1,06,292 ಮಹಿಳೆಯರನ್ನು ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೊಂದಾಯಿಸಲಾಗಿದೆ.

ಇ) ಉದ್ಭವಿಸುವುದಿಲ್ಲ, ಆದರೆ (ಅ)ದಲ್ಲಿ ವಿವರಿಸಿರುವ ಯೋಜನೆಯಡಿ ಕಳೆದ 2 ವರ್ಷಗಳಲ್ಲಿ ಕುಂದಾಪುರ ತಾಲ್ಲೂಕಿನಲ್ಲಿ 1239 ಜನ ಮಹಿಳೆಯರನ್ನು ಸದಸ್ಯರನ್ನಾಗಿ ನೊಂದಾಯಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊರತೆಯಿರುವ ಕಂದಾಯ ಇಲಾಖೆಯ ನೌಕರರು

2432 - ಶ್ರೀ ಕೆ. ಪ್ರತಾಪ್ ಚಂದ್ರ ಶೆಟ್ಟಿ : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊರತೆಯಿರುವ ಕಂದಾಯ ಇಲಾಖೆಯ ನೌಕರರ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರವನ್ನು ಒದಗಿಸುವುದು).

ಆ) ಇವುಗಳನ್ನು ತುಂಬಲು ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) 105

ತಾಲ್ಲೂಕುವಾರು ವಿವರ ಈ ರೀತಿ ಇದೆ

ಮಂಗಳೂರು	-	9
ಬಂಟ್ವಾಳ	-	7
ಪುತ್ತೂರು	-	17
ಸುಳ್ಯ	-	13
ಬೆಳ್ತಂಗಡಿ	-	5

ಕಾರ್ಕಳ	-	10
ಉಡುಪಿ	-	9
ಕುಂದಾಪುರ	-	35

ಆ) ಜಿಲ್ಲೆಯಲ್ಲಿ ಕೊರತೆಯಿರುವ ಹುದ್ದೆಗಳನ್ನು ತುಂಬುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿ ಗ್ರಾಮ ಸಹಾಯಕರ ಹುದ್ದೆಗಳ ಖಾಯಂ

2457 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಇರುವ ಒಟ್ಟು ಗ್ರಾಮ ಸಹಾಯಕರುಗಳ ಹುದ್ದೆ ಎಷ್ಟು?

ಆ) ಈ ಹುದ್ದೆಯನ್ನು ಖಾಯಂ ಗೊಳಿಸುವ ಆಲೋಚನೆ ಸರ್ಕಾರದ ಮುಂದಿದೆಯೇ?

ಇ) ಖಾಯಂಗೊಳಿಸುವ ಬಗ್ಗೆ ಎಲ್ಲಾ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿರುವರೇ?

ಈ) ಖಾಯಂ ಗೊಳಿಸುವ ಬಗ್ಗೆ ಅಧಿಕಾರಿಗಳ ಸಮಿತಿಯು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿರುವುದೇ, ಸಲ್ಲಿಸಿದ್ದಲ್ಲಿ ಯಾವಾಗ ಖಾಯಂ ಗೊಳಿಸಲಾಗುವುದು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) 10450

ಆ) ಇಲ್ಲ

ಇ) ಹೌದು

ಈ) ಸರ್ಕಾರಕ್ಕೆ ಸಮಿತಿಯು ವರದಿಯನ್ನು ಸಲ್ಲಿಸಿದ್ದಾರೆ. ಈ ವಿಷಯದ ಬಗ್ಗೆ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ 29424:94 ಬಾಕಿ ಇರುವುದರಿಂದ ರಿಟ್ ಅರ್ಜಿಯು ಇತ್ಯರ್ಥವಾದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಶಿರಾ ತಾಲ್ಲೋಕಿನ ಸಾರಿಗೆ ವ್ಯವಸ್ಥೆ

2115 - ಶ್ರೀ ಜಿ. ಸತ್ಯನಾರಾಯಣ (ಶಿರಾ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿರಾ ತಾಲ್ಲೂಕಿನಲ್ಲಿ ಸಂಚರಿಸಲು ಖಾಸಗಿ ಬಸ್ಸುಗಳಿಗೆ ಪರವಾನಿಗೆ ಕೊಡಲಾಗಿರುವ ಸಂಖ್ಯೆ ಎಷ್ಟು (ಮಾರ್ಗವಾರು ವಿವರ ನೀಡುವುದು)

ಆ) ಪರವಾನಿಗೆ ಪಡೆದ ಎಲ್ಲಾ ಬಸ್ಸುಗಳು ಸಂಚಾರ ನಡೆಸುತ್ತಿವೆಯೇ?

ಇ) ಪರವಾನಿಗೆ ಪಡೆದು ಹಲವು ಬಸ್ಸುಗಳು ಸಂಚಾರ ನಡೆಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಸಂಚಾರ ಸ್ಥಗಿತಗೊಳಿಸಿರುವ ಖಾಸಗಿ ಬಸ್ಸುಗಳ ಪರವಾನಿಗೆ ರದ್ದು ಪಡಿಸಿ ರಾಜ್ಯ ಸಾರಿಗೆ ಸಂಸ್ಥೆಗೆ ಹೊಸ ಪರವಾನಿಗೆ ಕೊಟ್ಟು ಗ್ರಾಮಾಂತರ ಸಂಚಾರ ವ್ಯವಸ್ಥೆ ಸುಗಮಗೊಳಿಸಲು ಇರುವ ತೊಂದರೆಗಳೇನು?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಮಂತ್ರಿಗಳು) :

ಅ) 72

ಮಾರ್ಗಗಳ ವಿವರಗಳನ್ನು ಲಗತ್ತಿಸಿರುವ ಅನುಬಂಧದಲ್ಲಿ ನೀಡಲಾಗಿದೆ.

ಆ) ಇಲ್ಲ

ಇ) ಹೌದು

ಈ) ಕಾನೂನು ತೊಡಕಿದೆ.

ಅನುಬಂಧ

ಶಿರಾ ತಾಲ್ಲೂಕಿನಲ್ಲಿ ಸಂಚರಿಸಲು ಖಾಸಗಿ ಬಸ್ಸುಗಳಿಗೆ ನೀಡಲಾಗಿರುವ ಪರವಾನಗಿಗಳ ವಿವರ

1) ಗೌರಿಬಿದನೂರಿನಿಂದ ತಿಪಟೂರು ಮತ್ತು ಹಿಂದಕ್ಕೆ
2) ದಾವಣಗೆರೆಯಿಂದ ಮಧುಗಿರಿಗೆ ಮತ್ತು ಹಿಂದಕ್ಕೆ
3) ಕುಣಿಗಲ್‌ನಿಂದ ತಿಮ್ಮನಹಳ್ಳಿ ಮತ್ತು ಹಿಂದಕ್ಕೆ
4) ಚನ್ನಪಟ್ಟಣದಿಂದ ಹುಲಿಕುಂಟೆ
5) ಕುಣಿಗಲ್‌ನಿಂದ ತಿಮ್ಮನಹಳ್ಳಿ
6) ತಿಮ್ಮನಹಳ್ಳಿ ಇಂದ ಗೌರಿಬಿದನೂರು
7) ದರ್ಮಪುರದಿಂದ ತುಮಕೂರು
8) ಶಿರಾದಿಂದ ಗವಿರಂಗಪುರ
9) ಹಿರಿಯೂರಿನಿಂದ ನೆಲಮಂಗಲ
10) ಶಿರಾದಿಂದ ತುಮಕೂರು ಮತ್ತು ಹಿಂದಕ್ಕೆ
11) ಕಾಂತರಾಳಹಟ್ಟಿಯಿಂದ ಕುಣಿಗಲ್
12) ತಿಪಟೂರಿನಿಂದ ಗೌರಿಬಿದನೂರು ಮತ್ತು ಹಿಂದಕ್ಕೆ
13) ತಿಪಟೂರು ನಿಂದ ಗೌರಿಬಿದನೂರು
14) ಐರಾಕ್‌ಸಂದ್ರ ಕಾಲೋನಿ ಇಂದ ದೊಡ್ಡಸಗ್ಗೇರಿ
15) ಸಿರಾದಿಂದ ವೈ.ಎನ್. ಹೊಸಕೋಟೆ ಮತ್ತು ಹಿಂದಕ್ಕೆ
16) ಗೌರಿಬಿದನೂರು ಇಂದ ಗಂಗಗಟ್ಟ ಮತ್ತು ಹಿಂದಕ್ಕೆ
17) ನಿಟ್ಟೂರಿನಿಂದ ಧರ್ಮಾಪುರ
18) ಗೌರಿಬಿದನೂರು ಇಂದ ತರಿಕೆರೆ ಮತ್ತು ಹಿಂದಕ್ಕೆ
19) ಶಿವಗಂಗಾ ಇಂದ ಹಿರಿಯೂರು ಮತ್ತು ಹಿಂದಕ್ಕೆ
20) ತಾಡಿ ಇಂದ ತ್ಯಾಮಗೊಂಡ್ಲು ಮತ್ತು ಹಿಂದಕ್ಕೆ
21) ಸಿರಾದಿಂದ ಬೆಂಗಳೂರು ಮತ್ತು ಹಿಂದಕ್ಕೆ
22) ಚಿರತಳ್ಳಿಯಿಂದ ಚಿಕ್ಕಮಗಳೂರು ಮತ್ತು ಹಿಂದಕ್ಕೆ
23) ಮಾವತೂರಿನಿಂದ ಗೌರಿಬಿದನೂರು ಮತ್ತು ಹಿಂದಕ್ಕೆ
24) ಗುಬ್ಬಿ ಇಂದ ವಿದುರಾಶ್ವತ ಮತ್ತು ಹಿಂದಕ್ಕೆ
25) ದರ್ಮಪುರದಿಂದ ಸಿ.ಎನ್. ಹಳ್ಳಿ

26) ಸಿರಾದಿಂದ ಕುದೂರು ಮತ್ತು ಹಿಂದಕ್ಕೆ
27) ಹುಳಿಯಾರಿನಿಂದ ಗೌರಿಬಿದನೂರು
28) ಗೌರಿಬಿದನೂರಿನಿಂದ ತಿಪಟೂರು
29) ಗೌರಿಬಿದನೂರುನಿಂದ ಶಿರಾ
30) ದಾಬಸಪೇಟೆ ಇಂದ ಶಿರಾ
31) ಹೊಸಹಳ್ಳಿಯಿಂದ ಹೊನಗೊಂಡನಹಳ್ಳಿ
32) ಮಾಯಸಂದ್ರ ಇಂದ ಹೂನಗೊಂಡನಹಳ್ಳಿ
33) ತಿಪಟೂರಿನಿಂದ ಗೌರಿಬಿದನೂರು
34) ರಾಮನಗರಂ ನಿಂದ ಚಿರತಹಳ್ಳಿ
35) ಮಾದಲೂರಿನಿಂದ ಕೆ.ಬಿ. ಕ್ರಾಸ್
36) ರಾಮನಗರಂ ಇಂದ ಚಿರತಹಳ್ಳಿ
37) ಚಿತ್ರದುರ್ಗದಿಂದ ಕೊಲತೂರು
38) ಕೊಲತೂರಿನಿಂದ ಚಿತ್ರದುರ್ಗ
39) ತುಮಕೂರಿನಿಂದ ಚಳ್ಕೆರೆ
40) ತುಮಕೂರಿನಿಂದ ಶಿರಾ
41) ಹುಳಿಯಾರಿನಿಂದ ಗೌರಿಬಿದನೂರು
42) ಮಧುಗಿರಿಯಿಂದ ತುಮಕೂರು
43) ಚಿತ್ರದುರ್ಗದಿಂದ ಮಾಲೂರು
44) ಕೊಲತೂರುನಿಂದ ಚಿತ್ರದುರ್ಗ
45) ಶಿರಾದಿಂದ ಗೌರಿಬಿದನೂರು
46) ಪಾಲಸಂದ್ರದಿಂದ ಹೊನಗೊಂಡನಹಳ್ಳಿ
47) ಶಿರಾದಿಂದ ಪರಶುರಾಮಪುರ
48) ತುಮಕೂರಿನಿಂದ ಚೇಲೂರು
49) ರಾಮನಗರದಿಂದ ಹಾರೊಗೆರೆ
50) ಹಿರಿಯೂರಿನಿಂದ ಹುಳಿಯಾರು
51) ತುಮಕೂರಿನಿಂದ ಶಿರಾ
52) ಶಿರಾದಿಂದ ಬೇವಿನಹಳ್ಳಿ
53) ರಾಮನಗರದಿಂದ ಧರ್ಮಾಪುರ
54) ತುಮಕೂರಿನಿಂದ ಶಿರಾ
55) ಕಾರ್ಪೇಹಳ್ಳಿಯಿಂದ ತುಮಕೂರು
56) ಶಿರಾದಿಂದ ಕೊಟ್ಟಾಗೇಟ್

57) ತುಮಕೂರಿನಿಂದ ದೊಡ್ಡ ಬಂಗೇರಿ

58) ತುಮಕೂರಿನಿಂದ ಚಿತ್ರದುರ್ಗ

59) ತಿಮ್ಮನಹಳ್ಳಿಯಿಂದ ತುಮಕೂರು

60) ಬಡವನಹಳ್ಳಿಯಿಂದ ಶಿವಮೊಗ್ಗ

61) ಶಿರಾದಿಂದ ನಿಟ್ಟೂರು ಮತ್ತು ಹಿಂದಕ್ಕೆ

62) ಶಿರಾದಿಂದ ಬೆಂಗಳೂರು

63) ಶಿರಾದಿಂದ ತಿಪಟೂರು

64) ತುಮಕೂರಿನಿಂದ ಹಿರಿಯೂರು

65) ತುಮಕೂರಿನಿಂದ ಹಿರಿಯೂರು

66) ಬೆಂಗಳೂರಿನಿಂದ

67) ಚಳ್ಳಕೆರೆ ಇಂದ ಸಿ.ಎನ್. ಹಳ್ಳಿ

68) ಪರಶುರಾಮಪುರದಿಂದ ರಾಮನಗರ

69) ಕಸಿನಾಯಕನಹಳ್ಳಿ ಇಂದ ಮಧುಗಿರಿ

70) ಕುಣಿಗಲ್‌ನಿಂದ ಹೊನಗೊಂಡನಹಳ್ಳಿ

71) ಹೊಸದುರ್ಗದಿಂದ ಗೌರಿಬಿದನೂರು

72) ಪರಶುರಾಮಪುರದಿಂದ ಸಿರಾ

ಹೊಸ ಜಿಲ್ಲೆಗಳನ್ನು ರಚನೆಗೆ ಕೈಗೊಂಡ ಕ್ರಮ

2394 - ಶ್ರೀ ಶಿವಣ್ಣನವರ್ ಬಸವರಾಜ್ ನೀಲಪ್ಪ (ಹಾವೇರಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ದೊಡ್ಡ ಜಿಲ್ಲೆಗಳನ್ನು ವಿಂಗಡಿಸಿ ಆಡಳಿತದ ಅನುಕೂಲಕ್ಕಾಗಿ ಹೊಸ ಜಿಲ್ಲೆಗಳನ್ನು ರಚಿಸಲು ಈವರೆವಿಗೂ ಕೈಗೊಂಡ ಕ್ರಮಗಳು ಯಾವುವು?

ಆ) 3 ಸಮಿತಿಗಳ ವರದಿಗಳಲ್ಲಿ ಸವಿಸ್ತಾರ ವಿವರಗಳನ್ನು ಸಂಗ್ರಹಿಸಿ ವೈಜ್ಞಾನಿಕವಾಗಿ ಶಿಫಾರಸ್ ಮಾಡಿದಂತಹ ಹೊಸ ಜಿಲ್ಲೆಗಳು ಯಾವುವು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ರಾಜ್ಯದ ಜಿಲ್ಲೆ ಹಾಗೂ ತಾಲ್ಲೂಕುಗಳ ಪುನರ್ ವಿಂಗಡಣೆ ಬಗ್ಗೆ ರಚಿಸಲಾಗಿದ್ದ ಶ್ರೀ ವಾಸುದೇವರಾವ್, ಶ್ರೀ ಹುಂಡೇಕರ್ ಹಾಗೂ ಶ್ರೀ ಗದ್ದೀಗೌಡರ್ ಸಮಿತಿಗಳು ವರದಿ ಸಲ್ಲಿಸಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ವಿಷಯವು ಇನ್ನೂ ಸರ್ಕಾರದ ಪರಿಶೀಲನೆಯಲ್ಲಿದೆ.

ತೋಟಗಾರಿಕೆ ಅಧಿಕಾರಿಗಳ ಕುರಿತು

2389 - ಶ್ರೀ ವಿಶ್ವೇಶ್ವರ ಹೆಗ್ಗಡೆ (ಅಂಕೋಲ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಿರ್ಸಿಯಲ್ಲಿರುವ ಜಿಲ್ಲಾ ತೋಟಗಾರಿಕೆ ಇಲಾಖೆಯಲ್ಲಿರುವ ಅಧಿಕಾರಿಗಳ ಸಂಖ್ಯೆ ಎಷ್ಟು?

ಆ) ಅಧಿಕಾರಿಗಳು ಯಾವ ಯಾವ ಹುದ್ದೆಗಳಲ್ಲಿ ಇರುವರು?

ಇ) ಜಿಲ್ಲಾ ತೋಟಗಾರಿಕೆ ಅಧಿಕಾರಿಗಳ ಸಮನ್ವಯ ಇಲ್ಲದೇ ಇರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದ ಕೈಗೊಂಡ ಕ್ರಮಗಳೇನು?

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :

ಅ) 3 (ಮೂರು)

ಆ) 1) ತೋಟಗಾರಿಕೆ ಉಪ ನಿರ್ದೇಶಕರು (ಜಿ.ಪಂ) ಸಿರ್ಸಿ

2) ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ) ಸಿರ್ಸಿ.

3) ಕೇಂದ್ರ ಕಛೇರಿ ಸಹಾಯಕರು (ಹಿಸತೋನಿ) ಹುದ್ದೆಗೆ ಸಮಾನಾಂತರ ತೋಟಗಾರಿಕೆ ಉಪ ನಿರ್ದೇಶಕರು (ಜಿಪ) ಸಿರ್ಸಿ ಇವರ ಕಛೇರಿ.

ಇ) ಹೌದು.

ತೋಟಗಾರಿಕೆ ಉಪ ನಿರ್ದೇಶಕರು (ಜಿ.ಪಂ) ಸಿರ್ಸಿ ಇವರು ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ ಜಿಲ್ಲೆಯ ಮೇಲಾಧಿಕಾರಿಗಳಾಗಿರುತ್ತಾರೆ.. ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಹಾಗೂ ಕೇಂದ್ರ ಕಛೇರಿ ಸಹಾಯಕರು (ತೋ.ಉ.ಸಿ ಇವರ ಕಛೇರಿ) ಇವರ ಹುದ್ದೆಗಳು ಸಮಾನಾಂತರ ಶ್ರೇಣಿಯಿಂದ ಕೂಡಿರುತ್ತದೆ. ಸಿರ್ಸಿಯಲ್ಲಿನ ತೋಟಗಾರಿಕೆ ಉಪ ನಿರ್ದೇಶಕರು (ಜಿಲ್ಲಾ ಪಂಚಾಯಿತಿ) ಹುದ್ದೆಯು ಅಲ್ಲಿದ್ದ ಅಧಿಕಾರಿಗಳು ನಿವೃತ್ತಿ ಹೊಂದಿದ್ದರಿಂದ ಖಾಲಿಯಾಗಿದ್ದಿತು. ಹಾಗೆ ಖಾಲಿಯಾಗಿದ್ದ ಹುದ್ದೆಗೆ ಅದೇ ಕಛೇರಿಯಲ್ಲ ಕೇಂದ್ರ ಕಛೇರಿ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದವರನ್ನು ಪ್ರಭಾರದ ಮೇಲೆ ನೇಮಿಸಿ ಕೊಳ್ಳಲಾಯಿತು. ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಇತರೆ ಅಧಿಕಾರಿಗಳು ಜೇಷ್ಠತೆಯಲ್ಲಿ ಕಿರಿಯರಾದವರಿಗೆ ಹೆಚ್ಚಿನ ಹುದ್ದೆಯ ಪ್ರಭಾರೆಯನ್ನು ವಹಿಸಿಕೊಟ್ಟಿರುವುದರಿಂದ ಜೇಷ್ಠತೆಯಲ್ಲಿ ಹಿರಿಯರಾದವರಿಗೆ ಕಿರಿಯರ ಕೈಕೆಳಗೆ ಕಾರ್ಯನಿರ್ವಹಿಸಬೇಕಾಗಿರುವುದಾಗಿ ತಿಳಿಯಪಡಿಸಿ ಅವರ ಬದಲಿಗೆ ಜಿಲ್ಲೆಯಲ್ಲಿ ಹಿರಿಯರಾಗಿ ಸೇವೆ ಸಲ್ಲಿಸುತ್ತಿರುವವರಿಗೆ ಪ್ರಭಾರೆಯನ್ನು ವಹಿಸಿಕೊಡುವಂತೆ ತಾಲ್ಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಕರುಗಳು ವಿನಂತಿಸಿದ್ದರು. ಅದರಂತೆ ಈಗ ಜಿಲ್ಲೆಯಲ್ಲಿ ಹಿರಿಯರಾಗಿ ಕಾರ್ಯಹಿಸುತ್ತಿರುವವರಿಗೆ ತೋಟಗಾರಿಕೆ ಉಪ ನಿರ್ದೇಶಕರ ಹುದ್ದೆಯ ಕಾರ್ಯಭಾರ ನಿರ್ವಹಿಸುವ ವ್ಯವಸ್ಥೆ ಮಾಡಲಾಗಿದೆ.

ವ್ಯವಸಾಯ ಮಾರುಕಟ್ಟೆಯ ತೂಕದವರ ನೇಮಕಾತಿ ಹಾಗೂ ವೇತನ ಕುರಿತು.

2365 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ನಿಯಂತ್ರಿತ ಮಾರುಕಟ್ಟೆಗಳಲ್ಲಿ ಕೆಲಸ ಮಾಡುತ್ತಿರುವ ಒಟ್ಟು ತೂಕದವರು (ವೇಮನ್) ಎಷ್ಟು ಜನ ಇದ್ದಾರೆ? (ಮಾರುಕಟ್ಟೆವಾರು ವಿವರ ನೀಡುವುದು. ಹಾಗೂ ಇವರಿಗೆ ಯಾವ ದರದಲ್ಲಿ ವೇತನ ನೀಡಲಾಗುತ್ತಿದೆ ವಿವರ ಒದಗಿಸುವುದು).

ಆ) ಈ ತೂಕದವರಿಗೆ ಕನಿಷ್ಟವೇತನ ಜಾರಿ ಮಾಡಲು ಯಾವುದಾದರೂ ನ್ಯಾಯಾಲಯ ಆದೇಶ ಜಾರಿ ಮಾಡಿದೆಯೇ.

ಇ) ಕರ್ನಾಟಕ • ಉಚ್ಚನ್ಯಾಯಾಲಯ, ಕಾರ್ಮಿಕ ಇಲಾಖೆಗೆ ತಿಂಗಳಿಗೆ ರೂ. 1200-00 ಗಳಂತೆ ಕನಿಷ್ಟ ವೇತನ ನೀಡಬೇಕೆಂದು ಆದೇಶ ನೀಡಿದ್ದರೂ ಈ ಆದೇಶವನ್ನು ಜಾರಿಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ.

ಈ) ಕರ್ನಾಟಕ ಉಚ್ಚನ್ಯಾಯಾಲಯ ರಿಟ್ ಅರ್ಜಿ ಸಂಖ್ಯೆ : 25421 : 95 ದಿನಾಂಕ 18-8-95 ರಂತೆ ನೀಡಿರುವ ಆದೇಶದಂತೆ ಕನಿಷ್ಟವೇತನ ಜಾರಿಗೊಳಿಸಲು ಆದೇಶ ಯಾವಾಗ ಜಾರಿಗೊಳಿಸುವುದು ?

ಶ್ರೀ ಬಿ.ಬಿ. ನಿಂಗಯ್ಯ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ರಾಜ್ಯದ ಒಟ್ಟು 124 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ 1081 ಲೈಸನ್ಸ್ ಪಡೆದ ತೂಕದವರು ಕಾರ್ಯನಿರ್ವಹಿಸುತ್ತಿದ್ದಾರೆ.

(ವಿವರ ಲಗತ್ತಿಸಲಾಗಿದೆ)

ಆ) ಹೌದು

ಇ) ಕರ್ನಾಟಕ ಉಚ್ಚನ್ಯಾಯಾಲಯವು ಯಾವುದೇ ಆದೇಶ ನೀಡಿರುವುದಿಲ್ಲ. ಕಾರ್ಮಿಕ ಅಧಿಕಾರಿ ಹಾಗೂ ಕನಿಷ್ಟ ವೇತನ ಕಾಯ್ದೆ 1948ರಡಿ ಹಕ್ಕು ಸಾಧನೆ ಪ್ರಾಧಿಕಾರ ಇವರು ಮಾತ್ರ ದಿನಾಂಕ 14-6-95ರ ಆದೇಶದಲ್ಲಿ ತೂಕದವರಿಗೆ ಕನಿಷ್ಟ ವೇತನವನ್ನು ಕನಿಷ್ಟವೇತನ ಕಾಯ್ದೆ 1948ರಡಿಯಲ್ಲಿ ಪಾವತಿ ಮಾಡುವಂತೆ ತಿಳಿಸಿರುತ್ತಾರೆ.

ಕರ್ನಾಟಕ ಉಚ್ಚನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 25421 : 95ರಲ್ಲಿ ದಿ. 18-8-95ರಂದು ಕಾರ್ಮಿಕ ಅಧಿಕಾರಿಯವರ ದಿನಾಂಕ 14-8-95ರ ಆದೇಶವನ್ನು ಜಾರಿಗೊಳಿಸುವುದಕ್ಕೆ ತಡೆಯಾಜ್ಞೆ ನೀಡಿರುತ್ತದೆ. ಆದ್ದರಿಂದ ಸದ್ಯಕ್ಕೆ ವೇತನ ಜಾರಿಗೊಳಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ತೂಕದವರಿಗೆ ಪ್ರತಿ ತಿಂಗಳೂ ದೊರೆಯುವ ತೂಕದ ದರಗಳ ವಿವರ ತೋರಿಸುವ ತಃಖ್ತೆ :

ಪ್ರತಿ ತಿಂಗಳೂ ರೂ.1000 ಕ್ಕಿಂತ ಹೆಚ್ಚಿನ ತೂಕದ ಶುಲ್ಕ ದೊರೆಯುವವರ ವಿವರ		ಪ್ರತಿ ತಿಂಗಳು ರೂ.1000 ಕ್ಕಿಂತ ಕಡಿಮೆ ತೂಕದ ಶುಲ್ಕ ದೊರೆಯುವವರ ವಿವರ		ತೂಕದವರು ಇಲ್ಲದೆ ಇರುವ ಮಾರುಕಟ್ಟೆ ಸಮಿತಿಗಳು	
ಮಾರುಕಟ್ಟೆ ಸಮಿತಿ	ತೂಕದವರ ಸಂಖ್ಯೆ	ಮಾರುಕಟ್ಟೆ ಸಮಿತಿ	ತೂಕದವರ ಸಂಖ್ಯೆ		
1	2	3	4	5	
ಚಿಂತಾಮಣಿ	4	ಬೆಂಗಳೂರು	96	1)	ಹಣ್ಣು ಮತ್ತು ತರಕಾರಿಗಳ ವಿಶೇಷ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ. ಬೆಂಗಳೂರು
ಶಿವಮೊಗ್ಗ	18	ಚಿತ್ರದುರ್ಗ	26	2)	ದೊಡ್ಡಬಳ್ಳಾಪುರ
		ಕೋಲಾರ (ತೂಕದ ಶುಲ್ಕ ಕೊಡುತ್ತಿಲ್ಲ)	1	3)	ಚಳ್ಳಕೆರೆ
				4)	ದಾವಣಗೆರೆ (ಸಮಿತಿಯ ನೌಕರರ ಉಸ್ತುವಾರಿ
		ಚಿಕ್ಕಬಳ್ಳಾಪುರ	5		ಯಲ್ಲಿ ತೂಕ ಮಾಡಲಾಗುವುದು)
		ಬಂಗಾರಪೇಟೆ	10	5)	ಹರಿಹರ
		ತುಮಕೂರು	9	6)	ಹಿರಿಯೂರು
		ತುರುವೇಕೆರೆ	2	7)	ಮಾಲೂರು
		ಹುಳಿಯೂರು	2	8)	ಗೌರಿಬಿದನೂರು
		ತಿಪಟೂರು	80	9)	ಮುಳಬಾಗಿಲು

		ಸಾಗರ	19	10)	ಶ್ರೀನಿವಾಸಪುರ
		ಭದ್ರಾವತಿ	1	11)	ಚನ್ನಗಿರಿ
		ಹೊಸದುರ್ಗ	1	12)	ಶಿಕಾರಿಪುರ
		(ತೂಕದ ಶುಲ್ಕವನ್ನು		13)	ಹೊನ್ನಾಳಿ
		ನೇರವಾಗಿ		14)	ಗುಬ್ಬಿ
		ವ್ಯಾಪಾರಿಗಳಿಂದ		15)	ಚಿಕ್ಕನಾಯಕನಹಳ್ಳಿ
		ಪಡೆಯುವುದು)		16)	ಕುಣಿಗಲ್
				17)	ಮಧುಗಿರಿ
				18)	ಪಾವಗಡ
		-		19)	ಶಿರಾ
				20)	ಚನ್ನಪಟ್ಟಣ
ಒಟ್ಟು	22	ಒಟ್ಟು	252		

22+252 -274

ಮಂಗಳೂರು	15	ಮೈಸೂರು	57	1)	ಕೊಳ್ಳೇಗಾಲ
		ಹಾಸನ	12	2)	ಚಾಮರಾಜನಗರ
		ಅರಸೀಕೆರೆ	38	3)	ಕೆ.ಆರ್. ನಗರ
		ಕಡೂರು	15	4)	ನಂಜನಗೂಡು
		ಚನ್ನರಾಯಪಟ್ಟಣ	17	5)	ಹುಣಸೂರು
				6)	ಪಿರಿಯಾಪಟ್ಟಣ
				7)	ಟಿ. ನರಸೀಪುರ
				8)	ಹೊಳೇನರಸೀಪುರ
				9)	ಸಕಲೇಶಪುರ
				10)	ಮಡಿಕೇರಿ
				11)	ಕುಶಾಲನಗರ
				12)	ಗೋಣಿಕೊಪ್ಪಲ್
				13)	ಪುತ್ತೂರು
				14)	ಉಡುಪಿ
				15)	ಚಿಕ್ಕಮಗಳೂರು
				16)	ತರೀಕೆರೆ
				17)	ಮಂಡ್ಯ
				18)	ಮದ್ದೂರು
				19)	ಕೆ.ಆರ್. ಪೇಟೆ
ಒಟ್ಟು	15	ಒಟ್ಟು	139		

15 + 139 - 154

ಬಳ್ಳಾರಿ	13	ಗುಲ್ಬರ್ಗಾ	55	1)	ಹುಮ್ನಾಬಾದ್
ಹಗರಿಬೊಮ್ಮನಹಳ್ಳಿ	2	ಸುರಪುರ	10		
		ಶಹಾಪುರ	4		

		ಯಾದಗಿರಿ	13
		ಚಿತ್ತಾಪುರ	7
		ಸೇಡಂ	1
		ಬೀದರ್	32
		ಬಸವಕಲ್ಯಾಣ	2
		ಔರಾದ್	2
		ಭಾಲ್ಕಿ	5
		ರಾಯಚೂರು	100
		ಗಂಗಾವತಿ	44
		ಸಿಂಧನೂರು	18
		ಕೊಪ್ಪಲ್	12
		ಕುಷ್ಟಗಿ	3
		ಯಲ್ಬುರ್ಗಾ	11
		ಮಾನ್ವಿ	2
		ಲಿಂಗಸುಗೂರು	5
		ಸಿರಗುಪ್ಪ	2
		ಕೊಟ್ಟೂರು	5
		ಹಡಗಲಿ	2
		ಹೊಸಪೇಟೆ	2
ಒಟ್ಟು	15	ಒಟ್ಟು	337

15 + 337 - 352

ಅಣ್ಣಿಗೇರಿ	2	ನರಗುಂದ	5	1)	ನಂದಗಡ
ಗದಗ್	36	ಹಿರೇಕೆರೂರು	4	2)	ಕುಡಚಿ
ಸವಣೂರು	1	ಮುಂಡರಗಿ	4	3)	ಶಿರಸಿ
ಬೆಳಗಾಂ	13	ಹಾನಗಲ್	1	4)	ಕುಮಟಾ
ಬಿಜಾಪುರ	28	ಶಿಗ್ಗಾಂವ್	2	5)	ಯಲ್ಲಾಪುರ
		ಕುಂದಗೋಳ್	3	6)	ಹೊನ್ನಾವರ
		ಹೊಳೇಆಲೂರು	4	7)	ಕಾರವಾರ
		ಧಾರವಾಡ	10		
		ಲಕ್ಷ್ಮೇಶ್ವರ	5		
		ರಾಣೆಬೆನ್ನೂರು	25		
		ಹಾವೇರಿ	4		
		ಹುಬ್ಬಳ್ಳಿ	53		
		ಬ್ಯಾಡಗಿ	21		
		ಸಂಕೇಶ್ವರ	1		
		ಸವದತ್ತಿ	7		
		ರಾಮದುರ್ಗ	5		

		ಬೈಲಹೊಂಗಲ	9
		ಅಥಣಿ	3
		ನಿಪ್ಪಾಣಿ	1
		ಗೋಕಾಕ್	5
		ಹಳಿಯಾಳ	1
		ಸಿದ್ದಾಪುರ	3
		ಜಮಖಂಡಿ	4
		ತಾಳಿಕೋಟೆ	4
		ಮಾಹಲಿಂಗಪುರ	18
		ಹುನಗುಂದ	1
		ಭಾಗಲಕೋಟೆ	17
		ಬಾದಾಮಿ	1
ಒಟ್ಟು	80	ಒಟ್ಟು	221

80 + 221 - 301

ಕೈಗಾರಿಕಾ ಸಹಕಾರ ಸಂಘಗಳ ಬಗ್ಗೆ

2364 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) *ಸಹಕಾರ ಸಂಘಗಳನ್ನು ಕೈಗಾರಿಕಾ ಸಹಕಾರ ಸಂಘಗಳು ಮತ್ತು ಕೈಗಾರಿಕಾ ಹೊರತುಪಡಿಸಿದ ಸಹಕಾರ ಸಂಘಗಳೆಂದು ಯಾವ ದಿನಾಂಕದಿಂದ ವಿಂಗಡಿಸಲಾಗಿದೆ.*

ಆ) *ರಾಜ್ಯದಲ್ಲಿರುವ ಕೈಗಾರಿಕಾ ಸಹಕಾರ ಸಂಘಗಳೆಷ್ಟು. ಇದರ ಉಸ್ತುವಾರಿ ನೋಡಿಕೊಳ್ಳುವ ಇಲಾಖೆಯಾವುದು.*

ಇ) *ರಾಜ್ಯದಲ್ಲಿ ಕೈಗಾರಿಕಾ ಸಹಕಾರ ಸಂಘಗಳೆಂದು ಬೇರ್ಪಡಿಸಿ. ಕೈಗಾರಿಕಾ ಇಲಾಖೆ ವರ್ಗಾಯಿಸಿದ್ದರು ಇನ್ನೂ ಅನೇಕ ಕೈಗಾರಿಕಾ ಸಹಕಾರ ಸಂಘಗಳ ಸಹಕಾರ ಇಲಾಖೆಯ ಅಧೀನದಲ್ಲಿ ಎಷ್ಟಿವೇ.*

ಈ) *ದಾವಣಗೆರೆ ಆಟೋಮೊಬೈಲ್ ಕೈಗಾರಿಕಾ ಸಹಕಾರ ಸಂಘವು ಕೈಗಾರಿಕಾ ಇಲಾಖೆಗೆ ವರ್ಗಾಯಿಸಿದ್ದರೂ ಸಹಕಾರ ಇಲಾಖೆಯ ಅಧೀನದಲ್ಲಿರಲು ಕಾರಣವೇನು.*

ಉ) *ಬೈಲಾದಲ್ಲಿ ಕಾರ್ಯದರ್ಶಿಯ ಹುದ್ದೆಯನ್ನು ಸರ್ಕಾರದ ಪ್ರತಿನಿಧಿ ಎಂದು ತೀರ್ಮಾನಿಸದೆ ಇದ್ದರೂ ಆದರೂ ಇಲಾಖೆಯ ಪ್ರಭಾರ ಕಾರ್ಯದರ್ಶಿಯಾಗಿ ನೇಮಿಸಿರುವ ಉದ್ದೇಶವೇನು ?*

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :

ಅ) ಸಹಕಾರ ಸಂಘಗಳನ್ನು ನೋಂದಣಿ ಮಾಡುವಾಗಲೇ ಕೈಗಾರಿಕಾ ಸಹಕಾರಿ ಸಂಘಗಳು ಮತ್ತು ಇತರೆ ಸಂಘಗಳೆಂದು ಗುರುತಿಸಲಾಗುವುದು. ಸಹಕಾರ ಸಂಘಗಳ ಕಾಯ್ದೆ ಮತ್ತು ನಿಬಂಧನೆಗಳ ಅಧಿಕಾರವನ್ನು ಈ ಕೆಳಗಿನ ಸರ್ಕಾರದ ಅಧಿಸೂಚನೆಗಳಂತೆ ವಿವಿಧ ಅಧಿಕಾರಿಗಳಿಗೆ ಪ್ರತ್ಯಾಯೋಜನೆ ಮಾಡಲಾಗಿದೆ. (ಡೆಲಿಗೇಷನ್ ಆಫ್ ಪವರ್ಸ್) ಸಿಎಂಡಬ್ಲ್ಯು 243 ಸಿಎಲ್‌ಎಂ 91 ದಿ. 4-5-94.

ಇ) 1401 ಕೈಗಾರಿಕಾ ಸಂಘಗಳಿವೆ

ಅಧಿಕಾರ ಪ್ರತ್ಯಾಯೋಜನೆಯು :

ಜವಳಿ, ಆಯುಕ್ತರು, ಸಕ್ಕರೆ ನಿರ್ದೇಶಕರು, ಅಪರ ನಿರ್ದೇಶಕರು (ಕೈಗಾರಿಕೆ ಮತ್ತು ವಾಣಿಜ್ಯ) ಹಾಗೂ ಪದನಿಮಿತ್ತ ಅಪರ ನಿಬಂಧಕರು, ಕೈಗಾರಿಕಾ ಸಹಕಾರ ಸಂಘಗಳು ಮತ್ತು ಸಹಕಾರ ಇಲಾಖೆಯ ಅಧಿಕಾರಿಗಳಿಗೆ ಇರುತ್ತದೆ.

ಅಪರ ನಿರ್ದೇಶಕರು ಕೈಗಾರಿಕೆ ಮತ್ತು ಮಾರಾಟ) ಹಾಗೂ ಪದನಿಮಿತ್ತ ಅಪರ ನಿಬಂಧಕರು ಕೈಗಾರಿಕಾ ಸಹಕಾರ ಸಂಘಗಳು	-	ಖಾದಿ ಮತ್ತು ಗ್ರಾಮೋದ್ಯೋಗ ಹ್ಯಾಂಡಿಕ್ರಾಫ್ಟ್ ಸಹಕಾರ ಸಂಘಗಳು ಹಾರ್ಟಿಜನ್ ಸಹಕಾರ ಸಂಘಗಳು, ಬೇಡಿ ಕಾರ್ಮಿಕರ ಸಹಕಾರ ಸಂಘಗಳು ಮತ್ತು ಕಾಯರ್ ಸಹಕಾರ ಸಂಘಗಳು
ಜವಳಿ ಅಯುಕ್ತರು	-	ನೂಲಿನ ಗಿರಣಿಗಳು ಮತ್ತು ನೇಕಾರರ ಸಹಕಾರ ಸಂಘಗಳು
ಸಕ್ಕರೆ ನಿರ್ದೇಶಕರು	-	ಸಹಕಾರ ಸಕ್ಕರೆ ಕಾರ್ಖಾನೆಗಳು

ಮೇಲೆ ವಿವರಿಸಿರುವ ಸಹಕಾರ ಸಂಘಗಳನ್ನು ಹೊರತುಪಡಿಸಿ, 553 (ಐದು ನೂರು ಐವತ್ತಮೂರು) ಸಹಕಾರ ಸಂಘಗಳು ಸಹಕಾರ ಇಲಾಖೆಯ ವ್ಯಾಪ್ತಿಯಲ್ಲಿ ಮುಂದುವರಿದಿವೆ.

ಪ್ರಶ್ನೆ 'ಇ' ನಲ್ಲಿ ಈಗಾಗಲೇ ಬೇರೆ ಬೇರೆ ಅಧಿಕಾರಿಗಳಿಗೆ ಸಹಕಾರ ಸಂಘಗಳ ಕಾಯ್ದೆ ಮತ್ತು ನಿಬಂಧನೆಗಳನ್ನು ಅಧಿಕಾರ ಪ್ರತ್ಯಾಯೋಜನೆ ಮಾಡಿರುವುದನ್ನು ವಿವರಿಸಲಾಗಿದೆ.

ವಿವರಿಸಿರುವ ಸಂಘಗಳನ್ನು ಹೊರತುಪಡಿಸಿ, ಇತರೆ ಸಹಕಾರ ಸಂಘಗಳು ಸಹಕಾರ ಇಲಾಖೆಯ ವ್ಯಾಪ್ತಿಯಲ್ಲಿಯೇ ಉಳಿದುಕೊಂಡಿದೆ. ಹೀಗೆ ಉಳಿದುಕೊಂಡಿರುವ ಸಂಘಗಳ ಪೈಕಿ ದಾವಣಗೆರೆ ಆಟೋಮೊಬೈಲ್ ಕೈಗಾರಿಕಾ ಸಹಕಾರ ಸಂಘ ಒಂದು.

ಈ ಸಂಘದ ಆಡಳಿತ ಮಂಡಳಿಯನ್ನು ಸಹಕಾರ ಸಂಘಗಳ ಕಾಯ್ದೆ ಕಲಂ 30 ಎ ಪ್ರಕಾರ ರದ್ದುಪಡಿಸಿ ವಿಶೇಷಾಧಿಕಾರಿಯನ್ನು ನೇಮಿಸಿದ್ದಾಗ, ಈ ಸಂಘದ ಕಾರ್ಯ ಚಟುವಟಿಕೆಗಳನ್ನು ನೋಡಿಕೊಳ್ಳಲು ಇಲಾಖೆಯ ಸಹಕಾರಿ ಅಭಿವೃದ್ಧಿ ಅಧಿಕಾರಿಯ ಶ್ರೇಣಿಯ ಒಬ್ಬರನ್ನು ಈ ಸಂಘದ ಹುದ್ದೆಯ ಅಧಿಕ ಪ್ರಭಾರದಲ್ಲಿರಿಸಲಾಗಿತ್ತು. ಈಗ ದಿನಾಂಕ 23-8-94 ರಿಂದ ದಾವಣಗೆರೆ ಒಂದನೇ ವೃತ್ತದ ಸಹಕಾರಿ ವಿಸ್ತರಣಾಧಿಕಾರಿಯವರನ್ನು ಅಧಿಕ ಪ್ರಭಾರದಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಆಡಳಿತ ಮಂಡಳಿ ಚುನಾವಣೆಯಾದ ನಂತರವೂ ಈ ವ್ಯವಸ್ಥೆ ಮುಂದುವರಿದಿದೆ.

ಗೋಕಾಕ್ ತಾಲ್ಲೂಕಿನಲ್ಲಿ ಕಂದಾಯ ಪಡ ಜಮೀನಿನ ಪರಭಾರೆ,

2059 - ಶ್ರೀ ಚಂದ್ರಶೇಖರ ನಾಯಕ್ (ಗೋಕಾಕ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೋಕಾಕ ನಗರ ಹಾಗೂ ತಾಲ್ಲೂಕಿನಲ್ಲಿರುವ ಒಟ್ಟು ಕಂದಾಯ ಪಡಾ ಜಮೀನು ಎಷ್ಟು?

ಆ) ಗೋಕಾಕ ನಗರದಲ್ಲಿರುವ ಕಂದಾಯ ನಿರುಪಯೋಗಿ ಜಮಿನನ್ನು 1995 ಜನವರಿಯಿಂದ ಪರಭಾರೆ ಮಾಡಿದ ಒಟ್ಟು ಜಮೀನು ಎಷ್ಟು.

ಇ) ಗೋಕಾಕ ನಗರದ ಕಾಲೇಜೊಂದಕ್ಕೆ ಹೊಂದಿಕೊಂಡಂತೆ ಇರುವ 9 ಎಕರೆ 15 ಗುಂಟೆ ಜಮೀನನ್ನು ಶಿಕ್ಷಣ ಸಂಸ್ಥೆಗೆ ವಹಿಸಿಕೊಟ್ಟದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಈ) ಸದರೀ ಜಮಿನನ್ನು ಇಷ್ಟು ದೊಡ್ಡ ಮೊತ್ತದಲ್ಲಿ ಒಮ್ಮೆಲೇ ಒಂದು ಸಂಸ್ಥೆಗೆ ನೀಡಲು ತಹಶೀಲ್ದಾರರಿಗೆ ಅಧಿಕಾರವಿದೆಯೇ.

ಉ) ಸರ್ಕಾರದ ಅನೇಕ ಕಛೇರಿಗಳಿಗೆ ಸ್ಥಳ ಒದಗಿಸಲು ಸ್ಥಳ ಇಲ್ಲದಿರುವಾಗ ಹೀಗೆ ಒದಗಿಸಿದ್ದು ನ್ಯಾಯವೇ?

ಊ) ಈ ವಿಷಯದಲ್ಲಿ ಜಮೀನನ್ನು ಶಿಕ್ಷಣ ಸಂಸ್ಥೆಗೆ ಮಂಜೂರು ಮಾಡಲು ಸರ್ಕಾರ ಆದೇಶ ವಿತ್ತಿದೆಯೇ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಗೋಕಾಕ ನಗರ ಹಾಗೂ ತಾಲ್ಲೋಕಿನಲ್ಲಿ ಯಾವುದೇ ಕಂದಾಯ ಪಡ ಜಮೀನು ಇರುವುದಿಲ್ಲ.

ಆ) ಜನವರಿ 1995ರಿಂದ ಯಾವುದೇ ಕಂದಾಯ ನಿರುಪಯೋಗಿ ಪಡ ಜಮೀನನ್ನು ಮಂಜೂರು ಮಾಡಿರುವುದಿಲ್ಲ.

ಇ) ಯಾವುದೇ ಶಿಕ್ಷಣ ಸಂಸ್ಥೆಗೆ ಜಮೀನು ಮಂಜೂರು ಮಾಡಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಉದ್ಭವಿಸುವುದಿಲ್ಲ.

ಗೋಕಾಕ್ ತಾಲ್ಲೂಕಿನಲ್ಲಿ ಬಸ್ಸಿನ ಸೌಕರ್ಯ ಕುರಿತು

2060 - ಶ್ರೀ ಚಂದ್ರಶೇಖರ ನಾಯಕ್ (ಗೋಕಾಕ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೋಕಾಕ್ ಡಿಪೋದಲ್ಲಿರುವ ಒಟ್ಟು ಬಸ್ಸುಗಳ ಸಂಖ್ಯೆ ಎಷ್ಟು?

ಆ) ಅವುಗಳಲ್ಲಿ ಓಡುತ್ತಿರುವ ಮತ್ತು ರಿಪೇರಿಗೆ ಒಳಪಟ್ಟ ಬಸ್ಸುಗಳ ಸಂಖ್ಯೆ ಎಷ್ಟು?

ಇ) ಗೋಕಾಕ ತಾಲ್ಲೂಕಿನ ಗುಜನಾಳ ಗಡನೆಲಗಂಟಿ ಕಡಬಗಟ್ಟಿ ಮುಂತಾದ ಹಳ್ಳಿಗಳಿಗೆ ಬ್ರಿಟೀಷರ ಕಾಲದಿಂದ ಇದುವರೆಗೆ ಬಸ್‌ನ ಸೌಕರ್ಯ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂಡಿದೆಯೇ.

ಈ) ಹಾಗಾದರೆ ಒಳ ಪ್ರದೇಶವಾದ 8 ರಿಂದ 10 ಕಿ.ಮೀ ಒಳಗಿರುವ ಸದರಿ ಹಳ್ಳಿಗಳಿಗೆ ಬಸ್‌ನ ಸೌಕರ್ಯ ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಉ) ಗೋಕಾಕ ನಗರದಿಂದ ಬಸ್ ನಿಲ್ದಾಣವನ್ನು ನಗರದ ಹೊರ ಪ್ರದೇಶಕ್ಕೆ ಸ್ಥಳಾಂತರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ಬೆಳಗಾವಿ ವಿಭಾಗದ ಗೋಕಾಕ್ ಡಿಪೋ ದಿನಾಂಕ 31-8-1995ಕ್ಕೆ ಸರಿಯಾಗಿ 93 ವಾಹನಗಳನ್ನು ಹೊಂದಿದೆ.

ಆ) ಈ ವಾಹನಗಳಲ್ಲಿ 90 ವಾಹನಗಳು ಮಾರ್ಗದ ಮೇಲೆ ಓಡುತ್ತಿದ್ದು 3 ವಾಹನಗಳು ದುರಸ್ತಿಯಲ್ಲಿವೆ.

ಇ) ಈ ಹಳ್ಳಿಗಳಿಗೆ ವಾಹನ ಯೋಗ್ಯ ರಸ್ತೆಗಳಿಲ್ಲದಿರುವುದರಿಂದ ಸಾರಿಗೆ ಸೌಕರ್ಯವನ್ನು ಕಲ್ಪಿಸಲಾಗಿರುವುದಿಲ್ಲ.

ಈ) ಗಡ, ಗುಜಾಳ ಮತ್ತು ಕಡಬಗಟ್ಟಿ ಹಳ್ಳಿಗಳಿಗೆ ಆಗಸ್ಟ್ 1995ರಲ್ಲಿ ವಾಹನ ಯೋಗ್ಯ ರಸ್ತೆಗಳನ್ನು ನಿರ್ಮಿಸಲಾಗಿದೆ. ಈ ಹಳ್ಳಿಗಳಿಗೆ ಸಾರಿಗೆ ಸೌಕರ್ಯ

ಕಲ್ಪಿಸಲು ಕ್ರಮ ತೆಗೆದುಕೊಳ್ಳಲಾಗುವುದು. ನೆಲಗಂಟಿ ಹಳ್ಳಿಗೆ ವಾಹನ ಯೋಗ್ಯ ರಸ್ತೆಯಿರುವುದಿಲ್ಲ,

ಉ) ಹಾಲಿ, ಬಸ್ ನಿಲ್ದಾಣವನ್ನು ಸ್ಥಳಾಂತರಿಸಲು ಯಾವುದೇ ಪ್ರಸ್ತಾವನೆಯಿರುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಅಧ್ಯಕ್ಷರು : ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಸಂಬಂಧ ಪಟ್ಟ ಉತ್ತರಗಳನ್ನು ಮಂಡಿಸಲಾಯಿತು.

ಸಭೆಯ ಮುಂದಿಡಲಾಗುವ ಕಾಗದಪತ್ರಗಳು

I ಶ್ರೀ ಎಂ.ಸಿ.ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾಗಳ ಸಚಿವರು): ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಮಂತ್ರಿ)ರವರ ಪರವಾಗಿ :

1976ರ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮದ 42(3)ನೇ ಕಲಮಿನ ಮೇರೆಗೆ :

1992-93ನೇ ಸಾಲಿನ ಬೆಂಗಳೂರು ವಿಶ್ವವಿದ್ಯಾನಿಲಯದ ಲೆಕ್ಕ ಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

II. ಶ್ರೀ ಎ.ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಶ್ರೀ ಎಂ.ಪಿ. ಪ್ರಾಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿ) ರವರ ಪರವಾಗಿ :

1993ರ ಕರ್ನಾಟಕ ಪಂಚಾಯತ್ ರಾಜ್ಅಧಿನಿಯಮದ 262(3)ನೇ ಕಲಮಿನ ಮೇರೆಗೆ :

1992-93ನೇ ಸಾಲಿನ ಕೋಲಾರ ಜಿಲ್ಲಾ ಪರಿಷತ್ತಿನ ವಾರ್ಷಿಕ ಲೆಕ್ಕಗಳು ಹಾಗೂ ಲೆಕ್ಕ ಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

III. ಶ್ರಿ ವೈಜನಾಥ ಪಾಟೀಲ್ (ನಗಾರಾಭಿವೃದ್ಧಿ ಮಂತ್ರಿ) ಅವರು :

1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮದ ೪೮(೫)ನೇ ಕಲಮಿನ ಮೇರೆಗೆ

1) 1992-93ನೇ ಸಾಲಿನ ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕ ತನಿಖಾ ವರದಿ;

2) 1993-94ನೇ ಸಾಲಿನ ಹಾಸನ ನಗಾರಾಭಿವೃದ್ಧಿ ಪ್ರಾಧಿಕಾರದ ಲೆಕ್ಕ ತಪಾಸಣಾ ವರದಿ;

3) 1986-87 ಹಾಗೂ 1987-88ನೇ ಸಾಲುಗಳ ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕ ತಪಾಸಣಾ ವರದಿಗಳು;

4) 1993-94ನೇ ಸಾಲಿನ ಚಿಕ್ಕ ಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕಪರಿಶೋಧನಾ ವರದಿ;

5) 1986-87, 1987-88, 1.4.88 ರಿಂದ 17.6.88ರವರಗೆ ಹಾಗೂ 1993-94ನೇ ಸಾಲುಗಳ ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕ ಪರಿಶೋಧನಾ ವರದಿಗಳು;

1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮದ 49ನೇ ಕಲಮಿನ ಮೇರೆಗೆ:

6) 1994-95ನೇ ಸಾಲಿನ ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿ:

7) 1994-95ನೇ ಸಾಲಿನ ವಿಜಾಪುರ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿ:

8) 1994-95 ನೇ ಸಾಲಿನ ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿ;

9) 1986-87 ಹಾಗೂ 1987-88ನೇ ಸಾಲುಗಳ ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿಗಳು;

1980ರ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮದ 25ನೇ ಕಲಮಿನ ಮೇರೆಗೆ:

10) 1994-95 ನೇ ಸಾಲಿನ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಕೃಷ್ಣಾ ಮೇಲ್ದಂಡೆ ಯೋಜನೆಯ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :

IV. ಶ್ರೀಸಿ. ಬೈರೇಗೌಡ (ಕೃಷಿ ಮಂತ್ರಿ)ರವರ ಪರವಾಗಿ :

1956ರ ಕಂಪನಿಗಳ ಕಾಯ್ದೆಯ 619ಎ ಕಲಮಿನ ಮೇರೆಗೆ :

1) 1992-93ನೇ ಸಾಲಿನ ಕರ್ನಾಟಕ ರಾಜ್ಯ ಅಗ್ರೋ ಕಾರ್ನ್ ಪ್ರಾಡಕ್ಟ್ ನಿಯಮಿತದ 20ನೇ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

1963ರ ಕೃಷಿ ವಿಶ್ವವಿದ್ಯಾನಿಲಯಗಳ ಅಧಿನಿಯಮದ 38(3)ನೇ ಕಲಮಿನ ಮೇರೆಗೆ;

2) 1991-91ನೇ ಸಾಲಿನ ಧಾರವಾಡ ಕೃಷಿ ವಿಶ್ವವಿದ್ಯಾಲಯದ ಲೆಕ್ಕಪರಿಶೋಧನಾ ವರದಿಗೆ ಅನುಸರಣಾ ವರದಿಗಳನ್ನು ಮಂಡಿಸುತ್ತೇನೆ.

ಅಧ್ಯಕ್ಷರು : ಎಲ್ಲಾ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಅರ್ಜಿಗಳನ್ನೊಪ್ಪಿಸುವುದು

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಅಧ್ಯಕ್ಷರೆ, ತುಮಕೂರು ಜಿಲ್ಲೆ ಸಿರಾ ತಾಲೂಕು ಸೀಬಿ ಅಗ್ರಹಾರ ಮತ್ತು ಸೀಬಿ ಗ್ರಾಮ ಪಂಚಾಯ್ತಿಗೆ ಸೇರಿದ ಹಳ್ಳಿಗಳಲ್ಲಿ ಸಾರಾಯಿ ಅಂಗಡಿಗಳಿಗೆ 1995ನೇ ಸಾಲಿನಿಂದ ಹೊಸದಾಗಿ ಪರವಾನಗಿ ಮತ್ತು ನವೀಕರಣವನ್ನು ರದ್ದುಗೊಳಿಸುವ ಬಗ್ಗೆ ಅರ್ಜಿಯನ್ನು ಸದನದ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಅರ್ಜಿಯನ್ನು ಮಂಡಿಸಲಾಯಿತು.

Sri Qumural Islam (Gulbarga) : Sir, I present the petition to consider the unaided teachers working in the additional sections of the Governemnt aided private Primary Schools as aided teachers, and release of salaries.

Mr. Speaker : Petition presented.

ಅಧ್ಯಕ್ಷರ ಸೂಚನೆ :

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಪ್ರಶ್ನೆ ಹಾಕಿದ ಸದಸ್ಯರು ಸಕಾಲದಲ್ಲಿ ಸದನದಲ್ಲಿ ಹಾಜರಿರುವ ಬಗ್ಗೆ

(ಶ್ರೀ ಕೆ.ಎಂ.ಕೃಷ್ಣಮೂರ್ತಿ : ಗೈರು ಹಾಜರು)

ಅಧ್ಯಕ್ಷರು : ಇವರು ಪ್ರಶ್ನೆಗೂ ಇರುವುದಿಲ್ಲ, ಗಮನ ಸೆಳೆಯುವ ಸೂಚನೆಗೂ ಇರುವುದಿಲ್ಲ, ಅರ್ಜಿ ಒಪ್ಪಿಸುವುದಕ್ಕೂ ಇರುವುದಿಲ್ಲ. ನಾಳೆಯಿಂದ ಅವರು ಏನು ಕಳುಹಿಸಿದರೂ ಅದನ್ನು ತೆಗೆದುಕೊಂಡು ಲಿಸ್ಟ ಮಾಡಬೇಡಿ. ಮಾನ್ಯ ಸದಸ್ಯರಲ್ಲಿ ಒಂದು ವಿನಂತಿ ಏನೆಂದರೆ: ಪ್ರಶ್ನೆಗಳನ್ನು ಕಳುಹಿಸಿದಂಥ ಮಾನ್ಯ ಸದಸ್ಯರು ಹಿಂದಿನ ದಿನವೇ ಅಜೆಂಡಾವನ್ನು ನೋಡಿಕೊಂಡು ಮಾರನೇ ದಿನ ಸಮಯಕ್ಕೆ ಸರಿಯಾಗಿ ಸಭೆಗೆ ಬರಬೇಕು. ನಿಮಗೋಸ್ಕರ 2-3 ಸಾರಿ ಹೆಸರುಗಳನ್ನು ಪುನರಾವರ್ತನೆ ಮಾಡುವ ಪದ್ದತಿ ಸರಿಯಲ್ಲ. ಮೊದಲನೇ ಸಾರಿ ಆರಿಸಿಬಂದಿರತಕ್ಕ ಎಲ್ಲಾ ಮಾನ್ಯ ಸದಸ್ಯರೂ ದಯವಿಟ್ಟು ಪ್ರಶ್ನೋತ್ತರ ಸಮಯದಲ್ಲಿ ಸಕಾಲದಲ್ಲಿ ಸದನದಲ್ಲಿ ಹಾಜರಿರಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ ನಾನು ತಮಗೆ ಎಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ.

ಅಧ್ಯಕ್ಷರು : 2-3 ವಿಚಾರಗಳಿವೆ. ಅವುಗಳನ್ನು ಮುಗಿಸಿ ಅನಂತರ ತೆಗೆದು ಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆಗಬಹುದು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಾನು ವಿಷಯವನ್ನು ಪ್ರಾರಂಭ ಮಾಡುವುದಕ್ಕೆ ಮುಂಚೆ ನಮ್ಮ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ಎಲ್ಲಿ ಹೋಗಿದ್ದಾರೆಂದು ನಮಗೆ ಗೊತ್ತಿಲ್ಲ ಅದು ಈ ಸದನಕ್ಕೆ ಗೊತ್ತಿಲ್ಲ.

ಅಧ್ಯಕ್ಷರು : ಅವರು ನನಗೆ ತಿಳಿಸಿ ನನ್ನ ಅನುಮತಿಯನ್ನು ತೆಗೆದುಕೊಂಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಅವರು ಎಲ್ಲಿ ಹೋಗಿದ್ದಾರೆಂಬ ವಿಚಾರ ಈ ಸಭೆಯ ಗಮನಕ್ಕೆ ಬರಬೇಕು. ಕಾವೇರಿ ನೀರನ್ನೇನೋ ನಮಗೆ ಅನ್ಯಾಯ ಮಾಡಿ ತಮಿಳ್ನಾಡಿಗೆ ಕೊಟ್ಟರು. ರಾಷ್ಟ್ರೀಯ ರಂಗಕ್ಕಾಗಿ ಕುಮಾರಿ ಜಯಲಲಿತಾರವರ ಜೊತೆಯಲ್ಲಿ ಬೀಗತನವನ್ನು ಮಾಡುವುದಕ್ಕೆ ಹೋಗಿ ನಮ್ಮನ್ನು ಬಲಿಕೊಟ್ಟರು. ಅದರ ಬಗ್ಗೆ ನಾವೆಲ್ಲಾ ಧರಣಿ ಮಾಡಿ ವಿಚಾರವನ್ನು ಹೇಳಿದ್ದೇವೆ. ಆದರೆ ಈಗ ಅವರು ಎಲ್ಲಿ ಹೋಗಿದ್ದಾರೆ? ಕಳೆದ ಎರಡು ದಿನಗಳಿಂದ ಈ ಸದನದಲ್ಲಿ ಅವರು ಇಲ್ಲ. ಎಲ್ಲಿ ಹೋಗಿದ್ದಾರೆಂಬುದು ಪತ್ರಿಕೆಗಳಲ್ಲೂ ಬಂದಿಲ್ಲ. ಆದ್ದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ, ಅವರು ಹೋಗಿದ್ದಾರೆಂಬುದು ತಮಗೇನಾದರೂ ಗೊತ್ತಿದ್ದರೆ ದಯವಿಟ್ಟು ತಿಳಿಸಿ. ಯಾವ ಕಾರಣಕ್ಕಾಗಿ ಎಲ್ಲಿಗೆ ಹೋಗಿದ್ದಾರೆ? ಈ ಸದನ ಸುದೀರ್ಘವಾಗಿ ನಡೆಯುತ್ತಿದ್ದರೂ ಅವರು ಬೆಂಗಳೂರಿನಲ್ಲೂ ಇಲ್ಲ, ಕರ್ನಾಟಕದಲ್ಲಿ ಎಲ್ಲೂ ಕೂಡ ಅವರ ಪ್ರವಾಸದ ವಿಚಾರ ಕಾಣುತ್ತಿಲ್ಲ, ಅಷ್ಟೇ ಅಲ್ಲ ಅವರು ಈ ಸದನದಲ್ಲೂ ಇಲ್ಲ ಅಂದಮೇಲೆ ಅವರು ಎಲ್ಲಿ ಹೋಗಿದ್ದಾರೆಂಬುದನ್ನು ಪ್ರಮುಖವಾಗಿ ಈ ಸದನಕ್ಕೆ ತಿಳಿಸಬೇಕಾಗಿ ಕೋರುತ್ತೇವೆ. ಏಕೆಂದರೆ ಈಗಾಗಲೇ ಅವರ ಪಕ್ಷದಲ್ಲಿ ಒಡಕು ಪ್ರಾರಂಭವಾಗಿರುವುದರಿಂದ ಎಲ್ಲಾದರೂ ಗೌಪ್ಯವಾಗಿ ಹೋಗಿ.....

(ಗೊಂದಲ)

ಶ್ರೀ ಎಂ. ನಾರಾಯಣ ಸ್ವಾಮಿ : ದಯವಿಟ್ಟು ಆ ಮಾತನ್ನು ವಾಪಸ್ಸು ತೆಗೆದುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಅತ್ಯಂತ ಗಂಭೀರವಾದ ಪ್ರಶ್ನೆಯನ್ನು ಮಾನ್ಯ ನಾಗರಾಜ್‌ರವರು ಪ್ರಸ್ತಾಪ ಮಾಡಿದ್ದಾರೆ. ನಮ್ಮಲ್ಲಿ ಒಡಕಿಲ್ಲ

ಎಂದು ಸುಮಾರು 15 ಜನ ನಿಂತುಕೊಂಡರು. ಇನ್ನುಳಿದ 30 ಜನ ಕುಳಿತ್ತಿದ್ದಾರೆ. ಅಂದರೆ ಕುಳಿತಿರುವ 30 ಜನರು ಒಡಕಿದೆ ಎಂಬುದನ್ನು ಒಪ್ಪಿಕೊಂಡು ಉಳಿದ 15 ಜನ ಒಡಕಿಲ್ಲವೆಂದು ನಿಂತುಕೊಂಡರೆ?

ಶ್ರೀ ಜಿ.ಬಿ. ಶಿವಕುಮಾರ್ : ನಮ್ಮ ಬೆಂಬಲಕ್ಕೆ ಯಾರು ಬೇಕಾಗಿಲ್ಲ. ಬೆಂಬಲ ಕೊಡುವುದಕ್ಕೆ ನಾವೆಲ್ಲರೂ ಒಂದೇ. ಇದು ನಮ್ಮ ಮನೆಯ ವಿಚಾರ.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಇದನ್ನು ಯಾರೂ ಕೂಡ ಲಘುವಾಗಿ ತೆಗೆದುಕೊಳ್ಳುವುದು ಬೇಡ. ಈ ಸದನದ ಸದಸ್ಯನಾಗಿ ನಾನು ಮಾನ್ಯ ಮುಖ್ಯಮಂತ್ರಿಗಳ ಹಾಜರಾತಿಯನ್ನು ಕೇಳುವ ಹಕ್ಕು ನನಗಿದೆ. ಆದ್ದರಿಂದ ಮಾನ್ಯ ಅಧ್ಯಕ್ಷರನ್ನು ನಾನು ನೇರವಾಗಿ ಕೇಳುತ್ತಿದ್ದೇನೆ.

ಒಬ್ಬ ಮಾನ್ಯ ಸದಸ್ಯರು : ಬೇರೆ ಸದಸ್ಯರ ಹಕ್ಕುಗಳನ್ನು ಕೇಳುವುದಕ್ಕೆ ಇವರಿಗೆ ಹಕ್ಕು ಇದೆಯೇ?

ಶ್ರೀ ವಾಟಾಳ್ ನಾಗರಾಜ್ : ಇದಕ್ಕೆ ಕಾರಣಗಳನ್ನು ಕೊಡತಕ್ಕದ್ದು ಸಮಂಜಸವೆಂದು ನಾನು ಅಂದುಕೊಂಡಿದ್ದೇನೆ. ನನ್ನ ಅಭಿಪ್ರಾಯದಲ್ಲಿ ನಿಮ್ಮಲ್ಲಿ ಒಡಕಿದೆ ಎಂದು ಹೇಳಿದೆ. ಇಲ್ಲ, ಎಂದು ನೀವು 15 ಜನ ನಿಂತುಕೊಂಡಿರಿ. ಇನ್ನುಳಿದವರು ಯಾರೂ ಕೂಡ ನಿಲ್ಲಲಿಲ್ಲ. ಆದ್ದರಿಂದ ಒಡಕಿದೆ ಎಂಬುದು ಸಾಬೀತಾಯಿತಲ್ಲಾ.....

(ಗೊಂದಲ)

ಶ್ರೀ ಜಿ.ಬಿ. ಶಿವಕುಮಾರ್ : ನಮ್ಮ ಮನೆಯ ವಿಚಾರದ ಬಗ್ಗೆ ನೀವು ಇಷ್ಟೊಂದು ಲಘುವಾಗಿ ಮಾತನಾಡಿದರೆ ಹೇಗೆ ಸ್ವಾಮಿ?

ಶ್ರೀ ವಾಟಾಳ್ ನಾಗರಾಜ್ : ಇದು ನಮ್ಮ ಮನೆಯ ವಿಚಾರವೆಂದು ಮಾನ್ಯ ಶಿವಕುಮಾರ್‌ರವರು ಹೇಳುತ್ತಿದ್ದಾರೆ. ನಾನು ಕೇಳುತ್ತಿರುವುದು ಈ ಸದನಕ್ಕೆ ಸಂಬಂಧಪಟ್ಟ ವಿಚಾರ.

ಶ್ರೀ ಆಯನೂರು ಮಂಜುನಾಥ್ : ಆಂಧ್ರದಲ್ಲಿ ಮನೆಯ ವಿಚಾರವೇ ಬೀದಿಗೆ ಬಂದಿದ್ದು.

ಶ್ರೀ ಜಿ.ಬಿ. ಶಿವಕುಮಾರ್ : ಕರ್ನಾಟಕದಲ್ಲಿ ಬಂದಿರುವ ಪರಿಸ್ಥಿತಿಯ ಬಗ್ಗೆ ನೀವು ಏನೇನೋ ಕನಸನ್ನು ಕಂಡುಕೊಂಡು ಭ್ರಮಾಲೋಕದಲ್ಲಿ ತಾವಿದ್ದೀರಿ.

ಅಧ್ಯಕ್ಷರು : ಸನ್ಮಾನ್ಯ ಮುಖ್ಯಮಂತ್ರಿಗಳು ನನಗೆ ಲಿಖಿತಮೂಲಕ ತಿಳಿಸಿ ಇವತ್ತು ನಾನು ಸದನಕ್ಕೆ ಬರುವುದಕ್ಕಾಗುವುದಿಲ್ಲ ಬೇರೆ ಕಾರ್ಯದ ನಿಮಿತ್ತ ನಾನು ಹೊರಗೆ ಉಳಿದಿರುತ್ತೇನೆಂದು ಹೇಳಿದ್ದಾರೆ. ನೀವು ಎಲ್ಲಿಗೆ ಹೋಗುತ್ತೀರೆಂದು ಅವರನ್ನು ಕೇಳುವ ಅಧಿಕಾರ ನನಗೆ ಇಲ್ಲ, ಸದನದಲ್ಲಿ ಅವರ ಗೈರುಹಾಜರಿಯನ್ನು ತಿಳಿಸುವ ವಿಚಾರವನ್ನು ಹೇಳಿದ್ದಾರೆ. ಆ ಜವಾಬ್ದಾರಿಯನ್ನು ನಾನು ಮಾಡಿದ್ದೇನೆ. ನಾನು ಅವರಿಗೆ ಅನುಮತಿ ಕೊಟ್ಟಿದ್ದೇನೆ. ಅವರ ಹೆಸರಿನಲ್ಲಿರತಕ್ಕ ಕಾರ್ಯಕ್ರಮಗಳನ್ನು ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಒಪ್ಪಿಸಿದ್ದಾರೆ ಅವರು ಇಲ್ಲಿ ಹಾಜರಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನಾನು ಈ ಸದನಕ್ಕೆ ಇಂದು ಬರುವುದಿಲ್ಲವೆಂದು ಮಾನ್ಯ ಮುಖ್ಯ ಮಂತ್ರಿಗಳು ತಮಗೆ ಪತ್ರವನ್ನು ಬರೆದಿದ್ದಾರೆ. ಸಂತೋಷ.

11.40 ಎ.ಎಂ.

ನಮಗೆ ಬೇಕಾಗಿರುವುದು ಮುಖ್ಯಮಂತ್ರಿಗಳು ಎಲ್ಲಿಹೋದರು ಎನ್ನುವ ಬಗ್ಗೆ ಕಾಳಜಿ, ಅಭಿಮಾನ ನಿಮಗೆ ಪತ್ರವನ್ನು ಬರೆದು ಹೋಗಿದ್ದಾರೆಂದರೆ ಅವರು ಎಲ್ಲಿ ಹೋಗಿದ್ದಾರೆ ಎನ್ನುವ ಬಗ್ಗೆ ಮಾಹಿತಿ ಬೇಕು. ಅದನ್ನು ಹುಡುಕತಕ್ಕವರ್ಯಾರು? ಎಲ್ಲಿ ಹೋಗಿದ್ದಾರೆ? ನಾನು ಈ ರಾಜ್ಯದಲ್ಲಿ ಎಲ್ಲೋ ಗೌಪ್ಯವಾಗಿದ್ದೇನೆಂದಾದರು ಹೇಳಬೇಕು.

ಅಧ್ಯಕ್ಷರು : ಅವರು ಎಲ್ಲೂ ಹೋಗಿಲ್ಲ, ಅವರಿಗೆ ಏನಾದರೂ ತೊಂದರೆಯಿದ್ದರೆ ತಕ್ಷಣ ನಿಮ್ಮ ಸಹಾಯವನ್ನು ಕೇಳಿ ಅವರನ್ನು ಮಾಡುವುದಕ್ಕೆ ರಕ್ಷಣೆ ಕಳುಹಿಸಿಕೊಡುತ್ತೇನೆ. ನಿಮಗೆ ಅವರ ಬಗ್ಗೆ ಸಂಶಯಬೇಡ.

ಶ್ರೀ ವಿಶ್ವೇಶ್ವರ ಹೆಗಡೆ : ಅವರಿಗೇನಾಗಿದೆ ಎನ್ನುವ ಬಗ್ಗೆ ಬಹಳ ಆತಂಕವಾಗಿದೆ. ಅವರು ಎಲ್ಲಿ ಹೋಗಿದ್ದಾರೆ ಎನ್ನುವ ಬಗ್ಗೆ ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್ : ನಮ್ಮ ಮುಖ್ಯಮಂತ್ರಿಯವರು ಕರ್ನಾಟಕದಲ್ಲಿಲ್ಲ, ಸದನದಲ್ಲಿ ಗೈರುಹಾಜರಿದ್ದಾರೆ, ಆದಕ್ಕಿಂತ ಯಾವ ಪ್ರಶ್ನೆ ಕೇಳಲಿ, ತಾವು ನನಗೆ ದಾರಿ ತೋರಿಸಬೇಕು.

ಅಧ್ಯಕ್ಷರು : ಅವರು ಎಲ್ಲೂ ಹೋಗಿಲ್ಲಾ. ನೀವು ನನಗೆ ದಾರಿ ತೋರಿಸುತ್ತೀರೆಂದು ನಂಬಿಕೊಂಡಿದ್ದರೆ ನೀವು ಈ ರೀತಿ ಮಾಡುತ್ತೀರಲ್ಲಾ?

ಶ್ರೀ ಜಿ.ಬಿ. ಶಿವಕುಮಾರ್ : ಅಧ್ಯಕ್ಷರೇ, ಇವರು ನಿಮ್ಮ ದಾರಿಯನ್ನು ತಪ್ಪಿಸುತ್ತಾರೆ.

ಅಧ್ಯಕ್ಷರು : ಅದು ಸಾಧ್ಯವಿಲ್ಲ ಬಿಡಿ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ನಾನು ಎಂದಾದರೂ ತಮಗೆ ದಾರಿಯನ್ನು ತಪ್ಪಿಸುವ ಪ್ರಯತ್ನ ಮಾಡಿದ್ದೇನೆಯೇ? ಮಾನ್ಯ ನಾಗೇಗೌಡರಿಗೆ ಇದರ ಬಗ್ಗೆ ಚರ್ಚೆ ಬೇಕು. ಎಂದು ಅವರ ಮನಸ್ಸಿನಲ್ಲಿದೆ. ಆದರೆ ಅವರು ಮತ್ತೆ ಶಿವಕುಮಾರ್‌ರವರು ದಾರಿ ತಪ್ಪಿಸುತ್ತಾರೆ ಎಂದು ಹೇಳುತ್ತಾರಲ್ಲಾ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ವಾಟಾಳ್ ನಾಗರಾಜ್‌ರವರು ಹೇಳುವುದರಲ್ಲಿ ಅರ್ಥವಿದೆ. ಏಕೆಂದರೆ ಮುಖ್ಯಮಂತ್ರಿಯವರು ನಿನ್ನೆ ಮತ್ತು ಇವತ್ತು ಸಹ ಸದನದಲ್ಲಿ ಇಲ್ಲ, ಅದಕ್ಕಾಗಿ ಅವರು ಎಲ್ಲಿ ಹೋಗಿದ್ದಾರೆಂದು ಕೇಳಿಕೊಂಡರು. ಅದಕ್ಕೆ ತಾವು ನನ್ನನ್ನು ಕೇಳಿಕೊಂಡು ಹೋಗಿದ್ದಾರೆಂದು ಹೇಳಿದಿರಿ, ಸಂತೋಷ. ಆದರೆ ತಮಿಳುನಾಡಿಗೇನಾದರೂ ಹೋಗಿದ್ದಾರೆಯೇ ಎಂದು ಸನ್ ಟಿ.ವಿ.ಯಲ್ಲಿ ಸಹ ನೋಡಿದೆವು. ಅಲ್ಲೂ ಇಲ್ಲ, ಸುಬ್ರಮಣ್ಯಸ್ವಾಮಿಯವರು ತಮಿಳುನಾಡಿನಲ್ಲಿರುವ ಬಗ್ಗೆ ಫೋಟೋವನ್ನು ತೆಗೆದಿದ್ದಾರೆ, ಅವರ ಹೆಸರು ಬಂದಿದೆ. ಆದರೆ ಇವರ ಹೆಸರು ಇಲ್ಲ, ಆದ್ದರಿಂದ ಅಲ್ಲೂ ಇಲ್ಲ ಇಲ್ಲೂ ಇಲ್ಲವೆಂದರೆ ಎಲ್ಲಿದ್ದಾರೆ? ಆದ್ದರಿಂದ ಅವರನ್ನು ಪತ್ತೆ ಮಾಡಿ ಹೇಳಿದರೆ ನಮಗೂ ಸಂತೋಷವಾಗುತ್ತದೆ.

ಅಧ್ಯಕ್ಷರು : ಅವರಿಗಿಂತಲೂ ಸಹ ಹೆಚ್ಚಿನ ಆಸಕ್ತಿ ತಮಗೆ ಮುಖ್ಯಮಂತ್ರಿಗಳ ಮೇಲಿರುವುದನ್ನು ನೋಡಿ ಬಹಳ ಆನಂದವಾಗಿದೆ. ಕರ್ನಾಟಕದಲ್ಲಿ ಇಂಥಹ ಒಂದು ಪರಂಪರೆ ಬೆಳೆದಿದೆಯಲ್ಲಾ ಎಂದು ಸಂತೋಷವಾಗಿದೆ. ಅವರು ಕ್ಷೇಮವಾಗಿದ್ದಾರೆ. ನೀವೇನೂ ಭಯಪಡಬೇಕಾಗಿಲ್ಲ, ನಾನು ಈ ತಕ್ಷಣ ಇದರ ಬಗ್ಗೆ ಗೃಹಸಚಿವರಿಗೆ ಜವಾಬ್ದಾರಿಯನ್ನು ಕೊಡುತ್ತೇನೆ, ಅಕಸ್ಮಾತ್ ಏನಾದರೂ ತೊಂದರೆ ಇದ್ದರೆ ಈ ಸದನಕ್ಕೆ ತಿಳಿಸಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮುಖ್ಯಮಂತ್ರಿಗಳು ಕ್ಷೇಮವಾಗಿರಬೇಕು, ಅವರು ಮುಖ್ಯಮಂತ್ರಿಗಳಾಗಿರಬೇಕೆಂದು ನಮಗೆ ಆಸೆ ಇದೆ. ನಮಗೆ ಕಾಲಬಂದಾಗ ನಾವು ಆಗೋಣ. ಆ ಮಾತು ಬೇರೆ. ಆದರೆ ಅವರು ಇರುವವರೆಗೆ ಸರಿಯಾಗಿರಬೇಕು, ನಮ್ಮೆಲ್ಲರ ಹಿತರಕ್ಷಣೆಯನ್ನು ನೋಡಿಕೊಂಡು ಹೋಗಬೇಕು. ಅದಕ್ಕಾಗಿ ನಾವು ಕೇಳುತ್ತಿದ್ದೇವೆ.

ಅಧ್ಯಕ್ಷರು : ನಿಮ್ಮ ಕಾಳಜಿಯನ್ನು ಮೆಚ್ಚತಕ್ಕದ್ದು. ಇದರ ಬಗ್ಗೆ ಗೃಹಸಚಿವರಿಗೆ ಎಲ್ಲಾ ಜವಾಬ್ದಾರಿಯನ್ನು ಒಪ್ಪಿಸಿಬಿಡೋಣ.

ಶ್ರೀ ವಾಟಾಳ್‌ನಾಗಾರಾಜ್ : ಮುಖ್ಯಮಂತ್ರಿಗಳ ಆರೋಗ್ಯ ಚೆನ್ನಾಗಿರಬೇಕು, ಅವರು ಅಧಿಕಾರದಲ್ಲಿ ಮುಂದುವರೆಯಬೇಕು. ಅದರ ಬಗ್ಗೆ ನನ್ನ ಅಭ್ಯಂತರವಿಲ್ಲ. ಆದರೆ ಅವರ ವಿರುದ್ಧ ಕೆಲವರು ಮಾತನಾಡುತ್ತಿದ್ದಾರೆ. ಆ ಮಾತು ಸರಿಯಲ್ಲವೆಂದು ನನ್ನ ಅಭಿಪ್ರಾಯ. ಆದ್ದರಿಂದ ಮಾನ್ಯ ಗೃಹಸಚಿವರನ್ನಾದರೂ ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮುಖ್ಯಮಂತ್ರಿಯವರು ಎಲ್ಲಿದ್ದಾರೆ ಎನ್ನುವ ಬಗ್ಗೆ ಈ ಸದನಕ್ಕೆ ತಿಳಿಸಬೇಕು. ಈ ರಾಜ್ಯದ ಮುಖ್ಯಮಂತ್ರಿಯವರ ಬಗ್ಗೆ ಬಹಳ ಕಾಳಜಿ ಇದೆ.

ಅಧ್ಯಕ್ಷರು : ಮಾನ್ಯ ಗೃಹಸಚಿವರೇ, ತಾವು ಹೋಗಿ ವಿಷಯವನ್ನು ತಿಳಿದುಕೊಂಡು ಬಂದು ಹೇಳಿ.

ಶ್ರೀ ಎ.ರಾಮದಾಸ್ : ಕರ್ನಾಟಕದಿಂದ ಬಿಟ್ಟಿರುವ ನೀರು ತಮಿಳುನಾಡಿಗೆ ಹೋಗಿ ತಲುಸಿದೆಯೋ ಎಂಬುದನ್ನು ನೋಡಲು ಮುಖ್ಯಮಂತ್ರಿಗಳು ಹೋಗಿದ್ದಾರೆಯೇ ಎಂಬುದು ನಮ್ಮ ಅನಿಸಿಕೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅಧ್ಯಕ್ಷರೆ, ಗೃಹಸಚಿವರಿಗೆ ಈಗ ಇರುವ ಜವಾಬ್ದಾರಿಗಳೇ ತುಂಬಾ ಇದೆ. ಅವರು ಒಪ್ಪಿಕೊಂಡಿರುವ ಜವಾಬ್ದಾರಿಗಳಲ್ಲಿ ಅನೇಕದರ ಬಗ್ಗೆ ಕೆಲಸ ಮಾಡುತ್ತಿದ್ದಾರೆ. ಇಷ್ಟೊಂದು ಜವಾಬ್ದಾರಿ ಕೊಟ್ಟಿದ್ದಕ್ಕಾಗಿ ಅವರು ಮೌನವಾಗಿದ್ದಾರೆಯೇ ಎಂದು ನನಗೆ ಭಯವಾಗುತ್ತಿದೆ. ಅವರು ಬಾಯಿಬಿಟ್ಟೇ ಹೇಳುತ್ತಿಲ್ಲ. ಅವರು ಸ್ಪಷ್ಟವಾಗಿ ಇದರ ಬಗ್ಗೆ ಹೇಳುತ್ತೇನೆಂದರೆ ತೊಂದರೆಯಿಲ್ಲ.

ಅಧ್ಯಕ್ಷರು : ಅವರ ಶಕ್ತಿಯ ವಿಚಾರ ನಿಮಗೇನು ಗೊತ್ತಿದೆ?

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ನಾವು ಮುಖ್ಯಮಂತ್ರಿಗಳ ಬಗ್ಗೆ ನಾವು ಮಾತನಾಡಬಾರದು, ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಶೀಲನೆ ಮಾಡಿ ಅನುಷ್ಠಾನಕ್ಕೆ ತರತಕ್ಕಂಥ ಇಪ್ಪತ್ತು ಅಂಶಗಳ ಕಾರ್ಯಕ್ರಮದ ಬಗ್ಗೆ ಸಮಿತಿಗಳನ್ನು ರಚನೆ ಮಾಡಿದ್ದಾರೆ. ಈ ಸಮಿತಿ ನಾವು ಇಲ್ಲಿ ಕಾಡಿ ಬೇಡಿ ಸರ್ಕಾರಕ್ಕೆ ಸಾಷ್ಟಾಂಗ ಹಾಕಿ ಅತ್ತೂ ಕರೆದು ನಾವು ಔತಣಕ್ಕೆ ಕರೆದಂತಾಗಿದೆ. ಈ ಸಮಿತಿಯಲ್ಲಿ...

ಶ್ರೀ ಸಿದ್ದರಾಮಯ್ಯ : ಇದು ಶೂನ್ಯವೇಳೆಯೇ?

ಶ್ರೀ ವಾಟಾಳ್ ನಾಗರಾಜ್ : ಹೌದು.

ಶ್ರೀ ಕೆ.ಎನ್. ನಾಗೇಗೌಡ : ಅವರಿಗೆ ಎಲ್ಲಾ ವೇಳೆಯೂ ಶೂನ್ಯವೇಳೆಯೇ.

ಅಧ್ಯಕ್ಷರು: ನೋಡಿ ನನ್ನ ಮೇಲೆ ಆರೋಪ, ಪರೋಕ್ಷವಾಗಿ.

ಶ್ರೀ ವಾಟಾಳ್ ನಾಗರಾಜ್ : ನನ್ನಿಂದ ತಮಗೆ ಆಪಾದನೆ ಬರುತ್ತದೆ ಎನ್ನುವುದಾದರೆ ನಾನು ಈ ಸದನಕ್ಕೆ ಬೇಕಾದರೆ ರಾಜೀನಾಮೆ ಕೊಡುತ್ತೇನೆ. ತಾವು ಕೊಡಿ ಎಂದು ಹೇಳಿ ನಾನು ಸತ್ಯವಾಗಿ ಈ ಕ್ಷಣವೇ ರಾಜೀನಾಮೆಯನ್ನು ಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೇ, ನಿಮ್ಮ ಹತ್ತಿರ ಬಂದು ನಾನು ರಾಜೀನಾಮೆಯನ್ನು ಕೊಡುವ ಬಗ್ಗೆ ಕೇಳುತ್ತೇನೆ. ಆದರೇ ನೀವು ರಾಜೀನಾಮೆಯನ್ನು ಕೇಳಬೇಡಿ ಎಂದು ಹೇಳಿದರೆ ಹೇಗಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಅಲ್ಲೊಂದು ಹೇಳಿ ಇಲ್ಲೊಂದು ಮಾತನಾಡಲು ನಾನೇನು ಯಡಿಯೂರಪ್ಪನೇ? ಅಲ್ಲೊಂದು ಇಲ್ಲೊಂದು ನಾನು ಮಾತನಾಡುವುದಿಲ್ಲ. ಎರಡೂ ಕಡೆಯೂ ನನ್ನದು ಒಂದೇ ಮಾತು.

ಇಪ್ಪತ್ತು ಅಂಶಗಳ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿ, ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ, ತಾಲ್ಲೂಕು ಹೆಚ್ಚುವರಿ ಕ್ಷೇತ್ರವನ್ನು ಹೊಂದಿರತಕ್ಕಂಥ ಶಾಸಕರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ, ಜಿಲ್ಲಾ ಪಂಚಾಯತಿ ಅಧ್ಯಕ್ಷರ ಹೆಸರಿನಲ್ಲಿ ಒಂದು ಸಮಿತಿ, ತಾಲ್ಲೂಕು ಪಂಚಾಯಿತಿ ಅಧ್ಯಕ್ಷರ ಹೆಸರ್ಲ್ಲ ಒಂದು ಸಮಿತಿ. ಈ ಸಮಿತಿಗಳು ಆಯಾಯ ಮಟ್ಟದಲ್ಲಿ ಇಪ್ಪತ್ತು ಅಂಶಗಳ ಕಾರ್ಯಕ್ರಮಗಳನ್ನು ಪರಿಶೀಲನೆ ಮಾಡತಕ್ಕ ವ್ಯವಸ್ಥೆಯೆಂದು ಇದರ ಬಗ್ಗೆ ಸರ್ಕಾರ ಆದೇಶಹೊರಡಿಸಿದೆ. ತಮ್ಮ ಗಮನಕ್ಕೆ ತರುವುದೇನೆಂದರೆ, ಶಾಸಕರಾಗಿರತಕ್ಕ ಸಮಿತಿಯು ಮೂರು ತಿಂಗಳಿಗೆ ಒಂದು ಸಾರಿ ಸಭೆ ಸೇರತಕ್ಕದ್ದು. ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರ ಹೆಸರಿನಲ್ಲಿರುವ ಸಮಿತಿ ತಿಂಗಳಿಗೆ ಒಂದು ಸಾರಿ ಸೇರತಕ್ಕದ್ದು. ನನಗನ್ನಿಸುತ್ತದೆ ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರ ಹೆಸರಿನಲ್ಲಿ ಸಮಿತಿ ಬೇಕಾಗಿರಲಿಲ್ಲ. ಈಗಾಗಲೇ ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರು ತಿಂಗಳಿಗೆ ಇಲ್ಲವೇ ಎರಡು ತಿಂಗಳಿಗೆ ಒಂದು ಸಾರಿ ವಿಶೇಷ ಸಭೆಗಳನ್ನು ಕರೆಯತಕ್ಕ ಅಧಿಕಾರದ ವ್ಯವಸ್ಥೆ ಅವರಿಗೆ ಇದೆ. ಅವರಿಗೆ ಆ ವ್ಯವಸ್ಥೆಯನ್ನು ನಾವು ಈ ಸದನದ ಮುಲಕವೇ ಕೊಟ್ಟಿದ್ದೇವೆ. ನಮ್ಮ ಪ್ರಶ್ನೆ ಏನೆಂದರೆ ಈ ಸದನದ ಸದಸ್ಯರಿಗೆ ಇರತಕ್ಕ ಪ್ರಾಮಾಣಿಕವಾದ ಎಲ್ಲಾ ಹಕ್ಕುಗಳನ್ನು ಕಸಿದುಕೊಂಡು ಅದನ್ನು ಅಧಿಕಾರಿಗಳಿಗೆ ನೀಡಿ ಆ ಮೂಲಕ ಶಾಸಕರನ್ನು ಕಡೆಗಾಣಿಸಿರುವ ಬಗ್ಗೆ ಸರ್ಕಾರದ ಮೇಲೆ ನೇರವಾದ ಆರೋಪವನ್ನು ನಾನು ಮೊದಲಿನಿಂದಲೂ ಮಾಡುತ್ತಿದ್ದೇನೆ. ಅದು ಸತ್ಯವೂ ಸಹ. ನೀವು ತೆರೆಯ ಮರೆಯ ಹೆಸರಿನಲ್ಲಿ ಶಾಸಕರಿಗೆ ಗೌರವವನ್ನು ಕೊಡುವ ಬಗ್ಗೆ ನೀವು ಒಂದು ಸಮಿತಿ ಮಾಡಿದ್ದಿರಿ ಮೂರು ತಿಂಗಳಿಗೆ ಒಂದು ಸಾರಿ ಸಭೆ ಸೇರಿ ಆದರೆ ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರು ತಿಂಗಳಿಗೆ ಒಂದು ಸಾರಿಯಾಗಿ ಸಭೆ ಸೇರಿಯೆಂದು ಹೇಳಿದರೆ ಮತ್ತೊಂದು ರೀತಿ ಈ ಸದನದ ಸದಸ್ಯರಿಗೆ ನೇರವಾಗಿ ಅಪಮಾನ ಮತ್ತು ಅಗೌರವವನ್ನು ತೋರಿದಂಥ ವಿಚಾರವಿದು. ಅದರಲ್ಲಿ ಎರಡು ಅಭಿಪ್ರಾಯವಿಲ್ಲ. ಪತ್ರಿಕೆಗಳಲ್ಲಿ ಬಂದಿದೆ, ಈಗಾಗಲೇ ಎಲ್ಲಾ ತಾಲ್ಲೂಕಿನಲ್ಲಿ ಹಿಂದೆ ಶಾಸಕರೇನು ಸಮಿತಿಗಳಿಗೆ ಅಧ್ಯಕ್ಷರಾಗಿದ್ದರು ಅದಕ್ಕೆಲ್ಲಾ ಅಧಿಕಾರಿಗಳನ್ನು ನೇಮಿಸಿದ್ದಾರೆ. ಈ ಬಗ್ಗೆ ತಮ್ಮ ಕೊಠಡಿಯಲ್ಲಿ ನಿರಂತರವಾಗಿ ಚರ್ಚೆಯಾಯಿತು. ಅದರಲ್ಲಿ ತಾವು ಈ ಬಗ್ಗೆ ಪರಿಶೀಲನೆ ಮಾಡತಕ್ಕ ಪ್ರಾಮಾಣಿಕವಾದ ಭರವಸೆಯನ್ನು ನೀಡಿದ್ದೀರಿ. ಮತ್ತು ಮಾನ್ಯ ಮುಖ್ಯಮಂತ್ರಿಯವರು ಸಹ ಇಲ್ಲಿ ಮಾತನಾಡುವಾಗ ತಾಲ್ಲೂಕು ಕಛೇರಿಯಲ್ಲಿ ಶಾಸಕರಿಗೆ ಕಾರ್ಯಾಲಯವನ್ನು ಕೊಡುತ್ತೇವೆಂದು ನೇರವಾಗಿ ಹೇಳಿದರು. ಅನಂತರ ಅವರು ಮತ್ತೆ ಹೊರಗಡೆ ಹೋಗಿ, ಯಾವ ಒತ್ತಡ, ಪ್ರಭಾವಕ್ಕೆ ಮಣಿಕರೋ ಗೊತ್ತಿಲ್ಲ, ಆದರೆ ಅವರು ಮತ್ತೆ ನಾನು ಆ ಮಾತಿಗೆ ಬದ್ಧನಲ್ಲ, ನಿಮಗೆ ಕ್ಷೇತ್ರಾಭಿವೃದ್ಧಿ ಕಾರ್ಯಾಲಯದಲ್ಲಿ ಒಂದು ಕಾರ್ಯಾಲಯವನ್ನು ಮಾಡಿಕೊಡುತ್ತೇನೆ ಎನ್ನತಕ್ಕ ಮಾತನ್ನು ಹೇಳಿದರು. ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಕಾರ್ಯಾಲಯದಲ್ಲೂ ಸಹ ಶಾಸಕರಿಗೆ ಕಾರ್ಯಾಲಯವಿಲ್ಲ. ತಾಲ್ಲೂಕು ಕಛೇರಿಯಲ್ಲೂ ಸಹ ಕಾರ್ಯಾಲಯವಿಲ್ಲ, ಇದು ಸ್ಪಷ್ಟ. ಹಿಂದೆ ತಮಗೆ ಗೊತ್ತಿರುವ ಹಾಗೆ ಶಾಸಕರ ಅಧ್ಯಕ್ಷತೆಯಲ್ಲಿ ಪ್ರಧಾನರನ್ನೊಳಗೊಂಡಂಥ....

ಶ್ರೀ ಜೆ.ಹೆಚ್. ಪಟೇಲ್: ಈ ರೀತಿ ಪ್ರಸ್ತಾಪ ಮಾಡಿದರೆ ಉತ್ತರವನ್ನೇಗೆ ಹೇಳುವುದು? ಸರ್ಕಾರವೇನು ಮಾಡುತ್ತಿದೆ, ಏನು ಮಾಡಬಹುದು ಎನ್ನುವ ಬಗ್ಗೆ ಉತ್ತರವನ್ನೇ ನಿರೀಕ್ಷೆ ಮಾಡದಿದ್ದರೆ, ತಾವು ಬರೀ ಹೇಳುವುದಾಗಿದ್ದರೆ ನಾವೇನು ಹೇಳುವುದು? ತಾವು ಏಕಾಏಕಿ ಮಾತನಾಡಿದರೆ ಹೇಗೆ?

ಶ್ರೀ ವಾಟಾಳ್ ನಾಗಾರಾಜ್ : ತಮ್ಮಿಂದ ಉತ್ತರವನ್ನು ನೀರೀಕ್ಷಣೆ ಮಾಡಿಯೇ ಮಾತನಾಡುತ್ತಿರುವುದು ಇವೆಲ್ಲಾ ಏಕಾಏಕಿ ಬರುವುದಿಲ್ಲ. ನೀವು ಎಂಟು ತಿಂಗಳಿನಲ್ಲಿ ಮಾಡಿರತಕ್ಕದ್ದನ್ನು ಒಂದು ಸಾರಿ ನಾವು ಹೇಳುತ್ತಿದ್ದೇವೆ. ನಾವೇನು ಏಕಾಏಕಿ ಹೇಳುತ್ತಿದ್ದೇವೆ?

ಶ್ರೀ ಜೆ.ಹೆಚ್. ಪಟೇಲ್ : ಈಗ ಪ್ರಸ್ತಾಪ ಮಾಡಿದರೆ ಅದಕ್ಕೆ ಉತ್ತರ ಹೇಗೆ ಹೇಳಬೇಕು? ಉತ್ತರ ಬೇಕೇ ಬೇಡವೇ? ಸರ್ಕಾರ ಏನು ಮಾಡಬಹುದು? ಅದಕ್ಕೆ ನೀವು ಉತ್ತರ ನಿರೀಕ್ಷೆ ಮಾಡದೆ ಬರೀ ಹೇಳುವುದಾದರೆ ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಉತ್ತರರ ನಿರೀಕ್ಷಣೆ ಮಾಡಿಯೇ ನಾನು ತಮಗೆ ನೇರವಾಗಿ ಹೇಳುತ್ತಿರುವುದು. ಇವೆಲ್ಲಾ ಏಕಾಏಕಿಯಾಗಿ ಬರುವಂತವಲ್ಲ. ತಾವು 8 ತಿಂಗಳಲ್ಲಿ ಮಾಡಿರತಕ್ಕದ್ದನ್ನು ನಾವು ಒಂದು ಸಾರಿ ಹೇಳುತ್ತಿದ್ದೇವೆ. ಏಕಾಏಕಿಯಾಗಿ ಏನು ಹೇಳುತ್ತಿದ್ದೇವೆ?

ಶ್ರೀ ಜೆ.ಹೆಚ್. ಪಟೇಲ್ : ತಾವು ಅಧ್ಯಕ್ಷರು ಸರ್ಕಾರಕ್ಕೆ ಹೇಳಿದರು ಇಂಥಹ ಪ್ರಸ್ತಾಪವನ್ನು ಮಾನ್ಯ ವಾಟಾಳ್ ನಾಗರಾಜು ಅವರು ಮಾಡುತ್ತಿದ್ದಾರೆಂದರೆ ನಾವು ಸಂಬಂಧಪಟ್ಟ ಮಂತ್ರಿಗಳು, ಮುಖ್ಯ ಮಂತ್ರಿಗಳು ಅಥವಾ ನಾನು ಯಾರಾದರೂ ಉತ್ತರ ಕೊಡಬಹುದು ಇದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸತ್ತಕ್ಕ ವಿಷಯ ಅಲ್ಲ. ಸಬ್ಜಟೆನ್ಸ ಇದೆ ಅದಕ್ಕೆ ಏನೂ ಮಾಡಬೇಕು ಮಾಡುತ್ತೇವೆ.

ಶ್ರಿ ವಾಟಾಳ್ ನಾಗರಾಜ್ : ನನಗೆ ಇದು ದಾರಿಯಲ್ಲ ಎಂದು ತಾವು ಹೇಳಿದಿರಿ ನಾನು ಅಧ್ಯಕ್ಷರನ್ನು ಕೇಳಿಕೊಂಡು ದಾರಿಯನ್ನು ಹುಡುಕಿಕೊಂಡು ಬಂದಿದ್ದೇನೆ. ಆದ್ದರಿಂದ ನಾನು ತಮಗೆ ಹೇಳುವುದನ್ನೆಲ್ಲಾ ಹೇಳುತ್ತೇನೆ. ಇವತ್ತು ತಮಗೆ ಶಕ್ಯವಾದರೆ ಉತ್ತರ ಕೊಡಿ, ಇಲ್ಲದಿದ್ದರೆ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿ. ಇದರಲ್ಲಿ ತಕರಾರು ಏನಿದೆ? ಸರಿಯಿಲ್ಲ ಎಂಬ ವಾದವನ್ನು ನಾನು ಒಪ್ಪುವುದಕ್ಕೆ ತಯಾರಿಲ್ಲ. ತಾಲ್ಲೂಕು ತಹಶೀಲ್ದಾರರ ಕಾರ್ಯ್ಯಾಲಯದಲ್ಲಿ ಇವತ್ತು ಶಾಸಕರಿಗೆ ವ್ಯವಸ್ಥೆ ಇಲ್ಲ. ನಮ್ಮ ಪರಿಸ್ಥಿತಿಯನ್ನು ಯಾರ ಮುಂದೆ ಹೇಳಬೇಕು? ಎಷ್ಟು ಹೇಳಿದರೂ ಸರ್ಕಾರ ಈ ರೀತಿ ಆದೇಶ ಹೊರಡಿಸಿದರೆ ಪರಿಸ್ಥಿತಿ ಏನು? ಈಗ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಕಾರ್ಯಾಲಯದಲ್ಲಿ ಕಾರ್ಯ್ಯಾಲಯ ಇಲ್ಲ. ತಾಲ್ಲೂಕು ಕಛೇರಿಯಲ್ಲಿ ಕಾರ್ಯ್ಯಾಲಯ ಇಲ್ಲ. ಬಗರ್ಹುಕುಂ ಸಾಗುವಳಿ - ಶಾಸಕರು ಇಲ್ಲ, ಅಕ್ರಮ- ಸಕ್ರಮ- ಶಾಸಕರು ಇಲ್ಲ, ಆಶ್ರಯ-ಶಾಸಕರು ಇಲ್ಲ, ಆರಾಧಾನಾ- ಶಾಸಕರು ಇಲ್ಲ. ಎಲ್ಲವನ್ನು ಶಾಸಕರಿಂದ ಕಡೆಗಣಿಸಿದ್ದಾರೆ. ನಾನು ಒಂದು ಪಕ್ಷದ ಬಗ್ಗೆ ಮಾತನಾಡುತ್ತಿಲ್ಲ. ಇಡೀ ಸದನದ ಎಲ್ಲಾ ಶಾಸಕರ ಹಿತದ ಬಗ್ಗೆ ನಾನು ಮಾತನಾಡುತ್ತಿದ್ದೇನೆ. ಆದುದರಿಂದ ಇದೆಲ್ಲಾ ಆದಮೇಲೆ ನಾನು ಮೊನ್ನೆತಾನೆ ಹೇಳಿದೆ, ಬರಗಾಲಕ್ಕೆ ಒಂದು ಸಮಿತಿ ಮಾಡಿದ್ದರ ಬಗ್ಗೆ ನಾನು ತಮ್ಮ ಗಮನಕ್ಕೆ ತಂದೆ. ಆ ಸಮಿತಿ ನೆಪ ಮಾತ್ರಕ್ಕೆ ಕಣ್ಣೊರೆಸತಕ್ಕ ಸಮಿತಿಯನ್ನು ರಚನೆ ಮಾಡಿದರು. ಆ ಸಮಿತಿಯಲ್ಲಿ ಕೂಡ ಯಾವುದೇ ವಿಧವಾದ ಶಕ್ತಿ ಇಲ್ಲ, ಆ ಸಮಿತಿಯನ್ನು ಕರೆದು ಏನು ಮಾಡಬೇಕು ನಾವು ಆ ಸಮಿತಿಗೆ ಯಾರಿಗೆ ಏನು ಹೇಳಬೇಕೆಂಬ ಶಕ್ತಿ ಇಲ್ಲ. ಇವತ್ತು ಅದೆಲ್ಲಾ ಮೀರಿ 20 ಅಂಶದ ಕಾರ್ಯಕ್ರಮದಲ್ಲಿ ಈ ಆದೇಶವನ್ನು ಸರ್ಕಾರ ಹೊರಡಿಸಿದೆ; ಇದನ್ನು ಕೂಡಲೇ ಹಿಂತೆಗೆದುಕೊಳ್ಳಬೇಕು.

ಎಲ್ಲಾ ವಿರೋಧ ಪಕ್ಷದ ಮುಖಂಡರು ಮತ್ತು ಆ ಕಡೆಯ ಮುಖಂಡರು ಕುಳಿತ ಚರ್ಚೆ ಮಾಡಿ 20 ಅಂಶಗಳ ಕಾರ್ಯಕ್ರಮಕ್ಕೆ ಯಾವ ಯಾವ ರೀತಿ ಇರಬೇಕೆಂಬುದನ್ನು ಮಾಡಬೇಕು. ಅದನ್ನು ಬಿಟ್ಟು ಒಂದು ಕಡೆ ನಮಗೆ 3 ತಿಂಗಳಿಗೊಮ್ಮೆ ಸಭೆ ಕರೆಯಿರಿ ಎಂದು ಹೇಳುವುದು, ಸಭೆ ಕರೆಯುವುದಕ್ಕೆ ಎಲ್ಲಿ ಕರೆಯಬೇಕು, ಸಭೆ ಕರೆಯುವುದಕ್ಕೆ ಸ್ಥಳವೇ ಇಲ್ಲ, ರಸ್ತೆ ರಸ್ತೆಯಲ್ಲಿ ಕರೆಯಬೇಕೇ, ಬೀದಿ ಬೀದಿಗಳಲ್ಲಿ ಕರೆಯಬೇಕೇ? ಎಲ್ಲಿ ಕರೆಯಬೇಕು ನಾವು? ಎಲ್ಲಿ ಸಭೆ ಕರೆಯಬೇಕೆಂದು ಇವತ್ತು ನಿರ್ಧಾರವಾಗಿಲ್ಲ, ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಿಗಾದರೂ ಒಂದು ಕಾರ್ಯಾಲಯ ಇದೆ, ಸಭೆ ಕರೆಯತಕ್ಕ ವ್ಯವಸ್ಥೆ ಇದೆ. ಅಂಥದ್ದರಲ್ಲಿ ಅವರನ್ನೇ ಮತ್ತೆ ನೀವು 20 ಅಂಶಗಳ ಕಾರ್ಯಕ್ರಮಕ್ಕೆ ಅಧ್ಯಕ್ಷರನ್ನಾಗಿ ಮಾಡಿರತಕ್ಕದ್ದು ಸರಿಯಲ್ಲ; ಸರ್ಕಾರ ಬಹಳ ಲೋಪ ಮಾಡಿದೆ; ಅಕ್ಷಮ್ಯ ಅಪರಾಧ ಮಾಡಿದೆ. ಶಾಸಕರಿಗೆ ಅಪರಾಧ ಮಾಡಿದ್ದೀರಿ, ಅವರ ಹಕ್ಕಿಗೆ ಚ್ಯುತಿ ತಂದಿದ್ದೀರಿ. ಆ ದೃಷ್ಟಿಯಿಂದ ನಾನು ಅಧ್ಯಕ್ಷರನ್ನು ಸರ್ಕಾರವನ್ನು ನೇರವಾಗಿ ಇದರ ಬಗ್ಗೆ ಉತ್ತರ ಕೊಡಬೇಕೆಂದು ಕೇಳುತ್ತಿದ್ದೇನೆ. ಅವರು ಉತ್ತರ ಕೊಡುವುದಕ್ಕಾಗುವುದಿಲ್ಲವೆಂದರೆ ನಾನು ವಿಧಿ ಇಲ್ಲದೆ ಧರಣಿ ಮಾಡಬೇಕಾಗುತ್ತದೆಂಬ ಮಾತನ್ನು ತಮಗೆ ಹೇಳುತ್ತಿದ್ದೇನೆ.

ಅಧ್ಯಕ್ಷರು : ಧರಣಿ ಬೇಡ, ಉಪ ಮುಖ್ಯ ಮಂತ್ರಿಗಳು ಹೇಳುತ್ತಾರೆ ಕೇಳಿ.

ಶ್ರೀ ವಾಟಾಳ್ ನಾಗರಾಜ್ : ಧರಣಿ ಅಲ್ಲದೆ ಬೇರೆ ಮಾತೇ ಇಲ್ಲ.

ಅಧ್ಯಕ್ಷರು : ಬಹಳ ಹೆತ್ತಾಯಿತು. ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇನ್ನೂ 3-4 ಜನ ಸದಸ್ಯರು ಕಾದಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಈ ಸಮಿತಿಗಳಿಗೆ ನಾರು ಯಾರೂ ಅಧ್ಯಕ್ಷರಾಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಮ್ಮ ಕೊಠಡಿಯಲ್ಲಿ ನಮ್ಮೆಲ್ಲರನ್ನು ಮೀಟಿಂಗ್ಗೆ ಕರೆಸಿದ್ದಿರಿ ಮುಖ್ಯ ಮಂತ್ರಿಗಳೂ ಕೂಡ ಬಂದಿದ್ದರು. ಇದನ್ನು ಪದೇಪದೇ ಹೇಳುವುದಕ್ಕೆ ನನಗೂ ಸರಿ ಕಾಣುವುದಿಲ್ಲ. ಆದರೆ ಒಂದು ಮಾತು; ತಾವು ತಮ್ಮ ಕೊಠಡಿಯಲ್ಲಿ ಮೀಟಿಂಗ್ • ಕರೆದಾಗ ಕೆಲವು ಮಾತುಗಳನ್ನು ಅವರು ಒಪ್ಪಿಕೊಂಡ ಮೇಲೆ ಈ ಸದನದಲ್ಲಿ ಬಂದ ತೀರ್ಮಾನ ಬೇರೆ ಆಗುತ್ತದೆಂದರೆ ಇದು ಸರಿಯಲ್ಲ. ಇಪ್ಪತ್ತು ಅಂಶಗಳ ಕಾರ್ಯಕ್ರಮದ ಬಗ್ಗೆ ಆ ದಿವಸ ಒಪ್ಪಿಕೊಂಡದ್ದು ಯಾರೇ ಆಗಲಿ ಶಾಸಕರು ಅಧ್ಯಕ್ಷರಾಗಬೇಕು ಎಂದು. ಅಲ್ಲಿ ಒಪ್ಪಿಕೊಂಡು ಇಲ್ಲಿ ಬಂದು ಇಂಪ್ಲಿಮೆಂಟೇಷನ್ ಬೇರೆ ಮಾಡಿದ್ದಾರೆ, ತಾಲ್ಲೂಕು ಪಂಚಾಯಿತಿ ಅಧ್ಯಕ್ಷರನ್ನು ಅಧ್ಯಕ್ಷರನ್ನಾಗಿ ಮಾಡಿದರೆ, ಹೇಗೆ? ಮೊನ್ನೆ ಕೂಡ ಹಾಗೇ ಆಯಿತು. ಕಾವೇರಿ ವಿಷಯದಲ್ಲಿ ತಮಗೆ ಗೊತ್ತಿದೆ, ಪುನಃ ನಾನು ಹೇಳಬೇಕಾಗಿಲ್ಲ. ಅಲ್ಲಿ ಒಳಗೆ ಹೇಳಿದ್ದುದು ಒಂದು, ಇಲ್ಲಿ ಸ್ಟೇಟ್ಮೆಂಟ್ ಕೊಟ್ಟದ್ದು ಒಂದು. ಹೀಗಾದರೆ ಹೇಗೆ? ನಾವು ಸದನ ನಡೆಯಲಿ ಎಂದು ಸಹಕಾರ ಕೊಡುವಾಗ ಅವರು ಹೇಗಾದರೂ ಕೇಳುತ್ತಾರೆ, ನಾವು ಏನು ಹೇಳಿದರೂ ನಡೆಯುತ್ತದೆಂಬ ಭಾವನೆಯನ್ನು ಸರ್ಕಾರದವರು ತಾಳಿದರೆ ಬಹಳ ಕಷ್ಟವಾಗುತ್ತದೆ.

ಏಕೆಂದರೆ, ನಾವು ಸೌಜನ್ಯದಿಂದ ಅವರು ಏನು ಹೇಳುತ್ತಾರೆ ಹೇಳಲಿ ಎಂದು ತಮ್ಮ ಎದುರಿಗೆ ಒಪ್ಪಿಕೊಂಡದ್ದು ಒಂದು ಮಾತು, ಆಮೇಲೆ ಇಲ್ಲಿ ಬಂದು ಸ್ಟೇಟ್ಮೆಂಟ್ ಬೇರೆ ಕೊಟ್ಟರು. 20 ಅಂಶಗಳ ಕಾರ್ಯಕ್ರಮವನ್ನು ಛೇಂಬರ್ನಲ್ಲಿ ಒಪ್ಪಿಕೊಂಡರು, ಇಲ್ಲಿ ಬಂದು ಬೇರೆ ರೀತಿ ಹೇಳಿದರು. ಈ ರೀತಿಯಾದರೆ ನಾವು ಹೇಗೆ ಕೆಲಸ ಮಾಜ ಬೇಕೆಂಬುದನ್ನು ತಾವೇ ಹೇಳಿ. ನಾಳೆ ಯಾವುದೇ ಒಂದು ವಿಷಯ

ಬಂದಾಗ ನಮ್ಮಿಂದ ಸಹಕಾರ ಅಪೇಕ್ಷೇ ಮಾಡಬಾರದು. ನಾನು ಬಹಳ ನೊಂದ ಮನಸ್ಸಿನಿಂದ ಈ ಮಾತು ಹೇಳುತ್ತಿದ್ದೇನೆ.

+ ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಕುರ್ಚಿಗಾಗಿ, ಸ್ಥಾನಮಾನಕ್ಕಾಗಿ ಶಾಸಕರು ಬಡಿದಾಡುತ್ತಿದ್ದಾರೆಂಬ ಸುದ್ದಿ ಕೇಳುವುದಕ್ಕೆ ನಮಗೆ ಇಚ್ಛೆ ಇಲ್ಲ. ಕಳೆದ 15 ವರ್ಷಗಳ ನನ್ನ ಅನುಭವದಲ್ಲಿ ಸದನದ ಒಳಗೆ ಮಾನ್ಯ ಸಭಾನಾಯಕರು ಏನಾದರೂ ಒಂದು ಮಾತು ಹೇಳಿದರೆ ಅಧ್ಯಕ್ಷರ ಕೊಠಡಿಯಲ್ಲಿ ಕುಳಿತು ವಿರೋಧ ಪಕ್ಷದ ನಾಯಕರ ಜೊತೆ ಚರ್ಚೆ ಮಾಡಿದರೆ ಅದನ್ನು ಅಕ್ಷರಶಃ ಅವರು ಹೇಳಿದಂಥ ಭರವಸೆಗಳನ್ನು ಈಡೇರಿಸಿ ಕೊಂಡು ಬಂದಿರತಕ್ಕ ಒಂದು ಸತ್ಸಂಪ್ರದಾಯವನ್ನು ನಾವು ಹಾಕಿಕೊಂಡು ಬಂದಿದ್ದೇವೆ. ನಾನು ತಮ್ಮಲ್ಲಿ ವಿನಂತಿಸುತ್ತೇನೆ, ಆಗದಿದ್ದರೆ ಆಗುವುದಿಲ್ಲವೆಂದು ಹೇಳಿ; ಕೊಠಡಿಯಲ್ಲಿ ಮಾತನಾಡಿದ ಮೇಲೆ ಸದನದ ಒಳಗೆ ಒಂದು ಮಾತು ಹೇಳಿದ ಮೇಲೆ ಅದಕ್ಕೆ ತದ್ವಿರುದ್ಧವಾದ ಆದೇಶಗಳು ಬಂದಾಗ ನಾವು ರಾಜ್ಯದ ಜನತೆಯ ಮುಂದೆ ತಲೆತಗ್ಗಿಸುವಂತಾಗುತ್ತದೆ. ಪತ್ರಿಕೆಯಲ್ಲಿ ಬೇರೆ ಬಂದಿರುತ್ತದೆ. ಅವರು ಕೊಟ್ಟಂಥ ಆಶ್ವಾಸನೆ ಬೇರೆ. ಈ ರೀತಿ ಇನ್ನೇನಾದರೂ ಬಂದಾಗ ಚುನಾಯಿತ ಪ್ರತಿನಿಧಿಗಳ ಬಗ್ಗೆ ಜನ ಸಂಶಯದಿಂದ ನೋಡುವಂಥ ಪರಿಸ್ಥಿತಿ ಉಂಟಾಗುತ್ತದೆ. ನಮ್ಮನ್ನು ಒಂದು ರೀತಿ ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವಂತದ್ದು ಸರಿಯಿಲ್ಲ. ದಯವಿಟ್ಟು ಈ ರೀತಿ ಆಗದಂತೆ ನೋಡಿಕೊಳ್ಳಿ. ಮಾನ್ಯ ವಾಟಾಳ್ ನಾಗರಾಜು ಅವರು ಸಂದರ್ಭಾನುಸಾರ ತಮ್ಮ ಗಮನಕ್ಕೆ ಸರ್ಕಾರದ ಗಮನಕ್ಕೆ ತರುವಂತ ಪ್ರಯತ್ನ ಮಾಡಿದ್ದಾರೆ. ಇನ್ನು ತಮಗೆ ಬಿಟ್ಟಿದ್ದು, ತಾವು ಏನು ಬೇಕಾದರೂ ಮಾಡಿ. ಇದು ಒಳ್ಳೆಯದಲ್ಲ, ಇದು ಆ ಕಡೆ ಯಾವುದೇ ಶಾಸಕರಿಗೆ ಗೌರವ ತರುವಂತ ಸಂಗತಿ ಅಲ್ಲ. ವಿರೋಧ ಪಕ್ಷದ ಶಾಸಕರು ಜಾಸ್ತಿ ಇದ್ದಾರೆ, ಇದರ ಮೂಲಕ ಅವರನ್ನೇ ಹತ್ತಿಕ್ಕುತ್ತೇವೆಂದು ಭಾವಿಸಿದ್ದರೆ ಅದು ವಾಪಸ್ಸು ತಿರುಗುಬಾಣವಾಗುತ್ತದೆ. ದಯವಿಟ್ಟು, ತಾವು ಅನುಭವ ಇರುವವರು, ಇದು ಈ ರೀತಿ ಆಗದಂತೆ ನೋಡಿಕೊಳ್ಳಿ ಎಂದು ಹೇಳುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ : ಈ ಬಗ್ಗೆ ನಾವು ಸಾಕಷ್ಟು ಚರ್ಚೆ ಮಾಡಿದ್ದೇವೆ. ಮಾನ್ಯ ಸಭಾನಾಯಕರು ಹೇಳಿದ್ದಾರೆ. ಶಾಸಕರ ಕಾರ್ಯನಿರ್ವಹಣೆಯ ಬಗ್ಗೆ ಅವರಿಗೆ ಇರತಕ್ಕ ಜವಾಬ್ದಾರಿ ಅವರ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವ ಬಗ್ಗೆ ಎಲ್ಲಾ ಪಕ್ಷದವರಿಗೆ ಇಂಥ ಪಕ್ಷದವರು ಎಂದು ಅಲ್ಲ, ಎಲ್ಲರಿಗೂ ಕಾಳಜಿ ಇದೆ. ಆದರೆ ಈಗ ನೀವು ಏನು ಬಹಳ ಜನ ಇದ್ದಾರೆಂದು ಹೇಳುತ್ತಿದ್ದೀರಿ, ನಿಮಗೆ ಮೆಂಬರ್ಸ್ಸ್ ಮಾಡುವುದಕ್ಕೆ ಅಲ್ಲ. ತಮ್ಮ ಮನಸ್ಸಿನಲ್ಲಿ ಆ ಸಂಶಯ ಇದ್ದರೆ ತೆಗೆಯಿರಿ. ಹೇಗೆ ಅಲ್ಲಿ ವಿದ್ಯುಕ್ತವಾಗಿ ಫಂಕ್ಷನ್ ಮಾಡಬೇಕು ಹೇಗೆ ಎಫೆಕ್ಟೀವ್ ಆಗಿ ಫಂಕ್ಷನ್ ಮಾಡಬೇಕೆಂಬ ಬಗ್ಗೆ ಚರ್ಚೆ ಮಾಡಿ. ಅದಕ್ಕೆ ಮಾನ್ಯ ಸಭಾನಾಯಕರು ಬಂದು ಈ ಬಗ್ಗೆ ಕೂಲಂಕುಷವಾಗಿ ಚರ್ಚೆ ಮಾಡದ್ದರ ಆಧಾರದ ಮೇಲೆ ಹೇಳುತ್ತಾರೆ. ಮಾನ್ಯ ನಾಗರಾಜು ಅವರಿಗೆ ನಾನು ಹೇಳಿದ್ದೇನೆಂದರೆ ಇದನ್ನು ಮೆದಲು ನಮಗೆ ತಿಳಿಸಿದರೆ ನಾವು ಮೊದಲೇ ಪ್ರಿಪೇರ್ ಆಗಿ ಬರುತ್ತೇವೆ ಎಂದು

ಶ್ರೀ ವಾಟಾಳ್ ನಾಗರಾಜ್ : ನಾನು ಏನು ಹೇಳುತ್ತೇನೆಂದರೆ, ಮಾನ್ಯ ಯಡಿಯೂರಪ್ಪನವರು ಹೇಳಿದ ಹಾಗೆ ನಮಗೆ ಇದು ಸ್ವಂತಿಕೆ ಏನೂ ಅಲ್ಲ.

ಅಧ್ಯಕ್ಷರು : ಸಭಾನಾಯಕರು ಬಂದ ಮೇಲೆ ಚರ್ಚೆ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ನಾನು ತಮ್ಮ ಮಾತಿಗೆ ಗೌರವ ಕೊಡುತ್ತೇನೆ. ಇದು ಹತ್ತಾರು ಬಾರಿ ಚರ್ಚೆಯಾಗಿದೆ. ಮಾನ್ಯ ಸಭಾನಾಯಕರು ನಮ್ಗೆ ಮುಖ ಕೊಟ್ಟು ಮಾತನಾಡತಕ್ಕ ಸೌಜನ್ಯ ಅವರಿಗೆ ಇಲ್ಲ, ಆದುದರಿಂದ ನಾನು ವಿಧಿ

ಇಲ್ಲದೆ ಧರಣಿ ಮಾಡಬೇಕಾಗಿದೆ. ಈ ದಿಸೆಯಲ್ಲಿ ಇಲ್ಲಿ ಎಲ್ಲಾ ಶಾಸಕರ ಹಕ್ಕನ್ನು ಮೊಟಕು ಮಾಡಿರತಕ್ಕ ಸಂದರ್ಭದಲ್ಲಿ ಪಕ್ಷಾತೀತವಾಗಿ ನಾನು ಧರಣಿ ಮಾಡಬೇಕೆಂದು ಹೊರಟಿದ್ದೇನೆ.

ಅಧ್ಯಕ್ಷರು : ಧರಣಿ ಬೇಡ, ಬೇರೆ ಏನಾದರೂ ಮಾಡಿ. ಸಭಾತ್ಯಾಗ ಹೇಳಿ.

(ಶ್ರೀ ವಾಟಾಳ್ ನಾಗರಾಜ್ ಅವರು ಈ ಹಂತದಲ್ಲಿ ಸಭಾಧ್ಯಕ್ಷರ ಮುಂದಿನ ಅಂಕಣದಲ್ಲಿ ಧರಣಿ ಹೂಡಿದರು)

ಅಧ್ಯಕ್ಷರು : ಮಾನ್ಯ ನಂಜೇಗೌಡರು ಏನೋ ಹೇಳುತ್ತಾರೆ ಕೇಳಿ, ಕೇಳದೆ ಹೋಗಿ ಕುಳಿತರೆ ಹೇಗೆ?

ಶ್ರೀ ಬಿ.ವಿ.ಶ್ರೀರಾಮರೆಡ್ಡಿ : ಈ ವಿಷಯದಲ್ಲಿ ಸ್ಪಷ್ಟವಾಗಿ ಅವರು ಹೇಳಿದರು. ತಾಲ್ಲೂಕು ಪಂಚಾಯಿತಿ ಸಮಿತಿ ಪ್ರತಿ ತಿಂಗಳು ನಡೆಯುತ್ತಿರತಕ್ಕದ್ದಕ್ಕೆ ಅವಕಾಶ ಇಟ್ಟು ಕೊಂಡು ಕೂಡ ಮತ್ತೇ ತಾಲ್ಲೂಕು ಪಂಚಾಯಿತಿ ಅಧ್ಯಕ್ಷತೆಯಲ್ಲಿ ಪ್ರತಿ ತಿಂಗಳು 20 ಅಂಶಗಳ ಕಾಕರ್ಯಕ್ರಮವನ್ನು ರೆವ್ಯೂ ಮಾಡಬೇಕೆಂದು ಇದೆಯಲ್ಲಾ ಅದು ಬೇಕು ಎಂದರೆ ಶಾಸಕರು ಅಧ್ಯಕ್ಷರಿರುವ ಸಮಿತಿಯನ್ನು ರದ್ದು ಮಾಡಿ. ನಾವು ಯಾರೂ ಇರುವುದಿಲ್ಲ.

ಅಧ್ಯಕ್ಷರು : ಎಲ್ಲರೂ ಎಕ್ಸಪರ್ಟ್ಸ್ ಆಗಿದ್ದಾರೆ. ಅದೇ ಬಂದಿರುವುದು ತೊಂದರೆ.

ಶ್ರೀ ಜಿ.ವಿ. ಶ್ರೀ ರಾಮರೆಡ್ಡಿ : ಅವರಿಗೆ ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಪ್ರತಿ ತಿಂಗಳು ಮೀಟಿಂಗ್ ಅಗತಕ್ಕ ಅವಶ್ಯಕತೆ ಇದ್ದರೆ ಶಾಸಕರ ಅಧ್ಯಕ್ಷತೆಯಲ್ಲಿ 3 ತಿಂಗಳಿಗೊಮ್ಮೆ ಮೀಟಿಂಗ್ ಮಾಡತಕ್ಕ ಅವಶ್ಯಕತೆ ಇಲ್ಲ, ಅದಾದರೂ ರದ್ದು ಮಾಡಿ ಅಥವಾ ಇದಾದರೂ ರದ್ದು ಮಾಡಿ.

ಅಧ್ಯಕ್ಷರು : ನಾಗರಾಜ್ ಅವು ಸವಿಸ್ತಾರವಾಗಿ ಹೇಳಿದ್ದಾರೆ. ನಾನು ಅವರಲ್ಲಿ ವಿನನಂತಿ ಮಾಡಿಕೊಂಡಿದ್ದೇನೆ, ಮಾನ್ಯ ಸಭಾನಾಯಕರು ಬಂದ ಮೇಲೆ ಅವರ ಹತ್ತಿರ ಕೇಳಿ ಎಂದು ಮತ್ತೇ ಮಾನ್ಯ ವಾಟಾಳ್ ನಾಗರಾಜು ಅವರಲ್ಲಿ ವಿನಂತಿಸಿ ಕೊಳ್ಳುತ್ತೇನೆ. ತಾವು ತಮ್ಮ ಸ್ಥಾನಕ್ಕೆ ಹಿಂದಿರುಗಬೇಕು ಎಂದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಸದನದಲ್ಲಿ ಈ ಕಡೆ ಆ ಕಡೆ ಇರತಕ್ಕ ಬಹುತೇಕ ಸದಸ್ಯರಿಗೆ ಮಾನ್ಯ ನಾಗರಾಜ್ ಅವರು ಹೇಳಿದಂಥ ಅಭಿಪ್ರಾಯಗಳು ಇವೆ.

ಅಧ್ಯಕ್ಷರು : ಅವರ ಮಾತಿನ ಕಳಕಳಿಯನ್ನು ನಾವು ಯಾರು ಅಲ್ಲಗಳೆಯುತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಏನು ಧರಣಿ ಕುಳಿತಿದ್ದೀರಿ, ನಿಮ್ಮ ಜೊತೆ ನಾವು ಪ್ರತ್ಯಕ್ಷವಾಗಿ ಬಾರದಿದ್ದರೂ ನಾವು ಕೂಡ ಧರಣಿ ಕುಳಿತ ಹಾಗೆ. ನಿಮ್ಮ ಭಾವನೆಗಳು ಏನಿದೆ ಅದಕ್ಕೆ ಸಂಪೂರ್ಣವಾಗಿ ಈ ಕಡೆ ಕುಳಿತಿರತಕ್ಕವರ ಬೆಂಬಲ ಇದೆ. ಮೊದಲಿನಿಂದ ನೀವು ಪ್ರಸ್ತಾಪ ಮಾಡಿದ್ದೀರಿ. ಸಭಾನಾಯಕರು ಬಂದಮೇಲೆ ಅನುಕೂಲಕರ ಉತ್ತರ ಸಿಗದಿದ್ದರೆ ಒಟ್ಟಾಗಿ ನಾವು ಏನು ಬೇಕಾದರೂ ನಿಮ್ಮ ಜೊತೆಯಲ್ಲಿ ತೀರ್ಮಾನ ಮಾಡೋಣ. ದಯವಿಟ್ಟು ಮುಂದಿನ ಕಾರ್ಯಕ್ರಮಕ್ಕೆ ಅನುಕೂರವಾಗಲಿ, ದಯವಿಟ್ಟು ತಾವು ಬರಬೇಕು.

(ಶ್ರೀ ವಾಟಾಳ್ ನಾಗರಾಜ್ ಅವರು ಧರಣಿ ಬಿಟ್ಟು ತಮ್ಮ ಸ್ಥಳಕ್ಕೆ ಹಿಂದಿರುಗಿದರು)

ಅಧ್ಯಕ್ಷರು : ನಾನು ಹೇಳಿದರೆ ಬರಲಿಲ್ಲ ಯಡಿಯೂರಪ್ಪನವರು ಹೇಳಿದತಕ್ಷಣ ಬಂದಿರಿ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಪುತ್ತೂರು ತಾಲ್ಲೂಕಿನಲ್ಲಿ ಕುಮಾರಧಾರಾ ಜಲ ವಿದ್ಯುತ್ ಯೋಜನೆ ಪ್ರಾರಂಭ

+ ಶ್ರೀ ಎಸ್. ಅಂಗಾರ (ಸುಳ್ಯ) : ಸಭಾಧ್ಯಕ್ಷರೆ, ಸುಳ್ಯ ವಿಧಾನಸಭಾ ಕ್ಷೇತ್ರ ಮೀಸಲು ಕ್ಷೇತ್ರವಾಗಿದ್ದು ಈ ಕ್ಷೇತ್ರಕ್ಕೆ ಸಂಬಂಧಪಟ್ಟ ಪುತ್ತೂರು ತಾಲ್ಲೂಕಿನ ಗುಂತೂರು ಗ್ರಾಮದಲ್ಲಿ ಕುಮಾರಧಾರಾ ಜಲವಿದ್ಯುತ್ ಯೋಜನೆಯಲ್ಲಿ ಕುಮಾರಧಾರಾ ನದಿಗೆ ಅಣೆಕಟ್ಟು ಕಟ್ಟುವಂಥ ಪ್ರಾಥಮಿಕ ಕೆಲಸ ಕಾರ್ಯ ಪ್ರಾರಂಭಗೊಂಡಿದೆ. ಆದರೆ ಈ ಕಾರ್ಯದ ಬಗ್ಗೆ ಯಾವುದೇ ಜನಪ್ರತಿನಿಧಿಗಳಿಗೆ ಇರಲಿ ಅಥವಾ ಯಾವುದೇ ಜನಗಳಿಗೆ ಇರಲಿ ಯಾವುದೇ ಸ್ಪಷ್ಟವಾದಂಥ ಮಾಹಿತಿಯನ್ನು ನೀಡದೆ ಅಲ್ಲಿ ಈ ಕಾರ್ಯ ಪ್ರಾರಂಭವಾಗಿರುವುದರಿಂದ ಅಲ್ಲಿ ಸಾಕಷ್ಟು ರೈತಾಪಿ ಜನಗಳು ಮತ್ತು ಕೂಲಿಕಾರ್ಮಿಕರಲ್ಲಿ ಗೊಂದಲ ಉಂಟಾಗಿದೆ. ಆದರೆ ಈ ಯೋಜನೆ ಏನಿದೆ ಈ ಯೋಜನೆಯನ್ನು ಪ್ರಾರಂಭಿಸುವಾಗ ಏತಕ್ಕೆ ಜನಪ್ರತಿನಿಧಿಗಳು ಮತ್ತು ಜನಗಳ ಒಂದು ಗಮನಕ್ಕೆ ತರದೆ ಈಗಾಗಲೇ ಈ ಕಾಮಗಾರಿಯನ್ನು ಪ್ರಾರಂಭ ಮಾಡಿದರು ಎನ್ನತಕ್ಕದ್ದು ಒಂದು ವಿಚಾರ. ಅದೇರೀತಿ ಈ ಅಣೆಕಟ್ಟಿನಿಂದಾಗಿ ಎಷ್ಟು ವಿಸ್ತೀರ್ಣ ಸ್ಥಳ ಮುಳುಗಡೆಯಾಗುವುದು ಮತ್ತು ಎಷ್ಟು ಕುಟುಂಬಗಳಿಗೆ ತೊಂದರೆಯಾಗುವುದು ಎಂಬ ಬಗ್ಗೆ ಸ್ಪಷ್ಟವಾದಂಥ ವಿವರಗಳನ್ನು ನೀಡಬೇಕು. ಅದೇರೀತಿಯಲ್ಲಿ ಈ ಅಣೆಕಟ್ಟಿನಿಂದಾಗಿ ಈ ವಿಧಾನಸಭಾ ಕ್ಷೇತ್ರದಲ್ಲಿ ಗೊಂದಲ ಉಂಟಾದ ಕಾರಣ ಜನಗಳಿಗೆ ಸ್ಪಷ್ಟವಾದ ಮಾಹಿತಿಯನ್ನು ನೀಡಬೇಕು. ಅಕಸ್ಮಾತ್ ಈ ಬಗ್ಗೆ ಮಾಹಿತಿಯನ್ನು ನೀಡದೇ ಹೋದಲ್ಲಿ ಅಲ್ಲಿ ಗೊಂದಲಗಳು ಮತ್ತು ಗಲಭೆಗಳಿಗೆ ಸರ್ಕಾರವೇ ಆಸ್ಪದ ಕೊಡುವಂಥ ಕೆಲಸವನ್ನು ಮಾಡಿದಂತಾಗುವುದು. ಆದ್ದರಿಂದ ಈ ಸಂದರ್ಭದಲ್ಲಿ ನಾನು ತಮ್ಮ ಮೂಲಕ ಜನಪ್ರತಿನಿಧಿಗಳು ಮತ್ತು ಜನಗಳಿಗೆ ಈ ಯೋಜನೆಯ ಸ್ಪಷ್ಟವಾದ ವಿವರಗಳನ್ನು ಕೊಡಬೇಕು. ಮತ್ತೆ ಯಾವುದೇ ರೈತಾಪಿ ಜನಗಳಿಗೆ ತೊಂದರೆ ಯಾಗುವಂಥ ಯೋಜನೆಯನ್ನು ಮಾಡಬಾರದು ಎನ್ನುವಂಥ ವಿನಂತಿಯನ್ನು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸುತ್ತೇನೆ.

ಶ್ರೀ ಡಿ.ವಿ. ಸದಾನಂದ ಗೌಡ : ಮಾನ್ಯ ಅಧ್ಯಕ್ಷರೆ....

ಅಧ್ಯಕ್ಷರು : ಅವರು ಹೇಳಿದ್ದಾರಲ್ಲಾ, ಸಾಕು.

ಶ್ರೀ ಡಿ.ವಿ. ಸದಾನಂದ ಗೌಡ : ಸ್ವಲ್ಪ ಮಾಹಿತಿ ಕೊಡುವಂಥ ಅವಶ್ಯಕತೆ ಇದೆ. ಸರ್ಕಾರ ಹೇಗೆ ಕದ್ದುಮುಚ್ಚಿ ಈ ಕೆಲಸವನ್ನು ಮಾಡುತ್ತಿದೆ ಎಂದು ಹೇಳುವುದಕ್ಕೆ...

ಸಭಾಧ್ಯಕ್ಷರು : ಅದಕ್ಕೆ ಸಪರೇಟ್ ನೋಟಿಸ್ ಕೊಡಿ. ಜೀರೋ ಹವರ್‌ನಲ್ಲಿ ಹಾಗೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಡಿ.ವಿ. ಸದಾನಂದ ಗೌಡ : ನಾವು ಇದಕ್ಕೆ ನೋಟೀಸ್ ಕೊಟ್ಟು ಸುಮಾರು 10-12 ದಿನಗಳು ಕಳೆಯಿತು. ಇನ್ನೂ ಕೂಡ ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶವಾಗಿಲ್ಲ, ನಮ್ಮ ಊರಿನಲ್ಲಿರುವಂಥ ರೈತಾಪಿವರ್ಗದ ಜನ ಈ ಸಂದರ್ಭದಲ್ಲಿ ಅದಕ್ಕೆ ಗೊಬ್ಬರ ಅದೆಲ್ಲಾ ಹಾಕಿ ಬೆಳೆ ಬೆಳೆಸಬೇಕು ಎಂದು ನಿಶ್ಚಯ ಮಾಡಿದ್ದಾರೆ ಅವರೆಲ್ಲಾ ಕಂಗಾಲಾಗಿದ್ದಾರೆ, ನಮ್ಮದೆಲ್ಲಾ ಮುಳುಗಡೆಯಾಗುತ್ತಿದೆ, ನಾವು ಏತಕ್ಕೆ ಕೃಷಿ ಮಾಡಬೇಕು ಅಲ್ಲಿ, ನಾವು ಕೃಷಿ ಮಾಡಬೇಕೋ ಬೇಡವೋ ಎನ್ನುವಂಥ ಗೊಂದಲದ ಹಂತದಲ್ಲಿರುವಂಥ ಸಂದರ್ಭದಲ್ಲಿ ನಾವು ರೈತಾಪಿ ಜನರ ಬಗ್ಗೆ ಏನಾದರೂ ಪ್ರಸ್ತಾಪ ಮಾಡಬೇಕಾಗಿದೆ. ನಾವು ಸರ್ಕಾರದಲ್ಲಿ ಕೇಳಿದೆವು. ತಾಲ್ಲೂಕು ಆಫೀಸಿನಲ್ಲಿ ಅದರ ಎದುರು ಸುಮಾರು ಎರಡು ಸಾವಿರ ಜನ ಸೇರಿ ಇದರ

ಮಾಹಿತಿ ಕೊಡಿ ಎಂದು ಕೇಳಿದರೆ ಅವರಿಗೆ ಗೊತ್ತಿಲ್ಲ. ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಕೇಳಿದರೆ ಅವರಿಗೆ ಗೊತ್ತಿಲ್ಲ. ಜಿಲ್ಲಾ ಪಂಚಾಯತ್ನಲ್ಲಿ ಕೇಳಿದರೆ ಅವರಿಗೆ ಗೊತ್ತಿಲ್ಲ ಸರ್ಕಾರದ ಹತ್ತಿರ ಬರೆದು ಕೇಳಿದರೂ ಸರ್ಕಾರ ಅದನ್ನು ಗಮನ ಮಾಡುತ್ತಿಲ್ಲ.

ಅಧ್ಯಕ್ಷರು : ಈಗ ನೀವು ಹೇಳಿದ್ದೂ ಏನೂ ಗೊತ್ತಾಗಲಿಲ್ಲ ಅವರಿಗೆ. ನೀವು ಹೇಳಬೇಕು ಎನ್ನುವ ಚಪಲಕ್ಕೆ ಹೇಳುತ್ತಾ ಹೋಗುವುದಾದರೆ ದಿವಸವೆಲ್ಲಾ ಭಜನೆ ಮಾಡಿ ನನ್ನದೇನೂ ಅಭ್ಯಂತರ ಇಲ್ಲ, ಯಾವುದಾದರೂ ಪ್ರಸ್ತಾಪ ಮಾಡುವ ಆ ವಿಚಾರ ಸರ್ಕಾರದ ಗಮನಕ್ಕೆ ಬರಬೇಕು. ನಿಮಗೆ ಅವಕಾಶ ಕೊಡುವ ಉದ್ದೇಶ ಏನೆಂದರೆ ನೀವು ಏನು ವಿಚಾರ ಪ್ರಸ್ತಾಪ ಮಾಡುತ್ತಾ ಇದ್ದೀರಿ, ಏತಕ್ಕಾಗಿ ಪ್ರಸ್ತಾಪ ಮಾಡುತ್ತಾ ಇದ್ದೀರಿ ಎಂಬುದು ಮೊದಲು ನಿಮಗೆ ಗೊತ್ತಾಗಬೇಕು. ಅನಂತರ ಕೇಳತಕ್ಕಂಥವರಿಗೆ ಗೊತ್ತಾಗಬೇಕು. ಯಾರಿಗೂ ಗೊತ್ತಾಗದಹಾಗೆ ಸುಮ್ಮನೆ ಬಡಬಡ ಅಂತ ಮಾತನಾಡುತ್ತಿದ್ದರೆ ಪ್ರಯೋಜನ ಏನು? ದಯಮಾಡಿ ತಾವು ಕುಳಿತುಕೊಳ್ಳಿ ಎಂದು ನಿಮಿಷ. ಹೀಗೆ ಮಾಡಿದರೆ The significance of zero Hour is totally gone,

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೇ ನಮಗೆ ಅವಕಾಶ ಕೊಡುತ್ತಿದ್ದೀರಿ. ಅದರ ಬಗ್ಗೆ ಎರಡು ಮಾತಿಲ್ಲ, ಹೊಸಬರಿಗೆ ಅವಕಾಶ ಕೊಡಬೇಕು ಎಂದು ತಾವು ಹೆಚ್ಚು ಗಮನ ಕೊಡುತ್ತಿದ್ದೀರಿ. ಅದರ ಬಗ್ಗೆ ಸಂಪೂರ್ಣ ನಮ್ಮ ಅಭಿನಂದನೆಗಳು ತಮಗೆ. ಇದರೇ ಏನಾಗಿದೆ ಅಧ್ಯಕ್ಷರೇ, ಅನೇಕ ಪ್ರಮುಖ ವಿಷಯಗಳು ಪ್ರಸ್ತಾಪ ಮಾಡುವುದಕ್ಕೆ ಆಗದೇ ಇದ್ದಾಗ ಜೀರೋ ಹವರ್ನಲ್ಲಿ ಪ್ರಸ್ತಾಪ ಮಾಡುತ್ತಾರೆ. ಸರ್ಕಾರ ಅದನ್ನು ಕೇಳಿ ತಕ್ಷಣ ಉತ್ತರ ಕೊಡುವುದಾದರೆ ಕೊಡಲಿ. ಇಲ್ಲದಿದ್ದರೆ ಆಮೇಲಾದರೂ ಕೊಡಲಿ. ಗಮನ ಕೊಡುತ್ತೇವೆ ಎಂದು ಹೇಳಲಿ.

ಅಧ್ಯಕ್ಷರು : ವಿರೋಧಪಕ್ಷದ ನಾಯಕರೇ, ಕೇಳಿ ದಯಮಾಡಿ. ಡೆಪ್ಯೂಟಿ ಚೀಫ್ ಮಿನಿಸ್ಟರ್ ಇಲ್ಲಿ ಕೂತಿದ್ದಾರೆ. ಅವರು ಆಗಿನಿಂದ ಏನು ವಿಷಯ ಏನು ವಿಷಯ ಯಾವುದು ಇದು, ನನ್ನ ಹತ್ತಿರ ಏನು ಇನ್ಫರ್ಮೇಷನ್ ಇಲ್ಲವಲ್ಲಾ ಎಂದು ಹೇಳುತ್ತಿದ್ದಾರೆ. ಅದಕ್ಕೆ ನಾನು ನನ್ನ ಸಿಬ್ಬಂದಿ ಮುಖಾಂತರ ಅವರಿಗೆ ಹೇಳಿ ಕಳುಹಿಸುತ್ತಿದ್ದೇನೆ. ಇಲ್ಲ, ಇದು ಜೀರೋ ಹವರ್ನಲ್ಲಿ ಮೆಂಬರ್ಸ್ ಬಂದು ನನ್ನ ಪರ್ಮಿಷನ್ ತೆಗೆದುಕೊಂಡು ರೈಸ್ ಮಾಡುತ್ತಿದ್ದಾರೆ ಅವರು ಮೆನ್ಷನ್ ಮಾಡಲಿ. ಅವರು ಅಂಗಾರರು ಮೆನ್ಷನ್ ಮಾಡಿದ್ದಾರೆ. ಅವರು ಕೇಳುತ್ತಿದ್ದಾರೆ. ಅಷ್ಟರಲ್ಲಿ ಮತ್ತೆ ಸದಾನಂದ ಗೌಡರು ಹೇಳುತ್ತಿದ್ದಾರೆ. ಹೀಗಾದರೆ ಏನೂ ಹೇಳುವುದಕ್ಕೇ ಆಗುವುದಿಲ್ಲ. ನಾನು ಏನು ಹೇಳುತ್ತೇನೆ ಅಂದರೇ ತಕರಾರು ಮಾಡುವುದಕ್ಕೆ ಜೀರೋ ಹವರ್ ಉಪಯೋಗಿಸಬೇಡಿ. ಬೇರೆ ಹವರ್ಸ್ ಇದ್ದಾವೆ. ರೂಲ್ಸ್ನಲ್ಲಿ ಬೇರೆ ಅವಕಾಶ ಇದೆ. ರೈಸ್ ಮಾಡುವುದಕ್ಕೆ ಮಾತ್ರ ನೀವು ಅವಕಾಶ ಉಪಯೋಗಿಸಿಕೊಳ್ಳಿ ಅಂದರೆ ನೀವು ಗಧಾಪ್ರಹಾರ ಎಲ್ಲಾ ಸಂದರ್ಭದಲ್ಲೂ ಮಾಡಿದರೆ ಏನು ಮಾಡುವುದಕ್ಕಾಗುತ್ತದೆ ಅವರು? ಯಾರು ಸರ್ಕಾರದಲ್ಲಿದ್ದರೂ ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೆ, ತಾವು ಕೆಲವು ಸದಸ್ಯರಿಗೆ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅನುಮತಿ ಕೊಡುತ್ತೀರಿ. ಅವರು ಅದನ್ನು ಪ್ರಸ್ತಾಪ ಮಾಡಲಿ. ಆ ಪ್ರಸ್ತಾಪ ಮಾಡುತ್ತಾ ಇರತಕ್ಕ ಸಂದರ್ಭದಲ್ಲಿ ಯಾವುದರ ಬಗ್ಗೆ ಪ್ರಸ್ತಾವ ಮಾಡಬೇಕು ಎಂದು ಹೇಳುವುದನ್ನು ಲಿಖಿತ ಮೂಲಕ ಒಂದು ಪತ್ರವನ್ನಾದರೂ ಕೊಡಲಿ. ಆ ಪತ್ರ ಬಂದಕೂಡಲೇ ನಮಗೆ ಅದರ ಕಾಪಿ ಕೊಡಿ. ಅದನ್ನಾದರು ಮಾಡಿ. ಇಲ್ಲದ ಇದ್ದರೆ ಅವರು ಎತ್ತುತ್ತಾ ಇರುವ

ವಿಚಾರಕ್ಕೆ ಸರ್ಕಾರದಿಂದ ಒಂದು ಉತ್ತರ ಬೇಕಲ್ಲಾ, ಸರ್ಕಾರದ ವತಿಯಿಂದ ಉತ್ತರ ಸಿಗದೇ ಇರತಕ್ಕ ಪರಿಸ್ಥಿತಿ ನಿರ್ಮಾಣ ಮಾಡಿದರೆ ನೀವು ಕೇಳಿರತಕ್ಕದ್ದು ಕಡತದಲ್ಲಿ ಹೋಗುತ್ತದೆ, ಕೆಲವು ಸಾರಿ ಉತ್ತರವೂ ಬರುವುದಿಲ್ಲ. ಯಾವುದಾನ್ನಾದರೂ ಪ್ರಸ್ತಾಪ ಮಾಡುವುದಕ್ಕೆ ತಾವು ಅನುಮತಿ ಕೊಟ್ಟಂಥ ಸಂದರ್ಭದಲ್ಲಿ ಲಿಖಿತ ಮೂಲಕ ಕೊಡಿ .ಆಗ ಸರ್ಕಾರಕ್ಕೂ ಒಂದು ಪ್ರತಿ ಬರುತ್ತದೆ. ಈ ಕೆಲಸ ದಯವಿಟ್ಟು ಮಾಡಿ

ಶ್ರೀ ಡಿ.ವಿ. ಸದಾನಂದ ಗೌಡ : ಅಧ್ಯಕ್ಷರೇ, ಒಂದು ಸ್ಪಷ್ಟೀಕರಣವನ್ನು ನಾನು ಬಯಸುತ್ತೇನೆ. ಏಕೆಂದರೆ ಈ ಜಲ ವಿದ್ಯುತ್ ಯೋಜನೆ ಬಗ್ಗೆ ಎರಡು ಬಾರಿ ತಮ್ಮನ್ನು ಭೇಟಿ ಮಾಡಿ ತಮಗೆ ಬರಹದ ಮೂಲಕ ಕೊಟ್ಟಂಥ ಸಂಗತಿ ತಮಗೆ ಗೊತ್ತಿದೆ. ಈಗ ಏನಾಗಿದೆ ಎಂದರೆ ಬರಹದ ಮೂಲಕ ಕೊಟ್ಟ ಹದಿನೈದು ದಿನಗಳ ನಂತರವೂ ಅಲ್ಲಿ ಈಗಾಗಲೇ ಕಾರ್ಯಕ್ರಮ ಆಗುತ್ತಾ ಇದೆ. ಅಲ್ಲಿ ಕಾಮಗಾರಿಗಳು ನಡೆಯುತ್ತಾ ಇದೆ. ರೈತಾಪಿ ವರ್ಗದ ಜನ ತೊಂದರೆಗೆ ಒಳಗಾಗಿದ್ದಾರೆ ಎಂಬ ಬಗ್ಗೆ ನಾನು ವೈಯಕ್ತಿಕ ಪತ್ರ ಬರೆದಿದ್ದೇನೆ. ಜಿಲ್ಲಾಧಿಕಾರಿಗಳನ್ನು ಕೇಳಿದರೂ ಮಾಹಿತಿ ಸಿಗುತ್ತಿಲ್ಲ. ಒಂದು ಶಾಸಕನಾಗಿ ಆ ಕ್ಷೇತ್ರದ ಜನತೆಗೆ ಇವತ್ತು ಕೃಷಿ ಮಾಡಬೇಕೋ ಬೇಡವೋ ಆ ಕ್ಲುಪ್ತ ಸಮಯದಲ್ಲಿ ಎಂಬ ಜಿಜ್ಞಾಸೆ ಬಂದಾಗ ಇದಕ್ಕೆ ನಮಗೆ ಉತ್ತರ ಸಿಗುತ್ತಿಲ್ಲ ಅಂದರೆ ನಾವು ಏತಕ್ಕೆ ಶಾಸಕರಾಗಿರಬೇಕು ಆ ಕ್ಷೇತ್ರದಲ್ಲಿ?

ಅಧ್ಯಕ್ಷರು : ಅವರು ಏನು ಹೇಳುತ್ತಿದ್ದಾರೆ ಎಂಬುದು ಗೊತ್ತಾಗಲೇ ಇಲ್ಲ. ಉಳಿದಿದ್ದೆಲ್ಲಾ ಭಾಷಣ ಮಾಡುತ್ತಿದ್ದಾರೆ. ನಾನು ಅದನ್ನೇ ಹೇಳುತ್ತಿದ್ದೇನೆ, ನಾನು ಅವರಿಗೆ ಸಹಕಾರ ಕೊಡುವುದಕ್ಕೆ ತಯಾರಿದ್ದರೂ ತೆಗೆದುಕೊಳ್ಳುವುದಕ್ಕೆ ಅವರು ತಯಾರಿಲ್ಲ.

ಶ್ರೀ ಡಿ.ವಿ. ಸದಾನಂದ ಗೌಡ : ಪ್ರಾರಂಭಿಕ ಹಂತದಲ್ಲೇ ಕುಮಾರಧಾರಾ ಜಲ ವಿದ್ಯುತ್ ಯೋಜನೆ ಎಂದು ಪ್ರಸ್ತಾಪ ಮಾಡಿದ್ದೇನೆ.

ಅಧ್ಯಕ್ಷರು : ಈಗ ನೀವು ಪ್ರಸ್ತಾಪ ಮಾಡಿದಿರಲ್ಲಾ, ಸರ್ಕಾರದ ಗಮನಕ್ಕೆ ಬಂದಿದೆ ಬಿಡಿ. ಪುಟ್ಟಣ್ಣಯ್ಯನವರೇ, ತಾವು ಯಾವದೋ ಒಂದು ವಿಚಾರ ಪ್ರಸ್ತಾಪ ಮಾಡಬೇಕು ಎಂದು ಹೇಳಿದಿರಲ್ಲಾ, ಸರಿಯಾಗಿ ಪ್ರಸ್ತಾಪ ಮಾಡದೇ ಹೋದರೆ ಅದರ ಪರಿಣಾಮ ಇಷ್ಟೇ ಆಗುರುದು ನಾನೇನೂ ಮಾಡುವುದಕ್ಕಾಗುವುದಿಲ್ಲ. It becomes a problem for me.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಸಭಾಧ್ಯಕ್ಷರೇ ತಮ್ಮ ಮೂಲಕ ಸರ್ಕಾರಕ್ಕೆ ಬಹಳ ಅತ್ಯಂತ ಜವಾಬ್ದಾರಿ ವಿಷಯವನ್ನು ಎರಡೂವರೆ ಮೂರು ತಿಂಗಳಿಂದ
ಅಧ್ಯಕ್ಷರು : ಕೃಷ್ಣಮೂರ್ತಿಯವರೇ, ಒಂದು ನಿಮಿಷ ಇರಿ. ಮುಖ್ಯಮಂತ್ರಿಗಳಿಲ್ಲ ಅವರ ಪರವಾಗಿ ಉಪಮುಖ್ಯಮಂತ್ರಿಗಳಿದ್ದಾರೆ. ಆಮೇಲೆ ಅವರ ಹತ್ತಿರ ಬಂದು ಮಾತನಾಡಿಕೊಳ್ಳಿ. ನಿಮ್ಮ ಚೀಟಿಗಳೂ ಏನಾದರೂ ಇದ್ದರೆ ಆಮೇಲೆ ಕೊಡಿ. ನಾನು ಅಧಿಕಾರರ ಸ್ವೀಕಾರ ಮಾಡಿದ ಮೊದಲನೇ ದಿವಸವೇ ಈ ಮಾತನ್ನು ಹೇಳಿದೆ. ದಯಮಾಡಿ ಸದನ ನಡೆಯುವಾಗ ಸದಸ್ಯರು ಬಂದು ಮಂತ್ರಿಗಳಿಗೆ ತೊಂದರೆ ಕೊಡಬೇಡಿ ಎಂದು. ಪ್ರಶ್ನೋತ್ತರ ವೇಳೆಯಲ್ಲಿ ಮಂತ್ರಿಗಳ ಪಕ್ಕ ಬಂದು ಕುಳಿತುಕೊಳ್ಳುತ್ತಾರೆ. ಇದರಿಂದ ನನಗೆ ತೊಂದರೆಯಾಗಿದೆ. ಪುಟ್ಟಣ್ಣಯ್ಯನವರೇ, ತಾವು ಮಾತನಾಡಿ.

2. ರಾಜ್ಯದಲ್ಲಿ ಹೆಚ್ಚಿನ ಕಬ್ಬು ಬೆಳೆದಿರುವುದರಿಂದ ಉಂಟಾಗಿರುವ ಪರಿಸ್ಥಿತಿ

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಸುಮಾರು ಎರಡೂವರೆ ಮೂರು ತಿಂಗಳಿಂದ ಸರ್ಕಾರದ ಗಮನಕ್ಕೆ ತಂದರೂ ಹೆಚ್ಚುವರಿ ಕಬ್ಬಿನ ಬಗ್ಗೆ ಸರ್ಕಾರ ಏನೂ ಆಲೋಚನೆ ಮಾಡಲಿಲ್ಲ. ಕರ್ನಾಟಕದಲ್ಲಿ ಸುಮಾರು 2 ಕೋಟಿ 15 ಲಕ್ಷ ಟನ್ ಕಬ್ಬನ್ನು ರೈತರು ಬೆಳೆಯುತ್ತಿದ್ದೆವು. 30 ಕಾರ್ಖಾನೆಯಲ್ಲಿ 1ಕೋಟಿ 15 ಲಕ್ಷ ಟನ್ ಕಬ್ಬನ್ನು ಮಾತ್ರ ಅರೆಯುವ ಸಾಮರ್ಥ್ಯ ಇದೆ. ಇನ್ನು ಖಂಡಸಾರಿ ಗಾಣಗಳು 60-65 ಟನ್ ಕಬ್ಬು ಅರೆದು ಇನ್ನೂ 30-35 ಲಕ್ಷ ಟನ್ ಹೆಚ್ಚುವರಿ ಕಬ್ಬು ಉಳಿದುಕೊಳ್ಳುವ ಪರಿಸ್ಥಿತಿ ಕರ್ನಾಟಕದಲ್ಲಿ ಉದ್ಭವವಾಗಿದೆ. ಈಗಾಗಲೇ ಕಬ್ಬು 16-17 ತಿಂಗಳು ಮೀರಿ ಹೋಗಿರತಕ್ಕ ವ್ಯವಸ್ಥೆಯಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಸಕ್ಕರೆ ಮಂತ್ರಿಗಳು ಹೆಚ್ಚುವರಿ ಕಬ್ಬು ಯಾವಯಾವ ಕಾರ್ಖಾನೆಗೆ ಬೇಕು ಅಂಥ ಕಾರ್ಖಾನೆಯ ಮೀಟಿಂಗನ್ನು ತ್ವರಿತವಾಗಿ ಕರೆದು ಹೆಚ್ಚುವರಿ ಕಬ್ಬನ್ನು ಯಾವ ರೀತಿ ಡೈವರ್ಷನ್ ಮಾಡಬೇಕೆಂಬುದು ಸರ್ಕಾರದ ಜವಾಬ್ದಾರಿ. ತಾವು ದಯವಿಟ್ಟು ಈ ಬಗ್ಗೆ ಕ್ರಮ ಕೈಗೊಳ್ಳಬೇಕು. ಮೂರು ತಿಂಗಳಿಂದ ಇದರ ಬಗ್ಗೆ ಯಾವುದೇ ಒಂದು ಗಂಭೀರವಾಗಿ ಕೆಲಸ ಮಾಡಲಿಲ್ಲ, ನಾನು ಅತ್ಯಂತ ಜವಾಬ್ದಾರಿಯುತವಾಗಿ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ. ಕ್ರಮ ಕೈಗೊಂಡರೆ ಸರ್ಕಾರಕ್ಕೂ ಗೌರವ ಬರುತ್ತದೆ, ಸಂಬಂಧಪಟ್ಟ ಇಲಾಖೆಗೂ ಗೌರವ ಬರುತ್ತದೆ. ಇವತ್ತು ಕರ್ನಾಟಕದಲ್ಲಿ ಕಬ್ಬಿನ ಬಗ್ಗೆ ಬೇಜಾವಾಬ್ದಾರಿತನ ಇಡಬಾರದು. ಇಲ್ಲದೆ ಇದ್ದರೇ ರೈತರು ಮೇನ್ ರೋಡಿಗೆ ಕಬ್ಬು ತಂದು ರಸ್ತೆಗೆ ಹಾಕಿಕೊಂಡು ಚಳುವಳಿ ಮಾಡತಕ್ಕ ಪರಿಸ್ಥಿತಿ ಸೃಷ್ಟಿಯಾಗುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಹೇಳಿದೆ. ಆಂಧ್ರದಲ್ಲಿ ಇದ್ದಂಥ ಪರಿಸ್ಥಿತಿ ಇವತ್ತು ಕರ್ನಾಟಕದಲ್ಲಿ ಆಗುತ್ತದೆ. ಎಷ್ಟೊಂದು ಕಷ್ಟ ಪರಿಸ್ಥಿತಿಯಲ್ಲಿದ್ದಾರೆಂದರೆ ಅದನ್ನು ಹೇಳುವುದಕ್ಕೆ ಅಸಾಧ್ಯ. ದಯವಿಟ್ಟು ಸರ್ಕಾರ ಇದರ ಬಗ್ಗೆ ತಮ್ಮ ನಿಲುವನ್ನು ಹೇಳಬೇಕು. ಗಂಭೀರವಾಗಿ ತಾವು ಆಲೋಚನೆ ಮಾಡಿ ಹೆಚ್ಚುವರಿ ಕಬ್ಬಿನ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವು ಏನು ಎಂಬುದನ್ನು ತಿಳಿಸಬೇಕು.

12.10 ಪಿ.ಎಂ.

ನಂತರ ಮೀಟಿಂಗ್ ಕರೆದರೆ, ಸಂಬಂಧಪಟ್ಟ ಶಾಸಕರನ್ನು ಕರೆದು ಯಾವ ರೀತಿ ಡೈವರ್ಶನ್ ಮಾಡಬಹುದು, ಯಾವ ರೀತಿ ಸರ್ಕಾರ ಬಗೆಹರಿಸಬಹುದು ಎಂಬ ಸಲಹೆಯನ್ನು ತೆಗೆದುಕೊಂಡು ಮಾಡಬೇಕು. ಈ ಕೆಲಸವನ್ನು ಬಹಳ ತ್ವರಿತವಾಗಿ ಮಾಡಬೇಕು. 3 ತಿಂಗಳಿನಿಂದ ಸರ್ಕಾರದ ಗಮನಕ್ಕೆ ತಂದರೂ, ಸರ್ಕಾರ ಕಬ್ಬು ಬೆಳೆಗಾರರ ಬಗ್ಗೆ ಬೇಜವಾಬ್ದಾರಿತನದಲ್ಲಿ ಇರುವುದನ್ನು ನೋಡಿದರೆ ಅದರ ಬಗ್ಗೆ ಸಮಂಜಸವಾದ ಉತ್ತರವನ್ನು ದಯವಿಟ್ಟು ಸಭಾಧ್ಯಕ್ಷರ ಮೂಲಕ ಕೊಟ್ಟರೆ ಅದು ಏನು ತೀರ್ಮಾನವೆಂದು ನಮಗೆ ಗೊತ್ತಾಗುತ್ತದೆ.

ಶ್ರೀ ಜೆ.ಹೆಚ್ ಪಟೇಲ್ (ಉಪಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ. ನಮ್ಮ ರಾಜ್ಯದಲ್ಲಿ ಕಬ್ಬು ಬೆಳೆಯತಕ್ಕಂಥ ಪ್ರದೇಶಗಳನ್ನು, ವಲಯಗಳನ್ನಾಗಿ ಹೇಳುವುದಾದರೆ ಮಂಡ್ಯ ಜಿಲ್ಲೆ ಮತ್ತು ಆ ವಿಭಾಗ, ಶಿವಮೊಗ್ಗ ಜಿಲ್ಲೆಯ ಶಿವಮೊಗ್ಗ ಮತ್ತು ಅದಕ್ಕೆ ಸಂಬಂಧಪಟ್ಟ ಹಾಗೆ ದಾವಣಗೆರೆ, ಹರಿಹರದ ಅಕ್ಕ ಪಕ್ಕ ಮತ್ತು ಬೆಳಗಾಂ ಜಿಲ್ಲೆ, ಈ ಮೂರು ವಲಯಗಳಲ್ಲಿರುವ ರೈತರ ಸಮಸ್ಯೆ ಏನು? ಕಬ್ಬಿನ ಸಮಸ್ಯೆ ಏನು? ಇದು ಮಾನ್ಯ ಸದಸ್ಯರಿಗೂ ಗೊತ್ತಿದೆ. ಸರ್ಕಾರಕ್ಕೂ ಗೊತ್ತಿದೆ. ಆದರೆ

ಇದನ್ನು ಒಂದು ಸರ್ವೇಸಾಮಾನ್ಯ ಫಾರ್ಮುಲ ಮಾಡುವುದಕ್ಕೆ ಆಗುತ್ತಿಲ್ಲ. ಏಕೆಂದರೆ ಒಂದೊಂದು ಏರಿಯಾದಲ್ಲಿ ಇರತಕ್ಕಂಥ ಕಬ್ಬಿನ ಕಾರ್ಖಾನೆಗಳು ಅವರವರ ಲಾಭ ನಷ್ಟದ ಆಧಾರದ ಮೇಲೆ, ಅವರವರ ಶಕ್ತಿ ಆಧಾರದ ಮೇಲೆ ಇವತ್ತು ನಿಂತಿವೆ. ಸರ್ಕಾರ ಏನು ಮಾಡಿದೆಯೆಂದರೆ ಇಳುವರಿ ಆಧಾರದ ಮೇಲೆ ಒಂದು ಬೆಲೆ ನಿಗದಿ ಮಾಡಿದೆ. ಇದು ಮಾನ್ಯ ಸದಸ್ಯರಿಗೂ ಗೊತ್ತಿದೆ. ನಾವು ಈಗ 8.5 ಶುಗರ್ ರಿಕವರಿ ಇದ್ದರೆ ಒಂದು ಟನ್‌ಗೆ ಇಷ್ಟು ಎಂದು ಮಾಡಬಹುದು. ಜಾಸ್ತಿ ಇದ್ದ ಕಡೆ ಇದು ಜಾಸ್ತಿಯಾಗಬಹುದು. ಬೆಳಗಾಂ ಜಿಲ್ಲೆಯವರಿಗೆ ಗೊತ್ತಿದೆ ಅಲ್ಲಿ ಜಾಸ್ತಿ ಇದೆ ಎಂದರೆ 12 ಪರ್ಸೆಂಟ್ ರಿಕವರಿ ಇದೆಯೆಂದು. ಆದ್ದರಿಂದ ಮಾನ್ಯ ಸದಸ್ಯರಿಗೆ ನಾನು ಹೇಳುವುದು ಇಷ್ಟೆ. ಎಲ್ಲಿ ಹೆಚ್ಚುವರಿ ದಾಸ್ತಾನು ಕಬ್ಬು ಇದೆ, ಈ ಹೆಚ್ಚುವರಿ ಕಬ್ಬು ಎಲ್ಲಾ ಈಗಾಗಲೇ ತಮಿಳುನಾಡಿಗೆ ಹೋಗಿದೆ, ಮಹರಾಷ್ಟ್ರಕ್ಕೆ ಹೋಗುತ್ತದೆ. ಇದನ್ನು ಸರ್ಕಾರ ನಿರ್ವಹಿಸುವುದು ಬಹಳ ಕಷ್ಟವಾಗುತ್ತದೆ. ಆದರೆ ನಾವು ಏನು ಹೇಳಬಹುದೆಂದರೆ, ನಾವು ಕಬ್ಬನ್ನು ಒಟ್ಟಿಗೆ ಹೊರಗಡೆಗೆ ಹೋಗುವುದಕ್ಕೆ ಬಿಡುವ ಹಾಗಿಲ್ಲ, ಹೊರಗಡೆ ಹೋಗುವುದಕ್ಕೆ ಅನುಮತಿ ಕೊಡುವುದಕ್ಕೆ ಯಾವ ಯಾವ ಏರಿಯಾದಿಂದ ಎಷ್ಟೆಷ್ಟು ಕಬ್ಬನ್ನು ಕೊಡಬಹುದು ಎನ್ನುವುದನ್ನು ಸರ್ಕಾರ ತೀರ್ಮಾನ ಮಾಡುತ್ತದೆ. ಇದು ಮಾನ್ಯ ಸದಸ್ಯರಿಗೂ ಕೂಡ ಗೊತ್ತಿದೆ. ಮಂಡ್ಯದಲ್ಲಿ ಹೆಚ್ಚುವರಿ ಕಬ್ಬು ಇದ್ದರೆ ಎಲ್ಲಿಗೆ ಹೋಗಬೇಕು? ಬೆಳಗಾಂ ಜಿಲ್ಲೆಯಲ್ಲಿ ಹೆಚ್ಚುವರಿ ಕಬ್ಬು ಇದ್ದರೆ ಎಲ್ಲಿಗೆ ಹೋಗಬೇಕು ಇದಕ್ಕೆ ಒಂದು ಸಭೆಯನ್ನು ಕರೆದು ವಿಚಾರಿಸೋಣ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಇಲ್ಲ, ಇಲ್ಲ, ನಾನು ದರದ ಬಗ್ಗೆ ತಮಗೆ ಪ್ರಶ್ನೆ ಮಾಡಲಿಲ್ಲ. ಬಹಳ ತ್ವರಿತವಾಗಿ ಮೀಟಿಂಗ್ ಕರೆಯಬೇಕು. ಈಗಾಗಲೇ ಎರಡೂವರೆ ಮೂರು ತಿಂಗಳಾಗಿದೆ. ಕಬ್ಬಿಗೆ ಆಗಲೇ 17 ತಿಂಗಳು ಆಗಿದೆ.

ಶ್ರೀ ಹೆಚ್.ಕೆ. ಪಟೇಲ್ : ಆಗಬಹುದು. ಮೀಟಿಂಗ್ ಕರೆಯಬಹುದು.

GANAPATHY PROCESSION IN BELGAUM

Sri B.I. PATIL : Mr. Speaker Sir, for the last 20 years the Ganapathy procession was being taken in Belgaum.....

Mr. SPEAKER : What is the problem? You have already told yesterday.

Sri B.I. PATIL : The Deputy Commissioner has agian issued a circular proposing new route for the Ganapathy Procession. This will cause law and order problem since the original route has been deviated. I want an assurance from the Hon'ble Minister to retain the Original route.

(The Hon'ble Member staged a Dharana in the Well of the House).

Mr. SPEAKER : I am appealing to you please come back to your seat. Assurance will be given. You come to my chambers. Don't you trust me? You are such a good friend of mine. You please come back to your seat.

(At this satge the Hon'ble Member withdrew from the well)

Mr. SPEAKER : The Hon. member is a gentleman and he has agreed with suggestion of the Chair.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೆ, ಇದು ಏನಾಗಿದೆಯೆಂದರೆ ನಿನ್ನೆ ಈ ವಿಚಾರ ಸಭೆಯಲ್ಲಿ ಪ್ರಸ್ತಾಪವಾಯಿತು. ಸರ್ಕಾರದ ವತಿಯಿಂದ ಒಂದು ಭರವಸೆ ಬಂತು. ಹೋದ ಸಾರಿ ಎಲ್ಲಿ ವರ್ಷಂಪ್ರತಿ ಗಣಪತಿಯನ್ನು ವಿಸರ್ಜನೆ ಮಾಡುತ್ತಿದ್ದರೋ ಅಲ್ಲಿಯೇ ಗಣಪತಿಯನ್ನು ವಿಸರ್ಜನೆ ಮಾಡುತ್ತಾರೆ, ಮೆರವಣಿಗೆ ತೆಗೆದುಕೊಂಡು ಹೋಗುವುದಕ್ಕೆ ಏನೂ ತೊಂದರೆಯಾಗುವುದಿಲ್ಲ, ಮಾಮೂಲು ನಡೆಯುವ ಹಾಗೆ ನಡೆದುಕೊಂಡು ಹೋಗುತ್ತದೆ ಎನ್ನುವಂಥ ಭರವಸೆ ಸರ್ಕಾರದಿಂದ ಬಂತು. ಇವತ್ತು ಬಿ.ಐ. ಪಾಟೀಲರು ಹೇಳುವಂಥದ್ದು ಏನೆಂದರೆ ನಿನ್ನೆ ಭರವಸೆ ಕೊಟ್ಟ ರೀತಿಯಲ್ಲಿ ಆಗುತ್ತಾ ಇಲ್ಲ. ಸ್ಥಳೀಯವಾಗಿ ಅಧಿಕಾರಿಗಳು ಅದಕ್ಕೆ ತದ್ವಿರುದ್ಧವಾಗಿ ಮಾಡುತ್ತಿದ್ದಾರೆ ಎನ್ನತಕ್ಕಂಥದ್ದು ಅವರು ಅಳಲು. ಅದು ಕ್ಲಾರಿಫೈ ಆಗಬೇಕು. ಸದನದಲ್ಲಿ ಒಂದು ಹೇಳಿಬಿಟ್ಟು ಅಲ್ಲಿ ಬೇರೆ ರೀತಿಯಾದರೆ ನಾವು ಸದನದಲ್ಲಿ ಹೇಗೆ ಸುಮ್ಮನಿರುವುದಕ್ಕೆ ಆಗುತ್ತದೆ? ಸ್ವಲ್ಪ ಕ್ಲಾರಿಫೈ ಮಾಡಿ. ಸದನದಲ್ಲಿ ಒಂದು ಹೇಳಿಕೆ ಕೊಟ್ಟ ಮೇಲೂ ಅದರಂತೆ ಆಗಬೇಕೋ? ಬೇಡವೋ? ಮಂತ್ರಿಗಳೆಂದರೆ ಒಂದು ತರಹ ಹೇಳಿಕೊಂಡು ಹೋಗುವುದು, ಅಧಿಕಾರಿಗಳು ಎಂದರೆ ತಮಗೆ ತಿಳಿದಂತೆ ಮಾಡುವುದು ಆಗಿಬಿಟ್ಟರೆ ಹೇಗೆ? ಈ ರೀತಿ ನಡೆದರೆ ಆಗುವುದಿಲ್ಲ. ಅದಕ್ಕೆ ವಾಸ್ತವವಾಗಿ ನಾನು ಇಲ್ಲಿ ಪಾರ್ಲಿಮೆಂಟರಿ ಸಿವಿಲ್ ಸರ್ವೀಸ್ ಚಾಪ್ಟರ್ ಓದುತ್ತಿದ್ದೆ. ಅವರ ಮೇಲೆ ಡೀಲ್ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಹೇಳುವುದು ಏನೆಂದರೆ ಮಂತ್ರಿಗಳು ಇಲ್ಲಿ ಒಂದು ಹೇಳಿಕೆ ಕೊಟ್ಟ ಮೇಲೆ ಸಿವಿಲ್ ಸರ್ವೆಂಟ್ಸ್ ಬೇರೆ ರೀತಿಯ ನಡವಳಿಕೆ ನಡೆದುಕೊಂಡರೆ ಅದು ತರವಲ್ಲ. ಅದಕ್ಕೆ ಸುಮ್ಮನಿರುವುದಕ್ಕೂ ಆಗುವುದಿಲ್ಲ ಸರ್ಕಾರ.

ಶ್ರೀ ಬಿ.ಎಸ್. ಯಡಿಯೂರಪ್ಪ : ಗೃಹ ಸಚಿವರು ಮಾತನಾಡಬೇಕಾದರೆ ಮಧ್ಯದಲ್ಲಿ ಒಂದು ಕ್ಲಾರಿಫೈ ಮಾಡಿದರು. ಅದೇನೆಂದರೆ 60-70 ವರ್ಷಗಳಿಂದ ಯಾವ ಒಂದು ಕೆರೆಯಲ್ಲಿ ಗಣಪತಿ ವಿಸರ್ಜನೆ ಆಗುತ್ತದೋ ಅಲ್ಲಿಯೇ ಮಾಡುವುದಕ್ಕೆ ನಮದೇನು ಅಭ್ಯಂತರ ಇಲ್ಲ ಎಂದು. ಮಾರ್ಗ ಸಹ ಅವರು ಹೇಗೆ ಹೋಗುತ್ತಿದ್ದರೋ ಹಾಗೆ ಹೋಗಲಿ ಎನ್ನುವ ಅರ್ಥದಲ್ಲಿ ಹೇಳಿದನ್ನು ನಾವು ದೂರವಾಣಿ ಮೂಲಕ ಸಂಪರ್ಕ ಮಾಡಿ ಎಲ್ಲರಿಗೂ ವಿಷಯವನ್ನು ತಿಳಿಸಿದೆವು. ಮಂತ್ರಿಗಳು ಏನು ಹೇಳಿದರೋ ಅದೇ ರೀತಿಯಲ್ಲಿ ಪತ್ರಿಕೆಯಲ್ಲೂ ಕೂಡ ಪ್ರಕಟವಾಗಿದೆ. ಯಾವ ಪೋಲಿಸ್ ಅಧಿಕಾರಿ ಬರ್ಮನ್ ಅವರು ಅಲ್ಲಿ ಹೋಗಿದ್ದಾರೆ, ಮತ್ತು 60-70 ವರ್ಷಗಳಿಂದ ಎಲ್ಲಿ ಗಣಪತಿ ವಿಸರ್ಜನೆ ಮಾಡುತ್ತಿದ್ದರೋ ಅಲ್ಲಿ ಮಾಡುವುದಕ್ಕೆ ಬಿಡುವುದಿಲ್ಲ, ಹೊಸದಾಗಿ ಕಟ್ಟಿದ ಕಡೆಯೇ ಬಿಡಬೇಕು ಎನ್ನುವ ನಿರ್ಬಂಧ ಹಾಕುವಂಥದ್ದು ಈ ತರಹ ಸುದ್ದಿಗಳು ಬಂದಿರುವುದರಿಂದ ಅಲ್ಲಿ ಮತ್ತೆ ಅಶಾಂತ ವಾತಾವರಣ ಉಂಟಾಗಿದದೆ. ನೀವು ಏನು ಇಲ್ಲಿ ಅಶ್ಯೂರೆನ್ಸ್ ಕೊಟ್ಟಿದ್ದೀರಿ ಅದು ಆಗುವ ರೀತಿಯಲ್ಲಿ ತಾವು ನೋಡಬೇಕು ಎಂಬುದು ಅವರದೂ ಅಪೇಕ್ಷೆ. ನಮ್ಮದೂ ಅಪೇಕ್ಷೆ. ಬೇರೆ ಏನೂ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ನಾನು ಏನು ಈ ಸದನದಲ್ಲಿ ಹೇಳಿದ್ದೇನೆ ಅದರ ಪ್ರಕಾರ ಅಧಿಕಾರಿಗಳು ಕೆಲಸವನ್ನು ಮಾಡುತ್ತಿದ್ದಾರೆ. ನಾನು ಹೇಳುವುದರಲ್ಲಿ ಅಲ್ಲಿ ಕೆಲಸ ಮಾಡುವುದರಲ್ಲಿ ಯಾವುದೇ ರೀತಿಯ ವ್ಯತ್ಯಾಸ ಇರುವುದಿಲ್ಲ ಎನ್ನತಕ್ಕಂಥ ಭರವಸೆಯನ್ನು ಇನ್ನೊಮ್ಮೆ ತಮ್ಮ ಮೂಲಕವಾಗಿ ಈ ಸದನಕ್ಕೆ ಮತ್ತು ಗೌರವಾನ್ವಿತ ಎಲ್ಲಾ ಸದಸ್ಯರಿಗೆ ಹಾಗೂ ವಿರೋಧ ಪಕ್ಷದ ನಾಯಕರಿಗೆ ನಾನು ಕೊಡುತ್ತಾ ಇದ್ದೇನೆ. ಮಾನ್ಯ ಬಿ.ಐ. ಪಾಟೀಲರೊಂದಿಗೆ ಈ ಸಭೆ ಪ್ರಾರಂಭ ಆಗುವುದಕ್ಕೆ ಮುಂದೆ ಅಲ್ಲಿರತಕ್ಕಂಥ ಪರಿಸ್ಥಿತಿ ಬಗ್ಗೆ ಸವಿಸ್ತಾರವಾಗಿ ನಾನು ಮಾತನಾಡಿದ್ದೇನೆ. ನಾನು ನಿನ್ನೆ ಒಂದು ಮಾತನ್ನು

ಹೇಳಿದ್ದೆ. ಈ ಸದನದಲ್ಲಿ, ಮಾನ್ಯ ಮುಖ್ಯಮಂತ್ರಿಗಳು ಬಂದಮೇಲೆ ಸಂಬಂಧಪಟ್ಟ ಎಲ್ಲಾ ಜಿಲ್ಲಾ ಶಾಸಕರುಗಳನ್ನು, ಎಲ್ಲಾ ಪಕ್ಷದ ಶಾಸಕರುಗಳನ್ನು ನಾವು ಕರೆದು ಇದರ ಬಗ್ಗೆ ಚರ್ಚೆ ಮಾಡಿ ಯಾವುದೇ ಸಮಸ್ಯೆ ಇಲ್ಲದೇ ಇರುವ ಹಾಗೆ ಇದನ್ನು ಬಗೆಹರಿಸಬೇಕು ಎನ್ನುವುದರ ಬಗ್ಗೆ ಚರ್ಚೆ ಮಾಡುತ್ತೇವೆ ಎಂದು ಹೇಳಿದ್ದೆವು. ಮಾನ್ಯ ವಿರೋಧ ಪಕ್ಷದ ನಾಯಕರಿಗೂ ಸಹಿತ ಈ ಸಭೆಗೆ ಬರಬೇಕು ಎನ್ನತಕ್ಕಂಥ ಮಾತನ್ನು ಹೇಳಿದ್ದೆ. ಅದೇ ತರಹ ನಾವು ನಡೆದುಕೊಳ್ಳುತ್ತೇವೆ. ಸಾಯಂಕಾಲದ ಒಳಗಡೆ ಉಳಿದ ನಾಯಕರನ್ನು ಸಹಿತ ನಾನು ಕರೆಸುತ್ತೇನೆ. ಕುಳಿತು ಚರ್ಚೆ ಮಾಡಿ ಎಲ್ಲರಿಗೂ ಸಮ್ಮತ ಆಗತಕ್ಕಂಥ ಈ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಪ್ರಯತ್ನವನ್ನು ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿವಸ ಈ ವಿಷಯ ಹೇಳಿದ್ದು ಸತ್ಯ. ಆವಾಗಲೇ ನಾನು ತಮಗೆ ಹೇಳಿದೆ. ಜಾಲಪ್ಪನವರೂ ಕೂಡ ಮುಖ್ಯಮಂತ್ರಿಯವರು ಬರಲಿ. ಅವರಿಗೆ ಕೇಳಿ ನಾನು ಮಾಡುತ್ತೇನೆಂದು ಹೇಳಿದರು. ನಿನ್ನೆ ಸಿಂಧ್ಯರವರು ಕೂಡ ಹೇಳಿದರು ಎಂದು ಹೇಳಿ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಆದರೆ ನಿನ್ನೆ ಒಂದು ಮಾತು ತಾವು ಹೇಳಿದಿರಿ. ಬಿ.ಐ. ಪಾಟೀಲರು ಏನು ಕೇಳಿದರು ಅಂದರೆ ಕನಿಷ್ಠ ಪಕ್ಷ ಈ ವರ್ಷ ಅದೇ ಮಾರ್ಗದಿಂದ ಅದೇ ಕೆರೆಗೆ ವಿಸರ್ಜನೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಹೇಳಿದರು. ಅದು ವಾದ ವಿವಾದ ನಡೆಯಿತು. ಕೊನೆಗೆ ಇದು ಒಂದು ವರ್ಷ ಅಲ್ಲಿಯೇ ಮಾಡಲಿ ಎನ್ನುವಂಥ ಮಾತನ್ನು ತಾವು ಹೇಳಿದಿರಿ. ಹೇಳಿದ ಮೇಲೆ ಅದೇ ರೀತಿ ಪತ್ರಿಕೆಯಲ್ಲಿ ಕೂಡ ಬಂತು.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನೇನು ಅದರ ಬಗ್ಗೆ ಡಿನೇ ಮಾಡುತ್ತಾ ಇಲ್ಲ, ಕೆರೆಯಲ್ಲಿ ವಿಸರ್ಜನೆ ಮಾಡಬೇಕು ಎನ್ನತಕ್ಕಂಥ ವಿಚಾರದಲ್ಲಿ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದಕ್ಕೆ ತಾವು ಹೇಳಿದಿರಿ. ಕೇಳಿದರ ಮೇಲೆ ಅದೇ ರೀತಿಯಾಗಿ ಅವರೂ ಕೂಡ ಒಪ್ಪಿಕೊಂಡು ನ್ಯಾಚ್ಯುರಲಿ ರೈಸ್ ಮಾಡಿದ ಪ್ರಶ್ನೆಗೆ ಉತ್ತರ ಸಿಕ್ಕಿತು ಎಂದು ಹೇಳಿ ಕುಳಿತುಕೊಂಡರು. ಇವತ್ತು ಅದೇ ರೀತಿಯಾಗಿ ಪತ್ರಿಕೆಯಲ್ಲಿ ಕೂಡ ಬಂತು. ಆದರೆ ನಿಮ್ಮ ಆಶ್ವಾಸನೆಗೆ ತದ್ವಿರುದ್ಧವಾಗಿ ಲೋಕಲ್ ಅಧಿಕಾರಿಗಳು ಸುತ್ತೋಲೆ ಕಳುಹಿಸಿದ್ದಾರೆ. ತಮಗೆ ಅವರು ಕಾಪಿಯನ್ನು ಕೂಡ ಕೊಟ್ಟಿದ್ದಾರೆ. ಅಂದರೆ ಇಲ್ಲಿ ಸಚಿವರು ಹೇಳುವುದು ಒಂದು, ಅಲ್ಲಿ ಸುತ್ತೋಲೆ ಹೊರಡಿಸುವುದು ಒಂದು. ಅದಕ್ಕಾಗಿ ಅಲ್ಲಿ ಮತ್ತೆ ಘರ್ಷಣೆ ಆಗುತ್ತದೆ. ತಾವು ಏನು ಹೇಳಿದಿರಿ ಅದರ ಪ್ರಕಾರ ನಡೆದುಕೊಳ್ಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸ್ವಾಮಿ ನಾನು ಹೇಳಿದ ಪ್ರಕಾರ ನಡೆದುಕೊಳ್ಳುವವನು. ನನಗೆ ಯಾವ ಸುತ್ತೋಲೆಯನ್ನು ಅವರು ತಂದುಕೊಟ್ಟಿಲ್ಲ, ಅಧ್ಯಕ್ಷರಿಗೆ ಬರೆದಿರತಕ್ಕಂಥ ಪತ್ರದ ಕಾಪಿಯನ್ನು ನನಗೆ ಕೊಟ್ಟಿದ್ದಾರೆ ಅಷ್ಟೆ. ಬೇರೆ ಏನೂ ಕೊಟ್ಟಿಲ್ಲ, ನಾನು ಮತ್ತೊಮ್ಮೆ ಹೇಳುತ್ತೇನೆ, ನಾನು ಏನು ಈ ಸದನದಲ್ಲಿ ನಿನ್ನೆ ಹೇಳಿದ್ದೇನೆ, ಅದರ ಪ್ರಕಾರವೇ ಎಲ್ಲವೂ ಸಹಿತ ಆಗುತ್ತದೆ. ಅಧಿಕಾರಿಗಳು ನಾನು ಹೇಳಿದ ಹಾಗೆ ಚಾಚೂ ತಪ್ಪದೆ ನಡೆದುಕೊಳ್ಳುತ್ತಾರೆ. ಅದರ ಬಗ್ಗೆ ನಾನು ಮತ್ತೊಮ್ಮೆ ಭರವಸೆ ಕೊಡುತ್ತಾ ಇದ್ದೇನೆ. ಕುಳಿತು ಸಭೆ ಮಾಡಿ ಚರ್ಚೆ ಮಾಡೋಣ. ತಾವೂ ಬನ್ನಿ ಒಂದು ಸಮಸ್ಯೆಗೆ ಪರಿಹಾರ ಕಂಡುಹಿಡಿಯೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗ ತಾವು 60-70 ವರ್ಷಗಳಿಂದ ಯಾವ ಒಂದು ಕೆರೆಯಲ್ಲಿ ವಿಸರ್ಜನೆ ಮಾಡುತ್ತಿದ್ದರೋ ಅಲ್ಲಿ ಮಾಡುವುದಕ್ಕೆ ನೀವು ಅವಕಾಶ ಕೊಟ್ಟರೆ ಮುಗಿದು ಹೋಯಿತು. ಆಮೇಲೆ ಇನ್ನು ಯಾವುದೇ ಬೇರೆ ವಿಷಯಗಳು

ಶಾಂತ ರೀತಿಯಲ್ಲಿ ಕಾರ್ಯಕ್ರಮಗಳು ನಡೆಯಬೇಕು ಎನ್ನುವುದಕ್ಕೆ ಎಲ್ಲಾ ರೀತಿಯ ಸಹಕಾರ ಕೊಡುತ್ತೇವೆ. ನಮ್ಮನ್ನೂ ಸಹ ಕರೆಯಿರಿ.

ಅಧ್ಯಕ್ಷರು : ಅವರ ನಿನ್ನೆಯ ಹೇಳಿಕೆಗೂ ಇವತ್ತು ಅಲ್ಲಿ ನಡೆಯುವುದಕ್ಕೂ ಏನೂ ವ್ಯತ್ಯಾಸ ಇರುವುದಿಲ್ಲ ಎಂದು ಹೇಳಿದ್ದಾರೆ. ಆದ್ದರಿಂದ Let us leave at that. ಸಚಿವರು ಹೇಳುವುದಕ್ಕೆ ವಿರುದ್ಧವಾಗಿ ನಡೆದರೆ ಸದನ ಇನ್ನೂ 20 ದಿವಸ ಇರುತ್ತದಲ್ಲಾ again you can raise the matter.

Sri B.I. Patil : Yesterday, again the Deputy Commissioner has sent a circular to take the procession in the new route.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಕೆರೆಯಲ್ಲಿ ವಿಸರ್ಜನೆ ಮಾಡಬಾರದೆಂದು ನಿನ್ನೆ ಪ್ರತಿಯೊಂದು ಸಂಸ್ಥೆಗೂ ಪೋಲೀಸ್ ನೋಟೀಸ್ ಕೊಟ್ಟಿರತಕ್ಕಂಥದ್ದು ಇದನ್ನು ಮುಂದುವರಿಸಿದ್ದಾರೆ ಶ್ರೀ ಬರ್ಮನ್‌ನವರು ಅಲ್ಲಿಗೆ ಹೋಗಿಬಿಟ್ಟು. ಇದರಿಂದ ರೂಟ್ ಬದಲಾವಣೆ ಮಾಡಿ ಆ ಕೆರೆಯಲ್ಲೇ ಮಾಡಬೇಕೆಂದು ಇಲ್ಲ ಈ ಒತ್ತಾಯ ಮಾಡುತ್ತಿರುವುದರಿಂದ ಅವರೂ ಪ್ರಸ್ತಾಪ ಮಾಡುತ್ತಾ ಇದ್ದಾರೆ ನಾವೂ ಪ್ರಸ್ತಾಪ ಮಾಡುತ್ತಾ ಇದ್ದೇವೆ. ಗೃಹಸಚಿವರು ಅಲ್ಲಿ ನಿನ್ನೆ ಹೇಳಿದಂತೆ ನಡೆಯುತ್ತದೆಂದು ಹೇಳುವುದಾದರೆ ನಮ್ಮದೇನೂ ಅಭ್ಯಂತರ ಇಲ್ಲ.

ಅಧ್ಯಕ್ಷರು : ಅವರದೇ ಜವಾಬ್ದಾರಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಧ್ಯಕ್ಷರೆ, ಈಗ ನಾವು ಏನು ಚರ್ಚೆ ಮಾಡಿದ್ದೇವೆ. ಇದರ ಬಗ್ಗೆ ಪ್ರಸ್ತಾಪ ಮಾಡಿದರೆ ಆ ಬಗ್ಗೆ ನನ್ನದೇನೂ ಆಕ್ಷೇಪ ಇಲ್ಲ. ನನಗೆ ಸಹಕಾರ ಆಗುತ್ತದೆ. ಲಾ ಅಂಡ್ ಆರ್ಡರ್ ಮೆಯಿಂಟೇನ್ ಮಾಡಲಿಕ್ಕೆ. ನಿಮ್ಮ ಸಲಹೆಯನ್ನೂ ಸಹಿತ ನಾವು ತೆಗೆದುಕೊಳ್ಳುತ್ತೇವೆ. ಸರ್ಕಾರ ಈ ವಿಚಾರದಲ್ಲಿ ಪ್ರೆಸ್ಟೇಜ್ ಪಾಯಿಂಟ್ ಮಾಡತಕ್ಕಂಥಾದ್ದು ಸಹಿತ ಏನೂ ಇಲ್ಲ. ನಾವು ಹೇಳಿದ್ದೇ ಸರಿ ಎಂದೂ ಹೇಳುತ್ತಿಲ್ಲ.

ಶ್ರೀ ಸುಭಾಷ್ ಎಸ್. ಜೋಷಿ : ಶ್ರೀ ಬಿ.ಐ. ಪಾಟೀಲ್‌ರವರು ಮಾತನಾಡಿದ್ದಾರೆ. ರೂಟ್ ಚೇಂಜ್ ಆಗಿದೆ. ಕಪಿಲೇಶ್ವರ ಸಲುವಾಗಿ ಏನೂ ತೊಂದರೆ ಇಲ್ಲ. ಆದರೆ ರೂಟ್ ಚೇಂಜ್ ಆಗಿರುವುದರಿಂದ ತೊಂದರೆಯಾಗುತ್ತಿದೆ ಎಂದು ಅವರು ಹೇಳಿದ್ದುದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಧ್ಯಕ್ಷರೇ, ಆ ರೂಟ್ ಚೇಂಜ್ ಆಗುವ ಪರಿಸ್ಥಿತಿ ಇಲ್ಲ. Final decision has not yet been taken by the Government. Now we are working out all the posibilities.

Mr. Speaker : O.K. Let us leave it. I am convinced.

3. ಬೇಡ ಜಂಗಮ ಹೆಸರಿನಲ್ಲಿ ಸವಲತ್ತುಗಳನ್ನು ಪಡೆದವರ ಮೇಲೆ ಕ್ರಮ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನಿನ್ನೆ ನಾನು ತಮ್ಮ ಕೊಠಡಿಯಲ್ಲಿ ಕೇಳಿಕೊಂಡಾಗ ತಾವು ಇದನ್ನು ಪ್ರಸ್ತಾಪ ಮಾಡಬಹುದು ಎಂದು ಅನುಮೋದನೆ ಕೊಟ್ಟಿದ್ದಕ್ಕಾಗಿ ಅಭಿನಂದಿಸುತ್ತೇನೆ. ಅದೇ ಸಂದರ್ಭದಲ್ಲಿ ಇವತ್ತು ರಿಸರ್ವೇಷನ್ ನಮ್ಮ ಸಂವಿಧಾನದ ಪ್ರಕಾರ ಆರ್ಟಿಕಲ್ 330, 332, 335ರ ಪ್ರಕಾರ ಶೆಡ್ಯೂಲ್‌ನಲ್ಲಿ ಕೆಲವು ಕಮ್ಯುನಿಟಿಗಳನ್ನು ಸೇರಿಸಿ ಶೆಡ್ಯೂಲ್ಡ್ ಕಾಸ್ಟ್ ಲಿಸ್ಟನ್ನು ಮಾಡಿದ್ದಾರೆ. ಆ ಶೆಡ್ಯೂಲ್ಡ್ ಕಾಸ್ಟ್ ಲಿಸ್ಟ್‌ನಲ್ಲಿ ಅದು ತಮಗೆ ಗೊತ್ತಿದ್ದ ಹಾಗೆ ಪ್ರತಿ ರಾಜ್ಯಕ್ಕೆ ಬೇರೆ ಬೇರೆ ಪಟ್ಟಿಗಳು ಇವೆ. ಇಲ್ಲೂ ಕೂಡ ಶೆಡ್ಯೂಲ್ಡ್ ಕಾಸ್ಟ್ ಲಿಸ್ಟ್ ಒಂದು ಇದೆ. ಅದರ ಪ್ರಕಾರ ಅದರೊಳಗೆ, ಈ ಬೇಡ ಜಂಗಮ,

ಬುಡುಗ ಜಂಗಮ ಎನ್ನತಕ್ಕಂತಹ ಕಮ್ಯುನಿಟಿಯನ್ನು ಸೇರಿಸಿದ್ದಾರೆ. ಅದು ಏಕೆ ಸೇರಿತು ಅಂದರೆ, ಹಿಂದೆ ಹೈದ್ರಾಬಾದ್ ಸ್ಟೇಟ್‌ನಲ್ಲಿ ತೆಲಂಗಾಣ ಭಾಗದಲ್ಲಿ ಈ ಬೇಡ ಜಂಗಮ, ಬುಡುಗ ಜಂಗಮ ಎನ್ನುವ ಜಾತಿಗಳು ಇದ್ದವು. ಅದಕ್ಕಾಗಿ ಆ ಒಂದು ಆಧಾರದ ಮೇಲೆ, ನಮ್ಮ ರಾಜ್ಯ ಪುನರ್ ವಿಂಗಡಣೆಯಾದ ಮೇಲೆ ಅಥವಾ ಇಂಟಗ್ರೇಷನ್ ಆದ ಮೇಲೆ ಆ ಕಡೆ ಇರತಕ್ಕ ಕಮ್ಯುನಿಟಿಗಳು, ಏಕೆಂದರೆ ಗುಲ್ಬರ್ಗ, ಬೀದರ್ ಹಾಗೂ ರಾಯಚೂರು ಭಾಗಗಳು ಈ ಕಡೆ ಬಂದ ಮೇಲೆ ಆ ಲಿಸ್ಟ್‌ನಲ್ಲಿರತಕ್ಕ ಜಾತಿಗಳು ಹಾಗೆಯೇ ಉಳಿದವು. ಆದರೆ ಈ ಮಧ್ಯದಲ್ಲಿ ನಾನು ಅಭಿನಂದಿಸುತ್ತೇನೆ, ಮಾನ್ಯ ಜೆ.ಹೆಚ್. ಪಟೇಲ್‌ರವರಿಗೆ ಅವರು ಇದರ ಬಗ್ಗೆ ಓಪನ್ನಾಗಿಯೇ ಕಂಡಂ ಮಾಡಿದ್ದಾರೆ. ಯಾರು ಕೆಲವು ವೀರಶೈವ ಲಿಂಗಾಯಿತರು, ಇದನ್ನು ಜಂಗಮ ಇರತಕ್ಕಂತಹವರು ಬೇಡ ಜಂಗಮ ಸರ್ಟಿಫಿಕೇಟ್ ತೆಗೆದುಕೊಂಡು ಈ ಸವಲತ್ತುಗಳನ್ನು ಪಡೆದುಕೊಳ್ಳತಕ್ಕಂತಹವರ ಬಗ್ಗೆ ಅವರು ಕಟುವಾಗಿ ಟೀಕಿಸಿದ್ದಾರೆ.

ಅದೇ ರೀತಿ ಸಿರಿಗೆರೆ ಸ್ವಾಮಿಗಳೂ ಕೂಡ ಟೀಕಿಸಿದ್ದಾರೆ. ಅದೇ ರೀತಿ ಕುಮಾರಸ್ವಾಮಿ, ಧಾರವಾಡ ಇವರೂ ಕೂಡ ಟೀಕಿಸಿದ್ದಾರೆ. ಹೀಗೆ ಅನೇಕ ಪ್ರಗತಿಪರ ವಿಚಾರ ಇರತಕ್ಕಂತಹವರು ಈ ಬಡವರ ಬಗ್ಗೆ ಸ್ವಲ್ಪ ತಿಳಿದುಕೊಂಡಂತಹವರು, ವಿದ್ಯಾವಂತರು ಇವತ್ತು ಪ್ರಾಮಾಣಿಕತೆಯಿಂದ ಇವರಿಗೆ ಸಹಾಯ ಸಿಕ್ಕಬೇಕು ಎನ್ನತಕ್ಕ ವಿಚಾರಧಾರೆಯುಳ್ಳವರು ಇವತ್ತು ಕಂಡಂ ಮಾಡಿದ್ದಾರೆ. ಆದರೆ ಕೆಲವು ಜನ ಇದರ ಲಾಭವನ್ನು ಪಡೆದುಕೊಂಡು ಇಷ್ಟೊಂದು ಗಲಾಟೆ ನಡೆದಿದೆ ಎಂದು ಗೊತ್ತಿದ್ದರೂ ಕೂಡ ಮೊನ್ನೆ ಮೆಡಿಕಲ್ ಸೆಲೆಕ್ಷನ್ ಆಯಿತು. ಆ ಮೆಡಿಕಲ್ ಸೆಲೆಕ್ಷನ್‌ನಲ್ಲಿ ಸುಮಾರು 9 ಜನ ಈ ಬೇಡ ಜಂಗಮ, ಬುಡುಗ ಜಂಗಮ ಎನ್ನುವ ಸರ್ಟಿಫಿಕೇಟ್ ತೆಗೆದುಕೊಂಡು ಕೆಲವು ಜಂಗಮ ಜನ ಇವತ್ತು ಆ ಮೆಡಿಕಲ್ ಸೀಟನ್ನು ತೆಗೆದುಕೊಂಡಿದ್ದಾರೆ. ಅದೇ ರೀತಿಯಾಗಿ ಕೆಲವು ಕಡೆ ಲೆಕ್ಚರರ್ಸ್, ಕೆಲವು ಕಡೆ ಸರ್ಕಾರಿ ನೌಕರರು ಕೂಡ ಇವತ್ತು ಅಪಾಯಿಂಟ್‌ಮೆಂಟ್‌ನಲ್ಲಿ ಹೋಗಿದ್ದಾರೆ. ಎಲ್ಲಿಯವರೆಗೆ ಹೋಗಿದೆ ಅಂದರೆ, ಕೆಲವು ಕಡೆ ಮುನ್ಸೀಫ್ ಕೂಡ ಇದೇ ಹೆಸರಿನಲ್ಲಿ ಆಗಿದ್ದಾರೆ. ನಾನು ಕೋ-ಆಪರೇಷನ್ ಮಿನಿಸ್ಟರ್ ಇದ್ದಾಗ ರಾಮಾಜೋಯಿಸ್‌ರವರು ಕೆಲವು ದಿವಸ ನಮ್ಮ ಚೀಫ್ ಜಸ್ಟೀಸ್ ಆಗಿದ್ದರು. ಅವರಿಗೆ ನಾನು ಸ್ವತಃ ಅವರ ಛೇಂಬರ್‌ಗೆ ಹೋಗಿ ಭೇಟಿಯಾದೆ. ಸರ್ ನೀವು ಇದ್ದಲ್ಲೇ ನಿಮ್ಮಲ್ಲೇ ಈ ರೀತಿಯಾಗಿ ರಿಕ್ರೂಟ್‌ಮೆಂಟ್ ಆದರೆ, ಕ್ಲರ್ಕ್, ಮುನ್ಸೀಫ್‌ಗಳು ಬೇಡ ಜಂಗಮ ಎಂದು ಹೇಳಿ ಜಂಗಮರಿಗೇ ಅಪಾಯಿಂಟ್‌ಮೆಂಟ್ ಮಾಡಿದರೆ ಇದು ಅನ್ಯಾಯವಾಗುತ್ತದೆ, ಇದಕ್ಕೆ ನೀವು ಏನಾದರೂ ಮಾರ್ಗ ಕಂಡು ಹಿಡಿಯಬೇಕು ಎಂದು ಹೇಳಿ ನಾನು ಮಿನಿಸ್ಟರ್ ಆಗಿ ಅವರ ಚೇಂಬರ್‌ಗೆ ಹೋಗಿ ಇದರ ಬಗ್ಗೆ ಪ್ರಸ್ತಾಪ ಮಾಡಿದಾಗ ಅವರು ಹೇಳಿದರು, ಏನು ಮಾಡಬೇಕು? ಕೆಲವು ಜನ ಇದರ ಉಪಯೋಗ ತೆಗೆದುಕೊಂಡಿದ್ದಾರೆ. ನಾನು ಇದನ್ನು ಯಾವ ರೀತಿಯಾಗಿ ಪರಿಹರಿಸಬೇಕು ಎನ್ನತಕ್ಕಂತಹದ್ದು ಗೊತ್ತಿಲ್ಲ. ಇದನ್ನು ಎಗ್ಸಾಮಿನ್ ಮಾಡಿಸುತ್ತೇನೆ ಎಂದು ಹೇಳಿ ಅವರು ಅಡ್ವೋಕೇಟ್ ಜನರಲ್ ಕರೆಯಿಸಿ ಮಾತನಾಡುತ್ತೇನೆ ಎಂದು ಹೇಳಿದರು. ಆಮೇಲೆ ಅವರ ವರ್ಗಾವಣೆಯೂ ಆಯಿತು. ಮುಂದೆ ಆ ವಿಷಯ ಅದೇ ರೀತಿಯಾಗಿ ಬೆಳೆದುಕೊಂಡು ಬಂದ ಮೇಲೆ ಕೊನೆಗೆ ಬ್ಯಾಕ್‌ಲಾಗ್ ಆದರೂ ಫಿಲ್ ಅಪ್ ಆಗಲಿ ಎಂದು ಹೇಳಿದಾಗ ನಮ್ಮ ಮೊಯಿಲಿಯವರು ಒಂದು ಸ್ಕೀಮು ತಂದು 18 ಜನ ಮುನ್ಸೀಫ್‌ಗಳನ್ನು ಒಂದೇ ಸಾರಿ ನೇಮಕ ಮಾಡತಕ್ಕಂತಹ ಒಂದು ಕೆಲಸ ಆಯಿತು. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಕೆಲವು ಅನುಕೂಲಸ್ಥರು, ಯಾರು ಈ ಲಿಸ್ಟ್‌ನಲ್ಲಿ ಬರುವುದಿಲ್ಲ, ನಾವು ಆ ಲಿಸ್ಟ್‌ನಲ್ಲಿ ಸೇರುತ್ತೇವೆ, ನಮಗೆ ಈ ಸವಲತ್ತು ಕೊಡಿ ಅಂದರೆ ಇದು ಬಹಳ ದೊಡ್ಡ ಅನ್ಯಾಯ ಆಗುತ್ತದೆ, ಮತ್ತು ನಾವೆಲ್ಲರೂ ಕಣ್ಣುಮುಚ್ಚಿಕೊಂಡು ಕೂಡುವುದಕ್ಕಾಗುವುದಿಲ್ಲ. ಇದು ಕೇವಲ ಯಾವುದೇ

ಒಂದು ಪೋಸ್ಟಿಗಾಗಲಿ, ಯಾವುದೋ ಒಂದು ಸೀಟಿಗಾಗಲಿ, ಅಥವಾ ಮೆಡಿಕಲ್ ಸೀಟಿಗಾಗಲಿ, ಸೀಮಿತವಾಗಿ ಉಳಿದಿಲ್ಲ.

ಇಂಜಿನೀಯರಿಂಗ್ ಸೀಟಿಗಾಗಿ ಸೀಮಿತವಾಗಿ ಉಳಿದಿಲ್ಲ. ಅಪಾಯಿಂಟ್‌ಮೆಂಟ್ ಆಗುತ್ತಾ ಇದ್ದಾವೆ, ಕೆಲವು ಕಡೆ ಇದೇ ಸರ್ಟಿಫಿಕೇಟ್ ತೆಗೆದುಕೊಂಡು ಎಲೆಕ್ಷನ್‌ನಲ್ಲೂ ಕೂಡ ಕಂಟೆಸ್ಟ್ ಮಾಡುವುದಕ್ಕೆ ಬಂದಿದ್ದಾರೆ. ಬೀದರ್ ಪಾರ್ಲಿಮೆಂಟರಿ ಸೀಟಿಗೆ ಒಬ್ಬರು ಬೇಡ ಜಂಗಮ ಸರ್ಟಿಫಿಕೇಟನ್ನು ತೆಗೆದುಕೊಂಡು ಬಂದು ಕಂಟೆಸ್ಟ್ ಮಾಡಿದ್ದರು. ಇಂತಹ ದೊಡ್ಡ ಅನ್ಯಾಯ ಇವತ್ತು ನಡೆದಿದೆ. ಅದಕ್ಕೆ ಸ್ಪಷ್ಟವಾಗಿ ಇದರ ಬಗ್ಗೆ ಒಂದು ಸುತ್ತೋಲೆ ಹೋಗಬೇಕು. ಎಂತಹ ಸುತ್ತೋಲೆ ಅಂದರೆ ಯಾರು ಈ ಒಂದು ಬೇಡ ಜಂಗಮ, ಬುಡುಗ ಜಂಗಮ ಫಾಲ್ಸ್ ಸರ್ಟಿಫಿಕೇಟ್ ತೆಗೆದುಕೊಂಡು ಮತ್ತು ಜಂಗಮರು ಆ ಸರ್ಟಿಫಿಕೇಟ್‌ಗಳನ್ನು ತೆಗೆದುಕೊಂಡು ಇವತ್ತು ಯಾವುದೇ ಒಂದು ಸವಲತ್ತನ್ನು ಪಡೆದುಕೊಂಡರೆ, ಅವರಿಗೆ ಶಿಕ್ಷೆಯಾಗಬೇಕು. ಎರಡನೆಯದು ಯಾವ್ಯಾವುದನ್ನು ಕೊಟ್ಟಿದ್ದೀರಿ, ಅದನ್ನು ವಿತ್ ಡ್ರಾ ಮಾಡಬೇಕು. ಏಕೆಂದರೆ ಕೆಲವು ವೋಕಲ್ ಸೆಕ್ಷನ್ ಇದೆ ಎಂದು ಹೇಳಿ ಒಂದು ಕಾನ್ಫರೆನ್ಸ್ ಮಾಡುವುದು. ದೊಡ್ಡ ದೊಡ್ಡವರನ್ನು ಕರೆಸುವುದು, ಅಲ್ಲಿ ಕಮಿಟ್‌ಮೆಂಟ್ ತೆಗೆದುಕೊಳ್ಳುವುದು ಇದರಿಂದ ಏನಾಗುತ್ತದೆ ಅಂದರೆ ದೊಡ್ಡ ಅನ್ಯಾಯವಾಗುತ್ತದೆ. ನಾನು ತಮ್ಮ ಗಮನಕ್ಕೆ ತರುತ್ತೇನೆ, ಅಂತ್ರಾಪಾಲಜಿಸ್ಟ್ ಕೂಡ ಒಂದು ಲಿಸ್ಟ್ ಮಾಡಿದ್ದಾರೆ. ಪ್ರತಿಯೊಂದು ಜಿಲ್ಲೆಯ ಗೆಜೆಟ್‌ಯರ್ ಇದೆ. ಅದೇ ರೀತಿಯಾಗಿ ಅಖಿಲ ಭಾರತದಲ್ಲೂ ಕೂಡ ಈ ಷೆಡ್ಯೂಲ್ಡ್ ಕಾಸ್ಟ್ ಷೆಡ್ಯೂಲ್ಡ್ ಟ್ರೈಬ್ಸ್‌ನ ಸರ್ವೇ ಮಾಡಿದ್ದಾರೆ ಕಮ್ಯುನಿಟಿವೈಸ್. ಅದಕ್ಕೆ ಡೆಫನ್‌ಷನ್ಸ್ ಕೂಡ ಕೊಟ್ಟಿದ್ದಾರೆ. ಬುಡುಗ ಜಂಗಮ ಅಂದರೇನು, ಬೇಡ ಜಂಗಮ ಅಂದರೇನು ಅಥವಾ ಬೇರೆ ಬೇರೆ ಕಮ್ಯುನಿಟೀಸ್‌ಗಳಿಗೆ ಡಿಸ್‌ಕ್ರಿಪ್‌ಷನ್ ಕೊಟ್ಟಿದ್ದಾರೆ. ಆ ಡಿಸ್‌ಕ್ರಿಪ್‌ಷನ್ ಆಧಾರದ ಮೇಲೆ, ಅವು ಕೆಲವು ಕಡೆ ಸೇರಿವೆ. ಉದಾಹರಣೆಗಾಗಿ ಬುಡುಗ ಜಂಗಮ. ಇವರು ಇರತಕ್ಕಂತಹದ್ದು ಎಲ್ಲಿ? ಕೋಸ್ಟಲ್ ಆಂಧ್ರ, ರಾಯಲ್‌ಸೀಮಾ, ತೆಲಂಗಾಣ, ಆಂಧ್ರ ಪ್ರದೇಶ. ತೆಲಂಗಾಣ ಅಂದರೆ, ನಾವು ಆವಾಗ ಹೈದ್ರಾಬಾದ್ ಕರ್ನಾಟಕದವರೂ ಕೂಡ ನಮ್ಮ ಆಂಧ್ರ ಪ್ರದೇಶದಲ್ಲಿದ್ದವು. ತೆಲಂಗಾಣದಲ್ಲಿದ್ದಂತಹ ಬೇಡ ಜಂಗಮ ಆ ಲಿಸ್ಟ್ ಅಲ್ಲೇ ಉಳಿಯಿತು. ಆ ರೀತಿ ಉಳಿದಾಗ, ಬೇಡ ಜಂಗಮ, ಹಾಗೂ ಬುಡುಗ ಜಂಗಮ ಅಂದರೆ ಅವರು non-vegetarians. ಅದಕ್ಕೆ ಕ್ಯಾರೆಕ್ಟರಿಸ್ಟಿಕ್ ಕೊಟ್ಟಿದ್ದಾರೆ. ಯಾರು ಅಂತ. ಈಗ ನಿಮ್ಮ ಗಮನಕ್ಕೆ ತರಬೇಕಾದರೆ extract from the Book "People of India - National Series" The Scheduled Caste description Ë Survey 85-90 ಇದರೊಳಗೆ ಹೇಳುತ್ತಾರೆ. "The Budaga Jangamas are non-vegetarians. They abstain from taking beef, but taking pork. Their staple food is rice and it is taken with pulses like grams....

ಹೀಗೆ ಅವರ ಕ್ಯಾರೆಕ್ಟರ್‌ಸ್ಟಿಕ್ಸ್ ಅವರ ಸರ್‌ನೇಮ್ ಏನು ಇರುತ್ತವೆ ಅಂದರೆ, "Gangam, Botha, Thorpathi.... ಈ ರೀತಿಯಾಗಿ ಅವರ ಸರ್‌ನೇಮುಗಳು ಇವೆ. ಇಲ್ಲಿ ಸರ್‌ನೇಮ್‌ಗಳು ಇರತಕ್ಕಂತಹವು ಯಾವುವು - ಹಿರೇಮಠ, ಮಠಪತಿ, ಇಂತಹವು ಇವೆ. ಇದರೊಳಗೆ ಅದಕ್ಕಾಗಿ ಈ ವ್ಯತ್ಯಾಸವನ್ನು ನಾವು ನೋಡಬೇಕಾಗುತ್ತದೆ. ಅವರು ಈ ರೀತಿಯಾಗಿ ತೆಗೆದುಕೊಳ್ಳುತ್ತಾರೆ. ಸರ್‌ನೇಮು ಏನಿದೆ, ಆ ಬುಡುಗ ಜಂಗಮ ಅನ್ನತಕ್ಕಂತಹದ್ದು, ಎನ್‌ಸೈಕ್ಲೋಪೀಡಿಯಾದಲ್ಲಿ ಮತ್ತು ಗೆಜೆಟ್‌ಯರ್‌ನಲ್ಲಿದೆ. ಅದೇ ರೀತಿಯಾಗಿ ಅವರ ಲಗ್ನ ಯಾವ ರೀತಿ ಆಗುತ್ತವೆ? ಮುಹೂರ್ತಗಳು ಹೇಗೆ ಆಗುತ್ತವೆ? ತಿತಿ ಹೇಗೆ ಆಗುತ್ತದೆ? ಇದೆಲ್ಲದರ ಬಗ್ಗೆ ಡಿಸ್‌ಕ್ರಿಪ್‌ಷನ್ ಇದೆ. ಅದೇ ರೀತಿಯಾಗಿ ಬೇಡ ಜಂಗಮ ಅಂದರೆ ಯಾರು? ಅವರ ಕ್ಯಾರೆಕ್ಟರ್‌ಸ್ಟಿಕ್ಸ್

ಏನು? ಅವರ ಬಗ್ಗೆ ಕೂಡ ಒಂದು ಸವಿಸ್ತಾರವಾದ ತಿಳುವಳಿಕೆ ಗೆಜೆಟಿಯರ್‌ನಲ್ಲಿ ಕೊಟ್ಟಿದ್ದಾರೆ.

Mr. Speaker : In one word ಯಾರು ಅದಕ್ಕೆ ಎಲಿಜಬಲ್ ಇಲ್ಲದಿದ್ದರೂ they are trying to claim the same benefits now.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಲ್ಲ ಇಲ್ಲ. ಎಲ್ಲಿಯವರೆಗೆ ಇದು ಹೋಗಿದೆ ಅಂದರೆ, ಈಗಾಗಲೇ ಷೆಡ್ಯೂಲ್ಡ್ ಕಾಸ್ಟ್ ಲಿಸ್ಟ್ ಉದ್ದಕ್ಕೆ ಬೆಳೆದುಕೊಂಡು ಹೋಗಿದೆ. 110, 111 32 ಇದ್ದುದು, ಕೊನೆಗೆ 62 ಆಯಿತು. 60 ಇದ್ದುದು 70ಕ್ಕೆ ಹೋಗಿ ಈಗ 110ಆಗಿ ಇಲ್ಲ 101ಆಗಿದೆ. ಮುಂದೆ ಎಲ್ಲಿಯತನಕ ಹೋಗುತ್ತದೆಯೋ ನೋಡೋಣ.

ಹೀಗಾಗಿ ಇದ್ದವರಿಗೆ ಸವಲತ್ತು ಸಿಗುತ್ತಿಲ್ಲ. ಯೂರು ಡಿಪ್ರಸ್ಡ್ ಇದ್ದರೆ, ಸಪ್ರಸ್ಡ ಇದ್ದಾರೆ, ಮತ್ತು ಡಿಸ್ಕಾಡೆಡ್ ಇದ್ದಾರೆ ಎಂದು ಹೇಳುತ್ತೀರಿ, ಅವರಿಗೆ ಈ ಸೌಲಭ್ಯ ಮುಟ್ಟುತ್ತಿಲ್ಲ. ಇವತ್ತು ಅವರ ಹೆಸರಿನಲ್ಲಿ ಮುಂದುವರೆದಂತಹ ಜನ ಯಾರಿಗೆ ಎಲ್ಲಾ ಸೌಲಭ್ಯಗಳು ಇವೆ. ಇದನ್ನೂ ಕೂಡ ಗಿಟ್ಟಿಸಿಕೊಳ್ಳಬೇಕೆಂದು ಹೊರಟರೆ ನಾವು ಅಲ್ಲಿಯವರೆಗೆ ಹೋಗಿ ಮುಟ್ಟುವುದಕ್ಕಾಗುತ್ತದೆ. ಅದಕ್ಕೆ ಇದರ ಬಗ್ಗೆ ಸ್ಪಷ್ಟವಾದ ನಿಲುವು ಸರ್ಕಾರ ತೆಗೆದುಕೊಳ್ಳಬೇಕು. ಮತ್ತು ಸರ್ಕಾರ ಸ್ಟ್ರಿಕ್ಟಾಗಿ ಒಂದು ಸರ್ಕ್ಯುಲರ್ ಇಷ್ಯೂ ಮಾಡಿ ಯಾರ್‍ಯಾರು ಫಾಲ್ಸ ಸರ್ಟಿಫಿಕೇಟ್ ಇಷ್ಯೂ ಮಾಡುತ್ತಾರೆ ಆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಇಲ್ಲ ಎಂದರೆ ಏನಾಗುತ್ತದೆ, ಇದು ನಿಲ್ಲುವುದಿಲ್ಲ. ಇವತ್ತು ನೀವು ಅಧಿಕಾರದಲ್ಲಿದ್ದೀರಿ, ಮೊನ್ನೆ ನಾವು ಇದ್ದೆವು, ಇದನ್ನೆಲ್ಲಾ ಅಧಿಕಾರಿಗಳ ಕೆಳಗೆ ಮಾಡುತ್ತಿದ್ದಾರೆ. ನಾವು ಸರ್ಕ್ಯುಲರ್ ಇಷ್ಯೂ ಮಾಡಿ ಪುನಃ ರಿವ್ಯೂ ಮಾಡುವುದಿಲ್ಲ. ಏನೂ ಇಲ್ಲ. ಅದಕ್ಕೆ ಸಿ.ಆರ್.ಇ. ಸೆಲ್ನಲ್ಲಿ ಅವರಿಗೆ ಹಾಕಿ ಇದಕ್ಕೆ ರಿವ್ಯೂ ಮಾಡಿಸಿ ಇಂತಹ ಕೇಸಸ್ ಎಲ್ಲೆಲ್ಲಿ ಇವೆ ನೀವು ನಿರ್ದಾಕ್ಷಿಣ್ಯವಾಗಿ ಇಂತಹ ಕಡೆ ಕ್ರಮ ತೆಗೆದುಕೊಳ್ಳಿ. ಇದರ ಬಗ್ಗೆ ಈಗಾಗಲೇ ಸಾಕಷ್ಟು ಮಂತ್ರಿಗಳು ಕೂಡ ಹೇಳಿದ್ದಾರೆ. ಉಪ ಮುಖ್ಯಮಂತ್ರಿಗಳೂ ಕೂಡ ಹೇಳಿದ್ದಾರೆ. ಆದರೆ ಇದು ಆಚರಣೆಯಲ್ಲಿ ಬರಬೇಕು. ಮೆಡಿಕಲ್ದು ನಾನು ಏಕೆ ಹೇಳುತ್ತಿದ್ದೇನೆ ಎಂದರೆ ಲೀಸ್ಟ ಅನೌನ್ಸ ಆಗಿ ಎಂಟು ದಿವಸ ಆಯಿತು. ಈಗ ಎಂಜನಿಯರಿಂಗ್ ಲಿಸ್ಟ ಅನೌನ್ಸ ಮಾಡಿದ್ದಾರೆ. ಇದರಲ್ಲಿ 9 ಜನ ಬಂದಿದ್ದಾರೆ. ಅದರಲ್ಲಿ ಒಂದು 30, 40 ಅಥವಾ 50 ಜನ ಬರುತ್ತಾರೆ. ಹೀಗೆ ಆದರೆ ನಿಜವಾದಂತಹ ಎಸ್.ಸಿ.ಯಿಂದ ಹಕ್ಕನ್ನು ದೋಚಿಕೊಂಡು ಇನ್ನೊಬ್ಬರು ತೆಗೆದುಕೊಂಡಂತೆ ಆಗುತ್ತದೆ ದಯವಿಟ್ಟು ಆದರ ಬಗ್ಗೆ.....

ಅಧ್ಯಕ್ಷರು : ಇದು ಆದರೂ ಪರವಾಗಿಲ್ಲ ಕೈ ಕಾಲು ಚೆನ್ನಾಗಿ ಇರುವವರು ಫಿಸಿಕಲೀ ಹ್ಯಾಂಡಿಕ್ಯಾಪ್ ಎಂದು ಹೇಳಿ ಕೆಲಸ ತೆಗೆದುಕೊಂಡು ಬಿಟ್ಟಿದ್ದಾರೆ. ಡಾಕ್ಟರ್ಸ್‌ಗಳು ಮತ್ತು ಆರ್ತೋಪೇಡಿಕ್ ಸರ್ಜನ್ಗಳು ಸರ್ಟಿಫಿಕೇಟ್‌ಗಳನ್ನು ಕೊಟ್ಟು ಬಿಟ್ಟಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಫಿಸಿಕಲೀ ಹ್ಯಾಂಡಿಕ್ಯಾಪ್ ಇವರಿಗೆ ಇನ್ನೊಂದು ವ್ಯವಸ್ಥೆ ಇದೆ, ಅಟ್ಲೀಸ್ಟ they are treated as equals. ಇವರು ಅನ್ ಟಚೇಬಲ್ಸ್. ಇವರು ಈಕ್ವಲ್ ಇದ್ದರೂ ಕೂಡ you treat them unequal ಇವರಿಗೆ ಅನೇಕ ತೊಂದರೆಗಳು ಇವೆ. ಸರ್ಕ್ಯುಲರ್ ಇಷ್ಯೂ ಮಾಡುತ್ತೀರಿ, ವೇಕೆನ್ಸೀ ಫಿಲ್ ಅಪ್ ಆಗುವುದಿಲ್ಲ. ಅದಕ್ಕೆ ದಯವಿಟ್ಟು ಇದರ ಬಗ್ಗೆ ಒಂದು ಸವಿಸ್ತರವಾದ ಹೇಳಿಕೆ ಕೊಡಬೇಕು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಸಭಾಪತಿಗಳೆ, ಇದೇ ವಿಷಯದಲ್ಲಿ ನಾನು ಹೈಕೋರ್ಟಿನಲ್ಲಿ ಪೂರ್ತಿ ಎವಿಡೆನ್ಸ್ ತರಿಸಿದ್ದೇನೆ ನಾನು ಪೂರ್ಣ ಸ್ವಾಗತ ಮಾಡುತ್ತೇನೆ, ಇವತ್ತು ಉಪ ಮುಖ್ಯಮಂತ್ರಿಗಳು ಹೇಳಿದ್ದಾಗಲಿ, ನಮ್ಮ ಖರ್ಗೆಯವರು ಹೇಳಿದ್ದಾಗಲಿ, ನಾನು ಖಂಡಿತವಾಗಿ ಸ್ವಾಗತ ಮಾಡುತ್ತೇನೆ. ಮೇಲಿನ ವರ್ಗದ ಎಸ್.ಸಿ.ಗೆ, ಎಸ್.ಟಿ.ಗೆ ಇರತಕ್ಕಂತಹ ಅವಕಾಶವನ್ನು ಉಪಯೋಗಿಸಿಕೊಳ್ಳುವುದು ಅಕ್ಷಮ್ಯ ಅಪರಾಧ, ಇದು ಆಗಬಾರದು. ಇದು ಇನ್ನು ಮುಂದೆ ಕೂಡ ಆಗಬಾರದು ಎಂದು ತಾವು ಖಂಡಿತವಾಗಿ ಕ್ರಮ ತೆಗೆದುಕೊಳ್ಳಬೇಕು. ಇದರ ಬಗ್ಗೆ ನಾನು ಹಲವಾರು ನೋಟಿಫಿಕೇಷನ್ ನಮ್ಮ ಕೋರ್ಟಿನಲ್ಲಿ, ಅಸೆಂಬ್ಲಿಯಲ್ಲಿ ಮತ್ತು ಸರ್ಕಾರದಲ್ಲಿ ಕೊಟ್ಟಿದ್ದರಿಂದ ಪರಿಣಾಮ ಏನಾಯಿತು ಎಂದರೆ ನಿಜವಾಗಿಯೂ ಅಲ್ಲದೆ ಇರತಕ್ಕಂತಹ ಬೇಡ ಜಂಗಮ, ಮತ್ತು ಬುಡಗ ಜಂಗಮ ಎಸ್.ಟಿ. ಯಾರು ನಿಜವಾಗಿ ಅಲ್ಲ ಅವರೆಲ್ಲರೂ ಕೂಡ ಸರ್ಟಿಫಿಕೇಟ್ ತೆಗೆದುಕೊಳ್ಳುತ್ತಿದ್ದಾರೆ. ಇದಕ್ಕೆ ಒಂದು ವಿರಾಮ ಹಾಕಬೇಕೆಂಬ ಉದ್ದೇಶದಿಂದ ಹೈಕೋರ್ಟಿನಲ್ಲಿ ಕೇಸ ಬಂದಾಗ ನಾನು ಸೆಂಟ್ರಲ್ ಗವರ್ನ್ಮೆಂಟ್ನಲ್ಲಿ ಇದ್ದಂತಹ ಹೈಯಸ್ಟ್ ಆಫೀಸರ್ ಅವರನ್ನು ಡೈರೆಕ್ಟಾಗಿ ಕರೆಯಿಸಿ ಸಾಕ್ಷ್ಯಾಧಾರಗಳನ್ನು ಕೊಟ್ಟು ಯಾರು ಬೇಡ ಜಂಗಮ ಆಗುತ್ತಾರೆ, ಯಾರು ಬುಡಗ ಜಂಗಮ ಆಗುತ್ತಾರೆ ಅದರ ಕುಲ ಧರ್ಮ ಇದೆಲ್ಲಾ ಏನು ಒಂದು ಐದು ದಿವಸ ಇದರಲ್ಲಿ ಎವಿಡೆನ್ಸ್ ಆಗಿದೆ. ಇದಾದ ನಂತರ ಹೈಕೋರ್ಟ್ ಈಗಾಗಲೇ ಜಸ್ಟೀಸ್ ವೆಂಕಟರಾಮನ್ರವರು ಸುಧೀರ್ಘವಾಗಿ ತೀರ್ಪು ಕೊಟ್ಟಿದ್ದಾರೆ. ಅದರ ಪ್ರಕಾರ ಬೇಡ ಜಂಗಮರು, ಬುಡಗ ಜಂಗಮರು, ವೀರಶೈವ ಜಂಗಮರು, ಬೇರೆ ಎನ್ನುವಂಥ ತೀರ್ಮಾನ ಕೊಟ್ಟಿದ್ದಾರೆ. ಉಪ ಮುಖ್ಯ ಮಂತ್ರಿಗಳು ದಯವಿಟ್ಟು ಆ ಜಡ್ಜ್ಮೆಂಟ್ ತರಿಸಿಕೊಂಡು ನೋಡಬೇಕು. ನೋಡಿದರೆ ಅದರಲ್ಲಿ ತಾವು ಯಾರು ನಿಜವಾದವರು ಎಂಬುದು ಗೊತ್ತಾಗುತ್ತದೆ. ಆ ಕಾರಣದಿಂದ ಇದನ್ನು ಉಪಯೋಗ ಮಾಡುವುದಕ್ಕೆ ಅವಕಾಶ ಮಾಡಿ ಕೊಡಬಾರದು.

ಇದನ್ನು ಖಂಡಿತವಾಗಿ ಅವರ ಹೆಸರಿನಲ್ಲಿ ಎಸ್.ಟಿ. ಮತ್ತು ಎಸ್.ಸಿ ಗೆ ನಾವು ಯಾರಿಗೆ ಕೊಟ್ಟಿದ್ದೇವೆ, ಆ ಅವಕಾಶವನ್ನು ತಪ್ಪಿಸುವಂಥದ್ದನ್ನು ಖಂಡಿತವಾಗಿ ಕೊಡಬಾರದು. ಇದೇ ಸಂದರ್ಭದಲ್ಲಿ ಮತ್ತೊಂದು ವಿಷಯವನ್ನು ಕೂಡ ಉಪ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಅದು ಏನೆಂದರೆ ಮದಕರಿ ನಾಯಕನ ಜನಾಂಗಕ್ಕೆ ಸೇರಿದವರೂ ಕೂಡ ಇವತ್ತು ನಾಯಕ ಎಂದು ಬರೆದು ಅವರೂ ಕೂಡ ಇವತ್ತು ಆ ಸರ್ಟಿಫಿಕೇಟ್ ತೆಗೆದುಕೊಂಡು ನಿಜವಾದ ಎಸ್.ಟಿ. ಯಾರು ಇದ್ದಾರೆ ಅವರನ್ನು ವಂಚನೆ ಮಾಡುತ್ತಿದ್ದಾರೆ. ಈ ಕೇಸ್ ಸುಪ್ರೀಂ ಕೋರ್ಟ್ನಲ್ಲೂ ಕೂಡ ಇವತ್ತು ಇದೆ. ಆ ಕಾರಣದಿಂದ ನಾನು ದಯವಿಟ್ಟು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ, ನಿಜವಾದ ಹರಿಜನ ಗಿರಿಜನರು ಏನಿದ್ದಾರೆ ಅವರಿಗೆ ಬರತಕ್ಕಂತಹ ಸೌಲಭ್ಯಗಳನ್ನು ವಂಚನೆ ಮಾಡತಕ್ಕಂತಹ ನೋಟಿಫಿಕೇಶನ್ ಏನು ಇದೆ, ಅನ್ಯಾಯ ಮಾಡತಕ್ಕಂತಹ ನೋಟಿಫಿಕೇಷನ್ ಏನು ಇದೆ, ಇವೆಲ್ಲವನ್ನೂ ಕೂಡ ತೆಗೆದು ಹಾಕಿ ಎಸ್.ಟಿ. ತೆಗೆದು ಹಾಕಿ ಸರಿಯಾಗಿ ಕ್ಲೀಯರ್ ಡೈರೆಕ್ಷನ್ ಕೊಟ್ಟು ಈ ಅಕ್ರಮ ನಡೆಯುತ್ತಾ ಇರುವುದನ್ನು ತಪ್ಪಿಸುವುದಕ್ಕೆ ತಾವು ಸಹಕಾರ ನೀಡಬೇಕು. ಇಲ್ಲದೆ ಇದ್ದರೆ ನಿಜವಾಗಿಯೂ ಎಸ್.ಟಿ./ಎಸ್.ಸಿ. ಅವರಿಗೆ ಅನ್ಯಾಯವಾಗುತ್ತಿದೆ. ಇದನ್ನು ಸರಿಪಡಿಸುವುದಕ್ಕೆ ತಾವು ದಯವಿಟ್ಟು ಕ್ರಮ ತೆಗೆದುಕೊಳ್ಳಬೇಕು. ಕೇವಲ ಹೈದ್ರಾಬಾದ್ನಲ್ಲಿ ಮಾತ್ರ ಹೈದ್ರಾಬಾದ್ ಕರ್ನಾಟಕ ಮತ್ತು ಬಾಂಬೆ ಕರ್ನಾಟಕದಲ್ಲಿ ಮಾತ್ರ ಇತ್ತು, ಬೇರೆ ಕಡೆ, ಇಲ್ಲ, ಅನ್ನತಕ್ಕಂತಹ ಮಾತನ್ನು ಕೂಡ ಹಲವಾರು ಗೆಜೆಟ್ ನೋಟಿಫಿಕೇಷನ್ ಮತ್ತು ಈ ಆಧಾರ ಸಹಿತವಾದ ಪುಸ್ತಕಗಳನ್ನು ನೋಡಿ ಈ ತೀರ್ಮಾನವಾಗಿದೆ. ದಯವಿಟ್ಟು ಆ ಜಡ್ಜಮೆಂಟನ್ನು ತಾವು ತರಿಸಿ ನೋಡಿ ಆ ಪ್ರಕಾರವಾಗಿ ಕೆಲಸ ನೋಟಿಫಿಕೇಷನ್ ಕ್ಲಾರಿಫಿಕೇಷನ್ ಇಷ್ಯೂ ಮಾಡಿ ಇವರಿಗೆ

ಆಗುತ್ತಾ ಇರತಕ್ಕಂತಹ ಅನ್ಯಾಯ ಸರಿಪಡಿಸಬೇಕೆಂದು ನಾನು ಇವತ್ತಿನ ದಿವಸ ತಮ್ಮಲ್ಲಿ ಕೇಳಿಕೊಳ್ಳುತ್ತೇವೆ.

ಶ್ರೀ ಬಿ.ಟಿ. ಲಲಿತಾನಾಯಕ್ : ಸನ್ಮಾನ್ಯ ಅಧ್ಯಕ್ಷರೆ, ಅವರು ಹೇಳಿದ್ದು ಎಲ್ಲಾ ಸರಿ, ಇದರ ಜೊತೆ ಬುಡುಗ ಎನ್ನುವುದು ಒಂದು ಜನಾಂಗ. ಆ ಬುಡುಗವನ್ನು ಗಂಡ ಹೆಂಡತಿಯರು ಇಬ್ಬರೂ ಈ ಬುಡುಗ ಜನ ಬೇಡ ಜಂಗಮರು ದಂಪತಿಗಳು ಹೋಗಿ ಅದನ್ನು ನುಡಿಸುತ್ತಾರೆ. ಅದು ಬೇರೆ ಯಾರಿಗೂ ಬರುವುದಿಲ್ಲ. ಆ ಬುಡುಗ ಎನ್ನುವುದು ಬೇರೆ ಯಾರ ಹತ್ತಿರವೂ ಇರುವುದಿಲ್ಲ. ಬೇಡ ಎನ್ನುವಂಥದ್ದು ಬೇಟೆ ಆಡಿ ತಿನ್ನುವ ಅರ್ಥದಲ್ಲಿ ಅವರನ್ನು ಬೇಡ ಜಂಗಮರು ಎನ್ನುತ್ತಾರೆ. ಅವರು ಯಾವತ್ತಿಗೂ ತೆಲುಗು ಮಾತನಾಡುತ್ತಾರೆ. ಕನ್ನಡ ಮಾತನಾಡುವುದಿಲ್ಲ, ಈಗ ಕಲಿತು ಮಾಡನಾಡ ಬಹುದು. ಆದರೆ ಇಷ್ಟು ಸ್ಪಷ್ಟವಾಗಿ ಗೆರೆ ಕೊರೆದ ಹಾಗೆ ನಾವು ಅವರನ್ನು ಇವರು ಬೇಡರು ಇವರು ಬೇಡ ಜಂಗಮರು ಮತ್ತು ಇವರು ಅಲ್ಲ ಎನ್ನುವುದನ್ನು ತಿಳಿದುಕೊಳ್ಳಬಹುದು; ಎಂದರೆ ಅವರು ಅಳಿಲು ಕೂಡ ಬಿಡುವುದಿಲ್ಲ. ವಿಧಾನಸೌಧದ ಹತ್ತಿರ ಬಂದರೇ ಬರೀ ಒಂದು ಅಳಿಲು ಕಂಡರೆ ಅವರು ಹೊಡೆದು ತೆಗೆದುಕೊಂಡು ಹೋಗುತ್ತಾರೆ. ಅಳಿಲು ಬೆಕ್ಕು ಮತ್ತು ಯಾವುದೂ ಪ್ರಾಣಿ ನಾಯಿ ಒಂದು ಬಿಟ್ಟರೆ ಪ್ರತಿಯೊಂದು ಪ್ರಾಣಿಯನ್ನು ಅವರು ತಿನ್ನುತ್ತಾರೆ. ಆದರೆ ಈ ಬೇಡ ಜಂಗಮರು ಯಾವುದೂ ತಿನ್ನುವುದಿಲ್ಲ, ಇಷ್ಟೇ ಅಲ್ಲ, ಮಾಂಸ-ಹಾರಿಗಳು ಇದ್ದು, ಭಿಕ್ಷುಕರಾಗಿ, ಹಗಲು ವೇಷಗಾರರಾಗಿ, ಕುಣಿದಾಡುವವರಿದ್ದು, ಕುರುಕುರು ಮಾಮ ಇದೆಲ್ಲಾ ಹೆಸರಿನಲ್ಲಿ ಇದೆ. ಏಕೆಂದರೆ ನಾನು ಅದರ ಅಧ್ಯಕ್ಷೆ ಆಗಿದ್ದೆ. ಈ ಸಂಘಟನೆ ಅಧ್ಯಕ್ಷೆಯಾಗಿ ನಾನು ಎಲ್ಲಾ ವಿಚಾರವನ್ನು ತಿಳಿದುಕೊಂಡಿದ್ದೇನೆ. ಮತ್ತು ಕನ್ನಡ ಸಾಹಿತ್ಯ ಅಕಾಡೆಮಿಯಿಂದ ಅವರ ಬಗ್ಗೆ ಒಂದು 'ಹಗಲು ವೇಷಗಾರರು' ಎಂಬ ಪುಸ್ತಕವೂ ಕೂಡ ಬಂದಿದೆ. ಆದ್ದರಿಂದ ಇದು ಮೋಸ ಹೋಗುವಂತಹ ಪ್ರಶ್ನೆ ಇಲ್ಲ ದಯಮಾಡಿ ಇದನ್ನು ಗಮನಿಸಿ ಸರ್ಟಿಫಿಕೇಟ್ ಕೊಡಬೇಕೆಂದು ತಮಗೆ ಹೇಳುತ್ತೇನೆ.

ಅಧ್ಯಕ್ಷರು : ಸರ್ಕಾರ ತಮ್ಮಲ್ಲಿ ಇದೆ, ನೀವೇ ಮಾಡಬೇಕು.

ಶ್ರೀ ಸಿ.ಹೆಚ್. ವಿಜಯ ಶಂಕರ್ : ಅಧ್ಯಕ್ಷರೇ ಒಂದು ನಿಮಿಷ.......

ಅಧ್ಯಕ್ಷರು : ನೀವು ಬೇಡರೂ ಅಲ್ಲ, ಬುಡುಗ ಜಂಗಮರೂ ಅಲ್ಲ ಕುಳಿತುಕೊಳ್ಳಿ.

ಶ್ರೀ ಜೆ. ಹೆಚ್.. ಪಟೇಲ್ : ಅಧ್ಯಕ್ಷರೆ, ಪರಿಶಿಷ್ಟ ಜಾತಿ ಅವರಿಗೆ ಸಿಗತಕ್ಕಂತಹ ಸೌಲಭ್ಯಗಳು...

ಶ್ರೀ ಡಿ. ನಾರಾಯಣ ದಾಸ್ : ಬೇಡ ಜಂಗಮರ ಬಗ್ಗೆ ಇನ್ನೊಂದು ಮಾತು ಹೇಳುತ್ತೇನೆ. ಇದು ನನ್ನ ಕ್ಷೇತ್ರದಲ್ಲಿ ಕೆಲವು ಆಗಿವೆ. ನಾನು ಚುನಾವಣೆಗೆ ನಿಂತಾಗ ದಾವಣಗೆರೆಯವರು ಅವರು ಜಂಗಮರು ಅವರು ಬೇಡ ಜಂಗಮರು ಅಲ್ಲ, ಏನೂ ಅಲ್ಲ, ಅನುಕೂಲಸ್ಥರು, ಶ್ರೀಮಂತರು ಅಂತಹವರು ಬಂದು ಈ ಬೇಡ ಜಂಗಮ ಎಂದು ಸರ್ಟಿಫಿಕೇಟ್ ತೆಗೆದುಕೊಂಡು ಬರತ್ತಾರೆ. ಅದಕ್ಕೆ ಇತ್ತೀಚೆಗೆ ಈ ಬೇಡ ಜಂಗಮ ಎನ್ನುವುದು ಊರೂರು ಜಂಗಮರು. ಅವರು ಸುಳ್ಳು ಸರ್ಟಿಫಿಕೇಟ್ ತೆಗೆದುಕೊಂಡು ಬಂದು ಜಿಲ್ಲಾ ಪರಿಷತ್ತಿಗೆ ಎಲೆಕ್ಟ್ ಆಗಿದ್ದಾರೆ. ಮೊನ್ನೆ ದೊಡ್ಡ ಧರಣಿ ಕೂಡ ನಡೆಯಿತು. ಅದಕ್ಕೆ ಈ ಪದ್ಧತಿಯನ್ನು ತಪ್ಪಿಸಬೇಕು. ಅವರು ನಿಜವಾಗಿಯೂ ಮಾಂಸಹಾರಿಗಳವರು ಈಗಾಗಲೇ ಇವರು ಗುರುಗಳಾಗಿದ್ದಾರೆ. ಅದಕ್ಕಾಗಿ ಬೇಡ ಜಂಗಮ ಎನ್ನುವುದನ್ನು ಪೂರ್ತಿ ತೆಗೆದು ಹಾಕಬೇಕು.

ಶ್ರೀ ಜೆ.ಹೆಚ್. ಪಟೇಲ್ : ಅಧ್ಯಕ್ಷರೆ, ಪರಿಶಿಷ್ಟ ಜಾತಿ ಲೀಸ್ಟ ಇದೆಯಲ್ಲಾ ಪರಿಶಿಷ್ಟ ಜಾತಿಯ ಪಟ್ಟಿ ಮಾಡುವುದು ಕೇಂದ್ರ ಸರ್ಕಾರದಿಂದ. ಮಾನ್ಯ ಖರ್ಗೆಯವರು ಹೇಳುತ್ತಾರೆ, ನಾವು ಕಳುಹಿಸಿದೆವು, ಬೇರೆ ಬೇರೆ ರಾಜ್ಯಗಳಿಲ್ಲಿ ಯಾರು ಪರಿಶಿಷ್ಟ ಜಾತಿಗೆ ಒಳಪಡುತ್ತಾರೆ, ಈ ಪಟ್ಟಿಯನ್ನು ರಾಜ್ಯಗಳು ಕಳುಹಿಸಿವೆ, ಅದರ ಪ್ರಕಾರ ಅವರು ಮಾಡಿದ್ದಾರೇ. ಅಲ್ಲಿ ಆಗಿರುವ ಮಿಸ್ಟೇಕ್ ಎಂದರೆ ಬೇಡ ಜಂಗಮ ಎಂದರೆ ಮಾನ್ಯ ಖರ್ಗೆಯವರು ಹೇಳಿದ್ದುದು ಸರಿ. ಆಂಧ್ರ ಪ್ರದೇಶದಲ್ಲಿ ಇದ್ದರೂ ಅದರ ಕ್ರೈಟೀರಿಯಾ ಇದೆಯಲ್ಲಾ, ಹೆಸರು ಅವರು ಮಾಂಸಹಾರಿಗಳು, ನಾವು ಮಾಂಸ ಹಾರಿಗಳು ಅಥವಾ ಹೆಸರಿನ ಮೇಲೆ ಕೂಡ ಬೇಡ. ಮಾಂಸ ಆಧಾರದ ಮೇಲೆ ಎಸ್.'ಸಿ,' ಬೆನಿಫಿಟ್ ತೆಗೆದುಕೊಳ್ಳಬೇಕೆಂದರೆ ಬಹಳ ಜನ ಬ್ರಾಹ್ಮಣರು, ಲಿಂಗಾಯಿತರು ಬರುತ್ತಾರೆ.

ಅಧ್ಯಕ್ಷರು : ನೀವು ಹಾಗೆ ಹೇಳಿ ನನ್ನ ಕಡೆ ನೋಡಿಕೊಂಡು ಹೇಳಿದರೆ ಜನವೇನೆ ತಿಳಿದುಕೊಳ್ಳುತ್ತಾರೆ. ನೀವು ಆ ಕಡೆ ತಿರುಗಿಕೊಂಡು ಹೇಳಿ.

ಶ್ರೀ ಜೆ.ಹೆಚ್.ಪಟೇಲ್ : ಅಧ್ಯಕ್ಷರೆ, ಆಹಾರ ಪ್ರಾಮುಖ್ಯ ಅಲ್ಲ. ಅವರು ಏನು ಕೆಲಸ ಮಾಡುತ್ತಿದ್ದರು, ಆಕ್ಚುಯಲ್ ಅವರು ಎಸ್.ಸಿ.ಗೆ ಮೂಲ ತತ್ವ ಏನು, ಅನ್ಟಚೆಬಲ್ಸ್ ಆಗಿ ಸಮಾಜದಲ್ಲಿ ಕೆಲವು ಬಹಳ ಹೀನಾಯವಾದ ಕೆಲಸಗಳನ್ನು ಮಾಡುವುದಕ್ಕೆ ಸಮಾಜ ಇದನ್ನು ಮಾಡಿಕೊಂಡು ಬಂದಿದೆ. ಸಾವಿರಾರು ವರ್ಷದ ಕಥೆ ಈಗ ಅದಕ್ಕೆ ನಾನು ಹೋಗುವುದಿಲ್ಲ. ತಾತ್ವಿಕವಾಗಿ ಸಾಂಸ್ಕೃತಿಕವಾಗಿ ಜಂಗಮ ಎಂದು ವೀರಶೈವ ಜಂಗಮ ಎನಿಸಿದ್ದಾರೆ, ಅವರು ಯಾವುದೇ ಕಾರಣದಿಂದ ಈ ಸವಲತ್ತುಗಳನ್ನು ಕೇಳ ಕೂಡದು. ವೀರಶೈವ ಜಂಗಮರು ಅವರು ಆ ಧರ್ಮದಲ್ಲಿ ಎಲ್ಲಾ ಹೇಳುವುದಕ್ಕೆ ಹೋಗುವುದಿಲ್ಲ ಅವರು ಬೇರೆಯವರಿಂದ ಪಾದ ಪೂಜೆ ಮಾಡಿಕೊಳ್ಳುತ್ತಾರೆ. ಬೇರೆಯವರು ಅವರಿಗೆ ಪೂಜೆ ಮಾಡುತ್ತಾರೆ. ಅವರಿಗೆ ಆಸ್ತಿ ಇರುವುದಿಲ್ಲ. ನ್ಯಾಯವಾಗಿ ಜಂಗಮ ಆ ಉಚ್ಚ ಮಟ್ಟದಲ್ಲಿ ಇರತಕ್ಕಂತಹ ಜಂಗಮರು ಇದನ್ನು ಕೇಳುವುದಿಲ್ಲ. ಈ ಸವಲತ್ತು ಏನಾಯಿತು ಎಂದರೆ ಕೆಲವು ತಹಶೀಲ್ದಾರರುಗಳು ಮಾನ್ಯ ಸದಸ್ಯರುಗಳು ಹೇಳಿದ ಹಾಗೆ ಹೈಕೋರ್ಟ್ ಆರ್ಡರನ್ನು ಮಿಸ್ ಇಂಟರ್‌ಪ್ರಿಟ್ ಮಾಡಿದ್ದಾರೆ. ಹೈಕೋರ್ಟ್ ಆರ್ಡರ್ ಏನು ಹೇಳಿದ ಹಾಗೆ ಇವನ್ನೆಲ್ಲಾ ಸರಿಯಾಗಿ ಪರಿಗಣಿಸಿ ನೀವು ಸರ್ಟಿಫಿಕೇಟ್ ಕೊಡಬೇಕೆಂದು ಹೇಳಿದ ಹಾಗೆ ಆಗಿಲ್ಲ. ಕೆಲವು ಕಡೆ ಸರ್ಟಿಫಿಕೇಟ್, ಅದಕ್ಕೆ ನಮ್ಮ ಸರ್ಕಾರ ಈ ಸುತ್ತೋಲೆಯನ್ನು ಕಳುಹಿಸಿರುವುದು ಇದರಲ್ಲಿ ಏನು ಕೇಳಿದ್ದೇವೆ ತಾವು ಹೇಳಿದ ಹಾಗೆ ಇದು ಫಾಲ್ಸ್ ಸರ್ಟಿಫಿಕೇಟ್ ಕೊಟ್ಟು ಕ್ಲಾಸ್ಸಿಫಿಕೇಷನ್ ಮಾಡಿದ್ದಾರೆ, ಅಧಿಕಾರಿಗಳ ಮೇಲೆ ಕ್ರಮ ಜರುಗಿಸುವುದು ಒಂದು. ಇನ್ನೊಂದು ಇನ್ನು ಮುಂದೆ ನಾಳೆ ಕ್ಯಾಬಿನೆಟ್ನಲ್ಲಿ ಕೂಡ ಈ ವಿಷಯ ಬರುತ್ತಿದೆ. ಮಾನ್ಯ ನಾಯಕರು ಇಲ್ಲ ಅದಕ್ಕೋಸ್ಕರ ಇದರ ಬಗ್ಗೆ ಸ್ಪಷ್ಟತೆ ನೀಡಿ, ವೀರಶೈವ ಜಂಗವುರು ಈ ಸವಲತ್ತನ್ನು ಕೇಳಕೂಡದು; ಅದು ಕಾನೂನಿಗೂ ವಿರುದ್ಧ ಅವರ ಸಂಸ್ಕೃತಿಗೂ ವಿರುದ್ಧ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಏನು ಮಾಡುತ್ತಾರೆ, ವೀರ-ಶೈವ ಜನಾಂಗ ಎಂದು ಹೇಳುವುದಕ್ಕೆ ಹೋಗುವುದಿಲ್ಲ, ಬೇಡ ಜಂಗಮ ಎಂದು ಬರೆದು ಕೊಟ್ಟು ಬಿಡುತ್ತಾರೆ.

ಶ್ರೀ ಜೆ.ಹೆಚ್. ಪಟೇಲ್ : ಅದೇ ತರಹ ಎರಡು ಹೆಸರು ಇದೆ. ದರ್ವೇಶಿಗಳು ಎನ್ನುವುದನ್ನು ಎಸ್.ಸಿ.ಯಲ್ಲಿ ಸೇರಿಸಿಕೊಂಡು ಮುಸ್ಲಿಂ ಕೆಲವರು ಕೇಳುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದಕ್ಕೆ ಗೆಜೆಟಿಯರ್‌ನಲ್ಲಿ ಪಾಪುಲೇಷನ್ ಕೂಡ ಕೊಟ್ಟಿದ್ದಾರೆ. 1961ರಲ್ಲಿ 3,035 ಬೇಡ ಜಂಗಮರು ಇದ್ದರು. ಅದಕ್ಕೆ ಇವೆಲ್ಲಾ ನೋಂದಣಿಬೇಕು.

ಶ್ರೀ ಜೆ.ಹೆಚ್. ಪಟೇಲ್ : ಈ ಅನಿಷ್ಟವನ್ನು ತಪ್ಪಿಸುವುದಕ್ಕೆ ಕಾನೂನು ಪ್ರಕಾರ ಏನು ಮಾಡಬೇಕು, ಈ ಸರ್ಕಾರ ತೀರ್ಮಾನ ಮಾಡುತ್ತದೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಉಪ ಮುಖ್ಯ ಮಂತ್ರಿಗಳು ಒಂದು ವಿಚಾರ ಮೀಸಲಾತಿಯ ಬಗ್ಗೆ ಮಾತನಾಡಬೇಕು ಅನ್ನುವ ಅಭಿಪ್ರಾಯ ನನ್ನದು ಇತ್ತು. ಆದರೆ ಆ ಬೇಡ ಜಂಗಮದ ಬಗ್ಗೆ ಮಾನ್ಯ ನಮ್ಮ ನಾಯಕರು ಮಾತನಾಡುತ್ತಿರುವಂಥ ಸಂದರ್ಭದಲ್ಲಿ ಮಾಡನಾಡಕೂಡದು ಎಂದು ಇದ್ದೆ. ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದರು, ಧರವೇಶಿಗಳು ಎಂದು ಹೇಳಿ ಇವತ್ತು ಪಡೆಯುತ್ತಿರುವಂಥ ಒಂದು ಸರ್ಟಿಫಿಕೇಟ್ ಷೆಡ್ಯೂಲ್ಡ್ ಕಾಸ್ಟ್, ಷೆಡ್ಯೂಲ್ಡ್ ಟ್ರೈಬ್ಸ ವ್ಯಾಪ್ತಿಗೆ ಬರುತ್ತದೆ ಎಂದು ಹೇಳಿ; ಆ ವ್ಯಾಪ್ತಿಗೆ ಬರುವುದಿಲ್ಲ. ಅವರದೇ ಮೀಸಲಾತಿ ಬೇರೆ ರೀತಿಯಲ್ಲಿ ಇರುವುದರಿಂದ ಅ ಷೆಡ್ಯೂಲ್ಡ್ ಕಾಸ್ಟ, ಷೆಟ್ರೈಬಿನ ಯಾವುದೇ ಒಂದು ಮೀಸಲಾತಿ ತಿಂದು ಹಾಕುವಂಥಹ ವ್ಯವಸ್ಥೆಯಲ್ಲಿ ಈ ಧರವೇಶಿಗಳು ಬರುವುದಿಲ್ಲ ಎನ್ನುವ ಒಂದು ವಿಚಾರ ತಮ್ಮ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು : ಅಲ್ಲಲ್ಲಿ, ಅವರು ಹೇಳಿದ್ದುದು ಅದಲ್ಲ, ಧರವೇಶಿಗಳು ಆಗದೇ ಇರತಕ್ಕಂಥ ಮುಸ್ಲಿಮ್ಸ್ ಎಲ್ಲಾ ಧರವೇಶಿ ಸರ್ಟಿಫಿಕೇಟ್ ತೆಗೆದುಕೊಂಡು ಬರುತ್ತಿದ್ದಾರೆ ಎಂದು ಅವರು ಹೇಳಿದರು. ಅದು ನಿಜ ಅಂಥಹ ಧರವೇಶಿಗಳು ಇದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜನ ಖರ್ಗೆ : ಈಗ ಉದಾಹರಣೆಗೆ ತಮಗೆ ಹೇಳಬೇಕಾದರೆ, ಪಟೇಲರಿಗೂ ಗೊತ್ತಿರಬಹುದು; ಡಾ॥ಅಂಬೇಡ್ಕರ್ ಅವರು ರಿಸರ್ವೇಷನ್ ಗೋಸ್ಕರ ಫೈಟ್ ಮಾಡಿದರು. ಆದರೆ 1956ರಲ್ಲಿ ಅವರು ಬುದ್ದಿಸಂಗೆ ಎಂಬ್ರೇಸ್ ಆದರು. ಎಂಬ್ರೇಸ್ ಆದಮೇಲೆ 1961ರ ಸೆನ್ಸಸ್ನಲ್ಲಿ ಎಲ್ಲಾ ಕಡೆ ಅವರ ಶಿಷ್ಯರು ಬುದ್ದಿಸ್ಟ, ಬುದ್ದಿಸ್ಟ ಎಂದು ಬರೆಸಿಬಿಟ್ಟರು. ಮಹಾರಾಷ್ಟ್ರದಲ್ಲಿ 42 ರಿಸರ್ವೇಷನ್ ಸೀಟ್ ಇತ್ತು. ಇವರು ಎಲ್ಲರೂ ಕೂಡ ಬುದ್ದಿಸ್ಟ ಎಂದು ಬರೆಸಿದ್ದಕ್ಕಾಗಿ 42 ಸೀಟು ಹೋಗಿ ಅಲ್ಲಿ ಕೊನೆಗೆ ಅಲ್ಲಿ ಕೊನೆಗೆ ಅಲ್ಲಿ 16 ಸೀಟಿಗೆ ಹೋಗಿದೆ. ಎಂ.ಎಲ್.ಎ. ಸೀಟ್ 16 ಇದೆ. ಪಾರ್ಲಿಮೆಂಟ್ 8 ಇತ್ತು ಕೇವಲ 3 ಸೀಟು ಇದೆ ಈಗ ಪಾರ್ಲಿಮೆಂಟಿನಲ್ಲಿ, ರಿಸರ್ವ್ಡ. ಅಂದರೆ ಇಲ್ಲಿಯವರೆಗೆ ಅವರು ಇನ್ನೂ ಫೈಟ್. ಮಾಡಿಕೊಳ್ಳುತ್ತಲೇ ಇದ್ದಾರೆ. ಮೊನ್ನೆ ಏನು ಆಯಿತು ಎಂದರೆ ವಿ.ಪಿ. ಸಿಂಗ್ ಅವರು ಇದ್ದಾಗ, ಪ್ರಕಾಶ್ ಅಂಬೇಡ್ಕರ್ ಅವರು,

ಇವರೆಲ್ಲರೂ ಕೂಡ ಈ ಸಮಸ್ಯೆಯನ್ನು ಮುಂದಿಟ್ಟ ಮೇಲೆ ನೀವು ಬುದ್ದಿಸ್ಟ ಅನ್ನೂ ಕೂಡ ಶೆಡ್ಯೂಲ್ಡ್ ಕ್ಯಾಸ್ಟನಲ್ಲಿ ಇಡಬೇಕು, ಯಾರು ಮೊದಲು ಅಲ್ಲಿ ಇದ್ದರು ಎಂದು ಹೇಳಿ ಬಂದರು. ಇನ್ನು ಪೊಲಿಟಿಕಲ್ ರಿಸರ್ವೇಷನ್ ಬಂದಿಲ್ಲ. ಏಕೆಂದರೆ ಎಲೆಕ್ಷನ್ನೇ ಇಲ್ಲ. ಡಿಲಿಮಿಟೇಷನ್ ಇಲ್ಲ. ಎಲ್ಲಿಂದ ಬರುತ್ತದೆ. ಸ್ವಲ್ಪ ಕೇಳಿ. ಅಂದರೆ ಪೊಲಿಟಿಕಲ್ ರಿಸರ್ವೇಷನ್ನೂ ಕಳೆದು ಕೊಂಡರು ಅವರು. ಯಾರು, ಫೈಟ್ ಮಾಡಿ ಕೊಡಿಸಿದವರು ಮತ್ತೆ ನೌಕರಿಗಳೂ ಸಿಗಲಿಲ್ಲ ಅವರಿಗೆ. ಏಕೆಂದರೆ ಅವರು ರಿಸರ್ವೇಷನ್ಎಂದು ಬರದೇ ಇಲ್ಲ ಅದಕ್ಕೆ ಯಾರು ಫೈಟ್ ಮಾಡಿದರು, ಅವರಿಗಂತೂ ಸಿಗಲಿಲ್ಲ. ಪಾಪ ಅವರು ಇಡೀ ದೇಶದ ಜನರಿಗಾಗಿ ಫೈಟ್ ಮಾಡಿದರು. ಅದಕ್ಕಾಗಿ ನಾವು ಇದನ್ನೂ ನೆನಪಿನಲ್ಲಿ ಇಡಬೇಕು. ಫೈಟ್ ಮಾಡತಕ್ಕಂಥ

ಜನ ಕಳೆದುಕೊಂಡಿದ್ದಾರೆ ರಿಸರ್ವೇಷನ್ನು ಎನ್ನತಕ್ಕಂಥಾದ್ದನ್ನು ಕೂಡ ನೆನಪಿನಲ್ಲಿ ಇಡಬೇಕಾಗುತ್ತದೆ.

ಒಬ್ಬ ಮಾನ್ಯ ಸದಸ್ಯರು : ಸನ್ಮಾನ್ಯ ಅಧ್ಯಕ್ಷರೇ, ಈ ಬೇಡ ಜಂಗಮರು ಯಾರು ಜಿಲ್ಲೆಯಲ್ಲಿ ಇದ್ದಾರೆ, ಯಾವ ಊರಿನಲ್ಲಿ ಇದ್ದಾರೆ ಎನ್ನುವುದನ್ನು 1956ನೇ ಇಸವಿಯಲ್ಲಿ ಪುನರ್ವಿಂಗಡನಾ ಕಾಲಕ್ಕೆ ಸರ್ವೆ ಮಾಡಿದ್ದೇವೆ. ಅದರಲ್ಲಿ ಕೇವಲ 1,700 ಫ್ಯಾಮಿಲಿಗಳು ಮಾತ್ರ ಈ ರಾಜ್ಯದಲ್ಲಿ ಇದ್ದಾರೆ. ಅದನ್ನು ಹೊರತು ಪಡಿಸಿ ಬೇರೆ ಜಿಲ್ಲೆಯಲ್ಲಿ ಇಲ್ಲ, ಅದಕ್ಕೆ ಸರ್ಕಾರಕ್ಕೆ ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಬೇರೆ ಜಿಲ್ಲೆಯಲ್ಲಿ ಏನು ಸರ್ಟಿಫಿಕೇಟನ್ನು ಕೊಡುತ್ತಿದ್ದಾರೆ, ಅದನ್ನು ಕೂಡಲೇ ನಿಲ್ಲಿಸುವಂತಹ ವ್ಯವಸ್ಥೆ ಮಾಡಬೇಕು. ಕೇವಲ ಸರ್ಕ್ಯುಲರ್ ಕೊಟ್ಟು ಕೈ ತೊಳೆದುಕೊಂಡು ಕುಳಿತರೆ ಆಗುವುದಿಲ್ಲ. ಸರ್ಕ್ಯುಲರ್ ತಾವು ಜನವರಿಯಲ್ಲಿ ಕೊಟ್ಟಿದ್ದೀರಿ. ಇವತ್ತಿನವರೆಗೂ ಏನು ಕ್ರಮ ಆಗಿದೆ ಈ ರಾಜ್ಯದಲ್ಲಿ ಏನೂ ಆಗಿಲ್ಲ. ಉದಾಹರಣೆಗೆ ತಮಗೆ ಹೇಳುತ್ತೇನೆ, ಶರಣ ಬಸವೇಶ್ವರ ವಿದ್ಯಾ ಸಂಸ್ಥೆ ಗುಲ್ಬರ್ಗಾದಲ್ಲಿ 24 ಪೇಕೆಗಳು ಪರಿಶಿಷ್ಟ ಜಾತಿ ಜನಾಂಗದವರಿಗಾಗಿ ಇದ್ದವು. ಅದನ್ನು ಈಗ ತುಂಬಿಕೊಂಡಿದ್ದಾರೆ, ಆ ವಿದ್ಯಾ ಸಂಸ್ಥೆಯವರು. 23 ಮಂದಿ ವೀರಶೈವ ಜಂಗಮರಿಗೆ, ಶೆಡ್ಯೂಲ್ ಕ್ಯಾಸ್ಟ್ ಸರ್ಟಿಫಿಕೇಟನ್ನು ತರಿಸಿ, ಖೊಟ್ಟ ದಾಖಲಾತಿಗಳನ್ನು ನಿರ್ಮಿಸಿ ಅಪಾಯಿಂಟ್ಮೆಂಟ್ ಮಾಡಿದ್ದಾರೆ. ಸರ್ಕಾರಕ್ಕೆ ನಾನು ಕೇಳಲಿಕ್ಕೆ ಬಯಸುತ್ತೇನೆ, ಒಂದು ಪ್ರಶ್ನೆಯನ್ನು. ಅಂತಹ ಪ್ರಕಟಣೆಗಳು ಸರ್ಕಾರದ ಗಮನಕ್ಕೆ ಬಂದಿದೆ, ಕೇವಲ 3 ಜಾತಿ ಸರ್ಟಿಫಿಕೇಟ್ ಮಾತ್ರ ಈ ರಾಜ್ಯದಲ್ಲಿ ಸುಳ್ಳು ಕೊಟ್ಟಿದ್ದಾರೆ ಎಂದು ಕೊಟ್ಟಿದ್ದಾರೆ. ದಯಮಾಡಿ ಆ ರೀತಿ ತಪ್ಪು ಮಾಹಿತಿಯನ್ನು ಈ ಸದನಕ್ಕೆ ಕೊಡಬಾರದು ಎಂದು ಹೇಳಿ ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಇದೂ ಅಲ್ಲದೇ, ಇನ್ನೂ ಒಂದು ಹೊಸ ಪ್ರಕರಣ ಪ್ರಾರಂಭವಾಗಿದೆ. ಬೇರೆ ಜಂಗಮರದು, ಇದು ಒಂದು ವಿಚಾರ ಬೇರೆ. ಇನ್ನೊಂದು ಪರಿಶಿಷ್ಟ ಜಾತಿ ಜನಾಂಗದವರಿಗೆ, ಹಿಂದುವರದಂಥ ಜನಾಂಗದವರು, ಅನುಕೂಲಸ್ಥರು ಯಾರು ವಿದ್ಯಾವಂತರು ಇದ್ದಾರೆ, ತಮ್ಮ ಮಕ್ಕಳನ್ನು ಹರಿಜನರಿಗೆ ದತ್ತಕ್ಕೆ ಕೊಟ್ಟಿದ್ದೇನೆ ಎಂದು ಹೇಳಿ ದತ್ತು ಪತ್ರಗಳನ್ನು ನೋಂದಣಿ ಮಾಡಿಸಿ ಸರ್ಟಿಫಿಕೇಟ್ ಪಡೆದು ಈಗ ಮೆಡಿಕಲ್ ಸೀಟುಗಳನ್ನು ಪಡೆದು, ವಿದ್ಯಾವಂತರು ಆದವರೂ ಇದ್ದಾರೆ. ಅಷ್ಟೇ ಅಲ್ಲದೆ ನೌಕರಿ ಕೂಡ ಪಡೆದಿದ್ದಾರೆ. ಇದು ಬೇರೆ ಜಿಲ್ಲೆಯಲ್ಲಿ ಅಲ್ಲ, ನನ್ನ ಜಿಲ್ಲೆಯಲ್ಲೇ 6 ಪ್ರಕರಣಗಳು ಇವೆ. ನೋಂದಣಿಯಾಗಿದೆ. ದಯಮಾಡಿ ಇವನ್ನೆಲ್ಲಾ ಸರ್ಕಾರ ಪರಿಶೀಲನೆ ಮಾಡಬೇಕು ಅಂತ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ನೋಡಿ, ದತ್ತು ಪಡೆದುಕೊಳ್ಳುವುದು ಹೊಸ ಮಾಡಲ್. ಆದರ ಬಗ್ಗೆ ಸ್ವಲ್ಪ ನಿಗಾ ಇಡಿ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಸದಸ್ಯರು ಹೇಳಿರತಕ್ಕಂಥ ವಿಚಾರ, ಅದು ದತ್ತು ಕೊಟ್ಟು ಆಗಲೀ, ಏನೇ ಅವರು ಮೋಸ ಮಾಡಿ, ಸಮಾಜಕ್ಕೂ ಮೋಸ ಮಾಡಿ, ಸರ್ಕಾರಕ್ಕೂ ಮೋಸ ಮಾಡಿ ಈ ರೀತಿ ಸವಲತ್ತು ಪಡೆಯತಕ್ಕಂಥವರನ್ನು, ಸವಲತ್ತು ಪಡೆಯದ ಹಾಗೆ ಏನು ಕಾನೂನು ಪ್ರಕಾರ ನಾವು ಸರ್ಕ್ಯುಲರ್ ಇಷ್ಯೂ ಮಾಡಿದ್ದೇವೆ ಎಂದರೆ, ಏನು ಸರ್ಕ್ಯುಲರ್ ಸುಮ್ಮನೆ ತಮಾಷೆಗೆ ಅಲ್ಲ ಇದು. ಸರ್ಕ್ಯುಲರ್ ಇಷ್ಯೂ ಮಾಡಿದ್ದೇವೆ. ಆ ಸರ್ಕ್ಯುಲರನ್ನು ಯಾರು ಪಾಲನೆ ಮಾಡುವುದಿಲ್ಲವೋ ಆ ಅಧಿಕಾರಿಯನ್ನು ಕೆಲಸದಿಂದ ತೆಗೆಯಬೇಕು. ತಮ್ಮ ಅಭಿಪ್ರಾಯ ಅದು ಇದ್ದರೆ ಆ ತರಹ ಮಾಡುತ್ತೇವೆ ಮತ್ತು ಈ.......

ಶ್ರೀ ಡಿ. ನಾರಾಯಣದಾಸ್ : ಖೊಟ್ಟಿ ಸರ್ಟಿಫಿಕೇಟ್ ಕೊಟ್ಟಿದ್ದಾರಲ್ಲಾ, ಏನೂ ಕ್ರಮ ಆಗಿಲ್ಲ.

ನಿಯಮ 60ರ ಮೇರೆಗೆ ಚರ್ಚೆ

ಅಧ್ಯಕ್ಷರು : ನೀವು ನಿಯಮ 60ರ ಕೆಳಗೆ ಒಂದು ನೋಟೀಸ್ ಕೊಟ್ಟಿದ್ದೀರಿ.

ಶಾಸಕರು ನಿರ್ಭೀತಿಯಿಂದ ಕೆಲಸಮಾಡಲು ಸಾಧ್ಯವಾಗದೇ ಇರುವ ಪರಿಸ್ಥಿತಿ ಉದ್ಭವಗೊಂಡಿರುವ ಬಗ್ಗೆ :

+ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಅಧ್ಯಕ್ಷರೇ, ನಾನು ನಿಯಮ 60ರ ಪ್ರಕಾರ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ. ನಾನು ನಂಜೇಗೌಡರು, ವೈ. ರಾಮಕೃಷ್ಣ ಎಲ್ಲಾ ಸದಸ್ಯರೂ ಸಹಿ ಮಾಡಿ ಕಳುಹಿಸಿದ್ದೇವೆ. ನಾನು ವಿವರಕ್ಕೆ ಹೋಗುವುದಿಲ್ಲ, ವಿಷಯಕ್ಕೆ ಹೋಗುವುದಿಲ್ಲ, ನಾನು ಹೇಳುವುಂಥಾದ್ದು ಸರಿ ಅನ್ನಿಸಿದರೆ, ಮನದಟ್ಟು ಆದರೆ, ತಾವು ಅನುಮತಿಯನ್ನು ಕೊಟ್ಟರೆ ನಂತರವೇ ಪ್ರಸ್ತಾಪ ಮಾಡಲಿಕ್ಕೆ ನಾನು ಸಿದ್ಧನಿದ್ದೇನೆ. ಇಲ್ಲಿ ಪ್ರಶ್ನೆ ಇರುವಂಥಾದ್ದು ಏನು? ಒಬ್ಬ ಚುನಾಯಿತ ಪ್ರತಿನಿಧಿಯಾಗಿ ನಮ್ಮ ಕರ್ತವ್ಯವನ್ನು ನಿರ್ವಹಿಸುವುದಕ್ಕೆ ಆಗದೇ ಇರುವಂಥ, ಉಸಿರು ಕಟ್ಟುವಂತ ಒಂದು ಪರಿಸ್ಥಿತಿಯಲ್ಲಿ ಈ ಕಡೆ ಕುಳಿತಿರುವಂಥ ಬಹುತೇಕ ಬಿ.ಜೆ.ಪಿ. ಶಾಸಕರು, ನಾವು ಕೆಲಸ ಮಾಡುತ್ತಿದ್ದೇವೆ. ಒಬ್ಬ ಶಾಸಕನಾಗಿ, ಒಂದು ಪೋಲೀಸ್ ಸ್ಟೇಷನ್‌ನಿಂದ ಏನಾದರೂ ಹೆಚ್ಚು ಕಡಿಮೆ ಆಯಿತು ಎಂದು ಯಾರಾದರೂ ಬಂದು ದೂರು ಕೊಟ್ಟರೆ ನಾನು ಆ ಪೋಲೀಸ್ ಸ್ಟೇಷನ್ ಅಧಿಕಾರಿಗಳನ್ನು ದೂರವಾಣಿ ಮೂಲಕ ಸಂಪರ್ಕ ಮಾಡುತ್ತೇನೆ. ಅಗತ್ಯ ಬಂದರೆ ಅವರನ್ನು ಹೋಗಿ ಭೇಟಿ ಮಾಡುತ್ತೇನೆ. ಇದು ಸರಿಯಲ್ಲ ಎಂದು ಹೇಳುವಂಥ ಪ್ರಯತ್ನ ಮಾಡುತ್ತೇನೆ. ಜಿಲ್ಲಾಧಿಕಾರಿಗಳ ಹತ್ತಿರ ನಾನು ಮಾತನಾಡುತ್ತೇನೆ. ಈ ರೀತಿ ಸಹಜವಾಗಿ ಜನ ನಿರೀಕ್ಷೆ ಮಾಡುವುದು, ಜನ ಆಯ್ಕೆ ಮಾಡಿ ಕಳುಹಿಸುವಂಥಾದ್ದೇನೇ ಚುನಾಯಿತ ಶಾಸಕರು ಈ ಕೆಲಸವನ್ನು ಮಾಡಬೇಕು. ನಾನು ಒಂದು ನೂರು ಉದಾಹರಣೆಯನ್ನು ಕೊಡುತ್ತೇನೆ. ಇವತ್ತು ಈ ಕಡೆ ಕುಳಿತಿರುವಂಥ ಬಿ.ಜೆ.ಪಿ.ಯ ಶಾಸಕರು, ಇತರೇ ಪಕ್ಷದ ಕೆಲವು ಶಾಸಕರು ನಿರ್ಭೀತಿಯಿಂದ, ಪ್ರಾಮಾಣಿಕವಾಗಿ ಕೆಲಸ ಮಾಡುವುದಕ್ಕೆ ಆಗದೇ ಇರುವಂಥ, ಉಸಿರು ಕಟ್ಟುವಂಥ ಒಂದು ಪರಿಸ್ಥಿತಿಯಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ. ಒಂದು ರೀತಿ ಚುನಾಯಿತ ಪ್ರತಿನಿಧಿಗಳನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವಂಥ ಒಂದು ವ್ಯವಸ್ಥಿತವಾದಂಥ ಷಡ್ಯಂತ್ರ ಇವತ್ತು ನಡೆಯುತ್ತಿದೆ. ನನಗೆ ದುಃಖ ಆಗುತ್ತಾ ಇರುವಂಥಾದ್ದು ಅಂದರೆ ಸನ್ಮಾನ್ಯ ಗೃಹಸಚಿವರು.....

ಶ್ರೀ ಎಂ.ಸಿ. ನಾಣಯ್ಯ : ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಹೇಳುವಂಥಾದ್ದು ಏನು ಎಂದರೆ ಮಾನ್ಯ ಅಧ್ಯಕ್ಷರೇ, ಇಲ್ಲಿ ನಿಲುವಳಿ ಸೂಚನೆ ಮೂಲಕ ಎರಡೆರಡು ದಿವಸ ಚರ್ಚೆಯಾಗಿದೆ ತಾವು ತಳ್ಳಿ ಹಾಕಿದಂಥ ಉದಾಹರಣೆಗಳು 106 ತೀರ್ಮಾನಗಳು ಇದ್ದಾವೆ. ನಾನು ಏನು ಹೇಳುತ್ತೇನೆ, ಆಮೇಲೆ ತಾವು ಅಬ್ಜಕ್ಷನ್ ರೈಸ್ ಮಾಡಿ. ನನ್ನದು ಏನೂ ಅಭ್ಯಂತರ ಇಲ್ಲ.

ಶ್ರೀ ಎಂ.ಸಿ. ನಾಣಯ್ಯ : ಪಾಯಿಂಟ್ ಆಫ್ ಆರ್ಡರ್.

ಅಧ್ಯಕ್ಷರು : ಅಲ್ಲ, ಕ್ರಿಯಾಲೋಪ ಎಂದು ಹೇಳಿ.

ಶ್ರೀ ಎಂ.ಸಿ. ನಾಣಯ್ಯ : ಆಯಿತು, ನಾನು ಕ್ರಿಯಾಲೋಪ ಎತ್ತುತ್ತೇನೆ. ಮಾನ್ಯ ಸಭಾಧ್ಯಕ್ಷರೇ, ನಿಯಮ 60ರ ಅಡಿಯಲ್ಲಿ ಕಳುಹಿಸಿರತಕ್ಕಂಥ ನೋಟೀಸಿನ ಪ್ರತಿ ನನಗೂ ತಲುಪಿದೆ.

ಅಧ್ಯಕ್ಷರು : ಹೌದು, ನಿಮಗೆ ತಲುಪಲೇ ಬೇಕು ಅದು. ಸಂಸದೀಯ ವ್ಯವಹಾರಗಳ ಸಚಿವರು ನೀವು.

ಶ್ರೀ ಎಂ.ಸಿ. ನಾಣಯ್ಯ : ಇದರ ಮೇಲೆ, ಬಹುಶಃ ತಾವು ಇನ್ನೂ ಅನುಮತಿ ಕೊಟ್ಟಿಲ್ಲ. ನಾನು ನಿಮ್ಮನ್ನು ಕಳಕಳಿಯಿಂದ ಪ್ರಾರ್ಥಿಸಿ ಕೊಳ್ಳುತ್ತಿದ್ದೇನೆ. ನಾವು ಈ ಸದನದಲ್ಲಿ ನಿಯಮ 60ರ ಅಡಿಯಲ್ಲಿ ವಿಚಾರಗಳನ್ನು ನಾವು ಪ್ರಸ್ತಾಪ ಮಾಡಬೇಕು ಅಂದಾಗ ಪೂರ್ವಭಾವಿಯಾಗಿ ಆ ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ತಾವು ಅನುಮತಿಯನ್ನು ಬಹಳಷ್ಟು ವಿಚಾರಗಳಲ್ಲಿ ಕೊಟ್ಟಿದ್ದೀರಿ. ಅದನ್ನೂ 2 ಗಂಟೆ, 3 ಗಂಟೆ ಚರ್ಚೆ ಮಾಡಿರತಕ್ಕ ನಿದರ್ಶನಗಳೂ ಉಂಟು. ಮಾನ್ಯ ಮಿತ್ರರು ಕೊಟ್ಟಿರತಕ್ಕಂಥ ವಿಚಾರ ಯಾವುದು ಇದೆ, ಮಾನ್ಯ ಸಭಾಧ್ಯಕ್ಷರೇ, ತಾವು ದಯವಿಟ್ಟು ನೋಡಿ: ಯಾವ ವಿಚಾರವನ್ನು ಇವತ್ತು ಆ ನಿಯಮ 60ರ ಅಡಿಯಲ್ಲಿ ಅವರು ಪ್ರಸ್ತಾಪ ಮಾಡಿದ್ದಾರೆ, ಈ ವಿಚಾರಗಳು, ಈ ಸಭೆಯಲ್ಲಿ ಕೆಲವು ದಿವಸಗಳ ಹಿಂದೆ ಕೂಲಂಕುಷವಾಗಿ ಚರ್ಚೆಯಾಗಿದೆ. ಚರ್ಚೆ ಆಗಿರತಕ್ಕಂಥ ವಿಚಾರಗಳು. ತಾವು ಎರಡು ವಿಚಾರಗಳನ್ನು ಇಟ್ಟಿದ್ದೀರಿ. ಇದೇ ಸದನದಲ್ಲಿ ಅದು ಚರ್ಚೆಯಾಗಿದೆ. ಅದು ಆದಮೇಲೆ, ಚರ್ಚೆ ಆದಮೇಲೆ ಪುನಃ ಅದೇ ವಿಚಾರವನ್ನು ಪುನಃ ಇದೇ ಸದನದಲ್ಲಿ ಕೂಡ ಅದನ್ನು ಪ್ರಸ್ತಾಪ ಮಾಡಲಿಕ್ಕೆ ಇರತಕ್ಕಂಥ ಅವಕಾಶ ಇಲ್ಲ, ಇದು ಮೊದಲನೆಯದು. ಎರಡನೆಯದು ಮಾನ್ಯ ಅಧ್ಯಕ್ಷರೇ, ಯಾವ ವಿಚಾರವನ್ನು ಇವತ್ತು ಪ್ರಸ್ತಾಪ ಮಾಡಲಿಕ್ಕೆ ಹೊರಟ್ಟಿದ್ದಾರೆ, ಆ ವಿಚಾರಗಳು ಈಗಾಗಲೇ ನ್ಯಾಯಾಲಯದ ಮುಂದೆ ಇದೆ. ನ್ಯಾಯಾಲಯದ ಮುಂದೆ ಇರತಕ್ಕಂಥ ವಿಚಾರಗಳನ್ನು ಇವತ್ತು ಪ್ರಸ್ತಾಪ ಮಾಡಿ. ನಾನು ಪೂರ್ವಭಾವಿಯಾಗಿ ಅದನ್ನು ಚರ್ಚೆ ಮಾಡುತ್ತಿದ್ದೇನೆ, ನಾನು ಅದರ ವಿಷಯಕ್ಕೆ ಹೋಗುವುದಿಲ್ಲ, ಅದರ ಮೆರಿಟ್‌ಗೆ ಹೋಗುವುದಿಲ್ಲ ಎಂದು ಹೇಳುತ್ತಾ ಇರತಕ್ಕಂಥ ಪ್ರಶ್ನೆ ಬಂದಾಗ, ಎತ್ತಿರತಕ್ಕಂಥ ವಿಚಾರದ ಬಗ್ಗೆ ತಾನೇ ಮಾತನಾಡಬೇಕಾಗಿತ್ತು, ಪೂರ್ವಭಾವಿಯಾಗಿ. ಆದ್ದರಿಂದ ನ್ಯಾಯಾಲಯದ ಮುಂದೆ ಇರತಕ್ಕಂಥ ವಿಚಾರಗಳು ಆಗಿರುವುದರಿಂದ ಮತ್ತು ಈ ವಿಚಾರಗಳೂ ಕೂಡ, ಸೀಮಿತವಾಗಿ ಎರಡು ವಿಚಾರಗಳನ್ನು ಎತ್ತಿರತಕ್ಕಂಥಾದ್ದು. ಈ ಸದನದಲ್ಲಿ ಬೇರೆ ತರಹದಲ್ಲಿ ಇವರು.

ಶ್ರೀ ಹೆಚ್.ಎನ್. ನಂಜೇಗೌಡ : ಹೇಗಿದೆ ನಾಣಯ್ಯನವರ ವಾದ ಅಂದರೆ, ಒಬ್ಬ ಪೋಲೀಸ್ ಅಧಿಕಾರಿ ಮಿನಿಸ್ಟರ್ ಅನ್ನುವುದನ್ನು ಮರೆತುಬಿಟ್ಟು ಹಿಡಿದುಕೊಂಡು ಒದ್ದು ಬಿಟ್ಟು ಇವರ ಮೇಲೆ ಕೇಸ್ ಹಾಕಿದರೆ ಅದೂ ನ್ಯಾಯಾಲಯದಲ್ಲಿ ಇರುತ್ತದೆ. ಅದನ್ನೂ ಎತ್ತುವ ಹಾಗಿಲ್ಲ. There Should be some logic, there should be some limitations.

(ಗೊಂದಲ)

ಎಂ.ಎಲ್.ಎ. ಮೇಲೆ ಕೇಸ್ ಹಾಕಿಬಿಟ್ಟು ನ್ಯಾಯಾಲಯದಲ್ಲಿ ಇದೆ ಅಂದರೆ ಏನು ಇದು?

ಶ್ರೀ ಜೆ.ಎಚ್. ಪಟೇಲ್ : ಅದೇ ಅಧಿವೇಶನದಲ್ಲಿ ಎಂದು ಇದೆ 62(5) ಮತ್ತು 68 ಎರಡನ್ನೂ ಓದಲಿ.

Sri H.N. NANJE GOWDA : This is the Government's attitude, The bureaucracy is already spoilt. You are further spoiling it.

ಶ್ರೀ ಜೆ.ಎಚ್. ಪಟೇಲ್ : ನಾನು ಮಾನ್ಯ ಸದಸ್ಯರಿಗೆ ಹೇಳುತ್ತೇನೆ. ಇದೇ ಅಧಿವೇಶನದಲ್ಲಿ 62(5)ರಲ್ಲಿ ಚರ್ಚೆಯಾಗಿರುವ ವಿಷಯದ ಮೇಲೆ ಪುನಃ ಚರ್ಚೆಗಾಗಿ ನಿಲುವಳಿ ಸೂಚನೆಯನ್ನು ತರತಕ್ಕದ್ದಲ್ಲ. ಆಮೇಲೆ......

(ಗೊಂದಲ)

(ಭಾರತೀಯ ಜನತಾ ಪಕ್ಷದ ಅನೇಕ ಸದಸ್ಯರು ಏಕಕಾಲದಲ್ಲಿ ಎದ್ದುನಿಂತು ಮಾತನಾಡಲು ಪ್ರಾರಂಭಿಸಿದರು)

ಶ್ರೀ ಎಂ. ಶ್ರೀನಿವಾಸ್ : ಸದನವನ್ನು ತಪ್ಪುದಾರಿಗೆ ಎಳೆಯುವುದು ಬೇಡ. ಉಪ ಮುಖ್ಯಮಂತ್ರಿಗಳೇ ನೋಡಿ, ಇದರ ಬಗ್ಗೆ ಚರ್ಚೆಯಾಗಿಲ್ಲ.

ಶ್ರೀ ಸಿ. ಬೈರೇಗೌಡ : ಮಾನ್ಯ ನಂಜೇಗೌಡರು ಉಪಯೋಗಿಸಿರತಕ್ಕಂಥ ಕೆಲವು ಮಾತುಗಳು ಏನಿವೆ, ಅದನ್ನು ದಯವಿಟ್ಟು ತಾವು ಕಡತದಿಂದ ತೆಗೆಸಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

Sri Y. RAMAKRISHNA : Is it unparliamentary ? If it is Parliamentary, why it should be removed?

(INTERRUPTIONS)

ಏತಕ್ಕೆ ತೆಗೆಯಬೇಕು?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ನಾವು ಹೇಳಿದರೆ ಕಡತದಿಂದ ತೆಗೆದುಹಾಕಿ ಬಿಡಿ ಎಂದು ಹೇಳುತ್ತೀರಿ. ಒಡೆಸಿಕೊಂಡವರಿಗೆ ಏನಾಗಬೇಕು? ಇರುವ ವಿಷಯ ಹೇಳಿದರೆ ಇಲ್ಲಿ ಜಗಳಕಾಯಲು ಬರುತ್ತೀರಿ. ಶಾಸಕರು ಅನುಭವಿಸಿದ್ದಾರೆ.......

(ಗೊಂದಲ)

ಅಧ್ಯಕ್ಷರು : ಒಂದು ನಿಮಿಷ. ಪ್ರಾಸಂಗಿಕವಾಗಿ ಮಾತನಾಡತಕ್ಕಂಥ ಸಂದರ್ಭದಲ್ಲಿ ಯಾವುದೇ ಒಬ್ಬ ಸದಸ್ಯರು ಉದ್ವೇಗಕ್ಕೆ ಒಳಗಾದಾಗ ಕೆಲವು ಪದಗಳನ್ನು ಬಳಸುತ್ತಾರೆ. ಸನ್ಮಾನ್ಯ ನಂಜೇಗೌಡರ ಪರಿಚಯ ನಮಗೆಲ್ಲರಿಗೂ ಇದೆ. ಅವರ ಅಭಿಪ್ರಾಯ ಅದು ಇರಲಾರದು. ಸಂದರ್ಭಕ್ಕೆ ಅನುಸಾರವಾಗಿ ಆ ಮಾತುಗಳನ್ನು ಅವರು ಹೇಳಿದ್ದಾರೆ. ಅವರು ಲಾಜಿಕ್ ಆಗಿ ತೆಗೆದು ಕೊಂಡು ಹೋಗಬಾರದು ಎಂದು ಹೇಳಿದ್ದಾರೆ ಅಷ್ಟೇ. ವೈ. ರಾಮಕೃಷ್ಣರವರೇ ತಾವು ಹೇಳಿದಿರಲ್ಲ, ಪಾರ್ಲಿಮೆಂಟರಿ, ಅನ್‌ಪಾರ್ಲಿಮೆಂಟರಿ ಅಂತ - Besides that I have also a guarded responsibility to See that what is in good taste and what is not in good taste. Please leave it to the discretion of the Chair - What should remain in the records and what should not be there in the records, Please leave it to the Chair.

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾವುದೇ ಸಂದರ್ಭದಲ್ಲಿ ಕೋರ್ಟಿನ ಒಳಗಡೆ ಇರುವಂಥ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇಲ್ಲ.

ಅಧ್ಯಕ್ಷರು : ಒಂದು ನಿಮಿಷ. ನಿಮ್ಮ ಕಡೆಯ ಸದಸ್ಯರಿಗೆ ಮತ್ತು ಈ ಕಡೆಯ ಸದಸ್ಯರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ನೋಟೀಸ್ ಕೊಟ್ಟಿದ್ದೇವೆ ಎಂದು

ನಾವು ಪ್ರಸ್ತಾಪ ಮಾಡಿದ್ದೀರಿ. ಅವರು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದ್ದಾರೆ. ತಾಳ್ಮೆಯಿರಲಿ. ಇದೊಂದು ಅಕ್ಯಾಡೆಮಿಕ್ ಇಂಟರೆಸ್ಟನಿಂದ ಡಿಸಕಷನ್ ಆಗಲಿ. ಏನೂ ತೊಂದರೆ ಇಲ್ಲ, ಅವರು ಏನು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದ್ದಾರೆ, ಅದು ಪೂರ್ಣವಾಗಲಿ. ಮತ್ತೆ ತಮ್ಮ ವಿಚಾರವನ್ನು ತಾವು ಮಂಡಿಸಿ. ಇತರ ಸದಸ್ಯರು ತಮ್ಮ ಉತ್ಸಾಹವನ್ನು ಸ್ವಲ್ಪ ಅಧೀನದಲ್ಲಿಟ್ಟು ಕೊಳ್ಳಿ. ತಾಳ್ಮೆ ಕಳೆದುಕೊಳ್ಳುವುದು ಬೇಡ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೇ, ನಾನು ಎತ್ತಿರತಕ್ಕಂಥಾದ್ದು ಅವರು ಯಾವ ವಿಚಾರವನ್ನು ಎತ್ತಿದ್ದಾರೆ, ಅದು ನಿಯಮ 60ರ ಅಡಿಯಲ್ಲಿ ಬರುವಂಥ ವಿಚಾರ ಅಲ್ಲ ಎಂಬುದಕ್ಕೆ ಮಾತ್ರ ಸೀಮಿತವಾಗಿದೆ. ಬಹುಶಃ ನಾಳೆ ಗೃಹ ಇಲಾಖೆಗೆ ಸಂಬಂಧಪಟ್ಟ ಹಾಗೆ ಚರ್ಚೆ ಮಾಡುವಾಗ ಹಲವಾರು ವಿಚಾರಗಳನ್ನು ಎತ್ತಲಿಕ್ಕೆ ಅವಕಾಶವನ್ನು ಯಾರೂ ಇಲ್ಲವೆಂದು ಹೇಳುವುದಕ್ಕೆ ಆಗುವುದಿಲ್ಲ. ಆದರೆ ನಿಯಮ 60ರ ಅಡಿಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳಿ ಈ ಕ್ರಿಯಾಲೋಪವನ್ನು ಎತ್ತಿರತಕ್ಕಂಥ ಅಂಶ. Kindly give me some time I don't know why they are all in a hurry now. Naither we are interested to bury them.

ಮಾನ್ಯ ಸಭಾಪತಿಗಳೇ, ಈಗ ನಿಯಮ 62ರಲ್ಲಿ ಯಾವ್ಯಾವ ವಿಚಾರಗಳನ್ನು ಎತ್ತಬಹುದು ಎಂದು ಹೇಳತಕ್ಕಂಥಾದ್ದು.

ಈಗ ನಿಯಮ 60 ಮತ್ತು 62 ಇದನ್ನು ನಾವು ನೋಡಿದಾಗ ಮಾನ್ಯ ಸಭಾಪತಿಗಳೇ, "A motion shall not revive discussion on a matter which has been discussed in the same session."

ಈಗ ಎತ್ತಿರತಕ್ಕಂಥ ವಿಚಾರಗಳು ಈ ಸದನದಲ್ಲಿ ಕೆಲವು ದಿವಸಗಳ ಹಿಂದೆ ವ್ಯಾಪಕವಾಗಿ ಸುಮಾರು ಎರಡರಿಂದ ಎರಡೂವರೆ ಗಂಟೆವರೆಗೆ ಚರ್ಚೆಯಾಯಿತು. ನಾವು ಇದೇ ಸದನದಲ್ಲಿ ಇದ್ದೆವು. ಅದಕ್ಕೆ ಸಂಬಂಧಪಟ್ಟಂತೆ ಶಾಸಕರು ಕೂಡ ಅವರ ಅನಿಸಿಕೆಗಳನ್ನು ಈ ಸದನದಲ್ಲಿ ಹೇಳಿದ್ದಾರೆ. ಅದಕ್ಕೆ ಮುಂಚೆಯೂ ಕೂಡ ಎತ್ತಿರತಕ್ಕಂಥ ಮೊದಲನೇ ಪ್ರಸ್ತಾಪ ಏನಿದೆ, ಅದನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ, ಮೊದಲನೇ ಪ್ರಸ್ತಾರ ಇದೇ ಸದನದಲ್ಲಿ ಚರ್ಚೆಗೆ ಬಂತು. ಬೇಕಾದಷ್ಟು ಇದರ ಬಗ್ಗೆ ಚರ್ಚೆಯಾಯಿತು. ಆದ್ದರಿಂದ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ಅವರು ಎತ್ತಿರತಕ್ಕಂಥ ಪ್ರಸ್ತಾಪದಲ್ಲಿ not more than one such motion shall be made". ಇದು ಒಂದು. ಎರಡನೇಯದು, ಈ ಸದನದಲ್ಲಿ ಎತ್ತಿರತಕ್ಕಂಥ ವಿಚಾರವನ್ನು ಪುನಃ ಎರಡನೆಯ ಸಲ ಇದೇ ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ, ಇನ್ನು ಮೂರನೆಯದು "The motion shall not deal with any matter which is under adjudication by a court of law having jurisdiction in any part of India."

ಆದ್ದರಿಂದ ನಾವೇ ಈ ಕಾನೂನನ್ನು ಮಾಡಿದ್ದೇವೆ, ನಾವೇ ನಿಯಮಾವಳಿ ರಚನೆಯನ್ನು ಮಾಡಿದ್ದೇವೆ. ಬಹುಶಃ ನಿಯಮಾವಳಿ ಏನೂ ಬೇಕಾಗಿಲ್ಲ ಎನ್ನತಕ್ಕಂಥ ಪರಿಸ್ಥಿತಿ ನಿರ್ಮಾಣವಾಗುವುದಾದರೆ ಈ ಸದನದಲ್ಲಿ ಯಾವ ವಿಚಾರವನ್ನು ನಿಯಮ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಆಗದೆ ಇರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆದ್ದರಿದ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ, ನಿಯಮ 60ರ ಅಡಿಯಲ್ಲಿ ಅವರು ಎತ್ತಿರತಕ್ಕಂಥ ವಿಚಾರ ಬರುವುದಿಲ್ಲ ಎಂದು ಇದಕ್ಕೆ ಸೀಮಿತ ಮಾಡತಕ್ಕಂಥಾದ್ದು

ನನ್ನ ವಾದ. ದಯವಿಟ್ಟು ಕ್ರಿಯಾಲೋಪವನ್ನು ತಾವು ಪರಿಗಣಿಸಿ ತಮ್ಮ ತೀರ್ಪನ್ನು ಕೊಡಬೇಕಾಗುತ್ತದೆ.

ಶ್ರೀ ಹೆಚ್.ಎನ್. ನಂಜೇಗೌಡ : ಕ್ಷಮಿಸಿ, ನನಗೆ ಸ್ವಲ್ಪ ಸಿಟ್ಟು ಬಂದಿತ್ತು. ಏಕೆಂದರೆ ಅವರು "the motion shall not deal with any matter which is under adjudication by a court of law" ಎಂದರು. ಇದರಲ್ಲಿ ಒಂದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದು ಶಕ್ದರ್ ಅಂಡ್ ಕೌಲ್‌ದ್ದು....

ಮಾನ್ಯ ಜೆ.ಹೆಚ್. ಪಟೇಲರು ದಯಮಾಡಿ ಕೇಳಿಕೊಳ್ಳಬೇಕು.

Kaul & Shakdhar 4th Edition 1991, page 958 :

"Members and Civil Servants: The relationship between members and civil servants is largely governed by certain well recognised principles and conventions developed over the years. Civil servants are enjoined to accord due courtesy and regard to the representatives of the people and to help them to the extent possible in the discharge of important functions which they have to perform. In case however, officers are unable to accede to the request or suggestions of the Members, the reasons for the officers' inability are politely explained to them."

ಇದು ಇರತಕ್ಕಂಥಾದ್ದು. ಈಗ ನಮ್ಮ ಬೈಂದೂರು ಶಾಸಕರು ಶ್ರೀ ಜಯರಾಮಶೆಟ್ಟರು. ಅವರು ಇನ್ನೂ ವಿವರಗಳನ್ನು ಹೇಳಿಲ್ಲ. ಒಂದು ಆಶ್ರಯ ಮನೆ ನಿವೇಶನದಲ್ಲಿ ಇದ್ದಂಥ ಒಬ್ಬ ಹೆಂಗಸಿನ ಮನೆ....

(ಗೊಂದಲ)

ಶ್ರೀ ಹೆಚ್.ಎನ್. ನಂಜೇಗೌಡ : ಕೋರ್ಟಿನ ಮುಂದೆ ಇದ್ದುದನ್ನು ಚರ್ಚೆ ಮಾಡಬೇಕು ಎಂದು....

ಶ್ರೀ ಜೆ.ಹೆಚ್. ಪಟೇಲ್ : ತಾವು ಹೇಳಿದ್ದುದು 6-0ರ ನಿಯಮದಲ್ಲಿ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ ಎಂದು. ಸಿವಿಲ್ ಸರ್ವೆಂಟ್ಸ್ ಬಿಹೇವಿಯರ್ ಹೇಗೆ ಇರಬೇಕು, ಕೋಡ್ ಆಫ್ ಕಾಂಡಕ್ಟ್ ಹೇಗೆ ಇರಬೇಕು, ಎನ್ನುವುದು ಸರಿ.

ಶ್ರೀ ಹೆಚ್.ಎನ್. ನಂಜೇಗೌಡ : ನನಗೆ ಗೊತ್ತಿದೆ. ರೂಲ್ಸ್ ಟೆಕ್ನಿಕ್ಯಾಲಿಟೀಸ್‌ಗೆ ಬರೋಣ. ಯಾವ ಫಾರ್ಮ್‌ನಲ್ಲಿ ತರಬೇಕೆಂದು ನೋಡೋಣ. ಪ್ರಿವಿಲೇಜ್ ತರಬೇಕು ಎಂದರೆ ಅದನ್ನು ತರೋಣ. ಅದು ನಮ್ಮ ಉದ್ದೇಶ ಅಲ್ಲ. ಯಾವ ರೀತಿಯಲ್ಲಿ ಚರ್ಚೆ ಆಗಬೇಕು ಎಂಬುದು ನಮ್ಮ ಉದ್ದೇಶ ಅಲ್ಲ ಈ ಸದನದ ಸದಸ್ಯರಿಗೆ ಸ್ವಲ್ಪ ಗೌರವ ಇರಬೇಕು ತಾನೆ? ಅಧಿಕಾರಿಗಳು ಗೌರವ ಕೊಡಬೇಕು. ಒಬ್ಬ ಸಬ್ ಇನ್‌ಸ್ಪೆಕ್ಟರ್ ಬರುತ್ತಾನೆ, ದರ್ಪದಿಂದ ಹೇಳುತ್ತಾನೆ - "I am B.I. Gaonkar, Assistant Sub-Inspector." ಅಸಿಸ್ಟೆಂಟ್ ಸಬ್‌ಇನ್‌ಸ್ಪೆಕ್ಟರ್, ಸಬ್ ಇನ್‌ಸ್ಪೆಕ್ಟರ್ ಕೂಡ ಅಲ್ಲ. 'ಕುಂದಾಪುರದ ಶಾಸಕರೇ ನೀವು? ಇಲ್ಲಿ ಏನು ಮಾಡುತ್ತಿದ್ದೀರಿ? ನಿಮಗೆ ಏನು ಆಗಬೇಕೆಂದು ಇದ್ದರೆ ನೀವು ತಹಸೀಲ್ದಾರರ ಕಚೇರಿಗೆ ಬರಬೇಕು. ಇನ್ನು ನೀವು ಇಲ್ಲಿಂದ ಹೊರಡಬಹುದು.... ಅಂತೆ.

ತಹಶೀಲ್ದಾರ್‌ರವರ ಮನೆಗೆ ಬರಬೇಕೆಂತೆ ತಹಶೀಲ್ದಾರ್‌ರವರು ಬರುತ್ತಾರೆಂದು ಇವರು ಮೂರು ಗಂಟೆಯವರೆಗೂ ಕಾದಿದ್ದಾರೆ. ನಾನು ಏಕೆ ಹೇಳುತ್ತಿದ್ದೇನೆಂದರೆ, ಇಲ್ಲಿ ಚರ್ಚೆಯಾಗಿ ಇವರನ್ನು ಹದ್ದುಬಸ್ತಿಗೆ ತರದೇ ಹೋದರೆ, ...

Mr. SPEAKER : That we can think of. What the Hon'ble...

ಶ್ರೀ ಹೆಚ್.ಎನ್. ನಂಜೇಗೌಡ : ಏಕೆ ಅಜಿಟೇಟ್ ಇದೆಯೆಂದರೆ, ಇದನ್ನು ಎಷ್ಟು ಸಾರಿ, ಎಲ್ಲೆಲ್ಲಿ ನೋಡುವಂಥಾದ್ದು. ಇವತ್ತು ಶಾಸಕರು ಹೊಸಬರು ಬಂದಿರುತ್ತಾರೆ...

ಅಧ್ಯಕ್ಷರು : ನಿಮ್ಮ ವಾದವನ್ನು ಪೂರ್ಣವಾಗಿ ಒಪ್ಪುತ್ತೇನೆ. I am also looking at the rules. ನನಗೆ ನೆನಪಿರುವ ಹಾಗೆ ಈ ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ತಾವು ಕೊನೇ ಪ್ಯಾರಾ ನೋಡಿ. ಈ ಎಲ್ಲಾ ಘಟನೆಗಳಿಂದ, ಮೇಲಿನ ಪ್ರಕರಣದಿಂದಾಗಿ, ಚುನಾಯಿತ ಪ್ರತಿನಿಧಿಗಳು, ನಿರ್ಭೀತಿಯಿಂದ ನಿಷ್ಪಕ್ಷಪಾತವಾಗಿ ತಮ್ಮ ಕ್ಷೇತ್ರದಲ್ಲಿ ಕೆಲಸ ಮಾಡಲು ಸಾಧ್ಯವಾಗದ ರೀತಿಯಲ್ಲಿ ಕೆಲವು ಸಚಿವರು ಮತ್ತು ಅಧಿಕಾರಿಗಳು ವರ್ತಿಸುತ್ತಾ ಇರುವ ಬಗ್ಗೆ ಇವತ್ತು ಸದನದಲ್ಲಿ ಚರ್ಚೆ ಮಾಡುತ್ತಿದ್ದೇವೆ.

ಶ್ರೀ ಹೆಚ್.ಎನ್. ನಂಜೇಗೌಡ : ನಾನು ಏನು ಹೇಳುವುದಕ್ಕೆ ಹೊರಟೆ ಎಂದರೆ, ಮಿಸ್ ಬಿಹೇವ್ ಮಾಡುವವರು ಅಧಿಕಾರಿಗಳೇ, ಇವರು ಕಾಯಿಸುತ್ತಾರೆ ಮತ್ತು ಎಷ್ಟು ನಿಕೃಷ್ಟವಾಗಿ ಕಾಣಬೇಕೋ ಕಾಣುತ್ತಾರೆ. ಇಷ್ಟೆಲ್ಲಾ ಮಾಡಿ, ಅವರೇ ಕೇಸ್ ಹಾಕುತ್ತಾರೆ. ಇದನ್ನು ಪ್ರಸ್ತಾಪ ಮಾಡಬೇಡಿ ಎಂದು ಮಾನ್ಯ ನಾಣಯ್ಯನವರು ಹೇಳುತ್ತಾರೆ. ಇದು ಅವರಿಗೆ ಸರಿಯೇ ಎಂದು ಕೇಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ : ಬೇರೆ ರೀತಿಯಲ್ಲಿ ಇದನ್ನು ಚರ್ಚೆ ಮಾಡೋಣ.

ಅಧ್ಯಕ್ಷರು : ಈ ವಿಚಾರದ ಪ್ರಾಮುಖ್ಯತೆಯನ್ನು ನಾನು ಅಲ್ಲ ಎಂದು ಹೇಳುತ್ತಿಲ್ಲ. ಇದರಲ್ಲಿ ಒಂದು ವಿಷಯಕ್ಕಿಂತ ಹೆಚ್ಚಿಗೆ ಇವೆ. 2-3 ವಿಷಯಗಳನ್ನು ಕ್ಲಬ್ ಮಾಡಿದ್ದಾರೆ. ಒಂದು ಸಲ ಈಗಾಗಲೇ ಇಲ್ಲಿ ಪ್ರಸ್ತಾಪವಾಗಿದೆ. Do they come within the framework of Rule 60? ತಾವು ಎಕ್ಸಾಮಿನ್ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನನಗೆ ಗೊತ್ತಿರುವ ಪ್ರಕಾರ, 12-13 ವರ್ಷಗಳ ಅನುಭವದಲ್ಲಿ ಅಥವಾ ಅವರ 30-40 ವರ್ಷಗಳ ಅನುಭವದಲ್ಲಿ ನಿಲುವಳಿ ಸೂಚನೆ ತಂದಾಗ, ಒಂದು ದಿವಸ ಎರಡು ದಿವಸ ಚರ್ಚೆಯಾಗಿದೆ. ಅಧ್ಯಕ್ಷರನ್ನು ಕನ್‌ವಿನ್ಸ್ ಮಾಡುವಂಥ ಪ್ರಯತ್ನ ಮಾಡಿದ್ದೇವೆ. ಮತ್ತೆ ತಳ್ಳಿ ಹಾಕಿದ್ದೂ ಉಂಟು. ಈ ರೂಪದಲ್ಲಿ ವಾಸ್ತವಿಕ ಸಂಗತಿಗಳನ್ನು ಸದನದ ಗಮನಕ್ಕೆ ಮತ್ತು ಸರ್ಕಾರದ ಗಮನಕ್ಕೆ ತರುವ ಪ್ರಯತ್ನ ಮಾಡಿದ್ದೇವೆ. ಇಲ್ಲಿ ನಾವು ಪ್ರಶ್ನೆ ಮಾಡತಕ್ಕಂಥದ್ದು, ಕೇಸ್‌ನ ಮೆರಿಟ್ ಬಗ್ಗೆ ಅಥವಾ ಡಿ-ಮೆರಿಟ್ ಬಗ್ಗೆ ಅಲ್ಲ. ಒಬ್ಬ ಸಚಿವರ ವರ್ತನೆಯಿಂದ ಶಾಸಕರು ಕೆಲಸ ಮಾಡುವುದಕ್ಕಾಗದೇ ಇರುವಂಥ, ಉಸಿರು ಕಟ್ಟುವಂಥ ಪರಿಸ್ಥಿತಿ ಬಂದಿದೆ. ಈ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇವೆ. ಇದು ತಮಗೆ ಕನ್‌ವಿನ್ಸ್ ಆಗಲಿಲ್ಲವೆಂದರೆ, ಅಥವಾ ನಾವು ತಮ್ಮನ್ನು ಕನ್‌ವಿನ್ಸ್ ಮಾಡುವುದಕ್ಕಾಗಲಿಲ್ಲವೆಂದರೆ, ತಾವು ರೂಲ್ಸ್ ಪ್ರಕಾರ, ರೂಲಿಂಗ್ ಕೊಡುವುದಕ್ಕೆ ಅಧಿಕಾರವಿದೆ. ಅದಕ್ಕೆ ನಾವು ತಲೆಬಾಗುತ್ತೇವೆ. ಆದರೆ, ಇದುವರೆಗೂ ಸದನದಲ್ಲಿ ನಡೆದಿರತಕ್ಕ ಸಂಪ್ರದಾಯದಂತೆ, ನಾವಿನ್ನೂ ತಮಗೆ ಕನ್‌ವಿನ್ಸ್ ಮಾಡುವುದಕ್ಕೆ ಹೋಗಿಯೇ ಇಲ್ಲ. ನಾನು ಏನು ಹೇಳಬೇಕೆಂದಿದ್ದೇನೆ, ಆದಾದ ಮೇಲೆ ತಾವು, ತಮ್ಮ ರೂಲಿಂಗ್ ಕೊಡುವುದಕ್ಕೆ ನನ್ನ ಅಭ್ಯಂತರವಿಲ್ಲ. ಇಲ್ಲಿ ಏನನ್ನು ಹೇಳುವುದಕ್ಕೆ ಹೊರಟಿದ್ದೇನೆಂದರೆ, very unfortunate thing. ಎಂದರೆ, ಒಬ್ಬ ಗೃಹ ಸಚಿವರ.....

(ಗೊಂದಲ)

ಶ್ರೀ ಎಂ.ಸಿ. ನಾಣಯ್ಯ : ನಾನು ಎತ್ತಿರತಕ್ಕ ಕ್ರಿಯಾಲೋಪದ ಬಗ್ಗೆ ತಾವು ಏನಾದರೊಂದು ತೀರ್ಮಾನ ಕೊಡಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಶಾಸಕರು ಜನಗಳ ಮುಂದೆ ಹೋಗಲಾರದ ಸ್ಥಿತಿ ಉಂಟಾಗಿದೆ...

(ಗೊಂದಲ)

ಕೆ. ಶರಣಪ್ಪ : ಕ್ರಿಯಾಲೋಪದ ಬಗ್ಗೆ ತಮ್ಮ ಆದೇಶವಾಗದ ಹೊರತು, ಅವರು ಮಾತನಾಡಲು ಬರುವುದಿಲ್ಲ.

ಶ್ರೀ ಹೆಚ್.ಎನ್. ನಂಜೇಗೌಡ : ಇಲ್ಲಿ ಚರ್ಚೆಯಾಯಿತು, ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಇದಾದ ಮೇಲೆ ಅಲ್ಲಿ ಪ್ರಸ್ತಾಪ ಮಾಡುತ್ತಾರೆ, ಇನ್ನೊಂದು ಕೇಸ್ ಹಾಕಿಸುತ್ತೇನೆ ಎಂದು, ಕೇಸ್ ಹಾಕಿಸಿದರು. ಇದು ಆಗಬಹುದೇ? ಇವತ್ತು ಇಲ್ಲಿ ಪ್ರಸ್ತಾಪ ಮಾಡುತ್ತೇವೆ, ನಾಳೆ ಇನ್ನೊಂದು ಕೇಸ್ ಹಾಕಿಸುತ್ತಾರೆ. ನಾಡಿದ್ದು ಇದನ್ನು ಚರ್ಚೆ ಮಾಡುವುದಿಲ್ಲ.

ಅಧ್ಯಕ್ಷರು : ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಏನೆಂದರೆ, ಈ ವಿಷಯವನ್ನು ಚರ್ಚೆ ಮಾಡಬಾರದು ಎಂದು ನಾನು ಹೇಳುತ್ತಾ ಇಲ್ಲ, ಈ ಚರ್ಚೆಯನ್ನು ಮೊಟಕುಗೊಳಿಸಬೇಕೆಂದು ನನ್ನ ಅಭಿಪ್ರಾಯವಿಲ್ಲ. ನಿಮ್ಮ ನೋಟೀಸ್ ಪ್ರಕಾರ, ನಮ್ಮ ನಿಯಮಾವಳಿ ಪ್ರಕಾರ, 2-3 ವಿಷಯಗಳನ್ನು ಕ್ಲಬ್ ಮಾಡುವುದಕ್ಕೆ ಬರುವುದಿಲ್ಲ, ಮಾನ್ಯ ರಾಮಕೃಷ್ಣ ಅವರೇ, ಇನ್ನೊಮ್ಮೆ ನೋಟೀಸ್ ನೋಡಿ. There are more than one issues, which is forbidden.

ಶ್ರೀ ವೈ. ರಾಮಕೃಷ್ಣ : ಅನೇಕ ಸಾರಿ ಮಾನ್ಯ ನಾಣಯ್ಯನವರಲ್ಲಿ ನಾನು ಪ್ರಾರ್ಥನೆ ಮಾಡಿಕೊಂಡಿದ್ದೇನೆ. You are not the Parliamentary Minister for your Party; you are the Parliamentary Minister for the entire House. You have to protect the rights & interests of the entire House.

ದಯಮಾಡಿ, ರೂಲ್ಸ್ ಆಫ್ ಪ್ರೊಸೀಜರ್‌ನ ಪುಟ-2ನ್ನು ನೋಡಿ. ಇದರಲ್ಲಿ "ಸಚಿವರು ಎಂದರೆ, ಮಂತ್ರಿಮಂಡಲದ ಒಬ್ಬ ಸದಸ್ಯ ಮತ್ತು ರಾಜ್ಯ ಸಚಿವ, ಉಪ ಸಚಿವರು, ಮುಖ್ಯಸಚೇತಕರು ಮತ್ತು ವ್ಯವಹಾರ ಖಾತೆಯ ಸಚಿವರನ್ನು ಒಳಗೊಂಡಿರುತ್ತದೆ." ಇದನ್ನು ಒಪ್ಪುತ್ತೀರಾ?

That means even though he belongs to a party, his duty is to protect the interests of all the members. Special mention has been made for that.

Mr. Speaker : My problem is, that it is not a matter between you and him. I am here to conduct the proceedings of the House. It is my earnerst appeal to the Hon'ble Deputy Leader of Opposition; Kindly once again go through the copy of the notice that you have served on the Chair and also read the relevant rules.

ಶ್ರೀ ವೈ. ರಾಮಕೃಷ್ಣ : ನಮ್ಮ ಹಕ್ಕುಬಾಧ್ಯತೆಗಳನ್ನು ಕಾಪಾಡುವುದರಲ್ಲಿ, ಅವರು ಮುಂದಾಗಬೇಕು.

ಅಧ್ಯಕ್ಷರು : ಮುಂದಾಗಬೇಕೆಂಬುದನ್ನು ಅವರು ಒಪ್ಪಿಕೊಂಡರೂ ಕೂಡ, ನಿಯಮಾವಳಿ ಒಪ್ಪಬೇಕೇ ಬೇಡವೇ? ನೀವೂ, ಅವರೂ ಒಪ್ಪಿಕೊಂಡರೆ, ನಿಮಗೆ ಇಷ್ಟಬಂದಹಾಗೆ ನಡೆಸುವುದಕ್ಕಾಗುತ್ತದೆಯೇ?

ಶ್ರೀ ಎಂ.ಸಿ. ನಾಣಯ್ಯ : ಸಭಾಧ್ಯಕ್ಷರೇ, ಸಂಸದೀಯ ವ್ಯವಹಾರಗಳ ಸಚಿವನಾಗಿ, ಕಾನೂನು, ನಿಯಮಗಳ ಒಳಗಡೆ ಕೆಲಸ ಮಾಡಬೇಕೆಂಬ ಪರಿಸ್ಥಿತಿ ಬಂದಾಗ, ಈ ರೀತಿಯ ಯಾವುದೇ ವಿಚಾರ ಬಂದಾಗ, ಮಾನ್ಯ ಸಭಾಧ್ಯಕ್ಷರ ಗಮನಕ್ಕೆ ತರಬೇಕಾಗಿರುವುದು ನನ್ನ ಕರ್ತವ್ಯ.

ಅಧ್ಯಕ್ಷರು : ನಿಮ್ಮ ಮಾತಿನ ವೇಗ ಹೇಗಿರುತ್ತದೆಂದರೆ, ಈ ಚರ್ಚೆಗೆ ನೀವು ಅಡ್ಡ ಬರುತ್ತಿದ್ದೀರೋ ಎನ್ನುವ ತರಹ ಇರುತ್ತಿದೆ. ತಾವು ಸ್ವಲ್ಪ ನಗುನಗುತ್ತಾ, ಸಂತೋಷದಿಂದ, ಸಮಾಧಾನದಿಂದ ಮಾತನಾಡಬೇಕು. ಈಗ ನೀವು ವಿರೋಧಪಕ್ಷದಲ್ಲಿಲ್ಲ; ಈಗ ಸಚಿವರಾಗಿದ್ದೀರಿ.

ಶ್ರೀ ವೈ. ರಾಮಕೃಷ್ಣ : ಅವರಿನ್ನೂ ಪೂರ್ವ ಜನ್ಮ ಮರೆತಿಲ್ಲ.

ಅಧ್ಯಕ್ಷರು : ಇಲ್ಲಿ ಕೆಲವರು ವಿರೋಧಪಕ್ಷದಲ್ಲಿದ್ದರೂ ಮಂತ್ರಿಗಳ ಹಾಗೆ ಇರುತ್ತಾರೆ, ಕೆಲವರು ಆಡಳಿತದಲ್ಲಿ ಬಂದರೂ ವಿರೋಧಪಕ್ಷದಲ್ಲಿ ಇದ್ದಹಾಗೆ ಇರುತ್ತಾರೆ. ನಾನು ಏನು ಮಾಡುವುದು?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಯಡಿಯೂರಪ್ಪನವರು ನಿಯಮ 60ರ ಪ್ರಕಾರ ತಮಗೆ ನೋಟೀಸ್ ಕೊಟ್ಟಿದ್ದಾರೆ. ಅದರಲ್ಲಿ ಎರಡು ವಿಧಾನ ತಮಗೆ ಬಂದಿರತಕ್ಕಂಥಾದ್ದು. ನಾವು ಪರಿಶೀಲನೆ ಮಾಡಬೇಕು ಎನ್ನತಕ್ಕಂಥಾದ್ದನ್ನು ಒತ್ತಾಯ ಮಾಡಿ, ತಮಗೆ ಸಾಕಷ್ಟು ಆಧಾರಗಳನ್ನು ಕೊಡತಕ್ಕಂಥಾದ್ದು. ತಾವು ಕೇಳಬಹುದು; ತಮಗೆ ಹಿಡಿಸಲಿಲ್ಲ, ಈ ನಿಲುವಳಿ ಸೂಚನೆ ಒಪ್ಪಿಗೆಯಾಗಲಿಲ್ಲವೆಂದರೆ, ಅಂತಿಮ ತೀರ್ಪು ಕೊಡತಕ್ಕ ವಿಧಾನ ತಮಗೆ ಗೊತ್ತಿದೆ. ಆದ್ದರಿಂದ, ಸಂಸದೀಯ ಸಚಿವರು ಮತ್ತು ಉಪ ಮುಖ್ಯಮಂತ್ರಿಗಳು ಶಾಂತವಾಗಿ ಕುಳಿತುಕೊಂಡರೆ, ಈ ಸಮಸ್ಯೆ ಬಗೆಹರಿಯುತ್ತದೆಂದು ಅಂದುಕೊಂಡಿದ್ದೇನೆ. ಇದರ ಬಗ್ಗೆ ನಾವು ಹೇಳತಕ್ಕಂಥ ವಿಚಾರಗಳನ್ನು ಹೇಳಬೇಕು. ಶ್ರೀಮಾನ್ ಸಿಂಧ್ಯರವರು ಗೃಹಮಂತ್ರಿಗಳಾಗಿದ್ದಾರೆ. ಹಿಂದೆ, ಅವರು ವಿರೋಧಪಕ್ಷದಲ್ಲಿದ್ದಾಗ ನಮ್ಮ ಪಕ್ಕದಲ್ಲಿಯೇ ಕುಳಿತು ಪ್ರತಿದಿನ, ಅಧ್ಯಕ್ಷರ ಕೊಠಡಿಗೆ ಬಂದು, ಏನು ವಿಚಾರ ಪ್ರಸ್ತಾಪ ಮಾಡಬೇಕೆಂಬುದನ್ನು ಅನೇಕ ಬಾರಿ ಹೇಳಿದ್ದೇವೆ. ಈಗ ತಾವೂ ಅಧ್ಯಕ್ಷರಾಗಿದ್ದೀರಿ. ನಾನು, ಅವರು ಮತ್ತು ದೇಶಪಾಂಡೆಯವರು, ಇವರು ವಿರೋಧಪಕ್ಷದ ನಾಯಕರಾಗಿದ್ದರು. ಈ ವ್ಯವಸ್ಥೆಯಲ್ಲಿ ಅನೇಕ ವರ್ಷಗಳ ಕಾಲ ನಡೆದು ಕೊಂಡಿರುವುದು ಉಂಟು. ತಾವೂ ನೋಡಿದ್ದೀರಿ. ಬೆಳಿಗ್ಗೆ ಏನು ಪ್ರಾರಂಭ ಮಾಡಬೇಕೆಂದು ಹೇಳಿದ್ದೇವೆ.

ಶ್ರೀ ಜೆ.ಹೆಚ್. ಪಟೇಲ್ : ಆಗ ರೂಲ್ಸ್ ಇರಲಿಲ್ಲವೇ?....

ಶ್ರೀ ವಾಟಾಳ್ ನಾಗರಾಜ್ : ಆಗ ಇರಲಿಲ್ಲವೆಂದು ತಿಳಿದುಕೊಳ್ಳಬೇಡಿ. ಆಗಲೂ ಇತ್ತು. ತಮಗೆ ಏನು ಹೇಳುತ್ತಿದ್ದೇನೆಂದರೆ, ಇಲ್ಲಿ ಶಾಸಕರ ಹಕ್ಕಿಗೆ ಚ್ಯುತಿ ಬರತಕ್ಕಂತಾದ್ದು ಮತ್ತು ಶಾಸಕರು ಭಯ ಭೀತಿಯಿಂದ ಕ್ಷೇತ್ರದಲ್ಲಿ ಕೆಲಸಮಾಡತಕ್ಕ ವಾತಾವರಣ ನಿರ್ಮಾಣವಾಗಿದೆ. ಶಾಸಕರಾದ ನಾವು ಸಾರ್ವಜನಿಕರ ಕೆಲಸ ಮಾಡಬೇಕೇ, ಬಿಡಬೇಕೇ ಎನ್ನತಕ್ಕಂಥ ಪ್ರಶ್ನೆ. ಇದು ಬೇರೆ ಪ್ರಶ್ನೆ ಅಲ್ಲ, ತಹಶೀಲ್ದಾರ್ ಒಂದು ಕಡೆ ಪ್ರಯೋಗ ಮಾಡುವಂತಾದ್ದು, ಪೋಲಿಸರು ಒಂದು ಕಡೆ ಮೇಲೆ ದಬ್ಬಾಳಿಕೆ ಮಾಡತಕ್ಕಂತಾದ್ದು. ಇದೆಲ್ಲಾ ವ್ಯಾಪ್ತಿಯಲ್ಲಿ ಶಾಸಕರ ಕೆಲಸಕ್ಕೆ ಕುಂಠಿತವಾಗಿದೆ, ಇದು ಅತಿ ಮುಖ್ಯ. ಅದಕ್ಕೆ ರಕ್ಷಣೆ ಕೊಡಬೇಕಾದ್ದು, ನೇರವಾಗಿ ಸರ್ಕಾರಕ್ಕಿಂತ ತಮ್ಮಲ್ಲಿ

ಕೇಳುತ್ತಿದ್ದೇವೆ. ನೀವು ರಕ್ಷಣೆ ಕೊಡಬೇಕಾಗುತ್ತದೆ. ಶಾಸಕರಿಗೆ ರಕ್ಷಣೆ ಕೊಡಬೇಕಾದ ಜವಾಬ್ದಾರಿ, ತಮ್ಮದೂ ಹೆಚ್ಚಿದೆಯೆಂದು ಹೇಳುತ್ತಿದ್ದೇನೆ. ಆದ್ದರಿಂದ, ನಿಯಮ 60ರ ಪ್ರಕಾರ ಬರುತ್ತದೆಯೋ ಇಲ್ಲವೋ ತೀರ್ಮಾನ ಮಾಡುವವರು ನೀವು. ಬರುತ್ತದೆ ಎಂದು ಹೇಳಿದರೆ, ವಾದ ಮಾಡತಕ್ಕಂತಾದ್ದು ನಮ್ಮ ಅಧಿಕಾರ. ತಾವು ಯಾವಾಗ ಬೇಕಾದರೂ ಒಪ್ಪಬಹುದು, ಬಿಡಬಹುದು. ಇದು ತಮಗೆ ಸೇರತಕ್ಕ ವಿಚಾರ.

1.10 ಪಿ.ಎಂ.

ಶ್ರೀಮತಿ ಪ್ರಮೀಳಾನೇಸರ್ಗಿ : ಮಾನ್ಯ ಅಧ್ಯಕ್ಷರೇ, ಕಾನೂನಿನಲ್ಲಿ ಒಂದು ದೃಷ್ಟಿ ಕೋನ ಇದೆ. ಸಬ್‌ಸ್ಟಾನ್‌ಟೀವ್ ಲಾ ಮತ್ತು ಪ್ರೊಸಿಜರಲ್ ಲಾ ಅಂತ. ಸಬ್‌ಸ್ಟಾನ್‌ಟೀವ್ ಲಾ ಅನ್ನು ಯಾರೂ ಕೂಡ ಚೇಂಜ್ ಮಾಡುವುದಕ್ಕೆ ಆಗುವುದಿಲ್ಲ. ಆದರೆ ಪ್ರೊಸಿಜರಲ್ ಲಾಗೆ ನಾವು ಪ್ರಿನ್ಸಿಪಲ್ ಏನು ಇಟ್ಟು ಕೊಂಡಿದ್ದೇವೆ ಅಂದರೆ excursum juri ಎಂದು ಹೇಳುತ್ತಾರೆ ರೋಮನ್ ಲಾ ನಲ್ಲಿ. ಅಂದರೆ ಪ್ರೊಸಿಜರಲ್ ಲಾ ಅನ್ನು ನಾವು ಯಾವಾಗ ಬೇಕಾದರೂ ಕೂಡ ಸಮಯಕ್ಕೆ ಸರಿಯಾಗಿ ಉಪಯೋಗಿಸಿಕೊಳ್ಳಬೇಕು ಎನ್ನುವುದು legal principle. ಅಂದರೆ ಈಗ ನಾವು ಯಾವುದೋ ಒಂದು ಅರ್ಜಿ ಕೊಡುತ್ತೇವೆ ಯಾವುದೋ ಒಂದು ಪ್ರಾವಿಷನ್ ಹಾಕುತ್ತಾರೆ. ಸಿವಿಲ್ ಪ್ರೊಸಿಜರ್ ಕೋಡ್ ಬದಲು ಕ್ರಿಮಿನಲ್ ಪ್ರೊಸಿಜರ್ ಲಾ ಎಂದು ಬರೆದಿರುತ್ತಾನೆ. ಅದು ಆಗುವುದಿಲ್ಲ ಎಂದು ತಳ್ಳಿ ಹಾಕುವುದಿಲ್ಲ, Erroneous provision of law is not ground to reject the application ಎನ್ನುವುದು ಪ್ರಿನ್ಸಿಪಲ್ ಆಫ್ ಲಾ. ಒಂದು ವೇಳೆ ನೀವು ರೂಲ್ 60 ಆಗುವುದಿಲ್ಲ ಎಂದು ಹೇಳಿ. ನಿಮ್ಮ ಕಾನೂನು ಪ್ರಕಾರ ಬೇರೆ ರೂಲ್ ಇದೆಯಲ್ಲಾ, ಯಾವ ಕಾನೂನು ಅಡಿಯಲ್ಲಿ ಬರುತ್ತದೆ ಅದರಡಿಯಲ್ಲಿ ಮಾಡಿ.

ಶ್ರೀ ಡಿ.ಟಿ. ಜಯಕುಮಾರ್ : ಇದು ಅಸೆಂಬ್ಲಿ; ಕೋರ್ಟ್ ಅಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೇ, ಆಯಿತು 60ರ ಅಡಿಯಲ್ಲಿ ಬರುವುದಿಲ್ಲ ಅಂದರೆ, ಕಾನೂನು ಪ್ರಕಾರ ಯಾವ ಕಾನೂನು ಅಡಿಯಲ್ಲಿ ಬರುತ್ತದೆಯೋ ಅದರ ಪ್ರಕಾರ ತೆಗೆದುಕೊಳ್ಳಬಹುದು ನಮಗೆ ಬೇಕಾಗಿರುವುದು ಈ ವಿಷಯ ಇಲ್ಲಿ ಚರ್ಚೆ ಆಗಬೇಕು.

Mr SPEAKER : The Chair is totally inclined to receive the judicious appeal of the hon. member Smt. Pramila. That is exactly what I have been trying to make out. It Rule 60 doesn't permit this, the Chair is not inclined to take up the matter under Rule 60. We are very much willing to consider this matter under any other rule. Yes. Welcome. ಇದಕ್ಕೆ ನೋಡಿ ವಕೀಲರು ಇರಬೇಕು ಎಂದು ಹೇಳುವುದು.

Sri M.C. NANAIAH : I am totally in agreement with the Hon'ble Member Smt. Pramila Nesargi. It doesn't come under Rule 60. That is all.

ಅಧ್ಯಕ್ಷರು : ನೋಡಿ ಯಡಿಯೂರಪ್ಪನವರೇ, ನೀವು ನಾನು ವಕೀಲರಲ್ಲ; ಇದೇ ನಮಗೆ ತೊಂದರೆ ಬಂದಿರುವುದು. ನಂಜೇಗೌಡರು ಪ್ರಾಕ್ಟೀಸ್ ಬಿಟ್ಟು ಬಹಳ ದಿನಗಳು ಆಯಿತು.

ಶ್ರೀ ಹೆಚ್.ಎನ್. ನಂಜೇಗೌಡ : ಲೋಕಸಭೆಯಲ್ಲಿ ಏನಾಗುತ್ತದೆ ಅಂದರೆ ನಾವು ಕೆಲವು ಸಲ ನೋಟೀಸ್ ಕೊಡುತ್ತೇವೆಯಲ್ಲಾ "Under the rules, we

hereby give notice" ಅಂತಲೇ ಹಾಕುತ್ತೇವೆ. We don't quote the rules. That is the job of the secretariat to guide the members. Suppose it is not under rule 60 ಅದನ್ನು ಸೆಕ್ರೆಟರಿಯೇಟ್‌ನವರು ಮಾಡಿಕೊಳ್ಳಬೇಕಾಗುತ್ತದೆ. ಅದನ್ನು ನಾವು ಹಾಕಿರುವ ರೂಲ್ ಸರಿಯಾಗಿಲ್ಲ ಎಂದು ಹೇಳಿ under that technical pretext the Government cannot take shelter.

Mr. SPEAKER : The Chair atleast will take the Parliament as the basis. The matter is not being prevented from being raised in the House. The Matter shall be raised but not under rule 60.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ನಮ್ಮ ಲಾ ಮಿನಿಸ್ಟರ್ ವಿಧಾನ ಪರಿಷತ್ತಿನಲ್ಲಿ ತಾವು ವಿರೋಧಪಕ್ಷದ ನಾಯಕರಾಗಿದ್ದಾಗ ನಾನು ಅವರ ಮಾತು ಕೇಳುವುದಕ್ಕೆ ಅಲ್ಲಿ ಬಂದು ಕುಳಿತುಕೊಳ್ಳುತ್ತಿದ್ದೆ. ಅವರು ಏನು ನಿಲುವಳಿ ಸೂಚನೆಯ ಮೂಲಕ ಪ್ರಸ್ತಾಪ ಮಾಡಿದ್ದಾರೆ ಇದುವರೆಗೂ ಗಂಟೆಗಟ್ಟಲೆ ಮಾತನಾಡಿದ್ದಾರೆ. ಯಾವುದೂ ಸಹ ಆ ಕೂನೂನಿನ ಅಡಿಯಲ್ಲಿ ಬಾರದೇ ಇದ್ದರೂ ಸಹ ದಿವಸಗಟ್ಟಲೇ ಚರ್ಚೆ ಮಾಡಿ ಚೇರ್‌ನ್ನು ಕನ್‌ವಿನ್ಸ್ ಮಾಡುವಂತಹ ಪ್ರಯತ್ನ ಮಾಡಿ ಕೊನೆಗೆ ಅಧ್ಯಕ್ಷರು ರೂಲಿಂಗ್ ಕೊಟ್ಟಿದ್ದು ಉಂಟು. ಆದರೆ ಇಲ್ಲಿ ನಡೆದಿರುವಂಥದ್ದು ಸಹ ಆ ರೂಲ್‌ನಲ್ಲಿ ಬರುವುದಿಲ್ಲ ಎಂದು ಅಧ್ಯಕ್ಷರು ಅಪ್ಪಣೆ ಕೊಟ್ಟಮೇಲೆ ನಾವ್ಯಾರು ಅವರ ಆಜ್ಞೆಯನ್ನು ಮೀರುವುದತಕ್ಕೆ ಆದರೆ ನಾನು ಕನ್‌ವಿನ್ಸ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಈ ರೂಲ್‌ನಲ್ಲಿಯೇ ತೆಗೆದು ಕೊಳ್ಳುವುದರಿಂದ ಇದು ಒಬ್ಬ ಯಡಿಯೂರಪ್ಪನವರ ಪ್ರಶ್ನೆ ಅಲ್ಲ, ಒಬ್ಬ ಅಪ್ಪಚ್ಚುರಂಜನ್ ಪ್ರಶ್ನೆ ಅಲ್ಲ ಈ ಶಾಸಕರಾಗಿ ನಾವು ಕೆಲಸ ಮಾಡುವುದಕ್ಕೆ ಆಗದೇ ಇರುವಂತಹ ಪರಿಸ್ಥಿತಿ ಬಂದಿರುವಾಗ ಹತ್ತಾರು ಶಾಸಕರ ಹೆಸರನ್ನು ನಾವು ಇಲ್ಲಿ ಮೆನ್‌ಷನ್ ಮಾಡಿದರೂ ಸಹ ಶಾಸಕ ಎನ್ನುವ ಒಂದೇ ಗುಂಪಿನ ಬಗ್ಗೆ ಇದು ಪ್ರಸ್ತಾಪ ಆಗುವುದು. ನಾಲ್ಕಾರು ಅಲ್ಲ. ಆದ್ದರಿಂದ ಅಧ್ಯಕ್ಷರು ತಾವು ಯಾವ ರೀತಿ ಚರ್ಚೆಮಾಡಬೇಕು ಎಂದು ಹೇಳುತ್ತೀರೋ ಆ ಅದೇಶದಂತೆ ನಾವು ಕೆಲಸ ಮಾಡುವುದಕ್ಕೆ ಸಿದ್ಧರಿದ್ದೇವೆ. ಆದರೆ ಮಾನ್ಯ ಅಧ್ಯಕ್ಷರೇ, ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಅಂದರೆ ಇವತ್ತು ಚುನಾಯಿತ ಪ್ರತಿನಿಧಿಗಳಾಗಿ ನಾವು ಪ್ರಾಮಾಣಿಕವಾಗಿ ಜನರ ಸೇವೆ ಮಾಡಬೇಕಾದುತ್ತದೆ, ಕೆಲಸ ಮಾಡಬೇಕಾಗುತ್ತದೆ.

ಆದರೆ ಬಿಜೆಪಿ ಶಾಸಕರನ್ನು ಹತ್ತಿಕ್ಕುತ್ತೇವೆ. ಅವರು ಕೆಲಸ ಮಾಡುವುದಕ್ಕೆ ಆಗದೇ ಇರುವಂತಹ ಒಂದು ಪರಿಸ್ಥಿತಿಯನ್ನು ತಂದು ಅಪರಾಧಿ ಸ್ಥಾನದಲ್ಲಿ ತಂದು ನಿಲ್ಲಿಸಿ ಒಂದು ದೊಡ್ಡ ಸಾಧನೆಯನ್ನು ಮಾಡುತ್ತಿದ್ದೇನೆ ಎಂದು ಏನಾದರೂ ಗೃಹಸಚಿವರು ಆಗಲಿ ಅಥವಾ ಮತ್ಯಾರಾದರೂ ಆಗಲಿ ಭಾವಿಸಿ ಆ ರೀತಿ ಶಾಸಕರ ಮೇಲೆ ಕಾನೂನು ಬಾಹಿರವಾಗಿ ಅಧಿಕಾರಿಗಳಿಂದ ತಮಗೆ ಏನು ವರದಿಬೇಕೋ ಆ ವರದಿಯನ್ನು ಪೋಲೀಸ್ ಸ್ಟೇಷನ್‌ನಿಂದ ಜಿಲ್ಲಾಧಿಕಾರಿಗಳಿಂದ ತರಿಸಿಕೊಂಡು ಈ ಚುನಾಯಿತ ಪ್ರತಿನಿಧಿಗಳು ಕೆಲಸ ಮಾಡುವುದಕ್ಕೆ ಆಗದೇ ಉಸಿರು ಕಟ್ಟುವಂತಹ ಒಂದು ಪರಿಸ್ಥಿತಿಯಲ್ಲಿ ನಿಲ್ಲಿಸುವಂತಹ ಒಂದು ಪ್ರಯತ್ನ ಏನು ಇದೆ ಇದು ಪ್ರಜಾತಂತ್ರ ವ್ಯವಸ್ಥೆಗೆ ಮಾರಕ ಆಗಬಹುದು. ಇವತ್ತು ನೀವು ಅಲ್ಲಿರಬಹುದು ನಾವು ಇಲ್ಲಿರಬಹುದು. ತಮಗೆ ಗೊತ್ತಿದೆ ಅಧ್ಯಕ್ಷರೇ ಪೋಲೀಸ್ ಸ್ಟೇಷನ್‌ಗಳಲ್ಲಿ ನಿಜವಾದಂತಹ ನಿರಪರಾಧಿಗಳಿಗೆ ಏನು ರಕ್ಷಣೇ ಸಿಗಬೇಕು ಅದು ಆಗದೇ ಅಪರಾಧಿಗಳಿಗೆ ರಕ್ಷಣೆ ಸಿಗುತ್ತಿದೆ. ಇದನ್ನು ನಾವು ನೋಡುತ್ತಿದ್ದೇವೆ. ಈ ಪದ್ಧತಿ ಬಂದಿದೆ. ಇವತ್ತು ಒಬ್ಬ ಗೃಹಸಚಿವರೇ ಆಕಸ್ಮಾತ್ ಪೋಲೀಸ್ ಇಲಾಖೆಯ ಅಧಿಕಾರಿಗಳಿಗೆ ಆದೇಶ ಕೊಟ್ಟು

ಈ ರೀತಿ ಮಾಡಿ ಹೀಗೇ ಮಾಡಿ ಈ ರೀತಿ ಮಾಡಬೇಡಿ ಎಂದು ಹೇಳುವುದಕ್ಕೆ ಹೊರಟುಬಿಟ್ಟರೆ ಏನಾಗಬಹುದು?

ಪ್ರಜಾತಂತ್ರ ವ್ಯವಸ್ಥೆ ಉಳಿಯುತ್ತದೆಯೇ? ರಾಮರಾಜ್ಯ ಮಾಡುವುದಕ್ಕೆ ಸಾಧ್ಯವೇ ಅಥವಾ ರಾವಣ ರಾಜ್ಯ ಆಗುತ್ತದೆಯೇ? ಈ ಕಡೆ ಕುಳಿತಿರತಕ್ಕಂಥ ಶಾಸಕರು ಯಾವುದೇ ವಿವರವನ್ನು ಕೇಳಿದರೆ ನಮ್ಮ ಸಚಿವರು ಒದಗಿಸಿಕೊಡುತ್ತಾರೆ. ಮಾನ್ಯ ಅಧ್ಯಕ್ಷರೇ, ನನಗೆ ದುಃಖ ಆಗತಕ್ಕಂಥ ಸಂಗತಿ ಒಂದು ರೀತಿ ಆಡಳಿತದಲ್ಲಿ ಬಿಜೆಪಿ ಶಾಸಕರು ಇನ್ನೂ ಕೆಲವರು ಹಸ್ತಕ್ಷೇಪ ಮಾಡುತ್ತಿದ್ದಾರೆ ಎನ್ನುವಂತಹ ಒಂದು ವಾತಾವರಣವನ್ನು ಮೂಡಿಸಿ ಭಾರತೀಯ ಜನತಾಪಾರ್ಟಿಯ ಚುನಾಯಿತ ಪ್ರತಿನಿಧಿಗಳನ್ನು ಜನರ ಮುಂದೆ ತಲೆತಗ್ಗಿಸುವಂತಹ, ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವಂತಹ ಒಂದು ಪ್ರಯತ್ನ ನಡಯುತ್ತಿದೆ. ಇದರ ಬಗ್ಗೆ ಹಿರಿಯ ಸಚಿವರಾಗಿದ್ದಂತಹ ಅನುಭವಿಗಳಾಗಿದ್ದಂತಹ, ಸದನದಲ್ಲಿ ಜನರ ಸೇವೆ ಮಾಡಿ ಕೆಲಸ ಮಾಡಿದಂತಹ ಒಬ್ಬ ವೈ. ರಾಮಕೃಷ್ಣ ಅಂತಹವರ ಬಗ್ಗೆ ಆ ರೀತಿಯ ಪತ್ರಿಕಾ ಹೇಳಿಕೆ.

ಆ ರೀತಿ ಆಡಳಿತದಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ ಎನ್ನುವಂತಹ ಭಾವನೆ ತರುವಂಥಾದ್ದು ಈ ಕಡೆ ನಾವು ಕುಳಿತಿದ್ದೇವೆ. ಅಶೋಕಕಾಟ್ವೆ ಬಗೆಗೆ ಆಯಿತು. ಅಪ್ಪಚ್ಚುರಂಜನ್ ಬಗ್ಗೆ ಆಯಿತು, ಸದಾನಂದಗೌಡರ ಬಗ್ಗೆ ಆಯಿತು, ಶಾಸಕ ಬಸವರಾಜ್ ಬಗ್ಗೆ ಮಾಡಿ ಆಯಿತು. ನಂಜಾಮರಿ ಅಂತಹವರು ಆ ಪರಿಸ್ಥಿತಿಗೆ ಸಿಕ್ಕಿಕೊಂಡರು, ಮಾಗಡಿಬಾಲಕೃಷ್ಣರವರು ಸಿಕ್ಕಿಕೊಂಡರು, ಜಯರಾಮಶೆಟ್ಟರು ಸಿಕ್ಕಿಕೊಂಡರು, ಯಾರು ಜೋರಾಗಿ ಮಾತನಾಡುವುದಿಲ್ಲ ಜನರ ಒಂದು ಅಪೇಕ್ಷೆಯಂತೆ ಚುನಾವಣೆಗೆ ನಿಂತು ಚುನಾವಣೆಯಲ್ಲಿ ಗೆದ್ದು ಕಡುಬಡವರ ರಕ್ಷಣೆಗೆ ಹೋದರೆ ಅವರ ಮೇಲೆ ಅಲ್ಲಿರುವಂತಹ ತಹಶೀಲ್ದಾರ್ಸ್ ಮತ್ತು ಉಪತಹಶೀಲ್ದಾರ್ಸ್ ಉದ್ದಟತನದಿಂದ ವರ್ತನೆ ಮಾಡುತ್ತಾರೆ. ಒಬ್ಬ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಬಂದು ಮನಬಂದತೆ ಮಾತನಾಡುತ್ತಾನೆ. ಹೀಗೆ ಮಾಡಬೇಡ ಎಂದು ಹೇಳಲು ಬಂದಂಥ ನಮ್ಮ ಹಿರಿಯ ಶಾಸಕರಾಗಿರುವಂತಹ ಸಭಾಪತಿಯವರ ಸಮಕ್ಷಮ ಸುಳ್ಳು ಕೇಸ್‌ಗಳನ್ನು ದಾಖಲು ಮಾಡುವಂತಹ ಪ್ರಯತ್ನ ಮಾಡಿದಾಗ ಏನಾಗುತ್ತದೆ. ಒಬ್ಬ ಶಾಸಕ ಜನರ ಮುಂದೆ ಜನ ಹಿತಕ್ಕಾಗಿ ಹೋದಾಗ ಅವನ ಮೇಲೆ ಕೇಸ್ ಹಾಕಬಹುದು ಎನ್ನುವಂತಹ ಉದ್ಧಟತನದ ವರ್ತನೆಯನ್ನು ಅಧಿಕಾರಿಗಳು ಮಾಡುವುದಕ್ಕೆ ಬಿಟ್ಟರೆ ಏನಾಗಬಹುದು?

ಯಾರೋ ಒಬ್ಬ ಒಂದು ಅಪರಾಧ ಮಾಡಿರುತ್ತಾನೆ. ನಾನು ಫೋನ್ ಮಾಡುತ್ತೇನೆ ಅವನು ನಿಜವಾಗಲು ಅಪರಾಧಿ ಅಲ್ಲ ಎಂದು ನಾನು ತಿಳಿದುಕೊಂಡಿರುತ್ತೇನೆ. ಪೋಲೀಸ್ ಸ್ಟೇಷನ್‌ಗೆ ಫೋನ್ ಮಾಡಿದಾಗ ಇಲ್ಲಾ ಯಡಿಯೂರಪ್ಪನವರೇ, ಈ ಕೆಲಸ ಆಗಿದೆ, ಇದರಿಂದ ನಾನು ಈ ಕ್ರಮ ತೆಗೆದುಕೊಂಡಿದ್ದೇನೆ ಎಂದು ಹೇಳಿದಾಗ ನಾನು ಕನ್‌ವಿನ್ಸ್ ಆಗುತ್ತೇನೆ. ತಪ್ಪಾಗಿದ್ದಾಗ ಇದು ಸರಿಯಲ್ಲ ಸರಿ ಮಾಡಪ್ಪ ಎಂದು ನಾನು ಫೋನ್ ಮಾಡಿ ಹೇಳಬಹುದು. ಪರ್ಸನಲ್ ಆಗಿ ಕರೆದು ಕೇಳಬಹುದು, ಜಿಲ್ಲಾಧಿಕಾರಿಗಳ ಜೊತೆಯಲ್ಲಿ ಹೋದಾಗ ನಾನು ಆ ತರಹ ಮಾತನಾಡಬಹುದು, ಆದರೆ ಇದೇ ಅಪರಾಧ ಎನ್ನುವಂತಹ ಉಸಿರು ಕಟ್ಟುವಂತಹ ಸ್ಥಿತಿಗೆ ನಮ್ಮನ್ನು ತಂದರೆ ನಾವು ಇಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯ ಇದೆಯೇ? ಸ್ವಾಮಿ ಏನಾಯಿತು? ನಾನು ಬಹಳ ದೂರ ಆ ಘಟನೆಗಳನ್ನು ತೆಗದುಕೊಂಡು ಹೋಗುವುದಿಲ್ಲ,

Mr. SPEAKER : I have a suggestion to you. Think it over. It is a very serious matter. Many hon. members may also participate. Regarding preliminary submissions, we already know....

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ನಾನು ಏನು ಹೇಳಲು ಹೊರಟ್ಟಿದ್ದೇನೆ ಅಂದರೆ ಇಲ್ಲೇ ಸದನದಲ್ಲಿ ನಡೆದಿರುವಂಥಾದ್ದು, ನಮ್ಮ ವಿಶ್ವೇಶ್ವರಹೆಗಡೆಯವರು......

ಅಧ್ಯಕ್ಷರು : ನನ್ನ ಅಪೀಲು ಏನೇಂದರೆ ಥಿಂಕ್ ಮಾಡಿ. ನಾವು ಇದನ್ನು ಸಪರೇಟ್ ಅಗಿ ಚರ್ಚೆಗೆ ತೆಗೆದುಕೊಂಡು can we have a longer discussion with all the affected members who also involved in it. If you can agree now for this, we will just drop this matter here. we can have elaborate discussion. ನಾನು ಸನ್ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ಮತ್ತು ಇತರೇ ಸನ್ಮಾನ್ಯ ಸದಸ್ಯರಲ್ಲಿ ಏನು ವಿನಂತಿ ಮಾಡಿಕೊಳ್ಳುತ್ತೇನೆ ಅಂದರೆ ವಿಷಯದ ಪ್ರಾಮುಖ್ಯತೆಯನ್ನು ಎತ್ತಿ ಹಿಡಿಯುವದೃಷ್ಟಿಯಿಂದ ಯಾವ ಸನ್ಮಾನ್ಯ ಸದಸ್ಯರುಗಳು ತಮ್ಮ ಕರ್ತವ್ಯವನ್ನು ನಿರ್ವಹಣೆ ಮಾಡುವುದಕ್ಕೆ ತೊಂದರೆ ಆಗಿದೆ ತಮ್ಮ ಕರ್ತವ್ಯನಿರ್ವಹಣೆ ಮಾಡತಕ್ಕಂಥ ಸಂದರ್ಭದಲ್ಲಿ ತಮ್ಮ ಮನಸ್ಸಿಗೆ ನೋವಾಗಿದೆ ಅಗೌರವವಾಗಿದೆ ಎನ್ನತಕ್ಕಂಥ ಭಾವನೆಯನ್ನು ವ್ಯಕ್ತ ಮಾಡಿದ್ದಾರೆ ಈ ವಿಚಾರವನ್ನು ಈ ಸದನದಲ್ಲಿ ಸವಿಸ್ತಾರವಾಗಿ ಚರ್ಚೆ ಮಾಡುವ ದೃಷ್ಟಿಯಿಂದ ನಾವು ಮಧ್ಯಾಹ್ನ ಸದನದ ಕಾರ್ಯಕಲಾಪಗಳ ಸಮಿತಿ ಸೇರಿದಾಗ ಎಷ್ಟು ಹೊತ್ತಿಗೆ ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕು ಎಂದು ಹೇಳಿ ಆಡಳಿತ ಪಕ್ಷದವರನ್ನು ಕೂಡ ವಿಶ್ವಾಸಕ್ಕೆ ತೆಗೆದುಕೊಂಡು ಸಮಯ ನಿಗಧಿ ಮಾಡೋಣ. ದಯಾಮಾಡಿ ತಾವುಗಳು ಸಹಕರಿಸಿದರೆ ಒಳ್ಳೆಯದು. ಈಗ 1-30 ಗಂಟೆಯವರೆಗೂ ಒಂದು ಗಮನಸೆಳೆಯುವ ಸೂಚನೆಯನ್ನು ತೆಗೆದು ಕೊಳ್ಳೋಣ.

ಗಮನ ಸೆಳೆಯುವ ಸೂಚನೆಗಳು :

ಕುಷ್ಟಗಿ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜಿನ ವಿಷಯದಲ್ಲಿ ತೋರಿತ್ತಿರುವ ತಾರತಮ್ಯ.

ಶ್ರೀ ಕೆ. ಶರಣಪ್ಪ (ಕುಷ್ಟಗಿ) : ಅಧ್ಯಕ್ಷರೇ, ಕುಷ್ಟಗಿ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜಿನ ವಿಷಯದಲ್ಲಿ ತೋರುತ್ತಿರುವ ತಾರತಮ್ಯದ ಬಗ್ಗೆ ಸನ್ಮಾನ್ಯ ಉಪಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರು ಗಮನ ಸೆಳೆಯುವ ಸೂಚನೆಯಲ್ಲಿ ಪ್ರಸ್ತಾಪ ಮಾಡಿರುವ ವಿಷಯದ ಬಗ್ಗೆ ಹೇಳುವುದಾದರೆ, ಸಿಂಧನೂರಿನಲ್ಲಿರುವ 110.33ಕೆ.ವಿ ವಿದ್ಯುತ್ ಉಪ ಕೇಂದ್ರದಿಂದ ಕುಷ್ಟಗಿ, ಮಸ್ಕಿ ಮತ್ತು ಸಿರಗುಪ್ಪಗಳಲ್ಲಿರುವ 33.11 ಕೆ ವಿ ವಿದ್ಯುತ್ ಉಪ ಕೇಂದ್ರಗಳಿಗೆ ವಿದ್ಯುತ್ ಸರಬರಾಜು ಆಗುತ್ತಿದೆ. ಸಿಂಧೂನೂರಿನ 110.33 ಕೆ ವಿ ವಿದ್ಯುತ್ ಉಪ ಕೇಂದ್ರಕ್ಕೆ ರಾಯಚೂರಿನಲ್ಲಿರುವ 220.110 ಕೆ ವಿ ವಿದ್ಯುತ್ ಸ್ವೀಕರಣಾ ಕೇಂದ್ರದಿಂದ ವಿದ್ಯುತ್ ಸರಬರಾಜಾಗುತ್ತಿದೆ. 11-8-95ರಂದು ರಾಯಚೂರಿನ 210 ಕೆ ವಿ ವಿದ್ಯುತ್ ಸ್ವೀಕರಣಾ ಕೇಂದ್ರದಲ್ಲಿ ಒಂದು ಸರ್ಕ್ಯೂಟ್ ಬ್ರೇಕರ್ ದೋಷದಿಂದ, ಸಿಂಧನೂರು ವಿದ್ಯುತ್ ಉಪ ಕೇಂದ್ರದ ಲೋಡನ್ನು ನಿಯಂತ್ರಿಸುವುದು ಅನಿವಾರ್ಯವಾಯಿತು.

11-8-95ರ ಸಂಜೆ 6.50 ರಿಂದ 14-8-95ರ ಸಂಜೆ 7.00 ಗಂಟೆಯವರೆಗೆ ಈ ಕಾರಣದಿಂದ ಲೋಡನ್ನು ನಿಯಂತ್ರಿಸಲಾಗಿತ್ತು. ಈ ಅವಧಿಯಲ್ಲಿ ಸಿಂಧನೂರು ವಿದ್ಯುತ್ ಉಪ ಕೇಂದ್ರದಿಂದ ವಿದ್ಯುತ್ ಪಡೆಯುವ ಕುಷ್ಟಗಿ, ಸಿರಗುಪ್ಪ ಮತ್ತು ಮಸ್ಕಿ ವಿದ್ಯುತ್ ಬೇಡಿಕೆಯನ್ನು ಕೇಂದ್ರಗಳಿಗೆ ತಾರತಮ್ಯವಿಲ್ಲದೇ ಲೋಡನ್ನು ನಿಯಂತ್ರಿಸಿಲಾಗಿದೆ. ಅಲ್ಲದೆ, ರಾಜ್ಯದಲ್ಲಿ ಮುಂಗಾರಿನ ಅಭಾವದಿಂದ ವಿದ್ಯುತ್ ಉತ್ಪಾದನೆಯು

ಕುಂಟಿತವಾಗಿರುವುದರಿಂದ ಬೆಳಗಿನ ಮತ್ತು ಸಂಜೆಯ ಪೀಕ್ ಲೋಡ್‌ಗಳಲ್ಲಿ ವಿದ್ಯುತ್ ಬೇಡಿಕೆಯನ್ನು ನಿಯಂತ್ರಿಸುವುದು ಅಗತ್ಯವಾಗಿದ್ದು, ನಿಯಮಿತ ಮತ್ತು ಅನಿಯಮಿತ ಲೋಡ್ ಶೆಡ್ಡಿಂಗ್‌ಅನ್ನು ನಿರ್ವಹಿಸಲಾಗುತ್ತಿದೆ. ಈ ಸಮಯದಲ್ಲೂ ಸಹ ಕುಷ್ಟಗಿ ತಾಲ್ಲೂಕಿಗೆ ತಾರತಮ್ಯ ಮಾಡದೇ, ಕುಷ್ಟಗಿ, ಸಿರಗುಪ್ಪ ಮತ್ತು ಮಸ್ಕಿ ಈ ಮೂರು ತಾಲ್ಲೂಕುಗಳಿಗೂ ಸಮವಾಗಿ ಲೋಡ್ ಶೆಡ್ಡಿಂಗ್ ಅನ್ನು ಮಾಡಲಾಗುತ್ತಿದೆ. 9-8-1995ರಿಂದ 15-8-95ರವರೆಗೆ ಸಿರಗುಪ್ಪ ಮತ್ತು ಮಸ್ಕಿ ತಾಲ್ಲೂಕುಗಳಲ್ಲಿ ಉಂಟಾದ ವಿದ್ಯುತ್ ಅಡಚಣೆಯ ಒಟ್ಟು ಅವಧಿ ಅನುಕ್ರಮವಾಗಿ 32 ಮತ್ತು 37 ಗಂಟೆಗಳಾದರೆ ಕುಷ್ಟಗಿ ತಾಲ್ಲೂಕಿಗೆ ಉಂಟಾದ ವಿದ್ಯುತ್ ಅಡಚಣೆ ಕೇವಲ 27 ಗಂಟೆ, 30 ನಿಮಿಷ ಮಾತ್ರ. ಈ ಅಂಕಿ ಅಂಶಗಳಿಂದ. ಕುಷ್ಟಗಿ ತಾಲ್ಲೂಕಿಗೆ ವಿದ್ಯುತ್ ಸರಬರಾಜಿನ ವಿಷಯದಲ್ಲಿ ಯಾವ ರೀತಿಯಲ್ಲೂ ಅನ್ಯಾಯ ಉಂಟಾಗಿಲ್ಲವೆಂದು ಸ್ಪಷ್ಟಪಡಿಸುತ್ತೇನೆ.

ಶ್ರೀ ಕೆ. ಶರಣಪ್ಪ : ಈ ಅಂಕಿಅಂಶಗಳು ತಪ್ಪು ಮಾಹಿತಿಯಿಂದ ಕೂಡಿವೆ ಎಂದು ಅಧ್ಯಕ್ಷರ ಮೂಲಕ ತಿಳಿಸಬಯಸುತ್ತೇನೆ. ಅಲ್ಲದೆ, ಹಿಂದಿನ 5 ವರ್ಷಗಳಿಂದ ಕುಷ್ಟಗಿಗೆ ತಾರತಮ್ಯ ಮಾಡಿರುವ ಅನೇಕ ಆಧಾರಗಳು ಕಂಡುಬಂದಿವೆ, ಆದ್ದರಿಂದ ನಾನು ದಯವಿಟ್ಟು ಕೇಳಿಕೊಳ್ಳುವುದಿಷ್ಟೇ : ಸಂಬಂಧಪಟ್ಟ ಅಧಿಕಾರಿಗಳಿಗೆ ಕುಷ್ಟಗಿಗೆ ತಾರತಮ್ಯವಾಗದಂತೆ ನೋಡಿಕೊಳ್ಳಬೇಕೆಂದು ಸೂಚಿಸಲು ತಮ್ಮ ಮೂಲಕ ವಿನಂತಿಸುತ್ತೇನೆ.

ಶ್ರೀ ಜೆ.ಎಚ್. ಪಟೇಲ್ : ನಮ್ಮ ಶಾಸಕರೇ ಇರುವ ಕಡೆ ನಾವೆಲ್ಲಾದರೂ ತಾರತಮ್ಯ ಮಾಡುತ್ತೇವೆಯೇ? ವ್ಯವಸ್ಥೆ ಮಾಡುತ್ತೇವೆ.

ಅಧ್ಯಕ್ಷರು : ಈಗ ಸದನವನ್ನು ಒಂದು ಘಂಟೆಗಳ ಕಾಲ ಮುಂದೂಡುತ್ತಿದ್ದೇನೆ.

(ಸದನವು 1 ಗಂಟೆ ಕಾಲ ವಿರಾಮಕ್ಕಾಗಿ 1 ಗಂಟೆ 20 ನಿಮಿಷದಲ್ಲಿ ಮುಂದೂಡಲ್ಪಟ್ಟಿತು.)

(ಸಭೆಯು 2.40 ಗಂಟೆಗೆ ಸಮಾವೇಶಗೊಂಡಿತು ಉಪಾಧ್ಯಕ್ಷರು ಶ್ರೀ ಎಂ.ಎಸ್. ಪಾಟೇಲ್ ಪೀಠವನ್ನು ಅಲಂಕರಿಸಿದ್ದರು)

ಗಮನ ಸೆಳೆಯುವ ಸೂಚನೆ

ಆಲಮಟ್ಟಿ ಜಲಾಶಯದಲ್ಲಿ ಮುಳುಗಡೆಯಾದ ಪ್ರದೇಶದ ಜನರಿಗೆ ಪುನರ್ವಸತಿ ಕಲ್ಪಿಸದಿರುವ ಹಾಗೂ ಪರಿಹಾರಧನ ನೀಡದಿರುವುದು.

ಶ್ರೀ ಜೆ.ಟಿ. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಆಲಮಟ್ಟಿ ಜಲಾಶಯದಲ್ಲಿ ಮುಳುಗಡೆಯಾದ ಪ್ರದೇಶದ ಜನರಿಗೆ ಪುನರ್ವಸತಿ ಕಲ್ಪಿಸದಿರುವ ಹಾಗೂ ಪರಿಹಾರ ಧನವನ್ನು ನೀಡದಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

+ಶ್ರೀ ಹೆಚ್.ಡಿ. ದೇವೆಗೌಡ (ಮುಖ್ಯ ಮಂತ್ರಿಯವರು) : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರುಗಳಾದ ಜೆ.ಟಿ. ಪಾಟೇಲ್, ಬಿ.ಎಸ್. ಪಾಟೇಲ್, ಆರ್. ಎಂ. ಕಲೂತಿ, ಹಾಗೂ ಎಸ್.ಆರ್. ಕಾಶಪ್ಪನವರುಗಳು ತಂದಿರತಕ್ಕಂಥ ಗಮನ ಸೆಳೆಯುವ ಸೂಚನೆಗೆ ಈ ಕೆಳಗಿನ ಹೇಳಿಕೆಯನ್ನು ನೀಡಬಯಸುತ್ತೇನೆ.

ಬಿಜಾಪುರ ಜಿಲ್ಲೆ, ಆಲಮಟ್ಟಿ ಜಲಾಶಯದಲ್ಲಿ 1995-96ನೇ ಸಾಲಿನಲ್ಲಿ 21 ಹಳ್ಳಿಗಳು ಮುಳುಗಡೆಯಾಗಲಿವೆಯೆಂದು ಅಂದಾಜು ಮಾಡಲಾಗಿದೆ ಮತ್ತು ಅವುಗಳನ್ನು 14 ಪುನರ್ವಸತಿ ಕೇಂದ್ರಗಳಲ್ಲಿ ನೆಲೆಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ವರ್ಷದ ಪ್ರವಾಹದ ಸಮಯದಲ್ಲಿ ಮುಳುಗಡೆಯಾಗಲಿರುವ ಹಳ್ಳಿಗಳ ನಿವಾಸಿಗಳನ್ನು ಸ್ಥಳಾಂತರಿಸಲು

ಸುಮಾರು 2.85 ಕೋಟಿ ರೂ.ಗಳ ಮೊತ್ತದಲ್ಲಿ ವ್ಯಾಪಕವಾದ ಕಂಟಿನ್‌ಜೆನ್ಸ್ ಪ್ಲಾನ್ ತಯಾರಿಸಿ ಅದನ್ನು ಆಚರಣೆಗೆ ತರಲಾಗಿದೆ. ಈ ವರ್ಷ ನಿರೀಕ್ಷಿಸಿದಷ್ಟು ಮಳೆ ಬಾರದುದರಿಂದ ಈ 21 ಹಳ್ಳಿಗಳ ಮುಳುಗಡೆ ಆಗುತ್ತಿಲ್ಲ. ಜಿಲ್ಲಾ ಆಡಳಿತ ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆ ಅಧಿಕಾರಿಗಳು ಪ್ರವಾಹದ ಸಮಯದಲ್ಲಿ ಜನರಿಗೆ ಸೂಕ್ತ ನೆರವನ್ನು ಒದಗಿಸುತ್ತಿದ್ದಾರೆ.

ಆಲಮಟ್ಟಿ ಜಲಾಶಯವನ್ನು 2 ಘಟ್ಟಗಳಲ್ಲಿ ನಿರ್ಮಿಸಲು ಉದ್ದೇಶಿಸಿದೆ. ಘಟ್ಟ-1ರ ಕೆಲಸಗಳನ್ನು ಮೂರು ಹಂತಗಳಲ್ಲಿ ಕೈಗೊಳ್ಳಲಾಗುತ್ತಿದೆ. ಹಂತ-1ರ ಕೆಲಸ ಪೂರ್ಣಗೊಂಡಿದ್ದು ಹಂತ-2ರ ಕೆಲಸಗಳು ಪ್ರಗತಿಯಲ್ಲಿ ಇರುತ್ತವೆ. ಹಂತ-2ರಲ್ಲಿ 95 ಹಳ್ಳಿಗಳು, ಹಂತ-3ರಲ್ಲಿ 41 ಹಳ್ಳಿಗಳು ಮತ್ತು ಘಟ್ಟ-2ರಲ್ಲಿ 22 ಹಳ್ಳಿಗಳು ಅಂದರೆ ಒಟ್ಟು 158 ಹಳ್ಳಿಗಳು ಹಂತಹಂತವಾಗಿ ಮುಳುಗಡೆಯಾಗುತ್ತಿವೆ. ಈ ಎಲ್ಲಾ ಗ್ರಾಮಗಳ ಪುನರ್ವಸತಿಗಾಗಿ ಪುನರ್ವಸತಿ ಕೇಂದ್ರಗಳ ನಿರ್ಮಾಣ ಕಾರ್ಯ ಬರದಿಂದ ಸಾಗುತ್ತಿದೆ. 1994ರಲ್ಲಿ ಮುಳುಗಡೆ ಆಗಲಿದ್ದ 6 ಹಳ್ಳಿಗಳ ಸಂತ್ರಸ್ತರನ್ನು 4 ಪುನರ್ವಸತಿ ಕೇಂದ್ರಗಳಲ್ಲಿ ಈಗಾಗಲೇ ಸ್ಥಳಾಂತರಗೊಳಿಸಲಾಗಿದೆ. ಆಲಮಟ್ಟಿ ಜಲಶಾಯದಡಿಯಲ್ಲಿ ಒಟ್ಟು 75.425 ಹೆಕ್ಟೇರ್ ಜಮೀನು ಮುಳುಗಡೆಯಾಗಲಿದೆ. ಇದರಲ್ಲಿ ಈಗಾಗಲೇ 18,060 ಹೆಕ್ಟೇರ್ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಈ ಯೋಜನೆಯನ್ನು ವಿಶ್ವ ಬ್ಯಾಂಕಿನ ಹಣಕಾಸು ನೆರವಿನೊಂದಿಗೆ ಕಾರ್ಯಗತಗೊಳಿಸಲಾಗುತ್ತಿರುವುದರಿಂದ ವಿಶ್ವ ಬ್ಯಾಂಕ್ ಸೂಚಿಸಿರುವ ಬಾಧಿತರಾದ ಸಂತ್ರಸ್ತ ಕುಟುಂಬದವರಿಗೆ ಸಲ್ಲತಕ್ಕ ಪರಿಹಾರವನ್ನು ನಿರ್ದಿಷ್ಟಪಡಿಸಲಾಗಿದೆ. ಬಾದಿತ ಕುಟುಂಬಗಳನ್ನು 7 ವರ್ಗಗಳಲ್ಲಿ ವಿಂಗಡಿಸಲಾಗಿದೆ. ಪ್ರತಿ ವರ್ಗಕ್ಕೆ ಸಲ್ಲುವ ಪರಿಹಾರಗಳನ್ನು ನಿರ್ದಿಷ್ಟಪಡಿಸಲಾಗಿದ್ದು ಅದರಂತೆ ಕೊಡಲಾಗುತ್ತಿದೆ.

ಮಾನ್ಯ ಉಪಾಧ್ಯಕ್ಷರೆ, ಈ ವಿಷಯದಲ್ಲಿ ಇತ್ತೀಚಿನ ಕೆಲವು ಘಟನೆಗಳನ್ನೂ ಕೂಡ ನಾನು ಹೇಳಬೇಕಾಗುತ್ತದೆ. ನಾವು ಏನು ಆಲಮಟ್ಟಿ ಜಲಾಶಯದ ಹಿಂಬದಿಯದಲ್ಲಿ ಕೆಲವು ಗ್ರಾಮಗಳು ಮುಳುಗಡೆಯಾಗುತ್ತದೆ. ಈ ಮುಳುಗಡೆಯಾಗತಕ್ಕಂಥದ್ದರ ಬಗ್ಗೆ ವರ್ಲ್ಡ್ ಬ್ಯಾಂಕಿನ ನಿಯಮಗಳು ಏನಿವೆ ಅದನ್ನು ಸರಿಯಾದ ರೀತಿ ಅನುಷ್ಠಾನಕ್ಕೆ ತರುವಂಥಾದ್ದರಲ್ಲಿ ಕೆಲವು ತೊಂದರೆಗಳು ಇವೆ. ಅಡೆತಡೆಗಳು ಇವೆ. ಅದು ಒಂದು ಕಡೆ ಇದೆ. ಮತ್ತೊಂದು ಕಡೆ ಇದರಲ್ಲಿ ಸಾಕಷ್ಟು ದುರುಪಯೋಗ ಕೂಡ ಆಗುತ್ತಾ ಇದೆ. ಬಡವರಿಗೆ ನಾವು ಏನು ಕಂಪೆನ್‌ಸೇಷನ್ ವರ್ಲ್ಡ್ ಬ್ಯಾಂಕಿನ ಪ್ರಕಾರ ಕೊಡುತ್ತಿದ್ದೇವೆ ಅದು ಅವರಿಗೆ ಹೋಗುವುದಿಲ್ಲ. ಕೆಲವು ಲಾಯರ್‌ಗಳು ಪವರ್ ಅಫ್ ಅಟಾರ್ನಿ ತೆಗೆದುಕೊಂಡು ಅವರಿಗೆ ಅಲ್ಪ ಸ್ವಲ್ಪ ಹಣವನ್ನು ಕೊಟ್ಟು ಆಮೇಲೆ ಕೋರ್ಟ್‌ನಲ್ಲಿ ಹೋಗಿ ಅವರು ಹೆಚ್ಚಿನ ಹಣವನ್ನು ಪಡೆದುಕೊಳ್ಳತಕ್ಕದ್ದು, ಹಣವನ್ನು ಪಡೆದುಕೊಳ್ಳತಕ್ಕಂಥ ಕಾಲದಲ್ಲಿ ಅದನ್ನು ತಡೆಗಟ್ಟತಕ್ಕಂಥದ್ದಕ್ಕೆ ನಮ್ಮ ವ್ಯವಸ್ಥೆ ಕೂಡ ಸರಿಯಾಗಿ ಇಲ್ಲ. ರೆವಿನ್ಯೂ ಅಧಿಕಾರಿಗಳು ಕೆಲವು ಸಂದರ್ಭದಲ್ಲಿ ಶಾಮಿಲು ಆಗುತ್ತಾರೆ.

ಇವತ್ತು ನಮ್ಮ ಸರ್ಕಾರದ ಪರವಾಗಿ ವಾದ ಮಾಡತಕ್ಕಂಥವರು ಕೂಡ ಎಲ್ಲರೂ ಅಲ್ಲ, ಕೆಲವರು ಶಾಮೀಲಾಗುತ್ತಾರೆ. ಇದು ಒಂದು ದೊಡ್ಡ ದುರಂತ. ಆದರೆ ರೈತರಿಗೆ ನಾವು ಏನು ಕೊಡುತ್ತೇವೆ. ಅಂತೀಮವಾಗಿ ಕೋರ್ಟ್ ಡಿಕ್ರಿ ಕೊಟ್ಟರೆ ಪೂರ್ತ ರೈತರಿಗೆ ಹೋಗತಕ್ಕಂಥದ್ದು ಹಲವಾರು ನಿದರ್ಶನ ಇಲ್ಲವೆನ್ನುವುದು ನಾನು ಜನತಾ ದರ್ಶನ ಸಭೆಗಳಿಗೆ ಹೋದಂತಹ ಕಾಲದಲ್ಲಿ ಅಲ್ಲಿ ಮೀಟಿಂಗ್ ನಡೆಸಿದಂತಹ ಕಾಲದಲ್ಲಿ ನನ್ನ ಗಮನಕ್ಕೆ ಅನೇಕ ಜನ ಬಡ ರೈತರು ಈ ಸುದ್ದಿಯನ್ನು ಕೊಟ್ಟಿದ್ದಾರೆ. ಆದಕ್ಕೋಸ್ಕರ ನಾನು· ಮುಖ್ಯ ಕಾರ್ಯದರ್ಶಿಯವರಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ಇವತ್ತು ನಾವೇ ನೇರವಾಗಿ ರೈತರಿಗೆ ಹಣವನ್ನು ಕೊಟ್ಟು ಕೊಂಡು

ಕೊಳ್ಳುವಂತಹ ವ್ಯವಸ್ಥೆಯನ್ನು ತರೋಣ, ಸುತ್ತಿ ಬಳಸಿ ಏನು ಈ ರೈತರ ಹೆಸರಿನಲ್ಲಿ ಅಥವಾ ಮುಳುಗಡೆಯಾಗತಕ್ಕಂಥವರ ಹೆಸರಿನಲ್ಲಿ ಬೇರೆ ಬೇರೆ ಶಕ್ತಿಗಳು ಈ ಹಣವನ್ನು ಅವರ ಹೆಸರಿನಲ್ಲಿ ಪಡೆದುಕೊಳ್ಳುವಂಥ ಈ ವ್ಯವಸ್ಥೆ ಇದೆ. ಇದಕ್ಕೆ ಅಂತಿಮ ಇತಿಶ್ರೀಯನ್ನು ಹಾಡಬೇಕೆಂದು ನಾನು ಅಧಿಕಾರಿಗಳಿಗೆ ಆದೇಶ ಮಾಡಿದ್ದೇನೆ. ಬಹುಶಃ ಸಂಜೆಯೊಳಗೆ ನನಗೆ ಒಂದು ವರದಿಯನ್ನು ಕೊಡಬೇಕೆಂದು ಹೇಳಿದ್ದೇನೆ. ಅದು ಯಾರಾದರೂ ನಿವೃತ್ತ ನ್ಯಾಯಾಧೀಶರಾಗಬಹುದು, ಸ್ಥಳೀಯ ಶಾಸಕರಾಗಬಹುದು. ಜಿಲ್ಲಾಧಿಕಾರಿಯಾಗಬಹುದು, ಅವರ ಜೊತೆಗೆ ಅಸಿಸ್ಟೆಂಟ್ ಕಮೀಷನರ್ ಇರಬಹುದು. ಹೀಗೆ ನಾಲ್ಕೈದು ಜನರ ಸಮಿತಿಯನ್ನು ಮಾಡಿ ನೇರವಾಗಿ ಅವರಿಗೆ ಕೊಂಡು ಕೊಳ್ಳುವ ಮುಖೇನ ಈ ಒಂದು ಅವ್ಯವಹಾರ ನಡೆಯುವುದಕ್ಕೆ ಅವಕಾಶ ಏನಿದೆ ಅದನ್ನು ತಡೆಗಟ್ಟುವುದು ಒಂದು, ಇನ್ನೊಂದು ಮಾತನ್ನು ಹೇಳಲಿಚ್ಛಿಸುತ್ತೇನೆ. 1998ಕ್ಕೆ ಮುಳುಗಡೆಯಾಗುವುದಾದರೆ ಅವರಿಗೆ ಇವತ್ತು ಅವಾರ್ಡ್ ಪಾಸ್ ಮಾಡಿದ್ದಾರೆ. 1995ರಲ್ಲಿ ಮುಳುಗಡೆಯಾಗಿರುವವರೆಗೆ ಇದುವರೆಗೂ 4(1) ನೋಟಿಫಿಕೇಷನ್ ಆಗಿಲ್ಲ. ಕಾರಣ ನಾನು ಯಾರ ಮೇಲೂ ದೋಷ ಹೊರಿಸುವುದಕ್ಕೆ ಹೇಳುತ್ತಾ ಇಲ್ಲ. ಹೇಗೆ ಅಧಿಕಾರಿಗಳು ನಡೆಸುತ್ತಾರೆಂದು 1997-98ನಲ್ಲಿ ಮುಳುಗಡೆಯಾಗುವುದಕ್ಕೆ 4(1), 6(1) ನೋಟಿಫಿಕೇಷನ್ ಆಗಿ, ಅವಾರ್ಡ್ ಪಾಸ್ ಆಗಿದೆ. ಕೋರ್ಟ್‌ಗೆ ಹೋಗಿ ಡಿಕ್ರಿ ತೆಗೆದುಕೊಂಡಿದ್ದಾರೆ. ಆಫೀಸ್‌ಗಳು ಜಪ್ತಿ ಮಾಡುತ್ತಾರೆ. ಈ ವರ್ಷ ಮುಳುಗಡೆಯಾಗುತ್ತವೆ ಅಂಥದ್ದಕ್ಕೆ ಏನೂ ಇಲ್ಲ. ಈ ವ್ಯವಸ್ಥೆಯಲ್ಲಿ ನಾನಾ ದೋಷವಿದೆ ಎಂದು ಹೇಳಿದೆ ಅಷ್ಟೆ. ಆದುದರಿಂದ ಈ ವಿಷಯವನ್ನು ತೀವ್ರವಾಗಿ ಗಮನಕ್ಕೆ ತೆಗೆದುಕೊಂಡು ಇದಕ್ಕೆ ಏನಾದರೂ ಯೋಗ್ಯ ರೀತಿಯಲ್ಲಿ ಪರಿಹಾರವನ್ನು ಕಂಡು ಹಿಡಿಯಬೇಕೆಂಬ ದೃಷ್ಟಿಯಿಂದ ನಾವು ನೇರವಾಗಿ ಪರ್‌ಚೇಸ್ ಮಾಡುವಂತಹ ಒಂದು ವ್ಯವಹಾರವನ್ನು ಜಾರಿಗೆ ತರಬೇಕೆಂದು ಆಲೋಚನೆ ಮಾಡುತ್ತಿದ್ದೇವೆ.

+ಶ್ರೀ ಜೆ.ಟಿ. ಪಾಟೀಲ್ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಇವತ್ತಿನ ಸದನಕ್ಕೆ ಒಂದು ಲಿಖಿತ ಮೂಖಾಂತರ ಉತ್ತರವನ್ನು ಕೊಟ್ಟಿದ್ದಾರೆ. ಇದನ್ನು ಸ್ಪಷ್ಟವಾಗಿ ಖಂಡನೆ ಮಾಡುತ್ತಾ, ಏಕೆಂದರೆ ಇದು ವಾಸ್ತವಿಕಕ್ಕೆ ಭಿನ್ನವಾದದ್ದು, ವ್ಯತಿರಿಕ್ತವಾದುದ್ದು ಸತ್ಯಕ್ಕೆ ಸಮೀಪ ಅಲ್ಲದಂಥ ಸಂಗತಿ ಇವತ್ತು ಸದನಕ್ಕೆ ಕೊಟ್ಟಿದ್ದಾರೆ ಎಂದು ಬಹಳ ವಿನಮ್ರಪೂರ್ವಕವಾಗಿ ದುಃಖದಿಂದ ಹೇಳುತ್ತೇನೆ. ಏಕೆಂದರೆ ಇಡೀ ದೇಶದಲ್ಲಿ ಮುಳುಗಡೆಯಾಗತಕ್ಕಂಥ ಜಲಾನಯನದಲ್ಲಿ ಕೃಷ್ಣಾ ಮತ್ತು ಅಲಮಟ್ಟಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮುಳುಗಡೆಯಾಗುವುದು ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ ಕನಿಷ್ಠ ಎರಡು ನೂರು ಹಳ್ಳಿಗಳಿಗಿಂತಲೂ ಹೆಚ್ಚಿಗೆ ಅಲ್ಲಿ ಗ್ರಾಮಗಳು ಮುಳುಗಡೆಯಾಗುತ್ತಿವೆ. ಒಂದು ಲಕ್ಷ ಹೆಕ್ಟೇರ್‌ಗಿಂತಲೂ ಹೆಚ್ಚಿಗೆ ಜಮೀನುಗಳು ಮುಳುಗಡೆಯಾಗುತ್ತಿದೆ. ಒಂದು ಲಕ್ಷ ಜನರು ಇದ್ದಂತಹ ಪಟ್ಟಣ ಹಾಗೂ ಇನ್ನೂರು ಹಳ್ಳಿಗಳಿಗಿಂತಲೂ ಹೆಚ್ಚಿಗೂ ಇವತ್ತು ಮುಳುಗುತ್ತಿವೆ. ಇವತ್ತಿನವರೆಗೂ ಯಾವುದೇ ಸರಿಯಾದ ಪುನರ್ ವಸತಿ ಕೇಂದ್ರ ಇಲ್ಲ, ಇನ್ನೂ ಅಧಿಕಾರಿಗಳು ಕೊಟ್ಟ ಮಾಹಿತಿಯ ಪ್ರಕಾರ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. 1995-96ನೇ ಸಾಲಿನಲ್ಲಿ 25 ಹಳ್ಳಿಗಳು ಮುಳುಗಡೆಯಾಗಿವೆ ಎಂದು ಹೇಳಿದರು. ಇವತ್ತು ಅಲಮಟ್ಟಿಯ ಜಲಾಶಯದ ಕೆಲಸ 504 ಮೀಟರ್ ಆಗಿದೆ. ಇನ್ನು ಬರುವ ಡಿಸೆಂಬರ್ ತಿಂಗಳಿಗೆ 509 ಮೀ. ಆಗುತ್ತದೆ. ಈ 504ಮೀ. ಕಟ್ಟುವಾಗಲೇ ಹೋದವರ್ಷ ಮಳೆಗಾಲದಲ್ಲಿ ಕೃಷ್ಣಾ ನದಿಯಲ್ಲಿ ಐದೂವರೆ ಲಕ್ಷ ಕ್ಯೂಸೆಕ್ಸ್ ನೀರು ಹರಿದಿತ್ತು. ಈ ವರ್ಷ ಮುಳುಗಡೆಯಾಗತಕ್ಕಂಥ ಜನರ ನಸೀಬೋ ಅಥವಾ ಮಳೆರಾಯನ ಕೃಪೆಯೋ ಮಳೆಯಿಂದ ಇವತ್ತು ಮುಳುಗಡೆಯಾಗದಂತಹಕ ಪರಿಸ್ಥಿತಿಗೆ ತಲುಪಿದೆಯೊ ಏನೋ ಇಷ್ಟು ಇದ್ದರೂ ಸಹಿತ ಬೀಳಗಿ ತಾಲ್ಲೂಕ್‌ನಲ್ಲಿ ಏಳು ಹಳ್ಳಿಗಳು ಜಲ್ಲಾವೃತವಾಗಿದೆ. ಅದರಲ್ಲಿ ಪ್ರಥಮ ಹಂತದಲ್ಲಿ 21 ಹಳ್ಳಿಗಳು ಸಂಪೂರ್ಣವಾಗಿ ಮುಳುಗಡೆಯಾಗಬೇಕಾಗಿತ್ತು. ಆದರೆ ನೀರಿನ ಪ್ರಮಾಣ ಕಡಿಮೆ ಇದ್ದ ಕಾರಣ, ನೀರು ಕಡಿಮೆ ಇದ್ದರೂ 7 ಹಳ್ಳಿಗಳು

ಮುಳುಗಡೆಯಾಗಿದೆ. ಅದರಲ್ಲಿ ಚಿನ್‌ವಾಲ್‌ಕೊಪ್ಪ ಎನ್ನುವಂಥಹಳ್ಳಿಯ ಉದಾಹರಣೆಯನ್ನು ಕೊಡುತ್ತೇನೆ. ಇಡೀ ಜಲಾಶಯದಲ್ಲಿ 1995-96ರಲ್ಲಿ ಕನಿಷ್ಟ 85ಹಳ್ಳಿಗಳು ಸಂಪೂರ್ಣವಾಗಿ ಮುಳುಗಡೆಯಾಗುತ್ತವೆ. ಏಕೆಂದರೆ 509ಮೀಟರ್ ಆರ್.ಸಿ.ಸಿ. ಡ್ಯಾಮ್ ಸ್ಟ್ರಕ್ಚರ್ ಮುಗಿದಿದೆ. ಇದರ ಮೇಲೆ ಹದಿನೈದೂವರೆ ಮೀಟರ್ ಡ್ಯಾಮ್ ಕಟ್ಟುತ್ತಾರೆ. ಅಲ್ಲಿ ಗೇಟ್ ಕೂರಿಸುತ್ತಾರೆ. ಈ 509 ಮೀ. ಡ್ಯಾಮ್ ಕಟ್ಟಿದ ಮೇಲೆ ಇಷ್ಟೇ ಮಳೆ ಆದರೂ ಸಹಿತ ಈಗ ಸ್ವಂತ ಮಾನ್ಯ ಮುಖ್ಯಮಂತ್ರಿಯವರು ಮತ್ತು ಇಡೀ ಕರ್ನಾಟಕ ರಾಜ್ಯದ ಶಾಸಕರು ಕೂಡಿ ಯಾವುದು ಹಳ್ಳಿಗಳು ಮುಳುಗಡೆಯಾಗಬಾರದೆಂದರೂ 85 ಹಳ್ಳಿಗಳು ಮುಳುಗಡೆಯಾಗುತ್ತವೆ. ಈ 85 ಹಳ್ಳಿಗಳ ಪೈಕಿ ಇವತ್ತು 20-25ಹಳ್ಳಿಗಳಿಗೆ ಜಮೀನು ಮತ್ತು ಮನೆಗಳಿಗೆ ಪರಿಹಾರಧನವನ್ನು ಕೊಟ್ಟಿದ್ದಾರೆ. ಇನ್ನುಳಿದ ಹಳ್ಳಿಗಳಿಗೆ ಪೂರ್ವಾನ್ವಯ ಯಾವುದೇ ಪರಿಹಾರವನ್ನು ಕೊಟ್ಟಿಲ್ಲ.

ಉಪಾಧ್ಯಕ್ಷರು : ಅದೆಲ್ಲವನ್ನೂ ಹೇಳಿದ್ದೀರಲ್ಲಾ...

ಶ್ರೀ ಜೆ.ಟಿ. ಪಾಟೀಲ್ : ಇದನ್ನು ಒಂಭತ್ತು ತಿಂಗಳಲ್ಲಿ ಮಾಡಬೇಕೆಂದು ಹೇಳಿದ್ದೆ. ಮೊದಲೇ ನಾನು ಚಿನ್‌ವಾಲ್ ಕೊಪ್ಪದ ಉದಾಹರಣೆಯನ್ನು ನಾನು ಹೇಳಿದ್ದೇನೆ. ಆ ಗ್ರಾಮ 1995 ರಲ್ಲಿ ಸಂಪೂರ್ಣವಾಗಿ ಮುಳುಗಡೆಯಾಗಿದೆ. ಇವತ್ತು ಅವರಿಗೆ ಸರಿಯಾಣ ಪುನರ್‌ವಸತಿ ಇಲ್ಲದೆ ಅವರು ಎಲ್ಲಿ ಹೋಗಿ ಪುನರ್‌ವಸತಿ ಮಾಡಬೇಕು. ಈ ಪರಿಸ್ಥಿತಿಯಲ್ಲಿ ತಾತ್ಕಾಲಿಕವಾಗಿ ನಮಗೆ ಶೆಡ್ ಕೊಡಿ ಜಿಂಗ್‌ಸೀಟ್ ಕೊಡಿ ಎಂದು ಅಧಿಕಾರಿಗಳನ್ನು ಕೇಳುವುದಕ್ಕೆ ಹೋದಾಗ ಅವರು ಅದನ್ನು ಕೊಡುವುದಕ್ಕೆ ಒಪ್ಪಲಿಲ್ಲ.

ಉಪಾಧ್ಯಕ್ಷರು : ಪಾಟೀಲ್‌ರವರೇ ನೀರಿನ ಸಮಸ್ಯೆ ಏನು ಅದನ್ನು ಹೇಳಿ.

ಶ್ರೀ ಜೆ.ಟಿ. ಪಾಟೀಲ್ : ನೀರಿನ ಸಮಸ್ಯೆಯನ್ನು ಹೇಳುತ್ತೇನೆ, ಅದಕ್ಕಾಗಿ ಸರ್ಕಾರ ಈ ಗ್ರಾಮಗಳು ಎನಿಸಿ ಅದಕ್ಕೆ ಗೋಡೆಗಳನ್ನು ಮುರಿದು ಜಿಂಕ್‌ಸೀಟ್ ಹಾಕಿ ತಾವೇ ನಿರ್ಮಿಸಿದಂತಹ ಪುನರ್‌ವಸತಿಯ ಫೋಟೊಗಳನ್ನು ತಮಗೆ ಕಳುಹಿಸಿಕೊಡುತ್ತೇನೆ. ಅದು ಅಲ್ಲದೆ ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ ಈ ಕರ್ನಾಟಕ ರಾಜ್ಯದ ಪ್ರತಿಷ್ಠಿತ ಪತ್ರಿಕೆಗಳು ತಮ್ಮದ್ದೇ ಆದ ಮೂಲದಿಂದ ಏನು ಸರ್ವೆ ಮಾಡಿದಂತಹ ರಿಪೋರ್ಟ್ ಕೊಟ್ಟಿದ್ದಾರೆ. ಮುಳುಗಡೆಯಾದಂತಹ ಜನರ ಬದುಕು......

ಉಪಾಧ್ಯಕ್ಷರು : ಪಾಟೀಲ್‌ರವರೇ, ಭಾಷಣ ಬೇಡ, ನಿಮ್ಮ ಸಮಸ್ಯೆಯನ್ನು ಹೇಳಿ,

ಶ್ರೀ ಜೆ.ಟಿ. ಪಾಟೀಲ್ : ಕೃಷ್ಣಾ ಮೇಲ್ದಂಡೆಯ. ಯೋಜನೆಯ ಭಾರತೀಯ ಕುಟುಂಬದ ಅಳಲು ಹಾಗೂ ಪುನರ್ ವಿಮೆ ಇಲ್ಲವೇ ಸರಮಾಲೆ ಇವೆಲ್ಲವನ್ನೂ ತಮ್ಮ ಕಡೆ ಕಳುಹಿಸಿಕೊಡುತ್ತೇನೆ. ದಯಮಾಡಿ ತಾವು ಪರಿಶೀಲನೆ ಮಾಡಬೇಕು. ಇಡೀ ಜಲಾಶಯಗಳಲ್ಲಿ ಬರತಕ್ಕಂಥ ಪುನರ್‌ವಸತಿ ಕೇಂದ್ರದೊಳಗೆ ಒಂದೇ ಒಂದು ಪುನರ್‌ವಸತಿ ಕೇಂದ್ರ ಸಹ ಸಂಪೂರ್ಣವಾಗಿ ನಿರ್ಮಾಣವಾಗಿಲ್ಲ. ರಸ್ತೆ ಇಲ್ಲ, ಲೈಟ್ ಇಲ್ಲ, ಶಾಲಾ ಕಟ್ಟಡ ಇಲ್ಲ,

ಉಪಾಧ್ಯಕ್ಷರು : ಅದೆಲ್ಲವನ್ನು ಹೇಳಿದ್ದೀರಲ್ಲಾ.

ಶ್ರೀ ಜೆ.ಟಿ. ಪಾಟೀಲ್ : ಉಪಾಧ್ಯಕ್ಷರೇ ನಾನು ಇದೆಲ್ಲಾ ಹೇಳಬೇಕಾಗುತ್ತದೆ. ಏಕೆಂದರೆ ಇವತ್ತು 136 ಹಳ್ಳಿಗಳು ಮುಳುಗಡೆಯಾಗಿದ್ದು ನಾವು ಬಹಳ ಸಂಕಟ ಪರಿಸ್ಥಿತಿಯಲ್ಲಿದ್ದು ಕಣ್ಣೀರು ಸುರಿಸುತ್ತಿದ್ದೇವೆ. ಹಿಂದಿನ ವರ್ಷ 85 ಹಳ್ಳಿಗಳು ಮುಳುಗಡೆಯಾಗಿದೆ ತಾವು ಏನು ಕ್ರಮವನ್ನು ಕೈಗೊಂಡಿದ್ದೀರಿ. ನಮಗೆ ಏನೂ ಪರಿಹಾರವಿಲ್ಲದೆ ನಾವು ಹೇಗೆ ಇರಬೇಕು. ದಯಮಾಡಿ ನಾವು ಭಿಕ್ಷುಕರಲ್ಲ, ನಿರಾಶ್ರಿತರಲ್ಲ, ಮಾನ್ಯ ಮುಖ್ಯಮಂತ್ರಿಗಳು ನಮ್ಮನ್ನು ಗಣನೆಗೆ ತೆಗೆದುಕೊಂಡು ಇದಕ್ಕೆ

ಕ್ರಮವನ್ನು ಕೈಗೊಳ್ಳಬೇಕು. ಅದೂ ಅಲ್ಲದೆ ಸರ್ಕಾರದವರು 15-5-95ರಂದು ಜಿ.ಓ. ಹೊರಡಿಸಿದ್ದೀರಿ. ಅದರಲ್ಲಿ ಒಂದು ತಾವು ಸ್ಲಾಬ್ ಮಾಡಿದ್ದೀರಿ. 10 ಹೆಕ್ಟೇರ್ ಒಳಗೆ ಇರುವವರಿಗೆ ಸಾಕಷ್ಟು ಸೌಲಭ್ಯವನ್ನು ತಾವು ಕೊಟ್ಟಿದ್ದೀರಿ.

10 ಹೆಕ್ಟೇರ್ ಮೇಲೆ ಇರುವವರಿಗೆ ಯಾವುದೇ ಸೌಕರ್ಯವಿಲ್ಲ, ಮನೆ ನಿವೇಶನ ಇಲ್ಲ, ಮನೆಕಟ್ಟಿಕೊಳ್ಳಲು ದುಡ್ಡಿಲ್ಲ, ಲ್ಯಾಂಡ್‌ಗೆ ಏನೋ ಕಂಪೆನ್‌ಸೇಷನ್ ಕೊಡುತ್ತೀರಿ, ಅದೂ ಸಹ ಮುಟ್ಟಿಲ್ಲ, ನಮಗೆ ನಿಮ್ಮ ದಯೆ, ಭಿಕ್ಷೆ ಬೇಕಾಗಿಲ್ಲ, ನಮ್ಮ ಭೂಮಿಗೆ ಮತ್ತು ಮನೆಗಳಿಗೆ ತಾವು ಸರಿಯಾದ ಕಂಪೆನ್‌ಸೇಷನ್ ಕೊಡಬೇಕು. ಈವತ್ತು ಏನು ಅನ್ಯಾಯವಾಗುತ್ತದೆ ಇದನ್ನು ಆ ಸ್ಥಳದಲ್ಲಿ ಪರಿಶೀಲಿಸಲು ಒಂದು ಸದನ ಸಮಿತಿಯನ್ನು ನೇಮಿಸಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

+ಶ್ರೀ ಬಿ.ಎಸ್. ಪಾಟೀಲ್ (ಸಾಸನೂರ್) : ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಸಾಕಷ್ಟು ಪರಿಹಾರಧನವನ್ನು ಒದಗಿಸಿದ್ದೇವೆ ಎಂದು ಹೇಳಿದರು, ಅಲ್ಲಿ ಕೆಲವೊಂದು ಹಳ್ಳಿಗಳಿಗೆ ಏನೂ ಪರಿಹಾರವನ್ನು ಕೂಡ ಒದಗಿಸಿಲ್ಲ, ಈಗ ನಮಗೆ ಮಳೆ ಬಾರದೆ ಕಷ್ಟವಾಗಿದ್ದರೂ ಸಹ ಅದು ನಮ್ಮ ಸುದೈವ ಎಂದು ಹೇಳಬೇಕಾಗುತ್ತದೆ. ಏಕೆಂದರೆ ಆಕಸ್ಮಾತ್ ಮಳೆಯಾಗಿದ್ದರೆ ಸಾಕಷ್ಟು ಹಳ್ಳಿಗಳು ಮುಳುಗಡೆಯಾಗಿ ನಾವು ಬಹಳ ತೊಂದರೆಯನ್ನು ಪಡುತ್ತಿದ್ದವು. ಈಗ ನಮ್ಮ ಮುಂದೆ ಆಗುತ್ತಿರುವಂತಹದ್ದರ ವರದಿಯನ್ನು ಕೊಟ್ಟಿದ್ದಾರೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಆದರೆ ಹೋದವರ್ಷ ಕೆಲವು ಪ್ರದೇಶಗಳು ಮುಳುಗಡೆಯಾಗಿದ್ದವು. ಅದರಿಂದ ಅಲ್ಲಿನ ಜನ ಆಗ ಬಹಳ ಸಂಕಷ್ಟದಲ್ಲಿ ಸಿಲುಕಿದರು. ಆ ಪ್ರಕಾರ ಈಗಾಗಲೇ ಏನಾದರೂ ಮಳೆಯಾದರೆ ನಮ್ಮ ಕೆಲವೊಂದು ಹಳ್ಳಿಗಳು ಬಹಳ ಸಂಕಷ್ಟ ಪರಿಸ್ಥಿತಿಯಲ್ಲಿ ಸಿಲುಕುತ್ತವೆ. 4(1) 6(1) notification ಆದಮೇಲೆ ಕೆಲವೊಂದು ಷೆಡ್ ಹಾಕಿದ್ದಾರೆ ಆ ಷೆಡ್‌ನಲ್ಲಿ 20-30 ಕುಟುಂಬಗಳು ಇರುತ್ತಾರೆ. ಆ ಷೆಡ್‌ನಲ್ಲಿ ಒಂದು ನಾಲ್ಕು ಜನ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ, ದನಗಳನ್ನು ಕೂಡಿಹಾಕಿದಹಾಗೆ ಹಾಕುವಂಥದ್ದನ್ನು ಬಂದು ನೋಡಿದರೆ ಗೊತ್ತಾಗುತ್ತದೆ. ಅದಕ್ಕಾಗಿ ಮಾನ್ಯ ಜೆ.ಟಿ. ಪಾಟೀಲರು ಹೇಳಿದ ರೀತಿಯಲ್ಲಿ ಸದನಸಮಿತಿಯನ್ನು ಮಾಡಬೇಕು, ಸದನಸಮಿತಿಯ ಮೂಲಕ ಅಲ್ಲಿಗೆ ಬಂದು ಪರಿಶೀಲನೆ ಮಾಡಿ ಅಲ್ಲಿ ರೈತರಿಗೆ ಏನು ಅನ್ಯಾಯವಾಗಿದೆ ಅದನ್ನು ಸರಿಪಡಿಸಬೇಕು. ಆಕಸ್ಮಾತ್ ದುರ್ದೈವದಿಂದ ಇದನ್ನು ಸರಿಪಡಿಸುವುದಕ್ಕೆ ತಾವು ಪ್ರಯತ್ನ ಮಾಡಲಿಲ್ಲ ಅಂದರೆ ಮತ್ತು ಸದನಸಮಿತಿಯನ್ನು ನೇಮಿಸಲಿಲ್ಲವಾದಲ್ಲಿ ನಾವು ಎಲ್ಲಾ ಹಳ್ಳಿಗಳಿಂದ ಜನರನ್ನು ಕರೆದುಕೊಂಡು ಬಂದು ವಿಧಾನಸೌಧದ ಮುಂದೆ ಘೇರಾವ್ ಮಾಡುವಂತಹ ಸಂದರ್ಭ ಬರುತ್ತದೆ, ದಯವಿಟ್ಟು ಅಂತಹ ಪ್ರಸಂಗಕ್ಕೆ ಅವಕಾಶ ಮಾಡಿಕೊಡಬಾರದೆಂದು ತಮ್ಮ ಮೂಲಕ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಉಪಾಧ್ಯಕ್ಷರೆ, ಇವರು ಹೇಳಿದ್ದನ್ನೆಲ್ಲಾ ನಾನು ಗಮನದಲ್ಲಿಟ್ಟುಕೊಂಡಿದ್ದೇನೆ. ಈಗ ಯಾವ ಯಾವ ಸಂದರ್ಭಕ್ಕೆ ಎಷ್ಟೆಷ್ಟು ಹಳ್ಳಿಗಳು ಮುಳುಗಡೆಯಾಗುತ್ತವೆ ಎಂದು ಹೇಳಿದ್ದಾರೆ. 503ಕ್ಕೆ ಬಂದಾಗ ಆರು ಹಳ್ಳಿ, 506ಕ್ಕೆ ಬಂದಾಗ 21 ಹಳ್ಳಿ, 509ಕ್ಕೆ ಬಂದಾಗ 68 ಹಳ್ಳಿ ಹೀಗೆ ಲೆವೆಲ್ ಮೇಲೆ ಇಲಾಖಾ ಅಧಿಕಾರಿಗಳು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ಮಧ್ಯದಲ್ಲಿ ನಮ್ಮ ಸ್ನೇಹಿತರು ಏನು ಹೇಳುತ್ತಿದ್ದಾರೆ, ಇನ್ನೂ ಸಾಕಷ್ಟು ಕೆಲಸ ಆಗಿಲ್ಲ, ಕುಡಿಯುವ ನೀರಿನದು ಇರಬಹುದು, ವಿದ್ಯುತ್‌ಚ್ಛಕ್ತಿಯದು ಇರಬಹುದು, ರಸ್ತೆಗಳು ಇರಬಹುದು, ತಾವೆಲ್ಲಾ ಏನು ಹೇಳಿದಿರಿ ಅದನ್ನೇನೂ ನಾನು ಅಸತ್ಯ ಅಥವಾ ಏನೂ ಇಲ್ಲವೇ ಇಲ್ಲ ನೀವು ಹೇಳತಕ್ಕಂಥದ್ದು ಎಂದು ನಾನೇನೂ ಹೇಳಲಿಲ್ಲ, ಅಲ್ಲಿ ಏನೇನು ಮಾಡಬೇಕೋ ಅದನ್ನೆಲ್ಲಾ ಮಾಡಿಸಲಿಕ್ಕೆ ಸರ್ಕಾರ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತದೆ. ನಾನು ಅಲ್ಲಿಗೆ ಹೋದಾಗ ಕೂಡ

ದೂರನ್ನು ಕೊಟ್ಟರು. ಈಗ ಕೊನೆಗೆ ಈ ವರ್ಷ ಏನು ಒಂದು 26-27 ಹಳ್ಳಿಯಲ್ಲಿ ಆ ಷೆಡ್‌ಗಳನ್ನು ಮಾಡುವಾಗ ಅದರ ಅಳತೆ 10 x 15 ಇದೆ, ಅದರ ಅಳತೆ ಬಹಳ ಕಡಿಮೆಯಾಗುತ್ತದೆಯಾದ್ದರಿಂದ ಅದನ್ನು 15 x 20 ಮಾಡಬೇಕೆಂದು ನನಗೆ ವರದಿಯನ್ನು ಕೊಟ್ಟಿದ್ದಾರೆ. ಅದರಿಂದ ಇವತ್ತು ಈ ಮಳೆ ಬರಲಿ ಬಾರದೆ ಹೋಗಲಿ, ನೀವು ಯಾವ ದಿನ ಶೇಖರಣೆಯಾಗುತ್ತದೆಯೋ ಅಂತಹ ಕಡೆಗಳಲ್ಲಿ ಮುಂಚಿತವಾಗಿ ಆ ಹಳ್ಳಿಗಳನ್ನು ಬೇರೆಡೆ ಸ್ಥಳಾಂತರಿಸುವುದನ್ನು ಮಾಡದೇ ಇದ್ದರೆ. The question of submersion of villages,ಗೆ ನಾವು ಅವಕಾಶ ಕೊಡುವುದಿಲ್ಲ. ಇದನ್ನು ನಿಧಾನ ಮಾಡದೆ ತ್ವರಿತವಾಗಿಯೇ ಮಾಡುತ್ತೇವೆ. ಅದಕ್ಕೇ ನಾನು ಹೇಳಿದೆ ನಿನ್ನೆ ಸೂಚನೆಯನ್ನು ಕೊಟ್ಟು ಹೋಗಿದ್ದೇನೆ. ಇವತ್ತು ನಾಳೆಯೊಳಗೆ ಈ ಬಗ್ಗೆ ಒಂದು ಸರ್ಕಾರಿ ಆದೇಶವನ್ನು ಕೂಡ ಹೊರಡಿಸಬೇಕು. ಆ ಆದೇಶದಲ್ಲಿ ಬರೀ ಅಧಿಕಾರಿಗಳು ಅಷ್ಟೇ ಅಲ್ಲ ನಿಮ್ಮಂಥ ಎಂ.ಎಲ್.ಎ.ಗಳನ್ನೂ ಅದರಲ್ಲಿ ಸೇರಿಸಿ ಅಲ್ಲಿ ಏನು ಕೆಲಸವಾಗಬೇಕು ಅದನ್ನು ನೋಡಿಕೊಳ್ಳತಕ್ಕಂಥದ್ದರ ಬಗ್ಗೆ, ಆದ್ಯತೆ ಮೇಲೆ ಹಣವನ್ನು ಬಿಡುಗಡೆ ಮಾಡುವುದರ ಬಗ್ಗೆ ಸಾಕಷ್ಟು ಸೌಲಭ್ಯವನ್ನು ಒದಗಿಸಿಕೊಡತಕ್ಕಂಥದ್ದರ ಬಗ್ಗೆ ಈ ಮುಖ್ಯಕಾರ್ಯದರ್ಶಿಗಳ ಸಮಿತಿಗೆ ಆ ಜವಾಬ್ದಾರಿಯನ್ನು ಕೊಡಬೇಕೆನ್ನುವ ನನ್ನ ಒಂದು ಅಭಿಪ್ರಾಯವನ್ನು ಅಧಿಕಾರಿಗಳಿಗೆ ತಿಳಿಸಿದ್ದೇನೆ. ಆ ರೀತಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಮುಖ್ಯ ಮಂತ್ರಿಗಳು ಹೇಳಿದಹಾಗೆ ಅವರೆ ಒಪ್ಪಿಕೊಂಡಿದ್ದಾರೆ. ನಮಗೂ ಕೂಡ ಗೊತ್ತಿದೆ. ಮೊನ್ನೆ ಮುಖ್ಯಮಂತ್ರಿಗಳು ಎಲ್ಲಾ ವಿರೋಧಪಕ್ಷದ ನಾಯಕರುಗಳನ್ನು ಸಭೆಗೆ ಕರೆಸಿದ್ದರು.

ಅದರಲ್ಲಿ ಕೆಲವು ವಿಷಯಗಳನ್ನು ಚರ್ಚೆ ಮಾಡಿದ್ದೇವೆ. ಅವರು ಹೇಳಿದ ಹಾಗೆ ಕೆಲವು ಮೀಡಿಯೆಟರ್ಸ್ ಅಂಥ ಏನು ಹೇಳುತ್ತೇವೆ, ಆ ಮೀಡಿಯೆಟರ್ಸ್ ಕೆಲವು ಕಡೆ ವಕೀಲರು ಪವರ್ ಆಫ್ ಅಟಾರ್ನಿ ತೆಗೆದುಕೊಂಡು ಆ ರೈತರ ಹತ್ತಿರ ದುಡ್ಡು ತೆಗೆದುಕೊಳ್ಳತಕ್ಕಂಥದ್ದು ಮತ್ತು ಅವರಿಗೆ ಕೊಡತಕ್ಕಂಥದ್ದು ಬಹಳ ಕಡಿಮೆ, ಅಂದರೆ ಸರ್ಕಾರದಿಂದ ಹೆಚ್ಚಾಗಿ ತೆಗೆದುಕೊಂಡು ಅವರಿಗೆ ಕೊಡತಕ್ಕಂಥದ್ದು ಬಹಳ ಕಡಿಮೆ, ಅಂದರೆ ಸರ್ಕಾರದಿಂದ ಹೆಚ್ಚಾಗಿ ತೆಗೆದುಕೊಂಡು ಅವರಿಗೆ ಕೊಡುವಂತಹದ್ದು ಬಹಳ ಕಡಿಮೆ. ಮತ್ತು ಮನೆ ಕಟ್ಟಿಸುವುದರ ಬಗ್ಗೆ, ರಿಹ್ಯಾಬಿಲಿಟೇಷನ್ ಪ್ರೋಗ್ರಾಂ ಬಗ್ಗೆ ಸಾಕಷ್ಟು ಅಸಮಾಧಾನ ಇದೆ ಎಂಬ ಮಾತನ್ನು ಅವರೂ ಕೂಡ ಒಪ್ಪಿಕೊಂಡಿದ್ದಾರೆ. ಮತ್ತು ಈಗ ಜೆ.ಟಿ. ಪಾಟೀಲರು ಹೇಳಿದ ಹಾಗೆ 66 ಹಳ್ಳಿಗಳು ಏನು ಇವೆ 4(1) ನೋಟಿಫಿಕೇಷನ್ ಇಲ್ಲ, 6(1) ಇಲ್ಲ ಏನೂ ಇಲ್ಲ. ಈ ತಕ್ಷಣ ಅವು ಮುಳುಗಡೆ ಆಗುತ್ತವೆ. ಅದಕ್ಕೆ ಈಗ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗುತ್ತದೆ.

ತಾವು ತಾತ್ಕಾಲಿಕವಾಗಿ ಷೆಡ್‌ನ್ನು ಹಾಕುತ್ತಿದ್ದೇವೆ ಎಂದು ಹೇಳಬಹುದು. ಈಗ ನಮ್ಮ ಪಾಟೀಲರು ಹೇಳಿದ ಹಾಗೆ ತಾತ್ಕಾಲಿಕವಾಗಿ ಷೆಡನ್ನು 10 x 10 ರಲ್ಲಿ ನಿನ್ನೆ ಒಂದು ಕುಟುಂಬಕ್ಕೆ ಹಾಕುತ್ತಿದ್ದಾರೆ ಇದರಿಂದ ತೊಂದರೆಯಾಗುತ್ತಿದೆ. ಅದಕ್ಕೆ ಅವರು ಕೇಳತಕ್ಕಂಥದ್ದು ಇಷ್ಟೆ. ಇದರೊಳಗೆ ಯಾರಾನು ದುರುಪಯೋಗ ಆಗಿದ್ದು ಅಥವಾ ಬೇನಾಮಿ ಹೆಸರಿನಿಂದ ಹಣ ತೆಗೆದುಕೊಳ್ಳತಕ್ಕಂಥದ್ದು ಮತ್ತು ಪವರ್ ಆಫ್ ಅಟಾರ್ನಿ ತೆಗೆದುಕೊಂಡು ರೈತರನ್ನು ಮೋಸ ಮಾಡತಕ್ಕಂಥದ್ದು. ಮತ್ತು ಈ ಪುನರ್ವಸತಿ ಕಾರ್ಯಕ್ರಮದಲ್ಲಿ ಹಣ ತೆಗೆದುಕೊಂಡು ಇಂತಹದ್ದೆಲ್ಲಾ ಏನು ಆಗುತ್ತಿದೆ ಅದಕ್ಕೆ ತಾವು ದಯವಿಟ್ಟು ಒಂದು ಸದನ ಸಮಿತಿಯನ್ನು ಕಳುಹಿಸಿ. ಅವರ ವರದಿಯ ಮೇಲೆ ಕ್ವಿಕ್ ಆಗಿ ಕೆಲಸ ಮಾಡುವುದಕ್ಕೂ ಆಗುತ್ತದೆ, ಅದರಲ್ಲಿ ಏನು ತಪ್ಪಿದೆ ಏಕೆಂದರೆ ಇದರಲ್ಲಿ ನಾವೇನು ಚಾರ್ಜ್ ಮಾಡುತ್ತಿಲ್ಲ, ಸರ್ಕಾರ ಇವತ್ತಿನ ದಿವಸ

ಇದರೊಳಗೆ ದುಡ್ಡು ತಿಂದಿದೆ, ಮೋಸ ಮಾಡುತ್ತಿದೆ ಎಂದೇನೂ ನಾವು ಹೇಳುತ್ತಿಲ್ಲ. ಅಲ್ಲಿನ ಪರಿಸ್ಥಿತಿಯನ್ನು ತಿಳಿದುಕೊಂಡು ಆ ಪರಿಸ್ಥಿತಿಯ ಅನುಸಾರವಾಗಿ ಅವರು ಯಾವ ರೀತಿಯಾಗಿ ಕೆಲಸ ಮಾಡಬೇಕೆಂದು ಸಲಹೆಯನ್ನು ಕೊಡುತ್ತಾರೆ ಅದರ ಆಧಾರದ ಮೇಲೆ ಮಾಡುವುದಕ್ಕಾಗುತ್ತದೆ. ಒಂದು ನಿಜವಾದ ಪರಿಸ್ಥಿತಿಯೂ ಕೂಡ ನಿಮಗೆ ಗೊತ್ತಾಗುತ್ತದೆ. ಅಂದರೆ ಎಷ್ಟು ಜನರಿಗೆ ನೀವು ಪುನರ್ವಸತಿಯನ್ನು ಕಲ್ಪಿಸಬೇಕು, ಮನೆಯನ್ನು ಎಷ್ಟು ಕಟ್ಟಿಸಬೇಕು ಅಥವಾ ಯಾರಿಗೆ ಪರಿಹಾರವನ್ನು ಕೊಡಬೇಕು ಅನ್ನುವ ಒಂದು ಸಂಪೂರ್ಣವಾದಂಥ ಮಾಹಿತಿ ಸಿಗುತ್ತದೆ. ನಿಮಗೆ ಯಾರಿಗೆ ಅನಿಸುತ್ತದೆ ಅವನ್ನು ಆ ಸಮಿತಿಯೊಳಗೆ ಹಾಕಿ ಒಂದು ಸದನ ಸಮಿತಿಯನ್ನು ಕಳುಹಿಸಿದರೆ ಎಲ್ಲಾ ಅಧಿಕಾರಿಗಳಿಗೂ ಕೂಡ ಒಂದು ಎಚ್ಚರ ಬರುತ್ತದೆ. ಅಂದರೆ ಈ ಸರ್ಕಾರ ನಮ್ಮನ್ನು ಕೇಳುತ್ತಾರೆ ಎಂಬ ಎಚ್ಚರ ಬರುತ್ತದೆ. ಈ ದಿವಸದವರೆಗೂ ನಾವು ಹಲವು ಕಾರ್ಯಕ್ರಮಗಳನ್ನು ಮಾಡಿಕೊಂಡು ಬಂದರೂ ಕೂಡ ಅದಕ್ಕೆ ಏನು ಪರಿಹಾರ ಸಿಗುತ್ತಿಲ್ಲ. ಮತ್ತು ಅಧಿಕಾರಿಗಳು ಕೂಡ ತಮ್ಮ ಏನು ಕೆಲಸ ಇದೆ ಅದನ್ನು ಅದೇ ರೀತಿಯಾಗಿ ಮಾಡುತ್ತಿದ್ದಾರೆ. ನೀವೂ ಕೂಡ ಮತ್ತು ಸಂಬಂಧಪಟ್ಟ ಮಂತ್ರಿಗಳು ಕೂಡ ಎರಡು ತಿಂಗಳಿಗೋ ಮೂರು ತಿಂಗಳಿಗೋ ರಿವ್ಯೂ ಮಾಡಬಹುದು, ಮಾಡುವುದಿಲ್ಲ ಎಂದು ನಾನು ಹೇಳುವುದಿಲ್ಲ, ಆದರೆ ಸ್ಥಳದಲ್ಲೇ ಹೋಗಿ ಎಲ್ಲವನ್ನೂ ಕೂಡ ಪರಿಶೀಲಿಸಿ ಸಲಹೆಗಳನ್ನು ಕೊಟ್ಟರೆ ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ತಮಗೆ ಅನುಕೂಲವಾಗುತ್ತದೆ. ಮತ್ತು ಅದನ್ನೇನು ಕೆಲವು ಜನ ದುರುಪಯೋಗ ಪಡಿಸಿಕೊಂಡಿದ್ದಾರೆ. ಅದೂ ಕೂಡ ಹೊರಗಡೆ ಬರುತ್ತದೆ. ಮತ್ತು ಇನ್ನು ಮೇಲಾದರೂ ನಾವು ಹೀಗೆ ಮಾಡಬಾರದು ಎಂದು ಮುಂದಿನವರಾದರೂ ಹೆದರುತ್ತಾರೆ. ಅದಕ್ಕಾಗಿ ದಯವಿಟ್ಟು ಅವರು ಸಲಹೆ ಮಾಡಿದ ಹಾಗೆ ಒಂದು ಸದನ ಸಮಿತಿಯನ್ನು ಕಳುಹಿಸಿ ಇಲ್ಲ ನಿಮಗೆ ಆಗುವುದಿಲ್ಲ ಅಂದರೆ ವಿಷಯ ಸಮಿತಿಯನ್ನಾದರೂ ಕಳುಹಿಸಿ, ಇದರಲ್ಲಿ ಯಾವುದಾದರೊಂದನ್ನು ಕಳುಹಿಸುವುದರ ಮೂಲಕ ಇದರ ಬಗ್ಗೆ ಸರಿಯಾದಂಥ ಒಂದು ಕ್ರಮವನ್ನು ತೆಗೆದುಕೊಳ್ಳಿ.

ಶ್ರೀ ಹೆಚ್.ಡಿ. ದೇವೇಗೌಡ : ನಾನು ಖರ್ಗೆಯವರು ಹೇಳತಕ್ಕಂಥ ಮಾತನ್ನು ಅಲ್ಲಗಳೆಯುವುದಿಲ್ಲ. ಒಂದೇ ಒಂದು ನನ್ನ ಮನಸ್ಸಿನಲ್ಲಿ ಇರುವುದು ಏನೆಂದು ಹೇಳಿದರೆ ವಿಷಯ ಸಮಿತಿಯನ್ನು ಬೇಕಾದರೂ ಕಳುಹಿಸುತ್ತೇನೆ, ಸದನ ಸಮಿತಿಯನ್ನು ಬೇಕಾದರೂ ಕಳುಹಿಸುತ್ತೇನೆ. ಇದೇನೂ ನನಗೆ ಗೌರವದ ಪ್ರಶ್ನೆಯಲ್ಲ. ಆದರೆ ಒಂದೇ ಒಂದು ಏನೆಂದು ಹೇಳಿದರೆ ಈ ಪವರ್ ಆಫ್ ಅಟಾರ್ನಿ ತೆಗೆದುಕೊಂಡು ಲಾಯರ್‌ಗಳು ಕೋರ್ಟ್ ಮುಂದೆ ಹೋಗಿ ಇಲ್ಲಿ 5 ಸಾವಿರ 10 ಸಾವಿರ ಕೊಟ್ಟು ಅಲ್ಲಿ ಒಂದು ಲಕ್ಷ ಒಂದೂವರೆ ಲಕ್ಷ ಏನು ತೆಗೆದುಕೊಂಡಿದ್ದಾರೆ ಅವರೆಲ್ಲರನ್ನೂ ಸದನ ಸಮಿತಿಯೊಳಗೆ ಕರೆದು ವಿಚಾರಣೆ ಮಾಡುವುದಕ್ಕಾಗುವುದಿಲ್ಲ. ತಮಗೆ ಆಡಳಿತದ ಅನುಭವ ಇದೆ. ಇವರು ಯಾರು ಪವರ್ ಆಫ್ ಅಟಾರ್ನಿ ತೆಗೆದುಕೊಂಡಿದ್ದಾರೆ ಅವರನ್ನು ನಾವು ನೋಟಿಫೈ ಮಾಡಿ ಡಂಗುರ ಹೊಡೆಸಿ, ನೀವು ಯಾವ ಹಳ್ಳಿಗಳಲ್ಲಿದ್ದಿರಾ ನೀವು ಯಾರು ಪವರ್ ಆಫ್ ಅಟಾರ್ನಿ ತೆಗೆದುಕೊಂಡಿದ್ದೀರಾ ಬನ್ನಿಯಪ್ಪ ನಮ್ಮ ಸದನ ಸಮಿತಿ ಬರುತ್ತದೆ ಅಂದರೆ I don't think, impracticable ಆಗಬಹುದೇನೋ ಎಂದು ನನಗೆ ಅನಿಸುತ್ತದೆ. ಬೇಕಾದರೆ ನಿಮ್ಮ ಹತ್ತಿರ ಅದನ್ನು ನಾನು ಚರ್ಚೆ ಮಾಡುತ್ತೇನೆ. ನಾನು ಮೊದಲೇ ಹೇಳಿದ್ದೇನೆ ಇದರಲ್ಲಿ ನನ್ನದೇನೂ ಅಭ್ಯಂತರ ಇಲ್ಲ. ಸನ್ಮಾನ್ಯ ಉಪಾಧ್ಯಕ್ಷರೆ, ಅಲ್ಲಿ ರಿವ್ಯೂ ಮಾಡಿದಾಗ ಒಂದು ಮಾತು ಹೇಳಿದೆ ಇದು ಹಿಂದೆ ನಡೆದುಹೋಗಿರುವ ಘಟನೆ ಬಗ್ಗೆ ನಾನು ಸಿ.ಓ.ಡಿ. ತನಿಖೆಯನ್ನು ಮಾಡಿಸುತ್ತೇನೆ ಎಂದು ಹೇಳಿದೆ. ಕಾರಣ ಏನು ಎಂದು ಹೇಳಿದರೆ 98ರಲ್ಲಿ ಮುಳುಗಡೆಯಾಗುವುದಕ್ಕೆ ಇವತ್ತೇ ಪೇಮೆಂಟ್ ಮಾಡಿದ್ದಾರೆ. 95ರಲ್ಲಿ

ಮುಳುಗಡೆಯಾಗುವವರಿಗೆ ಇನ್ನೂ ಒದ್ದಾಡುತ್ತಿವೆ, 4(1) ನೋಟಿಫಿಕೇಷನ್ನು ಆಗಿಲ್ಲ. ಇದರೊಳಗೆ ರೆವಿನ್ಯೂ ಅಧಿಕಾರಿಗಳು ಶಾಮೀಲಾಗಿದ್ದಾರೆ, ವಕೀಲರು ಶಾಮೀಲಾಗಿದ್ದಾರೆ, ಸರ್ಕಾರದ ಪರವಾಗಿ ಯಾರು ವಕೀಲರು ಕೆಲಸ ಮಾಡುವವರಿದ್ದಾರೋ ಅವರಲ್ಲಿ ಕೆಲವರು ಶಾಮೀಲಾಗಿದ್ದಾರೆ. ಇದರಲ್ಲಿ ದಾಮಾಷ ಹೇಳುವುದು ಬೇಡ. ಇದರಲ್ಲಿ ಒಂದು ದೊಡ್ಡ ರ್‍ಯಾಕೆಟ್ ಇದೆ. ಖಂಡಿತವಾಗಿಯೂ ಇದು ಅದರೊಳಗೆ ನಮ್ಮ ಕಾಲದಲ್ಲೂ, ಎಲ್ಲಾ ಕಾಲದಲ್ಲೂ ನಡೆದುಕೊಂಡು ಬಂದುಬಿಟ್ಟಿದೆ ಇದು ಒಂದು ಭಾಗ ಆಯಿತು. ಈಗ ನಡೆದು ಹೋಗಿರುವ ಬಗ್ಗೆ ತನಿಖೆ ನಡೆಸುವುದು ಅದು ಒಂದು ಭಾಗ, ಸದನ ಸಮಿತಿಯೋ ವಿಷಯ ಸಮಿತಿಯೋ ಅಥವಾ ಸಿ.ಓ.ಡಿ. ತನಿಖೆಯ ಬಗ್ಗೆ ನಿಮ್ಮ ಜೊತೆ ಚರ್ಚೆ ಮಾಡಿ ಮತ್ತೆ ನಿರ್ಣಯಕ್ಕೆ ಬರುತ್ತೇನೆ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದರಿಂದ ನಿಮಗೆ ಕ್ಲಿಯರ್ ಪಿಕ್ಚರ್ ಸಿಗುತ್ತದೆ, ವಿಷಯ ಸಮಿತಿ ಹೋಗಿಬಂದರೆ ಅವರೇ ಇನ್‌ಸ್ಟ್ರಕ್ಷನ್ ಮಾಡಿಕೊಂಡು ನಿಮಗೆ ಸಲಹೆಯನ್ನು ಕೊಡುತ್ತಾರೆ. ಇದರೊಳಗೆ ಬೇರೆ ಯಾವುದೇ ದೃಷ್ಟಿ ಇಲ್ಲ.

3.10 ಪಿ.ಎಂ.

ಶ್ರೀ ಹೆಚ್.ಡಿ. ದೇವೇಗೌಡ : ಒಂದು ನಿಮಿಷ ಬಂದೆ. ಯಾವ ಹಣ ದುರುಪಯೋಗ ಮಾಡಿ ಎಲ್ಲಾ ಲೂಟಿ ಮಾಡಿದ್ದಾರೆ ಎನ್ನತಕ್ಕಂಥದ್ದರ ಬಗ್ಗೆ ಸದನ ಸಮಿತಿ ಎನ್‌ಕ್ವೈರಿ ಮಾಡಲು ಕಷ್ಟವಾಗಬಹುದೆಂದು ನಾನು ಸೀಮಿತ ಜ್ಞಾನ ಮತ್ತು ಅನುಭವದ ಮಾತಿನಿಂದ ಹೇಳುತ್ತಿದ್ದೇನೆ. ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಈ ಕೂಡಲೇ ಈ ದಿಸೆಯಲ್ಲಿ ಏನು ಕ್ರಮ ಕೈಗೊಳ್ಳಬೇಕು ಎಂದು ಹೇಳಿರುವುದನ್ನು ಬಹುಶಃ ತಾವೂ ಒಪ್ಪುತ್ತೀರಿ ಎಂದು ಭಾವಿಸುತ್ತೇನೆ. ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಒಬ್ಬ ನಿವೃತ್ತ ನ್ಯಾಯಾಧೀಶ, ಸ್ಥಳೀಯ ಶಾಸಕ, ಅಸಿಸ್ಟೆಂಟ್ ಕಮೀಷನರ್, ಡಿಸ್ಟ್ರಿಕ್ಟ್ ಸೋಷಿಯಲ್ ವೆಲ್‌ಫೇರ್ ಆಫೀಸರ್ ಇವರನ್ನು ಒಳಗೊಂಡಂತೆ 4-5 ಜನರ ಸಮಿತಿ ಮಾಡಿ, ಇಲ್ಲಿಂದ ಮುಂದಕ್ಕೆ ಯಾವ ಯಾವ ಹಳ್ಳಿಗಳಿಗೆ ಏನೇನು ಕೊಡಬೇಕು. ಏನು ಮಾಡಬೇಕು ಎನ್ನುವ ಬಗ್ಗೆ ಸ್ಥಳದಲ್ಲೇ ಜನಗಳನ್ನು ಕೂರಿಸಿ, ನಾವು ಗ್ರಾಮ ಸಭೆಗಳನ್ನು ಮಾಡಿ ಆ ಊರಿನಲ್ಲಿ ಜಮೀನಿನ ಮೌಲ್ಯ ಏನಿದೆ, ಅದಕ್ಕಿಂತ ಶೇಕಡ 10ರಷ್ಟು ಸೊಲೇಷಿಯಂ ಕೊಟ್ಟು ತೆಗೆದುಕೊಳ್ಳಲಿಕ್ಕೆ ನಾವು ಏಕೆ ಪ್ರಯತ್ನ ಮಾಡಬಾರದು ಎಂದು ಹೇಳಿದ್ದಾರೆ. ಈಗಿರುವ ಗೊಂದಲಕ್ಕಿಂತ ಹೇಗೆ ಮಾಡುವುದು ಸೂಕ್ತ. ಏಕೆಂದರೆ ಈಗ ನಾವು ಹೇಗೋ ಡಿಬೆಂಚರ್‌ಗಳನ್ನು ರೈಸ್ ಮಾಡುವುದಕ್ಕೆ ಶುರು ಮಾಡಿದ್ದೇವೆ. ಈ ವಾರದಲ್ಲಿ ಕೆಲವು ಹಣ ಭರ್ತಿಯಾಗಬಹುದು. ಡಿಬೆಂಚರ್ ತೆಗೆದುಕೊಂಡವನಿಗೆ ಪೇಮೆಂಟ್ ಮಾಡಲಿಕ್ಕೆ ನಾವು ಹಿಂದೆ ಮುಂದೆ ನೋಡಬೇಕಾಗಿಲ್ಲ, ವಿಶ್ವಬ್ಯಾಂಕಿನಿಂದ ದುಡ್ಡು ಬರುತ್ತದೆಯೇ ಇಲ್ಲವೋ ಎಂದು ತಲೆ ಬಿಸಿ ಮಾಡಿಕೊಳ್ಳದೇ I wanted to speed up 180, 160, 130, 26 ಹಳ್ಳಿಗಳನ್ನೋ ಆ ಲೆವೆಲ್ ಮೇಲೆ ಎಳೆದುಕೊಂಡು ಹೋಗಿದ್ದಾರೆ. ಅದೇನೇ ಇರಲಿ ಅದಕ್ಕೊಂದು ಕಮಿಟಿ ಬೇಕಾದರೂ ನಾನು ಮಾಡುತ್ತೇನೆ. I am prepared to do that also ಆ ರೀತಿ ಒಂದು ಸಮಿತಿಯನ್ನು ಮಾಡಿ ಸ್ಪಷ್ಟವಾದ ಯಾವುದೇ ಅನ್ಯಾಯ, ಅಕ್ರಮ ನಡೆಯದ ರೀತಿ ಈ ಸಮಿತಿ ಒಬ್ಬ ನಿವೃತ್ತ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಕೆಲಸ ಮಾಡುತ್ತೇನೆ. ಸದರಿ ಸಮಿತಿಯಲ್ಲಿ ಶಾಸಕಾಂಗವೂ ಸೇರಿರುತ್ತದೆ. ಅಲ್ಲಿ ಯಾವುದೇ ರೀತಿಯ ಅಕ್ರಮ ನಡೆಯದಂತೆ ನೋಡಿಕೊಳ್ಳಲಿಕ್ಕೆ ಅವರು ವಾಚ್‌ಡಾಗ್ ಇದ್ದ ಹಾಗೆ ಇರಲು ಸಾಧ್ಯವಾಗಬಹುದು ಎಂಬುದು ನನ್ನ ಪ್ರಯತ್ನವಾಗಿದೆ. ಇದರ ಮೇಲೆ ಇನ್ನು ಮುಂದಕ್ಕೆ ಇಂಪ್ರೂವ್‌ಮೆಂಟ್ ಮಾಡಬೇಕೆಂದು ತಾವು ಹೇಳಿದರೆ,

ನಾನು ನಿಮ್ಮೊಡನೆ ಕುಳಿತು ಮಾತನಾಡಿ I am prepared to concede; ಅದರಲ್ಲಿ ನನಗೇನೂ ತೊಂದರೆಯಿಲ್ಲ.

ಶ್ರೀ ಜಿ.ಟಿ. ಪಾಟೀಲ್ : ಮಾನ್ಯ ಅಧ್ಯಕ್ಷರೇ, ದಿನಾಂಕ 15.5.95ರಂದು ಸರ್ಕಾರದವರು ಏನೊಂದು ಆದೇಶ ಹೊರಡಿಸಿದ್ದಾರೋ, ಇದರಿಂದ ಡಿಸ್ಕ್ರಿಮಿನೇಷನ್ ಆಗಿದೆ. 10 ಎಕರೆಗಿಂತಲೂ ಹೆಚ್ಚು ಜಮೀನು ಕಳೆದುಕೊಳ್ಳುವವರಿಗೆ ಯಾವುದೇ ಒಂದು ಸೌಕರ್ಯ ಇಲ್ಲದಂತೆ ಆಗಿದೆ. ಇದನ್ನು ಯಾವ ರೀತಿ ಸರಿಪಡಿಸುತ್ತೀರಿ ಎಂಬುದು ನನ್ನ ಮೊದಲನೆಯ ಪ್ರಶ್ನೆ. ಬೇರೊಂದು ಪುನರ್ ವಸತಿ ಕೇಂದ್ರಕ್ಕೆ ನಮ್ಮೆಲ್ಲರನ್ನೂ ನೀವು ಕಳುಹಿಸಿದ ಮಾತ್ರಕ್ಕೆ ಸರ್ಕಾರ ಕರ್ತವ್ಯ ಮುಗಿಯುವುದಿಲ್ಲ. ನಾವೆಲ್ಲಾ ನಿರುದ್ಯೋಗಿಗಳಾಗುತ್ತೇವೆ. ನಮ್ಮ ಹೊಟ್ಟೆ ಪಾಡೇನು? ಜೀವನ ಮಾಡುವುದು ಹೇಗೆ? ದಯಮಾಡಿ ಸರ್ಕಾರ ಯಾವುದೇ ನೌಕರಿಗಳಲ್ಲಿ ಮುಳುಗಡೆ ಆಗತಕ್ಕ ಪ್ರದೇಶಗಳ ಜನರಿಗೆ ಇಂತಿಷ್ಟು ಶೇಕಡಾವಾರು ಎಂದು ಮೀಸಲಾತಿ ನೀಡಲು ಸಾಧ್ಯವಿಲ್ಲವೇ? ಪ್ರತಿ ಕುಟುಂಬದಲ್ಲಿ ಕನಿಷ್ಠ ಒಬ್ಬೊಬ್ಬರಿಗಾದರೂ ಉದ್ಯೋಗ ದೊರಕಿಸಿಕೊಡತಕ್ಕ ವ್ಯವಸ್ಥೆ ಮಾಡುತ್ತೀರೋ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಮಧ್ಯಮ ಅಥವಾ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸುವ ಉದ್ದೇಶವಿದೆಯೇ? ಸರ್ಕಾರದವರು ಇವತ್ತು ಕನಿಷ್ಠ ಮಟ್ಟದ ಪರಿಹಾರ ಧನವನ್ನು ಕೊಡುತ್ತಿದ್ದಾರೆ. ನೀವು ಕೊಡತಕ್ಕ ಎಕ್ಸ್‌ಗ್ರೇಷಿಯಾ ಅಮೌಂಟ್ ಮತ್ತು ನಮ್ಮ ಜಮೀನಿನ ಮುಳುಗಡೆಗಾಗಿ ಸರ್ಕಾರದಿಂದಕ್ಕ ಕಾಂಪನ್‌ಸೇಷನ್ ಎರಡನ್ನೂ ಸೇರಿಸಿದರೂ ಸಹಿತ ಇವತ್ತು ಏನು ಈ ಸಲುವಾಗಿ ಜಮೀನನ್ನು ಕೊಂಡುಕೊಳ್ಳುವುದಕ್ಕಾಗಿ ಎಕ್ಸ್‌ಗ್ರೇಷಿಯಾ ಕೊಡಬೇಕೆಂದು ಮಾಡಿದ್ದೀರಿ, ಅದು ನಮಗೆ ದೊರಕಲಿಕ್ಕೆ ಸಾಧ್ಯವಿಲ್ಲ. ಇದು ನಮಗೆ ನಾಯಿ ಮೊಲೆಯಲ್ಲಿ ಹಾಲಿದ್ದ ಹಾಗೆ ಇದನ್ನು ಬಗೆಹರಿಸುತ್ತೇವೆ ಎಂದು ತಾವು ಸ್ಪಷ್ಟವಾದ ಒಂದು ಭರವಸೆಯನ್ನೂ ಕೊಡಬೇಕು. ಹಾಗೂ ಸದನ ಸಮಿತಿಯನ್ನು ರಚಿಸುವ ಘೋಷಣೆಯನ್ನು ಈ ಸದನದಲ್ಲಿ ಮಾಡಬೇಕೆಂದು ನಾನು ಅಧ್ಯಕ್ಷರ ಮೂಲಕ ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಹೆಚ್.ಡಿ. ದೇವೇಗೌಡ : ಆ ಸಮಿತಿ ಮಾಡುವ ಉದ್ದೇಶವೇ, ಅಲ್ಲಿ ಸ್ಥಳದಲ್ಲೇ ಹೋಗಿ ಅಲ್ಲಿರತಕ್ಕಂತಹ ಮಾರುಕಟ್ಟೆ ವ್ಯಾಲ್ಯೂ ನೋಡಿ, ಯಾವುದೇ ರೈತರಿಗೆ ಮೋಸ ಆಗದ ರೀತಿ ಇವತ್ತು ಅವರಿಗೆ ಸಿಗಬೇಕಾದಂತಹ ಪರಿಹಾರ ಧನವನ್ನು ಅವರಿಗೆ ಸಿಗುವಂತೆ ಉಸ್ತುವಾರಿ ಮಾಡುವುದಕ್ಕೆ ಈ ಕಮಿಟಿ ಮಾಡುವುದು. ಇದು ಮೊದಲನೆಯ ಅಂಶ. ಎರಡನೆಯದಾಗಿ, ಯಾರಿಗೆ ಇದನ್ನೆಲ್ಲಾ ಕಳೆದುಕೊಂಡು ಜೀವನಕ್ಕೆ ಮಾರ್ಗ ಇಲ್ಲದಂತಹ ಪರಿಸ್ಥಿತಿ ಬರುತ್ತದೆಯೋ ಅವರಿಗೆ ಪರ್ಯಾಯ ಉದ್ಯೋಗಾವಕಾಶಗಳನ್ನು ಒದಗಿಸಬೇಕೆಂದು ಕೇಳುತ್ತಿದ್ದಾರೆ. ಸನ್ಮಾನ್ಯ ಅಧ್ಯಕ್ಷರೇ, ಯಾವುದಾದರೂ ಹೊಸ ಕೈಗಾರಿಕೆಯನ್ನು ಆ ಒಂದು ಜಿಲ್ಲೆಗೆ ತೆಗೆದುಕೊಂಡು ಹೋಗಲಿಕ್ಕೆ ಸಾಧ್ಯವಿದೆಯೇ ಎಂದು ಸರ್ಕಾರ ಪರಿಶೀಲಿಸಿ, ಈ ವರ್ಗದ ಜನತೆಗೆ ಸ್ವಲ್ಪ ನೆರವಿಗೆ ಬರಲಿಕ್ಕೆ ಪ್ರಯತ್ನ ಮಾಡುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಏನೋ ಬೇರೆ ಹೇಳಿದ್ದೀರಿ. ನಾವು ಕನಿಷ್ಠ ಸದನದ ಸಮಿತಿ ಅಥವಾ ವಿಷಯ ಸಮಿತಿಗೆ ಸದರಿ ವಿಷಯವನ್ನು ಒಪ್ಪಿಸಿ ಎಂದು ಕೇಳಿದ್ದೆವು. ನೀವು ಹಾಗೆ ಮಾಡಲು ಆಗುವುದಿಲ್ಲವೆಂದು, ನಿವೃತ್ತ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡುತ್ತೇವೆಂದು ಹೇಳುತ್ತಿದ್ದೀರಿ.

ಶ್ರೀ ಹೆಚ್.ಡಿ. ದೇವೇಗೌಡ : ಪರ್ಚೇಸಸ್‌ಗೆ ಕಮಿಟಿ ಕುಳಿತು ಮಾಡುವುದಕ್ಕೆ ಆಗುವುದಿಲ್ಲ. ಈಗ ನಾವೇನು ಮಾಡುತ್ತೇವೆ ಎಂದರೆ, ಅಕ್ವಿಸಿಷನ್ ಪ್ರೊಸೀಡಿಂಗ್ಸ್ ಸ್ಕ್ರಾಪ್ ಮಾಡಿ, ಡೈರೆಕ್ಟ್ ಪರ್ಚೇಸ್ ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದಕ್ಕೆ ಬೇಕಾದರೆ ನೀವು ಸಮಿತಿ ಮಾಡಿ. ನಾನು ಹೇಳುವುದೇನೆಂದರೆ, ನೀವು ಯಾರನ್ನಾದರೂ ಕಳುಹಿಸಿ ಒಮ್ಮೆ ಸ್ಪಾಟ್‌ಇನ್ಸ್‌ಪೆಕ್ಷನ್ ಮಾಡಿಸಿ.

ಶ್ರೀ ಹೆಚ್.ಡಿ. ದೇವೇಗೌಡ : ನೀವು ಸಬ್ಜೆಕ್ಟ್ ಕಮಿಟಿಗೆ ಕಳುಹಿಸಿ ಎನ್ನುವುದಾದರೆ, ಹಾಗೇ ಮಾಡುತ್ತೇನೆ. ನನ್ನ ಮನಸ್ಸಿನಲ್ಲಿ ಸಿ.ಓ.ಡಿ. ಎನ್‌ಕ್ವೈರಿ ಏಕೆ ಮಾಡಿಸಬೇಕು ಎಂಬುದು ಇದೆ; ಅಂದರೆ People who have cheated ಅದು ನಮ್ಮ ಕಮಿಟಿ ಮುಂದೆ ಬರುವುದಿಲ್ಲ ಎಂಬುದು ನನ್ನ ಭಾವನೆ. With your experience, you can also understand.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸಿ.ಓ.ಡಿ. ಎನ್‌ಕ್ವೈರಿ ಮಾಡುತ್ತೇವೆ ಎಂದು ಹೇಳಿದ್ದಾರೆ, ನಾವು ಅದನ್ನು ಸ್ವಾಗತ ಮಾಡುತ್ತೇವೆ. ಇದರಲ್ಲಿ ಒಂದೆಡೆ ಮಿಸ್‌ಅಪ್ರೋಪ್ರಿಯೇಷನ್ ಆಗಿರುವುದೂ ಕೂಡ ಇದೆ. ಆದರೆ ಸ್ಪಾಟ್ ಇನ್ಸ್‌ಪೆಕ್ಷನ್ ಏಕೆ ಮಾಡಿ ಎಂದು ಹೇಳುತ್ತಿದ್ದೇನೆ ಎಂದರೆ, ಸವಲತ್ತು ಕೊಡುವುದಕ್ಕೆ ಅನುಕೂಲವಾಗುತ್ತದೆ. ಇದಕ್ಕೆ ಸ್ಥಳ ಪರಿಶೀಲನೆ ನಡೆಸಿ, ಪರಿಸ್ಥಿತಿ ನೋಡಿಕೊಂಡು ಬಂದರೆ ಅವರಿಗೆ ಗೊತ್ತಾಗುತ್ತದೆ.

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಖರ್ಗೆಯವರೆ, ಗ್ರೌಂಡ್‌ರಿಯಾಲಿಟಿ ನೋಡಿಕೊಂಡು ಇಮ್ಮೀಡಿಯೇಟ್‌ಲಿ ಸ್ಟೆಪ್ ಅಫ್ ಮಾಡಲಿಕ್ಕೆ ಇದರಿಂದ ಅನುಕೂಲವಾಗುತ್ತದೆ.

ಶ್ರೀ ಜಿ.ಟಿ. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಸರ್ಕಾರವರ ಈಗೇನು ಒಂದು ಆದೇಶ ಹೊರಡಿಸಿ 10 ಎಕರೆಗಿಂತಲೂ ಹೆಚ್ಚು ಜಮೀನು ಕಳೆದುಕೊಳ್ಳುವವರಿಗೆ ಯಾವುದೇ ಒಂದು ಸೌಕರ್ಯ ಕೊಡುವುದಿಲ್ಲ ಎಂದು ಹೇಳಿ ಏನು ಡಿಸ್ಕ್ರಿಮಿನೇಷನ್ ಮಾಡುತ್ತಿದ್ದೀರಿ ಅದರ ಬಗ್ಗೆ ಸರ್ಕಾರ ಏನೂ ಹೇಳಲಿಲ್ಲ, ದಯಮಾಡಿ ಸರ್ಕಾರ ಇದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕಾಂಪನ್‌ಸೇಷನ್ ಕೊಡುವುದರಲ್ಲಿ ವ್ಯತ್ಯಾಸ ಆಗುತ್ತಿದೆ. ಕೆಲವು ಜನರಿಗೆ 60 ಸಾವಿರ ಕೊಟ್ಟಿದ್ದೀರಿ, ಮತ್ತೆ ಕೆಲವು ಜನರಿಗೆ ಆ ರೀತಿ ಕೊಟ್ಟಿಲ್ಲ. ಒಬ್ಬರಿಗೆ ಒಂದು ರೀತಿ, ಇನ್ನೊಬ್ಬರಿಗೆ ಒಂದು ರೀತಿ ಆಗುತ್ತಿದೆ.

ಶ್ರೀ ಹೆಚ್.ಡಿ. ದೇವೇಗೌಡ : ಅದರಲ್ಲಿ ಒಂದು ದೊಡ್ಡ ದುರಂತವೇ ಇದೆ. ಅವರು ಹೇಳಿದ್ದರಲ್ಲಿ ಎಲ್ಲಾ ಸತ್ಯ ಇದೆ ಎಂದು ಹೇಳಿದ್ದೇನೆ. ಅದನ್ನು ಯಾವುದನ್ನೂ ನಾನು ಇಲ್ಲ ಎಂದು ಹೇಳಲಿಲ್ಲ. ಯಾರು ಕೋರ್ಟಿಗೆ ಮೋಟೀವ್ ಅಟ್ರಿಬ್ಯೂಟ್ ಮಾಡುವುದಕ್ಕೆ ಹೋಗುವುದಿಲ್ಲ. ವ್ಯವಸ್ಥೆ ಹೇಗೆ ಮಾಡಿಸಿಕೊಂಡಿದ್ದಾರೆ, ಆ ರೀತಿ ಅದು ಹೋಗಿದೆ. ಕೂಲಂಕುಷವಾಗಿ ತನಿಖೆ ಮಾಡಿಸುತ್ತೇನೆ ಎಂದು ಹೇಳಿದ್ದೇನೆ. ಈಗ ಎಲ್ಲಿ ಏನಾಗಿದೆ ಎಂಬುದು ನಿಮಗೇ ಗೊತ್ತಿದೆ. When once the Award is passed by the Tribunal, our hands are tightened. ಆಗ ಹೇಗೆ ಸಾಧ್ಯ ಇದೆ? ಎಕ್ಸ್‌ಗ್ರೇಷಿಯಾ ಕೊಡುವುದಕ್ಕೆ ಸಾಧ್ಯವೇ? ಎಲ್ಲಿ ಏನಾಗಿದೆ ಎಂಬುದನ್ನು ನೋಡಬೇಕು. ನೀವು ಹೇಳಿದ ಹಾಗೆ ಒಂದು ಸದನ ಸಮಿತಿಯನ್ನು ಬೇಕಾದರೆ ಕಳುಹಿಸಿಕೊಡುತ್ತೇನೆ. ಅವರು ಒಮ್ಮೆ ಹೋಗಿ ನೋಡಿಕೊಂಡು ಬರಲಿ. ನೋಡಿಕೊಂಡು ಬಂದು ಒಂದು ರಿಪೋರ್ಟ್ ಕೊಡಲಿ. Let us give attention to those people who are realy genuine. ನನಗೇನೂ ಅದರಲ್ಲಿ ಅಭ್ಯಂತರ ಇಲ್ಲ.

ಶ್ರೀ ಬಿ.ಎಸ್. ಪಾಟೀಲ್ : ತಾವೇನು ಸದನ ಸಮಿತಿಯನ್ನು ಮಾಡುತ್ತೇವೆ ಎಂದು ಹೇಳಿದ್ದೀರಿ. ಅಲ್ಲಿ ಮಾಡುವುದಕ್ಕೆ ಕೆಲಸ ಬಹಳಷ್ಟಿದೆ. ಇಲ್ಲಿ ಇನ್ನೊ

ಏನೇನೂ ಆಗಿಲ್ಲ. ನಾಳೆ ಮಳೆ ಬಂದರೆ ಬಹಳಷ್ಟು ಜನ ನಿರಾಶ್ರಿತರಾಗುವ ಸಂಭವವಿದೆ. ಅದಕ್ಕಾಗಿ ತುರ್ತಾಗಿ ಸಮರೋಪಾದಿಯಲ್ಲಿ ಕೆಲಸಗಳು ನಡೆದಲ್ಲಿ ಮಾತ್ರ, ಮುಂಬರಲಿರುವ ಮಳೆಯಿಂದಾಗುವ ಅನಾಹುತವನ್ನು ತಪ್ಪಿಸಬಹುದು.

(3) ಬೆಂಗಳೂರು ನಗರದ ಶ್ಯಾಮಲಾರೆಡ್ಡಿ ದಂತ ಮಹಾವಿದ್ಯಾಲಯದಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿಂದ ವಿದ್ಯಾರ್ಥಿಗಳಿಗೆ ಉಂಟಾಗಿರುವ ತೊಂದರೆ

ಶ್ರೀ ವಸಂತ ವಿ. ಸಾಲಿಯಾನ : ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದ ಶ್ಯಾಮಲಾರೆಡ್ಡಿ ದಂತ ಮಹಾವಿದ್ಯಾಲಯದಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿಂದ ವಿದ್ಯಾರ್ಥಿಗಳಿಗೆ ಉಂಟಾಗಿರುವ ತೊಂದರೆಯ ಬಗ್ಗೆ ನಾನು ವೈದ್ಯಕೀಯ ಶಿಕ್ಷಣ ರಾಜ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

+ ಶ್ರೀ ಎ.ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು) : ಬೆಂಗಳೂರು ನಗರದಲ್ಲಿ ಶ್ಯಾಮಲಾರೆಡ್ಡಿ ದಂತ ಕಾಲೇಜನ್ನು 40 ವಿದ್ಯಾರ್ಥಿಗಳ ಪ್ರವೇಶ ಸಾಮರ್ಥ್ಯದೊಂದಿಗೆ ಸರ್ಕಾರದ ಮಂಜುರಾತಿಯನ್ನು ನೀಡಿದೆ.

ಶ್ಯಾಮಲಾರೆಡ್ಡಿ ದಂತ ಕಾಲೇಜ್‌ನಲ್ಲಿ ಬೋಧಕ ಸಿಬ್ಬಂದಿ, ಪುಸ್ತಕಗಳು ಮತ್ತು ದಂತ ಕುರ್ಚಿಗಳ ಕೊರತೆ ಕಂಡುಬಂದಿದ್ದು, ಈ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆ. ಈ ಬಗ್ಗೆ ವೈದ್ಯಕೀಯ ಶಿಕ್ಷಣ ನಿರ್ದೇಶಕರು ಕಳೆದ ಜುಲೈ ತಿಂಗಳಲ್ಲಿ ಈ ಕಾಲೇಜಿಗೆ ಭೇಟಿ ಕೊಟ್ಟು ವಿದ್ಯಾರ್ಥಿಗಳು ಮತ್ತು ಆಡಳಿತಮಂಡಳಿಯವರು ಸೇರಿದಂತೆ ಎರಡು ದಿವಸಗಳ ಸಭೆ ನಡೆಸಿ ಕೂಲಂಕೂಷವಾಗಿ ಅಲ್ಲಿನ ಕುಂದುಕೊರತೆಗಳ ಬಗ್ಗೆ ಸಮೀಕ್ಷೆ ನಡೆಸಿರುತ್ತಾರೆ. ಮೇಲಿನ ಕುಂದುಕೊರತೆಗಳನ್ನು ಕೂಡಲೇ ಬಗೆಹರಿಸಲು ಕ್ರಮ ತೆಗೆದುಕೊಳ್ಳಬೇಕೆಂದು ಆಡಳಿತಮಂಡಲಿಯವರಿಗೆ ಸೂಚನೆ ನೀಡಿರುತ್ತಾರೆ.

ಆಡಳಿತ ಮಂಡಲಿಯವರು ಈ ಕುಂದುಕೊರತೆಗಳನ್ನು ಕೂಡಲೇ ಬಗೆಹರಿಸಲು ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿ, ಸ್ವಲ್ಪ ಕಾಲಾವಕಾಶಗಳನ್ನು ಕೋರಿರುತ್ತಾರೆ. ಈ ಸಂಸ್ಥೆಯಲ್ಲಿ ಭಾರತೀಯ ದಂತ ವೈದ್ಯ ಪರಿಷತ್ತಿನ ನಿಯಮದ ಪ್ರಕಾರ ಇರಬೇಕಾದಷ್ಟು ಪ್ರಮಾಣದಲ್ಲಿ ಬೋಧಕ ಸಿಬ್ಬಂದಿ ಇರುವುದಿಲ್ಲ. ಕೆಲವು ಬೋಧಕ ಸಿಬ್ಬಂದಿವರ್ಗದವರನ್ನು ಪಾರ್ಟ್‌ಟೈಮ್ ಮೇಲೆ ಹಾಗೂ ಕೆಲವರನ್ನು ಗೌರವಾನ್ವಿತ ಬೋಧಕ ಅಧ್ಯಾಪಕರಾಗಿ ಅವರ ಸೇವೆಯನ್ನು ಉಪಯೋಗಿಸಿಕೊಳ್ಳಲಾಗುತ್ತಿದೆ. ಈ ಬಗ್ಗೆ ವಿದ್ಯಾರ್ಥಿಗಳಿಂದ ಸಾಕಷ್ಟು ಅಸಮಾಧಾನ ಇರುತ್ತದೆ. ಖಾಯಂ ಬೋಧಕ ಸಿಬ್ಬಂದಿವರ್ಗದವರ ನೇಮಕಾತಿಗೆ ಕ್ರಮ ತೆಗೆದುಕೊಳ್ಳಲು ನಿರ್ದೇಶಕರು ಸೂಚಿಸಿರುತ್ತಾರೆ. ಈ ಸಂಸ್ಥೆಯಲ್ಲಿ 80 ದಂತ ಕುರ್ಚಿಗಳು ಇರಬೇಕಾಗಿದ್ದು, ಹಾಲಿ 22 ದಂತ ಕುರ್ಚಿಗಳು ಮಾತ್ರ ಲಭ್ಯವಿರುತ್ತವೆ. ಇವುಗಳ ಸಂಖ್ಯೆ ಬಹಳ ಕಡಿಮೆ ಇರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುತ್ತದೆ. ಈ ಬಗ್ಗೆ ಉಳಿದ ದಂತ ಕುರ್ಚಿಗಳನ್ನು ಖರೀದಿಸಲು ಸೂಚಿಸಲಾಗಿದೆ. ಈ ಸಮೀಕ್ಷೆ ಸಮಯದಲ್ಲಿ ದಂತ ಕುರ್ಚಿಗಳನ್ನು ಖರೀದಿಸಲು ವ್ಯವಹರಿಸಿರುವ ದಾಖಲೆಗಳನ್ನು ಹಾಗೂ ಇನ್‌ವೈಸ್‌ಪ್ರತಿಗಳನ್ನು ಹಾಜರುಪಡಿಸಿರುತ್ತಾರೆ. ಮತ್ತು ಕೂಡಲೇ ಅವುಗಳನ್ನು ಪಡೆಯುವುದಾಗಿ ತಿಳಿಸಿರುತ್ತಾರೆ.

ಈ ಕಾಲೇಜಿನ ಗ್ರಂಥಾಲಯದಲ್ಲಿ ಪುಸ್ತಕಗಳ ಕೊರತೆಯು ಸಹ ಇರುತ್ತದೆ. ಈ ಬಗ್ಗೆ ಜುಲೈ ತಿಂಗಳಲ್ಲಿ ಸುಮಾರು 1,12,000.00ರೂ.ಗಳಷ್ಟು ಬೆಲೆಬಾಳುವ 400 ಪುಸ್ತಕಗಳನ್ನು ಖರೀದಿಸಿರುತ್ತಾರೆ. ಇನ್ನೂ ಹೆಚ್ಚಿನ ಪುಸ್ತಕಗಳನ್ನು ಖರೀದಿಸಲು ವ್ಯವಹರಿಸಿರುವ ಪ್ರತಿಗಳನ್ನು ಒದಗಿಸಿರುತ್ತಾರೆ. ವಿದ್ಯಾರ್ಥಿಗಳಿಂದ ಹೆಚ್ಚು ವಸೂಲು ಮಾಡಲಾಗಿದ್ದ ಹಣ 6.50 ಲಕ್ಷ ರೂ.ಗಳನ್ನು ವಿದ್ಯಾರ್ಥಿಗಳಿಗೆ ಚೆಕ್‌ಗಳ ಮೂಲಕ ಹಿಂದಿರುಗಿಸಲಾಗಿದೆ. ಪುನರಾವರ್ತಿಸಿದ ವಿದ್ಯಾರ್ಥಿಗಳಿಂದ ಈ ಒಂದು ವಿಷಯಕ್ಕೆ

ಒಂದು ಅವಧಿಗೆ 5,000.00ರೂ.ಗಳಂತೆ ವಸೂಲು ಮಾಡಿರುವುದನ್ನು ರೂ.1000.00ಗಳಿಗೆ ಇಳಿಸಲಾಗಿದೆ.

ಎಲ್ಲ ವಿದ್ಯಾರ್ಥಿಗಳಿಗೂ ಪರೀಕ್ಷೆಗೆ ಹಾಜರಾಗಲು ಅವಕಾಶ ಮಾಡಲಾಗಿದೆ. ಅದಾಗ್ಯೂ ಕೆಲವು ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗದೇ ಉಳಿದ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲು ಅಡಚಣೆಯುಂಟು ಮಾಡಿದ ಪ್ರಯುಕ್ತ ಈ ಸಮಯದಲ್ಲಿ ಘರ್ಷಣೆ ಸಂಭವಿಸಿ ಪೋಲೀಸರು ಅಡಚಣೆ ಮಾಡಿದ ವಿದಾರ್ಥಿಗಳ ಮೇಲೆ ಕ್ರಮ ಕೈಗೊಂಡಿರುತ್ತಾರೆ.

ಈ ಸಾಲಿನ ಡಿಸೆಂಬರ್ ಅಂತ್ಯದೊಳಗೆ ಸಂಸ್ಥೆಯು ಎಲ್ಲ ಕಂದುಕೊರತೆಗಳನ್ನು ಸರಿಪಡಿಸಿಕೊಳ್ಳಲು ಆಡಳಿತಮಂಡಲಿಗೆ ಕಾಲಾವಕಾಶ ನೀಡಲಾಗಿದೆ. ಈ ಸೂಚನೆಗಳನ್ನು ಪರಿಪಾಲಿಸದೆ ಇದ್ದಲ್ಲಿ ಸಂಸ್ಥೆಯ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಶ್ರೀ ವಸಂತ ವಿ. ಸಾಲಿಯಾನ : ಮಾನ್ಯ ಅಧ್ಯಕ್ಷರೇ, ಮಾನ್ಯ ವೈದ್ಯಕೀಯ ಶಿಕ್ಷಣ ಮಂತ್ರಿಗಳು ಇವತ್ತು ಸದನದಲ್ಲಿ ಸತ್ಯಕ್ಕೆ ದೂರವಾದಂತಹ ಒಂದು ಸುಳ್ಳು ಉತ್ತರವನ್ನು ಹೇಳಿದ್ದಾರೆ. 1991ರಲ್ಲಿ ಈ ಡೆಂಟಲ್ ಕಾಲೇಜ್ ತೆರೆಯಲು ಯಾವ ಆಧಾರದ ಮೇಲೆ ಸರ್ಕಾರ ಅನುಮತಿ ನೀಡಿತ್ತು. ಇದೊಂದು ವಿಚಾರ ತಾವು ಹೇಳಬೇಕು. 1991ರಿಂದ ಈ ಕಾಲೇಜಿನಲ್ಲಿ ಈ ಎಲ್ಲಾ ಕೊರತೆಗಳಿವೆ ಎಂದು ಅವರು ಹೇಳಿದ್ದಾರೆ. ಇವತ್ತು ನಾವು 1995ರಲ್ಲಿ ಇದ್ದೇವೆ. ಕಳೆದ ನಾಲ್ಕು ವರ್ಷಗಳಲ್ಲಿ ಸುಮಾರು 160ಜನ ವಿದ್ಯಾರ್ಥಿಗಳು ಅಲ್ಲಿ ಯಾವುದೇ ಮೂಲಭೂತ ಸೌಕರ್ಯಗಳಿಲ್ಲದೇ ಓದಿದ್ದಾರೆ. ಈ ಕಾಲೇಜಿಗೆ ಒಟ್ಟು 80 ಡೆಂಟಲ್ ಛೇರ್ಸ್ ಬೇಕಾಗುತ್ತವೆ.

ಆದರೆ ಮೊನ್ನೆ ದಿನಾಂಕ: 24-8-95 ರಂದು ಕಾಲೇಜಿಗೆ ಭೇಟಿ ಮಾಡಿ ಅಲ್ಲಿ ನೋಡಿದಾಗ ಈಗ ಕೇವಲ ನಾಲ್ಕು ಡೆಂಟಲ್ ಚೇರ್‌ಗಳಿವೆ. ಗ್ರಂಥಾಲಯವಿಲ್ಲ ಮತ್ತು ಬೇಕಾದಂಥ ವಸತಿ ಸೌಕರ್ಯವಿಲ್ಲ, ಅಲ್ಲಿ ಕಟ್ಟಡ ಇಲ್ಲ. ಇವತ್ತು ನಾನು ಹೇಳುವುದೇನೆಂದರೆ, ಇವತ್ತು ಆ ಕಾಲೇಜಿನ ಪ್ರಾಂಶುಪಾಲರು ಯಾರು? ಆ ಕಾಲೇಜಿನಲ್ಲಿ ಎಷ್ಟು ಲೆಕ್ಚರ್ಸ್ ಇದ್ದಾರೆ, ಆ ಕಾಲೇಜಿನಲ್ಲಿ ಈಗ ಲೈಬ್ರೆರಿಯನ್ ಯಾರು? ಆ ಕಾಲೇಜಿನಲ್ಲಿ ಪ್ರಾಂಶುಪಾಲರ ವಿದ್ಯಾರ್ಹತೆ ಏನು? ಅವರು ಡೆಂಟಲ್ ಸರ್ಜನ್ನೋ ಅಥವಾ ಎಂ.ಬಿ.ಬಿ.ಎಸ್. ಸಾಮಾನ್ಯ ವೈದ್ಯರೋ ಎನ್ನುವುದರ ಬಗ್ಗೆ ತಾವು ಉತ್ತರ ಕೊಡಬೇಕಾಗುತ್ತದೆ. ಇದೇ ರೀತಿಯಲ್ಲಿ ಇಲಾಖೆಯವರು, ಯಾವುದೇ ಸರ್ಕಾರವಿರಬಹುದು, ಸುಳ್ಳು ಮಾಹಿತಿಗಳನ್ನು ಕೊಡುತ್ತಾ ಬಂದಿದ್ದಾರೆ. ಇವತ್ತು 1993-94ನೇ ಇಸವಿಗೆ ಸರ್ಕಾರ, ಗೌರ್ನಮೆಂಟ್ ಸೀಟುಗಳನ್ನು ಅವರಿಗೆ ಯಾವ ರೀತಿಯಲ್ಲಿ ಕೊಟ್ಟಿದೆ? 1994-95ನೇ ಇಸವಿಗೆ ಯಾವ ಆಧಾರದ ಮೇಲೆ ಗೌರ್ನಮೆಂಟ್ ಸೀಟುಗಳನ್ನು ಕೊಟ್ಟಿದ್ದಾರೆ 1995-96ನೇ ಸಾಲಿಗೆ ಯಾವ ಆಧಾರದ ಮೇಲೆ ಗೌರ್ನಮೆಂಟ್ ಸೀಟುಗಳನ್ನು ಕೊಟ್ಟಿದ್ದಾರೆ ಎನ್ನುವ ವಿಚಾರವನ್ನು ನಾನು ಕೇಳುತ್ತೇನೆ. ಅದೇ ರೀತಿಯಲ್ಲಿ ಮೊನ್ನೆ, ಅಂದರೆ ದಿನಾಂಕ 24-1-1995 ರಂದು ನಮ್ಮ ಬೆಂಗಳೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾದ ಶ್ರೀಮಾನ್ ಟಿ.ಬಿ. ಸುರೇಶ್‌ರವರು ಒಂದು ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಅದರಲ್ಲಿ ಅವರು ಏನು ಹೇಳಿದ್ದಾರೆಂದರೆ "After going through all the relevant records, it seriously recommends that the renewal of Shamala Reddy Dental College should not be granted for the year 1995-96."

ಈ ರೀತಿ, ಒಂದು ಸಮಿತಿ ಆ ಕಾಲೇಜಿಗೆ ಭೇಟಿ ನೀಡಿ ಸರ್ಕಾರಕ್ಕೆ ವರದಿಯನ್ನು ಕೊಟ್ಟಿದೆ. ಆದರೆ, ಉನ್ನತ ಅಧಿಕಾರಿಗಳು, ಅಂದರೆ, ಈ ಇಲಾಯ ನಿರ್ದೇಶಕರು, ಈಗಿರುವ ಸಚಿವರಿಗೂ ಕೂಡ ಸುಳ್ಳು ಮಾಹಿತಿಯನ್ನು ಕೊಟ್ಟಿದ್ದಾರೆ ಎಂದು ನನಗೆ ಕಾಣಿಸುತ್ತದೆ. ಅದರಿಂದಾಗಿ ಈ 160 ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ.

ಮೊನ್ನೆ ದಿನಾಂಕ: 21-8-95 ರಂದು ಕಾಲೇಜಿನಲ್ಲಿರುವ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಯಬೇಕಾಗಿತ್ತು. 160 ಜನ ವಿದ್ಯಾರ್ಥಿಗಳಲ್ಲಿ ಯಾರೇ ಒಬ್ಬ ವಿದ್ಯಾರ್ಥಿಯು ಕೂಡ ಆ ಪರೀಕ್ಷೆಗೆ ಹಾಜರಾಗಲಿಲ್ಲ. ಈ ಬಗ್ಗೆ ಈ ಸುಳ್ಳು ಮಾಹಿತಿಗಳನ್ನು ನೀಡಿದಂತ ಅಧಿಕಾರಿಗಳನ್ನೂ ಕೂಡ ಸರ್ಕಾರ ಕೂಡಲೇ ಅಮಾನತ್ತಿನಲ್ಲಿಡಬೇಕು; ಇದರ ಬಗ್ಗೆ ಒಂದು ಸದನದ ಸಮಿತಿಯನ್ನು ಮಾಡಿ, ಇವತ್ತೇ ಬೇಕಾದರೆ ನಿಮ್ಮ ಜೊತೆ ಆ ಕಾಲೇಜಿಗೆ ನಾನೂ ಬರುತ್ತೇನೆ, ನೀನು ಸುಳ್ಳು ಮಾಹಿತಿಯನ್ನು ಈ ಸದನಕ್ಕೆ ಕೊಟ್ಟಿದ್ದೀರಿ. ಅಲ್ಲಿ ಇರುವುದು ಕೇವಲ ನಾಲ್ಕು ಡೆಂಟಲ್ ಚೇರ್‌ಗಳು. ಅದರಿಂದ ಈಗ ನೀವು ಹಾಗೂ ನಾವು ಅಲ್ಲಿಗೆ ಹೋಗೋಣ, ನೋಡೋಣ, ಯಾವ ಪರಿಸ್ಥಿತಿ ಈಗ ಅಲ್ಲಿದೆ, ಯಾವ ಪರಿಸ್ಥಿತಿಯಲ್ಲಿ ಅಲ್ಲಿ ಕಾಲೇಜನ್ನು ನೆಡೆಸುವಂತಹ ಪರಿಸ್ಥಿತಿ ಇದೆ ಎನ್ನುವುದನ್ನು ನೋಡೋಣ.

ಶ್ರೀ ಎಸ್.ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಸಭಾಧ್ಯಕ್ಷರೆ, ನಿನ್ನೆ ಈ ಸದನದ ಸಭೆಯಲ್ಲಿ ಒಂದು ಇಂಜಿನಿಯರಿಂಗ್ ಕಾಲೇಜಿನ ಹಗರಣವನ್ನು ನೋಡಿದ್ದೆವು, ಇವತ್ತು ಡೆಂಟಲ್ ಕಾಲೇಜು, ನಾಳೆ ಮೆಡಿಕಲ್ ಕಾಲೇಜಿನ ಹಗರಣವೆನೋ ನನಗೆ ಗೊತ್ತಿಲ್ಲ. ನಿನ್ನೆ ನೀವು ಆಶ್ರಯ ತೆಗೆದುಕೊಂಡಿದ್ದು ಕೋರ್ಟಿನಲ್ಲಿ ತಡೆಯಾಜ್ಞೆ ಇದೆ ಎಂದು. ಇದರಲ್ಲಿ, ಕೋರ್ಟಿನ ತಡೆಯಾಜ್ಞೆ ಏನೂ ಇಲ್ಲ. ಸಭಾಧ್ಯಕ್ಷರೇ, ಭಾರತ ದಂತ ವೈದ್ಯ ಪರಿಷತ್ತಿನ, ಡೆಂಟಲ್ ಕೌನ್ಸಿಲ್ ಆಫ್ ಇಂಡಿಯಾ ಅದರ ಎಲ್ಲಾ ನಿಯಮಗಳನ್ನು ಈ ಡಾ: ಶಾಮಲ ರೆಡ್ಡಿ ಡೆಂಟಲ್ ಕಾಲೇಜ್ ಗಾಳಿಗೆ ತೂರಿದೆ. ಭಾರತ ದಂತ ವೈದ್ಯ ಪರಿಷತ್ತಿನ ಪ್ರಕಾರ, ಡೆಂಟಲ್ ನಾಲೇಜ್ ಇರುವಂಥ ಒಬ್ಬ ಪ್ರಿನ್ಸಿಪಾಲ್ ಇರಬೇಕು. ಆದರೆ ಈ ಸ್ಥಳೀಯ ತನಿಖೆ ಸಮಿತಿಯ ಪ್ರಕಾರ "Pricipal incharge of the College is M.B.B.S., with M.D., qualification. She is basically a non-dental qualified person. Besides her knowledge in Dental Science is under suspicion by the college."

ಲೋಕಲ್ ಎನ್‌ಕ್ವೈರಿ ಕಮಿಟಿ ಹೋದಾಗ ಬಂದಿರುವಂತಹ ವರದಿ ಇದು. ಭಾರತ ದಂತ ವೈದ್ಯ ಪರಿಷತ್ತಿನ ಪ್ರಕಾರ ಈ ಕಾಲೇಜಿನಲ್ಲಿ ಇರಬೇಕಾದಂಥ ಪ್ರಫೇಸರ್ಸ್‌9 ಜನ. ಈಗ ಇರುವುದು ಒಬ್ಬರು. ಭಾರತ ದಂತ ವೈದ್ಯ ಪರಿಷತ್ತಿನ ಪ್ರಕಾರ ಇರಬೇಕಾದ ಅಸಿಸ್ಟಂಟ್ ಪ್ರೊಫೆಸರ್ಸ್ 16 ಜನ, ಈಗ ಒಬ್ಬರೂ ಇಲ್ಲ. ಟ್ಯೂಟರ್ಸ್ ಇರಬೇಕಾದದ್ದು 32 ಜನ, ಈಗ ಇರುವುದು 4 ಜನ. ಇದು ಬೆಂಗಳೂರಿನಲ್ಲಿ ಡೆಂಟಲ್ ಕಾಲೇಜನ್ನೇ ನಡೆಸುವಂತಹ ಒಂದು ಲಕ್ಷಣ ವಿದ್ಯಾರ್ಥಿಗಳಿಂದಲೇ ಅವರು ಇನ್ನೂ ಬೇರೆ ಬೇರೆ ಸಂಸ್ಥೆಗಳನ್ನು ಪ್ರಾರಂಭ ಮಾಡುತ್ತಿರುವುದು. ಗ್ರಂಥಾಲಯ ಹೆಸರಿಗೆ ಮಾತ್ರ. ಸಭಾಧ್ಯಕ್ಷರೇ ನಾನು ಎಲ್ಲೂ ಕೇಳಿರಲಿಲ್ಲ, ವಿಶ್ವವಿದ್ಯಾಲಯದಲ್ಲಿ ಒಂದು ವಿಷಯದಲ್ಲಿ ಏನಾದರೂ ಅನುತ್ತೀರ್ಣರಾದರೆ ನಾವು ಕಟ್ಟಬೇಕಾಗಿರುವ ಹಣ 500 ರೂಪಾಯಿಗಳು, ಆದರೆ ಈ ಕಾಲೇಜಿನಲ್ಲಿ ಅನುತ್ತೀರ್ಣನಾದವನು ಕಟ್ಟಬೇಕಾದದ್ದು 5,000 ರೂಪಾಯಿ. ಯಾರು ಇವರ ಮೇಲೆ ನಿಯಂತ್ರಣವನ್ನು ಹಾಕುವವರು? ಆಮೇಲೆ ಈ ವೃತ್ತಿಪರ ಕಾಲೇಜುಗಳಲ್ಲಿ ಇಂಟರ್‌ನಲ್ ಅಸೆಸ್‌ಮೆಂಟ ಎಂದು ಇರುತ್ತದೆ. ಆ ವಿದ್ಯಾರ್ಥಿಯ ಅಧ್ಯಯನದ ಪರಿಣಿತಿಯನ್ನು ವಿಶ್ಲೇಷಣೆ ಮಾಡಿ ಅಂಕವನ್ನು ಕೊಡುವುದಕ್ಕೆ ಇಟ್ಟಿರುತ್ತಾರೆ. ಈ ಕಾಲೇಜಿನಲ್ಲಿ ಇಂಟರ್‌ನಲ್ ಅಸೆಸ್‌ಮೆಂಟ್ನಲ್ಲಿ ಕೂಡ, ದುಡ್ಡನ್ನು ಲೂಟಿ ಮಾಡುವುದಕ್ಕೆ ಇರುವ ಒಂದು ಸಾಧನವಾಗಿದೆ. ದುಡ್ಡು ಕೊಟ್ಟವನಿಗೆ ಇಂಟರ್‌ನಲ್ ಅಸೆಸ್‌ಮೆಂಟ್‌ನಲ್ಲಿ ಹೆಚ್ಚಿನ ಅಂಕ, ಕೊಡದೇ ಇದ್ದರೆ ಆ ವಿದ್ಯಾರ್ಥಿಗೆ ಚೆನ್ನಾಗಿ ಜ್ಞಾನವಿದ್ದರೂ ಕೂಡ ಪಾಸ್‌ಮಾಡುತ್ತಿಲ್ಲ, ಅಂಕವನ್ನು ಕೊಡುತ್ತಿಲ್ಲ. ಸಭಾಧ್ಯಕ್ಷರೇ, ಇನ್ನೊಂದು ವಿಶೇಷವೇನೆಂದರೆ, ವಿದ್ಯಾರ್ಥಿ ತರಗತಿಗೆ ಹಾಜರಾದರೆ ಅವನಿಗೆ ಹಾಜರಾತಿಯನ್ನು ಕೊಡುವುದಿಲ್ಲ, ಹಾಜರಾತಿ ಕೊರತೆ ಇದೆ ಎಂದು ನಂತರ ಅವನ ಹತ್ತಿರ ದುಡ್ಡನ್ನು ತೆಗೆದುಕೊಳ್ಳುವುದು. ಬೆಂಗಳೂರು ವಿಶ್ವವಿದ್ಯಾಲಯದ ಲೋಕಲ್ ಎನ್‌ಕ್ವೈರಿ ಕಮಿಟಿ.

"The college has not maintained any records to show the students attendance, class time table etc., About all this, the Committee suspects the very existence of this college."

ಎಂದು ಒಂದು ವರದಿಯನ್ನೇ ಕೊಟ್ಟಿದೆ. ಸಭಾಧ್ಯಕ್ಷರೇ, ನಾನು ವಿಧಾನ ಸಭೆಯ ಸದಸ್ಯನಾಗುವುದಕ್ಕಿಂದ ಮುಂಚೆ ಪೇಪರ್‌ನಲ್ಲಿ ಬೈರೇಗೌಡರ ಭಾಷಣವನ್ನು ಓದಿದ್ದೇನೆ.

ಶ್ರೀ ಹೆಚ್.ಡಿ. ಬಸವರಾಜು : ಮಂತ್ರಿಗಳ ಭಾಷಣ ಯಾವ ರೀತಿಯದೆಂದು ಅರ್ಥವಾಗುತ್ತಿಲ್ಲ.

ಶ್ರೀ ಎಸ್. ಸುರೇಶ್‌ಕುಮಾರ್ : ಸಭಾಧ್ಯಕ್ಷರೇ, ದಿನಾಂಕ: 19-7-95ರಂದು ಈ ಕಾಲೇಜಿನ ಬಗ್ಗೆ ನಮ್ಮ ವೈದ್ಯಕೀಯ ಶಿಕ್ಷಣ ನಿರ್ದೇಶಕರ ಸಮ್ಮುಖದಲ್ಲಿ ವಿದ್ಯಾರ್ಥಿಗಳದ್ದು, ಪೋಷಕರದ್ದು, ಮತ್ತು ಶಿಕ್ಷಕರದ್ದು ಒಂದು ಸಭೆಯನ್ನು ಮಾಡಲಾಯಿತು. ಇಲ್ಲಿ ಅಗತ್ಯ ಕ್ರಮಗಳೇನಿದ್ದಾವೆ, ಅದು ಶಿಕ್ಷಕರ ಸಂಖ್ಯೆ ಇರಬಹುದು, ಛೇರ್ಸ್ ಇರಬಹುದು. ಗ್ರಂಥಾಲಯ ಇರಬಹುದು ಇದರ ಬಗ್ಗೆ ಎಲ್ಲಾ ಒಂದು ತಿಂಗಳೊಳಗೆ ನಾನು ಅಗತ್ಯ ಕ್ರಮ ತೆಗೆದುಕೊಳ್ಳುತ್ತೇನೆಂದು ಅವತ್ತು ಅವರು ಭರವಸೆಯನ್ನು ಕೊಟ್ಟರು.

Till today nothing has happened. Unfortunately, the Director of Medical Education for reasons unkown has washed off her hands.

ಇವತ್ತು ಆ ವಿದ್ಯಾರ್ಥಿಗಳ ಗತಿಯೇನು? ಇವತ್ತು ಮಂತ್ರಿಗಳು ಎಲ್ಲಾ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲು ಅವಕಾಶವನ್ನು ಮಾಡಿಕೊಡಲಾಗಿದೆ ಎಂದು ಉತ್ತರ ಕೊಡುತ್ತಾರೆ. ಅವಕಾಶವೆಂದರೆ ಏನು ಸ್ವಾಮಿ? ಅವರಿಗೆ ಪ್ರಾಕ್ಟಿಕಲ್ ಗೊತ್ತಿಲ್ಲ, ಥಿಯರಿಯೂ ಗೊತ್ತಿಲ್ಲ, ಪರೀಕ್ಷೆಗೆ ಅವಕಾಶ ಕಲ್ಪಿಸಿಕೊಡುವುದೆಂದರೆ ಏನು ಅರ್ಥ? ಆ ವಿದ್ಯಾರ್ಥಿಗಳು ಯಾವ ರೀತಿ ಪರೀಕ್ಷೆಯಲ್ಲಿ ಬರೆಯುತ್ತಾರೆ. ಅಥವಾ ಆ ರೀತಿಯಾಗಿ ತೇರ್ಗಡೆಯಾದವರ ಹತ್ತಿರ ಹೋಗಿ ನಮ್ಮ ಮಂತ್ರಿಗಳು ಹೋಗಿ ಹಲ್ಲನ್ನು ತೆಗೆಸಿಕೊಳ್ಳುತ್ತಾರೋ? ಹಲ್ಲಿನ ನೋವು ಬಂದರೆ ಹೋಗುತ್ತಾರೋ ಇದು ವಿದ್ಯಾರ್ಥಿ ಸಮೂಹದ ಪ್ರಶ್ನೆ.

ಉಪಾಧ್ಯಕ್ಷರು : ಸುರೇಶ್‌ರವರೇ, ಮಂತ್ರಿಗಳು ಉತ್ತರ ಕೊಡಲಿ, ಮತ್ತೆ ತಮಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಆ ಲೋಕಲ್ ಎನ್‌ಕ್ವೈರಿ ಕಮಿಟಿಯವರು, ಏನು ಹೇಳಿದ್ದಾರೆಂದರೆ :

"It seems the Management is not even bothered to look into the welfare..." ಎಂದು 1991 ರಿಂದ ಹೇಳುತ್ತಾ ಬಂದಿದ್ದರೂ ಕೂಡ, ಮ್ಯಾನೇಜ್‌ಮೆಂಟ್ in its arrogance and in its adacity ಯಿಂದಾಗಿ ಯಾವ ಕೆಲಸವನ್ನೂ ಮಾಡಿಲ್ಲ. The adamancy of the Management towards the implementation and improvement of the better facilities to the college clearly shows that it is cheating the public instead of teaching them."

ಈ ರೀತಿಯಾಗಿ ಲೋಕಲ್ ಎನ್‌ಕ್ವೈರಿ ಕಮಿಟಿ ವರದಿ ಕೊಟ್ಟಿದೆ. ನಂತರ, ಕೊನೆಯಲ್ಲಿ ಕಮಿಟಿಯವರು ಹೇಳುತ್ತಾರೆ, ಇದನ್ನು ಯಾರೋ ಒಬ್ಬ ಸದಸ್ಯರು ಕೊಟ್ಟಿರುವುದಿಲ್ಲ Local Enquiry Committee is a statutory Body of the Bangalore University; ಲೋಕಲ್ ಕಮಿಟಿಯವರು ಏನು ಹೇಳುತ್ತಾರೆಂದರೆ, "The Committee has recorded its reluctance on the behaviour of the Chairman of the trust

who quarrelled with the members when it insisted on providing sufficient justification for the various infrastructural facilities provided to the students."

ಈ ಎಲ್ಲಾ ದೃಷ್ಟಿಯಿಂದ ಶಾಮಲಾ ರೆಡ್ಡಿ ಡೆಂಟಲ್ ಕಾಲೇಜು ಏನಿದೆ, ಅದು ಡೆಂಟಲ್ ಕಾಲೇಜಲ್ಲ, ಅದು ವಿದ್ಯಾರ್ಥಿಗಳನ್ನು ದೋಚುವ ಒಂದು ಅಂಗಡಿ. ಆದುದರಿಂದ ತಮ್ಮ ಮುಖಾಂತರ, ಮಂತ್ರಿಗಳನ್ನು ಕೇಳುತ್ತೇನೆ, ಇಲ್ಲಿ ಯಾವುದೇ ಕೋರ್ಟಿನ ತಡೆಯಾಜ್ಞೆ ಇಲ್ಲ, ಯಾವುದೇ ಅಡ್ಡಿ ಆತಂಕವಿಲ್ಲ, ಯಾವಾಗ ಈ ಕೆಲಸಗಳನ್ನೆಲ್ಲಾ ಮಾಡಬೇಕೆಂದಿತ್ತೆಂಬುದು ತಮಗೂ ಗೊತ್ತಿದೆ. ಅದಕ್ಕೋಸ್ಕರ ದಯವಿಟ್ಟು, ಡಾ. ಶಾಮಲರೆಡ್ಡಿ ಡೆಂಟಲ್ ಕಾಲೇಜನ್ನು ಮುಚ್ಚಿಬಿಡಿ; ಆ ವಿದ್ಯಾರ್ಥಿಗಳಿಗೆ ಮತ್ತೊಂದು ಪಿ.ಸಿ. ಡೆಂಟಲ್ ಕಾಲೇಜಿನ ಪರಿಸ್ಥಿತಿ ರೀತಿ ಆಗುವುದು ಬೇಡ. ಈ ವಿದ್ಯಾರ್ಥಿಗಳಿಗೆ ಬೇರೆ ಬೇರೆ ಇರುವಂತಹ ಡೆಂಟಲ್ ಕಾಲೇಜುಗಳಲ್ಲಿ ಓದುವುದಕ್ಕೆ ಅವಕಾಶ ಕೊಡಿ, ಜೊತೆಗೆ ಯಾರು ಡಾ. ಗಣೇಶ್ ರೆಡ್ಡಿ ಹಾಗೂ ಡಾ. ಶಾಮಲ ರೆಡ್ಡಿ ಇದ್ದಾರೆ, ಇವರ ವ್ಯವಹಾರದ ಬಗ್ಗೆ ಒಂದು ಸಿ.ಓ.ಡಿ. ತನಿಖೆ ನಡೆಸುವುದು ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಯ ನಿರ್ದೇಶಕರ ನಿಷ್ಕ್ರಿಯತೆಯ ಬಗ್ಗೆ ಒಂದು ತನಿಖೆ ನಡೆಸಿ ವರದಿಯನ್ನು ಈ ಸಭೆಗೆ ಮಂಡಿಸುತ್ತೀರಾ?

ಶ್ರೀ ಎ.ಬಿ. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಆ ಕಾಲೇಜಿನ ಇನ್‌ಫ್ರಾಸ್ಟ್ರಕ್ಚರ್ ಬಗ್ಗೆ ಕೇಳಿದ್ದಾರೆ. ಆ ದಂತ ಮಹಾ ವಿದ್ಯಾಲಯಗಳಿಗೆ ಯಾವ ರೀತಿಯಾದ ಸೌಲಭ್ಯಗಳು ಇರಬೇಕೋ ಆ ರೀತಿಯಾದ ಸೌಲಭ್ಯಗಳು ಇಲ್ಲವೆಂದು ಈಗಾಗಲೇ ಸರ್ಕಾರದ ಗಮನಕ್ಕೆ ಬಂದಿದೆ. ಡೆಂಟಲ್ ಕೌನ್ಸಿಲ್ ಆಫ್ ಇಂಡಿಯಾದವರು ಸ್ವತಃ ಇನ್‌ಸ್ಪೆಕ್ಷನ್ ಮಾಡಿದ್ದಾರೆ. ನಮ್ಮ ಡೈರೆಕ್ಟರ್ ಕೂಡ ಹೋಗಿ ಪರಿಶೀಲನೆ ಮಾಡಿದ್ದಾರೆ. ಹಾಗೂ ಅವರಿಗೆ ಕಾಲಾವಕಾಶ ಕೊಟ್ಟಿದ್ದಾರೆ. ಇವೊತ್ತು ನಮ್ಮ ಸರ್ಕಾರದ ವತಿಯಿಂದ ಡೈರೆಕ್ಟರ್ ಆಫ್ ಮೆಡಿಕಲ್ ಎಜ್ಯುಕೇಷನ್‌ನ್ನಾಗಲಿ ಒಂದು ಎಕ್ಸ್‌ಪರ್ಟ್ ಕಮಿಟಿಯಾಗಲಿ ಕಳುಹಿಸಿಕೊಟ್ಟು ಅವರು ಯಾವ ರೀತಿ ಸೌಲಭ್ಯಗಳನ್ನು ಒದಗಿಸಿಕೊಡಬೇಕೋ ಅದು ಇಲ್ಲದಿದ್ದರೆ ನಾವು ಹಿಂದೆ ಮುಂದೆ ನೋಡುವುದಿಲ್ಲ, ಉದಾಹರಣೆಗೆ ಪಿ.ಸಿ. ಡೆಂಟಲ್ ಕಾಲೇಜ್ ಇದೆ ನೀವು ಹೇಳುವುದಕ್ಕಿಂತ ಮುಂಚೆನೆ ಬಂದ್ ಮಾಡಿದ್ದೇವೆ. ಆ ವಿದ್ಯಾರ್ಥಿಗಳು ಸುಪ್ರೀಮ್ ಕೋರ್ಟಿಗೆ ಹೋಗುವುದಕ್ಕಿಂತ ಮುಂಚೆಯೇ ಎಲ್ಲಾ ವಿದ್ಯಾರ್ಥಿಗಳಿಗೆ ಎಲ್ಲಾ ಕಾಲೇಜುಗಳಿಗೆ ಹಾಕಿದ್ದೇವೆ. ಅದರ ಬಗ್ಗೆ ಮಾನ್ಯ ಸದಸ್ಯರು ಯಾವುದೇ ಚಿಂತನೆ ಮಾಡಬೇಕಾಗಿಲ್ಲ. ತಕ್ಷಣ ನಾವು ಡೈರೆಕ್ಟರ್ ಆಫ್ ಮೆಡಿಕಲ್ ಎಜುಕೇಷನ್ ಆಗಲಿ ಅಥವಾ ಮತ್ತೊಬ್ಬ ಎಕ್ಸ್‌ಪರ್ಟ್ ಅನ್ನು ಕಳುಹಿಸಿಕೊಟ್ಟು ಅದನ್ನು ಚೌಕಾಶಿ ಮಾಡಿ ಅಲ್ಲಿ ಯಾವ ರೀತಿ ಸೌಲಭ್ಯಗಳು ಇರಬೇಕೋ ಆ ರೀತಿ ಇಲ್ಲದಿದ್ದರೇ.....

Sri S. Suresh Kumar : What does he mean by it?

ಶ್ರೀ ವಸಂತ ವಿ. ಸಾಲಿಯಾನ : ಚೌಕಾಶಿ ಎಂದರೇನು? ಅಲ್ಲಿ ಚೌಕಾಶಿಯ ಪ್ರಶ್ನೆಯೇ ಇಲ್ಲ, It is a fraud. It is not a college.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹಿಂದೆ ಯಾವುದೋ ಒಂದು ಡೆಂಟಲ್ ಕಾಲೇಜು ಇದೇ ರೀತಿ ಇದ್ದಾಗ ಆ ವಿದ್ಯಾರ್ಥಿಗಳಿಗೆ ಬೇರೆ ಕಡೆಗೆ ಕಳುಹಿಸಿದರು. ಈಗ ಈ ವಿದ್ಯಾರ್ಥಿಗಳನ್ನು ಕೂಡ ಬೇರೆ ಕಡೆ ಕಳುಹಿಸಿ ಆ ಡೆಂಟಲ್ ಕಾಲೇಜನ್ನು ಕ್ಲೋಸ್ ಮಾಡಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾವುದೇ ರೀತಿಯಾಗಿ ಕಾನೂನುಬದ್ಧವಾಗಿ ಅದು ನಡೆಯುತ್ತಿಲ್ಲವೆಂದು ಗೊತ್ತಾಗಿದೆ. ಅಲ್ಲಿ ಯಾವುದೇ ರೀತಿಯ ಸವಲತ್ತುಗಳು ಇಲ್ಲವೆಂದು ಗೊತ್ತಾಗಿದೆ. ಅದನ್ನು ರದ್ದು ಮಾಡುತ್ತೇವೆಂದು ಹೇಳಿ ನಾವೂ ಕೂಡ ನಿಮ್ಮ ಜೊತೆಯಲ್ಲಿದ್ದೇವೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಚೌಕಾಶಿ ಎಂದರೆ ಎನ್‌ಕ್ವೈರಿ ಮಾಡುವುದು ಎಂದರ್ಥ.

ಶ್ರೀ ಎಲ್.ಆರ್. ಶಿವರಾಮೇಗೌಡ : ಚೌಕಾಶಿ ಅನ್ನುವುದು ಬೆಳಗಾಂ ಭಾಷೆ. ನೀವೇನೂ ಗಾಬರಿ ಆಗಬೇಡಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಆ ಕಾಲೇಜನ್ನು ನಮ್ಮ ಸರ್ಕಾರದವರು ಸ್ಯಾಂಕ್ಷನ್ ಮಾಡಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾರೇ ಸ್ಯಾಂಕ್ಷನ್ ಮಾಡಿರಲಿ, ಆದರೆ ಈಗ ಲೋಪದೋಷಗಳು ಇವೆ ಎಂದು ಸಮಿತಿಯಿಂದ ವರದಿ ಬಂದ ಮೇಲೆ ಒಂದು ಕ್ಷಣ ಕೂಡ ತಡ ಮಾಡದೇ ಅದನ್ನು ರದ್ದು ಮಾಡಿ. ಅವರ ಮೇಲೆ ಕ್ರಿಮಿನಲ್ ಪ್ರೊಸೀಜರ್ ಪ್ರಕಾರ ಆಕ್ಷನ್ ತಗೊಳ್ಳಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಚೌಕಾಶಿ ಅನ್ನುವುದು ಬಾರ್ಡರ್ ಭಾಷೆ.

ಒಬ್ಬ ಮಾನ್ಯ ಸದಸ್ಯರು : ನಿಮ್ಮ ಕಡೆ ಎರಡು ಕಾಲಿಗೆ ಬರುತ್ತಾರೆ ಎಂದು ಹೇಳುತ್ತೀರಿ. ಎರಡು ಕಾಲು ಎಂದರೆ ಏನರ್ಥ, ಎರಡು ಕಾಲು ಎಲ್ಲಿದೆ?

(ಗೊಂದಲ)

ಶ್ರೀ ಎ.ಬಿ. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಇವೊತ್ತು ಆ ಕಾಲೇಜಿನಲ್ಲಿ ಯಾವ ರೀತಿ ಸೌಲಭ್ಯಗಳು ಇರಬೇಕೋ ಅದು ಇಲ್ಲದಿದ್ದರೆ ಕ್ರಮ ಕೈಗೊಳ್ಳುತ್ತೇವೆ. ನಾವು ಈಗಾಗಲೇ ಒಂದು ಕಾಲೇಜನ್ನು ಮಾಡಿದ್ದೇವೆ. ಸುಮಾರು 48 ಡೆಂಟಲ್ ಕಾಲೇಜುಗಳನ್ನು ಕೊಟ್ಟಿದ್ದಾರೆ. ಅವುಗಳ ಪರಿಸ್ಥಿತಿ ಏನು ಎಂದು ತಿಳಿದುಕೊಳ್ಳಲು ಒಂದು ಲೋಕಲ್ ಎನ್ಕ್ವೈಯರಿ ಕಮಿಟಿಯನ್ನು ನಾವು ಕಳುಹಿಸಿದ್ದೇವೆ. ಅಲ್ಲಿ ಸೌಲಭ್ಯಗಳು ಇಲ್ಲದಿದ್ದುದನ್ನು ಕಂಡು ನಾವು ಈಗಾಗಲೇ ಆರು ಕಾಲೇಜುಗಳನ್ನು ಕ್ಯಾನ್ಸಲ್ ಮಾಡಿದ್ದೇವೆ. ಇಲ್ಲಿಯೂ ಕೂಡ ಸೌಲಭ್ಯಗಳನ್ನು ಒದಗಿಸಿಕೊಡದಿದ್ದರೆ ತಕ್ಷಣ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೇನೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಎಲ್ಲರಿಗೂ ಸಮಾಧಾನ ಮಾಡುವ ಹಾಗೆ ಸರ್ಕಾರ ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ಕಾಯಿದೆ ಪ್ರಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಈಗ ಉತ್ತರವನ್ನು ಕೊಡಲಾಗಿದೆ. ಆಕಸ್ಮಾತ್ ಅವರಿಗೆ ಆ ಉತ್ತರದಿಂದ ಸಮಾಧಾನವಾಗದಿದ್ದರೆ ತಮ್ಮ ಒಪ್ಪಿಗೆಯನ್ನು ಪಡೆದುಕೊಂಡು ಅದಕ್ಕೆ ಬೇಕಾಗಿರತಕ್ಕ ಉಪಪ್ರಶ್ನೆಗಳನ್ನು ಕೇಳಬಹುದು. ಎಲ್ಲರೂ

ನಿಂತುಕೊಂಡು ಒಂದು ಸಮರದ ರೀತಿಯಲ್ಲಿ ಕೆಲಸ ಮಾಡತಕ್ಕಂಥದ್ದು ಯಾರಿಗೂ ಕೀರ್ತಿ ತರತಕ್ಕಂಥದ್ದಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ದಿನಾಂಕ 24.1.1995ರಂದು ಎನ್ಕ್ವೈಯರಿ ರಿಪೋರ್ಟ್ ನಿಮ್ಮ ಕೈಗಳಿಗೆ ಬಂದಿದೆ. ತಾವು ಅಂದರೆ ನಿಮ್ಮ ಸರ್ಕಾರ ಬಂದಮೇಲೆ ಪ್ರಾಮಾಣಿಕವಾದ ಪ್ರಯತ್ನಗಳನ್ನು ಮಾಡಿದ್ದೀರಿ. ಆ ರಿಪೋರ್ಟ್ನಲ್ಲಿ ಆ ಕಾಲೇಜನ್ನು ಮುಚ್ಚಿ ಆ ಒಂದು ಮ್ಯಾನೇಜ್ಮೆಂಟ್ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಇದೆ. ಅದಕ್ಕೆ ಸಾಕ್ಷಾಧಾರಗಳಿವೆ. ಅದಾದ ಎಂಟು ತಿಂಗಳ ನಂತರ ನಾವು ಕೇಳುತ್ತಿದ್ದೇವೆ. ಮೊನ್ನೆ ತಾನೆ ನಲವತ್ತೈವತ್ತು ಜನ ವಿದ್ಯಾರ್ಥಿಗಳನ್ನು ಅರೆಸ್ಟ್ ಮಾಡಿ ಪೋಲೀಸ್ನವರು ಕಿರುಕುಳ ಕೊಟ್ಟು ಒಂದು ಪ್ರಭಾವದಿಂದ ಗೋಳು ಇಟ್ಟುಕೊಂಡರು. ನಾನು ಆವೊತ್ತೇ ಹೋಮ್ ಮಿನಿಸ್ಟರ್ಗೆ ಫೋನ್ ಮಾಡಿದ್ದೆ. ಸಂಬಂಧಪಟ್ಟ ಇಲಾಖೆಯವರಿಗೆ ಫೋನ್ ಮಾಡಿದ್ದೆ. ಈಗ ಆ ಕಾಲೇಜನ್ನು ರದ್ದು ಮಾಡಿ. ಆ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಮೇಲೆ ಶೋಷಣೆ ಮಾಡುತ್ತಿರುವಂಥವರ ಮೇಲೆ ತೆಗೆದುಕೊಳ್ಳಬೇಕಲ್ಲಾ. ಇನ್ನೇನು ನೀವು ಚೌಕಾಶಿ ಮಾಡುವುದು ಅದನ್ನು ನಾವು ಕೇಳುತ್ತಿದ್ದೇವೆ.

(ಸಭಾಧ್ಯಕ್ಷರು ಪೀಠವನ್ನಲಂಕರಿಸಿದರು)

ಶ್ರೀಮತಿ ಪ್ರೇಮೀಳ ನೇಸರ್ಗಿ : ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಲೇ ಇಲ್ಲವಲ್ಲಾ.

ಶ್ರೀ ಆರ್ವಿ. ದೇಶಪಾಂಡೆ : ಸದನದಲ್ಲೇ ಕ್ಯಾನ್ಸಲ್ ಆರ್ಡರ್ ಕೊಡಲಿಕ್ಕೆ ಆಗುತ್ತದೆಯೇ? ಕಾಯಿದೆಯಿಂದ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಅವರು ಮತ್ತಿನ್ನೇನು ಹೇಳುತ್ತಾರೆ?

ಅಧ್ಯಕ್ಷರು : ಏನು ವಿಷಯ? ಏಕೆ ಹೀಗಾಡುತ್ತಿದ್ದೀರಿ.

(ಗೊಂದಲ)

ಶ್ರೀ ಸಿ. ಭೈರೇಗೌಡ : ಗಮನ ಸೆಳೆಯುವ ಸೂಚನೆಯ ಬಗ್ಗೆ ನಮ್ಮ ವಸಂತ ಸಾಲಿಯಾನ್ರವರು ಹಾಗೂ ಶ್ರೀ ಸುರೇಶ್ ಕುಮಾರ್ರವರು ಕೇಳಿದರು. ಅದರ ಮೇಲೆ ವ್ಯಾಪಕವಾದ ಚರ್ಚೆ ಶುರುವಾಗಿದೆ.

ಅಧ್ಯಕ್ಷರು : ಅದಕ್ಕೆ ಇವರೆಲ್ಲರೂ ರಿಪ್ಲೈ ಕೊಡುತ್ತಿದ್ದಾರೋ?

ಶ್ರೀ ಆರ್.ವಿ. ದೇಶಪಾಂಡೆ : ನಮ್ಮ ಸ್ನೇಹಿತರಿಗೆ ಇಲ್ಲಿ ಕೈಯಲ್ಲೇ ಕ್ಯಾನ್ಸಲೇಷನ್ ಆರ್ಡರ್ ಬೇಕಾಗಿದೆ. ಅದು ಹೇಗೆ ಸಾಧ್ಯವಿದೆ? ಇಲ್ಲಿ ಕೊಡಲಿಕ್ಕೆ ಸಾಧ್ಯ ಇದೆಯೇ? ಮಾನ್ಯ ಮಂತ್ರಿಗಳು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ.

ಶ್ರೀಮತಿ ಪ್ರೇಮಿಳಾ ನೇಸರ್ಗಿ : ಇದು ವಿದ್ಯಾರ್ಥಿಗಳ ವಿಷಯ. ಎಂಟು ತಿಂಗಳಿಂದ ನೀವು ಕ್ರಮ ತೆಗೆದುಕೊಳ್ಳಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಮುಖ್ಯಮಂತ್ರಿಗಳು ರಿಪ್ಲೈ ಕೊಡುವಾಗ ಅವರಿಗೆ ಡಿಫೆಂಡ್ ಮಾಡಲಿಕ್ಕೆ ಸಚಿವರು ಹಾಗೂ ಸದಸ್ಯರು ಯಾರೂ ಇರುವುದಿಲ್ಲ. ಅನೇಕ ಸಲ ಹಾಗಾಗಿದೆ. ಮೊನ್ನೆ ಜಾಲಪ್ಪನವರು ಕೂಡ ಬರಗಾಲದ ಮೇಲೆ ಮಾತನಾಡುವಾಗ ಅವರ ರೆಸ್ಕ್ಯೂಗೆ ಯಾರೂ ಬರಲಿಲ್ಲ. ಇವೊತ್ತು ಮೆಡಿಕಲ್ ಮೆಡಿಕಲ್ ಎಜುಕೇಷನ್ ಮಿನಿಸ್ಟರ್ ಬಹಳ ಡಿಫೆಂಡ್ ಮಾಡುತ್ತಿದ್ದಾರೆ. ಆದರೆ ಅವರ ಕೈಯಲ್ಲಿ ಸೀಟು ಬಹಳ ಕಡಿಮೆ. ಎಲ್ಲಾ ಸುಪ್ರೀಂ ಕೋರ್ಟ್ನಿಂದ ಡೈರೆಕ್ಟ್ ಆದೇಶ ಬರುವುದರಿಂದ ಯಾವುದೂ ನೇರವಾಗಿ

ಶ್ರೀ ಆರ್.ವಿ. ದೇಶಪಾಂಡೆ : ನಮಗೆ ಮೆಡಿಕಲ್ ಸೀಟ್ ಬೇಕಾದರೆ ಸಚಿವರು ಬೇಡ. ಖರ್ಗೆಯವರೇ ಸಾಕು. ಅವರದ್ದೇ ಒಂದು ಸಂಸ್ಥೆ ಇದೆ. ನಾವು ಅಲ್ಲಿ ತೆಗೆದುಕೊಳ್ಳುತ್ತೇವೆ.

(ಗೊಂದಲ)

ಅಧ್ಯಕ್ಷರು : ಮೆಡಿಕಲ್ ಎಜ್ಯುಕೇಷನ್ ಮಿನಿಸ್ಟರ್ ಬಹಳ ಪವರ್‌ಫುಲ್ ಇದ್ದಾರೆ ಅಂದ ಹಾಗಾಯಿತು.

ಶ್ರೀ ವಸಂತ ವಿ. ಸಾಲಿಯಾನ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಈಗಾಗಲೇ ಉತ್ತರವನ್ನು ಹೇಳಿದ್ದಾರೆ. ಪ್ರಾಮುಖ್ಯವಾದ ವಿಚಾರವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ದಿನಾಂಕ 24.1.1995ನೇ ತಾರೀಖು ಬೆಂಗಳೂರು ವಿಶ್ವವಿದ್ಯಾಲಯ ಸಿಂಡಿಕೇಟ್ ಮೆಂಬರ್‌ರವರು ಲೋಕಲ್ ಎನ್ಕ್ವೈಯರಿ ಬಗ್ಗೆ ಸನ್ಮಾನ್ಯ ಪಿ.ಬಿ. ಸುರೇಶ್‌ರವರ ನೇತೃತ್ವದಲ್ಲಿ ಒಂದು ರಿಪೋರ್ಟ್ ತಯಾರು ಮಾಡಿ ಸರ್ಕಾರಕ್ಕೆ ಕೊಟ್ಟಿದ್ದಾರೆ. ವರದಿಯನ್ನು ಜನವರಿಯಲ್ಲಿ ಕೊಟ್ಟಿದ್ದಾರೆ. ಅಧಿಕಾರಿಗಳು ಮಂತ್ರಿಗಳಿಗೆ ಸುಳ್ಳು ಮಾಹಿತಿಯನ್ನು ಕೊಡುತ್ತಾರೆ. ಈ ರಿಪೋರ್ಟ್ ಕೊಟ್ಟು ಸುಮಾರು ಏಳು ತಿಂಗಳಾಯಿತು. ಆ ಕಾಲೇಜಿನವರು ಏಳು ತಿಂಗಳಿಂದ ಮೋಸ ಮಾಡುತ್ತಿದ್ದಾರೆ. ಏಳು ತಿಂಗಳಿಂದ ಮೋಸ ಮಾಡಿ ಈ ಮೆಡಿಕಲ್ ಡೈರೆಕ್ಟರ್‌ರವರು ಮೊನ್ನೆ ಪುನಃ ಆ ಕಾಲೇಜಿಗೆ ವಿಸಿಟ್ ಮಾಡಿದ್ದಾರೆ. ಅದೇ ದಿನ ನಾನು ಕೂಡ ದಿನಾಂಕ 24.8.1995 ಮತ್ತು 21ನೇ ತಾರೀಖು ವಿಸಿಟ್ ಮಾಡಿದ್ದೇನೆ. ಡೈರೆಕ್ಟರ್‌ರವರು ತಮಗೆ ಮೋಸ ಮಾಡುತ್ತಿದ್ದಾರೆ. ಅವರು ಈಗಾಗಲೇ ಹಿಂದಿನ ಸರ್ಕಾರಕ್ಕೆ ಮೋಸ ಮಾಡಿದ್ದಾರೆ. ಅದೇ ರೀತಿ ಈ ಸರ್ಕಾರಕ್ಕೂ ಮೋಸ ಮಾಡುತ್ತಿದ್ದಾರೆ. ಇದು 150 ವಿದ್ಯಾರ್ಥಿಗಳ ವಿಚಾರ. ಅವರ ಭವಿಷ್ಯದ ವಿಚಾರ ಆದ್ದರಿಂದ. ಮೊನ್ನೆ 21.8.95ರಂದು ಪರೀಕ್ಷೆಗಳು ಇದ್ದವು. ಅಂದು ಅವರು ಪರೀಕ್ಷೆಗೆ ಕುಳಿತುಕೊಳ್ಳಲಿಲ್ಲ. ಯಾವ ವಿದ್ಯಾರ್ಥಿಯೂ ಪರೀಕ್ಷೆಗೆ ಕುಳಿತುಕೊಳ್ಳಲಿಲ್ಲ, ಏಕೆಂದರೆ ಅವರಿಗೆ ಪಾಠ ಪ್ರವಚನ ಆಗಲಿಲ್ಲ, ಪ್ರಾಕ್ಟಿಕಲ್ಗಳಿಗೆ ಡೆಂಟಲ್ ಚೇರ್ ಇಲ್ಲ, ಲೈಬ್ರರಿ ಇಲ್ಲ, ಕ್ಲಾಸ್ ರೂಮ್ಗಳನ್ನು ಇವೊತ್ತು ಲಾಕ್ ಮಾಡಿ ಇಟ್ಟಿದ್ದಾರೆ. College itself is locked. It is a business centre. ಅಲ್ಲಿ ಏನೂ ನಡೆಯುತ್ತಿಲ್ಲ, ಮಾನ್ಯ ಸುರೇಶ್‌ರವರು ಹೇಳಿದ ಹಾಗೆ ಇದೊಂದು ಬಿಸನೆಸ್ ಸೆಂಟರ್ ಆಗಿದೆ. ಆದಕಾರಣ ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ ತಕ್ಷಣ ಇದನ್ನು ಪರಿಶೀಲಿಸಿ ಈ ಕಾಲೇಜನ್ನು ಮುಚ್ಚಬೇಕು. ಮತ್ತು 150 ವಿದ್ಯಾರ್ಥಿಗಳಿಗೆ ಬೇರೆ ಕಡೆ ಪರೀಕ್ಷೆಗೆ ಕುಳಿತುಕೊಳ್ಳಲು ವ್ಯವಸ್ಥೆ ಮಾಡಿಕೊಡಬೇಕು.

3.40 ಪಿ.ಎಂ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳು ಮದ್ರಾಸ್ನಿಂದ ಬಂದ ಮೇಲೆ ಆ ಕಡೆಯವರು ಬಹಳ ಹುರುಪಿನಲ್ಲಿದ್ದಾರೆ. ಏಕೋ ಏನೋ ಗೊತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೇ, ಇದು ತುಂಬಾ ಅನ್ಯಾಯ, ಏಕೆಂದರೆ ನಾನು ಕಿವಿಯಲ್ಲಿ ಕೇಳಿದೆ, ಅವರು ಮುಖ ಒಣಗಿಸಿಕೊಂಡು, ಕಪ್ಪಾಗಿ, ಬೇಸರದಿಂದ ಸಿಟ್ಟುಮಾಡಿಕೊಂಡು ಕೂತಿದ್ದಾರೆ. ಆದರೆ ಖರ್ಗೆಯವರು ಸಂತೋಷವಾಗಿ ಮದ್ರಾಸ್ನಿಂದ ಬಂದಿದ್ದಾರೆ ಎಂದು ಹೇಳುತ್ತಿದ್ದಾರೆ. ಆದರೆ ನಿಜವಾಗಿ ಅವರು ತುಂಬಾ ನೊಂದುಕೊಂಡು ಬಂದಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಖರ್ಗೆಯವರು ಹೇಳುವುದರಲ್ಲಿ ಸ್ವಲ್ಪ ಸತ್ಯವಿದೆ, ಆ ಕಡೆಯವರೆಲ್ಲಾ ಹುರುಪಿನಲ್ಲಿದ್ದಾರೆ, ಅದು ನಿಜ. ಆದರೆ ಮುಖ್ಯಮಂತ್ರಿಗಳು ಹುರುಪಿನಲ್ಲಿ ಇಲ್ಲ, ಕಾರಣ ಏನು ಎನ್ನುವುದೇ ಬಹಳ ದೊಡ್ಡ ಸಮಸ್ಯೆಯಾಗಿರುವುದು. ಇವರೆಲ್ಲಾ ಒಂದಾಗಿಬಿಟ್ಟಿದ್ದಾರೋ ಹೇಗೆ. ಏಕೆಂದರೆ ಇವರು ಬಹಳ ಹುರುಪಿನಲ್ಲಿದ್ದಾರೆ, ಆದರೆ ಮುಖ್ಯಮಂತ್ರಿಗಳು ಹುರುಪಿನಲ್ಲಿಲ್ಲ, ನಾನು ನೋಡುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ಸುರೇಶ್ರವರೇ, ಈಗಾಗಲೇ ವಸಂತ್ರವರು ಕವರ್ ಮಾಡಿರುವುದನ್ನು ಬಿಟ್ಟು ಬೇರೆ ಅಂಶಗಳು ಇದ್ದರೆ ಹೇಳಿ

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೇ, ಈ ಲೋಕಲ್ ಎನ್ಕ್ವೈರಿ ಕಮಿಟಿ ಡಾ|| ಶ್ಯಾಮಲಾ ರೆಡ್ಡಿ ಡೆಂಟಲ್ ಕಾಲೇಜಿನ ಬಗ್ಗೆ ವರದಿಯನ್ನು ಸಲ್ಲಿಸಿದ್ದು ದಿನಾಂಕ 24-01-1995ರಂದು. ಆದರೆ ಇದುವರೆಗೂ ಆ ಕಾಲೇಜಿನ ಮೇಲೆ ಕ್ರಮ ತೆಗೆದುಕೊಂಡಿಲ್ಲ, ಆದರೆ ಟೈಮ್ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ದಿನಾಂಕ 17-2-95ರಂದು ಸೇವಾಲಯ ಕಾಲೇಜ್ ಆಫ್ ಡೆಂಟಲ್ ಸೈನ್ಸಸ್ ಅಂಡ್ ಹಾಸ್ಪಿಟಲ್ ಬಗ್ಗೆಯೂ ಒಂದು ರಿಪೋರ್ಟನ್ನು ಕೊಟ್ಟರು.

"Compared to this Dr. Shamala Reddy College, Sevalaya College management people are angels."

ಬಹಳಷ್ಟು ಕೆಲಸಗಳನ್ನು ಮಾಡಿದ್ದಾರೆ. ಆ ಕಾಲೇಜನ್ನು ಇವೊತ್ತು ಡೀ-ರೆಕಗ್ನೈಸ್ ಮಾಡಿದ್ದಾರೆ. one of those seven colleges why not this Shamala Reddy college? ಎರಡನೆಯದಾಗಿ ಆ ಎನ್ಕ್ವೈರಿ ಕಮಿಟಿಯವರು ಹೇಳುತ್ತಾರೆ.

"The management is running its college in a residential dwelling house which is in no way adequate and proper to run a professional course like B.D.S."

This is since 1991.

"The Committee is very much unhappy of the college and its running this course in such a bad environment. There are no adequate space for classrooms, Principal room. library, laboratories as per the norms of the Dental Council of India and also University. The Principal was appointed one day earlier to the visit of L.E.C."

ಮಾನ್ಯ ಸಭಾಧ್ಯಕ್ಷರೇ, ಈ ಎಲ್.ಐ.ಸಿ. ಯವರು ಹೋಗುವುದು ಇವರಿಗೆ ಗೊತ್ತಾಯಿತು, ಲೋಕಾಯುಕ್ತ ಕಮಿಟಿಗೆ, ಆದ್ದರಿಂದ ಒಂದು ದಿವಸ ಮುಂಚಿತವಾಗಿ ಈ ಪ್ರಿನ್ಸಿಪಾಲ್ರನ್ನು ಸೇರಿಸಿಕೊಂಡರು. ಇವೊತ್ತಿನ ದಿವಸ ಅವರನ್ನೂ ಕೂಡ ಬಿಡಿಸಿ ಕಳುಹಿಸಿಬಿಟ್ಟಿದ್ದಾರೆ.

"The resume of the incharge Principal and the appointment orders were not produced to the Committee."

ಅಧ್ಯಕ್ಷರು : ಬಿಡಿ, they are totally bad. I am convinced. What would the Hon. Minister say? ಏನು ಸರ್ಕಾರಿ ಕಾಲೇಜ್ ಅಲ್ಲ, ಬಹಳ ತೀರಾ ಕೆಟ್ಟದಾಗಿದೆ ಎಂದು ಸದಸ್ಯರೆಲ್ಲಾ ಬಹಳ ಗಟ್ಟಿಯಾಗಿ ಹೇಳುತ್ತಿದ್ದಾರೆ. Why do you worry to defend them? ಏನದು ?

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಈ ವಿಷಯ ಅರ್ಧ ಗಂಟೆಯ ಕಾಲಾವಧಿಗಿಂತಲೂ ಹೆಚ್ಚಾಗಿ ಚರ್ಚೆಯಾಗುತ್ತಿದೆ. ಅವರೂ ಮಾತನಾಡುತ್ತಾರೆ, ಇವರೂ ಮಾತನಾಡುತ್ತಾರೆ, ಈಗಾಲೇ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ದಯವಿಟ್ಟು ಮಂತ್ರಿಗಳು ಉತ್ತರ ಪುನಃ ಕೊಡುತ್ತಾರೆ. ಏಕೆಂದರೆ ಯಾವುದಾದರೂ ಒಂದು ಮುಕ್ತಾಯ ಆಗಲಿ ಎಂದು ನಾನು ಹೇಳುತ್ತಿದ್ದೇನೆ.

Mr. Speaker : I will close it now. ಒಂದು ನಿಮಿಷ ನಾನು ಹೇಳುತ್ತೇನೆ. ಈಗ ಸನ್ಮಾನ್ಯ ಸದಸ್ಯರುಗಳ ಭಾವನೆ ಏನು ಎಂದು ನಾನು ಅರ್ಥವನ್ನು ಮಾಡಿಕೊಂಡಿದ್ದೇನೆ. ಈಗ ಸನ್ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ಅದನ್ನು ಕೇಳೋಣ. ಆಮೇಲೆ ಮುಂದೆ ನೋಡೋಣ.

ಶ್ರೀ ಎ.ಬಿ. ಪಾಟೀಲ್ : ಮಾನ್ಯ ಸದಸ್ಯರು ಇವೊತ್ತು ಈ ಬಗ್ಗೆ ಕೇಳಿದ್ದಾರೆ. ಇದಾದನಂತರ ಬೆಂಗಳೂರು ಯೂನಿವರ್ಸಿಟಿಯವರು ಮತ್ತೊಂದು ಕಮಿಟಿಯನ್ನು ರಚನೆ ಮಾಡಿ ಅದರಿಂದ ರಿಪೋರ್ಟ್ ತರಿಸಿಕೊಳ್ಳುವುದಕ್ಕೆ ಈಗಾಗಲೇ ಪ್ರಯತ್ನ ಮಾಡಿದ್ದಾರೆ. ನಾವೂ ಕೂಡ ಇವೊತ್ತು ನಮ್ಮ ಇಲಾಖೆಯಿಂದ ಪರಿಣಿತರ ಸಮಿತಿಯನ್ನು ರಚಿಸಿ ಈ ಬಗ್ಗೆ ವಿಚಾರಣೆಯನ್ನು ಮಾಡುತ್ತಿದ್ದೇವೆ. As per the norms of the Dental Council of India, ಎಲ್ಲಾ ಸೌಲಭ್ಯಗಳು ಇರಬಹುದೆಂದು ಡೆಂಟಲ್ ಕೌನ್ಸಿಲ್ ಆಫ್ ಇಂಡಿಯಾದವರು ಪರ್ಮಿಷನ್ ಕೊಟ್ಟು ಬಿಟ್ಟಿದ್ದಾರೆ. ಇವೊತ್ತು ಸರ್ಕಾರ ಮತ್ತೊಂದು ಬಾರಿ ಡೆಂಟಲ್ ಕೌನ್ಸಿಲ್ ಆಫ್ ಇಂಡಿಯಾದವರನ್ನು ಕೇಳಿಕೊಳ್ಳುತ್ತಿದ್ದೇವೆ, ಅದೇನೆಂದರೆ ಈ ಶ್ಯಾಮಲಾರೆಡ್ಡಿ ಕಾಲೇಜನ್ನು ತಾವು ಪುನಃ ಬಂದು ಎನ್ಕ್ವೈರಿ ಮಾಡಿ, ಇನ್ಫ್ರಾಸ್ಟ್ರಕ್ಚರೆಲ್ಲವನ್ನೂ ನೋಡಿ ಮತ್ತೊಮ್ಮೆ ರಿಪೋರ್ಟನ್ನು ಕೊಡಬೇಕು ಎಂದು ಕೇಳುತ್ತಿದ್ದೇವೆ. ಈಗ ನಾನು ಹೇಳುವುದೇನೆಂದರೆ, ಕಾನೂನು ಚೌಕಟ್ಟಿನಲ್ಲಿ ಒಂದು ವೇಳೆ ಈ ಕಾಲೇಜ್ನಲ್ಲಿ ಇನ್ಫ್ರಾಸ್ಟ್ರಕ್ಚರ್, ಸೌಲಭ್ಯಗಳು ಇಲ್ಲದೇ ಇದ್ದಲ್ಲಿ ಅಗತ್ಯವಾಗಿ ನಾವು ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಮಾನ್ಯ ಸಹೋದರಿಯವರು ಮತ್ತು ಸದಸ್ಯರು ಹೇಳಿದರು, ಇಲ್ಲಿ ಪರೀಕ್ಷೆ ಕೂಡಲಿಕ್ಕೆ ಇಲ್ಲಿ ಏನು ಸೌಕರ್ಯಗಳಿಲ್ಲ ಎಂದು ಹೇಳಿದರು. ಪರೀಕ್ಷೆಗೆ ಕೂಡಲಿಕ್ಕೆ ಅಲ್ಲಿ 7-8 ಜನ ಗೂಂಡಾ ಹುಡುಗರು ಇದ್ದಾರೆ. ಪೋಲೀಸ್ನವರು ಇವೊತ್ತು ಅವರನ್ನು ಅರೆಸ್ಟ್ ಮಾಡಿದ್ದಾರೆ. ಆ ಕಾಲೇಜಿನ ಎಲ್ಲಾ ವಿದ್ಯಾರ್ಥಿಗಳನ್ನು ಮತ್ತು ಪ್ರೊಫೆಸರ್ಗಳನ್ನು ಮತ್ತು ಪ್ರಿನ್ಸಿಪಾಲ್ರನ್ನು ಇವರು ಸಾಕಷ್ಟು ಬಡಿಯುತ್ತಿದ್ದಾರೆ. ಅದರ ಮೇಲೆ ಪೋಲೀಸ್ ಚೌಕಾಶಿ ಕೂಡ ನಡೆಯುತ್ತಿದೆ. ಇವೊತ್ತು ಆ ಕಾಲೇಜಿನ ಪ್ರೊಫೆಸರ್ ಸ್ಟಾಫ್, ಲೆಕ್ಚರರ್ಸ್ ಇವರೆಲ್ಲಾ ಕೂತು ಚರ್ಚೆ ಮಾಡಿ ಹೇಳಿದ್ದಾರೆ ಮತ್ತು ಸರ್ಕಾರಕ್ಕೆ ಕೂಡ ಕೆಲವು ಹೆಸರುಗಳನ್ನು ಕೊಟ್ಟಿದ್ದಾರೆ, ಬೇಕಾದರೆ ಆ ಪಟ್ಟಿಯನ್ನು ಸದಸ್ಯರಿಗೆ ಕೊಡುತ್ತೇನೆ ಅವರು ಚೌಕಾಶಿ ಮಾಡಲಿ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೇ, ಆ ಕಾಲೇಜಿಗೆ ಸಿ.ಇ.ಟಿ. ಯಿಂದ ಅಲಾಟ್ ಆದ ಹುಡುಗರಿಗೆ ಇವೊತ್ತು ಗೂಂಡಾಗಳು ಎಂದು ಇವರು ಬಿರುದು ಕೊಟ್ಟಿದ್ದಾರೆ. ಇಂಗ್ಲೀಷ್ನಲ್ಲಿ 'Call the dog mad and hang it.' ಎಂದ ಹಾಗೆ.

ಅಧ್ಯಕ್ಷರು : ದಯವಿಟ್ಟು ಒಂದು ಮಾತನ್ನು ನೀವು ಅರ್ಥ ಮಾಡಿಕೊಳ್ಳಿ. ಇದು ಒಂದು ಖಾಸಗೀ ಕಾಲೇಜ್. ನೀವು ಅತ್ಯಂತ ಉಗ್ರವಾಗಿ ಆ ಕಾಲೇಜಿನಲ್ಲಿ ನಡೆಯುತ್ತಿರುವ ಅವ್ಯವಹಾರಗಳ ಬಗ್ಗೆ ಈ ಸದನದಲ್ಲಿ ಗಮನವನ್ನು ಸೆಳೆದಿದ್ದೀರಿ. ಮಂತ್ರಿಗಳೂ ಕೂಡ ತಮ್ಮ ಇತಿಮಿತಿಯೊಳಗೆ ಏನೆಲ್ಲಾ ಪ್ರಯತ್ನವನ್ನು ಮಾಡುತ್ತಿದ್ದೇವೆ, ಏನು ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿ ಯಾವ ಮುಚ್ಚುಮರೆಯಿಲ್ಲದೆ ಮುಲಾಜಿಲ್ಲದೆ ಹೇಳಿದ್ದಾರೆ. ನೀವು ಬಹಳ ಜೋರಾಗಿ ಮಾತನಾಡಿದರೆ, ಅವರೇನೋ

ಡಿಫೆಂಡ್ ಮಾಡುವುದಕ್ಕೆ ಹೋಗುತ್ತಿದ್ದೀರೇನೋ ಎನ್ನುವಂಥ ಅಭಿಪ್ರಾಯ ಬರುತ್ತದೆ. ಆ ರೀತಿ ಏನೂ ಕಾಣುತ್ತಿಲ್ಲ. ನೀವು ದಯಮಾಡಿ ಒಂದು ತಿಂಗಳೊಳಗಾಗಿ ಈ ಸಂಸ್ಥೆಯ ವಿಚಾರಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ, ಈ ಸಂಸ್ಥೆ ಉಳಿಯಬೇಕೇ ಅಥವಾ ಈ ಸಂಸ್ಥೆಯಲ್ಲಿರುವ ಮಕ್ಕಳನ್ನೆಲ್ಲಾ ಬೇರೆ ಎಲ್ಲಿಗಾದರೂ ಕಳುಹಿಸಬೇಕೇ, ಅವರು ನಿಮ್ಮ ನಾರ್ಮ್ಸ್ ಪ್ರಕಾರ ಇಲ್ಲದೇ ಇದ್ದರೆ ಅದನ್ನು ಡೀ-ರೆಕಗ್ನೈಸ್ಮಾಡುವುದಕ್ಕೆ ಏನೆಲ್ಲಾ ವ್ಯವಸ್ಥೆ ಮಾಡಬೇಕೋ within a month's time you please complete your process of enquiry and come back to the House.

Sri S. Suresh Kumar : Director of Medical Education...

ಅಧ್ಯಕ್ಷರು : ಏನು, ಏನಿದೆ?

ಶ್ರೀ ಎಸ್. ಸುರೇಶ್ ಕುಮಾರ್ : ಈ ವಿಚಾರಗಳೆಲ್ಲಾ 1991ನೇ ಇಸವಿಯಿಂದಲೂ ಕೂಡ ಅವರಿಗೆ ಗೊತ್ತಿದೆ. ಈಗ ಇವರು...

ಅಧ್ಯಕ್ಷರು : ಅದನ್ನು ಹೆಲ್ತ್ ಡಿಮ್ಯಾಂಡ್ಸ್ ಬಂದಾಗ ಮಾತನಾಡೋಣ. This is a Calling Attention. So, you have drawn the attention of the Government confining to the happenings in the college. If you want to discuss and debate about all those things, we are taking up in the Demand. You can participate in the discussion. You cannot discuss all matters under the sun in the Calling Attention.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರದೊಂದೇ ಪಾಯಿಂಟ್, ಅವರು ರಕ್ಷಣೆ ಕೊಡುತ್ತಿದ್ದಾರೆ.

ಅಧ್ಯಕ್ಷರು : ಯಾರಿಗೆ? Including that ತಿಳಿಸಲಿ . ಅವರು If the authorities have failed, if the Director of Medical Education, if he or she has failed in her or his duties, that also will be reported to the House. ಅದನ್ನು ತಿಳಿದುಕೊಂಡು ಬಂದು ಹೇಳುತ್ತಾರೆ. Let us give them some time also. He will report to the House.

ಈಗಲೇ ಎಂದು ಕೇಳಿದರೆ ಹೇಗೆ ಅವರು ಮಾಡುತ್ತಾರೆ. ಒಂದು ತಿಂಗಳು ಕಾಲಾವಕಾಶ ಕೊಡೋಣ. You please come back with a proper and fair report to the House within a month's time.

ನಿಯಮ 351ರ ಮೇಲೆ

(i) ರಾಜ್ಯದಲ್ಲಿ ವಿಧವಾ ವೇತನ ತಾಲ್ಲೂಕು ಕಚೇರಿಗಳಿಗೆ ತಲುಪದೆ ಸಾರ್ವಜನಿಕರಿಗೆ ತೊಂದರೆ

ಶ್ರೀಮತಿ ಎನ್. ಜ್ಯೋತಿ ರೆಡ್ಡಿ (ಗೌರಿಬಿದನೂರು) : ಸನ್ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ವಿಧವಾ ವೇತನ ಕಳೆದ 8 ತಿಂಗಳಿಂದ ತಾಲ್ಲೂಕು ಕಚೇರಿಗಳಿಗೆ ಕಳುಹಿಸದೆ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತಿದೆ. ಈ ಬಗ್ಗೆ ಸರ್ಕಾರದ ಗಮನ ಹರಿಸಿ ಹಣ ಬಿಡುಗಡೆ ಮಾಡುವುದಕ್ಕೆ ಕ್ರಮ ಕೈಗೊಳ್ಳಬೇಕಾಗಿ ಕೋರುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) : ರಾಜ್ಯದ 20 ಜಿಲ್ಲೆಗಳ ಒಟ್ಟು ಸುಮಾರು 4.58 ಲಕ್ಷ ನಿರ್ಗತಿಕ ವಿಧವೆಯರ ಮಾಸಾಶನಗಳ ಪಾವತಿಗೆ ಸಂಬಂಧಪಟ್ಟ ಮನಿಯಾರ್ಡರ್ ನಮೂನೆಗಳನ್ನು ಇದುವರೆವಿಗೂ ಗಣಕೀಕರಣದ

ಮೂಲಕ ಬೆಂಗಳೂರಿನ ಖಜಾನೆ ಕೇಂದ್ರದಲ್ಲಿ ಗುರುತಿಸಿ ಜಿಲ್ಲಾ ಮತ್ತು ತಾಲ್ಲೂಕು ಖಜಾನೆಗಳ ಹಂತದಲ್ಲಿ ಅಂಚೆ ಕಛೇರಿಗಳ ಮೂಲಕ ಪಾವತಿ ಮಾಡಲಾಗುತ್ತಿದೆ. ಸದರಿ ಗಣಕ ಕೇಂದ್ರದ ಗಣಕೀ ಯಂತ್ರವು ಒಮ್ಮಿಂದೊಮ್ಮೆಲೇ ಕೆಟ್ಟು ಹೋದ ಕಾರಣ ಮಾರ್ಚ್ 95ರಲ್ಲಿ ಸರ್ಕಾರೀ ತಾಂತ್ರಿಕ ಸಲಹಾ ಸಮಿತಿಯು ನೀಡಿದ ಅನುಮೋದನೆಯ ಮೇರೆಗೆ ಮೇ 1995ರಲ್ಲಿ ಸದರಿ ನೂತನ ಗಣಕ ಯಂತ್ರವನ್ನು ಖರೀದಿಸಿ ಸಾಗಿಸಲಾತು. ಅಂದಿನಿಂದ ಬಾಕಿಯಾದ ಜನವರಿ 1995ರಿಂದ ಜೂನ್ 1995ರ ವರೆಗಿನ ಆರು ತಿಂಗಳ ಬಾಕಿ ಪಾವತಿಯ ಮನಿಯಾರ್ಡರ್ ನಮೂನೆಗಳನ್ನು ಕೂಡಲೇ ಮುದ್ರಿಸಿ ಜುಲೈ 1995 ರೊಳಗಾಗಿ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕುಗಳಿಗೆ (ಕಛೇರಿಗಳಿಗೆ) ಕಳುಹಿಸಿ ಅಂಚೆ ಕಛೇರಿಯ ಮೂಲಕ ಪಾವತಿಸುವ ಏರ್ಪಾಡು ಮಾಡಲಾಗಿದೆ. ಜುಲೈ ಮತ್ತು ಆಗಸ್ಟ್ 1995ರ ಎರಡು ತಿಂಗಳುಗಳ ಮುಂದಿನ ಬಾಕಿ ಕುರಿತಂತೆ ಮನಿಯಾರ್ಡರ್ ನಮೂನೆಗಳನ್ನು ಆಗಸ್ಟ್ 1995ರಲ್ಲಿ ಒಂದೇ ಕಂತಿನಲ್ಲಿ ಮುದ್ರಿಸಿ ಈಗಾಗಲೇ ಮುಂಚಿತವಾಗಿ ಎಲ್ಲಾ ಜಿಲ್ಲಾ ಖಜಾನೆಗಳಿಗೆ ಕಳುಹಿಸಲಾಗಿದೆ. ಈ ಮನಿಯಾರ್ಡರ್ಗಳು ಬಹುತೇಕ 1995ರ 9ನೇ ತಿಂಗಳ ನಂತರವೇ ಪಾವತಿಯಾಗಬೇಕಾಗಿರುತ್ತದೆ. ಈಗ ಖಜಾನೆ ಗಣಕ ಕೇಂದ್ರದ ಗಣಕ ಯಂತ್ರವು ಸುಸ್ಥಿತಿಯಲ್ಲಿ ನಿರ್ವಹಿಸುತ್ತಿದೆಯಾದ್ದರಿಂದ ಇನ್ನು ಮುಂದಿನ ಯಾವುದೇ ಪಾವತಿಗಳನ್ನು ಬಾಕಿಯಾಗದಂತೆ ನೋಡಿಕೊಳ್ಳಲಾಗುವುದು.

(ii) ಸರ್ಕಾರಿ ನೌಕರರಿಗೆ ವಾಹನ ಮುಂಗಡ ಹಣ ಬಿಡುಗಡೆಯಾಗದಿರುವ ಬಗ್ಗೆ

ಶ್ರೀ ಮಂಜುನಾಥ ಸಿ. ಕುನ್ನೂರ್ : ಮಾನ್ಯ ಅಧ್ಯಕ್ಷರೇ, ರಾಜ್ಯ ಸರ್ಕಾರೀ ನೌಕರರಿಗೆ ವಾಹನ ಮುಂಗಡ ಹಣಕ್ಕಾಗಿ ಕೋರಿ ವಿವಿಧ ಇಲಾಖೆಗಳಿಂದ ಆರ್ಥಿಕ ಇಲಾಖೆಗೆ ಮಾರ್ಚಿ ತಿಂಗಳಿನಲ್ಲಿಯೇ ಮನವಿಗಳನ್ನು ಸಲ್ಲಿಸಲಾಗಿದ್ದು, ಈವರೆವಿಗೂ ಈ ಹಣವನ್ನು ಬಿಡುಗಡೆ ಮಾಡಲು ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ. ಇದಕ್ಕೆ ಕಾರಣಗಳೇನು ?

ಶ್ರೀ ಆರ್.ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) : ನಾನು ಹಣಕಾಸಿನ ಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಕೊಡುತ್ತಿದ್ದೇನೆ. ಕಳೆದ ವರ್ಷದ 1994-95ನೇ ಸಾಲಿನಲ್ಲಿ 314.45 ಲಕ್ಷ ರೂ.ಗಳನ್ನು ವಾಹನಗಳಿಗಾಗಿ ಕೊಡಲಾಗಿದೆ. ಈ ವರ್ಷ ಮುಂಗಡ ಪತ್ರದಲ್ಲಿ ಸಾಕಷ್ಟು ಹಣ ಇದೆ. ವಾಹನಗಳ ಮುಂಗಡಕ್ಕಾಗಿ ಅರ್ಜಿ ಇಲಾಖೆ ಮುಖಾಂತರ ಏನು ಬರುತ್ತಿವೆ ಆ ಪ್ರಕಾರ ಹಣದ ಮಂಜೂರು ಆಗುತ್ತಿದೆ. ಯಾವ ಪ್ರಕರಣದಲ್ಲಿ ಹಣ ಮಂಜೂರು ಆಗಿಲ್ಲವೆಂದು ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದರೆ ಅದರ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು.

(iii) ಸಿರಾ ತಾಲ್ಲೂಕಿನ ಬುಕ್ಕಾ ಪಟ್ಟದಲ್ಲಿ ವಿದ್ಯುತ್ ಕೇಂದ್ರದ ಉಪಸ್ಥಾವರ ಸ್ಥಾಪನೆ

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಅಧ್ಯಕ್ಷರೆ, ತುಮಕೂರು ಜಿಲ್ಲೆ ಸಿರಾ ತಾಲ್ಲೂಕಿನ ಬುಕ್ಕಾಪಟ್ನ ಹೋಬಳಿ ಕೇಂದ್ರವಾಗಿದ್ದು, ವಿದ್ಯುತ್ ಅಭಾವದಿಂದ ಜನರು ತೀವ್ರತರ ತೊಂದರೆ ಅನುಭವಿಸುತ್ತಿದ್ದು ಅಲ್ಲಿ ಒಂದು ವಿದ್ಯುತ್ ಕೇಂದ್ರದ ಉಪ ಸ್ಥಾವರ ಮಂಜೂರಾತಿಗಾಗಿ ಅನೇಕ ಮನವಿಗಳನ್ನು ಸಲ್ಲಿಸಿದಾಗ್ಯೂ ಅದು ಕಾರ್ಯಗತವಾಗಿರುವುದಿಲ್ಲ. ಕೂಡಲೇ ಉಪ ಮುಖ್ಯಮಂತ್ರಿಗಳು ಅದರ ಕಡೆ ಗಮನಹರಿಸಿ ಉಪಸ್ಥಾವರವನ್ನು ಇದೇ ವರ್ಷದಲ್ಲಿ ಮಂಜೂರಾತಿ ಕಾರ್ಯವನ್ನು ಕೈಗೆತ್ತಿಕೊಳ್ಳಲು ಆಶ್ವಾಸನೆ ನೀಡುವಿರಾ?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) : ಶಿರಾ ತಾಲ್ಲೂಕಿನ ಬುಕ್ಕಾಪಟ್ಟಣದಲ್ಲಿ ಒಂದು 66:11 ಕೆ.ವಿ. 18 6.3 ಎಂ.ವಿ.ಎ., ವಿದ್ಯುತ್ ಉಪ ಕೇಂದ್ರವನ್ನು ನಿರ್ಮಾಣ ಮಾಡಲು ಮಂಡಳಿಯ ತಾಂತ್ರಿಕ ಸಮಿತಿಯು ಜೂನ್ 95ರಲ್ಲಿ ಅನುಮೋದನೆ ನೀಡಿದೆ. ನಿರ್ಮಾಣ ಕಾರ್ಯಗಳಿಗೆ ತಗಲುವ ಒಟ್ಟು ಅಂದಾಜು ವೆಚ್ಚ 156.5 ಲಕ್ಷ ರೂ. ಪ್ರಾರಂಭಿಕ ಕೆಲಸಗಳಿಗಾಗಿ ಪ್ರಸಕ್ತ ಸಾಲಿನ (1995-96)ರ ಆಯವ್ಯಯದಲ್ಲಿ 20 ಲಕ್ಷ ರೂ.ಗಳನ್ನು ಒದಗಿಸಿದೆ. ವಿವರವಾದ ಯೋಜನಾ ವರದಿಯನ್ನು ತಯಾರಿಸಲಾಗಿದ್ದು, ಮಂಡಳಿಯ ಆಡಳಿತಾತ್ಮಕ ಮಂಜೂರಾತಿಯನ್ನು ಪಡೆಯಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈ ವಿದ್ಯುತ್ ಉಪಕೇಂದ್ರದ ನಿರ್ಮಾಣಕ್ಕೆ ಬೇಕಾಗುವ ಭೂಮಿಯು ಲಭ್ಯವಿದೆ. ಈ ವಿದ್ಯುತ್ ಉಪಕೇಂದ್ರಕ್ಕೆ ಹಿರಿಯೂರು - ಶಿರಾ 66 ಕೆ.ವಿ. ವಿದ್ಯುತ್ ಲೈನಿನಿಂದ ಸುಮಾರು 16 ಕಿ.ಮೀ. ಉದ್ದದ ಟ್ಯಾಪ್ಲೈನನ್ನು ನಿರ್ಮಾಣ ಮಾಡಬೇಕಾಗಿದ್ದು, ಇದರ ಸಮೀಕ್ಷೆ (ಸರ್ವೆ) ಕಾರ್ಯವನ್ನು ಶೀಘ್ರದಲ್ಲೇ ತೆಗೆದುಕೊಳ್ಳಲಾಗುವುದು. ಡಿಸೆಂಬರ್ 96ರ ಅಂತ್ಯದ ವೇಳೆಗೆ ಪೂರ್ಣಗೊಳಿಸುವ ಗುರಿ ಹೊಂದಿದೆ.

(iv) ತುಳು ಮತ್ತು ಕೊಂಕಣಿ ಅಕಾಡೆಮಿಗಳಿಗೆ ಅನುದಾನ

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಸುಮಾರು 26 ಲಕ್ಷ ತುಳು ಮಾತೃ ಭಾಷೆಯನ್ನು ಮಾತನಾಡುವ ಕನ್ನಡಿಗರು, ಮತ್ತು ಅಷ್ಟೇ ಸಂಖ್ಯೆಯಲ್ಲಿ ಕೊಂಕಣಿ ಮಾತೃ ಭಾಷೆಯನ್ನು ಮಾತನಾಡುವ ಕನ್ನಡಿಗರು ಇರುವುದರಿಂದ ಈಗಾಗಲೇ ಹಲವು ಶ್ರೇಷ್ಠ ತುಳು ಸಾಹಿತ್ಯ ಹಾಗೂ ಕೊಂಕಣಿ ಸಾಹಿತ್ಯದಲ್ಲಿ ಪ್ರತಿಗಳು ಪ್ರಕಟಣೆ ಆಗಿದ್ದು ಇನ್ನೂ ಹೆಚ್ಚಿನ ಪ್ರೋತ್ಸಾಹ ಕೊಡಬೇಕಾದದ್ದರಿಂದಲೂ ವಿಶ್ವ ತುಳು ಸಮ್ಮೇಳನ ಮತ್ತು ವಿಶ್ವ ಕೊಂಕಣಿ ಸಮ್ಮೇಳವನ್ನು ಸಂಘಟಿಸಿ ಭಾಷೆಯನ್ನು ಇನ್ನಷ್ಟು ಬೆಳಗಿಸಲು ಪ್ರಯತ್ನಿಸುವ ಸಹಕಾರ ಮತ್ತು ಅನುದಾನಳಿಂದ ಕೂಡಿದ ಪ್ರೋತ್ಸಾಹವನ್ನು ಕೊಟ್ಟು ಮುಂದುವರಿಸಬೇಕೆಂದು ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಅಧ್ಯಕ್ಷರು : ಇದಕ್ಕೆ ಸಂಬಂಧಪಟ್ಟ ಮಂತ್ರಿಗಳಿಲ್ಲ. ಅವರಿಂದ ನಾನು ಉತ್ತರವನ್ನು ತರಿಸಿಕೊಡುತ್ತೇನೆ. ಮಾನ್ಯ 'ಮಂತ್ರಿಗಳು ಆ ಸದನದಲ್ಲಿದ್ದಾರೆ. ಅವರಿಂದ ಉತ್ತರ ತರಿಸಿ ಕೊಡುತ್ತೇನೆ.

(v) ಕರ್ನಾಟಕ ಸರ್ಕಾರಿ ಸಾಬೂನು ಕಾರ್ಖಾನೆಯ ಪುನರುಜ್ಜೀವನ

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೇ, 1992ರಲ್ಲಿ ಬಿ.ಐ.ಎಫ್.ಆರ್.ನಲ್ಲಿ ನೋಂದಣಿ ಮಾಡಲಾಗಿರುವ ಕರ್ನಾಟಕ ಸರ್ಕಾರೀ ಸಾಬೂನು ಕಾರ್ಖಾನೆಯ ಪುನರುಜ್ಜೀವನವನ್ನು ಕುರಿತು ಇದುವರೆಗೆ ರಾಜ್ಯಸರ್ಕಾರ ಯಾವುದೇ ವರದಿಯನ್ನೂ ಸಲ್ಲಿಸಿಲ್ಲ. 9-8-95ರಂದು ಬಿ.ಐ.ಎಫ್.ಆರ್. ಸಭೆ ನವದೆಹಲಿಯಲ್ಲಿ ನಡೆದಾಗ ಸರ್ಕಾರದ ಕಡೆಯಿಂದ ಯಾವುದೇ ಜವಾಬ್ದಾರಿಯುತ ಅಧಿಕಾರಿ ಅಲ್ಲಿ ಭಾಗವಹಿಸಲಿಲ್ಲ, ಅಲ್ಲಿಯ ನ್ಯಾಯಾಧೀಶರು ಕಳೆದ 3 ವರ್ಷದಿಂದಲೂ ರಾಜ್ಯಸರ್ಕಾರ ಸಬೂಬು ಹೇಳುತ್ತಾ ಬಂದು ಪುನರುಜ್ಜೀವನಗೊಳಿಸುವ ಕುರಿತು ಯಾವುದೇ ವರದಿಯನ್ನೂ ಸಲ್ಲಿಸದೇ ಇರುವ ಬಗ್ಗೆ ತೀವ್ರ ಆಕ್ಷೇಪಣೆಯನ್ನು ವ್ಯಕ್ತಪಡಿಸಿದ್ದಾರೆ. ಆತಂಕ ತರುವ ವಿಚಾರವೆಂದರೆ 2 ತಿಂಗಳೊಳಗಾಗಿ ರಾಜ್ಯಸರ್ಕಾರ ಈ ಕಾರ್ಖಾನೆಯ ಪುನರುಜ್ಜೀವನದ ಬಗ್ಗೆ ವರದಿಯನ್ನು ಸಲ್ಲಿಸದಿದ್ದರೆ ಸಾಬೂನು ಕಾರ್ಖಾನೆಯನ್ನು ಹರಾಜು ಮಾಡಲು ಐ.ಡಿ.ಬಿ.ಐ. ಬ್ಯಾಂಕಿಗೆ ಬಿ.ಐ.ಎಫ್.ಆರ್. ಆದೇಶವನ್ನು ನೀಡಿದೆ. ಈ ಗಂಭೀರ ವಿಚಾರವನ್ನು ಸರ್ಕಾರದ ಗಮನಕ್ಕೆ ತರುತ್ತಾ

ಕರ್ನಾಟಕ ಹೆಮ್ಮೆಯ ಕಾರ್ಖಾನೆಯನ್ನು ಖಾಸಗಿಯವರಿಗೆ ವಹಿಸುವ ಯಾವುದೇ ಪ್ರಯತ್ನವನ್ನೂ ಮಾಡದೆ 2.5 ಕೋಟಿ ರೂ.ಗಳ ಭದ್ರತೆಯನ್ನು ನೀಡಿ ಕಾರ್ಖಾನೆಯನ್ನು ಪುನರುಜ್ಜೀವನಗೊಳಿಸುವ ವರದಿಯನ್ನು ಸಲ್ಲಿಸಬೇಕೆಂದು ನಾನು ಸರಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಸಚಿವರು) : ಮಾನ್ಯ ಅಧ್ಯಕ್ಷರೆ,

ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತವು ಅನುಭವಿಸುತ್ತಾ ಬಂದಿರುವ ಹಾನಿಯಿಂದಾಗಿ 1992ಡಿಸೆಂಬರ್ನಲ್ಲಿ ಬಿ.ಐ.ಎಫ್.ಆರ್.ನಲ್ಲಿ ನೋಂದಾವಣೆ ಮಾಡಬೇಕಾಯಿತು (ಖಟ್ಲೆ 629:92) ಬಿ.ಐ.ಎಫ್.ಆರ್. 1993 ಫೆಬ್ರವರಿ 15ರಂದು ಮೊದಲಿನ ಸಭೆ ಕರೆಯಿತು. ಕಂಪನಿಯು 1993 ನವೆಂಬರ್ 3ರಂದು ಕಳುಹಿಸಿದ ಪುನರ್‌ಸಜ್ಜೀಕರಣ ಪ್ರಸ್ತಾವನೆಯನ್ನು ಪರಿಶೀಲಿಸಿ ಸಮಂಜಸವಾದ ಒಂದು ಪರಿಷ್ಕೃತ ಪ್ರಸ್ತಾವನೆಯನ್ನು ಕಳುಹಿಸುವಂತೆ ತಿಳಿಸಲಾಗಿತ್ತು. ಆ ನಂತರ ಕಂಪನಿಯು ಕಳುಹಿಸಿದ 23-5-1994 ಮತ್ತು 27-6-1994ರ ಪರಿಷ್ಕೃತ ಪುನರುಜ್ಜೀವನ ಯೋಜನೆಯನ್ನು ಸುಧೀರ್ಘವಾಗಿ ಪರಿಶೀಲಿಸಿ ಸರ್ಕಾರವು ಅನುಮೋದನೆ ನೀಡಿದ ಮೇಲೆ ಕಂಪನಿಯ ಮೂಲಕ ಐ.ಡಿ.ಬಿ.ಐ. ಸಂಸ್ಥೆಗೆ (ಆಪರೇಟಿಂಗ್ ಏಜನ್ಸಿ) ದಿನಾಂಕ 29-8-1994ರಂದು ಕಳುಹಿಸಲಾಯಿತು. ಪುನಃ ಸದರಿ ಪ್ರಸ್ತಾವನೆಯನ್ನು ಆಪರೇಟಿಂಗ್ ಏಜನ್ಸಿಯೊಂದಿಗೆ ಸಮಾಲೋಚಿಸಿ ಅದರ ಸಲಹೆಯ ಪ್ರಕಾರ ಪ್ರಸ್ತಾವದಲ್ಲಿ ಕೆಲವು ಬದಲಾವಣೆಗಳನ್ನು ತಂದು ಜೂನ್ 1995ರಲ್ಲಿ ಮತ್ತೆ ಕಳುಹಿಸಲಾಯಿತು. ಈ ರೀತಿ ಕಳುಹಿಸಿದ ಪ್ರಸ್ತಾವನೆಯನ್ನು ಆಮೂಲಾಗ್ರಮವಾಗಿ ಪರಿಶೀಲಿಸಿದ ನಂತರ ಐ.ಡಿ.ಬಿ.ಐ. ತಮ್ಮದೇ ಆದ ಒಂದು ಪ್ರಸ್ತಾವನೆಯನ್ನು ತಯಾರಿಸಿ ದಿನಾಂಕ 4-8-1995ರಂದು ಬೊಂಬಾಯಿಯಲ್ಲಿ ಕಂಪನಿಯ ಅಧಿಕಾರಿಗಳು, ರಾಜ್ಯ ಸರ್ಕಾರದ ಪ್ರತಿನಿಧಿಗಳು ಹಾಗೂ ಹಣಕಾಸು ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿ ಸದರಿ ಪ್ರಸ್ತಾವನೆಯನ್ನು ಬಿ.ಐ.ಎಫ್.ಆರ್. ಮುಂದೆ ಮಂಡಿಸುವ ಕುರಿತು ಚರ್ಚೆ ನಡೆಸಿತು. ಪ್ರಸ್ತಾವನೆಯಲ್ಲಿ ಅಡಕವಾಗಿದ್ದ ಏಕಕಾಲೀನ ಸಂದಾಯದ ನಿಲುವು ಬ್ಯಾಂಕುಗಳಿಗೆ ಒಪ್ಪಿಗೆಯಾಗದ ಕಾರಣ ದಿನಾಂಕ 9-8-1995ರಂದು ನಡೆದ ಬಿ.ಐ.ಎಫ್.ಆರ್.ನ ಹಿಯರಿಂಗ್ನಲ್ಲಿ ಎಲ್ಲರಿಗೂ ಒಪ್ಪಿಗೆಯಾಗುವಂತಹ ಪ್ರಸ್ತಾವನೆಯನ್ನು ಮರು ಮಂಡಿಸುವುದಾಗಿ ತಿಳಿಸಿದ ಮೇರೆಗೆ ಬಿ.ಐ.ಎಫ್.ಆರ್. ಸೆಪ್ಟೆಂಬರ್ 30ರ ಒಳಗೆ ಅಂತಹ ಒಂದು ಯೋಜನೆಯನ್ನು ತಯಾರಿಸಿ ಮಂಡಿಸುವಂತೆ ಸೂಚಿಸಿತು. ಸದರಿ ಸೂಚನೆಗೆ ಅನುಸಾರವಾಗಿ ದಿನಾಂಕ 28-8-1995ರಂದು ಸರ್ಕಾರದ ಮಟ್ಟದಲ್ಲಿ ಸಂಬಂಧಪಟ್ಟ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ತುರ್ತು ಸಭೆ ನಡೆಸಿ ಎಲ್ಲರೂ ಒಪ್ಪುವಂತಹ ಒಂದು ಯೋಜನೆಯನ್ನು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ ಪುನರುಜ್ಜೀವನಗೊಳಿಸುವ ದಿಸೆಯಲ್ಲಿ ತಯಾರಿಸುವ ಬಗ್ಗೆ ತೀರ್ಮಾನಿಸಲಾಯಿತು. ಬಹುತೇಕವಾಗಿ ಬಿ.ಐ.ಎಫ್.ಆರ್. ಆದೇಶದಂತೆ ಸೆಪ್ಟೆಂಬರ್ 30ರ ಒಳಗೆ ಪರಿಷ್ಕೃತ ಪುನರುಜ್ಜೀವನ ಯೋಜನೆಯನ್ನು ಮಂಡಿಸಲು ಕ್ರಮ ಕೈಗೊಳ್ಳಲಾಗುವುದು.

ದಿನಾಂಕ 9-8-1995ರಂದು ನಡೆದ ಬಿ.ಐ.ಎಫ್.ಆರ್. ಹಿಯರಿಂಗ್ನಲ್ಲಿ ಕಂಪನಿಗೆ ನಿಯೋಜನೆಯ ಮೇಲೆ ಇರುವ ಸರ್ಕಾರದ ಹಿರಿಯ ಅಧಿಕಾರಿಯಾದ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರಲ್ಲದೆ ಕರ್ನಾಟಕ ಸ್ಥಳೀಯ ಆಯುಕ್ತರ ಕಛೇರಿಯ ಒಬ್ಬ ಅಧಿಕಾರಿಯೂ ಸಹ ಹಾಜರಿದ್ದರು.

ಶಾಸನ ರಚನೆ

ವಿಧೇಯಕಗಳನ್ನು ಮಂಡಿಸಲು ಅನುಮತಿ

"ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ) (ಎರಡನೇ ತಿದ್ದುಪಡಿ) ವಿಧೇಯಕ 1995.

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) : ಮಾನ್ಯ ಮುಖ್ಯಮಂತ್ರಿಗಳ ಪರವಾಗಿ)

ಮಾನ್ಯ ಅಧ್ಯಕ್ಷರೆ, 1995ನೇ ಸಾಲಿನ ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ) (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ

"1995ರ ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ) (ಎರಡನೇ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) : ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೇ,

1995ರ ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ) (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

"ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) (ಎರಡನೇ ತಿದ್ದುಪಡಿ) ವಿಧೇಯಕ 1995

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ರಾಜ್ ಮಂತ್ರಿಗಳು): ಮಾನ್ಯ ಅಧ್ಯಕ್ಷರೇ

"1995ನೇ ಸಾಲಿನ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ

"1995ರ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) (2ನೇ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ರಾಜ್ ಮಂತ್ರಿಗಳು) ಮಾನ್ಯ ಅಧ್ಯಕ್ಷರೇ

"1995ರ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) (2ನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯುವನ್ನು ಮಂಡಿಸಲಾಗಿದೆ.

3. ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ವಿಧೇಯಕ 1995

ಶ್ರೀ ರಮೇಶ್ ಸಿ. ಜಿಗಜಿಣಗಿ (ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ,

"1995ರ ಸಾಲಿನ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ

"1995ರ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ

"1995ರ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಸಭಾಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

ಕರ್ನಾಟಕ ನಗರ ಪ್ರದೇಶದಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದ್ದುಪಡಿ) ವಿಧೇಯಕವನ್ನು 1995

ಪರ್ಯಾಲೋಚನಾ ಪ್ರಸ್ತಾವ

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಕಾಡಾ ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿ ಸಚಿವರು) : ಮಾನ್ಯ ಅಧ್ಯಕ್ಷರೆ, "1995ರ ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು

+ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಕಾಡಾ ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿ ಸಚಿವರು) : ಮಾನ್ಯ ಅಧ್ಯಕ್ಷರೆ, ಅನಧಿಕೃತ ಕಟ್ಟಡಗಳ ನಿರ್ಮಾಣ ಬಹಳಷ್ಟು ಪಟ್ಟಣಗಳಲ್ಲಿ ಅನೇಕ ವರ್ಷಗಳಿಂದ ನಡೆಯುತ್ತಾ ಬಂದಿದೆ. ಅಂಥವುಗಳನ್ನು ರೆಗ್ಯುಲರೈಸ್ ಮಾಡಬೇಕೆಂದು ಒಂದು ವಿಧೇಯಕ ಈ ಮೊದಲೇ ಪಾಸ್ಆಗಿದೆ. ಆದರೆ ಅದಕ್ಕೆ ಅನೇಕ ತಿದ್ದುಪಡಿಗಳನ್ನು ಮಾಡುವ ಸಲುವಾಗಿ ಈ ವಿಧೇಯಕವನ್ನು ತಂದಿದ್ದೇವೆ. ಈ ಹಿಂದೆ ಅಂದರೆ 1991ರಲ್ಲಿ ಮಾಡಿದರು, ಅದರಲ್ಲಿ ಕೆಲವು ಬದಲಾವಣೆ ಆಗಬೇಕಾಗಿದೆ. ಈಗ ಮೊದಲಿನ ತಾರೀಖಿನ ಪ್ರಕಾರ 1995ರ ಜನವರಿ 1ನೇ ತಾರೀಖಿನವರೆಗೆ ಯಾರ್ಯಾರು ಅನಧಿಕೃತವಾಗಿ ಕಟ್ಟಡಗಳನ್ನು ಕಟ್ಟಿದರು ಅದನ್ನೆಲ್ಲಾ ರೆಗ್ಯುಲರೈಸ್ ಮಾಡುವ ಸಲುವಾಗಿ ಆ ತಾರೀಖಿನ್ನು ಅಕ್ಟೋಬರ್ 94ರಿಂದ ಅಕ್ಟೋಬರ್ 95ರವರೆಗೆ ಕಾಲವನ್ನು ವಿಸ್ತರಣೆ ಮಾಡುವ ಸಲುವಾಗಿ ಈ ವಿಧೇಯಕವನ್ನು ಮಾಡಿದೆ. ಇದನ್ನು ಮಾಡುವ ಸಲುವಾಗಿ ರೆಗ್ಯುಲರೈಸೇಷನ್ ಮಾಡುವ ಸಂದರ್ಭದಲ್ಲಿ ಅನೇಕ ಬೋರ್ಡುಗಳು, ಡೆವಲಪ್ಮೆಂಟ್

ಅಥಾರಿಟೀಗಳೂ ಕೂಡ ಅನಧಿಕೃತ ಕಟ್ಟಡಗಳನ್ನು ಕಟ್ಟಿದ್ದಾರೆ. ಅದನ್ನೆಲ್ಲಾ ಬೇರ್ಪಡಿಸಿ ಜನರ ಬೇಡಿಕೆಗಳು ಏನಿವೆ ಅದು ರೆವಿನ್ಯೂ ಲ್ಯಾಂಡ್ಸ್ನಲ್ಲಾಗಲಿ, ಬೇರೆ ಕಡೆ ಆಗಲಿ ಕನ್ಸಿಡರ್ ಮಾಡಬೇಕಾಗುತ್ತದೆ. ಕೆಲವು ಕಡೆ ಪರ್ಮಿಷನ್ ಕೊಡುವ ವಿಚಾರದಲ್ಲಿ ಅಥವಾ ಬೇರೆ ಕಾರಣಗಳಿಂದ ಕಟ್ಟಡಗಳನ್ನು ಕಟ್ಟುವುದರಲ್ಲಿ ತಡವಾಗುತ್ತದೆ. ದಿನೇ ದಿನೇ ಕಟ್ಟಡಗಳ ಸಂಖ್ಯೆ ಬೆಳೆಯುತ್ತಿದೆ. ಜನರಿಗೆ ನಿವೇಶನಗಳ ಅವಶ್ಯಕತೆ ಇದೆ. ಇಷ್ಟೋ ಸಲ ಕೊಳಚೆ ಪ್ರದೇಶಗಳೂ ಕೂಡ ತಯಾರಾಗುತ್ತಿದೆ. ಆ ದೃಷ್ಟಿಯಿಂದ ಜನರೂ ಕೂಡ ಪಟ್ಟಣಗಳಿಗೆ ಬಂದು ಮನೆಗಳನ್ನು ಕಟ್ಟಿಸುತ್ತಾರೆ. ಕೆಲವರು ಅಲ್ಲಿಯೇ ಅನಧಿಕೃತವಾಗಿ ಮನೆಗಳನ್ನು ಕಟ್ಟಿಸುತ್ತಾರೆ. ಈಗ ಅವರೆಲ್ಲರಿಗೂ ಮನೆಗಳನ್ನು ಒಡೆದು ಹಾಕುವುದು, ಅಥವಾ ಬೇರೆ ರೀತಿಯಲ್ಲಿ ನಾಶ ಮಾಡುವುದು, ಅಥವಾ ಅವರಿಗೆ ಹೆಚ್ಚಿನ ರೇಟ್ ಹಾಕಿ ರೇಗ್ಯೂಲರೈಸ್ ಮಾಡುವುದು ಸಾಧ್ಯವಿಲ್ಲ. ಆ ದೃಷ್ಟಿಯಿಂದ ಸರ್ಕಾರದವರು ಕೆಲವು ವಿಷಯಗಳಲ್ಲಿ ಈ ಬಿಲ್ಲನ್ನು ತಂದು, ಈ ಬಿಲ್ಲಿನ ಮುಖಾಂತರ ಪಟ್ಟಣಗಳಲ್ಲಿ ಏನು ಲಕ್ಷಾಂತರ ಜನ ಏನು ಅನಧಿಕೃತವಾಗಿ ಮನೆಗಳನ್ನು ಕಟ್ಟಿದ್ದಾರೆ. ಅವರಿಗೆಲ್ಲಾ ರೆಗ್ಯುಲರೈಸ್ ಮಾಡಬೇಕು ಎನ್ನುವ ದೃಷ್ಟಿಯಿಂದ ಈ ಬಿಲ್ಲನ್ನು ತರಲಾಗಿದೆ, ಈ ಸಭೆಯು ಮನ್ನಣೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

+ ಶ್ರೀ ವೈ. ರಾಮಕೃಷ್ಣ (ಆನೇಕಲ್) : ಮಾನ್ಯ ಅಧ್ಯಕ್ಷರೇ, ಈಗ ಸಭೆಯ ಮುಂದೆ ಮಂಡಿಸಿರತಕ್ಕಂತಹ ಈ ಕರ್ನಾಟಕ ನಗರ ಪ್ರದೇಶದಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ ವಿಧೇಯಕ 1995. ಇದರ ಉದ್ದೇಶವೇನೋ ಬಹಳ ಚೆನ್ನಾಗಿದೆ. ಏನು ಇದರ ಉದ್ದೇಶ ಎಂದರೆ ಯಾರಿಗೆ ಮನೆ ಇಲ್ಲವೋ ಅಂಥವರು ಒಂದು ಮನೆಯನ್ನು ಅನಧಿಕೃತವಾಗಿ ಕಟ್ಟಿಕೊಂಡಿದ್ದರೆ, ಅದನ್ನು ಅಧಿಕೃತಗೊಳಿಸುವುದು ಇದರ ಉದ್ದೇಶ. ಆದರೆ ಇದರ ಪ್ರಾವಿಷನಸ್ಸು ನೋಡಿದಾಗ ಅದು ಎಲ್ಲಿಯೂ ಕಾಣುವುದಿಲ್ಲ, ಎಷ್ಟು ಎಕರೆ ಭೂಮಿ ಮೇಲೆ ಈ ಅನಧಿಕೃತ ಕಟ್ಟಡಗಳು ಬಂದಿವೆ. ಮತ್ತು ಅನಧಿಕೃತ ಕಟ್ಟಡಗಳು ಬಂದಿರತಕ್ಕಂತಹ ಸಂಖ್ಯೆ ಎಷ್ಟು ಮತ್ತು ಎಷ್ಟು ಜನಸಂಖ್ಯೆಗೆ ಇದು ಅನುಕೂಲವಾಗುತ್ತದೆ. ಅವರು ಹೇಳಿದ ಹಾಗೆಯೇ ಮನೆ ಇಲ್ಲದವರಿಗೆ ಎಷ್ಟು ಜನರಿಗೆ ಅನುಕೂಲವಾಗುತ್ತದೆ? ಮನೆ ಇರುವವರಿಗೆ ಎಷ್ಟು ಜನರಿಗೆ ಅನುಕೂಲವಾಗುತ್ತದೆ ಎನ್ನುವ ಅಂಕಿ ಅಂಶಗಳನ್ನು ಈ ತಿದ್ದುಪಡಿಯನ್ನು ಮಂಡಿಸಿದಾಗ ಇಟ್ಟಿದ್ದರೆ ಬಹುಶಃ ಸಭೆಗೆ ಒಂದು ಅನುಕೂಲವಾಗುತ್ತಿತ್ತು ಎಂದು ನಾನು ಭಾವಿಸುತ್ತೇನೆ. ಅಂತಹ ಅಂಕಿ ಅಂಶಗಳನ್ನು ಇವರು ಇಟ್ಟಿಲ್ಲ. ಬರೀ ತಿದ್ದುಪಡಿ, ಇದು ಎಂತಹ ತಿದ್ದುಪಡಿ ಎಂದರೆ ಇದುವರೆಗೆ ಏನು ಒಂದು ಕಮಿಟಿ ಇತ್ತು, ಆ ಕಮಿಟಿಯನ್ನು ಕಿತ್ತು ಹಾಕಿ ಒಬ್ಬ ಅಧಿಕಾರಿಯನ್ನು ಕಮಿಟಿಯ ಬದಲಿಗೆ ನೇಮಿಸತಕ್ಕಂಥದ್ದು ಅಷ್ಟೇ ಇವರ ಸಾರಾಂಶ. ಕಮಿಟಿಯಲ್ಲಿ ಹಿಂದೆ ನಾಲ್ಕು ಐದು ಜನ ಸದಸ್ಯರು ಇದ್ದರು, ಅವರನ್ನು ತೆಗೆದು ಬಿಡುವುದು ಅನಧಿಕೃತ ನಿರ್ಮಾಣದ ಕೆಲಸದಲ್ಲಿರುವ ಸಹಾಯಕ ಜಿಲ್ಲಾಧಿಕಾರಿಗಳು ಸದಸ್ಯರು, ಅಧ್ಯಕ್ಷರು, ಬೆಂಗಳೂರು ಮಹಾ ನಗರಪಾಲಿಕೆಯ ಅಧ್ಯಕ್ಷರು ಡೆಪ್ಯೂಟಿ ಕಮೀಷನರ್ ಸದಸ್ಯರು, ಪಟ್ಟಣ ಯೋಜನಾಧಿಕಾರಿಗಳು ಸದಸ್ಯರು, ಸಂಬಂಧಪಟ್ಟ ರೆವಿನ್ಯೂ ಉಪ ವಿಭಾಗಾಧಿಕಾರಿ ಸದಸ್ಯರು, ಅನಧಿಕೃತ ಕಟ್ಟಡ ನಿರ್ಮಾಣ ಕಾರ್ಯ ತಡೆಯಲಿರುವ ಅಧಿಕಾರಿಗಳು ಸದಸ್ಯರು, ಸಹಾಯಕ ಮಹಾನಗರ ಆಯುಕ್ತಕರು ಬೆಂಗಳೂರು ಅವರು ಸದಸ್ಯರು, ರಾಜ್ಯ ಸರ್ಕಾರವು ನಾಮ ನಿರ್ದೇಶನ ಮಾಡಿದ ನಾಲ್ವರು ವ್ಯಕ್ತಿಗಳಲ್ಲಿ ಇವರ ಇಬ್ಬರು ವ್ಯಕ್ತಿಗಳು ವಿಧಾನ ಮಂಡಲದಿಂದ ಮತ್ತು ಇಬ್ಬರು ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲರುಗಳಿಂದ ಕೂಡಿದ್ದ ಸಮಿತಿಯನ್ನು ತೆಗೆದು ಒಬ್ಬ ಹಿರಿಯ ಕೆ.ಎ.ಎಸ್. ಅಧಿಕಾರಿಯನ್ನು ನೇಮಕ ಮಾಡಿ, ಅವರು ಅವರಿಗೆ ತೋಚಿದ ಹಾಗೆ ಅವರದೇ ಅಂತಿಮ ತೀರ್ಮಾನ ಮಾಡಿರುವುದು ನಾವು ಅವರಿಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟಂತಾಗುವುದು.

ತಮ್ಮ ಗಮನಕ್ಕೆ ಒಂದು ವಿಷಯವನ್ನು ತರಲಿಕ್ಕೆ ಇಚ್ಚೆಪಡುತ್ತೇನೆ. ಈಗ ಅನಧಿಕೃತ ಕಟ್ಟಡಗಳು ನಿರ್ಮಾಣವಾಗದಂತೆ ಒಂದು ವಿಶೇಷವಾದಂತಹ ಒಂದು ಇಲಾಖೆಯನ್ನು ಸರ್ಕಾರ ಇಟ್ಟಿದೆ. ವಿಶೇಷ ಜಿಲ್ಲಾಧಿಕಾರಿಗಳು ಇದ್ದರು, ವಿಶೇಷ ಸಹಾಯಕ ಜಿಲ್ಲಾಧಿಕಾರಿ ಇದ್ದರು, ವಿಶೇಷ ರೆವಿನ್ಯೂ ಇನ್ಸ್ಪೆಕ್ಟರ್ ಇದ್ದರು, ವಿಶೇಷ ತಹಸೀಲ್ದಾರ್ ಇದ್ದರು ಇಷ್ಟು ಜನ ಅಧಿಕಾರಿಗಳು ಇದ್ದರೂ ಸಹ ಈ ಇಲಾಖೆ ಅನಧಿಕೃತ ನಿರ್ಮಾಣವನ್ನು ನಿಲ್ಲಿಸಲು ವಿಫಲರಾಗಿ ಬಹಳಷ್ಟು ಕಟ್ಟಡಗಳು ಬಂದುಬಿಟ್ಟಿವೆ. ಇಲಾಖಾಧಿಕಾರಿಗಳೆಲ್ಲರೂ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಸೋತಿದ್ದಾರೆ. ವಿಫಲರಾಗಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಪುನಃ ಅಧಿಕಾರಿಗಳನ್ನು ತೆಗೆದುಕೊಂಡು ಹೋಗಿ ನೇಮಕ ಮಾಡಿದರೆ, ಈ ಒಂದು ಉದ್ದೇಶ ನೇರವೇರುತ್ತದೆಯೇ ಎನ್ನುವುದನ್ನು ಮಾನ್ಯ ಮಂತ್ರಿಗಳು ಗಮನಿಸಬೇಕಾಗಿತ್ತು. ಈಗ ತಂದಿರುವ ಕಾನೂನು ಸಾಧುವಲ್ಲ. ಅದಕ್ಕೆ ಬೇರೆ ಒಂದು ಏಜೆನ್ಸಿಯನ್ನು ಇಡಬೇಕಾಗಿತ್ತು. ಅದರ ಮುಖಾಂತರ ಅನಧಿಕೃತ ಕಟ್ಟಡ ನಿರ್ಮಾಣ ಮಾಡಿದರೆ ಅವರಿಗೆ ಶಿಕ್ಷೆ ವಿಧಿಸಬೇಕಾಗಿತ್ತು. ಈ ಬಗ್ಗೆ ಮೊದಲು ಅಂಕಿ ಅಂಶಗಳನ್ನು ತರಿಸಬೇಕಾಗಿತ್ತು. ಈಗ ಒಂದು ಪ್ರಶ್ನೆಯನ್ನು ಕೇಳುತ್ತೇನೆ, ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ನಮ್ಮಲ್ಲಿ ಜಾರಿಯಲ್ಲಿದೆ. ಅದನ್ನು ಗಮನಕ್ಕೆ ತೆಗೆದುಕೊಳ್ಳದೆ ಒಬ್ಬರು ಒಂದು ಎಕರೆ ಜಮೀನಿನಲ್ಲಿ ತುಂಬಾ ಮನೆಗಳನ್ನು ಕಟ್ಟಿ ಬಿಟ್ಟಿರುತ್ತಾರೆ, ಬಾಡಿಗೆಗೆ ಕೊಟ್ಟಿದ್ದಾರೆ. ಆ ಮನೆಗಳನ್ನು ಅವುಗಳನ್ನು ನೀವು ಅಧಿಕೃತಗೊಳಿಸುತ್ತೀರಾ? ಮಾಡಕೂಡದು ಅದು ಅನ್ವಯಿಸುವುದಿಲ್ಲ ಎನ್ನುವುದಕ್ಕೆ ಈ ತಿದ್ದುಪಡಿ ವಿಧೇಯಕದಲ್ಲಿ ಎಲ್ಲಿದೆ? ಎರಡನೆಯದಾಗಿ ಬೆಂಗಳೂರು ನಗರದಲ್ಲಿ ಎಲ್ಲಿಯಾದರೂ ರೆವನ್ಯೂ ಲ್ಯಾಂಡ್ನಲ್ಲಿ ಬಹು ಮಹಡಿ ಕಟ್ಟಡವನ್ನು ಕಟ್ಟಿದ್ದರೆ ಅದನ್ನು ಅಧಿಕೃತಗೊಳಿಸಬಹುದು. (ಅಂದರೆ ಅನಧಿಕೃತವಾಗಿದ್ದರೆ ಮಾತ್ರ) ಅದಕ್ಕೋಸ್ಕರ ಇದು ಏನು ತೋರಿಸುತ್ತದೆ ಎಂದರೆ, ಬಹುಶಃ ಇದರಲ್ಲಿ ಏನೂ ತಿರುಳು ಇಲ್ಲ, ಇದರಿಂದ ಏನು ಉದ್ದೇಶ ನೇರವೇರಬೇಕು ಎಂದು ಮಾಡಿದ್ದೇವೋ ಅದು ಕಂಪ್ಲೀಟ್ ಆಗಿ ಫೈಲ್ಯೂರ್ ಆಗುತ್ತದೆ.

ಹಿಂದೆ ಏನು ಇತ್ತು ಅದು ರಿಪಟೇಷನ್ ಆಗುತ್ತದೆ. ಅದಕೋಸ್ಕರವಾಗಿ ಇದನ್ನು ಬಹಳ ತೀವ್ರವಾಗಿ ಆಲೋಚನೆ ಮಾಡಬೇಕಾಗುತ್ತದೆ. ಮೊದಲನೆಯದಾಗಿ ಆರ್ಡಿನೆನ್ಸ್ ತಂದು ಬಿಟ್ಟರು. ಇದರಿಂದ ನನಗೆ ಬಹಳ ಅನುಮಾನ ಬರುತ್ತದೆ. ಇಂತಹ ಮುಖ್ಯವಾದ ಬಿಲ್ ಅನಧಿಕೃತವಾಗಿರತಕ್ಕಂತಹ ಕಟ್ಟಡಗಳನ್ನು ಅಧಿಕೃತ ಮಾಡುವಂತಹ ತಿದ್ದುಪಡಿ ಇವರು ಆರ್ಡಿನೆನ್ಸ್ ಏಕೆ ತಂದಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. 7.7.1995ರಿಂದ ಜಾರಿಗೆ ಬಂದಿದೆ. ಇವತ್ತು ನಾನು ಮಂತ್ರಿಗಳನ್ನು ಹೇಳುತ್ತಿದ್ದೇನೆ, ಆರ್ಡಿನೆನ್ಸ್‌ನ್ನು ಬಹಳ ಅವಶ್ಯಕತೆ ಇದ್ದಾಗ ಮಾತ್ರ ಉಪಯೋಗಿಸಿಕೊಳ್ಳಬೇಕು, 8ನೇ ತಿಂಗಳಿನಲ್ಲಿ ನಾವುಗಳು ಸಭೆಯನ್ನು ಸೇರಿದ್ದೆವು. ಈ ಒಂದು ತಿಂಗಳ ಅರ್ಜೆನ್ಸಿ ಏನಿತ್ತು ಎಂದು ನಾನು ಹೇಳುತ್ತಿದ್ದೇನೆ, ಆ ಒಂದು ತಿಂಗಳಿನಲ್ಲಿ ಏನು ಅನಾಹುತವಾಗುತ್ತಿತ್ತು? ಆ ಒಂದು ತಿಂಗಳಿನಲ್ಲಿ ಎಷ್ಟು ಅರ್ಜಿಗಳು ಬಂದವು? ಅವುಗಳ ಗತಿ ಏನು? ಇದು ನನಗೆ ಬಹಳ ದುಃಖವಾಗುತ್ತದೆ. ಇದರ ಬಗ್ಗೆ ಸಂಬಂಧಪಟ್ಟಂತಹ ಮಂತ್ರಿಗಳು ವಿವರಣೆಯನ್ನು ಕೊಡಬೇಕು. What necessitated him to bring this Ordinance on 7.7.95 when we were scheduled to meet on 8th August?

ಅದನ್ನು ಅವರು ಸ್ಪಷ್ಟಪಡಿಸಿಲ್ಲ. ಸುಮ್ಮನೆ ಅವರು ಹೇಳುತ್ತಾರೆ ಆರ್ಡಿನೆನ್ಸ್ ಇತ್ತು ಆದ್ದರಿಂದ ಇದನ್ನು ತಂದುಬಿಟ್ಟೆ ಎಂದು ಏನು ಅವಶ್ಯಕತೆ? ಎಷ್ಟು ಅರ್ಜಿಗಳು ಬಂದಿದೆ, ಅದಕೋಸ್ಕರವಾಗಿ ಇದನ್ನು ಸಮಾನ್ಯವಾಗಿ ಒಪ್ಪತಕ್ಕದ್ದು ಅಲ್ಲ ಎಂದು ನಾನು ಭಾವಿಸಿಕೊಂಡಿದ್ದೇನೆ. ಇದರಲ್ಲಿ ಬಹಳ ಆಕ್ಟುಗಳು ಸೇರಿಕೊಂಡಿವೆ. ನಗರಾಭಿವೃದ್ಧಿ ಕಾನೂನು, ಟ್ರಸ್ಟ್ ಬೋರ್ಡ್ ಆಕ್ಟ್, ಅದರ ಪ್ರಾವಿಷನ್ಸ್ ಅನ್ನೂ

ಸಹ ನಾವು ನೋಡಬೇಕಾಗುತ್ತದೆ. ಕಾರ್ಪೊರೇಷನ್ ಮತ್ತು ಹಸಿರು ಪಟ್ಟಿ ಕಾನೂನನ್ನೂ ಸಹ ನಾವು ನೋಡಬೇಕಾಗುತ್ತದೆ. ಅರ್ಬನ್ ಸೀಲಿಂಗ್ ಆಕ್ಟ್ ಅದನ್ನು ನೋಡಬೇಕಾಗುತ್ತದೆ ಮುನ್ಸಿಪಲ್ ಬೈಲಾಸ್‌ಗಳನ್ನು ನೋಡಬೇಕಾಗುತ್ತದೆ. ಹಾಗೇನೇ ಇತ್ತೀಚೆಗೆ ತಂದಿರತಕ್ಕಂತಹ ತಾಲ್ಲೂಕು ಪಂಚಾಯ್ತಿ ಮತ್ತು ಜಿಲ್ಲಾ ಪರಿಷತ್ ಕಾನೂನು ಅವುಗಳು ಲೈಸನ್ಸ್ ಕೊಡತತಕ್ಕಂತಹ ಅಧಿಕಾರ ಅವರಿಗೂ ಇದೆ. ಅವುಗಳನ್ನೆಲ್ಲಾ ಸ್ಕ್ರೂಟನಿ ಮಾಡಬೇಕಾಗುತ್ತದೆ. ಅದಕ್ಕೋಸ್ಕರವಾಗಿ ಇದು ಅಷ್ಟು ಸುಲಭವಾಗಿರತಕ್ಕಂತಹ ಮಸೂದೆಯಲ್ಲ, ಇದರ ಜಾರಿ ಬಹಳ ಕಠಿಣವಾಗಿರುತ್ತದೆ. ಇದರಿಂದ ಸಾರ್ವಜನಿಕರು ಉಪಯೋಗಿಸುವ ಪಾರ್ಕು, ಆಟದ ಮೈದಾನ ಸೇರಿವೆ. ಅದನ್ನು ಕೈ ಬಿಡಬೇಕು. ಈ ಕಾನೂನಿನಿಂದ ಬಡವರಿಗೆ ಉಪಕಾರವಾಗುತ್ತದೆ ಎಂದು ನಾನಾದರೂ ಭಾವಿಸಿಲ್ಲ. ಏಕೆಂದರೆ ಅನಧಿಕೃತವಾಗಿರತಕ್ಕಂಥದ್ದನ್ನು ಅಧಿಕೃತ ಮಾಡಿ ಅವರಿಗೆ ಕೊಡುವುದಾದರೆ ನೀವು ವಿಧಿಸುವ ಫೀಜ್ ದುಬಾರಿಯಾಗಿದೆ. ಸಾರ್ವಜನಿಕರಿಗೆ, ವಸತಿ ಹೀನರಿಗೆ, ಕೊಳಚೆ ಪ್ರದೇಶದಲ್ಲಿ ವಾಸ ಮಾಡತಕ್ಕಂಥವರಿಗೆ ಇದರಿಂದ ಏನಾದರೂ ಪ್ರಯೋಜನವಾಗುತ್ತದೆಯೋ? ಇದರ ಬಗ್ಗೆ ಏನಾದರೂ ಹೇಳಿದ್ದಾರೋ? ಬಡವರನ್ನು ಮತ್ತೆ ಹೆಚ್ಚು ಬಡವರನ್ನಾಗಿ ಮಾಡುತ್ತೀರಿ. this act is meant to rob money from the poor. ಅದಕೋಸ್ಕರ ಬಹುಶಃ ಶ್ರೀಮಂತರ ರಕ್ಷಣೆ ಆಗುತ್ತದೆ. ಯಾರ್‍ಯಾರು ಶ್ರೀಮಂತರಾಗಿದ್ದಾರೋ ಅವರು ಇನ್ನೂ ಹೆಚ್ಚು ಶ್ರೀಮಂತರಾಗುತ್ತಾರೆ. ಅನಧಿಕೃತವಾಗಿ ನಿರ್ಮಾಣ ಮಾಡಿಕೊಂಡು, ಅನಧಿಕೃತವಾಗಿ ಬಾಡಿಗೆಗೆ ತೆಗೆದುಕೊಂಡು, ಬಹು ಮಹಡಿಯ ಕಟ್ಟಡಗಳನ್ನು ಕಟ್ಟಿಕೊಂಡು ಅನಧಿಕೃತವಾಗಿ ವಾಣಿಜ್ಯ ಮಳಿಗೆಗಳನ್ನು ಕಟ್ಟಿಕೊಂಡು, ಅವುಗಳನ್ನು ಸಹಿತ ಅಧಿಕೃತಗೊಳಿಸುತ್ತೇವೆ ಎಂದು ಈ ತಿದ್ದುಪಡಿಯಲ್ಲಿ ಹಾಕಿದ್ದೀರಿ. ಅಂದಮೇಲೆ ಯಾರ ಉಪಕಾರಕ್ಕಾಗಿ ಈ ಕಾನೂನನ್ನು ತಂದಿದ್ದೀರಿ? ಅದಕೋಸ್ಕರ ನಾನು ಇದನ್ನು ಒಪ್ಪುವುದಕ್ಕೆ ಆಗುವುದಿಲ್ಲ. ನಾನು ಹೇಳಬೇಕಾದರೆ, ಟೈಟಲ್ ಉದ್ದೇಶ ಚೆನ್ನಾಗಿ ಇದ್ದರೂ ಕೂಡ ಪ್ರಾವಿಷನ್ನಲ್ಲಿ ಇದಕ್ಕೆ ಏನೂ ಬೆಲೆ ಇಲ್ಲ, ದಯವಿಟ್ಟು ಇದನ್ನು ದೀರ್ಘವಾಗಿ ಪರಿಶೀಲನೆ ಮಾಡಬೇಕಾಗಿರುವುದರಿಂದ, ಇದನ್ನು ಜಂಟಿ ಸದನ ಸಮಿತಿಗೆ ಕಳುಹಿಸಿಕೊಡಿ, ಅದನ್ನು ಕಳುಹಿಸಿಕೊಟ್ಟರೆ ನಾವು ಎಲ್ಲಾ ಆಕ್ಟಗಳನ್ನು ಪರಿಶೀಲನೆ ಮಾಡಿ ಏನೇನು ಸಮಗ್ರವಾಗಿ ತಿದ್ದುಪಡಿಗಳನ್ನು ಮಾಡಬಹುದೋ, ಅವುಗಳನ್ನು ಮಾಡಲು ಸಲಹೆಗಳನ್ನು ಕೊಡುತ್ತೇವೆ, ಸದನದಲ್ಲಿ ಆ ತಿದ್ದುಪಡಿಗಳನ್ನು ಸೇರಿಸಿ ಸಮಗ್ರ ಮಸೂದೆಯನ್ನು ತರೋಣ, ನಾವೆಲ್ಲರೂ ಒಟ್ಟಿಗೆ ಪಾಸ್ ಮಾಡೋಣ, ಅಲ್ಲಿಯವರೆಗೆ ಇದನ್ನು ಪಾಸ್ ಮಾಡುವುದಕ್ಕೆ ಆಗುವುದಿಲ್ಲ.

4.10 ಪಿ.ಎಂ

+ ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ) : ಮಾನ್ಯ ಅಧ್ಯಕ್ಷರೇ ಇದು ಮೇಲ್ನೋಟಕ್ಕೆ ಬಹಳ ಸರಳವಾಗಿ ಮತ್ತು ಯಾವುದೇ ವಿಶೇಷವಾದ ಪರಿಣಾಮ ಇಲ್ಲದೆ ಇರತಕ್ಕ ಒಂದು ಮಸೂದೆಯಾಗಿ ಕಾಣುತ್ತದೆ. ಆದರೆ ನಿಜವಾಗಿ ಇದು ಒಂದು ರೀತಿಯ ಸ್ವೀಪಿಂಗ್ ಆ್ಯಕ್ಟ್ ನಾನು ಹೇಳುವುದಾದರೆ, this is a bill for repealment of all other enactments. ನೀವು ರೆಗ್ಯುಲರೈಸ್ ಮಾಡುವುದಕ್ಕೆ ಮತ್ತು ಏನು ಪಾರ್ಕ್ ಪ್ರಿಸರ್ವ್ ಮಾಡಬೇಕೆಂದು ಹೇಳಿದ್ದೀರಿ ಅಥವಾ ಸೆಟ್ ಅಪ್ ಇಡಬೇಕೆಂದು ಹೇಳಿದ್ದೀರಿ, ರೆಗ್ಯುಲೇಷನ್ಸ್ ಅದೆಲ್ಲಾ ರಿಪೀಲ್ ಆಗುತ್ತದೆ. ಪ್ರಕಾಶ್‌ರವರೇ ದಯವಿಟ್ಟು ಪುನಃ ನೋಡುವುದು ಒಳ್ಳೆಯದು. It is a very serious thing.

ಶ್ರೀ ಆರ್.ಎಲ್. ಜಾಲಪ್ಪ : ಅದು ನಮ್ಮ ಕಾಲದಲ್ಲಿ ಆಗಿದ್ದಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ನಮ್ಮ ಕಾಲದಲ್ಲಿ ಆದದ್ದು ಹೌದು. ಅದೂ ಕೂಡ with restraint ಮಾಡಿದ್ದೇವೆ. ಆದರೆ ತಾವು ದಯವಿಟ್ಟು ಇದನ್ನು

ಓದಿ. ನಾನು ಈಗಲೇ ಓದಿದ್ದು. ತಾವು ದಯವಿಟ್ಟು ಇದನ್ನು ನೋಡಬೇಕು. Unfortunately, I read it only now. It is very serious. It will annul all Acts. Under this umbrella, you can do it. It is very serious one. ತಾವು ಸೆಲೆಕ್ಟ್ ಕಮಿಟಿಗೆ ಕಳುಹಿಸಿದರೆ ಒಳ್ಳೆಯದು.

ಶ್ರೀ ಬಿ.ಎಸ್. ಯಡಿಯೂರಪ್ಪ : ನನಗನ್ನಿಸುತ್ತದೆ, ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸುವುದಕ್ಕೆ ಬದಲು ಸ್ಕ್ರಾಪ್ ಮಾಡುವಂಥದ್ದು ಒಳ್ಳೆಯದು.

ಶ್ರೀ ಎಂ. ವೀರಪ್ಪ ಮೊಯಿಲಿ : ತಮ್ಮ ಸರ್ಕಾರವನ್ನು ಟೀಕೆ ಮಾಡಬೇಕು ಮತ್ತೊಂದು ವಿಚಾರ ಅಲ್ಲ. ದಯವಿಟ್ಟು ಇದನ್ನು ತಾವು ಪುನರ್ ಪರಿಶೀಲನೆ ಮಾಡಿ ತಮಗೆ ಕನ್ವಿನ್ಸ್ ಆದರೆ ಮತ್ತೆ ತನ್ನಿ. ನಾವು ಇಲ್ಲಿ ಚರ್ಚೆ ಮಾಡೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದನ್ನು ವಿತ್ಡ್ರಾ ಮಾಡಿಕೊಂಡು ಬೇರೆ ರೀತಿಯಲ್ಲಿ ತಂದರೆ ಒಳ್ಳೆಯದು.

ಶ್ರೀ ಎಂ. ವೀರಪ್ಪ ಮೊಯಿಲಿ : ದಯವಿಟ್ಟು ತಾವು ತರಿಸಿ ನೋಡಿ. ಡೇಟ್ ಎಕ್ಸ್ಟೆಂಡ್ ಮಾಡಿದ್ದರೆ ಅದರಿಂದ ಸಾಕಷ್ಟು ಅನಾಹುತವಾಗುತ್ತದೆ. ಈಗ ಒಂದು ಮಾಡಬಹುದು. ಏನು ಡೇಟ್ ಕೊಟ್ಟಿದ್ದಾರೆ, ಅರ್ಜಿಗಳು ಯಾವುದು ಬಂದಿದೆ ಅದನ್ನು ತೀರ್ಮಾನ ಮಾಡುವುದಕ್ಕೆ ಮೊದಲು ನೋಡಿ. ಆಮೇಲೆ ಬಂದರೆ ಸುವೋಮೋಟೋ ಬೇಕಾದರೆ ಪ್ರೊವೈಡ್ ಮಾಡಬೇಕಾಗುತ್ತದೆ, ಅಮೆಂಡ್ಮೆಂಟ್ಬೇಕಾದರೆ ತನ್ನಿ. But now you will be opening up a pandora's box.

ಎಲ್ಲಾ ಹೊಸ ಅರ್ಜಿಗಳು ಬರುತ್ತವೆ, ಹೊಸ ಎನ್ಕ್ರೋಚ್ಮೆಂಟ್ ಪ್ರಾರಂಭವಾಗುತ್ತದೆ. ಈಗಾಗಲೇ ಎಷ್ಟೋ ಆಗಿವೆ. ಆದ್ದರಿಂದ ಇವತ್ತು ಇದಕ್ಕೆ ಡೇಟ್ ಎಕ್ಸ್ಟೆಂಡ್ ಮಾಡುವುದು ಬಹಳ ತಪ್ಪು. ಎಕ್ಸ್‌ಟೆಂಡ್ ಮಾಡಲೇಬೇಕೆಂದು ಎಕ್ಸ್‌ಟೆಂಡ್ ಮಾಡಬೇಡಿ. ಸುವೋಮೋಟೋ ಕನ್ಸಿಡರ್ ಮಾಡಲಿಕ್ಕೆ ಸರ್ಕಾರ ಕಾಂಪಿಟೆಂಟ್ ಅಥಾರಿಟಿ, ಮಾಡಲಿ. ಮೊದಲು ಕೊಟ್ಟಂಥ ಅರ್ಜಿಗಳು ತೀರ್ಮಾನವಾದ ಮೇಲೆ ನೋಡಿ. ಈಗಲೇ ಪ್ರೊವೈಡ್ ಮಾಡುವುದಕ್ಕೆ ಹೋದರೆ ಲಕ್ಷಾಂತರ ಅರ್ಜಿಗಳು ಬರುತ್ತವೆ, ನಿಮ್ಮ ಎಲ್ಲಾ ಭೂಮಿಗಳು ಹೋಗುತ್ತವೆ. ಎಲ್ಲಾ ಕಡೆ ಇರ್ರೆಗ್ಯುಲಾರಿಟೀಸ್ ಆಗುತ್ತದೆ. ಹೀಗಾದರೆ ಯಾವ ರೂಲ್ಸ್ ಬೇಕಾಗಿಲ್ಲ, ಮತ್ತೊಂದು ತಾವು ಏನು ಮಾಡಿದ್ದೀರೆಂದರೆ, ಗ್ರೀನ್ ಬೆಲ್ಟ್ ಏರಿಯಾದಲ್ಲಿ ಏನು ಅನ್‌ಅಥರೈಸ್ಡ್ ಮಾಡಿದ್ದಾರೆ ಅದೆಲ್ಲಾ ಮಾಡಿದ್ದೀರಿ. ಗ್ರೀನ್ ಬೆಲ್ಟ್‌ನಲ್ಲಿ ಒಂದು ಗುಡಿಸಲು ಹಾಕಿ ಅದನ್ನು ರೆಗ್ಯುಲರೈಸ್ ಮಾಡವುದು; ಅಂದರೆ ಗ್ರೀನ್ ಬೆಲ್ಟ್‌ನಲ್ಲಿ ಅಷ್ಟು ಸುಲಭವಾಗಿ ಮಾಡಬಹುದು. ಒಬ್ಬರು ಕೆ.ಎ.ಎಸ್. ಆಫೀಸರನ್ನು ಕಾಂಪಿಟೆಂಟ್ ಅಥಾರಿಟಿ ಮಾಡಿ ನೀವು ಈ ರೀತಿ ಮಾಡುವುದಾದರೆ ಗ್ರೀನ್ ಬೆಲ್ಟ್ ಏತಕ್ಕೆ ಇರಬೇಕು? Green-belt cannot be annulled.

ಆ ಆಕ್ಟ್ನೆ ಇದು ಕಾಂಟ್ರಡಿಕ್ಷನ್ ಆಗುತ್ತದೆ. ಗ್ರೀನ್ ಬೆಲ್ಟನ್ನು ಡೀನೋಟಿಫೈ ಮಾಡಬೇಕಾದರೂ it cannot be done. It is totally prohibited. It cannot be done at all. ಈಗ ನಾನು ಆ ಆ್ಯಕ್ಟನ್ನು ತರಲಿಲ್ಲ. How can a competent authority or a KAS officer denotify the area covered under the green-belt? ಪ್ರಕಾಶ್ರವರೇ, ತಾವು ಕೆಲವು ಸಮಯ ಅರ್ಬನ್ ಡೆವಲಪ್ಮೆಂಟ್ ಮಂತ್ರಿಗಳಾಗಿದ್ದಿರಿ. ತಾವು ಇದರ ಬಗ್ಗೆ ಆಲೋಚನೆ ಮಾಡಿ. Even the highest authority cannot denotify. ನನಗೆ ಗೊತ್ತಿದ್ದ ಹಾಗೆ ಗ್ರೀನ್ ಬೆಲ್ಟ್ ಕೂಡ ಲೆಜಿಸ್ಲೇಚರ್ಗೆ ಬರಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಸಿ.ಡಿ.ಪಿ. ಆಗುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಅದು ಆಗುವುದಿಲ್ಲ. It is not substantive Act. It is an ancillary act. ನಾವು ಇತ್ತೀಚೆಗೆ ಅದನ್ನು ಅಪ್ರೂವ್ ಮಾಡಿದ್ದೇವೆ. ಈ ಆ್ಯಕ್ಟ್ ಪ್ರಕಾರ ಸಿಡಿಪಿಐ. ಅನ್ನು ಹೇಗೆ ಬದಲಾವಣೆ ಮಾಡುತ್ತೀರಿ? ಈ ಆನ್ಸಿಲರಿ ಆ್ಯಕ್ಟಲ್ಲಿ ನೀವು ಸಬಸ್ಟ್ಯಾಂಟೀವ್ ಆಕ್ಟಲ್ಲಿ ಪ್ರೊವೈಡ್ ಮಾಡಿದಂಥ ವಿಚಾರಗಳನ್ನು ಹೇಗೆ ಬದಲಾವಣೆ ಮಾಡುತ್ತೀರಿ? I failed to understand this. I think, we require lot of time. I am very sorry, of course we should have got prepared and come here. But it involves very serious consequences.

I am telling you on the prima facie, reading of this bill.

ಸಿಡಿಪಿ. ಬದಲಾವಣೆ ಆಗುವುದಿಲ್ಲ, ಗ್ರೀನ್ ಬೆಲ್ಟ್ ಏತಕ್ಕೆ ಇರಬೇಕು? It amounts to repealing your CDP it self which you cannot do it ಆಮೇಲೆ Provide for regularisation of unauthorised construction which fall within the required set-off.

Set-off ಪ್ರೊವೈಡ್ ಮಾಡಲೇಬೇಕೆಂದು ಡೆಮಾಲಿಷನ್ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೀರಿ. ಇತ್ತೀಚೆಗೆ ಪತ್ರಿಕೆಗಳಲ್ಲೆಲ್ಲಾ ಕಾಣುತ್ತೇವೆ. ಬಿಡಿಎ ದವರು ಅದನ್ನೆಲ್ಲಾ ಡೆಮಾಲಿಷ್ ಮಾಡಬೇಕೆಂದು ಹೊರಟರು. set-off. ಡೆಮಾಲಿಷ್ ಮಾಡಬೇಕೆಂದು ಹೊರಟರೆ ಒಂದು ಕಡೆ ಈ Set-off ಅನ್ನು ಪ್ರೊವೈಡ್ ಮಾಡದಿದ್ದರೂ ರೆಗ್ಯೂಲರೈಸ್ ಮಾಡಬೇಕೆಂದು ಬಿಲ್ ನೀವು ತರುವುದಿದ್ದರೆ the entire House will be abetting this offence. Practically, everyone, who has constructed unauthorisedly without providing set-off, will be very happy.

ಇದು ಯಾರಿಗಾಗಿ ಮಾಡಿದ್ದು, ಬಡವರಿಗಾಗಿ ಮಾಡಿದ್ದಾ ಇದು? ಅನ್‌ಆಥರೈಸ್ಡ್ ಮುಖ್ಯವಾಗಿ ಜನ ಸಾಮಾನ್ಯರು, ಬಡವರು ಯಾರು ರೆವಿನ್ಯೂ ಲ್ಯಾಂಡ್‌ಗಳಲ್ಲಿ ಮನೆ ಕಟ್ಟಿಕೊಂಡಿದ್ದಾರೆ ಅವರಿಗೆ ರಿಲೀಫ್ ಕೊಡುವುದಕ್ಕೆ ತಂದಂಥ ಆ್ಯಕ್ಟನ್ನು ತಾವು ಬೇರೆ ಉದ್ದೇಶಕ್ಕೆ ಕೊಂಡೊಯ್ಯುತ್ತಿರತಕ್ಕ ಧಾಟಿ ನೋಡಿದರೆ ಬಹುಶಃ ಇದರ ಬಗ್ಗೆ ಚಿಂತನೆ ಮಾಡಲಿಲ್ಲವೆಂದು ನನ್ನ ಅಭಿಪ್ರಾಯ. I am attributing any malafides. But I can tell you, you cannot do it.

set-off ಯಾರು ಪ್ರೊವೈಡ್ ಮಾಡಬೇಕು? Set-off ನಲ್ಲಿ ಎಲ್ಲಾ ಕನ್‌ಸ್ಟ್ರಕ್ಷನ್ ಮಾಡಿ ಬಿಡುತ್ತಾರೆ.

ಶ್ರೀ ವೈಜನಾಥ ಪಾಟೀಲ್ : ಈ ಬಿಲ್‌ನಲ್ಲಿ ಪ್ರಾವಿಷನ್ ಇದೆ. ಯಾರಿಗೆ ಮನೆ ಇದೆ ಅಥವಾ ಸೈಟು ಇದೆ ಅಂಥವರಿಗೆ ರೆಗ್ಯುಲರೈಸ್ ಮಾಡುವುದಕ್ಕೆ ಅವಕಾಶ ಇಲ್ಲ.

ನಿಮ್ಮ ಕಾಲದಲ್ಲಿ ಮಾಡಿದ ಮೊದಲಿನ ಆ್ಯಕ್ಟಿನಲ್ಲಿ ಇದೆ ಡೆವಲಪ್‌ಮೆಂಟ್ ಅಥಾರಿಟೀಸ್ ಪ್ರಾಪರ್ಟಿ ಏನಿರುತ್ತದೆ ಅಲ್ಲ ರೆಗ್ಯುಲರೈಸೇಷನ್ ಮಾಡುವುದಕ್ಕೆ ಬಾರ್ ಇದೆ. ಎಲ್ಲಿ ಮುನಿಸಿಪಾಲಿಟಿ ಲ್ಯಾಂಡ್ ಇರುತ್ತದೆಯೋ ಅಲ್ಲಿ ನಾವು ರೆಗ್ಯುಲರೈಸ್ ಮಾಡುತ್ತಿಲ್ಲ ಈ ಆ್ಯಕ್ಟ್‌ಪ್ರಕಾರ. ಎಲ್ಲಿ ರೆವಿನ್ಯೂ ಲ್ಯಾಂಡ್ ಮತ್ತು ಗವರ್ನಮೆಂಟ್ ಲ್ಯಾಂಡ್ ಇದೆ ಅಲ್ಲಿ ಮಾತ್ರ ಮಾಡುವುದು. ಅದಕ್ಕೆ ಮೊದಲೇ ಪ್ರಾವಿಷನ್ ಇದೆ. ಕೆಲವು ಅಮೆಂಡ್‌ಮೆಂಟ್ಸ್ ಇವೆ. ಯಾರು ಮನೆ ಕಟ್ಟಿ ಕೊಳ್ಳುತ್ತಾರೆ ಅವರೆಲ್ಲರಿಗೂ ನಾವು ರೆಗ್ಯೂಲರೈಸ್ ಮಾಡುವುದಿಲ್ಲ. ಯಾರಿಗೆ ಸೈಟು ಇಲ್ಲ, ಮನೆ ಇಲ್ಲ ಅಂಥವರಿಗೆ ಮಾತ್ರ ರೆಗ್ಯೂಲರೈಸ್ ಮಾಡುವುದು.

ಶ್ರೀ ಎಂ. ವೀರಪ್ಪ ಮೊಯಿಲಿ : ಎರಡು ಫ್ಲೋರ್ ಕಟ್ಟಿದ್ದರೂ ರೆಗ್ಯೂಲರೈಸ್ ಮಾಡಬೇಕು ಅಂದರೆ ಎರಡು ಫ್ಲೋರ್ ಅನ್ನು ಜನತಾ ಮನೆ ಕಟ್ಟುತ್ತಾರೆಯೆ? ಕಡು ಬಡವರು ಕಟ್ಟುತ್ತಾರೆಯೇ? What is this contradiction ವೈಜನಾಥ ಪಾಟೀಲರೇ, ತಾವು ದಯವಿಟ್ಟು ಇದನ್ನು ಪರಿಶೀಲನೆ ಮಾಡಿ.

ಶ್ರೀ ವೈಜನಾಥ್ ಪಾಟೀಲ್ : ಮೊದಲು ಒಂದು ಕಾಲಕ್ಕೆ ಕಟ್ಟಿದ್ದಾರೆ, ಈಗ ಯಾವುದೂ ಇಲ್ಲ. ಸಧ್ಯ ನಾವು ಕಟ್ಟಲಿಕ್ಕೆ ಪರ್ಮಿಷನ್ ಕೂಡ ಕೊಡುತ್ತಿಲ್ಲ. ಮೊದಲು ಕಟ್ಟಿದ್ದನ್ನು ಡೆಮಾಲಿಷ್ ಮಾಡುವುದಕ್ಕೆ ಬರುವುದಿಲ್ಲ. ಉಳಿದ ಎಲ್ಲಾ ಪ್ರಾವಿಷನ್ ಏನಿದೆ ಇದು ಬಡವರಿಗೆ ಯಾರಿಗೆ ಸೈಟು ಇಲ್ಲ ಮನೆ ಇಲ್ಲ ಅಂಥವರಿಗೆ ಮಾತ್ರ. ಯಾರು ಅಂಥವರು ಮನೆ ಕಟ್ಟಿಸಿಕೊಂಡಿದ್ದಾರೆ ಅವರಿಗೆ ಮಾತ್ರ ರೆಗ್ಯೂಲರೈಸ್ ಮಾಡುತ್ತಿದ್ದೇವೆಯೇ ಹೊರತು ಬೇರೆಯವರಿಗೆ ಇಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ : ಹಾಗಾದರೆ ಬಡವರ ಡೆಫಿನಿಷನ್ ನಿಮ್ಮ ಪ್ರಕಾರ ಎರಡು ಫ್ಲೋರ್ ಯಾರು ಕಟ್ಟುತ್ತಾರೆ ಅವರೂ ಕೂಡ ಬಡವರು, ಗತಿ ಇಲ್ಲದವರು ವಸತಿಹೀನರು ಎಂದು ಹೇಳಿ ಆ ಡೆಫನಿಷನ್ ಅನ್ನು ಇದರಲ್ಲಿ ತರಿದುಬಿಡಿ. ನಮ್ಮ ಪ್ರಕಾರ ಬಡವರು ಎಂದರೆ ಎರಡು ಫ್ಲೋರ್ ಮನೆ ಕಟ್ಟಿದವರು ಎಂದು ಹೇಳಿ.

ಶ್ರೀ ವೈಜನಾಥ ಪಾಟೀಲ್ : 1991ನೇ ಆ್ಯಕ್ಟ್ ಪ್ರಕಾರ ಯಾರು ಎರಡು ಸ್ಟೋರೀಡ್ ಬಿಲ್ಡಿಂಗ್ ಅನ್‌ಆಥರೈಸ್ಡ್ ಆಗಿ ಕಟ್ಟಿದ್ದವರಿಗೂ ಕೂಡ ರೆಗ್ಯೂಲರೈಸ್ ಮಾಡುವುದು ಇದೆ. ಮೊದಲಿನ ಆ್ಯಕ್ಟಿನಲ್ಲಿ ಅದು ಇದೆ. ತಾವು ಅದನ್ನು ಪೂರ್ತಿ ಓದಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಪ್ರತಿಯೊಂದು ವಾಕ್ಯಕ್ಕೂ ಎದ್ದು ನಿಂತು ಮಾತನಾಡಿದರೆ ಅಡ್ಡಿಯಿಲ್ಲ, ಆದರೆ ದಯವಿಟ್ಟು ತಾವು ಸ್ವಲ್ಪ ಪರಾಂಭರಿಸಿ ನೋಡಿ. ತಮಗೆ ಇದರಲ್ಲಿ ತೃಪ್ತಿ ಕಾಣುತ್ತದೆಯೇ? ತಮ್ಮ ಪ್ರಕಾರ ಸರಿ ಇದೆ. ತಮ್ಮ ಉದ್ದೇಶ ಸರಿ ಇದ್ದರೆ ನಾವು ಅದನ್ನು ಟೀಕೆ ಮಾಡಲೇಬೇಕಾಗುತ್ತದೆ. ಅದನ್ನೇ ಹೇಳುವುದು ಸರಿಯಿಲ್ಲ ಎಂದು. ಸರಿ ಇದೆ ಎಂದು ತಾವು ಬಿಲ್ ತಂದಿದ್ದೀರಿ. ಎರಡು ಫ್ಲೋರ್ ಹೇಳಿದರಲ್ಲಾ ಅದಕ್ಕೆ ಸೆಟ್‌ಆಫ್ ಕೊಡದೆ ಮಾಡಿದರೂ ಕೂಡ ರೆಗ್ಯುಲರೈಸ್ ಮಾಡಬೇಕು. ಅದು ಸರಿಯೇ? you are minister incharge of urban development. You most know town-planning.

ಈಗ ಟೌನ್ ಪ್ಲಾನಿಂಗ್ ಸಿದ್ಧಾಂತಕ್ಕೆ ವಿರುದ್ಧವಾಗಿ ರೆಗ್ಯುಲರೈಸ್ ಮಾಡಿ ಎಂದು ಹೇಳತಕ್ಕದ್ದು ಆದರೆ ತಮ್ಮ ಕೈಯಲ್ಲಿ ಟೌನ್ ಪ್ಲಾನಿಂಗ್ ಸೇಫ್ ಆಗಿ ಉಳಿಯುವುದಕ್ಕೆ ಸಾಧ್ಯವಿದೆಯೇ? ದಯವಿಟ್ಟು ತಾವು ಆಲೋಚನೆ ಮಾಡಿ. ಆಮೇಲೆ ರೆಗ್ಯುಲರೈಸ್ ಅನ್‌ಆಥರೈಸ್ಡ್ ಇತ್ಯಾದಿ.

"To provide for regularisation of unauthorised construction having more than two floors..." ಈಗ ಎರಡು ಫ್ಲೋರ್ಸ್ ಏತಕ್ಕೆ? 5 ಫ್ಲೋರ್ಸ್ ಇದ್ದರೂ ಎಂದು ಮಾಡಿಬಿಡಿ. ಪಾಪ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟಿನಲ್ಲಿ ಅನೇಕರ ಕೇಸ್‌ಗಳು ಪೆಂಡಿಂಗ್ ಇದೆ. It can be five Floors also.

ಶ್ರೀ ಆರ್.ಎಲ್. ಜಾಲಪ್ಪ : ಸ್ವಾಮಿ, ಹಿಂದಿನ ಆ್ಯಕ್ಟ್‌ನಲ್ಲಿ ಎರಡು ಫ್ಲೋರ್‌ವರೆಗೆ ರೆಗ್ಯುಲರೈಸ್ ಮಾಡಬೇಕು ಎಂದು ಇತ್ತು. not more than two floors ಅಂತ, Suppose he has got three floors can we demolish it now? set off and other things, I agree ರೋಡ್ ಇರಬೇಕು, ಎಲ್ಲಾ ಇರಬೇಕು That I agree we will

have a second look in the Bill, ಆದರೆ ಈವತ್ತು 3 ಫ್ಲೋರ್ ಇದ್ದುದನ್ನು ಏನು ಬುಲ್ಡೋಜ್ ಮಾಡುತ್ತೀರಾ? ಎರಡು ಫ್ಲೋರ್‌ಗೆ ನೀವು ಪರ್ಮಿಷನ್ ಕೊಟ್ಟಿದ್ದೀರಿ. ಹಿಂದಿನ ಬಿಲ್‌ನಲ್ಲಿ ತಾವೇ ಒಪ್ಪಿಕೊಂಡಿದ್ದೀರಿ. ಎಲ್ಲರದೂ ಇಲ್ಲ ಅಕಸ್ಮಾತ್ ಅಲ್ಲೊಂದು ಇಲ್ಲೊಂದು ಇರಬಹುದು. ಅದನ್ನು ಬುಲ್ಡೋಜ್ ಮಾಡುವುದಕ್ಕಾಗುತ್ತದೆಯೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಅದಲ್ಲ ಜಾಲಪ್ಪನವರೇ. ಎರಡು ಫ್ಲೋರ್ ಇದ್ದುದನ್ನು ಮೂರು ಫ್ಲೋರ್ ಕಟ್ಟುವವರೆಗೂ ಅಧಿಕಾರಿಗಳೂ ಬದುಕಿದ್ದರೋ ಸತ್ತಿದ್ದರೋ? ಏನು ಸ್ವಾಮಿ ಇದು? ಏನು ಹೇಳುತ್ತಿದ್ದೀರಿ ನೀವು?

ಶ್ರೀ ಆರ್.ಎಲ್. ಜಾಲಪ್ಪ : 9 ತಿಂಗಳಲ್ಲಿ ಆಗಿರುವುದಲ್ಲ ಸ್ವಾಮಿ ಇದು. 3-4 ವರ್ಷದಿಂದ ಬಂದಿದ್ದು. ಅನ್‌ಆಥರೈಸ್ಡ್ ಕನ್‌ಸ್ಟ್ರಕ್ಷನ್ಸ್ ಕನ್‌ಫರ್ಮ್ ಮಾಡಬೇಕು ಎಂದು ಹಿಂದಿನ ಸರ್ಕಾರವೇ ತೀರ್ಮಾನ ತೆಗೆದುಕೊಂಡಿತ್ತು. 9 ತಿಂಗಳಲ್ಲಿ ಅಲ್ಲ ಬಂದಿರುವುದು. Prevention of unauthorised construction department ಇದೆಯಲ್ಲಾ That is the production of unauthorised constructions.

ಅಧ್ಯಕ್ಷರು : ವಿರೋಧಪಕ್ಷದ ನಾಯಕರು ಹೇಳಿದ್ದುದು 9 ತಿಂಗಳದಾಗಲೀ ಹಿಂದಿನದಾಗಲೀ ಇದನ್ನೆಲ್ಲಾ ತಡೆಗಟ್ಟುವುದಕ್ಕೆ ಆಫೀಸರ್ಸ್ ಇರುತ್ತಾರಲ್ಲಾ ಅವರೆಲ್ಲಾ ಕಂಪ್ಲೀಟಾಗಿ ಫೈಲ್ ಆದ ಹಾಗೆ ತಾನೆ? ಆದರಿಂದ the Government should spell out in clear terms as to how you are going to deal with those officers.

Sri R.L. JALAPPA : That is a seperate question. We will deal it separately.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಬಿಲ್‌ನಲ್ಲಿ ನಗರದಲ್ಲಿರಲಿ, ಹಳ್ಳಿಯಲ್ಲಿರಲಿ, ನಗರದ ಬಗ್ಗೆ ಮಾತನಾಡುತ್ತಿದ್ದೇವೆ. ಇದರಲ್ಲಿ ಬಡವರಿಗೆ ಅನುಕೂಲ ಮಾಡಿಕೊಡುವಂಥ ಯಾವುದೇ ಅಂಶ ಇದ್ದರೆ ಅವರು ಏನೇ ಅಕ್ಷಮ್ಯ ಅಪರಾಧ ಮಾಡಿದ್ದರೂ ಆ ಬಡವರಿಗೆ ಖಾಯಂ ಮಾಡಿಕೊಡುವುದಕ್ಕೆ ನಮ್ಮ ಅಭ್ಯಂತರ ಇಲ್ಲ. ಈ ಬಿಲ್ಲಿನ ಮೂಲಕ ಎರಡು ಫ್ಲೋರ್ ಮೂರು ಫ್ಲೋರ್, ನಾಲ್ಕು ಫ್ಲೋರ್ ಕಾನೂನುಬಾಹಿರವಾಗಿ ಕಟ್ಟಿರುವಂಥ ಕೋಟ್ಯಾಧಿಪತಿಗಳನ್ನು ರಕ್ಷಣೆ ಮಾಡುವುದು ಯಾವುದಿದೆ. ಅದರ ಬಗ್ಗೆ ನನಗನ್ನಿಸುತ್ತದೆ, ತಾವು ಇದನ್ನು ಗಂಭೀರವಾಗಿ ಸ್ಟಡಿ ಮಾಡಿದ್ದರೆ ಈ ಬಿಲ್ಲನ್ನು ತರುತ್ತಿರಲಿಲ್ಲ. ನನಗೆ ಅನ್ನಿಸುತ್ತದೆ ಜೆ.ಎಚ್. ಪಟೇಲರು ತಮ್ಮಂಥವರು ಇರುವುದರಿಂದ ಇದನ್ನು ನೋಡಿಬಿಟ್ಟು ಗೌರವದಿಂದ ವಿತ್‌ಡ್ರಾ ಮಾಡಿಕೊಂಡು ಬೇರೆ ರೂಪದಲ್ಲಿ ಬಡವರಿಗೆ ಅನುಕೂಲವಾಗುವ ರೀತಿಯಲ್ಲಿ ತರೋಣ. ಒಂದು ಕಡೆ ಗ್ರೌಂಡ್ ಫ್ಲೋರ್‌ನಲ್ಲಿ ಬಿಲ್ಡಿಂಗ್ ಕಟ್ಟುವವರ ಬಿಲ್ಡಿಂಗ್ ಎಲ್ಲಾ ಒಡೆಯುವಂಥದ್ದು ಮಾಡಿದಿರಿ, ನಾವು ಅಪ್ರಿಷಿಯೇಟ್ ಮಾಡಿದೆವು ನಿಮ್ಮನ್ನು. ಇನ್ನೊಂದು ಕಡೆ ಎರಡು ಫ್ಲೋರ್ ಇರುವುದನ್ನು ಮೂರು ಕಟ್ಟಿಕೊಂಡರು, ನಾಲ್ಕು ಕಟ್ಟಿಕೊಂಡರು. ಆದರೆ ಅವರಿಗೆ ಗೊತ್ತಿತ್ತು. ನೀವು ಕಟ್ಟಿ ಎಂದು ಕಣ್ಣುಮುಚ್ಚಿ ಕೊಂಡು ಕುಳಿತುಕೊಂಡು. ಕೋಟಿಗಟ್ಟಲೆ ಕೈ ಬದಲಾಯಿಸಿಕೊಂಡು, ಈಗ ಕನ್‌ಫರ್ಮ್ ಮಾಡಬೇಕು ಎನ್ನುವ ತೀರ್ಮಾನವನ್ನು ನಾವು ತೆಗೆದುಕೊಳ್ಳುವುದಾದರೆ ನಾವು ಇಲ್ಲಿ ಬರಬೇಕಾ ಸ್ವಾಮಿ ಜನತೆಯ ಪ್ರತಿನಿಧಿಗಳಾಗಿ? ನಾವು ಬಡವರ ಬಗ್ಗೆ ಯೋಚನೆ ಮಾಡೋಣ. ಅವರಿಗೆ ರಕ್ಷಣೆ ಕೊಡುವ ಬಗ್ಗೆ ಯೋಚನೆ ಮಾಡೋಣ. ನಿಮ್ಮ ಬಾಯಿನಿಂದ ಇದನ್ನು ನಾನು ನಿರೀಕ್ಷೆ ಮಾಡಿರಲಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ಅಲ್ಲಿ ಮನೆ ಕಟ್ಟಿರುವವರೆಲ್ಲಾ ಕೋಟ್ಯಾಧೀಶ್ವರರೇನಲ್ಲ, ಎಲ್ಲಾ ಸಣ್ಣಪುಟ್ಟ ಮನೆಗಳು ಬೇಕಾದಷ್ಟಿವೆ. ಮೂರು ಫ್ಲೋರ್

ಇರುವುದು ಎಷ್ಟಿರಬಹುದು? 1 ಅಥವಾ 2 ಪರ್ಸೆಂಟ್ ಕೂಡ ಇಲ್ಲ. ಮಿಕ್ಕದ್ದೆಲ್ಲವೂ ಬಡವರು ಕಟ್ಟಿಕೊಂಡಿರುವ ಮನೆಗಳೇ ರೆವಿನ್ಯೂ ಸೈಟ್ ತೆಗೆದುಕೊಂಡು ಮನೆ ಕಟ್ಟಿಕೊಂಡು ಹೋದರು ಅವರು ಈಗ. ಈಗ ಅದನ್ನು ಏನು ಮಾಡುತ್ತೀರಿ? ಸಾವಿರಾರು ಮನೆ ಇವೆ. 5 ಸಾವಿರ 6 ಸಾವಿರ ಮನೆ ಇವೆ. ಅದನ್ನು ಬುಲ್ಡೋಜ್ ಮಾಡುವುದಕ್ಕಾಗುತ್ತದಾ? ಇದು ಸಾಧ್ಯವೇ? ಆದ್ದರಿಂದ ಹಿಂದಿನ ಸರ್ಕಾರವೇ ಯೋಚನೆ ಮಾಡಿ. in their own wisdom.

Sri Y. RAMAKRISHNA : Make it an workable Act. ವರ್ಕಬಲ್ ಆ್ಯಕ್ಟ್ ತೆಗೆದುಕೊಂಡು ಬನ್ನಿ.

Sri R.L. JALAPPA : When previous Act was workable, This Act is also workable. One thing I agree with the Hon'ble Former chief Minister, ಗ್ರೀನ್‌ಬೆಲ್ಟ್‌ನಲ್ಲಿರುವುದು ಅದನ್ನು ರೆಗ್ಯುಲರೈಸ್ ಮಾಡುವುದು ನಮಗೂ ಅಷ್ಟು ಸರಿ ಕಾಣಿಸುತ್ತಿಲ್ಲ. ನೋಡೋಣ. ಬೇಕಾದರೆ ರೀಕನ್‌ಸಿಡರ್ ಮಾಡೋಣ ಅದನ್ನು. ತಾವು ಈ ಬಿಲ್ ಒಪ್ಪಿಕೊಳ್ಳಿ. ತಾವು ಏನು ಸಲಹೆಗಳನ್ನು ಕೊಟ್ಟಿದ್ದೀರಿ ನಾವು ಅದನ್ನು ಕ್ಯಾರಿ ಔಟ್ ಮಾಡುತ್ತೇವೆ. ಅದನ್ನು ಗಮನದಲ್ಲಿಟ್ಟುಕೊಂಡು ಎಕ್ಸಿಕ್ಯೂಟ್ ಮಾಡುವಾಗ ಅದನ್ನು ಎಕ್ಸಿಕ್ಯೂಟ್ ಮಾಡುತ್ತೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಹಿರಿಯ ಸಚಿವರು ತಾವೇ ಒಪ್ಪುತ್ತೀರಿ. ಗ್ರೀನ್‌ಬೆಲ್ಟ್ ಇದ್ದದ್ದು ತೆಗೆಯುವುದಕ್ಕಾಗುವುದೇ ಇಲ್ಲ ಡೀನೋಟಿಫೈ ಮಾಡಿ. ಅದನ್ನು ಸರಿ ಮಾಡಬೇಕಾದರೆ ಲೆಜಿಸ್ಲೇಚರ್‌ನಲ್ಲಿ ಇನ್ನೊಂದು ಆ್ಯಕ್ಟ್ ಬರಬೇಕು. ಈಗ ಅದನ್ನೂ ರೆಗ್ಯುಲರೈಸ್ ಮಾಡುವುದಕ್ಕೆ ಮಾಡಿದ್ದೀರಿ. ಹಾಗಾದರೆ ಗ್ರೀನ್‌ಬೆಲ್ಟ್ ಕಾನ್‌ಸೆಪ್ಟ್ ಏನು ಉಳಿಯುತ್ತದೆ? ಎಲ್ಲಿ ಉಳಿಯುತ್ತದೆ? ಏನೋ ಒಂದು ಸಣ್ಣ ಗುಡಿಸಲು ಕಟ್ಟುತ್ತಾನೆ. ಅದನ್ನು ಮಾಡಿ ಎಂದು ಹೇಳಿ ಮಾಡುತ್ತಾರೆ. This is what is being done. ತಮಗೆ ಗೊತ್ತಿದೆ. ಅನೇಕ ಕಡೆ ಇವತ್ತು. ಅಮೇಲೆ ಎರಡು ಫ್ಲೋರ್ಸ್ ಎಂದು ಹೇಳಿ ಅನೇಕ ಕೇಸ್‌ಗಳು ಇವತ್ತು ಸುಪ್ರೀಂ ಕೋರ್ಟ್ ಹೈಕೋರ್ಟ್‌ಗಳಲ್ಲಿ ಶ್ರೀಮಂತರದ್ದೇ ಮಲ್ಟಿಸ್ಟೋರೀಡ್ ಬಿಲ್ಡಿಂಗ್‌ಗಳನ್ನು ಕಟ್ಟಿದ್ದು. This is an indirect way of circumventing on those Supreme Court's decision or the High Court's decision or the cases pending.

ಅಲ್ಲಿ ಪೆಂಡಿಂಗ್ ಇರತಕ್ಕದ್ದನ್ನು ಕೂಡ ಇಲ್ಲಿ ಪ್ರೊವೈಡ್ ಮಾಡಿದೆ. Don't Provide under this act.

ಶ್ರೀ ಆರ್.ಎಲ್. ಜಾಲಪ್ಪ : ಎರಡು ಫ್ಲೋರ್‌ಗೆ ಲೈಸೆನ್ಸ್ ತೆಗೆದುಕೊಂಡು ಮೂರು ಫ್ಲೋರ್ ಐದು ಫ್ಲೋರ್ ಕಟ್ಟಿರುವವರ ಕೇಸ್‌ಗಳು ಹೈಕೋರ್ಟಿನಲ್ಲಿರುವುದು. ಈ ಅನ್‌ಆಥರೈಸ್ಡ್ ಕನ್‌ಸ್ಟ್ರಕ್ಷನ್ಸ್‌ದಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಎರಡು ಫ್ಲೋರ್‌ಗೆ ಲೈಸೆನ್ಸ್ ತೆಗೆದುಕೊಂಡು 3 ಫ್ಲೋರ್ ಕಟ್ಟಿದರೂ ಅನ್‌ಆಥರೈಸ್ಡೇ ಅದು.

ಶ್ರೀ ಆರ್.ಎಲ್. ಜಾಲಪ್ಪ : ಇದು ರೆವಿನ್ಯೂ ಸೈಟ್ಸ್. ಕಾರ್ಪೊರೇಷನ್‌ದೂ ಅಲ್ಲ ಬಿ.ಡಿ.ಎ.ದೂ ಅಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಬಿ.ಡಿ.ಎ. ಅಲ್ಲ. ಪ್ರೈವೇಟ್ ಸೈಟ್.

ಶ್ರೀ ಬಿ.ಎಸ್. ಯಡಿಯೂರಪ್ಪ : ಕೆರೆ, ಗೋಮಾಳ, ಬೆಂಗಳೂರು ಸುತ್ತಮುತ್ತ ಇರತಕ್ಕ ಕೆರೆಕಟ್ಟೆಗಳು ಕೋಟ್ಯಾಂತರ ರೂಪಾಯಿ ಬೆಲೆ ಬಾಳುವುದು ಲೂಟಿಯಾಗಿದೆ. ಅದಕ್ಕೇ ಕನ್‌ಫರ್ಮ್ ಮಾಡುವುದಕ್ಕೆ ಹೊರಟಿರುವುದು ನೀವು.

ಶ್ರೀ ವೈಜನಾಥ ಪಾಟೀಲ್ : 1992ರಲ್ಲಿ ಆಗಿದ್ದಕ್ಕೆ ಕೆಲವು ಅಮೆಂಡಮೆಂಟ್ಸ್ ಮಾತ್ರ ತಂದಿದ್ದೇವೆ. ಈ ಬಿಲ್ ನಾವು ಮಾಡಿದ್ದಲ್ಲ.

ಅಧ್ಯಕ್ಷರು : ಮೊಯಿಲಿಯವರೇ. ತಾವು ಕನ್‌ಕ್ಲೂಡ್ ಮಾಡಿದರೆ ಶ್ರೀಮತಿ ಪ್ರಮೀಳ ಅವರು ಮಾತನಾಡುತ್ತಾರೆ. ತಾವು ಕನ್‌ಕ್ಲೂಡ್ ಮಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಇನ್ನೊಂದು ಪಾರ್ಟ ಇತ್ತು. ಕಮರ್ಷಿಯಲ್ ಪರ್ಪಸ್‌ಗೆ ಕೂಡ ಹಾಕಿದ್ದೆವು. ಕಮರ್ಷಿಯಲ್ ಪರ್ಪಸ್‌ಗೆ ಇಷ್ಟು ಉದ್ದ ಇಷ್ಟು ಅಗಲ ಇರಬೇಕು ಎಂದು ಹೇಳಿ ಸ್ಮಾಲ್ ವೆಂಡರ್ಗಳನ್ನು ಮಾತ್ರ ರೆಗ್ಯುಲರೈಸ್ ಮಾಡಬೇಕೆಂಬುದು ನಮ್ಮ ಉದ್ದೇಶ ಇತ್ತು. ನೀವು ಏನು ಮಾಡಿದ್ದೀರಿ? ನೀವು ಕಮರ್ಷಿಯಲ್ ಕಾಂಪ್ಲೆಕ್ಸ್ ಮಾಡಿದ್ದರೂ ಕೂಡ ಅದನ್ನು ರೆಗ್ಯುಲರೈಸ್ ಮಾಡತಕ್ಕಂಥ ಅವಕಾಶ ನೀವು ಪ್ರೊವೈಡ್ ಮಾಡಿದ್ದೀರಿ. ಇದರ ಮಿತಿ sky is the limit for regularisation. There is no limit at all. It is in voilation of the Karnataka parks play fields and Open Spaces (Preservation and Regulation) Act, 1985.

ಏನಿದೆ ಅರ್ಥ? ಒಂದು ಪಾರ್ಕಿಗೆ ಇರುವ ಜಾಗಕ್ಕೆ ಕೂಡ ಮತ್ತೆ ಇಲ್ಲಿ ಅಮೆಂಡ್‌ಮೆಂಟ್ ತರಬೇಕು. ಷೆಡ್ಯೂಲ್‌ನಲ್ಲಿ ಹಾಕಿರುತ್ತಾರೆ ಇಂಥ ಪಾರ್ಕ್‌ಗಳು ಎಂದು ಹೇಳಿ. ಆ ಷೆಡ್ಯೂಲ್‌ನಲ್ಲಿ ಹಾಕಿದ ಮೇಲೆ ಆ ಪಾರ್ಕ್‌ಗಳನ್ನು ಪಾರ್ಕ್‌ಗಳಿಗೆ ಜಾಗ ಸೀಮಿತವಾದದ್ದು ಕೂಡ ಇವತ್ತು ರೆಗ್ಯುಲರೈಸ್ ಮಾಡಬೇಕು ಎಂದು ಹೇಳಿ ಹೊರಟರೆ ಯಾವ ಪಾರ್ಕ್‌ಗಳು ಉಳಿಯುತ್ತದೆಯ you cannot do it It will annul again ಪಾರ್ಕ್ ಆ್ಯಕ್ಟ್ ಎಂದು ಇದೆ ಅಧ್ಯಕ್ಷರೇ. ಆ ಪಾರ್ಕ್ ಆ್ಯಕ್ಟ್‌ನಲ್ಲಿ ಏನು ನಾವು ಪ್ರಿಸರ್ವೇಷನ್ ಮತ್ತು ಪ್ರೊಟೆಕ್ಷನ್‌ಗೆ ಪ್ರೊವೈಡ್ ಮಾಡುತ್ತೇವೆ. ಅದನ್ನೆಲ್ಲಾ ಈ ಆ್ಯಕ್ಟ್ ಮುಖಾಂತರ surreptitously we are taking it away. How can it happen?

ಇದಕ್ಕೆ ಸ್ಕ್ರೀನಿಂಗ್ ಕಮಿಟಿ ಎಂದು ಇತ್ತು. ಈಗ ಬರೀ ಒಬ್ಬ ಕಾಂಪಿಟೆಂಟ್ ಅಥಾರಿಟಿ. ಈ ಕಾಂಪಿಟೆಂಟ್ ಅಥಾರಿಟಿ ಆರ್ಡರ್ ಕೊಟ್ಟರೆ it is a final order. Some KAS officr or senior officer I can understand, ಒಂದು ಸ್ಕ್ರೀನಿಂಗ್ ಕಮಿಟಿ ಇದ್ದರೆ ಒಳ್ಳೆಯದು ನಾವು ನಾನ್ ಅಫಿಷಿಯಲ್ಸ್ ಹಾಕಿದ್ದೆವು. ನೀವು ನಾನ್ ಅಫಿಷಿಯಲ್ಸ್ ಬೇಡ ಎಂದು ಹೇಳಿದರೆ ಎರಡು ಮೂರು ಆಫೀಸರ್ಸ್‌ನ್ನು ಮಾಡಬಹುದಿತ್ತು. ಅದರ ಮೇಲೆ ಡೈರೆಕ್ಟಾಗಿ ಸ್ಟೇಟ್ ಗೌರ್ನಮೆಂಟ್‌ಗೆ ಅಪೀಲ್ ಹಾಕಬೇಕು. ಇಂಟರ್‌ಮೀಡಿಯೆಟ್ ಯಾವುದೂ ನೀವು ಪ್ರೊವೈಡ್ ಮಾಡಿಲ್ಲ, can you Imagine the Order of the that kind is directly appealable to the State Government ಕಾಂಪಿಟೆಂಟ್ ಅಥಾರಿಟಿ ಮಾಡಿ ಏನು ಪ್ರಯೋಜನ ತಾವು? That means you keep it open ಸ್ಟೇಟ್ ಗೌರ್ನಮೆಂಟಿನಿಂದ ಅಂದರೆ ವಿಧಾನಸೌಧದಿಂದ ಎಲ್ಲಾ ಕಂಟ್ರೋಲ್ ಮಾಡತಕ್ಕಂಥ ಒಂದು ಪರಿಸ್ಥಿತಿ ಇದರಿಂದ ಉದ್ಭವವಾಗುತ್ತದೆ. ಅಧ್ಯಕ್ಷರೇ, ಇದು ಯಾವ ಒಂದು ಸ್ಟ್ಯಾಂಡರ್ಡ್‌ಗೂ ಕೂಡ ನಿಲುಕುವುದಿಲ್ಲ, ನಾರ್ಮ್ಸ್ ಇರಬೇಕು, ಒಂದು ಸ್ಟಾಂಡರ್ಡ್ ಇರಬೇಕು. ಒಂದು ಆ್ಯಕ್ಟ್ ಮಾಡುವಾಗ ಒಂದು ಸ್ಕೀಂ ಇರುತ್ತದೆ. ಅದು ಸ್ಕೀಮೂ ಇಲ್ಲ ಪರ್ಪಸ್ಸೂ ಇಲ್ಲ, ಈ ತರಹ ನೀವು ಒಂದು ಮಸೂದೆಯನ್ನು ತಂದರೆ that is the abusive of the legisltive

powers ಎಂದು ನಾನು ಕ್ಲೀನಾಗಿ ಹೇಳಬೇಕಾಗುತ್ತದೆ. ಆದ್ದರಿಂದ ದಯಮಾಡಿ ಇದನ್ನು ಹಿಂದೆ ತೆಗೆದುಕೊಳ್ಳಿ. ಹಿಂದೆ ತೆಗೆದುಕೊಂಡು ವಿಚಾರ ಮಾಡಿ. ತಜ್ಞರ ಹತ್ತಿರ ವಿಚಾರ ಮಾಡಿರಿ. ಆಮೇಲೆ ಈ ಮಸೂದೆಯನ್ನು ನೀವು ಪುನಃ ತರಬೇಕು. ಮತ್ತೆ the central theme of the Act should be to protect the common man and weaker sections. ಆ ಪರಿದಿಗೆ ಇದು ಧಾಟಿ ಸಿಂಹೋಲಂಘನೆ ಮಾಡಿ ಆಕ್ಟ್ ಮಾಡುತ್ತಾ ಖಂಡಿತವಾಗಿ ಯಾರೋ ಪಟ್ಟಭದ್ರಹಿತಾಸಕ್ತಿಗಳಿಗೆ ಸಹಾಯ ಮಾಡಲಿಕ್ಕೆ ನೀವು ಮಾಡುತ್ತಾ ಇದ್ದೀರಿ ಎಂದು ನಾವು ದೋಷಾರೋಪಣೆ ಮಾಡಬೇಕಾಗುತ್ತದೆ.

+ ಶ್ರೀಮತಿ ಪ್ರಮೀಳ ನೇಸರ್ಗಿ (ಚಾಮರಾಜಪೇಟೆ) : ಮಾನ್ಯ ಸಭಾಧ್ಯಕ್ಷರೆ, ಈ ಬಿಲ್ ನೋಡಿದಾಗ ನನಗೆ ಅನ್ನಿಸಿತು ನಮ್ಮ ಸರ್ಕಾರದಲ್ಲಿ ನಿಜವಾಗಿಯೂ ಕಾನೂನು ಇಲಾಖೆ ಎನ್ನುವುದು ಇದೆಯೇ ಎಂದು. ನಿಜವಾಗಿ ಆಶ್ಚರ್ಯ ಆಗುತ್ತದೆ. ನಿಜವಾಗಿ ಕಾನೂನು ಮಂತ್ರಿಗಳೂ ಇದನ್ನು ನೋಡಬೇಕಾದ ವಿಷಯ. ಬುದ್ಧಿಜೀವಿಗಳು ಇರತಕ್ಕ ನಮ್ಮ ಕರ್ನಾಟಕ ರಾಜ್ಯದಲ್ಲಿ ಸುಂದರವಾದ ಪ್ರದೇಶ ಅಂದರೆ ಮೈಸೂರು ಎಂಬುದು ಹೆಸರುವಾಸಿ. ಈ ಆ್ಯಕ್ಟನ್ನು ನೋಡಿದರೆ ಏನನ್ನಿಸುತ್ತದೆ ಎಂದರೆ ಸುಂದರವಾದ ಕರ್ನಾಟಕವನ್ನು ವಿಕೃತಗೊಳಿಸುವುದು ಹೇಗೆ. ಹಾಗೆ ಮಾಡಬೇಕಾದರೆ ಇಂಥಹ ಆ್ಯಕ್ಟ್ ತಂದರೆ ಸಾಧ್ಯ ಎಂದು ಅಂದುಕೊಂಡು ಪ್ರಾಯಶಃ ಇದನ್ನು ತಂದಿದ್ದಾರೆ ಎಂದು ನಾನು ಅಂದುಕೊಂಡಿದ್ದೇನೆ.

ನಾನು ನೇರವಾಗಿ ಹೇಳುತ್ತಿದ್ದೇನೆ. ಇಡೀ ಕರ್ನಾಟಕ ರಾಜ್ಯವನ್ನು ವಿಕೃತ ಗೊಳಿಸುವಂಥ ಕಾನೂನು ಇದಾಗಿದೆ. ಈ ಕಾನೂನಿನಲ್ಲಿ ಅದು ಕೇಂದ್ರ ಸರ್ಕಾರದ ಕಾಯ್ದೆಯಾಗಲೀ ಅಥವಾ ಸ್ಥಳೀಯ ಸರ್ಕಾರದ ಕಾಯ್ದೆಯಾಗಲೀ ಇದುವರೆವಿಗೂ ತಂದಿರತಕ್ಕ ಎಲ್ಲಾ ಕಾನೂನುಗಳಿಗೂ ಕೂಡ ಅಡಚಣೆ ತಂದಿರುವ ಕಾನೂನು ಇದಾಗಿದೆ. Not Withstanding the provisions contained in the Urban Act ಎಂದು ಇಲ್ಲ, ಸಿ.ಡಿ.ಪಿ. ಪ್ರಾವಿಷನ್ಸ್ ಎಂದು ಇಲ್ಲ, ಜೋನಲ್ ರೆಗ್ಯುಲೇಷನ್ಸ್ ಎಂದೂ ಕೂಡ ಇಲ್ಲ. ಆದರೆ ಇದರ ಬಗ್ಗೆ ನನಗೆ ಆಶ್ಚರ್ಯವಾಗುತ್ತದೆ. ನೀವು ಎಲ್ಲಾ ಕಾನೂನುಗಳನ್ನು ಗಾಳಿಗೆ ತೂರಿ ಇದೊಂದು ಕಾನೂನನ್ನು ಯಾರಿಗೋಸ್ಕರ ತಂದಿದ್ದೀರಿ? ಯಾವ ಮನೆಗಳನ್ನು ರೆಗ್ಯುಲರೈಸ್ ಮಾಡುವುದಕ್ಕೆ ಈ ಕಾನೂನನ್ನು ತಂದಿದ್ದೀರಿ? ಪಾರ್ಕಿನಲ್ಲಿ ಮನೆ ಕಟ್ಟಿದರೂ ರೆಗ್ಯುಲರೈಜೇಷನ್ ಫುಟ್‌ಪಾತಿನಲ್ಲಿ ಅಂಗಡಿಗಳನ್ನು ಕಟ್ಟಿದರೆ ರೆಗ್ಯುಲರೈಜೇಷನ್ ನಾನು ಇದರ ಬಗ್ಗೆ ಇವತ್ತು ತಮನ್ನು ಕೇಳುತ್ತಿರುವುದು ಏನೆಂದರೆ, ಅಂಡರ್‌ಗ್ರೌಂಡ್ ಡ್ರೈನೇಜ್ ಏನಾಗಬೇಕು? ನಮ್ಮಲ್ಲಿ ವಾಟರ್ ಅಂಡ್ ಸ್ಯುವರೇಜ್ ಬೋರ್ಡ್ ಎನ್ನುವ ವ್ಯವಸ್ಥೆ ಇರುವುದಾದರೆ ಈ ಕಾನೂನನ್ನು ಗಾಳಿಗೆ ತೂರಿ ಆ ಪಾರ್ಕಿನಲ್ಲಿ ರಸ್ತೆಯಲ್ಲಿ ಫುಟ್‌ಪಾತಿನಲ್ಲಿ ಮನೆಗಳನ್ನು ಕಟ್ಟಿದ್ದು, ರೆವಿನ್ಯೂ ನಿವೇಶನಗಳಲ್ಲಿ ಯದ್ವಾತದ್ವಾ ಮನೆಗಳನ್ನು ಕಟ್ಟಿದ್ದು ಅದನ್ನು ನೀವು ರೆಗ್ಯುಲರೈಜೇಷನ್ ಮಾಡಿದರೆ ವಾಟರ್ ಅಂಡ್ ಸ್ಯೂವರೇಜ್ ಬೋರ್ಡ್ ಅನ್ನು ಕಿತ್ತು ಹಾಕಿ. ಆ ಬೋರ್ಡ್ ನಮಗೆ ಏಕೆ ಬೇಕು? ಹಳೆಯ ಕಾಲದಲ್ಲಿ ಕಾಡು ಇತ್ತಲ್ಲಾ law of Jungle ಗೆ ಹೋಗುವುದಾದರೆ ನೀವು ಇಂತಹ ಕಾನೂನು ತನ್ನಿ. This is a law which cannot be workable. ಇದರಿಂದ ಯಾರಿಗೂ ಕೂಡ ಒಳ್ಳೆಯದಾಗುವುದಿಲ್ಲವೆಂದು ನನಗನ್ನಿಸುತ್ತದೆ. ಇದರಲ್ಲಿ ತಾವು ನೋಡಬೇಕು, ಆಬ್ಜೆಕ್ಟ್ ಅಂಡ್ ರೀಸನ್ಸ್ ಎಂದು ಇದೆ. ಇದು ಯಾರಿಗೆ? ಇವರಿಗೆ ಸೆಟ್-ಆಫ್ ಬೇಡ. ನಾವು ಎಷ್ಟೋ ಬೈ-ಲಾಗಳನ್ನು ಮಾಡಿದ್ದೇವೆ. ನಾವು ಮುನಿಸಿಪಲ್, ಕಾರ್ಪೋರೇಷನ್ ಬೈ-ಲಾಗಳನ್ನು ಮಾಡಿ ಇಷ್ಟೇ ಸೆಟ್-ಆಫ್ ಇಡಬೇಕೆಂದು ಹೇಳಿದ್ದೇವೆ, ಕಟ್ಟಡವನ್ನು ಈ ರೀತಿ ನಿರ್ಮಿಸಬೇಕೆಂದು ಹೇಳಿದ್ದೇವೆ.

ಒಂದು ಮನೆಯನ್ನು ಅನಧಿಕೃತವಾಗಿ ಕಟ್ಟಿದ್ದರೆ ಅವರಿಗೆ ದಂಡ ವಿಧಿಸಬೇಕು. ದಂಡ ವಿಧಿಸಬೇಕಾದರೆ ಡೀವಿಯೇಷನ್ ಇಷ್ಟಿರಬೇಕು, ಇದಕ್ಕಿಂತ ಮಿತಿ ಮೀರಿದ್ದರೆ ಡೀವಿಯೇಷನ್ ಆಗುವುದಿಲ್ಲವೆಂದು ಕೂಡ ಕಾನೂನನ್ನು ತಂದಿದ್ದೇವೆ. ಅಂದರೆ ಎಷ್ಟಾದರೂ ಡೀವಿಯೇಷನ್ ಆಗಲಿ, ಎಷ್ಟಾದರೂ ಮಹಡಿ ಮನೆಗಳನ್ನು ಕಟ್ಟಲಿ ಎನ್ನುವುದಾದರೆ ಹಾಗಾದರೆ ಕಾನೂನು ಏಕಿರಬೇಕು? ಎಂದು ನಾನು ಕೇಳುತ್ತಿದ್ದೇನೆ. ಇದನ್ನು ಕಾನೂನಾಗಿ ತಂದರೆ ಇಡೀ ಕರ್ನಾಟಕದ ಫುಟ್‌ಪಾತ್‌ಗಳಲ್ಲಿ ಮನೆಗಳು ನಿರ್ಮಾಣವಾಗುತ್ತವೆ. ತಾವು 1995ರ ಅಕ್ಟೋಬರ್ ಒಂದನೇ ತಾರೀಖಿನೊಳಗೆ ಅರ್ಜಿಗಳನ್ನು ಸಲ್ಲಿಸಬಹುದೆಂದು ಹೇಳಿದ್ದೀರಿ. Proof is on the basis of person

ಏನು ಹೇಳಿದ್ದೀರೆಂದರೆ, ಹೇಳುವವನ ಮೇಲೆ ಬರ್ಡನ್. 1995ನೇ ಇಸವಿ ಜನವರಿಯೊಳಗೆ ನಾನು ಶೆಡ್ ಹಾಕಿದ್ದೇನೆಂದು ಹೇಳಬೇಕೆಂದು ಮಾಡಿದ್ದೀರಿ. ಅಂದ ಮೇಲೆ ನಾಳೆ ದಿವಸ ನೀವು ಸದರಿ ಕಾನೂನನ್ನು ಪ್ರಕಟಿಸಿದ್ದೇ ಆದರೆ ಇಡೀ ಕರ್ನಾಟಕದಲ್ಲಿ ರಸ್ತೆಗಳಲ್ಲಿ, ಫುಟ್‌ಪಾತ್‌ಗಳಲ್ಲಿ ಮನೆಗಳು ಆಗಿಂದಾಗ್ಗೆ ತಲೆಯೆತ್ತುತ್ತವೆ. ಅಂದರೆ ನೀವು ಯಾವಾಗ ಪ್ರೂವ್ ಮಾಡುತ್ತೀರಿ? ಪಬ್ಲಿಕೇಷನ್ ಹಾಕುತ್ತೀರಿ. ಅದನ್ನು ಹೊಡೆಯುವುದಕ್ಕಾಗುವುದಿಲ್ಲ, ಅದು ಸ್ಕ್ರೀನಿಂಗ್ ಕಮಿಟಿ ಮುಂದೆ ಬರುತ್ತದೆ. ಸ್ಕ್ರೀನಿಂಗ್ ಕಮಿಟಿ ಮುಂದೆ ಬಂದು ಇನ್ನು ಐದು ವರ್ಷದೊಳಗೆ ಡಿಸೈಡ್ ಆಗುವುದರೊಳಗೆ ಅಲ್ಲಿ ಅನಧಿಕೃತ ಮನೆಗಳು ಏಳುತ್ತವೆ, ಜೊತೆಗೆ ಇರುವಂಥ ಸುತ್ತಮುತ್ತಲಿನ ಜನರಿಗೆ ಅನಾನುಕೂಲವುಂಟಾಗುತ್ತದೆ.

ಮಾನ್ಯ ಸಭಾಧ್ಯಕ್ಷರೇ, ಈಗ ಇರತಕ್ಕಂಥ ಪರಿಸ್ಥಿತಿಯಲ್ಲಿ ಅಂಡರ್‌ಗ್ರೌಂಡ್ ಡ್ರೈನೇಜ್ ಸಿಸ್ಟಮ್ ಎನ್ನುವುದು ಇಡೀ ಎಲ್ಲಾ ಕಡೆ, ಎಲ್ಲಾ ನಗರ ಪ್ರದೇಶಗಳಲ್ಲೂ ಹಾಗೂ ಹಳ್ಳಿಗಳಲ್ಲೂ ಇಲ್ಲ. ಈ ರೀತಿ ನೀವು ಮನೆಗಳನ್ನು ಕಟ್ಟಿದ್ದೇ ಆದರೆ ಇರುವ ಡ್ರೈನೇಜ್‌ಗಳು ಕಟ್ಟು ಬ್ಲಾಕ್ ಆಗುತ್ತವೆ ಮತ್ತು ಈಗಾಗಲೇ ಇರತಕ್ಕ ಜನರಿಗೆ ಏನೇನು ನಾಗರೀಕ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿದ್ದೇವೆ. ಅವೆಲ್ಲವೂ ಕೂಡ ಮಣ್ಣು ಪಾಲಾಗತಕ್ಕ ಪರಿಸ್ಥಿತಿಯೊದಗಿ ಬರುತ್ತದೆ. ಆದುದರಿಂದ ದಯವಿಟ್ಟು ನಾನು ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ. ಮಾನ್ಯ ನಗರಾಭಿವೃದ್ಧಿ ಸಚಿವರಾದ ವೈಜನಾಥ ಪಾಟೀಲ್‌ರವರಿಗೆ ಸಮಯ ಇರಲಿಕ್ಕಿಲ್ಲ, ಕಾನೂನು ಸಚಿವರು ಅಥವಾ ಕಾನೂನು ತಜ್ಞರು ಅವರಿಗೆ ಸರಿಯಾದ ನಿರ್ದೇಶನವನ್ನು ಕೊಟ್ಟಿಲ್ಲ. ಇದು ಕರ್ನಾಟಕ ರಾಜ್ಯದ ಸಾರ್ವಜನಿಕರಿಗೆ ಅನ್ವಯವಾಗತಕ್ಕಂಥ ಕಾನೂನು ಆಗಿರುವುದರಿಂದ ಇದರಿಂದ ದುಷ್ಪರಿಣಾಮಗಳು ಜಾಸ್ತಿಯಾಗಲು ಕಾರಣವಾಗುತ್ತದೆ. ಇಡೀ ಕರ್ನಾಟಕದ ಜನತೆ ಇದರಿಂದ ತೊಂದರೆ ಅನುಭವಿಸಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಉಪ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಿರುವುದೇನೆಂದರೆ, ದಯವಿಟ್ಟು ತಂದಿರುವ ಮಸೂದೆಯನ್ನು ಹಿಂತೆಗೆದುಕೊಳ್ಳಿ. ಈ ಕಾನೂನನ್ನು ನಾವು ಕೇಳುತ್ತಿಲ್ಲ, ಸದರಿ ಮಸೂದೆಯನ್ನು ಚರ್ಚೆಗೆ ತಂದು ಇದರಿಂದಾಗುವ ಪರಿಣಾಮಗಳನ್ನು ಅನಂತರ ನೋಡುವುದರ ಬದಲು ದಯವಿಟ್ಟು ತಾವೇ ಈ ಮಸೂದೆಯನ್ನು ಹಿಂತೆಗೆದುಕೊಂಡು, ಬೇಕಾದರೆ ಮಸೂದೆಯಲ್ಲಿ ತಿಳಿಸಿರುವ ಆಬ್ಜೆಕ್ಟ್ ಅಂಡ್ ರೀಸನ್ಸ್ ಅನ್ನು ನೀವು ಕಣ್ಣು ಬಿಟ್ಟು ನೋಡಿ. ಇಡೀ ಪಾರ್ಕಿನಲ್ಲಿ ಕಟ್ಟಿದರೆ ರೆಗ್ಯುಲರೈಜೇಷನ್, ಫುಟ್‌ಪಾತ್‌ನಲ್ಲಿ ಕಟ್ಟಿದರೆ ರೆಗ್ಯುಲರೈಜೇಷನ್, ಮತ್ತು ಎಷ್ಟೇ ಮಹಡಿ ಮನೆಗಳನ್ನು ಅನಧಿಕೃತವಾಗಿ ಕಟ್ಟಿದರೂ ರೆಗ್ಯುಲರೈಜೇಷನ್. ಜೊತೆಗೆ ಎಷ್ಟು ಸೆಟ್-ಆಫ್‌ಗಳಿದ್ದರೂ ಏನಾದರೂ ಕೂಡ ರೆಗ್ಯುಲರೈಜೇಷನ್, ಇದು ಕಾನೂನೇ? ಇದನ್ನು ಕಾನೂನು ಎಂದು ಕರೆಯುತ್ತಾರೆಯೇ? ನನಗಂತೂ ಇದರ ಬಗ್ಗೆ ಆಶ್ಚರ್ಯವಾಗುತ್ತದೆ. ನಾನು ಮಾತನಾಡುವಾಗಗಲೇ ಸಭಾಧ್ಯಕ್ಷರಿಗೆ ಹೇಳಿದ್ದೆ, ಸದರಿ ಮಸೂದೆಯನ್ನು ನೋಡಿದಾಗ ಅನ್ನಿಸುತ್ತದೆ. ಈ ಸದನದಲ್ಲಿ ಏನಾದರೂ ಕಾನೂನು ಬಲ್ಲವರು ಇದ್ದಾರೆಯೇ ಎಂದು

ನಾಳೆ ದಿವಸ ಜನರು ನಮ್ಮನ್ನು ನೋಡಿ ನಗುತ್ತಾರೆ. ಅಂತಹ ಪರಿಸ್ಥಿತಿಗೆ ಕರ್ನಾಟಕ ಲೆಜಿಸ್ಲೇಚರನ್ನು ತಳ್ಳಬೇಡಿ.

ದಯವಿಟ್ಟು ಮಸೂದೆಯನ್ನು ಮತ್ತೊಮ್ಮೆ ಪರಿಶೀಲಿಸಿ ನೋಡಬೇಕು. ಅಲ್ಲದೆ, ತಂದಿರತಕ್ಕ ಎಲ್ಲಾ ಮಸೂದೆಗಳನ್ನು ದಯವಿಟ್ಟು ನೋಡಬೇಕು. ಲ್ಯಾಂಡ್ ಗ್ರಾಂಟ್ ರೂಲ್ಸ್ ಗ್ರೀನ್ ಬೆಲ್ಟ್‌ನಲ್ಲಿ ಬರುವ ಹಾಗಿಲ್ಲ, ಜೋನಲ್ ರೆಗ್ಯುಲೇಷನ್ಸ್, ಸಿಡಿಪಿ, ಇದ್ಯಾವುದೂ ಕೂಡ ಬರುವ ಹಾಗಿಲ್ಲ, ನೀವೇನಾದರೂ ಎಲ್ಲಾ ರೀತಿಯಲ್ಲಿ ಮಾಡುವ ಹಾಗಿದ್ದರೆ ಮಾಡಿ. ಎಲ್ಲಾ ಕಾನೂನುಗಳನ್ನು ರಿಪೀಲ್ ಮಾಡಿದ್ದೇವೆ. ಅನಧಿಕೃತವಾಗಿರುವುದಕ್ಕೆ, ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಿದ್ದೇವೆಂದು ಎಂದು ಒಂದೇ ಒಂದು ಕಾನೂನನ್ನು ತಂದು ಬಿಡಿ. ನಾವು-ನೀವು ಬೇಡ, ಕಾನೂನು ಬೇಡ. ನಾಳೆ ದಿವಸ ವಿಧಾನಸೌಧದ ಮೆಟ್ಟಿಲುಗಳ ಮೇಲೆಯೂ ಕೂಡ ರೆವಿನ್ಯೂಲ್ಯಾಂಡ್ ಎಂದು ಒಂದು ಶೆಡ್ ಕಟ್ಟುತ್ತಾರೆ, ಅದಕ್ಕೂ ಕೂಡ ತಾವು ತಂದಿರುವ ಮಸೂದೆಯಲ್ಲಿ ರಕ್ಷಣೆ ಸಿಕ್ಕಿದೆ. ನಾವೆಲ್ಲರೂ ಮನೆಗೆ ಹೋಗುವ ಪರಿಸ್ಥಿತಿ ಒದಗಿಬರುತ್ತದೆ. ಇರುವ ಕಾನೂನನ್ನು ಯಾವತ್ತೂ, ಎಲ್ಲಿಯೂ ಕೂಡ ನಾನು ನೋಡಿಲ್ಲ. ಇಡೀ ಭಾರತ ದೇಶದಲ್ಲಿ ಎಲ್ಲಿಯೂ ಕೂಡ ಇಂತಹ ಒಂದು ಕಾನೂನನ್ನು ತಂದಿರುವುದನ್ನು ನಾನು ನೋಡಿಲ್ಲ.

ಮಾನ್ಯ ಕಂದಾಯ ಮಂತ್ರಿಗಳು ಹೇಳಿದರು. ಈಗಾಗಲೇ ಅನಧಿಕೃತವಾಗಿ ಕಟ್ಟಡಗಳನ್ನು ನಿರ್ಮಿಸಿದ್ದರೆ ಒಡೆದುಹಾಕುವುದಕ್ಕಾಗುತ್ತದೆಯೇ ಎಂದು. ಆದರೆ ಇವೊತ್ತು ಏನಾಗಿದೆ? ಇಂತಹದೇ ಪರಿಸ್ಥಿತಿ ಹಿಂದೆ ಕಲ್ಕತ್ತಾನಲ್ಲಿ ನಡೆದಾಗ ಸುಪ್ರೀಂ ಕೋರ್ಟ್‌ನವರು 'ಕಟ್ಟಡವನ್ನು ಕಾನೂನಿಗೆ ವಿರುದ್ಧವಾಗಿ ಕಟ್ಟಿರುವುದರಿಂದ ಒಡೆದುಹಾಕಬೇಕು' ಎಂದು ತೀರ್ಪು ಕೊಟ್ಟರು. ನಮ್ಮ ಬೆಂಗಳೂರಿನ ರಾಜಮಹಲ್ ವಿಲಾಸ್ ಬಡಾವಣೆಯಲ್ಲಿ ಇಂತಹ ಮಹಡಿ ಮನೆಗಳನ್ನು ಅನಧಿಕೃತವಾದಿ ಕಟ್ಟಿದಾಗ ಕಾನೂನಿಗೆ ವಿರುದ್ಧವಾಗಿ ಈ ರೀತಿ ಕಟ್ಟಿರುವುದು ಎಂದು ಹೇಳಿ ಆ ಕಟ್ಟಡವನ್ನು ಒಡೆದುಹಾಕಿ ಎಂದು ಆದೇಶಿಸಿದರು. ತಮಗೂ ಗೊತ್ತಿರುವಂತೆ ರಜತ ಮಹಲ್ ಮತ್ತು ಶರ್ಮಾರವರ ಕಾಂಪ್ಲೆಕ್ಸ್ ಬಿಲ್ಡಿಂಗ್ಸ್ ಅನ್ನು ಇದೇ ರೀತಿ ಅನಧಿಕೃತವಾಗಿ ಕಟ್ಟಿದಾಗ ಎಲ್ಲವನ್ನೂ ಕೂಡ ಮಾಡಿದ್ದಾರೆ. ಇದೇನು ಕಾನೂನಿಗೆ ಮೀರಿದ್ದಲ್ಲ, ರೇವಜೀತು ಎಷ್ಟಾಗಿದೆ? ನೀವು ಯಾರಿಗೆ ರಕ್ಷಣೆ ಕೊಡುವುದಕ್ಕೋಸ್ಕರ ಈ ರೀತಿ ಮಾಡಿದ್ದೀರಿ? ಇದರ ಬಗ್ಗೆ ತಾವು ದಯವಿಟ್ಟು ಇವೊತ್ತು ಹೇಳಬೇಕು.

Is it for whose benefit? Is it for common man or for the benefit of vested interest? ಆ ವೆಸ್ಟೆಡ್ ಇಂಟರೆಸ್ಟ್ ಯಾರು ಎಂದು ನಮಗೆ ಹೇಳಿ, ನಾವೂ ಕೂಡ ತಿಳಿದುಕೊಳ್ಳೋಣ ಮತ್ತು ಯಾರಿಗೋಸ್ಕರ ಮಾಡಿದ್ದೀರೆಂಬುದನ್ನೂ ಸಹ ತಿಳಿದುಕೊಳ್ಳೋಣ. ಒಬ್ಬಿಬ್ಬರಿಗೋಸ್ಕರ ಮಾಡಿದರೆ. ಇದು ಕಾನೂನು ಆಗುವುದಿಲ್ಲ. ಇಡೀ ಕಾನೂನಿನಲ್ಲಿರುವ ಎಲ್ಲಾ ವಿಷಯಗಳನ್ನು ಪರಿಶೀಲಿಸಬೇಕಾಗಿದೆ. ಎಲ್ಲಾ ಕಾನೂನುಗಳನ್ನು ಸಮಗ್ರವಾಗಿ ನೋಡಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆದುದರಿಂದ, ಕಾರ್ಪೊರೇಷನ್, ಆ್ಯಕ್ಟ್ ಮುನಿಸಿಪಲ್ ಕಾರ್ಪೊರೇಷನ್ ಆ್ಯಕ್ಟ್ ಅನ್ನು ಕೂಡ ಪರಿಶೀಲಿಸಬೇಕಾಗುತ್ತದೆ. ಇದಲ್ಲದೆ ಇತ್ತೀಚೆಗೆ ಜಿಲ್ಲಾ ಪರಿಷತ್ತಿನ ಕಾನೂನನ್ನು ಸಹ ಅಂಗೀಕರಿಸಿದ್ದೇವೆ. ಈ ಕಾನೂನಿನಲ್ಲಿ ಸಹ ಅನಧಿಕೃತವಾಗಿ ಕಟ್ಟಡ ನಿರ್ಮಾಣವಾಗಿದ್ದರೆ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಲಾಗಿದೆ.

ಅಂದರೆ, ನೀವು ತಂದಿರುವಂಥ ಎಲ್ಲಾ ಕಾನೂನುಗಳನ್ನು ರದ್ದುಗೊಳಿಸಿಬಿಡಿ. ಜಿಲ್ಲಾ ಪರಿಷತ್ತಿನ ಆ್ಯಕ್ಟ್ ಅನ್ನು ತೆಗೆದುಬಿಡಿ ಮತ್ತು ಜಿಲ್ಲಾ ಪರಿಷತ್ತಿನ ಅಧ್ಯಕ್ಷರು, ಅಧಿಕಾರಿಗಳನ್ನು ಸಹ ತೆಗೆದು ಹಾಕಿಬಿಡಿ. ಎಲ್ಲೆಂದರಲ್ಲಿ ಅನಧಿಕೃತವಾಗಿ ಕಟ್ಟಡಗಳನ್ನು ಕಟ್ಟಿಕೊಳ್ಳುತ್ತಾರಲ್ಲಾ, ಈ ಮಸೂದೆ ಪ್ರಕಾರ ನೀವು ಅಧಿಕಾರ ಕೊಡುತ್ತಿದ್ದೀರಿ.

ಹಾಗಿದ್ದ ಮೇಲೆ ಏಕಿರಬೇಕು? ಪಂಚಾಯತ್ ವ್ಯವಸ್ಥೆಯೇ ಬೇಕಿಲ್ಲವಲ್ಲಾ. ರೆಜಿಸ್ಟ್ರೇಷನ್ ಬೇಡ, ಕಾನೂನು ಬೇಡ. ನಾನು ಕೇಳುವುದೇನೆಂದರೆ, ಇದೊಂದೇ ಸಾರಿ ಅಲ್ಲ, ಈ ರೀತಿ ಹಲವಾರು ಕಾನೂನುಗಳನ್ನು ತರುತ್ತಿದ್ದೀರಿ. ಇದರ ಬಗ್ಗೆ ನೀವು ಒಂದು ಸಮಿತಿ ರಚಿಸಿ. ಆ ಸಮಿತಿಯಲ್ಲಿ ಪರಿಶೀಲಿಸಿ, ಅವರ ಅಭಿಪ್ರಾಯಗಳನ್ನು ತೆಗೆದುಕೊಂಡು ಆಮೇಲೆ ಅದನ್ನು ಲೆಜಿಸ್ಲೇಷನ್‌ನಲ್ಲಿ ಇಡುವ ಒಂದು ಪ್ರಮೇಯವನ್ನು ಆದರೂ ಮಾಡಬೇಕಾಗುತ್ತದೆ. ಇಲ್ಲವೇ ತಮ್ಮಲ್ಲಿ ಅಂತಹ ಬುದ್ಧಿವಂತರ್‍ಯಾರು ಇಲ್ಲವೆಂದರೆ ಬೇಕಾದಷ್ಟು ಜನರಿದ್ದಾರೆ. ಇಲ್ಲದಿದ್ದರೆ ಇದಕ್ಕೊಂದು ವಿಷಯ ಸಮಿತಿಯನ್ನಾದರೂ ರಚಿಸಿ, ಆ ಸಮಿತಿಗೆ ಇಂತಹ ವಿಧೇಯಕಗಳನ್ನು ಕೊಟ್ಟು ಪರಿಶೀಲಿಸಿ ನಂತರ ಈ ಸದನದ ಮುಂದೆ ತನ್ನಿ. ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನನಗೆ ದುಃಖವಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏಕೆ ನೊಂದು ಹೇಳುತ್ತಿದ್ದಾರೆಂದರೆ, ಈ ವಿಧೇಯಕವನ್ನು ತರಬೇಕಾದರೆ ಆ ಸ್ಕ್ರೀನಿಂಗ್ ಕಮಿಟಿಯ ಅಧ್ಯಕ್ಷರೇ ಕಾನೂನು ಸಚಿವರಾಗಿರುವುದರಿಂದ, ವಿಧೇಯಕವನ್ನು ಪರಿಶೀಲಿಸದೆ ಈ ರೀತಿ ಸದನದ ಮುಂದೆ ತರುವುದಾದರೆ ಇದು ಸರಿಹೋಗಲಿಕ್ಕಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಇನ್ನು ಸದರಿ ವಿಧೇಯಕದಲ್ಲಿ ಆಟದ ಮೈದಾನ ಇರಬೇಕೆಂದು ಕಾನೂನನ್ನು ತಂದಿದ್ದೀರಿ ಆದರೆ ಇಲ್ಲಿ ಏನು ಹೇಳಿದ್ದೀರೆಂದರೆ, ಆಟದ ಮೈದಾನದಲ್ಲಿ ಕಟ್ಟಡ ಕಟ್ಟಿದರೆ ರೆಗ್ಯುಲರೈಜೇಷನ್. ದಯವಿಟ್ಟು ಆಬ್ಜೆಕ್ಟ್‌ನಲ್ಲಿ ನೋಡಿ. ಮಕ್ಕಳಿಗೆ ಆಟದ ಮೈದಾನವೂ ಬೇಡ, ಜನರಿಗೆ ರಿಕ್ರಿಯೇಷನ್‌ಗಾಗಿ ಪಾರ್ಕುಗಳೂ ಬೇಡ, ನಾಳೆ ದಿವಸ ಕಬ್ಬನ್ ಪಾರ್ಕ್ ಕೂಡ ಬೇಡ ಎಲ್ಲಾ ಕಡೆ ಕಟ್ಟಡಗಳು ಬರುತ್ತವೆ. ದಯವಿಟ್ಟು ಇದರ ಬಗ್ಗೆ ಯೋಚನೆ ಮಾಡಿ ನೋಡಬೇಕು. ಈ ರೀತಿಯಾಯಿತೆಂದರೆ ಪರಿಸ್ಥಿತಿ ಏನಾಗುತ್ತದೆ? ಮಾನ್ಯ ಅಧ್ಯಕ್ಷರೆ, ಇದನ್ನು ವಿತ್‌ಡ್ರಾ ಮಾಡಿಕೊಳ್ಳಬೇಕೆಂದು ನನಗೆ ಹೇಳಿದರೆ ನಾನು ಮುಂದೆ ಮಾತನಾಡದೆ ಕುಳಿತುಕೊಳ್ಳುತ್ತೇನೆ.

Sri D.T. JAYAKUMAR : Prevention of Parks and Fields Act ಎಂದು ಈಗಾಗಲೇ ಇದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅದನ್ನು ತೆಗೆದುಹಾಕಿದ್ದಾರೆ. ದಯವಿಟ್ಟು ಮಾನ್ಯ ಮಂತ್ರಿಗಳು ನೋಡಬೇಕು. ಅದಕ್ಕೋಸ್ಕರವೇ ನಾನು ಹೇಳಿದ್ದುದು.

+ ಶ್ರೀ ವಿ. ಮಾರುತಿರಾವ್ ಪವಾರ್ (ನರಸಿಂಹರಾಜ) : ಸನ್ಮಾನ್ಯ ಅಧ್ಯಕ್ಷರೆ, 15-20 ವರ್ಷಗಳಿಂದ ಮೈಸೂರು ನಗರದಂಥ ದೊಡ್ಡ ಪ್ರದೇಶದಲ್ಲಿ ಸುಮಾರು 30 ರಿಂದ 35 ರೆವಿನ್ಯೂ ನಿವೇಶನಗಳ ಬಡಾವಣೆಗಳಿರುವುದು ತಮಗೆಲ್ಲರಿಗೂ ತಿಳಿದಿರುವಂಥ ವಿಚಾರವಾಗಿದೆ. ಅಲ್ಲಿ ಕಳೆದ 15-20 ವರ್ಷಗಳಿಂದ ಯಾವುದೇ ನಾಗರೀಕ ಸೌಲಭ್ಯಗಳು ಅಲ್ಲಿನ ಜನರಿಗೆ ದೊರಕದೆ ಅದರಲ್ಲೂ ಗುಡಿಸಲುಗಳಲ್ಲಿ ವಾಸಿಸತಕ್ಕಂಥ ಜನರಿಗೆ ನೀರು, ದೀಪ ಹಾಗೂ ರಸ್ತೆಗಳ ವ್ಯವಸ್ಥೆ ಇಲ್ಲ. ಈ ರೀತಿಯಾದ ಪರಿಸ್ಥಿತಿಯಲ್ಲಿ ತಾವು ಅನಧಿಕೃತವಾಗಿ ನಿರ್ಮಾಣವಾಗಿರುವ ಕಟ್ಟಡಗಳನ್ನು ಸಕ್ರಮಗೊಳಿಸ ಹೊರಟಿರುವುದು ಸ್ವಾಗತಾರ್ಹ. ಆದರೆ, ಸದರಿ ವಿಧೇಯಕದ ಉದ್ದೇಶ ಮತ್ತು ಕಾರಣವೆಂಬ ಹೇಳಿಕೆಯ ಅನುಬಂಧದಲ್ಲಿ ತಿಳಿಸಿರುವಂತೆ ಎರಡು ಅಂತಸ್ತುಗಳಿಗಿಂತ ಹೆಚ್ಚು ಅಂತಸ್ತುಗಳುಳ್ಳ ಕಟ್ಟಡಗಳನ್ನು ಅನಧಿಕೃತವಾಗಿ ಕಟ್ಟಿದ್ದರೆ ಅಧಿಕೃತವಾಗಿ ಸಕ್ರಮಗೊಳಿಸಲಾಗುವುದೆಂಬ ವಿಚಾರವನ್ನು ನಮ್ಮ ಮುಂದಿಟ್ಟಿದ್ದೀರಿ. ಅದರ ಜೊತೆಗೆ ವಾಣಿಜ್ಯ ಉದ್ದೇಶಗಳಿಗಾಗಿ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸಲಾಗುವುದೆಂಬ ವಿಚಾರವನ್ನೂ ಸಹ ಇಟ್ಟಿದ್ದೀರಿ. ಅಲ್ಲದೆ, 1985ರ ಕರ್ನಾಟಕ ಉದ್ಯಾನವನಗಳ ಆಟದ ಮೈದಾನಗಳು, ಬಯಲು ಜಾಗಗಳು ಸಕ್ರಮಗೊಳಿಸಲಾಗುವುದೆಂಬ ವಿಚಾರವನ್ನು ಮಾನ್ಯ ಸಚಿವರು ವಿಧೇಯಕದಲ್ಲಿ

ತಿಳಿಸಿದ್ದಾರೆ. ಆದರೆ, ಸನ್ಮಾನ್ಯ ಮಂತ್ರಿಗಳು ಈಗಾಗಲೇ, ಯಾರು ಬಡ ಜನರಿದ್ದಾರೆ. ಅವರಿಗೆ ಮಾತ್ರ ನಾವು ಸಕ್ರಮಗೊಳಿಸುತ್ತೇವೆ ಎಂಬ ವಿಚಾರ ನಮ್ಮ ಮನಸ್ಸಿನಲ್ಲಿದೆ ಎನ್ನುವ ಮಾತನ್ನು ಹೇಳಿದರು. ಆ ವಿಷಯದ ಬಗ್ಗೆ ಏನು ಮುದ್ರಣ ಮಾಡಿ ಪ್ರತಿ ಒದಗಿಸಿದ್ದಾರೆ, ಇದರಲ್ಲಿ ಉದ್ಯಾನವನಗಳು ಮತ್ತು ವಾಣಿಜ್ಯ ಉದ್ದೇಶಗಳ ಕಟ್ಟಡಗಳನ್ನೂ ಸಹ ಸಕ್ರಮಗೊಳಿಸುವುದಕ್ಕಾಗಿ ಸಹ ಸಚಿವರು ಹೇಳಿದ್ದಾರೆ.

4.40 ಪಿ.ಎಂ

ಈ ಬಡವರು ಯಾರು ವಾಸ ಮಾಡುತ್ತಿದ್ದಾರೆ, ಇದರಲ್ಲಿ 10 ಅಡಿ x 15 ಅಡಿ ಜಾಗ ಇರಬಹುದು. ಅಥವಾ 15 ಅಡಿ x 20 ಅಡಿ ಜಾಗ ಇರಬಹುದು. ಅಥವಾ 30 ಅಡಿ x 40 ಅಡಿ ಜಾಗ ಇರಬಹುದು. ಈ ಸಕ್ರಮ ಮಾಡುವುದಕ್ಕೆ ಯಾವ ಮಾದರಿಯಲ್ಲಿ ಹಣವನ್ನು ಅವರಿಂದ ತೆಗೆದುಕೊಳ್ಳುತ್ತೀರಿ? ವಾಣಿಜ್ಯ ಮಳಿಗೆಗಳನ್ನು ಸಕ್ರಮ ಮಾಡುವುದಕ್ಕೆ ಹೊರಟಿದ್ದೀರಲ್ಲಾ, ಇದು ಬಡವರಿಗೋಸ್ಕರ ಮಾಡುವುದಕ್ಕೆ ಹೊರಟಿದ್ದೀರೋ ಅಥವಾ ಶ್ರೀಮಂತರ ಒಂದು ಒಳಿತಿಗಾಗಿ ಮಾಡುವುದಕ್ಕೆ ಹೊರಟಿದ್ದೀರೋ? ನಿಜವಾಗಿಯೂ ಬಡವರಿಗೆ ಸಕ್ರಮ ಮಾಡುವುದಕ್ಕೆ ಹೊರಟಿದ್ದರೆ ಇಲ್ಲಿರತಕ್ಕಂತಹ ಅನುಬಂಧ 4, 5 ಹಾಗೂ 6 ಇದನ್ನು ನೀವು ತೆಗೆದು ಹಾಕುತ್ತೀರಾ? ತೆಗೆದುಹಾಕಿ ಬಿಟ್ಟು ಬರೀ ಬಡವರಿಗೆ ಅನಧಿಕೃತವಾಗಿ ನಿವೇಶನಗಳು ಹಾಗೂ ಮನೆಗಳನ್ನು ಯಾರು ಕಟ್ಟಿಕೊಂಡಿದ್ದಾರೆ, ಆ ಜಾಗವನ್ನು ಅಧಿಕೃತಗೊಳಿಸುತ್ತೇವೆ ಎಂಬುದರ ಬಗ್ಗೆ ಒಂದು ನಿರ್ದಿಷ್ಟವಾದ ಹಾಗೂ ನಿಖರವಾದಂತಹ ಹೇಳಿಕೆಯನ್ನು ಕೊಡಬೇಕು. ಮತ್ತೆ ಇದೊಂದು ಉನ್ನತ ಮಟ್ಟದ ಅಧಿಕಾರಿಗಳ ವಲಯದಲ್ಲಿ ಚರ್ಚೆಯಾಗಿ, ಸದನದಲ್ಲಿ ಸಂಪೂರ್ಣ ಚರ್ಚೆಯಾಗಿ, ಅದಕ್ಕೊಂದು ಸಮಿತಿಯಾಗಿ, ನಂತರ ವಿಧೇಯಕವನ್ನಾಗಿ ಇಲ್ಲಿ ಮಂಡನೆ ಮಾಡಿದ್ದರೆ, ಗೌರವ ಬರುತ್ತಾ ಇತ್ತು. ಇದು ತುಂಬಾ ಹಗುರವಾಗಿ ತೆಗೆದುಕೊಳ್ಳತಕ್ಕ ವಿಚಾರ ಅಲ್ಲ. ಇಡೀ ಕರ್ನಾಟಕದಲ್ಲಿ ಅದರಲ್ಲೂ ವಿಶೇಷವಾಗಿ ಮೈಸೂರು ಮತ್ತು ಬೆಂಗಳೂರು ನಗರದಂತಹ ಪ್ರದೇಶಗಳಲ್ಲಿ ಇಂತಹ ರೆವಿನ್ಯೂ ಬಡಾವಣೆಗಳು ಜಾಸ್ತಿ ಇವೆ. ಇದಕ್ಕೆ ಸರ್ಕಾರದ ವೈಫಲ್ಯವೇ ಕಾರಣ.

ಅಧ್ಯಕ್ಷರು : ಆಯಿತು, ಆಯಿತು. ಅದನ್ನೆಲ್ಲಾ ಹೇಳಿದ್ದಾರಲ್ಲಾ,

ಶ್ರೀ ಇ. ಮಾರುತಿರಾವ್ ಪವಾರ್ : ದಯಮಾಡಿ ಇದು ಚರ್ಚೆಗೆ ಬರಬೇಕು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ ಕ್ಷೇತ್ರ) : ಮಾನ್ಯ ಸಭಾಧ್ಯಕ್ಷರೆ, ಇದು ಹತ್ತಾರು ವರ್ಷಗಳ ಕಾಯಿಲೆ. ವಿಶೇಷವಾಗಿ ಕರ್ನಾಟಕ ರಾಜ್ಯದಲ್ಲಿ ಬೆಂಗಳೂರು ನಗರಕ್ಕೆ ಜಾಸ್ತಿ ಅನ್ವಯವಾಗತಕ್ಕಂತಹದ್ದು. ಪಟ್ಟಣ ಪ್ರದೇಶಗಳಲ್ಲಿ ಅಲ್ಲಲ್ಲೇ ಇರತಕ್ಕಂತಹದ್ದು. ಪ್ರಾಯಶಃ 1991ರಲ್ಲಿ ಬೆಂಗಳೂರು ಮಹಾ ನಗರ ಪಾಲಿಕೆಯಲ್ಲಿ ಒಂದು ನಿರ್ಣಯವನ್ನು ಮಾಡಿ ಕಳುಹಿಸಿದ ಮೇಲೆ ಸರ್ಕಾರ ಕೆಲವಾರು ಮಾರ್ಪಾಡುಗಳನ್ನು ಮಾಡಿ ಆವತ್ತು ಈ ಕಾನೂನನ್ನು ಜಾರಿಗೆ ತರುವುದಕ್ಕೆ ಆಸಕ್ತಿ ವಹಿಸಿ ಅದರ ಬಗ್ಗೆ ಒಂದು ತೀರ್ಮಾನಕ್ಕೆ ಬಂತು. ಅದು ಯಾವ ರೀತಿ ಆಯಿತು ಎಂಬುದು ಗೊತ್ತಿಲ್ಲ. ಕನಸ್ಟ್ರಕ್ಷನ್ನಲ್ಲಿ, ಆತರೈಸ್ಡ್ ಮತ್ತು ಅನ್-ಆತರೈಸ್ಡ್ ಇದೆ. ಅನ್-ಆತರೈಸ್ಡ್ ಅಂದರೆ ಪೂರ್ತಿ ಪ್ಲಾನ್ ಇಲ್ಲದೆ ಮಂಜೂರಾತಿ ಇಲ್ಲದೆ ಕಟ್ಟತಕ್ಕಂತಹದ್ದು. ಆತರೈಸ್ಡ್ ಅಂದರೆ ಡೀವಿಯೇಷನ್. ಡೀವಿಯೇಷನ್ ಬಗ್ಗೆ ಹೇಳುವುದಾದರೆ, ಇವತ್ತು ಇರತಕ್ಕ ಕಾನೂನಿನಲ್ಲಿ ಚೌಕಟ್ಟಿನಲ್ಲಿ 5 ಪರ್ಸೆಂಟ್ ಬಿಟ್ಟರೆ ಯಾವುದೇ ಕಟ್ಟಡವನ್ನು ಸಕ್ರಮಗೊಳಿಸುವ ಕಾನೂನು ಯಾವುದೇ ಸೆಕ್ಷನ್ನಲ್ಲಿ ಇಲ್ಲದೇ ಇರುವ ಪ್ರಕರಣವನ್ನು ಹಿಂದಿನ ಸರ್ಕಾರ ಕೂಡ ಗಮನ ಹರಿಸಿ 5 ಪರ್ಸೆಂಟ್ ಏನು ಇರುತ್ತದೆ. ಅದನ್ನು ಆಯುಕ್ತರು ಎಂದು

ಯಾರು ಇರುತ್ತಾರೆ, ಈ ಅಧಿಕಾರಿಗಳು ಯಾರು ಇರುತ್ತಾರೆ, ಅವರಿಗೆ ಆ ಅಧಿಕಾರ ಇತ್ತು. ಅದಕ್ಕಿಂತ ಜಾಸ್ತಿ ಇರುವಂತಹವುಗಳನ್ನು ಬೆಂಗಳೂರು ನಗರ ಒಂದರಲ್ಲೇ ಆ ರೀತಿ ಇರತಕ್ಕ ಹೈ-ರೈಸ್ಡ್ ಬಿಲ್ಡಿಂಗ್ಗಳು ಮತ್ತೆ ಶಾಪಿಂಗ್ ಕಾಂಪ್ಲೆಕ್ಸ್ಗಳು, ದೊಡ್ಡ ದೊಡ್ಡ ಕಟ್ಟಡಗಳು 400ಕ್ಕೂ ಮೇಲ್ಪಟ್ಟು ಇದ್ದಾಗ ಇದನ್ನು ಮಾಡಬೇಕೆಂಬ ಉದ್ದೇಶದಿಂದ ಹಿಂದಿನ ಸರ್ಕಾರ ತೀರ್ಮಾನ ತೆಗೆದುಕೊಂಡಿತು. ಆದರೆ ಆ ತೀರ್ಮಾನ ಇನ್ನೂ ಜಾರಿಗೆ ಬರದೆ ಇದ್ದುದರಿಂದ ಇವತ್ತು ಏನು ಈ ಒಂದು ಕಾನೂನನ್ನು ಸರ್ಕಾರ ಸದನದ ಮುಂದೆ ತಂದಿದೆ, ಇದರಲ್ಲಿ 2-3 ರೂಪರೇಷೆಗಳನ್ನು ನಾವು ಗಮನಿಸಬೇಕಾಗುತ್ತದೆ. ಕೆ.ಎಂ.ಸಿ. 1976ರ ಕರ್ನಾಟಕ (ಕೆ.ಎಂ.ಸಿ.) ಕಾಯಿದೆ 441ರ ಪ್ರಕಾರ ಬಹುತೇಕರಿಗೆ ಏನು ಯಾವುದೇ ಕಾನೂನಿನಲ್ಲಿ ಏನೂ ಕೆಲಸ ಮಾಡದೆ ಇರುವಾಗ, ಕೋಟ್ಯಾಂತರ ರೂಪಾಯಿಗಳ ಹಣವನ್ನು ಬೆಂಗಳೂರು ಮಹಾನಗರ ಪಾಲಿಕೆಗೆ ಆಗಿರಬಹುದು, ಸ್ಥಳೀಯ ಸಂಸ್ಥೆಗಳಿಗೆ ಆಗಿರಬಹುದು. ಹಣವನ್ನು ಕಟ್ಟದೆ ಇವತ್ತು ಅದನ್ನು ಉಪಯೋಗ ಮಾಡುತ್ತಿದ್ದಾರೆ. ಈ ರೀತಿಯ ಕಟ್ಟಡಗಳನ್ನು ಬಾಂಬೆ ನಗರದಲ್ಲಿ ಒಂದೇ ಒಂದು ಕಟ್ಟಡವನ್ನು ಮಾತ್ರ ತೆಗೆದಿದ್ದಾರೆ. ಇಲ್ಲಿಯವರೆಗೂ ಇಡೀ ಇತಿಹಾಸದಲ್ಲಿ ಅನ್-ಆತರೈಸ್ಡ್, ಅತರೈಸ್ಡ್ ಅಥವಾ ಡೀವಿಯೇಷನ್ ಮಾಡಿರತಕ್ಕ ಕಟ್ಟಡಗಳನ್ನು ಯಾರೂ ತೆಗೆಯುವುದಕ್ಕೆ ಮುಂದೆ ಬರಲಿಲ್ಲ. ಇವತ್ತು ಅನೇಕ ನನ್ನ ಹಿರಿಯ ಸದಸ್ಯರುಗಳು ಮಾತನಾಡಿದ್ದಾರೆ. ಮಾತನಾಡುವಾಗ ಹೇಳುತ್ತಾರೆ, ಇದು ಏನು ಮಾಡುವುದಕ್ಕಾಗುತ್ತದೆ? ನಾವು ಅದಕ್ಕೆ ತಮ್ಮ ಮುಖೇನ ವಿನಂತಿ ಮಾಡುವುದೇನೆಂದರೆ, ಇದಕ್ಕೆ ಒಂದು ನಿಗದಿ ಇರಬೇಕು. ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳಾದಂತಹ ಶ್ರೀ ವೀರಪ್ಪ ಮೊಯಿಲಿಯವರು ಸರ್ಕಾರ ಇದ್ದಾಗ ಕೂಡ ಎಲ್ಲೆಲ್ಲಿ ಅನ್-ಆತರೈಸ್ಡ್ ಕನಸ್ಟ್ರಕ್ಷನ್ ಆಗಿದೆ, ಇನ್ನು ಮುಂದೆ ಮಾಡಬಾರದು ಎಂದು ಹೇಳಿಬಿಟ್ಟು ಅನೇಕ ಕಡೆ ಅದಕ್ಕೆ ಈ ಕಟ್ಟಡಗಳನ್ನೂ ಕೂಡ ಸಕ್ರಮಗೊಳಿಸುವುದಕ್ಕೆ ಅವರೆಲ್ಲರೂ ಕೂಡ ಆಯಾ ಬಡಾವಣೆಗಳಲ್ಲಿರುವ ಅಧಿಕಾರಿಗಳು ಹೋಗಿ ತಪಾಸಣೆ ಮಾಡಿ ಇಷ್ಟು ಕಟ್ಟಡಗಳು ಅನ್-ಆತರೈಸ್ಡ್ ಇದೆ. ಈ ಅನ್-ಆತರೈಸ್ಡ್ ಕಟ್ಟಡಗಳನ್ನು ಏನು ನಾವು ಸಕ್ರಮಗೊಳಿಸಬೇಕು ಎನ್ನುವುದಕ್ಕೆ ಕಡತ ಇದೆ. ಆದರೆ ಈ ತಹಲ್ವರೆಗೂ ಕೂಡ ಈ ಒಂದು ಹಳೇ ಕಾಯಿಲೆಯನ್ನು ತೆಗೆಯುವುದಕ್ಕೆ ಕಾನೂನಿನ ಚೌಕಟ್ಟಿನಲ್ಲಿ ಸಾಧ್ಯವಾಗಿಲ್ಲ.

ಅವರು ಹೇಳಿದ್ದುದು ನಿಜ. ಪಾರ್ಕುಗಳಲ್ಲಿರತಕ್ಕಂತಹದ್ದು, ಮತ್ತೆ ಆಟದ ಮೈದಾನದಲ್ಲಿರತಕ್ಕಂತಹದ್ದು ಇನ್ನು ಮುಂದೆ ಯಾವುದೇ ಕಾರಣಕ್ಕಾಗಿ ಆಗದ ಹಾಗೆ ಒಂದು ಸರಿಯಾದ ಅಧಿಕಾರಿಗಳಿಗೆ ಜವಾಬ್ದಾರಿ ನಿಗದಿಪಡಿಸಬೇಕು, ಲಕ್ಷಾಂತರ ರೂಪಾಯಿ ಸರ್ಕಾರಕ್ಕೆ ಮತ್ತು ಮಹಾನಗರಪಾಲಿಕೆಗಳಿಗೆ, ಸ್ಥಳೀಯ ಸಂಸ್ಥೆಗಳಿಗೆ ಬರಬೇಕಾದಂತಹ ವರಮಾನ ಬರುತ್ತಾ ಇಲ್ಲ. ತಮಗೆ ಒಂದೆರಡು ಮೂರು ಉದಾಹರಣೆಗಳನ್ನು ತಮಗೆ ಹೇಳುವುದಾದರೆ, ಮಹಾತ್ಮಗಾಂಧಿ ರಸ್ತೆಯಲ್ಲಿ ಲಕ್ಷಾಂತರ ರೂಪಾಯಿ ಬಾಡಿಗೆಯನ್ನು ತೆಗೆದುಕೊಳ್ಳುತ್ತಿದ್ದಾರೆ. ಯಾವುದೋ ಒಂದು ನೆಪವನ್ನು ಮಾಡಿ, ಅದಕ್ಕೆ ಇವತ್ತೂ ಕೂಡ ಟ್ಯಾಕ್ಸ್‌ನ್ನು ನಿಗದಿ ಮಾಡುವುದಕ್ಕಾಗುವುದಿಲ್ಲ, ಅದಕ್ಕೆ ನಾನು ತಮ್ಮಲ್ಲಿ ವಿನಂತಿ ಮಾಡುವುದು, ಏನು ಇವತ್ತು ಅನ್-ಆತರೈಸ್ಡ್ ಬೆಂಗಳೂರು ಹೊರ ವಲಯದಲ್ಲಿರತಕ್ಕಂತಹದ್ದು, ಬೆಂಗಳೂರು ಮಧ್ಯದಲ್ಲಿರತಕ್ಕಂತಹದ್ದು, ಇವೆಲ್ಲವನ್ನೂ ಕೂಡ ರಾಜ್ಯದಲ್ಲಿ ಬಹುತೇಕ ಅಲ್ಲಲ್ಲೇ ಇರುವಂತಹದ್ದಕ್ಕೆ ಈ ಕಾನೂನಿನಡಿಯಲ್ಲಿ ಸಕ್ರಮ ಮಾಡಿ, ಇನ್ನು ಮುಂದೆ ಆಗತಕ್ಕಂತಹದ್ದಕ್ಕೆ ಅಧಿಕಾರಿಗಳಿಗೆ ಜವಾಬ್ದಾರಿಯನ್ನು ವಹಿಸಿ, ಯಾವುದೇ ಅಧಿಕಾರಿ ಒಂದೇ ಒಂದು ಇಂತಹದ್ದನ್ನು ಮಾಡಿದರೆ, ಅವರ ಮೇಲೆ ಯಾವ ರೀತಿ ಕಾನೂನಿನ ಚೌಕಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಬೇಕೆಂಬುದನ್ನು ಮಾಡಿ; ಈ ಸಕ್ರಮಗೊಳಿಸಿದ್ದೇ ಆದರೆ, ರಾಜ್ಯದ ಬೊಕ್ಕಸಕ್ಕೆ

VIII F-12

ಅಲ್ಪಸ್ವಲ್ಪ ಹಣವೂ ಬರುತ್ತದೆ. ಇಲ್ಲದಿದ್ದರೆ ಮಧ್ಯವರ್ತಿಗಳು ಇದನ್ನು ತಿಂದುಕೊಂಡು ಆರಾಮವಾಗಿರತಕ್ಕ ಒಂದು ವ್ಯವಸ್ಥೆಯಾಗುತ್ತದೆ. ಆದ್ದರಿಂದ ಪ್ರಸ್ತುತ ಅನ್ನುವುದನ್ನು ಈ ಸಂದರ್ಭದಲ್ಲಿ ಹೇಳಿ ದಯಮಾಡಿ, ಈ ಕಾನೂನು ತರುವುದರಿಂದ, ಮಹಾನಗರ ಪಾಲಿಕೆಗೆ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಅನುಕೂಲವಾಗುತ್ತದೆಂಬುದನ್ನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವೈಜನಾಥ್ ಪಾಟೀಲ್ : ಯಾರಿಗೆ ರೆಗ್ಯುಲರೈಸ್ ಮಾಡಬೇಕೆಂಬುದು ಇಲ್ಲಿದೆ. ಯಾರಿಗೆ ರೆಗ್ಯುಲರೈಸ್ ಮಾಡಬಾರದು ಎಂಬುದೂ ಇದರಲ್ಲಿದೆ. ಎಲ್ಲರಿಗೂ ರೆಗ್ಯುಲರೈಸ್ ಮಾಡುತ್ತಾರೆ. ರೋಡಿನಲ್ಲಿರುವವರಿಗೂ ರೆಗ್ಯುಲರೈಸ್ ಮಾಡುತ್ತಾರೆ ಎಂದು ಹೇಳಿದರೆ ಹೇಗೆ?

+ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ಸನ್ಮಾನ್ಯ ಅಧ್ಯಕ್ಷರೆ, ಇದರಲ್ಲಿ 3 ಮುಖ್ಯವಾದ ಅಂಶ ಇದೆ. ಒಂದು 3ನೇ ಪೇಜ್ನಲ್ಲಿ 3ನೇ ಕಾಲಂನಲ್ಲಿ

"Burden of proving that an unauthorised construction was made prior to the first day of January 1995 shall lie on the applicant who seeks regularisation of such unauthorised constructions*

ಎಂದು ಇದೆ. ಇದು ಹೋಗಬೇಕು. ಏಕೆಂದರೆ ಬರ್ಡನ್ ಅಫ್ ಪ್ರೂಫ್ ಅನ್-ಆತರೈಸ್ಡ್ ಕಟ್ಟಡ ಕಟ್ಟತಕ್ಕಂತಹ ಮನುಷ್ಯನಿಗೆ ಎಂದು ಹೇಳಿಬಿಟ್ಟರೆ, ಇವತ್ತು ಪಟ್ಟಣ ಪ್ರದೇಶಗಳಲ್ಲಿ ಗುಂಡಾಗಿರಿ ಮಾಡಿ ನಾನೇ ಪೊಸಿಷನ್ನಲ್ಲಿರುವುದು ಎಂದು ಹೇಳಿ ಪ್ರೂವ್ ಮಾಡಿ ಬಿಡುತ್ತಾನೆ ಬೇಕಾದರೆ. ಬರ್ಡನ್ ಆಫ್ ಪ್ರೂಫ್ ಆತನ ಮೇಲೆ ಬಿಟ್ಟರೆ. ಆವಾಗ ಯಾರು ಅನ್-ಆತರೈಸ್ಡ್ ಕನಸ್ಟ್ರಕ್ಷನ್ ಮಾಡಿದ್ದಾರೆ ಎಂಬ ಬಗ್ಗೆ ಸರ್ಕಾರ ಗಮನ ಹರಿಸಬೇಕಾಗುತ್ತದೆ. ಯಾರು ಅನ್-ಆತರೈಸ್ಡ್ ಕನಸ್ಟ್ರಕ್ಷನ್ ಮಾಡಿದ್ದಾರೆ ಅವರೇ ಪ್ರೂವ್ ಮಾಡು ಅಂದರೆ, ಯಾವುದೋ ಒಂದು ಜಾಗ, ಯಾವುದೋ ಒಂದು ಬಿಲ್ಡಿಂಗ್ ಯಾವುದೋ ರೀತಿಯಲ್ಲಿ ಪ್ರೂವ್ಮಾಡುತ್ತಾನೆ, ಇವತ್ತು ಇರತಕ್ಕಂತಹ ವ್ಯವಸ್ಥೆಯಲ್ಲಿ, ಆದ್ದರಿಂದ ಇದು ಸರಿಯಲ್ಲ, ಆ ಸೆಕ್ಷನ್ನೂ ಹೋಗಬೇಕು. ಮತ್ತೆ Amendment of Section 7ನಲ್ಲಿ 2ನೇ ಕ್ಲಾಸ್ ಏನು ಇದೆ, ಇದು (ii) in sub-section (2) for the words "Member-Secretary of the Screening Committee shall issue an order" the words "competent authority shall make a final order" shall be substituted."

That means instead of Screening Committee, a Member-Secretary has to be replaced by the Competent Authority. The Competent Authority you are proposing here is a K.A.S. Group Senior Scale Officer. Again it is directly the Government taking a charge of deciding who is unauthorisedly constructing and who is not constructing. This should go.

ಮತ್ತೆ ಇದರ ಕಾನ್ಸಿಡಿಕ್ಷನ್ ಏನಾಗುತ್ತದೆಂದರೆ, ಇದೊಂದು ಹೋಗಬೇಕಾಗುತ್ತದೆ. Single authority means again the Government. Revision by the State Government. ಅದು ಏನು ಹೇಳುತ್ತದೆ ಈ ಸೆಕ್ಷನ್ನಲ್ಲಿ ಅಂದರೆ the State Government may on its own motion or on the application of any person at any time call for and examine the order passed or proceeding recorded by the competent authority for the purpose of satisfying itself as to the legality or propriety

of the order or the regularity of such proceeding and may pass such order with respect thereto as it may deem fit."

ಏನು ಸ್ವಾಮಿ ಇದು?

The State Government can suo moto take the revision on the Single Authority decision.

ಹೇಗೆ ಇದನ್ನು ಫ್ರೇಮ್ ಮಾಡಿದ್ದೀರಿ? ರಾಜ್ಯ ಸರ್ಕಾರ ಸುವೋ-ಮೋಟೋ ತೆಗೆದುಕೊಳ್ಳುವುದಾದರೆ What is the necessity of the judiciary? ನೀವು ಕಾಂಪಿಟೆಂಟ್ ಅಥಾರಿಟಿ ಎಂದು ಹೇಳಿ ಸಿಂಗಲ್ ಆಫೀಸರನ್ನು ಎಂದು ಹೇಳಿದ್ದೀರಿ. ಮತ್ತೆ State Government on its own motion, ಇದರ ಅರ್ಥ ಏನು? Most of the regularisation decisions will become political decisions.

ರಾಜಕೀಯವಾದ ತೀರ್ಮಾನವಾಗುತ್ತದೆ. ಏಕೆಂದರೆ ನಗರದಲ್ಲಿ ಬಹಳ ಶ್ರೀಮಂತರು ಕಟ್ಟಿರತಕ್ಕ ಹಲವಾರು ಅಂತಸ್ತಿನ ಬಿಲ್ಡಿಂಗ್ಗಳು ಅದು ರೆಗ್ಯುಲರೈಸ್ ಆಗುವುದಾದರೆ, ಯಾವನೋ ಒಬ್ಬ ಅಧಿಕಾರಿ ಅದು ಬೇಡ ಎಂದು ಹೇಳಿದರೆ, ಮತ್ತೆ the Government on its own can move a Motion. It will be a political decision doing favour. ಆದ್ದರಿಂದ ಈ ಸೆಕ್ಷನ್ ಹೋಗಬೇಕು. ಇದು ರಿವಿಷನ್ ಸ್ಟೇಟ್ಗೆ ಇರಬಾರದು. ಮತ್ತೆ Amendment of Section 9 ನಲ್ಲಿ ಏನು ಹೇಳುತ್ತೀರಿ ನೀವು; "in clause (a) for the words, figure and brackets "sub-Section(4)" the words, figure and brackets" sub-section (2)" shall be substituted. Substituted by what?

ಕಾಂಪಿಟೆಂಟ್ ಗೌರ್ನಮೆಂಟೇ. ರಿವಿಷನ್ನೂ ಗೌರ್ನಮೆಂಟ್. ಮತ್ತೆ ನ್ಯಾಯ ಎಲ್ಲಿ ಸಿಕ್ಕುತ್ತದೆ? ಎಲ್ಲಿಗೆ ಹೋಗಬೇಕು ನ್ಯಾಯಕ್ಕೆ? ಕಾಂಪಿಟೆಂಟ್ ಅಥಾರಿಟಿನೂ ಗೌರ್ನಮೆಂಟ್. ರಿವಿಷನ್ನೂ ಗೌರ್ನಮೆಂಟ್.

Then no other man to give adjudication as to which is right, which is wrong, who has constructed unauthorisedly who has not constructed unauthorisedly. ಇದರಿಂದ ಗವರ್ನಮೆಂಟ್ ಸ್ವೀಪಿಂಗ್ ಪವರ್ ತೆಗೆದುಕೊಳ್ಳುತ್ತದೆ ಮತ್ತು ಗವರ್ನಮೆಂಟೇ ಅದನ್ನು ತೀರ್ಮಾನ ಮಾಡುತ್ತದೆ. ಈಗ ಫ್ರೇಮ್ ಮಾಡುವುದು ಗವರ್ನಮೆಂಟ್, ತೀರ್ಮಾನ ಮಾಡುವುದೂ ಗವರ್ನಮೆಂಟೇ. ಇದರಿಂದ ಬಡವರಿಗಂತೂ ಖಂಡಿತ ಏನೂ ಪ್ರಯೋಜನ ಆಗುವುದಿಲ್ಲ ಮೈಟ್ ಈಸ್ ರೈಟ್. ಯಾರು ಬಲವಂತರು ಇದ್ದಾರೋ ಅವರಿಗೆ ಪ್ರಯೋಜನ ಆಗುತ್ತದೆ.

(ಈ ಹಂತದಲ್ಲಿ ವಾಟಾಳ್ ನಾಗರಾಜರು ಮಾತನಾಡಲು ಅವಕಾಶ ಕೊಡಬೇಕೆಂದು ಕೇಳಿದರು)

ಅಧ್ಯಕ್ಷರು : ನೀವು ರೂರಲ್ ಕಾನ್ಸಿಟ್ಯೂಯೆನ್ಸಿ ಅಲ್ಲವೇ? ಈಗ ನಂಜೇಗೌಡರಿಗೆ ಮೊದಲು ಅವಕಾಶ ಕೊಡೋಣ. ಅವರು ಬೆಂಗಳೂರಿಗೆ ಬಂದುಬಿಟ್ಟಿದ್ದಾರಲ್ಲಾ. ನಂಜೇಗೌಡರಿಗೆ ಕೊಟ್ಟು, ಆಮೇಲೆ ನಿಮಗೆ ಕೊಡುತ್ತೇನೆ.

ಶ್ರೀ ಹೆಚ್.ಎನ್. ನಂಜೇಗೌಡ : ವಾಟಾಳರು ಮಾತನಾಡಿದ ಮೇಲೆ ನಾನು ಮಾತನಾಡುತ್ತೇನೆ

+ ಶ್ರೀ ಹೆಚ್.ಎನ್. ನಂಜೇಗೌಡ (ಬಸವನಗುಡಿ) : ಮಾನ್ಯ ಅಧ್ಯಕ್ಷರೇ, ಈ ರೆವಿನ್ಯೂ ಪಾಕೆಟ್ಗಳಲ್ಲಿ ಕಟ್ಟಿದಂಥ ಮನೆಗಳನ್ನು ಸಕ್ರಮಗೊಳಿಸಬೇಕು ಎಂದು ಹೇಳಿದ್ದವರ

ಪೈಕಿ ನಾನೂ ಒಬ್ಬ. ಕಾರಣ ಏನು? ಈ ಮಧ್ಯಮ ವರ್ಗದವರು ರೆವಿನ್ಯೂ ಪಾಕೆಟ್ಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಯಾರು ಈ ಬಿಲ್ಲಿನ ಇನ್ಚಾರ್ಜ್? ವೈಜನಾಥ ಪಾಟೀಲರೇ, ನೀವೇ ಏನು? ನಾನೇನೋ ಲಾ ಮಿನಿಸ್ಟರ್ ಅಂತ ಇದ್ದೆ. ಏಕೆಂದರೆ ಅವರೇನೋ ಒಂದು ಸಣ್ಣ ಕಾನ್ಫರೆನ್ಸ್ನಲ್ಲಿ ಇದ್ದರಲ್ಲಾ, ಈ ಮಧ್ಯಮ ವರ್ಗದವರು ಲಿಟಲ್ ಬಿಲೋ ಮಿಡಲ್ ಕ್ಲಾಸ್, ಇವರು ಜಾಸ್ತಿ ಮನೆಗಳನ್ನು ಈ ರೆವಿನ್ಯೂ ಪಾಕೆಟ್ನಲ್ಲಿ ಕಟ್ಟಿದ್ದಾರೆ. ಇಂತಹ ರೆವಿನ್ಯೂ ಪಾಕೆಟ್ನಲ್ಲಿ ನಾನು ಹೇಳುತ್ತಾ ಇರತಕ್ಕಂಥಾದ್ದು, ಕನ್ನಡಿಗರೇ ಜಾಸ್ತಿ ಇದ್ದಾರೆ. ಅಪರೂಪ ಬೇರೆಯವರು ಇರುವುದು. ಇಲ್ಲಿ ಏನಾಗಿದೆ ಎಂದರೆ ಇವರು ರೆಗ್ಯುಲರೈಸ್ ಮಾಡಿಕೊಳ್ಳುವುದಕ್ಕೆ ತುಂಬಾ ಹಣ ಖರ್ಚು ಮಾಡತಕ್ಕಂಥ ಜನ ಅಲ್ಲ, ನಾವಾಗೇ ಮೇಲೆ ಬಿದ್ದು ಅವನ್ನು ರೆಗ್ಯುಲರೈಸ್ ಮಾಡಿಕೊಡಬೇಕಾಗುತ್ತದೆ ಹಾಗೂ ಖಾತೆಯನ್ನೂ ಮಾಡಿಕೊಡಬೇಕಾಗುತ್ತದೆ. ನಾವು ಏಕೆ ಇಲ್ಲಿ ಹೇಳಬೇಕು ಎಂದರೆ, ನಾನು ಇದನ್ನು ನೋಡಿದ್ದೇ ಇಲ್ಲ, ಈ ಅಬ್ಜೆಕ್ಟನ್ ಅಂಡ್ ರೀಸನ್ಸ್ ನೋಡಿದೆ. ಉದ್ದೇಶ ನಾವು ಏನು ಹೇಳುತ್ತಿದ್ದೆವೋ ಸರ್ಕಾರಕ್ಕೆ, ರೆವಿನ್ಯೂ ಪಾಕೆಟ್ನಲ್ಲಿ ಇರತಕ್ಕಂಥಾದ್ದನ್ನು ಖಾಯಂ ಮಾಡಿ, ಅದನ್ನು ರೆಗ್ಯುಲರೈಸ್ ಮಾಡಿ ಎಂದು ಹೇಳುತ್ತಿದ್ದೆವಲ್ಲಾ ಅದರ ನೆಪದಲ್ಲಿ ನಿಮ್ಮ ಅಬ್ಜೆಕ್ಟ್ಸ್ ರೀಸನ್ನಲ್ಲಿ ಏನೇನೋ ಹೇಳಿದ್ದೀರಿ. ಈಗ ಆಯಿತಲ್ಲ, ಬಿ.ಡಿ.ಎ.ನವರು ನೋಟಿಫೈ ಮಾಡಿರುತ್ತಾರೆ ರೆವಿನ್ಯೂ ಪಾಕೆಟ್ಸ್. ಅದನ್ನು ರೆಗ್ಯುಲರೈಸ್ ಮಾಡುವ ಹಾಗೆ ಇಲ್ಲವೇ?

ಶ್ರೀ ವೈಜನಾಥ ಪಾಟೀಲ್ : ಇಲ್ಲ ಮಾಡುವ ಹಾಗೆ ಇಲ್ಲ.

ಶ್ರೀ ಹೆಚ್.ಎನ್. ನಂಜೇಗೌಡ : ಮಾಡಬೇಕು. ಏಕಿಲ್ಲ?

ಶ್ರೀ ವೈಜನಾಥ ಪಾಟೀಲ್ : ಎಲ್ಲಾ ಮಾಡುತ್ತಾರೆ ಎಂದು ನಾವೂ ಮಾಡುವುದಕ್ಕೆ ಆಗುತ್ತದೆಯೇ?

ಶ್ರೀ ಹೆಚ್.ಎನ್. ನಂಜೇಗೌಡ : ಈಗ ಬೆಂಗಳೂರಿನಲ್ಲಿ ರೆವಿನ್ಯೂ ಪಾಕೆಟ್ಸ್ ಎಂದು ನಾವು ಹೇಳುತ್ತೇವಲ್ಲಾ, ಇವು ಬಿ.ಡಿ.ಎ. ನೋಟಿಫೈ ಮಾಡಿರುವ ಏರಿಯಾದಲ್ಲೇ ಜಾಸ್ತಿ ಇವೆ. ಬಿ.ಡಿ.ಎ. ನೋಟಿಫೈ ಮಾಡಿರುವ ಏರಿಯಾದಲ್ಲೇ ಈ ಬಡಬಗ್ಗರು, ಕನ್ನಡಿಗರು ಕಟ್ಟಿರುವುದು ಬೇರೆಯವರದ್ದು ನಾವು ಹೇಳುವುದಕ್ಕೆ ಹೋಗುವುದಿಲ್ಲ. ಈ ಸಣ್ಣ ಮನೆಗಳನ್ನು ಕಟ್ಟಿರುತ್ತಾರಲ್ಲಾ, ಈ 30-40 ಸೈಟು, 40-50 ಸೈಟು, 15-20 ಸೈಟು, ಬಿ.ಡಿ.ಎ. ಯಲ್ಲೂ ಕಟ್ಟಿದ್ದಾರೆ. ಏಕೆಂದರೆ ಇದರ ಉದ್ದೇಶ ಏನು? ಉದ್ದೇಶ ಸಫಲ ಆಗಬೇಕಲ್ಲಾ, ನಮ್ಮ ಉದ್ದೇಶ ಏನು? ಮನೆ ಇಲ್ಲದೇ ಇನ್ನೊಂದು ಪವರು ಮನೆ ಕಟ್ಟುಕೊಂಡಿದ್ದಾರೆ, ಶ್ರಮವಹಿಸಿ, ಬಡಬಗ್ಗರು, ಮಧ್ಯಮವರ್ಗದವರು ಅವರಿಗೆ ಹೆಚ್ಚಿಗೆ ಅನುಕೂಲ ಆಗಲಿ ಅಂತ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮ ಉದ್ದೇಶ ಆಯಿತು ಅದು. ಅವರು ಉದ್ದೇಶ ಏನು ಎಂಬುದನ್ನು ನೋಡಬೇಕು ನಾವು.

ಶ್ರೀ ಹೆಚ್.ಎನ್. ನಂಜೇಗೌಡ : ಆ ಉದಾಸೀನಕ್ಕೆ ವಿರುದ್ಧವಾಗಿದೆ, ಇದು. ನಮ್ಮದು ಉದ್ದೇಶ ಏನೇನು ಇದೆ, ನಮ್ಮ ಉದ್ದೇಶಕ್ಕೆ ಇದು ವಿರುದ್ಧವಾಗಿದೆ. ಅವರ ಉದ್ದೇಶಕ್ಕೆ, ಅವರು ಹೇಳಿದರು, ಅನುಗುಣವಾಗಿದೆ ಎನ್ನತಕ್ಕಂಥಾದ್ದು. ಇವರು ಏನು ಭಾರೀ ಆತುರವಾಗಿದ್ದಾರೆ ವೈಜನಾಥ ಪಾಟೀಲರು, ಏಕೆ ಎಂದು ಗೊತ್ತಾಗಲಿಲ್ಲ. ಆಮೇಲೆ "to provide for regularisation of unauthorised construction having more than two floors.

ಈ ಸೆಂಟೆನ್ಸ್ ಏಕೆ ಬಂತು? ಮೋರ್ ಡ್ಯಾನ್ ಟೂ ಫ್ಲೋರ್ಸ್ ಅಂದರೆ.....

ಶ್ರೀ ಆರ್.ಎಲ್. ಜಾಲಪ್ಪ : 1992ರ ಆಕ್ಟ್‌ನಲ್ಲಿ ಹಿಂದಿನ ಸರ್ಕಾರ ಏನು ಬಂತು, ಆಗ ಟೂ ಫ್ಲೋರ್ಸ್ ಎಂದು ಮಾಡಿದ್ದರು. Not more than two floors.

ಶ್ರೀ ಹೆಚ್.ಎನ್. ನಂಜೇಗೌಡ : ಅಲ್ಲ, ಏಕೆ ಮೋರ್ ದ್ಯಾನ್ ಟೂ ಫ್ಲೋರ್ಸ್? ನಿಮ್ಮ ಉದ್ದೇಶ ಅರ್ಥ ಆಯಿತು ನನಗೆ. ಅಂದರೆ ಟೂ ಫ್ಲೋರ್ಸಿಗಿಂತ ಜಾಸ್ತಿ ಕಟ್ಟಿರುವವರು ಇವರನ್ನು ಬಂದು ನೋಡಿದ್ದಾರೆ ಎಂಬುದು ಅಷ್ಟೇ. ಮೋರ್ ದ್ಯಾನ್ ಟೂ ಫ್ಲೋರ್ಸ್ ಎಂಬುದು ನಿಮಗೆ ಹೇಗೆ ಗೊತ್ತಾಯಿತು?

ಶ್ರೀ ಆರ್.ಎಲ್. ಜಾಲಪ್ಪ : ಇದು ಅತಿಯಾಯಿತು. ಇದು ನಂಜೇಗೌಡರಿಂದ ಬರುವ ಮಾತಲ್ಲ. ಇನ್ನು ಯಾರಿಂದ ಆದರೂ ಹೇಳಲಿ. ಆದರೆ ತಮ್ಮಿಂದ ಈ ಮಾತನ್ನು ನಿರೀಕ್ಷೆ ಮಾಡತಕ್ಕಂಥಾದ್ದು ಅಲ್ಲ ಸ್ವಾಮಿ. ಇದು ಕಾಮನ್ ಸೆನ್ಸ್. ಎರಡು ಫ್ಲೋರ್ ಇದ್ದರೆ ಒಡೆಯುವುದಿಲ್ಲ, ಹೊಸದಾಗಿ ಮೂರು ಫ್ಲೋರ್ ಇದ್ದರೆ ಅದನ್ನು ಒಡೆಯುತ್ತೇವೆ ಅಂದರೆ....

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಏನು ತಪ್ಪು ಹೇಳಿದರು, ಅವರು ನಿಮ್ಮನ್ನೆಲ್ಲಾ ಬಂದು ನೋಡಿ, ಕನ್ವಿನ್ಸ್ ಮಾಡಿದ್ದಾರೆ ಎಂದು ಹೇಳಿದರು. ಇದರಲ್ಲಿ ತಪ್ಪು ಏಕೆ ತಿಳಿದುಕೊಳ್ಳುತ್ತೀರಿ?

ಶ್ರೀ ಆರ್.ಎಲ್. ಜಾಲಪ್ಪ : ಸ್ವಾಮಿ ನಿಮಗೆ ಒಬ್ಬರಿಗೇ ಅಲ್ಲ ಕಾಮನ್ ಸೆನ್ಸ್ ಇರುವುದು. ಇದು ನಿಮ್ಮ ಆಸ್ತಿ ಅಲ್ಲ ಕಾಮನ್ ಸೆನ್ಸ್. ನಮಗೂ ಗೊತ್ತಾಗುತ್ತದೆ. ನೀವು ಏನು ಮಾತನಾಡುತ್ತೀರಿ ಎಂಬುದು ನಮಗೂ ಗೊತ್ತಾಗುತ್ತದೆ.

ಶ್ರೀ ಹೆಚ್.ಎನ್. ನಂಜೇಗೌಡ : ಜಾಲಪ್ಪನವರನ್ನು ಬಂದು ಯಾರೂ ನೋಡಿಲ್ಲ. ನಾನೇ ಡಿಕ್ಲೇರ್ ಮಾಡುತ್ತೇನೆ, ಅಧ್ಯಕ್ಷರೇ, ಜಾಲಪ್ಪನವರನ್ನು ಬಂದು ಎರಡು ಫ್ಲೋರಿನವರು, ಮೂರು ಫ್ಲೋರಿನವರು, ನಾಲ್ಕು ಫ್ಲೋರಿನವರು, ಐದು ಫ್ಲೋರಿನವರು, ಅವರು ಯಾರೂ ಬಂದು ಜಾಲಪ್ಪನವರನ್ನು ನೋಡಿಲ್ಲ, ನಾನೇ ಜಗಜ್ಜಾಹೀರಾಗಿ ಹೇಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಅಂದರೆ ಬೇರೆಯವರನ್ನು ನೋಡಿದ್ದಾರೆ ಎಂದು ಅರ್ಥವೇ? ಯಾರನ್ನೂ ನೋಡಿಲ್ಲ.

ಶ್ರೀ ಹೆಚ್.ಎನ್. ನಂಜೇಗೌಡ : ಆಯಿತು, ಒಪ್ಪಿಕೊಳ್ಳೋಣ.

ಶ್ರೀ ಎಂ.ಸಿ. ನಾಣಯ್ಯ : ನೀವು ದಯವಿಟ್ಟು ಕಾನೂನನ್ನು ತಂದಿರತಕ್ಕಂಥ ಸಂದರ್ಭವನ್ನು ನೋಡಿ. 1992ನೇ ಇಸವಿಯಲ್ಲಿ ಈ ಕಾನೂನನ್ನು ತಂದರು. 1991ನೇ ಇಸವಿಯಲ್ಲಿ ಈ ಸದನದಲ್ಲಿ ಚರ್ಚೆಯಾಗಿ ಕಾನೂನನ್ನು ತಂದು ಆಮೇಲೆ ರೆಗ್ಯುಲರೈಸೇಜೆಷನ್ ಮಾಡಬೇಕು ಎಂದು ತೀರ್ಮಾನವಾಗಿ, ಆದಾದಮೇಲೆ ಮೇಲ್ಮನೆಗೆ ಬಂದಾಗಲೂ ಕೂಡ ಅಲ್ಲಿ ಪುನಃ ಚರ್ಚೆಯಾಗಿ ಅಲ್ಲಿಂದ ಒಂದು ಕಮಿಟಿ ಮಾಡಿ ಇದನ್ನು ಮಾಡಿದರು. ಈಗ ಇರತಕ್ಕಂಥಾದ್ದು ಏನು ಅಂದರೆ ಕೆಲವು ವಿಚಾರದಲ್ಲಿ ಯಾವ್ಯಾವ ಜಮೀನುಗಳನ್ನು ರೆಗ್ಯುಲರೈಸ್ ಮಾಡಬಾರದು ಎಂದು ಹೇಳುತ್ತಾ ಇರತಕ್ಕಂಥ ಸೆಕ್ಷನ್ 4ರ ಅಡಿಯಲ್ಲಿ ಕೆಲವು ನಿರ್ಬಂಧ ಇದ್ದು, ಆ ನಿರ್ಬಂಧಗಳನ್ನು ಇವತ್ತು ಸಡಿಲ ಮಾಡಬೇಕಾಗಿರತಕ್ಕಂಥಾದ್ದಕ್ಕೆ ಏನೂ ಎಂದು ನೀವು ಕೇಳಬಹುದು ಕಾರಣ. ಅದಕ್ಕೆ ಇರತಕ್ಕಂಥ ಕಾರಣವನ್ನು ನಾವು ಕೊಟ್ಟಿದ್ದೇವೆ. ನೀವು ಹೇಳಿ. ನೀವು ಹೇಳಿ ಆದಮೇಲೆ ಉತ್ತರ ಹೇಳುತ್ತೇನೆ.

ಶ್ರೀ ಹೆಚ್.ಎನ್. ನಂಜೇಗೌಡ : ನಾನು ಏನು ಹೇಳುತ್ತೇನೆ. ಬಿ.ಡಿ.ಎ. ಜಮೀನು ಅಕ್ವೈರ್ ನೋಟಿಫಿಕೇಷನ್ ಆದತಕ್ಷಣ ಅಲ್ಲಿ ಹಾಕಿಕೊಂಡಿದ್ದರೆ ಒಡಿಸಿಹಾಕಿ. ಅದು ರೆಗ್ಯುಲರೈಸ್ ಮಾಡುವುದಿಲ್ಲ. ಫ್ಲೋಗ್ರೌಂಡ್ಸ್‌ನಲ್ಲಿ ಕಟ್ಟಿದ್ದರೆ ರೆಗ್ಯುಲರೈಸ್ ಮಾಡಿ,

ಪಾರ್ಕ್ನಲ್ಲಿ ಕಟ್ಟಿ ಆಗಿಬಿಟ್ಟಿದೆ. ಇಲ್ಲಿ ಕಟ್ಟಿ ಆಗಿರುವುದಿಲ್ಲ. ಬಿ.ಡಿ.ಎ. ನವರು ನೋಟಿಷ್ಟೈ ಮಾಡಿದ ತಕ್ಷಣ ಅಲ್ಲಿ ರೆಗ್ಯುಲರೈಸ್ ಮಾಡಬೇಡಿ. ಪ್ಲೇಗ್ರೌಂಡ್ಸ್ನಲ್ಲಿ ಮಾಡಬಹುದು, ಪಾರ್ಕ್ನಲ್ಲಿ ಮಾಡಬಹುದು. ಇದು ಏನೆಂದರೆ ಪ್ಲೇ ಗ್ರೌಂಡ್ಸ್ ಪಾರ್ಕ್ಸ್ ಇಲ್ಲೆಲ್ಲಾ ಏಕೆ ಮಾಡಬೇಕು. ಅದಕ್ಕೆ ಒಂದು ಕಾರಣಬೇಕಲ್ಲಾ ನಮಗೆ, ಏಕೆ ಮಾಡಬೇಕು ಎಂದು. ಈ ಪ್ಲೇ ಗ್ರೌಂಡ್ಸ್, ಪಾರ್ಕ್ನಲ್ಲಿ ಕಟ್ಟಿರುವವರೆಲ್ಲಾ ಬಲಿಷ್ಠರು. ಬಡವರು ಯಾರೂ ಅಲ್ಲಿ ಹೋಗಿ ಕಟ್ಟಿರುವುದಿಲ್ಲ. ನಿಮ್ಮ ಬಿ.ಡಿ.ಎ.ನವರು ನೋಟಿಷ್ಟೈ ಮಾಡಿರುತ್ತಾರಲ್ಲಾ, ಬಡಬೋರೇಗೌಡನ ಜಮೀನು, ಅಲ್ಲಿ ಕಟ್ಟಿಕೊಂಡಿರುವವರು ಯಾರು ಬಡವರು ಕಟ್ಟಿರುತ್ತಾರೆ, ಮಧ್ಯಮ ವರ್ಗದವರು ಕಟ್ಟಿರುತ್ತಾರೆ, ಬೇಕಾದರೆ ಸರ್ವೆ ಮಾಡಿಸಿ. ನಾನೇನು ಇದನ್ನು ವಾದಕ್ಕಾಗಿ ಹೇಳುತ್ತಿಲ್ಲ. ನಾನು ಏಕೆ ಹೇಳಿದೆ ಅಂದರೆ...

ಶ್ರೀ ಜೆ.ಹೆಚ್. ಪಟೇಲ್ : ಹಿಂದೆ ಯಾವುದೋ ಒಂದು ಕಾಲದಲ್ಲಿ ಆದ ರೇಪ್ಗೆ ತಾಳಿ ಕಟ್ಟಿಸುವ ಕೆಲಸವಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಆಯಿತು, ಆ ಪುಣ್ಯದ ಕೆಲಸ ನಿಮಗೆ ಬಂತಲ್ಲ.

ಶ್ರೀ ಹೆಚ್.ಎನ್. ನಂಜೇಗೌಡ : ಈಗ ನೀವು ತಾಳಿನೇ ಕಟ್ಟುತ್ತೀರೋ, ಫರ್ದರ್ ರೇಪ್ ಮಾಡುತ್ತೀರೋ, ನಮಗೆ ಒಂದೂ ಗೊತ್ತಾಗುವುದಿಲ್ಲ.

ಅಧ್ಯಕ್ಷರು : ಏನಾದರೂ ಮಾಡಿಕೊಳ್ಳಿ, ಮಾನ್ಯ ವಾಟಾಳರಿಗೆ ನಾಮಕರಣದ ಕೆಲಸ ಇಡಬೇಡಿ ಅಷ್ಟೇ.

ಶ್ರೀ ವಾಟಾಳ್ ನಾಗರಾಜ್ : ನಾಮಕರಣ ಅವರೇ ಮಾಡಿಕೊಂಡಿದ್ದಾರೆ. ಇದು ನಾಮಕರಣ ಅಲ್ಲವೇ

ಶ್ರೀಮತಿ ಪ್ರಮೀಳಾ ನೇಸರ್ಗಿ : ಅಧ್ಯಕ್ಷರೇ ಒಂದು ನಿಮಿಷ. ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದರಲ್ಲಾ, ತಾಳಿ ಕಟ್ಟುವ ಕೆಲಸ. ಆ ರೇಪ್ ಮಾಡದವರನ್ನೆಲ್ಲಾ ತಾಳಿ ಕಟ್ಟುವಂಥ ಕಾನೂನು ತೆಗೆದುಕೊಂಡು ಬನ್ನಿ ದಯವಿಟ್ಟು. ನಾವೆಲ್ಲಾ ಸಪೋರ್ಟ್ ಮಾಡೋಣ. ತೆಗೆದುಕೊಂಡು ಬನ್ನಿ. ಯಾರ್‍ಯಾರು ಮಾಡುತ್ತಾರಲ್ಲಾ ಅವರಿಗೆಲ್ಲಾ ತಾಳಿ ಕಟ್ಟುವುದು ಕಡ್ಡಾಯ ಮಾಡಿ ಕಾನೂನು ತೆಗೆದುಕೊಂಡು ಬನ್ನಿ, ನಾವೂ ಸಪೋರ್ಟ್ ಮಾಡೋಣ.

ಅಧ್ಯಕ್ಷರು : ನೀವು ಕೇಳುವುದು ಹೇಗೆ ಇದೆ ಎಂದರೆ ಅವರೆಲ್ಲಾ ಅವರ ಹತ್ತಿರಕ್ಕೇ ಹೋದ ಹಾಗೆ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ಈ ಸರ್ಕಾರದ ಬಗ್ಗೆ ನಿಮಗೆ ಏಕೆ ಅನುಮಾನ ಬಂತು?

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೇ, ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ, ಉಪ ಮುಖ್ಯಮಂತ್ರಿಗಳಿಗೆ ನಾನು ವಿನಂತಿಸಿಕೊಳ್ಳುತ್ತೇನೆ. ಏಕೆಂದರೆ ತಾವು ಯಾವುದೋ ಒಂದು ಕಾನೂನು ಮಾಡಿದರೆ ಅದು ಯಾರಿಗೆ ಸಹಾಯ ಆಗಬೇಕೋ ಅಂಥವರಿಗೆ ಮಾತ್ರ ಸಹಾಯ ಆಗಬೇಕು, ಇದನ್ನು ಸೀಮಿತಗೊಳಿಸಬೇಕು ಎಂದು ಜಾಲಪ್ಪನವರನ್ನು ನಾನು ಕೇಳಿಕೊಳ್ಳುತ್ತೇನೆ. ಈ ಕಾನೂನಿನ ಹೆಸರಿನಲ್ಲಿ ಶ್ರೀಮಂತರಿಗೆ ಅನುಕೂಲ ಯಾವುದೇ ಕಾರಣಕ್ಕೆ ಆಗತಕ್ಕದ್ದು ಅಲ್ಲ. ಇದು ಮಧ್ಯಮ ವರ್ಗದವರಿಗೆ ಈ ರಾಜ್ಯದ ಜನಕ್ಕೆ ಅನುಕೂಲ ಆಗಲಿ. ಹೊರಗಡೆಯಿಂದ ಬಂದವರು ದೊಡ್ಡ ದೊಡ್ಡವರು ಈ ಗ್ರೀನ್ ಬೆಲ್ಟಲ್ಲಿ ಕಟ್ಟಿರತಕ್ಕಂಥವರು ಅದನ್ನು ರೆಗ್ಯುಲರೈಸ್ ಮಾಡಬೇಕು ಎಂದು ಹಾಕಿದ್ದೀರಿ. ಗ್ರೀನ್

ಬೆಳ್ಳಲ್ಲಿ ನಮ್ಮ ರೈತರು ಏನಾದರೂ ಮನೆ ಕಟ್ಟಬೇಕಾದರೆ ತೋಟದ ಮನೆ ಎಂದು ಲೈಸೆನ್ಸ್ ತೆಗೆದುಕೊಳ್ಳಬೇಕು, ದೊಡ್ಡಮನೆ ಕಟ್ಟುವುದಕ್ಕೆ ಕೊಡುವುದಿಲ್ಲ. ತೋಟದ ಮನೆ ಕಟ್ಟದ ಹೊರತು ಅವನು ಏನಾದರೂ ದೊಡ್ಡದಾಗಿ ತಳಹದಿ ಹಾಕಿದರೆ ಅದನ್ನೂ ಒಡೆದು ಹಾಕಿದ್ದಾರೆ, ಜೆ.ಹೆಚ್. ಪಟೇಲರೇ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿರುವ ಮಧ್ಯಮ ವರ್ಗದವರಿಗೆ ಬಡವರಿಗೆ ಅನುಕೂಲ ಆಗುವುದಿಲ್ಲ, ಈ ಕಾನೂನು ಯಾರು ಅನಧಿಕೃತವಾಗಿ ಬಹಳ ದೊಡ್ಡದೊಡ್ಡ ಮನೆಗಳನ್ನು ಕಟ್ಟಿದ್ದಾರಲ್ಲಾ, ಅಂಥವರಿಗೆ ಅನುಕೂಲವಾಗುತ್ತದೆ, ರೆಗ್ಯುಲರೈಸ್ ಮಾಡಿದರೆ ಎಂದು ತಾವೆಲ್ಲಾ ಹೇಳುತ್ತಿದ್ದೀರಿ. ಮಾನ್ಯ ಸೋಮಣ್ಣನವರು ಹೇಳಿದ್ದನ್ನು ತಾವು ಕೇಳಲಿಲ್ಲ ಎಂದು ಕಾಣುತ್ತದೆ. ಇದನ್ನು ರೆಗ್ಯುಲರೈಸ್ ಮಾಡದೇ, ಈ ತರಹದ ಅಗ್ಲಿ ಗ್ರೋಥ್ ಅನ್ನು ನಾವು ಚೆಕ್ ಮಾಡದಿದ್ದರೆ where will we stand? What do you suggest for any Government if you don't regularise?

ಇಲ್ಲ ಕಾರ್ಪೊರೇಷನ್ನೂ ಯಾವುದೂ ಬರುವ ಹಾಗೆ ಇಲ್ಲ. ಯಾವುದೇ ರೀತಿಯಿಂದ ಅವರು ಯಾರಿಗೂ ಆನ್ಸರ್ಬಲ್ ಅಲ್ಲ. ಅವರಿಗೆ ಬೇಕುಬೇಕಾದ ಹಾಗೆ ಕಟ್ಟಿಕೊಂಡು ಬಿಟ್ಟಿದ್ದಾರೆ. ವಿದ್ಯುಚ್ಛಕ್ತಿ ಹಣ ಕಟ್ಟಿಲ್ಲ ಎರಡು ಹರ್ಷದಿಂದ. ಸಾವಿರಾರು ಮನೆಗಳನ್ನು ಕಟ್ಟಿಕೊಂಡಿದ್ದಾರೆ. ವಿದ್ಯುಚ್ಛಕ್ತಿ ಸಪ್ಲೈ ಮಾಡಿದ್ದಾರೆ. ಅದನ್ನೆಲ್ಲಾ ಮಾಡುವುದಕ್ಕೋಸ್ಕರ ಈಗ ನಾವು ರೆಗ್ಯುಲರೈಸ್ ಮಾಡಿದರೆ we can have some control over them ಅದನ್ನು ಆದರೂ ಉದ್ದೇಶ ತಾವು ಒಪ್ಪುತ್ತೀರಿ.

ಶ್ರೀ ಎಂ. ಶ್ರೀನಿವಾಸ : ಬಡವರು ರೆವಿನ್ಯೂ ಸೈಟ್ಗಳಲ್ಲಿ ಮನೆ ಕಟ್ಟಿರತಕ್ಕಂಥಾದ್ದನ್ನು ಸಕ್ರಮ ಮಾಡುವುದರಲ್ಲಿ ನನ್ನ ಅಭ್ಯಂತರ ಏನೂ ಇಲ್ಲ. ಒಂದೊಂದು ಎಕರೆ, ಎರಡೆರಡು ಎಕರೆ ಬೆಂಗಳೂರಿನಲ್ಲಿರತಕ್ಕಂಥಾದ್ದು, ಒಂದೊಂದು ಎಕರೆ ಕೆರೆ ಒಂದು ಕೋಟಿ ರೂಪಾಯಿ ಆಗುತ್ತದೆ. ಅದರೊಳಗೆಲ್ಲಾ ಒತ್ತುವರಿ ಮನೆ ಕಟ್ಟಿದ್ದಾರೆ. ಅದು ಆದಮೇಲೆ ಬಿ.ಡಿ.ಎ. ಜಾಗದಲ್ಲಿ ಹಿಂದಿನ ಸರ್ಕಾರ, ಹೆಗಡೆ ಸರ್ಕಾರದವರು, ಬಿ.ಇ.ಎಲ್. ಕಾಲೋನಿಯಲ್ಲಿ, ಸುಮಾರು 400 ಮನೆ ಕಟ್ಟಿದರು. ಆಗ ಒಡೆದು ಹಾಕಲಿಲ್ಲವೇ? ನೀವು ಏನು ಬಡವರು ತೆಗೆದುಕೊಂಡಿದ್ದಾರೆ, ಅದನ್ನು ರೆಗ್ಯುಲರೈಸ್ ಮಾಡಿ, ನಮಗೆ ಒಪ್ಪಿಗೆ ಇದೆ.

ಶ್ರೀ ಹೆಚ್.ಎನ್. ನಂಜೇಗೌಡ : ನಾನು ಏನು ಹೇಳುವುದಕ್ಕೆ ಹೊರಟೆ ಎಂದರೆ ಈಗ ಇದನ್ನು ರೆಗ್ಯುಲರೈಸ್ ಮಾಡಿ ಅವರ ಹತ್ತಿರ ಅಸೆಸ್ಮೆಂಟ್ ತೆಗೆದುಕೊಂಡು, ಅವರ ಅಭಿವೃದ್ಧಿಗೆ ಆ ಹಣವನ್ನು ಬೇರೆ ಅಕೌಂಟ್ ಇಟ್ಟು ಅಲ್ಲೇ ಖರ್ಚು ಮಾಡಬೇಕು ಎಂದು ಹೇಳಿದವನು ನಾನು. ಈ ರೆವಿನ್ಯೂ ಪಾಕೆಟ್ಸ್ ಇದೆ. ನನ್ನ ಕ್ಷೇತ್ರದಲ್ಲಿ ಶ್ರೀನಗರ ಡಿವಿಷನ್ ಎಂದು ಇದೆ. ಅಲ್ಲಿ ಒಂದು ಕಾಲು ಲಕ್ಷದ ಹತ್ತಿರ ಹತ್ತಿರ ಪಾಪ್ಯುಲೇಷನ್ ಇದೆ. ಅಲ್ಲಿ ಡೆವೆಲಪ್ಮೆಂಟ್ ಏನೂ ಆಗಲಿಲ್ಲ. ಮಾಮೂಲಿ ಚರಂಡಿಗೆ ಕಕ್ಕಸ್ಸು ನೀರು ಬಿಟ್ಟುಕೊಳ್ಳುತ್ತಾರೆ. ಮಳೆ ಬಂದರೆ ಅದು ಮನೆ ಒಳಕ್ಕೇ, ಆ ಕಕ್ಕಸ್ಸು ನೀರು ಹೋಗುತ್ತದೆ. ಇಂಥ ಪರಿಸ್ಥಿತಿ ಇದೆ. ಇಂಪ್ರೂವ್ಮೆಂಟ್ ಆಗಿಲ್ಲ. ಯಾರೋ ದುಡ್ಡಿನ ಆಸೆಗೆ ಚಿಕ್ಕಚಿಕ್ಕ ಸೈಟ್ ಮಾಡಿದರು, ಲೇಔಟ್ ಮಾಡಿದರು. ತೆಗೆದುಕೊಂಡಿರುವವರೆಲ್ಲಾ, ಸ್ಥಳೀಯವರು, ಬಡವರು, ಮಧ್ಯಮ ವರ್ಗದವರು. ಅದನ್ನು ತೆಗೆದುಕೊಂಡು, ಅವರ ಹತ್ತಿರ ಡೆವೆಲಪ್ಮೆಂಟ್ ಚಾರ್ಜಸ್ ತೆಗೆದುಕೊಂಡು ಅಲ್ಲೇ ಖರ್ಚು ಮಾಡಿ, ಬೇರೆ ಅಕೌಂಟ್ ಇಟ್ಟು ಎಂದು ನಾವು ಹೇಳಿರುವುದು. ಅದು ಮಾಡಿ ಮಾಡಬಾರದು ಎಂದು ಅಲ್ಲ, ಮಾಡಬೇಕಾದರೆ ಉದ್ದೇಶ ಸಾಫಲ್ಯ ಆಗುವ ಹಾಗೆ, ಇದು ದುರುಪಯೋಗ ಆಗದ ಹಾಗೆ

ಮಾಡಬೇಕು. ಇಲ್ಲಿ ಸ್ವಲ್ಪ ದುರುಪಯೋಗ ಆಗತಕ್ಕಂಥ ಅವಕಾಶ ಇದೆ ಎಂದು ನನಗನ್ನಿಸುತ್ತದೆ. ಇದು ನೋಡಿ. ಬಹುಶಃ ನಾನು ತಪ್ಪಿರಬಹುದು. ನಾನು ಅದನ್ನೂ ಹೇಳುವುದಿಲ್ಲ.

ಶ್ರೀ ಜೆ.ಹೆಚ್. ಪಟೇಲ್ : ದುರುಪಯೋಗ ಆಗದ ಹಾಗೆ ಸಜೆಷನ್ ಕೊಡಿ.

ಶ್ರೀ ಹೆಚ್.ಎನ್. ನಂಜೇಗೌಡ : ನೀವು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹಾಕಿದರೆ ಒಳ್ಳೆಯದು ಒಂದು ತಿಂಗಳಲ್ಲೇ ಕೊಡಿ ಎಂದು ಹಾಕಿ, ವರದಿಯನ್ನು. ಸ್ವಲ್ಪ ಅದನ್ನು ಮಾಡಬೇಕು ಅನ್ನಿಸುತ್ತೇದೆ. ಸ್ವಲ್ಪ ನಮಗೆ ಪ್ರಾಮಾಣಿಕವಾದಂಥ......

ಶ್ರೀ ಎಂ.ಸಿ. ನಾಣಯ್ಯ : ಸದನದಲ್ಲಿ ಈ ಬಗ್ಗೆ ಬೇಕಾದರೆ ಮಾತನಾಡೋಣ. ನಾಳೆ ಚರ್ಚೆ ಮಾಡೋಣ.

ಶ್ರೀ ಜೆ.ಹೆಚ್. ಪಟೇಲ್ : ಬೇಕಾದರೆ ನಾಳೆ ಚರ್ಚೆ ಮಾಡೋಣ. ನಾನು ಈಗ ತಮ್ಮ ಉದ್ದೇಶದ ಬಗ್ಗೆ ತುಂಬಾ ಗೌರವದಿಂದ ಹೇಳುತ್ತೇನೆ. ಇದರಿಂದ ದುರುಪಯೋಗ ಯಾರೂ ಪಡೆದುಕೊಳ್ಳಬಾರದು. ಆ ಉದ್ದೇಶದ ಬಗ್ಗೆ ತಮ್ಮದು ಏನೂ ಭಿನ್ನಾಭಿಪ್ರಾಯ ಇಲ್ಲ. ಆ ದೋಷಗಳನ್ನೇನಾದರೂ ತಿದ್ದುವುದಕ್ಕೆ ಸಾಧ್ಯ ಇದ್ದರೆ ನಾಳೆ ಚರ್ಚೆ ಮಾಡೋಣ.

ಅಧ್ಯಕ್ಷರು : ಚರ್ಚೆಯನ್ನು ಮುಂದಕ್ಕೆ ಹಾಕೋಣ ಎಂದು ಹೇಳುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾಳೆ ಮತ್ತೆ ಇದಕ್ಕೆ 2-3 ಗಂಟೆ ವ್ಯರ್ಥ ಮಾಡಬೇಡಿ. ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿ ಅಲ್ಲಿ ಚರ್ಚೆಯಾಗಿ, ಇಲ್ಲಿ ಬಿಲ್ ಬರಬೇಕಾಗಿದೆಯೇ ಹೊರತು ಯಾವುದೇ ಕಾರಣಕ್ಕೆ ಈ ಕಡೆ ಇರುವ ನಮ್ಮದು ಯಾರದೂ ಒಪ್ಪಿಗೆ ಇಲ್ಲ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೇ, ಚರ್ಚೆ ಮಾಡಬೇಕು ಅಂದರೆ ಬೇಕಾದರೆ ಚರ್ಚೆ ಮಾಡೋಣ. 1991ನೇ ಇಸವಿಯಲ್ಲೇ ನಾವು ಮಂಜೂರಾತಿ ಕೊಟ್ಟಿರತಕ್ಕಂಥ ಈ ಕಾಯಿದೆಗೆ ಕೆಲವು ತಿದ್ದುಪಡಿಗಳನ್ನು ಮಾತ್ರ ತಂದಿದ್ದೇವೆ. ತಿದ್ದುಪಡಿ ತಂದಿರತಕ್ಕಂಥದ್ದು, ಒಂದು ಸೆಕ್ಷನ್ 3ಕ್ಕೆ, ಇನ್ನೊಂದು ಸೆಕ್ಷನ್ 4ಕ್ಕೆ, ಇನ್ನೊಂದು ಸೆಕ್ಷನ್ 6ಕ್ಕೆ. ಇದು ಮೂರಕ್ಕೆ ಮಾತ್ರ ತಿದ್ದುಪಡಿ ತಂದಿರತಕ್ಕದ್ದು. ಸೆಕ್ಷನ್ 3ಕ್ಕೆ ತಂದಿರತಕ್ಕ ತಿದ್ದುಪಡಿ, ಮಾನ್ಯ ಸಭಾಧ್ಯಕ್ಷರೇ, ಒಂದು ಆ ಸಂದರ್ಭದಲ್ಲಿ 1992ನೇ ಮಾರ್ಚ್ ಒಳಗಡೆ ಎಂದು ಹೇಳತಕ್ಕದ್ದನ್ನು, 94ನೇ ಮಾರ್ಚ್ ಎಂದು ಹೇಳತಕ್ಕದ್ದನ್ನು ಈಗ 1995 ಜನವರಿ 1ರ ಒಳಗಡೆ ಎಂದು ಹೇಳುತ್ತಾ ಇರತಕ್ಕಂಥದ್ದು. ಅದರ ಒಳಗಡೆ ಯಾರೆಲ್ಲಾ ಈ ರೀತಿಯ ಅನ್-ಆತರೈಸ್ಡ್ ಕನಸ್ಟ್ರಕ್ಷನ್ಸ್ ಮಾಡಿದ್ದಾರೆ. ಅವರಿಗೆ ಸಂಬಂಧ ಪಟ್ಟಹಾಗೆ ಎಂದು ಹೇಳಿದ್ದೇವೆ. ಮತ್ತೆ ಯಾವುದನ್ನೆಲ್ಲಾ ನಾವು ರೆಗ್ಯುಲರೈಸ್ ಮಾಡಬಾರದು ಎಂದು ಹೇಳುತ್ತಾ ಇರತಕ್ಕಂಥದ್ದು. ಇದರಲ್ಲಿ ಒಂದು ಏನೆಂದರೆ, ಹೊಸದಾಗಿ ಸೇರತಕ್ಕಂಥಾದ್ದು ಏನು ಎಂದರೆ ನಾವು ಡಿಲೀಟ್ ಮಾಡಲಿಕ್ಕೆ ಹೇಳತಕ್ಕಂಥಾದ್ದು, 1986ನೇ ಇಸವಿಯಲ್ಲಿ ನಮ್ಮದೇ ಒಂದು ಕಾಯಿದೆ ಇದೆ. ಪ್ರೊಟೆಕ್ಷನ್ ಆಫ್ ಪ್ಲೇ ಫೀಲಡ್ಸ್ ಅಂಡ್ ಪಾರ್ಕ್ಸ್ ಎಂದು ಹೇಳುತ್ತಾ ಇರತಕ್ಕಂಥ ಒಂದು ಕಾಯಿದೆ ಇದೆ. ಮಾನ್ಯ ನಂಜೇಗೌಡರು ನೀವೇ ಹೇಳಿದ್ದೀರಿ. ಇಲ್ಲಿಯವರೆಗೂ ಕೂಡ ಆ ಕಾಯಿದೆಯ ಅಡಿಯಲ್ಲಿ ನಮ್ಮ ರಾಜ್ಯದಲ್ಲಿ ಪ್ರೊಟೆಕ್ಷನ್ ಆಫ್ ಪ್ಲೇ ಗ್ರೌಂಡ್ಸ್, ಪಾರ್ಕ್ಸ್ ಎಂದು ಹೇಳುತ್ತಾ ಇರತಕ್ಕಂಥದ್ದರಲ್ಲಿ ಯಾವುದೂ ಕೂಡ ಐಡೆಂಟಿಫೈ ಮಾಡಿಲ್ಲ. No identification at all.

ಆದ್ದರಿಂದ ಏನು ಆಗಿದೆ ಅಂದರೆ ಕೆಲವು ಲೋಕಲ್ ಅಥಾರಿಟೀಸ್ಗೆ ಸಂಬಂಧಪಟ್ಟಿರತಕ್ಕಂಥ ಕೆಲವು ಜಮೀನುಗಳು ಯಾವುದು ಇತ್ತು, ಆ ಜಮೀನುಗಳಲ್ಲಿ

ಈಗಾಗಲೇ ಕನಸ್ಟ್ರಕ್ಷನ್ಸ್ ಆಗಿಬಿಟ್ಟು ಹತ್ತಾರು ವರ್ಷಗಳಿಂದ ಅವರು ಇದ್ದಾರೆ. 12 ವರ್ಷ, 15 ವರ್ಷದಿಂದ ಇದ್ದಾರೆ. ಎಲೆಕ್ಟ್ರಿಸಿಟಿ ತೆಗೆದುಕೊಂಡಿದ್ದಾರೆ. ಬಾಡಿಗೆ ಕಟ್ಟುವುದಿಲ್ಲ, ಅಸೆಸ್ಮೆಂಟ್ ಕೊಡುವುದಿಲ್ಲ, ಏನೂ ಮಾಡುತ್ತಿಲ್ಲ. ಆದ್ದರಿಂದ, ಅಂಥಹ ಜಾಗಗಳಲ್ಲಿ ಕಟ್ಟಿರತಕ್ಕಂಥಾದ್ದು ಏನಾದರೂ ಇದ್ದರೆ ನಾವು ಅದನ್ನು ಮಾಡಬೇಕು ಎಂದು ಹೇಳುತ್ತಾ ಇರತಕ್ಕದ್ದು. ಬಹುಶಃ ಮಾನ್ಯ ನಂಜೇಗೌಡರು ಹೇಳತಕ್ಕಂಥ ಒಂದು ವಾದ. ನೀವು ಪ್ಲೇ ಗ್ರೌಂಡ್ಸ್ ಮತ್ತು ಪಾರ್ಕ್ಸ್‌ನಲ್ಲಿ ಸಂಬಂಧಪಟ್ಟಿರತಕ್ಕಂಥಾದ್ದಕ್ಕೆ ಕನಸ್ಟ್ರಕ್ಷನ್ ಆಗಿದ್ದರೆ ನೀವು ಅದನ್ನೂ ಕೂಡ ಮಾಡಬೇಕು ಎಂದು ಹೊರಟರೆ ಹೇಗೆ ಎಂದು ಇಲ್ಲಿಯವರೆಗೆ ಐಡೆಂಟಿಫಿಕೇಷನ್ನೇ ಆಗಿಲ್ಲ. 1986ನೇ ಇಸವಿಯಲ್ಲಿ ತಂದಿರತಕ್ಕಂಥ ಕಾಯಿದೆಗೆ, ಯಾವುದು ಪ್ಲೇಗ್ರೌಂಡ್ಸ್, ಯಾವುದು ಪಾರ್ಕ್ ಎಂದು ಐಡೆಂಟಿಫಿಕೇಷನ್ ಆಗಿಲ್ಲ, ಅದು ಬೆಂಗಳೂರಿಗೆ ಸಂಬಂಧಪಟ್ಟಿರತಕ್ಕಂಥ ಹಾಗೆ ಯಾವುದೆಲ್ಲಾ ಪಾರ್ಕ್ಸ್ ಇದೆ, ಅದಕ್ಕೆ ಸಂಬಂಧಪಟ್ಟದ್ದುದು ಬೇರೆ ಕಾಯಿದೆ, ಆ ಕಾಯಿದೆಯ ಅಡಿಯಲ್ಲಿ ಇದು ಬರುವುದಿಲ್ಲ.

ಶ್ರೀ ಹೆಚ್.ಎನ್. ನಂಜೇಗೌಡ : ಈಗ ನೀವು ಬಿ.ಡಿ.ಎ. ಯಿಂದ ನೋಟಿಫೈ ಆದರೆ ಅದನ್ನೂ ಹೊರಗೆ ಇಟ್ಟಿದ್ದೀರಿ. ಅದನ್ನು ರೆಗ್ಯುಲರೈಸ್ ಮಾಡಲಿಕ್ಕೆ ನೀವು ತಯಾರು ಇಲ್ಲ.

ಎಂ. ಶ್ರೀನಿವಾಸ್ : ಐಡೆಂಟಿಫೈ ನಾವು ಏಕೆ ಮಾಡಬೇಕು? ಪ್ಲಾನ್ನಲ್ಲಿಯೇ ಇರುತ್ತದೆಯಲ್ಲಾ.

Smt. Pramila Nesargi : The Citizens have every right to have a park. The place can marked for parks & playground should be protected.

ಶ್ರೀ ಎಂ.ಸಿ. ನಾಣಯ್ಯ : ಈಗ ಸರ್ಕಾರದ ವತಿಯಿಂದ ಹೇಳುವುದು ಇದ್ದರೆ, ನಮಗೂ ಕೂಡ ಇದರಲ್ಲಿ ರಿಸರ್ವೇಷನ್ ಇದೆ. ಪಾರ್ಕ್ ಮತ್ತು ಪ್ಲೇ ಗ್ರೌಂಡ್ಸ್ ಯಾವುದು ಇದೆ, ಇದು ಎಲ್ಲಾದರೂ ಉಳಿದುಕೊಂಡಿದ್ದರೆ ಅಲ್ಲಿ ಕನಸ್ಟ್ರಕ್ಷನ್ಸ್ ಆಗಬಾರದು ಎಂದು ಹೇಳುತ್ತಾ ಇರತಕ್ಕಂಥಾದ್ದು. ಆದರೆ ಐಡೆಂಟಿಫಿಕೇಷನ್ ಆಗಿಲ್ಲ ಎಂದು ಹೇಳುತ್ತಾ ಇರತಕ್ಕಂಥ ಒಂದೇ ಕಾರಣದಿಂದ ಇದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅನ್-ಆತರೈಸ್ಡ್ ಎಂದು ತಿಳಿದುಕೊಂಡಿದ್ದರೆ ಎಂದು ಹೇಳುತ್ತೀರಿ ಎಲ್ಲಿ ಅನ್-ಆತರೈಸ್ಡ್ ಕನಸ್ಟ್ರಕ್ಷನ್ ಇದ್ದರೆ ಕಿತ್ತು ಹಾಕಬೇಕು, ಪಾರ್ಕನ್ನು ಉಳಿಸಬೇಕು ಎಂದು ಹೇಳುವಂಥವರು ನಾವು.

ಶ್ರೀ ಎಂ.ಸಿ. ನಾಣಯ್ಯ : 15-16 ವರ್ಷಗಳು ಆಯಿತು. ಕೆಲವು ಜನ 20 ವರ್ಷಗಳಿಂದ ಇದ್ದಾರೆ ಕನಸ್ಟ್ರಕ್ಷನ್ಸ್ ಮಾಡಿಕೊಂಡು ಬಂದಿದ್ದಾರೆ. ಇಲ್ಲಿಯವರೆಗೆ ರೆಗ್ಯುಲರೈಸೇಷನ್ ಆಗಿಲ್ಲ. ಸರ್ಕಾರಕ್ಕೆ ಬರುತ್ತಾ ಇರತಕ್ಕಂಥ ಹಣವೂ ಬಂದಿಲ್ಲ ಲೋಕಲ್ ಅಥಾರಿಟಿ ಜಾಗ ಆಗಲೀ, ಸರ್ಕಾರದ ಜಮೀನು ಆಗಲೀ 25-30 ವರ್ಷದಿಂದ ಅವರು ಕಟ್ಟಿಕೊಡು ಬಂದಿದ್ದಾರೆ. ಎಲ್ಲಾ ತರಹದ ಸೌಲಭ್ಯಗಳನ್ನೂ ಪಡೆದುಕೊಂಡು ಬಂದಿದ್ದಾರೆ. ಇಲ್ಲಿಯವರೆಗೆ ರೆಗ್ಯುಲರೈಸೇಷನ್ ಆಗಿಲ್ಲ. 1991ನೇ ಇಸವಿಯಲ್ಲಿ ಕಾನೂನು ಜಾರಿಗೆ ಬಂದರೂ ಕೂಡ 95ನೇ ಇಸವಿಯಲ್ಲಿ ಕೂಡ ಇದರ ಬಗ್ಗೆ ಏನೂ ನಡೆದಿಲ್ಲ, ಕೊನೆಗೆ ಏನಾಯಿತು.

ಶ್ರೀ ಎಂ. ಶ್ರೀನಿವಾಸ್ : ಲಕ್ಷ್ಮಣರಾವ್ ವರದಿಯಲ್ಲಿ ಕೆರೆಗಳನ್ನು ಮೇಂಟೈನ್ ಮಾಡಬೇಕು ಎಂದು ಇದೆ. ಇವತ್ತು ಆ ಕೆರೆಗಳನ್ನು ತ್ರೀ ಅಫ್ಟೇರ್ಸ್ ಬಿಲ್ಡಿಂಗ್ಸ್ ಕಟ್ಟಿದ್ದಾರೆ. ಏನು ಕ್ರಮ ತೆಗೆದುಕೊಂಡರು ಅಧಿಕಾರಿಗಳು? ಹೇಳಿ ಸ್ವಾಮಿ ನೀವೇ. ನೀವು ಅಧಿಕಾರಿಗಳನ್ನು ಹಿಡಿತದಲ್ಲಿ ಇಟ್ಟುಕೊಳ್ಳದಿದ್ದರೆ ತ್ರೀ ಅಫ್ಟೇರ್ಗಳನ್ನು ಕಾರ್ಪೊರೇಷನ್

ಜಾಗ ಮತ್ತು ಮೈದಾನದಲ್ಲಿ ಕಟ್ಟಿದ್ದಾರೆ ಎಂದರೆ, ಅದನ್ನು ರೆಗ್ಯುಲರೈಸೇಷನ್ ಮಾಡುತ್ತೇವೆ ಎಂದರೆ ಅರ್ಥವೇ ಇಲ್ಲ.

ಶ್ರೀ ಎಂ.ಸಿ. ನಾಣಯ್ಯ : ನಿಮ್ಮ ಚಿಂತನೆ ಹೇಳುತ್ತೇನೆ. ನಿಮ್ಮ ಚಿಂತನೆಯನ್ನು ನೀವು ಹೇಳುತ್ತಾ ಇರತಕ್ಕಂಥಾದ್ದು ಪ್ಲೇ ಗ್ರೌಂಡ್ ಅಂಡ್ ಪಾರ್ಕ್ಗೆ ಸಂಬಂಧಪಟ್ಟಹಾಗೆ ನೀವು ನೇರವಾಗಿ ಒಂದು ವಿಚಾರವನ್ನು ಕೇಳಿದ್ದೀರಿ. ಅದೇ ಪ್ಲೇ ಫೀಲ್ಡ್ ಅಂಡ್ ಪಾರ್ಕ್ಸ್ ಇದಕ್ಕೆ ಸಂಬಂಧಪಟ್ಟಹಾಗೆ. ಮಾನ್ಯ ಸಭಾಧ್ಯಕ್ಷರೇ, ಬೆಂಗಳೂರಿನಲ್ಲಿ ಇರತಕ್ಕಂಥ ಗ್ರೀನ್ ಬೆಲ್ಟ್ ಕೆಲವು ಭಾಗಗಳಲ್ಲಿ ನಾವು ಮಾಡಿದ್ದೇವೆ. ಈ ಗ್ರೀನ್ ಬೆಲ್ಟ್ ಒಳಗಡೆ ಕೆಲವು ಭಾಗಗಳಲ್ಲಿ ಸುಮಾರು ಎಲ್ಲಾ ಕನ್ಸ್‌ಟ್ರಕ್ಷನ್ಸ್ ಆಗಿ ಬಿಟ್ಟಿದೆ. 10 ವರ್ಷ, 15 ವರ್ಷದಿಂದ ಕನಸಟರ್ಕ್ಷನ್ಸ್ ಆಗಿ ಅವರು ಎಲ್ಲಾ ಸೌಲಭ್ಯಗಳನ್ನು ಪಡೆದುಕೊಂಡಿರತಕ್ಕಂಥಾದ್ದು ಇದೆ. ಅದು ಪ್ರೈವೇಟ್ ಜಮೀನು ಆಗಿರಲಿಕ್ಕೆ ಸಾಕು ಮತ್ತು ಕೆಲವು ಸಂದರ್ಭದಲ್ಲಿ ಸರ್ಕಾರಿ ಜಮೀನು, ಲೋಕಲ್ ಅಥಾರಿಟೀ ಜಮೀನು ಆಗಿರಲಿಕ್ಕೆ ಸಾಕು. ಈಗ ಪ್ರೈವೇಟ್ ಜಮೀನು ಆದರೂ ಕೂಡ ಗ್ರೀನ್ ಬೆಲ್ಟ್‌ನಲ್ಲಿ ಬರಲಿಕ್ಕೆ ಉಂಟು ತಾನೇ? ಪ್ರೈವೇಟ್ ಜಾಗ ಗ್ರೀನ್ ಬೆಲ್ಟಿನ ಒಳಗಡೆ ಇದ್ದರೆ ಅಲ್ಲೂ ಕೂಡ ಯಾವುದೇ ಕನಸ್ಟ್ರಕ್ಷನ್ ಬರಲಿಕ್ಕೆ ಕೂಡದು. ಅಂಥ ಸಂದರ್ಭ ಎಲ್ಲಾದರೂ ನಡೆದಿದ್ದಂಥ ಸಂದರ್ಭದಲ್ಲಿ 10-15 ವರ್ಷದಿಂದ ಕನಸ್ಟ್ರಕ್ಷನ್ ಆಗಿ ಬಿಟ್ಟಿದೆ ಈಗ. ಏನು ಮಾಡಬೇಕು ಹೇಳಿ? ನೀವು ಏನಾದರೂ ನೋಟೀಸ್ ಕೊಟ್ಟರೆ ಪ್ರತಿಯೊಬ್ಬರೂ ಹೈಕೋರ್ಟಿಗೆ ಹೋಗಿ ಸ್ಟೇ ತರುತ್ತಾರೆ. ಸ್ಟೇ ಕೊಟ್ಟು ಆದಮೇಲೆ ಮುಂದುವರಿಸಿಕೊಂಡು ಹೋಗುತ್ತಾ ಇರತಕ್ಕಂಥಹದ್ದೇ ಒಂದು ವಾದ ಆದರೆ ನಾವು ಅದನ್ನು ಒಪ್ಪಬೇಕಾಗುತ್ತದೆ. ಆದ್ದರಿಂದ, ಈಗ ಅವರು ಏನು ಚರ್ಚೆ ಮಾಡಬೇಕು ಎಂದು ಹೇಳುತ್ತಿದ್ದಾರೆ, ನಾವು ನಾಳೆ ಚರ್ಚೆ ಮಾಡೋಣ. ಒಂದು ಒಮ್ಮತ್ರಕ್ಕೆ ಬರೋಣ. ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಪುನಃ ಹೋಗುತ್ತಾ ಇರತಕ್ಕಂಥ ಪರಿಸ್ಥಿತಿ ಬಂದಾಗ ನಾನು ಹೇಳುತ್ತೇನೆ ಈಗ 15 ವರ್ಷದಿಂದ ನೆನೆಗುದಿಗೆ ಬಿದ್ದಿರತಕ್ಕಂಥ, ಎಲ್ಲೋ ಒಂದು ಕಡೆ ಇದಕ್ಕೆ ಒಂದು ಇತಿಶ್ರೀ ಹಾಡಬೇಕು ಎಂದು ಇದನ್ನು ತಂದಿದ್ದೇವೆ.

ಶ್ರೀ ಹೆಚ್.ಎನ್. ನಂಜೇಗೌಡ : ಅದು ಒಳ್ಳೆಯದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಎಲ್ಲಾದರೂ ಒಂದು ಕಡೆ, ಯಾವುದಾದರೂ ಅನ್-ಆತರೈಸ್ಡ್ ಕನಸ್ಟ್ರಕ್ಷನ್ ಆಗಿರುವಂಥಾದ್ದನ್ನು ಇಂತಹ ಜಾಗದಲ್ಲಿ ಬಿಡಬೇಕು ಎನ್ನುವುದು ಇದೆಯೇ? ಎಲ್ಲವನ್ನೂ ಬರೆದುಬಿಟ್ಟಿದ್ದೀರಿ. ಅದು ಗ್ರೀನ್ ಬೆಲ್ಟ್ ಇರಬಹುದು, ಪಾರ್ಕ್ ಇರಬಹುದು, ಮತ್ತೊಂದು ಇರಬಹುದು.....

ಶ್ರೀ ವೈಜನಾಥ ಪಾಟೀಲ್ : ಇದೆಯಲ್ಲಾ, ತಾವು ನೋಡಿಲ್ಲ.

ಶ್ರೀ ಎಂ.ಸಿ. ನಾಣಯ್ಯ : ತಾವು ಸೆಕ್ಷನ್ 4 ಓದಿ. ಸೆಕ್ಷನ್ 4ನಲ್ಲಿ ಕ್ಲೀನಾಗಿ ಯಾವುದನ್ನೆಲ್ಲಾ ಮಾಡಲಿಕ್ಕೆ ಬರುವುದಿಲ್ಲ ಎಂದು ಹೇಳುತ್ತಾ ಇರತಕ್ಕಂಥಾದ್ದನ್ನು ಕೊಟ್ಟಿದ್ದೇವೆ. ಸೆಕ್ಷನ್ 4 ಓದಿ.

ಶ್ರೀ ಹೆಚ್.ಎನ್. ನಂಜೇಗೌಡ : ಅಧ್ಯಕ್ಷರೇ, ಈಗ ಕೆಲವು ಕಡೆ ನೂರಾರು ಮನೆಗಳು ಆಗಿದೆ. ಅದನ್ನು ಬಿ.ಡಿ.ಎ. ನೋಟಿಫೈ ಮಾಡಿದ್ದಾರೆ. ಕೆಲವರು ನೋಟಿಫೈ ಮಾಡಿದರೂ ಮನೆ ಕಟ್ಟಿಕೊಂಡಿದ್ದಾರೆ, ಕೆಲವರು ಮನೆ ಕಟ್ಟಿದ ಮೇಲೆ ಬಿ.ಡಿ.ಎ. ನವರು ನೋಟಿಫೈ ಮಾಡಿದ್ದಾರೆ. ಇದನ್ನು ನಾನು ವಾದಕ್ಕೆ ಹೇಳುತ್ತಿಲ್ಲ, ಅಂಥಾದ್ದನ್ನು ಮಾಡುವುದಕ್ಕೆ ಆಗುವುದಿಲ್ಲ ಎನ್ನುತ್ತೀರಿ ನೀವು. ಬೆಂಗಳೂರು ಸುತ್ತ, ಬೇರೆ ಕಡೆ ಗೊತ್ತಿಲ್ಲ ನನಗೆ. ಬಹುತೇಕ ಮೆಜಾರಿಟಿ ಇರತಕ್ಕಂಥಾದ್ದೇ ಇದರಲ್ಲಿ,

5.10 ಪಿ.ಎಂ

ಇದು ಯಾವ ಲಾಜಿಕ್ ನನಗೆ ಗೊತ್ತಿಲ್ಲ, ಇಲ್ಲಿ ಕಟ್ಟಿಕೊಂಡಿರುವವರು ಯಾರು? ಲೋಕಲ್ ಪೀಪಲ್, ಹೊರಗಡೆಯವರು ಅಲ್ಲ, ಸಣ್ಣಪುಟ್ಟ ಮನೆಗಳನ್ನು ಅವರು ಕಟ್ಟಿಕೊಂಡಿದ್ದಾರೆ. ಆದ್ದರಿಂದ ಸ್ವಲ್ಪ ಇಜ್ಜತ್ನಲ್ಲಿ ನಿಂತುಕೊಳ್ಳಬೇಡಿ. ಹೊರಗಡೆಯವರು ಗ್ರೀನ್ ಬೆಲ್ಟ್ನ ಬಂದಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸೆಕ್ಷನ್ 4 ಎಂದು ಹೇಳಿ ಯಾವುದನ್ನು ಬಿಡಬೇಕು ಎಂದು ಹೇಳಿದ್ದಾರಲ್ಲಾ, ಅದರಲ್ಲಿ ಒಂದು ನಂಬರ್ point No. 1 ಬಿಟ್ಟರೆ ಬಾಕಿ ಎಲ್ಲಾ ತೆಗೆದುಹಾಕಿದ್ದೀರಿ. ಯಾವುದನ್ನು ರೆಗ್ಯುಲರೈಸ್ ಮಾಡಬಾರದು ಎಂದು ಸೆಕ್ಷನ್ 4ರಲ್ಲಿ ಹಾಕಿದಾಗ ಅದರಲ್ಲಿ 1-2-3-4-5, ಪಾಯಿಂಟ್ ಇದೆ. 5 ಪಾಯಿಂಟ್ಸ್‌ನಲ್ಲಿ ನಾಲ್ಕು ಪಾಯಿಂಟನ್ನು ತೆಗೆದುಹಾಕಿದ್ದೀರಿ. ಅಲ್ಲಿ ಮಾಡಬಹುದು ಎಂದು ಹೇಳಿದ್ದಾರೆ. ಒಂದು ಪಾಯಿಂಟ್ ಎಂದರೆ Unauthorised construction on the way of existing or proposed roads, railway lines, communications & other things;, ಅಷ್ಟು ಮಾತ್ರ ಉಳಿಸಿಕೊಂಡಿದ್ದೀರಿ. ನೋಡಿ ಇದರಲ್ಲಿ,

ಅಧ್ಯಕ್ಷರು : ಒಂದು ನಿಮಿಷ. Your party members are interested to speak Now, Sri Vatal Nagaraj will speak.

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಇದು ಅನಧಿಕೃತ ನಿರ್ಮಾಣವನ್ನು ಸಕ್ರಮಗೊಳಿಸುವ ತಿದ್ದುಪಡಿ. ತಿದ್ದುಪಡಿ ಹೆಸರೇ ನಮಗೆ ಸ್ವಲ್ಪ ಅಗೌರವ ಆಗುತ್ತದೆ. ಈ ಅನಧಿಕೃತ ನಿರ್ಮಾಣವನ್ನು ಸಕ್ರಮಗೊಳಿಸುವುದು ಇಷ್ಟೇ ಇದು. ಅಕ್ರಮವಾಗಿ ಏನು ಕಟ್ಟಿದ್ದಾರೆ ಅದನ್ನು ನಾವು ಸಕ್ರಮಗೊಳಿಸುತ್ತೇವೆ ಎನ್ನತಕ್ಕಂಥ ನೀತಿ ಇದು ಬರತಕ್ಕಂಥಾದ್ದು. ನನಗನ್ನಿಸುತ್ತದೆ ಬೆಂಗಳೂರಿನಲ್ಲಿ ಹಸಿರುವಲಯ ಯಾವುದು? ಎಲ್ಲಿಯವರೆಗೆ ಅದನ್ನು ಮಾಡಿದ್ದಾರೆ? ಇದರಿಂದ ಮುಂದೆ ದಾಟಿಲ್ಲವೇ? ಇದು ಬಹಳ ಅತ್ಯಂತ ಪ್ರಮುಖವಾಗಿರತಕ್ಕಂಥ ಪ್ರಶ್ನೆ. ಹಸಿರು ವಲಯವನ್ನು ಧಾಟಿ ಮುಂದೆ ಹೋಗಿ ಈಗ ಹಸಿರು ವಲಯ ಎನ್ನತಕ್ಕಂಥ ಹೆಸರು ಅಳಿಸಿ ಬೇರೆ ಅದಕ್ಕೆ ಅದರ ಒಂದು ಹೆಸರಿಗೆ ಕಳಂಕ ಬರತಕ್ಕಂಥ ವಲಯ ನಿರ್ಮಾಣವಾಗಿದೆ. ತಮಗೆ ನಾನು ಹೇಳುತ್ತಿದ್ದೇನೆ, ಈ ಅಕ್ರಮ ಮನೆಗಳನ್ನು ಸಕ್ರಮ ಮಾಡತಕ್ಕಂಥಾದ್ದು ಎಂತೆಂಥ ಮನೆಗಳು? ಸಾಮಾನ್ಯವಾಗಿ ಯಾರು ಬಡವರು ಕಟ್ಟಿಕೊಂಡಿದ್ದಾರೆ, ನಾಲ್ಕು ಗೋಡೆಗಳನ್ನು ಹಾಕಿ ಜೋಪಡಿಗಳನ್ನು ನಿರ್ಮಿಸಿಕೊಂಡಿದ್ದಾರೆ, ಅಥವಾ ಹೆಂಚಿನ ಮನೆ ಹಾಕಿಕೊಂಡಿದ್ದಾರೆ ಎನ್ನುವ ಪ್ರಶ್ನೆ ಅಲ್ಲ, ಅಕ್ರಮವಾಗಿ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಇದು ಸುಮ್ಮನೆ ಆಯಿತು ಎಂದು ತಿಳಿದುಕೊಳ್ಳಬೇಡಿ. ಇದಕ್ಕೆ ಅನೇಕ ರಾಜಕಾರಣಿಗಳ ಬೆಂಬಲವೂ ಇದೆ. ಇದೇನು ಸಾಮಾನ್ಯವಾದುದು ಎಂದು ಹೇಳುವುದಕ್ಕೆ ಆಗುವುದಿಲ್ಲ, ಇದು ಎಲ್ಲಾ ಕಡೆ ನಡೆದಿದೆ. ಇದರಲ್ಲಿ ಖಾಸಗಿ ಗೃಹನಿರ್ಮಾಣ ಮಂಡಳಿಗಳ ಪಾತ್ರ ಬಹಳ ಮುಖ್ಯವಾಗಿದೆ. ತಮಗೆ ನಾನು ಹೇಳುತ್ತೇನೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಪರ್ಯಾಯವಾಗಿ ಸುಮಾರು ನೂರಾರು ಇಂತಹ ಸಂಘಗಳು ಉದ್ಭವವಾಗಿವೆ.

ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ, ಏನೆಂದರೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮೂಲಕ ನಿವೇಶನ ರಹಿತರಿಗೆ ನಿವೇಶನ ಹಂಚುವುದಕ್ಕೆ ಅವರಿಗೆ ಶಕ್ತಿ ಇಲ್ಲ, ಸ್ವಲ್ಪ ಹೆಚ್ಚು ಕಡಿಮೆ ಹತ್ತು ಲಕ್ಷ ಜನರಿಂದ ನಿವೇಶನ ಕೋರಿ ಅರ್ಜಿಗಳು ಬಂದು ವರ್ಷಾನುಗಟ್ಟಲೆ ಬಿದ್ದಿವೆ. ಈ ಅರ್ಜಿಗಳಿಗೋಸ್ಕರ ಠೇವಣಿಯನ್ನೂ ವಸೂಲು ಮಾಡಿದ್ದಾರೆ. ಈ ಠೇವಣಿಗೆ ಬಡ್ಡಿ ಇಲ್ಲ, ಮತ್ತೆ ನಿವೇಶನ ಕೊಡುತ್ತೇವೆ ಎನ್ನತಕ್ಕಂಥ, ಮಾತೂ ಕೂಡ ಇಲ್ಲ, ಇಂತಹ ಒಂದು

ಪರಿಸ್ಥಿತಿಯಲ್ಲಿ ಅತ್ಯಂತ ಶಕ್ತಿಹೀನವಾಗಿ ಬೆಂಗಳೂರು ನಗರ ಅಭಿವೃದ್ಧಿ ಪ್ರಾಧಿಕಾರ ಒಂದು ಕಡೆ ಇದೆ. ಈ ಅಭಿವೃದ್ಧಿ ಪ್ರಾಧಿಕಾರಕ್ಕೆ ಪರ್ಯಾಯವಾಗಿ ಬೆಂಗಳೂರಿನ ಸುತ್ತ ಬೇರೆ ಪ್ರಾಧಿಕಾರಗಳು ನಿರ್ಮಾಣವಾಗಿವೆ. ಅವರದ್ದೇ ಆದಂಥ ಬಡಾವಣೆಗಳ ನಿರ್ಮಾಣ, ಅವರದ್ದೇ ಆದ ರಸ್ತೆಗಳ ನಿರ್ಮಾಣವಾಗಿ, ಅವರೇ ಮನೆಗಳನ್ನು ಕೊಡತಕ್ಕಂಥಾದ್ದು, ಅವರೇ ಹಂಚಿಕೆ ಮಾಡತಕ್ಕಂಥಾದ್ದು ನಡೆದಿದೆ. ಇದು ಒಂದು ರೀತಿಯಲ್ಲಿ ಬೆಂಗಳೂರು ಅತ್ಯಂತ ಕೆಟ್ಟ ರೀತಿಯಲ್ಲಿ ಬೆಳೆಯುತ್ತಿದೆ. ಈ ಬೆಳವಣಿಗೆಯನ್ನು ಪರಿಣಾಮಕಾರಿಯಾಗಿ ತಡೆದು, ಈ ಬೆಂಗಳೂರಿನ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡುವುದಾದರೆ ಸ್ವಲ್ಪ ಹೆಚ್ಚುಕಡಿಮೆ ಇದರಲ್ಲಿ ಎಲ್ಲಾ ಸರ್ಕಾರಗಳೂ ವಿಫಲವಾಗಿವೆ. ಇದು ನಾನು ಪ್ರಾಮಾಣಿಕವಾಗಿ ಹೇಳತಕ್ಕಂಥ ಮಾತು. ನನಗನ್ನಿಸುತ್ತದೆ ಈ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇವತ್ತು ಯಾವ ರೀತಿ ಬದುಕುತ್ತಿದೆ ಎಂಬುದನ್ನು ಸ್ವಲ್ಪ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಮೂಲೆ ನಿವೇಶನಗಳನ್ನು ಮಾರಿ ಇವರು ಬದುಕುತ್ತಿರುವುದು. ತಾವು ಪತ್ರಿಕೆಗಳಲ್ಲಿ ಜಾಹೀರಾತು ಪ್ರಕಟವಾಗುತ್ತಿರುವುದನ್ನು ನೋಡಬಹುದು. ಇದರ ಬಗ್ಗೆ ಒಂದು ನಕ್ಷೆಯನ್ನು ಕೊಟ್ಟು ಜಾಹೀರಾತು ಪ್ರಕಟಿಸುತ್ತಾರೆ. ನನಗನ್ನಿಸುತ್ತದೆ ಈ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರ ಸಂಬಳ ಸಾರಿಗೆಗಳನ್ನು ಪಡೆಯತಕ್ಕಂಥಾದ್ದು ಏನಿದೆ ಅದಕ್ಕೆ ಅಮೂಲ್ಯವಾದ ಸ್ಥಳ ಯಾವುದೆಂದರೆ ಈ ಮೂಲೆ ನಿವೇಶನಗಳು. ಇದನ್ನು ಪ್ರತಿವಾರ ಪತ್ರಿಕೆಗಳಲ್ಲಿ ತಾವು ನೋಡಬಹುದು. ಪತ್ರಿಕೆಯಲ್ಲಿ ಅವರು ಪ್ರಚಾರ ಮಾಡುತ್ತಾರೆ, ಮೂಲೆ ನಿವೇಶನಗಳನ್ನು ಇಂತಹ ತಾರೀಖಿಗೆ, ಇಷ್ಟು ಹೊತ್ತಿಗೆ ನಾವು ಹರಾಜು ಹಾಕುತ್ತೇವೆ ಎಂದು ಹೇಳಿ. ಸ್ಥಳದಲ್ಲೇ ಬಂದು ಹಣ ಕಟ್ಟಿ ನಿವೇಶನ ಪಡೆಯಿರಿ ಎಂದು ಹೇಳುತ್ತಾರೆ. ಆದರೆ ಈ ನಿವೇಶನಗಳು ಯಾರಿಗೆ ಹೋಗುತ್ತವೆ? ಯಾವುದೇ ಸರ್ಕಾರ ಇದರ ಬಗ್ಗೆ ಚಿಂತನೆ ಮಾಡುತ್ತಿಲ್ಲ.

ಈ ನಿವೇಶನಗಳನ್ನು ಹರಾಜಿನಲ್ಲಿ ಪಡೆಯತಕ್ಕಂಥವರು ಯಾರು ಎಂದರೆ, ಹೊರಗಡೆ ಜನ. ಬೊಂಬಾಯಿ, ಡೆಲ್ಲಿಯಿಂದ ಬರತಕ್ಕಂಥ ಜನ ಕೋಟ್ಯಾಂತರ ರೂಪಾಯಿಗಳನ್ನು ಇಲ್ಲಿಗೆ ತೆಗೆದುಕೊಂಡು ಬರುತ್ತಾರೆ, ಅವರಿಗೆ ಸೌದಿ ಅರೇಬಿಯಾದಿಂದ, ವಿದೇಶದಿಂದ ಹಣ ಬರುತ್ತದೆ. ಹೀಗಾಗಿ ಈಗ ಬೆಂಗಳೂರು ನಮ್ಮದಾಗಿ ಉಳಿದಿಲ್ಲ. ಮಹಾತ್ಮ ಕೆಂಪೇಗೌಡ ಈ ನಗರವನ್ನು ಸ್ಥಾಪನೆ ಮಾಡಿ ನಾಲ್ಕು ಕಡೆ ಗೋಪುರಗಳನ್ನು ನಿರ್ಮಾಣ ಮಾಡಿ ಈ ಗೋಪುರಗಳನ್ನು ಧಾಟಿ ನಗರ ಬೆಳೆಯಬಾರದು ಇದು ಇಷ್ಟಕ್ಕೇ ನಿಲ್ಲಬೇಕು ಎಂದು ಆತ ಬಯಸಿದ್ದ. ಬೆಂಗಳೂರಿನ ಬೆಳವಣಿಗೆ ಹೆಚ್ಚಬಾರದು ಎಂದು ಅವರು ಅಂದೇ ಯೋಚನೆ ಮಾಡಿದ್ದರು. ಆದರೆ ಇವತ್ತು ನಾವು ಆ ಗೋಪುರಗಳನ್ನು ಧಾಟಿ ಸುಮಾರು ಮುಂದೆ ಹೋಗಿದ್ದೇವೆ. ಈ ಬೆಳವಣಿಗೆಗೆ ಕಾರಣ ಏನು? ಇದರ ಬಗ್ಗೆ ನಾವು ಗಮನಹರಿಸಬೇಕಾಗಿದೆ. ಬೆಂಗಳೂರಿನ ಬಗ್ಗೆ ನೆನಪು ಮಾಡಿಕೊಳ್ಳಬೇಕು ಎಂದರೆ ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು ಏನಿದ್ದರು, ಅವರು ದೈವತ್ವಕ್ಕೆ ಹೋದಂಥ ಜನ. ಸಾವಿರ ಸಾರಿ ಇಂತಹವರ ಪೂಜೆ ಮಾಡಿದರೂ ಸಾಲದು. ಕಬ್ಬನ್ ಉದ್ಯಾನವನ ಏನಿದೆ ಅಲ್ಲಿ ರಿಸರ್ವ್ ಬ್ಯಾಂಕ್ಗೆ ಜಾಗ ಕೊಡುವುದಿಲ್ಲ ಎಂದು ಅವರು ಹೇಳಿದರು. ಇದನ್ನು ಬೇರೆ ಬೇರೆ ಆಟದ ಮೈದಾನಗಳಿಗೆ ಕೂಡ ಕೊಡಬಾರದು. ಇದು ಏನೇ ಇದ್ದರೂ ಗಾಳಿ ಸೇವನೆಗೆ ಬರುವವರಿಗೆ ಮೀಸಲಾಗಿರಬೇಕು, ಇದನ್ನು ಅವರು ಬಳಸುವುದಕ್ಕೆ ಇರಬೇಕು ಎಂದು ಅವರು ಹೇಳಿದರು. ಆ ರೀತಿ ಬೆಳಗ್ಗೆ ಉದಯವಾದ ತಕ್ಷಣ ಬೆಂಗಳೂರು ಹೇಗೆ ಇರಬೇಕು, ಬೆಂಗಳೂರಿನ ಬೆಳವಣಿಗೆ, ಬೆಂಗಳೂರಿನ ರಸ್ತೆ, ಬೆಂಗಳೂರಿನ ಪರಿಸ್ಥಿತಿ ಬಗ್ಗೆ ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು ಹಗಲುರಾತ್ರಿ ಚಿಂತನೆ ಮಾಡಿದರು. ತಮಗೆ ಹೇಳುತ್ತೇನೆ, ಬೆಂಗಳೂರಿನ ಸುಭಾಷ್ನಗರ ಕೆರೆ ಏನಿದೆ, ಅಲ್ಲಿ ಈಗ ಬಸ್ ನಿಲ್ದಾಣ ನಿರ್ಮಾಣವಾಗಿದೆ. ಈ ಕೆರೆಯಲ್ಲಿ ಯಾವುದೇ ವಿಧವಾದಂಥ

ಕಟ್ಟಡಗಳು ಬರಬಾರದು ಎಂಬುದು ಕೆಂಗಲ್ ಹನುಮಂತಯ್ಯನವರ ಒಂದು ದೂರವಾದಂಥ ದೃಷ್ಟಿಯಾಗಿತ್ತು. ಆದರೆ ಅಲ್ಲಿ ಈಗ ಅಲ್ಲಿ ಅನೇಕ ಕಟ್ಟಡಗಳು ಬಂದಿವೆ. ಅಲ್ಲಿ ಉಸಿರಾಡುವುದಕ್ಕೆ ಜಾಗ ಇಲ್ಲ, ಇವತ್ತು ತಮಗೆ ನಾನು ಹೇಳುತ್ತೇನೆ, ಮೂಲೆ ನಿವೇಶನಗಳನ್ನು ಯಾರು ಪಡೆದು ಬೆಂಗಳೂರಿನಲ್ಲಿ ಮನೆಗಳನ್ನು ಕಟ್ಟಿಸುತ್ತಿದ್ದಾರೆ, ಇದರಿಂದ ಇದು ಮತ್ತೊಂದು ಬೊಂಬಾಯಿ ಆಗುತ್ತಿದೆ, ಇದು ಮತ್ತೊಂದು ವಿದೇಶವಾಗುತ್ತದೆ.

ಗಗನಚುಂಬಿ ಕಟ್ಟಡಗಳು ಈ ಮೂಲೆ ನಿವೇಶನಗಳಲ್ಲಿ ಬರುತ್ತಿವೆ. ಇದರಿಂದ ಮತ್ತೊಂದು ಬೊಂಬಾಯಿ ನಗರ ಇಲ್ಲಿ ನಿರ್ಮಾಣವಾಗುತ್ತದೆ. ಇದರ ಜೊತೆಗೆ ನಮ್ಮ ಜನ, ಕನ್ನಡದ ಜನ ಮೂಲ ವಾಸಿಗಳು ಏನಿದ್ದಾರೆ, ಅದು ಕಬ್ಬನ್ಪೇಟೆಯಾಗಿರಬಹುದು, ಚಿಕ್ಕಪೇಟೆಯಾಗಿರಬಹುದು, ಚಾಮರಾಜಪೇಟೆಯಾಗಿರಬಹುದು, ಈ ಸ್ಥಳಗಳಲ್ಲಿ ವಾಸ ಮಾಡತಕ್ಕಂಥ ಜನ ಹೆಚ್ಚು ಹಣದ ಆಸೆಗೆ ಬೊಂಬಾಯಿಯವರಿಗೆ, ಬೇರೆ ಬೇರೆ ಹೊರರಾಜ್ಯಗಳ ಜನರಿಗೆ ತಮ್ಮ ಜಾಗವನ್ನು ಮಾರಿ ಕಡಿಮೆ ಹಣದಲ್ಲಿ ಹೊರಗಡೆ ನಿವೇಶನ ತೆಗೆದುಕೊಂಡು ಅಲ್ಲಿ ವಾಸವಾಗುತ್ತಿದ್ದಾರೆ. ಇವರು ಮಾರಿದ ಮೂಲೆ ನಿವೇಶನಗಳಲ್ಲಿ ಗಗನಚುಂಬಿ ಕಟ್ಟಡಗಳನ್ನು ಕಟ್ಟತಕ್ಕಂಥ ವ್ಯವಸ್ಥೆಯಾಗಿದೆ. ನನಗನ್ನಿಸುತ್ತದೆ, ಇದರ ಬಗ್ಗೆ ನಾವೆಲ್ಲರೂ ಕೂಡ ಚಿಂತನೆ ಮಾಡಬೇಕು. ಈ ಬೆಂಗಳೂರು ನಗರದಲ್ಲಿ ನಾವು ಕನ್ನಡಿಗರೆಲ್ಲರೂ ಬೇರೆ ಬೇರೆ ಊರಿನವರು ಇರಬಹುದು. ಆದರೆ ಬೆಂಗಳೂರು ನಗರ ಉಳಿದರೆ ನಾವು ಉಳಿಯುತ್ತೇವೆ. ಇದು ರಾಜಧಾನಿಯಾಗಿ ಉಳಿದವರೆ ಈ ರಾಜ್ಯಕ್ಕೆ ಒಂದು ಅತ್ಯಂತ ಪರಿಣಾಮಕಾರಿಯಾದ ಹೆಸರು, ಪ್ರಕಾಶಮಾನವಾದ ಹೆಸರು ಉಳಿಯುತ್ತದೆ. ಈ ಬೆಳವಣಿಗೆಯನ್ನು ಕಡಿಮೆ ಮಾಡುವುದರಲ್ಲಿ ನಾವು ಯಾರೂ ಪ್ರಯತ್ನ ಮಾಡಿಲ್ಲ, ನಾನು ತಮಗೆ ನೇರವಾಗಿ ಕೇಳುತ್ತೇನೆ, ಈ ಗೃಹನಿರ್ಮಾಣ ಸಹಕಾರ ಸಂಘಗಳಿಗೆ ನಿವೇಶನಗಳನ್ನು ಪಡೆಯುವುದಕ್ಕೆ ಬೆಂಬಲ ಕೊಟ್ಟಿದ್ದು ಯಾರು? ಯಾವ ಸರ್ಕಾರ? ತಮಗೆ ಹೇಳುತ್ತೇನೆ, ಜಿ.ವಿ.ಕೆ. ರಾವ್ ಸಮಿತಿಯು ಒಂದು ವರದಿಯನ್ನು ಕೊಟ್ಟಿದೆ. ಅದು ಧೂಳು ಹಿಡಿದು ಕುಳಿತಿದೆ. ಈ ಗೃಹನಿರ್ಮಾಣ ಸಹಕಾರ ಸಂಘಗಳಿಗೆ ನೆಲಗಳ್ಳರು ಎಂದು ಹೆಸರು ಅವರು ಬೆಂಗಳೂರು ನಗರವನ್ನು ಒಂದು ರೀತಿಯಲ್ಲಿ ತಮ್ಮ ರಾಕ್ಷಸಿಕೃತ್ಯಗಳಿಂದ ನುಂಗಿ ನೀರು ಕುಡಿದಿದ್ದಾರೆ. ಕೋಟ್ಯಾಂತರ ರೂಪಾಯಿ ಸಂಪಾದನೆ ಮಾಡಿದ್ದಾರೆ, ನೆಲವನ್ನು ದಿಕ್ಕಾಪಾಲಾಗಿ ಹಂಚಿದ್ದಾರೆ. ರಸ್ತೆಗಳು ಇಲ್ಲ, ನೀರು ಇಲ್ಲ, ದೀಪ ಇಲ್ಲದೆ ಅಡಾದಿಡ್ಡಿಯಾಗಿ ಬೆಂಗಳೂರು ನಗರವನ್ನು ಇವರು ಬೆಳೆಸಿದ್ದಾರೆ. ಬೆಂಗಳೂರಿನ ಸಾರಿಗೆ ವ್ಯವಸ್ಥೆ, ಸಂಚಾರ ವ್ಯವಸ್ಥೆ ಎಲ್ಲವೂ ಒಂದು ಕಡೆಯಿಂದ ಕುಲಗೆಟ್ಟಿದೆ. ಇದನ್ನು ಗಮನಿಸಿದಿದ್ದರೆ ಮುಂದೆ ಬಹಳ ಕಷ್ಟವಾಗುತ್ತದೆ. ಈ ಮಾತನ್ನು ಹೇಳಿ ಸ್ವಲ್ಪ ಮುಂದೆ ಬಂದರೆ, ಮೊನ್ನೆತಾನೆ ಬೆಂಗಳೂರು ಮಹಾನಗರ ಪಾಲಿಕೆಯವರು ಎದ್ದರೆ ಆಳಲ್ಲ ಎಂದು ಹೇಳಿ ಒಂದು ನಾಲ್ಕು ಕಟ್ಟಡಗಳನ್ನು ಗುದ್ದಲಿಯಿಂದ ಕೆಡವಿಹಾಕಿ ಪತ್ರಿಕೆಯಲ್ಲಿ ಫೋಟೊ ಎಲ್ಲಾ ಬಂತು. ಮುಂದೆ ಏಕೆ ಇವರು ಕಟ್ಟಡಗಳನ್ನು ಒಡೆಯುವುದಕ್ಕೆ ಹೋಗಲಿಲ್ಲ, ನಾಲ್ಕು ಕಟ್ಟಡಗಳನ್ನು ಕೆಡವಿ ಏಕೆ ಅಲ್ಲಿಗೇ ನಿಲ್ಲಿಸಿದರು? ಬೆಂಗಳೂರು ಮಹಾ ನಗರಪಾಲಿಕೆಯವರು ಏನು ಈ ಅಕ್ರಮವಾಗಿ ವಾಹನಗಳನ್ನು ನಿಲ್ಲಿಸಲಿಕ್ಕೆ ಇರುವ ಸ್ಥಳಗಳಲ್ಲಿ ಹೋಟೇಲು, ಅಂಗಡಿಗಳನ್ನು ನಡೆಸುತ್ತಿದ್ದಾರೆ ಎಂದು ಹೇಳಿ ಯಾರ ಬೆದರಿಕೆಗೂ ನಾವು ಕೇಳುವುದಿಲ್ಲ ಎಂದು ಹೇಳಿ ಗುದ್ದಲಿ, ಪಿಕಾಸಿಗಳಿಂದ ಅವುಗಳನ್ನು ಒಡೆದುಹಾಕಿ ಫೋಟೊ ಹಾಕಿಸಿಕೊಂಡರು - ನಿಮ್ಮ ನಗರಪಾಲಿಕೆಯ ಆಡಳಿತಾಧಿಕಾರಿ ಮತ್ತು ಅಲ್ಲಿಯ ಅಧಿಕಾರಿಗಳು. ಅಂದರೆ ನಿಮಗೆ ಕೇವಲ ನಾಲ್ಕು ಕಟ್ಟಡಗಳು ಮಾತ್ರ ಸಾಕಾಗಿರುವುದು. ಹಾಗಿದ್ದರೆ ಮಿಕ್ಕವರು ಬಹಳ ಚೆನ್ನಾಗಿ ಕಟ್ಟಿಕೊಂಡಿದ್ದಾರೆ ಎಂದು ತಿಳಿದುಕೊಂಡಿದ್ದೀರೋ?

ಶ್ರೀ ಎನ್. ರಾಜಣ್ಣ : 4 ಮನೆಗಳನ್ನು ಒಡೆಯುವುದರೊಳಗಾಗಿ, ಉಳಿದವರು ಕೋರ್ಟಿಗೆ ಹೋಗಿ ಸ್ಟೇ ತಂದಿದ್ದಾರೆ. ಆದರಿಂದ, ಒಡೆಯುವುದಕ್ಕಾಗುತ್ತಾ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ನೀವು ಒಂದುಕಡೆ ಅಕ್ರಮ ಮನೆಗಳನ್ನು ಸಕ್ರಮ ಮಾಡುತ್ತೇವೆಂಬ ನೀತಿಯನ್ನು ಹೇಳುತ್ತಿದ್ದೀರಿ. ಮತ್ತೊಂದು ಕಡೆ ಮನೆಗಳನ್ನು ಹೊಡೆಯುತ್ತಿದ್ದೀರಿ. ತಾವು ಯಾವುದಾದರೊಂದು ನೀತಿ, ನಿಯಮವನ್ನು ಅಳವಡಿಸಿಕೊಳ್ಳಬೇಕು. ಒಟ್ಟಾರೆ ಇದರ ಬಗ್ಗೆ ತಮಗೆ ಹೇಳುತ್ತಿದ್ದೇನೆ. ಎರಡು ಮಹಡಿಯವರು, ಮತ್ತು ಆಟದ ಮೈದಾನ ಕಟ್ಟಿರತಕ್ಕಂಥವರು, ಇವೆಲ್ಲಕ್ಕೂ ಏನು ತಂದಿದ್ದೀರಿ, ಇದರ ಬಗ್ಗೆ ಅತ್ಯಂತ ಪ್ರಬಲವಾದ ಅನುಮಾನ ಬರುತ್ತಿದೆ. ಮಾನ್ಯ ಉಪ ಮುಖ್ಯಮಂತ್ರಿಗಳು ನೇರವಾಗಿ ಇದ್ದಾರೆ. ಇದರ ಬಗ್ಗೆ ಸಮಗ್ರವಾದ ಸಮೀಕ್ಷೆ ನಡೆಸಿ. ಇದರಲ್ಲಿ ಏನು ನಡೆದಿದೆ, ಅಕ್ರಮವಾಗಿ ಕಟ್ಟಿರತಕ್ಕ ಮನೆಗಳಲ್ಲಿ, ಪ್ರಾಮಾಣಿಕವಾಗಿ ಯಾವುವು, ಯಾವುದು, ಉದ್ದೇಶಪೂರ್ವಕವಾಗಿ, ನಾವು ನೋಡಿಯೇ ಬಿಡೋಣವೆಂದು ಕಟ್ಟಿದ್ದಾರೆ ಎನ್ನತಕ್ಕಂಥಾದ್ದರ ಬಗ್ಗೆ ತಾವು ಸಮೀಕ್ಷೆ ನಡೆಸಬೇಕು. ಇದೇನಾಗುತ್ತದೆಂದರೆ, ಒಂದು ಕಡೆ ಅಕ್ರಮ ಮನೆಗಳನ್ನು ಸಕ್ರಮ ಮಾಡುತ್ತೇವೆಂದು ಹೇಳುತ್ತಾ ಹೋದರೆ, ಮುಂದೆ ಈ ಗೃಹನಿರ್ಮಾಣ ಮಂಡಲಿ ಗ್ರಹಗಳು, ಈ ನೆಲಗಳ್ಳರು ಯಾರಿದ್ದಾರೆ, ಇವರ ಇಚ್ಛೆಬಂದ ಹಾಗೆ ಜಾಗಗಳನ್ನು ಕೊಂಡು, ಇವತ್ತು ಒಬ್ಬೊಬ್ಬ ಗೃಹ ನಿರ್ಮಾಣ ಮಂಡಳಿಯವರ ಹತ್ತಿರ ಒಂದು ಸಾವಿರ ಎಕರೆ, ಐದುನೂರು ಎಕರೆ, ಇನ್ನೂರು ಎಕರೆ ಪ್ರದೇಶವನ್ನು ಉಳಿಸಿಕೊಂಡಿದ್ದಾರೆ. ತಾವು ಜಿ.ವಿ.ಕೆ. ರಾವ್ ಕಮಿಟಿಯ ವರದಿಯ ಬಗ್ಗೆ ಕಣ್ಣು ಹಾಯಿಸಬೇಕು. ಅವರು ಬಹಳ ಸುಂದರವಾದ, ಒಳ್ಳೆಯ ವರದಿಯನ್ನು ಕೊಟ್ಟಿದ್ದಾರೆ. ಬೆಂಗಳೂರನ್ನು ಉಳಿಸಿಕೊಳ್ಳಬೇಕೆಂಬ ಸದಿಚ್ಛೆ ತಮಗೆ ಇದ್ದರೆ, ನೀವು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು. ಮತ್ತೊಂದು ಬೆಂಗಳೂರಿನಲ್ಲಿ ಚರಂಡಿ ಮೇಲೆ ಮಹಡಿ ಮನೆಗಳನ್ನು ಕಟ್ಟಿಸಿದ್ದಾರೆ. ಕಾರ್ಪೊರೇಷನ್ನ ದೊಡ್ಡ ದೊಡ್ಡ ಮೋರಿಗಳೇನಿವೆ, ಅವುಗಳ ಮೇಲೆ ಮಹಡಿ ಮನೆಗಳನ್ನು ಕಟ್ಟಿಸಿದ್ದಾರೆ. ಇದಕ್ಕೆ ಯಾರು ಅವಕಾಶ ಕೊಟ್ಟರೋ, ಯಾರು ಕಟ್ಟಿ ಎಂದು ಹೇಳಿದರೋ ಈ ರೀತಿ ಯದ್ವಾತದ್ವಾ ಕಟ್ಟಿದ್ದಾರೆ. ಈ ರೀತಿ ಬೆಳೆದರೆ, ಬೆಂಗಳೂರಿನ ಬಗ್ಗೆ ಕಾಳಜಿ ವಹಿಸತಕ್ಕ ಜನ ಅತ್ಯಂತ ಅಪಾಯಕಾರಿ ದಾರಿಯಲ್ಲಿ ಹೋಗುತ್ತಾ ಇದ್ದಾರೆ. ಇನ್ನು ಬೆಂಗಳೂರಿನಲ್ಲಿ ಎಷ್ಟು ಕೆರೆಗಳು ಇತ್ತೆಂದು ತಮಗೂ ಗೊತ್ತಿದೆ. ಇವತ್ತು ಒಂದು ಕೆರೆ ಎಲ್ಲಿಯಾದರೂ ಇದೆಯೇ? ಎಲ್ಲಾ ಕೆರೆಗಳನ್ನೂ ಧೂಳಿಪಟ ಮಾಡಿ, ನಿವೇಶನಗಳನ್ನು ಮಾಡಿ ಹರಾಜು ಮಾಡಿದ್ದಾರೆ. ನನಗನಿಸುತ್ತದೆ, ಇದರ ಬಗ್ಗೆ ಸಮಗ್ರವಾದ ಚರ್ಚೆ, ಈ ಸದನದಲ್ಲಿ ಆಗಬೇಕಾಗುತ್ತದೆ. ಮತ್ತೆ ಈ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ಮುಚ್ಚುವುದು ಒಳ್ಳೆಯದು. ಇದರಿಂದ ನಮಗೆ ಯಾವುದೇ ವಿಧವಾದ ಪ್ರಯೋಜನವಾಗಲೀ, ಉಪಕಾರವಾಗಲೀ ಆಗುತ್ತಾ ಇಲ್ಲ.

ಇದನ್ನು ಮುಚ್ಚಿ, ಅಲ್ಲಿರತಕ್ಕ ಅಧಿಕಾರಿಗಳನ್ನು, ಬೇರೆ ಇಲಾಖೆಗಳಿಗೆ ಪಡೆಯುವುದು ಒಳ್ಳೆಯದು. ಇದನ್ನು ಇಟ್ಟುಕೊಂಡು, ಬೆಂಗಳೂರು ಉದ್ಧಾರವಾಗುತ್ತದೆಂದು ನಾನು ಅಂದುಕೊಂಡಿಲ್ಲ, ಈ ಅಕ್ರಮವನ್ನು ಸಕ್ರಮ ಮಾಡುವಾಗ, ಕಣ್ಣುಮುಚ್ಚಿಕೊಂಡು ಮಾಡುವುದಕ್ಕೆ ಹೋಗಬೇಡಿ. ಅದರಿಂದ ಅಷ್ಟು ಒಳ್ಳೆಯದಾಗುವುದಿಲ್ಲ, ಕೆಲವರು ಪ್ರಾಮಾಣಿಕವಾಗಿ ಮನೆ ಕಟ್ಟಿಕೊಂಡಿದ್ದಾರೆ. ಇದು ಯಾವುದೋ, ಯಾರೋ ಮಾಡಿದ ಪಾಪ. ಈ ಪಾಪಕ್ಕೆ ನೇರವಾಗಿ ಗೃಹ ನಿರ್ಮಾಣ ಮಂಡಲಿಯವರೇ ಕಾರಣ, ಇನ್ನು ಯಾರೂ ಅಲ್ಲ, ನೀವು ಕಟ್ಟಿರಿ, ನಾವು ನೋಡಿಕೊಳ್ಳುತ್ತೇವೆಂದು ಹೇಳಿದ್ದಾರೆ. ಈಗ ಏನಾಯಿತೆಂದರೆ, ರೆವಿನ್ಯೂ ನಿವೇಶನದಲ್ಲಿ ಮನೆ ಕಟ್ಟಿದರೆ, ವಿದ್ಯುಚ್ಛಕ್ತಿ ಮಂಡಳಿಯಿಂದ ನೇರವಾಗಿ ವಿದ್ಯುತ್ ಸಂಪರ್ಕ ಕೊಟ್ಟುಬಿಡುತ್ತಾರೆ. ಇದಕ್ಕೆ ತಕರಾರು ಇಲ್ಲ. ಒಂದು ಮನೆ ಎಂದಮೇಲೆ ಲೈಟು ಕೊಡಬೇಕಾಗುತ್ತದೆ, ಅಂತಹ ಪರಿಸ್ಥಿತಿ

ಬರುತ್ತದೆ ಕೊಟ್ಟುಬಿಡುತ್ತಾರೆ. ಆದರೆ, ಒಂದು ಲೈಟು ಕೊಟ್ಟರೆ, ಅವನಿಗೆ ಅಧಿಕಾರ ಬಂತು. ನೀವು ಒಡೆಯುವುದಕ್ಕೆ ಹೋದರೆ, ಆ ಅಧಿಕಾರವಿಟ್ಟುಕೊಂಡು, ತಕ್ಷಣ ನ್ಯಾಯಾಲಯಕ್ಕೆ ಹೋಗುತ್ತಾರೆ, ನ್ಯಾಯಾಲಯ ಕರುಣೆಯಿಂದ ತಡೆಯಾಜ್ಞೆ ಕೊಡುತ್ತದೆ. ಇದು, ಒಂದರಿಂದ ಒಂದು, ಒಂದರಿಂದ ಒಂದು, ಹೀಗೆ ನಡೆಯುತ್ತಿದೆ. ನಾನು ತಮಗೆ ಹೇಳುತ್ತೇನೆ, ಮೊದಲನೆಯದಾಗಿ ಈ ಮನೆಗಳನ್ನು ಕಟ್ಟುವಾಗಲೇ ಎಚ್ಚರ ವಹಿಸಬೇಕು. ಮೊದಲನೆಯದಾಗಿ, ಇದಕ್ಕೆ ಅಧಿಕಾರಿಗಳು ಸಂಪೂರ್ಣವಾಗಿ ಜವಾಬ್ದಾರರಾಗಿದ್ದಾರೆ. ಮತ್ತೊಂದು ಕೊಳೆಗೇರಿ ನಿರ್ಮಾಣ.....

ಅಧ್ಯಕ್ಷರು : ಈ ವಿಧೇಯಕಕ್ಕೆ ಸೀಮಿತವಾಗಿ ಮಾತನಾಡಿ...

ಶ್ರೀ ವಾಟಾಳ್ ನಾಗರಾಜ್ : ಇದು ಸೀಮಿತವಾದ ಪ್ರಶ್ನೆಯಲ್ಲ, ಅಷ್ಟಕ್ಕೆ ಬಿಡತಕ್ಕಂತಾದ್ದಲ್ಲ. ತಾವು ಸೀಮಿತ ಎಂದು ಹೇಳುತ್ತೀರಿ. ಇದರಿಂದ ಮುಂದೆ ಹೋಗತಕ್ಕ ಕೆಲಸ ಆಗುತ್ತದೆ. ಅಕ್ರಮ, ಸಕ್ರಮ ಎಂದು ಹೇಳಿದರೆ, ಈ ರೀತಿ ಕಟ್ಟಿರತಕ್ಕ ಮನೆಗಳೆಲ್ಲವೂ ಬರುತ್ತದೆ. ಆದ್ದರಿಂದ, ಇದರ ಬಗ್ಗೆ ನಾವು ತೀವ್ರವಾಗಿ ಚಿಂತನೆ ಮಾಡಬೇಕು. ಈಗ, ಈ ವಿಧೇಯಕವನ್ನು ಹಿಂದೆ ತೆಗೆದುಕೊಂಡು ಜಂಟಿ ಸಲಹಾ ಸಮಿತಿಗೆ ಕಳುಹಿಸುವುದು ಅತ್ಯಂತ ಸೂಕ್ತವಾದುದು. ಇದನ್ನು ನೇರವಾಗಿ ಜಂಟಿ ಸಲಹಾ ಸಮಿತಿಗೆ ಕಳುಹಿಸಿಕೊಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

+ ಶ್ರೀ ಅಶ್ವತ್ಥ ನಾರಾಯಣ ರೆಡ್ಡಿ (ವರ್ತೂರು) : ಸನ್ಮಾನ್ಯ ಸಭಾಧ್ಯಕ್ಷರೇ, ಈ ಸಕ್ರಮ ಮಾಡತಕ್ಕಂಥ ವಿಧೇಯಕದ ಬಗ್ಗೆ, ಸನ್ಮಾನ್ಯ ವಿರೋಧಪಕ್ಷದ ನಾಯಕರು, ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳು, ವಾಟಾಳ್ ನಾಗರಾಜ್‌ರು, ಇತರೆ ಮಿತ್ರರು ಈ ವಿಷಯದ ಬಗ್ಗೆ ಬಹಳಷ್ಟು ಆತಂಕವನ್ನು ವ್ಯಕ್ತಪಡಿಸುತ್ತಿದ್ದಾರೆ. ಬೆಂಗಳೂರು ನಗರದ ಹೊರವಲಯದಲ್ಲಿ ಮತ್ತು ನಗರದೊಳಗಿನ ಅಂಚಿನಲ್ಲಿ ಬಹಳಷ್ಟು ಜನರು, ಸರ್ಕಾರದಿಂದ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿವೇಶನ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗದೆ ಪರಿಸ್ಥಿತಿ ಇದೆ. ಶೇಕಡ 90ರಷ್ಟು ಮಂದಿ ಕಾರ್ಮಿಕರು ರೆವಿನ್ಯೂ ನಿವೇಶನಗಳನ್ನು ಖರೀದಿ ಮಾಡಿಕೊಂಡು, ಅಲ್ಪದರದಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಇವರು ಬಡವರು ಮತ್ತು ಕಾರ್ಮಿಕರೇ, ಇದನ್ನು ಮುಚ್ಚಿಕೊಳ್ಳುವುದು ಬೇಕಾಗಿಲ್ಲ. ಇವರಲ್ಲಿ ಶೇಕಡ 90ರಷ್ಟು ಮಂದಿ ಕಾರ್ಮಿಕವರ್ಗ ಇದ್ದಾರೆ. ಇವತ್ತಿನದಿವಸ ಅವರಿಗೆ ರಸ್ತೆ ಇಲ್ಲ ದೀಪ ಇಲ್ಲ, ಅಲ್ಲಿ ಕಂದಾಯ ವಸೂಲ್ಮಾಡುವುದಕ್ಕೆ ಸರ್ಕಾರದ ಆದೇಶ ಬೇರೆ. ಇಷ್ಟಿರುವಾಗ, ಅವರಿಗೆ ಕನಿಷ್ಠ ಸೌಲಭ್ಯಗಳನ್ನು ಕೊಡಬೇಕಾಗಿರತಕ್ಕ ಸನ್ನಿವೇಶದಲ್ಲಿ, ಅಕ್ರಮ ಎಂದು ಅವರಿಗೆ ಯಾವುದೇ ಸೌಲಭ್ಯವನ್ನು ಕೊಡದಿದ್ದರೆ ಕಷ್ಟವಾಗುತ್ತದೆ. ಬೆಂಗಳೂರಿನಲ್ಲಿ ಗ್ರೀನ್ ಬೆಲ್ಟ್, ಹಸಿರು ವಲಯ ಎಂದು ಹೇಳುತ್ತೇವೆ. ಈ ಹಸಿರು ವಲಯದಲ್ಲಿರತಕ್ಕ ಗ್ರಾಮಗಳಲ್ಲಿ, ಗ್ರಾಮ ವಿಸ್ತರಣೆಯಾದಾಗ, ಅಲ್ಲಿ ಒಬ್ಬ ಕುಟುಂಬದವನು, ಆಚೆ ಹೋಗಿ ಮನೆ ಕಟ್ಟಿಕೊಳ್ಳಬೇಕೆಂದರೆ ಕನ್ವರ್ಷನ್ ಕೊಡುತ್ತಾ ಇಲ್ಲ, ಅವನು ಅಕ್ರಮವಾಗಿ ಜಮೀನಿನಲ್ಲಿ ಮನೆ ಕಟ್ಟದೇ ಇದ್ದರೆ ವಿಧಿ ಇಲ್ಲ. ಇವತ್ತು ಎಲ್ಲಿಯವರೆಗೆ ಬಿ.ಡಿ.ಎ. ದಿಂದ ಸಾಕಷ್ಟು ಜನರಿಗೆ ನಿವೇಶನ ಕೊಡತಕ್ಕ ವ್ಯವಸ್ಥೆ ಆಗಲಿಲ್ಲ, ಇದರಿಂದ ಸಾವಿರಾರು ಮನೆಗಳು ಬೆಂಗಳೂರು ನಗರದಲ್ಲಿ ಮತ್ತು ಹೊರ ವಲಯದಲ್ಲಿ ಮತ್ತು ಇಡೀ ರಾಜ್ಯದ ಎಲ್ಲಾ ನಗರಗಳಲ್ಲಿಯೂ ಈ ಪರಿಸ್ಥಿತಿ ಉಂಟಾಗಿದೆ. ಇವತ್ತು ಅಕ್ರಮವಾಗಿ ಮನೆ ಕಟ್ಟಿರುವ ಪ್ರತಿಯೊಬ್ಬರನ್ನೂ ಕೇಳತಕ್ಕ ಅಧಿಕಾರಿಗಳು ಯಾರೂ ಇಲ್ಲ, ಪ್ರಿವೆಂಟ್ ಮಾಡತಕ್ಕ ವ್ಯವಸ್ಥೆ ಇಲ್ಲ, ಸರ್ಕಾರದಲ್ಲಿ ಗ್ರೀನ್ ಬೆಲ್ಟ್ ವ್ಯವಸ್ಥೆ ಇದೆ. ಎಲ್ಲಾ ಸರ್ಕಾರಗಳೂ ಗ್ರೀನ್ ಬೆಲ್ಟ್ ಘೋಷಣೆ ಮಾಡಿವೆಯೇ ಹೊರತು, ಅದನ್ನು ರಕ್ಷಣೆ ಮಾಡಿ, ಪ್ರಿವೆನ್ಷನ್ ಮಾಡತಕ್ಕ ಕೆಲಸ ಯಾರೂ ಮಾಡಿಲ್ಲ, ಇವತ್ತು ಬೃಹದಾಕಾರವಾಗಿ, ಗ್ರೀನ್ ಬೆಲ್ಟಲ್ಲಿ ಮನೆಗಳು ಬಂದಿವೆ.

ಹಸಿರು ವಲಯದಲ್ಲಿ ರೆಗ್ಯುಲರೈಸ್ ಮಾಡಬಾರದೆಂದು ಈ ವಿಧೇಯಕದಲ್ಲಿ ತೋರಿಸುತ್ತಿದ್ದಾರೆ. ಆ ಮನೆಗಳನ್ನು ಮಾಡಿರತಕ್ಕವರ ಪರಿಸ್ಥಿತಿ ಏನಾಗಬೇಕು. ಪ್ರತಿಯೊಂದನ್ನೂ ಸಮೀಕ್ಷೆ ಮಾಡಲು ಜಂಟಿ ಸಲಹಾ ಸಮಿತಿಗೆ ಕೊಡಬೇಕೆಂದು ತಾವು ಹೇಳುತ್ತಿದ್ದೀರಿ. ಇವತ್ತು ಆದಷ್ಟು ಜಾಗ್ರತೆ ಈ ಶಾಸನವನ್ನು ಜಾರಿಗೊಳಿಸಿ, ಬಹಳಷ್ಟು ವಂಚಿತರಾಗಿರತಕ್ಕವರಿಗೆ ಸೌಲಭ್ಯಗಳನ್ನು ಕೊಡಬೇಕು. ಏಕೆಂದರೆ, ಇವತ್ತು ನಗರ ಸಭೆಯವರೂ ಮುಂದಕ್ಕೆ ಬರುತ್ತಾ ಇಲ್ಲ. ಏನು ನೋಟಿಫೈಡ್ ಏರಿಯಾ ಎಂದು ಹಿಂದಿನ ಸರ್ಕಾರ ಮಾಡಿದೆಯೋ, ಸರ್ಕಾರದಲ್ಲಿರತಕ್ಕ ಪ್ರತಿಯೊಂದು ಪ್ರದೇಶದಲ್ಲಿಯೂ ನೂರಕ್ಕೆ ನೂರರಷ್ಟು ಮನೆಗಳಿಗೆ ಸೌಲಭ್ಯವಿಲ್ಲ. ಇವತ್ತು ಇದನ್ನು ಸಕ್ರಮೀಕರಣ ಮಾಡದಿದ್ದರೆ, ಸುಮಾರು 14 ಲಕ್ಷ ಮತದಾರರು ಇರತಕ್ಕ ಪ್ರದೇಶ ಬೆಂಗಳೂರು ಹೊರವಲಯದಲ್ಲಿ ಬಹಳಷ್ಟು ತೊಂದರೆಗೆ ಒಳಗಾಗುತ್ತಾರೆ. ವಿರೋಧಪಕ್ಷದ ನಾಯಕರಾಗಿ ಹೇಗೆ ಮಾತನಾಡುತ್ತಾರೋ. ಸ್ಥಳದ ಪೂರ್ತಾ ಜನ ಅವರ ಜೊತೆ ಇದ್ದು, ಇವತ್ತು ಈ ಸಕ್ರಮೀಕರಣ ವಿಧೇಯಕವನ್ನು ತಂದು ಸೌಲಭ್ಯವನ್ನು ಕೊಡತಕ್ಕ ಕೆಲಸ ಇಡೀ ಸದನಕ್ಕೆ ಜವಾಬ್ದಾರಿ ಇದೆಯೇ ಹೊರತು, ಬರೀ ಸರ್ಕಾರದಲ್ಲಿರತಕ್ಕ ಯಾರೋ ಒಬ್ಬರು ಬಿಲ್ ತರತಕ್ಕವರ ಸ್ವಾರ್ಥ ಇಲ್ಲವೆಂದು ಹೇಳುತ್ತಾ, ಈ ಬಿಲ್ಲನ್ನು ಸಮರ್ಥನೆ ಮಾಡಿ, ಮಾತನಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri H.N. NANJE GOWDA : Again I went through the objects and reasons. ಮಾನ್ಯ ಜೆ.ಹೆಚ್. ಪಟೇಲ್ರವರಲ್ಲಿ ನನ್ನ ಕಳಕಳಿಯ ಮನವಿ. ನಾವೇನು ಕೇಳಿಕೊಂಡಿದ್ದೇವೆಂದರೆ, ಬಡವರಿಗೆ ಅನುಕೂಲವಾಗಲಿ, ಮಧ್ಯಮವರ್ಗದವರಿಗೆ ಅನುಕೂಲವಾಗಲಿ ಎಂದು. ಇಲ್ಲಿ ಪ್ರಾವಿಷನ್ ನೋಡಿದರೆ, ಉದ್ದೇಶ ಹೇಳಿರತಕ್ಕಂಥಾದ್ದು, 7-8 ಉದ್ದೇಶಗಳನ್ನು ಹೇಳಿದ್ದೀರಿ. ಗ್ರೀನ್ ಬೆಲ್ಟ್ ಏರಿಯಾದಲ್ಲಿ ಮಧ್ಯಮ ವರ್ಗದವರು ಮತ್ತು ಬಡವರು ಯಾರೂ ಕಟ್ಟಿಲ್ಲ. ಒಂದೊಂದಾಗಿ ಹೇಳಿಬಿಡುತ್ತೇನೆ. ಆದರೆ, ರೆಗ್ಯುಲರೈಸ್ ಮಾಡಬೇಕಾಗಿದೆ. ಇವೆಲ್ಲ ದೊಡ್ಡ ಬಿಲ್ಡರ್ಸ್ ಮಾಡಿಕೊಂಡಿದ್ದಾರೆ. ಇದನ್ನು ರೆಗ್ಯುಲರೈಸ್ ಮಾಡುವ ಉದ್ದೇಶ ಇಟ್ಟುಕೊಂಡಿದ್ದೀರಿ. ಆಮೇಲೆ ಎರಡು ಫ್ಲೋರ್ಸ್ ಮೇಲೆ ಇದ್ದವರದ್ದು ಇದು ಮಧ್ಯಮ ವರ್ಗದವರದೂ ಅಲ್ಲ, ಬಡವರದೂ ಅಲ್ಲ. ಇದನ್ನು ರೆಗ್ಯುಲರೈಸ್ ಮಾಡುವುದಕ್ಕೆ ಮಾಡಿಕೊಂಡಿದ್ದೀರಿ. ರೆಸಿಡೆನ್ಷಿಯಲ್ ಏರಿಯಾದಲ್ಲಿ, ಕಮರ್ಷಿಯಲ್ ಉದ್ದೇಶಕ್ಕಾಗಿ ಕಟ್ಟಿದ್ದರೆ, ಇಲ್ಲಿ ಹೇಳುತ್ತೀರಿ. "to provide for regularisation of unauthorised constructions used for commercial purposes" ಇದನ್ನು ರೆಗ್ಯುಲರೈಸ್ ಮಾಡುವುದಕ್ಕೆ ಮಾಡಿದ್ದೀರಿ. ಆಮೇಲೆ ಕರ್ನಾಟಕದ Parks, Play-fields and open spaces (Preservation and Regulation) Act, 1985 ವಿರುದ್ಧವಾಗಿ ಕಟ್ಟಿದ್ದರೆ, ಅದನ್ನು ರೆಗ್ಯುಲರೈಸ್ ಮಾಡುವುದಕ್ಕೆ ಒಪ್ಪಿದ್ದೀರಿ. ಇವೆಲ್ಲಾ ಶ್ರೀಮಂತರೇ ಮಾಡತಕ್ಕಂತಾದ್ದು. ನಾನು motives attribute / ಮಾಡುತ್ತಾ ಇಲ್ಲ. ನಿಮ್ಮ ಆಫೀಸರು ಯಾರೋ ಹಾಕಿರುತ್ತಾರೆ. ಇದನ್ನು ಮಾಡತಕ್ಕ ಕಾಲದಲ್ಲಿ ಚಿಂತನೆ ಮಾಡಿ, ಮಾಡಿಲ್ಲ. ಬಡವರು ಎಲ್ಲಿ ಕಟ್ಟಿರುತ್ತಾರೆ.

ನೀವು ಅರ್ಬನ್ ಡೆವಲಪ್ಮೆಂಟ್ ನೋಟಿಫೈ ಮಾಡಿರುತ್ತೀರಿ. ಪಕ್ಕದಲ್ಲಿಯೇ ಬಿ.ಡಿ.ಎ. ನವರೂ ನೋಟಿಫೈ ಮಾಡಿರುತ್ತಾರೆ. ಅಲ್ಲಿ ಮನೆ ಕಟ್ಟಿರುತ್ತಾರೆ, ಅವರಿಗೆ ಮಾತ್ರ ನೀವು ರೆಗ್ಯುಲರೈಸ್ ಮಾಡುವುದಕ್ಕೆ ತಯಾರಿಲ್ಲ. ಇವರು ಬಿಟ್ಟು, ಉಳಿದವರೆಲ್ಲರನ್ನೂ ಮಾಡುತ್ತೇವೆಂದು ಹೇಳಿದರೆ, ನೀವು ಬಂಡವಾಳಶಾಹಿಗಳದ್ದು ಮಾಡುತ್ತೀರಿ, ಬಡವರದ್ದು ಮಾತ್ರ ಮಾಡುವ ಹಾಗೆ ಇಲ್ಲ ಎನ್ನುವ ಹಾಗೆ ಇದೆ. ದಯಮಾಡಿ ಸ್ವಲ್ಪ ಚಿಂತನೆ ಮಾಡಿ. ಮಾನ್ಯ ನಾಣಯ್ಯನವರು ಕುಳಿತುಕೊಂಡು ಚರ್ಚೆ ಮಾಡೋಣವೆಂದು ಸುಲಭವಾಗಿ ಹೇಳುತ್ತಾರೆ. ಅವರಿಗೆ ಏನಾಗಿದೆ ಎಂದರೆ, ಅವರು ಕಾಫಿ ತೋಟ ನೋಡುತ್ತಾರೆ, ವಿಧಾನ ಸೌಧ ನೋಡುತ್ತಾರೆ. ಕ್ವಾರ್ಟರ್ಸ್ ನೋಡುತ್ತಾರೆ. ರೆವಿನ್ಯೂ

ಪ್ರಾಕ್ಟಿಸ್ನಲ್ಲಿ ಕಟ್ಟಿರತಕ್ಕ ಮನೆಗಳ ಪರಿಚಯ ಅವರಿಗೆ ಇಲ್ಲ, ದಯಮಾಡಿ, ಇದನ್ನು ಇನ್ನೊಂದು ಸಾರಿ ಕುಳಿತು ಆಲೋಚನೆ ಮಾಡುವುದು ಸೂಕ್ತ. ದಯಮಾಡಿ ಆತುರ ಮಾಡಬೇಡಿ.

ಶ್ರೀ ಎಂ.ಸಿ. ನಾಣಯ್ಯ : ಬಹಳ ವರ್ಷಗಳಿಂದ ತಾವೂ ಇದ್ದೀರಿ. ಬೆಂಗಳೂರು ಸುತ್ತಮುತ್ತ ಕಟ್ಟಿರತಕ್ಕ ಮನೆಗಳು ಸುಮಾರು 15-20ವರ್ಷಗಳಿಂದ ಕಟ್ಟಿರತಕ್ಕ ಮನೆಗಳು. ಇವುಗಳಿಂದ ಸರ್ಕಾರಕ್ಕೆ ಒಂದು ಪೈಸೆ ವರಮಾನ ಇಲ್ಲ, ಮಾನ್ಯ ಅಧ್ಯಕ್ಷರೇ, ಕಾರ್ಪೊರೇಷನ್ಗೆ ಟ್ಯಾಕ್ಸ್ ಬರುವುದಿಲ್ಲ.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೇ, ನಾನು ಬಾಯಿಬಿಟ್ಟು ಹೇಳಬಾರದು ಎಂದು ಇದ್ದೆ. ಕಾರ್ಪೊರೇಷನ್ನವರು ಪಾರ್ಕಿಂಗ್ ಸ್ಲಾಟ್ಗೆ ಬಿಟ್ಟಿದ್ದನ್ನು ಕಮರ್ಷಿಯಲ್ ಮಾಡಿಕೊಂಡಿದ್ದಾರೆ ಎಂದು ಹೊಡೆಯುವುದಕ್ಕೆ ಹೊರಟರು. ಅದು ಏಕೆ ನಿಂತುಕೊಂಡಿತು ಹಾಗಾದರೆ? ಕೋರ್ಟಿನಲ್ಲಿ ಸ್ಟೇ ತೆಗೆದುಕೊಂಡಿದ್ದಾರೆ ಎಂದು ಅಲ್ಲ, ಅದಕ್ಕೆ ಕಾರಣ ಇದೆ. ಅದನ್ನು ನೀವು ರೆಗ್ಯುಲರೈಸ್ ಮಾಡುವುದಿಲ್ಲವೇ ಈಗ? Are You not going to regularise them.

ಶ್ರೀ ಎಂ.ಸಿ. ನಾಣಯ್ಯ : ಈಗ ಇದರಲ್ಲಿ ಇರತಕ್ಕಂಥ ಪ್ರಶ್ನೆ ಏನೆಂದರೆ

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೇ, under this Act, are you not going to regularise them? Let us not make arguments. ವಾದಕ್ಕೋಸ್ಕರ ನಾವು ವಾದ ಮಾಡುವುದು ಬೇಡ.

Sri M.C. NANAIAH : Kindly bear it in mind that there is an existing Act. We have brought amendments only in respect of three sections.

ಇದನ್ನು ತಂದಿರತಕ್ಕಂಥ ಆಬ್‌ಜಕ್ಟ್ ಏನೆಂದರೆ ಗ್ರೀನ್ ಬೆಲ್ಟ್‌ನಲ್ಲಿ ಕಟ್ಟಿರತಕ್ಕಂಥ ಮನೆಗಳನ್ನು ತಾವು ರೆಗ್ಯುಲರೈಸ್ ಮಾಡಬೇಡಿ ಎಂದು ತಾವು ಹೇಳುತ್ತಿದ್ದೀರಿ.

ಶ್ರೀ ಹೆಚ್.ಎನ್. ನಂಜೇಗೌಡ : ತಾವು ಅಬ್‌ಜೆಕ್ಷನ್ ಅಂಡ್ರೀಸನ್ನಲ್ಲಿ ಹೇಳಿದ್ದೀರಲ್ಲಾ, ಅದನ್ನು ಒನ್ನೆ ಓದಿಬಿಟ್ಟು ಬಡವರಿಗೆ ಎಷ್ಟು ಜನರಿಗೆ ಅನುಕೂಲ ಆಗಬಹುದು ಅಂದಾಜು ಶೇಕಡ ಶ್ರೀಮಂತರಿಗೆ ಎಷ್ಟು ಆಗಬಹುದು ಎನ್ನುವುದನ್ನು ನೀವು ಹೇಳಿಬಿಡಿ, ನಾವು ಒಪ್ಪಿಕೊಳ್ಳುತ್ತೇವೆ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೇ, ಇಲ್ಲಿ ಬಡವರು ಕಟ್ಟಿರತಕ್ಕಂಥವರು ಇದ್ದಾರೆ ಇಲ್ಲ ಎಂದು ಅಲ್ಲ. ಮಧ್ಯಮ ವರ್ಗದವರು ಕಟ್ಟಿದ್ದಾರೆ ಇಲ್ಲ ಎಂದು ಹೇಳುವುದಿಲ್ಲ. ಕಮರ್ಷಿಯಲ್ ಏರಿಯಾಗಳಿಂದ ಬಂದಿರತಕ್ಕಂಥ ಈ ಟ್ರೇಡಿಂಗ್ ಕಮ್ಯುನಿಟಿಯವರು ಬಂದಿರತಕ್ಕಂಥವರೂ ಇದ್ದಾರೆ. ಎಲ್ಲೋ ಸರ್ಕಾರಕ್ಕೆ ವರಮಾನ ಬರುವುದಿದ್ದರೆ ಕಾರ್ಪೊರೇಷನ್ ಮತ್ತು ಮುನಿಸಿಪಾಲಿಟಿಗಳಿಗೆ ಏನು ಸೆಸ್ ಬರಬೇಕು ಅದು ಬರಬೇಕು ಎನ್ನುವಂತಹ ಹಿನ್ನೆಲೆಯಲ್ಲಿ ನಾವು ಕೆಲವು ತಿದ್ದುಪಡಿಗಳನ್ನು ತಂದಿದ್ದೇವೆ. ನಾನು ಒಂದು ಒಪ್ಪಿಕೊಳ್ಳುತ್ತೇನೆ. ಅದೇನೆಂದರೆ ಪಾರ್ಕ್ಸ್ ಅಂಡ್ ಪ್ಲೇಗ್ರೌಂಡ್ಸ್ ಎಂದು ಹೇಳುತ್ತಾ ಇರತಕ್ಕಂಥದ್ದನ್ನು ಶ್ರೀಮಾನ್ ಮೊಯ್ಲಿಯವರು ಕೂಡ ಎತ್ತಿದರು. ಪಾರ್ಕ್ಸ್ ಅಂಡ್ ಪ್ಲೇಗ್ರೌಂಡ್ಸ್‌ಗಳಿಗೆ ತಂದಿರುವುದಕ್ಕೆ ಕಾರಣ ಇವತ್ತು ಆ ಒಂದು ಕಾನೂನಿನ ಅಡಿಯಲ್ಲಿ ಯಾವುದೇ ಪಾರ್ಕ್ಸ್ ಅಂಡ್ ಪ್ಲೇಗ್ರೌಂಡಸ್‌ನ್ನು ಗುರುತಿಸಿಲ್ಲ ಅದನ್ನು ಗುರುತು ಮಾಡದೇ ಇರುವಂತಹ ಸಂದರ್ಭದಲ್ಲಿ ಅದನ್ನು ಪಾರ್ಕ್ ಅಂಡ್ ಪ್ಲೇಗ್ರೌಂಡ್ಸ್ ಎಂದು ಹೇಳುವುದಕ್ಕೆ ಬರುವುದಿಲ್ಲ. ಆ ಒಂದು ಪರ್ಟಿಕ್ಯುಲರ್ ಕ್ಲಾಸ್ ಯಾವುದು ಉಂಟು 9 ಅದನ್ನು ನಾವು ಡಿಲೀಟ್ ಮಾಡಬೇಕು

ಎಂದು ನಾವು ಹೇಳಿದ್ದೇವೆ. ಆ ಕ್ಲಾಸ್ 9ಕ್ಕೆ ಬೇಕಾದರೆ ನಾವು ಅಫಿಷಿಯಲ್ ತಿದ್ದುಪಡಿ ತರುತ್ತೇವೆ.

ಶ್ರೀ ಎಂ. ಶ್ರೀನಿವಾಸ್ (ಉತ್ತರಹಳ್ಳಿ) : ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ಸುಮಾರು 5 ಲಕ್ಷ ರೆವಿನ್ಯೂ ಮನೆಗಳು ಇವೆ. ಈ ಮನೆಗಳನ್ನು ರೆಗ್ಯುಲರೈಸ್ ಮಾಡುವುದರಲ್ಲಿ ನಮ್ಮದೇನೂ ಅಭ್ಯಂತರ ಇಲ್ಲ. ಬಿ.ಡಿ.ಎ. ಫೋರ್ ಓನ್ ನೋಟಿಫಿಕೇಷನ್ ಆದ ತಕ್ಷಣ ಸೊಸೈಟಿಯವರು ಮೊದಲು ಮನೆಗಳನ್ನು ಕಟ್ಟಿಸುತ್ತಾರೆ. ಮಾನ್ಯ ವಾಟಾಳ್ ನಾಗರಾಜ್ರವರು ಹೇಳಿದಂತೆ. ನೀವು ಏನು ನೋಟಿಫೈ ಮಾಡಿ ಪಟ್ಟಿ ಹಾಕಿದ್ದೀರಿ ರೆವಿನ್ಯೂ ಪಾಕೇಟ್ಸ್ ಎಂದು ಅದನ್ನು ರೆಗ್ಯುಲರೈಸ್ ಮಾಡುವುದರಲ್ಲಿ ನಮ್ಮದು ಯಾರದೂ ತಕರಾರು ಇಲ್ಲ, ನನ್ನ ಕ್ಷೇತ್ರದಲ್ಲಿ ನಾಲ್ಕು ನೋಟಿಫೈಡ್ ಏರಿಯಾಗಳು ಇವೆ. ಆದರೆ ಪಾರ್ಕ್ಗೆ ಬಿಟ್ಟಿರತಕ್ಕಂಥಾದ್ದು ರೋಡ್ಗೆ ಬಿಟ್ಟಿರತಕ್ಕಂಥಾದ್ದು ಕೆರೆಗಳು ಒಂದೊಂದು ಕೆರೆಗಳು 20 ಎಕರೆ ಇವೆ. ಅದರಲ್ಲಿ ಎರಡು ಎಕರೆ ಕೆರೆ ಉಳಿದಿಲ್ಲ, ನಾನು ಮಾನ್ಯ ಕಂದಾಯ ಮಂತ್ರಿಗಳಿಗೆ ಕೂಡ ಒಂದು ಪಟ್ಟಿಯನ್ನು ಕೊಟ್ಟಿದ್ದೇನೆ. ಅವರು ಎನ್ಕ್ವೈರಿ ಮಾಡುತ್ತಾರೆ ಎನ್ನುವ ನಂಬಿಕೆ ನನಗೆ ಇದೆ. ಅವರು ಈಗಾಗಲೇ ನನ್ನ ಕ್ಷೇತ್ರದಲ್ಲಿ ಸುಮಾರು 400-500ಎಕರೆ ಜಮೀನನ್ನು ತೆಗೆದುಕೊಂಡಿದ್ದಾರೆ. ಅದನ್ನು ಬಿಟ್ಟು ಮಾಡುತ್ತೇವೆ ಎಂದು ಹೇಳಿ.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) : ಮಾನ್ಯ ಅಧ್ಯಕ್ಷರೇ, ಮಾನ್ಯ ನಾಣಯ್ಯನವರು ಈಗಾಗಲೇ ಹೇಳಿದ್ದಾರೆ. ಹಿಂದೆ ಏನು ಬಿಲ್‌ನಲ್ಲಿ ಇತ್ತು ಆ ಬಿಲ್ನಲ್ಲಿ ಇರತಕ್ಕಂಥ ಸೆಕ್ಷನ್ 3 ಮತ್ತು 6 ಮತ್ತು 8 (ಎ) ಮತ್ತು 7 ಇಷ್ಟು ಮಾತ್ರ ಅಲ್ಲದೆ 9 ಕೂಡ ಹಾಗೂ ಈ 5-6 ಸೆಕ್ಷನ್ನ್ನೆ ಅಮೆಂಡ್ಮೆಂಟ್ ತಂದಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಆದರೆ ಆ ತಿದ್ದುಪಡಿಯನ್ನು ತರುವುದರಲ್ಲಿ ಏನಾಗಿದೆ ಎಂದರೆ ಮೊದಲಿನ ಉದ್ದೇಶ ಏನು ಇತ್ತು ಅಂದರೆ ಬಡವರು ಏನು ಸರ್ಕಾರಿ ಜಮೀನು ಮೇಲೆ ಅಥವಾ ಏನು ಅವರದ್ದೇ ಆದ ಸ್ವಂತ ಜಮೀನು ಮೇಲೆ ಮನೆಗಳನ್ನು ಕಟ್ಟಿಕೊಂಡಿದ್ದರು ಅದನ್ನು ಯಾವ ರೀತಿಯಾಗಿ ರೆಗ್ಯುರಲೈಸ್ ಮಾಡಬೇಕು ಮತ್ತು ಏರಿಯಾ ಕೂಡ ಫಿಕ್ಸ್ ಆಗತ್ತು. ಅದು 40 x 60 ಅಥವಾ 40 x 30 ಈ ರೀತಿಯಾಗಿ ಅದರ ಮುಖ್ಯ ಗುರಿ ಏನೆಂದರೆ ಯಾರು ಬಿ.ಡಿ.ಎ.ನಲ್ಲಿ ಮತ್ತು ನೇರವಾಗಿ ಮಾರ್ಕೆಟ್ ರೇಟ್ನಲ್ಲಿ ಖರೀದಿ ಮಾಡುವುದಕ್ಕೆ ಆಗುವುದಿಲ್ಲ, ಅಂತಹವರು ರೆವಿನ್ಯೂ ಸೈಟ್ಗಳನ್ನು ತೆಗೆದುಕೊಂಡು ಮನೆಗಳನ್ನು ಕಟ್ಟಿಸಿಕೊಂಡಿದ್ದಾರೆ. ಅವರಿಗೆ ಸರ್ಕಾರದ ಎಲ್ಲಾ ಸೌಲಭ್ಯಗಳು ಸಿಗಬೇಕು ಅದು ಎಲೆಕ್ಟ್ರಿಸಿಟಿ ಆಗಿರಬಹುದು ವಾಟರ್ ಆಗಿರಬಹುದು ಮತ್ತು ಟ್ಯಾಕ್ಸ್ ಕೂಡ ಸರ್ಕಾರ ವಸೂಲಿ ಮಾಡಬಹುದು ಎನ್ನತಕ್ಕಂಥ ದೃಷ್ಟಿಯಿಂದ ಈ ಕಾನೂನು ಹಿಂದೆ ತಂದಿದ್ದು. ಈಗ ಇದರಲ್ಲಿ ಏನಾಗಿದೆ ಅಂದರೆ ಒರಿಜನಲ್ ಆ್ಯಕ್ಟ್ ಪ್ರಕಾರ ಅನೆಕ್ಸರ್ನಲ್ಲಿ ಸೆಕ್ಷನ್ 3 ನೋಡಿದರೆ ರೆಗ್ಯುಲರೈಸೇಷನ್ ಅಲ್ಲಿ ಇದ್ದದ್ದು ಸುಮಾರು

Regularisation :

i) belonging to the State Government; or

ii) which is a revenue site owned by him, or

iii) belonging to him which is proposed to be acquired in connection with any development scheme of an Authority, in relation to which a notification under the Bangalore Development Authority Act, 1976

ಇದು ಏನು ಮಾಡಿದರು ಅಂದರೆ ಸಬ್ ಕ್ಲಾಸ್ 1 ಮತ್ತು 2 ಅನ್ನುರೀಟೈನ್ ಮಾಡಿಕೊಂಡಿರಿ. ಬಿ.ಡಿ.ಎ. ನಲ್ಲಿ ಇರತಕ್ಕಂಥ ಜಮೀನು ಮೇಲೆ ನೋಟಿಫೈ ಆಗಿದ್ದರ

ಮೇಲೆ ಕಟ್ಟಿಕೊಂಡವರನ್ನು ಕೈ ಬಿಟ್ಟಿದ್ದೀರಿ. ಅನೇಕ ಜನ ಬಡವರು ಬೆಂಗಳೂರಿನಲ್ಲಿರತಕ್ಕಂಥವರು ತಮ್ಮ ತಮ್ಮ ಜಮೀನಿನಲ್ಲಿ ಮನೆ ಕಟ್ಟಿಸಿಕೊಂಡಿದ್ದಾರೆ. ಇನ್ನೂ ಕೆಲವರು ಬೇರೆಯವರಿಗೂ ಕೂಡ ಮಾರಾಟ ಮಾಡಿರಬಹುದು. ಏಕೆಂದರೆ ಯಾವಾಗ ನಾವು ಫ್ರಾಗ್ಮೆಂಟೇಷನ್ ಆಕ್ಟ್ ರಿಲ್ಯಾಕ್ಸ್ ಮಾಡಿದೆವು. ಆಗ ನೇರವಾಗಿ ಒಂದು ಎಕರೆ ಅರ್ಧ ಎಕರೆ ರಿಜಿಸ್ಟೇಷನ್ ಮಾಡಿಕೊಳ್ಳುವುದಕ್ಕೆ ಅವರಿಗೆ ಅವಕಾಶ ಆಯಿತು. ಅವರು ಹೋಗಿ ನೇರವಾಗಿ ರಿಜಿಸ್ಟೇಷನ್ ಮಾಡಿಕೊಂಡು ಮನೆಗಳನ್ನು ಕೂಡ ಕಟ್ಟಿಕೊಂಡರು. ಅವರು ಮನೆಗಳನ್ನು ಕಟ್ಟಿಕೊಂಡಿದ್ದು ನಿಮ್ಮ ಕಾನೂನು ಪ್ರಕಾರ ಬಿ.ಡಿ.ಎ. ಆಗಲಿ ಅಥವಾ ಪಂಚಾಯತಿ ಆ್ಯಕ್ಟ್ ಪ್ರಕಾರ ಆಗಲಿ ಮಾಡದೇ ಇರಬಹುದು. ಆದರೆ ಫ್ರಾಗ್ಮೆಂಟೇಷನ್ ಆಕ್ಟ್ ರಿಲ್ಯಾಕ್ಸ್ ಆದ ಕಾರಣ ಅವರು ನೇರವಾಗಿ ಸಬ್ ರಿಜಿಸ್ಟಾರ್ ಹತ್ತಿರ ಹೋಗಿ ರಿಜಿಸ್ಟೇಶನ್ ಮಾಡಿಕೊಂಡಿದ್ದ ಕಾರಣ ಅವರ ಹತ್ತಿರ ಓನರ್‌ಶಿಪ್ ಇದ್ದ ಕಾರಣ ಮನೆಗಳನ್ನು ಕಟ್ಟಿಕೊಂಡರು. ನೀವು ಸೆಕ್ಷನ್ 3 ಸಬ್ ಕ್ಲಾಸ್ 3ನಲ್ಲಿ ಈಗ ತಂದಂತಹ ತಿದ್ದುಪಡಿಯಲ್ಲಿ ತಾವು ತೆಗೆದಿದ್ದೀರಿ. ತಾವು ನೋಡಿರಬಹುದು ಇದು ತೆಗೆದರೆ ಇದರ ಮುಖ್ಯ ಗುರಿ ಏನು? ಇಲ್ಲಿರತಕ್ಕಂಥ ರೈತರು ಏನು ಇದ್ದಾರೆ ಬೆಂಗಳೂರು ಅಕ್ಕಪಕ್ಕದಲ್ಲಿ ಇರತಕ್ಕಂಥ ರೈತರು ತಮ್ಮದೇ ಆದಂತಹ ಜಮೀನಿನಲ್ಲಿ ಅಥವಾ ತಮ್ಮ ಅಣ್ಣತಮ್ಮಂದಿರಿಗೆ ಕೊಟ್ಟಂತಹ ಜಮೀನಿನಲ್ಲಿ ಅವರು ಯಾರಿಗೂ ಒಂದು ಫ್ರಾಗ್ಮೆಂಟೇಷನ್ ಆಕ್ಟ್ ಕೆಳಗೆ ಅಧಿಕಾರ ಇದ್ದಾಗ ಮಾರಿದ್ದರೆ ಅಲ್ಲಿ ಅವನು ಕಟ್ಟಿಕೊಂಡಿದ್ದಂತಹ ಮನೆಗೆ ರೆಗ್ಯುಲರೈಸೇಷನ್ ಮಾಡುವುದಕ್ಕೆ ಬರುವುದಿಲ್ಲ. ಒಂದು ಕಡೆ ಅವರು ಮಾಡಿಬಿಟ್ಟರು ಇನ್ನೊಂದು ಕಡೆ ನಿಮ್ಮ ಬಿ.ಡಿ.ಎ. ನವರು ನೋಟಿಫಿಕೇಷನ್ ಮಾಡಿದರು. ಇದಕ್ಕಾಗಿ ಇವತ್ತು ಏನಾಗುತ್ತದೆ ಆ ಬಡವರು ತೊಂದರೆಗೆ ಒಳಪಡುತ್ತಾರೆ. ಅದಕ್ಕಾಗಿ ಇದು ಒಂದು ಕಾಂಪ್ಲಿಕೇಷನ್. ಪ್ಲೇಗ್ರೌಂಡ್ಸು ಕೂಡ ಒರಿಜನಲ್ ಆ್ಯಕ್ಟಲ್ಲಿ ಇಲ್ಲ. ತಾವು ಮಾತನಾಡುವಾಗ ಹಿಂದೆಯೂ ಕೂಡ ಇತ್ತು ಎನ್ನತಕ್ಕಂಥ ಮಾತನ್ನು ಹೇಳಿದಿರಿ ನಾನು ನೋಡಿದೆ ಸೆಕ್ಷನ್ 4ರಲ್ಲಿ

"Unauthorised constructions which shall not be regularised"

ಅದರಲ್ಲಿ ಅದು ಇತ್ತು.

"Unauthorised construction made in the area specified as green belt in the comprehensive development plan or outline development plan prepared under the Karnataka Town and Country Planning Act, 1961 or declared as green belt under Sub-Section (3A) of Section 95 of the Karnataka Land Revenue Act, 1964"

ಅದರಲ್ಲಿ ಅದು ಇದ್ದ ಮೇಲೆ ನೀವು ಅದನ್ನು ಪುನಃ ಡಿಲೀಟ್ ಮಾಡಿದಿರಿ. ಇನ್ನೊಂದು ಏನೆಂದರೆ ಸೆಕ್ಷನ್ 2ರಲ್ಲಿ ಕೂಡ

"Unauthorised construction or any portion thereof falling within the required set off, if any, from roads, railway lines, communications and other civic facilities or public utilities under the rules bye-laws or regulations governing buildings:"

ಇದು ಇತ್ತು. ಈಗ ಇರತಕ್ಕಂಥಾದ್ದರಲ್ಲಿ ಅದನ್ನು ಕೂಡ ಡಿಲೀಟ್ ಮಾಡಿದ್ದೀರಿ, ಅಂದರೆ ಅರ್ಥ ಏನು? ನಾವು ಸುಮ್ಮನೆ ಒರಿಜನಲ್ ಆ್ಯಕ್ಟಲ್ಲಿ ಇದ್ದದ್ದನ್ನೇ ಮಾಡಿದ್ದೇವೆಂದು ಹೇಳುವುದಕ್ಕೆ ಹೋಗಬೇಡಿ. ತಾವು ಎಲ್ಲೆಲ್ಲಿಬೇಕು ಅಲ್ಲಿ ಡಿಲೀಟ್ ಮಾಡಿದ್ದೀರಿ, ಎಲ್ಲಿ ಬೇಡವಾಗಿತ್ತು ಅಲ್ಲಿ ಬಿಟ್ಟು ಬಿಟ್ಟಿದ್ದೀರಿ. ಅದಕ್ಕೆ ನಾನು ಏನು

ಹೇಳುತ್ತಿದ್ದೇನೆಂದರೆ ಇದಕ್ಕೆ ಒಂದು ಕಾಂಪ್ರಹೆನ್ಸೀವ್ ಆ್ಯಕ್ಟ್ ಆಗಬೇಕಾದರೆ ಅಭ್ಯಾಸ ಮಾಡಬೇಕಾಗುತ್ತದೆ. ತಾವು ಬೇಕಾದರೆ ಸೆಲೆಕ್ಟ್ ಕಮಿಟಿಯನ್ನು ಮಾಡಿ ಸೆಲೆಕ್ಟ್ ಕಮಿಟಿಗೆ ಟೈಮ್ ಒಂದೇ ತಿಂಗಳಲ್ಲಿ ಕೊಡಿ ಎಂದು ಹೇಳಿ. Before the closure of this session. ಕೊಟ್ಟುಬಿಡಿ ಎಂದು ಹೇಳಿ. ಅದಕ್ಕಾಗಿ ಏನಾದರೂ ಸ್ವಲ್ಪ ವ್ಯತ್ಯಾಸಗಳು ಇದ್ದರೆ ಅದನ್ನು ಸರಿಮಾಡಿಕೊಂಡು ಬಂದರೆ ಪುನಃ ನೀವು ಇದನ್ನು ಪಾಸ್ ಮಾಡಿಕೊಳ್ಳುವುದಕ್ಕೆ ಯಾವ ತೊಂದರೆ ಇಲ್ಲ. ಬೇಕಾದರೆ 15 ದಿವಸ ಟೈಮ್ ಫಿಕ್ಸ್ ಮಾಡಿ. We don't mind to consider.

ತಾವು ಅಭ್ಯಾಸ ಮಾಡುವುದಕ್ಕೆ ಒಂದು ಅವಕಾಶ ಕೊಡಿ. ಸೆಕ್ಷನ್ 4ರಲ್ಲಿ ಸೆಕ್ಷನ್ 3ನಲ್ಲಿ ಒರಿಜನಲ್ ಆ್ಯಕ್ಟಲ್ಲಿ ಇರತಕ್ಕಂಥಾದ್ದನ್ನೇ ನೀವು ಕೆಲವು ಡಿಲೀಟ್ ಮಾಡಿದ್ದೀರಿ. ಇದರಿಂದ ಈಗ ಸ್ವಲ್ಪ ಕಾಂಟ್ರವರ್ಸಿ ಪ್ರಾರಂಭವಾಗಿದೆ. ಆದ್ದರಿಂದ, ಮಾನ್ಯ ಅಧ್ಯಕ್ಷರೇ, ತಾವು ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಿದರೆ ಏನೂ ತೊಂದರೆ ಆಗುವುದಿಲ್ಲ, ತಾವು ಬೇಕಾದರೆ ಒಂದು ಟೈಮ್ ಲಿಮಿಟ್ ಫಿಕ್ಸ್ ಮಾಡಿ 15 ದಿವಸಗಳ ಒಳಗಾಗಿಯೇ ಪುನಃ ಈ ಬಿಲ್ ಇಲ್ಲಿಬರಬೇಕು ಎಂದು ಹೇಳಿ.

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಆಗಬಹುದು. 15 ದಿವಸದಲ್ಲಿಯೇ ಜಾಯಿಂಟ್ ಸೆಲೆಕ್ಟ್ ಕಮಿಟಿ ರಿಪೋರ್ಟ್ ಬರುತ್ತದೆ ಅಂದರೆ ಅದಕ್ಕೆ ನಾನು ಒಪ್ಪುತ್ತೇನೆ. ತಾವು ರೆಫರ್ ಮಾಡಿ.

Sri M. Mallikarjuna Kharge : Sir, the Minister has agreed.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೇ, we will agree for that. Before the closure of the Session, it should come and it should be passed during this session only.

Mr. SPEAKER : The Bill is referred to the Joint Select Committee.

5.40 ಪಿ.ಎಂ.

ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವ ವಿಷಯದ ಮೇಲೆ ಚರ್ಚೆ ಆಗಿದ್ದರ ಕುರಿತು ಮಾನ್ಯ ಕಂದಾಯ ಸಚಿವರಿಂದ ಉತ್ತರ.

+ ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) : ಅಧ್ಯಕ್ಷರೇ, ನಾನು 25-8-95ರಲ್ಲಿ ಹೇಳಿಕೆ ಕೊಟ್ಟಾಗ 106 ತಾಲೂಕುಗಳಲ್ಲಿ ಪರಿಸ್ಥಿತಿ ಅಷ್ಟು ಚೆನ್ನಾಗಿಲ್ಲವೆಂದು ಹೇಳಿದ್ದೆ. ಅದರಲ್ಲೂ 41 ತಾಲೂಕುಗಳಲ್ಲಿ ತೀವ್ರವಾದ ಮಳೆ ಕೊರತೆ ಇದೆ ಎಂದು ಹೇಳಿದ್ದೆ. ಆದರೆ ಈಗ ಪರಿಸ್ಥಿತಿ ಉತ್ತಮವಾಗಿದೆ. ಆದರೂ ಕೋಲಾರ ಜಿಲ್ಲೆಯ 2 ತಾಲ್ಲೂಕು, ಚಿತ್ರದುರ್ಗ ಜಿಲ್ಲೆಯ 4 ತಾಲ್ಲೂಕು ಶಿವಮೊಗ್ಗ ಜಿಲ್ಲೆಯ 7 ತಾಲ್ಲೂಕು ಹಾಸನದಲ್ಲಿ 3 ತಾಲ್ಲೂಕು ಮತ್ತು ಚಿಕ್ಕಮಗಳೂರು 3 ತಾಲ್ಲೂಕು ಗುಲ್ಬರ್ಗದಲ್ಲಿ 2 ತಾಲ್ಲೂಕು ಬೆಳಗಾಂನಲ್ಲಿ 9 ತಾಲ್ಲೂಕು ಬಿಜಾಪುರದಲ್ಲಿ 3 ತಾಲ್ಲೂಕು ಉತ್ತರ ಕನ್ನಡದಲ್ಲಿ 3 ತಾಲ್ಲೂಕು ಹಾಗೂ ಧಾರವಾಡದಲ್ಲಿ 11 ತಾಲ್ಲೂಕು - ಈ 47 ತಾಲ್ಲೂಕುಗಳಲ್ಲಿ ಶೇಕಡ 40 ರಿಂದ 80ರವರೆಗೆ ಮಳೆಯಾಗಿದೆ. ಬ್ಯಾಡಗಿಯಲ್ಲಿ ಮಾತ್ರ ಬಹಳ ತೀವ್ರ ಅಭಾವವಿದೆ. ಈ 47 ಮತ್ತು ಬ್ಯಾಡಗಿ ತಾಲ್ಲೂಕುಗಳಲ್ಲಿ ಹೆಚ್ಚಿನ ಗಮನಕೊಡುವಂತೆ ಮತ್ತು ಕುಡಿವ ನೀರನ್ನು ಒದಗಿಸುವುದಕ್ಕೆ ಈಗಾಗಲೇ

ನಾವು ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆ. ಮತ್ತು 19-9-95ರಂದು ಕುಡಿವ ನೀರಿನ ಸರಬರಾಜಿಗಾಗಿ 9 ಕೋಟಿ ರೂ. ಬಿಡುಗಡೆ ಮಾಡಿದ್ದೇವೆ. ಈಗ ಹಣ ಉಪಯೋಗ ಆಗುತ್ತಾ ಇದೆ. ಇಎಎಸ್ ಹಾಗೂ ರೋಜಗಾರ್ ಯೋಜನೆಯಡಿಯಲ್ಲಿ ಸಾಕಷ್ಟು ಹಣವನ್ನು ಒದಗಿಸಲಾಗಿದೆ. ಅಲ್ಲದೆ ಬರೀ ಸರ್ಕಾರದ ಹಣವಲ್ಲ ಎಲ್ಲಾ ಹಣವನ್ನೂ ಉಪಯೋಗಿಸಿಕೊಂಡು, ನಮ್ಮ ಹತ್ತಿರ ಏನು 37 ಕೋಟಿ ಇದೆ ಅಷ್ಟನ್ನು ಒಂದು ತಿಂಗಳಲ್ಲಿ ಯಾವ ಸರ್ಕಾರವೂ ಉಪಯೋಗಿಸಿಲ್ಲ. ಹಿಂದೆ ಆಗಿದ್ದೆಲ್ಲಾ ನಾನು ನೋಡಿದ್ದೇನೆ. ಮಾನ್ಯ ಖರ್ಗೆಯವರು ರೆವಿನ್ಯೂ ಸಚಿವರಾಗಿದ್ದಾಗ ನಮ್ಮ ತಾಲೂಕಿಗೂ ಬಂದಿದ್ದರು. 91-92ರಲ್ಲಿ ಅಕ್ಟೋಬರ್ ನವೆಂಬರ್‌ನಲ್ಲಿ ಹೆವಿರೈನ್ಸ್ ಆದಾಗ 14 ಸಾವಿರ ಮನೆಗಳು ಬಿದ್ದುಹೋದವು, ಒಂದು ಮನೆಗೂ ಆಗ ಪರಿಹಾರ ಸಿಗಲಿಲ್ಲ. ಲಿಮಿಟೆಡ್ ಫಂಡ್ಸ್‌ನಿಂದ ಅವರು ತಾನೇ ಏನೂ ಮಾಡುವುದಕ್ಕಾಗಲಿಲ್ಲ, ಅವರನ್ನು ನಾನು ಬ್ಲೇಂ ಮಾಡುತ್ತಿಲ್ಲ. ಅಥವಾ ಬೇರೆ ಕಡೆಯಿಂದ ಸ್ವಲ್ಪ ಡೈವರ್ಟ್ ಮಾಡಬಹುದಿತ್ತು ಅವಕಾಶವಿರಲ್ಲ, I am not blaming anybody. ಈಗಾಗಲೇ ಕೊಡಗಿನಲ್ಲಿ ಫ್ಲಡ್ ಜಾಸ್ತಿಯಾಗಿ 341 ಲಕ್ಷ ರೂಪಾಯಿಗಳಿಗೆ ಡಿಮಾಂಡ್ ಕಳುಹಿಸಿದ್ದಾರೆ ಜಿಲ್ಲಾಧಿಕಾರಿಗಳು, ನಮಗೆ ಆ ಹಣ ರಿಲೀಸ್ ಮಾಡಬೇಕು. ರೋಡ್ಸ್ ಕಲ್ವರ್ಟ್ಸ್ ಎಲ್ಲಾ ಹಾಳಾಗಿ ಹೋಗಿದೆ ಎಂದು ಹೇಳಿದ್ದಾರೆ. ಅದಕ್ಕೆ ನಾವು ಈಗಾಗಲೇ 50 ಲಕ್ಷ ರೂ ಅದಕ್ಕೆ ಬಿಡುಗಡೆ ಮಾಡಿ ಎಂದು ಆಜ್ಞೆ ಮಾಡಿದ್ದೇವೆ. ಅದರಲ್ಲಿ 25 ಲಕ್ಷ ಈಗಾಗಲೇ ಬಿಡುಗಡೆ ಮಾಡಿದ್ದೇವೆ ಇನ್ನು ನಾವು ಸೆಪ್ಟೆಂಬರ್ ಮೊದಲ ವಾರದಲ್ಲಿದ್ದೇವೆ. ಅಕ್ಟೋಬರ್ ನವೆಂಬರ್ ಏನೇನಾಗುತ್ತದೆ ಕಾದು ನೋಡೋಣ.

ಶ್ರೀ ವೈ. ರಾಮಕೃಷ್ಣ : ಜೆಆರ್‌ವೈ ಬಗ್ಗೆ ಹೇಳಿದ್ದೀರಿ, ಮಳೆಗಾಲ ಇಲ್ಲದಿದ್ದರೂ ಅದು ಖರ್ಚಾಗುತ್ತಿತ್ತೋ ಇಲ್ಲವೋ? ಅದನ್ಯಾಕೆ ಇಲ್ಲಿ ಜಾಯಿಂಟ್ ಮಾಡುತ್ತೀರಿ? Let us accept the facts as they are. ಕೇಂದ್ರ ಸರ್ಕಾರದ ಯೋಜನೆ ಹಣ ತಂದು ನಾವು ಬರಗಾಲಕ್ಕೆ ಕೊಡುತ್ತಿದ್ದೇವೆ ಎಂಬುದು ಸಮರ್ಥನೀಯವಾದದ್ದಲ್ಲವೆಂಬುದು ನನ್ನ ವಾದ.

ಶ್ರೀ ಆರ್.ಎಲ್. ಜಾಲಪ್ಪ : ಇಎಎಸ್, ರೋಜ್‌ಗಾರ್, ರೋಜಗಾರ್-2 ಎಲ್ಲೆಲ್ಲಿಲ್ಲ ಆ ತಾಲ್ಲೂಕುಗಳಿಗೆ ತಲಾ 25 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದ್ದೇವೆ. ಶಿವಮೊಗ್ಗ ಜಿಲ್ಲೆಯ ಭದ್ರಾವತಿ, ಚನ್ನಗಿರಿ, ಹೊನ್ನಾಳಿ, ಸಾಗರ, ಶಿಕಾರಿಪುರ, ಸೊರಬ ತೀರ್ಥಹಳ್ಳಿ ಶಿವಮೊಗ್ಗ - ತಲಾ 25 ಲಕ್ಷ ರೂ. ಬಿಡುಗಡೆ ಮಾಡಿ ಅದರಲ್ಲಿ ಹನ್ನೆರಡೂವರೆ ಲಕ್ಷ ಬಿಡುಗಡೆ ಮಾಡಿದ್ದೇವೆ, ಎಸ್ಟಿಮೇಟ್ಸ್ ಎಲ್ಲಾ ಅಪ್ರೂವ್ ಮಾಡಿದ್ದಾರೆ. ವರ್ಕ್ ಆರ್ಡರ್ಸ್ ಕೂಡ ಕೊಟ್ಟಿದ್ದಾರೆ. ಕೆಲಸ ಈಗಾಗಲೇ ಪ್ರಾರಂಭ ಮಾಡಿದ್ದಾರೆ. ಮೈಸೂರು ಜಿಲ್ಲೆಯಲ್ಲಿ ಕೆ.ಆರ್. ನಗರ, ಹಾಸನ ಜಿಲ್ಲೆಯಲ್ಲಿ ಆಲೂರು 12.5 ಲಕ್ಷದಲ್ಲಿ 35 ಸಾವಿರ ಖರ್ಚು ಮಾಡಿದ್ದಾರೆ. ಅರಕಲಗೂಡಿನಲ್ಲಿ 12 ಲಕ್ಷದಲ್ಲಿ 2.31 ಲಕ್ಷ ಖರ್ಚು ಮಾಡಿದ್ದಾರೆ, ಹೊಳೆನರಸೀಪುರದಲ್ಲಿ 12.5 ಲಕ್ಷದಲ್ಲಿ 11 ಲಕ್ಷ ಖರ್ಚು ಮಾಡಿದ್ದಾರೆ. ಸಕಲೇಶಪುರದಲ್ಲಿ 12.5 ಲಕ್ಷದಲ್ಲಿ ಬರೀ 85 ಸಾವಿರ ಖರ್ಚು ಮಾಡಿದ್ದಾರೆ. ರಾಯಚೂರಿನಲ್ಲಿ ಸಿಂಧನೂರಿನಲ್ಲಿ 12.5 ಲಕ್ಷದಲ್ಲಿ 5.5 ಲಕ್ಷ ಖರ್ಚು ಮಾಡಿದ್ದಾರೆ. ಬೆಳಗಾಂನ ಚಿಕ್ಕೋಡಿಯಲ್ಲಿ 1.25 ಲಕ್ಷ ಖರ್ಚು ಮಾಡಿದ್ದಾರೆ. ಖಾನಾಪುರದಲ್ಲಿ 1.20 ಲಕ್ಷ ರಾಯಭಾಗ್‌ನಲ್ಲಿ 1.20 ಲಕ್ಷ ಖರ್ಚು ಮಾಡಿದ್ದಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಏನೂ ಖರ್ಚಾಗಿಲ್ಲ ಕಾರಣ 24 ರೂ. ಕೂಲಿಗೆ ಜನ ಅಲ್ಲಿ ಬರುವುದಿಲ್ಲ, ಅಲ್ಲಿ ಈಗೂಗ ಮಳೆಯಾಗುತ್ತಿದೆ. ನಿಮ್ಮಲ್ಲಿ ಮಳೆ ಜಾಸ್ತಿಯಾಗಿ 12 ಕೆರೆ ಒಡೆದುಹೋಗಿವೆ, 6 ಕೆರೆಗೆ 5 ಲಕ್ಷ ಈಗಾಗಲೇ ಕೊಟ್ಟಿದ್ದೇವೆ, ಇನ್ನುಳಿದದ್ದನ್ನು ಸದ್ಯದಲ್ಲಿ ರಿಲೀಸ್ ಮಾಡುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಳೆ ಬರಲಿಲ್ಲವೆಂದು ಮೊದಲು ದುಡ್ಡು ಕೊಡಲಿಲ್ಲ, ಮಳೆ ಜಾಸ್ತಿ ಬಂದು ಕೆರೆ ಒಡೆದರೂ ಅದಕ್ಕೂ ದುಡ್ಡು ಕೊಡುತ್ತಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ : 5 ಲಕ್ಷ ಕೊಟ್ಟಿದ್ದೇವೆ ಸ್ವಾಮಿ. ಅಧ್ಯಕ್ಷರೇ, ಕಳೆದ ಸಾರಿ ಚರ್ಚೆ ನಡೆಯುವಾಗ ನಮ್ಮ ಸದಸ್ಯರು ಹೇಳಿದರು. ಕೇವಲ 22, 23 ಪರ್ಸೆಂಟ್ ಹಣ ಮಾತ್ರ ಖರ್ಚಾಗಿದೆ ಎಂದು. ಲೇಟೆಸ್ಟ್ ಪ್ರಕಾರ 32 ಪರ್ಸೆಂಟ್ ಹಣ ಖರ್ಚಾಗಿದೆ. ಜೆಆರ್‌ವೈ ಅಥವಾ ನೆಮ್ಮದಿಯಲ್ಲಿ 37 ಪರ್ಸೆಂಟ್ ಖರ್ಚಾಗಿದೆ. ಈಗ ಜಿಲ್ಲಾಧಿಕಾರಿಗಳ ಹತ್ತಿರ 3 ಸಾವಿರದ 53 ಲಕ್ಷ ರೂ. ಹಣ ಇದೆ, ಸಿಆರ್‌ಎಫ್‌ನಿಂದ ಮೇವಿಗೆ ಎಲ್ಲಾ ಜಿಲ್ಲೆಗಳಿಂದ ಐದೈದು ಲಕ್ಷ ಬಿಡುಗಡೆ ಮಾಡಿದ್ದೇವೆ, ಅದರಲ್ಲಿ ತುಮಕೂರಿನಲ್ಲಿ 1.5 ಲಕ್ಷ ಉಪಯೋಗಿಸಿಕೊಂಡಿದ್ದಾರೆ, ಚಿತ್ರದುರ್ಗದಲ್ಲಿ 45 ಸಾವಿರ, ಚಿಕ್ಕಮಗಳೂರುನಲ್ಲಿ 92 ಸಾವಿರ ಹಾಸನದಲ್ಲಿ ಬರೀ 2 ಸಾವಿರ, ಕೊಡಗಿನಲ್ಲಿ 1.35 ಲಕ್ಷ, ರಾಯಚೂರುನಲ್ಲಿ 35 ಸಾವಿರ, ಬಳ್ಳಾರಿಯಲ್ಲಿ 50 ಸಾವಿರ ರೂ.ಗಳನ್ನು ಉಪಯೋಗಿಸಿಕೊಂಡಿದ್ದಾರೆ. ಒಟ್ಟು ನಾವು ಕೊಟ್ಟ 1 ಕೋಟಿಯಲ್ಲಿ ಕೇವಲ ಉಪಯೋಗವಾಗಿರುವುದು 5.9 ಲಕ್ಷ ಮಾತ್ರ ಅಲ್ಲಿಗೆ ತಮಗೆ ಅರ್ಥವಾಗಬೇಕು ಮೇವಿಗೆ ಅಷ್ಟು ಬರವಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಸರಾಸರಿ ಎಲ್ಲಾ ಜಿಲ್ಲೆಗೆ 5 ಲಕ್ಷ ಕೊಟ್ಟಿರಿ, ಕೊಡಗಿಗೂ 5 ಲಕ್ಷ, ಉತ್ತರಕನ್ನಡಕ್ಕೂ 5 ಲಕ್ಷ, ಅಲ್ಲಿ ಕೂಲಿಗೆ ಜನ ಬರುವುದಿಲ್ಲವೆಂದು ತಾವೇ ಹೇಳುತ್ತೀರಿ.

ಶ್ರೀ ಆರ್.ಎಲ್. ಜಾಲಪ್ಪ : ಈಗ ಚಿತ್ರದುರ್ಗ, ಚಿಕ್ಕಮಗಳೂರು, ಹಾಸನ, ಕೊಡಗು, ರಾಯಚೂರು, ಬಳ್ಳಾರಿ ಜಿಲ್ಲೆಗಳಿಗೆ ಐದೈದು ಲಕ್ಷ ಕೊಟ್ಟೆವಲ್ಲಾ ಅದರಲ್ಲೂ ಖರ್ಚಾಗಿಲ್ಲವಲ್ಲ ಬುದ್ಧಿ. ಏನೂ ಪ್ರಾಬ್ಲಂ ಇಲ್ಲ ಅಂದಹಾಗಾಯಿತು. ಆಮೇಲೆ ಕ್ಯಾಲಾಮಿಟಿ ರಿಲೀಫ್ ಫಂಡಿನಲ್ಲಿ ಶಿವಮೊಗ್ಗ ಜಿಲ್ಲೆಗೆ 90 ಲಕ್ಷ, ಮೈಸೂರಿಗೆ 12 ಲಕ್ಷ, ಮಂಡ್ಯದಲ್ಲಿ 50 ಲಕ್ಷ, ಹಾಸನದಲ್ಲಿ 50 ಲಕ್ಷ, ಗುಲ್ಬರ್ಗದಲ್ಲಿ 25 ಲಕ್ಷ, ರಾಯಚೂರಿನಲ್ಲಿ 12.5 ಲಕ್ಷ, ಬೆಳಗಾಂಗೆ 35.5 ಲಕ್ಷ, ಉತ್ತರ ಕನ್ನಡಕ್ಕೆ 75 ಲಕ್ಷ ಕೊಟ್ಟಿದ್ದೇವೆ. ಸ್ವಾಮಿ, ಹಾಸನದಲ್ಲಿ ಸ್ವಲ್ಪ ಖರ್ಚಾಗಿದೆ, ರಾಯಚೂರಿನಲ್ಲಿ 5 ಲಕ್ಷ, ಬೆಳಗಾಂನಲ್ಲಿ 3.65 ಲಕ್ಷ ಮಾತ್ರ ಖರ್ಚಾಗಿದೆ 35 ಲಕ್ಷಕ್ಕೆ, ಉತ್ತರಕನ್ನಡ ಜಿಲ್ಲೆಯಲ್ಲಿ 20 ಲಕ್ಷ ಖರ್ಚಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಜಿಲ್ಲಾ ಪರಿಷತ್ತಿನ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನೀವು ಯಾವತ್ತು ಚೆಕ್ ಕಳುಹಿಸಿಕೊಟ್ಟಿದ್ದೀರಿ? ನಿನ್ನೆ ಹೋಗಿದ್ದೆ, ಕೆಲಸ ಆಗಿದೆ, ದುಡ್ಡು ಕೊಡಲು ರಿಸರ್ವ್ ಬ್ಯಾಂಕಿನಿಂದ ಕ್ಲಿಯರಾಗಿಲ್ಲ. 10 ಲಕ್ಷ ಕೊಟ್ಟಿದ್ದಿರಿ ನಮಗೆ ಮೊದಲನೇ ಹಂತದಲ್ಲಿ 5 ಲಕ್ಷ ರೂ. ರಿಲೀಸ್ ಆದದ್ದು, ಮೊನ್ನೆ ಮಂಗಳವಾರ ಚೆಕ್ಕನ್ನು ಕಳುಹಿಸಿಕೊಟ್ಟಿದ್ದೀರಿ, ಅದು ಇನ್ನೂ ಕ್ರೆಡಿಟಾಗಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ನಿಮ್ಮ ಜಿಲ್ಲೆ ಬಗ್ಗೆ ಜಿಲ್ಲಾಧಿಕಾರಿ ಹತ್ತಿರ ಮಾತನಾಡಿದ್ದೇನೆ. ಪೂರ್ಣವಾಗಿ ಎಸ್ಟಿಮೇಟ್ಸ್ ಮಂಜೂರು ಮಾಡಿದ್ದಾರೆ. ಜಿಲ್ಲಾಧಿಕಾರಿಗಳು ಎಸ್ಟಿಮೇಟ್ಸ್ ಎಲ್ಲಾ ಮಂಜೂರು ಮಾಡಿದ್ದೇವೆ ಎಂದು ನನಗೆ ಹೇಳಿದ್ದಾರೆ Suppose if he has told me a lie, I will certainly see what I could do to him ಸಾಗರ ತೀರ್ಥಹಳ್ಳಿಯದೆಲ್ಲಾ ಇಲ್ಲಿ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮುಖ್ಯಮಂತ್ರಿಗಳನ್ನು ಯಾವುದರ ಬಗ್ಗೆ ಕೇಳಿದರೂ ಇಲ್ಲಿದೆ ಇಲ್ಲಿದೆ ಎನ್ನುತ್ತಾರೆ, ಇವರನ್ನು ಕೇಳಿದರೂ ಇಲ್ಲಿದೆ ಎನ್ನುತ್ತಾರೆ.

ಅಧ್ಯಕ್ಷರು : ನೀವು ಏನೇನು ಮಾಡಿಟ್ಟು ಅವರ ಕೈಗೆ ಕೊಟ್ಟಿದ್ದೀರೋ.

ಶ್ರೀ ಆರ್.ಎಲ್. ಜಾಲಪ್ಪ : ಚಿತ್ರದುರ್ಗದಲ್ಲಿ ಸಿಆರ್‌ಎಫ್‌ನಲ್ಲಿ ಖರ್ಚಾಗದ ಹಣ 2875 ಲಕ್ಷ ರೂ. ಇದೆ, ಈ ಹಣವನ್ನು ಯಾವುದಕ್ಕೆ ಅವಶ್ಯಕತೆ ಇದೆಯೋ ಉಪಯೋಗಿಸಿಕೊಳ್ಳಿ ಅದನ್ನು ರ್ಯಾಟಿಫೈ ಮಾಡುತ್ತೇವೆಂದು ಹೇಳಿದ್ದೇವೆ. ಇನ್ನು ಕುಡಿಯುವ ನೀರಿಗೆ ಆರ್‌ಡಿಪಿಆರ್‌ನಿಂದ 8044 ಬೋರ್‌ವೆಲ್ ತೆಗೆದುಕೊಂಡಿದ್ದು ಸಿಆರ್‌ಎಫ್‌ನಲ್ಲಿ 2187 ಬೋರ್‌ವೆಲ್ ತೆಗೆದುಕೊಂಡಿದ್ದೇವೆ. ಇನ್ನು ಕುಡಿವ ನೀರಿಗಾಗಿ ಬ್ಯಾಲೆನ್ಸ್ ಇರುವ ಹಣ 2126 ಲಕ್ಷ ಎಲ್ಲಾ ಜಿಲ್ಲಾಧಿಕಾರಿಗಳ ಹತ್ತಿರ ಇದೆ. 10 ಸಾವಿರ ಚಿಲ್ಲರೆ* ಬೋರ್‌ವೆಲ್ ಮಾಡಿದ್ದೇವೆ. ತಾಲ್ಲೂಕುವೈಸ್ ಬ್ರೇಕ್ ಅಫ್ ಇದೆ. ಬೇಕಾದರೆ ಕೊಡುತ್ತೇನೆ. ಆಮೇಲೆ ಎಲ್ಲೆಲ್ಲಿ ಸರಿಯಾಗಿ ಮಳೆಯಾಗಿಲ್ಲ ಅಲ್ಲಿಗೆ ಬೋರ್‌ವೆಲ್ ಹಾಕಲಿಕ್ಕೆ ಈಗಾಗಲೇ ಅನುಮತಿ ಕೊಟ್ಟಿದ್ದೇವೆ. ಮತ್ತು ಕುಡಿಯುವ ನೀರಿಗೆ ಯಾವುದೇ ತೊಂದರೆ ಬರಬಾರದು ಮತ್ತು ದೂರುಗಳು ಬರಕೂಡದೆಂದು ಜಿಲ್ಲಾಧಿಕಾರಿಗಳಿಗೆ ಕಟ್ಟುನಿಟ್ಟಿನ ಆದೇಶ ಕೊಟ್ಟಿದ್ದೇವೆ. ಲಾರಿ ಟ್ರಾಕ್ಟರ್‌ಗಳಲ್ಲಿ ಬೆಳಗಾಂ ಜಿಲ್ಲೆಯಲ್ಲಿ 13 ಹಳ್ಳಿಗಳು ಹಾಗೂ ಬೆಳಗಾಂ ಬೈಲಹೊಂಗಲ ಸಂಕೇಶ್ವರ ಪಟ್ಟಣಗಳಿಗೆ ನೀರು ಒದಗಿಸುತ್ತಿದ್ದೇವೆ. ಬೈಲಹೊಂಗಲದಲ್ಲಿ ಈ ಸಮಸ್ಯೆ ಇಲ್ಲ, ಇತರ ಕಡೆ ಟ್ರಾಕ್ಟರ್ ಮತ್ತು ಲಾರಿ ಮೇಲೆ ನೀರು ಸಾಗಿಸುತ್ತಿದ್ದೇವೆ.

ಬಿಜಾಪುರ ಜಿಲ್ಲೆಯಲ್ಲಿ 32 ಹಳ್ಳಿಗಳಿಗೆ ಟ್ರಾಕ್ಟರ್ ಲಾರಿಗಳಲ್ಲಿ ನೀರು ಸಾಗಿಸುತ್ತಿದ್ದೇವೆ. ಒಟ್ಟು 167 ಕೊಳವೆ ಬಾವಿಗಳಿಗೆ ಬಿಜಾಪುರ ಜಿಲ್ಲೆಯಲ್ಲಿ ಆರ್ಡರ್ಸ್ ಕೊಟ್ಟಿದ್ದೇವೆ, ತಮ್ಮ ಅವಗಾಹನೆಗೆ ಹೇಳಬೇಕಾದರೆ ಟ್ರಾಕ್ಟರ್ ಲಾರಿಗಳಲ್ಲಿ ಏನು ನೀರು ಸರಬರಾಜು ಮಾಡಿದ್ದೇವೆ ಅದಕ್ಕೆ ಒಟ್ಟು ಖರ್ಚಾಗಿರುವ ಹಣ 72.92 ಲಕ್ಷ. ಇನ್ನು ಗುಲ್ಬರ್ಗ ಜಿಲ್ಲೆಯ 84 ಗ್ರಾಮಗಳಲ್ಲಿ ಪಟ್ಟಣಗಳಲ್ಲಿ 22.66 ಲಕ್ಷ ಖರ್ಚುಮಾಡಿ ಟ್ಯಾಂಕರ್ ಮೂಲಕ ನೀರೊದಗಿಸಿದ್ದೇವೆ. ಯಾದಗಿರ್ ತಾಲ್ಲೂಕಿನಲ್ಲಿ 12 ಕೆರೆ ದುರಸ್ತಿಗೆ 33.30 ಲಕ್ಷದ ಒಂದು ಎಸ್ಟಿಮೇಟ್ ಬಂದಿದೆ, ಈಗ 5 ಲಕ್ಷ ಬಿಡುಗಡೆ ಮಾಡಿದ್ದೇವೆ, 6 ಕೆರೆಗಳ ದುರಸ್ತಿಯಾಗಿದೆ ಮತ್ತು ಉಳಿದವುಗಳನ್ನು ಮಳೆ ನಿಂತ ತಕ್ಷಣವೇ ದುರಸ್ತಿಗೆ ತೆಗೆದುಕೊಳ್ಳಲಾಗುವುದು. ಬೀದರ್ ಜಿಲ್ಲೆಯಲ್ಲಿ 48 ಗ್ರಾಮಗಳಿಗೆ 31.47 ಲಕ್ಷ ಖರ್ಚು ಮಾಡಿ ನೀರು ಒದಗಿಸಿದ್ದೇವೆ, ಬೀದರ್ 9, ಬಸವಕಲ್ಯಾಣ 21 ಭಾಲ್ಕಿ 7 ಹುಮ್ನಾಬಾದ್ 6, ಔರಾದ್‌ನಲ್ಲಿ 5 ಹಳ್ಳಿಗಳು ಮತ್ತು ಬೀದರ್ ಭಾಲ್ಕಿ ಹುಮ್ನಾಬಾದ್ ಪಟ್ಟಗಳಿಗೆ ನೀರನ್ನು ಲಾರಿ ಮೂಲಕ ಒದಗಿಸುತ್ತಿದ್ದೇವೆ. ಜೊತೆಗೆ ನೀರಾವರಿ ಇಲಾಖೆಯಲ್ಲಿ ಬಜೆಟ್‌ನಲ್ಲಿ ಒದಗಿಸಲಾಗಿರುವ ಹಣವನ್ನು ಖರ್ಚು ಮಾಡುವವರಿಗೆ ಕೆಲಸ ಒದಗಿಸಲಾಗಿದೆ. ಅದರಲ್ಲಿ ರಸ್ತೆ ಸೇತುವೆಗಳಿಗೆ 10.18 ಕೋಟಿ ಖರ್ಚಾಗಿದೆ, 8.14 ಲಕ್ಷ ಮ್ಯಾನ್‌ಡೇಸ್ ಕ್ರಿಯೋಟಾಗಿದೆ. ಮತ್ತು 9.68 ಕೋಟಿ ಸೇತುವೆಗಳಿಗೆ ಖರ್ಚಾಗಿದೆ.

ಅದರಲ್ಲಿ 5.3 ಲಕ್ಷ ಮ್ಯಾನ್‌ಡೇಸ್ ಕ್ರಿಯೇಟಾಗಿದೆ. ಮಧ್ಯಮ ನೀರಾವರಿಯೊಳಗೆ 11.22 ಕೋಟಿ ಖರ್ಚು ಮಾಡಲಾಗಿದೆ. 4.31 ಲಕ್ಷ ಮ್ಯಾನ್‌ಡೇಸನ್ನು ಒದಗಿಸಲಾಗಿದೆ. ಭಾರಿ ನೀರಾವರಿಯಲ್ಲಿ 9 6.97 ಕೋಟಿ ಖರ್ಚು ಮಾಡಿ 67 ಲಕ್ಷ ಜನರಿಗೆ ಕೆಲಸ ಒದಗಿಸಲಾಗಿದೆ. ಅರಣ್ಯ ಇಲಾಖೆಯಲ್ಲಿ 19.98 ಕೋಟಿ ಖರ್ಚು ಮಾಡಿ 35.30 ಲಕ್ಷ ಮ್ಯಾನ್‌ಡೇಸನ್ನು ಕ್ರಿಯೇಟ್ ಮಾಡಲಾಗಿದೆ. ಈಗ ನಾನು ಕೊಟ್ಟಿರುವ ಸಂಕ್ಷಿಪ್ತ ಮಾಹಿತಿಯಿಂದ ಮಾನ್ಯ ಸದಸ್ಯರು ತಕ್ಕಮಟ್ಟಿಗಾದರೂ ಸಮಾಧಾನಗೊಳ್ಳುವಿರೆಂದು ಭಾವಿಸುತ್ತೇನೆ. ಕೊಡಗು ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ 341 ಲಕ್ಷ ರೂ.ಗಳ ಹಾನಿ ಆಗಿದೆ ಎಂದು ಜಿಲ್ಲಾಧಿಕಾರಿಗಳಿಂದ ವರದಿ ಬಂದಿದೆ. ಮೊದಲೇ 10 ಲಕ್ಷ ಬಿಡುಗಡೆ ಮಾಡಲಾಗಿತ್ತು ಪುನಃ ಈಗ 50 ಲಕ್ಷ ಬಿಡುಗಡೆ ಮಾಡಿ ಅದರಲ್ಲಿ 25 ಲಕ್ಷ ರೂ.ಗಳನ್ನು ರಸ್ತೆ ಸೇತುವೆ ರಿಪೇರಿಗಾಗಿ ನೀಡಲಾಗಿದೆ. ಮಾನ್ಯ ಜ್ಞಾನೇಂದ್ರ ಅವರು

ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಅದನ್ನು ನಾನು ಸ್ವಾಗತಿಸುತ್ತೇನೆ. ತಾವು ಕೊಟ್ಟಿರುವ ಸಲಹೆಗಳು ರೈತನಾದ ನನಗೆ ಗೊತ್ತಿಲ್ಲದೆ ಇಲ್ಲ, ಕ್ಷಮಿಸಬೇಕು. ಸ್ವಾಮಿ, ನಮ್ಮ ರಾಜ್ಯದ್ದೇ ಆಗಲಿ ರಾಷ್ಟ್ರದ ಪರಿಸ್ಥಿತಿಯಾಗಲಿ ಇವತ್ತು ನಾವು ದೀರ್ಘಕಾಲದ ಯೋಜನೆಗಳನ್ನು ಹಾಕಿಕೊಳ್ಳುತ್ತಿಲ್ಲ. ಬರಪರಿಸ್ಥಿತಿಯನ್ನು ಟ್ಯಾಕ್‌ಲ್ ಮಾಡಲಿಕ್ಕೆ. ಕಳೆದ ಮೂರು ನಾಲ್ಕು ವರ್ಷದ ಹಿಂದೆ ಏನು ಬೋರ್‌ವೆಲ್ಸ್ ಹಾಕಿದ್ದೆವು ಅದೆಲ್ಲಾ ಇವತ್ತು ಫೇಲಾಗುತ್ತಿದೆ, ಕಾರಣ ನಾನೇನೂ ಹೇಳಬೇಕಾಗಿಲ್ಲ, ಏಕೆಂದರೆ ಮಳೆ ಕಡಿಮೆಯಾಯಿತು, ಬಿದ್ದ ಮಳೆ ನೀರೂ ಕೂಡ ಹರಿದುಹೋಗುತ್ತದೆಯೇ ವಿನಹ ಪರ್ಕುಲೇಟ್ ಆಗಲು ಅವಕಾಶವಾಗಿಲ್ಲ. ಬಹಳ ಮುಖ್ಯವಾಗಿ ಕೆರೆಗಳಲ್ಲೆಲ್ಲಾ ಹೂಳು ತುಂಬಿಕೊಂಡಿದೆ. ನಮ್ಮ ರೈತರು ಮೊದಲೆಲ್ಲಾ ಕೆರೆಯಲ್ಲಿರುವ ಗೋಡ ಮಣ್ಣನ್ನು ಹೊಡೆಯುತ್ತಿದ್ದರು. ಈಗ ಯಾರೂ ಇಲ್ಲ, ನಾವೆಲ್ಲಾ ಫೈವ್‌ಸ್ಟಾರ್ ಕೃಷಿಕರಾಗಿಬಿಟ್ಟಿದ್ದೇವೆ.

ಮಣ್ಣು ಹೆರಾಡೆಯುವ ರೂಢಿ ಇಲ್ಲವೇ ಇಲ್ಲ, ತಮಗೆ ಗೊತ್ತಿದೆ, ಮರ ನಿಮ್ಮ ಕಡೆನೂ ಕಡಿಮೆಯಾಗುತ್ತಿದೆ, ನಮ್ಮ ಕಡೆಯಲ್ಲಂತೂ ಹಗಲುಹೊತ್ತು ಕಂಡ ಮರ ರಾತ್ರಿ ಇಲ್ಲ, ಈ ಸ್ಥಿತಿ ಇದೆ. ಇದಕ್ಕೆ ಹಲವಾರು ಕಾರಣಗಳು ತಮಗೆಲ್ಲಾ ಗೊತ್ತಿದೆ. ಟ್ರಿಪ್ಲಾಂಟೇಷನನ್ನು ನಮ್ಮ ಅಥವಾ ಹಿಂದಿನ ಸರ್ಕಾರ ತೆಗೆದುಕೊಂಡಾಗ ಬರೀ ಸರ್ಕಾರದ ಕಾರ್ಯಕ್ರಮವಾಯಿತೇ ವಿನಹ ಸಾರ್ವಜನಿಕ ಕಾರ್ಯಕ್ರಮವಾಗಿ ಅವರು ಇದನ್ನು ಸ್ವೀಕರಿಸುತ್ತಿಲ್ಲ, ನಾನೂ ಈ ಸಾರಿ 5 ದಿವಸ ನಮ್ಮ ಅರಣ್ಯ ಅಧಿಕಾರಿಗಳನ್ನು ಕರೆದುಕೊಂಡು ಹೋಗಿ ಅಲ್ಲಿ ಹಳ್ಳಿಗಳಿಗೆ ಹೋಗಿ ಬರೀ ನಾವು 4 ಗಿಡ ಹಾಕಲಿಕ್ಕಲ್ಲಪ್ಪ ನಾವು ಅಲ್ಲಿಂದ ಬಂದಿರುವುದು, ನೀವು ಏನಾದರೂ ಗಿಡ ಹಾಕಿ ಹಲಸು ಹಾಕ್ತೀರೋ ಹುಣಸೆ ಹಾಕ್ತೀರೋ ಏನಾದರೂ ಹಾಕಿ ಮುಂದೆ ನಮ್ಮ ಪರಿಸ್ಥಿತಿ ಬಹಳ ಕಷ್ಟ ಇದೆ. 2 ಸಾವಿರ ಇಸವಿಗೆ ಸೌದೆ ಕೂಡ ಸಿಗುವುದಿಲ್ಲ ನಮಗೆ ಮರ ಕಡಿಮೆಯಾಯಿತು, ಅದರಿಂದ ಮಳೆ ಕಡಿಮೆಯಾಗಿದೆ. ಇದರಿಂದ ಸ್ವಲ್ಪ ಮಳೆ ಬಿದ್ದರೆ ಭೂಮಿ ಮೇಲಿನ ಮಣ್ಣೆಲ್ಲಾ ಕೊಚ್ಚಿಕೊಂಡು ಹೋಗುತ್ತದೆ, ಅರ್ಧ ಅಂಗುಲ ಮಣ್ಣು ಆಗ ಬೇಕಾದರೆ ಸುಮಾರು 80 ವರ್ಷ ಬೇಕು, ಈ ಮಣ್ಣು ಹೋಗಿ ಕೆರೆ ತುಂಬಿಕೊಳ್ಳುತ್ತದೆ, ಅಲ್ಲೂ ನೀರು ನಿಲ್ಲುವುದಿಲ್ಲ ಭೂಮಿಯಲ್ಲಿ ನೀರು ಇಂಗುವುದಿಲ್ಲ, ಬಾವಿಗಳಲ್ಲಿ ಕುಡಿವ ನೀರು ಸಿಕ್ಕುವುದಿಲ್ಲ.

ಈ ಮಣ್ಣು ನೀವು ಹೊಡೆಯುತ್ತಿಲ್ಲ, ದಯವಿಟ್ಟು ನಿಮ್ಮ ಮಕ್ಕಳು ಮರಿಗೋಸ್ಕರ ಇದನ್ನೆಲ್ಲಾ ಮಾಡಿ ಇಲ್ಲದಿದ್ದರೆ ನಮ್ಮ ತಾತ ಮುತ್ತಾತಂದಿರು ನಮಗೆ ಒಳ್ಳೆಯ ಫಲವತ್ತಾದ ಭೂಮಿ ಏನು ಕೊಟ್ಟು ಹೋಗಿದ್ದರು ನಮ್ಮ ಮಕ್ಕಳಿಗೆ ಇವತ್ತು ನಾವು ಬಂಜರು ಭೂಮಿ ಕೊಟ್ಟು ಹೋಗುತ್ತಿದ್ದೇವೆ, ಇದೇ ತರಹವಾದರೆ ಹಾಲನ್ನು ಇವತ್ತೇನು ಸ್ಯಾಚೆಟ್‌ನಲ್ಲಿ ಕೊಡುತ್ತಿದ್ದೇವೆ ಆ ತರಹ ನೀರು ಕೊಡುವ ಪರಿಸ್ಥಿತಿ ಬರಬಹುದೆಂದು ನಾವು ಹೇಳುತ್ತಿದ್ದೇವೆ. ನಮ್ಮ ದುರದೃಷ್ಟ ಜನತೆ ಇನ್ನೂ ಇದನ್ನು ತಿಳಿದುಕೊಂಡು ಎಚ್ಚರವಾಗಿಲ್ಲ, ಅದೂ ಹೇಳಿದ್ದೇವೆ, ಸ್ವಾಮಿ, ದುಃಸ್ವಪ್ನ ಬಿದ್ದಿದೆ ಎದ್ದುನಿಂತುಕೊಳ್ಳಿ ಎಂದು. ಒಂದೊಂದು ತಾಲ್ಲೂಕಿಗೆ ಸರಾಸರಿ 100-120 ಬೋರ್‌ವೆಲ್ಸ್ ಪ್ರತಿವರ್ಷ ಫೇಲಾಗುತ್ತಿದ್ದರೆ ಎಷ್ಟು ಹಾಕಲಿಕ್ಕೆ ಸಾಧ್ಯ? ಹೇಗೆ ನೀರು ಒದಗಿಸುವುದಕ್ಕೆ ಸಾಧ್ಯ? ಆಮೇಲೆ ವಾಟರ್ ಡಿಫಿಸಿಷನ್ ಏನಾಗಿದೆ ಇವತ್ತು? ಈಗ 400-420-450 ಅಡಿವರೆಗೂ ಹೋಗುತ್ತಿದೆ.

ಅಲ್ಲಿಗೂ ನೀರು ಸಿಗುವುದು ಕಷ್ಟ. ನಾನೇ ಒಂದು ಬೋರ್‌ವೆಲ್ ಹಾಕಿಸಿದ್ದೇನೆ. 422 ಅಡಿ ಹೋಗಿದೆ 500 ಗ್ಯಾಲನ್ ಸಿಕ್ಕಿದೆ. ಈ ತೊಂದರೆಗಳೆಲ್ಲಾ ಇದೆ, ಆದ್ದರಿಂದ ಸರ್ಕಾರಗಳು ಅಲ್ಪಕಾಲಿಕವಾಗಿ ಏನು ಖರ್ಚು ಮಾಡುತ್ತಿದ್ದೇವೆ ಅದನ್ನು ಸ್ವಲ್ಪ ಕಡಿಮೆ ಮಾಡಿ ನಾನ್‌ಪ್ರೊಡಕ್ಟೀವ್ ಐಟಂಸ್‌ಗೆ ಖರ್ಚು ಮಾಡುತ್ತಿರುವುದನ್ನೂ ಕಡಿಮೆ ಮಾಡಿ, ಇಂಥಾದರಲ್ಲಿ ನಾವು ಇನ್‌ವೆಸ್ಟ್ ಮಾಡಲೇಬೇಕಾಗುತ್ತದೆ; ರಾಜ್ಯದ ಮುಂದಿನ ದೃಷ್ಟಿ

ಗಮನದಲ್ಲಿಟ್ಟುಕೊಂಡು. ಇದು ಮಾಡದಿದ್ದರೆ, ನಾವೇನೂ ಹೋಗುತ್ತೇವೆ, ಇನ್ನು ಐದು ಹತ್ತು ವರ್ಷ ಇರಬಹುದು, ದೇವರು ನಿಮಗೆ ನೂರು ವರ್ಷ ಆಯಸ್ಸು ಕೊಡಲಿ.

ಶ್ರೀ ಎನ್. ರಾಜಣ್ಣ : ಅಧ್ಯಕ್ಷರೇ, ಬೋರ್‌ವೆಲ್ಸ್ ಎಲ್ಲಾ ಒಣಗಲು ಕಾರಣವೇನು ಗೊತ್ತೇ? ನಮಗೆ ಸ್ವಾತಂತ್ರ್ಯ ಬರುವ ಮುಂಚೆ 80 ಪರ್ಸೆಂಟ್ ಫಾರೆಸ್ಟ್ ಇತ್ತು, 20 ಪರ್ಸೆಂಟ್ ಪಾಪ್ಯುಲೇಷನ್ ಇತ್ತು. ಈಗ 80 ಪರ್ಸೆಂಟ್ ಪಾಪ್ಯುಲೇಷನ್ 20 ಪರ್ಸೆಂಟ್ ಫಾರೆಸ್ಟ್, ಒಂದು ಮರ ಮಿನಿಮಂ 50 ಸಾವಿರದಿಂದ 5 ಲಕ್ಷ ಗ್ಯಾಲನ ನೀರು ರಿಸರ್ವ್ ಮಾಡುತ್ತಿತ್ತು, ಮರ ಎಲ್ಲಾ ಒಡೆದು ಒಡೆದು ಬಯಲಾಗಿ ಹೋಗಿದೆ, ಇನ್ನುಳಿದಿರುವುದು ಬರೀ ಮನುಷ್ಯನೇ, ಮನುಷ್ಯ ಮನುಷ್ಯರನ್ನು ಕಿತ್ತು ತಿನ್ನುವಂತಹ ಕಾಲ ಬಂದಿದೆ, ಅದಕ್ಕೆ ಬೋರ್‌ವೆಲ್ಸ್‌ನಲ್ಲಿ ನೀರಿಲ್ಲ, ಪ್ರಕೃತಿ ಪ್ರಜ್ಞೆಯನ್ನು ಮೂಢಿಸಿಕೊಂಡು ಅರಣ್ಯ ಭೂಮಿಯನ್ನು ಡೆವಲಪ್‌ಮೆಂಟ್ ಮಾಡಿದರೆ ನೀರು.. ಇಲ್ಲವಾದರೆ ನೀರಿಗೆ ನೀರೇ ರಕ್ತ ಕುಡಿಯುವ ಕಾಲ ಬರುತ್ತದೆ.

ಶ್ರೀ ಆರ್.ಎಲ್. ಜಾಲಪ್ಪ : ಸರಕಾರ 5 ವರ್ಷ ಇರುತ್ತದೆ ಯೋಚನೆ ಮಾಡಬೇಡಿ. ನಾವುಗಳು 10-20-30 ವರ್ಷ ಇದ್ದು ಹೋಗುತ್ತೇವೆ. ಆದರೆ ನಾವು ಮುಂದಿನ ಮಕ್ಕಳ ಪೀಳಿಗೆಗೆ ಏನು ಎಂಬುದನ್ನು ಯೋಚನೆ ಮಾಡಿ ಕಾರ್ಯಕ್ರಮ ಕೈಗೊಳ್ಳದಿದ್ದರೆ ಸುಮ್ಮನೆ ನಾಟಕ ಆಡಿ ಹೋಗಬೇಕು. ಅಷ್ಟೇ ವಿನಃ ಬೇರೇನೂ ಇಲ್ಲ, ಅವರೂ ಆಡಿದರು. ನಾವೂ ಆಡಿದೆವು. ಹಿಂದಿನಿಂದ ಬಂದಿದೆ ನಾವೂ ಮಾಡಿಕೊಂಡು ಹೋಗುತ್ತೇವೆಂದು ಕುಳಿತರೆ ಇದರಿಂದ ಏನೇನೂ ಪ್ರಯೋಜನವಾಗುವುದಿಲ್ಲ. ಪ್ರತಿಯೊಬ್ಬರೂ ಸೀರಿಯಸ್ ಆಗಿ ಯೋಚನೆ ಮಾಡುವ ಕಾಲ ಬಂದಿದೆ. ಮಲೆನಾಡಿನಲ್ಲಿ ನಾನು ಕೆಲವು ವರ್ಷಗಳು ಇದ್ದೆ. ನಿಮ್ಮಲ್ಲಿ ಮಳೆ ಜಾಸ್ತಿ ನಿಮ್ಮಲ್ಲಿ ಆರ್ಗ್ಯಾನಿಕ್ ಮಿನರಲ್ಸ್ ಯೂಸ್ ಮಾಡುವುದು ಬಹಳ ಕಡಿಮೆ. ಸೊಪ್ಪಿನ ಬೆಟ್ಟ ಎಂದು ನಿಮಗೆ ಕೊಟ್ಟಿದ್ದರು. ಆದರೆ ಇವತ್ತಿನ ದಿವಸ ಸೊಪ್ಪನ್ನು ನಿಮ್ಮ ಗದ್ದೆಗಳಿಗೆ ಉಪಯೋಗಿಸಲಿಲ್ಲ, ನಿಮ್ಮಲ್ಲಿ ಆವರೇಜ್ ಯೀಲ್ಡ್ 8 ಕ್ವಿಂಟಾಲಿಗಿಂತ ಹೆಚ್ಚಾಗುವುದಿಲ್ಲ, ಬಿರುಕು ಬಿಡುತ್ತದೆ. ಏಕೆ ಬಿರುಕು ಬಿಡುತ್ತದೆಂದರೆ ಅದಕ್ಕೆ ಗೋಡು ಹೊಡೆಯುವುದಿಲ್ಲ ಕೆಮ್ಮಣ್ಣು ಹಾಕುವುದಿಲ್ಲ, ಆರ್ಗ್ಯಾನಿಕ್ ಮೆನ್ಯೂರ್ ಆಗುವುದಿಲ್ಲ, ಆದ್ದರಿಂದ ಬಿರುಕು ಬಿಟ್ಟೇ ಬಿಡುತ್ತದೆ. ನಾವು ಪುನಃ ವ್ಯವಸಾಯಕ್ಕೆ ಹಳೇ ಸಿಸ್ಟಂನಲ್ಲಿ ಹೋಗಬೇಕಾಗಿದೆ. ಕಳೆ ಕಿತ್ತದ್ದನ್ನು ಅಲ್ಲೇ ಹಾಕಿ ಆಚೆಗೆ ತೆಗೆದುಕೊಂಡು ಹೋಗಿ ಹಾಕಬೇಡಿ ಎಂದು ಹೇಳುತ್ತೇವೆ. ತಾವೇನು ಸಲಹೆ ಕೊಟ್ಟಿದ್ದೀರಿ ಅದನ್ನು ನೆನಪಿನಲ್ಲಿಕೊಂಡಿದ್ದೇನೆ. ತೀರ್ಥಹಳ್ಳಿಯಲ್ಲಿ ಏನೂ ಕೆಲಸವಾಗಿಲ್ಲವೆಂದು ಹೇಳಿದ್ದೀರಿ. ತಮ್ಮ ತಾಲ್ಲೂಕಿನಲ್ಲಿ 81 ಬೋರ್‌ವೆಲ್ಸ್‌ಗಳು ಆಗಿವೆ.

ಶ್ರೀ ಆರಗ ಜ್ಞಾನೇಂದ್ರ : 1-4-95 ಎಂದು ನನಗೆ ಕೊಟ್ಟಿದ್ದಾರೆ. ಒಂದು ವೇಳೆ ಜನವರಿಯಿಂದ ಆದರೂ ಕೂಡ ಒಂದು ತಾಲ್ಲೂಕಿನಲ್ಲಿ 81 ಬೋರ್‌ವೆಲ್ಸ್‌ಗಳು ಆಗಿರುವುದು ಕಡಿಮೆಯೇನೂ ಅಲ್ಲ, ಬೋರ್‌ವೆಲ್‌ಗಳಿಗೆ 27,18,000 ರೂ. ಖರ್ಚು ಮಾಡಿದ್ದೇವೆ. ಸಿಆರ್‌ಎಫ್ ನಿಂದ ಮತ್ತು ಆರ್‌ಡಿ ಪಿಆರ್‌ನಿಂದ 194 ಲಕ್ಷವನ್ನು ನಿಮ್ಮ ತಾಲ್ಲೂಕಿನಿಂದ ತೆಗೆದುಕೊಂಡಿದೆ. ಕೆಲಸವಾಗಲಿಲ್ಲವೆಂದು ಹೇಳಬೇಡಿ ಅದು ಸಾಲದು ಎಂದು ಹೇಳಿ ಅದನ್ನು ಒಪ್ಪಿಕೊಳ್ಳುತ್ತೇವೆ. ಶಿಕಾರಿಪುರದಲ್ಲಿ ಸಮಿತಿ ಸಭೆಗಳು ಆಗಲಿಲ್ಲವೆಂದು ಹೇಳುತ್ತಿದ್ದೀರಿ. ತಮ್ಮ ತಾಲ್ಲೂಕಿನಲ್ಲಿ ಕೂಡ ಆಗಿಲ್ಲ, ಮಾನ್ಯ ಜ್ಞಾನೇಂದ್ರ ಅವರು ಹೋದ ತಕ್ಷಣ ಒಂದು ಸಭೆಯನ್ನು ಮಾಡಿ. ಶಿಕಾರಿಪುರದಲ್ಲಿ 6 ಮಾಡಿದ್ದಾರೆ. ಶಿವಮೊಗ್ಗದಲ್ಲಿ 2, ಭದ್ರಾವತಿಯಲ್ಲಿ -1 ಚನ್ನಗಿರಿಯಲ್ಲಿ - 5

ಹೊನ್ನಾಳಿಯಲ್ಲಿ 4, ಸಾಗರದಲ್ಲಿ -3 ಸೊರಬದಲ್ಲಿ -3 ಮಾಡಿದ್ದಾರೆ. ನಿಮ್ಮಲ್ಲಿ ಆಗಲಿಲ್ಲ, ತಾವು ದಯವಿಟ್ಟು ಮಾಡಿ.

ಶ್ರೀ ಅರಗ ಜ್ಞಾನೇಂದ್ರ : ತೀರ್ಥ ಹಳ್ಳಿಯಲ್ಲಿ ಮೊನ್ನೆ ಮಾಡಿದ್ದೇವೆ.

ಶ್ರೀ ಆರ್.ಎಲ್. ಜಾಲಪ್ಪ : 94ರಲ್ಲಿ ಅತಿವೃಷ್ಟಿಯಾಗಿರುವಂಥಾದ್ದು ಮಾರ್ಕೆಟಿಂಗ್ ಫೆಡರೇಷನ್ನಿನಿಂದ ಮತ್ತು ಬೇರೆ ಇಲಾಖೆಗಳಿಂದ ಕೃಷಿಗೆ ಬೇಕಾದಂತಹ ಬೀಜಗಳನ್ನು ಕೊಡುತ್ತಿದ್ದರು 40 ಲಕ್ಷ ರೂಪಾಯಿ ಬಾಕಿ ಇತ್ತು ಅದನ್ನು ನಾವು ಈ ವರ್ಷ ರಿಲೀಸ್ ಮಾಡಿದ್ದೇವೆ. ಸಿಆರ್‌ಎಫ್ ಫಂಡಿನಿಂದ ಕೊಟ್ಟಿದ್ದೇವೆ. ಮೊನ್ನೆ ತಾನೆ ಆಲೀಕಲ್ಲಿನಿಂದ ಸ್ವಲ್ಪ ಲಾಸ್ ಆಯಿತೆಂದು ಹೇಳಿದರು ಅದಕ್ಕೆ 5 ಲಕ್ಷ ರೂಪಾಯಿ ಹಣವನ್ನು ಬಿಡುಗಡೆ ಮಾಡಿದ್ದೇವೆ. 15 ಸಾವಿರಕ್ಕಿಂತ ಹೆಚ್ಚು ವರಮಾನವಿದ್ದವರಿಗೆ ಕೊಡುವುದಕ್ಕೆ ಬರುವುದಿಲ್ಲ. ಇದಕ್ಕೆ ಒಂದು ನಾರ್ಮ್ಸ್ ಇದೆ. ಆದ್ದರಿಂದ 5 ಲಕ್ಷ ಕೊಟ್ಟಿದ್ದೇವೆ. ಶಿಕಾರಿಪುರದಲ್ಲಿ ನಮ್ಮ ಸ್ನೇಹಿತರು ಹೋಗಿದ್ದಾರೆ ಅಲ್ಲಿ 46ಬೋರ್‌ವೆಲ್ಸ್‌ಗಳು ಆಗಿವೆ. ಒಟ್ಟು ನಿಮ್ಮ ಜಿಲ್ಲೆಯೊಳಗೆ 2229 ಬೋರ್‌ವೆಲ್ಸ್‌ಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಅದರಲ್ಲಿ ಮುಕ್ಕಾಲು ಭಾಗದಷ್ಟು ಈಗಾಗಲೇ ಪೂರ್ತಿಯಾಗಿದೆ. ಹಾಸನದಲ್ಲಿ ಸಿಆರ್‌ಎಫ್ ಫಂಡಿನಿಂದ 9 ಕೆಲಸಗಳನ್ನು ತೆಗೆದುಕೊಂಡಿದ್ದಾರೆ ಅರಸೀಕೆರೆಯಲ್ಲಿ 10 ಕೆಲಸಗಳನ್ನು ತೆಗೆದುಕೊಂಡಿದ್ದಾರೆ. ಚಾಮರಾಜನಗರದಲ್ಲಿನ ನಮ್ಮ ಸ್ನೇಹಿತರು ಇಲ್ಲಿ ಇದ್ದಾರೆ ಅವರು ಹೇಳುತ್ತಾರೆ ನಾನು ಸಭೆಗೆ ಹೋಗಿಲ್ಲ ಎಂದು. ಆದರೂ ಅಲ್ಲಿ ಹೆಚ್ಚು ಕೆಲಸಗಳಾಗಿವೆ. ಕೆಲಸವಾಗುವುದಾದರೆ ಸಭೆಗಳಿಗೆ ಇವರೇಕೆ ಹೋಗಬೇಕು. ಮೈಸೂರು ಜಿಲ್ಲೆಯಲ್ಲಿ ಅತಿ ಹೆಚ್ಚಿನ ಕೆಲಸ ಮಾಡಿಸಿಕೊಂಡವರೆಂದರೆ ನಮ್ಮ ಸ್ನೇಹಿತರು. 326 ಕೆಲಸಗಳು ತಾಲ್ಲೂಕಿನಲ್ಲಿ ನಡೆಯುತ್ತಿದೆ 323 ಪೂರ್ತಿಯಾಗಿವೆ. 102 ಲಕ್ಷ ರೂಪಾಯಿ ರಿಲೀಸ್ ಮಾಡಿರುವುದರಲ್ಲಿ 68 ಲಕ್ಷ ರೂಪಾಯಿ ಖರ್ಚಾಗಿದೆ. 46 ಬೋರ್‌ವೆಲ್ಸ್‌ಗಳನ್ನು ಮಾಡಿಸಿಕೊಂಡಿದ್ದಾರೆ. ಜಿಲ್ಲೆಯೊಳಗೆ ಅವರದ್ದು ಹೆಚ್ಚು. ಹಣ ಬಿಡುಗಡೆ ಮಾಡಿರುವುದರೊಳಗೆ ಮಾಡಿಕೊಂಡಿದ್ದಾರೆ. Anyway I compliment him.

ಶ್ರೀ ಕಾಗೋಡು ತಿಮ್ಮಪ್ಪ : ಬೇರೆಯವರಿಗೆ 10 ಕೊಟ್ಟ ಹಾಗೆ ತೋರಿಸಿ 5 ಕೊಟ್ಟು ಇನ್ನು 5 ಅನ್ನು ನಂತರ ಕೊಡುತ್ತೇವೆಂದು ಹೇಳುತ್ತಾರೆ.....

ಶ್ರೀ ಆರ್.ಎಲ್. ಜಾಲಪ್ಪ : ಬೇರೆಯವರಿಗೆ ಕೊಟ್ಟ ಹಾಗೇ ಇವರಿಗೂ ಕೊಟ್ಟಿದ್ದೇವೆ. ಆದರೆ ಬೇರೆ ತಾಲ್ಲೂಕುಗಳಲ್ಲಿ ಜಾಸ್ತಿ ಕೆಲಸವಾಗಿಲ್ಲ, ಹೆಚ್ಚಿನ ಕೆಲಸವಾಗಿರುವುದು ಇವರ ತಾಲ್ಲೂಕಿನಲ್ಲೇ. ನಾನು ಯಾವುದೇ ಸಮಿತಿ ಸಭೆಗಳಿಗೆ ಹೋಗುವುದಿಲ್ಲ ನಾನು ನಿರಾಕರಿಸುತ್ತೇನೆ ಧಿಕ್ಕರಿಸುತ್ತೇನೆಂದು ಹೇಳಿದರಲ್ಲಾ, ಅಲ್ಲಿ ಆಗುವ ಕೆಲಸ ಆದರೆ ಸಭೆಗಳಿಗೆ ಹೋದರೆಷ್ಟು ಬಿಟ್ಟರೆಷ್ಟು. Anyway I compliment him; he has done good work.

ಎಲ್ಲರಿಗೂ ಕೊಟ್ಟ ಹಾಗೆ ಅವರಿಗೂ ಕೊಟ್ಟಿದ್ದೇವೆ. ಸನ್ಮಾನ್ಯ ಮುಖ್ಯಮಂತ್ರಿಗಳು ಬಹುತೇಕ ಎಲ್ಲಾ ಜಿಲ್ಲೆಗಳಿಗೂ ಹೋಗಿ ಅಧಿಕಾರಿಗಳ, ಶಾಸಕರ ಸಭೆ ಮಾಡಿದ್ದಾರೆ. ಮತ್ತು ಅಧಿಕಾರೇತರು ಏನಿದ್ದಾರೆ ಜಿಲ್ಲಾ ಪಂಚಾಯಿತಿ ಅಧ್ಯಕ್ಷರು ಸಮಿತಿಗಳನ್ನು ಕರೆದು ತಾಲ್ಲೂಕು ಪಂಚಾಯಿತಿಗಳನ್ನು ಕರೆದು ಅಲ್ಲಿ ಆ್ಯಕ್ಷನ್ ಪ್ಲಾನ್‌ನಲ್ಲಿ ಸೇರದಿದ್ದರೂ ಕೂಡ ಕೆಲಸ ತೆಗೆದುಕೊಳ್ಳಿ ಎಂದು ಹೇಳಿ ಬಂದಿದ್ದಾರೆ. ಅದೇ ರೀತಿಯಾಗಿ ನಾನು ಮತ್ತು ನಮ್ಮ ಸ್ನೇಹಿತರಾದ ಪ್ರಕಾಶ್‌ರವರು 5 ಜಿಲ್ಲೆಗಳಿಗೆ ಹೋಗಿ ಹೇಳಿದ್ದೇನೆ. ಆ್ಯಕ್ಷನ್ ಪ್ಲಾನ್ ಎಂದು ಹೇಳಿ ಕಾಯುವುದು ಬೇಡ ಮೊದಲು ಕೆಲಸ ತೆಗೆದುಕೊಳ್ಳಿ. ಆಮೇಲೆ ಆ್ಯಕ್ಷನ್ ಪ್ಲಾನ್‌ನಲ್ಲಿ ಸೇರಿಸಿಕೊಳ್ಳೋಣವೆಂದು ಹೇಳಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ : ಇದೆಲ್ಲಾ ಮಾಡುತ್ತಿರುವುದು ಜಿಲ್ಲೆಯ ಜಿಲ್ಲಾಧಿಕಾರಿಗಳು. ರೆಸಲ್ಯೂಷನ್ ಮಾಡಿ ನಾವು ಅದನ್ನು ಕಳುಹಿಸಬೇಕಂತೆ. ಅದಕ್ಕೆ ಅಡ್ಮಿನಿಸ್ಟ್ರೇಟೀವ್

ಸ್ಯಾಂಕ್ಷನ್ ಕೊಡುತ್ತಾರಂತೆ. ಆಮೇಲೆ ನಾವು ಎಸ್ಟಿಮೇಂಟ್ ಮಾಡಿ ಅದಕ್ಕೆ ಮಂಜೂರಾತಿ ತೆಗೆದುಕೊಳ್ಳಬೇಕಂತೆ. ಇದರೊಳಗೇ ಸಮಯ ಹೋಗುತ್ತದೆ.

ಶ್ರೀ ಆರ್.ಎಲ್. ಜಾಲಪ್ಪ : ಕೆಲಸ ಮೊದಲು ತೆಗೆದುಕೊಳ್ಳಿ. ಆಮೇಲೆ ಎಸ್ಟಿಮೇಟ್ಸ್ ಅದೆಲ್ಲಾ ಆಮೇಲೆ ಮಾಡಿಕೊಂಡರೆ ಆಯಿತು ಎಂದು ನಾವು ಹೇಳಿದ್ದೇವೆ. ಇನ್ನೊಂದು ಸಲ ಬೇಕಾದರೆ ಅದನ್ನು ಹೇಳುತ್ತೇವೆ. ಇಷ್ಟು ವಿವರಗಳನ್ನು ಸದಸ್ಯರಿಗೆ ಕೊಡುತ್ತೇನೆ.

ಶ್ರೀ ಬಿ. ನಂಜಾಮರಿ : ತುಮಕೂರು ಜಿಲ್ಲೆ ತಿಪಟೂರು ಕ್ಷೇತ್ರದಲ್ಲಿ ಎಷ್ಟು ಕೊಟ್ಟಿದ್ದೀರಿ ಎಂಬ ಬಗ್ಗೆ ವಿವರ ಹೇಳಲಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ತುಮಕೂರು ಜಿಲ್ಲೆಗೆ ಸಂಬಂಧಪಟ್ಟಂತೆ ಕೆಲ್ಯಾಮಿಟಿ ರಿಲೀಫ್ ಫಂಡಿನಿಂದ 331 ಬೋರ್‌ವೆಲ್ಸ್‌ಗಳನ್ನು ತೆಗೆದುಕೊಂಡಿದೆ. ಆರ್‌ಡಿಪಿಆರ್ ವತಿಯಿಂದ 243 ಬೋರ್‌ವೆಲ್ಸ್‌ಗಳನ್ನು ತೆಗೆದುಕೊಂಡಿದೆ ಮತ್ತು ಅದು ಪೂರ್ತಿಯಾಗಿವೆ. 231 ಬೋರ್‌ವೆಲ್ಸ್‌ಗಳೂ ಪೂರ್ತಿಯಾಗಿವೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಬೆಂಗಳೂರು ಗ್ರಾಮಾಂತರ ಜಿಲ್ಲೆದು; ಮಾಗಡಿ ಕ್ಷೇತ್ರದ್ದು ಕುಡಿಯುವ ನೀರಿನ ಬಗ್ಗೆ ಹೇಳಲಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ಕ್ಷೇತ್ರವಾರು ಇದೆ ಕೊಡುತ್ತೇನೆ. ತಿಪಟೂರು 23 ಬೋರ್‌ವೆಲ್‌ಗಳನ್ನು ಸಿಆರ್‌ಎಫ್‌ನಿಂದ ತೆಗೆದುಕೊಳ್ಳಲಾಗಿದೆ 8 ಬೋರ್‌ವೆಲ್ಸ್‌ಗಳನ್ನು ಆರ್‌ಡಿಪಿಆರ್‌ನಿಂದ ತೆಗೆದುಕೊಂಡು ಮುಗಿಸಲಾಗಿದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಸಭಾಧ್ಯಕ್ಷರ ಕ್ಷೇತ್ರಕ್ಕೆ ಎಷ್ಟು ಕೊಟ್ಟಿದ್ದೀರಿ ಹೇಳಿ. ಅವರ ಕ್ಷೇತ್ರಕ್ಕೆ ಕೊಡಲಿಲ್ಲವೆಂದರೆ ನಾವೆಲ್ಲರೂ ಸೇರಿ ಧರಣಿ ಮಾಡಬೇಕಾಗುತ್ತದೆ.

ಶ್ರೀ ಆರ್.ಎಲ್. ಜಾಲಪ್ಪ : ಅವರ ಕ್ಷೇತ್ರದಿಂದ ಹೆಚ್ಚಿನ ಹಣ ಬೇಕೆಂದು ಪತ್ರ ವ್ಯವಹಾರ ನಡೆದರೆ ಕನ್ಸಿಡರ್ ಮಾಡಿಕೊಡುತ್ತೇವೆ. ಏಕೆಂದರೆ ಎಲ್ಲರೂ ಸೇರಿ ಅವರ ಕ್ಷೇತ್ರವನ್ನು ನೋಡಿಕೊಳ್ಳಬೇಕು. ನಮಗೆ ಜವಾಬ್ದಾರಿ ಗೊತ್ತಿದೆ. ಅವರಿಗೆ ತೊಂದರೆಯಾಗುವುದಿಲ್ಲವೆಂಬ ಭರವಸೆಯನ್ನು ಕೊಡುತ್ತೇನೆ.

6.10 ಪಿ.ಎಂ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೇ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ನನ್ನ ತಾಲ್ಲೂಕು ಮಾಗಡಿ ತಾಲ್ಲೂಕುಬರದ ವ್ಯಾಪ್ತಿಯಲ್ಲಿ ಬರುತ್ತದೆ. ಅದಕ್ಕೆ ಎಷ್ಟು ಮಾಡಿದ್ದೀರಿ? ಕೆಲ್ಯಾಮಿಟಿ ಫಂಡ್‌ನಲ್ಲಿ ಎಷ್ಟು ಖರ್ಚಾಗಿದೆ ಎಂದು ಹೇಳಬೇಕು.

ಶ್ರೀ ಆರ್.ಎಲ್. ಜಾಲಪ್ಪ : ಮಾಗಡಿಗೆ ಇ.ಎ.ಎಸ್.ನಲ್ಲಿ 56,26 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇಲ್ಲಿಯವರೆಗೆ ಖರ್ಚಾಗಿರುವುದು 20ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಮತ್ತು ಜಿ.ಆರ್.ವೈ.ನಲ್ಲಿ 39.96 ಲಕ್ಷ ರೂಪಾಯಿಗಳನ್ನು ಕೊಡಲಾಗಿದೆ. ಹತ್ತು ಲಕ್ಷ ರೂಪಾಯಿಗಳನ್ನು ತಾವು ಖರ್ಚು ಮಾಡಿದ್ದೀರಿ. 29.96 ಲಕ್ಷ ರೂಪಾಯಿಗಳು ಉಳಿದಿದೆ ತಮ್ಮಲ್ಲಿ.

ಶ್ರೀ ಬಿ. ನಂಜಾಮರಿ : ತಿಪಟೂರಿನ ಬಗ್ಗೆ ಹೇಳಲಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ತಿಪಟೂರಿನ ಬಗ್ಗೆ ಹೇಳಿದನಲ್ಲಾ, 23 ಬೋರ್‌ವೆಲ್‌ಗಳು ಸಿಆರ್‌ಎಫ್‌ನಲ್ಲಿ ಮತ್ತು ಎಂಟು ಬೋರ್‌ವೆಲ್‌ಗಳನ್ನು ಆರ್‌ಡಿಪಿಆರ್ ನಲ್ಲಿ ಕೊಡಲಾಗಿದೆ.

ಶ್ರೀ ಕೆ.ಎನ್. ಗದ್ದಿ : ಧಾರವಾಡ ಜಿಲ್ಲೆ ನವಲಗುಂದ್ ತಾಲ್ಲೂಕು ಬಗ್ಗೆ ಹೇಳಿ.

ಒಬ್ಬ ಮಾನ್ಯ ಸದಸ್ಯರು : ಬಿಜಾಪುರ ಜಿಲ್ಲೆಯಲ್ಲಿ ಬರೀ ನಾಲ್ಕು ಕಡೆ ಮಳೆಯಾಗಿದೆ ಎಂದು ವರದಿ ಇದೆ. ಅದರ ಬಗ್ಗೆ ತಾವು ಸ್ಪಷ್ಟೀಕರಣವನ್ನು ಕೊಡಬೇಕು. ಅವರ ವರದಿ ಪ್ರಕಾರ ನಾಲ್ಕು ತಾಲ್ಲೂಕಿನಲ್ಲಿ ಮಳೆಯಾಗಿದೆ ಎನ್ನುವುದಾಗಿ ಹೇಳಿದ್ದಾರೆ. ಇಡೀ ಬಿಜಾಪುರ ಜಿಲ್ಲೆಯೇ ಬರಗಾಲದ ಜಿಲ್ಲೆ, ಅದರ ಬಗ್ಗೆ ಸ್ಪಷ್ಟೀಕರಣವನ್ನು ಕೊಡಬೇಕು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ನಾನು ಯಾವುದೇ ದಾಖಲಾತಿ ಕೇಳುವುದಿಲ್ಲ. ಅವರಿಗೆ ಸಹಕಾರವನ್ನು ಕೊಡುವುದಕ್ಕಾಗಿ ನಾನು ನಿಂತಿದ್ದೇನೆ. ಮಾನ್ಯ ರೆವಿನ್ಯೂ ಮಂತ್ರಿಗಳು ಹೇಳಿದ ಹಾಗೆ ಎಲ್ಲಾ ತಾಲ್ಲೂಕುವಾರು ಟಾಸ್ಕ್ ಫೋರ್ಸ್ ಸಮಿತಿ ಎಂದು ಹೇಳಿ ರಚನೆ ಮಾಡಿ ಈ ಕ್ಷೇತ್ರದ ಶಾಸಕರನ್ನು ಅಧ್ಯಕ್ಷರನ್ನಾಗಿ ಅವರು ನೇಮಿಸಿದ್ದಾರೆ. ಅಲ್ಲಿ ನಡೆಯುವಂಥ ಸಮಿತಿಗೆ ಟಾಸ್ಕ್‌ಫೋರ್ಸ್ ಸಮಿತಿಯ ಅಧ್ಯಕ್ಷರು ಎಂದು ಮಾಡಿದ್ದಾರೆ. ಅದು ಇರಬಹುದು. ಅನೇಕ ತಾಲ್ಲೂಕುಗಳಲ್ಲಿ ಈಗ ಸಭೆ ನಡೆದಿದೆ. ಅನೇಕ ತಾಲ್ಲೂಕುಗಳಲ್ಲಿ ಸಭೆ ನಡೆದಿರುವ ವಿಚಾರವನ್ನು ಅವರ ಗಮನಕ್ಕೆ ತಂದಿದ್ದಾರೆ. ಆದರೆ ನನ್ನ ಒಂದು ಮನವಿ ಮಾನ್ಯ ಮಂತ್ರಿಗಳಲ್ಲಿ ಏನೆಂದರೆ ಮಾನ್ಯ ಮಂತ್ರಿಗಳು ಅವರು ವಿಸ್ತಾರವಾದಂಥ ಒಂದು ಬರಪರಿಹಾರದ ಬಗ್ಗೆ ಹೇಳಿಕೆಯನ್ನು ಮಾಡಿದ್ದಾರೆ. ಚಿಕ್ಕಮಗಳೂರು ಜಿಲ್ಲೆಗೆ ಸಂಬಂಧಪಟ್ಟಿರುವಂಥ ನನಗೆ ದೊರೆತಿರುವ ಮಾಹಿತಿ ಪ್ರಕಾರ ನನ್ನ ಜಿಲ್ಲೆಗೆ ಅವರು ಇಲ್ಲಿಯವರೆಗೆ ಬಿಡುಗಡೆ ಮಾಡಿರುವ ಹಣ ಕೇವಲ ಹತ್ತು ಲಕ್ಷ ರೂಪಾಯಿಗಳು. ಅದು ಬಿಡುಗಡೆಯಾದ ನಂತರ ಒಂದು ಸಭೆ ನಡೆಸುವಂಥ ಅವಕಾಶ ಸಿಕ್ಕಿದೆ. ಯಾವ ಯಾವ ಗ್ರಾಮಾಂತರ ಪ್ರದೇಶದಲ್ಲಿ ಮೇವಿಗಾಗಿ ಅಥವಾ ಉದ್ಯೋಗವನ್ನು ಕಲ್ಪಿಸಿಕೊಡುವುದಕ್ಕಾಗಿ ಕೆಲವು ಕಾರ್ಯಕ್ರಮಗಳನ್ನು ನಾವು ಹಮ್ಮಿಕೊಂಡಿದ್ದೇವೆ. ನಮ್ಮ ಹಿರಿಯ ನಾಯಕರಾದಂಥ ಕಾಗೋಡು ತಿಮ್ಮಪ್ಪಾಜಿಯವರು ಹೇಳಿದ ಹಾಗೆ ಸರ್ಕಾರದವರು ಯಾವ ಯಾವ ಸಂದರ್ಭಕ್ಕೆ ಯಾವ ಯಾವ ಕಾಲಕ್ಕೆ ಯಾವ ಯಾವ ತಾರೀಖಿಗೆ ಹಣವನ್ನು ಬಿಡುಗಡೆ ಮಾಡಿ ಕೊಟ್ಟಿದ್ದಾರೆ ಎನ್ನುವುದರ ಬಗ್ಗೆ ಮಾನ್ಯ ಮಂತ್ರಿಗಳು ಒಂದು ವಿಸ್ತಾರವಾದ ಹೇಳಿಕೆಯನ್ನು ಈ ಸದನದಲ್ಲಿ ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಎರಡನೆಯದು ಉದ್ಯೋಗ ಭರವಸೆ ಯೋಜನೆಯಡಿಯಲ್ಲಿ ನಮ್ಮಲ್ಲಿ ಹೆಚ್ಚು ಕಡಿಮೆ 520 ಲಕ್ಷ ರೂಪಾಯಿ ಇಟ್ಟಿದ್ದಂಥದ್ದು ಖರ್ಚು ಮಾಡುವುದಕ್ಕೆ ಸೂಕ್ತವಾದ ಆದೇಶವನ್ನು ಮಾನ್ಯ ಈ ರಾಜ್ಯದ ಮುಖ್ಯಮಂತ್ರಿಗಳು ಚಿಕ್ಕಮಗಳೂರಿಗೆ ಆಗಮಿಸಿದಂಥ ಸಂದರ್ಭದಲ್ಲಿ ಆದೇಶಕೊಟ್ಟಿದ್ದರು. ನಮ್ಮ ರೆವಿನ್ಯೂ ಮಂತ್ರಿಗಳಲ್ಲಿ ವಿನಂತಿ ಏನೆಂದರೆ ಕುಡಿಯುವ ನೀರಿಗಾಗಿ ಫೆಬ್ರವರಿ ಮಾಹೆಯಲ್ಲಿ ಒಂದು ಆದೇಶವನ್ನು ಸರ್ಕಾರ ಹೊರಡಿಸಿ ಕಂಟಿನ್‌ಜೆನ್ಸಿ ಪ್ರೋಗ್ರಾಮ್‌ನಲ್ಲಿ 68 ಲಕ್ಷ ರೂಪಾಯಿಗಳಷ್ಟು ಹಣಕ್ಕೆ ನಾವು ಒಂದು ಕಂಟಿನ್‌ಜೆನ್ಸಿ ಪ್ರೋಗ್ರಾಮ್ ಮಾಡಿ ಕಳುಹಿಸಿದ್ದೆವವು ಚಿಕ್ಕಮಗಳೂರು ಜಿಲ್ಲೆಯಿಂದ. ಆದರೆ ಅದರಲ್ಲಿ ಬಿಡುಗಡೆಯಾದಂಥ ಹಣ ಕೇವಲ 38 ಲಕ್ಷ ರೂಪಾಯಿಗಳು. ಉಳಿದಂಥ ಹಣವನ್ನು ತಾವು ದಯವಿಟ್ಟು ಬಿಡುಗಡೆ ಮಾಡಿಕೊಡುತ್ತೀರಾ ಎಂದು ದಯಮಾಡಿ ನನಗೆ ಒಂದು ಆಶ್ವಾಸನೆಯನ್ನು ಕೊಡಬೇಕು ಎರಡನೆಯದಾಗಿ ನಮ್ಮ ಜಿಲ್ಲೆಗೆ ಬೋರ್‌ವೆಲ್ ಅಳವಡಿಸುವುದಕ್ಕಾಗಿ ನಾವು ಕಾರ್ಯಕ್ರಮ ಹಮ್ಮಿಕೊಂಡಿದ್ದಂಥದ್ದು 385 ಕೊಳವೆಬಾವಿಗಳಿಗಾಗಿ. ಆದರೆ ಅದರಲ್ಲಿ ಶೇಕಡ 50 ರಷ್ಟು ನಾವು ಕೊರೆಸಲಾಗಿದೆ. ಇನ್ನು ಉಳಿದಂಥ 50 ರಷ್ಟು ಕೊಳವೆಬಾವಿಗಳನ್ನು ಕೊರೆಸುವುದಕ್ಕಾಗಿ ಹಣದ ಕೊರತೆ ಇರುವುದರಿಂದ ದಯಮಾಡಿ ಹಣವನ್ನು ಒದಗಿಸಿಕೊಡಬೇಕೆಂದು ಹೇಳಿ ತಮ್ಮಲ್ಲಿ ನಾನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರು ಜಿಲ್ಲೆಗೆ ಒಟ್ಟು 4[illegible] ಬೋರ್‌ವೆಲ್‌ಗಳನ್ನು ಮಂಜೂರು ಮಾಡಿದ್ದೇವೆ. ಈಗ 191 ಬೋರ್‌ವೆಲ್ಸ್‌ಗಳು

ಕಂಪ್ಲೀಟ್ ಆಗಿದೆ. ಮಿಕ್ಕ ಕೆಲಸಗಳು ನಡೆಯುತ್ತಿವೆ. ಈಗ ಅವರ ಹತ್ತಿರ 292 ಲಕ್ಷ ರೂಪಾಯಿಗಳನ್ನು ನಾವು ಬಿಡುಗಡೆ ಮಾಡಿದ್ದೆವು. ಅದರಲ್ಲಿ 275 ಲಕ್ಷ ರೂಪಾಯಿ ಈಗಾಗಲೇ ಖರ್ಚಾಗಿದೆ. ಇನ್ನು ಇಲ್ಲಿ ಕೆಲ್ಯಾಮಿಟಿಯಲ್ಲಿ 40 ಲಕ್ಷ ರೂಪಾಯಿಗಳನ್ನು ನಾವು ಬಿಡುಗಡೆ ಮಾಡಿದ್ದೆವು. 35 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಹಣ ಸಾಲದೆ ಬಂದರೆ ನಾವು ಹಣ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಒಟ್ಟು 473 ಬೋರ್‌ವೆಲ್‌ಗಳನ್ನು ತಮಗೇನು ಮಂಜೂರು ಮಾಡಿದ್ದೇವೆ, ಆ ಪೂರ್ತಿ ಬೋರ್‌ವೆಲ್‌ಗಳನ್ನು ಹಾಕಿಸಿಕೊಡುವುದಕ್ಕೆ ನಾವು ಪ್ರಯತ್ನಪಡುತ್ತೇವೆ. ಇನ್ನು ಯಾವ ಯಾವ ತಾರೀಖಿನಿಂದ ರಿಲೀಸ್ ಮಾಡಿದಿರಿ ಎಂದರೆ ಅದು ಅಷ್ಟು ಕರಾರುವಾಕ್ಕಾಗಿ ನನ್ನ ಕೈಯಲ್ಲಿ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಬೇಕಾದರೆ ಮಾನ್ಯ ಸದಸ್ಯರಿಗೆ ನಾನು ಅದನ್ನು ಪತ್ರ ಮುಖೇನ ತಿಳಿಸುತ್ತೇನೆ. ನನ್ನ ಸ್ನೇಹಿತರಾದ ಬಾಲಕೃಷ್ಣರವರು ಮಾಗಡಿಗೆ ಏನು ಮಾಡಿದ್ದೀರಿ ಎಂದು ಕೇಳುತ್ತಿದ್ದಾರೆ. ಮಾಗಡಿಗೆ ನಾವು ಸಿಆರ್‌ಎಫ್ ಫಂಡ್‌ನಲ್ಲಿ 2 ಲಕ್ಷ 5 ಸಾವಿರ ರೂಪಾಯಿಗಳನ್ನು ರಿಲೀಸ್ ಮಾಡಿದ್ದೇವೆ. 2 ಲಕ್ಷ 5 ಸಾವಿರ ರೂಪಾಯಿಗಳನ್ನೂ ಖರ್ಚು ಮಾಡಿದ್ದೀರಿ ನೀವು. ಮತ್ತು 128 ಬೋರ್ವೆಲ್‌ಗಳನ್ನು ಆರ್‌ಡಿಪಿಆರ್‌ನಲ್ಲಿ ಮಂಜೂರು ಮಾಡಿದ್ದೇವೆ. ಅವರಲ್ಲಿ 102 ಬೋರ್‌ವೆಲ್‌ಗಳು ಈಗಾಗಲೇ ಕಂಪ್ಲೀಟ್ ಆಗಿದೆ. ಇನ್ನು 22 ಬೋರ್‌ವೆಲ್‌ಗಳು ಆಗಬೇಕಾಗಿದೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಕೆಲ್ಯಾಮಿಟಿ ಫಂಡ್‌ನಿಂದ ನಮಗೇನು ಸೌಲಭ್ಯಗಳಿವೆ? ನಮ್ಮ ತಾಲ್ಲೂಕನ್ನು ಬರಗಾಲ ಎಂದು ಡಿಕ್ಲೇರ್ ಮಾಡಿದ್ದೀರಿ. ಅದಕ್ಕೇನು ಸೌಲಭ್ಯ ದೊರಕಿದೆ? ಅದರ ಬಗ್ಗೆ ಹೇಳಬೇಕು.

ಶ್ರೀ ಆರ್.ಎಲ್.ಜಾಲಪ್ಪ : ಬರಗಾಲ ಎಂದು ಎಲ್ಲೂ ಡಿಕ್ಲೇರ್ ಮಾಡಿಲ್ಲ, ಕಡಿಮೆ ಮಳೆಯಾಗಿದೆ ಎಂದು ಹೇಳಿದ್ದೇವೆ. ನಿಮ್ಮದು ಕಡಿಮೆ ಮಳೆಯಾಗಿದೆ ನಿಜ. ಆದರೆ ಬರಗಾಲ ಎಂದು ಡೀಕ್ಲೇರ್ ಮಾಡಿಲ್ಲ, ನಮ್ಮ ರೆವಿನ್ಯೂ ಆ್ಯಕ್ಟ್‌ನಲ್ಲಿ ಬರಗಾಲ ಎಂದು ಡಿಕ್ಲೇರ್ ಮಾಡುವುದಕ್ಕೆ ಪ್ರಾವಿಷನ್ ಇದೆ. ಯಾವಾಗ ಇದೆ ಎಂದರೆ ಬೆಳೆ ಕಟಾವಾದಮೇಲೆ ಆರಾಣೆ ಮಳೆಗಿಂದ ಕಡಿಮೆ ಬಂದಿದ್ದರೆ ಅಂಥಹ ಕಡೆ ರಿಯಾಯಿತಿ ಕೊಡುವುದು ಮತ್ತು ಅಲ್ಪಾವಧಿ, ಸಾಲಗಳನ್ನು, ಮಧ್ಯಮಾವಧಿ ಅಥವಾ ದೀರ್ಘಾವಧಿ ಸಾಲಗಳನ್ನಾಗಿ ಕನ್‌ವರ್ಟ್ ಮಾಡುವುದು, ಈ ಸೌಲಭ್ಯಗಳನ್ನು ಕೊಡುವುದಕ್ಕೆ ಅವಕಾಶವಿದೆಯೇ ವಿನಹಾ ಬರಗಾಲ ಇದು ಎಂದು ಬರಪೀಡಿತ ಪ್ರದೇಶ ಎಂದು ಡಿಕ್ಲೇರ್ ಮಾಡುವುದಕ್ಕೆ ನಮ್ಮಲ್ಲಿ ಯಾವುದರಲ್ಲೂ ಪ್ರಾವಿಷನ್ಸ್ ಇಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಇದರಿಂದ ನಮಗೇನೂ ದೊರೆತಿಲ್ಲ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರಲ್ಲಿ ಒಂದು ವಿನಂತಿ. ನನಗೆ ಒಂದು ಪ್ರಶ್ನೆಯಲ್ಲಿ ತುಮಕೂರು ಜಿಲ್ಲೆಗೆ 576 ಕೊಳವೆ ಬಾವಿಗಳನ್ನು ಕೊಟ್ಟಿದ್ದೇವೆ ಎಂದು ನಿನ್ನೆ ಉತ್ತರ ಕೊಟ್ಟಿದ್ದೀರಿ. ಈಗ ಉತ್ತರ ಕೊಡುತ್ತಿರುವುದು ನೋಡಿದರೆ 100 ಕಡಿಮೆ ಮಾಡಿ ಕೊಡುತ್ತಿದ್ದೀರಿ. ಏನು ಸಮಾಚಾರ? ಸ್ವಲ್ಪ ತುಮಕೂರು ಜಿಲ್ಲೆ ಬಗ್ಗೆ ಹೇಳಿ. ಅದರ ಇತಿಹಾಸ ಏನಿದೆ ಎಂದು ನೋಡೋಣ. ಒಂದು ಕ್ಷೇತ್ರಕ್ಕೆ 125 ಕೊಟ್ಟಿದ್ದೇವೆ ಎಂದು ಹೇಳುತ್ತೀರಿ. ಇದೇನು ನಮಗೆ ಅರ್ಥವೇ ಆಗುತ್ತಿಲ್ಲ. ತುಮಕೂರು ಜಿಲ್ಲೆಯ ಕಳ್ಳಂಬೆಳ್ಳ ಕ್ಷೇತ್ರಕ್ಕೆ ಎಷ್ಟು ಕೊಟ್ಟಿದ್ದೀರಿ ಎಂದು ಹೇಳಿ. ಎಷ್ಟು ಕೊಟ್ಟಿದ್ದೀರಿ ಎಂದು ನಿಮಗಿಂತ ನನಗೆ ಚೆನ್ನಾಗಿ ಗೊತ್ತಿದೆ. ನೋಡೋಣ ಹೇಳಿ.

ಶ್ರೀ ಆರ್.ಎಲ್.ಜಾಲಪ್ಪ : ತುಮಕೂರಿನಲ್ಲಿ ಕುಡಿಯುವ ನೀರಿಗಾಗಿ ಸಿಆರ್‌ಎಫ್ 231 ಕೆಲಸಗಳನ್ನು ತೆಗೆದುಕೊಂಡಿದ್ದೇವೆ. ಆರ್‌ಡಿಪಿಆರ್‌ನಲ್ಲಿ 243 ಕೆಲಸಗಳನ್ನು ತೆಗೆದುಕೊಂಡಿದ್ದೇವೆ. ಅಲ್ಲಿಗೆ 474 ಬೋರ್‌ವೆಲ್‌ಗಳನ್ನು ನಿಮ್ಮ ಜಿಲ್ಲೆಗೆ ಕೊಟ್ಟಿರುವುದು.

ಶ್ರೀ ಟಿ.ಬಿ. ಜಯಚಂದ್ರ : ಕೊಟ್ಟಿರುವುದು 576 ಎಂದು ಹೇಳಿದ್ದೀರಿ. ನಿನ್ನೆ ಒಂದು ರಿಪ್ಲೈ ಕೊಟ್ಟದ್ದೀರಿ ಅನ್‌ಸ್ಟಾರ್ಡ್ ಕೊಶ್ಚನ್‌ಗೆ. ಅದರಲ್ಲಿ 576 ಎಂದು ಕೊಟ್ಟಿದ್ದೀರಿ. ಸಿಆರ್‌ಎಫ್‌ನಲ್ಲಿ 180 ಕೊಟ್ಟಿದ್ದೀರಿ ಎಂದು ಹೇಳುತ್ತೀರಿ. ಈಗ ನೋಡಿದರೆ 231 ಎಂದು ಹೇಳುತ್ತೀರಿ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಜನವರಿ ತಿಂಗಳಿಂದ ಲೆಕ್ಕ ಇಟ್ಟುಕೊಂಡು ಹೇಳುತ್ತೀದ್ದೀರಿ. ನಾವು 1-4 ರಿಂದ ಹೇಳುತ್ತಿದ್ದೇವೆ.

ಶ್ರೀ ಟಿ.ಬಿ. ಜಯಚಂದ್ರ : ನನ್ನ ಕ್ಷೇತ್ರಕ್ಕೆ ಎಷ್ಟು ಬರೆದಿದ್ದೀರಿ ಎಂದು ಹೇಳಿ.

ಶ್ರೀ ಎಂ.ಪಿ. ಪ್ರಕಾಶ್ : ಕ್ಷೇತ್ರವೆಂದರೆ ನಿಮ್ಮದು ಮೂರು ತಾಲ್ಲೂಕು ಆಗುತ್ತದೆ. ಈಗ ವ್ಯತ್ಯಾಸವಾಗಿಯೇ ಆಗುತ್ತದೆ.

ಶ್ರೀ ಆರ್.ಎಲ್. ಜಾಲಪ್ಪ : ನೀವು ಮೂರು-ನಾಲ್ಕು ತಾಲ್ಲೂಕುಗಳನ್ನು ಕ್ಷೇತ್ರ ಮಾಡಿಕೊಂಡರೆ ಏನು ಮಾಡೋಣ ಹೇಳಿ. ಇದನ್ನು ವಿವರವಾಗಿ ಎಲ್ಲಾ ಕೊಟ್ಟದ್ದೇನೆ. ಇನ್ನು ಏನಾದರೂ ಹೆಚ್ಚು ವಿವರಗಳೇನಾದರೂ ಬೇಕಾದರೆ ನಾನು ಅವರಿಗೆ ಕೊಡುತ್ತೇನೆ. ನನ್ನಲ್ಲಿ ಎಲ್ಲಾ ವಿವರಗಳು ಇದೆ. ಅವರುಗಳಿಗೆ ಕಳುಹಿಸಿಕೊಡುತ್ತೇನೆ. ಅದನ್ನು ಅವರು ನೋಡಬಹುದು. ಇಲ್ಲಿ ಒಂದು ಗಹನವಾದ ವಿಚಾರವೆಂದರೆ ನಾವೆಲ್ಲರೂ ಯೋಚನೆ ಮಾಡ ಬೇಕಾಗಿದೆ.

ಶ್ರೀ ಸಿ.ಹೆಚ್. ವಿಜಯಶಂಕರ್: ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳಲ್ಲಿ ಒಂದು ವಿನಂತಿ ಏನೆಂದರೆ ನಮ್ಮ ಹಿರಿಯ ಸದಸ್ಯರಾದ ಕಾಗೋಡು ತಿಮ್ಮಪ್ಪನವರು ಹೇಳುತ್ತಿದ್ದರು. ನಮ್ಮಲ್ಲಿ ಸ್ಕೇರ್‌ಸಿಟಿ ಫಂಡ್ ಎಂದು ಹತ್ತು ಲಕ್ಷ ರೂಪಾಯಿಗಳು ರಿಲೀಸ್‌ಆಗಿದೆ. ಆಗತಾನೆ ನಾವು ಸಭೆಗಳನ್ನು ನಡೆಸಿದ್ದೇವೆ. ಅದರಂತೆ ಹಣ ಕೂಡ ವಿನಿಯೋಗ ಮಾಡಿದ್ದೇವೆ. ಸರ್ಕಾರದಿಂದ ಆ ರೂಪದಿಂದಲೇ ಹಣ ಬಂದಿರುವುದು ಎಂದು ಇಲ್ಲಿ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ನಮ್ಮ ತಾಲ್ಲೂಕೂ ಕೂಡ ಅದೇ ರೀತಿ ಪರಿಗಣನೆಗೆ ಒಳಗಾಗಿದೆ. ಸರ್ಕಾರದಿಂದ ಅಧಿಕೃತವಾಗಿ ಅಂಗೀಕಾರವಾಗಿದೆ. ಆದ್ದರಿಂದ ಇಲ್ಲಿಯತನಕ ಒಂದೇ ಒಂದು ಸ್ಕೇರ್‌ಸಿಟಿ ಮೀಟಿಂಗ್ ನಡೆಯಲಿಲ್ಲ ನಮ್ಮಲ್ಲಿ. ಅದಕ್ಕಾಗಿ ನಮಗೆ ಸರ್ಕಾರದಿಂದ ಒಂದು ಪೈಸೆ ಹಣ ಬಂದಿರುವ ವಿಚಾರ ಇಲ್ಲ, ಇದೇಕೆ ಈ ರೀತಿ ವ್ಯತ್ಯಾಸಗಳಾಗುತ್ತಿದೆ ಎಂದು ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ಹೇಳಬೇಕು. ನಮ್ಮಲ್ಲಿ ಇಲ್ಲಿಯತನಕ ಒಂದು ಮೀಟಿಂಗ್ ನಡೆದಿಲ್ಲ, ಅದಕ್ಕೆ ಯಾರು ಜವಾಬ್ದಾರರು?

ಶ್ರೀ ಆರ್.ಎಲ್. ಜಾಲಪ್ಪ : ಅದಕ್ಕೆ ನೀವೇ ಜವಾಬ್ದಾರರು.

ಶ್ರೀ ಸಿ.ಹೆಚ್. ವಿಜಯಶಂಕರ್ : ಹಣ ಇದ್ದರೆ ತಾನೇ ಮೀಟಿಂಗ್ ಕರೆಯೋದು?

ಶ್ರೀ ಆರ್.ಎಲ್. ಜಾಲಪ್ಪ : ಇಂತಹ ದಿವಸ ಇಂತಹ ತಾರೀಖು ಮೀಟಿಂಗ್ ಕರೆಯಿರಿ ಎಂದು ಹೇಳಿ. ಮೀಟಿಂಗ್ ಕರೆಯದೇ ಇದ್ದರೆ ನಾನು ಜವಾಬ್ದಾರ.

ಶ್ರೀ ಸಿ.ಹೆಚ್. ವಿಜಯಶಂಕರ್ : ತಪ್ಪಾಗಿ ಭಾವಿಸಬಾರದು. ಹಣ ಇದ್ದರೆ ತಾನೇ ಮೀಟಿಂಗ್ ನಡೆಯುವುದು. ಹಣ ಇಲ್ಲದೆ ಮೀಟಿಂಗ್ ಮಾಡುವುದು ಎಂತಹದು?

ಶ್ರೀ ಆರ್.ಎಲ್. ಜಾಲಪ್ಪ : ಹಣ ಇದೆ ಸ್ವಾಮಿ.

ಶ್ರೀ ಸಿ.ಹೆಚ್. ವಿಜಯ ಶಂಕರ್ : ಹುಣಸೂರು ತಾಲ್ಲೂಕಿಗೆ ಏನೇನು ಕೊಟ್ಟಿದ್ದೀರಿ ಎಂಬುದನ್ನು ಸ್ಪಷ್ಟವಾಗಿ ಹೇಳಿ.

ಶ್ರೀ ಆರ್.ಎಲ್. ಜಾಲಪ್ಪ : ನೀವು ಅಲ್ಲಿ ಹೋಗಿ ವಿಚಾರಿಸಿದ್ದರೆ ತಾನೇ?

ಶ್ರೀ ಸಿ.ಹೆಚ್. ವಿಜಯ ಶಂಕರ್ : ಹುಣಸೂರು ತಾಲ್ಲೂಕಿಗೆ ಏನೇನು ಕೊಟ್ಟಿದ್ದೀರಿ? ಅದರ ವ್ಯವಸ್ಥೆ ಏನು? ದಯವಿಟ್ಟು ತಿಳಿಸಿ.

ಶ್ರೀ ಆರ್.ಎಲ್. ಜಾಲಪ್ಪ : ಹುಣಸೂರಿನಲ್ಲಿ ಇಎಸ್‌ನಲ್ಲಿ 44 ಲಕ್ಷ, 46 ಸಾವಿರ ರೂಪಾಯಿ ಒದಗಿಸಲಾಗಿದೆ. 25 ಲಕ್ಷ ರೂಪಾಯಿ ಖರ್ಚು ಮಾಡಿದ್ದೀರಿ, ಇನ್ನೂ ನಿಮ್ಮಲ್ಲಿ 21 ಲಕ್ಷ ರೂಪಾಯಿ ಇದೆ.

ಶ್ರೀ ಸಿ.ಹೆಚ್. ವಿಜಯ ಶಂಕರ್ : ಮಾನ್ಯ ಸಚಿವರು ಸ್ಕೇರ್ಸಿಟಿ ಫಂಡ್ ಬಗ್ಗೆ ಮಾತನಾಡಿ.

ಶ್ರೀ ಆರ್.ಎಲ್. ಜಾಲಪ್ಪ : ಸ್ಕೇರ್ಸಿಟಿ ಫಂಡ್ ಎಂದು ಇಲ್ಲ, ಎಲ್ಲಿ ಎಂಪ್ಲಾಯ್‌ಮೆಂಟ್ ಅಷುರ್‌ಮೇಷನ್ ಸ್ಕೀಮ್ಸ್ ಆಗಲಿ, ರೋಜ್‌ಗಾರ್ ಯೋಜನೆಯಾಗಲಿ ಇಲ್ಲದೇ ಇದ್ದರೆ ಅಂತಹ ತಾಲ್ಲೂಕಿನಲ್ಲಿ 25 ಲಕ್ಷ ಖರ್ಚು ಆಗಿದೆ. ಬರಗಾಲ ಪ್ರದೇಶ ಎನ್ನುವುದು.

ಶ್ರೀ ಸಿ.ಹೆಚ್. ವಿಜಯ ಶಂಕರ್ : ತಾವು ದಯವಿಟ್ಟು ತಪ್ಪಾಗಿ ತಿಳಿಯಬಾರದು.

ಅಧ್ಯಕ್ಷರು : ಸ್ಕೇರ್ಸಿಟಿ ಆದರೇನು, ಇಎಎಸ್ ಆದರೇನು ಕೆಲಸ ಕೊಡುವುದು ಅಲ್ಲವಾ.

ಶ್ರೀ ಆರ್.ಎಲ್. ಜಾಲಪ್ಪ : ತಿಮ್ಮಪ್ಪನವರು ನಿಮಗೆ ಗೊತ್ತಿಲ್ಲ ಎಂದು ಹೇಳಿ.

ಅಧ್ಯಕ್ಷರು : ಯಾವ ಸ್ಕೀಮ್ ಆದರೇನು ಕೆಲಸ ಕೊಡುವುದು ಅಲ್ಲವಾ?

ಶ್ರೀ ಸಿ.ಹೆಚ್. ವಿಜಯ ಶಂಕರ್ : ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ನಾನು ಇಲ್ಲ ಎಂದು ಹೇಳುವುದಿಲ್ಲ.

ಅಧ್ಯಕ್ಷರು : ಬರಗಾಲದಲ್ಲಿ ಕೂಲಿಯವರು ಕೇಳುತ್ತಾರಾ? ಕೂಲಿ ಮಾಡುವ ಕೃಷಿ ಕಾರ್ಮಿಕರು ಈ ಹೆಡ್‌ನಲ್ಲಿ ಬಂದರೆ ಮಾತ್ರ ನಾವು ತೆಗೆದುಕೊಳ್ಳುತ್ತೇವೆ ಬೇರೆ ಹೆಡ್‌ನಲ್ಲಿ ಬಂದರೆ ನಾವು ತೆಗೆದುಕೊಳ್ಳುವುದಿಲ್ಲ ಎಂದು ಹೇಳುತ್ತಾರಾ?

ಶ್ರೀ ಸಿ.ಹೆಚ್. ವಿಜಯ ಶಂಕರ್ : ಹಾಗೇನೂ ಭಾವನೆ ಇಲ್ಲ ಸಾರ್.

ಅಧ್ಯಕ್ಷರು : ತಿಮ್ಮಪ್ಪನವರೇನೋ ಬೇರೆ ವಿಚಾರದಲ್ಲಿ ಜಾಲಪ್ಪನವರನ್ನು ಕೇಳಿದ್ದರು. ನೀವು ಅದನ್ನೇ ಹಿಡಿದುಕೊಂಡರೆ. ತಿಮ್ಮಪ್ಪನವರ ವಿಷಯ ನಿಮಗೆ ಇನ್ನೂ ಗೊತ್ತಿಲ್ಲ.

ಶ್ರೀ ಸಿ.ಹೆಚ್. ವಿಜಯ ಶಂಕರ್ : ತಪ್ಪಾಗಿ ಭಾವಿಸಬಾರದು. ಇಎಎಸ್ ಆಗಲೀ ರೋಜ್‌ಗಾರ್ ಆಗಲಿ ಮೊದಲಿನಿಂದ ಇರತಕ್ಕ ಕಾರ್ಯಕ್ರಮಗಳು. ಈಗ ಸ್ಕೇರ್ಸಿಟಿ ಕಮಿಟಿ ಎಂದು

ಶ್ರೀ ಆರ್.ಎಲ್. ಜಾಲಪ್ಪ : ಎಲ್ಲಾ ಸರ್ಕಾರಗಳೂ ಇದನ್ನೇ ಮಾಡುವುದು.

ಶ್ರೀ ಸಿ.ಹೆಚ್. ವಿಜಯ ಶಂಕರ್ : ಸ್ಕೇರ್ಸಿಟಿ ಕಮಿಟಿ ಮಾಡುವಂತಹ ಅಗತ್ಯತೆ ಏನು ಇತ್ತು? ದಯವಿಟ್ಟು ಸರ್ಕಾರ ಸ್ಪಷ್ಟ ಮಾಡಬೇಕು.

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಇನ್ನೂ ಮೊದಲ ಸಾರಿ ಬಂದಿದ್ದಾರೆ. ಈ ಸಿಸ್ಟಂ ಸ್ವಲ್ಪ ಅರ್ಥ ಮಾಡಿಕೊಳ್ಳಿ. ಎಲ್ಲಾ ಸ್ಕೇರ್ಸಿಟಿ ಬಂದಾಗ ಎಲ್ಲಾ ಯೋಜನೆ ಅಡಿಯಲ್ಲಿ ಏನೇನು ಹಣ ಸಿಗುತ್ತದೆ. ಅದನ್ನೆಲ್ಲಾ ಉಪಯೋಗಿಸಿ ಕೊಳ್ಳಬೇಕಾಗುತ್ತದೆ. ಬರೇ ಸಿಆರ್ಎಫ್ ಫಂಡ್ ಎಂದು ಇಲ್ಲ, ಬರೇ 37ವರೆ ಕೋಟಿ ರೂಪಾಯಿನಲ್ಲಿ ಎಲ್ಲಾ ಬರಗಾಲವನ್ನು ತೀರ್ಮಾನ ಮಾಡುವುದಕ್ಕೆ ಆಗುವುದಿಲ್ಲ. 37 ಕೋಟಿ ಮುಗಿದ ಮೇಲೆ ಒಂದು ಸಮಯ ಇಎಎಸ್, ರೋಜ್‌ಗಾರ್‌ನಲ್ಲಿ ಎಲ್ಲಾ ಹಣ ಮುಗಿದು ಹೋಗುತ್ತದೆ. 37.46 ಲಕ್ಷ ನಮಗೆ ಏನು ಇದೆ, ಒಂದು ಸಮಯ ಅದೂ ಮುಗಿದು ಹೋದ ಮೇಲೆ ಬೇರೆ ಇಲಾಖೆಗಳಿಂದ ಯಾವುದಾದರೂ ಕೆಲಸ ನಿಲ್ಲಿಸಿ ಅಲ್ಲಿಂದ ಒಂದು ಐದು ಕೋಟಿ ಅಥವಾ ಹತ್ತು ಕೋಟಿ ರೂಪಾಯಿಯನ್ನು ತೆಗೆದು ಇಲ್ಲಿ ಕೊಟ್ಟು ಕೆಲಸ ಮಾಡಿಸಬೇಕಾಗುತ್ತದೆ. ಅದು ಸಿಸ್ಟಂ.

ಶ್ರೀ ಸಿ.ಹೆಚ್. ವಿಜಯ ಶಂಕರ್ : ತಾವು ಹಿರಿಯ ಸಚಿವರು, ತಪ್ಪಾಗಿ ಭಾವಿಸಬಾರದು.

ಶ್ರೀ ಆರ್.ಎಲ್. ಜಾಲಪ್ಪ : ನೀವು ಹೊಸ ಸದಸ್ಯರು, ನೀವು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಸಿ.ಹೆಚ್. ವಿಜಯ ಶಂಕರ್ : ಈಗ ಇಎಎಸ್, ಜವಾಹರ್ ರೋಜ್‌ಗಾರ್ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಲಿಕ್ಕೆ ಸ್ಕೇರ್ಸಿಟಿ ಕಮಿಟಿ ಏಕೆ ಮಾಡಿದಿರಿ? ಇದರ ಅಗತ್ಯತೆ ಏನು ಇತ್ತು?

ಶ್ರೀ ಆರ್. ಎಲ್. ಜಾಲಪ್ಪ : ಅದನ್ನೇ ಮಾನಿಟರ್‌ಮಾಡಿ.

ಅಧ್ಯಕ್ಷರು : ಈಗ ವಿಜಯ ಶಂಕರ್ ಅವರೇ, ನಿಮ್ಮ ಕ್ಷೇತ್ರದಲ್ಲಿ ಅಥವಾ ನಿಮ್ಮ ತಾಲ್ಲೂಕಿನಲ್ಲಿ ಮಳೆ ಸಕಾಲಕ್ಕೆ ಆಗಲಿಲ್ಲ, ಬೆಳೆ ಇಲ್ಲ, ಕೃಷಿಯನ್ನು ಅವಲಂಬಿಸಿದವರಿಗೆ ಜೀವನ ನಡೆಯುತ್ತಾ ಇಲ್ಲ, ಕೆಲಸ ಬೇಕು ಎಂದು ಕೇಳಿ ಕೆಲಸ ಕೊಡದೇ ಇರತಕ್ಕ ಯಾವುದಾದರೂ ನಿದರ್ಶನಗಳು ಇದ್ದರೆ ಅವರ ಗಮನಕ್ಕೆ ತನ್ನಿ. ಇಷ್ಟು ಜನ ಈ ಗ್ರಾಮದವರಿಗೆ ಕೆಲಸ ಕೇಳಿದರೂ ಕೆಲಸ ಕೊಡಲಿಲ್ಲ. ಹಣದ ಕೊರತೆಯಿಂದ ಕೆಲಸ ಸಿಗಲಿಲ್ಲ, ಸರ್ಕಾರ ವಿಫಲ ಆಗಿದೆ ಎಂದರೆ ಅದಕ್ಕೆ ಅವರು ಉತ್ತರ ಹೇಳುತ್ತಾರೆ. ಯಾವುದೋ ಹೆಡ್ ಹಿಡಿದು ಕೊಂಡು ಆ ಹೆಡ್ ಈ ಹೆಡ್ ಎಂದು, ಸ್ಕೇರ್ಸಿಟಿಯಲ್ಲಿ ಕೊಟ್ಟಿದ್ದೀರಾ, ಜೆಆರ್‌ವೈನಲ್ಲಿ ಕೊಟ್ಟಿದ್ದೀರಾ ಎಂದು ಹೇಳಿದರೆ ಹೇಗೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆ ಹೆಡ್ ಈ ಹೆಡ್ ಅಲ್ಲ, ಒಂದು ಮಾತು ನಾವು ಸೀರಿಯಸ್ ಆಗಿ ಕೇಳಬೇಕು. ಏಕೆಂದರೆ ನಿನ್ನೆ ಅವರು ಉತ್ತರ ಕೊಡುವಾಗ ಹೇಳಿದರು. ಸುಮಾರು 235 ಕೋಟಿ ರೂಪಾಯಿ ಇಲ್ಲಿಯವರೆಗೆ ನಮ್ಮ ಜಿಲ್ಲಾ ಪರಿಷತ್‌ಗೆ ಬಿಡುಗಡೆ ಮಾಡಿದ್ದಾರೆ ಎಲ್ಲಾ ವೇರಿಯಸ್ ಹೆಡ್‌ನಲ್ಲಿ, ಯಾವುದಾದರೂ ಹೆಡ್‌ನಲ್ಲಿ ಕೆಲಸ ಸಿಗಬೇಕು. ನಾವು ಒಪ್ಪಿಕೊಳ್ಳೋಣ. 235 ಕೋಟಿ ರೂಪಾಯಿ ಬಿಡುಗಡೆ ಮಾಡತಕ್ಕ ಉದ್ದೇಶ ಏನು ಎಂದರೆ ಜನರಿಗೆ ಕೆಲಸ ಸಿಗಬೇಕು ಮತ್ತು ಆ ಹಣ ಖರ್ಚಾಗಬೇಕು. ಆದರೆ ಇವರು ಖರ್ಚು ಮಾಡಿದ್ದುದು 62 ಕೋಟಿ ರೂಪಾಯಿ ಮಾತ್ರ. ಯಾವಾಗ 62 ಕೋಟಿ ರೂಪಾಯಿ ಖರ್ಚು

ಮಾಡಿದ್ದಾರೆ ಎಂದರೆ ಒನ್ ಫೋರ್ಥ್ ಅಮೌಂಟ್. ಇನ್ನೂ ತ್ರೀ ಫೋರ್ಥ್ ಅಮೌಂಟ್ ಸೇವಿಂಗ್ಸ್ ಇದೆ ಎಂದರೆ ಇವರು ಜನರಿಗೆ ಕೆಲಸ ಕೊಟ್ಟಹಾಗೆ ಆಯಿತೇ? ಎಫ್‌ಕ್ಷೀವಿಲಿ ಅಧಿಕಾರಿಗಳಿಂದ ಕೆಲಸ ತೆಗೆದುಕೊಂಡ ಹಾಗೆ ಆಯಿತೇ? ಇದು ಖರ್ಚಾಗಿಲ್ಲ ಎಂದು ಏಕೆ ನೀವು ಅಧಿಕಾರಿಗಳಿಗೆ ಕೇಳುವುದಿಲ್ಲ? ನೀವು ಪದೇ ಪದೇ ಮೀಟಿಂಗ್ ಮಾಡಿಲ್ಲ, ನೀವು ನೋಡಿಲ್ಲ ನೀವು ಖರ್ಚು ಮಾಡಿಲ್ಲ ಎಂದು ಹೇಳುತ್ತೀರಿ.

ನಾನು ಕೇಳುತ್ತೇನೆ, ನೀವು ಸರ್ಕಾರದ ವತಿಯಿಂದ ಯಾರು ಅಧಿಕಾರಿಗಳು ಹಣ ಖರ್ಚು ಮಾಡಿಲ್ಲ, ಎಂಪ್ಲಾಯ್‌ಮೆಂಟ್ ಅಶ್ಯೂರೆನ್ಸ್ ಸ್ಕೀಮ್‌ನಲ್ಲಿ ಅಷ್ಟು ಜನರಿಗೆ ಎಂಪ್ಲಾಯ್‌ಮೆಂಟ್ ಜನರೇಷನ್‌ಗೆ ಹಣ ಬಿಡುಗಡೆ ಮಾಡಿಲ್ಲ, ಅವರ ಬಗ್ಗೆ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ? ನಿಮ್ಮ ಹಣ ನ್ಯಾಚುರಲ್ ಕಲಾಮಿಟಿಯಲ್ಲಿ 20 ಕೋಟಿ ಇರಬಹುದು ಅಥವಾ 25 ಕೋಟಿ ರೂಪಾಯಿ ಇರಬಹುದು, ಒಪ್ಪೋಣ. ನೀವು ಹತ್ತು ಕೋಟಿ ರೂಪಾಯಿ ಬಿಡುಗಡೆ ಮಾಡಿರಬಹುದು. ಉಳಿದ ಹತ್ತು ಕೋಟಿ ರೂಪಾಯಿ ಹಣ ಯಾವುದು ಬಿಡುಗಡೆ ಮಾಡಿರುವುದಿಲ್ಲ, ಅದನ್ನು ನೀವು ಏಕೆ ಖರ್ಚು ಮಾಡಿಲ್ಲ ಎಂದು ಕೇಳಿ ನೀವು ಏನಾದರೂ ಸ್ಟೇಟ್ ಲೆವಲ್‌ನಲ್ಲಿ ರಿವ್ಯೂ ಮಾಡಿದ್ದೀರಾ? ಅಥವಾ ಜಿಲ್ಲಾ ಮಟ್ಟದಲ್ಲಿ ಇನ್‌ಛಾರ್ಜ್ ಮಿನಿಸ್ಟರ್ ಕೇಳಿ ರಿವ್ಯೂ ಮಾಡಿದ್ದೀರಾ? ಅದ್ನು ನೀವು ಹೇಳುವುದಿಲ್ಲ, ಈಗ ನಾವು ಕೊಟ್ಟಿದ್ದೇವೆ, ನೀವೇ ಖರ್ಚು ಮಾಡಿಲ್ಲ ಎಂದರೆ ಹೇಗೆ?

ಶ್ರೀ ಆರ್.ಎಲ್. ಜಾಲಪ್ಪ : ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಮಂತ್ರಿಗಳು ಕೂಡ ರಿವ್ಯೂ ಮಾಡಿದ್ದಾರೆ. ಸ್ಟೇಟ್ ಲೆವೆಲ್‌ನಲ್ಲಿ ಕೂಡ ಅಧಿಕಾರಿಗಳನ್ನು ಕರೆದು ಮಾನ್ಯ ಮುಖ್ಯಮಂತ್ರಿಗಳು ರಿವ್ಯೂ ಮಾಡಿದ್ದಾರೆ. ಕೆಲವು ಕಡೆ ನನ್ನ ಸ್ನೇಹಿತರು ಹೇಳಿದ ಹಾಗೆ ಹೆಚ್ಚು ಹಣ ಖರ್ಚಾಗಿಲ್ಲ, ನಾನಾ ಕಾರಣಗಳಿಂದ. ಶಿವಮೊಗ್ಗದಲ್ಲಿ ಹೇಳುತ್ತಿರುವುದು, ಎಂಪ್ಲಾಯ್‌ಮೆಂಟ್ ಅಫರ್‌ಮೇಷನ್ ಸ್ಕೀಮ್‌ನಲ್ಲಿ ಕೆಲಸ ತೆಗೆದುಕೊಂಡರೆ ಜನ ಬರುತ್ತಿಲ್ಲ, ಇದನ್ನು ಡ್ರಿಂಕಿಂಗ್ ವಾಟರ್‌ಗೆ ಕೊಡಿ ಎಂದು ಹೇಳಿ ಶಿವಮೊಗ್ಗದ ಡೆಪ್ಯುಟಿ ಕಮೀಷನರ್ ಕಾಗದ ಬರೆದು ಕಳುಹಿಸಿದ್ದಾರೆ. ಗುಲ್ಬಾರ್ಗಾದಲ್ಲಿ ಬರ ಇಲ್ಲ, ಪೂರ್ಣವಾಗಿ ಎಲ್ಲಾ ಕಡೆ ಬೆಳೆ ಚೆನ್ನಾಗಿ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ. ನಿಮ್ಮ ಕೋಲಾರದಲ್ಲಿಯೂ ಅನೇಕ ಸಾರಿ ಆಗುತ್ತದೆ. ಒಂದು ಮಳೆ ಯಾವುದಾದರೂ ಅವಕಾಶ ಮಳೆ ನಮ್ಮ ಕಡೆ ಬಂತು ಎಂದರೆ ಒಂದಕ್ಕೊಂದು ಕೆರೆಗಳು ಕೆಳಗಡೆ ಇರತಕ್ಕವು ಒಡೆದುಕೊಂಡು ಹೋಗುತ್ತವೆ.

ಶ್ರೀ ಆರ್.ಎಲ್. ಜಾಲಪ್ಪ : ಮಳೆ ಚೆನ್ನಾಗಿ ಆಗಿದೆ ಗುಲ್ಬರ್ಗಾದಲ್ಲಿ ಎಂದು ಹೇಳುತ್ತೀರಾ ಹೋಗಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ನೇರವಾಗಿ ನಿಮಗೆ ಕೇಳುತ್ತಿದ್ದೇನೆ. ಒಂದು ಯಾವುದೋ ಅಮೌಂಟ್ ಇಲ್ಲ ಎಂದು ತಿಳಿದುಕೊಳ್ಳಿ. ನಿಮ್ಮ ರೆಗ್ಯೂಲರ್ ಅಮೌಂಟ್ ಇದು ಖರ್ಚು ಮಾಡತಕ್ಕದ್ದು. ಮತ್ತು ನಾವು ಯಾವಾಗ ಡಿಕ್ಲೇರ್ ಮಾಡುತ್ತೇವೆ ಸುಮಾರು 175 ತಾಲ್ಲೂಕು ಪೈಕಿ 50 ತಾಲ್ಲೂಕುಗಳು ಎಂದು ತಿಳಿದುಕೊಳ್ಳಿ ಮಿನಿಮಮ್. ನೀವು ಹೇಳಿದ ಪ್ರಕಾರ. ಅಷ್ಟಾದರೂ ಖರ್ಚು ಮಾಡತಕ್ಕದ್ದು, ಖರ್ಚು ಮಾಡಿಸತಕ್ಕ ಶಕ್ತಿ ಸರ್ಕಾರಕ್ಕೆ ಇಲ್ಲ ಎಂದರೆ ನಾವೇನು ಹೇಳೋಣ. ಏನು ಸರ್ಕಾರಕ್ಕೆ ಇಂಟರೆಸ್ಟ್ ಇಲ್ಲ ಎಂದು ಹೇಳೋಣ. ಏನು ಆಸಕ್ತಿ ಇಲ್ಲ ಎಂದು ಹೇಳೋಣವೇ ಏನು ಹೇಳಬೇಕು.

ಶ್ರೀ ಆರ್.ಎಲ್. ಜಾಲಪ್ಪ : ಸರ್ಕಾರಕ್ಕೆ ಶಕ್ತಿ ಇಲ್ಲ ಎಂದಲ್ಲ,

ಶ್ರೀ ಸಿ.ಹೆಚ್. ವಿಜಯ ಶಂಕರ್ : ತಾವು ಅನುಮತಿ ಕೊಟ್ಟರೆ ಹೇಳುತ್ತೇನೆ. ಯಾವುದಾದರೂ ಆಗದೇ ಇರುವಂತಹ ಕೆಲಸ ಇದ್ದರೆ ಸರ್ಕಾರದ ಗಮನಕ್ಕೆ ತರಬೇಕು ಎಂದು ತಾವು ಏನು ಹೇಳಿದ್ದೀರಿ, ನಮ್ಮಲ್ಲಿ ಸಣ್ಣ ನೀರಾವರಿ ಇಲಾಖೆಗೆ ಸಂಬಂಧಪಟ್ಟ ನಾಲೆಗಳಲ್ಲಿ ಒಂದು ನಾಲೆಯಲ್ಲಿ ಕೂಡ ದುರಸ್ತಿ ಆಗಿಲ್ಲ, ಸಿಲ್ಟ್ ಎತ್ತುವಂತಹ ಕೆಲಸ ಆಗಿಲ್ಲ, ಬಹುಶಃ ಈ ಹಣ ಬಿಡುಗಡೆ ಆಗಿದ್ದರೆ ನಾಲೆಯ ಸಿಲ್ಟ್ ಎತ್ತುವಂತಹ ಕೆಲಸವನ್ನು ನಾವು ಅದರಲ್ಲಿ ತೆಗೆದುಕೊಂಡು ಮಾಡುವಂತಹ ಅವಕಾಶ ಇತ್ತು.

ಅಧ್ಯಕ್ಷರು : ನಾನು ಕೇಳಿದ್ದುದು ಒಂದು ನೀವು ಹೇಳುತ್ತಿರುವುದು ಮತ್ತೊಂದು. ಯಾವುದೇ ಒಂದು ಭಾಗದ ಜನರಿಗೆ ದುಡಿಮೆಯಿಂದಾಗಿ ಕೆಲಸ ಇಲ್ಲದೇ ಹೋಗಿದೆ, ನಾವು ಕೆಲಸ ಕೇಳಿದರೆ ಸರ್ಕಾರ ಮುಂದೆ ಬಂದು ಕೆಲಸ ಕೊಡುತ್ತಿಲ್ಲ ಎನ್ನುವ ಮಾತನ್ನು ನೀವು ಹೇಳಿದರೆ ಇಂತಹ ಗ್ರಾಮದಲ್ಲಿ ಇಂತಹ ಪ್ರದೇಶದಲ್ಲಿ ಬರಗಾಲದಿಂದಾಗಿ ಅವರಿಗೆ ಕೆಲಸ ಇಲ್ಲ, ಜೀವನ ನಡೆಯುತ್ತಿಲ್ಲ, ಕಷ್ಟ ಆಗಿದೆ, ಸರ್ಕಾರ ಮುಂದೆ ಬಂದು ಯಾವುದೇ ಯೋಜನೆಯಲ್ಲಿ ನೀವು ಕೆಲಸ ಕೊಟ್ಟಿಲ್ಲವೆಂದು ಹೇಳಿದರೆ ಅದಕ್ಕೆ ಅವರು ಜವಾಬ್ದಾರರು ಆಗುತ್ತಾರೆ. ಕೆಲಸಗಳು ಇನ್ನೂ ಆ ರೀತಿ ಹೋದರೆ ಪ್ರಪಂಚದಲ್ಲಿ ಬಹಳ ಕೆಲಸ ಆಗಬೇಕು ಎನ್ನುವುದು ಬಾಕಿ ಇದೆ. ನಾಲೆಗಳು ಆಗಬೇಕು, ಕೆರೆಗಳು ಆಗಬೇಕು, ಕೋಟೆಗಳುನ್ನು ಕಟ್ಟಬೇಕು. ಎಲ್ಲಾ ಇದೆ. ನೀವು ಸ್ಪೆಸಿಫಿಕ್ ಆಗಿ ಕೇಳಿ. ನೀವು ಕನಫ್ಯೂಸ್ ಮಾಡಿಕೊಳ್ಳುತ್ತೀರಿ. ಯಾವ ಇಷ್ಯು ಮೇಲೆ ಯಾವ ರೀತಿ ಚರ್ಚೆ ಮಾಡಬೇಕು ಎನ್ನುವಂತಹದ್ದು ಪೂರ್ಣವಾಗಿ ನೀವು ತಿಳಿದುಕೊಂಡು ಮಾಡುವುದಿಲ್ಲ, ಅದೇ ಬರುವುದು ತೊಂದರೆ.

ಶ್ರೀ ಸಿ.ಹೆಚ್. ವಿಜಯ ಶಂಕರ್ : ನಮ್ಮಲ್ಲಿ ಈಗಾಗಲೇ ಕಾಲು ಭಾಗದ ಜನಸಂಖ್ಯೆ ಕೊಡಗಿಗೆ ಹೋಗಿದ್ದಾರೆ. ಎಲ್ಲಿ ಎಸ್ಟೇಟ್‌ಗಳು ಇವೆ, ಕೆಲಸ ಮಾಡಲು ಅಲ್ಲಿ ಹೋಗಿದ್ದಾರೆ. ನಮ್ಮಲ್ಲಿ ಕೆಲಸ ಇದ್ದರೆ ಅಲ್ಲಿ ಏಕೆ ಹೋಗುತ್ತಿದ್ದರು?

ಶ್ರೀ ಆರ್.ಎಲ್. ಜಾಲಪ್ಪ : ಅಲ್ಲಿ ಕೆಲಸ ಇದ್ದಾಗ ಎಲ್ಲಾ ಕಡೆಯಿಂದ ಹೋಗುತ್ತಾರೆ.

ಶ್ರೀ ಸಿ.ಹೆಚ್. ವಿಜಯ ಶಂಕರ್ : ಆ ರೀತಿ ನಾನು 106 [illegible] ಮಾಡಿಕೊಡಬಲ್ಲೆ, ಎಷ್ಟು ಜನ ನಮ್ಮಿಂದ ಕೊಡಗಿಗೆ ಹೋಗಿದ್ದಾರೆ ಎಂದು [illegible]

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಸದಸ್ಯರು ನಾನು ಭರವಸೆ ಕೊಡುತ್ತಿದ್ದೇನೆ. ದಯವಿಟ್ಟು ತಾವು ನಾಳೆ ನಾಡಿದ್ದು ಶನಿವಾರ, ಭಾನುವಾರ ರಜೆ ಇದೆ ಅಲ್ಲಿಗೆ ಹೋಗಿ. ಅಲ್ಲಿ ಅಧಿಕಾರಿಗಳನ್ನು ಕರೆದು ಕೂರಿಸಿ ಮಾತನಾಡಿ. ಏನಾದರೂ ಸ್ಲಾಕ್‌ನೆಸ್ ಅಥವಾ ಲೋಪ ಇದ್ದರೆ ನಾನು ಅದನ್ನು ಅಟೆಂಡ್ ಮಾಡುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ : ನನ್ನ ಸಂಶಯ ನಿವಾರಣೆ ಆಗಿಲ್ಲ, ನಾನು ಕೇಳಿದೆ, ಆಗಸ್ಟ್ 15ನೇ ತಾರೀಖು ನಿಮ್ಮ ಅಡ್ವರ್‌ಟೈಸ್‌ಮೆಂಟಿನಲ್ಲಿ 44 ಕೋಟಿ ರೂಪಾಯಿ ಖರ್ಚು ಆಗಿದೆ ಎಂದು ಬಂದಿದೆ. ತಾವು ಮೊನ್ನೆ 19ನೇ ತಾರೀಖು ರಿಲೀಸ್ ಮಾಡಿರತಕ್ಕ ಅಮೌಂಟ್ ಬೇರೆ 20 ಕೋಟಿ ಸಮ್‌ಥಿಂಗ್‌ಎಂದು ಹೇಳಿದಿರಿ. ಇದರಲ್ಲಿ ಯಾವುದು ಸರಿ ಎನ್ನುವಂತಹದನ್ನು ನಾನು ಕೇಳಿದ್ದೆ. 44 ಕೋಟಿ ಸರಿಯೋ ಅಥವಾ 20 ಕೋಟಿ ಸರಿಯೋ?

ಶ್ರೀ ಆರ್.ಎಲ್. ಜಾಲಪ್ಪ : ಎರಡೂ ಸರಿ. ಕುಡಿಯುವ ನೀರಿಗೆ 44 ಕೋಟಿ ರೂಪಾಯಿ ರಿಲೀಸ್ ಮಾಡಿದ್ದೇವೆ ಎಂದು ಹೇಳಿದ್ದೇವೆ. ಇವತ್ತೂ ಅದೇ ಫಿಗರ್ಸ್ ಕೊಡುತ್ತಿದ್ದೇನೆ. ನಾವು ಸಿಆರ್‌ಎಫ್ ಫಂಡ್ಸ್ ಮತ್ತು ಆರ್‌ಡಿಪಿಆರ್ ನಿಂದ

ಸೇರಿಸಿ ಸುಮಾರು 40 ಕೋಟಿ ರೂಪಾಯಿಗಿಂತ ಜಾಸ್ತಿ ಹಣವನ್ನು ಬಿಡುಗಡೆ ಮಾಡಿದ್ದೇವೆ. ಇದರಲ್ಲಿ ಇನ್ನೂ ಎರಡೂ ಸಾವಿರದ ಎಂಟು ನೂರು ಎಂದರೆ ಸುಮಾರು 28 ಕೋಟಿ ರೂಪಾಯಿಗಳನ್ನು ಜಿಲ್ಲಾಧಿಕಾರಿಗಳ ಹತ್ತಿರ ಹಣ ಖರ್ಚು ಆಗುವುದು ಇದೆ. ಆ ಕೆಲಸ ತೆಗೆದುಕೊಂಡು ಮಾಡುತ್ತಿದ್ದಾರೆ. ಈಗ ಒಂದು ವಿಚಾರ ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತಿದ್ದೇನೆ. ನಮ್ಮ ಖರ್ಗೆಯವರು ಹೇಳಿದ್ದರಲ್ಲಿ ಸ್ವಲ್ಪ ಸತ್ಯಾಂಶ ಇದೆ. ಇದನ್ನು ನಾನು ಸುಮ್ಮನೆ ಎಲ್ಲಾ ಮಾಡಿಸಿಬಿಡಿ ಎಂದು ಹೇಳುವುದಕ್ಕೂ ನಾನು ತಯಾರಿಲ್ಲ, ಸ್ವಲ್ಪ ಸ್ಲಾಕ್‌ಲೆಸ್ ಇದೆ, ಕಾರಣ, ಅಧಿಕಾರಿಗಳ ವರ್ಗಾವಣೆ ಸ್ವಲ್ಪ ನಿಧಾನ ಆಯಿತು. ಅದು ಜೂನ್‌ವರೆಗೂ ಎಳೆದುಕೊಂಡು ಬಂತು. ಅಲ್ಲಿ ಸ್ವಲ್ಪ ತೊಂದರೆ ಆಗಿದೆ. ಇನ್ನೂ ಕೆಲವು ಕಡೆ 24 ರೂಪಾಯಿಗಳನ್ನು ಕೊಟ್ಟಾಗ ಅವರು ನಾವು ಕೆಲಸಕ್ಕೆ ಬರುವುದಿಲ್ಲ, ಮಳೆ ಬಿದ್ದರೆ 24 ರೂಪಾಯಿಗಿಂತ ಹೆಚ್ಚಿಗೆ ಅವರಿಗೆ ಕಲಿ ಸಿಗುವುದರಿಂದ 24 ರೂಪಾಯಿ ಕೆಲಸಕ್ಕ ಅವರು ಬರುವುದಿಲ್ಲ.

ಅಲ್ಲಿಯೂ ಸಹ ಸ್ವಲ್ಪ ತೊಂದರೆಯಾಗಿದೆ. ಅಧಿಕಾರಿಗಳಿಂದ ಸ್ವಲ್ಪ ತಡವಾಗಿರಬಹುದು ಆದರೆ ಇನ್ನು ಮುಂದೆ ಎಲ್ಲೆಲ್ಲಿ ಇದರ ಅವಶ್ಯಕತೆಯಿದೆಯೋ ಆಯಾ ತಾಲ್ಲೂಕುಗಳಲ್ಲಿ, ಜಿಲ್ಲೆಗಳಲ್ಲಿ ವಾರಕ್ಕೆ ಒಂದು ಸಲವಾದರೂ ರಿವ್ಯೂ ಮಾಡಿ ಈ ಕೆಲಸಗಳನ್ನು ಶೀಘ್ರವಾಗಿ ಮುಗಿಸುವಂತೆ ನಾವು ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಡುತ್ತೇವೆ ಮತ್ತು ಜಿಲ್ಲಾ ಪಂಚಾಯಿತಿಯವರಿಗೂ ಕೂಡ ನಾನು ನಮ್ಮ ಸ್ನೇಹಿತರ ಮೂಲಕ ಸೂಚನೆ ಕೊಡುವುದಲ್ಲದೆ ನಾನು ನೇರವಾಗಿ ಅವರಿಗೆ ಸೂಚನೆ ಕೊಡುತ್ತೇನೆ. ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದೇನೆಂದರೆ. ನಾವೆಲ್ಲರೂ ಸಾವಿರಾರು ವರ್ಷಗಳಿಂದದ ಬರೀ ವ್ಯವಸಾಯ ಮಾಡಿಕೊಂಡು ಬಂದಿದ್ದೇವೆ. ಆದರೆ ಇವೊತ್ತು ನಮ್ಮ ಸ್ಥಿತಿ ಏನಾಗಿದೆ? ನಾವೆಲ್ಲಾ ರೈತರೇ ಇಲ್ಲಿರುವವರಲ್ಲಿ ಶೇಕಡ 2-5ರಷ್ಟು ರೈತರು ಅಲ್ಲದಿರಬಹುದು, ಅಷ್ಟು ಹೊರತುಪಡಿಸಿದರೆ ಉಳಿದವರೆಲ್ಲರೂ ಕೂಡ ರೈತರಾಗಿದ್ದಾರೆ. ಮೂರು ತಿಂಗಳುಗಳ ಕಾಲ ಮಳೆ ಬರುವುದಕ್ಕೆ ನಿಧಾನವಾದರೆ ನಮಗೆ ತಡೆದುಕೊಳ್ಳುವುದಕ್ಕೆ ಶಕ್ತಿ ಇಲ್ಲವಲ್ಲ, ಇಂತಹ ಒಂದು ಪರಿಸ್ಥಿತಿಯಲ್ಲಿ ಎಷ್ಟು ದಿವಸ ಮುಂದುವರೆಸಿಕೊಂಡು ಹೋಗಲು ಸಾಧ್ಯ ಎಂಬುದನ್ನು ನಾವು ಯೋಚಿಸಬೇಕು. ಒಂದು ವರ್ಷ ಬರ ಬಂದಿಲ್ಲ, ಮಳೆ ಬರುವುದು ಎರಡು ತಿಂಗಳು ನಿಧಾನವಾದ್ದರಿಂದ ಆ ಎರಡು ತಿಂಗಳಿಗೇ ತತ್ತರಿಸುವಂಥ ಪರಿಸ್ಥಿತಿಯಲ್ಲಿ ನಾವು ಹಾಗೂ ರೈತರು ಇರುವುದಾದರೆ ಮುಂದಿನ ನಮ್ಮ ಭವಿಷ್ಯವೇನು ಎನ್ನುವುದನ್ನೂ ಸಹ ನಾವೆಲ್ಲರೂ ಆಲೋಚಿಸ ಬೇಕಾಗುತ್ತದೆ.

ಬೇಕಾದರೆ ಬಫರ್ ಸ್ಟಾಕ್ ಇಡಬಹುದು, ಆದರೆ ಅವರಿಗೆ ಕೊಳ್ಳುವ ಶಕ್ತಿ ಇರಬೇಕಲ್ಲಾ, ಇವೊತ್ತು ನಮ್ಮ ಜನರಿಗೆ ಕೊಳ್ಳುವ ಶಕ್ತಿ ಇಲ್ಲದಿರುವಾಗ ನಮ್ಮ ಆರ್ಥಿಕ ಸ್ಥಿತಿ ಎಷ್ಟರಮಟ್ಟಿಗೆ ಸುಧಾರಿಸಿದೆ? ಅದರಲ್ಲೂ ಗ್ರಾಮಾಂತರ ಪ್ರದೇಶಗಳಲ್ಲಿರುವ ಜನರ ಸ್ಥಿತಿ. ಅವರು ಕೂಲಿಕಾರರಾಗಿರಬಹುದು ಅಥವಾ ಸಣ್ಣ ಮತ್ತು ಅತಿ ಸಣ್ಣ ರೈತರಾಗಿರಬಹುದು, ಮೂರು ತಿಂಗಳುಗಳ ಕಾಲ ತಡೆದುಕೊಳ್ಳುವ ಶಕ್ತಿ ಇವರಲ್ಲಿ ಇಲ್ಲದಿರುವಾಗ ನಮ್ಮ ದೇಶ ಭದ್ರವಾಗಿದೆಯೇ? ಎಂದು ಹೇಳುವುದರಲ್ಲಿ ಏನಾದರೂ ಅರ್ಥವಿದೆಯೇ ಎನ್ನುವುದನ್ನು ನಾವೆಲ್ಲಾ ಯೋಚನೆ ಮಾಡಬೇಕಾಗಿದೆ. ನನಗಾದರೂ ಒಂದೊಂದು ಸಲ ಏನನ್ನಿಸುತ್ತದೆಂದರೆ ನಾವು ಶಕ್ತಿಯುತವಾದ ಬಲಯುತವಾದಂಥ ಒಂದು ರಾಷ್ಟ್ರವನ್ನು ಯಾವತ್ತು ನಿರ್ಮಿಸುತ್ತೇವೆಯೋ ಮತ್ತು ಯಾವತ್ತು ಬಡತನವನ್ನು ತೊಲಗಿಸುತ್ತೇವೆಯೋ ಎಂಬುದರ ಬಗ್ಗೆ ಎಲ್ಲಾ ಪಕ್ಷಗಳೂ ಒಂದೆಡೆ ಸೇರಿ ಯೋಚಿಸಿ ರೈತರಿಗೆ ತಡೆದುಕೊಳ್ಳುವ ಶಕ್ತಿ ಒದಗಿಸದಿದ್ದರೆ ನಮ್ಮ ರಾಜ್ಯವಾಗಲಿ, ನಮ್ಮ ರಾಷ್ಟ್ರವಾಗಲಿ ಬಲಯುತವಾಗುವುದಕ್ಕೆ ಸಾಧ್ಯವಾಗುವುದಿಲ್ಲ, ಸುಮ್ಮನೆ ಬಾಯಿ ಮಾತಿನಲ್ಲಿ, ಭಾಷಣಗಳಲ್ಲಿ

ನಾವು ಹೇಳಿಕೊಂಡು ಹೋಗಬಹುದೇ ವಿನಹ ನಿಜವಾಗಿಯೂ ನಾವು ನಶಿಸಿ ಹೋಗುತ್ತಿದ್ದೇವೆ ಎನ್ನುವುದನ್ನು ನಾವು ಎಷ್ಟು ಬೇಗ ಅರ್ಥಮಾಡಿಕೊಳ್ಳುತ್ತೇವೆಯೋ ಅಷ್ಟು ಒಳ್ಳೆಯದೆಂದು ಈ ಸಂದರ್ಭದಲ್ಲಿ ಹೇಳುತ್ತಾ, ಮಾನ್ಯ ಸದಸ್ಯರುಗಳು ಏನೇನು ಸಲಹೆಗಳನ್ನು ಕೊಟ್ಟಿದ್ದಾರೆ, ಅದನ್ನೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಈ ಒಂದು ಪರಿಸ್ಥಿತಿಯಲ್ಲಿ ಸಾಧ್ಯವಾದಷ್ಟು ಜನರಿಗೆ ತೊಂದರೆಯಾಗದಂತೆ ಪರಿಸ್ಥಿತಿ ನಿಭಾಯಿಸುವುದಕ್ಕೆ ಪ್ರಯತ್ನಿಸುತ್ತೇನೆಂದು ಭರವಸೆ ಕೊಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ. ಎಲ್ಲರಿಗೂ ವಂದನೆಗಳು.

ಶ್ರೀ ಡಿ.ಆರ್. ಪಾಟೀಲ್ (ಗದಗ) : ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಕಂದಾಯ ಸಚಿವರಿಗೆ ಕೇಳುವುದೇನೆಂದರೆ, ನಾವು ಈಗ ಮಾಡುತ್ತಿರುವಂಥ ಕೃಷಿ ಪದ್ಧತಿಯನ್ನು ಬದಲಾಯಿಸಿ, ಸಾವಯವ ಕೃಷಿ ಪದ್ಧತಿಯನ್ನು ಪುನಃ ಪ್ರಾರಂಭಿಸಬೇಕು ಹಾಗೂ ನಮ್ಮ ಜಮೀನಿನ ಫಲವತ್ತತೆಯನ್ನು ಉಳಿಸಿಕೊಳ್ಳಬೇಕಾದರೆ ಅಲ್ಲಿ ನಾವು ಎರೆಹುಳುಗಳ ಸಂಖ್ಯೆಯನ್ನು ಜಾಸ್ತಿ ಮಾಡಬೇಕು. ಅಂತಹ ಪರಿಸರವನ್ನು ನಿರ್ಮಿಸಬೇಕೆಂಬ ಮಾತನ್ನು ಸಚಿವರು ಹೇಳಿದರು. ಇದು ಕಂದಾಯ ಸಚಿವರು ವೈಯಕ್ತಿಕ ಅಭಿಪ್ರಾಯವೇ ಅಥವಾ ನಿಮ್ಮ ಸರ್ಕಾರದ ಅಭಿಪ್ರಾಯವೇ?

ಶ್ರೀ ಆರ್.ಎಲ್. ಜಾಲಪ್ಪ : ವೈಯಕ್ತಿಕ ಅಭಿಪ್ರಾಯವೂ ಹೌದು, ಸರ್ಕಾರದ ಅಭಿಪ್ರಾಯವೂ ಹೌದು.

ಶ್ರೀ ಎನ್. ರಾಜಣ್ಣ : ಇದು ರಾಷ್ಟ್ರೀಯ ಅಭಿಪ್ರಾಯವೂ ಹೌದು. ಮಣ್ಣಿನ ಫಲವತ್ತತೆ ಉತ್ತಮವಾಗಿರಬೇಕಾದರೆ ಕೊಟ್ಟಿಗೆ ಗೊಬ್ಬರ ಬಹಳ ಮುಖ್ಯ. ಹಾಗೆಯೇ ಎರೆಹುಳುಗಳೂ ಸಹ ಬಹಳ ಮುಖ್ಯ. Naturally you can develop the crop with the good product and it will be useful to the human being with a natural cultivation ಎಂದು ಹೇಳಬಹುದು.

ಶ್ರೀ ಡಿ.ಆರ್. ಪಾಟೀಲ್ : ಈಗ ನಮ್ಮ ಭೂಮಿಯಲ್ಲಿ ಎರೆಹುಳುಗಳ ಸಂಖ್ಯೆಯನ್ನು ಜಾಸ್ತಿಗೊಳಿಸಬೇಕಾದರೆ ನಾವು ರಾಸಾಯನಿಕ ಗೊಬ್ಬರವನ್ನು ಉಪಯೋಗಿಸಬಾರದೆಂಬುದು ತಮಗೆ ಗೊತ್ತಿದೆ. ಆದರೆ, ರಾಸಾಯನಿಕ ಗೊಬ್ಬರಕ್ಕೆ ಕೊಡುತ್ತಿರುವ ಸಬ್ಸಿಡಿಯನ್ನು ಏಕೆ ಕಡಿಮೆ ಮಾಡುತ್ತೀರೆಂದು ಮುಖ್ಯ ಮಂತ್ರಿಗಳು ಕೇಂದ್ರ ಸರ್ಕಾರಕ್ಕೆ ಪದೇ ಪದೇ ಕೇಳುತ್ತಿರುತ್ತಾರೆ ಇದರ ಬಗ್ಗೆ ನಿಮ್ಮಲ್ಲೇನಾದರೂ ದ್ವಂದ್ವವಿದೆಯೇ? ನಾವು ಎರೆಹುಳುಗಳನ್ನು ಹೆಚ್ಚಿಸುವುದಕ್ಕೆ ಮತ್ತು ಸಾವಯವ ಕೃಷಿಯನ್ನು ಪುನಃ ಪ್ರತಿಷ್ಠಾಪನೆ ಬೇಕಾದರೆ ಹಾಗೂ ನಮ್ಮ ಭೂಮಿಯ ಫಲವತ್ತತೆಯನ್ನು ಉಳಿಸಿಕೊಳ್ಳಬೇಕಾದರೆ ನಾವು ರಾಸಾಯನಿಕ ಗೊಬ್ಬರವನ್ನು ಉಪಯೋಗಿಸಬಾರದು, ಕ್ರಿಮಿನಾಶಕವನ್ನು ಉಪಯೋಗಿಸಬಾರದು. ಇದರ ಸಲುವಾಗಿ ನೀವು ಏನು ಕಾರ್ಯಕ್ರಮ ಹಾಕಿಕೊಳ್ಳುತ್ತೀರಿ? ಸಾವಯವ ಕೃಷಿಗೆ ಅನುಕೂಲವಾಗುವಂಥ ಕಾರ್ಯಕ್ರಮಗಳನ್ನು ಕೈಗೊಳ್ಳುವುದಕ್ಕೆ ನಿಮ್ಮ ಸರ್ಕಾರದ ಪ್ರೋತ್ಸಾಹವೇನು? ಇದರ ಬಗ್ಗೆ ದಯವಿಟ್ಟು ಕಂದಾಯ ಸಚಿವರು ಮತ್ತು ಮಾನ್ಯ ಕೃಷಿ ಸಚಿವರಾದ ಬೈರೇಗೌಡರು, ಇಬ್ಬರೂ ಸಹ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ನನಗಿಂತಲೂ ಬೈರೇಗೌಡರು ಇದರ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ he is competent more than me But as. a farmer ರಾಸಾಯನಿಕ ಗೊಬ್ಬರಗಳನ್ನು ಹೆಚ್ಚು ಬಳಸಬಾರದೆಂದು ಹೇಳಿದ್ದೇವೆಯೇ ವಿನಹ ಬಳಸಲೇಬಾರದೆಂದು ಹೇಳುವುದಕ್ಕಾಗುವುದಿಲ್ಲ, ಏಕ್‌ದಂ ಇವೊತ್ತಿನ ದಿವಸ ರಾಸಾಯನಿಕ ಗೊಬ್ಬರವನ್ನು ಬಳಸುವುದನ್ನು ಕಡಿಮೆ ಮಾಡಿದರೆ ಉತ್ಪಾದಕತೆ ಕಡಿಮೆಯಾಗುತ್ತದೆ.

ದೇಶದಲ್ಲಿ ಹಾಹಾಕಾರ ಜಾಸ್ತಿಯಾಗಬಹುದು ಮತ್ತು ನಮ್ಮ ದೇಶದಲ್ಲಿ ಏನು ಜನಸಂಖ್ಯೆ ಹೆಚ್ಚುತ್ತಿದೆ. ಇದಕ್ಕನುಗುಣವಾಗಿ ನಾವು ಆಹಾರೋತ್ಪಾದನೆಯನ್ನು ಮಾಡಲೇಬೇಕಾಗುತ್ತದೆ. ಎಲ್ಲಿಯವರೆಗೆ ಜನಸಂಖ್ಯೆಯನ್ನು ನಾವು ನಿಯಂತ್ರಿಸುವುದಕ್ಕಾಗುವುದಿಲ್ಲವೋ ಅಲ್ಲಿಯವರೆಗೆ ರಾಸಾಯನಿಕ ಗೊಬ್ಬರವನ್ನು ಕೂಡ ನಾವು ಅಲ್ಪಸ್ವಲ್ಪ ಉಪಯೋಗಿಸಲೇಬೇಕಾಗುತ್ತದೆ. ಹಾಗೆಂದಾಗ ಬರೀ ಅದರ ಮೇಲೆ ನಂಬಿ ಕೊಂಡಿರುವುದು ಅನಾವಶ್ಯಕವೆಂದು ನಾವು ನಮ್ಮ ರೈತರಿಗೆ ತಿಳಿವಳಿಕೆ ಕೊಡಬೇಕಾಗುತ್ತದೆ. ಉಳಿದ ವಿಚಾರವಾದ ಬಯೋ-ಟೆಕ್ನಾಲಜಿ ಬಗ್ಗೆ ಸನ್ಮಾನ್ಯ ಕೃಷಿ ಸಚಿವರಾದ ಬೈರೇಗೌಡರು ಹೇಳುತ್ತಾರೆ. ಈಗಾಗಲೇ ಅವರು ಸಮಗ್ರ ಕೃಷಿ ನೀತಿಯನ್ನು ತಯಾರಿಸಿದ್ದು, ಅದರ ಪ್ರತಿಯನ್ನು ತಮಗೆಲ್ಲರಿಗೂ ಕೊಟ್ಟಿದ್ದಾರೆ. ಅದರ ಬಗ್ಗೆ ಸಲಹೆಗಳೇನಾದರೂ ಕೊಡುವುದಿದ್ದರೆ ಅದಕ್ಕೆ ಸಂಬಂಧಿಸಿದ ಬೇಡಿಕೆ ಬಂದಾಗ ಕೊಟ್ಟು ಮಾತನಾಡಬಹುದು.

ಶ್ರೀ ಯು.ಬಿ. ಬಣಕಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಈಗ ಸದನದಲ್ಲಿ ಹೇಳಿರುವಂಥ ವಿಷಯಕ್ಕೂ ಮತ್ತು ತಾಲ್ಲೂಕಿನಲ್ಲಿ ನಡೆಯುತ್ತಿರುವಂಥ ವಿಷಯಕ್ಕೂ ಬಹಳಷ್ಟು ಅಂತರವಿದೆಯೆಂದು ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಕುಡಿಯುವ ನೀರಿನ ಸೌಕರ್ಯ ಒದಗಿಸಲು ಜಿಲ್ಲಾಧಿಕಾರಿಗಳ ಹತ್ತಿರ ಹಣವಿದೆಯೆಂದು ಸಚಿವರು ಹೇಳಿದರು. ಆದರೆ, ಸುಮಾರು ಒಂದು ತಿಂಗಳಿನಿಂದ ತರೀಕೆರೆ ತಾಲ್ಲೂಕಿನ ಕಡೂರು ಮತ್ತು ಯತ್ನಳ್ಳಿ ಗ್ರಾಮಸ್ಥರು ಮತ್ತು ಗ್ರಾಮ ಪಂಚಾಯಿತಿಯವರು ಮನವಿ ಹಾಗೂ ಟೆಲಿಗ್ರಾಂ ಮುಖಾಂತರ ಜಿಲ್ಲಾಧಿಕಾರಿಗಳಿಗೆ ಕುಡಿಯುವ ನೀರಿನ ಸಮಸ್ಯೆ ಕುರಿತು ತಿಳಿಸಿದರೂ ಕೂಡ ಅವರು ಮರಳಿ ಜಿಲ್ಲಾ ಪಂಚಾಯಿತಿಗೆ ಕಳುಹಿಸಿದರು. ಜಿಲ್ಲಾ ಪಂಚಾಯಿತಿಯವರು ತಮ್ಮ ಹತ್ತಿರ ಹಣವಿಲ್ಲವೆಂದು ಪುನಃ ಜಿಲ್ಲಾಧಿಕಾರಿಗಳಿಗೆ ಕಳುಹಿಸಿದರು. ಅವರ ಮನವಿ ಅಲ್ಲಿಂದಿಲ್ಲಿಗೆ ಅಡ್ಡಾಡುತ್ತಿದೆಯೇ ಹೊರತು ಇವೊತ್ತಿನವರೆವಿಗೂ ಅವರ ಕೆಲಸವಾಗಿಲ್ಲ, ಇದು ಮೊದಲನೆಯ ವಿಚಾರವಾದರೆ, ಎರಡನೆಯದಾಗಿ ಸಚಿವರು ಉದ್ಯೋಗ ಭರವಸೆ ಹಾಗೂ ಜವಾಹರ್ ರೋಜ್‌ಗಾರ್ ಯೋಜನೆ ಬಗ್ಗೆ ಹೇಳಿದರು. ಈ ವರ್ಷ ಸರ್ಕಾರ ತನ್ನ ಆಯ-ವ್ಯಯದಲ್ಲಿ 3054, 5054 ಮತ್ತು 4702 ಈ ಮೂರು ಲೆಕ್ಕ ಶೀರ್ಷಿಕೆಗಳನ್ನು ಕೈ ಬಿಟ್ಟಿದೆ,. ಸದರಿ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಕಳೆದ ಮೂರ್‍ನಾಲ್ಕು ವರ್ಷಗಳಿಂದ ಉದ್ಯೋಗ ಭರವಸೆ ಯೋಜನೆ ಮತ್ತು ಜವಹರ್ ರೋಜ್‌ಗಾರ್ ಯೋಜನೆಯಡಿ ನಡೆಸಿ-ಕೊಂಡು ಬಂದಿದ್ದಂಥ ಕೆಲಸಗಳನ್ನು ಕೈಗೆತ್ತಿಕೊಳ್ಳಬೇಕೆಂದು ಅವರು ತಿಳಿಸಿದ್ದಾರೆ. ಮತ್ತು ಇದುವರೆವಿಗೂ ಹೊಸದಾದ ಯಾವುದೇ ಕೆಲಸವನ್ನು ಪ್ರಾರಂಭಿಸಿಲ್ಲ. ಇದನ್ನು ನಾನು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಆರ್.ಎಲ್. ಜಾಲಪ್ಪ : ಸ್ಪಿಲ್-ಓವರ್ ವರ್ಕ್ಸ್ ಏನಿದೆ, ಆ ಕೆಲಸವನ್ನು ಮುಗಿಸಬೇಕೆಂದು ಹೇಳಿದ್ದೇವೆ. ಅದು ಯಾವಾಗಲೂ ಸಹಜವಾಗಿರುವುದರಿಂದ ಆ ಕೆಲಸ ಮಾಡುವಾಗ ಜನರಿಗೆ ಕೆಲಸ ಸಿಗುತ್ತದೆಯೋ ಇಲ್ಲವೋ ಹಳೆಯ ಕೆಲಸ ಮಾಡಿದರೂ ಕೂಡ ಜನರಿಗೆ ಕೆಲಸ ಸಿಗುತ್ತದೆ. ಮೊದಲು ಆ ಹಳೆಯ ಕೆಲಸ ಮುಗಿಸಿ ಎಂದು ಹೇಳಿದ್ದೇವೆ. ಇಲ್ಲದಿದ್ದರೆ ಸ್ಪಿಲ್-ಓವರ್ ವರ್ಕ್ಸ್ ಮುಗಿಸದಿದ್ದರೆ, ಮುಂದಿನ ವರ್ಷ ಅದನ್ನು ಮುಗಿಸಬೇಕಾದರೆ ಎಸ್ಕಲೇಶನ್ ಜಾಸ್ತಿಯಾಗುತ್ತದೆ.

ಶ್ರೀ ಯು.ಬಿ. ಬಣಕಾರ್ : ಅವರಿಗೆ ಉದ್ಯೋಗ ಕೊಡುವಂಥ ಭರವಸೆಯೂ ಇಲ್ಲ. ಈಗಾಗಲೇ ಕಾಮಗಾರಿ ಮುಗಿದು ಅಲ್ಲಿ ಕಲ್ಲುಗಳನ್ನು ಹೊರುವಂಥ ಕೆಲಸ ಬಾಕಿ ಇದ್ದರೂ ಆ ಉದ್ಯೋಗವೂ [illegible] ಜನರಿಗೆ ಸಿಗುತ್ತಿಲ್ಲ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಸಚಿವರಾದ ಜಾಲಪ್ಪನವರು ಬರಗಾಲದ ಬಗ್ಗೆ ಸರ್ಕಾರದ ವತಿಯಿಂದ ಏನೇನು ಕ್ರಮ ಕೈಗೊಳ್ಳಲಾಗಿದೆಯೆಂದು ಬಹಳ ವಿವರವಾಗಿ ಉತ್ತರ ಕೊಟ್ಟಿದ್ದಾರೆ. ಬಹುಶಃ ತಮಗೂ ಕೂಡ ಗೊತ್ತಿರುವಂತೆ ಬಿಜಾಪುರ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಈ ವರ್ಷ ಬಂದ ಬರಗಾಲದ ಬವಣೆಯಿಂದ ಜನರೆಲ್ಲರೂ ನರಳುತ್ತಿದ್ದಾರೆ. ಆದರೆ ನಾವು ಈ ವರ್ಷ ಸುದೈವಿಗಳು. ಕಾರಣ, ನಮ್ಮ ಜಿಲ್ಲೆಯ ಬಹಳಷ್ಟು ತಾಲ್ಲೂಕುಗಳಲ್ಲಿ ಬರಗಾಲದ ಛಾಯೆ ಅಷ್ಟು ಪರಿಣಾಮಕಾರಿಯಾಗಿ ಬಿದ್ದಿಲ್ಲ, ಆದರೆ ನಾನು ತಮ್ಮಿಂದ ನಿರೀಕ್ಷಿಸುವುದೇನೆಂದರೆ, ತಾವು ಮನಸ್ಸು ಮಾಡಿದರೆ ಇದಕ್ಕೆ ಶಾಶ್ವತ ಪರಿಹಾರ ಕಂಡುಹಿಡಿಯಲು ಸಾಧ್ಯವಿದೆ. ಈಗ ಉದಾಹರಣೆಗೆ ನೀರಾವರಿ ಇಲಾಖೆಯ 'ಕಾಡಾ' ಯೋಜನೆಯಲ್ಲಿ ಅನೇಕ ಬಾಂದ್ರಾಗಳನ್ನು ಕಟ್ಟುವುದಾಗಲಿ, ಪಿಕ್-ಅಪ್ಸ್ ಕಟ್ಟುವುದಾಗಲಿ ಮತ್ತು ಬೇರೆ ಸಣ್ಣ ಸಣ್ಣ ಕೆರೆಗಳನ್ನು ನಿರ್ಮಾಣ ಮಾಡುವುದಾಗಲಿ. ಈ ಎಲ್ಲಾ ಯೋಜನೆಗಳನ್ನು ಮಾಡುವುದಕ್ಕೆ ಮುಂಚಿತವಾಗಿ ತಾವು ಸಂಬಂಧಿಸಿದ ಎಲ್ಲಾ ಶಾಸಕರುಗಳ ಹಾಗೂ ಅಧಿಕಾರಿಗಳ ಸಭೆ ಕರೆದು ಬರಗಾಲಕ್ಕೆ ಸಂಬಂಧಿಸಿದಂತೆ ಒಂದು ಶಾಶ್ವತ ಪರಿಹಾರ ಕಂಡುಹಿಡಿಯುವುದಕ್ಕೆ ತಾವು ಮನಸ್ಸು ಮಾಡುತ್ತೀರಾ? ಹೇಗೆ? ಅಲ್ಲದೆ ಏನೇನು ಕೆಲಸಗಳನ್ನು ತೆಗೆದುಕೊಳ್ಳಬೇಕೆಂಬುದರ ಬಗ್ಗೆ ಈಗಾಗಲೇ ನಾವು ನಿರ್ಣಯ ಮಾಡಿ ಕಳುಹಿಸಿ 15-20 ದಿವಸಗಳಾಗಿದ್ದರೂ ಇನ್ನೂ ಅದಕ್ಕೆ ಮಂಜೂರಾತಿ ನೀಡಿಲ್ಲ, ಕೆಲಸಗಳಿನ್ನೂ ಪ್ರಾರಂಭವಾಗಿಲ್ಲ. ಕೆಲಸಗಳನ್ನು ಆದಷ್ಟು ಬೇಗ ಕಾರ್ಯಗತಗೊಳಿಸುವ ರೀತಿ ದಯಮಾಡಿ ತಾವು ಸಂಬಂಧಿಸಿದವರಿಗೆ ಸೂಚನೆಗಳನ್ನು ಕೊಡುತ್ತೀರಾ?

6.40 ಪಿ.ಎಂ.

ಶ್ರೀ ಆರ್.ಎಲ್. ಜಾಲಪ್ಪ : ಈ ವಿಷಯವಾಗಿ ಪ್ರತಿ ಎಂಟು ದಿವಸಕ್ಕೆ ಏನೇನು ಕೆಲಸ ಯಾವ್ಯಾವ ತಾಲ್ಲೂಕುಗಳಲ್ಲಿ ನಡೆಯುತ್ತಿದೆಯೆನ್ನುವ ಬಗ್ಗೆ ಮಾನಿಟರ್ ಮಾಡಿದ್ದೇವೆ. ಮತ್ತು ಜಿಲ್ಲಾಧಿಕಾರಿಗಳಿಗೆ ಕಟ್ಟು ನಿಟ್ಟಾದ ಸಲಹೆ ಮತ್ತು ಸೂಚನೆಗಳನ್ನು ಕೊಟ್ಟು ಏನು ಶಾಸಕರು ಕೆಲಸಗಳನ್ನು ಹೇಳುತ್ತಿದ್ದಾರೆ ಆ ಕೆಲಸಗಳಿಗೆ ಬೇಗ ಎಸ್ಟಿಮೇಟ್ ಅಪ್ರೂವ್ ಮಾಡಿಕೊಡಿ, ಒಂದು ವೇಳೆ ಎಸ್ಟಿಮೇಟ್ ನಿಧಾನವಾದರೆ ಕೆಲಸವನ್ನು ಪ್ರಾರಂಭ ಮಾಡಿಯೆಂದು ಸೂಚನೆ ಕೊಟ್ಟಿದ್ದೇವೆ.

ಶ್ರೀ ಹೆಚ್.ಡಿ. ಬಸವರಾಜ್ : ಸನ್ಮಾನ್ಯ ಅಧ್ಯಕ್ಷರೆ. ಬರಗಾಲದ ಬಗ್ಗೆ ಅಧಿಕಾರಿಗಳಲ್ಲಿ ಚುರುಕು ಮುಟ್ಟಿಸತಕ್ಕ ವ್ಯವಸ್ಥೆ ಮಾಡುತ್ತೇವೆ, ಅವರಿಗೆ ರಿವ್ಯೂ ಮಾಡಲು ಅನುಕೂಲ ಮಾಡಿಕೊಡುತ್ತೇವೆಂದು ಮಾನ್ಯ ಸಚಿವರು ಹೇಳಿದರು. ಸಚಿವರಲ್ಲಿ ಬರಗಾಲದ ಬಗ್ಗೆ ನಾನು ಮಾತನಾಡುತ್ತಿರುವ ಈ ಸಂದರ್ಭದಲ್ಲಿ ಕೇಳಿಕೊಳ್ಳುವುದೇನೆಂದರೆ ನಮ್ಮ ತಾಲ್ಲೂಕಿನಲ್ಲಿ ಉತ್ತಮವಾಗಿ ಕೆಲಸಮಾಡುತ್ತಿದ್ದಂಥ ತಹಶೀಲ್ದಾರರನ್ನು ವರ್ಗಾವಣೆ ಮಾಡಿದರು. ಆದರೆ ಅವರ ಬದಲಾಗಿ ಇನ್ನೊಬ್ಬರು ತಹಶೀಲ್ದಾರರನ್ನು ಇನ್ನೂ ನೇಮಕ ಮಾಡಲಿಲ್ಲವೆಂದರೆ ಇನ್ನು ಯಾವ ರೀತಿಯಲ್ಲಿ ಅವರು ಇದರ ಬಗ್ಗೆ ರಿವ್ಯೂ ಮಾಡುತ್ತಾರೆ ಎಂಬುದು ನನಗೆ ಅರ್ಥವಾಗಲಿಲ್ಲ. ಎರಡನೆಯದಾಗಿ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಯ ಚುನಾವಣೆಯಾಗಿ ಆರು ತಿಂಗಳ ಮೇಲಾಗಿದೆ, ಆದರೆ ಇದುವರೆಗೂ ಸಹ ಅಲ್ಲಿಗೆ ಕಾರ್ಯ ನಿರ್ವಾಹಕ ಅಧಿಕಾರಿಗಳನ್ನು ಹಾಕದೆ ನಾವು ಕ್ರಿಯಾಯೋಜನೆಯನ್ನು ತಯಾರು ಮಾಡಿ ಅದನ್ನು ಜಿಲ್ಲಾಪರಿಷತ್‌ಗೆ ಕಳಿಸಿಕೊಡಬೇಕು ಅದನ್ನು ಕೂಡ ಮಾಡಿಲ್ಲ. ಈಗ ಮಳೆ ಬಂದಿರಬಹುದು, ಆದರೆ ಅದು ಬೇರೆ ಪ್ರಶ್ನೆ. ಆದರೆ ಬರಗಾಲದ ಬಗ್ಗೆ ಚಿಂತನೆ ಮಾಡುವಂಥದ್ದು ಯಾವುದೇ ಯೋಜನೆಯ ಬಗ್ಗೆ ನಾವು ವ್ಯವಸ್ಥಿತವಾಗಿ ಕೆಲಸ ಮಾಡಬೇಕೆಂದು ಉತ್ಸಾಹದಲ್ಲಿ ಆಯ್ಕೆಯಾದಂಥ ಜನಪ್ರತಿನಿಧಿಗಳಾದ ನಾವು ಆರು

ತಿಂಗಳಿನಿಂದ ಸುಮ್ಮನೆ ಕುಳಿತುಕೊಂಡಿದ್ದೇವೆ. ಯಾವುದೇ ಸಭೆ ಮಾಡಬೇಕೆಂದರೆ ನಿಯಮಾವಳಿಯ ಪ್ರಕಾರ ಕಾರ್ಯನಿರ್ವಾಹಕ ಅಧಿಕಾರಿ ಇರಬೇಕಾಗುತ್ತದೆ. ಅಧಿಕಾರಿಯನ್ನು ನೇಮಕ ಮಾಡಿದ್ದಾರೆ. ಆದರೆ ಆ ಅಧಿಕಾರಿ ಇದುವರೆಗೂ ಹಾಜರಾಗಿಲ್ಲ, ಅವರನ್ನು ಯಾವ ದೃಷ್ಟಿಯಿಂದ ನೇಮಕ ಮಾಡಿದರೋ ಗೊತ್ತಿಲ್ಲ. ಸರ್ಕಾರ ಅವರಿಗೆ ಯಾವ ರೀತಿಯಲ್ಲಿ ಒತ್ತಾಸೆ ಕೊಡುತ್ತಿದೆಯೋ ಗೊತ್ತಿಲ್ಲ. ಅವರ ಮೇಲೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಂಡಿದ್ದರೆ ಬರಪರಿಹಾರದ ಸಮಯದಲ್ಲಿ ಜನಪ್ರತಿನಿಧಿಗಳೇನಾದರೂ ಕೆಲಸ ಮಾಡಬಹುದಾಗಿತ್ತು, ಸರ್ಕಾರ ಸಹ ಕೆಲಸ ಮಾಡುತ್ತಿಲ್ಲ, ಜನಪ್ರತಿನಿಧಿಗಳು ಕೆಲಸ ಮಾಡಬೇಕೆಂದು ಉತ್ಸಾಹದಲ್ಲಿದ್ದರೂ ಸಹ ಅವರ ಕೈಯಿಂದಲೂ ಸಹ ಕೆಲಸ ಮಾಡಿಸುತ್ತಿಲ್ಲ. ಈ ಸಂದರ್ಭದಲ್ಲಿ ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳಿ ಕೊಳ್ಳುವುದೇನೆಂದರೆ ಮೊದಲು ತಹಶೀಲ್ದಾರರನ್ನು ಹಾಕಬೇಕು ಅದರ ಜೊತೆಗೆ ಕಾರ್ಯನಿರ್ವಾಹಕ ಅಧಿಕಾರಿಗೆ ಎಚ್ಚರಿಕೆಯನ್ನು ಕೊಟ್ಟು ಈ ಕೂಡಲೆ ಕೆಲಸಕ್ಕೆ ಹಾಜರಾಗಬೇಕೆಂದು ಹೇಳಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಕೊಡಗಿನಲ್ಲಿ ಬರಗಾಲವೆನ್ನುವುದು ಕಾಣುತ್ತಿರಲಿಲ್ಲ. ಆದರೆ ಈ ನಡುವೆ ಅದೂ ಕೂಡ ಆಗಾಗ್ಗೆ ಕಂಡುಬರುತ್ತಿದೆ. ಅದಕ್ಕಾಗಿ ಶಾಶ್ವತವಾದ ಪರಿಹಾರ ಮಾಡಲು ಕೆಲವಾರು ನೀರಾವರಿ ಯೋಜನೆಯನ್ನು ಮಾಡಬೇಕು. ನಾನು ತಾಂತ್ರಿಕ ಪದವೀಧರನಾಗಿರುವುದರಿಂದ ಸಲಹೆಯನ್ನು ಕೊಡುವುದೇನೆಂದರೆ ಇಲ್ಲಿಂದ ಸಂಬಂಧಪಟ್ಟಂಥ ತಾಂತ್ರಿಕ ಅಧಿಕಾರಿಯನ್ನು ಅಲ್ಲಿಗೆ ಕಳಿಸಿಕೊಡಿಯೆಂದು ಕೇಳಿಕೊಂಡಿದ್ದೆ, ಅದರ ಬಗ್ಗೆ ಸಚಿವರು ಯಾವುದೇ ಉತ್ತರವನ್ನು ತಮ್ಮ ಭಾಷಣದಲ್ಲಿ ಹೇಳಲಿಲ್ಲ, ಅವರಲ್ಲಿ ದಯಮಾಡಿ ಕೇಳಿಕೊಳ್ಳುವುದೇನೆಂದರೆ ನನ್ನ ಮನಸ್ಸಿನಲ್ಲಿರುವ ಕೆಲವಾರು ಯೋಜನೆಗಳನ್ನು ಇವರ ಕಾಲದಲ್ಲಾದರೂ ಕಾರ್ಯಗತ ಮಾಡಲು ಆ ಅಧಿಕಾರಿಗಳನ್ನು ಕಳಿಸಿಕೊಡಬೇಕು ಮತ್ತು ಆ ಕಾರ್ಯವನ್ನು ಕೈಗೆತ್ತಿಕೊಳ್ಳಲು ಎಷ್ಟು ಹಣವು ಬೇಕಾಗುತ್ತದೆಯೋ ಅದನ್ನು ಸರ್ಕಾರದಿಂದ ಮಂಜೂರು ಮಾಡಿಸಿಕೊಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಅಧ್ಯಕ್ಷರೇ, ಅವರು ಮಾಡಿರುವ ಯೋಜನೆಗಳನ್ನು ನಾವು ಕೈಗೊಳ್ಳಲು ಇಲ್ಲಿಂದ ತಜ್ಞರನ್ನು ಕಳುಹಿಸಿಯೆಂದು ಹೇಳುತ್ತಿದ್ದಾರೆ. ಅದು ಇಂದಿನ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲದ ಮಾತು. ಬಲಗಾಲದ ಪರಿಹಾರಕೋಸ್ಕರ ದೊಡ್ಡ ಯೋಜನೆಗಳನ್ನು ತಕ್ಷಣ ತೆಗೆದುಕೊಳ್ಳತಕ್ಕ ಶಕ್ತಿ ಸರ್ಕಾರಕ್ಕೂ ಇಲ್ಲ, ಆ ರೀತಿ ಅವಕಾಶವು ಸಾಧ್ಯವಾಗುವುದಿಲ್ಲ, ಆದರೆ ಇದಕ್ಕೆ ಶಾಶ್ವತವಾದ ಪರಿಹಾರವಾಗಬೇಕಾಗುತ್ತದೆಂಬುದನ್ನು ನಾನು ಒಪ್ಪುತ್ತೇನೆ. ಎರಡನೆಯದಾಗಿ ತಹಶೀಲ್ದಾರರ ಬಗ್ಗೆ ಹೇಳಿದ್ದೀರಿ. ಇನ್ನು ಮೂರು ದಿವಸದಲ್ಲಿ ಅಂದರೆ ಸೋಮವಾರದಲ್ಲಿ ಅದರ ಬಗ್ಗೆ ಆದೇಶ ಹೊರಡಿಸುತ್ತೇನೆ. ಕೆಲವು ತೊಂದರೆಗಳಿತ್ತು. ಮೊದಲನೆಯ ವರ್ಗದ ತಹಶೀಲ್ದಾರರೆಲ್ಲರೂ AEOS ಇದ್ದು EOS ಆಗಿದ್ದರಿಂದ ನಾವು ಎರಡನೆಯ ವರ್ಗದವರನ್ನು ಮೊದಲನೆಯ ವರ್ಗಕ್ಕೆ ಬಡ್ತಿಯನ್ನು ಕೊಟ್ಟು ನೇಮಕ ಮಾಡುವಲ್ಲಿ ತೊಂದರೆಯಾಗಿದೆ ಸೋಮವಾರದೊಳಗೆ ಆದೇಶವನ್ನು ಕಳಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ, ಆರ್.ಎಲ್.ಇ.ಜಿ.ಪಿ, ಎನ್.ಆರ್.ಇ.ಪಿ ಅಥವಾ ಬೇರೆ ಬೇರೆ ಬಾಬಿನಲ್ಲೇನು ಹಣವನ್ನು ಕೊಟ್ಟಿದ್ದೇವೆ ಅದನ್ನು ವರ್ಷದ 365 ದಿವಸದಲ್ಲೂ ಸಹ ಕಳೆದ ಹತ್ತಾರು ವರ್ಷದಿಂದ ಮಾಡಿಕೊಂಡು ಬಂದಿರುವಂಥ ಕಾರ್ಯಕ್ರಮ. ಮನಗೆಲ್ಲರಿಗೂ ತೃಪ್ತಿ ತರುವ ವಿಚಾರವೇನೆಂದರೆ ದೇವರ ದಯೆಯಿಂದ ಮಳೆ ಬಿದ್ದಿದೆ, ಜಲಾಶಯ ತುಂಬಿದೆ, ಬದುಕಲು ಉಸಿರಾಡುವ ಸ್ಥಿತಿ ಬಂದಿದೆ, ಜೆ.ಹೆಚ್. ಪಟೇಲರು ವಿದ್ಯುತ್ ಬರವನ್ನು ತಂದಿಡುತ್ತಿದ್ದರು, ಆದರೆ ಈಗ ಅವರು ನೆಮ್ಮದಿಯಿಂದಿದ್ದಾರೆ, ಜನರು ನೆಮ್ಮದಿಯಿಂದಿದ್ದಾರೆ. ಸರ್ಕಾರದ ಮೇಲೆ ನಮ್ಮ ಆರೋಪವೇನೆಂದರೆ ಕಳೆದ ಮೇ ತಿಂಗಳನಿಂದ ಹೆಚ್ಚು ಕಮ್ಮಿ ಆಗಸ್ಟ್ ಕೊನೆಯ

ವರೆಗೆ ರಾಜ್ಯದಲ್ಲಿ ಭೀಕರವಾದ ಬರಗಾಲದ ಪರಿಸ್ಥಿತಿ ಇದ್ದಾಗ ಮುಖ್ಯಮಂತ್ರಿಗಳು ನಾವು ಒಂದು ಸ್ಕೀಮ್ ಮಾಡುತ್ತಿದ್ದೇವೆ,

ರೈತರಿಗೆ ಬೀಜವನ್ನು ಕೊಡುತ್ತೇವೆ. ಗೊಬ್ಬರ ಕೊಡುತ್ತೇವೆ. ಅದರ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಆದೇಶವನ್ನು ಕೊಟ್ಟಿದ್ದೇವೆ ಎಂದು ಹೇಳಿಕೆಯನ್ನು ಕೊಟ್ಟಿದ್ದರು. ಅದರ ಬಗ್ಗೆ ವಿವರವನ್ನು ತರಿಸಿ ಅನುಕೂಲ ಮಾಡಿಕೊಡುತ್ತೇವೆಂದು ಹೇಳಿಕೆಯನ್ನು ಕೊಟ್ಟಿದ್ದರು. ಆದರೆ ತಮ್ಮ ಉತ್ತರದಲ್ಲಿ ಒಬ್ಬ ಸಾಮಾನ್ಯ ರೈತನಿಗೆ, ಮುಂಗಾರು ಬೆಳೆಯನ್ನು ಕಳೆದುಕೊಂಡವನಿಗೆ ಒಂದು ಪೈಸೆ ಪರಿಹಾರ ಕೊಡಲಿಲ್ಲ, ಬಿತ್ತನೆ ಬೀಜ ಕೊಡಲಿಲ್ಲ, ಸೌಲಭ್ಯಗಳನ್ನು ಕೊಡಲಿಲ್ಲ. ತಾವು ವ ತುಮಾತಿಗೆ ಜಿಲ್ಲಾಧಿಕಾರಿಗಳಿಗೆ ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಹೇಳುತ್ತೀರಿ. ತಾವೇನು ಇದಕ್ಕಾಗಿ 39.50 ಕೋಟಿ ಬಿಡುಗಡೆ ಮಾಡಿದ್ದೀರಿ ಅದರಿಂದ ಒಂದು ಹತ್ತು ತಾಲ್ಲೂಕುಗಳಲ್ಲಿ ಬರಗಾಲ ಕಾಮಗಾರಿಗೆ ಖರ್ಚು ಮಾಡಿದ್ದೇವೆ ಎಂದು ತಮ್ಮ ಉತ್ತರದಲ್ಲಿ ಯಾವ ಮಾಹಿತಿ ಸಹ ಇಲ್ಲ, ಜಿಲ್ಲಾಧಿಕಾರಿಗಳ ಹತ್ತಿರ ಹಣವಿದೆ ಖರ್ಚು ಮಾಡಿಕೊಳ್ಳಿ ಎಂದು ಹೇಳುತ್ತಿದ್ದೀರಿ.

ಈ ಭೀಕರ ಬರಗಾಲಕ್ಕೆ ತುತ್ತಾಗಿರುವ ರೈತರನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿರುವುದು ನಿಮ್ಮಿಂದಾಗಿದೆ. ಮಳೆಯಾಗುವುದಕ್ಕಿಂತ ಮೊದಲ ರೈತನ ಗತಿಯೇನು? ಆ ಸಮಯದಲ್ಲಿ ಏನೂ ಮಾಡದೆಯೇ ಸಂಪೂರ್ಣವಾಗಿ ಬರಗಾಲಕ್ಕೆ ತುತ್ತಾದ ರೈತರನ್ನು ನಿರ್ಲಕ್ಷ್ಯ ಮಾಡಿದ್ದೀರಿ. ರೈತರನ್ನು ಉದ್ಧಾರ ಮಾಡುತ್ತೇವೆಂದು ತಾವೇನು ಹೇಳಿದ್ದೀರಿ ಆದರೆ ರೈತರ ಬಗ್ಗೆ ತಮಗೆ ಕಳಕಳಿ ಇಲ್ಲ. ರೈತ ವಿರೋಧಿ ಸರ್ಕಾರದ ಧೋರಣೆಯನ್ನು ವಿರೋಧಿಸಿ ನಾವೆಲ್ಲರೂ ಸಹ ಸಭೆಯಿಂದ ನಿರ್ಗಮಿಸುತ್ತಿದ್ದೇವೆ.

(ಬಿ.ಜೆ.ಪಿ. ಸದಸ್ಯರುಗಳೆಲ್ಲರೂ ಸಭೆಯನ್ನು ತ್ಯಾಗ ಮಾಡಿದರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಮೊದಲಿನಿಂದಲೂ ಹೇಳುವುದೇನೆಂದರೆ.

ಶ್ರೀ ಆರ್.ಎಲ್. ಜಾಲಪ್ಪ: ತಮ್ಮ ಕಾಲದಲ್ಲಿ ಏನು ಮಾಡಿದ್ದೀರಿ ಎಂದು ಮೊದಲು ಹೇಳಿ. ತಾವು ಕಂದಾಯ ಸಚಿವರಾಗಿದ್ದಾರೆ ದೊಡ್ಡಬಳ್ಳಾಪ್ಪುರದಲ್ಲಿ 12 ಸಾವಿರ ಮನೆಗಳು ಬಿದ್ದಿದ್ದಾಗ ಎಷ್ಟು ಮನೆಗಳಿಗೆ ಪರಿಹಾರ ಕೊಟ್ಟಿದ್ದೀರಿ. ಎಂದು ಮನೆಗೆ ಕೊಟ್ಟಿರಾ? ಆದರೆ ನಮ್ಮ ಮೇಲೆ ಸುಮ್ಮನೆ ಹೇಳುತ್ತೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಆ ರೀತಿ ಮಾತನಾಡಬೇಕು. ತಾವು ಈಗಾಗಲೇ 235 ಕೋಟಿ ಬಿಡುಗಡೆ ಮಾಡಿರುವ ಪ್ರಕಾರ ಖರ್ಚು ಮಾಡಿದ್ದೇ 62 ಕೋಟಿ. ಇದರ ಅರ್ಥವೇನೆಂದರೆ ಅವರು ಈ ಪ್ರಕೃತಿ ವಿಕೋಪದ ಸಮಯದಲ್ಲಿ ಯಾವ್ಯಾವ ಪರಿಹಾರ ಕೆಲಸಗಳನ್ನು ತೆಗೆದುಕೊಳ್ಳಬೇಕಾಗಿತ್ತು. ಹಣವನ್ನು ಖರ್ಚು ಮಾಡಬೇಕಾಗಿತ್ತೊ ಅದನ್ನು ಸಮರ್ಪಕವಾಗಿ ಮಾಡಿಲ್ಲ, ಎರಡನೆಯದಾಗಿ ತಾವು ಸರಿಯಾಗಿ ಕೆಲಸ ಮಾಡಿ ಎಂದು ರಾಜ್ಯಪಾಲರಿಗೆ ಮೆಮೊರ್ಯಾಂಡಂ ಕೊಟ್ಟಿದ್ದು ಮತ್ತು ಇದರ ಬಗ್ಗೆಯೇ ವಿಶೇಷ ಅಧಿವೇಶನವನ್ನು ಕರೆಸಿ ಚರ್ಚೆಮಾಡಬೇಕೆಂದು ಹೇಳಿದ್ದು. ಇಷ್ಟಾದರೂ ಸಹ ಆಡಳಿತ ಯಂತ್ರವನ್ನು ಅಧಿಕಾರಿಗಳನ್ನು ಚುರುಕುಗೊಳಿಸಿ ಕೆಲಸ ಮಾಡತಕ್ಕಂಥ ಯಾವುದೇ ಒಂದು ಶಕ್ತಿಯನ್ನು ಅವರು ತೋರಿಸಲಿಲ್ಲ, ಅನೇಕ ಕೆಲಸಗಳನ್ನು ಸಹ ಅವರು ನಿಲ್ಲಿಸಿದ್ದಾರೆ. ಜಿಲ್ಲಾ ಮತ್ತು ಡೆಪ್ಯೂಟಿ ಕಮೀಷನರ್ ರವರುಗಳಲ್ಲಿ ಸಹಕಾರವಿಲ್ಲ, ನಾವು ಮೊದಲೇ ಡೆಪ್ಯೂಟಿ ಕಮೀಷನರ್‌ರವರನ್ನು ಕ್ಯಾಪ್ಟನ್ ಮಾಡಿ ಜಿಲ್ಲೆಯ ಸಂಪೂರ್ಣ ಅಧಿಕಾರವನ್ನು ಕೊಟ್ಟು ಈ ಹಣ ಸಂಪೂರ್ಣವಾಗಿ ಖರ್ಚಾಗುತ್ತದೋ ಇಲ್ಲವೋ ಎನ್ನುವ ಬಗ್ಗೆ ವಿವರವಾಗಿ ನೋಡಲು ಅಧಿಕಾರವನ್ನು ಕೊಡಬೇಕೆಂದು ಹೇಳಿದ್ದೆವು, ಈ ಕೆಲಸವನ್ನು ಸಹ ಅವರು ಮಾಡಲಿಲ್ಲ,

ಟಾಸ್ಕ್ ಫೋರ್ಸ್ ಕೂಡ ಪ್ರತಿಯೊಂದು ತಾಲ್ಲೂಕಿನಲ್ಲಿ ಕರೆಯಿಸಿ ಅಲ್ಲಿ ಹಣವನ್ನು ಖರ್ಚುಮಾಡುವ ಬಗ್ಗೆ ರಿವ್ಯೂ ಮಾಡಬೇಕು, ಜಿಲ್ಲಾ ಮಂತ್ರಿಗಳು ರಿವ್ಯೂ ಮಾಡಬೇಕು, ರಾಜ್ಯಮಟ್ಟದಲ್ಲಿ ರಿವ್ಯೂ ಮಾಡಬೇಕು ಎಂದು ಕೇಳಿದ್ದರೂ ಸಹ ಅದನ್ನು ಸಹ ಸರಿಯಾಗಿ ಮಾಡಿಲ್ಲ. ಇದೆಲ್ಲವನ್ನೂ ನೋಡಿದರೆ ರಿಲೀಫ್ ಕೆಲಸದಲ್ಲಿ ಅವರಿಗೆ ಹೆಚ್ಚಿನ ಆಸಕ್ತಿ ಇಲ್ಲ, ಮತ್ತು ಜನರ ಸಮಸ್ಯೆಯನ್ನು ನಿವಾರಣೆ ಮಾಡಲು ಅವರಿಗೆ ಆಸಕ್ತಿಯಿಲ್ಲವೆಂದು ಇದರಿಂದ ಅರ್ಥವಾಗುತ್ತದೆ. ಅವರ ಉತ್ತರ ಸಮಾಧಾನಕರವಾಗಿಲ್ಲದ ಕಾರಣ ನಾವುಗಳು ಸಹ ಸಭೆಯಿಂದ ನಿರ್ಗಮಿಸುತ್ತಿದ್ದೇವೆ.

(ಕಾಂಗ್ರೇಸ್ (ಐ) ಸದಸ್ಯರುಗಳು ಸಭೆಯಿಂದ ನಿರ್ಗಮಿಸಿದರು)

ಶ್ರೀ ಕರಡಿ ಸಂಗಣ್ಣ (ಕೊಪ್ಪಳ) : ಸನ್ಮಾನ್ಯತ ಅಧ್ಯಕ್ಷರೆ. ಮಾನ್ಯ ಕಂದಾಯ ಮಂತ್ರಿಗಳಲ್ಲಿ ನನ್ನ ಕೆಲವು ಅಭಿಪ್ರಾಯಗಳನ್ನು ಹೇಳಬಯಸುವೆ. ಶ್ರೀಯುತ ಜಾಲಪ್ಪನವರು ಅತ್ಯಂತ ಶಾಶ್ವತ ಬರಗಾಲದ ಹಿನ್ನೆಲೆಯಲ್ಲಿ, ನಾವು ಬರಗಾಲವನ್ನು ಎದುರಿಸಿದಂಥ ಪರಿಸ್ಥಿತಿಯಲ್ಲಿದ್ದೇವೆ, ಅದರ ಬಗ್ಗೆ ನಾವೆಲ್ಲರೂ ಸಹ ಚಿಂತನೆ ಮಾಡಬೇಕು ಎಂದು ಅವರು ಹೇಳಿರುವುದನ್ನು ನೋಡಿದರೆ ಅವರನ್ನು ಶ್ಲಾಘಿಸಬೇಕಾಗಿದೆ. ಇವತ್ತು ಮರಗಳನ್ನು ನಾವು ನಾಶಮಾಡುತ್ತಿರುವುದರಿಂದ ಮರಗಳು ಇಲ್ಲದೆ ಮಳೆಯೂ ಬರುತ್ತಿಲ್ಲ, ಬರಗಾಲವು ಸೃಷ್ಟಿಯಾಗಬೇಕಾದರೆ ಅದೇ ಹಿನ್ನೆಲೆಯಾಗಿದೆ. ಆದ್ದರಿಂದ ನಾವು ಶಾಸನದ ರೂಪದಲ್ಲಾದರೂ ಸಹ 4-5 ಎಕರೆ ಜಮೀನು ಹೊಂದಿರುವ ರೈತರು ಹತ್ತು ಇಲ್ಲವೆ ಹದಿನೈದು ಗುಂಟೆ ಜಮಿನಿನಲ್ಲಿ ಯಾವುದೇ ಜಾತಿಯ ಮರವನ್ನು ಬೆಳೆಸಿದರೆ. ಮುಂದಿನ ಪೀಳಿಗೆಗಳು ಬದುಕಲು ಸಾಧ್ಯವಾಗುತ್ತದೆ. ನಮ್ಮ ತಾಲ್ಲೂಕಿನ ಬರಗಾಲದ ಉದಾಹರಣೆಯನ್ನು ಕೊಡುವುದೇನೆಂದರೆ, ನಮ್ಮ ಜಿಲ್ಲೆಯಲ್ಲಿ ಸಿಂಧನೂರು ಮತ್ತು ಕುಷ್ಟಗಿ ಎರಡು ತಾಲ್ಲೂಕನ್ನು ಬರಗಾಲದ ಪ್ರದೇಶವೆಂದು ಪರಿಗಣನೆ ಮಾಡಿದ್ದೀರಿ. ನಮ್ಮ ತಾಲ್ಲೂಕಿನಲ್ಲಿ ಅಳವಂಡಿ ಹೋಬಳಿಯ ಮಟ್ಟದಲ್ಲಿ ಒಂದು ಹನಿ ಮಳೆ ಬಿದ್ದಿಲ್ಲ, ಇವತ್ತು ಅಲ್ಲಿ ನಾವು ಬರೇ ಇ.ಎ.ಎಸ್. ಒಂದು ಯೋಜನೆಯಲ್ಲಿ ಕೆಲಸ ತೆಗೆದುಕೊಂಡಿದ್ದೇವೆ, ಮಂಡಲದ ಮಟ್ಟದಲ್ಲಿ ಇ.ಎ.ಎಸ್. ನ ಕೆಲಸ ಪ್ರಾರಂಭವಾಗಿರುವುದರಿಂದ ಅದನ್ನು ಬದಲಾವಣೆ ಮಾಡಿ ಆ ಒಂದು ಭಾಗಕ್ಕೆ ತಾವು ಹೆಚ್ಚಿನ ಹಣವನ್ನು ಒದಗಿಸಿಕೊಡುತ್ತೀರೆಂದು ಅಧ್ಯಕ್ಷರ ಮೂಲಕ ತಮ್ಮಲ್ಲಿ ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಸಪ್ಪ ಎಂ. (ಜಗಳೂರು) : ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಚಿತ್ರದುರ್ಗ ಜಿಲ್ಲೆಯ ಜಗಳೂರು ತಾಲ್ಲೂಕಿಗೆ ಸೇರಿದ ತುರುನೂರು ಹೋಬಳಿ it is the core of the drought prone area ಅಲ್ಲಿ ಮೊದಲು ಪ್ರಾರಂಭದಲ್ಲಿ ಸ್ವಲ್ಪ ಮಳೆ ಬಂದಿತ್ತು. ಬೀಜ ಹಾಕುವಾಗ ಸಂಪೂರ್ಣವಾಗಿ ಮಳೆ ನಿಂತು ಹೋಯಿತು. ಮತ್ತು ಪುನಃ ಅದನ್ನು ಅಲ್ಲಿಗೇ ಬಿಟ್ಟರು. ಮೇಲಾಗಿ ಇವತ್ತಿನ ದಿವಸ ಅಲ್ಲಿ ದನಗಳಿಗೆ ಮೇವು ಇಲ್ಲ. ಪ್ರತಿಯೊಬ್ಬರೂ ಕೂಡ ಇವತ್ತು ದನಗಳನ್ನು ಹೊಡೆದುಕೊಂಡು ನಾನಾ ಬಯಲಿಗೆ ಹೋಗುತ್ತಿದ್ದಾರೆ. ಅಲ್ಲಿ ಸಧ್ಯಕ್ಕೆ ಒಂದು ಗೋ ಶಾಲೆಯನ್ನು ಅಥವಾ ಫಾಡರ್ ಬ್ಯಾಂಕನ್ನು ಸ್ಥಾಪನೆ ಮಾಡಿದರೆ ದನಕರುಗಳಿಗೆ ತುಂಬಾ ಅನುಕೂಲವಾಗುತ್ತದೆ ಎಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಚಿತ್ರದುರ್ಗದಲ್ಲಿ ಕೊಟ್ಟ ಐದು ಲಕ್ಷದಲ್ಲಿ ಒಂದು ಲಕ್ಷ ರೂಪಾಯಿ ಕೂಡ ಖರ್ಚು ಮಾಡಲಿಲ್ಲ. ಈ ಗೋ ಶಾಲೆ ಏಕೆ ಬೇಕು?

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ. ಜಾಲಪ್ಪನವರು ಉತ್ತರ ಕೊಟ್ಟರು ಎಲ್ಲಾ ಸರಿ, ನಾನು ಭಾಷಣ ಮಾಡುವಾಗ ಹೇಳಿದೆ, ಕೇಂದ್ರದಿಂದ ತಾವು ಮುದ್ರಣ ಮಾಡಿ ಇಷ್ಟು ಕೋಟಿ ಬೇಕು ಎಂದ ಪ್ರತಿ ವರ್ಷ ಕಳುಹಿಸುತ್ತಿದ್ದೀರಿ ನಮ್ಮನ್ನು

ಎಲ್ಲಾ ವಿರೋಧ ಪಕ್ಷಗಳೆಲ್ಲವನ್ನೂ ಕರೆದಿರಿ, ಈ ಸಾರಿ ನಾವು ಕೇಂದ್ರಕ್ಕೆ ಮನವಿ ಸಲ್ಲಿಸುತ್ತಿದ್ದೇವೆ ಎಂದು ಹೇಳಿ, ತಾವು ದೆಹಲಿಗೆ ಹೋಗಿದ್ದೀರಿ. ಮನವಿಯನ್ನು ಕೊಟ್ಟು ಬಂದಿರಿ. ಕೇಂದ್ರದಿಂದ ಈ ಬರ ಪರಿಹಾರಕ್ಕೆ ಎಷ್ಟು ಹಣ ಬಂದಿತು. ಇದು ಒಂದು. ಮತ್ತು ನಾನು ಏನು ಹೇಳಿದೆ. ಕೇಂದ್ರ ಸರ್ಕಾರದ ವಿರುದ್ಧ ಒಂದು ಖಂಡನಾ ನಿರ್ಣಯ ಮಾಡಬೇಕೆಂದು ನಾನು ಒತ್ತಾಯ ಮಾಡಿದೆ. ನಾವು ಅದಕ್ಕೆ ಮಾತೇ ಇಲ್ಲ, ನಿಮ್ಮಿಂದ ಯಾವುದೇ ಉತ್ತರ ಬರಲಿಲ್ಲ. ಆದ್ದರಿಂದ ಕೇಂದ್ರ ಸರ್ಕಾರದ ವಿರುದ್ಧ ಖಂಡನಾ ನಿರ್ಣಯ ಮಾಡಬೇಕು, ಈಗ ಮಾಡಲೇಬೇಕು, ನಾನು ಅದಕ್ಕೆ ಒಪ್ಪತಕ್ಕಂಥದ್ದು ಅಲ್ಲ. ನೀವು ಏನು ಹೇಳಿದರೂ ನಾನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ ಕೇಂದ್ರ ಮೊದಲಿನಿಂದಲೂ, ನಾನು ಸುಮಾರು ಹಿಂದಿನ ಶಾಸನ ಸಭೆಯಿಂದ ನೋಡುತ್ತಿದ್ದೇನೆ, ಹಿಂದಿನ ಅರ್ಥ ಸಚಿವರು 300 ಕೋಟಿ ರೂಪಾಯಿಗೆ ಮನವಿ ಸಲ್ಲಿಸಿದರೂ ಆಗಲೂ ಹಣ ಬರಲಿಲ್ಲ, ಇದಾದ ಮೇಲೆ ಮನವಿ ಸಲ್ಲಿಸಿದರೂ ಆಗಲೂ ಹಣ ಬರಲಿಲ್ಲ. ಸುಮ್ಮನೆ ನೀವು ಕೇಂದ್ರ ಸರ್ಕಾರಕ್ಕೆ ಮನವಿ ಕೊಡುತ್ತಿದ್ದೇವೆ ಹಣ ಬರುತ್ತಿಲ್ಲ, ಎನ್ನತಕ್ಕಂತಹ ಮಾತನ್ನು ನೀವು ಹೇಳುತ್ತಿದ್ದೀರಿ. ಖಂಡನಾ ನಿರ್ಣಯವನ್ನು ತಾವು ನೇರವಾಗಿ ಮಾಡಬೇಕೆಂದು ಹೇಳಿ ನಿಮಗೆ ಒತ್ತಾಯ ಮಾಡಿ ನಾನು ಈ ಸದನದಲ್ಲಿ ಧರಣಿ ಮಾಡುತ್ತೇನೆ.

ಏಕೆಂದರೆ ಇದು ಅಷ್ಟು ಒಳ್ಳೆಯದೂ ಅಲ್ಲ, ಕೇಂದ್ರ ಸರ್ಕಾರದವರು ನಮಗೆ ಕಡೆಗಾಣಿಸಿದ್ದಾರೆ. ಮಲತಾಯಿ ಧೋರಣೆಯಲ್ಲಿ ನೋಡುತ್ತಿದ್ದಾರೆ, ಇವತ್ತು ಕೇಂದ್ರ ಸರ್ಕಾರ ಎಲ್ಲಾ ವಿಚಾರದಲ್ಲಿ ಆಂಧ್ರಕ್ಕೆ ಓಡೋಡಿ ಬರುತ್ತಾರೆ, ತಮಿಳುನಾಡಿಗೆ ಓಡೋಡಿ ಬರುತ್ತಾರೆ. ಇಲ್ಲಿಗೆ ಒಬ್ಬ ಅಧಿಕಾರಿಯನ್ನು ಕಳುಹಿಸಿ ಬರಗಾಲ ಪ್ರದೇಶ ಏನು ಯಾವ ಪರಿಸ್ಥಿತಿ ಇದೆ. ಎಂದು ಕೇಳತಕ್ಕಂತಹ ಸೌಜನ್ಯ ಇಲ್ಲ. ಈ ದೃಷ್ಟಿಯಿಂದ ನಾವು ಕೇಂದ್ರ ಸರ್ಕಾರದ ವಿರುದ್ಧ ಖಂಡನಾ ನಿರ್ಣಯವನ್ನು ಮಾಡಬೇಕೆಂದು ಸ್ಪಷ್ಟವಾಗಿ ಸರ್ಕಾರಕ್ಕೆ ಒತ್ತಾಯ ಮಾಡಿ ನಾನು ಧರಣಿ ಮಾಡುತ್ತಿದ್ದೇನೆ.

ಅಧ್ಯಕ್ಷರು : ಧರಣಿ ಬೇಡ ಸಭಾತ್ಯಾಗ ಮಾಡಿ. ಈಗ ಅಡ್‌ಜರ್ನ್ ಮಾಡಬೇಕು.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೆ. ವಾಟಾಳ್‌ನಾಗರಾಜ್‌ರವರು ಒಂದು ಗಂಭೀರವಾದಂತಹ ಪ್ರಶ್ನೆಯನ್ನು ಎತ್ತಿದ್ದಾರೆ. ಅದಕ್ಕೆ ಒಂದು ಮಾಹಿತಿಯನ್ನು ನಾನು ನಮ್ಮ ರಾಜ್ಯ ಸರ್ಕಾರಕ್ಕೆ ಕೊಡಬೇಕೆಂದು ಹೇಳಿ ಮೊಯಿಲಿಯವರು ಇದ್ದಾಗ ಖರ್ಗೆಯವರು ಇದ್ದಾಗ ಹೇಳಬೇಕೆಂದು ಹೇಳಿ.

ಒಬ್ಬ ಮಾನ್ಯ ಸದಸ್ಯರು : ಕಾಂಗ್ರೆಸ್‌ನವರು ಇದ್ದಾಗ ಹೇಳಿ, ಕಾಂಗ್ರೆಸ್‌ನವರು ಇದ್ದಾಗ ನೀವು ಹೇಳಬೇಕು. ಕಾಂಗ್ರೆಸ್‌ನವರು ಇದ್ದಾಗ ಖಂಡನಾ ನಿರ್ಣಯ ಮಾಡಬೇಕು.

ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಅಧ್ಯಕ್ಷರೆ, ವಾಟಾಳ ನಾಗರಾಜ್‌ರವರು ಏನು ಒಂದು ಪ್ರಶ್ನೆ ಎತ್ತಿದ್ದಾರೆ, ಕೇಂದ್ರ ಸರ್ಕಾರದಿಂದ ಎಷ್ಟು ಹಣ ಬಂದಿದೆ ಎನ್ನತಕ್ಕಂತಹ ವಿಚಾರವನ್ನು ಅವರು ಹೇಳಿದ್ದಾರೆ. ಅದಕ್ಕೆ ನಮ್ಮ ರಾಜ್ಯ ಸರ್ಕಾರಕ್ಕೆ ನಾನು ಒಂದು ಮಾಹಿತಿಯನ್ನು ಕೊಡಬೇಕು. ಬಹಳ ಮಹತ್ವವಾದ ಮಾಹಿತಿ ನನ್ನ ಹತ್ತಿರ ಇದೆ. ಅದನ್ನು ಪರಿಶೀಲನೆ ಮಾಡಬೇಕು. ಕೇಂದ್ರ ಸರ್ಕಾರದಿಂದ ತರಿಸಿಕೊಳ್ಳಬೇಕು. ಏನೆಂದರೆ ನಮಗೆ ಪ್ಲಾನ್ ಅಲೋಕೇಷನ್‌ನಲ್ಲಿ ಹಣ ಬರುತ್ತದೆ. ಸೆಂಟ್ರಲ್ ಸ್ಕೀಮ್‌ನಲ್ಲಿ ಹಣ ಬರುತ್ತದೆ. ಜೆ.ಆರ್.ವೈನಲ್ಲಿ ಹಣ ಆಗಲಿ, ಮತ್ತೊಂದಾಗಲಿ ಎಲ್ಲಾ ಹಣಗಳೂ ಬರುತ್ತವೆ. ಎಲ್ಲಾ ರಾಜ್ಯ ಸರ್ಕಾರಗಳಿಗೂ ಸೂತ್ರ ಇದೆ ಯಾವುದೇ ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರದವರು ಹಣ ಸಹಾಯ ಮಾಡುವಾಗ ಅದು ಗಾಡ್ಗೀಲ್

ಫಾರ್ಮುಲಾ ಇರಲಿ ಮತ್ತೊಂದು ಫಾರ್ಮುಲಾ ಇರಲಿ, ಯಾವುದೇ ಫಾರ್ಮುಲಾ ಬಿಟ್ಟು ಮಾಡುವುದಕ್ಕಾಗುವುದಿಲ್ಲ. ಆದರೆ ಈಗ ಇರತಕ್ಕಂತಹ ಕೇಂದ್ರ ಸರ್ಕಾರ ನರಸಿಂಹರಾಯರು ಸರ್ಕಾರ ಆಂಧ್ರ ಸರ್ಕಾರಕ್ಕೆ ಮೂರು-ನಾಲ್ಕು ತಿಂಗಳ ಹಿಂದೆ 650 ಕೋಟಿ ರೂಪಾಯಿಗಳ ವಿಶೇಷ ಹಣ ಕೊಟ್ಟಿದ್ದಾರೆ. 650 ಕೋಟಿ ರೂಪಾಯಿ ಸಣ್ಣ ಹಣ ಅಲ್ಲ, ಆ 650 ಕೋಟಿ ರೂಪಾಯಿ ಹಣವನ್ನು ಈ ನಿಯಮಾವಳಿಗಳನ್ನು ಬಿಟ್ಟು ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಯಾವ ರೀತಿ ಕೊಟ್ಟಿದೆ ಎಂದು ನಾನು ನಮ್ಮ ಮುಖ್ಯ ಮಂತ್ರಿಗಳು ಹಣಕಾಸಿನ ಮಂತ್ರಿಗಳಿಗೆ, ಪ್ರಧಾನ ಮಂತ್ರಿಗಳಿಗೆ ಬರೆದು ಇದು ನಿಜವೋ, ಅಲ್ಲವೋ ಎಂದು ತರಿಸತಕ್ಕಂಥದ್ದು ಒಂದು.

ಎರಡನೆಯದು ಇಲ್ಲಿ ಒಂದು ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಮೀಟಿಂಗ್‌ನಲ್ಲಿ ನಾನು ರಾಜ್ಯಸರ್ಕಾರಗಳಿಗೆ ಕೇಂದ್ರ ಸರ್ಕಾರ ವಿಶೇಷವಾದಂತಹ ಹಣ ಸಹಾಯ ಮಾಡುವುದಕ್ಕೆ ಅಧಿಕಾರ ಇದೆಯಾ? ಕಾನ್‌ಸ್ಟಿಟ್ಯೂಷನಲ್ ಆಗಿ ನಮ್ಮ ಕಾನ್‌ಸ್ಟಿಟ್ಯೂಷನ್ ಪ್ರಕಾರ ರಾಜ್ಯಾಂಗದ ಪ್ರಕಾರ ವಿಶೇಷವಾದ ಹಣವನ್ನು ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರ ಯಾವ ರೀತಿ ಕೊಡುವುದಕ್ಕೆ ಆಗುತ್ತದೆ ಎಂದು ನಾವು ಕಂಡ ಹಾಗೆ ಅಧಿಕಾರ ಇಲ್ಲ, ಈಗ ಎನ್.ಟಿ.ಆರ್. ಸರ್ಕಾರ ಇದ್ದಾಗ more than Rs.650 crores ಹೇಳಿದ್ದಾರೆ. ನನಗೆ ಅಷ್ಟು ಗೊತ್ತಿಲ್ಲ. ಆ ರೀತಿ ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರ ವಿಶೇಷ ಹಣ ಕೊಟ್ಟಿದ್ದರೆ, ಕರ್ನಾಟಕಕ್ಕೆ ಸಹ ಅವರು ಕೊಡಬೇಕಾಗುತ್ತದೆ. ಇದು ನಮ್ಮ ಪಾರ್ಲಿಮೆಂಟಿನ ಎಲ್ಲಾ ಮೆಂಬರ್ಸ್‌ಗೆ ಕಾಗದ ಬರೆದು ಇದು ನಿಜವೇ ಎಂದು ತಿಳಿದುಕೊಳ್ಳಬೇಕು. ಮುಖ್ಯಮಂತ್ರಿಯವರು ಎನ್.ಡಿ.ಸಿ. ಮೀಟಿಂಗ್‌ನಲ್ಲಿ ಆಂಧ್ರ ಸರ್ಕಾರಕ್ಕೆ ನರಸಿಂಹರಾಯರು ಸೇರಿದ್ದಾರೆ ಎಂದು ಹೇಳಿ ಕಾನೂನು ವಿರುದ್ಧವಾಗಿ ರಾಜ್ಯಾಂಗದ ವಿರುದ್ಧವಾಗಿ ಅವರು ಕೇಂದ್ರ ಸರ್ಕಾರ ಹಣ ಪ್ರಿಂಟ್ ಮಾಡುವುದಕ್ಕಾಗುವುದಿಲ್ಲ, ರಾಜ್ಯ ಸರ್ಕಾರ ಹಣ ಪ್ರಿಂಟ್ ಮಾಡುವುದಕ್ಕೆ ಆಗುವುದಿಲ್ಲ. ಪ್ಲ್ಯಾನಿಂಗ್ ಕಮಿಷನ್ ಇದೆ. ಎಲ್ಲಾ ಇರುತ್ತದೆ ಎಲ್ಲವನ್ನೂ ಬದಿಗೊತ್ತಿ ಆಂಧ್ರ ಸರ್ಕಾರಕ್ಕೆ 650 ಕೋಟಿ ರೂಪಾಯಿಗಿಂತ ಹೆಚ್ಚು ಹಣವನ್ನು ಯಾವ ರೀತಿ ಕೊಟ್ಟಿದ್ದಾರೆ, ಅದೇ ರೀತಿ ಹಣವನ್ನು ಕರ್ನಾಟಕ ಸರ್ಕಾರಕ್ಕೆ ಕೊಡುವುದಕ್ಕೆ ಎನ್.ಡಿ.ಸಿ. ಮೀಟಿಂಗ್‌ನಲ್ಲಿ ಮುಖ್ಯಮಂತ್ರಿಗಳು ನಿರ್ಧಾರ ತೆಗೆದುಕೊಳಬೇಕು ಎನ್ನುತಕ್ಕಂಥದ್ದು, ಅದಕ್ಕೆ ಸರ್ಕಾರ ಏನು ಯೋಚನೆ ಮಾಡುತ್ತದೆ ಎಂದು ತಾವು ತಿಳಿಸಬೇಕೆಂದು ನಾನು ಸರ್ಕಾರಕ್ಕೆ ಕೇಳುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರ ಹಣ ರಾಜ್ಯಗಳಿಗೆ ಕೊಡುವುದಕ್ಕೆ ಒಂದು ಸೂತ್ರ ಇದೆ. ಆದರೆ ಮಾನ್ಯ ಸದಸ್ಯರು ಏನು ಹೇಳಿದ್ದಾರೆ, ಆಂಧ್ರಕ್ಕೆ 650 ಕೋಟಿ ಎಂದು ಅದರ ವಿವರಗಳು ಗೊತ್ತಿಲ್ಲ ನನಗೆ. ಈ ತರಹ ಕೇಂದ್ರ ಸರ್ಕಾರ ಯಾವುದೇ ರಾಜ್ಯಕ್ಕೆ ತನ್ನ ಮನಸೋ ಇಚ್ಛೆ ತನಗೆ ಬೇಕಾದ ಹಾಗೆ ಕೊಡುವುದಕ್ಕೆ ಅವಕಾಶ ಇಲ್ಲ. ನನಗೆ ಗೊತ್ತಿರುವ ಪ್ರಕಾರ ರಾಜ್ಯಾಂಗದ ಪ್ರಕಾರ ಸಾಧ್ಯವಿಲ್ಲ, ಕೊಟ್ಟಿದ್ದರೆ ಯಾವ ಪ್ರಾವಿಷನನಲ್ಲಿ ಯಾವ ಕಾರಣಕ್ಕೋಸ್ಕರ ಕೊಟ್ಟಿದ್ದಾರೆ, ತಿಳಿದುಕೊಳ್ಳಬೇಕು. ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರ ಕೋಪ ನಮಗೆ ಅರ್ಥವಾಗುತ್ತದೆ.

ನಮಗೆ ರಾಜ್ಯದಲ್ಲಿ ಇಷ್ಟೊಂದು ಪರಿಸ್ಥಿತಿ ಇದ್ದಾಗ, ಕೇಂದ್ರ ಸರ್ಕಾರ ನಮಗೆ ಎಲ್ಲಾ ರೀತಿಯಿಂದ ನಾವು ಇಲ್ಲಿ ಕರ್ನಾಟಕದ ಜನ ಕೊಡತಕ್ಕಂತಹ ತೆರಿಗೆ ಇರಬಹುದು, ಮತ್ತೊಂದು ಏನೇ ಇರಲಿ, ಅವರು ಏನು ಇದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಹೋಗಿದ್ದರು, ಕಂದಾಯ ಮಂತ್ರಿಗಳು ಹೋಗಿದ್ದರು ಏನು ಹಣವನ್ನು ಕೊಟ್ಟರು ಅದು ಸರಿಯಾಗಿ ಸಮರ್ಪಕವಾಗಿ ಬೇಕಾಗುವಷ್ಟು ಕೊಟ್ಟಿಲ್ಲ ಎಂಬ ಸಿಟ್ಟು ಇದೆ. ಅದರ ಬಗ್ಗೆ ಧರಣಿ ಮಾಡಿದರೆ ಅದು ಬಗೆಹರಿಯುವುದಿಲ್ಲ. ಮಾನ್ಯ

ಸದಸ್ಯರ ಕಳಕಳಿ ಮತ್ತು ಕಳವಳ, ಮಾನ್ಯ ನಾಗೇಗೌಡರು ಕೊಟ್ಟಿರತಕ್ಕಂತಹ ಸಲಹೆ ಇವನ್ನು ಗಮನಕ್ಕೆ ತಂದಿದ್ದೇವೆ. ಇದರ ಬಗ್ಗೆ ಬೇಕಾದರೆ ಕೇಂದ್ರ ಸರ್ಕಾರದ ಜೊತೆ ಸಮಾಲೋಚನೆ ಮಾಡುತ್ತೇವೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಸನ್ಮಾನ್ಯ ಸಭಾಧ್ಯಕ್ಷರೆ, ಬರಗಾಲದ ಬಗ್ಗೆ ನಾವು ಆಲೋಚನೆ ಮಾಡಿದಾಗ ಒಂದು ರಾಜ್ಯ ಸರ್ಕಾರದ ಬರೀ ಮೇವಿಗಾಗಿ ದುಡ್ಡು ಕೊಡುವುದಕ್ಕೆ ಆಗುವುದಿಲ್ಲ ಎಂದು ಒಪ್ಪಿಕೊಳ್ಳುತ್ತೇನೆ. ಕೊಟ್ಟಿದ್ದೇವೆ ಎಂದರೆ ಅದು ಕೊಡುವುದಕ್ಕಾಗುವುದಿಲ್ಲ, ಏಕೆಂದರೆ ಜನಗಳ ದನಗಳ ಸಂಖ್ಯೆ ಲೆಕ್ಕ ಹಾಕಿಕೊಂಡರೆ 100 ಜನಗಳಿಗೆ 65 ದನಗಳು ಬರುತ್ತವೆ. ಅಂದರೆ ಒಂದು ದಿನಕ್ಕೆ ಮೇವಿನ ಬೆಲೆ 9 ಕೋಟಿ ಯಿಂದ 10 ಕೋಟಿ ರೂಪಾಯಿಯ ಮೇವು ಬೇಕು. ಅಂಥದ್ದರಲ್ಲಿ 106 ತಾಲ್ಲೂಕುಗಳಲ್ಲಿ ಬಂದಿರತಕ್ಕಂತಹ ಬರಗಾಲದಲ್ಲಿ ದನಗಳಿಗೆ ಮೇವು ಒದಗಿಸುತ್ತೇವೆ ಎಂದರೆ ಕನಿಷ್ಟ ಒಂದು ದಿವಸಕ್ಕೆ ನಾಲ್ಕು ಕೋಟಿ ರೂಪಾಯಿ ಮೇವು ಬೇಕು. ಆದ್ದರಿಂದ ಮೇವನ್ನು ಒದಗಿಸುವುದಕ್ಕಾಗುವುದಿಲ್ಲ.

ಅದು ಕೇಂದ್ರ ಸರ್ಕಾರ ರಾಜ್ಯ ಸರ್ಕಾರದಿಂದ ಬಂದಂತಹ ಹಣದಲ್ಲೆ ಅಲ್ಲಿರತಕ್ಕಂಥ ಒಂದು ಉದ್ಯೋಗವನ್ನು ಸೃಷ್ಟಿ ಮಾಡಬಹುದು. ಅದರೆ ಒಂದು ಬರಗಾಲದ ವಿಷಯದಲ್ಲಿ ನಾನು ಆಗಲೇ ಸರ್ಕಾರದ ಗಮನಕ್ಕೆ ತಂದಿದ್ದೇನೆ. 1974ನೇ ಇಸವಿಯಲ್ಲಿ ರಿಸರ್ವ್ ಬ್ಯಾಂಕ್ ಈ ರೀತಿ ಬರಗಾಲದ ಬರತಕ್ಕಂಥ ರಾಜ್ಯಗಳ ಬಗ್ಗೆ ಒಂದು ಟೀಮ್ ಅನ್ನು ಕಳುಹಿಸಿ ಒಂದು ಸಲಹೆಯನ್ನು ಕೊಟ್ಟರು. ಯಾವುದೇ ರೆವಿನ್ಯೂ ಡಿಪಾರ್ಟ್‌ಮೆಂಟ್‌ಗಳು ಆರ್ಥಾಣೆಗಿಂತ ಬೆಳೆ ಕಡಿಮೆಯಾಗಿದೆ ಎನ್ನುವಂತಹ ರಿಪೋರ್ಟನ್ನು ಇದುವರೆಗೂ ರಿಸರ್ವ್‌ಬ್ಯಾಂಕ್‌ಗೆ ಕೊಟ್ಟಿಲ್ಲ. ಈಗ ನಮಗೆ ಒಂದು ಹಿಂಗಾರು, ಮುಂಗಾರು ಒಟ್ಟು ಎರಡು ಬೆಳೆ ನಷ್ಟವಾಗಿದೆ. ಆದರೆ ಎರಡು ಬೆಳೆ ನಷ್ಟದ ಬಗ್ಗೆ ಪೂರ್ಣ ಮಾಹಿತಿ ಕೊಟ್ಟರೆ ರಿಸರ್ವ್ ಬ್ಯಾಂಕ್‌ನಿಂದ ಕನಿಷ್ಟ ಸವಲತ್ತುಗಳನ್ನು ಸಿಗುತ್ತದೆ. ರೈತ ತಾನು ಏನು ಬೇಸಾಯಮಾಡಿ ಕಳೆದುಕೊಂಡಿದ್ದಾನೆ, ಸಾಲ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಆದುದರಿಂದ ಇದರ ಬಗ್ಗೆ ನಾವು ಅತ್ಯಂತ ಗಂಭೀರವಾಗಿ ಸರ್ಕಾರದ ಗಮನಕ್ಕೆ ತಂದು, ರೆವಿನ್ಯೂ ಅಧಿಕಾರಿಗಳಿಗೆ ಯಾವುದೇ ಆದೇಶ ಕೊಟ್ಟು, ಅದು ವಿಲೇಜ್ ಅಕೌಂಟೆಂಟ್ ಆಗಬಹುದು, ರೆವಿನ್ಯೂ ಇನ್ಸ್‌ಪೆಕ್ಟರ್ ಆಗಬಹುದು, ಅಥವಾ ಜಿಲ್ಲಾಧಿಕಾರಿಗಳಾಗಿರಬಹುದು, ಈ ದಿಕ್ಕಿನಲ್ಲಿ ಕೆಲಸ ಮಾಡದೇ ಇದ್ದರೆ, ರೈತರಿಗೆ ಅವರು ತೆಗೆದುಕೊಂಡಿರತಕ್ಕಂಥ ಸಾಲಕ್ಕೆ ಒತ್ತಡ ಬರತಕ್ಕಂಥ ವ್ಯವಸ್ಥೆ ಇದೆ. ಮೊದಲು ಒಂದು ಬೆಳೆ ಫೈಲ್ಯೂರ್ ಆದರೆ ಯಾವ ರೀತಿ ಎರಡು ಬೆಳೆ ಫೈಲ್ಯೂರ್ ಆದರೆ ಯಾವ ರೀತಿ, ಮೂರು ಬೆಳೆ ಫೈಲ್ಯೂರ್ ಆದರೆ ಯಾವ ರೀತಿ ಸಾಲವನ್ನು, ಐದು ವರ್ಷದಲ್ಲಿ ಎಷ್ಟು ಮನ್ನಾ ಮಾಡಬಹುದು. ಯಾವ ರೀತಿ ಬಡ್ಡಿ ಮನ್ನಾ ಮಾಡಬಹುದು, ಹೇಗೆ ಐದು ವರ್ಷಗಳ ಕಾಲ ಎಕ್ಸ್‌ಟೆಂಡ್ ಮಾಡಬಹುದು ಹೊಸ ಸಾಲಗಳನ್ನು ಯಾವ ರೀತಿ ಕೊಡಬೇಕು ಎನ್ನತಕ್ಕಂಥ ನಾರ್ಮ್ಸ್ ಮೇಲೆ ಕಾನೂನುಗಳನ್ನು ಮಾಡಿ ರಿಸರ್ವ್ ಬ್ಯಾಂಕ್ ಮಾಡಿ, ಇದು ರಾಜ್ಯ ಸರ್ಕಾರಕ್ಕೆ ಗೊತ್ತಿದ್ದು, ಅದರ ಬಗ್ಗೆ ಸರ್ಕಾರ ಬೇಜವಾಬ್ದಾರಿಯಾಗಿ ವರ್ತಿಸಿದ್ದಕ್ಕೆ ವಿರೋಧ ಮಾಡುತ್ತಾ ನಾನು ಸಭಾತ್ಯಾಗವನ್ನು ಮಾಡುತ್ತೇನೆ.

(ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್. ಪುಟ್ಟಣ್ಣಯ್ಯನವರ ಸಭಾತ್ಯಾಗ ಮಾಡಿದರು)

ಅಧ್ಯಕ್ಷರು : ಮಾನ್ಯ ಸದಸ್ಯರಾದ ಪಾಟೀಲ್ ನಾಗರಾಜ್‌ರವರು ಅವರ ಸ್ಥಾನಕ್ಕೆ ಹಿಂದುರುಗಬೇಕು ಎಂದು ವಿನಂತಿ ಮಾಡುತ್ತಿದ್ದೇನೆ. ನಿಮ್ಮನ್ನು ಇಲ್ಲಿ ಇಟ್ಟುಕೊಂಡು

ನಾನು ಸಭೆಯನ್ನು ಮುಂದಕ್ಕೆ ಹಾಕುತ್ತೇನೆಯೇ? ಅದು ಅಷ್ಟು ಚೆನ್ನಾಗಿ ಇರುವುದಿಲ್ಲ. ದಯಮಾಡಿ ತಾವು ಅಲ್ಲಿಗೆ ಬರಬೇಕು. ನೀವು ಹಿರಿಯ ಸದಸ್ಯರಾಗಿದ್ದೀರಿ.

(ಈ ಹಂತದಲ್ಲೇ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ, ಲಘುವಾಗಿ ನಾನು ತೆಗೆದುಕೊಂಡಿಲ್ಲ ಅಥವಾ ನಮ್ಮ ಸರ್ಕಾರ ತೆಗೆದುಕೊಂಡಿಲ್ಲ. ನೀವು ಇದನ್ನು ಹೇಳುವ ಕ್ರಮ ಮತ್ತು ನೀವು ಅದನ್ನು ಪ್ರತಿಭಟಿಸುವ ಕ್ರಮ ಅದು ಸೀರಿಯಸ್‌ನೆಸ್ ತೋರಿಸುವುದಿಲ್ಲ.

ಅಧ್ಯಕ್ಷರು : ಬರಗಾಲದ ವಿಷಯದಲ್ಲಿ ಚರ್ಚೆ ಮುಕ್ತಾಯವಾಗಿದೆ. ಈಗ ಸಭೆಯನ್ನು ಮುಂದೂಡಿ ಪುನಃ ನಾಳೆ ಬೆಳಿಗ್ಗೆ 10 ಗಂಟೆಗೆ ಸಮಾವೇಶಗೊಳ್ಳುತ್ತದೆ)

(ಸದನವು ಸಂಜೆ 7.02 ಗಂಟೆಗೆ ಮುಕ್ತಾಯಗೊಂಡು ಪುನಃ ದಿನಾಂಕ 8.9.95 ರಂದು ಬೆಳಿಗ್ಗೆ 10 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಕರ್ನಾಟಕ ವಿಧಾನ ಸಭೆ

ಹತ್ತನೆಯ ವಿಧಾನ ಸಭೆ

(ಮೂರನೆಯ ಅಧಿವೇಶನ)

ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ) (ಎರಡನೇ ತಿದ್ದುಪಡಿ) ವಿಧೇಯಕ, 1995

(1995ರ ವಿಧಾನಸಭಾ ವಿಧೇಯಕ ಸಂಖ್ಯೆ 27)

ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ) ಅಧಿನಿಯಮ, 1957ನ್ನು ಮತ್ತಷ್ಟು ತಿದ್ದುಪಡಿ ಮಾಡುವ ವಿಧೇಯಕ.

ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ) ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 28) ಈ ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ನಲವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ :

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ : (1) ಈ ಅಧಿನಿಯಮವನ್ನು ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ಮತ್ತು ನೀರಿನ ದರ ವಿಧಿಸುವ) (ಎರಡನೇ ತಿದ್ದುಪಡಿ) ಅಧಿನಿಯಮ, 1995 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ದಿನಾಂಕದಂದು ಜಾರಿಯಲ್ಲಿ ಬರತಕ್ಕದ್ದು.

2. 10ನೇ ಪ್ರಕರಣದ ತಿದ್ದುಪಡಿ : ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ) ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 28) 10ನೇ ಪ್ರಕರಣದಲ್ಲಿ,

(1) (1)ನೇ ಉಪ-ಪ್ರಕರಣದ ತರುವಾಯ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ :

"ಪರಂತು, ಯಾವುದೇ ನೀರಾವರಿ ಕಾಮಗಾರಿಯ ಮೂಲಕ ಅಥವಾ (ಇನ್ನು ಮುಂದೆ ನಿಗಮ ಎಂದು ಕರೆಯಲಾಗುವ) ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದ ಮೂಲಕ ಅಥವಾ ಅದರ ಪರವಾಗಿ ನೀರು ಸರಬರಾಜು ಮಾಡಲಾಗುವ ಅಥವಾ ಲಭ್ಯವಾಗುವಂತೆ ಮಾಡಲಾದ ಯಾವುದೇ ಪ್ರದೇಶ ಅಥವಾ ಪ್ರದೇಶಗಳಲ್ಲಿ ನೀರಿನ ದರಗಳನ್ನು ಅಂಥ ಪ್ರದೇಶ ಅಥವಾ ಪ್ರದೇಶಗಳಲ್ಲಿನ ಸದರಿ ನಿಗಮದ ಮೂಲಕ ವಿಧಿಸತಕ್ಕದ್ದು ಮತ್ತು ವಸೂಲು ಮಾಡತಕ್ಕದ್ದು."

(2) (1ಎ) ಉಪ-ಪ್ರಕರಣದಲ್ಲಿ,

(ಎ) "ಸರ್ಕಾರವು ನೀರು ಸರಬರಾಜು ಮಾಡಬಹುದು" ಎಂಬ ಪದಗಳಿಗೆ "ಸರ್ಕಾರ ಅಥವಾ ಸಂದರ್ಭಾನುಸಾರವಾಗಿ ನಿಗಮವು ನೀರು ಸರಬರಾಜು ಮಾಡಬಹುದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು ;

(ಬಿ) "ಸರ್ಕಾರವು ನೀರಿನ ಪ್ರಮಾಣದ" - ಎಂಬ ಪದಗಳಿಗೆ "ಸರ್ಕಾರ ಅಥವಾ ಸಂದರ್ಭಾನುಸಾರ ನಿಗಮವು ನೀರಿನ ಪ್ರಮಾಣದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಉದ್ದೇಶ ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ) ಅಧಿನಿಯಮ, 1957ಕ್ಕೆ ಸೂಕ್ತ ತಿದ್ದುಪಡಿ ಮಾಡುವ ಮೂಲಕ, ಯಾವುದೇ ನೀರಾವರಿ ಕಾಮಗಾರಿಯಿಂದ ನೀರಿನ ಸರಬರಾಜು ಕಾಮಗಾರಿಯನ್ನು ಕೃಷ್ಣಾಭಾಗ್ಯ ಜಲನಿಗಮಕ್ಕೆ ವಹಿಸಿಕೊಡುವುದು ಮತ್ತು ಸದರಿ ನಿಗಮಕ್ಕೆ ನೀರಿನ ದರಗಳನ್ನು ವಿಧಿಸುವ ಮತ್ತು ವಸೂಲು ಮಾಡುವ ಹೊಣೆಗಾರಿಕೆಯನ್ನು ವಹಿಸಿಕೊಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ, ಈ ವಿಧೇಯಕ.

ಆರ್ಥಿಕ ಜ್ಞಾಪನ

ಇದುವರೆಗೂ ನೀರಿನ ದರಗಳನ್ನು ಸರ್ಕಾರವು ವಿಧಿಸಿ ವಸೂಲು ಮಾಡುತ್ತಿದ್ದು ಈಗ ಪ್ರಸ್ತಾವಿತ ತಿದ್ದುಪಡಿಯಿಂದಾಗಿ ನೀರಿನ ದರಗಳನ್ನು ವಿಧಿಸಲು ಮತ್ತು ವಸೂಲು ಮಾಡಲು ಕೃಷ್ಣಾಭಾಗ್ಯ ಜಲ ನಿಗಮಕ್ಕೆ ವಹಿಸಿಕೊಡುವುದರಿಂದ ಸರ್ಕಾರಕ್ಕೆ ಆದಾಯದಲ್ಲಿ ನಷ್ಟವುಂಟಾಗುತ್ತದೆ.

ಹೆಚ್.ಡಿ. ದೇವೇಗೌಡ
ಮುಖ್ಯಮಂತ್ರಿಗಳು

ನಿಂ.ಹು. ಮುತ್ತಲಗೇರಿ,
ಕಾರ್ಯದರ್ಶಿ

ಅನುಬಂಧ

ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ) ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 28) ಉದ್ಧೃತ ಭಾಗ

xx xx xx

10. ನೀರಿನ ದರ ವಿಧಿಸುವುದು (1)

(ಕ) xx xx xx

(ಖ) ಸರ್ಕಾರಕ್ಕೆ ಸೇರಿದ ಅಥವಾ ಸರ್ಕಾರವು ಅಥವಾ ಅದರ ಪರವಾಗಿ ನಿರ್ಮಿಸಲಾದ ಯಾವುದೇ ಕಾಮಗಾರಿಯಿಂದ ನೀರಾವರಿ ಉದ್ದೇಶಗಳಿಗಾಗಿ ಅಥವಾ ಇತರ ಯಾವುದೇ ಉದ್ದೇಶಕ್ಕಾಗಿ ನೀರನ್ನು ಸರಬರಾಜು ಮಾಡಿದಾಗ, ಲಭ್ಯವಾಗುವಂತೆ ಮಾಡಿದಾಗ ಅಥವಾ ಬಳಸಿದಾಗ ; ಮತ್ತು

(ಗ) ಅಂಥ ಯಾವುದೇ ಕಾಮಗಾರಿಯಿಂದ ನೇರವಾಗಿ ಹರಿಯುವ ಅಥವಾ ಜಿನುಗುವ ಅಥವಾ ಸುತ್ತಿ ಹರಿಯುವ ಮೂಲಕ, ಹೊಂದಿಕೊಂಡಿರುವ

ಭೂಮಿಯಿಂದ ಅಥವಾ ಅದರ ಮೂಲಕ ಜಿನುಗುವಿಕೆ ಅಥವಾ ಚರಂಡಿಯ ನೀರು, ಸಾಗುವಳಿಯಲ್ಲಿರುವ ಯಾವುದೇ ಭೂಮಿಗೆ ನೀರು ಒದಗಿಸಿದಾಗ ಅಥವಾ ಜಲಾಶಯಕ್ಕೆ ಹರಿದು ಅಲ್ಲಿಂದ ನೇರವಾಗಿ ಹರಿಯುವ ಮೂಲಕ ಅಥವಾ ಜಿನುಗುವ ಅಥವಾ ಸುತ್ತಿ ಹರಿಯುವ ಮೂಲಕ, ಹೊಂದಿಕೊಂಡಿರುವ ಭೂಮಿಯಿಂದ ಅಥವಾ ಅದರ ಮೂಲಕ ಜಿನುಗುವಿಕೆ ಅಥವಾ ಚರಂಡಿಯ ನೀರು, ಸಾಗುವಳಿಯಲ್ಲಿರುವ ಯಾವುದೇ ಭೂಮಿಗೆ ನೀರು ಒದಗಿಸಿದಾಗ ಮತ್ತು ಜಿಲ್ಲಾಧಿಕಾರಿಗಳು ಅಂಥ ಭೂಮಿಯಲ್ಲಿ ಬೆಳೆದಿರುವ ಬೆಳೆಗೆ ಅಂಥ ನೀರಾವರಿಯು ಲಾಭದಾಯಕವಾಗಿದೆ ಮತ್ತು ಅವಶ್ಯಕತೆಗಳಿಗೆ ಸಾಕಷ್ಟಾಗಿದೆಯೆಂದು ಅಭಿಪ್ರಾಯಪಟ್ಟಿರುವಾಗ ;

(ಫ) ಆಂಧ್ರ ರಾಜ್ಯ ಅಧಿನಿಯಮ, 1953ರ 67ನೇ ಪ್ರಕರಣದಡಿ ಸ್ಥಾಪಿಸಲಾದ ಪ್ರಾಧಿಕಾರವು ಸರ್ಕಾರಕ್ಕೆ ಸರಬರಾಜು ಮಾಡಿದ ಅಥವಾ ಲಭ್ಯವಿರುವಂತೆ ಮಾಡಿದ ನೀರನ್ನು ನೀರಾವರಿ ಉದ್ದೇಶಗಳಿಗಾಗಿ ಅಥವಾ ಇತರ ಯಾವುದೇ ಉದ್ದೇಶಕ್ಕಾಗಿ ಸರಬರಾಜು ಮಾಡಿದಾಗ, ಲಭ್ಯವಿರುವಂತೆ ಮಾಡಿದಾಗ ಅಥವಾ ಬಳಸಿದಾಗ,

ಸರ್ಕಾರವು, ಇಲ್ಲಿ ಇನ್ನು ಮುಂದೆ ನೀರಿನ ದರವೆಂದು ಉಲ್ಲೇಖಿಸಲಾಗುವ ಪ್ರತ್ಯೇಕ ದರವನ್ನು ಅಂಥ ನೀರಿಗಾಗಿ ವಿಧಿಸಲು ಹಕ್ಕುಳ್ಳವರಾಗಿರತಕ್ಕದ್ದು ಮತ್ತು ಸರ್ಕಾರವು ಯಾವ ದರದಲ್ಲಿ ಅಂಥ ನೀರಿನ ದರವನ್ನು ವಿಧಿಸುವುದೋ ಆ ದರವನ್ನು ನಿಯಮಿಸಬಹುದು ಮತ್ತು ಇದು,

(i) ಬೇರೆ ಬೇರೆ ಉದ್ದೇಶಗಳಿಗಾಗಿ ಸರಬರಾಜು ಮಾಡಿದ, ಲಭ್ಯವಾಗುವಂತೆ ಮಾಡಿದ ಅಥವಾ ಬಳಸಿದ ನೀರಿನ ಸಂಬಂಧದಲ್ಲಿ ಬೇರೆ ಬೇರೆಯಾಗಿರಬಹುದು;

(ii) ಬೇರೆ ಬೇರೆ ನೀರಾವರಿ ಕಾಮಗಾರಿಗಳಿಂದ ಸರಬರಾಜು ಮಾಡಿದ, ಲಭ್ಯವಾಗುವಂತೆ ಮಾಡಿದ ಅಥವಾ ಬಳಸಿದ ನೀರಿನ ಸಂಬಂಧದಲ್ಲಿ ಮತ್ತು ಅಂಥ ಭೂಮಿಯಲ್ಲಿ ಬೆಳೆಯಲಾದ, ಬೆಳೆಯಬಹುದಾದ ಬೆಳೆ ಅಥವಾ ಬೆಳೆಗಳ ಸಂಬಂಧದಲ್ಲಿ ಅಥವಾ ಸಂಬಂಧಪಡದೇ, ನೀರನ್ನು ಸರಬರಾಜು ಮಾಡಿದಾಗ, ಲಭ್ಯವಾಗುವಂತೆ ಮಾಡಿದಾಗ ಅಥವಾ ಬಳಸಿದಾಗ ಬೇರೆ ಬೇರೆಯಾಗಿರಬಹುದು ;

(iii) ಇತರ ಯಾವುದೇ ಕಾನೂನಿನಡಿ ಸಂದಾಯವಾಗಬೇಕಾದ ನೀರಿನ ದರವೇನಾದರೂ ಇದ್ದಲ್ಲಿ ಅದಕ್ಕೆ ಬದಲಾಗಿರಬಹುದು ;

ಮತ್ತು ವಿಧಿಸತಕ್ಕ ನೀರಿನ ದರದ ಮೊಬಲಗನ್ನು ಯಾವ ವಿಧಾನದಲ್ಲಿ ಮತ್ತು ಯಾವ ಪ್ರಾಧಿಕಾರವು ನಿರ್ಣಯಿಸತಕ್ಕುದೋ ಅದನ್ನು ಸಹ ನಿಯಮಿಸಬಹುದು.

(1ಎ) (1)ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 (1959ರ ಕರ್ನಾಟಕ ಅಧಿನಿಯಮ 11), ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960ರಡಿ) (1960ರ ಕರ್ನಾಟಕ ಅಧಿನಿಯಮ 17), ನೋಂದಾಯಿತವಾದ ನೀರು ಬಳಕೆದಾರರ ಸಹಕಾರ ಸಂಘಕ್ಕೆ ನೀರಾವರಿ ಉದ್ದೇಶಕ್ಕಾಗಿ ಸರ್ಕಾರವು ನೀರು ಸರಬರಾಜು ಮಾಡಬಹುದು ಅಥವಾ ನೀರು ಲಭ್ಯವಾಗುವಂತೆ ಮಾಡಬಹುದು ಮತ್ತು ಸರ್ಕಾರವು ನೀರಿನ ಪ್ರಮಾಣದ ಆಧಾರದ ಮೇಲೆ ನೀರು ದರಗಳನ್ನು ವಿಧಿಸಿ ಅಂಥ ಸಂಘಗಳಿಂದ, ವಸೂಲು ಮಾಡತಕ್ಕದ್ದು. ಸರ್ಕಾರವು ವಿಧಿಸತಕ್ಕ ನೀರಿನ ದರದ ಮೊಬಲಗನ್ನು ಯಾವ ಪ್ರಾಧಿಕಾರವು ನಿರ್ಣಯಿಸತಕ್ಕದ್ದೋ ಅದನ್ನು ನಿಯಮಿಸತಕ್ಕದ್ದು, ಅಂಥ ಸಂಘಗಳು ರೈತರಿಗೆ ನೀರು ಸರಬರಾಜು ಮಾಡಬಹುದು ಮತ್ತು ಪ್ರತಿಯೊಬ್ಬ ರೈತನಿಂದ ನೀರಿನ ದರವನ್ನು ವಸೂಲಿ ಮಾಡಬಹುದು.

xx xx xx

ಕರ್ನಾಟಕ ವಿಧಾನಸಭೆ

ಹತ್ತನೇ ವಿಧಾನ ಸಭೆ

(ಮೂರನೇ ಅಧಿವೇಶನ)

ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) (ಎರಡನೇ ತಿದ್ದುಪಡಿ) ವಿಧೇಯಕ, 1995.

(1995ರ ವಿಧಾನ ಸಭಾ ವಿಧೇಯಕ, ಸಂಖ್ಯೆ 30)

ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) ಅಧಿನಿಯಮ, 1987ನ್ನು ಮತ್ತಷ್ಟು ತಿದ್ದುಪಡಿ ಮಾಡುವ ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ, ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) ಅಧಿನಿಯಮ, 1987ನ್ನು (1987ರ ಕರ್ನಾಟಕ ಅಧಿನಿಯಮ ಸಂಖ್ಯೆ 20) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ:

ಭಾರತ ಗಣರಾಜ್ಯದ ನಲವತ್ತಾರನೇ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ** : (1) ಈ ಅಧಿನಿಯಮವನ್ನು ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) (ಎರಡನೇ ತಿದ್ದುಪಡಿ) ಅಧಿನಿಯಮ, 1995 ಎಂದು ಕರೆಯತಕ್ಕದ್ದು.

(2) ಇದು 1995ರ ಜೂನ್ ಐದನೇ ದಿನದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. **4ನೇ ಪ್ರಕರಣದ ತಿದ್ದುಪಡಿ** : ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) ಅಧಿನಿಯಮ, 1987ರ (1987ರ ಕರ್ನಾಟಕ ಅಧಿನಿಯಮ ಸಂಖ್ಯೆ 20) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮ ಎಂದು ಕರೆಯಲಾಗುವ) 4ನೇ ಪ್ರಕರಣದಲ್ಲಿ,

(1) (2)ನೇ ಉಪ-ಪ್ರಕರಣದಲ್ಲಿ,

(ಎ) (i)ನೇ ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ :

"(i) ಜಿಲ್ಲಾ ಪಂಚಾಯತಿಯ ಸಂದರ್ಭದಲ್ಲಿ, ರಾಜ್ಯ ಚುನಾವಣಾ ಕಮೀಷನರ್‌ಗೆ"

(ಬಿ) (iv)ನೇ ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:

"(iv) ತಾಲ್ಲೂಕು ಪಂಚಾಯತಿಯ ಸಂದರ್ಭದಲ್ಲಿ, ರಾಜ್ಯ ಚುನಾವಣಾ ಕಮೀಷನರ್‌ಗೆ"

(ಸಿ) ಪರಂತುಕವನ್ನು ಬಿಟ್ಟು ಬಿಡತಕ್ಕದ್ದು.

(2) ವಿವರಣೆಯಲ್ಲಿ (2)ನೇ ಖಂಡದ ನಂತರ ಈ ಮುಂದಿನದನ್ನು ಸೇರಿಸತಕ್ಕದ್ದು ಎಂದರೆ,

"(3) **ರಾಜ್ಯ ಚುನಾವಣಾ ಕಮೀಷನರ್**" ಎಂದರೆ ಕರ್ನಾಟಕ ಪಂಚಾಯತ್ ರಾಜ್ಯ ಅಧಿನಿಯಮ, 1993ರ 308ನೇ ಪ್ರಕರಣದ ಅಡಿಯಲ್ಲಿ ನೇಮಕನಾದ ರಾಜ್ಯ ಚುನಾವಣಾ ಕಮೀಷನರ್."

VIII F-15

3. ನಿರಸನ ಮತ್ತು ಉಳಿಸುವಿಕೆಗಳು : (1) ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) (ತಿದ್ದುಪಡಿ) ಅಧ್ಯಾದೇಶ, 1995 (1995ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 4) ಈ ಮೂಲಕ ನಿರಸಿತವಾಗಿದೆ.

(2) ಹಾಗೆ ನಿರಸನಗೊಳಿಸಿದ್ದಾಗ್ಯೂ, ಸದರಿ ಅಧ್ಯಾದೇಶದಿಂದ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾದ ಯಾವುದೇ ಕೃತ್ಯವನ್ನು ಅಥವಾ ಕೈಗೊಳ್ಳಲಾದ ಯಾವುದೇ ಕ್ರಮವನ್ನು, ಈ ಅಧಿನಿಯಮದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾದುದೆಂದು ಅಥವಾ ಕೈಗೊಳ್ಳಲಾದುದೆಂದು ಭಾವಿಸತಕ್ಕದ್ದು.

ಉದ್ದೇಶ ಮತ್ತು ಕಾರಣಗಳ ಹೇಳಿಕೆ

ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಯ ಸಂದರ್ಭದಲ್ಲಿ ಪಕ್ಷಾಂತರ ಆಧಾರದ ಮೇಲೆ ಅನರ್ಹತೆಯ ಪ್ರಶ್ನೆಯನ್ನು ನಿರ್ಧರಿಸಲು ರಾಜ್ಯ ಚುನಾವಣಾ ಆಯೋಗಕ್ಕೆ ಉಪಬಂಧ ಕಲ್ಪಿಸುವುದಕ್ಕಾಗಿ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) ಅಧಿನಿಯಮ, 1987ನ್ನು ತಿದ್ದುಪಡಿ ಮಾಡುವುದು ಅಗತ್ಯವೆಂದು ಭಾವಿಸಲಾಗಿದೆ.

ವಿಷಯವು ತುರ್ತು ಸ್ವರೂಪದ್ದಾದ್ದರಿಂದ ಮತ್ತು ಉಭಯ ಸದನಗಳೂ ಅಧಿವೇಶನದಲ್ಲಿಲ್ಲದಿದ್ದುದರಿಂದ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) (ತಿದ್ದುಪಡಿ) ಅಧ್ಯಾದೇಶ, 1995ನ್ನು ಪ್ರಖ್ಯಾಪಿಸಲಾಯಿತು.

ಆದ್ದರಿಂದ ಈ ವಿಧೇಯಕ.

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡಾವಳಿ ನಿಯಮಗಳ ನಿಯಮ 80ರ ಉಪ-ನಿಯಮ (1)ರ ಮೂಲಕ ಅಗತ್ಯಪಡಿಸಲಾದಂತೆ ವಿವರಣಾತ್ಮಕ ಹೇಳಿಕೆ.

ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಯ ಸಂದರ್ಭದಲ್ಲಿ ಪಕ್ಷಾಂತರ ಆಧಾರದ ಮೇಲೆ ಅನರ್ಹತೆಯ ಪ್ರಶ್ನೆಯನ್ನು ನಿರ್ಧರಿಸಲು ರಾಜ್ಯ ಚುನಾವಣಾ ಆಯೋಗಕ್ಕೆ ಉಪಬಂಧ ಕಲ್ಪಿಸುವುದಕ್ಕಾಗಿ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) ಅಧಿನಿಯಮ, 1987ನ್ನು ತಿದ್ದುಪಡಿ ಮಾಡುವುದು ಅಗತ್ಯವೆಂದು ಭಾವಿಸಲಾಗಿದೆ.

ವಿಷಯವು ತುರ್ತು ಸ್ವರೂಪದ್ದಾದ್ದರಿಂದ ಮತ್ತು ಉಭಯ ಸದನಗಳೂ ಅಧಿವೇಶನದಲ್ಲಿಲ್ಲದಿದ್ದುದರಿಂದ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) (ತಿದ್ದುಪಡಿ) ಅಧ್ಯಾದೇಶ, 1995ನ್ನು ಪ್ರಖ್ಯಾಪಿಸಲಾಯಿತು.

ಈ ವಿಧೇಯಕವನ್ನು ಮೇಲಿನ ಅಧ್ಯಾದೇಶ ಬದಲು ಮಂಡಿಸಲಾಗಿದೆ.

ಆಧಿಕೃತ ಜ್ಞಾಪನ ಪತ್ರ

ಪ್ರಸ್ತಾವಿತ ಕ್ರಮದಿಂದಾಗಿ ಯಾವುದೇ ಹೆಚ್ಚಿನ ವೆಚ್ಚ ತಗಲುವುದಿಲ್ಲ.

ಎಂ.ಪಿ. ಪ್ರಕಾಶ್,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು.

ನಿಂ.ಹು. ಮುತ್ತಲಗೇರಿ,
ಕಾರ್ಯದರ್ಶಿ

ಅನುಬಂಧ

ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) ಅಧಿನಿಯಮ 1987ರ (1987ರ ಕರ್ನಾಟಕ ಅಧಿನಿಯಮ ಸಂಖ್ಯೆ 20) ಉದ್ಧೃತ ಭಾಗ

xx xx xx

4. ಪಕ್ಷಾಂತರದ ಆಧಾರದ ಮೇಲೆ ಅನರ್ಹತೆಗೆ ಸಂಬಂಧಪಟ್ಟ ಪ್ರಶ್ನೆಯ ಬಗ್ಗೆ ತೀರ್ಮಾನ - (1) xx xx xx

(2) ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯು (1)ನೇ ಉಪ-ಪ್ರಕರಣದ ಅಡಿಯಲ್ಲಿ ಒಂದು ದೂರನ್ನು ಸ್ವೀಕರಿಸಿರುವಲ್ಲಿ, ಅಂಥ ದೂರನ್ನು ಸ್ವೀಕರಿಸಲಾದ ಇಪ್ಪತ್ತನಾಲ್ಕು ಗಂಟೆಗಳೊಳಗಾಗಿ, ಅದನ್ನು ತೀರ್ಮಾನಕ್ಕಾಗಿ,

(i) ಜಿಲ್ಲಾ ಪಂಚಾಯತಿಯ ಸಂದರ್ಭದಲ್ಲಿ, ಸರ್ಕಾರದ ಕಾರ್ಯದರ್ಶಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅವರಿಗೆ

(ii) xx xx xx

(iii) xx xx xx

(iv) ತಾಲ್ಲೂಕು ಪಂಚಾಯಿತಿಯ ಸಂದರ್ಭದಲ್ಲಿ, ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ...

- ಕಳುಹಿಸತಕ್ಕದ್ದು

xx xx xx

ಪರಂತು ಸರ್ಕಾರದ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ರಾಜ್ ಇಲಾಖೆ - ಇವರಿಗೆ ತೀರ್ಮಾನಕ್ಕಾಗಿ ಕಳುಹಿಸಲಾದ ದೂರಿನ ಸಂದರ್ಭದಲ್ಲಿ ಅವರು ಅಂಥ ಪ್ರಶ್ನೆಯನ್ನು ತೀರ್ಮಾನಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸರ್ಕಾರದ ಉಪ ಕಾರ್ಯದರ್ಶಿ ದರ್ಜೆಗೆ ಕಡಿಮೆಯಲ್ಲದ ಒಬ್ಬ ಅಧಿಕಾರಿಯನ್ನು ನಾಮ ನಿರ್ದೇಶಿಸಬಹುದು."

ಕರ್ನಾಟಕ ವಿಧಾನಸಭೆ

ಹತ್ತನೆಯ ವಿಧಾನಸಭೆ

(ಮೂರನೆಯ ಅಧಿವೇಶನ)

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ವಿಧೇಯಕ, 1995

(1995ರ ವಿಧಾನಸಭಾ ವಿಧೇಯಕ ಸಂಖ್ಯೆ 22)

ಕರ್ನಾಟಕ ರಾಜ್ಯದಲ್ಲಿನ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಹೊರತು ನಾಗರೀಕರ ಹಿಂದುಳಿದ ವರ್ಗಗಳಿಗಾಗಿ ಆಯೋಗವನ್ನು ರಚಿಸಲು ಮತ್ತು ಅದಕ್ಕೆ ಸಂಬಂಧಿಸಿದ ಮತ್ತು ಅನುಷಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸಲು ವಿಧೇಯಕ.

ಕರ್ನಾಟಕ ರಾಜ್ಯದಲ್ಲಿನ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಹೊರತು ನಾಗರೀಕರ ಹಿಂದುಳಿದ ವರ್ಗಗಳಿಗಾಗಿ ಆಯೋಗವನ್ನು ರಚಿಸುವುದು ಮತ್ತು ಅದಕ್ಕೆ ಸಂಬಂಧಿಸಿದ ಮತ್ತು ಅದಕ್ಕೆ ಅನುಷಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವುದು ಯುಕ್ತವಾದುದರಿಂದ,

ಇದು ಭಾರತ ಗಣರಾಜ್ಯದ ನಲವತ್ತಾರನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು

ಅಧ್ಯಾಯ–I

ಪ್ರಾರಂಭಿಕ

1. **ಚಿಕ್ಕಹೆಸರು ಮತ್ತು ಪ್ರಾರಂಭ** : (1) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಅಧಿನಿಯಮ, 1995 ಎಂದು ಕರೆಯತಕ್ಕದ್ದು.

(2)ಇದು, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು** : ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,

(ಎ) 'ಹಿಂದುಳಿದ ವರ್ಗಗಳು' ಎಂದರೆ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳನ್ನುಳಿದು ಕಾಲಕಾಲಕ್ಕೆ ಪಟ್ಟಿಯಲ್ಲಿ ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದ ಅಂಥ ನಾಗರೀಕರ ವರ್ಗ ಅಥವಾ ವರ್ಗಗಳು ;

(ಬಿ) 'ಆಯೋಗ' ಎಂದರೆ 3ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ;

(ಸಿ) 'ಪಟ್ಟಿಗಳು' ಎಂದರೆ ಸಂವಿಧಾನದ 15(4) ಮತ್ತು 16(4)ನೇ ಅನುಚ್ಛೇದಗಳ ಅಡಿಯಲ್ಲಿ ನಾಗರೀಕರ ಹಿಂದುಳಿದ ವರ್ಗಗಳ ಪರವಾಗಿ ಮೀಸಲಾತಿಗೆ ಉಪಬಂಧ ಕಲ್ಪಿಸುವ ಉದ್ದೇಶದಿಂದ ಕಾಲಕಾಲಕ್ಕೆ ರಾಜ್ಯ ಸರ್ಕಾರವು ಸಿದ್ಧಪಡಿಸಿದ ಪಟ್ಟಿಗಳು ;

(ಡಿ) 'ಸದಸ್ಯ' ಎಂದರೆ ಆಯೋಗದ ಸದಸ್ಯ.

ಅಧ್ಯಾಯ - II

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ರಚನೆ

3. ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ರಚನೆ :- (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಅಡಿಯಲ್ಲಿ ತನಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಮತ್ತು ವಹಿಸಿದ ಪ್ರಕಾರ್ಯಗಳನ್ನು ನಿರ್ವಹಿಸಲು "ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ" ಎಂಬ ಹೆಸರಿನಿಂದ ಕರೆಯಲಾಗುವ ತನ್ನ ಕೇಂದ್ರ ಕಾರ್ಯಸ್ಥಾನವನ್ನು ಬೆಂಗಳೂರಿನಲ್ಲಿ ಹೊಂದಿರುವ ಒಂದು ಆಯೋಗವನ್ನು ರಚಿಸತಕ್ಕದ್ದು.

(2) ಆಯೋಗವು ಈ ಮುಂದಿನ ಸದಸ್ಯರುಗಳನ್ನು ಹೊಂದಿರತಕ್ಕದ್ದು,

(ಎ) ಉಚ್ಚನ್ಯಾಯಾಲಯದ ನ್ಯಾಯಮೂರ್ತಿಯಾಗಿರುವ ಅಥವಾ ನ್ಯಾಯಮೂರ್ತಿಯಾಗಿದ್ದ ಒಬ್ಬ ಅಧ್ಯಕ್ಷ;

(ಬಿ) ಸಮಾಜ ವಿಜ್ಞಾನಿ ;

(ಸಿ) ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ವಿಶೇಷ ಜ್ಞಾನವುಳ್ಳ ನಾಲ್ವರು ವ್ಯಕ್ತಿಗಳು ; ಇವರನ್ನು ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡತಕ್ಕದ್ದು ಮತ್ತು

(ಡಿ) ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಇಲಾಖೆಯ ನಿರ್ದೇಶಕರು ಆಯೋಗದ ಸದಸ್ಯ - ಕಾರ್ಯದರ್ಶಿಯಾಗಿರತಕ್ಕುದು ;

4. ಅಧ್ಯಕ್ಷ ಮತ್ತು ಸದಸ್ಯರ ಪದಾವಧಿ ಮತ್ತು ಸೇವಾ ಷರತ್ತುಗಳು : (1) ರಾಜ್ಯ ಸರ್ಕಾರದ ಇಚ್ಛೆಗೊಳಪಟ್ಟು ಅಧ್ಯಕ್ಷ ಮತ್ತು ಪ್ರತಿಯೊಬ್ಬ ಸದಸ್ಯನು, ಅವನು ಪದಧಾರಣ ಮಾಡಿದ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಅಥವಾ ಅವನಿಗೆ ಅರವತ್ತೇಳು ವರ್ಷ ವಯಸ್ಸಾಗುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಪದಧಾರಣ ಮಾಡತಕ್ಕದ್ದು.

(2) ಅಧ್ಯಕ್ಷ ಅಥವಾ ಸದಸ್ಯನು ತನ್ನ ಸಹಿಯೊಂದಿಗೆ ರಾಜ್ಯ ಸರ್ಕಾರಕ್ಕೆ ಪತ್ರ ಬರೆದು ಯಾವುದೇ ಸಮಯದಲ್ಲಿ ಅಧ್ಯಕ್ಷ ಅಥವಾ ಸಂದರ್ಭಾನುಸಾರ ಸದಸ್ಯನ ಸ್ಥಾನಕ್ಕೆ ರಾಜೀನಾಮೆ ನೀಡಬಹುದು.

(3) ಒಬ್ಬ ವ್ಯಕ್ತಿಯು ಈ ಮುಂದಿನವುಗಳಿಗೊಳಗಾಗಿದ್ದರೆ ರಾಜ್ಯ ಸರ್ಕಾರವು ಅವನನ್ನು ಅಧ್ಯಕ್ಷನ ಅಥವಾ ಸದಸ್ಯನ ಸ್ಥಾನದಿಂದ ತೆಗೆದುಹಾಕತಕ್ಕದ್ದು,

(ಎ) ಅವಿಮುಕ್ತ ದಿವಾಳಿಯಾದರೆ;

(ಬಿ) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಅಧಃಪತನವನ್ನೊಳಗೊಳ್ಳುವ ಒಂದು ಅಪರಾಧಕ್ಕಾಗಿ ಅಪರಾಧಿ ಎಂದು ನಿರ್ಣೀತನಾಗಿದ್ದು ಕಾರಾವಾಸದ ಶಿಕ್ಷೆಗೆ ಒಳಗಾಗಿದ್ದರೆ ;

(ಸಿ) ಅಸ್ವಸ್ಥಚಿತ್ತದವನಾಗಿದ್ದರೆ ಮತ್ತು ಹಾಗೆಂದು ಸಕ್ಷಮ ನ್ಯಾಯಾಲಯದಿಂದ ಘೋಷಿಸಲಾಗಿದ್ದರೆ ;

(ಡಿ) ಕಾರ್ಯನಿರ್ವಹಿಸಲು ನಿರಾಕರಿಸಿದರೆ ಅಥವಾ ಕಾರ್ಯನಿರ್ವಹಿಸಲು ಅಸಮರ್ಥನಾದರೆ;

(ಇ) ಆಯೋಗದಿಂದ ಗೈರು ಹಾಜರಾಗುವುದಕ್ಕೆ ಅನುಮತಿಯನ್ನು ಪಡೆದುಕೊಳ್ಳದೆ ಆಯೋಗದ ನಿರಂತರ ಮೂರು ಸಭೆಗಳಿಗೆ ಗೈರು ಹಾಜರಾದರೆ ಅಥವಾ

(ಎಫ್)ಅವನು ಪದದಲ್ಲಿ ಮುಂದುವರಿಯುವುದರಿಂದ ಹಿಂದುಳಿದ ವರ್ಗಗಳು ಅಥವಾ ಸಾರ್ವಜನಿಕ ಹಿತಾಸಕ್ತಿಗೆ ಬಾಧಕವಾಗುವ ರೀತಿಯಲ್ಲಿ ತನ್ನ ಅಧ್ಯಕ್ಷ ಅಥವಾ ಸದಸ್ಯನ ಸ್ಥಾನವನ್ನು ದುರುಪಯೋಗಪಡಿಸಿಕೊಂಡಿರುವನೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಟ್ಟರೆ :

ಪರಂತು, ಈ ಖಂಡದಡಿ ಯಾವೊಬ್ಬ ವ್ಯಕ್ತಿಗೆ ಪ್ರಸ್ತಾವದ ವಿರುದ್ಧ ಅಹವಾಲು ಹೇಳಿಕೊಳ್ಳಲು ಸೂಕ್ತ ಅವಕಾಶ ಕೊಟ್ಟ ಹೊರತು ಅವನನ್ನು ತೆಗೆದು ಹಾಕತಕ್ಕದ್ದಲ್ಲ.

(4) (2)ನೇ ಉಪಪ್ರಕರಣದಡಿ ಅಥವಾ ಅನ್ಯಥಾ ರಿಕ್ತತೆಯುಂಟಾದಲ್ಲಿ ಅದನ್ನು ಹೊಸದಾಗಿ ನಾಮನಿರ್ದೇಶನ ಮಾಡುವ ಮೂಲಕ ತುಂಬತಕ್ಕದ್ದು.

(5) ಅಧ್ಯಕ್ಷ ಮತ್ತು ಸದಸ್ಯರಿಗೆ ಸಂದಾಯ ಮಾಡಬಹುದಾದ ವೇತನಗಳು ಮತ್ತು ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

5. ಆಯೋಗದ ಅಧಿಕಾರಿಗಳು ಮತ್ತು ಇತರ ಉದ್ಯೋಗಿಗಳು : (1) ರಾಜ್ಯ ಸರ್ಕಾರವು ಆಯೋಗದ ಪ್ರಕಾರ್ಯಗಳ ಸಮರ್ಥ ನಿರ್ವಹಣೆಗಾಗಿ ಅವಶ್ಯಕವಾಗಬಹುದಾದಂಥ ಅಧಿಕಾರಿಗಳು ಮತ್ತು ಉದ್ಯೋಗಿಗಳನ್ನು ಆಯೋಗಕ್ಕೆ ಒದಗಿಸತಕ್ಕದ್ದು.

(2) ಆಯೋಗದ ಉದ್ದೇಶಕ್ಕಾಗಿ ನೇಮಕ ಮಾಡಿಕೊಳ್ಳಲಾದ ಅಧಿಕಾರಿಗಳು ಮತ್ತು ಉದ್ಯೋಗಿಗಳಿಗೆ ಸಂದಾಯ ಮಾಡಬೇಕಾದ ವೇತನಗಳು ಮತ್ತು ಭತ್ಯೆಗಳು ಮತ್ತು ಅವರ ಸೇವಾ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

6. ವೇತನಗಳು ಮತ್ತು ಭತ್ಯೆಗಳನ್ನು ಅನುದಾನಗಳಿಂದ ಸಂದಾಯ **ಮಾಡುವುದು** : ಅಧ್ಯಕ್ಷ ಮತ್ತು ಸದಸ್ಯರಿಗೆ ಸಂದಾಯ ಮಾಡಬೇಕಾದ ವೇತನಗಳು ಮತ್ತು ಭತ್ಯೆಗಳನ್ನು ಮತ್ತು 5ನೇ ಪ್ರಕರಣದಲ್ಲಿ ಉಲ್ಲೇಖಿಸಿರುವ ಅಧಿಕಾರಿಗಳು ಮತ್ತು ಇತರ ಉದ್ಯೋಗಿಗಳಿಗೆ ಸಂದಾಯ ಮಾಡಬೇಕಾದ ವೇತನಗಳು, ಭತ್ಯೆಗಳು ಮತ್ತು ವಿಶ್ರಾಂತಿ ವೇತನಗಳೂ ಸೇರಿದಂತೆ ಆಡಳಿತ ವೆಚ್ಚಗಳನ್ನು 12ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಅನುದಾನಗಳಿಂದ ಸಂದಾಯ ಮಾಡತಕ್ಕದ್ದು.

7. ರಿಕ್ತತೆ ಇತ್ಯಾದಿಗಳು ಆಯೋಗದ ವ್ಯವಹರಣೆಗಳನ್ನೂ ಅನೂರ್ಜಿತ ಗೊಳಿಸತಕ್ಕದ್ದಲ್ಲ : ಆಯೋಗದ ಯಾವುದೇ ಕೃತ್ಯ ಅಥವಾ ವ್ಯವಹರಣೆಗಳನ್ನು ಆಯೋಗದಲ್ಲಿನ ರಿಕ್ತತೆ ಅಥವಾ ಅದರ ರಚನೆಯಲ್ಲಿನ ಯಾವುದೇ ನ್ಯೂನತೆಯ ಕಾರಣ ಮಾತ್ರದಿಂದಲೇ ಅನೂರ್ಜಿತಗೊಳಿಸತಕ್ಕದಲ್ಲ.

8. ಆಯೋಗದಿಂದ ವಿನಿಯಮಿಸಬೇಕಾದ ಕಾರ್ಯವಿಧಾನ : (1) ಆಯೋಗವು ಅವಶ್ಯಕವಾದಾಗಲೆಲ್ಲಾ ಸಾಮಾನ್ಯವಾಗಿ ಬೆಂಗಳೂರಿನಲ್ಲಿ ಮತ್ತು ಅಧ್ಯಕ್ಷರು ಸೂಕ್ತವೆಂದು ಭಾವಿಸುವಂಥ ಇತರ ಸ್ಥಳಗಳಲ್ಲಿ ಸಭೆ ಸೇರತಕ್ಕದ್ದು.

(2) ಆಯೋಗವು ಅದರ ಕಾರ್ಯವಿಧಾನವನ್ನು ವಿನಿಯಮಿಸತಕ್ಕದ್ದು.

(3) ಆಯೋಗದ ಎಲ್ಲ ಆದೇಶಗಳು ಮತ್ತು ತೀರ್ಮಾನಗಳನ್ನು ಸದಸ್ಯ - ಕಾರ್ಯದರ್ಶಿ ಅಥವಾ ಈ ಪರವಾಗಿ ಸದಸ್ಯ - ಕಾರ್ಯದರ್ಶಿಯು ಸೂಕ್ತವಾಗಿ ಪ್ರಾಧಿಕರಿಸಿದ ಆಯೋಗದ ಇತರ ಯಾರೇ ಅಧಿಕಾರಿಯು ಅಧಿಕೃತಗೊಳಿಸತಕ್ಕದ್ದು.

ಅಧ್ಯಾಯ - III

ಆಯೋಗದ ಪ್ರಕಾರ್ಯಗಳು ಮತ್ತು ಅಧಿಕಾರಗಳು

9. ಆಯೋಗದ ಪ್ರಕಾರ್ಯಗಳು : (1) ಆಯೋಗದ ಪ್ರಕಾರ್ಯಗಳು ಈ ಮುಂದಿನಂತಿರತಕ್ಕದ್ದು, ಎಂದರೆ :

(i) ನಾಗರೀಕರ ಯಾವುದೇ ವರ್ಗವನ್ನು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿಸಬೇಕೆಂದು ಬಂದ ಕೋರಿಕೆಗಳನ್ನು ಪರಿಶೀಲಿಸುವುದು ಮತ್ತು ಯಾವುದೇ ಹಿಂದುಳಿದ ವರ್ಗವನ್ನು ಅಂಥ ಪಟ್ಟಿಯಲ್ಲಿ ಹೆಚ್ಚಾಗಿ ಸೇರಿಸಲಾಗಿದೆ ಎಂದು ಅಥವಾ ಸೇರಿಸಲಾಗಿಲ್ಲವೆಂದು ಬಂದ ದೂರುಗಳ ವಿಚಾರಣೆ ಮಾಡುವುದು ಮತ್ತು ಸರ್ಕಾರಕ್ಕೆ ಅದು ಸಮುಚಿತವೆಂದು ಭಾವಿಸುವಂಥ ಸಲಹೆಯನ್ನು ನೀಡಬಹುದು.

(ii) ಹಿಂದುಳಿದ ವರ್ಗಗಳಿಗೆ ಸೇರಿದ ಜನರ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗಳ ಮತ್ತು ಸಮಸ್ಯೆಗಳ ಬಗ್ಗೆ ಸರ್ವೆ ಮಾಡುವುದು.

(iii) ಹಿಂದುಳಿದ ವರ್ಗಗಳಿಗಾಗಿ ಇರುವ ಅನೇಕ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಮೇಲ್ವಿಚಾರಣೆ ಮಾಡುವುದು.

(2)ಆಯೋಗವು ನೀಡುವ ಸಲಹೆಗಳಿಗೆ ಸರ್ಕಾರವು ಸಾಮಾನ್ಯವಾಗಿ ಬದ್ಧವಾಗಿರತಕ್ಕದ್ದು.

10. ಆಯೋಗದ ಅಧಿಕಾರಗಳು : ಆಯೋಗವು 9ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಅದರ ಪ್ರಕಾರ್ಯಗಳನ್ನು ನಿರ್ವಹಿಸುವಾಗ, ಒಂದು ದಾವೆಯನ್ನು ವಿಚಾರಣೆ ಮಾಡುವಾಗ ಮತ್ತು ವಿಶೇಷವಾಗಿ ಈ ಮುಂದಿನ ವಿಷಯಗಳಿಗೆ ಸಂಬಂಧಪಟ್ಟಂತೆ ಸಿವಿಲ್ ನ್ಯಾಯಾಲಯವು ಹೊಂದಿರುವ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ,

(ಎ) ರಾಜ್ಯದ ಯಾವುದೇ ಭಾಗದಿಂದ ಯಾರೇ ವ್ಯಕ್ತಿಯನ್ನು ಸಮನು ಮಾಡುವುದು ಮತ್ತು ಅವನ ಹಾಜರಾತಿಯನ್ನು ಒತ್ತಾಯಪಡಿಸುವುದು ಮತ್ತು ಪ್ರಮಾಣ ಮಾಡಿಸುವ ಮೂಲಕ ಆವನನ್ನು ಪರೀಕ್ಷಿಸುವುದು ;

(ಬಿ) ಯಾವುದೇ ದಾಖಲೆಗಳನ್ನು ಶೋಧಿಸುವುದನ್ನು ಮತ್ತು ಹಾಜರುಪಡಿಸುವುದನ್ನು ಅಗತ್ಯಪಡಿಸುವುದು ;

(ಸಿ) ಅಫಿಡವಿಟ್ಟುಗಳ ಮೂಲಕ ಸಾಕ್ಷ್ಯವನ್ನು ಸ್ವೀಕರಿಸುವುದು ;

(ಡಿ) ಯಾವುದೇ ನ್ಯಾಯಾಲಯ ಅಥವಾ ಕಚೇರಿಯಿಂದ ಯಾವುದೇ ಸರ್ಕಾರಿ ದಾಖಲೆ ಅಥವಾ ಅದರ ಪ್ರತಿಯನ್ನು ನೀಡುವಂತೆ ಅಗತ್ಯಪಡಿಸತಕ್ಕದ್ದು ;

(ಇ) ಸಾಕ್ಷಿಗಳ ಮತ್ತು ದಸ್ತಾವೇಜುಗಳ ಪರೀಕ್ಷೆಗಾಗಿ ಕಮೀಷನ್ನುಗಳನ್ನು ಹೊರಡಿಸುವುದು, ಮತ್ತು

(ಎಫ್) ನಿಯಮಿಸಬಹುದಾದಂಥ ಇತರ ಯಾವುದೇ ವಿಷಯ

11. ರಾಜ್ಯ ಸರ್ಕಾರದಿಂದ ಪಟ್ಟಿಗಳ ನಿಯತಕಾಲಿಕ ಪುನರೀಕ್ಷಣೆ : (1) ರಾಜ್ಯ ಸರ್ಕಾರವು ಯಾವುದೇ ಸಮಯದಲ್ಲಿ ಮತ್ತು ಈ ಅಧಿನಿಯಮವು ಜಾರಿಗೆ ಬಂದ ದಿನಾಂಕದಿಂದ ಮತ್ತು ಹತ್ತು ವರ್ಷಗಳ ಅವಧಿಯು ಮುಕ್ತಾಯವಾದಾಗ ಮತ್ತು ಅದರ ನಂತರ ಬರುವ ಹತ್ತು ವರ್ಷಗಳ ಅವಧಿ ಮುಕ್ತಾಯವಾಗುವಾಗ ಹಿಂದುಳಿದ ವರ್ಗಗಳಾಗಿರುವುದು ನಿಂತುಹೋಗಿರುವ ವರ್ಗಗಳನ್ನು ತೆಗೆದುಹಾಕುವ ಅಥವಾ ಹೊಸ ಹಿಂದುಳಿದ ವರ್ಗಗನ್ನು ಅಂಥ ಪಟ್ಟಿಯಲ್ಲಿ ಸೇರಿಸುವುದನ್ನು ಗಮನದಲ್ಲಿರಿಸಿಕೊಂಡು ಪಟ್ಟಿಗಳನ್ನು ಪುನರೀಕ್ಷಿಸತಕ್ಕದ್ದು.

(2) ರಾಜ್ಯ ಸರ್ಕಾರವು (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಪುನರೀಕ್ಷಣೆಯನ್ನು ಕೈಗೊಳ್ಳುವಾಗ ಆಯೋಗದ ಸಲಹೆಯನ್ನು ಪಡೆಯತಕ್ಕದ್ದು.

ಅಧ್ಯಾಯ - IV

ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

12.ರಾಜ್ಯ ಸರ್ಕಾರದಿಂದ ಅನುದಾನಗಳು : ಈ ಅಧಿನಿಯಮದ ಉದ್ದೇಶಗಳಿಗಾಗಿ ಬಳಸಲು ರಾಜ್ಯ ಸರ್ಕಾರವು ಯುಕ್ತವೆಂದು ಭಾವಿಸುವಂಥ ಹಣದ ಮೊತ್ತವನ್ನು ಅನುದಾನಗಳ ಮೂಲಕ ಆಯೋಗಕ್ಕೆ ಈ ಪರವಾಗಿ ಕಾನೂನಿನ ಮೂಲಕ ರಾಜ್ಯ ವಿಧಾನ ಮಂಡಲವು ಧನವಿನಿಯೋಗ ಮಾಡಿದ ನಂತರ, ನೀಡತಕ್ಕದ್ದು.

(2) ಆಯೋಗವು ಅಂಥ ಮೊತ್ತವನ್ನು ಈ ಅಧಿನಿಯಮದ ಅಡಿಯಲ್ಲಿನ ಪ್ರಕಾರ್ಯಗಳನ್ನು ನೆರವೇರಿಸಲು ತಾನು ಸೂಕ್ತವೆಂದು ಭಾವಿಸುವ ರೀತಿಯಲ್ಲಿ ಖರ್ಚು ಮಾಡಬಹುದು ಮತ್ತು ಅಂಥ ಮೊತ್ತಗಳನ್ನು (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಅನುದಾನಗಳಿಂದ ಸಂದಾಯ ಮಾಡಬಹುದಾದ ವೆಚ್ಚವೆಂದು ಪರಿಗಣಿಸತಕ್ಕದ್ದು.

13. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ : (1) ಆಯೋಗದ ಆದಾಯ ಮತ್ತು ವೆಚ್ಚಗಳನ್ನು ನಿಯಮಿಸಬಹುದಾದಂಥ ನಿಯಮಗಳಿಗನುಸಾರವಾಗಿ ಇಡತಕ್ಕದ್ದು.

(2) ಆಯೋಗವು ನಿಯಮಿಸಬಹುದಾದಂಥ ನಮೂನೆಯಲ್ಲಿ ಲೆಕ್ಕಪತ್ರಗಳ ವಾರ್ಷಿಕ ವಿವರವನ್ನು ತಯಾರಿಸತಕ್ಕದ್ದು.

(3) ಆಯೋಗದ ಲೆಕ್ಕಪತ್ರಗಳನ್ನು ವಾರ್ಷಿಕವಾಗಿ ರಾಜ್ಯ ಸರ್ಕಾರವು ನೇಮಕ ಮಾಡಬಹುದಾದಂಥ ಲೆಕ್ಕ ಪರಿಶೋಧಕನಿಂದ ಲೆಕ್ಕ ಪರಿಶೋಧನೆ ಮಾಡಿಸತಕ್ಕದ್ದು.

(4) ಲೆಕ್ಕ ಪರಿಶೋಧಕನಿಗೆ, ಲೆಕ್ಕಪರಿಶೋಧನೆಯ ಉದ್ದೇಶಕ್ಕಾಗಿ ಆಯೋಗದ ಎಲ್ಲ ಲೆಕ್ಕಪತ್ರಗಳನ್ನು ಮತ್ತು ಇತರ ದಾಖಲೆಗಳನ್ನು ಪಡೆಯಲು ಅವಕಾಶವಿರತಕ್ಕದ್ದು.

(5)ನಿಯಮಿಸಬಹುದಾದಂತೆ ಲೆಕ್ಕ ಪರಿಶೋಧನೆಯ ಅಂಥ ವೆಚ್ಚಗಳನ್ನು ಆಯೋಗವು ತನ್ನ ಅನುದಾನದಿಂದ ಸಂದಾಯ ಮಾಡತಕ್ಕದ್ದು.

(6) ಲೆಕ್ಕ ಪರಿಶೋಧಕನ ವರದಿಯನ್ನು ಸ್ವೀಕರಿಸಿದ ನಂತರ ಆದಷ್ಟು ಬೇಗನೆ ಆಯೋಗವು ಲೆಕ್ಕಪತ್ರಗಳ ವಾರ್ಷಿಕ ವಿವರವನ್ನು ಲೆಕ್ಕ ಪರಿಶೋಧಕನ ವರದಿಯ ಪ್ರತಿಯೊಂದಿಗೆ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ನಿಯಮಿಸಬಹುದಾದ ಅಂಥ ರೀತಿಯಲ್ಲಿ ಲೆಕ್ಕಪತ್ರಗಳ ವಾರ್ಷಿಕ ವಿವರನ್ನು ಪ್ರಕಟಿಸುವಂತೆ ಮಾಡತಕ್ಕದ್ದು.

(7) ರಾಜ್ಯ ಸರ್ಕಾರವು ಲೆಕ್ಕ ಪರಿಶೋಧಕನ ವರದಿಯನ್ನು ಅವಗಾಹಿಸಿದ ನಂತರ ಅದು ಉಚಿತವೆಂದು ಭಾವಿಸುವಂಥ ನಿರ್ದೇಶನಗಳನ್ನು ಆಯೋಗಕ್ಕೆ ನೀಡಬಹುದು ಮತ್ತು ಆಯೋಗವು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

14. ವಾರ್ಷಿಕ ವರದಿ : ಪ್ರತಿ ಹಣಕಾಸು ವರ್ಷಕ್ಕಾಗಿ ಆಯೋಗವು ಹಿಂದಿನ ವರ್ಷದಲ್ಲಿ ಅದರ ಕಾರ್ಯಚಟುವಟಿಕೆಯ ಬಗ್ಗೆ ಪೂರ್ಣ ಮಾಹಿತಿಯನ್ನು ನೀಡುವ ಅದರ ವಾರ್ಷಿಕ ವರದಿಯನ್ನು ನಿಯಮಿಸಬಹುದಾದಂತೆ ಅಂಥ ನಮೂನೆ ಮತ್ತು ಅಂಥ ಸಮಯದಲ್ಲಿ ತಯಾರಿಸತಕ್ಕದ್ದು ಎತ್ತು ಅದರ ಒಂದು ಪ್ರತಿಯನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

15. ವಾರ್ಷಿಕ ವರದಿ ಮತ್ತು ಲೆಕ್ಕ ಪರಿಶೋಧನಾ ವರದಿಯನ್ನು ರಾಜ್ಯ ವಿಧಾನ ಮಂಡಲದಲ್ಲಿ ಮಂಡಿಸತಕ್ಕದ್ದು : ರಾಜ್ಯ ಸರ್ಕಾರವು ಆಯೋಗವು ವಾರ್ಷಿಕ ವರದಿಯಲ್ಲಿ ನೀಡಿರುವ ಶಿಫಾರಸುಗಳು, ಅವು ರಾಜ್ಯಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ ಅವುಗಳ ಬಗ್ಗೆ ಕೈಗೊಂಡ ಕ್ರಮಗಳು ಮತ್ತು ಅಂಥ ಶಿಫಾರಸ್ಸುಗಳು ಯಾವುದಾದರೂ ಇದ್ದಲ್ಲಿ, ಅವುಗಳನ್ನು ಒಪ್ಪಿಕೊಳ್ಳದಿರುವುದಕ್ಕೆ ಕಾರಣಗಳ ಜ್ಞಾಪನದೊಂದಿಗೆ ವರದಿಗಳನ್ನು ಸ್ವೀಕರಿಸಿದ ನಂತರ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು. ಆಯೋಗವು ಅದರ ವಿವೇಚನಾನುಸಾರವಾಗಿ ಸಾರ್ವಜನಿಕ ಪ್ರಾಮುಖ್ಯತೆಯನ್ನು ಹೊಂದಿರುವ ಯಾವುದೇ ವಿಷಯವನ್ನು ರಾಜ್ಯ ಸರ್ಕಾರಕ್ಕೆ ಕಾಲಕಾಲಕ್ಕೆ ಸಲ್ಲಿಸಬಹುದು.

ಅಧ್ಯಾಯ - V

ಸಂಕೀರ್ಣ

16. ಆಯೋಗದ ಅಧ್ಯಕ್ಷ, ಸದಸ್ಯರು ಮತ್ತು ನೌಕರರು ಲೋಕ ನೌಕರರಾಗಿರತಕ್ಕದ್ದು : ಆಯೋಗದ ಅಧ್ಯಕ್ಷ, ಸದಸ್ಯರು ಮತ್ತು ನೌಕರರನ್ನು ಭಾರತ ದಂಡಸಂಹಿತೆಯ 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕನೌಕರರೆಂಬುದಾಗಿ ಭಾವಿಸತಕ್ಕದ್ದು.

17. ನಿಯಮಗಳನ್ನು ರಚಿಸಲು ಅಧಿಕಾರ : (1) ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆ ನೀಡುವ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ನೆರವೇರಿಸುವ ಉದ್ದೇಶಗಳಿಗಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಮೇಲೆ ತಿಳಿಸಿದ ಅಧಿಕಾರಗಳ ಸಾಮಾನ್ಯತೆಗೆ ಪ್ರತಿಕೂಲವಾಗದಂತೆ ಅಂಥ ನಿಯಮಗಳು ಈ ಮುಂದಿನ ಎಲ್ಲ ಅಥವಾ ಯಾವುದೇ ವಿಷಯದ ಬಗ್ಗೆ ಉಪಬಂಧ ಕಲ್ಪಿಸಬಹುದು, ಎಂದರೆ, .

(ಎ)

4ನೇ ಪ್ರಕರಣದ (5)ನೇ ಉಪಪ್ರಕರಣದ ಅಡಿಯಲ್ಲಿ ಅಧ್ಯಕ್ಷ ಮತ್ತು ಸದಸ್ಯರಿಗೆ ಮತ್ತು 5ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ಅಧಿಕಾರಿಗಳಿಗೆ ಮತ್ತು ಇತರ ನೌಕರರಿಗೆ ಸಂದಾಯ ಮಾಡಬಹುದಾದ ವೇತನಗಳು ಮತ್ತು ಭತ್ಯೆಗಳು ಮತ್ತು ಅವರ ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ;

(ಬಿ) 13ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ತಯಾರಿಸತಕ್ಕ ವಾರ್ಷಿಕ ವಿವರ ಮತ್ತು ಲೆಕ್ಕಪತ್ರಗಳ ನಮೂನೆ.

(ಸಿ) 14ನೇ ಪ್ರಕರಣದ ಅಡಿಯಲ್ಲಿ ತಯಾರಿಸತಕ್ಕಂಥ ವಾರ್ಷಿಕ ವರದಿಯ ನಮೂನೆ ಮತ್ತು ಸಮಯ.

(ಡಿ) ನಿಯಮಿಸುವುದು ಅಗತ್ಯವಾದಂಥ ಅಥವಾ ನಿಯಮಿಸಬಹುದಾದಂಥ ಇತರ ಯಾವುದೇ ವಿಷಯಗಳು.

(3) ಈ ಅಧಿನಿಯಮದ ಅಡಿಯಲ್ಲಿ ಮಾಡಲಾದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಒಂದು ಅಧಿವೇಶನ ಅಥವಾ ಎರಡು ಅನುಕ್ರಮ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಹೀಗೆ ಮಂಡಿಸಲಾದ ಅಧಿವೇಶನ

ಅಥವಾ ನಿಕಟೋತ್ತರ ಅಧಿವೇಶನಗಳು ಮುಕ್ತಾಯವಾಗುವ ಮೊದಲು ಉಭಯ ಸದನಗಳು ನಿಯಮದಲ್ಲಿ ಯಾವುದೇ ಮಾರ್ಪಾಡು ಮಾಡಬೇಕೆಂದು ಒಪ್ಪಿದರೆ ಅಥವಾ ನಿಯಮವನ್ನು ಮಾಡಬಾರದೆಂದು ತೀರ್ಮಾನಿಸಿದರೆ ತದನಂತರ ಆ ನಿಯಮವು, ಆ ನಿಯಮದ ಅಡಿಯಲ್ಲಿ ಈ ಮುಂಚೆ ಮಾಡಲಾದ ಯಾವುದರ ಮಾನ್ಯತೆಗೂ ಪ್ರತಿಕೂಲವಾಗದಂತೆ ಸಂದರ್ಭಾನುಸಾರ ಅಥವಾ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ.

18. **ತೊಂದರೆಗಳನ್ನು ನಿವಾರಿಸಲು ಅಧಿಕಾರ** : (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಲಾದ ಆದೇಶದ ಮೂಲಕ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂತೆ, ಅಗತ್ಯವೆಂದು ಅಥವಾ ಯುಕ್ತವೆಂದು ತನಗೆ ಕಂಡುಬರುವ ಉಪಬಂಧಗಳನ್ನು ಮಾಡಬಹುದು :

ಪರಂತು, ಅಂಥ ಯಾವುದೇ ಆದೇಶವನ್ನು ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳ ಅವಧಿ ಮುಕ್ತಾಯವಾದ ತರುವಾಯ ಮಂಡಿಸತಕ್ಕದ್ದಲ್ಲ.

(2) ಈ ಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಆದೇಶವನ್ನು ಅದನ್ನು ಹೊರಡಿಸಿದ ತರುವಾಯ ಆದಷ್ಟು ಬೇಗನೆ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ನಾಗರೀಕರ ಹಿಂದುಳಿದ ವರ್ಗಗಳಿಗಾಗಿ ಈ ಮುಂದಿನ ಉದ್ದೇಶಗಳ ಸಲುವಾಗಿ ಒಂದು ಶಾಶ್ವತ ಆಯೋಗವನ್ನು ರಚಿಸಲು ಉಪಬಂಧ ಕಲ್ಪಿಸುವುದು ಅಗತ್ಯವೆಂದು ಪರಿಗಣಿಸಲಾಯಿತು,

(i) ಅವರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಖಚಿತ ಪಡಿಸಿಕೊಳ್ಳುವುದು;

(ii) ನಾಗರೀಕರ ಯಾವುದೇ ವರ್ಗವನ್ನು ಹಿಂದುಳಿದ ವರ್ಗವೆಂದು ಪಟ್ಟಿಯಲ್ಲಿ ಸೇರಿಸಬೇಕೆಂಬ ಮನವಿಗಳನ್ನು ಪರೀಕ್ಷಿಸುವುದು ಮತ್ತು ಹಿಂದುಳಿದ ವರ್ಗಗಳನ್ನು ಪಟ್ಟಿಯಲ್ಲಿ ಹೆಚ್ಚಾಗಿ ಸೇರಿಸಿರುವ ಅಥವಾ ಸೇರಿಸಿಲ್ಲದಿರುವ ಬಗ್ಗೆ ವಿಚಾರಣೆ ನಡೆಸುವುದು ;

(iii) ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳ ಸಾಮಾಜಿಕ, ಶೈಕ್ಷಣಿಕ ಸ್ಥಿತಿಗಳ ಬಗ್ಗೆ ಮತ್ತು ಸಮಸ್ಯೆಗಳ ಬಗ್ಗೆ ಸರ್ವೆ ಮಾಡುವುದು ; ಮತ್ತು

(iv) ಹಿಂದುಳಿದ ವರ್ಗಗಳಿಗಾಗಿ ರೂಪಿಸಿದ ಅನೇಕ ಕಲ್ಯಾಣ ಯೋಜನೆಗಳ ಅನುಷ್ಠಾನದ ಮೇಲ್ವಿಚಾರಣೆ ನಡೆಸುವುದು

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಉದ್ದೇಶಿತ ಕ್ರಮದಿಂದಾಗಿ ವರ್ಷಕ್ಕೆ ಸರಿಸುಮಾರು 14.23 ಲಕ್ಷ ರೂ.ಗಳ ಅನಾವರ್ತಕ ವೆಚ್ಚ ಹಾಗೂ 19.29 ಲಕ್ಷ ರೂ.ಗಳ ಆವರ್ತಕ ವೆಚ್ಚವು ಉಂಟಾಗುತ್ತವೆ.

ಪ್ರತ್ಯಾಯೋಜಿತ ಶಾಸನ ರಚನಾಧಿಕಾರ ಕುರಿತು ಜ್ಞಾಪನ

2ನೇ ಖಂಡದ (ಸಿ) ಉಪ-ಖಂಡ, 4ನೇ ಖಂಡದ (4)ನೇ ಉಪಖಂಡ, 5ನೇ ಖಂಡದ (2)ನೇ ಉಪಖಂಡ, 10ನೇ ಖಂಡದ (1)ನೇ ಉಪಖಂಡದ (ಎಫ್) ಬಾಬು, 13ನೇ ಖಂಡದ (2)ನೇ ಉಪಖಂಡ ಮತ್ತು 13ನೇ ಖಂಡದ (5) ಮತ್ತು (6)ನೇ ಉಪಖಂಡಗಳು ಅವುಗಳಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶಗಳಿಗಾಗಿ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಪ್ರಸ್ತಾವಿತ ಪ್ರತ್ಯಾಯೋಜಿತ ಶಾಸನ ರಚನಾಧಿಕಾರವು ವಾಡಿಕೆಯ ಸ್ವರೂಪದ್ದಾಗಿರುತ್ತದೆ.

ರಮೇಶ್ ಎಸ್. ಜಿಗಜಿಣಗಿ,
ಸಮಾಜ ಕಲ್ಯಾಣ ಸಚಿವರು.

ನಿಂ.ಹು. ಮುತ್ತಲಗೇರಿ,
ಕಾರ್ಯದರ್ಶಿ.

BLANK PAGE

ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಶುಕ್ರವಾರ 8ನೇ ಸೆಪ್ಟೆಂಬರ್ ೧೯೯೫ರಂದು
ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಗ್ಗೆ ೧೦-೧೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ರಮೇಶ್ ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ. ಮುಂದಿನ ಕುರ್ಚಿಯಲ್ಲಿ ಮಂತ್ರಿಗಳು ಬೇಕಾಗುತ್ತದೆ. ಇದರಿಂದ ಸರ್ಕಾರಕ್ಕೆ ಸೀರಿಯಸ್‌ನೆಸ್ ಇಲ್ಲ ಎಂದಾಗುತ್ತದೆ. ನಾವು ಇವತ್ತು 10 ಗಂಟೆಗೆ ಕುಳಿತುಕೊಳ್ಳಬೇಕಾಗಿತ್ತು. ಆದರೆ 15 ನಿಮಿಷ ತಡವಾಗಿ ಸೇರುತ್ತಿದ್ದೇವೆ.

ಅಧ್ಯಕ್ಷರು : ನಾವು ಶುರು ಮಾಡಿಬಿಡೋಣ. ಅವರೆಲ್ಲಾ ಬಂದು ಬಿಡುತ್ತಾರೆ. ಮಾನ್ಯ ವಿರೋಧ ಪಕ್ಷದ ನಾಯಕರೆ ನಾವು ಅಜೆಂಡಾ ಕಳುಹಿಸಿದ್ದೇವೆ. ನಿನ್ನೆಯೂ ಸಹ ಇಮ್ಮೊತ್ತಿಗೆ ಎಂದು ಹೇಳಿದ್ದೇವೆ. ಬೆಲ್ ಹಾಕಿದ್ದೇವೆ, ಕೋರಂ ಇದೆ. ನಾನು ಬಂದಿದ್ದೇನೆ, ನಮ್ಮ ಕೆಲಸ ನಾವು ಶುರು ಮಾಡೋಣ. ಯಾರು ಬಂದಿಲ್ಲ, ಏಕೆ ಬಂದಿಲ್ಲ, ದಯಮಾಡಿ ಅದನ್ನು ನನಗೆ ಬಿಡಿ. ನೀವು ನೋಡುತ್ತಿದ್ದೀರಿ, ಸ್ವಯಂಪ್ರೇರಿತವಾಗಿ ನಾನು ಕೆಲವು ಸಂದರ್ಭದಲ್ಲಿ ಏನೆಲ್ಲಾ ಹೇಳಬೇಕೊ ಅದನ್ನೆಲ್ಲಾ ಹೇಳುತ್ತಿದ್ದೇನೆ. ನಾನು ಇದನ್ನು ಗಮನಿಸುತ್ತಿದ್ದೇನೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ನಮ್ಮ ಪ್ರಶ್ನೆಗಳಿಗೆ ಉತ್ತರ ಕೊಡುವವರು ಇಲ್ಲವಲ್ಲ.

ಅಧ್ಯಕ್ಷರು : ನಾನು ಏನು ಹೇಳುತ್ತಿದ್ದೇನೆಂದರೆ ಜ್ಞಾನೇಂದ್ರರವರೆ, ನೀವು ಮಾತನಾಡಿ ಅದರ ಗಾಂಭೀರ್ಯವನ್ನು ಕಳೆಯಬೇಡಿ. ನಿಮ್ಮ ಪ್ರಶ್ನೆಗೆ ಸಂಬಂಧಪಟ್ಟವರು ಉತ್ತರ ಮಾಡುವುದಕ್ಕೆ ಇಲ್ಲದೆ ಹೋದರೆ, ಏನು ಹೇಳಬೇಕು ಎಂದು ನನಗೆ ಬಿಡಿ. ಅದು ನನ್ನ ಗೌರವದ ಪ್ರಶ್ನೆ ನೀವು ಹೇಳಿ ನಾನು ಅದನ್ನು ಕೇಳಬೇಕಾ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಮುಂದಿನ ಬೆಂಚಿನಲ್ಲಿ ಹಿರಿಯರು ಬರದೆ ಇದ್ದರೆ, ಕ್ಯಾಬಿನೆಟ್ ಸಚಿವರು ಬರದೆ ಇದ್ದರೆ ಅದು ಈ ಸದನಕ್ಕೆ ಮಹತ್ವ ಬರುವುದಿಲ್ಲ.

ಅಧ್ಯಕ್ಷರು : ಅದನ್ನು ನಾನು ಹೇಳುತ್ತೇನೆ.

1995-96ನೇ ಸಾಲಿನಲ್ಲಿ ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆಗಳಿಗೆ ಒತ್ತಾಯ.

78 - ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) 1995-96ನೇ ಸಾಲಿನಲ್ಲಿ ಮುರಾರ್ಜಿ ದೇಸಾಯಿ ಮಾದರಿ ವಸತಿಶಾಲೆಗಳನ್ನು ಯಾವ ಯಾವ ಸ್ಥಳಗಳಲ್ಲಿ ಸರ್ಕಾರದವರು ತೆರೆಯಲು ಉದ್ದೇಶಿಸಿದ್ದಾರೆ.

ಆ) ಮಂಡ್ಯ ಜಿಲ್ಲೆಯ ಹುಲಿಗೆರೆ ಮದ್ದೂರು ತಾಲ್ಲೂಕಿನಲ್ಲಿ ಈ ಶಾಲೆಗಳನ್ನು ತೆರೆಯಲು ಸರ್ಕಾರದವರು ಪರಿಶೀಲಿಸುವರೇ,

ಇ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) 1995-96ನೇ ಸಾಲಿನಲ್ಲಿ ದಿವಂಗತ ಪ್ರಧಾನಿ ಮುರಾರ್ಜಿ ದೇಸಾಯಿ ಅವರ ಜನ್ಮಶತಾಬ್ದಿ ಸ್ಮರಣಾರ್ಥಕವಾಗಿ ಪ್ರತಿ ಜಿಲ್ಲೆಗೆ ಒಂದರಂತೆ 20 ಮಾದರಿ ನವೋದಯ ವಸತಿಶಾಲೆಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಈ ಶಾಲೆಗಳನ್ನು ಶಿಕ್ಷಣ ಇಲಾಖೆಯು ನಡೆಸುತ್ತಿರುವ ವಿದ್ಯಾಪೀಠಗಳಲ್ಲಿ ಅಥವಾ ಜಿಲ್ಲಾ ಪಂಚಾಯತ್ ಸಮಿತಿ ಆಯ್ಕೆ ಮಾಡುವ ಸ್ಥಳಗಳಲ್ಲಿ ಪ್ರಾರಂಭ ಮಾಡಲು ಉದ್ದೇಶಿಸಲಾಗಿದೆ. ತತ್ಸಂಬಂಧ, ಸ್ಥಳ ಆಯ್ಕೆ ಮಾಡಿ ಸೂಕ್ತ ಪ್ರಸ್ತಾವನೆಗಳನ್ನು ಸಲ್ಲಿಸುವಂತೆ ಜಿಲ್ಲಾಪಂಚಾಯತ್‌ಗಳನ್ನು ಕೋರಲಾಗಿದ್ದು, ಅವರಿಂದ ಪ್ರಸ್ತಾವನೆಯನ್ನು ನಿರೀಕ್ಷಿಸಲಾಗಿದೆ.

ಆ) ಮೇಲಿನ ಉತ್ತರದಿಂದಾಗಿ ಇದು ಉದ್ಭವಿಸುವುದಿಲ್ಲ.

ಅಧ್ಯಕ್ಷರು : ನಮಗೆ ರಿಪ್ಲೈ ಬಂದೇ ಇಲ್ಲ. ನಿಮ್ಮ ಸ್ಟಾಫ್ ನೋಡಿ ಅವರು ಕೆಲವೇ ಜನ ಕಂಟಿನ್ಯೂಯಸ್ ಆಗಿ ಯಾವ ಮಂತ್ರಿಗಳು ಬಂದರೂ ಅವರ ಹತ್ತಿರ ಇದ್ದು ಇದ್ದು ಅಭ್ಯಾಸ ಆಗಿಬಿಟ್ಟು, ಅವರು ಜಡ್ಡು ಕಟ್ಟಿಬಿಟ್ಟಿದ್ದಾರೆ. ಅವರಿಗೆ ವಿಧಾನಸಭೆ ಎಂದರೆ ಇವೆಲ್ಲಾ ಲೆಕ್ಕ ಇಲ್ಲ. ನಮಗೆ ಇನ್ನೂ ರಿಪ್ಲೈ ಬಂದಿಲ್ಲ. ನಾನು ಇಲ್ಲಿಗೆ ಬರುವಾಗ ನಾನು ಮಾತನಾಡಬಾರದು ಸದನದಲ್ಲಿ ಸದಸ್ಯರಿಗೆ ಮಾತನಾಡುವುದಕ್ಕೆ ಬಿಡಬೇಕು ಎಂದು ಪ್ರತಿಜ್ಞೆ ಮಾಡಿ ಬರುತ್ತೇನೆ ಆದರೆ ನಾನು ಮಾತನಾಡುವುದು ಅನಿವಾರ್ಯವಾಗುತ್ತಿದೆ. ನನಗೆ ಉತ್ತರ ಬಂದಿಲ್ಲ. I will take up the second question.

ಶ್ರೀ ಕೆ.ಎನ್. ನಾಗೇಗೌಡ : ನನ್ನ ಹತ್ತಿರ ಉತ್ತರ ಇದೆ. ತಾವು ಅಪ್ಪಣೆ ಕೊಟ್ಟರೆ. ನಾನು ಕೇಳಬಹುದಲ್ಲ.

ಅಧ್ಯಕ್ಷರು : ನನ್ನ ಹತ್ತಿರ ಇಲ್ಲವಲ್ಲ. ಆಯಿತು ತಾವು ಸಪ್ಲಿಮೆಂಟರಿ ಕೇಳಿ. Yes, we will go ahead. Please put supplementaries.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ಮೊರಾರ್ಜಿ ದೇಸಾಯಿಯವರ 20 ಮಾದರಿ ವಸತಿ ಶಾಲೆಗಳನ್ನು ಪ್ರಾರಂಭ ಮಾಡುತ್ತೇನೆ ಎಂದು ಹೇಳಿದ್ದಾರೆ ಅದಕ್ಕೆ ಜಿಲ್ಲಾಪಂಚಾಯತ್‌ನಿಂದ ಎಲ್ಲೆಲ್ಲಿ ಮಾಡಬೇಕು ಎನ್ನುವ ಮಾಹಿತಿ ಬೇಕು ಎಂದು ಹೇಳಿದ್ದಾರೆ. ಯಾವಾಗ ಮಾಡುತ್ತೀರಿ? ಯಾವ ರೀತಿ ಮಾದರಿ ಶಾಲೆ ಮಾಡುತ್ತೀರಿ. ಈ ಮಾದರಿ ಶಾಲೆಗೆ ಎಷ್ಟು ಹಣ ಖರ್ಚು ಆಗುತ್ತದೆ. ಇದನ್ನು ಈ ಶೈಕ್ಷಣಿಕ ವರ್ಷದಲ್ಲಿ ಪ್ರಾರಂಭ ಮಾಡುತ್ತೀರಾ?

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೆ, ಇದೇ ವರ್ಷ ನವೆಂಬರ್ ಒಂದಕ್ಕೆ ಪ್ರಾರಂಭಮಾಡಬೇಕು ಎಂದು ನಿರ್ಣಯ ಮಾಡಿದ್ದೇವೆ. ಕನಿಷ್ಠಪಕ್ಷ ಒಂದು

ನಡೆಸಬೇಕಾದರೆ, ಐದು ಎಕರೆ ಜಾಗ ಬೇಕಾಗುತ್ತದೆ. ಜಿಲ್ಲಾಪಂಚಾಯತ್ ಚೀಫ್ ಸೆಕ್ರೆಟರಿಗೆ ಈಗಾಗಲೇ ಈ ಬಗ್ಗೆ ಪತ್ರ ಬರೆದಿದ್ದೇವೆ. ಅಲ್ಲಿಂದ ರಿಪೋರ್ಟ್ ಬರಬೇಕು. ಅದು ಎಷ್ಟು ಬೇಗ ಬರುತ್ತದೆ ಅಷ್ಟು ಒಳ್ಳೆಯದು. ನವೆಂಬರ್ ಒಂದನೇ ತಾರೀಖಿಗೆ ನಾವು ಚಾಲು ಮಾಡುತ್ತೇವೆ.

ಶ್ರೀ ಕೆ.ಎನ್. ನಾಗೇಗೌಡ : ಈ 20 ಮಾದರಿ ಶಾಲೆಗಳಿಗೆ ಎಷ್ಟು ಹಣ ಬೇಕಾಗುತ್ತದೆ? ಈ ಮಾದರಿ ಶಾಲೆಯ ವ್ಯವಸ್ಥೆ ಯಾವ ರೀತಿ ಇರುತ್ತದೇ? ಮಾದರಿ ವಸತಿ ಶಾಲೆ ಎಂದರೆ, ಅದರ ಇನ್‌ಟೇಕ್ ಏನು? ಅದು ಯಾವ ರೀತಿ ಇರುತ್ತದೆ ಅದರ ಚಿತ್ರಣ ಬೇಕು.

ಶ್ರೀ ರಮೇಶ್ ಸಿ. ಜಿಗಜಿಣಗಿ : ಇದರಲ್ಲಿ ಮೊದಲನೇ ವರ್ಷದಲ್ಲಿ 50 ವಿದ್ಯಾರ್ಥಿಗಳು ಇರುತ್ತಾರೆ. ಅದರಲ್ಲಿ 50 ಪರ್ಸೆಂಟ್ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ, 40 ಪರ್ಸೆಂಟ್ ಹಿಂದುಳಿದ ವಿದ್ಯಾರ್ಥಿಗಳಿಗೆ, ಇನ್ನು 10 ಪರ್ಸೆಂಟ್ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಎಂದು ಮಾಡಿರುತ್ತೇವೆ. ಇದು ಐದು ವರ್ಷದ ಪ್ಲಾನ್. ಐದು ವರ್ಷದಲ್ಲಿ ಇದು ಪೂರ್ತಿಯಾಗುತ್ತದೆ. ಒಂದು ವಸತಿ ಶಾಲೆಗೆ ಒಂದು ಕೋಟಿ ರೂಪಾಯಿ ಹಣ ಖರ್ಚಾಗುತ್ತದೆ. ಐದು ವರ್ಷಗಳಲ್ಲಿ 250 ಮಕ್ಕಳಿಗೆ ಅಲ್ಲಿ ವಿದ್ಯಾಭ್ಯಾಸ ಮಾಡುವುದಕ್ಕೆ ಅವಕಾಶ ಇರುತ್ತದೆ.

ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ : ಮಾನ್ಯ ಅಧ್ಯಕ್ಷರೆ. ಸರ್ಕಾರ ಪ್ರೌಢಶಾಲೆಗಳನ್ನು ಮಾದರಿ ವಸತಿ ಪ್ರೌಢಶಾಲೆಗಳು ಎಂದು ಹೇಳಿ, ಪೂಜ್ಯ ಮಹಾತ್ಮಗಾಂಧೀಜಿಯವರ ಹೆಸರಿನಲ್ಲಿ 1984ರಲ್ಲಿ ಪ್ರಾರಂಭ ಮಾಡಿದ್ದಾರೆ. ಗ್ರಾಮೀಣ ಪ್ರದೇಶದಿಂದ ಹೆಚ್ಚು ಅಂಕಗಳನ್ನು ಪಡೆದಂತಹ ಮಕ್ಕಳನ್ನು ಆಯ್ಕೆ ಮಾಡಿದ್ದಾರೆ. ನಾಲ್ಕು ವಿಜನ್‌ಗಳಲ್ಲಿ ಹೆಣ್ಣು ಮಕ್ಕಳಿಗೆ ಪ್ರಾರಂಭ ಮಾಡಿದರು. ಈ ವಸತಿ ಶಾಲೆಗಳಿಗೆ ಕಟ್ಟಡಗಳು ಇವೆಯೆ? 1984ರಲ್ಲಿ ಪೂಜ್ಯ ಮಹಾತ್ಮಗಾಂಧಿಯವರ ಹೆಸರಿನಲ್ಲಿ ಪ್ರಾರಂಭ ಮಾಡಿದಂತಹ ವಸತಿ ಪ್ರೌಢಶಾಲೆಗಳು ಯಾವ ಸ್ಥಿತಿಯಲ್ಲಿವೆ ಹೇಳಿ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೆ, ಬಹಳ ಪ್ರತಿಭಾನ್ವಿತ ಹುಡುಗಿಯರಿಗೆ ನಾಲ್ಕು ಡಿವಿಜನ್‌ನಲ್ಲಿ ನಾಲ್ಕು ವಸತಿ ಶಾಲೆಗಳನ್ನು ತೆಗೆದದ್ದು ನಿಜ. ಆದರೆ ಇದನ್ನು ನನ್ನ ಇಲಾಖೆ ನಡೆಸುವುದಿಲ್ಲ. ಇದು ಮಾನ್ಯ ಮಂತ್ರಿಗಳಾದ ಗೋವಿಂದೇ ಗೌಡರ ಶಿಕ್ಷಣ ಇಲಾಖಾ ವತಿಯಿಂದ ನಡೆಸುತ್ತಾರೆ. ಅವರು ಬೇರೆ ಪ್ರಶ್ನೆಯನ್ನು ಹಾಕಲಿ ಮಾನ್ಯ ಮಂತ್ರಿಗಳೆ ಉತ್ತರವನ್ನು ಹೇಳುತ್ತಾರೆ.

ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಧಾರವಾಡದಲ್ಲಿ ಇರುವುದನ್ನು ನೋಡಿದ್ದಾರೆ. ಅವರು ಏನು ಕ್ರಮ ತೆಗೆದುಕೊಳ್ಳುತ್ತಾರೆ?

ಅಧ್ಯಕ್ಷರು : ಅದು ಆಗುವುದಿಲ್ಲ, ಪ್ರೊಸೀಜರ್ ಅಲ್ಲ, ತಾವು ನೋಟೀಸ್ ಕಳುಹಿಸಿ ಇವತ್ತು ಇದು ಬೇರೆಯವರದು ಇದೆ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಾನಂದಗೌಡರ 252 (1876) ಈ ಪ್ರಶ್ನೆ ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟಂತಹದ್ದು, ಆದುದರಿಂದ ಇದನ್ನು ನಾವು ರೆವಿನ್ಯೂ ಮಂತ್ರಿಯವರ ಇಲಾಖೆಗೆ ಕಳುಹಿಸಿದ್ದೇವೆ.

ಅಧ್ಯಕ್ಷರು : ನೀವು ಈ ಪ್ರಶ್ನೆಯನ್ನು ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳಿಗೆ ಕಳುಹಿಸಿದ್ದೀರಿ?

ಶ್ರೀ ಡಿ.ವಿ. ಸದಾನಂದ ಗೌಡ : ಹೌದು, ಈ ಪ್ರಶ್ನೆ ಪುನಃ ಕಂದಾಯ ಇಲಾಖೆಯಿಂದ ಬರುತ್ತದೋ, ಇಲ್ಲವೊ ಎಂಬುದು ನನ್ನ ಸಂಶಯ

ಅಧ್ಯಕ್ಷರು : ಬರುತ್ತದೆ, ನಾನು ಬರುವ ಹಾಗೆ ಮಾಡುತ್ತೇನೆ. ನಿಮ್ಮ ಸಂಶಯವನ್ನು ನಿವಾರಣೆ ಮಾಡುತ್ತೇನೆ.

ಗಂಗಮತಸ್ಥರು : ಬೆಸ್ತರು ಇವರನ್ನು ಪರಿಶಿಷ್ಟ ಪಂಗಡ ಪಟ್ಟಿಯಲ್ಲಿ ಸೇರಿಸುವ ಕುರಿತು.

1356 - ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಇತ್ತೀಚೆಗೆ ಗಂಗಮತಸ್ಥರು : ಬೆಸ್ತರು ಇವರನ್ನು ಪರಿಶಿಷ್ಟ ಪಂಗಡ ಪಟ್ಟಿಯಲ್ಲಿ ಸೇರಿಸಲು ಸರ್ಕಾರ ಆದೇಶ ಹೊರಡಿಸಿರುವುದು ನಿಜವೇ.*

ಆ) *ಹಾಗಿದ್ದಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರಲು ಎಲ್ಲಾ ಅರ್ಹತೆಯನ್ನು ಕೇಂದ್ರ ಸರ್ಕಾರ ಸೂಚಿಸಿರುವ ಮಾರ್ಗಸೂಚಿಯ ಪ್ರಕಾರ ಈ ಜನಾಂಗ ಅರ್ಹತೆ ಪಡೆದಿದ್ದಾರೆಯೇ, ಹಾಗಿದ್ದಲ್ಲಿ ಅರ್ಹತೆಯ ವಿವರ ತಿಳಿಸುವುದು.*

ಇ) *1991ರ ಜನಗಣತಿಯ ಸಮೀಕ್ಷೆ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಎಷ್ಟು ಲಕ್ಷ ಮಂದಿ ಪರಿಶಿಷ್ಟ ಪಂಗಡದವರಿದ್ದಾರೆ?*

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ಗಂಗಾಮತಸ್ಥರು ಹಾಗೂ ಬೆಸ್ತರನ್ನು ಪರಿಶಿಷ್ಟ ಪಂಗಡವೆಂದು ಪರಿಗಣಿಸಲು ಇದುವರೆವಿಗೂ ಯಾವುದೇ ಸರ್ಕಾರಿ ಆದೇಶ ಹೊರಡಿಸಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) 1991ರ ಜನಗಣತಿಯ ಪ್ರಕಾರ, ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ಪಂಗಡದ ಜನಸಂಖ್ಯೆ 19.15 ಲಕ್ಷ.

ಶ್ರೀ ಹೆಚ್.ಡಿ. ಬಸವರಾಜು : ಮಾನ್ಯ ಅಧ್ಯಕ್ಷರೆ, ಇತ್ತೀಚಿನ ದಿನಗಳಲ್ಲಿ ಮಾನ್ಯ ಮುಖ್ಯಮಂತ್ರಿಯವರು ಪರಿವಾರ ಸಮಾಜದ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈ ಸಭೆಯಲ್ಲೂ ಕೂಡ ಬಹಳಷ್ಟು ವಿಷಯ ಇದರ ಬಗ್ಗೆ ಚರ್ಚೆಯಾಗಿದೆ. ಪರಿವಾರ ಸಮಾಜದವರನ್ನು ಸೇರಿಸಬೇಕೆನ್ನುವಂತಹ ಒಂದು ವಿಷಯ ಚರ್ಚೆಯಾದ ನಂತರ, ಮತ್ತೆ ಮಾನ್ಯ ಮುಖ್ಯಮಂತ್ರಿಯವರು ಕೂಡ ಕೆಲವಾರು ಸಂದರ್ಭದಲ್ಲಿ ಸೇರಿಸುತ್ತೇವೆಂದು ಹೇಳಿದ್ದಾರೆ. 'ಪರಿವಾರ' ಎನ್ನುವುದು ನನಗೆ ತಿಳಿದಮಟ್ಟಿಗೆ ಅದು ಒಂದು ಸಮುದಾಯ, ಯಾವುದೇ ಜಾತಿ ಅಲ್ಲ, ಈ ಪರಿವಾರ ಎನ್ನತಕ್ಕಂಥ ಪದವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿದರೆ, ಲಕ್ಷಾಂತರ ಜನರು ಈ ಪರಿವಾರ ಸಮುದಾಯದ ಕೆಳಗಡೆ ಬರುವಂತಹ ಜಾತಿಗಳು ಎಲ್ಲಾ ಪರಿಶಿಷ್ಟ ಪಂಗಡಕ್ಕೆ ಬರುತ್ತವೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದು ಸರ್ಕಾರದ ಗಮನಕ್ಕೆ ಬಂದಿದ್ದರೆ ಈ ಪರಿವಾರ ಸಮುದಾಯದ ಅಡಿ ಎಷ್ಟು ಜಾತಿಗಳು ಬರುತ್ತದೆ. ಸುಮಾರು ಎಷ್ಟು ಲಕ್ಷ ಜನರನ್ನು ಪರಿಶಿಷ್ಟ ಪಂಗಡಕ್ಕೆ ನೀವು ಸೇರಿಸಬೇಕೆಂದು ಹೊರಟಿದ್ದೀರಿ. ಈಗ ಪ್ರತಿಶತ ಮೀಸಲಾತಿ ಶೇ. 3ರಷ್ಟು ಮಾತ್ರ ಕೊಟ್ಟಿದ್ದೀರಿ. ಇಷ್ಟು ಜನಾಂಗವನ್ನು ಇಷ್ಟು ಲಕ್ಷ ಅಧಿಕವಾಗಿ ಸೇರಿಸುವುದರಿಂದ ತಾವು ಮತ್ತೆ ಏನಾದರೂ ಮೀಸಲಾತಿಯ ಪ್ರಮಾಣವನ್ನು ಜಾಸ್ತಿ ಮಾಡುತ್ತೀರಾ? ಇದು ನನ್ನ ಪ್ರಶ್ನೆ.

ಅಧ್ಯಕ್ಷರು : ನಿಮ್ಮ 'ಅ' ಪ್ರಶ್ನೆಯಲ್ಲಿ ಗಂಗಾಮತಸ್ಥರು ಮತ್ತು ಬೆಸ್ತರು ಇವರನ್ನು ಸೇರಿಸಿಲ್ಲವೆಂದು ಹೇಳಿದ ಮೇಲೆ ಬೇರೆ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಭಾವನೆ ನನಗೆ ಅರ್ಥವಾಗಿದೆ. ಈಗ ಬೇರೆ ಬೇರೆ ಸಮಾಜಗಳನ್ನು ಪುನಃ ಎಸ್.ಟಿ. ಲಿಸ್ಟ್‌ನಲ್ಲಿ ಸೇರಿಸುವುದರಿಂದ ನಿಜವಾದ ಎಸ್.ಟಿಗಳಿಗೆ ತೊಂದರೆಯಾಗುತ್ತದೆ ಎಂಬ ಅವರ ಭಾವನೆಯನ್ನು ಅರ್ಥ ಮಾಡಿಕೊಂಡಿದ್ದೇನೆ. ಆದರೆ ನಾನು ಉತ್ತರದಲ್ಲಿ ಇದ್ಯಾವುದನ್ನು ಸೇರಿಸಿಲ್ಲವೆಂದು ಹೇಳಿದ್ದೇನೆ.

ಅದನ್ನು ಸೇರಿಸುವುದು ಮತ್ತು ಶೇಕಡವಾರು ಫಿಕ್ಸ್ ಮಾಡುವುದು, ನಮ್ಮ ರಾಜ್ಯ ಸರ್ಕಾರದ ಕಡೆ ಇಲ್ಲ, ಇದೆಲ್ಲಾ ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಬರುವಂತಹ ವಿಷಯವಾಗಿದೆ. ನಾನೂ ಸಹ ಹೇಳಿದ್ದೇನೆ. ಈಗ ಸದ್ಯಕ್ಕೆ ನಾವು ಯಾವುದು ಸೇರಿಸಿಲ್ಲವೆಂದು ಹೇಳಿದ್ದೇನೆ.

ವಿಜಾಪುರ ತಾಲ್ಲೂಕಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ದೊರೆತ ಸೌಲಭ್ಯಗಳು

715 - ಶ್ರೀ ಬಸನಗೌಡ ಪಾಟೀಲ್ (ವಿಜಾಪುರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಜಾಪುರ ತಾಲ್ಲೂಕಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಜಾತಿಯವರಿಗೆ ನೀಡಿದ ಸಹಾಯ ಸೌಲಭ್ಯಗಳೇನು? (ಮೂರು ವರ್ಷಗಳ ವಿವರ ಒದಗಿಸುವುದು)

ಆ) ಯಾವ ಯಾವ ಯೋಜನೆ ಅಡಿಯಲ್ಲಿ ಸಹಾಯ ಮಾಡಲಾಗಿದೆ, ಸಂಪೂರ್ಣ ವಿವರ ನೀಡುವುದು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ಮತ್ತು ಆ) ಸಮಾಜ ಕಲ್ಯಾಣ ಇಲಾಖೆಯಿಂದ ಕಳೆದ 3 ವರ್ಷಗಳಲ್ಲಿ ಬಿಜಾಪುರ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದವರಿಗೆ ನೀಡಿದ ಸಹಾಯ : ಸೌಲಭ್ಯಗಳು ಹಾಗೂ ಯೋಜನಾ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

VIII F-16

ಅನುಬಂಧ

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಯೋಜನೆಗಳ ಹೆಸರು	1992-93		1993-94		1994-95	
		ಆರ್ಥಿಕ ಸಾಧನೆ	ಭೌತಿಕ ಸಾಧನೆ (ಸಂಖ್ಯೆ)	ಆರ್ಥಿಕ ಸಾಧನೆ	ಭೌತಿಕ ಸಾಧನೆ (ಸಂಖ್ಯೆ)	ಆರ್ಥಿಕ ಸಾಧನೆ	ಭೌತಿಕ ಸಾಧನೆ (ಸಂಖ್ಯೆ)
1	2	3	4	5	6	7	8
1.	ವಿದ್ಯಾರ್ಥಿನಿಲಯಗಳು ಮತ್ತು ಆಶ್ರಮ ಶಾಲೆಗಳು	4.75	415 ವಿದ್ಯಾರ್ಥಿಗಳು	6.02	415 ವಿದ್ಯಾರ್ಥಿಗಳು	6.92	415 ವಿದ್ಯಾರ್ಥಿಗಳು
2.	ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಮೊದಲನೇ ದರ್ಜೆಯಲ್ಲಿ ಪಾಸು ಮಾಡಿದವರಿಗೆ ಬಹುಮಾನ ಹಣ	0.47	94 -"-	0.15	30 -"-	0.28	56 -"-
3.	ಕಾಲೇಜು ವಿದ್ಯಾರ್ಥಿಗಳಿಗೆ ಬಹುಮಾನ ಹಣ	0.08	11 -"-	0.16	21 -"-	0.26	35 -"-
4.	5 ರಿಂದ 10ನೇ ತರಗತಿಯವರಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ	3.35	3993 -"-	4.70	5406 -"-	5.06	5967 -"-
5.	1 ರಿಂದ 4ನೇ ತರಗತಿಯವರೆಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ	-	-	6.82	9087 -"-	9.98	13309 -"-
6.	ಪ್ರತಿಭಾ ವಿದ್ಯಾರ್ಥಿವೇತನ	0.49	594 -"-	0.56	698 -"-	0.91	1083 -"-
7.	ಮಹಿಳಾ ಕಲ್ಯಾಣ ಕೇಂದ್ರಗಳು	0.76	350 -"-	0.76	350 -"-	0.76	350 -"-
8.	ಹೊಲಿಗೆ ಯಂತ್ರಗಳ ಸರಬರಾಜು	0.24	20 -"-	0.24	20 -"-	0.24	20 -"-
9.	ಕಾನೂನು ಪದವೀಧರರಿಗೆ ಧನಸಹಾಯ	0.03	3 -"-	0.02	2 -"-	0.04	4 -"-
10.	ತಾಂತ್ರಿಕ ವಿದ್ಯಾರ್ಥಿಗಳಿಗೆ ಸಾಧನಸಲಕರಣೆಗಳು	0.225	30 -"-	0.375	50 -"-	0.525	70 -"-

11.	ಪುಸ್ತಕ ಭಂಡಾರ ಸ್ಥಾಪನೆ	0.24	100 -"-	0.24	100 -"-	-	-
12.	ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ	44.79	4408 -"-	24.94	1738 -"-	28.261	1871 -"-
13.	ದೌರ್ಜನ್ಯ ಪ್ರಕರಣಗಳಲ್ಲಿ ನೊಂದವರಿಗೆ ಪರಿಹಾರ ಧನ	0.015	1 ಫಲಾನುಭವಿ	-	-	1.00	1 ಫಲಾನುಭವಿ
14.	ಅಂತರ್ ಜಾತಿ ವಿವಾಹ ಮಾಡಿಕೊಂಡವರಿಗೆ ಧನಸಹಾಯ	0.12	3 ಫಲಾನುಭವಿಗಳು	-	-	-	-
	ಒಟ್ಟು	55.56	10022	44.985	17917	54.235	13181

ವಿಶೇಷ ಘಟಕ ಯೋಜನೆಯ ಕಾರ್ಯಕ್ರಮಗಳು

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಯೋಜನೆಗಳ ಹೆಸರು	1992-93		1993-94		1994-95	
		ಆರ್ಥಿಕ ಸಾಧನೆ	ಭೌತಿಕ ಸಾಧನೆ (ಸಂಖ್ಯೆ)	ಆರ್ಥಿಕ ಸಾಧನೆ	ಭೌತಿಕ ಸಾಧನೆ (ಸಂಖ್ಯೆ)	ಆರ್ಥಿಕ ಸಾಧನೆ	ಭೌತಿಕ ಸಾಧನೆ (ಸಂಖ್ಯೆ)
1	2	3	4	5	6	7	8
1)	ಎತ್ತುಗಾಡಿ	2.06	43 ಫಲಾನುಭವಿಗಳು	-	-	-	-
2)	ಪಂಪುಸೆಟ್ಟು	2.53	48 -"-	3.04	36 ಫಲಾನುಭವಿಗಳು	4.64	61 ಫಲಾನುಭವಿಗಳು
		4.59	91	3.04	36 ಫಲಾನುಭವಿಗಳು	4.64	61 ಫಲಾನುಭವಿಗಳು

3)	ಉತ್ಪನ್ನದಾಯಕ ಯೋಜನೆಗಳು						
	1. ಹಿಟ್ಟಿನ ಗಿರಣಿ	-	-	0.29	3 ಫಲಾನುಭವಿಗಳು	0.68	7 ಫಲಾನುಭವಿಗಳು
	2. ಸೈಕಲ್‌ಷಾಪ್	-	-	-	-	0.30	3 -"-
	3. ಚಂದ್ರಿಕೆ ಮತ್ತು ತಟ್ಟೆಗಳು	-	-	-	-	0.29	4 -"-
	4. ಚರ್ಮಗಾರಿಕೆ	-	-	-	-	0.07	2 -"-
	5. ನಾರಿನ ಹಗ್ಗ ತಯಾರಿಕೆ	-	-	-	-	0.24	5 -"-
	6. ಟೀ ಷಾಪ್	-	-	-	-	0.04	1 -"-
	7. ಕಮ್ಮಾರಿಕೆ	-	-	-	-	0.05	1 -"-
	ಒಟ್ಟು	-	-	0.29	3 ಫಲಾನುಭವಿಗಳು	1.67	25 ಫಲಾನುಭವಿಗಳು

ವಿಶೇಷ ಘಟಕ ಯೋಜನೆ ಕಾರ್ಯಕ್ರಮಗಳು

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಯೋಜನೆಗಳ ಹೆಸರು	[illegible]		1993-94		1994-95	
		ಆರ್ಥಿಕ ಸಾಧನೆ	ಭೌತಿಕ ಸಾಧನೆ	ಆರ್ಥಿಕ ಸಾಧನೆ	ಭೌತಿಕ ಸಾಧನೆ	ಆರ್ಥಿಕ ಸಾಧನೆ	ಭೌತಿಕ ಸಾಧನೆ
1	2	3	4	5	6	7	8
1)	ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ	3,30,000	11	8,10,000	27	15,00,000	50
2)	ಪಶುಸಂಗೋಪನಾ ಇಲಾಖೆ: ಎಮ್ಮೆ, ಹಸು, ಕುರಿ	37,450	7	2,49,312	29	2,44,800	30

3)	ಕೈಗಾರಿಕಾ ಇಲಾಖೆ:ಉಪಕರಣಗಳ ಪೂರೈಕೆ	4,15,000	218	5,81,000	501	9,97,000	483
4)	ತೋಟಗಾರಿಕೆ : ತೆಂಗಿನ ತೋಟ	87,975	69	49,725	39	47,175	37
5)	ಸಹಕಾರ ಇಲಾಖೆ-ಪಂಪ್‌ಸೆಟ್ ಪೂರೈಕೆ ಹಾಗೂ ಸದಸ್ಯತ್ವ	1,92,885	603	1,59,262	1,592	1,64,809	1524
6)	ಭೂ ಸಂರಕ್ಷಣಾ ಇಲಾಖೆ	17,59,700	811	33,03,900	906	23,43,800	632
7)	ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪಹಾರ ಪೂರೈಕೆ	57,355	6,345	1,81,800	3,030	84,837	6025
8)	ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಯೋಜನೆ	-	100	-	100	-	100
	1) ಪಾಯಖಾನೆ 2) ಬೋರ್‌ವೆಲ್	-	30	-	12	-	9
9)	ಕೃಷಿ ಇಲಾಖೆ (ಬೀಜ, ಗೊಬ್ಬರ ಹಾಗೂ ಪಂಪ್‌ಸೆಂಟ್ ಪೂರೈಕೆ)	1,13,956	39	1,37,984	19	2,65,797	47
10)	ಲಿಡ್ಕರ್ (ಚರ್ಮ ಕೈಗಾರಿಕೆ) ರಸ್ತೆ ಬದಿ ಕುಟೀರ್	[illegible]	10	27,750	5	25,000	5
11)	ರೇಷ್ಮೆ ಇಲಾಖೆ (ಚಂದ್ರಿಕೆ, ಬಿದಿರಿನ ತಟ್ಟೆಗಳು ಹಾಗೂ ಬೇವಿನ ಹಿಂಡಿ)	[illegible]	[illegible]	13,500	9	1,07,600	7
12)	ಮೀನುಗಾರಿಕೆ (ಮೀನು ಹಿಡಿಯುವ ಬಲೆ)	16,500	11	30,000	20	17,000	10
13)	ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ	-	-	-	-	1,47,000	260
14)	ಹಾಲು ಉತ್ಪಾದಕರ ಸಂಸ್ಥೆಗಳ ಒಕ್ಕೂಟ ಮಿಶ್ರತಳಿ ಆಕಳು ಪೂರೈಕೆ	3,69,600	88	4,91,400	117	3,94,800	94
	ಒಟ್ಟು	34,76,296	8,363	60,29,633	6,406	63,39,638	9313

ಶ್ರೀ ಬಸನಗೌಡ ಪಾಟೀಲ್: ಮಾನ್ಯ ಅಧ್ಯಕ್ಷರೆ, ನನಗೆ ಉತ್ತರ ದೊರಕದೆ ಪರಿಶಿಷ್ಟ ಜಾತಿಗೆ ನಮ್ಮ ತಾಲ್ಲೂಕಿನ ಗುರಿ ಎಷ್ಟಿತ್ತು, ಆ ಗುರಿಯನ್ನು ಮುಟ್ಟಿದ್ದೀರೋ, ಇಲ್ಲವೋ ಎಂಬುದು ನನಗೆ ಬೇಕು.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೆ, ಬಿಜಾಪುರ ತಾಲ್ಲೂಕಿಗೆ ಗುರಿ ಎನ್ನುವಂಥಾದ್ದು ಹೇಳುವುದು ಸ್ವಲ್ಪ ಕಷ್ಟವಾಗಿದೆ. ಅವರಿಗೆ ಏನೇನು ಬೇಕು, ಎಷ್ಟು ಮಾಡಿದ್ದೇವೆ, ಯಾವ ಯಾವ ಸ್ಕೀಮ್ ಎಂದು ದೊಡ್ಡ ಪಟ್ಟಿಯನ್ನು ನಾನು ಕೊಟ್ಟಿದ್ದೇನೆ. ಆದರೂ ಸಹ ಅವರು ಎಷ್ಟು ಗುರಿಯನ್ನು ಇಟ್ಟುಕೊಂಡಿದ್ದೀರಿ ಎಂದು ಕೇಳಿದ್ದಾರೆ. ಅದರ ಮಾಹಿತಿ ನನ್ನ ಹತ್ತಿರ ಸದ್ಯಕ್ಕೆ ಇಲ್ಲ. ಮಾನ್ಯ ಸದಸ್ಯರಿಗೆ ನಾನು ಕಳುಹಿಸಿ ಕೊಡುತ್ತೇನೆ.

ಹುಬ್ಬಳ್ಳಿ - ಧಾರವಾಡ ಮಹಾನಗರಕ್ಕೆ ಪೌರ ಸೌಲಭ್ಯ

1319 - ಶ್ರೀ ಅಶೋಕ್ ಕಾಟವೆ (ಹುಬ್ಬಳ್ಳಿ ನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಹುಬ್ಬಳ್ಳಿ -ಧಾರವಾಡ ಮಹಾನಗರ ಸಭೆಯು ನಾಗರೀಕರಿಗೆ ಕಲ್ಪಿಸಿಕೊಡುವ ಪೌರ ಸೌಲಭ್ಯ ಖಾಸಗಿಯವರಿಗೆ ವಹಿಸಲಾಗುತ್ತಿದೆಯೇ;*

ಆ) *ಹಾಗಿದ್ದಲ್ಲಿ ಇದಕ್ಕೆ ಅನುಸರಿಸಿದ ಕ್ರಮ ಯಾವುದು;*

ಇ) *ಮಹಾನಗರಸಭೆಗೆ ಕಡಿಮೆ ಇರುವ ಸಿಬ್ಬಂದಿ ಎಷ್ಟು; ಅವುಗಳನ್ನು ಭರ್ತಿ ಮಾಡಲಾಗುತ್ತಿದೇ ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?*

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಕಾಡಾ ಮತ್ತು ಹೈದ್ರಾಬಾದ್ - ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :

ಅ) ಪ್ರಾಯೋಗಿಕವಾಗಿ ಮಹಾನಗರಪಾಲಿಕೆಯ ಕೆಲವು ವಿಭಾಗಗಳ ಪೌರ ಸೌಲಭ್ಯ ಸೇವೆಯನ್ನು ಖಾಸಗಿಯವರಿಗೆ ವಹಿಸಲಾಗಿದೆ.

ಆ) ಬಹಿರಂಗ ಟೆಂಡರ್ ಮುಖಾಂತರ

ಇ) ಉದ್ಭವಿಸುವುದಿಲ್ಲ.

ಶ್ರೀ ಜಗದೀಶ ಶೆಟ್ಟರ್ (ಶ್ರೀ ಅಶೋಕ್ ಕಾಟವೆ ಪರವಾಗಿ) : ಮಾನ್ಯ ಅಧ್ಯಕ್ಷರೆ, ಮಹಾ ನಗರದಲ್ಲಿ ಈ ಸ್ವಚ್ಛತಾ ಕಾರ್ಯಕ್ರಮದ ಅಂಗವಾಗಿ ಕೆಲವೊಂದು ಕಂಟ್ರಾಕ್ಟಗಳನ್ನು ಖಾಸಗಿಯವರಿಗೆ ಕೊಡುತ್ತಿದ್ದಾರೆ. ಇದು ಒಂದು ಪ್ರಯೋಗಾತ್ಮಕವಾಗಿ ಕೊಡುತ್ತಿದ್ದಾರೆ. ಅದು ಎಷ್ಟು ಯಶಸ್ವಿಯಾಗಿದೆ? ಅದನ್ನು ಇಡೀ ಮಹಾ ನಗರಕ್ಕೆ ಅನ್ವಯಿಸಲಾಗಿದೆಯೇ ಎನ್ನುವುದನ್ನು ಮಾನ್ಯ ಮಂತ್ರಿಗಳು ಸ್ಪಷ್ಟ ಪಡಿಸಬೇಕೆಂದು ಕೇಳುತ್ತೇನೆ.

ಶ್ರೀ ವೈಜನಾಥ್ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಪ್ರಯೋಗಾತ್ಮಕವಾಗಿ ಹುಬ್ಬಳ್ಳಿಯಲ್ಲಿ ನಾವು ಇದನ್ನು ಮಾಡುತ್ತಿದ್ದೇವೆ. ಅದು ಎಷ್ಟರಮಟ್ಟಿಗೆ ಯಶಸ್ವಿಯಾಗುತ್ತದೆಯೊ ಅದನ್ನು ನೋಡಿ ಬೇರೆ ಕಡೆಗೆ ಉಪಯೋಗ ಮಾಡಬಹುದು. ಆ ದೃಷ್ಟಿಯಿಂದ ನಾವು ಮಾಡುತ್ತಿದ್ದೇವೆ. ಅದರ ಪೂರ್ಣ ವರದಿ ಬಂದಮೇಲೆ ಎಷ್ಟೆಷ್ಟು ಯಶಸ್ವಿಯಾಗುತ್ತದೆ, ನೋಡೋಣ, ನಂತರ ಬೇರೆ ಕಡೆಗೆ ವಿಸ್ತರಣೆ ಮಾಡೋಣ.

ಶ್ರೀ ಜಗದೀಶ ಶೆಟ್ಟರ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಸ್ಪಷ್ಟವಾದಂತಹ ಉತ್ತರವನ್ನು ಕೊಟ್ಟಿಲ್ಲ. ಈಗ ಕೆಲವು ಕಡೆ ಕಂಟ್ರಾಕ್ಟ ಕೊಟ್ಟು ಸ್ವಚ್ಛತಾ ಕಾರ್ಯಕ್ರಮವನ್ನು ಮಾಡುತ್ತಿದ್ದಾರೆ, ಅದು ಯಶಸ್ವಿ ಆಗಿದೆಯೋ ಇಲ್ಲವೊ ಎಂಬುದನ್ನು ನಾನು ಹೇಳುತ್ತಿದ್ದೇನೆ. ಅದಕ್ಕೆ ಅವರು ಸ್ಪಷ್ಟವಾಗಿ ಉತ್ತರ ಹೇಳುತ್ತಿಲ್ಲ.

ಅಧ್ಯಕ್ಷರು : ನೀವು ಈ ಕಡೆ ತಿರುಗಿಕೊಂಡು ಹೇಳಿ, ನಾನು ಎಷ್ಟು ಸ್ಪಷ್ಟವೆಂದು ಹೇಳುತ್ತೇನೆ.

ಶ್ರೀ ವೈಜನಾಥ್ ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾವು ಈಗ ಪ್ರಾಯೋಗಿಕವಾಗಿ ಕೆಲವೊಂದು ಕಡೆ ಮಾಡುತ್ತಿದ್ದೇವೆ. ಕೆಲವು ಕಡೆ ಇದ್ದ ಸಿಬ್ಬಂದಿ ವರ್ಗವೇ ಸರಿಯಾಗುತ್ತದೆ. ಕೆಲವು ಕಡೆ ಕಂಟ್ರಾಕ್ಟ್ ಬೇಸಿಸ್ ಮೇಲೆ ನಾವು ಕೊಡುತ್ತಿದ್ದೇವೆ. ಈ ಕಂಟ್ರಾಕ್ಟ್‌ದಾರರಿಂದ ಓಣೆಗಳಲ್ಲಿ ಒಳ್ಳೆಯ ಸ್ವಚ್ಛತಾ ಕಾರ್ಯವಾಗುತ್ತಿದೆ. ಆ ದೃಷ್ಟಿಯಿಂದ ಇದೇ ರೀತಿಯಾದರೆ ಬೇರೆ ಕಡೆಗೂ ಪ್ರಾರಂಭ ಮಾಡುತ್ತೇವೆ.

ಹುಬ್ಬಳ್ಳಿ ನಗರಕ್ಕೆ ಒಳಚರಂಡಿ ಯೋಜನೆ

184 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ ನಗರದ ಒಳಚರಂಡಿ ಯೋಜನೆ ಅಳವಡಿಸಲಾಗಿರುವ ಪ್ರದೇಶಗಳೆಷ್ಟು?

ಆ) ನಗರದ ಉಳಿದ ಭಾಗ ಪ್ರದೇಶ ಈ ಯೋಜನೆ ಅಳವಡಿಸದೇ ಇರಲು ಕಾರಣವೇನು?

ಇ) ಸರ್ಕಾರ ಇದಕ್ಕೆ ಕೈಕೊಂಡ ಕ್ರಮಗಳೇನು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಶೇ. 65 ರಷ್ಟು ಪ್ರದೇಶಗಳಲ್ಲಿ ಈ ಯೋಜನೆ ಅಳವಡಿಸಲಾಗಿದೆ.

ಆ) ಉಳಿದ ಪ್ರದೇಶಗಳಿಗೂ ಒಳಚರಂಡಿ ಯೋಜನೆ ವ್ಯವಸ್ಥೆಯನ್ನು ಅಳವಡಿಸಲು 1988-89ನೇ ಸಾಲಿನಲ್ಲಿ ವಿಶ್ವಬ್ಯಾಂಕ್ ನೆರವಿಗಾಗಿ 5,342 ಲಕ್ಷ ರೂ.ಗಳಿಗೆ ಅಂದಾಜನ್ನು ತಯಾರಿಸಲಾಗಿದ್ದು ಅದಕ್ಕೆ ಇನ್ನೂ ಮಂಜೂರಾತಿ ದೊರೆತಿಲ್ಲದಿರುವುದರಿಂದ ಈ ಯೋಜನೆಯನ್ನು ಅಳವಡಿಸಲಿಕ್ಕೆ ಆಗಿಲ್ಲ.

ಇ) ಈಗ ಈ ಯೋಜನೆಯ ಅಂದಾಜನ್ನು ಪರಿಷ್ಕರಿಸಿದಲ್ಲಿ ರೂ. 8400 ಲಕ್ಷಗಳಾಗಬಹುದು ವಿಶ್ವಬ್ಯಾಂಕ್ ಮಂಜೂರಾತಿ ದೊರೆತ ನಂತರ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

ಶ್ರೀ ಜಗದೀಶ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಹೇಳಿದಂತಹ ಉತ್ತರದಲ್ಲಿ ಹುಬ್ಬಳ್ಳಿ ನಗರದಲ್ಲಿ ಒಳಚರಂಡಿ ವ್ಯವಸ್ಥೆಯ ಸಲುವಾಗಿ 1988-89ರಲ್ಲಿ ವಿಶ್ವಬ್ಯಾಂಕ್ ನೆರವಿಗಾಗಿ 5,342 ಲಕ್ಷ ರೂಪಾಯಿಗಳ ಅಂದಾಜಿನ ಸಾಲಕ್ಕಾಗಿ ತೆಗೆದುಕೊಂಡರು. ಮುಂದೆ ಅದು ಯಾವುದೇ ರೀತಿಯ ತ್ವರಿತ ಗತಿಯಲ್ಲಿ ಫಾಲೋ ಅಫ್ ಆಗದೆ ಇದ್ದುದರಿಂದ ಇಲ್ಲಿಯವರೆಗೆ ಈ ಸಾಲ ಮಂಜೂರು ಆಗಿಲ್ಲ. ಇವತ್ತು ಹುಬ್ಬಳ್ಳಿ ಮತ್ತು ಧಾರವಾಡ ಮಹಾನಗರ ರಾಜ್ಯದಲ್ಲೇ ಎರಡನೆಯ ಮಹಾನಗರವಾಗಿ ಮತ್ತು 1991 ರಲ್ಲಿ ಜನಗಣತಿಯ ಪ್ರಕಾರ, ಆರು ಲಕ್ಷದ 42 ಸಾವಿರ ಜನಸಂಖ್ಯೆ ಇರುವಂಥಾದ್ದು, ಈ ಎಂಟು ಲಕ್ಷ ಜನಸಂಖ್ಯೆಯನ್ನು ದಾಟಿದೆ. ಹೀಗಾಗಿ ಕೆಲವೊಂದು ಭಾಗದಲ್ಲಿ ಹೆಚ್ಚಿನ ರೀತಿಯಲ್ಲಿ ಇವತ್ತು ಹುಬ್ಬಳ್ಳಿ ನಗರ ಬೆಳೆಯುತ್ತಿದೆ. ಗೋಕುಲ್ ರೋಡ್ ಎಕ್ಸ್‌ಟೆನ್‌ಷನ್ ಬೆಳೆಯುತ್ತಾ ಇದೆ. ಸೊಲ್ಲಾಪುರ ರಸ್ತೆ ಬೆಳೆಯುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಕೇವಲ ಇಡೀ ನಗರದಲ್ಲಿ ಶೇ. 65 ಮಾತ್ರ ಒಳಚರಂಡಿ ವ್ಯವಸ್ಥೆ ಆಗಿದೆ. ಹುಬ್ಬಳ್ಳಿ ಧಾರವಾಡ ನಗರದಲ್ಲೂ ಸಹಿತ ಮಹಾ ನಗರ ಬೃಹದಾಕಾರವಾಗಿ ಬೆಳೆಯುತ್ತಿರುವುದರಿಂದ ಇವತ್ತು ಕ್ಯಾನ್ಸರ್ ಆಸ್ಪತ್ರೆಯ ಸುತ್ತಲೂ ಇದ್ದಂತಹ ಪ್ರದೇಶದಲ್ಲಿ ಒಳಚರಂಡಿ ವ್ಯವಸ್ಥೆಯ ಸಮಸ್ಯೆ ಉಂಟಾಗಿದೆ. ಇಂತಹ ಹಲವಾರು ಸಮಸ್ಯೆಗಳಿಂದ ಜನರಿಗೆ ಸಾರ್ವಜನಿಕವಾದ ಆರೋಗ್ಯಕ್ಕೆ ಧಕ್ಕೆಯುಂಟಾಗಿರುವಂತಹ ಪರಿಸ್ಥಿತಿ ಬಂದಿದೆ.

ಒಳಚರಂಡಿ ವ್ಯವಸ್ಥೆಗಾಗಿ 5,342 ಲಕ್ಷ ರೂಪಾಯಿಗಳ ಅಂದಾಜನ್ನು ಆಗ ಮಾಡಿದ್ದು, ಈಗ ಮಾನ್ಯ ಸಚಿವರು ಉತ್ತರವನ್ನು ಹೇಳಿದ ಪ್ರಕಾರ 8,400 ಲಕ್ಷ ರೂಪಾಯಿಗಳ ಒಂದು ಯೋಜನೆ ಇದೆ. ಸರ್ಕಾರದವರು ಇದರ ಬಗ್ಗೆ ಒಂದು ನಿರ್ದಿಷ್ಟವಾಗಿ ಯಾವಾಗ ಕ್ರಮ ಕೈಗೊಳ್ಳುತ್ತೀರಿ. ವಿಶ್ವ ಬ್ಯಾಂಕಿನಿಂದ ಸಾಲವನ್ನು ಯಾವಾಗ ತೆಗೆದುಕೊಳ್ಳುತ್ತೀರಿ ಎಂಬುದಕ್ಕೆ ತಾವು ಸ್ಪಷ್ಟವಾಗಿ ಉತ್ತರವನ್ನು ಕೊಡಬೇಕೆಂದು ಕೇಳುತ್ತೇನೆ.

ಶ್ರೀ ವೈಜನಾಥ್ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈಗಾಗಲೆ ಶೇ. 65ರಷ್ಟು ಒಳಚರಂಡಿ ವ್ಯವಸ್ಥೆ ಇದೆ. ಉಳಿದ ಭಾಗದ ಸಲುವಾಗಿ ಒಂದು ಯೋಜನೆಯನ್ನು ಮಾಡಲಾಗಿದೆ. ವಿಶ್ವ ಬ್ಯಾಂಕಿನ ನೆರವನ್ನು ಕೋರಲಾಗಿದೆ. ಅದು 5,342 ಲಕ್ಷ ರೂಪಾಯಿಗಳ ಒಂದು ಯೋಜನೆ, ಅದಕ್ಕೆ ವಿಶ್ವ ಬ್ಯಾಂಕಿನಿಂದ ಲೋನ್ ಪಡೆಯುವುದಕ್ಕೆ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಅದಕ್ಕೆ ಆಷ್ಟು ಬೇಗ ಲೋನ್ ಪಡೆದು ಉಳಿದ ಹುಬ್ಬಳ್ಳಿ ಮತ್ತು ಧಾರವಾಡಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್ : ಕಳೆದ ಹತ್ತು ವರ್ಷಗಳಿಂದ ಒಳಚರಂಡಿ ವ್ಯವಸ್ಥೆಯ ಸಲುವಾಗಿ ಕೇಳಿಕೊಂಡು ಬರುತ್ತಿದ್ದೇವೆ, ಇದು ಬೆಂಗಳೂರು ನಗರದ ನಂತರ ಎರಡನೇ ದೊಡ್ಡ ಮಹಾನಗರ, ಧಾರವಾಡ-ಹುಬ್ಬಳ್ಳಿ ದೊಡ್ಡ ಪಟ್ಟಣ ಎಂದು ಕರೆಯುತ್ತಾರೆ. ಈ ಮಹಾ ನಗರಕ್ಕೆ ಹಿಂದೆ ನಾವು ಶಾಸಕರಾಗಿದ್ದಾಗಲೂ ಸಹಿತ ವಿಶ್ವಬ್ಯಾಂಕಿನಿಂದ ಸಾಲ ತೆಗೆದುಕೊಂಡು ಬಂದು ಒಳಚರಂಡಿ ವ್ಯವಸ್ಥೆಯನ್ನು ಮಾಡುತ್ತೇವೆ ಎಂದು ಹೇಳಿದ್ದೆವು. ಈಗಾಗಲೇ ಹತ್ತು ವರ್ಷ ಮುಗಿದುಹೋಯಿತು. ಇನ್ನೂ ವಿಶ್ವಬ್ಯಾಂಕಿನಿಂದ ಸಾಲವನ್ನು ತರುವುದರಲ್ಲೇ ಇದ್ದೇವೆ. ಇನ್ನು ಯಾವ ಸರ್ಕಾರ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಿಕೊಡುತ್ತದೆ? ಸರ್ಕಾರದವರು ಈ ಬಗ್ಗೆ ತೀವ್ರವಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಕ್ರಮ ಕೈಗೊಳ್ಳುತ್ತಿದ್ದಾರೆಯೇ ಹೇಗೆ ಎಂಬುದನ್ನು ತಿಳಿಸಬೇಕು.

ಶ್ರೀ ಜಗದೀಶ ಶೆಟ್ಟರ್ : ಈಗ ಈ ಒಳಚರಂಡಿಯಿಂದ ಬರುವ ಕೊಳಚೆ ನೀರನ್ನು ಸಂಸ್ಕರಿಸುವ ವ್ಯವಸ್ಥೆ ಇಲ್ಲ. ಈ ಒಳಚರಂಡಿ ನೀರನ್ನು ಹುಬ್ಬಳ್ಳಿ-ಧಾ[illegible] ಕೇವಲ ನಾಲೆಗೆ ಮತ್ತು ಕೆರೆಗಳಿಗೆ ಬಿಡುತ್ತಿದ್ದಾರೆ. ಇದರಿಂದ ದುರ್ನಾತವಾಗಿ [illegible] ವಾತಾವರಣ ಕೆಟ್ಟು, ಇದು ಆರೋಗ್ಯಕ್ಕೆ ಹಾನಿಕರವಾಗಿದೆ. ಆದ್ದರಿಂದ ಗ್ರಾ[illegible] ಸಂಸ್ಕರಿಸುವ ಒಂದು ವ್ಯವಸ್ಥೆಯನ್ನು ಮಾಡುವ ಕಡೆ ಮಾನ್ಯ ಸಚಿವರು ಗಮನಹರಿಸಬೇಕೆಂದು ನಾನು ಕೇಳುತ್ತಿದ್ದೇನೆ. ಮತ್ತು ಈಗಾಗಲೇ ಈ ಯೋಜನೆ ಹತ್ತು ವರ್ಷಗಳಿಂದಲೂ ಹಾಗೆಯೇ ಇದೆ, ಹಾಗೂ ವಿಶ್ವಬ್ಯಾಂಕಿನಿಂದ ಸಾಲ ತೆಗೆದುಕೊಳ್ಳುವುದು ಕೂಡ ಹಾಗೆಯೇ ಇದೆ. ಆದಷ್ಟು ಬೇಗ ಇದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಮಾನ್ಯ ಸಚಿವರು ಕೊಡಬೇಕೆಂದು ನಾನು ಕೇಳುತ್ತಿದ್ದೇನೆ.

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಕಳೆದ ಹತ್ತು ವರ್ಷಗಳಿಂದಲೂ ಈ ವಿಚಾರದಲ್ಲಿ ಪ್ರಯತ್ನ ನಡೆಸುತ್ತಿದ್ದರೂ ಸಾಧ್ಯವಾಗಿಲ್ಲ, ಆದಷ್ಟು ಬೇಗ ವಿಶ್ವಬ್ಯಾಂಕಿನಿಂದ ಸಾಲವನ್ನು ಪಡೆದು ಬೇಗ ಈ ಯೋಜನೆಯನ್ನು ಪೂರ್ಣಗೊಳಿಸಲಿಕ್ಕೆ ಸರ್ಕಾರ ಬದ್ಧ ಇದೆಯೆಂದು ಹೇಳಬಯಸುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಸನ್ಮಾನ್ಯ ಅಧ್ಯಕ್ಷರೆ, ರಾಜ್ಯದ ಅನೇಕ ಪಟ್ಟಣ ಪ್ರದೇಶಗಳಲ್ಲಿ ಈ ಒಳಚರಂಡಿ ವ್ಯವಸ್ಥೆ ಬಗ್ಗೆ ಬಹಳ ಅಗತ್ಯವಾಗಿ ಆಗಬೇಕಾದಂಥ ಕಾಮಗಾರಿಗಳು ಉಳಿದಿವೆ ಅನ್ನುವುದರ ಬಗ್ಗೆ ಸಾಕಷ್ಟು ಸಾರಿ ಈ ಸದನದಲ್ಲಿ ಪ್ರಸ್ತಾವನೆಯಾಗಿದೆ. ಆದರೆ ಮಾನ್ಯ ಮಂತ್ರಿಗಳು ಹುಬ್ಬಳ್ಳಿಯ ಒಳಚರಂಡಿ

ವ್ಯವಸ್ಥೆಗಾಗಿ ಐದುನೂರು ಲಕ್ಷ ಚಿಲ್ಲರೆಯ ಯೋಜನೆಯನ್ನು ತಯಾರುಪಡಿಸಿ ವಿಶ್ವಬ್ಯಾಂಕಿನಿಂದ ನೆರವು ಕೊಡುವಂತೆ ನಾವು ಕೇಳಿ ಕೊಂಡಿದ್ದೇವೆಂದು ಹೇಳುತ್ತಾರೆ. ನನಗೆ ಮಾಹಿತಿ ಲಭ್ಯವಿರುವಂತೆ ಸರ್ಕಾರದಿಂದ ಈ ಪ್ರಸ್ತಾವನೆ ಹೋಗಿದೆಯೇ ಎಂಬುದರ ಬಗ್ಗೆ ಯಾವ ತಾರೀಖಿಗೆ ಈ ಪ್ರಸ್ತಾವನೆ ತಮ್ಮ ಕೈಗೆ ಸೇರಿಕೊಂಡಿತು, ಈ ಪ್ರಸ್ತಾವನೆಯನ್ನು ತಾವು ವಿಶ್ವಬ್ಯಾಂಕಿನಿಂದ ಸಾಲವನ್ನು ಪಡೆಯುವುದಕ್ಕೆ ಯಾವ ಸಂದರ್ಭದಲ್ಲಿ ಕೇಳಿದ್ದೀರಿ ಎಂಬುದರ ಬಗ್ಗೆ ಮಾಹಿತಿಯನ್ನು ದಯಮಾಡಿ ಈ ಸಂದರ್ಭದಲ್ಲಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈಗ ವಿಶ್ವಬ್ಯಾಂಕಿಗೆ ಈ ಪ್ರಸ್ತಾವನೆ ಹೋಗಿದೆ. ಅದು ಯಾವಾಗ ಹೋಗಿದೆ, ಯಾವ ಹಂತದಲ್ಲಿದೆ ಎಂಬುದರ ಬಗ್ಗೆ ನಾನು ಮಾಹಿತಿಯನ್ನು ತರಿಸಿ ಹೇಳುತ್ತೇನೆ.

ಅಧ್ಯಕ್ಷರು : ಚಂದ್ರಕಾಂತ್ ಬೆಲ್ಲದ್‌ರವರೆ ತಾವು ಈ ಪ್ರಶ್ನೆಯನ್ನು ಬಿಟ್ಟು, ತಮ್ಮದೆ ಮುಂದಿನ ಪ್ರಶ್ನೆಯನ್ನು ಕೇಳಿ.....

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್ : ದಯವಿಟ್ಟು ಈ ಒಳಚರಂಡಿಯದು ಬಹಳ ದೊಡ್ಡ ಸಮಸ್ಯೆ ಇದೆ, ಅಧ್ಯಕ್ಷರೆ, ಈಗಾಗಲೆ ನಾನು ಒಂದು ಪ್ರಶ್ನೆಯನ್ನು ಹಾಕಿದೆ ಅದಕ್ಕೆ ಲಿಖಿತ ಉತ್ತರವನ್ನು ಕಳುಹಿಸಿದ್ದಾರೆ. ಆ ಒಳಚರಂಡಿಯ ನೀರು ಬುಂಗಾಡಿನ ದೊಡ್ಡ ಕೆರೆಗೆ ಹೋಗುತ್ತಿದೆ. ಅದಕ್ಕೆ ನಾನು ಪರಿಸರ ಮಂತ್ರಿಗಳಾದ ಸನ್ಮಾನ್ಯ ಶ್ರೀ ಸಿದ್ದನಗೌಡರಿಗೂ ಸಹ ಕೇಳಿದ್ದೇನೆ. ಇಂತಹ ಒಂದು ಕೆರೆ ಅಲ್ಲಿದೆ ಒಳಚರಂಡಿಯ ನೀರೆಲ್ಲಾ ಅಲ್ಲಿಗೆ ಬಿಟ್ಟು ಬಿಟ್ಟಿದ್ದಾರೆ. ಆದ್ದರಿಂದ ದಯವಿಟ್ಟು ಅದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ಹೇಗೆ?

ಅಧ್ಯಕ್ಷರು : ನೀವೆಲ್ಲಾ ಅದೇ ಜಿಲ್ಲೆಯವರು ನೀವು ಕುಳಿತು ಸರಿಮಾಡಿಕೊಳ್ಳಿ. ನೀವು ಅವರಿಗೆ ಈ ಬಗ್ಗೆ ಒಂದು ಸಪರೇಟ್ ನೋಟೀಸನ್ನು ಕಳುಹಿಸಿ.

ಧಾರವಾಡದಲ್ಲಿ ಬಾಲಭವನ ನಿರ್ಮಿಸುವ ಯೋಜನೆ

375 - ಶ್ರೀ ಚಂದ್ರಕಾಂತ ಜಿ. ಬೆಲ್ಲದ (ಧಾರವಾಡ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಧಾರವಾಡದಲ್ಲಿ ಮಕ್ಕಳ ಸಲುವಾಗಿ ಒಂದು ಬಾಲಭವನ (ಉಪವನ ವಿವಿಧ ಆಟದ ಚಟುವಟಿಕೆ ಉದ್ಯಾನ) ನಿರ್ಮಿಸುವ ಯೋಜನೆ ಇದೆಯೆ?

ಆ) ಹಾಗಿದ್ದಲ್ಲಿ ಈಗ ಯಾವ ಹಂತದಲ್ಲಿ ಇದೆ?

ಶ್ರೀಮತಿ ಬಿ.ಟಿ. ಲಲಿತಾ ನಾಯಕ್ (ಮಹಿಳಾ ಹಾಗೂ ಮಕ್ಕಳ ಕಲ್ಯಾಣ ಸಚಿವರು) :

ಅ) ಹೌದು

ಆ) ಜಿಲ್ಲಾ ಪ್ರಾಧಿಕಾರ, ಧಾರವಾಡ ಇವರಿಂದ ಯೋಜನೆಗೆ ತಗಲುಬಹುದಾದ ವೆಚ್ಚವನ್ನೊಳಗೊಂಡಂತೆ ಪ್ರಸ್ತಾವನೆ ಪಡೆದು ಪರಿಶೀಲಿಸಲಾಗುವುದು.

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್ : ಮಾನ್ಯ ಅಧ್ಯಕ್ಷರೆ, ನಾವು 1984 ರಿಂದಲೂ ಈ ಧಾರವಾಡ ಜಿಲ್ಲೆಗೆ ಬಾಲಭವನಬೇಕೆಂದು ಕೇಳುತ್ತಿದ್ದೇವೆ. ಅಲ್ಲಿ ಮಕ್ಕಳ ಸಲುವಾಗಿ ಪ್ರಾಣಿಗಳ ಒಂದು ಸಫಾರಿ ಮತ್ತು ಪಕ್ಕದಲ್ಲಿ ಬೋಟಿಂಗ್ ಮಾಡುವಂಥ ಒಂದು ವ್ಯವಸ್ಥೆ ಇರುವಂಥ ಬಾಲಭವನ ಬೇಕಾಗಿದೆ. ಅದಕ್ಕೆ ಸರಿಯಾದಂಥ ಯೋಜನೆ ಏನು ಎಂಬುದನ್ನು ಇಲ್ಲಿಯವರೆಗೂ ತಾವು ತಿಳಿಸಲಿಲ್ಲ.

ಅದಕ್ಕೆ ಏನು ಕ್ರಮತೆಗೆದುಕೊಳ್ಳುತ್ತೀರಿ ಎಂಬುದನ್ನು ದಯವಿಟ್ಟು ತಿಳಿಸಬೇಕೆಂದು ಸನ್ಮಾನ್ಯ ಮಂತ್ರಿಗಳಲ್ಲಿ ಕೇಳುತ್ತಿದ್ದೇನೆ.

ಶ್ರೀಮತಿ ಬಿ.ಟಿ. ಲಲಿತಾನಾಯಕ್ : ಮಾನ್ಯ ಸಭಾಧ್ಯಕ್ಷರೆ, ರಾಜ್ಯದಲ್ಲಿ ಮೊಟ್ಟ ಮೊದಲ ಬಾರಿ ಬಾಲಭವನವನ್ನು 1985ರಲ್ಲಿ ಆ ಸಂಸ್ಥೆ ನೊಂದಾವಣೆಯಾಯಿತು. ಆಗಿನಿಂದಲೂ ಕೂಡ ಸಾಕ್ಷು ಜಿಲ್ಲೆಗಳಲ್ಲಿ ನಾವು ಈ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿದ್ದೇವೆ. ಈಗ ಮೈಸೂರು, ಶಿವಮೊಗ್ಗ, ಮಡಿಕೇರಿ, ಮಂಗಳೂರು, ಗುಲ್ಬರ್ಗಾ, ಬೆಂಗಳೂರು ಹೀಗೆ ಒಟ್ಟು 6 ಜಿಲ್ಲೆಗಳಲ್ಲಿ ಮಕ್ಕಳಿಗೋಸ್ಕರ ಪುಟಾಣಿ ರೈಲುಗಳಿವೆ. ಮತ್ತೆ ಹೊಸದಾಗಿ ಈ ವರ್ಷ ಬೇರೆ ಬೇರೆ ಸೌಲಭ್ಯಗಳನ್ನು ಒದಗಿಸಿಕೊಡುವ ಸಲುವಾಗಿ ಧಾರವಾಡವೂ ಸೇರಿದಂತೆ ಎಲ್ಲಾ ಕಡೆಯಲ್ಲಿ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಮತ್ತೆ ಬೇಸಿಗೆ ಶಿಬಿರ ಇವೆಲ್ಲವನ್ನು ಐದು ಕೇಂದ್ರಗಳಲ್ಲಿ ನಡೆಸುತ್ತಿದ್ದೇವೆ. ಈಗ ತಾವು ಏನೇನು ಮಾಡಿದ್ದೀರಿ ಎಂದು ಕೇಳುತ್ತಿದ್ದೀರಿ, ಧಾರವಾಡದಲ್ಲಿ ಈಗ ಮಾಡುತ್ತಿದ್ದೇವೆ. ಈ ಎಲ್ಲಾ ಕಡೆ ಏನೇನು ಸೌಲಭ್ಯಗಳಿವೆ ಅವು ಧಾರವಾಡಕ್ಕೂ ಕೂಡ ಬರುತ್ತವೆ. ಈಗ ತಮಗೆ ಬೇಕು ಅಂದರೆ ಬೆಂಗಳೂರು ನಗರದಲ್ಲಿ ಏನೇನು ಇವೆ ಎಂಬುದನ್ನು ಹೇಳುತ್ತೇನೆ....

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್ : ಸನ್ಮಾನ್ಯ ಅಧ್ಯಕ್ಷರೆ, ನಾನು ಕೇಳುವುದು, ಧಾರವಾಡ, ಬೆಂಗಳೂರು ನಗರದ ನಂತರ ಎರಡನೆಯ ದೊಡ್ಡ ಮಹಾನಗರ, ಎರಡು ವಿಶ್ವವಿದ್ಯಾಲಯಗಳು ಇರುವಂತಹ ಮಹಾನಗರ. ಇಂತಹ ಒಂದು ನಗರದಲ್ಲಿ ಬಾಲಭವನದ ಅಗತ್ಯತೆ ಇದೆ. 1985 ರಿಂದ ಪ್ರಯತ್ನ ಮಾಡಿದಂಥ ಈ ಬಾಲಭವನ ಎಲ್ಲಿಗೆ ಬಂದಿದೆ? ಉಳಿದ ಎಲ್ಲಾ ಕಡೆ ಪುಟಾಣಿ ರೈಲು ಬಂದಿದೆ, ಎಲ್ಲಾ ಸೌಲಭ್ಯಗಳನ್ನು ಉಳಿದ ಜಿಲ್ಲೆಗಳಿಗೂ ಕೊಟ್ಟಿದ್ದೀರಿ, ಬಹಳ ಸಂತೋಷ. ನಾನು ಅದನ್ನು ಸ್ವಾಗತ ಮಾಡುತ್ತೇನೆ. ಆದರೆ ಎರಹಾನಗರವಾದಂಥ ಧಾರವಾಡ ನಗರಕ್ಕೆ ಈ ಸೌಲಭ್ಯಗಳನ್ನು ಕೊಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ? ದಯವಿಟ್ಟು ಅದರ ಬಗ್ಗೆ ಉತ್ತರವನ್ನು ಕೊಡಬೇಕು.

ಶ್ರೀಮತಿ ಬಿ.ಟಿ. ಲಲಿತಾನಾಯಕ್ : ಮಾನ್ಯ ಸಭಾಪತಿಗಳೇ, ಈಗ ಧಾರವಾಡದಲ್ಲಿ ನಾವು ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆಯನ್ನು ಕಳುಹಿಸಿ ಎಂದು ತಿಳಿಸಿದ್ದೇವೆ, [illegible] ಯಾವ ಯಾವ ರೀತಿ ಕಟ್ಟಡಗಳನ್ನು ಕಟ್ಟುವುದಕ್ಕೆ ಮತ್ತು ಲೈಬ್ರರಿ ಮಾಡುವುದಕ್ಕೆ ಮತ್ತು ಬೇರೆ ಬೇರೆ ಅನುಕೂಲಗಳನ್ನು ಮಾಡಲು ಜಾಗ ಹೇಗಿದೆ, ಯಾವ ರೀತಿ ಮಾಡಬಹುದು ಎಂಬ ಬಗ್ಗೆ ಒಂದು ಪ್ರಸ್ತಾವನೆಯನ್ನು ಕಳುಹಿಸಿಕೊಡಿ ಎಂದು ಹೇಳಿದ್ದೇವೆ. ಅವರಿಂದ ಇನ್ನೂ ಬಂದಿಲ್ಲ. ಅದು ಬಂದಕೂಡಲೆ ನಾವು ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ನೀವು ಮಂತ್ರಿ ಅಂದರೆ ನೀವೇ ಸರ್ಕಾರ. ನಾವು ಪ್ರಸ್ತಾವನೆಯನ್ನು ಕಳುಹಿಸುವುದಕ್ಕೆ ಹೇಳಿದ್ದೇವೆ ಅವರು ಇನ್ನೂ ಕಳುಹಿಸಿಲ್ಲ ಎಂದು ಹೇಳಿದರೆ ಅದು ಉತ್ತರ ಆಗುವುದಿಲ್ಲ. ಸನ್ಮಾನ್ಯ ಸದಸ್ಯರ ಅಭಿಪ್ರಾಯ ಏನೆಂದರೆ, ಇಡೀ ರಾಜ್ಯದಲ್ಲಿ ಬೆಂಗಳೂರು ಬಿಟ್ಟರೆ ಹುಬ್ಬಳ್ಳಿ-ಧಾರವಾಡ ಎರಡನೆ ಮಹಾನಗರವೆಂದು ಹೇಳುತ್ತಾರೆ. ದಯಮಾಡಿ ನಿಮ್ಮ ಅಧಿಕಾರವನ್ನು ಚಲಾಯಿಸಿ ಆ ತಕ್ಷಣ ಯಾವ ಯಾವ ಪ್ರಪೋಸಲ್ ಇದ್ದಾವೆ ಅವುಗಳನ್ನು ತರಿಸಿಕೊಂಡು ಬೆಂಗಳೂರಿಗೆ ಕೊಟ್ಟಿರುವಷ್ಟೇ ಪ್ರಾತಿನಿಧ್ಯವನ್ನು ಕೊಟ್ಟು ಅಲ್ಲಿ ಕೆಲಸವನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿ.

ಶ್ರೀಮತಿ ಬಿ.ಟಿ. ಲಲಿತಾನಾಯಕ್ : ಮಾನ್ಯ ಸಭಾಧ್ಯಕ್ಷರೆ, ಈಗ ಆರು ಜಿಲ್ಲೆಗಳಲ್ಲಿ ನಮ್ಮ ಅಧಿಕಾರವನ್ನು ಬಳಸಿ ಮಾಡಿಸಿದ್ದೇವೆ. ಧಾರವಾಡದಿಂದ ಇನ್ನು ಪ್ರಸ್ತಾವನೆ ಬಂದಿಲ್ಲ, ನಮ್ಮ ಪವರ್‌ಗೂ ಬೆಲೆ ಸಿಕ್ಕಿಲ್ಲ, ಈಗ ತಾವು ತರಿಸಿಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರು ಅದನ್ನೇ ಸ್ಪಷ್ಟ ಮಾಡಿದ್ದುದು. ಅಧಿಕಾರಿಗಳು ನೀವು ಹೇಳಿದಂಥ ಇಪ್ಪತ್ನಾಲ್ಕು ಗಂಟೆಯಲ್ಲಿ ಕೇಳಿದಂತಹ ಮಾಹಿತಿಯನ್ನು, ವರದಿಯನ್ನು ಕಳುಹಿಸುವಂತೆ ನೋಡಿಕೊಳ್ಳುವುದು ನಿಮ್ಮ ಜವಾಬ್ದಾರಿ. ಈಗಲಾದರೂ ನಾನು ಒತ್ತಾಯ ಮಾಡುತ್ತೇನೆ. ನೀವು ಈ ಇಲಾಖೆಯನ್ನು ಸಮರ್ಪಕವಾಗಿ ನಿರ್ವಹಿಸುತ್ತೀರಿ ಎಂಬ ವಿಶ್ವಾಸ ಇದೆ, ನಿಮ್ಮ ಕಾಲದಲ್ಲೂ ಆ ಉತ್ತರ ತರಿಸಿಕೊಳ್ಳದೆ ಇರುವಂಥ ಪರಿಸ್ಥಿತಿ ಬಂತಲ್ಲ ಎಂದು ನಮಗೆ ದುಃಖ ಆಗುತ್ತಿದೆ. ಇನ್ನು ಒಂದು ತಿಂಗಳಿನಲ್ಲಾದರೂ ವರದಿಯನ್ನು ತರಿಸಿಕೊಂಡು ಈ ವರ್ಷದ ಒಳಗಾಗಿ ಹಣವನ್ನು ಬಿಡುಗಡೆ ಮಾಡಿ, ಬೆಂಗಳೂರಿನಷ್ಟೆ ಹೆಚ್ಚಿನ ಆದ್ಯತೆಯನ್ನು ಹುಬ್ಬಳ್ಳಿ -ಧಾರವಾಡ ನಗರಕ್ಕೆ ಕೊಟ್ಟು ಕಾರ್ಯಕ್ರಮವನ್ನು ಮಾಡುತ್ತೀರೋ? ನಾವು ಅದನ್ನು ನಿಮ್ಮಿಂದ ನಿರೀಕ್ಷೆ ಮಾಡುತ್ತೇವೆ ಅಷ್ಟೆ.

ಶ್ರೀಮತಿ ಬಿ.ಟಿ. ಲಲಿತಾನಾಯಕ್ : ಮಾನ್ಯ ಸಭಾಧ್ಯಕ್ಷರೆ, ಈ ವರ್ಷದಲ್ಲಿ ಧಾರವಾಡಕ್ಕೋಸ್ಕರ ಆರು ಲಕ್ಷ ರೂಪಾಯಿಗಳ ಅನುದಾನವನ್ನು ಕಾಯ್ದಿರಿಸಿದ್ದೇವೆ. ಅದನ್ನು ಖರ್ಚು ಮಾಡುವುದಕ್ಕೆ ಅಲ್ಲಿಂದ ಸ್ವಲ್ಪ ಸಹಕಾರ ಸಿಕ್ಕಿಲ್ಲ. ಈಗ ನಾನು ಅಲ್ಲಿಗೇ ಹೋಗುತ್ತಿದ್ದೇನೆ, ದಯವಿಟ್ಟು ಅದನ್ನು ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆಗಬಹುದು.

ಕರ್ನಾಟಕ ಗೃಹ ನಿರ್ಮಾಣ ಮಂಡಳಿ ವತಿಯಿಂದ ಕಟ್ಟಿಸಲಾದ ಮನೆಗಳು

1840 - ಶ್ರೀ ಎನ್. ಕೃಷ್ಣಪ್ಪ (ಬನ್ನೂರು) : ಮಾನ್ಯ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬನ್ನೂರು ಪುರಸಭೆ ವ್ಯಾಪ್ತಿಯಲ್ಲಿ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯು ಮನೆಗಳನ್ನು ಕಟ್ಟಿಸಿದೆಯೇ?

ಆ) ಹಾಗಿದ್ದಲ್ಲಿ ಮನೆಗಳನ್ನು ಕಟ್ಟಿಸಲು ಪಡೆದಿರುವ ಜಮೀನೆಷ್ಟು? ಹಾಗೂ ಇಲ್ಲಿಯವರೆಗೆ ಕಟ್ಟಿರುವ ಮನೆಗಳ ಸಂಖ್ಯೆ ಎಷ್ಟು? (ಪ್ರತಿಯೊಂದು ವರ್ಗಾವಾರು ವಿವರ ನೀಡುವುದು)

ಇ) ಈ ಮನೆಗಳನ್ನು ಹಂಚಿಕೆ ಆಗಿರುವ ಜನರ ಸಂಖ್ಯೆ ಎಷ್ಟು (ವರ್ಗಾವಾರು ವಿವರ ನೀಡುವುದು)

ಈ) ಈ ಮನೆಗಳನ್ನು ಪಡೆಯಲು ಜನರು ಮುಂದೆ ಬರದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು?

ಶ್ರೀ ಬಸವರಾಜ್ ರಾಯರೆಡ್ಡಿ (ವಸತಿ ರಾಜ್ಯ ಸಚಿವರು) :

ಅ) ಹೌದು

ಆ) 18.29 ಎಕರೆ

245 ಮನೆಗಳನ್ನು ನಿರ್ಮಿಸಲಾಗಿದೆ

ಆರ್ಥಿಕ ದುರ್ಬಲ ವರ್ಗ	-	70
ಅಲ್ಪ ಆದಾಯ ವರ್ಗ	-	75
ಮಧ್ಯಮ ಆದಾಯ ವರ್ಗ	-	100

ಇ) 208 ಮನೆಗಳನ್ನು ಹಂಚಿಕೆ ಮಾಡಲಾಗಿರುತ್ತದೆ.

(ಆರ್ಥಿಕ ದುರ್ಬಲ ವರ್ಗ - 63

ಅಲ್ಪ ಆದಾಯ ವರ್ಗ - 67

ಮಧ್ಯಮ ಆದಾಯ ವರ್ಗ - 78

ಈ) ಹೌದು

ಉ) ಹಂಚಿಕೆದಾರರು ಮೌಖಿಕವಾಗಿ ಈ ಮನೆಗಳ ವಿನ್ಯಾಸವು ಸರಿ ಇಲ್ಲವೆಂದು ತಿಳಿದುಕೊಂಡಿರುವುದೇ ಇದಕ್ಕೆ ಕಾರಣ.

ಶ್ರೀ ಎನ್. ಕೃಷ್ಣಪ್ಪ : ಮಾನ್ಯ ಸಭಾಧ್ಯಕ್ಷರೆ, ಈ ಬನ್ನೂರು ಪುರಸಭೆಯ ವ್ಯಾಪ್ತಿಯಲ್ಲಿ 18 ಎಕರೆ 29 ಗುಂಟೆ ಜಮೀನನ್ನು ಅಕ್ವೈರ್ ಮಾಡಿಕೊಂಡಿದ್ದೇವೆ. ಅದರಲ್ಲಿ 245 ಮನೆಗಳನ್ನು ಕಟ್ಟಿದ್ದೇವೆ ಎಂದು ಹೇಳಿದ್ದಾರೆ. ಈಗಾಗಲೇ ಅದರಲ್ಲಿ 208 ಮನೆಗಳನ್ನು ಹಂಚಿದ್ದೇವೆ ಎಂಬ ಮಾತನ್ನು ಹೇಳುತ್ತಾರೆ. ಆದರೆ 18 ಎಕರೆ 29 ಗುಂಟೆ ಜಮೀನಿನಲ್ಲಿ ಎಷ್ಟು ಮನೆಗಳನ್ನು ಕಟ್ಟಿದ್ದಾರೆ, ಇನ್ನು ಎಷ್ಟು ಖಾಲೀ ನಿವೇಶನ ಇದೆ, ಆ ಖಾಲಿ ನಿವೇಶನವನ್ನು ಏನು ಮಾಡುತ್ತೀರಿ, ಅದನ್ನೇ ಹಂಚಬೇಕು. ಏಕೆಂದರೆ ಈಗಾಗಲೇ ತಾವು ತಮ್ಮ ಉತ್ತರದಲ್ಲಿ ಕೊಟ್ಟಿದ್ದೀರಿ. ಇವರು ಹಂಚಿದ ಮನೆಗಳನ್ನು ಜನ ದುಡ್ಡು ಕೊಟ್ಟು ಪಡೆದಿದ್ದಾರೆಯೆ? ಅಥವಾ ಮನೆಯನ್ನು ಪಡೆಯದೆ ಹಣವನ್ನು ಎಷ್ಟು ಜನ ಕಟ್ಟಿದ್ದಾರೆ? ಇನ್ನು ಈ ಮನೆಗಳನ್ನು ತಾವು ಹಂಚಿದಿರಿ, ಹಂಚಿಕೆದಾರು ಮೌಖಿಕವಾಗಿ ಈ ಮನೆಗಳ ವಿನ್ಯಾಸವು ಸರಿ ಇಲ್ಲವೆಂದು ತಿಳಿದುಕೊಂಡಿರುವುದೇ ಇದಕ್ಕೆ ಕಾರಣ ಎಂದು ಕೊನೆಯ ಪ್ರಶ್ನೆಗೆ ತಾವು ಉತ್ತರವನ್ನು ಕೊಟ್ಟಿದ್ದೀರಿ. ಸ್ವಾಮಿ, ನಾನಾದರೂ ಅಧ್ಯಕ್ಷರ ಮುಖಾಂತರ ಹೇಳುತ್ತೇನೆ, ಆ ಮನೆಗಳು ತಳ್ಳಿದರೆ ಸಾಕು ಬಿದ್ದುಹೋಗುತ್ತವೆ. ತಾವು ಕೊಟ್ಟಿರತಕ್ಕಂಥ ಉತ್ತರ ಏನಿದೆ, ಆ ಮನೆಗಳ ಕಟ್ಟಡದ ಕಟ್ಟಡ ಏನಿದೆ ಅದು ಶಿಥಿಲ ಆಗಿದೆ, ಸರಿಯಿಲ್ಲ ಒಳ್ಳೆಯ ಕಟ್ಟಡ ಕಟ್ಟಿಲ್ಲವೆಂದು ಹಣವನ್ನು ಕೊಟ್ಟಿರುವವರು ಕೂಡ ಅಲ್ಲಿ ಬರುತ್ತಾ ಇಲ್ಲ. ಬಹುಶಃ ತಮಗೆ ಏನು ಮಾಹಿತಿಯನ್ನು ಕೊಟ್ಟಿದ್ದಾರೆ ಅದು ತಪ್ಪು ಎಂದು ಅನಿಸುತ್ತದೆ. ತಮ್ಮ ಹೌಸಿಂಗ್ ಬೋರ್ಡಿನಲ್ಲಿ ಕಟ್ಟತಕ್ಕಂಥ ಪ್ಲಾನ್ ಇದೆಯಲ್ಲ, ಆ ಪ್ಲಾನು ಆ ಗ್ರಾಮಕ್ಕೆ ಸರಿಯಾದಂಥ ಪ್ಲಾನಲ್ಲ. ಮತ್ತೆ ಈಗಾಗಲೇ ಕಟ್ಟಿರುವ ಕಟ್ಟಡಗಳು ಇನ್ನೂ ಗೃಹ ಪ್ರವೇಶವನ್ನೇ ಮಾಡಿಲ್ಲ ಈಗಾಗಲೇ ಬಿದ್ದು ಹೋಗುವ ಮಟ್ಟದಲ್ಲಿದೆ. ದಯಮಾಡಿ ಅಲ್ಲಿಯ ಖಾಲಿ ಜಾಗವನ್ನು ಏನು ಮಾಡುತ್ತೀರಿ? ಕಟ್ಟಿರತಕ್ಕ ಮನೆಗಳಿಗೆ ಯಾರೂ ಬರುತ್ತಿಲ್ಲ, ತಾವು ದುಡ್ಡು ಕೊಟ್ಟಿಲ್ಲ ಮತ್ತು ಇನ್ನೂ ಕೂಡ ತಮ್ಮಲ್ಲೆ ಎಷ್ಟೋ ಮನೆಗಳು ಇವೆ, ಅದನ್ನೆಲ್ಲಾ ಏನು ಮಾಡುತ್ತೀರಿ ಎಂಬ ಬಗ್ಗೆ ತಾವು ಸವಿವರವಾದ ಉತ್ತರವನ್ನು ಕೊಡಬೇಕೆಂದು ನಾನು ಸಭಾಧ್ಯಕ್ಷರ ಮೂಲಕ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

10.40 ಎ.ಎಂ.

ಶ್ರೀ ಆರ್. ರೋಷನ್ ಬೇಗ್ (ವಸತಿ ರಾಜ್ಯ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಕೃಷ್ಣಪ್ಪನವರು ಆ ಮನೆಗಳ ಡಿಸೈನ್ ಸರಿ ಇಲ್ಲವೆಂದು ಹೇಳುತ್ತಿದ್ದಾರೆ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ಬಗ್ಗೆ ಕೆಲವು ದೂರಗಳೂ ಬಂದಿವೆ. ಈಗ ನಮ್ಮ ಕಂಟ್ರಾಕ್ಟ್‌ದಾರರುಗಳು ಹೋಗಿ ಮನೆಯ ಡಿಸೈನ್ ಚೇಂಜ್ ಮಾಡಿದ್ದಾರೆ. ರೂಫ್ ಹತ್ತಿರ ಓಪನಿಂಗ್ ಇದೆ ಎಂದು ಹೇಳಿ, ಆ ಡಿಸೈನ್ ಚೇಂಜ್ ಮಾಡಿದ್ದಾರೆ. ಆ ಡಿಸೈನ್ ಚೇಂಜ್ ಮಾಡಿದ ಮೇಲೆ ಜನ ಆ ಮನೆಗಳನ್ನು ತೆಗೆದುಕೊಳ್ಳಲಿಕ್ಕೆ ಮುಂದೆ ಬರುತ್ತಿದ್ದಾರೆ. ಮನೆಗಳನ್ನು ಒಟ್ಟು ಮೂರು ಗ್ರೂಪ್ ಆಗಿ ಡಿವೈಡ್ ಮಾಡಿದ್ದೇವೆ. ಫಸ್ಟ್ ಗ್ರೂಪ್‌ನಲ್ಲಿ 20 ಇ.ಡಬ್ಲ್ಯೂ.ಎಸ್., 24 ಎಲ್.ಐ.ಜಿ. ಮನೆಗಳು, 17 ಎಂ.ಐ.ಜಿ. ಮನೆಗಳು, 18

ಎಂ.ಐ.ಜಿ. - II ಮನೆಗಳು, ಹೀಗೆ ಒಟ್ಟು 79 ಮನೆಗಳಿವೆ. ಸೆಕೆಂಡ್ ಗ್ರೂಪ್‌ನಲ್ಲಿ 27 ಇ.ಡಬ್ಲ್ಯೂ.ಎಸ್. ಮನೆಗಳು, 24 ಎಲ್.ಐ.ಜಿ. ಮನೆಗಳು, 16 ಎಂ.ಐ.ಜಿ. ಮನೆಗಳು, 18 ಎಂ.ಐ.ಜಿ - II ಮನೆಗಳು, ಹೀಗೆ 85 ಮನೆಗಳಿವೆ. ಈ ರೀತಿ ಮೂರು ಗ್ರೂಪ್ ಮಾಡಿದ್ದೇವೆ. ಈ ಬಗ್ಗೆ ಕೆಲಸ ಶುರು ಆಗಿದ್ದು 1990ರಲ್ಲಿ, ಕೆಲಸ ಮುಗಿದಿದ್ದು ಮಾರ್ಚ್ 1992 ರಲ್ಲಿ, ಲ್ಯಾಂಡ್ ಅಕ್ವಿಸಿಷನ್ ಪ್ರಾಬ್ಲಂನಿಂದಾಗಿ ಇದರಲ್ಲಿ ಸ್ವಲ್ಪ ಡಿಲೇ ಆಗಿದೆ. ಈಗ ಗ್ರೂಪ್ -I ಮತ್ತು ಗ್ರೂಪ್ II ನಲ್ಲಿನ ಮನೆಗಳು ಕಂಪ್ಲೀಟ್ ಆಗಿವೆ. ಮನೆಗಳ ಡಿಸೈನ್ ಚೇಂಜ್ ಮಾಡಿದ ಮೇಲೆ ಜನ ಆ ಮನೆಗಳನ್ನು ತೆಗೆದುಕೊಳ್ಳಲು ಮುಂದೆ ಬರುತ್ತಿದ್ದಾರೆ.

ಶ್ರೀ ಎನ್. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಮನೆಗಳ ಹಂಚಿಕೆ ಸಂಬಂಧ ಲಾಟರಿ ಎತ್ತಿದ್ದಾರೆ. ಆದರೆ ಯಾರಿಗೆ ಮನೆಗಳನ್ನು ಮಂಜೂರು ಮಾಡಲಾಗಿದೆಯೋ ಅವರು ಇನ್ನೂ ದುಡ್ಡು ಕಟ್ಟಿಲ್ಲ. ದುಡ್ಡು ಕಟ್ಟಿಲ್ಲದಿದ್ದರೆ ಅವರು ಮನೆಗಳನ್ನು ಖರೀದಿ ಮಾಡುತ್ತಾರೆ ಎನ್ನುವುದಕ್ಕೆ ಗ್ಯಾರಂಟಿ ಏನು? ಡಿಸೈನ್ ಬದಲಾವಣೆ ಮಾಡಿದರೂ, ಆ ಮನೆಗಳನ್ನು ಕೊಳ್ಳಲು ಜನ ಮುಂದೆ ಬರುತ್ತಿಲ್ಲ. ಹಾಗೆಯೇ ಖಾಲಿ ನಿವೇಶನಗಳ ಬಗ್ಗೆ ನಾನು ಕೇಳಿದ್ದೇನೆ. ಆ ಮನೆಗಳನ್ನೇ ಯಾರೂ ತೆಗೆದುಕೊಳ್ಳದಿರುವಾಗ, ಖಾಲಿ ನಿವೇಶನಗಳನ್ನು ಏನು ಮಾಡುತ್ತೀರಿ? ಖಾಲಿ ನಿವೇಶನಗಳನ್ನು ಜನಗಳಿಗಾದರೂ ಮಾರಿದರೆ, ಅವರು ಅವುಗಳನ್ನು ಕೊಂಡು ಕೊಳ್ಳುತ್ತಾರೆ. ದಯವಿಟ್ಟು ಈ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರಿಸಬೇಕೆಂದು ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಆರ್. ರೋಷನ್ ಬೇಗ್ : ತಮ್ಮ ಸಲಹೆಯನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿ ಮೇರೆಗೆ ನಾನೊಂದು ಉಪ ಪ್ರಶ್ನೆಯನ್ನು ಕೇಳಲಿಕ್ಕೆ ಇಚ್ಛಿಪಡುತ್ತೇನೆ. ಕಳೆದ ಅಧಿವೇಶನದಲ್ಲಿ ಇದೇ ರೀತಿಯ ಪ್ರಶ್ನೆಯೊಂದನ್ನು ಸದನದಲ್ಲಿ ಕೇಳಿದಾಗ, ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಕರ್ನಾಟಕ ಗೃಹ ಮಂಡಳಿಯನ್ನು 'ಕರ್ನಾಟಕ ಹೆಲ್ ಬೋರ್ಡ್' ಎಂದು ಕರೆದಿದ್ದರು. ನನ್ನ ಪ್ರಶ್ನೆ ಏನೆಂದರೆ, ಗೃಹ ಮಂಡಳಿಯವರು ಮನೆಗಳನ್ನು ಯಾರಿಗೂ ಸಮಯಕ್ಕೆ ಸರಿಯಾಗಿ ಕಟ್ಟಿ ಕೊಡುವುದಿಲ್ಲ. ಮನೆಗಳನ್ನು ಕಟ್ಟಿ ಕೊಟ್ಟಮೇಲೆ 1:3ರ ಅನುಪಾತದಲ್ಲಿ ಎಸ್ಕಲೇಷನ್ ಮಾಡಿ ದುಡ್ಡನ್ನು ಚಾರ್ಜ್ ಮಾಡುತ್ತಿದ್ದಾರೆ. ಯಾರು ಮುಂಚೆಯೇ ಹಣ ಪಾವತಿ ಮಾಡಿರುತ್ತಾರೋ, ಅವರದು ಯಾವುದೇ ತಪ್ಪಿಲ್ಲದೇ ಇರುವಾಗ, ಹೌಸಿಂಗ್ ಬೋರ್ಡ್ ಮಾಡುವ ತಪ್ಪಿಗೆ, ಮೂರು ಪಟ್ಟು ಜಾಸ್ತಿ ಹಣವನ್ನು ಜನರಿಂದ ಯಾವ ರೀತಿ ಚಾರ್ಜ್ ಮಾಡುತ್ತೀರಿ? ಯಾವುದೇ ಪ್ರದೇಶದಲ್ಲಿ ಮನೆ ಇರಬಹುದು, ಇಡೀ ರಾಜ್ಯದಲ್ಲಿ ಹೌಸಿಂಗ್ ಬೋರ್ಡ್‌ನವರು ಹೇಳಿದ ಸಮಯಕ್ಕೆ ಮನೆಗಳನ್ನು ಕಟ್ಟಿಕೊಡುವುದಿಲ್ಲ. ಹಾಗೂ ಹೇಳಿದ ಬೆಲೆಗೂ ಮಾರಾಟ ಮಾಡುವುದಿಲ್ಲ. ಇವತ್ತು ಎಸ್ಕಲೇಷನ್ ಚಾರ್ಜ್ ಗ್ರಾಹಕರ ಮೇಲೆ ಬೀಳುತ್ತಿದೆ. ಯದ್ವಾತದ್ವಾ ರೇಟು ಹಾಕಿ ಬಹಳ ನಿಧಾನವಾಗಿ ಮನೆಗಳನ್ನು ಗೃಹ ಮಂಡಳಿಯವರು ಕಟ್ಟಿಕೊಡುತ್ತಿದ್ದಾರೆ. ಇದಕ್ಕೆ ಏನು ಕಾರಣ?

ಶ್ರೀ ಆರ್. ರೋಷನ್ ಬೇಗ್ : ಮಾನ್ಯ ಸದಸ್ಯರಾದ ಸುರೇಶ್ ಕುಮಾರ್‌ರವರು ನೀಡಿದಂತಹ ಸಲಹೆಗಳನ್ನು ನಾನು ಒಪ್ಪುತ್ತೇನೆ. ತಾವು ಹೇಳಿದ್ದೆಲ್ಲಾ ಈ ಹಿಂದೆ ಆಗಿದೆ. ಆಗ ನಮ್ಮ ಸರ್ಕಾರ ಇರಲಿಲ್ಲ. ಈಗ ನಮ್ಮ ಸರ್ಕಾರ ಬಂದ ಮೇಲೆ ನಾವು ಒಳ್ಳೆಯ ಕೆಲಸಗಳನ್ನು ಮಾಡಲಿಕ್ಕೆ ಹೊರಟಿದ್ದೇವೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ಕಾಸ್ಟ್‌ಎಸ್ಕಲೇಷನ್ ಬಗ್ಗೆ, ಹಿಂದಿನ ಸರ್ಕಾರದಲ್ಲಿ ಎಸ್ಕಲೇಟ್ ಆಗುತ್ತದೆ. ನಮ್ಮ ಸರ್ಕಾರ ಬಂದ ಮೇಲೆ ಎಸ್ಕಲೇಟ್ ಆಗುವುದಿಲ್ಲ ಎಂದರೆ ನಾವು ಏನು ಹೇಳೋಣ. ನಾನು ಹೇಳುವುದೇನೆಂದರೆ, ವಿಚಾರ ಇರುವಂತಾದ್ದು ಇಷ್ಟೆ. ಈಗ ಕರ್ನಾಟಕ ರಾಜ್ಯ ಗೃಹ ಮಂಡಳಿಯವರು....

ಅಧ್ಯಕ್ಷರು : ಮಾನ್ಯ ಸದಸ್ಯರಾದ ಸುರೇಶ್ ಕುಮಾರ್‌ರವರು ಎಸ್ಕಲೇಷನ್ ಆಗುವುದರ ಪರಿಣಾಮ ಯಾರ ಮೇಲೆ ಆಗುತ್ತದೆ? ಆ ದುಬಾರಿ ದುಡ್ಡು ಯಾರು ತುಂಬುತ್ತಿದ್ದಾರೆ? ಮನೆಗೆ ಅರ್ಜಿ ಹಾಕುವ ಬಳಕೆದಾರ ಏನಿದ್ದಾನೆ, ಅವನ ಮೇಲೆ ಬೀಳುತ್ತಿದೆಯೇ ಎಂದು ಕೇಳಿದರು. ಅದಕ್ಕೆ ಮಾನ್ಯ ಸಚಿವರು ಈ ಹಿಂದೆ ಆ ತರಹದ ಪರಿಸ್ಥಿತಿ ಹಿಂದೆ ಇತ್ತು, ಈಗ ಅದಕ್ಕೆಲ್ಲಾ ಅವಕಾಶ ಕೊಡುತ್ತಿಲ್ಲ ಎಂದು ಹೇಳಿದರು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಅವರು ಕೊಡುವಂತಹ ಮಾಹಿತಿ ತಪ್ಪಾಗುತ್ತದೆ ಮಾನ್ಯ ಅಧ್ಯಕ್ಷರೆ.

ಅಧ್ಯಕ್ಷರು : ಹೇಗೆ ತಪ್ಪಾಗುತ್ತದೆ?

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ನಾನು ಇವತ್ತು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ಮೈಸೂರು ನಗರದಲ್ಲಿ ನಿರ್ಮಾಣವಾಗುತ್ತಿರುವಂತಹ ಮನೆಗಳಿಗೆ ನಿಗದಿಪಡಿಸಲಾದಂತಹ ಬೆಲೆಗಿಂತ ದುಬಾರಿ ಯಾದ ಬೆಲೆಯನ್ನು ನೀಡಬೇಕೆಂದು ಈಗಾಗಲೇ ಸೂಚನೆಗಳನ್ನು ಫಲಾನುಭವಿಗಳಿಗೆ ನೀಡಿರುವಂತಹ ದಾಖಲೆಗಳು ನನ್ನ ಬಳಿ ಇವೆ. ತಾವು ಅಪ್ಪಣೆ ಕೊಟ್ಟರೆ ನಾನು ಅವುಗಳನ್ನು ಹಾಜರುಪಡಿಸಲು ಸಿದ್ದನಾಗಿದ್ದೇನೆ. ಅದೇ ರೀತಿಯಲ್ಲಿ ಚಿಕ್ಕಮಗಳೂರಿನಲ್ಲಿ ನಿರ್ಮಾಣವಾಗುತ್ತಿರುವಂತಹ ಗೃಹ ಮಂಡಳಿಯ ಮನೆಗಳಿಗೂ ಸಹ ನೋಟೀಸ್‌ಗಳನ್ನು ನೀಡಿರುವಂತಹ ಬೇಕಾದಷ್ಟು ಉದಾಹರಣೆಗಳು ನಮ್ಮೆಲ್ಲಾ ಶಾಸಕ ಮಿತ್ರರಲ್ಲಿ ಇರಬಹುದು. ಆದುದರಿಂದ ಹೆಚ್ಚುವರಿಯಾಗುವಂತಹ ಖರ್ಚನ್ನು ಸರ್ಕಾರವೇ ಭರಿಸುತ್ತದೆಯೇ ಎಂಬ ಬಗ್ಗೆ ದಯವಿಟ್ಟು ತಾವು ಮಾಹಿತಿಯನ್ನು ಕೊಡಬೇಕು.

ಶ್ರೀ ಆರ್. ರೋಷನ್ ಬೇಗ್ : ತಾವು ಆ ಬಗ್ಗೆ ಪ್ರತ್ಯೇಕ ನೋಟೀಸ್ ಕಳುಹಿಸಿದರೆ ನಾನು ಉತ್ತರ ಕೊಡುತ್ತೇನೆ.

ತುಂಗ ಭದ್ರಾ ಸಕ್ಕರೆ ಕಾರ್ಖಾನೆಯಲ್ಲಿ ಸತ್ಯಾಗ್ರಹ.

1493 - ಶ್ರೀ ಲ. ಅಯನೂರು ಮಂಜುನಾಥ (ಹೊಸನಗರ) : ಮಾನ್ಯ ಸಕ್ಕರೆ. ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗದಲ್ಲಿರುವ ತುಂಗಭದ್ರಾ ಸಕ್ಕರೆ ಕಾರ್ಖಾನೆಯಲ್ಲಿ ಕಳೆದ ಎರಡು ತಿಂಗಳುಗಳಿಂದ ಸತ್ಯಾಗ್ರಹ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಯಾವ ಕಾರಣಕ್ಕಾಗಿ ಕಾರ್ಮಿಕರು ಸತ್ಯಾಗ್ರಹ ನಡೆಸುತ್ತಿದ್ದಾರೆ

ಆ) ಹಾಗಿದ್ದಲ್ಲಿ ಸತ್ಯಾಗ್ರಹವನ್ನು ಕೊನೆ ಗೊಳಿಸಲು ಯಾವ ಕ್ರಮವನ್ನು ಕೈಗೊಳ್ಳಲಾಗಿದೆ.

ಇ) ಈ ಕಾರ್ಖಾನೆ ಈ ವರ್ಷ ಕಬ್ಬು ಅರೆಯುವ ಪರಿಸ್ಥಿತಿಯಲ್ಲಿದೆಯೇ, ಇದರ ಸಾಮರ್ಥ್ಯವೆಷ್ಟು, ಎಷ್ಟನ್ನು ಅರೆಯಲಾಗುತ್ತಿದೆ ಈ ಸಾಲಿನಲ್ಲಿ ಕಬ್ಬು ಅರೆಯುವ ಕೆಲಸವನ್ನು ಯಾವ ದಿನಾಂಕದಿಂದ ಪ್ರಾರಂಭಿಸಲಾಗುವುದು

ಈ) ಕಾರ್ಖಾನೆಯ ಮಾಲೀಕರು, ಕಳೆದ ಬಾರಿ ಸರಬರಾಜು ಮಾಡಲಾದ ಕಬ್ಬಿನ ಬಾಬ್ತು ರೈತರಿಗೆ ಕೊಡಬೇಕಾಗಿರುವ ಬಾಕಿ ಹಣ ಎಷ್ಟು ರೈತರಿಗೆ ಬಾಕಿ

ಕೊಡಿಸಿ ಅವರ ಹಿತರಕ್ಷಣೆ ಮಾಡುವ ಸಲುವಾಗಿ ಸರ್ಕಾರ ಮಧ್ಯಪ್ರವೇಶ ಮಾಡುವುದೇ? ಹಾಗಿದ್ದಲ್ಲಿ ಯಾವ ರೀತಿಯ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಪಿ.ಸಿ. ಸಿದ್ದನಗೌಡರ (ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು) :

ಅ) ಬಂದಿದೆ. ಕಾರಣಗಳು ಈ ಕೆಳಕಂಡಂತಿದೆ :

1) ನಿವೃತ್ತಿ ಹೊಂದಿದ ಕಾರ್ಮಿಕರಿಗೆ ಕೂಡಲೇ ಗ್ರಾಚುಯಿಟಿ ಪಾವತಿಸುವ ಬಗ್ಗೆ..

2) ಕಾರ್ಖಾನೆಯನ್ನು ಸೆಪ್ಟೆಂಬರ್ ಭಾಗದಲ್ಲಿ ಪ್ರಾರಂಭಿಸಬೇಕು.

3) ಕಾರ್ಮಿಕರ ಪ್ರತಿ ತಿಂಗಳ ಸಂಬಳವನ್ನು 10ನೇ ತಾರೀಖಿನ ಒಳಗಾಗಿ ಪಾವತಿಸಬೇಕು.

4) ಬಾಕಿ ಉಳಿಸಿಕೊಂಡಿರುವ ಓವರ್ ಟೈಂ ರಜಾ ಸಂಬಳ ಮತ್ತು 9 ತಿಂಗಳ ಹೆಚ್ಚುವರಿ ವೇತನ ಬಾಕಿ ಕೂಡಲೇ ಪಾವತಿಸಬೇಕು.

5) ಕಾರ್ಮಿಕರ ಸಂಬಳದಲ್ಲಿ ಕಡಿತಗೊಳಿಸಿದ 10 ತಿಂಗಳ ಜೀವವಿಮಾ ಪ್ರೀಮಿಯಮ್‌ನ್ನು ಕೂಡಲೇ ಅವರವರ ಖಾತೆಗೆ ಜಮಾ ಮಾಡಬೇಕು.

ಆ) ತುಂಗಭದ್ರಾ ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿಯು ದಿನಾಂಕ 8.8.95ರಂದು ತುಂಗಭದ್ರಾ ಶುಗರ್ ವರ್ಕ್ಸ್ ಮಜ್ದೂರ್ ಸಂಘ ಮತ್ತು ಸಕ್ಕರೆ ಕಾರ್ಖಾನೆ ಕೆಲಸಗಾರರ ಸಂಘ, ಇವುಗಳ ಉಪ ಕಾರ್ಮಿಕ ಆಯುಕ್ತರು, ಮಂಗಳೂರು, ಇವರ ಸಮಕ್ಷಮ ಶಿವಮೊಗ್ಗದಲ್ಲಿ ಮಾಡಿಕೊಂಡ ಒಪ್ಪಂದದನ್ವಯ ಕಾರ್ಮಿಕರು ತಮ್ಮ ಉಪವಾಸ ಸತ್ಯಾಗ್ರಹವನ್ನು ದಿನಾಂಕ 9.8.95 ರಿಂದ ಹಿಂತೆಗೆದುಕೊಂಡಿರುತ್ತಾರೆ. ಪರಿಸ್ಥಿತಿ ಶಾಂತವಾಗಿದೆ.

ಇ) ಪ್ರತಿ ವರ್ಷದಂತೆ ಈ ವರ್ಷವೂ ಈ ಕಾರ್ಖಾನೆಯು ಕಬ್ಬು ಅರೆಯುವ ಕೆಲಸ ಆರಂಭಿಸಲು ಅದಕ್ಕೆ ಅಗತ್ಯವಾದ ಪೂರ್ವ ಸಿದ್ಧತೆಗೆ ಕೆಲಸವಿದ್ದು, ಈ ಕಾರ್ಖಾನೆಯ ದಿನಂಪ್ರತಿ ಕಬ್ಬು ಅರೆಯುವ ಸಾಮರ್ಥ್ಯ 2500 ಟನ್‌ಗಳಾಗಿವೆ. ಕಾರ್ಖಾನೆಯು 1994-95ರ ಸಾಲಿನಲ್ಲಿ 3,20,507ಟನ್ ಕಬ್ಬನ್ನು ಅರೆದಿದ್ದು, 1995-96ರ ಸಾಲನ್ನು ಅಕ್ಟೋಬರ್ ಒಂದರಿಂದ ಪ್ರಾರಂಭಿಸುವ ನಿರೀಕ್ಷೆ ಇರುತ್ತದೆ. ಮತ್ತು ಈ ಸಾಲಿನಲ್ಲಿ 3.50 ಲಕ್ಷ ಟನ್ ಕಬ್ಬು ಅರೆಯುವ ಅಂದಾಜಿರುತ್ತದೆ.

ಈ) ಕಾರ್ಖಾನೆಯ ಮಾಲೀಕರು ಕಳೆದ ಬಾರಿ ಸರಬರಾಜು ಮಾಡಲಾದ ಕಬ್ಬಿನ ಬಾಬ್ತು (1994-95ರ ಸಾಲು) ಅಂದಾಜು ರೂ. 5 ಲಕ್ಷವನ್ನು ರೈತರಿಗೆ ಕೊಡಬೇಕಾಗಿರುತ್ತದೆ. ಈ ಬಾಕಿಯನ್ನು ಪಾವತಿಸುವಂತೆ ಹಾಗೂ ಕಾರ್ಖಾನೆಯ ಕಬ್ಬು ಅರೆಯುವ ಕೆಲಸವನ್ನು ಸಕಾಲದಲ್ಲಿ ಆರಂಭಿಸುವಂತೆ ಈಗಾಗಲೇ ಸೂಕ್ತ ಸೂಚನೆಯನ್ನು ನೀಡಲಾದ ಪ್ರಯುಕ್ತ ಸರ್ಕಾರದ ಮಧ್ಯಪ್ರವೇಶ ಅನಗತ್ಯ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ತುಂಗಭದ್ರಾ ಸಕ್ಕರೆ ಕಾರ್ಖಾನೆಯಲ್ಲಿ ಕಾರ್ಮಿಕರಿಗೆ ಹಣ ಕೊಡುವಂತಾದ್ದನ್ನು ಸುಮಾರು 8-10 ತಿಂಗಳಿನಿಂದ ಬಾಕಿ ಉಳಿಸಿಕೊಂಡು ಮತ್ತು ಕಬ್ಬು ಕೊಟ್ಟಂತಹ ರೈತರಿಗೂ ಕೂಡ ಕೊಡಬೇಕಾದ ಬಾಕಿಯನ್ನೂ ಉಳಿಸಿಕೊಂಡು ಸಕ್ಕರೆ ಕಾರ್ಖಾನೆಯ ಮಾಲೀಕರು ತಲೆ ತಪ್ಪಿಸಿಕೊಂಡು ತಿರುಗುತ್ತಿದ್ದಾರೆ. ಇದು ಆ ಜಿಲ್ಲೆಯ ತುಂಬಾ ಮಹತ್ವದ ಪ್ರಶ್ನೆ. ನನ್ನ ಪ್ರಶ್ನೆ ಇಷ್ಟೆ. ಐದು ಬೇಡಿಕೆಗಳನ್ನು ಇಟ್ಟುಕೊಂಡು, ಕಳೆದ ಎರಡೂವರೆ ತಿಂಗಳಿನಿಂದ ಅಲ್ಲಿ ಕಾರ್ಮಿಕರು ಸತ್ಯಾಗ್ರಹವನ್ನು ಮಾಡುತ್ತಿದ್ದರು. ಈಗಾಗಲೇ ಒಪ್ಪಂದವಾಗಿದೆ ಎಂದು ತಾವು ನನಗೆ ಮಾಹಿತಿಯನ್ನು ಕೊಟ್ಟಿರುತ್ತೀರಿ. ಆ ಒಪ್ಪಂದಕ್ಕೆ ಆಡಳಿತ ಮಂಡಳಿಯ

ಪರವಾಗಿ ಯಾರು ಹಾಜರಾಗಿದ್ದಾರೆ? ಈಗಾಗಲೇ ಒಪ್ಪಂದವಾಗಿ ಒಂದು ತಿಂಗಳು ಆಗಿದೆ. ಕಳೆದ ಒಂದು ತಿಂಗಳಿನಲ್ಲಿ ಕಾರ್ಮಿಕರ ಯಾವ ಬೇಡಿಕೆಗಳು ಕಾರ್ಯಗತವಾಗಿವೆ. ರೈತರಿಗೆ ಏನೊಂದು ಬಾಕಿಯನ್ನು ಕೊಡಬೇಕಾಗಿತ್ತೋ, ಅದನ್ನು ವಾಪಸ್ಸು ಕೊಡುವಂತೆ ತಾವು ಆದೇಶ ಕೊಟ್ಟಿದ್ದೀರಿ.

ಯಾವ ತಾರೀಖಿಗೆ ಬಾಕಿಯನ್ನು ವಾಪಸ್ಸು ಕೊಡಬೇಕೆಂದು ತಾವು ಆದೇಶವನ್ನು ಕೊಟ್ಟಿದ್ದೀರಿ? ಈಗಾಗಲೇ ಏನು ಕಾರ್ಯಗತವಾಗಿದೆ? ಎಂಬುದನ್ನು ದಯವಿಟ್ಟು ತಿಳಿಸಿ. ಈ ಕಾರ್ಖಾನೆಯನ್ನು ಸೆಪ್ಟಂಬರ್ 15ನೇ ತಾರೀಖು ತೆರೆಯಬೇಕಾಗಿತ್ತು. ಸೆಪ್ಟಂಬರ್ 15ನೇ ತಾರೀಖು ಸದರಿ ಕಾರ್ಖಾನೆಯನ್ನು ತೆರೆಯಬೇಕಾಗಿದ್ದರೆ ಅದಕ್ಕೆ ಮೊದಲು ಎರಡು ತಿಂಗಳುಗಳ ಕಾಲ ಅದರ ದುರಸ್ತಿ ಕೆಲಸ ನಡೆಯಬೇಕು. ಇವತ್ತಿಗೂ ಕೂಡ ದುರಸ್ತಿ ಕೆಲಸವನ್ನು ಪ್ರಾರಂಭ ಮಾಡಿರುವುದಿಲ್ಲ. ಹಾಗಾಗಿ ಈ ವರ್ಷ ಸದರಿ ಕಾರ್ಖಾನೆಯನ್ನು ಪ್ರಾರಂಭ ಮಾಡತಕ್ಕ ಸೂಚನೆ ಆಡಳಿತ ಮಂಡಳಿಯ ಕಡೆಯಿಂದ ಸಿಕ್ಕಿಲ್ಲ. ಇದರಿಂದಾಗಿ ಅಲ್ಲಿಯ ರೈತರು ಕಂಗಾಲಾಗಿದ್ದಾರೆ. ಕಬ್ಬು ವಯಸ್ಸಾದರೆ ಒಲೆಗೆ ಹಚ್ಚ ಬೇಕಾದಂತಹ ಒಂದು ಪರಿಸ್ಥಿತಿ ನಿರ್ಮಾಣವಾಗುತ್ತದೆ. ಸರ್ಕಾರದ ಬಳಿ ಈ ಬಗ್ಗೆ ಮಾಹಿತಿ ಏನಿದೆ? ಕಾರ್ಮಿಕರು ಮತ್ತು ಆಡಳಿತ ಮಂಡಳಿಯ ನಡುವೆ ಆಗಿರುವ ಒಪ್ಪಂದದ ಬಗ್ಗೆ ಸರ್ಕಾರದ ಬಳಿ ಏನು ಮಾಹಿತಿ ಇದೆ ಅದನ್ನು ದಯಮಾಡಿ ವಿವರವಾಗಿ ಒದಗಿಸಬೇಕೆಂದು ತಮ್ಮಲ್ಲಿ ಕೋರುತ್ತೇನೆ.

ಪಿ.ಸಿ. ಸಿದ್ದನಗೌಡರ್ : ಮಾನ್ಯ ಅಧ್ಯಕ್ಷರೇ, ತುಂಗಭದ್ರಾ ಸಕ್ಕರೆ ಕಾರ್ಖಾನೆಯ ಬಗ್ಗೆ ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಉತ್ತರಿಸುವುದಾದರೆ, ಕಾರ್ಮಿಕರ ಸಂಘದವರು ನಮ್ಮ ಕಾರ್ಮಿಕ ಇಲಾಖೆಯ ಅಧಿಕಾರಿಗಳೊಂದಿಗೆ ಸೇರಿ ಆಡಳಿತ ಮಂಡಳಿಯ ಜೊತೆಗೆ ಒಂದು ಒಪ್ಪಂದವನ್ನು ಮಾಡಿಕೊಂಡಿರುತ್ತಾರೆ. ಕಾರ್ಮಿಕರ ಐದು ಬೇಡಿಕೆಗಳ ಬಗ್ಗೆಯೂ, ಒಪ್ಪಂದ ಏರ್ಪಟ್ಟು ಅವರು ತಮ್ಮ ಉಪವಾಸ ಸತ್ಯಾಗ್ರಹವನ್ನು ಹಿಂದಕ್ಕೆ ತೆಗೆದುಕೊಂಡಿದ್ದಾರೆ. ಮಾನ್ಯ ಸದಸ್ಯರು ಹೇಳಿದಂತೆ, ಈಗಾಗಲೇ ನಾನು ಆಡಳಿತ ಮಂಡಳಿ ಉಳಿಸಿಕೊಂಡಿರತಕ್ಕ ಬಾಕಿಯನ್ನು ರೈತರಿಗೆ ಪಾವತಿಸುವಂತೆ ಸೂಚಿಸಿದ್ದೇನೆ. ಕೆಲವು ಶಾಸಕರೂ ಕೂಡ ಬಂದಿದ್ದರು. ನಾನು ಅವರನ್ನು ಕರೆಯಿಸಿ ಹೇಳಿದ್ದೇನೆ. ಇನ್ನೊಂದು ಖಾಸಗಿ ಕಂಪೆನಿ. ರೈತರ ಬಾಕಿಯನ್ನು ಪಾವತಿಸುವಂತೆ ನಾನು [illegible] ಆಡಳಿತ ಮಂಡಳಿಗೆ ಆದೇಶ ನೀಡಿದ್ದೇನೆ. ಇನ್ನೂ ಕೂಡ ನೌಕರರಿಗೆ ಕೊಡತಕ್ಕ ವೇತನ, ಪಿಂಚಣಿ ಅಥವಾ ಇನ್ನಿತರ ಬಾಕಿಗಳೇನಿದ್ದರೂ ನೌಕರರುಗಳಿಗೆ ಕೊಡುವಂತೆ ಮಾಲೀಕರನ್ನು ಕರೆಯಿಸಿ, ಅದನ್ನು ಚುಕ್ತಾ ಮಾಡುವಂತೆ ಅವರಿಗೆ ಹೇಳುತ್ತೇನೆ. ತಾವು ಎರಡನೇ ಪ್ರಶ್ನೆಯೊಂದನ್ನೂ ಕೇಳಿದ್ದೀರಿ.

ಶ್ರೀ ಅರಗ ಜ್ಞಾನೇಂದ್ರ : ಮಾಲೀಕರ ಪರವಾಗಿ ಒಪ್ಪಂದ ಮಾಡಿಕೊಳ್ಳಲು ಯಾರು ಹಾಜರಾಗಿದ್ದರು.

ಶ್ರೀ ಪಿ.ಸಿ. ಸಿದ್ದನಗೌಡರ್ : ಮಾನ್ಯ ಅಧ್ಯಕ್ಷರೇ, ಈ ಖಾಸಗಿ ಕಾರ್ಖಾನೆಯ ಮಾಲೀಕರ ಪರವಾಗಿ ಯಾರು ಹಾಜರಾಗಿದ್ದರು ಎಂದು ನಾನು ಹೇಳುವುದಕ್ಕೆ ಆಗುವುದಿಲ್ಲ. ಯಾರೋ ಅವರ ಮ್ಯಾನೇಜಿಂಗ್ ಡೈರೆಕ್ಟರ್ ಅಥವಾ ಜನರಲ್ ಮ್ಯಾನೇಜರ್ ಹಾಜರಾಗಿರಬಹುದು. ಅದಕ್ಕೆ ವಿವರ ಬೇಕಾಗಿದ್ದರೆ ನಾನು ಮಾಹಿತಿಯನ್ನು ತರಿಸಿ ಕೊಡುತ್ತೇನೆ. ಆ ಬಗ್ಗೆ ನನಗೆ ಸಧ್ಯಕ್ಕೆ ಗೊತ್ತಿಲ್ಲ. ಕಾರ್ಮಿಕರ ಸಂಘ ಹಾಗೂ ಕಾರ್ಮಿಕ ಇಲಾಖೆಯ ಅಧಿಕಾರಿ ಒಪ್ಪಂದದ ಸಮಯದಲ್ಲಿ ಹಾಜರಿದ್ದರು. ಕಾರ್ಮಿಕರು ಒಪ್ಪಂದವಾದನಂತರ ಅನ್ನ ಸತ್ಯಾಗ್ರಹವನ್ನು ಕೈ ಬಿಟ್ಟಿದ್ದಾರೆ. ಎರಡನೆಯದಾಗಿ, ಸದರಿ ಕಾರ್ಖಾನೆ ಸಧ್ಯಕ್ಕೆ ರಿಪೇರಿಯಲ್ಲಿದೆ. ಒಂದೂವರೆ ತಿಂಗಳೊಳಗಾಗಿ ಸದರಿ

ಕಾರ್ಖಾನೆಯನ್ನು ದುರಸ್ತಿ ಪಡಿಸುವುದಾಗಿ, ಕಾರ್ಖಾನೆಯವರು ಸರ್ಕಾರಕ್ಕೆ ಬರೆದು ಕೊಟ್ಟಿದ್ದಾರೆ.

ಇದು ಸ್ವಲ್ಪ ಟೆಕ್ನಿಕಲ್ ಇರುವುದರಿಂದ ನಾವು ನಿರ್ದಿಷ್ಟವಾಗಿ ಇದೇ ತಿಂಗಳು ಕಾರ್ಖಾನೆಯನ್ನು ಪ್ರಾರಂಭಿಸುತ್ತಾರೆ ಎಂದು ಹೇಳುವುದಕ್ಕಾಗುವುದಿಲ್ಲ. ಈ ಬಗ್ಗೆ ಬೇಗ ಕಾರ್ಖಾನೆ ಪ್ರಾರಂಭಿಸಲು ಈಗಾಗಲೇ ಅವರನ್ನು ಕರೆಯಿಸಿ ಹೇಳಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರಾದ ಯಡಿಯೂರಪ್ಪನವರು ಮತ್ತು ಮಾನ್ಯ ಸದಸ್ಯರಾದ ಈಶ್ವರಪ್ಪನವರು ಸೇರಿದಂತೆ ಅನೇಕ ಮಾನ್ಯ ಶಾಸಕರುಗಳು ಒತ್ತಾಯದ ಮೇರೆಗೆ ನಾನು ಆ ಕಾರ್ಖಾನೆಯ ಮಾಲೀಕರನ್ನು ಕರೆಯಿಸಿ ಹೇಳಿದ್ದೇನೆ. ಮತ್ತೊಮ್ಮೆ ಕೂಡ ಸದರಿ ಕಾರ್ಖಾನೆಯನ್ನು ಪ್ರಾರಂಭ ಮಾಡಲಿಕ್ಕೆ ಅವರನ್ನು ಒತ್ತಾಯಿಸುತ್ತೇನೆ. ಮೂರನೆಯದಾಗಿ, ರೈತರಿಗೆ ಕಾರ್ಖಾನೆಯವರು 5 ಲಕ್ಷ ರೂಪಾಯಿಗಳನ್ನು ಬಾಕಿ ಕೊಡುವುದಿದೆ. ಈಗಾಗಲೇ ಈ ಬಗ್ಗೆಯೂ ಅವರನ್ನು ಕರೆಸಿ, ಆ ಬಾಕಿಯನ್ನು ಕೊಡಲಿಕ್ಕೆ ಕೂಡ ನಾನು ಆದೇಶ ಕೊಟ್ಟಿದ್ದೇನೆ. ಮತ್ತೊಮ್ಮೆ ಕಾರ್ಖಾನೆಯವರನ್ನು ರೈತರ ಬಾಕಿ ಕೊಡಲಿಕ್ಕೆ ಒತ್ತಾಯ ಪಡಿಸುತ್ತೇನೆ ಮತ್ತು ನೌಕರರುಗಳಿಗೆ ಕೊಡಬೇಕಾಗಿರತಕ್ಕ ತುಟ್ಟಿಭತ್ಯೆ ಇರಬಹುದು ಅಥವಾ ಅರಿಯರ್ಸ್ ಸ್ಯಾಲರಿ ಇರಬಹುದು, ಅದನ್ನು ಕೂಡ ಅವರುಗಳಿಗೆ ಕೊಡುವುದಕ್ಕೆ ಕಾರ್ಖಾನೆಯವರನ್ನು ಸ್ವತಃ ಕರೆಸಿ ಹೇಳುತ್ತೇನೆ. ನಾನೂ ಸಹ ಒಮ್ಮೆ ಖುದ್ದಾಗಿ ಕಾರ್ಖಾನೆಗೆ ಭೇಟಿ ನೀಡಿದ್ದೆ.

ಭೇಟಿ ನೀಡಿದಾಗ, ಅಲ್ಲಿಯ ಕಾರ್ಮಿಕರಿಗೆ ನಿಮಗೆ ಏನಾದರೂ ಸಮಸ್ಯೆಗಳಿವೆಯೇ ಎಂದು ನಾನು ಕೇಳಿದೆ. ಆಗ ಅವರುಗಳು ನಮಗೇನೂ ಸಮಸ್ಯೆಯಿಲ್ಲ ಎಂದು ಹೇಳಿದರು. ಈ ಬಗ್ಗೆ ನಾನು ಅನೇಕ ಶಾಸಕರುಗಳಿಗೆ ಹೇಳಿದ್ದೇನೆ. ಮತ್ತು ಕಾರ್ಮಿಕ ಸಂಘದವರಿಗೂ ಸಹ ಹೇಳಿದ್ದೇನೆ. ಇವತ್ತಿಗೂ ಕೂಡ ನಾನು ಆ ಕೆಲಸವನ್ನು ಮಾಡುವುದಕ್ಕೆ ನನ್ನ ಸಂಪೂರ್ಣ ಸಹಕಾರ ಕೊಡುತ್ತೇನೆ ಎನ್ನುವಂಥ ಮಾತನ್ನು ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ನಾನು ಒಂದೇ ಒಂದು ಮನವಿಯನ್ನು ಮಾಡಿಕೊಳ್ಳುತ್ತೇನೆ. ಇಡೀ ರಾಜ್ಯದಲ್ಲಿ ಈ ರೀತಿಯಾದಂತಹ ಸಮಸ್ಯೆ ಇದೆ ಎಂಬುದು ತಮಗೆ ಗೊತ್ತಿದೆ. ಹೋದ ಸಾರಿ ಸೆಪ್ಟೆಂಬರ್‌ನಲ್ಲಿ ಕಾರ್ಖಾನೆ ಪ್ರಾರಂಭವಾಗದೇ, ಕೊನೆಗೆ ಸುಮಾರು ಲಕ್ಷಾಂತರ ಟನ್ ಕಬ್ಬು ಅರೆಯದೇ, ರೈತರ ಕಬ್ಬು ಒಣಗಿ ಹೋಗಿ, ರೈತರು ಶಿವಮೊಗ್ಗದಲ್ಲಿ ಬೀದಿ ಪಾಲಾಗಿ ಹೋದರು. ಕಳೆದ ಎರಡು ತಿಂಗಳಿನಲ್ಲಿ ಕಾರ್ಖಾನೆಯ ದುರಸ್ತಿ ಕೆಲಸವೆಲ್ಲಾ ಮುಗಿದು ಸೆಪ್ಟೆಂಬರ್ 15 ರಂದು ಸ್ಥಿರ ಕಾರ್ಖಾನೆ ಪ್ರಾರಂಭವಾಗಬೇಕಾಗಿತ್ತು ಎಂಬುದು ತಮಗೂ ಕೂಡ ಗೊತ್ತಿದೆ.

ತಾವು ನೀಡಿದ ಉತ್ತರದ ಪ್ರಕಾರವೇ, ಸದರಿ ಕಾರ್ಖಾನೆಯ ರಿಪೇರಿ ಕೆಲಸವೂ ಇನ್ನೂ ಪ್ರಾರಂಭವಾಗಿಲ್ಲ. ಈಗ ಸದರಿ ಕಾರ್ಖಾನೆಯ ರಿಪೇರಿ ಕೆಲಸವನ್ನು ಕೈಗೆತ್ತಿಕೊಂಡು ಇನ್ನು ಎರಡು ತಿಂಗಳ ಮೇಲೆ ಕಾರ್ಖಾನೆಯನ್ನು ಪ್ರಾರಂಭ ಮಾಡುವುದಾದರೆ, ಹೋದ ಸಲ ಒಂದು ಲಕ್ಷ ಟನ್ ಕಬ್ಬು ಉಳಿದಿತ್ತು, ಈ ವರ್ಷ 2 ಅಥವಾ 3 ಲಕ್ಷ ಟನ್ ಕಬ್ಬು ಒಣಗಿ ಹೋಗುತ್ತದೆ. ಈ ದಿಸೆಯಲ್ಲಿ ಸರ್ಕಾರದ ಒಂದು ಕರ್ತವ್ಯ ಇದೆ. ಖಾಸಗಿ ಮಾಲೀಕರು, ರಿಪೇರಿ ಮಾಡುವ ಕಾಲದಲ್ಲಿ ಕಾರ್ಖಾನೆಯನ್ನು ರಿಪೇರಿ ಮಾಡಿ ತಕ್ಷಣ ಕಾರ್ಖಾನೆಯನ್ನು ಪ್ರಾರಂಭ ಮಾಡಬೇಕಾಗಿತ್ತು. ಈಗಲಾದರೂ ಸರ್ಕಾರವು ಕಾರ್ಖಾನೆ ಮಾಲೀಕರ ಕಿವಿ ಹಿಂಡಿ, ಇನ್ನು 15-20 ದಿನಗಳಲ್ಲಿ ರಿಪೇರಿ ಪೂರ್ಣವಾಗುವಂತೆ ನೋಡಿಕೊಂಡು ಕಬ್ಬನ್ನು ತಿಂಗಳು ಕೊನೆಗಾದರೂ ಅರೆಯುವುದಕ್ಕೆ ಪ್ರಾರಂಭವಾಗುವಂತೆ ನೋಡಿಕೊಳ್ಳುತ್ತೀರಾ?

ಶ್ರೀ ಪಿ.ಸಿ. ಸಿದ್ದನಗೌಡರ್ : ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಅವರ ಕಿವಿಯನ್ನೂ ಹಿಂಡಿದ್ದೇನೆ, ಮೂಗನ್ನೂ ಹಿಂಡಿದ್ದೇನೆ. ನಾನು ಅವನಿಗೆ ಹೇಳಿದ್ದೇನೆ. ನಿನಗೆ ಏನಾದರೂ ನನ್ನಿಂದ ಸಹಾಯ ಬೇಕಾದರೆ ಬ್ಯಾಂಕಿನಿಂದ ಸಾಲ ಕೊಡಿಸುತ್ತೇನೆ. ನೀನು ಬಾ ಎಂದು ಹೇಳಿದ್ದೇನೆ. ಅದು ತಮಗೆಲ್ಲಾ ಗೊತ್ತಿದೆ. ಅದು ಯಾರ್‍ಯಾರು ತೆಗೆದುಕೊಂಡರು? ಯಾರ್‍ಯಾರು ಹೋದರು ಎಂಬುದು ನಿಮಗೆ ಗೊತ್ತಿದೆ. ಆದರೂ ಸರ್ಚ್ ಮಾಡಲಿಕ್ಕೆ ಹೊರಟಿದ್ದೇನೆ. ಇವತ್ತಿಗೂ ನಾನು ಸದರಿ ಕಾರ್ಖಾನೆ ರೆಡಿ ಮಾಡಲಿಕ್ಕೆ ಪ್ರಯತ್ನಿಸುತ್ತಿದ್ದೇನೆ. ಸಧ್ಯಕ್ಕೆ ಆ ಫ್ಯಾಕ್ಟರಿ ಮಾಲೀಕರು ಇಲ್ಲಿಲ್ಲ. ಅದು ತಮಗೆ ಗೊತ್ತಿದೆ. ಅವರ ಕೆಳಗಿನ ಲೆವೆಲ್ ಅಧಿಕಾರಿ. ಬಹುಶಃ ಮ್ಯಾನೇಜರ್ ಇರಬಹುದು, ಅವರನ್ನು ಕರೆಸಿ ನಾನು ಹೇಳಿದ್ದೇನೆ. ನನ್ನಿಂದ ಏನು ಸಹಕಾರ ಬೇಕೋ, ಸರ್ಕಾರದಿಂದ ಏನು ಸಹಾಯ ಬೇಕೋ ಬ್ಯಾಂಕಿನವರನ್ನು ಕರೆಯಿಸಿ ಸಾಲ ಕೊಡಿಸುತ್ತೇನೆ ಎಂದು ಹೇಳಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಕಾರ್ಖಾನೆಯ ಮಾಲೀಕರು ಕಿವಿಯನ್ನು ಹಿಂಡಿದ್ದೇವೆ, ಮೂಗನ್ನೂ ಹಿಂಡಿದ್ದೇವೆ ಎಂದು ಹೇಳಿದರು. ಅದು ಸ್ವಲ್ಪ ಲೆಕ್ಕ ಕೊಡಿ. ಎಷ್ಟು ಮಂದಿ ಮೂಗು ಮುರಿದಿದೆ? ಮತ್ತು ಕಿವಿ ಹರಿದಿದೆ? ಏಕೆಂದರೆ ಆ ರೀತಿ ಕಿವಿ, ಮೂಗು ಹಿಂಡಿದರೆ ಅದು ಕ್ರಿಮಿನಲ್ ಕೇಸಾಗುತ್ತದೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಸಕ್ಕರೆ ಕಾರ್ಖಾನೆಯ ಮಾಲೀಕ ಇವರ ಹತ್ತಿರ ಬರಲಿಲ್ಲ, ಅವನ ಮೂಗೂ ಸಿಕ್ಕಲಿಲ್ಲ, ಕಿವಿಯೂ ಸಿಕ್ಕಲಿಲ್ಲ ಇವರಿಗೆ. ಅಲ್ಲಿರುವ ಯಾರೋ ಕಾರ್ಮಿಕ ಅಥವಾ ನೌಕರರ ಮೂಗು, ಕಿವಿ, ಹಿಡಿದುಕೊಂಡು ಇವರೇನು ಮಾಡುವುದಕ್ಕಾಗುವುದಿಲ್ಲ, ರೈತರು, ಕಾರ್ಮಿಕರು ಬೀದಿ ಪಾಲಾಗುವುದನ್ನು ದಯಮಾಡಿ ತಪ್ಪಿಸಬೇಕು. ಸರ್ಕಾರದ ಕಡೆಯಿಂದ ಅವರ ಮೇಲೆ ನಿಯಂತ್ರಣ ಇಡಬೇಕು. ಇಲ್ಲದಿದ್ದರೆ ಅಲ್ಲಿರುರ ಕಬ್ಬನ್ನು ಅರೆಯಲು ಬೇರೆ ವ್ಯವಸ್ಥೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಅರಗ ಜ್ಞಾನೇಂದ್ರರವರೇ, ಅವರು ಹೇಗೆ ಮಾಡುತ್ತಾರೆ? ಬಂದರೆ, ಯಡಿಯೂರಪ್ಪನವರು, ನೀವು ಬಂದು ನೋಡಿದ್ದೀರಾ ಎಂದು ಕೇಳುತ್ತಾರೆ. ಬಾರದಿದ್ದರೆ ಬಂದಿಲ್ಲ ಎಂದು ಹೇಳುತ್ತಾರೆ.

ಗುಬ್ಬಿ ವೀರಣ್ಣ ಪ್ರಶಸ್ತಿ.

1105 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರದವರು ಗುಬ್ಬಿವೀರಣ್ಣ ಪ್ರಶಸ್ತಿಯನ್ನು 1994ರಲ್ಲಿ ನೀಡಿದ್ದಾರೆಯೇ.

ಆ) ನಾಟಕರಂಗದಲ್ಲಿ ಅಪಾರ ಸೇವೆ ಸಲ್ಲಿಸಿರುವವರಿಗೆ ಪ್ರಶಸ್ತಿಯನ್ನು ನೀಡಲು ಸ್ಥಾಪಿಸಿರುವುದು ನಿಜವಲ್ಲವೇ.

ಇ) ಹಾಗಿದ್ದಲ್ಲಿ, ಕಳೆದ ಬಾರಿ ಈ ಪ್ರಶಸ್ತಿಯನ್ನು ನೀಡದೇ ಇರಲು ಕಾರಣಗಳೇನು?

ಈ) ಪ್ರತಿ ವರ್ಷ ಈ ಪ್ರಶಸ್ತಿಯನ್ನು ನಾಟಕ ರಂಗದಲ್ಲಿ ಅದ್ವಿತೀಯ ಸೇವೆ ಸಲ್ಲಿಸಿರುವವರಿಗೆ ನೀಡಲು ಸರ್ಕಾರದವರು ಪರಿಶೀಲಿಸುವರೆ.

ಶ್ರೀಮತಿ ಬಿ.ಟಿ. ಲಲಿತಾನಾಯಕ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) ಇಲ್ಲ.

ಆ) ವೃತ್ತಿ ರಂಗಭೂಮಿಯಲ್ಲಿ ಅಪಾರ ಸೇವೆ ಸಲ್ಲಿಸಿರುವ ವ್ಯಕ್ತಿಗೆ ಡಾ|| ರಾಜ್‌ಕುಮಾರ್‌ರವರ ಹೆಸರಿನಲ್ಲಿ ಪ್ರಶಸ್ತಿ ಸ್ಥಾಪಿಸಲಾಗಿದೆ.

ಇ) ವೃತ್ತಿ ರಂಗಭೂಮಿಯಲ್ಲಿ ಅಪಾರ ಸೇವೆ ಸಲ್ಲಿಸಿರುವ ವ್ಯಕ್ತಿಗೆ ಡಾ|| ರಾಜ್‌ಕುಮಾರ್‌ರವರ ಹೆಸರಿನಲ್ಲಿ 'ವೃತ್ತಿ ರಂಗಭೂಮಿ' ಪ್ರಶಸ್ತಿಯನ್ನು ಹಾಗೂ ಗುಬ್ಬಿ ವೀರಣ್ಣ ನವರ ಹೆಸರಿನಲ್ಲಿ ಚಲನಚಿತ್ರ ಪ್ರಶಸ್ತಿಯನ್ನು ನೀಡಲು ಸರ್ಕಾರ ನಿರ್ಧರಿಸಿತು. ಆದರೆ, ಕನ್ನಡ ಚಲನಚಿತ್ರ ರಂಗದ ಬೆಳವಣಿಗೆಗೆ ಶ್ರಮಿಸಿದ ವ್ಯಕ್ತಿಗಳಿಗೆ 'ಗುಬ್ಬಿವೀರಣ್ಣ ಪ್ರಶಸ್ತಿ' ಬದಲು 'ಡಾ||ರಾಜ್‌ಕುಮಾರ್ ಪ್ರಶಸ್ತಿ' ಯನ್ನು ನೀಡುವುದು ಸಮಂಜಸವೆಂದು ಸರ್ಕಾರ ನಿರ್ಧರಿಸಿ, ಸಂಬಂಧಪಟ್ಟ ಆದೇಶಕ್ಕೆ ಮಾತ್ರ ಮಾರ್ಪಾಟು ಮಾಡಲಾಯ್ತು. ಹೀಗಾಗಿ ಪ್ರಶಸ್ತಿ ನೀಡುವುದರಲ್ಲಿ ವಿಳಂಬವಾಗಿದೆ. ಶೀಘ್ರದಲ್ಲಿ ಸರ್ಕಾರ ನಿರ್ಧಾರ ತೆಗೆದುಕೊಳ್ಳುವುದು,

ಈ) ಪರಿಶೀಲಿಸಲಾಗುವುದು.

ಶ್ರೀ ರಾಮಲಿಂಗಾ ರೆಡ್ಡಿ : ಸನ್ಮಾನ್ಯ ಸಭಾಧ್ಯಕ್ಷರೆ, ಈ ಹಿಂದೆ ಚಲನಚಿತ್ರರಂಗದಲ್ಲಿ ಸೇವೆ ಸಲ್ಲಿಸಿದಂತಹ ವ್ಯಕ್ತಿಗಳಿಗೆ ಗುಬ್ಬಿವೀರಣ್ಣನವರ ಹೆಸರಿನಲ್ಲಿ ಪ್ರಶಸ್ತಿಯನ್ನು ಕೊಡುತ್ತಿದ್ದರು ಮತ್ತು ವೃತ್ತಿ ರಂಗಭೂಮಿಯಲ್ಲಿ ಕೆಲಸ ಮಾಡುತ್ತಿದ್ದಂತಹವರಿಗೆ ಡಾ|| ರಾಜ್‌ಕುಮಾರ್‌ರವರ ಹೆಸರಿನಲ್ಲಿ ಪ್ರಶಸ್ತಿಯನ್ನು ಕೊಡುತ್ತಿದ್ದರು. ಆದರೆ ಸರ್ಕಾರದ ಒಂದು ಹೊಸ ತೀರ್ಮಾನದ ಪ್ರಕಾರ ಚಲನಚಿತ್ರರಂಗದಲ್ಲಿ ಸೇವೆ ಸಲ್ಲಿಸತಕ್ಕಂತಹ ವ್ಯಕ್ತಿಗಳಿಗೆ ತಾವು ಡಾ|| ರಾಜ್‌ಕುಮಾರ್‌ರವರ ಹೆಸರಿನಲ್ಲಿ ಪ್ರಶಸ್ತಿಯನ್ನು ಕೊಡುತ್ತಿದ್ದೀರಿ, ಅದಕ್ಕೆ ನಮ್ಮದೇನೂ ವಿರೋಧ ವಿಲ್ಲ. ಆದರೆ ನೀವು ಗುಬ್ಬಿವೀರಣ್ಣನವರ ಹೆಸರಿನಲ್ಲಿರತಕ್ಕಂತಹ ಪ್ರಶಸ್ತಿಯನ್ನು ನಾಟಕರಂಗದಲ್ಲಿರತಕ್ಕಂತಹವರಿಗೆ ಎಂದು ಸ್ವಲ್ಪ ಬದಲಾವಣೆ ಮಾಡಬೇಕಾಗಿತ್ತು. ನೀವು ಆ ತೀರ್ಮಾನವನ್ನು ತೆಗೆದುಕೊಂಡಿಲ್ಲ, ನನ್ನ ಕೊನೆಯ ಪ್ರಶ್ನೆಯಾದ (ಈ)ಯಲ್ಲಿ ಪ್ರತಿ ವರ್ಷ ಈ ಪ್ರಶಸ್ತಿಯನ್ನು ನಾಟಕ ರಂಗದಲ್ಲಿ ಅದ್ವತೀಯ ಸೇವೆ ಸಲ್ಲಿಸಿರುವವರಿಗೆ ನೀಡಲು ಸರ್ಕಾರದವರು ಪರಿಶೀಲಿಸುವರೆ ಎಂದು ಕೇಳಿದರೆ. ಅದಕ್ಕೆ ತಾವು ಪರಿಶೀಲಿಸಲಾಗುವುದೆಂದು ಉತ್ತರ ಕೊಟ್ಟಿದ್ದೀರಿ. ಈಗ ಗುಬ್ಬಿ ವೀರಣ್ಣನವರ ಹೆಸರಿನಲ್ಲಿ ಪ್ರಶಸ್ತಿಯನ್ನು ನಾಟಕರಂಗದಲ್ಲಿ ಯಾರು ಸೇವೆ ಸಲ್ಲಿಸಿದ್ದಾರೋ ಅವರಿಗೆ ಕೊಟ್ಟಿದ್ದರೆ, ಚೆನ್ನಾಗಿರುತ್ತಿತ್ತು ಎಂದು ನನ್ನ ಅಭಿಪ್ರಾಯ.

ಶ್ರೀಮತಿ. ಬಿ.ಟಿ. ಲಲಿತಾ ನಾಯಕ್ : ಮಾನ್ಯ ಸಭಾಧ್ಯಕ್ಷರೆ, ನಾವು ಕೂಡ ಇದೇ ಕೆಲಸವನ್ನು ಮಾಡುತ್ತಿದ್ದೇವೆ. ಈ ಹಿಂದಿನ ಸರ್ಕಾರ, ಗುಬ್ಬಿವೀರಣ್ಣನವರ ಹೆಸರಿನಲ್ಲಿ ಚಲನಚಿತ್ರ ರಂಗದಲ್ಲಿ ದುಡಿದಂತಹ ಗಣ್ಯರಿಗೆ ಕೊಡುವುದಕ್ಕೆ ಪ್ರಶಸ್ತಿಯನ್ನು ಸ್ಥಾಪನೆ ಮಾಡಿತ್ತು. ಅದನ್ನು ಈಗ ನಾವು ಏನು ಮಾಡಿದ್ದೇವೆಂದರೆ, ಚಲನಚಿತ್ರ ರಂಗದಲ್ಲಿ ಸೇವೆ ಸಲ್ಲಿಸಿದಂತಹವರು ಡಾ||ರಾಜ್‌ಕುಮಾರ್‌ರವರು, ಈ ಗುಬ್ಬಿವೀರಣ್ಣನವರು ರಂಗಭೂಮಿಗೆ ಸರಿಹೋಗುವಂತಹವರು. ಆದುದರಿಂದ ಇದು ಅದಲುಬದಲಾಗಿದೆ. ಮೊದಲು ಮಾಡುವಾಗ, ಚಲನಚಿತ್ರರಂಗಕ್ಕೆ ಸೇವೆ ಸಲ್ಲಿಸಿದವರಿಗೆ ಕೊಡುವಂತಹ ಪ್ರಶಸ್ತಿಯನ್ನು ಗುಬ್ಬಿವೀರಣ್ಣನವರ ಹೆಸರಿನಲ್ಲಿ ಕೊಡುತ್ತಿದ್ದರು. ಆದುದರಿಂದ ಇದನ್ನು ಸ್ವಲ್ಪ ಅದಲು ಬದಲು ಮಾಡಿಕೊಳ್ಳುವಂತಹ ಕೆಲಸವೆಷ್ಟು. ಆದರೆ ಎಲ್ಲವನ್ನು ಕೊಡುವಂಥ ಕೆಲಸವಾಗುತ್ತದೆ. ಡಾ|| ರಾಜ್‌ಕುಮಾರ್‌ರವರು ನನ್ನ ಹೆಸರಿನಲ್ಲಿರುವ ಪ್ರಶಸ್ತಿಯನ್ನು ಚಲನಚಿತ್ರರಂಗದವರಿಗೆ ಕೊಡಿ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಅದನ್ನು ಒಪ್ಪಿಕೊಂಡಿದ್ದೇವೆ. ಗುಬ್ಬಿವೀರಣ್ಣನವರು ರಂಗಭೂಮಿಗೆ ದುಡಿದಂತಹವರು, ಡಾ||ರಾಜ್‌ಕುಮಾರ್‌ರವರು ಚಲನಚಿತ್ರರಂಗದಲ್ಲಿ ದುಡಿತಂತಹವರು. ಆದುದರಿಂದ ಡಾ|| ರಾಜ್‌ಕುಮಾರ್‌ರವರ ಹೆಸರಿನ ಪ್ರಶಸ್ತಿಯನ್ನು ಚಲನಚಿತ್ರರಂಗಕ್ಕೆ ಮತ್ತು ಗುಬ್ಬಿ ವೀರಣ್ಣನವರ ಹೆಸರಿನ ಪ್ರಶಸ್ತಿಯನ್ನು ರಂಗಭೂಮಿಯಲ್ಲಿ ದುಡಿದಂತ ಏಣಗಿ ಬಾಳಪ್ಪನವರ

ಹೆಸರಿಗೆ ಈ ವರ್ಷ ಬಂದಿದೆ. ಆ ವಿಚಾರಗಿ ಬಾಳಪ್ಪನವರಿಗೆ ಆ ಪ್ರಶಸ್ತಿಯನ್ನು ಕೊಡುತ್ತೇವೆ.

ಶ್ರೀ ರಾಮಲಿಂಗಾರೆಡ್ಡಿ : ಉತ್ತರದಲ್ಲಿ ಆ ರೀತಿ ಇಲ್ಲ, ಪರಿಶೀಲಿಸಲಾಗುವುದೆಂದು ಕೊಟ್ಟಿದ್ದಾರಷ್ಟೆ. ಮಂತ್ರಿಗಳು ರೀತಿ ಹೇಳಿದರೆ ಸಂತೋಷ.

ಶ್ರೀ ಬಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿ ಆ ರೀತಿ ಇಲ್ಲ, ರಂಗಭೂಮಿಯಲ್ಲಿ ಸೇವೆ ಸಲ್ಲಿಸಿದವರಿಗೆ ಗುಬ್ಬಿವೀರಣ್ಣನವರ ಹೆಸರಿನಲ್ಲಿ ಪ್ರಶಸ್ತಿಯನ್ನು ಕೊಡಬಹುದು. ಚಲನಚಿತ್ರರಂಗದಲ್ಲಿ ಸೇವೆ ಸಲ್ಲಿಸಿದ ಡಾ|| ರಾಜ್‌ಕುಮಾರ್‌ರವರ ಹೆಸರಿನಲ್ಲಿ ಪ್ರಶಸ್ತಿಯನ್ನು ಕೊಡುವುದರಲ್ಲಿ ಯಾರಿಗೂ ಅಭ್ಯಂತರವಿಲ್ಲ. ಆದರೆ ಈ ಉತ್ತರದಲ್ಲಿ ರಂಗಭೂಮಿಯಲ್ಲಿ ಸೇವೆ ಸಲ್ಲಿಸಿದವರಿಗೆ ಗುಬ್ಬಿವೀರಣ್ಣನವರ ಹೆಸರಿನಲ್ಲಿ ಪ್ರಶಸ್ತಿಯನ್ನು ಕೊಡುವುದೆಂದು ಇಲ್ಲ. ಆದುದರಿಂದ ಅದನ್ನು ಸರ್ಕಾರ ಪರಿಶೀಲನೆ ಮಾಡಬೇಕು.

ಶ್ರೀ ಜಿ.ಎಸ್. ಶಿವನಂಜಪ್ಪ : ಮಾನ್ಯ ಅಧ್ಯಕ್ಷರೆ (ಅ) ಪ್ರಶ್ನೆಗೆ, ವೃತ್ತಿರಂಗಭೂಮಿಯಲ್ಲಿ ಅಪಾರ ಸೇವೆ ಸಲ್ಲಿಸಿರುವ ವ್ಯಕ್ತಿಗೆ ಡಾ|| ರಾಜ್‌ಕುಮಾರ್‌ರವರ ಹೆಸರಿನಲ್ಲಿ ಪ್ರಶಸ್ತಿ ಸ್ಥಾಪಿಸಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಇದು ಹಿಂದೆ ಇದ್ದದ್ದು. ಈಗ ಡಾ|| ರಾಜ್‌ಕುಮಾರ್‌ರವರು ಚಲನಚಿತ್ರರಂಗದಲ್ಲಿ ಅಪಾರವಾದ ಸೇವೆ ಸಲ್ಲಿಸಿದ್ದಾರೆ. ಅದಕ್ಕೋಸ್ಕರ ಅವರ ಹೆಸರಿನಲ್ಲಿ ಪ್ರಶಸ್ತಿಯನ್ನು ಕೊಡುವುದಕ್ಕೆ ನಮ್ಮದೇನು ಅಭ್ಯಂತರವಿಲ್ಲ. ಆದರೆ ನಾಟಕರತ್ನ ಗುಬ್ಬಿವೀರಣ್ಣನವರು ಇಡೀ ಭಾರತದಲ್ಲಿ ಹೆಸರು ಮಾಡಿದಂತ ವ್ಯಕ್ತಿಗೆ ಗುಬ್ಬಿವೀರಣ್ಣನವರ ಹೆಸರಿನಲ್ಲಿ ಯಾವ ಪುರಸ್ಕಾರವನ್ನು ಕೊಡುತ್ತೀರಿ ಎನ್ನುವ ಪ್ರಶ್ನೆಯನ್ನು ನಾನು ನಿಮಗೆ ಕೇಳುತ್ತಿದ್ದೇನೆ.

ಶ್ರೀಮತಿ. ಬಿ.ಟಿ. ಲಲಿತಾ ನಾಯಕ್ : ಗುಬ್ಬಿವೀರಣ್ಣನವರ ಹೆಸರಿನಲ್ಲೇ ಈ ರಂಗಭೂಮಿಯಲ್ಲಿ ಸೇವೆ ಸಲ್ಲಿಸಿದಂತ ಕಲಾವಿದರಿಗೆ ಈ ಪ್ರಶಸ್ತಿಯನ್ನು ಕೊಡುತ್ತಿದ್ದೇವೆ.

ಶ್ರೀ ಕುಂಬಳೆ ಸುಂದರರಾವ್ : ನಮ್ಮ ಕನ್ನಡ ಸಂಸ್ಕೃತಿ ಇಲಾಖೆಯ ಸಮಿತಿಯಲ್ಲಿ ಈ ಪ್ರಶಸ್ತಿಗಳು ಪ್ರಸ್ತಾಪ ಬಂದಾಗ, ಜಾನಪದ ಪ್ರಶಸ್ತಿಗೆ ಒಂದು ಯಕ್ಷಗಾನ ಪ್ರಶಸ್ತಿ ಒಂದು, ಈ ಎರಡನ್ನು ಆಳವಡಿಸಬೇಕೆಂದು ನಾವು ಕೇಳಿದ್ದೆವು. ಏಕೆಂದರೆ ಬಹುಶಃ ಯಕ್ಷಗಾನವನ್ನು ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗೆ ನೀವು ಸೀಮಿತಗೊಳಿಸುತ್ತೀರೆಂದು ನನಗೆ ಭಯವಾಗುತ್ತಿದೆ ದಯವಿಟ್ಟು ಹಾಗೆ ತಿಳಿಯಬಾರದು. ಇದು ಸಮಗ್ರ ಕರ್ನಾಟಕಕ್ಕೆ ಸಂಬಂಧಪಟ್ಟಂಥ ಕಲೆ. ಈ ಕಲೆಗೆ ಸಂಬಂಧಪಟ್ಟಂಥ ಒಂದು ಪ್ರಶಸ್ತಿ ಇರಬೇಕಾದ್ದು ಅವಶ್ಯ ಅಗತ್ಯವಿದೆ. 'ಭಾರತೀಯ ಶಿಲ್ಪ' ಎನ್ನುವ ಒಂದು ಪರಿಸ್ಥಿತಿಯನ್ನು ಯಕ್ಷಗಾನಕ್ಕೂ ಕೊಡಬೇಕು. ಹಾಗೆಯೇ, ಜಾನಪದ ಕಲಾವಿದರನ್ನು ಆರಿಸಿ, ಅವರಿಗೆ ಪ್ರಶಸ್ತಿಯನ್ನು ಇತರ ಜೊತೆಗೆ ಅಳವಡಿಸಬೇಕು. ನೆಚ್ಚಿನವರಾದ, ವಾಟಾಳ್ ನಾಗರಾಜ್‌ರವರು ಇದಕ್ಕೆ ಸಂಬಂಧಿಸಿದಂತೆ ವರದಿಯನ್ನು ಕೂಡ ಕೊಟ್ಟಿದ್ದಾರೆಂದು ನಾನು ಕೇಳಿದ್ದೇನೆ. ಮಾನ್ಯ ಮಂತ್ರಿಗಳು ಇದನ್ನು ಪರಿಶೀಲಿಸಿ ಉಳಿದ ಪ್ರಶಸ್ತಿಗಳ ಜೊತೆಗೆ ಈ ಪ್ರಶಸ್ತಿಗೂ ಅವಕಾಶ ಮಾಡಿಕೊಡಬೇಕಾಗಿ ನಿಮ್ಮ ಮೂಲಕ ಪ್ರಾರ್ಥಿಸುತ್ತೇನೆ.

ಶ್ರೀ ಬಿ.ಟಿ. ಲಲಿತಾ ನಾಯಕ್ : ಸನ್ಮಾನ್ಯ ಅಧ್ಯಕ್ಷರೆ, ಅಷ್ಟು ಪ್ರಶಸ್ತಿಗಳನ್ನು ಈಗಾಗಲೇ ಕೊಡುತ್ತಿದ್ದೇವೆ. ಇದನ್ನು ನಿಜವಾಗಲೂ ಪರಿಶೀಲಿಸಬೇಕಾದಂತದ್ದು. ಈಗಾಗಲೇ ಹಲವು ಪ್ರಶಸ್ತಿಗಳಿವೆ. ಪ್ರತಿಯೊಂದು ವಿಭಾಗಕ್ಕೂ ಒಂದೊಂದು ಪ್ರಶಸ್ತಿಯನ್ನು ಈಗಾಗಲೇ ಸರ್ಕಾರ ಕೊಡುತ್ತಿದೆ, ಇದನ್ನೂ ಪರಿಶೀಲಿಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಗುಬ್ಬಿವೀರಣ್ಣನವರ ಹೆಸರಿನಲ್ಲಿ ಹಾಗೂ ಡಾ॥ ರಾಜ್‌ಕುಮಾರ್‌ರವರ ಹೆಸರಿನಲ್ಲಿ ಪ್ರಶಸ್ತಿಗಳಿವೆ. ಇಬ್ಬರೂ ನಾಟಕರಂಗದಲ್ಲಿ ಇದ್ದವರು, ಅದರಲ್ಲಿ ಏನೂ ಅನುಮಾನವಿಲ್ಲ. ಡಾ॥ ರಾಜ್‌ಕುಮಾರ್‌ರವರು ಚಲನಚಿತ್ರರಂಗಕ್ಕೇ ಸೀಮಿತವೆಂದು ಹೇಳುವುದಕ್ಕಾಗುವುದಿಲ್ಲ, ಗುಬ್ಬಿವೀರಣ್ಣನವರು ನಾಟಕರಂಗಕ್ಕೇ ಸೀಮಿತವೆಂದು ಹೇಳುವುದಕ್ಕಾಗುವುದಿಲ್ಲ, ಇಬ್ಬರು ಹಿರಿಯರ ಹೆಸರಿನಲ್ಲಿ ಪ್ರಶಸ್ತಿಗಳನ್ನು ಕೊಡುತ್ತಿದ್ದೀರಿ. ಈಗ ಅದಲು ಬದಲಾಗಿ, ಗುಬ್ಬಿವೀರಣ್ಣನವರ ಹೆಸರು ಇಲ್ಲ ಅದಲುಬದಲಾಗಿದೆಯೆಂದು ಹೇಳಿದ್ದಾರೆ, ಅದೇನೂ ದೊಡ್ಡ ಸಮಸ್ಯೆಯಲ್ಲ, ಈಗ ತಮ್ಮ ಮೂಲಕ ಕೇಳತಕ್ಕಂತಹದ್ದು ಏನೆಂದರೆ ತಾವು ಗುಬ್ಬಿವೀರಣ್ಣನವರ ಹೆಸರಿನಲ್ಲೂ ಪ್ರಶಸ್ತಿಯನ್ನು ಕೊಡಬೇಕು. ಡಾ॥ ರಾಜ್‌ಕುಮಾರ್‌ರವರ ಹೆಸರಿನಲ್ಲೂ ಸಹ ಪ್ರಶಸ್ತಿಯನ್ನು ಕೊಡಬೇಕು ಹಾಗೂ ಡಾ॥ ರಾಜ್‌ಕುಮಾರ್‌ರವರ ಹೆಸರಿನಲ್ಲಿ ಕೊಟ್ಟಂತಹ ಪ್ರಶಸ್ತಿ ಚಲನಚಿತ್ರರಂಗಕ್ಕೆ ಹೋಗಲಿ, ಗುಬ್ಬಿವೀರಣ್ಣನವರ ಹೆಸರಿನಲ್ಲಿ ಕೊಟ್ಟಂತಹ ಪ್ರಶಸ್ತಿ ನಾಟಕರಂಗಕ್ಕೆ ಹೋಗಲಿ. ಇದು ಒಂದು, ಮತ್ತೆ ಎರಡನೆಯದಾಗಿ, ಅಧ್ಯಕ್ಷರೆ, ತಾವೇನು ಗುಬ್ಬಿವೀರಣ್ಣನವರ ಹೆಸರಿನಲ್ಲಿ ಪ್ರಶಸ್ತಿಯನ್ನು ಕೊಡುತ್ತಿದ್ದೀರಿ, ಈಗ ವೃತ್ತಿ ರಂಗ ಭೂಮಿಗಳೇ ಇಲ್ಲ, ರಂಗಭೂಮಿಯ ಕಥೆ ಈಗ ಮುಗಿದು ಹೋಗಿದೆ. ನಾಟಕರಂಗಭೂಮಿ ಸಂಪೂರ್ಣವಾಗಿ ನಾಶವೇ ಆಗಿದೆ. ಈಗ ರಂಗಭೂಮಿ ಎನ್ನುವುದು ಇಲ್ಲವೇ ಇಲ್ಲ, ಅದರ ಪುನರುಜ್ಜೀವನಕ್ಕೆ ನೀವು, ಸರ್ಕಾರದವರು ಏನಾದರೂ ಚಿಂತನೆ ಮಾಡಿದ್ದೀರಾ ಎನ್ನತಕ್ಕಂತಹದ್ದು ನನ್ನ ಮೂಲಭೂತವಾದಂತ ಪ್ರಶ್ನೆ.

ಶ್ರೀಮತಿ. ಬಿ.ಟಿ. ಲಲಿತಾ ನಾಯಕ್ : ಮಾನ್ಯ ಅಧ್ಯಕ್ಷರೆ, ವೃತ್ತಿ ರಂಗ ಭೂಮಿ ಮತ್ತು ಹವ್ಯಾಸಿ ರಂಗಭೂಮಿ ಈ ಎರಡಕ್ಕೂ ಕೂಡ ಸಂಬಂಧಿಸಿದಂತೆ ಸರ್ಕಾರ ಸಾಕಷ್ಟು ಕೆಲಸವನ್ನು ಮಾಡುತ್ತಿದೆ. ಅದರ ಪುನರುಜ್ಜೀವನಕ್ಕೆ ಹಲವಾರು ಯೋಜನೆಗಳನ್ನು ಹಾಕಿಕೊಂಡಿದೆ. ಸೀಸನ್‌ಗಳಲ್ಲಿ ಈ ವೃತ್ತಿ ರಂಗಭೂಮಿಯವರು ಬೇರೆ ಬೇರೆ ಕಡೆ ಹೋಗಿ ತಮ್ಮ ನಾಟಕಗಳನ್ನು ಪ್ರದರ್ಶನ ಮಾಡುವಂತಹ ಸಂದರ್ಭದಲ್ಲಿ, ಅವರಿಗೆ ಉಚಿತವಾದಂಥ ಊಟ ವಸತಿ ವ್ಯವಸ್ಥೆ ಹೀಗೆ ಇವೆಲ್ಲವನ್ನೂ ಕೊಡುತ್ತಿದ್ದೇವೆ. ಬೇಕಾದರೆ ತಾವು ವೃತ್ತಿರಂಗ ಭೂಮಿಯವರನ್ನು ಹೋಗಿ ವಿಚಾರಿಸಿ.

ಶ್ರೀ ಯು.ಆರ್. ಸಭಾಪತಿ : ಸನ್ಮಾನ್ಯ ಅಧ್ಯಕ್ಷರೆ. ಈಗ ನಾಟಕರಂಗದಲ್ಲಿ ಸೇವೆ ಸಲ್ಲಿಸಿದವರಿಗೆ ಗುಬ್ಬಿವೀರಣ್ಣನವರ ಹೆಸರಿನಲ್ಲಿ ಪ್ರಶಸ್ತಿಯನ್ನು ಹಾಗೂ ಚಲನಚಿತ್ರ ರಂಗದಲ್ಲಿ ಸೇವೆ ಸಲ್ಲಿಸಿದವರಿಗೆ ಡಾ॥ ರಾಜ್‌ಕುಮಾರ್‌ರವರ ಹೆಸರಿನಲ್ಲಿ ಪ್ರಶಸ್ತಿಯನ್ನು ಕೊಡುವ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿದರು. ಈಗ ಯಕ್ಷಗಾನದಲ್ಲಿ ಪ್ರಶಸ್ತಿಯನ್ನು ಕೊಡುವಾಗ ಯಾರ ಹೆಸರಿನಲ್ಲಿ ಪ್ರಶಸ್ತಿಯನ್ನು ಕೊಡುತ್ತೀರಿ ಎನ್ನುವುದರ ಬಗ್ಗೆ ತಾವು ತಿಳಿಸುತ್ತೀರಾ?

ಶ್ರೀಮತಿ. ಬಿ.ಟಿ. ಲಲಿತಾ ನಾಯಕ್ : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ 'ಜಾನಪದ ಶ್ರೀ' ಎನ್ನುವ ಪ್ರಶಸ್ತಿಯು ರಚನೆಯಾಗಿದೆ. ಎಸ್.ಎಂ. ಕರೀಂಖಾನ್‌ರವರು ಅದಕ್ಕೆ ಅಧ್ಯಕ್ಷರಾಗಿದ್ದಾರೆ. 'ದ್ರೋಣ' ಎನ್ನುವ ಪ್ರಶಸ್ತಿಯ ಬಗ್ಗೆ ಇನ್ನೂ ತೀರ್ಮಾನವಾಗಬೇಕಾಗಿದೆ. ಬಹುಶಃ ಈ ಜಾನಪದ ಪ್ರಶಸ್ತಿಯನ್ನು ಏನು ಕೊಡುತ್ತೇವೆ. ಅದರಲ್ಲಿ ಯಕ್ಷಗಾನದವರಿಗೂ ಕೂಡ ಕೊಡುವಂಥ ವ್ಯವಸ್ಥೆಯಾಗುತ್ತದೆ.

ಅಧ್ಯಕ್ಷರು : ಯಾರ ಹೆಸರಿನಲ್ಲಿ ಯಕ್ಷಗಾನ ಪ್ರಶಸ್ತಿಯನ್ನು ಕೊಡುತ್ತೀರೆಂದು ಮಾನ್ಯ ಸದಸ್ಯರು ಕೇಳಿದರು. ಇದರ ಬಗ್ಗೆ ಆಲೋಚನೆ ಮಾಡಿ ಹೇಳಿ.

ಶ್ರೀಮತಿ. ಬಿ.ಟಿ. ಲಲಿತಾ ನಾಯಕ್ : ಮಾನ್ಯ ಅಧ್ಯಕ್ಷರೆ, ಆ ಸಮಿತಿ ಇನ್ನೂ ಈಗ ರಚನೆಯಾಗಿದೆ. ಇನ್ನೊಂದು ಮಾನ್ಯ ವಾಟಾಳ್ ನಾಗರಾಜ್‌ರವರು ವೃತ್ತಿರಂಗ ಭೂಮಿ ಕಲಾವಿದರಿಗೆ ಸಂಬಂಧಿಸಿದಂತೆ ಕೇಳಿದ ಪ್ರಶ್ನೆಗೆ ಉತ್ತರ ಇಲ್ಲಿದೆ.

ಈಗಾಗಲೇ 'ಕಾಯಕಲ್ಪ' ಎನ್ನು ಯೋಜನೆ ಇದೆ. 7.30 ಲಕ್ಷ ರೂಪಾಯಿಗಳನ್ನು ನಾವು ಈಗಾಗಲೇ ವೃತ್ತಿರಂಗಭೂಮಿ ಕಲಾವಿದರಿಗೆ ಅನುದಾನವಾಗಿ ನೀಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಬೇಡಿಕೆ ಬಂದಾಗ ಅದರ ಬಗ್ಗೆ ಮಾತನಾಡೋಣ. ಪಾಪ ಅವರು ಬಹಳ ದೂರದಲ್ಲಿದ್ದಾರೆಂದು ನಾನು ತಮಗೆ ಹೇಳುತ್ತೇನೆ. ವೃತ್ತಿ ರಂಗಭೂಮಿ ನಟರೆಲ್ಲಾ ನೆಲಕಚ್ಚಿ ಬಹಳ ಜನ ಉಸಿರಿಲ್ಲದೆ ಹೋಗಿದ್ದಾರೆ.

ಶ್ರೀರಂಗ ಪಟ್ಟಣದ ಸಮೀಪ ಹೊಸ ಕಾರ್ಖಾನೆ ತೆರೆಯಲು ಅನುಮತಿ.

1476 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದ ಸಮೀಪ ಹೊಸದಾಗಿ ಕಾರ್ಖಾನೆ ತೆರೆಯಲು ಪರಿಸರ ಮತ್ತು ಮಾಲಿನ್ಯ ಮಂಡಳಿ ಅನುಮತಿ ನೀಡಿದೆಯೇ.*

ಆ) *ಶ್ರೀರಂಗಪಟ್ಟಣದ ಬಳಿ ಕೈಗಾರಿಕೆ ಸ್ಥಾಪಿಸಲು ಅನುಮತಿ ನೀಡುವುದರಿಂದ ರಂಗನತಿಟ್ಟು ಪಕ್ಷಿಧಾಮಕ್ಕೆ ಧಕ್ಕೆ ಯಾಗುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ.*

ಇ) *ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?*

ಶ್ರೀ ಪಿ.ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ರಾಜ್ಯ ಸಚಿವರು) :

ಅ) ಹೌದು, ಹತ್ತು ಟಿ.ಪಿ.ಡಿ. ಪ್ರಮಾಣದ ಎಲೆಕ್ಟ್ರಿಕಲ್ ಗ್ರೇಡ್ ಇನ್ಸ್ಯೂಲೇಷನ್ ಪ್ರೆಸ್ ಬೋರ್ಡ್ಸ್ ಮತ್ತು ಪ್ರಿ ಕಂಪ್ರೆಸ್ಡ್ ಬೋರ್ಡ್ಸ್ ತಯಾರಿಸುವ ಕಾರ್ಖಾನೆಗೆ ಇತರ ಷರತ್ತುಗಳಲ್ಲದೆ ಪರಿಸರ ಇಲಾಖೆಯಿಂದ ಪರಿಸರ ವಿಮೋಚನಾ ಸಮಿತಿಯ ಸಹಮತಿಯನ್ನು ಪಡೆಯುವ ಷರತ್ತನ್ನು ವಿಧಿಸಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಅನುಮತಿ ನೀಡಿತ್ತು. ಈಗ ಕಾರ್ಖಾನೆಯವರು ತಮ್ಮ ಅರ್ಜಿಯನ್ನು ಸ್ವ ಇಚ್ಛೆಯಿಂದ ಹಿಂತೆಗೆದುಕೊಂಡಿರುತ್ತಾರೆ.

ಆ) 'ಅ' ಉತ್ತರದಿಂದಾಗಿ ಉದ್ಭವಿಸುವುದಿಲ್ಲ.

ಇ) 'ಅ' ಉತ್ತರದಿಂದಾಗಿ ಉದ್ಭವಿಸುವುದಿಲ್ಲ.

ಅಧ್ಯಕ್ಷರು : ಶ್ರೀ. ಎಲ್.ಆರ್. ಶಿವರಾಮೇಗೌಡರವರ ಪ್ರಶ್ನೆಯನ್ನು ಜೆ.ಬಿ. ಶಿವಕುಮಾರ್‌ರವರು ಕೇಳುತ್ತಾರೆ.

ಶ್ರೀ ಜೆ.ಪಿ. ಶಿವಕುಮಾರ್ (ಶ್ರೀ ಎಲ್.ಆರ್. ಶಿವರಾಮೇಗೌಡರ ಪರವಾಗಿ) : ಮಾನ್ಯ ಅಧ್ಯಕ್ಷರೆ. ಉತ್ತರದಲ್ಲಿ ಯಾರೋ ಒಂದು ಕಂಪನಿಯವರು ಕೇಳಿದ್ದರು, ಈಗ ಕಾರ್ಖಾನೆಯವರೆ, ತಮ್ಮ ಅರ್ಜಿಯನ್ನು ಸ್ವಇಚ್ಛೆಯಿಂದ ಹಿಂತೆಗೆದುಕೊಂಡಿರುತ್ತಾರೆ ಎಂದು ಹೇಳಿರುವುದು ಸ್ಪಷ್ಟವಾಗಿದೆ. ಇದರ ಪ್ರಾಮುಖ್ಯತೆಯನ್ನು ಹೇಳಬೇಕೆಂದರೆ, ನಮ್ಮ ಜಿಲ್ಲೆಯಲ್ಲಿರತಕ್ಕಂತಹ ಬಲಮುರಿ ಕ್ಷೇತ್ರ ಹಾಗೂ ರಂಗನತಿಟ್ಟು ಇಡೀ ಪ್ರಪಂಚಾದ್ಯಂತ ಖ್ಯಾತಿಯನ್ನುಗಳಿಸಿರತಕ್ಕಂತಹದ್ದು. ಪ್ರಕೃತಿದತ್ತವಾಗಿ ಬಂದಿರತಕ್ಕಂತಹ ಈ ನೈಸರ್ಗಿಕ ಸಂಪತ್ತನ್ನು ಉಳಿಸಿಕೊಳ್ಳುವುದಕ್ಕೆ ಸರ್ಕಾರ ಈಗ ತಡೆಕೊಟ್ಟಿರುವುದರ ಜೊತೆಗೆ, ಯಾವುದೇ ಒತ್ತಡ ಬಂದರೂ ಸಹ ಇಂತಹ ಸ್ಥಳಗಳಲ್ಲಿ ಯಾವುದೇ ಕಾರ್ಖಾನೆಯನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶ ಕೊಡಬಾರದು. ಈಗ ಅದನ್ನು ಪ್ರಾರಂಭ ಮಾಡಲು ಅನುಮತಿಯನ್ನು ಕೊಟ್ಟಿದ್ದರು, ಅಲ್ಲಿಯ ಸ್ಥಳೀಯ ಜನರು ಪ್ರತಿರೋಧ ವ್ಯಕ್ತ ಮಾಡಿದ್ದರಿಂದ ಕಾರ್ಖಾನೆ ಪ್ರಾರಂಭ ಮಾಡುವುದಕ್ಕೆ ಅರ್ಜಿಯನ್ನು ಹಾಕಿದಂಥ ಆ ಮನುಷ್ಯ ವಾಪಸ್ ತೆಗೆದುಕೊಂಡ. ಇಲ್ಲದಿದ್ದರೆ ಆತ ಏನಾದರೂ

ಮಾಡಿ ಇಲಾಖೆಯವರನ್ನು ಶಾಮೀಲು ಮಾಡಿಕೊಂಡು ಅನುಮತಿಯನ್ನು ಪಡೆದುಕೊಳ್ಳುತ್ತಿದ್ದನೋ ಏನೂ ಇವತ್ತು ಬಲಮುರಿ ಕ್ಷೇತ್ರ, ಮೊನ್ನೆ ಕೆ.ಆರ್.ಎಸ್. ಅಣೆಕಟ್ಟೆಯಿಂದ ನೀರು ಬಿಟ್ಟಿದ್ದರಿಂದ ನೀರು ತುಂಬಿ ಇವತ್ತು ಎಷ್ಟು ಹಾಳಾಗಿದೆ ಎನ್ನುವುದು ಕೂಡ ತಮಗೆ ಗೊತ್ತಿದೆ. ಅದರ ಜೊತೆಗೆ ಈ ರೀತಿಯ ಕಾರ್ಖಾನೆಗಳು ಬಂದು ಅಲ್ಲಿ ಮಲಿನ ಮಾಡಿದರೆ, ಆ ಪ್ರಕೃತಿ ದತ್ತವಾಗಿ ಬಂದಿರತಕ್ಕಂತಹ ನೈಸರ್ಗಿಕ ಸಂಪತ್ತು ಹಾಳಾಗುತ್ತದೆ. ಸರ್ಕಾರ, ಇದರ ಜೊತೆಗೆ ಇನ್ನು ಮುಂದೆ ಕಟ್ಟುನಿಟ್ಟಾದಂಥ ಕ್ರಮವನ್ನು ತೆಗೆದುಕೊಳ್ಳಬೇಕು ಎನ್ನುವುದು ನನ್ನ ಆಗ್ರಹ.

ಶ್ರೀ ಪಿ.ಸಿ. ಸಿದ್ದನಗೌಡರ್ : ಮಾನ್ಯ ಅಧ್ಯಕ್ಷರೇ ಸನ್ಮಾನ್ಯ ಸದಸ್ಯರು ಹೇಳತಕ್ಕಂಥದ್ದು ಬಹಳ ಒಳ್ಳೆಯ ಸಲಹೆ ಎಂದು ನಾನು ಭಾವನೆ ಮಾಡಿದ್ದೇನೆ. ಈಗಾಗಲೇ ರಂಗನತಿಟ್ಟು ಸಮೀಪ ಯಾವುದೇ ಇಂಡಸ್ಟ್ರೀ ಕೊಡಬಾರದೆಂದು ತೀರ್ಮಾನ ತೆಗೆದುಕೊಂಡ ಅವರ ಮೇಲೆ ಕ್ರಮವನ್ನು ತೆಗೆದುಕೊಂಡು ಬಿಟ್ಟಿದ್ದೇನೆ. ಇನ್ನು ಮುಂದೆ ಯಾವ ಅಧಿಕಾರಿ ಬಂದರೂ ಸಹಿತ ಅಲ್ಲಿ ಕೊಡುವಂತಿಲ್ಲ, ಅವರು ಕೊಟ್ಟಿರುವ ಸಲಹೆ ಬಹಳ ಸೂಕ್ತವಾಗಿದೆ. ಅದನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಆ ಕಾರ್ಯಕ್ರಮ ಮಾಡುತ್ತದೆ

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ಇಷ್ಟೊಂದು ಪ್ರಸಿದ್ಧಿಯಾದ ಸ್ಥಳದಲ್ಲಿ ಈ ನಿಮ್ಮ ಮಾಲಿನ್ಯ ನಿಯಂತ್ರಣ ಮಂಡಳೀಯವರು ಒಳ್ಳೆ ಸಬ್ ರಿಜಿಸ್ಟ್ರಾರ್ ತರಹ ಕೆಲಸ ಮಾಡುತ್ತಿದ್ದಾರೆ. ಹೇಗೆ ಇವರು ಅನುಮತಿ ಕೊಟ್ಟರು? ಇಲಾಖೆ ಯಾವ ರೀತಿ ಕೆಲಸ ಮಾಡುತ್ತಿದೆ? ಎಂದು ನನಗನ್ನಿಸುತ್ತದೆ. ರಂಗನತಿಟ್ಟು ಬಹಳ ಪ್ರಸಿದ್ಧಿಯಾದ ಸ್ಥಳ ಸುಪ್ರಸಿದ್ಧವಾದಂಥ ಪಕ್ಷಿಗಳು ವಾಸ ಮಾಡುತ್ತಿರತಕ್ಕಂಥ ಸ್ಥಳದಲ್ಲಿ ಆ ಊರಿನ ಜನ ಪ್ರತಿಭಟನೆ ಮಾಡುತ್ತಾರೆಂದು ಗೊತ್ತಿದ್ದೂ, ಮಾಲಿನ್ಯ ಕೆಡುತ್ತೆ ಎಂದು ಗೊತ್ತಿದ್ದು ಮಾಲಿನ್ಯ ಇಲಾಖೆಯವರು ಅನುಮತಿ ಕೊಡುತ್ತಾರಲ್ಲ, ಆ ಫ್ಯಾಕ್ಟರಿಯವರ ಬಗ್ಗೆ ನಮಗೆ ಸಂತೋಷವಿದೆ. ಏಕೆಂದರೆ ಅವರು ವಾಪಸ್ತೆಗೆದುಕೊಂಡಿದ್ದಾರೆ. ನಿಮ್ಮ ಇಲಾಖೆಯವರು ಅನುಮತಿ ಕೊಟ್ರಲ್ಲ ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಅದು ಮಾಲಿನ್ಯ ಇಲಾಖೆಯೋ ಅಥವಾ ಅಮಾಲಿನ್ಯ ಇಲಾಖೆಯೋ ಎಂಬುದನ್ನು ದಯವಿಟ್ಟು ತಿಳಿಸುತ್ತೀರಾ?

ಅಧ್ಯಕ್ಷರು : ಎಲ್ಲೋ ಇಲಾಖೆಯಲ್ಲಿ ಮಾಲಿನ್ಯ ಇರುತ್ತದೆ ಅದನ್ನು ತೊಳೆಯುತ್ತೇವೆ ಎಂದು ಹೇಳಿ.

ಶ್ರೀ ಪಿ.ಸಿ. ಸಿದ್ದನಗೌಡರ್ : ಮಾನ್ಯ ಅಧ್ಯಕ್ಷರೇ ಸಾರ್ವಜನಿಕರ ದೂರು ಇನ್ನು ನನಗೆ ಬಂದಿರಲಿಲ್ಲ, ಪತ್ರಿಕೆಯಲ್ಲಿ ಬಂದ ತಕ್ಷಣ ಆ ಕಟಿಂಗ್ ಆಧಾರದಮೇಲೆ ನಾನು ಸ್ಟೇ ಕೊಟ್ಟು ಆ ಪಾರ್ಟಿಗೆ ಹಿಯರ್ ಮಾಡಿದೆ. ಅದನ್ನು ವಿಥ್ಡ್ರಾ ಮಾಡಿದೆ....

ಅಧ್ಯಕ್ಷರು : ಅವರು ಹೇಳುವುದು ಇಲಾಖೆಯಲ್ಲಿ ಎಲ್ಲೋ ಮಾಲಿನ್ಯ ಇದೆ ಎಂದು ಅದನ್ನು ತೊಳೆಯುತ್ತೇವೆಂದು ಹೇಳಿ.

ಶ್ರೀ ಪಿ.ಸಿ. ಸಿದ್ದನಗೌಡರ್ : ಆಯಿತು ಅದನ್ನು ಸರಿಯಾಗಿ ಕ್ಲೀನ್ ಮಾಡುತ್ತೇವೆ. ಆಸಿಡ್ ಹಾಕಿ ತೊಳೆಯುತ್ತೇವೆ.

ಶ್ರೀ ಕೆ.ಎನ್. ನಾಗೇಗೌಡ : ಅಧ್ಯಕ್ಷರೇ ಹಾಗಲ್ಲ, I really appreaciate the Minister. ಇಂತಹ ಒಂದು ಇಲಾಖೆಯಲ್ಲಿ ಅಧಿಕಾರಿಗಳು ಯಾರು ಇದಕ್ಕೆ ಷರತ್ತು ಹಾಕಿ ಕಂಡಿಷನ್ ಹಾಕಿ ಕೊಟ್ಟಿದ್ದಾರೆ ಅವರ ಮೇಲೆ ಏನು ಕ್ರಮ ತೆಗೆದುಕೊಂಡ್ಡೀರಿ. I want a specific Answer from the Minister. Do you take any action?

ಅವರನ್ನು ಸಸ್ಪಂಡ್ ಮಾಡಿದ್ದೀರಾ?

ಶ್ರೀ ಪಿ.ಸಿ. ಸಿದ್ದನಗೌಡರ್ : ಮಾಡಿದ್ದೇನೆ. ಅದನ್ನೇ ಹೇಳಿದೆ. ಅದನ್ನು ನಾನು ಸದಸ್ಯರು ಮೊದಲನೆಯ ಪ್ರಶ್ನೆಯ ಉತ್ತರದಲ್ಲಿ ಹೇಳಿದೆ. ಅವರು ಕೇಳಿದ್ದಿಲ್ಲ, ಆದರೂ ಹೇಳಿದ್ದೇನೆ. ಈ ರೀತಿ ಕೊಡತಕೂಡದು ಎಂದು ಹೇಳಿದ್ದೇನೆ. ಅದಕ್ಕಾಗಿ ಅಲ್ಲಿ ಒಬ್ಬ ಅಧಿಕಾರಿಯನ್ನು ಸಸ್ಪಂಡ್ ಮಾಡಿದ್ದೇನೆ. ಅವರಿಗ ಬೇರೆ ಕಡೆ ಕಳಿಸಿದ್ದೇನೆ. ಇನ್ನು ಮನೆಗೆ ಕಳುಹಿಸಿ ಎಂದರೆ ಕಳಿಸುತ್ತೇನೆ. ಅದಗಲ್ಲಿ ಏನೂ ಮುಲಾಜಿಲ್ಲ.

ಶ್ರೀಮತಿ ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ : ಮಾನ್ಯ ಅಧ್ಯಕ್ಷರೇ, ರಂಗನತಿಟ್ಟು ಪ್ರದೇಶ ನನ್ನ ಮತಕ್ಷೇತ್ರಕ್ಕೆ ಸಂಬಂಧಿಸಿದೆ. ಅಲ್ಲಿ ಬಹಳಷ್ಟು ಪಕ್ಷಿ ಸಂಕುಲ ಇದೆ. ಇದು ಬಹಳ ಒಳ್ಳೆಯ ಕೆಲಸವಾಯಿತು. ಇಲ್ಲದೆ ಹೋದರೆ ಅಲ್ಲಿ ಬಹಳ ಕಷ್ಟವಾಗುತ್ತಿತ್ತು. ಅಲ್ಲಿ ಈಗಾಗಲೇ ನೀರು ಜಾಸ್ತಿ ಬಂದು ಬಹಳಷ್ಟು ಪಕ್ಷಿಗಳು ಅಲ್ಲಿ ತೊಂದರೆ ಅನುಭವಿಸುತ್ತಿವೆ. ಈ ರೀತಿಯ ಒಳ್ಳೆಯ ಅಭಿಪ್ರಾಯ ತೆಗೆದುಕೊಂಡು ನಮ್ಮ ಸರ್ಕಾರದವರು ಬಹಳ ಅನುಕೂಲ ಮಾಡಿಕೊಟ್ಟಿದ್ದಾರೆ, ಅದಕ್ಕಾಗಿ ತುಂಬಾ ಸಂತೋಷವಾಗಿದೆ.

ಕೋಲಾರ ಜಿಲ್ಲೆಯ ಗ್ರಾನೈಟ್ ಗುತ್ತಿಗೆಗಳ ಬಗ್ಗೆ

1485 - ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಅ) ಡಿಸೆಂಬರ್ 94 ರಿಂದ 31-7-95ರವರೆಗೆ ಸರ್ಕಾರದಿಂದ ಕೋಲಾರ ಜಿಲ್ಲೆಯಲ್ಲಿ ಮಂಜೂರಾದ ಗ್ರಾನೈಟ್ ಗಣಿ ಗುತ್ತಿಗೆಗಳು ಎಷ್ಟು? ಮತ್ತು ಅದರಲ್ಲಿ ಪರಿಶಿಷ್ಟ ಜಾತಿ : ವರ್ಗ ಮತ್ತು ಹಿಂದುಳಿದ ವರ್ಗಗಳಿಗೆ ನೀಡಿದ ಗುತ್ತಿಗೆದಾರರೆಷ್ಟು?

ಶ್ರೀ ಎಸ್.ಡಿ. ಜಯರಾಮ್ (ಗಣಿ ಮತ್ತು ಭೂವಿಜ್ಞಾನ ಸಚಿವರು) :

ಅ) ಸದರಿ ಅವಧಿಯಲ್ಲಿ ಯಾವ ಕಲ್ಲುಗಣಿ ಗುತ್ತಿಗೆಯನ್ನು ನೀಡಿರುವುದಿಲ್ಲ.

ಅಧ್ಯಕ್ಷರು : ಬ್ಯೂಟಿಫುಲ್ ಶುದ್ಧ ಕನ್ನಡ

ಶ್ರೀ ಎಸ್. ರಾಜೇಂದ್ರನ್ : ಅಧ್ಯಕ್ಷರೆ ಇಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ನನ್ನ ಪ್ರಶ್ನೆ ಏನು ಎಂದರೆ "the number of granite leases issued by the Government of Karnataka in Kolar District from December 94 till 31.7.95 and out of which the number of persons belonging to SCs/STs and minoritie ಎಸ್ಸಿ-ಎಸ್ಟಿ ಬಗ್ಗೆ ಏನೂ ಕೊಟ್ಟಿಲ್ಲವೆಂದು. ಪಾಲಿಸಿ ಏನು ಅಡಾಪ್ಟ್ ಮಾಡಿದ್ದೀರಿ?

ಹೊಸ ಪಾಲಿಸಿ ಏನಾದರೂ ಮಾಡುತ್ತಿದ್ದೀರೋ? The answer given is, 'no leases have been granted during this period'.

ಎಸ್ಸಿ-ಎಸ್ಟಿಯವರಿಗೆ ಅವಕಾಶ ಕೊಡುವುದಕ್ಕೆ ನೀವು ಏನಾದರೂ ಪಾಲಿಸಿ ಇಟ್ಟುಕೊಳ್ಳುತ್ತೀರಾ? ರಿಸರ್ವೇಶನ್ ಪಾಲಿಸಿ ತರಹ ಒಂದು ಜಿಲ್ಲೆಗೆ ಎರಡು ಮೂರು ಕೊಡುತ್ತೀರೋ? ನಾವೂ ಎಕ್ಸ್‌ಪ್ಲೋರ್ಟ್ ಮಾಡಬೇಕು ಸ್ವಾಮಿ., ನಾವೂ ಹಣ ಕೊಡಬೇಕು, ನಾವೂ ಲಕ್ಷಾಂತರ ರೂಪಾಯಿ ಸಂಪಾದನೆ ಮಾಡಬೇಕು. ನಮ್ಮ ಕಮ್ಯೂನಿಟಿಯವರೂ ಮುಂದೆ ಬರುವುದಕ್ಕೆ ಸರ್ಕಾರದವರು ಏನಾದರೂ ಸಹಾಯ ಮಾಡುತ್ತೀರೋ? ದಯವಿಟ್ಟು ಇದರ ಬಗ್ಗೆ ತಾವು ಏನಾದರೂ ಮಾಡಿ.

ತಾವು ಈಕ್ವಾಲಿಟಿ ಆಫ್ ಲಾ ಬಗ್ಗೆ ಏನಾದರೂ ಮಾಡಿ ಸ್ವಲ್ಪ

ಅಧ್ಯಕ್ಷರು : ತಮಗೆ ಅವರ ಪ್ರಶ್ನೆ ಅರ್ಥವಾಯಿತಲ್ಲ, ತಾವು ಗುತ್ತಿಗೆ ಕೊಡುವುದಾದರೆ ನೀತಿ ಏನಾದರೂ ಆ ರೀತಿ ಇದ್ದರೆ, ಎಸ್ಸಿ/ಎಸ್ಟೀಸ್ಗೆ ಪ್ರಯಾರಿಟಿ ಕೊಡುತ್ತೀರೋ ಎನ್ನತಕ್ಕಂಥ ಮಾತನ್ನು ಅವರು ಕೇಳುತ್ತಿದ್ದಾರೆ.

ಶ್ರೀ ಎಸ್.ಡಿ. ಜಯರಾಮ್ : ಜಾತಿ ಆಧಾರದ ಮೇಲೆ ಕೊಡಬೇಕು ಎಂದೇನೂ ಮಾಡಿಲ್ಲ, ಯಾರು ಗ್ರಾನೈಟ್ ಗುತ್ತಿಗೆಗೆ ಹಾಕುತ್ತಾರೆ ಅದನ್ನು ಆ್ಯಕ್ಷನ್ ಪ್ರಕಾರ ನೋಡಿಕೊಂಡು ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ.

ಅಧ್ಯಕ್ಷರು : ಅವರು ಸ್ಪಷ್ಟವಾಗಿ ಕೇಳಿದ್ದು, ನಮಗೆ ಈ ಒಂದು ಉದ್ಯಮದಲ್ಲಿ ತೊಡಗಬೇಕೆಂದು ಆಸೆ ಇದೆ. ಎಸ್ಸಿ-ಎಸ್ಟಿಯವರಿಗೂ ಕೂಡ ಈ ಇಂಡಸ್ಟ್ರಿಯಲ್ಲಿ ತೊಡಬೇಕೆಂದು ಆಸೆ ಇದೆ. ನಮಗೆ ಏನಾದರೂ ನಿಮ್ಮ ಪಾಲಿಸಿಯಲ್ಲಿ ಪ್ರಯಾರಿಟಿ ಕೊಡುತ್ತೀರಾ ಎಂದು ಕೇಳಿದ್ದಾರೆ.

ಶ್ರೀ ಎಸ್.ಡಿ. ಜಯರಾಮ್ : ಮೊದಲನೆ ಪ್ರಯಾರಿಟಿ ಫ್ಯಾಕ್ಟರಿ ಹಾಕಿರೊವವರಿಗೆ ಎಂದು ಇದೆ. ಅದರಲ್ಲಿ ಅರ್ಹತೆ ಇದ್ದರೆ, ಯಾರೇ ಬರಲಿ ಕೊಡುತ್ತೇವೆ. ಇವರದೂ ಕೂಡ ಅರ್ಜಿ ಬಂದರೆ ಅದನ್ನು ನಾವು ಪರಿಗಣಿಸುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಗ್ರಾನೈಟ್ ಗುತ್ತಿಗೆ ತೆಗೆದುಕೊಳ್ಳುವುದೇ ಒಂದು ವಿಶೇಷ ಜಾತಿ ಸ್ವಾಮಿ. ಅದಕ್ಕೆ ಬಹಳ ಹೈ ಇನಫ್ಲುಯನ್ಸ್ ಇರಬೇಕು. ಅಂಥವರಿಗೆ ಮಾತ್ರ ಸಿಗುತ್ತದೆ. ಪಾಪ ಎಸ್ಸಿ/ಎಸ್ಟಿಯವರಿಗೆ ಎಲ್ಲಿ ಸಿಗುತ್ತದೆ ಅದು.

ಶ್ರೀ ಎಸ್. ರಾಜೇಂದ್ರನ್ : ನಾನು ಕೇಳುವುದು ಏನೆಂದರೆ, ಕೇಂದ್ರ ಸರ್ಕಾರದವರು ಸಹಾಯ ಮಾಡುತ್ತಿದ್ದಾರೆ, ರಾಜ್ಯ ಸರ್ಕಾರದವರು ಕೂಡ ಸ್ವಲ್ಪ ಸಹಾಯ ಮಾಡಿ ಎಂದು.

ಶ್ರೀ ಆರ್. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರು ಒಂದು ಮಾತನ್ನು ಹೇಳಿದರು. ಬಹುಶಃ it is a business; it is only a business ಆಕ್ಷನ್ ಯಾರಿಗೆ ಕೊಡುತ್ತಾರೆ, ಇದು ಅವರಿಗೇ ಕೊಡುತ್ತಾರೆ. ತಾವು ಮೇಲೆ ಇದ್ದವರಿಗೆ ಕೊಡುತ್ತಾರೆಂದು ಹೇಳಿದ್ದರೆ, ತಾವು ಮೇಲೆ ಇದ್ದೀರಿ, ತಾವು ಹಾಕಿಕೊಳ್ಳಬಹುದು ಅಷ್ಟೆ.

Sri S. Rajendran : Do you mean to say that SCs/STs people should not participate as they are economically weak. The Government is meant for them. The Goverment has to come forward and uplift these people. That is, State and Central Governments are existing I request the Government to provide shelter to these people and make my community people also participate in this.

ಶ್ರೀ ಎಸ್.ಡಿ. ಜಯರಾಮ್ : ರೂಲ್ ನಂಬರ್ 12ರಲ್ಲಿ ಪ್ರಯಾರಿಟಿ ಮಾಡಿದ್ದೇವೆ. ಪರಿಶಿಷ್ಟ ಜಾತಿಯವರು ಕೋ-ಆಪರೇಟೀವ್ ಸೊಸೈಟಿ ಮಾಡಿಕೊಂಡರೆ, ಅವರಿಗೂ ಕೂಡ ಕೊಡಬೇಕು ಎಂದು ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಇದರಲ್ಲಿ ಮೂಲಭೂತವಾಗಿ ನಾನು ಹೇಳತಕ್ಕಂಥದ್ದು ಏನೆಂದರೆ, ಈ ನಿಸರ್ಗ ಸಂಪತ್ತಿನ ನಾಶವನ್ನು ತಡೆಯುವುದಕ್ಕೋಸ್ಕರವಾಗಿ ಸಮಗ್ರವಾಗಿ ಗ್ರಾನೈಟ್ ತೆಗೆಯುವುದನ್ನು ಕರ್ನಾಟಕ ರಾಜ್ಯಾದ್ಯಂತ ಸರ್ಕಾರ ನಿಲ್ಲಿಸುವುದಕ್ಕೆ ಚಿಂತನೆ ಮಾಡಿದೆಯೆ? ಇದರಲ್ಲಿ ಜಾತಿ ಆಧಾರದ ಮೇಲೆ ಕೊಡೋದು ಬಿಡೋದು ಬೇರೆ ಪ್ರಶ್ನೆ. ಇದು ಜಾತಿ ಆಧಾರದ

ಮೇಲೆ ಅವರಿಗೆ ಇಷ್ಟು ಇವರಿಗೆ ಇಷ್ಟು ಎಂದು ಕೊಡುವುದು ಏನು ಪ್ರಶ್ನೆಯಲ್ಲ. ಜಾತಿಗಿಂತ ಹೆಚ್ಚಾಗಿ ಈ ರಾಜ್ಯದ ನಿಸರ್ಗ ಉಳಿಯುವುದಕ್ಕೆ ಸರ್ಕಾರದವರು ತೀವ್ರವಾಗಿ ಪ್ರಯತ್ನ ಮಾಡಿದ್ದೀರೋ?

ಶ್ರೀ ಎಸ್.ಡಿ. ಜಯರಾಮ್ : ಇನ್ನೂ ನಾವು ಪ್ರಯತ್ನ ಮಾಡಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಅಂದರೆ ನಿಸರ್ಗ ಎಲ್ಲಾ ನಾಶವಾದ ಮೇಲೆ ಇವರು ಪ್ರಯತ್ನ ಮಾಡುತ್ತಾರೆ ಎಂದು ತೀರ್ಮಾನವೇ?

ಶ್ರೀ ಎಸ್.ಡಿ. ಜಯರಾಮ್ : ನಿಸರ್ಗವನ್ನು ಉಳಿಸಿಕೊಂಡು ಸರ್ಕಾರ ಕೊಡಬೇಕೆಂದು ಆಲೋಚನೆ ಮಾಡುತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ಇಲ್ಲ, ಖಂಡಿತವಾಗಿ ನಿಸರ್ಗ ಉಳಿದಿಲ್ಲ. ಸಂಪೂರ್ಣ ನಿಸರ್ಗ ನಾಶವಾಗಿದೆ. ಇದರ ಬಗ್ಗೆ ಒಂದು ಸಮಿತಿ ಇದೆ, ಆ ಪ್ರಶ್ನೆ ಬೇರೆ ನಾನು ಪ್ರಾಮಾಣಿಕವಾಗಿ ತಮಗೆ ಹೇಳುತ್ತಿದ್ದೇನೆ. ಇದರಿಂದ ಸರ್ಕಾರ ಏನೂ ಉದ್ಧಾರವಾಗುವುದಿಲ್ಲ. ಇದರಿಂದ ಬರತಕ್ಕಂಥ ಹಣದಿಂದ ನಿಮ್ಮ ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳು ಉದ್ಧಾರವಾಗುತ್ತವೆ ಎಂದು ಹೇಳಿದರೆ, ಅದು ಬಹಳ ಅತ್ಯಂತ ನೋವಿನ ಪ್ರಸಂಗ. ಈಗಾಗಲೇ ಇದರ ಬಗ್ಗೆ ಒಂದು ವರದಿಯನ್ನು ಕೊಟ್ಟಿದ್ದೇವೆ. ವರದಿಯಲ್ಲಿ ನಾವು ಮತ್ತು ರೈತಸಂಘದವರು ಮತ್ತು ಜನತಾದಳದಲ್ಲಿ ಈಗ ಮುಖಂಡರಾಗಿರತಕ್ಕಂಥ ಬೈರೇಗೌಡರು ಶ್ರೀಮಾನ್ ನಾಣಯ್ಯನವರು ನಾವೆಲ್ಲರೂ ಸೇರಿ....

ಶ್ರೀ ಸಿ.ಎಂ. ಮಾಮನಿ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಸದನದ ಸಮಿತಿಯಾಗಿ ಅದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ ಹಾಗೂ ಚರ್ಚೆಯಾಗುತ್ತಿದೆ. ಅದರ ಬಗ್ಗೆ ಏತಕ್ಕೆ ಈಗ ಪುನಃ ಚರ್ಚೆ?

ಶ್ರೀ ವಾಟಾಳ್ ನಾಗರಾಜ್ : ತಾವು ಸ್ವಲ್ಪ ಸಾವಧಾನವಾಗಿ ಕೇಳಿ. ಸದನದ ಸಮಿತಿ ತಮಗೆ ಗೊತ್ತಿದೆಯಾ ಹಿಂದೆ ಒಂದು ಸದನದ ಸಮಿತಿಯ ವರದಿಯಾಗಿತ್ತು. ಅದೇನಾಯಿತು ಹೇಳಿ, ಈಗ ವರದಿ ಕೊಡುವುದು ಬೇರೆ. ಹಿಂದೆ ಆಗಿದ್ದ ಸಮಿತಿಯ ವರದಿ ಏನಾಯಿತು. ಅದರ ಬಗ್ಗೆ ಸ್ಪಷ್ಟ ಹೇಳಿ. ನಾವು ಅವರಿಗೆ ಇವರಿಗೆ ಗುತ್ತಿಗೆ ಆಧಾರದ ಮೇಲೆ ಕೊಡುವುದು ಬೇರೆ. ರಾಜ್ಯದ ನಿಸರ್ಗ ಸಂಪತ್ತನ್ನು ಉಳಿಸುವುದಕ್ಕೆ ನೀವು ಏನು ಮಾಡಿದ್ದೀರಿ ಹೇಳಿ?

ಶ್ರೀ ಎಸ್.ಡಿ. ಜಯರಾಮ್ : ಹಿಂದೆ ಇದ್ದಂಥ ಪಾಲಿಸಿಗೆ ಸದನದ ಸಮಿತಿಯ ವರದಿ ಆಧಾರ ಮಾಡಿಕೊಂಡು ಹೊಸ ಪಾಲಿಸಿಯನ್ನು ಮಾಡಿ ಇಲ್ಲಿ ಅಳವಡಿಸಲಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ನಾಣಯ್ಯನವರು ಏನು ಹೇಳಿದ್ದಾರೆ. ಮಾನ್ಯ ಚಂದ್ರೇಗೌಡರು ಏನು ಹೇಳಿದ್ದಾರೆ, ಮಾನ್ಯ ಬೈರೇಗೌಡರು ಏನು ಹೇಳಿದ್ದಾರೆ ಎಂಬುದರ ಬಗ್ಗೆ ಸ್ವಲ್ಪ ಹೇಳಿ ಸ್ವಾಮಿ.

ಶ್ರೀ ವೈ. ರಾಮಕೃಷ್ಣ : ಈ ಒಂದು ವೃತ್ತಿಯಲ್ಲಿ ತೊಡಗಿರತಕ್ಕಂಥವರು ನೂರಕ್ಕೆ ತೊಂಭತ್ತೊಂಭತ್ತು ಜನ ಪರಿಶಿಷ್ಟ ಜಾತಿಯವರು. ಕಲ್ಲು ಹೊಡೆಯುವವರು ಇರಬಹುದು ಅಥವಾ ಸಾಗಾಣಿಕೆ ಮಾಡುವವರು ಇರಬಹುದು. ಅಥವಾ ಶ್ರಮದಾನ ಮಾಡಿ ತೆಗೆಯತಕ್ಕಂಥವರು ಇರಬಹುದು. ಇದು ಮೊದಲನೆಯದು. ಇನ್ನು ಎರಡನೆಯದು ಈ ಒಂದು ಜನಾಂಗ ಶ್ರಮಪಟ್ಟು ಕೊಡತಕ್ಕಂಥ ಗಣಿಗೆ ರಿಸರ್ವೇಶನ್ ಇಲ್ಲವೆಂದರೆ ಸಂವಿಧಾನದಲ್ಲಿ ಇರತಕ್ಕಂಥ ರಿಸರ್ವೇಶನ್ಗಿಂಥ ದೊಡ್ಡದೇ? ಈಗ ಟ್ರಾನ್ಸ್‌ಪೋರ್ಟ್, ಆಲ್ ಇಂಡಿಯಾ ಟ್ರಾನ್ಸ್‌ಪೋರ್ಟ್‌ನಲ್ಲಿ ರಿಸರ್ವೇಶನ್ ಇದೆ. ಕೇಂದ್ರ ಸರ್ಕಾರದವರು ರಿಸರ್ವೇಶನ್ ಮಾಡಿದ್ದಾರೆ. ಪರಿಶಿಷ್ಟ ಜಾತಿಯವರಿಗೆ ರಿಸರ್ವೇಶನ್ ಕೊಡುತ್ತಾರೆ.

ಇವರು ಹಣ ಇರತಕ್ಕಂಥವರು ಯಾರಾದರೂ ಗಣಿ ಮಾಡುವುದಕ್ಕೆ ಮುಂದೆ ಬಂದಾಗ ಏತಕ್ಕೆ ಕೊಡುವುದಕ್ಕೆ ಆಗುವುದಿಲ್ಲ, ರಿಸರ್ವೇಶನ್ ಇಲ್ಲವೆಂದರೆ ಅರ್ಥ ಏನು? Is it above constitution. Issuing permit is above constitution. I want to know the answer from the Hon'ble Govt. ಜನರು ಸಿಕ್ಕುವುದಿಲ್ಲ ಎನ್ನುತ್ತೀರಿ ಸಿಕ್ಕಾಗ ಏತಕ್ಕೆ ಕೊಡಬಾರದು.

ಶ್ರೀ ಎಸ್.ಡಿ. ಜಯರಾಂ : ಮಾನ್ಯ ಅಧ್ಯಕ್ಷರೇ, ರೂಲ್ ನಂಬರ್ 12ರಲ್ಲಿ ಪ್ರಯಾರಿಟಿ ಪ್ರಕಾರ ಎಸ್.ಸಿ. ಎಸ್.ಟಿ.ಯವರು ಕೋ-ಆಪರೇಟಿವ್ ಸೊಸೈಟಿ ಮಾಡಿಕೊಂಡರೆ, ಕೊಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಾನು ಕೇಳಿರುವ ಪ್ರಶ್ನೆಗೆ ಉತ್ತರ ಬರಲಿಲ್ಲ.

ಅಧ್ಯಕ್ಷರು : ನಾನೇನು ಮಾಡಲಿ ಹೇಳಿ. ಈಗ ನಾನೇನು ಅವರ ಹತ್ತಿರ ಬಂದು ಹೇಳಿಸಲೇ? ನಾನೇನು ಮಾಡಲಿ ಹೇಳಿ. ನೀವು ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೇಳಿದ್ದೀರಿ, ಕೊಟ್ಟಿದ್ದೇನೆ. ಅವರಿಗೆ ಎಷ್ಟು ಗೊತ್ತಿತ್ತು ಅಷ್ಟು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ತಾವು ಬದಲಾವಣೆ ಆಗಿದ್ದೀರಿ.

ಅಧ್ಯಕ್ಷರು : ಅಲ್ಲ, ನಾನು ಏನು ಮಾಡಲಿ ಹೇಳಿ. ನಾನೇನು ಬದಲಾವಣೆ ಆಗಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಉತ್ತರ ನೋಡಿ ನನಗೇ ನೋವಾಯಿತು. ನಾನು ಬಂದು ಅಲ್ಲಿ ಹೇಳಲೇ ಎಂದು ಹೇಳಿದರೆ... ಹೇಗೆ, ನೀವು ಅಲ್ಲೇ ಕುಳಿತುಕೊಂಡು ಹೇಳಿದರೆ ಸಾಕಲ್ವೆ. ಎಷ್ಟೋ ಸಾರಿ ಮಂತ್ರಿಗಳಿಗೆ ಏನು ಹೇಳುತ್ತಿದ್ದಿರಿ ನೀವು, ಹೀಗೆ ಇರಬೇಕು, ಹಾಗೇ ಇರಬೇಕು ಎಂದು ಹೇಳಿಲ್ಲವೇ.

ಅಧ್ಯಕ್ಷರು : ಅವರಿಗೇ ಸುಮಾರಷ್ಟು ಸಾರಿ ಸೂಚನೆ ಕೊಟ್ಟಿದ್ದೇನೆ. ಇವೊತ್ತು ಕೂಡ ಕೊಟ್ಟಿದ್ದೇನೆ. ಅವರು [illegible] ನಾನೇನು ಮಾಡಲಿ. ನಾನೂ ಕೂಡ ಸುಸ್ತಾಗಿ ಬಿಟ್ಟಿದ್ದೇನೆ.

11.10 ಎ.ಎಂ

ಶ್ರೀ ವಾಟಾಳ್ ನಾಗರಾಜ್ : ನೀವು ನನಗೆ ಕೆಲವೊಮ್ಮೆ ತಡವಾಗಿ ಏಕೆ ಬಂದಿರಿ ಎಂದು ಕೇಳುತ್ತೀರಿ ನಾನು ನಿಮ್ಮ ಮನೋಧರ್ಮವನ್ನು ನೋಡಿಕೊಂಡು ಬರಬೇಕಾಗಿದೆ. ಏಕೆಂದರೆ ಅಂಥ ಪರಿಸ್ಥಿತಿ ನನಗಾಗಿದೆ. ಏಕೆಂದರೆ ನಿಮ್ಮ ಪರಿಸ್ಥಿತಿ ನೋಡಿ ನಾನು ಇವೊತ್ತು ಬರಲಿಲ್ಲ, ಏಕೆಂದರೆ ತಮ್ಮ ಸಭೆಗೆ ನಾನು ಬಂದರೆ ಇಲ್ಲಿ ಎಲ್ಲರೂ ನಿಮ್ಮೊಬ್ಬರದೇ ಎಂದು ಹೇಳುತ್ತಾರೆ, ನಾನು ರಾಜೀನಾಮೆ ಕೊಡಲೇ ಎಂದು ನಾನು ಹೇಳುತ್ತೇನೆ, ಕೊಡಬೇಡಿ ಎಂದು ನೀವು ಹೇಳುತ್ತೀರಿ. ಇಂಥ ಪ್ರಶ್ನೆಗಳನ್ನು ನಾನು ಎತ್ತಬೇಕು ಎಂದರೆ ನನಗೆ ಅದಕ್ಕೂ ತಾವು ಅವಕಾಶವನ್ನು ಕೊಡುವುದಿಲ್ಲ, ಇನ್ನು ಬರಲಿಲ್ಲ ಎಂದರೆ ಏಕೆ ತಡವಾಗಿ ಬಂದಿರಿ ಎಂದು ಅದನ್ನೂ ತಾವು ಕೇಳುತ್ತೀರಿ. ನಾನು ಮತ್ತು ನಂಜೇಗೌಡರು ಹೊರಗಡೆ ಕುಳಿತಿದ್ದೆವು. ಏಕೆಂದರೆ ಇತ್ತೀಚಿಗೆ ತಮಗೆ ನಮ್ಮ ಮೇಲೆ ಸಿಟ್ಟು ಬರುತ್ತಿದೆ, ಅದರಿಂದ ನಮಗೆ ಬಹಳ ನೋವಾಗುತ್ತಿವೆ. ನನಗೆ ಬಹಳ ನೋವಾಗುತ್ತಿದೆ. ಏಕೆಂದರೆ ಗ್ರಾನೈಟ್ ಬಗ್ಗೆ ಸುಮಾರು 15 ವರ್ಷದಿಂದ ನನ್ನ ಇಡೀ ಜೀವಮಾನದುದ್ದಕ್ಕೂ ಹೋರಾಟ ಮಾಡಿಕೊಂಡು ಬಂದಿದ್ದೇನೆ. ನಾನು ಇದರ ಬಗ್ಗೆ ಒಂದು ಪ್ರಶ್ನೆ ಕೇಳಿದರೆ, ನಾನೇ ಎದ್ದು

ಹೋಗಲಿ, ಹೇಳಲೀ ಎಂದು ತಾವು ಅಂದುಬಿಟ್ಟರೆ, ನಮಗೆ ಎಷ್ಟು ಮನಸ್ಸಿಗೆ ನೋವಾಗುತ್ತದೆ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರಿಗೆ, ಮಾನ್ಯ ವಾಟಾಳ್ ನಾಗರಾಜ್‌ರವರ ಮೇಲೆ ಇದ್ದಷ್ಟು ಪ್ರೀತಿ ಯಾರ ಮೇಲೂ ಇಲ್ಲ.

ಶ್ರೀ ಎಸ್.ಡಿ. ಜಯರಾಂ : ಮಾನ್ಯ ವಾಟಾಳ್‌ರವರು ಎತ್ತಿರತಕ್ಕಂಥ ಪ್ರಶ್ನೆ ಬಹಳ ಗಂಭೀರವಾದುದು. ಇದರ ಬಗ್ಗೆ ದೀರ್ಘವಾಗಿ ಚರ್ಚೆ ಮಾಡಿ ತಿಳಿಸುತ್ತೇನೆ ಎಂದು ನಾನಾದರೂ ಸದಸ್ಯರಿಗೆ ತಿಳಿಸಲಿಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೇ, ಎಲ್ಲಾ ಸಂಪತ್ತಿಗೂ ಒಂದು ಮಿತಿಯಿರುತ್ತದೆ. ಖನಿಜ ಸಂಪತ್ತಿಗೂ ಒಂದು ಮಿತಿಯಿರುತ್ತದೆ. ಗಣಿ ಸಂಪತ್ತಿಗೂ ಒಂದು ಮಿತಿಯಿರುತ್ತದೆ. ನಾವು ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ಕಟ್ಟುತ್ತಿದ್ದೇವೆ, ಸೇತುವೆಗಳನ್ನು ಕಟ್ಟುತ್ತಿದ್ದೇವೆ. ಈಗ ಆ ಗ್ರಾನೈಟ್, ಈ ಗ್ರಾನೈಟ್ ಯಾವುದೂ ಉಳಿದುಕೊಂಡಿಲ್ಲ, ಎಲ್ಲವೂ ಹೋಗುತ್ತಿವೆ. ಅದೇನೇ ಹೋಗಲೀ, ಈ ಗ್ರಾನೈಟ್ ಫಾರ್ಮ್ ಆಗಬೇಕಾದರೆ ಎಷ್ಟು ಕೋಟಿ ವರ್ಷ ತೆಗೆದುಕೊಳ್ಳುತ್ತದೆ. ಈ ಕೋಲಾರದ ಗಣಿಗಳಿಗೆ ಎಷ್ಟು ವರ್ಷವಾಗಿದೆ ಅದು ಫಾರ್ಮ್ ಆಗುವುದಕ್ಕೆ ಎಷ್ಟು ವರ್ಷ ತೆಗೆದುಕೊಂಡಿದೆ? ಆ ಮಾಹಿತಿಗಳು ಏನಾದರೂ ಇದ್ದರೆ ಈ ಸಭೆಗೆ ದಯವಿಟ್ಟು ತಿಳಿಸಿ.

ಶ್ರೀ ಎಸ್.ಡಿ. ಜಯರಾಮ್ : ಅಧ್ಯಕ್ಷರೇ, ಮಾಹಿತಿ ಈಗ ಇಲ್ಲ, ಮುಂದಿನ ಸಲ ಮಾಹಿತಿಯನ್ನು ತಿಳಿಸುತ್ತೇನೆ.

ಶ್ರೀ ಹೆಚ್.ಎನ್. ನಂಜೇಗೌಡ : ಒಂದು ವಿಚಾರ ಸಭೆಯ ಗಮನಕ್ಕೆ ತರುತ್ತೇನೆ. ಲಾಲ್‌ಬಾಗ್‌ನಲ್ಲಿ ಇರುವ ಗ್ರಾನೈಟ್ ಫಾರ್ಮ್ ಆಗುವುದಕ್ಕೆ 4 ಕೋಟಿ ವರ್ಷವಾಗಿದೆ. ಈ ಗ್ರಾನೈಟ್ ಹತ್ತು ವರ್ಷದಲ್ಲಿ ಆಗುವಂಥದ್ದಲ್ಲ.

ರಾಜ್ಯದಲ್ಲಿನ ಸಣ್ಣ ಕೈಗಾರಿಕೆಗಳು

399 - ಶ್ರೀ ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಕರ್ನಾಟಕ ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳ ಸಂಖ್ಯೆ ಎಷ್ಟು?*

ಆ) *ರಾಜ್ಯದಲ್ಲಿ ರೋಗಗ್ರಸ್ಥ ಸಣ್ಣ ಕೈಗಾರಿಕೆಗಳ ಸಂಖ್ಯೆ ಎಷ್ಟು?*

ಇ) *ರಾಜ್ಯದಲ್ಲಿ ರೋಗಗ್ರಸ್ಥ ಸಣ್ಣ ಕೈಗಾರಿಕೆಗಳ ಮರು ಸ್ಥಾಪನೆಗೆ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮ ಏನು;*

ಈ) *1994-95ನೇ ಸಾಲಿನ ಸಣ್ಣ ಕೈಗಾರಿಕೆ ಉದ್ಯಮಗಳಿಗೆ ನೀಡಬೇಕಾದಂತಹ ಸಹಾಯಧನವೆಷ್ಟು, ಹಾಗೂ ಈವರೆಗೆ ಎಷ್ಟು ಸಹಾಯಧನ ಸಣ್ಣ ಕೈಗಾರಿಕಾ ಉದ್ಯಮಗಳಿಗೆ ಕೊಡಬೇಕಾಗಿರುತ್ತವೆ?*

ಶ್ರೀ ಎಸ್.ಎಂ. ನಬಿ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು) :

ಅ) ದಿನಾಂಕ 31-3-1985ಕ್ಕೆ ರಾಜ್ಯದಲ್ಲಿರುವ ಸಣ್ಣ ಕೈಗಾರಿಕೆಗಳ ಸಂಖ್ಯೆ 1,63,524.

ಆ) ಭಾರತೀಯ ರಿಸರ್ವ್ ಬ್ಯಾಂಕಿನ ಮಾಹಿತಿಯ ಪ್ರಕಾರ ರಾಜ್ಯದಲ್ಲಿ 31-3-94ರ ಅಂತ್ಯಕ್ಕೆ ಒಟ್ಟು 13,950 ರೋಗಗ್ರಸ್ಥ ಕೈಗಾರಿಕೆಗಳಿವೆ.

ಇ) ರೋಗಗ್ರಸ್ಥ ಸಣ್ಣ ಕೈಗಾರಿಕೆಗಳ ಮರು ಸ್ಥಾಪನೆಗೆ ಈಗಾಗಲೇ 1988 ರಿಂದ ಸಮಿತಿಯೊಂದಿದ್ದು ಕಾರ್ಯ ನಿರ್ವಹಿಸುತ್ತಿದೆ. ಈ ಸಮಿತಿ ಇತ್ತೀಚಿನ ವರದಿಯಂತೆ

317 ಘಟಕಗಳಿಗೆ ಬೀಜಧನ ಸಹಾಯ ಮಂಜೂರಾತಿ ನೀಡಿದೆ. ಉತ್ತೇಜಕರ (ಪ್ರೊಮೋಟರ್ಸ್) ಶೇಕಡ 50ರ ಪಾಲಿಗೆ ಎದುರಾಗಿ ಬೀಜಧನ ಸಾಲದ ಮೊತ್ತ ರೂ. 50,000.00 ಮೀರದಂತೆ ನೀಡಲಾಗುತ್ತಿದೆ.

ಈ) 1994-95ನೇ ಸಾಲಿಗೆ ಸಣ್ಣ ಕೈಗಾರಿಕಾ ಉದ್ಯಮಗಳಿಗೆ ನೀಡಬೇಕಾದ ಸಹಾಯಧನ ರೂ. 68.12 ಕೋಟಿ. ಬಾಕಿ ನೀಡಬೇಕಾಗಿರುವ ಸಹಾಯಧನ ಮೊತ್ತ ರೂ. 33.12 ಕೋಟಿಗಳು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ಈ ರಾಜ್ಯದಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳು ಇರುವುದು ಎಷ್ಟು ಎಂದು ಕೇಳಿದ್ದಕ್ಕೆ 1,63,524 ಎಂದು ಹೇಳಿದ್ದಾರೆ. ರೋಗಗ್ರಸ್ಥ ಕೈಗಾರಿಕೆಗಳು ಎಷ್ಟು ಎಂದು ಕೇಳಿರುವುದಕ್ಕೆ 13,950 ಎಂದು ಹೇಳಿದ್ದಾರೆ. ರೋಗಗ್ರಸ್ಥ ಕೈಗಾರಿಕೆಗಳ ಮರು ಸ್ಥಾಪನೆಗಾಗಿ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳಿರುವುದಕ್ಕೆ ಕೇವಲ 317 ಘಟಕಗಳಿಗೆ ಬೀಜ ಧನ ಸಹಾಯವನ್ನು ಒದಗಿಸಿಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಅಂದರೆ 13950 ರೋಗಗ್ರಸ್ಥ ಕೈಗಾರಿಕೆಗಳು ಇರುವಂಥ ಈ ಸಂದರ್ಭದಲ್ಲಿ ಕೇವಲ 317 ಘಟಕಗಳಿಗೆ ಇವರು ಸಹಾಯ ಧನವನ್ನು ಮಾಡಿ ಮರುಸ್ಥಾಪನೆಗೆ ಅವಕಾಶ ಮಾಡಿಕೊಟ್ಟಿದ್ದರೆ ಇನ್ನು ಉಳಿದಂಥ ಸಣ್ಣ ಕೈಗಾರಿಕೆಗಳ ಕಥೆ ಏನು? ಇದರ ಜೊತೆಗೆ ಇಷ್ಟೊಂದು ಪ್ರಮಾಣದಲ್ಲಿ ಕೈಗಾರಿಕೆಗಳು ರೋಗಗ್ರಸ್ಥ ಆಗುತ್ತಿರುವುದಕ್ಕೆ ಕಾರಣ ಏನು? ಕೇವಲ ವಿದ್ಯುತ್‌ನ ಕೊರತೆಯಿಂದ ಏನಾದರೂ ರೋಗಗ್ರಸ್ಥವಾಗುತ್ತಿದೆಯೋ ಅಥವಾ ಇವರ ಬೇಕಾದಂಥ ಸಹಾಯಧನ ಸಮಯಕ್ಕೆ ಸರಿಯಾಗಿ ಸಿಗದೇ ಈ ಕೈಗಾರಿಕೆಗಳು ರೋಗಗ್ರಸ್ಥವಾಗುತ್ತಿವೆಯೋ ಅಥವಾ ಯಾವುದೇ ಒಂದು ಆರ್ಥಿಕ ನೆರವು ನೀಡುವಂಥ ಸಂಸ್ಥೆಗಳಿಂದ ಋಣ ದೊರಕಿಸಿಕೊಡುವುದರಲ್ಲಿ ವಿಳಂಬವಾಗಿ ಈ ಕೈಗಾರಿಕೆಗಳು ರೋಗಗ್ರಸ್ಥವಾಗುತ್ತಿವೆಯೋ ಎನ್ನುವುದರ ಬಗ್ಗೆ ಉತ್ತರ ನೀಡಬೇಕಾಗಿ ತಮ್ಮ ಮುಖಾಂತರ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎನ್.ಎಂ. ನಬಿ : ಸನ್ಮಾನ್ಯ ಸಭಾಧ್ಯಕ್ಷರೇ, ಸನ್ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆಗೆ ಉತ್ತರ ಹೇಳುವುದಾದರೆ, ನಮ್ಮಲ್ಲಿ ರೋಗಗ್ರಸ್ಥ ಕೈಗಾರಿಕೆಗಳನ್ನು ಗುರುತಿಸುವುದಕ್ಕೆ ಈಗ ಸದ್ಯಕ್ಕೆ ನನ್ನಲ್ಲಿರತಕ್ಕಂಥದ್ದು ಆರ್.ಬಿ.ಐ.ನಿಂದ ಮಾಡಿರತಕ್ಕಂಥ ಸರ್ವೆ ಮೂಲಕ ನನಗೆ ಗೊತ್ತಾಗಿರತಕ್ಕಂಥ ಸಂಖ್ಯೆಯನ್ನು ಅವರಿಗೆ ಕೊಟ್ಟಿದ್ದೇನೆ. ಇನ್ನು ನಾನು ಪ್ರವಾಸದಲ್ಲಿದ್ದಾಗ ಹಾಗೂ ನಮ್ಮ ಕೈಗಾರಿಕಾ ಹಾಗೂ ವಾಣಿಜ್ಯ ಇಲಾಖೆಯವರಿಗೆ ಕೂಡ ಆಯಾ ಜಿಲ್ಲೆಯಲ್ಲಿ ರೋಗಗ್ರಸ್ಥ ಕೈಗಾರಿಕೆಗಳ ಬಗ್ಗೆ ತಾಲ್ಲೂಕು ಮಟ್ಟದಲ್ಲಿ ಇರತಕ್ಕಂಥ ಪ್ರಮೋಶನಲ್ ಆಫೀಸರ್ಸ್‌ಗಳಿಗೆ ಹೇಳಿ ಅಲ್ಲಿ ರೋಗಗ್ರಸ್ಥ ಸಣ್ಣ ಕೈಗಾರಿಕೆಗಳು ಎಷ್ಟಿವೆ, ಒಟ್ಟಾಗಿ ಸಣ್ಣ ಕೈಗಾರಿಕೆಗಳು ಎಷ್ಟಿವೆ ಮತ್ತು ರೋಗಗ್ರಸ್ಥ ಕೈಗಾರಿಕೆಗಳಾಗುವುದಕ್ಕೆ ಏನು ಕಾರಣಗಳು ಎಂಬ ಬಗ್ಗೆ ಮಾಹಿತಿಗಳನ್ನು ನನಗೆ ಒದಗಿಸಬೇಕು ಎಂದು ಹೇಳಿದ್ದೇನೆ. ಇನ್ನು ಸ್ವಲ್ಪ ದಿನಗಳಲ್ಲಿ ಆ ಮಾಹಿತಿಗಳು ನಮಗೆ ಲಭ್ಯವಾಗುತ್ತಿವೆ. ಅದು ಬಂದನಂತರ ಈ ರೋಗಗ್ರಸ್ಥ ಕೈಗಾರಿಕೆಗಳು ಯಾವುವು ಇವೆ ಅವುಗಳಿಗೆ ಯಾವ ರೀತಿಯಲ್ಲಿ ಧನಸಹಾಯವನ್ನು ಮಾಡಿ ಪುನಶ್ಚೇತನಗೊಳಿಸುವುದಕ್ಕೆ ಏನು ಅನುಕೂಲ ಬೇಕೋ ಅದನ್ನೆಲ್ಲಾ ಸರ್ಕಾರ ಮಾಡುವುದಕ್ಕೆ ತೀರ್ಮಾನ ತೆಗೆದುಕೊಳ್ಳುತ್ತಿದೆ ಎನ್ನತಕ್ಕಂಥ ಮಾತನ್ನು ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮ್ಮದ್ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಹೇಳಿರುವಂಥ ಉತ್ತರದಿಂದ ನನಗೆ ಸಮಾಧಾನವಾಗಿಲ್ಲ. ಕಾರಣವೇನೆಂದರೆ, ಈ ರಾಜ್ಯದಲ್ಲಿ ಕೈಗಾರಿಕಾ ಉದಾರ ನೀತಿಯನ್ನು ಹಿಂದಿನ ಸರ್ಕಾರ ಘೋಷಿಸಿ

ಮಾಡಿರತಕ್ಕಂಥ ಸಂದರ್ಭದಲ್ಲಿ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ 'ಸಿಂಗಲ್ ವಿಂಡೋ ಏಜೆನ್ಸಿ' ಎಂದು ಹೇಳಿ ಸ್ಥಾಪನೆ ಮಾಡಿರುವಂಥದ್ದು. ಆ 'ಸಿಂಗಲ್ ವಿಂಡೋ ಏಜೆನ್ಸಿ'ಗೆ ಎಷ್ಟು ರೋಗಗ್ರಸ್ಥ ಕೈಗಾರಿಕೆಗಳು ಇವೆ ಆ ಕೈಗಾರಿಕೆಗಳವರು ಅರ್ಜಿಯನ್ನು ಹಾಕಿ ಬೇಕಾದಂಥ ಸಹಾಯವನ್ನು ಪಡೆಯುವುದರ ಬಗ್ಗೆ ಸರ್ಕಾರದವರು ನೇರವಾದ ಆದೇಶ ಹೊರಡಿಸಿದ್ದರು. ಅದರ ಬಗ್ಗೆ ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ, ನಾವು ಮುಂದಿನ ದಿನಗಳಲ್ಲಿ ಆದೇಶ ನೀಡಿದ್ದೇವೆ, ಆ ಮಾಹಿತಿ ನಮ್ಮ ಹತ್ತಿರ ಲಭ್ಯವಿಲ್ಲ ಅಂತ ಹೇಳಿ, ಇವೊತ್ತು ನಮಗೆ ಕೇಂದ್ರೀಯ ರಿಸರ್ವ್ ಬ್ಯಾಂಕ್‌ನವರು ಆ ಮಾಹಿತಿಯನ್ನು ಕೊಡಬೇಕು ಎಂದು ಹೇಳಿದರೆ, ಇದು ವಿಷಾದನೀಯ ಸಂಗತಿಯಾಗುತ್ತದೆ. ಇದರ ಜೊತೆಗೆ ತಮ್ಮ ಮೂಲಕ ಅವರನ್ನು ನಾನು ಪ್ರಶ್ನೆ ಮಾಡುವುದೇನೆಂದರೆ, 1994-95ನೇ ಸಾಲಿನಲ್ಲಿ ಸಣ್ಣ ಕೈಗಾರಿಕೆಗಳಿಗೆ ನೀಡಬೇಕಾದಂಥ ಸಹಾಯ ಧನ 68 ಕೋಟಿ 12 ಲಕ್ಷ ರೂಪಾಯಿಗಳು ಅದರಲ್ಲಿ ಈಗಾಗಲೇ ನಾವು 33.12 ಲಕ್ಷ ರೂಪಾಯಿಗಳನ್ನು ಕೊಟ್ಟಾಗಿದೆ ಎಂದು ಹೇಳಿದ್ದಾರೆ? ಯಾವ ವರ್ಷದಲ್ಲಿ ತಾವು ಈ 33.12 ಕೋಟಿ ರೂಪಾಯಿಗಳನ್ನು ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಸಹಾಯಧನದ ರೂಪದಲ್ಲಿ ಒದಗಿಸಿಕೊಟ್ಟಿದ್ದೀರಿ ಎನ್ನುವುದರ ಬಗ್ಗೆ ದಯಮಾಡಿ ಮಾಹಿತಿಯನ್ನು ಕೊಡಬೇಕು ಎಂದು ಕೇಳುತ್ತಿದ್ದೇನೆ.

ಶ್ರೀ ಎನ್.ಎಂ. ನಬಿ : ಮಾನ್ಯ ಸಭಾಧ್ಯಕ್ಷರೇ, ನಾನು ಅವರಿಗೆ ರೋಗಗ್ರಸ್ಥ ಸಣ್ಣ ಕೈಗಾರಿಕೆಗಳನ್ನು ಗುರುತಿಸತಕ್ಕಂಥದ್ದರ ಬಗ್ಗೆ ಹೇಳಿದೆನೆ ಹೊರತು ಅದಕ್ಕೆ ನಾವು ಸಹಾಯಧನವನ್ನು ಕೊಡುತ್ತಿಲ್ಲ ಎನ್ನತಕ್ಕಂಥ ಮಾತನ್ನು ನಾನು ಹೇಳಲಿಲ್ಲ. ಈಗಾಗಲೇ ರೋಗಗ್ರಸ್ಥವಾಗಿರತಕ್ಕಂಥ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ 50 ಸಾವಿರಕ್ಕೆ ಮೀರದ ಹಾಗೆ ಹಣ ಕೊಡುವುದಕ್ಕೆ ಮತ್ತು ಅದನ್ನು ರಿಶೆಡ್ಯೂಲ್ ಮಾಡಿ ಕೊಡತಕ್ಕಂಥ ಪದ್ಧತಿ ಜಾರಿಯಲ್ಲಿದೆ. ಈ ಹಣ ಅವರಿಗೆ ಬಹಳ ಕಡಿಮೆಯಾಗುತ್ತದೆ ಎಂದು ನಾವು ತಿಳಿದು ಇದನ್ನು ಹೆಚ್ಚು ಮಾಡಬೇಕಾದ ಪರಿಸ್ಥಿತಿ ಇದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದ್ದು ಈಗ ಅದರ ಬಗ್ಗೆ ಒಂದು ಸಮಿತಿಯನ್ನು ಕೂಡ ಮಾಡುತ್ತಿದ್ದೇವೆ. ಈಗ ಅವರಿಗೆ ಒಂದೂವರೆ ಲಕ್ಷದವರೆಗೆ ಕೈಗಾರಿಕೆಯನ್ನು ಪುನಃಶ್ಚೇತನಗೊಳಿಸಲಿಕ್ಕೆ ಕೊಡಬೇಕು ಎಂಬುದರ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುತ್ತಿದ್ದೇವೆ. ಆಮೇಲೆ ಮಾನ್ಯ ಸದಸ್ಯರು ಸಹಾಯ ಧನವನ್ನು ಕೊಡುವುದರ ಬಗ್ಗೆ ಹೇಳುತ್ತಾ, 31-12-94ಕ್ಕೆ ನಮ್ಮಲ್ಲಿ 2600 ಘಟಕಗಳು ಇದ್ದವು. 30.40 ಕೋಟಿಗಳಿತ್ತು. ಈಗ 1-1-95 ರಿಂದ 31-08-95ರ ವರೆಗೆ ನಾವು ಈಗಾಗಲೇ 26.5 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಈಗ ಸದ್ಯಕ್ಕೆ ಜೂನ್ 95 ರಿಂದ ನಮ್ಮಲ್ಲೀಗ ಇರತಕ್ಕಂಥದ್ದು 1.134 ಘಟಕಗಳಿಗೆ ನಾವು ಈಗ ಕೊಡಬೇಕಾಗಿರತಕ್ಕಂಥ ಸಹಾಯಧನ 14.31 ಕೋಟಿ ರೂಪಾಯಿಗಳು. ಅದನ್ನು ಇನ್ನು 5-6 ತಿಂಗಳಲ್ಲಿ ಪೂರ್ಣವಾಗಿ ಕೊಟ್ಟು ಅದನ್ನು ರೆಗ್ಯುಲರೈಸ್ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಆಶ್ರಯ ಯೋಜನೆಯಲ್ಲಿ ನಡೆದ ಅವ್ಯವಹಾರ

629 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಆಶ್ರಯ ಯೋಜನೆಯಲ್ಲಿ ಅವ್ಯವಹಾರದ ಬಗ್ಗೆ ಸಮಿತಿ ತನಿಖೆ ವರದಿ ನೀಡಿದ್ದು, ಈ ಬಗ್ಗೆ ಕೈಗೊಳ್ಳಲಾಗಿರುವ ಕ್ರಮಗಳಾವುವು?

ಆ) ಅವ್ಯವಹಾರದ ಬಗ್ಗೆ ಸಲ್ಲಿಸಿರುವ ವರದಿಯನ್ನು ಸರ್ಕಾರ ಅಂಗೀಕರಿಸಿದೆಯೇ;

ಇ) ಅಂಗೀಕರಿಸಿದ್ದಲ್ಲಿ ಅಪರಾಧಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡದಿರಲು ಕಾರಣಗಳೇನು?

ಶ್ರೀ ಬಸವರಾಜ ರಾಯರೆಡ್ಡಿ (ವಸತಿ ರಾಜ್ಯ ಸಚಿವರು) :

ಅ) ವರ್ತೂರು ವಿಧಾನ ಸಭಾ ಕ್ಷೇತ್ರದಲ್ಲಿನ ಹೂಡಿ ಗ್ರಾಮದ ಸ.ನಂ. 145, 149, 150 ಮತ್ತು 152 ರರಲ್ಲಿ ಒಟ್ಟು 70 ಎಕರೆ ಭೂಮಿಯಲ್ಲಿ 1383 ನಿವೇಶನಗಳನ್ನು ಅಭಿವೃದ್ಧಿ ಪಡಿಸಿ ಆಶ್ರಯ ಯೋಜನೆಯಡಿಯಲ್ಲಿ ಹಂಚಿಕೆ ಮಾಡಲಾಗಿದ್ದುದನ್ನು ವಿಭಾಗಾಧಿಕಾರಿಗಳ ವಿಚಾರಣೆಯ ವರದಿಯ ಮೇರೆಗೆ ಎಲ್ಲಾ ನಿವೇಶನ ಹಂಚಿಕೆಗಳನ್ನು ಸರ್ಕಾರಿ ಆದೇಶ ಸಂ. ವಸಇ 217 ಪಿಹೆಚ್‌ಎಸ್ 93, ದಿನಾಂಕ: 10-1-1995ರಲ್ಲಿ ರದ್ದುಪಡಿಸಿದೆ. ಆಶ್ರಯ ಯೋಜನೆಯಡಿ ಕರ್ತವ್ಯ ಲೋಪ ಎಸಗಿರುವ ಕಂದಾಯ ಅಧಿಕಾರಿಗಳನ್ನು ಸೇವೆಯಿಂದ ಅಮಾನತ್ತುಗೊಳಿಸಿ ಕಂದಾಯ ಇಲಾಖೆ ಸರ್ಕಾರಿ ಆದೇಶ ನಂ. ಆರ್‌ಡಿ :7:ಎಫ್‌ಇ:95 ದಿನಾಂಕ: 9-2-1995ರಲ್ಲಿ ಹೊರಡಿಸಲಾಗಿತ್ತು. ಸದರಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಬೇಕೆಂದು ಕಂದಾಯ ಇಲಾಖೆಯನ್ನು ಕೋರಲಾಗಿದೆ.

ಆ) ಹೌದು. ಅಂಗೀಕರಿಸಿದೆ.

ಇ) ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡುವಂತೆ ಕಂದಾಯ ಇಲಾಖೆಯನ್ನು ಕೋರಲಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸರ್ಕಾರವೇ ಆಶ್ರಯ ಯೋಜನೆಯಲ್ಲಿ ಲೂಟಿ ಮಾಡುವುದಕ್ಕೆ ಅವಕಾಶ ಮಾಡಿಕೊಡುವುದು ನಂತರ ಜೀರ್ಣ ಮಾಡಿಕೊಳ್ಳಲಿಕ್ಕೂ ಅವಕಾಶ ಮಾಡಿಕೊಡುವಂಥಾಗಿದೆ. ನೋಡಿ, ನೀವು ಉತ್ತರ ಕೊಡುತ್ತಾ 'ಆಶ್ರಯ' ಯೋಜನೆಯಲ್ಲಿ ವರ್ತೂರು ಹೋಬಳಿಯಲ್ಲಿ ಕರ್ತವ್ಯ ಲೋಪ ಮಾಡಿರುವಂಥವರ ಬಗ್ಗೆ ವಿಭಾಗಾಧಿಕಾರಿಗಳಿಂದ ತನಿಖೆಯನ್ನು ಮಾಡಿಸಿದ್ದೀರಿ, ಆದರೆ ಅವರನ್ನು ಅಮಾನತ್ತುಗೊಳಿಸುವುದಕ್ಕೆ 09-02-95ರಲ್ಲಿ ಆದೇಶ ಕೊಟ್ಟಿದ್ದೀರಿ. ಸ್ವಾಮಿ ಈಗಾಗಲೇ 8 ತಿಂಗಳು ಆಯಿತು. ಕಂದಾಯ ಇಲಾಖೆಯವರು ಅವರನ್ನು ಅಮಾನತ್ತು ಗೊಳಿಸುವುದು ಬೇಡವೇ? ನೀವು ವರದಿಯನ್ನು ತರಿಸಿಕೊಂಡು ಮಾಡಿದ ಮೇಲೆ ಅವರನ್ನು ಅಮಾನತ್ತುಗೊಳಿಸುವುದು ಬೇಡವೇ? ಎರಡನೆಯದಾಗಿ ಉತ್ತರದಲ್ಲಿ ಕೇವಲ ವರ್ತೂರು ವಿಧಾನಸಭಾ ಕ್ಷೇತ್ರದ ಬಗ್ಗೆ ಮಾತ್ರ ಹೇಳಿದ್ದೀರಿ, ಇನ್ನು ಎಲ್ಲೆಲ್ಲಿ ಈ ರೀತಿ ತನಿಖೆಯನ್ನು ಮಾಡಿಸಿದ್ದೀರಿ? ಇದೇ ಹಿನ್ನೆಲೆಯಲ್ಲಿ ಶ್ರೀ ಜಿ.ವಿ. ವಿಶ್ವನಾಥ್ ಸಮಿತಿ ಹೌಸಿಂಗ್ ಬೋರ್ಡ್ ಹಗರಣದ ಬಗ್ಗೆ ಸೈಟ್‌ಗಳ ಬಗ್ಗೆ ವರದಿಯನ್ನು ಕೊಟ್ಟಿದ್ದಾರಲ್ಲ ಅದು ಯಾವಾಗ ಕೈ ಸೇರಿತು. ಅದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಾ? ಇದನ್ನೆಲ್ಲಾ ಸದನದ ಮುಂದಿಡಬಹುದೇ?

ಶ್ರೀ ಆರ್. ರೋಶನ್ ಬೇಗ್ (ವಸತಿ ಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೇ, ಈ 'ಆಶ್ರಯ' ಸ್ಕೀಮ್‌ನಡಿಯಲ್ಲಿ ಏನು ಗೋಲ್‌ಮಾಲ್ ನಡೆದಿದೆ ಅದರ ಬಗ್ಗೆ ಈಗಾಗಲೇ ಎನ್‌ಕ್ವೈರಿಯನ್ನು ಮಾಡಿಸಿದ್ದೇವೆ. ಆ ಎನ್‌ಕ್ವೈರಿ ರಿಪೋರ್ಟ್ ಬಂದಿದೆ. ಅದರ ಪರವಾಗಿ ಈಗಾಗಲೇ ಕ್ರಮವನ್ನು ತೆಗೆದುಕೊಂಡಿದ್ದೇವೆ. About five Tahsildars in the city of Bangalore were suspended, but unfortunately ಅವರು CAT ಗೆ ಹೋಗಿ ಮತ್ತೆ ವಾಪಸ್ಸು ಬಂದರು. ಈಗ ಅಪಾರ್ಟ್ ಫ್ರಮ್ ವರ್ತೂರ್ ಈ ಸಿ.ಓ.ಡಿ. ಎನ್‌ಕ್ವೈರಿಯನ್ನು ಉತ್ತರಹಳ್ಳಿ ವಿಧಾನ ಸಭಾ ಕ್ಷೇತ್ರದಲ್ಲಿ ಮಾಡಿದ್ದೇವೆ. ಇದರಲ್ಲಿ ಸುಮಾರು 202 ಹಳ್ಳಿಗಳಲ್ಲಿ, ಕೆಂಗೇರಿ, ಯಶವಂತ್‌ಪುರ್, ಉತ್ತರಹಳ್ಳಿ, ಬೇಗೂರು, ಇಂಥ ಕಡೆಯೆಲ್ಲಾ ಫ್ರೀ ಸೈಟ್ಸ್ ಡಿಸ್ಟ್ರಿಬ್ಯೂಶನ್‌ನಲ್ಲಿ ಸರಿಯಾದ ರೀತಿಯಲ್ಲಿ ವಿತರಣೆಯಾಗಿಲ್ಲವೆಂದು ವರದಿ ಬಂದಿದೆ. ಆ ಪ್ರಕಾರ ಅಲಾಟ್‌ಮೆಂಟ್ ಎಲ್ಲವನ್ನೂ ಕ್ಯಾನ್ಸಲ್ ಮಾಡಿದ್ದೇವೆ. ಅಲಾಟ್‌ಮೆಂಟ್‌ನ್ನು ಕ್ಯಾನ್ಸಲ್ ಮಾಡಿ ಯಾರು ಯಾರು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದೇವೆಯೋ ಅಂಥವರ ಮೇಲೆ ಕ್ರಿಮಿನಲ್

ಕೇಸ್ ಹಾಕುವುದಕ್ಕೆ ಕಂದಾಯ ಮಂತ್ರಿಗಳಿಗೆ ರೆಫರ್ ಮಾಡಿದ್ದೇವೆ. ಇದಕ್ಕೆ ಕಂದಾಯ ಮಂತ್ರಿಗಳು ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಕಂದಾಯ ಮಂತ್ರಿಗಳಿಗೆ ರೆಫರ್ ಮಾಡಿ ಈಗಾಗಲೇ 8 ತಿಂಗಳಾಗಿದೆ. ಅದಕ್ಕೆ ನಾನು ಹೇಳಿದ್ದುದು, ಇದರಿಂದ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುವುದರಲ್ಲಿ ಡಿಲೇ ಆಗುತ್ತದೆ. ಎರಡನೆಯದು, ತಾವು ಬೇರೆ ಬೇರೆ ಅವ್ಯವಹಾರ ನಡೆದಿದೆಯೆಂದು ಹೇಳಿದಿರಿ. ನಾನು ನೇರವಾಗಿ ನಿಮ್ಮನ್ನು ಕೇಳಿದ್ದೇನೆ. ಇದೇ 'ಆಶ್ರಯ' ಯೋಜನೆಗೆ ಸಂಬಂಧಪಟ್ಟಂತೆ 'ಜಿ.ವಿ. ವಿಶ್ವನಾಥ್ ಸಮಿತಿ' ವರದಿಯನ್ನು ಕೊಟ್ಟಿದೆ. ಆ ವರದಿ ನಿಮ್ಮ ಕೈಗೆ ಸೇರಿದೆಯೋ? ಮತ್ತು ಯಾವಾಗ ನಿಮ್ಮ ಕೈ ಸೇರಿದೆ? ಅದನ್ನು ನೀವು ಈ ಸದನದ ಮುಂದೆ ಇಡುವುದಕ್ಕೆ ತೊಂದರೆ ಏನಾಗಿದೆ? ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದು ನೇರವಾದ ಒಂದು ಪ್ರಶ್ನೆ. ಎರಡನೆಯದಾಗಿ ಈ 'ಆಶ್ರಯ' ಯೋಜನೆಯಡಿಯಲ್ಲಿ ಮನೆ ಕಟ್ಟುವುದಕ್ಕೆ ಏನು ಅಡ್ವಾನ್ಸ್‌ನ್ನು ಕಂಟ್ರಾಕ್ಟರಿಗೆ ಕೊಟ್ಟಿದ್ದೀರೋ ಅದೆಲ್ಲಾ ಲೂಟಿಯಾಯಿತು. ಆಮೇಲೆ ಸಿ.ಓ.ಡಿ.ಯಿಂದ ತನಿಖೆಯನ್ನು ಮಾಡಿಸಿದಿರಿ. ಸಂಪೂರ್ಣ ಸಿ.ಓ.ಡಿ. ತನಿಖೆ ನಿಮ್ಮ ಕೈಗೆ ಬಂದಿದೆಯೋ? ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದು ನನ್ನ ಎರಡನೆಯ ಪ್ರಶ್ನೆ. ಮೂರನೆಯದಾಗಿ, ಶಾಸಕರ ಅಧ್ಯಕ್ಷತೆಯಲ್ಲಿ ಈ ಸಮಿತಿಯನ್ನು ಮಾಡಿ ಕಾರ್ಯಕಲಾಪ ನಡೆಯುತ್ತಿದ್ದ. ಇದರ ಮೂಲಕ ಸೈಟ್ ಹಂಚುವ ಕಾರ್ಯಕ್ರಮ ನಡೆಯುತ್ತಿದೆ. 20ನೇ ಡಿಸೆಂಬರ್‌ನಲ್ಲಿ ತಾವು ಅಧಿಕಾರಕ್ಕೆ ಬಂದಮೇಲೆ ಅದನ್ನು ಆ ದಿನವೇ ರದ್ದುಮಾಡಿಬಿಟ್ಟಿರಿ.

ಯಾರನ್ನಾದರೂ ಅಧ್ಯಕ್ಷತೆಯಲ್ಲಿ ಮಾಡಿಕೊಳ್ಳಿ. ಆ ಒಂದು ಸಮಿತಿಯನ್ನು ರಚನೆ ಮಾಡಿ ಬಡವರಿಗೆ ಸೈಟುಗಳನ್ನು ಹಂಚತಕ್ಕ ಕೆಲಸವನ್ನು ಮಾಡುತ್ತೀರೋ?

ಶ್ರೀ ಆರ್. ರೋಷನ್ ಬೇಗ್ : ಗೌರವಾನ್ವಿತ ವಿರೋಧ ಪಕ್ಷದ ನಾಯಕರು ಏನು ಹೇಳಿದ್ದಾರೆ. ಆ ಬಗ್ಗೆ ವಿಶ್ವನಾಥನ್‌ರವರ ಸಮಿತಿಯ ವರದಿ ಬಂದಿದೆ. ಅವರು ಏನು ರೆಕಮೆಂಡೇಷನ್ಸ್ ಮಾಡಿದ್ದಾರೆ, ಅದರ ಬಗ್ಗೆ ಎಕ್ಸಾಮಿನ್ ಮಾಡುತ್ತಿದ್ದೇವೆ. ಸಿ.ಓ.ಡಿ. ವರದಿ ಉತ್ತರ ಹಳ್ಳಿ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಬಂದಿದೆ. ಆ ಸಿ.ಓ.ಡಿ. ವರದಿಯ ಆಧಾರವಾಗಿ action is being taken against the concerned officials.

ಶ್ರೀ ಬಿ.ಎಸ್. ಯಡಿಯೂರಪ್ಪ : ಉತ್ತರಹಳ್ಳಿ ಬಗ್ಗೆ ನಾನು ಕೇಳಿಲ್ಲ. ಹೌಸಿಂಗ್ ಬೋರ್ಡಿನಲ್ಲಿ ಈ ಆಶ್ರಯ ಯೋಜನೆಯಡಿಯಲ್ಲಿ ಮನೆ ಕಟ್ಟುವುದಕ್ಕೆ ದುಡ್ಡು ಕೊಟ್ಟಿದ್ದಿರಿ, ಕಂಟ್ರಾಕ್ಟರ್ ಅದನ್ನು ಲೂಟಿ ಮಾಡಿ ತಿಂದರು. ಅದರ ಬಗ್ಗೆ ಸಿ.ಓ.ಡಿ ವಿಚಾರಣೆಗೆ ಹಾಕಿದ್ದಿರಿ, ಸಂಪೂರ್ಣ ವರದಿ ನಿಮ್ಮ ಕೈಗೆ ಬಂದಿದೆಯೋ? ಬಂದಿದ್ದರೆ ಯಾರ್ಯಾರ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ? ಇದು ಒಂದು. ಎರಡನೆಯದು ಆಶ್ರಯ ಯೋಜನೆಯಡಿಯಲ್ಲಿ ಬಡವರಿಗೆ ಸೈಟುಗಳನ್ನು ಹಂಚುವ ಸಲುವಾಗಿ ಶಾಸಕರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಲಾಗಿತ್ತು. ಅದನ್ನು ರದ್ದು ಮಾಡಿಬಿಟ್ಟಿದ್ದೀರಿ. ಮುಖ್ಯಮಂತ್ರಿಗಳೂ ಇಲ್ಲೇ ಇದ್ದಾರೆ. 8 ತಿಂಗಳು, 9 ತಿಂಗಳಿಂದ ಅದರ ಪ್ರೋಗ್ರೆಸ್ ನಿಂತು ಹೋಯಿತು. ಈಗಲಾದರೂ ಒಂದು ನಿರ್ದಿಷ್ಟವಾದ ದಿನಾಂಕ, ಸಮಿತಿ ರಚನೆ ಮಾಡಿ, ಬಡವರಿಗೆ ಸೈಟು ಹಂಚುವಂತಹ ಕೆಲಸವನ್ನು ಪ್ರಾರಂಭ ಮಾಡುತ್ತೀರೋ?

ಶ್ರೀ ಆರ್. ರೋಷನ್ ಬೇಗ್ : ಆದಷ್ಟು ಬೇಗ ಪ್ರಾರಂಭ ಮಾಡುತ್ತೇವೆ. ಸಿ.ಓ.ಡಿ. ವರದಿ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಕೇಳಿದ್ದಾರೆ. ಆ ಸಿ.ಓ.ಡಿ. ವರದಿ ಇನ್ನೂ ಬಂದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದು ಸರಿಯಿಲ್ಲ, ರೆಕಾರ್ಡಿಗೆ ತಪ್ಪು ಹೋಗುತ್ತದೆ. ಏನು ಸ್ವಾಮಿ ಹೀಗಾದರೆ, ಸಂಬಂಧಪಟ್ಟ ಮಂತ್ರಿಗಳು ಇಲ್ಲ.

ಅಧ್ಯಕ್ಷರು : ಒಂದು ಕೆಲಸ ಮಾಡೋಣ. I will with hold this question. ಮಂತ್ರಿಗಳು ದೆಹಲಿಗೆ ಸಮಾವೇಶಕ್ಕೆ ಹೋಗಿದ್ದಾರೆ. ಅವರು ನನ್ನ ಪರ್ಮಿಷನ್ ತೆಗೆದುಕೊಂಡು ಹೋಗಿದ್ದಾರೆ. ಅವರು ಬಂದ ಮೇಲೆ we can take it up.

ಶ್ರೀ ಬಿ.ಎಸ್. ಯಡಿಯೂರಪ್ಪ : ಆಗಬಹುದು.

ಪ್ರಶ್ನೋತ್ತರ ವೇಳೆ ಮುಗಿಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ, ವ್ಯವಹಾರಗಳ ಸಚಿವರು) : 8ನೇ ಸೆಪ್ಟೆಂಬರ್ 1995ರ 18ನೇ ಪಟ್ಟಿಯಲ್ಲಿ ಲಿಖಿತ ಮೂಲಕ ಉತ್ತರಿಸುವ 63ಪ್ರಶ್ನೆಗಳ ಪೈಕಿ 19ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಕಾರವಾರ - ಅಂಕೋಲ ಪಟ್ಟಣಗಳಿಗೆ ನೀರು ಪೂರೈಸುವ ಬಗ್ಗೆ

1487 - ಶ್ರೀ ವಸಂತ್ ಅಸ್ನೋಟಿಕರ್ (ಕಾರವಾರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಾರವಾರ - ಅಂಕೋಲ ಪಟ್ಟಣಗಳಿಗೆ 1993-94 ಹಾಗೂ 1994-95 ಮತ್ತು 1995 ಜುಲೈ ಅಂತ್ಯದವರೆಗೆ ರಾಜ್ಯ ನಗರ ನೀರು ಸರಬರಾಜು ಮಂಡಲಿ ನೀರು ಸರಬರಾಜು ಮಂಡಲಿ ನೀರು ಪೂರೈಸಿದ ದಿನಗಳೆಷ್ಟು ಹಾಗೂ ನೀರಿನ ಪ್ರಮಾಣವೆಷ್ಟು?

ಆ) ಈ ಎರಡು ಪಟ್ಟಣಗಳಿಗೆ ಸಾಕಷ್ಟು ನೀರು ಪೂರೈಸಲು ತೊಂದರೆ ಏನು?

ಇ) ತೀರಾ ದುಸ್ಥಿತಿಯಲ್ಲಿರುವ ಪೈಪ್‌ಲೈನ್ ಬದಲಾವಣೆ ಮಾಡಲು ಸರ್ಕಾರದವರು ಕ್ರಮಕೈಗೊಳ್ಳುವರೆ?

ಈ) ನೀರೆತ್ತುವ ಕೇಂದ್ರದಲ್ಲಿ ಸಂಭವಿಸುವ ವಿದ್ಯುತ್ ವ್ಯತ್ಯಯಕ್ಕೆ ಬದಲಿ ವ್ಯವಸ್ಥೆ ಕೈಗೊಳ್ಳಲಾಗಿದೆಯೇ?

ಉ) ನಗರದ ಹೊಸ ಬಡಾವಣೆಗಳಿಗೆ ನೀರು ಪೂರೈಕೆ ಯೋಜನೆಯನ್ನು ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಮಂಡಲಿಯು ಕಾರವಾರ ಮತ್ತು ಅಂಕೋಲ ಪಟ್ಟಣಗಳಿಗೆ ಪೂರೈಸಿರುವ ನೀರಿನ ಪ್ರಮಾಣ.

ಕಾರವಾರ :

ವರ್ಷ	ನೀರು ಪೂರೈಸಿದ ದಿನಗಳು	ನೀರಿನ ಪ್ರಮಾಣ ದರ ದಶಲಕ್ಷ ಲೀಟರ್‌ಗಳು
1993-94	341	593.50
1994-95	322	415.60

1995 ಜುಲೈವರೆಗೆ	106	139.00
ಅಂಕೋಲ		
1993-94	341	399.00
1994-95	322	295.62
1995 ಜುಲೈ ಅಂತ್ಯದವರೆಗೆ	166	88.40

ಆ) ಹಾಲಿ ಇರುವ ನೀರು ಸರಬರಾಜು ವ್ಯವಸ್ಥೆಯು 20 ವರ್ಷಗಳಷ್ಟು ಹಳೆಯದಾಗಿದ್ದು ಯಂತ್ರೋಪಕರಣಗಳ ಸವೆತದಿಂದಾಗಿ ಕಾರ್ಯ ಕ್ಷಮತೆಯಲ್ಲಿ ಕ್ಷೀಣತೆ ಉಂಟಾಗಿರುತ್ತದೆ. ಹಾಗೂ ಪೈಪ್‌ಲೈನ್ ಜಾಯಿಂಟ್‌ಗಳು ದುರ್ಬಲಗೊಂಡಿರುತ್ತದೆ. ಹಾಗೂ ವಿದ್ಯುಚ್ಛಕ್ತಿಯ ಅಡಚಣೆ ಮತ್ತು ನೀರಿನ ಬೇಡಿಕೆಯಲ್ಲಿ ಗಮನಾರ್ಹ ಏರಿಕೆ ಉಂಟಾಗಿರುತ್ತದೆ. ಈ ಮೇಲ್ಕಂಡ ಕಾರಣಗಳಿಂದಾಗಿ ಈ ಎರಡು ಪಟ್ಟಣಗಳಿಗೆ ಸಾಕಷ್ಟು ನೀರು ಪೂರೈಸಲು ಸಾಧ್ಯವಾಗಿರುವುದಿಲ್ಲ.

ಇ) 20 ವರ್ಷ ಹಳೆಯದಾದ ಪೈಪ್‌ಲೈನ್‌ನ ಜಾಯಿಂಟ್‌ಗಳು ದುರ್ಬಲಗೊಂಡಿದ್ದು ಆಗಾಗ ಅವುಗಳಲ್ಲಿ ಸೋರಿಕೆ ಉಂಟಾಗುತ್ತಿರುತ್ತದೆ. ಈ ಜಾಯಿಂಟ್‌ಗಳನ್ನು ಬಲಪಡಿಸಲು ಅಂದಾಜು ಪಟ್ಟಿಯನ್ನು ತಯಾರಿಸಲಾಗುತ್ತಿದೆ.

ಈ) ಇಲ್ಲ

ಉ) ನಗರದ ಹೊಸ ಬಡಾವಣೆಗಳಿಗೆ ನೀರು ಪೂರೈಕೆ ಮಾಡಲು, ನಗರದ ನೀರು ಸರಬರಾಜು ವ್ಯವಸ್ಥೆಯ ಅಭಿವೃದ್ಧಿಗಾಗಿ, ಒಂದು ಯೋಜನೆಯನ್ನು ಸಿದ್ಧ ಪಡಿಸಲಾಗುತ್ತಿದೆ.

ಹುಬ್ಬಳ್ಳಿ – ಧಾರವಾಡ ನಗರಕ್ಕೆ ನೀರು ಪೂರೈಕೆ

1533ಎ - ಶ್ರೀ ಅಶೋಕ್ ಕಾಟ್ವೆ (ಹುಬ್ಬಳ್ಳಿ ನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ - ಧಾರವಾಡ ಅವಳಿ ನಗರಗಳಲ್ಲಿ ನೀರು ಪೂರೈಕೆಯ ಕಾರ್ಯ ನೆನೆಗುದಿಗೆ ಬಿದ್ದು, ಜನಸಾಮಾನ್ಯರು ಬವಣೆ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಈ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ಆ) ಅಂಥ ಕಾರ್ಯಕ್ರಮ ಜಾರಿಗೆ ತಂದಿದ್ದಾರೆ. ಅದರ ವಸ್ತು ಸ್ಥಿತಿ ಯಾವ ಹಂತದಲ್ಲಿದೆ?

ಇ) ಇದಕ್ಕಾಗಿ ಸರ್ಕಾರ ಬಿಡುಗಡೆ ಮಾಡಿದ ಹಣವೆಷ್ಟು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಹೌದು, ಇದನ್ನು ಪರಿಹರಿಸಲು ರೂ. 700.00 ಲಕ್ಷಗಳ ಅಂದಾಜಿನಲ್ಲಿ ಜಲಸಂಗ್ರಹಾಗಾರಗಳ ನಿರ್ಮಾಣ ಮತ್ತು ವಿತರಣಾ ಜಾಲ ನವೀಕರಣ ಯೋಜನೆಯ ಕಾರ್ಯವನ್ನು ಕೈಗೊಳ್ಳಲಾಗಿದೆ.

ಆ) ಮೇಲ್ಕಂಡ ಯೋಜನೆಯ ಕಾಮಗಾರಿಗಳ ಪೈಕಿ ಶೇ. 90ರಷ್ಟು ಕೆಲಸ ಮುಗಿಸಲಾಗಿದೆ. ಉಳಿದ ಕೆಲಸಗಳು ಮಾರ್ಚಿ 96ಕ್ಕೆ ಮುಗಿಯುವ ನಿರೀಕ್ಷೆ ಇದೆ.

ಇ) ಪುರಸಭೆಯವರಿಂದ 30 ಲಕ್ಷ ಒಳಗೊಂಡಂತೆ ಸರ್ಕಾರದಿಂದ ಖರ್ಚು628.63 ಲಕ್ಷ

ಬೇರೆ ಮೂಲಗಳಿಂದ 497.81

ರೂ. 1126.44 ಲಕ್ಷ

ಹುಬ್ಬಳ್ಳಿಯಲ್ಲಿರುವ ಕೊಳಚೆ ಪ್ರದೇಶಗಳಿಗೆ ನಾಗರೀಕ ಸೌಲಭ್ಯ

1536 - ಶ್ರೀ ಅಶೋಕ್ಕಾಟವೆ (ಹುಬ್ಬಳ್ಳಿ ನಗರ ಕ್ಷೇತ್ರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊಳಚೆ ಅಭಿವೃದ್ಧಿ ನಿಗಮದವರು ಹುಬ್ಬಳ್ಳಿಯಲ್ಲಿರುವ ನೇಕಾರ ನಗರ ಹಾಗೂ ಇತರೆ ಘೋಷಿತ ಕೊಳಚೆ ಪ್ರದೇಶಗಳಲ್ಲಿ ರಸ್ತೆ, ಗಟಾರ, ನೀರು ಪೂರೈಕೆ ಹಾಗೂ ವಿದ್ಯುತ್ ಸೌಲಭ್ಯಗಳನ್ನೊದಗಿಸಲು ಬಿಡುಗಡೆ ಮಾಡಿದ ಹಣವೆಷ್ಟು?

ಆ) ಹಣ ಬಿಡುಗಡೆ ಮಾಡಿದ್ದಲ್ಲಿ ಕೈಗೊಂಡ ಕ್ರಮದ ವಿವರಣೆ ನೀಡುವುದು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) 1994-95ನೇ ಸಾಲಿನಲ್ಲಿ ಬಿಡುಗಡೆ ಮಾಡಲಾಗಿರುವ ಒಟ್ಟು ಹಣ 7.225 ಲಕ್ಷ ರೂ.ಗಳು.

ಪ್ರಸಕ್ತ ಸಾಲಿನಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು 14.00 ಲಕ್ಷ ರೂ.ಗಳನ್ನು ಮತ್ತು ವಸತಿ ನಿರ್ಮಾಣ ಯೋಜನೆಗೆಂದು 40.00 ಲಕ್ಷ ರೂ.ಗಳನ್ನು ಕಾಯ್ದಿರಿಸಲಾಗಿದೆ.

ಆ) 7.225 ಲಕ್ಷ ರೂ.ಗಳ ಬಿಡುಗಡೆಯ ಅನುದಾನದಲ್ಲಿ ನೇಕಾರ ನಗರ ಕೊಳಚೆ ಪ್ರದೇಶಕ್ಕೆ 1.25 ಲಕ್ಷ ರೂ.ಗಳನ್ನು ಖರ್ಚು ಮಾಡುವ ಮೂಲಕ 2 ಕಿರು ನೀರು ಸರಬರಾಜು ಯೋಜನೆಗಳನ್ನು ಕೈಗೊಳ್ಳಲಾಗಿದೆ. ಹಾಗೂ ಇನ್ನಿತರೆ 9 ಕೊಳಚೆ ಪ್ರದೇಶಗಳಲ್ಲಿ 5.975 ಲಕ್ಷ ರೂ.ಗಳ ಅಂದಾಜಿನಲ್ಲಿ ಕೊಳವೆ ಬಾವಿ, ಒಳಚರಂಡಿ ಕೆಲಸ, ನೆಲಹಾಸು ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. (ವಿವರಗಳನ್ನು ಅನುಬಂಧ ಅನಲ್ಲಿ ಒದಗಿಸಿದೆ).

ಅನುಬಂಧ - ಅ

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಕೊಳಚೆ ಪ್ರದೇಶದ ಹೆಸರು	ಅಂದಾಜು	ವೆಚ್ಚ	ಕಾಮಗಾರಿಯ ವಿವರ
ಹುಬ್ಬಳ್ಳಿ ಶಹರ ಕ್ಷೇತ್ರದಲ್ಲಿ ಬರುವ 1994-95ನೇ ಸಾಲಿನಲ್ಲಿ ಮಂಜೂರಾದ ಅನುದಾನದ ವಿವರ				
1.	ಕರಿಗಣ್ಣವರ ಹಕ್ಕಲ	0.90	0.468	ಕೊಳವೆ ಬಾವಿ ಕೆಲಸ ಮುಗಿದಿದೆ
2.	ಯಲ್ಲಾಪುರ ಓಣಿ (ಮಾರುತಿ ಗುಡಿ ಹಿಂಭಾಗ)	0.90	0.879	ಕೊಳವೆ ಬಾವಿ ಒಳಚರಂಡಿ ಕೆಲಸ ಮುಗಿದಿದೆ
3.	ತಾತುಸ್ಕರ ಫ್ಯಾಕ್ಟರಿ ಹಿಂಭಾಗ	0.40	0.283	ಕೊಳವೆ ಬಾವಿ ಕೆಲಸ ಮುಗಿದಿದೆ
4.	ಬ್ರಹ್ಮಾಪುರ, ದೊಡ್ಡಕೇರಿ	0.40	0.398	-ಅದೇ -
5.	ಹೇಟಗೆ ಮಡ್ಡಿ	0.90	0.398	- ಅದೇ -
6.	ಮುಲಾಲಿ ಜೋಪಡಿ	0.475	0.472	- ಅದೇ -
7.	10:ಎ ಯಲ್ಲಾಪುರ ಓಣಿ	0.40	0.390	ಒಳಚರಂಡಿ ಕೆಲಸ ಮುಗಿದಿದೆ.
ಹುಬ್ಬಳ್ಳಿ ಗ್ರಾಮೀಣ ಕ್ಷೇತ್ರದಲ್ಲಿ ಬರುವ 1994-95ನೇ ಸಾಲಿನಲ್ಲಿ ಮಂಜೂರಾದ ಅನುದಾನದ ವಿವರ				

8.	ಕೆ.ಸಿ.ಟಿ. ಮಿಲ್	0.30	0.282	ನೆಲಹಾಸು ಕೆಲಸ ಮುಗಿದಿದೆ
9.	ಮಾರುತಿ ನಗರ ಹೆಗ್ಗೇರಿ	1.30	0.419	ಕೊಳವೆ ಬಾವಿ ಕೆಲಸ ಮುಗಿದಿದೆ
	ಒಟ್ಟು	5.975	3.989	

ಹುಬ್ಬಳ್ಳಿ ನಗರದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳು

1225 - ಶ್ರೀ ಅಶೋಕ್ ಕಾಟವೆ (ಹುಬ್ಬಳ್ಳಿ ನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ ನಗರದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳು ಎಷ್ಟು;

ಆ) ಹುಬ್ಬಳ್ಳಿ -ಧಾರವಾಡ ಮಹಾನಗರಸಭೆಯ ನಿಯಂತ್ರಣದಲ್ಲಿರುವ ಒಟ್ಟು ರಸ್ತೆ ಎಷ್ಟು; ಅವುಗಳಲ್ಲಿ ಡಾಂಬರೀಕರಣ ಮಾಡಬೇಕಾಗಿರುವ ರಸ್ತೆ ಎಷ್ಟು?

ಇ) ಡಾಂಬರೀಕರಣ ಮಾಡಲು ಉದ್ದೇಶಿಸಿರುವ ರಸ್ತೆಗಳು ಎಷ್ಟು ಹಾಗೂ ಯಾವಾಗ ಮಾಡಿಸಲಾಗುವುದು?

ಶ್ರೀ ವೈಜನಾಥ್ ಪಾಟೀಲ (ನಗರಾಭಿವೃದ್ಧಿ, ಕಾಡಾ ಮತ್ತು ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :

ಅ) 15 (ಹದಿನೈದು) ರಸ್ತೆಗಳು

ಆ) 3515 ರಸ್ತೆಗಳು

ಇ) 114 ರಸ್ತೆಗಳನ್ನು ಡಾಂಬರೀಕರಣ ಮಾಡಲು ಉದ್ದೇಶಿಸಲಾಗಿದೆ. ಹಣಾವಕಾಶ ಪರಿಗಣಿಸಿ ಹಂತ ಹಂತವಾಗಿ ಪ್ರಸ್ತುತ ಸಾಲಿನ ಮಳೆಗಾಲದ ನಂತರ ಕೈಗೆತ್ತಿಕೊಳ್ಳಲಾಗುವುದು.

ವಿಜಾಪುರ ನಗರದಲ್ಲಿ ರಿಂಗ್ ರಸ್ತೆ

1864 - ಶ್ರೀ ಬಸನಗೌಡ ಆರ್. ಪಾಟೀಲ್ (ವಿಜಾಪುರ) : ಮಾನ್ಯ (ನಗರಾಭಿವೃದ್ಧಿ, ಕಾಡಾ ಮತ್ತು ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಜಾಪುರ ನಗರದಲ್ಲಿ ರಿಂಗ್ ರಸ್ತೆ ಮಾಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಆ) ಇದ್ದಲ್ಲಿ ಯಾವ ಪ್ರದೇಶಗಳಲ್ಲಿ ಹಾದು ಹೋಗುವುದು? (ಸಂಪೂರ್ಣ ಮಾಹಿತಿ ಒದಗಿಸುವುದು)?

ಇ) ಎಷ್ಟು ದಿವಸಗಳಲ್ಲಿ ಈ ಕೆಲಸ ಮಾಡಲಾಗುವುದು?

ಶ್ರೀ ವೈಜನಾಥ್ ಪಾಟೀಲ (ನಗರಾಭಿವೃದ್ಧಿ, ಕಾಡಾ ಮತ್ತು ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :

ಅ) ಹೌದು.

• ಆ) ಈ ರಸ್ತೆಯು ವಿಜಾಪುರ ಧಾರವಾಡ ರಸ್ತೆ ಮುಖಾಂತರ ಹಾದು ಹೊಸದಾಗಿ ಕಟ್ಟಿದ ಆಕಾಶವಾಣಿ ಕೇಂದ್ರ ಹಾಗೂ ರಾಷ್ಟ್ರೀಯ ಹೆದ್ದಾರಿ ನಂ. 13 (ಸೊಲ್ಲಾಪುರ) ರಲ್ಲಿ ಸೇರುತ್ತದೆ. ಸದರಿ ವ್ಯಾಪ್ತಿಯಲ್ಲಿ ಈ ಕೆಳಕಾಣಿಸಿದ ಸರ್ವೆ ನಂಬರ್‌ಗಳನ್ನು ಒಳಗೊಂಡಿರುತ್ತದೆ.

650, 645, 648, 585, 646,656,644, 643, 687, 686, 684, 683, 740, 741, 742, 743, 838, 923, 151, 150ಎ, 150ಬಿ, 897, 60, 61 ಮತ್ತು 62.

ಇ) ಈ ಕೆಲಸ ಪೂರ್ಣಗೊಳಿಸಲು ಕನಿಷ್ಠ ಎರಡು ವರ್ಷಗಳ ಅವಧಿ ಬೇಕಾಗುತ್ತದೆ.

ಹುಬ್ಬಳ್ಳಿ-ಧಾರವಾಡದಲ್ಲಿ ಸಾರ್ವಜನಿಕರಿಗೆ ವಿಶ್ರಾಂತಿ ತಾಣ ನಿರ್ಮಾಣ

931 - ಶ್ರೀ ಜಗದೀಶ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ - ಧಾರವಾಡ ಮಹಾನಗರದಲ್ಲಿ ರಾಮಾಪುರ ಅಥವಾ ಪುತ್ತೂರು ಗುಡ್ಡಗಳಲ್ಲಿ ನಗರದ ಚಿಕ್ಕ ಮಕ್ಕಳಿಗೆ ಮತ್ತು ಸಾರ್ವಜನಿಕರಿಗೆ ವಿಶ್ರಾಂತಿ ತಾಣ ಮಾಡುವ ಯೋಜನೆ ಸರ್ಕಾರದ ಮುಂದೆ ಇದೆಯೆ?

ಆ) ಇದ್ದರೆ ಯೋಜನೆಯ ರೂಪರೇಷೆಗಳು ಏನು?

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :

ಅ) ಇಂತಹ ಯೋಜನೆ ಅರಣ್ಯ ಇಲಾಖೆಯಲ್ಲಿ ಇರುವುದಿಲ್ಲ. ಉದ್ಯಾನವನ ನಿರ್ಮಿಸುವ ವಿಷಯವು ತೋಟಗಾರಿಕೆ ಇಲಾಖೆಗೆ ಸಂಬಂಧಿಸಿರುತ್ತದೆ. ಆದರೆ ರಾಮಾಪುರ ಅಥವಾ ಸತ್ತೂರು ಗುಡ್ಡಗಳು ಅರಣ್ಯ ಪ್ರದೇಶವಾಗಿರುವುದರಿಂದ ಅದನ್ನು ಬಿಡುಗಡೆ ಮಾಡಲು ತೋಟಗಾರಿಕೆ ಇಲಾಖೆಯಿಂದ ಬೇಡಿಕೆ ಬಂದಲ್ಲಿ ನಿಯಮಾನುಸಾರ ಪರಿಸೀಲಿಸಲಾಗುವುದು.

ಆ) ಉದ್ಭವಿಸುವುದಿಲ್ಲ

ಹುಬ್ಬಳ್ಳಿ - ಧಾರವಾಡ ಮಹಾನಗರದ ಅಭಿವೃದ್ಧಿಗೆ ಖರ್ಚಾದ ಹಣ

929 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ -ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ 1990-91ನೇ ಸಾಲಿನಿಂದ ಇಲ್ಲಿಯವರೆಗೆ ಮಹಾನಗರ ಅಭಿವೃದ್ಧಿ ಸಲುವಾಗಿ ಖರ್ಚು ಮಾಡಿದ ಹಣ ಎಷ್ಟು?

ಆ) ಯಾವ ಯಾವ ಕೆಲಸದ ಸಲುವಾಗಿ ಖರ್ಚು ಮಾಡಲಾಗಿದೆ ಅದರ ಸಂಪೂರ್ಣ ವಿವರ ಒದಗಿಸುವುದು.

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) 1990-91 ರಿಂದ 1994-95ರ ಕೊನೆಯವರೆಗೆ ಪ್ರಾಧಿಕಾರ ಮಹಾನಗರದ ಅಭಿವೃದ್ಧಿಗಾಗಿ ಮಾಡಿದ ಖರ್ಚಿನ ವಿವರಗಳು ಈ ಕೆಳಗಿನಂತಿದೆ.

1)	1990-91	ಇಲ್ಲ
2)	1991-92	ಇಲ್ಲ
3)	1992-93	31.37 ಲಕ್ಷ
4)	1993-94	44.71 ಲಕ್ಷ
5)	1994-95	36.18 ಲಕ್ಷ
	ಒಟ್ಟು	112.26 ಲಕ್ಷ

ಆ) ಹುಬ್ಬಳ್ಳಿ-ಧಾರವಾಡ ನಗರಗಳಲ್ಲಿಯ ಸ್ಮಶಾನ, ಉದ್ಯಾನ, ವೃತ್ತ ಹಾಗೂ ಕಟ್ಟಡಗಳಿಗೆ ಪ್ರತಿ ವರ್ಷ ಮಾಡಲಾದ ವೆಚ್ಚದ ವಿವರಗಳನ್ನು ಅನುಬಂಧ ಎ ಮತ್ತು ಬಿರಲ್ಲಿ ನೀಡಲಾಗಿದೆ.

Annexure -'A'

Sl. No.	Details of works	Yearwise expenditure (in Lakhs)					
		1990-91	91-92	92-93	93-94	94-95	
1.	Improvements to Circles Roads.	-	-	26.71	21.32	1.97	The detail is of works executed
2.	Improvements to Gardens	-	-	4.66	2.73	30.16	are furnished
3.	Improvements to Burial Grounds	-	-	-	13.31	4.05	in Annexure 'B'. -do-
4.	Buildings	-	-	-	7.35	-	-do-
	Totals	-	-	31.37	44.71	36.18	

No.HUD/241/MNL/95

Annexure 'B'

Sl. No.	Name of the work	Expenditure Incurred during 90-91	91-92	92-93	93-94	94-95	Remarks
					(Rupees in lakhs)		
1	2	3	4	5	6	7	8
I. Circles : Dharwad :							
1.	Development of Jubliee Circle Dharwad.	Nil	Nil	1.84	0.11	Nill	Providing foot-Path and grills and electrification works.
2.	Development of Rayapurtank.	Nil	Nil	8.79	–	-	Works completed
3.	Development of Kalaghatgi Circle, Dharwad	Nil	Nil	7.16	-	-	-do-
4.	N.T.T.F. Circle Development	Nil	Nil	2.02	-	-	Providing grills to footpath of providing footpaths.
Hubli							
5.	Development of Hosur Circle	Nil	Nil	5.45	1.63	0.08	-do-
6.	Development of Karadioni	Nil	Nil	1.42	0.35	0.15	-do-
7.	Development of Desai cross.	Nil	Nil	0.03	1.73	0.42	-do-
8.	Development of Benkapur Circle	Nil	Nil	-	0.95	0.52	-do-
9.	Development of Siddeshwar company	Nil	Nil	-	0.97	-	-do-
10.	Development of Keshwapur	Nil	Nil	-	2.64	-	-do-
11.	Development works in K.B.S. No. 18	Nil	Nil	-	1.89	-	Works completed.
12.	Development of Vijaya nagar road (Asphalting)	Nil	Nil	-	7.18	-	Asphaiting of Road-2 kms.
13.	Development of road from new English School to Karwar road. (Asphalting)	Nil	Nil	-	395	.	18-Asphalting of Road-1 Km.
14.	Development of C.D. and gutter near Navanagar	Nil	Nil	-	-	0.80	Work completed
		-	-	26.71	21.32	1.97	

II.	**Improvements to Gardens. Hubli & Dharawad :**						
1.	Garden at Shreenagar Dharawad.	-	-	2.73	-	0.09	All the works such providing fencing, electrical poles, and S.V. lamps and Water supply are completed.
2.	Garden at Visweshwar nagar, Hubli.	-	-	0.59	2.73	1.31	
3.	Garden at Renukanagar Hubli	-	-	1.34	–	-	
4.	Improvements to Unakal Tank and Garden, Hubli.	-	-	-	-	10.89	
5.	Improvements to Garden Indira Glass House	-	-	-	-	17.87	
				4.66	2.73	30.16	
III.	**Improvement To Burial Grounds:**						
1.	Burial ground at Jannata nagar, Dharwad	-	-	-	5.62	0.39	All the works such as providing barbed wire fencing roads, electrical poles with S.V. lamps and water upply etc., have been completed.
2.	Burial ground at Hosayellapur, Dharwad	-	-	-	-	3.56	-do-
3.	Burialground at Kalburgimath, Hubli	-	-	-	3.73	-	-do-
4.	Burialground at Gopanakoppa, Hubli	-	-	-	1.64	-	-do-
5.	Burialground at Koudimath Hubli	-	-	-	2.32	0.10	-do-
III.	**Buildings :**						
1.	Construction of garage for vehicles behind Development Authority office including electrification.	-	-	-	2.23	-	All these works have been completed.

No. HUD/241/MNL/95

2.	Rest house in near darga on P.R. Road	-	-	-	2.15	-	All these works have been completed.

3.	construction of Gymnastic hall at Bhairidevarkoppa.	-	-	-	0.96	-	-do-
4.	Construction of Gymnastic Hall at Unakal.	-	-	-	1.49	-	-do-
5.	Garage for Ambulance Van at Vivekananda Hospital, Hubli.	-	-	-	0.52	-	-do-
	Total				7.35 lakhs		

No. HUD/241/MNL/95

ಅಂಬೇಡ್ಕರ್ ಯೋಜನೆಯಲ್ಲಿ ಮನೆಗಳ ನಿರ್ಮಾಣ

1724 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94, 1994-95ನೇ ಸಾಲಿನಲ್ಲಿ ಜಿಲ್ಲಾವಾರು ಅಂಬೇಡ್ಕರ್ ಯೋಜನೆಯಲ್ಲಿ ಕಟ್ಟಲು ಹಾಕಿಕೊಳ್ಳಲಾಗಿದ್ದ ಮನೆಗಳ ಸಂಖ್ಯೆ ಎಷ್ಟು; ಪೂರ್ತಿ ಕಟ್ಟಲಾಗಿರುವ ಮನೆಗಳು ಎಷ್ಟು; ಆ ವರ್ಷಗಳಲ್ಲಿ ಜಿಲ್ಲಾವಾರು ಬಿಡುಗಡೆ ಮಾಡಿದ ಹಣ, ಖರ್ಚಾದ ಹಣ ಎಷ್ಟು?

ಆ) 1995-96ನೇ ಸಾಲಿನಲ್ಲಿ ತಾಲ್ಲೂಕುವಾರು, ಕಟ್ಟಲು ಯೋಜಿಸಿರುವ ಮನೆಗಳು ಎಷ್ಟು, ಬಿಡುಗಡೆ ಮಾಡಿದ ಹಣವೆಷ್ಟು? (31-7-95ರ ರೊಳಗೆ)

ಶ್ರೀ ಆರ್. ರೋಷನ್ ಬೇಗ್ (ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ಅನುಬಂಧ-1, ಅನುಬಂಧ-2ರಲ್ಲಿ ಜಿಲ್ಲಾವಾರು ಮಾಹಿತಿ ನೀಡಲಾಗಿದೆ.

ಆ) 25,000 ಮನೆಗಳನ್ನು ಗ್ರಾಮಾಂತರ ಪ್ರದೇಶದಲ್ಲಿ ಕಟ್ಟಲು ಉದ್ದೇಶಿಸಲಾಗಿದೆ ಹಾಗೂ 18.80 ಕೋಟಿ ಹಣ ಬಿಡುಗಡೆ ಮಾಡಲು ಕೈಗೊಳ್ಳಲಾಗಿದೆ.

Annesure - I

	Districts	Houses target for the year 93-94 (rural)	Completed houses	Released amount (in lakhs	Expenditure (in lakhs)	Houses target for the year 93-94 (urban)	Completed houses	Released amount (in lakhs)	Expenditure
1.	Bijapura	1621	1466	243.15	296.67	975	328	163.28	
2.	Mysore	1413	1450	211.95	217.54	600	388	69.27	67.88
3.	Rayachur	1192	1106	178.80	178.80	425	250	41.86	21.25
4.	Bangalore(R)	1033	920	154.95	139.49	400	151	42.53	[illegible]
5.	Chitradurga	1194	1037	179.10	159.05	350	145	39.57	23.48
6.	Mandya	979	931	146.85	137.12	325	180	42.17	30.53
7.	Hassan	870	854	130.50	138.00	350	81	32.52	7.50
8.	Tumkur	1364	1361	204.60	203.17	350	165	33.47	29.59
9.	Gulbarga	1301	1089	195.15	182.47	600	99	57.34	23.98
10.	D. Kannada	1525	1023	228.75	167.15	650	205	69.15	35.68
11.	Shimoga	1089	1036	163.35	151.18	350	141	39.00	22.41
12.	Kolar	1301	964	195.05	140.67	575	270	49.21	64.67
13.	Bellary	977	868	146.55	130.20	600	276	63.56	46.85
14.	Dharwad	1731	1611	259.65	220.30	1200	711	152.50	94.53
15.	Kodagu	326	263	48.90	43.06	50	50	8.00	8.00

16.	Chickmagalur	652	418	97.80	103.06	275	198	39,189	34,28
17.	Bidar	652	652	97.80	97.80	300	147	29.50	24.28
18.	Bangalore(U)	425	425	63.75	63.75	125	82	16.00	10.27
19.	Belgaum	1837	1670	275.55	263.62	1000	392	106.191	72.83
20.	U. Kannada	652	468	97.80	77.28	500	90	36.80	18.07
	Total	22,134	19612	3320.00	3105.38	10000	4326	1071.06	661.30

Annexure -II

	Name of the Districts	1994-95 Houses Rural area	Houses Completed	Amount Released (in lakhs)	Amount spent (in lakhs)
1.	Bijapura	918	-	119.34	-
2.	Mysore	796	310	103.48	79.69
3.	Raichur	674	74	87.62	60.66
4.	Bangalore (R)	552	33	71.76	16.50
5.	Chitradurga	674	141	87.62	70.24
6.	Mandya	552	70	71.76	24.30
7.	Hassan	491	230	63.83	31.47
8.	Tumkur	796	89	103.48	24.87
9.	Gulbarga	735	35	95.55	19.32
10.	D. Kannada	857	533	111.41	117.33
11.	Shimoga	613	237	79.69	54.08
12.	Kolar	735	-	95.55	-
13.	Bellary	552	409	71.76	64.00
14.	Dharwad	979	91	127.27	25.56
15.	Kodagu	183	62	23.79	13.16
16.	Chickmagalur	369	7	47.97	3.31
17.	Bidar	369	132	47.97	37.67
18.	Bangalore(U)	246	234	31.98	22.68
19.	Belguam	1040	129	135.20	31.89
20.	U.Kannada	369	37	47.97	8.97
	Total	12500	2853	1625.00	705.70

ಗಿರಿಜನ ಉಪಯೋಜನೆಯಲ್ಲಿ ಕೈಗೊಂಡ ಕಾರ್ಯಕ್ರಮಗಳು

1756 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗಿರಿಜನ ಉಪಯೋಜನೆಯಲ್ಲಿ 92-93, 93-94, 94-95 ರಲ್ಲಿ ಆಯವ್ಯಯ ಪ್ರಕಾರ ನಿಗದಿತ ಮೊತ್ತ; ಬಿಡುಗಡೆ ಮಾಡಿದ ಮೊತ್ತ ವೆಚ್ಚ ಮಾಡಿದ ಮೊತ್ತ ಹಾಗೂ ವೆಚ್ಚ ಮಾಡದೆ ಉಳಿಸಿದ ಮೊತ್ತವೆಷ್ಟು?

ಆ) ಈ ಉಪಯೋಜನೆಯಲ್ಲಿ ಯಾವಾಗ ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಂಡಿದೆ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ಗಿರಿಜನ ಉಪಯೋಜನೆಯಲ್ಲಿ 92-93 ರಿಂದ 94-95 ರವರೆಗೆ ನಿಗದಿತ ಮೊತ್ತ, ಖರ್ಚು ಉಳಿಕೆಯ ವಿವರ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

	ವರ್ಷ	ಆಯವ್ಯಯ ದಲ್ಲಿ ನಿಗದಿತ ಮೊತ್ತ	ಬಿಡುಗಡೆ ಯಾದ	ಖರ್ಚಾದ ಮೊತ್ತ	ಉಳಿದ ಮೊತ್ತ
1)	1992-93	2046.85	2046.85	1349.21	697.64
2)	1993-94	3729.96	3729.96	3197.32	532.64
3)	1994-95	4639.69	4639.69	4576.21	63.48

ಆ) 1976-77ನೇ ಸಾಲಿನಿಂದ ಗಿರಿಜನ ಉಪಯೋಜನೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ.

ಧಾರವಾಡ-ಹುಬ್ಬಳ್ಳಿ ಮಹಾನಗರಗಳಲ್ಲಿ ಆಶ್ರಯ ಯೋಜನೆಯಲ್ಲಿ ವಿತರಣೆಯಾದ ನಿವೇಶನಗಳು

904 - ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ) : ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಧಾರವಾಡ ಹುಬ್ಬಳ್ಳಿ ಮಹಾನಗರದಡಿಯಲ್ಲಿ ಹತ್ತು ವರ್ಷಗಳಲ್ಲಿ ಪ್ರತಿ ವರ್ಷ ಆಶ್ರಯ ಯೋಜನೆಯಲ್ಲಿ ಮನೆ ಮತ್ತು ನಿವೇಶನ ಮಾಡಿದ ವಿವರ ಒದಗಿಸುವುದು;

ಆ) ನಿವೇಶನ ಮತ್ತು ಮನೆಗಳನ್ನು ಯಾವ ಯಾವ ಬಡಾವಣೆಯಲ್ಲಿ ಯಾವ ವರ್ಷಗಳಲ್ಲಿ ವಿತರಣೆ ಮಾಡಲಾಗಿದೆ.

ಇ) ಇನ್ನೂ ಹಕ್ಕು ಪತ್ರ ನೀಡಿದ ಜನರಿಗೆ ಸರಿಯಾದ ಮನೆ ನಿವೇಶನ ನೀಡದೆ ಇರುವ ಪ್ರಕರಣಗಳು ಎಷ್ಟು, ಅದರ ಪೂರ್ಣ ವಿವರಣೆ ಕೊಡುವುದು?

ಶ್ರೀ ಆರ್. ರೋಷನ್ ಬೇಗ್ (ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ಆಶ್ರಯ ಯೋಜನೆಯು 910-91 ರಿಂದ ಪ್ರಾರಂಭವಾಗಿದ್ದು, 1992-93ನೇ ಸಾಲಿನಲ್ಲಿ 2114 ನಿವೇಶನಗಳನ್ನು ತಯಾರಿಸಿ 1200 ಫಲಾನುಭವಿಗಳಿಗೆ ಪಟ್ಟಾ ವಿತರಣೆ

ಮಾಡಲಾಗಿದೆ. ಇದರ ಪೈಕಿ 93-94 ಮತ್ತು 94-95ನೇ ಸಾಲಿನಲ್ಲಿ ಒಟ್ಟು 309 ಆಶ್ರಯ ಮನೆಗಳನ್ನು ಕಟ್ಟಲಾಗಿದೆ.

ಆ)

ವರ್ಷ		ಗ್ರಾಮ	ನಿವೇಶನ ವಿತರಣೆ ಸಂಖ್ಯೆ	ವರ್ಷ	ಮನೆ ನಿರ್ಮಾಣ ಸಂಖ್ಯೆ	ವಿತರಣೆ ಸಂಖ್ಯೆ
1.	1992-93	ಅಮರಗೋಳ	678	93-94	-	-
2.	1992-93	ಸತ್ತೂರ್	417	94-95	80	ಪೂರ್ಣಗೊಂಡ
				94-95	85	309
3.	1992-93	ನವಲೂರ್	105	94-95	(26 ಮನೆ ಪ್ಲಿಂತ ಮಟ್ಟ)	ಮನೆಗಳನ್ನು ವಿತರಣೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ
4.	1992-93	ಗೋಕುಲ	-	94-95	144 ಮನೆ ಮುಗಿದಿರುತ್ತದೆ)	
				94-95	57 ಮನೆ ಪ್ಲಿಂತ	
5.	1994-95	ಬಮ್ಮಾಪುರ	-	94-95	15 "	
6.	1994-95	ಉಣಕಲ್	-	94-95	50 "	
7.	1994Ë95	ಗೋಪನ ಕೊಪ್ಪ	-	94Ë95	30 "	

ಇ)

1.	ಅಮರಗೋಳ	678 ಮನೆ ಕಟ್ಟಿಲ್ಲ
2.	ಸತ್ತೂರ	252 "
3.	ನವಲೂರು	105 "
4.	ಗೋಕುಲ	ನಿವೇಶನ ಮತ್ತು ಮನೆಗಳನ್ನು ವಿತರಣೆ ಮಾಡಿಲ್ಲ
5.	ಅಮ್ಮಾಪುರ	"
6.	ಉಣಕಲ್	"
7.	ಗೋಪನಕೊಪ್ಪ	"

ಮುದ್ದುರೇಶ್ವರ ಫುಡ್ಸ್ ಮತ್ತು ಆಗ್ರೋ ಪ್ರಾಡಕ್ಟನವರಿಗೆ ಆಕ್ವುಕಲ್ಚರ್‌ಗಾಗಿ ಜಮೀನು ಮಂಜೂರು

439 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮುದ್ದುರೇಶ್ವರ ಫುಡ್ಸ್ ಮತ್ತು ಆಗ್ರೋ ಪ್ರಾಡಕ್ಟನವರಿಗೆ ಆಕ್ವುಕಲ್ಚರ್‌ಗಾಗಿ ಕಾರವಾರದಲ್ಲಿ ಜಮೀನು ಮಂಜೂರು ಮಾಡಲಾಗಿದೆಯೇ ಮತ್ತು ಯಾವಾಗ?

ಆ) ಹಾಗಿದ್ದಲ್ಲಿ ಯಾವ ಬೆಲೆಗೆ ಮಂಜೂರು ಮಾಡಲಾಗಿದೆ.

ಇ) ಈ ಮುಂಚೆ ಜಮೀನನ್ನು ಯಾರಿಗೆ ಮಂಜೂರು ಮಾಡಲಾಗಿತ್ತು ಮತ್ತು ಯಾವ ಬೆಲೆಗೆ.

ಈ) ಒಂದು ಸಾರಿ ಒಬ್ಬರಿಗೆ ಮಂಜೂರು ಮಾಡಿದ ಮೇಲೆ ಇನ್ನೊಬ್ಬರಿಗೆ ಜಮೀನು ಮಂಜೂರು ಮಾಡಲು ಸಾಧ್ಯವೆ?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):

ಅ) ಮುದ್ದುರೇಶ್ವರ ಫುಡ್ಸ್ ಮತ್ತು ಎಕ್ಸ್‌ಪೋರ್ಟ್ ಲಿಮಿಟೆಡ್‌ರವರಿಗೆ ಕಾರವಾರ ಜಿಲ್ಲೆಯ ಕುಮಟ ಮತ್ತು ಅಂಕೋಲ ತಾಲ್ಲೂಕುಗಳಲ್ಲಿ 1818 ಎಕರೆ 16 ಗುಂಟೆ 8 ಅಣೆ ಜಮೀನನ್ನು ದಿನಾಂಕ 23.6.94ರಲ್ಲಿ ಮಂಜೂರು ಮಾಡಲಾಗಿದೆ.

ಆ) ಮೇಲ್ಕಾಣಿಸಿದ ಜಮೀನಿಗೆ ವಿಧಿಸಿರುವ ತಾತ್ಕಾಲಿಕ ಬೆಲೆಯು 54.94 ಲಕ್ಷ ರೂ. ಆಗಿರುತ್ತದೆ.

ಇ) ಇದಕ್ಕೆ ಮುಂಚೆ ಬಳ್ಳಾರ್‌ಪುರ್ ಇಂಡಸ್ಟ್ರೀಸ್ ಲಿಮಿಟೆಡ್‌ರವರಿಗೆ ಈ ಜಮೀನನ್ನು ಮಂಜೂರು ಮಾಡಲಾಗಿತ್ತು. ಮತ್ತು ಅದಕ್ಕೆ ಆ ಕಂಪನಿಯವರು ತಾತ್ಕಾಲಿಕ ದರದಲ್ಲಿ ಒಟ್ಟು 54.94 ಲಕ್ಷ ರೂ.ಗಳನ್ನು ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಲಿಗೆ ಪಾವತಿ ಮಾಡಿದ್ದರು.

ಈ) ಒಮ್ಮೆ ಮಂಜೂರಾದ ಭೂಮಿಯನ್ನು ಮಂಜೂರುದಾರರು ಕೈಗಾರಿಕೆಯನ್ನು ಸ್ಥಾಪಿಸಲು ತಪ್ಪಿದಲ್ಲಿ ಅಂತಹ ಭೂಮಿಯನ್ನು ಪುನರ್ ವಶಪಡಿಸಿಕೊಳ್ಳಲು ಮಂಡಳಿಯು ಅಧಿಕಾರವನ್ನು ಹೊಂದಿದೆ. ಕೈಗಾರಿಕೆಯ ಸ್ಥಾಪನೆಗೆ ನೀಡಿದ ಜಮೀನನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಲು ಸಾಧ್ಯವಾಗದಿದ್ದಲ್ಲಿ ಮಂಜೂರುದಾರರು ಸ್ವತಃ ಸಂಪೂರ್ಣ ಭೂಮಿಯನ್ನು ಅಥವಾ ಉಪಯೋಗಿಸಲು ಸಾಧ್ಯವಾಗದ ಭಾಗಶಃ ಜಮೀನನ್ನು ಮಂಡಳಿಗೆ ಹಿಂದಿರುಗಿಸಲು ಅವಕಾಶವಿದೆಯೆಂದು ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯು ವರದಿ ಮಾಡಿದೆ. ಇಂತಹ ಜಮೀನನ್ನು ಬೇರೆಯವರಿಗೆ ಕೈಗಾರಿಕೆ ಸ್ಥಾಪನೆಗಾಗಿ ಮಂಜೂರು ಮಾಡಲು ಅವಕಾಶವಿದೆ. ವಿಷಯವು ಉಚ್ಚ ನ್ಯಾಯಾಲಯದ ಮುಂದೆಯೂ ಸಹ ರಿಟ್ ಅರ್ಜಿ ಸಂಖ್ಯೆ: 22831-22832:94 ರಲ್ಲಿರುತ್ತದೆ.

ಟೀ ನರಸೀಪುರ ತಾಲ್ಲೂಕಿನಲ್ಲಿ ಕೈಗಾರಿಕಾ ಎಸ್ಟೇಟ್‌ಗಳ ನಿರ್ಮಾಣ

1837 - ಶ್ರೀ ಎಸ್. ಕೃಷ್ಣಪ್ಪ (ಬನ್ನೂರು) : ಮಾನ್ಯ ಸಣ್ಣ ಪ್ರಮಾಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿನ ತಾಲ್ಲೂಕು ಕೇಂದ್ರಗಳಲ್ಲಿ ಕೈಗಾರಿಕಾ ಎಸ್ಟೇಟುಗಳನ್ನು ನಿರ್ಮಿಸಲಾಗಿರುವವುಗಳ ಸಂಖ್ಯೆ ಎಷ್ಟು?

ಆ) ಉಳಿದ ತಾಲ್ಲೂಕುಗಳಲ್ಲಿ ಕೈಗಾರಿಕಾ ಎಸ್ಟೇಟುಗಳನ್ನು ನಿರ್ಮಿಸಲು ಸರ್ಕಾರ ಕೈಗೊಂಡಿರುವ ಹಾಗೂ ಕೈಗೊಳ್ಳಲಿರುವ ಕ್ರಮಗಳೇನು?

ಇ) ಟೀ ನರಸೀಪುರ ತಾಲ್ಲೂಕಿನಲ್ಲಿ 1995-96ರಲ್ಲಿ ಕೈಗಾರಿಕಾ ಎಸ್ಟೇಟುಗಳನ್ನು ನಿರ್ಮಿಸುವ ಯೋಜನೆ ಸರ್ಕಾರದ ಮುಂದೆ ಇದೆಯೇ?

ಈ) ಹಾಗಿದ್ದಲ್ಲಿ, ಇದಕ್ಕಾಗಿ ಖರ್ಚು ಮಾಡಲಿರುವ ಹಣದ ಪ್ರಮಾಣವೆಷ್ಟು?

ಶ್ರೀ ಎನ್.ಎಂ. ನಬಿ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು) :

ಅ) 105 ಕೈಗಾರಿಕಾ ಎಸ್ಟೇಟುಗಳು

ಆ) ಉಳಿದ 24 ತಾಲ್ಲೂಕುಗಳಲ್ಲಿ ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸಲು ಭೂ ಸ್ವಾಧೀನತೆಯ ಕ್ರಮವು ಪ್ರಗತಿಯಲ್ಲಿದೆ.

ಇ) ಇಲ್ಲಾ

ಈ) ಉದ್ಭವಿಸುವುದಿಲ್ಲ

ಉತ್ತರ ಕನ್ನಡ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆ ಪ್ರಾರಂಭ

1469 - ಡಾ॥ ಎಂ.ಪಿ. ಕರ್ಕಿ (ಕುಮಟ್ಟ) : ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ ತಂತ್ರಜ್ಞಾನ ಪರಿಸರ ಮಾಲಿನ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉತ್ತರ ಕನ್ನಡ ಜಿಲ್ಲೆಯ ಹಳ್ಳಿಯೊಂದರಲ್ಲಿ ಸಹಕಾರಿ ರಂಗದಲ್ಲಿ ಸಕ್ಕರೆ ಕಾರ್ಖಾನೆ ಪ್ರಾರಂಭಿಸುವ ಬಗ್ಗೆ ಕೆಲವು ವರ್ಷಗಳಿಂದ ಪ್ರಯತ್ನ ನಡೆಯುತ್ತಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸರ್ಕಾರ ಈ ಪ್ರಯತ್ನಕ್ಕೆ ಪ್ರೋತ್ಸಾಹ ಕೊಡುತ್ತಿಲ್ಲವೆಂಬುದು ನಿಜವೆ;

ಇ) ಸಹಕಾರಿ ರಂಗದ ಬೇಡಿಕೆಯನ್ನು ಬದಿಗೊತ್ತಿ ಖಾಸಗಿ ರಂಗದಲ್ಲಿ ಅನುಮತಿ ನೀಡುವ ಯತ್ನವನ್ನು ಸರ್ಕಾರ ಮಾಡುತ್ತಿದೆಯೇ;

ಈ) ಹಾಗಿದ್ದಲ್ಲಿ ಖಾಸಗಿಯವರಿಗೆ ಪ್ರೋತ್ಸಾಹ ನೀಡಿ ಶಿಫಾರಸ್ಸು ಮಾಡುವ ಅಧಿಕಾರಿಗಳಾರು.

ಉ) ಹಾಗಿದ್ದಲ್ಲಿ ಸಹಕಾರಿ ರಂಗದಲ್ಲಿ ಈ ಸಕ್ಕರೆ ಕಾರ್ಖಾನೆ ಪ್ರಾರಂಭಿಸುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಪಿ.ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ ಯಂತ್ರ ಕಲೆ, ಪರಿಸರ ಹಾಗೂ ಜೀವಿಪರಿಸ್ಥಿತಿ ಶಾಸ್ತ್ರ ರಾಜ್ಯ ಸಚಿವರು) :

ಅ) ಬಂದಿದೆ

ಆ) ಉತ್ತರ ಕನ್ನಡ ಜಿಲ್ಲೆ ಹಳಿಯಾಳ ತಾಲ್ಲೂಕಿನಲ್ಲಿ ಸಹಕಾರಿ ರಂಗದಲ್ಲಿ. ಮೆ: ಮಲೆನಾಡು ಕಾಳಿಕಾಂಬ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲು ದಿನಾಂಕ 13-12-91 ರಂದು ಅರ್ಜಿ ಸಲ್ಲಿಸಿರುತ್ತದೆ. ಇದಕ್ಕೆ ಮುಂಚೆ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲು 3 ಅರ್ಜಿಗಳು ಬಂದಿದ್ದು, ರಾಜ್ಯ ಪರಿಶೀಲನಾ ಸಮಿತಿಯು ದಿನಾಂಕ 7-8-90ರಂದು ನಡೆದ ಸಭೆಯಲ್ಲಿ ಈ 3 ಅರ್ಜಿಗಳ ಪೈಕಿ ಮೆ: ಕೆ.ಎನ್. ಗುರುಸ್ವಾಮಿ ಅಂಡ್ ಕಂಪನಿರವರ ಅರ್ಜಿಯನ್ನು ಅನುಮತಿ ಪತ್ರ ನೀಡುವಿಕೆಗಾಗಿ ಭಾರತ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ನಿರ್ಣಯ ಕೈಗೊಂಡಿತು. ಇದರಂತೆ ಕೆ.ಎನ್. ಗುರುಸ್ವಾಮಿ ಅಂಡ್ ಕಂಪನಿಯವರ ಅರ್ಜಿಯನ್ನು ಭಾರತ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಯಿತು. ನಂತರ ರಾಜ್ಯ ಪರಿಶೀಲನಾ ಸಮಿತಿಯ ದಿನಾಂಕ 17-1-92ರಂದು ನಡೆದ ಸಭೆಯಲ್ಲಿ ಈಗಾಗಲೇ ಮೆ: ಕೆ.ಎನ್. ಗುರುಸ್ವಾಮಿ ಅಂಡ್ ಕಂಪನಿಯವರ ಅರ್ಜಿ ಭಾರ[illegible] ಶಿಫಾರಸ್ಸು ಮಾಡಿರುವುದರಿಂದ ಜಿಲ್ಲೆಯಲ್ಲಿ ಇನ್ನೊಂದು ಸಕ್ಕರೆ ಕಾರ್ಖಾನೆ [illegible] ಅವಕಾಶವಿಲ್ಲವೆಂದು ತೀರ್ಮಾನಿಸಿ ಮೆ: ಮಲೆನಾಡು ಕಾಳಿಕಾಂಬ ಸಹಕಾ[illegible] ಸಕ್ಕರೆ ಕಾರ್ಖಾನೆಯವರ ಅರ್ಜಿಯನ್ನು ಪರಿಗಣಿಸಿರುವುದಿಲ್ಲ, ಅರ್ಜಿದಾರರಿಗೆ ಈ ಸಂಬಂಧದಲ್ಲಿ ಹಿಂಬರಹವನ್ನು ನೀಡಲಾಗಿದೆ. ಸಹಕಾರಿ ಕ್ಷೇತ್ರದ ಉದ್ದೇಶಿತ ಸಹಕಾರ ಸಕ್ಕರೆ ಕಾರ್ಖಾನೆಯ ಅರ್ಜಿಯೂ ಸೇರಿದಂತೆ ತದನಂತರ ಮೆ: ಕೆ.ಎನ್. ಗುರುಸ್ವಾಮಿ ಅಂಡ್ ಕಂಪನಿರವರ ಅರ್ಜಿಯನ್ನು ಭಾರತ ಸರ್ಕಾರ ತಿರಸ್ಕರಿಸಿರುತ್ತದೆ. ಇದಾದ ನಂತರ ಸಹಕಾರಿ ಕ್ಷೇತ್ರದ ಉದ್ದೇಶಿತ ಸಹಕಾರ ಸಕ್ಕರೆ ಕಾರ್ಖಾನೆ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿರುವುದಿಲ್ಲ ಹಾಗೂ ಸಹಕಾರಿ ಕಾಯ್ದೆ ಅಡಿಯಲ್ಲಿ ನೊಂದಣಿ ಮಾಡಿರುವುದಿಲ್ಲ, ಈ ಕಾರಣದಿಂದ ಸಹಕಾರಿ ಕ್ಷೇತ್ರದ ಉದ್ದೇಶಿತ ಕಾರ್ಖಾನೆಯ ಅರ್ಜಿಯನ್ನು ಭಾರತ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವುದಿಲ್ಲ, ಸರ್ಕಾರ ಸಹಕಾರಿ ಕ್ಷೇತ್ರದಲ್ಲಿ ಕಾರ್ಖಾನೆ ಸ್ಥಾಪಿಸುವುದಕ್ಕೆ ಪ್ರೋತ್ಸಾಹ ಕೊಡುತ್ತಿಲ್ಲವೆಂಬುದು ನಿಜವಲ್ಲ,

ಇ) ಇಲ್ಲ

ಈ) ಉದ್ಭವಿಸುವುದಿಲ್ಲ

ಉ) ಪ್ರಸ್ತುತ ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲ್ಲೂಕಿನಲ್ಲಿ ಸಕ್ಕರೆ ಕಾರ್ಖಾನೆ ಸ್ಥಾಪಿಸಲು ಮೆ: ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್‌ರವರ ಅರ್ಜಿಯು ಅನುಮತಿ ಪತ್ರಕ್ಕಾಗಿ ಭಾರತ ಸರ್ಕಾರದ ಮುಂದೆ ಇರುತ್ತದೆ. ಜಿಲ್ಲೆಯಲ್ಲಿ ಬೆಳೆಯಲಾಗುತ್ತಿರುವ ಕಬ್ಬಿನ ಪ್ರಮಾಣ 2500 ಮೆ. ಟನ್ ಸಾಮರ್ಥ್ಯದ ಒಂದು ಕಾರ್ಖಾನೆಗೆ ಸಾಕಾಗುವುದರಿಂದ ಇನ್ನೊಂದು ಕಾರ್ಖಾನೆ ಸ್ಥಾಪಿಸಲು ಅವಕಾಶವಿರುವುದಿಲ್ಲ.

ರಾಷ್ಟ್ರೀಯ ಕ್ರೀಡೆಗಳ ವಸತಿ ಸಮುಚ್ಚಯ ಕುರಿತು

1478 - ಡಾ|| ಎ.ಬಿ. ಮಲಕರೆಡ್ಡಿ (ಯಾದಗಿರಿ) : ಮಾನ್ಯ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರಿನಲ್ಲಿರುವ ಕೋರಮಂಗಲ ಬಡಾವಣೆಯಲ್ಲಿ ರಾಷ್ಟ್ರೀಯ ಕ್ರೀಡೆಗಳ ಬಡಾವಣೆಯಲ್ಲಿ ರಾಷ್ಟ್ರೀಯ ಕ್ರೀಡೆಗಳ ವಸತಿ ಸಮುಚ್ಚಯ ನಿರ್ಮಾಣ ಕಾರ್ಯ ಎಂದು ಆರಂಭವಾಯಿತು.

ಆ) ಈ ನಿರ್ಮಾಣ ಕಾರ್ಯವನ್ನು ಮುಗಿಸಲು ಉದ್ದೇಶಿಸಿರುವ ದಿನಾಂಕ ಯಾವುದು?

ಇ) ಇಂದಿನವರೆಗೆ ಈ ನಿರ್ಮಾಣ ಕಾರ್ಯದಲ್ಲಿ ಎಷ್ಟು ನಿರ್ಮಾಣ ಕಾರ್ಯವನ್ನು ಮುಗಿಸಲಾಗಿದೆ.

ಈ) ಈ ನಿರ್ಮಾಣ ಕಾರ್ಯವು ಅವಧಿ ಅವಲಂಬಿತವಾಗಿದ್ದಿಯೇ?

ಉ) ಹಾಗಿದ್ದರೆ ಪ್ರತಿ ತಿಂಗಳಲೂ ಮುಗಿಸಬೇಕಾದ ಕೆಲಸವೆಷ್ಟು?

ಊ) ಈ ವೇಗದಲ್ಲಿ ಸದರಿ ಯೋಜನೆಯನ್ನು ಫೆಬ್ರವರಿ 1996ರವರೆಗೆ ಮುಗಿಸಲಾಗುವುದೆ.

ಋ) ಒಂದು ವೇಳೆ ಮುಗಿಸದೇ ಹೋದರೆ ರಾಷ್ಟ್ರೀಯ [illegible] ಮುಂದೂಡಲಾಗಿದೆಯೆ.

ೠ) ಇಲ್ಲದೆ ಹೋದರೆ ಪರ್ಯಾಯ ವ್ಯವಸ್ಥೆಗಳೇನಾದರೂ ಈ ಉದ್ದೇಶಕ್ಕೋಸ್ಕರ ಮಾಡಲಾಗುವುದೇ?

ಶ್ರೀ ಬಸವರಾಜ್ ರಾಯರೆಡ್ಡಿ (ವಸತಿ ರಾಜ್ಯ ಸಚಿವರು) :

ಅ) ನಿರ್ಮಾಣ ಕಾರ್ಯದ ವರ್ಕ್ ಆರ್ಡರ್ ಅನ್ನು ದಿನಾಂಕ: 17-2-1995 ರಂದು ನೀಡಲಾಗಿದೆ.

ಆ) ಡಿಸೆಂಬರ್ 15, 1995ರ ಒಳಗೆ ಮುಗಿಸಲು ಯೋಜಿಸಲಾಗಿದೆ.

ಇ) ಮೊದಲನೇ ಹಂತದಲ್ಲಿ 1200 ಮನೆಗಳನ್ನು (ಸೆಕ್ಟರ್ ಎ1, ಬಿ1 ಮತ್ತು ಸಿ1 ಗಳಲ್ಲಿ) ಡಿಸೆಂಬರ್ 15 1995 ರೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ. ಪ್ರಗತಿಯು ಈ ಕೆಳಕಂಡಂತಿದೆ.

ಒಟ್ಟು ಮನೆಗಳ ಸಂಖ್ಯೆ	ಈಗ ಮಾಡಿದ್ದು	ಶೇ. ವಾರು	ವಿತರಣೆ
ಎ1 524	225	42.93	ಈಗ ತೋರಿಸಿರುವ ಮನೆ
ಬಿ1 444	201	45.27	ಗಳಿಗೆ ರೂಫಿಂಗ್ ಹಾಕಲಾಗಿದ್ದು

ಸಿ1 440	174	39.54	ಬೇರೆ ಕೆಲಸಗಳಾದ ಗೋಡೆ ಕಿಟಕಿ, ಬಾಗಿಲು ಫ್ಲೋರಿಂಗ್ ಪೇಟಿಂಗ್ ನೀರು, ವಿದ್ಯುತ್ ಇತ್ಯಾದಿ ಕೆಲಸಗಳು ಜೊತೆಯಲ್ಲಿ ನಡೆಯುತ್ತಿದೆ ಇತರೆ ಕೆಲಸಗಳಾದ ಹೊರ ನೀರು ಸರಬರಾಜು, ಸ್ಯಾನಿಟರಿ, ವಿದ್ಯುತ್, ಸಬ್‌ಸ್ಟೇಷನ್, ಟ್ರಾನ್ಸ್‌ಫಾರಂಗಳು ಇತ್ಯಾದಿ ಪೂರೈಕೆ ಕಾರ್ಯಗಳು ಪ್ರಗತಿಯಲ್ಲಿದೆ 2ನೇ ಹಂತವನ್ನು 60 ವಾರಗಳಲ್ಲಿ ಮುಗಿಸಲು ಯೋಜಿಸಲಾಗಿದೆ. ಈ ಪೈಕಿ ಒಟ್ಟು 1338 ಮನೆಗಳನ್ನು ಕಟ್ಟಲು ಯೋಜಿಸಲಾಗಿದ್ದು ಈಗಾಗಲೇ ಪ್ರಾರಂಭವಾಗಿದೆ. ಕೆಲಸಗಳು ಪಾಯದ್ಯ ನೆಲಮಹಡಿಯ ಹಂತದಲ್ಲಿದೆ.

ಈ) ಹೌದು ಅವಧಿ ಅವಲಂಬಿತವಾಗಿದೆ.

ಉ) ಈ ಕೆಲಸವನ್ನು ವಹಿಸಿರುವ ಗುತ್ತಿಗೆದಾರರು ಪರ್ಟ್ ಚಾರ್ಟ್‌ಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಕೆಲಸದ ವಿವರ ಮತ್ತು ಪೂರ್ಣಗೊಳಿಸಬೇಕಾದ ವಿವರಗಳಿರುತ್ತದೆ. ಸದರಿ ಪರ್ಟ್ ಚಾರ್ಟ್‌ಗಳು ಪ್ರತಿ ತಿಂಗಳು ಮತ್ತು ಪ್ರತಿವಾರ ಪೂರೈಸಬೇಕಾದ ಕೆಲಸಗಳ ಮಾಹಿತಿ ನೀಡುತ್ತವೆ. ಸದರಿ ಪರ್ಟ್ ಚಾರ್ಟ್‌ಗಳಲ್ಲಿ ತೋರಿಸಿದಂತೆ ಮೊದಲನೆಯ ಹಂತದ ಕೆಲಸಗಳು ಡಿಸೆಂಬರ್ 15, 1995 ರೊಳಗೆ ಪೂರ್ಣಗೊಳ್ಳುವುದು.

ಊ) ಮೊದಲನೆ ಹಂತದ ಕೆಲಸಗಳು ಫೆಬ್ರವರಿ 1996ರೊಳಗೆ ಪೂರ್ಣಗೊಳಿಸಬಹುದಾಗಿದೆ.

ಋ) ಪ್ರಶ್ನೆ ಉದ್ಭವಿಸುವುದಿಲ್ಲ

ೠ) ಉದ್ಭವಿಸುವುದಿಲ್ಲ

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ

1477 - ಡಾ|| ಎ.ಬಿ. ಮಲಕರೆಡ್ಡಿ (ಯಾದಗಿರಿ) : ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ ಜೀವಿಶಾಸ್ತ್ರ ಮತ್ತು ಪರಿಸರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವನ್ನು ಎಂದು ಸ್ಥಾಪಿಸಲಾಯಿತು?

ಆ) ಅದರಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರ ಸಂಖ್ಯೆ ಎಷ್ಟು?

ಇ) ಈ ನಿಗಮದ ಕೇಂದ್ರ ಕಛೇರಿಯನ್ನು ಬೆಂಗಳೂರಿನಿಂದ ಸ್ಥಳಾಂತರಿಸುವ ಪ್ರಸ್ತಾವನೆ ಏನಾದರೂ ಇದೆಯೇ?

ಈ) ಹಾಗಿದ್ದಲ್ಲಿ ಯಾವ ಸ್ಥಳಕ್ಕೆ ಸ್ಥಳಾಂತರಿಸಲು ಪರಿಶೀಲಿಸಲಾಗುತ್ತಿದೆ?

ಉ) ಈ ಸ್ಥಳಾಂತರದಿಂದ ಉಂಟಾಗುವ ವೆಚ್ಚವೇನು?

ಊ) ಈ ಸ್ಥಳಾಂತರದಿಂದ ಆಗುವ ಲಾಭವೇನು?

ಋ) ಈ ಸ್ಥಳಾಂತರವನ್ನು ಕುರಿತು ಯಾವುದಾದರೂ ಅಧ್ಯಾಯವನ್ನು ಕೈಗೊಂಡಿದ್ದೀರೆಯೇ?

ಋೂ)ಹಾಗಿದ್ದಲ್ಲಿ ವಿವರಗಳನ್ನು ನೀಡುವುದು.

ಶ್ರೀ ಪಿ.ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ ಜೀವಿಶಾಸ್ತ್ರ ಮತ್ತು ಪರಿಸರ ರಾಜ್ಯ ಸಚಿವರು) :

ಅ) 1975ನೇ ಇಸವಿ ಅಕ್ಟೋಬರ್‌ನಲ್ಲಿ ಸ್ಥಾಪಿಸಲಾಗಿದೆ.

ಆ) 1381

ಇ) ಮತ್ತು ಈ) ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಉ) ಸುಮಾರು ರೂ. 25.00 ಲಕ್ಷಗಳು

ಊ) ಸ್ಥಳಾಂತರದಿಂದ ನೇಕಾರರಿಗೆ ಸೇವೆಯನ್ನು ಉತ್ತಮಪಡಿಸಲು ಮತ್ತು ಅವರ ದೈನಂದಿನ ಸಮಸ್ಯೆಗಳನ್ನು ಬಗೆಹರಿಸಲು ಅನುಕೂಲವಾಗುವುದೆಂದು ಅಭಿಪ್ರಾಯ ಪಡಲಾಗಿದೆ.

ಋ) ಮತ್ತು ಋೂ) ಕೂಲಂಕುಷವಾಗಿ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಹಿಂದುಳಿದ ಹಾಸ್ಟೆಲ್‌ಗಳಿಗೆ, ವಿದ್ಯಾರ್ಥಿಗಳಿಗೆ ಆಹಾರ ಪದಾರ್ಥಗಳನ್ನು ನೀಡುವ **ಬಗ್ಗೆ**

1915 - ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೇ?

ಅ) ಹಿಂದುಳಿದ ಹಾಸ್ಟೆಲ್ಲುಗಳ ವಿದ್ಯಾರ್ಥಿಗಳಿಗೆ ಹಣ ನೀಡುವ ಬದಲು ಆಹಾರ ಪದಾರ್ಥಗಳನ್ನು ನೀಡುವ ಯೋಜನೆ ಸರ್ಕಾರದ ಮುಂದೆ ಇದೆಯೇ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ಹಿಂದುಳಿದ ಹಾಸ್ಟೆಲುಗಳ ವಿದ್ಯಾರ್ಥಿಗಳಿಗೆ ಉಚಿತವಾಗಿ ವಸತಿ ಹಾಗೂ ಊಟದ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಹಣವನ್ನು ವಿದ್ಯಾರ್ಥಿಗಳಿಗೆ ನೀಡುತ್ತಿಲ್ಲ.

ಬೃಹತ್ ಉದ್ದಿಮೆಗಳನ್ನು ಸ್ಥಾಪಿಸುವುದು

1483 - ಶ್ರೀ ಪ್ರತಾಪ್‌ಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೃಹತ್ ಉದ್ದಿಮೆಗಳನ್ನು ಸ್ಥಾಪಿಸುವಾಗ ಜನರನ್ನು ಜನಪ್ರತಿನಿಧಿಗಳನ್ನು ಸಂಘ ಸಂಸ್ಥೆಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಮತ್ತು ಅವಶ್ಯಕತೆಗಿಂತ ಹೆಚ್ಚು ಫಲವತ್ತಾದ ಭೂಮಿಗಳನ್ನು ಸರ್ಕಾರವು ಪರವಾನಿಗೆ ಕೊಟ್ಟು ಪ್ರೋತ್ಸಾಹಿಸುತ್ತದೆ ಎನ್ನುವುದು ನಿಜವೇ?

ಆ) ಹಾಗಿದ್ದಲ್ಲಿ, ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):

ಅ) ಮತ್ತು ಆ) ಕೈಗಾರಿಕೆಗಳಿಗೆ ಬೇಕಾಗುವ ಭೂಮಿಯನ್ನು ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯು ವಿತರಿಸುತ್ತದೆ. ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳಿಗೆ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯು ಬಹುತೇಕವಾಗಿ ತನ್ನ ಕೈಗಾರಿಕಾ ಪ್ರದೇಶಗಳಿಂದ ವಿತರಿಸುತ್ತದೆ. ಭಾರಿ ಕೈಗಾರಿಕೆಗಳಿಗೆ ಮಂಡಳಿಯ ಮತ್ತು ಸರ್ಕಾರದ ಮಂಜೂರಾತಿ ಪಡೆದ ನಂತರ ಅವಶ್ಯಕವಾದಷ್ಟು ಭೂಮಿಯನ್ನು ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯು ಸ್ವಾಧೀನಪಡಿಸಿಕೊಂಡು ವಿತರಿಸುತ್ತದೆ. ಈ ಭೂಮಿಯನ್ನು ಮಂಡಳಿಯು ಯೋಜನೆಗಳನ್ನು

ಏಕಗವಾಕ್ಷಿ ಏಜೆನ್ಸಿ ಅಥವಾ ಉನ್ನತ ಮಟ್ಟದ ಸಮಿತಿಯು ಮಂಜೂರಾತಿ ಮಾಡಿದ ನಂತರವೇ ಕೈಗಾರಿಕೆಗಳಿಗೆ ವಿತರಿಸುವುದು. ಅವಶ್ಯಕವಾದಷ್ಟೇ ಭೂಮಿಯನ್ನು ವಿತರಿಸುವುದನ್ನು ಖಚಿತಪಡಿಸಿಕೊಳ್ಳಲು ಸರ್ಕಾರವು ಭೂಮಿಯ ಲ್ಯಾಂಡ್ ಆಡಿಟ್ ಆಗುವುದನ್ನು ಒತ್ತಾಯಿಸುತ್ತದೆ.

ರಾಜ್ಯದಲ್ಲಿ ವಿದ್ಯಾರ್ಥಿನಿಲಯಗಳ ಸಂಖ್ಯೆ

2039 - ಶ್ರೀ ಕೆ. ಪ್ರತಾಪ್ ಚಂದ್ರಶೆಟ್ಟಿ (ಕುಂದಾಪುರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮೆಟ್ರಿಕ್ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು)?

ಆ) ಸಿಬ್ಬಂದಿಗಳ ಕೊರತೆಯಿಂದ ಪ್ರಾರಂಭವಾಗದೇ ಇರುವ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು?

ಇ) ಈ ಸಿಬ್ಬಂದಿಗಳ ಕೊರತೆಯನ್ನು ಎಂದು ತುಂಬಬಹುದು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ಸಮಾಜ ಕಲ್ಯಾಣ ಇಲಾಖೆಯು ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ 828 ಮೆಟ್ರಿಕ್ ಪೂರ್ವ ಮತ್ತು 107 ಮೆಟ್ರಿಕ್ನಂತರದ ವಿದ್ಯಾರ್ಥಿನಿಲಯಗಳನ್ನು ನಡೆಸುತ್ತಿದೆ. (ಅದರ ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿ ಅನುಬಂಧದಲ್ಲಿ ನೀಡಿದೆ).

ಆ) ಇಲಾಖೆಯಲ್ಲಿ ಸಿಬ್ಬಂದಿಗಳ ಕೊರತೆ ಇದ್ದರೂ ಬೇರೆ ಇಲಾಖೆಗಳಿಂದ ನಿಯೋಜನೆಯ ಮೇರೆಗೆ ಮತ್ತು ಇಲಾಖೆಯ ಇತರ ಸಿಬ್ಬಂದಿಗಳ ವರ್ಗಾವಣೆಗಳ ಮೂಲಕ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಿ ನಡೆಸಲಾಗುತ್ತಿದೆ.

ಇ) ಸಿಬ್ಬಂದಿ ನೇಮಕಾತಿ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಅನುಬಂಧ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗಾಗಿರುವ ಮೆಟ್ರಿಕ್ಪೂರ್ವ ಮತ್ತು ಮೆಟ್ರಿಕ್ನಂತರದ ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿಯ ವಿವರ

ಕ್ರಮ ಸಂಖ್ಯೆ	ಜಿಲ್ಲಾವಾರು ಮತ್ತು ತಾಲ್ಲೂಕುವಾರು	ಮೆಟ್ರಿಕ್ಪೂರ್ವ ವಿದ್ಯಾರ್ಥಿ ನಿಲಯಗಳ ಸಂಖ್ಯೆ			ಮೆಟ್ರಿಕ್ನಂತರದ ವಿದ್ಯಾರ್ಥಿ ನಿಲಯಗಳ ಸಂಖ್ಯೆ
		ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಒಟ್ಟು	
1	2	3	4	5	6
1.	**ಬೆಂಗಳೂರು ನಗರ ಜಿಲ್ಲೆ**	30	-	30	7
	1. ಬೆಂಗಳೂರು ನಗರ	10	-	10	7
	2. ಆನೇಕಲ್ ತಾಲ್ಲೂಕು	7	-	7	-

	3. ಬೆಂಗಳೂರು ಉತ್ತರ ತಾಲ್ಲೂಕು	5	-	5	-
	4. ಬೆಂಗಳೂರು ದಕ್ಷಿಣ ತಾಲ್ಲೂಕು	8	-	8	-
2.	**ಬೆಂಗಳೂರು ಗ್ರಾಮಾಂತರ ಜಿಲ್ಲೆ**	36	1	37	1
	1. ಕನಕಪುರ ತಾಲ್ಲೂಕು	8	-	8	-
	2. ಮಾಗಡಿ ತಾಲ್ಲೂಕು	6	-	6	-
	3. ನೆಲಮಂಗಲ ತಾಲ್ಲೂಕು	3	-	3	-
	4. ದೇವನಹಳ್ಳಿ ತಾಲ್ಲೂಕು	3	-	3	-
	5. ದೊಡ್ಡಬಳ್ಳಾಪುರ ತಾಲ್ಲೂಕು	3	-	3	-
	6. ಹೊಸಕೋಟೆ ತಾಲ್ಲೂಕು	4	-	4	1
	7. ರಾಮನಗರ ತಾಲ್ಲೂಕು	3	1	4	-
	8. ಚನ್ನಪಟ್ಟಣ ತಾಲ್ಲೂಕು	6	-	6	-
3.	**ಚಿತ್ರದುರ್ಗ ಜಿಲ್ಲೆ**	46	-	46	13
	1. ಚಳ್ಳಕೆರೆ ತಾಲ್ಲೂಕು	6	-	6	1
	2. ಚಿತ್ರದುರ್ಗ ತಾಲ್ಲೂಕು	10	-	10	8
	3. ದಾವಣಗೆರೆ ತಾಲ್ಲೂಕು	5	-	5	-
	4. ಹರಿಹರ ತಾಲ್ಲೂಕು	4	-	4	-
	5. ಹಿರಿಯೂರು ತಾಲ್ಲೂಕು	9	-	9	1
	6. ಹೊಳಲ್ಕೆರೆ ತಾಲ್ಲೂಕು	4	-	4	1
	7. ಜಗಳೂರು ತಾಲ್ಲೂಕು	3	-	3	-
	8. ಮೊಳಕಾಲ್ಮೂರು ತಾಲ್ಲೂಕು	3	-	3	1
	9. ಹೊಸದುರ್ಗ ತಾಲ್ಲೂಕು	2	-	2	1
4.	**ಕೋಲಾರ ಜಿಲ್ಲೆ :**	56	-	56	12
	1. ಬಾಗೇಪಲ್ಲಿ ತಾಲ್ಲೂಕು	3	-	3	1
	2. ಬಂಗಾರುಪೇಟೆ ತಾಲ್ಲೂಕು	10	-	10	-
	3. ಚಿಕ್ಕಬಳ್ಳಾಪುರ ತಾಲ್ಲೂಕು	2	-	2	2
	4. ಚಿಂತಾಮಣಿ ತಾಲ್ಲೂಕು	5	-	5	1
	5. ಗೌರಿಬಿದನೂರು ತಾಲ್ಲೂಕು	6	-	6	1
	6. ಗುಡಿಬಂಡೆ ತಾಲ್ಲೂಕು	3	-	3	-
	7. ಕೋಲಾರ ತಾಲ್ಲೂಕು	8	-	8	4
	8. ಮಾಲೂರು ತಾಲ್ಲೂಕು	6	-	6	1
	9. ಮುಳಬಾಗಿಲು ತಾಲ್ಲೂಕು	6	-	6	1

	10.	ಶಿಡ್ಲಘಟ್ಟ ತಾಲ್ಲೂಕು	3	-	3	-
	11.	ಶ್ರೀನಿವಾಸಪುರ ತಾಲ್ಲೂಕು	4	-	4	1
5.	**ತುಮಕೂರು ಜಿಲ್ಲೆ :**		44	-	44	13
	1.	ಚಿಕ್ಕನಾಯಕನಹಳ್ಳಿ ತಾಲ್ಲೂಕು	4	-	4	1
	2.	ಗುಬ್ಬಿ ತಾಲ್ಲೂಕು	5	-	5	-
	3.	ಕೊರಟಗೆರೆ ತಾಲ್ಲೂಕು	3	-	3	1
	4.	ಕುಣಿಗಲ್ ತಾಲ್ಲೂಕು	4	-	4	-
	5.	ಮಧುಗಿರಿ ತಾಲ್ಲೂಕು	8	-	8	2
	6.	ಪಾವಗಡ ತಾಲ್ಲೂಕು	6	-	6	2
	7.	ಶಿರಾ ತಾಲ್ಲೂಕು	6	-	6	1
	8.	ತಿಪಟೂರು ತಾಲ್ಲೂಕು	2	-	2	-
	9.	ತುಮಕೂರು ತಾಲ್ಲೂಕು	4	-	4	6
	10.	ತುರುವೇಕೆರೆ ತಾಲ್ಲೂಕು	2	-	2	-
6.	**ಶಿವಮೊಗ್ಗ ಜಿಲ್ಲೆ :**		40	1	41	4
	1.	ಭದ್ರಾವತಿ ತಾಲ್ಲೂಕು	6	-	6	-
	2.	ಚನ್ನಗಿರಿ ತಾಲ್ಲೂಕು	6	-	6	-
	3.	ಹೊನ್ನಾಳಿ ತಾಲ್ಲೂಕು	5	-	5	-
	4.	ಹೊಸನಗರ ತಾಲ್ಲೂಕು	2	-	2	-
	5.	ಸಾಗರ ತಾಲ್ಲೂಕು	4	1	5	1
	6.	ಶಿಕಾರಿಪುರ ತಾಲ್ಲೂಕು	5	-	5	1
	7.	ಶಿವಮೊಗ್ಗ ತಾಲ್ಲೂಕು	3	-	3	2
	8.	ಸೊರಬ ತಾಲ್ಲೂಕು	7	-	7	-
	9.	ತೀರ್ಥಹಳ್ಳಿ ತಾಲ್ಲೂಕು	2	-	2	-
7.	**ಮೈಸೂರು ಜಿಲ್ಲೆ :**		51	4	55	9
	1.	ಚಾಮರಾಜನಗರ ತಾಲ್ಲೂಕು	7	1	8	3
	2.	ಗುಂಡ್ಲುಪೇಟೆ ತಾಲ್ಲೂಕು	4	-	4	-
	3.	ಹೆಚ್.ಡಿ.ಕೋಟೆ ತಾಲ್ಲೂಕು	4	1	5	1
	4.	ಹುಣಸೂರು ತಾಲ್ಲೂಕು	5	-	5	1
	5.	ಕೊಳ್ಳೇಗಾಲ ತಾಲ್ಲೂಕು	7	1	8	2
	6.	ಕೆ.ಆರ್.ನಗರ ತಾಲ್ಲೂಕು	4	-	4	1
	7.	ಮೈಸೂರು ತಾಲ್ಲೂಕು	4	-	4	1

	8.	ನಂಜನಗೂಡು ತಾಲ್ಲೂಕು	6	-	6	-
	9.	ಪಿರಿಯಾಪಟ್ಟಣ ತಾಲ್ಲೂಕು	2	1	3	-
	10.	ಟಿ. ನರಸೀಪುರ ತಾಲ್ಲೂಕು	4	-	4	-
	11.	ಯಳಂದೂರು ತಾಲ್ಲೂಕು	4	-	4	-
8.	**ಮಂಡ್ಯ ಜಿಲ್ಲೆ**		32	-	32	4
	1.	ಮಂಡ್ಯ ತಾಲ್ಲೂಕು	6	-	6	2
	2.	ಕೆ.ಆರ್.ಪೇಟೆ ತಾಲ್ಲೂಕು	3	-	3	-
	3.	ಮದ್ದೂರು ತಾಲ್ಲೂಕು	5	-	5	-
	4.	ಮಳವಳ್ಳಿ ತಾಲ್ಲೂಕು	9	-	9	2
	5.	ನಾಗಮಂಗಲ ತಾಲ್ಲೂಕು	4	-	4	-
	6.	ಪಾಂಡವಪುರ ತಾಲ್ಲೂಕು	3	-	3	-
	7.	ಶ್ರೀರಂಗಪಟ್ಟಣ ತಾಲ್ಲೂಕು	2	-	2	-
9.	**ಹಾಸನ ಜಿಲ್ಲೆ**		45	-	45	2
	1.	ಆಲೂರು ತಾಲ್ಲೂಕು	2	-	2	-
	2.	ಅರಕಲಗೂಡು ತಾಲ್ಲೂಕು	6	-	6	1
	3.	ಅರಸೀಕೆರೆ ತಾಲ್ಲೂಕು	8	-	8	-
	4.	ಬೇಲೂರು ತಾಲ್ಲೂಕು	6	-	6	
	5.	ಚನ್ನರಾಯಪಟ್ಟಣ ತಾಲ್ಲೂಕು	3	-	3	-
	6.	ಹಾಸನ ತಾಲ್ಲೂಕು	8	-	8	1
	7.	ಹೊಳೆನರಸೀಪುರ ತಾಲ್ಲೂಕು	7	-	7	-
	8.	ಸಕಲೇಶಪುರ ತಾಲ್ಲೂಕು	5	-	5	-
10.	**ಚಿಕ್ಕಮಗಳೂರು ಜಿಲ್ಲೆ**		26	1	27	5
	1.	ಚಿಕ್ಕಮಗಳೂರು ತಾಲ್ಲೂಕು	5	-	5	3
	2.	ಕೊಪ್ಪ ತಾಲ್ಲೂಕು	3	1	4	-
	3.	ಕಡೂರು ತಾಲ್ಲೂಕು	5	-	5	-
	4.	ಮೂಡಿಗೆರೆ ತಾಲ್ಲೂಕು	5	-	5	1
	5.	ನರಸಿಂಹರಾಜಪುರ ತಾಲ್ಲೂಕು	2	-	2	-
	6.	ಶೃಂಗೇರಿ ತಾಲ್ಲೂಕು	1	-	1	-
	7.	ತರೀಕೆರೆ ತಾಲ್ಲೂಕು	5	-	5	1
11.	**ಕೊಡಗು ಜಿಲ್ಲೆ**		18	8	26	2
	1.	ಮಡಿಕೇರಿ ತಾಲ್ಲೂಕು	3	1	4	2

	2. ಸೋಮವಾರಪೇಟೆ ತಾಲ್ಲೂಕು	8	2	10	-
	3. ವೀರರಾಜಪೇಟೆ ತಾಲ್ಲೂಕು	7	5	12	-
12.	**ದಕ್ಷಿಣ ಕನ್ನಡ ಜಿಲ್ಲೆ**	32	8	40	3
	1. ಬೆಳ್ತಂಗಡಿ ತಾಲ್ಲೂಕು	2	2	4	-
	2. ಬಂಟ್ವಾಳ ತಾಲ್ಲೂಕು	3	3	6	-
	3. ಕುಂದಾಪುರ ತಾಲ್ಲೂಕು	4	1	5	-
	4. ಕಾರ್ಕಳ ತಾಲ್ಲೂಕು	6	1	7	-
	5. ಮಂಗಳೂರು ತಾಲ್ಲೂಕು	4	-	4	2
	6. ಪುತ್ತೂರು ತಾಲ್ಲೂಕು	3	-	3	-
	7. ಸುಳ್ಯ ತಾಲ್ಲೂಕು	3	1	4	1
	8. ಉಡುಪಿ ತಾಲ್ಲೂಕು	6	-	6	-
13.	**ಬೆಳಗಾವಿ ಜಿಲ್ಲೆ**	37	-	37	2
	1. ಅಥಣಿ ತಾಲ್ಲೂಕು	2	-	2	-
	2. ಬೈಲಹೊಂಗಲ ತಾಲ್ಲೂಕು	7	-	7	-
	3. ಬೆಳಗಾವಿ ತಾಲ್ಲೂಕು	2	-	2	1
	4. ಚಿಕ್ಕೋಡಿ ತಾಲ್ಲೂಕು	7	-	7	-
	5. ಗೋಕಾಕ್ ತಾಲ್ಲೂಕು	3	-	3	1
	6. ಹುಕ್ಕೇರಿ ತಾಲ್ಲೂಕು	3	-	3	-
	7. ಖಾನಾಪುರ ತಾಲ್ಲೂಕು	5	-	5	-
	8. ರಾಮದುರ್ಗ ತಾಲ್ಲೂಕು	2	-	2	-
	9. ರಾಯಬಾಗ್ ತಾಲ್ಲೂಕು	2	-	2	-
	10. ಸೌಂದತ್ತಿ ತಾಲ್ಲೂಕು	4	-	4	-
14.	**ಬಿಜಾಪುರ ಜಿಲ್ಲೆ**	45	-	45	2
	1. ಬಾದಾಮಿ ತಾಲ್ಲೂಕು	5	-	5	-
	2. ಬಾಗಲಕೋಟೆ ತಾಲ್ಲೂಕು	3	-	3	-
	3. ಬಾಗೇವಾಡಿ ತಾಲ್ಲೂಕು	2	-	2	-
	4. ಬಿಜಾಪುರ ತಾಲ್ಲೂಕು	3	-	3	1
	5. ಬೀಳಗಿ ತಾಲ್ಲೂಕು	2	-	2	-
	6. ಹುನಗುಂದ ತಾಲ್ಲೂಕು	3	-	3	-
	7. ಇಂಡಿ ತಾಲ್ಲೂಕು	8	-	8	-
	8. ಜಮಖಂಡಿ ತಾಲ್ಲೂಕು	3	-	3	-

	9.	ಮುದ್ದೇಬೀಹಾಳ್ ತಾಲ್ಲೂಕು	5	-	5	-
	10.	ಮುಧೋಳ್ ತಾಲ್ಲೂಕು	4	-	4	-
	11.	ಸಿಂಧಗಿ ತಾಲ್ಲೂಕು	7	-	7	1
15.	**ಧಾರವಾಡ ಜಿಲ್ಲೆ**		61	-	61	3
	1.	ಬ್ಯಾಡಗಿ ತಾಲ್ಲೂಕು	6	-	6	-
	2.	ಧಾರವಾಡ ತಾಲ್ಲೂಕು	3	-	3	3
	3.	ಗದಗ ತಾಲ್ಲೂಕು	2	-	2	-
	4.	ಹಾನಗಲ್ ತಾಲ್ಲೂಕು	6	-	6	-
	5.	ಹಾವೇರಿ ತಾಲ್ಲೂಕು	2	-	2	-
	6.	ಹಿರೇಕೆರೂರು ತಾಲ್ಲೂಕು	9	-	9	-
	7.	ಹುಬ್ಬಳ್ಳಿ ತಾಲ್ಲೂಕು	3	-	3	-
	8.	ಕಲಘಟಗಿ ತಾಲ್ಲೂಕು	2	-	2	-
	9.	ಕುಂದಗೋಳ್ ತಾಲ್ಲೂಕು	1	-	1	-
	10.	ರಾಣೆಬೆನ್ನೂರು ತಾಲ್ಲೂಕು	3	-	3	-
	11.	ರೋಣ ತಾಲ್ಲೂಕು	4	-	4	-
	12.	ಶಿರಹಟ್ಟಿ ತಾಲ್ಲೂಕು	5	-	5	-
	13.	ಸವಣೂರು ತಾಲ್ಲೂಕು	3	-	3	-
	14.	ಶಿಗ್ಗಾಂವ ತಾಲ್ಲೂಕು	3	-	3	-
	15.	ಮುಂಡರಗಿ ತಾಲ್ಲೂಕು	5	-	5	-
	16.	ನರಗುಂದ ತಾಲ್ಲೂಕು	2	-	2	-
	17.	ನವಲಗುಂದ ತಾಲ್ಲೂಕು	2	-	2	-
16.	**ಉತ್ತರ ಕನ್ನಡ ಜಿಲ್ಲೆ**		26	-	26	-
	1.	ಅಂಕೋಲಾ ತಾಲ್ಲೂಕು	2	-	2	-
	2.	ಭಟ್ಕಳ ತಾಲ್ಲೂಕು	2	-	2	-
	3.	ಹಳಿಯಾಳ ತಾಲ್ಲೂಕು	3	-	3	-
	4.	ಹೊನ್ನಾವರ ತಾಲ್ಲೂಕು	2	-	2	-
	5.	ಕಾರವಾರ ತಾಲ್ಲೂಕು	2	-	2	-
	6.	ಕುಮಟಾ ತಾಲ್ಲೂಕು	2	-	2	-
	7.	ಮುಂಡಗೋಡ ತಾಲ್ಲೂಕು	3	-	3	-
	8.	ಸಿದ್ದಾಪುರ ತಾಲ್ಲೂಕು	3	-	3	-
	9.	ಶಿರಸಿ ತಾಲ್ಲೂಕು	3	-	3	-

	10. ಸೂಪಾ ತಾಲ್ಲೂಕು	1	-	1	1
	11. ಯಲ್ಲಾಪುರ ತಾಲ್ಲೂಕು	3	-	3	-
17.	**ಗುಲ್ಬರ್ಗಾ ಜಿಲ್ಲೆ**	66	-	66	13
	1. ಅಫಜಲಪುರ ತಾಲ್ಲೂಕು	6	-	6	1
	2. ಆಳಂದ ತಾಲ್ಲೂಕು	5	-	5	1
	3. ಚಿಂಚೋಳಿ ತಾಲ್ಲೂಕು	7	-	7	-
	4. ಚಿತ್ತಾಪುರ ತಾಲ್ಲೂಕು	8	-	8	-
	5. ಗುಲ್ಬರ್ಗಾ ತಾಲ್ಲೂಕು	7	-	7	6
	6. ಜೇವರ್ಗಿ ತಾಲ್ಲೂಕು	4	-	4	1
	7. ಸೇಡಂ ತಾಲ್ಲೂಕು	6	-	6	-
	8. ಷಹಾಪುರ ತಾಲ್ಲೂಕು	4	-	4	2
	9. ಶೋರಾಪುರ ತಾಲ್ಲೂಕು	5	-	5	1
	10. ಯಾದಗೀರ ತಾಲ್ಲೂಕು	14	-	14	1
18.	**ರಾಯಚೂರು ಜಿಲ್ಲೆ**	41	-	41	4
	1. ದೇವದುರ್ಗ ತಾಲ್ಲೂಕು	7	-	7	1
	2. ಕೊಪ್ಪಳ ತಾಲ್ಲೂಕು	3	-	3	-
	3. ಕುಷ್ಟಗಿ ತಾಲ್ಲೂಕು	4	-	4	-
	4. ಲಿಂಗಸುಗೂರು ತಾಲ್ಲೂಕು	4	-	4	1
	5. ಮಾನ್ವಿ ತಾಲ್ಲೂಕು	5	-	5	-
	6. ರಾಯಚೂರು ತಾಲ್ಲೂಕು	4	-	4	1
	7. ಸಿಂಧನೂರು ತಾಲ್ಲೂಕು	4	-	4	1
	8. ಯಲ್ಬುರ್ಗಾ ತಾಲ್ಲೂಕು	6	-	6	-
	9. ಗಂಗಾವತಿ ತಾಲ್ಲೂಕು	4	-	4	-
19.	**ಬಳ್ಳಾರಿ ಜಿಲ್ಲೆ**	41	-	41	3
	1. ಬಳ್ಳಾರಿ ತಾಲ್ಲೂಕು	5	-	5	2
	2. ಹಡಗಲಿ ತಾಲ್ಲೂಕು	6	-	6	-
	3. ಹರಪನಹಳ್ಳಿ ತಾಲ್ಲೂಕು	5	-	5	-
	4. ಹೊಸಪೇಟೆ ತಾಲ್ಲೂಕು	6	-	6	-
	5. ಕೂಡ್ಲಿಗಿ ತಾಲ್ಲೂಕು	6	-	6	-
	6. ಸಂಡೂರು ತಾಲ್ಲೂಕು	4	-	4	1
	7. ಹಗರಿಬೊಮ್ಮನಹಳ್ಳಿ ತಾಲ್ಲೂಕು	5	-	5	-

	8.	ಸಿರುಗುಪ್ಪಾ ತಾಲ್ಲೂಕು	4	-	4	-
20.	**ಬೀದರ್ ಜಿಲ್ಲೆ**		32	-	32	4
	1.	ಬಸವಕಲ್ಯಾಣ ತಾಲ್ಲೂಕು	6	-	6	1
	2.	ಭಾಲ್ಕಿ ತಾಲ್ಲೂಕು	8	-	8	1
	3.	ಬೀದರ್ ತಾಲ್ಲೂಕು	6	-	6	2
	4.	ಹುಮ್ನಾಬಾದ್ ತಾಲ್ಲೂಕು	9	-	9	-
	5.	ಔರಾದ್ ತಾಲ್ಲೂಕು	3	-	3	-
		ಒಟ್ಟು	805	23	828	107

ವಿದ್ಯಾರ್ಥಿನಿಲಯಗಳಿಗೆ ಸರಬರಾಜು ಮಾಡಲಾದ ಅಕ್ಕಿಯ ದರ ಕುರಿತು

2040 - ಶ್ರೀ ಕೆ. ಪ್ರತಾಪ್ ಚಂದ್ರಶೆಟ್ಟಿ (ಕುಂದಾಪುರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿ.ಸಿ.ಎಂ. ಮತ್ತು ಸಮಾಜ ಕಲ್ಯಾಣ ವಿದ್ಯಾರ್ಥಿನಿಲಯಗಳಿಗೆ ಎಷ್ಟೆಷ್ಟು ದರದಲ್ಲಿ ಅಕ್ಕಿಯನ್ನು ಸರಬರಾಜು ಮಾಡಲಾಗುತ್ತಿದೆ?

ಆ) ಬಿ.ಸಿ.ಎಂ. ಮತ್ತು ಸಮಾಜ ಕಲ್ಯಾಣ ವಿದ್ಯಾರ್ಥಿನಿಲಯಗಳ ಸಾದಿಲ್ವಾರು ವೆಚ್ಚವೆಷ್ಟು?

ಇ) ಬಿ.ಸಿ.ಎಂ. ಮತ್ತು ಸಮಾಜ ಕಲ್ಯಾಣ ವಿದ್ಯಾರ್ಥಿನಿಲಯಗಳಿಗೆ ಕೊಡುವ ಅನುದಾನ ಎಷ್ಟು?

ಈ) ಸಾದಿಲ್ವಾರು ವೆಚ್ಚದಲ್ಲಿ ವ್ಯತ್ಯಾಸವಿದ್ದಲ್ಲಿ ಸರಿಪಡಿಸುವ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ಸಮಾಜ ಕಲ್ಯಾಣ ಇಲಾಖೆ

ಸಮಾಜ ಕಲ್ಯಾಣ ಇಲಾಖೆಯಿಂದ ನಡೆಸಲ್ಪಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಲಯಗಳಿಗೆ ರಿಯಾಯಿತಿ ದರದಲ್ಲಿ ಅಂದರೆ ಕೆ.ಜಿ. ಯೊಂದಕ್ಕೆ ರೂ. 3.20 ರಂತೆ ಒಬ್ಬರಿಗೆ ಒಂದು ತಿಂಗಳಿಗೆ 10 ಕೆ.ಜಿ.ಯಂತೆ ಹಾಗೂ ಉಳಿಕೆ 5 ಕೆ.ಜಿ. ಅಕ್ಕಿಯನ್ನು ಆರ್.ಪಿ.ಡಿ.ಎಸ್. ದರದಲ್ಲಿ ನೀಡಲು ಇತ್ತೀಚಿನ ಸುತ್ತೋಲೆ ದಿನಾಂಕ 20-7-95 ಸಂಖ್ಯೆ ಡಿಎಫ್‌ಎಸ್:ಜಾರಿ 11 22:91-92ರಲ್ಲಿ ಸೂಚನೆ ನೀಡಲಾಗಿದೆ.

ಬಿ.ಸಿ.ಎಂ. ಇಲಾಖೆ : ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ವಿದ್ಯಾರ್ಥಿನಿಲಯಗಳಿಗೆ ಪ್ರತಿ ಕೆ.ಜಿ.ಗೆ ರೂ. 7.05 ದರದಲ್ಲಿ ಅಕ್ಕಿಯನ್ನು ಸರಬರಾಜು ಮಾಡಲಾಗುತ್ತಿದೆ.

ಆ) ಸಮಾಜ ಕಲ್ಯಾಣ ಇಲಾಖೆ

ಸಮಾಜ ಕಲ್ಯಾಣ ವಿದ್ಯಾರ್ಥಿನಿಲಯಗಳ ವಸತಿದಾರರಿಗೆ ಸಾದಿಲ್ವಾರು ಅಂದರೆ 'ಕಂಟಿನ್ಜನ್ಸಿ' ವೆಚ್ಚವನ್ನು ನೀಡಲಾಗುತ್ತಿಲ್ಲ. ಆದರೆ 'ಇತರೆ ವೆಚ್ಚ'ದ ರೂಪದಲ್ಲಿ ಪ್ರತಿ ವಸತಿದಾರರಿಗೆ ಮಾಹೆಯಾನ ರೂ. 25.00 ರಂತೆ ಭರಿಸಲಾಗುತ್ತಿದೆ.

ಬಿ.ಸಿ.ಎಂ. ಶಾಖೆ : ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ವಿದ್ಯಾರ್ಥಿನಿಲಯಗಳಿಗೆ ಸಾದಿಲ್ವಾರು ವೆಚ್ಚವೆಂದು ನಿಗಧಿಪಡಿಸಿರುವುದಿಲ್ಲ. ಇತರೆ ವೆಚ್ಚವೆಂದು ಪ್ರತಿ ವಿದ್ಯಾರ್ಥಿಗೆ ಮಾಹೆಯಾನ ರೂ. 5-00ರಂತೆ ನಿಗಧಿಪಡಿಸಲಾಗಿದೆ.

ಇ) ಸಮಾಜ ಕಲ್ಯಾಣ ಇಲಾಖೆ

ಸಮಾಜ ಕಲ್ಯಾಣ ವಿದ್ಯಾರ್ಥಿನಿಲಯಗಳ ನಿರ್ವಹಣೆಗಾಗಿ ಆವರ್ತ ಹಾಗೂ ಅನಾವರ್ತ ವೆಚ್ಚದ ರೂಪದಲ್ಲಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.

ಆವರ್ತ ವೆಚ್ಚ :

1)	ಭೋಜನಾ ವೆಚ್ಚ	-	ರೂ. 250.00ರಂತೆ ಮಾಹೆಯಾನ ಪ್ರತಿ ವಸತಿದಾರರಿಗೆ.
2)	ಉಡುಪು	-	ರೂ. 300.00ರಂತೆ ವಾರ್ಷಿಕವಾಗಿ ಪ್ರತಿ ವಸತಿದಾರರಿಗೆ.
3)	ಪಠ್ಯಪುಸ್ತಕ ಮತ್ತು ಸ್ಟೇಷನರಿ ವೆಚ್ಚ	-	ರೂ. 100.00ರಂತೆ ವಾರ್ಷಿಕವಾಗಿ ಪ್ರತಿ ವಸತಿದಾರರಿಗೆ.
4)	ಇತರೆ ವೆಚ್ಚ	-	ರೂ. 25.00ರಂತೆ ಮಾಹೆಯಾನ ಪ್ರತಿ ವಸತಿದಾರರಿಗೆ.
5)	ಕ್ಷೌರದ ವೆಚ್ಚ	-	ರೂ. 30.00 ರಂತೆ ವಾರ್ಷಿಕವಾಗಿ ಪ್ರತಿ ವಸತಿದಾರರಿಗೆ.
6)	ಹಾಸಿಗೆ ವೆಚ್ಚ	-	ರೂ. 300.00ರಂತೆ ಪ್ರತಿ 3 ವರ್ಷಕ್ಕೊಮ್ಮೆ ಪ್ರತಿ ವಿದ್ಯಾರ್ಥಿಗೆ.
7)	ವಾರ್ತಾ ಪತ್ರಿಕೆ	-	ಪ್ರತಿ ವಿದ್ಯಾರ್ಥಿನಿಲಯಕ್ಕೆ ರೂ. 500 ವಾರ್ಷಿಕ ಮತ್ತು ನಿಯತಕಾಲಿಕ ವೆಚ್ಚ.
8)	ವೈದ್ಯಕೀಯ ವೆಚ್ಚ	-	ಪ್ರತಿ ವಿದ್ಯಾರ್ಥಿನಿಲಯಕ್ಕೆ ವಾರ್ಷಿಕ ರೂ. 1000ರಂತೆ
9)	ಕಲಾಯಿ ವೆಚ್ಚ	-	ಪ್ರತಿ ವಿದ್ಯಾರ್ಥಿನಿಲಯಕ್ಕೆ ರೂ. 600 ವಾರ್ಷಿಕವಾಗಿ
10)	ವಿದ್ಯುಚ್ಛಕ್ತಿ ಮತ್ತು ನೀರಿನವೆಚ್ಚ.	-	ಪ್ರತಿ ವಿದ್ಯಾರ್ಥಿನಿಲಯಕ್ಕೆ ರೂ. 1000 ವಾರ್ಷಿಕವಾಗಿ
11)	ಬಾಡಿಗೆ ವೆಚ್ಚ	-	ಪ್ರತಿ ವಿದ್ಯಾರ್ಥಿನಿಲಯಕ್ಕೆ ಮಾಹೆಯಾನ ರೂ. 1000 ಅಥವಾ ಲೋಕೋಪಯೋಗಿ ಇಲಾಖೆ ನಿಗಧಿಪಡಿಸಿದ ದರ.
12)	ಅರೆಕಾಲಿಕ ಬೋಧಕರ ಗೌರವ ಧನ		1) 50 ಸಂಖ್ಯೆಯುಳ್ಳ ವಿದ್ಯಾರ್ಥಿನಿಲಯಕ್ಕೆ ಪ್ರತಿ ಬೋಧಕರಿಗೆ ರೂ. 125 ಮಾಹೆಯಾನ.

2) 50 ಸಂಖ್ಯೆಗೂ ಹೆಚ್ಚಿರುವ ವಿದ್ಯಾರ್ಥಿ ನಿಲಯದ ಪ್ರತಿ ಭೋಧಕರಿಗೆ ರೂ. 175ರಂತೆ ಮಾಹೆಯಾನ.

ಅನಾವರ್ತ ವೆಚ್ಚ :

1) ಕ್ರೀಡಾ ಸಾಮಗ್ರಿ - ಪ್ರತಿ ವಿದ್ಯಾರ್ಥಿನಿಲಯದ ಪ್ರಾರಂಭಿಸುವಾಗಿ ರೂ. 1000.

2) ಪಾತ್ರೆ ಹಾಗೂ ಪೀಠೋಪಕರಣ - ಪ್ರತಿ ವಿದ್ಯಾರ್ಥಿನಿಲಯ ಪ್ರಾರಂಭಿಸುವಾಗ ರೂ. 40.000

3) ಗ್ರಂಥಾಲಯದ ಪುಸ್ತಕ - ಪ್ರತಿ ವಿದ್ಯಾರ್ಥಿನಿಲಯ ಪ್ರಾರಂಭಿಸುವಾಗ ರೂ. 1500.00

ಬಿ.ಸಿ.ಎಂ. ಇಲಾಖೆ : ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ಮೆಟ್ರಿಕ್ಪೂರ್ವ ವಿದ್ಯಾರ್ಥಿನಿಲಯಗಳಿಗೆ ಅನುದಾನ ನೀಡಿರುವುದಿಲ್ಲ. ಆದರೆ, ಪ್ರತಿ ವಿದ್ಯಾರ್ಥಿಗಳಿಗೆ ಮಾಹೆಯಾನ ರೂ. 250ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಮಾಹೆಯಾನ ರೂ. 300ರಂತೆ ಭೋಜನಾ ವೆಚ್ಚವನ್ನು ಭರಿಸಲಾಗುತ್ತಿದೆ. ಖಾಸಗಿ ಅನುದಾನಿತ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಮಾಹೆಯಾನ 250ರಂತೆ ಪ್ರತಿ ವಿದ್ಯಾರ್ಥಿಗೆ ಪ್ರತಿ ಮಾಹೆಗೆ ಭೋಜನಾ ವೆಚ್ಚಕ್ಕಾಗಿ ಅನುದಾನವನ್ನು ನೀಡಲಾಗುತ್ತಿದೆ.

ಈ) ಸಮಾಜ ಕಲ್ಯಾಣ ಇಲಾಖೆ ಬಿ.ಸಿ.ಎಂ. ಇಲಾಖೆ

ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಲ್ಲಿ ದೊರೆಯುತ್ತಿರುವ ಸೌಲಭ್ಯಗಳಿಗೂ ಮತ್ತು ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ವಿದ್ಯಾರ್ಥಿನಿಲಯಗಳಲ್ಲಿ ನೀಡುತ್ತಿರುವ ಸೌಲಭ್ಯಗಳಲ್ಲಿ ವ್ಯತ್ಯಾಸವಿರುತ್ತದೆ. ತಾರತಮ್ಯವಿರುವ ಅಂದರೆ, ಇತರೆ ವೆಚ್ಚ ಸಮವಸ್ತ್ರ, ಪಠ್ಯಪುಸ್ತಕ ಮತ್ತು ಲೇಖನಸಾಮಗ್ರಿ ವೆಚ್ಚಗಳಲ್ಲಿ ವ್ಯತ್ಯಾಸವಿದ್ದು ಸದರಿ ತಾರತಮ್ಯವನ್ನು ನಿವಾರಿಸುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

1995-96ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ವರ್ಗಾವಣೆಗಳ ಬಗ್ಗೆ

1004 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ನಡೆದಿರುವ ವರ್ಗಾವಣೆಗಳೆಷ್ಟು? ವರ್ಗಾವಾರು ವಿವರ ಒದಗಿಸುವುದು?

ಆ) ವರ್ಗಾವಣೆಯಿಂದ ಸರ್ಕಾರದ ಬೊಕ್ಕಸಕ್ಕೆ ಖರ್ಚಾದ ಹಣವೆಷ್ಟು?

ಇ) ಕೋರಿಕೆಯ ಮೇಲೆ ಆದ ವರ್ಗಾವಣೆ ಎಷ್ಟು? ಹಾಗೂ ಸರ್ಕಾರ ಮಾಡಿರುವ ವರ್ಗಾವಣೆ ಎಷ್ಟು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಂತೆ 1995-96ನೇ ಸಾಲಿನಲ್ಲಿ ನಡೆದಿರುವ ವರ್ಗಾವಣೆಗಳ ವರ್ಗಾವಾರು ವಿವರ ಈ ಕೆಳಕಂಡಂತಿದೆ.

ಎ. ವರ್ಗ	ಬಿ.ವರ್ಗ	ಸಿ.ವರ್ಗ	ಡಿ.ವರ್ಗ	ಒಟ್ಟು
16	14	410	157	597

ಆ)	ರೂ. 22,500	ರೂ. 10,500	ರೂ. 204600	ರೂ 45300	ರೂ. 282900

ಇ)

ಕೋರಿಕೆ					ಸರ್ಕಾರ ಮಾಡಿರುವ ವರ್ಗಾವಣೆ				
ಎ	ಬಿ	ಸಿ	ಡಿ	ಒಟ್ಟು	ಎ	ಬಿ	ಸಿ	ಡಿ	ಒಟ್ಟು
7	8	69	6	90	9	6	341	151	507

ಗೃಹ ಮಂಡಲಿಯ ವರ್ಗಾವಣೆಗಳು

1005 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96ನೇ ಸಾಲಿನಲ್ಲಿ ಗೃಹನಿರ್ಮಾಣ ಮಂಡಳಿಯಲ್ಲಿ ನಡೆದ ಒಟ್ಟು ವರ್ಗಾವಣೆಗಳು ಎಷ್ಟು?

ಆ) ಕೋರಿಕೆಯ ಮೇಲೆ ಆದ ವರ್ಗಾವಣೆಗಳು ಎಷ್ಟು? ಸರ್ಕಾರ ಮಾಡಿರುವ ವರ್ಗಾವಣೆ ಎಷ್ಟು?

ಇ) ಇದರಿಂದ ಸರ್ಕಾರದ ಬೊಕ್ಕಸಕ್ಕೆ ಖರ್ಚಾದ ಹಣವೆಷ್ಟು?

ಶ್ರೀ ಬಸವರಾಜ್ ರಾಯರೆಡ್ಡಿ (ವಸತಿ ರಾಜ್ಯ ಸಚಿವರು) :

ಅ) 179

ಆ) ಕೋರಿಕೆಯ ಮೇಲೆ 24 ನೌಕರರ ವರ್ಗಾವಣೆ ಆಗಿದೆ. ಇದು ಸರ್ಕಾರದಿಂದ ಅನುಮೋದನೆ ಪಡೆದಿದೆ. ಕರ್ನಾಟಕ ಗೃಹ ಮಂಡಳಿ ಸಾಮಾನ್ಯ ವರ್ಗಾವಣೆಯಲ್ಲಿ ತನ್ನ 155 ನೌಕರರನ್ನು ವರ್ಗಾವಣೆ ಮಾಡಿದೆ.

ಇ) ರೂ. 1.91 ಲಕ್ಷಗಳು.

ರಾಜ್ಯದಲ್ಲಿ ಅನಧಿಕೃತ ಗ್ರಾನೈಟ್ ಸಾಗಿಸುತ್ತಿರುವುದು

1305 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ 6 ತಿಂಗಳುಗಳಿಂದ ಅಕ್ರಮವಾಗಿ ಗ್ರಾನೈಟ್ ಕಲ್ಲುಗಳನ್ನು ಸಾಗಿಸುತ್ತಿರುವುದರಿಂದ ವಶಪಡಿಸಿಕೊಂಡಿರುವುದು ನಿಜವೇ?

ಆ) ಹಾಗಿದ್ದಲ್ಲಿ ಯಾವ ಯಾವ ಗಣಿ ಮಾಲೀಕರಿಂದ ಎಷ್ಟೆಷ್ಟು ಗ್ರಾನೈಟ್ ಕಲ್ಲುಗಳನ್ನು ವಶಪಡಿಸಿಕೊಳ್ಳಲಾಗಿದೆ. ಅವುಗಳ ಮೌಲ್ಯವೆಷ್ಟು?

(ಸಂಪೂರ್ಣ ವಿವರ ನೀಡುವುದು)

ಶ್ರೀ ಎಸ್.ಡಿ. ಜಯರಾಮ್ (ಗಣಿ ಮತ್ತು ಭೂವಿಜ್ಞಾನ ಸಚಿವರು) :

ಅ) ನಿಜ

ಆ) ಕಳೆದ 6 ತಿಂಗಳಿಂದ ರಾಜ್ಯದಲ್ಲಿ ಅನಧಿಕೃತವಾಗಿ ಕೆಲಸ ಮಾಡುತ್ತಿದ್ದ ಕೆಲವು ಪ್ರದೇಶಗಳಲ್ಲಿ ಹಾಗೂ ಸಾಗಿಸುತ್ತಿರುವಾಗ ಗ್ರಾನೈಟ್ ದಿಮ್ಮಿಗಳನ್ನು ವಶಪಡಿಸಿಕೊಳ್ಳಲಾಗಿದೆ. ವಶಪಡಿಸಿಕೊಂಡ ಸಮಯದಲ್ಲಿ ಯಾವ ವ್ಯಕ್ತಿಗಳು ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿದ್ದರೆಂಬುದಕ್ಕೆ ನಿಖರವಾದ ಮಾಹಿತಿ ಪಡೆಯಲು ಸಾಧ್ಯವಾಗಲಿಲ್ಲ. ಈಗ ವಶಪಡಿಸಿಕೊಂಡಿರುವ ಒಟ್ಟು 1007 ಕಲ್ಲು ದಿಮ್ಮಿಗಳ ಅಂದಾಜು ಮೌಲ್ಯ ಎರಡು ಕೋಟಿ ರೂಪಾಯಿಗಳಾಗುತ್ತದೆ.

ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ಹುದ್ದೆಗಳ ಬಗ್ಗೆ

1306 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯಲ್ಲಿ ಕಚೇರಿ ಅಧೀಕ್ಷಕರ ಮಂಜೂರಾತಿ ಹುದ್ದೆಗಳ ಸಂಖ್ಯೆ ಎಷ್ಟು?

ಆ) ಅವುಗಳನ್ನು ವರ್ಗ ಮತ್ತು ನೇಮಕಾತಿ ನಿಯಮದ ಪ್ರಕಾರ ಭರ್ತಿ ಮಾಡಲಾಗಿದೆಯೇ?

ಇ) ಇದುವರೆಗೂ ಬಡ್ತಿ ನೀಡಿರುವ ಸಂಖ್ಯೆ ಎಷ್ಟು? ಮಂಜೂರಾಗಿರುವುದಕ್ಕಿಂತಲೂ ಹೆಚ್ಚಾಗಿ ಬಡ್ತಿ ನೀಡಿದ್ದಲ್ಲಿ ಯಾವ ವರ್ಗ ಮತ್ತು ನೇಮಕಾತಿಯನ್ನು ಪಾಲಿಸಿ ಬಡ್ತಿ ನೀಡಲಾಗಿದೆ?

ಈ) ಬಡ್ತಿ ನೀಡಿರುವ ಬಗ್ಗೆ ನ್ಯಾಯಾಲಯದ ಯಾವುದಾದರೂ ತೀರ್ಪು ಬಂದಿದೆಯೇ, ಅದರನ್ವಯ ಏನಾದರೂ ಕ್ರಮ ಕೈಗೊಳ್ಳಲಾಗಿದೆಯೇ?

ಉ) ಮಂಜೂರಾತಿ ಸಂಖ್ಯೆಗಿಂತ ಹೆಚ್ಚಾಗಿ ಬಡ್ತಿ ನೀಡಿದಲ್ಲಿ ನೌಕರರ ಬಗ್ಗೆ ಕೈಗೊಳ್ಳಲಾಗಿರುವ ಕ್ರಮಗಳೇನು, ಅವರನ್ನು ಅಧೀಕ್ಷಕರ ಪದಕ್ರಮ ಪಟ್ಟಿಯಲ್ಲಿ ಸೇರಿಸಲಾಗಿದೆಯೇ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) 31 ಹುದ್ದೆಗಳು

ಆ) ಹೌದು

ಇ) ಇದುವರೆವಿಗೂ ಬಡ್ತಿ ನೀಡಿರುವ ಸಂಖ್ಯೆ 50 ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಆದೇಶದಂತೆ ನೀಡಿರುವ ಬಡ್ತಿಯನ್ನು ಪುನರ್ ಪರಿಶೀಲಿಸುವಾಗ, ಹಿಂಬಡ್ತಿ ನೀಡದೆ ಸರ್ಕಾರದ ಸೂಚನೆಯಂತೆ ತಾತ್ಕಾಲಿಕವಾಗಿ ಬೇರೆ ಬೇರೆ ಇಲಾಖೆಗಳಲ್ಲಿ ಕಾರ್ಯನಿರ್ವಹಿಸಲು ಸೂಚಿಸಿರುವಂತೆ ನಿಯೋಜನೆಯ ಮೇರೆಗೆ ಕಾರ್ಯ ನಿರ್ವಹಿಸುತ್ತಿದ್ದಾರೆ.

ಈ) ಹೌದು, ನ್ಯಾಯಾಲಯವು ತೀರ್ಪು ನೀಡಿದ ಪ್ರಕಾರ ಅರ್ಹರಿರುವವರಿಗೆ ಬಡ್ತಿ ನೀಡಲಾಗಿದೆ.

ಉ) ಆಡಳಿತ ನ್ಯಾಯ ಮಂಡಳಿಯ ಆದೇಶದಂತೆ ಮುಂಬಡ್ತಿ ನೀಡಲಾಗಿದೆ. ಈಗಾಗಲೇ ಮುಂಬಡ್ತಿ ಹೊಂದಿರುವ ಅಂದರೆ ನ್ಯಾಯ ಮಂಡಳಿಯ ಆದೇಶದ ಪೂರ್ವದಲ್ಲಿ ಪ್ರಥಮ ದರ್ಜೆ ಸಹಾಯಕ ವೃಂದದಿಂದ ಬಡ್ತಿ ಹೊಂದಿದ್ದ ನೌಕರರನ್ನು ಹಿಂಬಡ್ತಿ ಮಾಡದೇ ತಾತ್ಕಾಲಿಕವಾಗಿ ನಿಯೋಜನೆ ಮೇರೆಗೆ ಬೇರೆ ಇಲಾಖೆಗೆ ನಿಯೋಜಿಸಲಾಗಿದೆ. ಸದರಿ ನೌಕರರನ್ನು ಪದಕ್ರಮ ಪಟ್ಟಿಯಲ್ಲಿ ಸೇರಿಸಿರುವುದಿಲ್ಲ.

International Air Port at Devanahalli

1033 - Shri N. Rajanna (Bharathinagara) : Will the Minister for Large & Medium Industries be pleased to state?

a) Whether the Govt. has taken up the construction of International airport at Devanahalli near Bangalore.

b) If so, Whether it will be constructed in joint venture.

c) Whether TATA's have been entrusted with the above work?

d) When it would be completed?

Sri R.V. Deshpande (Minister for large and Medium Industries.) :

a) Govt. have entrusted the work of implementation of the project to construct an airport near Devanahalli conforming to international standard to TATA industries Ltd, and Consortium formed by them on 'build-Own-Operate' basis.

b) A decision is yet to be taken, KSIIDC is however considering to participate in the equity of the proposed project.

c) As replied to question A

d) As per the time frame indicated by the TATA consortium, the Airport whould be ready for Cargo Operation in about 36 months and for passenger traffic in about 48 months from the date of giving possession of land.

ಜಂಟಿ ಸಲಹಾ ಸಮಿತಿ ರಚನೆ (ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವುದು)

ಶ್ರೀ ವೈಜನಾಥ್ ಪಾಟೀಲ್ : ಮಾನ್ಯ ಸಭಾಧ್ಯಕ್ಷರೆ,

1995ನೇ ಸಾಲಿನ ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ ತಿದ್ದುಪಡಿ ವಿಧೇಯಕವನ್ನು ಹದಿನೈದು ಜನ ವಿಧಾನಸಭೆಯ ಮತ್ತು ಐದು ಜನ ವಿಧಾನ ಪರಿಷತ್ತಿನ ಒಟ್ಟು ಇಪ್ಪತ್ತು ಸದಸ್ಯರಿರುವ ಸಂಯುಕ್ತ ಪರಿಶೀಲನಾ ಸಮಿತಿಗೆ ಒಪ್ಪಿಸಬೇಕೆಂದು, ಅದಕ್ಕಾಗಿ ವಿಧಾನ ಪರಿಷತ್ತಿನ ಒಪ್ಪಿಗೆಯನ್ನು ಪಡೆಯಬೇಕಾಗಿದೆ. ಈ ಕೆಳಕಂಡ ವಿಧಾನ ಸಭೆಯ ಸದಸ್ಯರುಗಳು ಸಂಯುಕ್ತ ಪರಿಶೀಲನಾ ಸಮಿತಿಯ ಸದಸ್ಯರಾಗಬೇಕೆಂದು ಹಾಗೂ ಸಮಿತಿಯ ವರದಿಯನ್ನು ದಿನಾಂಕ 15-9-95ರೊಳಗಾಗಿ ಸದನಕ್ಕೆ ಮಂಡಿಸಬೇಕೆಂಬ ವಿಚಾರವನ್ನು ಸೂಚಿಸುತ್ತೇನೆ.

ಶ್ರೀಯುತರುಗಳಾದ :

1. ವಿ. ಸೋಮಣ್ಣ
2. ಎಸ್. ರಾಜಣ್ಣ
3. ಶ್ರೀಮತಿ ಡಿ.ಜಿ. ಹೇಮಾವತಿ
4. ಅಶ್ವತ್ಥನಾರಾಯಣ ರೆಡ್ಡಿ
5. ಜೆ.ಎ. ಫೆರ್ನಾಂಡೀಸ್
6. ಕೆ. ಶರಣಪ್ಪ
7. ಕೃಷ್ಣ
8. ಹೆಚ್.ಕೆ. ಕುಮಾರಸ್ವಾಮಿ
9. ಶ್ರೀಮತಿ ಜ್ಯೋತಿ ರೆಡ್ಡಿ
10. ಯು.ಆರ್. ಸಭಾಪತಿ
11. ಬಿ. ಮುನಿಯಪ್ಪ
12. ಸಿ.ಆರ್. ಸಗೀರ್ ಅಹಮ್ಮದ್

13. ರಾಮಲಿಂಗಾರೆಡ್ಡಿ
14. ವೈ. ರಾಮಕೃಷ್ಣ
15. ಎ. ರಾಮದಾಸ್

ಈ 15 ಜನ ಸಮಿತಿಯ ಸದಸ್ಯರಾಗಿರುತ್ತಾರೆ. ಇದಕ್ಕೆ ಸದನವು ತನ್ನ ಒಪ್ಪಿಗೆಯನ್ನು ನೀಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ :

"1995ನೇ ಸಾಲಿನ ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ ತಿದ್ದುಪಡಿ ವಿಧೇಯಕವವನ್ನು ಹದಿನೈದು ಜನ ವಿಧಾನ ಸಭೆಯ ಮತ್ತು 5 ಜನ ವಿಧಾನ ಪರಿಷತ್ತಿನ ಒಟ್ಟು ಇಪ್ಪತ್ತು ಸದಸ್ಯರಿರುವ ಸಂಯುಕ್ತ ಪರಿಶೀಲನಾ ಸಮಿತಿಗೆ ಒಪ್ಪಿಸಬೇಕೆಂದು, ಅದಕ್ಕಾಗಿ ವಿಧಾನ ಪರಿಷತ್ತಿನ ಒಪ್ಪಿಗೆಯನ್ನು ಪಡೆಯಬೇಕಾಗಿದೆ. ಈ ಕೆಳಕಂಡ ವಿಧಾನ ಸಭೆಯ ಸದಸ್ಯರುಗಳು ಸಂಯುಕ್ತ ಪರಿಶೀಲನಾ ಸಮಿತಿಯ ಸದಸ್ಯರಾಗಿರಬೇಕೆಂದು ಹಾಗೂ ಸಮಿತಿಯ ವರದಿಯನ್ನು ದಿನಾಂಕ 15-9-95ರೊಳಗಾಗಿ ಸದನಕ್ಕೆ ಮಂಡಿಸಬೇಕೆಂಬ ವಿಚಾರವನ್ನು ಸಭೆಯು ತೀರ್ಮಾನಿಸುತ್ತದೆ.

ಶ್ರೀಯುತರುಗಳಾದ :

1. ವಿ. ಸೋಮಣ್ಣ
2. ಎಸ್. ರಾಜಣ್ಣ
3. ಶ್ರೀಮತಿ ಡಿ.ಜೆ. ಹೇಮಾವತಿ
4. ಅಶ್ವತ್ಥನಾರಾಯಣ ರೆಡ್ಡಿ
5. ಜೆ.ಎ. ಫರ್ನಾಂಡೀಸ್
6. ಕೆ. ಶರಣಪ್ಪ
7. ಕೃಷ್ಣ
8. ಹೆಚ್.ಕೆ. ಕುಮಾರಸ್ವಾಮಿ
9. ಶ್ರೀಮತಿ ಜ್ಯೋತಿ ರೆಡ್ಡಿ
10. ಯು.ಆರ್. ಸಭಾಪತಿ
11. ಬಿ. ಮುನಿಯಪ್ಪ
12. ಸಿ.ಆರ್. ಸಗೀರ್ ಅಹಮ್ಮದ್
13. ರಾಮಲಿಂಗಾರೆಡ್ಡಿ
14. ವೈ. ರಾಮಕೃಷ್ಣ
15. ಎ. ರಾಮದಾಸ್

ಪ್ರಸ್ತಾಪವು ಅಂಗೀಕರಿಸಲ್ಪಟ್ಟಿತು-ಸದನದ ಅನುಮೋದನೆ ದೊರೆಯಿತು

4. ಅಧ್ಯಕ್ಷರ ಅಪ್ಪಣೆಕೋರಿ ಪ್ರಸ್ತಾಪಿಸಲಾದ ವಿಷಯಗಳು

(ಅ) ಬಳ್ಳಾರಿಯಲ್ಲಿ ಜೂನ್ ತಿಂಗಳಲ್ಲಿ ಬೆಂಕಿ ಆಕಸ್ಮಿಕದಿಂದ 11-12 ಗುಡಿಸಲುಗಳು ಸುಟ್ಟು ಹೋಗಿರುವುದು

ಶ್ರೀ ಎಂ. ದಿವಾಕರ ಬಾಬು (ಬಳ್ಳಾರಿ) : ಮಾನ್ಯ ಅಧ್ಯಕ್ಷರೆ, ಜೂನ್ ತಿಂಗಳಲ್ಲಿ ಬೆಂಕಿ ಆಕಸ್ಮಿಕದಿಂದ 11-12 ಗುಡಿಸಲುಗಳು ಬಳ್ಳಾರಿಯಲ್ಲಿ ಸುಟ್ಟು ಹೋದಮೇಲೆ, ಇಲ್ಲಿಯವರೆಗೂ ಅಲ್ಲಿ ಅವರಿಗೆ ರೀಹ್ಯಾಬಿಲಿಟೇಷನ್ ಮಾಡಿಲ್ಲ. ಅಲ್ಲೇ ಪುನರ್ವಸತಿ ಮಾಡಿಕೊಳ್ಳುತ್ತೇವೆ ಅಂದರೂ ಅದಕ್ಕೂ ಪರ್ಮಿಷನ್ ಕೊಡುತ್ತಾ ಇಲ್ಲ. ಮೊನ್ನೆ ಮುಖ್ಯಮಂತ್ರಿಗಳು ಬಂದಾಗ ಜನತಾ ದರ್ಶನದಲ್ಲಿ ರೆಪ್ರಸೆಂಟೇಷನ್ ಮಾಡಿದಾಗ, ರೀ-ಹ್ಯಾಬಿಲಿಟೇಷನ್ ಮಾಡಬೇಕು ಎಂದು ಹೇಳಿದಾಗ ಅಧಿಕಾರಿಗಳು ಇಲ್ಲ ಎಂದು ಮತ್ತೆ ಬರೆದಿದ್ದಾರೆ. ಈಗ ಅಲ್ಲಿಂದ 3 ತಿಂಗಳಿನಿಂದ ಬಿಸಿಲಿನಲ್ಲಿ, ಮಳೆಯಲ್ಲಿ ಅಲ್ಲೇ ಇದ್ದಾರೆ. ಅವರಿಗೆ ವಸತಿಯನ್ನು ಅಲ್ಲೇ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ನಾನು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದಾಗ, ನಾವು ರೀ-ಹ್ಯಾಬಿಲಿಟೇಷನ್ ಫಾರ್ಮೇಷನ್ ಮಾಡುತ್ತಿದ್ದೇವೆ, ಫಲಾನುಭವಿಗಳ ಪಟ್ಟಿಯನ್ನು ಮಾಡುತ್ತಿದ್ದೇವೆ ಎಂದು ಹೇಳಿದರು. ಆಮೇಲೆ ಪುರಸಭೆಯ ಕಮೀಷನರ್ ಜೊತೆ ಡಿಸ್ಕಸ್ ಮಾಡಿ ಎಂದು ಹೇಳಿದರು. ಮುನಿಸಿಪಲ್ ಕಮೀಷನರಿಗೆ ಲೆಟರ್ ಬರೆದಾಗ, ಅವರು ನಮಗೆ ಸಂಬಂಧ ಇಲ್ಲ, ನಮ್ಮ ಜಮೀನು ಅಲ್ಲ ಅದು ಅಂತ ಹೇಳಿ ಅವರೊಂದು ಲೆಟರ್ ಬರೆದಿದ್ದಾರೆ. ಪುನಃ ಮತ್ತೆ ನಾನು ಜಿಲ್ಲಾಧಿಕಾರಿಗಳಿಗೆ ಸಂಪರ್ಕಿಸಿದರೆ, ಅವರು ನಾವು ಇದನ್ನು ಮಾಡುವುದಕ್ಕೆ ಬರುವುದಿಲ್ಲ, ಇದು, ಅರ್ಬನ್ ಡೆವಲಪ್ಮೆಂಟ್ ಅಥಾರಿಟಿಯವರು ಮತ್ತೆ ಲೇ-ಔಟನ್ನು ಮಾಡಿದಾಗ, ಅದರಲ್ಲಿ ವಸತಿ ಮಾಡಿಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಆಶ್ರಯ ಕಮಿಟಿಯಲ್ಲಿ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಒಬ್ಬೊಬ್ಬರು ಒಂದೊಂದು ಸ್ಟೇಟ್ಮೆಂಟ್ ಕೊಡುತ್ತಿದ್ದಾರೆ. ಇದರ ಬಗ್ಗೆ ನನಗೆ ಅರ್ಥವಾಗುವುದಿಲ್ಲ. ಏಕೆಂದರೆ ಆ ಬಡ ಜನರನ್ನು ಅಲ್ಲೇ ಹಾಗೇ ಬಿಸಿಲಿನಲ್ಲಿ, ಮಳೆಯಲ್ಲಿ ಕೊಲ್ಲಬೇಕು ಎಂದು ಇದ್ದೀರೋ ಆ ಅಧಿಕಾರಿಗಳು ಅವರ ಮನಸ್ಸಿಗೆ ಬಂದ ಹಾಗೆ ಮಾಡುತ್ತಿದ್ದಾರೆ.

ಅಧ್ಯಕ್ಷರು : ನಾನು ಮಾಡಿಸುತ್ತೇನೆ. ಹೆಚ್ಚಿಗೆ ವಿವರ ಬೇಕಾಗಿಲ್ಲ, ಪ್ರಸ್ತಾಪ ಮಾಡುವುದಷ್ಟೆ. ವೈಜನಾಥ್ ಪಾಟೀಲ್ರವರೆ, ಬಳ್ಳಾರಿಯಲ್ಲಿ ಬೆಂಕಿ ಆಕಸ್ಮಿಕ ನಡೆದಿತ್ತು. ಅವರೊಳಗೆ ಕೆಲವರು ನಿರಾಶ್ರಿತರಾಗಿದ್ದಾರೆ. ಅವರಿಗೆ ಇನ್ನೂ ವಸತಿ ಕಲ್ಪಿಸಿಕೊಟ್ಟಿಲ್ಲ. ಯಾರೂ ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳುತ್ತಿದ್ದಾರೆ. ದಯಮಾಡಿ ಆ ಕಡೆ ಗಮನ ಹರಿಸಿ ತಕ್ಷಣ ವ್ಯವಸ್ಥೆ ಏನು ಬೇಕೋ ಅದನ್ನು ಮಾಡಿಕೊಡಿ.

(ಆ) ಪಿ.ಯು.ಸಿ. ಪರೀಕ್ಷೆಯಲ್ಲಿ ನಕಲಿ ಅಂಕಪಟ್ಟಿ ಸೃಷ್ಟಿ

ಶ್ರೀ ಯು.ಆರ್. ಸಭಾಪತಿ (ಉಡುಪಿ) : ಸನ್ಮಾನ್ಯ ಅಧ್ಯಕ್ಷರೆ, ಪಿ.ಯು.ಸಿ. ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿರತಕ್ಕ ಕೆಲವು ವಿದ್ಯಾರ್ಥಿಗಳು, ಅವರನ್ನು ಉತ್ತೀರ್ಣಗೊಳಿಸಿ, ಪಿ.ಯು.ಸಿ. ಮಂಡಲಿಯಲ್ಲಿ ನಕಲಿ ಅಂಕ ಪಟ್ಟಿಯನ್ನು ಸೃಷ್ಟಿಸಿ ಆ ಮೂಲಕ ಕೆಲವು ವಿದ್ಯಾರ್ಥಿಗಳು ಮಣಿಪಾಲದಲ್ಲಿ ಇಂಜಿನೀಯರಿಂಗ್ ಕಾಲೇಜು ಹಾಗೂ ವೈದ್ಯಕೀಯ ಕಾಲೇಜಿನಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಇದರ ಬಗ್ಗೆ 1993ರಲ್ಲಿ ಮಣಿಪಾಲ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರು ಈ ಬಗ್ಗೆ ದೂರು ಕೂಡ ಕೊಟ್ಟಿದ್ದರು. ದೂರು ಕೊಟ್ಟಮೇಲೆ, ಪಿ.ಯು.ಸಿ. ಮಂಡಲಿಯ ಹಿರಿಯ ಅಧಿಕಾರಿಗಳು ಅದರ ಬಗ್ಗೆ ತನಿಖೆ ಮಾಡಿ, ನಕಲಿ ಅಂಕ ಪಟ್ಟಿಯನ್ನು ಸ್ವಾಧೀನಪಡಿಸಿಕೊಂಡು ತನ್ಮೂಲಕ ಅದರ ಬಗ್ಗೆ ತನಿಖೆ ವರದಿ ಸಲ್ಲಿಸಿ 2 ವರ್ಷ ಆದರೂ ಕೂಡ ಈ ಬಗ್ಗೆ ಸಂಬಂಧಪಟ್ಟ ಯಾವುದೇ ಅಧಿಕಾರಿಗಳ ಮೇಲೆ ಕ್ರಮವನ್ನೂ ಕೈಗೊಳ್ಳಲಿಲ್ಲ. ಅನುತ್ತೀರ್ಣರಾದಂತಹ ಯಾವ ವಿದ್ಯಾರ್ಥಿಗಳು ಇದ್ದಾರೆ, ಆ ವಿದ್ಯಾರ್ಥಿಗಳು ಈಗಾಗಲೇ

2ನೇ ವರ್ಷ-3ನೇ ವರ್ಷದ ಇಂಜಿನೀಯರಿಂಗ್ ಹಗೂ ವೈದ್ಯಕೀಯ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಈ ರೀತಿ ಬೋಗಸ್ ಅಂಕ ಪಟ್ಟಿಯ ಪ್ರಮಾಣ ಜಾಸ್ತಿಯಾಗುತ್ತಿದೆ: ಮಾತ್ರವಲ್ಲದೆ ಸರ್ಕಾರ ತನಿಖಾ ವರದಿಯನ್ನು ತೆಗೆದುಕೊಂಡ ನಂತರವೂ ಸಹ ಈ ಬಗ್ಗೆ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ ಅಂತ ಹೇಳಿದರೆ ಇನ್ನು ಮುಂದೆ ಪಿ.ಯು.ಸಿ.ಯಲ್ಲಿ ವಿದ್ಯಾರ್ಥಿಗಳು ಯಾವ ರೀತಿಯಲ್ಲಿ ಹೆಚ್ಚಿನ ಅಂಕಗಳನ್ನು ಪಡೆದಂತಹ ವಿದ್ಯಾರ್ಥಿಗಳಿಗೆ ಆದಂತಹ ಅನಾನುಕೂಲಕ್ಕೆ ಯಾರು ಹೊಣೆಗಾರರು ಆಗುತ್ತಾರೆ? ಇದನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಡಿ. ಮಂಜುನಾಥ್: (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ, ಇದು ನನ್ನ ಇಲಾಖೆಗೆ ಬರುವುದಿಲ್ಲ. ನನ್ನ ಸಹೋದ್ಯೋಗಿ ಶ್ರೀ ಗೋವಿಂದೆಗೌಡರ ಪರವಾಗಿ ಇಷ್ಟು ಆಶ್ವಾಸನೆ ಕೊಡುತ್ತೇನೆ. 2 ವರ್ಷ ಆದರೂ ವಿಚಾರಣೆಯಾಗಿಲ್ಲ ಅಂತ ಹೇಳುತ್ತಿದ್ದಾರೆ, ಶ್ರೀಗೋವಿಂದೆಗೌಡರಿಗೆ ಹೇಳಿ ವಿಚಾರಣ ವರದಿ ಬಂದಿದ್ದಾರೆ, ಅವರ ಮೇಲೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ನಾನು ವ್ಯವಸ್ಥೆ ಮಾಡುತ್ತೇನೆ.

(ಇ) ಬೆಂಗಳೂರು ಬಂದ್‌ಗೆ ಕರೆ ಕೊಟ್ಟಿರುವುದು

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : (ಬಾಗೇಪಲ್ಲಿ) ಸನ್ಮಾನ್ಯ ಸಭಾಧ್ಯಕ್ಷರೆ, ಈ ದಿವಸ ಕೆಲವು ಸಂಘಟನೆಗಳವರು ಬೆಂಗಳೂರು ಬಂದ್‌ಗೆ ಕರೆಯನ್ನು ಕೊಟ್ಟಿದ್ದಾರೆ. ತಮಿಳುನಾಡಿಗೆ 5 ಟಿ.ಎಂ.ಸಿ ಕಾವೇರಿ ನೀರನ್ನು ಸರ್ಕಾರ ಬಿಟ್ಟದ್ದರ ವಿರುದ್ಧ ಪ್ರತಿಭಟನೆ ಮಾಡಲು ಬೆಂಗಳೂರು ಬಂದ್ಗೆ ಕರೆಯನ್ನು ಕೊಟ್ಟಿದೆ. ನಮಗೆ ಬೆಂಗಳೂರು ಬಂದ್ ಎಂದು ಹೇಳಿದರೆ, ಹಿಂದೆ ಇದೇ ಕಾವೇರಿ ನದಿಯ ನೀರಿನ ವಿಷಯವಾಗಿ ಬೆಂಗಳೂರಿಗೆ ಬಂದ್ ಕೊಟ್ಟಂತಹ ಸಂದರ್ಭದಲ್ಲಿ ಬೆಂಗಳೂರು ನಗರದಲ್ಲಿ ನಡೆದಂತಹ ಅಹಿತಕರ ಘಟನೆಗಳು ಮತ್ತು ಅದರಿಂದ ಆದಂತಹ ದುಷ್ಪರಿಣಾಮಗಳು, ಭಾಷೆ ಅಲ್ಪಸಂಖ್ಯಾತರ ಮೇಲೆ ನಡೆದಂತಹ ದಬ್ಬಾಳಿಗಳು ನಮ್ಮ ಮುಂದೆ ಸಾಕ್ಷಿಯಾಗಿ ನಿಂತಿದೆ. ಇವತ್ತು ಕೂಡ ಇದೇ ವಿಷಯದ ಬಗ್ಗೆ ಬಂದ್‌ನ್ನು ಕರೆದಿರತಕ್ಕಂತಹ ಸಂದರ್ಭದಲ್ಲಿ ಬೆಂಗಳೂರು ನಗರದಲ್ಲಿ ಬಂದ್‌ನ ಪರಿಸ್ಥಿತಿ ಏನಾಗಿದೆ? ಅಥವಾ ಬಂದ್ ಎಂದು ಹೇಳಿದರೆ ಕೆಲವರು ಟಾರ್ಗೆಟ್ ಮಾಡಿಕೊಂಡಿರುತ್ತಾರೆ, ಬಂದ್ ಸಂದರ್ಭದಲ್ಲಿ ಅವರ ಮೇಲೆ ಸೇಡು ತೀರಿಸಿಕೊಳ್ಳುವುದಕ್ಕೆ. ಆದ್ದರಿಂದ ಆ ಭಾಷಾ ಅಲ್ಪಸಂಖ್ಯಾತರಿಗೆ ರಕ್ಷಣೆಯನ್ನು ಕೊಡಲಿಕ್ಕೆ ಮತ್ತು ಬಂದ್ ಬಗ್ಗೆ ಮಾನ್ಯ ಗೃಹ ಮಂತ್ರಿಗಳು ಏನೇನು ಕ್ರಮ ತೆಗೆದುಕೊಂಡಿದ್ದಾರೆಂದು ದಯಮಾಡಿ ಸದನಕ್ಕೆ ವಿವರವಾಗಿ ತಿಳಿಸಬೇಕೆಂದು ತಮ್ಮ ಮೂಲಕ ಗೃಹ ಮಂತ್ರಿಗಳನ್ನು ಕೇಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸನ್ಮಾನ್ಯ ಅಧ್ಯಕ್ಷರೇ, ಗೌರವಾನ್ವಿತ ಸದಸ್ಯರಾಗಿರತಕ್ಕಂತಹ ಮಾನ್ಯ ಶ್ರೀ ಶ್ರೀರಾಮರೆಡ್ಡಿಯವರು ಏನು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ, ಬೆಂಗಳೂರು ಬಂದ್ಗೆ ಕೆಲವರು ಕೊಟ್ಟಿರತಕ್ಕಂತಹ ಕರೆಗೆ ಇದುವರೆಗೂ ಸಹಿತ ಯಾವುದೇ ಸಹಕಾರ ಸಿಕ್ಕಿಲ್ಲ, ಸಾರ್ವಜನಿಕ ಜೀವನ ಯಾವುದೇ ರೀತಿಯ ಅಡಚಣೆ ಇಲ್ಲದೆ ನಡೆಯುತ್ತಿದೆ. ಬಿ.ಟಿ.ಎಸ್. ಬಸ್ಸುಗಳು ಓಡಾಡುತ್ತಿವೆ. ಕಛೇರಿಗಳಲ್ಲಿ ಕೆಲಸ ಕಾರ್ಯಗಳು ನಡೆಯುತ್ತಿವೆ. ಬಸ್ಸಳಿಗೆ ಯಾವುದೋ ಒಂದು ಕಡೆ ಮಾತ್ರ ಬೆಳಗಿನ ಜಾವ ಐದೂವರೆ ಗಂಟೆಯಲ್ಲಿ ಯಾರೋ ನಾಲ್ಕು ಐದು ಜನ ಹುಡುಗರು ಕಲ್ಲನ್ನು ಹೊಡೆದರಂತೆ. ಇದನ್ನು ಬಿಟ್ಟರೆ...

ಅಧ್ಯಕ್ಷರು : ಕಳೆದ ಸಾರಿ ನಡೆದಿದ್ದರಿಂದ ಈ ಸಾರಿ ವಿಶೇಷವಾಗಿ ಏನು ಎಚ್ಚರಿಕೆಯನ್ನು ತೆಗೆದುಕೊಂಡಿದ್ದೀರಿ ಅದನ್ನು ಮಾತ್ರ ಹೇಳಿಬಿಡಿ. ವಿವರವಾಗಿ ಏನು ಬೇಡ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಷ್ಟೇ ಇನ್ನೇನೂ ಇಲ್ಲ.

(ಈ) ಮೈಸೂರು ಜಿಲ್ಲೆಗಳ 3 ಜನ ಶಾಸಕರುಗಳಿಗೆ ಆಗಸ್ಟ್ 15ರಂದು ತೋರಿದ ಮಲತಾಯಿ ಧೋರಣೆ.

ಶ್ರೀ ಶಂಕರ್ ಲಿಂಗೇಗೌಡ : ಸನ್ಮಾನ್ಯ ಅಧ್ಯಕರೇ, ನಾವು ಈ ಸ್ವತಂತ್ರ ಭಾರತದ ಪ್ರತಿನಿಧಿಗಳೋ ಅಲ್ಲವೋ ಅನ್ನತಕ್ಕಂತಹ ಪ್ರಶ್ನೆಯನ್ನು ಈ ಸದನದಲ್ಲಿ ಹೇಳಬೇಕಾದುದು ಅನಿವಾರ್ಯವಾಗುತ್ತದೆ. ಕಾರಣವಾದರೂ ಇಷ್ಟೇ; ನಮ್ಮ ಜನತಾ ದಳದ ಸರ್ಕಾರ ಸ್ವಾಭಿಮಾನ, ಸದೃಢ, ಎಲ್ಲ ವರ್ಗದ ಜನರ ಹಿತವನ್ನು ಕಾಪಾಡುತ್ತದೆ ಎಂದು ಘೋಷಣೆಗಳ ಮುಖಾಂತರ ಈ ರಾಜ್ಯದ ಆಡಳಿತದ ಚುಕ್ಕಾಣಿಯನ್ನು ಹಿಡಿದರು. ಆದರೆ ನಮ್ಮ ಮೈಸೂರು ಜಿಲ್ಲೆಯಲ್ಲಿ ನಮ್ಮ ಉಸ್ತುವಾಗಿ ಮಂತ್ರಿಗಳು ನಮಗೆ ಉಸಿರು ಕಟ್ಟುವಂತಹ ವಾತಾವರಣವನ್ನು ನಿರ್ಮಾಣ ಮಾಡಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ನಾವು ಪ್ರಬುದ್ಧ ಮತ್ತು ಪ್ರಜ್ಞಾವಂತ ಮತದಾರ ರಿಂದ ಆಯ್ಕೆಯಾಗಿ, ಎಲ್ಲಾ ವರ್ಗದ ಜನರನ್ನು ಓಲೈಸುವ ದಿಕ್ಕಿನಲ್ಲಿ ಕೆಲಸ ಮಾಡಿಕೊಂಡು ಹೋಗುತ್ತಿದ್ದರೂ ಕೂಡ, ಕುವೆಂಪುರವರು ಒಂದು ಮಾತನ್ನು ಹೇಳುತ್ತಾರೆ. "ಜಾತಿ ಮತಗಳ ಹೊಟ್ಟೆ ತೂರಿ ಎಲ್ಲ ತತ್ವಗಳ ಎಲ್ಲೆ ಮೀರಿ, ದಿಗ್ ದಿಗಂತದ ದತ್ತ ಏರಿ" ಕವೆಂಪುರವರ ವ್ಯಾಖ್ಯಾನವನ್ನು ಸೂಚಿಸಿಕೊಂಡು ಹೋಗತಕ್ಕಂತಹ ನಾವು, ನಮ್ಮನ್ನು 15ನೇ ಆಗಸ್ಟರಂದು ನಡೆದಂತಹ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಮೂರು ಶಾಸಕರಿಗೂ ಕೂಡ ಮಲತಾಯಿ ಧೋರಣೆಯನ್ನು ತೋರುವುದರ ಮೂಲಕ, ನಮ್ಮನ್ನು ಗುರುತಿಸದೇ ನಮ್ಮನ್ನು ಕರೆಯದೇ ಇರತಕ್ಕಂಥದ್ದು ಪ್ರಜಾಪ್ರಭುತ್ವದ ಕಗ್ಗೊಲೆ ಎನ್ನತಕ್ಕಂತಹ ಮಾತನ್ನು ಕೂಡ ಸಿಟ್ಟಾಗಿ ಹೇಳಬೇಕಾಗುತ್ತದೆ. ಇದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ, ಮಂಡ್ಯದಲ್ಲಿ ಬಡವರಿಗೆ ಸೇವೆ ಸಲ್ಲಿಸದ ರಾಜಕಾರಣಿ, ಅಧಿಕಾರಿಯನ್ನು ಒದ್ದು ಹೊರಗಡೆ ಹಾಕಿ ಎನ್ನತಕ್ಕಂತಹ ಮಾತನಾಡಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಪ್ರಜಾ ಪ್ರತಿನಿಧಿಗಳಿಗೆ ಇರಬೇಕಾಗಿರತಕ್ಕಂತಹ ಹಕ್ಕನ್ನು ಇವರು ಖಂಡಿತವಾಗಿಯೂ ಕೊಟ್ಟಿಲ್ಲ, ನಮ್ಮ ಜನತಾ ದಳದವರು ತಮ್ಮ ಮೌಲ್ಯವನ್ನು ಕಳೆದುಕೊಂಡಿದ್ದಾರೆ ಅನ್ನುವ ಮಾತನ್ನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ. 224 ಜನರು ಗೆದ್ದ ಮೇಲೆ ಎಲ್ಲಾ ವರ್ಗದವರು ಜನತೆಯ ಪ್ರತಿನಿಧಿಗಳ ಎಂದು ತಿಳಿದುಕೊಳ್ಳಬೇಕು, ಎಲ್ಲರಿಗೂ ಕೂಡ ಸಮಾನತೆ ಸಿಗಬೇಕೆಂದು ಸ್ಪಷ್ಟವಾಗಿ ನಾನು ಹೇಳಬಯಸುತ್ತೇನೆ. ಇದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಸ್ಪಷ್ಟವಾದಂತಹ ಉತ್ತರವನ್ನು ಕೊಡಲಿ, ಇದಕ್ಕೆ ಅಧಿಕಾರಿಗಳು ಶಾಮೀಲಾಗಿದ್ದಾರೆಯೋ ಅಥವಾ ನಮ್ಮ ಉಸ್ತುವಾರಿ ಮಂತ್ರಿಗಳ ಕೈವಾಡವೋ ಏನು ಎಂಬುದು ನಮಗೆ ಶಂಕೆ ಮೂಡಿದೆ.

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) : ಜಿಲ್ಲಾ ಮಂತ್ರಿಗಳು ಸ್ವಾತಂತ್ರ್ಯ ದಿನಾಚರಣೆಯ ದಿನ ಬಾವುಟವನ್ನು ಹಾರಿಸುವಂಥದ್ದು ಸರ್ಕಾರದ ಆದೇಶವೇ ಇದೆ. ತಮಗೆ ಏನಾಯಿತು ನನಗೆ ಅರ್ಥವಾಗಲಿಲ್ಲ, ಅವರು ಹೇಳಿದ್ದು ಸಹ ನನಗೆ ಅರ್ಥವಾಗಲಿಲ್ಲ. ಬಾವುಟವನ್ನು ಹಾರಿಸುವಂಥದ್ದನ್ನು ಜಿಲ್ಲಾ ಮಂತ್ರಿಗಳು ಮಾಡುತ್ತಾರೆ. ಸಂಬಂಧಪಟ್ಟಂತಹ ಡಿವಿಜನ್ ಕಮಿಷನ್ ಎಲ್ಲಾರಿಗೂ ಆಹ್ವಾನ ಪತ್ರಿಕೆಯನ್ನು ಕಳುಹಿಸುತ್ತಾರೆ. ಈಗ ಏನು ಮಾಡಿದ್ದಾರೆ ಎನ್ನುವುದು ನನಗೆ ಗೊತ್ತಾಗಲಿಲ್ಲ.

ಅಧ್ಯಕ್ಷರು : ಇವರ ಜಿಲ್ಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಆಹ್ವಾನ ಪತ್ರಿಕೆಯಲ್ಲಿ ಜಿಲ್ಲೆಯ ಯಾವ ಶಾಸಕರ ಹೆಸರನ್ನು ಮುದ್ರಣ ಮಾಡಿಲ್ಲ, ಇವರಿಗೆ ಯಾವುದೇ ರೀತಿಯ ಮನ್ನಣೆಯನ್ನು ಕೊಡಲಿಲ್ಲ.

ಶ್ರೀ ಹೆಚ್.ಡಿ. ಬಸವರಾಜ್ : ಮಾನ್ಯ ಅಧ್ಯಕ್ಷರೇ, ಅಧಿಕಾರಿಗಳ ಮೇಲೆ ಹಸ್ತಕ್ಷೇಪ ಮಾಡಲಿಕ್ಕೆ ಹೊರಟ್ಟಿದ್ದಾರೆ ಉಸ್ತುವಾರಿ ಮಂತ್ರಿಗಳು. 10 ದಿವಸಗಳ ಕಾಲ ಅಧಿಕಾರಿಗಳು ಶಾಸಕರ ಜೊತೆಯಲ್ಲಿ ಕೆಸ ಮಾಡಬೇಕೆಂದು ಇದ್ದರೂ ಕೂಡ ಅದನ್ನು ಮಾಡಬಾರದೆಂದು ಹೇಳುತ್ತಿದ್ದಾರೆ.

ಅಧ್ಯಕ್ಷರು : ನಾನು ನಿಮಗೆ ಹೇಳಿದೆ ಕನ್ನಡವನ್ನು ನಿಧಾನವಾಗಿ ಮಾತನಾಡಿ ಎಂದು.

ಶ್ರೀ ವಿ. ಮಾರುತಿರಾವ್ ಪವಾರ್ : ಸನ್ಮಾನ್ಯ ಅಧ್ಯಕ್ಷರೇ, ಕಳೆದ ಅಧಿವೇಶನದ ಸಂದರ್ಭದಲ್ಲಿ ನಮ್ಮ ಕೆ. ಎಸ್. ಈಶ್ವರಪ್ಪನವರು ಈ ವಿಚಾರವನ್ನು ಎತ್ತಿದ್ದಾಗ ಸನ್ಮಾನ್ಯ ಮುಖ್ಯ ಮಂತ್ರಿಗಳೇ ಹೇಳಿದ್ದಾರೆ.

ಅಧ್ಯಕ್ಷರು : ಜಿಲ್ಲಾ ಪಂಚಾಯ್ತಿತಿ ಛೇರ್ಮನ್ನರ ಅಧ್ಯಕ್ಷತೆ, ಜಿಲ್ಲಾ ಮಂತ್ರಿಗಳು ಅಲ್ಲಿ ಬಾವುಟವನ್ನು ಹಾರಿಸುತ್ತಾರೆ, ಇವರ ಹೆಸರುಗನ್ನು ಆ ಆಹ್ವಾನ ಪತ್ರಿಕೆಯಲ್ಲಿ ಸೇರಿಸಿರುವುದಿಲ್ಲ, ಉದ್ದೇಶ ಪೂರ್ವಕವಾಗಿ ನಮ್ಮನ್ನು ಕಡೆಗಣಿಸಿದ್ದಾರೆ ಎನ್ನುವುದು ಅವರ ವಾದ. ನಾವೆಲ್ಲ ಸಿಟಿಯಿಂದ ಆಯ್ಕೆಯಾಗಿರುವಂತಹ ಶಾಸಕರು ಎಂದು. Looking at this invitation, I think there is some truth in what they say. I think the proper authority should be...

ಶ್ರೀ ಹೆಚ್. ಡಿ. ದೇವೇಗೌಡ : ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರು ಇದರೊಳಗೆ ಇಲ್ಲ ಸರ್, ಇನ್ನು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಇದನ್ನು ಕೊಡುತ್ತಾರೆ.

ಅಧ್ಯಕ್ಷರು : ಅದರಲ್ಲಿ, ಇದರಲ್ಲಿ ಎಲ್ಲಿಯೂ ಇಲ್ಲ ಅವರನ್ನು ಬಿಟ್ಟು ಬಿಟ್ಟಿದ್ದಾರೆ ಅವರ ಹೆಸರನ್ನು ಪ್ರಿಂಟ್ಮಾಡಿಲ್ಲ, ನಮ್ಮನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ, ಎನ್ನುವುದು ಅವರ ಅಳಲು. ಶಾಸಕರಾಗಿ ಆಯ್ಕೆಯಾದ ಮೇಲೆ ಅವರನ್ನು ಎಲ್ಲಿಯಾದರೂ ಒಂದು ಕಡೆ ಸೇರಿಸಬೇಕಲ್ಲ.

ಶ್ರೀ ಹೆಚ್.ಡಿ. ದೇವೇಗೌಡ : ಬಾವುಟ ಹಾರಿಸುವುದರಲ್ಲಿ ಯಾರ ಹೆಸರನ್ನು.. ಜಿಲ್ಲಾ ಅಧ್ಯಕ್ಷರು ಹೆಸರು ಇಲ್ಲ, ಸಾಂಸ್ಕೃತಿಕ ಕಾರ್ಯಕ್ರಮದ ವಿಷಯವನ್ನು ಹೇಳುತ್ತಿದ್ದೀರಿ, ಸಾಂಸ್ಕೃತಿಕ ಕಾರ್ಯಕ್ರಮದ ವಿಷಯದಲ್ಲಿ ನಾನು ಸಂಬಂಧಪಟ್ಟಂತಹ ಜಿಲ್ಲಾಧಿಕಾರಿಗಳಿಂದ ವಿಷಯವನ್ನು ತರಿಸುತ್ತೇನೆ. ಸಾಮಾನ್ಯವಾಗಿ ಯಾವ ಶಾಸಕರ ಹೆಸರನ್ನು ಹಾಕುವುದಿಲ್ಲ, ನಾವು ಪ್ರಯತ್ನ ಮಾಡಿದ್ದೇವೆ, ಅದು ಗವರ್ನಮೆಂಟ್ ಆಫ್ ಇಂಡಿಯಾ ಫ್ಲಾಗ್ ಕೋಡ್ ಅಂಡ್ ರೂಲ್ಸ್ ಅಡ್ಡ ಬಂತು ಎಂದು ಹೇಳಿ....

ಶ್ರೀ ಹೆಚ್.ಡಿ. ಬಸವರಾಜ್ : ಫ್ಲಾಗ್ ಹಾರಿಸುವುದು ನಮ್ಮ ಹಕ್ಕು, ಆ ಹಕ್ಕನ್ನು ಮೊಟಕು ಮಾಡಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ : ಫ್ಲಾಗ್ ಹಾಯಿಸ್ಟಿಂಗ್ ಹಕ್ಕಲ್ಲ, ಹಾಕುವುದಕ್ಕೆ ಬರುವುದಿಲ್ಲ, ಅವರು ಆಹ್ವಾನ ಪತ್ರಿಕೆಯನ್ನು ಕಳುಹಿಸಿಲ್ಲವೆಂದು ಹೇಳಲಿಲ್ಲ, if it is not sent, definitely it will be a lapse.

ಈಗಲೇ ವಿಚಾರ ಮಾಡುತ್ತೇನೆ. I Willcome back to the House.

(ಉ) ಮಾಜಿ ಮಂತ್ರಿ ಸಾಗರವಳ್ಳಿ ರೇವಣ್ಣನವರನ್ನು ಜೈಲಿನಿಂದ ಬಿಡುಗಡೆ ಮಾಡುವ ಬಗ್ಗೆ

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಸನ್ಮಾನ್ಯ ಅಧ್ಯಕ್ಷರೇ, ಸಾಗರವಳ್ಳಿ ರೇವಣ್ಣ ಎಂಬುವರು ಬಹಳ ಹಳೆಯ ಸದಸ್ಯರು, ಹಾಗೂ ಮಾಜಿ ಬಂದೀಖಾನೆ

ಮಂತ್ರಿಯಾಗಿದ್ದರು, ಕೃಷಿ ಮಂತ್ರಿಯಾಗಿದ್ದರು, ಕೆಲವೊಂದು ಘಟನೆಯಾಗಿ ಇವತ್ತು ಅವರು ಜೈಲಿನಲ್ಲಿದ್ದಾರೆ. ಪಾಪ ಅವರಿಗೆ ವಯಸ್ಸಾಗಿದೆ, ತೊಂದರೆಯಾಗುತ್ತದೆ, ಅವರನ್ನು ಬಿಡಿಸಬೇಕೆಂದು...

ಅಧ್ಯಕ್ಷರು : ಬಿಡುಗಡೆ ಮಾಡಿದ್ದಾರೆಂತಲ್ಲಾ ಬಿಡಿ, ಇನ್ನು ಏನು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಇನ್ನು ಬಿಡುಗಡೆ ಮಾಡಿಲ್ಲ. ಅದಕ್ಕೆ ದಯವಿಟ್ಟು ಬಿಡುಗಡೆ ಮಾಡಿ, ಬಿಡುಗಡೆಯಾಗದೇ ಹೆಚ್ಚು ಕಡಿಮೆಯಾದರೆ ಪಾಪ. ಅವರು ಮಾಜಿ ಮಂತ್ರಿಯಾಗಿದ್ದಾರೆ ಅವರನ್ನು ಬಿಡುಗಡೆ ಮಾಡಿ.

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೇ, ಸಾಗರವಳ್ಳಿ ರೇವಣ್ಣನವರ ಮೇಲೆ ಶ್ರೀ ಗುರುಪಾದಪ್ಪ ನಾಗಮಾರಪಲ್ಲಿಯವರಿಗೆ ಎಷ್ಟು ಅನುಕಂಪವಿದೆಯೋ ಅಷ್ಟೇ ಅನುಕಂಪ ನಮಗೂ ಇದೆ. ಅದರೆ ಅವರು ಹೇಳತಕ್ಕಂತಹ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಇಲ್ಲಿ ಬಂದಿರುವ ಸಮಸ್ಯೆ ಏನೆಂದರೆ ಈಗಾಗಲೇ 5 ವರ್ಷಗಳಿಂದ ಆ ನಾಲೆಯ ಮಧ್ಯದಲ್ಲಿ ಎಲ್ಲಾ ಕಡೆ ಅಗೆದುಕೊಂಡು ಹೋಗಿದ್ದಾರೆ. ಆ ಮಧ್ಯ ಸ್ಮಾಲ್‌ಒಂದು ಸಣ್ಣ ಬಿಟ್ ಉಳಿದಿದೆ, ಹೈ ಕೋರ್ಟಿಗೆ ಹೋದರು, ಹೈ ಕೋರ್ಟ್ನಲ್ಲಿ ರದ್ದಾಯಿತು. ಅವರ ಪರವಾಗಿ ಆಗಿಲ್ಲ, ಹಿಂದಿನ ನೀರಾವರಿ ಮಂತ್ರಿಗಳು ಸ್ಟೇ ಯನ್ನು ತೆಗೆದುಕೊಂಡರು, ಸ್ಟೇ ಯನ್ನು ಮೂರೇ ದಿನಕ್ಕೋ ಎರಡು ದಿನಕ್ಕೋ-24 ಗಂಟೆಗಳಲ್ಲಿ ಆ ಸ್ಟೇಯನ್ನು ವೇಕೇಟ್ ಮಾಡಿದರು. ಮಾಜಿ ಮುಖ್ಯ ಮಂತ್ರಿಗಳು ಇಲ್ಲಿಯೇ ಕುಳಿತಿದ್ದಾರೆ, ನನ್ನ ಹತ್ತಿರ ಬಂದರು ನಾನು ಅದನ್ನು ತರಿಸಿ ನೋಡಿದೆ, ಇದು ಸಾಧ್ಯವಾಗುವುದಿಲ್ಲ. ಅದರೆ ಅವರು ಹಠಮಾರಿತನ ಮಾಡಿ

ನಾವು ನಾಲೆಯನ್ನು ಬೇರೆ ಕಡೆ ಬದಲಾವಣೆ ಮಾಡಲಿಕ್ಕೆ ಆಗುವುದಿಲ್ಲ. ಅಲ್ಲಿ ಹೋಗಿ ಕೆಲಸ ಮಾಡಕೂಡದು ಎಂದು ಅಡೆತಡೆ ಮಾಡಲಿಕ್ಕೆ ಹೋಗಿದ್ದಾರೆ, ಅಧಿಕಾರಿಗಳು ವಿನಯದಿಂದ ಹೇಳಿದ್ದಾರೆ ನಾನು ಜೈಲಿಗೆ ಹೋಗುತ್ತೇನೆಂದ ಹಠಮಾಡಿಕೊಂಡು ಕುಳಿತುಕೊಂಡರೆ. ಹೋಗಿಯಪ್ಪ ಎಂದು ನಿನ್ನೇ ಹೇಳಿದರು. ನಾನು ಹೋಗುವುದಿಲ್ಲವೆಂದರು. ಕುಳಿತಿದ್ದಾರೆ ಇವತ್ತು ಬೆಳಗ್ಗೆ ವಿತ್ ಡ್ರಾ ಮಾಡಿ ಗೌರ್ನಮೆಂಟ್ ಆರ್ಡರ್‌ನ್ನು ವಿತ್ ಡ್ರಾ ಮಾಡುತ್ತೇವೆ, ಆ ಎಫ್.ಐ.ಆರ್.ನ್ನು ವಿತ್‌ಡ್ರಾ ಮಾಡುತ್ತೇವೆ ನೀವು ಏನು ಅದರ ಒಳಗಡೆ ಪ್ರವೇಶ ಮಾಡಬೇಡಿ ಎಂದರೆ ಕೇಳದೇ ಕುಳಿತುಕೊಳ್ಳುತ್ತೇವೆಂದರೆ ನಾವು ಏನು ಮಾಡುವುದಕ್ಕೆ ಆಗುವುದಿಲ್ಲ. Government has taken a decision not to file F.I.R.

ಅವರ ಮೇಲೆ ಅದೂ ಹಾಕಬೇಡಿ ಎಂದು ಹೇಳಿದ್ದೇವೆ. ಇನ್ನೇನು ಮಾಡಬೇಕು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಬಿಟ್ಟು ಬಿಡಿ ಎಂದು ಅಷ್ಟೆ. ಅಲ್ಲ ಜಾಮೀನು ಕೊಡಿ ಎಂದರು, ಅದಕ್ಕೆ..

ಶ್ರೀ ಹೆಚ್.ಡಿ. ದೇವೇಗೌಡ : ನನ್ನದೇ ಕಾರನ್ನು ಕಳುಹಿಸುತ್ತೇನೆ, ನೀವೇ ಅವರನ್ನು ಕರೆದುಕೊಂಡು ಹೋಗಿ ಅವರ ಊರಿಗೆ ಬಿಟ್ಟು ಬನ್ನಿ ಅಷ್ಟೆ.

(ಊ) ದಿನಾಂಕ. 10-8-95ರಂದು ಪುಣಜನೂರಿನಲ್ಲಿ ದಂತಚೋರ ವೀರಪ್ಪನಿಂದ 11 ಜನರ ಕೊಲೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರವೂ ಸೇರಿದಂತೆ 10-8-1995ರಂದು ಕಾಡುಗಳ್ಳ ದಂತಚೋರ ವೀರಪ್ಪನ್ ಪುಣಜನೂರಿನಲ್ಲಿ ಹಾಗೂ ದೇಡುಗುಲಿಯಲ್ಲಿ ಒಟ್ಟು 11 ಜನರನ್ನು ಕೊಂದು, ಇಡೀ ಪ್ರದೇಶದ ಜನರು ಭಯಭೀತಿಯಿಂದ ಅತ್ಯಂತ ಕಂಗಾಲಾಗಿದ್ದಾರೆ. ಈ ಪರಿಸ್ಥಿತಿ,

ಇದು ಮೊದಲೇ ಅಲ್ಲ, ಈ ಕಾಡಿನಲ್ಲಿ ಕೊಳ್ಳೇಗಾಲದಿಂದ ಹಿಡಿದು ಚಾಮರಾಜನಗರದ ಕೊನೆಯ ಗಡಿಯವರೆಗೂ, ಸುಮಾರು ಹತ್ತಾರು ವರ್ಷಗಳಿಂದ ಇದು ನಡೆದುಕೊಂಡೆ ಬಂದಿದೆ.

11.40 ಎ.ಎಂ.

ಬಂದಂಥ ಎಲ್ಲಾ ಸರ್ಕಾರಗಳು ತಮ್ಮ ಸರ್ವ ಪ್ರಯತ್ನಗಳನ್ನು ಮಾಡುತ್ತಿವೆ. ನಾವು ಈಗ ಹಿಡಿಯುತ್ತಿದ್ದೇವೆ. ಇನ್ನು ಕೆಲವೇ ದಿನಗಳಲ್ಲಿ ಹಿಡಿಯುತ್ತಿದ್ದೇವೆಂದು ಹೇಳುತ್ತಿದ್ದರೂ ಈ ಬಗ್ಗೆ ತೀವ್ರವಾಗಿ ಒಂದೂ ಪ್ರಯತ್ನವನ್ನು ಇದುವರೆಗೂ ಮಾಡಲಿಲ್ಲ. ಇತ್ತೀಚೆಗೆ ನಾನು ಮತ್ತು ನಮ್ಮ ವಿರೋಧ ಪಕ್ಷದ ನಾಯಕರಾದ ಶ್ರೀ ಯಡಿಯೂರಪ್ಪನವರು ಒಟ್ಟಿಗೆ ಹೋಗಿ ಆ ಸ್ಥಳವನ್ನು ಪರಿಶೀಲನೆ ಮಾಡಿಕೊಂಡು ಬಂದಿದ್ದೇವೆ. ಜೊತೆಗೆ ಸರ್ಕಾರದ ಗೃಹ ಮಂತ್ರಿಗಳು, ಹಣಕಾಸಿನ ಸಚಿವರು. ಆರೋಗ್ಯ ಸಚಿವರು ಅಲ್ಲಿ ಹೋಗಿದ್ದಾರೆ ಇದು ಹೋಗತಕ್ಕದ್ದು ಪರಿಹಾರ ಕೊಡತಕ್ಕದ್ದು ಒಂದು ವಿಧ. ಆದರೆ ಈ ಸಮಸ್ಯೆಯನ್ನು ಬಗೆಹರಿಸತಕ್ಕ ಬಗ್ಗೆ ಸರ್ಕಾರ ಮಾಡಿರುವ ತೀವ್ರವಾದ ಕ್ರಮಗಳು ಏನೇನು? ಈ ಪರಿಸ್ಥಿತಿ ಬಗ್ಗೆ ಚಿಂತನೆ ಮಾಡಿದ್ದೀರಾ ಎನ್ನುವುದು ಒಂದು. ಗಡಿ ಭದ್ರತಾ ಪಡೆಯನ್ನು ಒಂದು ಕಡೆ ತರಿಸಿದ್ದಿರಿ, ಮತ್ತೆ ಕೇಂದ್ರ ಸರ್ಕಾರದವರು ಅದನ್ನು ಹಿಂತೆಗೆದುಕೊಂಡಿದ್ದಾರೆ.

ಮತ್ತೊಂದಕ್ಕೆ ಇಂಡೋ ನೇಪಾಳ ರಿಜಿಮೆಂಟರಿ ಕರೆಯುತ್ತೇವೆಂದು ಮಾನ್ಯ ಗೃಹ ಮಂತ್ರಿಗಳು ಹೇಳಿದ ಹೇಳಿಕೆ ಬಂದಿತ್ತು. ಅವರ ಒಪ್ಪಿಗೆಯಾಗಿದೆ. ನಮಗೆ ಅನುಕೂಲವಾಗುತ್ತದೆಂದು ಹೇಳಿದ್ದಾರೆ. ಈ ಪರಿಸ್ಥಿತಿ ಎಲ್ಲವನ್ನು ನೋಡಿದಾಗ ಸರ್ಕಾರದ ಜವಾಬ್ದಾರಿಯನ್ನು ಪ್ರಶ್ನೆ ಮಾಡುತ್ತೇನೆ, ಅವರು ಪ್ರಯತ್ನ ಮಾಡಿಲ್ಲವೆಂದು ಆರೋಪಣೆ ಮಾಡುತ್ತಿಲ್ಲ, ಆದರೆ ಈ ಪರಿಸ್ಥಿತಿಯನ್ನು ಸರಿಪಡಿಸುವುದಕ್ಕೆ ವೀರಪ್ಪನ್ ಹಿಡಿಯುವುದಕ್ಕೆ ತಮಿಳ್ನಾಡು ಸರ್ಕಾರಕ್ಕೂ ಕರ್ನಾಟಕ ಸರ್ಕಾರಕ್ಕೂ ಹೊಂದಾಣಿಕೆ ಏನು? ನಿಮ್ಮ ಯೋಜನೆಗಳು ಏನು? ಈಗ ಗಡಿ ಭದ್ರತಾ ಪಡೆ ಹಿಂದೆ ಹೋದಮೇಲೆ ನಿಮ್ಮ ಇವತ್ತಿನ ಪರಿಸ್ಥಿತಿ ಏನು? ಮತ್ತು ನಿಮ್ಮ ಟಾಸ್ಕಫೋರ್ಸ್ ಏನಿದೆ ಆ ವ್ಯವಸ್ಥೆಯಲ್ಲಿ ಜನಸಂಖ್ಯೆ ಬಹಳ ಕಡಿಮೆ. ಕೇವಲ 500 ಜನ ಮಾತ್ರ ಇದ್ದಾರೆ. ಆ ಜನಸಂಖ್ಯೆಯನ್ನು ಹೆಚ್ಚಿಸಿ ನಿಮ್ಮ ಹೊಸ ಯೋಜನೆಗಳನ್ನು ಅನೇಕ ಕಡೆ ನಾನು ಕೇಳಿದ್ದೇನೆ, ಮುಖ್ಯ ಮಂತ್ರಿಗಳು ಒಂದು ಹೇಳಿಕೆ ಕೊಟ್ಟರು, ತಾವು ಒಂದು ಹೇಳಿಕೆ ಕೊಟ್ಟಿರಿ. ಹೊಸ ಯೋಜನೆ ಏನು ಇಟ್ಟುಕೊಂಡಿದ್ದೇವೆ ಆ ಯೋಜನೆ ಪ್ರಕಾರ ನಾವು ಹಿಡಿದೇಶ ಹಿಡಿಯುತ್ತೇವೆಂಬ ಭರವಸೆ ಕೊಟ್ಟಿದ್ದರು. ಈ ಪ್ರಕಾರ ನೋಡಿದರೆ ನನಗನ್ನಿಸುತ್ತದೆ, ಇದುವರೆಗೆ ಸುಮಾರು 108 ಜನ ಸತ್ತಿದ್ದಾರೆ. ಅದರಲ್ಲಿ ಉನ್ನತಾಧಿಕಾರಿಗಳು ಇದ್ದಾರೆ, ಮತ್ತು ಅಮಾಯಕರು ಇದ್ದಾರೆ. ಇದೆಲ್ಲ ಪರಿಸ್ಥಿತಿ ನೋಡಿದಾಗ ಇದು ಬಹಳ ಗಂಭೀರವಾದ ಪರಿಸ್ಥಿತಿ. ಈ ಸದನದಲ್ಲಿ ಹತ್ತಾರು ಬಾರಿ ಇದನ್ನು ಪ್ರಸ್ತಾಪ ಮಾಡಿದ್ದೇವೆ. ಇದು ಬರೀ ಪ್ರಸ್ತಾಪದಲ್ಲಿದೆ. ಸರ್ಕಾರವೇ ಇಷ್ಟು ಹೊತ್ತಿಗೆ ಸದನದಲ್ಲಿ ಒಂದು ಹೇಳಿಕೆ ಕೊಡಬೇಕಾಗಿತ್ತು. ನಾನು ನಿಮ್ಮನ್ನು ಆಕ್ಷೇಪಣೆ ಮಾಡಿ ಮಾತನಾಡುತ್ತೇನೆಂದು ಅಲ್ಲ, ಇದು ಎಲ್ಲರಿಗೂ ಸೇರುತ್ತದೆ. ಇದು ವಿರೋಧ ಪಕ್ಷವಾಗಲಿ ಆಡಳಿತ ಪಕ್ಷವಾಗಲಿ, ನಾನು ಪಕ್ಷಾತೀತವಾಗಿ ಮಾತನಾಡುತ್ತಿದ್ದೇನೆ. ಈ ಬಗ್ಗೆ ರಾಜ್ಯದ ಜನತೆಗೆ ಭಯಭೀತಿ ವಾತಾವರಣ ಏನು ಉಂಟಾಗಿದೆ ಈ ವಾತಾವರಣವನ್ನು ಹೋಗಲಾಡಿಸುವುದಕ್ಕೆ ಯಾವ ಕ್ರಮವನ್ನು ಸರ್ಕಾರ ತೆಗೆದುಕೊಂಡಿದೆ? ಪುಣಜೂರು ಜನತೆಗೆ ತಾವು 50 ಸಾವಿರ ರೂಪಾಯಿ ಪರಿಹಾರ ಕೊಟ್ಟಿರಿ. ಅದೇ ಬೇಡಗುಣಿಯಲ್ಲಿ ಏನು ಸತ್ತಿದ್ದಾರೆ ಅಲ್ಲಿ ಸತ್ತಿರತಕ್ಕ ಜನರು ನಮ್ಮವರೆ, ನಮ್ಮ ಕರ್ನಾಟಕದವರೆ. ಆದರೆ ಅವರಿಗೆ ನೀವು ಪರಿಹಾರ ಕೊಡಲಿಲ್ಲ, ಇವರಿಗೆ ಮಾತ್ರ ಒಬ್ಬರಿಗೆ 50 ಸಾವಿರ ರೂಪಾಯಿ ಪರಿಹಾರ ಕೊಟ್ಟಿದ್ದೀರಿ. ಪುಣಜೂರಿನವರಿಗೆ ಕೊಟ್ಟಿಲ್ಲ,

ಆದರೆ ಬೇಡಗುಣೆಯ ಜನರಿಗೆ ಪರಿಹಾರ ಕೊಡಲಿಲ್ಲ. ಆ ಗಡಿ ಪ್ರದೇಶದಲ್ಲಿ ಸುಮಾರು 120 ಹಳ್ಳಿಯ ಜನರು ಬರುತ್ತಾರೆ. ಕೊಳ್ಳೇಗಾಲದಿಂದ ಅಸೂರಿನಿಂದ, ಈ ಕಡೆ ಯಳಂದೂರು, ಬಿಳಿಗಿರಿರಂಗನಬೆಟ್ಟ ಚಾಮರಾಜನಗರಕ್ಕೆ ಬರುವವರೆಗೆ 120 ಹಳ್ಳಿಗಳು ಬರುತ್ತವೆ. ಈ 120 ಹಳ್ಳಿಗಳ ಜನರದ್ದು ಕಣ್ಣೀರಿನ ಕಥೆ. ಅದು ಅವರಿಗೇ ಗೊತ್ತು, ಗೃಹಮಂತ್ರಿಗಳಿಗೆ ಗೊತ್ತು, ಅವರು ಅದನ್ನು ಪರಿಶೀಲನೆ ಮಾಡಿದ್ದಾರೆ. ಆ ಜನರ ರಕ್ಷಣೆಗೆ ನಾವು ಏನು ಕ್ರಮ ಕೈಗೊಂಡಿದ್ದೇವೆ? ಇಟಲ್ಸ್ ಅತ್ಯಂತ ಪರಿಣಾಮಕಾರಿಯಾಗಿದೆ. ನಿಮಗೆ ಏನೇನು ಮಾಹಿತಿ ಇದೆ, ನೀವು ಯಾವತ್ತು ಹಿಡಿಯತಕ್ಕದ್ದು, ಆ ವ್ಯವಸ್ಥೆ ಏನು? ಸರ್ಕಾರದಿಂದ ಈ ಬಗ್ಗೆ ಪರಿಣಾಮಕಾರಿಯಾಗಿ ತಿಳಿವಳಿಕೆ ಕೊಡಲಿಲ್ಲವೆಂದರೆ ಕೇಂದ್ರ ಸರ್ಕಾರ ಕಣ್ಮುಚ್ಚಿ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಇದು ಕೇವಲ ಕರ್ನಾಟಕದ್ದು ತಮಿಳ್ನಾಡಿನದು ಎಂದು ಅವರು ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರ ಈ ಬಗ್ಗೆ ತೀವ್ರ ಗಮನ ಕೊಡಬೇಕು.

ಹೆಚ್ಚು ಕಡಿಮೆ ನನಗನ್ನಿಸುತ್ತದೆ, 150-180 ಕಿಲೋಮೀಟರ್‌ವರೆಗೆ ಈ ಕಾಡು ಬರುತ್ತದೆ ಈ ವ್ಯವಸ್ಥೆಯಲ್ಲಿ ಗಡಿ ಭದ್ರತಾ ಪಡೆಯನ್ನು ಹೇಳದೆ ಕೇಳದೆ ಅವರು ಹಿಂದಕ್ಕೆ ಪಡೆದಿರುವ ಕಾರಣವೇನು? ಮತ್ತೆ ನನಗನ್ನಿಸುತ್ತದೆ, ಗಡಿ ಭದ್ರತಾ ಪಡೆಯವರನ್ನು ಕರೆಯಬೇಕು, ನಮ್ಮ ಪೋಲೀಸರು ಏನು ಇದ್ದಾರೆ ಅವರು ತಮ್ಮ ಪ್ರಾಣದ ಹಂಗನ್ನು ತೊರೆದು ಕೆಲಸ ಮಾಡುತ್ತಿದ್ದಾರೆ. ಅವರ ಬಗ್ಗೆ ಬೇರೆ ಮಾತು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಅವರಿಗೆ ಎಷ್ಟು ಶಕ್ತಿ ಕೊಡಬೇಕು, ಅಷ್ಟು ಶಕ್ತಿಯನ್ನು ಸರ್ಕಾರ ಕೊಡಬೇಕು ಮತ್ತು ಕೇಂದ್ರ ಸರ್ಕಾರ ಎಲ್ಲಾ ರೀತಿಯ ನೆರವನ್ನು ತಮಿಳ್ನಾಡು ಮತ್ತು ಕರ್ನಾಟಕ ಸರ್ಕಾರಕ್ಕೆ ಕೊಡಬೇಕು, ಪೋಲೀಸ್ ಇಲಾಖೆಯವರು ಮತ್ತು ಅರಣ್ಯ ಇಲಾಖೆಯವರು ಏನು ಕೆಲಸ ಮಾಡುತ್ತಿದ್ದಾರೆ, ಆ ಬಗ್ಗೆ ಕೇಂದ್ರ ಸರ್ಕಾರ ತೀವ್ರವಾದ ಗಮನ ಹರಿಸಲಿಲ್ಲವೆಂದು ನನ್ನ ಆಕ್ಷೇಪಣೆ. ಏಕೆಂದರೆ ಅವರಿಗೆ ಜವಾಬ್ದಾರಿ ಇದ್ದಿದ್ದರೆ ಗಡಿ ಭದ್ರತಾ ಪಡೆಯನ್ನು ಹಿಂದಕ್ಕೆ ಪಡೆಯುತ್ತಿರಲಿಲ್ಲ, ಇದು ಒಂದು. ತಮಿಳ್ನಾಡಿನ ಪೋಲೀಸರಿಗೂ ಮತ್ತು ಕರ್ನಾಟಕ ಪೋಲೀಸರಿಗೂ ಹೊಂದಾಣಿಕೆ ಇಲ್ಲವೆಂದು ಒಂದು ಕಡೆ ಇದೆ. ಅರಣ್ಯ ಇಲಾಖೆಯವರಿಗೂ ಮತ್ತು ಪೋಲೀಸ್ ಇಲಾಖೆಯವರಿಗೂ ಹೊಂದಾಣಿಕೆ ಇಲ್ಲ ಎಂಬ ಪರಿಸ್ಥಿತಿ ಒಂದು ಕಡೆ. ಈ ಎಲ್ಲ ದ್ವಂದ್ವ ಪರಿಸ್ಥಿತಿಯಲ್ಲಿ ಏನಾಗುತ್ತಿದೆಂದರೆ,ಒಂದು ಸಾರಿ ಅವರು ಗುಂಡಿಟ್ಟು ಕೊಂದತಕ್ಷಣ ಎಲ್ಲರೂ ಎಚ್ಚರವಾಗುತ್ತಾರೆ.

ಎಲ್ಲರೂ ಹೋಗುತ್ತಾರೆ, ಪರಿಹಾರ ಕೊಡುತ್ತೇವೆ, ರಕ್ಷಣೆ ಕೊಡುತ್ತೇವೆಂದು ಹೇಳುತ್ತಾರೆ. ಆರು ತಿಂಗಳಾದ ಮೇಲೆ ಎಲ್ಲ ತಣ್ಣಗಿರುತ್ತಾರೆ. ಅವನು ಒಂದು ಟೈಂ ನೋಡಿ ಸರಿಯಾದ ಟೈಮಿಗೆ ಬಂದು ಎಲ್ಲರನ್ನು ಕೊಂದು ಹೋಗುತ್ತಿದ್ದಾನೆ. ಈಗ ಪುಣಜೂರು ಪರಿಸ್ಥಿತಿಯನ್ನು ತಮಗೆ ಹೇಳುತ್ತೇನೆ. ಅಲ್ಲಿ ಪೋಲೀಸ್ ಇತ್ತು. ಪೋಲೀಸ್ ಇದ್ದೂ ಕೂಡ ಪ್ರಯೋಜನವಾಗಿಲ್ಲ, ಅಲ್ಲಿ ಸತ್ತಿರತಕ್ಕವರು ಅಮಾಯಕರು, ಅದು ಕಣ್ಣೀರಿನ ಕಥೆ. ಸೋಲಿಗರು ಹಳ್ಳಿಯ ಜನರು, ತಿನ್ನುವುದಕ್ಕೆ ಆಹಾರ ಇಲ್ಲದಿರತಕ್ಕ, ಬಡತನದಲ್ಲಿರತಕ್ಕ ಜನರನ್ನು ಕೊಲೆ ಮಾಡಿರತಕ್ಕದ್ದು ಸರಿಯಲ್ಲ. ಆದುದರಿಂದ ಆ ಪ್ರದೇಶದ ಜನರ ರಕ್ಷಣೆ ಬಗ್ಗೆ ಏನು ಕ್ರಮ ಕೈಗೊಳ್ಳುತ್ತೀರಿ ಮತ್ತು ಪುಣಜೂರು ಸುತ್ತ ಬೇಲಿ ಹಾಕುವುದಕ್ಕೆ ಯಾವಾಗ ಕ್ರಮ ಕೈಗೊಳ್ಳುತ್ತೀರಿ? ಬೆಳೆ ನಾಶವಾಗದಂತೆ ಬೇಲಿ ಹಾಕಬೇಕೆಂದು ಅಲ್ಲಿನ ಜನರು ನಮ್ಮೆಲ್ಲರನ್ನು ಅತ್ಯಂತ ಕಳಕಳಿಯಿಂದ ಮನವಿ ಮಾಡಿದ್ದಾರೆ. ಈ ವಿಚಾರ ಬಹಳ ಗಂಭೀರವಾದ ವಿಚಾರ . ಇದಕ್ಕೆ ಸರ್ಕಾರ ತೀವ್ರವಾಗಿ ಚರ್ಚೆಗೆ ಅವಕಾಶ ಕೊಡುವುದು ಒಳ್ಳೆಯದೆಂದು ನನಗನ್ನಿಸುತ್ತದೆ ಇದರ ಬಗ್ಗೆ ತೀವ್ರವಾದ ಚರ್ಚೆ ನಡೆಯಲಿ. ಅಂದಿನಿಂದ ಇಂದಿನವರೆಗೆ ಏನೇನಾಯಿತು. ಸರ್ಕಾರ ಕ್ರಮಗಳು ಏನು, ಈ ಬಗ್ಗೆ ಆಗಿರತಕ್ಕದ್ದು ಏನು ಅಲ್ಲಿ

ಸತ್ತವರಿಗೆ ಪರಿಹಾರ ಏನು ಈ ಎಲ್ಲ ವಿಚಾರಗಳನ್ನು ಸಮಗ್ರವಾಗಿ ಚರ್ಚೆ ಮಾಡಿ ಆ ಪ್ರದೇಶದಲ್ಲಿ ಇಂಥ ಭಯೋತ್ಪಾದನೆ ನಿಲ್ಲುವುದಕ್ಕೆ ಏನು ಮಾಡಬೇಕು ಮತ್ತು ವೀರಪ್ಪನ್ ಹಿಡಿಯುವುದಕ್ಕೆ ನೀವು ಏನೇನು ತಂತ್ರಗಳನ್ನು ಉಪಯೋಗಿಸಿದ್ದೀರಿ ಈ ಬಗ್ಗೆ ಒಂದು ಸಮಗ್ರವಾದ ಚರ್ಚೆಯಾಗಲಿ. ಈ ಬಗ್ಗೆ ಗೌಪ್ಯವಾಗಿ ಇಟ್ಟುಕೊಳ್ಳತಕ್ಕ ಪರಿಸ್ಥಿತಿ ಏನೂ ಇಲ್ಲವೆಂದು ತಮ್ಮ ಮೂಲಕ ಸರ್ಕಾರಕ್ಕೆ ಹೇಳಿ, ಚರ್ಚೆಗೆ ಅವಕಾಶ ಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಕಳಕಳಿಯಿಂದ ಮನವಿ ಸಲ್ಲಿಸುತ್ತೇನೆ.

+ ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಈ ಘಟನೆ ನಡೆದ ಎರಡನೇ ದಿನಕ್ಕೆ ನಾನು ಪುಣಜೂರಿಗೆ ಹೋಗಿ ಸ್ಥಳ ನೋಡಿ ಬಂದೆ. ನಾನು ಸ್ಥಳ ನೋಡಿದಾಗ ಜಲಿಯನ್‌ವಾಲ್‌ಬಾಗ್ ಘಟನೆ ಏನಿದೆ ಅದು ಮರುಕಳಿಸುತ್ತದೆ. ಅಲ್ಲಿರತಕ್ಕ ಮುದ್ದೇಗೌಡ, ಮಾಜಿ ಛೇರ್ಮನ್ ಬಹಳ ಪ್ರಾಮಾಣಿಕ ವ್ಯಕ್ತಿ. ಆ ಹಿರಿಯನನ್ನು ಮನೆಗೆ ಕರೆಸಿ, ಅವನ ಮನೆಗೆ ಹೋದ ಒಂದೇ ಕಾರಣ ಎಂದರೆ, ವೀರಪ್ಪನ್ ಹೆಂಡತಿ ಮುತ್ತುಲಕ್ಷ್ಮಿಯನ್ನು ಆ ಗ್ರಾಮದವರು ಮುದ್ದೇಗೌಡನ ಸಹಾಯದಿಂದ ಪೋಲೀಸರಿಗೆ ಹಿಡಿದು ಕೊಟ್ಟರು ಎಂಬ ಕಾರಣಕ್ಕೋಸ್ಕರ ನೆಪ ಮಾಡಿಕೊಂಡು ಅವರ ಮನೆಗೆ ಯಾರು ಯಾರು ಬೇಕೊ ಅವರನ್ನೆಲ್ಲ ಕರೆಸಿ ಸಾಲಾಗಿ ನಿಲ್ಲಿಸಿ ಗುಂಡಿಕ್ಕಿ ಕೊಂದಿದ್ದಾನೆ. ಆ ಸಮಯಕ್ಕೆ ಸರಿಯಾಗಿ ಸರ್ಕಾರಿ ಬಸ್ ಬಾರದಿದ್ದರೆ ನೂರಾರು ಜನರ ಮರಣ ಹೋಮವಾಗುತ್ತಿತ್ತು. ಆದರೆ ಒಂದು ಸಂಗತಿ ಗಮನಿಸಬೇಕಾಗಿರತಕ್ಕದ್ದು ವೀರಪ್ಪನ್ ಹೇಳಿರುವುದು. ನಾನು ನನ್ನ ಹೆಂಡತಿಯನ್ನು ನೀವು ಹಿಡಿದುಕೊಟ್ರಲ್ಲ, ಇನು ಏನೋ ಆಯಿತಲ್ಲ ಮಾನಭಂಗ, ಈ ತರಹ ನಿಮಗೆ ಆಗಿದ್ದರೆ ಏನಾಗುತ್ತಿತ್ತೆಂದು ಹೆಣ್ಣು ಮಕ್ಕಳನ್ನು ಸಾಲಾಗಿ ನಿಲ್ಲಿಸಿ ಗುಂಡಿಕ್ಕಿ ಕೊಂದಿರುವಂತಹ ರೀತಿಯನ್ನು ನೋಡಿದಾಗ, ತನ್ನ ಮೇಲೆ ಜನರ ಅನುಕಂಪ ಇರಬೇಕೆಂದು ಅವನ ಮನಸ್ಸಿನಲ್ಲಿರುವುದು ಸ್ಪಷ್ಟವಾಗುತ್ತದೆ.

ನನಗೆ ದುಃಖವಾಗುತ್ತಿರುವುದು ಏನೆಂದರೆ ಮಾನ್ಯ ಮುಖ್ಯಮಂತ್ರಿಗಳು ತಪ್ಪು ತಿಳಿದುಕೊಳ್ಳದಿದ್ದರೆ, ಈ ರೀತಿ ಗಂಭೀರವಾದ ಪ್ರಸಂಗ ನಡೆದಾಗ ಈ ಘಟನೆ ನಡೆದು ಒಂದು ತಿಂಗಳಾಗಿದೆ, ಮುಖ್ಯ ಮಂತ್ರಿಗಳು ಅಲ್ಲಿಗೆ ಹೋಗಲಿಲ್ಲ, ಮಾನ್ಯ ಗೃಹ ಸಚಿವರು 3-4 ದಿನಗಳಾದ ಮೇಲೆ ಹೋದರು. ಏಕೆ ಮುಖ್ಯ ಮಂತ್ರಿಗಳು ಹೋಗಬಾರದಿತ್ತು? ಇದರ ಬಗ್ಗೆ ಅವರಿಗೆ ಕಳಕಳಿ ಇದೆ ಎಂದು ಜನರಲ್ಲಿ ವಿಶ್ವಾಸ ಬರಬೇಕಾಗಿತ್ತು. ಯಾರು ಅಲ್ಲಿ ಸುದ್ದಿಯನ್ನು ಪೋಲೀಸರಿಗೆ ಮುಟ್ಟಿಸುತ್ತಿದ್ದಾರೆ, ಅವರಿಗೆ ಧೈರ್ಯ ಬರಬೇಕಾಗಿತ್ತು. ಇದು ಯಾವ ಕೆಲಸವನ್ನೂ ಸರ್ಕಾರ ಮಾಡಲಿಲ್ಲ, ಮುಖ್ಯ ಮಂತ್ರಿಗಳು ಸಂಪೂರ್ಣ ನಿರ್ಲಕ್ಷ್ಯ ತೋರಿಸಿದರು. ಆ ಕಡೆ ಹೋಗಲಿಲ್ಲ. ಇವತ್ತು ನಾನು ನಿಮಗೆ ಹೇಳುವುದು ಏನೆಂದರೆ ಸಂಪೂರ್ಣ ಚರ್ಚೆ ಆಗಬೇಕೆಂದು ಹೇಳುವುದಕ್ಕೆ ಇಚ್ಛೆಪಡುವುದಿಲ್ಲ, ಗೃಹ ಸಚಿವರು ಹೇಳಬಹುದು, ಇದು ಗಂಭೀರವಾದ ವಿಷಯ ಚರ್ಚೆಗೆ ಬರುವುದಿಲ್ಲ ಎಂದರೆ ನಿಮ್ಮ ಕೊಠಡಿಗೆ ಬರುವುದಕ್ಕೆ ನಾವು ಸಿದ್ಧರಿದ್ದೇವೆ ಗೃಹ ಸಚಿವರೆ, ಮಾನ್ಯ ನಾಗರಾಜ್ ಅವರು ಹೇಳಿದ ಹಾಗೆ ಕೊನೇಪಕ್ಷ ಡೀಟೈಲ್ ಆಗಿ ಚರ್ಚೆಯಾಗದಿದ್ದರೆ, ನಿಮ್ಮ ಕೊಠಡಿಗೆ ನಾವು ಬರುವುದಕ್ಕೆ ತಯಾರಿದ್ದೇವೆ.

ನೀವು ಏನು ಸಿದ್ಧತೆ ಮಾಡಿದ್ದೀರಿ? ಗಡಿ ಭದ್ರತಾ ಪಡೆಯನ್ನು ತಂದಿರಿ, ಮತ್ತೆ ಅವರನ್ನು ವಾಪಸ್ಸು ಕಳುಹಿಸಿದ್ದು ಏಕೆ? ಇದರಿಂದ ಒಂದು ರೀತಿ ಗೊಂದಲ ಉಂಟಾಗಿದೆ. ನಾನು ಶಂಕರಬಿದಿರಿ ಅವರ ಹತ್ತಿರ ಮಾತನಾಡಿದೆ. ನನಗೆ ಬಂದಿರುವ ಸುದ್ದಿ ಪ್ರಕಾರ ಮತ್ತು ನಾಗರಾಜ್ ಅವರು ಹೇಳಿದಂತೆ ತಮಿಳ್ನಾಡಿನ ಪೋಲೀಸರಿಗೂ ಮತ್ತು ನಮ್ಮ ರಾಜ್ಯದ ಪೋಲೀಸರಿಗೂ ಸರಿಯಾದ ಅಂಡರ್‌ಸ್ಟ್ಯಾಂಡಿಂಗ್ ಇಲ್ಲದೆ ಗೊಂದಲ ಇದೆ. ನಾನು ಒಂದೇ ಒಂದು ಸಲಹೆ ಕೊಟ್ಟೆ ಶಂಕರಬಿದ್ರೆಯವರಿಗೆ.

ಆ ಕಾಡುಗಳ್ಳ ಎನಿದ್ದಾನೆ, ಅದು ಎಷ್ಟೇ ದೊಡ್ಡ ಪ್ರದೇಶ ಇರಬಹುದು. ಇದು ಆಯಕಟ್ಟಿನ ಗ್ರಾಮ. ಆ ಗ್ರಾಮದಿಂದ ಕಾಡಿನ ಒಳಗಡೆ ಜನರು ಹೋಗದಂತೆ ನಿರ್ಬಂಧ ಹಾಕಿ. ಒಂದು ತಿಂಗಳು ಸಾಕು. ನನಗೆ ಏನೂ ಗೊತ್ತಿಲ್ಲ, ನಾನು ಒಬ್ಬ ಲೇಮ್ಯಾನ್ ಆಗಿ ಒಂದು ಸಲಹೆ ಕೊಟ್ಟೆ. ಕೆಲವರು ಹೋಗಿ ವೀರಪ್ಪನ್ ಪರವಾಗಿ ಮಾಹಿತಿ ಕೊಡುವವರು ಆಹಾರ ಕೊಡುವವರು ಇದ್ದಾರೆ. ಇಷ್ಟು ದಿನದಿಂದ ನಾವು ಹೋರಾಟ ಮಾಡುತ್ತಿದ್ದೇವೆ, ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತಿದ್ದೇವೆ. ಆದರೆ ಸುತ್ತ ಆಯಕಟ್ಟಿನ ಪ್ರದೇಶದಲ್ಲಿ ಪೋಲೀಸ್ ಬಂದೋಬಸ್ತು ಹಾಕಿ. ಅವರಿಂದ ನಮಗೆ ಏನೂ ಸಹಾಯ ಬೇಡ, ಕಾಡಿನೊಳಗೆ ಒಂದು ತಿಂಗಳು ಪ್ರವೇಶ ಮಾಡುವುದಿಲ್ಲವೆಂದು ಮಾಡಿದ್ದರೆ ಉಸಿರು ಕಟ್ಟುವಂತಹ ವಾತಾವರಣದಲ್ಲಿ ಸಿಕ್ಕಿಕೊಂಡು ಹೊರಗೆ ಬರುವ ಪರಿಸ್ಥಿತಿ ಬರುತ್ತಿತ್ತು. ಇಲ್ಲಿ ಸದನ ನಡೆಯುಬೇಕಾದರೆ, ಗೃಹ ಸಚಿವರು ಹೇಳಿದಾಗ, ಇನ್ನೇನು ಸಿಕ್ಕಿದ, ಒಂದು ಗಂಟೆಯಲ್ಲಿ ಜೀವಸಹಿತ ಸಿಗುತ್ತಾನೆ, ಮೃತದೇಹ ಸಿಗುತ್ತದೆನ್ನುವ ಮಟ್ಟಿಗೆ ಚರ್ಚೆಯಲ್ಲಿ ಅವತ್ತು ನಾವು ಭಾಗವಹಿಸಿದಾಗ ನಮಗೆ ಆ ರೀತಿ ಅನ್ನಿಸಿತ್ತು ಆ ಸಮಯದಲ್ಲಿ ನೀವು ಎಷ್ಟು ಬಿಗಿ ಮಾಡಬೇಕಾಗಿತ್ತು. ಅದು ಆಗಲಿಲ್ಲ. ಮಾಡುವುದಕ್ಕಾಗದಿದ್ದರೂ ಅವತ್ತಿನಿಂದ ಅವನು ಅಷ್ಟು ಸುಲಭವಾಗಿ ಹೋಗಿಬರುವುದಕ್ಕೆ ಅವಕಾಶ ಮಾಡಿಕೊಡದೆ ಬಂದೋಬಸ್ತು ಮಾಡಬಹುದಾಗಿತ್ತು. ಅದಕ್ಕೆ ನಾನು ಅಲ್ಲಿ ಹೋದೆ ಆ ಐದು ಕುಟುಂಬಗಳ ಸ್ಥಿತಿ, ಅವ್ಯವಸ್ಥೆ, ಆ ಮಕ್ಕಳ ವಿದ್ಯಾಭ್ಯಾಸ, ಅವರ ಬಡತನ ನಾನು ಅದರಲ್ಲಿ ಒಬ್ಬ ಹುಡುಗನನ್ನು ಕರೆದುಕೊಂಡು ಬಂದು ನನ್ನ ಮನೆಯಲ್ಲಿಟ್ಟು ದತ್ತು ತೆಗೆದುಕೊಂಡು ಓದಿಸಿ ಅವನಿಗೆ ನೌಕರಿ ಸಿಕ್ಕಿದರೆ ಮನೆಗೆ ಕಳುಹಿಸಿಕೊಡುತ್ತೇನಪ್ಪ ಎಂದು ನನ್ನ ಮನೆಯಲ್ಲಿ ಕರೆದುಕೊಂಡುಬಂದು ಇಲ್ಲಿ ಎಸ್.ಎಸ್.ಎಲ್.ಸಿ.ಗೆ ಸೇರಿಸಿದ್ದೇನೆ.

ಉಳಿದ ಮಕ್ಕಳಿಗೂ ವ್ಯವಸ್ಥೆ ಮಾಡುತ್ತಿದ್ದೇನೆ. ನಾನು ಸರ್ಕಾರಕ್ಕೆ ಇದನ್ನು ಮಾಡಿ ಎಂದು ಹೇಳುತ್ತಿಲ್ಲ. ಜನ ಇದ್ದಾರೆ ಅದನ್ನು ಮಾಡುವುದಕ್ಕೆ. ಆದರೆ ನಾನು ಗೃಹಸಚಿವರಿಗೆ ಹೇಳುತ್ತಿದ್ದೇನೆ ಈ ನಿರ್ಲಕ್ಷ್ಯ ಏತಕ್ಕೆ? ಶಂಕರ್ ಬಿದರಿ ಅವರನ್ನು ನೀವು ಅಲ್ಲಿ ಕಳುಹಿಸಿದ್ದೀರಿ. ವಿವರ ನಾನು ಕೇಳುವುದಿಲ್ಲ, ಎಷ್ಟು ಜನ ಅಧಿಕಾರಿಗಳು ಅಲ್ಲಿಂದ ವಾಪಸ್ ಬಂದಿದ್ದಾರೆ? ಹೊಸ ಸಿಬ್ಬಂದಿ ಕೊಡುವುದಿರಲಿ ಅಲ್ಲಿರುವವರು ವಾಪಸ್ ಬಂದು ಬಿಟ್ಟಿದ್ದಾರೆ. ಅಂದರೆ ಅಲ್ಲಿರುವವರು ಜೀವಭಯದಿಂದ ವಾಪಸ್ ಬಂದಿದ್ದಾರಾ? ಅಥವಾ ಬೇರೆ ಇಲಾಖೆಯಲ್ಲಿ ಬೇಕಾದಷ್ಟು ಅನುಕೂಲವಾಗುತ್ತದೆ, ವ್ಯವಹಾರವಾಗುತ್ತದೆ, ಅಲ್ಲಿ ಏತಕ್ಕೆ ಹೋಗಬೇಕು ಎಂಬ ಭಯದಿಂದ ಅವರು ಬಂದಿದ್ದರೆ ಆ ಶಂಕರ್ ಬಿದರಿಯವರನ್ನು ಬಲಿ ಕೊಡುವುದಕ್ಕೆ ಹೊರಟಿದ್ದೀರಾ? ಸ್ವಾಮಿ. ನಾನು ನೇರವಾಗಿ ಒಂದು ಮಾತು ಹೇಳುತ್ತೇನೆ. ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳಿದ ಮಾತನ್ನು ನಾನು ಸಮರ್ಥನೆ ಮಾಡುತ್ತೇನೆ. ಅಲ್ಲಿ ಯಾರಾದರೂ ಸತ್ತಾಗ, ಗುಂಡಿನ ಆಹುತಿಗೆ ದೌರ್ಜನ್ಯಕ್ಕೆ ಸಿಕ್ಕಿದಾಗ ಮಾತ್ರ ನಿಮ್ಮ ಸರ್ಕಾರ ಹೋಗುತ್ತದೆ, ಓಡಾಟ ಮಾಡುತ್ತೀರಿ. ಒಂದು ತಾವು ಗಮನಿಸಬೇಕು. ಶಂಕರ್ ಬಿದರಿಯವರು ಮದುವೆಗೋ ಯಾವುದೋ ಕಾರಣಕ್ಕೆ ರಜಾ ಹೋದಾಗ ಈ ಘಟನೆ ನಡೆದಿದೆ. ಈ ಆಯಕಟ್ಟಿನ ಊರಿನಲ್ಲಿ ಎಲ್ಲೂ ಪೋಲೀಸ್ ಬಂದೋಬಸ್ತ್ ಇಲ್ಲ. ವೀರಪ್ಪನ್ ಹಿಡಿಯುವವರಿಗೆ ಧೈರ್ಯ ಹೋಗುವಂತೆ ಮಾಡಿದ್ದೀರಿ.

ಕಾಡು ಲೂಟಿ ಮಾಡಿ ಕೋಟ್ಯಾಂತರ ರೂಪಾಯಿ ಲೂಟಿ ಮಾಡುವುದಕ್ಕೆ ಸರ್ಕಾರ ಹಿಂದಿನಿಂದ ನಿರ್ಲಕ್ಷ್ಯ ಮಾಡಿಕೊಂಡು ಬಂದಿದ್ದರಿಂದ ಇವತ್ತು ಅವನೇ ಮದುವೆ ಮುಂಜಿ, ಒಳ್ಳೆಯದು, ಕೆಟ್ಟದ್ದು ಇದಕ್ಕೆಲ್ಲಾ ಊರ ಸುತ್ತಮುತ್ತ ಸಂಪರ್ಕ ಇಟ್ಟುಕೊಳ್ಳುವ ಸ್ಥಿತಿಗೆ ಹತ್ತಾರು ವರ್ಷ ಬಿಟ್ಟಿರಿ. ಯಾವುದೇ ಸರ್ಕಾರ ಇರಲಿ, ದಯಮಾಡಿ ನಾನು ವಿನಂತಿ ಮಾಡುತ್ತೇನೆ, ಇಲ್ಲವೇ ಫ್ರೀಯಾಗಿ ಬಿಟ್ಟುಬಿಡಿ ಸ್ವಾಮಿ.

ಅನೇಕ ಜನ ವೀರಪ್ಪನ್‌ನಂಥವರು ಕಾಡಿನ ಒಳಗಡೆ ಇದ್ದಾರೆ. ಹೊರಗಡೆ ಅವನಿಗಿಂತ ಲೂಟಿ ಮಾಡುವವರಿದ್ದಾರೆ. ಅವನೊಬ್ಬನನ್ನು ಬಿಟ್ಟು ಬಿಡಿ. ನಾನು ಜವಾಬ್ದಾರಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಇಲ್ಲ ಅಂದರೆ, ನಿಮಗೆ ನಿಜವಾಗಿ ಕಳಕಳಿ ಇತ್ತು ಅಂದರೆ, ಏನೆಂದುಕೊಳ್ಳಬಹುದು? ಒಂದು ಸರ್ಕಾರ, ಒಂದು ನಿರ್ದಿಷ್ಟವಾದ ಪ್ರದೇಶದಲ್ಲಿ ಒಬ್ಬ ಇದ್ದಾನೆ. ವರ್ಷಾನುಗಟ್ಟಲೆ ಆಯಿತು. ಎಲ್ಲಾ ಫೋರ್ಸ್‌ಗಳು ಬಂದಾಯಿತು. ಹಿಡಿದಿಲ್ಲ ಅನ್ನುವಂಥದ್ದು ಸರ್ಕಾರಕ್ಕೆ ಅಪಮಾನಕರ ಸಂಗತಿ. ತಮಿಳುನಾಡಿನ ಸರ್ಕಾರ ನೀವು ಕುಳಿತು ಯೋಜನೆ ಮಾಡಿ. ಇದಕ್ಕೆ ಬಿಗಿ ಬಂದೋಬಸ್ತ್ ಮಾಡಿ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಯಾವುದನ್ನು ಹೇಳಬಹುದೋ ಅದನ್ನು ಈ ಸಭೆಯೊಳಗಡೆ ಹೇಳಿ. ಉಳಿದಿದ್ದನ್ನು ಸ್ಪೀಕರ್ ಕೊಠಡಿಯೊಳಗೆ ಕರೆದು, ಕೆಲವು ಪ್ರಮುಖರನ್ನು ಕರೆದು ನಮಗೆ ವಿಶ್ವಾಸ ಬರುವ ರೀತಿಯಲ್ಲಿ ನೀವು ಏನು ಮುಂದೆ ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೀರಿ ಅದನ್ನಾದರೂ ತಿಳಿಸುವಂಥ ಪ್ರಯತ್ನ ಮಾಡಿ. ಮುಖ್ಯಮಂತ್ರಿಗಳಲ್ಲಿ ನನ್ನ ಒಂದೇ ವಿನಂತಿ. ಗೃಹ ಸಚಿವರು ಹೋಗಿದ್ದಾರೆ ಯಶಿಕ್ಷಣ ಪಡೆಯುತ್ತಿದ್ದಾರೆ. ಇದರ ಬಗ್ಗೆ 1993ರಲ್ಲಿ ಮಣಿಪಾಲ ಪದವಿ ಪೂರ್ವ ಕಾಲೇಜಿನ ಯಡಿಯೂರಪ್ಪನವರೇ, ನಾನ್ಯಾಕೆ ಅಂದರೆ ನಾನು ಏನೂ ಹೇಳುವುದಿಲ್ಲ. ಆದರೆ ನೀವು ಹೋಗಬೇಕಾದ್ದು ನಿಮ್ಮ ಕರ್ತವ್ಯ ಇತ್ತು. ಒಂದು ತಿಂಗಳಾದರೂ ಸಹ ಹೋಗಲಿಲ್ಲ. ಈಗಲಾದರೂ ತಾವು ಅಲ್ಲಿಗೆ ಧಾವಿಸಿ ಪರಿಸ್ಥಿತಿ ತಿಳಿದುಕೊಂಡು ಬಂದೋಬಸ್ತ್ ಮಾಡಿ ಅಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳಿಗೆ ಮಾನಸಿಕ ಸ್ಥೈರ್ಯ ತುಂಬಿ, ಅವರಿಗೆ ಬೇಕಾದಂಥ ಅನುಕೂಲವನ್ನು ಮಾಡಿಕೊಟ್ಟು ಅಲ್ಲಿ ಕೆಲಸ ಮಾಡುವವರಿಗೆ ಒಂದಲ್ಲ ಹತ್ತು ಪಟ್ಟು ಸಂಬಳ ಕೊಡಿ. ಬೇಕಾದ ಸವಲತ್ತು ಕೊಡಿ. ಪ್ರಾಣದ ಹಂಗನ್ನು ತೊರೆದು ಕೆಲಸ ಮಾಡುವವರಿಗೆ ವಿಶ್ವಾಸ ಬರುವ ರೀತಿಯಲ್ಲಿ ಸರಿಯಾದಂಥ ಪ್ರಾಮಾಣಿಕರಲ್ಲಿ ಪ್ರಾಮಾಣಿಕರು ಧೈರ್ಯವಂತರನ್ನು ಅಲ್ಲಿಗೆ ನಿಯುಕ್ತಿ ಮಾಡಿ, ಯಾವ ಫೋರ್ಸ್ ಬೇಕೋ ಅದನ್ನು ಅಗತ್ಯವಾಗಿ ತೆಗೆದುಕೊಂಡು ಈ ಕಾರ್ಯವನ್ನು ಪೂರ್ಣ ಮಾಡುವ ಕಡೆ ಒಂದು ವ್ಯವಸ್ಥೆಯನ್ನು ಮಾಡಬೇಕು ಎಂದು ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಈಗ ವೀರಪ್ಪನ್ ಅನ್ನು ಹುಡುಕುವುದು ಬಿಟ್ಟು ಅವನಷ್ಟಕ್ಕೆ ಅವನನ್ನು ಫ್ರೀಯಾಗಿ ಬಿಟ್ಟರೆ ಮನುಷ್ಯರನ್ನು ಕೊಲ್ಲುವುದಾದರೂ ನಿಲ್ಲುತ್ತದೆ. ಆನೆ ದಂತ ಮತ್ತು ಗಂಧ ಕಡಿಯಬಹುದು. ಮನುಷ್ಯರ ಜೀವವಾದರೂ ಉಳಿಯಬಹುದು. ಅದಾದರೂ ಮಾಡಿ. ಅವರನ್ನು ಫ್ರೀಯಾಗಿ ಬಿಟ್ಟು ಬಿಡಿ.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಪುಣಜೂರು ಗ್ರಾಮಕ್ಕೆ ನಾನೂ ಕೂಡ ಭೇಟಿ ನೀಡಿದ್ದೆ. ಶ್ರೀಮಾನ್ ವಾಟಾಳ್ ನಾಗರಾಜ್ ಅವರ ಮತಕ್ಷೇತ್ರ ಅದು. ಅವರ ಬೋರ್ಡ್ ಕೂಡ ಅಲ್ಲಿದೆ. ವಾಟರ್ ಸಪ್ಲೈ ಸ್ಕೀಂ ಇನ್ನಾಗುರೇಷನ್ ಮಾಡಿ ಅಲ್ಲಿ ಅಡಿಗಲ್ಲು ಹಾಕಿರುವುದು ಕೂಡ ನಾನು ನೋಡಿದೆ. ಅದೊಂದು ಕೊನೇ ಊರು. ಬಾರ್ಡರ್‌ನಲ್ಲಿರತಕ್ಕ ಒಂದು ಕೊನೇ ಹಳ್ಳಿ. ಮತ್ತು ಈ ಒಂದು ದುರ್ಘಟನೆ ನಡೆಯತಕ್ಕ ಸಮಯ ಏತಕ್ಕೆ ಅಂದರೆ ಅದೇ ಸಮಯದಲ್ಲಿ ಶಂಕರ್ ಬಿದರಿಯವರು ತಮ್ಮ ಸಿಸ್ಟರ್ ಮ್ಯಾರೇಜ್ ಇದೆ ಎಂದು ಬೆಂಗಳೂರಿಗೆ ಬಂದಿದ್ದರು ಅಂತ ಕಾಣುತ್ತದೆ. ಮತ್ತು ಅದೇ ಸಂದರ್ಭದಲ್ಲಿ ಅಲ್ಲಿ ಪೋಲೀಸ್ ವ್ಯಾನ್ ಏನು ಸದಾ ಕಾಲ ಇರುತ್ತಿತ್ತು ಆ ಪೋಲೀಸ್ ವ್ಯಾನನ್ನು ಕೂಡ ಪೋಲೀಸರು ವಿತ್‌ಡ್ರಾ ಮಾಡಿದರು. ಅದನ್ನು ಯಾವ ಕಾರಣಕ್ಕಾಗಿ ಮಾಡಿದರೋ ಏನೋ ಗೊತ್ತಾಗಲಿಲ್ಲ. ಯಾವತ್ತೂ ಇರತಕ್ಕ ಪೋಲೀಸ್ ವ್ಯಾನನ್ನು

ವಿತ್‌ಡ್ರಾ ಮಾಡಿದ ತಕ್ಷಣ ಇದೆಲ್ಲಾ ಪರಿಸ್ಥಿತಿ ವೀರಪ್ಪನ್ ಗೆಳೆಯರಿಗೆ ಮತ್ತು ವೀರಪ್ಪನ್‌ಗೆ ಗೊತ್ತಾದ ಮೇಲೆ ಅವನು ಸೇಡು ತೀರಿಸಿಕೊಳ್ಳಬೇಕು ಅಂತ ಹೇಳಿ ಆ ಹಳ್ಳಿಗೆ ಬಂದು ಎಲ್ಲಾ ಗೆಳೆಯರ ಜೊತೆಯಲ್ಲಿ ಯಾರು ಕೊನೆಯ ಮನೆಯಲ್ಲಿದ್ದಾರೆ. ಶ್ರೀಮಾನ್ ಯಡಿಯೂರಪ್ಪನವರು ಹೇಳಿದರು ಸರಪಂಚವು ಮುಟ್ಟೇಗೌಡ ಅಂತ ಇದ್ದಾರೆ, ಕೊನೇ ಮನೆ, ಪಾಪ, ಅವರು ಮನೆಯೊಳಗೆ ಜಾಯಿಂಟ್ ಫ್ಯಾಮಿಲಿ, ಸುಮಾರು ಹತ್ತು ಹದಿನೈದು ಜನ ಒಂದೇ ಕಡೆ ಕೂಡಿ ಇರತಕ್ಕವರು ಅವರನ್ನು ಹೊರಗಡೆ ಕರೆದು ಸಾಲಾಗಿ ಕೂರಿಸಿ. ಗುಂಡೇಟು ಹಾಕಿ ಕೊಂದು ಅವರು ಹೊರಟುಹೋದರು.

ಅವರು ಹೇಳತಕ್ಕದ್ದೇನೆಂದರೆ ಒಂದು ವೇಳೆ ಈ ಪೋಲೀಸ್ ವ್ಯಾನ್ ಇದ್ದಿದ್ದರೆ ಈ ಘಟನೆ ನಡೆಯುತ್ತಿರಲಿಲ್ಲ. ಏಕೆಂದರೆ ಪೋಲೀಸ್ ವ್ಯಾನ್ ಇದ್ದಾಗ ನಮಗೆ ಯಾವುದೂ ಕೂಡ ತೊಂದರೆ ಕೊಡತಕ್ಕದ್ದನ್ನು ಅವನು ಮಾಡಲಿಲ್ಲ. ಈ ಪೋಲೀಸ್ ವ್ಯಾನ್ ಏತಕ್ಕೆ ವಿತ್‌ಡ್ರಾ ಮಾಡಿದರೋ ನಮಗೆ ಗೊತ್ತಾಗಲಿಲ್ಲ, ಅದಕ್ಕಾಗಿ ಈ ಒಂದು ಘಟನೆ ನಡೆಯಿತು ಎಂಬುದು ಅವರ ಒಂದು ಅನಿಸಿಕೆ. ಎರಡನೆಯದು ಏನೆಂದರೆ ತಮಿಳುನಾಡು ಪೋಲೀಸರು ಕರ್ನಾಟಕ ಪೋಲೀಸರ ನಡುವೆ ಕೂಡ ಹೊಂದಾಣಿಕೆ ಇಲ್ಲ. ಮೂರನೆಯದು ಏನೆಂದರೆ ಕರ್ನಾಟಕ ಫಾರೆಸ್ಟ್ ಆಫಿಷಿಯಲ್ಸ್ ಮತ್ತು ಪೋಲೀಸ್ ಇವರಲ್ಲೂ ಕೂಡ ಒಂದು ಅಂಡರ್‌ಸ್ಟ್ಯಾಂಡಿಂಗ್ ಇಲ್ಲ. ನಾಲ್ಕನೆಯದು ಏನೆಂದರೆ, ಅಲ್ಲಿ ಕೆಲವು ಪೋಲೀಸರಿಗೆ ಸಬ್‌ಇನ್‌ಸ್ಪೆಕ್ಟರ್‌ಗಳು ಸರ್ಕಲ್ ಇನ್‌ಸ್ಪೆಕ್ಟರ್‌ಗಳಿಗೆ ಪೋಸ್ಟಿಂಗ್ಸ್ ಕೊಟ್ಟಿದ್ದೀರಿ, ಅದರಲ್ಲಿ ಅಲ್ಲಿ ಕೆಲವು ಜನರನ್ನು ವಿತ್ ಡ್ರಾ ಮಾಡಿಕೊಂಡಿದ್ದಾರೆ ಮತ್ತು ಕೆಲವು ಜನ ಜಾಯಿನ್ ಆಗಿಲ್ಲ ಎಂಬುದು ಕೂಡ ವರದಿಯಾಗಿದೆ. ಹೀಗೆ ಅನೇಕ ಕಾರಣಗಳು ಇದಕ್ಕೆ ಸಂಬಂಧಪಟ್ಟಹಾಗೆ ಇದೆ. ಅದಕ್ಕಾಗಿ ತಾವು ಇದರ ಬಗ್ಗೆ ಪುನರಾವಲೋಚನೆ ಮಾಡಬೇಕಾಗುತ್ತದೆ. ಮತ್ತು ಬಾರ್ಡರ್ ಸೆಕ್ಯೂರಿಟಿ ಫೋರ್ಸ್ ಆಗಲೀ ಇಂಡೋ ಟಿಬೆಟಿಯನ್ ಬಾರ್ಡರ್ ಫೋರ್ಸ್ ಇಟ್ಟಾಗ ಅವನಿಗೆ ಭಯ ಇತ್ತು ಅದಕ್ಕಾಗಿ ಬೇರೆ ಕಡೆ ಅಡ್ಡಾಡುತ್ತಿರಲಿಲ್ಲ, ಎಂದು ಕೂಡ ಜನ ಹೇಳುತ್ತಾರೆ. ಆಗ ನಾವು ಸ್ವಲ್ಪ ನೆಮ್ಮದಿಯಿಂದ ಇದ್ದೆವು ಎಂದು ಜನ ಹೇಳುತ್ತಾರೆ. ಏಕೆಂದರೆ ಈ ಪುಣಜೂರು ಗ್ರಾಮ ಮ್ಯೆನ್‌ರೋಡಿನಿಂದ ಮೂರು ಕಿಲೋಮಿಟರ್ ಕೂಡ ಇಲ್ಲ, ಹೆಚ್ಚು ಕಡಿಮೆ ಎರಡೂವರೆ ಮೂರು ಕಿಲೋಮಿಟರ್ ಇರಬಹುದು ಅಂದರೆ ನೇರವಾಗಿ ಪೋಲೀಸರಿಗೆ ಹೋಗುವುದಕ್ಕೆ ಕೂಡ ಅನುಕೂಲ ಇದೆ. ವೆಹಿಕಲ್ ಹೋಗಬಹುದು. ಕಾರ್ ಹೋಗಬಹುದು, ಬಸ್ ಹೋಗಬಹುದು. ಇಂಥ ಒಂದು ಹಳ್ಳಿಗೆ ಇಷ್ಟು ದೊಡ್ಡ ಅನಾಹುತ ಆಗಿದೆ. ಪುಣಜೂರು ಗ್ರಾಮಕ್ಕೆ ಕಾರ್ ಹೋಗುತ್ತದೆ. ಎಲ್ಲಾ ವೆಹಿಕಲ್ಸ್ ಹೋಗತಕ್ಕ ವ್ಯವಸ್ಥೆ ಅಲ್ಲಿದೆ. ಇದ್ದರೂ ಕೂಡ ಇವತ್ತು ದೊಡ್ಡ ಅಲಕ್ಷ್ಯ ಆಗಿ ಇವತ್ತು ಸುಮಾರು 11-12ಜನ ಅಲ್ಲಿ ಗುಂಡೇಟಿಗೆ ಒಳಗಾಗಿದ್ದಾರೆ. ಅವನು ಬಂದು ರಾಜಾರೋಷವಾಗಿ ಹೆದರಿಸುತ್ತಾನೆ ಅಂದರೆ ಇವತ್ತು ನಾವು ನಿಜವಾಗಿ ಹೇಳಬೇಕಾಗುತ್ತದೆ. ಇದು ಸರ್ಕಾರದ ಅಲಕ್ಷ್ಯದಿಂದ ಆಗಿದೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಯಾವುದೇ ಒಂದು ಕಾರಣಕ್ಕಾಗಿ ಶಂಕರ್ ಬಿದರಿಯವರು ಬಂದಿರಬಹುದು. ಆದರೆ ಬೇರೆಯವರು ಅಲ್ಲಿರತಕ್ಕವರು ಇದಕ್ಕೆ ವ್ಯವಸ್ಥೆ ಮಾಡಬಹುದಾಗಿತ್ತು, ಅದನ್ನು ಮಾಡಲಿಲ್ಲ ಅನ್ನುತಕ್ಕಂಥದ್ದು ಒಂದು. ಎರಡನೆಯದು ಏನೆಂದರೆ 50,000 ರೂಪಾಯಿ ಕೆಲವು ಜನರಿಗೆ ಕೊಟ್ಟಿದ್ದೀರಿ. ಪುಣಜೂರು ಗ್ರಾಮದಲ್ಲಿರತಕ್ಕವರಿಗೆ. ಬೇಲ್ ಗುಡಿಯಲ್ಲಿರತಕ್ಕವರಿಗೂ ಕೂಡ ಅದು ಕರ್ನಾಟಕದಲ್ಲಿದ್ದರೂ ಸತ್ತಿದ್ದು ತಮಿಳು ನಾಡಿನಲ್ಲಿ, ಬಾರ್ಡರ್ ಏರಿಯೂದಲ್ಲಿ, ಸ್ವಲ್ಪ 200 ಫೀಟ್ ಇರಬಹುದು ಅಷ್ಟೆ ಆ ಬಾರ್ಡರ್‌ನಲ್ಲಿ ಸತ್ತಿದ್ದಾರೆಂದು ತಿಳಿದುಕೊಂಡು ನೀವು ತಮಿಳುನಾಡಿನವರು ಎಂದು ಹೇಳಿ ನಮ್ಮ ಕರ್ನಾಟಕದವರು ಅವರಿಗೆ ಕೊಟ್ಟಿಲ್ಲ, ನೀವು ಬೇಕಾದರೆ ಓಟರ್ಸ್ ಲಿಸ್ಟ್‌ನಲ್ಲಿ ಅವರ ಹೆಸರು ಇದೆಯೋ

ಇಲ್ಲವೋ ನೋಡಿ. ಪಂಚಾಯತ್‌ನಲ್ಲಿ ಅವರ ಹೆಸರು ಇದೆಯೋ ಇಲ್ಲವೋ ನೋಡಿ. ಯಾವ ಮನೆಯಲ್ಲಿರುತ್ತಾನೆ ಅವರ ಮನೆ ನಂಬರ್ ಇದೆಯಾ ನೋಡಿಕೊಂಡು ಬೇಕಾದರೆ ಕೊಡಿ. ಏಕೆಂದರೆ ಓಟರ್ಸ್ ಲಿಸ್ಟ್‌ನಲ್ಲಿ ಅವರ ಹೆಸರಿರುತ್ತದೆ. ಪಂಚಾಯತ್‌ನಲ್ಲಿ ಹೆಸರಿರುತ್ತದೆ. ರೇಷನ್ ಕಾರ್ಡ್ ಇರುತ್ತದೆ. ಇವೆಲ್ಲವನ್ನೂ ನೋಡಿಕೊಂಡು ಅವರಿಗೆ ಕೊಡಿ. ಇವತ್ತಿನ ದಿವಸ 50,000 ರೂಪಾಯಿ ಕೊಡತಕ್ಕದ್ದು ಕೂಡ ಅವರಿಗೆ ತಲುಪಲಿಲ್ಲ. ಅದನ್ನು ಕೂಡ ತಾವು ಕೊಡತಕ್ಕ ವ್ಯವಸ್ಥೆ ಮಾಡಬೇಕು. ಅವರದು ಇನ್ನೊಂದು ಬೇಡಿಕೆ ಏನಿದೆ ಎಂದರೆ ಒಂದು ಪೋಲೀಸ್ ಔಟ್‌ಪೋಸ್ಟ್ ಅಲ್ಲಿ ಬೇಕು. ಪೋಲೀಸ್ ಸ್ಟೇಷನ್ ನಿಮಗೆ ಕೊಡುವುದಕ್ಕೆ ಆಗದಿದ್ದರೂ ಕೂಡ ಒಂದು ಔಟ್‌ಪೋಸ್ಟ್ ಪೋಲೀಸ್ ಸ್ಟೇಷನ್ ಅಲ್ಲಿ ಮಾಡಬೇಕು ಎಂಬುದು ಅವರ ಬೇಡಿಕೆ ಇದೆ. ಒಂದು ಪೋಲೀಸ್ ಸ್ಟೇಷನ್ ನೀವು ಮಾಡಿದರೆ ಸುಮಾರು ಐದಾರು ಹಳ್ಳಿಗಳಿಗೆ ಅದು ಅನುಕೂಲವಾಗುತ್ತದೆ ಎಂದು ಅವರ ಬೇಡಿಕೆ ಇದೆ.

ಅದರ ಬಗ್ಗೆಯೂ ಕೂಡ ತಾವು ಯೋಚನೆ ಮಾಡಿ ಅಲ್ಲಿಗೆ ತಕ್ಷಣ ಒಂದು ಪೋಲೀಸ್ ಔಟ್‌ಪೋಸ್ಟ್ ಮಾಡಬೇಕು. ಏಕೆಂದರೆ ಬಹಳ ದಿವಸ ನೀವು ವ್ಯಾನನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಅವಕ್ಕೆ ಪರಿಸ್ಥಿತಿ ಹೀಗಿದೆ ಎಂದು ಒಂದು ಪೋಲೀಸ್ ಔಟ್‌ಪೋಸ್ಟ್ ಮಾಡಿದರೆ ಒಳ್ಳೆಯದು. ನಮ್ಮ ನಾಗರಾಜ್ ಅವರು ಹೇಳಿದಹಾಗೆ ಬಾರ್ಡರ್ ಏರಿಯಾದಲ್ಲಿರತಕ್ಕ ಸುಮಾರು 130 ಹಳ್ಳಿಗಳಿಗೆ ಇವರ ಕಾಟ ಜಾಸ್ತಿ ಇದೆ. ಅದಕ್ಕಾಗಿ ಇಲ್ಲಿ ಯಾವಾಗಲೂ ಪೋಲೀಸ್ ಕಾವಲು ಇರಬೇಕು. ಯಾವರೀತಿಯಾಗಿ ಸ್ಟೇಟ್ ಪೆಟ್ರೋಲಿಂಗ್ ಮಾಡುತ್ತಿರುತ್ತಾರಲ್ಲ ಆ ರೀತಿಯಾಗಿ ಪೋಲೀಸರು ಯಾವಾಗಲೂ ಈ ಏರಿಯಾದಲ್ಲಿ ಪೆಟ್ರೋಲಿಂಗ್ ಮಾಡತಕ್ಕಂಥದ್ದು ಬಹಳ ಅವಶ್ಯ ಇದೆ. ಅದನ್ನು ನೀವು ನಾಲ್ಕು ತುಕಡಿಗಳನ್ನು ಮಾಡುತ್ತೀರೋ ಐದು ತುಕಡಿಗಳನ್ನು ಮಾಡುತ್ತೀರೋ ಯಾವ ರೀತಿಯಾಗಿ ಅದನ್ನು ಮಾಡುತ್ತೀರೋ ಅದು ನಿಮಗೆ ಬಿಟ್ಟಿದ್ದು. ಆದರೆ ಅಲ್ಲಿ 130 ಹಳ್ಳಿಗಳಲ್ಲಿ ಈ ಪೆಟ್ರೋಲಿಂಗ್ ಮಾಡತಕ್ಕಂಥದ್ದು ಮತ್ತು ಪದೇ ಪದೇ ಪೋಲೀಸರು ಭೇಟಿ ಕೊಡತಕ್ಕಂಥದ್ದು ಅವಶ್ಯಕತೆ ಇದೆ. ಅದಕ್ಕಾಗಿ ಈ ಬಗ್ಗೆ ತಾವು ಒಂದು ಸವಿಸ್ತಾರವಾದ ಹೇಳಿಕೆಯನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅದಕ್ಕೆ ನೀವು ಪುನಃ ಬಿ.ಎಸ್.ಎಫ್. ತರುತ್ತೀರೋ ಹೇಗೆ? ಮತ್ತೆ ಏನು ಪರ್ಯಾಯ ವ್ಯವಸ್ಥೆ ಮಾಡುತ್ತೀರಿ ಎಂಬುದನ್ನು ಕೂಡ ಸ್ಪಷ್ಟಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಶೂನ್ಯ ವೇಳೆಯಲ್ಲಿ ಪ್ರಸ್ತಾಪಮಾಡಲಿ ಎಂದು ಅವರು ಬಂದು ಹೇಳಿದ್ದಾರೆ. ಎಲ್ಲಾ ವಿಚಾರಕ್ಕೂ ಒಂದು ನಿಮಿಷ ಒಂದು ನಿಮಿಷ ಎಂದು ತಾವುಗಳು ಹೇಳಿದರೆ. ಸಪ್ಲಿಮೆಂಟರೀಸ್ ಆಗಬೇಕು, ಶೂನ್ಯ ವೇಳೆಯಲ್ಲಿ ಮಾತನಾಡಬೇಕು ಎಂದರೆ ನನ್ನ ಕೈಯಲ್ಲಿ ಆಗುವುದಲ್ಲ ಸಭೆ ನಡೆಸುವುದಕ್ಕೆ. I am sorry. I cannot run the House like this. Please make the statement.

ಶ್ರೀ ಡಿ.ವಿ. ಸದಾನಂದ ಗೌಡ : ಸನ್ಮಾನ್ಯ ಅಧ್ಯಕ್ಷರೆ, ಇದನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತಿಲ್ಲ. ಈ ವಿಚಾರವಲ್ಲದೆ ಇನ್ನು ಎಷ್ಟೋ ಸಲಹೆಗಳನ್ನು ನಿಮ್ಮಲ್ಲಿ ಕೊಡುತ್ತೇನೆ. ಇದು ಅಂತ್ಯ ಆಗಲಿ ಎಂದಷ್ಟೇ ನನ್ನ ಉದ್ದೇಶ.

ಅಧ್ಯಕ್ಷರು : ಆಯಿತು. ಅದಕ್ಕೆ ಸಪರೇಟ್ ಆಗಿ ನೋಟೀಸ್ ಕಳುಹಿಸಿ. ತೆಗೆದುಕೊಳ್ಳೋಣ.

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ. ಮಾನ್ಯ ವಾಟಾಳ್ ನಾಗರಾಜು ರವರು, ಮಾನ್ಯ ಯಡಿಯೂರಪ್ಪನವರು ಮತ್ತು ಖರ್ಗೆಯವರು ಕಾಡುಗಳ್ಳ ವೀರಪ್ಪನ್ ವಿಚಾರದಲ್ಲಿ ಏನು ಪ್ರಸ್ತಾಪ ಮಾಡಿದ್ದಾರೆ, ಅವರು

ಮಾಡಿರತಕ್ಕಂಥ ಕೆಲವು ವಿಚಾರಗಳನ್ನು ಮತ್ತು ಸಲಹೆಗಳನ್ನು ಸರ್ಕಾರ ಸ್ವೀಕಾರ ಮಾಡುತ್ತದೆ. ಬಹುಮುಖ್ಯವಾಗಿ ಈ ಪುಣಜೂರು ಊರಿನಲ್ಲಿ ನಡೆದಿರತಕ್ಕಂಥ ಘಟನೆ ಏನು ಇದೆ ಅಲ್ಲಿಗೆ ನಾನು ಘಟನೆ ನಡೆದ ಎರಡು ದಿನಗಳಲ್ಲಿ ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರು, ಹಣಕಾಸು ಮಂತ್ರಿಗಳು ಆದ ಮಾನ್ಯ ಸಿದ್ದರಾಮಯ್ಯನವರು ಡಾ॥ ಮಹದೇವಪ್ಪನವರು, ಸನ್ಮಾನ್ಯ ವಾಟಾಳ್ ನಾಗರಾಜುರವರು ಸಹಿತ ನಮ್ಮ ಜೊತೆಯಲ್ಲಿ ಬಂದಿದ್ದರು. ನಾವೆಲ್ಲ ಅಲ್ಲಿಗೆ ಭೇಟಿ ಕೊಟ್ಟು, ಅಲ್ಲಿನ ಪರಿಸ್ಥಿತಿಯನ್ನು ನೋಡಿಕೊಂಡು ಬಂದಿದ್ದೇವೆ. ಪುಣಜನೂರು ಗ್ರಾಮದ ಮುದ್ದೇಗೌಡ ಮತ್ತು 4 ಜನ ಇತರರು ಏನು ಸತ್ತಿದ್ದಾರೆ ಅವರ ಕುಟುಂಬ ವರ್ಗದವರಿಗೆ ಪರಿಹಾರವನ್ನು ಕೊಟ್ಟಿದ್ದೇವೆ. ಆ ಮೇಲೆ ಬೇಡಗುಳಿ ಗ್ರಾಮದ 5 ಜನ ಸೋಲಿದಗರನ್ನು ತಾವು ತಿಳಿದುಕೊಂಡಿರುವ ಹಾಗೆ ಅದು 200 ಅಡಿಯಲ್ಲಿ ಇರತಕ್ಕಂಥದ್ದಲ್ಲ. ಸುಮಾರು 2-3 ಕಿ.ಮಿ. ಒಳಗಡೆ ಕಾಡಿನಲ್ಲಿ ಇದೆ ಎಂದು ನನಗೆ ತಿಳಿದು ಬಂದಿರತಕ್ಕಂಥ ವಿಚಾರ. ತಮಿಳುನಾಡು ಸರ್ಕಾರಕ್ಕೆ ನಾವು ಪತ್ರ ಬರೆದಿದ್ದೇವೆ. ಅಲ್ಲಿ ಸತ್ತವರು ನಮ್ಮ ರಾಜ್ಯದವರು ಎಂದು ತಿಳಿದುಬಂದಿದೆ. ಇವರಿಗೆ ಯಾವ ರೀತಿ ಪರಿಹಾರ ಕೊಟ್ಟಿದ್ದೇವೆ ಅದೇ ರೀತಿ ಅವರಿಗೆ ಪರಿಹಾರವನ್ನು ಕೊಡಬೇಕೆನ್ನುವಂಥ ತಮ್ಮ ಸಲಹೆಯನ್ನು ನಾನು ಒಪ್ಪುತ್ತೇನೆ. ಇನ್ನು ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ನಿರ್ಲಕ್ಷ್ಯದಿಂದ ಇದ್ದಾರೆ. ಇದರ ಬಗ್ಗೆ ಅವರು ಆಸಕ್ತಿ ವಹಿಸಿಲ್ಲ ಎನ್ನತಕ್ಕಂಥ ಮಾತು ಸರಿಯಲ್ಲ. ಅವರು ಎರಡು ಸಾರಿ ಇದರ ಬಗ್ಗೆ ಸಭೆಗಳನ್ನು ನಡೆಸಿದ್ದಾರೆ. ತಮಿಳುನಾಡಿನ ಮುಖ್ಯಮಂತ್ರಿಗಳ ಜೊತೆಯಲ್ಲೂ, ನಮ್ಮ ಅಧಿಕಾರಿಗಳು ಮತ್ತು ತಮಿಳುನಾಡಿನ ಅಧಿಕಾರಿಗಳು ಕುಳಿತು ವೀರಪ್ಪನ್‌ನನ್ನು ಹಿಡಿಯುವ ಕಾರ್ಯತಂತ್ರದ ಬಗ್ಗೆ ಈಗಾಗಲೇ ಸವಿಸ್ತಾರವಾಗಿ ಚರ್ಚೆಯನ್ನು ಮಾಡಿದ್ದಾರೆ. ಇದರ ಜೊತೆಗೆ ನಾನು ಕೆಲವು ವಿಚಾರವನ್ನು ಹೇಳಬೇಕಾಗುತ್ತದೆ. ಅದೇನೆಂದರೆ ತಮಿಳುನಾಡಿನ ಸರ್ಕಾರದವರು ಎಲ್ಲಾ ಸಂದರ್ಭದಲ್ಲೂ ಸಹಿತ ನಮ್ಮ ಪೋಲೀಸರಿಗೆ ಸಂಪೂರ್ಣವಾದ ಸಹಕಾರವನ್ನು ಕೊಟ್ಟಿದ್ದಾರೆ. ಹಿಂದಿನ ಸರ್ಕಾರಗಳಲ್ಲಿ ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳು ಆಗಿದ್ದ ಸಂದರ್ಭದಲ್ಲಿ,

ಮತ್ತು ಅದಕ್ಕೆ ಹಿಂದೆ ವೀರಪ್ಪ ಮೊಯಿಲಿಯವರ ಸರ್ಕಾರದಲ್ಲೂ ಸಹಿತ ಈ ಎಲ್ಲಾ ಸರ್ಕಾರಗಳಲ್ಲೂ ಸಹಿತ ಎಸ್‌ಟಿಎಫ್ ಆಪರೇಷನ್ ಜಾಯಿಂಟ್‌ಟಾಸ್ಕ್ ಫೋರ್ಸ್ ಏನಿದೆ ಇದರ ಆಪರೇಷನ್ಸ್‌ನಲ್ಲಿ ಸಹಿತ ತಮಿಳುನಾಡಿನವರು ನಮಗೆ ಸಹಕಾರ ಕೊಟ್ಟಿಲ್ಲ ಎನ್ನತಕ್ಕಂಥ ಪ್ರಶ್ನೆ ಉದ್ಭವ ಆಗಿಲ್ಲ. ಎಲ್ಲಾ ರೀತಿಯಲ್ಲೂ ಅವರು ಸಹಕಾರವನ್ನು ಕೊಟ್ಟಿದ್ದಾರೆ. ಕೇಂದ್ರ ಸರ್ಕಾರದವರು ಸಹ ನಮಗೆ ಸಹಕಾರನವನ್ನು ಕೊಟ್ಟಿದ್ದಾರೆ. ಬಾರ್ಡರ್‌ಸೆಕ್ಯೂರಿಟಿ ಫೋರ್ಸ್‌ನ್ನು ನಾವು ಕೇಳಿದಾಗ ಕೇಂದ್ರದವರು ಕೊಟ್ಟಿದ್ದಾರೆ. ಬಾರ್ಡರ್ ಸೆಕ್ಯೂರಿಟಿ ಫೋರ್ಸ್‌ನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳಿ ಅದು ಒಂದು ಕೇಂದ್ರ ಸರ್ಕಾರದ ನೀತಿ 1994ನೇ ಇಸವಿಯಲ್ಲಿ ಈ ರೀತಿಯ ಕಾರ್ಯಾಚರಣೆ ಇರತಕ್ಕಂಥ ಬಾರ್ಡರ್ ಸೆಕ್ಯೂರಿಟಿ ಫೋರ್ಸ್‌ನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹಾಗೆಯೇ ತೀರ್ಮಾನವಾದದ್ದು ಅದರ ಪ್ರಕಾರವಾಗಿ ಅವರು ವಾಪಸ್ಸು ತೆಗೆದುಕೊಂಡಿದ್ದಾರೆ. ನಮಗೇನಾದರೂ ಪಡೆಗಳು ಬೇಕೆಂದಾಗ, ಅವರು ಕೊಡುವುದಕ್ಕೆ ತಯಾರಿದ್ದಾರೆ. ಕೇಂದ್ರಸರ್ಕಾರದವರು ಈ ವಿಚಾರದಲ್ಲಿ ಸಂಪೂರ್ಣವಾಗಿ ನಮಗೆ ಸಹಕಾರವನ್ನು ಕೊಡತಕ್ಕಂಥ ಭರವಸೆಯನ್ನು ಕೊಟ್ಟಿದ್ದಾರೆ. ನಾನು ಕೇಂದ್ರ ಸರ್ಕಾರದ ಗೃಹ ಮಂತ್ರಿಗಳನ್ನು ಭೇಟಿ ಮಾಡಿದ್ದಾಗ ಮಾತನಾಡಿದ್ದೇನೆ. ಮುಖ್ಯವಾಗಿ ಮಾನ್ಯ ಮುಖ್ಯಮಂತ್ರಿಗಳು ಗೃಹಮಂತ್ರಿಗಳು ಈ ವಿಚಾರದಲ್ಲಿ ಚರ್ಚೆ ಮಾಡಿ. ಯಾವ ರೀತಿ ನಮ್ಮ ಕಾರ್ಯತಂತ್ರ ಇರಬೇಕು ಎನ್ನುವುದರ ಬಗ್ಗೆ ಅವರು ಚರ್ಚೆ ಮಾಡುವಂಥ ಸಂದರ್ಭದಲ್ಲಿ ಅವರು ಭರವಸೆಯನ್ನು ಸಹಿತ ಕೊಟ್ಟಿದ್ದಾರೆ. ಮಾನ್ಯ

ಖರ್ಗೆಯವರು ಏನು ಹೇಳಿದ್ದಾರೆ. ಪೋಲಿಸ್ ವ್ಯಾನ್ ಅವತ್ತು ಇಲ್ಲದೇ ಇದ್ದದ್ದು ನಿಜ. ಮಾನ್ಯ ಯಡಿಯೂರಪ್ಪನವರು ಹೇಳಿದ ಹಾಗೆ ವೀರಪ್ಪನ್ ಇರುವ ಜಾಗ ಸುಮಾರು 200 ಕಿ.ಮಿ. ನಷ್ಟು ಉದ್ದ ಇದೆ. ನಿಜವಾಗಿ ಅದು ಬರತಕ್ಕಂಥದ್ದು ಕೊಳ್ಳೇಗಾಲ ಅಷ್ಟೇ ಅಲ್ಲ, ನಿಮಗೆ ಗೊತ್ತಿದ್ದ ಹಾಗೆ ಪ್ರಾರಂಭವಾಗುವುದು ಸಂಗಮದಿಂದ. ಅದು ಪ್ರಾರಂಭ ಆಗತಕ್ಕಂಥದ್ದು ಮುತ್ತತ್ತಿಯಿಂದ. ತಮಿಳುನಾಡಿಗೆ ಸಹಿತ 200 ಕಿ.ಮಿ. ನಷ್ಟು ಬಾರ್ಡರ್ ಹೋಗುತ್ತದೆ. ಸಣ್ಣ ಸಣ್ಣ ಹಳ್ಳಿಗಳು ಸುಮಾರು 60-70 ಇವೆ. ಸುಮಾರು 150 ಹಳ್ಳಿಗಳು ಇವೆ. ಇವೆರಡನ್ನೂ ಸೇರಿಸಿದರೆ ಸುಮಾರು 200-220 ಹಳ್ಳಿಗಳಾಗುತ್ತವೆ. ಆ ಎಂಟೈರ್ 200 ಕಿ.ಮೀಟರ್ಸ್ ಟಚ್‌ನಲ್ಲಿ. ಅವರ ಜೀವವನ್ನು ರಕ್ಷಣೆ ಮಾಡತಕ್ಕಂಥದ್ದು ಸರ್ಕಾರದ ಕರ್ತವ್ಯ ಆಗಬೇಕು, ಇದು ನಮ್ಮ ಧರ್ಮ, ಇದನ್ನು ನಾನು ಒಪ್ಪುತ್ತೇನೆ. ಅವತ್ತಿನ ದಿವಸ ಪೋಲೀಸ್ ವ್ಯಾನ್ ಏಕೆ ಇರಲಿಲ್ಲ ಎಂದರೆ 2 ತಿಂಗಳಿಂದ ಆ ಒಂದು ಜಾಗದಲ್ಲಿ ಇರಲಿಲ್ಲ. ಅಲ್ಲಿ ಯಾವುದೇ ರೀತಿಯ ತೊಂದರೆ ಇಲ್ಲ ಎಂದು ತಿಳಿದು ಅಲ್ಲಿ ಯೂನಿಟ್ ಹೆಡ್ ಯಾರಿದ್ದಾರೆ, ಅಡ್‌ಮಿನಿಸ್ಟ್ರೇಟೀವ್ ಹೆಡ್ ಯಾರಿದ್ದಾರೆ ಅವರಿಗೆ ಅಷ್ಟೊಂದು ಸ್ವಾತಂತ್ರವನ್ನು ಕೊಟ್ಟಿದ್ದೇವೆ. ಆದರಲ್ಲಿ ಸರ್ಕಾರದ ನಿರ್ಲಕ್ಷ್ಯತೆ ಎನ್ನುವಂಥದ್ದು ಉದ್ಭವವಾಗುವುದಿಲ್ಲ.

ವಿಶೇಷ ಕಾರ್ಯಾಚರಣೆ ಪಡೆಯಲ್ಲಿ ಕರ್ನಾಟಕದ ಪೋಲೀಸ್‌ನವರು ಯಾರು ಕೆಲಸ ಮಾಡುತ್ತಿದ್ದಾರೆ ಅವರಲ್ಲಿ ಒಬ್ಬ ಅಧಿಕಾರಿಯನ್ನೂ ನಾನು ಇಲ್ಲಿಯವರೆಗೆ ವರ್ಗಾವಣೆ ಮಾಡಿಲ್ಲ, ಇದಕ್ಕಿಂತ ಹಿಂದೆಯೇ ಕೆಲವರ ವರ್ಗಾವಣೆ ಆಗಿತ್ತು. ಕೆಲವರು ಅಲ್ಲಿಂದ ರಿಲೀಫ್ ಆಗಿ ಒಂದು ಇಲ್ಲಿ ಪೋಸ್ಟಿಂಗ್‌ನ್ನು ತೆಗೆದುಕೊಂಡಿದ್ದಾರೆ. ಇದು ನಿಜವಾಗಿಯೂ ಆಗಿರತಕ್ಕಂಥದ್ದು. ಇನ್ನು ಅರಣ್ಯ ಅಧಿಕಾರಿಗಳಿಗೂ ಮತ್ತು ಪೋಲೀಸ್ ಅಫಿಶಿಯಲ್ಸ್‌ಗೂ ಇರುವ ಹೊಂದಾಣಿಕೆ ಬಗ್ಗೆ. ನನಗೆ ಇಲ್ಲಿಯವರೆಗೆ ಯಾರೂ ಸಹಿತ ಅಲ್ಲಿ ಕೆಲಸ ಮಾಡುತ್ತಿರುವ ಎಸ್‌ಟಿಎಫ್ ನವರು ಆಗಲಿ ಅಥವಾ ಅರಣ್ಯ ಇಲಾಖೆಯವರು ಆಗಲಿ, ಯಾರೂ ಹೊಂದಾಣಿಕೆ ಇಲ್ಲ ಎಂದು ಹೇಳಲಿಲ್ಲ. ಆದರೂ ನೀವೂ ಹೇಳಿದ್ದೀರಿ. ನಾನು ಮತ್ತೊಮ್ಮೆ ಅಧಿವೇಶನಗ ನಂತರ ಈ ಒಂದು ಕಾರ್ಯಾಚರಣೆಯ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಈ ಒಂದು ಕೆಲಸವನ್ನು ವೀಕ್ಷಣೆ ಮಾಡತಕ್ಕಂಥ ಸಂದರ್ಭದಲ್ಲಿ ಈ ವಿಚಾರವನ್ನು ಸಹಿತ ಗಮನದಲ್ಲಿಟ್ಟುಕೊಂಡು ಮಾಡುತ್ತೇನೆ.

ಬಹಳ ಮುಖ್ಯವಾಗಿ ತಾವು ಏನು ಔಟ್‌ಪೋಸ್ಟ್ ಬಗ್ಗೆ ಹೇಳಿದ್ದೀರಿ, ರಾತ್ರಿ ಹೊತ್ತು ಪ್ಯಾಟ್ರೋಲಿಂಗ್ ಮಾಡತಕ್ಕಂಥದ್ದು, ಹಗಲು ಹೊತ್ತಿನಲ್ಲಿ ಪೆಟ್ರೋಲಿಂಗ್ ಮಾಡತಕ್ಕಂಥದ್ದು ಹಳ್ಳಿಗಳಿಗೆ ಬರದೇ ಇರತಕ್ಕಂಥದ್ದು ಕೊನೆಯ ಪಕ್ಷ ಅಲ್ಲಿರತಕ್ಕಂಥ ಜನಗಳಿಗೆ ರಕ್ಷಣೆಯನ್ನು ಕೊಡುವುದು, ನಿರ್ಭೀತಿಯಿಂದ ಅವರು ಬದುಕುವುದಕ್ಕೆ ರಕ್ಷಣೆ ನೀಡುವುದು, ಈ ವಿಚಾರದಲ್ಲಿ ಸರ್ಕಾರ ಎಲ್ಲಾ ಆದ್ಯತೆಯನ್ನು ಕೊಡುತ್ತದೆ ಎನ್ನತಕ್ಕಂಥ ಭರವಸೆಯನ್ನು ಈ ಸಂದರ್ಭದಲ್ಲಿ ನಾನು ಕೊಡುತ್ತೇನೆ. ಏನು ಕಾರ್ಯತಂತ್ರವನ್ನು ನೀವು ಇಟ್ಟುಕೊಂಡಿದ್ದೀರಿ, ಎಂದು ಮಾನ್ಯ ಯಡಿಯೂರಪ್ಪನವರು ಕೇಳಿದ್ದಾರೆ. That is the crux of the problem. ನಿಮ್ಮ ಕಾರ್ಯಾಚರಣೆ ಏನು? ನೀವು ನಿರ್ಲಕ್ಷ್ಯತೆಯಿಂದ ಇದ್ದೀರಾ? ಅಥವಾ ಏನಾದರೂ ಮಾಡುತ್ತಿದ್ದೀರಾ? ಹತ್ತು ವರ್ಷಗಳಿಂದ ಇದು ನಡೆಯುತ್ತಿದೆಯಲ್ಲ, ಇದಕ್ಕೆ ಎಳೂವರೆ ಕೋಟಿ ರೂಪಾಯಿ ಖರ್ಚಾಗಿದೆ,ಏನು ಮಾಡಿದ್ದೀರಾ? ಎನ್ನತಕ್ಕಂಥ ಪ್ರಶ್ನೆಯನ್ನು ಅವರು ಕೇಳಿದರು. ಈ ಪ್ರಶ್ನೆಯನ್ನು ನಾನು ಒಪ್ಪುತ್ತೇನೆ.

ಆ ಪಡೆಯಲ್ಲಿ ಕೆಲಸ ಯಾರು ಮಾಡುತ್ತಿದ್ದಾರೆ, ನನಗೆ ಗೊತ್ತಿದ್ದ ಹಾಗೆ ಜೀವದ ಭಯವನ್ನು ಬಿಟ್ಟು ಅವರು ಕೆಲಸ ಮಾಡುತ್ತಿದ್ದಾರೆ. ಪ್ರಾಣವನ್ನು ತ್ಯಾಗಮಾಡಿ

ಅಲ್ಲಿ ಹೋರಾಟ ಮಾಡುತ್ತಿದ್ದಾರೆ. ಅದನ್ನು ನಾವು ಎಲ್ಲರೂ ಸಹಿತ ಮೆಚ್ಚುತ್ತೇವೆ. ಅವರೂ ಬಹಳ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ. 115-120 ಜನ ಇದ್ದಂಥ ವೀರಪ್ಪನ ಗ್ಯಾಂಗ್‌ನವರು ಅವರನ್ನು ಪೋಲೀಸ್‌ನವರು ಪತ್ತೆಮಾಡಿ, ಈಗ 10-15 ಜನಕ್ಕೆ ಇಳಿಸಿದ್ದೇವೆಂದು ಹೇಳಿದ್ದಾರೆ. ಇತ್ತೀಚಿನ ದಿನಗಳಲ್ಲಿ ತಮಗೆ ಗೊತ್ತಿರುವ ಹಾಗೆ, ಆ ಒಂದು ಪ್ರದೇಶದಲ್ಲಿಯೇ ತಮಿಳುನಾಡಿನ ಜೈಲು ಬ್ರೇಕ್‌ನಲ್ಲಿ ಎಲ್‌ಟಿಟಿನವರು ಏನು ತಪ್ಪಿಸಿಕೊಂಡು ಹೊರಟುಹೋಗಿದ್ದರು ಅವರಲ್ಲಿ 7-8 ಜನ ಆ ಒಂದು ಪ್ರದೇಶದಲ್ಲಿ ಪತ್ತೆ ಆಗಿರತಕ್ಕಂಥದ್ದು ನಮ್ಮೆಲ್ಲರ ಗಮನಕ್ಕೂ ಸಹಿತ ಬಂದಿದೆ. ಇದರ ಹಿನ್ನೆಲೆಯಲ್ಲಿ ಬಹಳ ಮುಖ್ಯವಾಗಿ ಈ ವೀರಪ್ಪನ್‌ನ ಕಾರ್ಯಾಚರಣೆಯ ಹಿತದೃಷ್ಟಿಯಿಂದಾಗಿ ಅನೇಕ ವಿಚಾರಗಳೇನಿವೆ ಅವುಗಳನ್ನು ನಾನು ಗೌಪ್ಯವಾಗಿ ಇಡುವುದಕ್ಕೆ ಬಯಸುತ್ತೇನೆ.

ತಮಗೆ ಗೊತ್ತಿದೆ. ಆ ವೀರಪ್ಪನ್‌ಗೆ ಎಲ್ಲಿಂದಲಾದರೂ, ಹೇಗಾದರೂ ಸುದ್ದಿ ತಲುಪಿ ಬಿಡುತ್ತದೆ. ಅದು ಹೇಗೆ ಏನು ಎನ್ನುವುದನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಇಷ್ಟು ವಿಚಾರಗಳನ್ನು ಹೇಳಿ ಅಲ್ಲಿರತಕ್ಕಂಥ ಜನಗಳ ರಕ್ಷಣೆಗೆ ಸರ್ಕಾರ ಎಲ್ಲಾ ರೀತಿಯ ಕ್ರಮವನ್ನು ಸಹಿತ ನಾವು ತೆಗೆದುಕೊಳ್ಳುತ್ತೇವೆ. ಹೆಚ್ಚಿನ ಸಿಬ್ಬಂದಿ ವರ್ಗ ಇರಬಹುದು, ಹೆಚ್ಚಿನ ಸಂಖ್ಯೆಯ ಸಲಕರಣೆಗಳು ಇರಬಹುದು, ಇಂಟಲಿಜೆನ್ಸಿ ಇರಬಹುದು, ಅವೆಲ್ಲವನ್ನು ಸಹಿತ ನಾವು ಕ್ರಮ ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥ ಭರವಸೆಯನ್ನು ಈ ಸಂದರ್ಭದಲ್ಲಿ ಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಒಂದೇ ಒಂದು ವಿಷಯ ಕೇಳುತ್ತೇನೆ, ಬೇರೆ ಏನೂ ಕೇಳುವುದಿಲ್ಲ. 125-130 ಜನರಿಂದ 10-15ಕ್ಕೆ ಇಳಿದಿರಬಹುದು ಎಂದು ತಾವು ಏನು ಹೇಳಿದಿರಿ ಅದು ಒಂದು ಕಾಲದಲ್ಲಿ ಇತ್ತು. ಈಗ ಯಾರ್‍ಯಾರು ಕುಖ್ಯಾತ ವ್ಯಕ್ತಿಗಳು ಜೈಲಿನಿಂದ ತಪ್ಪಿಸಿಕೊಂಡವರು ಇದ್ದಾರೆ, ಅಥವಾ ಎಲ್‌ಟಿಟಿಯವರು ಇರಬಹುದು, ಅಂಥವರಿಗೆ ಈ ಕಾಡು ಆಶ್ರಯದಾಣ ಆಗುತ್ತಿದೆಯೇನೋ ಎನ್ನುವ ಭಯ ನನಗೆ ಇದೆ. ನಿಮ್ಮ ಲೆಕ್ಕದಲ್ಲಿ ಹತ್ತಾರು ಇದೆ ಎನ್ನುವುದರ ಬದಲು ನನ್ನ ಪ್ರಕಾರ ನೂರಾರು ಇದ್ದದ್ದು ಡಬಲ್ ತ್ರಿಬಲ್ ಆಗಿದ್ದರೂ ನೀವು ಆಶ್ಚರ್ಯ ಪಡಬೇಕಾಗಿಲ್ಲ. ಅವರೆಲ್ಲರೂ ಸಹಕಾರಿಗಳಾಗಿ ಅಲ್ಲಿಗೆ ಹೋಗಿ ನಿಂತು ಹೊಟ್ಟೆಪಾಡಿಗೆ ಜೀವ ಉಳಿಸಿಕೊಳ್ಳುವುದಕ್ಕೆ ಜೈಲಿಗೆ ಹೋಗುವುದನ್ನು ತಪ್ಪಿಸಿಕೊಳ್ಳುವುದಕ್ಕೆ ಅದೇ ಒಂದು ದೊಡ್ಡ ಗ್ಯಾಂಗನ್ನು ಒಂದು ತರಹ ಸೀಡಿಂಗ್ ಸೆಂಟರ್ ಆಗಿಬಿಡುತ್ತದೆ ಏನೋ ಎಂಬ ಭಯ ನನಗಿದೆ. ಅದಕ್ಕಾಗಿ ನಾನು ಹೇಳುತ್ತೇನೆ ತಡಮಾಡಬೇಡಿ, ನೀವು ಏನು ಮಾಡುತ್ತೀರಿ ಕಾರ್ಯಾಚರಣೆಗೋಸ್ಕರ ಅದಕ್ಕೆ ನಮ್ಮ ಸಂಪೂರ್ಣ ಸಹಕಾರ ಇದೆ. ನಾನು ಏನೂ ವಿವರವನ್ನು ಕೇಳುವುದಕ್ಕೆ ಇಚ್ಛೆಪಡುವುದಿಲ್ಲ. ನೀವು ಬೇಕಾದರೆ ಅಧ್ಯಕ್ಷರ ಕೊಠಡಿಗೆ ಬಂದು ಏನು ಹೇಳಬೇಕೋ ಹೇಳಿ. ಇಲ್ಲಿರುವಂಥದು ಬಹಿರಂಗವಾಗಿ ಹೇಳುವಂಥಾದ್ದು ಹೇಳಿ. ನನ್ನದೇನೂ ಅಭ್ಯಂತರ ಇಲ್ಲ. ಆದರೆ ನಿಮ್ಮ ಮನಸ್ಸಿನಲ್ಲಿ ಅಲ್ಲಿ ಹತ್ತಾರು ಜನ ಉಳಿದಿದ್ದಾರೆ ಎನ್ನುವ ಭ್ರಮೆ ನಿಮಗಿದ್ದರೆ. ಖಂಡಿತಾ ಇಲ್ಲ. ಅದು ದೊಡ್ಡ ಪ್ರಮಾಣದ ಈ ರೀತಿಯ ಇಂಥ ನೂರಾರು ವೀರಪ್ಪನ್‌ಗಳನ್ನು ಸಾಕುವಂಥ ಒಂದು ತಾಣವಾದರೂ ಆಗಬಹುದು. ವೀರಪ್ಪನ್ ಹೆಸರಿನಲ್ಲಿ ಈ ತರಹ ರೌಡಿ ಎಲಿಮೆಂಟ್ಸ್ ಲೂಟಿ ಮಾಡುವಂಥ ಜನರನ್ನು ತಯಾರು ಮಾಡುವಂಥ ಸೆಂಟರ್ ಅಲ್ಲಿ ಆಗಬಾರದು ಎನ್ನುವ ದೃಷ್ಟಿಯಿಂದ ದಯಮಾಡಿ ತಾವು ಯೋಚನೆ ಮಾಡಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷರೆ, ನಾನು ಅತ್ಯಂತ ಪ್ರಾಮಾಣಿಕವಾಗಿ ಆ ಭರವಸೆಯನ್ನು ಕೊಡುತ್ತೇನೆ. ನಮ್ಮ ಶಕ್ತಿ ಮೀರಿ, ಈ ವಿಚಾರದಲ್ಲಿ ಸರ್ಕಾರ ಎಲ್ಲಾ ರೀತಿಯ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ನಾನು ಸ್ಪಷ್ಟವಾಗಿ ಸರ್ಕಾರಕ್ಕೆ ಏನು ಹೇಳುತ್ತೇನೆಂದರೆ ಗಡಿ ಭದ್ರತಾ ಪಡೆಯನ್ನು ಪುನಃ ಇಲ್ಲಿಗೆ ಕರೆಸಿ. ಇದರಲ್ಲಿ ತಮ್ಮ ಗೌರವದ ಪ್ರಶ್ನೆ ಬರುವುದಿಲ್ಲ. ಗಡಿ ಭದ್ರತಾ ಪಡೆಯನ್ನು ಕರೆಸಿದರೆ ಅವರು ಮತ್ತು ನಮ್ಮವರು ಒಟ್ಟಿಗೆ ಸೇರಿದರೆ ಅದಕ್ಕೆ ಹೆಚ್ಚಿನ ಶಕ್ತಿ ಬರುತ್ತದೆ. ನನ್ನ ವೈಯಕ್ತಿಕ ಅಭಿಪ್ರಾಯವನ್ನು ಹೇಳುವುದಾದರೆ ಅಲ್ಲಿರತಕ್ಕಂಥ ನಮ್ಮ ಪೋಲೀಸರ ಸಂಖ್ಯೆ ಅಷ್ಟೇನು ಜಾಸ್ತಿ ಇಲ್ಲ. ಅತ್ಯಂತ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಈ ಪೋಲೀಸರ ಸಂಖ್ಯೆ ಜಾಸ್ತಿ ಮಾಡಿ ಮುಂದಿನ ಕ್ರಮ ಕೈಗೊಳ್ಳುವುದಕ್ಕೆ ಏನಾದರೂ ಯೋಜನೆ ಹಾಕಿಕೊಂಡಿದ್ದರೆ ಅದನ್ನು ಬಹಿರಂಗವಾಗಿ ಸರ್ಕಾರ ನಮಗೆ ಹೇಳಿಕೆಯನ್ನು ಕೊಡದಿದ್ದರೂ ಬೇರೆ ಗೋಪ್ಯ ಸಭೆಯನ್ನಾದರೂ ಕರೆದು ಏನು ಮಾಡುತ್ತೀರಿ ಎಂಬುದನ್ನಾದರೂ ನೀವು ಹೇಳಬೇಡವೇ? ಈ ಪ್ರಶ್ನೆಯನ್ನು ಎತ್ತದೇ ಸುಮ್ಮನೆ ಅಲ್ಲಿ ಜನ ಸಾಯುತ್ತಿದ್ದಾರೆ, ಗಡಿ ಭದ್ರತಾ ಪಡೆ ಹೋಗಿದೆ. ಇದೆಲ್ಲಾ ಆಗಿದೆ. ಆದ್ದರಿಂದ ನಾನು ಸಚಿವರಿಗೆ ಏನು ಹೇಳುತ್ತಿದ್ದೇನೆಂದರೆ ಮತ್ತೊಮ್ಮೆ ತಾವು ನಮ್ಮ ಸರ್ಕಾರದ ಪರವಾಗಿ ಕೇಂದ್ರ ಸರ್ಕಾರದ ಜೊತೆಯಲ್ಲಿ ಮಾತನಾಡಿ ತಕ್ಷಣವೇ ಗಡಿ ಭದ್ರತಾ ಪಡೆಯನ್ನು ಮತ್ತೆ ಕರೆಸತಕ್ಕಂಥ ವ್ಯವಸ್ಥೆಯನ್ನು ಮೂಡಿಸುತ್ತೀರಾ?

12.10 ಪಿ.ಎಂ.

ಇನ್ನು ಎರಡನೆಯದಾಗಿ ಪುಣಜೂರು ಬೇಡಿಹುಳಿ ಬಗ್ಗೆ ಹೇಳುವುದಾದರೆ, ಮಾನ್ಯ ಮಂತ್ರಿಗಳು ಪುಣಜೂರನ್ನು ನೋಡಿದ್ದಾರೆ. ಅದು ಬಹಳ ಭಯಾನಕ ಪ್ರದೇಶವಾಗಿ ಕಾಣುತ್ತದೆ. ಇದು ನೇರವಾಗಿ ನನ್ನ ಕ್ಷೇತ್ರದಲ್ಲಿ ಬರತಕ್ಕ ಪ್ರದೇಶ. ಅಲ್ಲಿ ಒಂದು ಉಪ ಪೋಲಿಸ್ ಸ್ಟೇಷನ್‌ನ್ನು ಮಾಡುವ ಬಗ್ಗೆ ತಾವು ಒಪ್ಪಿದ್ದೀರಿ. ಅದನ್ನು ಮಾಡಬೇಕು. ಗಡಿ ಪ್ರದೇಶದಲ್ಲಿರತಕ್ಕ 100 ಹಳ್ಳಿಗಳು ಅತ್ಯಂತ ಕಡು ಬಡತನದಲ್ಲಿರತಕ್ಕ ಹಳ್ಳಿಗಳು. ಬಹಳ ಭಯದ ವಾತಾವರಣದಲ್ಲಿ ಇರತಕ್ಕ ಪ್ರದೇಶ. ಆ ಪ್ರದೇಶದ ಭದ್ರತೆ ಮತ್ತು ಅಭಿವೃದ್ಧಿಗೆ ಕನಿಷ್ಠ ಒಂದು ಉತ್ತಮ ಯೋಜನೆಯನ್ನು ಬಹುಶಃ ತಾವು ಈಗಾಗಲೇ ಸಿದ್ಧಮಾಡಿರಬಹುದು. ಒಂದು ವೇಳೆ ಸಿದ್ಧ ಮಾಡಿಲ್ಲದಿದ್ದರೆ ಈಗಾಲಾದರೂ ತಾವು ಕೂಡಲೇ ಮಾಡಬೇಕು. ಆ 100 ಹಳ್ಳಿಗಳಿಗೂ ತಾವು ರಕ್ಷಣೆ ಕೊಡತಕ್ಕ ಕೆಲಸವನ್ನು ಏನು ಮಾಡಿದ್ದೀರೆಂಬುದನ್ನು ದಯವಿಟ್ಟು ತಿಳಿಸಬೇಕೆಂದು ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಆ ಪ್ರದೇಶದಲ್ಲಿರತಕ್ಕ ಎಲ್ಲಾ ಜನರೂ ಕೂಡ ನಿರ್ಭೀತಿಯಿಂದ ಜೀವನ ಮಾಡುವಂತೆ ವ್ಯವಸ್ಥೆ ಮಾಡಲು ನಾವು ಈಗಾಗಲೇ ಏನು ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ ಅದನ್ನು ಪ್ರಾಮಾಣಿಕವಾಗಿ ಮಾಡುತ್ತೇವೆ. ಉಳಿದ ವಿಚಾರಗಳ ಬಗ್ಗೆ ನಾನು ಕ್ರಮ ತೆಗೆದುಕೊಂಡಿದ್ದೇನೆಂಬ ಭರವಸೆಯನ್ನು ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಕೇಂದ್ರದಿಂದ ಗಡಿ ಭದ್ರತಾ ಪಡೆಯನ್ನು ಕರೆಸದೇ ಇವರು ಹೇಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯ ಇವರು ಕೇಂದ್ರಕ್ಕೆ ಮನವಿಯನ್ನು ಮಾತ್ರ ಕಳುಹಿಸಬಹುದೇ ಹೊರತು ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಇವರು ಕೇಂದ್ರದ ಗೃಹ ಮಂತ್ರಿಗಳ ಜೊತೆ ಅಥವಾ ಮಾನ್ಯ ಪ್ರಧಾನಮಂತ್ರಿಗಳ ಜೊತೆ ಮಾತನಾಡಿ ಮನವಿಯನ್ನು ಸಲ್ಲಿಸಿಬೇಕು. ಗಡಿ ಭದ್ರತಾ ಪಡೆಯನ್ನು ಇವರು ಕರೆಸುತ್ತಾರೋ ಇಲ್ಲವೋ ಎಂಬುದು ನಮಗೆ ಬೇಕು. ಇದನ್ನು ಸ್ಪಷ್ಟಪಡಿಸಿದರೆ ಒಳ್ಳೆಯದು. ಈ ಬಗ್ಗೆ ನಮ್ಮ ಪೋಲೀಸರಿಗೆ ಶಕ್ತಿ ಇಲ್ಲವೆಂದು ನನಗೆ ಭಾವನೆ ಇಲ್ಲ. ಪೋಲೀಸರಿಗೆ ಶಕ್ತಿ ಇದೆ ಅಥವಾ ಇಲ್ಲ ಎಂಬ ಬಗ್ಗೆ ಚರ್ಚೆಮಾಡಿ ನಾನು ಯಾರನ್ನೂ ಅವಹೇಳನ ಮಾಡುವುದಕ್ಕೆ ಹೋಗುವುದಿಲ್ಲ. ಇದು ಕಳೆದ 10

ವರ್ಷಗಳಿಂದ ನಡೆಯುತ್ತಿದೆ. ಇದರ ಬಗ್ಗೆ ನಾನು ಈಗ ಮಾತನಾಡುವುದು ಸರಿಯಲ್ಲ. ಗಡಿ ಭದ್ರತಾ ಪಡೆಯನ್ನು ಕರೆಸುವುದಕ್ಕೆ ತಾವು ಕೇಂದ್ರದ ಜೊತೆ ಮಾತನಾಡಿ ಮನವಿಯನ್ನು ಸಲ್ಲಿಸುತ್ತೀರಾ? ತಾವು ಏನು ಕಾರ್ಯಕ್ರಮ ಹಾಕಿಕೊಳ್ಳುತ್ತೀರಿ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ನನ್ನ ಮೇಲೆ ವಿಶೇಷವಾದ ವಿಶ್ವಾಸವಿದೆ. ನಾನು ಅವರಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಈ ವಿಚಾರವನ್ನು ನಮ್ಮ ಸರ್ಕಾರಕ್ಕೆ ಬಿಡಿ. ಸ್ವಲ್ಪ ಸಮಯವನ್ನು ಕೊಡಿ. ಅದನ್ನು ನಾವು ಮಾಡುತ್ತೇವೆ. ವೀರಪ್ಪನ್ ವಿರುದ್ಧ ಕಾರ್ಯಾಚರಣೆ ಯೋಜಿಸುವ ಬಗ್ಗೆ ನಮಗೆ ಬಿಡಿ.

ಶ್ರೀ ಎ. ರುಕ್ಮಯ್ಯ ಪೂಜಾರಿ : ನೀವು 2 ಕೋಟಿ ರೂಪಾಯಿಗಳನ್ನು ಕೊಟ್ಟು ನೀವೂ ಮತ್ತು ವೀರಪ್ಪನ್ ಒಂದು ಒಪ್ಪಂದವನ್ನು ಮಾಡಿಕೊಳ್ಳಿ. ಅನಂತರ ಅವನು ತನ್ನ ಕೆಲಸವನ್ನು ಬಹುಶಃ ನಿಲ್ಲಿಸಬಹುದು. ಕಳೆದ 10 ವರ್ಷಗಳಿಂದ ನೀವು ಏನೂ ಮಾಡುವುದಕ್ಕಾಗಿಲ್ಲ. 7.5 ಕೋಟಿ ರೂಪಾಯಿಗಳನ್ನು ನೀವು ಖರ್ಚು ಮಾಡಿದ್ದೀರಿ. ನೂರಾರು ಜನ ಜೀವ, ಕಳೆದುಕೊಂಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನನಗೆ ಒಂದು ಭಯ ಏನೆಂದರೆ, ಹಿಂದೆ ಗೃಹ ಮಂತ್ರಿಗಳಾಗಿದ್ದ ಮಾನ್ಯ ಧರ್ಮಸಿಂಗ್‌ರವರು ನಮ್ಮ ಪಕ್ಕದಲ್ಲಿ ಇವತ್ತು ಇದ್ದಾರೆ. ಇವರು ಅಧಿಕಾರದಲ್ಲಿದ್ದಾಗ ಇದನ್ನು ನಮಗೆ ಬಿಟ್ಟುಬಿಡಿ. ಇದರಲ್ಲಿ ಏನೂ ಅನುಮಾನ ಪಡಬೇಡಿ ಎಂದರು. ಅವರಿಗೆ ನಾವು ಬಿಟ್ಟಮೇಲೆ ಈಗ ಈಕಡೆ ಬಂದು ಕುಳಿತಿದ್ದಾರೆ. ಈಗ ಅವರು ನಮಗೆ ಇದನ್ನು ಬಿಟ್ಟು ಬಿಡಿ, ನಮಗೆ ಬಿಟ್ಟುಬಿಡಿ ಎಂದು ಹೇಳುತ್ತಿದ್ದಾರೆ. ಹಿಂದೆ ಬಸವಲಿಂಗಪ್ಪನವರು ಅರಣ್ಯ ಮಂತ್ರಿಯಾಗಿದ್ದಾಗ ನೀವೇನೂ ಹೆದರಬೇಡಿ,ಇನ್ನು ಕೇವಲ ಎರಡೇ ದಿವಸದಲ್ಲಿ ಇದನ್ನು ಮಾಡುತ್ತೇವೆ. ನೀವು ಯಾರಿಗೂ ಹೇಳಬೇಡಿ ಎಂದು ಹೇಳಿದರು. ಇಷ್ಟೇ ಅಲ್ಲ ಮಾನ್ಯ ವೀರೇಂದ್ರ ಪಾಟೀಲರ ಕಾಲದಿಂದಲೂ ನಾವು ಏನು ಕೇಳುತ್ತಿದ್ದೇವೆಂದರೆ, ಇದನ್ನು ನಮಗೆ ಬಿಟ್ಟುಬಿಡಿ. ಎಂದು ಇವರು ಹೇಳುತ್ತಲೇ ಇದ್ದಾರೆ. ನಾವು ಬಿಟ್ಟುಬಿಟ್ಟಿದ್ದೇವೆ. ಜನರು ಸಾಯುತ್ತಿದ್ದಾರೆ.

ಇಷ್ಟು ಮಾತ್ರ ಅವತ್ತಿನಿಂದಲೂ ನಡೆಯುತ್ತಾ ಇದೆಯೇ ಹೊರತು ಬೇರೆ ಏನೂ ಆಗಿಲ್ಲ. ವೀರಪ್ಪನ್‌ನನ್ನು ಹಿಡಿಯಬೇಕಾದರೆ ಇದರ ಬಗ್ಗೆ ಚರ್ಚೆ ಆಗಬಾರದು, ಇದನ್ನು ನಮಗೆ ಬಿಟ್ಟುಬಿಡಿ, ನಾವು ನೋಡಿ ಕೊಳ್ಳುತ್ತೇವೆಂದು ಹೇಳುತ್ತಲೇ ಬಂದರು. ಇನ್ನೂ ಎಷ್ಟು ದಿವಸ ಬಿಡಬೇಕು, ನಾವು ಯಾರನ್ನು ನೋಡಿಕೊಳ್ಳಬೇಕು. ಧರ್ಮಸಿಂಗ್‌ರವರ ಬಗ್ಗೆ ನಮಗೆ ಒಳ್ಳೆಯ ಅಭಿಪ್ರಾಯ ಇದೆ. ಅವರು ಅಲ್ಲಿ ಬಿಟ್ಟು ಈಕಡೆ ಬಂದರು. ಇದರ ಬಗ್ಗೆ ಲಘುವಾಗಿ ತೀರ್ಮಾನ ತೆಗೆದುಕೊಳ್ಳಬೇಕೆಂದು ಅಭಿಪ್ರಾಯವಿಲ್ಲ, ಏನಾದರೊಂದು ಪರಿಹಾರವನ್ನು ಕಂಡು ಹಿಡಿಯಿರಿ. ನಾವು ಕೇಂದ್ರದ ಜೊತೆ ಮಾತನಾಡುತ್ತಿದ್ದೇವೆ, ಗಡಿ ಭದ್ರತಾಪಡೆಯನ್ನು ಕರೆಸುತ್ತೇವೆಂದು ಸ್ಪಷ್ಟವಾಗಿ ಹೇಳಿ. ನಿಮಗೆ ಕಳುಹಿಸುವುದಿಲ್ಲವೆಂದು ಅವರೇನಾದರೂ ಹೇಳುತ್ತಿದ್ದಾರೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಇಲ್ಲಿ ನಾನು ಮಾತನಾಡುವುದರಿಂದ ಏನಾದರೂ ಉಪಯೋಗ ಇದೆಯೇ? ನಾನು ಜೋರಾಗಿ ಹೇಳಬೇಕೆ? ಈ ದಿಸೆಯಲ್ಲಿ ನಮ್ಮಿಂದ ಏನೇನು ಕ್ರಮ ತೆಗೆದು ಕೊಳ್ಳುವುದಕ್ಕೆ ಸಾಧ್ಯವೋ ಅದನ್ನೆಲ್ಲಾ ಪ್ರಾಮಾಣಿಕವಾಗಿ ತೆಗೆದುಕೊಳ್ಳುತ್ತೇವೆ. ತಮ್ಮ ಸಲಹೆಗಳೇನಾದರೂ ಇದ್ದರೆ ಅದನ್ನೂ ಕೊಡಿ. ಅದನ್ನೂ ಕೂಡ ನಾವು ತೆಗೆದುಕೊಂಡು ಕ್ರಮ ತೆಗೆದುಕೊಳ್ಳುತ್ತೇವೆ.

VIII F-21

ಗಮನ ಸೆಳೆಯುವ ಸೂಚನೆಗಳು

ಕೊಪ್ಪಳ ತಾಲ್ಲೂಕಿನಲ್ಲಿ ಪ್ರಾರಂಭಿಸಲಾಗಿರುವ ಏತ ನೀರಾವರಿ ಯೋಜನೆ

ಶ್ರೀ ಕರಡಿ ಸಂಗಪ್ಪ ಅಮರಪ್ಪ (ಕೊಪ್ಪಳ) : ಮಾನ್ಯ ಅಧ್ಯಕ್ಷರೆ, ಕೊಪ್ಪಳ ತಾಲೂಕಿನಲ್ಲಿ ಪ್ರಾರಂಭಿಸಲಾಗಿರುವ ಏತ ನೀರಾವರಿ ಯೋಜನೆಯ ಬಗ್ಗೆ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ಖಾತೆ ಸಚಿವರು) : ಮಾನ್ಯ ಅಧ್ಯಕ್ಷರೆ, ಕೊಪ್ಪಳ ತಾಲ್ಲೂಕಿನಲ್ಲಿ ಈಗಾಗಲೇ ಪ್ರಾರಂಭಿಸಿದ ಏತ ನೀರಾವರಿ ಯೋಜನೆಗಳ ಅಚ್ಚುಕಟ್ಟು ಪ್ರದೇಶಕ್ಕೆ ಒಂದು ವರ್ಷದಲ್ಲಿ ಮುಂಗಾರು ಮತ್ತು ಹಿಂಗಾರು ಬೆಳೆಗೆ (ಒಟ್ಟು ಎರಡು ಬೆಳೆಗೆ) ನೀರನ್ನು ಒದಗಿಸಿದಾಗ ಮಾತ್ರ ನೀರಿನ ಕರ ಆಕರಣೆಯನ್ನು ಪ್ರತ್ಯೇಕವಾಗಿ ವಿಧಿಸಲಾಗಿದೆ. ಒಂದು ಬೆಳೆಗೆ ನೀರನ್ನು ಒದಗಿಸಿ ಎರಡು ಬೆಳೆಗಳಿಗೆ ಕರ ಆಕರಣೆ ಮಾಡಿದ ಪ್ರಕರಣಗಳು ಯಾವುದೂ ಇಲ್ಲ.

ಶ್ರೀ ಕರಡಿ ಸಂಗಪ್ಪ ಅಮರಪ್ಪ : ಮಾನ್ಯ ಅಧ್ಯಕ್ಷರೆ, ಎರಡೂ ಬೆಳೆಗಳಿಗೆ ಅಧಿಕಾರಿಗಳು ತೆರಿಗೆಯನ್ನು ಹಾಕಿದ್ದಾರೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾನ್ಯ ಸಚಿವರು ಸೂಚನೆ ಕೊಟ್ಟು ಹಿಂದೆ ಹಾಕಿರತಕ್ಕ ತೆರಿಗೆಯನ್ನು ರದ್ದುಪಡಿಸುವುದಕ್ಕೆ ಕ್ರಮ ತೆಗುದುಕೊಳ್ಳಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀಮತಿ ಲೀಲಾವತಿ ಆರ್. ಪ್ರಸಾದ್ : ನಾನು ಇದನ್ನು ಪರಿಶೀಲಿಸುತ್ತೇನೆ.

(2) ರಾಜ್ಯದ ಬಹುತೇಕ ಹಳ್ಳಿಗಳಲ್ಲಿ ಪರವಾನಗಿ ಇಲ್ಲದೆ ಅಕ್ರಮವಾಗಿ ಸಾರಾಯಿ ಅಂಗಡಿ / ಬಾರ್‌ಗಳನ್ನು ತೆಗೆದಿರುವ ಬಗ್ಗೆ

ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಅಧ್ಯಕ್ಷರೆ, ಗ್ರಾಮೀಣ ಪ್ರದೇಶದಲ್ಲಿ ಸಾರಾಯಿ ಅಂಗಡಿಯನ್ನು ಪ್ರಾರಂಭ ಮಾಡಬೇಕಾದರೆ ಎಕ್ಸೈಜ್ ಲೈಸೆನ್ಸ್ ತೆಗೆದುಕೊಳ್ಳಬೇಕಾದ್ದು ಎಷ್ಟು ಅವಶ್ಯಕತೆ ಇದೆಯೋ ಅಷ್ಟೇ ಅವಶ್ಯ ಗ್ರಾಮಪಂಚಾಯಿತಿಯ ಲೈಸೆನ್ಸ್‌ನ್ನೂ ತೆಗೆದುಕೊಳ್ಳಬೇಕೆಂಬುದು. ಆದರೆ ದುರ್ದೈವದಿಂದ ಗ್ರಾಮಾಂತರ ಪ್ರದೇಶದಲ್ಲಿ ಪ್ರಾರಂಭವಾಗುವಂಥ ಯಾವುದೇ ಸಾರಾಯಿ ಅಂಗಡಿಗಳೂ ಗ್ರಾಮಪಂಚಾಯಿತಿಯ ಲೈಸೆನ್ಸ್‌ನ್ನು ತೆಗೆದುಕೊಳ್ಳದೆ ಪ್ರಾರಂಭವಾಗಿವೆ. ಇವೆಲ್ಲಾ ಗೈರ್ ಕಾನೂನು ಇವೆ. ಅವುಗಳನ್ನು ಕೂಡಲೇ ನಿಲ್ಲಿಸುವುದಕ್ಕೆ ಮಾನ್ಯ ಅಬ್ಕಾರಿ ಸಚಿವರು ಮತ್ತು ಮಾನ್ಯ ಗೃಹ ಸಚಿವರುಗಳ ಗಮನ ಸೆಳೆಯಬಯಸುತ್ತೇನೆ.

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಸೇಂದಿ, ಸಾರಾಯಿ ಹಾಗೂ ಭಾರತೀಯ ಹಾಗೂ ವಿದೇಶಿಯ ಮದ್ಯಗಳನ್ನು ಮಾರಾಟ ಮಾಡಲು ಬೇಕಾದ ಲೈಸೆನ್ಸ್‌ಗಳನ್ನು ಕರ್ನಾಟಕ ಅಬಕಾರಿ ಅಧಿನಿಯಮ 1965ರ ಅಡಿಯಲ್ಲಿ ರಚಿತವಾದ ನಿಯಮಗಳ ಪ್ರಕಾರ ನೀಡಲಾಗುತ್ತಿದೆ. ಕರ್ನಾಟಕ ಅಬಕಾರಿ ಅಧಿ ನಿಯಮ 1965 (ನೋಡಿ ಸೆಕ್ಷನ್ 15) ರಲ್ಲಾಗಲೀ ಅಥವಾ ಅದರ ಕೆಳಗೆ ರಚಿಸಿದ ಯಾವುದೇ ನಿಯಮಗಳ ಪ್ರಕಾರವಾದಲೀ (ನೋಡಿ. ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು 1968ರ ನಿಯಮ 5 ಅಥವಾ ಕರ್ನಾಟಕ ಅಬಕಾರಿ ಚಿಲ್ಲರೆ ಮದ್ಯ ಮಾರಾಟ ಮಾಡುವ ಹಕ್ಕಿನ ಗುತ್ತಿಗೆಯ ವಿಲೇವಾರಿ) ನಿಯಮಗಳು 1969ರ ನಿಯಮ 17(2) ಮದ್ಯ ಮಾರಾಟ ಮಾಡುವ ಲೈಸೆನ್ಸ್‌ಗಳನ್ನು ಕೊಡುವಾಗ ಬೇರೆ ಪ್ರಾಧಿಕಾರಗಳು, ಇತರೇ ಯಾವುದೇ ಲೈಸೆನ್ಸ್‌ಗಳನ್ನು ನೀಡುವ ಅವಶ್ಯಕತೆಯಿದ್ದರೆ ಅಂತಹ ಲೈಸೆನ್ಸ್‌ಗಳನ್ನು ಹೊಂದಿದ್ದರೆ ಮಾತ್ರ ಲೈಸೆನ್ಸ್ ನೀಡಬೇಕೆಂದು ವಿಧಿಸಿರುವುದಿಲ್ಲ. ಆದ ಕಾರಣ ಅಬಕಾರಿ ಇಲಾಖೆಯು

ಮದ್ಯ ಮಾರಾಟದ ಲೈಸೆನ್ಸ್‌ಗಳನ್ನು ನೀಡುವಾಗ ಗ್ರಾಮ ಪಂಚಾಯತಿಯನ್ನು ಒಳಗೊಂಡಂತೆ ಇತರೆ ಯಾವುದೇ ಪ್ರಾಧಿಕಾರವು ನೀಡುವ ಲೈಸೆನ್ಸ್ ಅನುಮತಿಯನ್ನು ಸಲ್ಲಿಸಲು ಒತ್ತಾಯಿಸುತ್ತಿಲ್ಲ. ಹಾಗೆಯೇ ಅಬಕಾರಿ ಇಲಾಖೆಯು ಗ್ರಾಮ ಪಂಚಾಯತಿ ಲೈಸೆನ್ಸ್ ಇಲ್ಲದೆ ಮದ್ಯ ಮಾರಾಟ ಮಾಡುವವರ ಮೇಲೆ ಕ್ರಮ ಜರುಗಿಸುವ ಪ್ರಶ್ನೆಯೂ ಉದ್ಭವಿಸುವುದಿಲ್ಲ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಅಬ್ಕಾರಿ ಸಚಿವರ ಗಮನವನ್ನು ನಾನು ಸೆಳೆಯುವುದಕ್ಕೆ ಹೇಳಲಿಲ್ಲ. ಮಾನ್ಯ ಗೃಹ ಸಚಿವರ ಗಮನವನ್ನು ಸೆಳೆಯಲು ನಾನು ಹೇಳಿದ್ದುದು. ನೀವು ಲೈಸೆನ್ಸ್‌ನ್ನು ಕೊಟ್ಟ ಮೇಲೆ ನಿಮ್ಮ ಜವಾಬ್ದಾರಿ ಮುಗಿಯಿತು. ಈಗ ಅದಕ್ಕೆ ಪಂಚಾಯಿತಿಯ ಲೈಸೆನ್ಸ್ ಬೇಕಾಗುತ್ತದೆ. ಪಂಚಾಯಿತಿ ಲೈಸೆನ್ಸ್ ಇಲ್ಲದೆ ಸಾರಾಯಿಯನ್ನು ಮಾರಾಟ ಮಾಡುವುದಕ್ಕೆ ಸಾಧ್ಯವೇ? ಅವರ ವಿರುದ್ಧ ಕಂಪ್ಲೇಂಟ್ ಕೊಡುವುದಕ್ಕೆ ಪಂಚಾಯಿತಿಯವರೂ ಹೆದರುತ್ತಾರೆ, ಗ್ರಾಮಸ್ಥರೂ ಕೂಡ ಹೆದರುತ್ತಾರೆ. ಕಾರಣ ಅವರು ದುಷ್ಟ ಶಕ್ತಿಗಳು ಎಂದು. ಆದ್ದರಿಂದ ಸರ್ಕಾರ ಸೋಮೋಟೋ ಪೋಲಿಸ್ ಇಲಾಖೆಗೆ ಆದೇಶ ನೀಡಿ ಈ ಪಂಚಾಯಿತಿಗಳ ಲೈಸೆನ್ಸ್ ಇಲ್ಲದೆ ಈ ಸಾರಾಯಿ ಅಂಗಡಿಗಳು ಯಾವ ಯಾವ ಗ್ರಾಮಗಳಲ್ಲಿವೆ ಅವೆಲ್ಲವನ್ನೂ ಬಂದ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಗೃಹ ಮಂತ್ರಿಗಳ ಗಮನ ಸೆಳೆಯುವ ಸಲುವಾಗಿ ನಾನು ನೋಟೀಸ್ ಕೊಟ್ಟೆ. ಇವರು ಅದನ್ನು ಮಾನ್ಯ ಅಬ್ಕಾರಿ ಸಚಿವರಿಗೆ ಕಳುಹಿಸಿಕೊಟ್ಟಿದ್ದಾರೆ. ದಯವಿಟ್ಟು ಮಾನ್ಯ ಗೃಹ ಸಚಿವರು ಇದಕ್ಕೆ ಉತ್ತರ ಕೊಡಬೇಕು. ತಾವು ಎಲ್ಲ ಪೋಲೀಸ್ ಅಧಿಕಾರಿಗಳಿಗೂ ಆದೇಶಕೊಡಬೇಕು. ನಾವು ಬರುವ ಅಕ್ಟೋಬರ್ 2ನೇ ತಾರೀಖು ಗಾಂಧೀಜಿಯವರ 125ನೇ ವರ್ಷವನ್ನು ಆಚರಣೆ ಮಾಡುತ್ತಿದ್ದೇವೆ. ಆ ಮಹಾತ್ಮನಿಗೆ ಗೌರವ ಕೊಡುವ ದೃಷ್ಟಿಯಿಂದ ಬರುವ ಅಕ್ಟೋಬರ್ 2ನೇ ತಾರೀಖಿನೊಳಗೆ ಸೋಮೋಟೋ ಪೋಲಿಸ್ ಅಧಿಕಾರಿಗಳು ಎಲ್ಲಾ ಗ್ರಾಮಗಳಲ್ಲಿರುವ ಸಾರಾಯಿ ಅಂಗಡಿಗಳಿಗೆ ಯಾವುಯಾವುದಕ್ಕೆ ಲೈಸೆನ್ಸ್ ಇರುವುದಿಲ್ಲ ಎಂಬುದನ್ನು ನೋಡಿ ಅವುಗಳನ್ನು ಬಂದ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಗೃಹ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ) : ಮಾನ್ಯ ಅಧ್ಯಕ್ಷರೆ, ನಾನು ಈ ಸಂದರ್ಭದಲ್ಲಿ ಇನ್ನೊಂದು ವಿಚಾರವನ್ನು ಸ್ಪಷ್ಟಪಡಿಸುವುದಕ್ಕೆ ಇಷ್ಟಪಡುತ್ತೇನೆ. ಅಬಕಾರಿ ನಿಯಮದ ಪ್ರಕಾರ ಯಾವುದೇ ಮದ್ಯವನ್ನು ಮಾರಾಟ ಮಾಡತಕ್ಕ ಸಂದರ್ಭದಲ್ಲಿ ಗ್ರಾಮಪಂಚಾಯಿತಿಯ ಲೈಸೆನ್ಸ್ ಪಡೆಯಬೇಕಾಗಿಲ್ಲ ಎಂಬುದು. ಆದರೆ 1993ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮದ ಪ್ರಕಾರ ಯಾವುದೇ ವ್ಯವಹಾರಗಳನ್ನೂ ಮಾಡಬೇಕಾದರೂ ಸಂಬಂಧಪಟ್ಟ ಗ್ರಾಮಪಂಚಾಯಿತಿಯ ಲೈಸೆನ್ಸ್‌ನ್ನು ಪಡೆಯಬೇಕೆಂದು ಇದೆ. ಇದರ ಬಗ್ಗೆ ಮಾನ್ಯ ಸಚಿವರಾದ ಎಂ.ಪಿ. ಪ್ರಕಾಶ್‌ರವರು ಹೇಳಬೇಕು. ಏಕೆಂದರೆ ಗ್ರಾಮ ಪಂಚಾಯತಿ ಆ್ಯಕ್ಟ್‌ನಲ್ಲಿ ಗ್ರಾಮಗಳನ್ನು ಮದ್ಯಮುಕ್ತ ಮಾಡಬೇಕೆಂಬ ನಿರ್ಣಯವನ್ನು ಕೆಲವೊಂದು ಗ್ರಾಮ ಪಂಚಾಯತಿಗಳು ಮಾಡಿಕೊಂಡಿವೆ. ಅದನ್ನು ಸಂಬಂಧಪಟ್ಟ ಅಬ್ಕಾರಿ ಇಲಾಖೆಯವರಿಗೆ ಅವರು ಕಳುಹಿಸಿಕೊಟ್ಟಿದ್ದಾರೆ.

ನಾವು ಇದರ ಬಗ್ಗೆ ಕ್ರಮ ಕೈಗೊಳ್ಳುತ್ತೇವೆಂಬ ಉತ್ತರವನ್ನೂ ಕೂಡ ಇವರು ಆ ಪಂಚಾಯಿತಿಗೆ ಕಳುಹಿಸಿಕೊಟ್ಟಿದ್ದಾರೆ. ಆದರೆ ಇದು ಯಾವುದನ್ನೂ ಗಣನೆಗೆ ತೆಗೆದುಕೊಳ್ಳದೆ ಪಂಚಾಯಿತಿ ನಿರ್ಣಯದ ಅವಶ್ಯಕತೆ ಇಲ್ಲವೆಂದು ಅವರು ಉತ್ತರ ಕೊಡುವುದಾದರೆ ಈ ಅಬ್ಕಾರಿ ಆ್ಯಕ್ಟ್‌ನೀತಿ ಏನಿದೆ ಇದನ್ನು ಒಪ್ಪಬೇಕೇ? ಅಥವಾ ಗ್ರಾಮ ಪಂಚಾಯಿತಿಯ ಆ್ಯಕ್ಟ್‌ನ್ನು ಒಪ್ಪಬೇಕೇ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಈ ಬಗ್ಗೆ ಸ್ಪಷ್ಟವಾಗಿ ಮಾಹಿತಿಯನ್ನು ಸರ್ಕಾರದ ವತಿಯಿಂದ ಕೇಳಬಯಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂತೆ ಕರ್ನಾಟಕ ಪಂಚಾಯತಿ ರಾಜ್ ಕಾಯಿದೆ ಕೆಳಗಡೆ ಯಾವುದೇ ವ್ಯವಹಾರ ಮಾಡತಕ್ಕವರು ಲೈಸೆನ್ಸನ್ನು ಪಂಚಾಯಿತಿಯಿಂದ ತೆಗೆದುಕೊಳ್ಳಬೇಕು. ಅಬಕಾರಿ ವಿಚಾರದಲ್ಲಿ ಅಗಲಿ ಅಥವಾ ಬೇರೆ ವ್ಯವಹಾರ ಮಾಡತಕ್ಕವರು ಲೈಸೆನ್ಸ್ ತೆಗೆದುಕೊಳ್ಳಬೇಕು. ಎಕ್ಸೈಜ್ ಇಲಾಖೆಯ ಮುಖಾಂತರ ನಡೆಯತಕ್ಕ ಹರಾಜಿನಲ್ಲಿ ಹಣ ಕಟ್ಟಿ ತೆಗದುಕೊಳ್ಳತಕ್ಕದ್ದು ಒಂದು ಭಾಗ. ಆದರೆ ಅಂಗಡಿಮುಟ್ಟು ವ್ಯವಹಾರವನ್ನು ಮಾಡುವಾಗ ಕಾಯಿದೆ ಕೆಳಗೆ ಲೈಸೆನ್ಸ್ ತೆಗೆದುಕೊಳ್ಳತಕ್ಕದು ಸಾಧುವಾದದ್ದು. ಅದರ ಪ್ರಕಾರ ಕ್ರಮ ಕೈಗೊಳ್ಳಬೇಕೆಂದು ಇಷ್ಟರಲ್ಲೆ ನಾವು ಸುತ್ತೋಲೆಯನ್ನು ಕಳುಹಿಸುವವರು ಇದ್ದೇವೆ. ಮಾನ್ಯ ಡಿ.ಆರ್. ಪಾಟೀಲ್‌ರವರು ಈ ವಿಚಾರದಲ್ಲಿ ನನ್ನ ಗಮನವನ್ನು ಪತ್ರದ ಮುಖಾಂತರ ಸೆಳೆದಿದ್ದಾರೆ. ಅವರು ಮಾತನಾಡಿದ್ದಾರೆ. ನಾವು ಅಬಕಾರಿ ಸಚಿವರ ಜೊತೆಯಲ್ಲಿ ಮಾತನಾಡುತ್ತೇವೆ. ಎಲ್ಲರೂ ಕೂಡ ಲೈಸೆನ್ಸ್ ತೆಗೆದುಕೊಳ್ಳಬೇಕು. ಅನಧಿಕೃತವಾಗಿರತಕ್ಕದ್ದರ ಬಗ್ಗೆ ಎಕ್ಸೈಜ್‌ನವರು ಕ್ರಮ ತೆಗೆದುಕೊಳ್ಳುತ್ತಾರೆ. ನಾವು ಕೂಡ ಕ್ರಮ ತೆಗೆದುಕೊಳ್ಳುತ್ತೇವೆಂದು ಈ ಮೂಲಕ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ : ಮಾನ್ಯ ಉಪಾಧ್ಯಕ್ಷರೆ, ನನ್ನ ಪ್ರಶ್ನೆಗೆ ಅಬಕಾರಿ ಮಂತ್ರಿಗಳು ಉತ್ತರ ಕೊಡಬೇಕು. ತಾವು ಕೊಟ್ಟಂತಹ ಉತ್ತರವನ್ನು ಅವರು ಒಪ್ಪಬೇಕು ಏಕೆಂದರೆ ತಮಗೆ ಸಂಬಂಧವಿಲ್ಲವೆನ್ನತಕ್ಕ ಉತ್ತರವನ್ನು ಇಲ್ಲಿ ಕೊಟ್ಟುಕೊಂಡು, ಇದೇ ಸದನದಲ್ಲಿ ತಾವು ಒಂದು ಉತ್ತರವನ್ನು ಕೊಡುತ್ತೀರಿ, ಮತ್ತೊಂದು ಉತ್ತರವನ್ನು ತಮ್ಮ ಅಬಕಾರಿ ಸಚಿವರು ಕೊಡುತ್ತಾರೆ. ನಾವು ಹೇಳತಕ್ಕದ್ದು ಏನೆಂದರೆ ಯಾವ ಪಂಚಾಯಿತಿಯವರು ನಮಗೆ ಬೇಡವೆಂದು ಹೇಳುತ್ತಾರೆ. ಅದಕ್ಕೆ ತಾವು ಆದ್ಯತೆಯನ್ನು ಕೊಡಿ. ಇಡೀ ರಾಜ್ಯದಲ್ಲಿ ಪಾನನಿರೋಧ ಜಾರಿಗೆ ಮಾಡಿಯೆಂದು ನಾನು ಹೇಳುತ್ತಿಲ್ಲ. ಕೆಲವು ಅವರ ಕ್ಷೇತ್ರಗಳಲ್ಲಿರಬಹುದು. ಕೆಲವು ಗ್ರಾಮಪಂಚಾಯಿತಿಯವರು ಮದ್ಯಮುಕ್ತ ಗ್ರಾಮವನ್ನಾಗಿ ಮಾಡಬೇಕೆಂದು ಅವರು ರೆಸುಲ್ಯೂಷನ್ ಅನ್ನು ಮಾಡಿದ್ದಾರೆ. ಆ ಆಧಾರದ ಮೇಲೆ. ನಾವು ಕೇಳುತ್ತಿದ್ದೇವೆ. ಆದರೆ ಇವತ್ತು ಇದು ಆದ ಮೇಲೆ ತಾವು ಕೊಡತಕ್ಕ ಉತ್ತರ ದ್ವಂದ್ವ. ಜವಾಬ್ದಾರಿ ಇಬ್ಬರಿಗೂ ಸಮನಾಗಿದೆ. ಆದ್ದರಿಂದ ಇಬ್ಬರೂ ಸಮಾನವಾದ ಉತ್ತರವನ್ನು ಕೊಡಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೆ, ಪ್ರಾಯಶಃ ಪ್ರತಾಪಚಂದ್ರ ಶೆಟ್ಟಿಯವರು ಎತ್ತಿರತಕ್ಕ ಪ್ರಶ್ನೆಗೆ ಅಬಕಾರಿ ಇಲಾಖೆಯಲ್ಲಿ ಎರಡು ಭಾಗ ಇದೆ. ಒಂದು ಎಕ್ಸೈಜ್ ಇಲಾಖೆಯಿಂದ ಮಾರಾಟ ಮಾಡತಕ್ಕ ಅಂಗಡಿಗಳೇ ಬೇಡವೆಂದು ಗ್ರಾಮಪಂಚಾಯಿತಿಗಳು ಹೇಳಿದಾಗ, ತೆಗೆದು ಕೊಳ್ಳತಕ್ಕ ನಿರ್ಣಯ ಅದು ಬೇರೆ ಇದೆ. ಆದರೆ ಮಾನ್ಯ ಡಿ.ಆರ್. ಪಾಟೀಲ್‌ರವರು ಎತ್ತಿರುವಂತಹ ಮತ್ತೊಂದು ಪ್ರಶ್ನೆ, ಯಾರೇ ವ್ಯವಹಾರಗಳನ್ನು ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಮಾಡುವಾಗ ಅದರ ಲೈಸೆನ್ಸ್‌ನ್ನು ಪಡೆಯಬೇಕೆನ್ನುವಂತಹದ್ದು. ಅಷ್ಟು ಮಟ್ಟಿಗೆ ನಾನು ಪೂರಕವಾಗಿ ಮಾತನಾಡಿದ್ದೇನೆ. ಅಬಕಾರಿ ಮತ್ತು ನಮ್ಮ ನಡುವೆ ವಿಭಿನ್ನವಾಗಿರತಕ್ಕ ಉತ್ತರಗಳೇನು ಅಲ್ಲ. ಸರ್ಕಾರ ಕಾಯಿದೆ ಪ್ರಕಾರವಾಗಿ ಗ್ರಾಮಪಂಚಾಯಿತಿಯವರು ಬೇಡವೆನ್ನುವ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದರೆ, ಅದಕ್ಕೆ ಅವರು ಕಾನೂನು ಪ್ರಕಾರವಾಗಿ ಕ್ರಮ ಕೈಗೊಳ್ಳುತ್ತಾರೆ. ಆದರೆ ಮಾನ್ಯ ಡಿ.ಆರ್. ಪಾಟೀಲ್‌ರವರು ಎತ್ತಿರತಕ್ಕ ಪ್ರಶ್ನೆಯ ಮೂಲಕವಾಗಿಯೂ ಕೂಡ ಅವರು ಲೈಸೆನ್ಸ್‌ನ್ನ್ ತೆಗೆದುಕೊಂಡೇ ತೀರಬೇಕು. ಅವರು ಯಾವುದೇ ಭಾಗದಲ್ಲಿರಲಿ. ಆ ಗ್ರಾಮಪಂಚಾಯಿತಿಯವರು ತೀರ್ಮಾನವನ್ನು ಮಾಡದಿದ್ದರೂ ಕೂಡ ಅವರು ಲೈಸೆನ್ಸನ್ನು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಡಿ.ಆರ್. ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಗ್ರಾಮಪಂಚಾಯಿತಿಯ ಲೈಸೆನ್ಸ್ ಇಲ್ಲದೆ ಯಾವ್ಯಾವ ಸಾರಾಯಿ ಅಂಗಡಿಗಳು ಈಗ ಇವೆ, ಅವುಗಳನ್ನು ಪೋಲೀಸರ

ಸಹಾಯದಿಂದ ಮತ್ತು ಅಬಕಾರಿ ಇಲಾಖೆಯ ಸಹಾಯದಿಂದ ಅಕ್ಟೋಬರ್ 2ನೇ ತಾರೀಖಿನೊಳಗಾಗಿ ಸೋಮೋಟೋ ಸರ್ವೆ ಮಾಡಿಸಿ ಬಂದ್ ಮಾಡಿಸುತ್ತಿರೋ ಹೇಗೆ? ಇದರ ಬಗ್ಗೆ ತಮ್ಮಿಂದ ಡೆಫನೆಟ್ ಉತ್ತರ ಬೇಕು ಸ್ವಾಮಿ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಬಹಳ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ನಾವು ನೇರವಾಗಿಯೇ ಎಲ್ಲಾ ಗ್ರಾಮಪಂಚಾಯಿತಿಗಳಿಗೆ ಜಿಲ್ಲಾಪಂಚಾಯಿತಿಯ ಮುಖ್ಯಕಾರ್ಯದರ್ಶಿಗಳಿಗೆ ಸುತ್ತೋಲೆಯನ್ನು ಕಳುಹಿಸಿ ಕೊಡುತ್ತಿದ್ದೇವೆ. ಈ ಪ್ರಕಾರವಾಗಿ ತಮ್ಮ ತಮ್ಮ ಗ್ರಾಮಪಂಚಾಯಿತಿಯ ವ್ಯಾಪ್ತಿಯಲ್ಲಿ ಬರತಕ್ಕ ಅನಧಿಕೃತವಾಗಿ ಲೇಸೆನ್ಸನ್ನು ಪಡೆಯದಿರತಕ್ಕ ಅಂಗಡಿಗಳು ಇದ್ದರೆ, ಅವುಗಳನ್ನು ಮುಚ್ಚಿಸುವಂತಹ ಪ್ರಯತ್ನವನ್ನು ನೀವು ಮಾಡಬೇಕೆಂದು ಕೂಡ ಹೇಳುತ್ತೇವೆ. ಆದರೆ ಅಕ್ಟೋಬರ್ 2ನೇ ತಾರೀಖು ಬಹಳ ಸಾಂಕೇತಿಕವಾದುದು ಅದು ನಿಜ. ಈಗ ಸಮಯ ಬಹಳ ಕಡಿಮೆಯಿರುವುದರಿಂದ ಅದು ಪ್ರಾಯಶಃ ಆಗುತ್ತದೆ ಇಲ್ಲವೆನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಆದಷ್ಟುಮಟ್ಟಿಗೆ ಅಕ್ಟೋಬರ್ 2ರ ಸಾಂಕೇತಿಕ ದಿನಕ್ಕೆ ಅನುಗುಣವಾದ ರೀತಿಯಲ್ಲಿ ಕ್ರಮ ಕೈಗೊಳ್ಳುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಗಳು ನುಣುಚಿ ಕೊಂಡು ಉತ್ತರ ಕೊಟ್ಟಹಾಗೆ ಆಗುತ್ತದೆ. ಕೊಟ್ಟಿರತಕ್ಕ ಉತ್ತರದಲ್ಲಿ ಸ್ಪಷ್ಟವಾಗಿದೆ. ಗ್ರಾಮ ಪಂಚಾಯಿತಿ ಲೈಸೆನ್ಸ್ ಇಲ್ಲದೆ ಮದ್ಯ ಮಾರಾಟ ಮಾಡುವವರ ಮೇಲೆ ಯಾವುದೇ ಕ್ರಮ ಜರುಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಎನ್ನತಕ್ಕ ಉತ್ತರವನ್ನು ಮಾನ್ಯ ಅಬಕಾರಿ ಸಚಿವರು ಕೊಡುತ್ತಿದ್ದಾರೆ. ನಾವು ಅದನ್ನೆಲ್ಲ ಮಾಡುತ್ತೇವೆ ಎನ್ನತಕ್ಕ ಉತ್ತರವನ್ನು ತಾವು ಕೊಟ್ಟಿದ್ದೀರಿ. ನಾನು ನೇರವಾಗಿ ಅಬಕಾರಿ ಸಚಿವರ ಹತ್ತಿರ ಕೇಳುತ್ತೇನೆ, ಗ್ರಾಮೀಣಾಭಿವೃದ್ಧಿ ಸಚಿವರು ಕೊಟ್ಟಿರತಕ್ಕ ಉತ್ತರಕ್ಕೆ ತಮ್ಮ ಸಹಮತ ಇದೆಯೋ ಇಲ್ಲವೋ ಎಂದು ಅದರ ಬಗ್ಗೆ ಮಾತ್ರ ಹೇಳಿ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೆ, ಅದು ಮೇಲ್ನೋಟಕ್ಕೆ ಸ್ವಲ್ಪ ವ್ಯತ್ಯಾಸವೆಂದು ಕಂಡರೂ ಕೂಡ, ಅವರು ಪ್ರಾಯಶಃ ಉತ್ತರವನ್ನು ತಯಾರು ಮಾಡುವಾಗ ಎಕ್ಸೈಜ್ ಕಾನೂನಿಗೆ ಮಾತ್ರ ತಮ್ಮನ್ನು ಸೀಮಿತಗೊಳಿಸಿಕೊಂಡಿರುವುದರಿಂದ, ಆ ಮಾತನ್ನು ಹೇಳಿದ್ದಾರೆ. ಗ್ರಾಮೀಣಾಭಿವೃದ್ಧಿ ಕಾಯಿದೆಯ ಕೆಳಗೆ ಇರತಕ್ಕ ಅನ್ವಯ, ಈಗ ನಿಮ್ಮ ಆಸೆ ನೆರವೇರ ಬೇಕಾಗಿದೆ. ಮತ್ತೆ ಅನಧಿಕೃತವಾಗಿರತಕ್ಕ ಅಂಗಡಿಗಳನ್ನು ಮುಚ್ಚಬೇಕಾಗಿದೆ. ಖಂಡಿತ ಅದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಗ್ರಾಮೀಣಾಭಿವೃದ್ಧಿ ಸಚಿವರು ಏನೋ ಒಂದು ಖಚಿತವಾದ ಭರವಸೆಯನ್ನು ಕೊಟ್ಟರು. ಪಂಚಾಯತಿ ಇಲಾಖೆಯ ಮುಖಾಂತರ ಇವುಗಳನ್ನು ಬಂದ್ ಮಾಡಿಸಲಿಕ್ಕೆ ಸಾಧ್ಯವಾಗುವುದಿಲ್ಲ, ಆದಕ್ಕೆ ನನಗೆ ಗೃಹ ಸಚಿವರಿಂದ ಭರವಸೆ ಬೇಕೆಂದು ಹೇಳಿ ಈ ಗಮನ ಸೆಳೆಯುವ ಸೂಚನೆಯನ್ನು ಗೃಹಸಚಿವರಿಗೆ ಕೊಟ್ಟಿದ್ದೆ. ಅದು ಹೇಗೋ ಅಬಕಾರಿ ಇಲಾಖೆಗೆ ಹೋಗಿಬಿಟ್ಟಿದೆ. ಈಗ ಏನು ಪ್ರಕಾಶ್ ಸಾಹೇಬರು ನಮಗೆ ಭರವಸೆ ಕೊಟ್ಟಿದ್ದಾರೆ, ಆ ಭರವಸೆ ನಮಗೆ ಗೃಹ ಸಚಿವರಿಂದ ಬೇಕು. ಈ ಅಂಗಡಿಗಳ ವಿರುದ್ಧ ಪಂಚಾಯಿತಿಯವರು ಯಾರೂ ಕಂಪ್ಲೇಂಟ್ ಕೊಡುವುದಕ್ಕೆ ಹೋಗುವುದಿಲ್ಲ, ಅವು ದುಷ್ಟಶಕ್ತಿಗಳು. ಕಂಪ್ಲೆಂಟ್ ಕೊಟ್ಟರೆ ನಾಳೆ ಅವರು ಬಾಳುವೆ ಮಾಡುವುದು ಕಷ್ಟವಾಗುತ್ತದೆ. ಅವರ ಬಣವೆ ಸುಡಿಸುವುದು ಈ ತರಹ ನೂರೆಂಟು ತೊಂದರೆ ಕೊಡುತ್ತಾರೆ. ಅದಕ್ಕೆ ಪೋಲೀಸ್ ಇಲಾಖೆಯ ಜನ ಸೋಮೋಟೋ ಎಲ್ಲಿ ಗೈರು ಕಾನೂನು ಆಗಿ ಈ ಅಂಗಡಿಗಳು ಪ್ರಾರಂಭವಾಗಿವೆ ಆ ಗೈರು ಕಾನೂನು ಅಂಗಡಿಗಳನ್ನು ಮುಚ್ಚಿಸಲಿಕ್ಕೆ ಪೋಲೀಸ್ ಇಲಾಖೆಯವರು ತಾವೇ ಕ್ರಮವನ್ನು ಕೈಗೊಳ್ಳಬೇಕು. ಅವರಿಂದ ಕಂಪ್ಲೆಂಟ್ ಬರಬೇಕೆಂದು

ಅಪೇಕ್ಷೆಪಡಬಾರದು. ಆ ಭರವಸೆಯನ್ನು ಮಾನ್ಯ ಗೃಹಸಚಿವರು ನಮಗೆ ಕೊಡಬೇಕೆಂದು ನಾನು ಅಪೇಕ್ಷೆಪಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ನಿನ್ನೆ ಮಾತನಾಡಿದ್ದಾರೆ. ನಿನ್ನೆ ಪಾಟೀಲ್‌ರವರು ಖಾಸಗಿಯಾಗಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ ಎಲ್ಲ ವಿಷಯವನ್ನು ಹೇಳಿದ್ದಾರೆ. ನಾನು ಈಗಾಗಲೇ ಸೂಚನೆಯನ್ನು ಸಹಿತ ಕೊಟ್ಟಿದ್ದೇನೆ. ಪೋಲೀಸ್‌ನವರು ಈಗಿರತಕ್ಕ ಕಾನೂನು ಪ್ರಕಾರ, ಹೊಸ ಕಾನೂನು ಏನು ಬೇಕಾಗಿಲ್ಲ, ಸೂಚನೆಯೂ ಬೇಕಾಗಿಲ್ಲ. ಕಾನೂನು ಬಾಹಿರವಾಗಿರತಕ್ಕ ಯಾವುದೇ ಚಟುವಟಿಕೆ ನಡೆದರೂ ಅದನ್ನು ನಿಲ್ಲಿಸಲಿಕ್ಕೆ ಅವರಿಗೆ ಅವಕಾಶವಿದೆ ಅದನ್ನು ಅವರು ಮಾಡಬಹುದು. ಮಾನ್ಯ ಪಾಟೀಲ್‌ರವರು ಏನು ಹೇಳಿದ್ದಾರೆ ಅದನ್ನು ಗಮನದಲ್ಲಿಟ್ಟುಕೊಂಡು ನಮ್ಮ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡುತ್ತೇನೆ, ಎಕ್ಸೈಜ್ ಡಿಪಾರ್ಟ್‌ಮೆಂಟ್‌ನವರು ಇದು ಬೇಸಿಕ್ ಕೆಲಸ. ಎಕ್ಸೈಜ್ ಕಮೀಷನರ್, ಮಂತ್ರಿಗಳು ನಾವು ಕುಳಿತುಕೊಂಡು ವಿಚಾರ ಮಾಡಿ, ಇದನ್ನು ತಡೆಗಟ್ಟಲಿಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕು, ಎಕ್ಸೈಜ್‌ನವರಿಗೆ ಏನಾದರೂ ಕೊರತೆ ಇದೆಯೋ ನಮಗೆ ಏನಾದರೂ ಕೊರತೆ ಇದೆಯೋ ಇದರಿಂದ ಏಕೆ ಇದು ಎಫೆಕ್ಟೀವ್ ಆಗಿ ಇಲ್ಲವೆನ್ನುವುದನ್ನು ವಿಚಾರಮಾಡಿ ಎಕ್ಸೈಜ್ ಮಿನಿಸ್ಟರ್ ಇದಕ್ಕೆ ಸಂಬಂಧಪಟ್ಟ ಸೂಚನೆಯನ್ನು ಕೊಡುತ್ತಾರೆ. ಪೋಲೀಸ್‌ಇಲಾಖೆಯಿಂದ ಅವರಿಗೇನು ಸಹಕಾರ ಬೇಕೋ ಈ ವಿಚಾರದಲ್ಲಿ ಸಂಪೂರ್ಣವಾದ ಸಹಕಾರವನ್ನು ನಾವು ಆ ಇಲಾಖೆಗೆ ಕೊಡುತ್ತೇವೆ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಹೇಳಿರುವುದಕ್ಕೆ ಮಾನ್ಯ ಅಬಕಾರಿ ಸಚಿವರ ಸಹಮತ ಇದೆಯೋ ಇಲ್ಲವೋ ಎನ್ನತಕ್ಕದ್ದನ್ನು ನಾನು ಕೇಳುತ್ತಿದ್ದೇನೆ. ಅವರು ಕುಳಿತಕೊಂಡು ಇವರು ಹೇಳುತ್ತಿರುವುದು ಸರಿಯೆ?

ಶ್ರೀ ತಿಪ್ಪೇಸ್ವಾಮಿ : ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಾದ ಪ್ರಕಾಶ್‌ರವರು ಏನು ಹೇಳಿದರೋ, ಮಾನ್ಯ ಗೃಹಸಚಿವರಾದ ಸಿಂಧ್ಯಾರವರು ಹೇಳಿದಂತೆ ನಮ್ಮ ಕಾನೂನಿಗೆ ಒಳಪಟ್ಟಂತೆ ಸೂಕ್ತಕ್ರಮ ತೆಗೆದುಕೊಳ್ಳುವುದಕ್ಕೆ ನಾವು ಯಾವುದೇ ಕಾರಣದಿಂದಲೂ ಹಿಂಜರಿಯುವುದಿಲ್ಲ.

ಉಪಾಧ್ಯಕ್ಷರು : ಮಾನ್ಯ ಮಂತ್ರಿಗಳು ಕ್ಲಿಯರ್ ಆಗಿ ಹೇಳಿದ್ದಾರೆ. ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರೇ ತಾವು ಕುಳಿತುಕೊಳ್ಳಿ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ : ಮಾನ್ಯ ಉಪಾಧ್ಯಕ್ಷರೆ, ನಾವು ಪ್ರಶ್ನೆ ಕೇಳುವುದು ಸ್ಪಷ್ಟವಾದ ಮಾಹಿತಿಯನ್ನು ಪಡೆಯಲಿಕ್ಕೆ. ನೀವು ನುಣುಚಿಕೊಂಡು ಕೊಡುವ ಉತ್ತರವನ್ನು ಕೇಳುವುದಕ್ಕೆ ನಾವು ಇಲ್ಲಿ ಬಂದು ಕುಳಿತುಕೊಂಡಿಲ್ಲ, ಸ್ಪಷ್ಟವಾಗಿ ಉತ್ತರ ಹೇಳಿ, ಪಂಚಾಯತ್‌ರಾಜ್ ಮಂತ್ರಿಗಳು ಹೇಳಿರುವುದಕ್ಕೆ ನಮ್ಮ ಸಹಮತ ಇದೆಯೆಂದು ಹೇಳಿದರೆ, ನಾವು ಇಲ್ಲಿ ಕುಳಿತುಕೊಳ್ಳುತ್ತೇವೆ. ಅವರದೊಂದು ಕಾನೂನು ನಿಮ್ಮದೊಂದು ಕಾನೂನು ಹಿಡಿದುಕೊಂಡು ನಾವು ಜಗಳವಾಡುವುದಾ? ಸ್ಪಷ್ಟವಾಗಿ ನೀವು ಇಲ್ಲಿ ಹೇಳಿ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಅಬಕಾರಿ ಸಚಿವರು ನಮ್ಮ ಗಮನಸೆಳೆಯುವ ಸೂಚನೆಗೆ ಉತ್ತರ ಕೊಡುವಾಗ, ಪಂಚಾಯಿತಿ ಲೈಸೆನ್ಸ್ ಅವಶ್ಯವಿಲ್ಲವೆನ್ನುವಂತಹ ಲಿಖಿತ ಉತ್ತರವನ್ನು ನಮಗೆ ಕೊಟ್ಟಿದ್ದಾರೆ. ಆದರೆ ಪಂಚಾಯಿತ್ ರಾಜ್ ಸಚಿವರು ಮತ್ತು ಗೃಹಸಚಿವರು ಲೈಸೆನ್ಸ್ ಬೇಕಾಗುತ್ತದೆ, ಪಂಚಾಯತಿ ಗೈರು ಕಾನೂನು ಕೆಲಸ ಅವು ಎಲ್ಲೆ ಇದ್ದರೂ ಅವನ್ನು ಬಂದ್ ಮಾಡಬೇಕು. ಅದಕ್ಕೆ ಏನೇನು ಸಹಾಯ ಬೇಕೋ ಅದನ್ನು ಅಬಕಾರಿ ಸಚಿವರಿಗೆ ಕೊಡುತ್ತೇವೆ ಎನ್ನುವ

ಭರವಸೆಯನ್ನು ಅವರು ಕೊಟ್ಟರು. ಅಬಕಾರಿ ಸಚಿವರು ನಮಗೆ ಪಂಚಾಯಿತಿ ಲೈಸೆನ್ಸ್ ಬೇಕಾಗಿಲ್ಲವೆನ್ನುತ್ತಾರೆ. ಅದಕ್ಕೆ ಅವರಿಂದ ಖಚಿತವಾದ ಉತ್ತರ ಬೇಕು, ಪಂಚಾಯಿತಿಯ ಕಾನೂನು ಪ್ರಕಾರ ಪಂಚಾಯಿತಿಯ ಲೈಸೆನ್ಸ್ ಬೇಕಾಗುತ್ತದೆ. ಪಂಚಾಯಿತಿಯ ಲೈಸೆನ್ಸ್‌ತೆಗೆದುಕೊಂಡಿರಲಿಲ್ಲವೆಂದರೆ ಆ ಸಾರಾಯಿ ಅಂಗಡಿಗಳನ್ನು ಪೋಲೀಸ್ ಇಲಾಖೆಯ ಸಹಾಯದಿಂದ ಪಂಚಾಯಿತಿ ಇಲಾಖೆಯ ಸಹಾಯದಿಂದ ಬಂದ್ ಮಾಡಿಸುತ್ತೇವೆ ಎನ್ನುವ ಖಚಿತ ಭರವಸೆ ಅವರಿಂದ ನಮಗೆ ಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೆ, ಪ್ರಾಯಶಃ ಗ್ರಹಿಕೆಯಲ್ಲಿ ಆಗಿರತಕ್ಕ ಸ್ವಲ್ಪ ಗೊಂದಲ. ಅವರು ಅಬಕಾರಿ ಕಾನೂನಿನ ಕೆಳಗಡೆಗೆ, ನಮ್ಮಲ್ಲಿ ಯಾರ್‍ಯಾರು ಹೈಯೆಸ್ಟ್ ಬಿಡ್ಡರ್ ಆಗಿರುತ್ತಾರೆ, ಅದರ ಪ್ರಕಾರ ನಾವು ಕ್ರಮ ಕೈಗೊಳ್ಳುತ್ತೇವೆನ್ನತಕ್ಕ ಮಾತನ್ನು ಅವರು ಹೇಳಿದ್ದಾರೆ. ಆದರೆ ಅದಕ್ಕೆ ಬೇರೆ ಬೇರೆ ಕಾಯಿದೆಗಳೂ ಕೂಡ ಲಾಗು ಇರುತ್ತವೆ. ಆಯಾಯ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ನಡೆಯಿತಕ್ಕ ಎಲ್ಲ ವ್ಯವಹಾರ ಅಂಗಡಿ ಮುಗ್ಗಟ್ಟುಗಳು ಎಲ್ಲವೂ ಕೂಡ ಆಯಾಯ ಪಂಚಾಯಿತಿಯಿಂದ ಲೈಸೆನ್ಸನ್ನು ತೆಗೆದುಕೊಳ್ಳಬೇಕೆನ್ನತಕ್ಕದ್ದು ನಮ್ಮ ಕರ್ನಾಟಕ ರಾಜ್ಯ ಪಂಚಾಯತ್ ಆ್ಯಕ್ಟನ ಕೆಳಗೆ ಇದೆ. ಅದರ ಪ್ರಕಾರ ಕ್ರಮ ಕೈಗೊಳ್ಳತಕ್ಕದ್ದು ಗ್ರಾಮಪಂಚಾಯಿತಿಯ ಕರ್ತವ್ಯ. ಅದು ತಪ್ಪಾಗಿ ಮಾಡಿರತಕ್ಕದ್ದು ಇದ್ದರೆ, ಅದಕ್ಕೆ ನಾವು ಫಿರ್ಯಾದೆಯನ್ನು ಕೊಡುತ್ತೇವೆ. ಒಂದು ವೇಳೆ ಫಿರ್ಯಾದೆಯನ್ನು ಕೊಡಲಿಕ್ಕೆ ವಾತಾವರಣ ಅಲ್ಲಿ ಸರಿಯಿಲ್ಲದ ಸಂದರ್ಭ ಬಂದಾಗ ಕೂಡ ಪೋಲೀಸ್‌ಇಲಾಖೆಯ ಅಧಿಕಾರಿಗಳು ಮತ್ತು ಬೇರೆ ಇಲಾಖೆಯ ಅಧಿಕಾರಿಗಳು ಕೂಡ ಸಮನ್ವಯಗೊಳಿಸಬೇಕಾಗುತ್ತದೆ. ಆದ್ದರಿಂದ ನೀವೇನು ಮಾನ್ಯ ಪ್ರತಾಪಚಂದ್ರಶೆಟ್ಟಿಯವರು ಬೇರೆ ಅಭಿಪ್ರಾಯವಿದೆಯೆಂದು ಹೇಳಿದಿರಿ, ಅವರದು ಕೂಡ ಸಹಮತ ಇದೆ. ಬೇರೆ ಬೇರೆ ಕಾನೂನಿನ ಕೆಳಗೆ ಇರತಕ್ಕದ್ದು ಇದೆ. ಅವರು ಒಪ್ಪಿದ್ದಾರೆ, ನೀವು ಸಹಮತ ಎನ್ನುವ ಶಬ್ದ ಬರಲಿಲ್ಲವೆನ್ನುವ ಕಾರಣಕ್ಕಾಗಿಯೇ ಅವರ ಕಾನೂನು ಬೇರೆ ನಮ್ಮ ಕಾನೂನು ಬೇರೆ ಅಂತ ಅಲ್ಲ, ಎಲ್ಲರ ಕಾನೂನು ಒಂದೇ. ಅದರ ಪ್ರಕಾರ ನಾವು ಕ್ರಮ ಕೈಗೊಳ್ಳುತ್ತೇವೆ.

ನಿಯಮ 351ರ ಅಡಿಯಲ್ಲಿನ ಸೂಚನೆಗಳು

(ಅ) ಬೆಂಗಳೂರು ನಗರ ಕಾರ್ಪೋರೇಷನ್ ಮಿತಿಯಲ್ಲಿ ಬರುವ ಮಡಿವಾಳ ಮುಖ್ಯ ರಸ್ತೆಯ ದುರಸ್ತಿ.

ಎಂ. ಶ್ರೀನಿವಾಸ್ (ಉತ್ತರಹಳ್ಳಿ) : ಸನ್ಮಾನ್ಯ ಉಪಾಧ್ಯಕ್ಷರೇ, ಬೆಂಗಳೂರು ನಗರ ಕಾರ್ಪೋರೇಷನ್ ಮಿತಿಯಲ್ಲಿ ಬರುವ ಮಡಿವಾಳ ಮುಖ್ಯ ರಸ್ತೆಯು (ಹೊಸೂರು ರಸ್ತೆಗೆ ಸೇರುವವರೆಗೆ) ತುಂಬಾ ಹಾಳಾಗಿದ್ದು, ವಾಹನ ಸಂಚಾರಕ್ಕೆ ತುಂಬ ತೊಂದರೆಯಾಗಿದೆ. ಅಲ್ಲದೆ , ಭಾರಿ ವಾಹನಗಳಾದ ಲಾರಿ, ಟ್ಯಾಂಕರ್ ಮತ್ತು ಕೆ.ಎಸ್.ಆರ್.ಟಿ.ಸಿ. ಬಸ್‌ಗಳು ಓಡಾಡುತ್ತಿರುವುದರಿಂದ ರಸ್ತೆಯಲ್ಲಿ ಹಳ್ಳ ದಿಣ್ಣೆಗಳು ಬೀಳಲಾಗಿದೆ. ಆದ್ದರಿಂದ ಆ ರಸ್ತೆಯಲ್ಲಿ ದಿನನಿತ್ಯ ಅಪಘಾತಗಳು ಆಗುತ್ತಿವೆ. ವಾಹನಗಳು ದುರಸ್ತಿಗಾಗಿ ದಾರಿಯಲ್ಲಿ ಬಿದ್ದಿರುವುದು ಸರ್ವೇ ಸಾಮಾನ್ಯವಾಗಿದೆ. ಆದ್ದರಿಂದ ಕೂಡಲೇ ಸದರಿ ರಸ್ತೆಯನ್ನು ಪಕ್ಕ ಟಾರ್ ರಸ್ತೆಯನ್ನಾಗಿ ಮಾಡಿ, ಅಲ್ಲಿನ ನಿವಾಸಿಗಳ ವಾಹನ ಸಂಚಾರಕ್ಕೆ ವ್ಯವಸ್ಥೆ ಮಾಡಲಾಗುವುದೇ?

ಶ್ರೀ ಆರ್. ರೋಷನ್ ಬೇಗ್ (ಬೆಂಗಳೂರು ನಗರಾಭಿವೃದ್ಧಿ ಮತ್ತು ವಕ್ಫ್‌ಸಚಿವರು) : ಮಾನ್ಯ ಉಪಾಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ಕೊಡಬಯಸುತ್ತೇನೆ.

ಬೆಂಗಳೂರು ನಗರದಲ್ಲಿ ಇರುವ ಮಡಿವಾಳ ಮುಖ್ಯರಸ್ತೆ (ಹೊಸೂರು ರಸ್ತೆಗೆ ಸೇರುವವರೆಗೆ) ಯು ತುಂಬಾ ಹಾಳಾಗಿದ್ದು, ವಾಹನ ಸಂಚಾರಕ್ಕೆ ತೊಂದರೆ ಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ರಸ್ತೆ ಬೆಂಗಳೂರು ಮಹಾ ನಗರ ಪಾಲಿಕೆ ಮಿತಿಯೊಳಗೆ ಇದ್ದರೂ ಸಹಿತ ಇದರ ನಿರ್ವಹಣೆಯನ್ನು ಲೋಕೋಪಯೋಗಿ ಇಲಾಖೆ (ರಾಷ್ಟ್ರೀಯ ಹೆದ್ದಾರಿ ವಿಭಾಗ) ಇವರು ನೋಡಿಕೊಳ್ಳುತ್ತಿರುವವರು. ಈ ರಸ್ತೆಯನ್ನು ಕೂಡಲೇ ದುರಸ್ತಿಗೊಳಿಸಲು ಲೋಕೋಪಯೋಗಿ ಇಲಾಖೆಗೆ ನಿರ್ದೇಶನ ನೀಡಲಾಗುವುದು.

ಎಂ. ಶ್ರೀನಿವಾಸ್ : ಅಲ್ಲಿಗೆ ತಮ್ಮನ್ನೇ ಕರೆದುಕೊಂಡು ಹೋಗಿದ್ದೇನೆ....

ಉಪಾಧ್ಯಕ್ಷರು : ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರಲ್ಲ.

ಶ್ರೀ ಎಂ. ಶ್ರೀನಿವಾಸ್ : ಒಂದು ನಿಮಿಷ ಉಪಾಧ್ಯಕ್ಷರೇ, ತಾವು ಹೇಳಿದ್ದೀರಿ, ಬಿ.ಡಿ.ಎ. ಇದೆ. ಕಾರ್ಪೊರೇಷನ್ ಇದೆ ಎಂದು ಹೇಳಿದ್ದೀರಿ. ತಮಗೆ ಗೊತ್ತಿದೆ. ಎರಡು ಸಾರಿ ಪತ್ರಿಕೆಯಲ್ಲಿ ದೊಡ್ಡದಾಗಿ ಫೋಟೋ ಸಹ ಬಂದಿದೆ. ಇದುವರೆಗೂ ರಿಪೇರಿ ಆಗಿಲ್ಲ. ತಮ್ಮನ್ನು ಕರೆದುಕೊಂಡು ಹೋಗಿ ಸುಮಾರು 3 ತಿಂಗಳು ಆಯಿತು, ಯಾವಾಗ ಮಾಡುತ್ತೀರಿ? ಲಿಖಿತವಾಗಿ ಹೇಳಿ. ಆ ರಸ್ತೆ ನೋಡಿ ತಾವು ಬೇಸರ ಬಿದ್ದಿದ್ದೀರಿ ಎಷ್ಟು, ಯಾವ ತಿಂಗಳು ಇಲ್ಲ ಒಂದು ವಾರದೊಳಗೆ ರಿಪೇರಿ ಮಾಡುತ್ತೀರಿ? ರಿಪೇರಿ ಮಾಡುವುದಕ್ಕೆ ತೆಗೆದುಕೊಳ್ಳಿ ಸ್ವಾಮಿ. ರಸ್ತೆಯನ್ನು ಮಾಡಲು ಟೆಂಡರ್ ಕರೆಯುತ್ತೀರಿ, ಮತ್ತೊಂದು ಆಮೇಲೆ ಮಾಡಿ. ರಿಪೇರಿಗೆ ಒಂದು ಡಬ್ಬ ಟಾರ್ ಇಲ್ಲವೇ. ಅದಕ್ಕೆ ನೀವು ಯಾವಾಗ ರಿಪೇರಿ ಮಾಡುತ್ತೀರಿ, ಅದನ್ನು ಹೇಳಿ.

(ಆ) ಬಂಟ್ವಾಳಕ್ಕೆ ಸಂಚಾರಿ ಪೋಲೀಸ್ ಠಾಣೆ.

ಶ್ರೀ ಬಿ. ರಮಾನಾಥ ರೈ (ಬಂಟ್ವಾಳ) : ಮಾನ್ಯ ಉಪಾಧ್ಯಕ್ಷರೇ, ಬಂಟ್ವಾಳ ನಗರ ಬೆಳೆಯುತ್ತಿರುವ ನಗರ ವಾಹನ ಸಂಚಾರ ಜಾಸ್ತಿಯಾಗಿ ವಾಹನ ನಿಯಂತ್ರಣ ಮಾಡುವುದು ಕಷ್ಟವಾಗಿದೆ. ಆದುದರಿಂದ ದಯಮಾಡಿ ಗೃಹ ಸಚಿವರು ಮುಂದಿನ ವಾರ್ಷಿಕ ಸಾಲಿನಲ್ಲಿ ಬಂಟ್ವಾಳಕ್ಕೆ ಸಂಚಾರಿ ಪೋಲೀಸ್ ಠಾಣೆ ತೆರೆಯುವ ಬಗ್ಗೆ ಗಮನ ಹರಿಸುವರೇ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) : ಮಾನ್ಯ ಉಪಾಧ್ಯಕ್ಷರೆ, 1995-96ನೇ ಸಾಲಿನಲ್ಲಿ 20 ಪೋಲೀಸ್ ಠಾಣೆಗಳನ್ನು ತೆರೆಯುವುದು ಸರ್ಕಾರದ ನೀತಿಯಾಗಿದೆ. ಇವುಗಳನ್ನು ಅವುಗಳ ಅಗತ್ಯತೆ ಹಾಗೂ ಆದ್ಯತೆಯನ್ನು ಆಧರಿಸಿ ಮಂಜೂರಾತಿ ನೀಡುವ ಬಗ್ಗೆ ಸರ್ಕಾರವು ಪರಿಶೀಲಿಸುತ್ತಿದೆ.

ಬಂಟ್ವಾಳ ನಗರದಲ್ಲಿ ಸಂಚಾರಿ ಪೋಲೀಸ್‌ಠಾಣೆಯ ಅವಶ್ಯಕತೆಯೂ ಸರಕಾರದ ಗಮನಕ್ಕೆ ಬಂದಿದೆ. ಆದ್ದರಿಂದ ಹೊಸ ಠಾಣೆಗಳನ್ನು ತೆರೆಯುವಾಗ ಇದನ್ನು ಪರಿಶೀಲನೆಗೆ ತೆಗೆದುಕೊಳ್ಳಲಾಗುವುದು.

ಈ ವಿಚಾರದಲ್ಲಿ ಮಾನ್ಯ ರಮಾನಾಥ ರೈ ಅವರು, ಹಿಂದಿನ ಗೃಹ ಮಂತ್ರಿಗಳು ಮತ್ತು ಇತರ ದಕ್ಷಿಣ ಕನ್ನಡ ಜಿಲ್ಲೆಯ ಶಾಸಕರು ನನ್ನ ಮೇಲೆ ಬಹಳ ಒತ್ತಾಯವನ್ನು ತಂದಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲೂ ಸಹಿತ ನಾನು ಮಾತನಾಡಿದ್ದೇನೆ. ಇದರ ಅವಶ್ಯಕತೆಯೂ ಇದೆ ಎಂದು ಹೇಳಿದ್ದಾರೆ. ಆದ್ದರಿಂದ ಈ ವಿಚಾರವನ್ನು ನಾನು ಬಹಳ ತೀವ್ರವಾಗಿ ಪರಿಶೀಲಿಸುತ್ತೇನೆ.

(೯) ಸಾತನೂರು ವ್ಯಾಪ್ತಿಯಲ್ಲಿ ಹೂಕುಂದ ಗ್ರಾಮದ ಪಂಚಾಯಿತಿ ಅಧ್ಯಕ್ಷರ ಸ್ಥಾನದ ಬಗ್ಗೆ :

ಶ್ರೀ ಡಿ.ಬಿ. ಶಿವಕುಮಾರ್ (ಸಾತನೂರು) : ಮಾನ್ಯ ಉಪಾಧ್ಯಕ್ಷರೇ, ನಾನು ಇದನ್ನು ನಿಯಮ 69 ಅಥವಾ 73ರಲ್ಲಿ ಪ್ರಸ್ತಾಪ ಮಾಡಬೇಕು ಎಂದು ಇದ್ದೆ. ನೋಡಿದರೆ ಇದಕ್ಕೆ ಹಾಕಿದ್ದೀರಿ. ನನಗೆ ಸಮಾಧಾನ ಆಗುವುದಿಲ್ಲ.

ಕನಕಪುರ ತಾಲ್ಲೂಕು ಸಾತನೂರು ಕ್ಷೇತ್ರದ ವ್ಯಾಪ್ತಿಯಲ್ಲಿ ಹೂಕುಂದ ಗ್ರಾಮ ಪಂಚಾಯಿತಿಗೆ ಎಸ್.ಟಿ. ಜನಾಂಗಕ್ಕೆ ಕಾಯಿರಿಸಿರುವುದು ಸರಿಯಷ್ಟೇ. ಶ್ರೀಮತಿ ನಾಗಮ್ಮ ಎಂಬುವರು ಒಂದೂವರೆ ವರ್ಷದ ಹಿಂದೆ ಹೂಕುಂದ ಪಂಚಾಯಿತಿಯ ಅಧ್ಯಕ್ಷರಾಗಿ ಆಯ್ಕೆಯಾಗಿ ಕಾರ್ಯನಿರ್ವಹಿಸುತ್ತಾ ಬಂದಿರುತ್ತಾರೆ. ಶ್ರೀಮತಿ ನಾಗಮ್ಮನವರು ಆ ಪಂಚಾಯಿತಿಯ ಏಕೈಕ ಪರಿಶಿಷ್ಟ ಜನಾಂಗದ ಸದಸ್ಯೆಯಾಗಿ ಚುನಾಯಿತರಾಗಿರುತ್ತಾರೆ. ಈ ಪಂಚಾಯಿತಿಯಲ್ಲಿ ಮೇಲು ವರ್ಗಕ್ಕೆ ಸೇರಿದ ಇತರೆ ಸದಸ್ಯರುಗಳು ಆ ಪಂಚಾಯಿತಿಯ ಹಣವನ್ನು ದುರುಪಯೋಗ ಮಾಡಿ, ಖಾಸಗಿಯಾಗಿ ಹಂಚಲು ಒತ್ತಾಯಿಸಿರುತ್ತಾರೆಂದು ಪಂಚಾಯಿತಿಯ ಅಧ್ಯಕ್ಷಿಣಿ ತಿಳಿಸಿರುತ್ತಾರೆ. ಶ್ರೀಮತಿ ನಾಗಮ್ಮನವರು ಹಣದ ದುರುಪಯೋಗಕ್ಕೆ ಒಪ್ಪದೇ ಇರುವ ಕಾರಣ ಆಕೆಯ ಮೇಲೆ ಅವಿಶ್ವಾಸ ನಿರ್ಣಯ ಮಂಡಿಸಿ ಮೇಲು ವರ್ಗಕ್ಕೆ ಸೇರಿದ ಇತರೆ ಸದಸ್ಯರುಗಳು ಅಧ್ಯಕ್ಷರ ಸ್ಥಾನದಿಂದ ಇಳಿಸಿರುತ್ತಾರೆ. ಮತ್ತೆ ನಾನು ಹತ್ತಾರು ಬಾರಿ ಒತ್ತಾಯ ಮಾಡಿದ ಮೇರೆಗೆ ಜಿಲ್ಲಾಧಿಕಾರಿಗಳ ಆದೇಶದಂತೆ ದಿನಾಂಕ 16-8-95ರಂದು ಚುನಾವಣೆ ನಡೆದು ಪಂಚಾಯಿತಿಯ ಶ್ರೀಮತಿ ನಾಗಮ್ಮ ಎಸ್.ಟಿ.ವರ್ಗಕ್ಕೆ ಸೇರಿದ ಏಕೈಕ ಸದಸ್ಯರಾಗಿದ್ದು, ಅಧ್ಯಕ್ಷರ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದರೂ ಸಹ ಇಲ್ಲಿಯವರೆಗೂ ಘೋಷಿಸಿರುವುದಿಲ್ಲ. ಇದರಿಂದ ಹರಿಜನ ಮಹಿಳೆಯರಿಗೆ ಮತ್ತು ವಿಶೇಷವಾಗಿ ಮಹಿಳಾ ವರ್ಗಕ್ಕೆ ಅನ್ಯಾಯವಾಗಿರುತ್ತದೆ. ಈ ಮೇಲ್ಕಂಡ ವಿಚಾರವನ್ನು ಪ್ರಸ್ತಾಪ ಮಾಡಲು ಅವಕಾಶ ಕೇಳಿದ್ದೆ. ಅದನ್ನು ಯಾವ ರೀತಿ ಉತ್ತರ ಕೊಡುತ್ತಾರೋ, ಕೊಡಲಿ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಈ ವಿಷಯಕ್ಕೆ ಸಂಬಂಧಿಸಿದಂತೆ ಹೇಳಿಕೆಯನ್ನು ಕೊಡಬಯಸುತ್ತೇನೆ.

ಕನಕಪುರ ತಾಲ್ಲೂಕು ಹೂಕುಂದ ಗ್ರಾಮ ಪಂಚಾಯಿತಿ ಅಧ್ಯಕ್ಷರ ಸ್ಥಾನವು ಅವಿಶ್ವಾಸ ನಿರ್ಣಯದ ಮೂಲಕ ತೆರವಾಗಿರುವುದರಿಂದ ಮರು ಚುನಾವಣೆಯನ್ನು ದಿನಾಂಕ : 16.8.1995 ರಂದು ನಡೆಸಲಾಗಿದೆ. ಈ ಗ್ರಾಮ ಪಂಚಾಯಿತಿ ಅಧ್ಯಕ್ಷರ ಸ್ಥಾನವು ಪರಿಶಿಷ್ಟ ಪಂಗಡದ ಮಹಿಳಾ ವರ್ಗಕ್ಕೆ ಮೀಸಲಾಗಿರುತ್ತದೆ.

ದಿನಾಂಕ : 16.8.95 ರಂದು ಕರೆಯಲಾದ ಗ್ರಾಮ ಪಂಚಾಯಿತಿಯ ಸಭೆಯಲ್ಲಿ ಒಟ್ಟು 13 ಜನ ಸದಸ್ಯರಲ್ಲಿ ಸಭೆಗೆ ಕೇವಲ 3 ಜನ ಸದಸ್ಯರು ಹಾಜರಿದ್ದು, ಪರಿಶಿಷ್ಟ ಪಂಗಡದ ಮಹಿಳಾ ವರ್ಗದಿಂದ ಒಂದೇ ಒಂದು ನಾಮಪತ್ರ ಸ್ವೀಕೃತವಾಗಿರುತ್ತದೆ. ಸಭೆಯಲ್ಲಿ ಕೋರಮ್ ಇಲ್ಲದೆ ಇರುವುದರಿಂದ ನಿಯೋಜಿತ ಅಧಿಕಾರಿಯವರು ಫಲಿತಾಂಶವನ್ನು ಪ್ರಕಟಣೆ ಮಾಡುವ ಬಗ್ಗೆ ಜಿಲ್ಲಾಧಿಕಾರಿಗಳಿಂದ ಸ್ಪಷ್ಟೀಕರಣವನ್ನು ಕೋರಿರುತ್ತಾರೆ.

ಸರ್ಕಾರಿ ಸುತ್ತೋಲೆ ಸಂಖ್ಯೆ: ಆರ್‌ಡಿಪಿ 1152 ಜೆಡ್‌ಪಿಎಸ್ 94, ದಿನಾಂಕ: 21.10.1994ರಲ್ಲಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 53(1)ರರಲ್ಲಿ ನಿರ್ದಿಷ್ಟಪಡಿಸಲಾದ ಕೋರಮ್‌ನ್ನು (ಒಟ್ಟು ಸದಸ್ಯರ $\frac{1}{3}$ ಭಾಗ) ಗ್ರಾಮ ಪಂಚಾಯಿತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಯ ಉದ್ದೇಶಕ್ಕಾಗಿ ಕರೆಯುವ

ಸಭೆಯಲ್ಲೂ ಕೂಡ ಅನುಸರಿಸಬೇಕಾಗುತ್ತದೆಂದು, ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸ್ಪಷ್ಟೀಕರಣ ನೀಡಲಾಗಿದೆ.

(ಈ) ದಕ್ಷಿಣ ಕನ್ನಡ ಜಿಲ್ಲಾ ಗ್ರಾಹಕರ ದೂರು ಪರಿಹಾರ ವೇದಿಕೆ

ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಳ) : ಸನ್ಮಾನ್ಯ ಉಪಾಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲಾ ಗ್ರಾಹಕರ ದೂರು ಪರಿಹಾರ ವೇದಿಕೆ, ಮಂಗಳೂರು, ಇದರ ಅಧ್ಯಕ್ಷ ನ್ಯಾಯಾಧೀಶರ ಹುದ್ದೆ ನಿವೃತ್ತಿಯಿಂದ ತೆರವಾಗಿ ಆರು ತಿಂಗಳುಗಳು ಕಳೆದರೂ ಇನ್ನೂ ಭರ್ತಿಯಾಗದೇ ಭಾರೀ ಸಂಖ್ಯೆಯ ಪ್ರಕರಣಗಳು ತನಿಖೆಗಾಗಿ ಕಾಯುತ್ತಿವೆ. ಇತರ 5 ಜಿಲ್ಲೆಗಳಲ್ಲಿ ಈ ವೇದಿಕೆಗಳು ನಿಷ್ಕ್ರಿಯವಾಗಿವೆ. ಎಲ್ಲಾ ಖಾಲಿ ಸ್ಥಾನಗಳನ್ನು ಭರ್ತಿ ಮಾಡಿ, ಗರಿಷ್ಟ ಆವು ತಿಂಗಳೊಳಗೆ ಗ್ರಾಹಕರಿಗೆ ನ್ಯಾಯ ನೀಡಬೇಕಾದ ಗ್ರಾಹಕರ ಶಿಕ್ಷಣ ಕಾಯ್ದೆ 1986ರ ಆಶಯವನ್ನು ಅನುಷ್ಠಾನಕ್ಕೆ ತರಬೇಕು ಸರ್ಕಾರವನ್ನು ಈ ಮೂಲಕ ಒತ್ತಾಯಿಸುತ್ತಿದ್ದೇನೆ.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರ ಪರವಾಗಿ ಹೇಳಿಕೆಯನ್ನು ಕೊಡಬಯಸುತ್ತೇನೆ.

ದಕ್ಷಿಣ ಕನ್ನಡ ಜಿಲ್ಲಾ ವೇದಿಕೆ, ಮಂಗಳೂರು ಇವರ ಅಧ್ಯಕ್ಷರ ಸ್ಥಾನವನ್ನು ಭರ್ತಿ ಮಾಡಲಾಗಿದೆ. ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಕೆ.ಆರ್. ಭಟ್‌ರವರನ್ನು ಈ ಸ್ಥಾನಕ್ಕೆ ನೇಮಿಸಲಾಗಿದೆ. ಶ್ರೀಯುತರು ದಿನಾಂಕ: 5-7-1995 ರಂದು ಅಧಿಕಾರ ವಹಿಸಿಕೊಂಡಿರುತ್ತಾರೆ. ಸದ್ಯದಲ್ಲಿ ಉನ್ನರ ಕನ್ನಡ ಜಿಲ್ಲಾ ವೇದಿಕೆಯ ಅಧ್ಯಕ್ಷರ ಸ್ಥಾನಕ್ಕೆ ಹಾಲಿ ನೇಮಕ ಮಾಡಲಾಗಿದ್ದ ಶ್ರೀ ನಾಗಯ್ಯಶೆಟ್ಟಿ ಅವರು ಅಧಿಕಾರ ವಹಿಸಿಕೊಳ್ಳಲು ಇಚ್ಛಿಸದೇ ಇರುವುದರಿಂದ ಖಾಲಿ ಉಳಿದಿದೆ. ಈ ಸ್ಥಾನವನ್ನು ಶೀಘ್ರದಲ್ಲಿಯೇ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು. ಉಳಿದ ಎಲ್ಲಾ ಜಿಲ್ಲಾ ವೇದಿಕೆಗಳ ಅಧ್ಯಕ್ಷ ಸ್ಥಾನಗಳನ್ನು ಭರ್ತಿ ಮಾಡಲಾಗಿದೆ.

(ಉ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನರಸಣ್ಣ ಜಾತಿಯವರಿಗೆ ಸೌಲಭ್ಯ

ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಉಪಾಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನರಸಣ್ಣ ಜಾತಿಯವರು ಸುಮಾರು 500 ಜನರಷ್ಟಿದ್ದಾರೆ. ಅವರು ಅತ್ಯಂತ ಹಿಂದುಳಿದಿದ್ದು, ಬಡವರಾಗಿದ್ದು ಸರ್ಕಾರದ ಎಲ್ಲಾ ಸವಲತ್ತುಗಳಿಂದ ವಂಚಿತರಾಗಿದ್ದಾರೆ. ಅವರಲ್ಲಿ ವಿದ್ಯಾವಂತರಂತೂ ಇಲ್ಲವೇ ಇಲ್ಲ. ಅವರು ನೂರಾರು ವರ್ಷಗಳ ಹಿಂದೆ ಉತ್ತರ ಕರ್ನಾಟಕದಿಂದ ಬಂದು ನೆಲೆಸಿದವರಾಗಿದ್ದಾರೆ ಮತ್ತು ಅವರ ಪೂರ್ವಜರು ಹಕ್ಕಿಪಿಕ್ಕಿ ಜನಾಂಗದವರು ಎಂದು ಅವರ ಹಿರಿಯರು ಹೇಳುತ್ತಿದ್ದಾರೆ. ಈಗ ಅವರನ್ನು ಯಾವುದೇ ಜಾತಿಯಾಗಿ ಗುರುತಿಸಿಲ್ಲ, ಇದು ಅತ್ಯಂತ ವಿಷಾದನೀಯ. ಅವರ ಜೀವನ ಕ್ರಮ ಅತ್ಯಂತ ನಿಕೃಷ್ಟ ಪರಿಸ್ಥಿತಿಯಲ್ಲಿದೆ. ಆದುದರಿಂದ ಅವರ ಅಭಿವೃದ್ಧಿಗಾಗಿ ಅವರನ್ನು ಹಕ್ಕಿಪಿಕ್ಕಿ ಜನಾಂಗದ ಉಪಜಾತಿಯಾಗಿ ಪರಿಗಣಿಸಿ, ನರಸಣ್ಣ ಜಾತಿಯನ್ನು ಪರಿಶಿಷ್ಟ ಪಂಗಡವೆಂದು ಘೋಷಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಹೇಳಿಕೆಯನ್ನು ಕೊಡಬಯಸುತ್ತೇನೆ.

ಯಾವುದೇ ಜಾತಿ ಅಥವಾ ಪಂಗಡವನ್ನು ಪರಿಶಿಷ್ಟ ಜಾತಿ ಅಥವಾ ಪಂಗಡಕ್ಕೆ ಸೇರಿಸುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಮಾತ್ರ ಇರುತ್ತದೆ. ರಾಜ್ಯ ಸರ್ಕಾರ ಕೇವಲ ಶಿಫಾರಸ್ಸನ್ನು ಮಾತ್ರ ಮಾಡಬಹುದಾಗಿದೆ. ಪರಿಶಿಷ್ಟ ಜಾತಿ : ಪಂಗಡಕ್ಕೆ ಸೇರಿಸುವಂತೆ ಕೋರಿ ಹಲವಾರು ಅರ್ಜಿಗಳು ಬಂದಿರುತ್ತವೆ. ಈ ಮನವಿಗಳನ್ನು

ಪರಿಶೀಲಿಸಿ ಅರ್ಹ ಜಾತಿ ಅಥವಾ ಉಪಜಾತಿ ಮತ್ತು ಪಂಗಡಗಳನ್ನು ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳ ಪಟ್ಟಿಯಲ್ಲಿ ಸೇರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಸಲುವಾಗಿ ಸರ್ಕಾರಿ ಆದೇಶ ಸಂಖ್ಯೆ : ಎಸ್‌ಡಬ್ಲ್ಯೂಎಲ್ 126 ಎಸ್‌ಎಡಿ 88 ದಿನಾಂಕ : 5-1-1991 ರಲ್ಲಿ ಒಂದು ಸಮಿತಿಯನ್ನು ರಚಿಸಲಾಗಿದೆ. ಸದರಿ ಸಮಿತಿಯನ್ನು ಪುನರ್ ರಚನೆ ಮಾಡುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ವಿವಿಧ ಜಾತಿ : ಪಂಗಡಗಳಿಂದ ಪರಿಶಿಷ್ಟ ಜಾತಿ ಪಂಗಡಗಳ ಪಟ್ಟಿಗೆ ಸೇರಿಸುವಂತೆ ಕೋರಿಬಂದಿದ್ದ ಎಲ್ಲ ಅರ್ಜಿಗಳನ್ನು ಮೇಲಿನ ಸಮಿತಿಯ ಪರಿಶೀಲನೆಗೆ ಇಡಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ನರಸಣ್ಣ ಜಾತಿಯನ್ನು ಪರಿಶಿಷ್ಟ ಪಂಗಡದ ಹಕ್ಕಿಪಿಕ್ಕಿ ಜನಾಂಗದ ಪರ್ಯಾಯ ಜಾತಿಯೆಂದು ಪರಿಗಣಿಸಿ ಅವರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕೆಂದು ಸದರಿ ಸಮಾಜದ ಅಧ್ಯಕ್ಷರಿಂದ ಮನವಿ ಬಂದಿದ್ದು ಅದನ್ನೂ ಸಹ ಮೇಲಿನ ಸಮಿತಿಯ ಪರಿಶೀಲನೆಗೆ ಕಳುಹಿಸಲಾಗಿದೆ. ಸದರಿ ಸಮಿತಿಯ ವರದಿ ಬಂದ ನಂತರ ಈ ವಿಷಯದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

12.40 ಪಿ.ಎಂ.

(ಊ) ಧಾರವಾಡ ಜಿಲ್ಲಾ ಹಿರೇಕೆರೂರು ತಾಲ್ಲೂಕು ಕಡೂರು ಗ್ರಾಮದಲ್ಲಿ ಕುಡಿಯುವ ನೀರಿನ ತೀವ್ರ ಸಮಸ್ಯೆ

ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರ್) : ಮಾನ್ಯ ಅಧ್ಯಕ್ಷರೇ, ಧಾರವಾಡ ಜಿಲ್ಲಾ ಹಿರೇಕೆರೂರ ತಾಲೂಕು ಕಡೂರ ಗ್ರಾಮದಲ್ಲಿ ಕುಡಿಯುವ ನೀರಿನ ತೀವ್ರ ಸಮಸ್ಯೆ ಕಳೆದ ಒಂದು ತಿಂಗಳಿಂದ ಉಂಟಾಗಿದ್ದು ಈ ಬಗ್ಗೆ ಕ್ರಮ ತೆಗೆದುಕೊಳ್ಳಲು ಕಡೂರ ಗ್ರಾಮಸ್ಥರು ಮನವಿ ಸಲ್ಲಿಸಿದರೆ ಆ ಮನವಿ ಜಿಲ್ಲಾ ಪಂಚಾಯಿತಿ ಕಾರ್ಯಾಲಯದಿಂದ ಜಿಲ್ಲಾಧಿಕಾರಿಗಳ ಕಚೇರಿಗೆ, ಜಿಲ್ಲಾಧಿಕಾರಿಗಳ ಕಚೇರಿಯಿಂದ ಜಿಲ್ಲಾ ಪಂಚಾಯತಿ ಕಾರ್ಯಾಲಯಕ್ಕೆ ಓಡಾಡುತ್ತಾ ಇನ್ನುವರೆಗೆ ಏನೂ ಪರಿಹಾರ ಆಗಿರುವುದಿಲ್ಲ. ಕಾರಣ ಈ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳಲು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರನ್ನು ವಿನಂತಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಹಿರೇಕೆರೂರು ತಾಲ್ಲೂಕಿನ ಕಡೂರು ಗ್ರಾಮದ ಜನಸಂಖ್ಯೆ 3820 ಇರುತ್ತದೆ. ಈ ಗ್ರಾಮದಲ್ಲಿ ಸದ್ಯ ವಿದ್ಯುತ್ ಚಾಲಿತ ಎರಡು ಕೊಳವೆಬಾವಿಗಳು ಮತ್ತು ಎರಡು ಕೈಪಂಪು ಕೊಳವೆ ಬಾವಿಗಳು ಇರುತ್ತವೆ.

ಈ ಒಂದು ತಿಂಗಳಿನಿಂದ ಕೊಳವೆ ಬಾವಿಗಳ ಇಳುವರಿ ಕಡಿಮೆಯಾಗಿ ವಿದ್ಯುತ್ ನಿಲುಗಡೆ ಸಂದರ್ಭದಲ್ಲಿ ತೊಂದರೆ ಆಗಿರುತ್ತದೆ. ಒಂದು ವಿದ್ಯುತ್ ಚಾಲಿತ ಕೊಳವೆ ಬಾವಿಯಲ್ಲಿ ನೀರು ಉಪ್ಪಾಗಿದ್ದು ಕುಡಿಯಲು ಯೋಗ್ಯವಾಗಿರುವುದಿಲ್ಲ.

ಈ ಸದ್ಯ ಆ ಗ್ರಾಮದಲ್ಲಿ ಎರಡು ಕೈ ಪಂಪು ಕೊಳವೆಬಾವಿಗಳು ಕಾರ್ಯನಿರ್ವಹಿಸುತ್ತಿವೆ. ಸರಾಸರಿ ಪ್ರತಿಯೊಬ್ಬರಿಗೂ ದಿವಸಕ್ಕೆ 20 ಲೀಟರ್ ಕುಡಿಯುವ ನೀರು ಸರಬರಾಜು ಆಗುತ್ತಿದೆ.

ಈ ಗ್ರಾಮವು 1995-96ನೇ ಸಾಲಿನ ಕ್ರಿಯಾ ಯೋಜನೆಯಲ್ಲೇ ಸೇರಿದ್ದು ಒಂದು ಕೊಳವೆ ಬಾವಿಯನ್ನು ಕೊರೆಯಿಸಲಾಗುತ್ತದೆ. ಈಗ ಇಲಾಖಾ ರಿಗ್ ಯಂತ್ರದಿಂದ ಒಂದು ಕೊಳವೆ ಬಾವಿಯನ್ನು ಒಂದು ವಾರದಲ್ಲಿ ಕೊರೆದು ಅಲ್ಲಿ ನೀರಿನ ಸಮಸ್ಯೆಯನ್ನು ಬಗೆಹರಿಸಲು ಕ್ರಮ ತೆಗೆದುಕೊಳ್ಳಲಾಗುವುದು.

(ಋ) ಬಿಜಾಪುರ ನಗರದಲ್ಲಿರುವ ನೀರಿನ ಅಭಾವ ಪರಿಹಾರ

ಶ್ರೀ ಬಸನಗೌಡ ರಾ. ಪಾಟೀಲ್ (ಬಿಜಾಪುರ) : ಮಾನ್ಯ ಅಧ್ಯಕ್ಷರೇ, ಬಿಜಾಪುರ ನಗರದಲ್ಲಿರುವ ಅಸಮರ್ಪಕ ನೀರಿನ ಪೈಪ್‌ಲೈನ್ ವ್ಯವಸ್ಥೆಯಿಂದ ವಿಜಾಪುರದ ನಗರದ ಅನೇಕ ಭಾಗಗಳಲ್ಲಿ ನೀರು ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುತ್ತಿದ್ದು, ಅನೇಕ ಹೊಸ ಬಡಾವಣೆಗಳಿಗೆ ನೀರು ಪೂರೈಕೆ ವ್ಯವಸ್ಥೆ ಇಲ್ಲದೇ ಇರುವುದರಿಂದ ದಿನದಿಂದ ದಿನಕ್ಕೆ ಬೆಳೆಯುತ್ತಿರುವ ವಿಜಾಪುರ ನಗರದ ನಾಗರೀಕರು ವಿಶೇಷವಾಗಿ ಬಡವರ ಕಾಲನಿಗಳು ಈ ಗಂಭೀರ ಪರಿಸ್ಥಿತಿಯನ್ನು ಅನುಭವಿಸುತ್ತಿರುವುದು ಸಾರ್ವಜನಿಕವಾಗಿ ಅತಿ ಮಹತ್ವದ ಸಮಸ್ಯೆಯಾಗಿರುವುದರಿಂದ ಹೊಸ ಪೈಪ್ ಲೈನ್ ವ್ಯವಸ್ಥೆ ಯೋಜನೆಯೊಂದನ್ನು ಸಿದ್ಧಪಡಿಸಿ ವಿಜಾಪುರ ಕುಡಿಯುವ ನೀರಿನ 2ನೇ ಹಂತದ ಕುಡಿಯುವ ನೀರಿನ ಯೋಜನೆ ಮುಕ್ತಾಯಗೊಳ್ಳುವುದರೊಳಗಾಗಿ ಸರ್ಕಾರ ಈ ಯೋಜನೆಯನ್ನು ಕಾರ್ಯಗತಗೊಳಿಸಲು ಕಾರ್ಯೋನ್ಮುಖವಾಗಬೇಕೆಂದು ಕೇಳಿಕೊಳ್ಳುತ್ತೇನೆ. ವಿಜಾಪುರ ನಗರದಲ್ಲಿ ಅನೇಕ ಬಡಾವಣೆಗಳಲ್ಲಿ ಮತ್ತು ಅನೇಕ ಪ್ರದೇಶಗಳಲ್ಲಿ ಒಳಚರಂಡಿ ವ್ಯವಸ್ಥೆ ಸಮರ್ಪಕವಾಗಿ ಇಲ್ಲದೇ ಇರುವುದರಿಂದ ಅನೇಕ ನಾಗರೀಕ ಜೀವನಾರೋಗ್ಯ ಸಮಸ್ಯೆಗಳು ಉದ್ಭವಿಸುತ್ತಿದ್ದು, ಅನೇಕ ಕಡೆ ಕೊಳಚೆ ಪ್ರದೇಶಗಳ ಕೊಳಚೆ ಶೇಖರಣಾ ಕೇಂದ್ರ ನಗರದ ಮಧ್ಯಭಾಗದಲ್ಲಿ ಆಗಿರುವುದರಿಂದ ಸರ್ಕಾರ ಒಳಚರಂಡಿ ಯೋಜನೆಗೆ ವಿಶೇಷ ಹಣ ಒದಗಿಸಿ ಸಮರೋಪಾದಿಯಲ್ಲಿ ಕಾರ್ಯೋನ್ಮುಖವಾಗಿ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ನಗರಾಭಿವೃದ್ಧಿ ಸಚಿವರನ್ನು ವಿನಂತಿಸುತ್ತೇನೆ.

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಹಾಲಿ ಬಿಜಾಪುರ ನಗರದ ಕುಡಿಯುವ ನೀರಿನ ವಿತರಣಾ ವ್ಯವಸ್ಥೆಯು ಹಳೆಯದಾಗಿದ್ದು ಇದನ್ನು ನವೀಕರಿಸಬೇಕಾಗಿದೆ ಹಾಗೂ ಕೆಲವು ಹೊಸ ಪ್ರದೇಶಗಳಿಗೆ ವಿಸ್ತರಣಾ ವ್ಯವಸ್ಥೆಯನ್ನು ಅಳವಡಿಸಬೇಕಾಗಿದೆ. ಬಿಜಾಪುರ ನಗರಕ್ಕೆ ಈಗ ಕಾರ್ಯಗತಗೊಳಿಸುತ್ತಿರುವ 1670 ಲಕ್ಷ ರೂ.ಗಳ ಅಂದಾಜಿನ ಯೋಜನೆಯಲ್ಲಿ ಈ ಅವಕಾಶವು ಇರುವುದಿಲ್ಲ.

ಆದ್ದರಿಂದ ಮಂಡಳಿಯ ವತಿಯಿಂದ ಸರ್ವೆ ಕಾರ್ಯವು ಮುಗಿದಿದ್ದು ಅಗತ್ಯವಾದ ವಿನ್ಯಾಸ ಮತ್ತು ಅಂದಾಜು ಪತ್ರಿಕೆಯನ್ನು ತಯಾರಿಸಲಾಗುತ್ತಿದೆ.. ಈ ಅಂದಾಜಿನ ಮೊತ್ತವು ಸುಮಾರು 1200 ಲಕ್ಷ ರೂ.ಗಳಾಗಬಹುದು. ಈ ಯೋಜನೆಗೆ ವಿವರವಾದ ಅಂದಾಜನ್ನು ತಯಾರಿಸಿ ಈ ಕೆಳಕಂಡ ಹಣಕಾಸಿನ ವ್ಯವಸ್ಥೆಯಲ್ಲಿ ತೆಗೆದುಕೊಳ್ಳಲು ಪ್ರಸ್ತಾವನೆ ಮಾಡಿ ಮಂಡಳಿಯ ಠರಾವು ಹಾಗೂ ನಗರಸಭೆಯ ಠರಾವನ್ನು ಪಡೆದು ಸರ್ಕಾರಕ್ಕೆ ಕಳುಹಿಸಲಾಗುವುದು.

ಹುಡ್ಕೋ ಸಾಲ	....	ಅಂದಾಜಿನ ಶೇ.	70 ಭಾಗ
ಸರ್ಕಾರದ ಸಾಲ	....	ಅಂದಾಜಿನ ಶೇ.	10 ಭಾಗ
ಬಜಾಪುರ ನಗರಸಭೆ ವಂತಿಕೆ	....	ಅಂದಾಜಿನ ಶೇ.	20 ಭಾಗ

ಇದಲ್ಲದೆ ಇತ್ತೀಚಿನ ಸರ್ಕಾರದ ನಿರ್ಧಾರದಂತೆ ಯೋಜನೆಯನ್ನು ಸರ್ಕಾರಕ್ಕೆ ಕಳುಹಿಸುವ ಮುನ್ನ ಸ್ಥಳೀಯ ಸಂಸ್ಥೆಯಿದ ಅವರ ಪಾಲಿನ 1/3 ಭಾಗ ಹಣವನ್ನು ಪಾವತಿ ಮಾಡಿದ ನಂತರ ಸರ್ಕಾರಕ್ಕೆ ಅಂದಾಜನ್ನು ಕಳುಹಿಸಬೇಕಾಗಿದೆ. ಅದರಂತೆ ಸರ್ಕಾರದ ನೀತಿಯನ್ನು ಅನುಸರಿಸಿ ಆಡಳಿತಾತ್ಮಕ ಅನುಮೋದನೆಯನ್ನು ಪಡೆಯಲು ಅಂದಾಜನ್ನು ಕಳುಹಿಸಲಾಗುವುದು.

ಬಿಜಾಪುರ ನಗರದ ಈಗಿರುವ ಒಳಚರಂಡಿ ವ್ಯವಸ್ಥೆಯನ್ನು 1972ರಲ್ಲಿ ಕೈಗೊಂಡು ಉಸ್ತುವಾರಿಯನ್ನು ನಗರಸಭೆಗೆ ವಹಿಸಿಕೊಟ್ಟಿದೆ. ಈ ಒಳಚರಂಡಿ ವ್ಯವಸ್ಥೆಯನ್ನು ಉತ್ತಮಗೊಳಿಸಲು ಯಾವ ಪ್ರಸ್ತಾವನೆಯೂ ಇರುವುದಿಲ್ಲ.

(ಋೂ) ಹುಬ್ಬಳ್ಳಿ - ಧಾರವಾಡ ಮಹಾನಗರದಲ್ಲಿ ಸತತ ಮಳೆಯಿಂದ ರಸ್ತೆಗಳು ಶಿಥಿಲವಾಗಿರುವ ಬಗ್ಗೆ

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಮಹಾನಗರಸಭೆಯ ಒಡೆತನದ 550 ಕಿ.ಮಿ. ಉದ್ದಳತೆಯ ರಸ್ತೆಗಳಿದ್ದು. 2-3 ವರ್ಷಗಳ ಸತತ ಮಳೆಯಿಂದ ಹಾಗೂ ಇತರ ಕಾರಣಗಳಿಗಾಗಿ ನಗರದ ರಸ್ತೆಗಳು ಸಂಪೂರ್ಣ ಕೆಟ್ಟು ಹೋಗಿ ರಸ್ತೆಗಳಲ್ಲಿ ದೊಡ್ಡ ದೊಡ್ಡ ತಗ್ಗುಗಳು ಬಿದ್ದು ಸಂಚಾರಕ್ಕೆ ಬಹಳಷ್ಟು ಅನಾನುಕೂಲವಾಗಿರುತ್ತದೆ. ರಸ್ತೆಗಳ ಕಾಮಗಾರಿಯ ಹಿಂದಿನ ವರ್ಷದ ಬಿಲ್ ಅಂದಾಜು 97.00 ಲಕ್ಷದಷ್ಟು ಬಾರಿ ಇದ್ದು ಈಗ ರಸ್ತೆಗಳ ಸುಧಾರಣೆಗೆ ಕನಿಷ್ಟ 250 ಲಕ್ಷ ರೂಪಾಯಿಗಳ ಅವಶ್ಯಕತೆ ಇದ್ದು, ಮಹಾನಗರಸಭೆಯ ಆರ್ಥಿಕ ಪರಿಸ್ಥಿತಿ ಸರಿಯಿಲ್ಲದ ಕಾರಣ, ರಸ್ತೆ ಸುಧಾರಣೆಗಾಗಿ ಸರ್ಕಾರ ಮೇಲೆ ಹೇಳಿದ 250 ಲಕ್ಷ ರೂಪಾಯಿಗಳ ವಿಶೇಷ ಅನುದಾನ ನೀಡುವುದು ಅತೀ ಅವಶ್ಯ ಇದ್ದು, ಈ ಕುರಿತು ಹುಬ್ಬಳ್ಳಿ-ಧಾರವಾಡ ಮಹಾನಗರಸಭೆಯ ಕಮೀಷನರ್ ರವರು ದಿನಾಂಕ 18.8.1995ರಂದು ಪತ್ರದ ಮುಖಾಂತರ ಸರ್ಕಾರದ ಗಮನಕ್ಕೆ ತಂದಿರುತ್ತಾರೆ. ಕಾರಣ ಈ ರಸ್ತೆಗಳ ಸುಧಾರಣೆಗಾಗಿ ರೂ. 250 ಲಕ್ಷವನ್ನು ವಿಶೇಷ ಅನುದಾನದ ರೂಪದಲ್ಲಿ ಬಿಡುಗಡೆ ಮಾಡಬೇಕಾಗಿ ನಾನು ವಿನಂತಿಸುತ್ತೇನೆ.

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ, ಕಾಡಾ ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಹುಬ್ಬಳ್ಳಿ -ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ರಸ್ತೆಗಳು ಮಳೆ ಹಾಗೂ ಇತರ ಕಾರಣಗಳಿಂದ ಸಂಪೂರ್ಣ ಕೆಟ್ಟು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ರಸ್ತೆಗಳ ರಿಪೇರಿಗಾಗಿ 1994-95ನೇ ಸಾಲಿನಲ್ಲಿ 60.00 ಲಕ್ಷ ರೂಪಾಯಿಗಳನ್ನು ಜಕಾತಿ ಅನುದಾನದಲ್ಲಿ ಕಡಿತ ಮಾಡಿ ನೀಡಲಾಗಿದೆ. ಅಲ್ಲದೆ ಹುಬ್ಬಳ್ಳಿ-ಧಾರವಾಡ ನಗರ ಪಾಲಿಕೆಯ ಆಯವ್ಯಯದಲ್ಲಿ 145.00 ಲಕ್ಷ ರೂಪಾಯಿಗಳ ವ್ಯವಸ್ಥೆ ಮಾಡಲಾಗಿತ್ತು. ಈ ಎಲ್ಲಾ ಹಣವನ್ನು ಈಗಾಗಲೇ ರಸ್ತೆ ದುರಸ್ತಿಗಾಗಿ ಉಪಯೋಗಿಸಲಾಗಿದೆ. ಇನ್ನೂ ಬಾಕಿ ಇರುವ ರಸ್ತೆಗಳ ದುರಸ್ತಿಗಾಗಿ 1995-96ನೇ ಸಾಲಿನ ನಗರ ಪಾಲಿಕೆ ಆಯವ್ಯಯದಲ್ಲಿ 160-00 ಲಕ್ಷ ರೂಪಾಯಿಗಳನ್ನು ಕಾಯ್ದಿರಿಸಲಾಗಿದೆ.

(ಎ) ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಿಗೆ ಸಾರಿಗೆ ವ್ಯವಸ್ಥೆ

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ) : ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖಾಸಗಿ ಬಸ್ಸುಗಳು ಗ್ರಾಮಾಂತರ ಪ್ರದೇಶ ಸಾರಿಗೆ ವ್ಯವಸ್ಥೆಯ ನೆಪದಲ್ಲಿ ಪರವಾನಿಗೆ ಪಡೆದಿದ್ದು, ಗ್ರಾಮಾಂತರ ಪ್ರದೇಶಗಳಿಗೆ ವ್ಯವಸ್ಥಿತವಾಗಿ ಹೋಗುತ್ತಾ ಇಲ್ಲವೆಂದು ಸಾರ್ವಜನಿಕರಿಂದ ಮನವಿಗಳು ಸರ್ಕಾರಕ್ಕೆ ಬಂದಿದೆ. ಆದರೂ ಇಲ್ಲಿಯ ತನಕ ಖಾಸಗಿ ಬಸ್ಸುಗಳು ಪರವಾನಿಗೆ ಪಡೆದ ಸ್ಥಳಗಳನ್ನು ತಲುಪುತ್ತಾ ಇಲ್ಲ. ಇದನ್ನು ತಕ್ಷಣ ಪರಿಶೀಲಿಸಿ ಹೋಗಬೇಕಾದ ಗ್ರಾಮಾಂತರ ಪ್ರದೇಶಗಳಿಗೆ ಹೋಗುವ ವ್ಯವಸ್ಥೆಯನ್ನು ಮಾಡಬೇಕಾಗಿದೆ. ಈ ವಿಚಾರವನ್ನು ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಪರವಾಗಿ ಹಾಗೂ ಸಾರ್ವಜನಿಕರ ಪರವಾಗಿ ಸದನದ ಮೂಲಕ ಸರ್ಕಾರದ ಗಮನಕ್ಕೆ ತರುತ್ತಾ ಇದ್ದೇನೆ.

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು): ಮಾನ್ಯ ಉಪಾಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ಪರವಾನಿಗೆ ಹೊಂದಿದ ಖಾಸಗೀ ಬಸ್ಸುಗಳು ಹೋಗುತ್ತಿಲ್ಲವೆಂಬ ಅನೇಕ ಮನವಿಗಳು ಹಾಗೂ ದೂರುಗಳು ಸಾರ್ವಜನಿಕರಿಂದ, ವಿದ್ಯಾರ್ಥಿ ಸಮುದಾಯದಿಂದ ಹಾಗೂ ಜಿಲ್ಲೆಯ ಮಾನ್ಯ ಶಾಸಕರುಗಳಿಂದ ಸರ್ಕಾರಕ್ಕೆ :ಜಿಲ್ಲಾ ಆಡಳಿತಕ್ಕೆ ಹಾಗೂ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಗಮನಕ್ಕೆ ಬಂದಿರುತ್ತದೆ. ಇಂತಹ ದೂರುಗಳು ಮುಂಗಾರು ಮಳೆಯ ಸಂದರ್ಭದಲ್ಲಿ ಹೆಚ್ಚು ಬಂದಿರುತ್ತವೆ. ಹೀಗೆ ಬಂದ ದೂರುಗಳ ಪೈಕಿ ಪ್ರಮುಖ ಗ್ರಾಮಾಂತರ ಪ್ರದೇಶಗಳೆಂದರೆ 1)

ಕುಂದಾಪುರ ತಾಲ್ಲೂಕಿನ ಮುಟ್ಟುಮನೆ, ಅಮಾಸೆಬೈಲ್, ಶಂಕರನಾರಾಯಣ, ಬೈಲೂರು, ಮಳಹಳ್ಳಿ, ಹಾಗೂ ಸುರುಗೋಳಿ 2) ಉಡುಪಿ ತಾಲ್ಲೂಕಿನ ಪೆರೆ ಹಳ್ಳಿ, ದೊಡ್ಡನಗುಡ್ಡೆ, ಪಾಂಬೂರು ಮುದರಂಗಡಿ ಮತ್ತು ಇನ್ನಾ, 3) ಮಂಗಳೂರು ತಾಲ್ಲೂಕಿನ ಮುಚ್ಚೂರು, ನಿಡ್ಡೋಡಿ, ಮಲ್ಲಾರ ಪಟ್ಟಣ, ಪತ್ತೂರು, ಬೀರಿ, ಮೂಡೂರು, 4) ಬೆಲ್ತಂಗಡಿ ತಾಲ್ಲೂಕಿನ ಬಂದರು, ಮಡಂತ್ಯಾರು ಮತ್ತು ಕೊಕ್ಕಪಡವು, 5) ಕಾರ್ಕಳ ತಾಲ್ಲೂಕಿನ ಸೋಮೇಶ್ವರ, ಮುನಿಯಾಲು, ಕಂಜಾಳ, ಬೊರಕಟ್ಟೆ ಮತ್ತು ಮಾಳ 6) ಬಂಟ್ವಾಳ ತಾಲ್ಲೂಕಿನ ಸೂರ್ನಾಡು, ರಾಯಿ, ಕೊಳತ್ತೆ ಬೈಲು, ಬೆಂಜಿನಪದವು, ಮಲ್ಲಾರು, ಮೇಲ್ಕಂಡ ಎಲ್ಲಾ ಪ್ರಕರಣಗಳಲ್ಲಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದಿಂದ ವಾಹನಗಳನ್ನು ಸತತವಾಗಿ ತಪಾಸಣೆಗೆ ಒಳಪಡಿಸಿ ಪರವಾನಿಗೆ ಪ್ರಕಾರ ಬಸ್ಸುಗಳನ್ನು ಓಡಿಸದಿದ್ದಕ್ಕೆ ಮಾಲೀಕರಿಗೆ ದಂಡ ವಿಧಿಸಲಾಗಿದೆ. ಹಾಗೂ ಬಸ್ಸುಗಳನ್ನು ಗ್ರಾಮಾಂತರ ಪ್ರದೇಶಗಳಿಗೆ ಓಡಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಖಾಸಗೀ ಬಸ್ಸು ಮಾಲೀಕರಿಗೆ ತಿಳುವಳಿಕೆ ಪತ್ರ ನೀಡಿ ಪರವಾನಿಗೆ ರದ್ದತಿಗೆ ಸಹ ಕ್ರಮ ತೆಗೆದುಕೊಳ್ಳಲಾಗಿದೆ. ಇಂತಹ ಗ್ರಾಮಗಳಿಗೆ ಒಂದೆರಡು ಬಸ್ಸುಗಳು ಓಡಿಸದಿದ್ದರೂ ಆ ಗ್ರಾಮಗಳಿಗೆ ಇತರೆ ಬಸ್ಸುಗಳ ಸೌಕರ್ಯವಿರುತ್ತದೆ. ಜನವರಿ 1995ರಿಂದ ಜುಲೈ ಅಂತ್ಯದವರೆಗೆ 26 ಖಾಸಗೀ ಬಸ್ಸು ಪರವಾನಿಗೆಗಳನ್ನು ರದ್ದುಗೊಳಿಸಲಾಗಿದೆ. ಈಗ ಗ್ರಾಮಾಂತರ ಪ್ರದೇಶಗಳಿಗೆ ಬಸ್ಸು ಓಡಿಸದಿರುವ ಪ್ರಕರಣಗಳಲ್ಲಿ ಜಿಲ್ಲೆಯಲ್ಲಿನ ವಿಪರೀತ ಮುಂಗಾರು ಮಳೆಯಿಂದಾಗಿ ರಸ್ತೆಗಳು ಹಾಳಾಗಿದ್ದು ಅನೇಕ ಹಳ್ಳಗಳಿಂದ ಕೂಡಿದ್ದು ಬಸ್ಸುಗಳನ್ನು ಸಂಚಾರಗೊಳಿಸಲು ಅಸಾಧ್ಯವಾಗಿದೆ ಎಂಬ ಕಾರಣಗಳು ತನಿಖೆಯಿಂದ ಹಾಗೂ ಬಸ್ಸು ಮಾಲೀಕರಿಂದ ತಿಳಿದು ಬಂದಿದೆ. ರಸ್ತೆಗಳ ರಿಪೇರಿಗೆ ಸೂಕ್ತ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಇಲಾಖೆಗೂ ಸಹ ತಿಳಿಸಲಾಗಿದೆ.

ಗ್ರಾಮಾಂತರ ಪ್ರದೇಶಗಳಿಗೆ ಬಸ್ಸುಗಳನ್ನು ಓಡಿಸದೇ ಇರುವ ಮಾಲೀಕರ ಮೇಲೆ ಇನ್ನೂ ಹೆಚ್ಚಿನ ಕ್ರಮ ಕೈಗೊಳ್ಳಲು ಮತ್ತು ಕಠಿಣ ಕ್ರಮವನ್ನು ಜರುಗಿಸಲಾಗುವುದು.

3 ಶಾಸನ ರಚನೆ

ವಿಧೇಯಕಗಳನ್ನು ಪರ್ಯಾಲೋಚಿಸುವುದು ಮತ್ತು ಅಂಗೀಕರಿಸುವುದು

ಕರ್ನಾಟಕ ನೀರಾವರಿ(ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ (ಎರಡನೇ ತಿದ್ದುಪಡಿ) ವಿಧೇಯಕ, 1995

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಹೆಚ್.ಡಿ.ದೇವೇಗೌಡ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ) (ಎರಡನೇ ತಿದ್ದುಪಡಿ) ವಿಧೇಯಕ, 1995ಅನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ವೈ. ರಾಮಕೃಷ್ಣ : ಮಾನ್ಯ ಅಧ್ಯಕ್ಷರೇ, ತಾವೇನು ನಿಗಮ ಮಾಡಬೇಕೆಂದು ಹೊರಟಿದ್ದೀರಿ, ಆ ನಿಗಮ ದಕ್ಷತೆಯಿಂದ ಕೆಲಸ ಮಾಡಬೇಕಾದರೆ, ದಕ್ಷತೆ ಇರತಕ್ಕ, ಪ್ರಾಮಾಣಿಕ ಅಧಿಕಾರಿಗಳನ್ನು, ನುರಿತಂಥ ಅಧಿಕಾರಿಗಳನ್ನು those who are committed to the wok ಅಂತಹವರನ್ನು ತಾವು ಹಾಕಿದರೆ, ನಿಗಮ ಚೆನ್ನಾಗಿ ಕೆಲಸ ಮಾಡುತ್ತದೆಂದು ಸಲಹೆ ಕೊಡುತ್ತೇನೆ. ಎರಡನೆಯದು, ಇದಕ್ಕೆ ನೇರವಾಗಿ ಸಂಬಂಧ ಇಲ್ಲದೇ ಇದ್ದರೂ ಕೂಡ ಯು.ಕೆ.ಪಿ.ಗೆ ವಿಶ್ವಬ್ಯಾಂಕ್ ಲೋನ್ ಏನಾಗಿದೆ ಮತ್ತು ಬಾಂಡುಗಳ ವಿಚಾರ ಏನಾಗಿದೆ ಎಂಬ ಬಗ್ಗೆ ತಾವು ಎರಡು ಮಾತುಗಳನ್ನು ಹೇಳಿದರೆ, I think I will be very much enlightened.

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಇದು ಫಾರ್ಮಲ್ ಅಮೆಂಡ್‌ಮೆಂಟ್ ಇದ್ದರೂ ಕೂಡ, consequential amendment ಇದ್ದರೂ ಕೂಡ ಇದರ ಮುಖ್ಯ ಉದ್ದೇಶವೇನೆಂದರೆ, ಕೃಷ್ಣ ಭಾಗ್ಯ ಜಲ ನಿಗಮದ ವತಿಯಿಂದ ನಡೆದಂಥ ಪ್ರಾಜೆಕ್ಟ್‌ನಲ್ಲಿ ವಾಟರ್ ರೇಟನ್ನು ಕೂಡ ಹಾಕಬೇಕೆನ್ನುವುದು ಇದೆ. ಉಳಿದ ಪ್ರಾಜೆಕ್ಟ್‌ಗಳಿಗೆ ನೇರವಾಗಿ, 1957ನೇ ಕಾಯಿದೆ ಅನ್ವಯ ವಾಟರ್ ರೇಟ್ ಮತ್ತು ವಾಟರ್ ಲೆವಿಯನ್ನು ಹಾಕಬೇಕು. ಇದು ನಿಗಮ ಆದಕಾರಣ, ಈ ನಿಗಮದ ಮುಖಾಂತರ ಆಗಬೇಕೆಂದು ತಿದ್ದುಪಡಿ ತಂದಿದ್ದೀರಿ. ಸರಳವಾದ ತಿದ್ದುಪಡಿ ತಂದಿದ್ದೀರಿ, ಇದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ, ಕೃಷ್ಣ ಭಾಗ್ಯ ಜಲ ನಿಗಮ ಏನಿದೆ, ಅದಕ್ಕೆ ಈಗಾಗಲೇ ನೀವು ಬಾಂಡ್ ಮುಖಾಂತರ, ಹಣವನ್ನು ಕಲೆಕ್ಟ್ ಮಾಡುತ್ತಿದ್ದೀರಿ. ಹಣವನ್ನು ಕಲೆಕ್ಟ್ ಮಾಡಿ, ಖರ್ಚು ಮಾಡುವುದನ್ನೂ ಕೂಡ ಈ ನಿಗಮದ ಮುಖಾಂತರ ತಾವು ಮಾಡುತಿದ್ದೀರಿ. ಅದಕ್ಕಾಗಿ ತಾವು ಹೆಚ್ಚಿನ ಇಂಟ್ರೆಸ್ಟ್ ಕೊಡುತ್ತಿದ್ದೀರಿ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ. ಉದಾಹರಣೆಗಾಗಿ ಬ್ಯಾಂಕಿನವರು ಸುಮಾರು 15-16 ಪರ್ಸೆಂಟ್ ಕೊಟ್ಟರೆ, ನೀವು ಹೆಚ್ಚಿನ ಹಣ ಅಟ್ರಾಕ್ಟ್ ಮಾಡುವುದಕ್ಕೋಸ್ಕರ 18-20 ಪರ್ಸೆಂಟ್ ಇಂಟರೆಸ್ಟ್ ನೀವು ಮಾಡಬಹುದು. ಅಂದಾಗ ಈ ಪ್ರಾಜೆಕ್ಟ್ ಕಾಸ್ಟ್ ಕೂಡ ಜಾಸ್ತಿಯಾಗುತದೆ. ಆಗ ವಾಟರ್ ಲೆವಿ ಅಥವಾ ವಾಟರ್ ರೇಟ್ ಕಂಪೇರಿಟೀವ್ ಬೇರೆ ಪ್ರಾಜೆಕ್ಟ್‌ಗಳಲ್ಲಿರತಕ್ಕಂಥ ಅಚ್ಚುಕಟ್ಟುದಾರರಿಗೆ, ಮತ್ತು ಇವರಿಗೆ ವ್ಯತ್ಯಾಸಗಳಾಗತಕ್ಕಂತಾದ್ದು ಮತ್ತು ಇಲ್ಲಿ ನಮಗೆ ಜಾಸ್ತಿ ಹಣ ಕೊಟ್ಟೆರಿ, ಅಥವಾ ನೀವು ಜಾಸ್ತಿ ರೇಟ್ ಹಾಕಿದಿರಿ ಎನ್ನತಕ್ಕಂತಾದ್ದು ಬರಬಹುದು. ಹಣ ಕಲೆಕ್ಟ್ ಆಗಲಿಲ್ಲವೆಂದರೆ, ವಾಟರ್ ರೇಟ್ ಕಲೆಕ್ಟ್ ಆಗಲಿಲ್ಲವೆಂದರೆ, ನೀವು ಹೇಳಬಹುದು, ವಾಟರ್ ರೇಟ್ ಕಲೆಕ್ಟ್ ಆಗಲಿಲ್ಲ, ಅದಕ್ಕಾಗಿ ನಾವು ಡೆವಲಪ್ ಮೆಂಟ್ ವರ್ಕ್ಸ್ ತೆಗೆದುಕೊಳ್ಳುವುದಕ್ಕಾಗುತ್ತಾ ಇಲ್ಲ ಎಂದು. ಏಕೆಂದರೆ ಇದು ನಿಗಮ ಇದೆ. ಕಾರ್ಪೊರೇಷನ್‌ನಲ್ಲಿ ಹಣ ಇಲ್ಲ, ಸ್ಯಾಲರಿಯನ್ನೂ ಕೊಡುವುದಕ್ಕಾಗುವುದಿಲ್ಲ ಎನ್ನುವ ಪರಿಸ್ಥಿತಿ ನಾಳೆ ಬರಬಹುದು. ಏಕೆಂದರೆ, ಕೆ.ಇ.ಬಿ.ನಲ್ಲೂ ಕಡೆ ಅದೇ ರೀತಿಯಾಗಿ ಆಗುತ್ತಿದೆ ನಾಳೆ ಪವರ್ ಕಾರ್ಪೊರೇಷನ್‌ನಿಂದಲೂ ಅನೇಕ ಪ್ರಾಜೆಕ್ಟ್‌ಗಳನ್ನು ನಿಲ್ಲಿಸುತ್ತೀರಿ. ಏಕೆಂದರೆ, ಹಣದ ಕೊರತೆ ಇದ್ದ ಕಾರಣ ಕಾರ್ಪೊರೇಷನ್ ಇಂಡಿಪೆಂಡೆಂಟ್ ಇದೆ ಅಥವಾ ಕಾರ್ಪೊರೇಷನ್‌ಗೆ ಅದರದೇ ಆದಂಥ ರಿಸೋರ್ಸನ್ನು ರೂಪಿಸಿಕೊಳ್ಳಬೇಕಾಗುತದೆ. ಅದಕ್ಕಾಗಿ ಸರ್ಕಾರ ನೇರವಾಗಿ ಸಹಾಯ ಮಾಡುವುದಕ್ಕಾಗುವುದಿಲ್ಲ, ಅವರು ಎಲ್ಲಿಯಾದರೂ ಬಾರೋ ಮಾಡಲಿ ಅಥವಾ ಎಲ್ಲಿಯಾದರೂ ಹಣ ತೆಗೆದುಕೊಳ್ಳಲಿ, ಎಲ್ಲಿಯಾದರೂ ಲೋನ್ ತೆಗೆದುಕೊಳ್ಳಲಿ ಎನ್ನತಕ್ಕಂಥ ಅಭಿಪ್ರಾಯ ಬರುತ್ತದೆ. ಅದಕ್ಕೆ, ವಾಟರ್ ರೇಟ್ ಕಲೆಕ್ಟ್ ಆಗಲಿಲ್ಲವೆಂದು ನಾಳೆ ಪ್ರಾಜೆಕ್ಟ್ ಕೆಲಸಗಳು ನಿಲ್ಲತಕ್ಕಂಥಾದ್ದು ಕೂಡ ಆಗುತ್ತದೆ.

ಏಕೆಂದರೆ, ಅದು ಇಂಡಿಪೆಂಡೆಂಟ್, ಅದಕ್ಕೆ ಬೇರೆ ಪ್ರಾಜೆಕ್ಟ್‌ಗಳು , ಉಳಿದ ಸರ್ಕಾರದ ಪ್ರಾಜೆಕ್ಟ್‌ಗಳೇ ಬೇರೆ. ಹೀಗಾಗಿ, ಇದಕ್ಕೆ ಹೊಡೆತ ಬೀಳಬಾರದು. ಅದರ ಬಗ್ಗೆ ಕೂಡ ಈ ಸಂದರ್ಭದಲ್ಲಿ ಸ್ಪಷ್ಟೀಕರಣ ಕೊಡಬೇಕಾಗುತ್ತದೆ. ಇವತ್ತು ಪತ್ರಿಕೆಯಲ್ಲೂ ಕೂಡ ಬಂದಿದೆ. ತಾವು ಇದಕ್ಕಿಂತ ಮುಂಚೆಯೇ ಎಲ್ಲಾ ವಿರೋಧ ಪಕ್ಷದ ನಾಯಕರನ್ನು ಕರೆಯಿಸಿ, ಅಪ್ಪರ್ ಕೃಷ್ಣಾ ಬಗ್ಗೆ ಚರ್ಚೆ ಮಾಡಿದ್ದೀರಿ. ಏನೆಂದರೆ, ವಿಶ್ವಬ್ಯಾಂಕ್‌ನವರು ಇದಕ್ಕೆ ಸಹಾಯ ನಿಲ್ಲಿಸಬಹುದು ಎನ್ನತಕ್ಕ ಸೂಚನೆಯನ್ನು ತಾವು ಕೊಟ್ಟಿದ್ದೀರಿ. ಏಕೆಂದರೆ, ಅವರು ಈ ರೀಹ್ಯಾಬಿಟೇಷನ್ ಪ್ರೋಗ್ರಾಂ ಸರಿಯಿಲ್ಲ, ನಮ್ಮ ಹಣ ತೆಗೆದುಕೊಂಡು ಸರಿಯಾಗಿ ಖರ್ಚು ಮಾಡುತ್ತಾ ಇಲ್ಲ. ಈ ರೀತಿ ಅನೇಕ ಕುಂಟು ನೆಪಗಳನ್ನು ಅವರು ಕೂಡ ಹುಡುಕುತ್ತಿದ್ದಾರೆ. ಆಗ ಮಾತ್ರ ಇಲ್ಲ, 1992ರಲ್ಲಿ, 1994ರಲ್ಲಿ ಕೂಡ ಅವರು ಹುಡುಕಿದ್ದರು. ಪುನಃ ಈಗ ಅವರು ಇದನ್ನು ಇನ್‌ಸಿಸ್ಟ್ ಮಾಡುತ್ತಾರೆ. ಒಂದು ಕಡೆ ನಾವು ವಾಟರ್ ರೇಟ್ ಹಾಕುತ್ತಿದ್ದೇವೆ. ಜಲ ಭಾಗ್ಯ ನಿಗಮದಿಂದ ಹಣವನ್ನು ಕಲೆಕ್ಟ್ ಮಾಡುತ್ತೇವೆ. ಇನ್ನೊಂದು ಕಡೆ ವರ್ಲ್ಡ್ ಬ್ಯಾಂಕಿನಿಂದ ಸಿಗತಕ್ಕ ಹಣವೂ ಕೂಡ ನಿಲ್ಲತಕ್ಕಂತಾದ್ದು ಅಥವಾ ನಿಲ್ಲಿಸುತ್ತೇವೆ ಎಂದು ಅವರೂ ಕೂಡ ಸ್ಪಷ್ಟವಾಗಿ ಹೇಳಿದ್ದಾರೆ. ಇದರ ಬಗ್ಗೆ ತಾವು ಸವಿಸ್ತಾರವಾಗಿ ಹೇಳಬೇಕು ಮತ್ತು ಸ್ಪಷ್ಟೀಕರಣ ಕೊಡಬೇಕೆಂದು ತಮ್ಮನ್ನು ಕೇಳುತ್ತೇನೆ.

ಶ್ರೀ ಬಾಳಪ್ಪ ಭೀಮಪ್ಪ ಚಿಮ್ಮನಕಟ್ಟಿ :ಮಾನ್ಯ ಅಧ್ಯಕ್ಷರೇ, ಇದರ ಮೇಲೆ ತಾವು ಅಮೂಲಾಗ್ರವಾಗಿ ತಿದ್ದುಪಡಿಯನ್ನು ತರಬಹುದು. ಇರಿಗೇಷನ್ ಆಕ್ಟ್ ಮೇಲೆ ತಿದ್ದುಪಡಿ ತಂದು, ಬಹಳ ಬದಲಾವಣೆಯಾಗಬೇಕಾಗಿದೆ. ಇದರಲ್ಲಿ ಬಹಳ ಸಮಸ್ಯೆಗಳು ಇವೆ. ಇದು ಕೇವಲ ಕೃಷ್ಣಾ ಭಾಗ್ಯ ಜಲನಿಗಮದ ಸಮಸ್ಯೆ ಅಲ್ಲ. ಇಡೀ ನೀರಾವರಿ ಪ್ರದೇಶಗಳನ್ನೊಳಗೊಂಡ ಎಲ್ಲಾ ರೈತರ ಸಮಸ್ಯೆಗಳೂ ಇವೆ.

+ ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ರಾಮಕೃಷ್ಣ ಅವರು ಹಾಗೂ ಮಾನ್ಯ ಖರ್ಗೆಯವರು ಏನು ಎತ್ತಿದ್ದಾರೆ, ಅವರ ಮನಸ್ಸಿನಲ್ಲಿ, ಮುಂದೆ ಏನು ಸಮಸ್ಯೆಗಳು ಉದ್ಭವವಾಗಬಹುದು ಎನ್ನತಕ್ಕಂಥ ಹಿನ್ನೆಲೆಯಲ್ಲಿ ಎತ್ತಿದ್ದಾರೆ. ನಾನು ಇಷ್ಟೇ ಈ ಸಂದರ್ಭದಲ್ಲಿ ಆಶ್ವಾಸನೆ ಕೊಡಲಿಕ್ಕೆ ಇಚ್ಛೆ ಪಡುತ್ತೇನೆ. 17.5 ಪರ್ಸೆಂಟ್ ರೇಟ್ ಆಫ್ ಇಂಟರೆಸ್ಟ್ ಫಿಕ್ಸ್ ಮಾಡಿರತಕ್ಕಂತಾದ್ದು. ಹಣ ಬರತಕ್ಕಂತಾದ್ದರ ಬಗ್ಗೆ ಯಾವ ಸಂಶಯ ಇಲ್ಲ. ಆ ದೃಷ್ಟಿಯಿಂದಲೇ ಮೊನ್ನೆ ಫ್ಲೋಟ್ ಮಾಡಿದ್ದೇವೆ. ಸಾಕಷ್ಟು ಹಣ ಬರುತ್ತದೆ ಎನ್ನತಕ್ಕಂಥ ಆತ್ಮವಿಶ್ವಾಸವೂ ಇದೆ. ಈಗ ಬರುತ್ತದೆ. ಅದರಲ್ಲಿ ಅನುಮಾನವೇನೂ ಇಲ್ಲ. ವಾಟರ್ ರೇಟ್ ಬಗ್ಗೆ ತಾವು ಏನು ಹೇಳಿದ್ದೀರಿ, ವಾಟರ್ ರೇಟನ್ನು ಫಿಕ್ಸ್ ಮಾಡತಕ್ಕ ಕಾಲದಲ್ಲಿ ಯೂನಿಫಾರ್ಮಿಟಿ ಇರಬೇಕೆ ಅಥವಾ ಈ ಪ್ರಾಜೆಕ್ಟ್‌ಗೆ ಬೇರೆ ಮಾಡಬೇಕೇ ಎಂಬ ಬಗ್ಗೆ ನಾವು ವಾಟರ್ ರೇಟನ್ನು ಏನು ನಿಗದಿ ಮಾಡುತ್ತೇವೆ ಎನ್ನುವುದನ್ನು ಇದರಲ್ಲಿ ಹೇಳಿಲ್ಲ. ಅದನ್ನು ಪ್ರತ್ಯೇಕವಾಗಿ ಚರ್ಚೆಗೆ ತೆಗೆದುಕೊಳ್ಳೋಣ. ಇವತ್ತು ಡಿಬೆಂಚರ್ ಫ್ಲೋಟ್ ಮಾಡಲಿಕ್ಕೆ ಮೊದಲು ಅನುಮತಿ ಕೇಳಿದಾಗ, ನಮ್ಮ ಅಸೆಟ್ಸನ್ನೂ ಟ್ರಾನ್ಸ್‌ಫರ್ ಮಾಡಬೇಕು, ವಾಟರ್ ರೇಟನ್ನು ಹೆಚ್ಚು ಮಾಡುತ್ತೇವೆನ್ನುವುದನ್ನು ಹೇಳಿ ಎಂದು ಹೇಳಿದ್ದಾರೆ. ಎರಡನೆಯದು ಈ ನಿಗಮದಿಂದ ಬೇರೆ ನೀರನ್ನು ಯೋಜನೆಗಳಿಗೆ ಸರಬರಾಜು ಮಾಡಬೇಕಾಗುತ್ತದೆ. ಆದ್ದರಿಂದ ಆ ತಿದ್ದುಪಡಿಯನ್ನು ಇದರಲ್ಲಿ ಅಳವಡಿಸಿದ್ದೇವೆ. ವಾಟರ್ ರೇಟ್ ಎಷ್ಟು ಹೆಚ್ಚು ಮಾಡಬೇಕೆಂಬುದರ ಬಗ್ಗೆ ಹೇಗೆ ಮಾಡಬೇಕೆಂಬುದರ ಬಗ್ಗೆ ಮತ್ತೆ ಸದನದ ಮುಂದೆ ಬರಬೇಕಾಗುತ್ತದೆ. ನಾನು ಇಷ್ಟೇ ಹೇಳುತ್ತೇನೆ. ಇದಕ್ಕೋಸ್ಕರ ಯದ್ವಾತದ್ವಾ ಮಾಡುವುದಕ್ಕೆ ಹೋಗುವುದಿಲ್ಲ, ಪ್ರತ್ಯೇಕವಾಗಿ ನಾವೆಲ್ಲಾ ಕುಳಿತುಕೊಂಡೇ ಚರ್ಚೆ ಮಾಡಿ ನಿರ್ಣಯ ಮಾಡೋಣ. ಬಡ್ಡಿಯನ್ನು ಕೊಡಬೇಕಾಗುತ್ತದೆ. ರಾಜ್ಯದಲ್ಲಿರುವ ನಮ್ಮ ಸಂಪತ್ತನ್ನು ಬಳಕೆ ಮಾಡಿಕೊಳ್ಳುವಾಗ ಆ ಪ್ರಾಜೆಕ್ಟ್ ಬೇರೆ, ಈ ಪ್ರಾಜೆಕ್ಟ್ ಬೇರೆ ಎಂದು ಯೋಚನೆ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಅವಶ್ಯಕತೆ ಇದೆ. ಇದನ್ನು ಮುಗಿಸಬೇಕೆಂಬ ಸದುದ್ದೇಶದಿಂದಲೇ ನಿಗಮ ಮಾಡಿರುವುದು. ಹಣ ಕೂಡಿಸಿಕೊಳ್ಳುವುದಕ್ಕೆ ಬಡ್ಡಿ ಕೊಡಲೇಬೇಕಾಗುತ್ತದೆ. ರಾಜ್ಯ ಸರ್ಕಾರದಿಂದ ಒಟ್ಟು ಮೊತ್ತ, ಬಡ್ಡಿ ಮತ್ತೊಂದು ಕ್ಲಿಯರ್ ಮಾಡಬೇಕಾಗುತ್ತದೆ. ಇಷ್ಟು ಮಾತ್ರ ಹೇಳುತ್ತೇನೆ. ಇದು ಸಿಂಪಲ್ ಬಿಲ್ ಇದೆ. It is only to get confidence for the investors ನಾವು ಈ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಜೊತೆಗೆ ಈ ಲ್ಯಾಕುನಾ ಏನಿದೆಯೆಂದರೆ, ನಿಗಮದ ವ್ಯಾಪ್ತಿಯೊಳಗೆ ನೀರು ಶೇಖರಣೆಯಾಗುವುದರಿಂದ, ನೀರು ಬಿಡತಕ್ಕಂತಾದ್ದಕ್ಕೆ ಮತ್ತು ನೀರು ದರ ನಿಗದಿ ಮಾಡುವುದಕ್ಕೆ ಇದು ಸಿಂಪಲ್ ತಿದ್ದುಪಡಿ ಇದೆ. ದಯಮಾಡಿ ಇದನ್ನು ಒಪ್ಪಿಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇವೆ. ವರ್ಲ್ಡ್ ಬ್ಯಾಂಕ್ ಬಗ್ಗೆ ಮಾನ್ಯ ಖರ್ಗೆಯವರು ಹೇಳಿದ್ದುದು ನಿಜ. ನಾವು ಪ್ರಯತ್ನ ಮಾಡುತ್ತಿದ್ದೇವೆ, ಫೈನಾನ್ಸ್ ಮಿನಿಸ್ಟರ್ ಪುನಃ ವಿಶ್ವಬ್ಯಾಂಕ್ ಅಧಿಕಾರಿಗಳಿಗೆ ಬರೆದಿದ್ದಾರೆ. ಇದರ ಬಗ್ಗೆ ನಮ್ಮ ಕೈಲಿ ಎಷ್ಟು ಶಕ್ತಿ ಇದೆಯೋ ಅಷ್ಟು ಪ್ರಯತ್ನವನ್ನು ನಾವು ಮಾಡುತ್ತೇವೆ. ಅವರು ಕೇಳಿರುವ ಕಂಡೀಷನ್‌ಗಳಲ್ಲೂ ಸಾಧ್ಯವಾದ ಮಟ್ಟಿಗೆ ಕೆಲವು ಒಪ್ಪುವುದಕ್ಕೆ ಪ್ರಯತ್ನ ಮಾಡಿದ್ದೇವೆ. ನಿನ್ನೆ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಮೀಟಿಂಗ್ ಮಾಡಿದ್ದೇವೆ. ಒಂದು ವೇಳೆ ಆಗಲಿಲ್ಲವೆಂದರೆ, We have to raise our own resources. ಪ್ರಾಜೆಕ್ಟ್ ನಿಲ್ಲಿಸುವುದಕ್ಕೆ ಸಾಧ್ಯವಾಗುವುದಿಲ್ಲ.

ಉಪಾಧ್ಯಕ್ಷರು : "ಪ್ರಸ್ತಾವ ಏನೆಂದರೆ, 1995ನೇ ಸಾಲಿನ ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ) (ಎರಡನೆಯ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ : 2

ಉಪಾಧ್ಯಕ್ಷರು : ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ ಮೊದಲನೆಯ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಹೆಚ್.ಡಿ. ದೇವೇಗೌಡ(ಮುಖ್ಯ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೇ, 1995ನೇ ಸಾಲಿನ ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ) (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ, 1995ನೇ ಸಾಲಿನ ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಹಾಗೂ ನೀರಿನ ದರ ವಿಧಿಸುವ) (ಎರಡನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಶ್ರೀ ಆರ್. ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ಕರ್ನಾಟಕ ಭೂ ಕಂದಾಯ ತಿದ್ದುಪಡಿ ವಿಧೇಯಕ 1995ನ್ನು ಬುಧವಾರ ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಆಗಬಹುದು.

ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) (ಎರಡನೆಯ ತಿದ್ದುಪಡಿ) ವಿಧೇಯಕ 1995

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೇ, 1995ರ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ

(ಪಕ್ಷಾಂತರ ನಿಷೇಧ) (ಎರಡನೆಯ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೆ, ಈ ಹಿಂದೆ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಸದಸ್ಯರುಗಳು ಪಕ್ಷಾಂತರ ನಿಷೇಧ ಕಾಯ್ದೆ ಕೆಳಗೆ ತಪ್ಪು ಎಸಗಿದ್ದಾರೆ ಎಂದು ಹೇಳಿ ಸಾಬೀತಾದಂತಹ ಅರ್ಹತೆ ಅಥವಾ ಅನರ್ಹತೆಯ ಬಗ್ಗೆ ನಿರ್ಣಯ ಮಾಡತಕ್ಕಂಥ ಅಧಿಕಾರ ಗ್ರಾಮೀಣಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಅಥವಾ ಅವರಿಂದ ಸೂಚಿಸಲ್ಪಡುವಂತಹ ತತ್ಸಂಬಂಧಿ ಅಧಿಕಾರಿ, ತಾಲ್ಲೂಕು ಪಂಚಾಯಿತಿ ಸದಸ್ಯರಿಗೆ ಸಂಬಂಧಪಟ್ಟಂತೆ ಜಿಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಅಧಿಕಾರವನ್ನು ವಹಿಸಿಕೊಡಲಾಗಿತ್ತು. ಅದರ ಬಗ್ಗೆ ಉಭಯ ಸದನಗಳಲ್ಲಿ ಕೂಡ ಅನೇಕ ಸದಸ್ಯರು ಗ್ರಾಮೀಣಾಭಿವೃದ್ಧಿಯ ಇಲಾಖೆಯ ಅಥವಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕೆಲಸ ಮಾಡುವಾಗ ಆಳುವ ಪಕ್ಷದ ಪರವಾಗಿ ಒಲವು ತೋರಿಸುವಂತಹ ಸಂಭವವಿರುವುದರಿಂದ ಅಂತಹ ಅಪಾಯಗಳು ಆಗಬಾರದು, ಈಗಾಗಲೇ ನಮ್ಮ ರಾಜ್ಯದಲ್ಲಿ ಒಟ್ಟು ಚುನಾವಣಾ ಆಯುಕ್ತರು ಇರುವ ಸಂದರ್ಭ ಇರುವುದರಿಂದ ಚುನಾವಣಾ ಆಯುಕ್ತರಿಗೆ ಇಂತಹ ಅರ್ಹತೆ ಅಥವಾ ಅನರ್ಹತೆಯ ಬಗ್ಗೆ ತೀರ್ಮಾನ ಕೊಡುವಂತಹ ಅಧಿಕಾರವನ್ನು ಕೊಡಬೇಕು ಎಂದು ಹೇಳಿ ಸಲಹೆ ಬಂದಿದ್ದು, ಆ ಸಲಹೆ ಬಹಳ ಯೋಗ್ಯವಾದಂತಹ ಸಲಹೆ ಆದುದ್ದರಿಂದ ನಾವು ಅದನ್ನು ಒಪ್ಪಿ ಅದರ ಮೂಲಕವಾಗಿ ಸದನ ಮುಗಿದ ನಂತರ ಒಂದು ಅಧ್ಯಾದೇಶವನ್ನು ಹೊರಡಿಸಿ, ಚುನಾವಣಾ ಆಯುಕ್ತರಿಗೆ ಅರ್ಹತೆ ಮತ್ತು ಅನರ್ಹತೆ ಬಗ್ಗೆ ಒಂದು ವಿಚಾರಣೆಯನ್ನು ಮಾಡತಕ್ಕಂಥ ಒಂದು ಅಧಿಕಾರವನ್ನು ಕೊಟ್ಟಿದ್ದೇವೆ. ಸದನ ಇಲ್ಲದೇ ಇದ್ದುದ್ದರಿಂದ ಆ ಅಧ್ಯಾದೇಶವನ್ನು ಹೊರಡಿಸಿತ್ತು. ಈಗ ಅದನ್ನು ಸರಿಪಡಿಸಿ ಈ ತಿದ್ದುಪಡಿಯನ್ನು ತಂದಿದ್ದೇವೆ. ದಯ ಮಾಡಿ ಈ ತಿದ್ದುಪಡಿ ವಿಧೇಯಕವನ್ನು ಒಪ್ಪಿಕೊಳ್ಳಬೇಕೆಂದು ವಿನಂತಿ.

+ ಶ್ರೀ ವೈ ರಾಮಕೃಷ್ಣ (ಆನೇಕಲ್) : ಮಾನ್ಯ ಅಧ್ಯಕ್ಷರೇ, ನಮ್ಮ ಸಲಹೆ ಮೇರೆಗೆ ಈ ಒಂದು ತಿದ್ದುಪಡಿ ತಂದಿದ್ದಾರೆ ನಾನು ಒಪ್ಪುತ್ತೇನೆ. ಈ ಪಕ್ಷಾಂತರ ನಿಷೇಧದ ತಿದ್ದುಪಡಿಯನ್ನು ತಂದಿದ್ದೀರಿ ಇದರ ಬಗ್ಗೆ ಹೇಳುವುದಾದರೆ There was no Constitutional compulsion. The Constitutional compulsion was there only for Parliament and Assmbly. But there was no Constitutional compulsion here.

ತಾವು ಇದನ್ನು ಸ್ಥಳೀಯ ಸಂಸ್ಥೆಗಳಿಗೂ ಅನ್ವಯ ಮಾಡಿಕೊಂಡಿದ್ದೀರಿ. ಒಪ್ಪುತ್ತೀರಿ ಎಂದು ಕಾಣುತ್ತದೆ. ಏತಕ್ಕಾಗಿ ಮಾಡಿಕೊಂಡಿದ್ದೀರಿ ಕೇವಲ ರಾಜಕೀಯ ಉದ್ದೇಶಕ್ಕಾಗಿ ಮಾಡಿಕೊಂಡಿದ್ದೀರಿ. not for principles. ಏನು ರಾಜಕೀಯ ಉದ್ದೇಶ, ಅಂದರೆ ತಾಲ್ಲೂಕು ಪಂಚಾಯತಿಯಲ್ಲಿ ಜಿಲ್ಲಾ ಪಂಚಾಯತಿಯಲ್ಲಿ ವಿಲೇಜ್ ಪಂಚಾಯತಿಯಲ್ಲಿ ತಮ್ಮ ಪಾರ್ಟಿಯವರು ಬಹುಸಂಖ್ಯೆಯಲ್ಲಿ ಆರಿಸಿ ಬಂದಿದ್ದಾರೆ. ಅವರು ಎಲ್ಲಿ ಚೆದುರಿ ಹೋಗುತ್ತಾರೋ ಎನ್ನುವ ಭಯದಿಂದ ಅವರನ್ನು ಹಗ್ಗ ಹಾಕಿ ಈ ಪಕ್ಷದಲ್ಲೇ ಇರಲು ಕಟ್ಟಿ ಹಾಕುವಂತಹ ಒಂದು ಪ್ರಯತ್ನ ತಾವು ಮಾಡಿದ್ದೀರಿ. ಈ ಮಸೂದೆ ಉದ್ದೇಶ ಏನಪ್ಪ ಅಂದರೆ ನಿಮಗೆ ಒಂದು ರಾಜಕೀಯ ಬಲ ಇದ್ದಂತೆ. ನಾನು ತಮಗೆ ಒಂದು ವಿಷಯ ಹೇಳುತ್ತೇನೆ. ಪಾರ್ಲಿಮೆಂಟಿನಲ್ಲಿ ಈ ಮಸೂದೆ ತಂದು ಯಾವ ರೀತಿ ನಿಷ್ಫಲ ಆಯಿತು ಎನ್ನುವುದು ತಮಗೆ ಗೊತ್ತು. ನಮ್ಮ ಕರ್ನಾಟಕ ರಾಜ್ಯದಲ್ಲಿ ತಂದು ಏನಾಯಿತು ಎನ್ನುವುದು ತಮಗೆ ಗೊತ್ತಿದೆ, ಅದನ್ನು ನಾನು ತಮಗೆ ಬಾಯಿ ಬಿಟ್ಟು ಹೇಳಬೇಕಾಗಿಲ್ಲ, ನೀವುಗಳು ಬಂದಾಗ ಎಷ್ಟು ಜನರು

ಇದ್ದೀರಿ, ಈಗ ಎಷ್ಟು ಜನರು ಆಗಿದ್ದೀರಿ ಎಂಬುದನ್ನು ನೀವೇ ಆಲೋಚಿಸಿರಿ. ನಾನು ಈ ತಿದ್ದುಪಡಿ ಬೇಡಾ ಅಂತ ಹೇಳುವುದಿಲ್ಲ, ಇದು ಸಾಧ್ಯವೇ? ಇದರ ಯಶಸ್ಸು ಎಲ್ಲಿದೆ ಅಲ್ಲಿ ಇಲ್ಲ, ಇದನ್ನು ಎಲ್ಲಿ ಅನುಷ್ಠಾನಕ್ಕೆ ತರುತ್ತಿರೋ ಅಲ್ಲಿ ಇಲ್ಲ. ಅದನ್ನು ಅನುಷ್ಠಾನಕ್ಕೆ ತರತಕ್ಕಂಥಾದ್ದು ನಿಮ್ಮ ನಡೆವಳಿಕೆಯಲ್ಲಿ ನೀವು ಚೆನ್ನಾಗಿ ಕೆಲಸ ಮಾಡಿದರೆ ನೀವು ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿರುವಂತಹ ಎಲ್ಲಾ ಬೇಡಿಕೆಗಳನ್ನು ಈಡೇರಿಸಿದರೆ, ಜನಗಳ ಕಷ್ಟ ಸುಖಗಳಿಗೆ ಸ್ಪಂದಿಸಿದರೆ ಜನಗಳ ಮನಸ್ಸನ್ನು ಒಲಿಸಿದರೆ, ಬಹುಶಃ ತಿದ್ದುಪಡಿ ಬೇಕಿಲ್ಲ, ಇಲ್ಲದಿದ್ದರೆ ಎಲ್ಲಿ ಇರುತ್ತದೆ ಬರೀ ಕಾನೂನಿನಲ್ಲಿರುತ್ತದೆ ಮೂಲಭೂತವಾಗಿ ನಾನು ತಮ್ಮಲ್ಲಿ ಹೇಳುತ್ತಿದ್ದೇನೆ. ತಾವೇನು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದೀರಿ, ಅವುಗಳನ್ನು ಪ್ರಾಮಾಣಿಕವಾಗಿ ಜಾರಿಗೆ ತೆಗೆದುಕೊಂಡು ಬಂದಿದ್ದೀರೋ, ತೆಗೆದುಕೊಂಡು ಬರುವುದಕ್ಕೆ ಆಗುತ್ತದೆಯೇ? ಈಗ ಉದಾಹರಣೆಗೆ ಪರಿಶಿಷ್ಟ ಜಾತಿಯವರಿಗೆ ಎಷ್ಟರ ಮಟ್ಟಿಗೆ ನೀವು ರಕ್ಷಣೆ ಕೊಟ್ಟಿದ್ದೀರಿ, ತಾವು ರಿಜರ್ವೇಷನ್ ಬಗ್ಗೆ ಮಾತನಾಡುತ್ತೀರಿ. ಇವತ್ತು ಮೀಸಲಾತಿಯಿಂದ ಸಾವಿರಾರು ಜನ ಆರಿಸಿ ಬಂದಿದ್ದಾರೆ. ಅವರ ಹಿತ ಕಾಪಾಡಬೇಕು ಅವರಿಗೆ ಸಿಕ್ಕಬೇಕಾದ ಪ್ರಾತಿನಿಧ್ಯ ಸಿಕ್ಕಿಲ್ಲ. ಅವರ ಪ್ರಗತಿಗೆ ಸಾಕಷ್ಟು ಹಣ ಕೊಡಬೇಕು, ಅಧಿಕಾರ ಕೊಡಬೇಕು, ರಕ್ಷಣೆ ಕೊಡಬೇಕು, ಮಾನ್ಯ ಸದಸ್ಯರೊಬ್ಬರು ನಿಯಮ 351ರ ಅಡಿಯಲ್ಲಿ ಒಂದು ವಿಚಾರವನ್ನು ತೆಗೆದುಕೊಂಡು ಬಂದರು. ವಿಲೇಜ್ ಪಂಚಾಯತಿಯ ಒಬ್ಬ ಸದಸ್ಯರು ಶ್ರೀಮತಿ ನಾಗಮ್ಮ ಎನ್ನತಕ್ಕಂಥ ಒಬ್ಬ ಮಹಿಳೆಯನ್ನು ಹೊಡೆದರು. ನಾನು ಹೇಳುತ್ತಿದ್ದೇನೆ. ನನ್ನ ಕ್ಷೇತ್ರದಲ್ಲಿ ಬೇಗೂರು ಒಂದು ದೊಡ್ಡ ಊರು. ಇಲ್ಲಿ ವಿ.ಪಿ. ಇದೆ. ಅಲ್ಲಿ ಒಬ್ಬ ಹರಿಜನ ಪದವೀಧರ ವಿಲೇಜ್ ಪಂಚಾಯಿತಿ ಅಧ್ಯಕ್ಷ ಅವನಿಗೆ ಹೊಡೆದಿದ್ದಾರೆ. ಅಧಿಕಾರಿಗಳ ಎದುರು, ಸಾರ್ವಜನಿಕರ ಎದುರುಗಡೆ ಹೊಡೆದಿದ್ದಾರೆ. ಪೋಲೀಸ್ ನವರಿಗೆ ಆ್ಯಕ್ಷನ್ ತೆಗೆದುಕೊಳ್ಳಿ ಅಂತ ತಿಳಿಸಿ 20 ದಿವಸ ಆಯಿತು ಇದುವರೆಗೂ ಆ್ಯಕ್ಷನ್ ತೆಗೆದುಕೊಂಡಿಲ್ಲ. ಪರಿಸ್ಥಿತಿ ಈ ರೀತಿ ಆದರೆ ಜನಗಳಿಗೆ ಈ ಸಂಸ್ಥೆಯ ಮೇಲೆ ನಂಬಿಕೆ ಎಲ್ಲಿ ಬರುತ್ತದೆ, ಅವರು ಈ ಪಕ್ಷವನ್ನು ಬಿಟ್ಟು ಏಕೆ ರಕ್ಷಣೆ ಕೊಡುವ ಪಕ್ಷಕ್ಕೆ ಹೋಗುವುದಿಲ್ಲ, ಯೋಚಿಸುವುದಿಲ್ಲ. ತಾವು ಎಷ್ಟರ ಮಟ್ಟಿಗೆ ತಿ ಸಿರುವ ವಾಗ್ದಾನವನ್ನು ಚುನಾವಣಾ ಪ್ರಣಾಳಿಕೆಯಲ್ಲಿ ಕೊಟ್ಟಿರತಕ್ಕಂಥ ಆಶ್ವಾಸನೆಗಳನ್ನು ಈಡೇರಿಸುತ್ತೀರೋ ಅದರ ಮೇಲೆ ಅದು ಈ ತಿದ್ದುಪಡಿಯ ಯಶಸ್ಸು ಆಗಿರುತ್ತದೆಯೇ ಹೊರತು ಇಲ್ಲಾ ನಾವು ಹಗ್ಗ ಹಾಕಿ ಕಟ್ಟಿದ್ದೇವೆ ಅದರಿಂದ ನೀವು ಇದೇ ಪಕ್ಷದಲ್ಲಿ ಇರು ಎಂದರೆ ಪಾರ್ಲಿಮೆಂಟ್‌ನಲ್ಲಿ ಕಿತ್ತುಕೊಂಡು ಹೋಗಿರುವಾಗ ಅಸೆಂಬ್ಲಿಯಲ್ಲೇ ಕಿತ್ತುಕೊಂಡು ಹೋಗಿರುವಾಗ ಸ್ಥಳೀಯ ಸಂಸ್ಥೆಗಳಲ್ಲಿ ಕಿತ್ತುಕೊಂಡು ಹೋಗುವುದಿಲ್ಲ ಎಂದು ಯಾರೂ ಹೇಳುವುದಕ್ಕೆ ಆಗುವುದಿಲ್ಲ. ಆಂಧ್ರಪ್ರದೇಶದಲ್ಲಿ ಏನಾಯಿತು? ಎನ್.ಟಿ.ಆರ್. ಸರ್ಕಾರ ಬರುವುದಕ್ಕಿಂತ ಮುಂಚೆ ಅವರ ಪಕ್ಷದವರು ಸ್ಥಳೀಯ ಸಂಸ್ಥೆಗಳಲ್ಲಿ ಯಾರಾದರೂ ಇದ್ದರಾ? ಪಂಚಾಯತಿಯಲ್ಲಿ ಇದ್ದರಾ? ಜಿಲ್ಲಾ ಪಂಚಾಯತಿಯಲ್ಲಿ ಇದ್ದರಾ? ತಾಲ್ಲೂಕು ಪಂಚಾಯತಿಯಲ್ಲಿ ಇದ್ದರಾ? ಹೇಗೆ ಅಸೆಂಬ್ಲಿಗೆ ಚುನಾಯಿಸಿ ಬಂದರು? ಎನ್.ಟಿ. ರಾಮರಾವ್ ಅವರ ಪಕ್ಷ ಹೇಗೆ ಅಧಿಕಾರಕ್ಕೆ ಬಂತು? ಸದಸ್ಯರ ಮನಸ್ಸಿಗೆ ಬೇಜಾರಾದಾಗ, ಮನಸ್ಸಿಗೆ ತೊಂದರೆ ಆದಾಗ, ನ್ಯಾಯಬದ್ಧವಲ್ಲದ ರೀತಿಯಲ್ಲಿ ಕಾರ್ಯಕ್ರಮಗಳು ನಡೆದಾಗ ಇವೆಲ್ಲ ಆಗುತ್ತವೆ. ನಿಮ್ಮ ಸರ್ಕಾರ ಬಂದು 9 ತಿಂಗಳು ಆಯಿತು. ಜನಗಳ ಕಷ್ಟ ಸುಖಕ್ಕೆ ಏನಾದರೂ ಸ್ಪಂದಿಸಿದ್ದೀರಾ? ಮಾಡಬೇಕಾದಂತಹ ಅಭಿವೃದ್ಧಿ ಕೆಲಸಗಳನ್ನು ಸಾಧನೆ ಮಾಡಿದ್ದೀರಾ? ಇದರಿಂದ ಏನಾಗುತ್ತದೆ ಎಂದರೆ ಅವರ ಮನಸ್ಸಿಗೆ ಬೇಜಾರು ಆಗುತ್ತದೆ. ನೀವು ಹೇಳುತ್ತೀರಿ ನಾವು ಹಗ್ಗ ಹಾಕಿ ಕಟ್ಟಿಬಿಟ್ಟಿದ್ದೀವಿ ಅದರಿಂದ ನೀವು ಕಿತ್ತುಕೊಂಡು ಹೋಗುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತೀರಿ. ನಾನು ಇರುವ ವಾಸ್ತವಾಂಶ ಪ್ರಸ್ತಾಪ ಮಾಡುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :ತಾವು ಹೇಳುವುದು ಏನೆಂದರೆ ಅಲ್ಲಿ ಬಹಳಷ್ಟು ಜನ ಬೇಜಾರಾಗಿದ್ದಾರೆ. ಆದರಿಂದ ತಾವು ಪಕ್ಷಾಂತರ ನಿಷೇಧ ಕಾನೂನು ತೆಗೆದು ಹಾಕಿದ ತಕ್ಷಣ ಅವರು ಇಲ್ಲಿ ಬಂದು ಬಿಡುತ್ತಾರೆ ಅಂತ.

ಶ್ರೀ ವೈ. ರಾಮಕೃಷ್ಣ : ಕಿತ್ತುಕೊಂಡು ಹೋಗುತ್ತಾರೆ. ಅಲ್ಲಿ ಏನೋ ಒಂದು ನಿರ್ಬಂಧ ಇದೆ. ಇಟ್ಟಿದ್ದೀರಲ್ಲ ಮೂರನೇ ಒಂದು ಭಾಗ ಇಷ್ಟಪಟ್ಟರೆ ಪಕ್ಷಾಂತರ ವಾಗಬಹುದು. ಅದೇ ರೂಲ್ಸ್ ಇಲ್ಲಿಯೂ ಅಪ್ಪೈ ಆಗುತ್ತದೆ. ಆಗ ಈ ತಿದ್ದುಪಡಿಯ ಅವಶ್ಯಕತೆ ಎಲ್ಲಿ ಬಂತು. ನೀವು ಏನು ಹೇಳುತ್ತೀರಿ ಅದನ್ನು ಕಾರ್ಯಗತ ಮಾಡಿ. ಅದು ಅತ್ಯಂತ ಮುಖ್ಯವಾದುದು ಎಂದು ನಾನು ತಿಳಿದುಕೊಂಡಿದ್ದೇನೆ. ಈಗ ಒಂದು ವಿಚಾರ ನಾನು ತಮ್ಮಲ್ಲಿ ಹೇಳುತ್ತೇನೆ. ತಾವು ಅರಿತವರು, ನುರಿತವರು ಚೆನ್ನಾಗಿ ಭಾಷಣ ಮಾಡತಕ್ಕಂಥವರು ತಾವು ಸರ್ಕಾರವನ್ನು ಬಹಳ ಚೆನ್ನಾಗಿ ಡಿಫೆಂಡ್ ಮಾಡುತ್ತೀರಿ, ಕೆಲಸ ಕಾರ್ಯ ಮಾಡದಿದ್ದರೂ ಸಹ ಚೆನ್ನಾಗಿ ಡಿಫೆಂಡ್ ಮಾಡುತ್ತೀರಿ.

1.10 ಪಿ.ಎಂ.

ನಿನ್ನೆ ದಿವಸ ಮಾನ್ಯ ರೆವಿನ್ಯೂ ಸಚಿವರು ಹೇಳಿದರಲ್ಲ ಇಷ್ಟು ಕೋಟಿ ಕೊಟ್ಟಿದ್ದೇವೆ. ಅಷ್ಟು ಕೋಟಿ ಕೊಟ್ಟಿದ್ದೇವೆ ಅಂತ. ಜಿಲ್ಲಾಧಿಕಾರಿಗಳನ್ನು ನಾನು ಕೇಳಿದೆ ಖರ್ಚಾಗಲಿಲ್ಲ, ಏಕೆ ಖರ್ಚು ಮಾಡಲಿಲ್ಲವೆಂದು ಯಾರಾದರೂ ವಿವರಣೆ ಕೇಳಿದ್ದೀರಾ? ಸಸ್ಪೆಂಡ್ ಮಾಡಿದ್ದೀರಾ? ಏನು ಆಕ್ಷನ್ ತೆಗೆದುಕೊಂಡಿದ್ದೀರ ಹೇಳಿ. ನನಗೆ ಗೊತ್ತಿದೆ ಎಷ್ಟು ಉಗ್ರ ಹೋರಾಟ ಮಾಡಿದಿರಿ ಅಂತ, ಇವತ್ತೇ ಆಗಿಬಿಡಬೇಕು, ಆರ್ಡಿನೆನ್ಸ್ ತಂದ ಮೇಲೆ ಏನು ಮಾಡಿದಿರಿ? ಅವರಿಗೆ ಅಧಿಕಾರ ಕೊಟ್ಟಿದ್ದೀರ? Z.P. T.P. ಅಧ್ಯಕ್ಷರ ನಿಗಧಿ ಪಡಿಸಿದ್ದೀರಾ? ನೀವೇ ಹೇಳಿ, ಇವತ್ತು ನಮಗೆ ಅವಧಿ ಇದೆ, ರಾಷ್ಟ್ರಪತಿಗೆ ಅವಧಿ ಇದೆ, ಎಂಪಿಗಳಿಗೆ ಅವಧಿ ಇದೆ. ಎಲ್ಲರಿಗೂ ಇದೆ. ಈ ತಾಲ್ಲೂಕು ಬೋರ್ಡ್ ಅಧ್ಯಕ್ಷರಿಗೆ ಎಷ್ಟು ಅವಧಿ ಅಂತ ತಾವು ಹೇಳಿ ನೋಡೋಣ. ಉಪಾಧ್ಯಕ್ಷರಿಗೆ ಎಷ್ಟು ಅವಧಿ, ಅವರ ಕೆಲಸ ಕಾರ್ಯಗಳೇನು? ನಿಗದಿ ಮಾಡಿದ್ದೀರಾ? Does it take very much of your time to fix their term, to fix their salary, to fix their duties? you have utterly failed. ಅಂದರೆ ಏನು ತೋರಿಸುತ್ತದೆ ಎಂದರೆ, ಅವರನ್ನು ಸಸ್ಪೆಂಡ್ ಮಾಡಿದ ಹಾಗೆ ಮಾಡಿ ಇಟ್ಟಿರಬೇಕು, ನೀವು ಹೇಳಿದಂತೆ ಅವರು ಕೇಳಬೇಕು, ನೀವೇನಾದರೂ ಹೆಚ್ಚುಕಮ್ಮಿ ಮಾಡಿದರೆ ನಮ್ಮನ್ನು ಎಲ್ಲಿ ತೆಗೆದುಬಿಡುತ್ತಾರೋ ಎಂಬ ಭಯದಲ್ಲಿಟ್ಟು ನೀವು ನಿಮ್ಮ ಪಕ್ಷವನ್ನು ಬೆಳೆಸುತ್ತಿದ್ದೀರೆ ಹೊರತು ಸ್ಥಳೀಯ ಸಂಸ್ಥೆಗಳನ್ನಲ್ಲ, ಇದು ನ್ಯಾಯವಾದದ್ದಲ್ಲ. ಬಾಯಲ್ಲಿ ನೀವು ಹೇಳುವುದು ಸೆಕ್ಯುಲರಿಸಂ, ಮಾಡುವುದು ಕಾಸ್ಟಿಸಂ, ಜನರಿಗೆ ಗೊತ್ತಾಗುವುದಿಲ್ಲವೆಂದು ತಿಳಿದುಕೊಂಡಿದ್ದೀರಾ? ಟ್ರಾನ್ಸ್‌ಫಾರ್ಸ್‌ನಲ್ಲಿ ಏನು ಮಾಡಿದೀರಿ? ಜನ ನಿಮ್ಮಲ್ಲಿ ಹೇಗೆ ನಂಬಿಕೆ ಇಡುತ್ತಾರೆ? ನಿಮಗೆ ಹೇಗೆ ಬೆಲೆ ಕೊಡುತ್ತಾರೆ? ನಿಮ್ಮ ಪಕ್ಷದಲ್ಲಿ ಯಾಕಿರಬೇಕು?

(ಗೊಂದಲ)

ಶ್ರೀ ವೈ. ರಾಮಕೃಷ್ಣ : ಇವು ಸಕ್ಸಸ್ ಆಗಬೇಕಾದರೆ ಹೇಗೆ ಇರಬೇಕೆಂದು ಹೇಳುತ್ತಿದ್ದೇನೆ. It has got a direct bearing.....

Sri M.P. Prakash : You are a senior Member. After all, we have to confine ourselves to the Bill

(INTERRUPTIONS)

Sri Y. Ramakrishna : Does it not pertain to the Bill

(INTERRUPTIONS)

Sri M.P. Prakash : There are number of things which may lead to some sort of chaos.. I request the Hon'ble Member to confine himself to the Bill.

ಶ್ರೀ ವೈ. ರಾಮಕೃಷ್ಣ : ಡೆಮಾಕ್ರಸಿ ಅಂದರೆ ಪ್ರಜಾಪ್ರಭುತ್ವ, ಮೊದಲನೆಯದು "Caring" and ಎರಡನೆಯದು "Sharing"; These are the two eyes of democracy. You have to care for all sections of the people, respect them equally and share the power with all. ಇದನ್ನು ನಮ್ಮ ಉಪಮುಖ್ಯಮಂತ್ರಿಗಳು ಒಪ್ಪುತ್ತಾರೆಂದು ಕಾಣಿಸುತ್ತದೆ. ಇವೆರಡನ್ನೂ ಯಾವಾಗ ಪರಿಪಾಲಿಸುವುದಿಲ್ಲ ಆಗ ಪ್ರಜಾಪ್ರಭುತ್ವ ವಿಫಲವಾಗುತ್ತದೆ. Secondly sharing : Democracy should be shared by all sections of the society. ದಯವಿಟ್ಟು ಇದನ್ನು ಬರೆದು ಇಟ್ಟುಕೊಳ್ಳಿ. ಎಲ್ಲಿಯ ತನಕ ನೀವು ಇದನ್ನು ಕಾಪಾಡಿಕೊಂಡು ಹೋಗುವುದಿಲ್ಲ ಅಲ್ಲಿಯ ತನಕ Democracy will be in danger. ಇದನ್ನು ನೀವು ಆದರ್ಶವಾಗಿ ಇಟ್ಟುಕೊಂಡು ಕೆಲಸ ಮಾಡಿದರೆ ಏಕೆ ಸ್ವಾಮಿ ನೀವು ವಿಫಲರಾಗುತ್ತೀರಿ? ನಿಮ್ಮ ಸದಸ್ಯರನ್ನು ಏಕೆ ಹಗ್ಗ ಹಾಕಿ ಕಟ್ಟಬೇಕು? ಅವರಾಗಿಯೇ ನಿಮ್ಮ ಪಕ್ಷದಲ್ಲಿರುತ್ತಾರೆ, ಇರುವುದಿಲ್ಲವೇ? ನಾನು ಟೀಕೆ ಮಾಡುತ್ತಿಲ್ಲ, ಅಂಥ ಲೋಕಸಭೆ ಮತ್ತು ನಮ್ಮ ವಿಧಾನಸಭೆಯಲ್ಲೇ ಆಗಿರುವಾಗ ಅದೇ ಪ್ರಾವಿಶನ್ ಅಲ್ಲಿಗೂ ಅನ್ವಯಿಸುವಾಗ ಈ ಬಿಲ್ ನ ಅವಶ್ಯಕತೆ ಇನ್ನೇನಿದೆ? ಎಂದು ನಾನು ನಿಮ್ಮನ್ನು ಪ್ರಶ್ನೆ ಮಾಡುತ್ತೇನೆ. ಉದಾಹರಣೆಗೆ ಬಾಯಲ್ಲಿ ಸೋಶಿಯಲಿಸಂ ಹೇಳ್ತೀರಿ. You are champions of Socialism. ನೀವು ಮಾಡುತ್ತಿರುವುದೇನು? ಪಕ್ಕ ಕ್ಯಾಪಿಟಲಿಸಂ, ಇಲ್ಲಿ ತರುವ ತಿದ್ದುಪಡಿಗಳೇನು? Pakka Capitalismಗೆ ಸಂಪೂರ್ಣ ಬೆಂಬಲವಿರುವ ಅಂತ ತಿದ್ದುಪಡಿಗಳನ್ನು ತಂದಿದ್ದೀರಿ. Land Revenue Reformsಗೆ ಅಮೆಂಡ್ ಮೆಂಟ್ ತಂದಿದ್ದೀರಿ. ಲ್ಯಾಂಡ್ ರೆವಿನ್ಯೂ ಕೋಡ್‌ಗೆ ಇಲ್ಲಿ ರಿಫಾರ್ಮ್ಸ್ ತಂದಿದ್ದೀರಿ, ಎಂತೆಂತಹ ಇಂಡಸ್ಟ್ರೀಯಲಿಸ್ಟ್ ಇನ್‌ವೈಟ್ ಮಾಡಿದ್ದೀರಿ? ಹೌದೋ ಅಲ್ಲವೋ? ನಾನು ಹೇಳಿದ್ದು ಸರಿಯಾಗಿದ್ದರೆ ನೀವು ಒಪ್ಪಿಕೊಳ್ಳಿ. ಹಾಗೇನೇ ಸ್ವದೇಶಿ ಚಳುವಳಿ. this pertains to the Bill. ಪಕ್ಷಾಂತರ ಯಾವಾಗ ಆಗುವುದಿಲ್ಲ ಎನ್ನುವುದಕ್ಕೆ ನಾನು ಹೇಳುತ್ತಿದ್ದೇನೆ. ಉದಾಹರಣೆಗೆ ಬಾಯಲ್ಲಿ ಮಹಾತ್ಮಗಾಂಧಿ ಹೆಸರು ಹೇಳುತ್ತೀರಿ. ಅದು ತಪ್ಪಲ್ಲ. ಅವರ ತತ್ವಗಳನ್ನು ಅನುಸರಿಸುತ್ತೀರ? ಪಾನನಿರೋಧ ಜಾರಿಗೆ ತಂದಿದ್ದೀರಾ? ಅಥವಾ ಸ್ವದೇಶಿ ಉಪಯೋಗಿಸುತ್ತಿದ್ದೀರಾ, ಅದಕ್ಕೆ ಇಂಪಾರ್ಟೆನ್ಸ್ ಕೊಟ್ಟಿದ್ದೀರಾ? ಗೋ ಸಂರಕ್ಷಣೆ, ಮಾಡಿದ್ದೀರಾ? ಹೇಳಿ ಗೋವುಗಳನ್ನು ಕುಯ್ಯಲು ಕಳಿಸಿಕೊಡುತ್ತಿದ್ದೀರಿ ಬಾಯಲ್ಲಿ ಏನು ಗಾಂಧಿ ಹೆಸರು ಹೇಳುತ್ತೀರಿ, ಹರಿಜನರ ಸಂರಕ್ಷಣೆ ಮಾಡುತ್ತೇವೆ ಎಂದು ಹೇಳುತ್ತೀರಿ ಅವರ ಮೇಲೆ ಎಷ್ಟು ಅಟ್ರಾಸಿಟೀಸ್? ನಾಳೆ ಡಿಮಾಂಡ್ ಬಂದಾಗ ಮಾತನಾಡುತ್ತೇನೆ, ನಿಮ್ಮ ಮುಂದೆ ಇಡುತ್ತೇನೆ, 6 ತಿಂಗಳಲ್ಲಿ 40 ಜನರ ಕೊಲೆಯಾಗಿದೆ. ನಿಮ್ಮ ಪ್ರಣಾಳಿಕೆಯಲ್ಲಿ ಏನಿದೆ? ಉಚಿತ ಶಿಕ್ಷಣ ಕೊಡುತ್ತೇವೆ ಎನ್ನುತ್ತೀರಿ, ಕೊಡಿ ಯಾರು ಬೇಡಾಂದವರು? ನಾವು ಅಡ್ಡಿ ಬಂದಿದ್ದೀವು? ನರ್ಸರಿ ಕ್ಲಾಸ್ ಗೆ ಬೆಂಗಳೂರಿನಲ್ಲಿ 25 ಸಾವಿರ ತೆಗೆದುಕೊಳ್ಳುತ್ತಾರೆ. ನಿನ್ನೆ ದಿವಸ ಯಾರೋ ಹೇಳಿದರು 75 ಲಕ್ಷ ಮೆಡಿಕಲ್ ಸೀಟಿಗೆ ಅಂತ. ನಿಮ್ಮ ಪ್ರಣಾಳಿಕೆ ನೋಡಿ ಜನ ಬೇಸರಪಡುತ್ತಾರಲ್ಲ, ನಿಮ್ಮ ಹೇಳಿಕೆಗೂ ನಡೆವಳಿಕೆಗೆ ಅಜಗಜಾಂತರ ವ್ಯತ್ಯಾಸ ಇದೆಯಲ್ಲಾ ಬಾಯಲ್ಲಿ secularism ಹೇಳ್ತೀರಿ. ಮಾಡೋದು casteism. ಇದು ನಿಮಗೆ · ತರವಲ್ಲ.

ಬೇರೆ ಪಕ್ಷದವರು ಪೋಸ್ ಮಾಡುವುದಿಲ್ಲ. I am posing these questions to you because you are an intelligent Minister. You are capable of defending your Government. ಇದನ್ನು ನೀವು ಭದ್ರ ಮಾಡುತ್ತೀರ? Anti defection - ಹಗ್ಗ ತಂದು ಸದಸ್ಯರನ್ನು ಕತ್ತುಪಟ್ಟಿ ಹಿಡಿದು ಕೂರಿಸಿದರೆ ಅವರ ಮನಸೆಲ್ಲಿರುತ್ತದೆ? ಶರೀರ ಎಲ್ಲಿರುತ್ತದೆ? ಆಲೋಚನೆ ಮಾಡಿ. ನಿಮ್ಮ ಸರ್ಕಾರ ಇರುವಾಗಲೇ ಪಕ್ಷಾಂತರ ಅಲ್ಲಿಂದಲೇ ಪ್ರಾರಂಭವಾಗುತ್ತದೆ. ಏತಕ್ಕೋಸ್ಕರ? ಕಾರ್ಯಗತ ಮಾಡದ ಮನೋಧೋರಣೆಯಿಂದ. ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ, ಇಂತಹ ಬಿಲ್‌ಗಳಿಂದ ಶರೀರ ಕಟ್ಟಿರಬಹುದು, ಆದರೆ ಮನಸನ್ನು ಕಟ್ಟಿಡಲು ಸಾಧ್ಯವಿಲ್ಲ. ಮನಸನ್ನು ಕಟ್ಟಲು ಬೇಕಾದ ಕಾರ್ಯಕ್ರಮಗಳನ್ನು ತಾವು ನಿರೂಪಣೆ ಮಾಡಿ ಈ ಕಾಯಿದೆ ಶಾಶ್ವತವಾಗಿ ಇರುವಂತೆ ಮಾಡಿ I am not opposing it. I am for it But Take it in good spirit and do the work in an effective manner ಅಷ್ಟು ನಾನು ಹೇಳುತ್ತೇನೆ.

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) : ಮಾನ್ಯ ಉಪಾಧ್ಯಕ್ಷರೇ, ನಾನು ಹೆಚ್ಚಿಗೆ ಕಾಲ ತೆಗೆದುಕೊಳ್ಳುವುದಿಲ್ಲ. ಏಕೆಂದರೆ ಮೊದಲು ಅಧಿಕಾರ ಸೆಕ್ರೆಟರಿಗಳಿಗಿತ್ತು, ಅದಕ್ಕೆ ಸರಿಹೋಗುವುದಿಲ್ಲ, ಏಕೆಂದರೆ ಎಲ್ಲ ರಾಜಕೀಯ ಪಕ್ಷಗಳು ಕಾರ್ಯದರ್ಶಿ ಹತ್ತಿರ ಹೋಗಿ ಅರ್ಜಿ ಹಾಕುವುದಾಗಲಿ, ಪಕ್ಷಾಂತರ ನಿಷೇಧದ ಬಗ್ಗೆ ಹೇಳುವುದು ಅಪೀಲ್ ಮಾಡುವುದು ಸರಿಯಲ್ಲ ಅದಕ್ಕಾಗಿ ಇದನ್ನು ಎಲೆಕ್ಷನ್ ಕಮೀಷನ್‌ಗೆ ಇಡಬೇಕೆಂದು ಎಲ್ಲರೂ ಕೇಳಿದ್ದೇವೆ ಅದರ ಪ್ರಕಾರ ತಿದ್ದುಪಡಿ ತಂದಿದ್ದೀರಿ ನಾನು ಸ್ವಾಗತ ಮಾಡುತ್ತೇನೆ. ಇನ್ನೊಂದು ಸೂಚನೆ ಕೊಡುತ್ತೇನೆ. ತಾವು ಇನ್ನೂ ತಿದ್ದುಪಡಿ ತರಬಹುದಿತ್ತು, ಬಿಕೆ ಶಿವಕುಮಾರ್ ಎಲ್ಲಿ ಹೋದರೋ ಗೊತ್ತಿಲ್ಲ. ನಿಯಮ 351ರ ಕೆಳಗೆ ಅವರು ಒಂದು ಪ್ರಶ್ನೆ ತಮಗೆ ಕೇಳಿ, ಕನಕಪುರದಲ್ಲಿ ಒಬ್ಬ ಶೆಡ್ಯೂಲ್‌ಟ್ರೈಬ್ ಹೆಂಗಸು ಅಧ್ಯಕ್ಷರಾಗಿದ್ದಾರೆ. ಮಾನ್ಯ ಉಪಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ಆಕೆ ಅಧ್ಯಕ್ಷರಾಗಿದ್ದಾರೆಂದು ಉಳಿದಂತಹ ಸದಸ್ಯರು ಒಂದು ಸಭೆಗೂ ಅಟೆಂಡ್ ಆಗುತ್ತಿಲ್ಲ, ಒಂದು ಎರಡು ತಿಂಗಳ ಪ್ರಶ್ನೆಯಲ್ಲ, ಐದಾರು ತಿಂಗಳಿಂದ ಒಂದು ಸಭೆಗೂ ಅವರು ಹಾಜರಾಗುತ್ತಿಲ್ಲ, ಅವರ ಉದ್ದೇಶವೇನೆಂದರೆ ಅವರು ಬೇಸರ ಬಂದು ಬಿಟ್ಟು ಹೋಗಲಿ, ಇಲ್ಲಾಂದರೆ ಅವರ ಅವಧಿ ಎಲ್ಲಿಯವರೆಗೆ ಇರುತ್ತದೆ ಅಲ್ಲಿಯವರೆಗೂ ಅದೇ ರೀತಿ ನಾವು ನಡೆದುಕೊಳ್ಳಬೇಕು, ನಮಗೆ ಬೇಕಾದ ಅಧ್ಯಕ್ಷರು ಮುಂದೆ ಬಂದ ಮೇಲೆ ನಾವು ಸಭೆ ನಡೆಸಬೇಕೆಂದಿದೆ. ಇಂತಹ ಪ್ರಸಂಗದಲ್ಲಿ ತಾವೇನು ಮಾಡುತ್ತೀರಿ? ಅದಕ್ಕೂ ಇಂತಹ ತಿದ್ದುಪಡಿ ತರುತ್ತೀರೋ ಹ್ಯಾಗೇ? ಇಲ್ಲಾಂದರೆ ನೇರವಾಗಿ ಸೂಪರ್ ಸೀಡ್ ಮಾಡಿ, ಒಂದು ಎರಡು ಮೂರು ಸಲ ಅವರು ಸಭೆಗೆ ಬರದೇ ಹೋದರೆ ಅಂತಹ ಸದಸ್ಯರನ್ನು ತೆಗೆದುಹಾಕಿ ಪುನಃ ಚುನಾವಣೆ ಮಾಡಿ. ಇಲ್ಲಾಂದರೆ ಯಾವ ತಾಲ್ಲೂಕು ಪಂಚಾಯಿತಿ ಕೆಲಸ ಮಾಡಲು ಕೋರಮ್ ಇಲ್ಲದಿದ್ದರೆ ಸೂಪರ್ ಸೀಡ್ ಮಾಡಿ ಅಡ್ಮಿನಿಸ್ಟ್ರೇಟರ್ ಹಾಕುವ ವ್ಯವಸ್ಥೆ ಮಾಡಿ ಏಕೆಂದರೆ ಒಂದು ಕಡೆ ಯಾರೋ ಷೆಡ್ಯೂಲ್ ಟ್ರೈಬ್‌ನವರು ಅಧ್ಯಕ್ಷರಾಗಿದ್ದಾರೆಂದು ಸಭೆ ನಡೆಸದೆ ಮುಂದುವರಿಸಿಕೊಂಡು ಹೋಗುವುದು ಯಾವ ಪ್ರಜಾಪ್ರಭುತ್ವ? ಮತ್ತೆ ಏಕೆ ರಿಸರ್ವೇಶನ್ ಇರಬೇಕು? ಈ ಒಂದು ಕೇಸಿನಲ್ಲಿ ಷೆಡ್ಯೂಲ್‌ಟ್ರೈಬ್ ಹೆಣ್ಣು ಇರಬಹುದು, ಬೇರೊಂದು ಕಡೆ ಷೆಡ್ಯೂಲ್‌ಕ್ಯಾಸ್ಟ್ ಇರಬಹುದು, ಇನ್ನೊಂದು ಕಡೆ ಹಿಂದುಳಿದ ವರ್ಗ ಇರಬಹುದು ಅಥವಾ ನಿಮಗೆ ಬೇಕಾಗದವರೇ ಮೇಜರ್ ಕಮ್ಯುನಿಟಿಯವರೇ ಇರಬಹುದು. ಆಗ ಏನಾಗುತ್ತದೆ, ಸಭೆ ಯಾವುದೂ ನಡೆಯದೆ ಕೆಲಸಗಳು ನಡೆಯದೆ ಅಭಿವೃದ್ಧಿ ಆಗುವುದಿಲ್ಲ. ಅದಕ್ಕಾಗಿ ಇದಕ್ಕೇನಾದರೂ ಒಂದು ವ್ಯವಸ್ಥೆ ಮಾಡಬೇಕು, ಕಾನೂನಿಗೆ ತಿದ್ದುಪಡಿ ತಂದು ಮಾಡುತ್ತೀರೋ ಯಾವುದಾದರೂ ಅಲ್ಟರ್‌ನೇಟ್ ವ್ಯವಸ್ಥೆ ಮಾಡಬೇಕಲ್ಲ.

ಶ್ರೀ ಜೆ.ಎಚ್. ಪಟೇಲ್ : ಗ್ರಾಮಪಂಚಾಯಿತಿಗೆ ನೀವೇನು ಮಾಡಿದಿರಿ ಎಂದರೆ ಇಂತಹ ಗ್ರಾಮದಲ್ಲಿ ಅಧ್ಯಕ್ಷರು ಎಸ್‌ಸಿಯವರೇ ಆಗಬೇಕು, ಮಹಿಳೆಯೇ ಆಗಬೇಕೆಂದು ಹೇಳಲಿಲ್ಲ, ಆದರೆ ಚುನಾವಣೆ ಆದಮೇಲೆ ಹೇಳಿದಿರಿ, ಇದು ತಾಲೂಕು ಪಂಚಾಯಿತಿ ಸರಿಹೋಯಿತು. ಗ್ರಾಮಪಂಚಾಯಿತಿಗೆ ನಿಮಗೆ ತಿಳಿದವರಿಗೆ ಯಾವ ಯಾವ ಊರಿಗೆ ಯಾರು ಯಾರನ್ನೂ ಮಾಡಲಾಯಿತು. ಹಾಗಾದ್ದರಿಂದ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಹಳ್ಳಿಯಿಂದ ದಿಲ್ಲಿವರೆಗೆ ಹೇಳಿಕೊಂಡು ಹೊರಟಿದ್ದೀರಲ್ಲ ಸೋಶಿಯಲ್ ಜಸ್ಟಿಸ್ ಆ ಥಿಯರಿಯಲ್ಲೆ ನಾವೂ ಕೂಡ ಮಾಡಿದ್ದುದು, ಅದರಲ್ಲಿ ವ್ಯತ್ಯಾಸವಿದ್ದರೆ ನೀವು ಸರಿಪಡಿಸಬೇಕು, ತಮಗೇ ಗೊತ್ತಿದೆ ತಮ್ಮ ಕಾಲದಲ್ಲಿ ಈ ಪಂಚಾಯತಿ ರಾಜ್ ಬಂದ ಮೇಲೆ ಎಷ್ಟೊಂದು ಎಸ್‌ಸಿಎಸ್‌ಟಿ ಅಥವಾ ಹಿಂದುಳಿದವರು ಅಧ್ಯಕ್ಷರಾಗಿದ್ದಾರೆ, ಒಬ್ಬರನ್ನೂ ಮಾಡಲು ತಯಾರಿರಲಿಲ್ಲ, ಏಕೆಂದರೆ, ಸದಸ್ಯರು ತಯಾರಿರಲಿಲ್ಲ ಅವರು ಒಲ್ಲೆ ಎನ್ನುತ್ತಾರೆ. ಅಥವಾ ಅವರಿಗೆ ಬೇಕಾದ ಮನುಷ್ಯ ಇದ್ದರೆ ನಿಮ್ಮಂಥವರ ಒತ್ತಾಯ ಇದ್ದರೆ ಯಾವುದಾದರೂ ರಾಜಕೀಯ ವಿಲ್ ಇದ್ದರೆ ಅಥವಾ ರಾಜಕೀಯ ಪಕ್ಷದ ಒತ್ತಡವಿದ್ದರೆ, ಒಂದೋ ಎರಡೋ ಕೊಡುತ್ತಾರೆ. ಇಲ್ಲದಿದ್ದರೆ ಕೊಡುವುದೇ ಇಲ್ಲ. ಅದಕ್ಕೇ ಅನಿವಾರ್ಯವಾಗಿ ಇದನ್ನು ತರಬೇಕಾದ ಪರಿಸ್ಥಿತಿ ಬಂತು. ಅದಕ್ಕೆ ರಾಜೀವಗಾಂಧಿಯವರೂ ಕಾರಣ ತಿದ್ದುಪಡಿಯಲ್ಲಿ ಆರೀತಿ ಇದ್ದ ಕಾರಣ, ಇವತ್ತು ಆ ವ್ಯವಸ್ಥೆ ನಾವು ಮಾಡಿದ್ದೇವೆ, ನೀವು ಕೂಡ ಅದನ್ನು ಮುಂದುವರೆಸಿಕೊಂಡು ಹೋದಿರಿ, ಆದರೆ ಇಲ್ಲೇನಾಗಿದೆಯೆಂದರೆ, ಚುನಾವಣೆಯಾದ ಮೇಲೆ ಮಾಡಿದರೂ ಕೂಡ ಒಂದು ಪಂಚಾಯಿತಿಯನ್ನು ಷೆಡ್ಯೂಲ್ಡ್‌ಟ್ರೈಬ್ಸ್‌ಗೆಂದು ನಾವು ಡಿಕ್ಲೇರ್ ಮಾಡಿದ ಮೇಲೆ ಅದರ ಪ್ರಕಾರ ನಡೆದುಕೊಳ್ಳಬೇಕಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೆ, ಇದರಲ್ಲಿ ವಿಷಯಗಳು ಸರಿಯಾಗಿ ಸ್ಪಷ್ಟನೆಯಾಗಲಿ ಎಂದು ಹೇಳುತ್ತಿದ್ದೇನೆ, ಇಲ್ಲಿ ತಾವು ಹೇಳಿದಂತೆ ಪರಿಶಿಷ್ಟ ಪಂಗಡದವರಿಗೆ ಮೀಸಲಾತಿಯಾಗಿದೆ ಎಂಬ ಕಾರಣಕ್ಕಾಗಿ ಆದದ್ದಲ್ಲ ಚುನಾವಣೆಯಾಗಿ ಅಧ್ಯಕ್ಷರು ಉಪಾಧ್ಯಕ್ಷರು ಆಯ್ಕೆಯಾದರು. ಅನಂತರ ಕೆಲವು ಕಾರಣಕ್ಕಾಗಿ ಅಧ್ಯಕ್ಷರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿದರು. ಅದು ಸ್ವೀಕಾರವಾಗಿ ಅಧ್ಯಕ್ಷರ ಚುನಾವಣೆ ಮತ್ತೆ ಪ್ರಕಟಣೆ ಮಾಡಿದರು, ಆಗ ಕೋರಂ ಇಲ್ಲದ್ದರಿಂದ ಅದು ಮುಂದೆಹೋಯಿತು. ಕಾನೂನಿನ 55ನೇ ಸೆಕ್ಷನ್ ಕೆಳಗೆ ಅಧ್ಯಕ್ಷ ಉಪಾಧ್ಯಕ್ಷರ ಚುನಾವಣೆಗೂ ಕೋರಂ ಅಗತ್ಯವೆಂಬ ಮಾತಿದೆ. ಅಲ್ಲಿ ಸ್ಥಗಿತವಾಗಿದೆ ಎಂಬುದಿಲ್ಲ ಉಪಾಧ್ಯಕ್ಷ ಕಾರ್ಯವನ್ನು ನಿರ್ವಹಿಸಿಕೊಂಡು ಹೋಗುತ್ತಿದ್ದಾರೆ ತಾವು ಹೇಳಿದಂತೆ ಅಂತರ್ಗತವಾದಂಥ ಆಶಯಗಳಿರಬಹುದು ಆದರೆ ಅಲ್ಲಿ ಪ್ರಾಥಮಿಕವಾಗಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಗಳಾಗಿವೆ. ಇದೇ ಹೆಣ್ಣು ಮಗಳನ್ನು ಅಧ್ಯಕ್ಷರನ್ನಾಗಿ ಅಲ್ಲಿ ಆರಿಸಿದ್ದಾರೆ, ಆದರೆ ಮುಂದೆ ಕೆಲವು ಕಾರಣಗಳಿಗಾಗಿ ಅವಿಶ್ವಾಸ ನಿರ್ಣಯ ಮಂಡಿಸಿದ ನಂತರ ಅದು ಸ್ವೀಕಾರವಾಗಿ ನಂತರ ಹೊಸದಾಗಿ ಚುನಾವಣಾ ವೇಳಾ ಪಟ್ಟಿ ಪ್ರಕಟ ಮಾಡಿ ಅಧ್ಯಕ್ಷರ ಚುನಾವಣೆಗೆ ಸಂದರ್ಭದಲ್ಲಿ ಒಬ್ಬರದೇ ನಾಮಪತ್ರ ಸ್ವೀಕಾರವಾಗಿದೆ. ಆದರೆ ಅಧ್ಯಕ್ಷರ ಆಯ್ಕೆ ಸಂದರ್ಭದಲ್ಲಿ ಕೋರಂ ಇಲ್ಲ, 13 ಸದಸ್ಯರಲ್ಲಿ ಕೇವಲ 3 ಜನ ಹಾಜರಾಗಿದ್ದರಿಂದ ಇದಕ್ಕೆ ತಮ್ಮ ಸರ್ಕಾರದವರೇ ಸ್ಪಷ್ಟನೆ ಕೊಟ್ಟಿದ್ದಾರೆ. ಅದರಲ್ಲಿ 21-10-94ನೇ ದಿನಾಂಕದ ಸುತ್ತೋಲೆಯಲ್ಲಿ ಕರ್ನಾಟಕ ಪಂಚಾಯಿತಿ ರಾಜ್ಯ ಅಧಿನಿಯಮ 93ರ 53(1) ರ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಕೋರಂ ಅನ್ನು ಒಟ್ಟು ಸದಸ್ಯರ ಒಂದು ಮೂರನೇ ಭಾಗದ ಗ್ರಾಮಪಂಚಾಯಿತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಯ ಉದ್ದೇಶಕ್ಕಾಗಿ ಕರೆಯುವ ಸಭೆಯಲ್ಲೂ ಕೂಡ ಅನುಸರಿಸಬೇಕಾಗುತ್ತದೆ ಎಂದು ಜಿಲ್ಲಾಧಿಕಾರಿಗಳಿಗೆ ಸ್ಪಷ್ಟೀಕರಣ ನೀಡಲಾಗಿದೆ. 21-10-94ರ

ಸುತ್ತೋಲೆ ಮೂಲಕ ಸ್ಪಷ್ಟೀಕರಣ ಕೊಟ್ಟಿರುವುದರಿಂದ ಈಗ ಉಪಾಧ್ಯಕ್ಷರ ವಿಚಾರದಲ್ಲಿ ಗೊಂದಲವಾಗಿದೆ.

ಇದಕ್ಕೆ ಸಂಬಂಧವಿರದಿದ್ದರೂ ಹೇಳುತ್ತೇನೆ, ಮಾನ್ಯ ನಾಯಕರು ಹೇಳಿರುವುದು ಬಹಳ ಸಮಂಜಸವಾಗಿದೆ. ಅನೇಕ ಸಂದರ್ಭಗಳಲ್ಲಿ ನಾವು ಕಾರ್ಯ ನಿರ್ವಾಹಕ ಅಧಿಕಾರಿಗಳನ್ನು ಹಾಕಿಸಿರುವುದು, ಸರ್ಕಾರದಲ್ಲೂ ಈ ಬಗ್ಗೆ ಚರ್ಚೆಯಾಗುತ್ತಿದೆ. ಅಧ್ಯಕ್ಷ-ಉಪಾಧ್ಯಕ್ಷರ ಚುನಾವಣೆ ಮಟ್ಟಿಗಾದರೂ ಕೂಡ ಕನಿಷ್ಠ ಕೋರಂ ಒಪ್ಪಬೇಕಾದ ಅಗತ್ಯವಿಲ್ಲ, ಏಕೆಂದರೆ, ಜಾತಿ ಜನಾಂಗ ಹಿಂದುಳಿದ ವರ್ಗಕ್ಕೆ ಮಿಸಲಾತಿ ಕೊಟ್ಟ ಸಂದರ್ಭದಲ್ಲಿ, ಒಂದೇ ಒಂದು ನಾಮನಿರ್ದೇಶನ ಬಂದ ಸಂದರ್ಭವಿದ್ದರೆ ಆಗ ಕೋರಂ ಅನ್ನು ಒತ್ತಾಯಿಸಬಾರದೆಂಬ ಬಗ್ಗೆ ಪರ್ಯಾಲೋಚನೆ ಮಾಡುತ್ತಿದ್ದೇವೆ. ಅದಕ್ಕಾಗಿಯೇ ಪರಿಣತರ ಸಮಿತಿಗೆ ಈ ವಿಷಯವನ್ನು ಒಪ್ಪಿಸಿದ್ದೇವೆ, ಈ ಪರಿಣತರ ಸಮಿತಿಯ ವರದಿ ಬಂದ ತಕ್ಷಣವೇ ತಾವೆತ್ತಿರುವ ವಿಚಾರ ಬಹಳ ತರ್ಕಬದ್ಧವಿರುವುದರಿಂದ ಅದನ್ನು ನಾವು ಪರಿಗಣಿಸುತ್ತೇವೆ.

ಶ್ರೀ ಬಿ.ಕೆ. ಶಿವಕುಮಾರ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಈ ಎಸ್‌ಟಿ ಜನಾಂಗದ ಮಹಿಳೆಯರಿಗೆ ಅವಕಾಶ ಮಾಡಿಕೊಡಲು ತಮಗೆ ಆಸೆ ಇದೆ ಎಂದು ಹೇಳುತ್ತಿದ್ದಾರೆ. ಆದರೆ ಸಂವಿಧಾನದಲ್ಲಿ ನಾವು ಮಿಸಲಾತಿ ಅವರಿಗೆ ಕೊಟ್ಟಮೇಲೆ ಅವರು ಅಧ್ಯಕ್ಷಿಣಿ ಆಗಬೇಕೆಂದು ಸರ್ಕಾರ ತೀರ್ಮಾನ ಮಾಡಿದ ಮೇಲೆ ಅವರಿಗೆ ರಕ್ಷಣೆ ಕೊಡಬೇಕಾದ ಜವಾಬ್ದಾರಿ ಯಾರದು? ಮೇಲ್ವರ್ಗದ ಜನರೆಲ್ಲ ಒಟ್ಟುಗೂಡಿ ಇಡೀ ರಾಜ್ಯದಲ್ಲಿ ಹೀಗೆ ಎಲ್ಲಾ ಕಡೆ ಮಾಡಿಬಿಡುತ್ತಾರೆ. ಒಬ್ಬ ಮಹಿಳೆಗೆ ಮೀಸಲಾತಿ ಆಗಿದೆ, ಬೇರೆ ಗಂಡಸರೆಲ್ಲ ಸೇರಿಕೊಂಡು ಆಕೆ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿ ಆಕೆಯನ್ನು ಇಳಿಸಿಯಾದ ಮೇಲೆ ಮತ್ತೆ ಅವರು ಹೋಗುವುದೇ ಇಲ್ಲ, ಅವರ ರಕ್ಷಣೆ ಮಾಡುವವರು ಯಾರು? ಏಕೆ ಈ ಮಿಸಲಾತಿ ತಂದದ್ದು ಎಂದು ತಾವು ದಯವಿಟ್ಟು ಹೇಳಬೇಕು. ಮೀಸಲಾತಿ ತಂದ ಮೇಲೆ ಅವರನ್ನು ಕಾಪಾಡುವುದು ಸರ್ಕಾರದ ಧರ್ಮ, ಅದು ಬಿಟ್ಟು, ನಾವು ಪರಿಣತರ ಸಮಿತಿ ಮಾಡುತ್ತೇವೆಂದು ಹೇಳುತ್ತೀರಿ. ಅದರ ವರದಿ ಬರುವ ಹೊತ್ತಿಗೆ ಇನ್ನೇನ್ನೂ ಆಗಿರುತ್ತದೆ. ಆಕೆಗೇನಾಗಿದೆ ಅಂದರೆ, ಒಬ್ಬ ಕೂಲಿಯವಳಿಗೆ ಈ ಅಧ್ಯಕ್ಷ ಸ್ಥಾನ ಸಿಕ್ಕು ಆಕೆ ಮತ್ತೆ ಕೂಲಿಗೆ ಹೋಗುವಂತಿಲ್ಲ ಈ ಅಧ್ಯಕ್ಷ ಸ್ಥಾನಕ್ಕೆ ಬರುವಂತಿಲ್ಲ ಈ ಪರಿಸ್ಥಿತಿಯಾಗಿದೆ, ಆದ್ದರಿಂದ ಸರ್ಕಾರ ಆರ್ಡಿನೆನ್ಸ್ ಅಥವಾ ಒಂದು ಆದೇಶ ಹೊರಡಿಸಿ ಆಕೆಗೆ ಅವಕಾಶ ಮಾಡಿಕೊಟ್ಟರೆ ಒಳ್ಳೆಯದಾಗುತ್ತದೆ.

ಇಲ್ಲದಿದ್ದರೆ ನೀವೇನು ಮೀಸಲಾತಿ ತಂದಿದ್ದೀರಿ ಅದಕ್ಕೆ ವಿರುದ್ಧವಾಗಿ ನಡೆಯುತ್ತಿದ್ದೀರಿ, ರಾಜಕೀಯ ಒತ್ತಡಕ್ಕೆ ಮಾಡುತ್ತಿದ್ದೀರಿ, ಪಕ್ಷದ ಶಾಸಕರ ಕೈವಾಡಕ್ಕೆ ತಾವು ಮಣಿಯುತ್ತಿದ್ದೀರಿ ತಾವು ಸಂವಿಧಾನಕ್ಕೆ ಗೌರವ ಕೊಟ್ಟು ಮಹಿಳೆಯರಿಗೆ ಮೀಸಲಾತಿ ಕೊಡುತ್ತೇವೆಂದು ಏನು ಹೇಳುತ್ತಿದ್ದೀರಿ, ಅದಕ್ಕೆ ಗೌರವ ಕೊಡುವುದಾದರೆ ತಾವು ಆರ್ಡಿನೆನ್ಸ್ ಹೊರಡಿಸಿ, ಇಲ್ಲದಿದ್ದರೆ ಸರಿಯಾದ ಒಂದು ಸುತ್ತೋಲೆ ಹೊರಡಿಸಿ ಆ ಗಿರಿಜನ ಮಹಿಳೆಗೆ ರಕ್ಷಣೆ ಕೊಡುವ ಜವಾಬ್ದಾರಿ ಸರ್ಕಾರದ್ದೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಇದನ್ನು ಅರ್ಧ ಗಂಟೆ ಚರ್ಚೆಯಾಗಿ ಪರಿವರ್ತನೆ ಮಾಡಬೇಕು, ಬಹಳ ಸದಸ್ಯರು ಇದರ ಬಗ್ಗೆ ಸಚಿವರು ಆಸಕ್ತಿಯಿಂದ ಇದ್ದಾರೆ. ಇದು ಒಂದು ಮಹಿಳೆಯ ಸ್ಥಾನದ ವಿಚಾರ ದಯವಿಟ್ಟು ಇದಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿಮಾಡುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಸನ್ಮಾನ್ಯ ಉಪಾಧ್ಯಕ್ಷರೇ, ಆ ಹೆಣ್ಣು ಮಗಳು ನನ್ನ ಹತ್ತಿರ ಕೂಡ ಬಂದಿದ್ದಳು, ಇದು ಒಂದೇ ಹೆಣ್ಣು ಮಗಳ ವಿಷಯವಲ್ಲ,

ಇಡೀ ಕರ್ನಾಟಕದಲ್ಲಿ ಎಸ್‌ಟಿಗೆ ಎಲ್ಲೆಲ್ಲಿ ರಿಸರ್ವ್ ಮಾಡಿದ್ದಾರೆ, ಎಲ್ಲಾ ಹೆಣ್ಣು ಮಕ್ಕಳ ಪರಿಸ್ಥಿತಿ ಇದೇ ಆಗಿದೆ. ಕನಕಪುರ ವಿಷಯ ಏನಾಗಿದೆ ಅಂದರೆ ಆ ಹೆಂಗಸು ಅಧಿಕಾರಕ್ಕೆ ಬಂದ ತಕ್ಷಣ ಅಲ್ಲಿರುವ ಮಹನೀಯರೆಲ್ಲ ಸೇರಿ ಹೆಣ್ಣು ಮಗಳು ಹೇಗೆ ಅಧಿಕಾರ ನೆಡುಸುತ್ತೀಯೋ ನೋಡುತ್ತೇವೆ, ಅವಿಶ್ವಾಸ ನಿರ್ಣಯ ತರುತ್ತೇವೆ, ಎಂದು ಆಕೆ ವಿರುದ್ಧ ನಿರ್ಣಯ ತಂದರು ಮತ್ತೆ ಚುನಾವಣೆಯಲ್ಲಿ ಮೀಸಲಾತಿ ಎಸ್‌ಟಿಗೆ ಇದೆ.

ಆಕೆ ಒಬ್ಬಳೇ ಹಾಕಬೇಕು, ಹಾಕುತ್ತೇನೆ ಅಂದಾಗ ನೋಡೋಣ ನೀನು ಹೇಗೆ ಚುನಾವಣೆಯಲ್ಲಿ ಗೆದ್ದುಬರ್ತೀಯ, ನೀನು ಹೇಗೆ ಅಧಿಕಾರ ನಡೆಸ್ತಿಯಾ ಅಂತ ಆ ಹೆಣ್ಣು ಮಗಳಿಗೆ ಕಣ್ಣೀರು ಇಳಿಸಿದ್ದಾರೆ, ಅಲ್ಲಿರುವ ಮಹನೀಯರುಗಳು. ನಾನು ಇವತ್ತು ಕೇಳುತ್ತಿದ್ದೇನೆ ಖಂಡಿತವಾಗಿ ಇದರ ಬಗ್ಗೆ ಸಮಂಜಸವಾಗಿ ತಿದ್ದುಪಡಿ ತಂದು, ಈ ರೀತಿ ಯಾವ್ಯಾವ ಕ್ಷೇತ್ರದಲ್ಲಿ ಕರ್ನಾಟಕದಲ್ಲಿ ಮಹಿಳೆಯರಿಗೆ ಚುನಾವಣೆಗೆ ಮೀಸಲಾತಿ ಕೊಡುವಾಗ ಮಹನೀಯರು ಸಹಕಾರ ಕೊಡುವುದಿಲ್ಲ ಎಂದು ಹೇಳುತ್ತಾರೆ. ದಯವಿಟ್ಟು ಅವರನ್ನು ಅನರ್ಹಗೊಳಿಸುವ ಕಾನೂನು ತೆಗೆದುಕೊಂಡು ಬನ್ನಿ. ಇದು ತರಬೇಕು, ಅದಲ್ಲ, ನೀವು ತರುವುದೇನು, ಅವರು ಬೇರೆ ಪಕ್ಷಕ್ಕೆ ಹೋಗುತ್ತಾರೆಂದು ಪಕ್ಷಾಂತರ ನಿಷೇಧವಲ್ಲ. ಮಹಿಳೆಯರ ಮೀಸಲಾತಿ ಬಂದಾಗ ಯಾರು ಅವರಿಗೆ ಸಹಾಯಕವಾಗಿರುವುದಿಲ್ಲ, ಅವರು ಅಧಿಕಾರ ನಡೆಸುವುದಕ್ಕೆ ತಯಾರಾಗಿಲ್ಲ ಎನ್ನುತ್ತಾರೆ ಅಂತಹ ಮಹನೀಯರನ್ನು ಡಿಸ್‌ಕ್ವಾಲಿಫೈ ಮಾಡುತ್ತೇವೆಂದು ಅಮೆಂಡ್‌ಮೆಂಟ್ ತನ್ನಿ, ಮಾಡೋಣ. ಇಲ್ಲದಿದ್ದರೆ ಎಲ್ಲ ಕಡೆ ಇದೇ ಪರಿಸ್ಥಿತಿ ಆಗಿದೆ. ನನಗೆ ಗೊತ್ತಿದೆ. ಕನಕಪುರದಲ್ಲಿ ಉಪಾಧ್ಯಕ್ಷರು ಇದ್ದಾರೆ ಕೆಲಸ ಮಾಡಿಕೊಂಡು ಹೋಗುತ್ತಿದ್ದಾರೆಂದು, ಇದೇ ಅವರು ಮಾಡುವ ವಿಷಯ. ಉಪಾಧ್ಯಕ್ಷರು ಹೇಗಿದ್ದರೂ ಗಂಡಸರಿದ್ದಾರೆ, ಈ ಮಹಿಳೆ ಬೇಡ, ಇವರಿಗೆ ಕೋರಂ ಕೊಡುವುದು ಬೇಡ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಬ್ಬರು ಗಂಡಸರ ಜಗಳದಲ್ಲಿ ಈ ಹೆಣ್ಣುಮಗಳು ಹೀಗಾಯಿತು, ಒಂದೆ ಕಡೆ ಸಿಂಧ್ಯಾ ಒಂದು ಕಡೆ ಶಿವಕುಮಾರ್, ಇದನ್ನು ಏನಾದರೂ ಮಾಡಿ ಬಗೆಹರಿಸಿ.

ಶ್ರೀ ಜೆ.ಎಚ್. ಪಟೇಲ್ : ಜನ ಮಹಿಳೆಯರನ್ನು ನಾವು ಜಿಲ್ಲಾಪಂಚಾಯಿತಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನಾಗಿ ಮಾಡಿದ್ದೇವೆ, ನೀವು ನಮಗೆ ಬುದ್ಧಿ ಹೇಳುತ್ತೀರಿ.

ಶ್ರೀ ಹೆಚ್.ಡಿ. ಬಸವರಾಜು : ಅಧ್ಯಕ್ಷರೇ 7 ಜನ ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ, ಅದರಲ್ಲಿ ವೀರರಾಜಪೇಟೆ ಬಗ್ಗೆ ನಾನು ಹೇಳುತ್ತೇನೆ ಇವತ್ತಿನವರೆಗೂ ಕಾರ್ಯನಿರ್ವಾಹಕ ಅಧಿಕಾರಿಯನ್ನು ನೇಮಕ ಮಾಡಿಲ್ಲ ಒಂದೇ ಒಂದು ಕ್ರಿಯಾಯೋಜನೆ ಅವರು ತಯಾರಿಸಿಲ್ಲ, ಅಲ್ಲಿ ಅವರು ಅಧಿಕಾರ ಮಾಡಬಾರದು ಎಂದು ಹೇಳುತ್ತೀರಿ. ಅಧಿಕಾರ ಮಾಡುವಂಥಾದ್ದದು ಕೊಟ್ಟಾಗ, ಕಾರ್ಯನಿರ್ವಹಣಾ ಅಧಿಕಾರಿಗಳಿಗೂ ಇವರಿಗೂ ಆಗುತ್ತಿಲ್ಲ, ಇದು ಅಸಂಬದ್ಧವಾಗಿದೆ. ಅವರಿಗೆ ಎನ್‌ಕರೇಜ್ ಮಾಡುತ್ತಿದ್ದೇವೆಂದು ಏಕೆ ಹೇಳುತ್ತಿದ್ದೀರಿ. ಎನ್‌ಕರೇಜ್ ಮಾಡುತ್ತಿಲ್ಲ.

ಶ್ರೀಮತಿ ಪ್ರಮಿಳಾ ನೇಸರ್ಗಿ : ಮಾನ್ಯ ಉಪ ಮುಖ್ಯ ಮಂತ್ರಿಗಳು 7 ಜನರನ್ನು ನಾವು ಮಾಡಿದ್ದೇವೆಂದು ಹೇಳಿದರು. ತಾವು ಮಾಡಿಲ್ಲ. ರಾಜ್ಯಾಂಗದತ್ತವಾದ ಹಕ್ಕು ಅದು. 74ನೇ ಅಮೆಂಡ್‌ಮೆಂಟ್ ಆಗಿದೆ. 74ನೇ ಅಮೆಂಡ್‌ಮೆಂಟ್ ಆಗದಿದ್ದರೆ ತಾವೇನೂ ಮಾಡುತ್ತಿರಲಿಲ್ಲ. ನಾವು ಎಲ್ಲಾ ಪಕ್ಷಗಳೂ ಸೇರಿಕೊಂಡು ಅಮೆಂಡ್‌ಮೆಂಟ್ ತಂದಿದ್ದರಿಂದ ನೀವು ಇಲ್ಲಿ ಕಾನೂನು ತಂದಿದ್ದೀರಿ. ನಾವು ಹೋರಾಟ ಮಾಡಿ

ಅದನ್ನು ತಂದಿದ್ದೇವೆ. ತಾವು ಹೊಗಳಿಕೆಗೆ 7ಜನರನ್ನು ತಂದಿದ್ದೇವೆಂದು ಹೇಳುತ್ತಿದ್ದೀರಿ. ಮಂಡಲ ಕಮಿಷನ್ ಜಡ್ಜ್‌ಮೆಂಟಿನಲ್ಲಿ ಸುಪ್ರೀಂ ಕೋರ್ಟಿನಲ್ಲಿ ತೀರ್ಮಾನವಾದಾಗ ಹಾರಿಜೆಂಟಲ್ ಡಿವಿಜನ್ ಆಗಬೇಕು 50 ಪರ್ಸೆಂಟ್ ಮೀಸಲಾತಿ ಮಹಿಳೆಯರಿಗೆ ಆಗಬೇಕೆಂದು ಹೇಳಿದ್ದಾರೆ. 50 ಪರ್ಸೆಂಟ್ ಮೀಸಲಾತಿಯನ್ನು ತೆಗೆದುಕೊಂಡು ಬನ್ನಿ. ನೀವು ಎಷ್ಟು ಜನ ಜಿಲ್ಲಾ ಪರಿಷತ್ತಿನಲ್ಲಿ ಇದ್ದೀರಿ ಅದರಲ್ಲಿ 50 ಪರ್ಸೆಂಟ್ ಮಹಿಳೆರಿಗೆ ಕೊಡಿ. ಸುಪ್ರೀಂ ಕೋರ್ಟಿನವರು ಹೇಳಿದ ಹಾಗೆ ಹಾರಿಜಾಂಟಲ್ ಡಿವಿಜನ್ ತೆಗೆದುಕೊಂಡು ಬನ್ನಿ. ಅದನ್ನು ಬಿಟ್ಟು ನಾವು 7 ಜನರನ್ನು ತಂದಿದ್ದೇವೆ ಎಂದು ಹೇಳುವುದು ಅಲ್ಲ, ಹೊಗಳಿಕೆ ತಮಗೆ ಅಲ್ಲ ಅದು ನಮಗೂ ಸೇರತಕ್ಕಂಥಾದ್ದು ನಾವು ಮಹಿಳೆಯರು ಹೋರಾಟ ಮಾಡದಿದ್ದರೆ ತಾವು ಏನೂ ಮಾಡುತ್ತಿರಲಿಲ್ಲ ಎಂಬ ವಿಷಯವನ್ನು ತಾವು ತಿಳಿದುಕೊಳ್ಳಬೇಕು. ಅದು ನೀವು ಮಾಡಿದ್ದು ಅಲ್ಲ. ಮಹಿಳೆಯರು ಸಂಘಟನೆ ಮಾಡಿ, ಹೋರಾಟ ಮಾಡಿ, ಅಮೆಂಡ್‌ಮೆಂಟ್ ತೆಗೆದುಕೊಂಡು ಬಂದು ಈ ರಾಜ್ಯದಲ್ಲಿ ತರಲಿಲ್ಲವಲ್ಲ ಎಂದು, ರಾಜ್ಯಾಂಗದಲ್ಲಿ ಅಮೆಂಡ್‌ಮೆಂಟ್ ತಂದಿದ್ದಾರೆ.

ಶ್ರೀ ಡಿ.ಟಿ. ಜಯಕುಮಾರ್ : ಮಂಡಲ ಆಯೋಗದ ಮೇಲೆ ಮಾತನಾಡತಕ್ಕಂತಹ ಯಾವ ನೈತಿಕ ಹಕ್ಕೂ ನಿಮಗೆ ಇಲ್ಲ, ಮಂಡಲ ಆಯೋಗದ ವರದಿಯನ್ನು ಸುಟ್ಟು ಹಾಕಿದವರು ನೀವು..

ಶ್ರೀಮತಿ ಪ್ರಮಿಳಾ ನೇಸರ್ಗಿ : ಅಧಿಕಾರ ಕೊಟ್ಟು ಹೆಸರಿಗೆ ಅಧ್ಯಕ್ಷರೆಂದು ಹೇಳಿ ಆ ಕಡೆ ಕಿತ್ತು ಹಾಕಿದ್ದೀರಿ. ಒಳ್ಳೆಯದೇನು ಮಾಡಿದ್ದೀರಿ.

ಉಪಾಧ್ಯಕ್ಷರು : ನಾವು ಸದನದಲ್ಲಿ ಅಮೆಂಡ್‌ಮೆಂಟ್ ಬಗ್ಗೆ ಚರ್ಚೆ ಮಾಡಬೇಕಾಗಿದೆ. ನಾವು ಎಲ್ಲೋ ಹೋಗಿ ಮುಟ್ಟುತ್ತಿದ್ದೇವೆ. ಆದ್ದರಿಂದ ಈ ಅಮೆಂಡ್‌ಮೆಂಟಿಗೆ ಸೀಮಿತವಾಗಿ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು : ಕನಕಪುರ ಬಿಟ್ಟು ಬೇರೆ ಕಡೆ ಹೋಗಿಲ್ಲ ನಾವು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ವಿಧೇಯಕಗಳ ಬಗ್ಗೆ ಚರ್ಚೆ ಮಾಡುವಾಗ ತೀರ ದೂರ ಹೋಗದಿದ್ದರೂ ಕೂಡ ಸುತ್ತಮುತ್ತ ಹೇಳಬೇಕಾಗುತ್ತದೆ. ಇಲ್ಲದಿದ್ದರೆ ಅರ್ಥ ಬರುವುದಿಲ್ಲ. ಈ ಪಕ್ಷಾಂತರ ನಿಷೇಧದ ಬಗ್ಗೆ ಇಲ್ಲಿ ವಿಧೇಯಕವನ್ನು ಮಂಡಿಸಿದ್ದೀರಿ, ರಾಜ್ಯ ಚುನಾವಣಾ ಆಯೋಗದಲ್ಲಿ ಭಾಗವಹಿಸತಕ್ಕಂಥಾ ವಾದ ಇಲ್ಲಿ ಇದೆ. ಗ್ರಾಮ ಪಂಚಾಯತಿ ತಾಲ್ಲೂಕು, ಪಂಚಾಯತಿ, ಜಿಲ್ಲಾ ಪಂಚಾಯತಿಗಳ ವ್ಯವಸ್ಥೆ ಇನ್ನೂ ಸರಿಯಾಗಿಲ್ಲವೆಂದು ನಾನು ಹೇಳಿದರೆ ತಾವು ಒಪ್ಪುತ್ತೀರೆಂದು ಕಾಣುತ್ತದೆ. ಹಿಂದೆ ನಾನು ತಮ್ಮ ಗಮನ ಸೆಳೆದಿದ್ದೆ. ಈ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ಒಂದು ಸಮಿತಿ ಮಾಡಿದ್ದೀರಿ. ಚುನಾವಣೆಯಾಗಿ ತಾಲ್ಲೂಕು ಪಂಚಾಯತಿ ಅಧ್ಯಕ್ಷರು, ಗ್ರಾಮ ಪಂಚಾಯತಿ ಅಧ್ಯಕ್ಷರು, ಜಿಲ್ಲಾಪಂಚಾಯತಿ ಅಧ್ಯಕ್ಷರುಗಳ ವ್ಯವಸ್ಥೆಯಾಗಿ, ಅವರು ಅಧಿಕಾರಕ್ಕೆ ಬಂದ ಮೇಲೂ ಯಾವ ರೀತಿ ಕಾರ್ಯಕ್ರಮ ನಡೆಯಬೇಕು ವ್ಯವಸ್ಥೆ ಹೇಗಿರಬೇಕೆಂಬ ಬಗ್ಗೆ ಸಮಿತಿ ಮಾಡಿದ್ದೀರಿ. ನಾಯಕ್ ಸಮಿತಿಯಾಗಿದೆ. ಆ ಸಮಿತಿಯ ವರದಿ ಬರುವುದು ಯಾವಾಗ? ಅದಕ್ಕೊಂದು ನಿರ್ದಿಷ್ಟ ಸಮಯ ಬೇಕು.

ಈ ಸಂಸ್ಥೆಗಳಿಗೆ ಅಧಿಕಾರ ಬಂದು ಒಂದು ವರ್ಷ ಹತ್ತಿರವಾಗುತ್ತಿದೆ. ಇನ್ನೂ ಅವರು ವರದಿ ಕೊಟ್ಟಿಲ್ಲ, ಆ ವರದಿ ಕೊಟ್ಟಮೇಲೆ ಅದು ಇಲ್ಲಿ ಚರ್ಚೆಯಾಗಬೇಕೇ ಬಿಡಬೇಕೇ ಎಂಬ ಪ್ರಶ್ನೆ ಇದೆ. ಚರ್ಚೆಯಾಗಬೇಕೆಂಬುದು ನನ್ನ ಭಾವನೆ. ಚರ್ಚೆಯಾಗಿ ಅದು ಸಂಪೂರ್ಣವಾಗಿ ಕಾರ್ಯಗತಕ್ಕೆ ಬರುವುದಕ್ಕೆ ಹೆಚ್ಚು ಕಡಿಮೆ ಒಂದು ವರ್ಷವೇ ಆಗಬಹುದು, ಇಲ್ಲವೇ ಇನ್ನೂ ಮುಂದೆ ಹೋದರೂ ಹೋಗಬಹುದು. ಆ ವರದಿಯ

ಗತಿ ಏನಾಯಿತು ಅದು ಎಲ್ಲಿ ತಲುಪಿದೆ ಎಂಬುದು ಅತ್ಯಂತ ಪ್ರಾಮುಖ್ಯವಾದ ಪ್ರಶ್ನೆ. ಅಧ್ಯಕ್ಷರುಗಳಿಗೆ ಅವಧಿ ತೀರ್ಮಾನ ಇನ್ನೂ ಆಗಿಲ್ಲ. ಇದು ನನ್ನ ನೇರವಾದ ಪ್ರಶ್ನೆ. ಇನ್ನು 3-4 ತಿಂಗಳು ಕಳೆದರೆ ಚುನಾವಣೆಯಾಗಬೇಕು. ಒಂದು ವರ್ಷವೆಂದು ಇಟ್ಟರಿ, ಒಂದೂವರೆ ವರ್ಷವೆಂದು ಇಟ್ಟರಿ, 5 ವರ್ಷವೆಂದು ಇಟ್ಟರಿ, ಇನ್ನೂ ತೀರ್ಮಾನವಾಗಬೇಕಲ್ಲ. ಈ ಕ್ಷಣದವರೆಗೂ ತಾಲ್ಲೂಕು ಪಂಚಾಯತಿ ಅಧ್ಯಕ್ಷರ ಅವಧಿ ಎಷ್ಟು, ಜಿಲ್ಲಾ ಪಂಚಾಯತಿ ಅಧ್ಯಕ್ಷರ ಅವಧಿ ಎಷ್ಟು ಎಂದು ತೀರ್ಮಾನವಾಗಿಲ್ಲ. ಅದು ತೀರ್ಮಾನವಾದರೆ, ಅದಕ್ಕೆ ಒಂದು ಅಂಕಿತವಾಗುತ್ತದೆ. ಅದಿಲ್ಲದಿದ್ದರೆ ಈ ವ್ಯವಸ್ಥೆಗೆ ಬಹಳ ಧಕ್ಕೆ ಬರುತ್ತದೆ. ಯಾವ ಉದ್ದೇಶದಿಂದ ಇದನ್ನು ತೀರ್ಮಾನ ಮಾಡಿಲ್ಲ. ಪಕ್ಷಾಂತರ ಮಸೂದೆ ರಾಜ್ಯ ಚುನಾವಣಾ ಆಯೋಗಕ್ಕೆ ವಹಿಸತಕ್ಕಂಥಾದ್ದು ಇದನ್ನೆಲ್ಲಾ ತರುತ್ತಿದ್ದೀರಿ, ಇದರಲ್ಲಿ ಭಾರಿ ಆಘಾತವಾಗುತ್ತದೆಂದು ಹೇಳುವುದಿಲ್ಲ. ಆದರೆ ಮೂಲಭೂತವಾಗಿ ಈ ಸಂಸ್ಥೆಗಳ ಅಧ್ಯಕ್ಷರು ಎಷ್ಟು ವರ್ಷವಿರಬೇಕೆಂಬ ಬಗ್ಗೆ ಯಾವಾಗ ತೀರ್ಮಾನ ತೆಗೆದುಕೊಳ್ಳುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಇಷ್ಟಕ್ಕೇ ಸೀಮಿತಗೊಳಿಸಿ 2 ವಿಚಾರಗಳನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಇದಕ್ಕೆ ಪೂರಕವಲ್ಲದಿದ್ದರೂ ಕೂಡ ಸ್ಪಷ್ಟೀಕರಣದ ಅಗತ್ಯವಿರುವುದರಿಂದ ವಿವರವನ್ನು ನೀಡುತ್ತಿದ್ದೇನೆ. ಈಗಿರತಕ್ಕದ್ದು ಕರ್ನಾಟಕ ಪಂಚಾಯತಿ ರಾಜ್ ಆ್ಯಕ್ಟ್ 1993. ಇದರ ಕೆಳಗೆ ದಿ ಟರ್ಮ್ ಆಫ್ ಆಫೀಸ್ ಎನ್ನುವುದನ್ನು ಡಿಫೆಂಡ್ ಮಾಡಿದ್ದಾರೆ. "The term of office of the Adhyaksha or the Upadhyaksha, as the case may be, is the term of office of that of the members." ಅನ್ನತಕ್ಕಂತಹ ಮಾತು ಇದೆ. ಅಂದರೆ ಸದಸ್ಯರ ಅವಧಿಗನುಗುಣವಾಗಿ ಅಧ್ಯಕ್ಷ, ಉಪಾಧ್ಯಕ್ಷರ ಅವಧಿ ಕೂಡ ಇದೆ ಎಂದು ಇದೆ. ಅದು ಸ್ಪಷ್ಟ. ಆದರೆ ಸರಕಾರದಲ್ಲಿ ಕೂಡ ಅದರ ಅವಧಿಯನ್ನು 12 ತಿಂಗಳು ಮಾಡಬೇಕೇ ಅಥವಾ 20 ತಿಂಗಳು ಮಾಡಬೇಕೇ ಎಂಬ ಯೋಚನೆ ಇದೆ. ಹಿಂದಿನ ಸರಕಾರ ನಗರಪಾಲಿಕೆ ಬಿಲ್ಲಿನಲ್ಲಿ ಅಲ್ಲಿನ ಅಧ್ಯಕ್ಷರ ಅವಧಿಯನ್ನು 30 ತಿಂಗಳಿಗೆ ಇಳಿಸಿದೆ. ಇದು ನಮ್ಮ ಸರಕಾರದ ಗಮನದಲ್ಲಿದೆ. ಇಷ್ಟರಲ್ಲೇ ಒಂದು ಕಾನೂನು ತರುವುದರ ಮೂಲಕ ಆದರ ಅವಧಿಯನ್ನು ನಿಗದಿ ಪಡಿಸುತ್ತೇವೆ. ಅಲ್ಲಿಯವರೆಗೆ ಅಧ್ಯಕ್ಷ ಉಪಾಧ್ಯಕ್ಷರ ಅವಧಿ ಈಗ ಆ ಸದಸ್ಯರ ಅವಧಿ ಅಂದರೆ 5 ವರ್ಷದವರೆಗೆ ಎಂದು ಭಾವಿಸಿಕೊಳ್ಳಬಹುದು. ಈಗಿರತಕ್ಕಂತಹ ಕಾನೂನಿನ ಕೆಳಗೆ as it is. ಅದು unless it is otherwise. ಆದ್ದರಿಂದ ನಾವು ಅಂತಹ ತಿದ್ದುಪಡಿಯನ್ನು ಇಲ್ಲಿಯವರೆಗೆ ತಂದಿಲ್ಲ, ಸರಕಾರ ಇದರ ಬಗ್ಗೆ ಗಂಭೀರವಾಗಿ ಪರಿಶೀಲಿಸುತ್ತಿದೆಯ. ಮಾನ್ಯ ನಾಗರಾಜ್‌ರವರು ಅದನ್ನು ಒಪ್ಪಿಕೊಳ್ಳುತ್ತಾರೆಂದು ಭಾವಿಸುತ್ತೇನೆ. ಹಿರಿಯ ಸದಸ್ಯರಾದ ಮಾನ್ಯ ರಾಮಕೃಷ್ಣರವರು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ, ಅದನ್ನು ಒಪ್ಪಿಕೊಳ್ಳುತ್ತೇನೆ. ಪ್ರಜಾಪ್ರಭುತ್ವ ಅದು ಒಂದು ಆರೋಗ್ಯಕರವಾಗಿ ಬೆಳೆದಿದ್ದರೆ, ಅದರಲ್ಲಿ ಪ್ರಬುದ್ಧತೆ ಇರುವಂತಹ ಸಮಾಜವಿದ್ದರೆ, ಪ್ರಾಯಶಃ ಅವರು ಭಾವಿಸಿದಂತಹ ರೀತಿಯಲ್ಲಿ ಪ್ರಜಾಪ್ರಭುತ್ವವೂ ಕೂಡ ಬಹಳ ಮುಖ್ಯವಾಗಿ ಇರುವಂತಹ ಸಂಪೂರ್ಣವಾದ ಒಂದು Utopian concept ಅಲ್ಲ ಅದು. ಏಕೆಂದರೆ ಅರಿಸ್ಟಾಟಲ್, ಸಾಕ್ರೆಟೀಸ್ ಅಂತಹವರೂ ಕೂಡಜ ಪ್ರಜಾಪ್ರಭುತ್ವ is nothing but a oligarchy ಎಂದು ಕರೆದಿದ್ದಾರೆ.

ಇದರ ಜೊತೆ ಜೊತೆಗೆ ನಾವು ಕೂಡ ಇದಕ್ಕೆ ಜವಾಬ್ದಾರಿಯಾಗಿರತಕ್ಕಂತಹ ಜನ ಇದ್ದೇವೆ. The tyranny of a prince in oligarchy is pardonable than the apathy of intellectuals in a Democracy" ಎನ್ನತಕ್ಕಂತಹ ಮಾತು ಇದೆ. ನಾವೆಲ್ಲರೂ ಬುದ್ಧಿವಂತರಾದಂತಹವರು ಅಥವಾ ಭದ್ರತೆ ಜೀವನದಲ್ಲಿ ಇರತಕ್ಕಂತಹವರು, ಪ್ರಜಾಪ್ರಭುತ್ವದ ಮೌಲ್ಯಗಳು ಮತ್ತು ಹೋರಾಟಗಳ ಕುರಿತಾಗಿರತಕ್ಕಂಥಾದ್ದರಲ್ಲಿ ನಾವು ನಿರ್ಲಿಪ್ತತೆ

ನಿರ್ಲಕ್ಷ್ಯತೆ ತಾಳಿದರೆ ಒಂದು ಅಲಿಗಾರ್ಕಿಯಲ್ಲಿ ನಿರಂಕುಶ ಪ್ರಭುತ್ವದಲ್ಲಿ ಮಾಡತಕ್ಕಂತಹ ಕ್ರೌರ್ಯ ದಬ್ಬಾಳಿಕೆಗಿಂತಲೂ ಕೂಡ ಅಪಾಯಕಾರಿ ಅನ್ನತಕ್ಕಂತಹ ಮಾತಿದೆ. ನಮ್ಮದು ಒಂದು ಎಳೆಯದಾಗಿರತಕ್ಕಂತಹ ಪ್ರಜಾಪ್ರಭುತ್ವ. ಮತ್ತು ನಮ್ಮದೇ ಆಗಿರತಕ್ಕಂತಹ ಸ್ವಂತ ವಿವೇಕ ಇರುವುದರಿಂದ ಇಲ್ಲಿಯವರೆಗೆ ನಾವು ಉಳಿದುಕೊಂಡಿದ್ದೇವೆ. ಈ ಕಾರಣದಿಂದ ಪ್ರಜಾಪ್ರಭುತ್ವದ ರೀತಿಯಲ್ಲಿ ಪಕ್ಷಾಂತರ ನಿಷೇಧ ಎನ್ನುವುದು ಇಂಗ್ಲೇಂಡಿನಲ್ಲಿ ಇಲ್ಲವೇ ಇಲ್ಲ, ಅಲ್ಲ ಪ್ರಭುದ್ಧವಾಗಿ ಯೋಚನೆ ಮಾಡುತ್ತಾರೆ, ಪ್ರಬುದ್ಧವಾಗಿ ಪ್ರತಿಕ್ರಿಯಿಸುತ್ತಾರೆ. ಆದರೆ ಇಲ್ಲಿ ಹೇಳಿದಂತೆ ಯಾವುದನ್ನೂ ಎಲ್ಲಾ ಕಾಲಕ್ಕೆ ಬೇಕಾಗಿರತಕ್ಕಂತಹ ಸಿದ್ಧೌಷಧಿಗಳು ಇರಲಿಕ್ಕೆ ಸಾಧ್ಯವಿಲ್ಲ. ಪಕ್ಷಾಂತರ ನಿಷೇಧ ಮಾಡದೇ ಹೋಗಿದ್ದರೆ ಅನೇಕ ಸಂದರ್ಭದಲ್ಲಿ ಕುದುರೆ ವ್ಯಾಪಾರವಾಗುತ್ತದೆಂದು ಎಲ್ಲರಿಗೂ ಗೊತ್ತಿದೆ. ಆತ್ಮ ಸಾಕ್ಷಿಯನ್ನು ಯಾವ ರೀತಿಯಾಗಿ ಬಳಸಿಕೊಂಡಿದ್ದಾರೆ ಯಾರ್‍ಯಾರು ಯಾರ್‍ಯಾರ ಪರವಾಗಿ ಬಳಸಿಕೊಂಡಿದ್ದಾರೆಂಬುದು ಈ ದೇಶದ ರಾಜಕೀಯ ಚರಿತ್ರೆಯಲ್ಲಿ ಬರೆದಿರತಕ್ಕಂಥಾದ್ದು ಇದೆ. ಮಧುಲಿಮಯೆ ಅವರು ಮೊರಾರ್ಜಿ ದೇಸಾಯಿಯವರು ಪ್ರಧಾನ ಮಂತ್ರಿಗಳಾಗಿದ್ದಾಗ ಈ ವಿಚಾರವನ್ನು ಪ್ರಸ್ತಾಪ ಮಾಡಿದಾಗ ಆಂತರಿಕ ಪ್ರಜಾಪ್ರಭುತ್ವ ಇಲ್ಲದಂತಹ ಪಕ್ಷ ಮತ್ತು ವ್ಯಕ್ತಿ ಸ್ವಾತಂತ್ರ್ಯವನ್ನು, ಅಭಿಪ್ರಾಯವನ್ನು ಅಭಿವ್ಯಕ್ತಿಗೊಳಿಸುವಲ್ಲಿ ತಾವೇನಾದರೂ ಪ್ರಯತ್ನ ಮಾಡುವುದಾಗಿದ್ದರೆ ಅದೂ ಕೂಡ ಮಾರಕವಾಗುತ್ತದೆ ಎನ್ನತಕ್ಕಂತಹ ವಿಚಾರವನ್ನು ಮಧುಲಿಮಯೆ ಅವರು ಪಾರ್ಲಿಮೆಂಟಿನಲ್ಲಿ ಮಾತನಾಡಿದ್ದರ ಬಗ್ಗೆ ದೊಡ್ಡದಾದ ತತ್ವದ ವಿಚಾರವನ್ನೇ ಪ್ರಸ್ತಾಪ ಮಾಡಿದ್ದಾರೆ. ಆ ಕಾರಣಕ್ಕಾಗಿ ಪಾಸ್ ಆಗಲಿಲ್ಲ. ಡ್ಯುಯಲ್ ಮೆಂಬರ್ ಷಿಪ್ ವಿಚಾರದಲ್ಲಿ ಚರ್ಚೆಯಾಗಿದ್ದರೂ ಕೂಡ ಅಲ್ಲಿ ಅದು ಒಂದು It is something like a treaty. ಅದ್ಭುತವಾದಂತಹ ವಿಚಾರ.

ಪಕ್ಷಾಂತರ ನಿಷೇಧದಿಂದ ಯಾವ್ಯಾವ ಕಾಲದಲ್ಲಿ ಎಲ್ಲೆಲ್ಲಿ ಲೋಪದೋಷಗಳು ಇದೆ, ಸ್ವಾರ್ಥಕ್ಕಾಗಿ ಹೇಗೆ ಅದನ್ನು ಬಳಸಿಕೊಂಡಿದ್ದಾರೆಂಬುದನ್ನು ನೋಡಬಹುದು. ಪ್ರತಿಯೊಂದು ಕಾನೂನನ್ನು ಪ್ರತಿಯೊಂದು ಆಜ್ಞೆಯನ್ನು ಕೂಡ ಬುದ್ಧಿವಂತನಾದವನು, ಬಲಶಾಲಿಯಾದಂತಹವನು ಅದನ್ನು ತಿರುಚುವಂತಹ ವಿಕೃತಗೊಳಿಸುವಂತಹ ಪ್ರಯತ್ನ ನಿರಂತರವಾಗಿ ನಡೆಯುತ್ತಿರುತ್ತದೆ. ಅದು ನಿರಂತರವಾಗಿ ನಡೆಯುತ್ತದೆನ್ನುವ ಒಂದೇ ಕಾರಣಕ್ಕಾಗಿ ನಾವು ಅದಕ್ಕೆ ಬೇಕಾಗಿರತಕ್ಕಂತಹ ನಿಯಂತ್ರಣಗಳನ್ನು ಅಂತರ್ಗತಗೊಳಿಸಬಾರದೆಂದೇನೂ ಅಲ್ಲ. ಅದನ್ನು ತಾವು ಈಗಾಗಲೇ ಎಲ್ಲರೂ ಸ್ವಾಗತ ಮಾಡಿದ್ದೀರಿ. ತಾವೆಲ್ಲರೂ ಸಲಹೆ ಮಾಡಿದಂತೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಅನೇಕ ಹಿರಿಯ ಸದಸ್ಯರು ಹೇಳಿದಂತೆ ಆಡಳಿತ ಪಕ್ಷ ಆಯಾಯ ಕಾರ್ಯದರ್ಶಿಯ ಮೇಲೆ ಪ್ರಭಾವ ಬೀರಬಹುದೆಂಬ ಎನ್ನುವ ಕಾರಣವಿದ್ದುದರಿಂದ ನಮ್ಮಲ್ಲಿ ಚುನಾವಣಾ ಆಯುಕ್ತರ ವ್ಯವಸ್ಥೆ ಇರುವುದರಿಂದ, ಅವರಿಗೆ ಅಧಿಕಾರ ಕೊಡಬೇಕೆನ್ನುವುದು ಮಾಮೂಲಿಯಾಗಿರತಕ್ಕಂತಹ ಮತ್ತು ಸದನ ಒಪ್ಪುವಂಥಾದ್ದಾಗಿರುವುದರಿಂದ ಇದರ ಬಗ್ಗೆ ಚರ್ಚೆ ಮಾಡದೆ ಇದನ್ನು ಸ್ವೀಕಾರ ಮಾಡಬೇಕೆಂದು ಮಾನ್ಯ ಸದಸ್ಯರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಅರಗಂ ಜ್ಞಾನೇಂದ್ರ : ಮೀಸಲಾತಿ ಪಾಲಿಸಿ ಪ್ರಕಾರ ಒಬ್ಬ ಹೆಣ್ಣುಮಗಳು ಅಧ್ಯಕ್ಷರಾಗಬೇಕಾದರೆ, ಇಬ್ಬರು ಜನ ಉಳಿದಂತಹವರು ಬೇಕಾಗುತ್ತದೆ. ಒಬ್ಬರು ಅನುಮೋದಕರು ಒಬ್ಬರು ಸೂಚಕರು. ಇಲ್ಲದಿದ್ದರೆ ಅರ್ಜಿ ತಿರಸ್ಕೃತರಾಗುತ್ತದೆ. ಅನೇಕರೂ ಇನ್ನು ಕೂಡ ಚೇರ್ಮನ್ ಆಗಲಿಕ್ಕೆ ಸಾಧ್ಯವಿಲ್ಲದೆ ಒದ್ದಾಡುತ್ತಿದ್ದಾರೆ.

1.40 ಪಿ.ಎಂ.

ತಾವು ಅಮೆಂಡ್‌ಮೆಂಟ್ ತರುವಾಗ ಈ ರೀತಿ ಸೂಚಕರು ಅನುಮೋದಕರಿಬ್ಬರು ಇಲ್ಲದೆ ಹಾಗೆಯೇ ಇರತಕ್ಕಂಥ ಖಾಲಿ ಸ್ಥಾನಗಳಿಗೆ ಏನು ಮಾಡುತ್ತೀರಿ ಎನ್ನುವುದು

ಒಂದು. ಇನ್ನೊಂದನ್ನು ಛೇರ್ಮನ್‌ರನ್ನು ರೋಟೇಷನ್ ಸಿಸ್ಟಂನಲ್ಲಿ ತಾಲ್ಲೂಕುಪಂಚಾಯಿತಿಗೆ ನಾಮಕರಣಮಾಡಿದಿರಿ. ಐದನೇ ಒಂದು ಭಾಗ ಛೇರ್ಮನ್‌ರುಗಳ ತಾಲ್ಲೂಕು ಪಂಚಾಯಿತಿಯ ಸದಸ್ಯರಾಗುತ್ತಾರೆ. ಈಗಾಗಲೇ ಒಂದೂವರೆ ವರ್ಷದ ಅವಧಿ ಅವರದು ಕಳೆದುಹೋಗಿರುವುದರಿಂದ ಐದನೇ ಒಂದು ಭಾಗ ಛೇರ್ಮನ್‌ರುಗಳು ಬಂದಿದೆ ಬಹುಶಃ ಇನ್ನೊಂದು ಬ್ಯಾಚಿಗೆ ಅವಕಾಶ ತಪ್ಪಿಹೋಗುತ್ತದೆ. ಈ ರೀತಿಯಲ್ಲಿದ್ದಾಗ ಆ ಛೇರ್ಮನ್‌ರುಗಳು ಅವಕಾಶದಿಂದ ವಂಚಿತರಾಗುತ್ತಾರೆ. ಐದನೇ ಒಂದು ಭಾಗ ಎಂದು ಹೇಳಿದಿರಿ. ಇನ್ನು ಉಳಿದಿರುವುದು ಮೂರೂವರೆ ವರ್ಷವೋ ಅಥವಾ ನಾಲ್ಕು ವರ್ಷವೋ ಇದೆ. ಇನ್ನು ನಾಲ್ಕು ಬ್ಯಾಚಿಗೆ ಮಾತ್ರ ಅವಕಾಶ ಸಿಗುತ್ತದೆಯೇ ವಿನಹ ಇನ್ನೊಂದು ಬ್ಯಾಚಿಗೆ ಸಿಗುವುದಿಲ್ಲ.ಈ ಒಂದು ಸಂದರ್ಭದಲ್ಲಿ ತಮ್ಮ ಅನಿಸಿಕೆಯೇನು, ಸರ್ಕಾರದ ನಿಲುವೇನು ಎಂದು ದಯಮಾಡಿ ಈ ಸಂದರ್ಭದಲ್ಲಿ ಹೇಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಎತ್ತಿರುವಂಥ ಪ್ರಶ್ನೆ ಇದಕ್ಕೆ ನೇರವಾಗಿ ಸಂಬಂಧವಿಲ್ಲದೇ ಇರುವಂಥದ್ದು. ಆದರೂ ಕೂಡ ತಾವು ಅವಕಾಶವನ್ನು ಕೊಟ್ಟಿದ್ದೀರಿ. ಅವರು ಎತ್ತಿರುವಂಥ ವಿಷಯ ಸ್ವಲ್ಪ ಗಂಭೀರವಾಗಿದೆ. ಮಾನ್ಯ ಉಪಾಧ್ಯಕ್ಷರೇ,ಎಲ್ಲಾ ಕಾನೂನನ್ನು ತಯಾರು ಮಾಡುವಾಗ ಮುಂದೆ ಯಾವ ಪರಿಣಾಮಗಳಾಗಬಹುದು, all eventualities ಎಂತಲೂ ಕೂಡ ಬಳಸುತ್ತಾರೆ. ಆದ್ದರಿಂದ General Clauses Act ಕೂಡ ಇರುತ್ತದೆ. ಹೇಗೆ ಇಂಟರ್‌ಪ್ರೆಟ್ ಮಾಡಬೇಕು ಎಂದು. removal of hurdle clause ಎಂತಲೂ ಕೂಡ ಇರುತ್ತದೆ. ಈ ಸಂದರ್ಭಗಳಲ್ಲಿ ನಾವು ಕೆಲವು ಸಲ ಯೋಚನೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅದನ್ನು ಯೋಚನೆ ಮಾಡದೆ ನಮ್ಮ ಅನುಭವಗಳ ಮೂಲಕ ಕಾರ್ಯಕ್ಷಮತೆಗಳ ಮೂಲಕ, ಬಂದಿರುರ ತಪ್ಪನ್ನು ಅಂಕಿಗಳನ್ನು ನಾವು ನಿರಂತವಾಗಿ ಸರಿಪಡಿಸಿಕೊಳ್ಳುತ್ತಲೇ ಹೋಗಬೇಕಾಗುತ್ತದೆ. ಆದ್ದರಿಂದಲೇ ನ್ಯಾಯಾಲಯಗಳು ಅನೇಕ ಸಂದರ್ಭದಲ್ಲಿ ನಮ್ಮ ಕಾನೂನನ್ನು ಅರ್ಥ ವ್ಯಾಪ್ತಿಗಳನ್ನು ಮಾಡಿಸುತ್ತಾರೆ. ಅದನ್ನು ವಿಷದೀಕರಿಸುತ್ತಾರೆ. ಈ ಹಿನ್ನಲೆಯಲ್ಲಿ ಕೂಡ ನಾವು ಬದಲಾವಣೆಗಳನ್ನು ಮಾಡಬೇಕಾಗುತ್ತದೆ. ಈಗ ಒಬ್ಬ ಸೂಚಕ ಅನುಮೋದಕ ಇಲ್ಲದಂಥ ರೀತಿಯಲ್ಲಿ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಯಾವುದೇ ಸಂದರ್ಭದಲ್ಲಿ ಇಂಟರ್‌ಪ್ರೆಟೇಷನ್ ಏನಾಗುತ್ತದೆ ಎಂದರೆ ಜನರಲ್ ಕ್ಲಾಸ್ ಪ್ರಕಾರ ಹೋಗುತ್ತದೆ. ಆದರೆ, ನಮ್ಮ ಪಂಚಾಯಿತಿ ಆ್ಯಕ್ಟ್‌ನಲ್ಲೇ ಒಂದಕ್ಕೊಂದು ಸೆಕ್ಷನ್ಸ್ ಕಾಂಟ್ರಡಿಕ್ಟರಿ ಇದ್ದಾಗ, ಸೆಕ್ಷನ್ ಅಮೆಂಡ್‌ಮೆಂಟ್‌ನ್ನಾದರೂ ಮಾಡಬೇಕು, ಇಲ್ಲದಿದ್ದರೆ ಡಿಲೀಟ್ ಆದರೂ ಮಾಡಬೇಕು ಒಂದು. ಈ ರೀತಿ ಇದ್ದಾಗ, ಹೇಗೆ ಮಾಡುತ್ತೀರಿ ಎಂದು ಅವರು ಕೇಳಿರುವುದು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಎತ್ತಿದಂತೆ certain legilsative anomalies will still be there one of the provisions prevalent is removal of hurdle clause will be there. After all, Government will reserve all powers in the best interest of management. Theree will be judicial interpretation also. ಆದರೆ ಆ ವಿಚಾರಗಳಲ್ಲಿ ನಾನು ವ್ಯಾಖ್ಯಾನವನ್ನು ಮಾಡದೆ ಅವರು ಹೇಳಿದಂತೆ ಸೂಚಕ ಮತ್ತು ಅನುಮೋದಕ ಇಲ್ಲದಂಥ ಗೊತ್ತುವಳಿಗಳನ್ನು ಸ್ವೀಕಾರ ಮಾಡಬಾರದು ಎಂದು ಕೂಡ ಇದೆ. ಅದಕ್ಕಾಗಿ ನಾವು ಪರಿಣಿತರ ಸಮಿತಿ ಎಂದು ಮಾಡಿರುವುದು. ಆ ಪರಿಣಿತರ ಸಮಿತಿಯ ವರದಿ ಬಂದನಂತರ ಇದನ್ನು ಯೋಚನೆ ಮಾಡುತ್ತೇವೆ. ಎರಡನೆಯದು ತಾಲ್ಲೂಕು ಪಂಚಾಯಿತಿಯಲ್ಲಿ ಗ್ರಾಮ ಪಂಚಾಯಿತಿ ಸದಸ್ಯರ ಒಂದನೇ ಐದು ಭಾಗದಷ್ಟು ಜನ ಅವರು ಆಯ್ಕೆಯಾಗಿ ಬರಬೇಕು ಎಂದು ಏನು ಇದೆ. ಅವರ ಅವರ ನಡುವೆ ಇರತಕ್ಕಂಥದ್ದರಲ್ಲಿ

ಒಂದು ಸಕ್ರಮವಾದ ಹೊಂದಾಣಿಕೆ ಇರಬೇಕು. ತಾಲ್ಲೂಕು ಪಂಚಾಯಿತಿಗಳ ನಿರ್ಣಯಗಳು ಕೂಡ ಗ್ರಾಮಪಂಚಾಯಿತಿಯ ಸದಸ್ಯರಿಗೆ ಗೊತ್ತಾಗಬೇಕು ಎನ್ನುವಂಥ ಕಾರಣದಲ್ಲಿ ಮಾಡಿರುವ ವಿಷಯ. ಅವರಿಗೆ ಅದರಲ್ಲಿ ಅವಧಿ ಸಿಗಲಿಕ್ಕಿಲ್ಲ ಎನ್ನುವ ಮಾತು ಏನಿದೆ, ಪ್ರಾರಂಭದಲ್ಲಿ ಈಗ ನಾವು ಬೈಕ್ಯಾಮೆರಲ್ ಇರುವ ಒಂದು ಛೇಂಬರ್ ಇರುತ್ತದೆ, ವಿಧಾನಪರಿಷತ್ ಪ್ರಾರಂಭದ ವರ್ಷದಲ್ಲಿ ಒಂದನೇ ಮೂರು ಭಾಗದ ಜನರು ಹೋಗಬೇಕು ಎಂದಾಗ ಎರಡು ವರ್ಷದಲ್ಲಿ ಅವರು ನಿವೃತ್ತರಾಗುತ್ತಾರೆ. ಪ್ರಥಮಬಾರಿಗೆ ಯಾವ ರೀತಿ ವಿಧಾನ ಪರಿಷತ್‌ಗೆ ಬಂದಾಗ ಪ್ರಥಮ ಹಂತದ ಎರಡನೇ ವರ್ಷದಲ್ಲಿ ಕೆಲವರು ಹೋಗುತ್ತಾರೆ. ನಾಲ್ಕನೇ ವರ್ಷದಲ್ಲಿ ಕೆಲವರು ಹೋಗುತ್ತಾರೆ. ಆರು ವರ್ಷ ಇರತಕ್ಕಂಥವರೂ ಇದ್ದಾರೆ. ಆ ನಂತರ ಆರು ವರ್ಷ ಸಂಪೂರ್ಣವಾಗಿ ಇರುತ್ತದೆ. ಇದು ಅನಿವಾರ್ಯವಾಗಿರುವ ಕೆಲವು ವ್ಯವಸ್ಥೆಗಳು. ಈಗ 40-50 ಪಂಚಾಯಿತಿಗಳು ಇದ್ದಂಥ ಸಂದರ್ಭದಲ್ಲಿ ಒಂದನೇ ಐದು ಭಾಗದಂತೆ ತೆಗೆದುಕೊಂಡಾಗ ಎಲ್ಲರಿಗೂ ಕೂಡ ಅದು ಸಿಗಲಾರದು ಎನ್ನುವ ಮಾತು ಹೇಳುತ್ತೀರಿ. ಎಲ್ಲರಿಗೂ ಸಿಗಬೇಕು ಎನ್ನುವುದಕ್ಕಿಂತಲೂ ಹೆಚ್ಚಾಗಿ ಗ್ರಾಮಪಂಚಾಯಿತಿಯ ಪ್ರಾತಿನಿಧಿಕ ಸ್ವರೂಪ ತಾಲ್ಲೂಕು ಪಂಚಾಯಿತಿಯಲ್ಲಿ ಇರಬೇಕು ಎನ್ನುವುದು ಅದರ ಉದ್ದೇಶವೇ ವಿನಹ ಪ್ರತಿಯೊಬ್ಬ ಅಧ್ಯಕ್ಷರೂ ಅಲ್ಲಿ ಭಾಗವಹಿಸಬೇಕು ಎಂದು ಏನೂ ಇಲ್ಲ. ಇದರ ಜೊತೆ ಜೊತೆಗೆ ಜಿಲ್ಲಾ ಪಂಚಾಯಿತಿ ಸದಸ್ಯರು ಈಗ ಇರುವಂಥ ಕಾನೂನು ಕೆಳಗೆ ತಾಲ್ಲೂಕು ಪಂಚಾಯಿತಿ ಸದಸ್ಯರಲ್ಲ. ಆದರೆ ಶಾಸಕರು ತಾಲ್ಲೂಕುಪಂಚಾಯಿತಿಯಲ್ಲಿದ್ದಾರೆ. ಹಾಗೆಯೇ ಜಿಲ್ಲಾ ಪಂಚಾಯಿತಿಯಲ್ಲೂ ಕೂಡ ಇದ್ದಾರೆ. ಆದ್ದರಿಂದ ಇವನ್ನು ಕೂಡ ಸರಿಪಡಿಸುವಂಥ ಪ್ರಯತ್ನ ಮಾಡುತ್ತಿದ್ದೇವೆ. ಪರಿಣಿತರ ಸಮಿತಿಯ ವರದಿಯು ಬಂದನಂತರ ನಾವು ಈ ಸದನದಲ್ಲಿ ಈ ವಿಚಾರಗಳ ಮೇಲೆ ಪ್ರಸ್ತಾಪ ಮಾಡುತ್ತೇವೆ. ದಯವಿಟ್ಟು ಇದನ್ನು ಅಂಗೀಕರಿಸಬೇಕು ಎಂದು ತಮ್ಮ ಮೂಲಕ ಅರಿಕೆ ಮಾಡಿಕೊಳ್ಳುತ್ತೇನೆ.

1995ರ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳು (ಪಕ್ಷಾಂತರ ನಿಷೇಧ)

(ಎರಡನೇ ತಿದ್ದುಪಡಿ) ವಿಧೇಯಕ,

ಪರ್ಯಾಲೋಚನಾ ಪ್ರಸ್ತಾವ

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ : " 1995ನೇ ಸಾಲಿನ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು ಖಂಡ 2 ರಿಂದ 3 ರವರೆಗೆ

ಉಪಾಧ್ಯಕ್ಷರು : " ಖಂಡ 2 ರಿಂದ 3 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ",

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 3 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ :

ಉಪಾಧ್ಯಕ್ಷರು : ಪ್ರಸ್ತಾವ 'ಏನೆಂದರೆ: " ಮೊದಲನೇ ಖಂಡ, ಧೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೇ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಉಪಾಧ್ಯಕ್ಷರೇ, 1995ರ ಕರ್ನಾಟಕ ಸ್ಥಳೀಯ ಪ್ರಾಧಿಕಾರಿಗಳು (ಪಕ್ಷಾಂತರ ನಿಷೇಧ) (ಎರಡನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಪ್ರಕಟಣೆ

ಉಪಾಧ್ಯಕ್ಷರು : ರಾಜ್ಯ ಗ್ರಂಥಾಲಯ ಪ್ರಾಧಿಕಾರದ ಸದಸ್ಯ ಸ್ಥಾನಕ್ಕೆ ಭರ್ತಿ ಮಾಡಬೇಕಾದ ಸ್ಥಾನಗಳ ಸಂಖ್ಯೆಗೆ ಸಮಾನವಾಗಿ ನಾಮಪತ್ರಗಳು ಬಂದಿರುವುದರಿಂದ ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ಈ ಕೆಳಕಂಡ ಸದಸ್ಯರುಗಳು ಚುನಾಯಿತರಾಗಿರುತ್ತಾರೆ ಎಂದು ಘೋಷಿಸುತ್ತೇನೆ.

ಶ್ರೀಯುತರುಗಳಾದ 1) ಎನ್. ಕೃಷ್ಣಪ್ಪ

2) ಡಿ.ಎಸ್. ಮಾದಪ್ಪ

3) ಬಿ. ಶಿವರಾಂ

4) ಬಸಪ್ಪ

ಉಪಾಧ್ಯಕ್ಷರು : ಈಗ ಸಭೆಯನ್ನು ಒಂದು ಗಂಟೆಗಳ ಕಾಲ ಮುಂದಕ್ಕೆ ಹಾಕುತ್ತೇನೆ.

ಸಭೆಯು 1-47ಕ್ಕೆ ಮುಕ್ತಾಯಗೊಂಡಿತು.

(ಸದನವು 3.00 ಗಂಟೆಗೆ ಪುನಃ ಸಮಾವೇಶಗೊಂಡಿತು)

(ಶ್ರೀ ರಮೇಶ್ ಕುಮಾರ್ ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

ನ್ಯಾಯಾಲಯ ನಿಂದನಾ ಪ್ರಕರಣದಲ್ಲಿ ಶ್ರೀವಾಸುದೇವನ್ ಅವರಿಗೆ ಜೈಲು ಶಿಕ್ಷೆ

+ಶ್ರೀ ಬಿ. ಎಸ್ ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಶ್ರೀ ವಾಸುದೇವನ್ ಎಂಬ ಐ.ಎ.ಎಸ್. ಅಧಿಕಾರಿಗೆ ನ್ಯಾಯಾಲಯ ನಿಂದನಾ ಪ್ರಕರಣವಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ಜೈಲು ಶಿಕ್ಷೆಯ ಪ್ರಸ್ತಾಪಿಸಲು ನಾವು ನಿಮಗೆ ಒಂದು ನೋಟೀಸ್ ಅನ್ನು ಕಳುಹಿಸಿಕೊಟ್ಟಿದ್ದೆವು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಒಂದು ವಿಚಾರವನ್ನು ತಮ್ಮ ಗಮನ ಸೆಳೆಯಬಯಸುತ್ತೇನೆ. ನಮ್ಮ ರಾಜ್ಯ ಹಿರಿಯ ಐ.ಎ.ಎಸ್. ಅಧಿಕಾರಿಯಾದ ಶ್ರೀ ವಾಸುದೇವನ್ ರವರಿಗೆ ....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಮ್ಮ ದೇಶದ ಇತಿಹಾಸದಲ್ಲೇ ಮೊದಲ ಬಾರಿಗೆ ಏನೂ ಅಪರಾಧವೇ ಮಾಡದಿರತಕ್ಕ ಶ್ರೀ ವಾಸುದೇವನ್ ರಂತಹ ಒಬ್ಬ ಪ್ರಾಮಾಣಿಕ ಅಧಿಕಾರಿ ಇವತ್ತು ಜೈಲಿಗೆ ಹೋಗುವಂತಹ ಒಂದು ಪರಿಸ್ಥಿತಿ ಬಂದಿದೆ. ಇದಕ್ಕೆ ಸರ್ಕಾರದ ಅಪರಾಧವೇ ಕಾರಣವಾಗಿದೆ.

(ಗೊಂದಲ)

ಅಧ್ಯಕ್ಷರು : ಒಂದು ನಿಮಿಷ. ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಸರ್ಕಾರದ ಪರವಾಗಿ ಏನೋ ಹೇಳುತ್ತಿದ್ದಾರೆ, ಕೇಳೋಣ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಆ ಅಧಿಕಾರಿಗೆ ಈ ರೀತಿ ಆಗಬಾರದಿತ್ತು, ಅವರ ಮೇಲೆ ನಮಗೆ ಅನುಕಂಪವಿದೆ. ಯಾರ ತಪ್ಪಿನಿಂದ .....

(ಗೊಂದಲ)

ಅಧ್ಯಕ್ಷರು : ದಯಮಾಡಿ ಒಂದು ನಿಮಿಷ ಕುಳಿತುಕೊಳ್ಳಿ. ಮಾನ್ಯ ವಾಟಾಳ್ ನಾಗರಾಜ್‌ರವರೇ ತಾವು ಯಾವ ವಿಷಯವನ್ನು ಪ್ರಸ್ತಾಪಿಸಬೇಕೆಂದಿದ್ದೀರಿ?

ಶ್ರೀ ವಾಟಾಳ್ ನಾಗರಾಜ್ : ನಾವೆಲ್ಲರೂ ಆ ವಿಷಯದ ಮೇಲೆ ಮಾತನಾಡೋಣ. ಎಲ್ಲರಿಗೂ ಮಾತನಾಡಲು ಅವಕಾಶ ಸಿಗುತ್ತದೆ.

ಅಧ್ಯಕ್ಷರು : ಎಲ್ಲರೂ ಒಂದೇ ವಿಷಯವನ್ನು ಪ್ರಸ್ತಾಪಿಸಬೇಕೆಂದಿದ್ದೀರೋ?

ಶ್ರೀ ವಾಟಾಳ್ ನಾಗರಾಜ್ : ಹೌದು. ನನಗೆ ಒಂದು ನಿಮಿಷ ಅವಕಾಶ ಕೊಡಿ. ನಾನು ಆ ಬಗ್ಗೆ ಹೇಳುತ್ತೇನೆ.

ಅಧ್ಯಕ್ಷರು : ಒಂದು ನಿಮಿಷ. ಸರ್ಕಾರ ಈ ಬಗ್ಗೆ ಏನು ಹೇಳುತ್ತದೆಯೋ ಕೇಳೋಣ.

ಶ್ರೀ ಡಿ. ಮಂಜುನಾಥ್ : ಕೋರ್ಟಿನಲ್ಲಿ ತೀರ್ಮಾನವಾಗಿರುವಂತಹ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡುವಂತಹ ಆವಶ್ಯಕತೆ ಏನಿದೆ. ಯಾವ ನಿಯಮದ ಪ್ರಕಾರ ಅವರು ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ : ಮುಖ್ಯಮಂತ್ರಿಗಳು ಯಾರೋ ಅವರಿಗೆ ಬೇಕಾದವರಿಗೆ ಪ್ರಮೋಷನ್ ಕೊಡುವುದಕ್ಕೋಸ್ಕರ, ಶ್ರೀ ಧನಂಜಯ ಎಂಬುವವರಿಗೆ ಪ್ರಮೋಷನ್ ಕೊಡಬೇಕೆಂದು ನಿರ್ಣಯವಾಗಿದ್ದರೂ ಸಹ...

(ಗೊಂದಲ)

ಅಧ್ಯಕ್ಷರು : ಮಾನ್ಯ ಮಂಜುನಾಥ್‌ರವರೇ, ಒಂದು ನಿಮಿಷ ಕುಳಿತುಕೊಳ್ಳಿ. ಅವರು ಮೊದಲು ವಿಷಯವನ್ನು ಪ್ರಸ್ತಾಪ ಮಾಡಲಿ. ನಾನು ತಮಗೂ ಮಾತನಾಡಲು ಅವಕಾಶ ಕೊಡುತ್ತೇನೆ.

ಶ್ರೀ ವಾಟಾಳ್‌ನಾಗರಾಜ್ : ಮಾನ್ಯ ಅಧ್ಯಕ್ಷರೇ, ಒಂದು ತಿಂಗಳ ಹಿಂದೆ ನ್ಯಾಯಾಲಯದ ನಿಂದನೆಗೆ ಒಳಗಾಗಿದ್ದ ವಸತಿ ಮತ್ತು ನಗಾಭಿವೃದ್ಧಿ ಇಲಾಖೆಯ ಸರ್ಕಾರದ ಕಾರ್ಯದರ್ಶಿಯಾಗಿರುವ ಶ್ರೀ ಮಾನ್ ವಾಸುದೇವನ್‌ರವರಿಗೆ ಒಂದು ತಿಂಗಳು ಸಾದಾ ಜೈಲು ಶಿಕ್ಷೆ ಎಂದು ಸರ್ವೋಚ್ಚ ನ್ಯಾಯಾಲಯ ತೀರ್ಪು ನೀಡಿತ್ತು. ನಂತರ ಆ ತೀರ್ಪಿನ ಪುನರ್‌ಪರಿಶೀಲನೆ ಮಾಡಿ ಶಿಕ್ಷೆಯನ್ನು ತಾವು ಕಡಿಮೆ ಮಾಡಬೇಕು, ನಾನು ಯಾವುದೇ ರೀತಿಯ ಅಪರಾಧ ಮಾಡಿಲ್ಲ, ನಾನು ತಾವು ಹೇಳಿದ ಪ್ರಕಾರ ನಡೆದುಕೊಳ್ಳುತ್ತೇನೆ ಎನ್ನತಕ್ಕಂಥ ಅತ್ಯಂತ ಕರುಣೆಯಿಂದ ಒಂದು ಮನವಿಯನ್ನು ಸದರಿ ಅಧಿಕಾರಿಯು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದರು. ಸರ್ವೋಚ್ಚ ನ್ಯಾಯಾಲಯವು ಅವರ ಈ ಮನವಿಯನ್ನು ತಿರಸ್ಕರಿಸಿ, ಅವರಿಗೆ ಶಿಕ್ಷೆಯನ್ನು ಖಾಯಂ ಮಾಡುವ ತೀರ್ಪನ್ನು ಇಂದು ನೀಡಿದೆ. ಸದರಿ ಅಧಿಕಾರಿಗೆ ನ್ಯಾಯಾಲಯವು ಇಂದು ಒಂದು ತಿಂಗಳ ಸಾದಾ ಜೈಲು ಶಿಕ್ಷೆಯನ್ನು ಖಾಯಂ ಮಾಡಿದೆ. ಕರ್ನಾಟಕ ರಾಜ್ಯದ ಒಬ್ಬ ಆದರ್ಶವಾದಂತಹ ಹಾಗೂ ಉನ್ನತ ಸ್ಥಾನದಲ್ಲಿರುವಂತಹ ಪ್ರಾಮಾಣಿಕ ಅಧಿಕಾರಿಗೆ ಈ ರೀತಿಯ ಶಿಕ್ಷೆಯನ್ನು ವಿಧಿಸಲಾಗಿದೆ. ಇದು ನನ್ನ ವೈಯಕ್ತಿಕವಾದಂತಹ ಅಭಿಪ್ರಾಯವಾಗಿದೆ. ನಾನು ಸುಪ್ರೀಂ ಕೋರ್ಟ್‌ನ ತೀರ್ಪನ್ನು ಪ್ರಶ್ನಿಸುತ್ತಿಲ್ಲ. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಆ ಉನ್ನತವಾದಂತಹ ಅಧಿಕಾರಿಯ ಸೇವೆ ಕರ್ನಾಟಕ ರಾಜ್ಯಕ್ಕೆ ಅಗತ್ಯವಾಗಿ ಬೇಕಾಗಿರುವುದರಿಂದ, ಆ ಅಧಿಕಾರಿಗೆ ಒಂದು ತಿಂಗಳು ಸಾದಾ ಜೈಲು ವಾಸದ ಶಿಕ್ಷೆಯನ್ನು ಸುಪ್ರೀಂ ಕೋರ್ಟ್ ಏನು ಖಾಯಂ ಮಾಡಿದೆ, ಅದನ್ನು ರದ್ದುಗೊಳಿಸುವ ಬಗ್ಗೆ ಈ ಸದನ ಒಂದು ನಿರ್ಣಯವನ್ನು ಮಾಡಬೇಕು ಮತ್ತು ಈ ಬಗ್ಗೆ ರಾಷ್ಟ್ರಪತಿಯವರಿಗೆ ತಿಳಿಸಬೇಕು. ಸಾಧ್ಯವಾದರೆ ಕರ್ನಾಟಕ ರಾಜ್ಯದ ಪರವಾಗಿ ರಾಷ್ಟ್ರಪತಿಯವರಿಗೆ ರಾಷ್ಟ್ರಪತಿಗಳ ಬಳಿಗೆ ಒಂದು ನಿಯೋಗವಾದರೂ ಹೋಗಬೇಕಾಗುತ್ತದೆ.

ಈ ವಿಷಯದ ಬಗ್ಗೆ ಸಮಗ್ರವಾಗಿ ಚರ್ಚೆಯಾಗಲಿ. ಇಂತಹ ವಿಚಾರಗಳಲ್ಲಿ ನಾವು ಬಹಳ ಮಡಿವಂತಿಕೆ ಮಾಡುವುದು ಬೇಡ. ಅನೇಕ ವಿಚಾರಗಳಲ್ಲಿ ನ್ಯಾಯಾಲಯದ ಬಗ್ಗೆ ಇಲ್ಲಿ ಚರ್ಚೆಯೇ ಮಾಡಬಾರದು ಎಂಬ ಮಡಿವಂತಿಕೆ, ನನಗೇನೂ ಅಷ್ಟು ಸಾಧುವಾಗಿ ಕಾಣುತ್ತಿಲ್ಲ, ಕೆಲವು ವಿಚಾರಗಳಲ್ಲಿ ಸದನದಲ್ಲಿ ಚರ್ಚೆ ನಡೆಸಲು ತಾವು ಅನುಮತಿ ನೀಡಬೇಕಾಗುತ್ತದೆ. ನ್ಯಾಯಾಂಗ ಬೇರೆ, ಕಾರ್ಯಾಂಗ ಬೇರೆ, ಶಾಸಕಾಂಗ ಬೇರೆ. ಇವೆಲ್ಲಾ ವ್ಯವಸ್ಥೆಗಳಿದ್ದರೂ ಕೆಲವು ಸಂದರ್ಭಗಳಲ್ಲಿ ನಾವು ನ್ಯಾಯಾಂಗದ ವಿಚಾರಗಳನ್ನು ಇಲ್ಲಿ ಚರ್ಚಿಸಬೇಕಾಗುತ್ತದೆ. ನಾವು ಕಣ್ಣು ಮುಚ್ಚಿಕೊಂಡು, ಮಡಿವಂತಿಕೆಯಿಂದ ನ್ಯಾಯಾಂಗದ ಬಗ್ಗೆ ಏನೂ ಮಾತನಾಡುವುದು ಬೇಡ ಎಂಬ ಭಾವನೆಯಲ್ಲಿ ನಾವು ಕುಳಿತುಕೊಳ್ಳತಕ್ಕದ್ದು ಒಳ್ಳೆಯದಲ್ಲ, ಆ ಬಗ್ಗೆ ಸಮಗ್ರವಾಗಿ ಚರ್ಚೆಯೂ ಆಗಬೇಕಾಗುತ್ತದೆ. ಇದೊಂದು ವಿಚಾರವಾಯಿತು. ಮತ್ತೊಂದು ವಿಚಾರವೆಂದರೆ, ಒಟ್ಟಾರೆ ಇಡೀ ಸದನದಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ಎಲ್ಲರಿಗೂ ಗೊತ್ತಿರುವಂತೆ ಈ ಅಧಿಕಾರಿ ಒಬ್ಬ ಒಳ್ಳೆಯ ಅಧಿಕಾರಿ, ಪ್ರಾಮಾಣಿಕವಾದಂತಹ ಅಧಿಕಾರಿ. ಇಂತಹ ಅಧಿಕಾರಿಗೆ ಈ ಪರಿಸ್ಥಿತಿ ನಿರ್ಮಾಣವಾಗಿರುವ ಬಗ್ಗೆ ನಮಗೆಲ್ಲರಿಗೂ ಬಹಳ ನೋವಾಗಿದೆ. ದಯಮಾಡಿ ನಮಗೆ ಆಗಿರುವ ನೋವನ್ನು ತಾವು ಅರ್ಥ ಮಾಡಿಕೊಂಡು ಅದನ್ನು ಸಮಗ್ರವಾಗಿ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕು. ಅವರಿಗೆ ವಿಧಿಸಿರುವ ಶಿಕ್ಷೆ ರದ್ದುಗೊಳಿಸುವ ನಿರ್ಣಯವೊಂದನ್ನು ಈ ಸದನದಲ್ಲಿ ಕೈಗೊಳ್ಳಬೇಕೆಂದು ನಾನು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಹೇಳಿದಂತೆ, ತಾವು ಈ ವಿಷಯವನ್ನು ಯಾವ ನಿಯಮಾವಳಿ ಅಡಿಯಲ್ಲಿ ಚರ್ಚಿಸುತ್ತಿದ್ದೀರಿ?

VIII F-23

ಶ್ರೀ ಬಿ.ಎಸ್. ಯಡಿಯೂರಪ್ಪ ; ನಾವು ಈ ವಿಷಯವನ್ನು ಸದನದಲ್ಲಿ ಪ್ರಸ್ತಾಪಿಸಲು ತಮಗೆ ಮೊದಲೇ ನೋಟೀಸ್ ಅನ್ನು ಕಳುಹಿಸಿದ್ದೆವು.

(ಗೊಂದಲ)

ಅಧ್ಯಕ್ಷರು : ಹೌದು, ತಾವು ವೈ. ರಾಮಕೃಷ್ಣ ಹಾಗೂ ಪ್ರಮೀಳಾ ನೇಸರ್ಗಿಯವರು ಈ ವಿಷಯವನ್ನು ಪ್ರಸ್ತಾಪಿಸಲು ಮೂರ್‍ನಾಲ್ಕು ದಿನಗಳ ಹಿಂದೆ ಒಂದು ನೋಟೀಸ್ ಕಳುಹಿಸಿಕೊಟ್ಟಿದ್ದಿರಿ. ಆದರೆ ಆ ವಿಚಾರ ಸುಪ್ರೀಂ ಕೋರ್ಟ್ ಮುಂದೆ ಪೆಂಡಿಂಗ್ ಇದ್ದುದರಿಂದ ಈ ವಿಚಾರವನ್ನು ಸದನದಲ್ಲಿ ಚರ್ಚಿಸುವುದು ಸರಿಯಾಗುವುದಿಲ್ಲ ಎಂಬ ಭಾವನೆಯಿಂದ ಅದನ್ನು ಇಲ್ಲಿ ತರಲಿಲ್ಲ, ದಯಮಾಡಿ ತಾವು ಅನ್ಯಥಾ ಭಾವಿಸಬಾರದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಈಗಲೂ ಸಹ ಸುಪ್ರೀಂ ಕೋರ್ಟಿನ ತೀರ್ಪಿನ ಬಗ್ಗೆ ನಮ್ಮದೇನೂ ಆಕ್ಷೇಪಣೆ ಇಲ್ಲ. ಆ ತೀರ್ಪಿಗೆ ತಲೆ ಬಾಗಬೇಕು ಎಂದು ನಾವು ಹೇಳುತ್ತೇವೆ. ಇಲ್ಲಿರುವ ಪ್ರಶ್ನೆ ಏನೆಂದರೆ, ಶ್ರೀ ವಾಸುದೇವನ್ ಎಂಬ ಒಬ್ಬ ಪ್ರಾಮಾಣಿಕ ಐ.ಎ.ಎಸ್. ಅಧಿಕಾರಿ, ರಾಜ್ಯದ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಯಾಗಿ ಸುಪ್ರೀಂ ಕೋರ್ಟ್ ಮುಂದೆ ಸರ್ಕಾರದ ಪರವಾಗಿ ಒಂದು ಅಂಡರ್‌ಟೇಕಿಂಗ್ ಕೊಟ್ಟರು. ಎರಡು ತಿಂಗಳೊಳಗಾಗಿ ಧನಂಜಯ ಎಂಬ ವ್ಯಕ್ತಿಯನ್ನು ನ್ಯಾಯಾಲಯವು ಸೂಚಿಸಿರುವಂತಹ ಒಂದು ಹುದ್ದೆಗೆ ಬಡ್ತಿ ನೀಡುವಂತಹ ವ್ಯವಸ್ಥೆ ಮಾಡುತ್ತೇವೆ ಎಂಬ ಅಂಡರ್‌ಟೇಕಿಂಗ್ ಕೊಟ್ಟರು. ಶ್ರೀವಾಸುದೇವನ್‌ರವರದು ಸದರಿ ಪ್ರಕರಣದಲ್ಲಿ ಏನು ತಪ್ಪು ಎಂದು ನಾನು ಕೇಳುತ್ತೇನೆ. ನ್ಯಾಯಾಲಯವು ನೀಡಿದ್ದ ತೀರ್ಪನ್ನು ಜಾರಿಗೊಳಿಸುವುದಕ್ಕಾಗಿ ದಿನಾಂಕ 29.4.94ರಲ್ಲಿ ಕಾರ್ಪೊರೇಷನ್‌ನಲ್ಲಿ ಒಂದು ನಿರ್ಣಯವಾಗಿ, ಸರ್ಕಾರಕ್ಕೆ ಆ ಬಗ್ಗೆ ಫೈಲ್ ಬಂದಿದೆ. ಈ ಸರ್ಕಾರಕ್ಕೆ ಬೇಕಾದಂತಹ ಯಾರೋ ವ್ಯಕ್ತಿಯನ್ನು ಆ ಹುದ್ದೆಗೆ ತುಂಬಬೇಕು, ಮಾನ್ಯ ಮುಖ್ಯಮಂತ್ರಿಗಳು ತಮ್ಮ ಕರ್ತವ್ಯವನ್ನು ನಿರ್ವಹಿಸದೇ ಇರುವ ಪರಿಣಾಮ, ಫೈಲ್ ಅನ್ನು ತಮ್ಮಲ್ಲಿಯೇ ಇಟ್ಟುಕೊಂಡ ಪರಿಣಾಮ, ಒಬ್ಬ ಪ್ರಾಮಾಣಿಕ ಅಧಿಕಾರಿ ಇವತ್ತು ಜೈಲು ಶಿಕ್ಷೆ ಅನುಭವಿಸುವಂತಾಗಿದೆ. ಅವರಿಗೆ ನ್ಯಾಯಾಲಯವು ನೀಡಿದ್ದ ಶಿಕ್ಷೆಯನ್ನು ಖಾಯಂ ಮಾಡಲಾಗಿದೆ. ಇಲ್ಲಿ ಮುಖ್ಯವಾಗಿ ಎರಡು ಸಂಗತಿಗಳನ್ನು ಅಧಿಕಾರಿಗಳು ಗಮನಿಸಬೇಕಾಗುತ್ತದೆ. ಹೈಕೋರ್ಟ್ ಇರಬಹುದು, ಸುಪ್ರೀಂ ಕೋರ್ಟ್ ಇರಬಹುದು, ಡಿಸ್ಟ್ರಿಕ್ಟ್ ಕೋರ್ಟ್‌ಗಳು ಇರಬಹುದು, ಒಂದು ನ್ಯಾಯಾಲಯ ತೀರ್ಪನ್ನು ಕೊಟ್ಟ ಮೇಲೂ ಅಧಿಕಾರಿಗಳು ಅದನ್ನು ಜಾರಿಗೊಳಿಸದೇ ಕಣ್ಣುಮುಚ್ಚಿಕೊಂಡು ಕುಳಿತುಕೊಂಡರೆ, ತಮ್ಮ ಕರ್ತವ್ಯವನ್ನು ಕಾನೂನಿನ ಚೌಕಟ್ಟಿನೊಳಗೆ ನಿರ್ವಹಿಸದಿದ್ದಲ್ಲಿ, ಸರ್ಕಾರವಾಗಲಿ ಚುನಾಯಿತ ಪ್ರತಿನಿಧಿಗಳಾಗಲಿ, ಮುಖ್ಯಮಂತ್ರಿಗಳಾಗಲಿ, ಮಂತ್ರಿಗಳಾಗಲಿ ನಿಮ್ಮ ರಕ್ಷಣೆಗೆ ಬರುವುದಿಲ್ಲ.

ಯಾವುದೇ ಒಂದು ತಪ್ಪು ಮಾಡದಂತಹ ಒಬ್ಬ ಉನ್ನತ ಅಧಿಕಾರಿಗೆ ಈ ದೇಶದ ಇತಿಹಾಸದಲ್ಲಿಯೇ ಮೊದಲ ಬಾರಿಗೆ, ಸರ್ಕಾರದಲ್ಲಿ ಅಧಿಕಾರದಲ್ಲಿರುವಂತಹ ಜನರ ತಪ್ಪಿಗಾಗಿ ಒಂದು ತಿಂಗಳು ಜೈಲು ಅನುಭವಿಸುವಂತಹ ವಿಶೇಷ ಪರಿಸ್ಥಿತಿ ಉದ್ಭವಿಸಿದೆ. ಇದು ನಮ್ಮ ರಾಜ್ಯದಲ್ಲಿ, ಅಷ್ಟೇ ಏಕೆ, ಇಡೀ ದೇಶದಲ್ಲಿ ಈ ರೀತಿಯಾಗಿರತಕ್ಕ ಮೊದಲ ಉದಾಹರಣೆ ಎಂದು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ನಾನು ಹೇಳುವುದೇನೆಂದರೆ ಇವತ್ತು ಯಾವುದೇ ಒಂದು ವ್ಯವಸ್ಥೆಯಲ್ಲಿ ಮುಖ್ಯಮಂತ್ರಿಗಳನ್ನು ಯಾರೂ ಜೈಲಿಗೆ ಕಳುಹಿಸುವುದಿಲ್ಲ, ಸರ್ಕಾರದ ಪ್ರತಿನಿಧಿಗಳಾಗಿ ಅವರ ಪರವಾಗಿ ಕೆಲಸ ಮಾಡುವಂತಹ ಅಧಿಕಾರಿಗಳು ಯಾರಿರುತ್ತಾರೋ ಅವರು ಸರ್ಕಾರದ ಕರ್ತವ್ಯದ ಜವಾಬ್ದಾರಿ ಹೊರಬೇಕಾಗುತ್ತದೆ. ಸದರಿ ಪ್ರಕರಣದಲ್ಲಿ ನ್ಯಾಯಾಲಯದ ತೀರ್ಪನ್ನು ಜಾರಿಗೊಳಿಸುವುದು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಜವಾಬ್ದಾರಿಯಾಗಿತ್ತು.

ಸರ್ಕಾರದ ಮುಖ್ಯ ಕಾರ್ಯದರ್ಶಿಯಾಗಿ ಅವರನ್ನು ನಾವೇಕೆ ಉನ್ನತ ಸ್ಥಾನದಲ್ಲಿ ಕುಳ್ಳಿರಿಸಿದ್ದೇವೆ? ಸುಪ್ರೀಂ ಕೋರ್ಟ್ ಅಥವಾ ಇನ್ನಿತರ ಕೋರ್ಟ್‌ಗಳು ಸರ್ಕಾರಕ್ಕೆ ನಿರ್ದೇಶನಗಳನ್ನು ನೀಡಿದಾಗ, 24 ಗಂಟೆಗಳ ಕಾಲ ಕಣ್ಣು ತೆರೆದುಕೊಂಡು ಅಧಿಕಾರಿಗಳಿಗೆ ಧಕ್ಕೆಯಾಗದಂತೆ ಕಾನೂನಿನ ಚೌಕಟ್ಟಿನೊಳಗೆ ಕೋರ್ಟ್‌ಗಳ ಆದೇಶವನ್ನು ಪಾಲನೆ ಮಾಡಬೇಕು.

ಕಾರ್ಯಾಂಗ ಮತ್ತು ಶಾಸಕಾಂಗ ಹದಗೆಟ್ಟು ಹೋಗುವಂತಹ ಪರಿಸ್ಥಿತಿಯಲ್ಲಿ, ನ್ಯಾಯಾಂಗದ ತೀರ್ಪಿಗಾದರೂ ತಲೆ ಬಾಗದಿರುವ ಹಾಗೂ ಆ ಬಗ್ಗೆ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳದಿರುವಂತಹ ಪರಿಸ್ಥಿತಿ ಏನು ಬಂದಿದೆ, ಇದರಿಂದ ನಾನೇನು ಅಂದುಕೊಂಡಿದ್ದೇನೆ ಎಂದರೆ, ಇದು ಸೆನ್ಸಾರ್ against the Government. ಮುಖ್ಯ ಮಂತ್ರಿಗಳಿಗೆ ಒಂದು ಕ್ಷಣವೂ ಅಧಿಕಾರದಲ್ಲಿ ಮುಂದುವರೆಯುವ ನೈತಿಕ ಹಕ್ಕು ಇಲ್ಲ, ತಕ್ಷಣಕ್ಕೆ ಅವರು ರಾಜೀನಾಮೆ ಕೊಟ್ಟು ಅಧಿಕಾರ ಬಿಟ್ಟು ಹೋಗುವಂತಹ ವಿಶೇಷ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. ಕೋರ್ಟ್‌ನ ವಿಷಯವನ್ನು ನಾವಿಲ್ಲಿ ಪ್ರಸ್ತಾಪ ಮಾಡುತ್ತಿಲ್ಲ, ಇವತ್ತು ಆ ಅಧಿಕಾರಿಯನ್ನು ನೀವು ಹೇಗೆ ರಕ್ಷಣೆ ಮಾಡುತ್ತೀರಿ? ನಾನು ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ. ನೀವು ಮಾಡಿದಂತಹ ಅಕ್ಷಮ್ಯ ಅಪರಾಧಕ್ಕೆ. ನೀವು ರಾಷ್ಟ್ರಪತಿಗಳ ಬಳಿಗೆ ಹೋಗಿ ಅವರನ್ನು ಭೇಟಿಯಾಗಿ. ನನ್ನ ಅಧಿಕಾರಿಯಿಂದ ತಪ್ಪಾಗಿರುವುದಿಲ್ಲ, ಈ ತಪ್ಪು ನಾನು ಮಾಡಿರುವುದು, ನಾನು ಶಿಕ್ಷೆ ಅನುಭವಿಸುವಂತಹ ಕೆಲಸ ಮಾಡಿರುವುದು, ಎಂದು ರಾಷ್ಟ್ರಪತಿಗಳ ಬಳಿಗೆ ಹೋಗಿ ತಮ್ಮ ಅಕ್ಷಮ್ಯ ಅಪರಾಧಕ್ಕೆ ಅವರ ಬಳಿ ಕ್ಷಮಾಪಣೆ ಕೇಳಿ, ಆ ಅಧಿಕಾರಿಯನ್ನು ಉಳಿಸುವಂತಹ ಪ್ರಯತ್ನ ಮಾಡುತ್ತೀರೋ? ಅಥವಾ ಕಾನೂನು ಚೌಕಟ್ಟಿನೊಳಗೆ ಏನು ಮಾಡುತ್ತೀರೋ ಅದನ್ನು ನೀವು ಮಾಡಿ. ನಾನು ಒಬ್ಬ ಅಧಿಕಾರಿಯನ್ನು ದೂರುವುದಕ್ಕೆ ಇಚ್ಛೆ ಪಡುವುದಿಲ್ಲ, ಆ ಅಧಿಕಾರಿ ಪ್ರಾಮಾಣಿಕವಾಗಿ, ಸರ್ಕಾರದ ಪರವಾಗಿ ಕೋರ್ಟ್‌ನ ಮುಂದೆ ಒಂದು ಅಂಡರ್‌ಟೇಕಿಂಗ್ ಅನ್ನು ಕೊಟ್ಟು ಬಂದ ಮೇಲೆ, ಅದು ಜಾರಿಯಾಗುವಂತೆ ನೋಡಿಕೊಳ್ಳಬೇಕಾದುದು ಸರ್ಕಾರದ ಕರ್ತವ್ಯವಾಗಿತ್ತು. ನಾನು ಈ ಬಗ್ಗೆ ವಿವರಗಳಿಗೆ ಹೋಗುವುದಿಲ್ಲ.

ಯಾರ ಹೆಸರನ್ನೂ ಹೇಳುವುದಕ್ಕೆ ಹೋಗುವುದಿಲ್ಲ, ನಾನು ಹಾಗೆ ಹೇಳಿದರೆ, ಯಡಿಯೂರಪ್ಪನವರು ಎಲ್ಲದಕ್ಕೂ ಚುಚ್ಚು ಮಾತನಾಡುತ್ತಾರೆ ಅಂತ ಆಗುತ್ತದೆ. ಸ್ವಾಮಿ, ನೀವು ಫೈಲ್ ಅನ್ನು ತರಿಸಿ ನೋಡಿ. ನಿಮ್ಮ ಮಂತ್ರಿಮಂಡಲದ ಸಭೆಯನ್ನು ಕರೆದು ಏಕೆ ಈ ಘಟನೆಯು ನಡೆಯಿತು ಎಂದು ಅಲ್ಲಿ ಕೇಳಿ. ತನಗೆ ನ್ಯಾಯ ಬೇಕೆಂದು ಧನಂಜಯ ಎಂಬುವವನು ಕೋರ್ಟಿಗೆ ಹೋದ. ಸ್ವಾಮಿ ಆ ಸಮಯದಲ್ಲಿ ಇಲ್ಲಿ ಅಧಿಕಾರದಲ್ಲಿರುವಂತಹ ಜನ, ಯಾರೋ ಮೂರ್‍ನಾಲ್ಕು ಜನ ಶಾಸಕರುಗಳಿಂದ ಅರ್ಜಿ ತರಿಸಿಕೊಳ್ಳುತ್ತಾರೆ, ಯಾರೋ ತಮಗೆ ಬೇಕಾದಂತಹವರನ್ನು ಧನಂಜಯ ಜಾಗದಲ್ಲಿ ಬಡ್ತಿ ನೀಡಿ ತುಂಬುವುದಕ್ಕೋಸ್ಕರ, ನ್ಯಾಯಾಲಯ ನೀಡಿದ್ದ ನಿರ್ದೇಶನವನ್ನು ಉಲ್ಲಂಘಿಸಿದ್ದಾರೆ.

ಕಂಟೆಂಪ್ಟ್ ಆಫ್ ಕೋರ್ಟ್ ಆಗುತ್ತದೆಂದು ಧನಂಜಯ ಸುಪ್ರೀಂ ಕೋರ್ಟ್‌ಗೆ ಹೋದರು. ಇದೆಲ್ಲಾ ಗೊತ್ತಿದ್ದರೂ ಸಹ, ಮುಖ್ಯಮಂತ್ರಿಗಳ ಒಂದು ಕರ್ತವ್ಯ ಚ್ಯುತಿಯಿಂದ ಇವತ್ತು ವಾಸುದೇವನ್‌ಗೆ ಈ ಶಿಕ್ಷೆಯಾಗಿದೆ, ಮುಖ್ಯಮಂತ್ರಿಗಳು ಒಂದು ಕ್ಷಣ ಕೂಡ ಅಧಿಕಾರದಲ್ಲಿ ಮುಂದುವರೆಯುವಂತಹ ನೈತಿಕ ಹಕ್ಕಿಲ್ಲ, ರಾಜೀನಾಮೆಯನ್ನು ಕೊಟ್ಟು ಅವರು ಮನೆಗೆ ಹೋಗಬೇಕು. ಮಂಜುನಾಥ್‌ರಂತಹ ಹಿರಿಯ ಸಚಿವರು ಈ ಸದನದಲ್ಲಿ ಇದ್ದೀರಿ ಈ ವಾಸುದೇವನ್‌ರವರನ್ನು ಹೇಗೆ ರಕ್ಷಣೆ ಮಾಡುತ್ತೀರಿ ಎನ್ನುವುದನ್ನು ಹೇಳಬೇಕು. ಇಲ್ಲವೆಂದರೆ ಮುಖ್ಯಮಂತ್ರಿಗಳು ಈ ಸದನಕ್ಕೆ ಬರುವವರೆಗೆ 10 ನಿಮಿಷದ ಕಾಲ ಈ ಸದನವನ್ನು ಮುಂದೂಡಿ ಅಧ್ಯಕ್ಷರೆ. ಮುಖ್ಯಮಂತ್ರಿಗಳು

ಸದನಕ್ಕೆ ಬರಲಿ. ಇಂತಹ ವಿಶೇಷವಾದಂತಹ ಪರಿಸ್ಥಿತಿ ಹಾಗೂ ಇಂತಹ ಘಟನೆ ಇಡೀ ದೇಶದಲ್ಲೇ ಮೊದಲಬಾರಿಗೆ ನಡೆದಿರಬೇಕಾದರೆ, ಇದಕ್ಕಿಂತ ಬೇರೆ ಕೆಲಸ ಮುಖ್ಯಮಂತ್ರಿಗಳಿಗೆ ಇರುವುದಿಲ್ಲ, 10 ನಿಮಿಷ ಸದನವನ್ನು ಮುಂದೂಡಿ ಮುಖ್ಯಮಂತ್ರಿಗಳನ್ನು ಕರೆಯಿಸಿ. ಇದಕ್ಕೆ ಕಾರಣ ಯಾರು? ವಾಸುದೇವನ್ ಒಂದು ತಿಂಗಳು ಜೈಲಿಗೆ ಹೋಗುತ್ತಾರೆ, ಪರವಾಗಿಲ್ಲ, ನೀವು ಎಷ್ಟು ಜನರನ್ನು ಈ ರೀತಿ ಜೈಲಿಗೆ ಕಳುಹಿಸಬೇಕೆಂದು ಭಾವಿಸಿದ್ದೀರಿ? ನಾಳೆ ಪ್ರಾಮಾಣಿಕ ಅಧಿಕಾರಿಗಳು ಯಾರಾದರೂ ಕೋರ್ಟ್ ಮುಂದೆ ಅಂಡರ್‌ಟೇಕಿಂಗ್ ಕೊಡುವುದಕ್ಕೆ ಹೋಗುತ್ತಾರೋ ಅವರ ಜವಾಬ್ದಾರಿಯನ್ನು ನಿರ್ವಹಿಸುವುದಕ್ಕೆ ಹೋಗುತ್ತಾರೋ ಇದೆಲ್ಲಾ ಸಮಸ್ಯೆಗಳು ಉದ್ಭವವಾಗಿರುವುದರಿಂದ ಮುಖ್ಯಮಂತ್ರಿಗಳು ಈ ಸದನಕ್ಕೆ ಬರಬೇಕು. ವಾಸ್ತವಿಕ ಪರಿಸ್ಥಿತಿ ಏನಾಗಿದೆ? ಕಾರ್ಪೊರೇಷನ್ ರೆಸೊಲ್ಯೂಷನ್ ಮಾಡಿದ ಮೇಲೂ ಸಹ ಅದನ್ನು ಜಾರಿಗೆ ತರದೇ ಇರುವುದಕ್ಕೆ ಕಾರಣವೇನು? ಸುಪ್ರೀಂ ಕೋರ್ಟ್ ಧನಂಜಯನಿಗೆ ನ್ಯಾಯವಾಗಿ ಸಿಗಬೇಕಾದಂಥ ಆ ಹುದ್ದೆ ಸಿಗಬೇಕೆಂದು ನಿರ್ದೇಶನವನ್ನು ಕೊಟ್ಟ ಮೇಲೂ ಸಹ ಅದನ್ನು ಮೀರಿ ನಡೆಯುವಂತಹ ಎಂದು ಉದ್ಘಟಿತನವನ್ನು ಈ ಸರ್ಕಾರ ಏತಕ್ಕೆ ಮಾಡಿತು? ಅದರ ಬಗ್ಗೆ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇವತ್ತು ಮಂಜುನಾಥ್‌ರಂತಹವರು ಇದರ ಹಿನ್ನೆಲೆ ಏನೆಂದು ತಿಳಿದುಕೊಳ್ಳದೇ ಇಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ. ಇದು ಕಾನೂನಿನ ಪ್ರಶ್ನೆಯಲ್ಲ, ಇಲ್ಲಿರುವುದು ಮಾನವೀಯತೆಯ ಪ್ರಶ್ನೆ ಲಕ್ಷಾಂತರ ಅಧಿಕಾರಿಗಳ ಪ್ರಶ್ನೆ. ನಿಮ್ಮ ಮುಖ್ಯಕಾರ್ಯದರ್ಶಿಯವರು ಕೈಕಟ್ಟಿಕೊಂಡು ಕುಳಿತಿರುವಂತಹ ಪ್ರಶ್ನೆ.

+ಶ್ರೀ. ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಸುಪ್ರೀಂ ಕೋರ್ಟ್ ತೀರ್ಪೇನು ಬಂದಿದೆ, ವಾಸುದೇವನ್‌ರವರಿಗೆ ಪುನಃ ಒಂದು ತಿಂಗಳು ಶಿಕ್ಷೆ ಕೊಡತಕ್ಕಂತಹದನ್ನು ಖಚಿತ ಮಾಡಿ ಏನು ತೀರ್ಪು ಕೊಟ್ಟಿದ್ದಾರೆ, ಇದು ನಿಜಕ್ಕೂ ನಮ್ಮೆಲ್ಲರಿಗೂ ಒಂದು ಆತಂಕವನ್ನು ತರತಕ್ಕಂತಹ ವಿಷಯ .

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಕಾರಣ ಇಷ್ಟೆ, ಇವತ್ತು ಒಬ್ಬ ಪ್ರಾಮಾಣಿಕ ಅಧಿಕಾರಿ ಜೈಲಿಗೆ ಹೋಗುವಂಥ ಪರಿಸ್ಥಿತಿ ಬರುತ್ತಿದೆ. ಶ್ರೀಮಾನ್ ಧನಂಜಯ ಎನ್ನತಕ್ಕಂತಹ ಒಬ್ಬ ಸೂಪರಿಂಟೆಂಡೆಂಟ್ ಇಂಜನಿಯರ್‌ಗೆ ಮುಖ್ಯ ಅಭಿಯಂತರರಾಗಿ ಬಡ್ತಿ ಕೊಡತಕ್ಕಂತಹ ವಿಷಯದಲ್ಲಿ ನ್ಯಾಯಾಲಯದ ಆದೇಶವಿದ್ದರೂ ಕೂಡ ಮತ್ತು ಇದನ್ನು ಜಾರಿಗೊಳಿಸಬೇಕೆಂದು ಸರ್ಕಾರದಿಂದ ಆದೇಶ ಇದ್ದರೂ ಕೂಡ ಇದನ್ನು ಸರ್ಕಾರ ಜಾರಿಗೊಳಿಸದೆ ಇದ್ದ ಕಾರಣ ಇವತ್ತು ಈ ಪರಿಸ್ಥಿತಿ ಬಂದಿದೆ. ಇವತ್ತು ಧನಂಜಯ ಎನ್ನತಕ್ಕಂತಹ ಪರಿಶಿಷ್ಟ ಜಾತಿಗೆ ಸೇರಿದಂಥ ಒಬ್ಬ ಇಂಜನಿಯರು ನನಗೆ ಅನ್ಯಾಯವಾಗಿದೆ ಎಂದು ಬಹಳ ದಿವಸಗಳ ಹಿಂದಿನಿಂದಲೂ ಅವರು ಹೋರಾಟ ಮಾಡುತ್ತಿದ್ದಾರೆ. ಅವರು ಹೋರಾಟ ಮಾಡಿದಾಗ ಅದಕ್ಕೆ ಕಿವಿ ಕೊಡದೆ ಇದ್ದ ಪಕ್ಷದಲ್ಲಿ ಅವನು ಕೋರ್ಟಿಗೆ ಹೋಗಬೇಕಾಯಿತು, ಕೋರ್ಟಿನಲ್ಲಿ ಅವನ ಅನಿಸಿಕೆಯನ್ನು ಎತ್ತಿಹಿಡಿಯಲಾಯಿತು. ಕೋರ್ಟಿನಲ್ಲಿ ಎತ್ತಿಹಿಡಿದರೂ ಕೂಡ ಇಲ್ಲಿ ಆಡಳಿತದಲ್ಲಿ ಅದನ್ನು ಆಚರಣೆಯಲ್ಲಿ ತರಲಿಲ್ಲ, ಆದಕ್ಕೆ ಇವತ್ತು ಕಾರಣಕರ್ತರು ಯಾರು? ನಾವು ಇದನ್ನು ಯೋಚನೆ ಮಾಡಬೇಕಾಗುತ್ತದೆ.

ಜಡ್ಜ್‌ಮೆಂಟ್ ಬಂದ ಮೇಲೆ ಸ್ವಲ್ಪ ದಿವಸ ತೆಗೆದುಕೊಂಡರೂ ಅಡ್ಡಿಯಿಲ್ಲ, ಕಂಟೆಮ್ಪ್ಟ್ ಕೇಸ್ ಹಾಕಿದ ಮೇಲೂ ಕೂಡ ನಾವು ನ್ಯಾಯಾಲಯದ ಆದೇಶವನ್ನು ಜಾರಿಗೊಳಿಸಿ, ಅವರಿಗೆ ಕೊಡಬಹುದಿತ್ತು. ಅದನ್ನೂ ಕೂಡ ಮಾಡಲಿಲ್ಲ, ಕೊನೆಗೆ ಯಾರು ಜೈಲಿಗೆ ಹೋದರೆಂದರೆ, ಒಬ್ಬ ಪ್ರಾಮಾಣಿಕರಾದ ಐ.ಎ.ಎಸ್. ಅಧಿಕಾರಿ

ಇವತ್ತು ಒಂದು ತಿಂಗಳು ಜೈಲಿಗೆ ಹೋಗುವಂತಹ ಪರಿಸ್ಥಿತಿ ಬಂತು. ಅಂದರೆ, ಇದಕ್ಕೆ ನೇರವಾಗಿ ಸರ್ಕಾರ ಜವಾಬ್ದಾರಿಯನ್ನು ಹೊತ್ತು ಕೊಳ್ಳಬೇಕಾಗುತ್ತದೆ. ಏಕೆಂದರೆ ನಿಮ್ಮ ಆದೇಶದ ಪ್ರಕಾರ, ನೀವೇನು ಹುಕುಂ ಕೊಡುತ್ತೀರೋ, ನೀವೇನು ಆರ್ಡರ್ ಪಾಸ್ ಮಾಡುತ್ತೀರೋ ನೀವೇನೂ ಎಕ್ಸಿಕ್ಯೂಟಿವ್ ಆರ್ಡರ್ ಕೊಡುತ್ತೀರೋ ಅದನ್ನು ಆಚರಣೆಯಲ್ಲಿ ತರತಕ್ಕಂತಹ ಕೆಲಸ ಅವರದು. ನೀವು ಹುಕುಮೇ ಕೊಡದೆ ಇದ್ದಾಗ ನೀವು ಹುಕುಂ ಅನ್ನು ಚಲಾಯಿಸದೇ ಇದ್ದಾಗ, ನಿಮಗೆ ಬೇಕಾದಾಗ ಅದನ್ನು ಚಲಾಯಿಸುವುದು ಬೇಡವಾದಾಗ, ವಿತ್‌ಹೆಲ್ಡ್ ಮಾಡುವುದು ಎಂದಾಗ, ಇವತ್ತು ಅನ್ಯಾಯವಾಗಿ ಈ ಅಧಿಕಾರಿಗಳನ್ನು ಬಲಿ ಕೊಡುತ್ತಿದ್ದೀರಿ. ನಮ್ಮ ದೋಷದಿಂದ, ನಮ್ಮ ಲೋಪದಿಂದ ಮತ್ತು ನಾವು ಮಾಡಿದಂತ ಒಂದು ಪಾಪದ ಕೆಲಸದಿಂದ ಇನ್ನೊಬ್ಬ ಶಿಕ್ಷೆಯನ್ನು ಅನುಭವಿಸತಕ್ಕಂತಹ ಒಂದು ಸಮಯ ಬಂದಿದೆ. ಅಧ್ಯಕ್ಷರೆ, ಇದು ಹೇಗಾಗಿದೆ ಎಂದರೆ, ಈ ಕಬ್ಬನ್ನು ತಿಂದು ನರಿ ಓಡಿಹೋಯಿತಂತೆ ವಾಡಿ ತಿಂದು ಒಂಟೆ ಸಿಕ್ಕಿ ಬಿತ್ತಂತೆ . ಇದು ಆ ಲೆಕ್ಕಾ ಆಗಿದೆ. ಮಾಡಿದವರು ಯಾರೋ, ಸರ್ಕಾರದ ವಿಳಂಬದಿಂದ ಸರ್ಕಾರದ ತಪ್ಪಿನಿಂದ ಇದಾಗಿದೆ. ಇವತ್ತಿನದಿವಸ ಬಿ.ಡಿ.ಎ. ಯಾರ ಹತ್ತಿರ ಇದೆ ಸ್ವಾಮಿ? ನಗರಾಭಿವೃದ್ಧಿ ಅಂದರೆ ಬೆಂಗಳೂರು ಮಹಾನಗರಪಾಲಿಕೆ ಕೂಡ ಮುಖ್ಯಮಂತ್ರಿಗಳ ಅಧೀನದಲ್ಲಿಯೇ ಬರುತ್ತದೆ, ನನಗನಿಸಿದಂತೆ ಅದು ನಮ್ಮ ನಗರಾಭಿವೃದ್ಧಿ ಸಚಿವರ ಅಧೀನದಲ್ಲಿ ಇಲ್ಲ, ಅಂದರೆ ಇದರ ಜವಾಬ್ದಾರಿಯನ್ನು ಮುಖ್ಯಮಂತ್ರಿಗಳು ನೇರವಾಗಿ ವಹಿಸಿಕೊಳ್ಳಬೇಕಾಗುತ್ತದೆ.

ಏಕೆಂದರೆ, ಈ ಖಾತೆಯನ್ನು ನೇರವಾಗಿ ಅವರು ವಹಿಸಿಕೊಂಡಿದ್ದಾರೆ. ಇವತ್ತು ರೋಷನ್ ಬೇಗ್‌ರವರು ರಾಜ್ಯ ಸಚಿವರಿರಬಹುದು, ಆದರೆ ಅವರಿಗೆ ಎಷ್ಟರಮಟ್ಟಿಗೆ ಅಧಿಕಾರವನ್ನು ಕೊಟ್ಟಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಸಂಪೂರ್ಣವಾದಂತ ಸ್ವತಂತ್ರ ಪ್ರಭಾರ ಅವರಿಗೆ ಇಲ್ಲ, ಅವರ ಮುಖಾಂತರ ಮುಖ್ಯಮಂತ್ರಿಗಳಿಗೆ ಎಲ್ಲವೂ ಹೋಗಬೇಕು. ಅಂದಾಗ ಮುಖ್ಯಮಂತ್ರಿಗಳೇ ಇದಕ್ಕೆ ಹೊಣೆ. ಇವತ್ತು ಪ್ರಾಮಾಣಿಕವಾಗಿ ನಿಮ್ಮ ಮಾತನ್ನು ಕೇಳಿದಂಥ ಅಧಿಕಾರಿಗಳನ್ನು ಜೈಲಿಗೆ ಕಳುಹಿಸುತ್ತೀರಾ? ಪ್ರಾಮಾಣಿಕವಾಗಿ ನಿಮ್ಮ ಅನಿಸಿಕೆಗಳನ್ನು ಆಚರಣೆಗೆ ತರುವಂತಹವರಿಗೆ ಜೈಲಿಗೆ ಕಳುಹಿಸುತ್ತೀರಾ? ಮತ್ತೆ ನೀವು ಅವರನ್ನು ಈ ಕಡೆ ಉಪಯೋಗ ಮಾಡಿಕೊಳ್ಳುವುದು, ನೀವು ಇದನ್ನು ಜಾರಿಗೆ ಕೊಡಬೇಡಿ ಎಂದು ಹೇಳುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗ ಮುಖ್ಯಮಂತ್ರಿಗಳು ಸದನದಲ್ಲಿ ಇಲ್ಲ, ಸುಮ್ಮನೆ ನೀವು ಯಾರಿಗೆ ಹೇಳುತ್ತೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಇದ್ದವರಿಗೆ ನಾವು ಹೇಳಬೇಕು, ಏನು ಮಾಡುವುದು? ಇಂತಹ ಪರಿಸ್ಥಿತಿ ಇದೆ. ನಿಜವಾಗಿ ನೋಡಿದರೆ ಮುಖ್ಯಮಂತ್ರಿಗಳೇ ಬರಬೇಕು. ಏಕೆಂದರೆ ಇದು ಅವರ ಖಾತೆಗೆ ಸಂಬಂಧಿಸಿದು.

ಶ್ರೀ ವಾಟಾ ನಾಗರಾಜ್ : ಈ ರಾಜ್ಯದ ಮುಖ್ಯಮಂತ್ರಿಗಳಿಗೆ ಈ ಸದನ ಬೇಕಾಗಿಲ್ಲವೆಂದು ಕಾಣುತ್ತಿದೆ. ಈ ಸದನದ ವ್ಯವಸ್ಥೆ ಬೇಕಾಗಿಲ್ಲವೆಂದು ಕಾಣುತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಏಕೆಂದರೆ ಇದು ಬಹಳ ಮಹತ್ವವಾದದ್ದು. ಇವತ್ತು ಇವರಿಗೆ ಈ ಪರಿಸ್ಥಿತಿ ಬಂದಿದೆ, ನಾಳೆ ಅವರಿಗೆ ಅದು ಆಗಿರತಕ್ಕಂತಹ ಪರಿಸ್ಥಿತಿ ಬರುತ್ತದೆ ಏಕೆಂದರೆ ಅವರು ನಡೆಸತಕ್ಕಂತಹದ್ದು.

ಉಪಾಧ್ಯಕ್ಷರು : ಖರ್ಗೆಯವರೆ ಈ ವಿಷಯವನ್ನು ಆಮೇಲೆ ಪ್ರಸ್ತಾಪಕ್ಕೆ ತೆಗೆದುಕೊಳ್ಳೋಣವೇ? ನಾನು ನಿಮ್ಮ ಸಲಹೆಯನ್ನು ಕೇಳುತ್ತಿದ್ದೇನೆ, ಮುಖ್ಯಮಂತ್ರಿಗಳು ಬಂದ ಮೇಲೆ ಇದನ್ನು ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮುಖ್ಯಮಂತ್ರಿಗಳನ್ನು ಕರೆಯಿಸಿ ಸಾರ್. ಅಲ್ಲಿಯವರೆಗೆ ಈ ಸದನವನ್ನು ಮುಂದೂಡಿ. ಏಕೆಂದರೆ ಇದು ಬಹಳ ಮುಖ್ಯವಾದಂತಹ ವಿಚಾರ. ಇವತ್ತು ಕಾರ್ಯದರ್ಶಿಯವರಿಗೆ ಹೀಗಾಗಿದೆ ನಾಳೆ ಮುಖ್ಯಕಾರ್ಯದರ್ಶಿಯವರಿಗೆ ಆಗುತ್ತದೆ. ಅದಕ್ಕಿಂತ ಮುಖ್ಯಮಂತ್ರಿಗಳೇ, ನಾವು ತಪ್ಪನ್ನು ಮಾಡಿದ್ದೇವೆ, ನಮ್ಮಿಂದ ತಡವಾಗಿದೆ ಎಂದು ಅವರೇ ಬೇಕಾದರೆ ಹೋಗಲಿ, ಅವರನ್ನು ಕರೆಯಿಸಿ.

ಉಪಾಧ್ಯಕ್ಷರು : ಮುಖ್ಯಮಂತ್ರಿಗಳನ್ನು ಕರೆಯುವುದಕ್ಕೆ ಹೇಳಿ ಕಳುಹಿಸಿದ್ದೇವೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ಮುಖ್ಯಮಂತ್ರಿಗಳು ಈ ಬಗ್ಗೆ ಇಷ್ಟೊತ್ತಿಗೆ ಸದನಕ್ಕೆ ಬಂದು ಹೇಳಿಕೆಯನ್ನು ಕೊಡುವುದು ಅವರ ಜವಾಬ್ದಾರಿಯಾಗಿದೆ. ವಾಸುದೇವನ್‌ರವರಿಗೆ, ನಮ್ಮ ಐ.ಎ.ಎಸ್. ಅಧಿಕಾರಿಗೆ ಏನಾಗಿದೆ, ಏನು ಪರಿಸ್ಥಿತಿ ಎಂದು ಒಂದು ವಾರಕ್ಕೆ ಮುಂಚೆಯೇ ಈ ಸದನಕ್ಕೆ ಹೇಳಿಕೆಯನ್ನು ಕೊಡಬೇಕಾಗಿತ್ತು.

ಶ್ರೀ. ಡಿ. ಮಂಜುನಾಥ್ : ಮಾನ್ಯ ಉಪಾಧ್ಯಕ್ಷರೆ, ಮುಖ್ಯಮಂತ್ರಿಗಳು ಸದನಕ್ಕೆ ಬಂದು ತಿಳಿಸುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ಹೇಳುತ್ತಿದ್ದೇನೆ, ವಾಸುದೇವನ್‌ರವರ ಪರಿಸ್ಥಿತಿಯ ಬಗ್ಗೆ ಈ ಸದನಕ್ಕೆ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಇಷ್ಟೊತ್ತಿಗೆ ಕೊಡಬೇಕಾಗಿತ್ತು, ಅವರು ಹೇಳಿಕೆಯನ್ನು ಕೊಡುವುದರಲ್ಲಿ ವಿಫಲರಾಗಿದ್ದಾರೆ. ಅವರು ಒಂದು ರೀತಿ ಈ ಸದನವನ್ನು ಕಡೆಗಣಿಸಿದ್ದಾರೆಂದು ನನಗನ್ನಿಸುತ್ತಿದೆ, ಬೇರೆ ಮಾತೇ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ಬಹಳ ಮುಖ್ಯವಾದ ವಿಚಾರ ಇವತ್ತು ವಾಸುದೇವನ್ ಅವರು ದೆಹಲಿಯ ಕರ್ನಾಟಕ ಭವನದಲ್ಲಿ ಇದ್ದಾರಲ್ಲ, ಅವರನ್ನು ಹಿಡಿದುಕೊಂಡು ಜೈಲಿಗೆ ಹಾಕುತ್ತಾರೆ. ಇದು ತುರ್ತು ವಿಷಯವಾಗಿದೆ, ಈ ಬಗ್ಗೆ ನಾಲ್ಕು ದಿವಸ, ಐದು ದಿವಸ, ಮೂರು ದಿವಸವೆಂದು ವಿಳಂಬ ಮಾಡಲಾಗುವುದಿಲ್ಲ. ಏಕೆಂದರೆ ಸುಪ್ರೀಂ ಕೋರ್ಟಿನ ಆದೇಶವನ್ನು ಕೂಡಲೇ ಜಾರಿಗೆ ತರುತ್ತಾರೆ. ಅಧ್ಯಕ್ಷರೆ, ಅದರಿಂದ ಏನಾಗುತ್ತದೆಂದರೆ entire beauracracy will be demoralised.

ನಾಳೆ ಯಾರೂ ಕೂಡ ಈ ಸರ್ಕಾರದ ಮಾತನ್ನು ಕೇಳುವುದಿಲ್ಲ. ಮತ್ತೆ ನೀವು ಯಾವುದೇ ಕಾನೂನು ಚೌಕಟ್ಟಿನಲ್ಲಿ ಇದನ್ನು ಜಾರಿಗೆ ತನ್ನಿ ಎಂದು ಹೇಳಿದರೂ ಯಾರೊಬ್ಬ ಅಧಿಕಾರಿ ಜಾರಿಗೆ ತರುವುದಿಲ್ಲ ಆಡಳಿತ ಯಂತ್ರ ಸಂಪೂರ್ಣವಾಗಿ ಮಲಗಿಬಿಡುತ್ತದೆ. ಮತ್ತೆ ಒಂದೂ ಕೆಲಸವೂ ಈ ರಾಜ್ಯದಲ್ಲಿ ಆಗುವುದಿಲ್ಲ, ಆಡಳಿತವು ಸುಸ್ತಾಗುತ್ತದೆ. ಆದಕ್ಕೆ ಕಾರಣರು ಯಾರು? ನೀವು ಮುಖ್ಯಮಂತ್ರಿಗಳು. ನಿಮ್ಮ ಇಲಾಖೆ ಇದೆ, ನಿಮ್ಮ ಖಾತೆ ಇದೆ, ಇದನ್ನು ನೀವು ಸೂಕ್ಷ್ಮವಾಗಿ ನೋಡಬೇಕಾಗಿತ್ತು ಮೊದಲೇ ಇದರ ಬಗ್ಗೆ ನಿಮಗೆ ಗೊತ್ತಾಗಿತ್ತು. ಒಂದು ಸಾರಿ ವಾಸುದೇವನ್ ಅವರಿಗೆ ಒಂದು ತಿಂಗಳ ಕನ್‌ವಿಕ್ಷನನ್ನು ಕೊಟ್ಟಿದ್ದರು, ಕೂಡಲೇ ಹೋಗಿ ಇದರ ಬಗ್ಗೆ ಯೋಚನೆ ಮಾಡಿ, ಒಬ್ಬ ಒಳ್ಳೆಯ ವಕೀಲರನ್ನು ನೇಮಕ ಮಾಡಿ, ರಕ್ಷಣೆ ಮಾಡುವಂತಹದ್ದನ್ನು ಮಾಡಬೇಕಾಗಿತ್ತು. ನೀವು ಮಾಡಿದ ತಪ್ಪಿಗೆ, ಅವರನ್ನು ರಕ್ಷಣೆಯನ್ನು ಮಾಡಿಲ್ಲ, ಕೊನೆಗೆ ಬ್ಯೂರೋಕ್ರಸಿಯ ಅದರಲ್ಲೂ ಒಬ್ಬ ಒಳ್ಳೆಯ ಅಧಿಕಾರಿಯನ್ನು ಬಲಿಕೊಡುವಂತಹದ್ದು ನಡೆಯಿತು.

ಯಾರೋ ಒಬ್ಬ ಅಧಿಕಾರಿ ಕೆಟ್ಟವನಿದ್ದಾನೆ, ಅಪ್ರಮಾಣಿಕನಿದ್ದಾನೆ ಅಥವಾ ಸರಿಯಾಗಿ ಸಮರ್ಥನಿಲ್ಲ, ಅವನು ತಾನಾಗಿಯೇ ಇಂತಹ ಕೆಲಸವನ್ನು ಮಾಡಿಕೊಂಡಿದ್ದಾನೆ.

ಹೋಗಲಿ ಬಿಡಿ ಎಂದರೆ ಅದು ಬೇರೆಯ ಮಾತು. ಒಳ್ಳೆಯ ಅಧಿಕಾರಿಗಳಿಗೂ ಸಹ. ರಕ್ಷಣೆಯನ್ನು ಕೊಡತಕ್ಕಂತಹದ್ದನ್ನು ನೀವು ಮಾಡಲಿಲ್ಲವೆಂದರೆ, ನಿಮ್ಮ ಪರವಾಗಿ ಯಾರು ಕೆಲಸ ಮಾಡುತ್ತಾರೆ ಸ್ವಾಮಿ? ಯಾರು ಜನರ ಪರವಾಗಿ ಕೆಲಸ ಮಾಡುತ್ತಾರೆ? ನಾಳೆ ಜನರ ಸಮಸ್ಯೆಗಳಿಗೆ ಯಾರು ಸ್ಪಂದಿಸುತ್ತಾರೆ? ಅದಕ್ಕಾಗಿ ನೀವು ಮುಖ್ಯಮಂತ್ರಿಗಳನ್ನು ಕರೆಯಿಸಿರಿ, ಇದರ ಬಗ್ಗೆ ಚರ್ಚೆಯಾಗಬೇಕು. ತಕ್ಷಣ ಮುಂದಿನ ಕಾರ್ಯಕ್ರಮಗಳನ್ನು ಏನು ಹಾಕಿಕೊಳ್ಳಬೇಕು ಎನ್ನುವುದರ ಬಗ್ಗೆಯೂ ಕೂಡ ಅವರು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಇಲ್ಲವೆಂದರೆ ಮುಖ್ಯಮಂತ್ರಿಗಳೆ ವಾಸುದೇವನ್ ಅವರಿಗೆ ಶಿಕ್ಷೆ ಕೊಡುವುದು ಬೇಡ ಏಕೆಂದರೆ ನನ್ನ ಕೈಯಿಂದ ಆದೇಶವನ್ನು ಜಾರಿಗೊಳಿಸುವುದಕ್ಕೆ ಆಗಲಿಲ್ಲ, ಯಾರೋ ಒಬ್ಬ ಪರಿಶಿಷ್ಟ ಜಾತಿಯ ಸುಪರಿಂಟೆಂಡೆಂಟ್ ಇಂಜಿನಿಯರಿದ್ದ ಅವನಿಗೆ ಕೊಡಬೇಕಾದ್ದಿಲ್ಲ, ಅದಕ್ಕಾಗಿ ನಾನು ಬೇರೆಯವರಿಗೆ ಕೊಟ್ಟಿದ್ದೇನೆ, ಬೇಕಾದರೆ ಅವನ ಜಾಗದಲ್ಲಿ ನನ್ನನ್ನು ಹಾಕಿ ಎಂದು ಒಂದು ಅರ್ಜಿಯನ್ನು ಕೊಟ್ಟು ಹೋಗಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ಒಂದು ದಾಖಲೆಗಳು ಸರಿ ಇಲ್ಲ. ಇನ್ನೊಂದು ದುಃಖ ಆಗುವುದು ಒಬ್ಬ ಹರಿಜನ ಅಧಿಕಾರಿಗೆ ಯಾವ ಸ್ಥಿತಿಗೆ ತರುವಂಥ ಕೆಲಸ. ಹರಿಜನರಿಗೆ ಉದ್ಧಾರ ಮಾಡುತ್ತೇವೆಂದು ಹೇಳುವಂಥದ್ದು ಅವರಿಗೆ ನ್ಯಾಯಬದ್ಧವಾಗಿ ಸಿಗುವಂಥದ್ದು ಕೊಡದೇ, ಆ ಅಧಿಕಾರಿಗೆ ಜೈಲಿಗೆ ಕಳುಹಿಸಿ ಬಡ್ತಿ ಸಿಗಬೇಕಾದಂಥ ಅಧಿಕಾರಿಗೆ ದ್ರೋಹ ಮಾಡಿದ್ದಕ್ಕೆ ಇದೊಂದು ಉದಾಹರಣೆ. 25-8-1995 ನಂಬರ್ ಎ 12-6-ಪಿಆರ್ - 111-1995-96 ದಿನಾಂಕ 21.8.1995 : ಬೆಂಗಳೂರು ಕಾರ್ಪೊರೇಶನ್ ಸಭೆಯಲ್ಲಿ ತೀರ್ಮಾನ ಮಾಡಿದೆ.

"The Government of Karnataka vide its orders dated under reference has accorded sanction to create a supernumerary post of Chief Engineer and to promote Sri T.R. Dhananjay against this post in terms of Bangalore City Corporation Resolution No. 5/162 dated 29/4/1995. It is also directed in the above Government order to extend all benefits to be given to Sri T.R. Dhananjay in pursuance of the order of the Hon'ble Supreme Court of India dated 26/7/1993. In view of the fact stated above and in partial modification of official memorandum dated under reference No. 3, Sri T.R. Dhananjay, S.E., Bangalore City Corporation is promoted as Chief Engineer with immediate effect against the newely created post. He is entitled for all the benefits in terms of the orders of the Hon'ble Supreme Court of India, dated 26/7/1993 read with Bangalore City Corporation resolution No. 5/162 dated 29/4/1994".

ಇಲ್ಲಿ ಆಶ್ಚರ್ಯ ಮತ್ತು ಮುಖ್ಯವಾದ ಸಂಗತಿ ಎಂದರೆ, ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿ ಇದ್ದಂಥ ಕಾಲದಲ್ಲಿ ಶ್ರೀ ಗೋಪಿನಾಥ್ ಸಾಂಡ್ರಾರವರು ವಸತಿ ಸಚಿವರಾಗಿ ದಿನಾಂಕ 11.10.1993ರಂದು ಪತ್ರವನ್ನು ಬರೆಯುತ್ತಾರೆ.

(ಸಭಾಧ್ಯಕ್ಷರು ಪೀಠವನ್ನಲಂಕರಿಸಿದರು)

ಅಧ್ಯಕ್ಷರು : ಒಂದು ವಿನಂತಿ ಮಾಡಿಕೊಳ್ಳುತ್ತೇನೆ, ನಿಮ್ಮನ್ನು before you could proceed ನನಗೇನನ್ನಿಸುತ್ತದೆಂದರೆ ಇದು ಬಹಳ ಸೂಕ್ಷ್ಮವಾದಂಥ ವಿಚಾರ. ನಾವು ನಮ್ಮ ಆಂಕ್ಷಯ್‌ಟಿಯಲ್ಲಿ ಅವರಿಗೆ ಏನೋ ಸಹಾಯ ಮಾಡಬೇಕು ಎನ್ನುವ ಆತುರದಲ್ಲಿ, ಅದು ಇನ್ನೇನೋ ಆಗಲು ಬಾರದು ನೋಡಿ. ನೀವು ಎಲ್ಲರೂ

ಒಪ್ಪುವುದಾದರೆ ಒಂದು ಹತ್ತು ನಿಮಿಷ ಸದನ ಮುಂದಕ್ಕೆ ಹಾಕೋಣ. ತಾವು ಎಲ್ಲರೂ ಕೂಡ ಹಿರಿಯರಿದ್ದೀರಿ, ಪರಿಣಿತರಿದ್ದೀರಿ ಇಲ್ಲಿ ಚರ್ಚೆ ಮಾಡುವ ಬದಲು...

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ವಾಕ್ಯವನ್ನು ಪೂರ್ತಿ ಮಾಡುತ್ತೇನೆ. ವಿವರಕ್ಕೆ ಹೋಗುವುದಿಲ್ಲ, ದಿನಾಂಕ 11.10.93ರಂದು ಸನ್ಮಾನ್ಯ ಗೋಪಿನಾಥ ಸಾಂಡ್ರಾರವರು ವಸತಿ ಸಚಿವರಾಗಿ ಒಂದು ಪತ್ರವನ್ನು ಬರೆದಿದ್ದಾರೆ. ದಯಮಾಡಿ ಹೈಕೋರ್ಟ್ ಅಥವಾ ಸುಪ್ರೀಂ ಕೋರ್ಟ್ ಆದೇಶವನ್ನು ಅನುಷ್ಠಾನಕ್ಕೆ ತರಲು ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ ಮತ್ತು ಮಹಾನಗರ ಪಾಲಿಕೆ ಸೂಕ್ತ ಕ್ರಮ ತೆಗೆದುಕೊಳ್ಳಲು ಆದೇಶ ನೀಡಬೇಕೆಂದು ಹೇಳಿ ಪತ್ರ ಬರೆದಿದ್ದಾರೆ. ಈ ಆದೇಶವನ್ನು ಧಿಕ್ಕರಿಸಿ ಕಡತವನ್ನು ಈ ಕಡೆ ಆ ಕಡೆ ಕಳುಹಿಸುತ್ತಿದ್ದಾರೆ. ಶ್ರೀ ಧನಂಜಯರವರು ಕಂಟೆಪ್ಟ್ ಆಫ್ ಕೋರ್ಟ್‌ಗಾಗಿ ಮೊರೆ ಹೋದಾಗ ನ್ಯಾಯಾಲಯದವರು ಅರ್ಜಿದಾರರ ಪರವಾಗಿ ಮತ್ತೊಮ್ಮೆ ಆದೇಶವನ್ನು ನೀಡಿದ್ದಾರೆ. ಇಷ್ಟಿದ್ದರೂ ಕೂಡ ಈವರೆಗೆ ಅವರಿಗೆ ಸ್ಥಾನ ನೀಡಲಾಗಿಲ್ಲ, ಈ ಕಡತವನ್ನು ಅಡ್ವೋಕೇಟ್ ಜನರಲ್‌ರವರ ಓಪಿನಿಯನ್‌ನ್ನು ಪಡೆದುಕೊಂಡು ಕಳುಹಿಸಿದ್ದಾರೆ. ಅಂದರೆ ಗೋಪಿನಾಥ್ ಸಾಂಡ್ರಾರವರು ಮುಂದಾಲೋಚನೆ ಮಾಡಿ ಸಚಿವರಾಗಿ ದಿನಾಂಕ 11.10.1993ರಂದು ಸನ್ಮಾನ್ಯ ಮುಖ್ಯಮಂತ್ರಿಗಳಾದ ವೀರಪ್ಪ ಮೊಯಿಲಿಯವರಿಗೆ ಒಂದು ಪತ್ರವನ್ನು ಬರೆದಿದ್ದಾರೆ. ವೀರಪ್ಪ ಮೊಯಿಲಿಯವರು ದಿನಾಂಕ 12.10.1993ರಂದು ಬೆಂಗಳೂರು ಮಹಾನಗರ ಪಾಲಿಕೆ ಸೂಪರಿಂಟೆಂಡಿಂಗ್‌ಇಂಜಿನಿಯರ್ ಶ್ರೀ ಟಿ.ಆರ್. ಧನಂಜಯ ಕುಮಾರ್ ಅವರಿಗೆ ಬಡ್ತಿ ನೀಡುವ ಬಗ್ಗೆ ಸುಪ್ರೀಮ್ ಕೋರ್ಟ್ ಆದೇಶವನ್ನು ಅನುಷ್ಠಾನಕ್ಕೆ ತರಲು ಕೋರಿ ತಾವು ದಿನಾಂಕ 11.10.1993ರಂದು ಬರೆದ ಪತ್ರ ಬಂದು ತಲುಪಿದೆ. ಈ ವಿಷಯವನ್ನು ಕೂಡಲೇ ಪರಿಶೀಲಿಸಿ ವರದಿ ನೀಡಲು ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿಯವರಿಗೆ ಸೂಚನೆ ನೀಡಿದ್ದೇನೆ. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ ಅವೊತ್ತಿದ್ದಂಥ ಸರ್ಕಾರ ಕೂಡ ತ್ವರಿತವಾಗಿ ಸುಪ್ರೀಮ್ ಕೋರ್ಟ್ ಆದೇಶವನ್ನು ಪಾಲನೆ ಮಾಡದೇ ದೊಡ್ಡ ಅಪರಾಧ ಮಾಡಿ. ಇವೊತ್ತು ವಾಸುದೇವನ್‌ಗೆ ಈ ಸ್ಥಿತಿ ಬರುವುದಕ್ಕೆ ಕಾರಣವಾಯಿತು. ಅದು ಆದಮೇಲೆ ದೇವೇಗೌಡರು ಮುಖ್ಯಮಂತ್ರಿಗಳಾದ ಮೇಲೆ ಅವರಿಗೆ ಬೇಕಾದ ಯಾರಿಗೋ ಒಬ್ಬರಿಗೆ ಪ್ರಮೋಷನ್ ಕೊಡಿಸಬೇಕೆಂದು, ಸುಪ್ರೀಂ ಕೋರ್ಟ್ ಆದೇಶವನ್ನು ಧಿಕ್ಕರಿಸಿ ಈ ಅಕ್ಷಮ್ಯ ಅಪರಾಧವನ್ನು ಮಾಡಿದ್ದಂಥ ಇವೊತ್ತು, ಒಬ್ಬ ಪ್ರಾಮಾಣಿಕ ಅಧಿಕಾರಿ ಜೈಲಿಗೆ ಹೋಗುವಂಥ ಪರಿಸ್ಥಿತಿ ಉಂಟಾಗಿದೆ. ಇನ್ನೊಂದು ಕಡೆ ಹರಿಜನ ಗಿರಿಜನರಿಗೆ ಉದ್ಧಾರ ಮಾಡುತ್ತೇವೆಂದು ಪ್ರಮೋಶನ್ ಕೊಡುತ್ತೇವೆಂದು ಹೇಳುವಂಥವರು ಯಾವ ರೀತಿ ಆ ಸಮೂಹಕ್ಕೆ ದ್ರೋಹ ಮಾಡಿದ್ದಾರೆ ಎನ್ನುವಂಥದ್ದಕ್ಕೆ ಇದೊಂದು ಉದಾಹರಣೆ. ಕಡತಕ್ಕೆ ಹೋಗಲಿ ಎಂದು ಹೇಳುವುದಕ್ಕೆ ಇದನ್ನು ಹೇಳುತ್ತಿದ್ದೇನೆ. ಗೊತ್ತಿದ್ದರೂ ಸಹ ಎಲ್ಲವನ್ನು ಮುಚ್ಚಿಹಾಕಿ ಒಂದು ಅಕ್ಷಮ್ಯ ಅಪರಾಧವನ್ನು ಮಾಡಿದ್ದರಿಂದ ಹೇಳುವುದಕ್ಕೆ ಇದೊಂದು ಉದಾಹರಣೆ. ಮಾನ್ಯ ಅಧ್ಯಕ್ಷರೇ, ಇನ್ನೂ ಅನೇಕ ದಾಖಲೆಗಳಿಗೆ ತಮಗೆ ನಾನು ಕಳುಹಿಸಿ ಕೊಡುತ್ತೇನೆ. ತಮಗೆ ಆಶ್ಚರ್ಯವಾಗುವಂಥದ್ದು ಎಂದರೆ ಈ ಸರ್ಕಾರ ಬಂದ ಮೇಲೆ ಯಾರೋ ಮೂರು ಜನ ಶಾಸಕರ ಕಾಗದಗಳನ್ನು ತೆಗೆದುಕೊಂಡು ತಕ್ಷಣ ಆ ಫೈಲನ್ನು ತಂದು ಇಲ್ಲಿ ಇಟ್ಟುಕೊಂಡು ಯಾವ ಸ್ಥಿತಿ ಮಾಡಿದ್ದಾರೆ ಎನ್ನುವುದಕ್ಕೆ ನನ್ನ ಹತ್ತಿರ ದಾಖಲೆ ಇದೆ. ಅದನ್ನು ನಾನು ನಿಮಗೆ ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು : ಈಗ ಹತ್ತು ನಿಮಿಷ ದಯಮಾಡಿ ಎಲ್ಲರೂ ಒಪ್ಪಿದರರೆ ಸದನವನ್ನು ಮುಂದಕ್ಕೆ ಹಾಕುತ್ತೇನೆ. ಕೂಡಲೇ ಎಲ್ಲರು ಕುಳಿತುಕೊಂಡು ಚರ್ಚೆ ಮಾಡೋಣ. ಬೇರೆ ವಿಷಯ ಏನೇ ಇರಲಿ.

ಶ್ರೀ ಡಿ. ಮಂಜುನಾಥ್ : ಆಯಿತು, ಹತ್ತು ನಿಮಿಷ ಮುಂದಕ್ಕೆ ಹಾಕಿ.

ಶ್ರೀ ಹೆಚ್.ಎನ್. ನಂಜೇಗೌಡ : ಅಷ್ಟು ಸುಲಭವಾಗಿ ಮುಂದಕ್ಕೆ ಹಾಕಿ ಎಂದರೆ ಆಗುತ್ತದೆಯೋ? ಮಂಜುನಾಥ್‌ರವರೇ, ಸ್ವಲ್ಪ ದಯಮಾಡಿ ಕಿವಿಗೆ ಹಾಕಿಕೊಳ್ಳಿ, ಏತಕ್ಕೆ ಆತುರ ಪಡುತ್ತೀರಿ?

ಶ್ರೀ ಡಿ. ಮಂಜುನಾಥ್ : ತಾವು ಅನುಭವಸ್ಥರಿದ್ದೀರಿ, ಅಧ್ಯಕ್ಷರು ಹೇಳಿದಹಾಗೆ ಇದು ಸೂಕ್ಷ್ಮವಾದ ವಿಚಾರವೇ, ಇಲ್ಲಿ ಚರ್ಚೆ ಮಾಡುವುದು ಬೇಡ.

ಶ್ರೀ ಹೆಚ್.ಎನ್. ನಂಜೇಗೌಡ : ನಾವು ಅನುಭವಸ್ಥರಿರುವುದರಿಂದಲೇ ಪ್ರಸ್ತಾಪ ಮಾಡಬೇಕಾಗಿರುವುದು. ಇದು ಸೂಕ್ಷ್ಮವಾದ ವಿಚಾರವಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನೇರವಾಗಿ ಅಧಿಕಾರಿಗಳಿಗಲ್ಲ ಶಿಕ್ಷೆ ಆಗಬೇಕಾಗಿರುವುದು. ಇದರ ತೆರೆಮರೆಯಲ್ಲಿ ನೇರವಾಗಿ ಸರ್ಕಾರದ ಮೇಲೆ ಪ್ರಾಮಾಣಿಕವಾಗಿ ಹೇಳುವುದಾದರೆ ಸರ್ಕಾರದ ಬೇಜವಾಬ್ದಾರಿತನದಿಂದ ಇವೊತ್ತು ಇದು ಆಗಿರುವುದು. ಒಂದು ವರ್ಷದಿಂದ ಜವಾಬ್ದಾರಿ ಇಲ್ಲದೆ ಇರುವ ವಿಚಾರಕ್ಕೆ ಇದು ಆಗಿರುವುದು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ಪರಿಶಿಷ್ಟ ಜಾತಿಯವರಿಗೆ ಅನ್ಯಾಯವಾಗಿದೆ, ನಾನು ಒಂದು ಕ್ಷಣವೂ ಮಂತ್ರಿ ಸ್ಥಾನದಲ್ಲಿ ಇರೋದಿಲ್ಲ ಹೋಗುತ್ತೇನೆಂದು ಮಂಜುನಾಥ್‌ರವರೇ ನೀವು ಹೇಳಬೇಕಾಗಿತ್ತು. ಅಂತಹ ಪರಿಸ್ಥಿತಿ ಇದು. ಅದರ ಪರವಾಗಿ ಮಾತನಾಡುತ್ತೀರಿ ಎಂದರೆ ನಿಮ್ಮ ಕಳಕಳಿ ಏನು, ನಿಮಗೆ ಖುರ್ಚಿ ಸಿಕ್ಕಿದೆ ಸಾಕು ಯಾರಾದರು ಹಾಳಾಗಿ ಹೋಗಲಿ ಎನ್ನುವ ದೃಷ್ಟಿಯಲ್ಲಿದ್ದೀರಿ ನೀವು ಅಷ್ಟೆ.

(ಗೊಂದಲ)

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೇ, ನಾನು ಒಂದು ಮಾತನ್ನು ತಮ್ಮನ್ನು ಕೇಳುತ್ತೇನೆ. ಅವರು ನಿಯಮ 69ರ ಅಡಿಯಲ್ಲಿ ಕೊಟ್ಟಿರತಕ್ಕಂಥದ್ದು. ಅದರ ನಕಲು ಬಂದಿದೆ. ಮಾನ್ಯ ಸಭಾಧ್ಯಕ್ಷರೇ ತಾವು ಅದನ್ನು ಡಿಸ್ಕಶನ್‌ಗೆ ಸ್ಲೇಟ್ ಮಾಡಬಹುದಾಗಿತ್ತು. ಏಕಾಏಕಿಯಾಗಿ ಪ್ರತಿಯೊಂದು ವಿಚಾರವನ್ನು ತಾವು .....

(ಗೊಂದಲ)

ಶ್ರೀ ಎಂ.ಸಿ. ನಾಣಯ್ಯ : ಹಾಗಾದರೆ ಈ ಸಭೆಗೆ ನಿಯಮ ಇಲ್ಲವೇ?

(ಗೊಂದಲ)

ಶ್ರೀ ಎಂ.ಸಿ. ನಾಣಯ್ಯ : ನಾವು ಅದರ ಬಗ್ಗೆ ಪರಿಶೀಲನೆ ಮಾಡಬೇಕಾಗುತ್ತದೆ. ನೀವು ಅದನ್ನು ಯಾವ ನಿಯಮಕ್ಕನುಸಾರವಾಗಿ ತರುತ್ತಿದ್ದೀರಿ? ರಾಜಕಾರಣ ಮಾಡಲಿಕ್ಕೆ ಒಂದು ಮಿತಿ ಬೇಕಾಗುತ್ತದೆ.

(ಗೊಂದಲ)

Sri M.C. Nanaiah : Let it come for discussion as per rules. This is not the first time that you are raising issues like this. For everything you are

provoking. You give proper notice. This is not the manner in which you have raise issues. For what purpose you are raising this issue.

(Interruptions)

ಶ್ರೀ ಬಿ.ಎಸ್. ಯಡಿಯೂರಪ್ಪ : ಜನರ ತೀರ್ಪಿಗೆ ಮನ್ನಣೆ ಇಲ್ಲ, ಸುಪ್ರೀಮ್ ಕೋರ್ಟ್ ತೀರ್ಪಿಗೆ ಮನ್ನಣೆ ಇಲ್ಲ, ಇವತ್ತು ನಾವು ಪ್ರಜಾತಂತ್ರ ವ್ಯವಸ್ಥೆಯಲ್ಲಿದ್ದೇವೋ ಏನೋ?

(ಗೊಂದಲ)

ಶ್ರೀ ಹೆಚ್.ಎನ್. ನಂಜೇಗೌಡರು : ಈಗ ಸ್ವಲ್ಪ ಸಮಗ್ರ ಚಿಂತನೆ ಆಗಬೇಕಾಗಿದೆ. ನಾನು ಇನ್ನು ಬಾಯಿನೇ ಬಿಟ್ಟಿಲ್ಲ, ನಾನು ಬಾಯಿ ಬಿಡುವುದಕ್ಕೆ ಮುಂಚೆ ಅಧ್ಯಕ್ಷರೇ, ನಾನು ಪದೇ ಪದೇ ಹೇಳುತ್ತೇನೆ, ಇವೊತ್ತು ಮುಖ್ಯಮಂತ್ರಿಗಳು ಕೂಡ ಇದ್ದಾರೆ ನಾನು ವಿನಂತಿಸಿಕೊಳ್ಳುತ್ತೇನೆ. ಪಾರ್ಲಿಮೆಂಟ್ ಅಫೇರ್ಸ್ ಮತ್ತು ಲಾ ಅವರಿಂದ ಕಿತ್ತು ಯಾರಿಗಾದರೂ ಸರಿಯಾದವರಿಗೆ ಕೊಡಿ.

ಶ್ರೀ ಎಂ.ಸಿ. ನಾಣಯ್ಯ : ನೀವು ಹೇಳಿದ್ದನ್ನೆಲ್ಲಾ ಕೇಳೋದಕ್ಕಲ್ಲ ಇಲ್ಲಿ ಇರುವುದು. I am sorry. We are not here to take and accept everything. We have got responsibility and we are speaking from the Government. If the Hon'ble Speaker states if for discussion, we will come with relevant papers

ನೀವು ಬಹಳ ಸಲ ಇದನ್ನು ನನಗೋಸ್ಕರ ಹೇಳಿದ್ದೀರಿ. ನಾನು ಹೇಳುತ್ತಿದ್ದೇನೆ. ನಾನು ಕೂಡ ಜವಾಬ್ದಾರಿಯಿಂದ ಮಾತನಾಡುತ್ತಿದ್ದೇನೆ. ಒಂದು ನಿಯಮ ಇದೆ. ಆ ನಿಯಮದ ಅಡಿಯಲ್ಲಿ ತನ್ನಿ. ಮಾನ್ಯ ಸಭಾಧ್ಯಕ್ಷರು ಅದನ್ನು ಡಿಸ್ಕಶನ್‌ಗೋಸ್ಕರ ಸ್ಟೇಟ್ ಮಾಡಲಿ. We will come forward with relevant papers before the house.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರಿಗೆ ಅನುಮತಿಯನ್ನು ಪಡೆದೇ ಇಲ್ಲಿ ಪ್ರಸ್ತಾಪವನ್ನು ಮಾಡಿದ್ದೇವೆ. ಅಧ್ಯಕ್ಷರು ಅನುಮತಿಯನ್ನು ಕೊಟ್ಟಮೇಲೆ ಅದನ್ನು ಪರಿಶೀಲನೆ ಮಾಡುವ ಅಧಿಕಾರ ನಿಮಗೂ ಇಲ್ಲ. ನಾವು ಅಧ್ಯಕ್ಷರನ್ನು ವಿನಂತಿ ಮಾಡಿ ಚರ್ಚೆ ಪ್ರಾರಂಭವಾದ ಮೇಲೆ ಅಧ್ಯಕ್ಷರು ಏತಕ್ಕೆ ಅನುಮತಿ ಕೊಟ್ಟರು ಎಂದು ಕೇಳುವ ಅಧಿಕಾರ ನಿಮಗೂ ಇಲ್ಲ. ಆ ಚೇರ್‌ಗೆ ಇದೆ. ಯಾವುದೇ ರೂಲ್ಸ್‌ನ್ನು ಸಸ್ಪೆಂಡ್ ಮಾಡಿ ಮಹತ್ವವಾದದ್ದನ್ನು ಕಂಡರೆ ಅದಕ್ಕೆ ಅವಕಾಶವನ್ನು ಕೊಡುವಂಥ ಅಧಿಕಾರ ಅವರಿಗೆ ಇದೆ. ಅವರು ನಿಲ್ಲಿಸಬೇಕೆಂದರೆ ಬಾಯಿ ಮುಚ್ಚಿಕೊಂಡು ಇರಲಿಕ್ಕೆ ನಾವು ಸಿದ್ಧರಿದ್ದೇವೆ. ನಿಮಗೆ ಆ ಅಧಿಕಾರ ಇಲ್ಲ,

ಶ್ರೀ ವಾಟಾಳ್ ನಾಗರಾಜ್ : ಶಿಕ್ಷೆ ಖಾಯಂ ಆಗಿದೆ ಎಂದು ಸುದ್ದಿ ಬಂದಾಗ, ಇದನ್ನು ನಾವು ಹೇಳಬಾರದು ಎಂದರೇನು? ವಾಸುದೇವನ್‌ರವರಿಗೆ ಶಿಕ್ಷೆ ಖಾಯಂ ಆಗಿದೆ ಅದನ್ನು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸಬೇಕೇ ಬೇಡವೆ?

3.30 ಪಿ.ಎಂ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಈಗ ಏನು ಅಭಿಪ್ರಾಯ ಬರುತ್ತಿದೆಯೆಂದರೆ, ಏನೋ ನಮಗೆ ಸಂಬಂಧವಿಲ್ಲದ ವಿಷಯವನ್ನು ಇಲ್ಲಿ ಎತ್ತಿದ್ದೇವೆ, ಅದಕ್ಕೆ ಕಾನೂನು ಚೌಕಟ್ಟಿನಲ್ಲಿ ಪರ್ಮಿಶನ್ ಕೊಡಬಾರದು ಆದರೂ ನೀವು ಕೊಟ್ಟಿದ್ದೀರಿ ಎನ್ನತಕ್ಕಂಥ ಅಭಿಪ್ರಾಯವನ್ನು ಅವರು ಇಟ್ಟುಕೊಂಡು

ಮಾತನಾಡುತ್ತಿದ್ದಾರೆ. ಇವೊತ್ತು 363 ರೂಲ್ ಕೆಳಗಡೆ ತಮಗೆ ಸಬ್‌ಸೀಡಿಯರಿ ಪವರ್ಸ್ ಇದೆ, ಸಂಪೂರ್ಣವಾಗಿ ತಾವು ಸದನದಲ್ಲಿರತಕ್ಕಂಥ ಯಾವುದೇ ಒಂದು ನಿಯಮವನ್ನು ಸಸ್ಪೆಂಡ್ ಮಾಡಿ, ಮುಖ್ಯವಾದ ಇಶ್ಯೂ ಇದ್ದರೆ ಅದನ್ನು ತೆಗೆದುಕೊಳ್ಳಬಹುದು ಎನ್ನತಕ್ಕಂಥ ವಿಚಾರ ಈಗಾಗಲೇ ರೂಲ್ಸ್‌ನಲ್ಲಿ ಇದೆ.

ಅಧ್ಯಕ್ಷರು : ಇರಲಿ ಬಿಡಿ ಖರ್ಗೆಯವರೇ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಲ್ಲ, ಇಲ್ಲ, ಪವರ್ಸ್ ಇಲ್ಲ, ಹೇಗೆ ಚರ್ಚೆಗೆ ಬಂತು ಅನ್ನತಕ್ಕಂಥದ್ದಲ್ಲ. ಇದರಿಂದ ಏನಾಗುತ್ತದೆಂದರೆ ತಮ್ಮ ಮನಸ್ಸಿಗೂ ನೋವಾಗುತ್ತದೆ. ನಾವು ಏನೋ ಬೇಜವಾಬ್ದಾರಿಯಿಂದ ಮಾತನಾಡುತ್ತೇವೇನೋ ಕಾನೂನೇ ಇಲ್ಲವೇನೋ ಇವರಿಗೆ ಕಾನೂನಿನ ಚೌಕಟ್ಟಿನಲ್ಲಿ ಮಾತನಾಡತಕ್ಕಂಥದ್ದು ಇವರಿಗೆ ಗೊತ್ತಿಲ್ಲ ಎನ್ನತಕ್ಕಂಥದ್ದು ಬರಬಾರದು. ಆದ್ದರಿಂದ ನಾನು ಇದನ್ನು ಕೋಟ್ ಮಾಡುತ್ತೇನೆ, ಇದು ಅವರಿಗೆ ಗೊತ್ತಿದೆ, ಆದರೂ ಕೂಡ ಪದೇ ಪದೇ ಇದನ್ನು ಕೇಳತಕ್ಕಂಥದ್ದು. As per rule No. 363 of our Rules of Procedure the Hon'ble Speaker has powers to suspend rules and allow a specific point to be taken up for discussion. I quote. "All matters not specifically provided for these rules and all questions relating to the detailed working of these rules shall be regulated in such manner as the Speaker may from time to time direct".

So, the Hon'ble Speaker, has got this power. The Hon'ble Speaker has permitted to raise this subject.

ನಾನೂ ಕೂಡ ಮಾತನಾಡಬೇಕು ಎಂದು ಎರಡು ನಿಮಿಷ ನಿಂತೆ. ನಾವು ಏನು ಅಪರಾಧ ಮಾಡಿರುವುದು? ಇದು ಏನು ಇಂಪ್ರೆಷನ್ ಕೊಡುತ್ತಿದ್ದಾರೆ ಎಂದರೆ ಕಾನೂನಿನಲ್ಲಿ ತಿಳಿಸಿಲ್ಲ. ಏನು ಬಂದರೂ ಅದನ್ನು ಮಾತನಾಡುತ್ತಿದ್ದಾರೆ, ಯಾವ ರೂಲ್‌ನಲ್ಲಿ ಮಾತನಾಡುತ್ತಿದ್ದಾರೆ ಎಂದು ಪುಸ್ತಕ ತೆಗೆದುಕೊಂಡು ಕೇಳುತ್ತಿದ್ದಾರೆ. ಆದ್ದರಿಂದ ನಾನು ಹೇಳುತ್ತಿದ್ದೇನೆ ರೂಲ್ ನಂಬರ್ 363 ಯನ್ನು ತೆಗೆದುಕೊಂಡು ನಾವು ಇದನ್ನು ರೈಸ್ ಮಾಡಿದ್ದೇವೆ. ತಾವು ಸಸ್ಪೆಂಡ್ ಮಾಡಿದೆ ಬೇರೆ ರೂಲ್ಸ್, ಇವೊತ್ತು ನಮಗೆ ಪರ್ಮಿಶನ್ ಕೊಡಿ.

+ ಹೆಚ್.ಎನ್. ನಂಜೇಗೌಡ : ಅಧ್ಯಕ್ಷರೇ, ಇದರ ಜೊತೆಗೆ ನಾನು ಒಂದೆರಡು ಮಾತುಗಳನ್ನು ಹೇಳುತ್ತೇನೆ. ಇವೊತ್ತು ಸಭೆ ನಡೆಸುವುದರ ಬಗ್ಗೆ ರೂಲ್ಸ್ ಇದೆ, ಅದು ಎಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. ಒಂದು ವಿಶೇಷವಾದಂಥ ಪರಿಸ್ಥಿತಿ ಇವೊತ್ತು ಒದಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದಾಗಲೀ ಆಮೇಲೆ, ಏಕೆಂದರೆ ಮುಖ್ಯಮಂತ್ರಿಗಳು ಬಂದರಲ್ಲಾ ಈ ಸಭೆಗೆ.

ಶ್ರೀ ಹೆಚ್.ಎನ್. ನಂಜೇಗೌಡ : ಅಲ್ಲ, ನಾನು ಏನು ಹೇಳುತ್ತೇನೆಂದರೆ, ಈಗ doctrine of ministerial responsibility ಇದೆ ನಮ್ಮದು parliamentary system of democracy ಇದೆ doctrine of ministerial responsibility ತೆಗೆದುಕೊಂಡರೆ ಸುಪ್ರೀಂ ಕೋರ್ಟ್ ಒಬ್ಬ ಅಧಿಕಾರಿಗೆ ಜೈಲ್‌ಗೆ ಹಾಕುತ್ತದೆ. Why I am agitated is, ದಿನವೂ ಬರತಕ್ಕಂಥ ನ್ಯೂಸ್‌ನ್ನು ತಾವು ನೋಡುತ್ತೀರಿ. ಯಾರೋ ಒಬ್ಬ ಐ.ಎ.ಎಸ್. ಅಧಿಕಾರಿ ನಮ್ಮ ಕರ್ನಾಟಕದವರೇ ಒಬ್ಬ ಜಡ್ಜ್ ನೋಡುತ್ತಾನೆ. ಕೊನೆಗೆ ಈ ಅಧಿಕಾರಿ ಹೆದರಿಕೊಂಡು ಕಾಲಿಗೆ ಬಿದ್ದು ಓಡಿ ಬರುತ್ತಾನೆ. ಪತ್ರಿಕೆಯಲ್ಲಿ ಬರತಕ್ಕಂಥ ನ್ಯೂಸನ್ನು ನಾನು ಹೇಳುವುದು. ಇಂಥ ವಿಚಾರಗಳಿಂದ ಹೊರದೇಶಗಳಲ್ಲಿ

ನಮ್ಮ ರಾಷ್ಟ್ರದ ಗೌರವ ಘನತೆ ಕೆಳಮಟ್ಟಕ್ಕೆ ಹೋಗುತ್ತದೆ ಎನ್ನುವುದನ್ನು ಯಾರೂ ಚಿಂತನೆ ಮಾಡಿದ ಹಾಗೆ ಕಾಣುವುದಿಲ್ಲ, ಇದ್ದವರು ಇಬ್ಬರಲ್ಲಿ ಕದ್ದವರು ಯಾರು ಅಂತ, ಒಬ್ಬ ಅಧಿಕಾರಿ ಹೋಗಿ ಜಡ್ಜ್‌ನ್ನು ನೋಡುತ್ತಾನೆ, ಜಡ್ಜ್ ಮತ್ತು ಇವರಿಗೆ ಸಂವಾದ ಆಗುತ್ತದೆ, ಅದು ಪತ್ರಿಕೆಯಲ್ಲಿ ಬರುತ್ತದೆ, ಇಲ್ಲವೇ ಅಧಿಕಾರಿ ಹೇಳಬೇಕು ಹೀಗಾಯಿತು, ಅದಕ್ಕಾಗಿ ನಾನು ಕಾಲಿಗೆ ಬಿದ್ದು ಓಡಿಬಂದೆ ಎಂದು. ಅಧಿಕಾರಿ ಹೇಳಿರುವುದಕ್ಕೆ ಸಾಧ್ಯವಿಲ್ಲ ಎಂದರೆ ಜಡ್ಜ್ ಹೇಳುತ್ತಾನೆ. ಇದು ಒಂದು ಸಾಧಾರಣ ವಿಚಾರ ಅಂತ ಹೇಳಿ ಯುಶ್ಯೂವಲ್ ಕೋರ್ಸ್‌ನಲ್ಲಿ ಇದು ಕಂಟೇಮ್ಪ್ಟ್ ಆಗುತ್ತದೆ, ನೋಟಿಸ್ ಕೊಟ್ಟು ಇದನ್ನು ಮಾಡಬೇಕು ಎಂದರೆ, ನಾನು ಹೇಳತಕ್ಕಂಥದ್ದು ಎಂದರೆ ಇಲ್ಲಿ ಮೂರು ವಿಚಾರಗಳು ಅಡಕವಾಗಿದೆ ಮಾನ್ಯ ಅಧ್ಯಕ್ಷರೇ, ಹೇಳತಕ್ಕಂಥದ್ದು ಎಂದರೆ ಇಲ್ಲಿ ಮೂರು ವಿಚಾರಗಳು ಅಡಕವಾಗಿದೆ ಮಾನ್ಯ ಅಧ್ಯಕ್ಷರೇ,

Mr. Speaker : I had asked the Hon'ble Deputy Speaker to preside. ಸಭೆ ಪುನಃ ಸಮಾವೇಶವಾದ ತಕ್ಷಣ ಮಾನ್ಯ ವಾಟಾಳ್ ನಾಗರಾಜ್‌ರವರು, ವಿರೋಧ ಪಕ್ಷದ ನಾಯಕರು, ಖರ್ಗೆಯವರು ಎಲ್ಲರೂ ಎದ್ದರು. ಏನು ವಿಷಯ ಅಂತ ಕೇಳಿದಾಗ ಈ ರೀತಿಯ ಇದೆಯೆಂದು ಹೇಳಿದರು. ಮೊದಲು ವಾಟಾಳ್‌ರವರು ಪ್ರಸ್ತಾಪ ಮಾಡಿದಂಥ ಸಂದರ್ಭದಲ್ಲಿ, ಅತ್ಯಂತ ಕರುಣೆಯಿಂದ ಪ್ರಾಮಾಣಿಕ ಅಧಿಕಾರಿ ಸುಪ್ರೀಂ ಕೋರ್ಟ್ ಮುಂದೆ ಹೋದರೂ ಕೂಡ ಸುಪ್ರೀಂ ಕೋರ್ಟ್ ಅದನ್ನು ನಿರಾಕರಣೆ ಮಾಡಿದೆ. ಒಬ್ಬ ದಕ್ಷ ಅಧಿಕಾರಿ, ಪ್ರಾಮಾಣಿಕ ಅಧಿಕಾರಿ, ಇದು ನಮ್ಮೆಲ್ಲರಿಗೂ ಆಗಿರತಕ್ಕಂಥ ನೋವು. ಇದಕ್ಕೆ ಏನು ಪರಿಹಾರ ಸಾಧ್ಯವಾಗುತ್ತದೆಯೋ ಅದನ್ನು ನಾವು ಕಂಡುಕೊಳ್ಳಬೇಕು. ಆತನನ್ನು ರಕ್ಷಣೆ ಮಾಡಬೇಕು ಎನ್ನತಕ್ಕಂಥ ಅಭಿಪ್ರಾಯ ವ್ಯಕ್ತ ಮಾಡಿ ಅಲ್ಲಿಗೆ ಸೀಮಿತಗೊಳಿಸಿದೆ. ಆಮೇಲೆ ಅದು ಏನಾಯಿತು ಎಂದರೆ ನಂತರ ಅದು ಬೇರೆಲೆಲ್ಲೋ ಪ್ರೋರ್ಶನ್ಸ್‌ಗೆ ಹೋಯಿತು? ಅದಕ್ಕೆ ಯಾರು ಕಾರಣ, ಯಾರು ನಿಧಾನ ಮಾಡಿದರು ಎಂದು. ಅದು ನಾವು ಮಾತನಾಡತಕ್ಕಂಥ ಸಂದರ್ಭದಲ್ಲಿ ಮೀಟರ್ ಇಟ್ಟು ನಾವು ಎಲ್ಲರನ್ನೂ ಚೆಕ್ ಮಾಡುವುದಕ್ಕಾಗುವುದಿಲ್ಲ, ಮಾತು ಆಡುವ ಸಂದರ್ಭದಲ್ಲಿ ಏನೇನೆಲ್ಲಾ ಬರುತ್ತದೆ. ಈಗಾಗಲೇ ಒಂದು ಸೂಕ್ಷ್ಮವಾದಂತಹ ವಿಚಾರ ಇಲ್ಲಿ ಅಸ್ಫೋಟಗೊಂಡು ಇಲ್ಲಿಗೆ ಬಂದು ನಿಂತಿದೆ. ಅಷ್ಟರಲ್ಲಿ ನಾನು ಲಾ ಡಿಪಾರ್ಟ್ ಮೆಂಟ್‌ನ ಲಾ ಸೆಕ್ರೆಟರಿ ಜೊತೆ ಒಂದೆರಡು ನಿಮಿಷ ಮಾತನಾಡಬೇಕಾಗಿತ್ತು ಆದ್ದರಿಂದ ಒಂದೆರಡು ನಿಮಿಷಗಳ ಕಾಲ ಡೆಪ್ಯುಟಿ ಸ್ಪೀಕರ್‌ನ್ನು ಇಲ್ಲಿ ಕೂರಿಸಿ ಹೊರಗೆ ಹೋಗಿ ಮತ್ತೆ ಒಳಗೆ ವಾಪಸ್ ಬಂದೆ. ನಾನು ಈಗಲೂ ತಮ್ಮೆಲ್ಲರನ್ನೂ ವಿನಂತಿ ಮಾಡಿಕೊಳ್ಳುತ್ತೇನೆ. ನಮಗೆ ಬಹಳ ಮುಖ್ಯ other aspects, academic interest ತಾವು ಹೇಳತಕ್ಕಂಥದ್ದು ಯಾವುದು ಇವೆ,...

Sri H.N. Nanjegowda : Sir, as per Article 72 of the Constitution of India whether this House can pass a resolution appealing to the President of India to condone?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) : ಒಂದು ನಿಮಿಷ, ನಾನೇನು ಇದನ್ನು ಚರ್ಚೆಯಾಗುವುದು ಬೇಡ ಎಂದು ಹೇಳಲಿಲ್ಲ, ಮಾನ್ಯ ಯಡಿಯೂರಪ್ಪನವರು ಈ ಸರ್ಕಾರಕ್ಕೆ ಯಾರನ್ನೂ ಉಳಿಸುವುದಕ್ಕೆ ಶಕ್ತಿಯಿಲ್ಲ, ಧೈರ್ಯವಿಲ್ಲ ಯೋಗ್ಯತೆ ಇಲ್ಲ ಎಂದು ಹೇಳುತ್ತಿದ್ದ ಭಾಷಣ ನಾನು ಕೇಳಿದೆ. Let there be a threadbare discussion. ಈಗ ಸುಪ್ರೀಂ ಕೋರ್ಟ್‌ನಿಂದ ಕೇಸ್ ಇಲ್ಲ ಅದು ನಿಖಾಲೆಯಾಗಿದೆ, ಸಬ್‌ಜುಡೀಸ್ ಇಲ್ಲ, ಇದು ಯಾವ ಕಾಲದಿಂದ ನಡೆದುಕೊಂಡು ಬಂದಿದೆ, ಕಾರ್ಪೊರೇಶನ್‌ನಲ್ಲಿ ಏನೇನು ಮಾಡಿದ್ದಾರೆ, ಹಿಂದಿನ ಸರ್ಕಾರಗಳು ಏನೇನು ಮಾಡಿದೆ,

ನಾವೇನಾದರೂ ಎಲ್ಲಿ ತಪ್ಪಿದ್ದೇವೆಯೋ ನಮ್ಮನ್ನು ಬೇಕಾದರೂ ಗಲ್ಲಿಗೆ ಹಾಕುವುದಾದರೆ ಹಾಕಬಹುದು. ಮಾತ್ರತ್ತಿದ್ದರೆ ಈ ಸರ್ಕಾರ ಉಳಿಸುವುದಕ್ಕಾಗುವುದಿಲ್ಲ, ಈ ಸರ್ಕಾರ ಉಳಿಸುವುದಕ್ಕಾಗುವುದಿಲ್ಲ, ಇನ್ನೇನು ಇವರ ಸರ್ಕಾರ ಮಾಡಿದರೆ ಉಳಿಸಿಬಿಡುತ್ತದೆಯೇ? Let there be a debate I will answer every point. I have no objection.

ಶ್ರೀ ಬಿ.ಎಸ್. ಯಡಿಯೂರಪ್ಪ : ಸರಿಯಿದೆ, ಸಭಾನಾಯಕರು ಹೇಳುತ್ತಿರುವುದು ಸರಿಯಿದೆ. ಡಿಟೈಲ್ಸ್ ಡಿಸ್‌ಕಶನ್ ಈ ವಿಷಯದಲ್ಲಿ ಇಲ್ಲೇ ಆಗಬೇಕು.

ಶ್ರೀ ಹೆಚ್.ಡಿ. ದೇವೇಗೌಡ : ಇದಕ್ಕೆ ನಾವೇನು ಮಾಡಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಖಂಡಿತ, ಹಿಂದಿನ ಸರ್ಕಾರ ಹೇಗೆ ಜವಾಬ್ದಾರಿ...

Mr. Speaker : Angry exchanges and unnecessary debate is not the subject matter now. We are not interested in any thing other than the official who is in distress.

ಶ್ರೀ ಹೆಚ್.ಡಿ. ದೇವೇಗೌಡ : ಮಾತ್ರತ್ತಿದರೆ ಸರ್ಕಾರದಲ್ಲಿ.... ಇವೊತ್ತು ಯಾರು ಬೇಕಾದರೂ ಇಂಟರೆಸ್ಟ್ ಇಲ್ಲ, ಇದಕ್ಕೆ ಒಂದು ಲಿಮಿಟ್ ಇದೆ, ಅವೊತ್ತು ಭಾನುವಾರ ಮಧ್ಯಾಹ್ನ I tried to contact Mr. Nariman in Bombay. ನಾನು ಇದೇ ಸದನದಲ್ಲಿ ಹೇಳಿದ್ದೇನೆ, ನಮಗೇನು ಜವಾಬ್ದಾರಿ ಇಲ್ಲವೇ?

ಶ್ರೀ ಹೆಚ್.ಎನ್. ನಂಜೇಗೌಡ : ನಾನೇನು ಅಂದುಕೊಂಡೆ ಅಂದರೆ ಅಧ್ಯಕ್ಷರೇ, ಈ ಸಭೆಗೆ ರೆಸ್ಯೂಲ್ಯೂಷನ್ ಮಾಡುವುದಕ್ಕೆ ಅವಕಾಶ ಇದ್ದರೆ.

ಅಧ್ಯಕ್ಷರು : ಅದನ್ನೂ ಕೂಡ ಅಲ್ಲಿ ಕುಳಿತು ಚರ್ಚೆ ಮಾಡೋಣ. I appeal to the entire House. ಕರ್ನಾಟಕ ವಿಧಾನ ಸಭೆ ಒಂದು ಹೊಸ ಸಂಪ್ರದಾಯವನ್ನು ಸೃಷ್ಟಿ ಮಾಡಲಿ, ಒಬ್ಬ ದಕ್ಷ ಪ್ರಾಮಾಣಿಕ ಅಧಿಕಾರಿಗೆ ತೊಂದರೆಯಾದಾಗ, ತನ್ನ ಕಳಕಳಿಯನ್ನು ವ್ಯಕ್ತಪಡಿಸುವುದರಲ್ಲಿ ನಾವು ಒಂದು ಹೊಸ ಸಂಪ್ರದಾಯವನ್ನು ಸೃಷ್ಟಿ ಮಾಡೋಣ. ಅದು ಹೇಗೆ ಮಾಡಬೇಕು ಎನ್ನುವುದನ್ನು ತಮ್ಮೆಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೇನೆ. ನೀವೆಲ್ಲರೂ ಅಲ್ಲಿಗೆ ದಯಮಾಡಿ ಬನ್ನಿ. ಒಂದು ಹತ್ತು ನಿಮಿಷ ಸದನವನ್ನು ಮುಂದಕ್ಕೆ ಹಾಕಿದರೆ ಏನೂ ಅನಾಹುತ ಆಗುವುದಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ : ಈ ಸಭೆಯಲ್ಲಿ ಮಾತನಾಡಿದ್ದೆಲ್ಲಾ ಪೇಪರ್‌ನಲ್ಲಿ ಬರುತ್ತದೆ. ದೇವೇಗೌಡರಿಗೆ ಏನೂ ಜವಾಬ್ದಾರಿ ಇಲ್ಲ ಎಂದರೆ ನನಗೆಲ್ಲಾ ಗೊತ್ತಿದೆ ಈ ರಾಜ್ಯದಲ್ಲಿ ಏನೇನು ನಡೆಯುತ್ತಿದೆ ಎಂದು ಹೇಳಿ. One thing I would like to make it clear. We are not hesitating for any discussion. ಸಬ್‌ಜುಡೀಸ್ ಅಲ್ಲ ಇದು ಮುಗಿದು ಹೋಗಿದೆ ನೀವು ಏನು ಬೇಕಾದರೂ ಚರ್ಚೆ ಮಾಡಿ, ಎಲ್ಲಾ ದಾಖಲೆಗಳನ್ನು ಸಭೆಯ ಮುಂದೆ ಇಡೋಣ do not unnecessarily draw conclusion that this Government has failed.

ಅಧ್ಯಕ್ಷರು : ಅರ್ಧ ಗಂಟೆ ಕಾಲ ಸದನವನ್ನು ಮುಂದಕ್ಕೆ ಹಾಕಿದ್ದೇನೆ.

(3-37ಕ್ಕೆ ಸದನವನ್ನು ಅರ್ಧ ಗಂಟೆಗಳ ಕಾಲ ಮುಂದಕ್ಕೆ ಹಾಕಲಾಯಿತು)

(ಸಭೆ ಪುನಃ 5.07 ಗಂಟೆಗೆ ಸಮಾವೇಶಗೊಂಡಿತು. ಮಾನ್ಯ ಅಧ್ಯಕ್ಷರು ತಮ್ಮ ಪೀಠದಲ್ಲಿ ಉಪಸ್ಥಿತರಾದರು)

ಅಧ್ಯಕ್ಷರು : ಕರ್ನಾಟಕ ಪುರಸಭೆಗಳ ತಿದ್ದುಪಡಿ ವಿಧೇಯಕ 1995...

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೇ....

ಅಧ್ಯಕ್ಷರು : ಈಗ ತಮಗೆ ಗೊತ್ತಿದೆ, ಇದು ಬಹಳ ಸೂಕ್ಷ್ಮವಾದಂಥ ವಿಚಾರ. ತಮ್ಮನ್ನು ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮತ್ತು ಸನ್ಮಾನ್ಯ ಸಭಾನಾಯಕರನ್ನೂ ಸಂಪರ್ಕಮಾಡಿ ನಮ್ಮ ಆತಂಕ ಏನಿದೆ ಅದಕ್ಕೆ ಸ್ಪಂದಿಸಿ ನಮ್ಮೆಲ್ಲರ ವಿಶ್ವಾಸ ಮತ್ತು ಗೌರವಕ್ಕೆ ಅರ್ಹರಾಗಿರತಕ್ಕಂಥ ಒಬ್ಬ ಅಧಿಕಾರಿಗೆ ಏನು ತೊಂದರೆ ಇದೆ, ತೊಂದರೆ ಆಗಿದೆ ಅದರಿಂದ ಪಾರು ಮಾಡುವುದಕ್ಕೆ ನಮ್ಮ ಇತಿಮಿತಿಯೊಳಗೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದರ ಜವಾಬ್ದಾರಿಯನ್ನು ನಾನು ಅವರಿಗೆ ಒಪ್ಪಿಸಿದ್ದೇನೆ, ನಿಮ್ಮೆಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು. ಅದನ್ನು ಅಲ್ಲಿಗೇ ಮುಕ್ತಾಯಮಾಡಿ ಮುಗಿಸುತ್ತೇನೆ. ಎಲ್ಲಿ ಮಂತ್ರಿಗಳು? ಯಾರಾದರೊಬ್ಬರು ಮೂವ್ ಮಾಡಿರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮೂವ್ ಮಾಡುವವರೇ ಇಲ್ಲ, ಯಾರಿಗೂ ಆಸಕ್ತಿ ಇಲ್ಲ, ಅರ್ಬನ್ ಡೆವಲಪ್‌ಮೆಂಟ್ ಮಂತ್ರಿಗಳು ಇಲ್ಲ.

ಅಧ್ಯಕ್ಷರು : ಒಂದು ಕೆಲಸ ಮಾಡೋಣ. ಅದನ್ನು ಡೆಫರ್ ಮಾಡಿ We will move on to the next item. ಪರವಾಗಿಲ್ಲ. ಈಗ ಏನು ಅವರು on account of some problem. ಕ್ಯಾಬಿನೇಟ್ ಮೀಟಿಂಗ್ ಇಟ್ಟುಕೊಳ್ಳುತ್ತೇವೆ ಅಂತ ಹೇಳಿದರಲ್ಲ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹಾಗಾದರೆ ಅಡ್ಜರ್ನ್ ಮಾಡಿ. ಇಲ್ಲಿ ಯಾರೂ ಬಿಲ್ ಮೂವ್ ಮಾಡುವವರು ಇಲ್ಲವೆಂದರೆ ಹೇಗೆ? ಏನು ಮಾಡುತ್ತೀರಿ ಹೇಳಿ.

ಶ್ರೀ ಡಿ. ಮಂಜುನಾಥ್ : ನಾನು ಮೂವ್ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮೂವ್ ಮಾಡುವುದಲ್ಲ, ಕನ್ಸಿಡರೇಶನ್ ಇದೆ.

ಅಧ್ಯಕ್ಷರು : ಈಗ ನಾವು ಒಂದು ಕೆಲಸ ಮಾಡೋಣ.....

ಶ್ರೀ ಡಿ. ಮಂಜುನಾಥ್ : ಡಿಮ್ಯಾಂಡ್ಸ್ ಮೇಲೆಯಾದರೂ ಚರ್ಚೆಯಾಗಲಿ.

ಅಧ್ಯಕ್ಷರು : ಬಿಲ್‌ಗೆ ಸಂಬಂಧಪಟ್ಟ ಮಂತ್ರಿಗಳು ಬರಲಿ. ಟೆಂಪರರಿ ಅರೇಂಜ್‌ಮೆಂಟ್ ಮಾಡುವುದೇನೂ ಬೇಕಾಗಿಲ್ಲ, We will take up the Bill next day. Now, we will go to Demands for Grants. I request Mr. Veerappa Moily to continue his speech on the demands which is the next item of the agenda.

ವಿತ್ತೀಯ ಕಾರ್ಯಕಲಾಪಗಳು

1995-96ನೇ ಸಾಲಿನ ಬೇಡಿಕೆಗಳ ಮೇಲೆ ಚರ್ಚೆ

+ ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೇ, ಕ್ಷಮಿಸಬೇಕು, ನಾನು ಈಗಾಗಲೇ ಹೆಚ್ಚು ಸಮಯವನ್ನು ತೆಗೆದುಕೊಂಡಿದ್ದೇನೆ. ವಿದ್ಯುತ್ ಇಲಾಖೆಯ ಬೇಡಿಕೆಯನ್ನೂ ಕೂಡ ಈ ಚರ್ಚೆಯಲ್ಲಿ ಅಳವಡಿಸಲಾಗಿದೆ. ಇದರ ವಿಚಾರವಾಗಿ, ಬಹಳ ಸೂಕ್ಷ್ಮವಾಗಿ ಕೆಲವೇ ಮಾತುಗಳಲ್ಲಿ ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ. ಕರ್ನಾಟಕ ರಾಜ್ಯ ಮೊದಲಿಂದಲೂ ಕೂಡ ಹೈಡಲ್ ಜನರೇಷನ್‌ನಲ್ಲಿ it has been a Posheer. ಆದರೆ, ಕ್ರಮೇಣ ಏನಾಯಿತು? ಆ ಸ್ಥಾನವನ್ನು ನಾವು ಕಳೆದುಕೊಂಡಿದ್ದೇವೆ. ಯಾವ ಮುಂದಾಳುತನವನ್ನು ವಿದ್ಯುತ್ ಉತ್ಪಾದನೆಯಲ್ಲಿ ನಾವು ಗಳಿಸಿಕೊಂಡಿದ್ದೆವೋ, ಅದನ್ನು ಇವತ್ತು ಕಳೆದುಕೊಳ್ಳತಕ್ಕಂಥ ಪರಿಸ್ಥಿತಿ ಬಂದಿದೆ. ಅದೂ ಕೂಡ ಸಾಧಾರಣವಾಗಿ

7ನೇ ಪಂಚವಾರ್ಷಿಕ ಯೋಜನೆಯಲ್ಲಿ ಬಹುಶಃ ಕರ್ನಾಟಕ ರಾಜ್ಯದ ಇತಿಹಾಸದಲ್ಲಿಯೇ ಅಂದರೆ, 1985ರಿಂದ 1990ರ ವರೆಗಿನ ಈ ಅವಧಿಯಲ್ಲಿ, ಕರ್ನಾಟಕ ರಾಜ್ಯ ತನ್ನ ಇತಿಹಾಸದಲ್ಲಿಯೇ ಕಂಡುಕಾಣದೇ ಇರತಕ್ಕಂಥ ಅತ್ಯಂತ ನಿಕೃಷ್ಟ ವಿದ್ಯುತ್ ಕೊರತೆಯನ್ನು...

ಅಧ್ಯಕ್ಷರು : ಜಯಪ್ರಕಾಶ್ ಹೆಗಡೆಯವರೆ, You will kindly note down all the relevant points of My Moily's speech ಸಚಿವ ಸಂಪುಟದ ಸಭೆ ಇರುವುದರಿಂದ, ಸಂಪುಟದ ಮಂತ್ರಿಗಳು ಅಲ್ಲಿಗೆ ಹೋಗಿರುತ್ತಾರೆ. ಆದ್ದರಿಂದ, ನೀವು ಸರ್ಕಾರದ ಪರವಾಗಿ ಜವಾಬ್ದಾರಿ ತೆಗೆದುಕೊಂಡು ನೀವು ಸದಸ್ಯರ ಪಾಯಿಂಟ್ಸ್‌ಗಳನ್ನು ಬರೆದಿಟ್ಟುಕೊಳ್ಳಿ. So that you can give it back to the concerned.

ಶ್ರೀ ಎಂ. ವೀರಪ್ಪ ಮೊಯಿಲಿ : ಅತ್ಯಂತ ಕನಿಷ್ಠ ವಿದ್ಯುತ್ ಸಮಸ್ಯೆಯನ್ನು ಎದುರಿಸಬೇಕಾಯಿತು. Worse power shortage was during this period 1985-1990 that means, seventh five year plan ಪೀರಿಯಡ್‌ನಲ್ಲಿ 1980ನೇ ದಶಕದ ಕೊನೆಯ ಹೊತ್ತಿಗೆ, it went up as high as 30.5 percent ಇದು 1987-88ರಲ್ಲಿ ಬಂತು. ಆದುದರಿಂದ, ಇಡೀ ದೇಶದಲ್ಲಿಯೇ ಅತ್ಯಂತ ಹೆಚ್ಚು ಪವರ್ ಕಟ್ ನಮ್ಮ ರಾಜ್ಯದಲ್ಲಿ ಬರತಕ್ಕ ವ್ಯವಸ್ಥೆ ಆಗ ಆಯಿತು. ಆದ್ದರಿಂದ ಇವತ್ತು ಆ ವಿಚಾರವನ್ನು ಗಮನದಲ್ಲಿಟ್ಟುಕೊಂಡು, ಪರಿಸ್ಥಿತಿಯನ್ನು ಸುಧಾರಿಸಬೇಕು. ಏಕೆಂದರೆ, ಇಡೀ 7ನೇ ಯೋಜನಾ ಅವಧಿಯಲ್ಲಿ ನಮ್ಮ ಕಾಂಟ್ರಿಬ್ಯೂಷನ್ for power growth was only 4.5 per cent ತಮಿಳುನಾಡಿನಲ್ಲಿ ಪವರ್ ಗ್ರೋತ್ ಪರ್ಸೆಂಟೇಜ್ 56 ಪರ್ಸೆಂಟ್ ಆದರೆ, ಮಹಾರಾಷ್ಟ್ರದಲ್ಲಿ, 21 ಪರ್ಸೆಂಟ್ ಆದರೆ, ಕರ್ನಾಟಕದಲ್ಲಿ, the growth in installed capacity was only 4.5 per cent.

ಈ ಪವರ್ ಅಲೋಕೇಷನ್‌ಗೆ ಕೂಡ, ಆ ಅವಧಿಯಲ್ಲಿ ನಾವು ಹೆಚ್ಚು ಹಣವನ್ನು ಒದಗಿಸುವುದಕ್ಕಾಗಲಿಲ್ಲ, ರಿಸೋರ್ಸಸ್ ಕಡಿಮೆಯಾಯಿತು. ಆಮೇಲೆ ಇನ್‌ಸ್ಟಾಲ್ ಕೆಪಾಸಿಟಿ ಕೂಡ ಆ ವರ್ಷದಲ್ಲಿ ಅಂದರೆ, 7ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಕಡಿಮೆಯಾಯಿತು. ಒಂದು ಪವರ್ ಸೆಕ್ಟಾರ್‌ಗೆ ವಿದ್ಯುತ್ ವೆಚ್ಚದ, ಕೆಲವು ವರ್ಷದ ಅಂಕಿಸಂಖ್ಯೆಗಳನ್ನು ಮಾತ್ರ ಕೊಡುವುದಕ್ಕೆ ಅಪೇಕ್ಷೆಪಡುತ್ತೇನೆ. 1987-88ರಲ್ಲಿ 150.24 ಕೋಟಿ ರೂಪಾಯಿ, 1988-89ರಲ್ಲಿ 205.85 ಕೋಟಿ ರೂಪಾಯಿ 1989-90ರಲ್ಲಿ 286.33 ಕೋಟಿ, ಅಲ್ಲಿಯವರೆಗೆ ಬಹಳ ಕಡಿಮೆ ರಿಸೋರ್ಸ್‌ಸ್ ಕೊಡುವುದಕ್ಕೆ ಸಾಧ್ಯವಾಯಿತು. 1990-91ರಲ್ಲಿ 379.49 ಕೋಟಿ, 1992-93ರಲ್ಲಿ 587.31 ಕೋಟಿ, 1993-94ರಲ್ಲಿ 763.42 ಕೋಟಿ ರೂಪಾಯಿ, 1994-95ರಲ್ಲಿ 740.37 ಕೋಟಿ. ಆದ್ದರಿಂದ, ಇದ್ದುದರಲ್ಲಿ ಹೆಚ್ಚಿನ ಮೊತ್ತವನ್ನು ನಾವು ಪವರ್ ಸೆಕ್ಟಾರ್‌ಗೆ ಕೊಟ್ಟಿದ್ದೇವೆ. 7ನೇ ಪಂಚವಾರ್ಷಿಕ ಯೋಜನೆಯಲ್ಲಿ ಆಯವ್ಯಯದಲ್ಲಿ 22 ಪರ್ಸೆಂಟ್ ಕೊಟ್ಟಿದ್ದರೆ, ಸಾಧಾರಣವಾಗಿ 24.26ರ ವರೆಗೂ ಕೊಡುವಂಥ ಪರಿಸ್ಥಿತಿ ಆಗ ಬಂತು. ನಮ್ಮಲ್ಲಿ ಪವರ್ ಜನರೇಷನ್ ಅಂದರೆ, ನಮ್ಮ ಯೋಜನೆಗಳಿಂದ, ಪವರ್ ಜನರೇಷನ್‌ನಲ್ಲಿ, 1983-84ರಲ್ಲಿ 7821 ಮಿಲಿಯನ್ ಯೂನಿಟ್ ಉತ್ಪಾದನೆ ಮಾಡಿದರೆ, 1988-89ಕ್ಕೆ ಬಂದಾಗ 9261 ಮಿಲಿಯನ್ ಯೂನಿಟ್ ಬಂತು. ಅಂದರೆ, 1983-84ರಿಂದ 1987-88ರ ವರೆಗೆ ಅಡಿಷನ್ 1440 ಮಿಲಿಯನ್ ಯೂನಿಟ್. ಇನ್ನು 1988-89ರಿಂದ 1994-95ರ ವರೆಗೆ ಹೇಳುವುದಾದರೆ, 1988-89ಕ್ಕೆ 9261ಮಿಲಿಯನ್ ಯೂನಿಟ್‌ಉತ್ಪಾದನೆ ಆಗುತ್ತಾ ಇದ್ದರೆ, 1994-95ಕ್ಕೆ 16,314 ಮಿಲಿಯನ್ ಯೂನಿಟ್ ಉತ್ಪಾದನೆಯಾಯಿತು. ಅಂದರೆ ಸಾಧಾರಣ ಈ 5 ವರ್ಷಗಳ addition to the power generation is 7053 Mega watts ನಾವು ವಿಶೇಷವಾಗಿ, ಇದರ ಬಗ್ಗೆ ಕೆಲವು ಕ್ಷೇತ್ರಗಳಲ್ಲಿ,

ತ್ಯಾಗಗಳನ್ನು ಮಾಡಬೇಕಾಗುತ್ತದೆ. ಆದರೆ, ಇಡೀ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಅತ್ಯಂತ ಹೆಚ್ಚಿನ ಜನರೇಷನ್‌ಗೆ, ಹೆಚ್ಚು ಮಿಲಿಯನ್ ಯೂನಿಟ್ ಕೊಡತಕ್ಕ ಕೆಲಸವನ್ನು ಕಳೆದ 1989-90ರಿಂದ 1994-95ರ ವರೆಗೆ ನಾವು ಇದನ್ನು ಏರಿಸಿಕೊಂಡು ಬಂದಿದ್ದೇವೆ.

(ಶ್ರೀ ಎಂ.ಎಸ್. ಪಾಟೀಲ್ (ಉಪಾಧ್ಯಕ್ಷರು)ರವರು, ಸಭಾಧ್ಯಕ್ಷರ ಪೀಠದಲ್ಲಿ ಉಪಸ್ಥಿತರಾದರು)

ಈಗ ಅದೇ ಪ್ರಕಾರ, ಇಂಪೋರ್ಟ್ ಮಾಡಿದಂಥ ಪವರ್ ಮತ್ತು ನಮ್ಮ ಜನರೇಷನ್, ನಾವು ಉತ್ಪಾದನೆ ಮಾಡಿದಂಥ ವಿದ್ಯುತ್ ಇವೆರಡೂ ಸೇರಿದರೆ, ಪವರ್ ಕನ್‌ಸಂಪ್‌ಷನ್ 1988-89ರಲ್ಲಿ 9445 ಮಿಲಿಯನ್ ಯೂನಿಟ್ ಇದ್ದರೆ, 1994-95ಕ್ಕೆ 19,714 ಮಿಲಿಯನ್ ಯೂನಿಟ್ ಇನ್‌ಕ್ರೀಸ್ ಎಷ್ಟಾಯಿತೆಂದರೆ, 10,296ಕ್ಕೂ ಹೆಚ್ಚು ಮಿಲಿಯನ್ ಯೂನಿಟ್ ಈ 5 ವರ್ಷದಲ್ಲಿ ನಾವು ಉಪಯೋಗ ಮಾಡತಕ್ಕಂಥ ಪರಿಸ್ಥಿತಿಗೆ ತಂದಿದ್ದೇವೆ. ಅಂದರೆ, ಇವತ್ತು ಪರ್ ಕ್ಯಾಪಿಟಾ ಕನ್‌ಸಂಪ್‌ಷನ್ ಆಫ್ ಪವರ್, ಕಿಲೋವ್ಯಾಟ್ಸ್ ಆಫ್ ಹವರ್ ಆ ದಾಮಾಶಾ ನೋಡಿದರೆ, 1988-89ರಲ್ಲಿ, ಕರ್ನಾಟಕದಲ್ಲಿ ಪರ್ ಕ್ಯಾಪಿಟಾ ಕನ್‌ಸಂಪ್‌ಷನ್ 233 ಮಿಲಿಯನ್ ಯೂನಿಟ್ ಇದ್ದರೆ, 1991-92ರಲ್ಲಿ 296 ಮಿಲಿಯನ್ ಯೂನಿಟ್‌ಗೆ ಬಂತು. 1992-93ರಲ್ಲಿ 290 ಮಿಲಿಯನ್ ಯೂನಿಟ್, 1993-94ರಲ್ಲಿ 313 ಮಿಲಿಯನ್ ಯೂನಿಟ್, 1994-95ರಲ್ಲಿ 320 ಮಿಲಿಯನ್ ಯೂನಿಟ್‌ಗೆ ಬಂತು. ಅಂದರೆ, ಪರ್ ಕ್ಯಾಪಿಟಾ ಕನ್‌ಸಂಪ್‌ಷನ್ ಕೂಡ ಒಂದು ರೀತಿಯಲ್ಲಿ ಸ್ವಲ್ಪ ಜಾಸ್ತಿ ಗ್ರೋತ್ ರೇಟ್ ಅಭಿವೃದ್ಧಿಯಾಗಲಿಕ್ಕೆ ಸಾಧ್ಯವಾಯಿತು. ರೂರಲ್ ಎಲೆಕ್ಟ್ರಿಫಿಕೇಷನ್ ಎಂದರೆ, ಪಂಪ್‌ಸೆಟ್, 1983-84ರಲ್ಲಿ 3.96 ಲಕ್ಷ ಕ್ಯುಮಲೇಟ್ ; ಆ ವರ್ಷ ಹಾಗೂ ಹಿಂದಿನ ವರ್ಷಗಳದ್ದು ಎಲ್ಲಾ ಕೂಡಿದರೆ, ಅಷ್ಟು ಐ.ಪಿ. ಸೆಟ್‌ಗಳಿಗೆ ನಾವು ವಿದ್ಯುತ್ ಕೊಡುತ್ತಾ ಇದ್ದರೆ, 1988-89ಕ್ಕೆ 5.96 ಲಕ್ಷ ಐ.ಪಿ. ಸೆಟ್‌ಗೆ ಕೊಡಲಾಯಿತು. ಇದು ಒಟ್ಟು, ಆ ವರ್ಷದ ಫಿಗರ್ ಅಲ್ಲ, it is a cumulative figure. ಆಮೇಲೆ 1994-95ಕ್ಕೆ 9.74 ಲಕ್ಷ ಐ.ಪಿ. ಸೆಟ್‌ಗೆ ವಿದ್ಯುತ್‌ನ್ನು ಕೊಡುವುದಕ್ಕೆ ಸಾಧ್ಯವಾಯಿತು. ಅಂದರೆ, ಸುಮಾರು ನಮ್ಮ ಸರ್ಕಾರ ಬಂದಂದಿನಿಂದ 1988-89ಕ್ಕೆ 5.96 ಲಕ್ಷ ಐ.ಪಿ. ಸೆಟ್‌ಗಳು ಇದ್ದರೆ, ಸುಮಾರು ಈ 5 ವರ್ಷಗಳಲ್ಲಿ ಸಾಧಾರಣವಾಗಿ ಅದನ್ನು ಡಬಲ್ ಮಾಡತಕ್ಕಂಥ, ಅದನ್ನು ದ್ವಿಗುಣ ಮಾಡತಕ್ಕಂಥ ಕೆಲಸ ನಡೆದಿದೆ. transfer and distribution loss ಕೂಡ 1988-89ರಲ್ಲಿ 20.74 ಪರ್ಸೆಂಟ್ ಇದ್ದರೆ, 1994-95ಕ್ಕೆ 18.30 ಪರ್ಸೆಂಟ್ ಆಯಿತು. ಇಷ್ಟು ಕೆಳಗೆ ಇಳಿಯಿತು. ಈ ವರ್ಷ ನಾವು ಲೆಕ್ಕಹಾಕಿದ ಪ್ರಕಾರ ಅದು 18 ಪರ್ಸೆಂಟ್‌ಗೆ ಇಳಿಯಬೇಕು.

ಇದು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಇದು ಕಂಟಿನ್ಯುಟಿ, ಯಾವ 5 ವರ್ಷದಿಂದ ಈ ವಿದ್ಯುತ್ ಕ್ಷೇತ್ರದಲ್ಲಿ ಅಂದರೆ ಅದು ತೃಪ್ತಿ ತರುತ್ತದೆ ಎಂದು ಅಲ್ಲ, ವಿಶೇಷವಾಗಿ ಎಲ್ಲಾ ಕ್ಷೇತ್ರದಲ್ಲಿ ಅದು ಐ.ಪಿ. ಸೆಟ್ ಇರಬಹುದು, ಉತ್ಪಾದನಾ ಕ್ಷೇತ್ರ ಇರಬಹುದು. ಪರ್ ಕ್ಯಾಪಿಟಾ ಆಫ್ ಕನ್‌ಸಂಪಷನ್ ಎಲೆಕ್ಟ್ರಿಸಿಟಿ ಇರಬಹುದು, ನಾವು ಬಹಳ ಸಮಯದಿಂದ ನಾವು ಸಿಸ್ಟರ ಇಂಪ್ರೂವ್‌ಮೆಂಟ್‌ನ್ನು ಮತ್ತು ನಾವು ಜನರೇಷನ್‌ಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡುತ್ತಿದ್ದೇವೇ ಹೊರತು, ನಾವು ಉತ್ಪಾದನೆ ಮಾಡಿದಂತಹ ವಿದ್ಯುತ್ ಅನ್ನು ಯೋಗ್ಯ ರೀತಿಯಿಂದ ಗ್ರಾಹಕರಿಗೆ ಮುಟ್ಟಿಸತಕ್ಕಂಥ ಕೆಲಸ ಮಾಡುತ್ತಿಲ್ಲ, ಅದು ಗ್ರಾಹಕರಿಗೆ ಇರಬಹುದು, ಕೈಗಾರಿಕೆಗಳಿಗೆ ಇರಬಹುದು, ಅದು ಕೃಷಿಗೆ ಸಂಬಂಧಪಟ್ಟಿದ್ದು ಇರಬಹುದು ಅಥವಾ ಡೊಮ್ಯಾಸ್ಟಿಕ್ ಕಂಸಂಪ್ಷನ್‌ಗೆ ಸಂಬಂಧಪಟ್ಟಿದ್ದು ಇರಬಹುದು, ಅದನ್ನು ಒದಗಿಸತಕ್ಕಂಥ ಲೈನ್

ಇಂಪ್ರೂವ್‌ಮೆಂಟ್ ಮಾಡತಕ್ಕಂಥಾದ್ದು ಸಬ್‌ಸ್ಟೇಷನ್ಸ್ ಕಟ್ಟತಕ್ಕಂಥಾದ್ದು ಇದರಲ್ಲಿ ನಾವು ಹೆಚ್ಚು ಆಸಕ್ತಿಯಿಂದ ಆದ್ಯತೆಯಿಂದ ಕೆಲಸ ಮಾಡಬೇಕಾಗಿದೆ. ಆ ದೃಷ್ಟಿಯಲ್ಲಿ ನಾವು ಕೆಲಸ ಮಾಡಿದ್ದರಿಂದ ಟಿ ಅಂಡ್ ಡಿ ಲಾಸಸ್ ಸ್ವಲ್ಪ ಕಡಿಮೆ ಆಯಿತು. ಪ್ಲಾಂಟ್ ಲೋಡ್ ಫ್ಯಾಕ್ಟರಿ ಕೂಡ ವಿಶೇಷವಾಗಿ ಇಂಪ್ರೂವ್ ಆಗಲಿಕ್ಕೆ ಸಾಧ್ಯವಾಯಿತು. ನಮ್ಮ ಕೆ.ಇ.ಬಿ.ಯ ಒಟ್ಟು ಆದಾಯ 1988-89ನೇ ಸಾಲಿನಲ್ಲಿ ಒಟ್ಟು 691.72 ಕೋಟಿ ರೂಪಾಯಿಗಳು ಇದ್ದದ್ದು ಅದು ಸಾಧಾರಣಾ 1991-93ನೇ ಸಾಲಿಗೆ ಬಂದಾಗ, ಸುಮಾರು 900 ಕೋಟಿ ರೂಪಾಯಿಗಳು ಆದರೆ ಅದು ಬರೀ ಎರಡು ವರ್ಷಕ್ಕೆ ಅಂದರೆ 1994-95ನೇ ಸಾಲಿಗೆ ಬಂದಾಗ, ಕೆ.ಇ.ಬಿ.ಯ ಒಟ್ಟು ರೆವಿನ್ಯೂ 1700 ಕೋಟಿ ರೂಪಾಯಿಗಳು ಆಯಿತು. ಸಾಧಾರಣವಾಗಿ 2-3 ವರ್ಷಗಳಲ್ಲಿ ಕೆ.ಇ.ಬಿ.ಯ ಆದಾಯ ದ್ವಿಗುಣವಾಗತಕ್ಕಂಥ ಪರಿಸ್ಥಿತಿ ನಿರ್ಮಾಣ ಆಗಿದೆ. ಈ ಒಂದು ಹಂತದಲ್ಲಿ ಅನೇಕ ರೀತಿಯ ಬಂಡವಾಳವನ್ನು ಅಂದರೆ ಕೆ.ಇ.ಬಿ. ಸೆಕ್ಟಾರ್ ಇಡುವುದು ಅಥವಾ ಜನರೇಶನ್ ಮಾಡತಕ್ಕಂಥ ಒಂದು ದೃಷ್ಟಿಯಲ್ಲಿ ಕೂಡ ಬಂಡವಾಳವನ್ನು ನಾವು ಹೆಚ್ಚು ಹಾಕಿದ್ದೇವೆ.

ಮುಖ್ಯವಾಗಿ 1983-1994ರಿಂದ 1988-89ರ ವರೆಗೆ ಅವರೇಜ್ ಪರ್ ಇಯರ್ 162-48 ಕೋಟಿ ರೂಪಾಯಿಗಳು ಆವರೇಜ್ ಪರ್ 6 ವರ್ಷಗಳು ನಾವು ಖರ್ಚು ಮಾಡುತ್ತಿದ್ದರೆ ಕೆ.ಇ.ಬಿ. ಮತ್ತು ಕೆ.ಪಿ.ಸಿ. ಎರಡೂ ಸೇರಿ 1989-90ರಿಂದ 1992-93ರ ವರೆಗೆ ಆವರೇಜ್ ಪರ್ ಇಯರ್ 417.91 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೆವು. ಆದರೆ 1993-94ರಲ್ಲಿ 763.42 ಕೋಟಿ ರೂಪಾಯಿಗಳನ್ನು ಆ ಒಂದು ವರ್ಷದಲ್ಲಿ ಖರ್ಚು ಮಾಡಿದ್ದೇವೆ. ಒಂದೇ ವರ್ಷದಲ್ಲಿ ದ್ವಿಗುಣ ಮಾಡಿದ್ದೇವೆ. ನಾವು ಎರಡು ಪಟ್ಟು ಜಾಸ್ತಿ ಮಾಡಿದ್ದೇವೆ. ಸಿಸ್ಟಂ ಇಂಪ್ರೂವ್‌ಮೆಂಟ್‌ಗೆ ಮತ್ತು ಉತ್ಪಾದನೆಗೆ. ಆದರೆ 1994-95ರಲ್ಲಿ ಸುಮಾರು 900 ಕೋಟಿ ರೂಪಾಯಿಯನ್ನು ಖರ್ಚು ಮಾಡಬೇಕಾಗಿತ್ತು. ತಾವು ಬಂದ ಮೇಲೆ ಖರ್ಚು ಮಾಡುವುದು ಸಾಕು, ಈ ವರ್ಷ ಮಾಡೋಣ ಎಂದು ತಾವು ನಿರ್ಣಯ ಮಾಡಿದ್ದೀರಿ, ಜಾಸ್ತಿ ಮಾಡಿ ಅದನ್ನು ಮೇಕಪ್ ಮಾಡಿ ಈ ವರ್ಷ ಖರ್ಚು ಮಾಡಿ ಎಂದು ನಾನು ತಮ್ಮನ್ನು ಕೇಳಿಕೊಳ್ಳುವುದು. ಕಳೆದ ವರ್ಷ ಯಾವುದೋ ಕಾರಣಕ್ಕಾಗಿ ತಾವು ಏನು ಸ್ವಲ್ಪ ಕಡಿಮೆ ಖರ್ಚು ಮಾಡಿದ್ದೀರಿ ಅದನ್ನು ನೀವು ಈ ವರ್ಷ ಭರಿಸಿ ಹೆಚ್ಚು ಖರ್ಚು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಇದನ್ನು ನಾನು ಬಹಳ ವಿಸ್ತಾರವಾಗಿ ಹೇಳಲಿಕ್ಕೆ ಹೋಗುವುದಿಲ್ಲ, ಯಾವ ಒಂದು ಗ್ರೋತ್ ರೇಟ್ ಅಭಿವೃದ್ಧಿಯನ್ನು 5 ವರ್ಷದಿಂದ ಇವತ್ತು ಮಾಡಲಿಕ್ಕೆ ಸಾಧ್ಯವಾಯಿತು. ಅದನ್ನು ಮುಂದುವರಿಸಿಕೊಂಡು ಹೋಗಬೇಕು, ಕಡಿಮೆ ಮಾಡಬಾರದು. ನಮ್ಮ ಸರ್ಕಾರ ಇರುವಾಗ ನಾವು ಒಂದು ಗುರಿಯನ್ನು ಹಾಕಿಕೊಂಡಿದ್ದೆವು. ಅದೇನೆಂದರೆ, ಈ ಶತಮಾನ ಮುಗಿಯುವುದರೊಳಗಡೆ ಇವತ್ತಿನಿಂದ 9 ಪರ್ಸೆಂಟ್ ಗ್ರೋತ್ ರೇಟನ್ನು ಸಾಧನೆ ಮಾಡಬೇಕು. ಆ 9 ಪರ್ಸೆಂಟ್ ಗ್ರೋತ್ ರೇಟನ್ನು ಸಾಧನೆ ಮಾಡಿದಾಗ ಮಾತ್ರ ವಿದ್ಯುತ್ ಕ್ಷೇತ್ರದಲ್ಲಿ ನಾವು ಒಂದು ರೀತಿಯಾದ ವಿಶ್ವಾಸಾರ್ಹವಾದಂತಹ ಒಂದು ವೇದಿಕೆಯನ್ನು ಪುನಃ ನಮ್ಮ ಕರ್ನಾಟಕ ರಾಜ್ಯ ಸ್ಥಾಪನೆ ಮಾಡಲಿಕ್ಕೆ ಸಾಧ್ಯ ಇದೆ ಎಂಬುದನ್ನು ನಾವು ಲೆಕ್ಕ ಹಾಕಿಕೊಂಡು ಇವತ್ತು ಕೆಲಸ ಮುಂದುವರಿಸಿಕೊಂಡು ಹೋಗಬೇಕಾಗಿದೆ. ಇದನ್ನು ಮಾಡುವಾಗ ನಾನು ಬಹಳ ಸೂಕ್ಷ್ಮವಾಗಿ ಹೇಳುತ್ತೇನೆ. ಇವತ್ತು ಯಾವುದರಲ್ಲಿ ಸರ್ಕಾರ ಆದ್ಯತೆ ತೆಗೆದುಕೊಳ್ಳಬೇಕು.

ಒಂದನೇ ಆದ್ಯತೆ ಅಂದರೆ ಇವತ್ತು ಸರ್ಕಾರದ ಕಾರ್ಯಕ್ರಮಗಳು ಸಿಸ್ಟಂ ಇಂಪ್ರೂವ್‌ಮೆಂಟ್‌ಗೆ ಸಬ್ ಸ್ಟೇಷನ್ಸ್ ಮಾಡುವುದಕ್ಕೆ ಸುಮಾರು 900 ಕೋಟಿ ರೂಪಾಯಿಗಳ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಅದರಲ್ಲಿ ಕಳೆದ ಎರಡು ವರ್ಷಗಳಲ್ಲಿ

500 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇದಕ್ಕೆ ನೀವು ಹೆಚ್ಚು ಖರ್ಚು ಮಾಡಬೇಕಾಗುತ್ತದೆ. ಇದು ಸರ್ಕಾರ ಮಾಡಬೇಕಾದ ಕೆಲಸ, ಇದಕ್ಕೆ ಖಾಸಗಿಯವರು ಬರುವುದಿಲ್ಲ, ಖಾಸಗಿಯವರು ಬೇಕಾದರೆ ವಿದ್ಯುತ್ ಉತ್ಪಾದನೆ ಮಾಡಿಕೊಡಬಹುದು. ಆದರೆ ವಿದ್ಯುತ್ ರವಾನೆ ಮಾಡತಕ್ಕಂಥ ಜವಾಬ್ದಾರಿ ಸರ್ಕಾರದ್ದೇ ಆಗಿರುತ್ತದೆ. ಅದಕ್ಕೆ ನೀವು ಇವತ್ತು ಹೆಚ್ಚು ಹಣವನ್ನು ದೊರಕಿಸಿಕೊಡಬೇಕಾಗುತ್ತದೆ. ಎರಡನೆಯದಾಗಿ ಖಾಸಗೀಕರಣ ಮಾಡುವಾಗ ನಮ್ಮ ದೃಷ್ಟಿಕೋನ ಏನು ಇರಬೇಕು ನನ್ನ ಸೂಚನೆ ಏನೆಂದರೆ ಇದರ ಬಗ್ಗೆ ಸರ್ಕಾರ ಒಂದು ಸ್ಪಷ್ಟವಾದ ನೀತಿಯನ್ನು ಕೈಗೊಳ್ಳಬೇಕಾದಂತಹ ಅವಶ್ಯಕತೆ ಇದೆ. ಈಗ ಸಣ್ಣ ಸಣ್ಣ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್‌ಗಳು ಇದ್ದರೆ, ಅದನ್ನು ಖಾಸಗೀಯವರಿಗೆ ಕೊಡಿ. ಹೊರದೇಶದವರಿಗೆ ಅಲ್ಲ, ನಮ್ಮ ದೇಶದವರಿಗೆ ಅದರಲ್ಲೂ ಕರ್ನಾಟಕ ರಾಜ್ಯದವರಿಗೆ ಪ್ರಥಮ ಪ್ರಾಶಸ್ತ್ಯ ಕೊಟ್ಟು ತಾವು ಮಾಡಬೇಕು. ದೊಡ್ಡದೊಡ್ಡ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್‌ಗಳು ಇದ್ದರೆ, ಅದನ್ನು ದಯಮಾಡಿ ಹೊರದೇಶದವರಿಗೆ ಅಥವಾ ನಮ್ಮ ಖಾಸಗಿಯವರಿಗೆ ಕೊಡಬೇಡಿ. ಏಕೆಂದರೆ ಅಲ್ಲಿ ಬಹಳ ಚೀಪ್ ಆಗಿ ಎಲೆಕ್ಟ್ರಿಸಿಟಿ ಜನರೇಶನ್ ಮಾಡಬಹುದು. ಮತ್ತು ಅದನ್ನು ಹೊರದೇಶದವರಿಗೆ ಕೊಟ್ಟರೆ ಏನಾಗುತ್ತದೆ ಅಂದರೆ, ಆ ಲಾಭ ನಮಗೆ ಸಿಗುವುದಿಲ್ಲ. ಅದು ಚೀಪ್ ಆಗಿ ಎಲ್ಲಿ ಆಗುತ್ತದೆ ಅದನ್ನು ದಯಮಾಡಿ ಹೊರಗೆ ಕೊಡಬೇಡಿ. ಆದರೆ ಗ್ಯಾಸ್ ಬೇಸ್ಡ್ ಆಯಿಲ್ ಬೇಸ್ಡ್ ಮತ್ತು ಥರ್ಮಲ್ ವಿದ್ಯುತ್ ತಯಾರು ಮಾಡಬೇಕು ಎಂದು ತಾವೇನು ಅಪೇಕ್ಷೆ ಪಡುತ್ತೀರೋ ಅದನ್ನು ಬೇಕಾದರೆ ತಾವು ಖಾಸಗಿಯವರಿಗೆ ನಮ್ಮ ದೇಶದವರಿಗೆ ಹೊರದೇಶದವರಿಗೆ ಅಥವಾ ವಿದ್ಯುತ್ ಉತ್ಪಾದನೆ ಮಾಡತಕ್ಕಂಥ ಕಂಪನಿಗಳಿಗೆ ಕೊಡಬಹುದು. ಇದರ ಬಗ್ಗೆ ತಮ್ಮ ಆದ್ಯತೆ ಸ್ಪಷ್ಟವಾದ ನೀತಿಯನ್ನು ಕೈಗೊಳ್ಳಬೇಕಾಗುತ್ತದೆ.

ಇದರ ಬಗ್ಗೆ ಸ್ಪಷ್ಟವಾದ ನೀತಿಯನ್ನು ಈ ದೇಶಕ್ಕೆ ಈ ನಾಡಿಗೆ ಹೇಳಬೇಕಾದಂತಹ ಅವಶ್ಯಕತೆ ಇದೆ. ಇವತ್ತು ನಾವು ಹೆಚ್ಚು ಹೆಚ್ಚು ಥರ್ಮಲ್‌ಗೆ ಹೋದರೆ, ಅಥವಾ ಹೆಚ್ಚು ಹೆಚ್ಚು ಡೀಜಲ್ ಜನರೇಶನ್‌ಗೆ ಹೋದರೆ, ಕಾಸ್ಟ್‌ಲೀ ಆಗುತ್ತದೆ ಮತ್ತು ಅದಕ್ಕೆ ಹೆಚ್ಚು ದೊಡ್ಡ ಬಂಡವಾಳ ಬೇಕಾಗುತ್ತದೆ. ಆ ಬಗ್ಗೆ ನಾವು ನಮ್ಮ ಹೆಚ್ಚು ಶ್ರಮವನ್ನು ವಿನಿಯೋಗ ಮಾಡದೇ ಅದು ಬಹಳ ಫಾಸ್ಟ್ ಬೆನಿಫಿಟ್ ರೇಶಿಯೋದಲ್ಲಿಯೂ ಕೂಡ ವಿದಿತ ಆಗುವುದಿಲ್ಲ, ಆದ್ದರಿಂದ ನೀವು ಹಾಕತಕ್ಕಂಥ ವಿದ್ಯುತ್ ಕ್ಷೇತ್ರದ ಬಂಡವಾಳದ ಬಗ್ಗೆ ಒಂದು ನಿರ್ದಿಷ್ಟವಾದ ನೀತಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಅದರ ಬಗ್ಗೆ ಒಂದು ಸ್ಪಷ್ಟನೆ ಇರಬೇಕಾಗುತ್ತದೆ. ನಾನು ಇದನ್ನು ಹೇಳತಕ್ಕಂಥ ಸಂದರ್ಭದಲ್ಲಿ ನೀವು ಬೇರೆ ಬೇರೆ ಪ್ರಾಜೆಕ್ಟ್‌ಗಳನ್ನು ಏನು ತೆಗೆದುಕೊಳ್ಳುತ್ತೀರಿ ಅದರ ಬಗ್ಗೆ ನಾನು ಕೊನೆಗೆ ಬರುತ್ತೇನೆ. ಆದರೆ ಈಗ ಏನಾಗಿದೆ ಅಂದರೆ 50 ಪರ್ಸೆಂಟ್ ಪವರ್ ಕಟ್ ಅಂತ ಘೋಷಣೆ ಒಮ್ಮೆಲೇ ಮೊನ್ನೆ ಬಂತು. ಅದಕ್ಕೆ ತಾವು ಹೇಳುತ್ತೀರಿ, ಅದು ಸರ್ಕಾರದ ಘೋಷಣೆ ಅಲ್ಲ, ಕೆ.ಇ.ಬಿ.ಯವರು ನಿರ್ಣಯ ಮಾಡಿ ಸರ್ಕಾರಕ್ಕೆ ಕಳುಹಿಸಿದ್ದಾರೆ ಎಂದು. ನನಗೆ ಅನಿಸುತ್ತದೆ ಅದರ ಬಗ್ಗೆ ತಾವು ಸ್ವಲ್ಪ ಆತುರ ಮಾಡಿದಿರಿ ಏಕೆಂದರೆ, ವಾಟರ್ ಇಯರ್ ಎಂಡ್ ಆಗುವಂಥಾದ್ದು ಸೆಪ್ಟೆಂಬರ್ 15. ಸೆಪ್ಟೆಂಬರ್ 15ರವರೆಗೂ ಕಾಯತಕ್ಕಂಥ ಸಂಯಮ ತಾಳ್ಮೆ ತಮಗೆ ಏಕೆ ಇಲ್ಲ, ಈ ಘೋಷಣೆಗಳು ಏನಾಗುತ್ತವೆ ಅಂದರೆ ಅದು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಕಟಣೆಗಳು ಆಗುತ್ತದೆ. ಇವತ್ತು ಇಡೀ ವಿಶ್ವದ ಜನ, ವಿಶ್ವದ ಉದ್ಯಮಿಗಳು ಕರ್ನಾಟಕ ರಾಜ್ಯದ ಕಡೆ ದೃಷ್ಟಿಮಾಡಿ ನೋಡುತ್ತಿದ್ದಾರೆ, ಯಾವ ರೀತಿ ಕರ್ನಾಟಕ ಮುನ್ನಡೆಯುತ್ತಿದೆ ಅಂತ ಹೇಳಿ. ತಮಗೆ ನೆನಪು ಇರಬಹುದು ಮಾನ್ಯ ಗುಂಡೂರಾಯರ ಸರ್ಕಾರವಿದ್ದಾಗ, ನಾನು ಸರ್ಕಾರದಲ್ಲಿದ್ದಾಗ ಒಮ್ಮೆ 100

ಪರ್ಸೆಂಟ್ ವಿದ್ಯುತ್ ಕಟ್ ಎಂದು ಘೋಷಣೆ ಆಯಿತು. ಅದು ಯಾರೋ ಒಬ್ಬ ಅಧಿಕಾರಿಗಳ ಅಚಾತುರ್ಯದಿಂದ ಆಯಿತು. ಆಗ ತಾವು ಕೂಡ ಇದ್ದಿರಿ. We were not consulted at that time also. Suddenly some officer took a decision. Of course, next day it was revoked. ಅದು ರಾತ್ರಿ ಅನೌನ್ಸ್ ಆಯಿತು, ನಾವು ಬೆಳಿಗ್ಗೆ ಪ್ರೆಸ್ ಕಾನ್ಫರೆನ್ಸ್ ಕರೆದು ಅದನ್ನು ರದ್ದು ಮಾಡಿದೆವು. ಅದು ಬಹಳ ದೊಡ್ಡ ಅಚಾತುರ್ಯದ ಕೆಲಸ. 100 ಪರ್ಸೆಂಟ್ ಕಟ್ ಅಂತ ಏನು ಘೋಷಣೆ ಆಗಿದೆ ಅದು ಆದದ್ದು 1981ರಲ್ಲಿ. ಆದರೆ ನಾನು ಪರದೇಶಕ್ಕೆ ಹೋದಾಗ, ಅನೇಕ ಮಂದಿ ಪರದೇಶದಿಂದ ಇಲ್ಲಿಗೆ ಬಂದಾಗ, ಅವರು ಈ ಕ್ವೆಶ್ಚನ್ ಕೇಳುತ್ತಾರೆ.

5.30 ಪಿ.ಎಂ.

ನಿಮ್ಮಲ್ಲಿ ನೂರಪರ್ಸೆಂಟ್ ಪವರ್ ಕಟ್ ಅನ್ನು ಘೋಷಣೆ ಮಾಡಿದ್ದಿರಿ ಎಂದು ಒಂದ ದಿವಸ ಮಾಡಿದ್ದರು ಎಂದು ಯಾರಿಗೂ ಗೊತ್ತಾಗಲಿಲ್ಲ ಅಥವಾ ಆ ಘೋಷಣೆ ಒಂದು ಗಂಟೆ ಇತ್ತು ಎಂದು ಯಾರೂ ಹೇಳುತ್ತಿಲ್ಲ. ಆದರೆ ಕರ್ನಾಟಕ ರಾಜ್ಯದಲ್ಲಿ ದಿವಂಗತ ಸರ್.ಎಂ. ವಿಶ್ವೇಶ್ವರಯ್ಯನವರು ಮಾದರಿಯಾಗಿ ಇಡೀ ರಾಷ್ಟ್ರಕ್ಕೆ ಮುಂದಾಳಾಗಿ ನಾಯಕತ್ವ ಯಾವ ರಾಜ್ಯ ಕೊಟ್ಟಿತ್ತೋ ಅಲ್ಲಿ ನೀರು ಪರ್ಸೆಂಟ್ ಪವರ್ ಕಟ್ ಘೋಷಣೆಯಾದಂಥ ಕಪ್ಪುಚುಕ್ಕೆ ಇದೆ ಬಹುಶಃ ಇವತ್ತಿಗೂ ಅದು ಒರೆಸಲಿಕ್ಕೆ ಸಾಧ್ಯವಾಗಲಿಲ್ಲ, ಇವತ್ತಿಗೂ ಪ್ರಶ್ನೆ ಹಾಕುತ್ತಿದ್ದಾರೆ. ನಮ್ಮ ರಾಜ್ಯಕ್ಕೆ ಕೈಗಾರಿಕಾ ಕ್ಷೇತ್ರದಲ್ಲಿ ಒಳ್ಳೆಯ ಹೆಸರೇನಿತ್ತು ಸಮಗ್ರತೆ ಇತ್ತು ಅದು ಸಂಪೂರ್ಣ ಹಾಳಾಗಿದೆ. ಅದೇ ಪರಿಣಾಮ ಇವತ್ತಾಗಿದೆ. ಆ ಸಂದರ್ಭದಲ್ಲಾದ ಸಂಗತಿ ಬೇರೆ, ಆದರೆ ಇವತ್ತು ಇಡೀ ಲಿಬರಲೈಜೇಶನ್ ಪಾಲಿಸಿ ಕರ್ನಾಟಕದಲ್ಲಿ ಅತ್ಯಂತ ಯಶಸ್ವಿಯಾಗಿ ಜಾರಿಯಾಗುತ್ತಿದೆ ಎಂಬ ಮಾತು ಅಂತರರಾಷ್ಟ್ರೀಯ ಮಟ್ಟದಲ್ಲಿ ಕೇಳುತ್ತಿರುವಾಗ, ಈ ಅಚಾತುರ್ಯದ ಘೋಷಣೆ ಯಾರೇ ಮಾಡಿದರೂ ಅದಕ್ಕೆ ಸರ್ಕಾರ ಜವಾಬ್ದಾರರಾಗಬೇಕಾಗುತ್ತದೆ. ಇವತ್ತು ಇನ್ನೊಂದು ಕಪ್ಪುಚುಕ್ಕೆ ಬರುವಂತೆ ಏನಿತ್ತು ಹೇಳಿ? ಏಕೆಂದರೆ ಈಗ ಸ್ವಲ್ಪ ಇಂಪ್ರೂವ್‌ಮೆಂಟ್ ಆಗಿದೆ. ಲಿಂಗನಮಕ್ಕಿ ಕೂಡ ಇಂಪ್ರೂವ್‌ಮೆಂಟಾಗಿದೆ. ಈ ರಿಸರ್ವಾಯರ್‌ನ ಕ್ಯಾರಿಓವರ್ 86-87ಕ್ಕೆ 2.75ಇತ್ತು. ಆಗ ಕೂಡ 50 ಪರ್ಸೆಂಟ್ ಮಾಡುವುದಿಲ್ಲ 1994-95ಕ್ಕೆ 10 ಪರ್ಸೆಂಟ್ ಕ್ಯಾರಿ ಓವರ್- ಕೆಲವು ಸಾರಿ ಬಹಳ ಹೆದರಿರುತ್ತಾರೆ, ನಮಗೂ ಆಡಳಿತೆಯಲ್ಲಿ ಅನುಭವ ಇದೆ. ಅವರು ಏನು ಹೇಳುತ್ತಾರೆ ಎಂದರೆ ಈ ವರ್ಷ ಸ್ವಲ್ಪ ಮಳೆ ಕಡಿಮೆಯಾದ ಕೂಡಲೇ ಇನ್ನೆರಡು ವರ್ಷ ಮಳೆ ಬರುವುದಿಲ್ಲ ಅಂತ, ಎರಡು ವರ್ಷ ಮಳೆ ಬರುವುದಿಲ್ಲವೆಂದು you must reserve water today. ಕಡೆಪಕ್ಷ ಒಂದು ವರ್ಷಕ್ಕೆ ಎಷ್ಟು ನೀರಿರಬೇಕೋ ಅಷ್ಟಿರಬೇಕಾದ್ದು ಸರಿ, ಆದರೆ 2-3 ವರ್ಷ ಮಳೆ ಬರುವುದಿಲ್ಲವೆಂದು ಲೆಕ್ಕಾಚಾರ ಹಾಕಿಕೊಂಡು ಪವರ್‌ಕಟ್ ಮಾಡುವುದು, ವಿದ್ಯುತ್ ನೀತಿ ಘೋಷಣೆ ಮಾಡತಕ್ಕಂತಹ ಒಂದು ಹುಚ್ಚುತನ, ನಮ್ಮ ಪರಿಣಿತರಲ್ಲಿ ಬಹಳ ಇದೆ. ಅದಕ್ಕೆ ಸರ್ಕಾರದಲ್ಲಿರುವ ತಾವು ವಿವೇಕ ಉಪಯೋಗ ಮಾಡಬೇಕಾದ ಅವಶ್ಯಕತೆ ಇದೆ. 10% carry over, sometimes even 5% carry over is a healthy position. 20 ಪರ್ಸೆಂಟ್ ಕ್ಯಾರಿಓವರ್ ಇರಬೇಕು ಅಂದರೆ we are wasting it ಏಕೆಂದರೆ ಜಾಸ್ತಿ ಮಳೆ ಬಂದರೆ ಏನಾಗುತ್ತದೆ? ನೀರೆಲ್ಲ ಹೊರಟುಹೋಗುತ್ತದೆ we will be wasting energy to that extent. Suppose you get, 15%, 10%, 25% ಅಂತ ಹೇಳಿದರೆ ಮಳೆಬಂದು ನೀರು ತುಂಬಿಬಿಟ್ಟರೆ, ಆ ನೀರು ಹೊರಟೇಹೋಗುತ್ತದೆ it will be a big waste. you will be sometimes losing by such decisions 4 hundred 5 hundred crores per annum. ಇದು

ಆಗುತ್ತದೆ. ಇದರ ಬಗ್ಗೆ ವಿಶೇಷ ಜಾಗ್ರತೆ ವಹಿಸಿಕೊಳ್ಳಬೇಕಾದ ಅವಶ್ಯಕತೆ ಬಹಳ ಇದೆ. ಇದರ ಬಗ್ಗೆ ಎಚ್ಚರ ಎಂದೂ ತಪ್ಪಲಿಕ್ಕೆ ಸಾಧ್ಯವಾಗುವುದಿಲ್ಲ, ಎಚ್ಚರತಪ್ಪಿದರೆ ವಿಶೇಷವಾದ ಅಚಾತುರ್ಯವಾಗಿ ಯಾವ ಕೈಗಾರಿಕಾ ಕ್ಷೇತ್ರದಲ್ಲಿ ನಮಗೆ ರೆವಿನ್ಯೂ ಬರಬೇಕು, ಅದಕ್ಕೆ ಖಂಡಿತವಾಗಿ ದೊಡ್ಡ ಅಘಾತ ಮಾಡಿದ ಹಾಗೆ ಆಗುತ್ತದೆ. ಅದನ್ನು ವಿಶೇಷವಾಗಿ ವಿಶ್ಲೇಷಣೆ ಮಾಡಲಿಕ್ಕೆ ನಾನು ಹೋಗುವುದಿಲ್ಲ, ಆದರೆ ಇವತ್ತು ನೀರನ್ನು ಕ್ಯಾರಿ ಓವರ್ ಮಾಡತಕ್ಕ ದೃಷ್ಟಿಯಿಂದ ಎಚ್ಚರಿಕೆಯಿಂದ ಉಪಯೋಗ ಮಾಡಬೇಕಾದ ಅವಶ್ಯಕತೆ ಇದೆ. ಅಂತಹ ಕಂಟಿನ್ಜೆನ್ಸಿ ಬಂದರೆ ಏನು ಮಾಡಬಹುದು? ನೀವು ನಿಮ್ಮ ಸ್ಟೋರೇಜ್ ಮೇಲೇ ಡಿಸೈಡ್ ಮಾಡುವ ಬದಲು ಪರ್ಯಾಯವಾದ ಕೆಲವು ವ್ಯವಸ್ಥೆಗಳನ್ನು ತಂತ್ರಗಳನ್ನು ನೀವು ಉಪಯೋಗ ಮಾಡಬೇಕಾದ ಅವಶ್ಯಕತೆ ಇದೆ. ಅದೇನು ಮಾಡಬಹುದು? ನಮ್ಮಲ್ಲಿ ಈಗ ಇರುವ ಕೊರತೆ ಪ್ರತಿ ದಿವಸಕ್ಕೆ ಎಷ್ಟು ಎಂದರೆ 59.01 ಮಿಲಿಯನ್ ಯೂನಿಟ್ ಜನರಲಿ. ಈಗ ನಮ್ಮಲ್ಲಿ ಅನೇಕ ಇಂಡಸ್ಟ್ರಿಗಳಲ್ಲಿ ಅನೇಕ ಕ್ಯಾಪ್ಟೀವ್ ಯೂನಿಟ್ಸ್ ಅಂತ ಖಾಸಗಿಯವರದು ಇವೆ, ಅದರಿಂದ ಉತ್ಪಾದನೆ ಮಾಡಿದರೆ ಎಷ್ಟು ವಿದ್ಯುತ್ ಬರುತ್ತದೆಂದರೆ 18 to 20 ಮಿಲಿಯನ್ ಯೂನಿಟ್ಸ್, ಅದು ಡೀಸೆಲ್ ಅಥವಾ ಥರ್ಮಲ್ ಇರಬಹುದು, ಬೇರೆ ರೀತಿಗಳಲ್ಲಿ ಅವರು ಉತ್ಪಾದಿಸುತ್ತಾರೆ, ಆ ಕೊರತೆ ನೀಗಿಸಲಿಕ್ಕೆ ಇವತ್ತು ಸಾಧ್ಯವಾಗುತ್ತದೆ, ಇಷ್ಟು ಮಾತ್ರವಲ್ಲ, ಈ ಕ್ಯಾಪ್ಟೀವ್ ಯೂನಿಟ್ ಉಪಯೋಗ ಮಾಡಲಿಕ್ಕೆ ತಾವೇನು ಮಾಡಬಹುದು ಎಂದರೆ ಅವರಿಗೆ ಇನ್‌ಸೆಂಟಿವ್ ರಿಬೇಟ್ ಕೊಡಬೇಕು. ಏಕೆಂದರೆ ಒಂದು ಕಂಟಿನ್ಜೆನ್ಸಿ ಪ್ಲಾನ್ ಯಾವಾಗಲೂ ತಮ್ಮ ಬಳಿ ರೆಡಿ ಇರಬೇಕು. ಇವತ್ತೇನಾಗಿದೆ ಎಂದರೆ ಒಂದೆರಡು ವರ್ಷ ನಾವು ಪವರ್‌ಕಟ್ ತೆಗೆದುಬಿಟ್ಟೆವು ಸಾಕಷ್ಟು ಉತ್ಪಾದನೆ ಆಯಿತು. ಒಂದೂವರೆ ವರ್ಷ ಪವರ್‌ಕಟ್ ರಿಮೂವ್ ಮಾಡಿದೆವು ಆದ್ದರಿಂದ ಕಂಟಿನ್ಜೆನ್ಸಿ ಪ್ಲಾನ್ ನಾವು ಹುಡುಕಲಿಕ್ಕೆ ಹೋಗಲಿಲ್ಲ. ಆದರೆ ಈಗ ಕಂಟಿನ್ಜೆನ್ಸಿ ಪ್ಲಾನನ್ನು ರೆಡಿ ಮಾಡುವುದು ಒಳ್ಳೆಯದು ಏಕೆಂದರೆ ಯಾರು ಖಾಸಗಿಯಾಗಿ ಉತ್ಪಾದನೆ ಮಾಡುತ್ತಾರೆ ಅದಕ್ಕೆ ರಿಬೇಟ್ ಕೊಡುತ್ತೇವೆಂದು ಹೇಳಬಹುದು, ಬೇರೆ ಬೇರೆ ರೀತಿಯ package of Incentives ಅನ್ನು ನೀವು ಅನೌನ್ಸ್‌ಮಾಡಿದರೆ ಈ ಎಲ್ಲ ಕ್ಯಾಪ್ಟಿವ್‌ಯೂನಿಟ್ಟನ್ನು ಚಾರ್ಜ್‌ಮಾಡಬಹುದು.

18 ರಿಂದ 20 ಮಿಲಿಯನ್ ಯೂನಿಟ್ಸಿಲ್ಲದಿದ್ದರೂ 10-15 ಮಿಲಿಯನ್ ಯೂನಿಟ್ಸ್ ಉಪಯೋಗ ಮಾಡಿದರೂ ಕೂಡ ನಿಮ್ಮ ಕೊರತೆ ಪೂರೈಸುವ ಶಕ್ತಿ ನಿಮ್ಮ ಗ್ರಿಡ್‌ಗೆ ಬರುತ್ತದೆ, ಅದನ್ನು ಇವತ್ತು ಮಾಡಬೇಕಾಗುತ್ತದೆ. ಅನೇಕ ಬಾರಿ ಏನಾಗುತ್ತದೆ ಎಂದರೆ, we are not very quick in acting on it. 45 M.Wts., of power is just there already at Bangalore. ಎಂಆರ್‌ಪಿಯವರು ಮೆಶಿನರಿ ಜೋಡಣೆ ಮಾಡಿ Suppose you give permission today, ಆಮೇಲೆ ಅವರಿಗೆ ಫ್ಯಾಕ್ಟರಿಗೆ ಬೇಕಾದೀತು, ಸದ್ಯ 45 M.Wts., is just available with them ಅದನ್ನು ಸ್ಥಾಪನೆ ಮಾಡುವಾಗ Pollution Board, Environment Board ಎಲ್ಲ ಕ್ಲಿಯರಾದದ್ದು ಫೈನಲ್ಲಾಗಿ ಇದನ್ನು ಚಾರ್ಜ್ ಮಾಡಬೇಕಾದರೆ final nod of the pollution / Environment Board is necessary. Why don't you act quickly upon it? ಈಗ ಕೊರತೆ ಇದೆ. ನನ್ನ ಗಮನಕ್ಕೆ ಬಂದ ಇದು ಒಂದು ನಿದರ್ಶನ ಇಂತಹ ಅನೇಕ ನಿದರ್ಶನಗಳು ಅಲ್ಲಲ್ಲಿ ಕ್ಯಾಪ್ಟಿವ್ ಯೂನಿಟ್ಸ್‌ನಲ್ಲಿ ಇರಲಿಕ್ಕೆ ಸಾಧ್ಯವಿದೆ. ಇದರಲ್ಲಿ ತಡ ಮಾಡಬಾರದು. ಏಕೆಂದರೆ Why should you delay it? ಇದು ಪರಿಸರ ಮಾಲಿನ್ಯ ಮಂಡಲಿ ಕ್ಲಿಯರ್ ಮಾಡಿದ್ದು ಕಮಿಶನ್ ಮಾಡುವ ಮೊದಲು ಫೈಲನ್ ಕ್ಲಿಯರೆನ್ಸ್ ಎಂದಿದೆ ಅದಾದರೆ ಸಾಕು ಇದನ್ನು ಏಕೆ ನೀವು ಮಾಡಬಾರದು? ನೀವು ಮಾಡಬೇಕು, ಏಕೆಂದರೆ ಕೇಂದ್ರದಲ್ಲಿ ಕೂಡ ಇವತ್ತು ಸಿಂಗಲ್ ಏಜೆನ್ಸಿ ಮಾಡುತ್ತಿದ್ದಾರೆ, ನೀವು ಕೂಡ

ಪವರ್ ಮಿಜಿನಿಸ್ಟ್ರಿಯಲ್ಲಿ either power Secretary or the Chief Secretary ಅವರ ನೇತೃತ್ವದಲ್ಲಿ ಇದನ್ನು ಮಾಡಿದಾಗ ಮಾತ್ರ ಇದೆಲ್ಲ ಪರಿಹಾರವಾಗುತ್ತದೆ, ನನಗೆ ಗೊತ್ತಿದೆ ನಾನು ಮುಖ್ಯಮಂತ್ರಿಯಾದಾಗ one Captive Unit was ready for commissioning. It took one and half years. ಎರಡು ವರ್ಷ ಅವರಿಗೆ ಬರಿ Nod from the Chief Minister was necessary, It took $1\frac{1}{2}$ years to two years. ಇಂತಹ ಕೆಲವು ಕಮ್ಯುನಿಕೇಶನ್‌ಗ್ಯಾಪ್ ಏನಿದೆ ನಿಧಾನ ಏನಿದೆ, ಕೆಲವು ಸಲ ಏನಾಗುತ್ತದೆಂದರೆ ಈ ತರಹದ ಸಣ್ಣಸಣ್ಣ ಕ್ಯಾಪ್ಟಿವ್ ಯೂನಿಟ್ಸ್ ಮಾಡುವವರಿಗೆ ನಿರಾಸೆಯಾಗುತ್ತದೆ. ಎರಡು ವರ್ಷ ಹೋಯಿತು ಎಂದರೆ, ಎಷ್ಟು ನಷ್ಟವಾಗುತ್ತದೆ? ಎಷ್ಟು ಬಡ್ಡಿ ನಷ್ಟವಾಗುತ್ತದೆ ಎಂಬುದನ್ನು ತಾವು ತಿಳಿದುಕೊಳ್ಳಬೇಕು. ಇನ್ನು ವಿದ್ಯುತ್ ಉತ್ಪನ್ನದಲ್ಲಿ ಕೂಡ ಯಾವ್ಯಾವ ಪ್ರಾಜೆಕ್ಟ್ ತಮ್ಮಲ್ಲಿದೆ ಇಮ್ಮಿಡಿಯೆಟ್ಟಾಗಿ ಯಾವ ರೀತಿಯಲ್ಲಿ ಅದನ್ನು ಏಕೆಂದರೆ ಕೆಲವು ಒಂದು ಒಂದೂವರೆ ವರ್ಷದಲ್ಲಿ ಬರಬಹುದು, MRPL-their proposal is 500 M.Wts.

ಉತ್ಪಾದನೆ ಮಾಡುವ ಒಂದು ಪ್ರಪೋಸಲ್ ಇದೆ. ಈಗ 45 ಮೆಗಾ ವ್ಯಾಟಾಯಿತು.

ಈಗ 500 ಮೆಗಾವ್ಯಾಟ್ ಮಾಡಲು ಅವರಿಗೆ ಕ್ಲಿಕೆನ್ ಮಾಡಲಿಕ್ಕೆ ಯಾವ ಕ್ಲಿಯರೆನ್ಸ್ ಬೇಕು ಅದೆಲ್ಲ ಮಾಡಬೇಕಾಗುತ್ತದೆ, ಈವನ್ ಜಯಪ್ರಕಾಶ್ ಸ್ಟೀಲ್ ಇಂಡಸ್ಟ್ರಿಯವರು ಕೂಡ I think 500 ಮೆಗಾವ್ಯಾಟ್ ಉತ್ಪಾದಿಸಲು ಬೇಕಾದಂಥ ಅವರ ಒಂದು ಪ್ರಪೋಸಲ್ ಫೈನಲೈಸ್ ಆಗಿದೆ. now the Management must have been changed, but you have to give Clearance. Evan Vijayanagar Steel Plant would like to produce 500 M.Wts., 500 plus 500 plus 500. ಒಂದೂವರೆ ಸಾವಿರ ಮೆಗಾವ್ಯಾಟ್ ಪವರ್ ಜನರೇಟ್ ಮಾಡುವ ಪ್ರಪೋಸಲ್ is at your doors. ಕೊಜೆಂಟ್ರಿಕ್ಸ್‌ದು ಎರಡು ಮೂರು ವರ್ಷಗಳಿರಬಹುದು, ಆದರೆ ಈ ಮೂರು ಪ್ರಾಜೆಕ್ಟ್‌ಗಳನ್ನು ಮಾಡುವುದರಿಂದ ಅವರ ರಿಕ್ವೈರ್‌ಮೆಂಟಾಗಿ ಸ್ವಲ್ಪ ಉಳಿಯುತ್ತದೆ. ಒಂದೂವರೆ ವರ್ಷದಲ್ಲಿ ಒಂದೂವರೆ ಸಾವಿರ ಮೆಗಾವ್ಯಾಟ್ ನಿಮ್ಮ ಗ್ರಿಡ್‌ಗೆ ಬರುತ್ತದೆ. ಅದಕ್ಕೆ ಬೇಕಾದ ಸನ್ನಾಹ ತಾವು ಮಾಡುತ್ತೀದ್ದೀರೆಂಬ ಒಂದು ಸಂದೇಶ ಇವತ್ತು ಉದ್ಯಮಿಗಳಿಗೆ ಹೋಗಿಬಿಟ್ಟರೆ, ಅನೇಕ ಉದ್ಯಮಿಗಳು ಮುಂದೆ ಬರುತ್ತಾರೆ ಎರಡನೆಯದು ಉತ್ತಮವಾದ ವಿಶ್ವಾಸಾರ್ಹವಾದ ವಿದ್ಯುತ್ ಮತ್ತು ಉದ್ಯಮ ಕ್ಷೇತ್ರಕ್ಕೆ ಸ್ಥಿರತೆಯನ್ನು ಕೊಡಲಿಕ್ಕೆ ಸಾಧ್ಯವಿರುವಾಗ, ನಾನು ಹೇಳುವುದು Environment Pollution Board Regulations ಏನೇನು ರೂಲ್ಸ್ ಹಾಕಿದ್ದಾರೆ ಅದನ್ನು ಒಂದಿಂಚು ರಿಲ್ಯಾಕ್ಸ್ ಮಾಡಬೇಡಿ you should be very strict ಆದರೆ ಒಮ್ಮೆ ಕ್ಲಿಯರ್ ಮಾಡಿದ ಮೇಲೆ Do not entertain any objection ಇಲ್ಲದಿದ್ದರೆ ಯಾರೂ ನಿಮ್ಮಲ್ಲಿ ಕೈಗಾರಿಕೆ ಮಾಡಲು ಬರುವುದಿಲ್ಲ, ಅದನ್ನು ಕ್ಲಿಯರೆನ್ಸ್ ಮಾಡುವಾಗ ಕೂಡ ಯಾವ political interference ಅಥವಾ ಯಾವುದೇ ಆತುರ ಬೇಕಾಗಿಲ್ಲ, ಬಹಳ ಕಠಿಣವಾದ ರೀತಿಯಲ್ಲಿ ಅದಕ್ಕೆ ಇಂತಹ ಒಂದು ಆವಶ್ಯಕತೆ ಇದೆ ಆ ಅವಶ್ಯಕತೆಯನ್ನು ಬಹಳ ಪೂರೈಕೆ ಮಾಡಿದರೆ ಮಾತ್ರ ನಾವು ಕ್ಲಿಯರೆನ್ಸ್ ಕೊಡುತ್ತೇವೆ ಎಂದು ಹೇಳಬೇಕು, ಏಕೆಂದರೆ ರಾಜ್ಯ ಕ್ಲಿಯರೆನ್ಸ್ ಕೊಡುವ ಅಥಾರಿಟಿ ಅಲ್ಲ, ಕೇಂದ್ರ ಕೊಡತಕ್ಕದ್ದು, ಬಹಳ ಸ್ಟ್ರಿಕ್ಟ್‌ನಾರ್ಮ್ಸ್ ಅನ್ನು ಅವರು ಅಡಾಪ್ಟ್ ಮಾಡುತ್ತಾರೆ ನೀವು ಕೂಡ ಸ್ಟ್ರಿಕ್ಟಾಗಿ ಅದನ್ನು ಅಡಾಪ್ಟ್ ಮಾಡಿ. ತಮಗೆ ಗೊತ್ತಿದೆ ಅನೇಕ ರೀತಿಯಲ್ಲಿ ಲಾಭ ಮಾಡಲಿಕ್ಕೆ ರಾಜಕಾರಣಿಗಳು ರಾಜಕೀಯ ಲಾಭ ಒಂದು ಪ್ರಾಜೆಕ್ಟ್‌ನಲ್ಲಿ ಆಗುವುದಿದ್ದರೆ ಇದನ್ನು

ಮಾಡೋಣ ಎಂದು ನಾವೆಲ್ಲ ಹೊರಡುತ್ತೇವೆ. ಆದರೆ ಒಮ್ಮೆ ಕ್ಲಿಯರೆನ್ಸ್ ಸಿಕ್ಕಿದ ಮೇಲೆ ಯಾವುದೇ ರೀತಿಯ ಹಸ್ತಕ್ಷೇಪ ಯಾರಿಂದಲೂ ಕೂಡ ಬಾರದೇ ಇರುವ ರೀತಿಯಲ್ಲಿ ಸರ್ಕಾರ ವರ್ತನೆ ಮಾಡಬೇಕಾಗುತ್ತದೆ. ಸರ್ಕಾರ ಸ್ವಲ್ಪ ಮೆದುವಿದೆ ಎಂದಾಗ ಎಜಿಟೇಶನ್‌ಗೆ ಮತ್ತೊಂದಕ್ಕೆ ಹೆದರಿದಿರಿ ಎಂದರೆ ಹೊಡೆಯಲಿಕ್ಕೆ ಅವರು ಬರುತ್ತಾರೆ. ಇಲ್ಲಿ ಯಾವ ಕೈಗಾರಿಕೆಯನ್ನೂ ಕೂಡ ಮೊದಲು ಸಾಧ್ಯವಾಗುವುದಿಲ್ಲ, ಈ ದೃಷ್ಟಿಕೋನದಿಂದ ತಾವು ಮುಂದೆ ಕೆಲಸ ಮಾಡಬೇಕಾದ ಅವಶ್ಯಕತೆ ಖಂಡಿತ ಇದೆ. ಕರ್ನಾಟಕ ರಾಜ್ಯ ಕೈಗಾರಿಕೆಗಳಲ್ಲಿ ಕರ್ನಾಟಕ ರಾಜ್ಯ ಇಡೀ ರಾಷ್ಟ್ರದಲ್ಲಿ ದೊಡ್ಡ ದಾಪುಗಾಲು ಹಾಕಿಕೊಂಡು ಮುಂದೆ ಹೋಗುತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ನೀವು ಯಾರಿಗೆ ಭಾಷಣ ಮಾಡುತ್ತಿದ್ದೀರಿ ಎಂದು ನನಗೆ ಅನುಮಾನ ಬಂದು ಬಿಟ್ಟಿದೆ.

ಉಪಾಧ್ಯಕ್ಷರು : ನಾಗರಾಜ್‌ರವರೇ ಮಂತ್ರಿಗಳು ಇದ್ದಾರೆ, ಬರೆದುಕೊಳ್ಳುತ್ತಿದ್ದಾರೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಕಣ್ಣುಕಾಣುವುದಿಲ್ಲವೆ, ಕಣ್ಣೇನಾದರೂ ಮಂಜಾಯ್ತ?

ಶ್ರೀ ವಾಟಾಳ್ ನಾಗರಾಜ್ : ನಾಲಗೆಯನ್ನು ಸ್ವಲ್ಪ ಬಿಗಿಹಿಡಿದು ಮಾತನಾಡಿ, ಇದನ್ನೆಲ್ಲಿ ನೀವು ಮಾತನಾಡಬಾರದು, ಕಣ್ಣು ಕಾಣುವುದಿಲ್ಲವೇ ಎನ್ನುವ ಪ್ರಶ್ನೆಯಲ್ಲ. ನೀವು ಸಂಬಂಧಪಟ್ಟ ಮಂತ್ರಿಯಲ್ಲ, ಮಾತಾಡುವಾಗ ಸ್ವಲ್ಪ ಜವಾಬ್ದಾರಿಯಿಂದ ಮಾತನಾಡಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ವಾಟಾಳ್ ನಾಗರಾಜ್‌ರವರು ಬೇರೆ ದೃಷ್ಟಿಯಿಂದ ಕೇಳಲಿಲ್ಲ, ಸಂಬಂಧಪಟ್ಟ ಕ್ಯಾಬಿನೆಟ್ ಸಚಿವರು ಇದ್ದರೆ ತಮಗೆ ಉತ್ತರ ಕೊಡಲು ಅನುಕೂಲವಾಗುತ್ತದೆ ಎಂಬ ದೃಷ್ಟಿಯಿಂದ ಹೇಳಿದ್ದಾರೆ. ಯಾವಾಗಲೂ ತಮಗೆ ಗೊತ್ತಿದೆ. ಪ್ರಥಮಬಾರಿಗೆ ಯಾರೂ ಲೋಪ ಎತ್ತುತ್ತಿಲ್ಲ, ಸಾಮಾನ್ಯವಾಗಿ ಸಂಬಂಧಪಟ್ಟ ಬೇಡಿಕೆ ಮಂತ್ರಿಗಳಿದ್ದರೆ ಚೆನ್ನಾಗಿರುತ್ತದೆ ಎಂದು ಲೋಪ ಎತ್ತಿಹಿಡಿಯುತ್ತಾರೆ ಆ ದೃಷ್ಟಿಯಿಂದ ಅವರು ಕೇಳುವಾಗ ನಾವಿದ್ದೇವೆ ಅಂದರೆ ಸಾಕಾಗಿತ್ತು ಕಣ್ಣಿಲ್ಲ ಅಂದರೆ ಅಷ್ಟು ಸರಿಯಾಗುವುದಿಲ್ಲ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಮುಕ್ಕಾಲು ಗಂಟೆ ಹಿಂದೆ ಮಾಜಿ ಮುಖ್ಯಮಂತ್ರಿಗಳಿಗೂ ಹೇಳಿಹೋಗಿದ್ದಾರೆ.

ಒಬ್ಬ ಮಾನ್ಯ ಸದಸ್ಯರು : ವಾಟಾಳ್‌ರವರು ಬಹಳ ಹಿರಿಯ ಸದಸ್ಯರು, ಅನೇಕ ಸಂದರ್ಭಗಳಲ್ಲಿ ಒಬ್ಬೊಬ್ಬ ಸಚಿವರೇ ಇಲ್ಲಿದ್ದುದನ್ನು ನಾವು ಪತ್ರಿಕೆಗಳಲ್ಲಿ ನೋಡಿದ್ದೇವೆ ಇವತ್ತು ಸರ್ಕಾರದ ಆರೇಳು ಸಚಿವರು ಇಲ್ಲಿ ಕುಳಿತಿದ್ದಾರೆ, ಸಂಬಂಧಪಟ್ಟ ಇಲಾಖೆ ಸಚಿವರು ಅವರಿಗೆ ಸೂಚನೆ ಕೊಟ್ಟಿದ್ದಾರೆ, ಅವರು ಬರೆದುಕೊಳ್ಳುತ್ತಿದ್ದಾರೆ, ಅದನ್ನು ಬಿಟ್ಟು ನಿಮಗೆ ಜವಾಬ್ದಾರಿ ಇಲ್ಲ ಎಂದು ಹಿರಿಯ ಸದಸ್ಯರಿಗೆ ಮಾತನಾಡುವುದು ಸಮಂಜಸವಲ್ಲ, ಇವತ್ತೇನಾಗಿದೆ ಇವರು ಬಹಳ ಹಿರಿಯ ಸದಸ್ಯರು ಇವರು ಮಾತನಾಡಿದರೆ ಎಲ್ಲರೂ ಸುಮ್ಮನೆ ಕುಳಿತು ಕೊಂಡುಬಿಡುತ್ತಾರೆಂಬ ಭಾವನೆ ಅವರಿಗಿದ್ದರೆ ಅದು ತಪ್ಪು. ಅವರೂ ಸಹ ತಾನು ಮಾತನಾಡಿದ್ದೆಲ್ಲ ರೈಟ್ ಎಂದು ತಿಳಿದುಕೊಳ್ಳಬಾರದು, ಅವರೇನಾದರೂ ಪ್ರಶ್ನೆ ಕೇಳಿ ಇವರು ಹೇಳದೇ ಇದ್ದರೆ ಆಗ ನೀವು ಪ್ರಶ್ನೆ ಮಾಡಿ, ಅದು ಬಿಟ್ಟು ಹಿರಿಯಸದಸ್ಯರಾಗಿ ನೀವು ಬಾಯಿಗೆ ಬಂದಹಾಗೆಲ್ಲ ಮಾತನಾಡುವುದು ಬಹಳ ತಪ್ಪಾಗುತ್ತದೆ, ಈ ಮನೆಗೆ ನೀವು ಕೆಟ್ಟದಾಗಿ ನಡೆದುಕೊಂಡಿದ್ದೀರಿ ಎಂದು ಈ ಸಮಯದಲ್ಲಿ ನನಗಂತೂ ಅನ್ನಿಸುತ್ತದೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ವಾಟಾಳ್‌ನಾಗರಾಜ್‌ರವರೂ ಬಹಳ ಹಿರಿಯ ಸದಸ್ಯರು ಅದರಲ್ಲಿ ಎರಡನೇ ಮಾತಿಲ್ಲ ಮಾನ್ಯ ಮಾಜಿ ಮುಖ್ಯಮಂತ್ರಿಗಳು ಸದೀರ್ಘವಾಗಿ ಅದರ ಬಗ್ಗೆ ಬೆಳಕು ಚೆಲ್ಲುತ್ತಿರುವಾಗ ಜವಾಬ್ದಾರಿಯುತ ಮಂತ್ರಿಗಳು ಅಂತ ಅಲ್ಲ ಅದಕ್ಕೆ ಸಂಬಂಧಪಟ್ಟ ಹಿರಿಯ ಮಂತ್ರಿಗಳಿಲ್ಲವಲ್ಲ ಎಂಬ ಧಾಟಿಯಲ್ಲಿ ಅವರು ಹೇಳಿದಾಗ ನಾವು ಇದ್ದೇವೆ ಎಂಬ ಮಾತು ಹೇಳಿದ್ದರೆ ಬಹಳ ಸೌಜನ್ಯವಾಗಿತ್ತು, ತಾವೂ ಹಿರಿಯರು ನಿಮ್ಮ ಬಗ್ಗೆ ಬಹಳ ಗೌರವ ಇದೆ, ಆದರೆ ನೀವು ಈ ತರಹ ಒರಟುತನದಲ್ಲಿ ಹೇಳಿದ್ದುದು ಅವರ ಮನಸಿಗೆ ನೋವಾಗಿದೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್: ಅಧ್ಯಕ್ಷರೇ, ನಾವೂ ಜವಾಬ್ದಾರಿ ಇರುವ ಸಚಿವರಿದ್ದೇವೆ, ಅಧ್ಯಕ್ಷರು ಸದನದಲ್ಲೇ ಹೇಳಿಹೋಗಿದ್ದಾರೆ,

ಶ್ರೀ ವಾಟಾಳ್ ನಾಗರಾಜ್ : ಒಂದು ನಿಮಿಷ ನಾನು ಮಾತನಾಡುವಾಗ, ಮಾಜಿ ಮುಖ್ಯಮಂತ್ರಿಗಳು ಮಾತನಾಡುತ್ತಿದ್ದಾರೆ, ಯಾರೂ ಇಲ್ಲವಲ್ಲ ಅಂತ ಹೇಳಿದ್ದು ಇಷ್ಟೇ ಆದರೆ ಮೊದಲೇ ನೇರವಾಗಿ ನಾನು ಯಾರ ಜವಾಬ್ದಾರಿ ಇರುವವರಿಲ್ಲ ಬೇಜವಾಬ್ದಾರಿ ಎಂದು ಮಾತನಾಡಿದ್ದರೆ ಈ ಸದನದಲ್ಲಿ ನೀವು ಹೇಳಿದ ಶಿಕ್ಷೆಗೆ ನಾನು ಗುರಿಯಾಗುತ್ತೇನೆ. ಮಾಜಿ ಮುಖ್ಯಮಂತ್ರಿಗಳು ವಿದ್ಯುತ್ ಬಗ್ಗೆ ಅಪಾರವಾದ ಬೆಳಕನ್ನು ಚೆಲ್ಲುತ್ತಿದ್ದಾರೆ ಎಂದು ನಾನು ಹೇಳಿದೆ. ಮಾಜಿ ಮುಖ್ಯಮಂತ್ರಿಗಳು ನನಗೇ ಉತ್ತರ ಕೊಟ್ಟುಕೊಳ್ಳುತ್ತಿದ್ದರು, ಯಾರಿರಲಿ ಇಲ್ಲದೆ ಇರಲಿ ನಾನು ಮಾತನಾಡಿ ಕೊಳ್ಳುತ್ತೇನೆ ಎಂದು ಅದು ಅವರ ಹಣೆಬರಹ ನನಗದು ಬೇಕಾಗಿಲ್ಲ, ಈಗ ತಾವು ಹೇಳಿದಿರಲ್ಲ, ತೀರ್ಮಾನ ಮಾಡಿಕೊಂಡು ಬಂದಿದ್ದೇವೆ ಮಾತನಾಡಿಕೊಳ್ಳುತ್ತೇವೆ ಎಂದು ಅದನ್ನು ಹೇಳಿಕೊಳ್ಳಿ, ನನಗೆ ಸಂಬಂಧವಿಲ್ಲ, ಆದರೆ ನಾನು ಕೇಳಿದೆ ಆ ಹಿರಿಯ ಮಹಿಳಾ ಸಚಿವರು ಏನು ಹೇಳಬೇಕಾಗಿತ್ತು ಎಂದರೆ, ನಾವಿದ್ದೇವೆ ಬರೆದುಕೊಳ್ಳುತ್ತಿದ್ದೇವೆ ಅಂತ ಆ ರೀತಿ ಹೇಳುವುದು ಬಿಟ್ಟು ನಿಮಗೇನು ಕಣ್ಣು ಕಾಣುವುದಿಲ್ಲವೇ ಅಂದರೆ ಇಲ್ಲಿ ಚುನಾವಣೆಗೆ ಕುರುಡರು ನಿಲ್ಲುವುದಕ್ಕೆ ಅವಕಾಶ ಇದೆಯೆ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಯಾರೂ ಇಲ್ಲಿಲ್ಲ ಎಂದು ಹೇಳಿದಾಗ, ಆ ಮಾತು ನಾನು ಹೇಳಬೇಕಾಯಿತು.

ಶ್ರೀ ವಾಟಾಳ್ ನಾಗರಾಜ್ : ಬಹಳ ಸುಸಂಸ್ಕೃತ ಹಿನ್ನೆಲೆಯಿರುವಂತಹ ಹಿನ್ನೆಲೆಯಿಂದ ಬಂದಿರುವವರು, ಅವರಿಂದ ಈ ಭಾಷೆ ಬರುತ್ತದೆ ಎಂದು ಖಂಡಿತವಾಗಿ ನಾನು ಕಂಡಿರಲಿಲ್ಲ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ನನಗೂ ಅಷ್ಟೇ ಗೌರವ ಇದೆ, ನಾವು ಇಲ್ಲಿ ಕುಳಿತಿರುವುದು ಬಹುಶಃ ವಾಟಾಳ್ ನಾಗರಾಜ್ ಏಕೆ ಕಾಣಿಸಲಿಲ್ಲ ಎಂದು ಈ ಮಾತು ಹೇಳಬೇಕಾಯಿತು.

ಶ್ರೀ ವಾಟಾಳ್ ನಾಗರಾಜ್ : ಅಂದರೆ ಪ್ರಸಿದ್ಧ ಸಾಹಿತಿಗಳು, ಕರ್ನಾಟಕ ಏಕೀಕರಣಕ್ಕಾಗಿ ಹೋರಾಟ ಮಾಡಿದ ಪಂಡಿತ ಶಿವಮೂರ್ತಿ ಶಾಸ್ತ್ರಿಯವರ ಸೊಸೆ ಇವರು, ಇವರ ಸಂಸ್ಕೃತಿ ಎಷ್ಟರಮಟ್ಟಕ್ಕೆ ಇಳಿದಿದೆ ಎಂದರೆ ನಿಮಗೆ ಕಣ್ಣಿಲ್ಲವೇ, ಸಂತೋಷ. ನೀವು ಇದೇ ಧಾಟಿಯಲ್ಲಿ ಮುಂದುವರಿಯುವುದಾದರೆ ಇದು ಒಳ್ಳೆಯ ಸಂಪ್ರದಾಯ ಅಲ್ಲ, ನಮಗೆ ಗೌರವ ತರುವಂಥದಲ್ಲ, ನಿಮ್ಮ ಹಣೆಬರಹ ಏನು ಬೇಕಾದರೂ ಮಾಡಿಕೊಳ್ಳಿ.

(ಗೊಂದಲ)

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಮಾನ್ಯ ವಾಟಾಳ್ ನಾಗರಾಜ್ ಅವರು, ಹಿರಿಯ ಸದಸ್ಯರು, ಅವರು ಇಲ್ಲಿ ಯಾರು ಇಲ್ಲ ಎಂದು ಹೇಳಿದಾಗ, ನಾವ್ಯಾರು ಅವರ ಕಣ್ಣಿಗೆ ಕಾಣಿಸಲಿಲ್ಲವೆ ಎಂದು ಹೇಳಿದೆ.

ಡಾ|| ಯು. ಚಿತ್ತರಂಜನ್ : ಮಾನ್ಯ ಉಪಾಧ್ಯಕ್ಷರೆ, ಪ್ರಶ್ನೋತ್ತರ ಸಮಯದಲ್ಲಿ ಸಂಬಂಧಪಟ್ಟ ಮಂತ್ರಿಗಳು ಇರಬೇಕೆಂದು ಎಷ್ಟು ಸಲ ಮಾನ್ಯ ಅಧ್ಯಕ್ಷರು ಹೇಳಿದ್ದಾರೆ. ಚರ್ಚೆ ನಡೆಯುತ್ತಿರುವಾಗ ಕೂಡ ಇರಬೇಕೆಂದು ಹೇಳಿದ್ದರು. ಇದು ಸಭಾಧ್ಯಕ್ಷರ ಪೀಠಕ್ಕೆ ತೋರಿದ ಅಗೌರವ, ಅದು ನಮಗೆ ಅಲ್ಲ,

ಉಪಾಧ್ಯಕ್ಷರು : ನಿಮಗೆ ತಿಳಿಯಲಾರದ ವಿಷಯಗಳನ್ನು ಮಾತನಾಡುವುದಕ್ಕೆ ಹೋಗಬೇಡಿ. ಯಾವುದೇ ವಿಷಯವನ್ನು ನೀವೇ ಮಾತನಾಡಲು ಹೋಗಬೇಡಿ. ನಿಮ್ಮ ನಾಯಕರನ್ನು ಕೇಳಿ ಮಾತನಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ವಿಶೇಷವಾಗಿ ಬಂಡವಾಳ ಬರುತ್ತಿದೆ. ವಿದ್ಯುತ್ ಕ್ಷೇತ್ರ ಬಹಳ ಪ್ರಾಮುಖ್ಯವಾದುದು. ಇಲ್ಲಿ ವಿದ್ಯುತ್ ಕ್ಷೇತ್ರದಲ್ಲಿ ಅನೇಕ ದೊಡ್ಡ ದೊಡ್ಡ ಕೈಗಾರಿಕೆ ಮಾಡುವವರು ಕ್ಯಾಪ್ಟೀವ್ ಯೂನಿಟ್ಟಿಗೆ ಬರುತ್ತಿದ್ದಾರೆ. 500-1000 ಮೆಗಾವ್ಯಾಟಿಗೆ ಬರುತ್ತಿದ್ದಾರೆ. ಇದು ಬರತಕ್ಕಂತಹ ಗಳಿಗೆಯಲ್ಲೇ ಮೂಲಭೂತವಾಗಿರತಕ್ಕಂತಹದ್ದು, ಅಲ್ಲೇ ಕ್ಲಿಯರೆನ್ಸ್ ಕೊಡಲಿಕ್ಕೆ ಅಲ್ಲೇ ನಾವು ಇನ್‌ವೆಸ್ಟ್‌ಮೆಂಟಿಗೆ ತಡಹಿಡಿದರೆ ಏನಾಗುತ್ತದೆಂದರೆ it will have a spiralling effect. ಉಳಿದ ಇನ್‌ವೆಸ್ಟ್‌ಮೆಂಟ್‌ಗಳು ಯಾವುದೂ ಕೂಡ ನಮ್ಮಲ್ಲಿಗೆ ಬರುವುದಿಲ್ಲ, ಡಿಸೆಂಬರ್ 94ರ ಅಂತ್ಯಕ್ಕೆ Centre for Monitoring Indian Economy. ಇದು ನಮ್ಮ ರಾಜ್ಯದ ಪಬ್ಲಿಕೇಷನ್ ಅಲ್ಲ, ಇದು ಬಾಂಬೆಯಲ್ಲಿರತಕ್ಕಂತಹ ಒಂದು ವೆಲ್ ಅಕ್ಸೆಪ್ಟೆಡ್ ಪಬ್ಲಿಕೇಷನ್. ಅದರ ಪ್ರಕಾರ ಅವರು ಏನು ಹೇಳುತ್ತಾರೆಂದರೆ, share of private Enterprise ಕರ್ನಾಟಕಕ್ಕೆ ಇಡೀ ರಾಷ್ಟ್ರದಲ್ಲಿ ಎರಡನೇ ಸ್ಥಾನ ಬಂದಿದೆ. As on December, 1993 we had occupied 4th place. ಡಿಸೆಂಬರ್ 1993ರಲ್ಲಿ 4ನೇ ಪ್ಲೇಸ್ ಬಂದಿದೆ ಎಂದು ಹೇಳುವಾಗ ಮಾನ್ಯ ಮೊಯಿಲಿಯವರು ಸುಳ್ಳು ಹೇಳುತ್ತಿದ್ದಾರೆಂದು ಹೇಳಿದರು. This is the latest. ಪ್ರತಿ ಡಿಸೆಂಬರ್‌ಗೆ ಸಿ.ಎಂ.ಐ. ಸಂಸ್ಥೆಯವರು ಹೊರ ತರುತ್ತಾರೆ ಇದರ ಪ್ರಕಾರ ಕೂಡ ನಮ್ಮದು ಎರಡನೇ ಸ್ಥಾನದಲ್ಲಿ ಬರುತ್ತದೆ. 2nd place in the country. Share of private sector, ಡಿಸೆಂಬರ್ 94ರ ಅಂತ್ಯಕ್ಕೆ 47,217 ಕೋಟಿ ರೂಪಾಯಿಗಳು ಇನ್‌ವೆಸ್ಟ್‌ಮೆಂಟ್ ನಮಗೆ ಬರುತ್ತವೆ, even according to the graph which is given. First Andhra Pradesh, next Karnataka, even according to the graph. ಮುಖ್ಯವಾಗಿ ಕರ್ನಾಟಕ ರಾಜ್ಯದಲ್ಲಿ 2 ಜಿಲ್ಲೆಗಳಲ್ಲಿ districts with more than Rs. 4,000 crores investment, ಇಡೀ ದೇಶವನ್ನು ಸಮೀಕ್ಷೆ ಮಾಡಿದ ಮೇಲೆ 11 ಜಿಲ್ಲೆಗಳಲ್ಲಿ ದಕ್ಷಿಣ ಕನ್ನಡ ಮತ್ತು ಬಳ್ಳಾರಿ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ [illegible] ಕೋಟಿ ರೂಪಾಯಿ ಇನ್‌ವೆಸ್ಟ್‌ಮೆಂಟ್ ಪವರ್, ರೀಫೈನರಿ, ಸ್ಟೀಲ್ ಎಲ್ಲಾ ಸೇರಿ. ಅದರಲ್ಲಿ ನಮ್ಮ ಷೇರ್ ಇಡೀ ದೇಶದ ಬೇರೆ ಬೇರೆ ಜಿಲ್ಲೆಗಳಲ್ಲಿ 28.9 ಪರ್ಸೆಂಟ್ ಕಾಂಟ್ರಿಬ್ಯೂಷನ್ ಫ್ರಂ ದಟ್ ಡಿಸ್ಟ್ರಿಕ್ಟ್. ಇಡೀ ರಾಜ್ಯದಲ್ಲಿ 28 ಪರ್ಸೆಂಟ್ ಕಾಂಟ್ರಿಬ್ಯೂಷನ್ ಇದೆ. ಬಳ್ಳಾರಿಯಲ್ಲಿ 6938 ಕೋಟಿ ಸ್ಟೀಲ್ ಅಂಡ್ ಪವರ್ 14.7 ಪರ್ಸೆಂಟ್ ಕಾಂಟ್ರಿಬ್ಯೂಷನ್ in the State, 0.9% contribution in the entire country.

ಇದನ್ನು ನೀವು ಬಹಳ ಜೋಪಾನದಿಂದ ನೋಡಿಕೊಳ್ಳಬೇಕಾಗುತ್ತದೆ. ಆ ಜಿಲ್ಲೆಗಳಿಗೆ ಬಹಳ ಹೆಚ್ಚು ಗಮನ ಕೊಡಬೇಕಾಗುತ್ತದೆ. ಇನ್‌ವೆಸ್ಟ್‌ಮೆಂಟ್ ಯಾವುದು ಬರುತ್ತಿದೆ ಅದನ್ನು ಹೆಚ್ಚಿಸತಕ್ಕಂತಹ ಕೆಲಸ ಮಾಡಬೇಕೇ ಹೊರತು People should not run

away. For example Tata Steel, they wanted to put up a steel plant in south Canara They were investigating both in South Canara and North Canara. They were investigating park now they have taken a decision not to put up.

ಇದು ಬೇಡವೆಂದು ಹೇಳಿದರು. ಒರಿಸ್ಸಾಗೆ ಹೋಗಿದ್ದಾರೆ. ನಾರ್ತ್ ಕೆನರಾ ನೀವು ಯಾವಾಗಲೂ ಬೇಡವೆಂದು ಹೇಳುತ್ತೀರಿ ಅದು ನಿಮಗೆ ಬಿಟ್ಟದ್ದುದು. ಎಲ್ಲಾ ಜಿಲ್ಲೆಗಳೂ ಬೇಡವೆಂದು ದೂಡಲಿಕ್ಕೆ ಹೋದರೆ, ಎಲ್ಲಾ ಬೇರೆ ರಾಜ್ಯಗಳಿಗೆ ಹೋಗಿ ಅಲ್ಲಿ ಕೈಗಾರಿಕೆ ಮಾಡುತ್ತಾರೆ. ಆದರೆ ಇವತ್ತು ಜನ ಬೆಳೆಯುತ್ತಿದ್ದಾರೆ, ಕಡಿಮೆ ಜನಸಂಖ್ಯೆ ಆಗುತ್ತಿಲ್ಲ, ಹಿಂದಿನ ಹಾಗೆ ಬಾಂಬೆಗೆ ಹೋಗಿ ದುಬಾಯಿಗೆ ಪರದೇಶಕ್ಕೆ ಅಪಾಯಿಂಟ್‌ಮೆಂಟ್‌ಗೆ ಹೋಗಲಿಕ್ಕೆ ಬರುವುದಿಲ್ಲ, ನಾವು ಪ್ರೊವೈಡ್ ಮಾಡಬೇಕಾಗುತ್ತದೆ. ಮಹಾರಾಷ್ಟ್ರದಲ್ಲಿ ಹೇಗೆ ಪ್ರಾಸ್ಪಾರಿಟಿ ಬಂದಿದೆ. It is because of this industrialisation. ಯಾವುದೂ ಕೈಗಾರಿಕೆ ಬೇಡವೆಂದು ನಾರ್ತ್ ಕೆನರಾದವರ ವಾದ ಇದೆ.

ಡಾ|| ಎಂ.ಪಿ. ಕರ್ಕಿ : ಉತ್ತರ ಕನ್ನಡ ಜಿಲ್ಲೆ ಅಂದರೆ ನೂರಕ್ಕೆ 80 ರಷ್ಟು ಅರಣ್ಯ ಇರತಕ್ಕಂತಹ ಜಿಲ್ಲೆ, ಈಗಾಗಲೇ ಅನೇಕ ಯೋಜನೆಗಳಿಗೆ ಜನರು ಬಳಸಿಕೊಂಡಿದ್ದಾರೆ. ಜನರಿಗೆ ಸರಿಯಾದ ಜಾಗ ಕಲ್ಪಿಸಲಿಕ್ಕೆ ಸಾಧ್ಯವಾಗಲಿಲ್ಲ, ಅಂಥಾದ್ದರಲ್ಲಿ ಸೀ ಬರ್ಡ್ ಆಯಿತು, ಕೈಗಾ ಆಯಿತು, ಸೂಪಾ ಅಣೆಕಟ್ಟು ಆಯಿತು ಶರಾವತಿ ಟೇಲ್‌ರೇಸ್ ಆಯಿತು, ಹೀಗೆ ಜನರನ್ನು ಎಬ್ಬಿಸತಕ್ಕಂತಹ ಕೆಲಸ ನಡೆದಿದೆ. ನಮ್ಮ ಜನರಿಗೆ ವ್ಯವಸಾಯಕ್ಕೆ ಬೇರೆ ಜಾಗದಲ್ಲಿ ವ್ಯವಸ್ಥೆ ಮಾಡಲಿಕ್ಕೆ ಸರಕಾರಕ್ಕೆ ಆಗುತ್ತಿಲ್ಲ, 15 ವರ್ಷದ ಹಿಂದೆ ಕಾಳಿ ಪ್ರಾಜೆಕ್ಟ್‌ನಲ್ಲಿ ಆಗಿರತಕ್ಕಂತಹ ಜನರಿಗೆ ಇನ್ನೂ ಕೂಡ ಸರಿಯಾದ ವ್ಯವಸ್ಥೆ ಆಗಲಿಲ್ಲ, ಅವರಿಗೆ ಕಾಂಪೆನ್‌ಸೇಷನ್ ಕೊಡಲಿಕ್ಕಾಗಲಿಲ್ಲ, ಅಂಥಾದ್ದರಲ್ಲಿ 5000 ಎಕರೆ, 10,000 ಎಕರೆ......

ಶ್ರೀ ಎಂ. ವೀರಪ್ಪ ಮೊಯಿಲಿ : ತಾವು ಹೇಳತಕ್ಕಂತಹ ಎಕ್ಸ್‌ಪ್ಲನೇಷನ್ ಅನ್ನು ಆಮೇಲೆ ಕೊಡಿ. ನಿಮ್ಮ ವಾದ ನಮ್ಮ ವಾದಕ್ಕಿಂತ ಬೇರೆ. ನಮ್ಮದು ಡೆವಲಪ್‌ಮೆಂಟ್ ಮೈಂಡ್ ನಿಮ್ಮದು ಷಿಂಕಿಂಗ್ ಮೈಂಡ್. ನಿಮ್ಮದೊಂದು ಧ್ರುವ ನಮ್ಮದೊಂದು ಧ್ರುವ. ಉತ್ತರ ಧ್ರುವ ದಕ್ಷಿಣ ಧ್ರುವ.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ : ನಾವು ಪರಿಸರ ವಿರೋಧಿಗಳು ಅಲ್ಲ, ಪರಿಸರ ಉಳಿಸಿ, ಅಭಿವೃದ್ಧಿ ಮಾಡಬೇಕು,

ಉಪಾಧ್ಯಕ್ಷರು : ನಿಮ್ಮ ಸಮಯ ಬಂದಾಗ ನೀವು ಮಾತನಾಡುವಿರಂತೆ ತಾವು ಕುಳಿತುಕೊಳ್ಳಿ.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೆ, ಸಣ್ಣ ಸಣ್ಣ ಕೈಗಾರಿಕೆಗಳು 1 ಕೋಟಿ ಜನರಿಗೆ ಉದ್ಯೋಗ ಕೊಡುವುದು ಇದ್ದರೆ, ಒಂದು ಎಕರೆ ಜಾಗದಲ್ಲಿ 150 ಜನರಿಗೆ ಉದ್ಯೋಗ ಕೊಡುವಂತಹ ಅದು ಕ್ಯಾಶ್ಯುಯಲ್ ಲೇಬರ್ಸ್ ಇರಬಹುದು, ಅಥವಾ ಸಣ್ಣ ಘಟಕಗಳು ಇರಬಹುದು ಅದು ಕೊಡುವುದಿದ್ದರೆ, ಎಂಆರ್‌ಪಿಎಲ್ ಎಂಬ ಸಂಸ್ಥೆ, 6 ಕೋಟಿ ಬಂಡವಾಳದಲ್ಲಿ ಒಬ್ಬ ವ್ಯಕ್ತಿಗೆ ಉದ್ಯೋಗ ಸಿಗದಿದ್ದರೆ, ಇದರಿಂದ ಉಪಯೋಗವೇನು ಎಂಬ ಬಗ್ಗೆ ವಿಚಾರ ಮಾಡಬೇಕು. ಇವತ್ತು ಜಿಲ್ಲೆಯ ಜನತೆ ಚರ್ಚೆ ಆರಂಭ ಮಾಡಿದೆ, 25 ಸಾವಿರ ಫಿಷರ್‌ಮೆನ್‌ಗಳು ಈಗಾಗಲೇ ಮುಷ್ಕರ ಆರಂಭ ಮಾಡಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ : ತಮ್ಮ ವಾದ ಇದೆ. ತಾವು ಆಮೇಲೆ ಮಾತನಾಡಿ. 30 ವರ್ಷಗಳ ಹಿಂದೆ ಎಂ.ಸಿ.ಎಫ್. ಬಂತು. ಆಮೇಲೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಯಾವ ದೊಡ್ಡ ಕೈಗಾರಿಕೆಗಳೂ ಬರಲಿಲ್ಲ. ಯಾರೂ ಬರಲಿಲ್ಲ. ಅದೇ ಸರಿ ಎಂದು ತಮ್ಮ ವಾದ. ಒಂದು ಕೈಗಾರಿಕೆ, ಬಂದರೆ 500-300 ಜನರಿಗೆ ಕೆಲಸ ಸಿಗುತ್ತದೆಂದು ಅಲ್ಲ. 9 ಸಾವಿರ ಕೋಟಿಯ, 10 ಸಾವಿರ ಕೋಟಿ ಬಂಡವಾಳ ಹೂಡಿದಾಗ, ಅದರ ಕೆಲಸ ಡೈರೆಕ್ಟ್ ಮಾತ್ರ ಅಲ್ಲ, ಇನ್‌ಡೈರೆಕ್ಟ್ ಆಗಿ ಅನೇಕ ರೀತಿಯ ಸಂಪತ್ತು ಅಂಗಡಿಗಳು, ವ್ಯಾಪಾರಗಳು ವಹಿವಾಟಗಳು ಸೇಲ್ಸ್‌ಟ್ಯಾಕ್ಸ್‌ಗಳು ಬರುತ್ತವೆ.

ಸೇಲ್ಸ್ ಟ್ಯಾಕ್ಸ ಬರದಿದ್ದರೆ ನೀವು ಯಾವ ಕಾರ್ಯಕ್ರಮ ತೆಗೆದುಕೊಳ್ಳಲಿಕ್ಕೆ ಸಾಧ್ಯವಿದೆ. ಮಹಾರಾಷ್ಟ್ರ, ಗುಜರಾತ್ ಹೇಗೆ ಡೆವಲಪ್ ಆಗಿದೆ. ಪೊಲ್ಯೂಷನ್ ಬಗ್ಗೆ ಸ್ಟ್ರಿಕ್ಟ್ ಆಗಿ ಎನ್‌ಫೋರ್ಸ್ ಮಾಡೋಣ. ವೆಲ್ತ್ ಕ್ರಿಯೇಟ್ ಆಗದಿದ್ದರೆ ಒಂದು ದೇಶ, ಒಂದು ನಾಡು ಅಥವಾ ಒಂದು ಜಿಲ್ಲೆ ಹೇಗೆ ಅಭಿವೃದ್ಧಿಯಾಗುತ್ತದೆ.? 500-1500-10000 ಜನರ ಕೆಲಸ ಅಲ್ಲ. ಅಷ್ಟು ಜನರಿಗೆ ಕೆಲಸ ಸಿಕ್ಕಿದಾಗ ಅಲ್ಲಿ ಇನ್‌ವೆಸ್ಟ್‌ಮೆಂಟ್ ಆದಾಗ ಅದಕ್ಕೆ ಬೇಕಾದಂತಹ ಪರಿಕರ ಪ್ರಾರಂಭವಾಗುತ್ತದೆ. ಯಾವುದೂ ಬೇಡ ಎಂದು ಕುಳಿತುಕೊಂಡರೆ, ಆ ಸಂಗತಿ ಬೇರೆ. ಶಿಲಾಯುಗಕ್ಕೆ ಹೋಗಬೇಕಾಗುತ್ತದೆ. ಅವರ ಕಡೆ ಕೈಗಾರಿಕೆಯಾಗಲಿ ಎಂದು ಅವರು ಹೇಳುತ್ತಾರೆ. ಉತ್ತರ ಕನ್ನಡದಲ್ಲಿ ನಮಗೆ ಯಾವ ಕೈಗಾರಿಕೆಯೂ ಬೇಡ ನಾವು ಹೀಗೇ ಇರುತ್ತೇವೆಂದು ಹೇಳುತ್ತಾರೆ. ಒಳ್ಳೆಯದು, ನಮ್ಮದೇನೂ ಆಕ್ಷೇಪಣೆ ಇಲ್ಲ. ಅದು ನಿಮ್ಮ ವಾದ.

ಡಾ॥ ಎಂ.ಪಿ. ಕರ್ಕಿ : ಉತ್ತರ ಕನ್ನಡ ಜಿಲ್ಲೆಯಲ್ಲಿ ಯಾವ ಕೈಗಾರಿಕೆಯೂ ಬೇಡವೆಂದು ನಾವು ಹೇಳಲಿಲ್ಲ. ದೊಡ್ಡ ಉದ್ದಿಮೆಗಳು ಬಂದು ಸಾವಿರಾರು ಜನರನ್ನು ಒಕ್ಕಲೆಬ್ಬಿಸುವುದು, ಪರಿಸರ ನಾಶಕ್ಕೆ ಕಾರಣರಾಗುವುದು ಬೇಡ. ಆದರೆ ಸಣ್ಣ ಸಣ್ಣ ಕೈಗಾರಿಕೆಗಳು ಬರಲಿ, ಜನರಿಗೆ ಉದ್ಯೋಗ ಸಿಗಲಿ ಎಂಬ ಭಾವನೆ ಇರತಕ್ಕಂತಹವರು ನಾವು. ನಾವು ಅದನ್ನು ತಾವು ಗಮನಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಆಯಿತು ಸಣ್ಣ ಕೈಗಾರಿಕೆಗಳು ಬರಲಿ ಎಂದು ಹಾರೈಸುತ್ತೇನೆ.

6.00 ಪಿ.ಎಂ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸೌತ್‌ಕೆನರಾ ನಾರ್ತ್ ಕೆನರಾ ಇಬ್ಬರೂ ಕಚ್ಚಾಡುತ್ತಿದ್ದಾರೆ. ಏನಾದರೂ ಉಳಿದರೆ ರಾಯಚೂರು ಗುಲ್ಬರ್ಗಾ ಕಡೆಗೆ ಕೊಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಡಿಬೆಟಿನಲ್ಲಿ ಇರುವುದು ಅಭಿವೃದ್ಧಿ ಬೇಕೋ ಬೇಡವೋ ಅಷ್ಟೇ ಇರುವುದು ಇಲ್ಲಿ ಈಗ ಮೈನ್ ಪಾಯಿಂಟ್ ಕೈಗಾರಿಕೆಗಳು ಬೇಡ, ಯಾವುದೂ ಬೇಡ, ಸಣ್ಣ ಕೈಗಾರಿಕೆಗಳು ಯಾವುದೂ ಬೇಡ ಎಂದು ಹೇಳುವುದು ಅಲ್ಲ. ಇದು ಯಾರಿಗೆ ಅನುಕೂಲ ಮಾಡಿಕೊಡುತ್ತದೆ. ಅದು ಈ ಡಿಬೆಟಿನಲ್ಲಿ ಬೇಡ. ಇದನ್ನು ಕನ್ವಿನ್ಸ್ ಮಾಡಲಿಕ್ಕೆ ಪ್ರತ್ಯೇಕ ಡಿಬೇಟ್ ಮಾಡೋಣ. ಇವತ್ತು ಕೈಗಾರಿಕೆಗಳು ಬರಬೇಕಾಗುತ್ತದೆ. ವೆಲ್ತ್ ಕ್ರಿಯೇಟ್ ಆಗಬೇಕಾಗುತ್ತದೆ. ಬರೀ ಕ್ಲರ್ಕ್ ಜಾಬ್‌ಗಳನ್ನು ಕೊಟ್ಟು ಕರ್ನಾಟಕದಲ್ಲಿ ರಾಜ್ಯ ಕಟ್ಟುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಉತ್ಪಾದನೆ ಮಾಡತಕ್ಕಂತಹ ಒಂದು ಕ್ಷೇತ್ರ ಪ್ರಾರಂಭವಾಗಬೇಕಾಗುತ್ತದೆ. ಕೃಷಿ ಕ್ಷೇತ್ರ ಮಾಡಬೇಕಾಗುತ್ತದೆ ಮತ್ತು ಕೈಗಾರಿಕಾ ಕ್ಷೇತ್ರದಲ್ಲಿಯೂ ಕೂಡ ಹೆಚ್ಚು ಉತ್ಪಾದನೆ ಮಾಡಬೇಕಾಗುತ್ತದೆ. ಅದೇ ಹೊತ್ತಿಗೆ ಪರಿಸರ ಮತ್ತೊಂದು ಅನ್ನು ನಾವು ಕಠಿಣವಾಗಿ ಎನ್‌ಫೋರ್ಸ್ ಮಾಡಬೇಕಾಗುತ್ತದೆ, ಅದಕ್ಕೆ ನಾನು ಒಪ್ಪುತ್ತೇನೆ. But, not at the

cost of the people's wealth, not at the cost of the people's misery. Yes, I agree with you. ಇಷ್ಟು ಅಭಿವೃದ್ಧಿಯ ದಾರಿಯಲ್ಲಿರುವಾಗ, ವಿದ್ಯುತ್ ಕ್ಷೇತ್ರದಲ್ಲಿ ಸುವ್ಯವಸ್ಥಿತವಾದ ಕೆಲಸ ಮಾಡಬೇಕಾಗುತ್ತದೆ. ಒಂದು ಸಾವಿರ ಮೆಗಾವಾಟಿನ ಕೋಜೆಂಟ್ರಿಕ್ಸ್ ಯೋಜನೆ ಏನು ಇದು ಅದು ಹೊಸ ಪ್ಲಾಟ್ ಅಲ್ಲ. ಎನ್‌ಟಿಪಿಸಿ ಅವರು 2 ಸಾವಿರ ಮೆಗಾವ್ಯಾಟ್‌ನ ಉತ್ಪಾದನೆ ಮಾಡಬೇಕೆಂದು ಹೇಳಿ 300 ಎಕರೆ ಜಾಗಕ್ಕೆ ಎನ್‌ಟಿಪಿಸಿ ಅವರು ಎನ್‌ವೈರ್‌ನಮೆಂಟಲ್ ಕ್ಲಿಯರೆನ್ಸ್ ಕೂಡ ಕೊಟ್ಟಿದ್ದಾರೆ. ಈ ಪ್ರಾಜೆಕ್ಟ್ ಮಾಡಬೇಕೆಂದು ಎನ್‌ಟಿಪಿಸಿ ಅವರು ಬಂದಾಗ, ಪ್ರಾಜೆಕ್ಟ್ ಕ್ಲಿಯರೆನ್ಸ್ ಕೂಡ ಕೊಟ್ಟಿದ್ದಾರೆ. ನಾನು ಒಂದನ್ನು ಒಪ್ಪುತ್ತೇನೆ. ಮಂತ್ರಿಗಳು ಬಂದು ಇಲ್ಲಿ ರಾಜಕೀಯ ಹಸ್ತಕ್ಷೇಪ ಮಾಡಿ ಕ್ಲಿಯರೆನ್ಸ್ ಕೊಟ್ಟರು ಎಂಬ ಅಭಿಪ್ರಾಯ ಬಂದದ್ದು ತಪ್ಪು. ಯಾವುದೇ ಕ್ಲಿಯರೆನ್ಸ್ ಬೋರ್ಡಿನಲ್ಲಿ ಮಾಡುತ್ತೀರಿ ಅದಕ್ಕೆ ಪರಿಣಿತರನ್ನು ಹೊಂದಿದಂತಹ ಬೋರ್ಡ್ ಇರಬೇಕು. ಸಂಬಂಧಪಟ್ಟ ಪೋರ್ಟ್ ಪೋಲಿಯೋ ಮಂತ್ರಿಗಳು ಅವರ ನಿರ್ಣಯದಲ್ಲಿ ಕೈ ಹಾಕಬಾರದು ಹಸ್ತಾಕ್ಷೇಪ ಮಾಡಬಾರದು. ಆ ಭಾವನೆ ಮೊನ್ನೆ ಬಂದಿದೆ. ಒಂದು ವೇಳೆ ಅಲ್ಲಿ ಪರಿಣಿತರ ಸರಿಯಾದಂತಹ ಮಂಡಲಿ ಇಲ್ಲದಿದ್ದರೆ ದಯಮಾಡಿ ಅದನ್ನು ರೀ ಕಾನ್ಸ್‌ಟಿಟ್ಯೂಟ್ ಮಾಡಿ, ಆ ಬೋರ್ಡ್‌ಗಳಲ್ಲಿ ಜನರಿಗೆ ವಿಶ್ವಾಸ ಹುಟ್ಟಬೇಕು.

ಈ ಕ್ಲಿಯರೆನ್ಸ್ ಕೊಡತಕ್ಕಂತಹ ಅಧಿಕಾರ ನಮ್ಮ ರಾಜ್ಯದ ಬೋರ್ಡಿಗೆ ಇಲ್ಲ, ಅದು ಕೇಂದ್ರಕ್ಕೆ ಹೋಗಬೇಕಾಗುತ್ತದೆ. ಕೇಂದ್ರದಲ್ಲಿ ಒಂದು ಬೋರ್ಡ್ ಇದೆ. ಈ ಬಗ್ಗೆ ಕ್ಲಿಯರೆನ್ಸ್ ಕೊಡತಕ್ಕಂತಹ ದೃಷ್ಟಿಯಲ್ಲಿ 300 ಎಕರೆ ಜಾಗಕ್ಕೆ ಎನ್‌ಟಿಪಿಸಿ ಅವರು ಈಗಾಗಲೇ ಕ್ಲಿಯರೆನ್ಸ್ ಕೊಟ್ಟಿದ್ದಾರೆ. ಕೋಜೆಂಟ್ರಿಕ್ಸ್ ಪ್ಲಾಟ್ಸ್‌ಗೆ ಕೊಟ್ಟಿದ್ದಾರೆ. ಇದನ್ನು ತಾವು ಆಲೋಚನೆ ಮಾಡಬೇಕಾಗುತ್ತದೆ. ಏಕೆಂದರೆ ಆಗಾಗ ಈ ಸಬ್ಜೆಕ್ಟ್ ಅನ್ನು ರೀ ಓಪನ್ ಮಾಡತತಕ್ಕಂಥಾದ್ದು ಜನರ ದೃಷ್ಟಿಯಲ್ಲಿ ಅದನ್ನು ಮಾಡಿ ಷರ್ಫ್ಸ್ ಕನ್ಸರ್ವಿಟಿ ಆಫ್ ದಿ ಪೊಲ್ಯೂಷನ್ ಅಂಡ್ ಎನ್‌ವೈರ್ನಮೆಂಟ್ ಬೋರ್ಡ್ ಅದು ಏನು ಷರತ್ತು ಇದೆ ಅದನ್ನು ಪೂರ್ತಿ ಮಾಡತಕ್ಕಂತಹ ಜವಾಬ್ದಾರಿ ತಮ್ಮದು ಇದೆ. ಕೋಜೆಂಟ್ರಿಕ್ಸ್‌ನಲ್ಲಿ, ಯಾವುದೇ ಒಂದು ಪ್ರಾಜೆಕ್ಟ್ ಇರಲಿ ನಾನು ನೂರಕ್ಕೆ ನೂರು ಪಾಲು ಒಪ್ಪುತ್ತೇನೆ, ಅದು ಟ್ರಾನ್ಸ್‌ಪರೆಂಟಾಗಿ ಇರಬೇಕಾಗುತ್ತದೆ. ಇದರಲ್ಲಿ ಗುಟ್ಟೇನೂ ಇಲ್ಲ, ಮಾನ್ಯ ಜೆ.ಹೆಚ್. ಪಟೇಲರು ಇದರ ಬಗ್ಗೆ ಸ್ಪಷ್ಟವಾದ ಅಭಿಪ್ರಾಯ ಕೊಟ್ಟಿದ್ದಾರೆ. ಈ ಪ್ರಾಜೆಕ್ಟ್ ಅನ್ನೂ ಕೈಬಿಡುವುದಿಲ್ಲ ನಾವು ಮುಂದುವರಿಸಿಕೊಂಡು ಹೋಗುತ್ತೇವೆಂದು ಸ್ಪಷ್ಟವಾದ ಅಭಿಪ್ರಾಯವನ್ನು ತಾವು ಆಗಾಗ್ಗೆ ಕೊಡುತ್ತಲೇ ಬಂದಿದ್ದೀರಿ. ಏಕೆಂದರೆ, ಕೋಜೆಂಟ್ರಿಕ್ಸ್ ಪ್ರಾಜೆಕ್ಟ್ ವಿಚಾರ ಬಂದಾಗ ತಾವು ಹೇಳಿದ್ದೀರಿ. 'Mr. Patel said Government was keen to have Cogentrix Project okayed by the centre at the earliest considering the State's precarious position. Though the MOU was signed by the previous government we have been pursuing it zealously keeping the State's interest in mind. ಎಂದು ಸ್ಪಷ್ಟವಾದ ಅಭಿಪ್ರಾಯ ಕೊಟ್ಟಿದ್ದೀರಿ. ಒಂದು ಮೆಚ್ಚುತ್ತೇನೆ. ವಿದ್ಯುತ್ ವಿಚಾರಕ್ಕೆ ಬಂದಾಗ ತಾವು ಯಾವುದೇ ರಾಜಕೀಯ ಮಿಶ್ರಣ ಮಾಡಲಿಲ್ಲ, ಬಹಳ ಸ್ಪಷ್ಟವಾದ ಅಭಿಪ್ರಾಯವನ್ನು ಕೊಡುತ್ತಲೇ ಬಂದಿದ್ದೀರಿ. ಆದರೆ ಮಾನ್ಯ ಮುಖ್ಯ ಮಂತ್ರಿಗಳು ಹೇಳಿಕೆಯನ್ನು ಕೊಡುವಾಗ ಜನರಲ್ಲಿ ಇದರಲ್ಲಿ ಏನೋ ಇದೆ ಎಂಬ ಸಂಶಯ ಬರುತ್ತದೆ.'

ಎಕನಾಮಿಕ್ಸ್ ಟೈಮ್ಸ್‌ನಲ್ಲಿ ಬಂದಿದೆ, Bangalore dtd. 22nd July, 95.

"Stunned by the BJP's allegation of a fresh round of Rs. 700 crores kickbacks in the Cogentrix deed, the Karnataka Chief Minister Mr. H.D.

Devegowda has bluntly asked the saffron leaders to go and ask his Congress predecessors Mr. Sarekoppa Bangarappa and Mr. Veerappa Moily for a share. How can there be any kickback when the role of the State Government is very limited, he asked pointing out that his regime has absolutely nothing to do either with inviting or signing the Memorandum of Understanding with the Cogentrix or finalising the power deal. My Government only perused the project. We would like it to take off at the earliest possible to tackle the chronic power shortage in Karnataka."

ಮೊಯಿಲಿಯವರ ಬಗ್ಗೆ ಕೇಳಿ ಬಂಗಾರಪ್ಪನವರ ಬಗ್ಗೆ ಕೇಳಿ. ತಮಗೆ ಗೊತ್ತಿದೆ. ಇದರಲ್ಲಿ ಬಹಳ ಸ್ಪಷ್ಟವಾಗಿ ಹೇಳುವುದು ಇದ್ದರೆ, ಕೊಜೆಂಟ್ರಿಕ್ಸ್ 92ನೇ ಇಸವಿಯಲ್ಲಿ ಅದು ಮೊಮೊರ್‍ಯಾಂಡಮ್ ಆಫ್ ಅಂಡರ್‌ಸ್ಟ್ಯಾಂಡಿಂಗ್ ಆದರೂ ಕೂಡ ನಾವು ಸೆಪ್ಟೆಂಬರ್ 94ರಲ್ಲಿ ಡ್ರಾಫ್ಟ್ ಪವರ್ ಪರ್ಚೇಸ್ ಅಗ್ರಿಮೆಂಟ್ ಮಾಡಿದ್ದೆವು. We took lot of time. ~~ಈ~~ ಪ್ರಾಜೆಕ್ಟ್‌ಗೆ ನಾವು ಅಷ್ಟು ಸಮಯ ತೆಗೆದುಕೊಂಡಿದ್ದೇವೆ. We wanted it to be very transparent. ಒಂದು ವಿಚಾರ ಇಲ್ಲಿ ಡಿಬೇಟ್ ಆಗಬಹುದು. ಯಾವುದೇ ಹಂತದಲ್ಲಿ ಇದರಲ್ಲಿ ಸಂಶಯವಿದ್ದರೆ, First you should be satisfied. ಬಾಕಿಯವರಿಗೆ ಉತ್ತರ ಕೊಡುವ ಮೊದಲು you are satisfied. You have very clearly said. ಮುಖ್ಯಮಂತ್ರಿಯವರು ಕೂಡ he must be totally convinced. If he has any doubts, even now it is not late: to go through all conditions. You please do it. ಏಕೆಂದರೆ ಇದರಲ್ಲಿ ಯಾರಿಗಾದರೂ ಕೂಡ ಯಾವುದೇ ರೀತಿಯ ಅನುಮಾನ ಇದರಲ್ಲಿ ಬರುವಂತಾದ್ದು ನಡೆಯಬಾರದು.

ಶ್ರೀ ಕೆ.ಎನ್. ನಾಗೇಗೌಡ : ಮಾಜಿ ಮುಖ್ಯಮಂತ್ರಿಗಳು ಬಹಳ ಮಹತ್ತರವಾದ ವಿಚಾರವನ್ನು ಹೇಳುತ್ತಿದ್ದಾರೆ. ಕೊಜೆಂಟ್ರಿಕ್ಸ್ ವಿದ್ಯುತ್ ಯೋಜನೆ ಬಗ್ಗೆ ಬಹಳ ಸ್ಪೀಡಾಗಿ ತೆಗೆದುಕೊಳ್ಳಬೇಕು ಮತ್ತೆ ಅದನ್ನು ಯಾವುದೇ ರೀತಿಯಾದಂತಹ ಆಲೋಚನೆಗೆ ಹೋಗದೆ, ಆ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕೆಂದು ಅವರು ಹೇಳುತ್ತಿದ್ದಾರೆ. ನಾನು ಇತ್ತೀಚೆಗೆ 15-20 ದಿವಸದ ಹಿಂದೆ ಇವರ ಮಂತ್ರಿಮಂಡಲದಲ್ಲೇ ಈ ಇಲಾಖೆಯನ್ನು ಹೊಂದಿದಂತಹ ಉಪ ಮುಖ್ಯಮಂತ್ರಿಗಳು ಪ್ರೆಸ್ ಕಾನ್‌ಫರೆನ್ಸ್‌ನಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಕೊಜೆಂಟ್ರಿಕ್ಸ್ ಬಗ್ಗೆ ಬಹಳ ಡಿಫೆಕ್ಟ್ ಇದೆ, ಆತುರ ಬೇಡ ಸ್ವಲ್ಪ ವಿವರವಾಗಿ ಸ್ಟಡಿ ಮಾಡಬೇಕು, ಡಿಲೇ ಮಾಡಿ ಆ ಡಿಫೆಕ್ಟ್ ಅನ್ನು ಸೆಟ್‌ರೈಟ್ ಮಾಡಿ, ಮುಂದೆ ಹೋಗಬೇಕೆಂದು ಇವರ ಕೈಕೆಳಗೆ ಇದ್ದಂತಹ ಪವರ್ ಇಲಾಖೆಯನ್ನು ಹೊಂದಿದಂತಹ ಮಾನ್ಯ ಉಪಮುಖ್ಯಮಂತ್ರಿಗಳು ಆ ಮಾತನ್ನು ಹೇಳಿದ ಮೇಲೆ, ನಿಮ್ಮ ಇಬ್ಬರಲ್ಲಿ ಭಿನ್ನಾಭಿಪ್ರಾಯ ಬಂದಿದೆ ಎಂದು ಅನ್ನಿಸುತ್ತದಲ್ಲವೇ? ಈಗಿನ ಉಪ ಮುಖ್ಯಮಂತ್ರಿಗಳು ಬಹಳ ಕ್ಲಿಯರ್ ಆಗಿದ್ದಾರೆ ಮಾನ್ಯ ಮುಖ್ಯ ಮಂತ್ರಿಗಳು ಕನ್‌ಫ್ಯೂಸ್ ಮಾಡುತ್ತಿದ್ದಾರೆಂದು ನೀವು ಹೇಳುತ್ತಿದ್ದೀರಿ. Certain differences in the views.

ನಾವು ಹೇಳುವುದೇನೆಂದರೆ, ನೀವು ಮುಖ್ಯ ಮಂತ್ರಿಯಾಗಿದ್ದಾಗ ನಿಮ್ಮ ಕೈಕೆಳಗೆ ಇದ್ದ ಉಪ ಮುಖ್ಯಮಂತ್ರಿಗಳು ಟೋಟಲಿ ಡಿಫೆಕ್ಟ್ ಇದೆ, ಸೆಟ್‌ರೈಟ್ ಡಿ ಡಿಫೆಕ್ಟ್ ಎಂದು ಹೇಳಿದ್ದಾರೆ. You kindly spell out which are the defects in particular. ನಿಮ್ಮ ಸರಕಾರವಿದ್ದಾಗ ಯಾವುದು ಡಿಫೆಕ್ಟ್ ಇತ್ತು ಎಂದು ಅವರು ಹೇಳಿದ್ದಾರೆ,

ಅದು ನನ್ನದಲ್ಲ. Your former Deputy Chief Minister says it. To-day in Deccan Herald I have read that the Central Electricity Authority is awaiting for the detailed report. ಇವತ್ತು ಡೆಕ್ಕನ್ ಹೆರಾಲ್ಡ್‌ನಲ್ಲಿ ಬಂದಿದೆ. ಡಿಪಿಎಆರ್‌ನವರು ಕಾಯುತ್ತಿದ್ದಾರೆ. ವರದಿಗೆ ಕಾಯುತ್ತಿದ್ದಾರೆ. ಕೆ.ಇ.ಬಿ.ಯವರು ಕ್ಲಿಯರ್ ಮಾಡಿದ ತಕ್ಷಣವೇ ನಾವು ಕ್ಲಿಯರೆನ್ಸ್ ಮಾಡುತ್ತೇವೆಂದು ಶ್ರೀ ಸಾಳ್ವೆ ಅವರು ಹೇಳಿದ್ದಾರೆ. ನಮಗೆ ನೀವು ಹೇಳಬೇಕು, ನೀವು ಹೇಳಿದ್ದಕ್ಕೂ ನಿಮ್ಮ ಹಿಂದಿನ ಉಪ ಮುಖ್ಯಮಂತ್ರಿಗಳು ಹೇಳಿದ್ದಕ್ಕೂ ಡಿಫರೆನ್ಸ್ ಏನು ಎಂದು ಹೇಳಿದರೆ ಅದು ಅನುಕೂಲವಾಗುತ್ತದೆ. ಕ್ಲಿಯರ್ ಆಗುತ್ತದೆ. It would clear the mind of the public.

ಶ್ರೀ ಎಂ. ವೀರಪ್ಪ ಮೊಯಿಲಿ : ಇದರಲ್ಲಿ ಡಿಫೆಕ್ಟ್ ಪ್ರಶ್ನೆಯೇ ಇಲ್ಲ. It was cleared by the Cabinet. The draft power purchase agreement was cleared in the Cabinet itself.

ಇದು ಕ್ಯಾಬಿನೆಟ್ಟಿನಲ್ಲಿ ಬಂದಿತ್ತು. ಕ್ಯಾಬಿನೆಟ್‌ನಲ್ಲಿ ಮಾಡಿದ ಮೇಲೆ ಅದನ್ನು ಕೇಂದ್ರಕ್ಕೆ ನಾವು ಕಳಿಸಿದ್ದೇವೆ. ಡಿಫೆಕ್ಟ್ ಇದ್ದರೆ, ಯಾವಾಗಲೋ ಸರಿ ಮಾಡಬಹುದಾಗಿತ್ತು. It is still not late. That is what I am telling you. It is very transparent. ಇಲ್ಲಿ ವಸ್ತುಸ್ಥಿತಿಯನ್ನು ಹೇಳಲಿಕ್ಕೆ ಮಾತ್ರ ನಾನು ಅಪೇಕ್ಷೆ ಪಡುತ್ತೇನೆ. ಬೇರೆ ಬೇರೆ ರೀತಿಯ ಪತ್ರಿಕಾ ಹೇಳಿಕೆಗಳನ್ನು ನಮ್ಮ ವಿರೋಧ ಪಕ್ಷದ ನಾಯಕರೂ ಹೇಳಿದ್ದಾರೆ. 5080 ಕೋಟಿ ಇತ್ತು, ನಾನು ಕ್ವೆಶ್ಚನ್ ರೈಸ್ ಮಾಡಿದ ಮೇಲೆ 4387.48 ಕೋಟಿಗೆ ಇಳಿಸಿದರು ಎಂದು ಒಂದು ವಾರವನ್ನು ಮಾನ್ಯ ಯಡಿಯೂರಪ್ಪನವರು ಎತ್ತಿದ್ದಾರೆ. ತಮಗೆ ಗೊತ್ತಿದೆ, ಜನವರಿ ಫಸ್ಟ್ 94ನಲ್ಲಿ as on that date in terms of dollars the project cost was 1238.239 million dollars, in terms of rupees it was Rs. 3,945 crores. As on 1st January 1997, after three years, this cost would be 1,392.851 million dollars and in terms of rupees, it would be Rs. 4387.48 crores.

ಇವರು ರೈಸ್ ಮಾಡಿದ ಮೇಲೆ ಕಡಿಮೆ ಮಾಡಿದ್ದೀರಿ ಎಂದು ಹೇಳಿ ಇದೆ. ಪವರ್ ಪರ್ಚೇಸ್ ಅಗ್ರಿಮೆಂಟ್ ಆಗುವಾಗಲೇ 4387.48 ಕ್ರೋರ್ಸ್ ಇದ್ದದ್ದು ನಿಜ. ಬಹಳ ಹಿಂದೆ 5080 ಕೋಟಿ ಇದ್ದದ್ದು ಹೌದು. ಸೆಪ್ಟೆಂಬರ್ 94ನ ಮೊದಲೇ ಇದು 4387.48 ಕೋಟಿಗೆ ಅದು ನಿಂತಿದೆ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೆ, ಫಾರಿನ್ ಇನ್‌ವೆಸ್ಟ್‌ಮೆಂಟ್ ಕ್ಲಿಯರೆನ್ಸ್ ಬೋರ್ಡಿಗೆ ಮೊದಲು ಕೊಜೆಂಟ್ರಿಕ್ಸ್‌ನವರು ಒಂದು ಡ್ರಾಫ್ಟ್ ಆಫರ್ ಕೊಟ್ಟಿದ್ದರು, 160 ಮೆಗಾವ್ಯಾಟ್‌ನ 6 ಕೇಂದ್ರಗಳನ್ನು ಮಾಡುವುದರ ಬಗ್ಗೆ ಅದರಲ್ಲಿ ಇವರು ನಮೂದಿಸಿದಂತಹ ಪ್ರಾಬಬಲ್ ಕಾಸ್ಟ್ ಆಫ್ ದಿ ಪ್ರಾಜೆಕ್ಟ್ 5080 ಕೋಟಿ. ಮಾನ್ಯ ವೀರಪ್ಪ ಮೊಯಿಲಿಯವರ ಕಾಲದಲ್ಲಿ ಪಾರ್ ಪರ್ಚೇಸ್, ಅಗ್ರಿಮೆಂಟ್ ಅನ್ನು ಕೆ.ಇ.ಬಿ. ಯವರ ಮುಖಾಂತರ ಮಾಡುವಾಗ ಇನ್ನೂ ಪೂರ್ಣ ಅಲ್ಲ, ಅದೂ ಡ್ರಾಫ್ಟ್. ಅದಕ್ಕೆ ಸಹಿ ಮಾಡುವಾಗ 160-ರ 6ರ ಬದಲು 250ರ 4 ಯೂನಿಟ್ ಅನ್ನು ಮಾಡಬೇಕೆಂದು ಬದಲಾವಣೆ ಮಾಡಿ, ಅದಕ್ಕೆ ಬೇಕಾದ ತಾಂತ್ರಿಕ ಅವಶ್ಯಕತೆಗಳನ್ನು ಬದಲಾವಣೆ ಮಾಡಿ, ಅದಕ್ಕೆ ಬೇಕಾಗತಕ್ಕಂತಹ ಎಲ್ಲಾ ಯಂತ್ರಗಳನ್ನು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬಿಡ್ ಮಾಡಿ ತೆಗೆದುಕೊಳ್ಳಬೇಕೆಂದು, ಆ ಆಧಾರದ ಮೇಲೆ 3900 ಸಮ್ ಕ್ರೋರ್ಸ್ ಆದರೆ ಇದೇ ಕ್ಯಾಪಿಟಲ್ ಇನ್‌ವೆಸ್ಟ್‌ಮೆಂಟ್ ಮೇಲೆ ಇನ್ನು ಉಳಿದದ್ದು ಎಲ್ಲಾ ಇಂಟರೆಸ್ಟ್ ಬರ್ಡನ್ ಎಲ್ಲಾ ಸೇರಿಸಿ 1997ಕ್ಕೆ ಅವರು ನಮಗೆ ವಿದ್ಯುಚ್ಛಕ್ತಿಯನ್ನು ಕೊಡುವಾಗ ಕಾಸ್ಟ್ ವಿಲ್

ಬಿ 4387 ಕ್ರೋರ್ಸ್ ಎಂದು ಆಗಿ, ಅದರ ಆಧಾರದ ಮೇಲೆ ಈಗ ಕೆಲಸ ನಡೆಯುತ್ತಿದೆ. ಮಾಜಿ ಮುಖ್ಯಮಂತ್ರಿಗಳ ಸಲಹೆ, ಅವರ ಉಪ ಮುಖ್ಯಮಂತ್ರಿಗಳು - ನಾವು ಇದರೊಳಗೆ ಯಾರ ಹೆಸರನ್ನೂ ತಂದಿಲ್ಲ, ಅವರ ಕಾಲದಲ್ಲಿ ಪವರ್ ಪರ್ಚೇಸ್ ಅಗ್ರಿಮೆಂಟ್ ಆಗಿತ್ತು ಅದನ್ನು ಆದಷ್ಟು ಬೇಗನೆ ಕ್ಲಿಯರ್ ಮಾಡಿ what we want is electric power as early as possible and the deal must be as transparent as possible. ದೆರಡನ್ನೂ ನಾವು ಗಮನದಲ್ಲಿಟ್ಟುಕೊಂಡಿದ್ದೇವೆ. ಅವಸರಕ್ಕೆ ಬೇಕೆಂದು ಅವರು ಹೇಳಿದ ಕಂಡೀಷನ್‌ಗೆಲ್ಲಾ ನಾವು ಒಪ್ಪಿಕೊಂಡಿಲ್ಲ, ಪರ್ ಯೂನಿಟ್ ಕಾಸ್ಟ್ ಎಷ್ಟು ಕಡಿಮೆ ಬೀಳುತ್ತದೆಯೇ ಎಂಬ ಬಗ್ಗೆ ಇನ್ನೂ ನಡೆಯುತ್ತಿದೆ.

Ultimately, by the end of November or December the whole process will be completed. ಕೊಜೆಂಟ್ರಿಕ್ಸ್‌ನವರು ಎಲ್ಲಾ ಇಂಟರ್‌ನ್ಯಾಷನಲ್ ಕಂಪೆನಿಯವರನ್ನು ಸಭೆ ಕರೆದಿದ್ದಾರೆ. ತಮಗೆ ಏನೇನು ಬೇಕು ಎಂತಹ ಯಂತ್ರಗಳು ಬೇಕು ಎಂದು ತಿಳಿಯಲು ಕರೆದಿದ್ದಾರೆ. ಅದೆಲ್ಲಾ ಆದಮೇಲೆ ಎಕನಾಮಿಕ್ ಅಫೇರ್ ಮಿನಿಸ್ಟ್ರಿ ಕ್ಲಿಯರ್ ಮಾಡಿದ ಮೇಲೆ, ಸೆಂಟ್ರಲ್ ಎಲೆಕ್ಟ್ರಿಸಿಟಿ ಅಥಾರಿಟಿ ಕ್ಲಿಯರ್ ಮಾಡಿದ ಮೇಲೆ, ಕೆ.ಇ.ಬಿ. ಮತ್ತು ಕೊಜೆಂಟ್ರಿಕ್ಸ್ ಫೈನಲ್ ಪಿಪಿಎ ಸಹಿ ಮಾಡಿದ ಮೇಲೆ, ಫೈನಾನ್ಸ್ ಮಿನಿಸ್ಟ್ರಿಯಿಂದ ಕೌಂಟರ್ ಗ್ಯಾರಂಟಿಯಾದ ಮೇಲೆ, ಸ್ಟೇಟ್ ಗ್ಯಾರಂಟಿ ಕೌಂಟರ್ ಗ್ಯಾರಂಟಿ ಕೊಡುತ್ತದೆ. All this will take another 3 or 4 months and we expect the project to be taken up by the beginning of the next year. This is the present position.

ಶ್ರೀ ಅರಗ ಜ್ಞಾನೇಂದ್ರ : ಇದರ ವ್ಯವಸ್ಥೆ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಇದಕ್ಕೆ ಏಕೆ ಕೊಟ್ಟಿದ್ದೀರಿ. ನಾಲ್ಕೂವರೆ ಕೋಟಿಯಷ್ಟು....

ಶ್ರೀ ಜೆ.ಹೆಚ್. ಪಟೇಲ್ : ಯಾವ ಆಧಾರದ ಮೇಲೆ 3 ಕೋಟಿಗೆ ಒಂದು ಮೆಗಾವ್ಯಾಟ್ ಆಗುತ್ತದೆಂದು ಹೇಳುತ್ತೀರೋ ಗೊತ್ತಿಲ್ಲ. ಇಡೀ ಪ್ರಪಂಚದಲ್ಲಿ ಕೋಲ್ ಬೇಸ್ಡ್ ಆಗಬಹುದು ಆಯಿಲ್ ಬೇಸ್ಡ್ ಆಗಬಹುದು ನ್ಯಾಫ್ತ ಬೇಸ್ಡ್ ಆಗಬಹುದು. ಬೇರೆ ಬೇರೆ ಇಂಧನಗಳನ್ನು ಉಪಯೋಗಿಸಿದರೆ ಅದು ಬೇರೆ ಬೇರೆ ಕಾಸ್ಟ್ ಆಗುತ್ತದೆ. ಈವರು ಹೇಳಿದ ಹಾಗೆ 3 ಕೋಟಿಗೆ ಆಗುವುದು ಕಷ್ಟವಾಗುತ್ತದೆ. ನಮ್ಮಲ್ಲಿ ಹೈಡಲ್ ಪ್ರಾಜೆಕ್ಟ್ ಚೀಪರ್ ಆಗಿದೆ. ಈಗ ಇರಕ್ಕಂತಹ ಯಾವುದೇ ಥರ್ಮಲ್ ಸ್ಟೇಷನ್ ಬಗ್ಗೆ ಕೂಡ ವಿಚಾರ ಮಾಡಬೇಕಾಗುತ್ತದೆ. ವಿನಾಕಾರಣ ನಾವೇಕೆ 1 ರೂಪಾಯಿಯಷ್ಟು ಒಂದು ಯೂನಿಟ್ಟಿಗೆ ಜಾಸ್ತಿ ಕೊಡುವುದಕ್ಕೆ ಹೋಗೋಣ ಚೀಪಾಗಿ 3 ರೂಪಾಯಿಗೆ ಸಿಗುವುದಾದರೆ ಕೊಂಡುಕೊಳ್ಳುತ್ತೇವೆ. ಬಿ.ಜೆ.ಪಿ. ನಾಯಕರು ಹೇಳುತ್ತಲೇ ಬಂದಿದ್ದಾರೆ, ಅವರು ಹೇಳಿದ್ದನ್ನೆಲ್ಲಾ ಕೇಳಿದ್ದೇವೆ. ನಮ್ಮ ಹಿತದೃಷ್ಟಿಯಿಂದಲೇ ಹೇಳುವುದು. ಆದಷ್ಟು ಇದನ್ನು ಕಡಿಮೆಗೆ ತೆಗೆದುಕೊಳ್ಳಿ ಎಂದು ಹೇಳಿದ್ದರು. ಅದನ್ನೇ ನಾವು ಮಾಡಿದ್ದೇವೆ. ಮಾಸ್ಕ ಮೊಯಿಲಿಯವರಿಗೂ ಗೊತ್ತಿದೆ ಅದರ ಹಿಂದಿನ ಸರಕಾರದವರಿಗೂ ಗೊತ್ತಿದೆ. But, what this government wants is not to waste time in this kind of meaningless discussion.

ಶ್ರೀ ಅರಗ ಜ್ಞಾನೇಂದ್ರ : ಪವರ್ ಪ್ರಾಜೆಕ್ಟ್‌ಗೆ ಬೇಕಾಗುವಷ್ಟು ಕೋಲ್ ಭಾರತದಲ್ಲೇ ಇರುವಾಗ ಇಂಪೋರ್ಟೆಡ್ ಕೋಲಿನ ಮೇಲೆ ಇರುವಂತಹ ಪ್ರಾಜೆಕ್ಟ್ ನಮಗೆ ಬೇಕಾಗಿತ್ತೇ?

Sri J.H. PATEL : KPC is an organisation which is generating power ಮೊದಲು ನಮ್ಮದು 4 ಯೂನಿಟ್ಸ್ ಇವೆ. 210 ಮೆಗಾವ್ಯಾಟ್‌ನ ಕೆಪ್ಯಾಸಿಟಿಯದ್ದು 4 ಯೂನಿಟ್ಸ್ ಇವೆ. ಮೊದಲನೇ ಯೂನಿಟ್ ಅಂದರೆ ರಾಯಚೂರು ಥರ್ಮಲ್

ಪ್ಲಾಂಟ್‌ದು ಮೊದಲನೆಯದು ಮತ್ತು ಎರಡನೆಯದು 89 ಪೈಸೆ ಪರ್ ಯೂನಿಟ್ ಕಾಸ್ಟ್ ಇತ್ತು. ಮೂರನೇ ಯೂನಿಟ್ಟಿಗೆ ಬಂದಾಗ 1-80 ಪೈಸೆ ಆಯಿತು. 4ನೇ ಯೂನಿಟ್ಟಿನವರು ನಮ್ಮದೆ ಕೆ.ಪಿ.ಸಿ. ಯವರು 4ನೇ ಯೂನಿಟ್ಟಿನ ಎಲೆಕ್ಟ್ರಿಸಿಟಿಯನ್ನು ಕೆ.ಇ.ಬಿ.ಗೆ ಮಾರುವುದಕ್ಕೆ ಅವರು ಆಫರ್ ಮಾಡಿರುವುದು 2-57 ಪೈಸೆ. ಆದ್ದರಿಂದ ಸ್ವತಃ ಸರಕಾರವೇ ನಡೆಸತಕ್ಕಂತಹ ಕಂಪನಿಗಳಿಗೆ ಏನು ಕಾಸ್ಟ್ ಆಗುತ್ತದೆ ಎಂಬುದನ್ನು ವಿಚಾರ ಮಾಡಬೇಕು. ಯಾರೋ ಹೇಳಿದರು 1 ರೂಪಾಯಿಗೆ 3 ರೂಪಾಯಿಗೆ ಸಿಗುತ್ತದೆಂದು, ಅದೆಲ್ಲಾ ಇಲ್ಲ, ವ್ಯವಹಾರದಲ್ಲಿ ವಾಸ್ತವಿಕ ವೈಜ್ಞಾನಿಕ ಆಧಾರದ ಮೇಲೆ ನಾವು ಹೋಗುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬಿ.ಜೆ.ಪಿ. ಮುಖಂಡರಿಂದ ಮಾನ್ಯ ಯಡಿಯೂರಪ್ಪನವರು ಏನು ಸಲಹೆ ಕೊಟ್ಟಿದ್ದರು. ನಮ್ಮ ಹಿತದೃಷ್ಟಿಯಿಂದ ಅವರು ಹೇಳಿದ್ದಾರೆ. ಆ ಎಲ್ಲಾ ಸಲಹೆಗಳನ್ನು ತೆಗೆದುಕೊಂಡು ನಾವು ಮಾಡಿದ್ದೇವೆಂದು ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದರು. ಅದರಲ್ಲಿ ಯಾವ್ಯಾವುದನ್ನು ತೆಗೆದುಕೊಳ್ಳಬೇಕೋ ಅಷ್ಟೇ ತೆಗೆದುಕೊಳ್ಳಿ, ಹೆಚ್ಚಿಗೆ ತೆಗೆದುಕೊಳ್ಳುವುದಕ್ಕೆ ಹೋದರೆ ಮತ್ತೆ ತೊಂದರೆಯಾಗುತ್ತದೆ.

ಶ್ರೀ ಅರಗ ಜ್ಞಾನೇಂದ್ರ : ಈಗ ಚೌಕಾಶಿ ಇಲ್ಲನೆಂದು ಹೇಳುವುದಕ್ಕಾಗುವುದಿಲ್ಲ. ಮಹಾರಾಷ್ಟ್ರ ಸರಕಾರದಲ್ಲಿ ಎನ್ರಾನ್‌ನವರು ನೆಗೋಸಿಯೇಷನ್ನಿಗೆ ಬಂದಿದ್ದಾರೆ. 15 ರಿಂದ 20 ಪರ್ಸೆಂಟ್ ರೆಡ್ಯೂಸ್ ಮಾಡುತ್ತೇವೆಂದು ಎನ್ರಾನ್ ಅಧಿಕಾರಿ ಹೇಳಿ ಕಳಿಸಿದ್ದಾರೆನ್ನುವ ಸುದ್ದಿ ಬರುತ್ತದೆ. ಈ ಗಲಾಟೆಯೆಲ್ಲಾ ಆದ ಮೇಲೆ ನೆಗೋಸಿಯೇಷನ್ ಮಾಡಿ ಕಡಿಮೆ ಮಾಡುತ್ತೇವೆಂದು ಬಂದಿದ್ದಾರೆ. ಆ ಹಿನ್ನೆಲೆಯಲ್ಲಿ ತಾವು ಅವಲೋಕನ ಮಾಡಿ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಜೆ.ಹೆಚ್. ಪಟೇಲ್ : ಎಷ್ಟು ಕಡಿಮೆಗೆ ಸಿಗುತ್ತದೋ ಅಷ್ಟು ಕಡಿಮೆಗೆ ಮಾಡಬೇಕು ಎಂದು ತಾನೆ ತಾವು ಹೇಳುವುದು, ಅದೇ ಕೆಲಸವನ್ನು ನಾವೂ ಮಾಡುತ್ತಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ : ತಾವು ಸಾಕಷ್ಟು ಸ್ಪಷ್ಟೀಕರಣ ಕೊಟ್ಟಿದ್ದೀರಿ. ಇಲ್ಲಿ ಪ್ರಶ್ನೆ ಇರುವುದೆಂದರೆ ಯಾವುದು....

ಶ್ರೀ ಸಿ.ಹೆಚ್. ವಿಜಯ ಶಂಕರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಒಂದು ಮಾತನ್ನು ಹೇಳುತ್ತೇನೆ. ಮೂಲ ಸಿದ್ಧಾಂತಗಳೇ ಬದಲಾವಣೆಯಾಗಿರುವಾಗ ನಾವು ಯಾರನ್ನೂ ಕೂಡ ದೂಷಿಸುವುದಕ್ಕಾಗುವುದಿಲ್ಲ. ವಿದೇಶೀ ವಸ್ತುಗಳನ್ನು ಬಹಿಷ್ಕರಿಸಿ ಎಂದು ಮಹಾತ್ಮಾ ಗಾಂಧೀಜಿಯವರು ಈ ದೇಶಕ್ಕೆ ಕೊಟ್ಟಂತಹ ಕರೆ. ಆದರೆ ಇವತ್ತು ನೀವು ವಿದೇಶೀ ಕಂಪೆನಿಗಳನ್ನು ನೀವು ಕರೆದಿದ್ದರೆ ನಮ್ಮ ಉದ್ಧಾರವಾಗುವುದಿಲ್ಲ, ನಾವೆಲ್ಲಾ ಪೂರ್ತಿಯಾಗಿ ನಿರಪರಾಧಿಗಳಾಗುತ್ತೇವೆ, ದುರ್‌ವ್ಯವಸ್ಥೆಗೆ ಬರುತ್ತೇವೆ ದಯವಿಟ್ಟು ನೀವೇ ನಮ್ಮನ್ನು ಉದ್ಧಾರ ಮಾಡಬೇಕು ಬನ್ನಿ ಎಂದು ಕರೆ ಕೊಡುತ್ತಿರುವುದು ಇವತ್ತಿನ ವ್ಯವಸ್ಥೆಯಾಗಿದೆ. ಈ ವ್ಯವಸ್ಥೆಯೇ ಸಂಪೂರ್ಣ ಬದಲಾವಣೆಯಾಗಿರುವಾಗ ನಾವು ನಿಮ್ಮನ್ನಾಗಲಿ, ಬೇರೆಯವನ್ನಾಗಲಿ ದೂಷಿಸಲಿಕ್ಕೆ ಹೇಗೆ ಸಾಧ್ಯವಾಗುತ್ತದೆ.

ಶ್ರೀ ಜೆ.ಹೆಚ್. ಪಟೇಲ್ : ಮಹಾತ್ಮಾ ಗಾಂಧಿಯವರ ತತ್ವವನ್ನು ತಾವು ಹೇಳಿದಿರಿ. ಎಲ್ಲೋ ಜನರೇಟ್ ಆದ ಎಲೆಕ್ಟ್ರಿಸಿಟಿಯನ್ನು ಇಲ್ಲಿಗೆ ಇಂಪೋರ್ಟ್ ಮಾಡುವುದಕ್ಕಾಗುವುದಿಲ್ಲ, ಎಲೆಕ್ಟ್ರಿಸಿಟಿ ಭಾರತದಲ್ಲೇ ಜನರೇಟ್ ಆಗಬೇಕು. ಅವರು ಬಂಡವಾಳ ಕೊಟ್ಟಿದ್ದಾರೆ ಅಷ್ಟೇ.

6.30 ಪಿ.ಎಂ

ಶ್ರೀ ಕಾಗೋಡು ತಿಮ್ಮಪ್ಪ : ಸ್ವದೇಶಿ ಚಳುವಳಿಯ ಕಾಲದಲ್ಲಿ ಬ್ರಿಟಿಷರೂ ಸೇರಿದಂತೆ ಪರದೇಶದ ಕಂಪನಿಗಳು ಭಾರತಕ್ಕೆ ಬಂದು ಕಾರ್ಖಾನೆಗಳನ್ನು ಸ್ಥಾಪಿಸಿದ್ದವು. ಅಲ್ಲದೆ, ನಮ್ಮ ದೇಶದ ಹತ್ತಿ ಬೇರೆ ದೇಶಕ್ಕೆ ಹೋಗಿ ಅಲ್ಲಿ ಅದು ಬಟ್ಟೆಯಾಗಿ ಉತ್ಪಾದನೆಯಾಗಿ ಪುನಃ ನಮ್ಮ ದೇಶಕ್ಕೆ ಬಂದಂಥ ಬಟ್ಟೆಗಳನ್ನು ನಾವು ಧರಿಸುತ್ತಿದ್ದಾಗ ಆ ಬಟ್ಟೆ ನಮಗೆ ಬೇಡವೆಂದು ಮಹಾತ್ಮಗಾಂಧೀಜಿಯವರು ಆ ಬಟ್ಟೆಗಳನ್ನು ಸುಟ್ಟರು.

ಶ್ರೀ ಜೆ.ಹೆಚ್. ಪಟೇಲ್ : ನಮ್ಮ ದೇಶದ ಹತ್ತಿ ಅಥವಾ ರೇಷ್ಮೆಯಾದರೂ ಅವು ವಿದೇಶಗಳಿಗೆ ಹೋಗಿ ಅಲ್ಲಿನ ಕಾರ್ಖಾನೆಗಳಲ್ಲಿ ತಯಾರಾಗಿ ಭಾರತಕ್ಕೆ ಬಂದಂಥ ವಸ್ತುಗಳನ್ನು ನಮಗೆ ಬೇಡವೆಂದು ಅವರು ಸುಟ್ಟರು. ಇದು ಮೊದಲನೆಯದಾದರೆ, ಎರಡನೆಯದಾಗಿ ಮಾನ್ಯ ಕಾಗೋಡು ತಿಮ್ಮಪ್ಪನವರೇ, ಕೇಂದ್ರ ಅರ್ಥ ಸಚಿವರಾದ ಡಾ॥ಮನಮೋಹನ್‌ಸಿಂಗ್ ಮತ್ತು ಪ್ರಧಾನಮಂತ್ರಿ ನರಸಿಂಹರಾವ್‌ರವರು ಒಪ್ಪಿಕೊಂಡಿರುವ ಉದಾರೀಕರಣ, ಜಾಗತೀಕರಣ, ಆಧುನೀಕರಣ ನೀತಿಯಿಂದ ಜರ್ಮನಿ, ಚೈನಾ, ರಷ್ಯಾ ಮುಂತಾದ ದೇಶಗಳನ್ನು ಕುರಿತು "please, come" ಎಂದು ಹೇಳುತ್ತಿದ್ದಾರಲ್ಲ, ಈ ಮಾತನ್ನು ನೀವು ಆಗ ಏಕೆ ಹೇಳಲಿಲ್ಲ?

ಶ್ರೀ ಕಾಗೋಡು ತಿಮ್ಮಪ್ಪ : ಸ್ವದೇಶಿ ಚಳುವಳಿ ಒಂದು ನೂರು ವರ್ಷಕ್ಕೂ ಮಿಗಿಲಾಗಿ ನಡೆದಿದೆ. ಆ ಚಳುವಳಿ ಯಥಾಸ್ಥಿತಿ ಇರುವುದಕ್ಕಾಗುವುದಿಲ್ಲ. ಸ್ವದೇಶಿ ಚಳುವಳಿಯಲ್ಲಿ ಕ್ರಾಂತಿ ಮಾಡುತ್ತಾ ಮಾಡುತ್ತಾ ನಾವು ಅನೇಕ ಬದಲಾವಣೆಗಳನ್ನು ಕಾಣಬೇಕಾಗುತ್ತದೆ. ಹಾಗೆಯೇ ಸ್ವದೇಶಿ ಚಳುವಳಿಯಲ್ಲೂ ಕೆಲವು ಬದಲಾವಣೆಗಳನ್ನು ನೋಡುತ್ತಿದ್ದೇವೆ.

ಶ್ರೀ ಜೆ.ಹೆಚ್. ಪಟೇಲ್ : ನಾವು ಸಹ ಹಿಂದೆ ಮಾಡುತ್ತಿದ್ದೆವಲ್ಲ, ನಿಮ್ಮ ಸ್ವದೇಶಿ ಚಳುವಳಿಯನ್ನೇ ನಾವು ಸ್ವಲ್ಪ ಬದಲಾವಣೆ ಮಾಡುತ್ತಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಈ ಪ್ರಶ್ನೆಯೇನೆಂದರೆ ಕಳೆದ ಐವತ್ತು ವರ್ಷಗಳಿಂದ ಇವೊತ್ತಿನವರೆಗೆ ಮಾಡಿರುವಂತಾದ್ದನ್ನು ನೋಡಿದರೆ ಈಗ ಅದಕ್ಕೆ ನಾವು ದ್ವಿಗುಣವಾಗಿ ಉತ್ಪಾದಿಸಬೇಕಾಗುತ್ತದೆ. ಆದುದರಿಂದ, ನಿಮ್ಮೊಳಗೆ ನೀವು ಬಂಡವಾಳ ಹೂಡಿಕೊಂಡು ಉತ್ಪಾದನೆ ಮಾಡುವುದಿದ್ದರೆ ಸ್ವಾಗತಿಸಬಹುದು. ಇದು ಸಾಧ್ಯವಿದೆಯೇ? ಸಾಧ್ಯವಿಲ್ಲ, ಸಾಧ್ಯವಿಲ್ಲದಿದ್ದರೆ, ಆಗ ಪರ್ಯಾಯವಾಗಿ ವಿಚಾರ ಮಾಡಬೇಕಾಗುತ್ತದೆ. ಇಲ್ಲಿ ನಾವು ಪ್ರತಿ ವರ್ಷ 900 ಕೋಟಿ ರೂಪಾಯಿಗಳಷ್ಟು ಬಂಡವಾಳವನ್ನು ಸಂಗ್ರಹಿಸುವುದಕ್ಕಾಗುವುದಿಲ್ಲ. ಕ್ರಿ.ಶ. 2000 ಇಸವಿಯೊಳಗಾಗಿ ನೀವು 6000 ಮೆಗಾವ್ಯಾಟ್‌ಗಳಷ್ಟು ವಿದ್ಯುತ್ ಉತ್ಪಾದನೆ ಮಾಡಬೇಕು. ಅಷ್ಟು ಪ್ರಮಾಣದಲ್ಲಿ ವಿದ್ಯುತ್ ಉತ್ಪಾದಿಸಲು ನಿಮಗೆ ಎಷ್ಟು ಹಣ ಬೇಕು?

ಶ್ರೀ ಜೆ.ಹೆಚ್. ಪಟೇಲ್ : 25,000 ಕೋಟಿ ರೂಪಾಯಿಗಳು.

ಶ್ರೀ ಎಂ. ವೀರಪ್ಪ ಮೊಯಿಲಿ : ಈ 25,000 ಕೋಟಿ ರೂಪಾಯಿಗಳ ಹಣವನ್ನು ಕರ್ನಾಟಕದಲ್ಲಿ ಬಂಡವಾಳ ಹೂಡಿ ವಿದ್ಯುತ್ ಉತ್ಪಾದಿಸುವುದಕ್ಕೆ ಸಾಧ್ಯವಿದೆಯೇ? ಹೇಳಿ ಪಟೇಲ್‌ರವರೇ, ಇದಕ್ಕೆ ಈಗ ಬಿ.ಜೆ.ಪಿ.ಯವರ ಸೂತ್ರ ಇದ್ದರೆ ಬಹುಶಃ ನಾವೆಲ್ಲರೂ ಅವರಿಗೆ ಒಂದು ಆಥರೈಸ್ ಮಾಡೋಣ. ಕರ್ನಾಟಕ ರಾಜ್ಯದಲ್ಲಿ ಸುಮಾರು 25,000 ಕೋಟಿ ರೂಪಾಯಿಗಳಷ್ಟು ಬಂಡವಾಳ ಹೂಡಿ ವಿದ್ಯುತ್ ಉತ್ಪಾದನೆ ಮಾಡುವುದಿದ್ದರೆ, ಸಂಪೂರ್ಣ ಅಧಿಕಾರವನ್ನು ಯಡಿಯೂರಪ್ಪನವರಿಗೆ ಕೊಟ್ಟುಬಿಡೋಣ. ನೀವು 25,000 ಕೋಟಿ ರೂಪಾಯಿಗಳನ್ನು ಬರೀ ವಿದ್ಯುತ್ ಉತ್ಪಾದನೆಗೆಂದೇ ಖರ್ಚು ಮಾಡಬೇಕು.

ಶ್ರೀ ಜೆ.ಹೆಚ್. ಪಟೇಲ್ : ಬರೀ ಬಿ.ಜೆ.ಪಿ.ಯೊಂದೇ ಅಲ್ಲ, ಯಾವುದೇ ಪಕ್ಷವಾಗಲೀ ಈ ದೇಶದಲ್ಲಿ ಇಲ್ಲವೇ ಕರ್ನಾಟಕದಲ್ಲಿ 4-5 ವರ್ಷಗಳ ಕಾಲದಲ್ಲಿ ಸುಮಾರು 25,000 ಕೋಟಿ ರೂಪಾಯಿಗಳಷ್ಟು ಹಣವನ್ನು ಬಂಡವಾಳವಾಗಿ ಹೂಡುವ ಶಕ್ತಿ ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಒಂದು ಸಂತೋಷದ ಸಂಗತಿಯೇನೆಂದರೆ ಮಹಾತ್ಮಗಾಂಧೀಜಿಯವರನ್ನು ಉದ್ಧರಿಸುವಂಥ ಒಂದು ಹಂತಕ್ಕೆ ಬಿಜೆಪಿಯವರು ಬಂದು ಬಿಟ್ಟಿದ್ದಾರೆ. ಅದು ಸ್ವಾಗತಿಸುವಂಥ ಒಂದು ವಿಚಾರವಾಗಿದೆ.

(ಈ ಹಂತದಲ್ಲಿ ಬಿಜೆಪಿ ಸದಸ್ಯರಾದ ಶ್ರೀ ಅರಗ ಜ್ಞಾನೇಂದ್ರರವರು ಮಾತನಾಡುವುದಕ್ಕೆ ಎದ್ದು ನಿಂತರು)

It is welcome change in our friends. So, we welcome them. ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ಬೇಕಾಗುವ ಸುಮಾರು 25,000 ಕೋಟಿ ರೂಪಾಯಿಗಳಷ್ಟು ಹಣವನ್ನು ಏನಾದರೊಂದು ಪವಾಡ ಅಥವಾ ಭಜನೆ ಮಾಡುವುದರ ಮುಖಾಂತರ ಸಂಗ್ರಹಿಸುವುದಿದ್ದರೆ ಆ ವಿಚಾರವನ್ನು ನಾವು ಸಂತೋಷದಿಂದ ಸ್ವಾಗತಿಸಬಹುದು. ಆದರೆ, ಈಗ ಉದ್ಭವಿಸಿರುವ ಪ್ರಶ್ನೆಯೇನೆಂದರೆ, even about tariff, ಈಗ ಯಾವುದು 4,387.48 ಕೋಟಿ ರೂಪಾಯಿಗಳ ದರ ಇದೆ, ಇದು ಅಪ್ಪರ್ ಸೀಲಿಂಗ್. ಇದು ಕಡಿಮೆಯಾಗಿ ಮೂರು ಕೋಟಿ ರೂಪಾಯಿಗಳಿಗೂ ಇಳಿಯಬಹುದು. We need not rule out. ಆ ಒಪ್ಪಂದದಲ್ಲಿಯೇ ನಾವು ಅದನ್ನು ಕಲ್ಪಿಸಿಕೊಟ್ಟಿದ್ದೇವೆ. It is the upper ceiling. ಏಕೆಂದರೆ ಕೆಲವು ಸಲ ವಿದೇಶಿ ಬಂಡವಾಳಗಾರರು ಸಹ ರಾಜಕೀಯ ಮಾಡುತ್ತಾರೆ. ಏನೆಂದರೆ, the present Cogentrix gentleman gave a statement, after Mr. Devegowda's statement, that we have decided to call for global tenders. ಜಾಗತಿಕ ಟೆಂಡರ್ ಕರೆಯಬೇಕೆಂದು ಒಪ್ಪಂದದಲ್ಲಿಯೇ ಇದೆ. Sometimes they also play some sort of politics. ದೇವೇಗೌಡರು ಬಂದ ನಂತರ ನಾವು ನಿರ್ಧಾರ ತೆಗೆದುಕೊಂಡಿದ್ದೇವೆ. ವಿದ್ಯುತ್ ಖರೀದಿ ಒಪ್ಪಂದದಲ್ಲಿಯೇ ಇದೆ. We have taken that decision long back. ಸಿವಿಲ್ ವರ್ಕ್ಸ್ ಆಗಲಿ, ಬೇರೆ ಎಕ್ವಿಪ್‌ಮೆಂಟ್ ಆಗಲಿ ನೀವು ಜಾಗತಿಕ ಟೆಂಡರ್ ಕರೆದೇ ಈ ಕೆಲಸಗಳನ್ನು ವಹಿಸಿಕೊಡಬೇಕೆಂದು ಆ ಕಾಲದಲ್ಲಿಯೇ ನಿರ್ಣಯವಾಗಿದೆ. Everything is transparent. ಒಂದು ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಲು ಇರುವ ಸೀಲಿಂಗ್ ಮೂರು ಕೋಟಿ ರೂಪಾಯಿಗಳಿಗೆ ಕಡಿಮೆಯಾದರೆ ನಮ್ಮ ಸ್ನೇಹಿತರಾದ ಬಿ.ಜೆ.ಪಿ. ಯವರಿಗೆ ಕೊಟ್ಟರೆ ಏಕೆ ಬೇಡವೆಂದು ಹೇಳುತ್ತೀರಿ. ಜೆ.ಹೆಚ್. ಪಟೇಲರೆ, ಸಿವಿಲ್ ವರ್ಕ್ಸ್, ಎಕ್ವಿಪ್‌ಮೆಂಟ್‌ಗಳನ್ನು ಮೂರು ಕೋಟಿ ರೂಪಾಯಿಯೊಳಗೆ we will provide ಎಂದು ಯಾರಾದರೂ ಮುಂದೆ ಬಂದರೆ, ಬಿ.ಹೆಚ್.ಇ.ಎಲ್.ನವರು ಮುಂದೆ ಬರುವುದಾದರೆ ಅವರನ್ನೂ ಕೂಡ ತೆಗೆದುಕೊಳ್ಳಬಹುದು. Let us say that flexibility is already available. ವಿದೇಶಿ ಬಂಡವಾಳವಿಲ್ಲದೆ ಬಿ.ಹೆಚ್.ಇ.ಎಲ್. ಅವರಿಂದಲೇ ಆಗುವುದಿದ್ದರೆ they need not purchase the equipment from abroad. ಆ ಸ್ವಾತಂತ್ರ್ಯವನ್ನು ನಾವು ಇಟ್ಟುಕೊಂಡಿದ್ದೇವೆ. ಅಲ್ಲದೆ, ಆ ಸ್ವಾತಂತ್ರ್ಯವನ್ನು ಕರಡು ವಿದ್ಯುತ್ ಖರೀದಿ ಒಪ್ಪಂದದಲ್ಲೂ ಕೂಡ ಯಾವಾಗಲೂ ನಾವು ಉಳಿಸಿಕೊಂಡು ಬಂದಿದ್ದೇವೆ. ಇನ್ನು ವಿದ್ಯುತ್ ಕರದ ಬಗ್ಗೆ ಸಹ 1ನೇ ಜನವರಿ 1994ಕ್ಕೆ ನಾವು ಲೆಕ್ಕ ಹಾಕುವುದಾದರೆ ಒಂದು ಯೂನಿಟ್‌ಗೆ ರೂ. 2.27 ಪೈಸೆಗಳಷ್ಟಾಗುತ್ತದೆ. ಅನಂತರ, 1ನೇ ಜನವರಿ, 1997ಕ್ಕೆ ರೂ. 2.59 ಪೈಸೆಗಳಷ್ಟು....

VIII F-25

ಉಪಾಧ್ಯಕ್ಷರು : ಮಾನ್ಯ ವೀರಪ್ಪ ಮೊಯಿಲಿಯವರೆ, ಕೆಲವು ಜನ ಸದಸ್ಯರುಗಳು ತಂತಮ್ಮ ಊರುಗಳಿಗೆ ಹೋಗಬೇಕೆಂದು ಕೇಳುತ್ತಿರುವುದರಿಂದ, ತಾವು ಮಾತನಾಡಿ ಮುಗಿಸಲು ಇನ್ನು ಎಷ್ಟು ನಿಮಿಷಗಳನ್ನು ತೆಗೆದುಕೊಳ್ಳುತ್ತೀರಿ?

ಶ್ರೀ ಎಂ. ವೀರಪ್ಪ ಮೊಯಿಲಿ : ನಾನು ಇನ್ನು ಹತ್ತು ನಿಮಿಷಗಳಲ್ಲಿ ಮುಗಿಸುತ್ತೇನೆ. ಇಲ್ಲವೆಂದರೆ, ಅವಕಾಶ ಕೊಡುವುದಾದರೆ ಇನ್ನು ಎರಡು ಗಂಟೆಗಳ ಕಾಲ ಬೇಕಾದರೆ ಮಾತನಾಡುತ್ತೇನೆ.

ಉಪಾಧ್ಯಕ್ಷರು : ತಾವು ಮಾತನಾಡಬೇಡಿ ಎಂದು ಹೇಳಲಿಲ್ಲ. ಆದರೆ, ಮಾತನಾಡಲು ತಮಗೆ ಇನ್ನು ಎಷ್ಟು ಹೊತ್ತು ಬೇಕಾಗುತ್ತದೆ? ಎಂಬುದು.

ಶ್ರೀ ಎಂ. ವೀರಪ್ಪ ಮೊಯಿಲಿ : ತಾವು ನನಗೆ ಮಾತನಾಡಿದ್ದು ಸಾಕು ಕುಳಿತುಕೊಳ್ಳಿ ಎಂದು ಹೇಳಿದರೆ ಕುಳಿತುಕೊಳ್ಳುತ್ತೇನೆ.

(ಈ ಮಧ್ಯೆ ಸಚಿವರಾದ ಶ್ರೀ ಬಿ.ಎನ್. ಬಚ್ಚೇಗೌಡರು ಏನೋ ಮಾತನಾಡಲು ಪ್ರಯತ್ನಿಸಿದರು)

ಬಚ್ಚೇಗೌಡರೇ, ತಾವು ಸಚಿವರಾಗಿದ್ದೀರಿ, ಇನ್ನು ಎರಡು ಗಂಟೆಗಳಷ್ಟು ಸಮಯ ಇದೆಯೆಂದು ತಾವು ಮಾತನಾಡುವುದಿದ್ದರೆ ಮಾತನಾಡಿ, ನಾನು ನನ್ನ ಮಾತನ್ನು ಇಲ್ಲಿಗೇ ನಿಲ್ಲಿಸಿಬಿಡುತ್ತೇನೆ. We will authorise you to speak. ಬಹಳ ಲಘುವಾಗಿ ಮಾತನಾಡಬಾರದು. ನಿಮ್ಮಿಂದ ಭಿಕ್ಷೆ ಕೇಳಿ ನಾವು ಇಲ್ಲಿ ಮಾತನಾಡುತ್ತಿಲ್ಲ, ನಾವು ಜವಾಬ್ದಾರಿಯಿಂದ ಮಾತನಾಡುತ್ತಿದ್ದೇವೆ. ಮಾನ್ಯ ಉಪಾಧ್ಯಕ್ಷರು ಮಾತನಾಡುವುದು ಬೇಡವೆಂದರೆ ನಾವು ಕುಳಿತುಕೊಳ್ಳುತ್ತೇವೆ. I can finish right now.

ಉಪಾಧ್ಯಕ್ಷರು : ತಾವು ಒಳ್ಳೆಯ ವಿಷಯವನ್ನು ಪ್ರಸ್ತಾಪಿಸುತ್ತಿದ್ದೀರಿ, ಮಾತನಾಡಿ.

ಶ್ರೀ ಜೆ.ಹೆಚ್. ಪಟೇಲ್ : ತಾವು ಒಳ್ಳೆಯ ವಿಷಯಗಳನ್ನೇ ಹೇಳುತ್ತಿದ್ದೀರಿ. ಹೇಳಿ. ನಾನು ಕೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ನನಗೆ ಗೊತ್ತಾಯಿತು. ನಾನು ನಮ್ಮ ನಾಯಕರ ಹತ್ತಿರ ಮಾತನಾಡಿ ವಿದ್ಯುಚ್ಛಕ್ತಿ ಬಗ್ಗೆ ಉಳಿದವರು ಮಾತನಾಡಲಿ, ನಾನು ಆ ಬಗ್ಗೆ ಮಾತನಾಡುವುದಿಲ್ಲವೆಂದು ಹೇಳಿದೆ. ಆದರೆ, ನಾನು ಮಾತನಾಡಲೇಬೇಕೆಂದು ಅವರ ಆಸಕ್ತಿ ಇದ್ದುದರಿಂದ ನಾನು ಮಾತನಾಡುತ್ತಿದ್ದೇನಷ್ಟೆ. ಇನ್ನು 10 ನಿಮಿಷಗಳಲ್ಲಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ. ಇವೊತ್ತು ಎಂ.ಎಸ್.ಸಿ.ಬಿ.ಯವರು ಮಹಾರಾಷ್ಟ್ರದಲ್ಲಿ ರೂ. 2.40 ಪೈಸೆಯಿಂದ ರೂ. 2.50 ಪೈಸೆಯಷ್ಟು ಪ್ರತಿ ಯೂನಿಟ್‌ಗೆ ತೆಗೆದುಕೊಳ್ಳುತ್ತಿದ್ದಾರೆ. Whereas we are buying power at Rs. 2.59 by 1997. ಅನಂತರ ಒರಿಸ್ಸಾ ರಾಜ್ಯ ಸೇರಿದಂತೆ ಎಲ್ಲಾ ಕಡೆಗಳಲ್ಲೂ ಕೂಡ ಅಷ್ಟೆ. ಅಲ್ಲದೆ ರಾಯಚೂರು ಥರ್ಮಲ್ ಯೂನಿಟ್‌ನಲ್ಲಿ ವಿದ್ಯುತ್ ಸರಬರಾಜು ಮಾಡುವಾಗ ಇದಕ್ಕಿಂತ ಜಾಸ್ತಿ ದರ ಈಗಾಗಲೇ ಇದೆ. ಒಂದು ವೇಳೆ ಜಾಗತಿಕ ಟೆಂಡರ್‌ನಲ್ಲಿ ಪ್ರಾಜೆಕ್ಟ್ ಕಾಸ್ಟ್ ಕಡಿಮೆಯಾದರೆ, ಈ ದರ ಕೂಡ ಕಡಿಮೆಯಾಗುತ್ತದೆ. ಇದಕ್ಕೆ ವಿದ್ಯುತ್ ಖರೀದಿ ಒಪ್ಪಂದದಲ್ಲಿ ಕೂಡ it has been provided. ಇನ್ನು ಏಪ್ರಿಲ್, 1995ರಂದು CEAಗೆ ಫೀಸಿಬಿಲಿಟಿ ರಿಪೋರ್ಟ್ ಕೊಟ್ಟಿದ್ದಾರೆ. ಅಲ್ಲದೆ, ವಿವರವಾದ ಯೋಜನಾ ವರದಿಯನ್ನು ಕೂಡ ಕೊಡುವವರಿದ್ದಾರೆ. ಆದುದರಿಂದ, ಜುಲೈ 31ನೇ ತಾರೀಖಿನೊಳಗಾಗಿ ಮುಖ್ಯಮಂತ್ರಿಯವರು ಕೊಡಬೇಕು ಎಂದರೆ ಇದರಲ್ಲಿ ಅವಸರ ಮಾಡಬಾರದು. ವಿವರವಾದ ಯೋಜನಾ ವರದಿ ಬರಬೇಕು, ಅದು ಬರಬೇಕಾದರೆ ಈಗಾಗಲೇ ಜಾಗತಿಕ ಟೆಂಡರ್ ಅನ್ನು ಏನು ಕರೆಯಲಾಗಿದೆ, ಅದರ ವಿವರಗಳು ಸಹ ಬರಬೇಕಾಗುತ್ತದೆ. ಈ ಎಲ್ಲಾ ಮಾಹಿತಿಗಳು ಬರದೆ ನೀವು ಅಷ್ಟೆರುಗೊಳಿಸಿ

ಎಂದರೆ ನಮ್ಮ ರಾಜ್ಯಕ್ಕೆ ರಾಜ್ಯದ ಜನತೆಗೆ ಇದರಿಂದ ನಷ್ಟವಾಗುತ್ತದ್ದಾದ್ದರಿಂದ ಈ ರೀತಿ ಆಗಬಾರದು. ಆದುದರಿಂದ ಭಾರತ ಸರ್ಕಾರಕ್ಕೆ ತಾವು ಡೆಡ್‌ಲೈನ್ ಕೊಡುವಂಥ ಕೆಲಸ ಮಾಡಬೇಡಿ.

ಶ್ರೀ ಜೆ.ಹೆಚ್. ಪಟೇಲ್ : ಜುಲೈ 31ನೇ ತಾರೀಖಿನೊಳಗೆ in principle clearance ಕೊಡಬೇಕೆಂದು ಭಾರತ ಸರ್ಕಾರ ಹೇಳಿದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಕೊಟ್ಟರು.

Sri M. Veerappa Moily : In principle okay. ಆದರೆ ಅಂತಿಮವಾಗಿ ಕೊಡತಕ್ಕಂಥಾದ್ದು, it should be transparent. ಜಾಗತಿಕ ಟೆಂಡರ್ ಬರಬೇಕಾಗುತ್ತದೆ, ನಾವು ಅದನ್ನು ಸ್ಕ್ರೂಟಿನೈಸ್ ಮಾಡಬೇಕಾಗುತ್ತದೆ. ನೋಡಬೇಕಾಗುತ್ತದೆ. ಎಲ್ಲಿಯಾದರೂ ಪ್ರೈಸ್ padding ಆಗದೇ ಅದನ್ನು ಸರಿಯಾಗಿ ನೋಡಿಕೊಂಡು ಆದಷ್ಟು ಕಡಿಮೆ ದರದಲ್ಲಿ ಎಕ್ವಿಪ್‌ಮೆಂಟ್‌ಗಳನ್ನು ಗುತ್ತಿಗೆ ಆಧಾರದ ಮೇಲೆ ಕೊಡುವ ರೀತಿಯಲ್ಲಿ ನಾವು ನೋಡುವುದಕ್ಕೆ ಅವಕಾಶವಿಟ್ಟುಕೊಂಡು, ನಾವ ಕರಡು ವಿದ್ಯುತ್ ಖರೀದಿ ಒಪ್ಪಂದವನ್ನು ಮಾಡಿಕೊಂಡಾಗ ಮಹಾರಾಷ್ಟ್ರದಲ್ಲಾಗಲಿ, ಒರಿಸ್ಸಾದಲ್ಲಾಗಲಿ, ಇಡೀ ದೇಶದಲ್ಲಿ ಏನೇನು ಒಪ್ಪಂದಗಳಾಗಿವೆಯೋ, ಅದನ್ನೆಲ್ಲವನ್ನೂ ನಾವು ಸ್ಕ್ರೂಟಿನೈಸ್ ಮಾಡಿಕೊಂಡು ಬಹುಶಃ ನಮ್ಮ ಕೊಜೆಂಟ್ರಿಕ್ಸ್ ಯೋಜನೆಗೆ ಸಂಬಂಧಿಸಿದಂತೆ ವಿದ್ಯುತ್ ಖರೀದಿ ಒಪ್ಪಂದದಲ್ಲಿ ಏನು ಮಾಡಿದ್ದೇವೆ that is the best project and the most advantageous project as far as Karnataka is concerned. It needs improvement. ಅದನ್ನು ಇನ್ನೂ ಕೂಡ ಅಭಿವೃದ್ಧಿಗೊಳಿಸುವುದಕ್ಕೆ, ಬದಲಾವಣೆ ಮಾಡುವುದಕ್ಕೆ ಏನೇನು ಸಾಧ್ಯವಿದೆ, ನಾನು ಜಡ್ಜ್‌ಮೆಂಟ್ ಹೇಳುವುದಿಲ್ಲ, ವಸ್ತುಸ್ಥಿತಿ ಹೇಳುತ್ತಿದ್ದೇನೆ. ಜಡ್ಜ್‌ಮೆಂಟ್ ಕೊಡತಕ್ಕಂಥವರು ತಾವು. ಏಕೆಂದರೆ, ಇದರ ಬಗ್ಗೆ ನಾವು ಜನತೆಯ ಮನವೊಲಿಸಬೇಕಾಗುತ್ತದೆ. ಯಾವುದೇ ಒಂದು ಯೋಜನೆ ಕುರಿತಾಗಲಿ, ಯಾವ ರೀತಿಯಲ್ಲಿ ನಾವು ಆ ಬಗ್ಗೆ ವ್ಯವಹರಿಸಿದ್ದೇವೆ, ಯಾವ ರೀತಿ ತಿಳಿಯಪಡಿಸಿದ್ದೇವೆ, ಅದೆಲ್ಲವೂ ಹೊಂದಿಕೊಂಡಿರುತ್ತದೆ.

It shows how transparent we have been. Otherwise, we could have concluded it. ಯಾವುದೇ ಕೆಲಸ ಮಾಡುವುದಿದ್ದರೆ ಸಿ.ಇ.ಎ. ಮತ್ತು ಭಾರತ ಸರ್ಕಾರದವರು ಏನು ಸ್ಟ್ಯಾಂಡರ್ಡ್ ಹಾಕಿದ್ದಾರೆ all those conditions which have been incorporated in the draft agreement are very much in conformity with the CEA Government of India regulations. ಯಾವುದನ್ನೂ ನಾವು ಕ್ರಾಸ್ ಮಾಡಲಿಲ್ಲ, but I don't say about Enron. ಕೆಲವು ಷರತ್ತುಗಳನ್ನು ವ್ಯತ್ಯಾಸ ಮಾಡಿರಬಹುದು. ಆದರೆ, ಸಿ.ಇ.ಎ. ಷರತ್ತುಗಳಾಗಲೀ ಅಥವಾ ಕೇಂದ್ರದ ಎಲೆಕ್ಟ್ರಿಸಿಟಿ ಅಥಾರಿಟಿ ಷರತ್ತುಗಳಾಗಲೀ ಅಥವಾ ಕೇಂದ್ರ ಸರ್ಕಾರ ಹಾಕಿಕೊಂಡಂಥ ಷರತ್ತುಗಳಾಗಲೀ, ಯಾವುದೇ ಹಂತದಲ್ಲೂ ಕೂಡ ನಾವು ಹೆಚ್ಚು-ಕಡಿಮೆ ಮಾಡಲಿಲ್ಲ, ಇನ್ನು ಕೂಡ ಅದನ್ನು ಅಭಿವೃದ್ಧಿಗೊಳಿಸುವುದಕ್ಕೆ ಸಾಧ್ಯವಿದ್ದರೆ ಮಾಡಬಹುದು. ಆದುದರಿಂದ, ನಾನು ಅದರ ಬಗ್ಗೆ ಹೆಚ್ಚು ವಿಸ್ತಾರವಾಗಿ ಹೇಳಲು ಹೋಗುವುದಿಲ್ಲ, ಆದರೆ, ಕೊಜೆಂಟ್ರಿಕ್ಸ್ ಅಥವಾ ಇದಕ್ಕೆ ಹೊಂದಿಕೊಂಡು ಮುಂದೆ ಬರುವ ವಿದೇಶಿ ಬಂಡವಾಳದ ಬಗ್ಗೆ ಸ್ಪಷ್ಟವಾದ ವಿಚಾರವನ್ನು ಜನತೆಗೂ ಕೂಡ ಹೇಳಬೇಕಾಗುತ್ತದೆ. ಇದರಲ್ಲಿ ಯಾವುದೇ ವಿಷಯವನ್ನೂ ಕೂಡ ಅಡಗಿಸಿಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಇವೊತ್ತು ನಾವು ಖಂಡಿತವಾಗಿಯೂ ವಿದ್ಯುತ್ ಯೋಜನೆ ಬಗ್ಗೆ ಹೆಚ್ಚು ರಾಜಕೀಯ ಮಾಡುವುದಕ್ಕೆ ಹೋಗದೆ we are not prepared to mix up up politics. ಆದ್ದರಿಂದ ಇವೊತ್ತು ವಿದ್ಯುತ್ ಕ್ಷೇತ್ರವನ್ನು ಬಲಪಡಿಸದಿದ್ದರೆ, ನಮ್ಮ ಎಲ್ಲಾ ಬಂಡವಾಳದ ಚಿತ್ರಗಳು

that will only be a dream. ಏಕೆಂದರೆ ಈಗ ಎನ್.ಟಿ.ಪಿ.ಸಿ.ಯವರು they have also come forward to establish one plant. ಎನ್.ಟಿ.ಪಿ.ಸಿ.ಯವರು ಮುಂದೆ ಬಂದರೆ you can definitely welcome their proposal. ಅವರು ಇಲ್ಲಿಗೆ ಬಂದು ಪ್ರಾಜೆಕ್ಟ್ ಮಾಡುವುದಿದ್ದರೆ ನೀವು ಅವರಿಗೆ ಖಂಡಿತವಾಗಿಯೂ ಆಶ್ರಯ ಕೊಡಬಹುದು.

ಶ್ರೀ ಜೆ.ಹೆಚ್. ಪಟೇಲ್ : ತಮಗೆ ಗೊತ್ತಿರುವಂತೆ ನಂದಿಕೂರಿನಲ್ಲಿ with the Russian collaboration NTPC was allowed to set up 2400 MW power plant.

Sri M. Veerappa Moily : I was told lately they are prepared to come forward. Andhra Pradesh has welcomed them. ಆದರೆ, ಕರ್ನಾಟಕದಲ್ಲಿ ಎನ್.ಟಿ.ಪಿ.ಸಿ.ಯವರು ಯೋಜನೆಗಳನ್ನು ಹಮ್ಮಿಕೊಳ್ಳುವುದಕ್ಕೆ ಏನಾದರೂ ಮುಂದೆ ಬಂದರೆ ನಾನು ತಿಳಿದುಕೊಂಡಂತೆ they have made an enquiry.

ಶ್ರೀ ಜೆ.ಹೆಚ್. ಪಟೇಲ್ : ಅದರ ಬಗ್ಗೆ ತೌಲನಿಕ ಅಧ್ಯಯನ ಮಾಡುತ್ತೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ : ತೌಲನಿಕ ಅಧ್ಯಯನ ಮಾಡುವುದರ ಜೊತೆಗೆ ಅದನ್ನು ತಾವು ಕೂಡ ಸ್ವಾಗತಿಸಬೇಕೆಂದು ಹೇಳುತ್ತಾ, ವಿದ್ಯುತ್ ಕ್ಷೇತ್ರದ ಬಗ್ಗೆ ಒಂದು ಸಂತೋಷದ ಸಂಗತಿ ಎಂದರೆ, ಮಾನ್ಯ ಸಚಿವರಿಗೆ ಈ ಬಗ್ಗೆ ಸ್ಪಷ್ಟವಾದ ನಿಲುವು ಇದೆ ಮತ್ತು ರಾಜ್ಯದಲ್ಲಿ ವಿದ್ಯುತ್ ಕ್ಷೇತ್ರವನ್ನು ಬಲಪಡಿಸಲು ಯಾವ ರೀತಿ ಕಾರ್ಯಕ್ರಮ ಕೈಗೊಳ್ಳಬೇಕೆಂಬುದರ ಬಗ್ಗೆ ಸರಿಯಾದ ಚಿಂತನೆ ಇದೆ. ಅದನ್ನು ನಾವು ಮುಂದುವರೆಸಿಕೊಂಡು ಹೋಗಬೇಕಾದಂಥ ಅವಶ್ಯಕತೆಯಿದೆ. ಆದರೆ, ಯಾವುದೇ ಹಂತದಲ್ಲೂ ಕೂಡ ವಿಳಂಬ ಮಾಡತಕ್ಕಂಥಾದ್ದು, ಅನಾವಶ್ಯಕವಾಗಿ ಕಿರುಕುಳ ಕೊಡುವುದು ಆಗಬಾರದು. ಅದಕ್ಕೋಸ್ಕರ ನಾನು "ಏಕ ಕಿಂಡಿ ವ್ಯವಸ್ಥೆ" ಮಾಡಬೇಕೆಂದು ಹೇಳಿದೆ. ಈಗ ಯಾವುದೇ ಒಂದು ಯೋಜನೆ ಮಾಡಬೇಕಾದರೂ ಕೂಡ, ಇತ್ತೀಚೆಗೆ ಕೇಂದ್ರ ಸರ್ಕಾರ ಕೂಡ ನಿರ್ಣಯ ತೆಗೆದುಕೊಂಡಿದ್ದು, ಅದರಲ್ಲಿ ನೀವು ಗ್ಲೋಬಲ್ ಟೆಂಡರ್ ಕರೆದು ವಿದ್ಯುತ್ ಯೋಜನೆಗಳನ್ನು ವಹಿಸಿಕೊಡಬೇಕೆಂದು ಹೇಳಿದ್ದಾರೆ. That is welcome. ಇನ್ನು ಮುಂದೆಯೂ ಬರತಕ್ಕಂಥ ಯೋಜನೆಗಳನ್ನು ಸಹ ತಾವು ಮಾಡಬಹುದು. ಮತ್ತು ಯಾವುದೇ ದೃಷ್ಟಿಯಿಂದಲೂ ಕಿರುಕುಳ ಕೊಡುವಂಥಾದ್ದು ಆಗಬಾರದು. The power ministry should have its own monitoring cell. Wherever there is delay in clearing captive units that has to be cleared immediately. ನನಗೆ ಇಷ್ಟು ಹೊತ್ತು ಮಾತನಾಡಲು ಸಮಯಾವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ತಮಗೆ ವಿಶೇಷವಾಗಿ ವಂದನೆ ಸಮರ್ಪಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ಇಲಾಖೆಗಳ ಬೇಡಿಕೆಗಳಿಗೆ ಸಂಬಂಧಿಸಿದಂತೆ ಚರ್ಚೆ ಪ್ರಾರಂಭವಾಗಿದೆ. ಇವೊತ್ತಿನ ಹೊಸ ಪದ್ಧತಿ ಪ್ರಕಾರ ವಿಷಯ ಸಮಿತಿಗಳನ್ನು ರಚಿಸಿದ ನಂತರ, ಮಾತನಾಡುವುದಕ್ಕೆ ಹೆಚ್ಚು ಕಾಲಾವಕಾಶವನ್ನು ಈ ಸದನದಲ್ಲಿ ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲ, ಏಕೆಂದರೆ, ವಿಷಯ ಸಮಿತಿಗಳನ್ನು ರಚಿಸಿರುವ ಉದ್ದೇಶ ಸದನದಲ್ಲಿ ಪ್ರತಿಯೊಂದು ಇಲಾಖೆಗಳ ಬೇಡಿಕೆಗಳ ಬಗ್ಗೆ ಚರ್ಚಿಸುವುದಕ್ಕೆ ಸಾಕಷ್ಟು ಸಮಯಾವಕಾಶ ಇಲ್ಲವಾದ ಕಾರಣ, ಆ ಕುರಿತು ವಿಷಯ ಸಮಿತಿ ಸಭೆಗಳಲ್ಲಿ ಚರ್ಚಿಸಿ ಸುದೀರ್ಘವಾದ ವರದಿ ಕೊಡಬೇಕೆಂಬುದಾಗಿದೆ. ಅದೇ ರೀತಿ ವಿಷಯ ಸಮಿತಿಗಳು ಸಭೆ ಸೇರಿ ಎಲ್ಲಾ

ಇಲಾಖಾ ಬೇಡಿಕೆಗಳ ಬಗ್ಗೆ ಚರ್ಚಿಸಿ ಈ ಸದನಕ್ಕೆ ಈಗಾಗಲೇ ವರದಿಗಳನ್ನು ಸಲ್ಲಿಸಿವೆ. ಆದುದರಿಂದ, ಆ ವರದಿಗಳ ಆಧಾರದ ಮೇಲೆ ಪ್ರಾಮುಖ್ಯವಾಗಿರುವ ಒಂದೆರಡು ಅಂಶಗಳನ್ನು ಹೊರತುಪಡಿಸಿದರೆ ಬೇರೆ ಯಾವುದೂ ಇಲ್ಲವೆಂದು ಹೇಳಿ, ನಾನು ಹೆಚ್ಚು ಮಾತನಾಡಲು ಹೋಗದೆ, ತಾವು ನನಗೆ ಮಾತನಾಡಲು ಸೋಮವಾರ ದಿವಸ ಅವಕಾಶ ಕಲ್ಪಿಸಿಕೊಡುತ್ತೀರೆಂದು ನಂಬಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಈಗ ಸದನವನ್ನು ಮುಂದೂಡಿ ಮತ್ತೆ ಸೋಮವಾರ ದಿನಾಂಕ 11.9.95ರಂದು ಬೆಳಿಗ್ಗೆ 11.00 ಗಂಟೆಗೆ ಸೇರುವುದು.

(ಸದನವು ಸಂಜೆ 6 ಗಂಟೆ 35 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 11ನೇ ಸೆಪ್ಟೆಂಬರ್ ಮಾಹೆ 1995ರ ಸೋಮವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

BLANK PAGE

ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಸೋಮವಾರ ೧೧ನೇ ಸೆಪ್ಟಂಬರ್ ೧೯೯೫ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧-೦೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ಎಸ್. ರಮೇಶ್ ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ರಾಜ್ಯದಲ್ಲಿ ಪಡಿತರ ವಿತರಣೆಯ ಪ್ರಮಾಣ.

2373 - ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು. ಈ ಕೆಳಕಂಡ ಪ್ರಶ್ನಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪಡಿತರ ವಿತರಣಾ ಸಾಮಗ್ರಿಯ ಬೆಲೆ ಏರಿಕೆಯ ಪ್ರಮಾಣ ಎಷ್ಟು ?

ಆ) ರಾಜ್ಯದಲ್ಲಿ ಇತರ ಅವಶ್ಯಕ ವಸ್ತುಗಳ ಬೆಲೆ ಏರಿಕೆಯ ಪ್ರಮಾಣ ಎಷ್ಟು ?

ಇ) ಸರ್ಕಾರವು ಅವಶ್ಯಕ ವಸ್ತುಗಳ ಬೆಲೆ ಏರಿಕೆಯನ್ನು ತಡೆಗಟ್ಟಲು ಕೈಗೊಂಡ ಕ್ರಮಗಳೇನು ?

ಶ್ರೀ ಎಸ್. ನಂಜಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು.)

ಅ) ಕಳೆದ ಒಂದು ವರ್ಷದಿಂದ ಸಾರ್ವಜನಿಕ ವಿತರಣೆ ಮೂಲಕ ವಿತರಿಸಲ್ಪಡುವ ಪಡಿತರ ಸಾಮಗ್ರಿಗಳ ಬೆಲೆಯಲ್ಲಿ ಹೆಚ್ಚಳವಾಗಿರುವುದಿಲ್ಲ.

ಆ) ಅವಶ್ಯಕ ವಸ್ತುಗಳ ಹಾಲಿ ಇರುವ ದರವನ್ನು ಲಗತ್ತಿಸಿದೆ.

ಇ) ಅವಶ್ಯಕ ವಸ್ತುಗಳ ಬೆಲೆಯನ್ನು ನಿಯಂತ್ರಣದಲ್ಲಿ ಯಾವುದೇ ಶಾಸನಗಳು ಇರುವುದಿಲ್ಲ. ಈ ವಸ್ತುಗಳ ಬೆಲೆಯು ಅನಧಿಕೃತ ಸಂಗ್ರಹಣೆಯಿಂದ ಉಂಟಾಗಿದ್ದಲ್ಲಿ ಅವಶ್ಯಕ ವಸ್ತುಗಳ ಕಾಯ್ದೆಯಡಿ ಕ್ರಮ ಕೈಗೊಳ್ಳಲಾಗುತ್ತಿದೆ.

STATEMENT SHOWING THE OPEN MARKET RETAIL PRICE PREVAILING IN KARNATAKA

Commodity		April 1994 20-4-95	April 1995 25-4-95	%	May 1994 25-5-94	May 1995 10-5-95	%	June 1994 20-6-94
1.	Rice							
	S. Fine	13-00	13-25(+)	1.92	12.50	13-00(+)	4.00	12-50
	Fine	11-00	11-50(+)	4.54	10-00	12-50(+)	25.00	10-50
	common	8-50	9-00(+)	15.88	7-30	9-00(+)	23.29	8-00
2.	Wheat -Bans	7-00	8-00(+)	4.28	7-00	8-00(+)	14.29	7-00
3.	Pulses:							
	Turdal	22-00	28-00(+)	7.27	22-00	29-00(+)	31.82	22-00
	Gramdal	17-30	15-50(-)	10.40	18-00	15-50(-)	13.89	17-00
4.	Sugar	14-40	13-00(-)	9.72	15-80	12-70(-)	19.62	14-75
5.	Gur	13-00	10-00(-)	23.07	12-00	10-50(-)	12.50	12-50
6.	Groundnut							
	Oil (10Kg)	37-50	41-80(+)	11.46	37-00	41-80(+)	12.97	39-50
7.	Mustard							
	Oil (15Kg)	39-00	47-00(+)	120.5	43-00	47-00(+)	9.30	42-00
8.	Vanaspati							
	(15 Kg)	43-00	44-00(+)	2.32	40-00	47-00(+)	17.5	42-00

9.	Tea :							
	Ordinary	68-00	64-00(+)	5.88	68-00	65-00(-)	4.41	68-00
	Superior	70-00	80-00(+)	14.28	70-00	80-00(+)	14.29	70-00
10.	Salt :							
	Loose	1-20	1-50(+)	25.00	1-20	2-00(-)	16.67	1.27
	Packet	1-00	1-20(+)	20.00	1-00	1-60(+)	60.00	1-00
	Onion	2-60	3-00(+)	15.38	2-40	4-25(+)	77.08	3-20
[illegible]	Potato	3-20	4-80(+)	50.00	4-40	5-00(+)	13.64	4-40
13	Ragi	4-20	5-20(+)	23.80	4-20	5-50(+)	30.95	4-20
14.	Jowar-							
	[illegible]	5-00	8-00(+)	60.00	5-50	7-50(+)	26.36	5-50
15.	Coffee							
	S. Fine		148-00			148-00		
	Fine		127-00			127-00		

Question : 2373

STATEMENT SHOWING THE OPEN MARKET RETAIL PRICE PREVAILING IN KARNATAKA

	Commodity	June 1995 28.6.95	%	July 1994 20.7.94	July 1995 20.6.95	%	Aug. 1994 30.8.94	August 1995 30.8.95	%
1.	Rice:								
	S. Fine	12-50(+)	8.00	12-50	15-50(+)	8.00	13-00	13-50(+)	3.85
	Fine	12-00(+)	14.29	10-50	12-00(+)	14.29	11-00	12-00(+)	9.09
	Common	7-50(-)	6.25	8-50	9-50(+)	11.76	8-50	9-00(+)	5.88
2.	Wheat-								
	Bansi	7-50(+)	7.14	7-25	8-00(+)	10.34	7-00	7.50(+)	7.14
3.	Pulses:								
	Turdal	34-00(+)	54.55	22-00	34-00(+)	54.55	22-00	54-00(+)	54.55
	Gramdal	14-50(-)	14.71	18-50	14-50(-)	21.62	20-00	13-50(-)	32.50
4.	Sugar	12-50(-)	15.25	14-40	12-75(-)	11.46	14-00	13-00(-)	7.14
5.	Gur	11-00(-)	12.00	12-50	10-50(-)	16.00	12-00	11-50(-)	4.17
6.	G'nut								
	Oil-100Kg	42-40(+)	7.34	39-80	43-40(+)	9.05	40-50	43-20(+)	6.67
7.	Mustard								
	Oil-15Kg	47-00(+)	11.90	42-00	47-00(+)	11.90	43-00	47-00(+)	9.00
8.	Vanaspati								
	-15Kg	43-00(+)	2.38	39-00	44-00(+)	12.82	40-00	42-00(+)	5.00

9.	Tea :								
	Ordinary	65-00(-)	4.41	68-00	65-00(-)	91.18	64-00	70-00(+)	9.38
	Superior	80-00(+)	14.29	70-00	80-00(+)	14.29	72-00	80-00(+)	11.11
10.	Salt :								
	Loose	2-00(+)	66.67	1-00	2-00(+)	100.00	1-00	2-00(+)	100.00
	Packet	2-00(+)	100.00	1-00	2-00(+)	100.00	1-00	2-00(+)	100.00
11.	Onion	5-00(+)	56.25	3-20	5-50(+)	71.88	5-20	7-20(+)	38.46
12.	Potato	7-50(+)	70.45	4-20	8-00(+)	90.48	3-00	4-40(+)	46.67
13.	Ragi	5-50(+)	30.95	4-20	5-50(+)	30.95	4-20	5-50(+)	30.95
14.	Jowar-								
	Bijapur	8-25(+)	50.00	5-50	8-50(+)	54.55	5-50	8-50(+)	54.55
15.	Coffee:								
	S.Fine	147-30		130-00				130-00	
	Fine	127-00		125-00				125-00	

• ಶ್ರೀ ಕೆ. ಜಯರಾಮ ಶೆಟ್ಟಿ: ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಪಡಿತರ ವಿತರಣಾ ಸಾಮಗ್ರಿಯ ಬೆಲೆ ಏರಿಕೆಯ ಪ್ರಮಾಣ ಎಷ್ಟು ಎಂದು ಪ್ರಶ್ನೆ ಕೇಳಿದರೆ ಉತ್ತರವಾಗಿ ಕಳೆದ ಒಂದು ವರ್ಷದಿಂದ ಸಾರ್ವಜನಿಕ ವಿತರಣೆ ಮೂಲಕ ವಿತರಿಸಲ್ಪಡುವ ಪಡಿತರ ಸಾಮಗ್ರಿಗಳ ಬೆಲೆಯಲ್ಲಿ ಹೆಚ್ಚಳವಾಗಿರುವುದಿಲ್ಲ ಎಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಆದರೆ ಗೋಧಿಯ ಬೆಲೆ ಜಾಸ್ತಿಯಾಗಿದೆ. ಹಾಗಾಗಿ ರಾಜ್ಯದಲ್ಲಿ ಇತರ ಅವಶ್ಯಕ ವಸ್ತುಗಳ ಬೆಲೆ ಏರಿಕೆಯ ಪ್ರಮಾಣ ಎಷ್ಟು ಎಂದು ಕೇಳಿದರೆ ಈಗ ಓಪನ್ ಮಾರ್ಕೆಟ್‌ನಲ್ಲಿ ಇಲ್ಲದ ಅತೀ ಕಡಿಮೆ ರೇಟನ್ನು ತೋರಿಸಿದ್ದಾರೆ. ಆದರೆ ಮಂಗಳೂರು ನಗರದಲ್ಲಿ ಅಥವಾ ಗ್ರಾಮಾಂತರ ಪ್ರದೇಶದಲ್ಲಿ ಈ ಸರ್ಕಾರ ಏನು ಬೆಲೆ ಏರಿಕೆಯನ್ನು ಪಟ್ಟಿಯನ್ನು ಕೊಟ್ಟಿದೆ, ಆ ರೇಟಿಗೆ ಗೋಧಿ ಸಿಗುವುದಿಲ್ಲ, ಅಕ್ಕಿ 12.50 ರೂಪಾಯಿಗೆ ಸಿಗುವುದಿಲ್ಲ, ಸುಮಾರು 13ರಿಂದ 14 ರೂಪಾಯಿವರೆಗೆ ಜಾಸ್ತಿಯಾಗಿದೆ. ಹಾಗೆಯೇ ಗೋಧಿ ಬೆಲೆ ಜಾಸ್ತಿಯಾಗಿದೆ. ಸಕ್ಕರೆ ಬೆಲೆಯಲ್ಲಿ ತಾವು ಏನು ಲೆಕ್ಕಾಚಾರ ಕೊಟ್ಟಿದ್ದೀರಿ ಅದೂ ಜಾಸ್ತಿಯಾಗುರವುದು ಉಂಟು. ಆದರೆ ತಮ್ಮ ಹತ್ತಿರ ನಾನು ಇವತ್ತು ಹೇಳುತ್ತಿದ್ದೇನೆ, ಈ ಬೆಲೆ ಏರಿಕೆಯ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ? ತಮ್ಮ ಉತ್ತರದಲ್ಲಿ ಅವಶ್ಯಕ ವಸ್ತುಗಳ ಬೆಲೆ ನಿಯಂತ್ರಣದಲ್ಲಿ ಯಾವುದೇ ಶಾಸನಗಳು ಇರುವುದಿಲ್ಲ ಎಂದು ಹೇಳಿದ್ದೀರಿ. ಆದರೆ ಶ್ರೀಸಾಮಾನ್ಯನ ಅವಶ್ಯಕತೆಗನುಗುಣವಾಗಿ ತಾವು ಯಾವ ಕ್ರಮವನ್ನು ಕೈಗೊಳ್ಳುತ್ತಿದ್ದೀರಿ ಎಂಬುದನ್ನು ನಿರ್ದಿಷ್ಟವಾಗಿ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ನಂಜಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಗೋಧಿ ಬೆಲೆ ಪಡಿತರ ಪದ್ಧತಿಯಲ್ಲಿ ಜಾಸ್ತಿಯಾಗಿದೆ ಎನ್ನುವಂತಹ ಪ್ರಶ್ನೆಯನ್ನು ಕೇಳಿದ್ದಾರೆ. 15.7.95ರಲ್ಲಿ ಗೋಧಿಯನ್ನು ಸಹ ಕಡಿಮೆ ದರದಲ್ಲಿ ಕೊಡುವಂತಹ ಒಂದು ವ್ಯವಸ್ಥೆಯನ್ನು ಮಾಡಿದ್ದೇವೆ. ಆದುದರಿಂದ ಪಡಿತರ ವ್ಯವಸ್ಥೆಯಲ್ಲಿ ವಿತರಿಸಲಾಗುತ್ತಿರುವ ಆಹಾರ ಪದಾರ್ಥಗಳ ಬೆಲೆ ಏರಿಕೆ ಜಾಸ್ತಿಯಾಗಿಲ್ಲ ಎನ್ನುವ ಮಾತನ್ನು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಎರಡನೆಯದಾಗಿ ಅವಶ್ಯಕ ವಸ್ತುಗಳನ್ನು ಕೊಡುತ್ತಿರುವುದರ ಬೆಲೆ ಜಾಸ್ತಿಯಾಗುತ್ತಿದೆ, ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳಿದ್ದಾರೆ. ಇದಕ್ಕೆ ಹೇಳುವುದಾದರೆ ಈಗಾಗಲೇ ನಮ್ಮ ಇಲಾಖೆ ವತಿಯಿಂದ ತಪಾಸಣೆ ಮಾಡುವುದು ಹಾಗೂ ಎಲ್ಲಿ ಅವಶ್ಯ ವಸ್ತುಗಳನ್ನು ಅಕ್ರಮವಾಗಿ ದಾಸ್ತಾನು ಮಾಡಿದ್ದರೆ ಅದನ್ನು ಪತ್ತೆ ಮಾಡುವಂತಹ ಕೆಲಸ ಮಾಡುತ್ತಿದ್ದೇವೆ. ಸೆಪ್ಟೆಂಬರ್ 1994ರಿಂದ ತಾಳೆ ಎಣ್ಣೆಯನ್ನು ನಮ್ಮ ರಾಜ್ಯಕ್ಕೆ ಕೊಟ್ಟಿರಲಿಲ್ಲ, ಅದರ ಬಗ್ಗೆ ನಾವು ಕೇಂದ್ರ ಸರ್ಕಾರಕ್ಕೆ ಬರೆದು, ನಮಗೆ ತಾಳೆ ಎಣ್ಣೆಯನ್ನು ತಾವು ವಿತರಣೆ ಮಾಡಬೇಕು, ನೀವು ಮಾಡದೇಹೋದರೆ ನಾವೇ ಬೇರೆ ರಾಷ್ಟ್ರಗಳಿಂದ ತರಿಸಿಕೊಳ್ಳಬೇಕಾಗುತ್ತದೆ ಎಂದು ಒತ್ತಾಯ ಮಾಡಿದ್ದರಿಂದ ಕಳೆದ ತಿಂಗಳಿನಿಂದ 3000 ಮೆಟ್ರಿಕ್ ಟನ್ ತಾಳೆ ಎಣ್ಣೆಯನ್ನು ಕೊಟ್ಟಿದ್ದಾರೆ. ಅದು ನಿರಂತರವಾಗಿ ಪ್ರತಿ ತಿಂಗಳು ಬರುವಂತಹ ವ್ಯವಸ್ಥೆ ಮಾಡಿದ್ದೇವೆ. ಆದ್ದರಿಂದ ಜುಲೈ, ಆಗಸ್ಟ್ ತಿಂಗಳಿನಲ್ಲಿ ಎಣ್ಣೆ ಬೆಲೆ ಇಳಿಮುಖವಾಗಿದೆ ಎನ್ನುವಂತಹ ಮಾತನ್ನು ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಹಾಗಾಗಿ ಅಕ್ಕಿ ಸಹ ಕಳೆದ ವರ್ಷಕ್ಕಿಂತ ಈ ವರ್ಷ ಕಡಿಮೆ ಬೆಲೆಯಲ್ಲಿ ಸಿಗುತ್ತಿದೆ. ಮಾನ್ಯ ಸದಸ್ಯರು ಮಂಗಳೂರಿನಲ್ಲಿ ಏನು ಅಕ್ಕಿಯನ್ನು ಜಾಸ್ತಿ ಬೆಲೆಯಲ್ಲಿ ಮಾರುತ್ತಿದ್ದಾರೆ ಎಂದು ಹೇಳಿದರು ಅದನ್ನು ಪರಿಶೀಲನೆ ಮಾಡಿ ಅದನ್ನು ಯಾವ ರೀತಿ ಕಡಿಮೆ ದರದಲ್ಲಿ ಮಾರಬೇಕು,ಅಲ್ಲಿ ಹೋರ್ಡಿಂಗ್ ಏನಾದರೂ ಇದ್ದರೆ, ಅಥವಾ ಸಪ್ಲೈ ಡಿಮ್ಯಾಂಡ್ ಏನಾದರೂ ಕಡಿಮೆ ಇದ್ದರೆ ಅದನ್ನು ಹೆಚ್ಚು ಒದಗಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ. ಜಯರಾಂ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಅನಧಿಕೃತವಾಗಿ ಹೆಚ್ಚುವರಿ ಸಂಗ್ರಹಣೆ ಮಾಡುವ ಬಗ್ಗೆ ತಾವು ನಿರ್ದಿಷ್ಟವಾಗಿ ಏನು ಕ್ರಮಗಳನ್ನು ಕೈಗೊಂಡಿದ್ದೀರಿ ಎನ್ನುವುದಕ್ಕೆ ನಾನು ತಮ್ಮಿಂದ ಉತ್ತರವನ್ನು ಅಪೇಕ್ಷೆ ಮಾಡುತ್ತೇನೆ.

ಶ್ರೀ ಎಸ್. ನಂಜಪ್ಪ : ಮಾನ್ಯ ಅಧ್ಯಕ್ಷರೆ, ತತ್‌ಕ್ಷಣ ತಪಾಸಣೆ ಮಾಡುತ್ತಿದ್ದು ಎಲ್ಲೆಲ್ಲಿ ಅಕ್ರಮವಾಗಿ ದಾಸ್ತಾನು ಮಾಡಿದ್ದಾರೆ ಅದನ್ನು ಪತ್ತೆ ಹಚ್ಚುವಂತಹ ಕೆಲಸವನ್ನು ನಮ್ಮ ಇಲಾಖೆ ವತಿಯಿಂದ ಆಗಾಗ್ಗೆ ಮಾಡುತ್ತಿದ್ದೇವೆ. ನಾನೂ ಸಹ ತತ್‌ಕ್ಷಣ ತಪಾಸಣೆ ಮಾಡುವಂತಹ ಕಾರ್ಯದಲ್ಲಿ ನನ್ನನ್ನು ತೊಡಗಿಸಿಕೊಂಡಿದ್ದೇನೆ. ಈ ಮೂಲಕವಾಗಿ ಅವಶ್ಯಕ ವಸ್ತುಗಳ ಬೆಲೆ ಏರದಂತೆ ನಾವು ನೋಡಿಕೊಳ್ಳುತ್ತಿದ್ದೇವೆ. ಇಡೀ ಭರತ ಖಂಡದಲ್ಲಿ ಬೇಕಾಗುವಷ್ಟು ಸಕ್ಕರೆ ಒಂದು ಕೋಟಿ 25 ಲಕ್ಷ ಟನ್. ಈಗಾಗಲೇ ಸಕ್ಕರೆ ದಾಸ್ತಾನಿದೆ.

ಅಧ್ಯಕ್ಷರು : ಮಾನ್ಯ ಆಹಾರ ಸಚಿವರೇ, ನೀವು ಕೊಟ್ಟಿರುವಂತಹ ಉತ್ತರವನ್ನು ನೋಡಿ. ಅವಶ್ಯಕ ವಸ್ತುಗಳ ಬೆಲೆಯನ್ನು ನಿಯಂತ್ರಣ ತರಲಿಕ್ಕೆ ಯಾವುದೇ ಶಾಸನಗಳು ಇರುವುದಿಲ್ಲ, ಅಂದರೆ ಶಾಸನಗಳ ಮುಖಾಂತರ ನೀವು ನಿಯಂತ್ರಣದಲ್ಲಿ ಇದ್ದರೂ ಆಗುವುದಿಲ್ಲ, ಅದಕ್ಕೆ ಪರ್ಯಾಯ ವ್ಯವಸ್ಥೆ ಏನು? ಅನಧಿಕೃತವಾಗಿ ಎಲ್ಲೆಲ್ಲಿ ಸಂಗ್ರಹಣ ಮಾಡಿರುತ್ತಾರೆ ಅದನ್ನು ಅಲ್ಲಿ ಸರ್ಕಾರ ಕ್ರಮವನ್ನು ತೆಗೆದುಕೊಳ್ಳುವುದು. ಇದು ತಪಾಸಣೆ ಮಾಡುವುದರಿಂದ ಆಗುವುದಿಲ್ಲ, ರೈಡ್ ಮಾಡುವುದು, ಕೇಸಸ್ ಬುಕ್ ಮಾಡುವುದು, ಅವರ ಮೇಲೆ ಆ್ಯಕ್ಷನ್ ತೆಗೆದುಕೊಳ್ಳುವುದು. ಇದನ್ನು ಅವರು ಕೇಳುವುದು. ಮಾನ್ಯ ಸದಸ್ಯರೇ, ನೀವು ವಕೀಲರಲ್ಲವೇ, ನೀವು ಸರಿಯಾಗಿ ಕೇಳುವುದಿಲ್ಲ.

ಶ್ರೀ ಎಸ್. ನಂಜಪ್ಪ : ಮಾನ್ಯ ಅಧ್ಯಕ್ಷರೆ, ನಾವು ಆ ಕೆಲಸವನ್ನು ಮಾಡುತ್ತಿದ್ದೇವೆ.

ಶ್ರೀ ಕೆ. ಜಯರಾಮ ಶೆಟ್ಟಿ : ತಾವು ಎಷ್ಟು ಕೇಸ್‌ಗಳನ್ನು ರೈಡ್ ಮಾಡಿದ್ದೀರಿ?

ಶ್ರೀ ಎಸ್. ನಂಜಪ್ಪ : ಈ ವಿವರಗಳನ್ನು ಮಾನ್ಯ ಸದಸ್ಯರಿಗೆ ಒದಗಿಸಿ ಕೊಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಈ ರಾಜ್ಯಕ್ಕೆ ಬರುವ ರಾಜ್ಯದ ಪಾಲಿನ ಪಡಿತರ ವಿತರಣೆ ಸಾಮಗ್ರಿಗಳ ಪ್ರಮಾಣ ನಾವು ಕೇಳಿದರೆ ಈ ಪ್ರಮಾಣ ಕಳೆದ ಅನೇಕ ವರ್ಷದಿಂದ ಹೆಚ್ಚಿಲ್ಲವೆಂದು ನಿಮ್ಮ ಇಲಾಖೆಯವರು ದೂರು ಹೇಳುತ್ತಾರೆ. ಎಷ್ಟು ವರ್ಷಗಳಿಂದ ನಮ್ಮ ರಾಜ್ಯಕ್ಕೆ ಬರುತ್ತಿರುವ ಪಡಿತರ ಸಾಮಗ್ರಿಗಳ ಪ್ರಮಾಣ ಹೆಚ್ಚಿಲ್ಲ, ಇದನ್ನು ಹೆಚ್ಚಿಸುವುದಕ್ಕೋಸ್ಕರ ವರ್ಷವರ್ಷ ರೇಷನ್ ಕಾರ್ಡಗಳ ಸಂಖ್ಯೆ ಕೂಡ ಹೆಚ್ಚುತ್ತಿದೆ. ಇದರಿಂದ ಬೇಡಿಕೆ ಪ್ರಮಾಣ ಕೂಡ ಹೆಚ್ಚುತ್ತದೆ. ಕೇಂದ್ರ ಸರ್ಕಾರದಿಂದ ಇದರ ಪ್ರಮಾಣವನ್ನು ಹೆಚ್ಚಿಸಲು ರಾಜ್ಯ ಸರ್ಕಾರ ಏನು ಕ್ರಮವನ್ನು ಕೈಗೊಂಡಿದೆ.

ಶ್ರೀ ಎಸ್. ನಂಜಪ್ಪ : ಮಾನ್ಯ ಅಧ್ಯಕ್ಷರೆ, ಅಕ್ಕಿ ಮತ್ತು ಗೋಧಿ ಪ್ರಮಾಣ ನಮ್ಮ ರಾಜ್ಯಕ್ಕೆ ಹೆಚ್ಚಿದೆ. ಅಕ್ಕಿ ಮತ್ತು ಗೋಧಿಗೆ ಯಾವುದೇ ಸಮಸ್ಯೆಗಳು ಇಲ್ಲ, ನಮಗೆ ಸಮಸ್ಯೆ ಇರುವುದು ಸಕ್ಕರೆ ಮತ್ತು ಸೀಮೆಎಣ್ಣೆಯದು. ನಮಗೆ ಸಕ್ಕರೆ 39,000 ಮೆಟ್ರಿಕ್ ಟನ್ ಬೇಕಾಗುತ್ತದೆ.ಆದರೆ ಈಗ ನಮಗೆ ಮಾಹೆಯಾನ 17,000 ಮೆಟ್ರಿಕ್ ಟನ್ ಮಾಹೆಯಾನ ಬರುತ್ತಿದೆ. ಇದರಲ್ಲಿ ಹೆಚ್ಚಳವಾಗಿಲ್ಲ, ದಕ್ಷಿಣ ರಾಜ್ಯಗಳ ಆಹಾರ ಮಂತ್ರಿಗಳ ಸಮ್ಮೇಳನ ತಿರುವನಂತಪುರದಲ್ಲಿ ಹೋದ ತಿಂಗಳು ನಡೆಯಿತು. ಅದು ನಡೆದಂತಹ ಸಂದರ್ಭದಲ್ಲಿ ಕೇಂದ್ರ ಆಹಾರ ಮಂತ್ರಿಗಳ ಹತ್ತಿರ ಇದನ್ನು ಪ್ರಸ್ತಾಪ ಮಾಡಿದಾಗ ಅವರು ಶೇ. 5ರಷ್ಟು ಮಾತ್ರ ಸಕ್ಕರೆಯನ್ನು ಹೆಚ್ಚುವರಿಯಾಗಿ

ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟರು. ಈಗ 100ಕ್ವಿಂಟಾಲ್ ಸಕ್ಕರೆ ಬರುತ್ತಿದ್ದರೆ 5ಕ್ವಿಂಟಾಲ್ ಮಾತ್ರ ಹೆಚ್ಚಾಗಿ ಕೊಡುತ್ತೇವೆಂದು ಕೇಂದ್ರಸರ್ಕಾರ ಸೂಚಿಸಿದೆ. ನಮಗೆ ಸೀಮೆಎಣ್ಣೆ 98,000 ಕೆ.ಎಲ್ ಪ್ರತಿ ಮಾಹೆಯಾನ ಬೇಕಾಗಿರುವುದು. ಆದರೆ ನಮಗೆ ಕೊಡುತ್ತಿರುವಂಥಾದ್ದು 49,000 ಕೆ.ಎಲ್ ಇದರ ಹೆಚ್ಚಳವನ್ನು ಮಾನ್ಯ ಮುಖ್ಯ ಮಂತ್ರಿಯವರು ಕೇಂದ್ರದಲ್ಲಿ ಆಹಾರಮಂತ್ರಿಗಳಲ್ಲಿ ಪ್ರಸ್ತಾಪ ಮಾಡಿದರು. ಅದಕ್ಕೆ ಅವರು ಪ್ರತಿ ಮಾಹೆಯಾನ 10 ಸಾವಿರ ಕೆ ಎಲ್ ಕೊಡುತ್ತೇವೆಂದು ಹೇಳಿ,ಈಗ ವರ್ಷಕ್ಕೆ 15,000 ಕೆ ಎಲ್ ಕೊಡುತ್ತೇವೆಂದು ಹೇಳಿದ್ದಾರೆ. ಇನ್ನೂ ನಮಗೆ ಕೊಟ್ಟಿಲ್ಲ. ಅದನ್ನು ತರುವುದಕ್ಕೆ ನಾವು ಪ್ರಮಾಣಿಕ ಪ್ರಯತ್ನವನ್ನು ಮಾಡುತ್ತಿದ್ದೇವೆ. ನಾನೂ ಸಹ ಸಂಸತ್ ಸದಸ್ಯರಿಗೆ ಮತ್ತು ಕೇಂದ್ರ ಮಂತ್ರಿಗಳನ್ನು ಭೇಟಿ ಮಾಡಿ ಇದನ್ನು ಹೆಚ್ಚಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ರಾಜ್ಯದಲ್ಲಿ ಕಳೆದ ವರ್ಷ ತಯಾರಾದ ಕನ್ನಡ ಚಲನ ಚಿತ್ರಗಳು.

2355 - ಶ್ರೀ ಅಶೋಕ್ ಕಾಟವೆ (ಹುಬ್ಬಳ್ಳಿ ನಗರ) : ಮಾನ್ಯ ವಾರ್ತಾ ಮತ್ತು ಪ್ರಚಾರ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ ವರ್ಷ ಹಾಗೂ ವರ್ಷದ ಜುಲೈವರೆಗೆ ಎಷ್ಟು ಕನ್ನಡ ಚಿತ್ರಗಳು ನಿರ್ಮಾಣಗೊಂಡು ಬಿಡುಗಡೆಯಾದವು?

ಆ) ಸರ್ಕಾರ ಎಷ್ಟು ಚಿತ್ರಗಳಿಗೆ ಸಬ್ಸಿಡಿ ಹಣ ಹಾಗೂ ತೆರಿಗೆ ವಿನಾಯಿತಿಯನ್ನು ನೀಡಿದೆ?

ಇ) ಕನ್ನಡ ಚಲನಚಿತ್ರಗಳು ದೇಶ ಹಾಗೂ ವಿದೇಶ ಮಾರುಕಟ್ಟೆಯನ್ನು ಪ್ರವೇಶಿಸುವ ಬಗ್ಗೆ ಸರ್ಕಾರ ಯಾವ ಕ್ರಮ ಕೈ ಗೊಂಡಿದೆ?

ಶ್ರೀ ಎಂ.ಸಿ. ನಾಣಯ್ಯ (ವಾರ್ತಾ ಮತ್ತು ಪ್ರಚಾರ ಮತ್ತು ಕಾನೂನು ಸಚಿವರು)

ಅ) 1994ರ ಜನವರಿಯಿಂದ 1995ರ ಜುಲೈವರೆಗೆ 109 ಚಿತ್ರಗಳು ಬಿಡುಗಡೆ ಆಗಿದೆ.

ಆ) 1994ರ ಏಪ್ರಿಲ್‌ನಿಂದ 1995ರ ಜುಲೈವರೆಗೆ 103 ಚಿತ್ರಗಳಿಗೆ ಶೇ.50ರ ಮನರಂಜನಾ ತೆರಿಗೆ ವಿನಾಯಿತಿ ನೀಡಲಾಗಿದೆ. ಹಾಗೂ 125ಚಿತ್ರಗಳಿಗೆ ಸಂಬಂಧಿಸಿದಂತೆ 294.50 ಲಕ್ಷ ರೂ. ಸಹಾಯಧನ ನೀಡಲಾಗಿದೆ.

ಇ) ಭಾರತ ಸರ್ಕಾರ ಏರ್ಪಡಿಸುವ ಅಂತರ ರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲಿ ಮಳಿಗೆ ತೆರೆದು ಪ್ರಚಾರ ನೀಡಲಾಗುತ್ತಿದೆ.

ಶ್ರೀ ಅಶೋಕ್ ಕಾಟವೆ : ಮಾನ್ಯ ಅಧ್ಯಕ್ಷರೆ, ಎಷ್ಟು ಕನ್ನಡ ಚಿತ್ರಗಳ ನಿರ್ಮಾಣಕ್ಕೆ ನ್ಯಾಷನಲ್ ಫಿಲಂ ಡೆವಲಪ್‌ಮೆಂಟ್ ಕಾರ್ಪೋರೇಷನ್‌ನಿಂದ ಸಹಾಯ ಧನ ನೀಡಿದೆ? ಅವುಗಳ ಪೂರ್ತಿ ನಿರ್ಮಾಣವಾಗಿ ಬಿಡುಗಡೆಯಾಗಿದೆಯೇ? ನಿರ್ಮಾಪಕರಾದ ಚಂದೂಲಾಲ್ ಜೈನ್‌ರವರ ನಿರ್ದೇಶನದ ವಸಂತಮೊಕಾಶಿಯವರ ಗಂಗವ್ವ ಗಂಗಾಮಾತ ಇದುವರೆಗೆ ಏಕೆ ಬಿಡುಗಡೆಯಾಗಿಲ್ಲ?

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಚಂದೂಲಾಲ್ ಜೈನ್‌ರವರ ಒಂದು ಚಿತ್ರವೆಂದು ಹೇಳಿದ್ದಾರೆ. ಅದಕ್ಕೆ ಅವರು ಒಂದು ಪ್ರತ್ಯೇಕವಾಗಿ ಪ್ರಶ್ನೆಯನ್ನು ಕಳುಹಿಸಲಿ ನಾನು ಅದಕ್ಕೆ ಉತ್ತರ ಕೊಡುತ್ತೇನೆ. ಆದರೆ ಕನ್ನಡ ನಾಡಿನಲ್ಲಿ ಯಾವ ಯಾವ ಕನ್ನಡ ಚಲನಚಿತ್ರಗಳು ನಿರ್ಮಾಣವಾಗುತ್ತದೆಯೊ ಆ ಎಲ್ಲಾ ಚಿತ್ರಗಳಿಗೂ ಸಬ್ಸಿಡಿ ಕೊಡುವಂಥಾದ್ದು ನಮ್ಮಲ್ಲಿ ಅವಕಾಶ ಇವತ್ತು ಇದೆ.

ಆದರೆ ನೀವು ಸ್ಪೆಸಿಫಿಕ್ ಆಗಿ ಕೇಳಿರುವಂತಹ ಒಂದು ಚಿತ್ರ ಅದರ ಬಗ್ಗೆ ಬೇರೆ ಪ್ರಶ್ನೆಯನ್ನು ಕಳುಹಿಸಿ ಉತ್ತರವನ್ನು ಕೊಡುತ್ತೇನೆ. ಈಗ ನನ್ನ ಹತ್ತಿರ ಉತ್ತರವಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಕನ್ನಡ ಚಿತ್ರಕ್ಕೆ ಈಗ ಸಬ್ಸಿಡಿ ಕೊಡುವಂತಹ ಅವಕಾಶವಿದ್ದರೆ ಮಾನ್ಯ ಸದಸ್ಯರು ಹೇಳಿದಂತಹ ಒಂದು ಚಿತ್ರಕ್ಕೆ ಸಬ್ಸಿಡಿ ಕೊಟ್ಟಿಲ್ಲವೆಂದರೆ ಅದಕ್ಕೆ ಕೊಡುವಂತಹ ವ್ಯವಸ್ಥೆಯನ್ನು ಮಾಡಬಹುದಲ್ಲವೇ?

ಶ್ರೀ ಎಂ.ಸಿ. ನಾಣಯ್ಯ : ಪ್ರತಿಯೊಂದು ಕನ್ನಡ ಚಿತ್ರಗಳಿಗೆ ಸಬ್ಸಿಡಿಯನ್ನು ಕೊಡುವಂತಹ ಅವಕಾಶ ಇವತ್ತಿನ ನಿಯಮದಲ್ಲಿದೆ. ಆದುದರಿಂದ ಅದಕ್ಕೂ ಬರುತ್ತದೆ. ಅದು ಜೇಷ್ಠತೆಯ ಆಧಾರದ ಮೇಲೆ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ತಾವು ಸಬ್ಸಿಡಿ ಹಣವನ್ನು ಏನು ಕೊಡುತ್ತಿದ್ದೀರಿ, ಎಷ್ಟು ಚಿತ್ರಗಳಿಗೆ ಈ ಸಬ್ಸಿಡಿ ಹಣವನ್ನು ಕೊಟ್ಟಿದ್ದೀರಿ, ಮತ್ತೆ ಕೊಡದೇ ಇರುವಂತಹ ಚಿತ್ರಗಳ ಸಂಖ್ಯೆ ಎಷ್ಟು? ಮತ್ತೆ ಎಷ್ಟು ಹಣವನ್ನು ಬಿಡುಗಡೆ ಮಾಡಬೇಕಾಗಿದೆ?

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೆ, ಹಳೆಯ ಚಿತ್ರಗಳು ಸುಮಾರು 170 ಚಿತ್ರಗಳಿಗೆ ಸಬ್ಸಿಡಿ ಕೊಡುವಂಥಾದ್ದು ಬಾಕಿ ಇದೆ. ಈಗ 1994-95ನೇ ಸಾಲಿನಲ್ಲಿ ಕೊಡುವಂತಹ ಚಿತ್ರಗಳ ಸಂಖ್ಯೆ 80 ಬಾಕಿ ಇದೆ. ಸುಮಾರು 80-170 ಒಟ್ಟು 250 ಚಿತ್ರಗಳು ಇವೆ. ನಾವು ಕೊಡಬೇಕಾಗಿರುವಂತಹ ಸಬ್ಸಿಡಿ ಸುಮಾರು 716ಲಕ್ಷ ರೂ.ಗಳು ಬಾಕಿ ಇದೆ. ಅದನ್ನು ಹಂತಹಂತವಾಗಿ ತೀರಿಸಬೇಕೆಂದು ತೀರ್ಮಾನ ಮಾಡಿದ್ದೇವೆ. 1994-95ನೇ ಸಾಲಿನ ಒಳಗಡೆ ಬಂದಿರುವಂತಹ ಚಿತ್ರಗಳು ಎಷ್ಟಿವೆ, ಅದಕ್ಕೆಲ್ಲಾ ಕೂಡಲೇ ಹಣಕಾಸಿನ ಇಲಾಖೆಯಿಂದ ಈ ಹಣವನ್ನು ಬಿಡುಗಡೆ ಮಾಡಬೇಕೆಂದು ಅವರನ್ನು ಕೋರಿದ್ದೇವೆ. ಒಂದು ವರ್ಷದ ಒಳಗೆ ಕೊಡಲು ಪ್ರಯತ್ನ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಸರ್ಕಾರದ ನೀತಿ ಹಣಕಾಸಿನ ಇಲಾಖೆಯಿಂದ ಹಣ ಬರುತ್ತದೆ. ಅದಕ್ಕೋಸ್ಕರ ಕಾಯುತ್ತೇವೆಂದು ಹೇಳಿ 240 ಚಿತ್ರಗಳನ್ನು ಹೆಚ್ಚು ಕಡಿಮೆ ಎರಡೂವರೆ, ಮೂರು ವರ್ಷಗಳಿಂದ ಇವರು ಚಿತ್ರಗಳಿಗೆ ಸಬ್ಸಿಡಿ ಬಿಡುಗಡೆ ಮಾಡಿಲ್ಲ, ಸರ್ಕಾರದ ನೀತಿ ಕನ್ನಡ ಚಿತ್ರಗಳಿಗೆ ಸಹಾಯಧನವನ್ನು ಕೊಡಬೇಕೆಂದು ಏನು ಇದೆ, ಇದು ನೀತಿಗೆ ತದ್ವಿರುದ್ಧವಾಗಿದೆ. ನೀತಿ ಎಂದ ಮೇಲೆ ಯಾವ ಯಾವ ಚಿತ್ರಗಳು ಎಷ್ಟು ತಿಂಗಳೊಳಗೆ ಸಲ್ಲಿಸಿದ ಮೇಲೆ ತಕ್ಷಣ ಹಣವನ್ನು ಕೊಡಬೇಕೆಂದು ಇದೆ. ಅದನ್ನು ತಾವು ಒಪ್ಪಿಕೊಳ್ಳುತ್ತೀರಿ. ಈ ದೃಷ್ಟಿಯಿಂದ ನಾನು ಹೇಳುವುದೇನೆಂದರೆ ಇನ್ನು 240-250 ಚಿತ್ರಗಳು ಬಾಕಿ ಉಳಿದಿದೆ ಎಂದರೆ ಹೆಚ್ಚು ಕಡಿಮೆ ಏಳು-ಏಳೂವರೆ ಕೋಟಿ ರೂ.ಗಳು ಬಾಕಿ ಇದೆ. ಅವರಿಗೆ ಬಡ್ಡಿಯನ್ನು ಕೊಡುವುದಿಲ್ಲ. ಕನ್ನಡ ಚಿತ್ರಗಳನ್ನು ತೆಗೆಯಬೇಕಾದರೆ 10ರೂ.ಗಳಿಗೆ 15ರೂ.ಗಳ ಬಡ್ಡಿಯಂತೆ 100ಕ್ಕೆ 100ರಂತೆ ಬಡ್ಡಿಗೆ ತಂದು ಚಿತ್ರವನ್ನು ತೆಗೆಯುವುದು. ಸರ್ಕಾರದ ನೀತಿ ಏನು ಎಂಬ ಬಗ್ಗೆ ಒಂದು ತೀರ್ಮಾನಕ್ಕೆ ಬರಬೇಕು. ಹಣ ಕೊಡುತ್ತೇವೆಂದು ಹೇಳಬೇಕು,ಇಲ್ಲ ಕೊಡುವುದಿಲ್ಲವೆಂದು ಹೇಳಬೇಕು. ಸರ್ಕಾರದ ನೀತಿ ಏನು ಎಂಬುದನ್ನು ಹೇಳಬೇಕು. ಅದನ್ನು ಬಿಟ್ಟು ಒಂದು ಕಡೆ ಸರ್ಕಾರದ ನೀತಿಯನ್ನು ಹೇಳಿಬಿಟ್ಟು, ನಾವೆಲ್ಲಾ ಕನ್ನಡ ಚಿತ್ರಗಳನ್ನು ಉದ್ಧಾರ ಮಾಡುತ್ತೇವೆ. ಅದನ್ನು ಬೆಳಸಿ ಚಿತ್ರಗಳಿಗೆ ಸಬ್ಸಿಡಿಯನ್ನು ಕೊಡುತ್ತೇವೆಂದು ಹೇಳಿ ಇಂತಹ ಪರಿಸ್ಥಿತಿಯಾದರೆ ಗತಿಯೇನು?

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದಂತಹ ವಿಚಾರವನ್ನು ಒಪ್ಪುತ್ತೇನೆ. ಹಣ ಕೊಡುವಂಥಾದ್ದು ಬಾಕಿ ಇದೆ. ಈ

ವರ್ಷದ್ದು ಸೇರಿ 716 ಲಕ್ಷ ರೂಪಾಯಿಗಳು ಕೊಡಬೇಕು. ಈ ವರ್ಷ ನಾನು ಅಧಿಕಾರಕ್ಕೆ ಬಂದಮೇಲೆ ಒಂದು ಕೋಟಿ ಇಪ್ಪತ್ತೈದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇನೆ. ಜೇಷ್ಠತೆಯನ್ನು ನಾನು ಸಂಪೂರ್ಣವಾಗಿ ತಯಾರು ಮಾಡಿದ್ದೇನೆ. ಯಾರಿಗೂ ಔಟ್ ಆಫ್ ಟರ್ನ್ ಅಲಾಂಟ್‌ಮೆಂಟ್ ಕೊಡುವುದಿಲ್ಲ, ಅದನ್ನು ಕೊಡಲು ಇರುವಂಥದ್ದಕ್ಕೆ ನಾನು ಕ್ರಮ ಕೈಗೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಈಗ ಯಾವ ರೀತಿಯಲ್ಲಿ ಕೊಡುತ್ತಿದ್ದೀರಿ ಎಂದರೆ ಇವರು ಪಟ್ಟಿಯನ್ನು ಮಾಡಿ ನಾಲ್ಕುವರೆ ಲಕ್ಷ ಐದು ರೂ.ಗಳ ಸಬ್ಸಿಡಿ ಬರುವಂತಹ ಚಿತ್ರಕ್ಕೆ 50 ಸಾವಿರ, 25 ಸಾವಿರ ರೂಪಾಯಿಗಳಂತೆ ಒಂದು ರೀತಿಯ ಭಿಕ್ಷೆ ಕೊಟ್ಟ ಕೂಲಿ ಕೊಡುವ ಹಾಗೆ ಕೊಡುತ್ತಿದ್ದಾರೆ. ಇದು ಅಲ್ಲ, ಸರ್ಕಾರದ ನೀತಿ ಯೋಜನೇತರ ವೆಚ್ಚದಲ್ಲಿ ಇದಕ್ಕಾಗಿ ಇಷ್ಟು ಹಣವನ್ನು ವರ್ಷಕ್ಕೆ ಎಂದು ಇಟ್ಟುಕೊಳ್ಳಬೇಕು. ಹಣಕಾಸಿನ ಸಚಿವರು ಇದನ್ನು ತಡೆ ಹಿಡಿಯುವುದಕ್ಕೆ ಆಗುವುದಿಲ್ಲ, ಏಕೆಂದರೆ ಇದು ನಿಮ್ಮ ನೀತಿಯಾಗಿದೆ. ಸರ್ಕಾರಕ್ಕೆ ವರ್ಷಕ್ಕೆ ಎಷ್ಟು ಚಿತ್ರಗಳು ಬರುತ್ತದೆಯೋ ಅಷ್ಟು ಹಣವನ್ನು ಇಟ್ಟುಕೊಳ್ಳಬೇಕು.

ಅದು ನಿಮ್ಮ ಕರ್ತವ್ಯ. ನೀವು ಇಟ್ಟುಕೊಳ್ಳುವುದು ಎರಡು ವರ್ಷದಿಂದ ಸುಮಾರು 240 ಚಿತ್ರಗಳು ಬಿಡುಗಡೆ ಮಾಡದೇ ಇದ್ದರೆ ಕನ್ನಡ ಚಿತ್ರಗಳು ಬೆಳೆಸುವುದು ಹೇಗೆ? ಅದನ್ನು ತಾವು ಸ್ಪಷ್ಟ ಪಡಿಸಬೇಕು.

ಅಧ್ಯಕ್ಷರು : ಈ ಸಲಹೆಯನ್ನು ತಾವು ಗಮನದಲ್ಲಿಟ್ಟುಕೊಂಡು ಮುಂದಕ್ಕೆ ಆ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳಿ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೆ, ಇವತ್ತು ಇದು ಚರ್ಚೆಗೆ ಬರುತ್ತದೆ. ಆಗ ಅವರು ಹೇಳಿದ ಎಲ್ಲಾ ಸಲಹೆಯನ್ನು ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಕುಂಬ್ಳೆ ಸುಂದರರಾವ್ : ಮಾನ್ಯ ಅಧ್ಯಕ್ಷರೆ, ಕನ್ನಡ ಚಿತ್ರಗಳಿಗೆ ಮನರಂಜನಾ ತೆರಿಗೆ ವಿನಾಯತಿ ಇರುತ್ತದೆ. ಚಿತ್ರಗಳಿಗೆ ಪ್ರೋತ್ಸಾಹ ಕೊಡುವಂತಹ ದೃಷ್ಟಿಯಲ್ಲಿ ಇದು ಇರತ್ತದೆ. ಆದರೆ ನನಗೆ ದುಃಖವೇನೆಂದರೆ ಯಾವ ಕನ್ನಡ ಚಿತ್ರಗಳನ್ನು ನೋಡಿದರೂ ಅದರಲ್ಲಿ ಕನ್ನಡತನವೇ ಇರುವುದಿಲ್ಲ, ಒಂದು ಪ್ರದೇಶದ ಚಿತ್ರಗಳನ್ನು ನೋಡಿದಾಗ ಆ ಪ್ರದೇಶದ ಸಂಸ್ಕೃತಿ ಅಲ್ಲಿರುವಂತಹ ಆಚಾರ ವಿಚಾರಗಳು, ಇದರ ಬಗ್ಗೆ ನಮಗೆ ಒಂದು ಕಲ್ಪನೆ ಬರುತ್ತದೆ. ಉದಾಹರಣೆಗೆ ಮಲಯಾಳಿ ಚಿತ್ರಗಳನ್ನು ಕನ್ನಡ ಜನರು ನೋಡುವ ಅಭ್ಯಾಸವನ್ನು ಮಾಡಿಕೊಂಡಿದ್ದಾರೆ. ಏಕೆಂದರೆ ಅದರಲ್ಲಿ ಮಲಯಾಳಿತನವಿರುತ್ತದೆ. ತಮಿಳು ಚಿತ್ರಗಳನ್ನು ನೋಡಿದರೆ ತಮಿಳುತನ ಇರುತ್ತದೆ. ಈ ಕನ್ನಡ ಚಿತ್ರಗಳು ಹಿಂದಿ ಚಿತ್ರಗಳು ಅಗ್ಗದ ನಕಲಾಗಿರುತ್ತವೆ. ಅದರಲ್ಲಿ ಕೋವಿ, ಪಿಸ್ತೂಲ್‌ಗಳು ಮಾತನಾಡುತ್ತವೆ. ಬಾಯಲ್ಲಿ ಕನ್ನಡ ಮಾತನಾಡುತ್ತಾರೆ. ಕನ್ನಡದ ಯಾವ ಪರಿಸರವನ್ನು ನಾವು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ, ಕಾಣುವುದಕ್ಕೂ ಆಗುವುದಿಲ್ಲ, ನಾವು ಪರಿಸರ ಪ್ರಜ್ಞೆಯಿಂದ, ಭಾಷಾ ಪ್ರಜ್ಞೆಯಿಂದ ಸಂಸ್ಕೃತಿಯ ಪ್ರಜ್ಞೆಯಿಂದ ಈ ಸಬ್ಸಿಡಿಯನ್ನು ಕೊಡುವಾಗ ಮನರಂಜನಾ ತೆರಿಗೆ ವಿನಾಯಿತಿಯನ್ನು ಕೊಡುವಾಗ ಆ ದೃಷ್ಟಿಯ ಚಿತ್ರಗಳಿಗೆ ಆದ್ಯತೆಯನ್ನು ಕೊಡುವುದರ ಜೊತೆಯಲ್ಲಿ ಅಂತಹ ಚಿತ್ರಗಳ ಮೂಲಕ ಕನ್ನಡತನವನ್ನು ಎತ್ತಿ ಹಿಡಿಯುವಂತಹ ಅಗತ್ಯವಿದೆ ಎಂದು ಸರ್ಕಾರಕ್ಕೆ ಅನಿಸಿದೆಯೇ ಆ ರೀತಿ ಅನಿಸಿದರೆ ಆ ದೃಷ್ಟಿಯಲ್ಲಿ ಏನಾದರೂ ಕೆಲಸ ನಡೆದಿದೆಯೇ?

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೆ, ನನ್ನ ಮಿತ್ರರು ಹೇಳಿದಂತಹ ವಾದವನ್ನು ನಾನು ಒಪ್ಪುತ್ತೇನೆ. ಸರ್ಕಾರದ ಚಿಂತನೆಯೂ ಆ ಒಂದು ದಾರಿಯಲ್ಲಿ ಹರಿದಿದೆ. ಅದರ ಬಗ್ಗೆ ಕ್ರಮ ಕೈಗೊಳ್ಳುವಂಥಾದ್ದು ಮತ್ತು ಬಜೆಟ್‌ನಲ್ಲಿ ಕನ್ನಡ

ಚಿತ್ರಗಳ ಗುಣಮಟ್ಟವನ್ನು ಆಧರಿಸಿ ಸಬ್ಸಿಡಿಯನ್ನು ಕೊಡಬೇಕೆಂಬ ಬಗ್ಗೆ ನಾವು ಚಿಂತನೆ ಮಾಡುತ್ತಿದ್ದೇವೆ. ಸಮಗ್ರವಾಗಿ ಎಲ್ಲರ ಜೊತೆಗೆ ಚರ್ಚೆ ಮಾಡಿ ಸರ್ಕಾರದ ನೀತಿ ನಿರೂಪಣೆ ಮಾಡಬೇಕೆಂದು ಹಮ್ಮಿಕೊಂಡಿದ್ದೇವೆ. ಈ ಸಂದರ್ಭ ಬಂದಾಗ ಅದರ ಬಗ್ಗೆ ಚಿಂತನೆ ಮಾಡುತ್ತೇವೆ.

News Papers In The State.

248 - Sri U.B. Banakar (Hirekerur) : Will the Minister for Information and Publicity be Pleased to state?

1. *Total No. of Dailies Weeklies and Monthlies in the State (Languge wise breakupto be furnished)*
2. *The Amount of Advertisement released to the above papers during 1992-93, 1993-94, 1994-995 (Language wise breakup to be furnished).*

Sri. M.C. Nanaiah (Minister for Information and Publicity.) :

1. Details of the News papers being published in the State as per the Records of the Department. 1740

I) Dailies Total : 232

1.	Kannada	-	175
2.	English	-	25
3.	Hindi	-	12
4.	Urdu	-	11
5.	Tamil	-	2
6.	Malayalam	-	3
7.	Marathi	-	4

II Weeklies Total 141

1.	Kannada	-	112
2.	English	-	18
3.	Hindi	-	5
4.	Urdu	-	4
5.	Konkani	-	1
6.	Marathi	-	1

III Monthlies Total : 924

1.	Kannada		890
2.	Hindi	-	4
3.	English	-	27

VIII F-26

4.	Urdu	-	2
5.	Konkani	-	1

2. The Details of Amount of Advertusement released to the on follows

News Papers			1992-93	1993-94	1994-95
I.	**Dailies :**				
1.	Kan.	Rs.	1.98 Crores	1.66 crores	1.23 cr.
2.	Eng.	Rs.	1.34 "	1.00 "	0.53 "
3.	Hindi	Rs.	54,642/-	50,622/-	35, 800/-
4.	Urdu	Rs.	2.54 lakhas	2.71 lakhs	4.67 lakhs
5.	Tamil	Rs.	8.56 lakhs	1.70 lakhs	1.04 lakhs
6.	Malayalam	Rs.	8000/-	15560/-	17472/-
7.	Marathi	Rs.	3.65 lakhs	1.63 lakhs	1.47 lakhs
II	**Weeklies :**				
1.	Kannada	Rs.	1.25 lakhs,	2.60 lakhs,	1.53 lakhs
2.	English	Rs.	5500/-	8500/-	2000/-
3.	Konkani	Rs.	2800/-	Bill not submitted	Bill not submitted
4.	Marathi	Rs.	500/-	3500/- Rs.	1500/-
III	**Monthlies :**				
1.	Kannada	Rs.	44245/-	47015/-	47715/-
2.	English	Rs.	5300/-	3300/-	3200/-
3.	Urdu	Rs.	18096/-	29038/-	28953/-
4.	Konkani	Rs.	1000/-	1000/-	500/-

ಶ್ರೀ ಯು.ಬಿ. ಬಣಕಾರ್ : ಮಾನ್ಯ ಅಧ್ಯಕ್ಷರೆ, ಪ್ರಜಾಪ್ರಭುತ್ವದ ಮಹತ್ವ ಅಸ್ತ್ರ ಮತ್ತು ಅಂಗವಾದ ಈ ಪತ್ರಿಕೋದ್ಯಮಕ್ಕೆ 1992-93ನೇ ಇಸವಿಯಲ್ಲಿ ಮೂರು ಕೋಟಿ ನಲವತ್ತೊಂಭತ್ತು ಲಕ್ಷ ಖರ್ಚು ಮಾಡಲಾಗಿದೆ. 1993-94ರಲ್ಲಿ ಎರಡು ಕೋಟಿ ಎಪ್ಪತ್ತಾರು ಲಕ್ಷ ಮತ್ತು 1994-95ರಲ್ಲಿ ಒಂದು ಕೋಟಿ ಎಂಭತ್ತಾರು ಲಕ್ಷ ರೂಪಾಯಿಗಳನ್ನು ಖರ್ಚುಮಾಡಲಾಗಿದೆ.

ಅಧ್ಯಕ್ಷರೆ, ಸರ್ಕಾರದ ಎಲ್ಲಾ ಯೋಜನೆಗಳಲ್ಲೂ ವೆಚ್ಚ ಏರುತ್ತಿದ್ದರೆ ಇದರ ಒಂದೇ ನಿದರ್ಶನದಲ್ಲಿ ನಾನು ಕಡಿತ ಆಗಿದ್ದನ್ನು ಕಾಣುತ್ತಿದ್ದೇನೆ. ಈ ವರ್ಷ 4 ಕೋಟಿ 50 ಲಕ್ಷ ರೂಪಾಯಿಗಳನ್ನು ಏನು ನಿಗಧಿ ಮಾಡಿದೆ ಅದನ್ನು ಪೂರ್ಣ ಪ್ರಮಾಣದಲ್ಲಿ ಖರ್ಚುಮಾಡುವಂತೆ ಕ್ರಮ ಈ ಸಲವಾದರೂ ತೆಗೆದುಕೊಳ್ಳುತ್ತಾರೆಯೇ ಎಂದು ನಾನು ಅವರನ್ನು ಕೇಳಬಯಸುತ್ತಿದ್ದೇನೆ. ಹಾಗೂ ಜಾಹೀರಾತಿಗಾಗಿ ಏನು

ನಿಗಧಿ ಮಾಡಿದ್ದಾರೆ ಆ ಪ್ರಮಾಣವನ್ನು ಯಾವ ರೀತಿಯಾಗಿ ತಾವು ಪಿ.ಡಬ್ಲ್ಯೂ.ಡಿ.ಯಲ್ಲಿ ಪ್ರತಿವರ್ಷ ಎಸ್.ಆರ್. ಎಂದು ಏರಿಸುತ್ತಾ ಹೋಗುತ್ತೀರೋ ಅದೇ ರೀತಿ ಈ ಜಾಹೀರಾತಿಗೆ ಕೊಡುವಂಥ ಹಣವನ್ನು ಸಹ ತಾವು ಏರಿಸಲಿಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎಂ.ಸಿ. ನಾಣಯ್ಯ : ಸಭಾಧ್ಯಕ್ಷರೆ, ಈ ಜಾಹೀರಾತು ಕೊಡಲಿಕ್ಕೆ ಇರತಕ್ಕಂಥದ್ದರ ಬಗ್ಗೆ ಸರ್ಕಾರ ಒಂದು ನೀತಿಯನ್ನು ಹಾಕಿಕೊಂಡಿದೆ. ಮಾಧ್ಯಮ ಪಟ್ಟಿಯಲ್ಲಿ ಇರತಕ್ಕಂಥದ್ದು, ಮಾಧ್ಯಮ ಪಟ್ಟಿಯಲ್ಲಿ ಇಲ್ಲದೇ ಇರತಕ್ಕಂಥದ್ದು, ಮಾಧ್ಯಮ ಪಟ್ಟಿಯಲ್ಲಿ ಇರುವಂಥದ್ದಕ್ಕೆ ಅವರಿಗೆ ಒಂದು ದರವನ್ನು ನಿಗಧಿ ಮಾಡಿದ್ದೇವೆ. ಮಾಧ್ಯಮ ಪಟ್ಟಿಯಲ್ಲಿ ಇಲ್ಲದೆ ಇರುವಂಥದ್ದಕ್ಕೆ ಸುಮಾರು 700 ಪತ್ರಿಕೆಗಳು ಯಾವುದು ಇದೆ ಅದಕ್ಕೆ ಸಂದರ್ಭಾನುಸಾರ ವರ್ಷಕ್ಕೆ 4-5 ಜಾಹೀರಾತನ್ನು ಬಿಡುಗಡೆ ಮಾಡಲಿಕ್ಕೆ 300 ರೂಪಾಯಿಗಳನ್ನು ಕೊಡುತ್ತಿದ್ದಾರೆ. ಅದನ್ನು ಏರಿಸಬೇಕೆಂದು ಕೇಳಿದ್ದೇವೆ. ಈ ವರ್ಷ 95-96ನೇ ಸಾಲಿಗೆ ಈಗಿರತಕ್ಕ ಜಾಹೀರಾತು ದರವನ್ನು ಶೇಕಡ 25ರಷ್ಟು ನಾವು ಹೆಚ್ಚಿಸಬೇಕೆಂದು ಹೇಳುತ್ತಾ ಇರತಕ್ಕಂಥ ಕಾರ್ಯಕ್ರಮವನ್ನು ಕೈಗೊಂಡಿದ್ದೇವೆ. ಹಣದ ಕೊರತೆ ಸ್ವಲ್ಪ ಇದೆ ಎಂದು ಹೇಳುತ್ತಾ ಇರತಕ್ಕಂಥದ್ದನ್ನು ನಾನು ಒಪ್ಪುತ್ತೇನೆ. ಈಗ ಸುಮಾರು ನಾಲ್ಕೂವರೆ ಕೋಟಿ ರೂಪಾಯಿ ನಾವು ಪ್ರತಿವರ್ಷ ಈ ಜಾಹೀರಾತಿಗೋಸ್ಕರ ಬಿಡುಗಡೆ ಮಾಡುತ್ತಿದ್ದೇವೆ. ಮಾನ್ಯ ಮಿತ್ರರಾಗಿರತಕ್ಕ ವಾಟಾಳ್‌ರವರು ಇದರ ಬಗ್ಗೆ ಚಿಂತನೆಯನ್ನು ಹರಿಸಿದ್ದಾರೆ, ನಿಮ್ಮೆಲ್ಲರ ಜೊತೆಯಲ್ಲಿ ಸೇರಿ ಇದನ್ನು ಹೆಚ್ಚು ಅಭಿವೃದ್ಧಿ ಮಾಡಲಿಕ್ಕೋಸ್ಕರ ಜಾಹೀರಾತನ್ನು ಕೊಡಲಿಕ್ಕೋಸ್ಕರ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಯು.ಬಿ. ಬಣಕಾರ್ : ಸನ್ಮಾನ್ಯ ಅಧ್ಯಕ್ಷರೆ, ಕರ್ನಾಟಕದಲ್ಲಿ ಈಗಾಗಲೇ ಉರ್ದು, ತಮಿಳು, ಮಲೆಯಾಳಿ, ಮರಾಠಿ, ಹೀಗೆ ಅನೇಕ ಪತ್ರಿಕೆಗಳಿಗೆ ಜಾಹೀರಾತು ಕೊಡುತ್ತಿದ್ದಾರೆ, ಇದೇ ರೀತಿ ಬೇರೆ ರಾಜ್ಯದಲ್ಲಿ ಕನ್ನಡ ಪತ್ರಿಕೆಗಳಿಗೇನಾದರೂ ಸರ್ಕಾರ ಜಾಹೀರಾತನ್ನು ಕೊಡುವ ಪದ್ಧತಿ ಇದೆಯೆ?

ಶ್ರೀ ಎಂ.ಸಿ. ನಾಣಯ್ಯ : ಮಹಾರಾಷ್ಟ್ರದಲ್ಲಿ, ಗೋವಾದಲ್ಲಿ, ದೆಹಲಿಯಲ್ಲಿ ನಮ್ಮ ಕನ್ನಡ ಪತ್ರಿಕೆಗಳು ಇದೆ, ಆ ಕನ್ನಡ ಪತ್ರಿಕೆಗಳಿಗೆ ವಿಶೇಷವಾದಂಥ ಜಾಹೀರಾತನ್ನು ನಾವು ಕೊಡುತ್ತಾ ಇದ್ದೇವೆ.

ಶ್ರೀ ಯು.ಬಿ. ಬಣಕಾರ್ : ಈ ರಾಜ್ಯದೊಳಗೆ ಯಾವ ರೀತಿಯಾಗಿ ಬೇರೆ ಪತ್ರಿಕೆಗಳಿಗೆ ನಮ್ಮ ಸರ್ಕಾರ ಪ್ರೋತ್ಸಾಹ ಕೊಡುತ್ತಿದೆ ಹಾಗೂ ಬೇರೆ ರಾಜ್ಯಗಳವರು ಕನ್ನಡ ಪತ್ರಿಕೆಗಳಿಗೆ ಯಾವ ರೀತಿ ಪ್ರೋತ್ಸಾಹವನ್ನು ಕೊಡುತ್ತಿದ್ದಾರೆ ಎಂಬುದನ್ನು ತಮಗೆ ಕೇಳುತ್ತೇನೆ.

ಅಧ್ಯಕ್ಷರು : ಅವರು ಹೇಳುವುದು ಬೇರೆ ಭಾಷೆಯ, ಅನ್ಯ ಭಾಷೆಯ ಪತ್ರಿಕೆಗಳಿಗೆ ನಮ್ಮ ರಾಜ್ಯದಲ್ಲಿ ನೀವು ಸಹಾಯ ಮಾಡುತ್ತಿದ್ದೀರಿ ಅದೇ ರೀತಿ ಅನ್ಯ ರಾಜ್ಯಗಳಲ್ಲಿ ಕನ್ನಡ ಭಾಷೆಯ ಪತ್ರಿಕೆಗಳು ಇದ್ದಾವೆಯೋ? ಇದ್ದರೆ ಅವರಿಗೇನಾದರೂ ಸಹಾಯ ಮಾಡುತ್ತಿದ್ದೀರಾ ಎಂದು ಅವರು ಕೇಳುತ್ತಿರುವುದು.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೆ, ಈಗ ಗೋವಾದಲ್ಲಿ, ಮಹಾರಾಷ್ಟ್ರದಲ್ಲಿ, ಮತ್ತು ದೆಹಲಿಯಲ್ಲಿರತಕ್ಕಂಥ ನಮ್ಮ ಕನ್ನಡ ಪತ್ರಿಕೆಗಳೇನಿವೆಯಲ್ಲಾ ಅವುಗಳಿಗೆ ಆ ರಾಜ್ಯದವರೂ ಕೂಡ ಜಾಹೀರಾತನ್ನು ಕೊಡುತ್ತಿದ್ದಾರೆ.

ಶ್ರೀ ಚಂದ್ರಕಾಂತ್ ಜಿ ಬೆಲ್ಲದ್ : ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಮಂತ್ರಿಗಳು ಈಗ ಕನ್ನಡ ರಾಜ್ಯಭಾಷೆಗಾಗಿಯೇ ಕಡಿಮೆ ಮಾಡುತ್ತಾ ಹೋಗಿ ಉಳಿದ ಭಾಷೆಗಳಿಗೆ ಹೆಚ್ಚಿನ ಹಣವನ್ನು ಕೊಡುತ್ತಿದ್ದಾರೆ. ಅದರಲ್ಲಿ ಮುಖ್ಯವಾಗಿ ಉರ್ದು ಭಾಷೆಗೆ ಏನು

ಕೊಟ್ಟಿದ್ದಾರೆ ಕಳೆದ ವರ್ಷದಲ್ಲಿ ಆ ಪತ್ರಿಕೆಗೆ ಎರಡುಪಟ್ಟು ಹೆಚ್ಚಿಸಿದ್ದಾರೆ. ಈ ಪ್ರಕಾರ ತಾರತಮ್ಯ ಏಕೆ? ಕನ್ನಡಕ್ಕೆ ನೀವು ಹೆಚ್ಚಿನ ಅಗ್ರಮಾನ್ಯವನ್ನು ಕೊಡಬೇಕಾದ ಸರ್ಕಾರ ಈ ನಮ್ಮ ಪತ್ರಿಕೆಗೆ ಕೊಡದೇ ಬೇರೆ ಭಾಷೆಗಳ ಪತ್ರಿಕೆಗಳಿಗೆ ನೀವು ಕೊಡುತ್ತಿರುವುದು ಸರಿಯೇ? ಅದಕ್ಕೆ ತಾವು ಉತ್ತರವನ್ನು ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ : ಸಭಾಧ್ಯಕ್ಷರೆ, ಇದರಲ್ಲಿ ಯಾವುದೇ ತಾರತಮ್ಯ ಇಲ್ಲ, ಕನ್ನಡ ಭಾಷೆಯಲ್ಲಿ ಬರುತ್ತಾ ಇರತಕ್ಕಂಥ ಪತ್ರಿಕೆಗಳಿಗೂ ಜಾಹೀರಾತನ್ನು ಕೊಡುತ್ತಿದ್ದೆವು, ಮತ್ತು ಕೆಲವು ಸಂದರ್ಭದಲ್ಲಿ ಗಡಿನಾಡಿನಲ್ಲಿ ಇರತಕ್ಕಂಥ ಮರಾಠಿ ಆ ಭಾಗದಲ್ಲೂ ಜಾಹೀರಾತನ್ನು ಕೊಟ್ಟೆವು, ಉರ್ದುವಿಗೂ ನಾವು ಜಾಹೀರಾತನ್ನು ಕೊಟ್ಟೆವು, ತಾರತಮ್ಯ ಎಂದು ಹೇಳುತ್ತಾ ಇರತಕ್ಕಂಥದನ್ನು ಸರ್ಕಾರ ಮಾಡುವುದಿಲ್ಲ. ಎಲ್ಲಾ ಪತ್ರಿಕೆಗಳಿಗೂ ಒಂದು ನೀತಿಯನ್ನು ಅನುಸರಿಸಿ ಜಾಹೀರಾತನ್ನು ಕೊಡುತ್ತಿದ್ದೇವೆ. ಕೆಲವು ಸಂದರ್ಭದಲ್ಲಿ ಜಾಸ್ತಿ ಕೊಡುತ್ತಿದ್ದವು ಈ ಹಿಂದೆ ಕೊಟ್ಟಿರಲಿಲ್ಲ ಕೊಟ್ಟಿದ್ದೇವೆ. ಕನ್ನಡಕ್ಕೂ ಕೂಡ ಹೆಚ್ಚಿನ ಜಾಹಿರಾತನ್ನು ಕೊಡಬೇಕು ಎಂದು ಹೇಳುತ್ತಾ ಇರತಕ್ಕಂಥದ್ದಕ್ಕೂ ತೀರ್ಮಾನವನ್ನು ಕೈಗೊಳ್ಳುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಈ ಜಾಹೀರಾತು ಮತ್ತು ಇದೆಲ್ಲಾ ಸಣ್ಣ ಪತ್ರಿಕೆಗಳ ಬಗ್ಗೆ ಒಂದು ಉತ್ತಮವಾದಂಥ ಭವಿಷ್ಯದ ಬಗ್ಗೆ ಎಂ.ಬಿ. ಸಿಂಗ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚನೆಯಾಗಿತ್ತು. ಆ ಸಮಿತಿ ವರದಿಯನ್ನು ಕೊಟ್ಟು ಎಷ್ಟು ವರ್ಷಗಳಾಯಿತು? ಆ ವರದಿಯನ್ನು ತಾವೇನಾದರೂ ಅನುಷ್ಠಾನಕ್ಕೆ ತಂದಿದ್ದೀರಾ? ಎಷ್ಟು ತಂದಿದ್ದೀರಿ ? ಯಾವ ಮಟ್ಟದಲ್ಲಿ ತಂದಿದ್ದೀರಿ ಎಂಬತಕ್ಕಂಥದ್ದು ಒಂದು. ಮತ್ತೊಂದು ಈ ಮರಾಠಿ, ತಮಿಳು, ತೆಲುಗು, ಮಲೆಯಾಳಂ, ಗಡಿನಾಡ ಹೊರಗಡೆ ಪತ್ರಿಕೆಯಲ್ಲಿ ನೀವೇನು ಜಾಹೀರಾತು ಕೊಡುತ್ತಿದ್ದೀರಿ, ನಾನೇನು ಹೇಳುತ್ತೇನೆ ಎಂದರೆ, ಬೆಳಗಾವಿಯ ಕನ್ನಡ ಪತ್ರಿಕೆಗಳಿಗೆ ಮರಾಠಿ ಪತ್ರಿಕೆಗಳಿಗೆ, ಕೊಡತಕ್ಕಂಥ ಜಾಹೀರಾತಿನಲ್ಲಿ ಕಾಲುಭಾಗ ಜಾಹೀರಾತನ್ನು ಕೊಡುತ್ತಾ ಇಲ್ಲ ಎಂಬತಕ್ಕಂಥ ಕೂಗು ಇವತ್ತಿನ ದಿನ ಇದೆ. ಆದ್ದರಿಂದ ಬೆಳಗಾವಿಯ ಗಡಿಭಾಗದ ಕನ್ನಡ ಪತ್ರಿಕೆಗಳಿಗೆ ನೀವು ಹೆಚ್ಚಿನ ಜಾಹೀರಾತನ್ನು ಕೊಡುವುದಕ್ಕೆ ವಿಶೇಷವಾದಂಥ ಗಮನವನ್ನು ತಾವು ಕೊಡುತ್ತೀರೋ?

ಶ್ರೀ ಎಂ.ಸಿ. ನಾಣಯ್ಯ : ಈಗಾಗಲೇ ಅದನ್ನು ಒಪ್ಪಿದ್ದೇನೆ. ಗಡಿನಾಡಿನಲ್ಲಿರತಕ್ಕಂಥ ನಮ್ಮ ಕನ್ನಡ ಪತ್ರಿಕೆಗಳು ಯಾವುದು ಇದೆ ಅಲ್ಲಿಯೂ ಕೂಡ ಹೆಚ್ಚಿಗೆ ನಾವು ಜಾಹೀರಾತನ್ನು ಕೊಡಬೇಕು ಎಂದು ಹೇಳುತ್ತಾ ಇರತಕ್ಕಂಥದ್ದು ನಾನು ನೀತಿಯ ಪ್ರಶ್ನೆಯಾಗಿ ತೆಗೆದುಕೊಂಡು ಅದಕ್ಕೂ ಕೂಡ ಕಾರ್ಯಕ್ರಮವನ್ನು ನಾನು ಹಾಕಿಕೊಳ್ಳುತ್ತಿದ್ದೇನೆ. ಇನ್ನೂ ಹೆಚ್ಚು ಹೆಚ್ಚು ಆ ಕೆಲಸವನ್ನು ಮಾಡಲಿಕ್ಕೆ ಇರತಕ್ಕಂಥ ಕ್ರಮವನ್ನು ಕೈಗೊಳ್ಳುತ್ತೇನೆ. ಮತ್ತು ಎಂ.ಬಿ. ಸಿಂಗ್‌ರ ವರದಿ ಬಗ್ಗೆ ಕೇಳಿದಿರಿ, ಮಾನ್ಯ ಸಭಾಧ್ಯಕ್ಷರೆ, ಇದು ತಾವು ಬೇರೆ ಒಂದು ಪ್ರಶ್ನೆಯನ್ನು ಕೇಳಿದ್ದರೆ ಅದಕ್ಕೆ ಪೂರ್ತಿಯಾಗಿರತಕ್ಕಂಥ ಉತ್ತವನ್ನು ಕೊಡುತ್ತಿದ್ದೆ, ಆದರೂ ತಮ್ಮ ಇಲಾಖೆಯ ಬೇಡಿಕೆ ಮೇಲೆ ಚರ್ಚೆ ಮಾಡುವಾಗ ಉತ್ತರವನ್ನು ಹೇಳೋಣ.

ಶ್ರೀ ಎ. ರಾಮದಾಸ್ : ಎಂ.ಬಿ. ಸಿಂಗ್ ರಿಪೋರ್ಟ್ ಬಗ್ಗೆ ಅವರು ಹೇಳಿದರು. ಅದಕ್ಕೆ ಅನುಷ್ಠಾನಕ್ಕೆ ಕೊಟ್ಟಿದೆಯೇ ಎಂದು ಸರ್ಕಾರ ನನಗೇ ಉತ್ತರ ಕೊಟ್ಟಿದೆ. 1992ನೇ ಇಸವಿಯಲ್ಲಿ ಎಂ.ಬಿ. ಸಿಂಗ್ ರಿಪೋರ್ಟ್ ಬಂದರೂ ಕೂಡ ಸಣ್ಣ ಪತ್ರಿಕೆಗಳಿಗೆ ಜಾಹೀರಾತನ್ನು ಕೊಡುವ ವಿಚಾರವನ್ನು ಅವತ್ತಿನಿಂದಲೂ ನೆನೆಗುದಿಗೆ ಬಿದ್ದಿದೆ. ಇವತ್ತು ಸಣ್ಣ ಪತ್ರಿಕೆಗಳಿಗೆ ಜಾಹೀರಾತು ಸಿಗದೆ ಇಡೀ ರಾಜ್ಯದಲ್ಲಿ ಸಫರ್ ಆಗುತ್ತಿರುವಂಥ ವಿಚಾರ, ಆದರೆ ಅನುಷ್ಠಾನ ಮಾಡಿಲ್ಲ ಎಂದು ಸರ್ಕಾರ ಈಗಾಗಲೇ

ನನಗೆ ಲಿಖಿತವಾದಂಥ ಉತ್ತರವನ್ನು ಕೊಟ್ಟಿದೆ. ಅನುಷ್ಠಾನಕ್ಕೆ ತರದೇ ಹೋದರೆ ಸಣ್ಣ ಪತ್ರಿಕೆಗಳ ಜಾಹೀರಾತಿನ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಸರ್ಕಾರ ಏನು ಕ್ರಮವನ್ನು ಕೈಗೊಂಡಿದೆ ಎಂಬುದನ್ನು ಕೇಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೆ, ಎಂ.ಬಿ. ಸಿಂಗ್ ವರದಿಯಲ್ಲಿ ಇರತಕ್ಕ ಈ ಜಾಹೀರಾತು ದರ ಯಾವುದು ಇದೆ, ಅದನ್ನು ವರ್ಷದಿಂದ ವರ್ಷಕ್ಕೆ ಏರಿಸಿಕೊಂಡು ಹೋಗುತ್ತಾ ಇರತಕ್ಕಂಥ ನೀತಿಯನ್ನು ಅನುಸರಿಸಿಕೊಂಡು ಬಂದಿದೆ. ಆದರೆ ಅಲ್ಲಿ ಮಾಡಿರತಕ್ಕ ಒಂದು ಸಲಹೆ ಯಾವುದು ಇತ್ತು ಅಂದರೆ ಇವತ್ತು ಜಾಹೀರಾತಿಗೆ ಒಂದು ಪತ್ರಿಕೆ ಒಳಪಡಬೇಕಾದರೆ ಅದು ಶುರುವಾಗಿ ಮೂರು ವರ್ಷಗಳವರೆಗೆ ಇರಬೇಕು ಮತ್ತು ಅದರ ಪ್ರಸಾರ ಸ್ಥಳದಿಂದ ಸ್ಥಳಕ್ಕೆ ಅದು ಐದು ಸಾವಿರ, ಮೂರು ಸಾವಿರ, ಎರಡು ಸಾವಿರ ಹೀಗೇ ಇರಬೇಕೆಂದು ಕೇಳಿ ಎಂ.ಬಿ. ಸಿಂಗ್‌ರವರು ಇದನ್ನು ಒಂದು ವರ್ಷಕ್ಕೆ ಇಳಿಸಿ ಪ್ರಸಾರದ ಸಂಖ್ಯೆಯನ್ನು ಒಂದು ಸಾವಿರಕ್ಕೆ ಇಳಿಸಬೇಕೆಂದು ಅವರು ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ಸ್ವಲ್ಪಮಟ್ಟಿಗೆ ಇದರ ಬಗ್ಗೆ ನಾವು ವಿಚಾರ ಮಾಡುತ್ತಿದ್ದೇವೆ. ಆ ವಿಚಾರ ಮಾಡಿ ಆದ ಮೇಲೆ ಜಾರಿಗೆ ತರುತ್ತೇವೆ.

ಹೊಸನಗರ ಕ್ಷೇತ್ರದಲ್ಲಿ ಪಶುವೈದ್ಯಕೀಯ ಕೇಂದ್ರಗಳು.

2191 - ಶ್ರೀ ಆಯನೂರು ಮಂಜುನಾಥ (ಹೊಸನಗರ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸನಗರದ ವಿಧಾನ ಸಭಾ ಕ್ಷೇತ್ರದಲ್ಲಿರುವ (ಶಿವಮೊಗ್ಗ ತಾಲ್ಲೂಕು ಮತ್ತು ಹೊಸನಗರ ತಾಲ್ಲೂಕು) ಪಶುವೈದ್ಯಶಾಲೆಗಳ ಸಂಖ್ಯೆ ಎಷ್ಟು. ಎಲ್ಲೆಲ್ಲಿ ಇವೆ.

ಆ) ವೈದ್ಯರು ಭೇಟಿ ನೀಡಲಾಗುತ್ತಿರುವ ಕೇಂದ್ರಗಳು ಎಷ್ಟು. ಅವು ಯಾವುವು.

ಇ) ಹೊಸನಗರ ವಿಧಾನ ಸಭಾ ಕ್ಷೇತ್ರದಲ್ಲಿ 1995-96ರಲ್ಲಿ ಹೊಸದಾಗಿ ಪಶುವೈದ್ಯಕೀಯ ಕೇಂದ್ರಗಳನ್ನು ತೆರೆಯಲು ಸರ್ಕಾರ ಉದ್ದೇಶಿಸಿದೇಯೇ; ಹಾಗಿದ್ದಲ್ಲಿ ತೆರೆಯಲಾಗುವುದೇ;

ಈ) ಹಿಂದಿನ ಜಿಲ್ಲಾ ಪಂಚಾಯತ್ ಕ್ಷೇತ್ರದಲ್ಲಿ ಪ್ರಾರಂಭಿಸಲಾಗಿದ್ದ ಕೇಂದ್ರಗಳು ಯಾವುವು; ಪುನಃ ಅವುಗಳನ್ನು ಪೂರ್ಣ ಪ್ರಮಾಣದ ಆಸ್ಪತ್ರೆಗಳಾಗಿ ತೆರೆಯಲಾಗುವುದೇ;

ಉ) ಹಾಗಿದ್ದಲ್ಲಿ ಯಾವಾಗಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಬಿ. ಎನ್. ಬಚ್ಚೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) 37. ವಿವರಗಳನ್ನು ಅನುಬಂದ-1 ರಲ್ಲಿ ಸೂಚಿಸಲಾಗಿದೆ.

ಆ) ಅನುಬಂಧ-1ರಲ್ಲಿ ಸೂಚಿಸಿರುವ ಪಶು ಆಸ್ಪತ್ರೆ ಪಶು ಚಿಕಿತ್ಸಾಲಯಗಳಲ್ಲಿನ ವೈದ್ಯರುಗಳಲ್ಲದೆ ಸಂಚಾರಿ ಪಶು ಚಿಕಿತ್ಸಾ ಘಟಕದ ವೈದ್ಯರು 33 ಕೇಂದ್ರಗಳಿಗೆ ಭೇಟಿ ನೀಡಿರುತ್ತಾರೆ. ವಿವರಗಳನ್ನು ಅನುಬಂಧ-2ರಲ್ಲಿ ಸೂಚಿಸಲಾಗಿದೆ.

ಇ) ಪ್ರಸಕ್ತ ಸಾಲಿನಲ್ಲಿ ರಾಜ್ಯದಲ್ಲಿ ಯಾವುದೇ ಪಶುವೈದ್ಯಕೀಯ ಸಂಸ್ಥೆಗಳನ್ನು ಪ್ರಾರಂಭಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದಿಲ್ಲ.

ಈ) ಕೋಟೆ ಗಂಗೂರು ಹಾಗೂ ಬೆಳ್ಳೂರು, ತೆರೆಯಲಾಗುವುದು. ಈಗಾಗಲೇ ಸರ್ಕಾರದ ಮಂಜೂರಾತಿ ಆದೇಶ ಹೊರಡಿಸಿದೆ.

ಉ) ಸದ್ಯದಲ್ಲೇ ಪ್ರಾರಂಭಿಸಲಾಗುವುದು.

ಅನುಬಂಧ-1

ಹೊಸನಗರ ಮತಕ್ಷೇತ್ರದಲ್ಲಿರುವ ಪಶುವೈದ್ಯಕೀಯ ಸಂಸ್ಥೆಗಳ ವಿವರಗಳು

ಶಿವಮೊಗ್ಗ ತಾಲ್ಲೂಕು:

ಪಶು ಚಿಕಿತ್ಸಾಲಯ :

1) ಆಯನೂರು
2) ಹೊಳಲೂರು
3) ಹಾರ್‍ನಹಳ್ಳಿ
4) ಕುಂಸಿ
5) ಮೇಲಿನ ಹನಸವಾಡಿ,
6) ಗಾಜನೂರು

ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು :

1) ದರಮಘಟ್ಟ
2) ಉಂಬಳೆಬೈಲು
3) ಮಂಡಘಟ್ಟ
4) ಹೊಲಬೇನಹಳ್ಳಿ
5) ಕೊಮ್ಮನಾಳಿ
6) ಹಾಡೋನಹಳ್ಳಿ
7) ಮತ್ತೂರು
8) ಮಲವಗೊಪ್ಪ
9) ಲಕ್ಕನಕುಪ್ಪೆ
10) ಕೋಟೆಗಂಗೂರು

ಹೊಸನಗರ ತಾಲ್ಲೂರು :

ಪಶು ಆಸ್ಪತ್ರೆ : 1) ಹೊಸನಗರ

ಪಶು ಚಿಕಿತ್ಸಾಲಯ :

1) ನಗರ
2) ರಿಪ್ಪನ್ ಪೇಟೆ
3) ಯಡೂರು

ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ

1) ನಿಟ್ಟೂರು
2) ಅಲಗೇರಿಮಂಡಿ
3) ಯಾದೂರ್
4) ಸಾಗರಕೂಡಿಗೆ
5) ಕೆ.ಬಿ. ಸರ್ಕಲ್
6) ಸಂಪೇಕಟ್ಟೆ
7) ಹುಂಚ
8) ಕನಾಗೋಡು
9) ಮುಂಬಾರುಮಾವಿನಕಟ್ಟೆ
10) ಕಡವಳ್ಳಿ ಕ್ರಾಸ್
11) ಹೆಬ್ಬಿಗೆ
12) ಬೆಳ್ಳೂರು

ಕೃತಕ ಗರ್ಭಧಾರಣಾ ಕೇಂದ್ರಗಳು

1) ಅರಸಾಲು

2) ಕೊಡೂರು

3) ಪುರಪ್ಪಮನೆ

4) ನೊಸಲಿ

ಸಂಚಾರಿ ಪಶು ಚಿಕಿತ್ಸಾಲಯ :

1) ಹೊಸನಗರ

ಅನುಬಂಧ - 2

ಸಂಚಾರಿ ಪಶು ಚಿಕಿತ್ಸಾ ಘಟಕವು ಭೇಟಿ ನೀಡುತ್ತಿರುವ ಕೇಂದ್ರಗಳ ಸ್ಥಳಗಳ ವಿವರಗಳು.

1) ಜಯನಗರ
2) ಮಟಳ್ಳಿ
3) ಕಾಳಿಪುರ
4) ತುಮ್ಮ
5) ಗುಬ್ಬಿಗ
6) ಕಾನಡೆ
7) ಹೆಡ್ಲಿ
8) ಹರೋಡಿ
9) ಗೊರಗೋಡು
10) ಸೊನಾಲಿ
11) ಬೆಲ್ಲೋಡಿ
12) ಸೋಮಿನಕೊಪ್ಪ
13) ಕೋಟೆಗಂಗೂರು
14) ಸಿದ್ದಿಪುರ
15) ದೇವಕಾಸಿನಕೊಪ್ಪ
16) ಹಬ್ಬಲ್ಗೆರೆ
17) ಗೋಪಿಶೆಟ್ಟಿ
18) ಪುರುಗವಳ್ಳಿ
19) ಹನುಮಂತಪುರ
20) ಗದ್ದಿಕೊಪ್ಪ
21) ಹಾವಿನಕಟ್ಟೆ
22) ಪಿಳ್ಳನಗೇರಿ
23) ಜವಳಿ
24) ಕೂಡ್ಲಿ
25) ಬಡವಾಪುರ
26) ಯಳವತ್ತಿ
27) ಹೊಸೋಡಿ
28) ಶೆಟ್ಟಿಹಳ್ಳಿ
29) ಮಲ್ಲೇನಹಳ್ಳಿ
30) ಗುರ್ಡೆಕೊಪ್ಪ
31) ಕಾಖಿಕೆರೆ
32) ಬಿ. ಬೀರ್ನಹಳ್ಳಿ
33) ಹಾರೋಬೆನಹಳ್ಳಿ

ಶ್ರೀ ಆಯನೂರು ಮಂಜುನಾಥ್ : ಮಾನ್ಯ ಅಧ್ಯಕ್ಷರೆ, ಅತ್ಯಂತ ಆಶ್ಚರ್ಯದಿಂದ ಒದಗಿಸಿರುವಂಥ ಉತ್ತರದಲ್ಲಿ ನಾನು ಹೊಸನಗರ ವಿಧಾನಸಭಾ ಕ್ಷೇತ್ರದೊಳಗೆ ಎಷ್ಟು ಪಶುಸಂಗೋಪನ ಚಿಕಿತ್ಸಾಲಯಗಳು ಇವೆ ಎಂದು ಕೇಳಿದ್ದೇನೆ. ಅದರಲ್ಲಿ 35ನ್ನು ಪಟ್ಟಿ ಕೊಟ್ಟಿದ್ದಾರೆ. ನನ್ನ ಕ್ಷೇತ್ರಕ್ಕೆ ಸಂಬಂಧಪಡದೆ ಇರತಕ್ಕಂಥ 13 ಕೇಂದ್ರಗಳನ್ನು ಪಟ್ಟಿ ಮಾಡಿದ್ದಾರೇ. ನಾನು ಹೊಸನಗರ ವಿಧಾನಸಭಾದ್ದು ಕೇಳಿದ್ದರೆ ಶಿವಮೊಗ್ಗ ಕ್ಷೇತ್ರದ ಕೆಲವನ್ನು ತೀರ್ಥಹಳ್ಳಿ ಕ್ಷೇತ್ರದ ಕೆಲವನ್ನು ಸೇರಿಸಿ ಹೊಸನಗರ ವಿಧಾನಸಭಾ ಕ್ಷೇತ್ರದ

ಹೊಸನಗರ ವಿಧಾನಸಭಾ ಕ್ಷೇತ್ರದೊಳಗೆ ಇದ್ದಾವೆ ಎಂದು ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ನಾವು ಒಂದು ಪ್ರಶ್ನೆಗೋಸ್ಕರ ಅಧಿವೇಶನಕ್ಕೆ 10-15ದಿನ ಮುಂಚಿತವಾಗಿಯೆ ಹಾಕಿರುತ್ತೇವೆ. ಸರ್ಕಾರ ಉತ್ತರವನ್ನು ಒದಗಿಸುವಾಗ ಎಷ್ಟು ಕಾಳಜಿನ್ನು ವಹಿಸಿದೆ ಉತ್ತರವನ್ನು ಕೊಡುವುದರಲ್ಲಿ ಎನ್ನುವುದನ್ನು ಇಲ್ಲಿ ಒದಕಿಸಿದಂಥ ಉತ್ತರದಿಂದ ಗೊತ್ತಾಗುತ್ತವೆ. ಈ ಬಗ್ಗೆ ಸ್ಪಷ್ಟ ಮಾಹಿತಿಯನ್ನು ಕೊಡಬೇಕು. ನನ್ನ ಕ್ಷೇತ್ರದೊಳಗೆ ಎಷ್ಟು ಪಶುಚಿಕಿತ್ಸಾ ಕೇಂದ್ರಗಳಿದ್ದಾವೆ ಎನ್ನುವುದು ಒಂದು. ಎರಡನೆಯದು ಈ ಸಾಲಿನೊಳಗೆ ಪಶುಚಿಕಿತ್ಸಾ ಕೇಂದ್ರಗಳನ್ನು ಪ್ರಾರಂಭ ಮಾಡುತ್ತೀರಾ ಎಂದು ನಾನು ಕೇಳಿದ್ದೇನೆ. ಅದಕ್ಕೆ ಈ ಸಾಲಿ ಆ ತರಹದ ಯೋಜನೆಯನ್ನು ಹಮ್ಮಿಕೊಂಡಿಲ್ಲ ಎಂದು ಹೇಳಿದ್ದಾರೆ. ಗ್ರಾಮಾಂತರ ಪ್ರದೇಶದೊಳಗೆ ಇರತಕ್ಕಂಥ ಆ ಹಸುಗಳ ಬೆಲೆ ಇವತ್ತು ಗಗನ ಮುಟ್ಟಿದ್ದಾವೆ. ಅಂಥ ಒಂದು ಹಸುವಿಗೋ, ಎತ್ತಿಗೋ ಹುಷಾರಿಲ್ಲದಿದ್ದರೆ, ಅದೇನಾದರೂ ಸತ್ತುಹೋದರೆ ಇಡೀ ರೈತ ವರ್ಷಪೂರ್ತಿ ತನ್ನ ಆದಾಯವನ್ನು ಕಳೆದುಕೊಳ್ಳುತ್ತಾನ. ರೈತನ ಪರ ಇರತಕ್ಕಂಥ ಸರ್ಕಾರ, ಮಣ್ಣಿನ ಮಕ್ಕಳ ಪರ ಇರತಕ್ಕಂಥ ಸರ್ಕಾರ ಅನ್ನತಕ್ಕಂಥ ನೀತಿಯನ್ನು ಇಟ್ಟುಕೊಂಡಿರಬೇಕಾದರೆ ಈ ರೀತಿಯಾಗಿ ತೆಗೆದುಕೊಂಡಿರತಕ್ಕಂಥದ್ದು ಸರಿಯಲ್ಲ. ಅದಕ್ಕೆ ನನ್ನ ಕ್ಷೇತ್ರದೊಳಗೆ ವಿಶೇಷವಾಗಿ ಪಶುಚಿಕಿತ್ಸಾ ಕೇಂದ್ರಗಳನ್ನು ಕೂಡಲೇ ಪ್ರಾರಂಭ ಮಾಡಬೇಕು. ತಾವೇನು ಪಟ್ಟಿಯನ್ನು ಕೊಟ್ಟಿದ್ದೀರಿ ಅವುಗಳನ್ನಾದರೂ ಪ್ರಾರಂಭ ಮಾಡುತ್ತೀರಾ ಎನ್ನತಕ್ಕ ಪ್ರಶ್ನೆಯನ್ನು ತಮ್ಮ ಮುಂದಿಡುತ್ತಿದ್ದೇನೆ.

ಶ್ರೀ ಬಿ.ಎನ್. ಬಚ್ಚೇಗೌಡ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಕ್ಷೇತ್ರದಲ್ಲಿ, ಹೊಸನಗರ ವಿಧಾನಸಭಾ ಕ್ಷೇತ್ರ ಎಂದು ಕೇಳಿದ್ದಾರೆ; ಹೊಸನಗರ ತಾಲ್ಲೂಕಿನಲ್ಲಿ ನಮ್ಮ ಇಲಾಖೆಯಲ್ಲಿ ಮೂರು ಹಂತದ ಯೋಜನೆಗಳಿವೆ, ಪಶು ಆಸ್ಪತ್ರೆ, ಪಶು ಚಿಕಿತ್ಸಾಲಯ, ಮತ್ತು ಪ್ರಾಥಮಿಕ ಪಶು ಚಿಕಿತ್ಸಾಲಯ ಇವು ಒಟ್ಟು ಅವರಲ್ಲಿ 12 ಸಂಸ್ಥೆಗಳು ಆ ಹೊಸನಗರ ತಾಲ್ಲೂಕಿಗೆ ಬರುತ್ತದೆ. ಮತ್ತು ಶಿವಮೊಗ್ಗಕ್ಕೆ ತೆಗೆದುಕೊಂಡಂತೆ ಅವರ ಕ್ಷೇತ್ರದಲ್ಲಿ ಸೇರಿ ಒಟ್ಟು 37 ಸಂಸ್ಥೆಗಳು ಇವತ್ತು ಕೆಲಸ ಮಾಡುತ್ತಾ ಇವೆ.

ಶ್ರೀ ಆಯನೂರು ಮಂಜುನಾಥ್ : ಹೊಸನಗರ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಇವೆ ಎಂಬುದನ್ನು ಹೇಳಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ : ಆದ್ದರಿಂದ ಪ್ರಾಥಮಿಕ ಪಶು ಸಂಚಾರಿ ಆಸ್ಪತ್ರೆ ಮತ್ತು ಕೃತಕ ಗರ್ಭಧಾರಣ ಕೇಂದ್ರಗಳು ಎಲ್ಲಾ ಒಟ್ಟು 37 ಸಂಸ್ಥೆಗಳು ಕೆಲಸ ಮಾಡುತ್ತಾ ಇವೆ. ಶಿವಮೊಗ್ಗವನ್ನು ಹೊರತು ಪಡಿಸಿ ಅವರ ತಾಲ್ಲೂಕಿಗೆ ಸೇರಿದಂತಹದ್ದು ಆ ಪಟ್ಟಿಯನ್ನು ಅನುಬಂಧದಲ್ಲಿ ಕೊಡಲಾಗಿದೆ. ಅದರಲ್ಲಿ ಆಯನೂರು, ಹೊಳಲೂರು, ಹಾರ್ನಹಳ್ಳಿ, ಕುಂಸಿ, ಮೇಲಿನ ಹನಸವಾಡಿ, ಗಾಜನೂರು ಎಂದು ಅದು ಪಶು ಚಿಕಿತ್ಸಾಲಯಗಳಿಗೆ ಸಂಬಂಧಪಟ್ಟಿದ್ದುದು, ಮತ್ತು ಪ್ರಾಥಮಿಕ ಪಶು ಚಿಕಿತ್ಸಾಲಯಗಳು ಸುಮಾರು ಹತ್ತು ಚಿಕಿತ್ಸಾಲಯಗಳು, ಒಟ್ಟು 37 ಸಂಸ್ಥೆಗಳು ಕೆಲಸ ಮಾಡುತ್ತಾ ಇರತಕ್ಕಂಥದ್ದು. ಅದರಲ್ಲಿ ಸ್ವಲ್ಪ ಹೊಸನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರತಕ್ಕಂಥದ್ದು ಏನಾದರೂ ವ್ಯತ್ಯಾಸ ಇದ್ದರೆ ಅದನ್ನು ಆಮೇಲೆ ತಮಗೆ ತಿಳಿಸುತ್ತೇವೆ;

ಶ್ರೀ ಆಯನೂರು ಮಂಜುನಾಥ್ : 12 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳಿವೆ ಎಂದು ಹೇಳಿದ್ದೀರಿ, ಆ ಹನ್ನೆರಡನ್ನು ಹೊಸದಾಗಿ ಓಪನ್ ಮಾಡಿಕೊಟ್ಟು ಬಿಟ್ಟರೆ ಸಾಕು. ನಾನು ಸ್ವಾಗತ ಮಾಡುತ್ತೇನೆ, ತಪ್ಪು ಮಾಹಿತಿಯನ್ನು ನಿರೀಕ್ಷೆ ಮಾಡುವುದಕ್ಕಿಂತ ನನ್ನ ಕ್ಷೇತ್ರದಲ್ಲಿ 35 ಇವೆಯೆಂದು ಹೇಳಿದ್ದೀರಿ.... ನನ್ನ ಕ್ಷೇತ್ರದೊಳಗೆ ಬರುವ ಪ್ರಾಥಮಿಕ

ಪಶು ಚಿಕಿತ್ಸಾ ಕೇಂದ್ರಗಳಲ್ಲಿ ಪಶುವೈದ್ಯಾಧಿಕಾರಿಗಳನ್ನು ಭರ್ತಿ ಮಾಡಿಕೊಟ್ಟರೆ ಸಾಕು, ಬೇರೆ ಇನ್ನೇನೂ ನಾನು ಕೇಳುತ್ತಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ : ಕಾನೂನಿನ ಪರಿಮಿತಿಯಲ್ಲಿ ಎಷ್ಟು ಅವಶ್ಯಕತೆ ಇದೆಯೋ ಅದನ್ನು ಮಾಡಿಕೊಡುತ್ತೇವೆ ಮತ್ತೇ ಇದರಲ್ಲಿ ಅವರು ಕೇಳಿರತಕ್ಕಂಥದ್ದು, 117 ಸಾಂಕ್ಷನ್ಡ್ ಪೋಸ್ಟ್ ಇರತಕ್ಕಂಥದ್ದು, ಅದರಲ್ಲಿ 37 ಪೋಸ್ಟ್‌ಗಳನ್ನು ಇನ್ನೂ ತುಂಬಬೇಕಾಗಿದೆ, ವೆಟರ್ನರಿ ಆಫೀಸರನ್ನೊಬ್ಬರನ್ನು ತುಂಬಬೇಕು ಮತ್ತು ಲೈವ್ ಸ್ಟಾಕ್ ಆಫೀಸರ್ಸ್ ನಾಲ್ಕು ಬಾಕಿ ಇದೆ. ವೆಟರ್ನರಿ ಅಸಿಸ್ಟೆಂಟ್ 31ರಲ್ಲಿ 19 ಹುದ್ದೆಗಳನ್ನು ಇನ್ನೂ ತುಂಬಬೇಕಾಗಿದೆ ಮತ್ತು ಗ್ರೂಪ್ 'ಡಿ' ನೌಕರರಲ್ಲಿ 50 ಅವರಿಗೆ ಮಂಜೂರಾತಿ ಆಗಿದೆ ಇನ್ನೂ 15 ಜನರನ್ನು ತುಂಬಬೇಕಾಗಿದೆ. ಒಟ್ಟು 117 ಹುದ್ದೆಗಳಲ್ಲಿ 37 ಅವರದ್ದು ತುಂಬಬೇಕಾಗಿದೆ?

11-30 ಎ.ಎಂ.

ಈಗಾಗಲೇ ಅಲ್ಲಿ ಬಡ್ತಿಗಳನ್ನು ನೀಡಿ, ಆದಷ್ಟು ಬೇಗನೆ ಆ ಹುದ್ದೆಗಳನ್ನು ತುಂಬುವಂಥ ಕಾರ್ಯ ಮಾಡುತ್ತೇವೆ. ಸಂಚಾರಿ ಪಶು ಚಿಕಿತ್ಸಾ ಘಟಕ ಎಲ್ಲೆಲ್ಲಿ ವಿಸಿಟ್ ಮಾಡುತ್ತದೆ ಎಂದು ಕೇಳಿದ್ದಾರೆ. ಸಂಚಾರಿ ಪಶು ಚಿಕಿತ್ಸಾ ಘಟಕವು ಕಾರ್ಯಕ್ರಮಗಳನ್ನು ಹಾಕಿಕೊಂಡು, ಪ್ರತಿ ನಾಲ್ಕು ದಿವಸಕ್ಕೆ ಒಂದು ಸಾರಿ ಆಯಾ ಹಳ್ಳಿಗಳಿಗೆ ಭೇಟಿ ನೀಡುತ್ತದೆ. ಯಾವ ಹಳ್ಳಿಗಳಲ್ಲಿ ಪಶು ಚಿಕಿತ್ಸಾ ಆಸ್ಪತ್ರೆಗಳು ಇರುವುದಿಲ್ಲವೋ, ಅಂತಹ ಮಾರ್ಗಗಳನ್ನು ಆಯ್ದುಕೊಂಡು ಅಲ್ಲಿ ಹೋಗಿ ಪಶು ಚಿಕಿತ್ಸೆಯನ್ನು ಕೊಡುವಂತಹ ಕಾರ್ಯವನ್ನು ಈ ಸಂಚಾರಿ ಘಟಕ ಮಾಡುತ್ತಿದೆ. ಹೊಸದಾಗಿ ನಾವು 310 ಪಶುವೈದ್ಯ ಆಸ್ಪತ್ರೆಗಳನ್ನು ತೆರೆಯಲು ಅನುಮತಿ ನೀಡಿದ್ದು, ಅವುಗಳಲ್ಲಿ ಕೋಟೆಗಂಗೂರು ಹಾಗೂ ಬೆಳ್ಳೂರುಗಳಲ್ಲಿ ಜಿಲ್ಲಾ ಪಂಚಾಯಿತಿ ಮೂಲಕ ಮಂಜೂರಾತಿ ನೀಡಲಾಗಿದೆ. ಆ ಆಸ್ಪತ್ರೆಗಳಿಗೆ ಯಾವಾಗ ಪೂರ್ಣ ಪ್ರಮಾಣದ ಸಿಬ್ಬಂದಿ ಒದಗಿಸುತ್ತೀರಿ ಎಂದು ಕೇಳಿದ್ದಾರೆ. ಈ ಆಯವ್ಯಯ ಅಧಿವೇಶನ ಮುಗಿದ ನಂತರ, ಅಂದರೆ ಒಂದೆರಡು ತಿಂಗಳೊಳಗಾಗಿ ನಾವು ಆ ಹುದ್ದೆಗಳನ್ನು ಭರ್ತಿ ಮಾಡುವಂತಹ ಕೆಲಸ ಮಾಡುತ್ತೇವೆ.

ಶ್ರೀ ಅರಗ ಜ್ಞಾನೇಂದ್ರ : ಹೊಸ-ನಗರ ತಾಲ್ಲೂಕಿನ ಸ್ವಲ್ಪ ಭಾಗ ತೀರ್ಥಹಳ್ಳಿ ಕ್ಷೇತ್ರಕ್ಕೂ ಬರುವುದರಿಂದ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಸಂಚಾರಿ ಪಶುಚಿಕಿತ್ಸಾ ಘಟಕದ ಬಗ್ಗೆ ತಾವು ಪ್ರಸ್ತಾಪ ಮಾಡಿದ್ದೀರಿ. ನನ್ನ ಕ್ಷೇತ್ರದಲ್ಲಿ ಒಂದು ಸಂಚಾರಿ ಪಶು ಚಿಕಿತ್ಸಾ ಘಟಕ 5 ವರ್ಷಗಳ ಹಿಂದೆ ಮಂಜೂರಾಗಿದೆ. ಅದಕ್ಕೆ ಸರ್ಕಾರದವರು ಡಾಕ್ಟರ್‌ಕೊಟ್ಟಿದ್ದೀರಿ, ಪೀವನ್‌ಕೊಟ್ಟಿದ್ದೀರಿ, ಅದಕ್ಕೆ ಬೇಕಾದಂತಹ ಔಷಧಿಗಳನ್ನೂ ಸಹ ಒದಗಿಸಿದ್ದೀರಿ. ಆದರ ಸದರಿ ಸಂಚಾರ ಘಟಕದ ವಾಹನಕ್ಕೆ ಒಬ್ಬ ಡ್ರೈವರ್‌ನನ್ನು ನೀಡದೇ, ಆ ಸಂಚಾರಿ ಘಟಕ ಅನುಪಯುಕ್ತ ಸ್ಥಿತಿಯಲ್ಲಿ ನಿಂತಿದೆ. ದಯಮಾಡಿ ಅಲ್ಲಿಗೆ ಒಬ್ಬ ಡ್ರೈವರ್ ಅನ್ನು ನೇಮಕ ಮಾಡುತ್ತೀರಾ ಮತ್ತು ಎಷ್ಟು ದಿವಸದೊಳಗಾಗಿ ನೇಮಕಾತಿ ಮಾಡುತ್ತೀರಿ?

ಅಧ್ಯಕ್ಷರು ಡ್ರೈವರ್ ಪೋಸ್ಟ ತಾನೇ, ಒಂದು ವಾರದಲ್ಲಿ ತುಂಬಬಹುದು ಬಿಡಿ.

ಶ್ರೀ ಬಿ.ಎನ್. ಬಚ್ಚೇಗೌಡ : ಇನ್ನು ಒಂದು ವಾರದೊಳಗಾಗಿ ನಿಯೋಜನೆ ಮೇಲಾಗಲಿ ಅಥವಾ ಇನ್ನಿತರ ರೀತಿಯಿಂದಾಗಲಿ ಆ ಡ್ರೈವರ್ ಹುದ್ದೆಯನ್ನು ತುಂಬುವಂತಹ ಕಾರ್ಯವನ್ನು ಮಾಡುತ್ತೇನೆ.

ಅಧ್ಯಕ್ಷರು : ನಾನೇನೋ ನೀವು ಡೈರೆಕ್ಟರ್ ಪೋಸ್ಟ ತುಂಬಿ ಎಂದು ಕೇಳುತ್ತೀರಿ ಎಂದು ಭಾವಿಸಿದ್ದೆ.

(ನಗು)

ಶ್ರೀ ಸಿ.ಎಂ. ಮಾಮನಿ : ಕಳೆದ ಶನಿವಾರದ ದಿವಸ ನಮ್ಮ ಕ್ಷೇತ್ರದಲ್ಲಿ ಒಂದು ಪಶು ಚಿಕಿತ್ಸಾಲಯವನ್ನು ಪ್ರಾರಂಭ ಮಾಡಲಿಕ್ಕೆ ನಾನು ಹೋಗಿದ್ದೆ. ಆ ಸಂದರ್ಭದಲ್ಲಿ ಬಾಯಿಬೇನೆ, ಕಾಲುಬೇನೆ ಬರತಕ್ಕ ದನಗಳಿಗೆ ಚುಚ್ಚುಮದ್ದನ್ನು ನೀಡುವುದಕ್ಕಾಗಿ, ಒಂದು ದಿನಕ್ಕೆ 6 ರೂ. 50 ಪೈಸೆ ಹಣವನ್ನು ತೆಗೆದುಕೊಳ್ಳಬೇಕೆಂದು ಜಿಲ್ಲಾ ಪಂಚಾಯಿತಿಯವರು ತಿಳಿಸಿದ್ದಾರೆ ಎಂದು ಅಲ್ಲಿನ ಡಾಕ್ಟರ್ ನನಗೆ ಹರು. ಸದರಿ ಚುಚ್ಚುಮದ್ದನ್ನು ಇಲ್ಲಿಯವರೆಗೂ ಪುಕ್ಕಟೆಯಾಗಿ ಕೊಡಲಾಗುತ್ತಿತ್ತು, ಈಗ ಇದಕ್ಕಿದ್ದಂತೆ 6 ರೂ. 50 ಪೈಸೆ ವಸೂಲು ಮಾಡುವುದು ಒಳ್ಳೆಯದಲ್ಲ. ಸದರಿ ಚುಚ್ಚುಮದ್ದಿಗೆ ಹಿಂದಿನಂತೆ ಪುಕ್ಕಟೆಯಾಗಿ ಒದಗಿಸುವ ವ್ಯವಸ್ಥೆ ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರನ್ನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಬಿ. ಎನ್ ಬಚ್ಚೇಗೌಡ : ಮಾನ್ಯ ಅಧ್ಯಕ್ಷರೇ, ನಮ್ಮ ಇಲಾಖಾ ಬೇಡಿಕೆಗಳ ಮೇಲೆ ಚರ್ಚೆಯಾಗುವ ಸಂದರ್ಭದಲ್ಲಿ ನಾನು ಆ ಬಗ್ಗೆ ಒಂದು ತೀರ್ಮಾನವನ್ನು ಈ ಸದದಲ್ಲಿ ಪ್ರಚುರ ಪಡಿಸುತ್ತೇನೆ. ಈಗಾಗಲೇ ಅದು 1 ರೂ. 25 ಪೈ. ಕೊಡುವಂತಹ ಕಾರ್ಯ ಇವತ್ತು ಆಗಿರತಕ್ಕದ್ದು. ಚುಚ್ಚುಮದ್ದನ್ನು ಪೂರ್ಣವಾಗಿ ಹಣ ಇಲ್ಲದೆಯೇ ಕೊಡಬೇಕು ಎನ್ನುವ ತೀರ್ಮಾನ ತೆಗೆದುಕೊಂಡು ಅದನ್ನು ನಾವು ಈ ಸದನದಲ್ಲಿ ತಿಳಿಸುತ್ತೇವೆ.

ಅಧ್ಯಕ್ಷರು : ಈ ಪ್ರಶ್ನಗೆ ಸಂಬಂದಿಸಿದಂತೆ ಕಡೇ ಉಪ ಪ್ರಶ್ನೆ ಕೇಳಲು ಅವಕಾಶ ಮಾಡಿಕೊಡುತ್ತಿದ್ದೇನೆ.

ಶ್ರೀ ಟಿ.ಎಚ್. ಬಸವರಾಜ್ : ಹೊಸದುರ್ಗ ತಾಲ್ಲೂಕಿನಲ್ಲಿ ಹಿಂದೆ ಹೆಬ್ಬಳ್ಳಿ, ಬೆಲಗೂರು ಮತ್ತು ಕಾರೇಹಳ್ಳಿಗಳಲ್ಲಿ 300 ಕುರಿಗಳನ್ನು ತಂದು ಮೂರು ಕುರಿ ಸಾಕಾಣಿಕೆ ಕೇಂದ್ರಗಳನ್ನು ಪ್ರಾರಂಭ ಮಾಡಿದ್ದರು. ಈಗ ಆ ಮೂರು ಕೇಂದ್ರಗಳಲ್ಲಿ ಯಾವುದೇ ಕೇಂದ್ರದಲ್ಲೂ ಸಹಿತ ಕುರಿ ಸಾಕಾಣಿಕೆ ಕೆಲಸ ನಡೆಯುತ್ತಿಲ್ಲ. ಈ ಬಗ್ಗೆ ಮಾನ್ಯ ಮಂತ್ರಿಗಳು ಯಾವುದಾದರೂ ಕಾರ್ಯಕ್ರಮಗಳನ್ನು ಹಾಕಿಕೊಂಡರೆ ಬಹಳಷ್ಟು ಅನುಕೂಲವಾಗುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ : ಈ ಬಗ್ಗೆ ಬೇಡಿಕೇಗಳ ಮೇಲೆ ಉತ್ತರ ಹೇಳುವಾಗ ವಿವರವಾಗಿ ತಿಳಿಸುತ್ತೇನೆ. ಮಾನ್ಯ ಸದಸ್ಯರು ಈ ಬಗ್ಗೆ ಪ್ರತ್ಯೇಕ ಪ್ರಶ್ನೆಯನ್ನೇ ಕೇಳಬೇಕು. ಸದ್ಯಕ್ಕೆ ನನ್ನ ಹತ್ತಿರ ಕುರಿ ಸಾಕಾಣಿಕೆ ಕೇಂದ್ರದ ಬಗ್ಗೆ ಮಾಹಿತಿ ಇಲ್ಲ.

ಹುಬ್ಬಳ್ಳಿ ತಾಲ್ಲೂಕಿನಲ್ಲಿ ಕೊಳವೆ ಬಾವಿಗಳು.

2549 - ಶ್ರೀ ಜಗದೀಶ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ತಾಲ್ಲೂಕಿನಲ್ಲಿ ಇಲ್ಲಿಯವರೆಗೆ ಕೊರೆದ ಬಾವಿಗಳ ಸಂಖ್ಯೆ ಎಷ್ಟು? ಅವುಗಳಲ್ಲಿ ಸುಸ್ಥಿತಿಯಲ್ಲಿರುವ ಕೊಳವೆಬಾವಿಗಳ ಸಂಖ್ಯೆ ಎಷ್ಟು? ಸುಸ್ಥಿತಿಯಲ್ಲಿರದ ಕೊಳವೆಬಾವಿಗಳನ್ನು ದುರಸ್ತಿಗೊಳಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಆ) ಈ ವರ್ಷ ಎಷ್ಟು ಹೊಸ ಕೊಳವೆಬಾವಿಗಳನ್ನು ಕೊರೆಯಲಾಗುವುದು? (ವಿವರಗಳನ್ನು ಒದಗಿಸುವುದು)

ಶ್ರೀ ಪಿ. ಪ್ರಕಾಶ್. (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ಹುಬ್ಬಳ್ಳಿ ತಾಲ್ಲೂಕಿನಲ್ಲಿ, ಇಲ್ಲಿಯವರೆಗೆ ಕೊರೆದ ಕೊಳವೆ ಬಾವಿಗಳ ಸಂಖ್ಯೆ

ಅವುಗಳಲ್ಲಿ ಸುಸ್ಥಿತಿಯಲ್ಲಿರುವ ಕೊಳವೆಬಾವಿಗಳ ಸಂಖ್ಯೆ : 242

ಸುಸ್ಥಿತಿಯಲ್ಲಿರದ ಕೊಳವೆಬಾವಿಗಳನ್ನು ತಾಲ್ಲೂಕು ಮಟ್ಟದಲ್ಲಿರುವ ಸಂಚಾರಿ ಕಾರ್ಯಾಗಾರ ವ್ಯಾನ್ ಸಹಾಯದಿಂದ ದುರಸ್ತಿ ಮಾಡಲಾಗುವುದು.

ಆ) 14

ರಾಜ್ಯ ವಲಯ (ಸಾಮಾನ್ಯ)	:	1
ರಾಜ್ಯ ವಲಯ (ಎಸ್.ಸಿ.ಪಿ)	:	5
ಕೇಂದ್ರವಲಯ (ಸಾಮಾನ್ಯ)	:	5
ಕೇಂದ್ರವಲಯ (ಎಸ್.ಸಿ.ಸಿ)	:	3
		14

ಶ್ರೀ ಜಗದೀಶ ಶೆಟ್ಟರ್: ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಹುಬ್ಬಳ್ಳಿ ತಾಲ್ಲೂಕಿನಲ್ಲಿ ಇಲ್ಲಿಯವರೆಗೆ ಕೊರೆದ ಕೊಳವೆ ಬಾವಿಗಳ ಸಂಖ್ಯೆ 272 ಎಂದು ಹೇಳಿದ್ದಾರೆ. ಅದರಲ್ಲಿ ಸರಿಯಾದ ಸುಸ್ಥಿತಿಯಲ್ಲಿರುವ ಕೊಳವೆ ಬಾವಿ ಸಂಖ್ಯೆ 242 ಎಂದು ಹೇಳಿದ್ದಾರೆ. ಅಂದರೆ ಒಟ್ಟು 30 ಕೊಳವೆ ಬಾವಿಗಳು ಸುಸ್ಥಿತಿಯಲ್ಲಿ ಇಲ್ಲ. ಅಂತಹ ಕೊಳವೆ ಬಾವಿಗಳು ಎಷ್ಟು ವರ್ಷದಿಂದ ಸುಸ್ಥಿತಿಯಲ್ಲಿ ಇಲ್ಲ ಮತ್ತು ಅವುಗಳನ್ನು ರಿಪೇರಿ ಮಾಡಲಿಕ್ಕೆ ಎಷ್ಟು ಸಮಯ ಹಿಡಿಯುತ್ತದೆ? ಎಂಬುದನ್ನು ಮಾನ್ಯ ಮಂತ್ರಿಗಳು ದಯವಿಟ್ಟು ತಿಳಿಸಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಈ ಕೊಳವೆ ಬಾವಿಗಳು ನಿರ್ದಿಷ್ಟವಾಗಿ ಇಂತಹ ಕಡೆಯೇ ದುರಸ್ತಿಗೊಳಗಾಗುತ್ತವೆ ಎಂದಲ್ಲ. ಅವು ಆಗ್ಗಿಂದಾಗ್ಗೆ ಕೆಡುತ್ತಲೆ ಇರುತ್ತವೆ. ಸುಸ್ಥಿತಿಯಲ್ಲಿರದ ಕೊಳವೆ ಬಾವಿಗಳ ಸಂಖ್ಯೆ ನಿಖರವಾಗಿ 30 ಅಲ್ಲ. ಏಕೆಂದರೆ ಕೊಳವೆ ಬಾವಿಗಳು ಆಗ್ಗಾಗ್ಗೆ ದುರಸ್ತಿಯಾಗುತ್ತಿರುತ್ತವೆ, ಮತ್ತು ಕೆಟ್ಟು ಹೋಗುತ್ತಿರುತ್ತವೆ. ನಿರ್ದಿಷ್ಟವಾಗಿ ಇಂತಹ ತಾರೀಖಿನ ದಿವಸವೇ ಎಷ್ಟು ಕೊಳವೆ ಬಾವಿಗಳು ಸುಸ್ಥಿತಿಯಲ್ಲಿಲ್ಲ ಎಂಬ ಮಾಹಿತಿ ಬೇಕಾದರೆ, ನಾನು ಅದನ್ನು ನಂತರ ತಮಗೆ ಕಳುಹಿಸಿ ಕೊಡುತ್ತೇನೆ. ಒಂದು ವೇಳಾಪಟ್ಟಿಯನ್ನು ಹಾಕಿಕೊಂಡು ತಾಲ್ಲೂಕು ಮಟ್ಟದಲ್ಲಿರುವ ಸಂಚಾರಿ ಕಾರ್ಯಾಗಾರ ವ್ಯಾನ್ ಆಯಾ ಗ್ರಾಮಗಳಲ್ಲಿರತಕ್ಕ ಕೊಳವೆ ಬಾವಿಗಳನ್ನು ಸುಸ್ಥಿತಿಯಲ್ಲಿಡಬೇಕು ಎನ್ನತಕ್ಕ ಒಂದು ಕಾರ್ಯಕ್ರಮ ಇದೆ. ಅದರ ಪ್ರಕಾರ ಇನ್ನು ಒಂದು ತಿಂಗಳೊಳಗಾಗಿ ಬಹುತೇಕ ಎಲ್ಲಾ ಕೊಳವೆ ಬಾವಿಗಳೂ ದುರಸ್ತಿಯಾಗುತ್ತವೆ. ದಿವಂಗತ ನಜೀರ್ ಸಾಬ್‌ರವರು ಮಂತ್ರಿಗಳಾಗಿದ್ದಾಗ ಒಂದು ಕಾರ್ಯಕ್ರಮ ಹಾಕಿಕೊಂಡಿದ್ದರು. ಏತನ್ಮಧ್ಯೆ ಆ ಕಾರ್ಯಕ್ರಮವನ್ನು ಕೈಬಿಟ್ಟಿದ್ದರು. ಟ್ರೈಸಂ ಯೋಜನೆಯಡಿಯಲ್ಲಿ ಕನಿಷ್ಠ ಮೇಲ್ಮಟ್ಟದಲ್ಲಿ ಇರತಕ್ಕ ಕೆಲವೊಂದು ಸಣ್ಣಪುಟ್ಟ ದುರಸ್ತಿಗಳನ್ನು ಮಾಡುವುದಕ್ಕೆ ಗ್ರಾಮ ಪಂಚಾಯಿತಿಯವರು ಯುವಕರಿಗೆ ತರಬೇತಿ ಕೊಡಬೇಕು ಮತ್ತು ಅದಕ್ಕಾಗಿ ಒಂದು ಟೂಲ್ ಅನ್ನೂ ಕೂಡ ಪಂಚಾಯಿತಿಯವರು ತೆಗೆದುಕೊಂಡು ಇಟ್ಟುಕೊಂಡಿರಬೇಕು ಎನ್ನತಕ್ಕ ಒಂದು ಕಾರ್ಯಕ್ರಮ ಇತ್ತು. ಈಗ ಅಲ್ಲಲ್ಲಿ ಈ ಕಾರ್ಯಕ್ರಮವನ್ನು ಬಿಟ್ಟಿದ್ದಾರೆ. ನಾನು ಈ ಬಗ್ಗೆ ಒಂದು ಸುತ್ತೋಲೆ ಕಳುಹಿಸಿ, ಸದರಿ ಕಾರ್ಯಕ್ರಮ ಆದಷ್ಟು ಬೇಗನೆ ಮತ್ತೆ ಪ್ರಾರಂಭವಾಗುವಂತೆ ಪ್ರಯತ್ನ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಸುಸ್ಥಿತಿಯಲ್ಲಿರದ ಕೊಳವೆ ಬಾವಿಗಳನ್ನು ತಾಲ್ಲೂಕೂ ಮಟ್ಟದಲ್ಲಿರುವ ಸಂಚಾರಿ ಕಾರ್ಯಾಗಾರ ವ್ಯಾನ್ ಸಹಾಯದಿಂದ ದುರಸ್ತಿ ಮಾಡಲಾಗುವುದು ಎಂದು ಹೇಳಿದ್ದಾರೆ.

ಆದರೆ ನಾನಂತೂ ಈ ರೀತಿಯ ವ್ಯಾನ್ ಅನ್ನು ಯಾವಾಗಲೂ ನೋಡಿಯೇ ಇಲ್ಲ. ಕೆಲವೊಂದು ಕಡೆ ಕೊಳವೆ ಬಾವಿಗಳು ಕೆಟ್ಟು ಹೋಗಿ ಒಂದು ವರ್ಷವಾಗಿದ್ದರೂ, ಆ ಬಗ್ಗೆ ತಿಳಿಸಿದರೂ ಕೂಡ ಅವುಗಳು ರಿಪೇರಿಯಾಗುತ್ತಿಲ್ಲ. ಸಂಚಾರಿ ಕಾರ್ಯಾಗಾರ ವ್ಯಾನ್ ಕಾರ್ಯನಿರ್ವಹಿಸುತ್ತಿದೆಯೇ ಹೇಗೆ? ಹಾಗೂ ಇಂತಹ ಕಡೆ ಕೊಳವೆ ಬಾವಿ ಕೆಟ್ಟಿದೆ ಎಂದು ಅವರಿಗೆ ಮಾಹಿತಿ ನೀಡಿದ ನಂತರ, ಎಷ್ಟು ಕಾಲಾವಧಿಯೊಳಗಾಗಿ ಅವರು ಸರಿ ಕೊಳವೆ ಬಾವಿಗಳನ್ನು ದುರಸ್ತಿ ಮಾಡುತ್ತಾರೆ ಎಂಬ ಬಗ್ಗೆ ತಾವು ಸ್ಪಷ್ಟವಾದ ಭರವಸೆ ಕೊಡಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಸಂಚಾರಿ ಘಟಕಗಳು ಯಾವಾಗಲೂ ಕೂಡ ಕೆಲಸ ನಿರ್ವಹಿಸುತ್ತಿವೆ. ಇವುಗಳಲ್ಲಿ ಕೆಲವು ಸುಸ್ಥಿತಿಯಲ್ಲಿ ಇರದಿರಬಹುದು. ತಾವು ಸಂಚಾರಿ ಘಟಕವನ್ನು ನೋಡಿಲ್ಲ ಎಂದ ಮಾತ್ರಕ್ಕೆ ಅವುಗಳು ಇಲ್ಲ ಎಂದು ತಾವು ಭಾವಿಸುವಂತಿಲ್ಲ. ನಾನು ಈ ಕೂಡಲೇ ತಮಗೆ ಮಾಹಿತಿಯನ್ನು ತರಿಸಿಕೊಡುತ್ತೇನೆ. ಹುಬ್ಬಳ್ಳಿ ಸಂಚಾರಿ ಕಾರ್ಯಾಗಾರ ಘಟಕದವರು ಒಂದು ವೇಳಾಪಟ್ಟಿಯನ್ನು ಹಾಕಿಕೊಂಡಿರುತ್ತಾರೆ. ತಾವು ಹೇಳಿದಂತೆ, ಅಲ್ಲಿ ಕಳೆದ ಒಂದು ವರ್ಷದಿಂದಲೂ ದುರಸ್ತಿಯಾಗದೇ ಇರತಕ್ಕ ಕೊಳವೆಬಾವಿಗಳೇನಾದರೂ ಇದ್ದರೆ, ಅದಕ್ಕೆ ಕಾರಣರಾದವರ ವಿರುದ್ಧ, ಶೀಘ್ರವಾಗಿ ಕ್ರಮ ಕೂಡ ತೆಗೆದುಕೊಳ್ಳುತ್ತೇನೆ. ಅಂತಹ ಪ್ರಕರಣಗಳ ಬಗ್ಗೆ ತಾವು ದಯಮಾಡಿ ಮಾಹಿತಿಯನ್ನು ಕೊಡಿ. ಇನ್ನೊಂದು ತಿಂಗಳೊಳಗಾಗಿ ಅಂತಹ ಎಲ್ಲಾ ಕೊಳವೆ ಬಾವಿಗಳನ್ನು ದುರಸ್ತಿಪಡಿಸಲಾಗುವುದು ಎಂದು ಭರವಸೆ ಕೊಡುತ್ತೇನೆ.

ಶ್ರೀ ಅಶೋಕ್ ಕಾಟ್ವೆ : ಹುಬ್ಬಳ್ಳಿ ಧಾರವಾಡ ಮಹಾ ನಗರದಲ್ಲಿ ಕೆಟ್ಟು ಹೋದಂತಹ ಕೊಳವೆ ಬಾವಿಗಳನ್ನು ದುರಸ್ತಿ ಪಡಿಸಲು ಸದ್ಯಕ್ಕೆ ಒಂದೇಒಂದು ವಿಂಗ್ ಇದೆ. ಇದರಿಂದಾಗಿ ಕೆಟ್ಟು ಹೋದಂತಹ 6-8 ಕೊಳವೆ ಬಾವಿಗಳನ್ನು ಇನ್ನೂ ದುರಸ್ತಿಪಡಿಸಲಾಗಿಲ್ಲ. ಆದುದರಿಂದ ಅಲ್ಲಿಗೆ ಇನ್ನೊಂದು ವಿಂಗ್ ಅನ್ನು ಒದಗಿಸುವುದಕ್ಕೆ ಸರ್ಕಾರ ಏನಾದರೂ ಯೋಜನೆ ಹಾಕಿಕೊಂಡಿದೆಯೇ?

ಶ್ರೀ ಎಂ.ಪಿ. ಪ್ರಕಾಶ್ : ತಾವು ಪ್ರಸ್ತಾಪಿಸಿದಂತಹ ವಿಷಯವು ನಗರಾಭಿವೃದ್ಧಿ ಸಚಿವರ ಇಲಾಖೆಯ ವ್ಯಾಪ್ತಿಗೆ ಬರುತ್ತದೆ. ಆದಾಗ್ಯೂ ನಾನು ಮಾನ್ಯ ಸದಸ್ಯರ ಭಾವನೆಗಳನ್ನು ಖಂಡಿತವಾಗಿ ಸಂಬಂಧಪಟ್ಟ ಸಚಿವರಿಗೆ ತಿಳಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಹಿಂದೇ ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದ ದಿವಂಗತ ನಜೀರ್ ಸಾಬ್‌ರವನ್ನು ನಾವು ಇವತ್ತು ನೆನಪಿಸಿಕೊಳ್ಳಬೇಕು. ಹಿಂದೆ ನೀವು ಅಧಿಕಾರದಲ್ಲಿದ್ದಾಗಲೇ, ಪುಣ್ಯಾತ್ಮ 4-5 ವರ್ಷಗಳಿಗಾಗುವಷ್ಟು ಕೊಳವೆ ಬಾವಿಗಳನ್ನು ತೆಗೆಸಿದ್ದಿರು. ದುರಸ್ತಿ ಪಡಿಸಲು ಸಂಚಾರಿ ಘಟಕಗಳು ಹೋದಾಗ, ದುರಸ್ತಿ ಪಡಿಸಲು ಅಗತ್ಯವಿರುವ ಸಾಮಗ್ರಿಗಳನ್ನು ಎಲ್ಲವನ್ನು ಅವು ಕೊಂಡೊಯ್ಯುತ್ತಿಲ್ಲ. ನೀವು ಬೇಕಾದರೆ 2-3 ಜಿಲ್ಲೆಗಳಿಂದ ಸ್ಯಾಂಪಲ್ ತರಿಸಿ ನೋಡಿ. ಒಂದೇ ಕಡೆ ಖಾಯಂ ಆಗಿ ಹತ್ತಾರು ಬಾರಿ ದುರಸ್ತಿ ಮಾಡುತ್ತಲೇ ಇರುತ್ತಾರೆ. ಕನಿಷ್ಟ ಆರು ತಿಂಗಳು ಅಥವಾ ಒಂದು ವರ್ಷವಾದರೂ ಗಟ್ಟಿಯಾಗಿ ನಿಲ್ಲುವಂತಹ ರೀತಿಯಲ್ಲಿ ಕೊಳವೆ ಬಾವಿಗಳನ್ನು ದುರಸ್ತಿ ಪಡಿಸುತ್ತಿಲ್ಲ. ವಾಹನಗಳು ದುರಸ್ತಿಗೆಂದು ಹೋದಾಗ ಅಗತ್ಯವಾಗಿರುವಂತಹ ಎಲ್ಲಾ ಸಾಮಗ್ರಿಗಳನ್ನು ಮೊದಲೇ ತೆಗೆದುಕೊಂಡು ಹೋಗಿದ್ದರೆ, ಯಾವುದೋ ಒಂದು ಸಾಮಗ್ರಿ ಇಲ್ಲ ಎನ್ನುವ ಕಾರಣದಿಂದ ಮತ್ತೊಮ್ಮೆ ವಾಪಸ್ಸು ಬರುವುದು ತಪ್ಪುತ್ತದೆ. ಅಗತ್ಯವಿರುವ ಎಲ್ಲಾ ಸಾಮಾನುಗಳನ್ನು ಒಂದೇ ಸಲ ತೆಗೆದುಕೊಂಡು ಹೋಗಿ ದುರಸ್ತಿ ಮಾಡಲಿಕ್ಕೆ ಹಾಗೂ ಆ ರೀತಿ ದುರಸ್ತಿಪಡಿಸಿದ ಕೊಳವೆ ಬಾವಿಗಳು ಕನಿಷ್ಠ ಆರು ತಿಂಗಳಾದರೂ ಗಟ್ಟಿಯಾಗಿ ಉಳಿಯುವಂತಹ

ರೀತಿ ಮಾಡುವುದಕ್ಕೆ ಸಂಬಂಧಪಟ್ಟವರಿಗೆ ತಾವು ಏನಾದರೂ ನಿರ್ದೇಶನಗಳನ್ನು ಕೊಡಬಹುದೇ?

ಶ್ರೀ ಎಂ.ಪಿ. ಪ್ರಕಾಶ್ : ಇದೊಂದು ಯೋಗ್ಯವಾದ ಸಲಹೆ. ಆ ಒಂದು ದೃಷ್ಟಿಯನ್ನಿಟ್ಟುಕೊಂಡೇ, ಗ್ರಾಮ ಪಂಚಾಯಿತಿಯ ಮುಖಾಂತರ ಟ್ರೈಸಂ ಯೋಜನೆ ಅಡಿಯಲ್ಲಿ ನಿರುದ್ಯೋಗಿಗಳಾಗಿರತಕ್ಕ ಯುವಕರಿಗೆ ತರಬೇತಿ ಕೊಟ್ಟು, ಆಯಾ ಗ್ರಾಮ ಪಂಚಾಯಿತಿಯವರು ಕನಿಷ್ಠ ಒಂದು ಟೂಲ್ ಕಿಟ್ ಅನ್ನಾದರೂ ಇಟ್ಟುಕೊಂಡಿರಬೇಕು ಎನ್ನುವ ಯೋಜನೆ ಇದೆ. ಅವುಗಳು ಸಣ್ಣಪುಟ್ಟ ಕೈಪಂಪ್‌ಗಳನ್ನು ಅಳವಡಿಸಿರತಕ್ಕ ಕೊಳವೆ ಬಾವಿಗಳನ್ನು ದುರಸ್ತಿ ಮಾಡಬೇಕು. ಐ.ಟಿ.ಐ. ಮೊದಲಾದ ತರಬೇತಿ ಹೊಂದಿರತಕ್ಕ ಯುವಕರು ಈ ಕಿರು ನೀರು ಯೋಜನೆಯಲ್ಲಿ ಏನಾದರೂ ಏರಿಳಿತದಿಂದ ಅಥವಾ ಬೇರೆ ಕಾರಣಗಳಿಂದ ಕೈಪಂಪ್ ಕೆಟ್ಟಿದ್ದರೆ ಅದನ್ನು ರೀವೈಂಡಿಂಗ್ ಮಾಡತಕ್ಕ ಕೆಲಸಗಳು ಆಯಾ ಮಟ್ಟದಲ್ಲಿ ನಡೆಯುತ್ತಿದ್ದರೆ, ಜಾಗ್ರತೆಯಾಗಿ ಕೊಳವೆ ಬಾವಿಗಳನ್ನು ಸುಸ್ಥಿತಿಯಲ್ಲಿ ಇಡುವಂತಾಗುತ್ತದೆ. ಆದರೆ ನೀವು ಹೇಳಿದಂತೆ, ಅನೇಕ ಸಂದರ್ಭಗಳಲ್ಲಿ ಬೇರೆ ಬೇರೆ ಕಾರಣಗಳಿಗೂ ಕೂಡ ಅವುಗಳನ್ನು ಯಾವ ರೀತಿಯಾಗಿ ಸಾರ್ವಜನಿಕವಾಗಿ ಉಪಯೋಗಿಸಿಕೊಳ್ಳಬೇಕು ಎನ್ನುವುದರ ಬಗ್ಗೆ ಕೂಡ ನಮ್ಮ ಜನಗಳಲ್ಲಿ ಜಾಗೃತಿಯನ್ನು ಮೂಡಿಸಬೇಕಾಗುತ್ತದೆ. ಅನೇಕ ಕೊಳವೆ ಬಾವಿಗಳ ರಾಡ್‌ಗಳನ್ನು ಮುರಿದಿರುತ್ತಾರೆ. ಯಾರಾದರೂ ಹುಡುಗರು ಕೊಳವೆ ಬಾವಿಗಳ ಮೇಲೆ ನಿಂತು ಅದನ್ನು ಕೆಟ್ಟದಾಗಿ ಉಪಯೋಗಿಸಿಕೊಂಡಾಗ ರಾಡ್‌ಗಳು ಮುರಿದು ಹೋಗಿರತಕ್ಕವು ಹೆಚ್ಚಿನ ಸಂಖ್ಯೆಯಲ್ಲಿ ಇವೆ. ಆ ದೃಷ್ಟಿಯನ್ನಿಟ್ಟುಕೊಂಡು ನಾನು ಅವರಿಗೆ ಮಾಹಿತಿಯನ್ನು ಕಳುಹಿಸಿಕೊಡುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಅಥವಾ ಇಡೀ ರಾಜ್ಯದಲ್ಲಿ ಬರುವಂತಹ ಕೊಳವೆ ಬಾವಿಗಳಿಗೆ ಸಾಮಗ್ರಿಗಳನ್ನು ಕೊಂಡುಕೊಳ್ಳುವುದಕ್ಕೆ ಹಾಗೂ ಕೊಳವೆ ಬಾವಿಗಳನ್ನು ಕೊಂಡುಕೊಳ್ಳುವುದಕ್ಕೆ ಎಸ್.ಪಿ.ಡಿ. ದರದಲ್ಲಿ ಏನು ನಿಗದಿಪಡಿಸಬೇಕೋ ಅದನ್ನು ನಿಗದಿಪಡಿಸಲಾಗಿದೆಯೇ ಎಂಬುದು ನನ್ನ ಪ್ರಶ್ನೆ.

ಶ್ರೀ ಎಂ.ಪಿ. ಪ್ರಕಾಶ್ : ಈಗ ಎಸ್.ಪಿ.ಡಿ. ರೇಟ್‌ನಲ್ಲಿ ಇರತಕ್ಕ ದರದಲ್ಲಿ ತೆಗೆದುಕೊಳ್ಳಬೇಕು ಎನ್ನತಕ್ಕದ್ದು ಇದೆ. ಇದು ಸದರಿ ಪ್ರಶ್ನೆಗೆ ನೇರವಾಗಿ ಸಂಬಂಧ ಪಡದಿದ್ದರೂ ಕೂಡ ನಾನು ಉತ್ತರಿಸುತ್ತಿದ್ದೇನೆ. ನಾವು ಎಸ್.ಪಿ.ಡಿ. ದರದಲ್ಲಿ ತೆಗೆದುಕೊಳ್ಳಬೇಕಾಗಿದ್ದರೂ, ಕೆಲವೊಂದು ತುರ್ತು ಸಂದರ್ಭಗಳಲ್ಲಿ, ಕೆಲವು ನಿಯಮಾವಳಿಗಳನ್ನು ಸಡಿಲಗೊಳಿಸಲು ಅನುಮತಿಯನ್ನು ಪಡೆದುಕೊಂಡು ಕೆಲಸ ಮಾಡಬೇಕು ಎನ್ನತಕ್ಕಂತಹ ನಿಯಮಾವಳಿ ಕೂಡ ಇದೆ.

ಜವಾಹರ್ ರೋಜಗಾರ್ ಯೋಜನೆಯ ಫಲಾನುಭವಿಗಳು

2412 - ಶ್ರೀ ಬಸನಗೌಡ ಪಾಟೀಲ್ (ವಿಜಾಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ನಗರದಲ್ಲಿ ಇದುವರೆಗೆ ಜವಾಹರ್ ರೋಜ್‌ಗಾರ್ ಯೋಜನೆ ಅಡಿಯಲ್ಲಿ ಎಷ್ಟು ಫಲಾನುಭವಿಗಳಿಗೆ ಸಾಲ ಸೌಲಭ್ಯ ದೊರೆತಿದೆ (ವಿವರ ನೀಡುವುದು)

ಆ) ಸಾಲ ಪಡೆದ ಫಲಾನುಭವಿಗಳು ತಮ್ಮ ಕಸಬು ಆರಂಭಿಸಿದ್ದಾರೆಯೇ; ಎಷ್ಟು ಲಾಭದಲ್ಲಿ ನಡೆಯುತ್ತಿದೆ? (ವಿವರ ನೀಡುವುದು)

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ನಿರುದ್ಯೋಗಿ ಮತ್ತು ಸಾಕಷ್ಟು ಉದ್ಯೋಗಗಳಿಲ್ಲದ ಗ್ರಾಮೀಣ ಪ್ರದೇಶದಲ್ಲಿರುವ ಪುರುಷ ಹಾಗೂ ಮಹಿಳೆಯರಿಗೆ ಹೆಚ್ಚುವರಿ ಲಾಭಗಳಿಸಿ ಕೊಡುವಂತಹ ಉದ್ಯೋಗ ಸೃಜಿಸುವುದು ಜವಾಹರ್ ರೋಜ್‌ಗಾರ್ ಯೋಜನೆಯ ಮೂಲ ಉದ್ದೇಶವಾದ್ದರಿಂದ ನಗರ ಪ್ರದೇಶದವರಿಗೆ ಈ ಯೋಜನೆಯಡಿ ಸಾಲ ಸೌಲಭ್ಯ ಒದಗಿಸುವುದು ಈ ಯೋಜನೆ ವ್ಯಾಪ್ತಿಗೆ ಬರುವುದಿಲ್ಲ.

ಆ) ಅನ್ವಯಿಸುವುದಿಲ್ಲ.

ಶ್ರೀ ಬಸನಗೌಡ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಜವಾಹರ್ ರೋಜ್‌ಗಾರ್ ಯೋಜನೆಯಡಿಯಲ್ಲಿ ನಗರ ಪ್ರದೇಶಗಳಲ್ಲಿ ಸಾಲ ಸೌಲಭ್ಯಗಳನ್ನು ಒದಗಿಸುವುದು, ಈ ಯೋಜನೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂದು ತಿಳಿಸಿದ್ದೀರಿ. ಆದರೆ ನಗರದ ವ್ಯಾಪ್ತಿಯಲ್ಲಿ ಬರುವಂತಹ ನಿರುದ್ಯೋಗಿ ಯುವಕರಿಗೆ ಯಾವ ಒಂದು ಯೋಜನೆಯಡಿಯಲ್ಲಿ ಅವರಿಗೆ ಸಾಲ ಸೌಲಭ್ಯ ಒದಗಿಸುವಂತಹ ವ್ಯವಸ್ಥೆ ಇದೆ ಎಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಇದೊಂದು ಕೇಂದ್ರ ಸರ್ಕಾರದ ಯೋಜನೆ. ಜವಾಹರ್ ರೋಜ್‌ಗಾರ್ ಯೋಜನೆ ಕೇಂದ್ರ ಸರ್ಕಾರದ ಯೋಜನೆಯಾಗಿರುವುದರಿಂದ, ಆ ಯೋಜನೆಯ ಕೆಲವು ನೀತಿ ಮತ್ತು ನಿಯಮಗಳನ್ನು ಅನುಸರಿಸಿ, ಅದನ್ನು ನಾವು ಅನುಷ್ಠಾನಗೊಳಿಸಬೇಕಾಗುತ್ತದೆ. ಆ ಯೋಜನೆಯಲ್ಲಿ ರಾಜ್ಯ ಸರ್ಕಾರದ ಪಾಲೂ ಇದೆ.

ನಗರ ಪ್ರದೇಶಗಳ ನಿರುದ್ಯೋಗಿಗಳಿಗೂ ಕೂಡ ಉದ್ಯೋಗ ಒದಗಿಸಿಕೊಡುವುದರಲ್ಲಿ, ಇದು ಬಹಳ ಪ್ರಮುಖವಾದ ಚರ್ಚೆ ಇದಾಗುವುದರಿಂದ, ಇದರ ಬಗ್ಗೆಯೂ ಕೂಡ ನಮ್ಮ ಸರ್ಕಾರ ಕೇಂದ್ರ ಸರ್ಕಾರಕ್ಕೆ ಬರೆಯುತ್ತದೆ. ತಾವೂ ಕೂಡ ತಮ್ಮ ಪ್ರಭಾವವನ್ನು ಕೇಂದ್ರ ಸರ್ಕಾರದ ಮೇಲೆ ಬೀರಿ, ಈ ಯೋಜನೆಯಲ್ಲಿ ನಗರಪ್ರದೇಶದ ನಿರುದ್ಯೋಗಿಗಳನ್ನು ಸೇರಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ತಮ್ಮ ಮೂಲಕ ಅವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಮೀನು ಅಭಿವೃದ್ಧಿ ಮಂಡಳಿ

2254 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಮೀನು ಅಭಿವೃದ್ಧಿ ಮಂಡಳಿ (ಕೆ.ಎಫ್.ಡಿ.ಸಿ) ಶಾಖೆಗಳನ್ನು ಎಲ್ಲೆಲ್ಲಿ ಹೊಂದಿದೆ?

ಆ) ಒಟ್ಟು ಇರುವ ಸಿಬ್ಬಂದಿಗಳೆಷ್ಟು?

ಇ) ಕೆ.ಎಫ್.ಡಿ.ಸಿ.ಯನ್ನು ಲಾಭದಾಯಕವನ್ನಾಗಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ ನಿಯಮಿತ, ಮಂಗಳೂರು ಇದು ಉತ್ಪಾದನಾ ಘಟಕಗಳನ್ನು ಮಂಗಳೂರು, ಉಳ್ಳಾಲ, ಕುಳೈ, ಕಾಪು, ಮಲ್ಪೆ, ಗಂಗೊಳ್ಳಿ, ಭಟ್ಕಳ, ತದಡಿ ಮತ್ತು ಕಾರವಾರಗಳಲ್ಲಿ ಹೊಂದಿದೆ. ಜೊತೆಗೆ 20 ಮಾರಾಟ ಮಳಿಗೆಗಳನ್ನು ಬೆಂಗಳೂರು (8 ಸಂಖ್ಯೆ), ಹುಬ್ಬಳ್ಳಿ, ಮಡಿಕೇರಿ, ವಿರಾಜಪೇಟೆ,

ಗೋಣಿಕೊಪ್ಪಲು, ಸಿದ್ದಾಪುರ, ಮೈಸೂರು, ಮಂಡ್ಯ, ಕೋಲಾರ, ಕೆ.ಜಿ.ಎಫ್. ಗೌರಿಬಿದನೂರು, ತುಮಕೂರು ಮತ್ತು ಚಿಕ್ಕಬಳ್ಳಾಪುರಗಳಲ್ಲಿ ಹೊಂದಿದೆ.

ಆ) 289

ಇ) ಸರ್ಕಾರವು ನಿಗಮಕ್ಕೆ ಸಹಾಯ ಮಾಡಲು ಇಲ್ಲಿಯವರೆಗೆ 244.145 ಲಕ್ಷ ರೂ.ಗಳ ಷೇರು ಬಂಡವಾಳ ಮತ್ತು 60 ಲಕ್ಷ ರೂ.ಗಳ ಸಾಲನ್ನು ನೀಡಿದೆ.

ಶ್ರೀ ಕೆ. ಪ್ರತಾಪ್ ಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ ನಿಯಮಿತ ಇದು ನಷ್ಟದಲ್ಲಿ ನಡೆಯುತ್ತಿದೆ. ರಾಜ್ಯದ ಬೇರೆ ಬೇರೆ ಖಾಸಗಿ ಸಂಸ್ಥೆಗಳು ಲಾಭದಾಯಕವಾಗಿ ನಡೆಯುತ್ತರತಕ್ಕಂತಹ ಸಂದರ್ಭದಲ್ಲಿ ಈ ಒಂದು ಸಂಸ್ಥೆ ನಷ್ಟದಲ್ಲಿ ನಡೆಯುವುದಕ್ಕೆ ಕಾರಣವೇನು ಮತ್ತು ಒಟ್ಟು ಇರುವ 289 ಸಿಬ್ಬಂದಿಗಳಲ್ಲಿ 200 ಸಿಬ್ಬಂದಿಗಳು ಹೆಚ್ಚುವರಿಯಾಗಿ ಇದೆ ಎನ್ನತಕ್ಕಂತಹದ್ದನ್ನು ವಿಷಯ ಸಮಿತಿ ಗಮನಿಸಿದೆ. ಈ ಬಗ್ಗೆ ತಮ್ಮ ನಿಲುವೇನು? 3.27 ಕೋಟಿ ರೂಪಾಯಿಗಳಷ್ಟು ನಷ್ಟವನ್ನು ತುಂಬಲು ಸರ್ಕಾರ ಕೈಗೊಳ್ಳತಕ್ಕಂತಹ ಕ್ರಮವೇನು ಮತ್ತು ಅದನ್ನು ಎಷ್ಟು ವರ್ಷದಲ್ಲಿ ಲಾಭದಾಯಕವನ್ನಾಗಿ ಮಾಡಬಹುದು? ಜೊತೆಗೆ ಈ ನಿಗಮದ ಮೂಲಕ ಈಗ ವಹಿವಾಟು ನಡೆಯುತ್ತಿಲ್ಲ, ಮೀನುಗಾರರು ಹಾಗೂ ಅಧಿಕಾರಿಗಳ ಮಧ್ಯೆ ಸಾಮರಸ್ಯವಿಲ್ಲವೆನ್ನುವ ಕೂಗಿದೆ, ಇದನ್ನು ಹೇಗೆ ಸರಿಪಡಿಸುತ್ತೀರಿ?

ಶ್ರೀ ಕೆ. ಜಯಪ್ರಕಾಶ್ ಹೆಗ್ಗಡೆ : ಅಧ್ಯಕ್ಷರೆ, ಮಾನ್ಯ ಸದಸ್ಯರು, ಈ ಸಂಸ್ಥೆಯಲ್ಲಿ ಹೆಚ್ಚುವರಿ ನೌಕರರಿದ್ದಾರೆಂದು ಹೇಳಿದರು, ಅದು ಸತ್ಯ. ಹಿಂದೆ ತಪ್ಪು ಮಾಡಿದ ಹಾಗೆ ನಾವು ಈಗ ಮಾಡದೆ, ಹೊಸ ನೌಕರರನ್ನು ತೆಗೆದುಕೊಳ್ಳುವುದಕ್ಕೆ ನಿಲ್ಲಿಸಿದ್ದೇವೆ. ಹಾಗೆಯೇ ಈ ಒಂದು ಸಂಸ್ಥೆ ಹಿಂದೆ ಬಹಳಷ್ಟು ನಷ್ಟದಲ್ಲಿತ್ತು. ಆದರೆ ಪ್ರಸ್ತುತ ಈ ವರ್ಷದ ಹಿಂದಿನ ಮೂರು ತಿಂಗಳಲ್ಲಿ ನಾವು 10 ಲಕ್ಷ ರೂಪಾಯಿಗಳ ಲಾಭವನ್ನು ಗಳಿಸಿದ್ದೇವೆ. ನಾವು ಇನ್ನೂ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಈಗ ಹೆಚ್ಚುವರಿ ನೌಕರರನ್ನು ಸಾಧ್ಯವಾದ ಮಟ್ಟಿಗೆ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳಿಗೆ ತೆಗೆದುಕೊಳ್ಳುವುದು ಹಾಗೂ 1994-95 ಮತ್ತು 1995-96ನೇ ಸಾಲಿನಲ್ಲಿ ಪುನಃ ನಿಗಮಕ್ಕೆ ಹಣವನ್ನು ಸರ್ಕಾರದಿಂದ ಒದಗಿಸಿ ಇನ್ನೂ ಹೆಚ್ಚಿನ ವ್ಯಾಪರ ಮಾಡಲು ಪ್ರಯತ್ನ ಮಾಡುತ್ತೇವೆ. ಇದುವರೆವಿಗೆ ಮೀನುಗಾರರಿಗೆ ಮುಂಗಡ ಹಣವನ್ನು ಒದಗಿಸದೆ ಅವರು ಮೀನನ್ನು ಕೊಡುತ್ತಿರಲಿಲ್ಲ, ಕೆಲವು ಶೀತಲೀಕರಣ ಘಟಕಗಳು ನಷ್ಟದಲ್ಲಿ ನಡೆಯುತ್ತಿತ್ತು, ಅವನ್ನು ಪುನಶ್ಚೇತನಗೊಳಿಸಿ ಹೆಚ್ಚಿನ ಕಾರ್ಯಕ್ರಮಗಳನ್ನು ಹಾಕಿಕೊಂಡು ಅದನ್ನು ಲಾಭದಲ್ಲಿ ತರುವುದಕ್ಕೆ ಪ್ರಯತ್ನವನ್ನು ಮಾಡುತ್ತಾ ಇದ್ದೇವೆ.

ಡಾ॥ ಯು. ಚಿತ್ತರಂಜನ್ : ಅನೇಕರಿಗೆ ಗೊತ್ತಿರುವುದಿಲ್ಲ, ಸಂಜೆ ಹೊತ್ತಿಗೆ ಮೀನನ್ನು ಹಿಡಿದುಕೊಂಡು ಬಂದದ್ದನ್ನು ಅವರು ಕೂಡಲೇ ವ್ಯಾಪಾರ ಮಾಡಿದಾಗ ಶೇಕಡ 6ರಷ್ಟನ್ನು ಅವರು ಇಟ್ಟುಕೊಳ್ಳುತ್ತಾರೆ. ಸಾಧಾರಣವಾಗಿ ಭಟ್ಕಳ್ ಬಂದರಿನಲ್ಲಿ ಒಂದು ದಿವಸಕ್ಕೆ ಒಂದು ಲಕ್ಷದಿಂದ ಇಪ್ಪತ್ತು ಲಕ್ಷದವರೆಗೆ ಮೀನು ಬರುತ್ತದೆ. ಅದರಲ್ಲಿ ಶೇಕಡ 6ರಷ್ಟನ್ನು ಇಟ್ಟುಕೊಂಡು ಮೀನುಗಾರರು ಯಾರಿದ್ದಾರೆ ಅವರಿಗೆ ಮುಂಗಡವನ್ನು ಕೊಡುತ್ತಾರೆ. ಇಷ್ಟು ಹಣವನ್ನು ಸಂಪಾದನೆ ಮಾಡುವುದಕ್ಕೆ ಅವಕಾಶವಿರುವಾಗ ಬಹುಶಃ ಇಲ್ಲಿ ಪ್ರೋತ್ಸಾಹ ಕಡಿಮೆ ಇದೆ. ಅವರಿಂದ ಎಂಟರ್‌ಪ್ರೆನ್ಯೂರ್ಸ್ ಅನ್ನು ತೆಗೆದುಕೊಳ್ಳುವಂತಹ ಕೊರತೆ ಇದೆ. ಯಾರು ಮೀನು ವಹಿವಾಟು ಮಾಡುತ್ತಾರೆ, ಅವರ ಮನಸ್ಸನ್ನು ಗೆದ್ದು, ಮಾಡಲು ಒಂದು ವಿಶೇಷವಾದ ಪ್ರೋತ್ಸಾಹ ಕೊಡುವುದಕ್ಕೆ ಏನು ಕಾರ್ಯಕ್ರಮ ರಚಿಸಲಾಗಿದೆ?

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಕಳೆದ 24 ವರ್ಷಗಳಿಂದ ಈ ಒಂದು ಸಂಸ್ಥೆ ನಷ್ಟದಲ್ಲಿಯೇ ಬಂದಿತ್ತು. ಕಾರಣ, ಅಲ್ಲಿರುವಂತಹ ವ್ಯವಸ್ಥೆ ಏನೆಂದರೆ ಮೀನುಗಾರರಿಗೆ, ಮೀನುಗಾರಿಕೆಯಲ್ಲಿ ಮುಂಗಡ ಹಣವನ್ನು ಆ ಸೀಸನ್‌ನಲ್ಲಿ ಅವರು ಕೊಟ್ಟರೆ ಮಾತ್ರ ಮೀನನ್ನು ಕೊಡುವಂತಹ ಒಂದು ವ್ಯವಸ್ಥೆ ಇದೆ. ಇದುವರೆಗೆ ಹಣದ ಕೊರತೆಯಿಂದ ಕೊಡುವುದಕ್ಕೆ ಕಷ್ಟವಾಗುತ್ತಿತ್ತು. ಈಗ ಸರ್ಕಾರದ ವತಿಯಿಂದ ಹೆಚ್ಚಿನ ಹಣವನ್ನು ಒದಗಿಸಿಕೊಂಡು ಈ ಒಂದು ವ್ಯವಸ್ಥೆಯನ್ನು ಮಾಡಿಕೊಂಡಿದ್ದೇವೆ, ಮುಂದಿನ ದಿನಗಳಲ್ಲಿ ಇದನ್ನು ಪುನಃ ಲಾಭದಾಯಕವಾಗಿ ಮಾಡಲು ನಾವು ಹೆಚ್ಚಿನ ಪ್ರಯತ್ನವನ್ನು ಮಾಡುತ್ತಿದ್ದೇವೆ.

ಶ್ರೀ ಕೆ. ಪ್ರತಾಪ್ ಚಂದ್ರ ಶೆಟ್ಟಿ : ಬ್ರಹ್ಮಾವರ ಹಂಗಾರ ಕಟ್ಟೆಯಲ್ಲಿ ನಿಗಮದ ಉತ್ಪಾದನೆಯಲ್ಲಿ ಘಟಕವನ್ನು ಮಾಡುವ ಯೋಜನೆ ಏನಾದರೂ ಇದೆಯೇ?

ಶ್ರೀ ಕೆ. ಜಯಪ್ರಕಾಶ್ ಹೆಗ್ಗಡೆ : ಇಷ್ಟರವರೆಗೆ ಆ ಒಂದು ಯೋಜನೆಯನ್ನು ಹಾಕಿಕೊಂಡಿಲ್ಲ, ಅಗತ್ಯ ಕಂಡುಬಂದಲ್ಲಿ ಅದನ್ನು ಹಾಕಿಕೊಳ್ಳುತ್ತೇವೆ.

ಬೀಳಗಿ ನ್ಯಾಯಾಲಯಕ್ಕೆ ಸ್ವಂತ ಕಟ್ಟಡವಿಲ್ಲದಿರುವುದು

2295 - ಶ್ರೀ ಜೆ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆ ಬೀಳಗಿ ತಾಲ್ಲೂಕು ಕೇಂದ್ರ ಸ್ಥಳವಿದ್ದು ಅಲ್ಲಿ ನ್ಯಾಯಾಲಯದ ಕಟ್ಟಡ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದೇ ವರ್ಷದಲ್ಲಿ ಕಟ್ಟಡ ಕಟ್ಟಲು ಕಾರ್ಯಕ್ರಮ ಹಾಕಿಕೊಳ್ಳಲಾಗುವುದೆ?

ಇ) ಕಾರ್ಯಕ್ರಮ ಹಾಕಿಕೊಂಡಿದ್ದಲ್ಲಿ ಕಟ್ಟಡದ ಅಂದಾಜು ವೆಚ್ಚವೆಷ್ಟು?

ಈ) ಹಾಗಿಲ್ಲದಿದ್ದಲ್ಲಿ 1995-96ನೇ ಸಾಲಿನಲ್ಲಿ ಕಟ್ಟಡ ಸಲುವಾಗಿ ಏನಾದರೂ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ವಾರ್ತಾ ಮತ್ತು ಪ್ರಚಾರ ಸಚಿವರು) :

ಅ) ಹೌದು

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

ಈ) ಈ ಉದ್ದೇಶಕ್ಕಾಗಿ ಸೂಕ್ತ ನಿವೇಶನ ಪಡೆಯುವ ದಿಟ್ಟಿನಲ್ಲಿ ವ್ಯವಸ್ಥಾಪಕ ನಿರ್ದೇಶಕರು, ರಿಸೆಟಲ್‌ಮೆಂಟ್ ಮತ್ತು ಪುನರ್ವಸತಿ, ಕೃಷ್ಣಾ ಮೇಲ್ದಂಡೆ ಯೋಜನೆ, ಬಾಗಲಕೋಟೆ ಇವರನ್ನು ಬೀಳಗಿಯಲ್ಲಿ 4 ಎಕರೆ ಜಮೀನು ಒದಗಿಸುವಂತೆ ಕೋರಿದೆ ಹಾಗೂ ಜಿಲ್ಲಾ ನ್ಯಾಯಾಧೀಶರು ಬಿಜಾಪುರರವರನ್ನು ಸದರಿ ಜಮೀನು ನ್ಯಾಯಾಲಯ ಕಟ್ಟಡ ಕಟ್ಟಲು ಸೂಕ್ತವೇ ಎಂಬ ಬಗ್ಗೆ ಅಭಿಪ್ರಾಯ ನೀಡಲು ಕೋರಿದೆ. ಈ ಬಗ್ಗೆ ಜಮೀನು ಲಭ್ಯವಾದ ಕೂಡಲೇ ಉಚ್ಚನ್ಯಾಯಾಲಯ ಪ್ರಸ್ತಾವನೆ ಬಂದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಜೆ.ಟಿ. ಪಾಟೀಲ್ : ಅಧ್ಯಕ್ಷರೇ, ಮಂತ್ರಿಗಳು ತಮ್ಮ ಉತ್ತರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ರಿಸೆಟಲ್‌ಮೆಂಟ್ ಮತ್ತು ಪುನರ್ವಸತಿ, ಕೃಷ್ಣಾ ಮೇಲ್ದಂಡೆ ಯೋಜನೆ, ಬಾಗಲಕೋಟೆ ಇವರಿಂದ ನಿವೇಶನವನ್ನು ಪಡೆದುಕೊಳ್ಳಲು ಕೋರಲಾಗಿದೆ ಎಂದು ಹೇಳಿದ್ದಾರೆ. ಅದನ್ನು ತಾವು ಯಾವಾಗ ಕೋರಿದ್ದೀರಿ? ಅವರಿಂದ ಯಾವಾಗ

ಉತ್ತರ ಬಂದಿದೆ? ಬರದಿದ್ದರೆ, ಎಷ್ಟು ದಿನಗಳಲ್ಲಿ ಅವರಿಂದ ನಿವೇಶನವನ್ನು ಪಡೆದುಕೊಳ್ಳಲು ವ್ಯವಸ್ಥೆಯನ್ನು ಮಾಡುವಿರಿ? ಎರಡನೆಯದು, ಜಿಲ್ಲಾ ನ್ಯಾಯಾಲಯಗಳಿಗೆ ಈ ನಿವೇಶನ ಸೂಕ್ತವೇ ಎಂಬ ಬಗ್ಗೆ ಬರೆದಿದ್ದೇವೆಂದು ಅದನ್ನು ತಾವು ಪ್ರಸ್ತಾಪಿಸಿದ್ದೀರಿ. ಅವರಿಂದ ಏನಾದರೂ ನಿಮಗೆ ಉತ್ತರ ಬಂದಿದೆಯೇ? ಬರದಿದ್ದರೆ ತಾವು ಎಷ್ಟು ದಿವಸಗಳಲ್ಲಿ ತರಿಸಿಕೊಳ್ಳುವ ವ್ಯವಸ್ಥೆಯನ್ನು ಮಾಡುತ್ತೀರಿ? ಇವೆಲ್ಲವನ್ನೂ ಬೇಗ ತರಿಸಿಕೊಂಡು ನಮ್ಮ ಬೀಳಗಿಗೆ ನ್ಯಾಯಾಲಯದ ಕಟ್ಟಡ ನಿರ್ಮಾಣ ಕಾರ್ಯವನ್ನು ಎಷ್ಟು ದಿವಸಗಳಲ್ಲಿ ಪ್ರಾರಂಭ ಮಾಡುತ್ತೀರೆಂದು ಒಂದು ಸ್ಪಷ್ಟವಾದ ಉತ್ತರವನ್ನು ಪಡೆಯುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೆ, 1993ನೇ ಇಸವಿಯಲ್ಲಿ ಬೀಳಗಿಯಲ್ಲಿ ಮ್ಯಾನಿಸಿಪಲ್ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟ್ ಕೋರ್ಟನ್ನು ತೆರೆದಿದ್ದೇವೆ. ಅದು ಖಾಸಗಿ ಕಟ್ಟಡದಲ್ಲಿ ನಡೆಯುತ್ತಿದೆ. ಕೃಷ್ಣಾ ಮೇಲ್ದಂಡೆ ವ್ಯವಸ್ಥಾಪಕ ನಿರ್ದೇಶಕರಿಗೆ ನಾಲ್ಕು ಎಕರೆ ಜಮೀನು ಕೊಡಬೇಕೆಂದು ಹೈಕೋರ್ಟ್‌ನವರು ಜಿಲ್ಲಾ ಸೆಷನ್ ನ್ಯಾಯಾಧೀಶರನ್ನು ಕೇಳಿದ್ದಾರೆ. ಮತ್ತು ಅಲ್ಲಿರುವಂತಹ ಜಾಗ ಕಟ್ಟಡದ ನಿರ್ಮಾಣಕ್ಕೆ ಸರಿಹೊಂದುವುದೇ ಹೇಗೆ ಎನ್ನುವುದನ್ನು ತಾವು ಹೋಗಿ ನೋಡಿ ಕೊಂಡು ಬರಬೇಕೆಂದು ಉಚ್ಚನ್ಯಾಯಾಲಯದವರು ಆ ಜಿಲ್ಲಾ ಸೆಷನ್ಸ್ ನ್ಯಾಯಾಧೀಶರಿಗೆ ತಿಳಿಸಿದ್ದಾರೆ. ಈ ಪ್ರಸ್ತಾವನೆ ಈಗ ಹೈಕೋರ್ಟಿಗೆ ಇನ್ನೂ ಬಂದಿಲ್ಲ. ನಾನು ಇದರ ಬಗ್ಗೆ ಈಗಾಗಲೇ ನಮ್ಮ ಕಾರ್ಯದರ್ಶಿಯವರಿಗೆ ಈ ಪ್ರಸ್ತಾವನೆಯನ್ನು ಕೂಡಲೇ ತರಿಸಿಕೊಳ್ಳುತ್ತೇನೆ, ನಾಳೆ ಉಚ್ಚನ್ಯಾಯಾಲಯದವರು ಇದಕ್ಕೆ ಒಪ್ಪಿ, ನಂತರ ಅದಕ್ಕೆ ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟು, ಅಲ್ಲಿಂದ ನಮ್ಮ ಇಲಾಖೆಗೆ ಬಂದ ಮೇಲೆ ನಾನು ಈ ಕ್ರಮವನ್ನು ತೆಗೆದುಕೊಳ್ಳುತ್ತೇನೆ. 1995-96ನೇ ಸಾಲಿಗೆ ಈ ಉದ್ದೇಶಕ್ಕಾಗಿ ನಾವು ಅನುದಾನವನ್ನು ಬಿಡುಗಡೆ ಮಾಡಿಲ್ಲ. ಮಂಜೂರಾತಿ ಆಗಿಲ್ಲ. ಮುಂದಿನ ವರ್ಷ ಇದನ್ನು ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಬೆಂಗಳೂರು ಮ್ಯಾಜಿಸ್ಟ್ರೇಟ್ ಕೋರ್ಟ್ ಆವರಣದಲ್ಲಿ ಕ್ಯಾಂಟಿನ್ ವ್ಯವಸ್ಥೆ ಇಲ್ಲದೇ ಇರುವುದು.

2281 - ಶ್ರೀ ರಾಮಲಿಂಗ ರೆಡ್ಡಿ (ಜಯನಗರ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಮ್ಯಾಜಿಸ್ಟ್ರೇಟ್ ಕೋರ್ಟ್ ಕಾಂಪ್ಲೆಕ್ಸ್ ಆವರಣದಲ್ಲಿ ಕ್ಯಾಂಟೀನ್ ವ್ಯವಸ್ಥೆ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದಕ್ಕೆ ಟೆಂಡರ್ ಕರೆಯಲಾಗಿದೆಯೇ?

ಇ) ಈ ಕಾಂಪ್ಲೆಕ್ಸ್‌ನಲ್ಲಿ ಕ್ಯಾಂಟೀನ್ ವ್ಯವಸ್ಥೆಯನ್ನು ಒದಗಿಸಲು ಸರ್ಕಾರ ಕ್ರಮಕೈಗೊಳ್ಳುವುದೇ?

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ವಾರ್ತಾ ಮತ್ತು ಪ್ರಚಾರ ಸಚಿವರು) :

ಅ) ಕ್ಯಾಂಟೀನ್ ವ್ಯವಸ್ಥೆ ಇದೆ.

ಆ) ಲೀವ್ ಅಂಡ್ ಲೈಸೆನ್ಸ್ ಅಗ್ರಿಮೆಂಟ್ ಪ್ರಕಾರ ಪ್ರಿನ್ಸಿಪಲ್ ಸಿಟಿ ಸಿವಿಲ್ ಅಂಡ್ ಸೆಷನ್ಸ್ ನ್ಯಾಯಾಧೀಶರು ಈ ಕ್ಯಾಂಟೀನುಗಳನ್ನು ನಡೆಸಲು ಅನುಮತಿ ನೀಡಿರುತ್ತಾರೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ರಾಮಲಿಂಗಾ ರೆಡ್ಡಿ : ಸನ್ಮಾನ್ಯ ಅಧ್ಯಕ್ಷರೇ, ಬೆಂಗಳೂರಿನ ಮ್ಯಾಜಿಸ್ಟ್ರೇಟ್ ಕೋರ್ಟ್ ಕಾಂಪ್ಲೆಕ್ಸ್ ಆವರಣದಲ್ಲಿ ಕ್ಯಾಂಟೀನ್ ವ್ಯವಸ್ಥೆ ಇಲ್ಲವೆಂದು ನನ್ನ ಗಮನಕ್ಕೆ ಬಂದಿತ್ತು. ಆದರೆ ಸನ್ಮಾನ್ಯ ಸಚಿವರು ಕ್ಯಾಂಟೀನ್ ವ್ಯವಸ್ಥೆ ಇದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ.

ಯಾದಗಿರಿ ತಾಲ್ಲೋಕಿನಲ್ಲಿ ಕುಡಿಯುವ ನೀರಿನ ಸರಬರಾಜು ಯೋಜನೆ

2518 - ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯಾದಗಿರಿ ತಾಲ್ಲೂಕಿನಲ್ಲಿ ಮಂಜೂರಾಗಿರುವ ಒಟ್ಟು ಕುಡಿಯುವ ನೀರು ಸರಬರಾಜು ಯೋಜನೆಗಳೆಷ್ಟು (ಕಿರು ನೀರು ಸರಬರಾಜು ಪೈಪ್ ಮೂಲಕ ಸರಬರಾಜು ಮಾಡುವ ಕುಡಿಯುವ ನೀರಿನ ಯೋಜನೆ ಇತರೆ ಎಲ್ಲಾ ವಿವರಗಳನ್ನು ನೀಡುವುದು)

ಆ) ಈ ಯೋಜನೆಗಳು ಸಮರ್ಪಕವಾಗಿ ನಡೆಯುತ್ತಿವೆಯೇ? ಇಲ್ಲದಿದ್ದಲ್ಲಿ ಕಾರಣವೇನು?

ಇ) ಈ ಯೋಜನೆಗಳಿಗೆ ಅಗತ್ಯವಿರುವಷ್ಟು ಹಣವನ್ನು ರಾಜ್ಯ ಸರ್ಕಾರ ಬಿಡುಗಡೆ ಮಾಡಿದೆಯೇ?

ಈ) ಮಾಡದಿದ್ದರೆ ಯಾವಾಗ ಹಣವನ್ನು ಬಿಡುಗಡೆ ಮಾಡಲಾಗುವುದು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು):

ಅ) ಯಾದಗಿರಿ ತಾಲ್ಲೂಕಿನಲ್ಲಿ ಮಂಜೂರಾಗಿರುವ ಕುಡಿಯುವ ನೀರು ಸರಬರಾಜು ಯೋಜನೆಗಳು : 1113

ಇತರೆ ವಿವರಗಳು ಕೆಳಗಿನಂತಿವೆ.

ಕೈಪಂಪು ಕೊಳವೆ ಬಾವಿಗಳು	:	862
ಕಿರು ನೀರು ಸರಬರಾಜು ಯೋಜನೆಗಳು	:	179
ಕೊಳವೆ ನೀರು ಸರಬರಾಜು ಯೋಜನೆಗಳು	:	72
		1113

ಆ) ಪೂರ್ಣಗೊಂಡಿರುವ ಯೋಜನೆಗಳು ತೃಪ್ತಿಕರವಾಗಿ ಕೆಲಸ ಮಾಡುತ್ತಿವೆ.

ಇ) ಹೌದು

ಈ) ಕಾರ್ಯಕ್ರಮದಂತೆ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ಮಂತ್ರಿಗಳು ಕೊಟ್ಟಂಥ ಉತ್ತರದಲ್ಲಿ ಕೈಪಂಪು ಕೊಳವೆ ಬಾವಿಗಳು 862, ಕಿರು ನೀರು ಸರಬರಾಜು ಯೋಜನೆಗಳು 179 ಮತ್ತು ಕೊಳವೆ ನೀರು ಸರಬರಾಜು ಯೋಜನೆಗಳು 72. ಹೀಗೆ ಒಟ್ಟು 1113 ಎಂದು ಹೇಳಿದ್ದಾರೆ. ಇದರಲ್ಲಿ ಈಗ ಎಷ್ಟು ಚಾಲ್ತಿಯಲ್ಲಿವೆ ಮತ್ತು ಎಷ್ಟು ದುರಸ್ತಿ ಮಾಡತಕ್ಕಂತಹ ವ್ಯವಸ್ಥೆಯಲ್ಲಿವೆ ಎನ್ನುವುದನ್ನು ಸ್ಪಷ್ಟಪಡಿಸಬೇಕು, ಇದು ಮೊದಲನೆಯದು, ಎರಡನೆಯದು, ಹೊಸದಾಗಿ ಮಂಜೂರಾದವು ಎಷ್ಟು? ಅವನ್ನು ಯಾವಾಗ ಪೂರ್ಣಗೊಳಿಸುತ್ತೀರಿ, ಕೆಲವಕ್ಕೆ ವಿಶೇಷ ಅನುದಾನವನ್ನು ಒಂದು ಯೋಜನೆ ಅಡಿಯಲ್ಲಿ ಕೊಡಲಾಗಿತ್ತು. ಅಂದರೆ, ನಿರ್ದಿಷ್ಟವಾಗಿ ನಮ್ಮ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಈ ಕೆ.ಇ.ಬಿ. ಯವರು ಎಲೆಕ್ಟ್ರಿಕ್ ವೈಯರ್

ಇಲ್ಲವೆಂದು, ಕನೆಕ್ಷನ್ ಕೊಟ್ಟಿಲ್ಲವೆಂದು ಅವು ಬಹಳಷ್ಟು ನಿಂತು ಹೋಗಿವೆ. ಅಂದರೆ, ನಿಮ್ಮ ಇಲಾಖೆಯ ವತಿಯಿಂದ ಒಂದನ್ನು ಮಾಡಿದ್ದಾರೆ, ಆದರೆ ಸಂಪರ್ಕ ಕೊಟ್ಟಿಲ್ಲವೆಂದು ಆ ಕಿರುನೀರು ಸರಬರಾಜು ಯೋಜನೆ ಅಸ್ತಿತ್ವದಲ್ಲಿ ಬಂದಿಲ್ಲ. ಅದಕ್ಕಾಗಿ, ದಯವಿಟ್ಟು ಇದನ್ನು ಯಾವಾಗ ಪೂರೈಸುತ್ತೀರಿ ಮತ್ತು ಯಾವಾಗ ಇದನ್ನು ಮಾಡುತ್ತೀರಿ? ಎಷ್ಟು ದುರಸ್ತಿ ಮಾಡತಕ್ಕಂತಹವುಗಳಿವೆ, ಅವನ್ನೂ ಕೂಡ ಹೇಳಬೇಕು. ಮತ್ತೆ ಆ ವರ್ಲ್ಡ್ ಬ್ಯಾಂಕ್ ಏಡೆಡ್ ಪ್ರಾಜೆಕ್ಟ್‌ನಲ್ಲಿ ಏನಾದರೂ ಆ ಜಿಲ್ಲೆಯು ಸೇರಿದೆಯೇನು? ಆ ಜಿಲ್ಲೆಯು ಸೇರಿದ್ದರೆ, ಈ ತಾಲ್ಲೂಕನ್ನೂ ಸಹ ಅದರಲ್ಲಿ ಏನಾದರೂ ಅಳವಡಿಸಿಕೊಳ್ಳಲಾಗಿದೆಯೇ?

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಬಹಳ ವ್ಯಾಪಕವಾದಂಥ ಪ್ರಶ್ನೆಯನ್ನು ಕೇಳಿದ್ದಾರೆ. ಇದರಲ್ಲಿ 1995-96ನೇ ಸಾಲಿಗೆ ಒಟ್ಟು 42.95 ಲಕ್ಷ ರೂಪಾಯಿಗಳನ್ನು ನಾವು ಅನುದಾನವಾಗಿ ಬಿಡುಗಡೆ ಮಾಡಿದ್ದೇವೆ. ಈಗ 144 ಯೋಜನೆಗಳಲ್ಲಿ 195 ಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ. ಅದರಲ್ಲಿ 18 ಕೊಳವೆ ನೀರು ಸರಬರಾಜು ಯೋಜನೆ, ಮತ್ತು 87 ಕಿರು ನೀರು ಸರಬರಾಜು ಯೋಜನೆ, ಇವುಗಳಿಗೆ ನಾವು ಈಗಾಗಲೇ ಅನುದಾನವನ್ನು ಬಿಡುಗಡೆ ಮಾಡಿದ್ದೇವೆ. ಉಳಿದ 24 ಕೊಳವೆ ನೀರು ಸರಬರಾಜು ಯೋಜನೆ, 1995-96ನೇ ಸಾಲಿನ ಅನುಬಂಧ (ಇ)ನಲ್ಲಿ ಕೊಡಲಾಗಿದೆ, ಅದು ತಮಗೆ ಗೊತ್ತಿರುವಂತಹದ್ದು. ಅದರಲ್ಲಿ 62.86 ಲಕ್ಷ ರೂಪಾಯಿಗಳನ್ನು ಈ ವರ್ಷದ ಜುಲೈ ಅಂತ್ಯದವರೆಗೆ ನಾವು ಖರ್ಚು ಮಾಡಿದ್ದೇವೆ. ಉಳಿದಿರುವಂತ ಮೊತ್ತವನ್ನು ನಂತರ ಖರ್ಚು ಮಾಡುತ್ತೇವೆ. ಈ ವರ್ಷದಲ್ಲಿ 29.43 ಲಕ್ಷಗಳನ್ನು ಈ ವಿಚಾರಕ್ಕಾಗಿಯೇ ಅನುದಾನವನ್ನು ಬಿಡುಗಡೆ ಮಾಡಿದ್ದೇವೆ. ಇನ್ನುಳಿದ 11 ಯೋಜನೆಗಳನ್ನು 1996-97ನೇ ಸಾಲಿನಲ್ಲಿ ಅವುಗಳನ್ನು ಮುಂದುವರೆದ ಕಾಮಗಾರಿಗಳೆಂದು ಪರಿಗಣಿಸಿ, ನಾವು ಪೂರ್ಣಗೊಳಿಸುವುದಕ್ಕೆ ನಿರ್ಧರಿಸಿದ್ದೇವೆ. ಹಾಗೆಯೇ 15 ಕಿರುನೀರು ಯೋಜನೆಗಳಲ್ಲಿ 1995-96ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಮುಂದುವರೆಯುವ ಕಾಮಗಾರಿಗಳೆಂದು ಎಂದು ಸೇರಿಸಲ್ಪಟ್ಟಿವೆ. ಇವುಗಳ ಅಂದಾಜು ಮೊತ್ತ 23 ಲಕ್ಷ ರೂಪಾಯಿಗಳಾಗಿವೆ. ಇದಕ್ಕಾಗಿ, ಇಲ್ಲಿಯವರೆಗೆ 14 ಲಕ್ಷ ರೂಪಾಯಿಗಳ ಹಣವನ್ನು ಖರ್ಚು ಮಾಡಲಾಗಿದೆ. 1995-96ನೇ ಸಾಲಿಗಾಗಿ 13.52 ಲಕ್ಷ ರೂಪಾಯಿಗಳನ್ನು, ಈ ಹಿಂದಿನ ಹಣವಲ್ಲದೆ, ಉಳಿದಿರತಕ್ಕಂತಹ ಹಣವನ್ನೂ ಕೂಡ ನಾವು ಬಿಡುಗಡೆ ಮಾಡಿದ್ದೇವೆ.

ಮಾರ್ಚ್ 96ರೊಳಗೆ ಈ ಎಲ್ಲಾ ಯೋಜನೆಗಳನ್ನು ಮುಕ್ತಾಯಗೊಳಿಸುತ್ತೇವೆ. ತಾವು ಹೇಳಿದಂತೆ ವಿದ್ಯುಚ್ಛಕ್ತಿ ಮಂಡಳಿಯವರು ವಿದ್ಯುಚ್ಛಕ್ತಿಯನ್ನು ಯಾವುದೋ ಕಾರಣಗೋಸ್ಕರ ಕೊಡದೇ ಹೋದರೂ ಕೂಡ ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ನಾವು ಅಲ್ಲಿಗೆ ಹೋದಾಗ ಪರಿವೀಕ್ಷಣಾ ಸಂದರ್ಭದಲ್ಲಿಯೂ ಕೂಡ ನಿಖರವಾಗಿ ಅವರಿಗೆ ಹೇಳಿದ್ದೇವೆ. ಅದನ್ನು ಆದ್ಯತೆಯ ಮೇಲೆ ಕುಡಿಯುವ ನೀರಿನ ಯೋಜನೆಗಳು ಯಾವುದು ಇವೆ ಅವುಗಳಿಗೆ ತಕ್ಷಣ ಕೊಡಬೇಕೆಂದು ಹೇಳಿದ್ದೇವೆ. ಅಕಸ್ಮಾತ್ ಉಳಿದಿದ್ದರೆ ನಾನು ಈಗಾಗಲೇ ಒಂದು ಪತ್ರವನ್ನು ನಮ್ಮ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಬರೆದು ಅವುಗಳಿಗೆ ವಿದ್ಯುಚ್ಛಕ್ತಿ ಒದಗಿಸುವಂತೆ ಕೆಲಸವನ್ನು ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಏನಾಗಿದೆ ಎಂದರೆ ಎಲೆಕ್ಟ್ರಿಸಿಟಿ ಸಪ್ಲೈ ಮಾಡುವ ಕಂಡಕ್ಟರ್ ಅನ್ನು ಲಾರಿಯನ್ನು ಗುಲ್ಬರ್ಗಾ ಕಡೆ ಕಳುಹಿಸುವುದಿಲ್ಲ, ಆ ಲಾರಿಗಳು ಇಲ್ಲೇ ಸುತ್ತಮುತ್ತ ಅಂದರೆ ತುಮಕೂರು, ಕೋಲಾರ ಬೆಂಗಳೂರು ಬಿಟ್ಟು ಮುಂದೆ ಹೋಗುವುದಿಲ್ಲ, ಇಲ್ಲಿಯೇ ಓಡಾಡುತ್ತವೆ. ಕೊನೆಯ ಪಕ್ಷ ಕುಡಿಯುವ

ನೀರಿಗಾದರೂ ನೀವು ಕೊಡಿ ಎಂದು ನಾನು ಮಾನ್ಯ ಉಪಮುಖ್ಯಮಂತ್ರಿಗಳಿಗೆ ಪತ್ರವನ್ನು ಬರೆದೆ. ಆಮೇಲೆ ಮತ್ತೆ ನಾನು ಅವರಿಗೆ ಎರಡನೇ ರಿಮೈಂಡರ್ ಕೂಡ ಕೊಟ್ಟೆ. ಅದೇ ರೀತಿಯಾಗಿ ಅವರಿಗೂ ಕೂಡ ಪ್ರತಿಯನ್ನು ಕಳುಹಿಸಿಕೊಟ್ಟೆ. ಇಷ್ಟಾದರೂ ಕೂಡ ಏನೂ ಆಗಿಲ್ಲ, ಇವೊತ್ತು ಸುಮಾರು 32 ಸ್ಕೀಮ್‌ಗಳು ರೆಡಿ ಇವೆ. ಕೇವಲ ಕನೆಕ್ಷನ್ ಇರಲಾರದಕ್ಕೋಸ್ಕರ ನೀರು ಕೊಡತಕ್ಕಂಥ ವ್ಯವಸ್ಥೆ ಆಗುತ್ತಿಲ್ಲ, ಹಣ ಇಲ್ಲವೆಂದೇನಿಲ್ಲ, ಇವೊತ್ತು ಕಂಡಕ್ಟರ್ಸ್ ಇಲ್ಲವೆಂದು ಹೇಳಿ, ಟ್ರಾನ್ಸ್‌ಫರ್ಮರ್ಸ್ ಇಲ್ಲವೆಂದು ಹೇಳಿ ನಿಲ್ಲಿಸಿದರೆ ನಾವು ಖರ್ಚು ಮಾಡಿದ ಕೋಟಿಗಟ್ಟಲೆ ಹಣ ವ್ಯರ್ಥವಾಗುತ್ತದೆ. ಅದಕ್ಕಾಗಿ ತಾವು ಕ್ರಮ ತೆಗೆದುಕೊಂಡು ಏನು ವ್ಯವಸ್ಥೆ ಮಾಡಿದ್ದೀರಿ ಎನ್ನತಕ್ಕಂಥದ್ದನ್ನು ಸ್ಪೆಸಿಫಿಕ್ ಆಗಿ ಹೇಳಿದರೆ ಒಳ್ಳೆಯದು. ಇಲ್ಲವಾದರೆ ಅಲ್ಲಿಯ ಅಧಿಕಾರಿಗಳು ಏನು ಹೇಳುತ್ತಾರೆ ಎಂದರೆ ನಾವು ಬರೆದಿದ್ದೇವೆ ತಾವೇ ಒಂದು ಮಾತನ್ನು ಮಂತ್ರಿಯವರಿಗೆ ಹೇಳಿ ಕೊಡಿಸಿಕೊಡಿ ಎಂದು ಹೇಳುತ್ತಾರೆ. ದಯವಿಟ್ಟು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಿ ಎಂದು ಅದಕ್ಕಾಗಿ ತಮಗೆ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಪ್ರಕಾಶ್‌ರವರೇ, ಅದಕ್ಕೆ ಉತ್ತರ ಕೊಡುವುದು ಬೇಕಾಗಿಲ್ಲ. ಅವರು ಅಲ್ಲಿ ಸಪ್ಲೈ ಇಲ್ಲದೇ ಕಂಟಿನ್ಯೂಯಸ್ಸಾಗಿ ಐದು ಸಾರಿ ಆರಿಸಿ ಬಂದಿದ್ದಾರೆ. ಇಲ್ಲಿ ಎಲ್ಲಾ ಸಪ್ಲೈಸ್ ಬಂದು ನಾವೆಲ್ಲಾ ಬಿಟ್ಟುಬಿಟ್ಟು ಬರುತ್ತಾ ಇದ್ದೇವೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಖರ್ಗೆಯವರು ಭಾವನೆಗಳೇ ನಮ್ಮ ಭಾವನೆಗಳು. ಏಕೆಂದರೆ ನಾನೂ ಕೂಡ ಅದೇ ಪ್ರದೇಶದಿಂದ ಬಂದಿರತಕ್ಕವನು. ಸಪ್ಲೈ ಈ ಕಡೆಗೆ ಹೋಗುತ್ತಿದೆ. ನಾವು ಇದೇ ಪ್ರಯತ್ನವನ್ನು ಸದಾಕಾಲ ಮಾಡುತ್ತಿದ್ದೇವೆ. ಅವರ ಜೊತೆ ಸೇರಿಕೊಂಡು ನಾನು ವಿದ್ಯುಚ್ಛಕ್ತಿ ಮಂತ್ರಿಗಳಿಗೆ ಬರೆಯುತ್ತೇನೆ.

ಬಿನ್ನಿಪೇಟೆ ಕ್ಷೇತ್ರದಲ್ಲಿರುವ ನ್ಯಾಯಬೆಲೆ ಅಂಗಡಿಗಳು

2522 - ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿನ್ನಿಪೇಟೆ ವಿಧಾನ ಸಭಾಕ್ಷೇತ್ರದಲ್ಲಿ ಇರುವ ಒಟ್ಟು ನ್ಯಾಯಬೆಲೆ ಅಂಗಡಿಗಳೆಷ್ಟು?

ಆ) ಅವುಗಳ ಪೈಕಿ 1994ರಲ್ಲಿ ಹಾಗೂ 1995ರಲ್ಲಿ ಇಲ್ಲಿಯವರೆಗೆ ಎಷ್ಟು ನ್ಯಾಯಬೆಲೆ ಅಂಗಡಿಗಳಿಗೆ ಪರವಾನಗಿ ನೀಡಲಾಗಿದೆ?

ಇ) ಇವುಗಳ ಪೈಕಿ ಸಹಕಾರ ಸಂಘಗಳಿಂದು ನಡೆಸುವ ಹಾಗೂ ಖಾಸಗಿ ವ್ಯಕ್ತಿಗಳಿಂದು ನಡೆಸುವ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು?

ಈ) ಖಾಸಗಿ ವ್ಯಕ್ತಿಗಳಿಗೆ ಯಾವ ಆಧಾರದ ಮೇಲೆ ಹೊಸದಾಗಿ ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡಲಾಗಿದೆ?

ಉ) 1995-96ರಲ್ಲಿ ಹೊಸದಾಗಿ ನ್ಯಾಯ ಬೆಲೆ ಅಂಗಡಿಗಳನ್ನು ಈ ಕ್ಷೇತ್ರದಲ್ಲಿ ತೆಗೆಯಲಾಗುವುವುಗಳ ಸಂಖ್ಯೆ ಎಷ್ಟು?

ಶ್ರೀ ಎಸ್. ನಂಜಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) 172

ಆ) 7

ಇ) 7 ನ್ಯಾಯಬೆಲೆ ಅಂಗಡಿಗಳು ಸಹಕಾರ ಸಂಘ ಮತ್ತು ಸಂಘ ಸಂಸ್ಥೆಗಳಾಗಿದ್ದು ಖಾಸಗಿ ವ್ಯಕ್ತಿಗಳಿಂದ ನಡೆಸಲ್ಪಡುವ ಅಂಗಡಿಗಳು ಯಾವುವು ಇರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) 1995-96ನೇ ಸಾಲಿನಲ್ಲಿ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲು ಗುರಿ ನಿಗಧಿಪಡಿಸಿರುವುದಿಲ್ಲ.

ಶ್ರೀ ಎಸ್. ನಂಜಪ್ಪ : ಮಾನ್ಯ ಅಧ್ಯಕ್ಷರೇ, ಉತ್ತರಗಳನ್ನು ಒದಗಿಸಲಾಗಿದೆ. ಇಂಗ್ಲೀಷ್ ವರ್ಶನ್‌ನಲ್ಲಿ ಪ್ರಶ್ನೆ ಕೇಳಿರುವವರ ಹೆಸರು ತಪ್ಪಾಗಿ ಟೈಪ್ ಆಗಿದೆ. ಅದಕ್ಕಾಗಿ ವಿಷಾದ ವ್ಯಕ್ತಪಡಿಸುತ್ತಾ ಅದನ್ನು ತಿದ್ದಿಕೊಳ್ಳಬೇಕು ಎಂದು ಮಾನ್ಯ ಸದಸ್ಯರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ವಿ. ಸೋಮಣ್ಣ : ಮಾನ್ಯ ಅಧ್ಯಕ್ಷರೇ, ಬಿನ್ನಿಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿ 172 ಅಂಗಡಿಗಳು ಇವೆ ಎಂದು ಹೇಳಿದ್ದಾರೆ. ಅವುಗಳ ಪೈಕಿ 1994-95ರಲ್ಲಿ ಏಳು ಅಂಗಡಿಗಳ ಪರವಾನಿಗೆಯನ್ನು ನೀಡಿದ್ದೇವೆ ಎಂದು ಹೇಳುತ್ತಿದ್ದಾರೆ. ಈ ಏಳು ಅಂಗಡಿಗಳನ್ನೂ ಕೂಡ ನಾವು ಸಹಕಾರಿ ಸಂಘಕ್ಕೆ ಸಂಸ್ಥೆಗೆ ಕೊಟ್ಟಿದ್ದೇವೆ ಎಂದು ಹೇಳುತ್ತಿದ್ದಾರೆ. ಈ ಅಂಗಡಿಗಳನ್ನು ಏನು ಕೊಡುತ್ತಿದ್ದಾರೆ ಇದಕ್ಕೆ ಯಾವುದೇ ರೀತಿಯಾದ ಒಂದು ರೋಸ್ಟರ್ ಇಲ್ಲ, ಪ್ರಾಯಶಃ ಅನೇಕ ಮಹಿಳೆಯರು ಇವೊತ್ತು ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡು ಅಂಗಡಿಗಳ ಪರವಾನಿಗೆಯನ್ನು ಕೊಡಿ ಎಂದು ಕೇಳಿದರೆ ಕೊಡುವುದಕ್ಕೆ ತಯಾರಿಲ್ಲ. ಅನೇಕ ವ್ಯವಸ್ಥಿತವಾಗಿ ಇರತಕ್ಕಂಥ ಅಂಗಡಿಗಳು ಅದು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಹೆಸರಿನಲ್ಲಿ ಇರಬಹುದು, ಅಂಗವಿಕಲರ ಹೆಸರಿನಲ್ಲಿ ಇರಬಹುದು ಈ ರೀತಿ ಯಾರಿಗಾದರೂ ಕೊಡಿ ಎಂದು ಹೇಳಿದರೆ ಅಧಿಕಾರಿಗಳು ಆ ರೀತಿ ಇರತಕ್ಕಂಥವರಿಗೆ ಕೊಡುವುದಕ್ಕೆ ತಯಾರು ಆಗಿಲ್ಲ. ಯಾರಾದರೂ ಒಂದು ಕುಟುಂಬದಲ್ಲಿ 6-7 ಜನ ಮೆಂಬರಾಗಿ ರಿಜಿಸ್ಟ್ರೇಷನ್ ಮಾಡಿಸಿದ ತಕ್ಷಣ ಅವರಿಗೆ ಅಂಗಡಿಗಳನ್ನು ಕೊಡತಕ್ಕಂಥ ಸಂಪ್ರದಾಯ ಈ ಒಂದು ಇಲಾಖೆಯಲ್ಲಿ ಬಂದಿದೆ. ಇದು ಸನ್ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೇ? ಮತ್ತೆ ಏನು ಇವೊತ್ತು ಅಂಗಡಿಗಳನ್ನು ಕೊಡುತ್ತಿದ್ದಾರೆ ಇದಕ್ಕೆ ಯಾವುದಾದರೂ ಅಡೆತಡೆಗಳು ಕಾನೂನಿನ ಚೌಕಟ್ಟಿನಲ್ಲಿ ಇದೆಯೇ? ಇದನ್ನು ಯಾವ ರೀತಿ ಕೊಡುತ್ತಿದ್ದೀರಿ ಎಂಬುದನ್ನು ತಮ್ಮ ಮೂಲಕ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ಇನ್ನೊಂದು ಉತ್ತರ ಖಾಸಗೀ ವ್ಯಕ್ತಿಗಳಿಗೆ ಕೊಡುವುದು ಉದ್ಭವವಾಗುವುದಿಲ್ಲ ಎಂದು ಹೇಳಿದ್ದಾರೆ. ಆದರೆ ಈಗ ಕೊಟ್ಟಿರುವುದೆಲ್ಲಾ ಖಾಸಗೀ ವ್ಯಕ್ತಿಗಳಿಗೇ ಮತ್ತು ಮುಂದೆ ಕೊಡತಕ್ಕಂಥದಿಲ್ಲ ಎಂದು ಹೇಳಿದ್ದಾರೆ. ಆದರೆ ಮಾನ್ಯ ಅಧ್ಯಕ್ಷರೇ, ಈ ಏಳು ಅಂಗಡಿಗಳನ್ನು ಏನು ಕೊಟ್ಟಿದ್ದಾರಲ್ಲಾ ಅವುಗಳೆಲ್ಲಾ ಖಾಸಗೀ ಅಂಗಡಿಗಳೇ ಕೊಟ್ಟಿರುವುದು. ಅವುಗಳಲ್ಲಿ ಸಂಘ ಎಂದು ಇಲ್ಲ ಒಂದೇ ಕುಟುಂಬದ ಸದಸ್ಯರು ಸನ್ಮಾನ್ಯ ಸಚಿವರಲ್ಲಿ ತಮ್ಮ ಮೂಲಕ ವಿನಂತಿಸಿ ಉತ್ತರವನ್ನು ಬಯಸುತ್ತೇನೆ.

ಶ್ರೀ ಎಸ್. ನಂಜಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿರುವಂಥ ಉಪ ಪ್ರಶ್ನೆಯಲ್ಲಿ ಏಳು ನ್ಯಾಯ ಅಂಗಡಿಗಳು ಖಾಸಗೀಯವರದು ಎಂದು ಹೇಳುತ್ತಿದ್ದಾರೆ. ನನಗೆ ಗೊತ್ತಿರುವಂಥ ಮಾಹಿತಿ ಪ್ರಕಾರ ಅದು ಸಂಘ ಸಂಸ್ಥೆಗಳಿಗೆ ಕೊಟ್ಟಿರುವಂಥದ್ದು. ಅಗತ್ಯ ವಸ್ತುಗಳ ನ್ಯಾಯ ಬೆಲೆ ಅಂಗಡಿಗಳನ್ನು ಕೊಡಬೇಕಾದರೆ ಕಾಯಿದೆ ಪ್ರಕಾರ ಅವುಗಳನ್ನು ಆದ್ಯತೆಯ ಮೇಲೆ ಕೊಡುತ್ತೇವೆ. ಮೊದಲು ಪರಿಶಿಷ್ಟ ಜನಾಂಗದ ಸಂಘ ಸಂಸ್ಥೆಗಳು ಅವರು ಇಲ್ಲದೆ ಹೋದರೆ ವ್ಯಕ್ತಿಗಳು ಅದು ಇಲ್ಲದೆ ಹೋದರೆ ಪರಿಶಿಷ್ಟ ಪಂಗಡದ ಸಂಘಗಳು ಮತ್ತು ವ್ಯಕ್ತಿ ಮೂರನೆಯದು ಸೈನ್ಯದಲ್ಲಿ ಇರುವಂಥ ಎಕ್ಸ್-ಸರ್ವಿಸ್‌ಮೆನ್‌ಗಳಿಗೆ ಕೊಡುವಂಥದ್ದು, ನಾಲ್ಕನೆಯದು ಸಂಘ ಸಂಸ್ಥೆಗಳಿಗೆ ಕೊಡಬೇಕು ಎಂದು ಇದೆ. ಇವುಗಳನ್ನೂ ಕೂಡ ಅದರ ಮೇಲೆ ಕೊಟ್ಟಿದ್ದಾರೆಂದು ನಾನು ಭಾವಿಸಿಕೊಂಡಿದ್ದೇನೆ. ಏನಾದರೂ ವ್ಯಕ್ತಿಗಳು, ಅವರ ಮನೆಯವರೇ ಏನಾದರೂ ಸೇರಿಕೊಂಡು ಸಂಘ ಮಾಡಿಕೊಂಡು ಪಡೆದುಕೊಂಡಿರುವಂಥ ಸದಸ್ಯರ ಆಪಾದನೆ

ಇದ್ದರೆ ನಾನು ಅದನ್ನು ತನಿಖೆ ಮಾಡಿಸಿ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನುವಂಥ ಆಶ್ವಾಸನೆಯನ್ನು ಈ ಸದನಕ್ಕೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ವಿ. ಸೋಮಣ್ಣ : ಈ ಫಸ್ಟ್ ರೇಂಜ್‌ನಲ್ಲಿ 397 ಅಂಗಡಿಗಳು ಇದ್ದರೆ ಅದರಲ್ಲಿ 174 ಅಂಗಡಿಗಳನ್ನು ಖಾಸಗಿಯವರು ನಡೆಸುತ್ತಿದ್ದಾರೆ. ಸಂಘ ಸಂಸ್ಥೆಗಳು ನಡೆಸುತ್ತಾ ಇರತಕ್ಕಂಥದ್ದು 141. ತಮ್ಮ ಮೂಲಕ ನಾನು ವಿನಂತಿ ಮಾಡುವುದು ಇಷ್ಟೇನೇ. ಯಾರು ಸಂಘ ಸಂಸ್ಥೆಗಳನ್ನು ಮಾಡುತ್ತಾರೆ ಅವರು ಕೆಲಸ ಮಾಡತಕ್ಕಂಥವರ ಬಂಧುಗಳ ಹೆಸರಿನಲ್ಲಿ ಬೇರೆಯವರ ಹೆಸರಿನಲ್ಲಿ ಮಾಡುತ್ತಿದ್ದಾರೆ. ಇದಕ್ಕಾಗಿ ಕಠಿಣವಾದಂಥ ಒಂದು ಕಾನೂನು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಎರಡು ವರ್ಷದಿಂದ ಒಂದು ಸರಿಯಾದ ಸಂಘಕ್ಕೆ ಕೊಡಿ ಎಂದು ಹೇಳಿದರೆ ಅವರಿಗೆ ದೊಡ್ಡ ಹೃದಯ ಇಲ್ಲ. ಅದಕ್ಕಾಗಿ ತಮ್ಮ ಮೂಲಕ ವಿನಂತಿ ಮಾಡುತ್ತೇನೆ ಇನ್ನು ಮುಂದಾದರೂ ಒಂದು ಮನೆಯವರಿಗೆ ಕೊಡತಕ್ಕಂಥದ್ದನ್ನು ನಿಲ್ಲಿಸಲಿ.

ಅಧ್ಯಕ್ಷರು : ನೀವು ಕಂಪ್ಲೇಂಟ್ ಕೊಡಿ ಅವರು ಚೆಕ್ ಮಾಡುತ್ತಾರೆ. ಒಬ್ಬೊಬ್ಬರ ಸರ್ಕಾರ ಇದ್ದಾಗ ಕೆಲವು ಖಾಸಗಿಯವರು ಸರ್ಕಾರಿ ಆಗಿರುತ್ತಾರೆ. ಈಗ ಸರ್ಕಾರ ಬದಲಾಗಿದೆ. ಈಗ ಹೊಸ ಖಾಸಗಿಯವರು ಸರ್ಕಾರಿ ಆಗಿರುತ್ತಾರೆ. ಅದನ್ನು ಅವರು ಹೇಳುತ್ತಿದ್ದಾರೆ. ಆ ಕಡೆಗೆ ಗಮನಕೊಡಿ.

ಕರಾವಳಿಯಲ್ಲಿ ಮೀನುಗಾರಿಕಾ ಜಟ್ಟಿಗಳು

947 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆಯ ಕರಾವಳಿಯಲ್ಲಿ ಮೀನುಗಾರಿಕಾ ಜಟ್ಟಿಗಳನ್ನು ಮಾಡಬೇಕೆನ್ನುವ ಬಗ್ಗೆ ಸಾರ್ವಜನಿಕರಿಂದ ಅರ್ಜಿಗಳು ಸರ್ಕಾರಕ್ಕೆ ಬಂದಿದೆಯೇ?

ಆ) ಈ ಎರಡು ಜಿಲ್ಲೆಗಳ ಎಷ್ಟು ಕೇಂದ್ರಗಳಲ್ಲಿ ಮೀನುಗಾರಿಕಾ ಜಟ್ಟಿಗಳನ್ನು ಮಾಡಲು ಸರ್ಕಾರ ಉದ್ದೇಶಿಸಿದೆ?

ಇ) ಇದಕ್ಕೆ ಯಾವಾಗ ಮಂಜೂರಾತಿ ನೀಡಲಾಗುವುದು?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಹೌದು

ಆ) 8 ಕೇಂದ್ರಗಳಲ್ಲಿ

ಇ) ಮೂರು ಕೇಂದ್ರಗಳಿಗೆ ಮಂಜೂರಾತಿ ನೀಡಲಾಗಿದೆ. ಉಳಿದ ಕೇಂದ್ರಗಳಿಗೆ ಭಾರತ ಸರ್ಕಾರದ ಅನುಮೋದನೆ ಪಡೆದು ಮಂಜೂರಾತಿ ನೀಡಲಾಗುವುದು.

ಶ್ರೀ ಯು.ಆರ್. ಸಭಾಪತಿ : ಸನ್ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಮೂರು ಜಟ್ಟಿ ಕೇಂದ್ರಗಳು ಎಂದು ಕೊಟ್ಟಿದ್ದಾರೆ. ಆ ಮೂರು ಜಟ್ಟಿ ಕೇಂದ್ರಗಳು ಯಾವುವು ಹಾಗೂ ಅವುಗಳ ಅಂದಾಜು ವೆಚ್ಚವೆಷ್ಟು? ಅವುಗಳ ಕಾಮಗಾರಿ ಯಾವ ಯಾವ ಹಂತದಲ್ಲಿದೆ? ಮಂಜೂರಾತಿ ಆಗದೆ ರಾಜ್ಯ ಸರ್ಕಾರ ನಿಗದಿಪಡಿಸಿದ ಉಳಿದ ಐದು ಮೀನುಗಾರಿಕೆ ಜಟ್ಟಿ ಕೇಂದ್ರಗಳು ಯಾವುವು ಮತ್ತು ಅವುಗಳ ಅಂದಾಜು ವೆಚ್ಚವೆಷ್ಟು? ಅವುಗಳ ಬಗ್ಗೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಅನುಮೋದನೆಗಳಿಗೆ ಕಳುಹಿಸಿದೆಯೇ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಂಜೂರಾತಿ ಆದಂಥದ್ದು ಕೋಡಿ ಬೆಂಗರೆ ಹಂಗಾರು ಕಟ್ಟೆ. ಅದು 55.50 ಲಕ್ಷ ರೂಪಾಯಿ ಈಗ ಪರಿಷ್ಕೃತ 72 ಲಕ್ಷ ರೂಪಾಯಿಗಳು ಆಗಿದೆ. ಗಂಗೊಳ್ಳಿ 13.12 ಲಕ್ಷ ಹಾಗೂ 89.53 ಲಕ್ಷ ವೆಚ್ಚದಲ್ಲಿ ಭಟ್ಕಳ ಅಳವೆಕೋಡೆಯ ಮೀನುಗಾರಿಕೆ ಇಳಿದಾಣ ನಿರ್ಮಾಣಕ್ಕೆ ಭಾರತ ಸರ್ಕಾರ ಅನುಮೋದನೆ ಕೊಟ್ಟಿದೆ. ಹಾಗೆಯೇ ಹೆಜಮಾಡಿ ಕೋಡಿದು 100 ಲಕ್ಷದ ವೆಚ್ಚದ ಮೀನುಗಾರಿಕೆ ಇಳಿದಾಣ ನಿರ್ಮಾಣಕ್ಕೆ ಕೇಂದ್ರದ ಅನುಮತಿಗಾಗಿ ನಾವು ಕಾಯುತ್ತಿದ್ದೇವೆ. ಅದೇ ರೀತಿಯಲ್ಲಿ ಎರಡು ಶಿರೂರು ಮತ್ತು ಉತ್ತರ ಕನ್ನಡದ ಮಂಜಾಳದಲ್ಲಿ ಈ ಜಟ್ಟಿಯನ್ನು ಮಾಡಲಿಕ್ಕೆ ಸ್ಥಳ ಯೋಗ್ಯವಾದುದಲ್ಲವೆಂದು ಕೇಂದ್ರದ ಮೀನುಗಾರಿಕೆ ಇಂಜಿನಿಯರಿಂಗ್ ಸಂಸ್ಥೆಯವರು ವರದಿಯನ್ನು ಕೊಟ್ಟಿದ್ದಾರೆ.

ಶ್ರೀ ಯು.ಆರ್. ಸಭಾಪತಿ : ಐದು ಕೇಂದ್ರಗಳ ಪೈಕಿ ಬರೀ ಮೂರು ಕೇಂದ್ರದ್ದು ಮಾತ್ರ ನೀವು ಹೇಳಿದ್ದೀರಿ. ಇನ್ನು ಎರಡು ಕೇಂದ್ರದ್ದು ನೀವು ಹೇಳಬೇಕು.

ಶ್ರೀ ಕೆ. ಜಯಪ್ರಕಾಶ ಹೆಗಡೆ : ಕೇಂದ್ರ ಇಂಜಿನಿಯರಿಂಗ್ ವಿಭಾಗದವರು ಆಗುವುದಿಲ್ಲ ಎಂದು ಹೇಳಿದ್ದಾರೆ. ಉಳಿದದ್ದು ಹೆಜಮಾಡಿ ಕೋಡಿ. ಕೋಡಿಕುಂದಾಪುರ ಹಾಗೂ ಬೆಳಗೇರಿ ಅದು ಕೇಂದ್ರದ ಅನುಮತಿ ಸಿಕ್ಕಿದ ಕೂಡಲೇ ಮಾಡುತ್ತೇವೆ. ಇನ್ನು ಹೆಜಮಾಡಿಕೋಡಿಯ ಮೀನುಗಾರಿಕೆ ಕೇಂದ್ರಕ್ಕೆ ಈಗಾಗಲೇ ನಾವು 23.86 ಲಕ್ಷ ಲ್ಯಾಂಡ್ ಅಕ್ವಿಸಿಷನ್ ಚಾರ್ಜ್ ನಾವು ಪೂರ್ತಿ ಮಾಡಿ ಆಗಿದೆ. ಅದನ್ನು ನಿರಾಶ್ರಿತರಿಂದ ಪಡೆದುಕೊಂಡು ಅವರು ಖಾಲಿ ಮಾಡಿದ ಮೇಲೆ ಅದನ್ನು ನಾವು ಮಾಡುತ್ತೇವೆ.

ಶ್ರೀ ಯು.ಆರ್. ಸಭಾಪತಿ : ಕೋಡಿ ಬೆಂಗರೆ ಗಂಗೊಳ್ಳಿ ಭಟ್ಕಳ ಇದರ ಕಾಮಗಾರಿ ಯಾವ ಯಾವ ಹಂತದಲ್ಲಿ ಇದೆ.

ಶ್ರೀ ಕೆ. ಜಯಪ್ರಕಾಶ ಹೆಗಡೆ : ಕೋಡಿ ಬೆಂಗರೆ, ಹಂಗಾರು ಕೋಡಿ ಪ್ಲಾಟ್‌ಫಾರಂ ಈಗಾಗಲೇ ತಯಾರಾಗಿದೆ. ಈಗ ಮಳೆ ನಿಂತ ನಂತರ ಅದರ ಕಾಮಗಾರಿ ಪ್ರಾರಂಭವಾಗುತ್ತದೆ. ಗಂಗೊಳ್ಳಿ ಕಾರ್ಯಕ್ಕೆ ನಾವು ಪಿ.ಡಬ್ಲ್ಯೂ.ಡಿ. ಯವರಿಗೆ ಪೂರ್ತಿ ಹಣವನ್ನು ಕೊಟ್ಟಿದ್ದೇವೆ. ಅವರೂ ಸಹ ಮಳೆ ನಿಂತ ಕೂಡಲೇ ಕಾಮಗಾರಿಯನ್ನು ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ವಸಂತ ವಿ. ಸಾಲಿಯಾನ : ಮಾನ್ಯ ಅಧ್ಯಕ್ಷರೇ, ಈ ಜಟ್ಟಿ ನಿರ್ಮಾಣ ಕಾರ್ಯಕ್ರಮ ಏನು ಇದೆ ಬಹಳ ಮಹತ್ವದ ಕಾರ್ಯಕ್ರಮ. ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡದ ಕೆಲವು ಗ್ರಾಮಗಳ ಪೈಕಿ ಈಗಾಗಲೇ ಸಚಿವರು ಹೇಳಿದ್ದಾರೆ. 1994ನೇ ಇಸವಿಯಲ್ಲಿ ಹಿಂದೆ ಸರ್ಕಾರ ಉಲ್ಲಾಳ, ಕಾಪು, ಬೆಟಗೇರಿ ನವ ಮಂಗಳೂರು, ಬಂದರು, ಶಿರೂರು ಕುಮಟಾ ಮತ್ತು ಬೆಳಗೇರಿ ಈ ಪ್ರದೇಶಗಳಲ್ಲಿ ಜಟ್ಟಿಯನ್ನು ನಿರ್ಮಾಣ ಮಾಡಲು ಈಗಾಗಲೇ ಹಿಂದಿನ ಸರ್ಕಾರ ಮೈಕ್ರೋ ಸರ್ವೆಯನ್ನು ಸಹ ಮಾಡಿಸುವಂಥ ಕ್ರಮ ನಡೆದಿದೆ. ಇದರ ಬಗ್ಗೆ ಸನ್ಮಾನ್ಯ ಸಚಿವರು ಆಸಕ್ತಿ ವಹಿಸಬೇಕು. ಏಕೆಂದರೆ ಜಟ್ಟಿ ನಿರ್ಮಾಣ ಕಾರ್ಯಕ್ರಮ ಮೀನನ್ನು ಒಂದೇ ಕಡೆಯಿಂದ ಇನ್ನೊಂದು ಕಡೆಗೆ ಟ್ರಾನ್ಸ್‌ಪೋರ್ಟ್ ಮಾಡಲಿಕ್ಕೆ ಬಹಳ ಕಷ್ಟವಾಗುತ್ತದೆ. ಹೆಚ್ಚಾಗಿ ಪ್ರದೇಶಗಳಲ್ಲಿ ಈ ಇಳಿದಾಣ ಇದ್ದರೆ ಮೀನಿಗೆ ಸರಿಯಾದಂಥ ಬೆಲೆ ಬರುತ್ತದೆ. ಅದೇ ರೀತಿಯಲ್ಲಿ ಸಾರ್ವಜನಿಕರಿಗೆ ಹಂಚುವುದಕ್ಕೋಸ್ಕರ, ವ್ಯಾಪಾರಕ್ಕಾಗಿ ಒಳ್ಳೆಯದಾಗುತ್ತದೆ ಎನ್ನುವಂಥದ್ದಕ್ಕೆ ಸರ್ಕಾರ ಸರ್ವೆ ಮಾಡಿದ್ದಾರೆ. ಅದಕ್ಕೋಸ್ಕರ ಸನ್ಮಾನ್ಯ ಸಚಿವರು ಆದಷ್ಟು ಬೇಗ ರಾಜ್ಯ ಸರ್ಕಾರದಿಂದ ಅದಕ್ಕೆ ಅನುಮತಿ ದೊರಕಿಸಿ ಅದೇ ರೀತಿಯಲ್ಲಿ ಕೇಂದ್ರ ಸರ್ಕಾರಕ್ಕೆ ಅನುಮತಿ ದೊರಕಿಸುವಂಥ ಕ್ರಮ ಮಾಡಬೇಕಾಗಿ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಜಯಪ್ರಕಾಶ ಹೆಗಡೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಸಲಹೆಯ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

12.00 ನೂನ್

ಶ್ರೀ ಎನ್. ಯೋಗೀಶ್ ಭಟ್ : ಸನ್ಮಾನ್ಯ ಅಧ್ಯಕ್ಷರೇ, ಸರ್ಕಾರದ ಕಡೆಯಿಂದ ಯಾವುದೇ ಹಣದ ಸಹಾಯವಿಲ್ಲದೇ ಯಾವುದ ರೀತಿಯ ಅನುದಾನವಿಲ್ಲದೆ ಕೇವಲ ಪರವಾನಿಗಿಯಿಂದ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಅಲ್ಲಿ ಮಾಡಲು ಸಾಧ್ಯವಿತ್ತು. ವಿಶೇಷವಾಗಿ ಕೋ-ಆಪರೇಟಿವ್ ಸೊಸೈಟಿಯವರು ಮುಂದೆ ಬಂದು ತಮಗೆ ಬೇಕಾದ ವಿಶ್ರಾಂತಿ ತಂಗುದಾಣ, ಮಾರ್ಕೆಟಿಂಗ್ ಕಟ್ಟಡವನ್ನೂ ಸಹಿತ ಕೇವಲ ತಾವು ಪರವಾನಿಗಿಯನ್ನು ಕೊಟ್ಟರೆ ಸಾಕು, ಉಳಿದ ಕಟ್ಟಡವನ್ನು ನಾವೇಮಾಡುತ್ತೇವೆಂದು ಕಳೆದ 8 ತಿಂಗಳುಗಳಿಂದ, ಒಂದು ವರ್ಷದಿಂದ ಈ ಬೇಡಿಕೆಯನ್ನು ನೀಡಿದ್ದರೂ ಕೂಡ ಇನ್ನೂ ಪರವಾನಿಗಿಯನ್ನು ಏಕೆ ನೀಡಿಲ್ಲ? ಆ ಪರವಾನಿಗಿಯನ್ನು ನೀಡಿದರೆ ಸಾಕಷ್ಟು ಅಭಿವೃದ್ಧಿ ಕೆಲಸಗಳು ಸಾಕಷ್ಟು ಆಗುವುದರಿಂದ ತಾವು ತಕ್ಷಣ ಪರವಾನಿಗಿಯನ್ನು ಕೊಡುವುದಕ್ಕೆ ಸಾಧ್ಯವೇ ಎನ್ನತಕ್ಕ ಪ್ರಶ್ನೆಯನ್ನು ನಾನು ಕೇಳುತ್ತಿದ್ದೇನೆ. ಇದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ?

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಅಧ್ಯಕ್ಷರೇ ನಾನು ಸರಿಯಾದ ಮಾಹಿತಿಯನ್ನು ತೆಗೆದುಕೊಂಡು ಮಾನ್ಯ ಸದಸ್ಯರಿಗೆ ಉತ್ತರವನ್ನು ಒದಗಿಸಲಿಕ್ಕೆ ಇಚ್ಛಿಪಡುತ್ತೇನೆ.

ಡಾ: ಯು. ಚಿತ್ತರಂಜನ್ : ಅಧ್ಯಕ್ಷರೇ, ಭಟ್ಕಳದ ಅಳವೆಕೋಡಿಯಲ್ಲಿ ಜಟ್ಟಿ ನಿರ್ಮಾಣಕ್ಕೆ ಸನ್ಮಾನ್ಯ ಮೀನುಗಾರಿಕೆ ಮಂತ್ರಿಗಳನ್ನು ಕೇಳಲಿಕ್ಕೆ ಇಚ್ಛಿಪಡುತ್ತೇನೆ. ಈ ಜಟ್ಟಿ ನಿರ್ಮಾಣಕ್ಕೆ ಕೇಂದ್ರ ಸರ್ಕಾರದಿಂದ ಅನುಮತಿ ದೊರಕಿದೆಯೆಂದು ತಿಳಿಸಿದ್ದೀರಿ. ಇದು ಯಾವಾಗ ಬಂದಿದೆ ಮತ್ತು ಇವೊತ್ತಿನವರೆಗೂ ಏಕೆ ಇನ್ನೂ ಕೆಲಸವನ್ನು ಪ್ರಾರಂಭ ಮಾಡಿಲ್ಲ, ಎನ್ನುವುದು ನನ್ನ ಪ್ರಶ್ನೆಯಾಗಿದೆ. ಇದರ ಜೊತೆಗೆ ಸರ್ಕಾರದ ಈ ಮೀನುಗಾರಿಕೆ ಮತ್ತು ಬಂದರು ಬಗ್ಗೆ ಹಣ ಒದಗಿಸುತ್ತಾರೋ ಇಲ್ಲವೋ ಎಂಬ ಅನುಮಾನ ಸ್ವಲ್ಪ ನನಗಿದೆ, ಏಕೆಂದರೆ ಮಲತಾಯಿ ಧೋರಣೆ ಆಗುತ್ತಿದೆಯೆಂದು ಆದ್ದರಿಂದ ದಯವಿಟ್ಟು ಈ ಎರಡೂ ಪ್ರಶ್ನೆಗಳಿಗೂ ಉಂಟಾಗಿರತಕ್ಕಂಥ ನನ್ನ ಸಂಶಯಕ್ಕೆ ಉತ್ತರವನ್ನು ಕೊಡಬೇಕು.

ಅಧ್ಯಕ್ಷರು : ಬೇಡಿಕೆಯ ಮೇಲೆ ಇವಕ್ಕೆಲ್ಲಾ ಉತ್ತರವನ್ನು ಕೊಟ್ಟು ಬಿಡಿ. ಈಗ ಪ್ರತಾಪ್‌ಚಂದ್ರಶೆಟ್ಟರದು ಕಡೆಯ ಉಪ ಪ್ರಶ್ನೆ.

ಶ್ರೀ ಕೆ. ಪ್ರತಾಪ್ ಚಂದ್ರಶೆಟ್ಟಿ : ಮಾನ್ಯ ಅಧ್ಯಕ್ಷರೇ, ಈ ಜಟ್ಟಿ ನಿರ್ಮಾಣಾ ಕಾರ್ಯ ಕಳೆದ ವರ್ಷ ಏನು ಇತ್ತೋ ಅದನ್ನೇ ಈಗ ಪ್ರಾರಂಭ ಮಾಡುತ್ತಿದ್ದೀರೋ ಅಥವಾ ಹೊಸದಾಗಿ ಏನಾದರೂ ಪ್ರಾರಂಭ ಮಾಡುತ್ತಿದ್ದೀರೋ ಎನ್ನುವುದು ನನ್ನ ಮೊದಲ ಪ್ರಶ್ನೆ. ಮತ್ತೊಂದು ಶಿರೋರ್ ಅಳವೆಗಡ್ಡೆಯಲ್ಲಿ ತಮ್ಮ ಕೇಂದ್ರದ ಸರ್ವೇಯವರು ಫೀಸಿಬಿಲಿಟಿ ಇಲ್ಲ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಅಲ್ಲಿ ಈಗಾಗಲೇ ಐಸ್‌ಪ್ಲಾಂಟ್ ಇದೆ, ಫಿಷ್ ಡ್ರೈಯಿಂಗ್ ಯಾರ್ಡ್ ಇದೆ, ಇಷ್ಟೆಲ್ಲಾ ಸೌಲಭ್ಯಗಳಿದ್ದರೂ ಸಹಿತ ಬೋಟ್ ಬರಲಿಕ್ಕೆ ವ್ಯವಸ್ಥೆ ಇಲ್ಲದಿದ್ದರೆ ಏನಿ ಪ್ರಯೋಜನ? ಏಕೆಂದರೆ ಇದನ್ನು ಕೇಂದ್ರ ಸರ್ಕಾರವೇ ಗುರುತಿಸಿ ಇಷ್ಟೆಲ್ಲಾ ಕೆಲಸವನ್ನು ಮಾಡಿ ಇವೊತ್ತು ಅಲ್ಲಿಗೆ ಬೋಟ್ ಬರಲಿಕ್ಕೆ ಆಗದೇ ಇರತಕ್ಕಂಥ ಪರಿಸ್ಥಿತಿ ಇದ್ದರೆ, ಪುನಃ ತಾವು ಯಾವುದೇ ಬೇರೆ ಮೂಲಗಳಿಂದ ಸರ್ವೇ ಮಾಡಿಸಿ ಅದಕ್ಕೆ ಫಿಸಿಬಿಲಿಟಿ ಇದೆಯೋ ಇಲ್ಲವೋ ಎನ್ನತಕ್ಕಂಥ ವರದಿಯನ್ನು ತರಿಸಬೇಕು ಎನ್ನತಕ್ಕಂಥದ್ದು ನನ್ನ ಅಭಿಮತ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೇ, ಗಂಗೊಳ್ಳಿಯಲ್ಲಿ ಇದ್ದಂತಹ ಜಟ್ಟಿಯನ್ನು 120 ಕಿ.ಮೀ. ವಿಸ್ತರಣೆಯನ್ನು ಮಾಡುತ್ತಿದ್ದೇವೆ. ಹಾಗೂ ಮಾನ್ಯ ಸದಸ್ಯರು ಶಿರೋರ್ ಬಗ್ಗೆ ಮಾಹಿತಿಯನ್ನು ಕೇಳಿದ್ದಾರೆ, ಅದರ ಬಗ್ಗೆ ಕೇಂದ್ರ ಕರಾವಳಿ ಮೀನುಗಾರಿಕೆ ಇಂಜಿನಿಯರ್ ಸಂಸ್ಥೆಯವರು ಅಲ್ಲಿ ಜಟ್ಟಿಯನ್ನು ಮಾಡಲಿಕ್ಕೆ ಆಗುವುದಿಲ್ಲ ಎನ್ನುವ ವರದಿಯನ್ನು ಕೊಟ್ಟಿರುವುದರಿಂದ ತಮ್ಮ ಮುಂದೆ ಆ ವರದಿಯನ್ನು ಇಟ್ಟಿದ್ದೇವೆ.

ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಲಿಯಿಂದ ಪಶು ಆಹಾರ ಸ್ಥಾಪನೆ.

1905 - ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಎರಡು ಪಶು ಆಹಾರ ಘಟಕಗಳನ್ನು ಪ್ರಾರಂಭಿಸಲು ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಯು ಒಪ್ಪಿರುವುದು ವಾಸ್ತವಾಂಶವೇ?

ಆ) ಹಾಗಿದ್ದಲ್ಲಿ ಸ್ಥಳಗಳು ಯಾವುವು ಮತ್ತು ಸಾಮರ್ಥ್ಯ ಎಷ್ಟು?

ಶ್ರೀ ಬಿ.ಎನ್. ಬಚ್ಚೇಗೌಡ (ಪಶು ಸಂಗೋಪನಾ ಮತ್ತು ಪಶು ವೈದ್ಯಸಚಿವರು):

ಅ) ಕರ್ನಾಟಕ ಹಾಲು ಮಹಾ ಮಂಡಳಿಯು ರಾಜ್ಯದಲ್ಲಿ ಪಶು ಆಹಾರ ಘಟಕಗಳನ್ನು ತೆರೆಯಲು ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಯ ಮುಂದೆ ಪ್ರಸ್ತಾವನೆಯನ್ನು ಮಂಡಿಸಿತ್ತು. ಅನಂತರ, ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಯವರು ಅದರ ಪರಿಣಿತರ ಅಭಿಪ್ರಾಯದ ಮೇರೆಗೆ ಹೊಸ ಆಹಾರ ಘಟಕಗಳನ್ನು ತೆರೆಯುವ ಬದಲು ಹಾಲಿ ಇರುವ ಪಶು ಆಹಾರ ಘಟಕಗಳ ಸಾಮರ್ಥ್ಯವನ್ನು ಅಧಿಕಗೊಳಿಸಿ ವಿಸ್ತರಿಸುವಂತೆ ಸಲಹೆ ನೀಡಿದೆ.

ಆ) ಉದ್ಭವಿಸುವುದಿಲ್ಲ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಜಾನುವಾರು ಮೇವು ಘಟಕಗಳನ್ನು ಪ್ರಾರಂಭಿಸುವುದಕ್ಕೆ ಏನು ಕಾರ್ಯಕ್ರಮವನ್ನು ತಗೆದುಕೊಂಡಿದ್ದೀರಿ ಎಂದು ಕೇಳಿದ್ದಕ್ಕೆ ಅದಕ್ಕೆ ಅವರು ಉತ್ತರದಲ್ಲಿ ಎಕ್ಸ್‌ಪ್ಯಾನ್‌ಷನ್ ಮಾಡುವುದಕ್ಕೆ ಮಾತ್ರ ಅವಕಾಶವಿದೆ ಎಂದು ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ ಎಷ್ಟು ಕ್ಯಾಟಲ್ ಫೀಡ್ ಅವಶ್ಯಕತೆ ಇದೆ. ಮತ್ತು ಈಗ ಎಷ್ಟು ಉತ್ಪಾದನೆಯನ್ನು ಮಾಡುತ್ತಿದ್ದೀರಿ ಹಾಗೂ ಹೊಸ ಪ್ಲಾಂಟ್ ಮಾಡುವುದಕ್ಕೂ ಮತ್ತು ಎಕ್ಸ್‌ಪ್ಯಾನ್‌ಷನ್ ಮಾಡುವುದಕ್ಕೂ ಏನು ವ್ಯತ್ಯಾಸ ಆಗುತ್ತದೆ ಎನ್ನತಕ್ಕಂಥದ್ದು ನನ್ನ ಪ್ರಶ್ನೆ. ನಾಲ್ಕನೆಯದಾಗಿ ಕೆ.ಎಂ.ಎಫ್.ನವರು ಏನು ಪ್ರಪೋಸಲ್‌ನ್ನು ಕಳುಹಿಸಿಕೊಟ್ಟಿದ್ದಾರೆ ಅದನ್ನು ಯಾವ ಯಾವ ಊರುಗಳಿಗೆ ಕಳುಹಿಸಿದ್ದಾರೆ ದಯವಿಟ್ಟು ತಿಳಿಸುತ್ತೀರಾ.

ಶ್ರೀ ಬಿ.ಎನ್. ಬಚ್ಚೇಗೌಡ : ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ಹಾಲು ಉತ್ಪಾದಕರ ಮಹಾ ಮಂಡಳಿ ಅಧೀನದಲ್ಲಿ ಮೂರು ಪಶು ಆಹಾರ ಘಟಕಗಳು ಆಹಾರ ಮಿಶ್ರಣ ಕೆಲಸವನ್ನು ಮಾಡುತ್ತಿವೆ. ಇದರಲ್ಲಿ ಮೊದಲನೆಯದಾಗಿ ರಾಜಾನುಕುಂಟೆ, ಎರಡನೆಯದಾಗಿ ಗುಬ್ಬಿ ಹಾಗೂ ಮೂರನೆಯದು ಧಾರವಾಡದಲ್ಲಿದೆ. ಈ ಮೂರು ಪಶು ಆಹಾರ ಉತ್ಪಾದನೆಯ ಸಾಮರ್ಥ್ಯ ಪ್ರತಿದಿನ 100 ಮೆಟ್ರಿಕ್ ಟನ್. ಅದರಲ್ಲಿ ಸುಮಾರು 70 ಭಾಗದಷ್ಟು ಸಾಮರ್ಥ್ಯವನ್ನು ಉಪಯೋಗಿಸಿಕೊಂಡು ವಾರ್ಷಿಕ ಸುಮಾರು 70-72 ಮೆಟ್ರಿಕ್ ಟನ್‌ಗಳಷ್ಟು ಉತ್ಪಾದನೆಯಾಗುತ್ತಿದೆ. ಅದರ ಪೂರ್ಣ ಪ್ರಮಾಣದ ಉತ್ಪಾದನೆಯ ಸಾಮರ್ಥ್ಯ 90 ಸಾವಿರ ಮೆಟ್ರಿಕ್ ಟನ್‌ಗಳು, ಅದರ ಬೇಡಿಕೆ ನಮ್ಮ ರಾಜ್ಯದಲ್ಲಿ 13 ಒಕ್ಕೂಟಗಳಿಂದ ಸರಬರಾಜು ಮಾಡುತ್ತಿರತಕ್ಕಂಥದ್ದರಲ್ಲಿ ಬೇಡಿಕೆ 72 ಸಾವಿರ ಟನ್‌ಗಳು. ಇದನ್ನು ಉತ್ಪಾದಕರಿಗೆ ಅಥವಾ ರೈತರಿಗೆ ಸರಬರಾಜು

ಮಾಡುತ್ತಿದ್ದೇವೆ. ಈ ಹಿಂದೆ ಮಾನ್ ನಾಗೇಗೌಡರು ಮಂತ್ರಿಗಳಾಗಿದ್ದಾಗ ಎರಡನೇ ಆಡಳಿತ ಮಂಡಳಿಯ ಸಭೆಯಲ್ಲಿ ದಿನಾಂಕ 5-8-93ರಂದು ಕರ್ನಾಟಕ ರಾಜ್ಯದಲ್ಲಿ ಇನ್ನೂ ಹೆಚ್ಚು ಪಶು ಆಹಾರ ಘಟಕಗಳನ್ನು ತೆರೆಯಬೇಕೆಂದು ನಿರ್ಧರಿಸಿ ಸುಮಾರು 10 ಘಟಕಗಳನ್ನು ಮಂಡ್ಯ, ದಕ್ಷಿಣ ಕನ್ನಡ ಜಿಲ್ಲೆ, ಕೋಲಾರ, ಗುಲ್ಬರ್ಗಾ, ಬಳ್ಳಾರಿ, ಶಿವಮೊಗ್ಗಾ, ಮೈಸೂರು, ಹಾಸನ, ಬಿಜಾಪುರ, ಈ ಜಾಗಗಳಲ್ಲಿ ತೆರೆಯಬೇಕೆಂದು ರಾಷ್ಟ್ರೀಯ ಹೈನು ಅಭಿವೃದ್ಧಿಗೆ ಶಿಫಾರಸ್ಸು ಮಾಡಿತು. ಅದಾದನಂತರ ದಿನಾಂಕ 27-9-93ರಲ್ಲಿ ಕರ್ನಾಟಕ ಹಾಲು ಉತ್ಪಾದಕರ ಮಂಡಳಿಯ ಆಡಳಿತ ಸಭೆಯಲ್ಲಿ ಮತ್ತೊಂದು ತೀರ್ಮಾನವನ್ನು ತೆಗೆದುಕೊಂಡು ಈಗಿರತಕ್ಕಂಥ ಮೂರು ಪಶು ಆಹಾರ ಘಟಕಗಳ ಪಶು ಆಹಾರ ಸಾಮಾರ್ಥ್ಯವನ್ನು ಜಾಸ್ತಿ ಮಾಡುವಂಥದ್ದು, ವಿಸ್ತರಣೆ ಮಾಡುವಂಥದ್ದು ಅದಾದನಂತರ ಇನ್ನೆರಡು ಪಶು ಆಹಾರ ಘಟಕಗಳನ್ನು ತೆರೆಯಬೇಕೆಂದು ಹೇಳಿ ಅದರಲ್ಲಿ ಒಂದನ್ನು ಮಳವಳ್ಳಿಯಲ್ಲಿ ಮತ್ತೊಂದನ್ನು ಕಾರ್ಕಳದಲ್ಲಿ ತೆರೆಯಲು ತೀರ್ಮಾನ ಮಾಡಿ ಅದನ್ನು ಎನ್‌ಡಿಡಿಬಿಗೆ ಕಳುಹಿಸಿದರು. ಅದಾದನಂತರ ಸಚಿವರಾಗಿದ್ದ ನಾಗೇಗೌಡರು He had discussions with NDDB Chairman Dr. Kurien.

ಅವರ ಹತ್ತಿರ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ, ಆದರೆ ಆ ಬಗ್ಗೆ ಏನು ನಡೆಯಿತು ಎನ್ನುವ ಮಾಹಿತಿ ನಮ್ಮ ಮುಂದೆ ಇವೊತ್ತು ಇಲ್ಲ. What discussion he had with NDDB Chairman or the minutes there at NDDB, Anand ಎಂಬ ಮಾಹಿತಿ ನಮ್ಮ ಹತ್ತಿರ ಇಲ್ಲ. ಅಂದಿನ ಸರ್ಕಾರ ಮತ್ತು ಎನ್‌ಡಿಡಿಬಿ ಮಧ್ಯೆ ಏನಾದರೂ ಚರ್ಚೆಯಾಯಿತೇ ಎಂಬ ಬಗ್ಗೆ ಮಾಹಿತಿ ನಮ್ಮ ಬಳಿ ಇಲ್ಲ. ಅದಾದ ಮೇಲೆ ಎನ್‌ಡಿಡಿಬಿಯವರು ಅವರ ಪರಿಣಿತರನ್ನು ಕಳುಹಿಸಿ ಇಲ್ಲಿ ಉತ್ಪಾದನೆಯ ಬಗ್ಗೆ ಮತ್ತು ವಿತರಣೆಯ ಬಗ್ಗೆ ಸಮೀಕ್ಷೆ ಮಾಡಲು ಕಳುಹಿಸಿದ್ದರು. ಕ್ಷೀರಧಾರ ಯೋಜನೆ ಮೂರು ಈ ವರ್ಷದ ಡಿಸೆಂಬರ್‌ನಲ್ಲಿ ಮುಗಿದುಹೋಗುತ್ತದೆ. ಅಂದರೆ ಶೇಕಡ 70 ಸಾಲವಾಗಿ ಮತ್ತು ಶೇಕಡ 30 ಸಬ್ಸಿಡಿ ಕೊಡುವುದು ಈ ವರ್ಷಕ್ಕೆ ಅಂತಿಮವಾಗುತ್ತದೆ. ಆ ದೃಷ್ಟಿಯಲ್ಲಿ ಯಾವುದೇ ಪಶು ಆಹಾರ ಘಟಕವನ್ನು ತೆರೆಯಬೇಕಾದರೆ ಅದಕ್ಕೆ 6 ಕೋಟಿ 40 ಲಕ್ಷ ರೂಗಳು ಬೇಕಾಗುತ್ತದೆ. ಇದಕ್ಕೆ ಇನ್ನು ಮೂರು ವರ್ಷ ಟರ್ನ್ ಕೀ ಬೇಸಿಸ್‌ನಲ್ಲಿ ಬೇಕಾಗುತ್ತದೆ.

ಅದನ್ನು ತೆರೆಯುವಂಥದ್ದು ಸಾಧುವಲ್ಲವೆಂದು ಹೇಳಿ ಡಿಸ್‌ಕರೇಜ್ ಮಾಡಿ ಆ ಪರಿಣಿತರು ಇರತಕ್ಕಂಥ ಮೂರು ಪಶು ಆಹಾರ ಘಟಕಗಳಲ್ಲೇ 100 ಮೆಟ್ರಿಕ್ ಟನ್ ಸಾಮರ್ಥ್ಯದಿಂದ 200 ಮೆಟ್ರಿಕ್ ಟನ್‌ಗಳಿಗೆ ಸಾಮರ್ಥ್ಯವನ್ನು ಜಾಸ್ತಿ ಮಾಡಿ ಈಗಿರತಕ್ಕಂಥ 72 ಸಾವಿರ ಅಥವಾ 90 ಸಾವಿರ ಮೆಟ್ರಿಕ್ ಟನ್ ಏನಿದೆ ಅದನ್ನು 180 ಸಾವಿರ ಮೆಟ್ರಿಕ್ ಟನ್ ಮಾಡಿಯೆಂದು ತೀರ್ಮಾನವನ್ನು ಅವರು ಕೊಟ್ಟು ಬಿಟ್ಟಿರುವುದರಿಂದ ಈಗ ಯಾವುದೇ ಪಶು ಆಹಾರ ಘಟಕಗಳನ್ನು ತೆರೆಯುವಂಥದ್ದು ನಮ್ಮ ಮುಂದೆ ಇಲ್ಲ. ಈ ಮಧ್ಯೆ ಹಾಸನದಲ್ಲಿ ಒಂದು ಮಲೆನಾಡು ಭಾಗದಲ್ಲಿ ಒಂದು ಪಶು ಆಹಾರ ಘಟಕವನ್ನು ತೆರೆಯಬೇಕು ಎನ್ನುವ ಉದ್ದೇಶದಿಂದ ಅಲ್ಲಿಯ ಮಲೆನಾಡು ಅಭಿವೃದ್ಧಿ ಮಂಡಳಿಯಿಂದ ಹಣ ಮತ್ತು ಜಿಲ್ಲಾ ಪಂಚಾಯತಿಯಿಂದ ಸರ್ಕಾರದಿಂದ ಬಂದಂಥ ಹಣ ಮತ್ತು ನಮ್ಮ ಇಲಾಖೆಯಿಂದ ಬಂದಂಥ ಹಣ ಈ ನಾಲ್ಕನ್ನೂ ಕೂಡಿಸಿ ಅಲ್ಲಿ ಇದನ್ನು ತೆರೆಯಬೇಕೆಂದು ಈಗಾಗಲೇ ಸರ್ಕಾರ ತೀರ್ಮಾನ ತೆಗೆದುಕೊಂಡು 100 ಮೆಟ್ರಿಕ್ ಟನ್ ಸಾಮರ್ಥ್ಯವುಳ್ಳ 6 ಕೋಟಿ 40 ಲಕ್ಷ ಹಣವನ್ನು ಖರ್ಚು ಮಾಡಿ ಇದನ್ನು ತೆಗೆಯುವಂಥ ಒಂದು ವ್ಯವಸ್ಥೆಯಾಗಿದೆ. ಅದು ನಾಲ್ಕನೇ ಘಟಕವಾಗುತ್ತದೆಯಲ್ಲದೇ ಇದು ಸರ್ಕಾರೀ ಸ್ವಾಮ್ಯದ್ದೇ ವಿನಃ ಕೆ.ಎಂ.ಎಫ್. ಅಥವಾ ಎನ್‌ಡಿಡಿಬಿಯದ್ದಲ್ಲ. ಆಯಾಯಾ ಯೂನಿಯನ್‌ಗಳವರು ಮಾಡಿಕೊಳ್ಳುವುದಾದರೆ ಮಂಡ್ಯದಲ್ಲಿ ಅವರೂ ಮಾಡಿಕೊಳ್ಳುವುದಾದರೆ ಮಂಡ್ಯದ

ಯೂನಿಯನ್ ಮತ್ತು ಸರ್ಕಾರದ ಹಣದಿಂದ ಮಾಡಿಕೊಳ್ಳಬಹುದು. KMF is not prepared to have any new cattle feed plants. This is the stand taken.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಪಶು ಆಹಾರ ವಿತರಣೆಯಲ್ಲಿ ಬಹಳ ತೊಂದರೆಯಾಗಿದೆ. ಸರಿಯಾದ ವೇಳೆಗೆ ಅದು ವಿತರಣೆ ಆಗುತ್ತಿಲ್ಲ. ತಾವು ಏನು ಈ ಪಶು ಆಹಾರವನ್ನು ಕರ್ನಾಟಕ ಹಾಲು ಮಹಾ ಮಂಡಳಿಯ ವತಿಯಿಂದ ಏನು ಕಳುಹಿಸಿಕೊಡುತ್ತಿದ್ದೀರಿ ಅದು ಸರಿಯಾದ ವೇಳೆಗೆ ಮುಟ್ಟುತ್ತಲೇ ಇಲ್ಲ. ತಾವು ಏನನ್ನೂ ಮೇನ್‌ಟೇನ್ ಮಾಡುತ್ತಿಲ್ಲ. ಆದ್ದರಿಂದ ಇದರ ಬಗ್ಗೆ ಚೆಕ್ ಮಾಡಿ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಬಿ.ಎನ್. ಬಚ್ಚೇಗೌಡ : ಪಶು ಆಹಾರಘಟಕಗಳಿಂದ ಸರಬರಾಜು ಆಗುವಂಥಾದ್ದು ಬಹಳ ಉತ್ತಮವಾಗಿದೆ. ಗುಣಮಟ್ಟ ಚೆನ್ನಾಗಿದೆ. ಅದಕ್ಕೆ ಬೇಕಾದುದು ಮೇಜ್, ರೈಸ್ ಬ್ರಾನ್, ಮೊಲಾಸಿಸ್, ಮತ್ತು ಕೆಲವು ಪ್ರೊಟೀನ್ ಅಂಶ. ನಮ್ಮಲ್ಲಿ ಎರಡು ರೀತಿಯ ಪಶು ಆಹಾರ ತಯಾರಿಸುತ್ತೇವೆ. ಮೊದಲನೆಯದು ಪುಡಿ ರೂಪದಲ್ಲಿರುವುದು 3.20ರೂ.ಗೆ ಕೊಡುವಂಥಾದ್ದು. ಎರಡನೆಯದು ಪೆಲೆಟ್ ರೂಪದಲ್ಲಿ ಕೊಡುವಂಥಾದ್ದು 4.20ರೂ.ಗೆ ಕೊಡುತ್ತೇವೆ. ಅದು ಬೈ ಪಾಸ್‌ಎಂದು ಧಾರವಾಡದಲ್ಲಿ ಮಾಡುತ್ತೇವೆ. ಅದರ ಕ್ವಾಲಿಟಿ ಬಹಳ ಚೆನ್ನಾಗಿದೆ. ನಮ್ಮಲ್ಲಿ ಅದು ಬಹಳ ಚೆನ್ನಾಗಿ ಉಪಯೋಗ ಆಗುತ್ತಿದೆ. ಕೆಲವು ಖಾಸಗಿಯವರು ಬೂಸಾ ಮತ್ತು ಅವರ ಉತ್ಪಾದನೆಯನ್ನು ಮಾರಾಟ ಮಾಡಿಕೊಳ್ಳಲು ನಮ್ಮ ಆಹಾರದಲ್ಲಿ ಮಣ್ಣು ಇದೆ, ತೊಂದರೆಯಾಗುತ್ತದೆ ಎಂದು ದೂರು ಹೇಳಿಕೊಂಡು ಮಾರಾಟ ಮಾಡಿಕೊಳ್ಳುತ್ತಿದ್ದಾರೆ, ಆದರೆ ನಮ್ಮ ಉತ್ಪಾದನೆಯಲ್ಲಿ ಕ್ವಾಲಿಟಿಯ ಬಗ್ಗೆ ಯಾರೂ ಅನುಮಾನ ಪಟ್ಟು ಕೊಳ್ಳಬೇಕಾದ್ದಿಲ್ಲ. ಬಹಳ ಉತ್ತಮ ಗುಣಮಟ್ಟದ ಆಹಾರವನ್ನು ಕೊಡುತ್ತೇವೆ. ಕ್ವಾಲಿಟಿ ಕಂಟ್ರೋಲ್ ಇದೆ. ಸ್ವತಃ ನಾನೇ ಎಲ್ಲಾ ಘಟಕಗಳಿಗೂ ಭೇಟಿ ಕೊಟ್ಟಿದ್ದೇನೆ. ಬೇರೆಯವರು ನಮ್ಮ ವಿರುದ್ಧ ಹೇಳುತ್ತಿರುವುದು ಶುದ್ಧ ಸುಳ್ಳು. ನಮ್ಮಲ್ಲಿ ಕ್ವಾಲಿಟಿ ಚೆನ್ನಾಗಿರುತ್ತದೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಮಾನ್ಯ ಅಧ್ಯಕ್ಷರೆ. ನಾನೇ ಸ್ವತಃ ಡೇರಿ ಮಾಡಿರುವುದರಿಂದ ಈ ಮಾತನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು : ನಿಮ್ಮ ಪ್ರಶ್ನೆಗೆ ನಾನೇ ಉತ್ತರ ಹೇಳುತ್ತೇನೆ. ನಾವು ತಯಾರಿಸುವ ಆಹಾರದ ಕ್ವಾಲಿಟಿ ಬಹಳ ಚೆನ್ನಾಗಿದೆ ಎಂದು ಹೇಳುತ್ತಿದ್ದಾರೆ. ಇನ್ನೂ ಉತ್ತಮಪಡಿಸಬೇಕೆಂದು ತಾವು ಹೇಳಿದರೆ ಅಲ್ಲಿಗೆ ಮುಗಿಯುತ್ತದೆ.

ಒಬ್ಬ ಮಾನ್ಯ ಸದಸ್ಯರು : ಅಧ್ಯಕ್ಷರೆ, ನಾನೂ ಕೂಡ ಶಿವಮೊಗ್ಗಾ ಡೈರಿಯ ಅಧ್ಯಕ್ಷನಾಗಿದ್ದು ಕೆ.ಎಂ.ಎಫ್.ನ ಡೈರೆಕ್ಟರ್ ಆಗಿದ್ದೆ. ಈ ನಿರ್ಣಯವನ್ನು ಮಾಡುವ ಹಂತದಲ್ಲಿ ನಾನೂ ಕೂಡ ಇದ್ದೆ. ಈ ಕ್ಯಾಟಲ್‌ಫೀಡ್ ತಯಾರಿಸುವಂಥ ಮೂರು ಘಟಕಗಳು ಕೆ.ಎಂ.ಎಫ್.ನ ಅಧೀನದಲ್ಲಿ ಏನಿವೆ ಇಲ್ಲಿಂದ ಶಿವಮೊಗ್ಗ ಮತ್ತು ಮಂಗಳೂರಿಗೆ ಸಾಗಾಣಿಕೆ ಮಾಡುತ್ತವೆ. ಅತ್ಯಂತ ಹೆಚ್ಚು ಬಳಕೆ ಮಾಡತಕ್ಕ ಎರಡು ಒಕ್ಕೂಟಗಳು ಇವು. ಅಲ್ಲಿಗೆ ಈ ಕ್ಯಾಟಲ್ ಫೀಡನ್ನು ಸಾಗಾಣಿಕೆ ಮಾಡುವುದು ಅತ್ಯಂತ ದುಬಾರಿಯಾಗುತ್ತದೆಂಬ ಕಾರಣದಿಂದ ಈ ಘಟಕವನ್ನು ಶಿವಮೊಗ್ಗಾದಲ್ಲಿ ತೆರೆಯಬೇಕೆಂದು ಯೋಚನೆ ಮಾಡಿದ್ದೆವು. ಅದಕ್ಕೆ ಬೇಕಾದ ಆಯಿಲ್ ಕೇಕ್ ಆಗಲಿ. ಮೊಲಾಸಿಸ್ ಆಗಲಿ, ಇಲ್ಲಿನ ಶುಗರ್ ಫ್ಯಾಕ್ಟರಿಗಳಿಂದ ಸಿಕ್ಕುವುದರಿಂದ ಜೋಳ ಮತ್ತು ರಾಗಿಯನ್ನು ಬೆಳೆಯತಕ್ಕ ಪ್ರದೇಶದಲ್ಲಿ ಇವು ಇರುವುದರಿಂದಾಗಿ ಶಿವಮೊಗ್ಗಾವನ್ನು ಕೇಂದ್ರವನ್ನಾಗಿ ಮಾಡಿಕೊಂಡು ಮಂಗಳೂರು, ಚಿಕ್ಕಮಂಗಳೂರು, ಚಿತ್ರದುರ್ಗ, ಶಿವಮೊಗ್ಗಾ ವ್ಯಾಪ್ತಿಯಲ್ಲಿರತಕ್ಕ ಡೇರಿಗಳಿಗೆ ಸಪ್ಲೈ ಮಾಡಬೇಕೆಂಬ ದೃಷ್ಟಿಯಿಂದ ಅಲ್ಲಿ ಒಂದು

ಘಟಕವನ್ನು ತೆರೆಯುವ ವ್ಯವಸ್ಥೆ ಆಗಬೇಕೆಂದು ಒಂದು ನಿರ್ಣಯವನ್ನು ಪಾಸ್ ಮಾಡಲಾಗಿತ್ತು. ಆದ್ದರಿಂದ ಸರ್ಕಾರದ ವತಿಯಿಂದಾಗಲಿ ಅಥವಾ ಕೆ.ಎಂ.ಎಫ್.ನ ವತಿಯಿಂದಾಗಲಿ ಒಂದು ಘಟಕವನ್ನು ತೆರೆಯಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ : ನಾವು ಹಾಸನದಲ್ಲಿ ಈಗ ತೆರೆಯುತ್ತಿದ್ದೇವೆ. ಮಲೆನಾಡು ಭಾಗದಲ್ಲೇ ಶಿವಮೊಗ್ಗಾ ಕೂಡ ಬರುವುದರಿಂದ ಹಾಸನದಲ್ಲಿ ಘಟಕವನ್ನು ತೆರೆದು ಶಿವಮೊಗ್ಗಾ, ಚಿಕ್ಕಮಗಳೂರು, ಮಂಗಳೂರು ದಕ್ಷಿಣ ಕನ್ನಡ ಪ್ರದೇಶಗಳಿಗೆ ಸಪ್ಲೈ ಮಾಡುವ ಉದ್ದೇಶದಿಂದಲೇ ಈ ಘಟಕವನ್ನು ತೆರೆಯುತ್ತಿರುವುದು. ಇದರಿಂದಾಗಿ ಶಿವಮೊಗ್ಗಾದಲ್ಲಿ ತೆರೆಯತಕ್ಕ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾನು ಒಂದು ಮುಖ್ಯವಾದ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ತಮ್ಮ ಅನುಮತಿಯನ್ನು ಕೇಳಿದ್ದೆ. ಅದಕ್ಕೆ ಅನುಮತಿಯನ್ನು ಕೊಟ್ಟಿದ್ದಕ್ಕೆ ಧನ್ಯವಾದಗಳು.

ಅಧ್ಯಕ್ಷರು : ತಮ್ಮನ್ನು ಅನಂತರ ಕರೆಯುತ್ತೇವೆ.

ಶ್ರೀ ಕೆ.ಎನ್.ನಾಗೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ಎಲ್ಲಾ ಮಾಹಿತಿಗಳೂ ಸರಿಯಾಗಿವೆ. ಆದರೆ ನಾವೂ ಮತ್ತು ಕುರಿಯನ್‌ರವರೂ ಸೇರಿ ನಡೆಸಿದಂಥ ಸಭೆಯ ಪ್ರೊಸೀಡಿಂಗ್ಸ್ ಇಲ್ಲವೆಂದು ಅವರು ಪ್ರಸ್ತಾಪ ಮಾಡಿದ್ದಾರೆ. ನಾವು ಹಿಂದೆ ಮಾನ್ಯ ಕುರಿಯನ್‌ರವರನ್ನು ಕರ್ನಾಟಕಕ್ಕೆ ಕರೆದುಕೊಂಡು ಬಂದು ಅಂದಿನ ಮುಖ್ಯ ಮಂತ್ರಿಗಳಾದ ಮಾನ್ಯ ವೀರಪ್ಪಮೊಯಿಲಿಯವರ ಮನೆಯಲ್ಲೇ ಕುಳಿತು ಬಹಳ ಸುದೀರ್ಘವಾಗಿ ನಾವೂ ಅವರೂ ಎಲ್ಲರೂ ಮಾತನಾಡಿದ್ದೆವು. ಅಲ್ಲಿ ಎರಡು ಕ್ಯಾಟಲ್ ಫೀಡ್ ಪ್ಲಾಂಟನ್ನು ಕೊಡುವುದಕ್ಕೆ ಅವರು ಒಪ್ಪಿದರು. ಕಾರಣ ಎನ್.ಡಿ.ಡಿ.ಬಿ.ಯಲ್ಲಿ ಎರಡು ಸಾವಿರ ಕೋಟಿ ರೂಪಾಯಿಗಳಷ್ಟು ಅವತ್ತು ನಮ್ಮಲ್ಲಿ ಪಾಮ್ ಆಯಿಲ್ ಫ್ಯಾಕ್ಟರಿಯನ್ನೂ ಕೂಡ ಅವರು ಮಂಜೂರಾತಿ ಮಾಡಿಸಿಕೊಂಡರು. ಅದೇ ರೀತಿ ಮಲೆನಾಡಿಗೆ ಬದಲಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಮಾಡಿಸಿಕೊಂಡರು. ಉದಾಹರಣೆಗೆ ಹೇಳುವುದಾದರೆ. ರಾಜಾನುಕುಂಟೆಯಿಂದ ಅಲ್ಲಿಗೆ ತೆಗೆದುಕೊಂಡು ಹೋಗಬೇಕೆಂದರೆ ಬಹಳಷ್ಟು ಸಾಗಾಣಿಕೆ ವೆಚ್ಚ ಜಾಸ್ತಿಯಾಗುತ್ತದೆ. ಈ ರೀತಿ ಸಾಗಾಣಿಕೆ ವೆಚ್ಚ ಜಾಸ್ತಿಯಾಗುವುದನ್ನು ತಪ್ಪಿಸುವ ದೃಷ್ಟಿಯಿಂದ ಎಕ್ಸಪ್ಯಾನ್‌ಷನ್ ಪ್ರೋಗ್ರಾಂಗಳನ್ನು ಆದಷ್ಟೂ ಕೈ ಬಿಟ್ಟು ಹೊಸ ಪ್ರಾಜೆಕ್ಟ್‌ಗಳನ್ನು ಮಾಡತಕ್ಕದ್ದು ಸೂಕ್ತ. ಏಕೆಂದರೆ ಹೊಸ ಟೆಕ್ನಿಕ್ ಬಂದಿದೆ. ಇದರಲ್ಲಿ ಕ್ವಾಲಿಟಿಯನ್ನು ಉತ್ತಮಪಡಿಸಬಹುದು. ಈ ಎಲ್ಲಾ ದೃಷ್ಟಿಯಿಂದ ಹೇಳಿದಾಗ ಅದನ್ನು ಕುರಿಯನ್‌ರವರು ಒಪ್ಪಿಕೊಂಡರು. ಆದರೆ ಅವತ್ತಿನ ಆ ಪ್ರೊಸೀಡಿಂಗ್ಸ್ ಎಲ್ಲಿದೆ ಎಂಬುದು ನನಗೆ ಗೊತ್ತಿಲ್ಲ. ಮತ್ತೆ ನಾನು ಆನಂದ್‌ಗೆ ಹೋಗಿದ್ದಾಗಲೂ ಅವರು ಒಪ್ಪಿದ್ದರು. ಒಂದು ಮಳವಳ್ಳಿಗೆ ಮತ್ತು ಇನ್ನೊಂದನ್ನು ಕಾರ್ಕಳಕ್ಕೆ ಕೊಡುವುದಕ್ಕೆ ಅವರು ಒಪ್ಪಿದ್ದರು. ಈಗ ತಾವು ಹಾಸನದಲ್ಲಿ ತೆರೆಯುತ್ತಿರುವುದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಈಗ ಎನ್.ಡಿ.ಡಿ.ಬಿ.ಯವರ ಹತ್ತಿರ ಹಣ ಇರುವುದರಿಂದ ಈ ಎರಡೂ ಪ್ರೊಪೋಸಲ್‌ನ್ನು ತಾವು ಕೈ ಬಿಡಬಾರದು. ತಾವು ಆನಂದ್‌ಗೆ ಹೋಗಿ ಕುರಿಯನ್‌ರವರನ್ನು ಭೇಟಿ ಮಾಡಬೇಕು. ಏಕೆಂದರೆ ಅವರು ಬಹಳ ದೊಡ್ಡ ಮನುಷ್ಯರು. ತಾವು ಹೇಳಿದ ಮಾತಿನಂತೆ ಅವರು ನಡೆದುಕೊಳ್ಳುತ್ತಾರೆ. ಅವರಿಗೆ ಇದನ್ನು ನೆನಪುಮಾಡಿಕೊಟ್ಟು ಅವರ ಮೇಲೆ ಒತ್ತಡವನ್ನು ತರಬೇಕು. ನಾವು ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರದ ಮಟ್ಟದಲ್ಲಿ ಎನ್.ಡಿ.ಡಿ.ಬಿ.ಗೆ ಬಹಳಷ್ಟು ಸಹಾಯ ಮಾಡಿದ್ದೇವೆ. ಹಿಂದೆ ಒಂದು ಸಂದರ್ಭದಲ್ಲಿ ಎನ್.ಡಿ.ಡಿ.ಬಿ.ಯನ್ನು ತೆಗೆಯಬೇಕೆಂದು ಪ್ರಸ್ತಾಪ ಬಂದಾಗ ಕುರಿಯನ್‌ರವರಿಗೆ ಬೆಂಬಲವನ್ನು ಕೊಟ್ಟಿದ್ದು ಎಂದರೆ ನಮ್ಮ ಕರ್ನಾಟಕ ರಾಜ್ಯ. ನಮ್ಮ ರಾಜ್ಯದ ಬಗ್ಗೆ ಮಾನ್ಯ

ಕುರಿಯನ್‌ರವರಿಗೆ ಬಹಳ ಒಳ್ಳೆಯ ಅಭಿಪ್ರಾಯ ಇದೆ. ಒಳ್ಳೆಯ ಮನಸ್ಸು ಇದೆ, ಹೆಚ್ಚಿನ ಹಣ ಅವರಲ್ಲಿದೆ. ನಮಗೆ ಇನ್ನೂ ಫೀಡ್ಸ್ ಬೇಕಾಗಿದೆ. ಬರಗಾಲ ಪರಿಸ್ಥಿತಿಯಲ್ಲಿ ಹೈನುಗಾರಿಕೆ ಬೆಳೆಯಬೇಕಾದರೆ ಫೀಡ್ಸ್ ಬೇಕಾಗುತ್ತದೆ. ದಯವಿಟ್ಟು ತಾವು ನಮ್ಮ ರಾಜ್ಯ ಸರ್ಕಾರದ ವತಿಯಿಂದ ಹೋಗಿ ಅವರನ್ನು ಭೇಟಿ ಮಾಡಿ. ಯಾವ ರೀತಿಯಲ್ಲಿ ಫೈನಾನ್ಸ್ ಮಾಡಿಕೊಂಡಬೇಕೆಂಬ ವಿಚಾರದಲ್ಲಿ ಅನಂತರ ಲೆಕ್ಕಾಚಾರ ಹಾಕಿಕೊಡಿ. ಪ್ರಿನ್ಸಿಪಲ್ ಅಗ್ರಿಮೆಂಟ್ ಮಾಡಿಕೊಂಡು ಬರುವುದಕ್ಕೆ ತಾವು ಆನಂದ್‌ಗೆ ಹೋಗಿಬರಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ. ನಾನು ಆನಂದ್‌ಗೆ ಭೇಟಿಕೊಟ್ಟು ಮಾನ್ಯ ಕುರಿಯನ್‌ರವರ ಜೊತ ಚರ್ಚೆಯನ್ನೂ ಕೂಡ ಮಾಡಿದ್ದೇನೆ. ಅವರ ಆಪರೇಷನ್ ಫ್ಲಡ್ ತ್ರೀ ಅಂತಿಮವಾದರೂ ಕೂಡ 2000 ವರ್ಷದ ಅಂತ್ಯದವರೆಗೂ ಅದನ್ನು ವಿಸ್ತರಣೆ ಮಾಡಬೇಕು. ಆಪರೇಷನ್ ಫ್ಲಡ್ ಫೋರ್‌ನ್ನು ಇಂಟ್ರಡ್ಯೂಸ್ ಮಾಡಬೇಕು. ನಮ್ಮಲ್ಲಿರತಕ್ಕ ಸಿಕ್ ಯೂನಿಟ್ಸ್‌ನ್ನು ರಿವೈವ್‌ಲ್ ಮಾಡಬೇಕು, ರೀ ಷೆಡ್ಯೂಲಿಂಗ್ ಮಾಡಬೇಕು, ಇನ್ನೂ ಮುಂತಾದ ಹಲವಾರು ವಿಚಾರಗಳನ್ನು ಅವರೊಡನೆ ಪ್ರಸ್ತಾಪ ಮಾಡಿ ಬಂದಿದ್ದೇವೆ ಮಾನ್ಯ ನಾಗೇಗೌಡರು ತಿಳಿಸಿದಂತೆ ಸುಮಾರು 1000 ಕೋಟಿ ರೂ.ಗಿಂತ ಹೆಚ್ಚು ಲಾಭದಲ್ಲಿ ಎನ್.ಡಿ.ಡಿ.ಬಿ. ನಡೆಯುತ್ತಿದೆ. ಮುಂದೆ ಅವರು ಆಪರೇಷನ್ ಫ್ಲಡ್ ಫೋರ್‌ನ್ನು ತೆಗೆದುಕೊಂಡಾಗ ನಮ್ಮಲ್ಲಿ 70-30 ಬೇಸಿ ಸಬ್ಸಿಡಿ ತೆಗೆದುಕೊಂಡು ಮುಂದೆ ಏನು ಮಾಡಬೇಕೆಂಬ ಬಗ್ಗೆ ಅವರ ಜೊತೆ ಚರ್ಚೆ ಮಾಡೋಣ. ಮಾನ್ಯ ಸದಸ್ಯರ ಮನಸ್ಸಿನ ಇಂಗಿತ ನನಗೆ ಗೊತ್ತಿದೆ. ಅವರು ತಮ್ಮ ಕಾಲದಲ್ಲಿ ಬಹಳ ಉತ್ತಮವಾಗಿ ಈ ಇಲಾಖೆಯನ್ನು ಅಭಿವೃದ್ಧಿ ಮಾಡುವ ದಿಸೆಯಲ್ಲಿ ಕೆಲಸ ಮಾಡಿದ್ದಾರೆ. ಅವರನ್ನೂ ನನ್ನ ಜೊತೆಗೆ ತೆಗೆದುಕೊಂಡು ಈ ಕಾರ್ಯಕ್ರಮವನ್ನು ಮಾಡುತ್ತೇನೆಂದು ಹೇಳಬಯಸುತ್ತೇನೆ.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರ

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ : 11ನೇ ಸೆಪ್ಟಂಬರ್ 1995ರ 19ನೇ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ 51 ಪ್ರಶ್ನೆಗಳ ಪೈಕಿ 45 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಹುಬ್ಬಳ್ಳಿ ನಗರ ಪ್ರದೇಶದಲ್ಲಿ ನೀರಾವರಿ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ

2353 - ಶ್ರೀ ಅಶೋಕ್ ಕಾಟವೆ (ಹುಬ್ಬಳ್ಳಿ ನಗರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ನಗರ ಪ್ರದೇಶದಲ್ಲಿ ನೀರಾವರಿ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆಯೇ ಹಾಗಿದ್ದಲ್ಲಿ ಎಷ್ಟು, ಇನ್ನು ಬೇಡಿಕೆ ಇದೆಯೇ.

ಆ) ಕುಡಿಯುವ ನೀರಿನ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆಯೇ, ಸಂಪರ್ಕ ಇಲ್ಲದೇ ಇನ್ನು ಎಷ್ಟು ಕೊಳವೆ ಬಾವಿಗಳಿವೆ.

ಇ) ಸರ್ಕಾರದವರು ಈ ಬಗ್ಗೆ ಕೈಗೊಂಡ ಕ್ರಮಗಳೇನು.

ಈ) ಈ ಎರಡು ಯೋಜನೆಗಳ ಬಗ್ಗೆ ಸರ್ಕಾರ ಇದುವರೆಗೆ ಮಾಡಿದ ವೆಚ್ಚ ಎಷ್ಟು? (ವಿವರವನ್ನೊದಗಿಸುವುದು).

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಹೌದು, ಆಗಸ್ಟ್ 95ರ ಅಂತ್ಯದವರೆಗೆ ಒಟ್ಟು 417ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕಕ್ಕಾಗಿ ಬೇಡಿಕೆ ಇದ್ದು, 20 ಅರ್ಜಿಗಳು ವಿವಿಧ ಹಂತಗಳಲ್ಲಿ ಬಾಕಿ ಉಳಿದಿವೆ.

ಆ) ಹೌದು, ಆಗಸ್ಟ್ 95ರ ಅಂತ್ಯದವರೆಗೆ ಒಟ್ಟು 44 ಕುಡಿಯುವ ನೀರಿನ ಯೋಜನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಯಾವುದೇ ಅರ್ಜಿಯು ವಿದ್ಯುತ್ ಸಂಪರ್ಕಕ್ಕಾಗಿ ಪ್ರಸ್ತುತ ಬಾಕಿ ಉಳಿದಿಲ್ಲ.

ಇ) ಬಾಕಿ ಇರುವ ನೀರಾವರಿ ಪಂಪುಸೆಟ್ಟುಗಳ ಅರ್ಜಿಗಳಿಗೆ ಆರ್ಥಿಕ ಮತ್ತು ತಾಂತ್ರಿಕ ಸಾಧ್ಯತೆಗಳನ್ನು ಪರಿಶೀಲಿಸಿ ಆದ್ಯತೆ ಮತ್ತು ಹಿರಿತನದ ಪ್ರಕಾರ ವಿದ್ಯುತ್ ಸಂಪರ್ಕ ಒದಗಿಸಲು ಕ್ರಮ ತೆಗೆದುಕೊಳ್ಳಲಾಗುತ್ತದೆ.

ಈ) ಈ ಎರಡು ಯೋಜನೆಗಳ ಬಗ್ಗೆ ಆಗಸ್ಟ್ 95ರ ಅಂತ್ಯದವರೆಗೆ ಒಟ್ಟು 69.5 ಲಕ್ಷ ರೂ. ಗಳನ್ನು ಖರ್ಚು ಮಾಡಲಾಗಿದೆ.

ವಿವರಗಳು ಕೆಳಕಂಡಂತಿದೆ.

1)	ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಒದಗಿಸುವ ಬಗ್ಗೆ	65 ಲಕ್ಷ ರೂ.
2)	ಕುಡಿಯುವ ನೀರಿನ ಯೋಜನೆಗಳಿಗೆ ವಿದ್ಯುತ್ ಸಂಪರ್ಕ ಒದಗಿಸುವ ಬಗ್ಗೆ	4.5 ಲಕ್ಷ್ ರೂ.
	ಒಟ್ಟು	69.5 ಲಕ್ಷ ರೂ.

ಹುಬ್ಬಳ್ಳಿ ನಗರದಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ

2384 - ಶ್ರೀ ಅಶೋಕ್ ಕಾಟ್‌ವೆ (ಹುಬ್ಬಳ್ಳಿ ನಗರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ನಗರದಲ್ಲಿ ವಿದ್ಯುತ್ ಪೂರೈಕೆಯ ಪ್ರತಿನಿತ್ಯ ವ್ಯತ್ಯಯ ಉಂಟಾಗಿ ಅಲ್ಲಿಯ ಕೈಗಾರಿಕೆ ಹಾಗೂ ವಾಣಿಜ್ಯ ಚಟುವಟಿಕೆಗಳಿಗೆ ಭಾರಿ ಅನಾನುಕೂಲ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಬಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ಯಾವ ಕ್ರಮಗಳನ್ನು ಕೈಗೊಂಡಿದೆ.

ಇ) ವಿದ್ಯುತ್ ಸರಬರಾಜು ಸುಧಾರಿಸಲು ಸರ್ಕಾರವು ಹುಬ್ಬಳ್ಳಿ ನಗರಕ್ಕೆ ಅಗತ್ಯ ವಿರುವ ಎಷ್ಟು ಕೆ.ವಿ. ವಿದ್ಯುತ್ ಸರಬರಾಜು ಮಾಡಲು ವ್ಯವಸ್ಥೆ ಮಾಡಿದೆ ಹಾಗೂ ಅದರ ವಿವರ ನೀಡುವುದು?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಹೌದು.

ಆ) ಹುಬ್ಬಳ್ಳಿ ನಗರದಲ್ಲಿ ವಿದ್ಯುತ್ ಸರಬರಾಜಿನ ಸುಧಾರಣೆಗಾಗಿ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಅ) ಹುಬ್ಬಳ್ಳಿ ಸಮೀಪದ ನರೇಂದ್ರದಲ್ಲಿ ಏಷಿಯನ್ ಅಭಿವೃದ್ಧಿ ಬ್ಯಾಂಕಿನ ಸಾಲ ಸೌಲಭ್ಯದೊಡನೆ 220:110 ಕೆ.ವಿ.ವಿದ್ಯುತ್ ಸ್ವೀಕರಣಾ ಕೇಂದ್ರವನ್ನು ನಿರ್ಮಾಣ ಮಾಡಲಾಗುತ್ತಿದೆ. ನಿರ್ಮಾಣ ಕಾರ್ಯವನ್ನು ಡಿಸೆಂಬರ್ 96ರ ಅಂತ್ಯದ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಿದೆ.

ಆ) ಹುಬ್ಬಳ್ಳಿ ಅರ್ಬನ್ ಡಿಸ್ಟ್ರಿಬ್ಯೂಷನ್ ಇಂಪ್ರೂವ್‌ಮೆಂಟ್‌ಸ್ಕೀಂ ನಡಿಯಲ್ಲಿ ಗೋಪನಕೊಪ್ಪ ಮತ್ತು ನವನಗರಗಳಲ್ಲಿ 110 ಕೆ.ವಿ. ವಿದ್ಯುತ್ ಸಬ್-ಸ್ಟೇಷನ್‌ಗಳ ನಿರ್ಮಾಣ.

ಇ) ಪವರ್ ಹೌಸ್ ಕಾಂಪೌಂಡ್ ಮತ್ತು ಕೈಗಾರಿಕಾ ಪ್ರದೇಶಗಳಲ್ಲಿರುವ 33:11 ಕೆ.ವಿ. ವಿದ್ಯುತ್ ಸಬ್-ಸ್ಟೇಷನ್‌ಗಳಲ್ಲಿ ತಲಾ 5 ಎಂ.ವಿ.ಎ. ಸಾಮರ್ಥ್ಯದ ಒಂದೊಂದು ಪವರ್ ಟ್ರಾನ್ಸ್‌ಫಾರ್ಮರ್‌ಗಳನ್ನು ಹೆಚ್ಚುವರಿಯಾಗಿ ಸ್ಥಾಪಿಸುವುದು.

ಈ) ತರಿಹಾಳ 110 ಕೆ.ವಿ. ವಿದ್ಯುತ್ ಉಪ ಕೇಂದ್ರದಲ್ಲಿ 10 ಎಂ.ವಿ.ಎ. ಸಾಮರ್ಥ್ಯದ 110 : 33 ಕೆ.ವಿ. ಪವರ್ ಟ್ರಾನ್ಸ್ ಫಾರ್ಮರ್‌ನ್ನು 20 ಎಂ.ವಿ.ಎ. ಸಾಮರ್ಥ್ಯದ 110:33ಕೆ.ವಿ. ಪವರ್ ಟ್ರಾನ್ಸ್ ಫಾರ್ಮರ್ ಮೂಲಕ ಬದಲಾಯಿಸುವುದು.

ಉ) ವಿತರಣಾ ವ್ಯವಸ್ಥೆಯಲ್ಲಿ ಹೆಚ್ಚುವರಿಯಾಗಿ 28 ವಿತರಣಾ ಟ್ರಾನ್ಸ್ ಫಾರ್ಮರ್ ಕೇಂದ್ರಗಳ ಸ್ಥಾಪನೆ ಮತ್ತು 48 ಕಡಿಮೆ ಸಾಮರ್ಥ್ಯದ ವಿತರಣಾ ಟ್ರಾನ್ಸ್ ಫಾರ್ಮರ್‌ಗಳನ್ನು ಹೆಚ್ಚಿನ ಸಾಮರ್ಥ್ಯದ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ಮೂಲಕ ಬದಲಾಯಿಸುವುದು.

ಇ) ಹುಬ್ಬಳ್ಳಿ ನಗರದಲ್ಲಿ ವಿದ್ಯುತ್ ಸರಬರಾಜಿನ ಸುಧಾರಣೆಗಾಗಿ, ನಗರಕ್ಕೆ ಅಗತ್ಯವಿರುವ ಸುಮಾರು 95 ಎಂ.ವಿ.ಎ.ನಷ್ಟು ವಿದ್ಯುತ್ತನ್ನು ಸರಬರಾಜು ಮಾಡಲು ಯೋಜಿಸಿದ್ದು. ವಿದ್ಯುತ್ ಉಪಕೇಂದ್ರವಾರು ವಿವರಗಳು ಕೆಳಕಂಡಂತಿದೆ.

ಕ್ರ. ಸಂ.	ವಿದ್ಯುತ್ ಉಪ ಕೇಂದ್ರ	ಯೋಜಿತ ವಿದ್ಯುತ್ ಸರಬರಾಜಿನ ಪ್ರಮಾಣ
1.	ಶರಾವತಿ ರಿಸೀವಿಂಗ್ ಸ್ಟೇಷನ್	20 ಎಂ.ವಿ.ಎ.
2.	ತರೀಹಾಳ್	10 ”
3.	ಗೋಪನಕೊಪ್ಪ	20 ”
4.	ಕೈಗಾರಿಕಾ ಪ್ರದೇಶ	15 ”
5.	ಪವರ್ ಹೌಸ್ ಕಾಂಪೌಂಡ್	10 ”
6.	ನವನಗರ	20 ”
	ಒಟ್ಟು	95 ಎಂ.ವಿ.ಎ.

ಹುಬ್ಬಳ್ಳಿ ನಗರದಲ್ಲಿ ಪಶು ವೈದ್ಯ ಆಸ್ಪತ್ರೆಗಳು

2388 - ಶ್ರೀ ಅಶೋಕ್ ಕಾಟ್‌ವೆ (ಹುಬ್ಬಳ್ಳಿ ನಗರ) : ಮಾನ್ಯ ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ನಗರದಲ್ಲಿ ಎಷ್ಟು ಪಶು ವೈದ್ಯ ಆಸ್ಪತ್ರೆಗಳಿವೆ?

ಆ) ಅಲ್ಲಿ ಜಾನುವಾರುಗಳಿಗೆ ನೀಡಬೇಕಾದ ಅಗತ್ಯ ಚಿಕಿತ್ಸಾ ಸೌಲಭ್ಯಗಳಿವೆಯೇ?

ಇ) ಪರಿಣಿತ ವೈದ್ಯರ ಸಿಬ್ಬಂದಿ ಇದ್ದಾರೆಯೇ?

ಈ) ನಗರವು ಬೆಳೆಯುತ್ತಿದ್ದು, ಸುತ್ತೆಲ್ಲಾ ಹಳ್ಳಿಯ ಜನರು ಇಲ್ಲಿಗೆ ಬರುವುದರಿಂದ, ಇನ್ನೂ ಒಂದು ಸುಸಜ್ಜಿತ ಆಸ್ಪತ್ರೆ ನೀಡಲು ಸರ್ಕಾರ ಸಿದ್ಧವಿದೆಯೇ?

ಉ) ಈಗ ನ್ಯೂ ಇಂಗ್ಲೀಷ್ ಸ್ಕೂಲ್ ಹತ್ತಿರ ಇರುವ ಪಶುವೈದ್ಯ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿ, ಆಧುನೀಕರಣಗೊಳಿಸುವ ಯೋಜನೆ ಸರ್ಕಾರಕ್ಕಿದೆಯೇ?

ಶ್ರೀ ಬಿ.ಎನ್. ಬಚ್ಚೇಗೌಡ (ಪಶು ಸಂಗೋಪನಾ ರಾಜ್ಯ ಸಚಿವರು) :

ಅ) 4

ಆ) ಹೌದು.

ಇ) ಹೌದು

ಈ) ಈಗಾಗಲೇ ಒಂದು ಸುಸಜ್ಜಿತ ಆಸ್ಪತ್ರೆ ಕಾರ್ಯನಿರ್ವಹಿಸುತ್ತಿರುವುದರಿಂದ, ಮತ್ತೊಂದು ಆಸ್ಪತ್ರೆಯ ಅವಶ್ಯಕತೆ ಇರುವುದಿಲ್ಲ.

ಉ) ಸದರಿ ಪಶುವೈದ್ಯ ಆಸ್ಪತ್ರೆಯನ್ನು ಜಿಲ್ಲಾ ಮಟ್ಟದ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ. ಆಸ್ಪತ್ರೆಯಲ್ಲಿ ಆಧುನೀಕ ರೀತಿಯಲ್ಲಿ ಶಸ್ತ್ರ ಚಿಕಿತ್ಸಾ ವಿಭಾಗವನ್ನು ಹಾಗೂ ಕ್ಷ-ಕಿರಣ (ಎಕ್ಸ್-ರೇ) ಘಟಕವನ್ನು ಪ್ರಾರಂಭಿಸಿದ್ದು, ಈಗಾಗಲೇ ಇವುಗಳು ಕಾರ್ಯನಿರ್ವಹಿಸುತ್ತಿದೆ.

ಜಿಲ್ಲಾವಾರು ರೋಜಗಾರ್ ಯೋಜನೆಯ ಬಗ್ಗೆ

1762 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1992-93, 93-94 ಮತ್ತು 1994-95ರಲ್ಲಿ ಜಿಲ್ಲಾವಾರು ರೋಜ್‌ಗಾರ್ ಯೋಜನೆಯಲ್ಲಿ ಶೇಕಡಾ 80 ಹಾಗೂ 20ರಲ್ಲಿ ನಿಗದಿಗೊಳಿಸಿದ, ಬಿಡುಗಡೆ ಮಾಡಿದ ವೆಚ್ಚ ಮಾಡಿದ ಹಾಗೂ ವರ್ಷದ ಕೊನೆಗೆ ವೆಚ್ಚವಾಗದೆ ಉಳಿದ ಹಣವೆಷ್ಟು.

ಆ) 1995-96ರಲ್ಲಿ ರೋಜ್‌ಗಾರ್ ಯೋಜನೆಯಲ್ಲಿ ಜಿಲ್ಲಾವಾರು ನಿಗದಿಗೊಳಿಸಿದ ಬಿಡುಗಡೆ ಮಾಡಿದ ಹಾಗೂ ವೆಚ್ಚ ಮಡಿದ ಮೊತ್ತವೆಷ್ಟು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) (ಲಕ್ಷ ರೂ.ಗಳಲ್ಲಿ)

ವರ್ಷ	ನಿಗದಿ ಮಾಡಿದ ಹಣ	ಬಿಡುಗಡೆ ಮಾಡಿದ ಹಣ	ಖರ್ಚು ಮಾಡಿದ ಹಣ	ಉಳಿಕೆ ಹಣ
1992-93	11763.33	14252.55	12533.912	1718.638
1993-94	16531.34	16480.31	17571.233	(-)1090.923
1994-95	19068.33	19342.49	18332.338	1010.152

ಜಿಲ್ಲಾವಾರು ಮಾಹಿತಿಯನ್ನು ತಃಖ್ತೆಯಲ್ಲಿ ಒದಗಿಸಿದೆ.

ಆ) (ಲಕ್ಷ ರೂ.ಗಳಲ್ಲಿ)

ವರ್ಷ	ನಿಗದಿ ಮಾಡಿದ ಹಣ	ಬಿಡುಗಡೆ ಮಾಡಿದ ಹಣ	ಖರ್ಚು ಮಾಡಿದ ಹಣ
1995-96	21094.44	5171.49	1947.927

ಜಿಲ್ಲಾವಾರು ಮಾಹಿತಿಯನ್ನು ತಃಖ್ತೆಯಲ್ಲಿ ಒದಗಿಸಿದೆ.

ಜವಾಹರ್ ರೋಜ್‌ಗಾರ್ ಯೋಜನೆಯಡಿಯಲ್ಲಿ 1995-96ನೇ ಸಾಲಿಗೆ ನಿಗದಿಗೊಳಿಸಿದ, ಬಿಡುಗಡೆ ಮಾಡಿದ ಮತ್ತು ವೆಚ್ಚ ಮಾಡಿದ ಹಣದ ವಿವರ. (ಲಕ್ಷ ರೂಗಳಲ್ಲಿ)

ಕ್ರ. ಸಂ.	ಜಿಲ್ಲೆ	ನಿಗದಿಗೊಳಿಸಿದ ಹಣ (1995-96)	ಬಿಡುಗಡೆ ಮಾಡಿದ ಹಣ (31-7-95)	ವೆಚ್ಚ ಮಾಡಿದ ಹಣ (31-7-95)
1.	ಬೆಂಗಳೂರು(ಗ್ರಾ)	917.69	224.21	72.242
2.	ಬೆಂಗಳೂರು(ನ)	600.39	149.85	16.313
3.	ಬೆಳಗಾಂ	967.54	237.06	124.710
4.	ಬಳ್ಳಾರಿ	1127.61	275.69	145.490
5.	ಬೀದರ್	346.24	206.51	54.602
6.	ಬಿಜಾಪುರ	1353.91	330.23	102.656
7.	ಚಿಕ್ಕ ಮಗಳೂರು	694.02	173.23	67.361
8.	ಚಿತ್ರದುರ್ಗ	1493.84	366.02	139.827
9.	ದಕ್ಷಿಣ ಕನ್ನಡ	756.90	184.34	56.239
10.	ಧಾರವಾಡ	1371.06	333.58	65.961
11.	ಗುಲ್ಬರ್ಗಾ	1754.56	428.46	224.433
12.	ಹಾಸನ	873.21	213.23	79.154
13.	ಕೊಡಗು	447.80	108.26	43.992
14.	ಕೋಲಾರ	1642.06	401.35	175.900
15.	ಮಂಡ್ಯ	575.84	141.04	43.457
16.	ಮೈಸೂರು	1427.59	349.78	222.296
17.	ರಾಯಚೂರು	1439.10	351.99	162.806
18.	ಶಿವಮೊಗ್ಗ	873.77	218.16	11.175

19.	ತುಮಕೂರು	1440.29	352.23	98.123
20.	ಉತ್ತರ ಕನ್ನಡ	481.02	116.27	38.800
	ರಾಜ್ಯ ಕೋಶ	10.00	10.00	2.390
	ಒಟ್ಟು	21094.44	5171.49	1947.927

ಪಶ್ಚಿಮ ಘಟ್ಟ ಯೋಜನೆಯಲ್ಲಿ ಬರುವ ತಾಲ್ಲೂಕುಗಳು

1768 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯಲ್ಲಿ ಬರುವ ತಾಲ್ಲೂಕುಗಳು ಯಾವುವು.

ಆ) ಈ ಮಂಡಳಿಗೆ 1992-93, 1993-94, 94-95ರಲ್ಲಿ ನಿಗದಿಗೊಳಿಸಿದ, ಬಿಡುಗಡೆ ಮಾಡಿದ, ವೆಚ್ಚ ಮಾಡಿದ ಹಾಗೂ ವೆಚ್ಚ ಮಾಡದೆ ಉಳಿಸಿದ ಹಣವೆಷ್ಟು.

ಇ) 1995.96ನೇ ಸಾಲಿನಲ್ಲಿ ಈ ಯೋಜನೆಗೆ ನಿಗದಿಮಾಡಿದ ಹಣವೆಷ್ಟು ಹಾಗೂ 1-4-95ರಿಂದ 30-6-95ರವರೆಗೆ ಬಿಡುಗಡೆಯಾದ ಹಾಗೂ ವೆಚ್ಚವಾದ ಹಣವೆಷ್ಟು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ತಾಲ್ಲೂಕುಗಳ ಪಟ್ಟಿಯನ್ನು ಲಗತ್ತಿಸಿದೆ.

ಆ) ವಿವರಗಳನ್ನು ಅನುಬಂಧದಲ್ಲಿ ತೋರಿಸಲಾಗಿದೆ.

ಇ) ಈ ಯೋಜನೆಗೆ 1995-96ನೇ ಸಾಲಿನಲ್ಲಿ ನಿಗದಿಪಡಿಸಲಾದ ಹಣ ರೂ. 1122.00 ಲಕ್ಷಗಳು. 1-4-95ರಿಂದ 30-6-95ರವರೆಗೆ ಅನುದಾನವನ್ನು ಬಿಡುಗಡೆ ಮಾಡಿರುವುದಿಲ್ಲ. 1995-96ನೇ ಆರಂಭಿಕ ಶಿಲ್ಕಿನ ಹಣದಲ್ಲಿ ರೂ. 25.09 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯಡಿ ಕಾರ್ಯಾಚರಣೆಯಲ್ಲಿರುವ ಪ್ರದೇಶಗಳು

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು		ತಾಲ್ಲೂಕುಗಳ ಹೆಸರು
1.	ಬೆಳಗಾಂ	1.	ಖಾನಾಪುರ
		2.	ಹುಕ್ಕೇರಿ
		3.	ಬೆಳಗಾಂ
		4.	ಬೈಲಹೊಂಗಲ
		5.	ಸೌಂದತ್ತಿ
2.	ಚಿಕ್ಕಮಗಳೂರು	6.	ಕೊಪ್ಪ
		7.	ಮೂಡಿಗೆರೆ
		8.	ಶೃಂಗೇರಿ
		9.	ಚಿಕ್ಕಮಗಳೂರು

		10.	ನರಸಿಂಹರಾಜಪುರ
3.	ಕೊಡಗು	11.	ಮಡಿಕೇರಿ
		12.	ಸೋಮವಾರಪೇಟೆ
		13.	ವೀರಾಜಪೇಟೆ
4.	ಹಾಸನ	14.	ಸಕಲೇಶಪುರ
		15.	ಆಲೂರು
		16.	ಬೇಲೂರು
		17.	ಹಾಸನ
5.	ಮೈಸೂರು	18.	ಹೆಚ್.ಡಿ. ಕೋಟ
		19.	ಗುಂಡ್ಲುಪೇಟೆ
6.	ಉತ್ತರ ಕನ್ನಡ	20.	ಅಂಕೋಲಾ
		21.	ಭಟ್ಕಳ್
		22.	ಹೊನ್ನಾವರ
		23.	ಕುಮಾಟಾ
		24.	ಕಾರವಾರ
		25.	ಸಿದ್ದಾಪುರ
		26.	ಸಿರಸಿ
		27.	ಸೂಪ
		28.	ಯಲ್ಲಾಪುರ
7.	ದಕ್ಷಿಣ ಕನ್ನಡ	29.	ಬೆಳ್ತಂಗಡಿ
		30.	ಕುಂದಾಪುರ
		31.	ಕಾರ್ಕಳ
		32.	ಪುತ್ತೂರು
		33.	ಸೂಳ್ಯ
		34.	ಉಡುಪಿ
8.	ಶಿವಮೊಗ್ಗ	35.	ಹೊಸನಗರ
		36.	ತೀರ್ಥಹಳ್ಳಿ
		37.	ಸಾಗರ
		38.	ಶಿವಮೊಗ್ಗ
		39.	ಶಿಕಾರಿಪುರ
9.	ಧಾರವಾಡ	40.	ಧಾರವಾಡ

ಅನುಬಂಧ

ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯಡಿ 1992-93, 1993-94 ಮತ್ತು 1994-95ನೇ ಸಾಲುಗಳಲ್ಲಿ ನಿಗದಿಪಡಿಸಿದ ಹಣ, ಬಿಡುಗಡೆ ಮಾಡಿದ ಹಣ, ವೆಚ್ಚ ಮಾಡಿದ ಹಣ ಹಾಗೂ ವೆಚ್ಚ ಮಾಡದೆ ಉಳಿದ ಹಣದ ವಿವರಗಳನ್ನೊಳಗೊಂಡ ತಃಖ್ತೆ.

(ಲಕ್ಷ ರೂ.ಗಳಲ್ಲಿ)

ಕ್ರ. ಸಂ.	ವರ್ಷ	ನಿಗದಿ ಪಡಿಸಿದ ಅನುದಾನ	ಬಿಡುಗಡೆಯಾದ ಅನುದಾನ	ವೆಚ್ಚ ಮಾಡಿದ ಹಣ	ಖರ್ಚಾಗದೇ ಉಳಿದ ಹಣ
1.	1992-93	955.640	955.640	946.764	8.876
2.	1993-94	1024.000	1045.124	939.741	84.259
3.	1994-95	1028.750	944.491	955.812	72.938

ಸರ್ವಜ್ಞ ಜನ್ಮಸ್ಥಳ ಅಬಲೂರಿನಲ್ಲಿ ತೆಗೆದುಕೊಂಡ ಕಾರ್ಯಕ್ರಮ.

1730 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಧಾರವಾಡ ಜಿಲ್ಲಾ ಹಿರೇಕೆರೂರು ತಾಲ್ಲೂಕಿನಲ್ಲಿರುವ ಸರ್ವಜ್ಞನ ಜನ್ಮ ಸ್ಥಳ ಅಬಲೂರಿನಲ್ಲಿ ಹಾಕಿಕೊಂಡಿರುವ ಅಭಿವೃದ್ಧಿ ಕಾರ್ಯಕ್ರಮಗಳಾವುವು ಹಾಗೂ ಅವುಗಳನ್ನು ಯಾವಾಗ ಹಾಕಿಕೊಳ್ಳಲಾಗಿದೆ.

ಆ) ಆ ಎಲ್ಲಾ ಕಾರ್ಯಗಳ ಪ್ರಗತಿ 31-7-95ಕ್ಕೆ ಯಾವ ಹಂತದಲ್ಲಿದೆ.

ಇ) ಹಾಗೂ ಪ್ರತಿ ಯೋಜನೆಗಳನ್ನು ಎಂದು ಮುಗಿಸಲಾಗುವುದು ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ)1 ಸರ್ವಜ್ಞನ ಮಂಟಪಕ್ಕೆ ಆವರಣ ಗೋಡೆ ನಿರ್ಮಿಸುವುದು, ಪ್ರವಾಸಿ ಮಂದಿರ ಕಟ್ಟುವುದು, ಸರ್ವಜ್ಞ ಸ್ಮಾರಕ ಭವನ ನಿರ್ಮಾಣ ಇವುಗಳನ್ನು 94-95ನೇ ಸಾಲಿನಲ್ಲಿ ಹಾಕಿಕೊಳ್ಳಲಾಗಿದೆ.

2) ಒಂದು ಕೊಳವೆ ಬಾವಿಯನ್ನು ಕೇಂದ್ರ ವಲಯ ವಿಶೇಷ ಘಟಕ ಯೋಜನೆಯಲ್ಲಿ ತೆಗೆದುಕೊಳ್ಳಲಾಗಿದೆ.

1995-96ನೇ ಸಾಲಿನಲ್ಲಿ ಹಾಕಿಕೊಳ್ಳಲಾಗಿದೆ.

3) ಒಂದು ಅಂಗನವಾಡಿ ಕಟ್ಟಡ ನಿರ್ಮಾಣವನ್ನು ಉದ್ಯೋಗ ಭರವಸೆ ಯೋಜನೆಯಡಿ ತೆಗೆದುಕೊಳ್ಳಲಾಗಿದೆ.

1994-95ನೇ ಸಾಲಿನ ಹಾಕಿಕೊಳ್ಳಲಾಗಿದೆ.

4) ಜೆಆರ್‌ವೈ 80 ಶೇ. ಅಡಿಯಲ್ಲಿ :

1) ಅಬಲೂರು ಗ್ರಾಮದಲ್ಲಿ ಶಾಲಾ ರಿಪೇರಿ ಹಾಗೂ ಕಾಂಪೌಂಡ್ ದುರಸ್ತಿ

2) ಎಸ್‌ಸಿ :ಎಸ್‌ಟಿ. ಮನೆ ನಿರ್ಮಾಣ

3) ಪಕ್ಕಾ ಗಟಾರ ಹಾಗೂ ರಸ್ತೆ ಸುಧಾರಣೆ 1995-96ನೇ ಸಾಲಿಗೆ ಹಾಕಿಕೊಳ್ಳಲಾಗಿದೆ.

ಆ)1)ಟೆಂಡರು ಕರೆಯುಲಾಗಿದೆ.

2) ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ ತಾಂತ್ರಿಕ ಉಪ ವಿಭಾಗ (ಪಿಹೆಚ್ಇ) ಧಾರವಾಡ ಇವರಿಗೆ ಕೊಳವೆ ಬಾವಿ ಕೊರೆಯಲು ತಿಳಿಸಲಾಗಿದೆ.

3) ಅಂಗನವಾಡಿ ಕಟ್ಟಡ ನಿರ್ಮಾಣ ಪೂರ್ಣಗೊಂಡಿದೆ.

4) ಕೆಲಸಗಳು ಪ್ರಗತಿಯಲ್ಲಿವೆ.

ಇ)1)ಟೆಂಡರ್ ಒಪ್ಪಿಗೆಯಾದ ಕೂಡಲೇ ಯೋಜನೆಗಳನ್ನು ಪೂರ್ಣಗೊಳಿಸಲಾಗುವುದು.

2) ಶೀಘ್ರವಾಗಿ ಮುಗಿಸಲಾಗುವುದು.

3) ಪೂರ್ಣಗೊಂಡಿರುವುದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

4) ದಿನಾಂಕ 31-3-96ರ ಒಳಗಾಗಿ ಪೂರ್ಣಗೊಳಿಸಲಾಗುವುದು.

ರಟ್ಟೀಹಳ್ಳಿ-ತುಮ್ಮಿನಕಟ್ಟಿ ರಸ್ತೆ ದುರಸ್ತಿ

1731-Ë ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಟ್ಟೀಹಳ್ಳಿ - ತುಮ್ಮಿನಕಟ್ಟೆ ರಸ್ತೆಯಲ್ಲಿ ರಟ್ಟೀಹಳ್ಳಿಯಿಂದ 4 ಕಿ.ಮೀ. ರಸ್ತೆ ಪೂರಾ ಹಾಳಾಗಿ ಹೋಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ದುರಸ್ತಿ ಮಾಡಲು ಸರ್ಕಾರದವರು ತೆಗೆದುಕೊಂಡಿರುವ ಕ್ರಮವೇನು, ಹಾಗೂ ಯಾವಾಗ ದುರಸ್ತಿ ಮಾಡಲಾಗುತ್ತದೆ?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಸದರಿ ರಸ್ತೆಯ 4 ಕಿ.ಮೀ. ಉದ್ದದ ಭಾಗವು ಕೆಟ್ಟಿದ್ದು, ವಾಹನಗಳ ಸುಗಮ ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈ ಭಾಗದ ರಸ್ತೆಯನ್ನು 1995-96ನೇ ಸಾಲಿನಲ್ಲಿ ಮಳೆಗಾಲದ ನಂತರ ಡಾಂಬರು, ಮಾಡುವ ಪ್ರಸ್ತಾಪವಿರುತ್ತದೆ. ಅಲ್ಲಿಯವರೆವಿಗೂ ರಸ್ತೆಯಲ್ಲಿನ ಗುಂಡಿಗಳನ್ನು ಮುಚ್ಚಿ ರಸ್ತೆಯನ್ನು ಸುಸ್ಥಿತಿಯಲ್ಲಿಡುವಂತೆ ಸೂಚಿಸಲಾಗಿದೆ.

ತಾಲ್ಲೂಕು ಪಂಚಾಯ್ತಿ ಜೀಪ್ ಉಪಯೋಗದ ಬಗ್ಗೆ

2451 - ಡಾ॥ ಯು. ಚಿತ್ತರಂಜನ್ (ಭಟ್ಕಳ್) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತಾಲ್ಲೂಕು ಪಂಚಾಯ್ತಿ ಕಾರ್ಯ ನಿರ್ವಾಹಕ ಅಧಿಕಾರಿಯ ವಾಹನವನ್ನು ತಾಲ್ಲೂಕು ಪಂಚಾಯ್ತಿ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಉಪಯೋಗಿಸುವ ಕುರಿತು ನಿರ್ದಿಷ್ಟ ಸೂಚನೆಗಳನ್ನು ಸರ್ಕಾರದಿಂದ ಕೊಡಲಾಗಿದೆಯೇ? (ಅವರ ವಿವರಗಳೇನು)

ಆ) ಆ ಕ್ಷೇತ್ರದ ವಿಧಾನ ಸಭಾ ಸದಸ್ಯರು ಕ್ಷೇತ್ರದಲ್ಲಿ ಪ್ರವಾಸ ಮಾಡಲು ಈ ವಾಹನ ಉಪಯೋಗಿಸಲು ಏನು ವ್ಯವಸ್ಥೆ ಮಾಡಲಾಗಿದೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು):

ಅ) ತಾಲ್ಲೂಕು ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ವಾಹನಗಳನ್ನು ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಈ ಬಗ್ಗೆ ಯಾವ ಸೂಚನೆಗಳನ್ನು ಹೊರಡಿಸಿರುವುದಿಲ್ಲ.

ರಾಜ್ಯದ ವಿದ್ಯುತ್ ಯೋಜನೆಗಳನ್ನು ಕಾರ್ಯಗತಗೊಳಿಸುವುದು

2508 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಐದು (5) ವರ್ಷಗಳಲ್ಲಿ ರಾಜ್ಯದ ಎಷ್ಟು ವಿದ್ಯುತ್ ಯೋಜನೆಗಳನ್ನು ಕೇಂದ್ರ ಸರ್ಕಾರದ ಒಪ್ಪಿಗೆಗಾಗಿ ಕಳುಹಿಸಿ ಕೊಡಲಾಗಿದೆ (ವರ್ಷಾವಾರು ಅಂಕಿಅಂಶಗಳನ್ನು ಒದಗಿಸುವುದು)

ಆ) ಇವುಗಳ ಪೈಕಿ ಎಷ್ಟು ಯೋಜನೆಗಳಿಗೆ ಕೇಂದ್ರದ ಒಪ್ಪಿಗೆ ದೊರೆತಿದೆ. ಇನ್ನೂ ಎಷ್ಟು ಯೋಜನೆಗಳಿಗೆ ಒಪ್ಪಿಗೆ ದೊರೆಯಬೇಕಾಗಿದೆ.

ಇ) ಒಪ್ಪಿಗೆ ಪಡೆದುಕೊಳ್ಳುವ ಸಲುವಾಗಿ ರಾಜ್ಯ ಸರ್ಕಾರ ಕೇಂದ್ರದ ಮೇಲೆ ಒತ್ತಡವನ್ನು ತಂದಿದೆಯೇ (ಈ ಬಗ್ಗೆ ಪೂರ್ಣ ವಿವರಗಳನ್ನು ಒದಗಿಸುವುದು)

ಉ) ಈ ಜಲ ವಿದ್ಯುತ್ ಯೋಜನೆಗಳು ಕಾರ್ಯಗತಗೊಂಡಾಗ ಎಷ್ಟು ಸಾಮರ್ಥ್ಯದ ವಿದ್ಯುತ್ ಉತ್ಪಾದನೆಯಾಗುವುದು?

ಊ) ಈ ಯೋಜನೆಗಳನ್ನು ಕಾರ್ಯಗತಗೊಳಿಸಲು ಸರ್ಕಾರದ ಮುಂದಿರುವ ಕ್ರಮಗಳೇನು?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಕಳೆದ ಐದು ವರ್ಷಗಳಲ್ಲಿ ಈ ಕೆಳಗೆ ಕಾಣಿಸಿರುವ ಆರು ಪ್ರಸ್ತಾವನೆಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ.

1. ಜಲವಿದ್ಯುತ್ : ಮಹದಾಯಿ ಜಲವಿದ್ಯುತ್ ಯೋಜನೆ ಆಗಸ್ಟ್ 1991ರಲ್ಲಿ ಕಳುಹಿಸಲಾಗಿದೆ.
2. ಅಣು ವಿದ್ಯುತ್ ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರ ಯೂನಿಟ್ 5 ಮತ್ತು 6 ನವೀಕರಿಸಿದ ಪ್ರಸ್ತಾವನೆ 1994ರಲ್ಲಿ ಕಳುಹಿಸಿದೆ.
3. ಬಾಮಾಲಾಪುರ ವಿದ್ಯುತ್ ಯೋಜನಾ ಕೇಂದ್ರ ನವೆಂಬರ್ 1991ರಲ್ಲಿ ಕಳುಹಿಸಿದೆ.
4. ಹೊಸಪೇಟೆ ಶಾಖೋತ್ಪನ್ನ ವಿದ್ಯುತ್ ಕೇಂದ್ರ ಡಿಸೆಂಬರ್ 91ರಲ್ಲಿ ಕಳುಹಿಸಿದೆ.
5. ಮಂಗಳೂರಿನಲ್ಲಿರುವ ಕೋಜೆಂಟ್ರಿಕ್ಸ್ ಕಂಪನಿ ಮಾರ್ಚ್ 95ರಲ್ಲಿ ಕಳುಹಿಸಿದೆ.
6. ಡೀಸೆಲ್ : ಯಲಹಂಕ ಡೀಸೆಲ್ ವಿದ್ಯುತ್ ಉತ್ಪಾದನಾ ಘಟಕ : ಅಕ್ಟೋಬರ್ 95ರಲ್ಲಿ ವಿಸ್ತರಣೆಗೊಳಿಸುವ ಕಾರ್ಯಕ್ರಮ.

ಆ) ಮೇಲಿನ ಎಲ್ಲಾ ಯೋಜನೆಗಳಿಗೆ ಕೇಂದ್ರ ಸರ್ಕಾರದ ಅನುಮತಿಗಾಗಿ ಕಾಯಲಾಗಿದೆ.

ಆ) ಹೌದು. ಮಹದಾಯಿ ನದಿಯು ಎರಡು ರಾಜ್ಯಗಳ ನದಿಯಾಗಿದ್ದು, ಕೇಂದ್ರ ಸರ್ಕಾರದ ಸೂಚನೆಯಂತೆ, ಗೋವಾ ಸರ್ಕಾರದ ಅನುಮತಿಯನ್ನು ಕೋರಲಾಗಿದೆ. ಸದರಿ ಯೋಜನೆಯನ್ನು ಕಾರ್ಯಗತಗೊಳಿಸಲು ಗೋವಾ ಮತ್ತು ಕರ್ನಾಟಕದ ಅಧಿಕಾರಿಗಳನ್ನೊಳಗೊಂಡ ತಾಂತ್ರಿಕ ಸಮಿತಿಯನ್ನು ರಚಿಸಲಾಗಿದೆ.

ಈ ಸಮಿತಿಯು 3 ಬಾರಿ ಸಭೆ ಸೇರಿ, ಸಭೆಯ ನಡವಳಿಯಂತೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಶಾಖೋತ್ಪನ್ನ ಸ್ಥಾವರ ಯೋಜನೆಗೆ ಅನುಮತಿ ಪಡೆಯಬೇಕಾಗಿದೆ.

ಕೇಂದ್ರ ಪರಿಸರ ಇಲಾಖೆ ಮತ್ತು ರಾಜ್ಯ ವಾಯು ಮಾಲಿನ್ಯ ಕೇಂದ್ರಿಯ ಮಂಡಳಿಯ ಒಪ್ಪಿಗೆಯು ದೊರೆತ ನಂತರ ಯಲಹಂಕ ಡೀಸೆಲ್ ಉತ್ಪಾದನಾ ಘಟಕದ ವಿಸ್ತಾರಣಾ ಯೋಜನೆಯು ಕಾರ್ಯಗತವಾಗಲಿದೆ. ಒಪ್ಪಿಗೆ ಪಡೆಯುವುದಕ್ಕಾಗಿ ಪ್ರಯತ್ನಿಸಲಾಗುತ್ತಿದೆ.

ಉ) ಸುಮಾರು 828 ಮಿಲಿಯನ್ ಯೂನಿಟ್‌ಗಳು.

ಊ) ಗೋವಾ ಮತ್ತು ಕರ್ನಾಟಕ ಅಧಿಕಾರಿಗಳ ತಾಂತ್ರಿಕ ಸಮಿತಿಯ ನಿರ್ಧಾರದಂತೆ ಗೋವಾದ ಜೀವಿ ಶಾಸ್ತ್ರದ ಮೇಲೆ ಮಹಾದಾಯಿ ಯೋಜನೆಯಿಂದ ಆಗುವ ಪ್ರಭಾವದ ಬಗ್ಗೆ ಪರಿಸರ ಪ್ರಭಾವಿ ಅಧ್ಯಯನ ಕಾರ್ಯಕ್ರಮವನ್ನು ಕೈಗೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ.

ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ರಾಯಚೂರು ಶಾಖೋತ್ಪನ್ನ ವಿದ್ಯುತ್ ಸ್ಥಾವರ ಯೋಜನೆಯ ಯೂನಿಟ್ 5 ಮತ್ತು 6ನ್ನು ಕೂಡಲೇ ಕಾರ್ಯಗತಗೊಳಿಸಲು ಸರ್ಕಾರ ಒಪ್ಪಿದೆ. ಇದನ್ನು ಕೇಂದ್ರ ಸರ್ಕಾರದೊಂದಿಗೆ ಸಮಾಲೋಚಿಸಲಾಗುತ್ತಿದೆ.

ಯಲಹಂಕ ಡೀಸೆಲ್ ಉತ್ಪಾದನಾ ಘಟಕದ ವಿಸ್ತರಣೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಒಪ್ಪಿಗೆ ದೊರೆಯಬೇಕಾಗಿದೆ.

ಕೊಜೆಂಟ್ರಿಕ್ಸ್ ಕಂಪನಿಗೆ ಸಂಬಂಧಿಸಿದಂತೆ, ವಿದ್ಯುತ್ ಖರೀದಿ ಒಪ್ಪಂದಕ್ಕೆ ದಿನಾಂಕ : 30-9-1994ರಂದು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಸಹಿ ಹಾಕಿದೆ. ಮತ್ತು ವಿದ್ಯುತ್ ಖರೀದಿ ಒಪ್ಪಂದದ ಬಗ್ಗೆ ಅಂತಿಮವಾಗಿ ನಿರ್ಧಾರ ತೆಗೆದುಕೊಳ್ಳಬೇಕಾಗಿದೆ.

ಹೊಸಪೇಟೆ ಯೋಜನೆಯು ಹೆಚ್.ಓ.ಕೆ. (ಡೆಕ್ಕನ್ ಪವರ್ ಕಾರ್ಪೊರೇಷನ್) ಯಿಂದ ಕಾರ್ಯಗತಗೊಳಿಸಬೇಕಾಗಿದೆ. ಸದರಿ ಯೋಜನೆಗೆ ಕೇಂದ್ರ ಸರ್ಕಾರದ ಒಪ್ಪಿಗೆಗೆ ಪ್ರಯತ್ನಿಸಲಾಗುತ್ತಿದೆ.

ಚಾಮಾಲಾಪುರ ವಿದ್ಯುತ್ ಯೋಜನೆಗೆ ಸಂಬಂಧಿಸಿದಂತೆ ಈ ಯೋಜನೆಯನ್ನು ಕಾರ್ಯಗತಗೊಳಿಸುವ ಬಗ್ಗೆ ರಾಜ್ಯ ಸರ್ಕಾರವು ಇನ್ನೂ ನಿರ್ಧರಿಸಿರುವುದಿಲ್ಲ.

ಬೀದರ್ ಜಿಲ್ಲೆಯಲ್ಲಿ ಲೋಕೋಪಯೋಗಿ ರಸ್ತೆಗಳ ದುರಸ್ತಿ

2507-ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಎಷ್ಟು ಕಿ.ಮೀ. ರಸ್ತೆಗಳು ಲೋಕೋಪಯೋಗಿ ಇಲಾಖೆಗೆ ಸೇರಿವೆ?

ಆ) ಇವುಗಳಲ್ಲಿ ರಾಜ್ಯ ಹೆದ್ದಾರಿಗೆ ಎಷ್ಟು ಕಿ.ಮೀ. ಬರುತ್ತದೆ.?

ಇ) ರಾಷ್ಟ್ರೀಯ ಹೆದ್ದಾರಿಗೆ ಎಷ್ಟು ಕಿಮೀ. ರಸ್ತೆ ಬರುತ್ತದೆ?

ಈ) ಜಿಲ್ಲೆಯಲ್ಲಿ ಇಲಾಖೆಯ ವಶದಲ್ಲಿರುವ ಅನೇಕ ರಸ್ತೆಗಳು ಹಾಳಾಗಿ ಜನ ಸಂಚಾರ ಮತ್ತು ವಾಹನ ಸಂಚಾರಕ್ಕೆ ತೊಂದರೆಯಾಗಿರುವುದು ನಿಜವಲ್ಲವೇ?

ಉ) ಹಾಗಿದ್ದಲ್ಲಿ ಈ ರಸ್ತೆಗಳ ಸುಧಾರಣೆ ಮತ್ತು ದುರಸ್ತಿಗಾಗಿ ಈ ಆಯವ್ಯಯದಲ್ಲಿ ಎಷ್ಟು ಹಣವನ್ನು ಮೀಸಲಿಡಲಾಗಿದೆ?

ಊ) ಇದುವರೆವಿಗೆ ಬಿಡುಗಡೆ ಮತ್ತು ಖರ್ಚು ಮಾಡಲಾದ ಹಣದ ಪ್ರಮಾಣವೆಷ್ಟು?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಬೀದರ್ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಒಟ್ಟು 1044.10 ಕಿಮೀ. ಉದ್ದದ ರಸ್ತೆಗಳಿವೆ.

ಆ) ಬೀದರ್ ಜಿಲ್ಲೆಯಲ್ಲಿ ಬರುವ ರಾಜ್ಯ ಹೆದ್ದಾರಿಗಳ ಒಟ್ಟು ಉದ್ದ 276.60 ಕಿ.ಮೀ.ಗಳು.

ಇ) ಬೀದರ್ ಜಿಲ್ಲೆಯಲ್ಲಿ ಬರುವ ರಾಷ್ಟ್ರೀಯ ಹೆದ್ದಾರಿಯ ಉದ್ದ 75.00 ಕಿಮೀ.

ಈ) ಕೆಲವು ರಸ್ತೆಗಳು ಕೆಟ್ಟಿದ್ದು, ವಾಹನಗಳ ಸುಗಮ ಸಂಚಾರಕ್ಕೆ ತೊಂದರೆ ಆಗಿರುವುದು ವಾಸ್ತವವಾಗಿರುತ್ತದೆ.

ಉ) ರಸ್ತೆಗಳ ದುರಸ್ತಿ ಹಾಗೂ ನಿರ್ವಹಣೆಗೆ ಪ್ರತಿ ಕಿಮೀ. ಉದ್ದಕ್ಕೆ ಸರಾಸರಿ 15000.00 ರೂ.ಗಳನ್ನು ನಿಗಧಿಪಡಿಸಿದೆ. ಹಾಗೂ ಆಯ್ದ ಭಾಗಗಳ ಅಭಿವೃದ್ಧಿಗಾಗಿ 19.89 ಲಕ್ಷ ರೂ.ಗಳನ್ನು 1995-96ನೇ ಸಾಲಿನಲ್ಲಿ ನಿಗಧಿಪಡಿಸಿದೆ. ರಾಷ್ಟ್ರೀಯ ಹೆದ್ದಾರಿ ಭಾಗವನ್ನು ಬಲಪಡಿಸುವ ಕಾಮಗಾರಿಯನ್ನು ಸುಮಾರು 250.00 ಲಕ್ಷ ರೂ.ಗಳಿಗೆ ಗುತ್ತಿಗೆ ತೀರ್ಮಾನಿಸಿದೆ.

ಊ) ಬೀದರ್ ಜಿಲ್ಲೆಯಲ್ಲಿ ರಸ್ತೆಗಳ ಸುಧಾರಣೆ ಹಾಗೂ ಅಭಿವೃದ್ಧಿಗಾಗಿ 1992-93ರಿಂದ 1994-95ರ ಸಾಲಿನ ವರೆಗೆ ಒಟ್ಟು 508.14 ಲಕ್ಷ ರೂ.ಗಳನ್ನು ಒದಗಿಸಲಾಗಿದೆ.

ಕನ್ನಡ ವಾಕ್ಚಿತ್ರದ ವಜ್ರಮಹೋತ್ಸವ

2264 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕನ್ನಡ ವಾಕ್ಚಿತ್ರಕ್ಕೆ ಈಗ 61 ವರ್ಷ ಕಳೆದು 62ನೇ ವರ್ಷ ನಡೆಯುತ್ತಿರುವುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ ಇದರ ನೆನಪಿನ ಅಂಗವಾಗಿ ವಜ್ರಮಹೋತ್ಸವವನ್ನು ಆಚರಿಸುವ ಉದ್ದೇಶ ಇದೆಯೇ?

ಇ) ಇದ್ದಲ್ಲಿ ಯಾವಾಗ ಆಚರಿಸಲಾಗುವುದು?

ಈ) ಈ ವಿಷಯವಾಗಿ ಪೂರ್ವಭಾವಿ ಸಿದ್ಧತೆಗಳು ನಡೆದಿವೆಯೇ? ನಡೆದಿದ್ದಲ್ಲಿ ವಿವರಗಳೇನು?

ಶ್ರೀ ಎಂ.ಸಿ. ನಾಣಯ್ಯ (ವಾರ್ತಾ ಮತ್ತು ಪ್ರಚಾರ ಸಚಿವರು) :

ಅ) ನಿಜ.

ಆ) ಇದೆ

ಇ) ಈ ಬಗ್ಗೆ ರಚಿಸಿರುವ ಸಮಿತಿ ಸಭೆ ಸೇರಿ ನಿರ್ಧರಿಸಬೇಕಿದೆ.

ಈ) ವಜ್ರಮಹೋತ್ಸವ ಆಚರಿಸಲು ಸಮಿತಿಯೊಂದನ್ನು ರಚಿಸಲಾಗಿದೆ.

ರಾಜ್ಯದಲ್ಲಿರುವ ನಕಲಿ ರೇಷನ್ ಕಾರ್ಡುಗಳ ಪತ್ತೆ

2263 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ ಎರಡು (2) ವರ್ಷಗಳಿಂದ ಎಷ್ಟು ನಕಲಿ ರೇಷನ್ ಕಾರ್ಡುಗಳು ಪತ್ತೆಯಾಗಿವೆ (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು)

ಆ) ನಕಲಿ ರೇಷನ್ ಕಾರ್ಡುಗಳ ಹಾವಳಿಯನ್ನು ತಪ್ಪಿಸಲು ಕೈಗೊಂಡಿರುವ ಕ್ರಮಗಳೇನು ?

ಇ) ನಕಲಿ ರೇಷನ್ ಕಾರ್ಡುಗಳನ್ನು ಪತ್ತೆ ಹಚ್ಚಲು ವಿಶೇಷ ಜಾಗೃತ ದಳವನ್ನು ರಚಿಸಲಾಗಿದೆಯೇ ?

ಈ) ಇಲ್ಲದಿದ್ದಲ್ಲಿ ಪೋಲೀಸ್ ಇಲಾಖೆಯ ಸಹಯೋಗದೊಂದಿಗೆ ವಿಶೇಷ ಜಾಗೃತ ದಳವನ್ನು ರಚಿಸಲಾಗುವುದೇ ?

ಶ್ರೀ ಎಸ್. ನಂಜಪ್ಪ (ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರು) :

ಅ) 3,21,297

ಜಿಲ್ಲಾವಾರು ವಿವರಗಳ ತಃಖ್ತೆಯನ್ನು ಲಗತ್ತಿಸಲಾಗಿದೆ.

ಆ) ಇಲಾಖೆಯ ಎಲ್ಲಾ ಕಾರ್ಯನಿರ್ವಾಹಕರ ಸಿಬ್ಬಂದಿಯವರಿಗೆ ಇಂತಿಷ್ಟು ನಕಲಿ ಪಡಿತರ ಚೀಟಿಗಳನ್ನು ಪತ್ತೆ ಹಚ್ಚುವಂತೆ ಆದೇಶಿಸಿ ಅದರಂತೆ ಗುರಿ ನಿಗಧಿಪಡಿಸಲಾಗಿದೆ. ಅಲ್ಲದೇ ಸೆಪ್ಟಂಬರ್ 1995ರಿಂದ ನಕಲಿ ಪಡಿತರ ಚೀಟಿಗಳನ್ನು ಪತ್ತೆ ಹಚ್ಚಲು ವಿಶೇಷ ಕಾರ್ಯಕ್ರಮವನ್ನು ಸಹ ಹಮ್ಮಿಕ್ಕೊಳ್ಳಲಾಗಿದೆ.

ಇ) ಮತ್ತು ಈ) ಉಪ ಪ್ರಶ್ನೆ (ಅ)ಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

1993 ಏಪ್ರಿಲ್ ಮಾಹೆಯಿಂದ ಮಾರ್ಚ್ 94ರವರೆಗೆ ಕಂಡುಹಿಡಿದಿರುವ ನಕಲಿ ಪಡಿತರ ಚೀಟಿ ವಿವರ

		ಏಪ್ರಿಲ್ 93	ಮೇ	ಜೂನ್	ಜುಲೈ	ಆಗಸ್ಟ	ಸೆಪ್ಟೆಂಬರ್	ಅಕ್ಟೋಬರ್	ನವೆಂಬರ್	ಡಿಸೆಂಬರ್	ಜನವರಿ 94	ಫೆಬ್ರವರಿ	ಮಾರ್ಚ್	ಒಟ್ಟು
1.	ಬೆಂಗಳೂರು (ಅಪ)	27	14	80	42	50	-	19185	9833	-	66	-	9898	38695
2.	ಬೆಂಗಳೂರು (ನಗರ)	13	7	2	11	1472	4	465	242	4	367	223	629	3439
3.	ಬೆಂಗಳೂರು (ಗ್ರಾಮ)	-	8	8	3	11	-	-	-	625	1432	1023	5	3115
4.	ಬೆಳಗಾಂ	70	968	2151	168	78	3162	366	1044	2327	90	1391	2753	14568
5.	ಬಳ್ಳಾರಿ	8250	32	3992	3451	21	42	17	24	2508	20	20	11	18388
6.	ಬೀದರ್	-	2	-	2246	4	31	1337	-	2	-	1312	-	4934
7.	ಬಿಜಾಪುರ	41	135	74	56	1209	466	-	18	-	27	193	-	2219
8.	ಚಿಕ್ಕಮಗಳೂರು	-	-	14	-	-	-	-	-	-	-	-	-	14
9.	ಚಿತ್ರದುರ್ಗ	-	-	2	-	-	-	-	9359	5160	309	272	462	15564
10.	ದಕ್ಷಿಣ ಕನ್ನಡ	41	23	251	31	79	74	56	1320	17	70	1362	43	3367
11.	ಧಾರವಾಡ	3211	2368	3711	1163	-	173	718	5088	3179	-	1095	68	20769
12.	ಗುಲ್ಬರ್ಗಾ	180	19	737	1285	361	1719	928	5194	741	96	852	13	12075
13.	ಹಾಸನ	1214	618	29	283	89	1140	1325	65	2	10	5	36	4816
14.	ಕೊಡಗು	8	14	127	8	-	-	1000	905	1253	-	-	-	3315
15.	ಕೋಲಾರ	-	-	1553	12	59	12	17	4941	293	182	493	41660	49222
16.	ಮಂಡ್ಯ	-	-	-	-	-	-	-	-	2290	816	-	865	3971
17.	ಮೈಸೂರು	9	-	82	-	1999	60	3860	2357	32	4012	8507	8042	28960

18.	ರಾಯಚೂರು	-	-	-	-	43	32	-	705	-	-	918	6688	8386
19.	ಶಿವಮೊಗ್ಗ	-	-	809	760	-	-	-	49	-	-	-	-	1618
20.	ತುಮಕೂರು	6	-	-	-	-	-	34	-	-	1422	273	-	1735
21.	ಉತ್ತರ ಕನ್ನಡ	53	518	-	35	35	27	5	1920	1	520	60	7	3181
	ಒಟ್ಟು	13064	4735	13622	9554	5510	6942	29308	43064	18434	9439	17999	70680	242351

1994ನೇ ಏಪ್ರಿಲ್‌ನಿಂದ ಮಾರ್ಚ್ 1995ರವರೆಗೆ ರಾಜ್ಯದಲ್ಲಿ ಕಂಡು ಹಿಡಿದಿರುವ ನಕಲಿ ಪಡಿತರ ಚೀಟಿಯ ವಿವರ

		ಏಪ್ರಿಲ್ 94	ಮೇ	ಜೂನ್	ಜುಲೈ	ಆಗಸ್ಟ	ಸೆಪ್ಟೆಂ ಬರ್	ಅಕ್ಟೋ ಬರ್	ನವೆಂ ಬರ್	ಡಿಸೆಂ ಬರ್	ಜನ ವರಿ 95	ಫೆಬ್ರ ವರಿ	ಮಾರ್ಚ್	ಒಟ್ಟು
1.	ಬೆಂಗಳೂರು (ಉಪ)	58	-	96	9	162	12	-	991	4092	3	4	1	5428
2.	ಬೆಂಗಳೂರು (ನಗರ)	10	439	9	4	14	-	11	-	19	26	130	16	678
3.	ಬೆಂಗಳೂರು (ಗ್ರಾಮ)	2	6	7	12	247	234	177	2	91	186	82	6725	7771
4.	ಬೆಳಗಾಂ	1743	123	100	-	190	77	279	91	312	83	32	280	3310
5.	ಬಳ್ಳಾರಿ	23	10	8	54	47	47	38	-	36	3500	-	-	3763
6.	ಬೀದರ್	459	-	-	13	1521	-	-	-	-	-	-	-	1993
7.	ಬಿಜಾಪುರ	-	1866	22	383	1996	1447	29	6	19	27	8863	-	14658
8.	ಚಿಕ್ಕಮಗಳೂರು	-	-	-	-	133	986	335	80	-	-	-	-	1534
9.	ಚಿತ್ರದುರ್ಗ	-	251	-	-	98	31	2	19	40	-	538	341	1320
10.	ದಕ್ಷಿಣ ಕನ್ನಡ	7	416	399	172	721	309	134	95	64	206	184	264	3041
11.	ಧಾರವಾಡ	101	2307	224	1542	237	279	187	203	75	65	85	67	5372
12.	ಗುಲ್ಬರ್ಗಾ	-	310	-	419	8419	171	13	143	-	-	-	-	9478
13.	ಹಾಸನ	21	-	30	45	72	54	129	73	13	28	36	-	501
14.	ಕೊಡಗು	-	-	-	87	21	2	-	36	-	-	-	1376	1522
15.	ಕೋಲಾರ	-	-	9	-	425	74	7	-	8	332	42	167	1064
16.	ಮಂಡ್ಯ	15	-	506	214	-	27	-	-	-	-	-	-	762

17.	ಮೈಸೂರು	-	2858	445	694	142	685	-	2	110	262	100	370	5668
18.	ರಾಯಚೂರು	-	-	26	145	64	80	-	-	15	12	40	18	400
19.	ಶಿವಮೊಗ್ಗ	-	2	-	-	-	-	-	-	-	-	-	12	12
20.	ತುಮಕೂರು	-	-	-	-	7383	169	57	53	52	52	54	48	7868
21.	ಉತ್ತರ ಕನ್ನಡ	21	68	32	71	15	28	26	2063	221	58	11	190	2804
	ಒಟ್ಟು	2530	8656	1913	3864	21907	4712	1424	3857	5167	4840	10201	9875	78946

ಹುಬ್ಬಳ್ಳಿ ಗ್ರಾಮೀಣ ಕ್ಷೇತ್ರದಲ್ಲಿ ರಸ್ತೆ ಕಾಮಗಾರಿಗೆ ನಿಗದಿಯಾದ ಹಣ

2550-ಶ್ರೀ ಜಗದೀಶ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ಗ್ರಾಮೀಣ ಕ್ಷೇತ್ರದಲ್ಲಿ 1995-96ರಲ್ಲಿ ಲೋಕೋಪಯೋಗಿ ಇಲಾಖೆಯಿಂದ ಕೈಗೊಳ್ಳಲಿರುವ ಹಾಗೂ ಕೈಗೊಂಡಿರುವ ರಸ್ತೆ ಕಾಮಗಾರಿಗಳು ಯಾವುವು? ಹಾಗೂ ಇದಕ್ಕಾಗಿ ನಿಗಧಿಪಡಿಸಿರುವ ಹಣದ ಮೊತ್ತ ಎಷ್ಟು? (ವಿವರ ನೀಡುವುದು)

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು)

ಅ) ಕೈಗೊಂಡಿರುವ ಕಾಮಗಾರಿಗಳು :

1) ಅಂಚಟಗೇರಿ ಚೆನ್ನಾಪುರ ಚವರಗುಡ್ಡ ರಸ್ತೆ ಸುಧಾರಣೆ.
2) ಸುಳ್ಳ ಬೆಂಗೇರಿ ರಸ್ತೆಗೆ ಡಾಂಬರೀಕರಣ ಕಿಮೀ. 1 ರಿಂದ 4ರ ವರೆಗೆ
3) ಸುಳ್ಳ ಬೆಂಗೇರಿ ರಸ್ತೆ ಬದಿಯ ಬದಿಗಳನ್ನು ಬಲಪಡಿಸುವುದು.
4) ಯಮನೂರ ಶಿರ್ಲಾಪೂರ ಬ್ಯಾಕಟ್ಟಿ ರಸ್ತೆ ಮರು ಡಾಂಬರೀಕರಣ ಕಿಮೀ. 18 ರಿಂದ 19.20.
5) ಉಣಕಲ್ ರಸ್ತೆ ಕಿ.ಮೀ. 4 ರಿಂದ 7ರ ವರೆಗೆ ಮರು ಖಡಿ ಹಾಕುವುದು.
6) ಸುಳ್ಳ ಬೆಂಗೇರಿ ರಸ್ತೆಗೆ ಕಿಮೀ. 9 ರಿಂದ 10ರ ವರೆಗೆ ಮೆಟಲಿಂಗ್ ಮಾಡುವುದು.
7) ಕಾರವಾರ ಬಳ್ಳಾರಿ ರಸ್ತೆ ಕಿ.ಮೀ. 141.70ರಲ್ಲಿ ಸೇತುವೆ ನಿರ್ಮಾಣ.
8) -ಸದರ- ಕಿ.ಮೀ. 151.90ರಲ್ಲಿ ಸೇತುವೆ ನಿರ್ಮಾಣ.
9) ಉಣಕಲ್ ಹುಬ್ಬಳ್ಳಿ ರಸ್ತೆ ಡಿಮೆಟಲಿಂಗ್ ಒದಗಿಸುವುದು ಹಾಗೂ ಡಾಂಬರೀಕರಣ.
10) ಕಾರವಾರ ಬಳ್ಳಾರಿ ರಸ್ತೆ ಕಿಮೀ. 133ರಿಂದ 144ರ ವರೆಗೆ ವಿಸ್ತರಣೆ ಮತ್ತು ಡಾಂಬರೀಕರಣ ಮಾಡುವುದು.

ಇದಕ್ಕಾಗಿ ಒಟ್ಟು ನಿಗಧಿಪಡಿಸಿದ ಹಣದ ಮೊತ್ತ 14.65 ಲಕ್ಷ ರೂ.ಗಳು.

1995-96ನೇ ಸಾಲಿನಲ್ಲಿ ಹೊಸ ಕಾಮಗಾರಿಗಳನ್ನು ಇನ್ನೂ ಕೈಗೊಂಡಿರುವುದಿಲ್ಲ.

ಟಿ. ನರಸೀಪುರ ಪಂಚಾಯಿತಿಯಲ್ಲಿ ಕುಡಿಯುವ ನೀರಿನ ತೊಂದರೆ

2224 - ಶ್ರೀ ಎಸ್. ಕೃಷ್ಣಪ್ಪ (ಬನ್ನೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಟಿ. ನರಸೀಪುರ ಪಂಚಾಯ್ತಿಯಲ್ಲಿ ಕುಡಿಯುವ ನೀರಿಗೆ ತೊಂದರೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ನೀರಿನ ತೊಂದರೆ ತಪ್ಪಿಸಲು ಕೈಗೊಂಡಿರುವ ಕ್ರಮಗಳೇನು?

ಇ) ಶಾಶ್ವತವಾದ ನೀರಿನ ಬವಣೆ ತಪ್ಪಿಸಲು ವ್ಯವಸ್ಥಿತವಾಗಿ ಕೈಗೊಂಡ ಕ್ರಮಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು):

ಅ) ಹೌದು.

ಆ) 1995-96ನೇ ಸಾಲಿನಲ್ಲಿ 3 ಹೊಸ ಕೊಳವೆಬಾವಿಗಳನ್ನು ಕೊರೆಯಲಾಗಿದೆ. ಒಂದು ಕೊಳವೆಬಾವಿಯನ್ನು ಹಾಲಿ ಇರುವ ಮೇಲ್ಮಟ್ಟ ಜಲಸಂಗ್ರಹಾಲಯಕ್ಕೆ ಸಂಪರ್ಕ

ಕಲ್ಪಿಸಲಾಗಿದೆ. ಉಳಿದ ಎರಡು ಕೊಳವೆಬಾವಿಗಳಿಂದ ಎರಡು ಕಿರುನೀರು ಸರಬರಾಜು ಯೋಜನೆಗಳನ್ನು ಅಳವಡಿಸಲಾಗಿದೆ. ಹಾಲಿ ಇರುವ ಪಂಪುಸೆಟ್ಟುಗಳನ್ನು ದುರಸ್ತಿಗೊಳಿಸಲಾಗಿದೆ.

ಇ) ಹಾಲಿ ಇರುವ ಕುಡಿಯುವ ನೀರಿನ ಯೋಜನೆಯನ್ನು ಅಭಿವೃದ್ಧಿಪಡಿಸಲು ರೂ. 28.00 ಲಕ್ಷದ ಒಂದು ರೇಖಾ ಅಂದಾಜನ್ನು ತಯಾರಿಸಲಾಗಿದೆ. ಇದು ಪರಿಶೀಲನೆಯಲ್ಲಿದೆ.

ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ಅನುದಾನ

2324 - ಡಾ|| ಎಂ.ಪಿ. ಕರ್ಕಿ (ಕುಮಟಾ) : ಮಾನ್ಯ ಹಣಕಾಸು ಮತ್ತು ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕ್ ಪಂಚಾಯತ್‌ಗಳಿಗೆ ಅನುದಾನ ಕೊಡುವಲ್ಲಿ ಜನಸಂಖ್ಯೆ ಹಾಗೂ ಭೂ ಕಂದಾಯ ಮುಖ್ಯವಾದ ಅಂಗವೆಂಬುದು ನಿಜವೇ?

ಆ) ಇದರ ಸಂಗಡ ಭೂ ವಿಸ್ತಾರಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡುವುದು ನ್ಯಾಯವೆಂದು ಸರ್ಕಾರವು ಉದ್ದೇಶಿಸುವುದೇ?

ಇ) ಹೀಗೆ ಮಾಡಿದ್ದಲ್ಲಿ ಗುಡ್ಡಗಾಡು, ದುರ್ಗಮ ಪ್ರದೇಶದ ಜನತೆಗೆ ಅನ್ಯಾಯವಾಗುವುದಿಲ್ಲವೆ?

ಈ) ತಮಗೆ ಹಾಗೆ ಅನಿಸಿದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಸಿದ್ದರಾಮಯ್ಯ (ಹಣಕಾಸು ಮತ್ತು ಯೋಜನಾ ಸಚಿವರು) :

ಅ) ಜಿಲ್ಲಾ ಪಂಚಾಯಿತಿಗಳಿಗೆ ಯೋಜನಾ ಅನುದಾನವನ್ನು ಕೊಡುವಲ್ಲಿ ಜನಸಂಖ್ಯೆಯು ಒಂದು ಮುಖ್ಯ ಅಂಗ. ಭೂ ಕಂದಾಯ ಪರಿಗಣಿಸಿಲ್ಲ.

ಆ) ಇ) ಮತ್ತು ಈ) ಭಾರತದ ರಾಜ್ಯಾಂಗದ 73ನೇ ತಿದ್ದುಪಡಿಯ ಆರ್ಟಿಕಲ್ 243-ಐ ಮತ್ತು 74ನೇ ತಿದ್ದುಪಡಿಯ 243-ವೈ ಮತ್ತು ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ (1993 (ಕರ್ನಾಟಕ ಕಾಯ್ದೆ 14, 1993ರ) ಸೆಕ್ಷನ್ 267ರಂತೆ ರಾಜ್ಯ ಸರ್ಕಾರವು ಅಧಿಸೂಚನೆ ಸಂಖ್ಯೆ : ಆರ್‌ಡಿಪಿ. 313 ಜಡ್‌ಪಿಎಸ್. 93, ದಿನಾಂಕ 10.6.94ರಲ್ಲಿ ಕರ್ನಾಟಕ ರಾಜ್ಯ ವಿತ್ತೀಯ ಆಯೋಗವನ್ನು ರಚಿಸಿದೆ. ಈ ಅಧಿಸೂಚನೆಯ ಕಂಡಿಕೆ 4(iii) ನಂತೆ ಜಿಲ್ಲಾ ಪಂಚಾಯತ್, ತಾಲ್ಲೂಕ್ ಪಂಚಾಯತ್ ಮತ್ತ ಗ್ರಾಮ ಪಂಚಾಯತ್‌ಗಳಿಗೆ ಅನುದಾನದ ಹಂಚಿಕೆಯ ಸೂತ್ರಗಳನ್ನು ಸಹ ಶಿಫಾರಸ್ಸು ಮಾಡಬೇಕು. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ವಿತ್ತೀಯ ಆಯೋಗದ ಶಿಫಾರಸ್ಸುಗಳು ಬಂದ ನಂತರ ಸರ್ಕಾರವು ಈ ವಿಷಯದ ಬಗ್ಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳುವುದು.

ಮಂಡ್ಯ ಜಿಲ್ಲೆಯ ಜಿಲ್ಲಾ ಪಂಚಾಯತ್‌ನಲ್ಲಿ ಗುತ್ತಿಗೆದಾರರಿಗೆ ರಸ್ತೆಗಳ ಬಾಬ್ತು ಬರಬೇಕಾದ ಹಣ

1919 - ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯ ಜಿಲ್ಲಾ ಪಂಚಾಯತ್‌ನಲ್ಲಿ ಕಳೆದ ವರ್ಷದ ಗುತ್ತಿಗೆದಾರರಿಗೆ ರಸ್ತೆಗಳ ಬಾಬ್ತು ಬೇಕಾಗಿದೆ ಹಣ ಎಷ್ಟು?

ಆ) ರಸ್ತೆ ಕೆಲಸ ಮಾಡದೆ ಹಣ ಪಡೆದಿರುವ ಹಾಗೂ ಪಡೆಯಲು ಪ್ರಯತ್ನ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಬಗ್ಗೆ ತನಿಖೆ ಮಾಡಲು ಆದೇಶ ಮಾಡಲಾಗುವುದೇ?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) 1994-95ನೇ ಸಾಲಿನ ಕೊನೆಗೆ ಮಂಡ್ಯ ಜಿಲ್ಲಾ ಪಂಚಾಯತ್‌ನಲ್ಲಿ ಗುತ್ತಿಗೆದಾರರಿಗೆ ರಸ್ತೆಗಳ ಬಾಬ್ತು ನೀಡಬೇಕಾಗಿದ್ದಂತಹ ಬಿಲ್ಲುಗಳ ಮೊತ್ತ 136.02 ಲಕ್ಷ ರೂ.ಗಳು ಇದರಲ್ಲಿ ದಿನಾಂಕ 1.4.1995ರಿಂದ 31.7.95 ರವರೆಗೆ 65.61 ಲಕ್ಷ ರೂ.ಗಳ ಬಿಲ್ಲುಗಳನ್ನು ಪಾವತಿ ಮಾಡಿದ್ದು, ದಿನಾಂಕ 1.8.1995ಕ್ಕೆ ಬಾಕಿ ಇರುವ ಬಾಬ್ತು 68.41 ಲಕ್ಷ ರೂ.ಗಳು ಎಂದು ಜಿಲ್ಲಾ ಪಂಚಾಯತ್ ವತಿಯಿಂದ ತಿಳಿಸಿರುತ್ತಾರೆ.

ಆ) ಸದರಿ ವಿಷಯದಲ್ಲಿ ಸರ್ಕಾರದ ಬಳಿ ಯಾವುದೇ ಮಾಹಿತಿ ಇರುವುದಿಲ್ಲ.

ಇ) ರಸ್ತೆ ಕೆಲಸ ಮಾಡದೇ ಹಣ ಪಡೆದಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಲ್ಲಿ, ನಿಯಮಗಳ ರೀತ್ಯ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಕಿರುಗಾವಲು ಕ್ಷೇತ್ರದಲ್ಲಿ ನ್ಯಾಯಬೆಲೆ ಅಂಗಡಿಗಳು

1920 - ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆ ಕಿರುಗಾವಲು ಕ್ಷೇತ್ರದಲ್ಲಿರುವ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು?

ಆ) ಹಾಗಿದ್ದಲ್ಲಿ, ಇವುಗಳ ಪೈಕಿ ದೂರುಗಳು ಬಂದ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು? ಅವುಗಳ ಮೇಲೆ ತೆಗೆದುಕೊಂಡ ಕ್ರಮಗಳೇನು?

ಇ) ಕಿರುಗಾವಲು ಹೋಬಳಿ, ಆಲದ ಹಳ್ಳಿ ನ್ಯಾಯಬೆಲೆ ಅಂಗಡಿಯ ಪ್ರಕರಣದ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಸ್. ನಂಜಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) 55

ಆ) 4. ಈ ಅಂಗಡಿಗಳ ಪ್ರಾಧಿಕಾರವನ್ನು ಅಮಾನತ್ತು ಪಡಿಸಲಾಗಿದೆ.

ಇ) ಕಿರುಗಾವಲು ಹೋಬಳಿ ಆಲದ ನ್ಯಾಯಬೆಲೆ ಅಂಗಡಿಯ ಪ್ರಾಧಿಕಾರವನ್ನು ಅಮಾನತ್ತು ಪಡಿಸಿದೆ. ಈ ಬಗ್ಗೆ ನ್ಯಾಯಬೆಲೆ ಅಂಗಡಿ ಮಾಲೀಕರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ನಂ. 27903 :95 ಸಲ್ಲಿಸಿದ್ದು, ಸದರಿ ಪ್ರಕರಣದ ಬಗ್ಗೆ ಉಚ್ಚ ನ್ಯಾಯಾಲಯ ಆದೇಶವನ್ನು ಕಾಯಲಾಗಿದೆ.

ಕರ್ನಾಟಕ ಹಾಲು ಮಹಾ ಮಂಡಲಿಗೆ ಸಹಾಯಧನ

1906 - ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ಕರ್ನಾಟಕ ಹಾಲು ಮಹಾ ಮಂಡಳಿಗೆ ರೂ. 5.50 ಕೋಟಿಗಳನ್ನು ಸಹಾಯಧನ ರೂಪದಲ್ಲಿ ಮಂಜೂರು ಮಾಡಲಾಗಿದೆಯೇ?

ಆ) ರಾಜ್ಯ ಸರ್ಕಾರದಿಂದ ಕರ್ನಾಟಕ ಹಾಲು ಮಹಾ ಮಂಡಳಿಗೆ ಬಿಡುಗಡೆಯಾಗಬೇಕಾಗಿರುವ ಬಾಕಿ ಹಣ ಎಷ್ಟು?

ಶ್ರೀ ಬಿ.ಎನ್. ಬಚ್ಚೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) 1993-94ನೇ ಸಾಲಿನಲ್ಲಿ ಕರ್ನಾಟಕ ಹಾಲು ಮಹಾ ಮಂಡಳಿಗೆ ಸರ್ಕಾರವು ಈ ಕೆಳಕಾಣಿಸಿದಂತೆ ಹಣ ಬಿಡುಗಡೆ ಮಾಡಿದೆ.

		ಯೋಜನೆ ರೂ. ಲಕ್ಷಗಳಲ್ಲಿ	ಯೋಜನೇತರ ರೂ. ಲಕ್ಷಗಳಲ್ಲಿ
1)	ಸಹಾಯಾನುಧಾನ ರೂಪದಲ್ಲಿ	500-00	-
2)	ದ್ಯೆ ಷೋತಾ ನಷ್ಟ ಭರಿಸಲು ಸಹಾಯಧನ ರೂಪದಲ್ಲಿ	-	325-00
3)	ಬ್ರಿಡ್ಜ್ ಲೋನ್ ರೂಪದಲ್ಲಿ	150-00	-
	ಒಟ್ಟು	650-00	325-00

ಆ) 1.	1995-96ನೇ ಸಾಲಿನಲ್ಲಿ ಯೋಜನೆ ಸಹಾಯಾನುಧಾನವಾಗಿ	ರೂ.	218.00 ಲಕ್ಷ
2.	ಮಕ್ಕಳ ಕ್ಷೀರ ರೂ ಯೋಜನೆಯಡಿಯಲ್ಲಿ		677.68 ಲಕ್ಷ
	ಒಟ್ಟು	ರೂ.	895.68

ಹಾಲು ಒಕ್ಕೂಟಗಳ ಬಗ್ಗೆ

1913 - ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹಾಲು ಒಕ್ಕೂಟಗಳನ್ನು ಹಾಲು ಮತ್ತು ಹಾಲು ಉತ್ಪನ್ನಗಳನ್ನು ಮಾಡಲು ಖಾಸಗಿಯವರಿಗೆ ಕೊಡುವ ಆಲೋಚನೆ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಬಂದಿದೆಯೇ?

ಆ) ಖಾಸಗಿ ಕ್ಷೇತ್ರಕ್ಕೂ ಸಹಕಾರ ಕ್ಷೇತ್ರಕ್ಕೂ ಇರುವ ವ್ಯತ್ಯಾಸವೇನು?

ಶ್ರೀ ಬಿ.ಎನ್. ಬಚ್ಚೇಗೌಡ (ಪಶುಸಂಗೋಪನಾ ಮತ್ತು ಪಶು ವೈದ್ಯ ಸಚಿವರು) :

ಅ) ಬಂದಿಲ್ಲ

ಆ) ಸಹಕಾರಿ ಕ್ಷೇತ್ರವು "ಎಲ್ಲರೂ ಒಬ್ಬರು ಮತ್ತು ಒಬ್ಬರಿಗೆ ಎಲ್ಲರೂ" ಎಂಬ ತತ್ವದ ಮೇಲೆ ಕಾರ್ಯ ನಿರ್ವಹಿಸಿ ಭಾಗವಹಿಸುವ ಎಲ್ಲಾ ಸದಸ್ಯರಿಗೂ ಸಮಾನ ಅವಕಾಶ ಸೌಲಭ್ಯ ಸವಲತ್ತುಗಳನ್ನು ನೀಡುತ್ತದೆ. ಮತ್ತು ಸಾಮಾಜಿಕ ಹೊಣೆಗಾರಿಕೆಯನ್ನು ಹೊಂದಿರುತ್ತದೆ. ಆದರೆ ಖಾಸಗಿ ಕ್ಷೇತ್ರವೂ ಒಬ್ಬರ ಅಥವಾ ಒಂದು ನಿಗದಿತ ಗುಂಪಿನ ಮಾಲೀಕತ್ವದ್ದಾಗಿದ್ದು ಸಾಮಾಜಿಕ ಹೊಣೆಗಾರಿಕೆ ಇಲ್ಲದೇ ಇರುವುದರ ಜೊತೆಗೆ ಸಮಾನ ಭಾಗವಹಿಸುವಿಕೆ ಅಥವಾ ಸೌಲಭ್ಯ ಮತ್ತು ಸವಲತ್ತುಗಳನ್ನು ಹಂಚಿಕೊಳ್ಳುವುದು ಇರುವುದಿಲ್ಲ.

ಕುಂದಾಪುರ ತಾಲ್ಲೂಕು ಲೋಕೋಪಯೋಗಿ ರಸ್ತೆಗಳ ಕುರಿತು

2626 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕಿನಲ್ಲಿ ಇರುವ ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೊಳಪಟ್ಟ ರಸ್ತೆಗಳಾವುವು? (ರಸ್ತೆಯ ಉದ್ದ ಮತ್ತು ಹೆಸರು ಒಳಗೊಂಡು)

ಆ) ಇವುಗಳಲ್ಲಿ ಡಾಂಬರೀಕರಣ ಮಾಡಿರುವ ಲೋಕೋಪಯೋಗಿ ಇಲಾಖೆ ರಸ್ತೆಗಳಾವುವು?

ಇ) *ತುರ್ತು ದುರಸ್ತಿಯಾಗಬೇಕಿದ್ದ ರಸ್ತೆಗಳಾವುವು? (ರಸ್ತೆಯ ಉದ್ದ ಮತ್ತು ಹೆಸರು ಸಂಪೂರ್ಣ ವಿವರವನ್ನೊದಗಿಸುವುದು)*

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಕುಂದಾಪುರ ತಾಲ್ಲೂಕಿನಲ್ಲಿ 89.90 ಕಿ.ಮೀ. ಉದ್ದದ 2 ರಾಜ್ಯ ಹೆದ್ದಾರಿ ಹಾಗೂ 197.11 ಕಿ.ಮೀ. ಉದ್ದದ ಜಿಲ್ಲಾ ಮುಖ್ಯ ರಸ್ತೆಗಳು ಇವೆ. ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಆ) 89.80 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿ ಹಾಗೂ 142.84 ಕಿ.ಮೀ. ಉದ್ದದ ಜಿಲ್ಲಾ ಮುಖ್ಯ ರಸ್ತೆಗಳಿಗೆ ಡಾಂಬರೀಕರಣವಾಗಿರುತ್ತದೆ. ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಇ) ಇತ್ತೀಚಿಗೆ ಆಗಿರುವ ಮಳೆಯಿಂದ ಹಾನಿಗೊಂಡಿರುವ ರಸ್ತೆಯ ಆಯ್ದ ಭಾಗಗಳಿಗೆ ತುರ್ತು ದುರಸ್ತಿ ಆಗಬೇಕಾಗಿದೆ. ಅದರ ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.

ಅನುಬಂಧ-1

ಕುಂದಾಪುರ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಯ ಅಧೀನದಲ್ಲಿರುವ ರಸ್ತೆಗಳ ವಿವರ

	ರಸ್ತೆಗಳ ಹೆಸರು	ಉದ್ದ (ಕಿ.ಮೀ.ಗಳಲ್ಲಿ)	ಡಾಂಬರೀಕರಣ ವಾಗಿರುವ ಉದ್ದ (ಕಿಮೀ)
1)	**ರಾಜ್ಯ ಹೆದ್ದಾರಿಗಳು**		
1.	ಆಗುಂಬೆ ಬೈಂದೂರು ರಸ್ತೆ ಕಿ.ಮೀ. 16 ರಿಂದ 88.70 ಕಿ.ಮೀ.ವರೆಗೆ	72.70	72.70
2.	ಹೊನ್ನಾಳಿ ಅರಸಾಲ್ ಹಾಲ್ಕಲಿ ರಸ್ತೆ ಕಿ.ಮೀ. 131.00 ರಿಂದ 148.20ರವರೆಗೆ	17.20	17.20
		89.90	89.90
2)	**ಜಿಲ್ಲಾ ಮುಖ್ಯ ರಸ್ತೆಗಳು**		
1.	ಸೋಮೇಶ್ವರ ಕೋಟೇಶ್ವರ ರಸ್ತೆ ಕಿ.ಮೀ 27.60 ರಿಂದ 46.80ರವರೆಗೆ	19.20	19.20
2.	ಹಾಲಾಡಿ ಅಮಾಸೇ ಬೈಲು ರಸ್ತೆ ಕಿಮೀ 0.0 ರಿಂದ 13.00ರವರೆಗೆ	13.00	13.00
3.	ಸೌಡ ಸಿದ್ದಾಪುರ ರಸ್ತೆ ಕಿ.ಮೀ. 0.0 ಕಿ.ಮೀ. 11.90ರವರೆಗೆ	11.90	11.90
4.	ಬ್ರಹ್ಮಾವರ ಜನ್ನಾಡಿ ರಸ್ತೆ ಕಿಮೀ 15.00 ರಿಂದ 19.40ರವರೆಗೆ	4.40	4.40

5.	ಕೋಟೇಶ್ವರ ಪೇಟೆ ಭಾಗದ ಹಳೇ ಎಂಬಿಸಿ ರಸ್ತೆ 1.60 ಕಿ.ಮೀ.	1.60	1.60
6.	ಗುಡ್ಡೆ ಅಂಗಡಿ ಶಿರಿಯಾದ ರಸ್ತೆ ಕಿಮೀ 0.0 ದಿಂದ 5.00 ರವರೆಗೆ	5.00	1.66
7.	ಬಿದ್ಧಲಿ ಕಟ್ಟೆ ಮೋಳ ಹಳ್ಳಿ ರಸ್ತೆ ಕಿಮೀ 0.00 ದಿಂದ 6.30ರ ವರೆಗೆ	6.30	1.26
8.	ಸಿದ್ದಾಪುರ ಮಚ್ಚಟ್ಟು ರಸ್ತೆ ಕಿ.ಮೀ. 0.0 ದಿಂದ 10.00ರವರೆಗೆ	10.00	0.75
9.	ಹೊಣ್ಸೆ ಮಕ್ಕಿ ಬೇಳೂರು ಉಳ್ಳೂರು ರಸ್ತೆ ಕಿಮೀ 0.00 ದಿಂದ 13.00ರ ವರೆಗೆ	13.00	5.44
10.	ಬೆಳ್ವೆ ಹೆಂ-ಗವಳ್ಳಿ ರಸ್ತೆ ಕಿಮೀ 0.0 ರಿಂದ 5.00 ರವರೆಗೆ	5.00	1.40
11.	ಕಂಡ್ಲೂರು ಹೊಸಂಗಡಿ ರಸ್ತೆ ಕಿಮೀ 0.0 ದಿಂದ ಕಿಮೀ 32.60ರವರೆಗೆ	32.60	32.60
12.	ಹೆಮ್ಮಾಡಿ ದೇವಲಕುಂದ ರಸ್ತೆ ಮೀ 0.00 ದಿಂದ 8.68 ರವರೆಗೆ	8.68	8.68
13.	ಒಡೇರಹೊಬಳಿ ಕೋಣಿ ಬಸ್ರೂರು ಕಂಡ್ಲೂರು ರಸ್ತೆ ಕಿ.ಮೀ 0.0 ದಿಂದ 9.65ರವರೆಗೆ	9.65	9.65
14.	ಕುಂದಾಪುರ ಪೇಟೆ ಭಾಗದ ಹಳೇ ಎಂ.ಬಿ.ಸಿ. ರಸ್ತೆ	1.80	1.80
15.	ಸಿದ್ದಾಪುರ ಹಳ್ಳಿ ಹೊಳೆ ಮುದೂರು ಜಡ್ಕಲ್ ರಸ್ತೆ 0.00 ದಿಂದ ಕಿ.ಮೀ. 43.00ರವರೆಗೆ	34.20	14.20
16.	ಗಂಗೊಳ್ಳಿಯಿಂದ ಬೈಂದೂರುವರೆಗಿನ ಹಳೇ ಎಂಬಿಸಿ ರಸ್ತೆ	13.28	13.28
17.	ಶಿರೂರು ತೊದಳ್ಳಿ ರಸ್ತೆ ಕಿ.ಮೀ. 0.00 ರಿಂದ 7.50 ರವರೆಗೆ	7.50	2.00
	ಒಟ್ಟು	197.11	142.84

ಅನುಬಂಧ-2

ದುರಸ್ತಿ ಆಗಬೇಕಾದ ರಸ್ತೆಗಳ ವಿವರ

	ಆಯ್ದ ಭಾಗಗಳು	ದುರಸ್ತಿಗೆ (ಲಕ್ಷ ರೂ.ಗಳಲ್ಲಿ)
1.	ಸಿದ್ದಾಪುರ ಹಳ್ಳಿಹೊಳೆ ಮುದ್ದೂರು ಜಡ್ಕಲ್ ರಸ್ತೆಯ ಕಿಮೀ 12.00 ರಿಂದ 14, 16, 25 ಮತ್ತು 26ರಲ್ಲಿ ಮಳೆಯಿಂದ ಹಾನಿಯಾದ ಭಾಗಗಳ ತುರ್ತು ದುರಸ್ತಿ	2.00
2.	ಹೊನ್ನಾಳಿ ಅರಸಾಲೆ ಹಾಲ್ಕಿಲ್ ರಸ್ತೆಯ ಕಿ.ಮೀ. 131 ರಿಂದ 141 ಮತ್ತು 145ರವರೆಗೆ ಆಯ್ದ ಭಾಗಗಳ ತುರ್ತು ದುರಸ್ತಿ	2.00
3.	ಶಿರೂರು ತೂದಳ್ಳಿ ರಸ್ತೆಯು ಕಿ.ಮೀ. 1,2 ಮತ್ತು 3 ರಲ್ಲಿ ಹಾನಿಗೊಂಡ ಭಾಗದ ತುರ್ತು ದುರಸ್ತಿ	0.50
4.	ಆಗುಂಬೆ ಬೈಂದೂರು ರಸ್ತೆಯ ಕಿ.ಮೀ. 16, 22, 27, 73 ಮತ್ತು 79 ಕಿಮೀಗಳಲ್ಲಿ ತುರ್ತು ದುರಸ್ತಿ	3.00
5.	ಹಳೇ ಎಂಬಿಸಿ ರಸ್ತೆ ಕಂಬದ ಕೋಣೆ ಪೇಟೆ ಭಾಗದಲ್ಲಿ ಕುಸಿದ ಮೋರಿಯ ಪುನರ್ ನಿರ್ಮಾಣ	0.50
6.	ಹೆನ್ನೂಡ್ಡಿ ದೇವಲಿ ಕುಂದರಸ್ತೆಯ ಆಯ್ದ ಭಾಗಗಳಲ್ಲಿ ತುರ್ತು ದುರಸ್ತಿ	1.00
7.	ಸೋಮೇಶ್ವರ ಕೋಟೇಶ್ವರ ರಸ್ತೆಯ ಆಯ್ದ ಭಾಗಗಳಲ್ಲಿ ಮಳೆಯಿಂದ ಹಾನಿಗೊಂಡ ಭಾಗಗಳ ತುರ್ತು ದುರಸ್ತಿ	1.00
8.	ಹಾಲಾಡಿ ಅಮಾಸೇ ಬೈಲು ರಸ್ತೆಯಲ್ಲಿ ಹಾನಿಗೊಂಡ ಭಾಗಗಳಲ್ಲಿ ತುರ್ತು ದುರಸ್ತಿ.	1.00
9.	ಹುಣ್ಸೆ ಮಕ್ಕಿ ಬೇಳೂರು ರಸ್ತೆಯ ಕಿಮೀ 10.40, 10.50 ಮತ್ತು 12.10ರಲ್ಲಿ ಹಾನಿಗೊಂಡ ಭಾಗಗಳ ತುರ್ತು ದುರಸ್ತಿ	1.00
10.	ಬ್ರಹ್ಮಾವರ ಜನ್ನಾಡಿ ರಸ್ತೆಯ ಹಾನಿಗೊಂಡಿರುವ ಭಾಗದ ತುರ್ತು ದುರಸ್ತಿ	0.50
11.	ವಡೇರಹೊಬಳಿ ಕೋಣಿ ಬಸ್ರೂರು ರಸ್ತೆಯಲ್ಲಿ ಹಾನಿಗೊಂಡ ಭಾಗಗಳ ತುರ್ತು ದುರಸ್ತಿ	0.50

12.	ಕಂಡ್ಲೂರು ಹೊಸಂಗದ ರಸ್ತೆಯಲ್ಲಿ ಹಾನಿಗೊಂಡ ಭಾಗಗಳ ದುರಸ್ತಿ	1.00
13.	ಗುಡ್ಡೆ ಅಂಗಡಿ, ಶಿರಿಯೂರ ರಸ್ತೆಯ ಕಿ.ಮೀ. 3.15ರಿಂದ 3.28ರ ಭಾಗದ ತುರ್ತು ದುರಸ್ತಿ.	0.35
		14.35

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಕ್ರಮ ಕಟ್ಟಡಗಳು

2628 - ಶ್ರೀ ಕೆ. ಪ್ರತಾಪ್ ಚಂದ್ರಶೆಟ್ಟಿ (ಕುಂದಾಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಯಾವ ಯಾವ ಗ್ರಾಮ ಪಂಚಾಯಿತಿಗಳು ಸಾರ್ವಜನಿಕರ ಹಿತದೃಷ್ಟಿಯಿಂದ ನಿರ್ಣಯಿಸಿದ, ತೆರವು, ಮಾಡಲು ಲೋಕೋಪಯೋಗಿ ಇಲಾಖೆಗೆ ಕೇಳಿಕೊಂಡ ಅಕ್ರಮ ಕಟ್ಟಡಗಳು ಹಾಗೂ ತಾತ್ಕಾಲಿಕ ಶೆಡ್ಡುಗಳ ಸಂಖ್ಯೆ ಎಷ್ಟು;

ಆ) ಲೋಕೋಪಯೋಗಿ ಇಲಾಖೆ ತೆಗೆದುಕೊಂಡ ಕ್ರಮವೇನು?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಐದು ಗ್ರಾಮ ಪಂಚಾಯತಿಗಳು ನಿರ್ಣಯಿಸಿದ ಅಕ್ರಮ ಕಟ್ಟಡಗಳು ಹಾಗೂ ತಾತ್ಕಾಲಿಕ ಶೆಡ್ಡುಗಳನ್ನು ತೆರವು ಮಾಡಲು ಲೋಕೋಪಯೋಗಿರವರಿಗೆ ಕೋರಿರುತ್ತಾರೆ. ಅವುಗಳು:

(1) ಪಡುವರಾರು ಗ್ರಾಮ ಪಂಚಾಯತ್

(2) ಮುನ್ನೂರು ಗ್ರಾಮ ಪಂಚಾಯತ್

(3) ಉಪ್ಪಿನಂಗಡಿ ಗ್ರಾಮ ಪಂಚಾಯತ್

(4) ಹಾಲಾಡಿ ಗ್ರಾಮ ಪಂಚಾಯತ್

(5) ಪೆರುವಾಜೆ ಗ್ರಾಮ ಪಂಚಾಯತ್

ಅಕ್ರಮ ಕಟ್ಟಡಗಳು ಹಾಗೂ ತಾತ್ಕಾಲಿಕ ಶೆಡ್ಡುಗಳು ಐದು (5) ಇರುತ್ತದೆ.

ಆ) ಸಂಬಂಧಪಟ್ಟವರಿಗೆ ನೋಟೀಸ್ ಜಾರಿ ಮಾಡಿ ಮುಂದಿನ ಕ್ರಮ ಕೈಗೊಳ್ಳಲಾಗುತ್ತಿದೆ.

ಪಂಚಾಯತ್ ತೂಫಾನ್ ಕಾರ್ಯಕ್ರಮ

2255 - ಶ್ರೀ ಕೆ. ಪ್ರತಾಪ್‌ಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 'ಪಂಚಾಯತ್ ತುಫಾನ್' ಕಾರ್ಯಕ್ರಮ ರಾಜ್ಯದ ಯಾವ ಯಾವ ತಾಲ್ಲೂಕುಗಳಿಗೆ ಹಮ್ಮಿಕೊಳ್ಳಲಾಗಿದೆ?

ಆ) ಈ ಹಿಂದೆ ಹಾಕಿಕೊಂಡ ಕಾರ್ಯಕ್ರಮವೇನು? ಮುಂದೆ ಹಾಕಿಕೊಳ್ಳುವ ಕಾರ್ಯಕ್ರಮವೇನು?

ಇ) ಬಿಡುಗಡೆಯಾದ ಹಣವೆಷ್ಟು? (ತಾಲ್ಲೂಕುವಾರು ವಿವರ)

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಈ ಹೆಸರಿನ ಕಾರ್ಯಕ್ರಮವನ್ನು ಸರ್ಕಾರದಿಂದ ಜಾರಿ ಮಾಡುತ್ತಿಲ್ಲ. "The Concerned for working Children" ಎಂಬ ಸ್ವಯಂಸೇವಾ ಸಂಸ್ಥೆಯು ದಕ್ಷಿಣ ಕನ್ನಡ, ಶಿವಮೊಗ್ಗ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ (13 ಗ್ರಾಮಗಳಲ್ಲಿ) ಈ ಹೆಸರಿನ ಕಾರ್ಯಕ್ರಮವನ್ನು ಜಾರಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈ ಕಾರ್ಯಕ್ರಮವನ್ನು ಮೂರು ವರ್ಷಗಳ ನಂತರ ಸರ್ಕಾರದಿಂದ ಮುಂದುವರಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಇ) ಉದ್ಭವಿಸುವುದಿಲ್ಲ

ಪಾಂಡವಪುರ ತಾಲ್ಲೂಕಿನಲ್ಲಿರುವ ಪ್ರೇಕ್ಷಣೀಯ ಸ್ಥಳಗಳು

2504 - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪಾಂಡವಪುರ ತಾಲ್ಲೂಕಿಗೆ ಸಂಬಂಧಪಟ್ಟಂತೆ ಪ್ರೇಕ್ಷಣೀಯ ಸ್ಥಳಗಳಾವುವು?

ಆ) ತೊಣ್ಣೂರು ಕೆರೆ, ಕುಂತಿ ಬೆಟ್ಟ ಮತ್ತು ಮೇಲುಕೋಟೆ ಈ ಮೂರು ಸ್ಥಳಗಳನ್ನು ಪ್ರವಾಸೋದ್ಯಮ ಇಲಾಖೆಗೆ ಸೇರ್ಪಡೆ ಆಗಿವೆಯೇ? ಆಗಿದ್ದಲ್ಲಿ ಈ ಇಲಾಖೆಯಿಂದ ಬರುವ ಯಾವ ಯಾವ ಸವಲತ್ತುಗಳನ್ನು ಒದಗಿಸಲಾಗಿದೆಯೇ?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಮೇಲುಕೋಟೆ

ಆ) ಹೌದು

ರಾಜ್ಯ ಪ್ರವಾಸೋದ್ಯಮ ನೀತಿಯಲ್ಲಿ ಪ್ರವಾಸೋದ್ಯಮ ಸೌಲಭ್ಯಗಳಾದ ಹೋಟೆಲ್, ರೆಸ್ಟೋರೆಂಟ್ಸ್ ಇತ್ಯಾದಿಗಳನ್ನು ಪ್ರವಾಸೋದ್ಯಮ ಕೇಂದ್ರಗಳಲ್ಲಿ ಅಭಿವೃದ್ಧಿಪಡಿಸುವ ಬಗ್ಗೆ ಅವಕಾಶ ನೀಡಲಾಗಿದೆ. ಈ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸುವ ಬಗ್ಗೆ ಖಾಸಗಿಯವರು ವಾಣಿಜ್ಯ ದೃಷ್ಟಿಯಿಂದ ಪಾಲ್ಗೊಳ್ಳುವರಾಗಿ ಸರ್ಕಾರವು ನಿರೀಕ್ಷಿಸುತ್ತದೆ. ಖಾಸಗಿಯವರನ್ನು ಆಕರ್ಷಿಸುವ ಸಲುವಾಗಿ ಸರ್ಕಾರವು ಅನೇಕ ರಿಯಾಯಿತಿ ಉತ್ತೇಜನಗಳನ್ನು ಹೆಚ್ಚಿಸಿದೆ. ಈ ಒಂದು ಕಾರಣಕ್ಕಾಗಿ ಪ್ರವಾಸಿ ಕೇಂದ್ರಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಲಾಗಿದ್ದು, ಮೂರು ತಂಡ ರಿಯಾಯಿತಿ ಮತ್ತು ಉತ್ತೇಜನಗಳನ್ನು ನೀಡಲಾಗುವುದು. ತೊಣ್ಣೂರು ಕೆರೆ, ಕುಂತಿಬೆಟ್ಟ ಪ್ರವಾಸೋದ್ಯಮ ನೀತಿಯಲ್ಲಿ 'ಬಿ' ಗುಂಪಿನಲ್ಲೂ ಮತ್ತು ಮೇಲು ಕೋಟೆಯನ್ನು 'ಸಿ' ಗುಂಪಿನಲ್ಲೂ ಸೇರಿಸಲಾಗಿದೆ. ಮೇಲುಕೋಟೆಯಲ್ಲಿ ರೂ. 33.00 ಲಕ್ಷ ಅಂದಾಜು ವೆಚ್ಚದಲ್ಲಿ ಪ್ರವಾಸಿ ಸೌಲಭ್ಯವನ್ನು ನಿರ್ಮಿಸಲಾಗುತ್ತಿದೆ. ಮೂಲಭೂತ ನಾಗರೀಕ ಸೌಲಭ್ಯಗಳಾದ ರಸ್ತೆ, ನೀರು ಸರಬರಾಜು ಇತ್ಯಾದಿಗಳಿಗಾಗಿ ಸರ್ಕಾರವು ಮಾಸ್ಟರ್ ಪ್ಲಾನ್ ತಯಾರಿಸಿದೆ ಮತ್ತು ಇದನ್ನು ಹಂತ ಹಂತವಾಗಿ ಕಾರ್ಯಗತಗೊಳಿಸಲಾಗುವುದು.

ಪಾಂಡವಪುರ ತಾಲ್ಲೂಕು ತೊಣ್ಣೂರು ಕೆರೆ ಮತ್ತು ಕುಂತಿಬೆಟ್ಟ ಮತ್ತು ಮೇಲು ಕೋಟೆಗಳನ್ನು ಪ್ರವಾಸೋದ್ಯಮಕ್ಕೆ ಸೇರಿಸುವುದು.

2302 - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪಾಂಡವಪುರ ತಾಲ್ಲೂಕು ತೊಣ್ಣೂರು ಕೆರೆ ಮತ್ತು ಕುಂತಿ ಬೆಟ್ಟ ಮತ್ತು ಮೇಲುಕೋಟೆ ಈ ಮೂರು ಮುಖ್ಯವಾದ ಪ್ರೇಕ್ಷಣೀಯ ಸ್ಥಳಗಳಾಗಿವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಇವುಗಳನ್ನು ಪ್ರವಾಸೋದ್ಯಮ ಇಲಾಖೆಗೆ ಸೇರ್ಪಡೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಹೌದು

ಆ) ರಾಜ್ಯ ಪ್ರವಾಸೋದ್ಯಮ ನೀತಿಯಲ್ಲಿ ಪ್ರವಾಸೋದ್ಯಮ ಸೌಲಭ್ಯಗಳಾದ ಹೋಟೆಲ್, ರೆಸ್ಟೋರೆಂಟ್ಸ್ ಇತ್ಯಾದಿಗಳನ್ನು ಪ್ರವಾಸೋದ್ಯಮ ಕೇಂದ್ರಗಳಲ್ಲಿ ಅಭಿವೃದ್ಧಿ ಪಡಿಸುವ ಬಗ್ಗೆ ಅವಕಾಶ ನೀಡಲಾಗಿದೆ. ಈ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ಖಾಸಗಿಯವರು ವಾಣಿಜ್ಯ ದೃಷ್ಟಿಯಿಂದ ಪಾಲ್ಗೊಳ್ಳುವುದಾಗಿ ಸರ್ಕಾರವು ನಿರೀಕ್ಷಿಸುತ್ತದೆ. ಖಾಸಗಿಯವರನ್ನು ಆಕರ್ಷಿಸುವ ಸಲುವಾಗಿ ಸರ್ಕಾರವು ಅನೇಕ ರಿಯಾಯಿತಿ ಉತ್ತೇಜನಗಳನ್ನು ಹೆಚ್ಚಿಸಿದೆ. ಈ ಒಂದು ಕಾರಣಕ್ಕಾಗಿ ಪ್ರವಾಸಿ ಕೇಂದ್ರಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಲಾಗಿದ್ದು, ಮೂರು ತಂಡ ರಿಯಾಯಿತಿ ಮತ್ತು ಉತ್ತೇಜನಗಳನ್ನು ನೀಡಲಾಗುವುದು. ಪ್ರವಾಸೋದ್ಯಮ ನೀತಿಯಲ್ಲಿ ಮೇಲುಕೋಟೆಯನ್ನು 'ಸಿ' ಗುಂಪಿನಲ್ಲೂ ಹಾಗೂ ತೊಣ್ಣೂರು ಕೆರೆ ಮತ್ತು ಕುಂತಿಬೆಟ್ಟವನ್ನು 'ಬಿ' ಗುಂಪಿನಲ್ಲೂ ಅಭಿವೃದ್ಧಿಗಾಗಿ ಸೇರಿಸಲಾಗಿದೆ.

ಮೂಲಭೂತ ನಾಗರೀಕ ಸೌಲಭ್ಯಗಳಾದ ರಸ್ತೆ, ನೀರು ಸರಬರಾಜು ಇತ್ಯಾದಿಗಳಿಗಾಗಿ ಸರ್ಕಾರವು ಮಾಸ್ಟರ್ ಪ್ಲಾನ್ ತಯಾರಿಸಿದೆ ಮತ್ತು ಇದನ್ನು ಹಂತ ಹಂತವಾಗಿ ಕಾರ್ಯಗತಗೊಳಿಸಲಾಗುವುದು.

ಪಂಚಾಯಿತಿಗಳ ಅಭಿವೃದ್ಧಿಯ ಕಾರ್ಯಕ್ರಮಗಳು

2301 - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಹಾಗೂ ಗ್ರಾಮ ಪಂಚಾಯತ್‌ಗಳ ವ್ಯಾಪ್ತಿಯಲ್ಲಿ ಗ್ರಾಮೀಣ ಅಭಿವೃದ್ಧಿಯ ಬಗ್ಗೆ ಯಾವ ಯಾವ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ?

ಆ) ಗ್ರಾಮೀಣ ಪ್ರದೇಶಗಳು ಅಭಿವೃದ್ಧಿಯಾಗಲು ಸ್ಥಳೀಯ ಸಂಸ್ಥೆಗಳನ್ನು ಆ ಪಂಚಾಯ್ತಿಯ ಸೊತ್ತು ಎಂದು ಘೋಷಿಸುವ ಉದ್ದೇಶ ಇದೆಯೇ?

ಇ) ಹಾಗಿದ್ದಲ್ಲಿ, ಈ ಯೋಜನೆಯನ್ನು ಯಾವಾಗ ಕಾರ್ಯರೂಪಕ್ಕೆ ತರಲಾಗುವುದು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್) :

ಅ) ಯೋಜನೆಗಳ ಪಟ್ಟಿಯನ್ನು ಅನುಬಂಧ-ಎ ನಲ್ಲಿ ಇಡಲಾಗಿದೆ.

ಆ) ಇಲ್ಲಾ

ಇ) ಉದ್ಭವಿಸುವುದಿಲ್ಲ.

ಅನುಬಂಧ - 'ಎ'

ಜಿಲ್ಲಾ ತಾಲ್ಲೂಕು ಮತ್ತು ಗ್ರಾಮ ಪಂಚಾಯತ್ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು

1. ಜವಾಹರ್ ರೋಜ್‌ಗಾರ್ ಯೋಜನೆ
2. ಜವಾಹರ್ ರೋಜ್‌ಗಾರ್ ಯೋಜನೆ ಎರಡನೇ ವಾಹಿನಿ
3. ದಶಲಕ್ಷಬಾವಿ ಯೋಜನೆ
4. ಇಂದಿರಾ ಅವಾಸ್ ಯೋಜನೆ
5. ಉದ್ಯೋಗ ಭರವಸೆ ಯೋಜನೆ
6. ನೆಮ್ಮದಿ
7. ಬರಪೀಡಿತ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮ
8. ಪಶ್ಚಿಮ ಘಟ್ಟ ಅಭಿವೃದ್ಧಿ ಕಾರ್ಯಕ್ರಮ
9. ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ
10. ಗ್ರಾಮೀಣ ಯುವಕರಿಗೆ ಸ್ವಯಂ ಉದ್ಯೋಗ ತರಬೇತಿ (ಟ್ರೈಸಂ)
11. ಗ್ರಾಮೀಣ ಕುಶಲಕರ್ಮಿಗಳಿಗೆ ಸುಧಾರಿತ ಉಪಕರಣಗಳ ಪೆಟ್ಟಿಗೆ ಕೊಡುವ ಕಾರ್ಯಕ್ರಮ
12. ಕೃಷಿ ಉತ್ಪನ್ನದ ಹೆಚ್ಚಳಕ್ಕಾಗಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ನೆರವು ಕಾರ್ಯಕ್ರಮ (100 ಬಾವಿ ಯೋಜನೆ)
13. ಗ್ರಾಮೀಣ ಪ್ರದೇಶದ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಕಾರ್ಯಕ್ರಮ (ಡ್ವಾಕ್ರಾ)
14. ಜೀತವಿಮುಕ್ತರ ಪುನರ್‌ವಸತಿ ಕಾರ್ಯಕ್ರಮ
15. ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆ
16. ಸಮಗ್ರ ಗ್ರಾಮೀಣ ಇಂಧನ ಕಾರ್ಯಕ್ರಮ
17. ರಾಷ್ಟ್ರೀಯ ಸುಧಾರಿತ ಒಲೆಗಳ ಕಾರ್ಯಕ್ರಮ
18. ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲೀಕರಣ
    - ಅ) ನಲ್ಲಿ ನೀರು ಸರಬರಾಜು ಯೋಜನೆ
    - ಆ) ಕಿರು ನೀರು ಸರಬರಾಜು ಯೋಜನೆ
    - ಇ) ಕೈಪಂಪು ಅಳವಡಿಸಿದ ಕೊಳವೆ ಬಾವಿ ಯೋಜನೆ
    - ಈ) ಗ್ರಾಮ ನೈರ್ಮಲ್ಯ
19. ವಿದೇಶಿ ನೆರವಿನ ಕಾರ್ಯಕ್ರಮಗಳು :
    - ಅ) ವಿಶ್ವ ಬ್ಯಾಂಕ್ ನೆರವಿನ ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ಪರಿಸರ ನೈರ್ಮಲೀಕರಣ ಯೋಜನೆ
    - ಆ) ನೆದರ್‌ಲ್ಯಾಂಡ್ ನೆರವಿನ ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯದ ಘಟಕ
    - ಇ) ಡ್ಯಾನಿಡಾ ನೆರವಿನ ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲೀಕರಣ ಯೋಜನೆ.

ಔಷಧಿಗಳ ಕೊರತೆಯಿಂದಾಗಿ ಜಾನುವಾರುಗಳಿಗೆ ತೊಂದರೆ

2292 Ë ಶ್ರೀ ಜಿ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದ ಪ್ರತಿಯೊಂದು ತಾಲ್ಲೂಕಿನಲ್ಲಿಯ ಆಸ್ಪತ್ರೆಗಳಿಗೆ ಔಷಧಗಳ ಕೊರತೆಯಿಂದ ಸರಿಯಾದ ಚಿಕಿತ್ಸೆ ಜಾನುವಾರುಗಳಿಗೆ ಸಿಗುತ್ತಿಲ್ಲದಿರುವ ವಿಷಯ ಸರಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಇದನ್ನು ಸರಿಪಡಿಸಲು ಕೈಗೊಳ್ಳುವ ಕ್ರಮಗಳೇನು?

ಇ) ಪ್ರತಿ ಜಿಲ್ಲೆಗೂ ಹಾಗೂ ಪ್ರತಿಯೊಂದು ಆಸ್ಪತ್ರೆಗಳಿಗೆ ಸರಕಾರದಿಂದ ಬಿಡುಗಡೆ ಮಾಡುತ್ತಿರುವ ಔಷಧಗಳ ಅಂದಾಜು ಎಷ್ಟು; ಇದರ ಅಂದಾಜು ಮೊತ್ತ ಎಷ್ಟಾಗುತ್ತದೆ;

ಈ) ಪ್ರತಿಯೊಂದು ತಾಲ್ಲೂಕಿಗೂ ಸರಿ ಸಮಾನವಾದ ಹಂಚಿಕೆಯಾಗುತ್ತಿದೆಯೇ?

ಉ) ಹಂಚಿಕೆಯಾಗುತ್ತಿಲ್ಲದಿದ್ದಲ್ಲಿ ಇದನ್ನು ಸರಿಪಡಿಸಲು ಕೈಗೊಳ್ಳುವ ಕ್ರಮಗಳೇನು?

ಶ್ರೀ ಬಿ.ಎಸ್. ಬಚ್ಚೇಗೌಡ (ಪಶುಸಂಗೋಪನೆ ರಾಜ್ಯ ಸಚಿವರು) :

ಅ) ಬಂದಿಲ್ಲ

ಆ) ಉದ್ಭವಿಸುವುದಿಲ್ಲ

ಇ) ಅಂದಾಜು ಮೊತ್ತದ ವಿವರವನ್ನು ಅನುಬಂಧ-1ರಲ್ಲಿ ನೀಡಿದೆ.

ಈ) ಪ್ರತಿ ತಾಲ್ಲೂಕಿಗೆ ಔಷಧಿಗಳ ಸರಬರಾಜು, ಅಲ್ಲಿರುವ ಜಾನುವಾರು ಸಂಖ್ಯೆಗಳ ಮೇಲೆ ಅವಲಂಬಿಸಿ, ಹಂಚಿಕೆ ಮಾಡಲಾಗುತ್ತಿದೆ.

ಉ) ಔಷಧಿಗಳ ವಿವರಣೆಯನ್ನು ಸಂಬಂಧಪಟ್ಟ ಜಿಲ್ಲಾ ಉಪ ನಿರ್ದೇಶಕರಿಗೆ ವಹಿಸಲಾಗಿದ್ದು, ವ್ಯವಸ್ಥಿತ ಔಷಧಿ ವಿತರಣೆಗೆ ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

ಅನುಬಂಧ-1

ಅ) ಪ್ರತಿಯೊಂದು ಜಿಲ್ಲೆಗೂ ಸರ್ಕಾರದಿಂದ ಬಿಡುಗಡೆ ಮಾಡುತ್ತಿರುವ ಅಂದಾಜು ಮೊತ್ತದ ವಿವರ ಕೆಳಕಂಡಂತಿದೆ:

		(ರೂ. ಲಕ್ಷಗಳಲ್ಲಿ)
1.	ಬೆಂಗಳೂರು ನಗರ	7.28
2.	ಬೆಂಗಳೂರು ಗ್ರಾಮಾಂತರ	16.68
3.	ಕೋಲಾರ	18.04
4.	ತುಮಕೂರು	23.42
5.	ಶಿವಮೊಗ್ಗ	22.00
6.	ಚಿತ್ರದುರ್ಗ	22.00
7.	ಮೈಸೂರು	26.00
8.	ಮಂಡ್ಯ	16.00
9.	ಹಾಸನ	23.10
10.	ದಕ್ಷಿಣ ಕನ್ನಡ	22.00

11.	ಚಿಕ್ಕಮಗಳೂರು	14.90
12.	ಕೊಡಗು	5.82
13.	ಬೆಳಗಾಂ	29.00
14.	ಧಾರವಾಡ	25.00
15.	ಬಿಜಾಪುರ	25.00
16.	ಕಾರವಾರ	12.00
17.	ಗುಲ್ಬರ್ಗಾ	25.00
18.	ಬಳ್ಳಾರಿ	18.00
19.	ಬೀದರ್	11.76
20.	ರಾಯಚೂರು	22.00
	ಒಟ್ಟು	386.00

ಆ) ಪ್ರತಿಯೊಂದು ಆಸ್ಪತ್ರೆಗಳಿಗೆ ಸರ್ಕಾರದಿಂದ ಬಿಡುಗಡೆ ಮಾಡುತ್ತಿರುವ ಅಂದಾಜು ಮೊತ್ತದ ವಿವರ ಕೆಳಕಂಡಂತಿದೆ:

1.	ಪಶು ಆಸ್ಪತ್ರೆ	25,000
2.	ಪಶು ಚಿಕಿತ್ಸಾಲಯ	20,000
3.	ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ	15,000
4.	ಸಂಚಾರಿ ಪಶುಚಿಕಿತ್ಸಾಲಯ	15,000
5.	ಕೃತಕ ಗರ್ಭಧಾರಣಾ ಕೇಂದ್ರ	8,000

ಐ.ಜಿ.ಆರ್.ವೈ ಮತ್ತು ಇಎಎಸ್ ಸ್ಕೀಂಗಳಲ್ಲಿ ಪ್ರತಿಯೊಂದು ತಾಲ್ಲೂಕಿಗೂ ಹಣ ಬಿಡುಗಡೆ

2294 - ಶ್ರೀ ಜೆ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದ ಪ್ರತಿಯೊಂದು ತಾಲ್ಲೂಕಿಗೂ ಜೆ.ಆರ್.ವೈ. ಹಾಗೂ ಐ.ಜಿ.ಆರ್.ವೈ. ಮತ್ತು ಇ.ಎ.ಎಸ್. ಸ್ಕೀಮುಗಳ ಅಡಿಯಲ್ಲಿ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ, (ಅದರ ಸಂಪೂರ್ಣವಾದ ವಿವರಗಳನ್ನು ತಾಲ್ಲೂಕುವಾರು ಕೊಡುವುದು)?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):

ಅ) ಜವಾಹರ್ ರೋಜ್‌ಗಾರ್ ಯೋಜನೆಯ ಮೊದಲನೇ ವಾಹಿನಿಯಡಿಯಲ್ಲಿ ರಾಜ್ಯದ ಎಲ್ಲಾ 20 ಜಿಲ್ಲೆಗಳಿಗೆ ರೂ. 8879.22 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಐ.ಜಿ.ಆರ್.ವೈ. ಯಡಿ ರಾಜ್ಯದ 7 ಜಿಲ್ಲೆಗಳಿಗೆ 1021.25 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಈ ಎರಡು ಯೋಜನೆಗಳಲ್ಲಿ ಜಿಲ್ಲಾವಾರು ಮಾತ್ರ ಬಿಡುಗಡೆ ಮಾಡಲಾಗುತ್ತೆ. ತಾಲ್ಲೂಕುವಾರು ಹಣ ಬಿಡುಗಡೆ ಮಾಡುವುದಿಲ್ಲ. ಜಿಲ್ಲಾವಾರು ಮಾಹಿತಿಯನ್ನು ತಃಖ್ತೆಯಲ್ಲಿ ಲಗತ್ತಿಸಿದೆ.

ಉದ್ಯೋಗ ಭರವಸೆ ಯೋಜನೆಯಡಿಯಲ್ಲಿ ರೂ. 5050.00 ಲಕ್ಷಗಳನ್ನು ತಾಲ್ಲೂಕುವಾರು ಬಿಡುಗಡೆ ಮಾಡಲಾಗಿದೆ. ವಿವರದ ತಃಖ್ತೆ ಲಗತ್ತಿಸಿದೆ.

ಪ್ರಶ್ನೆ ಸಂಖ್ಯೆ : 2294

1995-96ನೇ ಸಾಲಿನಲ್ಲಿ ಜಿ.ಆರ್.ವೈ. ಹಾಗೂ ಐ.ಜಿ.ಆರ್.ವೈ. ಯಡಿಯಲ್ಲಿ ಬಿಡುಗಡೆ ಮಾಡಿದ ಹಣದ ಜಿಲ್ಲಾವಾರು ವಿವರ.

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಜಿ.ಆರ್.ವೈ.ನಲ್ಲಿ ಬಿಡುಗಡೆ ಮಾಡಿದ ಹಣ	ಐ.ಜಿ.ಆರ್.ವೈ.ನಲ್ಲಿ ಬಿಡುಗಡೆ ಮಾಡಿದ ಹಣ
1.	ಬೆಂಗಳೂರು	300.63	-
2.	ಬೆಂಗಳೂರು (ಗ್ರಾಮಾಂತರ)	448.76	-
3.	ಬೆಳಗಾಂ	474.44	-
4.	ಬಳ್ಳಾರಿ	551.80	115.00
5.	ಬೀದರ್	413.35	93.75
6.	ಬಿಜಾಪುರ	661.64	-
7.	ಚಿಕ್ಕಮಗಳೂರು	346.82	-
8.	ಚಿತ್ರದುರ್ಗ	732.53	132.50
9.	ದಕ್ಷಿಣ ಕನ್ನಡ	369.01	-
10.	ಧಾರವಾಡ	333.55	176.25
11.	ಗುಲ್ಬರ್ಗಾ	861.87	190.00
12.	ಹಾಸನ	213.23	-
13.	ಕೊಡಗು	216.77	-
14.	ಕೋಲಾರ	805.65	168.75
15.	ಮಂಡ್ಯ	282.28	-
16.	ಮೈಸೂರು	349.78	-
17.	ರಾಯಚೂರು	704.49	-
18.	ಶಿವಮೊಗ್ಗ	218.16	-
19.	ತುಮಕೂರು	352.23	145.00
20.	ಉತ್ತರ ಕನ್ನಡ	232.80	-
	ರಾಜ್ಯ ಕೋಶ	10.00	
	ಒಟ್ಟು	8879.22	1021.25

ಪ್ರಶ್ನೆ ಸಂಖ್ಯೆ : 2294

1995-96ನೇ ಸಾಲಿನಲ್ಲಿ ಉದ್ಯೋಗ ಭರವಸೆ ಯೋಜನೆಯಡಿಯಲ್ಲಿ ಈ ಕೆಳಕಂಡಂತೆ ತಾಲ್ಲೂಕುವಾರು ಅನುದಾನವನ್ನು ಬಿಡುಗಡೆ ಮಾಡಿರುವ ವಿವರ.

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲೆ	ತಾಲ್ಲೂಕು		ಕೇಂದ್ರ ಪಾಲು	ರಾಜ್ಯ ಪಾಲು	ಒಟ್ಟು
1	2	3		4	5	6
1.	ಬೆಳಗಾವಿ	1.	ಅಥಣಿ	40.00	10.00	50.00
		2.	ಗೋಕಾಕ್	40.00	10.00	50.00
		3.	ಸೌಂದತ್ತಿ	40.00	10.00	50.00
		4.	ಬೈಲಹೊಂಗಲ್	40.00	10.00	50.00
		5.	ಬೆಳಗಾವಿ	40.00	10.00	50.00
		6.	ಹುಕ್ಕೇರಿ	40.00	10.00	50.00
		7.	ರಾಮದುರ್ಗ	30.00	7.50	37.50
				270.00	67.50	337.50
2.	ಬೀದರ್	8.	ಔರಾದ್	40.00	10.00	50.00
		9.	ಬಸವಕಲ್ಯಾಣ	40.00	10.00	50.00
		10.	ಹುಮ್ನಾಬಾದ್	40.00	10.00	50.00
		11.	ಭಾಲ್ಕಿ	30.00	7.50	37.50
				150.00	37.50	187.50
3.	ಬಿಜಾಪುರ	12.	ಬಾದಾಮಿ	30.00	7.50	37.50
		13.	ಬಾಗಲಕೋಟೆ	30.00	7.50	37.50
		14.	ಬಾಗೇವಾಡಿ	40.00	10.00	50.00
		15.	ಬಿಜಾಪುರ	40.00	10.00	50.00
		16.	ಬೀಳಗಿ	30.00	7.50	37.50*
		17.	ಹುನಗುಂದ	30.00	7.50	37.50
		18.	ಇಂಡಿ	40.00	10.00	50.00
		19.	ಜಮಖಂಡಿ	40.00	10.00	50.00

		20.	ಮುದ್ದೇಬಿಹಾಳ್	30.00	7.50	37.50
		21.	ಮುಧೋಳ	30.00	7.50	37.50
		22.	ಸಿಂಧಗಿ	40.00	10.00	50.00
				380.00	95.00	475.00
	ಬಳ್ಳಾರಿ	23.	ಹಡಗಲಿ	30.00	7.50	37.50
		24.	ಹರಪನಹಳ್ಳಿ	40.00	10.00	50.00
		25.	ಕೂಡ್ಲಿಗಿ	40.00	10.00	50.00
		26.	ಹಗರಿಬೊಮ್ಮನ ಹಳ್ಳಿ	30.00	7.50	37.50
		27.	ಸಂಡೂರು	30.00	7.50	37.50
				170.00	42.50	212.50
5.	ಚಿತ್ರದುರ್ಗ	28.	ಚಳ್ಳಕೆರೆ	40.00	10.00	50.00
		29.	ಚಿತ್ರದುರ್ಗ	40.00	10.00	50.00
		30.	ಹೊಳಲ್ಕೆರೆ	30.00	7.50	37.50
		31.	ಹೊಸದುರ್ಗ	30.00	7.50	37.50
		32.	ಜಗಳೂರು	30.00	7.50	37.50
		33.	ಮೊಳಕಾಲ್ಮೂರು	30.00	7.50	37.50
				200.00	50.00	250.00
6.	ಚಿಕ್ಕಮಗಳೂರು	34.	ಕಡೂರು	40.00	10.00	50.00
		35.	ಕೊಪ್ಪ	30.00	7.50	37.50
		36.	ಮೂಡಿಗೆರೆ	30.00	7.50	37.50
		37.	ಎನ್.ಆರ್.ಪುರ	20.00	5.00	25.00
		38.	ಶೃಂಗೇರಿ	20.00	5.00	25.00
		39.	ಚಿಕ್ಕಮಗಳೂರು	30.00	7.50	37.50
		40.	ತರೀಕೆರೆ	30.00	7.50	37.50
				200.00	50.00	250.00
7.	ಧಾರವಾಡ	41.	ಬ್ಯಾಡಗಿ	30.00	7.50	37.50
		42.	ಶಿಗ್ಗಾಂವ್	30.00	7.50	37.50

		43.	ಧಾರವಾಡ	30.00	7.50	37.50
		44.	ಗದಗ	30.00	7.50	37.50
		45.	ಹಾವೇರಿ	30.00	7.50	37.50
		46.	ಹಿರೇಕರೂರು	30.00	7.50	37.50
		47.	ಹುಬ್ಬಳ್ಳಿ	30.00	7.50	37.50
		48	ಕಲಘಟಗಿ	30.00	7.50	37.50
		49.	ಕುಂದಗೋಳ	30.00	7.50	37.50
		50.	ಮುಂಡರಗಿ	30.00	7.50	37.50
		51.	ರಾಣಿಬೆನ್ನೂರು	40.00	10.00	50.00
		52.	ರೋಣ	30.00	7.50	37.50
		53.	ಸವಣೂರು	30.00	7.50	37.50
		54.	ಶಿರಹಟ್ಟಿ	30.00	7.50	37.50
				430.00	107.50	537.50
8.	ಗುಲ್ಬರ್ಗಾ	55.	ಆಫ್‌ಜಲ್‌ಪುರ	30.00	7.50	37.50
		56.	ಆಳಂದ್	40.00	10.00	50.00
		57.	ಚಿತ್ತಾಪುರ	40.00	10.00	50.00
		58.	ಗುಲ್ಬರ್ಗಾ	40.00	10.00	50.00
		59.	ಸೇಡಂ	30.00	7.50	37.50
		60.	ಶಹಪುರ	40.00	10.00	50.00
		61.	ಶೋರಾಪುರ	40.00	10.00	50.00
		62.	ಯಾದಗೀರ್	40.00	10.00	50.00
		63.	ಜೇವರ್ಗಿ	30.00	7.50	37.50
				330.00	82.50	412.50
9.	ಕೋಲಾರ	64.	ಬಾಗೇಪಲ್ಲಿ	30.00	7.50	37.50
		65.	ಬಂಗಾರಪೇಟೆ	40.00	10.00	50.00
		66.	ಚಿಂತಾಮಣಿ	30.00	7.50	37.50
		67.	ಗುಡಿಬಂಡೆ	20.00	5.00	25.00
		68.	ಕೋಲಾರ	40.00	10.00	50.00
		69.	ಮಾಲೂರು	30.00	7.50	37.50

		70.	ಮುಳಬಾಗಿಲು	30.00	7.50	37.50
		71.	ಶಿಡ್ಲಘಟ್ಟ	30.00	7.50	37.50
		72.	ಶ್ರೀನಿವಾಸಪುರ	30.00	7.50	37.50
				280.00	70.00 3	50.00
10.	ರಾಯಚೂರು	73.	ದೇವದುರ್ಗ	30.00	7.50	37.50
		74.	ಕುಷ್ಟಗಿ	30.00	7.50	37.50
		75.	ಲಿಂಗಸಗೂರು	40.00	10.00	50.00
		76.	ಯಲಬುರ್ಗಾ	30.00	7.50	37.50
		77.	ಕೊಪ್ಪಳ	40.00	10.00	50.00
		78.	ರಾಯಚೂರು	30.00	7.50	37.50
				200.00	50.00	250.00
11.	ತುಮಕೂರು	79.	ಚಿಕ್ಕನಾಯ್ಕನಹಳ್ಳಿ	30.00	7.50	37.50
		80.	ಕೊರಟಗೆರೆ	30.00	7.50	37.50
		81.	ಮಧುಗಿರಿ	40.00	10.00	50.00
		82.	ಪಾವಗಡ	30.00	7.50	37.50
		83.	ಶಿರಾ	40.00	10.00	50.00
		84.	ತಿಪಟೂರು	30.00	7.50	37.50
		85.	ಗುಬ್ಬಿ	40.00	10.00	50.00
		86.	ಕುಣಿಗಲ್	40.00	10.00	50.00
		87.	ತುಮಕೂರು	40.00	10.00	50.00
				320.00	80.00	400.00
12.	ದಕ್ಷಿಣ ಕನ್ನಡ	88.	ಬಂಟ್ವಾಳ್	40.00	10.00	50.00
		89.	ಬೆಳ್ತಂಗಡಿ	40.00	10.00	50.00
		90.	ಕಾರ್ಕಳ	40.00	10.00	50.00
		91.	ಕುಂದಾಪುರ	40.00	10.00	50.00
		92.	ಮಂಗಳೂರು	40.00	10.00	50.00
		93.	ಪುತ್ತೂರು	40.00	10.00	50.00
		94.	ಸುಳ್ಯ	30.00	7.50	37.50

		95.	ಉಡುಪಿ	40.00	10.00	50.00
				310.00	77.50	387.50
13.	ಕೊಡಗು	96.	ಮಡಿಕೇರಿ	30.00	7.50	37.50
		97.	ಸೋಮವಾರ ಪೇಟೆ	30.00	7.50	37.50
		98.	ವೀರಾಜಪೇಟೆ	30.00	7.50	37.50
				90.00	22.50	112.50
14.	ಮೈಸೂರು	99.	ಚಾಮರಾಜ ನಗರ	40.00	10.00	50.00
		100.	ಗುಂಡ್ಲುಪೇಟೆ	30.00	7.50	37.50
		101.	ಹುಣಸೂರು	30.00	7.50	37.50
		102.	ಹೆಚ್.ಡಿ.ಕೋಟೆ	40.00	10.00	50.00
		103.	ಕೊಳ್ಳೇಗಾಲ	40.00	10.00	50.00
		104.	ನಂಜನಗೂಡು	40.00	10.00	50.00
		105.	ಪಿರಿಯಾಪಟ್ಟಣ	30.00	7.50	37.50
		106.	ಯಳಂದೂರು	20.00	5.00	25.00
		107.	ಮೈಸೂರು	40.00	10.00	50.00
				310.00	77.50	387.50
15.	ಬೆಂಗಳೂರು(ಗ್ರಾ)	108.	ಚನ್ನಪಟ್ಟಣ	30.00	7.50	37.50
		109.	ದೇವನಹಳ್ಳಿ	30.00	7.50	37.50
		110.	ದೊಡ್ಡಬಳ್ಳಾಪುರ	30.00	7.50	37.50
		111.	ಕನಕಪುರ	40.00	10.00	50.00
		112.	ಹೊಸಕೋಟೆ	30.00	7.50	37.50
		113.	ಮಾಗಡಿ	30.00	7.50	37.50
		114.	ನೆಲಮಂಗಲ	30.00	7.50	37.50
		115.	ರಾಮನಗರ	30.00	7.50	37.50
				250.00	62.50	312.50
16.	ಹಾಸನ	116.	ಹಾಸನ	40.00	10.00	50.00

117.	ಬೇಲೂರು	30.00	7.50	37.50
118.	ಚನ್ನರಾಯ ಪಟ್ಟಣ	40.00	10.00	50.00
119.	ಅರಸೀಕೆರೆ	40.00	10.00	50.00
		250.00	62.50	312.50
	ಒಟ್ಟು	4040.00	1010.00	5050.00

ರಸ್ತೆಗಳ ಸುಧಾರಣೆ ಕುರಿತು

2218 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಈ ಸರ್ಕಾರ ಪ್ರತಿ ಶಾಸಕರಿಂದ ಅವರ ಕ್ಷೇತ್ರದಲ್ಲಿ ಜಿಲ್ಲಾ ಪಂಚಾಯಿತಿಯ 50 ಕಿ.ಮೀ. ಉದ್ದದ ರಸ್ತೆಯನ್ನು ಮೇಲ್ದರ್ಜೆಗೇರಿಸಿ ಲೋಕೋಪಯೋಗಿ ಇಲಾಖೆಯ ಉಸ್ತುವಾರಿಯಲ್ಲಿ ತೆಗೆದುಕೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?*

ಆ) *ಹಾಗಿದ್ದಲ್ಲಿ, ಈ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಗೆ ಯಾವಾಗ ತೆಗೆದುಕೊಳ್ಳುವುದು?*

ಇ) *ಇಲಾಖೆಗೆ ತೆಗೆದುಕೊಳ್ಳುವ ರಸ್ತೆಗಳ ಸುಧಾರಣೆಗಾಗಿ ಪ್ರತಿ ವರ್ಷ ಎಷ್ಟು ಹಣ ಮೀಸಲಿಡಲಾಗುವುದು?*

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಇಲ್ಲ

ಆ) ಪ್ರಶ್ನೆ ಉದ್ಭವಿಸುವುದಿಲ್ಲ

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ರಸ್ತೆ ಮತ್ತು ಸೇತುವೆಗಳ ನಿರ್ಮಾಣ ಮತ್ತು ರಿಪೇರಿಗೆ ಹಣ ಬಿಡುಗಡೆಯಲ್ಲಿ ತಾರತಮ್ಯ

2216 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಲೋಕೋಪಯೋಗಿ ಇಲಾಖೆಯ ಅಡಿಯಲ್ಲಿ ಬರುವ ರಸ್ತೆ ಮತ್ತು ಸೇತುವೆಗಳ ನಿರ್ಮಾಣ ಮತ್ತು ರಿಪೇರಿಗಾಗಿ ಹಣ ಬಿಡುಗಡೆ ಮಾಡುವುದರಲ್ಲಿ ಹಳೇ ಮೈಸೂರು ಮತ್ತು ಉತ್ತರ ಕರ್ನಾಟಕದ ಜಿಲ್ಲೆಗಳ ತಾರತಮ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಈ ತಾರತಮ್ಯ ಹೋಗಲಾಡಿಸಲು ಈ ಹಣಕಾಸು ವರ್ಷದ ಮುಂದಿನ 7 ತಿಂಗಳುಗಳಲ್ಲಿ ಕಡಿಮೆ ಹಣ ಪಡೆದ ಜಿಲ್ಲೆಗಳ ಹೆಚ್ಚಿನ ಹಣ ಬಿಡುಗಡೆ ಮಾಡಲಾಗುವುದೇ?*

ಇ) *ಗ್ರಾಮ ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ಗಳಿಗೆ ಜನಸಂಖ್ಯೆ ಹಿಂದುಳಿದಿರುವಿಕೆ, ಬಡತನ ಇವೆಲ್ಲವುಗಳನ್ನು ಆಧರಿಸಿ, ಹೇಗೆ ಹಣ*

ಬಿಡುಗಡೆಯಾಗಿರುವುದು ಹಾಗೆ ವಿಧಾನಸಭಾ ಕ್ಷೇತ್ರವಾರು ಲೋಕೋಪಯೋಗಿ ಇಲಾಖೆಯಲ್ಲಿ ಹಣ ಬಿಡುಗಡೆ ಮಾಡಲು ಇರುವ ತೊಂದರೆಗಳೇನು?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ತಾರತಮ್ಯವಾಗಿರುವುದಿಲ್ಲ

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಲೋಕೋಪಯೋಗಿ ಇಲಾಖೆ ವ್ಯಾಪ್ತಿಯ ರಸ್ತೆಗಳು ರಾಜ್ಯ ಹೆದ್ದಾರಿ ಮತ್ತು ಮುಖ್ಯ ಜಿಲ್ಲಾ ರಸ್ತೆಗಳಾಗಿದ್ದು ಯಾವುದೇ ಒಂದು ಕ್ಷೇತ್ರಕ್ಕೆ ಸೀಮಿತವಾಗುವುದಿಲ್ಲ. ಅಲ್ಲದೆ ಜಿಲ್ಲಾ ಮಟ್ಟದ ಆಡಳಿತಾತ್ಮಕ ಕಟ್ಟಡಗಳ ಹಾಗೂ ವಸತಿ ಗೃಹಗಳ ನಿರ್ಮಾಣವೂ ಕೂಡ ಯಾವುದೇ ಒಂದು ಕ್ಷೇತ್ರಕ್ಕೆ ಸೀಮಿತವಾಗುವುದಿಲ್ಲ. ಆದ್ದರಿಂದ ಗ್ರಾಮ ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಮಾದರಿಯಲ್ಲಿ ಹಣ ಬಿಡುಗಡೆ ಕಾರ್ಯ ಸಾಧ್ಯವಿಲ್ಲ.

ಇಂಡಿ ಮತ ಕ್ಷೇತ್ರದಲ್ಲಿ ವಿದ್ಯುತ್ ಯೋಜನೆ

531 - ಶ್ರೀ ರವಿಕಾಂತ ಎಸ್. ಪಾಟೀಲ್ (ಇಂಡಿ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಂಡಿ ಮತ ಕ್ಷೇತ್ರದಲ್ಲಿ ಹೊಸ ಸರ್ಕಾರ ರಚನೆಯಾದ ಮೇಲೆ ಕೊಟ್ಟಿರುವ ಭಾಗ್ಯಜ್ಯೋತಿಗಳೆಷ್ಟು?

ಆ) ಇಂಡಿ ಮತ ಕ್ಷೇತ್ರದ 2 ತಾಲ್ಲೂಕುಗಳನ್ನೊಳಗೊಂಡ (ಇಂಡಿ ಮತ್ತು ಸಿಂದಗಿ) ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ 2 ತಾಲ್ಲೂಕುಗಳನ್ನೊಳಗೊಂಡ ಈ ಮತ ಕ್ಷೇತ್ರಕ್ಕೆ ಕನಿಷ್ಟ 2000 ಭಾಗ್ಯಜ್ಯೋತಿಗಳನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಪ್ರಸಕ್ತ ವರ್ಷವಾದ 1995-96ರಲ್ಲಿ ಇಂಡಿ ಮತ ಕ್ಷೇತ್ರದಲ್ಲಿ ಭಾಗ್ಯಜ್ಯೋತಿ ಯೋಜನೆಯಡಿ 1000 ಫಲಾನುಭವಿಗಳ ಮನೆಗಳಿಗೆ ವಿದ್ಯುತ್ ಸಂಪರ್ಕ ಒದಗಿಸಲು ಗುರಿ ನಿಗದಿಪಡಿಸಿದೆ.

ಆ) ಹೌದು

ಇ) ಪ್ರತೀ ಗ್ರಾಮಾಂತರ ವಿಧಾನ ಸಭಾ ಕ್ಷೇತ್ರಕ್ಕೆ 1000 ಭಾಗ್ಯಜ್ಯೋತಿ ಸಂಪರ್ಕಗಳನ್ನು ನೀಡಲಾಗುತ್ತದೆ ಇದರ ಪ್ರಕಾರ ಇಂಡಿ ಮತ ಕ್ಷೇತ್ರ ಮತ್ತು ಸಿಂದಗಿ ಮತ ಕ್ಷೇತ್ರಗಳಿಗೆ ತಲಾ 1000 ಭಾಗ್ಯಜ್ಯೋತಿ ಸಂಪರ್ಕಗಳನ್ನು ನೀಡಲಾಗುವುದು ಇಂಡಿ ಮತ ಕ್ಷೇತ್ರಕ್ಕೆ 2000 ಭಾಗ್ಯಜ್ಯೋತಿ ಸಂಪರ್ಕಗಳನ್ನು ನೀಡಲು ಸಾಧ್ಯವಿಲ್ಲ.

ಬಿನ್ನಿಪೇಟೆ ವಿಧಾನ ಸಭಾಕ್ಷೇತ್ರದಲ್ಲಿ ವಿದ್ಯುತ್ ಅಭಾವ

2519 - ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿನ್ನಿಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿ ವಿದ್ಯುತ್ ನಿಲುಗಡೆ ಪ್ರತಿದಿನ ಎಷ್ಟು ಗಂಟೆಗಳಕಾಲ ಆಗುತ್ತಿರುತ್ತದೆ?

ಆ) ಈ ಕ್ಷೇತ್ರದಲ್ಲಿ ಹಲವಾರು ಭಾಗಗಳಲ್ಲಿ ಪ್ರತಿ ದಿವಸ ಹಲವಾರು ಗಂಟೆಗಳ ಕಾಲ ವಿದ್ಯುತ್ ಸಂಪರ್ಕವಿಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು?

ಈ) ಈ ಕ್ಷೇತ್ರದಲ್ಲಿ ಹೊಸದಾಗಿ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸಲು ಸರ್ಕಾರ ಉದ್ದೇಶಿಸಿದೆಯೇ?

ಉ) ಹಾಗಿದ್ದಲ್ಲಿ ಎಷ್ಟು ಟ್ರಾನ್ಸ್ ಫಾರ್ಮರ್‌ಗಳನ್ನು ಹೊಸದಾಗಿ ಈ ಕ್ಷೇತ್ರದಲ್ಲಿ 1995-96ರಲ್ಲಿ ಅಳವಡಿಸಲಾಗುವುದು?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಬೆಳಗಿನ ಮತ್ತು ಸಂಜೆಯ ಪೀಕ್‌ಲೋಡ್ ಸಮಯಗಳಲ್ಲಿ 45 ನಿಮಿಷಗಳ ಅವಧಿಯ ನಿಯಮಿತ ಲೋಡ್ ಶೆಡ್ಡಿಂಗನ್ನು ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿ ನಿರ್ವಹಿಸಲಾಗುತ್ತಿದೆ.

ಆ) ಮತ್ತು ಇ) ಈ ಕ್ಷೇತ್ರದಲ್ಲಿ ಪ್ರತಿ ದಿವಸ ದೀರ್ಘಕಾಲದ ವಿದ್ಯುತ್ ಅಡಚಣೆ ಉಂಟಾಗುತ್ತಿಲ್ಲ. ಕೆಲವೊಮ್ಮೆ ವಿದ್ಯುತ್ ಉಪಕರಣಗಳಲ್ಲಿ ಉಂಟಾಗುವ ದೋಷ, ಕೇಬಲ್‌ಮತ್ತು ವಿದ್ಯುತ್ ಲೈನುಗಳಲ್ಲಿ ಉಂಟಾಗುವ ದೋಷ ಇತ್ಯಾದಿ ಕಾರಣಗಳಿಂದ ವಿದ್ಯುತ್ ಸರಬರಾಜಿನಲ್ಲಿ ಅನಿವಾರ್ಯವಾಗಿ ಅಡಚಣೆ ಉಂಟಾಗುತ್ತದೆ. ಆದಷ್ಟು ಜಾಗ್ರತೆ ವಿದ್ಯುತ್ ಸರಬರಾಜನ್ನು ಪುನರ್ ವ್ಯವಸ್ಥೆಗೊಳಿಸಲು ಎಲ್ಲಾ ಅಗತ್ಯಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ.

ಈ) ಹೌದು.

ಉ) ಈ ಕ್ಷೇತ್ರದಲ್ಲಿ 1995-96ರಲ್ಲಿ 17ಹೊಸ ವಿತರಣಾ ಟ್ರಾನ್ಸ್ ಫಾರ್ಮರ್‌ಗಳನ್ನು ಅಳವಡಿಸಲು ಉದ್ದೇಶಿಸಿದೆ.

ಮಲ್ಪೆ ಅಧಿಸೂಚಿತ ಪ್ರದೇಶದ ಮೀನುಗಾರಿಕಾ ಇಲಾಖೆಯ ಜಾಗ ಗುತ್ತಿಗೆ ನೀಡುವ ಬಗ್ಗೆ

1880 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಲ್ಪೆ ಮೀನುಗಾರಿಕೆ ಬಂದರಿನ ಸರಹದ್ದಿನಲ್ಲಿರುವ ಮಲ್ಪೆ ಅಧಿಸೂಚಿತ ಪ್ರದೇಶದೊಳಗಿನ, ಮೀನುಗಾರಿಕಾ ಇಲಾಖೆಯ ಅಧೀನದಲ್ಲಿ ಇರತಕ್ಕ ಭೂಮಿ ಎಷ್ಟು?

ಆ) ಕಳೆದ ಐದು ವರ್ಷಗಳಿಂದ ಈ ಭೂಮಿಯನ್ನು ದೀರ್ಘ ಕಾಲಾವಧಿ ಗುತ್ತಿಗೆಗೆ ಎಷ್ಟು ಜನರಿಗೆ ಕೊಡಲಾಗಿದೆ?

ಇ) ಹಾಗಿದ್ದಲ್ಲಿ, ಯಾವ ಉದ್ದೇಶಕ್ಕಾಗಿ ಕೊಡಲಾಗಿದೆ, ಎಷ್ಟು ವರ್ಷದಿಂದ ಕೊಡಲಾಗಿದೆ, ಎಷ್ಟು ಎಕರೆ ಭೂಮಿ ಕೊಡಲಾಗಿದೆ?

ಈ) ಕಳೆದ 5 ವರ್ಷಗಳಲ್ಲಿ ದೀರ್ಘ ಕಾಲಾವಧಿ ಗುತ್ತಿಗೆಗಳನ್ನು ಎಷ್ಟು ಸಲ ಮರು ಪರಿಶೀಲನೆ ಮಾಡಲಾಗಿದೆ. ಈ ಬಗ್ಗೆ ನಿಗಧಿಪಡಿಸಲಾದ ಗುತ್ತಿಗೆ ದರ ಎಷ್ಟು?

ಉ) ನಿಗಧಿತ ದೀರ್ಘ ಕಾಲಾವಧಿ ಗುತ್ತಿಗೆ ಮುಗಿದ ಮೇಲೆ ಪುನರ್ ವಿಮರ್ಶಿಸಿದ ದರದಲ್ಲಿ ಮತ್ತು ಎಷ್ಟು ಜನ ಸರ್ಕಾರದ ಮಂಜೂರಾತಿ ಪಡೆದಿದ್ದಾರೆ, ಪಡೆದಿದ್ದಲ್ಲಿ ಯಾವ ವರ್ಷದಲ್ಲಿ ಪಡೆಯಲಾಗಿದೆ?

ಊ) ಗುತ್ತಿಗೆದಾರರಿಂದ ಮೀನುಗಾರಿಕೆ ಇಲಾಖೆಗೆ ಬರಬೇಕಾದ ಹಣ ಎಷ್ಟು (ವಿವರ ನೀಡುವುದು)?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) 80 ಎಕರೆ 52 ಸೆಂಟ್ಸ್.

ಆ) ಯಾರಿಗೂ ನೀಡಿಲ್ಲ

ಇ) ಉದ್ಭವಿಸುವುದಿಲ್ಲ

ಈ) ಎರಡು ಪ್ರಕರಣಗಳು. ಒಂದು ಪ್ರಕರಣದಲ್ಲಿ ಶೇಕಡ 10ರಂತೆ ಹೆಚ್ಚಿಸಿದೆ. ಹಾಗೂ ಇನ್ನೊಂದು ಪ್ರಕರಣದಲ್ಲಿ ಜಾರಿಯಲ್ಲಿದ್ದ 100 ಸೆಂಟ್ಸ್‌ಗೆ ವಾರ್ಷಿಕ 150.00 ರೂ. ದರವನ್ನು 60 ಸೆಂಟ್ಸ್‌ಗೆ ರೂ. 3846ಕ್ಕೆ ಹೆಚ್ಚಿಸಿದೆ.

ಉ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಊ) ವಿವಿಧ ಗೇಣಿದಾರರಿಂದ 1995Ë96ನೇ ಸಾಲಿಗೆ 16,681 ರೂ.ಗಳ ಬಾಕಿ ಇದೆ.

ಅನುಬಂಧ

ಕ್ರ. ಸಂ.	ಗುತ್ತಿಗೆದಾರರ : ಸಂಸ್ಥೆಯ ಹೆಸರು	ಗುತ್ತಿಗೆ ನೀಡಿದ್ದ ಅವಧಿ	ಪುನರ್ ವಿಮರ್ಶಿಸಿದ ದರ	ಪುನರ್ ವಿಮರ್ಶಿಸಿದ ಪರಿಷ್ಕೃತ ಗುತ್ತಿಗೆ ಅವಧಿ	ಷರಾ
1.	123 ಮೀನುಗಾರರಿಗೆ (5 ಎಕರೆ)	1) 1987-88 ರಿಂದ 1989-90 ವರೆಗೆ	10 ಚ.ಮೀ.ಗೆ ರೂ. 2-50 ರೂ. 5-00	90-91 ರಿಂದ 91-92	123 ಜನರಲ್ಲಿ 102 ಜನರು ಮಾತ್ರ ಗುತ್ತಿಗೆ ಪಡೆದಿರುತ್ತಾರೆ.
		2) 90-91 ರಿಂದ	10 ಚ.ಮೀ.ಗೆ ವರ್ಷಕ್ಕೆ ರೂ.5-00ರ ಶೇಕಡ 10ರಂತೆ ವರ್ಷಂ ಪ್ರತಿ ಹೆಚ್ಚಳ	94-95 ರಿಂದ 5 ವರ್ಷಗಳ ವರೆಗೆ	
2.	ಮೆ:ಸಾಯಿಕಿಸಾನ್ ಫಿಷರೀಸ್ ಎಕ್ಸ್‌ಪ್ಯಾನ್ಷನ್ (ಮಲ್ಪೆ (0.60 ಎಕರೆ)	4-5-74 ರಿಂದ 15 ವರ್ಷಗಳು ವಾರ್ಷಿಕ ರೂ. 150.00	ರೂ. 3846.00 ವಾರ್ಷಿಕ ದರ	8-9-94 ರಿಂದ 15 ವರ್ಷಗಳು ಮತ್ತು ಪ್ರತಿ 3 ವರ್ಷಕ್ಕೊಮ್ಮೆ ಶೇಕಡ 20 ಹೆಚ್ಚಳ	
3.	ಮೆ :ಕೊರೋನೆಟ್ ಕ್ಯಾನಿಂಗ್ ಕಂ. ಮಲ್ಪೆ (2 ಎಕರೆ)	14-7-8 ರಿಂದ 13-7-2006	-	-	ದರವನ್ನು ಪರಿಷ್ಕರಿಸುವುದು ಪರಿಶೀಲನೆಯಲ್ಲಿದೆ.
4.	ಶ್ರೀಮತಿ ಮನೋರಮಾ ಮಧ್ವರಾಜ್ ಮಲ್ಪೆ	15-2-80 ರಿಂದ 10 ವರ್ಷಗಳಿಗೆ	-	-	ಅದೇ

(0.52 ಎಕರೆ)	1 ಎಕರೆಗೆ ವಾರ್ಷಿಕ ರೂ.1000.00ರಂತೆ

ದ.ಕನ್ನಡ ಜಿಲ್ಲೆಯಲ್ಲಿ ಪಶುವೈದ್ಯಕೀಯ ಸಹಾಯಕರ ನೇಮಕ

1883 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಗೆ ಮಂಜೂರಾಗಿರುವ ಪಶುವೈದ್ಯಕೀಯ ಸಹಾಯಕರ ಹುದ್ದೆಗಳ ಸಂಖ್ಯೆ ಎಷ್ಟು?

ಆ) ಈಗ ಭರ್ತಿ ಮಾಡಲಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು?

ಇ) ಈಗ ಖಾಲಿ ಇರುವ ಹುದ್ದೆಗಳ ಸಂಖ್ಯೆ : ಎಷ್ಟು

ಈ) ದಕ್ಷಿಣ ಕನ್ನಡ ಜಿಲ್ಲೆಯ ಪಶುವೈದ್ಯಕೀಯ ತರಬೇತಿ ಕೇಂದ್ರವನ್ನು ಮಳವಳ್ಳಿಗೆ ಸ್ಥಳಾಂತರಗೊಳ್ಳಲು ಕಾರಣಗಳು ಏನು?

ಉ) ಪಶುವೈದ್ಯಕೀಯ ತರಬೇತಿ ಕೇಂದ್ರವನ್ನು ದಕ್ಷಿಣ ಕನ್ನಡ ಜಿಲ್ಲೆಯ ಕ್ಕೊಲಾಗೆ ಸ್ಥಳಾಂತರಿಸುವ ಆಲೋಚನೆ ಸರ್ಕಾರದ ಮುಂದಿದೆಯೇ?

ಊ) ಹಾಗಿದ್ದಲ್ಲಿ ಯಾವಾಗ ಸ್ಥಳಾಂತರಿಸಲಾಗುವುದು?

ಶ್ರೀ ಬಿ.ಎನ್. ಬಚ್ಚೇಗೌಡ (ಪಶು ಸಂಗೋಪನಾ ರಾಜ್ಯ ಸಚಿವರು) :

ಅ) 157.

ಆ) 32.

ಇ) 125

ಈ) 1) ಕೇಂದ್ರವನ್ನು ಮಳವಳ್ಳಿಗೆ ಸ್ಥಳಾಂತರಿಸುವುದರಿಂದ ಮೈಸೂರು ವಿಭಾಗದ ಜಿಲ್ಲೆಗಳಲ್ಲಿನ ರೈತರಿಗೆ ಹಾಗೂ ಮಹಿಳೆಯರಿಗೆ ಅನುಕೂಲವಾಗುವ ದೃಷ್ಟಿಯಿಂದ

2) ಮಳ್ಳವಳ್ಳಿಯಲ್ಲಿ ಈ ಕೇಂದ್ರಕ್ಕೆ ಸೂಕ್ತ ಕಟ್ಟಡದ ಲಭ್ಯತೆ ಇದ್ದುದರಿಂದ.

ಉ) ಒಂದು ಪಶುವೈದ್ಯಕೀಯ ತರಬೇತಿ ಕೇಂದ್ರವು ಕ್ಕೊಲಾದಲ್ಲಿ ಕಾರ್ಯ ನಿರ್ವಹಿಸುತ್ತಿರುವುದರಿಂದ ಸ್ಥಳಾಂತರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಊ) ಉದ್ಭವಿಸುವುದಿಲ್ಲ.

ಪಶುವೈದ್ಯ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರುಗಳ ಹುದ್ದೆ

1882 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಪಶುವೈದ್ಯ ಇಲಾಖೆಯಲ್ಲಿ ಖಾಲಿ ಇರುವ ಹಿರಿಯ ಸಹಾಯಕ ನಿರ್ದೇಶಕರುಗಳ ಹುದ್ದೆ ಸಂಖ್ಯೆ ಎಷ್ಟು?

ಆ) ಹಿರಿಯ ಸಹಾಯಕ ನಿರ್ದೇಶಕರುಗಳ ಹುದ್ದೆಯನ್ನು ಸೃಷ್ಟಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಇ) ಹಾಗಿದ್ದಲ್ಲಿ, ಎಷ್ಟು ಹುದ್ದೆಯನ್ನು ಸೃಷ್ಟಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆ?

ಈ) ಯಾವಾಗ ಈ ಹುದ್ದೆಯನ್ನು ಮಂಜೂರು ಮಾಡಲಾಗುವುದು?

ಉ) ಹಿರಿಯ ಸಹಾಯಕ ನಿರ್ದೇಶಕರುಗಳ ಹುದ್ದೆ : ಮಂಜೂರಾದಲ್ಲಿ ಪಶುವೈದ್ಯಾಧಿಕಾರಿಗಳಿಗೆ ಮತ್ತು ಸಹಾಯಕ ನಿರ್ದೇಶಕರುಗಳಿಗೆ ಬಡ್ತಿ ನೀಡುವ ಸಾಧ್ಯತೆ ಇದೆಯೇ?

ಶ್ರೀ ಬಿ.ಎನ್. ಬಚ್ಚೇಗೌಡ (ಪಶು ಸಂಗೋಪನಾ ರಾಜ್ಯ ಸಚಿವರು) :

ಅ) ಇಲ್ಲ

ಆ) ಇದೆ

ಇ) 200

ಈ) ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ

ಉ) ಇದೆ.

ಲೋಕೋಪಯೋಗಿ ಇಲಾಖೆಯ ವಸತಿ ಗೃಹಗಳಿಗೆ ಸುಣ್ಣ ಬಣ್ಣ ಬಳಸದೇ ಇರುವುದು.

2423 - ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಲಾಲ್ಬಾಗ್ ಸಿದ್ದಾಪುರದಲ್ಲಿರುವ ಲೋಕೋಪಯೋಗಿ ಇಲಾಖೆಯ ವಸತಿಗೃಹಗಳಲ್ಲಿ ಸಂಪೂರ್ಣವಾಗಿ ಸುಣ್ಣ ಬಣ್ಣ ಬಳಸದೇ ಸುಮಾರು ವರ್ಷಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸದರಿ ಕಾರ್ಯಕ್ಕಾಗಿ ತಯಾರಿಸಿದ ಅಂದಾಜು ವೆಚ್ಚವೆಷ್ಟು ಹಾಗೂ ಯಾವಾಗ ಸದರಿ ಕಾರ್ಯವನ್ನು ಕೈಗೊಳ್ಳಲಾಗುವುದು?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ಸದರಿ ವಸತಿಗೃಹಗಳ ಸುಣ್ಣ ಬಣ್ಣ ಹಾಗೂ ದುರಸ್ತಿಗಾಗಿ 2.40 ಲಕ್ಷ ರೂ.ಗಳು ಬೇಕಾಗುತ್ತದೆ. ಈ ಸ್ಥಳದಲ್ಲಿರುವ ಎಲ್ಲಾ ವಸತಿಗೃಹಗಳ ವಾರ್ಷಿಕ ನಿರ್ವಹಣೆಗಾಗಿ 40,000 ಅನುದಾನ ನಿಗದಿಪಡಿಸಲಾಗಿದೆ. ಆದ್ದರಿಂದ ಅನುದಾನದ ಲಭ್ಯತೆಯನ್ನು ಆಧರಿಸಿ ಆದ್ಯತೆಯ ಮೇಲೆ ಸುಣ್ಣ ಬಣ್ಣ ಕಾಮಗಾರಿಗಳನ್ನು ಕೈಗೊಳ್ಳಲು ಪರಿಶೀಲಿಸಲಾಗುವುದು.

ಲಾಲ್‌ಬಾಗ್ ಸಿದ್ದಾಪುರದಲ್ಲಿರುವ ಲೋಕೋಪಯೋಗಿ ಇಲಾಖೆಯ ವಸತಿ ಗೃಹಗಳು

2422 - ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಲೋಕೋಪಯೋಗಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ಲಾಲ್‌ಬಾಗ್ -ಸಿದ್ದಾಪುರದಲ್ಲಿರುವ ಲೋಕೋಪಯೋಗಿ ಇಲಾಖೆಯ ವಸತಿ ಗೃಹಗಳಲ್ಲಿ ಬ್ಲಾಕ್ ನಂ.5 ಹಾಗೂ 2-1 ರಲ್ಲಿ ಕಾಂಪೌಂಡ್ಗಳ ಬಾಗಿಲುಗಳು ಮುರಿದು ಹೋಗಿರುವುದು ಹಾಗೂ ಅಲ್ಲಿನ ಅಂಗಳವು ಸಮತಳವಾಗಿಲ್ಲದೆ ಇರುವುದರಿಂದ ನಿವಾಸಿಗಳು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ ಕೂಡಲೇ ಸದರಿ ಗೇಟ್ಗಳನ್ನು ಹಾಗೂ ಆವರಣವನ್ನು ಸಮತಳ ಮಾಡಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಲಾಗುವುದು.

ವಸತಿ ಗೃಹಗಳಿಗೆ ವಾಹನ ನಿಲ್ಲಿಸಲು ನಿರ್ಮಿಸಿರುವ ಶೆಡ್ಡುಗಳು ದುರಸ್ತಿ.

2424 - ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಲಾಲ್‌ಬಾಗ್-ಸಿದ್ದಾಪುರದಲ್ಲಿರುವ ಲೋಕೋಪಯೋಗಿ ಇಲಾಖೆಯ ವಸತಿಗೃಹಗಳಲ್ಲಿನ ವಾಹನ ನಿಲ್ಲಿಸಲು ನಿರ್ಮಿಸಿರುವ ಶೆಡ್ಡುಗಳು ದುರಸ್ಥಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೇ?

ಆ) ಹಾಗಿದ್ದಲ್ಲಿ ಸದರಿ ಶೆಡ್ಡಗಳನ್ನು ದುರಸ್ಥಿ ಮಾಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ.

ಇ) ವಸತಿಗೃಹಗಳಲ್ಲಿ ಹಾಕಿರುವ ಮೆಶ್ಗಳು ಕಿತ್ತು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಅವುಗಳನ್ನು ದುರಸ್ಥಿ ಮಾಡಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಬಂದಿದೆ.

ಈ) ಕ್ರಮ ಕೈಗೊಳ್ಳಲಾಗುವುದು.

ವಿದ್ಯುತ್ ಮಂಡಳಿಗೆ ಬರಬೇಕಾಗಿರುವ ಹಣ.

2381 - ಶ್ರೀ ಎಸ್. ಕೃಷ್ಣಪ್ಪ (ಬನ್ನೂರು) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಪುರಸಭೆಗಳಿಂದ ಕರ್ನಾಟಕ ವಿದ್ಯುತ್ ಮಂಡಳಿಗೆ ಬರಬೇಕಾಗಿರುವ ಹಣವೆಷ್ಟು? ಎಲ್ಲಾ ಪುರಸಭೆಗಳ ವಿವರಗಳನ್ನೊದಗಿಸುವುದು.

ಆ) ಈ ಹಣವನ್ನು ಕೊಡುವಲ್ಲಿ ಪುರಸಭೆಗಳು ಹಣ ಹೊಂದಿವೆಯೇ? ಈ ಹಣವನ್ನು ಮನ್ನಾ ಮಾಡುವ ಕಾರ್ಯಕ್ರಮ ವಿದೆಯೇ?

ಇ) ಈ ಬಾಕಿ ಹಣದಿಂದ ಹೊಸದಾಗಿ ರಸ್ತೆ ದೀಪ ಹಾಕಲು ಇಲಾಖೆಯವರು ಒಪ್ಪದೇ ಇರುವುದು ನಿಜವೇ?

ಶ್ರೀ. ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) 1995ರ ಮಾರ್ಚ್ ಅಂತ್ಯಕ್ಕೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ರಾಜ್ಯದ ವಿವಿಧ ಪುರಸಭೆಗಳಿಂದ ಬರಬೇಕಾಗಿದ್ದ ಒಟ್ಟು ಬಾಕಿ ಹಣದ ಮೊತ್ತ 474.92 ಲಕ್ಷ ರೂ.ಗಳು ಬಾಕಿ ಹೊಂದಿದ್ದ ಪುರಸಭೆಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಆ) ಪುರಸಭೆಗಳ ಆರ್ಥಿಕ ಸ್ಥಿತಿಗತಿ ಉತ್ತಮ ಇಲ್ಲದಿದ್ದರೂ ಸಹ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಎದುರಿಸುತ್ತಿರುವ ಆರ್ಥಿಕ ಮುಗ್ಗಟ್ಟಿನ ಪರಿಸ್ಥಿತಿಯಲ್ಲಿ ಬಾಕಿ ಹಣವನ್ನು ಮನ್ನಾ ಮಾಡುವುದು ಸಾಧ್ಯವಿಲ್ಲ.

ಇ) ಕೇವಲ ಗ್ರಾಮ ಪಂಚಾಯ್ತಿ ಮತ್ತು ಟೌನ್ ಪಂಚಾಯ್ತಿಗಳ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ ಮಾತ್ರ ಹೆಚ್ಚುವರಿ ಬೀದಿ ದೀಪಗಳನ್ನು ಹಾಕುವ ಕಾರ್ಯವನ್ನು ಸ್ಥಗಿತಗೊಳಿಸಲಾಗಿದೆ. ಪುರಸಭೆ, ನಗರ ಸಭೆ ಮತ್ತು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ ಹೆಚ್ಚುವರಿ ಬೀದಿ ದೀಪಗಳನ್ನು ಬಾಕಿ ಇದ್ದರೂ ಹಾಕಲಾಗುತ್ತಿದೆ.

ವಿಧಾನ ಸಭಾ ಸದಸ್ಯರಾದ ಶ್ರೀ ಎಸ್. ಕೃಷ್ಣಪ್ಪನವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2381 ಕ್ಕೆ ಅನುಬಂಧ.

31-3-95ರ ಅಂತ್ಯದಲ್ಲಿದ್ದಂತೆ ರಾಜ್ಯದ ವಿವಿಧ ಪುರಸಭೆಗಳಿಂದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಬರಬೇಕಾಗಿದ್ದ ಬಾಕಿ ಹಣದ ವಿವರಗಳು

ಕ್ರಮ. ಸಂಖ್ಯೆ.	ಜಿಲ್ಲೆ/ಪುರಸಭೆ	ಬಾಕಿ ಹಣದ ಮೊತ್ತ ರೂ.ಗಳಲ್ಲಿ
ಬೆಂಗಳೂರು ಜಿಲ್ಲೆ		
1)	ಟಿ.ಎಂ.ಸಿ. ಚೆನ್ನಪಟ್ಟಣ	90,790
2)	-"- ಕನಕಪುರ	4,05,094
3)	-"- ಆನೇಕಲ್	6,45,564
4)	-"- ರಾಮನಗರಂ	5,42,469
5)	-"- ಯಲಹಂಕ	8,16,777
6)	-"- ಹೊಸಕೋಟೆ	3,24,454
7)	-"- ದೊಡ್ಡ ಬಳ್ಳಾಪುರ	7,16,863
8)	-"- ಮಾಗಡಿ	760
9)	-"- ದೇವನಹಳ್ಳಿ	60,571
ತುಮಕೂರು ಜಿಲ್ಲೆ		
1)	ಟಿ.ಎಂ.ಸಿ. ತಿಪಟೂರು	24,96,136
2)	-"- ಚಿಕ್ಕನಾಯ್ಕನಹಳ್ಳಿ	3,88,623
3)	-"- ಕುಣಿಗಲ್	74,593
4)	-"- ಮಧುಗಿರಿ	5,30,168
5)	-"- ಸಿರಾ	8,01,520
ಕೋಲಾರ ಜಿಲ್ಲೆ		
1)	-"- ಬಂಗಾರಪೇಟೆ	3,06,166
2)	-"- ಮಲೂರು	6,71,289
3)	-"- ಮುಳಬಾಗಿಲು	23,66,860
4)	-"- ಚಿಕ್ಕಬಳ್ಳಾಪುರ	30,58,545
5)	-"- ಗೌರಿಬಿದನೂರು	4,72,008
6)	-"- ಶಿಡ್ಲಘಟ್ಟ	2,72,142
7)	-"- ಚಿಂತಾಮಣಿ	6,31,813

ದಕ್ಷಿಣ ಕನ್ನಡ ಜಿಲ್ಲೆ

1)	-"- ಮುಲ್ಕಿ	1,25,636
2)	-"- ಕಾರ್ಕಳ	4,71,579
3)	-"- ಮೂಡಬಿದರೆ	2,05,727
4)	-"- ಬ್ರಹ್ಮಾವರ	50
5)	-"- ಕುಂದಾಪುರ	3,38,630
6)	-"- ಬೈಂದೂರು	145

ಶಿವಮೊಗ್ಗ ಜಿಲ್ಲೆ

1)	ಟಿ.ಎಂ.ಸಿ. ಶಿಕಾರಿಪುರ	1,68,916
2)	-"- ಸಾಗರ	98,168

ಚಿಕ್ಕಮಗಳೂರು ಜಿಲ್ಲೆ

1)	-"- ಕಡೂರು	78,085
2)	-"- ತರಿಕೇರೆ	8,70,552

ಮೈಸೂರು ಜಿಲ್ಲೆ

1)	-"- ನಂಜನಗೂಡು	7,66,059
2)	-"- ಬನ್ನೂರು	2,41,415
3)	-"- ಕೊಳ್ಳೇಗಾಲ	5,56,875
4)	-"- ಚಾಮರಾಜನಗರ	11,22,104
5)	-"- ಗುಂಡ್ಲುಪೇಟೆ	1,95,163
6)	-"- ಹುಣಸೂರು	19,32,230

ಮಂಡ್ಯ ಜಿಲ್ಲೆ

1)	-"- ಮದ್ದೂರು	1,06,497
2)	-"- ಮಳವಳ್ಳಿ	9,93,120
3)	-"- ಶ್ರೀರಂಗಪಟ್ಟಣ	5,44,511
4)	-"- ಪಾಂಡವಪುರ	5,94,288

ಕೊಡಗು ಜಿಲ್ಲೆ

1)	-"- ಮಡಿಕೇರಿ	3,81,735

ಹಾಸನ ಜಿಲ್ಲೆ

1)	-"- ಸಕಲೇಶಪುರ	4,815
2)	-"- ಚನ್ನರಾಯಪಟ್ಟಣ	9,56,015

ಧಾರವಾಡ ಜಿಲ್ಲೆ

1)	-''- ಶಿಗ್ಗಾಂವ್	26,7,47
2)	-''- ಸವಣೂರು	6,22,429
3)	-''- ಕುಂದ್‌ಗೋಳ	1,33,953
4)	-''- ನರಗುಂದ	2,30,509
5)	-''- ನವಲಗುಂದ	38,837
6)	-''- ಅಣ್ಣಿಗೇರಿ	9,33,058
7)	-''- ಮುಂಡರಗಿ	53,484
8)	-''- ಗದಗ ಬೆಟಗೇರಿ	30,019
9)	-''- ಲಕ್ಷ್ಮೇಶ್ವರ	96,593
10)	ಟಿ.ಎಂ.ಸಿ ರೋಣ	16,48,025
11)	-''- ಗಜೇಂದ್ರ ಗಢ	2,43,640
12)	-''- ನರೇಗಲ್	6,35,849
13)	-''- ಮುಳಗಾಂವ್	5,78,609
14)	-''- ಹಾವೇರಿ	98,082
15)	-''- ಹಾನಗಲ್	1,34,572
16)	-''- ರಾಣೆಬೆನ್ನೂರು	3,55,571

ಉತ್ತರ ಕನ್ನಡ ಜಿಲ್ಲೆ

1)	-''- ಸಿರಸಿ	4,14,580
2)	-''- ದಾಂಡೇಲಿ	4,07,638
3)	-''- ಹಳಿಯಾಳ	1,06,136
4)	-''- ಭಟ್ಕಳ	23,310
5)	-''- ಹೊನ್ನಾವರ	

ಚಿತ್ರದುರ್ಗ ಜಿಲ್ಲೆ

1)	-''- ಹಿರಿಯೂರು	1,54,052
2)	-''- ಹರಿಹರ	72,36,028

ಬೆಳಗಾಂ ಜಿಲ್ಲೆ

1)	-''- ಖಾನಪುರ	1,45,407
2)	-''- ಬೈಲಗೊಂಗಲ	7,884
3)	-''- ರಾಮದುರ್ಗ	98,767
4)	-''- ಚಿಕ್ಕೋಡಿ	85,285

5)	-"- ಸದಲಗಾ	3,96,444
6)	-"- ಕೊನ್ನೂರು	3,667
7)	-"- ರಾಯಬಾಗ	2,93,925
8)	-"- ಕುಡುಚಿ	15,056
ಬಿಜಾಪುರ ಜಿಲ್ಲೆ		
1)	-"- ಬಸವನ ಬಾಗೇವಾಡಿ	1,25,191
2)	-"- ಸಿಂದಗಿ	2,942
3)	-"- ಮುದ್ದೇಬಿಹಾಳ	17,24,438
4)	-"- ಗುಳೇದ ಗುಡ್ಡ	1,36,798
5)	-"- ಹುನಗುಂದ	5,66,284
6)	-"- ಕೆರೂರು	32, 982
7)	-"- ಇಳಕಲ್ಲು	16,547

ರಾಜ್ಯದಲ್ಲಿ ಕೊಳವೆ ಬಾವಿಗಳ ದುರಸ್ಥಿಗಾಗಿ ಪಂಚಾಯಿತಿಗಳಿಗೆ ಹಣ

2462 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಕೊಳವೆಬಾವಿಗಳ ದುರಸ್ತಿಗೆ ಪ್ರತಿ ಗ್ರಾಮಪಂಚಾಯತಿಗಳಿಗೂ ವರ್ಷಕ್ಕೆ ಎಷ್ಟು ಹಣ ಒದಗಿಸಲಾಗುವುದು?

ಆ) ಕರ್ನಾಟಕ ರಾಜ್ಯಾದ್ಯಂತ ಕೆಟ್ಟಿರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು?

ಇ) ಅವುಗಳನ್ನು ದುರಸ್ತಿ ಮಾಡಿಸಲು ಕೈಗೊಂಡ ಕ್ರಮಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಪ್ರತಿ ಕೈಪಂಪಿನ ಕೊಳವೆ ಬಾವಿಯ ದುರಸ್ತಿಗೆ ವರ್ಷಕ್ಕೆ 400-00 ರೂಪಾಯಿಗಳನ್ನು ನಿಗದಿಪಡಿಸಿದ್ದು ಅದರಂತೆ ಹಣ ಒದಗಿಸಲಾಗುತ್ತಿದೆ.

ಆ) 9395

ಇ) ಕೊಳವೆ ಬಾವಿಗಳು ಕೆಟ್ಟು ಹೋದ ಬಗ್ಗೆ ದೂರುಗಳು ಬಂದ ಕೂಡಲೇ ಇಲಾಖೆಯಲ್ಲಿ ದಾಖಲಿಸಿಕೊಂಡು ಸಂಚಾರಿ ಘಟಕದಿಂದ ದುರಸ್ತಿಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರತಿ ತಾಲ್ಲೂಕಿನಲ್ಲಿಯೂ ಕೊಳವೆಬಾವಿಗಳ ದುರಸ್ತಿಗೆ ಸಿಬ್ಬಂದಿ ವರ್ಗದಿಂದ ಕೂಡಿದ ಒಂದು ಸಂಚಾರಿ ಕಾರ್ಯಾಗಾರ ವ್ಯಾನ್ ಇದೆ.

ವಿದ್ಯುತ್ ಮಂಡಳಿಗೆ ಬರಬೇಕಾದ ಬಾಕಿ ಬಗ್ಗೆ ನ್ಯಾಯಾಲಯದಲ್ಲಿರುವ ಪ್ರಕರಣ ಕುರಿತು

2312 - ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ವಿದ್ಯುತ್ ಮಂಡಳಿಗೆ 1992-93, 1993-94 ಹಾಗೂ 1994-95 ಸಾಲಿನಲ್ಲಿ ಮತ್ತು 1995-96ನೇ ಸಾಲಿನಲ್ಲಿ (ಜುಲೈ 95ರ ಅಂತ್ಯದವರೆಗೆ) ವಿವಿಧ ಗ್ರಾಹಕರುಗಳಿಂದ ಬರಬೇಕಾಗಿರುವ ಒಟ್ಟು ಮೊತ್ತ ಎಷ್ಟು?

ಆ) *ವಸೂಲಾದ ಮೊತ್ತ ಮತ್ತು ನಿವ್ವಳ ಬಾಕಿ ಇರುವ ಮೊತ್ತದ ವಿವರಣೆ ಪಟ್ಟಿಯನ್ನು ಹಾಗೂ ವಿದ್ಯುತ್ ಬಾಕಿ ಪೈಕಿ 1 ಲಕ್ಷ ರೂ.ಗಳಿಗಿಂತ ಹೆಚ್ಚು ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಈ ಪೈಕಿ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳೆಷ್ಟು (ಅತ್ಯಂತ ಹಳೆಯ ಪ್ರಕರಣಗಳ ವಿವರ ನೀಡುವುದು)*

ಈ) *ಈ ಸುಸ್ತಿದಾರರಿಂದ ಬಾಕಿ ಹಣದ ವಸೂಲಿ ಮಾಡಲು ಏನು ಕ್ರಮ ಕೈಗೊಳ್ಳಲಾಗಿದೆ.*

ಉ) *ಈ ಬಾಕಿ ವಸೂಲು ಮಾಡಲು ಕಂದಾಯ ಇಲಾಖೆಯಿಂದ (ಕರ್ನಾಟಕ ಗೃಹ ಮಂಡಳಿಯಲ್ಲಿ ವಸೂಲಿ ಅಧಿಕಾರಿಗಳು ಇರುವಂತೆ) ಕರ್ನಾಟಕ ಆಡಳಿತ ಸೇವೆ ಅಧಿಕಾರಿಗಳ ಸೇವೆ ಎರವಲು ಪಡೆದು ಪ್ರತಿ ಕಂದಾಯ ವಿಭಾಗಕ್ಕೆ ಒಬ್ಬರಂತೆ ವಸೂಲಿ ಅಧಿಕಾರಿಯೆಂದು ನೇಮಿಸಿ, ಈ ಬಾಕಿಯನ್ನು ಭೂ ಕಂದಾಯ ಬಾಕಿಯೆಂದು ವಸೂಲಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?*

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ವರ್ಷವಾರು ಬಾಕಿ ಮೊತ್ತದ ವಿವರಗಳು ಕೆಳಕಂಡಂತಿದೆ.

ವರ್ಷ	ಬಾಕಿ ಮೊತ್ತ ಲಕ್ಷ ರೂ.ಗಳಲ್ಲಿ
1992-93	1,75,190.28
1993-4	2,10,697.64
1994-95	2,35,888.61

1995-96ನೇ ಸಾಲಿನಲ್ಲಿ ಜುಲೈ 95ರ ಅಂತ್ಯದವರೆಗಿನ ಮಾಹಿತಿ ಈಗ ಲಭ್ಯವಿರುವುದಿಲ್ಲ.

ಏಪ್ರಿಲ್ 95ರ ಮಾಹೆಗೆ ಮಾಹಿತಿಯು ಲಭ್ಯವಿದ್ದು ಬಾಕಿಯ ಮೊತ್ತ 83,043.90 ಲಕ್ಷ ರೂ.ಗಳಾಗಿದೆ.

ಆ) ವರ್ಷವಾರು ವಿವರಗಳು ಕೆಳಕಂಡಂತಿದೆ.

ವರ್ಷ	ವಸೂಲಾದ ಮೊತ್ತ (ಲಕ್ಷ ರೂ.ಗಳಲ್ಲಿ)	ನಿವ್ವಳ ಬಾಕಿ ಮೊತ್ತ (ಲಕ್ಷ ರೂ.ಗಳಲ್ಲಿ
1992-93	1,14,420.33	60,769.95
1993-94	1,43,970.28	66,727.36
1994-95	1,67,319.31	68,569.30
1995-96 (ಏಪ್ರಿಲ್ 95ರವರೆಗೆ)	12,523.33	70,520.57

ಇ) 31-3-95ರ ಅಂತ್ಯದಲ್ಲಿದ್ದಂತೆ 317 ಇನ್ಸ್‌ಲೇಷನ್‌ಗಳ ಪ್ರಕರಣಗಳು ನ್ಯಾಯಾಲಯಗಳಲ್ಲಿ ಇತ್ಯರ್ಥವಾಗಬೇಕಾಗಿದೆ. ಅತ್ಯಂತ ಹಳೆಯ ಪ್ರಕರಣಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಈ) ಬಾಕಿ ವಸೂಲಾತಿಯ ಬಗ್ಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ತೀವ್ರವಾಗಿ ಪರಿಗಣಿಸಿ, ಬಾಕಿ ವಸೂಲಾತಿಗಾಗಿ ಮಂಡಳಿಯ ಪ್ರತಿಯೊಂದು ವಿಭಾಗಕ್ಕೂ ಮಾಹೆಯಾನ ಗುರಿಯನ್ನು ನಿಗದಿ ಪಡಿಸಲಾಗುತ್ತಿದೆ ಹಾಗೂ ಈ ಗುರಿಯನ್ನು ಪೂರ್ಣ ಪ್ರಮಾಣದಲ್ಲಿ ಸಾಧಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಕೆಲವು ಗ್ರಾಹಕರುಗಳು ಬಾಕಿ ಹಣದ ಬಗ್ಗೆ ಮೇಲ್ಮನವಿ ಸಲ್ಲಿಸಿದ್ದು ಇವುಗಳನ್ನು ತ್ವರಿತಗತಿಯಲ್ಲಿ ವಿಲೇವಾ ಮಾಡಲು ಮಂಡಳಿಯ ಅಪ್‌ಲೆಟ್ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ಶೀಘ್ರ ಇತ್ಯರ್ಥಕ್ಕಾಗಿ ಸಾಧ್ಯವಾದ ಎಲ್ಲ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಬಾಕಿ ಇರುವ ವಿದ್ಯುತ್ ಗ್ರಾಹಕರುಗಳಿಗೆ ವಿದ್ಯುತ್ ಸಂಪರ್ಕವನ್ನು ಬಂದ್ (ಡಿಸ್‌ಕನೆಕ್ಷನ್) ಮಾಡುವ ಕಾರ್ಯಗಳನ್ನು ಎಲ್ಲಾ ಹಂತಗಳಲ್ಲಿ ಪರಿಶೀಲಿಸಲಾಗುತ್ತಿದೆ.

ವಿದ್ಯುತ್ ಬಾಕಿಯನ್ನು ಭೂ ಕಂದಾಯ ಬಾಕಿ (ಲ್ಯಾಂಡ್ ರೆವಿನ್ಯೂ ಬಾಕಿ) ಯೆಂದು ಪರಿಗಣಿಸಿ, ಬಾಕಿ ವಸೂಲಾತಿಗಾಗಿ ಕೆಇಬಿ (ರಿಕವರಿ ಆಫ್ ಡ್ಯೂಸ್) ಆ್ಯಕ್ಟ್ 1976 ಮತ್ತು ಕೆಇಬಿ (ರಿಕವರಿ ಆಫ್ ಡ್ಯೂಸ್) ರೂಲ್ಸ್ 1978ರ ಪ್ರಕಾರ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಉ) ಇದನ್ನು ಪರಿಶೀಲಿಸಲಾಗುವುದು.

ವಿಧಾನ ಸಭಾ ಸದಸ್ಯರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2312 ಕ್ಕೆ ಅನುಬಂಧ.

ನ್ಯಾಯ ದರದಲ್ಲಿ ಬಾಕಿ ಇರುವಅತ್ಯಂತ ಹಳೆಯ ಬಾಕಿ ಹಣದ ಮೊತ್ತ

ಕ್ರಮ ಸಂಖ್ಯೆ	ಆರ್.ಆರ್.ನಂ. ವಿವರಗಳು	ಹೆಸರು	ಪ್ರಕರಣಗಳ
1)	ವಿಎಆರ್-ಡಿ386	ಉದಯವಾಡ ಐಸ್ ಫ್ಯಾಕ್ಟರಿ	1.10
2)	ಎಚ್‌ಟಿ-5	ಕಾರೋನೆಟ್ ಇಂಜಿನಿಯರಿಂಗ್, ಮಲೆಪ್	1.65
3)	ಎಕ್‌ಎಲ್‌ಎಚ್‌ಟಿ-23	ಇಂಟರ್ ಮಾಡಲ್ ಟ್ರಾನ್ಸ್‌ಪೋರ್ಟ್	2.04
4)	ಎಚ್‌ಟಿ-5	ಸೂರಜ್ ಟ್ರೇಡಿಂಗ್	1.13
5)	ಎನ್‌ಪಿ-172	ಅಮೀರ್‌ಜಾನ್ ಜನತಾ ಮಿನರಲ್	1.37
6)	ಎಎನ್‌ಪಿ-36	ಕೆ.ಎನ್. ತಿಪ್ಪೇಸ್ವಾಮಿ	1.13
7)	ಎಇಎಚ್-103	ಎಸ್.ಬಿ. ಅಂಜನೇಯಶೆಟ್ಟಿ, ಮಧುಗಿರಿ	1.47
8)	ಪಿ-1146	ಎಸ್.ಎಂ.ಎಸ್. ಟ್ರಸ್ಟ್	2.38

9)	ಎಚ್‌ಟಿ-11	ಪಟೇಲ್ ಡೈಸ್ ಅಂಡ್ ಕೆಮಿಕಲ್ಸ್	2.36
10)	ಎಸ್.ಎಸ್.ಪಿ.-692	ಕೃಷ್ಣರೆಡ್ಡಿ ಸ್ಟೋನ್ ಗ್ರೆನಡಲ್	1.28
11)	ಎಲ್‌ಎಪಿ-37	ವಿಕಾಸ್ ಅಂಬ್ರೆಲಾ (ಪ್ರೈ) ಲಿಮಿಟೆಡ್	1.76
12)	ಐಎಪಿ-86	ಸನ್‌ಟೆಕ್ಸ್ ಪ್ಲಾಂಟ್ ಸೆಂಟರ್	1.36
13)	ಎಲ್‌ಜಿ-39468	ಸಿಲ್‌ವರ್ ಸ್ಟಾರ್ ಹೋಟಲ್	1.45
14)	ಡಬ್ಲ್ಯೂಯು 3ಪಿ 1941	ಎಂ. ರಂಗನಾಥ ಪ್ಲಾಸ್ಟಿಕ್ ವಾ ಮೌಲ್ಡ್	1.27
15)	ಡಬ್ಲ್ಯುಎಸ್‌ಪಿ 1991	ಎಂ.ಎಸ್. ನ್ಯಾಷನಲ್ ಪ್ರಾಜೆಕ್ಟ್	1.05
16)	ಡಬ್ಲ್ಯು 3ಪಿ-1040	ಬಾಬುಲಾಲ್ ಕೋಠಾರ್	6.61
17)	ಟಿಪಿ-6633	ಶ್ರೀದೇವಿ	3.16
18)	ಇ4 ಎಚ್‌ಟಿ-8	ತ್ರಿಕ್‌ಮಣಿ ಶೆಡ್	1.73
19)	ಎಸ್‌ಕೆಪಿ -69	ಮರುಲಿ ಪ್ಲಾಸ್ಟಿಕ್ ಯದ್‌ಯೋಗ್	1.59
20)	ಡಬ್ಲ್ಯೂಪಿ-236	ರಾಧಾಕೃಷ್ಣ ರೆಡ್ಡಿ	1.05
21)	ಎನ್‌ಎಸ್‌ಪಿ-1659	ಅರವಿಂದ್ ಅಲ್ಲಾಯಸ್	7.33
22)	ಎನ್‌ಎಸ್‌ಪಿ-2209	ಬೈಯಾರ್ ರಬ್ಬರ್ ಪ್ರಾಡಕ್ಟ್	12.32
23)	ಎನ್.ಎಸ್.ಪಿ.-547	ಪ್ರದೀಪ್ ಇಂಡಸ್ಟ್ರೀಸ್	8.20
24)	ಎನ್‌ಎಸ್‌ಪಿ-489	ನಾರಾಯಣಮ್ಮ	1.39
25)	ಎಂ.ಪಿ.-747	ಭಾರತ್ ರೈಸ್ ಮಿಲ್	1.43
26)	ಪಿ-42	ಎಸ್. ವಿರೂಪಣ್ಣ ಹಿರಿಯೂರ್	3.46
27)	ಪಿ-1168	ಬಾಲಾಜಿ ಇಂಡಸ್ಟ್ರೀಸ್	10.46
28)	ಪಿ-868	ಎ. ಸಿದ್ದಪ್ಪ	5.75
29)	ಪಿ-1086	ವೀರಭದ್ರೇಶ್ವರ ಇಂಡಸ್ಟ್ರೀಸ್	5.54
30)	ಪಿ-1610	ಶಿವರುದ್ರಪ್ಪ	1.08
31)	ಎನ್‌ಸ್‌ಸಿ	ವಸಂತ ಇಂಡಸ್ಟ್ರೀಸ್, ಶಿವಮೊಗ್ಗ	5.14

ಮಾಗಡಿ ತಾಲ್ಲೂಕಿನಲ್ಲಿ ವಿದ್ಯುತ್ತಿನ ಅಭಾವ

2210-ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಾಗಡಿ ತಾಲ್ಲೂಕಿನಲ್ಲಿ ಗೃಹ ಬಳಕೆ ಹಾಗೂ ನೀರಾವರಿ ಪಂಪುಸೆಟ್ಟುಗಳ ವಿದ್ಯುತ್‌ನ ಭಾರಿ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ರೀತಿಯ ವಿದ್ಯುತ್ ಅಭಾವವನ್ನು ತಪ್ಪಿಸಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಇ) ತಾಲ್ಲೂಕಿನ ಪ್ರದೇಶದಲ್ಲಿ ಒಂದು ಹೈಪವರ್ ಸ್ಟೇಷನನ್ನು ಮತ್ತೊಂದು ಹೈಪವರ್ ಸ್ಟೇಷನ್‌ನ್ನು ಆದಷ್ಟು ಶೀಘ್ರದಲ್ಲಿಯೇ ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಮಾಗಡಿ ತಾಲ್ಲೂಕಿನಲ್ಲಿ ಗೃಹ ಬಳಕೆ ಹಾಗೂ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್‌ನ ಅಭಾವ ಅಷ್ಟಾಗಿ ಇರುವುದಿಲ್ಲ.

ಆ) ಮಾಗಡಿ ತಾಲ್ಲೂಕಿನ ಕೇಂದ್ರ ಸ್ಥಾನವಾದ ಮಾಗಡಿ ಮತ್ತು ತಾವರೆಕೆರೆಗಳಲ್ಲಿ ತಲಾ ಒಂದು 66:11 ಕೆವಿ ವಿದ್ಯುತ್ ಉಪಕೇಂದ್ರ ಕಾರ್ಯ ನಿರ್ವಹಿಸುತ್ತಿದೆ. ಮಾಗಡಿ 66:11 ಕೆವಿ ಸಬ್ ಸ್ಟೇಷನ್ನಿನಲ್ಲಿ 6.3 ಎಂ.ವಿ.ಎ. ಸಾಮರ್ಥ್ಯದ ಒಂದು ಮತ್ತು 8 ಎಂ.ವಿ.ಎ. ಸಾಮರ್ಥ್ಯದ ಇನ್ನೊಂದು ಪವರ್ ಟ್ರಾನ್ಸ್‌ಫಾರ್ಮರ್‌ಗಳು ಕಾರ್ಯ ನಿರ್ವಹಿಸುತ್ತಿವೆ. ತಾವರೇಕೆರೆಯ 66:11 ಕೆವಿ ವಿದ್ಯುತ್ ಸಬ್ ಸ್ಟೇಷನ್ನಿನಲ್ಲಿ 5 ಎಂ.ವಿ.ಎ. ಸಾಮರ್ಥ್ಯದ ಒಂದು ಪವರ್ ಟ್ರಾನ್ಸ್‌ಫಾರ್ಮರ್ ಕಾರ್ಯ ನಿರ್ವಹಿಸುತ್ತಿದೆ. ಅಲ್ಲದೇ, ನೆರೆಯ ತಾಲ್ಲೂಕಾದ ಕುಣಿಗಲ್ ತಾಲ್ಲೂಕಿನ ಅಂಚೇಪಾಳ್ಯದಲ್ಲಿರುವ 66:11 ಕೆವಿ ವಿದ್ಯುತ್ ಸಬ್ ಸ್ಟೇಷನ್ನಿಂದಲೂ ಮಾಗಡಿ ತಾಲ್ಲೂಕಿನ ಕೆಲವು ಪ್ರದೇಶಗಳಿಗೆ ವಿದ್ಯುತ್ ಸರಬರಾಜಾಗುತ್ತಿದೆ.

ಇ) ಈ ತಾಲ್ಲೂಕಿನ ಕುದೂರು ಗ್ರಾಮದಲ್ಲಿ ಒಂದು 66:11 ಕೆವಿ ವಿದ್ಯುತ್ ಸಬ್ ಸ್ಟೇಷನ್‌ನ್ನು ಸ್ಥಾಪಿಸಲು ತಾಂತ್ರಿಕ ಸಮಿತಿಯ ಅನುಮೋದನೆ ದೊರೆತಿದ್ದು 1996-97ರ ಸಾಲಿನಲ್ಲಿ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲು ಉದ್ದೇಶಿಸಿದೆ.

ಅಧ್ಯಕ್ಷರು : ಉತ್ತರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು. ಈಗ ಪ್ರಕಟಣೆ

ಪ್ರಕಟಣೆ

ಅಧ್ಯಕ್ಷರು : ದಿನಾಂಕ 8-9-1995ರಂದು ನಡೆದ ವಿಧಾನ ಸಭೆಯ ಕಾರ್ಯ ಕಲಾಪಗಳ ಸಲಹಾ ಸಮಿತಿ ಸಭೆಯು ಪ್ರಸ್ತುತ ಅಧಿವೇಶನದಲ್ಲಿ ಪ್ರತಿದಿನ ಬೆಳಿಗ್ಗೆ 10-00 ಗಂಟೆಯಿಂದ ಸಂಜೆ 6Ë00 ಗಂಟೆಯವರೆಗೆ ಸಭೆ ಸೇರಿ, ಈ ಕೆಳಕಂಡಂತೆ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಿತು.

11-9-1995	1.	ಪ್ರಶ್ನೋತ್ತರ
ಸೋಮವಾರ	2.	ಗಮನ ಸೆಳೆಯುವ ಸೂಚನೆಗಳು
ಮತ್ತು		
12-9-1995	3.	ಶಾಸನ ರಚನೆ
ಮಂಗಳವಾರ	4.	ಶಿಕ್ಷಣ ಇಲಾಖೆ
	5.	ವಾರ್ತಾ, ಪ್ರವಾಸೋದ್ಯಮ, ಯುವಜನ ಸೇವೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ
	6.	ಕಾರ್ಮಿಕ ಮತ್ತು ಸಮಾಜ ಕಲ್ಯಾಣ ಇಲಾಖೆ
	7.	ಕೃಷಿ, ತೋಟಗಾರಿಕೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

	8.	ವಿದ್ಯುಚ್ಛಕ್ತಿ (ಇಂಧನ) ಇಲಾಖಾ ಅನುದಾನ ಬೇಡಿಕೆಗಳಿಗೆ ಸಂಬಂಧಿಸಿದಂತೆ ಚರ್ಚೆ, ಉತ್ತರ ಹಾಗೂ ಮತಕ್ಕೆ ಹಾಕುವುದು.
13-9-1995	1.	ಪ್ರಶ್ನೋತ್ತರ
ಬುಧವಾರ	2.	ಗಮನಸೆಳೆಯುವ ಸೂಚನೆಗಳು
	3.	ಶಾಸನ ರಚನೆ
	4.	ವಸತಿ ಮತ್ತು ನಗರಾಭಿವೃದ್ಧಿ ಇಲಾಖಾ ಅನುದಾನ ಬೇಡಿಕೆಗಳಿಗೆ ಸಂಬಂಧಿಸಿದಂತೆ ಚರ್ಚೆ, ಉತ್ತರ ಹಾಗೂ ಮತಕ್ಕೆ ಹಾಕುವುದು.
	5.	ಬೆಂಗಳೂರು ಅಭಿವೃದ್ಧಿ ಇಲಾಖೆ
	6.	ನಿಯಮ 69ರ ರೀತ್ಯಾ ಕೃಷ್ಣ ಮೇಲ್ದಂಡೆ ಯೋಜನೆಯ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ
14-9-1995	1.	ಪ್ರಶ್ನೋತ್ತರ
ಗುರುವಾರ	2.	ಗಮನ ಸೆಳೆಯುವ ಸೂಚನೆಗಳು
	3.	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ಅನುದಾನ ಬೇಡಿಕೆಗಳಿಗೆ ಉತ್ತರ ಹಾಗೂ ಮತಕ್ಕೆ ಹಾಕುವುದು.
	4.	ನಿಯಮ 69ರ ರೀತ್ಯಾ ಮಾನ್ಯ ಸದಸ್ಯರಾದ ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ಶಾಸಕರ ಮೇಲೆ ಸಚಿವರು ಹಲ್ಲೆ ಮಾಡಿರುವ ವಿಷಯದ ಬಗ್ಗೆ ಪ್ರಸ್ತಾಪ.
	5.	ನಿಯಮ 59ರ ರೀತ್ಯಾ ಡಿ.ಆರ್. ಪಾಟೀಲ್ ಅವರು ನೀಡಿರುವ ಸೂಚನೆ
15-9-1995	1.	ಪ್ರಶ್ನೋತ್ತರ
ಶುಕ್ರವಾರ	2.	ಗಮನ ಸೆಳೆಯುವ ಸೂಚನೆಗಳು
	3.	ನೀರಾವರಿ ಇಲಾಖೆ
	4.	ಲೋಕೋಪಯೋಗಿ ಇಲಾಖೆ
	5.	ಖಾಸಗಿ ಕಾರ್ಯಕಲಾಪಗಳು
16-9-1995	ಉಪವೇಶನವಿರುವುದಿಲ್ಲ	
ಶನಿವಾರ		
17-9-1995	ರಜಾ ದಿನ	
ಭಾನುವಾರ		
18-9-1995	1.	ಪ್ರಶ್ನೋತ್ತರ
ಸೋಮವಾರ	2.	ಗಮನ ಸೆಳೆಯುವ ಸೂಚನೆಗಳು

	3.	ಉಳಿದ ಎಲ್ಲಾ ಅನುದಾನ ಬೇಡಿಕೆಗಳಿಗೆ ಸಂಬಂಧಿಸಿದಂತೆ, ಚರ್ಚೆ ಉತ್ತರ ಹಾಗೂ ಮತಕ್ಕೆ ಹಾಕುವುದು.
	4.	ಧನವಿನಿಯೋಗ ವಿಧೇಯಕ ಮಂಡನೆ ಹಾಗೂ ಮತಕ್ಕೆ ಹಾಕುವುದು
19-9-1995	1.	ಪ್ರಶ್ನೋತ್ತರ
ಮಂಗಳವಾರ	2.	ಗಮನ ಸೆಳೆಯುವ ಸೂಚನೆಗಳು
	3.	ಶಾಸನ ರಚನೆ
	4.	1995Ë96ನೇ ಸಾಲಿನ ಪೂರಕ ಅಂದಾಜುಗಳ ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು
20Ë9Ë1995	1.	ಪ್ರಶ್ನೋತ್ತರ
ಬುಧವಾರ	2.	ಗಮನ ಸೆಳೆಯುವ ಸೂಚನೆಗಳು
	3.	ಶಾಸನ ರಚನೆ
21-9-1995	1.	ಪ್ರಶ್ನೋತ್ತರ
ಗುರುವಾರ	2.	ಗಮನ ಸೆಳೆಯುವ ಸೂಚನೆಗಳು
	3.	ಶಾಸನ ರಚನೆ
22-9-1995	1.	ಪ್ರಶ್ನೋತ್ತರ
ಶುಕ್ರವಾರ	2.	ಗಮನ ಸೆಳೆಯುವ ಸೂಚನೆಗಳು
	3.	ಶಾಸನ ರಚನೆ
	4.	ನಿಯಮ 69ರ ಕೆಳಗೆ 20 ಅಂಶಗಳ ಕಾರ್ಯಕ್ರಮದ ಅಡಿಯಲ್ಲಿ ಶಾಸಕರುಗಳಿಗೆ ಒದಗಿಸಿರುವ ಸಲವತ್ತುಗಳ ಬಗ್ಗೆ ಪ್ರಸ್ತಾಪ.
	5.	ಖಾಸಗಿ ಕಾರ್ಯಕಲಾಪಗಳು
		ಬೆಳಿಗ್ಗೆ 9.30 ಗಂಟೆಯಿಂದ 1 ಗಂಟೆಯವರೆಗೆ
23-9-1995	1.	ಪ್ರಶ್ನೋತ್ತರ
ಶನಿವಾರ	2.	ಗಮನ ಸೆಳೆಯುವ ಸೂಚನೆಗಳು
	3.	ಶಾಸನ ರಚನೆ
	4.	ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಪಠ್ಯವಾಗಿದ್ದ "ಓದುವ ಆಟ" ಪುಸ್ತಕವನ್ನು ರದ್ದುಗೊಳಿಸಿರುವ ಬಗ್ಗೆ ಪ್ರಸ್ತಾಪ.

ಸದನವು ಸಮಿತಿಯ ಶಿಫಾರಸ್ಸಿಗೆ ಒಪ್ಪಿಗೆ ನೀಡಿದೆಯೆಂದು ಭಾವಿಸುತ್ತೇನೆ.

VIII-F-3

ಗೈರು ಹಾಜರಿಗೆ ಅನುಮತಿ

ಅಧ್ಯಕ್ಷರು : ಶ್ರೀ ಎನ್. ಬಸವಯ್ಯನವರು ದಿನಾಂಕ 21ನೇ ಆಗಸ್ಟ್ 1995 ರಂದು ಬರೆದ ಪತ್ರವು ನನಗೆ ಬಂದಿದ್ದು, ಅದು ಈ ರೀತಿ ಇದೆ.

"ಶ್ರೀ ಎನ್. ಬಸವಯ್ಯನವರು ದಿನಾಂಕ 21ನೇ ಆಗಸ್ಟ್ 1995 ರಿಂದ ಈ ಅಧಿವೇಶನ ಮುಕ್ತಾಯವಾಗುವರೆಗೆ ಗೈರು ಹಾಜರಾಗಲು ಅನುಮತಿ ಕೋರಿದ್ದಾರೆ."

"ಮಾನ್ಯ ಸದಸ್ಯರು ಗೈರು ಹಾಜರಾಗಲು ಸಭೆಯು ಸಮ್ಮತಿಸುತ್ತದೆಯೇ?"

(ಯಾವ ಸದಸ್ಯರೂ ವಿರೋಧ ವ್ಯಕ್ತಪಡಿಸಲಿಲ್ಲ)

ಅಧ್ಯಕ್ಷರು : ಮಾನ್ಯ ಸದಸ್ಯರು ಗೈರು ಹಾಜರಾಗಲು ಅನುಮತಿ ನೀಡಲಾಗಿದೆ.

ವರದಿಗಳನ್ನೊಪ್ಪಿಸುವುದು

ಶ್ರೀ ಹೆಚ್.ಎನ್. ನಂಜೇಗೌಡ (ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿ) : ಮಾನ್ಯ ಅಧ್ಯಕ್ಷರೆ, ನಾನು ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿಯ 1 ರಿಂದ 7ರ ವರೆಗಿನ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು : ವರದಿಯನ್ನೊಪ್ಪಿಸಲಾಯಿತು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:

(1) ದ.ಕ. ಜಿಲ್ಲೆಯಲ್ಲಿ ಕೊಜೆಂಟ್ರಿಕ್ಸ್, ಎಂ.ಆರ್.ಪಿ.ಎಲ್. ಹಾಗೂ ಇತರ ಬೃಹತ್ ಕೈಗಾರಿಕೆಗಳಿಂದ ಉಂಟಾಗಲಿರುವ ವಾಯು ಮತ್ತು ಜಲಮಾಲಿನ್ಯ

ಶ್ರೀ ಯು.ಆರ್. ಸಭಾಪತಿ : ಮಾನ್ಯ ಸಭಾಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಾಗಲೇ ಸ್ಥಾಪನೆಗೊಂಡಿರತಕ್ಕಂತಹ ಎಂ.ಆರ್.ಪಿ.ಎಲ್. ಹಾಗೂ ಇನ್ನೂ ಸ್ಥಾಪನೆಗೊಳ್ಳಲಿರುವ ಕೊಜೆಂಟ್ರಿಕ್ಸ್ ಮತ್ತು ಇತರ ಬೃಹತ್ ಕೈಗಾರಿಕೆಗಳಿಂದ ಆಗತಕ್ಕಂತಹ ವಾಯು ಹಾಗೂ ಜಲಮಾಲಿನ್ಯದ ಬಗ್ಗೆ ಜಿಲ್ಲೆಯ ಪರಿಸರವಾದಿಗಳು ಮತ್ತು ಮೀನುಗಾರರು ಸಾಕಷ್ಟು ದೊಡ್ಡ ರೀತಿಯಲ್ಲಿ ಚಳುವಳಿಯನ್ನು ಪ್ರಾರಂಭಿಸಿದ್ದಾರೆ. ಜಿಲ್ಲೆಯಲ್ಲಿ ಅದರಲ್ಲೂ ಕೂಡ ಒಂದು ಕಡೆ ಪಶ್ಚಿಮ ಘಟ್ಟಗಳ ನಾಶ; ಇನ್ನೊಂದು ಕಡೆ ಸಮುದ್ರ ಮಾಲಿನ್ಯ ಮತ್ತೊಂದು ಕಡೆ ಕುಡಿಯುವ ನೀರಿನ ಅಭಾವ, ಹೀಗೆ ಹತ್ತು ಹಲವು ವಿಚಾರಗಳ ಬಗ್ಗೆ ನಮ್ಮ ಸದನ ಬಹಳ ಗಂಭೀರವಾಗಿ ಚರ್ಚೆ ಮಾಡಬೇಕಾಗಿದೆ. ಇದೇ 21 ರಂದು ದಕ್ಷಿಣ ಕನ್ನಡ ಜಿಲ್ಲೆಯ ಮೀನುಗಾರರ ಸಮುದಾಯ ಎಂ.ಆರ್.ಪಿ.ಎಲ್. ಕಂಪನಿಯವರು ಈಗಾಗಲೇ ತ್ಯಾಜ್ಯ ವಸ್ತುಗಳನ್ನು ಸಮುದ್ರಕ್ಕೆ ಬಿಡಲು ಹಾಕಿರತಕ್ಕಂತಹ ಪೈಪುಗಳನ್ನು ಕಿತ್ತು ಹಾಕುವಂತಹ ಒಂದು ಹೋರಾಟವನ್ನು ಪ್ರಾರಂಭಿಸುತ್ತಿದ್ದಾರೆ ಮತ್ತೊಂದು ಎಡೆ ಕೊಜೆಂಟ್ರಿಕ್ಸ್ ವಿರುದ್ಧ ಸಾಕಷ್ಟು ರೀತಿಯ ಜನಾಭಿಪ್ರಾಯ ರೂಪುಗೊಂಡಿದ್ದು, ಸರ್ಕಾರ ಈ ಒಪ್ಪಂದಕ್ಕೆ ಒಂದು ವೇಳೆ ಸಹಿ ಹಾಕಿದ್ದೇ ಆದರೆ ಜಿಲ್ಲೆಯಲ್ಲಿ ಉಗ್ರ ರೂಪದ ಚಳುವಳಿ ಪ್ರಾರಂಭವಾಗುವುದು ಕಂಡು ಬರುತ್ತಿದೆ. ಈ ದಿಸೆಯಲ್ಲಿ ದಯವಿಟ್ಟು ಸರ್ಕಾರದ ಗಮನವನ್ನು ಸೆಳೆಯಲು ಅವಕಾಶವನ್ನು ಕೊಟ್ಟಿದ್ದೀರಿ ಆದರೂ ಕೂಡ ಸಾರ್ವಜನಿಕ ಒಂದು ಮಹತ್ವದ ದೃಷ್ಟಿಯಿಂದ ಇದನ್ನು ನಿಯಮಾವಳಿ 69 ಚರ್ಚೆಗೆ ಅವಕಾಶ ಮಾಡಿಕೊಡಬೇಕಾಗಿ ತಮ್ಮ ಹತ್ತಿರ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಆಯಿತು ಆಲೋಚನೆ ಮಾಡೋಣ.

(ii) ಗ್ರಾನೈಟ್ ಅವ್ಯವಹಾರದ ಬಗ್ಗೆ

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಮತ್ತು ವಿಧಾನ ಪರಿಷತ್ತಿನಲ್ಲಿ ಕರ್ನಾಟಕ ರಾಜ್ಯದ ಗ್ರಾನೈಟ್ ಅವ್ಯವಹಾರದ ಬಗ್ಗೆ ಸಾಕಷ್ಟು ಚರ್ಚೆಯಾಗಿ, ಸನ್ಮಾನ್ಯ ಹಿರಿಯ ಸದಸ್ಯರಾದ ಶ್ರೀ ಕೆ.ಎನ್. ನಾಗೇಗೌಡ ಅಧ್ಯಕ್ಷತೆಯಲ್ಲಿ ಜಂಟಿ ಸದನ ಸಮಿತಿಯು ರಚನೆಯಾಗಿರುವುದು ಸರಿಯಷ್ಟೆ, ಆ ಸಮಿತಿ ವರದಿ ಕೊಡುವ ತನಕ ಅದರ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಈ ಜಂಟಿ ಸದನ ಸಮಿತಿ ಸ್ಥಳ ಪರಿಶೀಲನೆಯ ಮಾಡುವ ದೃಷ್ಟಿಯಿಂದ ನಿನ್ನೆ ದಿವಸ ಬೆಂಗಳೂರಿನಿಂದ ಮಂಗಳೂರಿಗೆ ಬಸ್‌ನಲ್ಲಿ ಹೋಗಿ ವಾಪಸ್ಸು ಬಂತು. ಅನೇಕ ಆಶ್ಚರ್ಯಪಡುವಂತಹ ಸಂಗತಿಗಳನ್ನು ಎಲ್ಲಾ ಪಕ್ಷದ ಸದಸ್ಯರುಗಳು ಈ ಸದನಕ್ಕೆ ತಿಳಿಸಲು ಆಸಕ್ತರಾಗಿದ್ದಾರೆ.

ಅಧ್ಯಕ್ಷರು : ಆಯಿತು, ಈಗ ಪ್ರಸ್ತಾಪಕ್ಕೆ ಅಷ್ಟೇ ನಾನು ಅವಕಾಶ ಕೊಡಬೇಕಾಗಿತ್ತು; ಅಷ್ಟೇ.

ಶ್ರೀ ಕೆ.ಎಸ್. ಈಶ್ವರಪ್ಪ : ಅದನ್ನೇ ಏನು ನೋಡಿದೆವು ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು : ಬೇಡ, ದಯವಿಟ್ಟು ನನ್ನ ಮಾತನ್ನು ಕೇಳಿ, ನಾವು ಹೊಸ ಸಂಪ್ರದಾಯವನ್ನು ಹಾಕುವುದು ಬೇಡ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬಸ್‌ನಲ್ಲಿ ಹೋದಾಗ ಏನು ನೋಡಿದರು ಎಂಬುದನ್ನು ಹೇಳುತ್ತಾರೆ.

ಅಧ್ಯಕ್ಷರು : ನನಗೆ ಹೇಳಿದ್ದಾರೆ, ನಾನು ತಮಗೆ ಏನು ಹೇಳುತ್ತೇನೆಂದರೆ, ತಾವು ವಿರೋಧ ಪಕ್ಷದ ನಾಯಕರು.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಏನು ಹೇಳುತ್ತೀರಿ ಅದನ್ನು ಕೇಳುತ್ತೇವೆ. ಒಂದು ಸಮಿತಿಯನ್ನು ರಚನೆ ಮಾಡಿದ ಮೇಲೂ ಕಲ್ಲು ಹೋಗುತ್ತಿದೆ ಎನ್ನುವುದಾದರೆ ಈ ಸಮಿತಿ ಉದ್ದೇಶವೇ ಸಫಲವಾಗುವುದಿಲ್ಲ. ಆದ್ದರಿಂದ ಅದನ್ನು ತಡೆ ಮಾಡುವುದಕ್ಕೆ ಏನಾದರೂ ವಿಶೇಷ ಗಮನವನ್ನು ಕೊಡಬೇಕು.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಕಲ್ಲುಗಳನ್ನು ತುಂಬಿಕೊಂಡು ಹೋಗುತ್ತಿರುವಂತಹ ಸುಮಾರು ಲಾರಿಗಳನ್ನು ಎಲ್ಲಾ ಪಕ್ಷದ ಸದಸ್ಯರುಗಳು ಗಮನಿಸಿದ್ದಾರೆ. ಈ ರೀತಿಯ ಪ್ರತಿ ಲಾರಿಗಳನ್ನು ಹಿಡಿದುನೋಡಿದಾಗ ಪ್ರತಿ ಲಾರಿಯಲ್ಲಿಯೂ ಕೂಡ ಎರಡೇ ಎರಡು ಡಾಕ್ಯೂಮೆಂಟ್ಸ್ ಇರುತ್ತದೆ. ಒಂದು ಭೂ ಮತ್ತು ಗಣಿ ವಿಜ್ಞಾನ ಇಲಾಖೆಯ ಒಂದು ಪರವಾನಗಿ ಮತ್ತು ಸೇಲ್ಸ್‌ಟ್ಯಾಕ್ಸ್ ಇಲಾಖೆಯ ಫಾರಂ ನಂಬರ್ 30 ಇದೆ. ನಾನು ಏಕೆ ಹೇಳುತ್ತೇನೆ ಎಂದರೆ ಒಂದೇ ಲಾರಿ ಎರಡು ಸಂಸ್ಥೆಗೆ ಸೇರಿದ್ದುದು ಬರುತ್ತಿದೆ. ಇದು ತುಂಬಾ ಆಶ್ಚರ್ಯ ಬರುತ್ತಿದೆ. ಎರಡನೇ ಗಮನವನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛಿಪಡುತ್ತೇನೆ. ಒಂದು ಟನ್ ಏನು ಆ ಗ್ರಾನೈಟ್ ಕಲ್ಲು ಇದೆ ಇದಕ್ಕೆ ರಾಯಲ್ಟಿ ಒಂದು ಸಾವಿರ ರೂಪಾಯಿಗಳು.

ಅಧ್ಯಕ್ಷರು : ಬೇಡ, ಈಗ ಬೇಡ. ದಯಮಾಡಿ ಕೇಳಿ ನನ್ನ ಮಾತನ್ನು ಕೇಳಿ, ನನ್ನ ಮಾತನ್ನು ತಾವು ಕೇಳುತ್ತಿಲ್ಲ, ದಯಮಾಡಿ ಕೇಳಿ. ಒಂದು ನಿಮಿಷ ತಾವು ಕುಳಿತುಕೊಳ್ಳಿ. ಶ್ರೀ ಶ್ರೀರಾಮರೆಡ್ಡಿಯವರೇ, ನಾನು ನಿಮ್ಮಲ್ಲಿ ಏನು ಹೇಳುತ್ತೇನೆಂದರೆ, ನೀವು ಎಲ್ಲಾ ಸದಸ್ಯರು, ಆ ಸಮಿತಿಯಲ್ಲಿರತಕ್ಕಂತಹವರು ಎಲ್ಲರೂ

ಪ್ರವಾಸಕ್ಕೆ ಹೋಗಿ ಬಂದಿರತಕ್ಕಂತಹವರು ಹಾಗೂ ಪ್ರಸ್ತಾಪ ಮಾಡತಕ್ಕಂತಹ ತಾವು ಸನ್ಮಾನ್ಯ ಚಂದ್ರಣ್ಣನವರು, ಕೃಷ್ಣನವರು ಹೇಳಬೇಕಾಗಿರತಕ್ಕಂಥದ್ದು ಒಂದೇ ವಿಷಯ. ಶ್ರೀ ವಾಟಾಳ್ ನಾಗರಾಜ್‌ರವರೇ, ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನಾವು ಆ ವಿವರಗಳನ್ನು ಇಲ್ಲಿ ಚರ್ಚೆ ಮಾಡುವುದು ಬೇಡ. ಜಂಟಿ ಸದನ ಸಮಿತಿಗೆ ಏರ್ಪಾಡು ಮಾಡಿದ್ದೇವೆ, ಈ ಸಂಜೆ 4 ಗಂಟೆಗೆ ಸಂಬಂಧಿಸಿದ ಅಧಿಕಾರಿಗಳನ್ನು ಸಭೆಗೆ ಕರೆದಿದ್ದೇನೆ. ಸನ್ಮಾನ್ಯ ಕೆ.ಎನ್. ನಾಗೇಗೌಡರು, ಅಧ್ಯಕ್ಷರು ಯಾರು ಇದ್ದಾರೆ, ಅವರಿಗೂ ಅಲ್ಲಿ ಬರಲಿಕ್ಕೆ ಹೇಳಿದ್ದೇನೆ. ನಿಮ್ಮ ಸಮಿತಿಯ ವಿಚಾರ ವ್ಯಾಪ್ತಿಯನ್ನು ಸ್ಪಷ್ಟಪಡಿಸುವುದಕ್ಕೆ, ನಿಮ್ಮ ಕೈ ಬಲಪಡಿಸುವುದಕ್ಕೆ ಯಾವ ಕ್ರಮಗಳನ್ನು ಹೊಸ ಸಂಪ್ರದಾಯ ಹಾಕದ ರೀತಿಯಲ್ಲಿ ನಾವು ಕೈಗೊಳ್ಳಬೇಕು ಅದನ್ನು ಅಲ್ಲಿ ಸಮಾಲೋಚನೆ ಮಾಡೋಣ.

ಶ್ರೀ ಕೆ.ಎಸ್. ಈಶ್ವರಪ್ಪ : ಅಲ್ಲಿಯವರೆಗೆ ಲಾರಿಗಳು ಹೋಗುತ್ತಿರುವುದನ್ನು ನಿಲ್ಲಿಸಬೇಕು ಅಂತ ಅಷ್ಟೆ. ಅಧ್ಯಕ್ಷರೇ, ನೂರಾರು ಲಾರಿಗಳು ಹೋಗುತ್ತಿವೆ, ಒಂದೊಂದು ಲಾರಿಗೆ ಮೂರು ಸಾವಿರ ರೂಪಾಯಿಗಳ ವ್ಯಾಲ್ಯೂ ಕಟ್ಟುತ್ತಿದ್ದಾರೆ.

ಅಧ್ಯಕ್ಷರು : 4 ಗಂಟೆಗೆ ಸಭೆಯನ್ನು ಕರೆದಿದ್ದೇನೆ.

ಶ್ರೀ ಎಸ್.ಆರ್. ಲಕ್ಷ್ಮಯ್ಯ : ಅಧ್ಯಕ್ಷರೇ, ಇದು ಬಹಳ ಅತಿಯಾಯಿತು.

(ಗೊಂದಲ)

ಅಧ್ಯಕ್ಷರು : ದಯಮಾಡಿ ನನಗೆ ಬಿಡಿ, ನಾನು ನೋಡಿಕೊಳ್ಳುತ್ತೇನೆ, ನನಗೆ ಇನ್ನೂ ಚೈತನ್ಯವಿದೆ, ನನಗೆ ಸುಸ್ತಾದಾಗ ತಮ್ಮನ್ನು ಕರೆಯುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಈಗ 4 ಗಂಟೆಗೆ ಚರ್ಚೆ ಮಾಡಿ ಈಗ ನಮ್ಮ ಪ್ರಶ್ನೆ ಅದು ಅಲ್ಲ, ಈಗ ನೆನ್ನೆ ಒಂದೇ ದಿವಸ ಸುಮಾರು 20 ರಿಂದ 25 ಲಾರಿಗಳು ಆ ಸರಕುಗಳನ್ನು ಒಂದು ದಿವಸಕ್ಕೆ ಸಾಗಣಿಕೆಯನ್ನು ಮಾಡಿದೆ. ಬೆಳಿಗ್ಗೆಯಿಂದ ಮತ್ತೆ ಪ್ರಾರಂಭವಾಗಿರುತ್ತದೆ. ಆದ್ದರಿಂದ ಅದನ್ನು ತಕ್ಷಣ ತಡೆಯಲಿಕ್ಕೆ ಇವತ್ತು ನಾವು ಪ್ರಸ್ತಾಪ ಮಾಡಿದ್ದುದು. 4 ಗಂಟೆಗೆ ವಿವರವಾಗಿ ಚರ್ಚೆ ಮಾಡೋಣ ಅದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ, ಆದರೆ ನಿನ್ನೆ ಒಂದೇ ದಿವಸದಲ್ಲಿಯೇ ಕೋಟ್ಯಾಂತರ ರೂ.ಗಳ ಬೆಲೆ ಬಾಳುವ ಸುಮಾರು 25 ಲಾರಿಗಳು ನಾವು ಸದನ ಸಮಿತಿಯ ಸದಸ್ಯರು ಹೋಗಿ ಬರುವಾಗಲೇ ನಾವೇ ತಡೆದು ನೋಡಿದ್ದೇವೆ. ಅದನ್ನು ತಕ್ಷಣ ನಿಲ್ಲಿಸಿ. ಚರ್ಚೆ ಬೇಕಾದರೆ ಆಮೇಲೆ ಮಾಡೋಣ. 4 ಗಂಟೆಗೆ ಚರ್ಚೆ ಮಾಡುವುದಕ್ಕೆ ಖಂಡಿತ ಅಭ್ಯಂತರವಿಲ್ಲ. ಅದಕ್ಕೆ ಗಮನವನ್ನು ಸೆಳೆದು ಸಂಬಂಧಪಟ್ಟಂತಹ ಮಂತ್ರಿಗಳು, ಆ ಇಲಾಖೆಯ ಅಧಿಕಾರಿಗಳಿಗೆ ತಕ್ಷಣ ಸೂಚನೆಯನ್ನು ಕೊಟ್ಟು ತಕ್ಷಣ ಅದನ್ನು ನಿಲ್ಲಿಸಬೇಕು ಮತ್ತೆ ಚರ್ಚೆ ಮಾಡಿ ಕಾನೂನಿನ ಪ್ರಕಾರ ಇದು ಏನಿದೆ ಅದನ್ನು ಮಾಡೋಣ ಎಂದು ಅಷ್ಟೇ ಪ್ರಸ್ತಾಪ ಮಾಡುತ್ತಿರುವುದು.

ಅಧ್ಯಕ್ಷರು : ನಿಮ್ಮ ಭಾವನೆಗಳನ್ನು ಗೌರವಿಸಿ, ತಕ್ಷಣ ಅಧ್ಯಕ್ಷರ ಪೀಠ ತನ್ನ ಕಾರ್ಯವನ್ನು ಕೈಗೊಳ್ಳುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಇದು ನಮ್ಮ ಸದನ ಸಮಿತಿಯ ನೇಮಕವಾದ ದಿನವೇ ಸರ್ಕಾರಕ್ಕೆ ನೇರವಾಗಿ ಹೇಳಬೇಕಾಗಿತ್ತು. ಇವತ್ತಿನಿಂದ ಎಲ್ಲಾ ಗ್ರಾನೈಟ್‌ಗಳು ಯಾವುದೇ ಬಂದರ್‌ಗಳಿಗಾಗಲಿ ಎಲ್ಲಿಗೆ ಆಗಲಿಹೋಗತಕ್ಕಂಥದ್ದನ್ನು ತಕ್ಷಣದಿಂದ ನಿಲ್ಲಿಸಬೇಕೆಂದು ಸರ್ಕಾರ ಒಂದು ಆದೇಶವನ್ನು ಹೊರಡಿಸಬೇಕಾಗಿತ್ತು. ಈ ಕಡೆ ಸಮಿತಿಯನ್ನು ರಚನೆ ಮಾಡಿ, ಆ ಕಡೆ ವ್ಯವಸ್ಥಿತವಾಗಿ ಗ್ರಾನೈಟ್‌ನ್ನು

ತೆಗೆದುಕೊಂಡು ಹೋಗುತ್ತಿದ್ದರೆ, ಇದು ಹಕ್ಕುಚ್ಯುತಿಯಾಗುತ್ತದೆ. ಈ ಸಮಿತಿಯ ವ್ಯವಸ್ಥೆಗೆ ಧಕ್ಕೆ ಬರುತ್ತದೆ. ಸಮಿತಿ ಯಾವ ಒಂದು ವಿಚಾರದ ಮೇಲೆ ರಚನೆಯಾಗಿದೆ ಆ ರಚನೆಗೆ ಭಂಗ ಬರುತ್ತದೆ. ಆದ್ದರಿಂದ ಒಂದು ಕಡೆ ಸಮಿತಿಯನ್ನು ರಚನೆ ಮಾಡುವುದು, ಮತ್ತೊಂದು ಕಡೆ ಗ್ರಾನೈಟ್‌ನ್ನು ಎಲ್ಲಾ ಕಡೆ ಸಾಗಿಸುವಂಥದ್ದು ಇದೆಯಲ್ಲಾ ಇದು ವ್ಯವಸ್ಥೆಯಲ್ಲ. ಈಗ ಸ್ನೇಹಿತರುಗಳು ಏನು ಹೇಳಿದರು ಎಂದರೆ 21 ಲಾರಿಗಳು ಒಂದೇ ರಸ್ತೆಯಲ್ಲಿ ಬರುತ್ತದೆಂದು. 500 ಲಾರಿಗಳು ಒಂದು ದಿವಸದಲ್ಲಿ ಬರುತ್ತದೆ. ಇದು ಒಂದೇ ರಸ್ತೆಯಲ್ಲ, ಬಿಜಾಪುರದಿಂದ ಬರುತ್ತದೆ, ಹುಬ್ಬಳ್ಳಿ ಕಡೆಯಿಂದ ಬರುತ್ತದೆ ಬೇರೆ ಬೇರೆ ಕಡೆ. ಎಲ್ಲಾ ಕಡೆಯಿಂದ ಬರತಕ್ಕಂತಹ ಕನಿಷ್ಟ 500 ಲಾರಿಗಳು ಬರುತ್ತವೆ. ಇದರಲ್ಲಿ ತುಂಬತಕ್ಕಂಥದ್ದು 5 ಟನ್ ಹಾಕಬೇಕೆಂದು ಇರುವುದು. ಇದು ಬೇರೆ ವಿಚಾರಕ್ಕೆ ನಾವು ಇಲ್ಲಿ ಚರ್ಚೆ ಮಾಡುವುದು ಬೇಡ ಅದರ ಸಂಪೂರ್ಣ ವಿಚಾರವನ್ನು ಚರ್ಚೆ ಮಾಡುವುದು ಬೇಡ. ಆದರೆ ಮಾತ್ರ ತಮ್ಮಲ್ಲಿ ಒಂದು ಮನವಿಯನ್ನು ಮಾಡುತ್ತೇನೆ. ತಾವು ಏನು ಈ ಸದನ ಸಮಿತಿಯನ್ನು ನೇಮಕ ಮಾಡಿದ್ದೀರಿ, ಈ ಸಮಿತಿಗೆ ಹೆಚ್ಚಿನ ಅಧಿಕಾರವಿದೆ. ಮತ್ತು ಈ ಸಮಿತಿ ವ್ಯಾಪ್ತಿಗೆ ಎಲ್ಲವೂ ಬರುತ್ತದೆ. ಆದರೆ ಸಮಿತಿಯನ್ನು ಹೊರಗೆ ಇಟ್ಟು ನನ್ನ ಇಚ್ಛೆ ಬಂದ ಹಾಗೆ ನಾನು ಮಾಡಿಸುತ್ತೇನೆಂದು ಸರ್ಕಾರ ಹೊರಟಿರುವುದು ಸರಿಯಲ್ಲ. ಆದ್ದರಿಂದ ತಮ್ಮ ಗಮನಕ್ಕೆ ಇದನ್ನು ತರಬೇಕಲ್ಲಾ, ತಾವೇ ರಚನೆ ಮಾಡಿರತಕ್ಕಂತಹ ಸಮಿತಿ, ಈ ಸಮಿತಿಯ ವ್ಯವಸ್ಥೆ ಏನು? ಮತ್ತು ಹೊರಗಡೆಯ ಪರಿಸ್ಥಿತಿಯನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಆದ್ದರಿಂದ ಅದನ್ನು ನಿಲ್ಲಿಸತಕ್ಕಂಥದ್ದು ಒಂದು. ಜೊತೆಗೆ ಮಂಗಳೂರು ಬಂದರಿನಿಂದ ಬೇರೆ ದೇಶಕ್ಕೆ ಹಡಗಿನಿಂದ ಹೋಗತಕ್ಕಂಥದ್ದನ್ನು ಈಗ ನಿಲ್ಲಿಸಬೇಕು. ತಕ್ಷಣದಿಂದ ತಡೆಯಾಜ್ಞೆಯನ್ನು ಮಾಡಬೇಕು. ಅದನ್ನು ನಾನು ತಮಗೆ ಹೇಳುತ್ತಿದ್ದೇನೆ.

12.30 ಪಿ.ಎಂ.

ಶ್ರೀ ಬಿ. ಚಂದ್ರಣ್ಣ : ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಆದರೆ ಇದಕ್ಕೆ ಬರತಕ್ಕ ಎಲ್ಲಾ ಇಲಾಖೆಯ ಅಧಿಕಾರಿಗಳನ್ನು ತಾವು ಕರೆಯಿಸಬೇಕಾಗುತ್ತದೆ. ಅಲ್ಲಿ ಬರತಕ್ಕ ವಿಷಯದಲ್ಲಿ ಒಬ್ಬಿಬ್ಬರು ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ದಯವಿಟ್ಟು ಅದನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಕೃಷ್ಣಪ್ಪ : ಈ ಗ್ರಾನೈಟ್ ವಿಷಯದಲ್ಲಿ ಸದನದ ಸಮಿತಿಯನ್ನು ನೇಮಿಸಿದ ಮೇಲೆ ಬಹುಶಃ ಈ ಫೇಕ್ ಎನ್ನತಕ್ಕ ಪರ್ಮಿಟ್ ಎಂದು ನಾವು ಏನು ಕರೆಯುತ್ತಿದ್ದೇವೆ, ಬರೀ ಪರ್ಮಿಟ್ ಇಷ್ಯೂ ಮಾಡುವುದು ಒಂದರಲ್ಲೇ ಅಲ್ಲ ಫೇಕ್ ಆಗಿರತಕ್ಕದ್ದು; ಕಮರ್ಷಿಯಲ್ ಟ್ಯಾಕ್ಸ್ ಇಲಾಖೆ ಕೂಡ, ಪರ್ಮಿಟ್‌ಗೂ ಅವರು ಕೊಟ್ಟಿರತಕ್ಕ ಫಾರಂ ನಂ. 39ಕ್ಕೂ ಏನೂ ಸಂಬಂಧ ಇಲ್ಲ, ಅದೂ ಸೇರಿದೆ. ಪೊಲೀಸ್ ಇಲಾಖೆಯವರು, ಒಂದು ದಾರಿಯಲ್ಲಿ ತೆಗೆದುಕೊಂಡು ಹೋಗಬೇಕಾದ ಕಲ್ಲು ಕೇವಲ 9 ಟನ್ನುಗೆ ಅವಕಾಶ ಇದ್ದಂಥ ಸಮಯದಲ್ಲಿ 20-25 ಟನ್ ಇರತಕ್ಕ ಗ್ರಾನೈಟ್ ಕಲ್ಲು ಸಾಗಿಸುವುದಕ್ಕೆ ಅವರೂ ಕೂಡ ಕೊಲೈಡ್ ಆಗಿದ್ದಾರೆ.

ಅಧ್ಯಕ್ಷರು : ಈಗ ಡೀಟೈಲ್ಸ್ ಬೇಡ. ಆಮೇಲೆ ಚರ್ಚೆ ಮಾಡೋಣ. ತಾವು ಸಮಿತಿಯ ಸದಸ್ಯರು, ತಮ್ಮ ಭಾವನೆಗಳು ನನಗೆ ಅರ್ಥವಾಗುತ್ತಿವೆ. ಆ ಎಲ್ಲಾ ವಿವರಗಳನ್ನು ಸಂಜೆ 4ಕ್ಕೆ ಸಭೆ ಸೇರಿದಾಗ ಚರ್ಚೆ ಮಾಡೋಣ. ಹೊಸದೇನಾದರೂ ಇದ್ದರೆ ಹೇಳಿ ಶಿವರಾಮು ಅವರೇ.

ಶ್ರೀ ಬಿ. ಶಿವರಾಮು : ಮಾನ್ಯ ಸದಸ್ಯರು ಈಗಾಗಲೇ ಹೇಳಿದ್ದಾರೆ. ಇದರ ಜೊತೆಗೆ ಸಾಕಷ್ಟು ಕಲ್ಲು ಹೋಗುತ್ತಿರತಕ್ಕದ್ದು ನೋಡಿದರೆ ಫಾರಂ ನಂ. 39 ಎಂದು ಏನು ಇದೆಯಲ್ಲಾ ಅದು ಬೋಗಸ್ ಎಂದು ಹೇಳುತ್ತೇನೆ.

ಶ್ರೀ ಬಿ.ಬಿ. ಶಿವಪ್ಪ : ಯಾವುದೇ ದಾರಿಯಲ್ಲಿ ಸಂಸ್ಥೆಯಿಂದ ಕೊಡತಕ್ಕ ಇನ್‌ವಾಯ್ಸ್ ಮತ್ತು ಸರ್ಕಾರದಿಂದ ಕೊಡತಕ್ಕ ಪರವಾನಗಿ ಇಲ್ಲದೆ ಕಲ್ಲು ಹೋಗುತ್ತಿದೆ ಎಂದರೆ ಅರ್ಥ ಏನೆಂಬುದನ್ನು ನಾವು ಯೋಚಿಸಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಸಂಜೆ 4 ಗಂಟೆಗೆ ಕರೆದಿದ್ದೀರಿ, ಅಲ್ಲಿ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳೋಣ. ಆದ್ದರಿಂದ ನಾನು ಈಗ ವಿವರಕ್ಕೆ ಹೋಗುವುದಿಲ್ಲ. ಆದರೆ ಒಂದು ಮಾತು, ಸರ್ಕಾರ ಇದೆ, ಪ್ರತಿನಿಧಿಗಳು ಇದ್ದಾರೆ, ಮಂತ್ರಿಗಳು ಇದ್ದಾರೆ. ಸಮಿತಿ ವರದಿ ಕೊಡುವರೆಗೆ ಒಂದು ಗ್ರಾನೈಟ್ ಕಲ್ಲೂ ಹೊರಗಡೆ ಹೋಗುವುದಕ್ಕೆ ನಾವು ಬಿಡುವುದಿಲ್ಲವೆಂದೂ, ಆರೀತಿ ಆದೇಶ ಕೊಡುತ್ತೇವೆಂದು ಅವರು ಹೇಳದೆ ಇದ್ದರೆ ತಾವು ಕೂಡಲೇ ಕರೆದು ಏನು ಮಾತನಾಡಿದರೂ ಸರ್ಕಾರ ಆಶ್ವಾಸನೆ ಕೊಟ್ಟಂತಾಗುವುದಿಲ್ಲ, ತಾವು ಬಿಗಿ ಮಾಡುತ್ತೀರಾ?

ಅಧ್ಯಕ್ಷರು : ನನ್ನ ಅಬ್ಸರ್ವೇಷನ್ಸ್ ಅನ್ನು ಕೇಳಿಬಿಡಿ. ಆಮೇಲೆ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸಮಿತಿ ಆದಮೇಲೆ ತರಾತುರಿಯಲ್ಲಿ ಪ್ರತಿದಿನ ನೂರಾರು ಲೋಡು ಕಲ್ಲು ಹೋಗುತ್ತಿದೆ. ಇದು ನಿಲ್ಲಬೇಕು. ನೂರಾರು ಕೋಟಿ ರೂಪಾಯಿ ಸರ್ಕಾರದ ಖಜಾನೆಗೆ ಬರುವಂಥ ತೆರಿಗೆ ಹಣ ಉಳಿಯಬೇಕೆಂದು ನಾವು ಅದಕ್ಕಾಗಿ ಧರಣಿಗೆ ಹೋದೆವು, ಧರಣಿ ಮಾಡಿದೆವು, ತಾವು ತಪ್ಪು ತಿಳಿದುಕೊಂಡಿರಿ, ಪತ್ರಿಕೆಯಲ್ಲಿ ಏನೆಲ್ಲ ಆಯಿತು, ತಾವು ನೋಡಿದ್ದೀರಿ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ತಾವು ತುಂಬಾ ಒಳ್ಳೆಯ ನಿಲುವು ತೆಗೆದುಕೊಂಡಿದ್ದೀರಿ, ತಾವು ಅಧಿಕಾರಿಗಳನ್ನು ಕರೆದು ಮಾತನಾಡಿ. ಮಾನ್ಯ ಉಪ ಮುಖ್ಯ ಮಂತ್ರಿಗಳು ಇದ್ದಾರೆ, ಈ ನಿಮಿಷದಿಂದ ಒಂದು ಗ್ರಾನೈಟ್ ಕಲ್ಲೂ ವರದಿ ಕೊಡುವವರೆಗೆ ಹೊರಗಡೆ ಹೋಗುವುದಕ್ಕೆ ಬಿಡುವುದಿಲ್ಲವೆಂಬ ಮಾತನ್ನು ಸಹ ಮಾನ್ಯ ಉಪಮುಖ್ಯ ಮಂತ್ರಿಗಳು ಹೇಳಲಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಈ ವಿಷಯವನ್ನು ಸದನದ ಸಮಿತಿ ಸೇರುವ ಮೊದಲನೇ ದಿನ ಪ್ರಸ್ತಾಪ ಮಾಡಿದ್ದೆ. ಆದರೆ ಸಂಬಂಧಪಟ್ಟ ಅಧಿಕಾರಿಗಳು ಏನು ಹೇಳಿದರು, ಆ ರೀತಿ ತಡೆಹಿಡಿಯುವುದಕ್ಕೆ ರೂಲ್ಸ್‌ನಲ್ಲಿ ಪ್ರಾವಿಷನ್ ಇಲ್ಲವೆಂದು ಹೇಳಿದರು. ರೂಲ್ಸ್‌ನಲ್ಲಿ ಪ್ರಾವಿಷನ್ ಇದೆ.

ಅಧ್ಯಕ್ಷರು : ಅಲ್ಲಿ ಚರ್ಚೆ ಮಾಡೋಣ. ನೀವು ರೂಲ್ಸ್ ಓದಿಕೊಂಡು ಬಂದಿದ್ದೀರಿ, ಬೆಳಿಗ್ಗೆ ನನಗೆ ಪುಸ್ತಕ ತೋರಿಸಿದಿರಿ, ನನಗೆ ನಿಮ್ಮ ಆರ್ಗ್ಯೂಮೆಂಟ್ ಕನ್‌ವಿನ್ಸ್ ಆಗಿದೆ. ಈ ಚರ್ಚೆಯನ್ನು ಅಲ್ಲಿ ಮಾಡೋಣ. ಈ ಗ್ರಾನೈಟಿಗೆ ಸಂಬಂಧಿಸಿದಂತೆ ಜಂಟಿ ಸದನದ ಸಮಿತಿಯನ್ನು ಏನು ಏರ್ಪಾಡು ಮಾಡಿದ್ದೇವೆ ಅದರ ತನಿಖಾ ಅವಧಿಯೊಳಗೆ ತನಿಖೆ ಮಾಡತಕ್ಕ ಸಂದರ್ಭದಲ್ಲಿ ನಿಮ್ಮ ಗಮನಕ್ಕೆ ಬಂದಂಥ ಕೆಲವು ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದೀರಿ. ಈ ಜಂಟಿ ಸದನದ ಸಮಿತಿ ಈ ಸದನದ ಅಭಿಪ್ರಾಯದ ಮೇರೆಗೆ ಉದ್ಭವವಾಗಿರತಕ್ಕದ್ದು. ಈ ಸದನದ ಪರಮೋಚ್ಚತೆಯನ್ನು ಸಾರ್ವಭೌಮತೆಯನ್ನು ಅಧಿಕಾರವನ್ನು ಯಾರೂ ಪ್ರಶ್ನೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಸತ್ಯವನ್ನು ಬಯಲಿಗೆ ಎಳೆಯಬೇಕೆಂಬ ದೃಷ್ಟಿಯಿಂದ ಏನು ಈ ಸಮಿತಿ ರಚನೆ ಮಾಡಿದ್ದೇವೆ ಅದು ಸಕ್ರಿಯವಾಗಿ ಕೆಲಸ ಮಾಡುವುದಕ್ಕೆ ಎಲ್ಲಾ ಸಹಕಾರವನ್ನು ಸದನ ಕೊಡುತ್ತದೆ. ಅದರ ಬಗ್ಗೆ ಕೂಲಂಕಷವಾದ ಚರ್ಚೆಯನ್ನು ಸಾಯಂಕಾಲ 4 ಗಂಟೆಗೆ ಏನು ಸಭೆ ಕರೆದಿದ್ದೇವೆ ಅಲ್ಲಿ ಮಾಡೋಣ. ಈ

ವಿಚಾರವನ್ನು ಇಲ್ಲಿಗೆ ಮುಕ್ತಾಯ ಮಾಡೋಣ. ಇದರ ಬಗ್ಗೆ ಮತ್ತೆ ಪ್ರಸ್ತಾಪ ಬೇಡ. ಈಗ ಖರ್ಗೆಯವರು, ತಾವು ಬೇರೆ ವಿಷಯ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೇಳಿದ್ದೀರಿ.

(iii) ಶಿವಮೊಗ್ಗ ಮತ್ತು ಕುಣಿಗಲ್ ಗಣೇಶ ಉತ್ಸವದ ಸಂದರ್ಭದಲ್ಲಿ ನಡೆದ ಘಟನೆಗಳ ಬಗ್ಗೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, 8ನೇ ತಾರೀಖು ಶಿವಮೊಗ್ಗದಲ್ಲಿ ನಡೆದಂಥ ಘಟನೆ ಮತ್ತು 6ನೇ ತಾರೀಖು ಕುಣಿಗಲ್‌ನಲ್ಲಿ ನಡೆದಂತ ಘಟನೆ ಮತ್ತು ನಿನ್ನೆ ಕೂಡ ಅಲ್ಲಿ ಒಬ್ಬ ಯುವಕ ತೀರಿಕೊಂಡಿದ್ದಾನೆ. ಅದೇ ರೀತಿ ಬೆಳಗಾಂನಲ್ಲಿ ಗಣಪತಿ ಉತ್ಸವದ ಪರಿಣಾಮವಾಗಿ ನಿನ್ನೆ ಕೂಡ ಅಲ್ಲಿ ಕಾರು ಮತ್ತು ಮೋಟಾರು ಬೈಕ್ ಅನೇಕ ಅಂಗಡಿಗಳ ಲೂಟಿ ಇವೆಲ್ಲ ನಡೆದಿದೆ. ಇದೇ ರೀತಿ ಸಣ್ಣಪುಟ್ಟ ಘಟನೆಗಳು ಇದೇ ಗಣಪತಿ ಪ್ರೊಸೆಷನ್ ತೆಗೆಯುವಾಗ ಅನೇಕ ಕಡೆ ನಡೆದಿವೆ. ನಮಗೆಲ್ಲರಿಗೂ ಗೊತ್ತಿದೆ, ಇಂಥ ಘಟನೆಗಳು ನಡೆಯಬಾರದೆಂದು ಪೋಲೀಸ್ ಬಂದೂಬಸ್ತ್ ಮತ್ತು ಸರ್ಕಾರ ಕೂಡ ಸಾಕಷ್ಟು ಪ್ರಿಕಾಷನ್ ತೆಗೆದುಕೊಂಡು ಪ್ರಯತ್ನ ಮಾಡಿದೆ. ಇಷ್ಟಾದರೂ ಕೂಡ, ನಾವು ಈ ಸದನದಲ್ಲಿ ಇದರ ಬಗ್ಗೆ ಅನೇಕ ಸಾರಿ ಪ್ರಸ್ತಪ ಮಾಡಿದ್ದೇವೆ. ತಮಗೆ ಗೊತ್ತಿದೆ, ಬೆಳಗಾಂ ಘಟನೆ ಬಗ್ಗೆ ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಮತ್ತು ವಿರೋಧ ಪಕ್ಷದ ನಾಯಕರು ಇಲ್ಲಿ ಪ್ರಸ್ತಾಪ ಮಾಡಿದ್ದರು. ಪದೇ ಪದೇ ನಾವು ಹೇಳಿದರೂ ಕೂಡ ಈ ಘಟನೆಗಳು ಏಕೆ ನಡೆಯುತ್ತಿದೆ? ಇದು ನನಗೆ ಅರ್ಥವಾಗುತ್ತಿಲ್ಲ. ಇದರ ಹಿನ್ನೆಲೆ ಏನು? ಇದರ ಹಿಂದೆ ಯಾರಿದ್ದಾರೆ? ಶಿವಮೊಗ್ಗದಲ್ಲಿ 8ನೇ ತಾರೀಖು ಘಟನೆ ನಡೆಯುವಾಗ ಪ್ರೊಸೆಷನ್ ಮಧ್ಯಾಹ್ನ ಪ್ರಾರಂಭವಾಯಿತು. ಮೂರು ಗಂಟೆಗೆ ಸ್ಟ್ಯಾಬಿಂಗ್ ಇನ್ಸಿಡೆಂಟ್ ನಡೆಯಿತು. ನನಗೆ ಗೊತ್ತಿದ್ದ ಹಾಗೆ ಸ್ಟ್ಯಾಬಿಂಗ್ ಇನ್ಸಿಡೆಂಟ್‌ನಿಂದಾಗಿ ಆಸ್ಪತ್ರೆಯಲ್ಲಿ ಒಬ್ಬರು ತೀರಿಕೊಂಡಿದ್ದಾರೆಂಬ ವರ್ತಮಾನ ಬಂದಿದೆ. ಅದೇ ರೀತಿ ಕುಣಿಗಲ್‌ನಲ್ಲಿ ಏನು 6ನೇ ತಾರೀಖು ಗಣಪತಿ ಪೆಂಡಾಲ್ ಸುಟ್ಟು ಹೋಯಿತು, ಸುಟ್ಟು ಹೋದ ಮೇಲೆ ಅದೇ ಕಾರಣ ಎಂದು ನೆಪ ಮುಂದೆ ಮಾಡಿ ಮೊನ್ನೆ ತಮ್ಮ ಕುಣಿಗಲ್‌ನಲ್ಲಿ ಒಬ್ಬ ಗೋವಿಂದಯ್ಯ ಎಂಬ ಯುವಕನಿಗೆ ಮಚ್ಚಿನಿಂದ, ಕೊಡಲಿಯಿಂದ ಮತ್ತು ಚಾಕುವಿನಿಂದ ಸ್ಟ್ಯಾಬ್ ಮಾಡಿ ಇವತ್ತು ಅವನು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ತೀರಿಕೊಂಡಿದ್ದಾನೆ. ಬೆಳಗಾಂನಲ್ಲಿ ಕೂಡ ಇಷ್ಟು ಪ್ರಿಕಾಷನ್ಸ್ ತೆಗೆದುಕೊಂಡರೂ ಕೂಡ ಅಲ್ಲ ಒಂದು ಪ್ರೊಸೆಷನ್ ಮುಗಿದ ಮೇಲೆ ಪುನಃ ಕೆಲವು ಜನ ಅದಕ್ಕೆ ಪ್ರೋತ್ಸಾಹ ನೀಡಿ ಅಂಗಡಿಗಳನ್ನು ಲೂಟಿ ಮಾಡತಕ್ಕದ್ದು ಸ್ಕೂಟರ್ ಸುಡತಕ್ಕದ್ದು ಮತ್ತು ಕೆಲವು ಅಂಗಡಿಗಳ ಮೇಲೆ ಕಲ್ಲು ತೂರಾಟ ಮಾಡತಕ್ಕದ್ದು ಮಾಡಿದ್ದಾರೆ. ಇದರ ಹಿನ್ನೆಲೆ ಏನು? ಏಕೆ ಘಟನೆಗಳು ಆಗುತ್ತಿವೆ.

ಇದು ಸರ್ಕಾರಕ್ಕೆ ಗೊತ್ತಿದ್ದರೂ ಕೂಡ ನೀವು ಮುಂಜಾಗರೂಕತೆ ಅಥವಾ ಮುಂದಿನ ಕ್ರಮ ಏತಕ್ಕೆ ತೆಗೆದುಕೊಂಡಿಲ್ಲ, ಪ್ರಿಕಾಷನ್ ಏತಕ್ಕೆ ತೆಗೆದುಕೊಂಡಿಲ್ಲ? ಇದನ್ನು ನಾನು ಕೇಳಬಯಸುತ್ತೇನೆ. ಒಂದು ವೇಳೆ ಇದೇ ರೀತಿ ಬಿಟ್ಟರೆ ಇವತ್ತು ಕುಣಿಗಲ್‌ನಲ್ಲಿ ಘಟನೆ ಆಗುವುದಕ್ಕೆ ಕಾರಣವೇನೆಂದರೆ ಮಾನ್ಯ ಮುಖ್ಯ ಮಂತ್ರಿಗಳು ತುರುವೇಕೆರೆಗೆ ಸರ್ಕಾರಿ ಫಂಕ್ಷನ್‌ಗೆ ಬರುತ್ತಾರೆಂದು ಅಲ್ಲಿನ ಬಂದೋಬಸ್ತ್‌ಗೆ ಇಲ್ಲಿರತಕ್ಕ ಪೊಲೀಸರನ್ನು ಅಲ್ಲಿ ತೆಗೆದುಕೊಂಡು ಹೋದಕಾರಣಕ್ಕಾಗಿ, ಇಲ್ಲಿನ ಪೊಲೀಸ್ ವ್ಯಾನ್ ಮತ್ತು ಸ್ಪೆಷಲ್ ಪೊಲೀಸ್ ಫೋರ್ಸ್ ಅಲ್ಲಿ ತೆಗೆದುಕೊಂಡು ಹೋದ ಕಾರಣಕ್ಕೆ ಇಲ್ಲಿ ಘಟನೆ ನಡೆಯಿತು. ಏಕೆಂದರೆ ಅವತ್ತು ಯಾವ ಪೊಲೀಸರು ಅಲ್ಲಿರಲಿಲ್ಲ ಎಂಬ ಪ್ರಶ್ನೆ ನಮ್ಮ ಮುಂದೆ ಬಂದಿದೆ. ಅದೇ ರೀತಿ ವೀರಪ್ಪನ್ ವಿಚಾರ ಕೂಡ. ಪುಣಜೂರಿನಲ್ಲಿ ಕೂಡ ಹೀಗೇ ಆದದ್ದು. ಅಲ್ಲಿ ವ್ಯಾನ್ ಷಿಫ್ಟ್ ಮಾಡಿದ ಮೇಲೆ

ಈ ಘಟನೆ ನಡೆದದ್ದು. ಅನೇಕ ಕಡೆ ಗೊತ್ತಿದ್ದರೂ ಕೂಡ ಪೊಲೀಸ್ ಫೋರ್ಸ್ ಏತಕ್ಕೆ ವಿತ್ ಡ್ರಾ ಮಾಡುತ್ತೀರಿ? ತುರುವೇಕೆರೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಫಂಕ್ಷನ್ ಇದ್ದಿದ್ದರೆ ನೀವು ನೇರವಾಗಿ ಬೇರೆಯಾವುದಾದರೂ ಫೋರ್ಸ್ ತೆಗೆದುಕೊಂಡು ಅಥವಾ ಅಡಿಷನಲ್ ಫೋರ್ಸ್ ತರಿಸಿ ಅವರ ಕಾರ್ಯಕ್ರಮವನ್ನು ಯಶಸ್ವಿ ಮಾಡಬಹುದಿತ್ತು.

ಕುಣಿಗಲ್‌ನಲ್ಲಿ ಟೆನ್‌ಷನ್ ಇದೆ ಎಂದು ಗೊತ್ತಿತ್ತು. ಪದೇ ಪದೇ ಅಲ್ಲಿ ಇಂಥ ಘಟನೆಗಳು ನಡೆಯುತ್ತವೆಂದು ಗೊತ್ತಿದ್ದರೂ ಕೂಡ ಪೊಲೀಸ್ ಫೋರ್ಸ್ ಏತಕ್ಕೆ ವಿತ್‌ಡ್ರಾ ಮಾಡಿದಿರಿ? ಇದನ್ನು ತಾವು ಸ್ಪಷ್ಟಪಡಿಸಬೇಕಾಗುತ್ತದೆ. ಇಲ್ಲದಿದ್ದರೆ ಏನಾಗುತ್ತದೆ, ನಾವು ಸುಮ್ಮನೆ ಕೇಳುವುದು, ತಾವು ಸುಮ್ಮನೆ ನಿಮ್ಮ ಕಾಲದಲ್ಲಿ ನಮ್ಮ ಕಾಲದಲ್ಲಿ ನಡೆಯಿತು ಎಂದು ಅದೇ ಚರ್ಚೆ ಜಾಸ್ತಿಯಾಗಿದೆ. ನೀವು ಏನು ಮಾಡಿದಿರಿ ಎಂದು ನಾವು ಕೇಳುವುದಕ್ಕೆ ಹೋದರೆ, ಹಿಂದೆ ಆಗಿಲ್ಲವೇನು ಎಂಬ ಪ್ರಶ್ನೆಯನ್ನು ಸಾಕಷ್ಟು ಸಮಯ ನೀವು ಹಾಕಿದ್ದೀರಿ. ಹೀಗಾದರೆ ನಾವಾದರೂ ನಾವಾದರೂ ಶಿಕ್ಷೆಗೆ ಗುರಿಯಾದೆವು, ಜನರು ನಮಗೆ ಶಿಕ್ಷೆ ಕೊಟ್ಟರು. ಆದರೆ ಮಾನ್ಯ ಮುಖ್ಯ ಮಂತ್ರಿಗಳನ್ನು ಪದೇ ಪದೇ ನಾವು ಕೇಳುವುದು ಇವತ್ತು ವಾಸುದೇವನ್ ಕೇಸ್ ಬಂತು, ನಿಮ್ಮ ಸರ್ಕಾರ ಮಾಡಿದ್ದುದು ಎಂದು ಇನ್ನೊಂದು ಮಾತು ಬಂತು. ಇವರಿಗೆ ಒಂದು ಏನಾಗಿದೆ ಎಂದರೆ ಯಾವುದೋ ಒಂದು ರೀತಿಯಿಂದ ನೆಪ ಹೇಳಿಕೊಂಡು ನಡೆದುಕೊಂಡು ಹೋಗತಕ್ಕದ್ದು. ಅದಕ್ಕೆ ನಾನು ಅವರಿಗೆ ಕೇಳುತ್ತೇನೆ, ಈ ಮೂರು ಘಟನೆಗಳು ಏನು ನಡೆದಿವೆ ಇದರ ಹಿನ್ನೆಲೆ ಏನು? ಶಿವಮೊಗ್ಗದಲ್ಲಿಯೂ ಕೂಡ ಅಲ್ಲಿರತಕ್ಕ ಹಿಂದೂ ಮಹಾಸಭೆ ಸಂಘಟನೆಯಾಗಿ ಪ್ರೊಸೆಷನ್ ಪ್ರಾರಂಭ ಮಾಡಿದಾಗ ಅಲ್ಲಿನ ಅಹಮದ್ ಸರ್ಕಲ್‌ನಲ್ಲಿ ಕಲ್ಲು ತೂರಾಟ ಮಾಡಿದರು ಎಂಬ ಒಂದು ಸುದ್ದಿ ಇದೆ. ಮತ್ತು ಅನೇಕ ಅಂಗಡಿಗಳ ಮೇಲೂ ಕೂಡ ಕಲ್ಲು ಹೊಡೆದರು ಎನ್ನತಕ್ಕ ಸುದ್ದಿ ಇದೆ. ಅನೇಕ ಪೂಜೆ ಮಾಡತಕ್ಕ ಸ್ಥಳಗಳು ಅದು ಗುಡಿ ಇರಬಹುದು, ಗುಂಡಾರ ಇರಬಹುದು, ಮಸೀದಿ ಇರಬಹುದು ಅದರ ಮೇಲೂ ಕಲ್ಲು ಹೊಡೆದು ಜನರನ್ನು ಪ್ರಚೋದನೆ ಮಾಡತಕ್ಕದ್ದು ನಡೆದಿದೆ. ಅದಕ್ಕೆ ಈ ಘಟನೆಗಳ ಬಗ್ಗೆ ನಿಮಗೆ ಗೊತ್ತಿದ್ದರೂ ಪುನಃ ಪುನಃ ಇದು ಏತಕ್ಕಾಗುತ್ತಿದೆ ಎಂಬ ಬಗ್ಗೆ ತಾವು ಸ್ವಲ್ಪ ಮಾಹಿತಿ ಕೊಟ್ಟರೆ ಒಳ್ಳೆಯದಾಗುತ್ತದೆ. ಮತ್ತು ಈಗ ಏನು ಲೋಪದೋಷ ಆಗದೆ ಕುಣಿಗಲ್ ಮತ್ತು ಬೇರೆ ಕಡೆ ಇದಕ್ಕೆ ತಾವು ನೇರ ಹೊಣೆಯನ್ನು ಹೊತ್ತು ಕೊಳ್ಳಬೇಕಾಗುತ್ತದೆ. ಏಕೆಂದರೆ ಮುಖ್ಯಮಂತ್ರಿಗಳ ಸಂರಕ್ಷಣೆಗೆ ಪೋಲೀಸರು ಹೋಗುತ್ತಿದ್ದರು ಬೇರೆಯವರು ಸಾಯುತ್ತಿದ್ದರು ಅಂದರೆ ಇವರ ಜೀವ ಮಹತ್ವ ಏನಲ್ಲ ಎಂಬ ಪ್ರಶ್ನೆ ಬರುತ್ತದೆ.

ಅಧ್ಯಕ್ಷರು : ಮಾನ್ಯ ಮುದ್ದಹನುಮೇಗೌಡರು ಬಂದು ನನ್ನನ್ನು ಕೇಳಿದರು. ನಾನು ಬೇರೆಯವರಿಗೂ ಅವಕಾಶ ಕೊಡುತ್ತೇನೆ. ನನಗೆ ನೆನಪಿದೆ ಯಾರುಯಾರು ಬಂದು ಕೇಳಿದ್ದಾರೆ ಎಂದು. ನನಗೆ ಗೊತ್ತಿದೆ. ಅನುಮತಿ ಕೊಡುತ್ತೇನೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಸನ್ಮಾನ್ಯ ಸಭಾಧ್ಯಕ್ಷರೆ, ಕುಣಿಗಲ್‌ನಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ ಇದೆ ಎಂಬ ಬಗ್ಗೆ ತನಗೆಲ್ಲಾ ಗೊತ್ತಿದೆ. ನಿನ್ನೆ ದಿವಸ ಮಾನ್ಯ ಗೃಹಸಚಿವರೂ ಕೂಡ ಅಲ್ಲಿಗೆ ಭೇಟಿ ಕೊಟ್ಟಿದ್ದಾರೆ. ನಾನಾದರೂ ಕೂಡ ಒಂದು ವಿಷಯವನ್ನು ಹೇಳಲಿಕ್ಕೆ ಇಷ್ಟಪಡುತ್ತೇನ. ಪದೇ ಪದೇ ಏನು ಕುಣಿಗಲ್ ಪಟ್ಟಣದಲ್ಲಿ ಇಂಥಹ ಪ್ರಕರಣ ನಡೆಯುತ್ತಿದೆ ಇದರ ಹಿನ್ನೆಲೆ ನೋಡಿದಾಗ ಯಾವುದೋ ವಿಚ್ಛಿದ್ರಕಾರಕ ಶಕ್ತಿ ಮತ್ತು ದುಷ್ಕರ್ಮಿಗಳು ಕೆಲವರು ಅವರ ಸ್ವಾರ್ಥಕ್ಕೋಸ್ಕರ ಇಂಥ ಪರಿಸ್ಥಿತಿ ನಿರ್ಮಾಣ ಮಾಡುತ್ತಿದ್ದಾರೆ ಎನ್ನುವುದರ ಬಗ್ಗೆ ಈವತ್ತು ಸಾರ್ವಜನಿಕರಲ್ಲಿ ಸಹಜವಾಗಿ ಒಂದು ಶಂಕೆ ಮೂಡಿದೆ. ಮತ್ತೆ ಇದರ ಜೊತೆಗೆ ಏನಾಗಿದೆ ಪದೇ

ಪದೇ ಜರುಗುತ್ತಿರುವ ಇಂಥಹ ಕೃತ್ಯಗಳಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತಿದೆ. ಆದ್ದರಿಂದ ನಾನು ಸರ್ಕಾರಕ್ಕೆ ಒಂದು ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏತಕ್ಕೆ ಪದೇ ಪದೇ ಇಂಥಹ ಘಟನೆ ಕುಣಿಗಲ್‌ನಲ್ಲಿ ನಡೆಯುತ್ತಿದೆ ಇದಕ್ಕೆ ಯಾರು ಮೂಲ ಕಾರಣರು? ಇದರ ಹಿಂದೆ ಯಾರಾದರೂ ಕೂಡ ಒಂದು ವಿಚ್ಛಿದ್ರಕಾರಿ ಶಕ್ತಿ ಅಥವಾ ದುಷ್ಕರ್ಮಿಗಳು ಇಂಥ ಪರಿಸ್ಥಿತಿ ನಿರ್ಮಾಣ ಮಾಡಿ ಅದರ ಲಾಭ ಪಡೆಯಲಿಕ್ಕೆ ಪ್ರಯತ್ನ ಮಾಡುತ್ತಿದ್ದರೆ, ಈ ಬಗ್ಗೆ ಮತ್ತು ದಿನಾಂಕ 3-9-95, 6-9-95 ಮತ್ತು 9-9-95 ಈ ಮೂರು ದಿವಸ ಸತತವಾಗಿ ಏನು ಅಲ್ಲಿ ಒಂದು ಘಟನೆ ನಡೆದಿದೆ ಈ ಘಟನೆಗಳ ಇನ್‌ವೆಸ್ಟಿಗೇಷನನ್ನು ದಯಮಾಡಿ ಸಿ.ಓ.ಡಿ.ಗೆ ವಿಶಿಷ್ಟವಾಗಿ ನೇಮಕ ಮಾಡಿ ವಹಿಸಬೇಕು ಎನ್ನುವುದರ ಜೊತೆಗೆ ಕುಣಿಗಲ್ ಪಟ್ಟಣದಲ್ಲಿ ಇಂಥ ಘಟನೆಗಳು ಪುನರಾವರ್ತನೆಯಾಗದಂತೆ ಸರ್ಕಾರ ಮುನ್ನೆಚ್ಚರಿಕೆ ಕ್ರಮವನ್ನು ಜರಗಿಸಬೇಕು ಎನ್ನುವ ಮಾತನ್ನು ಹೇಳುವುದರ ಜೊತೆಗೆ ಈ ಸದನದ ಮೂಲಕ ನಾನಾದರೂ ಕೂಡ ಕುಣಿಗಲ್ ತಾಲ್ಲೂಕಿನ ಜನತೆಯನ್ನು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ. ದಯಮಾಡಿ ಕೋಮು ಸೌಹಾರ್ದತೆಯನ್ನು ಕಾಪಾಡಬೇಕು ಮತ್ತು ಇಂಥಹ ಘಟನೆಗಳು ಜರಗದಂತೆ ತಾವು ನೋಡಿಕೊಳ್ಳಬೇಕು, ಈ ಪಟ್ಟಣದಲ್ಲಿ ಶಾಂತಿಯನ್ನು ಕಾಪಾಡತಕ್ಕಂಥ ಒಂದು ಕೆಲಸವನ್ನು ತಾವು ಸಂಪೂರ್ಣ ಸಹಕಾರ ಕೊಟ್ಟು ಮಾಡಬೇಕು ಎನ್ನುವುದರ ಜೊತೆಗೆ ನಾನು ಮತ್ತೊಮ್ಮೆ ಮಾನ್ಯ ಗೃಹ ಸಚಿವರನ್ನು ಒತ್ತಾಯ ಮಾಡುತ್ತೇನೆ. ಈ ಎಲ್ಲಾ ಹಿನ್ನೆಲೆಯನ್ನು ಮತ್ತು ಈ ಮೂರು ಘಟನೆಗಳು ಏನು ನಡೆದಿವೆ ಅವುಗಳ ಬಗ್ಗೆ ತನಿಖೆಯನ್ನು ಮಾಡಲು ದಯಮಾಡಿ ಸಿ.ಓ.ಡಿ.ಗೆ ವಹಿಸಿಕೊಡಬೇಕು ಎಂದು ತಮ್ಮ ಮೂಲಕ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಸನ್ಮಾನ್ಯ ಅಧ್ಯಕ್ಷರೆ, ಮೊನ್ನೆ 8ನೇ ತಾರೀಖು ಅಸೆಂಬ್ಲಿ ಬಿಟ್ಟು ನಾನು ಶಿವಮೊಗ್ಗಕ್ಕೆ ಹೋಗಿದ್ದೆ. ಕಳೆದ ಆರು ವರ್ಷಗಳಿಂದ ನಾನು ಶಾಸಕನಾಗಿದ್ದೇನೆ. 6 ವರ್ಷದಲ್ಲಿ ಶಿವಮೊಗ್ಗದಲ್ಲಿ ಒಂದೂ ಗಲಾಟೆಯಾಗಿರಲಿಲ್ಲ. ನನಗನ್ನಿಸುತ್ತದೆ. ಶಿವಮೊಗ್ಗ ಇರಲಿ, ಕುಣಿಗಲ್ ಇರಲಿ ಈ ರೀತಿ ಗಲಭೆ ನಡೆದಿರುವ ದೃಷ್ಟಿ ನೋಡಿದರೆ ಯಾರೋ ಹಿಂದೂಗಳು ಮಾಡುತ್ತಿದ್ದಾರೆ ಯಾರೋ ಮುಸಲ್ಮಾನರು ಮಾಡುತ್ತಿದ್ದಾರೆ ಎಂಬ ಭಾವನೆ ನನಗಂತೂ ಇಲ್ಲ. ಯಾರೋ ಒಂದು ರೀತಿ ರಾಕ್ಷಸರು ಈ ಒಂದು ದುಷ್ಕೃತ್ಯಗಳಲ್ಲಿ ತೊಡಗುತ್ತಿದ್ದಾರೆ. ಇವರನ್ನು ಹದ್ದು ಬಸ್ತಿನಲ್ಲಿ ತರುವುದಕ್ಕೆ ಸರ್ಕಾರದ ಕಡೆಯಿಂದ ಪೋಲೀಸ್ ಇಲಾಖೆ ಏನು ಶಕ್ತಿ ಹಾಕಬೇಕಾಗಿತ್ತೋ ಆ ಶಕ್ತಿ ಹಾಕುವುದರಲ್ಲಿ ವಿಫಲವಾಗಿದೆ ಎಂದು ನನಗನ್ನಿಸುತ್ತಾ ಇದೆ. ಏತಕ್ಕೆಂದರೆ ಮೆರವಣಿಗೆ ಆಗುತ್ತಾ ಇರುವಂಥ ಸಂದರ್ಭದಲ್ಲಿ ಕೆಲವು ದುಷ್ಕರ್ಮಿಗಳು ಒಂದಿಷ್ಟು ದುಷ್ಕೃತ್ಯಗಳನ್ನು ಮಾಡಿದರೆ ಅದೇ ಸಂದರ್ಭದಲ್ಲಿ, ಆ ಸಂದರ್ಭಕ್ಕಿಂತ ಮುಂಚೆಯೇ ಊರಿನಿಂದ ಹೊರಗಡೆ ಚಾಕು ಹಾಕುವುದು, ಒಟ್ಟೊಟ್ಟಿಗೆ 100 ಜನ 200 ಜನ ಕೈಯಲ್ಲಿ ದೊಡ್ಡ ದೊಡ್ಡ ಕತ್ತಿ ಇಟ್ಟುಕೊಂಡು ಓಡಾಡುವುದು ಇದೆಲ್ಲಾ ನಡೆಯುತ್ತಾ ಇದೆ. ಇದರ ಅರ್ಥ ಪೂರ್ವಯೋಜಿತ ಶಕ್ತಿಗಳು ಈ ಒಂದು ಕೃತ್ಯಗಳನ್ನು ಮಾಡುತ್ತಿವೆ ಎಂದು ಮೇಲ್ನೋಟಕ್ಕೇ ಕಂಡು ಬರುತ್ತಿದೆ.

ಇದು ಕಳೆದ ವರ್ಷವೂ ಅಷ್ಟೆ ಹಿಂದು ಮಹಾಮಂಡಲಿ ಗಣಪತಿ 50 ವರ್ಷದ ಗಣಪತಿಯನ್ನು ಕಳೆದ ವರ್ಷ ಬಿಟ್ಟಿತ್ತು. ಸುಮಾರು 50 ಸಾವಿರಕ್ಕೂ ಹೆಚ್ಚು ಜನ ತುಂಬಾ ಶಾಂತಿಯಿಂದ ಮೆರವಣಿಗೆ ಮಾಡಿದರೂ ಒಂದೇ ಒಂದು ಸಣ್ಣ ಘಟನೆಯೂ ಕೂಡ ಕಳೆದ ವರ್ಷ ನಡೆಯಲಿಲ್ಲ. ಆದರೆ ಮೆರವಣಿಗೆ ಮುಗಿದು ಎಲ್ಲಾ ಆದನಂತರ ಕೊನೆಯಲ್ಲಿ ಊರಿನಿಂದ ಹೊರಗಡೆ ಒಂದು ಕಾಲೇಜು ಹತ್ತಿರ ಒಬ್ಬ ಹಿಂದೂ ವ್ಯಕ್ತಿಯ ಕೊಲೆಯಾಗಿದೆ. ಈ ಬಾರಿ ಕೂಡ ಅದೇ ರೀತಿ ಆಗಿದೆ. ಮೆರವಣಿಗೆ ಆಗುತ್ತಿರುವ ಜಾಗ ಬೇರೆ ಕೊಲೆಯಾಗಿರುವ ಜಾಗ ಬೇರೆ ಟಿಪ್ಪೂ

ನಗರ ಅಂತ. ನಾನು ಅದಕ್ಕೋಸ್ಕರ ಸರ್ಕಾರವನ್ನು ಈ ಸಂದರ್ಭದಲ್ಲಿ ಒತ್ತಾಯ ಮಾಡುವುದು ಇಷ್ಟೇ. ದುಷ್ಕರ್ಮಿಗಳು ಯಾರು ಎಂಬುದು ತಮಗೆ ಗೊತ್ತಿದೆ. ಪೋಲೀಸ್ ಇಲಾಖೆಗೆ ಗೊತ್ತಿದೆ, ಗೊತ್ತಿಲ್ಲ ಅಂತ ಅಲ್ಲ.ಈ ರೀತಿ ಘಟನೆ ನಡೆಯುವಂಥ ಸಂದರ್ಭದಲ್ಲಿ,

ಏತಕ್ಕೆ ಅವರನ್ನು ಬಂಧಿಸುವುದಿಲ್ಲ, ಅವರು ಹಿಂದೂಗಳಿರಲಿ ಮುಸಲ್ಮಾನರಿರಲಿ, ಮುಂಚೆಯೇ ಅವರನ್ನು ಬಂಧಿಸಿ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಇಡೀ ಕರ್ನಾಟಕ ರಾಜ್ಯಕ್ಕೆ ಹಿಂದೂ ಮಹಾಸಭಾ ಮಂಡಲಿಯ ಗಣಪತಿ ಹೋಗುವ ಸಂದರ್ಭದಲ್ಲಿ ಏನೋ ಒಂದಿಷ್ಟು ಗಲಾಟೆಯಾಗುತ್ತದೆ ಎನ್ನುವ ಭಾವನೆ ಇದೆ. ಇದು ಗೊತ್ತಿದ್ದರೂ ಕೂಡ ಸರ್ಕಾರ ಪೋಲೀಸ್‌ಶಕ್ತಿ ಏತಕ್ಕೆ ಜಾಸ್ತಿ ಹಾಕುವುದಿಲ್ಲ? ನನಗಂತೂ ಅರ್ಥವಾಗುವುದಿಲ್ಲ. ಸತ್ತ ವ್ಯಕ್ತಿಗಳಿಗೆ ಸರ್ಕಾರ ಪರಿಹಾರ ಕೊಡುತ್ತದೆ, ಕೂಡಲಿ. ಆದರೆ ಪ್ರತಿವರ್ಷ ಕೂಡ ಇದು ಒಂದು ರೀತಿಯ ಭಯ ಆಗುತ್ತಿದೆ ಶಿವಮೊಗ್ಗ ನಗರದಲ್ಲಿ ಮತ್ತು ಇಡೀ ರಾಜ್ಯದಲ್ಲಿ. ಇದಕ್ಕೆ ಕೊನೆ ಏನು? ಸರ್ಕಾರ ಇದನ್ನು ಏನಾದರೂ ಮಾಡಿ ಕೊನೆಗಾಣಿಸಬೇಕು. ದುಷ್ಕೃತ್ಯ ವ್ಯಕ್ತಿಗಳ ಹಾಗೂ ಕೊಲೆಗಡುಕರ ಬಗ್ಗೆ ಸರ್ಕಾರ ಗಮನ ಕೊಡಬೇಕು ಎಂದು ಹೇಳಿ ಸತ್ತಂಥ ವ್ಯಕ್ತಿ ಕೊರಮ ಜನಾಂಗದ ವ್ಯಕ್ತಿ. ಕೂಲಿ ಮಾಡುವವನು. ಅವರ ಕುಟುಂಬದವರಿಗೆ ತಕ್ಷಣ ಸರ್ಕಾರ ಪರಿಹಾರ ಕೊಡಬೇಕು ಎಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಎಚ್. ಪಟೇಲ್ : ರಾಜ್ಯದ ಬೇರೆ ಕಡೆಯ ವಿಚಾರವನ್ನು ಗೃಹಸಚಿವರು ಹೇಳುತ್ತಾರೆ. ಮಾನ್ಯ ಖರ್ಗೆಯವರು ಪ್ರಸ್ತಾಪ ಮಾಡಿದ್ದಾರೆ. ಶಿವಮೊಗ್ಗದ್ದು ಮಾನ್ಯ ಶಾಸಕರು ಹೇಳಿದ ಬಗ್ಗೆ ನಾನು ಹೇಳುತ್ತೇನೆ. ಅಲ್ಲಿ ಶಾಸಕರೇ ಸ್ವತಃ ನಿಂತು ಅದನ್ನು ನಿಯಂತ್ರಣಕ್ಕೆ ತರುವುದಕ್ಕೋಸ್ಕರ ಪ್ರಯತ್ನ ಮಾಡಿದ್ದಾರೆ. I admire him ಪೋಲೀಸರ ಇನ್ ಎಫಿಶಿಯೆನ್ಸಿ ಅಂತ ಅಲ್ಲ. Anti-Social elements actually they have done. There was no political party involved. No political party supported it. Anti-social elements who were trying to have some revenge with the police for some other reason, ಯಾವುದೋ ಮರ್ಡರ್ ಕೇಸ್‌ನಲ್ಲೋ ಅಥವಾ ಮತ್ತೊಂದು ಕೇಸಿನಲ್ಲೋ ಅದು ಆಗಿದೆ. ಪೋಲೀಸರು ನಿಜವಾಗಿಯೂ ಶ್ಲಾಘನೀಯವಾದ ಕೆಲಸವನ್ನು ಮಾಡಿದ್ದಾರೆ. ಅವರೇ ಸ್ವತಃ ಹೊಡೆಸಿಕೊಂಡರು. ನಾನು ಆ ದಿವಸ. I was in touch with the police and the administration ಯಾವುದೇ ಕಾರಣಕ್ಕೆ ಗೋಲೀಬಾರ್ ಮಾಡಬೇಡಿ ಎಂದು ಹೇಳಿದ್ದೆ. ಶಾಸಕರೂ ಇದ್ದರಂತೆ, ಅವರು ಹೇಳಿದರು-ಶಾಸಕರೂ ಕೂಡ ಪ್ರಯತ್ನ ಮಾಡಿದರು ಆಯನೂರು ಮಂಜುನಾಥ್ ಇದ್ದರು ಎಂದು ಹೇಳಿದರು. ಸಮಾಜಘಾತುಕ ಶಕ್ತಿಗಳಾಗಿರುವುದರಿಂದ ಇದನ್ನು ಹತೋಟಿಗೆ ತರೋಣ. ನಾವೆಲ್ಲಾ ಮನಸ್ಸು ಮಾಡಿದರೆ ತರುವುದಕ್ಕೆ ಕಷ್ಟವಾಗುವುದಿಲ್ಲ. ಶಿವಮೊಗ್ಗದ ಬಗ್ಗೆ ಮಾತ್ರ ನಾನು ಹೇಳಿದ್ದುದು. ಉಳಿದಿದ್ದಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಸನ್ಮಾನ್ಯ ಜಿಲ್ಲಾ ರಕ್ಷಣಾಧಿಕಾರಿಗಳು ಸ್ವತಃ ಹೇಳುತ್ತಿದ್ದಾರೆ ಆರ್.ಎ.ಎಫ್. ಪೋರ್ಸನ್ನು ತರಿಸುವುದಕ್ಕಾಗಲಿಲ್ಲ ಎಂದು. ನಿಮ್ಮ ಹತ್ತಿರ ಅವರು ಹೇಳಿದರು. ಇದನ್ನು ಜಿಲ್ಲಾ ಅಧಿಕಾರಿಗಳು ಪ್ರಯತ್ನ ಮಾಡಬೇಕಾಗಿತ್ತು. ಪೋಲೀಸ್ ಇಲಾಖೆ ಅಧಿಕಾರಿಗಳು ಪ್ರಯತ್ನ ಮಾಡಬೇಕಾಗಿತ್ತು. ಆರ್.ಎ.ಎಫ್. ಏತಕ್ಕೆ ಬರಲಿಲ್ಲ, ಬಂದಿದ್ದರೆ ಪರಿಸ್ಥಿತಿ ಖಂಡಿತ ನಿಯಂತ್ರಣಕ್ಕೆ ಬರುತ್ತಿತ್ತು.

ಅಧ್ಯಕ್ಷರು : ಮಾನ್ಯ ಶಿವರಾಂ ಅವರೇ, ತಾವು ಒಂದು ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಅನುಮತಿ ಕೇಳಿದ್ದಿರಿ ಟಿ.ಸಿ.ಎಚ್. ಅಡ್ಮಿಷನ್ಸ್ ವಿಚಾರ.

ಶ್ರೀ ವಾಟಾಳ್ ನಾಗರಾಜ್ : ಇದರ ಬಗ್ಗೆ ಏನಾಯಿತು?

ಅಧ್ಯಕ್ಷರು : ಅವರು ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಸಮಗ್ರವಾಗಿ ಇಡೀ ರಾಜ್ಯಕ್ಕೆ ಸಂಬಂಧಪಟ್ಟಿದ್ದುದು ಹೇಳಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಉತ್ತರ ಹೇಳಲಿ ಅವರು. ಏಕೆಂದರೆ ಅವರು ಕುಣಿಗಲ್‌ಗೆ ಹೋಗಿದ್ದರು. ಮಾನ್ಯ ಉಪಮುಖ್ಯಮಂತ್ರಿಗಳೂ ಮತ್ತೆ ಬೆಳಕು ಚೆಲ್ಲಿದರು. ಏನೆಂದರೆ ಸಮಾಜಘಾತುಕ ಶಕ್ತಿಗಳಿಗೆ ಪೋಲೀಸರ ಮೇಲೆ ಸಿಟ್ಟಿದೆ ಎಂದು. ಅದು ಯಾವ ಕಾರಣಕ್ಕೆ ಸಿಟ್ಟಿದೆ ಏನು ಎಂಬುದನ್ನು ಸ್ವಲ್ಪವಾದರೂ ಹೇಳಬೇಕು. ಇಲ್ಲದಿದ್ದರೆ ಜನರಿಗೆ ಹೇಗೆ ಗೊತ್ತಾಗಬೇಕು? ಅಂದರೆ ದಿನವೂ ನಾವು ಚರ್ಚೆ ಮಾಡಿಯೂ ಕೂಡ........

ಅಧ್ಯಕ್ಷರು : ನೀವು ಸರ್ಕಾರ ನಡೆಸಿದ್ದೀರಿ. ಸಭೆ ನೋಡಿದ್ದೀರಿ. ಜೀರೋ ಹವರ್‌ನಲ್ಲಿ ಮೆನ್‌ಷನ್ ಮಾಡುವುದಕ್ಕೆ ಅಷ್ಟೇ ಅವಕಾಶ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮೆನ್‌ಷನ್ ಅಂದರೂ ಕೂಡ ಸರ್ಕಾರ ಸ್ಪಂದಿಸಬೇಕಲ್ಲಾ. ಏನು ನಡೆದಿದೆ ಎಂಬುದು ಅವರಿಗೆ ಗೊತ್ತಿದೆ. ಅವರು ಅಲ್ಲಿ ಹೋಗಿದ್ದಾರೆ. ಒಂದು ಲಕ್ಷ ರೂಪಾಯಿಯನ್ನು ಕುಣಿಗಲ್ ವಿಕ್ಟಿಮ್ ಮನೆಯವರಿಗೆ ಕೊಟ್ಟು ಬಂದಿದ್ದಾರೆ.

ಅಧ್ಯಕ್ಷರು : ನೀವು ಬಹಳ ಕಾಲ ಅಧಿಕಾರದಲ್ಲಿದ್ದಿರಿ. ನೀವು ಅವರಿಗೆ ಗೈಡ್ ಮಾಡಬೇಕು ಸ್ಪಂದಿಸುವುದು ಎಲ್ಲಾ ಹೇಗೆ ಎಂದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರಿಗೆ ಅವಶ್ಯಕತೆ ಇಲ್ಲ, ಯಾರ ಗೈಡೆನ್ಸ್ ಸಲಹೆ ಬೇಕಾಗಿಲ್ಲ. ಅವರು ಸಮರ್ಥರಿದ್ದಾರೆ. ಆದರೆ ನಮಗೆ ಬೇಕಾಗಿರುವುದು ಉತ್ತರ. ಏತಕ್ಕೆ ನಡೆದಿದೆ, ಏನು ನಡೆದಿದೆ ಎಂಬುದು ಜನರಿಗೆ ಗೊತ್ತಾಗಬೇಕು. ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ ನಾಳೆ. ಯಾರಾದರೂ ಒಬ್ಬರು ಜವಾಬ್ದಾರಿ ತೆಗೆದುಕೊಳ್ಳಬೇಕು.

ಶ್ರೀ ಆಯನೂರ್ ಮಂಜುನಾಥ್ : ಈಶ್ವರಪ್ಪನವರು ಪ್ರಸ್ತಾಪ ಮಾಡಿದ ಗಲಭೆ ವಿಚಾರ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದು.

ಅಧ್ಯಕ್ಷರು : ನಾನು ವಾಟಾಳ್ ನಾಗರಾಜ್ ಅವರಿಗೆ ಕರೆದಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಪ್ರತಿಸಾರಿಯೂ ಗಣಪತಿ ಉತ್ಸವದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ರಾಜ್ಯದಲ್ಲಿ ಈ ತರಹ ಗದ್ದಲಗಳು ಗಲಾಟೆಗಳು ಆಗುವುದು ಸರ್ಕಾರಕ್ಕೆ ಗೊತ್ತಿದೆ. ಸೂಕ್ಷ್ಮವಾದ ಪ್ರದೇಶಗಳು ಯಾವುವು ಎಂಬುದನ್ನು ಮೊದಲೇ ಗಮನಿಸಿ ಆ ಪ್ರದೇಶದಲ್ಲಿ ಎಚ್ಚರ ವಹಿಸಬೇಕಾದುದು ಸರ್ಕಾರದ ಆದ್ಯಕರ್ತವ್ಯ ಇದೆ. ಎಲ್ಲೆಲ್ಲಿ ಆಗುತ್ತದೆ ಎಂಬುದು ಸರ್ಕಾರಕ್ಕೆ ಗೊತ್ತಿದೆ. ಆಮೇಲೆ ಇದಾದಮೇಲೆ ಅಲ್ಲಿ ಹೋಗಿ ಕರ್ಫ್ಯೂ ಹಾಕತಕ್ಕದ್ದು, ಅವರಿಗೆ ಪರಿಹಾರ ಕೊಡತಕ್ಕದ್ದು ಒಂದು ವಿಧ. ಆದರೆ ಅನೇಕ ಸಾರಿ ಶಾಂತಿ ಸಮಿತಿ ಸಭೆಗಳನ್ನು ಮಾಡಬೇಕು. ಜಿಲ್ಲಾ ಮಟ್ಟದ ಸಮಿತಿಗಳು, ತಾಲ್ಲೂಕು ಮಟ್ಟದ ಸಮಿತಿಗಳು ಮತ್ತು ರಾಜ್ಯ ಮಟ್ಟದ ಸಮಿತಿ ಸಭೆ ಮಾಡಬೇಕೆಂದು ಈ ಸದನದಲ್ಲಿ ಅನೇಕ ಸಾರಿ ಚರ್ಚೆ ನಡೆದಿದೆ.

ಆ ಸಮಿತಿಯ ಆಧಾರದ ಮೇಲೆ ಇಂತಹ ಸಲಹೆಗಳನ್ನು ಸೂಕ್ಷ್ಮವಾಗಿ ಪರಿಶೀಲನೆ ಮಾಡಿ ಅಲ್ಲಿಗೆ ಏನು ಬಂದೋಬಸ್ತು ಕೊಡಬೇಕೆಂಬುದನ್ನು ಪ್ರತಿ ಸಾರಿ ಚರ್ಚೆಮಾಡುತ್ತೇವೆ. ಈ ವರ್ಷ ಚರ್ಚೆ ಆದಮೇಲೆ ಮುಂದಿನ ವರ್ಷದವರೆಗೆ ನಾವು ಇದರ ಬಗ್ಗೆ ಏನೂ ಕ್ರಮ ಕೈಗೊಳ್ಳುವುದಿಲ್ಲ. ಆದ್ದರಿಂದ ಮಾನ್ಯ ಅಧ್ಯಕ್ಷರ

ಮುಖಾಂತರ ಸರ್ಕಾರಕ್ಕೆ ತಿಳಿಸುವುದೇನೆಂದರದರೆ, ಈ ಬಗ್ಗೆ ಎಲ್ಲೆಲ್ಲಿ ಸೂಕ್ಷ್ಮವಾದ ಪ್ರದೇಶಗಳು ಇವೆ ಆ ಪ್ರದೇಶಗಳನ್ನು ಗುರುತಿಸಿ ಗಣಪತಿ ಹಬ್ಬದ ಸಮಯದಲ್ಲಿ ಸಂಪೂರ್ಣವಾದಂಥ ವ್ಯವಸ್ಥಿತವಾದಂಥ ಪೋಲೀಸ್ ಬಂದೋಬಸ್ತು ಇಟ್ಟುಕೊಳ್ಳುವುದು ನಮ್ಮ ಕರ್ತವ್ಯ. ಇಂತಹ ಸಮಿತಿಗಳನ್ನು ಏನು ಮಾಡುಬೇಕೆಂದಿದ್ದೇವೆ ಅಂದರೆ ಹೊಂದಾಣಿಕೆ ಸಮಿತಿ. ಯಾವುದೇ ಗದ್ದಲ ಆಗಬಾರದು. ಪ್ರತಿಯೊಂದಕ್ಕೂ ಎಲ್ಲಾ ವರ್ಗದ ಜನರನ್ನು ಸೇರಿಸಿ ಸಮಿತಿಯನ್ನು ಮಾಡುವುದರಿಂದ ಏನಾಗುತ್ತದೆ ಎಂದರೆ ನಾಳೆ ಇದಕ್ಕೆ ಈ ಸಮಸ್ಯೆಗೆ ಪರಿಹಾರ ಸಿಗುತ್ತದೆ ಎನ್ನತಕ್ಕಂಥದ್ದು ನನ್ನ ಪ್ರಾಮಾಣಿಕವಾದಂಥ ಚಿಂತನೆ. ತಾಲ್ಲೂಕು ಮಟ್ಟದಲ್ಲಿ ಜಿಲ್ಲಾಮಟ್ಟದಲ್ಲಿ ಇಂತಹ ಸಮಿತಿಗಳನ್ನು ಮಾಡುತ್ತೇವೆಂದು ಹೇಳಿದ್ದರು. ಬಹಳ ಹಿಂದೆ ವಿಧಾನಸೌಧದ 3ನೇ ಮಹಡಿಯಲ್ಲಿ ರಾಜ್ಯ ಮಟ್ಟದ ಹೊಂದಾಣಿಕೆ ಸಮಿತಿ ಇಂತಹ ಸಮಸ್ಯೆಗಳನ್ನು ಪರಿಹರಿಸಲು ಸೇರಿತ್ತು. ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಈಗಲೂ ಇಂತಹ ಸಮಿತಿಗಳು ರಚನೆಯಾಗಬೇಕು. ಈ ಸಮಿತಿಯ ಮೂಲಕ ಜನರಿಗೆ ತಿಳುವಳಿಕೆ ಕೊಡಬೇಕು. ಮತ್ತು ಸರ್ಕಾರವು ಸೂಕ್ಷ್ಮವಾದ ಪ್ರದೇಶಗಳನ್ನು ಗುರುತಿಸಿ ಅಲ್ಲಿ ಅಶಾಂತಿ ತಲೆದೋರದಂತೆ ವ್ಯವಸ್ಥೆ ಮಾಡಬೇಕು. ಸತ್ತವರ ಕುಟುಂಬದವರಿಗೆ ಪರಿಹಾರವನ್ನು ತಾವು ಕೂಡಲೆ ಕೊಡಿಸಬೇಕು ಎಂದು ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಈ ತರಹ ಆಗುವಂಥ ಸಾಮಾನ್ಯ ಘಟನೆಗಳ ಬಗ್ಗೆ ಜೆ.ಹೆಚ್. ಪಟೇಲರು ಹೇಳಿದಂತೆ ನಾನು ಸರ್ಕಾರವನ್ನು ದೂರುವುದಕ್ಕೆ ಇಷ್ಟಪಡುವುದಿಲ್ಲ. ಯಾವುದೇ ಕಾರಣಕ್ಕೋಸ್ಕರವಾಗಿಯೂ ಶಾಂತ ರೀತಿಯಲ್ಲಿ ಈ ಕಾರ್ಯಕ್ರಮ ಆಗಲೇಬಾರದು ಎನ್ನುವಂಥ ಕೆಲವು ಕೆಟ್ಟ ಎಲಿಮೆಂಟ್ಸ್ ಇವೆ. ಈ ರೀತಿ ಗಲಭೆ ಎಬ್ಬಿಸುವವರು ಯಾರೇ ಇರಬಹುದು. ಆ ಸಮಾಜ, ಈ ಸಮಾಜ ಎಂದು ನಾನು ಹೇಳುವುದುಕ್ಕೆ ಇಷ್ಟಪಡುವುದಿಲ್ಲ. ಸಾರ್ವಜನಿಕ ಸಭೆಸಮಾರಂಭಗಳು, ಉತ್ಸವಗಳು. ಧಾರ್ಮಿಕ ಸಮಾರಂಭಗಳು ಇವುಗಳು ನಡೆಯುವಾಗ ಮಾನ್ಯ ಪಟೇಲರು ಹೇಳಿದಂತೆ ಉದ್ದೇಶಪೂರ್ವಕವಾಗಿ ಈ ತರಹ ಗಲಭೆ ಮಾಡಿ ಯಾವುದೋ ಸೇಡು ತೀರಿಸಿಕೊಳ್ಳುವುದಕ್ಕೆ ಪ್ರಯತ್ನ ನಡೆಸುತ್ತಿದ್ದಾರೆ.ಈ ರೀತಿ ಅಶಾಂತಿ ಎದ್ದಾಗ ಪೋಲೀಸರಿಗೆ ಮತ್ತು ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ಈ ತರಹ ಕೆಟ್ಟ ಹೆಸರು ಬರಬೇಕು ಎನ್ನುವವರೂ ಸಹ ಇದ್ದಾರೆ. ಅಂಥವರನ್ನು ಸರ್ಕಾರ ಗುರುತಿಸಬೇಕು. ಮಿತಿಮೀರಿ ವರ್ತನೆ ಮಾಡುವಂಥ ಅಯೋಗ್ಯರು ಯಾರಿದ್ದಾರೆ ಅಂಥವರನ್ನು ಮೊದಲೇ ಬಂಧನ ಮಾಡಬೇಕು. ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸುತ್ತಿದ್ದಂಥ ಶಾಸಕರಾದ ಆಯನೂರು ಮಂಜುನಾಥ್ ಮತ್ತು ಈಶ್ವರಪ್ಪನವರನ್ನು ನಾವು ಶಿವಮೊಗ್ಗಕ್ಕೆ ಗಣಪತಿ ಉತ್ಸವಕ್ಕೆ ಕಳುಹಿಸಿಕೊಟ್ಟೆವು. ಈ ನಮ್ಮ ಶಾಸಕರು ನನಗೆ ಇನ್ನು ಮುಂದೆ ಇಂಥಹ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕೋ ಬೇಡವೋ ಎಂದು ದೂರವಾಣಿ ಮೂಲಕ ಕೇಳಿದರು. ನಾವು ಆ ಗಣಪತಿ ಮೆರವಣಿಗೆಯಲ್ಲಿ ಭಾಗವಹಿಸಿದ ಮೇಲೂ ಇಂತಹ ಘಟನೆಯಾದರೆ ನಾವು ತಲೆತಗ್ಗಿಸಬೇಕಾಗುತ್ತದೆ. ಅದಕ್ಕೋಸ್ಕರ ಪೋಲೀಸ್‌ನವರಿಗೆ ನಮ್ಮ ಬಗ್ಗೆ ವಿಶ್ವಾಸ ಇರಲಿ. ಯಾವುದೇ ಪಕ್ಷ ಇರಲಿ, ಯಾರೇ ಬೇಕಾದರೂ ಸಮಾರಂಭ ನಡೆಸಲಿ. ಇಂಥಹ ಸಮಾರಂಭಗಳನ್ನು ಸರಿಯಾದ ರೀತಿಯಲ್ಲಿ, ಶಾಂತ ರೀತಿಯಲ್ಲಿ ನಡೆಸುವುದು ಆ ಸಂಸ್ಥೆಯವರಿಗೆ ಬಿಟ್ಟದ್ದು. ಆದರೆ ಅಡ್ಡಿ ಮಾಡುವಂಥ ಕೆಟ್ಟ ಪದ್ಧತಿಯ ಜನ ಯಾರು ಇದ್ದಾರೆ ಅದನ್ನು ಬಿಗಿ ಮಾಡುವಂಥ ಕೆಲಸಕ್ಕೆ ಗೃಹಸಚಿವರು ವಿಶೇಷವಾಗಿ ಗಮನಹರಿಸಬೇಕು. ಗೃಹ ಸಚಿವರು ಬೆಳಗಾಂ ಬಗ್ಗೆ ವಿಶೇಷವಾದಂಥ ಗಮನ ಕೊಟ್ಟಿದ್ದರಿಂದ ಆ ನಗರ ತುಂಬ ಶಾಂತ ರೀತಿಯಲ್ಲಿ ಇದೆ. ಆದರೆ ಆ ನಗರ ಶಾಂತರೀತಿಯಲ್ಲಿರುವುದು ಇನ್ನಾದರೂ ಕೆಲವರಿಗೆ ಸೈರಣೆಯಿಲ್ಲ. ಎಲ್ಲಾದರೂ ಒಂದು ಮೂಲೆಯಲ್ಲಿ ಏನಾದರೂ

ಒಂದು ಗಲಭೆ ಮಾಡಲೇಬೇಕು. ಈ ರೀತಿಯ ಕೆಲವು ವ್ಯಕ್ತಿಗಳು ಇದ್ದಾರೆ. ಇಂತಹ ವ್ಯಕ್ತಿಗಳನ್ನು ಗುರುತಿಸಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಗೃಹಸಚಿವರನ್ನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಮಂಜುನಾಥ್, ತಮಗೆ ಒಂದು ಸಲಹೆ ಏನೆಂದರೆ ಶೂನ್ಯ ವೇಳೆಯಲ್ಲಿ ತಮ್ಮ ಲೀಡರ್‌ಗೆ ಅವಕಾಶ ಕೊಟ್ಟಿದ್ದೇನೆ. ಇವರು, ಈಶ್ವರಪ್ಪನವರು ಎಲ್ಲರೂ ಎಲ್ಲಾ ವಿಚಾರದಲ್ಲಿ ಮಾತನಾಡಬೇಕೆಂದು ಸಮಯ ಆರ್ಗನೈಸ್ ಮಾಡುವುದು ನನಗೆ ಕಷ್ಟವಾಗುತ್ತದೆ. ನನ್ನ ಕಷ್ಟವನ್ನು ನೀವು ತಿಳಿದುಕೊಳ್ಳಬೇಕು.

ಶ್ರೀ ಆಯನೂರು ಮಂಜುನಾಥ್ : ಮಾನ್ಯ ಅಧ್ಯಕ್ಷರೆ, ಆಗಿರುವಂಥ ಸಾವು ನನ್ನ ಕ್ಷೇತ್ರದಲ್ಲಿ ಆಗಿರುವಂಥದ್ದು. ನಾನಾ ಆ ಕ್ಷೇತ್ರದ ಶಾಸಕನಾಗಿ ಒಂದೆರಡು ವಾಕ್ಯಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಲೀಡರ್ ಮಾತನಾಡುವಾಗ ಧ್ವನಿ ಸೇರಿಸಬೇಕು ಎನ್ನುವಂಥ ಉದ್ದೇಶದಿಂದ ನಾನು ಮಾತನಾಡುತ್ತಿಲ್ಲ, ಮೊನ್ನೆ ಶಿವಮೊಗ್ಗ ನಗರದಲ್ಲಿ ಆದಂಥ ಗಲಭೆಯಲ್ಲಿ ಸತ್ತಂತ ವ್ಯಕ್ತಿ ನನ್ನ ಹೊಸನಗರ ವಿಧಾನಸಭಾ ಕ್ಷೇತ್ರಕ್ಕೆ ಸೇರಿದವನು. ಶಿವಮೊಗ್ಗದ ಔಟ್‌ಸ್ಕರ್ಟ್ಸ್ ಏನಿವೆ ಅವೆಲ್ಲವೂ ಬರುತ್ತವೆ. ಈ ಸಾರಿ ಆಡಳಿತಾತ್ಮಕವಾದಂಥ ವೈಫಲ್ಯ ಅಲ್ಲಿ ಆಗಿದ್ದರಿಂದ ಗಲಾಟೆ ಹೆಚ್ಚು ವ್ಯಾಪಕವಾಗಿ ಹರಡಲಿಕ್ಕೆ ಕಾರಣವಾಯಿತು. ಸ್ಪಷ್ಟವಾಗಿ ಹೇಳುವುದಾದರೆ ಶಾಂತಿ ಸಮಿತಿ ಸಭೆಗಳನ್ನು ಆಡಳಿತದವರು ಮಾಡುವಾಗ ನಮ್ಮ ಸ್ಥಳೀಯ ಶಾಸಕರಾದಂಥ ನನ್ನನ್ನು ಆಗಲಿ, ಅಥವಾ ಈಶ್ವರಪ್ಪನವನ್ನು ಆಗಲಿ ಅಲ್ಲಿ ಕರೆಯಲಿಲ್ಲ, ಆ ಶಾಂತಿ ಸಮಿತಿಗೆ ನಮ್ಮನ್ನು ಪಾಲ್ಗೊಳ್ಳುವಂತೆ ಮಾಡಲಿಲ್ಲ, ಸಂಪೂರ್ಣವಾಗಿ ಶಾಸಕರನ್ನು ನಿರ್ಲಕ್ಷಿಸಿ ಶಾಂತಿ ಸಮಿತಿಯ ಕಾರ್ಯಕ್ರಮದ ವ್ಯವಸ್ಥೆಯನ್ನು ಮಾಡುವಂಥ ಪ್ರಯತ್ನವನ್ನು ಮಾಡಿದರು. 2ನೆಯದು ಸ್ಪಷ್ಟವಾಗಿ ಗೊತ್ತಾಗುತ್ತಿತ್ತು, ಅರ್ಧ ಫರ್ಲಾಂಗು ದೂರದಲ್ಲಿರತಕ್ಕಂಥ ಶಿವಪ್ಪನಾಯಕ ವೃತ್ತಕ್ಕೂ ಮತ್ತು ಗೋಪಿ ವೃತ್ತಕ್ಕೂ ಮಧ್ಯೆ ಏನಾಗುತ್ತಿದೆ ಎಂದು. ಗೋಪಿ ವೃತ್ತದಲ್ಲಿ ಗಲಭೆ ಆಗುವಾಗ ಟಿಯರ್ ಗ್ಯಾಸ್ ಚೆಲ್ಲಬೇಕೆಂದರೆ ವಯರ್‌ಲೆಸ್‌ನಲ್ಲಿ ಹೇಳುತ್ತಾ ಇದ್ದರು. ಅರ್ಧ ಫರ್ಲಾಂಗು ದೂರಕ್ಕೆ ಬರಬೇಕಾದರೆ ಮೆರವಣಿಗೆ ಒಂದು ಗಂಟೆಗಿಂತ ಹೆಚ್ಚು ಕಾಲ ತೆಗೆದುಕೊಂಡಿತು. ಪೋಲಿಸರ ಹತ್ತಿರ ಕೇವಲ 5 ಟಿಯರ್ ಗ್ಯಾಸ್‌ನ ಗನ್‌ಗಳು ಇದ್ದವು. ಪೊಲೀಸರು ಬಹಳಷ್ಟು ಶ್ರಮವಹಿಸಿ ಗಲಭೆಯನ್ನು ತಡೆಗಟ್ಟಲು ಒದ್ದಾಡಿದ್ದು ಇವೆಲ್ಲವೂ ಸತ್ಯ ಸಂಗತಿಯಾಗಿದೆ. ಆದರೆ ಇವರಲ್ಲಿ ಕೋಆರ್ಡಿನೇಷನ್ ಕೊರತೆ ಇತ್ತು. ಜಿಲ್ಲಾಧಿಕಾರಿಗಳು ಮತ್ತು ಸೂಪರಿಂಟೆಂಡಂಟ್ ಆಫ್ ಪೊಲೀಸ್ ಇವರ ಮಧ್ಯೆ ಕಮ್ಯುನಿಕೇಷನ್ ಗ್ಯಾಪ್ ಇತ್ತು. ಎಸ್.ಪಿ.ಯವರು ಇಡೀ ನಗರಕ್ಕೆ ಕರ್ಫ್ಯೂವನ್ನು ಕೇಳಿದರೆ ಜಿಲ್ಲಾಧಿಕಾರಿಗಳು ಲಿಮಿಟೆಡ್ ಎಂದು 5 ಏರಿಯಾಗಳಿಗೆ ಕರ್ಫ್ಯೂವನ್ನು ಜಾರಿಮಾಡಲು ಅವಕಾಶ ಕೊಟ್ಟರು. ಎಸ್.ಪಿ. ಯವರು ಕೇಳಿದ್ದು ಒಂದು ಆದರೆ ಜಿಲ್ಲಾಧಿಕಾರಿಗಳು ಆದೇಶ ಮಾಡಿದ್ದುದು ಮತ್ತೊಂದು. ಎಸ್.ಪಿ.ಯವರು ಕೇಳಿದರೆ ಜಿಲ್ಲಾಧಿಕಾರಿಗಳು ಒಪ್ಪುವ ಹಾಗಿಲ್ಲ, ಜಿಲ್ಲಾಧಿಕಾರಿಗಳು ಹೇಳಿದರೆ ಎಸ್.ಪಿ.ಯವರು ಮಾಡುವ ಹಾಗಿಲ್ಲ. ತತ್ಪರಿಣಾಮವಾಗಿ ಆ ಸ್ಥಳದಲ್ಲಿ ಗಲಾಟೆ ಪ್ರಾರಂಭವಾಯಿತು. ಒಬ್ಬ ಮೂರ್ತಿ ಎನ್ನತಕ್ಕಂಥ ಕೂಲಿಗಾರ ಆ ಗಲಾಟೆಯಲ್ಲಿ ಸತ್ತಿದ್ದನೆ. ಬೇರೆ ಏನಾದರೂ ಆದಾಗ ಅಂದರೆ ಪ್ರವಾಹದಲ್ಲಿ ಕೊಚ್ಚಿ ಹೋಗಿ ಅಥವಾ ಇನ್ನಿತರ ಸಂದರ್ಭಗಳಲ್ಲಿ ಸತ್ತುಹೋದ ವ್ಯಕ್ತಿಯ ಕಡೆಯವರಿಗೆ ಹೇಗೆ ಪರಿಹಾರ ಧನವನ್ನು ಕೊಡುತ್ತಿದ್ದರೋ ಅದೇ ರೀತಿ ಈ ಕೋಮು ಗಲಭೆಯಲ್ಲಿ ಸತ್ತು ಹೋದ ವ್ಯಕ್ತಿಗೆ ಸರ್ಕಾರ ಪರಿಹಾರ ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಈ ಕೋಮು ಗಲಭೆ ಪ್ರಸ್ತಾಪ ಬಂದಿತ್ತು. ಯವಾಗ ಎಂದರೆ ಬೆಳಗಾಂನ ಪರಿಸ್ಥಿತಿಯನ್ನು ಚರ್ಚೆ ಮಾಡುವ ಸಂದರ್ಭದಲ್ಲಿ

ಸರ್ಕಾರ ಯಾವಾಗಾಲೂ ಮಾಡುವುದೇನೆಂದರೆ ಗಲಭೆ ಘಟನೆಗಳು ಸಂಭವಿಸಿದ ನಂತರ ಕ್ರಮ ತೆಗೆದುಕೊಳ್ಳುವುದಕ್ಕೆ ಮುಂದಾಗತಕ್ಕಂಥದ್ದು ಸರಿಯಲ್ಲ. ಮೊದಲನೆಯದಾಗಿ ನಾನು ಹೇಳುವುದೇನೆಂದರೆ ಗಣೇಶನ ವಿಸರ್ಜನೆ ಬೇರೆ ಬೇರೆ ಯಾವ ಯಾವುದೋ ಸಂದರ್ಭಗಳಲ್ಲಿ ನಡೆಯತಕ್ಕಂಥದ್ದು, ಆದರೆ ಶಿವಮೊಗ್ಗದಲ್ಲಿ ಗಣಪತಿ ವಿಸರ್ಜನೆ ಯಾವಾಗ ನಡೆಯುತ್ತದೆ ಎಂಬುದು ಸ್ಪಷ್ಟವಾಗಿ ಸರ್ಕಾರಕ್ಕೆ ಗೊತ್ತಿದೆ. ಮತ್ತು ಸೂಕ್ಷ್ಮ ಪ್ರದೇಶಗಳು ಯಾವುದು ಎಂದು ಕೂಡ ಗೊತ್ತಿದೆ. ಇಂಥಹ ಸಂದರ್ಭಗಳಲ್ಲಿ ಸರ್ಕಾರವೇ ಮುಂಜಾಗ್ರತೆಯಾಗಿ ಬಹಳ ಮೊದಲೇ ಕ್ರಮ ತೆಗೆದುಕೊಳ್ಳದೆ ಇರತಕ್ಕಂಥದ್ದು ಈ ಗಲಭೆಗೆ ಒಂದು ಕಾರಣವಾಗಿದೆ. ಈಗಾಗಲೇ ಮಾನ್ಯ ಸದಸ್ಯರು ಹೇಳಿದ ಹಾಗೆ ಯಾರೋ ಆಂಟಿ ಸೋಶಿಯಲ್ ಎಲಿಮೆಂಟ್ಸ್ ಇದರ ಉಪಯೋಗವನ್ನು ತೆಗೆದುಕೊಳ್ಳುತ್ತಿದ್ದಾರೆ. ಇದು ನಿಜ. ಈ ಅಭಿಪ್ರಾಯ ತಪ್ಪೇನೂ ಅಲ್ಲ. ಆದರೆ ನಿಜವಾಗಿ ಮಾಡಬೇಕಾಗಿರುತಕ್ಕಂಥ ಕೆಲಸ ಏನೆಂದರೆ ನಾವೆಲ್ಲರೂ ಸೇರಿ ಆ ಘಟನೆಗಳಿಗೆ ಪ್ರಚೋದನೆ ಮಾಡುತ್ತಿರತಕ್ಕಂಥವರು ಯಾರು? ಅದು ಯಾರದರೂ ಆಗಲಿ. ಅಂಥವರನ್ನು ಹುಡುಕಿ ಅವರ ಬಗ್ಗೆ ಕಾನೂನು ಕ್ರಮವನ್ನು ತೆಗೆದುಕೊಳ್ಳದೇ ಹೋದರೆ ಈ ಗಲಭೆಗಳು ಸದಾ ಮುಂದುವರಿಯುತ್ತಿರುತ್ತದೆ. ಗಣೇಶನ ಸ್ಥಾಪನೆ ಮಾಡಿದಾಗ ಒಂದು ಗಲಾಟೆ, ನೀರಿಗೆ ಬಿಟ್ಟಾಗ ಗಲಾಟೆ, ಹಬ್ಬ ಬಂದಾಗ ಗಲಾಟೆ....

ಅಧ್ಯಕ್ಷರು : ಈಗ ಸನ್ಮಾನ್ಯ ಗೃಹಸಚಿವರು ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸ್ಟೇಟ್‌ಮೆಂಟ್ ಕೊಡಿ, ದಯವಿಟ್ಟು. ಅಥವಾ ಆ ಮೇಲೆ ಎಲ್ಲಾ ಮಾಹಿತಿ ತರಿಸಿಕೊಂಡು during the course of the day ಮಾಡುತ್ತೀರೋ ಹೇಗೆ?....

ಶ್ರೀ ಪಿ.ಜಿ.ಆರ್. ಸಿಂಧ್ಯ : ಏನು ಸ್ವಾಮಿ ತಾವು ಹೇಳಿದ್ದುದು.

ಅಧ್ಯಕ್ಷರು : ಈಗ ಅನೇಕ ಸದಸ್ಯರು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನೀವು ನಿಮ್ಮ ಅಧಿಕಾರಿಗಳ ಜೊತೆ ಸಂಪರ್ಕ ಇಟ್ಟುಕೊಂಡು ಎಲ್ಲಾ ಮಾಹಿತಿಯನ್ನು ಕ್ರೋಢೀಕರಿಸಿ ನಂತರ ದಿನದ ಕಾರ್ಯಕ್ರಮದ ಅವಧಿಯೊಳಗೆ ಉತ್ತರ ನೀಡುತ್ತೀರೋ ಯಾವಾಗ ಅವರಿಗೆ ಒಂದು ಸಲಹೆಯನ್ನು ಹೇಳುತ್ತೀರಿ? ಹೇಗೆ ಮಾಡುತ್ತೀರಿ? I leave it to you. I cannot insist on you to speak now itself.

Sri P.G.R. SINDHIA : I have materials. ತಾವು ಹೇಗೆ ಹೇಳುತ್ತೀರಿ ಹಾಗೆ ಮಾಡುತ್ತೇನೆ ಸ್ವಾಮಿ.

Mr. SPEAKER : Then please speak out.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಗೃಹಸಚಿವರು ರೆಡಿ ಇದ್ದಾರೆ.

ಅಧ್ಯಕ್ಷರು : ನನ್ನದೇನೂ ಅಬ್ಜಕ್ಷನ್ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಸದಸ್ಯರುಗಳಾದ ಮಾನ್ಯ ಖರ್ಗೆಯವರು, ಮಾನ್ಯ ಮುದ್ದಹನುಮೇಗೌಡರು, ಸನ್ಮಾನ್ಯ ವಾಟಾಳ್ ನಾಗರಾಜ್‌ರವರು, ವಿರೋಧಪಕ್ಷದ ನಾಯಕರಾದ ಮಾನ್ಯ ಯಡಿಯೂರಪ್ಪನವರು, ಮಾನ್ಯ ಆಯನೂರು ಮಂಜೂನಾಥ್‌ರವರು, ಹಾಗೂ ಮಾನ್ಯ ಶ್ರೀರಾಮರೆಡ್ಡಿಯವರು ಈ ರಾಜ್ಯದಲ್ಲಿ ಕಳೆದ ಸಾರಿ ಗಣಪತಿ ವಿಸರ್ಜನೆ ಸಂಬಂಧದಲ್ಲಿ ಒಂದು ವಾರದಿಂದ ನಡೆದಿರತಕ್ಕಂಥ ಘಟನಾವಳಿಗಳ ಬಗೆ ಪ್ರಸ್ತಾಪ ಮಾಡಿದ್ದಾರೆ. ನಾನು ಯಾವುದೇ ರಾಗದ್ವೇಷ ಅಥವಾ ಕುಂಟು ನೆಪಗಳನ್ನು ಕೊಡದೆ ವಾಸ್ತವಾಂಶವನ್ನು ತಮ್ಮ ಮುಖಾಂತರ ಸದನದ ಮುಂದೆ ಇಡಲಿಕ್ಕೆ ಬಯಸುತ್ತೇನೆ. ಈ ವಿಷಯಕ್ಕೆ ಮುಂಚೆ

ನಾನು ಒಂದು ವಿಚಾರವನ್ನು ಹೇಳಲಿಕ್ಕೆ ಬಯಸುತ್ತೇನೆ. ಕರ್ನಾಟಕ ಮಹಾಜನತೆಗೆ, ಕರ್ನಾಟಕದ ಎಲ್ಲಾ ಪಕ್ಷದ ಮುಖಂಡರುಗಳಿಗೆ, ಹಿಂದೂಗಳಿಗೆ, ಮುಸಲ್ಮಾನರಿಗೆ, ಭಾರತೀಯ ಜನತಾಪಕ್ಷದವರಿಗೆ ಕಾಂಗ್ರೆಸ್‌ನವರಿಗೆ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾಜಿ ಮುಖ್ಯಮಂತ್ರಿಗಳು, ಮಾಜಿ ಗೃಹಸಚಿವರು ಇವರೆಲ್ಲಾ ಶಾಂತಿ ಕಾಪಾಡುವ ಬಗ್ಗೆ ಹೇಳುವುದನ್ನು ಕೇಳಿದ್ದರೆ ಚೆನ್ನಾಗಿತ್ತು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ನಾನು ಕರ್ನಾಟಕದ ಮಹಾಜನತೆಗೆ ಈ ಸಂದರ್ಭದಲ್ಲಿ...

ಅಧ್ಯಕ್ಷರು : ನೋಡಿ ಖರ್ಗೆಯವರು ಇಂಟರ್ನಲ್ ಪ್ರಾಬ್ಲಮ್ಸ್‌ಗೆಲ್ಲಾ ನಮ್ಮಲ್ಲಿ ಸಲಹೆ ಕೇಳುತ್ತಾರೆ. ನಾನು ಏನು ಮಾಡಬೇಕು?

ಶ್ರೀ ವಾಟಾಳ್ ನಾಗರಾಜ್ : ನಾವಂತೂ ಗಣಪತಿ ವಿಸರ್ಜನೆ ಗಲಾಟೆ ಬಗ್ಗೆ ಚರ್ಚೆ ಮಾಡುತ್ತಾ ಇರುವುದು ಆದರೆ ಇಲ್ಲಿ ಅದನ್ನೆಲ್ಲಾ ಹೇಳುವ ಹಾಗಿಲ್ಲ.

ಅಧ್ಯಕ್ಷರು : ಅಲ್ಲಿ ಕಾರ್ಯಕ್ರಮಕ್ಕೆ ಬರುತ್ತೀರಲ್ಲಾ, ಆಗ ಮಾತನಾಡೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ : ರಾಜ್ಯದಲ್ಲಿ ಕಳೆದ ಒಂದು ವಾರದಲ್ಲಿ ನಡೆದಿರತಕ್ಕಂಥ ಗಣೇಶನ ಉತ್ಸವ ಇರಬಹುದು, ಅಲ್ಲಿ ನಡೆದ ಗಲಭೆಯ ಘಟನೆ ಇರಬಹುದು, ಅದರ ಹಿಂದೆ ನಡೆದಿರತಕ್ಕಂಥ ಈದ್‌ಮಿಲಾದ್ ವಿಚಾರ ಇರಬಹುದು, ಈ ವಿಚಾರದಲ್ಲಿ ಸಮಸ್ತ ಜನತೆ ಕೊಟ್ಟಿರತಕ್ಕಂಥ ಸಹಕಾರಕ್ಕೆ ನಾನು ತುಂಬ ಚಿರಋಣಿಯಾಗಿದ್ದೇನೆ. ವಿಶೇಷವಾಗಿ ಅದು ಬಿ.ಜೆ.ಪಿಯವರು ಇರಬಹುದು, ಕಾಂಗ್ರೆಸ್ ಪಕ್ಷದವರು ಇರಬಹುದು, ಕೆ.ಸಿ.ಪಿ.ಯವರು ಇರಬಹುದು, ಎಂಇಎಸ್‌ನವರು ಇರಬಹುದು, ಹಿಂದೂಗಳೂ ಇರಬಹುದು, ಮುಸಲ್ಮಾನರು ಇರಬಹುದು, ಕ್ರಿಶ್ಚಿಯನ್ನರು ಇರಬಹುದು, ನನ್ನ ಸಹದ್ಯೋಗಿಗಳು, ನಮ್ಮ ಪಕ್ಷದ ಎಲ್ಲಾ ಶಾಸಕರು ಕೊಟ್ಟಿರತಕ್ಕಂಥ ಸಹಕಾರದಿಂದ, ನಾನು ಹೆಮ್ಮೆಯಿಂದ ಈ ವಿಚಾರವನ್ನು ಹೇಳುತ್ತೇನೆ. ಈ ಬಾರಿ ರಾಜ್ಯದಲ್ಲಿ ಗಣೇಶನ ಉತ್ಸವವು ಕಳೆದ ಸಲ ನಡೆದಂಥ ಉತ್ಸವಗಳಿಗೆ ಹೋಲಿಕೆ ಮಾಡಿ ನೋಡಿದಾಗ ಶಾಂತಿಯಿಂದ ನಡೆದಿದೆ. ಇದಕ್ಕಾಗಿ ನಾನು ರಾಜ್ಯದ ಜನತೆಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿರುವ ಹಾಗೆ, ಬೆಳಗಾಂನಲ್ಲಿ ಪ್ರಕ್ಷುಬ್ಧ ವಾತಾವರಣ ಇದೆ ಎನ್ನತಕ್ಕಂಥ ಸಂದರ್ಭದಲ್ಲಿ ಮಾನ್ಯ ಯಡಿಯೂರಪ್ಪನವರು ಮಾನ್ಯ ವೀರಪ್ಪ ಮೊಯಿಲಿಯವರು, ಮತ್ತು ಸರ್ವಪಕ್ಷದ ನಾಯಕರುಗಳನ್ನು ಎಲ್ಲರನ್ನು ಕೂಡ ಶಾಂತಿ ಸಭೆಗೆ ಕರೆದಿದ್ದವು. ನಮ್ಮ ಪಕ್ಷದ ಎಲ್ಲಾ ಮಂತ್ರಿಗಳು ಸಂಬಂಧಪಟ್ಟ ಜಿಲ್ಲಾ ಮಂತ್ರಿಗಳ ಆ ಸಭೆಗೆ ಬಂದಿದ್ದರು. ಈಶ್ವರಪ್ಪನವರು ಮತ್ತು ಆಯನೂರು ಮಂಜುನಾಥ್‌ರವರು ಶಿವಮೊಗ್ಗದಲ್ಲಿ ಗಣೇಶನ ಉತ್ಸವದಲ್ಲಿ ಭಾಗವಹಿಸಿ ಅಲ್ಲಿ ಶಾಂತಿಯನ್ನು ಕಾಪಾಡಲಿಕ್ಕೆ, ಮೆರವಣಿಗೆಯನ್ನು ಸೌಹಾರ್ದಯುತವಾಗಿ ನಡೆಸಿ ಅಲ್ಲಿ ಇದ್ದಂಥ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ತಮ್ಮ ಸಹಕಾರ ಕೊಟ್ಟಿದ್ದಾರೆ. ನಾನು ಅವರಿಗೆ ಚಿರಋಣಿಯಾಗಿದ್ದೇನೆ. ನನಗೆ ಸಹದ್ಯೋಗಿಗಳಾದ ಶಿವಾನಂದ ಕೌಜಲಗಿಯವರು ಮತ್ತು ಸನ್ಮಾನ್ಯ ಎ.ಬಿ. ಪಾಟೀಲರು, ಬೆಳಗಾವಿ ವಿಚಾರದಲ್ಲಿ ನಮ್ಮ ಎಂಇಎಸ್ ಶಾಸಕರು ಮಾನ್ಯ ಬಿ.ಐ. ಪಾಟೀಲರು, ತರಾಳೆಯವರು ಇರಬಹುದು...

1.00 ಪಿ.ಎಂ.

ಅಧ್ಯಕ್ಷರು : ತರಾಳೆ

ಶ್ರೀ ಪಿ.ಜಿ.ಆರ್. ಸಿಂಧ್ಯ : ಏನು ಸ್ವಾಮಿ?

ಅಧ್ಯಕ್ಷರು : ತರಾಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸನ್ಮಾನ್ಯ ನಾರಾಯಣರಾವ್ ತರಾಳಿಯವರು ಕೊಟ್ಟಿರತಕ್ಕ ಸಹಕಾರದಿಂದ ಇರಬಹುದು. ಕ್ಷಮಿಸಬೇಕು. ನಾನು ಆ ಉದ್ದೇಶದಿಂದ ಹೇಳಲಿಲ್ಲ.

ಅಧ್ಯಕ್ಷರು : ನೀವು ಹೇಳಿದಾಗ ಅವರು ಬರೆದುಕೊಂಡು ಬಿಡುತ್ತಾರೆ. ಅದಕ್ಕೋಸ್ಕರ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸನ್ಮಾನ್ಯ ಶ್ರೀ ನಾರಾಯಣರಾವ್ ತರಾಳಿಯವರು

ಶ್ರೀ ವಾಟಾಳ್ ನಾಗರಾಜ್ : ಅವರಿಗೆ ಅರ್ಥವಾಗಲಿಲ್ಲ, ತರ್ಲೆ ಎನ್ನುವ ಭಾಷೆ ಅವರಿಗೆ ಅರ್ಥವಾಗಲಿಲ್ಲ, ಬೇರೆಯವರಿಗೆ ಆಗಿದ್ದರೆ ಅರ್ಥವಾಗಿಬಿಡುವುದೇನೊ.

ಅಧ್ಯಕ್ಷರು : ನೀವು ಮತ್ತೆ ಅದನ್ನೇ ಪ್ರಸ್ತಾಪ ಮಾಡಿ ಅವರಿಗೆ ಗೊತ್ತಾಗುವ ಹಾಗೆ ಮಾಡಿದಿರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆ ಕಡೆ ಅನೇಕ ಹೆಸರುಗಳು ಈ ರೀತಿ ಇರುತ್ತವೆ, ಈರುಳ್ಳಿ, ಬೆಳ್ಳುಳ್ಳಿ, ಮೆಣಸಿನಕಾಯಿ ಅಂತ. ಹೀಗಿರುವಾಗ ಅದೂ ಒಂದು ಇರಬಹುದು ಅಂತ ಅನ್ನಿಸುತ್ತದೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಕ್ಷಮಿಸಬೇಕು, ನಾನು ಯಾವುದೇ ದುರುದ್ದೇಶದಿಂದ ಹೇಳಿರತಕ್ಕಂತಹದ್ದಲ್ಲ. ಸನ್ಮಾನ್ಯ ಗೌರವಾನ್ವಿತ ಸದಸ್ಯರಾಗಿರತಕ್ಕ ನಾರಾಯಣ್ ರಾವ್ ತರಾಳಿಯವರು ಕೊಟ್ಟಿರತಕ್ಕ ಸಹಕಾರದಿಂದಾಗಿ ಇವತ್ತು ರಾಜ್ಯದಲ್ಲಿ ಎಲ್ಲಾ ಕಡೆಗಳಲ್ಲೂ ಸಹ ಗಣಪತಿ ವಿಸರ್ಜನೆ ಬಹಳ ಶಾಂತ ರೀತಿಯಲ್ಲಿ ನಡೆದಿದೆ. ಇನ್ನು ಶಿವಮೊಗ್ಗದಲ್ಲಿ ನಡೆದಿರತಕ್ಕ ಘಟನೆ ಏನು ಇದೆ, ಕೆಲವು ಸಣ್ಣಪುಟ್ಟ ಘಟನೆಗಳು ನಡೆದಿವೆ, ಕುಣಿಗಲ್‌ನಲ್ಲಿ ಸ್ವಲ್ಪಮಟ್ಟಿಗೆ ಪೂರ್ಣವಾದ ಶಾಂತಿ ಪರಿಸ್ಥಿತಿ ಬಂದಿಲ್ಲ ಎಂಬುದನ್ನು ನಾನೂ ಸಹ ಒಪ್ಪುತ್ತೇನೆ. ಕೆಲವು ಘಟನಾವಳಿಗಳ ಬಗ್ಗೆ ಕೆಲವು ವಿವರಗಳನ್ನು ಕೇಳಿದ್ದಾರೆ, ಅದನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಸುಮಾರು 1 ತಿಂಗಳ ಹಿಂದೆ, ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಸಂಬಂಧಪಟ್ಟ ಹಾಗೆ ಎಲ್ಲಾ ಉನ್ನತ ಅಧಿಕಾರಿಗಳನ್ನು ಕರೆಯಿಸಿ ಒಂದು ಸಭೆಯನ್ನು ಮಾಡಿ, ಜಿಲ್ಲಾಧಿಕಾರಿಗಳಿಗೆ ಮತ್ತು ಎಸ್.ಪಿ.ಯವರಿಗೆ ನಾವೊಂದು ಸೂಚನೆಯನ್ನು ಕೊಟ್ಟಿದ್ದೇವೆ. ಎಲ್ಲೆಲ್ಲಿ ಸಾಧ್ಯ ಇದೆಯೋ ಅಲ್ಲಿ ಸಂಬಂಧಪಟ್ಟ ನಾಗರೀಕರನ್ನು ವಿವಿಧ ಜನಾಂಗದ ವಿವಿಧ ಗುಂಪುಗಳ ಮುಖಂಡರನ್ನು ಕರೆಸಿ ಶಾಂತಿ ಸಭೆಗಳನ್ನು ಮಾಡಿ, ಸೌಹಾರ್ದಯುತವಾದ ವಾತಾವರಣದಲ್ಲಿ ಈ ಹಬ್ಬವನ್ನು ಆಚರಣೆ ಮಾಡಲಿಕ್ಕೆ ಒಂದು ಮುಂಜಾಗ್ರತ ಕ್ರಮವನ್ನು ತೆಗೆದುಕೊಳ್ಳಬೇಕು ಎನ್ನತಕ್ಕಂತಹ ಸೂಚನೆಯನ್ನು ಕೊಟ್ಟಿದ್ದೇವೆ. ಅದರ ಪ್ರಕಾರವಾಗಿ ಉದಾಹರಣೆಗೆ ದಾವಣಗೆರೆಯಲ್ಲಿ ಶಿವಶಂಕರಪ್ಪನವರು ಈಗ ಸಭೆಯಲ್ಲಿಲ್ಲ, ಅವರ ಅಧ್ಯಕ್ಷತೆಯಲ್ಲೇ ಸಭೆ ನಡೆಯಿತು. ಅಲ್ಲಿ ಬಹಳ ಶಾಂತಿಯುತವಾಗಿ ವಾತಾವರಣವನ್ನು ಕಾಪಾಡಿಸಲಿಕ್ಕೆ ಸಹಕಾರವನ್ನು ಮಾಡಿದ್ದಾರೆ. ಈ ಸಾರಿ ದಾವಣಗೆರೆ ಹರಿಹರದಲ್ಲಿ ಯಾವುದೇ ರೀತಿಯ ಘಟನಾವಳಿಗಳು ನಡೆದಿಲ್ಲ, ಯಾವ ಭಾಗದಲ್ಲೂ ಸಹ ಮತ್ತು ಬೆಳಗಾಂನಲ್ಲೂ ಅಷ್ಟೇ ಸುಮಾರು 1 ತಿಂಗಳ ಹಿಂದೆ ಅಲ್ಲಿಯ ಜಿಲ್ಲಾ ಮಂತ್ರಿಗಳು, ಶಾಸಕರು, ಜಿಲ್ಲಾ ಅಧಿಕಾರಿಗಳು ಎಲ್ಲಾ ಸೇರಿ ಸಭೆಯನ್ನು ಮಾಡಿದ್ದರ ಪ್ರಯುಕ್ತವಾಗಿ ಇವತ್ತು ಶಾಂತಿಯುತವಾಗಿ ಅಲ್ಲಿ ಗಣಪತಿಯ ವಿಸರ್ಜನೆ ಮಾಡಲಿಕ್ಕೆ ಸಾಧ್ಯವಾಗಿದೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಇನ್ನೂ ಪ್ರಿಕಾಶ್‌ನ ತೆಗೆದುಕೊಂಡಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಈ ಸೆಂಟ್ರಲ್ ಗೌರ್ನಮೆಂಟ್ ಫೋರ್ಸ್‌ನ್ನು ತಾವು ತರುವುದರ ಬಗ್ಗೆ ಗೌರ್ನಮೆಂಟ್ ಆಫ್

ಇಂಡಿಯಾದವರು ಇದರ ಬಗ್ಗೆ ಸ್ವಲ್ಪ ರಿಸರ್ವೇಷನ್ಸ್ ಇಟ್ಟುಕೊಂಡಿದ್ದಾರೆ. ಏಕೆಂದರೆ ಅವರಿಗೂ ರಾಷ್ಟ್ರದ ಅನೇಕ ಕಡೆಗಳಲ್ಲಿ ಕಾನೂನಿನ ಲಾ ಅಂಡ್ ಆರ್ಡರ್ ಪ್ರಾಬ್ಲಂ ಇದೆ. ಆದರೂ ಸಹ ನಾವು ಕೇಳಿದಾಗಲೆಲ್ಲಾ ಕೊಟ್ಟಿದ್ದಾರೆ.

ನಾವು ಗಣಪತಿ ಹಬ್ಬಕ್ಕೆ ಸಂಬಂಧಪಟ್ಟಹಾಗೆ ಸಿ.ಆರ್.ಪಿ.ಸಿ. . ಯನ್ನು ಕರೆಸಿದ್ದೇವೆ. ಇನ್ನೂ ಸಿ.ಆರ್.ಪಿ.ಎಸ್.ನ 2 ಬೆಟ್ಯಾಲಿಯನ್‌ಗಳು ಇವೆ. ಒಂದು ಬೆಳಗಾಂನಲ್ಲಿ ನಾವು ಹಾಕಿದ್ದೇವೆ. ಮತ್ತೊಂದನ್ನು ಬೆಂಗಳೂರಿನಲ್ಲೇ ಮುಂಜಾಗ್ರತ ಕ್ರಮವಾಗಿ ದೃಷ್ಟಿಯಿಂದ ನಾವು ತೆಗೆದುಕೊಂಡಿದ್ದೇವೆ. ಶಿವಮೊಗ್ಗದ್ದೂ ಸಹ ತಮಗೆ ಗೊತ್ತಿದ್ದ ಹಾಗೆ ಅಲ್ಲೇ ಒಂದು ಕೆ.ಎಸ್.ಆರ್.ಪಿ. ಬೆಟ್ಯಾಲಿಯನ್ ಇದೆ. ಒಂದು ಕೆ.ಎಸ್.ಆರ್.ಪಿ. ಬೆಟ್ಯಾಲಿಯನ್ ಅಂದರೆ 1000 ಜನ ಆಗುತ್ತಾರೆ. ಎಲ್ಲಾ ಜಿಲ್ಲೆಯ ಎಲ್ಲಾ ಅಧಿಕಾರಿಗಳನ್ನು ಸಹ ಶಿವಮೊಗ್ಗಕ್ಕೆ ಕರೆಯಿಸಿದ್ದೆವು. ಒಂದು ಕೆ.ಎಸ್.ಆರ್.ಪಿ. ಬೆಟ್ಯಾಲಿಯನ್‌ನ್ನೂ ಸಹ ನಾವು ಹಾಕಿದ್ದೇವೆ. ತಾವೇನೂ ಹೇಳುತ್ತಿದ್ದೀರಿ. ತುರುವೇಕೆರೆಗೆ ಮಾನ್ಯ ಮುಖ್ಯಮಂತ್ರಿಗಳು ಹೋಗಬೇಕಾಗಿತ್ತು, ಅದಕ್ಕೋಸ್ಕರವಾಗಿ ಕುಣಿಗಲ್‌ನಲ್ಲಿದ್ದಂತಹ ಎಲ್ಲಾ ಸಿಬ್ಬಂದಿ ತರುವೇಕೆರೆಗೆ ಹೋದರು ಅನ್ನತಕ್ಕಂತಹದ್ದು. ಅದರಲ್ಲಿ ವಾಸ್ತವಾಂಶ ಇಲ್ಲ. ಗಂಟೆ ಮುಂಚಿತವಾಗಿ ಮುಖ್ಯಮಂತ್ರಿಗಳು ತುರುವೇಕೆರೆಗೆ ಬರುವುದಿಲ್ಲ ಎನ್ನತಕ್ಕಂತಹದ್ದನ್ನು ನಾವು ತಿಳಿಸಿದ್ದೆವು. ಆದ್ದರಿಂದ ಮುಖ್ಯಮಂತ್ರಿಗಳಿಗೆ ಮಾಡತಕ್ಕಂತಹ ಬಂದೋಬಸ್ತು ಏನು ಇದೆ, ಅದು ಆಗಿರಲಿಲ್ಲ. ಅವರ ಬದಲಾಗಿ ಗೃಹ ಮಂತ್ರಿಗಳು ಬರುತ್ತಾರೆ ಎನ್ನುವ ಬದಲಾವಣೆಯ ಸೂಚನೆ ಹೋಗಿತ್ತು. ಮೊನ್ನೆ ದಿನ ರಾತ್ರಿ ಫೋನ್ ಮಾಡಿ ಎಸ್.ಸಿ. ಯವರಿಗೆ ಅವರು ರಜೆಯ ಮೇಲಿದ್ದರು. ಅವರಿಗೆ ಹುಷಾರಿರಲಿಲ್ಲ. ಎಸ್.ಪಿ. ಯವರಿಗೆ, ಡಿ.ಸಿ.ಯವರಿಗೆ ನೀವು ಕುಣಿಗಲ್‌ನಲ್ಲೇ ಕ್ಯಾಂಪ್ ಮಾಡಬೇಕು ಎಂದು ಹೇಳಿದೆ. ನಾನು ಹೋಂ ಮಿನಿಸ್ಟರ್ ಆಗಿದ್ದರೂ ಎಸ್.ಪಿ.ಯವರನ್ನು ನನ್ನ ಜೊತೆಯಲ್ಲಿ ಕರೆದುಕೊಂಡು ಹೋಗಲಿಲ್ಲ. ಆ ಸಂದರ್ಭದಲ್ಲಿ ಮಾನ್ಯ ಮುದ್ದನುಮೇಗೌಡರೂ ಸಹ ಅಲ್ಲೇ ಇದ್ದರು, ಅವರೂ ಸಹಕಾರ ಕೊಟ್ಟಿದ್ದಾರೆ, ಎಲ್ಲಾ ರೀತಿಯಲ್ಲೂ. ಎಸ್.ಪಿ.ಯವರಿಗೆ ಹಾಗೂ ಡೆಪ್ಯೂಟಿ ಕಮೀಷನರ್‌ರವರಿಗೆ ಅಲ್ಲೇ ಇದ್ದು, ಸತ್ತಿರತಕ್ಕಂತಹವರು ಯಾರು ಇದ್ದಾರೆ. ಅವರು ಹಿಂದೂ -ಮುಸಲ್ಮಾನ್ ಅಥವಾ ಗಣಪತಿ ವಿಸರ್ಜನೆಗೆ ಸಂಬಂಧಪಟ್ಟ ಹಾಗೆ ಸತ್ತಿದ್ದಾರೆ ಎಂಬ ವಿಚಾರ ಇನ್ನೂ ಗೊತ್ತಾಗಿಲ್ಲ. ಏಕೆ ಸತ್ತಿದ್ದಾರೆ ಎಂದು ಹೇಳಿ ಅದರ ಬಗ್ಗೆ ವಿಚಾರಣೆಯನ್ನು ಪೋಲೀಸ್‌ನವರು ನಡೆಸುತ್ತಿದ್ದಾರೆ. ಆದರೂ ಸಹ ಜಿಲ್ಲಾಧಿಕಾರಿಗಳಿಗೆ ನಿನ್ನೆ ಭಾನುವಾರ ಇದ್ದರೂ ಸಹ ತಕ್ಷಣ 1.00 ಲಕ್ಷ ರೂಪಾಯಿಗಳ ಪರಿಹಾರವನ್ನು ಅವರ ಕುಟುಂಬ ವರ್ಗದವರಿಗೆ ಕೊಡಬೇಕು ಎಂದು ಹೇಳಿ, ಅಲ್ಲೇ ಉಳಿದು ನಾನು ವಾಪಸ್ಸು ಬರುವಾಗ ಅದನ್ನು ಚೆಕ್ ಮಾಡಿದ್ದೇನೆ. ಒಂದು ಲಕ್ಷ ರೂ.ಗಳ ಪರಿಹಾರವನ್ನು ಕೊಡಲಿಕ್ಕೆ ನಾನು ಕ್ರಮವನ್ನು ತೆಗೆದುಕೊಂಡಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : 1 ಸಾವಿರ ಜನರ ಬೆಟ್ಯಾಲಿಯನ್‌ನ ಫೋರ್ಸ್ ಅಲ್ಲಿ ಇದ್ದರೂ ಸಹ ಏಕೆ ಹೀಗಾಯಿತು ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಅದನ್ನು ಹೇಳುತ್ತೇನೆ. ಇದು ಬಹಳಷ್ಟು ವರ್ಷಗಳಿಂದಲೂ ಇರತಕ್ಕಂತಹದ್ದು. ಇಷ್ಟು ಮಾತ್ರ ಕಡಿಮೆಯಾಗಿರುವುದನ್ನು ನಾನು ಪ್ರಶಂಸೆ ಮಾಡುತ್ತೇನೆ. ಮಾನ್ಯ ಈಶ್ವರಪ್ಪನವರು, ಮತ್ತೆ ಮಾನ್ಯ ಮಂಜುನಾಥ್ ರವರು ಆ ಮೆರವಣಿಗೆಯಲ್ಲಿ ಇವರಿಬ್ಬರೂ ಭಾಗವಹಿಸಿದ್ದರು. ಪೋಲೀಸ್‌ನವರನ್ನು ಅಭಿನಂದಿಸಿದ್ದಾರೆ. ಬಹಳ ನಿಷ್ಠೆಯಿಂದ ಪೋಲೀಸ್‌ನವರು ಇದ್ದಾರೆ. ಅಲ್ಲಿರತಕ್ಕ ಉನ್ನತ ಪೋಲೀಸ್ ಅಧಿಕಾರಿಗಳಿಗೆ ನಾನು ಅಭಿನಂದಿಸುತ್ತೇನೆ. ಅವರು ರಿಸ್ಟೈನ್ಡ್ ಆಗಿದ್ದರಿಂದ ಮಾನ್ಯ ಉಪ ಮುಖ್ಯ ಮಂತ್ರಿಗಳು ಹೇಳಿದ ಹಾಗೆ ಅಲ್ಲಿ ಕೆಲವು ಆಂಟಿ ಸೋಷಿಯಲ್ ಎಲಿಮೆಂಟ್ಸ್‌ಏನು ಇವೆ. ಅದು ಒಂದು ಭಾಗ, ಇನ್ನೊಂದು ವರ್ಗದ ಜನರಿಗೆ ಸ್ವಲ್ಪ ಪೋಲೀಸರ ಬಗ್ಗೆ ಸ್ವಲ್ಪ ಅಸಮಾಧಾನ ಇದೆ. ಅಲ್ಲಿ ಒಂದು

VIII-F

ಕಸ್ಟೋಡಿಯನ್‌ಡೆತ್ ಆಗಿದೆ ಅನ್ನತಕ್ಕಂತಹ ಒಂದು ಶಂಕೆ ಇದೆ. ಅದರ ಬಗ್ಗೆ ಒಂದು ಸಿ.ಓ.ಡಿ. ವಿಚಾರಣೆಯನ್ನು ನಾವು ಮಾಡಿಸುತ್ತಿದ್ದೇವೆ. ಆ ಜನಾಂಗದವರು ಸತ್ತ ಎನ್ನುವ ಕಾರಣಕ್ಕಾಗಿ ಪೋಲೀಸ್‌ನವರ ಮೇಲೆ ಸ್ವಾಭಾವಿಕವಾಗಿ, ಸಹಜವಾಗಿ ಸ್ವಲ್ಪ ಸಿಟ್ಟು ಇರಬಹುದು. ಅವರು ಗಲಾಟೆ ಮಾಡಿರಬಹುದು ಎನ್ನುವ ಶಂಕೆ ಇದೆ. ಈ ಕಾರಣದಿಂದಾಗಿ ಅಲ್ಲಿ ಸ್ವಲ್ಪ ಗಲಭೆ ನಡೆದಿರಬಹುದು ಎನ್ನತಕ್ಕಂತಹದ್ದು ಇದೆಯೇ ಹೊರತು, ಖಚಿತವಾಗಿ ಇದು ಹೀಗೇ ಆಗಿದೆ ಎಂದು ಹೇಳುವುದು ಕಷ್ಟ. ನಿಮಗೆ ಗೊತ್ತಿದೆ ಮಾನ್ಯ ಅಧ್ಯಕ್ಷರೇ, ಇಂತಹ ಸಂದರ್ಭಗಳಲ್ಲಿ ಆವೇಶಬುದ್ಧಿಯನ್ನು ನಾವು ಸಿಟ್ಟಿನ ಕೈಗೆ ಕೊಟ್ಟುಬಿಡುತ್ತೇವೆ.

ಅಧ್ಯಕ್ಷರು : ನನಗೆ ಗೊತ್ತಿದೆ ಅಂತ ನಾವೇನೋ ಪಾಲ್ಗೊಂಡ ಹಾಗೆ ಹೇಳುತ್ತಿದ್ದೀರಲ್ಲಾ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇಲ್ಲ ಇಲ್ಲ. ಶಿವಮೊಗ್ಗದಲ್ಲಿಯಾಗಲಿ, ಬೆಳಗಾಂನಲ್ಲಿಯಾಗಲಿ, ಅಥವಾ ಕುಣಿಗಲ್‌ನಲ್ಲಿಯಾಗಲಿ, ಸಾಕಷ್ಟು ಬಂದೋಬಸ್ತನ್ನು ಪೋಲೀಸ್‌ನವರು ನಮ್ಮ ರಾಜ್ಯದ ಇಲಾಖೆಯವರಿಗೆ ಎಷ್ಟೊಂದು ಕೆಪ್ಯಾಸಿಟಿ ಇದೆ, ಅದಕ್ಕಿಂತ ಹೆಚ್ಚಿನ ಕ್ರಮವನ್ನು ನಾವು ತೆಗೆದುಕೊಂಡಿದ್ದೇವೆ. ಸಿ.ಆರ್.ಪಿ.ಎಫ್.ನ್ನು ನಾವು ಕರೆಯಿಸಿಕೊಂಡಿದ್ದೇವೆ. ಶಾಂತಿ ಸಭೆಗಳನ್ನು ಮಾಡಿದ್ದೇವೆ. ಎಸ್.ಪಿ.ಡಿ.ಸಿ. ಯವರಿಗೆ ಬೇಕಾಗಿರತಕ್ಕ ಎಲ್ಲಾ ಫ್ರೀಡಂಗಳನ್ನು ನಾವು ಕೊಟ್ಟಿದ್ದೇವೆ. ಎಲ್ಲಾ ಎಂ.ಎಲ್.ಎ.ಗಳು ಸಹಕಾರ ಕೊಟ್ಟಿದ್ದರಿಂದ, ಜನತೆ ಸಹಕಾರ ಕೊಟ್ಟಿದ್ದರಿಂದ ಈ ಕೆಲಸ ಆಗಿದೆ. ನಾವು ಎಲ್ಲೂ ಸಹ ಪೋಲೀಸ ಫೋರ್ಸನ್ನು ವಾಪಸ್ಸು ತೆಗೆದುಕೊಂಡಿಲ್ಲ. ಕುಣಿಗಲ್‌ನಲ್ಲೂ ಸಹ ಪೋಲೀಸ್ ಫೋರ್ಸನ್ನು ವಾಪಸ್ಸು ತೆಗೆದುಕೊಂಡಿಲ್ಲ ಎಸ್.ಪಿ. ಅಲ್ಲೇ ಇದ್ದರು. ಇನ್ನೂ 3ನೇ ತಾರೀಖು, 6ನೇ ತಾರೀಖು, 9ನೇ ತಾರೀಖು ನಡೆದಿರತಕ್ಕ ಘಟನಾವಳಿಗಳ ಬಗ್ಗೆ ಒಂದು ಸಿ.ಓ.ಡಿ. ವಿಚಾರಣೆಯನ್ನು ಮಾಡಬೇಕು ಅಂತ ಮುದ್ದ ಹನುಮೇಗೌಡರು ಹೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಏನು ಕುಣಿಗಲ್‌ನಲ್ಲಿ ಪರಿಹಾರವನ್ನು ಕೊಡಿಸಿ ಬಂದರೋ ಅದೇ ರೀತಿಯಲ್ಲಿ ಶಿವಮೊಗ್ಗದಲ್ಲೂ, ಹಾಗೂ ರಾಜ್ಯದ ಇತರೆ ಕಡೆಗಳಲ್ಲೂ ಪರಿಹಾರ ಕೊಡಿಸುವ ವ್ಯವಸ್ಥೆ ಮಾಡುತ್ತೀರೋ.

ಶ್ರೀ ಬಿ.ಬಿ. ಚಿಮ್ಮನಕಟ್ಟೆ : ಮಾನ್ಯ ಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈ ಎಲ್ಲಾ ಅಪಾಯಗಳು, ಹೆಚ್ಚು-ಕಡಿಮೆ ಎಲ್ಲಾ ಕಡೆ ನಡೆದಿವೆ. ಅದರ ಬದಲಾಗಿ ಗಣಪತಿ ಇಡುವುದಕ್ಕೆ ಸ್ವಲ್ಪ ರಿಸ್ಟ್ರಿಕ್ಟ್ ಮಾಡಿ, 5 ದಿವಸ, 3 ದಿವಸ ಏನಾದರೂ ವ್ಯವಸ್ಥೆ ಮಾಡಿ. ಇಲ್ಲದೇ ಹೋದರೆ ಗಣಪತಿಯ ಹಬ್ಬದ ಸಂದರ್ಭದಲ್ಲಿ ಬಹಳ ಅಪಾಯಗಳನ್ನು ಎದುರಿಸತಕ್ಕ ಸಂದರ್ಭ ಇವೆ. ಬಹುಶಃ ಈ ಪರಿಸ್ಥಿತಿಯನ್ನು ಉಪಯೋಗ ಮಾಡಿಕೊಂಡು ಸಮಾಜಘಾತಕ ಶಕ್ತಿಗಳು ಕೂಡಿಕೊಂಡು ಬಹಳವಾಗಿ ಸಮಾಜವನ್ನು ಹಾಳುಮಾಡುವ ವ್ಯವಸ್ಥೆಗೆ ಬಂದಿವೆ. ದೇವರ ಹೆಸರಿನಲ್ಲಿ ಏನೇನೋ ನಡೆಯತಕ್ಕಂತಹ ಪರಿಸ್ಥಿತಿಯೂ ಕೂಡ ಉದ್ಭವಾಗಿದೆ. ಅದನ್ನು ನಿಭಾಯಿಸುವುದರಲ್ಲಿ ಏನಾದರೊಂದು ನೀತಿ-ನಿಯಮಗಳನ್ನು ಮಾಡಿದರೆ ಬಹಳ ಒಳ್ಳೆಯದೇನೋ ಎಂಬುದು ನನ್ನ ಅಭಿಪ್ರಾಯ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅದರ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ. ಏಕೆಂದರೆ ಶಿವಮೊಗ್ಗದ ವಿಚಾರದಲ್ಲೂ ಸಹ ಏಕೆ ಡೆತ್ ಆಗಿದೆ? ಏನಾಗಿದೆ? ಅಗತ್ಯ ಬಿದ್ದರೆ ಸಿ.ಓ.ಡಿ. ಕೈಯ್ಯಿಂದ ಮಾಡಿಸೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಏಕೆಂದರೆ ನೀವು ಹೇಳಿದ ಹಾಗೆ ಲೋಕಲ್ ಪೋಲೀಸರಿಗೆ ಅವರಿಗೂ ವ್ಯತ್ಯಾಸ ಇದ್ದಾಗ, ಸಾಮಾನ್ಯವಾಗಿ ಸಿ.ಓ.ಡಿ. ರೆಫರ್‌ಮಾಡಿದರೆ ಏನಾಗುತ್ತದೆಂದರೆ ಆಂಟಿ ಸೋಷಿಯಲ್ ಎಲಿಮೆಂಟ್ಸ್ ಯಾರು?

ಅವರಿಗೆ ಯಾರು ಸಪೋರ್ಟ್ ಮಾಡುತ್ತಾರೆಂಬುದು ಹೊರಗೆ ಬರುತ್ತದೆ. ಅದಕ್ಕಾಗಿ ನಿಮ್ಮದು ಪಾತ್ರ ಅಂದರೆ ಲೋಕಲ್ ಪೋಲೀಸ್‌ನೊಳಗೆ ಲೈಕಿಂಗ್ -ಡಿಸ್‌ಲೈಕಿಂಗ್ ಇರುತ್ತದೆ. ಕೆಲವು ಸಲ ಇನ್‌ಫ್ಲೂಯನ್ಸ್ ಮೇಲೆ ಹಾಕುತ್ತೇವೆ. ಕೆಲವು ಸಲ ಎಂ.ಎಲ್.ಎ. ಬೇಕಾದವರನ್ನೂ ಹಾಕುತ್ತಾರೆ. ಬೇಡವಾದರನ್ನೂ ಹಾಕುತ್ತಾರೆ. ಅನೇಕ ತೊಂದರೆಗಳಾಗುತ್ತವೆ. ಅನೇಕ ಸಲ ಸಂಬಂಧಪಟ್ಟ ಮಂತ್ರಿಗಳು ಹಾಕಿಸಿಕೊಳ್ಳುತ್ತಾರೆ. ಅದಕ್ಕಾಗಿ ಇದನ್ನು ನೀವು ಸಿ.ಓ.ಡಿ.ಗೆ ರೆಫರ್ ಮಾಡಿ 3ನೇ ಪಾರ್ಟಿಯಾಗುತ್ತಾರೆ. ಸತ್ಯಾಂಶ ಹೊರಗಡೆ ಬರುತ್ತದೆ. ಕುಣಿಗಲ್ಲೇ ಇರಲಿ, ಶಿವಮೊಗ್ಗ ಇರಲಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಕುಣಿಗಲ್ ವಿಚಾರ ಹೇಳಬೇಕಾದರೆ, ಅಲ್ಲಿರತಕ್ಕ ಅಧಿಕಾರಿಗಳಿಗೆ ಮುದ್ದನುಮೇಗೌಡರು ಯಾವುದೇ ರೀತಿಯ ಹಸ್ತಕ್ಷೇಪ ಮಾಡಿಲ್ಲ. ಅವರು ಸಲಹೆಯನ್ನೂ ನನಗೆ ಕೊಟ್ಟಿಲ್ಲ. ಇಂತಹವರನ್ನು ಟ್ರಾನ್ಸ್‌ಫರ್ ಮಾಡಿ, ಅಂತ ಮತ್ತೆ ಸಿ.ಓ.ಡಿ. ಶಿವಮೊಗ್ಗದಲ್ಲಿ ಆಗಿರತಕ್ಕ ಸಾವಿನ ಬಗ್ಗೆಯಾಗಲಿ, ಕುಣಿಗಲ್‌ನಲ್ಲಿ ಆಗಿರತಕ್ಕಂತಹ ಸಾವಿರ ಬಗ್ಗೆಯಾಗಲಿ ಯಾವ ರೀತಿ ನಡೆದಿದೆ ಅಂತ ನಾನು ಇನ್ನೊಷ್ಟು ಮಾಹಿತಿಯನ್ನು ತರಿಸಿಕೊಳ್ಳಬೇಕಾಗಿದೆ. ಅಲ್ಲಿದ್ದಂತಹ ಅಧಿಕಾರಿಗಳು ನಿಮ್ಮ ಪರಿಚಯ ಇರತಕ್ಕಂತಹವರೇ ನಾನು ಅದರ ಬಗ್ಗೆ ವಿಚಾರ ಮಾಡುತ್ತೇನೆ. ನಾನು ಭರವಸೆ ಕೊಡುತ್ತೇನೆ. ನನಗೇನೂ ಸಿ.ಓ.ಡಿ.ಯಿಂದ ಮಾಡಿಸಬಾರದು ಅಂತ ಇಲ್ಲ. ಇದರ ಬಗ್ಗೆ ಪರಿಶೀಲನೆ ಮಾಡತಕ್ಕ ಭರವಸೆಯನ್ನು ಕೊಡುತ್ತೇನೆ. ಮತ್ತು ಕಳೆದ 6 ವರ್ಷಗಳಿಂದ ಇದು ನಡೆದುಕೊಂಡು ಬಂದಿದೆ, ಯಾವ ರೀತಿಯ ಘಟನಾವಳಿಗಳು ಅಗಿಲ್ಲ ಅಂತ ಮಾನ್ಯ ಈಶ್ವರಪ್ಪನವರು ಹೇಳಿದರು, ಘಟನಾವಳಿಗಳು ಆಗಿವೆ. ತಮಗೇ ಗೊತ್ತಿದೆ. ಘಟನಾವಳಿಗಳು ಏನಾಯಿತು? ಏಕೆ ಆಯಿತು? ಹೇಗೆ ಆಗಿದೆ ಎಲ್ಲಾ ನಿಮಗೆ ಗೊತ್ತಿರತಕ್ಕ ವಿಚಾರ.

ಶ್ರೀ ಕೆ.ಎಸ್. ಈಶ್ವರಪ್ಪ : ಮೆರವಣಿಗೆ ಒಂದು ಕಡೆಯಾಗುತ್ತಿದೆ. ಕೊಲೆಗಳು ಇನ್ನೊಂದು ಕಡೆ ಆಗುತ್ತಿದೆ. ಯಾರೋ 150 ಜನ ಚಾಕು. ಖಡ್ಗ ಹಿಡಿದುಕೊಂಡು ಹೋಗುತ್ತಾರೆ. ಇದರ ಬಗ್ಗೆಯೂ ತನಿಖೆ ನಡೆಯಬೇಕು ಎಂದು ಹಿಂದೆಯೇ ಹೇಳಿದ್ದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಶಿವಮೊಗ್ಗ ಎಸ್.ಪಿ.ಯವರು, ಆರ್.ಎ.ಎಫ್.ನ್ನು ಕೇಳಿದ್ದರು ಎಂದು ಪತ್ರಿಕೆಯಲ್ಲಿ ಬಂದಿದೆ ಎಂದು ಹೇಳಿದರು. ಅವರು ಇನ್ನೊಂದು ಪತ್ರಿಕೆಯಲ್ಲಿ ನೀಡಿರುವ ಇನ್ನೊಂದು ಹೇಳಿಕೆ ಇವತ್ತು ಬಂದಿದೆ. ಆ ರೀತಿಯಾಗಿ ಪತ್ರಿಕೆಗಳಿಗೆ ಹೇಳಲಿಲ್ಲ, ಅಂತ ಅದೇನೆ ಇರಲಿ, ಶಿವಮೊಗ್ಗ ಪೋಲೀಸ್‌ನವರು, ಡಿ.ಐ.ಜಿ.ಇರಬಹುದು, ಎಸ್.ಪಿ.ಯವರು ಇರಬಹುದು ಮುಂಜಾಗ್ರತ ಕ್ರಮಕ್ಕೋಸ್ಕರ ಬಂದೋಬಸ್ತುಗೋಸ್ಕರ ಏನೇನು ಕೇಳಿದರೋ ಅವೆಲ್ಲವನ್ನೂ ಸಹ ನಾವು ಕೊಟ್ಟಿದ್ದೇವೆ. ಅನ್ನುವ ಮಾತನ್ನು ಹೇಳಿ, ಮುಂಜಾಗ್ರತೆಯಾಗಿ ಬಂಧನವನ್ನೂ ಸಹ ಮಾಡಿದ್ದೇವೆ. ಆ ಅಂಕಿ ಅಂಶಗಳು ನನ್ನ ಹತ್ತಿರ ಇಲ್ಲ. ಬೇಕಾದರೆ ಅವುಗಳನ್ನು ಒದಿಗಿಸಿಕೊಡುತ್ತೇನೆ, ಈ ಸದನಕ್ಕೆ. ಕುಣಿಗಲ್‌ನಲ್ಲಿ ಮಾಡಿದ್ದೇವೆ. ಬೆಳಗಾಂನಲ್ಲಿ ಮಾಡಿದ್ದೇವೆ. ಶಿವಮೊಗ್ಗದಲ್ಲಿ ಮಾಡಿದ್ದೇವೆ. ಆದರೆ ಯಾವುದೇ ರೀತಿಯ ಭಾವನೆಗಳಿಗೆ ಪ್ರಚೋದನೆ ಕೊಡುವುದಕ್ಕೆ ಹೋಗಬಾರದು. ಇವೆಲ್ಲಾ ಭಾವನಾತ್ಮಕವಾದ ವಿಚಾರಗಳು. ನಾವು ಅರೆಸ್ಟ್ ಮಾಡುವುದರಿಂದಲೇ ಅನೇಕ ಸಂದರ್ಭಗಳಲ್ಲಿ ಗಲಭೆಗಳು ಆಗುತ್ತವೆ.ಮಾನ್ಯ ಮೊಯಿಲಿಯವರು. ಮಾನ್ಯ ಯಡಿಯೂರಪ್ಪನವರು ಆವತ್ತಿನ ಸಭೆಯಲ್ಲಿ ಭಾಗವಹಿಸಿದ್ದರು. ಮಾನ್ಯ ಬಿ.ಐ. ಪಾಟೇಲ್‌ರವರೂ ಸಹ ಸಭೆಯಲ್ಲಿ ಭಾಗವಹಿಸಿದ್ದರು.

ನೀವು ಈ ರೂಟನ್ನು ಬಿಟ್ಟು ಆ ರೂಟಿಗೆ ಹೋಗಿ ಎಂದರೆ ಅದಕ್ಕೆ, ನಾವು ಏಕೆ ಆರೂಟಿಗೆ ಹೋಗಬೇಕು ಎನ್ನತಕ್ಕಂಥಾದ್ದೇ ಒಂದು ದೊಡ್ಡ ಸಮಸ್ಯೆಯಾಗಿ ಬಂತು. ಆದ್ದರಿಂದ ಇದು ಒಂದು ಸೂಕ್ಷ್ಮವಾದ ವಿಚಾರ ಆಗಿರುವುದರಿಂದಾಗಿ

ಬಂದೋಬಸ್ತು ಮಾಡುವುದರಲ್ಲಿ ಸರ್ಕಾರ ಯಶಸ್ವಿಯಾಗಿದೆ. ಇಂಥಾ ಘಟನಾವಳಿಗಳು ಇವತ್ತು ಬಹಳ ಕಡಿಮೆಯಾಗಿದೆ ಅನ್ನತಕಕ್ಕಂಥ ಮಾತನ್ನು ಕೇಳಿ, ಪರಿಹಾರದ ಬಗ್ಗೆ ಏನು ಹೇಳಿದ್ದಾರೆ, ನಾನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಮತ್ತು ಎಸ್.ಪಿ.ಗಳಿಗೆ ಸಂದರ್ಭದಲ್ಲಿ ಮಾತನಾಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ನನಗೆ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು : ಅದೇ ನನಗೂ ಅರ್ಥ ಆಗುತ್ತಿಲ್ಲ, ನಿಮಗೂ ಅರ್ಥ ಆಗುತ್ತಿಲ್ಲ. ಅವರೂ ಹಾಗೇ ಇದ್ದಾರೆ. ಈಗ ಜೀರೋ ಅವರ್‌ನಲ್ಲಿ ಮೆನ್‌ಷನ್ ಮಾಡಿದ್ದಾರೆ. ನೀವು ಎಲಾಬೊರೇಟ್ ಆನ್ಸರ್ ಕೊಡುತ್ತಿದ್ದೀರಿ. you should just sum up in brief. ಆಮೇಲೆ ಬೇಕಾದರೆ ಸೆಪರೇಟಾಗಿ ರೈಸ್ ಮಾಡುವುದಕ್ಕೆ ಅವಕಾಶ ಇದೆ. ನಾನು ಈಗ ಜೀರೋ ಅವರ್ ಡೆಫನಿಷನ್ ರಿವೈಸ್ ಮಾಡಬೇಕು. ಜೀರೋ ಅವರ್ಸ್ ಮಾಡಿಕೊಂಡಿದ್ದೀರಿ ನೀವು. I have to regulate. You should use your wisdom.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಧ್ಯಕ್ಷರೇ, ನನಗೆ ಏನೂ ಆ ತರಹ ಇಲ್ಲ. I would like to submit humbly before your kindself the facts. ಈಗ ಸರ್ಕಾರದ ಮೇಲೆ ಆರ್ ಎ ಎಫ್ ತರಿಸಲಿಲ್ಲ ಎಂದು ಹೇಳಿದ್ದಾರೆ. ಎಸ್.ಪಿ.ಅವರು ಬಂದೋಬಸ್ತು ಮಾಡಲಿಲ್ಲ. ಅಲ್ಲಿ ಸಿ.ಎಮ್. ಬಂದೋಬಸ್ತ್‌ಗೆ ತುರುವೇಕೆರೆಗೆ ಹೋಗಿದ್ದು. ಅದರಿಂದ ಹಾಗೆ ಆಯಿತು ಎಂದು ಹೇಳಿದಾಗ for that reason ಇಷ್ಟೊಂದು ನಾನು ಡೀಟೈಲ್ ಆಗಿ ಸ್ಟೇಟ್‌ಮೆಂಟ್‌ಮಾಡಿದ್ದೇನೆಯೋ ಹೊರತು ಬೇರೆ ಯಾವ ಕಾರಣದಿಂದಲೂ ಅಲ್ಲ. ನೀವು ಮಾತನಾಡುವಾಗ ನಾನು ಕೇಳಿದ್ದೇನೆ. ನಾನು ಮಾತನಾಡುವಾಗ ತಾವೂ ಕೇಳಿ. ಶಿವಮೊಗ್ಗಾದಲ್ಲಿ ಆಗಿರತಕ್ಕಂಥ ಸಾವಿನ ಬಗ್ಗೆ ಪರಿಹಾರವನ್ನು ಒದಗಿಸಿ ಕೊಡುತ್ತೇನೆ. ಇದರ ಬಗ್ಗೆ ಸ್ಪಷ್ಟವಾಗಿ ನಾನು ಹೇಳುತ್ತಿದ್ದೇನೆ. ಕೊನೆಯದಾಗಿ, ಅಧ್ಯಕ್ಷರೇ, ಇವತ್ತು ಗಣಪತಿ ಪ್ರೊಸೆಷನ್ ಇರಬಹುದು, ಈದ್‌ಮಿಲಾದ್ ಪ್ರೊಸೆಷನ್ ಇರಬಹುದು, ಈ ರೀತಿಯ ಪ್ರೊಸೆಷನ್‌ಗಳ ಸಂದರ್ಭದಲ್ಲಿ ನಾವು ಅಂದರೆ ರಾಜ್ಯ ಸರ್ಕಾರ ಹದ್ದಿನ ಕಣ್ಣನ್ನು ಇಟ್ಟಿದ್ದೇವೆ. ಯಾರು ಆಂಟಿ ಸೋಷಿಯಲ್ ಎಲಿಮೆಂಟ್ಸ್ ಇದ್ದಾರೆ. ಕಮ್ಯುನಲ್ ಗೂಂಡಾಗಳು ಇದ್ದಾರೆ, ಇವರ ಮೇಲೆ ನಿರ್ದಾಕ್ಷಿಣ್ಯವಾಗಿ ಕಠಿಣ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಮುಂಜಾಗ್ರತೆಯಾಗಿ ಶಾಂತಿ ಸಭೆಗಳನ್ನು ಒಂದಲ್ಲ ಎರಡು ಸಾರಿ ಮಾಡುವುದರ ಕಡೆಗೆ ನಾವು ನಿಗಾವನ್ನು ಮಾಡಿದ್ದೇವೆ. ಇದರ ಜೊತೆಗೆ, ಮಾನ್ಯ ಅಧ್ಯಕ್ಷರೇ,ಇಂಥಹ ಸಂದರ್ಭಗಳಲ್ಲಿ ವಿಶೇಷವಾದ ಬಂದೋಬಸ್ತನ್ನು ಮಾಡಲಿಕ್ಕೆ ಪೋಲೀಸನಲ್ಲೇ ಒಂದು ವಿಶೇಷವಾದ ಪೋಲೀಸ್ ಪಡೆಯನ್ನು ಮಾಡಲಿಕ್ಕೂ ಸಹಿತ ಸರ್ಕಾರ ಪರಿಶೀಲನೆಯನ್ನು ಮಾಡುತ್ತಿದೆ ಎಂದು ಹೇಳಲು ಇಷ್ಟ ಪಡುತ್ತೇನೆ. ಇನ್ನು ಶಾಂತಿ ಸಮಿತಿಯ ಬಗ್ಗೆ ನಾನು ಹೇಳಿದ್ದೆ, ತಮಗೆ ಧೀರ್ಘವಾಗಿ ಹೇಳಿದ್ದೇನೆ. ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಗುರುತು ಮಾಡಿರತಕ್ಕಂಥ ಸೂಕ್ಷ್ಮವಾದ ಪ್ರದೇಶಗಳಲ್ಲಿ ಎಲ್ಲಾ ಕಡೆಗಳಲ್ಲೂ ಸಹಿತ ಶಾಂತಿ ಸಭೆಗಳನ್ನು ಮುಂಜಾಗ್ರತೆಯಾಗಿ ಮಾಡುತ್ತೇವೆ. ಈ ದಿಸೆಯಲ್ಲಿ ಸದನದ ಎಲ್ಲಾ ಪಕ್ಷದ ಗಣ್ಯವ್ಯಕ್ತಿಗಳು ಸಹಕಾರವನ್ನು ಕೊಡಬೇಕು ಎಂದು ಹೇಳಿ, ತಾವು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ, ತಮಗೆ ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶಿಕ್ಷಕರ ನೇಮಕಾತಿ ಬಗ್ಗೆ.

ಶ್ರೀ ಬಿ. ಶಿವರಾಮು (ಗಂಡಸಿ) : ಆಯಿತು. ಸನ್ಮಾನ್ಯ ಅಧ್ಯಕ್ಷರೇ, ಈಗ ಶಿಕ್ಷಕರ ನೇಮಕಾತಿ ವಿಚಾರವಾಗಿ ಟಿ.ಸಿ.ಹೆಚ್., ಸಿ.ಪಿ.ಎಡ್. ತರಬೇತಿ ಆದವರಿಗೆ

10ನೇ ತಾರೀಖಿಗೆ ಕೊನೆಯ ದಿವಸವಾಗಿ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಕಛೇರಿಯಲ್ಲಿ ನೋಂದಣಿ ಮಾಡಬೇಕು ಎನ್ನತಕ್ಕಂಥ ಆದೇಶವನ್ನು ಸರ್ಕಾರ ಹೊರಡಿಸಿದೆ. ಇದರಲ್ಲಿ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿದೆ ಎನ್ನತಕ್ಕಂಥಾದ್ದನು ತಮ್ಮ ಮೂಲಕ ಮಂತ್ರಿಗಳ ಗಮನಕ್ಕೆ ತರಲಿಕ್ಕೆ ಇಚ್ಛೆ ಪಡುತ್ತಿದ್ದೇನೆ ಅಧ್ಯಕ್ಷರೇ. ಈ ಸಾರಿ ಟಿ.ಸಿ.ಹೆಚ್, ಸಿ.ಪಿ.ಎಡ್. ಫಲಿತಾಂಶ ಲೇಟಾಗಿ ಹೊರಗೆ ಬಂತು. ಕೆಲವು ವ್ಯತ್ಯಾಸಗಳನ್ನು ಸರಿಪಡಿಸತಕ್ಕಂಥ ವಿಚಾರದಲ್ಲಿ ಮಂಡಳಿಯ ಕಛೇರಿಯಲ್ಲಿ 6-7ನೇ ತಾರೀಖು ಸಾಧಾರಣ ಒಂದು ಸಾವಿರ ಹುಡುಗರು ಇದ್ದದ್ದು ನನ್ನ ಗಮನಕ್ಕೆ ಬಂದು. ಕಛೇರಿಗೆ ಹೋಗಿ ಮಂಡಳಿಯ ನಿರ್ದೇಶಕರ ಗಮನಕ್ಕೆ ನಾನು ತಂದಿದ್ದೇನೆ. ಈಗ ಏನಾಗಿದೆ ಎಂದರೆ ಮಾರ್ಕ್ಸ್ ಕಾರ್ಡ್‌ಗಳನ್ನು ಸರಿಪಡಿಸಿಕೊಡತಕ್ಕಂಥಾದ್ದು, ಅದನ್ನು ನೋಂದಾಯಿಸಿ ಕೊಡತಕ್ಕಂಥಾದ್ದು ಡಿಲೇ ಆಗಿರುವುದರಿಂದ ಆ ಹುಡುಗರಿಗೆ 10ನೇ ತಾರೀಖಿಗೆ ನೋಂದಣಿಯನ್ನು ಮಾಡತಕ್ಕಂಥಾದ್ದು ಆಗಿಲ್ಲ. ಎರಡನೇಯ ವಿಚಾರ ಎಂದರೆ, 8ನೇ ತಾರೀಖು, 9ನೇ ತಾರೀಖು ರಜಾ ಇತ್ತು, ಎರಡನೇ ಶನಿವಾರ ಮತ್ತು ಭಾನುವಾರ. 10ನೇ ತಾರೀಖಿಗೆ ಅವರು ನೋಂದಣಿಯ ಕೊನೆಯ ದಿವಸ ಎಂದು ಹೇಳಿದರು. 10ನೇ ತಾರೀಖು ಭಾನುವಾರ, 9ನೇ ತಾರೀಖು ರಜಾದಿನ, 8ನೇ ತಾರೀಖು ಬಂದ್. ಆದ್ದರಿಂದ, ಈ ಮೂರು ದಿವಸ ರಜಾ ಬಂದದ್ದರಿಂದ ಕಛೇರಿಯಲ್ಲಿ ಕೆಲಸ ಆಗಿಲ್ಲ. ಆ ಸಂದರ್ಭದಲ್ಲಿ ಆ ಕಛೇರಿಗೆ ಹೋದಾಗ, ನಿರ್ದೇಶಕರನ್ನು ಭೇಟಿ ಮಾಡಿದಾಗ ಅವರ ಅಸಹಾಯಕತೆಯನ್ನು ಹೇಳತಕ್ಕಂಥದನ್ನು ಮಾಡಿದ್ದಾರೆ, ಸಿಬ್ಬಂದಿ ಇಲ್ಲ ಅನ್ನತಕ್ಕಂಥಾದ್ದನ್ನು. ಅಸಿಸ್ಟೆಂಟ್ ಡೈರೆಕ್ಟರ್ ಏನಿದ್ದಾರೆ, ಅವತ್ತು ರಜೆಯಲ್ಲಿ ಇದ್ದು, ಆ ಕಛೇರಿಯೊಳಗೆ ಬಂದಂಥ ಪ್ರಸ್ತಾವನೆಗಳನ್ನು ಪರಿಶೀಲನೆ ಮಾಡದೇ ಸೈನ್ ಹಾಕದೇ ಹುಡುಗರಿಗೆ ನಿಮ್ಮ ಶಾಲೆಗಳಿಗೆ ಕಳುಹಿಸುತ್ತೇನೆ ಹೋಗಿ ಎನ್ನತಕ್ಕಂಥ ವಿಚಾರವನ್ನು ಹೇಳಿದ್ದಾರೆ. ಈಗ ಕಳುಹಿಸುವುದು ಡಿಲೇ ಆಗಿರುವುದರಿಂದ ಆ ಹುಡುಗರಿಗೆ ನೋಂದಣಿ ಆಗದೇ ಇರುವುದರಿಂದ ತೊಂದರೆಯಾಗಿದೆ. ದಯವಿಟ್ಟು ಕಾಲಾವಕಾಶ ಏನು ತಾವು 10ಕ್ಕೆ ನಿಗದಿ ಮಾಡಿದ್ದೀರಿ ಅದನ್ನು ಕನಿಷ್ಠ ಒಂದು ವಾರ, 16ನೇ ತಾರೀಖಿನವರೆಗಾದರೂ ಮುಂದುವರೆಸಿ ಒಂದು ವರ್ಷಕ್ಕೆ ದೊರೆಯತಕ್ಕಂಥ ಒಂದು ಅವಕಾಶದಲ್ಲಿ ಆ ವಿದ್ಯಾರ್ಥಿಗಳಿಗೆ ತಾವು ನ್ಯಾಯವನ್ನು ಒದಗಿಸಿ ಕೊಡಬೇಕು ಎಂದು ಹೇಳಿ ಅಧ್ಯಕ್ಷರ ಮೂಲಕ ಮಂತ್ರಿಗಳನ್ನು ನಾನು ಮನವಿ ಮಾಡಿ ಕೊಳ್ಳುತ್ತಿದ್ದೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸ್ನೇಹಿತರು ಏನು ಅರ್ಜಿಗಳು ಅವರಿಗೆ ಸರಿಯಾದ ಕಾಲಕ್ಕೆ ದೊರೆಯುವುದಕ್ಕೆ ಅವಕಾಶ ಆಗಲಿಲ್ಲ ಎಂದು ಹೇಳಿ ಕೇಳುತ್ತಿದ್ದಾರೆ, ನಾವು ಈಗ ರೆಕ್ರೂಟ್‌ಮೆಂಟ್ ಮಾಡುತ್ತಿರತಕ್ಕಂಥಾದ್ದು 29 ವರ್ಷದ ಮೇಲ್ಪಟ್ಟಿರತಕ್ಕಂಥವರಿಗೆ ನಾವು 10ನೇ ತಾರೀಖಿನ ಗಡುವು ಕೊಟ್ಟಿರತಕ್ಕಂಥಾದ್ದು. 29ವರ್ಷದ ಮೇಲ್ಪಟ್ಟಿರತಕ್ಕಂಥವರು ಈ 5-6 ವರ್ಷಗಳ ಹಿಂದೆ ಸರ್ಟಿಫಿಕೇಟ್‌ಗಳನ್ನು ತೆಗೆದುಕೊಂಡು ಅವರವರು ಭದ್ರವಾಗಿ ಇಟ್ಟು ಕೊಂಡಿದ್ದಾರೆ. ಈಗ 18 ವರ್ಷದ ಮೇಲ್ಪಟ್ಟವರಿಗೆ, ನನ್ನ ಸ್ನೇಹಿತರು ಏನು ಹೇಳುತ್ತಿದ್ದಾರೆ ಅವರಿಗೆ ಒಂದು ವೇಳೆ ಈ ರೀತಿ ಸರ್ಟಿಫಿಕೇಟ್, ಸಿಕ್ಕಿಲ್ಲ ಎಂದರೆ ಒಪ್ಪಬಹುದಾಗಿತ್ತು. 29 ವರ್ಷಕ್ಕೆ ಮೇಲ್ಪಟ್ಟವರು 9,000 ಉಪಾಧ್ಯಾಯರುಗಳನ್ನು ನಾವು ನೇಮಕ ಮಾಡಿ ಕೊಳ್ಳುವುದರಿಂದ ಸರ್ಟಿಫಿಕೇಟುಗಳು ಹಿಂದೆಯೇ ಸಿಕ್ಕಿರುತ್ತದೆ. ಆದ್ದರಿಂದ ಅದನ್ನು ಪರಿಶೀಲನೆ ಮಾಡಿ ನೋಡುತ್ತೇನೆ. ಆ ರೀತಿಯ ಅವ್ಯವಸ್ಥೆ ಆಗುವುದಕ್ಕೆ ಕಾರಣ ಇಲ್ಲ, ನಾನು ಕೇಳಿದ ಈಗ ಅಧಿಕಾರಿಗಳನ್ನು ಎಲ್ಲಾ ಆಗಿದೆ ಅನ್ನುತ್ತಿದ್ದಾರೆ. ತಾವು ಏನು ಹೇಳುತ್ತಿದ್ದೀರಿ, 29ವರ್ಷದ ಮೇಲ್ಪಟ್ಟವರು ಆಗಿರುವುದರಿಂದ

ಅವರಿಗೆ ಎಲ್ಲಾ ಸರ್ಟಿಫಿಕೇಟುಗಳು ಅವರ ಹತ್ತಿರ ಭದ್ರವಾಗಿ ಇಟ್ಟುಕೊಂಡಿದ್ದಾರೆ. ಅವರೇ 10ನೇ ತಾರೀಖಿಗೆ ಅಪ್ಲಿಕೇಷನ್ ಹಾಕಬೇಕಾಗಿರತಕ್ಕಂಥಾದ್ದು. ಇದರ ಬಗ್ಗೆ ವಿಮರ್ಶೆ ಮಾಡಿ ನೋಡಿ ಹೇಳುತ್ತೇನೆ.

ನಿಯಮ 351ರ ಅಡಿಯಲ್ಲಿನ ಸೂಚನೆಗಳು

ಬಾದಾಮಿ ಮತ್ತು ಗುಳೇದ ಗುಡ್ಡದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಖಾಲಿ ಇರತಕ್ಕ ವೈದ್ಯಾಧಿಕಾರಿಗಳ ಹುದ್ದೆ ಭರ್ತಿ

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಗುಳೇದಗುಡ್ಡ) : ಮಾನ್ಯ ಅಧ್ಯಕ್ಷರೇ, ವಿಜಾಪುರ ಜಿಲ್ಲೆ ಬಾದಾಮಿ ತಾಲ್ಲೂಕಿನ ಬಾದಾಮಿ ಮತ್ತು ಗುಳೇದಗುಡ್ಡ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ, ಇತರ ಆರೋಗ್ಯ ಕೇಂದ್ರಗಳು ಮತ್ತು ಘಟಕಗಳಿಗೆ ಮಂಜೂರಾದ ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿ ಹುದ್ದೆಗಳಿಗೆ ಇಂದಿಗೂ ಭರ್ತಿ ಮಾಡದೇ ರೋಗಿಗಳಿಗೆ ತುಂಬಾ ದೈಹಿಕ ಮತ್ತು ಮಾನಸಿಕ ತೊಂದರೆಯಾಗಿರುವುದರಿಂದ ತೊಂದರೆಯಿಂದ ಬಳಲುವ ಪರಿಸ್ಥಿತಿ ಉದ್ಭವಿಸಿದೆ. ರೋಗ ನಿಯಂತ್ರಣಕ್ಕಾಗಿ ವೈದ್ಯರ ಮತ್ತು ತಜ್ಞ ವೈದ್ಯರ ಸಲಹೆಗಾಗಿ ದೂರ ಸ್ಥಳಗಳಾದ ಬಾಗಲಕೋಟೆ, ಗದಗ್, ಹುಬ್ಬಳ್ಳಿಗೆ ಹೋಗುವ ಪರಿಸ್ಥಿತಿ ತಲೆದೋರಿದೆ. ಸಾಮಾನ್ಯ ಕೂಲಿಕಾರರು, ರೈತರು, ಶಿಕ್ಷಕರು, ಈ ಸ್ಥಳಗಳಿಗೆ ಹೋಗಿ ಶುಶ್ರೂಷೆ, ಚಿಕಿತ್ಸೆ ಪಡೆಯುವ ಶಕ್ತಿ ಇಲ್ಲವೇ ಇಲ್ಲ, ಆಸ್ಪತ್ರೆಗಳಲ್ಲಿ ಔಷಧ ಇದ್ದರೂ, ವೈದ್ಯರು ಮತ್ತು ಅವರ ಸಹಾಯಕ ಸಿಬ್ಬಂದಿ ಇರದಿರುವುದರಿಂದ ಬಳಕೆಯಾಗದೇ ಅನುಪಯುಕ್ತ ಆಗುವ ಸಂದರ್ಭ ಒದಗಿದೆ. ಆದ್ದರಿಂದ ಸರ್ಕಾರ ಆದಷ್ಟು ತೀವ್ರವೇ ಖಾಲಿ ಇರುವ ವೈದ್ಯರ ಮತ್ತು ಸಹಾಯಕ ಹುದ್ದೆಗಳನ್ನು ಭರ್ತಿ ಮಾಡುವ ಅಗತ್ಯ ಕ್ರಮ ಕೈಗೊಳ್ಳಲು ಸರ್ಕಾರದ ತುರ್ತು ಗಮನವನ್ನು ಸೆಳೆಯುತ್ತಿದ್ದೇನೆ.

ಅಧ್ಯಕ್ಷರು : ಮಂತ್ರಿಗಳು ನನ್ನ ಅನುಮತಿಯನ್ನು ಪಡೆದು ದೆಹಲಿಯಲ್ಲಿ ಆರೋಗ್ಯ ಮಂತ್ರಿಗಳ ಕಾರ್ಯಕ್ರಮದಲ್ಲಿ ಪಾಲುಗೊಳ್ಳುವುದಕ್ಕೆ ಹೋಗಿದ್ದಾರೆ. ಅವರು ಬಂದ ನಂತರ ಉತ್ತರವನ್ನು ಕೊಡುತ್ತಾರೆ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ಸಚಿವರು) : ಮಾನ್ಯ ಅಧ್ಯಕ್ಷರೇ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ನೀಡ ಬಯಸುತ್ತೇನೆ.

ಸಮುದಾಯ ಆರೋಗ್ಯ ಕೇಂದ್ರ, ಬಾದಾಮಿ, ಇಲ್ಲಿ ನಾಲ್ಕು ಜನ ವೈದ್ಯರು ಕೆಲಸ ಮಾಡುತ್ತಿದ್ದಾರೆ. (ಡಾ|| ಶ್ರೀ ಶೈಲಪ್ಪ, ಡಾ|| ಸಾಳಗುಂದಿ, ಡಾ|| ಕೋರಡ್ಡಿ, ಡಾ|| ಮುಜುಂದಾರ) ಸದರಿ ಆಸ್ಪತ್ರೆಯಲ್ಲಿ ಪ್ರಯೋಗ ಶಾಲಾ ತಂತ್ರಜ್ಞ, ಫಾರ್ಮಾಸಿಸ್ಟ್ ನೇತ್ರ ಸಹಾಯಕ ಹುದ್ದೆಗಳು ಖಾಲಿಯಿರುವುದಲ್ಲದೇ ಕಿರಿಯ ಆರೋಗ್ಯ ಸಹಾಯಕ (13), ಕಿರಿಯ ಆರೋಗ್ಯ ಸಹಾಯಕಿ (5), ಪ್ರಥಮ ದರ್ಜೆ ಸಹಾಯಕ (5) ಮತ್ತು ಡಿ-ವಂಗಡ(17) ಹುದ್ದೆಗಳು ಖಾಲಿಯಿರುತ್ತವೆ.

ಸಾರ್ವಜನಿಕ ಆಸ್ಪತ್ರೆ, ಗುಳೇದಗುಡ್ಡ ಇಲ್ಲಿ ಮೂರು ಮಂದಿ ವೈದ್ಯರು ಕೆಲಸ ಮಾಡುತ್ತಿದ್ದಾರೆ. (ಡಾ|| ಪಟ್ಟಣ, ಡಾ|| (ಶ್ರೀಮತಿ) ಟೆಲಸಂಗ, ಮತ್ತು ಡಾ|| ಬ್ಯಾಕೋಡ್).

ಬಾದಾಮಿ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಪ್ರಾಥಮಿಕ ಆರೋಗ್ಯ ಘಟಕಗಳ ಪೈಕಿ ಕೆಲವು ಸಂಸ್ಥೆಗಳಲ್ಲಿ ವೈದ್ಯರು, ಹಿರಿಯ ಆರೋಗ್ಯ ಸಹಾಯಕ, ಕಿರಿಯ ಆರೋಗ್ಯ ಸಹಾಯಕ, ಪ್ರಯೋಗ ಶಾಲಾ ತಂತ್ರಜ್ಞ ಹುದ್ದೆಗಳು ಖಾಲಿ ಇರುತ್ತವೆ.

ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಗುತ್ತಿಗೆಗೆ ಆಧಾರದ ವೈದ್ಯರನ್ನು ನೇಮಿಸುವ ಮೂಲಕ, ಸ್ನಾತಕೋತ್ತರ ವ್ಯಾಸಂಗದಿಂದ ಹಿಂದಿರುಗುವ ವೈದ್ಯರನ್ನು ನೇಮಿಸುವ ಮೂಲಕ ಮತ್ತು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ನೇಮಕ ಮಾಡುವ ಮೂಲಕ ತುಂಬಲು ಈಗಾಗಲೇ ಕ್ರಮ ಕೈಗೊಳ್ಳಲಾಗಿರುತ್ತದೆ.

ಕಿರಿಯ ಆರೋಗ್ಯ ಸಹಾಯಕ:ಸಹಾಯಕಿ, ಪ್ರಥಮ ದರ್ಜೆ ಹುದ್ದೆ ಹಾಗೂ ಇತರೆ ವರ್ಗದ ಖಾಲಿ ಹುದ್ದೆಗಳನ್ನು ತುಂಬಲು ಆರ್ಥಿಕ ಇಲಾಖೆಯು ಈಗಾಗಲೇ ಆರ್ಥಿಕ ನಿರ್ಬಂಧ ಸಡಿಲಗೊಳಿಸಿದ್ದು, ಸಮಾಜ ಕಲ್ಯಾಣ ಇಲಾಖೆಯ ನೇಮಕಾತಿಗೆ ಮೀಸಲಾತಿಯ ಆದೇಶವನ್ನು ಇತ್ತೀಚೆಗೆ ಹೊರಡಿಸಲಾಗಿದ್ದು, ಈ ಉಳಿದ ಸಿಬ್ಬಂದಿಯ ಹುದ್ದೆಗಳನ್ನು ತುಂಬಲು ಆದಷ್ಟು ಕೂಡಲೇ ಕ್ರಮ ಕೈಗೊಳ್ಳಲಾಗುವುದು.

(2) ದ.ಕ. ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿ ಹುದ್ದೆ ಭರ್ತಿ

ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಸಭಾಧ್ಯಕ್ಷರೇ, ವರ್ಗಾವಣೆಯಿಂದ ಖಾಲಿ ಆಗಿರುವ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿ ಹುದ್ದೆ ಹಾಗೂ ಖಾಲಿ ಆಗಿರುವ ಉಡುಪಿ ತಾಲ್ಲೂಕು ಪಂಚಾಯಿತಿ ಸಹಿತ ಇತರ ತಾಲ್ಲೂಕು ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹುದ್ದೆಗಳನ್ನು ಭರ್ತಿ ಮಾಡದೇ ದೈನಂದಿನ ಅಭಿವೃದ್ಧಿ ಕಾರ್ಯಗಳಿಗೆ ತೊಡಕು ಉಂಟಾಗಿದೆ. ಸರ್ಕಾರ ಈ ಬಗ್ಗೆ ಯಾವ ನಿರ್ಧಾರ ಕೈಗೊಳ್ಳುತ್ತದೆ ಎಂದು ಸ್ಪಷ್ಟಪಡಿಸಬೇಕು.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೇ, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಹೇಳಿಕೆಯನ್ನು ಕೊಡಬಯಸುತ್ತೇನೆ. ದಕ್ಷಿಣ ಕನ್ನಡ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿ ಹುದ್ದೆಯು ಐಎಎಸ್ ವರ್ಗದ ಹುದ್ದೆಯಾಗಿದ್ದು, ಈ ಹುದ್ದೆಯನ್ನು ಭರ್ತಿ ಮಾಡುವ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಕ್ರಮ ಕೈಗೊಳ್ಳುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 8 ತಾಲ್ಲೂಕು ಪಂಚಾಯಿತಿಗಳಿದ್ದು, ಎಲ್ಲಾ ತಾಲ್ಲೂಕು ಪಂಚಾಯಿತಿಗಳಿಗೆ ಕಾರ್ಯನಿರ್ವಹಣಾ ಅಧಿಕಾರಿಗಳನ್ನು ನೇಮಕ ಮಾಡಿ ಈಗಾಗಲೇ ಆದೇಶ ಹೊರಡಿಸಲಾಗಿದೆ. ನೇಮಿಸಿರುವ ಸ್ಥಳಗಳಿಗೆ ಕೆಲವು ಅಧಿಕಾರಿಗಳು ಈಗಾಗಲೇ ಹಾಜರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ನೇಮಿಸಿದ ಸ್ಥಳಕ್ಕೆ ಹಾಜರಾಗದೇ ಇರುವ ಅಧಿಕಾರಿಗಳಿಗೆ ಕೂಡಲೇ ಹಾಜರಾಗಲು ಸೂಚನೆಯನ್ನು ನೀಡಲಾಗಿದೆ. ಗೈರು ಹಾಜರಾದ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳುತ್ತೇವೆಂದು ಈ ದಿನವೇ ಎಚ್ಚರಿಕೆ ನೋಟೀಸನ್ನು ಕೊಡಲಾಗಿದೆ.

ಅಧ್ಯಕ್ಷರು : ಅರಗ ಜ್ಞಾನೇಂದ್ರ ಅವರ ಸೂಚನೆಯನ್ನು ಬಾಲಕೃಷ್ಣ ಅವರು ಕೇಳುತ್ತಾರೆ.

(ii) ತೀರ್ಥಹಳ್ಳಿ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜು

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ವಿದ್ಯುತ್ ಇಲಾಖೆಯ ಎಂಆರ್‌ಎಸ್‌ನಿಂದ ತೀರ್ಥಹಳ್ಳಿ ತಾಲ್ಲೂಕಿನ ಮಂದಗದ್ದೆವರೆಗೆ ಸುಮಾರು 35 ಕಿ.ಮೀ. 11 ಕೆ.ವಿ.ಎ. ಲೈನ್ ಎಳೆದು ಸುಮಾರು 20 ವರ್ಷಗಳಾಗಿದೆ. ಇದುವರೆಗೂ ಇದರಿಂದ ವಿದ್ಯುತ್ ಸರಬರಾಜು ಮಾಡಿಲ್ಲ. ಬಳಕೆದಾರನಿಗೆ ಕೊಡಲು ಸಾಧ್ಯವಾಗದೇ ಇಲಾಖೆಯ ತಂತಿ ಮತ್ತು ಅವರ ಬೆಲೆ ಬಾಳುವ ವಸ್ತುಗಳು ಕಳ್ಳತನವಾಗಿ ಇಲಾಖೆಗೆ ಅಪಾರ ನಷ್ಟ ಸಂಭವಿಸಿರುತ್ತದೆ. ಸಾರ್ವಜನಿಕರು ಮತ್ತು ಜನಪ್ರತಿನಿಧಿಗಳು ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಿದಾಗ್ಯೂ ಉಳಿಸಲು ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ. ಈ ರೀತಿ ಸಾರ್ವಜನಿಕ ಹಣ ನಷ್ಟ ಮಾಡಿದ ಸಂಬಂಧಿಸಿದ

ಅಧಿಕಾರಿಗಳ ಮೇಲೆ ಸೂಕ್ತ ಕ್ರಮವನ್ನು ಜರುಗಿಸಬೇಕು ಮತ್ತು ಏನು ಇವರು ಈ ಲೈನ್ ಅನುಪಯುಕ್ತ ಅಂದರೆ ಅದನ್ನು ಬಿಚ್ಚಿ ಉಳಿದ ಕಂಬ ಮತ್ತು ಇತರ ವಸ್ತುಗಳನ್ನು ರಕ್ಷಣೆ ಮಾಡಲು ಮಾನ್ಯ ಉಪ ಮುಖ್ಯ ಮಂತ್ರಿಗಳನ್ನು ಕೋರುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೇ, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಮ್ಮ ಅನುಮತಿ ಮೇರೆಗೆ ಉಪ ಮುಖ್ಯಮಂತ್ರಿಗಳ ಉತ್ತರವನ್ನು ಓದುತ್ತಿದ್ದೇನೆ.

ಶಿವಮೊಗ್ಗದ ಎಂ.ಆರ್.ಎಸ್.ನಿಂದ ತೀರ್ಥಹಳ್ಳಿ ತಾಲ್ಲೂಕಿನ ಮಂದಗದ್ದೆಯವರೆಗೆ 11 ಕೆ.ವಿ. ಲೈನನ್ನು ನಿರ್ಮಾಣ ಮಾಡುವಾಗ ನ್ಯಾಯಾಲಯದಲ್ಲಿ ಪ್ರಕರಣವು ದಾಖಲಾದ್ದರಿಂದ, ನಿರ್ಮಾಣ ಕಾರ್ಯವು ಅಪೂರ್ಣಗೊಂಡು ಸ್ಥಗಿತವಾಗಿತ್ತು. ಶಿವಮೊಗ್ಗದಿಂದ ಸೂಳೇಬೈಲಿನವರೆಗಿನ ಲೈನಿನ ಭಾಗವನ್ನು ಚಾಲನೆಗೊಳಿಸಿ ಉಪಯೋಗಿಸಲಾಗುತ್ತಿದೆ. ಬಾಕಿ ಉಳಿದ ಅಪೂರ್ಣ ಲೈನ್ ಪ್ರಸ್ತುತ ನಿರುಪಯುಕ್ತವಾಗಿರುವುದರಿಂದ ಇದನ್ನು ಬಿಚ್ಚಲು (ಡಿಸ್‌ಮ್ಯಾಂಟಲ್) ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಮಳೆಗಾಲ ಕಳೆದ ನಂತರ ಈ ಕಾರ್ಯವನ್ನು ತ್ವರಿತಗತಿಯಲ್ಲಿ ನಿರ್ವಹಿಸಿ, ಬಿಚ್ಚಲ್ಪಟ್ಟ ಸಾಮಗ್ರಿಗಳನ್ನು ಉಗ್ರಾಣಕ್ಕೆ ಮರುಳಿಸಲಾಗುವುದು.

ಈ ಅಪೂರ್ಣ ಲೈನಿನ ಕೆಲವು ಸಾಮಗ್ರಿಗಳನ್ನು ಬಿಚ್ಚಿ ಮಂಡಳಿಯ ಇತರ ಕೆಲಸಗಳಿಗೆ ಉಪಯೋಗಿಸಲಾಗಿದೆ, ಕೆಲವು ಸಾಮಗ್ರಿಗಳು ಕಳ್ಳತನಗೊಂಡಿದ್ದು, ಪೋಲಿಸ್ ದೂರುಗಳನ್ನು ದಾಖಲು ಮಾಡಲಾಗಿದ್ದು, ಪೋಲೀಸ್ ತನಿಖೆಯು ನಡೆಯುತ್ತಿದೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಮಂತ್ರಿ) : ಮಾನ್ಯ ಅಧ್ಯಕ್ಷರೇ, ಒಂದು ವಿಷಯ ಹೇಳಬೇಕು. ಮಾನ್ಯ ಶ್ರೀ ಶಿವರಾಮು ಅವರು ಕೇಳಿದ ಪ್ರಶ್ನೆ ಇದೆ. ಅವರು ಕೇಳಿದ ಪ್ರಶ್ನೆಗೆ ಈಗ 20.9.95ವರೆಗೆ ಟೈಮ್ ಕೊಡುವುದಕ್ಕೆ ಅವಕಾಶ ಮಾಡಿ ಕೊಡಲಾಗಿದೆ.

ಶ್ರೀ ಬಿ. ಶಿವರಾಮು : ಥ್ಯಾಂಕ್ಸ್.

ಅಧ್ಯಕ್ಷರು : ಕನ್ನಡದಲ್ಲಿ ಥ್ಯಾಂಕ್ಸ್ ಹೇಳಿ.

(iii) ದ.ಕ. ಜಿಲ್ಲೆಯ ಲ್ಯಾಂಪ್ಸ್ ಸೊಸೈಟಿಗಳಲ್ಲಿ ನಷ್ಟ

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) :ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಲ್ಯಾಂಪ್ಸ್ ಸೊಸೈಟಿಗಳು ನಷ್ಟದಲ್ಲಿ ನಡೆಯುತ್ತಿರುವುದರ ಬಗ್ಗೆ, ಮಾನ್ಯ ಸಹಕಾರ ಸಚಿವರ ಗಮನ ಸೆಳೆಯುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲ ಲ್ಯಾಂಪ್ಸ್ ಸೊಸೈಟಿಗಳಲ್ಲಿ ಸಹಕಾರ ಇಲಾಖೆಯ ಅಧಿಕಾರಿಗಳು ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದು ರಾಜ್ಯದ ವಿವಿಧ ಕಡೆಗಳಲ್ಲಿ ರಾಜ್ಯದ ಅರಣ್ಯ ಇಲಾಖೆಯ ಅಧಿಕಾರಿಗಳು ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವ ಲ್ಯಾಂಪ್ಸ್ ಸೊಸೈಟಿಯೂ ಲಾಭದಾಯಕವಾಗಿ ನಡೆಯುತ್ತಿಲ್ಲ. ಲ್ಯಾಂಪ್ ಸೊಸೈಟಿಗಳ ಮುಖ್ಯ ಉದ್ದೇಶ ಎಂದರೆ, ಹಿರಿಜನರಿಗೆ ಉದ್ಯೋಗ ಒದಗಿಸಿಕೊಡುವುದು ಮತ್ತು ಅರಣ್ಯ ಉತ್ಪನ್ನಗಳ ಸಂಗ್ರಹಣೆ. ಆದರೆ ಅರಣ್ಯಗಳು ಅರಣ್ಯ ಇಲಾಖೆಯ ಹತೋಟಿಯಲ್ಲಿರುವುದರಿಂದ ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸಲು ಸಹಕಾರ ಇಲಾಖೆಯ ಅಧಿಕಾರಿಗಳಿಗೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಅರಣ್ಯ ಇಲಾಖೆಯ ಅಧಿಕಾರಿಗಳನ್ನು ಕಾರ್ಯದರ್ಶಿಯನ್ನಾಗಿ ಮಾಡಿ ರಾಜ್ಯದಲ್ಲಿರುವ ಇತರ ಘಟಕಗಳಂತೆ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲ ಲ್ಯಾಂಪ್ಸ್ ಸೊಸೈಟಿಗಳಲ್ಲೂ ಲಾಭದಾಯಕವಾಗಿ ನಡೆಯುವಂತೆ

ಮಾಡಬೇಕೆಂದು ನಾನು ಈ ಸಭೆಯ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಾ ಇದ್ದೇನೆ.

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಮಂತ್ರಿ) : ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1979ರಲ್ಲಿ ಈ ಲ್ಯಾಂಪ್ಸ್ ಸೊಸೈಟಿಗಳನ್ನು ಸ್ಥಾಪಿಸಿರುವ ವಿವರ ಈ ಕೆಳಕಂಡಂತೆ ಇರುತ್ತದೆ. ಬಂಟ್ವಾಳ, ಬೆಳ್ತಂಗಡಿ, ಕುಂದಾಪುರ, ಕಾರ್ಕಳ, ಮಂಗಳೂರು, ಪುತ್ತೂರು, ಸುಳ್ಯ ಮತ್ತು ಉಡುಪಿ. ಒಟ್ಟು ಎಂಟು ಲ್ಯಾಂಪ್ಸ್ ಸಂಘಗಳನ್ನು ಸ್ಥಾಪಿಸಲಾಗಿದೆ. ಮಾನ್ಯ ಸದಸ್ಯರು ಎಲ್ಲ ಸಂಘಗಳೂ ನಷ್ಟದ ಎಂದು ಹೇಳುತ್ತಾರೆ. ಆದರೆ ಮಾತು ಸರಿಯಲ್ಲ. ಕೇವಲ ಒಂದು ಬಂಟ್ವಾಳ ಮತ್ತು ಕುಂದಾಪುರ ಈ ಎರಡು ಸಂಘಗಳು ಮಾತ್ರ ನಷ್ಟದಲ್ಲಿವೆ. ಉಳಿದ ಆರು ಸಂಘಗಳು ಲಾಭದಲ್ಲಿ ನಡೆಯುತ್ತಾ ಇವೆ. ಇನ್ನು, ಅರಣ್ಯ ಇಲಾಖೆಯವರನ್ನು ಅಲ್ಲಿ ನೇಮಿಸಬೇಕೆಂದು ಹೇಳಿದ್ದಾರೆ. ಆದರೆ ಆ ಕುರಿತು ಅಲ್ಲಿಯ ಸೊಸೈಟಿಗಳು ಏನಾದರೂ ಕೇಳಿದರೆ ಅರಣ್ಯ ಇಲಾಖೆಯವರನ್ನು ನೇಮಿಸಿಕೊಳ್ಳುವುದಕ್ಕೆ ನಾವು ಪರವಾನಿಗಿಯನ್ನು ಕೊಡುತ್ತೇವೆ ಅಷ್ಟೇ ಅಲ್ಲ ಅದಕ್ಕಾಗಿ ಈಗಾಗಲೇ ನಾವು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಈ ವರ್ಷ ನಾವು 274 ಲಕ್ಷ ರೂಪಾಯಿಗಳನ್ನು ನಿಗದಿ ಮಾಡಿದ್ದೇವೆ, ಅವುಗಳನ್ನು ಲಾಭದಲ್ಲಿ ತರುವುದಕ್ಕೆ ಸಹಾಯಧನ ಕೊಡುತ್ತೇವೆ.

(IV) "ಸಿ" ಮತ್ತು "ಡಿ" ನೌಕರರುಗಳ ಮಕ್ಕಳಿಗೆ ಮೀಸಲಾತಿ ಪಡೆಯಲು ಸಿಂಧುತ್ವ ಪ್ರಮಾಣ ಪತ್ರ ನೀಡುವ ಬಗ್ಗೆ

ಶ್ರೀ ಕುಂಬ್ಳೆ ಸುಂದರರಾವ್ (ಸೂರತ್ಕಲ್) : ಮಾನ್ಯ ಅಧ್ಯಕ್ಷರೇ, ರಾಜ್ಯ ಸರ್ಕಾರದವರು ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ಕಲ್ಪಿಸಿ, ಅದರಲ್ಲಿ ಕೆನೆಪದರ ವರ್ಗಗಳಿಗೆ ಸರ್ಕಾರಿ, ಅರೆಸರ್ಕಾರಿ, ಕೇಂದ್ರ ಸರ್ಕಾರ ಮುಂತಾದ ಇಲಾಖೆಗಳಲ್ಲಿ ಕೆಲಸ ಮಾಡುವ ಸಿ ಮತ್ತು ಡಿ ಗುಂಪಿನ ನೌಕರರಿಗೂ ಆದಾಯಮಿತಿಯನ್ನು ಸಡಿಲಿಸಿ ಶೈಕ್ಷಣಿಕ ಸೌಲಭ್ಯವನ್ನು ಪಡೆಯಲು ಅವಕಾಶ ಮಾಡಿಕೊಟ್ಟಿರುವುದು ಅಭಿನಂದನೀಯ. ಇದರಿಂದಾಗಿ ಹಿಂದುಳಿದ ವರ್ಗಗಳು ಶೈಕ್ಷಣಿಕವಾಗಿ ಮುಂದೆ ಬರುವುದಕ್ಕೆ ಅನುಕೂಲತೆಯನ್ನು ಮಾಡಿಕೊಟ್ಟ ಹಾಗೆ ಆಗಿದೆ. ಆದರೆ, ವೃತ್ತಿ ಶಿಕ್ಷಣ ಸೌಲಭ್ಯವನ್ನು ತಮ್ಮ ಮಕ್ಕಳಿಗೆ ಪಡೆಯುವ ಸಂದರ್ಭದಲ್ಲಿ ಸದರಿ ಸಿ ಮತ್ತು ಡಿ ಗುಂಪಿನ ನೌಕರರು ಬಹಳಷ್ಟು ವರ್ಷ ಕಾಲದವರೆಗೆ ಸೇವೆಯನ್ನು ಸಲ್ಲಿಸುವುದಕ್ಕೆ ಇರುವುದರಿಂದ ನಿಯಮಾನುಸಾರವಾಗಿ, ಸಹಜವಾಗಿ ಅವರ ಒಟ್ಟು ಸಂಬಳವು 50 ಸಾವಿರ ರೂಪಾಯಿಗಳನ್ನು ಮೀರಿರುವುದು ಸತ್ಯಸಂಗತಿಯಾಗಿರುತ್ತದೆ. ಈ ಕಾರಣವನ್ನು ಮುಂದಿಟ್ಟುಕೊಂಡು ಕೆಲವು ಜಿಲ್ಲೆಗಳಲ್ಲಿ ಕೆಲವು ಅಧಿಕಾರಿಗಳು ಸಿಂಧುತ್ವ ಪ್ರಮಾಣಪತ್ರವನ್ನು ನೀಡಲು ನಿರಾಕರಿಸುತ್ತಿರುವುದು ಮತ್ತು ಕೆಲವು ಜಿಲ್ಲೆಗಳಲ್ಲಿ ನೀಡಿರುವುದು ತಿಳಿದು ಬರುತ್ತದೆ. ಸರ್ಕಾರದ ಆದೇಶದಲ್ಲಿ ಸ್ಪಷ್ಟವಾಗಿರುವಂತೆ ಆದಾಯ ತೆರಿಗೆ ಪಾವತಿದಾರರಲ್ಲದ ಗೆಜೆಟೆಡ್ ಹುದ್ದೆಯಲ್ಲಿ ಇರದ ಎಲ್ಲಾ ಸಿ ಮತ್ತು ಡಿ ದರ್ಜೆಯ ನೌಕರರ ಒಟ್ಟು ಸಂಬಳವನ್ನು ಪರಿಗಣನೆಗೆ ತೆಗೆದುಕೊಳ್ಳದೆ ಈ ಸೌಲಭ್ಯವನ್ನು ವಿಸ್ತರಿಸಬೇಕಾಗುತ್ತದೆ. ಪ್ರಸ್ತುತ ಈ ಕುರಿತು ಅಧಿಕಾರಿ ವರ್ಗದವರಲ್ಲಿ ಇರುವಂಥ ದ್ವಂದ್ವವನ್ನು ಹೋಗಲಾಡಿಸಿ ವೃತ್ತಿ ಶಿಕ್ಷಣಕ್ಕೆ ಮೀಸಲಾತಿಯನ್ನು ಪಡೆಯಬಯಸುವ ಅಭ್ಯರ್ಥಿಗಳಿಗೆ, ಅರ್ಜಿದಾರರಿಗೆ ಸಿಂಧುತ್ವ ಬಗ್ಗೆ ಪ್ರಮಾಣ ಪತ್ರವನ್ನು ಅವರಿಗೆ ಉಳಿದ ನಿಯಮಗಳು ಸರಿಯಾಗಿದ್ದ ಪಕ್ಷದಲ್ಲಿ ಕೂಡಲೇ ಕೊಡುವ ಬಗ್ಗೆ ತುರ್ತು ಆದೇಶವನ್ನು ನೀಡಿ ಹಿಂದುಳಿದ ವರ್ಗಗಳಿಗೆ ಆಗಿರುವ ಅನಾನುಕೂಲವನ್ನು ಇದು ಆಗದಂತೆ ನಿವಾರಿಸಬೇಕಾಗಿ ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳನ್ನು ಈ ಮೂಲಕ ಗಮನ ಸೆಳೆದು ಪ್ರಾರ್ಥಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಮೇರೆಗೆ ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳ ಹೇಳಿಕೆಯನ್ನು ಓದುತ್ತೇನೆ.

ನ್ಯಾಯಮೂರ್ತಿ ಚಿನ್ನಪ್ಪ ರೆಡ್ಡಿ ಆಯೋಗದ ವರದಿಯ ಪ್ರಕಾರ, ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶಾವಕಾಶ ಕುರಿತಂತೆ ಸರ್ಕಾರಿ ಮೀಸಲಾತಿ ಆದೇಶ ಸಂಖ್ಯೆ : ಸಕಇ 150 ಬಿಸಿಎ 94 ದಿನಾಂಕ 17-9-1994ನ್ನು ಹೊರಡಿಸಲಾಗಿದ್ದು, ಇದರನ್ವಯ, ಪ್ರವರ್ಗ-Iನ್ನು ಹೊರತುಪಡಿಸಿ, ಪ್ರವರ್ಗ -II(ಎ) II(ಬಿ), III(ಎ) ಮತ್ತು III(ಬಿ) ಇವುಗಳಲ್ಲಿ ನಮೂದಾಗಿರುವ ಜಾತಿಗಳ ಅಭ್ಯರ್ಥಿಗಳಿಗೆ ಈ ಕೆಳಕಂಡ ಷರತ್ತುಗಳನ್ನು ಅನ್ವಯಿಸಲಾಗಿದೆ:

1. ಅಭ್ಯರ್ಥಿ : ತಂದೆ-ತಾಯಿ : ಪೋಷಕರು ಸರ್ಕಾರದ ಒಂದನೇ ದರ್ಜೆಯ ಅಥವಾ ಎರಡನೆ ದರ್ಜೆಯ ಅಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದರೆ ಅಥವಾ ಸಾರ್ವಜನಿಕ ಉದ್ಯಮಗಳಲ್ಲಿ ತತ್ಸಮಾನವಾದ ಹುದ್ದೆಗಳನ್ನು ಹೊಂದಿದ್ದರೆ, ಅಥವಾ ಖಾಸಗಿ ಕೈಗಾರಿಕೆ : ಸಂಸ್ಥೆಗಳ ಉದ್ಯೋಗಿಯಾಗಿದ್ದು, ಎರಡನೇ ದರ್ಜೆ ಅಧಿಕಾರಿಯು ಪಡೆಯುತ್ತಿರುವ ವೇತನ ಶ್ರೇಣಿಗಿಂತ ಕಡಿಮೆಯಿಲ್ಲದ ವೇತನ ಶ್ರೇಣಿಯ ವೇತನ ಪಡೆಯುತ್ತಿದ್ದರೆ -(ವೇತನ ಶ್ರೇಣಿ ರೂ. 2050-3950);
2. ಅಭ್ಯರ್ಥಿ : ತಂದೆ - ತಾಯಿ: ಪೋಷಕರು ಆದಾಯ ತೆರಿಗೆ ಪಾವತಿದಾರರಾಗಿದ್ದರೆ;
3. ಅಭ್ಯರ್ಥಿ : ತಂದೆ-ತಾಯಿ; ಪೋಷಕರು ಮಾರಾಟ ತೆರಿಗೆ ಪಾವತಿದಾರರಾಗಿದ್ದರೆ;
4. ಅಭ್ಯರ್ಥಿ : ತಂದೆ-ತಾಯಿ; ಪೋಷಕರು ಇವರಲ್ಲಿ ಯಾರೊಬ್ಬರು ಅಥವಾ ಇಬ್ಬರೂ ಸೇರಿ 8 ಹೆಕ್ಟೇರ್ ಮಳೆಯಾಧಾರಿತ ಅಥವಾ ಒಣಭೂಮಿ ಅಥವಾ ತತ್ಸಮಾನವಾದ ಇತರೇ ಜಮೀನನ್ನು ಹೊಂದಿದ್ದರೆ;
5. ಅಭ್ಯರ್ಥಿ : ತಂದೆ-ತಾಯಿ; ಪೋಷಕರು ಸಂಪತ್ತು ತೆರಿಗೆ ಪಾವತಿದಾರರಾಗಿದ್ದಲ್ಲಿ;

ಮೇಲ್ಕಂಡ ಷರತ್ತುಗಳಿಗೆ ಒಳಪಡದೇ ಸಂಪತ್ತು ಇರುವವರು ಮಾತ್ರ ಮೀಸಲಾತಿಗೆ ಅರ್ಹತೆಯನ್ನು ಹೊಂದಿರುತ್ತಾರೆ. ಆದ ಕಾರಣ, ಸಂಬಂಧಪಟ್ಟ ಅಧಿಕಾರಿಗಳು ಅಂತಹವರಿಗೆ ಸಿಂಧುತ್ವ ಪ್ರಮಾಣ ಪತ್ರವನ್ನು ನೀಡುತ್ತಿರುವುದಿಲ್ಲ.

ಸರ್ಕಾರಿ ನೌಕರಿಗಳಲ್ಲಿರುವ ಸಿ ಮತ್ತು ಡಿ ಗುಂಪಿನ ನೌಕರರುಗಳು ಬಹಳಷ್ಟು ವರ್ಷಗಳ ಕಾಲ ಸೇವೆ ಸಲ್ಲಿಸಿರುವುದರಿಂದ ಅವರ ಸಂಬಳವು 50 ಸಾವಿರ ರೂ.ಗಳು ಮೀರಿರುವುದರಿಂದ, ಅವರು ಆದಾಯ ತೆರಿಗೆ ನಿರ್ಧರಣೆಗೆ ಒಳಪಡುತ್ತಾರೆ. ಆದ್ದರಿಂದ ಅವರ ಮಕ್ಕಳು ಮೀಸಲಾತಿಯನ್ನು ಪಡೆಯಲು ಅರ್ಹರಾಗುವುದಿಲ್ಲ. ಹಾಗೂ ಅವರಿಗೆ ಸಿಂಧುತ್ವ ಪ್ರಮಾಣ ಪತ್ರವನ್ನು ನೀಡಲು ಬರುವುದಿಲ್ಲ.

ಅಧ್ಯಕ್ಷರು : ರಾಮಲಿಂಗಾರೆಡ್ಡಿಯವರೇ, ಮಂತ್ರಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ನನ್ನ ಅನುಮತಿಯನ್ನು ಪಡೆದುಕೊಂಡು ಡೆಲ್ಲಿಗೆ ಹೋಗಿದ್ದಾರೆ. ಹೇಳಿಕೆಯನ್ನು ನಾನು ತಮಗೆ ತರಿಸಿಕೊಡುತ್ತೇನೆ.

ಶ್ರೀ ರಾಮಲಿಂಗಾರೆಡ್ಡಿ : ಆಗಬಹುದು.

(V) ಧಾರವಾಡ ಜಿಲ್ಲೆ ಗದಗ ತಾಲ್ಲೂಕಿನ ಹೊಂಬಳ ಗ್ರಾಮದಲ್ಲಿ ಬಸ್ ನಿಲ್ದಾಣ

ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಅಧ್ಯಕ್ಷರೇ, ಧಾರವಾಡ ಜಿಲ್ಲೆಯ ಗದಗ್ ತಾಲ್ಲೂಕಿನಲ್ಲಿ ಹೊಂಬಳ ಒಂದು ದೊಡ್ಡ ಗ್ರಾಮ. ಇದು ಪಂಚಾಯತಿ ಕೇಂದ್ರ ಸ್ಥಾನವೂ ಹೌದು. ಈ ಗ್ರಾಮದಲ್ಲಿ ಬಸ್ ನಿಲ್ದಾಣ ಇಲ್ಲ, ಬಸ್ ನಿಲ್ದಾಣ ಆಗಬೇಕೆಂದು ಗ್ರಾಮಸ್ಥರ ಬೇಡಿಕೆಯಾಗಿದೆ. ಹಿಂದೆ ಸಾರಿಗೆ ಸಚಿವರಾಗಿದ್ದ ಮಾನ್ಯ ಅಜೀಜ್ ಸೇಠ್ ಅವರು ಕಾರ್ಯಕ್ರಮ ಒಂದರಲ್ಲಿ ಪಾಲ್ಗೊಳ್ಳಲು ಹೊಂಬಳ

ಗ್ರಾಮಕ್ಕೆ ಬಂದಾಗ ಗ್ರಾಮಸ್ತರ ಬೇಡಿಕೆಯನ್ನು ಕೇಳಿ ಗ್ರಾಮಸ್ಥರು ಪುಕ್ಕಟೆಯಾಗಿ ನಿವೇಶನ ನೀಡಿದರೆ ಬಸ್ಸು ನಿಲ್ದಾಣವನ್ನು ಕಟ್ಟುವ ಭರವಸೆಯನ್ನು ನೀಡಿದ್ದರು. ಹೊಂಬಳ ಗ್ರಾಮಪಂಚಾಯಿತಿಯು ಬಸ್ ನಿಲ್ದಾಣಕ್ಕೆ 1992 ನಿವೇಶನವನ್ನು ಕೆ.ಎಸ್.ಆರ್.ಟಿ.ಸಿ.ಗೆ ನೀಡಿತು. ನಿವೇಶನವು ಕೆ.ಎಸ್.ಆರ್.ಟಿ.ಸಿ.ಯ ಕಬ್ಜಾದಲ್ಲಿರುತ್ತದೆ. ಆದರೆ ಈವರೆಗೆ ಬಸ್ ನಿಲ್ದಾಣವಾಗಿಲ್ಲ. ಮಾನ್ಯ ಸಾರಿಗೆ ಸಚಿವರು ಸಂಬಂಧಿಸಿದ ಅಧಿಕಾರಿಗಳಿಗೆ ಆದೇಶ ನೀಡಿ ತೀವ್ರವಾಗಿ ಹೊಂಬಳ ಗ್ರಾಮದಲ್ಲಿ ಬಸ್ಸು ನಿಲ್ದಾಣ ನಿರ್ಮಾಣವಾಗುವಂತೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಕೋರುತ್ತೇನೆ.

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಮಂತ್ರಿ) : ಮಾನ್ಯ ಅಧ್ಯಕ್ಷರೇ, ಸರ್ಕಾರದ ಉತ್ತರ ಈ ಪ್ರಕಾರವಾಗಿ ಇರುತ್ತದೆ.

ಧಾರವಾಡ ಜಿಲ್ಲೆಯ ಗದಗ ತಾಲ್ಲೂಕಿನಲ್ಲಿ ಹೊಂಬಳವು ಹತ್ತು ಸಾವಿರ ಜನಸಂಖ್ಯೆಯನ್ನು ಹೊಂದಿರುವ ಒಂದು ದೊಡ್ಡ ಗ್ರಾಮವಾಗಿದೆ. ಸದರಿ ಗ್ರಾಮವು ಹೋಬಳಿ ಕೇಂದ್ರವಾಗಿರುವುದಲ್ಲದೆ ಮಂಡಲ ಪಂಚಾಯಿತಿ ಕೇಂದ್ರವೂ ಸಹ ಆಗಿರುತ್ತದೆ.

ಪ್ರಸ್ತುತ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ 33 ವಾಹನಗಳು ಈ ಗ್ರಾಮದ ಮೂಲಕ ಹಾದು ಹೋಗುತ್ತಿದೆ.

ಬಸ್ ನಿಲ್ದಾಣ ನಿರ್ಮಿಸುವ ಸಲುವಾಗಿ ಮಂಡಲ ಪಂಚಾಯಿತಿಯವರು ದಿನಾಂಕ 8-9-92 ರಂದು 100 x 65 ಅಡಿಗಳ ಅಳತೆಯುಳ್ಳ ನಿವೇಶನವನ್ನು ಉಚಿತವಾಗಿ ಮಂಜೂರು ಮಾಡಿರುತ್ತಾರೆ.

ಸಂಸ್ಥೆಯ ಆರ್ಥಿಕ ಮುಗ್ಗಟ್ಟಿನ ಪರಿಸ್ಥಿತಿಯ ಕಾರಣ ಬಸ್ ನಿಲ್ದಾಣ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಲಿಲ್ಲ. ಈ ವಿಷಯದ ಬಗ್ಗೆ 1996-97ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಲು ಪರಿಶೀಲಿಸಲಾಗುವುದು.

ಅಧ್ಯಕ್ಷರು : ಶ್ರೀ ರುಕ್ಮಯ್ಯ ಪೂಜಾರಿಯವರೇ, ತಾವು ಈಗ ಓದಿಬಿಡಿ. ಮಂತ್ರಿಗಳು ಇವತ್ತು ಬೆಳಿಗ್ಗೆ ಸ್ವಲ್ಪ ಕಾಲಾವಕಾಶ ಬೇಕು ಎಂದು ಕೇಳಿಕೊಂಡಿದ್ದಾರೆ. ಉತ್ತರವನ್ನು ನಾನು ತರಿಸಿಕೊಡುತ್ತೇನೆ. ತಾವು ಓದಿಬಿಡಿ.

(vi) ಬಂಟ್ವಾಳ ಮತ್ತು ಪುತ್ತೂರು ತಾಲ್ಲೂಕಿನ ಭೂಮಿಯನ್ನು ಅರಣ್ಯ ಭೂಮಿಯೆಂದು ಘೋಷಿಸಿರುವ ಬಗ್ಗೆ

ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಅಧ್ಯಕ್ಷರೇ, ಕರ್ನಾಟಕ ಸರ್ಕಾರದ ಅಧಿಸೂಚನೆ ಕ್ರಮಾಂಕ ಎಎಫ್‌ಡಿ 20 ಎಫ್‌ಯುಎಫ್ 69 ದಿನಾಂಕ 30.5.69ರ ಆದೇಶವು ದಿನಾಂಕ 12.6.69ರ ಕರ್ನಾಟಕ ರಾಜ್ಯಪತ್ರದ ಭಾಗ 4-2ಸಿ 11ರ ಪುಟಸಂಖ್ಯೆ 2051 ರಿಂದ 2072 ಪ್ರಕಟವಾದ ಮತ್ತು ಕರ್ನಾಟಕ ಸರ್ಕಾರದ ಅನುಬಂಧ ಕ್ರಮಾಂಕ ಎಎಫ್‌ಡಿ 41 ಡಬ್ಲ್ಯೂಎಫ್ 77 ದಿನಾಂಕ 23-9-1977ರ ಆದೇಶವು ದಿನಾಂಕ 6.10.77ರ ಕರ್ನಾಟಕ ರಾಜ್ಯಪತ್ರದ ಭಾಗ 4-(2) ಸಿ 11ರ ಪುಟಸಂಖ್ಯೆ 960 ದಿನಾಂಕ 4-8-94ರಲ್ಲಿ ಪ್ರಕಟವಾದ ಮೇರೆಗೆ ಬಂಟ್ವಾಳ ಮತ್ತು ಪುತ್ತೂರು ತಾಲ್ಲೂಕಿನ ಭೂಮಿಯನ್ನು ಮೀಸಲು ಅರಣ್ಯವೆಂದು ಘೋಷಿಸಲು ನಿರ್ಧಾರವಾಗಿದೆ. ಈ ರೀತಿ ಅರಣ್ಯ ಭೂಮಿಯೆಂದು ಘೋಷಿಸಿರುವ ಜಮೀನನ್ನು ನೂರಾರು ವರ್ಷಗಳಿಂದ ಹಲವಾರು ಖಾಸಗಿ ವ್ಯಕ್ತಿಗಳು ಅನುಭೋಗ ಮಾಡಿಕೊಂಡು ಬರುತ್ತಿದ್ದಾರೆ. ಇದು ಅರಣ್ಯ ಭೂಮಿಯೆಂದು ಘೋಷಿಸಿದರೆ ಈ ಕುಟುಂಬಗಳು ದಾರಿಪಾಲಾಗುತ್ತವೆ. ಆದ್ದರಿಂದ ಇಂತಹ ಭೂಮಿಯನ್ನು ಅರಣ್ಯ ಭೂಮಿಯನ್ನಾಗಿ ಘೋಷಿಸಬಾರದಾಗಿ ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಅಧ್ಯಕ್ಷರು : ಉತ್ತರವನ್ನು ನಾನು ತರಿಸಿಕೊಡುತ್ತೇನೆ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಆಯಿತು.

(vii) ಹಿರೇಕೆರೂರು ತಾಲ್ಲೂಕು ಅಬಲೂರಿನ ಅಭಿವೃದ್ಧಿ ಕಾರ್ಯಕ್ರಮಗಳು

ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಅಧ್ಯಕ್ಷರೇ, ವರಕವಿ ಸರ್ವಜ್ಞನ ಜನ್ಮಸ್ಥಳವಾದ ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಅಬಲೂರಿನಲ್ಲಿ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿತ್ತು. ಕೇವಲ ಅಬಲೂರು-ಹಿರೇಕೆರೂರು ಕೂಡುವ ರಸ್ತೆಯಲ್ಲಿ ಮೆಟಲಿಂಗ್ ಮಾಡುವ ಕೆಲಸ ನಡೆದಿದೆ. ಪ್ರವಾಸಿಮಂದಿರದ ಕಾರ್ಯ ಸುಮಾರು ಒಂದು ವರ್ಷದಿಂದ ಸ್ಥಗಿತಗೊಂಡಿದೆ. ಸ್ಮಾರಕಭವನದ ಕೆಲಸ ಇನ್ನೂ ಪ್ರಾರಂಭವೇ ಆಗಿಲ್ಲ. ಹಿರೇಕೆರೂರು-ಅಬಲೂರು ಕೂಡುವ ರಸ್ತೆಯ ಡಾಂಬರೀಕರಣ ಬಗ್ಗೆ ಯಾವುದೇ ಕ್ರಮ ಜರುಗಿಸಿಲ್ಲ. ಕಾರಣ, ಈಗಲಾದರೂ ವರಕವಿ ಸರ್ವಜ್ಞನ ಜನ್ಮಸ್ಥಳವಾದ ಅಬಲೂರಿನ ಅಭಿವೃದ್ಧಿಗೊಳಿಸಲು ಹಾಕಿಕೊಂಡ ಕಾರ್ಯಕ್ರಮಗಳನ್ನು ಬೇಗನೆ ಮಾಡಲು ಮಾನ್ಯ ಲೋಕೋಪಯೋಗಿ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಮಂತ್ರಿ) : ಮಾನ್ಯ ಅಧ್ಯಕ್ಷರೇ, ಸರ್ಕಾರದ ಹೇಳಿಕೆಯು ಈ ರೀತಿ ಇದೆ.

ವರಕವಿ ಸರ್ವಜ್ಞನ ಜನ್ಮಸ್ಥಳವಾದ ಧಾರವಾಡ ಜಿಲ್ಲೆ, ಹಿರೇಕೆರೂರು ತಾಲ್ಲೂಕಿನ ಅಬಲೂರಿನಲ್ಲಿ ಕೆಳಕಂಡ ಅಭಿವೃದ್ಧಿ ಕಾಮಗಾರಿಗಳನ್ನು ಮಾಡಲಾಗುತ್ತಿದೆ:

1. ಹಿರೇಕೆರೂರ – ಅಬಲೂರ – ಕೂಡು ರಸ್ತೆ :

ಈ ರಸ್ತೆಯ 6 ಕಿ.ಮೀ. ಗೆ ಜಲ್ಲಿ ಹಾಕಲಾಗಿದೆ. ಇನ್ನುಳಿದ 2 ಕಿ.ಮೀ.ಗೆ ಜಲ್ಲಿ ಹಾಕುವ ಕಾಮಗಾರಿಯು ಮುಂದುವರೆಯುತ್ತಿದೆ. ಈ ಕಾಮಗಾರಿಯನ್ನು ಒಟ್ಟು 10 ಲಕ್ಷ ರೂ.ಗಳ ಅಂದಾಜಿನಲ್ಲಿ ಕೈಗೊಳ್ಳಲಾಗಿದೆ. ಡಾಂಬರೀಕರಣವನ್ನು ಮಾಡುವ ಬಗ್ಗೆ ಪರಿಶೀಲಿಸಲಾಗುವುದು.

2. ಸ್ಮಾರಕ ಭವನ :

ಈ ಕಾಮಗಾರಿಯನ್ನು 2 ಲಕ್ಷ ರೂ.ಗಳ ಅಂದಾಜಿನಲ್ಲಿ ತೆಗೆದುಕೊಳ್ಳಲಾಗಿದೆ. ಈ ಕಾಮಗಾರಿಗೆ ಯಾರೂ ಗುತ್ತಿಗೆದಾರರು ಮುಂದೆ ಬರಲಿಲ್ಲ. ಆದ್ದರಿಂದ ನಿಯಮಗಳಂತೆ ಇಲಾಖಾ ವತಿಯಿಂದ ತೆಗೆದುಕೊಳ್ಳಲಾಗುತ್ತದೆ. ಹಾಗೂ ಈ ಸಾಲಿನಲ್ಲಿ ನಿಗದಿಪಡಿಸಿರುವ 1 ಲಕ್ಷ ರೂ.ಗಳ ಅನುದಾನವನ್ನು ಉಪಯೋಗಿಸಲಾಗುವುದು.

3. ಪ್ರವಾಸಿ ಮಂದಿರ :

ಈ ಕಾಮಗಾರಿಯನ್ನು 10 ಲಕ್ಷ ರೂ.ಗಳ ಅಂದಾಜಿನಲ್ಲಿ ಕೈಗೊಳ್ಳಲಾಗಿದೆ. ಇದಕ್ಕೂ ಸಹ ಗುತ್ತಿಗೆದಾರರು ಬರದಿದ್ದುದರಿಂದ ಕಾಮಗಾರಿಯನ್ನು ಇಲಾಖಾವತಿಯಿಂದ ಕೈಗೊಂಡಿದ್ದು ನೆಲಮಟ್ಟದವರೆಗೂ ಕಾಮಗಾರಿಯು ಆಗಿದೆ. ಈ ಸಾಲಿನಲ್ಲಿ ನಿಗದಿಪಡಿಸಿರುವ 5 ಲಕ್ಷ ರೂ. ಅನುದಾನವನ್ನು ಉಪಯೋಗಿಸಿಕೊಳ್ಳಲಾಗುವುದು.

4. ಕಾಂಪೌಂಡ್ ಗೋಡೆ ನಿರ್ಮಾಣ :

ಈ ಕಾಮಗಾರಿಯನ್ನು 2 ಲಕ್ಷ ರೂ.ಗಳ ಅಂದಾಜಿನಲ್ಲಿ ಕೈಗೊಂಡಿದ್ದು ಕಾಮಗಾರಿಯು ಮುಂದುವರಿದಿದೆ. ಈ ಸಾಲಿನಲ್ಲಿ ನಿಗದಿಪಡಿಸಿದ 1 ಲಕ್ಷ ರೂ.ಗಳ ಅನುದಾನವನ್ನು ಉಪಯೋಗಿಸಿಕೊಳ್ಳಲಾಗುವುದು.

1.30 ಪಿ.ಎಂ.

(ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಸಭಾಧ್ಯಕ್ಷರ ಪೀಠದಲ್ಲಿ ಉಪಸ್ಥಿತರಾದರು)

(viii) ಗುಬ್ಬಿ ತಾಲ್ಲೂಕು, ಹೊಸಕೆರೆಗೆ ಬಾಲಕಿಯರ ಪ್ರೌಢಶಾಲೆ ಮಂಜೂರು

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಸಭಾಧ್ಯಕ್ಷಿಣಿಯರೇ, ಶ್ರೀ ಎಂ.ಐ.ಜಿ. ಎಜುಕೇಷನ್ ಸೊಸೈಟಿ, ರಿಜಿಸ್ಟರ್ಡ್, ಓಬಳಾಪುರ ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ ಇವರು ಗುಬ್ಬಿ ತಾಲ್ಲೂಕು, ಹೊಸಕೆರೆಯಲ್ಲಿ ಬಾಲಕಿಯರ ಪ್ರೌಢಶಾಲೆ ಮಂಜೂರ್ಮಾಡುವಂತೆ ಹಲವಾರು ಬಾರಿ ಕೋರಿದರೂ ಕೂಡ, ಇದುವರೆಗೆ ಮಂಜೂರಾಗಿರುವುದಿಲ್ಲ. ಇದನ್ನು ಸನ್ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಎಸ್.ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) : ಮಾನ್ಯ ಸಭಾಧ್ಯಕ್ಷಿಣಿಯರೇ, ಪ್ರೌಢ ಶಿಕ್ಷಣ ಸಚಿವರು, ಮೇಲ್ಮನೆಗೆ ಹೋಗಿರುವುದರಿಂದ, ಅವರು ಬಂದನಂತರ, ಸರ್ಕಾರದ ಉತ್ತರವನ್ನು ತರಿಸಿಕೊಡಲಾಗುವುದು.

ಗಮನ ಸೆಳೆಯುವ ಸೂಚನೆಗಳು

ಹುಬ್ಬಳ್ಳಿ-ಧಾರವಾಡ ನಗರದ ಜನತೆಯು ತೀವ್ರತರವಾದ ಕುಡಿಯುವ ನೀರಿನ ತೊಂದರೆಯನ್ನು ಎದುರಿಸುತ್ತಿರುವ ಬಗ್ಗೆ

+ ಶ್ರೀ ಅಶೋಕ್ ಕಾಟ್ವೆ (ಹುಬ್ಬಳ್ಳಿ) : ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿ ಕೆಲವೊಂದು ವರ್ಷಗಳಿಂದ ನೀರಿನ ತೀವ್ರ ಅಭಾವದಿಂದ ಜನರು ಪರಿತಪಿಸುತ್ತಿದ್ದಾರೆ. ಹುಬ್ಬಳ್ಳಿ ಧಾರವಾಡ ಮಹಾನಗರಕ್ಕೆ ಸಂಬಂಧಿಸಿದಂತೆ 4 ಕೆರೆಗಳು ಇವೆ. ನೀರು ಸಾಗರ, ಉಣಕಲ್, ಗುಡಿದಾಳ್ ಮತ್ತು ಮಲಪ್ರಭಾದಿಂದ ನೀರು ಬರುತ್ತದೆ. ಮಲಪ್ರಭಾ ನೀರು ಸಾಗರದಿಂದ 90 ಲಕ್ಷ ಗ್ಯಾಲನ್ ನೀರು ಬರುತ್ತದೆ. ಮಲಪ್ರಭಾ ಮೊದಲನೇ ಹಂತದಿಂದ 75 ಲಕ್ಷ ಗ್ಯಾಲನ್, ಎರಡನೇ ಹಂತದಿಂದ 75 ಲಕ್ಷ ಗ್ಯಾಲನ್ ಒಟ್ಟು 150 ಲಕ್ಷ ಗ್ಯಾಲನ್ ಬರುತ್ತದೆ. ಉಣಕಲ್ ಕಡೆಯಿಂದ 10 ಲಕ್ಷ ಗ್ಯಾಲನ್ ನೀರು ಬರುತ್ತದೆ. ಇಷ್ಟು ಬಂದರೂ ಸಹಿತ ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ವಾರಕ್ಕೆ ಮೂರು ದಿವಸ ಮಾತ್ರ ನೀರು ಕೊಡುತ್ತಾರೆ.

ಚೇರ್ಮನ್ : ತಾವು ಮೊದಲು ಮಂತ್ರಿಗಳ ಗಮನ ಸೆಳೆಯಬೇಕು, ಮಂತ್ರಿಗಳು ಉತ್ತರ ಕೊಟ್ಟನಂತರ ಮತ್ತೆ ತಾವು ಪ್ರಶ್ನೆ ಕೇಳಬೇಕು.

ಶ್ರೀ ಅಶೋಕ್ ಕಾಟ್ವೆ : ಹುಬ್ಬಳ್ಳಿ-ಧಾರವಾಡ ನಗರದ ಜನತೆಯು ತೀವ್ರ ತರವಾದ ಕುಡಿಯುವ ನೀರಿನ ತೊಂದರೆಯನ್ನು ಎದುರಿಸುತ್ತಿರುವ ಬಗ್ಗೆ ನಗರಾಭಿವೃದ್ಧಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) : ಮಾನ್ಯ ಸಭಾಧ್ಯಕ್ಷಿಣಿಯವರೇ,

ಹುಬ್ಬಳ್ಳಿ-ಧಾರವಾಡ ಮಹಾನಗರದ ಜನಸಂಖ್ಯೆಯು 1991ರ ಜನಗಣತಿಯ ಪ್ರಕಾರ 6,17,510 ಇದ್ದು ಈಗಿನ ಜನಸಂಖ್ಯೆ : ಸುಮಾರು 7.60 ಲಕ್ಷಗಳು ಇರಬಹುದು. ಈ ಅವಳಿ ನಗರಗಳಿಗೆ ನೀರಸಾಗರ ಜಲಾಶಯ ಮತ್ತು ಮಲಪ್ರಭಾ ಜಲಾಶಯಗಳಿಂದ ನೀರನ್ನು ಸರಬರಾಜು ಮಾಡುವ ವ್ಯವಸ್ಥೆ ಇರುತ್ತದೆ. ಈ ಸ್ಥಾವರಗಳನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ನಿರ್ವಹಿಸುತ್ತಿದ್ದು ನೀರನ್ನು ಸಗಟಾಗಿ ಮಹಾನಗರ ಪಾಲಿಕೆಯು ನಿರ್ವಹಿಸುತ್ತದೆ. ಉನಕಲ್ ಕೆರೆಯಿಂದಲೂ

ನೀರನ್ನು ಅಗತ್ಯ ಬಿದ್ದಾಗ ಸರಬರಾಜು ಮಾಡುವ ವ್ಯವಸ್ಥೆ ಇದ್ದು ಇದನ್ನು ಮಹಾ ನಗರಪಾಲಿಕೆಯು ನಿರ್ವಹಿಸುತ್ತಿದೆ.

ವಿವಿಧ ಮೂಲಗಳಿಂದ ಪ್ರತಿ ದಿನ ಈ ಕೆಳಕಂಡ ಪ್ರಮಾಣದಲ್ಲಿ ಹುಬ್ಬಳ್ಳಿ-ಧಾರವಾಡ ನಗರಗಳಿಗೆ ನೀರಿನ ಸರಬರಾಜು ಮಾಡಲಾಗುತ್ತಿದೆ.

1.	ಮಲಪ್ರಭಾ ಜಲಾಶಯದಿಂದ	11.00 ದಶಲಕ್ಷ ಗ್ಯಾಲನ್
2.	ನೀರ ಸಾಗರದಿಂದ	8.50 ದಶಲಕ್ಷ ಗ್ಯಾಲನ್
		19.50 ದಶಲಕ್ಷ ಗ್ಯಾಲನ್

ಎರಡು ದಿನಗಳಿಗೊಮ್ಮೆ ಅವಳಿ ನಗರಗಳಿಗೆ ಒಟ್ಟು ಸರಾಸರಿ 89 ದಶಲಕ್ಷ ನೀರು ಸರಬರಾಜು ಆಗುತ್ತಿದೆ. ವಿತರಣಾ ವ್ಯವಸ್ಥೆಯ ತೊಂದರೆಯಿಂದ ನೀರನ್ನು ಎರಡು ದಿನಗಳಿಗೊಮ್ಮೆ ಸರಬರಾಜು ಮಾಡಲಾಗುತ್ತಿದೆ. ಮತ್ತು ಕೆಲವು ಹೊಸ ಬಡಾವಣೆಗಳಲ್ಲೂ ನೀರಿನ ಕೊರತೆ ಇದೆ. ಮಹಾನಗರ 7.60 ಲಕ್ಷ ಜನಸಂಖ್ಯೆಗೆ ಎರಡು ದಿನಗಳಿಗೊಮ್ಮೆ ತಲಾ 52 ಗ್ಯಾಲನ್ ನೀರು ಸರಬರಾಜು ಆದಂತೆ ಆಗುತ್ತದೆ.

ವಿತರಣಾ ವ್ಯವಸ್ಥೆಯ ನವೀಕರಣ ಮತ್ತು ಜಲಸಂಗ್ರಹಾಗಾರಗಳ ನಿರ್ಮಾಣಕೊಸ್ಕರ 700.00 ರೂ. ಅಂದಾಜಿನ ಯೋಜನೆಯು ಪ್ರಗತಿಯಲ್ಲಿ ಇದೆ. ಇದರಲ್ಲೂ ಸುಮಾರು ಶೇ 90ರಷ್ಟು ಕಾರ್ಯಗಳು ಮುಗಿದಿದ್ದು, ಮಾರ್ಚ್ 96ರ ವೇಳೆಗೆ ಎಲ್ಲಾ ಕಾರ್ಯಗಳನ್ನು ಮುಗಿಸಿದ ಯೋಜನೆಯನ್ನು ಹೊಂದಲಾಗಿದೆ. ಇದು ಮುಗಿದಾಗ ಸಮರ್ಪಕವಾಗಿ ನೀರು ಸರಬರಾಜು ಮಾಡುವ ಸಾಧ್ಯತೆ ಇದೆ. ಈ ಯೋಜನೆಗೆ ಈಗಾಗಲೇ 1071 ಲಕ್ಷ ರೂ.ಗಳು ಖರ್ಚಾಗಿದೆ.

ಮಲಪ್ರಭಾ ಎರಡನೇ ಹಂತದ ಯೋಜನೆಯೂ ಸಹ ಏಪ್ರಿಲ್ 1993 ರಲ್ಲಿ ಕಾರ್ಯಗತಗೊಳಿಸಲಾಗಿದೆ. ಇದರಿಂದ ದಿನಂಪ್ರತಿ 11 ದಶಲಕ್ಷ ಗ್ಯಾಲನ್ ನೀರು ಒದಗಿ ಬರುತ್ತದೆ. ಹುಬ್ಬಳ್ಳಿ-ಧಾರವಾಡ ನಗರಗಳ ಮಧ್ಯೆ ಬರುವ ಹಳ್ಳಿಗಳಿಗೆ ನೀರನ್ನು ಒದಗಿಸಬೇಕಾಗಿದ್ದು ಈ ಕಾರ್ಯ ಪ್ರಗತಿಯಲ್ಲಿ ಇದೆ. ಈ ಯೋಜನೆಯ ಅಂದಾಜು 650 ಲಕ್ಷ ರೂ.ಗಳು ಆಗಿದ್ದು ಇದುವರೆವಿಗೂ ಈ ಯೋಜನೆಗೆ 6.6.77 ಲಕ್ಷ ರೂ.ಗಳು ಖರ್ಚಾಗಿದೆ. ಈ ಯೋಜನೆಯನ್ನು ಸಹಾ ಮಾರ್ಚ್ 1996ರ ಅಂತ್ಯದ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಇದಲ್ಲದೇ ಧಾರವಾಡ ನಗರದಲ್ಲಿ 185 ಕೊಳವೆ ಬಾವಿಗಳಿದ್ದು ಅದರಲ್ಲಿ 140 ಕೈಪಂಪುಗಳು ಮತ್ತು 40 ವಿದ್ಯುತ್ ಚಾಲಿತ ಪಂಪುಗಳು ಇವೆ. ಒಟ್ಟು 168 ಕೊಳವೆ ಬಾವಿಗಳು ಸುಸ್ಥಿತಿಯಲ್ಲಿ ಇವೆ. ಹಾಗೆಯೇ ಹುಬ್ಬಳ್ಳಿ ನಗರದಲ್ಲಿ ಒಟ್ಟು 538 ಕೊಳವೆ ಬಾವಿಗಳಿದ್ದು ಅವುಗಳಲ್ಲಿ 483ಕ್ಕೆ ಕೈಪಂಪುಗಳನ್ನು ಮತ್ತು 55ಕ್ಕೆ ವಿದ್ಯುತ್ ಚಾಲಿತ ಪಂಪುಗಳನ್ನು ಅಳವಡಿಸಲಾಗಿದೆ. ಒಟ್ಟು 391 ಬಾವಿಗಳು ಸುಸ್ಥಿತಿಯಲ್ಲಿ ಇವೆ.

ಶ್ರೀ ಅಶೋಕ್ ಕಾಟ್ವೆ : ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ಇಷ್ಟು ಇದ್ದರೂ ಸಹಿತ ಹುಬ್ಬಳ್ಳಿ ಧಾರವಾಡ ಮಹಾನಗರಕ್ಕೆ ವಾರಕ್ಕೆ ಮೂರು ದಿವಸ ಮಾತ್ರ ನೀರು ಬರುತ್ತದೆ. ಇದಲ್ಲದೆ ಮೊನ್ನೆ ತಾನೆ ಧಾರವಾಡ ಮಾಳಮಟ್ಟಿ ಎಂಬ ಜಾಗದಲ್ಲಿ ಪೈಪುಗಳು ಒಡೆದು, 8 ದಿವಸಗಳಿಂದ ಹುಬ್ಬಳ್ಳಿ ಧಾರವಾಡ ಮಹಾನಗರಕ್ಕೆ ಒಂದು ಹನಿ ನೀರು ಬರಲಿಲ್ಲ. ಈ ರೀತಿ ಹಮ್ಮಿನಬಾವಿಯಿಂದ ಧಾರವಾಡದವರೆಗೆ ನೀರಿನ ಪೈಪುಗಳು 180 ಕಡೆ ಸೋರುತ್ತಿವೆ ಸೋರುವುದು ಹೇಗೆಂದರೆ, ಆ ಸೋರುವುದರ ಕಡೆಗೆ 10 ಹೆಚ್.ಪಿ. ಮೋಟಾರು ಹಚ್ಚಿ, ಜನರು ತಮ್ಮ ಹೊಲಕ್ಕೆ

ನೀರನ್ನು ಉಪಯೋಗಿಸುತ್ತಿದ್ದಾರೆ. ಅಂದರೆ, ಅಷ್ಟೊ ದೊಡ್ಡ ಪ್ರಮಾಣದಲ್ಲಿ ನೀರಿನ ಪೈಪುಗಳು ಸೋರಿ, ಹುಬ್ಬಳ್ಳಿ - ಧಾರವಾಡ ಮಹಾನಗರಕ್ಕೆ ನೀರು ಕಡಿಮೆ ಬರುತ್ತಿದೆ. ಈ ರೀತಿ ನೀರು ಕಡಿಮೆ ಬರುವುದರಿಂದ, ಅಲ್ಲಿಯ ಜನರು ತೀವ್ರ ತ್ರಾಸಾಗುತ್ತಿದೆ. ಇವತ್ತು ಹುಬ್ಬಳ್ಳಿ ಧಾರವಾಡ ಮಹಾನಗರಕ್ಕೆ, 2ನೇ ಮಲಪ್ರಭಾ ಯೋಜನೆಯಿಂದ 150 ದಶಲಕ್ಷ ಬೇಕಾಗಿತ್ತು. ಆದರೆ, ಈ 2ನೇ ಯೋಜನೆ ಪೂರ್ಣಗೊಂಡರೂ ಸಹಿತ ಮಲಪ್ರಭಾವದಿಂದ 110 ದಶಲಕ್ಷ ಗ್ಯಾಲನ್‌ಗಿಂತ ಹೆಚ್ಚಿಗೆ ನೀರು ಬಂದಿಲ್ಲ. 150 ದಶಲಕ್ಷ ಗ್ಯಾಲನ್ ನೀರು ಬರುವುದರಲ್ಲಿ ಇದುವರೆಗೆ 10 ಲಕ್ಷ ಗ್ಯಾಲನ್ ಮಾತ್ರ ಬರುತ್ತಿದೆಯೆಂದು ತನಿಖೆ ಮಾಡಿದ್ದಾರೆ. ಆದರೆ, 110 ಲಕ್ಷ ಗ್ಯಾಲನ್ ಬಂದರೂ ಸಹಿತ ಪೈಪುಗಳು ಒಡೆದಿರುತ್ತವೆ. 180 ಕಡೆ ಅಂದರೆ, ಸವದತ್ತಿಯಿಂದ ಹಮ್ಮಿನಬಾವಿ ಕಡೆಗೆ ಪೈಪುಗಳು ಒಡೆದಿವೆ. ಈ ರೀತಿ ಒಡೆದ ಪೈಪುಗಳಿಂದ ಬರುತ್ತಿರುವ ನೀರಿಗೆ 10 ಹೆಚ್.ಪಿ. ಮೋಟಾರು ಹಚ್ಚಿ ಹೊಲಗಳಿಗೆ ನೀರನ್ನು ತೆಗೆದುಕೊಳ್ಳುತ್ತಿದ್ದಾರೆ. ಇಂತಹ ಕಳಪೆ ಕಾಮಗಾರಿ ಆಗಿದೆ. ಇಂತಹ ಕಳಪೆ ಕಾಮಗಾರಿ ಆಗಿರುವುದರಿಂದ, ನಮಗೆ ನೀರು ಸರಬರಾಜಾಗುತ್ತಿಲ್ಲ. ಕಳಪೆ ಕಾಮಗಾರಿಯಾಗಿ, ಹುಬ್ಬಳ್ಳಿ ಧಾರವಾಡ ಜನತೆಯ ಮೇಲೆ ಹೆಚ್ಚಿನ ಕರಭಾರ ಬೀಳುತ್ತಿದೆ. ದುಡ್ಡು ಹೆಚ್ಚು ಖರ್ಚಾಗುತ್ತಾ ಇದೆ. ಕೆಲಸ ಚೆನ್ನಾಗಿ ಆಗುತ್ತಾ ಇಲ್ಲ.

ಚೇರ್ಮನ್ : ದಯಮಾಡಿ, ಇದರ ಬಗ್ಗೆ ಕ್ಲಾರಿಫಿಕೇಷನ್ ಕೇಳಿ.

ಶ್ರೀ ಅಶೋಕ್ ಕಾಟ್ವೆ : ಈ ರೀತಿ ಒಡೆದಿರುವ ಪೈಪುಗಳ ಬಗ್ಗೆ ಸರ್ಕಾರ ತನಿಖೆ ಮಾಡಬೇಕು. ಆಮೇಲೆ ಹಮ್ಮಿನಬಾವಿಯಿಂದ ಧಾರವಾಡದವರೆಗೆ, 4 ಕಿಲೋಮೀಟರ್ ಇರುವಂಥ ದಾರಿಯಲ್ಲಿ ಹೋದ ಸಲ ಹಾಕಿದಂಥ ಪೈಪುಗಳು ಒಡೆದುದರಿಂದ, ಅಲ್ಲಿಗೆ ಹೊಸ ಪೈಪುಗಳ ಜೋಡಣೆ ಮಾಡಿದ್ದಾರೆ. ಇದಕ್ಕೆ 48 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇದರಿಂದಲೂ ಹೆಚ್ಚಿನ ಹೊರೆ ನಮ್ಮ ಹುಬ್ಬಳ್ಳಿ - ಧಾರವಾಡ ಮಹಾನಗರದ ಜನತೆಯ ಮೇಲೆ ಬೀಳುತ್ತಿದೆ. ಆದರೆ, 1991ನೇ ಜನಗಣತಿಯ ಪ್ರಕಾರ ಆರೂವರೆ ಲಕ್ಷ ಇದ್ದಂಥ ಜನಸಂಖ್ಯೆ, ಇವತ್ತಿನ ಜನಗಣತಿಯ ಪ್ರಕಾರ 8 ಲಕ್ಷಕ್ಕೆ ಬಂದಿದೆ. ಅಂದಾಜು ಇವತ್ತಿನವರೆಗೂ 8 ಲಕ್ಷ ಎಂದು ಜನಗಣತಿ ಆಗಿದೆ ಸುಮಾರು 110 ಲಕ್ಷ ಗ್ಯಾಲನ್ ನೀರು ಬರುತ್ತಿಲ್ಲ. ಹಬ್ಬ ಹರಿದಿನಗಳಲ್ಲಿ ಹುಬ್ಬಳ್ಳಿ ಜನ ನೀರಿಗಾಗಿ ಬಹಳ ತೊಂದರೆ ಪಡುತ್ತಿದ್ದಾರೆ. ಹುಬ್ಬಳ್ಳಿ - ಧಾರವಾಡದ ಜನ ನೀರಿಗಾಗಿ ರಸ್ತೆರೋಕೋ ಚಳುವಳಿ ಮತ್ತು ಹೋರಾಟಗಳನ್ನು ಮಾಡುತ್ತಿದ್ದಾರೆ ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ಹೇಗೆ? ಅದರನಂತರ ಈಗ ಎರಡನೆಯ ಹಂತ ಮುಗಿದ ಮೇಲೆ ಮೂರನೆಯ ಹಂತ ಮಹದಾಯಿ ಯೋಜನೆ ತೆಗೆದುಕೊಳ್ಳುವ ಬಗ್ಗೆ ಸರ್ಕಾರದ ಗಮನದಲ್ಲಿ ಇದೆಯೋ ಇಲ್ಲವೋ ಎನ್ನುವುದನ್ನು ತಿಳಿಸಬೇಕು. ಈ ರೀ ಮಾಡಲಿಂಗ್ ಸ್ಕೀಮ್‌ನಲ್ಲಿ ಹುಬ್ಬಳ್ಳಿ ಮತ್ತು ಧಾರವಾಡ ಮಹಾನಗರಕ್ಕೆ 20 ಜಲಸಂಗ್ರಹಗಳು ಆಗಬೇಕಾಗಿತ್ತು. ಆ 20 ಜಲಸಂಗ್ರಹಗಳಲ್ಲಿ 10 ಜಲಸಂಗ್ರಹಗಳು ಧಾರವಾಡದಲ್ಲಿ ಆಗಿವೆ. ಮುಖ್ಯವಾದ ಜಲಸಂಗ್ರಹ ಏನು ನವನಗರದಲ್ಲಿ ಆಗಬೇಕಾಗಿತ್ತು. ಆ ಜಲಸಂಗ್ರಹ ಮೊದಲ ಟ್ಯಾಂಕ್ ಇದೆ ಎಂದು ಹೇಳಿ ಆ ಮೊದಲ ಟ್ಯಾಂಕ್ ಪೂರ್ಣ ಸೋರಿ ಅಲ್ಲಿ ದೊಡ್ಡ ಕೆರೆ ನಿರ್ಮಾಣ ಆಗಿದೆ. ಅದೇ ರೀತಿಯಲ್ಲಿ ಗಪೂರ್‌ಗಲ್ಲಿಯಲ್ಲಿ ಹಾಕಿದಂತಹ ಒಂದು ಜಲಸಂಗ್ರಹಣೆ ಸಂಪೂರ್ಣವಾಗಿ ಸೋರಿ ತದನಂತರ ಹಳೆಯ ಹುಬ್ಬಳ್ಳಿಯ ಕೃಷ್ಣಾಪುರದಲ್ಲಿಯೂ ಕೂಡ ಕಟ್ಟಿದಂತಹ ಜಲಸಂಗ್ರಹಣೆ ಪೂರ್ಣ ಸೋರುತ್ತಿದೆ. ನಾನು ನೋಡಿ ಬಂದಿದ್ದೇನೆ. ಆದ್ದರಿಂದ ನಾನು ನಮ್ಮ ಮಾನ್ಯ ಮಂತ್ರಿಗಳ ಗಮನಕ್ಕೆ ತರಲು ಇಚ್ಛಿಪಡುತ್ತೇನೆ ಸೋರುವಂತಹ ಜಲಸಂಗ್ರಹಗಳನ್ನು ಯಾವಾಗ ರಿಪೇರಿ ಮಾಡುತ್ತಾರೆ ಮತ್ತು ಉಣಕಲ್‌ನಲ್ಲಿರುವಂತಹ ಮದರ್ ಟ್ಯಾಂಕ್ ಅದು ಯಾವಾಗ ಪೂರ್ಣಗೊಳ್ಳುತ್ತದೆ. ರಾಯಪುರದಲ್ಲಿ ಇರುವಂತಹ ಮದರ್ ಟ್ಯಾಂಕ್

ಯಾವಾಗ ಪೂರ್ಣಗೊಳಿಸುತ್ತಾರೆ. ಹುಬ್ಬಳ್ಳಿ ನಗರಕ್ಕೆ ಬರುವಂತಹ ಒಂದು ನೀರಿನ ಪ್ರಮಾಣ ಹೇಳಬೇಕು ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ವೈಜನಾಥ್ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಬಲ್ಕ್ ವಾಟರ್ ಸಪ್ಲೈ ಕರ್ನಾಟಕ ವಾಟರ್ ಸಪ್ಲೈ ಬೋರ್ಡಿನಿಂದ ಆಗುತ್ತಿದೆ. ಡಿಸ್ಟ್ರಿಬ್ಯೂಷನ್ ಕಾರ್ಪೊರೇಷನ್‌ನವರು ಮಾಡುತ್ತಾರೆ. ಆ ಎರಡೂ ನನಗೆ ಸಂಬಂಧ ಬರುತ್ತವೆ. ಹುಬ್ಬಳ್ಳಿ - ಧಾರವಾಡ ಮಹಾನಗರಕ್ಕೆ ನೀರಿನ ಮೂರು ಸೋರ್ಸ್ಸ್ ಇವೆ. ನೀರಿನ ಸಲುವಾಗಿ. ಒಂದು ನೀರು ಸಾಗರ ಮಲಪ್ರಭಾ. ಇನ್ನು ಕೆಲವು ಕಡೆ ನೀರು ಸೋರಿ ಹೋಗುತ್ತವೆ ಅಂತ ದೂರುಗಳು ಇವೆ. ಮುಖ್ಯ ಸಮಸ್ಯೆ ಅಂದರೆ ರೀ ಮಾಡಲಿಂಗ್ ಸಲುವಾಗಿ ಒಂದು ಯೋಜನೆ 1990ರಲ್ಲಿ ಮಂಜೂರಾಗಿದೆ. ಅದರ 80 ಪರ್ಸೆಂಟ್ ಕೆಲಸ ಮುಗಿದಿದೆ. ಆ ಯೋಜನೆ ಪೂರ್ಣವಾದರೆ ಬಹಳಷ್ಟು ದೂರುಗಳು ಬರುವುದಿಲ್ಲ. 1996ರ ಮಾರ್ಚಿ ಒಳಗೆ ರೀ ಮಾಡಲಿಂಗ್ ಕೆಲಸ ಪೂರ್ಣ ಆಗುತ್ತದೆ. ಇನ್ನು ಕೆಲವು ಕಡೆ ಪೈಪ್ಸ್ ಸರಿಯಾಗಿ ಕೂಡಿಸಿಲ್ಲ ಅದರ ಸುವಾಗಿ ನೀರು ಸೋರಿ ಹೋಗುತ್ತದೆ. ಸೋರಿ ಹೋದ ನೀರಿನಲ್ಲಿ ಅಗ್ರಿಕಲ್ಚರ್ ಮಾಡಿಕೊಳ್ಳುತ್ತಾರೆಂದು ಹೇಳಿದ್ದಾರೆ. ಅದರ ಬಗ್ಗೆ ನಾನು ವಿಚಾರಿಸಿ ಎನ್‌ಕ್ವೈರಿ ಮಾಡಿಸುತ್ತೇನೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಅಶೋಕ್ ಕಾಟ್ವೆ : 3ನೇ ಯೋಜನೆಯಾದ ಮಹದಾಯಿ ಯೋಜನೆ ಸರ್ಕಾರದ ಗಮನದಲ್ಲಿ ಇದೆಯೋ ಇಲ್ಲವೋ ಎನ್ನುವುದನ್ನು ಸ್ವಲ್ಪ ಹೇಳಬೇಕು.

ಶ್ರೀ ವೈಜನಾಥ್ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಇದೆ. ಮತ್ತು ರೀ ಮಾಡಲಿಂಗ್ ಕೆಲಸ ಮಾರ್ಚಿ 1996ರ ಒಳಗೆ ಮುಗಿಸುತ್ತೇವೆ. ಎಲ್ಲೆಲ್ಲಿ ಪೈಪ್ ಸಿಸ್ಟಂ ಸರಿ ಇಲ್ಲದೆ ಇದ್ದರೆ ಅದರ ಬಗ್ಗೆ ಎನ್‌ಕ್ವೈರಿ ಮಾಡಿಸಿ ಅವ್ಯವಹಾರಗಳು ಆಗಿದ್ದರೆ ಅದರ ಬಗ್ಗೆ ಎನ್‌ಕ್ವೈರಿ ಮಾಡಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಸದಸ್ಯರಾದ ಮಾಮನಿ ಚಂದ್ರಶೇಖರ್ ಅವರ ಗಮನ ಸೆಳೆಯುವ ಸೂಚನೆಯನ್ನು ಮುಖ್ಯಮಂತ್ರಿಗಳು ಇಲ್ಲದೇ ಇರುವುದರಿಂದ ಮುಂದಕ್ಕೆ ಹಾಕಲಾಗಿದೆ.

ಶಾಸನ ರಚನೆ

ಕರ್ನಾಟಕ ಪುರಸಭೆಗಳ (ತಿದ್ದುಪಡಿ) ವಿಧೇಯಕ 1995

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಕಾಡಾ ಮತ್ತು ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯ ಸಚಿವರು) : ಮಾನ್ಯ ಅಧ್ಯಕ್ಷರೇ, 1995ರ ಕರ್ನಾಟಕ ಪುರಸಭೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು.

+ ಶ್ರೀ ವೈಜನಾಥ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಕರ್ನಾಟಕ ಮುನಿಸಿಪಲ್ ಆಕ್ಟ್ 1964ರಲ್ಲಿ 9ನೇ ಸೆಕ್ಷನ್ ಪ್ರಕಾರ ಈ ಫಿಕ್ಸೇಷನ್ ಆಫ್ ಬೌಂಡ್ರೀಸ್ ಕ್ಲಾಸಿಫಿಕೇಷನ್ ಆಫ್ ಅರ್ಬನ್ ಏರಿಯಾಸ್, ಇದು ಸಿಟಿ ಮುನಿಸಿಪಾಲಿಟಿ ಆಗಿರಬೇಕೇ ಅಥವಾ ಟೌನ್ ಮುನಿಸಿಪಾಲಿಟಿ ಆಗಿರಬೇಕೇ ಇದರ ಬಗ್ಗೆ ಆಗ ಒಂದು ನೋಟಿಫಿಕೇಷನ್ ಸರ್ಕಾರದ ವತಿಯಿಂದ ಚುನಾವಣೆ ಬರುವುದಕ್ಕಿಂತ ಮುಂಚೆ ಅದು ಯಾವುದೇ ಪ್ರೋಸಸ್ ಆದರೆ ಅದು ಮೊದಲನೆಯದು. ಆದರಲ್ಲಿ ಮೊದಲಿನಿಂದ

ಆಕ್ಟ್‌ನಲ್ಲಿ 60 ದಿವಸ ಸಮಯ ಇದೆ. ಅಬ್ಜೆಕ್ಷನ್ಸ್ ಸಲುವಾಗಿ. ಅಬ್ಜೆಕ್ಷನ್ಸ್ ಹಾಕುವುದಕ್ಕೆ 60 ದಿವಸ ಸಮಯ ಬಹಳ ಆಗುತ್ತದೆ. ಅಷ್ಟು ಸಮಯ ಕೊಟ್ಟರೆ ಮುಂದೆ ಡೀ ಲಿಮಿಟೇಷನ್ ಆಗಬೇಕು. ರಿಸರ್ವೇಷನ್ ಆಗಬೇಕು ಅದಕ್ಕೆ ಸಮಯ ಆಗುತ್ತದೆ ಎಂದು ಅದು 60 ದಿವಸದ ಬದಲಾಗಿ 30 ದಿವಸಕ್ಕೆ ಲಿಮಿಟೇಶನ್ ಇಳಿಸಲಾಗಿದೆ. ಅದರ ಸಲುವಾಗಿ ಒಂದು ತಿದ್ದುಪಡಿ. ಚುನಾವಣೆಗಳು ಬೇಗ ಆಗಬೇಕು. ಏಕೆಂದರೆ ನಾವು ಈಗ ಎಲ್ಲಾ ಕಡೆ ಆಡಳಿತಾಧಿಕಾರಿಗಳನ್ನು ಹಾಕಿದ್ದೇವೆ. ಚುನಾಯಿತ ಮಂಡಳಿ ಈಗ ಇಲ್ಲ, ಆ ದೃಷ್ಟಿಯಿಂದ ಹೊಸ ಚುನಾಯಿತ ಮಂಡಳಿಗಳು ಅಸ್ತಿತ್ವಕ್ಕೆ ಬರಬೇಕು. ಆ ದೃಷ್ಟಿಯಿಂದ 60 ದಿವಸಯಿಂದ 30 ದಿವಸಕ್ಕೆ ಲಿಮಿಟೇಷನ್ ಅಬ್ಜೆಕ್ಷನ್ಸ್ ಹಾಕುವುದಕ್ಕೆ ಇಳಿಸಲಾಗಿದೆ. ಅದಕ್ಕೆ ಈ ಸಭೆ ಒಪ್ಪಿಗೆ ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

+ ಶ್ರೀ ವೈ. ರಾಮಕೃಷ್ಣ (ಅನೇಕಲ್) : ಮಾನ್ಯ ಅಧ್ಯಕ್ಷರೇ, ಅವರು ಏನು ಒಂದು ತಿದ್ದುಪಡಿ ತಂದಿದ್ದಾರೆ ಅದು ಬಹಳ ಆತುರದ ತಿದ್ದುಪಡಿ ಎಂದು ನಾನು ತಿಳಿದುಕೊಂಡಿದ್ದೇನೆ ಸಾಮಾನ್ಯವಾಗಿ ಇದು ಪುರಸಭೆಗಳು ಮತ್ತು ಟೌನ್ ಮುನಿಸಿಪಾಲಿಟಿಗಳಿಗೆ ಸಂಬಂಧಪಟ್ಟಿದ್ದುದು. ಸಾಮಾನ್ಯವಾಗಿ ಚುನಾವಣೆಗೆ ನಿಲ್ಲತಕ್ಕಂಥ ಅಭ್ಯರ್ಥಿಗಳ ಸಂಖ್ಯೆ ಜಾಸ್ತಿ ಇರುತ್ತದೆ. ಪ್ರತಿಯೊಬ್ಬರೂ ಕೂಡ ಅಬ್ಜೆಕ್ಷನ್ಸ್ ಹಾಕುತ್ತಾರೆ. ಅವರು ಅರ್ಜಿಗಳು ಕೊಡುತ್ತಾರೆ. ಅದು ಪರಿಶೀಲನೆ ಅರ್ಹವಾಗಿರುತ್ತದೆ. ಅದರಲ್ಲೂ ಇತ್ತೀಚೆಗೆ ಅವರು ಹೇಳಿದ ಹಾಗೆ ರೂಲ್ಸ್ ಆಫ್ ರಿಸರ್ವೇಷನ್ 73-74ನೇ ರಾಜ್ಯಾಂಗದ ತಿದ್ದುಪಡಿ ಬಂದ ಮೇಲೆ "ಎ" ವರ್ಗೀಕರಣ "ಬಿ" ವರ್ಗೀಕರಣ ಮಾಡಬೇಕಾಗುತ್ತದೆ. ಇದಕ್ಕೆ ನೂರಾರು ಅರ್ಜಿಗಳು ಬರುತ್ತವೆ. ಇದನ್ನು ಗಮನದಲ್ಲಿ ಇಟ್ಟುಕೊಂಡು ನಾನು ಒಂದು ಉದಾಹರಣೆ ಕೊಡುತ್ತೇನೆ. ಬೆಂಗಳೂರು ಸಿಟಿ ಕಾರ್ಪೊರೇಷನ್ ಎಂದು ಇಟ್ಟುಕೊಳ್ಳಿ. ನೂರು ಕ್ಷೇತ್ರಗಳು ಇರುತ್ತದೆ ಎಂದು ಇಟ್ಟುಕೊಳ್ಳಿ. ಒಂದು ಕ್ಷೇತ್ರದಿಂದ ಕನಿಷ್ಠ 20 ಅರ್ಜಿಗಳು ಬಂದೇ ಬರುತ್ತವೆ. ಅಲ್ಲಿಗೆ ಸುಮಾರು 2000 ಅರ್ಜಿಗಳು ಆಗುತ್ತವೆ. ಎರಡು ಸಾವಿರ ಅರ್ಜಿಗಳ ಅಹವಾಲುಗಳನ್ನು ಕೇಳಬೇಕಾದರೆ ಅವರ ಅಬ್ಜೆಕ್ಷನ್ಸ್‌ನ್ನು ತಾವು ಕೇಳಬೇಕಾದರೆ ಎಷ್ಟು ದಿವಸ ಆಗಬಹುದು ಎನ್ನುವುದನ್ನು ತಾವು ಯೋಚನೆ ಮಾಡಿ. It is a judicial Proceeding. It could be questioned in the court of law. After notification it cannot be questioned. However, before Notification, it can be questioned in the court of law. ಅಂದರೆ

ಏನು ಅಷ್ಟು ಜನರಿಗೂ ಕೂಡ ಸಮಾಧಾನಕರವಾದಂತಹ ಉತ್ತರಗಳನ್ನು ಕೊಡಬೇಕು. ಮತ್ತು ಇಲ್ಲಿ ಅನೇಕ ವಿಷಯಗಳು ಬರುತ್ತವೆ. It should be scientific.ಅಧಿಕಾರಿಗಳು ತೆಗೆದುಕೊಳ್ಳತಕ್ಕಂಥ ತೀರ್ಮಾನ ಅದು ಸೈಂಟಿಫಿಕ್ ಆಗಿರಬೇಕು. ಅದು ಯೂನಿಫಾರಮ್ ಆಗಿರಬೇಕು. ಒಬ್ಬರಿಗೊಂದು ಒಬ್ಬರಿಗೊಂದು ಮಾಡುವುದಕ್ಕೆ ಆಗುವುದಿಲ್ಲ, ಒಂದು ಕ್ಷೇತ್ರಕ್ಕೆ ಒಂದು ಇನ್ನೊಂದು ಕ್ಷೇತ್ರಕ್ಕೆ ಒಂದು ಮಾಡುವುದಕ್ಕೆ ಆಗುವುದಿಲ್ಲ, Geographical contiguity - ಭೌಗೋಳಿಕ ಎಲ್ಲೆ, ಇದು ಬಹಳ ಮುಖ್ಯವಾದುದು. ಇದನ್ನೆಲ್ಲಾ ಮಾಡಬೇಕಾದರೆ ತಾವು ಏನು ಹಿಂದೆ 60 ದಿವಸ ಎಂದು ನೋಟಿಫಿಕೇಷನ್ ಇಟ್ಟುಕೊಂಡಿದ್ದಿರಿ ಆ 60 ದಿವಸ ಕೂಡ ಸಾಕಾಗುವುದಿಲ್ಲ ಎಂಬುದು ನನ್ನ ಅಭಿಪ್ರಾಯ. You have to take into account the geographical contiguity if at all you want to decide it judicially.

ಹಾಲಿ ಇರತಕ್ಕಂಥ ಪ್ರಾವಿಷನ್ ಅನ್ನು ಈ "ಎ" ವರ್ಗ "ಬಿ" ವರ್ಗ ಎಂದು ಬಂದ ಮೇಲೆ ರಿಜರ್ವೇಷನ್ ಸೀಟುಗಳು ಜಾಸ್ತಿ ಆದಮೇಲೆ 30 ದಿವಸಕ್ಕೆ ಇಳಿಸುತ್ತೇವೆಂದು ಹೇಳಿದರೆ it is humanly possible? ಇದನ್ನು ಆಲೋಚನೆ ಮಾಡಿ.

ಇದನ್ನು ರೀ ಕನ್ಸಿಡರ್ ಮಾಡಿ. ಇದರಲ್ಲಿ ಏನೂ ಪೊಲಿಟಿಕಲ್ ಮೋಟೀವ್ ಇಲ್ಲ. You have to give fair opportunity to all the applicants. ತಾವೇನು ಮಂಡಿಸಿದ್ದೀರಿ ಇದರಲ್ಲಿ ವಿವರಣಾತ್ಮಕ ಎಂದು ಒಂದು ಪದ ಉಪಯೋಗಿಸಿದ್ದೀರಿ. ಉದ್ದೇಶ ಮತ್ತು ಕಾರಣಗಳಲ್ಲಿ ತಾವು ಏನು ಹೇಳಿದ್ದೀರಿ.

2.00 ಪಿ.ಎಂ.

ತಾವೇ ಹೇಳಿದಿರಿ ಇದು ಮೊದಲನೇ ಹೆಜ್ಜೆ, ಅಬ್ಜೆಕ್ಷನ್ಸ್ ಕೇಳುವುದು, ಆರ್ಡರ್ಸ್ ಮಾಡುವುದು ಡಿಲಿಮಿಟೇಷನ್ ವಿಂಗಡಣೆ ಮಾಡುವುದು ಮೀಸಲಾತಿ ನಿರ್ಣಯ ಮಾಡುವುದು ಅದರ ಮೇಲೆ ಅಪೀಲ್ ಹೋಗುವುದು ಅದರ ಮೇಲೆ ಡಿಸಿಷನ್ ತೆಗೆದುಕೊಳ್ಳುವುದು. ಇದು ತಮಗೆ ಯಾರು ಅಡ್ವೈಸ್ ಮಾಡಿದ್ದುದು? 30 ದಿವಸದಲ್ಲಿ ಸಾಧ್ಯವಾಗುತ್ತದೆ ಇದು ಎಂದು ನನಗಂತೂ ಆಶ್ಚರ್ಯವಾಗುತ್ತದೆ. ಎಕ್ಸಿಕ್ಯೂಟಿವ್ ಆರ್ಡರಾಗಿದ್ದರೆ ನಾನು ಇದನ್ನು ಹೇಳುತ್ತಿರಲಿಲ್ಲ. It is not an executive order. It is a judicious order. ಹೀಗಿರುವಾಗ ಆತುರದಲ್ಲಿ ಇದರ ಬಗ್ಗೆ ಆರ್ಡಿನೆನ್ಸ್ ಮಾಡಿಬಿಟ್ಟಿದ್ದೀರಿ 7-7-95ರಿಂದ, ಪರ್ಪಸ್ ಸರ್ವೆ ಆಗಿದೆಯೇ? ನಿಮಗಿಂತ ಆತುರದಲ್ಲಿ ನಾವೂ ಇದ್ದೇವೆ ಏಕೆಂದರೆ ಚುನಾವಣೆಗೆ ಅವಧಿ ಮುಗಿದುಹೋಗಿದೆ ಎಲೆಕ್ಟೆಡ್ ಬಾಡಿಸ್‌ಗೆ ಬದಲಾಗಿ ಬೇರೆ ಅಧಿಕಾರಿಗಳನ್ನು ತಾವು ನೇಮಕ ಮಾಡಿಬಿಟ್ಟಿದ್ದೀರಿ ಎಷ್ಟು ಬೇಕೋ ಅಷ್ಟು ಆತುರವಾಗಿರಬೇಕು. ಆದರೆ ಸಾಧ್ಯವಾಗುತ್ತದೆಯೇ ಎನ್ನುವುದನ್ನು ತಾವು ಆಲೋಚನೆ ಮಾಡಬೇಕು ಇದರಲ್ಲೇನು ರಾಜಕೀಯ ಉದ್ದೇಶ ಇಲ್ಲ ಮತ್ತೊಂದಿಲ್ಲ ಅದಕ್ಕಾಗಿ ತಾವು ರೀಕನ್‌ಸಿಡರ್ ಮಾಡಿ ಮುಂದೆ ಏನು ಪ್ರಾವಿಷನ್ ಇತ್ತೋ ಅದೇ ಚೆನ್ನಾಗಿತ್ತು ಎಂದು ನಾನು ಹೇಳುತ್ತೇನೆ, ಇನ್ನೊಂದು ವಿಚಾರ, ವಿವರಣಾತ್ಮಕ ಹೇಳಿಕೆಯಲ್ಲಿ ತಾವು ಹೇಳಿರುವುದು ಸಂದರ್ಭಾನುಸಾರ ಕರ್ನಾಟಕ ಪುರಸಭೆಗಳ ಅಧಿನಿಯಮ 1964 99ನೇ ಪ್ರಕರಣವು ಸ್ಥಳೀಯ ಪ್ರದೇಶವನ್ನು ಚಿಕ್ಕನಗರ ಪ್ರದೇಶವನ್ನಾಗಿ ರಚಿಸುವ ಅಥವಾ ಸಂದರ್ಭಾನುಸಾರವಾಗಿ it cannot be an executive discretion it should be a judicious discretion. That is the correct interpretation of the order ವಿವರಣಾತ್ಮಕ ಹೇಳಿಕೆಯಲ್ಲಿ ತಾವು ಬಳಸಿರುವ ಪದ ಏನಿದೆ ಇದು ಯಾವ ರಾಜಕೀಯದ ಇಂಟರ್‌ಫಿಯರೆನ್ಸಿಲ್ಲದೆ free and fair ಹೆಸರಿನಲ್ಲಿ ನಡೆಯುವುದಕ್ಕೆ ತಾವು ಅವಕಾಶ ಮಾಡಿಕೊಡಿ ಅದಕ್ಕೋಸ್ಕರ ಆಕ್ಷೇಪಗಳನ್ನು ಆಹ್ವಾನಿಸುವುದಿರಬಹುದು ಕಾಲಾವಧಿ 2 ತಿಂಗಳು ಇದ್ದುದನ್ನು ಮೊಟಕು ಮಾಡಿ 30 ದಿವಸದಲ್ಲಿ ಮಾಡಿ ಗೆಜೆಟ್ ಅಧಿಸೂಚನೆ ಮಾಡಿ ಚುನಾವಣೆ ನಡೆಸುತ್ತೇನೆ ಎಂಬುದು ಬಹುಶಃ ಸಾಧ್ಯವಾಗದ ಮಾತು ಎಂದು ನಾನಂತೂ ಭಾವಿಸುತ್ತೇನೆ.

(ಉಪಾಧ್ಯಕ್ಷರು ಶ್ರೀ ಎಂ.ಎಸ್. ಪಾಟೀಲ್‌ರವರು ಪೀಠವನ್ನಲಂಕರಿಸಿದರು)

ಆದ್ದರಿಂದ ಹಿಂದೆ ಏನೂ ಎರಡು ತಿಂಗಳಿದ್ದು ಅದೂ ಬಹುಶಃ ಸಾಲುವುದಿಲ್ಲ ಆದರೂ ಚಿಂತೆಯಿಲ್ಲ ಅದನ್ನು ಅಮೆಂಡ್ ಮಾಡುವುದು ಬೇಡ. ಅದನ್ನೇ ರೀಟೈನ್ ಮಾಡಿದರೆ ಪ್ರಜಾಪ್ರಭುತ್ವದ ಹಿತದೃಷ್ಟಿಯಿಂದ ಪುರಸಭೆಗಳ ಚುನಾವಣೆಗಳು ಫೇರ್ ಮತ್ತು ಫ್ರೀ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ಆ ಟೈಮನ್ನು ಇಟ್ಟುಕೊಂಡರೆ ಒಳ್ಳೆಯದೆಂದು ನಾನು ಭಾವಿಸಿಕೊಂಡಿದ್ದೇನೆ. ಆದ್ದರಿಂದ ನಾನು ಇದನ್ನು ವಿರೋಧಿಸುತ್ತಿದ್ದೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) : ಸನ್ಮಾನ್ಯ ಉಪಾಧ್ಯಕ್ಷರೇ, ಯಾವುದೇ ಚುನಾವಣೆ ಆಗಬೇಕಾದರೆ delimitation is the first step for the election ಎಂದು ಹೇಳುತ್ತಾರೆ ಅದಾಗಿಲ್ಲವೆಂದರೆ ಚುನಾವಣೆ ಸರಿಯಾಗಿ ಆಗುವುದಕ್ಕೇ ಸಾಧ್ಯವಿಲ್ಲ, 74ನೇ ರಾಜ್ಯಾಂಗ ತಿದ್ದುಪಡಿಯಾದ ಮೇಲೆ ನೀವು ಜಿಲ್ಲಾಪರಿಷತ್ತು

ತಂದಿರಿ. ಅದಾದಮೇಲೆ ಮುನಿಸಿಪಾಲಿಟಿ ಆಕ್ಟ್ ಕೂಡ ತಿದ್ದುಪಡಿ ಮಾಡಿ ತಂದಿದ್ದೀರಿ. ಹೊಸದಾಗಿ ಈಗ ಚುನಾವಣೆಯಾಗಬೇಕಾದರೆ ಇದು ಡಿಲಿಮಿಟೇಷನ್ ಆಗಬೇಕಾಗುತ್ತದೆ. ಅದನ್ನು ನೀವು ಯಾವರೀತಿ ಮಾಡಬೇಕೆಂದು ಪರ್ಯಾಲೋಚನೆ ಮಾಡಿ ಈಗಿನ ಶಾಸಕರ ಜೊತೆ ಯೋಚನೆ ಮಾಡಿ ಮಾಡಬೇಕಾಗುತ್ತದೆ. ಇದೇನೂ ಮಾಡದೆ ಆಡಳಿತಾಧಿಕಾರಿಗಳನ್ನು ನೇಮಕ ಮಾಡಿಬಿಟ್ಟಿದ್ದೀರಿ, ಇದನ್ನು ಯಾವಾಗ ನೀವು ಮಾಡಬೇಕಾಗಿತ್ತೆಂದರೆ ಆಡಳಿತಾಧಿಕಾರಿಗಳ ಹುದ್ದೆ ಫಿಲಪ್ ಆಗುವ ಮುಂಚೆ. ಚುನಾವಣೆ ಅವಧಿ ಮುಗಿಯುವ ಮುಂಚೆ ಎಲ್ಲವನ್ನೂ ತಾವು ಮಾಡಬೇಕಾಗಿತ್ತು. 94ರಲ್ಲಿ ತಿದ್ದುಪಡಿ ಬಂದ ನಂತರ ಒಂದು ವರ್ಷ ಕಾಲ ಇತ್ತು. ಆಗ ಮಾಡಲಿಲ್ಲ, ಆದರೆ ಈಗ ತರಾತುರಿಯಲ್ಲಿ ಆಡಳಿತಾಧಿಕಾರಿಗಳನ್ನು ನೇಮಕ ಮಾಡಿಬಿಟ್ಟು ತರಾತುರಿಯಲ್ಲಿ ಕೋರ್ಟಿನಲ್ಲಿ ಪರ್ಯಾಲೋಚನೆ ಬಂದಿರುವಾಗ, ತಮ್ಮ ಅಡ್ವೊಕೇಟ್ ಜನರಲ್ ಕೋರ್ಟಿನಲ್ಲಿ ಅಫಿಡವಿಟ್ ಹಾಕಿದ್ದಾರೆ, ಏನು ಹೇಳಿದ್ದೀರಿ, ನಾವು ನವೆಂಬರ್‌ನಲ್ಲಿ ಚುನಾವಣೆ ಮಾಡುತ್ತೇವೆಂದಿದ್ದೀರಿ. ಅಂದರೆ ಅಷ್ಟರಲ್ಲಿ ಈ ಡಿಲಿಮಿಟೇಷನ್ ಮುಗಿದು ಅದರಲ್ಲಿ ಆರ್ಡರಾಗಿ ಎಲ್ಲಾ ಒಪ್ಪಿಗೆ ಆಗಿ ಚುನಾವಣಾ ಕಾರ್ಯಪಟ್ಟಿ ಇಷ್ಯೂ ಮಾಡಿ ಚುನಾವಣೆ ನವೆಂಬರ್ ಒಳಗೆ ಆಗಬೇಕಾಗುತ್ತದೆ. ಇದಾಗುವುದಕ್ಕೆ ಸಾಧ್ಯವಾಗುವುದಿಲ್ಲ not executable order. ಇದು ಮಾಡುವುದಕ್ಕೆ ಆಗದಿರುವುದರಿಂದ ನೀವು ಕಣ್ಣೊರೆಸುವುದಕ್ಕಾಗಿ ಅಥವಾ ಕೋರ್ಟಿನಲ್ಲಿ ಅಫಿಡವಿಟ್ ಹಾಕಿ ನಾವು ಮಾಡುತ್ತೇವೆಂಬ ಧೋರಣೆಯಲ್ಲಿ ತಿದ್ದುಪಡಿ ತಂದಿದ್ದೀರಿ ಎಂದು ನಮಗನ್ನಿಸುತ್ತದೆ. ಆದರೆ delimitation ನಿಜವಾಗಿಯೂ ಯೋಚನೆ ಮಾಡಿ ತಂದಿಲ್ಲ, ನೀವು ನಿಜವಾಗಿ ಸರಿಯಾಗಿ ಮಾಡಬೇಕಾದರೆ, ಕಾಲಾವಕಾಶ ಸರಿಯಿಲ್ಲವೆಂದರೆ ಕೋರ್ಟಿಗೆ ತಾವು ಅರ್ಜಿ ಹಾಕಿ, ಇದು ಮಾಡುವುದಕ್ಕೆ ಸಾಧ್ಯವಿಲ್ಲ ಡಿಲಿಮಿಟೇಷನನ್ನು, ಆತುರಾತುರವಾಗಿ ತಂದರೆ ಜನಗಳಿಗೆ ಅನ್ಯಾಯವಾಗುತ್ತದೆ. ಇಡೀ ಕರ್ನಾಟಕಕ್ಕೆ ಸಂಬಂಧಪಟ್ಟ ವಿಷಯವಾಗಿರುವುದರಿಂದ ಡೀಲಿಮಿಟೇಷನ್ ಅನ್ನು ಸರಿಯಾಗಿ ಆಗಿ ಎಲ್ಲಾ ತಕರಾರು ಅರ್ಜಿಗಳನ್ನು ವಿಚಾರಣೆ ಮಾಡಿ ಚಿಂತನೆ ಮಾಡಬೇಕಾಗಿದ್ದರಿಂದ ಇದು ಮಾಡುವುದಕ್ಕಾಗುವುದಿಲ್ಲ, ಅರ್ಜಿ ಬೇಕಾದರೆ ತಾವು ಕೋರ್ಟಿನಲ್ಲಿ ಹಾಕಿ ಇನ್ನೂ ಸ್ವಲ್ಪ ಟೈಮನ್ನು ಕೇಳಿ. ಯಾವ ಕೋರ್ಟೂ ಸಹ ಡಿಲಿಮಿಟೇಷನ್ ಆಗದೆ ಚುನಾವಣೆ ಮಾಡಿ ಎಂದು ಹೇಳುವುದಿಲ್ಲ. ಸುಪ್ರೀಂಕೋರ್ಟಿನಲ್ಲಿ ಕೂಡ ಜಿಲ್ಲಾಪರಿಷತ್ ಮಂಡಲಪಂಚಾಯ್ತಿ ತೀರ್ಮಾನವಾದಾಗ ನೀವು ಅಂಡರ್ ಟೇಕಿಂಗ್ ಕೊಟ್ಟಿರಿ, ಡಿಸೆಂಬರ್‌ನೊಳಗೆ ಮಾಡುತ್ತೇವೆಂದು ಹೇಳಿದಿರಿ. ಆದರೆ ಮಾಡುವುದಕ್ಕಾಗದ ಸಂದರ್ಭದಲ್ಲಿ ಮತ್ತೊಮ್ಮೆ ಅರ್ಜಿ ಹಾಕಿ ಟೈಂ ತೆಗೆದುಕೊಂಡು ಏಪ್ರಿಲ್‌ನಲ್ಲಿ ಮಾಡುತ್ತೇವೆಂದು ಹೇಳಿದಿರಿ ಅದೇ ಪ್ರಕಾರ ಈಗಲೂ ಕಾಲ ಮಿಂಚಿಲ್ಲ, ಸರಿಯಾಗಿ ಆಗಬೇಕಾದರೆ ಪ್ರಭಾಪ್ರಭುತ್ವದ ರಕ್ಷಣೆಯಾಗಬೇಕಾದರೆ ಡಿಲಿಮಿಟೇಷನ್ ಮುಖ್ಯವಾಗಿರುವುದರಿಂದ ಮೀಸಲಾತಿ ಮಹಿಳೆಯರಿಗೆ ಎಲ್ಲಿ ಹಿಂದುಳಿದವರ್ಗಕ್ಕೆ ಎಲ್ಲಿ ಎಸ್‌ಸಿಗಳಿಗೆ ಎಲ್ಲಿ ಎಸ್‌ಟಿಗಳಿಗೇ ಎಲ್ಲಿ ಇದು ಜನಸಂಖ್ಯೆಯ ಆಧಾರದಮೇಲೆ ಆಗಬೇಕಾಗುತ್ತದೆ ಅದನ್ನೂ ಸರ್ವೆ ಮಾಡಿ ಸೆನ್ಸಸ್ ವರದಿ ಪ್ರಕಾರ ತೆಗೆದುಕೊಂಡು ಇದು ಮುಡಬೇಕಾಗುತ್ತದೆ. ಭೌಗೋಳಿಕವಾಗಿ ಇದು ಕಂಜೀನಿಯಲ್ ಪಾರ್ಟ್ ಆಗುತ್ತದೆಯೇ ಇಲ್ಲವೇ ಅದನ್ನೂ ನೋಡಬೇಕಾಗುತ್ತದೆ ಆ ಕಾರಣದಿಂದ ಕೇವಲ 30 ದಿವಸ ಕೊಡುತ್ತೇವೆಂದು ನೀವು ಹೇಳಿದರೆ ಇದರಿಂದ ಸರಿಯಾಗಿ ಡೀಲಿಮಿಟೇಷನಾಗುತ್ತದೆಂದು ನನಗನ್ನಿಸುವುದಿಲ್ಲ. ಆದ್ದರಿಂದ ಮೊದಲು ಇದನ್ನು ವಿತ್‌ಡ್ರಾ ಮಾಡಿ, ಮೊದಲು ಆರ್ಡಿನೆನ್ಸ್‌ನಲ್ಲಿ 2 ತಿಂಗಳೇನಿದೆ ಅದನ್ನೇ ಇಟ್ಟುಕೊಂಡು ಡೀಲಿಮಿಟೇಷನ್ ನೋಟಿಫಿಕೇಷನ್ ಇಷ್ಯೂ ಮಾಡಿ ಎರಡು ತಿಂಗಳ ಕಾಲಾವಕಾಶ ಕೊಟ್ಟು ಜನರ ತಕರಾರು ತಿಳಿದುಕೊಂಡು ನಂತರ ಮಾಡುವುದು ಸೂಕ್ತ ಇಲ್ಲದೇ ಇದ್ದರೆ ಇದರಿಂದ ಹೆಚ್ಚು ಅನಾನುಕೂಲವಾಗುತ್ತದೆ. ಹೆಚ್ಚು ಜನ ಕೋರ್ಟ್‌ಗಳಿಗೆ ಹೋಗುತ್ತಾರೆ. ಅಂದರೆ ಲಾಯರ್‌ಗಳಿಗೂ ಕೆಲಸ

ಜಾಸ್ತಿ ಮಾಡಿ ಕೊಡುತ್ತೀರಿ, ಅದರ ಬದಲು ಸಾರ್ವಜನಿಕರಿಗೆ ಅನುಕೂಲವಾಗುವ ಕೆಲಸ ತಾವು ಮಾಡಿ ಎಂದು ಇದನ್ನು ವಿಥ್‌ಡ್ರಾ ಮಾಡಿ ಎಂದು ತಮ್ಮನ್ನು ಕೇಳಿಕೊಳ್ಳುತ್ತೇನೆ ತಾವು ಮಾಡುತ್ತೀರ ಅಂತ ನಾನು ಅಂದುಕೊಂಡಿದ್ದೇನೆ.

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಚಿಕ್ಕಮಗಳೂರು) : ಅಧ್ಯಕ್ಷರೇ, ನಗರಾಭಿವೃದ್ಧಿ ಸಚಿವರು ನಗರಸಭೆ ಪುರಸಭೆಗಳ ಚುನಾವಣೆ ನಡೆಸುವ ಬಗ್ಗೆ ಈಗ ತಂದಿರುವ ಬಿಲ್ ಬಗ್ಗೆ ಮಾತನಾಡುವುದಾದರೆ ಅನೇಕ ದಿನಗಳಿಂದ ದಿನಪತ್ರಿಕೆಗಳಲ್ಲಿ ಸಚಿವರು ಅನೇಕ ಹೇಳಿಕೆಗಳನ್ನು ಮಾಡಿದ್ದಾರೆ. ಅದರಲ್ಲಿ ಅವರು ಕ್ಷೇತ್ರ ವಿಂಗಡಣೆ ಬಗ್ಗೆ ಆಗಲೇ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟು ಅವರು ಡಿಲಿಮಿಟೇಷನ್ ಬಗ್ಗೆ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ ಎನ್ನುವ ಬಗ್ಗೆಯೂ ರಾಜ್ಯ ಮಟ್ಟದ ಪತ್ರಿಕೆಗಳಲ್ಲಿ ಹೇಳಿಕೆ ಮಾಡಿದ್ದಾರೆ. ಆದರೆ ಜಿಲ್ಲಾಧಿಕಾರಿಗಳ ಕಚೇರಿಗೆ ಹೋಗಿ ನಾವು ನಗರಾಭಿವೃದ್ಧಿ ಇಲಾಖೆಯಿಂದ ಬಂದಿರುವ ಪ್ರಸ್ತಾವನೆಗಳೇನು ಎಂದು ಕೇಳಿದಾಗ ಇಲ್ಲಿಯವರೆಗೂ ನಮಗೆ ಯಾವ ಪ್ರಸ್ತಾವನೆಯೂ ಬಂದಿಲ್ಲವೆಂಬ ಅಭಿಪ್ರಾಯವನ್ನು ಜಿಲ್ಲಾಧಿಕಾರಿಗಳು ವ್ಯಕ್ತಪಡಿಸಿದ್ದಾರೆ. ಕ್ಷೇತ್ರ ವಿಂಗಡಣೆ ಎಂಬುದು ಒಂದು ಗಂಭೀರ ವಿಚಾರ. ಅದೂ ಸ್ಥಳೀಯ ಚುನಾವಣೆ ನಡೆಯುವ ಸಂದರ್ಭದಲ್ಲಿ ಸ್ಥಳೀಯ ಶಾಸಕರಿರಬಹುದು ಜನಪ್ರತಿನಿಧಿಗಳಿರಬಹುದು ಜೊತೆಗೆ ಸಂವಿಧಾನದ 74ನೇ ತಿದ್ದುಪಡಿ ಪ್ರಕಾರ ನನ್ನ ತಿಳಿವಳಿಕೆಯಂತೆ ಈ ಕಾನೂನಿನ ಅನ್ವಯ 6ತಿಂಗಳೊಳಗೆ ಚುನಾವಣೆ ಮಾಡಬೇಕಾಗುತ್ತದೆ. ಆದರೆ ಇನ್ನೂ 6 ತಿಂಗಳು ಮುಂದೂಡಲು ಸರ್ಕಾರ ಯಾವ ರೀತಿ ಕಾರ್ಯಕ್ರಮ ಹಾಕಿಕೊಂಡಿದೆ ಎಂಬ ಬಗ್ಗೆ ಮಂತ್ರಿಗಳು ಉತ್ತರ ಕೊಡಬೇಕಾಗುತ್ತದೆ. ಎರಡನೆಯದಾಗಿ ಡಿಲಿಮಿಟೇಷನ್ ಸಂದರ್ಭದಲ್ಲಿ, ಅನೇಕ ಸದಸ್ಯರು ಮಾತನಾಡಿದ್ದಾರೆ, ಇದು ತುರ್ತಾಗಿ ಮಾಡುವಂತಹ ಮಸೂದೆ ಅಥವಾ ಕಾನೂನಲ್ಲ, ಇದಕ್ಕೆ ಜನಸಂಪರ್ಕವಿಟ್ಟುಕೊಂಡು ಸ್ಥಳೀಯ ನಗರಸಭೆ ಅಥವಾ ಪುರಸಭೆಗಳಲ್ಲಾಗಲಿ ಅಥವಾ ನಾಲ್ಕೈದು ಕ್ಯಾಟಗಿರಿ ಏನು ಈಗ ಮಾಡಿದ್ದಾರೆ 10 ಸಾವಿರಕ್ಕಿಂತ 20 ಸಾವಿರ ಜನಸಂಖ್ಯೆ ಇರುವ ಸಂದರ್ಭದಲ್ಲಿ ನಾವು ಟೌನ್ ಪಂಚಾಯ್ತಿ ಎಂದು ಮಾಡುತ್ತೇವೆ, 20 ಸಾವಿರದಿಂದ 50 ಸಾವಿರದವರೆಗೆ ಜನಸಂಖ್ಯೆ ಇರುವಾಗ ಅದಕ್ಕೆ ಟೌನ್ ಮುನಿಸಿಪಾಲಿಟಿ ಎಂದು ಮಾಡುತ್ತೇವೆ. 50 ಸಾವಿರದಿಂದ 2 ಲಕ್ಷದವರೆಗೆ ಇದ್ದರೆ ಅದಕ್ಕೆ ಸಿಟಿ ಮುನಿಸಿಪಲ್ ಕೌನ್ಸಿಲ್ ಎಂದು ಮಾಡುತ್ತೇವೆ ಅದಕ್ಕಿಂತ ಮೀರಿದಾಗ ನಗರಪಾಲಿಕೆ ಮಾಡುತ್ತೇವೆಂದು ಹೇಳಿದ್ದಾರೆ. ತರಾತುರಿಯಲ್ಲಿ ಈ ಬಿಲ್ ತಂದು ನಾವು ಕ್ಷೇತ್ರವಿಂಗಡಣೆ ಮಾಡಿ ಚುನಾವಣೆ ನಡೆಸಿಬಿಡುತ್ತೇವೆ ಎಂದರೆ ನನಗನ್ನಿಸುತ್ತದೆ ಸರ್ಕಾರ ಬಹಳ ಆತುರದಲ್ಲಿದೆ ಅನ್ನಿಸುತ್ತದೆ. ಆದ್ದರಿಂದ ಇವರು ಡಿಲಿಮಿಟೇಷನ್ ಮಾಡುವಾಗ ಚುನಾಯಿತ ಪ್ರತಿನಿಧಿಗಳ ಸಮ್ಮುಖದಲ್ಲಿ ಜೊತೆಗೆ 74ನೇ ತಿದ್ದುಪಡಿಯಲ್ಲಿ ಸ್ಥಳೀಯ ಸಂಘಸಂಸ್ಥೆಗಳ ಪದಾಧಿಕಾರಿಗಳನ್ನೂ ಸಹ ನೇಮಕ ಮಾಡಲು ಅವಕಾಶವಿರುವುದರಿಂದ ಅವರ ಸಹಕಾರವನ್ನೂ ತೆಗೆದುಕೊಂಡು ಈ ಕಾರ್ಯದಲ್ಲಿ ಸರ್ಕಾರ ತೊಡಗಬೇಕು. ತರಾತುರಿಯಲ್ಲಿ ಡಿಲಿಮಿಟೇಷನ್ ಮಾಡುತ್ತೇವೆಂದರೆ ಸರಿಹೋಗುವುದಿಲ್ಲ, ಇದರ ಬಗ್ಗೆ ಸರ್ಕಾರ ಸಂಪೂರ್ಣ ವಿಚಾರ ಮಾಡಿ ಡಿಲಿಮಿಟೇಷನ್ ಮಾಡುವಾಗ ಸ್ಥಳೀಯ ಜನಸಂಪರ್ಕವಿಟ್ಟುಕೊಂಡು ಮಾಡಬೇಕೆಂದು ಈಗ ತಂದಿರುವ ಬಿಲ್‌ನ್ನು ಮಾನ್ಯಮಂತ್ರಿಗಳು ವಾಪಸ್ ತೆಗೆದುಕೊಂಡು ಸ್ಥಳೀಯ ಅಧಿಕಾರಿಗಳಿಗೆ ಆ ಅಧಿಕಾರ ಕೊಟ್ಟು ಸ್ಥಳೀಯ ಜನಪ್ರತಿನಿಧಿಗಳಿಗೆ ಆಹ್ವಾನಕೊಟ್ಟು ಮಾಹಿತಿ ಸಂಗ್ರಹಿಸಿದ ನಂತರ ಈ ಬಿಲ್‌ನ್ನು ಸಭೆಯಲ್ಲಿ ಮಂಡಿಸಬೇಕೆಂದು ಸಚಿವರಲ್ಲಿ ನಾನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) : ಉಪಾಧ್ಯಕ್ಷರೇ, ಇದು ಡಿಲಿಮಿಟೇಷನ್ ಅಲ್ಲ, ಇದು classification of urban areas. ಸಿಟಿ ಮುನಿಸಿಪಾಲಿಟಿ ಯಾವುದಿರಬೇಕು, ಟೌನ್ ಮುನಿಸಿಪಾಲಿಟಿ ಅಂದರೆ ಯಾವುದಿರಬೇಕು ಟೌನ್

ಪಂಚಾಯಿತಿ ಯಾವುದಿರಬೇಕು ಈ ಕ್ಲಾಸಿಫಿಕೇಷನ್‌ಗಾಗಿ ಆಕ್ಷೇಪಣೆ ಕರೆದಿದ್ದುದು ಡಿಲಿಮಿಟೇಷನ್ ಸಲುವಾಗಿ ಅಲ್ಲ, ಮಾನ್ಯ ಸದಸ್ಯರು ತಪ್ಪು ತಿಳಿದುಕೊಂಡಿದ್ದಾರೆ, ಅದರ ಸಲುವಾಗಿ ಒಂದು ತಿಂಗಳು ಸಮಯ ಕೊಟ್ಟಿದೆ. ಮೊದಲಿನ ಕಾನೂನು ಪ್ರಕಾರ 60 ದಿವಸ ಟೈಂ ಕೊಟ್ಟಿತ್ತು 74ನೇ ತಿದ್ದುಪಡಿ ಪ್ರಕಾರ 6 ತಿಂಗಳಲ್ಲಿ ಚುನಾವಣೆ ಮಾಡಬೇಕೆಂದು ಪ್ರಾವಿಷನ್ ಇದೆ. ಹಾಗೆ ಮಾಡಬೇಕಾದರೆ ನಾವು ಸ್ವಲ್ಪ ಸ್ಪೀಡಾಗಿ ಹೋಗಬೇಕಾಗುತ್ತದೆ. ಆ ದೃಷ್ಟಿಯಿಂದ 60 ದಿವಸ ಲಿಮಿಟೇಷನ್ ಏನಿದೆ ಅದು ಕ್ಷೇತ್ರ ವಿಂಗಡಣೆ ಸಲುವಾಗಿ ಅಲ್ಲ, ಯಾವ ತರಹದ ಬಾಡಿ ಇರಬೇಕು ಎಂದು ವರ್ಗೀಕರಣದ್ದು it could be town municipality or town panchayat or city municipality.

ಇದರ ಬಗ್ಗೆ ನಾವು ಸರ್ಕಾರದ ವತಿಯಿಂದ ಈಗಾಗಲೇ ಅಧಿಸೂಚನೆ ಹೊರಡಿಸಿದ್ದೇವೆ. ಅಬ್ಜೆಕ್ಷನ್ಸ್ ಕಾಲ್‌ಫಾರ್ ಮಾಡಿದ್ದೇವೆ, ಈಗಾಗಲೇ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಡೈರೆಕ್ಷನ್ಸ್ ಕೊಟ್ಟು ಎಲ್ಲಾ ಸ್ಥಳೀಯ ಸಚಿವರು ಶಾಸಕರು ಸ್ಥಳೀಯ ನಾಯಕರು ಯಾರಿರುತ್ತಾರೆ ಅಂಥವರನ್ನು ಕನ್‌ಸಲ್ಟ್ ಮಾಡಿ ಪ್ರಪೋಸಲ್ಸ್ ಕಳುಹಿಸಿ ಎಂದಿದ್ದೆವು. ಇದಕ್ಕಿಂತ ಮೊದಲೇ ಬಂದಿದೆ. ಮತ್ತೊಮ್ಮೆ ಡೈರೆಕ್ಷನ್ ಕೊಟ್ಟನಂತರ ಎಲ್ಲಾ ಕಡೆಯಿಂದ ಪ್ರಪೋಸಲ್ಸ್ ಬಂದಿವೆ, ಅಬ್ಜೆಕ್ಷನ್ಸ್ ಸಲುವಾಗಿ 60 ದಿವಸದ ಸಲುವಾಗಿ 30 ದಿವಸಕ್ಕೆ ಇಳಿಸಿದ್ದೇವೆ. 2 ತಿಂಗಳಲ್ಲಿ ಹಿಯರಿಂಗ್ ಆಗುವುದಕ್ಕೆ ಸಾಧ್ಯವಿಲ್ಲವೆಂದರೆ 6 ತಿಂಗಳಲ್ಲೂ ಆಗಲೂ ಸಾಧ್ಯವಿಲ್ಲ, ಅಂತೂ ಚುನಾವಣೆಯೇ ಆಗುವುದಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಇದು ಡಿಲಿಮಿಟೇಷನ್ ಅಲ್ಲವೆಂದು ನೀವು ಹೇಳಿ, ಇದು ಟೌನ್ ಪಂಚಾಯತಿ ಯಾವುದಾಗಬೇಕು ಮುನಿಸಿಪಾಲಿಟಿ ಯಾವುದಾಗಬೇಕು ಅದರ ಬಗ್ಗೆ ಮಾತ್ರ ಎಂದು ಹೇಳುತ್ತೀರಿ, ಹಾಗಿದ್ದರೆ ನೀವು ಪಬ್ಲಿಷ್ ಮಾಡಿರಬೇಕಲ್ಲಾ? ಮಾಡಿದ್ದರೆ ಯಾವಾಗ ಮಾಡಿದ್ದಿರಿ, ಮಾಡಿ ಒಂದು ತಿಂಗಳು ಆಗಿಹೋಗಿದ್ದರೆ this becomes redundant. ಈ ತಿದ್ದುಪಡಿ ಬೇಕಾಗುವುದಿಲ್ಲ ಅಥವಾ ಇನ್ನೂ ಟೈಮಿತ್ತೆಂದರೆ ಅದನ್ನು ರೆಡ್ಯೂಸ್ ಮಾಡಲು ಬೇಕಾಗುತ್ತದೆ. ಆದ್ದರಿಂದ ಯಾವಾಗ ಪಬ್ಲಿಷ್ ಮಾಡಿದ್ದೀರಿ ಅಥವಾ ಇನ್ನು ಮುಂದೆ ಮಾಡುತ್ತೀರಾ ಎಂಬ ಮಾಹಿತಿಯನ್ನು ದಯಮಾಡಿ ತಿಳಿಸಿದರೆ ಅನುಕೂಲವಾಗುತ್ತದೆ.

ಶ್ರೀ ವೈಜನಾಥ್ ಪಾಟೀಲ್ : ಇದಕ್ಕೆ ಸಮಯವಿಲ್ಲವೆಂದು ಒಂದು ಸುಗ್ರೀವಾಜ್ಞೆ ಹೊರಡಿಸಿದ್ದೇವೆ ಆ ಆರ್ಡಿನೆನ್ಸ್ ರಿಪ್ಲೇಸ್ ಮಾಡುವ ಸಲುವಾಗಿ, ಮೊದಲಿನದು ಆಕ್ಟ್ ಪ್ರಕಾರ 60 ದಿವಸ ಟೈಂ ಲಿಮಿಟೇಷನ್ ಉಂಟು. ಈಗ 60ಕ್ಕೆ ಬದಲಾಗಿ 30ಕ್ಕೆ ಇಳಿಸುತ್ತಿದ್ದೇವೆ.

ಶ್ರೀ ವೈ. ರಾಮಕೃಷ್ಣ : ಇದು ಆಲೋಚನೆ ಮಾಡಬೇಕಾದ ವಿಚಾರ. When it has to be used - ordinance? Under extraordinary circumstances when the session is not there. ಒಪ್ಪಿಕೊಳ್ಳೇನೆ, 60 ದಿವಸ ಇರುವುದನ್ನು 30 ದಿವಸಕ್ಕೆ ತರಬೇಕೆಂದರೆ ಇದು ನಮಗೆ ಅರ್ಥವಾಗತ್ತದೆ. ಇಷ್ಟು ಪಾಪ್ಯುಲೇಷನ್‌ಗೆ ಇಂತಹ ವಿಂಗಡಣೆ, ಅದಕ್ಕೆ ಅಬ್ಜೆಕ್ಷನ್ಸ್ ಕಾಲ್‌ಫಾರ್ ಮಾಡಬಾರದೇ? People are anxious to know. ಅದಕ್ಕೆ ಟೈಂ ಸಾಕಾಗುವುದಿಲ್ಲ ಎಂದು ನಾನು ಹೇಳಿದ್ದುದು.

ಶ್ರೀ ಸಿ.ಆರ್. ಸಗೀರ್ ಅಹಮ್ಮದ್ : ಈಗ ಮಾನ್ಯ ಸಚಿವರು ಹೇಳುತ್ತಾರೆ, ಪುರಸಭೆ ನಗರಸಭೆಗಳ ಸರಹದ್ದನ್ನು ನಿಗದಿಪಡಿಸುವ ಬಗ್ಗೆ ಸಮಯ ಕೇಳಲಿಕ್ಕಾಗಿ ಈ ಬಿಲ್ ತಂದಿದ್ದೇವೆ ಎಂದು. ನನ್ನ ತಿಳಿವಳಿಕೆಯಂತೆ, ಅಧಿಸೂಚನೆ ಬಗ್ಗೆ ಯಾವ ಜಿಲ್ಲಾಧಿಕಾರಿಯೂ ಚುನಾಯಿತ ಪ್ರತಿನಿಧಿಗಳಾಗಲಿ ಸ್ಥಳೀಯ ಸಂಸ್ಥೆಗಳ ಪದಾಧಿಕಾರಿಗಳನ್ನಾಗಲಿ

ಅವರ ಜೊತೆ ಚರ್ಚೆಯಂತೂ ಮಾಡಲಿಲ್ಲ. ನಮ್ಮ ಜಿಲ್ಲೆಯಲ್ಲಂತೂ ಆಗಿಲ್ಲ. ಈಗ ಮುಖ್ಯವಾಗಿರುವ ವಿಚಾರವೇನೆಂದರೆ ಪುರಸಭೆ ನಗರಸಭೆಗಳ ಸರಹದ್ದು ನಿಗದಿಪಡಿಸುವ ಬಗ್ಗೆ ಅನೇಕ ಹಳ್ಳಿಗಳನ್ನು ಈ ಅಧಿಸೂಚನೆಯಲ್ಲಿ ಸೇರಿಸಿಕೊಂಡಿರುವ ಉದಾಹರಣೆಗಳು ಎಲ್ಲಾ ಗೌರವಾನ್ವಿತ ಸದಸ್ಯರ ಗಮನಕ್ಕೆ ಬಂದಿವೆ. ಅಂದರೆ ಅನೇಕ ಹಳ್ಳಿಗಳು ರಾಜ್ಯಾಂಗದ 73ನೇ ತಿದ್ದುಪಡಿ ಪ್ರಕಾರ ನಗರಸಭಾ ವ್ಯಾಪ್ತಿಗಾಗಲಿ ಪುರಸಭಾ ವ್ಯಾಪ್ತಿಗಾಗಲಿ ಸೇರಿಸಿಕೊಳ್ಳಲು ಸರ್ಕಾರ ಆಲೋಚನೆ ಮಾಡಿದೆ, ಅದರ ಅಧಿಸೂಚನೆ ಹೊರಡಿಸಲೂ ಇವತ್ತು ಪ್ರಯತ್ನ ಮಾಡುತ್ತದೆ. ಅದರೆ ಆರ್ಥಿಕವಾಗಿ ಅದು ನಗರಸಭೆ ಪುರಸಭೆ ಅಥವಾ ನಗರಪಾಲಿಕೆ ಯಾವುದೇ ಇರಬಹುದು ಅವುಗಳ ಸ್ಥಿತಿ ಉತ್ತಮವಾಗಿಲ್ಲದೇ ಇರುವುದರಿಂದ ಒಂದು ಪಕ್ಷ ಈ ಹಳ್ಳಿಗಳನ್ನು ಸೇರಿಸಿಕೊಂಡರೆ ಅವುಗಳಿಗೆ ನಾಗರೀಕ ಸವಲತ್ತು ದೊರಕಿಸಿಕೊಡುವುದಕ್ಕಾಗಿ ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳೇನು ಎಂದು ಮಾನ್ಯ ಸಚಿವರು ಹೇಳಬೇಕಾಗುತ್ತದೆ. ವಿಸ್ತೀರ್ಣವಾದ ಒಂದು ಬೌಂಡರಿ ನೀವು ಫಿಕ್ಸ್ ಮಾಡಿದಾಗ ರಸ್ತೆ ಕುಡಿಯುವ ನೀರಿನ ವ್ಯವಸ್ಥೆ ಇರಬಹುದು ಬೀದಿ ದೀಪಗಳಿರಬಹುದು, ಏಕೆಂದರೆ ಪುರಸಭೆಗಳ ಆರ್ಥಿಕಪರಿಸ್ಥಿತಿ ಎಷ್ಟು ಹದಗೆಟ್ಟಿದೆ ಎಂಬ ಬಗ್ಗೆ ಸರ್ಕಾರದಲ್ಲಿ ಸಾಕಷ್ಟು ಮಾಹಿತಿ ಇದೆ. ಆದ್ದರಿಂದ ಈ ಬಿಲ್ ಮಂಡಿಸುವ ಮುಂಚೆ ಸಚಿವರು ಈ ವಿಚಾರಗಳಿಗೂ ಗಮನಕೊಡಬೇಕು ಮುಖ್ಯವಾಗಿ ಗ್ರಾಮಪಂಚಾಯ್ತಿ ವ್ಯಾಪ್ತಿಯಲ್ಲಿರುವ ಗ್ರಾಮಗಳು ಪುರಸಭೆ ನಗರಸಭೆಗಳಿಗೆ ಒಳಪಡಿಸಿಕೊಳ್ಳುವ ಪ್ರಯತ್ನ ಮಾಡಿದ್ದೀರಿ ಅದಕ್ಕೆ ಯಾವರೀತಿಯಲ್ಲಿ ಅಧಿಸೂಚನೆ ಮಾಡುತ್ತೀರಿ, ಏಕೆಂದರೆ ಮುಂದಿನ ದಿನಗಳಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಯುವಾಗ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಹಳ್ಳಿ ಮತದಾರರು ಗ್ರಾಮಪಂಚಾಯ್ತಿತಿಯಲ್ಲೂ ಮತಗಳನ್ನು ಚಲಾಯಿಸಿದ ನಂತರ ಅವರು ನಗರಸಭೆ ಪುರಸಭೆ ವ್ಯಾಪ್ತಿಯಲ್ಲೂ ಮತ ಚಲಾಯಿಸುವ ಹಕ್ಕು ಯಾವ ಕಾನೂನಿನಂತೆ ದೊರೆಯುತ್ತದೆ ಇದು ಒಂದನೆಯದು, ಎರಡನೆಯದು ಗ್ರಾಮಪಂಚಾಯಿತಿಯಲ್ಲಿ ಬರುವ ಹಳ್ಳಿಗಳನ್ನು ಬಿಟ್ಟು ಇವರೇನಾದರೂ ಪುರಸಭಾ ವ್ಯಾಪ್ತಿ ಮಾಡುತ್ತಾರೋ ಅಥವಾ ಗ್ರಾಮಪಂಚಾಯಿತ್ತಿಯಿಂದ ಸೇರಿಸಿಕೊಳ್ಳುವ ಹಳ್ಳಿಗಳೇನಿವೆ ಅವನ್ನು ಗ್ರಾಮಪಂಚಾಯಿತಿ ವ್ಯಾಪ್ತಿಯಿಂದ ಕೈಬಿಡುತ್ತೀರೋ ಎನ್ನುವ ಮಾಹಿತಿ ಸದನಕ್ಕೆ ಕೊಡಬೇಕು.

ಶ್ರೀ ವೈಜನಾಥ ಪಾಟೀಲ್ : ಅಧ್ಯಕ್ಷರೇ, ಆಗಸ್ಟ್ ತಿಂಗಳಲ್ಲೇ ಅಧಿಸೂಚನೆ ಎಲ್ಲಾ ಕಡೆ ಜಾರಿಯಾಗಿದೆ, ಅಬ್ಜೆಕ್ಷನ್ಸ್ ಸಲುವಾಗಿ ಇನ್ನೂ ಸಮಯ ಇದೆ. ಕೆಲವು ಕಡೆ ಕೆಲವು ಹಳ್ಳಿಗಳು ಮುನಿಸಿಪಾಲಿಟಿಯಲ್ಲೋ ಟೌನ್ ಪಂಚಾಯಿತ್ತಿಗೋ ಸೇರಬೇಕೆಂದು ಇಚ್ಛೆ ಇದ್ದರೆ ಅಂಥವನ್ನೂ ಸೇರಿಸಲಾಗಿದೆ. ವಿರೋಧ ಯಾರು ಮಾಡಿದ್ದಾರೆ ಅವರಿಗೆ ಕೂಡ ಅವಕಾಶ ಕೊಡಲಾಗಿದೆ. ತಮ್ಮ ಅಬ್ಜೆಕ್ಷನ್ಸೇನಾದರೂ ಇದ್ದರೆ ಅದಕ್ಕೆ 30 ದಿವಸ ಅವಕಾಶ ಇದೆ. ಶಿವಮೊಗ್ಗ ಭದ್ರಾವತಿ ಒಂದು ಸಮಸ್ಯೆ ಇತ್ತು. ಈಗ ಎರಡೂ ಕೂಡ ಒಂದು ಕಾರ್ಪೊರೇಷನಾಗಿದೆ. ಅವುಗಳ ಮಧ್ಯೆ ಸುಮಾರು 35ಕ್ಕಿಂತ ಹೆಚ್ಚು ಹಳ್ಳಿಗಳು ಇದ್ದವು. ಅವನ್ನು ಈಗ ಬೇರೆ ಮಾಡಿ ಅಲ್ಲಿ ಗ್ರಾಮ ಪಂಚಾಯ್ತಿ ಚುನಾವಣೆಗಳು ನಡೆಯುತ್ತಿವೆ. ಇಂಥದ್ದು ಗೆಜೆಟ್ ನೋಟಿಫಿಕೇಷನ್ನಾಗಿದೆ. ಆಗಸ್ಟ್‌ನಲ್ಲಿ ಪುರಸಭೆಗಳೆಷ್ಟಿವೆ ಟೌನ್ ಪಂಚಾಯ್ತಿ ಯಾವುದು ಮಾಡಬೇಕೆಂದು ಮೊದಲ ಸರ್ಕಾರದಿಂದಲೇ ಪ್ರಪೋಸಲ್ ಬಂದಿವೆ ಅದರೂ ನಮ್ಮ ಸರ್ಕಾರ ಬಂದಮೇಲೆ ಪುನಃ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ಕೊಟ್ಟು ಪ್ರಪೋಸಲ್ ಕಳುಹಿಸಿದ್ದೇವೆ. ಅವರೂ ಎಲ್ಲರನ್ನು ಕನ್‌ಸಲ್ಟ್ ಮಾಡಿ ಕಳುಹಿಸಿದ್ದಾರೆ ಬಹಳಷ್ಟು ಎಲೆಕ್ಟೆಡ್ ಪ್ರತಿನಿಧಿಗಳನ್ನು ಜಿಲ್ಲಾಮಂತ್ರಿಗಳನ್ನು ಕನ್‌ಸಲ್ಟ್ ಮಾಡಿ ಕಳುಹಿಸಿದ್ದಾರೆ. ಹಾಗಿದ್ದೂ ಏನಾದರೂ ಆಕ್ಷೇಪಣೆಗಳಿದ್ದಲ್ಲಿ ಇನ್ನೂ ಕೂಡ ಅದಕ್ಕೆ ಸಮಯವಿದೆ. ಅದಕ್ಕೆ ಹಿಯರಿಂಗ್ ಆಗುತ್ತದೆ, ಇದು ಸಂವಿಧಾನದ ಆಬ್ಲಿಗೇಷನ್ ಇದೆ, 6 ತಿಂಗಳಲ್ಲಿ ಚುನಾವಣೆ ಮಾಡಬೇಕು. ಅದಕ್ಕಿಂತ ಹೆಚ್ಚಿನ ಅವಧಿಗೆ ಆಡಳಿತಾಧಿಕಾರಿಗಳನ್ನು ಇಡಬಾರದು ಎಂದು. ಈಗಾಗಲೇ ಆಡಳಿತಾಧಿಕಾರಿಗಳನ್ನು ನಾವು ಮಾಡಿದ್ದೇವೆ,

ಚುನಾವಣೆ ನವೆಂಬರ್‌ಗಿಂತ ಮೊದಲು ಮಾಡಬೇಕಾದರೆ 30 ದಿವಸಕ್ಕೆ ಅವಧಿ ಇಳಿಸಬೇಕಾಗುತ್ತದೆ. ಚುನಾವಣೆ ನಾವು ಮಾಡುವುದಿಲ್ಲ ಹೀಗೇ ನಡೆಯಲಿ ಎಂದರೆ ಆ ಪ್ರಶ್ನೆ ಬೇರೆ, ನಮಗೆ ಚುನಾವಣೆ ಆದಷ್ಟು ಬೇಗ ಮಾಡಬೇಕಾಗಿದೆ. ನವೆಂಬರ್‌ನಲ್ಲಿ ಚುನಾವಣೆ ಮಾಡಬೇಕಾಗಿರುವ ದೃಷ್ಟಿಯಿಂದ ಈ ತಿದ್ದುಪಡಿ ತರಲಾಗಿದೆ. ಅದಕ್ಕಾಗಿ ಮಾನ್ಯ ಸದಸ್ಯರಿಗೆಲ್ಲಾ ಈ ರಿಕ್ವೆಸ್ಟ್ ಮಾಡುತ್ತಿದ್ದೇನೆ.

ಶ್ರೀ ಸಿ.ಆರ್. ಸಗೀರ್ ಅಹ್ಮದ್ : ಅಧ್ಯಕ್ಷರೇ, ನನ್ನ ಪ್ರಶ್ನೆ ಏನೆಂದರೆ ಅನೇಕ ಹಳ್ಳಿಗಳಿಗೆ ಗ್ರಾಮಪಂಚಾಯಿತಿಗಳು ನಾಗರೀಕ ಸೌಲಭ್ಯ ಒದಗಿಸಿಕೊಡುವುದರಲ್ಲಿ ಯಶಸ್ವಿಯಾಗಿವೆ. ನೀವು ಅಧಿಸೂಚನೆ ಮಾಡಿದ ತಕ್ಷಣವೇ ಪುರಸಭಾ ವ್ಯಾಪ್ತಿಯಲ್ಲಿ ಸೇರಿಕೊಂಡಿದೆ ಎಂದಾಗ ಅವರು ನಾಗರೀಕ ಸೌಲಭ್ಯಗಳಿಂದ ವಂಚಿತರಾಗುವುದಿಲ್ಲವೋ ಎಂದು ನಾನು ಸಚಿವರನ್ನು ಕೇಳುವುದು. ಅದಕ್ಕಾಗಿ ಈ ಮನೆಯಿಂದ ಅವರಿಗೆ ಆಶ್ವಾಸನೆ ಕೊಡಬೇಕು ಅವರಿಗೆ ದೊರೆಯಬೇಕಾದ ನಾಗರೀಕ ಸವಲತ್ತು ನಾವು ಒದಗಿಸಿಕೊಡುತ್ತೇವೆಂದು ಹೇಳಿದರೆ ಆಗಬಹುದು, ಎರಡನೆಯದು ಇವತ್ತು ನಗರ ಪ್ರಾಧಿಕಾರದ ವ್ಯಾಪ್ತಿಗಳನ್ನೂ ಫಿಕ್ಸ್ ಮಾಡಬೇಕಾಗಿದೆ. ಅದಕ್ಕೂ ಸರ್ಕಾರದಿಂದ ಜಿಲ್ಲಾಮಟ್ಟಕ್ಕೆ ಕೆಲವು ಮಾಹಿತಿಗಳು ತಲುಪಿವೆ. ಏಕೆಂದರೆ ನಗರಸಭೆ ನಗರಪ್ರಾಧಿಕಾರ ಅಂದರೆ ಬೇರೆ ಬೇರೆ ಸಂಸ್ಥೆಯಲ್ಲಿ ಅದರ ಅಂಗಸಂಸ್ಥೆ ಅದು.

ಇದರ ಬಗ್ಗೆಯೂ ಮಾನ್ಯ ಮಂತ್ರಿಗಳು ಚಿಂತನೆ ಮಾಡಬೇಕಾಗುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಸೇರಿಸುವಂತಹ ಹಳ್ಳಿಗಳಿಗೆ ನಾಗರೀಕ ಸೌಲಭ್ಯಗಳನ್ನು ಒದಗಿಸಿಕೊಡುವ ಬಗ್ಗೆ ಇವರೇನು ನಿರ್ಣಯಗಳನ್ನು ಮಾಡಿದ್ದಾರೆಂಬ ಬಗ್ಗೆ ಹೇಳಬೇಕಾಗುತ್ತದೆ. ಎಲ್ಲರ ಜೊತೆಯಲ್ಲಿ ಚರ್ಚೆ ನಡೆಸಿ ನಿರ್ಣಯ ಮಾಡಿದ್ದೇವೆಂದು ಹೇಳುತ್ತಾರೆ. ಯಾವ ಗ್ರಾಮ ಪಂಚಾಯತಿಯವರು ಈ ಹಳ್ಳಿಗಳನ್ನು ನಾವು ನಗರ ಸಭಾ ವ್ಯಾಪ್ತಿಗೆ ಸೇರಿಸಿಕೊಳ್ಳಲು ನಮ್ಮ ಅಭ್ಯಂತರವಿಲ್ಲವೆಂದು ಒಂದು ನಿರ್ಣಯ ಮಾಡಿರುವುದನ್ನು ನಾನಂತೂ ನೋಡಿಲ್ಲ. ನಾಳೆ ಆ ಭಾಗದ ಹಳ್ಳಿಯ ಜನರು ನಾಗರೀಕ ಸೌಲಭ್ಯಗಳಿಂದ ವಂಚಿತರಾಗುತ್ತಾರೆಂಬ ಭಯದಿಂದ ನಾನು ಮಂತ್ರಿಗಳನ್ನು ಈ ಪ್ರಶ್ನೆ ಕೇಳುತ್ತಿದ್ದೇನೆ.

ಶ್ರೀಮತಿ ಪ್ರಮೀಳಾ ಎಸ್. ನೇಸರ್ಗಿ : 7-7-95ರಲ್ಲಿ ಆರ್ಡಿನೆನ್ಸ್ ಹೊರಡಿಸಿ 2 ತಿಂಗಳು ಅವಕಾಶ ಕೊಟ್ಟಿದ್ದೇವೆಂದು ಅದರಲ್ಲಿ ಇದೆ. ಅಂದರೆ 7-9-95ಕ್ಕೆ ಮುಗಿದೇ ಹೋಯಿತು. ಈಗ ಆರ್ಡಿನೆನ್ಸ್ ಅನ್ನು ರೀಪ್ಲೇಸ್ ಮಾಡಿ ಆಕ್ಟ್ ತರುತ್ತೇವೆಂದು ಹೇಳುತ್ತಿದ್ದೀರಿ. ಇದು ಕಾನೂನಿನಲ್ಲಿ ಕೂಡ ವಿಪರ್ಯಾಸವಾಗುತ್ತದೆ. ಯೋಚನೆ ಮಾಡಬೇಕು. ನೀವು ಯಾವ ರೀತಿ ಮಾಡುತ್ತೀರಿ? ಫ್ರೆಷ್ ಆಗಿ ಬೇರೆ ಕಾನೂನು ತರುವ ಹಾಗೆ ಇದ್ದರೆ ತನ್ನಿ. ರೀಪ್ಲೇಸ್ ಮಾಡುವುದಕ್ಕೆ ತರುತ್ತೇವೆಂದರೆ ಆಗುವುದಿಲ್ಲ, ಈಗ ಹೊಸದಾಗಿ ಕಾನೂನು ತಂದು ಅಮೆಂಡ್ ಮಾಡಿ ಇಲ್ಲಿ ಇಡಿ. ಹೊಸದಾಗಿ ತಂದರೆ ಅದಕ್ಕೆ ಮೂರು ತಿಂಗಳು ಸಮಯ ಸಿಗುತ್ತದೆ. ಹಾಗೆ ಮಾಡುವುದಾದರೆ ಈ ಸದನ ಒಪ್ಪಿಗೆ ಕೊಡಬಹುದು. 7-7-95ರಲ್ಲಿ ಆರ್ಡಿನೆನ್ಸ್ ಹೊರಡಿಸಿದ್ದಾರೆ 7-9-95ಗೆ ಸಮಯ ಮುಗಿದು ಹೋಗುತ್ತದೆ. ಈಗ ನೀವು ತರುವುದರಲ್ಲಿ ಅರ್ಥವಿಲ್ಲ, ತಪ್ಪು ಇರುವುದನ್ನು ನೀವು ತೆಗೆದುಕೊಂಡು ರೀಪ್ಲೇಸ್ ಮಾಡುತ್ತೇವೆಂದರೆ ಆಗುವುದಿಲ್ಲ, ಕಾನೂನಿನಲ್ಲಿ ಆಗದೇ ಇರುವುದನ್ನು ರೀಪ್ಲೇಸ್ ಮಾಡುತ್ತೇವೆಂದರೆ ಆಗುವುದಿಲ್ಲ, ನೀವು ಯಾರನ್ನಾದರೂ ಕನ್ಸಲ್ಟ್ ಮಾಡಿ ಯಾರನ್ನು ಕೇಳಬೇಕೋ ಕೇಳಿ. ಈ ರೀತಿ ಮುಗಿದು ಹೋಗಿರುವ ಆರ್ಡಿನೆನ್ಸ್ ಅನ್ನು ತರುವುದಕ್ಕೆ ಸಾಧ್ಯವಿದೆ ಎಂದು ನಿಮ್ಮ ಅಡ್ವೊಕೇಟ್ ಜನರಲ್‌ರವರು ಒಪೀನಿಯನ್ ಕೊಟ್ಟರೆ ಮಾಡಿ. It is reviving the old ordinance or dead ordinance. ಯೋಚನೆ ಮಾಡಿ ನೋಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಶ್ರೀಮತಿ ಪ್ರಮೀಳಾರವರು ಹೇಳಿದ ಹಾಗೆ ಆರ್ಡಿನೆನ್ಸ್ ಲ್ಯಾಪ್ಸ್ ಆಗಿದೆ. ಅಲ್ಲದೆ ಅದರ ಪೀರಿಯಡ್ ಓವರ್ ಆಗಿದೆ.

ನಾವು 7ನೇ ತಾರೀಖು ಪಾಸ್ ಮಾಡಿಕೊಟ್ಟರೆ ಈ ಕಾನೂನು ಎಫೆಕ್ಟಿನಲ್ಲಿ ಇರುತ್ತಿತ್ತು. ಇವತ್ತು 11ನೇ ತಾರೀಖು 4 ದಿವಸ ಆಗಿದೆ. ಈ ನಾಲ್ಕು ದಿವಸದಲ್ಲಿ ಆದನಂತರ ಟ್ರಾನ್ಸ್‌ಆಕ್ಷನ್ಸ್‌ಗಳ ಗತಿ ಏನು? ಮತ್ತು ಇದು ಮೇಲ್ಮನೆಗೆ ಮತ್ತು ಗವರ್ನರ್ ಹತ್ತಿರ ಅಲ್ಲಿ ಅಪ್ರೂವ್ ಆಗತಕ್ಕಂತಹ ಸಮಯ ಅಂದರೆ ಇನ್ನೂ 4 ದಿವಸವಾಗುತ್ತದೆ. ಈ ಪೀರಿಯಡ್ ಅನ್ನು ಹೇಗೆ ಟ್ರೀಟ್ ಮಾಡುತ್ತೀರಿ? ಒಂದು ಕಡೆ ಆರ್ಡಿನೆನ್ಸ್ ಲ್ಯಾಪ್ಸ್ ಆಯಿತು. 7ನೇ ತಾರೀಖಿನಿಂದ ನಡೆದಂತಹ ಘಟನೆಗಳು ಏನು ಇವೆ ಇವನ್ನು ಈ ಕಾನೂನು ಅಪ್ರೂವ್ ಆಗುವವರೆಗೆ ಯಾವ ರೀತಿ ರ್‍ಯಾಟಿಫೈ ಮಾಡುತ್ತೀರಿ? ಇಲ್ಲವಾದಲ್ಲಿ ನೀವು ಇದನ್ನು ಅಕ್ಸೆಪ್ಟ್ ಮಾಡಿಕೊಂಡು ಇನ್ನೊಂದು ಆರ್ಡಿನೆನ್ಸ್ ಅನ್ನು ತರಬೇಕಾಗುತ್ತದೆ. ಅಲ್ಲಿಯವರೆಗೆ ಇದನ್ನು ಪ್ಲೇಸ್ ಮಾಡುವುದಕ್ಕಾಗುವುದಿಲ್ಲ, ಇದು ಉಪಯೋಗಕ್ಕೆ ಕೂಡ ಬರುವುದಿಲ್ಲ. ಅನೇಕ ಡೀ ಲಿಮಿಟೇಷನ್ ಕಾನ್ಸ್‌ಟಿಟ್ಯುಯೆನ್ಸಿ ಇದೆ. ಉದಾಹರಣೆಗೆ ಗುಲ್ಬರ್ಗ ತೆಗೆದುಕೊಳ್ಳಿ. ಕೆಲವು ಕಡೆಗಳಲ್ಲಿ 750 ಜನ ಮತದಾರರಿಗೆ ಒಂದು ಕೌನ್ಸಿಲರ್. ಇನ್ನೊಂದು ಕಡೆ 7000, 10000 ಮತದಾರರು ಇದ್ದಾರೆ. ಇದಕ್ಕಾಗಿ ನೀವೇ ಒಂದು ಕ್ರೈಟೀರಿಯಾ ಹಾಕಿಕೊಳ್ಳಬೇಕು. ಹೀಗೆ ವ್ಯತ್ಯಾಸ ಇದೆ. ಡೀಲಿಮಿಟೇಷನ್ ಆಫ್ ಕಾನ್ಸ್‌ಟಿಟ್ಯುಯೆನ್ಸಿಯಲ್ಲಿ ನೀವು ಮುಂದೆ ಮಾಡುವಾಗ ಇಲ್ಲಿಂದಲೇ ಒಂದು ಆದೇಶ ಕೊಡಬೇಕು. ಮಿನಿಮಮ್ ಇಷ್ಟು ವೋಟರ್ಸ್ ಇದ್ದರೆ ಒಂದು ಕ್ಷೇತ್ರ ಮಾಡಬೇಕೆಂದು ಹೇಳಬೇಕು. ಕೆಲವು ಕಡೆ 750-900 ಜನ ವೋಟರ್ಸ್‌ಗೆ ಒಂದೊಂದು ಕ್ಷೇತ್ರ ಮಾಡಿದ್ದಾರೆ. ಮತ್ತೊಂದು ಕಡೆ 9-10-20 ಸಾವಿರ ಎಂದು ಇದೆ. ನಿಮಗೆ ಗೊತ್ತಿದೆ ಗುಲ್ಬರ್ಗದಲ್ಲಿ ಯಾವ ರೀತಿ ವ್ಯತ್ಯಾಸ ಇದೆ ಎಂದು. ಬಹಮನಿಪುರದಲ್ಲೇ ಒಂದು ಇನ್ನೊಂದು ಕಡೆಯಲ್ಲೇ ಒಂದು. ಶಹಬಜಾರ್‌ನಲ್ಲೇ ಒಂದು ರೀತಿ ಇದೆ. ಇದನ್ನು ತಪ್ಪಿಸುವ ಸಲುವಾಗಿ ಮಿನಿಮಮ್ 3-4 ಸಾವಿರ ಎಂದು ಯೂನಿಫಾರ್ಮಿಟಿ ಇರಲಿ ಇದರಲ್ಲಿ 2-3 ಸಾವಿರ ಹೆಚ್ಚೂ ಕಡಿಮೆ ಇರಲಿ. ಪರವಾಗಿಲ್ಲ ಆದರೆ ಒಂದು ಕಡೆ 1 ಸಾವಿರ ಮತ್ತೊಂದು ಕಡೆ 10 ಸಾವಿರ ಬಂದರೆ ಬಹಳ ವ್ಯತ್ಯಾಸವಾಗುತ್ತದೆ. ಮೀಸಲಾತಿ ಪಾಲಿಸಿಯಿಂದ ಟೋಟಲ್ ನಂಬರ್ ಆಫ್ ವೋಟ್ಸ್ ಆ ನಗರ ಸಭೆ ಏರಿಯಾದಲ್ಲಿ ಎಷ್ಟು ಇದೆ ಅದನ್ನು ನೋಡಿಕೊಂಡು ಅದರ ಆಧಾರದ ಮೇಲೆ 3-4 ಸೀಟು ಎಂದು ನಿಗದಿ ಮಾಡಿ ಡಿಸ್ಟ್ರಿಬ್ಯೂಷನ್ ಮಾಡಬೇಕು. ಏರಿಯಾ ವೈಸ್ ಹೋಗುತ್ತೀರಿ ಅಲ್ಲಿ 18-20 ಪರ್ಸೆಂಟ್ ಇಲ್ಲವೆಂದು ರಿಜೆಕ್ಟ್ ಮಾಡುತ್ತೀರಿ. ಇದರಿಂದಾಗಿ ಅನ್ ಈಕ್ವಲ್ ಡಿಸ್ಟ್ರಿಬ್ಯೂಷನ್ ಆಗುತ್ತದೆ. ಒಂದೇ ಕಡೆ ಪಾಪ್ಯುಲೇಷನ್ ಇರುವುದಿಲ್ಲ. ಎಲ್ಲೆಲ್ಲಿ ಜಾಗ ಸಿಗುತ್ತದೆ ಅಲ್ಲಿ ಇರುತ್ತಾರೆ. ಎಲ್ಲೆಲ್ಲಿ ಅಲಾಟ್‌ಮೆಂಟ್ ಆಗಿರುತ್ತದೆ ಅಲ್ಲಿ ಇರುತ್ತಾರೆ. ಆದ್ದರಿಂದ ನೀವು ಟೋಟಲ್ ವೋಟರ್ಸ್ ಮೇಲೆ ಪರ್ಸಂಟೇಜ್ ಮೇಲೆ ವರ್ಕ್‌ಔಟ್ ಮಾಡಿ ಅದರ ಮೇಲೆ ಕಾರ್ಪೊರೇಟರ್ಸ್‌ಗಳ ಕ್ಷೇತ್ರವನ್ನು ನಿಗದಿ ಮಾಡಿ. ಆರ್ಡಿನೆನ್ಸ್ ಲ್ಯಾಪ್ಸ್ ಆಗಿದ್ದರ ಬಗ್ಗೆ ಸ್ಪಷ್ಟವಾದ ಅಭಿಪ್ರಾಯ ಕೊಡಬೇಕು.

ಶ್ರೀ ಕೆ. ಶರಣಪ್ಪ : ಮಾನ್ಯ ಖರ್ಗೆಯವರು ಹೇಳಿದ ಹಾಗೆ ಮಹಾ ನಗರದಲ್ಲಿ ಒಂದು ತಾರತಮ್ಯವಾಗಿದೆ. ಕೆಲವೊಂದು ಡಿವಿಜನ್‌ನಲ್ಲಿ 200-300 ಇದೆ. ಡೀಲಿಮಿಟೇಷನ್ ಅನ್ನು ಯಾವ ರೀತಿ ಮಾಡುತ್ತಿದ್ದಾರೆ ಏನು ಮಾಡುತ್ತಿದ್ದಾರೆಂದು ನಮಗೆ ಗೊತ್ತಾಗುತ್ತಿಲ್ಲ, ನಾವು ಒಬ್ಬ ಶಾಸಕರಿದ್ದೇವೆ. ಮಹಾ ನಗರದಲ್ಲಿ ಡೀ ಲಿಮಿಟೇಷನ್ ಯಾವ ರೀತಿ ಮಾಡುತ್ತಿದ್ದಾರೆಂಬುದು ಗೊತ್ತಿಲ್ಲ. ಮೊನ್ನೆ ನಾನು ಮಂತ್ರಿಗಳನ್ನು ಪ್ರಶ್ನೆ ಕೇಳಿದಾಗ 60 ರಿಂದ 65 ಕೌನ್ಸಿಲರ್‌ಗಳು ಆಗಬೇಕೆಂದು ಉತ್ತರ ಕೊಟ್ಟಿದ್ದಾರೆ. ಅಂದರೆ ತಾವು ಯಾವ ಆಧಾರದ ಮೇಲೆ ಡೀ ಲಿಮಿಟೇಷನ್ ಮಾಡುತ್ತಿದ್ದೀರಿ. ಏರಿಯಾ ವೈಸ್ ಮಾಡುತ್ತಿದ್ದೀರೋ ಕ್ಷೇತ್ರವಾರು ಮಾಡುತ್ತಿದ್ದೀರೋ ಹೇಗೆ ಎಂಬುದನ್ನು ತಾವು ತಿಳಿಸಬೇಕು. ಮಹಾನಗರದಲ್ಲಿ ಬಹಳ ತಾರತಮ್ಯವಾಗಿದೆ.

3 ಸಾವಿರ ಒಂದು ಕಡೆ ಇದ್ದರೆ ಮತ್ತೊಂದು ಕಡೆ 27 ಸಾವಿರ ಆಗಿವೆ. ಡೀ ಲಿಮಿಟೇಷನ್ ಮಾಡಬೇಕಾದರೆ ಯಾವ ರೀತಿ ಮಾಡುತ್ತೀರಿ ಎಂಬ ಬಗ್ಗೆ ತಿಳಿಸಬೇಕು. ಯಾವ ಆಧಾರದ ಮೇಲೆ ಆಗುತ್ತವೆ ಏರಿಯಾವನ್ನು ಆಧಾರ ಮಾಡಿದ್ದೀರೋ ಜನಸಂಖ್ಯೆಯನ್ನು ಆಧಾರವನ್ನಾಗಿ ಇಟ್ಟುಕೊಂಡು ಮಾಡಿದ್ದೀರೋ ಎಂಬುದನ್ನು ತಿಳಿಸಬೇಕು.

ಶ್ರೀ ವೈಜನಾಥ ಪಾಟೀಲ್ : ಕ್ಷೇತ್ರಗಳ ಬಗ್ಗೆ ಮಾನ್ಯ ಖರ್ಗೆಯವರು ಹಾಗೂ ಇತರೆ ಸದಸ್ಯರುಗಳು ಹೇಳಿದರು. ಮೊದಲು ಒಂದು ಕಡೆ 10 ಸಾವಿರ ಜನಸಂಖ್ಯೆ ಮತ್ತೊಂದು ಕಡೆ 1 ಸಾವಿರ ವೋಟರ್ಸ್ ಇರುತ್ತಿದ್ದರು. ಇದು ಮೊದಲಿನದು. ಹೊಸ ಪ್ರಾವಿಷನ್ ಪ್ರಕಾರ 74ನೇ ಅಮೆಂಡ್‌ಮೆಂಟ್ ಪ್ರಕಾರ ಈಗ ಈಕ್ವಲ್ ಆಗಿ ಬರುತ್ತದೆ. ಒಂದು ವೇಳೆ 25 ಸಾವಿರ ಜನಸಂಖ್ಯೆ ಇದ್ದರೆ 25 ಜನರು ಆರಿಸಿ ಬರುತ್ತಾರೆ ಅಂದರೆ 1 ಸಾವಿರಕ್ಕೆ ಒಬ್ಬ ಸದಸ್ಯರು ಆರಿಸಿ ಬರುತ್ತಾರೆ ಅಂದರೆ 1 ಸಾವಿರಕ್ಕೆ ಒಬ್ಬ ಸದಸ್ಯರು ಆರಿಸಿ ಬರುತ್ತಾರೆ. ಇದೇ ತರಹ ಡೀ ಲಿಮಿಟೇಷನ್ ಆಗುತ್ತದೆ, ಮೊದಲಿನ ತರಹ ಆಗುವುದಿಲ್ಲ. ಇದು ಇನ್ನೂ ಆಗಿಲ್ಲ, ಹಳೆಯ ತರಹ ಆಗುವುದಿಲ್ಲ. Equal population for all the constituencies.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆ ಆರ್ಡಿನೆನ್ಸ್‌ಗೆ 60 ದಿವಸಗಳ ಕಾಲ ವ್ಯಾಲ್ಯೂ ಇತ್ತು. ಇವತ್ತು 65ನೇ ದಿವಸವಾಗಿದೆ.

ಶ್ರೀ ವೈಜನಾಥ್ ಪಾಟೀಲ್ : ಇದೆ. On 18th only it will be lapsing; not earlier.

18ನೇ ಸೆಪ್ಟೆಂಬರ್ ಆಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಆರ್ಟಿಕಲ್ 213 (ಬಿ) (ಎ) ಪ್ರಸಾರವಾಗಿ ಫ್ರಮ್‌ದಿ ಡೇಟ್ ಆಫ್ ದಿ ಕಮೆನ್ಸ್‌ಮೆಂಟ್ ಆಫ್ ದಿ ಸೆಷನ್ ಎಂದು ಇದೆ. ಸಿಕ್ಸ್ ವೀಕ್ ಲಾಸ್ಟ್ ಡೇ 18ನೇ ಸೆಪ್ಟೆಂಬರ್ ಆಗುತ್ತದೆ.

ಶ್ರೀಮತಿ ಪ್ರಮೀಳಾ ಎಸ್. ನೇಸರ್ಗಿ : ಈ ಅಧಿವೇಶನ ರೀ ಅಸೆಂಬ್ಲಿಯಾದ ಮೇಲೆ 6 ವಾರಗಳ ಒಳಗೆ ಆರ್ಡಿನೆನ್ಸ್ ಇಡಬೇಕು ಕಾನೂನು ರಾಜ್ಯ ಅಲ್ಲ ಅದನ್ನು ನಾವು ಇಲ್ಲಿ ಚರ್ಚೆ ಮಾಡುತ್ತಿಲ್ಲ. ಆರ್ಡಿನೆನ್ಸ್‌ನಲ್ಲಿ 60 ದಿವಸಗಳ ಕಾಲ ಸಮಯ ಕೊಟ್ಟಿದ್ದೀರಿ On 7th July ordinance came into force. 60 days has expired.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಹಾಗಲ್ಲ ಅದು. ನಾವು ಅದನ್ನು ನೋಟಿಫಿಕೇಷನ್ ಮಾಡಿದ ಮೇಲೆ ಅಸೆಂಬ್ಲಿ ಸೆಷನ್ಸ್ ಕಮೆನ್ಸ್ ಆದಮೇಲೆ ಕಮೆನ್ಸ್ ಆದ ಡೇಟ್‌ನಿಂದಾಗಿ ಆರು ವಾರಗಳು ಅದು.

ಶ್ರೀಮತಿ ಪ್ರಮೀಳಾ ಎಸ್. ನೇಸರ್ಗಿ : ನಾನು ಹೇಳುತ್ತಿರುವುದು ಏನೆಂದರೆ ಆರ್ಡಿನೆನ್ಸ್‌ನಲ್ಲಿ ಟೈಮ್ 60 ದಿವಸ ಎಂದು ಕೊಟ್ಟಿದ್ದೀರಿ. ಅರವತ್ತು ದಿವಸ ಎಕ್ಸ್‌ಪೈರ್ ಆಗಿಹೋಗಿದೆ. ಇವತ್ತು ನೀವು ಮಾಡುವುದಾದರೆ ತರಬಹುದು. ಆದರೆ with prospective effect, not by effect ಆರ್ಡಿನೆನ್ಸ್‌ನಲ್ಲಿ ತರುವುದಕ್ಕೆ ಬರುವುದಿಲ್ಲ. ನೀವು ಹೊಸ ಕಾನೂನು ಬೇಕಾದರೆ ಆಕ್ಟ್‌ತೆಗೆದುಕೊಂಡು ಬನ್ನಿ. ಆರ್ಡಿನೆನ್ಸ್ ಪ್ರಕಾರ ನೀವೇನು 60 ದಿವಸ ಕೊಟ್ಟಿದ್ದಿರಿ. that has elapsed.

Sri B.N. BACHEGOWDA : From the date of notification and from the date of introduction of the Bill here.

ಆ ರೀತಿ ತೆಗೆದುಕೊಳ್ಳಬೇಕು ಅದನ್ನು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಆ ರೀತಿ ತೆಗೆದುಕೊಳ್ಳಬೇಕು ಎಂದು ಹೇಳಿ ಇಂಟರ್ ಪ್ರೆಟೇಷನ್. ನಾವು ಅದನ್ನೇ ಹೇಳುತ್ತಿರುವುದು. ಇದನ್ನು ಅಮೆಂಡ್‌ಮೆಂಟ್ ಮಾಡಿ. ಬಿಲ್‌ನಲ್ಲಿ ಆ ರೀತಿ ಇಂಟ್ರಡ್ಯೂಸ್ ಮಾಡಿ.

ಶ್ರೀ ಬಿ.ಎನ್. ಬಚ್ಚೇಗೌಡ : ಅಸೆಂಬ್ಲಿ ಪ್ರಾರಂಭವಾದ ದಿವಸದಿಂದ ಆ ಡೇಟ್‌ಗೆ ಬರುತ್ತದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಕಾನೂನು ಪ್ರಕಾರ ಬರುವುದಿಲ್ಲ, ನೀವು ಇದರಲ್ಲಿ ಬರೆಯಬೇಕಾಗಿತ್ತು. ಈ ಬಿಲ್ಲಿನಲ್ಲಿ from the date it is coming into force ಎಂದು ಬರೆಯಬೇಕಾಗಿತ್ತು. ತಾವು ಮಾಡಿಲ್ಲ. ಆಗಲೇ ನೋಟಿಫಿಕೇಷನ್ ಇಷ್ಯೂ ಮಾಡಿದ್ದೀರಿ ಎಂದು ಹೇಳುತ್ತೀರಿ. ಇಷ್ಯೂ ಮಾಡಿ ಬಿಟ್ಟಿದ್ದೀರಿ. ಜಾರಿಗೆ ಬಂದುಬಿಟ್ಟಿದೆ. ಆರ್ಡಿನೆನ್ಸ್ ಜಾರಿಗೆ ಬಂದಿದೆ. ನೋಟಿಫಿಕೇಷನ್ ಇಷ್ಯೂ ಮಾಡಿಬಿಟ್ಟಿದ್ದೀರಿ. ಇದರ ಪ್ರಕಾರ ಏನಾಗುತ್ತದೆ ಅರವತ್ತು ದಿವಸದಿಂದ ಇವತ್ತು ನೀವು ತಂದರೆ ಮತ್ತೆ ಮೂವತ್ತು ದಿವಸ ಸಿಗುತ್ತದೆ. 90 ದಿವಸ ಆಗುತ್ತದೆ. Your very object will be frustrated. ನೀವೇನು ತಂದಿದ್ದೀರಿ. ಅದರ ಉದ್ದೇಶವೇ ಆಗುತ್ತಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ : ಕಮೆನ್ಸ್‌ಮೆಂಟ್ ಆಫ್ ದಿ ಅಸೆಂಬ್ಲಿ ಆಗ ಆಗುತ್ತದೆ ಎನ್ನತಕ್ಕಂಥದ್ದು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಹಾಗೆ ಮಾಡಿಲ್ಲ ಅವರು. ನೋಟಿಫಿಕೇಷನ್ ಇಷ್ಯೂ ಮಾಡದಿದ್ದರೆ ಬರುತ್ತಿತ್ತು. ಮಂತ್ರಿಗಳು ನೋಟಿಫಿಕೇಷನನ್ನು ಈಗಾಗಲೇ ಇಷ್ಯೂ ಮಾಡಿದ್ದೇನೆ ಎಂದು ಹೇಳಿದ್ದಾರೆ. ಕ್ಲಾರಿಫಿಕೇಷನ್ ಕೊಟ್ಟರು. ಆಗಸ್ಟ್ ತಿಂಗಳಲ್ಲೇ ಇಷ್ಯೂ ಮಾಡಿಬಿಟ್ಟಿದ್ದೇನೆ ಎಂದು ಹೇಳಿದ್ದಾರೆ. ಅಂದ ಮೇಲೆ ಅರವತ್ತು ದಿವಸ ಅಲ್ಲಿಗೆ ಮುಗಿಯಿತು. ಲ್ಯಾಪ್ಸ್ ಆಗಿದೆ. ಕಾನೂನು ಪ್ರಕಾರ ಹೇಗೆ ತರಬೇಕೋ ತೆಗೆದುಕೊಂಡು ಬನ್ನಿ. ನಾವು ಪಾಸ್ ಮಾಡೋಣ. ಇವತ್ತೇ ಪಾಸ್ ಮಾಡೋಣ. ಅದನ್ನು ಬೇಡ ಎಂದು ಹೇಳುವುದಿಲ್ಲ, ಆದರೆ ಸರಿಯಾಗಿ ತೆಗೆದುಕೊಂಡು ಬನ್ನಿ. ಮಾನ್ಯ ಬಚ್ಚೇಗೌಡರು ನಾವು ನೀವೆಲ್ಲಾ ಇದ್ದು ಇಂಥ ಕಾನೂನನ್ನು ತಂದು ಮಾಡಿದ್ದಾರಲ್ಲಾ ಎಂದು ನಗೆಪಾಟಲು ಮಾಡಬಾರದು. ಸರಿಯಾಗಿ ತೆಗೆದುಕೊಂಡು ಬನ್ನಿ. ನಾವು ಪಾಸ್ ಮಾಡೋಣ. ವಿತ್ ಪ್ರಾಸ್ಪೆಕ್ಟೀವ್ ನೀವು ತರಬಹುದು. ಇವತ್ತೇ ತೆಗೆದುಕೊಂಡು ಬನ್ನಿ. ಪ್ರಾಸ್ಪೆಕ್ಟೀವ್ ಲೆಜಿಸ್‌ಲೇಷನ್ ಮಾಡಿ ನೀವು.

ಶ್ರೀ ವೈಜನಾಥ್ ಪಾಟೀಲ್ : ಮಾನ್ಯ ಉಪಾಧ್ಯಕ್ಷರೇ,

"Ordinancee promulgated under this Article shall have the same force and effct as an Act of lgislature of the State assented by the Governor. But every such ordinancee shall be laid before the Legislative Assembly of the State or where there is a Legislative Council in the State, before both the Houses shall cease to operate about the expiration of six weeks from the re-assembly of the legislature or before the expiration of that period, a resolution dis-approving it is passed by the Legislative Assembly and agreed to be Legislative Council, if any upon passing of the resolution or as the case may be, on the resolution being agreed by the Council and may be..."

This will be expiring on 18th September.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಲ್ಲಿ ಎರಡು ಪ್ರಶ್ನೆಗಳು ಇವೆ. ಒಂದು ರಿಪ್ಲೇಸ್‌ಮೆಂಟ್ ಮಾಡುವುದಕ್ಕೆ ಟೈಮ್ ಅದು. What he is stating there is a

provision in the Constitution to replace within two months ಅಧಿವೇಶನ ಇದ್ದಾಗಲೂ ಕೂಡ ಅರವತ್ತು ದಿವಸದಲ್ಲಿ ಯಾವಾಗಲಾದರೂ ಅರವತ್ತು ದಿವಸದ ಒಳಗಾಗಿ ನೀವು ತರಬೇಕು. ಅಂದಾಗ ಅದು ವ್ಯಾಲಿಡ್ ಇರುತ್ತದೆ. ಇಲ್ಲದಿದ್ದರೆ ಇಲ್ಲ ಎನ್ನತಕ್ಕಂಥದ್ದು ಅದು. ಆದರೆ ನೀವೇನು ಕೊಟ್ಟಂಥ ಟೈಮ್ ಇದೆ, ಆ ಟೈಮ್ "It shall deemed to have come into force with effect from 7th July 1995 ಏನೆಂದರೆ ಷಾರ್ಟ್ ಟೈಟಲ್ ಅಂಡ್ ಕಮೆನ್ಸ್‌ಮೆಂಟ್ ಇದೆಯಲ್ಲಾ, This Act may be called the Karnataka Municipalities Amendment Act, 1995.

ಈ ಕಾನೂನು ಯಾವಾಗ ಅಸ್ತಿತ್ವಕ್ಕೆ ಬರುತ್ತದೆ? It shall be deemed to have come into force with effect from the 7th day of July 1995. From that day two months.

ಅಂದರೆ ಏನಾಯಿತು? ಏಳನೇ ತಾರೀಖಿಗೆ ಇದು ಎಕ್ಸ್‌ಪೈರ್ ಆಯಿತು. ಅಂದಾಗ 7ನೇ ತಾರೀಖಿಗೆ ಎಕ್ಸ್‌ಪೈರ್ ಆದ ಮೇಲೆ ಈ ಐದು ದಿವಸ ಎಕ್ಸ್‌ಟ್ರಾ ಅದಕ್ಕೆ ಈ ಕಾನೂನು ಅಸ್ತಿತ್ವದಲ್ಲಿಲ್ಲ, ಮುಗಿದುಹೋಯಿತು. ಎರಡು ತಿಂಗಳು ಪೀರಿಯಡ್ ಏನಿತ್ತು, not for replacement ನೀವೇನು ಪೀರಿಯಡ್ ಕೊಟ್ಟಿದ್ದಿರಿ, ಆ ಪೀರಿಯಡ್ ಮುಗಿದುಹೋಯಿತು. ನಿಮ್ಮ ಎಕ್ಸ್‌ಪ್ಲನೇಟರಿ ನೋಟ್‌ನಲ್ಲಿ ಕೂಡ ನೋಡಿ.

"Section 9 of the Karnataka Municipalities Act, '64 provides a period of two months to entertain any objections from all persons to the proposal to constitute the local area to be a smaller urban area.

ಅಂದರೆ you have already provided two months to entertain any objections. That two months period is already over.

ಈಗ ನೀವು ಆರ್ಡಿನೆನ್ಸ್ ಇಷ್ಯೂ ಮಾಡಿದ ಮೇಲೆ ಆರ್ಡಿನೆನ್ಸ್ 5ನೇ ಜುಲೈಗೆ ಬಂತು. 5 ನೇ ಜುಲೈಯಿಂದ ಆಗಸ್ಟ್, ಸೆಪ್ಟೆಂಬರ್ 7ಕ್ಕೆ ಮುಗಿದುಹೋಯಿತು. ಅಂದರೆ 7 ರಿಂದ ಈ ಕಡೆ ಈ ಕಾನೂನು ಅಸ್ತಿತ್ವದಲ್ಲಿಲ್ಲ, ಇನ್ನು ಮೇಲೆ ಆಬ್ಜೆಕ್ಷನ್ ಕಾಲ್‌ಫರ್ ಮಾಡುವ ಹಾಗೆ ಇಲ್ಲ, ಆ ಪೀರಿಯಡ್ಡೇ ಮುಗಿದುಹೋಯಿತು. ನೀವು ಹೇಳುವುದೇನೆಂದರೆ ಆರ್ಟಿಕಲ್ Under the constitution you are telling for replacement. ಇದು ಯಾವುದೇ ರೀಪ್ಲೇಸ್ ಮಾಡುವುದಕ್ಕೆ ಅರವತ್ತು ದಿವಸ ಇರುತ್ತದೆ. ಅದನ್ನು ಡ್ಯೂರಿಂಗ್ ಸೆಷನ್ ಮಾಡಬೇಕು. ಅರವತ್ತು ದಿವಸಕ್ಕಿಂತ ಹೆಚ್ಚಿಗೆ ಆಗಬಾರದು ಎನ್ನುವುದು ಅದು. ಆದರೆ ಇಲ್ಲಿ ನೀವು ಕೊಟ್ಟಂಥ ಪೀರಿಯಡ್ಡೇ ಮುಗಿದು ಹೋಗಿದೆಯೆಲ್ಲಾ, ಆರ್ಡಿನೆನ್ಸ್ ಪೀರಿಯಡ್ ನಾನು ಹೇಳುತ್ತಿಲ್ಲ, ಇದು ಕಾನೂನಿನ ಪೀರಿಯಡ್. ನೀವು ಆರ್ಡಿನೆನ್ಸ್ ಕೊಟ್ಟಂಥದ್ದು. I am not telling under the Article. That is different any Act can be brought under that within 60 days it can be passed as law. Any ordinance.

ಆದರೆ ಈ ಆರ್ಡಿನೆನ್ಸ್‌ಗೆ ನೀವು ಲೈಫ್ ಕೊಟ್ಟಿದ್ದೇ ಎರಡು ತಿಂಗಳು ಆಬ್ಜೆಕ್ಷನ್ಸ್ ಕಾಲ್‌ಫರ್ ಮಾಡುವುದಕ್ಕೆ. ಆ ಎರಡು ತಿಂಗಳೂ ಈಗ ಮುಗಿದುಹೋಗಿದೆ.

ಶ್ರೀ ವೈಜನಾಥ್ ಪಾಟೀಲ್ : ಮಾನ್ಯ ಉಪಾಧ್ಯಕ್ಷರೇ, ಆಬ್ಜೆಕ್ಷನ್ಸ್ ಕಾಲ್‌ಫರ್ ಮಾಡುವುದಕ್ಕೆ ನೋಟೀಫಿಕೇಷನ್ ಆಗಿದ್ದು ಆಗಸ್ಟ್‌ನಲ್ಲಿ ಇನ್ನೂ ಅದಕ್ಕೆ 30 ದಿವಸ ಸಮಯ ಇದೆ. ನೀವು ಕೇಳುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೋಟೀಫಿಕೇಷನ್ ಡೇಟ್ ಆದರೂ ಹೇಳಿ. ನಮಗೆ ಅದಾದರೂ ಹೇಳಿ. ನಾವು ನೋಡುವುದು ಈ ಬಿಲ್ಲಿನಲ್ಲಿ ಏನಿದೆ ಅದನ್ನು ನೋಡುತ್ತೇನೆ.

ಶ್ರೀ ವೈಜನಾಥ್ ಪಾಟೀಲ್ : ಒಂದೊಂದು ಜಿಲ್ಲೆಯದು ಬೇರೆ ಬೇರೆ ತಾರೀಖುಗಳು ಇವೆ. ಬೇಕಾದರೆ ನಾವು ಪ್ರೊವೈಡ್ ಮಾಡುತ್ತೇವೆ. ಗೆಜೆಟ್‌ನಲ್ಲಿವೆ. ಅದನ್ನು ಬಿಟ್ಟು ಏನಾದರೂ ಅಬ್ಜೆಕ್ಷನ್ಸ್ ಹೇಳುವುದಿದ್ದರೆ ಸರ್ಕಾರದವರು ಸರಿಪಡಿಸುತ್ತೇವೆ. ಅದಕ್ಕೂ ಏನಾದರೂ ಬೇಕಾದರೆ ಸರಿಪಡಿಸಬಹುದು. ಅಬ್ಜೆಕ್ಷನ್ಸ್ ಏನಾದರೂ ಇದ್ದು ಯಾವುದಾದರೂ ಹಳ್ಳಿಗಳು ಮುನಿಸಿಪಲ್ ಏರಿಯಾದಲ್ಲಿ ಸೇರಿವೆ, ಅವರಿಗೆ ಆರ್ಥಿಕ ಪರಿಸ್ಥಿತಿ ಕೆಟ್ಟದ್ದು ಇದೆ, ಅವರಿಗೆ ಏನಾದರೂ ಗ್ಯಾರಂಟಿ ಬೇಕಾದರೆ ಅಂಥವರು ಬೇಕಾದರೆ ಬೇರೆ ಗ್ರಾಮಪಂಚಾಯಿತಿ ಎಂದು ಇಟ್ಟುಕೊಳ್ಳುವುದಕ್ಕೆ ಕೇಳಿದರೂ ಕೂಡ ಸರ್ಕಾರ ಅದರ ಬಗ್ಗೆ ವಿಚಾರ ಮಾಡುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬೇರೆ ಬೇರೆ ಇದೆ ಎಂದು ಹೇಳಿದರೆ ಅದು ನಮಗೆ ಹೇಗೆ ಗೊತ್ತಾಗುತ್ತದೆ? ಕಾನೂನು ಇರುವುದು 7ನೇ ಜುಲೈ 1995. From this date two months. Two months expired on 7th ನೀವು ಈಗ ಬಿಲ್‌ನ್ನು ಪಾಸು ಮಾಡುವುದಕ್ಕೆ ತಂದಿದ್ದೀರಿ. ಅಂದರೆ ಇದನ್ನು ರೆಟ್ರಾಸ್ಪೆಕ್ಟೀವ್ ಪಾಸ್ ಮಾಡಬೇಕೇ? ಪ್ರಾಸ್ಪೆಕ್ಟೀವ್ ನಮಗೆ ಏನು ಗೊತ್ತಾಗುತ್ತದೆ?

ಶ್ರೀ ಕೆ. ಶರಣಪ್ಪ : ಇಲ್ಲಿ ಯಾವುದೇ ಡೇಟ್ ಎಕ್ಸ್‌ಪೈರ್ ಆಗುವ ಪ್ರಶ್ನೆಯೇ ಇಲ್ಲ, ಸೆಕ್ಷನ್ 9 ಏನಿದೆ, ಎರಡು ತಿಂಗಳ ಬದಲಿಗೆ ಮೂರು ತಿಂಗಳು. ಇನ್‌ಸ್ಟೆಡ್ ಆಫ್ ಟೂ ಮಂಥ್ಸ್ ಒಂದು ತಿಂಗಳು ಎಂದು ಮಾಡುವುದಕ್ಕೆ ಅಮೆಂಡ್‌ಮೆಂಟ್ ಇದೆ. ಈ ಅಮೆಂಡ್‌ಮೆಂಟ್ ಮಾಡಬೇಕಾದರೆ ಆರ್ಡಿನೆನ್ಸ್ ಮೊದಲು ಬಂದು ರೀಪ್ಲೆಸ್ ಮಾಡುತ್ತದೆ. ಆರ್ಡಿನೆನ್ಸ್ ರೀಪ್ಲೆಸ್ ಮಾಡಿ ವಿತ್‌ಇನ್ ಟೈಮ್ ಮಾಡುತ್ತದೆ. ಆರ್ಡಿನೆನ್ಸ್ ಸಲುವಾಗಿ ಯಾದಗೂ ಏನಿದೆ, ಎರಡು ತಿಂಗಳ ಬದಲಿ ಒಂದು ತಿಂಗಳ ಅವಧಿ ಅಬ್ಜೆಕ್ಷನ್‌ಸ ಹಿಯರ್ ಮಾಡುವುದಕ್ಕೆಂದು ಇದೆ. ಅಂದ ಮೇಲೆ ಯಾವುದೋ ಡೇಟ್ ಇಲ್ಲಿ ಎಕ್ಸ್‌ಪೈರ್ ಪ್ರಶ್ನೆಯೇ ಬರುವುದಿಲ್ಲ, They are creating confusion. ಆ ಡೇಟ್, ಈ ಡೇಟ್ ಡೀಲಿಮಿಟೇಷನ್ ಬಗ್ಗೆ ಪ್ರಶ್ನೆಯೇ ಇಲ್ಲ. ಇದು ಓನ್ಲಿ ಆರ್ಗನೈಜೇಷನ್ಸ್. ಮುನಿಸಿಪಾಲಿಟಿ ಯಾವುದು ಮಾಡಬೇಕು, ಟೌನ್ ಪಂಚಾಯಾತಿ ಯಾವುದು ಮಾಡಬೇಕು ಎನ್ನುವ ಬಗ್ಗೆ ಹಿಯರಿಂಗ್ ಎರಡು ತಿಂಗಳ ಬದಲಿಗೆ ಒಂದು ತಿಂಗಳು ಎಂದು ಇದೆ. ಜನಸಂಖ್ಯೆ ಆಧಾರದ ಆ ಓಣಿಯನ್ನು ಯಾವ ಓಣಿಗೆ ಸೇರಿಸಬೇಕು ಎನ್ನುವುದು ಕನ್‌ಫ್ಯೂಷನ್. ಆ ರೀತಿ ಕನ್‌ಫ್ಯೂಸ್ ಮಾಡುವ ಅವಶ್ಯಕತೆಯಿಲ್ಲ, ದಯಮಾಡಿ ಇದು ಕ್ಲಿಯರ್ ಇದೆ. ಓನ್ಲಿ ಫಾರ್ಮಲ್ ಅಮೆಂಡ್‌ಮೆಂಟ್. ಆರ್ಡಿನೆನ್ಸ್ ರೀಪ್ಲೇಸ್ ಮಾಡುವುದು ಇದೆ. ದಯವಿಟ್ಟು ಈ ಅಮೆಂಡ್‌ಮೆಂಟನ್ನು ಅಲೋ ಮಾಡಬೇಕು ಎಂದು ಹೇಳಿ ನಾನು ಸಮರ್ಥನೆ ಮಾಡುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಉಪಮುಖ್ಯಮಂತ್ರಿಗಳು ಸದನಕ್ಕೆ ಬಂದಿದ್ದಾರೆ. ನಾನು ಈಗ ಕೇಳುತ್ತಿದ್ದೇನೆ, ಆರ್ಡಿನೆನ್ಸ್ ತಾವು 7-7-95ಕ್ಕೆ ತೆಗೆದುಕೊಂಡು ಬಂದಿರಿ. ಆರ್ಡಿನೆನ್ಸ್‌ನೊಳಗಡೆ ಅಬ್ಜೆಕ್ಷನ್ಸ್ ಹಾಕುವುದಕ್ಕೆ ಅರವತ್ತು ದಿವಸ ಎಂದು ಟೈಮ್ ಕೊಟ್ಟಿದ್ದಿರಿ. ಅರವತ್ತು ದಿವಸ ಎಂದು ಟೈಮ್ ಕೊಟ್ಟು ಈಗಾಗಲೇ ನೋಟೀಫಿಕೇಷನ್ಸ್‌ನ್ನು ಹಲವಾರು ಮುನಿಸಿಪಾಲಿಟಿಗಳಲ್ಲಿ ಇಷ್ಯೂ ಮಾಡಿಬಿಟ್ಟಿದ್ದೀರಿ. ಎರಡು ತಿಂಗಳು ಇವತ್ತಿಗೆ ಮುಗಿದುಹೋಗಿದೆ. 7ನೇ ತಾರೀಖಿಗೆ ಮುಗಿದುಹೋಯಿತು. ಇವತ್ತು 11ನೇ ತಾರೀಖು. ನಾಲ್ಕು ದಿವಸ ಮುಗಿದುಹೋಯಿತು.

ಇವತ್ತು ನೀವು ಈ ಆಕ್ಟ್‌ನ್ನು ರೀಪ್ಲೇಸ್ ಮಾಡಿ ಎಂದು ಕೇಳುತ್ತಿದ್ದೀರಿ. ಆರ್ಡಿನೆನ್ಸ್‌ನ್ನು ರೀಪ್ಲೇಸ್ ಮಾಡಬೇಕಾದರೆ ಅರವತ್ತು ದಿವಸ ನೀವು ಕೊಟ್ಟಿರುವ ಟೈಮ್ ಎಕ್ಸ್‌ಪೈರ್ ಆಗಿಹೋಗಿದೆ. ಆದ್ದರಿಂದ ಈ ಆರ್ಡಿನೆನ್ಸ್‌ನಲ್ಲಿ ಸತ್ಯವಿಲ್ಲ, ಇವತ್ತು ನೀವು ತರುವುದಕ್ಕೆ ಸಾಧ್ಯವಿಲ್ಲ, ನೀವು ತರಬೇಕಾದರೆ ಪ್ರಾಸ್ಪೆಕ್ಟೀವ್ ಎಫೆಕ್ಟ್ ಇವತ್ತಿಂದ ತರಬೇಕು. ಬೇರೆ ಕಾನೂನನ್ನು ತಾವು ತರಬೇಕಾಗುತ್ತದೆ. ದಯವಿಟ್ಟು ಎಕ್ಸಾಮಿನ್ ಮಾಡಿ. ನಾನು ನೋಡಿದ್ದೇನೆ, 213 ಕಾನ್ಸ್‌ಟಿಟ್ಯೂಷನ್ ಪ್ರಕಾರ ಆರ್ಡಿನೆನ್ಸ್ ಯಾವಾಗ ತರಬೇಕು ಎಂಬುದು ನಮಗೆ ಗೊತ್ತಿದೆ.

2.30 ಪಿ.ಎಂ.

ಆರ್ಡಿನೆನ್ಸ್ ಆದಾಗ ಆರು ವಾರದೊಳಗೆ ಆಕ್ಟ್ ತರಬೇಕು ಎಂದು ಗೊತ್ತಿದೆ. ತರಬಾರದು ಎಂದು ಹೇಳಲಿಲ್ಲ, ನೀವು ತಂದಿದ್ದೀರಿ, ಆದರೆ ಆಕ್ಟ್‌ನ ಆರ್ಡಿನೆನ್ಸ್‌ನಲ್ಲಿ 60ದಿವಸ ಎಂದು ಟೈಮ್ ಕೊಟ್ಟಿರುವುದರಿಂದ ಆ ಟೈಮ್ ಮುಗಿದು ಹೋಗಿರುವುದರಿಂದ ಅದನ್ನು ರಿಪ್ಲೇಸ್ ಮಾಡುವುದಕ್ಕೆ ಆಗುವುದಿಲ್ಲ, ದಯವಿಟ್ಟು ಪ್ರಾಸ್ಪೆಕ್ಟೀವ್‌ಲಿ ತರುವುದಕ್ಕೆ ಅಧಿಕಾರ ಇದೆ. ತರಬಾರದು ಎಂದು ಹೇಳಲಿಲ್ಲ. ಇವತ್ತಿನಿಂದ ನೀವು ಪ್ರಾಸ್ಪೆಕ್ಟೀವ್ ಎಫೆಕ್ಟ್ ತೆಗೆದುಕೊಂಡು ಬನ್ನಿ. ನಾವು ಬೇಡ ಎಂದು ಹೇಳುವುದಿಲ್ಲ, ನಾವು ಬಿಲ್ ಪಾಸ್ ಮಾಡುವುದಕ್ಕೆ ತಯಾರು ಇದ್ದೇವೆ. ಪ್ರಾಸ್ಪೆಕ್ಟೀವ್ ತರದೆ with effect from, 7.7.95 ರಿಪ್ಲೇಸ್‌ಮೆಂಟ್ ಎಂದರೆ "this Act comes into force replacing with effect from 7.7.95.

7.7.95 ರಿಂದ 30 ದಿವಸ ಮುಗಿದು ಹೋದ ಮೇಲೆ ಅಬ್ಜೆಕ್ಷನ್ಸ್ ಹಾಕುವುದಕ್ಕೆ ಜನಗಳಿಗೆ ಕಾನೂನು ಪ್ರಕಾರ ಅಧಿಕಾರ ಇರುವುದಿಲ್ಲ, ದಯವಿಟ್ಟು ಯೋಚನೆ ಮಾಡಿ, ನಾವು ಹೇಳುತ್ತೇವೆಂದಲ್ಲ, ಇದರ ಬಗ್ಗೆ ಜಿಜ್ಞಾಸೆ ಬೇಡ. ದಯವಿಟ್ಟು ಕೇಳಿ. ನೀವೇ ನೋಡಿ 7.7.95 ರಿಂದ ಒಂದು ತಿಂಗಳು 7.8.95ಕ್ಕೆ, ಅದು ಒಂದು ತಿಂಗಳು ಹೋದ ಮೇಲೆ ರಿಪ್ಲೇಸ್ ಮಾಡುವುದರಿಂದ 30 ದಿವಸ 7.8ಕ್ಕೆ ಮುಗಿದು ಹೋಗುತ್ತದೆ. ಈಗ 9ನೇ ತಿಂಗಳು ತಂದಿದ್ದೀರಿ, ದಯವಿಟ್ಟು ಯೋಚನೆ ಮಾಡಿ.

ಶ್ರೀ ಆರ್.ವಿ. ದೇಶಪಾಂಡೆ : ಈಗ ಯಾವುದಾದರೂ ಒಂದು ಆರ್ಡಿನೆನ್ಸ್ ಇಷ್ಯೂ ಆದನಂತರ ಆ ವೆಲಿಡಿಟಿ ಬಗ್ಗೆ ಇವತ್ತು ಅವರು ಛಾಲೆಂಜ್ ಮಾಡುತ್ತಾ ಇಲ್ಲ, ನಾವು ಇಂಟ್ರಡ್ಯೂಸ್ ಮಾಡುವ ಬಗ್ಗೆ ಸ್ವಲ್ಪ ತಿಳುವಳಿಕೆ ಮಾಡಬೇಕು ಎಂದು ಹೇಳುತ್ತಿದ್ದಾರೆ. ಅಧಿವೇಶನ ಪ್ರಾರಂಭ ಆದನಂತರ ಆರು ವಾರದಲ್ಲಿ ಇದನ್ನು ನಾವು ತರಬಹುದು. ಆರು ವಾರ ಅಂದರೆ 18ನೇ ಸೆಪ್ಟೆಂಬರ್ 95ಕ್ಕೆ ಎಕ್ಸ್‌ಪೈರ್ ಆಗುತ್ತದೆ. So it is within the time..

ಎರಡನೆಯದು ಇಲ್ಲಿ ರಿಪೀಲಿಂಗ್ ಮತ್ತು ಸೇವಿಂಗ್ಸ್ ಪ್ರಾವಿಷನ್ಸ್ ಇದೆ. ಏನು ಪ್ರಾವಿಜನ್ ಇದೆ ಎಂದರೆ

(1) The Karnataka Municipalities (Amendment) Ordinance, 1995 (Karnataka Ordinance 6 of 1995) is hereby repealed.

(2) Notwithstanding such repeal, anything done or any action taken under the principal Act as amended by the said ordinance shall be deemed to have been done or taken under the principal Act as amended by this Act.

ಹಾಗೆ ರಿಪೀಲಿಂಗ್ ಪ್ರಾವಿಷನ್ ಇದ್ದ ಮೂಲಕ, ಇನ್ನೂ ಟೈಮ್ 18ನೇ ತಾರೀಖಿನವರೆಗೆ ಇದ್ದ ಮೂಲಕ it is perfectly in order... ಹಾಗಾಗಿ ಏನು

ಗೌರವಾನ್ವಿತ ಸದಸ್ಯರು ಅಬ್ಜೆಕ್ಷನ್ಸ್ ರೈಸ್ ಮಾಡಿದ್ದಾರೆ ಅದು ಸರಿಯಲ್ಲಿ ಎಂದು ಬಹಳ ವಿನಯದಿಂದ ಹೇಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಬಂದಿದ್ದೀರಿ ಒಳ್ಳೆಯದಾಯಿತು. ಆದರೆ ನಮಗೆ ಇದನ್ನು ಸ್ವಲ್ಪ ಎಕ್ಸ್‌ಪ್ಲೈನ್ ಮಾಡಿದರೆ ಗೊತ್ತಾಗುತ್ತದೆ.

Short title and commencement, - Sub-clause(2),

(2) It shall be deemed to have come into force with effect from the seventh day of July 1995,

ಈ ಆಕ್ಟ್‌ನಲ್ಲಿಯೇ ಇದೆ. This Act has come into force from 7th July 95 and this is for 2 months time..

ಹಳೆಯ ಆಕ್ಟ್ ಪ್ರಕಾರ ಎರಡು ತಿಂಗಳು ಟೈಮ್. ಈಗಿನ ಪ್ರಕಾರ 30 ದಿವಸ ಟೈಮ್ ಹೌದೇ?

ಶ್ರೀ ಜೆ.ಹೆಚ್. ಪಟೇಲ್ : 60 ದಿವಸ ಇದ್ದದ್ದನ್ನು 30 ದಿವಸ ಮಾಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : 60 ದಿವಸದಿಂದ 30 ದಿವಸ ಅಂದರೆ ನೋ ಅಬ್ಜೆಕ್ಷನ್ಸ್ ಕಾಲ್‌ಫರ್ ಮಾಡುವುದನ್ನು ಶಾರ್ಟ್ ಪೀರಿಯಡ್ ಮಾಡಿ 30 ದಿವಸದಲ್ಲಿ ಮಾಡುತ್ತಿದ್ದೀರಿ. This Act comes into force on 5th July, ಅಂದರೆ 5ನೇ ಆಗಸ್ಟ್‌ವರೆಗೆ ಟೈಮ್ ಇತ್ತು. 7ನೇ ಜುಲೈನಿಂದ 8ನೇ ಆಗಸ್ಟ್ ವರೆಗೆ ಟೈಮ್ ಇತ್ತು. ಅದರ ಮೇಲೆ ಈ ಕಾನೂನು ಲಾಗೂ ಇಲ್ಲ, ಏಕೆಂದರೆ ಒಂದು ತಿಂಗಳು ಟೈಮ್ ಅಬ್ಜೆಕ್ಷನ್ಸ್ ರೈಸ್ ಮಾಡುವುದಕ್ಕೆ. ಈಗ ನೀವು ಏನು ಮಾಡುತ್ತಿದ್ದೀರಿ, ಎರಡು ತಿಂಗಳು ಎಂದು ಹಿಂದಿನ ಕಾನೂನನ್ನು ಹಿಡಿದುಕೊಂಡರೂ ಕೂಡ, ಅದು ರಿಪೀಲಿಂಗ್ ಪ್ರಾವಿಷನ್ ಇದೆ ಅಥವಾ ಹಿಂದಿನ ಕಾನೂನಿನಲ್ಲಿ ಏನು ಮಾಡಿದೆ ಎಂದು ಅದರ ಪ್ರಕಾರ ನಡೆದುಕೊಂಡು ಹೋಗುತ್ತದೆ ಎಂದರೂ ಕೂಡ ಎರಡು ತಿಂಗಳು ಇಟ್ಟುಕೊಳ್ಳಿ. ಎರಡು ತಿಂಗಳು ಟೈಮ್ ಎಂದು ಇಟ್ಟುಕೊಂಡರೂ ಕೂಡ ನಮ್ಮ ವಾದ ಏನು ಅಂದರೆ ಇನ್ನು ಐದು ದಿವಸ ಹೆಚ್ಚಿಗೆ ಆಯಿತು. ಈ ಐದು ದಿವಸದಲ್ಲಿ ಈ ಕಾನೂನಿನ ಕೆಳಗಡೆ ಏನೇ ಕ್ರಮ ತೆಗೆದುಕೊಂಡರೂ ಅದು ಇನ್‌ಫ್ರಕ್ಚಯಸ್ ಎನ್ನತಕ್ಕ ವಾದವನ್ನು ನಾವು ಇಟ್ಟಿದ್ದೇವೆ.

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಸದಸ್ಯರು ಒಂದು ತಿಂಗಳ ಅಬ್ಜೆಕ್ಷನ್ಸ್ ಬಗ್ಗೆ ಏನು ಕೇಳುತ್ತಿದ್ದಾರೆ ಅದರ ಬಗ್ಗೆ ಹೇಳುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಒಂದು ಮುಖ್ಯವಾದ ವಿಚಾರ ಇದೆ. ಮಾನ್ಯ ಗೃಹ ಸಚಿವರು ಹೊರಟು ಹೋಗುತ್ತಿದ್ದಾರೆ ಅವರನ್ನು ಕರೆಸಬೇಕು. ಏನು ವಿಚಾರ ಎಂದರೆ ಕೌಲಾಲಂಪುರದಿಂದ ಒಂದು ವಿಮಾನ ಯಾರಿಗೂ ಗೊತ್ತಿಲ್ಲದೇ ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಬಂತು, ಅದರಲ್ಲಿ ಬಂದಂತಹವರಲ್ಲಿ ನಾಲ್ಕು ಜನ ನಿಗೂಡ ರೀತಿಯಲ್ಲಿ ಕಣ್ಮರೆ ಆಗಿದ್ದಾರೆ. ಭಾರಿ ಶಸ್ತ್ರಾಸ್ತ್ರಗಳು ಬಂದಿರತಕ್ಕ ವಿಚಾರ ಇದೆ. ಇದರ ಬಗ್ಗೆ ಮಾನ್ಯ ಗೃಹ ಸಚಿವರು ಈ ಸದನಕ್ಕೆ ವಿಚಾರ ತಿಳಿಸಬೇಕು, ಮಾನ್ಯ ಗೃಹ ಸಚಿವರನ್ನು ಕರೆಸಬೇಕು.

ಶ್ರೀ ಎಂ.ಸಿ. ನಾಣಯ್ಯ : ಅವರು ಹೇಳತಕ್ಕ ವಿಚಾರ 30 ದಿವಸ ಯಾವುದು ಇದೆ, 30 ದಿವಸ ಎಂದು ಹೇಳುತ್ತಾ ಇರತಕ್ಕ ಕ್ಯಾಲೆಂಡರ್ ಆಫ್ ಇವೆಂಟ್ಸ್ ನಾವು ಮಾಡಿದ ಮೇಲೆ this is a ordinance replacement bill.

ಆರ್ಡಿನೆನ್ಸ್ ನಾವು ತಂದಿದ್ದೇವೆ. 30 ದಿವಸ ಇರತಕ್ಕದ್ದು ನಾವು ಮಾಡಿಕೊಂಡು ಬಿಟ್ಟಿದ್ದೇವೆ. ಈಗ ಆರ್ಡಿನೆನ್ಸ್‌ಗೆ ಬಿಲ್ ಪ್ಲೇಸ್ ಆಗಬೇಕಲ್ಲಾ, 60 ದಿವಸ ಇದ್ದದ್ದನ್ನು 30 ದಿವಸ ತಂದಿದ್ದೇವೆ. ಮುಂಚೆ 60 ದಿವಸ ಇತ್ತು. ಡೀ ಲಿಮಿಟೇಷನ್ ಆಫ್ ಕಾನ್ಸಿಟಿಟ್ಯೂಷನ್ ಸಂಬಂಧ ಪಟ್ಟ ಹಾಗೆ ಇದನ್ನು ತಂದಿರತಕ್ಕದ್ದು. ಆದ್ದರಿಂದ 60 ದಿವಸ ಎಂದು ಮಾಡಿದಾಗ ಡಿಸೆಂಬರ್ ಒಳಗೆ ಚುನಾವಣೆ ನಡೆಸಬೇಕು ಎಂದು ಹೇಳುತ್ತಿರತಕ್ಕದ್ದು ಒಂದು, ಎರಡನೆಯದು 74ನೇ ಕಾನ್‌ಸ್ಟಿಟ್ಯೂಷನ್ ಅಮೆಂಡ್‌ಮೆಂಟ್ ಪ್ರಕಾರ, ತಮಗೆಲ್ಲಾ ಈಗಾಗಲೇ ಗೊತ್ತಿದೆ. ಇದು ಆರ್ಡಿನೆನ್ಸ್ ರಿಪ್ಲೇಸ್‌ಮೆಂಟ್ 60 ದಿವಸ ಇದ್ದದ್ದು 30 ದಿವಸ ಆಯಿತು.

ಶ್ರೀಮತಿ ಪ್ರಮೀಳಾ ನೇಸರ್ಗಿ : ತಾವು ಮೊದಲ ಸೆಂಟೆನ್ಸ್ ನೋಡಿ. It shall be deemed to have come into force with effect from the seventh day of July 1995. ಆಕ್ಟ್ ಪ್ರಕಾರ 7ನೇ ಜುಲೈ 1995. ಎರಡು ತಿಂಗಳು ಮುಗಿದು ಹೋಗಿದೆ. ನೀವು ರಿಪ್ಲೇಸ್‌ಗೆ ಕೊಟ್ಟಿರುವುದು 30 ದಿವಸ ಟೈಮ್ ಎಕ್ಸ್‌ಪೈರ್ ಆಯಿತು. Now you cannot replace. It shall deemed to come into force ಎಂದು ಇದೆಯಲ್ಲಾ,

ಅದನ್ನು ಪ್ರಾಸ್ಪೆಕ್ಟೀವ್ ಮಾಡಿ ಎಂದು ನಾವು ಕೇಳುತ್ತಿದ್ದೇವೆ. from today it must come otherwise it will become redundant. Please read this.

ಶ್ರೀ ಎಂ.ಸಿ. ನಾಣಯ್ಯ : ರಿಡೆಂಡೆಂಟ್ ಆಗುವುದಿಲ್ಲ, ಕ್ಯಾಲೆಂಡರ್ ಆಫ್ ಇವೆಂಟ್ಸ್ ಪಬ್ಲಿಷ್ ಮಾಡಿರತಕ್ಕ ದಿವಸದಿಂದ ನಾವು 30 ದಿವಸ ಎಂದು ಹೇಳುತ್ತಾ ಇರತಕ್ಕದ್ದು ನಾರ್ಮಲಿ ಎಲ್‌ಎ ಬಿಲ್‌ನಲ್ಲಿ it shall be deemed to have come into force as on that particular day ಎಂದು ನಾವು ಮಾಡಿಕೊಂಡಿದ್ದೇವೆ. ಆದ್ದರಿಂದ ಈ ಬಿಲ್‌ನಲ್ಲಿ ಯಾವುದೇ ತರಹದ ಲೋಪ ಇಲ್ಲ. ಆದ್ದರಿಂದ ತಾವು ಇದನ್ನು ಪಾಸ್ ಮಾಡಿಕೊಡಬೇಕು. ತಾಂತ್ರಿಕವಾಗಿ ಇರತಕ್ಕ ಲೋಪ ಇಲ್ಲ, ಅದು ಆಗಿದ್ದರೆ ನಾನು ಒಪ್ಪಿಕೊಳ್ಳುತ್ತಿದ್ದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಹೇಳುವುದು ಹೇಳುತ್ತೇವೆ, ನೀವು ಮಾಡುವುದು ಮಾಡಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ಈಗ ಪ್ರಸ್ತಾಪ ಮಾಡಿರುವ ವಿಚಾರದಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳು ಸರ್ಕಾರದ ಪರವಾಗಿ ಉತ್ತರ ಹೇಳುತ್ತಾರೆಯೇ?

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಶಿವರಾಮೇಗೌಡರು ಪ್ರಸ್ತಾಪ ಮಾಡಿರುವ ವಿಚಾರಕ್ಕೆ ಉತ್ತರ ಹೇಳಬೇಕು.

ಉಪಾಧ್ಯಕ್ಷರು : ಈ ವಿಧೇಯಕಕ್ಕೆ ಅನುಮತಿ ದೊರೆತ ನಂತರ ನಿಮ್ಮ ವಿಚಾರ ತೆಗೆದುಕೊಳ್ಳೋಣ.

ಪರ್ಯಾಲೋಚನಾ ಪ್ರಸ್ತಾಪ

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ '1995ರ ಕರ್ನಾಟಕ ಪುರಸಭೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ಮತ್ತು 3

ಉಪಾಧ್ಯಕ್ಷರು : "ಖಂಡ 2 ಮತ್ತು 3 ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಮತ್ತು 3 ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ:

"ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ ಈ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆ ಖಂಡ, ಹೆಸರು ಮತ್ತು ಅವತರಣಿಕೆ ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಹಾಗೂ ವಸತಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, 1995ರ ಕರ್ನಾಟಕ ಪುರಸಭೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ:

"1995ರ ಕರ್ನಾಟಕ ಪುರಸಭೆಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಶ್ರೀ ಡಿ.ಕೆ. ಶಿವಕುಮಾರ್ : ಬಾಂಬ್ ಬೀಳುವಂತಹ ಪರಿಸ್ಥಿತಿ ಇದೆ ಉಪಾಧ್ಯಕ್ಷರೇ

ಉಪಾಧ್ಯಕ್ಷರು : ಈಗ ಒಂದು ಪ್ರಕಟಣೆ ಇದೆ, ಆ ನಂತರ ನಿಮ್ಮ ವಿಚಾರ ಪ್ರಸ್ತಾಪ ಮಾಡಿ.

"ಈಗ ನಾವು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಒಂದು ವಿಚಾರ ಪ್ರಸ್ತಾಪ ಮಾಡಿರುವ ಹಾಗೆ ಯಾವ್ಯಾವ ಪಾರ್ಟಿಗಳಿಗೆ ಎಷ್ಟೆಷ್ಟು ಟೈಮ್ ಕೊಡಬೇಕು ಎಂದು ನಿರ್ಧಾರ ತೆಗೆದುಕೊಂಡಿದ್ದೇವೆ. ಜನತಾ ದಳ 76 ನಿಮಿಷ, ಬಿಜೆಪಿ 40 ನಿಮಿಷ, ನಮಗೆ ಇರತಕ್ಕ ಒಟ್ಟು ಸಮಯ 12 ತಾಸುಗಳು.

ಜನತಾದಳಕ್ಕೆ 300 ನಿಮಿಷ, ಬಿ.ಜೆ.ಪಿ.ಗೆ 160 ನಿಮಿಷ, ಕಾಂಗ್ರೆಸ್'ಐ' ಗೆ 144 ನಿಮಿಶ, ಕೆ.ಸಿ.ಪಿ.ಗೆ 40 ನಿಮಿಷ, ಪಕ್ಷೇತರರಿಗೆ 64 ನಿಮಿಷ, ಕೆ.ಸಿ.ವಿ.ಪಿ. ಗೆ 10 ನಿಮಿಷ, ಕೆ.ಆರ್.ಆರ್.ಎಸ್.ಪಿ.ಗೆ 10 ನಿಮಿಷ, ಎ.ಐ.ಎ.ಡಿ.ಎಂ.ಕೆ. ಗೆ 10 ನಿಮಿಷ, ಸಿ.ಪಿ.ಎಂ.ಗೆ 10 ನಿಮಿಷ, ಬಿ.ಎಸ್.ಪಿ.ಗೆ 10 ನಿಮಿಷ, ಕೆ.ಆರ್.ಪಿ.ಗೆ 10 ನಿಮಿಷ, ಇಂಡಿಯನ್ ಮುಸ್ಲೀಮ್ ಲೀಗ್‌ಗೆ 10 ನಿಮಿಷವನ್ನು ಕೊಡಲಾಗಿದೆ. ಈ ರೀತಿ

ಒಟ್ಟು 778 ನಿಮಿಷಗಳನ್ನು ವಿವಿಧ ರಾಜಕೀಯ ಪಕ್ಷಗಳಿಗೆ ಅಲಾಟ್ ಮಾಡಲಾಗಿದೆ. ಆಯಾಯ ಪಕ್ಷಗಳು ತಮಗೆ ನೀಡಿರುವ ಸಮಯವನ್ನು ಮೀರದಂತೆ ಮಾತನಾಡಬೇಕಾಗಿ ಬಿನ್ನವಿಸಿಕೊಳ್ಳುತ್ತೇನೆ.

ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಅನಧಿಕೃತವಾಗಿ ಕೌಲಾಲಂಪುರದಿಂದ ಬಂದಿರುವ ವಿಮಾನದ ಬಗ್ಗೆ

ಶ್ರೀ ಎಲ್.ಆರ್. ಶಿವರಾಮೇಗೌಡ : ಉಪಾಧ್ಯಕ್ಷರೆ, ಅಕ್ರಮವಾಗಿ ಬೆಂಗಳೂರಿಗೆ ವಿಮಾನ ಬಂದಿದೆ ಎಂಬುದಾಗಿ ನಮಗೆ ಗೊತ್ತಾಗಿದೆ, ಅದು ನಿಜವೇ ಎನ್ನುವ ಬಗ್ಗೆ ಸರ್ಕಾರ ದಯಮಾಡಿ ಸ್ಪಷ್ಟೀಕರಣ ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ಬೆಳಿಗ್ಗೆ ಕೌಲಾಲಂಪುರದಿಂದ ಬೆಂಗಳೂರು ವಿಮಾನ ನಿಲ್ದಾಣಕ್ಕೆ ನಿಗೂಢವಾಗಿ ಒಂದು ವಿಮಾನ ಬಂದಿದೆ. ಅದರಲ್ಲಿ ಬಂದಂಥ ನಾಲ್ಕು ಜನರು ಯಾರಿಗೂ ತಿಳಿಯದ ರೀತಿಯಲ್ಲಿ ಕಣ್ಮರೆಯಾಗಿದ್ದಾರೆ. ಅವರನ್ನು ಹುಡುಕುವ ಕೆಲಸ ನಡೆಯುತ್ತಿದೆಯೆಂಬ ವಿಷಯ ತಿಳಿದು ಬಂದಿದೆ. ಅದರಲ್ಲಿ ಭಾರಿ ಶಸ್ತ್ರಾಸ್ತ್ರಗಳಿವೆಯಂತೆ! ಇದರ ಬಗ್ಗೆ ಸರ್ಕಾರ ಸ್ಪಷ್ಟನೆ ನೀಡಬೇಕು.

ಶ್ರೀ ಜೆ.ಹೆಚ್. ಪಟೇಲ್ : ಉಪಾಧ್ಯಕ್ಷರೆ, ಇನ್ನೂ ಅಧಿಕೃತವಾಗಿ ಏನೂ ಗೊತ್ತಾಗಿಲ್ಲ, ನಾವು ಸದನಕ್ಕೆ ಹೇಳಬೇಕಾದರೆ ಏನಾದರೂ ಅಥಾರಿಟಿ ಬೇಡವೇ?

ಶ್ರೀ ಡಿ.ಕೆ. ಶಿವಕುಮಾರ್ : ಉಪಾಧ್ಯಕ್ಷರೆ, ಒಂದು ಗಂಟೆ ಬಿಟ್ಟುಕೊಂಡು ಹೇಳಿಕೆ ಕೊಡಲಿ. ನಾಳೆ ಹೇಳಿಕೆ ಕೊಡುತ್ತೇವೆಂದರೆ ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಸಾರ್ವಜನಿಕರ ಮೂಲಕ ಮತ್ತು ನಮಗೇನು ವಿಚಾರ ತಿಳಿದುಬರುತ್ತದೆ ಅದನ್ನು ಇಲ್ಲಿ ಪ್ರಸ್ತಾಪ ಮಾಡುವುದೇ ಬೇಡವೇ? ಇದರ ಬಗ್ಗೆ ಅನುಮಾನ ಬಂದಿದೆ, ಭಯ ಬಂದಿದೆ.

ಉಪಾಧ್ಯಕ್ಷರು : ಈಗ ಮಾನ್ಯ ಸದಸ್ಯರು ಬಹಳ ಗಂಭೀರವಾದ ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ಸರ್ಕಾರದ ಪರವಾಗಿ ದಯವಿಟ್ಟು ಹೇಳಿಕೆಯನ್ನು ಕೊಡಿಸಿ.

ಶ್ರೀ ಜೆ.ಹೆಚ್. ಪಟೇಲ್ : ಉಪಾಧ್ಯಕ್ಷರೆ, ಅದರ ಬಗ್ಗೆ ಅಧಿಕೃತವಾಗಿ ಮಾಹಿತಿಯನ್ನು ತರಿಸಿಕೊಂಡು ಸರ್ಕಾರ ಹೇಳಿಕೆಯನ್ನು ಕೊಡುತ್ತದೆ. ಅದಕ್ಕೇಕೆ ಅಷ್ಟೊಂದು ಆತುರ?

ಶ್ರೀ ಎಲ್.ಆರ್. ಶಿವರಾಮೇಗೌಡ : ನಾವು ಬೆಳಿಗ್ಗೆಯಿಂದ ಕುಳಿತುಕೊಂಡಿದ್ದೇವೆ, ಊಟಕ್ಕೆ ಹೋಗಲು ಅವಕಾಶ ಕೊಡಿ.

ಶ್ರೀ ಕೆ.ಎನ್. ನಾಗೇಗೌಡ : ಅರ್ಧ ಗಂಟೆ ಊಟಕ್ಕೆ ಅವಕಾಶಕೊಟ್ಟರೆ ಒಳ್ಳೆಯದು. ಇಲ್ಲಿ ರೆಗ್ಯುಲರ್ ಆಗಿ ಕುಳಿತುಕೊಳ್ಳುವವರಿಗೆ ಬಹಳ ಕಷ್ಟವಾಗುತ್ತದೆ. ನಾವು ಬೆಳಿಗ್ಗೆ ಹತ್ತು ಗಂಟೆಗೆ ಬಂದರೆ ಸಂಜೆಯವರೆಗೆ ಕುಳಿತುಕೊಳ್ಳುವವರಿಗೆ ತೊಂದರೆಯಾಗುತ್ತದೆ. ಆದ್ದರಿಂದ 10-20 ನಿಮಿಷ ಊಟಕ್ಕೆ ಅವಕಾಶ ಕೊಡಿ.

ಉಪಾಧ್ಯಕ್ಷರು : ಬಿಸ್‌ನೆಸ್ ಅಡ್ವೈಸರಿ ಕಮಿಟಿಯ ತೀರ್ಮಾನದ ಪ್ರಕಾರ ಈ ವಾರ ಊಟಕ್ಕೆ ವಿರಾಮ ನೀಡಲಾಗುವುದಿಲ್ಲ, ತಾವು ಇದೊಂದು ವಾರ ಸಹಕಾರ ಮಾಡಬೇಕು.

+ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಸನ್ಮಾನ್ಯ ಉಪಾಧ್ಯಕ್ಷರೆ, ತಾವೇನು ಬಿಸ್‌ನೆಸ್‌ಅಡ್ವೈಸರಿ ಕಮಿಟಿ ತೀರ್ಮಾನವನ್ನು ಏನು ಹೇಳಿದ್ದೀರಿ ಅದರ ಬಗ್ಗೆ ಹೆಚ್ಚು ಮಾತನಾಡಲು ಹೋಗುವುದಿಲ್ಲ, ಕಾಲದ ಮಿತಿ ಇರುವ ಪ್ರಯುಕ್ತ ಅದನ್ನು ಮಾಡಿದ್ದಾರೆಂದು ನಾನು ಭಾವಿಸುತ್ತೇನೆ. ಆದ್ದರಿಂದ ಇರತಕ್ಕ ಕಾಲವನ್ನು ಸದುಪಯೋಗ ಮಾಡಿಕೊಳ್ಳತಕ್ಕದ್ದು ನಮ್ಮೆಲ್ಲರ ಕರ್ತವ್ಯವಾಗಿದೆ. ಈಗಾಗಲೇ ನಮ್ಮ ಬಿ.ಜೆ.ಪಿ.ಯ ಮುಖಂಡರು ಮತ್ತು ಕಾಂಗ್ರೆಸ್ ಪಕ್ಷದ ನಾಯಕರಾದ ಮೊಯ್ಲಿಯವರು ಇಟ್ಟಿರುವ ಇಲಾಖಾ ಬೇಡಿಕೆಗಳ ಮೇಲೆ ಬಹಳ ಸುದೀರ್ಘವಾಗಿ ಮಾತನಾಡಿದ್ದಾರೆ. ಅದೇ ರೀತಿ ಆಡಳಿತ ಪಕ್ಷದಲ್ಲಿರುವ ನಾವುಗಳು ಸಹ ಬೇಡಿಕೆಗಳ ಮೇಲೆ ಅನೇಕ ವಿಚಾರಗಳನ್ನು ಹೇಳಿದರೆ ಸರ್ಕಾರಕ್ಕೆ ಬಹಳಷ್ಟು ಪ್ರಯೋಜನವಾಗುತ್ತದೆ ಎನ್ನುವ ಭಾವನೆಯಿಂದ ನಾನು ನಾಲ್ಕು ಮಾತುಗಳನ್ನಾಡಬೇಕೆಂದುಕೊಂಡಿದ್ದೇನೆ. ತಮಗೆ ಗೊತ್ತಿರುವ ಹಾಗೆ ನಮ್ಮ ಪಾರ್ಲಿಮೆಂಟರಿ ಪದ್ಧತಿಯಲ್ಲಿ ಹೊಸದಾಗಿ ಬಂದಂಥ ವಿಷಯ ಸಮಿತಿಯ ಪದ್ಧತಿಯೇನಿದೆ ಇದು ಬಹಳ ಒಳ್ಳೆಯ ಪದ್ಧತಿಯೆಂದು ನಾನು ತಿಳಿದುಕೊಳ್ಳುತ್ತೇನೆ. ಕಾರಣ ಇಲ್ಲಿ ಮಾತನಾಡತಕ್ಕ ಸದಸ್ಯರಿಗೂ ಸಹ ಒಳ್ಳೆಯ ಮಾಹಿತಿ ದೊರೆಯುತ್ತದೆ. ಜೊತೆಗೆ ಇಲಾಖಾ ಮಂತ್ರಿಗಳಿಗೆ, ಅಧಿಕಾರಿಗಳಿಗೆ ಹೆಚ್ಚು ಮಾಹಿತಿ ಇದರಿಂದ ಸಿಗುತ್ತದೆಂದು ನನಗನ್ನಿಸುತ್ತಿದೆ. ಈ ಸದನದಲ್ಲಿ ಬಹಳವಾಗಿ ಇಲಾಖೆಗಳು ಬರುವುದರಿಂದ ಎಲ್ಲಾ ವಿಚಾರದ ಬಗ್ಗೆ ಕೂಲಂಕಷವಾಗಿ ಮಾತನಾಡಲು ಸಾಧ್ಯವಾಗದಿರುವ ಪ್ರಸಂಗದಲ್ಲಿ ಇಂಥಹ ವಿಷಯ ಸಮಿತಿಗಳಿದ್ದರೆ ಅದರಿಂದ ಬಹಳ ಪ್ರಮುಖವಾದ ವಿಚಾರಗಳನ್ನು ಕೈಗೆತ್ತಿಕೊಂಡು ಸದನಕ್ಕೆ ವರದಿಯನ್ನು ಕಳಿಸಿದಾಗ ಹೆಚ್ಚು ಪ್ರಯೋಜನವಾಗುತ್ತದೆಂದು ನಾನು ಭಾವಿಸುತ್ತೇನೆ. ಆದ್ದರಿಂದ ಈ ರೀತಿಯಾದ ಅತ್ಯುತ್ತಮವಾದ ವಿಷಯ ಸಮಿತಿಯ ಪದ್ಧತಿಯೇನಿದೆ ಅದು ಹೆಚ್ಚು ಪರಿಣಾಮಕಾರಿಯಾಗಬೇಕು ಎನ್ನುವ ಉದ್ದೇಶದಿಂದ ಈ ಮಾತನ್ನು ಹೇಳುತ್ತಿದ್ದೇನೆ. ವಿಷಯ ಸಮಿತಿಗಳಿಗೆ ಹೆಚ್ಚು ದಿನಗಳನ್ನು ನಿಗದಿ ಮಾಡಬೇಕು, ಹೆಚ್ಚು ದಿವಸಗಳು ವಿಷಯ ಸಮಿತಿಗಳು ಸಭೆ ಸೇರಬೇಕು, ಅದಕ್ಕೆ ಎಲ್ಲಾ ಅಧಿಕಾರಿಗಳು ಸಹಕಾರ ಮಾಡಬೇಕು, ಅದರಿಂದ ಹೊಸಹೊಸ ವಿಚಾರಗಳು, ನೀತಿಗಳು ಹೊರಕ್ಕೆ ಬರುತ್ತದೆ ಎನ್ನುವ ಭಾವನೆಯಿಂದ ಈ ವಿಷಯ ಸಮಿತಿಯ ಪದ್ಧತಿಯು ಭದ್ರವಾಗಲು ನಮ್ಮ ವಿಧಾನಮಂಡಲದ ನೇತ್ರತ್ವದಲ್ಲೇನು ವ್ಯವಸ್ಥೆ. ಇದೆ ಅದಕ್ಕೆ ನಮ್ಮೆಲ್ಲರ ಸಹಕಾರವಿದೆ, ಆ ಪದ್ಧತಿಯನ್ನು ಭದ್ರಮಾಡಬೇಕು, ಅದಕ್ಕೆ ಹೆಚ್ಚು ಶಕ್ತಿಯನ್ನು ಕೊಡಬೇಕು. ವಿಷಯ ಸಮಿತಿಗಳು ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಲು ವಿಧಾನಮಂಡಲ ಅತ್ಯಂತ ಮಹತ್ತರವಾದ ಕಾರ್ಯವನ್ನು ರೂಪಿಸುತ್ತದೆ. ಅದಕ್ಕೆ ನಮ್ಮೆಲ್ಲರ ಬೆಂಬಲವಿದೆಯೆನ್ನತಕ್ಕ ಮಾತನ್ನು ಹೇಳಿ, ಈ ದಿವಸ ಶಿಕ್ಷಣ ಇಲಾಖೆಯ ಬಗ್ಗೆ ಕೆಲವಾರು ಮಾತುಗಳನ್ನೇಳಬೇಕೆಂದು ನಾನು ಅಂದುಕೊಂಡಿದ್ದೇನೆ. ಶಿಕ್ಷಣ ಇಲಾಖೆಯು ಬಹಳ ಮಹತ್ತರವಾದ ಇಲಾಖೆ, ಬಹುಶಃ ಶಿಕ್ಷಣ ಇಲಾಖೆಯೆಂದು ಹೇಳಿದರೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಸನ್ಮಾನ್ಯ ಉಪಾಧ್ಯಕ್ಷರೆ, ಅಧಿಕಾರಿಗಳ ಗ್ಯಾಲರಿಯಲ್ಲಿ ಯಾವುದೇ ಇಲಾಖೆಯ ಕಾರ್ಯದರ್ಶಿಗಳಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರ ಪಾಡಿಗೆ ಅವರು ಮಾತನಾಡಿಕೊಂಡು ಹೋಗಲಿ, ಅವರ ಪಕ್ಷದವರು ತಾನೇ.

ಶ್ರೀ ಕೆ.ಎನ್. ನಾಗೇಗೌಡ : ಇಲ್ಲಿ ಸದನವೆಂದರೆ ನಮ್ಮ ಪಕ್ಷದ ಸದನ ನಿಮ್ಮ ಪಕ್ಷದ ಸದನವೆಂದು ಇದೆಯೇ? ಸದನವೆಂದರೆ ಎಲ್ಲಾಪಕ್ಷದವರಿಗೂ ಒಂದೇ. ಸದನದಲ್ಲಿ ಸರ್ಕಾರ ಮತ್ತು ಸದಸ್ಯರು ಅಷ್ಟೆ.

ಶ್ರೀ ಬಿ.ಬಿ. ಶಿವಪ್ಪ : ಹಳ್ಳಿಗಳಲ್ಲಿನ ಶಾಲೆಗಳಲ್ಲಿ ಶಿಕ್ಷಕರಿಲ್ಲ, ಇಲ್ಲಿ ಶಿಕ್ಷಣ ಇಲಾಖೆಯ ಮಂತ್ರಿಗಳಿಲ್ಲ, ತಾವು ಶಿಕ್ಷಣ ಇಲಾಖೆಯ ಬಗ್ಗೆ ಮಾತನಾಡಬೇಕು ಮಾತನಾಡಿ.

ಶ್ರೀ ಕೆ.ಎನ್. ನಾಗೇಗೌಡ : ಉಪಾಧ್ಯಕ್ಷರೆ, ಇವತ್ತು ಶಿಕ್ಷಣ ಇಲಾಖೆ ಅತ್ಯಂತ ಮಹತ್ತರವಾದ ಇಲಾಖೆ. ಶಿಕ್ಷಣ ಇಲಾಖೆಗೆ ನಾವು ಬಹಳ ಒತ್ತನ್ನು ನೀಡುತ್ತಿರುವುದನ್ನು ನೋಡುತ್ತಿದ್ದೇವೆ. ಮನುಷ್ಯನ ಮೂಲಭೂತ ಜೀವನ ಬದಲಾವಣೆಯಾಗಬೇಕಾದರೆ, ಮತ್ತು ಅವರ ಸ್ವರೂಪ ಬದಲಾವಣೆಯಾಗಬೇಕಾದರೆ ಜ್ಞಾನ ಅತ್ಯಂತ ಅವಶ್ಯಕವಾಗಿರಬೇಕಾಗಿರತಕ್ಕ ವಸ್ತು ಜ್ಞಾನವನ್ನು ಗಳಿಸತಕ್ಕದ್ದು, ಕೊಡತಕ್ಕದ್ದು ಈ ವ್ಯವಸ್ಥೆಯಲ್ಲಿ ಪ್ರಾಮುಖ್ಯವಾದುದು ಶಿಕ್ಷಣ ಇಲಾಖೆ. ಪ್ರಾಥಮಿಕ ಶಿಕ್ಷಣವಂತೂ ಅತ್ಯಂತ ಮುಖ್ಯವಾದ ಭಾಗ. ನಮ್ಮ ಕರ್ನಾಟಕ ಸರ್ಕಾರ ಈ ಶಿಕ್ಷಣ ಇಲಾಖೆಯಲ್ಲಿ ಬಹಳ ವರ್ಷಗಳಿಂದ ಒಳ್ಳೆಯ ಹೆಸರನ್ನು ಉಳಿಸಿಕೊಂಡು ಬಂದಿದೆ. ಯಾವುದೇ ಸರ್ಕಾರ ಬರಲಿ ಹೋಗಲಿ ಶಿಕ್ಷಣ ಇಲಾಖೆಯಲ್ಲಿ ಬಹಳ ಹೆಚ್ಚಿನ ಪರಿಣಾಮಕಾರಿಯಾಗಿ ಕೆಲಸ ಮಾಡಿಕೊಂಡು ಬಂದಿರುವ ರಾಜ್ಯಗಳಲ್ಲಿ ನಮ್ಮ ರಾಜ್ಯವೂ ಸಹ ಒಳ್ಳೆಯ ಹಾದಿಯಲ್ಲಿ ಹೋಗುತ್ತಿದೆಯೆಂದರೆ ತಪ್ಪಾಗಲಾರದು.ಆದರೆ ಮೂಲಭೂತ ಅವಶ್ಯಕತೆಗಳೇನಿದೆ ಅದರ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ನಮ್ಮ ದೇಶದಲ್ಲಿ ಸುಮಾರು ನಲವತ್ತು ಕೋಟಿಗಿಂತ ಹೆಚ್ಚು ಜನರು ಅಕ್ಷರಸ್ಥರಾಗಿದ್ದರೂ ಸಹ ಇನ್ನೂ ಸುಮಾರು ಐವತ್ತು ಕೋಟಿ ಜನಸಂಖ್ಯೆ ಅಕ್ಷರಸ್ಥರಾಗಬೇಕಾಗಿದೆ. ಎಂದು ಸಾವಿರ ವರ್ಷದೊಳಗೆ ನಾವು ರಾಷ್ಟ್ರದಲ್ಲಿ ಸಂಪೂರ್ಣವಾಗಿ ಅಕ್ಷರ ಜ್ಞಾನವನ್ನು ಕೊಡಬೇಕೆಂಬುದು ಕೇಂದ್ರ ಸರ್ಕಾರದ ನೀತಿಯಾಗಿದೆ. ಅದರಲ್ಲೂ ಕೇಂದ್ರ ಸರ್ಕಾರದಲ್ಲಿ ಬಹಳ ತಿಳುವಳಿಕೆಯುಳ್ಳ, ಪ್ರಭಾವಯುತವಾಗಿರುವ ಮಂತ್ರಿಗಳಾದ ಮಾಧವರಾವ್‌ಸಿಂಧ್ಯರವರು ಇದ್ದಾರೆ. ಶಿಕ್ಷಣ ರಾಜಕೀಯವಲ್ಲ, ಅದು ಒಂದು ಆಸ್ತಿ. ಅನ್ನ ನೀರು, ಬಟ್ಟೆಯ ಅವಶ್ಯಕತೆ ಎಷ್ಟರಮಟ್ಟಿಗೆ ಮನುಷ್ಯನಿಗೆ ಇದೆಯೋ ಅಷ್ಟೇ ಅವಶ್ಯಕತೆ ಶಿಕ್ಷಣಕ್ಕೆ ಇದೆ. ಯಾವ ಮನುಷ್ಯನಿಗೆ ಶಿಕ್ಷಣವಿರುವುದಿಲ್ಲವೋ ಅವನಿಗೆ ಮಾನವನಾಗಿ ಪ್ರಾಮಾಣಿಕವಾಗಿ ಪರಿಣಾಮಕಾರಿಯಾಗಿ ಜೀವನ ನಡೆಸಲು ಸಾಧ್ಯವಾಗುವುದಿಲ್ಲ.

ಆದುದರಿಂದ ಇವೊತ್ತು ಕೇಂದ್ರ ಸರ್ಕಾರ ಕೂಡ ಶಿಕ್ಷಣಕ್ಕೆ ಬಹಳ ಮಹತ್ವ ಕೊಟ್ಟಿದೆ. ಕ್ರಿ.ಶ. 2000 ಇಸವಿಯೊಳಗಾಗಿ ಭಾರತದಲ್ಲಿ ಉಳಿದ 50 ಕೋಟಿ ಜನಸಂಖ್ಯೆ ಏನಿದೆ, ಅವರಿಗೆ ಎಲ್ಲಾ ವಿಧದಲ್ಲೂ ಸಂಪೂರ್ಣವಾದ ಶಿಕ್ಷಣ ಕೊಟ್ಟು ಅಕ್ಷರಸ್ಥರನ್ನಾಗಿ ಮಾಡಬೇಕಾಗಿದೆ. ಶಿಕ್ಷಣವೆಂದರೆ ವಿಶ್ವವಿದ್ಯಾನಿಲಯದ ಪದವಿಯಲ್ಲ, ವಿಶ್ವವಿದ್ಯಾನಿಲಯಗಳ ಪದವಿಗಳ ಬಗ್ಗೆ ನಾವು ಹೆಚ್ಚು ಗಮನಹರಿಸುವುದಕ್ಕಿಂತ ಮುಂಚೆ ಶಿಕ್ಷಣವೆಂದರೆ ಮನುಷ್ಯ ಅರಿತುಕೊಳ್ಳುವುದಕ್ಕೆ, ಅರಿತುಕೊಂಡು ಬದುಕುವುದಕ್ಕೆ ಹಾಗೂ ತನ್ನ ಸುತ್ತ-ಮುತ್ತಲಿನ ಸಮಾಜವನ್ನು ತಿಳಿದುಕೊಂಡು ಆಗತಕ್ಕಂಥ ಎಲ್ಲಾ ಆಗು-ಹೋಗುಗಳನ್ನು ಅರ್ಥೈಸಿಕೊಳ್ಳುವುದಕ್ಕೆ ಎಷ್ಟು ಜ್ಞಾನ ಬೇಕೋ ಅಷ್ಟು ಸಿಕ್ಕಿದರೆ ಅದೇ ದೊಡ್ಡ ಶಿಕ್ಷಣವೆಂದು ನನಗನ್ನಿಸುತ್ತದೆ. ಅಂತಹ ಒಂದು ಶಿಕ್ಷಣದ ಅವಶ್ಯಕತೆಯನ್ನು ನಾವು ಇವೊತ್ತು ಕಾಣುತ್ತಿದ್ದೇವೆ. ಅದಕ್ಕೋಸ್ಕರ ಕ್ರಿ.ಶ.2000 ಇಸವಿಯೊಳಗಾಗಿ ಇಡೀ ರಾಷ್ಟ್ರದಲ್ಲಿರುವ ಎಲ್ಲಾ ಜನರಿಗೂ ಶಿಕ್ಷಣ ಕೊಡತಕ್ಕಂಥ ವ್ಯವಸ್ಥೆ ಮಾಡುತ್ತೇವೆನ್ನುವ ಮಾತು ಪದೇ ಪದೇ ಕೇಂದ್ರ ಸರ್ಕಾರದಿಂದ ಕೇಳಿ ಬರುತ್ತಿದೆ. ಇದು ಬಹಳ ಸಂತೋಷದ ವಿಚಾರ. ಇದು ನಮ್ಮ ರಾಜ್ಯಾಂಗವಾಗಿ ಇರುವ ವಿಚಾರವೂ ಆಗಿರುವುದರಿಂದ ಆ ಬಗ್ಗೆ ಹೆಚ್ಚು ಗಮನ ಕೊಡಬೇಕೆಂದು ಹೇಳುತ್ತಾ ಕೇಂದ್ರ ಸರ್ಕಾರದ ಜೊತೆ ಈ ಕುರಿತು ಒತ್ತಾಸೆಯಾಗಿ ನಿಂತು ಕ್ರಿ.ಶ. 2000ವರ್ಷದೊಳಗೆ ರಾಷ್ಟ್ರದ ಎಲ್ಲಾ ಜನರನ್ನೂ ಸಂಪೂರ್ಣ ಅಕ್ಷರಸ್ಥರನ್ನಾಗಿ ಮಾಡುವ ಕಡೆ

ಗಮನಹರಿಸಬೇಕೆಂಬುದು ನನ್ನ ವಿಚಾರವೂ ಆಗಿದೆ. ಇವೊತ್ತಿನ ದಿವಸ ನಾವು ಬಹಳಷ್ಟು ಶಿಕ್ಷಣವನ್ನು ಹಳ್ಳಿಗಾಡುಗಳಲ್ಲಿ ಕೊಡುತ್ತಿದ್ದೇವೆ.

ಇದರ ಬಗ್ಗೆ ನಾನು ಹೆಚ್ಚು ಹೊತ್ತು ತೆಗೆದುಕೊಂಡು ವಿಸ್ತಾರವಾಗಿ ಹೇಳುವುದಕ್ಕೆ ಹೋಗುವುದಿಲ್ಲ, ಅಷ್ಟು ಸಮಯವೂ ಇಲ್ಲ. ಹಳ್ಳಿಗಾಡುಗಳಲ್ಲಿರುವ ಶಾಲೆಗಳಿಗೆ ಅವಶ್ಯಕವಾಗಿ ಬೇಕಾಗಿರುವುದು ಶಿಕ್ಷಕರು. ಮಾನ್ಯ ಹಿರಿಯ ಸದಸ್ಯರಾದ ಶ್ರೀ ಬಿ.ಬಿ. ಶಿವಪ್ಪನವರು ಮಾತನಾಡುತ್ತಾ ಇವೊತ್ತಿನ ದಿವಸ ಹಳ್ಳಿಗಾಡುಗಳಲ್ಲಿರುವ ಶಾಲೆಗಳಿಗೆ ಶಿಕ್ಷಕರುಗಳೇ ಇಲ್ಲವೆಂದು ಬಹಳ ಚೆನ್ನಾಗಿ ಹೇಳಿದರು. ಆ ಮಾತು ನಿಜ, ಆದರ ಬಗ್ಗೆ ನನ್ನದು ಎರಡು ಮಾತಿಲ್ಲ. ಹಳ್ಳಿಗಾಡುಗಳಲ್ಲಿರುವ ಪ್ರಾಥಮಿಕ,ಮಾಧ್ಯಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಶಿಕ್ಷಕರುಗಳೇ ಇಲ್ಲದಿರುವಂಥ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಅದಕ್ಕೋಸ್ಕರ ನಮ್ಮ ಸರ್ಕಾರ ರಾಜ್ಯದಲ್ಲಿ 18,000 ಶಿಕ್ಷಕರುಗಳನ್ನು ತುಂಬತಕ್ಕಂಥ ಕಾರ್ಯಕ್ರಮವನ್ನು ಈಗಾಗಲೇ ಕೈಗೆತ್ತಿಕೊಂಡಿದೆ. ಈ ಬಗ್ಗೆ ನನ್ನ ಸಲಹೆಯೇನೆಂದರೆ, ಶಿಕ್ಷಕರುಗಳನ್ನು ಅತ್ಯಂತ ಶೀಘ್ರವಾಗಿ ನೇಮಿಸಬೇಕಾಗಿದೆ. ಇನ್ನು ಉಳಿದಿರುವುದು 5-6ತಿಂಗಳುಗಳು ಮಾತ್ರ. ಅಷ್ಟರೊಳಗಾಗಿ ಶಿಕ್ಷಕರುಗಳನ್ನು ನೇಮಿಸದಿದ್ದರೆ ಶೈಕ್ಷಣಿಕ ವರ್ಷ ಪ್ರಾರಂಭವಾಗುವುದಿಲ್ಲ, ಆದುದರಿಂದ, ಶಿಕ್ಷಕರುಗಳ ಆಯ್ಕೆ ಪದ್ಧತಿ ಏನಿದೆ, ಅದನ್ನು ಚೆನ್ನಾಗಿ ಉಪಯೋಗಿಸಿಕೊಂಡು ಆದಷ್ಟು ಬೇಗ ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಾಲೆಗಳಲ್ಲಿರುವ ಶಿಕ್ಷಕರುಗಳ ಕೊರತೆಯನ್ನು ತುಂಬಲೇಬೇಕು. ಅಲ್ಲದೆ, ಶಾಲೆಗಳಲ್ಲಿ 50 ಮಕ್ಕಳಿಗೆ ಒಬ್ಬ ಶಿಕ್ಷಕರಿರಬೇಕೆಂಬ ಒಂದು ನಿಯಮವೇನಿದೆ ಅದನ್ನು ಪಾಲಿಸಬೇಕು ಮತ್ತು ಕೇರಳದಲ್ಲಿ ಮಕ್ಕಳಿಗೆ ಯಾವ ರೀತಿ ಶಿಕ್ಷಣ ಕೊಡುತ್ತಿದ್ದಾರೆಂಬುದು ಎಲ್ಲರಿಗೂ ಗೊತ್ತಿರುವ ವಿಚಾರವಾಗಿದೆ.

ಅಲ್ಲಿ ಸಣ್ಣ-ಸಣ್ಣ ಗುಡಿಸಲುಗಳಲ್ಲಿ ಪಾಠಶಾಲೆಗಳನ್ನು ನಡೆಸುತ್ತಾರೆ. ಆದರೆ ನಮ್ಮ ರಾಜ್ಯದ ಶಾಲೆಗಳಿಗೆ ಅತ್ಯವಶ್ಯಕವಾಗಿ ಬೇಕಾಗಿರುವಂಥಾದ್ದು ಶಿಕ್ಷಕರು. ಶಿಕ್ಷಕರನ್ನು ನೇಮಿಸತಕ್ಕ ಕೆಲಸವನ್ನು ನಮ್ಮ ಸರ್ಕಾರ ಮಾಡಬೇಕು. ನಾನು ತಿಳಿದುಕೊಂಡಿರುವಂತೆ ಶಿಕ್ಷಕರುಗಳನ್ನು ಇಷ್ಟೊತ್ತಿಗೆ ನೇಮಿಸಬೇಕಾಗಿತ್ತು, ತಡವಾಗಿದೆಯೆಂದು ನನ್ನ ಅನಿಸಿಕೆ. ಆದರೆ, ಇನ್ನು ಮುಂದೆ ತಡವಾಗುವುದು ಬೇಡ. ಈ ವರ್ಷವೂ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಶಿಕ್ಷಕರನ್ನು ನೇಮಿಸಬೇಕೆಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತಾ, ಇವೊತ್ತಿನ ದಿವಸ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ 2-3 ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದೇವೆ. ವಿದ್ಯಾ ವಿಕಾಸ ಯೋಜನೆ ಮತ್ತು ಪುಸ್ತಕ ವಿತರಣಾ ಯೋಜನೆಯ ಬಗ್ಗೆ ಒಂದು ಮಾತನ್ನು ಹೇಳುತ್ತೇವೆ. ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಾದ ಶ್ರೀ ಗೋವಿಂದೇಗೌಡರು ಈಗ ಸದನದಲ್ಲಿಲ್ಲ, ಅವರು ಪ್ರಾಮಾಣಿಕರಾಗಿದ್ದು ಹಳ್ಳಿಗಾಡಿನ ವಿಚಾರಗಳನ್ನು ಚೆನ್ನಾಗಿ ತಿಳಿದುಕೊಂಡಿರುವಂಥ ಒಬ್ಬ ವಿದ್ಯಾ ಸಚಿವರಾಗಿದ್ದಾರೆ. ಮೊದಲು ನಾವು ಯಾವ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕೆಂಬುದನ್ನು ಸಚಿವರು ಯೋಚಿಸಿಬೇಕು. ಮಾನ್ಯ ಹಿರಿಯ ಸದಸ್ಯರಾದ ಮಲ್ಲಿಕಾರ್ಜುನ ಖರ್ಗೆಯವರೂ ಸಹ ಶಿಕ್ಷಣ ಸಚಿವರಾಗಿ ಕೆಲಸ ಮಾಡಿದ್ದಾರೆ. ನಮ್ಮ ಸರ್ಕಾರ 17 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಶಾಲಾ ಮಕ್ಕಳಿಗೆ ಉಚಿತವಾಗಿ ಸಮವಸ್ತ್ರಗಳನ್ನು ಹಾಗೂ 40 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಪೌಷ್ಠಿಕ ಆಹಾರವನ್ನು ಒದಗಿಸುತ್ತಿದೆ. ಒಟ್ಟು 57 ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಏನು ಖರ್ಚು ಮಾಡಲಾಗುತ್ತಿದೆ, ಇದನ್ನು ಸರ್ಕಾರ ಪುನರ್ ಪರಿಶೀಲಿಸಬೇಕೆಂದು ನನ್ನ ಅನ್ನಿಸಿಕೆಯಾಗಿದೆ. ಏಕೆಂದರೆ ಕೇಂದ್ರ ಸರ್ಕಾರ ಈಗ ಆಲೋಚನೆ ಮಾಡಿ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಉಪಹಾರದ ಕಾರ್ಯಕ್ರಮವನ್ನು ಜಾರಿಗೆ ತಂದಿದೆ. ಕೇಂದ್ರ ಸರ್ಕಾರದಂಥ ಸರ್ಕಾರಗಳು ಇಂತಹ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದಕ್ಕೆ ಶಕ್ತಿ ಇದೆ. ಅವರ ಹಣಕಾಸು ಪರಿಸ್ಥಿತಿ ಉತ್ತಮವಾಗಿದೆ.

ಆದರೆ,ರಾಜ್ಯ ಸರ್ಕಾರಗಳು ಇಂತಹ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದಕ್ಕೆ ಶಕ್ತಿ ಇರುವುದಿಲ್ಲ. ನಮ್ಮಲ್ಲಿ ಬೇಕಾದಷ್ಟು ಕಡೆಗಳಲ್ಲಿನ ಶಾಲೆಗಳಿಗೆ ಕಟ್ಟಡಗಳಿಲ್ಲ, ಶಿಕ್ಷಕರುಗಳಿಲ್ಲ. ಈ ಪರಿಸ್ಥಿತಿಯಲ್ಲಿ ಬೇಕಾಗಿರುವ ಇನ್‌ಫ್ರಾಸ್ಟ್ರಕ್ಚರ್ ಕಡೆ ನಾವು ಹೆಚ್ಚು ಗಮನಹರಿಸಿಲ್ಲ. ಎರಡು ಬಾಬುತ್ತುಗಳಲ್ಲಿ ಈ ವರ್ಷಕ್ಕೆ ಸಂಬಂಧಿಸಿದಂತೆ 57 ಕೋಟಿ ರೂಪಾಯಿಗಳನ್ನು ಏನು ಖರ್ಚು ಮಾಡುತ್ತಿದ್ದೀರಿ, ಅಷ್ಟು ಹಣವನ್ನು ಈ ವರ್ಷವೇ ಮಾಡುವುದಕ್ಕಾಗುತ್ತದೆಯೇ ಎಂಬುದು ನನಗೆ ಗೊತ್ತಿಲ್ಲ. ಈಗಾಗಲೇ ಅಗತ್ಯವಾದಷ್ಟು ಹಣವನ್ನು ಬಿಡುಗಡೆ ಮಾಡಿ ಶಾಲಾ ಮಕ್ಕಳಿಗೆ ಉಚಿತವಾಗಿ ಸಮವಸ್ತ್ರಗಳನ್ನು ಒದಗಿಸಿಕೊಟ್ಟಿದ್ದೀರಿ. ಅಲ್ಲದೆ, ರಾಜ್ಯದಲ್ಲಿರುವ ಕೆಲವು ಕಡೆಯ ಶಾಲೆಗಳಿಗೆ ತಿಂಗಳಿಗೆ ಇಂತಿಷ್ಟು ಕಿಲೋ ಪ್ರಮಾಣದಲ್ಲಿ ಪೌಷ್ಟಿಕ ಆಹಾರವನ್ನು ಕಲ್ಪಿಸತಕ್ಕ ವ್ಯವಸ್ಥೆ ಮಾಡಿದ್ದೀರಿ. ಈ ವರ್ಷ ಮುಗಿಯುತ್ತಾ ಬಂದಿದ್ದು, ಮುಂದಿನ ವರ್ಷಕ್ಕಾದರೂ ತಾವು ಯೋಜನೆ ಮಾಡಬೇಕು. ಈ ಯೋಜನೆ ಸರಿಯಾಗಿಲ್ಲ.

ಹಳ್ಳಿಗಾಡುಗಳಲ್ಲಿರುವ ಶಾಲಾ ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ಒದಗಿಸುತ್ತಿರುವ ಪದ್ಧತಿ ಬಗ್ಗೆ ನಾನು ಹೆಚ್ಚು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಈ ಯೋಜನೆ ಸಮರ್ಪಕವಾಗಿಲ್ಲವೆಂಬುದನ್ನು ಮಾತ್ರ ಎಲ್ಲಾ ಸದಸ್ಯರು ಒಪ್ಪಿಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ. ಆದುದರಿಂದ ಎರಡು ಯೋಜನೆಗಳಿಗೆ ನಿಗದಿಪಡಿಸಿರುವ 57 ಕೋಟಿ ರೂಪಾಯಿಗಳೇನಿದೆ, ಈ ಹಣವನ್ನು ಶಾಲಾ ಕಟ್ಟಡಗಳ ನಿರ್ಮಾಣಕ್ಕೆ ಉಪಯೋಗಿಸಿಕೊಳ್ಳಬೇಕೆಂಬುದು ನನ್ನ ಸಲಹೆ. ಈಗ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಸದನಕ್ಕೆ ಬಂದಿದ್ದಾರೆ. ಈ 57 ಕೋಟಿ ರೂಪಾಯಿಗಳ ಯೋಜನೆ ವರ್ಷದ ಮಧ್ಯದಲ್ಲಿ ನಿಲ್ಲಿಸುವುದಕ್ಕೆ ಸಾಧ್ಯವಾಗದಿರುವುದರಿಂದ ವಿದ್ಯಾ ವಿಕಾಸ ಯೋಜನೆಯಡಿ ಶಾಲಾ ಮಕ್ಕಳಿಗೆ ಪೌಷ್ಟಿಕ ಆಹಾರ ಮತ್ತು ಉಚಿತ ಸಮವಸ್ತ್ರಗಳನ್ನು ಏನು ಒದಗಿಸಿಕೊಡುತ್ತಿದ್ದೀರಿ, ಈ ಎರಡೂ ಯೋಜನೆಗಳನ್ನು ನಿಲ್ಲಿಸಿ ಬರುವ ವರ್ಷಕ್ಕೆ ಅಂದರೆ 1996-97ನೇ ಸಾಲಿನ ಸದರಿ ಹಣವನ್ನು ಶಾಲಾ ಕಟ್ಟಡಗಳಿಗಾಗಿ ಖರ್ಚು ಮಾಡುವಂಥ ಒಂದು ಯೋಜನೆಯನ್ನು ತಾವು ರೂಪಿಸಬೇಕೆಂಬುದು ನನ್ನ ಸಲಹೆಯಾಗಿದೆ. ಶಾಲಾ ಕಟ್ಟಡಗಳಿಗಾಗಿ ಆಯವ್ಯಯದಲ್ಲಿ ಒದಗಿಸತಕ್ಕಂಥ ಹಣವನ ನಾವು ನೋಡುತ್ತಿದ್ದೇವೆ. ಅದರ ಬಗ್ಗೆ ಅತೃಪ್ತಿ ಇದೆ. ಶಾಲಾ ಕಟ್ಟಡಗಳಿಗಾಗಿ ಈ ವರ್ಷದ ಆಯ-ವ್ಯಯದಲ್ಲಿ 8 ಕೋಟಿ 20 ಲಕ್ಷ ರೂಪಾಯಿಗಳನ್ನು ನಿಗದಿಪಡಿಸಿರುವ ಮಾಹಿತಿಯನ್ನು ನಾನು ತರಿಸಿಕೊಂಡು ನೋಡಿದೆ. ಈ ಹಣದಲ್ಲಿ ಪ್ರಾಥಮಿಕ ಶಾಲಾ ಕಟ್ಟಡಕ್ಕೆ ವಿಶೇಷ ಶಾಲೆ ನಡೆಸುವುದಕ್ಕೆ, ಕಟ್ಟಡಗಳನ್ನು ಕಟ್ಟಿಸಲು ಮತ್ತು ದುರಸ್ತಿ ಕೆಲಸಗಳೆಲ್ಲವನ್ನೂ ಸೇರಿಸಿಕೊಂಡಿದ್ದಾರೆ.

ಇಷ್ಟು ಹಣದಿಂದ ಏನೂ ಪ್ರಯೋಜನವಾಗುವುದಿಲ್ಲ. ಎಂಟು ಕೋಟಿ ರೂಪಾಯಿಗಳಷ್ಟು ಹಣವನ್ನು ನಿಗದಿಪಡಿಸುವುದಾರೆ ವರ್ಷದಿಂದ ವರ್ಷಕ್ಕೆ ಜಾಸ್ತಿ ಬಿದ್ದುಹೋಗಿರತಕ್ಕ ಶಾಲೆಗಳನ್ನು ನಾವು ನೋಡಬೇಕೇ ವಿನಹ ಕಟ್ಟಿರತಕ್ಕ ಶಾಲೆಗಳನ್ನು, ದುರಸ್ತಿಗೊಳಿಸಿರುವ ಶಾಲೆಗಳನ್ನೂ ಸಹ ನೋಡಲು ಸಾಧ್ಯವಾಗುವುದಿಲ್ಲ. ಆದುದರಿಂದ ವಿದ್ಯಾ ವಿಕಾಸ ಯೋಜನೆ ಮತ್ತು ಪುಸ್ತಕ ವಿತರಣಾ ಯೋಜನೆಗಿಂತ ಶಾಲೆಗಳನ್ನು ಕಟ್ಟಿಸುವ ಮತ್ತು ದುರಸ್ತಿಗೊಳಿಸುವುದರ ಕಡೆ ಹೆಚ್ಚು ಗಮನ ಕೊಡಬೇಕೆಂದು ನಾನು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಲ್ಲಿ ನನ್ನ ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಡಿ.ಪಿ.ಎ.ಪಿ. ಬಗ್ಗೆ ಹೇಳುವುದಾದರೆ ನಮ್ಮ ರಾಜ್ಯದಲ್ಲಿ ಈ ಕಾರ್ಯಕ್ರಮ ಬಹಳ ಉತ್ತಮವಾಗಿ ನಡೆಯುತ್ತಿದೆ. ಕಾರ್ಯಕ್ರಮದ ಉದ್ದೇಶ ಯಾವ ಹಳ್ಳಿಗಾಡಿನಲ್ಲಿ ಪ್ರಾಥಮಿಕ ಶಾಲೆ ಇಲ್ಲವೋ, ಆ ಹಳ್ಳಿಗಳಿಗೆ ಪ್ರಾಥಮಿಕ ಶಾಲಾ ಸೌಲಭ್ಯ ಕಲ್ಪಿಸಿಕೊಡಬೇಕೆಂಬುದೇ ಆಗಿದೆ. ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವಡಿ ನಮ್ಮ ರಾಜ್ಯದ ಮತ್ತು ಕೇಂದ್ರ ಸರ್ಕಾರದ ಪಾಲಿನ ಹಣವೇನಿದೆ, ಕೇಂದ್ರ

ಸರ್ಕಾರದಿಂದ ಹೆಚ್ಚು ಹಣ ಬರಬೇಕಾದರೆ ನೀವೂ ಸಹ ಹಣ ಕೊಡಬೇಕು. ನೀವು ಹೆಚ್ಚು ಹಣ ಈ ಯೋಜನೆಗೆ ಒದಗಿಸಿದರೆ ಕೇಂದ್ರದಿಂದಲೂ ಹೆಚ್ಚು ಹಣ ಬರುತ್ತದೆ. ಇದಲ್ಲದೆ,ಬೇರೆ ಬೇರೆ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದಕ್ಕೆ ಡಿಪಿಎಪಿ ಯಲ್ಲಿ ರಾಜ್ಯದ ಹಣವೇನಿದೆ, ಇದಕ್ಕೆ ತಾವು ಹೆಚ್ಚು ಹಣ ಒದಗಿಸಿದರೆ ಕೇಂದ್ರ ಸರ್ಕಾರದಿಂದಲೂ ಹೆಚ್ಚು ಹಣ ಬರುತ್ತದೆ. ಆದುದರಿಂದ, ಮ್ಯಾಚಿಂಗ್ ಗ್ರಾಂಟ್‌ನಲ್ಲಿ ಸರಿಯಾದ ಒಂದು ಯೋಜನೆ ಮಾಡಿಕೊಳ್ಳಬೇಕು. ಈ ಒಂದು ಸಲಹೆ ಕೊಡುತ್ತಾ, ಇನ್ನು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಕಡ್ಡಾಯವಾಗಿ ಹೆಣ್ಣುಮಕ್ಕಳು ಇರುವ ಕಡೆ ಶೌಚಾಲಯದ ವ್ಯವಸ್ಥೆಯನ್ನು ಮಾಡಲೇಬೇಕು. ಈಗ ತಾವು ಶೌಚಾಲಯ ನಿರ್ಮಿಸುವ ಕಾರ್ಯಕ್ರಮ ಹಾಕಿಕೊಂಡಿದ್ದೀರಿ. ಅದರಲ್ಲೂ ಹೆಚ್ಚಾಗಿ ಹೆಣ್ಣುಮಕ್ಕಳಿರುವ ಶಾಲೆಗಳಲ್ಲಿ ತಾವು ಶೌಚಾಲಯ ನಿರ್ಮಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂಬ ಸಲಹೆ ಕೊಡುತ್ತೇನೆ, ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹೇಳಬೇಕಾದ 2-3 ಪ್ರಾಮುಖ್ಯವಾದ ವಿಚಾರಗಳಿವೆ. ನಮ್ಮ ರಾಜ್ಯದಲ್ಲಿ ಬಹಳ ವಿಶ್ವವಿದ್ಯಾನಿಲಯಗಳಿವೆ. ಅದರಲ್ಲೂ ಮೈಸೂರು ವಿಶ್ವವಿದ್ಯಾನಿಲಯ ಬಹಳ ಪುರಾತನ ಕಾಲದ್ದಾಗಿದ್ದು, ಹೆಚ್ಚು ಹೆಸರುವಾಸಿಯಾದ ವಿಶ್ವವಿದ್ಯಾನಿಲಯವಾಗಿದೆ. ರಾಜ್ಯದಲ್ಲಿರುವ ವಿಶ್ವವಿದ್ಯಾನಿಲಯಗಳ ಅಧೀನದಲ್ಲಿ ಒಟ್ಟು 1250 ಕಾಲೇಜುಗಳಿವೆ. ಈ ವಿಶ್ವವಿದ್ಯಾನಿಲಯಗಳಲ್ಲಿ ಮತ್ತು ಹೆಚ್ಚಿನ ಕಾಲೇಜುಗಳಲ್ಲಿ ನಮಗೆ ಕಂಡುಬರುತ್ತಿರುವ ಒಂದೇ ಒಂದು ಕೊರತೆಯೆಂದರೆ ಹಣದ್ದು. ಹಣದ ಕೊರತೆಯಿರುವ ವಿಶ್ವವಿದ್ಯಾನಿಲಯಗಳ ಬಗ್ಗೆ ಮಾನ್ಯ ಉನ್ನತ ಶಿಕ್ಷಣ ಸಚಿವರಾದ ಮಂಜುನಾಥ್‌ರವರು ಹೆಚ್ಚು ಗಮನಹರಿಸಬೇಕೆಂಬುದು ನನ್ನ ಆಸೆಯಾಗಿದೆ. ಏಕೆಂದರೆ, ಇವೊತ್ತಿನ ದಿವಸ ರಾಜ್ಯದಲ್ಲಿರುವ ಆರು ವಿಶ್ವವಿದ್ಯಾನಿಲಯಗಳ ಅಧೀನದಲ್ಲಿ 1250 ಕಾಲೇಜುಗಳಿದ್ದು, ಅವುಗಳಿಗೆ ಒಂದೂ ಸ್ಟೇಡಿಯಂ ಇರುವುದಿಲ್ಲ, ಬೇಕಾದಷ್ಟು ಕಡೆಯಲ್ಲಿ ಕಟ್ಟಡಗಳಿಗಾಗಿ ನಿಧಿ ಇರುವುದಿಲ್ಲ, ಇನ್‌ಫ್ರಾಸ್ಟ್ರಕ್ಚರ್ ಇರುವುದಿಲ್ಲ. ವಿಶ್ವವಿದ್ಯಾನಿಲಯಗಳಲ್ಲಿ ಮತ್ತು ಕಾಲೇಜುಗಳಲ್ಲಿ ಈ ರೀತಿಯಾದ ವ್ಯವಸ್ಥೆಯಿರುವುದನ್ನು ಮನಗಂಡು ಪ್ರೊಫೆಸರ್ ನವನೀತರಾವ್‌ರವರ ಅಧ್ಯಕ್ಷತೆಯಲ್ಲಿ 1993ರಲ್ಲಿ ಒಂದು ಸಮಿತಿಯನ್ನು ರಚಿಸಿದ್ದರು. ಆ ಸಮಿತಿಯವರು ತಮ್ಮ ವರದಿಯನ್ನು ಸರ್ಕಾರಕ್ಕೆ 1994ರಂದು ಸಲ್ಲಿಸಿದರು. ವರದಿಯಲ್ಲಿ ಪ್ರಾಮುಖ್ಯವಾದ 4-5 ವಿಚಾರಗಳನ್ನು ಪ್ರಸ್ತಾಪಿಸಿರುವುದನ್ನು ನಾನು ನೋಡಿದ್ದೇನೆ. ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ರಾಜ್ಯ ಉನ್ನತ ಶಿಕ್ಷಣ ಪರಿಷತ್ತನ್ನು ಸ್ಥಾಪಿಸಬೇಕೆಂದು ಶಿಫಾರಸ್ಸು ಮಾಡಿದ್ದಾರೆ. ರಾಜ್ಯ ಉನ್ನತ ಶಿಕ್ಷಣ ಪರಿಷತ್ತನ್ನು ಸ್ಥಾಪಿಸುವುದರಲ್ಲಿ ಈಗಿರುವ ವಿಶ್ವವಿದ್ಯಾನಿಲಯಗಳಿಗೆ ಏಕರೂಪದ ಪಠ್ಯಕ್ರಮ, ಏಕರೂಪದ ಪರೀಕ್ಷೆ ಮತ್ತು ಏಕರೂಪದ ಆಡಳಿತವಿರಬೇಕೆಂಬುದು ಸಮಿತಿಯ ವರದಿಯಾಗಿದೆ.

ತಮಿಳುನಾಡಿನಲ್ಲಾಗಲಿ ಆಂಧ್ರಪ್ರದೇಶದಲ್ಲಾಗಲಿ ಏಳು ವರ್ಷಗಳ ಹಿಂದೆಯೇ ನವನೀತರಾವ್ ಸಮಿತಿಯ ವರದಿ ಜಾರಿಗೆ ಬಂತು. ಸಮಿತಿ ತನ್ನ ವರದಿಯಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಎರಡು ವಿಶ್ವವಿದ್ಯಾನಿಲಯಗಳನ್ನಾಗಿ ಮಾಡಬೇಕೆಂದು ತಿಳಿಸಿದೆ. ಅಲ್ಲದೆ. ಅದೇ ರೀತಿ ಮೈಸೂರು ವಿಶ್ವವಿದ್ಯಾನಿಲಯವನ್ನು ಹೈಯರ್ ಫೆಡರಲ್ ಯೂನಿವರ್ಸಿಟಿ ಎಂದು ಮಾಡುವುದಕ್ಕೆ ಸಲಹೆ ಮಾಡಿರುವುದರ ಕಡೆ ತಾವು ಗಮನಹರಿಸಬೇಕಾಗಿದೆ. ರಾಜ್ಯದಲ್ಲಿ ಇಂಜಿನಿಯರಿಂಗ್ ಕಾಲೇಜುಗಳನ್ನು ತೆರೆಯಬೇಕೆಂದು ನಾವು ರಿವ್ಯೂ ಮಾಡಿದ್ದೇವೆ. ಕಾಲೇಜುಗಳಿಗೆ ಯಾವ ರೀತಿ ಅಫಿಲಿಯೇಷನ್ ಕೊಡಲಾಗುತ್ತಿದೆಯೆಂಬುದು ತಮಗೆ ಗೊತ್ತಿದೆ. ಇದರ ಬಗ್ಗೆ ಅಫಿಲಿಯೇಷನ್ ಕಮಿಟಿ ಇದ್ದು, ಕಾಲೇಜುಗಳಿಗೆ ಅಫಿಲಿಯೇಷನ್ ಕೊಡಬೇಕಾದರೆ ಕಾಲೇಜುಗಳಲ್ಲಿರುವ ಇನ್‌ಫ್ರಾಸ್ಟ್ರಕ್ಚರ್ ಗಮನಿಸುತ್ತಾರೆ. ಶಿಫಾರಸ್ಸು ಮಾಡುತ್ತಾರೆ. ನಂತರ ಅದು ಪುನಃ ಸರ್ಕಾರದ ಮುಂದೆ ಬರಬೇಕು. ಇಷ್ಟೇ ಅಲ್ಲದೆ, ಸಮಿತಿ ತನ್ನ ವರದಿಯಲ್ಲಿ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿರುವ ಪ್ರೊ-ಛಾನ್ಸೆಲರ್ ಹುದ್ದೆಗಳನ್ನು

ರದ್ದುಪಡಿಸಬೇಕೆಂದು ಹೇಳಿದೆ. ಶೈಕ್ಷಣಿಕ ವಿಚಾರಕ್ಕೆ ಸಂಬಂಧಿಸಿದಂತೆ ಪೊಲಿಟಿಕ್ಸ್ ಮಿಕ್ಸ್ ಮಾಡುತ್ತಿದ್ದಾರೆಂದು ನಾನು ಹೇಳುವುದಿಲ್ಲ. ಈಗ ಆಂಧ್ರಪ್ರದೇಶ ಮತ್ತು ತಮಿಳುನಾಡುಗಳಲ್ಲಿನ ವಿಶ್ವವಿದ್ಯಾನಿಲಯಗಳಲ್ಲಿ ಛಾನ್ಸಲರ್ ಮತ್ತು ವೈಸ್ ಛಾನ್ಸಲರ್ ಹುದ್ದೆಗಳನ್ನಿಟ್ಟುಕೊಂಡು ಪ್ರೊ-ಛಾನ್ಸಲರ್ ಹುದ್ದೆಗಳನ್ನು ರದ್ದುಪಡಿಸಿದ ನಂತರ ಅಲ್ಲಿ ಸೆನೆಟ್ ಮತ್ತು ಸಿಂಡಿಕೇಟ್ ಇದೆ. ಆದರೆ, ಇಲ್ಲಿ ಏತಕ್ಕೆ ಇವರು ಒಪ್ಪುವುದಿಲ್ಲವೆಂದರೆ ಸೆನೆಟ್, ಸಿಂಡಿಕೇಟ್ ಹೊರಟುಹೋಗುತ್ತದಾದ್ದರಿಂದ ಈ ಸಮಿತಿಯವರು ಬೇಸರ ಪಡುತ್ತಾರೆ.

3.00 ಪಿ.ಎಂ.

ಶ್ರೀ ಡಿ. ಮಂಜುನಾಥ್ : ಈಗ ಪ್ರೊ-ವೈಸ್ ಛಾನ್ಸಲರ್ ಮಾಡಿ ಎಂದು ರೆಕಮೆಂಡ್ ಮಾಡಿದ್ದಾರೆ.

ಶ್ರೀ ಕೆ.ಎನ್. ನಾಗೇಗೌಡ : ಏನೂ ಕೆಲಸ ಇರುವುದಿಲ್ಲ. That's what I am telling. ಇದರ ಉದ್ದೇಶದಿಂದ ಅವರು ಮಾಡಿದ್ದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಎಲ್ಲಕ್ಕಿಂತ distortion ಏನೆಂದರೆ ಇದು ಎಫಿಷಿಯನ್ಸಿ ಬಗ್ಗೆ ಅವರು ಏನೇ ರೆಕಮೆಂಡ್ ಮಾಡಲಿ ಮಾಡುತ್ತಾರೆ. ಉದಾಹರಣೆಗೆ ಹೇಳುವುದಾದರೆ ಮೊದಲು ಬಿಎಡ್, ಟಿಸಿಹೆಚ್ ಕಂಪಲ್ಸರಿ ಇರಲಿಲ್ಲ. ಪಂಚವಾರ್ಷಿಕ ಯೋಜನೆಯಲ್ಲಿ ಯಾವುದೋ ನ್ಯಾಷನಲ್ ಟೀಚರ್ಸ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಅವರು ರೆಕಮೆಂಡ್ ಮಾಡಿದರು. ನಮ್ಮಲ್ಲಿ ಡಿ.ಎಸ್.ಈ.ಆರ್.ಟಿ. ಎಂದು ನಾವು ಕರೆಯುತ್ತೇವೆ. ಅವರು ರೆಕಮೆಂಡ್ ಮಾಡಿದರು. ರೆಕಮೆಂಡ್ ಮಾಡಿ ಟಿ.ಸಿ.ಹೆಚ್. ಮತ್ತು ಬಿಎಡ್ ಅವರು ಮಾಡಿಕೊಂಡು ಆ ಒಂದು ಇನ್‌ಕ್ಲಿನೇಷನ್ ತೋರಿಸಿ ಬಿಡುತ್ತಾರೆ. ಈಗ ಟ್ರೆಂಡ್ ಕೆಲಸನ್ನೂ ಆಗಿ ಬಿಡುತ್ತದೆ. ಆದ ಕೂಡಲೇ ನೀವು ಜಾಬ್‌ಗೆ ಕಾಲ್‌ಫಾರ್ ಮಾಡುತ್ತೀರಿ. ಆಗ ಒಂದು ಸೆಟ್ ಆಫ್ ಪೀಪಲ್ ಬಂದು ಬಿಡುತ್ತಾರೆ. ಬೇರೆಯವರಿಗೆ ಅದು ಅವಕಾಶ ಇರುವುದಿಲ್ಲ. ನೀವು ಏನು ಹೇಳುತ್ತೀರಿ ಎಂದರೆ ಕ್ವಾಲಿಫಿಕೇಷನ್ ಇಲ್ಲ ಅದಕ್ಕೆ ರಿಕ್ರೂಟ್‌ಮೆಂಟ್ ಮಾಡುವುದಿಲ್ಲ ಎಂದು ಈಗ ಯೂನಿವರ್ಸಿಟಿಯಲ್ಲಿ ಏನು ಮಾಡಿದ್ದೀರಿ ಅದಕ್ಕೆ ನಾನು ಬಹಳಷ್ಟು ಅಪೋಸ್ ಮಾಡಿದೆ. ಏನು ಮಾಡಿದ್ದಾರೆ ಎಂದರೆ ಅದು ಒಂದು ಸ್ಪೆಷಲ್ ಎಕ್ಸಾಮಿನೇಷನ್ ಇಟ್ಟಿದ್ದಾರೆ. ಅವರು ಎಮ್‌ಎಡ್ ಮಾಡಲಿ, ಬಿಎಡ್ ಮಾಡಲಿ, ಎಮ್‌ಎ ಫಸ್ಟ್‌ಕ್ಲಾಸ್ ಇರಲಿ, ಏನೇ ಇರಲಿ, ಅವನಿಗೆ ಜಾಬ್ ಇಲ್ಲ. ಇಲ್ಲಿಯವರೆಗೆ ಏನು ಇತ್ತು ಎಮ್.ಎ.ಫಸ್ಟ್ ಕ್ಲ್ಯಾಸ್, ಎಮ್.ಎ. ಸೆಕೆಂಡ್ ಕ್ಲ್ಯಾಸ್ ಇದ್ದವರಿಗೆ ತೆಗೆದುಕೊಳ್ಳುತ್ತಿದ್ದರು. ಈಗ ಅದೆಲ್ಲಾ ಭರ್ತಿಯಾಗುತ್ತಿದೆ ಎಂದು ತಿಳಿದುಕೊಂಡು ಅದಕ್ಕೆ ಒಂದು ಎಂಟ್ರೆನ್ಸ್ ಟೆಸ್ಟ್ ಇಡುತ್ತಾರೆ ಎನಟ್ರೆನ್ಸ್ ಟೆಸ್ಟ್ ಎಂದರೆ ಒಂದು ಬೇರೆ ರೀತಿಯ ಎಕ್ಸಾಮಿನೇಷನ್. ಅಂತಹ ಒಂದು ಎಕ್ಸಾಮಿನೇಷನ್ ಪಾಸ್ ಆದರೆ ಮಾತ್ರ ಅವರು ಅಪ್ಲಿಕೇಷನ್ ಹಾಕಬೇಕು. ಇಲ್ಲದೆ ಇದ್ದರೆ ಲೆಕ್ಚರರ್ ಪೋಸ್ಟ್‌ಗೆ ಹಾಕುವ ಹಾಗೆ ಇಲ್ಲ. ಹೀಗೆ ಮಾಡಿ ಒಂದೊಂದು ಹಂತಕ್ಕೆ ಒಂದೊಂದು ಡಿಸ್ಕರೇಜ್ ಮೆಂಟ್ ಮಾಡುತ್ತಾರೆ. ಇಲ್ಲ ನೀವು ರಿಕ್ರೂಟ್‌ಮೆಂಟ್ ಮಾಡಬೇಕು, ಬೇರೆಯವರನ್ನು ಸಾಮಾಜಿಕ ನ್ಯಾಯ ಸಿಗಬೇಕೆಂದರೆ ಅವರಿಗೆ ರಿಕ್ರೂಟ್‌ಮೆಂಟ್‌ಮಾಡಿ ಟ್ರೈನಿಂಗ್ ಕಳುಹಿಸಿ. ಐ.ಎ.ಎಸ್. ಆದವನು ವಿಲೇಜ್ ಅಕೌಂಟೆಂಟ್‌ನಿಂದ ಹಿಡಿದುಕೊಂಡು ತಹಶೀಲ್ದಾರ್ ಬಿ.ಡಿ.ಓ ದಿಂದ ಹಿಡಿದುಕೊಂಡು ಡಿ.ಸಿ.ಗೆ ಬರುತ್ತಾರೆ. ಅಂದಾಗ ನೀವು ಒಬ್ಬ ಲೆಕ್ಚರರ್ ಯಾವಾಗ ಎಮ್.ಎ. ಆದ ಮೇಲೆ ಅವರು ನೇರವಾಗಿ ಲೆಕ್ಚರರ್ ತೆಗೆದುಕೊಳ್ಳುತ್ತೀರಿ, ಫಸ್ಟ್ ಕ್ಲಾಸ್ ಇದ್ದವರು. ಸೆಕೆಂಡ್ ಕ್ಲಾಸ್ ಇದ್ದವರು ಏನೋ ನಿಮ್ಮ ಕ್ವಾಲಿಫಿಕೇಷನ್ ಮೇಲೆ ಮತ್ತೆ ಈಗ ಸಿಗದೇ ಇದ್ದರೆ ಆ ರಿಸರ್ವೇಷನ್ ಕೋಟಾದಲ್ಲಿ ಅಥವಾ ಎ.ಬಿ.ಸಿ. ಕ್ಯಾಟಗರಿಯಲ್ಲಿ ಯಾವುದೇ ಇರಲಿ ಸಿಗಲಿಲ್ಲ ಎಂದರೆ ನೀವು ರಿಕ್ರೂಟ್‌ಮೆಂಟ್

ಮಾಡಿ ಆ ಮೇಲೆ ಟ್ರೈನಿಂಗ್ ಕಳುಹಿಸಿ. ಅಲ್ಲಿ ನಿಮ್ಮ ಸ್ಟ್ಯಾಂಡರ್ಡ್‌ಗೆ ತಕ್ಕಂತಹ ಕ್ವಾಲಿಫಿಕೇಷನ್ ಅವನು ತೆಗೆದುಕೊಳ್ಳಲಿಲ್ಲ ಎಂದರೆ ಅವನಿಗೆ ಮನೆಗೆ ಕಳುಹಿಸಿ.

ಶ್ರೀ ಡಿ. ಮಂಜುನಾಥ್ : ಯಾನಿವರ್ಸಿಟಿ ಗ್ರಾಂಟ್ ಕಮಿಷನ್‌ನವರು ಗೈಡ್‌ಲೈನ್ಸ್ ಹಾಕಿದ್ದರು. ಇದು ಅವರು ಥ್ರೋಔಟ್ ಇಂಡಿಯಾ ಎನ್.ಇ.ಟಿ. ಟೆಸ್ಟ್ ಆಗಬೇಕಾಗಿದೆ. ಆ ಮೇಲೆ ಮಿನಿಮಿಮ್ ಮಾರ್ಕ್ಸ್ 55 ಇರಬೇಕು. ಇದು ಯೂನಿವರ್ಸಿಟಿ ಗ್ರಾಂಟ್ ಕಮಿಷನ್ ಗೈಡ್ ಲೈನ್ಸ್ ಈಗ ಯೂನಿವರ್ಸಿಟಿ ಸ್ಕೇಲ್ಸ್ ಕೊಟ್ಟಿದ್ದೇವೆ 1992ರಲ್ಲಿ ಆದಾದಮೇಲೆ ಇದನ್ನು ಹಾಕಿದ್ದಾರೆ. ನಮಗೆ ಏನಾಗಿದೆ ಒಂದು ಸಂಕಟ ಈ ಗ್ರಾಮಾಂತರ ಹುಡುಗರಿಗೆ ತುಂಬಾ ತೊಂದರೆಯಾಗುತ್ತಿದೆ. ನನಗೆ ಅದು ಗೊತ್ತಿದೆ. ಏಕೆಂದರೆ ಅವರು ಸೆಕೆಂಡ್ ಕ್ಲಾಸ್ ಬಂದರೂ ಇವತ್ತಿನ ದಿವಸ ಅವರ ಗೈಡ್‌ಲೈನ್ಸ್ ಪ್ರಕಾರ ಕೆಲಸ ಸಿಗುವುದಿಲ್ಲ. ಎನ್.ಇ.ಟಿ. ಪಾಸ್ ಆಗಬೇಕು. ನಾನು ಎರಡು ಸಾರಿ ಎನ್.ಇ.ಟಿ. ಎಕ್ಸಾಮಿನೇಷನ್ ಫಲಿತಾಂಶವನ್ನು ನೋಡಿದೆ. ಅದರಲ್ಲಿ 9 ಪರ್ಸೆಂಟ್ 10ಪರ್ಸೆಂಟ್ ಪಾಸ್ ಆಗುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಅದಕ್ಕಾಗಿಯೇ ಹೇಳಿದೆ This is the elimination process. ಎಂದು ನಾನು ಪ್ರೊಟೆಸ್ಟ್ ಮಾಡಿ ಲೆಟರ್ ಬರೆದಿದ್ದೇನೆ. ಎಲಿಮಿನೇಷನ್, ಪ್ರೋಸೆಸ್ ಯಾವಾಗ ಸ್ವಲ್ಪ ಅಕ್ಯುಮ್ಯುಲೇಷನ್ ಆಗುತ್ತದೆ. ಜಾಗ ಭರ್ತಿಯಾಗುತ್ತದೆ. ಎಂದು ಕಂಡ ಕೂಡಲೇ ಇನ್ನು ಒಂದು ರೈಡರ್ ಹಾಕುತ್ತಾರೆ. ಅದು ಪೂರ್ತಿಯಾದ ಮೇಲೆ ಅದು ನಿಧಾನವಾಗಿ ಮುಟ್ಟುವವರೆಗೆ ಇನ್ನು ಒಂದು ರೈಡರ್ ತಂದು ಇಡುವುದು.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೆ, ಅದರಿಂದ ನಾನು ಈ ನವನೀತ್‌ರಾವ್ ಕಮಿಟಿಯ ರಿಪೋರ್ಟ್‌ಗಳು ಇವೆ ಅದರಲ್ಲಿ ಇನ್ನು ಬಹಳ ಮಹತ್ವವಾದುದು ಏನಿದೆ ಎಂಬುದನ್ನು ಹೇಳುತ್ತೇನೆ. ಒಂದು ಯೂನಿವರ್ಸಿಟಿಯಿಂದ ಇನ್ನೊಂದು ಯೂನಿವರ್ಸಿಟಿಗೆ ಮಾರ್ಕ್ಸ್ ಬೇರೆಯಾಗುತ್ತವೆ.. ತಮಗೆ ಗೊತ್ತಿದೆ. ಒಂದು ಡಿಗ್ರಿ ಮಾರ್ಕ್ಸ್‌ಗಳೂ ಅವರ ಸಿಲಬಸ್ ಬೇರೆ. ಕೆಲವು ಕಡ್ ಮಾರ್ಕ್ಸ್ ಸಿಸ್ಟಮ್ ಬೇರೆ, ಅಲ್ಲಿ ಕರಪ್ಷನ್ ಬೇರೆ ಇರುತ್ತದೆ. ಅಲ್ಲಿಯ ಎಜ್ಯುಕೇಷನ್ ಸಿಸ್ಟಮ್ ಬೇರೆ ಇರುತ್ತದೆ. ಇದೆಲ್ಲಾ ಇರುತ್ತದೆ. ಅದಕ್ಕೋಸ್ಕರ ಅವರು ಯೂನಿಫಾರಂ ಆಗಿ ಒಂದು ಉನ್ನತ ಶಿಕ್ಷಣ ಪರಿಷತ್ತು ಮಾಡಿಕೊಂಡರೆ ಹೈ ಲೆವಲ್ ಎಜ್ಯುಕೇಷನ್ ಕೌನ್ಸಿಲ್ ಮಾಡಿ ಕೊಂಡರೆ ಎಲ್ಲಾ ಕೋ-ಆರ್ಡಿನೇಟ್ ಮಾಡಬಹುದು ಎಂದು ಹೇಳಿದ್ದಾರೆ. ತಮಿಳುನಾಡಿನಲ್ಲಿ, ಆಂಧ್ರದಲ್ಲಿ ಇರುವುದನ್ನು ತಾವು ತರಿಸಿ ನೋಡಬೇಕು, ಬಹಳ ಸಕ್ಸಸ್‌ಫುಲ್ ಆಗಿದೆ. ಈಗಾಗಲೇ ಯು.ಜಿ.ಸಿ. ಯವರು ತಮಗ ಕಾಗದ ಬರೆದಿದ್ದಾರೆ. ನಾನು ಒಂದು ಸಾರಿ ಯು.ಜಿ.ಸಿ.ಗೆ ಗ್ರಾಂಟ್ಸ್‌ಗೆ ಹೋಗುತ್ತಿದ್ದಾಗ, ರಾಮರೆಡ್ಡಿಯವರು ಇದ್ದರು. ಅವರು ತೀರಿ ಹೋದರು. ಅವರು ಯಾವಾಗಲೂ ಪ್ರಶ್ನೆ ಮಾಡುತ್ತಿದ್ದುದು ಎಂದರೆ ನಾವು ಯು.ಜಿ.ಸಿ.ಯವರು ಸ್ಟೇಟ್ ಗವರ್ನಮೆಂಟ್‌ಗೆ ಅನೇಕ ಕಾಗದಗಳನ್ನು ಬರೆದು ಒತ್ತಾಯ ಮಾಡಿದ್ದೇವೆ,

ಈ ಕೌನ್ಸಿಲ್ ಮಾಡಿ ಎಂದು ಅವರು ಕೊಡತಕ್ಕಂತಹ ದುಡ್ಡಿನಿಂದ ಏನೂ ಆಗುವುದಿಲ್ಲ, ನಿಮಗೆ ಗೊತ್ತಿರುವ ಹಾಗೆ ಈ ಫಂಡ್ ರೈಸ್ ಮಾಡತಕ್ಕಂಥದ್ದೇ ಈ ಕೌನ್ಸಿಲ್ ಇಂಟೆನ್‌ಷನ್. ಫಂಡ್ ರೈಸ್ ಮಾಡಬೇಕು ಎನ್ನತಕ್ಕಂಥದ್ದು, ನೀವು ರಾಜ್ಯಸರ್ಕಾರದವರು ನಿಜವಾಗಿ ಯೂನಿವರ್ಸಿಟಿಗೆ ಹಣ ಕೊಡುವುದಕ್ಕಾಗುವುದಿಲ್ಲ. ಈಗ ಅದನ್ನು ನೋಡಿದೆ. ಈ ಸಾರಿ ಬಿಲ್ಡಿಂಗ್ ಕಟ್ಟುವುದಕ್ಕೆ ಇಟ್ಟಿರುವ ಹಣ 97 ಲಕ್ಷ ರೂಪಾಯಿ. ಹೆಚ್ಚು ಕಡಿಮೆ ಸರ್ಕಾರಿ ಕಾಲೇಜುಗಳ ಸಂಖ್ಯೆ ಎಷ್ಟು ಇದೆ ಸಂಖ್ಯೆ ಸರಿಯಾಗಿ ಗೊತ್ತಿಲ್ಲ.

136 ಕಾಲೇಜುಗಳಿಗೆ ಬಿಲ್ಡಿಂಗ್ ರಿಪೇರಿಗಾಗಿ ಇಟ್ಟಿರತಕ್ಕಂತಹ ದುಡ್ಡು ಎಷ್ಟು ಎಂದರೆ 97 ಲಕ್ಷ ರೂಪಾಯಿ. ಇಡೀ ವರ್ಷಕ್ಕೆ ಆ ಮೇಲೆ ಅವರಿಗೆ ಅವರು ಆನ್ ಗೋಯಿಂಗ್ ಪ್ರಾಜೆಕ್ಟ್‌ಗೆ ಎಲ್ಲೆಲ್ಲಿ ಬಿಲ್ಡಿಂಗ್ ನಡೆಯುತ್ತಿವೆ ಅದು ಕಂಪ್ಲೀಟ್ ಮಾಡಬೇಕಾದರೆ ನಾಲ್ಕು ಕೋಟಿ ಹಣ ಬೇಕು. ಪುನಃ ನೀವು ಹೊಸ ಬಿಲ್ಡಿಂಗ್ ತೆಗೆದುಕೊಳ್ಳಬೇಕಾದರೆ ನನಗೆ ಬಂದಿರುವ ಮಾಹಿತಿ ಪ್ರಕಾರ ಆರು ಕೋಟಿ ರೂಪಾಯಿ ಬೇಕು. 10 ಕೋಟಿ ರೂಪಾಯಿಗೆ ಬದಲಾಗಿ ನೀವು ಒಂದು ಕೋಟಿ ರೂಪಾಯಿ ಹಣವನ್ನು 130 ಅಥವಾ ಹೆಚ್ಚು ಕಡಿಮೆ ಕಾಲೇಜುಗಳಿಗೆ ನೀವು ಹಣ ಇಡಲಿಲ್ಲ ಎಂದರೆ ರಾಜ್ಯ ಸರ್ಕಾರಗಳು ಹೈಯರ್ ಎಜ್ಯುಕೇಷನ್‌ಗಳಿಗೆ,ಈ ಬಿಲ್ಡಿಂಗ್ ಕಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ಬಹಳ ಕಡಿಮೆ ಇದೆ. ನೀವು ಮರೆತು ಬಿಡಿ. ನಾನು ಹೇಳುತ್ತೇನೆ. ಯಾವ ಸರ್ಕಾರ ಇರಲಿ ನೀವು ಇದ್ದರೂ ಅಷ್ಟೆ, ನಾವು ಇದ್ದರೂ ಅಷ್ಟೆ. ಅವರು ಇದ್ದರೂ ಅಷ್ಟೆ. ಯಾರಾದರೂ ಇದ್ದರೆ ಅಷ್ಟೆ ಅದು. ಅದಕ್ಕೆ ನೀವು ಅಲೋಕೇಷನ್ ವ್ಯವಸ್ಥೆ ಮಾಡಿಕೊಳ್ಳಬೇಕು. ಅದಕ್ಕೆ ಇಂತಹ ಕೌನ್ಸಿಲ್ ಎಸೆನ್‌ಷಿಯಲ್. ಕರ್ನಾಟಕ ಯೂನಿವರ್ಸಿಟಿಯಲ್ಲಿ ಒಂದೂವರೆ ವರ್ಷದ ಹಿಂದೆ ಒಂದು, ಎರಡು ಮತ್ತು ಮೂರು ಕೋರ್ಸಸ್‌ನಲ್ಲಿ ಎಲ್ಲಾ ಮಾಡಿ 8-9 ಕೋಟಿ ಯು.ಜಿ.ಸಿ. ಗ್ರಾಂಟ್ ತೆಗೆದುಕೊಂಡು ಬಂದರು. ಮೈಸೂರು ಯೂನಿವರ್ಸಿಟಿಗೆ ಇನ್ನು ಗ್ರಾಂಟ್ ಬಂದಿಲ್ಲ. ಏಕೆ ಈ ಮಾತು ಹೇಳುತ್ತಿದ್ದೇನೆ ಎಂದರೆ ಮಾನ್ಯ ನಮ್ಮ ಜೆ.ಹೆಚ್. ಪಟೇಲರಿಗೆ ಬಹಳ ಚೆನ್ನಾಗಿ ಗೊತ್ತು. ಸೆಂಟ್ರಲ್ ಗವರ್ನ್‌ಮೆಂಟ್‌ನಲ್ಲಿ ಯು.ಜಿ.ಸಿ.ಯವರು ಎಲ್ಲಾ ನಾರ್ಥ್ ಇಂಡಿಯಾದಲ್ಲಿ ಇರುವವರಿಗೆ ಏನೇನು ಅನುಕೂಲ ಮಾಡಿಕೊಡುತ್ತಾರೆಂದು.

ಊರ್ಮಿಳಾ ಪಟೇಲ್ ಇದ್ದರು ಅವರ ಹತ್ತಿರ ಹೋಗಿ ಮಾತನಾಡಿ ನಮಗೆ ರೀಜನಲ್ ಬ್ರಾಂಚ್ ಕೊಡಬೇಕೆಂದು ಹೇಳಿ. ರೀಜಿನಲ್ ಬ್ರಾಂಚ್ ಓಪನ್ ಮಾಡಿಸಿದೆವು. ಯು.ಜಿ.ಸಿ. ಗ್ರಾಂಟ್‌ನಲ್ಲಿ ಕೋಟ್ಯಾಂತರ ರೂಪಾಯಿಗಳು ಬರುತ್ತವೆ. ನಮ್ಮ ರಾಜ್ಯ ಸರ್ಕಾರದ ಸೋರ್ಸಸ್ ಎಲ್ಲಾ ಪ್ರೈಮರಿ, ಸೆಕೆಂಡರಿ ಎಜ್ಯುಕೇಷನ್ ಕಡೆ kindly divert the whole money. ಹೈಯರ್ education. you have to concentrate only with UGC and the Central Government funds. ನೀವು ರಾಜ್ಯ ಸರ್ಕಾರದಲ್ಲಿ ಕುಳಿತು ಪಕ್ಕದಲ್ಲಿ ಜೆ.ಹೆಚ್. ಪಟೇಲರು ನೀವೂ ಕುಳಿತು ಕೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೆ ನನ್ನದು ಥಿಂಕಿಂಗ್ ಏನೆಂದರೆ ನಾವು ಯು.ಜಿ.ಸಿ. ಯವರಿಗೆ ಬಹಳಷ್ಟು ಒತ್ತಾಯ ಮಾಡುತ್ತಾ ಇರತಕ್ಕಂತಹ ಸ್ಟೇಟ್ ಹೈಯರ್ ಎಜ್ಯುಕೇಷನ್ ಕೌನ್ಸಿಲ್ ರಿಪೋರ್ಟ್‌ನಲ್ಲಿ ಸಮಿತಿಯವರು 1994 ರಿಪೋರ್ಟ್ ಕೊಟ್ಟು ಒಂದು ವರ್ಷವಾಗಿರುವುದರಿಂದ ದಯವಿಟ್ಟು ನಿಮ್ಮ ಕಾಲದಲ್ಲಿ ಅದನ್ನು ಮಾಡಿ ನಿಜ ಅದು ಏನಾಗುತ್ತದೆ ಎಂದರೆ ಸೆನೆಟ್ ಮತ್ತು ಸಿಂಡಿಕೇಟ್ ಅಲ್ಲಿ ರದ್ದು ಮಾಡಿ. ಕಾಲೇಜಿಗೆ ಯಾವ ಪ್ರೋರ್ಷನ್ ಬೇಕು ಅದಕ್ಕೆ ರೆಕಮೆಂಡೇಷನ್ ಪ್ರೋರ್ಷನ್‌ನಲ್ಲಿ ಅದನ್ನು ನೀವು ಇಟ್ಟುಕೊಳ್ಳಿ ಅದಕ್ಕೆ ಯಾವ ಪ್ರೋರ್ಷನ್ ಬೇಡ ಅದನ್ನು ನೀವು ಖಂಡಿತವಾಗಿ ತೆಗೆದು ಹಾಕಬೇಕು. ಮತ್ತು ನಮ್ಮ ಮೈಸೂರು ಯೂನಿವರ್ಸಿಟಿಗೆ ಫೆಡರಲ್ ಯೂನಿವರ್ಸಿಟಿಯಾಗಿ ಮಾಡಿ ಎಂದು ಏನು ಹೇಳಿದ್ದಾರೆ. ಅದನ್ನು ಮಾಡಿ ಶ್ರೀ ಮಾಲಿಯವರು ನನಗೆ ವೈಸ್ ಚಾನ್ಸಲರ್ ಆಗಿದ್ದರು. The same Karnataka University Professor Sri Ramegowda was my lecturer.

ಅವರು ಕಂಪ್ಲೀಟ್ ಮಾಡಿಕೊಂಡು ಬಂದು ಇಂಜನಿಯರಿಂಗ್ ಕಾಲೇಜ್ ಲೆಕ್ಚರರ್ ಆಗಿ ಬಂದರು. ಶ್ರೀ ಮಾಲಿ ಅದರ ವೈಸ್ ಛಾನ್ಸಲರ್ ಆಗಿದ್ದಂತಹ ಕುವೆಂಪುರವರು ಇದ್ದಂಥ ಅದಕ್ಕೆ ಫೆಡರಲ್ ಯೂನಿವರ್ಸಿಟಿ ಎಂದು ಏನು ಹೇಳಿದ್ದಾರೆ, ದಯವಿಟ್ಟು ಅದನ್ನು ನಮ್ಮ ಈ ಅಕಾಡೆಮಿಕ್ ಈಯರ್ ಒಳಗೆ ಅದನ್ನು ಮಾಡಬೇಕು.

ಬೆಂಗಳೂರು ಯೂನಿವರ್ಸಿಟಿಯನ್ನು ನೀವು ಡಿವೈಡ್‌ಮಾಡಬೇಕು. ಅದನ್ನು ನಾನು ಓದಿದೆ, ನಿನ್ನೆ ಮೊನ್ನೆ ನಾನು ಎಲ್ಲಾ ತರಿಸಿಕೊಂಡು ನೋಡಿದಾಗ that is the most practical suggestion he made actually. ಸಮ್ ಪೋರ್ಷನ್ ನಿಮಗೆ ಯಾವ್ಯಾವುದು ಅಡ್ಮಿನಿಸ್ಟ್ರೇಷನ್ ನಮಗೆ ಪ್ರಾಬ್ಲಮ್ ಬರುತ್ತದೆ ಅಡ್ಮಿನಿಸ್ಟ್ರೇಷನ್ ನಿಮ್ಮ ಕೈಯಲ್ಲಿ ಆಗುವುದಿಲ್ಲ, ಫೈನಾನ್‌ಷಿಯಲ್ ನಮಗೆ ಪ್ರಾಬ್ಲಮ್ ಬರುತ್ತದೆ. ರಾಜ್ಯ ಸರ್ಕಾರಕ್ಕೆ ಇರತಕ್ಕಂತಹ ಫೈನಾನ್‌ಷಿಯಲ್ ಸ್ಟ್ರೆಂಗ್ತ್ ಒಳಗಡೆ ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ, ಅಂಥದ್ದನ್ನು ನೀವು ಡಿಲೀಟ್ ಮಾಡಿದರೆ ನಮಗೆ ಅಭ್ಯಂತರವಿಲ್ಲ, ಆದರೆ ಇಂಥದ್ದನ್ನು ನೀವು ಮಾಡತಕ್ಕಂಥದ್ದು ಬಹಳ ಒಳ್ಳೆಯದು. ಇದನ್ನು ಮಾಡಬೇಕು. ಕೆಲವು ಕಾಲೇಜುಗಳಿಗೆ ಅಟಾನಮಸ್ ಕೇಳುತ್ತಿದ್ದಾರೆ. ಬೇಡ ಎಂದು ಹೇಳುತ್ತೀರಿ, ನಮ್ಮ ತುಮಕೂರಿನ ಸಿದ್ದಗಂಗಾ ಕಾಲೇಜ್ ಇದೆ. ನೀವು ಅಟಾನಮಸ್ ಕೊಟ್ಟರೆ ಏನು ತೊಂದರೆ?

ಶ್ರೀ ಡಿ. ಮಂಜುನಾಥ್ : ಡಿಗ್ರಿ ಪೋಸ್ಟ್‌ಗ್ರಾಜ್ಯುಯೇಷನ್ ಇದೆ. ಈಗ ನಾವು ಡಿಸ್ಕರೇಜ್ ಮಾಡುವುದು ಏನೆಂದರೆ ಡಿಗ್ರಿ ಕಾಲೇಜಿನಲ್ಲಿ ಎಂ.ಎ.ಎಂ.ಎಸ್.ಸಿ. ಬೇಡ ಎಂದು.

ಶ್ರೀ ಕೆ.ಎನ್. ನಾಗೇಗೌಡ : ಅಧ್ಯಕ್ಷರೆ, ಅಲ್ಲಿ ಏನಾಗಿದೆ ಈ ಯೂನಿವರ್ಸಿಟಿ ಬಗ್ಗೆ ನಾನು ನಿಮ್ಮ ಜೊತೆ ಮಾತನಾಡುತ್ತೇನೆ. ಕಾಲ ಇಲ್ಲ. ಈ ಬಗ್ಗೆ ಅಫಿಲಿಯೇಷನ್ ಕಮಿಟಿ ಅದರದ್ದೂ ಇದರದ್ದೂ ಬಹಳ ಸಮಸ್ಯೆಗಳು ಇವೆ. ಆದ್ದರಿಂದ ಇದು ಒಂದು ಥಿಂಕಿಂಗ್ ನೀವು ನೋಡಬೇಕು. ಯಾವುದಕ್ಕೆ ಅಟಾನಮಸ್ ಕೊಡಬೇಕೆಂದು ಎನ್ನುವುದನ್ನು ಮಾತ್ರ ಬಹಳ ಕೇರ್‌ಫುಲ್ಲಾಗಿ ನೋಡಬೇಕಾಗುತ್ತದೆ. ಅಷ್ಟು ಸುಲಭವಾಗಿ ಮಾಡಿ ಎಂದು ನಾನು ಹೇಳುವುದಿಲ್ಲ, ಆದರೆ ಎಲ್ಲಿ ಸಾಕಷ್ಟು ವ್ಯವಸ್ಥೆ ಇದೆ. ಸಾಕಷ್ಟು ಇನ್‌ಫ್ರಾಸ್ಟ್ರಕ್ಚರ್, ಲ್ಯಾಬೋರೇಟರಿ, ಲೈಬ್ರರಿ, ಬಿಲ್ಡಿಂಗ್ ಸ್ಟೂಡೆಂಟ್ಸ್, ಕ್ವಾಲಿಫೈಡ್ ಸ್ಟ್ಯಾಫ್ ಅಥವಾ ಫೈನಾನ್‌ಷಿಯಲ್ position of the education institution ಎಲ್ಲಿ ಸೌಂಡ್ ಇದೆ ಅಲ್ಲಿ ಬಹಳ ವರ್ಷ ಇರಬಹುದು, 50 ವರ್ಷಗಳಿಂದ 60 ವರ್ಷ ಇರತಕ್ಕಂತಹ ಕಡೆ ನೋಡಿ ಕೊಡತಕ್ಕಂಥದ್ದು. ನೀವು ಯೋಚನೆ ಮಾಡಬೇಕೆಂದು ನಮ್ಮ ಸಲಹೆ. ಆದರೆ ಈ ಕಮಿಟಿಯಲ್ಲಿ ಏನು ಮೂರು ಮಾಡಿದ್ದಾರೆ ಟೆಕ್ನಿಕಲ್ ಯೂನಿವರ್ಸಿಟಿ, ಮೆಡಿಕಲ್ ಯೂನಿವರ್ಸಿಟಿ ಮತ್ತು ಓಪನ್ ಯೂನಿವರ್ಸಿಟಿ ಆ ಎರಡು ಯೂನಿವರ್ಸಿಟಿ ನೀವು ಮಾಡದೇ ಇದ್ದರೆ ನನಗೆ ಚಿಂತೆ ಇಲ್ಲ, ಟೆಕ್ನಿಕಲ್ ಮತ್ತು ಮೆಡಿಕಲ್ ಯೂನಿವರ್ಸಿಟಿ ಅವೆರಡೂ ಮಾಡದೇ ಇದ್ದರೆ ಚಿಂತೆ ಇಲ್ಲ,

ಆದರೆ ಓಪನ್ ಯೂನಿವರ್ಸಿಟಿ ಮಾಡಬೇಕು. These are the new ideas. ಇನ್ನು ಹೊಸ ಹೊಸದಾಗಿ ಮಕ್ಕಳಿಗೆ ಕತೆ ಹಿಸ್ಟರಿ, ಕತೆ ಮ್ಯಾಥಮಿಟಿಕ್ಸ್, ಕತೆ ಫಿಸಿಕ್ಸ್ ಅವೆಲ್ಲಾ ಹೇಳಿಕೊಂಡು ಹೋದರೆ ಯಾರಿಗೂ ಕೆಲಸ ಸಿಗುವುದಿಲ್ಲ, ಬೇರೆ ಬೇರೆ ರೀತಿಯಲ್ಲಿ ಓಪನ್ ಯೂನಿವರ್ಸಿಟಿಯಲ್ಲಿ ಮತ್ತು ಬೇರೆ ಬೇರೆ ಕೋರ್ಸಸ್ ಮಾಡುವ ಹಾಗೆ ನಾವು ಈ ಸಾರಿ ಮಾತ್ರ ಓಪನ್ ಯೂನಿವರ್ಸಿಟಿಯನ್ನು ಅಥವಾ ತಾವು ಡಿಮ್ಯಾಂಡ್ ಮೇಲೆ ರಿಪ್ಲೇ ಮಾಡುವಾಗ ಮಾಡಬೇಕು. I am so particular about higher education. ನಿಮಗೆ ಒಳ್ಳೆಯ ಇಲಾಖೆ ಇದೆ, ಮೇಸ್ಟು ಇಲ್ಲ, ಎಂದು ಗೋವಿಂದೇಗೌಡರು ಬಯಿಸಿಕೊಳ್ಳಲಿ. ಆದರೆ ನಿಮಗೆ ಮಾಡುವುದಕ್ಕೆ ಒಳ್ಳೊಳ್ಳೆಯ ಅವಕಾಶ ಇದೆ. ಅವರಿಗೆ ಮೇಸ್ಟು ಇಲ್ಲ, ಬಿಲ್ಡಿಂಗ್ ಇಲ್ಲ ಎಂದು ಅವರಿಗೆ ಅವರದೇ ಆದ ಸಮಸ್ಯೆಗಳು ಇರುತ್ತವೆ. ಈ ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ಕೇಂದ್ರ ಸರ್ಕಾರ ಪರಿಹಾರಕ್ಕೆ ಬರಬೇಕು ಎಂದು ನಾನು ಪ್ರಾರಂಭದಲ್ಲಿ ಹೇಳಿದೆ.

ನಿಮ್ಮ ಸಮಸ್ಯೆ ಬಗೆಹರಿಸಬೇಕಾದರೆ ಕೇಂದ್ರ ಸರ್ಕಾರದವರು ರಾಜ್ಯಾಂಗ ವಿಧಿ ಪ್ರಕಾರ ಹಣ ಕೊಟ್ಟುಕೊಂಡು ಈ ಕೇರ್ ಅವರೇ ತೆಗೆದುಕೊಳ್ಳಬೇಕಾಗುತ್ತದೆ. ಇದಕ್ಕೆ ಬೇಕಾಗುವಷ್ಟು ಬಿಲ್ಡಿಂಗ್ ಫಂಡ್ಸ್ ಅವರೇ ಕೊಡಬೇಕಾಗುತ್ತದೆ. ಡಿಪಿಎಪಿ ಪ್ರೋಗ್ರಾಂಗೆ ನೂರು ಪರ್ಸೆಂಟ್ ಅವರೇ ಮಾಡಬೇಕಾಗುತ್ತದೆ. ಬರುವ ವರ್ಷದಿಂದ ಮಾಡಲೇಬೇಕು. ಮಾಧವರಾವ್ ಸಿಂಧ್ಯಾರವರು ಮೊನ್ನೆ ಹೇಳಿದ್ದಾರೆ. ಎರಡು ಸಾವಿರ ವರ್ಷದೊಳಗೆ ಇದನ್ನು ಪೂರ್ತಿ ಮಾಡುತ್ತೇವೆ ಎಂದು. ಅವರು ಮಾಡಲೇ ಬೇಕು. ಬೇರೆ ಮಾರ್ಗ ಇಲ್ಲ. ರಾಜ್ಯ ಸರ್ಕಾರದಲ್ಲಿ ಅಷ್ಟು ಹಣಕಾಸಿನ ವ್ಯವಸ್ಥೆ ಇಲ್ಲ. ಯಾರು ಬಂದರೂ ಮಾಡುವುದಕ್ಕಾಗುವುದಿಲ್ಲ, ಅದು ಒಂದು ಇನ್ನು ತಾವು ಓಪನ್ ಯೂನಿವರ್ಸಿಟಿ ಮಾಡಬೇಕು. ಇದು ನನ್ನ ಅನಿಸಿಕೆ. ಮತ್ತು ಕಾಪಿ ಹೊಡೆಯತಕ್ಕಂಥ ಸಿಸ್ಟಂ ಅನ್ನು ತಾವು ಯಾವ ರೀತಿ ತಪ್ಪಿಸುತ್ತೀರಿ ಎಂಬುದನ್ನು ನೋಡಬೇಕು. ತಾವು ಮಾಸ್ ಕಾಪಿ ಬಗ್ಗೆ ಬಹಳ ಎಚ್ಚರಿಕೆಯಿಂದ ಮಾಡಬೇಕು. ವಿಜಿಲೆನ್ಸ್ ಎಲ್ಲಾ ಇದೆ. ಇಲ್ಲಾ ಎಂದು ನಾನು ಹೇಳುವುದಿಲ್ಲ, ನಿಮ್ಮ ವಿಜಿಲೆನ್ಸ್ ಇದೆ, ಕೆಲವು ಯೂನಿವರ್ಸಿಟಿಗಳಲ್ಲಿ ತುಂಬಾ ಚೆನ್ನಾಗಿ ಮಾಡುತ್ತಿದ್ದಾರೆ. ಕೆಲವು ಕಾಲೇಜುಗಳಲ್ಲಿ ಅವಕಾಶ ಮಾಡಿಕೊಡುವುದಿಲ್ಲ, ನಾವು ಕಂಡ ಹಾಗೆ ಕೆಲವು ಕಾಲೇಜುಗಳಲ್ಲಿ ಖಂಡಿತ ಮಾಡಿ ಕೊಡುವುದಿಲ್ಲ, ಮ್ಯಾನೇಜ್‌ಮೆಂಟ್‌ನವರು ಒಪ್ಪುವುದಿಲ್ಲ, ಅಲ್ಲಿನ ಸ್ಟಾಫ್‌ನವರೂ ಸಹ ಬಹಳ ಸ್ಟ್ರಿಕ್ಟ್ ಆಗಿ ಇರುತ್ತಾರೆ. ಹೊರಗಡೆಯಿಂದ ಬಂದಂತಹ ಸೂಪರಿಂಟೆಂಡೆಂಟ್ ಸ್ಟ್ರಿಕ್ಟ್ ಆಗಿ ಇರುತ್ತಾರೆ. ಕೆಲವು ಕಾಲೇಜುಗಳಲ್ಲಿ ಈ ಮಾಸ್ ಕಾಪಿ ಮಾಡತಕ್ಕಂಥದ್ದನ್ನು ನಿಲ್ಲಿಸಲೇ ಬೇಕು. ಅದೇ ರೀತಿ ಹೈಯರ್ ಎಜುಕೇಷನ್‌ನಲ್ಲಿ 2-3 ಕಡೆ ಹೆಚ್ಚು ಗಮನ ಕೊಡಬೇಕು. ಈಗ ಸ್ವಲ್ಪ ಕಡಿಮೆ ಇರಬಹುದು, ಅದರೆ ಈ ಕಡೆ ಗಮನ ಕೊಡುವುದರ ಅವಶ್ಯಕತೆ ಇದೆ. ಮತ್ತೊಂದು ವಿಚಾರ ಹೇಳುವುದಾದರೆ ನಾವು ಸಾವಿರ ಕೋಟಿ ರೂಪಾಯಿಯಷ್ಟು ಹಣವನ್ನು ಸಂಬಳವಾಗಿ ಕೊಡುತ್ತಿದ್ದೇವೆ. ಸಂಬಳ ಕೊಡುವುದಕ್ಕೆ ವಿದ್ಯಾ ಇಲಾಖೆ ಇರುವುದು. ನೀವು ಎಷ್ಟು ಹಣ ಕೊಡುತ್ತೀರಿ ಅದರಲ್ಲಿ 90 ಪರ್ಸೆಂಟ್ ಸಂಬಳಕ್ಕೆ ಹೋಗುತ್ತಿದೆ. ಇನ್ನು ಏನೂ ಇಲ್ಲ,

ಶಾಶ್ವತ ಅನುದಾನ, ಕಾಲೇಜುಗಳಿಗೆ ಏಡೆಡ್ ಎಂದು ಕೊಡುತ್ತಾ ಬಂದಿದ್ದೀರಿ. ವರ್ಷ ವರ್ಷಕ್ಕೆ ನಿಮಗೆ 10, 15, 20 ಇನ್ಸಿಟಿಟ್ಯೂಷನ್ ಗ್ರಾಂಟ್ ಇನ್ ಏಡ್ ಎಂದು ಬರುತ್ತಾ ಹೋದರೆ ನೀವು ಈ ಕಡೆ ಸ್ಯಾಂಕ್ಷನ್ ಮಾಡುತ್ತಾ ಹೋದರೆ, ನಂತರ ನೀವು ಮುಂದೆ ಎಷ್ಟು ವರ್ಷ ಕೊಡುತ್ತೀರಿ? ಇದನ್ನು ಒಂದು ಕಡೆ ನಿಲ್ಲಿಸಬೇಕಾಗುತ್ತದೆ. ಯಾವುದಾದರೂ ಒಂದು ಕಡೆ, ಯಾವುದಾದರೂ ಒಂದು ಹಂತದಲ್ಲಿ ನಿಲ್ಲಿಸಬೇಕಾಗುತ್ತದೆ. ಇದರ ಬಗ್ಗೆ ಒಂದು ಯೋಜನೆ ಮಾಡಿ ಇನ್ನು 5 ವರ್ಷಗಳಿಗಾದರೂ ತೆಗೆದುಕೊಂಡು ಬನ್ನಿ. ಸರ್ಕಾರ ಸಂಬಳ ಕೊಟ್ಟ ಮೇಲೆ ಹೆಚ್ಚು ಕಡಿಮೆ ಎಲ್ಲಾ ವಹಿಸಿಕೊಂಡ ಹಾಗೆ ಆಗುತ್ತದೆ. ಆದುದರಿಂದ ನೀವು ಇದರ ಬಗ್ಗೆ ಯೋಚನೆ ಮಾಡಬೇಕು ಮತ್ತು ನಿಮ್ಮ ಡಿಪಾರ್ಟ್‌ಮೆಂಟ್‌ನಲ್ಲಿ ಇಂಗ್ಲೀಷ್ ಮತ್ತು ಸೈನ್ಸ್ ಲೆಕ್ಚರರ್ಸ್ ಇಲ್ಲ, ತಾವು ಏನಾದರೂ ಮಾಜಿ ಲೆಕ್ಚರರ್ಸ್ ಅನ್ನು ತುಂಬಬೇಕು.

ಅದರಲ್ಲೂ ಗ್ರಾಮಾಂತರ ಪ್ರದೇಶಗಳಲ್ಲಿ ಇರುವಂತಹ ಮಕ್ಕಳಿಗೆ ಅವರು ಮೊದಲೇ ಇಂಗ್ಲೀಷ್ ನಾಲೆಡ್ಜ್‌ನಲ್ಲಿ ಪೂರ್‌ಇರುತ್ತಾರೆ. ಮ್ಯಾಥಮ್ಯಾಟಿಕ್ಸ್ ನಾಲೆಡ್ಜ್‌ನಲ್ಲಿ ಪೂರ್ ಇರುತ್ತಾರೆ, ಸೈನ್ಸ್ ನಾಲೆಡ್ಜ್‌ನಲ್ಲಿ ಪೂರ್ ಇರುತ್ತಾರೆ. ಇದರ ಬಗ್ಗೆ ಮಾಡಬೇಕು ಎಂದು ನಾನು ತಮ್ಮಲ್ಲಿ ಕೊನೆಯದಾಗಿ ತಿಳಿಸುತ್ತಾ ನಾನು ನೋಡಿದ ಹಾಗೆ ನಮ್ಮ ಶಂಕರ ಗೌಡರು ಅತ್ಯುತ್ತಮ ವಿದ್ಯಾಮಂತ್ರಿಗಳಾಗಿದ್ದರು. ಅದಾದ ಮೇಲೆ ಬೇಕಾದಷ್ಟು ಜನ ಬಂದಿರಬಹುದು, ನಾನು ಬಂದಿಲ್ಲ ಎಂದು ಹೇಳುವುದಿಲ್ಲ, ಅವರು ಗ್ರಾಂಟ್

ಇನ್‌ಪಿಡ್ ತಂದರು, ಚೆಕ್ ಸಿಸ್ಟಂ ತಂದಿದ್ದು, ಮತ್ತೊಂದು, ಮಗದೊಂದು ಎಲ್ಲಾ ಸಮಗ್ರವಾಗಿ ಮಾಡಿ ಹೆಸರು ಪಡೆದುಕೊಂಡರು. ಬಹಳ ಒಳ್ಳೆಯ ಶಿಕ್ಷಣ ಮಂತ್ರಿಗಳು ಎಂದು ನಾವೆಲ್ಲರೂ ಹೇಳಿಕೊಳ್ಳುತ್ತಿದ್ದೆವು. ಇನ್ನು ಟ್ರಾನ್ಸ್‌ಫರ್ ಸಿಸ್ಟಂ ಅನ್ನು ತರಲು ಸಾಧ್ಯವೇ ಎಂಬುದನ್ನು ನೋಡಿ. ಕಾಲೇಜು ಟು ಕಾಲೇಜು. ಈಗ ಎಲ್ಲಿ ಏಡೆಡ್ ಇನ್ಸಿಟಿಟ್ಯೂಷನ್ ಇವೆ ಎಂದರೆ ಪ್ರೈವೇಟ್ ಇನ್ಸಿಟಿಟ್ಯೂಷನ್ ಅಲ್ಲಿ ಟ್ರಾನ್ಸ್‌ಫರ್ ಇಲ್ಲ. ಅವನು ಅಲ್ಲಿ ಬಂದು ಸೇರಿಕೊಂಡರೆ ರಿಟೈರ್ಸ್ ಆಗುವವರೆಗೂ ಅವನು ಅಲ್ಲಿಯ ಯಾವುದೇ ಅಳಿಯ, ಯಾವುದೋ ಮಾವ, ಏನೋ ಸಂಬಂಧ ಇರುತ್ತದೆ. ಸೇರಿಕೊಂಡು ಇರುತ್ತಾನೆ ಅಲ್ಲಿ, ಇವೆಲ್ಲಾ ಅನುದಾನಕ್ಕೆ ಯಾವುದೋ ಕತೆ, ಸೇರಿಕೊಂಡು ಬಿಟ್ಟಿರುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಗೌಡರೇ ಒಂದು ವಿಚಾರ ನಾನು ಕೇಳಬೇಕು ಎಂದು ಇದ್ದೆ. ಅವರು ಎಂಬ್ರೇಸ್ ಆಗಬಹುದು ಎಂದು ಹೇಳಿ ಬಿಟ್ಟೆ. ಇಡೀ ಸ್ಟೇಟ್‌ನಲ್ಲಿ the lowest percentage of passing SSLC Examination is in Mandya and next comes Raichur. ಇದು ಏನು ಕಾರಣ ಎಂದು ಗೊತ್ತಾಗುತ್ತಿಲ್ಲ, ಏಕೆಂದರೆ ಅನೇಕ ಘಟಾನುಘಟಿಗಳು ತಾವು ಆ ಭಾಗದಿಂದ ಬರುತ್ತಿದ್ದೀರಿ. ಮತ್ತು ಮಂಡ್ಯ ಬೆಂಗಳೂರಿಗೆ ಬಹಳ ಸಮೀಪ ಇದೆ. ಹಾಗೂ ಆರ್ಥಿಕವಾಗಿ ಅನುಕೂಲವಾಗಿ ಇದ್ದಾರೆ. ಅಲ್ಲಿ ಪೂರ್ತಿ ಇರಿಗೇಷನ್ ಇದೆ. ಅಲ್ಲಿ ಪಾಸಿಂಗ್ ಪರ್ಸಟೇಂಜ್ ಕಡಿಮೆ. ಮಂಡ್ಯ ಆದಮೇಲೆ ನೆಕ್ಸ್ಟ್ ಬರುವುದು ರಾಯಚೂರು ಮತ್ತು ಹಾಸನ. ಇದು ಏನು ನನಗೆ ತಿಳಿಯುತ್ತಿಲ್ಲ, ಆದುದರಿಂದ ತಾವು ಸ್ವಲ್ಪ ಇದರ ಮೇಲೆ ಬೆಳಕು ಚೆಲ್ಲಿದರೆ ಒಳ್ಳೆಯದು.

ಶ್ರೀ ಕೆ.ಎನ್. ನಾಗೇಗೌಡ : ಮಂಡ್ಯದಲ್ಲಿ ರಿಸಲ್ಟ್ ಕಡಿಮೆ ಬರುತ್ತಿದೆ ನಿಜ, ಅದು ಇಲ್ಲಾ ಎಂದು ನಾವು ಹೇಳುವುದಿಲ್ಲ, ಅದಕ್ಕೆ ಏನು ಕಾರಣ ಎಂದು ನಾನು ಹೇಗೆ ಹೇಳಲಿ? ನನಗೆ ಅರ್ಥವಾಗುವುದಿಲ್ಲ, ಅದಕ್ಕೆ ಒಂದಲ್ಲ ಒಂದು ವಿಚಾರ ನಾನು ಅದರ ಬಗ್ಗೆ ವಿಷಾದ ವ್ಯಕ್ತ ಮಾಡಬಹುದು ಅಷ್ಟೆ.

ಶ್ರೀ ಜೆ.ಹೆಚ್. ಪಟೇಲ್ : ಕಾರಣವನ್ನು ಮಾನ್ಯ ಸದಸ್ಯರೇ ಹೇಳಿದರು. ಸ್ವಲ್ಪ ಅನುಕೂಲವಾಗಿ ಇದ್ದಾರೆ, ನೀರಾವರಿ ಇದೆ, ಮತ್ತೆ ಏಕೆ ಓದುವುದಕ್ಕೆ ಹೋಗುತ್ತಾರೆ? ತೀರಾ ಬಡತನ ಇದ್ದು ಏನಾದರೂ ಮಾಡಿ ಓದಬೇಕು, ಕೆಲಸ ತೆಗೆದುಕೊಳ್ಳಬೇಕು ಎಂದು ಅಂತಹ ಕಡೆ ಇರುವ ಜನ ಓದುತ್ತಾರೆ. ಮಂಡ್ಯದಲ್ಲಿ ಸ್ವಾಭಾವಿಕವಾಗಿ ಓದುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆರ್ಥಿಕ ಪರಿಸ್ಥಿತಿ ಸರಿಯಿಲ್ಲ ಎಂದು ಹೇಳಿ ಮಕ್ಕಳಿಗೆ ಆ ಪ್ರೋಟೀನ್, ಈ ಪ್ರೋಟೀನ್ ಕೊಡಿ, ಆ ಫುಡ್, ಈ ಫುಡ್, ಮಿಡ್‌ಮೇ ಮೀಲ್ಸ್ ಕೊಡಿ ಎಂದು ಮಾಡುತ್ತೀರಿ. ಇಲ್ಲಿ ಆರ್ಥಿಕ ಪರಿಸ್ಥಿತಿ ಇದ್ದರೂ ಏಕೆ ಈ ರೀತಿ ಆಗುತ್ತಿದೆ.

ಶ್ರೀಮತಿ ಬಿ.ಟಿ. ಲಲಿತಾನಾಯಕ್ : ಆರ್ಥಿಕ ಪರಿಸ್ಥಿತಿ ಸರಿಯಿದ್ದಾಗ ಕೆಲವು ಸಾರಿ ಮಾನ್ಯ ಉಪಮುಖ್ಯಮಂತ್ರಿಗಳು ಹೇಳಿದ ಹಾಗೆ ಬೇಕಾಗುವುದಿಲ್ಲ. ಆದರೆ ರಾಯಚೂರಿನಲ್ಲಿ ಏನಾಗಿದೆ ಎಂದರೆ ಏನೂ ಇಲ್ಲದ್ದಕ್ಕೆ ಬೇಕಾಗಿಲ್ಲ, ಒಣ ಭೂಮಿ, ನಿರುತ್ಸಾಹವಾದಂತಹ ವಾತಾವರಣ, ಹಸಿರು ಎನ್ನುವುದು ಇಲ್ಲವೇ ಇಲ್ಲ, ಬರೀ ಗುಡ್ಡಗಾಡು, ಬೆಂಕಿಯಂತಹ ಬಿಸಿಲು ಇದರಿಂದ ಇವರಿಗೆ ವಿದ್ಯೆ ಕಲಿಯುವುದಕ್ಕೆ ಅವಕಾಶ ಇಲ್ಲ. ಮಂಡ್ಯದಲ್ಲಿ ಬಹಳ ಹೆಚ್ಚಿಗೆ ಆರ್ಥಿಕವಾಗಿ ಏನೂ ಬೇಕಾಗಿಲ್ಲ ಆರಾಮವಾಗಿ ಇರುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದು ರೆಕಾರ್ಡ್‌ನಲ್ಲಿ ತಪ್ಪು ಹೋಗುತ್ತದೆ. ಸಿಂಧನೂರು ಗಂಗಾವತಿ, ಮಾನವಿ, ರಾಯಚೂರು ಅರ್ಧ ಭಾಗ. ಇಲ್ಲಿ ಅರ್ಧ ಡಿಸ್ಟ್ರಿಕ್ಟ್ ಆದರೂ ಕಲಿಯಬೇಕಲ್ಲಾ, ಉಳಿದದ್ದು ಅರ್ಧ ಬಿಡಿರಿ. ಕೊಪ್ಪಳ ನಿಮ್ಮ ದೇವದುರ್ಗ, ಗುಲಬುರ್ಗ ಅದನ್ನು ಒಂದು ಕಡೆ ಲೆಕ್ಕಕ್ಕೆ ಇಟ್ಟುಕೊಳ್ಳೋಣ. ಉಳಿದ ನಾಲ್ಕು ತಾಲ್ಲೂಕಾದರೂ ಲೆಕ್ಕಕ್ಕೆ ಬಗಬೇಕಲ್ಲಾ !

ಶ್ರೀ ಹೆಚ್.ಎನ್. ನಂಜೇಗೌಡ : ಮಂಡ್ಯ ಜಿಲ್ಲೆಯಲ್ಲಿ ಏನಾಗುತ್ತದೆ ಎಂದರೆ ಮಾನ್ಯ ಉಪಮುಖ್ಯ ಮಂತ್ರಿಗಳಿಗೆ ಗೊತ್ತಿದೆಯೋ ಇಲ್ಲವೋ ನೀರಾವರಿ ಬಂತಲ್ಲ, ಅಲ್ಲಿ ಮೇಸ್ತ್ರ ವ್ಯವಸಾಯ ಮಾಡಿಸುತ್ತಿರುತ್ತಾರೆ. ಪಾಠ ಹೇಳುವುದಕ್ಕೆ ಯಾರೂ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನನಗೆ ಇನ್ನೊಂದು ಅನುಮಾನ ಬಂದಿದೆ, ಮಂಡ್ಯದಲ್ಲಿ ಕೊಡತಕ್ಕಂಥ ಪೌಷ್ಠಿಕಾಂಶ ಏನಿದೆ ಅದು ಕಲಬೆರಕೆ ಇರಬೇಕು ಎಂದು ಅನಿಸುತ್ತದೆ.

ಮಾನ್ಯ ಸದಸ್ಯರು : ಮಂಡ್ಯ ಜಿಲ್ಲೆಯವರು ಬೇರೆ ಪೌಷ್ಠಿಕಾಂಶವನ್ನು ತೆಗೆದು ಕೊಳ್ಳುವುದೇ ಇಲ್ಲ, ಸ್ವತಃ ನಮ್ಮದೇ ಆದಂತಹ ಪೌಷ್ಠಿಕಾಂಶ ಇದೆ. ಕಲಬರಕೆ ತೆಗೆದು ಕೊಳ್ಳುವುದೇ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ಒಪ್ಪತಕ್ಕಂಥ ಮಾತು. ಏಕೆಂದರೆ ಅವರು ಕ್ಷೇತ್ರದಲ್ಲಿ ಸರ್ಕಾರಿ ನೌಕರಿಯಲ್ಲಿ ಜಾಸ್ತಿ ಜನ ಇರುವುದು. ಮಂಡ್ಯದಲ್ಲಿ ಯಾವ ತಾಲ್ಲೂಕಿನಲ್ಲಿ ಸಹ ಅಷ್ಟು ಜನ ಇಲ್ಲ. ಅವರ ಕ್ಷೇತ್ರದಲ್ಲಿ ಇದ್ದಾರೆ.

ಶ್ರೀ ಕೆ.ಎನ್. ನಾಗೇಗೌಡ : ನಾನು ಪೋಷಕನಾಗಿ ನೋಡಿದ್ದೇನೆ, ಸಂಸ್ಥೆಗಳನ್ನು ನಡೆಸಿ ನೋಡುತ್ತಿದ್ದೇನೆ. ಮತ್ತೆ ವಿದ್ಯಾರ್ಥಿಗಳಾಗಿ ನಾವು ನೋಡಿದ್ದೇವೆ. ನಮ್ಮ ಜಿಲ್ಲೆಯಲ್ಲಿ ಫಲಿತಾಂಶ ಕಡಿಮೆ ಬರುವುದಕ್ಕೆ ನಾಲ್ಕೈದು ಕಾರಣಗಳಿವೆ. ವಾಟಾಳ್ ನಾಗರಾಜ್‌ರವರು ಇರತಕ್ಕಂಥ ಚಾಮರಾಜನಗರದ ಕಡೆಯೆಲ್ಲಾ ಮಾಸ್ ಕಾಪಿ ಹೊಡೆಯುತ್ತಾರೆ. ನಮ್ಮಲ್ಲಿ ಮಾಸ್ ಕಾಪಿ ಇಲ್ಲ. ಎರಡನೆಯದು ನಮ್ಮ ಖರ್ಗೆಯವರು ಇರತಕ್ಕಂಥ ಗುಲ್ಬರ್ಗ ಜಿಲ್ಲೆಯಲ್ಲಿ ಉದ್ಯೋಗ ಸಿಗುವುದಿಲ್ಲ ಅವರಿಗೆ, ಗದ್ದೆ ಹತ್ತಿರ ಹೋಗುವುದಕ್ಕೆ ಇರುವುದಿಲ್ಲ, ಅಲ್ಲಿ ನೀರಾವರಿ ಇಲ್ಲ ಕೆಲಸ ಇಲ್ಲ, ಹಾಗಾಗಿ ಅವರು ಸಂಪೂರ್ಣವಾಗಿ ಶಾಲೆಗಳಿಗೆ ಹೋಗಲೇಬೇಕು, ಕಲಿಯಲೇಬೇಕು. ನಮ್ಮಲ್ಲಿ ನೀರಾವರಿ ಇದೆ, ಗದ್ದೆ ಹತ್ತಿರ ಹೋಗಬೇಕು. ನಮ್ಮ ಸೋಮಶೇಖರ್ ಅವರನ್ನು ಕೇಳಿ. ಮಿಡ್ಲ್ ಸ್ಕೂಲ್‌ವರೆಗೂ ನಾನು ಊರಿನಲ್ಲೇ ಇದ್ದೆ, ಅಲ್ಲಿ ನಾವು ಗದ್ದೆಗೆ ಹೋಗಿ ಬಂದು ನಾನು ಶಾಲೆಗೆ ಹೋಗುತ್ತಿದ್ದೆ. ನಮ್ಮ ಜಿಲ್ಲೆಯಲ್ಲಿ ನಮ್ಮ ಯುವಕರು ಬಹಳಷ್ಟು ಜನ ಮೆಡಿಕಲ್, ಇಂಜಿನೀಯರ್, ಡಿಗ್ರಿ ಹೋಲ್ಡರ್ಸ್ ಇದ್ದಾರೆ, ಯಾರೂ ಕೆಲಸಕ್ಕೆ ಹೋಗುವುದಿಲ್ಲ, ಅಷ್ಟೊಂದು ಇಷ್ಟಪಡುವುದಿಲ್ಲ, ಅನುಕೂಲಸ್ಥವಾಗಿ ಇದ್ದರೆ. ಯಾರಿಗೆ ಅನುಕೂಲ ಇರುವುದಿಲ್ಲ ಅವನು ಸರ್ಕಾರಿ ಚಾಕರಿ ಮಾಡುವುದಕ್ಕೆ ಇಷ್ಟ ಪಡುತ್ತಾನೆ.

ಶ್ರೀ ವಾಟಾಳ್ ನಾಗರಾಜ್ : ಪ್ರಾಮಾಣಿಕ ವಿದ್ಯಾರ್ಥಿಗಳು ಇಡೀ ರಾಜ್ಯದಲ್ಲಿ ಎಲ್ಲಾದರೂ ಇದ್ದಾರೆ ಎಂದರೆ ನಮ್ಮ ಚಾಮರಾಜ ನಗರದಲ್ಲಿ.

ಶ್ರೀ ಕೆ.ಎನ್. ನಾಗೇಗೌಡ : ಸಂತೋಷ. ನೀರಾವರಿ ಎರಡನೆಯ ವಿಷಯ. ಇನ್ನು. ಮೂರನೆಯಿದಾಗಿ ವ್ಯವಸ್ಥೆಯಲ್ಲಿ ಆರ್ಥಿಕವಾಗಿ ನಾವು ಅಷ್ಟೊಂದು ಹಿಂದುಳಿದಿದ್ದೇವೆ ಎಂದು ಹೇಳುವುದಕ್ಕೆ ತಯಾರಾಗಿಲ್ಲ, ಅಷ್ಟೊಂದು ಮುಂದುವರೆದಿದ್ದೇವೆ ಎಂದು ಹೇಳುವುದಕ್ಕೂ ತಯಾರಾಗಿಲ್ಲ, ಈಗ ನಾಗಮಂಗಲ ನೋಡಿ ಅಲ್ಲಿಯವರು ಇಡೀ

ಪ್ರಪಂಚದಲ್ಲಿ ಇದ್ದಾರೆ. ಇವರು ಎಲ್ಲಿಗೆ ಹೋದರೂ ಶಿವರಾಮೇಗೌಡರನ್ನು ಏನಣ್ಣ ಹೋಗಿದ್ದ ನಾಗಮಂಗಲಕ್ಕೆ ಬಂದ ಊರಿಂದ ಎಂದು ಕೇಳುತ್ತಾರೆ. ಇವರಿಗೆ ಗೊತ್ತಾಗುವುದಿಲ್ಲ ಯಾರು ನಾಗಮಂಗಲದವರು ಎಂದು. ನೀವು ಡೆಲ್ಲಿಗೆ ಹೋಗಿ ಸಿಗುತ್ತಾರೆ. ಎಲ್ಲಿ ಆರ್ಥಿಕವಾದಂತಹ ಅಥವಾ ಕುಡಿಯುವಂತಹ ಅವಕಾಶಗಳು ಇರುವುದಿಲ್ಲ ಅಂತಹ ಕಡೆ ಸ್ವಾಭಾವಿಕವಾಗಿ ವಿದ್ಯಾಭ್ಯಾಸಕ್ಕೆ ಆಸಕ್ತಿ ಇಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಒಂದು ರೀತಿ ಇಡೀ ವಿಧಾನ ಸೌಧ. ನಾಗಮಂಗಲ ಬೆಳ್ಳೂರು ಕೈಯಲ್ಲಿ ಇರುವುದು. ಅದು ಸಂತೋಷಪಡುವಂಥಾದ್ದು. ಮತ್ತು ಅವರು ಬಹಳ ಚೆನ್ನಾಗಿ ಕೆಲಸ ಮಾಡುತ್ತಾರೆ. ಮಂಡ್ಯದವರಿಗಿಂತ ಆ ತಾಲ್ಲೂಕಿನವರು ಬಹಳ ಚೆನ್ನಾಗಿ ಕೆಲಸ ಮಾಡುತ್ತಾರೆ.

ಶ್ರೀ ಕೆ.ಎನ್. ನಾಗೇಗೌಡ : ಅದು ಮಂಡ್ಯ ಜಿಲ್ಲೆಯೇ ಅದು ಏನು ಚಾಮರಾಜ ನಗರ ತಾಲ್ಲೂಕು ಎಂದು ತಿಳಿದುಕೊಂಡಿದ್ದೀರಿ ಏನು?

ಶ್ರೀ ವಾಟಾಳ್ ನಾಗರಾಜ್ : ಮಂಡ್ಯ ಜಿಲ್ಲೆಯಲ್ಲಿ ಇದು ಒಂದು ತಾಲ್ಲೂಕು ಮಾತ್ರ ಎಂದು ನಾನು ಹೇಳುತ್ತೇನೆ. ಅದಕ್ಕೆ ಅವರು ಬೆನ್ನು ತಟ್ಟಿಕೊಳ್ಳಬೇಕಾದ್ದಿಲ್ಲ.

ಶ್ರೀ ಕೆ.ಎನ್. ನಾಗೇಗೌಡ : ನನಗೆ ಮಂಡ್ಯ ಜಿಲ್ಲೆಯಾಗಲಿ, ಕರ್ನಾಟಕ ರಾಜ್ಯವಾಗಲಿ ಎಲ್ಲಾ ಒಂದೇ ಅದಕ್ಕೆ ಏನೂ ಇಲ್ಲ. ಅದರೂ ಒಂದು ವಿಷಯ ನಿಜ. ನಾವೆಲ್ಲರೂ ಬಹಳ ಯೋಚನೆ ಮಾಡಿದ್ದೇವೆ. ಬಹಳಷ್ಟು ಮೀಟಿಂಗ್‌ಗಳಲ್ಲಿ ನಮ್ಮ ಮಂಡ್ಯ ಜಿಲ್ಲೆಯಲ್ಲಿ ಫಲಿತಾಂಶ ಕೆಳಮಟ್ಟಕ್ಕೆ ಬರುತ್ತಿರುವುದರ ಬಗ್ಗೆ ತೀವ್ರವಾದಂತಹ ಪರಿಶೀಲನೆ ಮಾಡಿ ನೋಡಿದ್ದೇವೆ. ಕೆಲವು ಕಡೆ ಮೇಸ್ಟರು ಇಲ್ಲ. ಕೆಲವು ಕಡೆ ಬೇಕಾದಷ್ಟು ಕೊರತೆಗಳು ಇದೆ. ಆದರೆ ನಾನು ಈಗ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಒಟ್ಟಿನಲ್ಲಿ ಒಳ್ಳೆಯ. ಫಲಿತಾಂಶ ಬಂದರೆ ಸಂತೋಷವಾದಂತಹ ವಿಚಾರ. ನಾವೆಲ್ಲಾ ರಾಜ್ಯದಲ್ಲಿ ಒಳ್ಳೆಯ ಫಲಿತಾಂಶ ಬರಬೇಕು, ನಮ್ಮ ಜಿಲ್ಲೆಯಲ್ಲಿ ಒಳ್ಳೆಯ ಫಲಿತಾಂಶ ಬರಬೇಕು. ನಮ್ಮ ಹುಡುಗರು ಓದಿ ಮುಂದೆ ಬರಬೇಕು ಎನ್ನುವಂತಹ ಅನಿಸಿಕೆಯನ್ನು ಪ್ರಸ್ತಾಪ ಮಾಡಿದ್ದೆ. ಇನ್ನು ಪ್ರಮುಖವಾದ ವಿಚಾರ ಎಂದರೆ ಟ್ರಾನ್ಸ್‌ಫರ್ಸ್ ತಾವು ಅದನ್ನು ಜಾರಿಗೆ ತರತಕ್ಕಂಥ ಕೆಲಸ ಮಾಡಬೇಕು. ಇವತ್ತು ನಾನ್ ಟೀಚಿಂಗ್ ಸ್ಟಾಫ್ ಏನಿದ್ದಾರೆ. ಕಾಲೇಜಿನಲ್ಲಿ ಅವರ್‍ಯಾರನ್ನು ಕಂಟ್ರೋಲ್ ಮಾಡುವುದಕ್ಕೆ ಆಗುವುದಿಲ್ಲ, ಆದುದರಿಂದ ದಯವಿಟ್ಟು ನಾನ್ ಟೀಚಿಂಗ್ ಸ್ಟಾಫ್ ಮಾಡದೇ ಇದ್ದರೂ ಪರವಾಗಿಲ್ಲ ಈ ಟೀಚಿಂಗ್ ಸ್ಟಾಫ್ ಒಂದು ಕಡೆ ಸೇರಿಕೊಂಡು ಬಿಟ್ಟರೆ ಒಳ್ಳೆಯ ಲೆಕ್ಚರರ್ಸ್ ಇದ್ದರೆ ಅವರಿಗೆ ಇನ್ನೊಂದು ಕಡೆ ಅವಕಾಶ ಇರುವುದಿಲ್ಲ, ಟ್ರಾನ್ಸ್‌ಫರ್ ಪದ್ಧತಿಯನ್ನು ಜಾರಿಗೆ ತರುವುದು ಬಹಳ ಕಷ್ಟವಾಗಿದೆ. ಅಷ್ಟೊಂದು ಸುಲಭ ಇದೆ ಒಂದು ನಾನು ಭಾವಿಸಿಕೊಂಡಿಲ್ಲ, ಅದರೆ ಹಂತ ಹಂತವಾಗಿ ಯೋಚನೆ ಮಾಡಿ ಈ ಕಾಲೇಜುಗಳಲ್ಲಿ ಟ್ರಾನ್ಸ್‌ಫರ್ ಅನ್ನು ಜಾರಿಗೆ ತರತಕ್ಕಂಥಾದ್ದು ಒಳ್ಳೆಯದು. ಆದುದರಿಂದ ಒಳ್ಳೆಯ ಅಧ್ಯಾಪಕರು ಯಾರಿದ್ದಾರೆ, ಚೆನ್ನಾಗಿ ಟೀಚ್ ಮಾಡತಕ್ಕಂಥ ಲೆಕ್ಚರರ್ಸ್ ಪ್ರೊಫೆಸರ್ ಅವರ ಸೇವೆ ಬೇರೆ ಕಡೆ ಸಿಗಲಿ. ಅವರು ಬೇರೆ ಕಡೆ ಸೇವೆ ಮಾಡಿ ಬೇರೆ ಮಕ್ಕಳಿಗೂ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಪ್ರಸ್ತಾಪ ಮಾಡುವುದಕ್ಕೆ ಇಷ್ಟ ಪಡುತ್ತೇನೆ. ದಯವಿಟ್ಟು ತಾವು ಬರುವ ವರ್ಷವಾದರೂ ಕೂಡ ಈ ಕಡೆ ಗಮನ ಹರಿಸಿ ಮತ್ತೆ ಶಾಶ್ವತವಾದಂತಹ ಅನುದಾನವನ್ನು ಕೊಡತಕ್ಕಂಥಾದ್ದು ಇದನ್ನು ಒಂದು ಹಂತದಲ್ಲಿ ನಿಲ್ಲಿಸತಕ್ಕಂಥಾದ್ದು ಒಳ್ಳೆಯದು. ಈ ಎರಡನ್ನು ನಿಮ್ಮ ಇಲಾಖೆಯಲ್ಲಿ ಮಾಡಿ. ಈ ಸಾರಿ ನೀವು ಸೀಟ್ ಮಾಡಿದಿರಿ. ಸೀಟಿನಲ್ಲಿ ಯಾವ ಗೊಂದಲ ಇಲ್ಲ, ಹೇಳಿಕೊಳ್ಳುವಷ್ಟು ಗೊಂದಲ ಇದೆ ಎಂದು ನಾನು ಖಂಡಿತ ಹೇಳಿಕೊಳ್ಳುವುದಿಲ್ಲ. Compared to

Previous years ನೋಡಿದಾಗ ಈ ವರ್ಷ ನಿಮ್ಮ ಸಿಇಟಿಯವರು ತುಂಬಾ ಚೆನ್ನಾಗಿ ಕೆಲಸ ಮಾಡಿದ್ದಾರೆ.

ಆದುದರಿಂದ ತಾವು ಆ ರೀತಿಯಾದಂತಹ ಒಂದು ಯೋಜನೆ ಮಾಡಬೇಕೆಂದು ಹೇಳಿ, ನಾಲ್ಕೈದು ಬಹಳ ಪ್ರಾಮುಖ್ಯವಾದಂತಹ ವಿಚಾರಗಳನ್ನು ಬರುವ ವರ್ಷವಾದರೂ ತಾವು ಕನ್ಸಿಡರ್ ಮಾಡುವಂತಹ ಯೋಚನೆ ಮಾಡಬೇಕೆಂದು ನಾನು ಮನವಿ ಮಾಡುತ್ತೇನೆ.

ಇನ್ನು ಹಾಪ್‌ಕಾಮ್ಸ್ ಬಗ್ಗೆ ತೋಟಗಾರಿಕೆ ಇಲಾಕೆಯ ವ್ಯವಸಾಯದಲ್ಲಿ ಪ್ರಾಮುಖ್ಯವಾದಂಥದ್ದು ತೋಟಗಾರಿಕೆ ಇಲಾಖೆ ಕಾಮ್ಸ್ ಬಗ್ಗೆ ಹಿಂದೆ ನಮ್ಮ ಸ್ನೇಹಿತರಾದ ಮಾನ್ಯ ಕೃಷ್ಣಪ್ಪನವರು ಮಂತ್ರಿಗಳಾಗಿದ್ದರು. ನಾನು ಅವರ ವಿಚಾರದಲ್ಲಿ ಬಹಳಷ್ಟು ನೋಡುತ್ತಿದ್ದಾಗ, ಸುಮಾರು ಒಂದು ವರ್ಷಕ್ಕೆ 1994-95ರಲ್ಲಿ ಹಾಪ್‌ಕಾಮ್ಸ್ ವಹಿವಾಟು 31 ಕೋಟಿ ರೂ.ಗಳು ಆಗಿದೆ ಅದನ್ನು ಇನ್ನು ಜಾಸ್ತಿ ಮಾಡಬಹುದು, ಜಾಸ್ತಿ ಎಂದು ಹೇಳುವುದಕ್ಕಾಗುವುದಿಲ್ಲ, ಕಡಿಮೆ ಇದ್ದರೂ ಸಹಿತ ಇವತ್ತು ಮಾಡಬಹುದು. ಆದರೆ ಅಲ್ಲಿ ಏನು ಸಮಸ್ಯೆಯಾಗಿದೆ ಎಂದರೆ ನಾನು ಒಂದು ರಿಪೋರ್ಟ್ ತರಿಸಿಕೊಂಡು ನೋಡಿದೆ. ಗುಜರಾತ್ ರಾಜ್ಯದಲ್ಲಿ ಎರಡು ಲಕ್ಷ ಟನ್ ತರಕಾರಿಯನ್ನು ಬೆಳೆಯುವಂತಹ ರಾಜ್ಯದಲ್ಲಿ 139-140 ಕೋಲ್ಡ್ ಸ್ಟೋರೇಜ್ ಇದೆ. ಇಲ್ಲಿ ಏಳು ಲಕ್ಷ ಟನ್ ತರಕಾರಿ ಬೆಳೆಯುತ್ತಿದ್ದಾರೆ. ಅಪ್ರಾಕ್ಸಿಮೆಟಲಿ ಫಿಗರ್ 12 ಲಕ್ಷ ಎಕ್ಸ್ ಎಕ್ಸ್ ಇದೆ. ಇಂತಹ ಕಡೆ 14 ಕೋಲ್ಡ್‌ಸ್ಟೋರೇಜ್ ಇದೆ. ಇವತ್ತು ಅದು ಆಲೂಗಡ್ಡೆ ಇರಲಿ, ಮತ್ತೆ ಯಾವುದೇ ಇರಲಿ,50 ಲಕ್ಷ ಜನಸಂಖ್ಯೆ ಇರುವಂತಹ ಬೆಂಗಳೂರಿನಲ್ಲಿ ಇವತ್ತು 245 ಅಂಗಡಿಗಳನ್ನು ಮಾಡಿದ್ದಾರೆ. ಕನಿಷ್ಠ ಒಂದು ವರ್ಷಕ್ಕೆ 100ಮಾಡಿದರೆ ಅದು ಗ್ರಾಹಕರಿಗೂ ಅನುಕೂಲವಾಗುತ್ತದೆ, ರೈತರಿಗೂ ಅನುಕೂಲವಾಗುತ್ತದೆ. ಕೋಲ್ಡ್ ಸ್ಟೋರೇಜ್ ಇನ್‌ಕ್ರೀಸ್ ಮಾಡುವಂಥಾದ್ದು, ಹಾಪ್‌ಕಾಮ್ಸ್ ಸೆಂಟರ್ 19-20 ಜಿಲ್ಲೆಗಳಲ್ಲಿ 7 ಜಿಲ್ಲೆಗಳಲ್ಲಿ ಆಗಿರುವುದು, ಇದಕ್ಕೆ ನಾನು ಸರ್ಕಾರಕ್ಕೆ ಒಂದು ಸಲಹೆಯನ್ನು ಕೊಡುತ್ತೇನೆ. 20 ಜಿಲ್ಲೆಗಳಲ್ಲಿ ಹಾಪ್‌ಕಾಮ್ಸ್ ಆಕ್ಟಿವಿಟೀಸ್ ನಡೆಯುಬೇಕು. ಆ ರೀತಿ ನಡೆದರೆ 100 ಕೋಟಿ ರೂಪಾಯಿಗಳ ವಹಿವಾಟು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದು ನಿಜವಾಗಲೂ ರೈತರಿಗೆ ಬಹಳಷ್ಟು ಸಹಾಯ ಮಾಡಿದಂತಾಗುತ್ತದೆ. ಕಬ್ಬಿನ ವ್ಯವಸ್ಥೆ ಗೊತ್ತಿದೆ. ನಮ್ಮ ಸ್ನೇಹಿತರಾದಂತಹ ಮಾನ್ಯ ಪುಟ್ಟಣ್ಣಯ್ಯನವರು ಬಹಳ ಚೆನ್ನಾಗಿ ಹೇಳಿದರು. 30-35 ಲಕ್ಷ ಕಬ್ಬನ್ನು ಬೆಳೆದು ಅದನ್ನು ಅರೆಯುವುದಕ್ಕೆ ಮೂರು ಕಾರ್ಖಾನೆಗಳ ಹತ್ತಿರ ನಮ್ಮ ರೈತರು ಪರ್ಮಿಟ್ ಕೊಡಿ ಎಂದು ಕೇಳುತ್ತಿದ್ದಾರೆ. ಮಾನ್ಯ ಜೆ.ಹೆಚ್. ಪಟೇಲ್‌ರವರ ಊರು ಶಿವಮೊಗ್ಗದಲ್ಲಿ ಹಾಗೆ ಇದೆ. ನಮ್ಮ ರೈತರ ಒಂದು ಕೆಟ್ಟ ಅಭ್ಯಾಸ ಏನೆಂದರೆ ಭತ್ತವನ್ನು ಹಾಕಿದರೆ ಭತ್ತವನ್ನೇ ಹಾಕುತ್ತಾರೆ. ಕಬ್ಬನ್ನು ಹಾಕಿದರೆ ಕಬ್ಬನ್ನು ಹಾಕುವುದು, ಜೋಳ ಬೆಳೆದರೆ ಜೋಳವನ್ನು ಬೆಳೆಯುವುದು. ಅಥವಾ ಹಿಪ್ಪುನೇರಳೆಯನ್ನು ಬೆಳೆದರೆ ಅದನ್ನೇ ಮಾಡುವಂತಹ ಪದ್ಧತಿ ಇದೆ. ನಾವು ನಮ್ಮ ರೈತರನ್ನು ಬದಲಾಯಿಸಬೇಕಾದರೆ, ಈ ತೋಟಗಾರಿಕೆಯ ಬಗ್ಗೆ ಹೆಚ್ಚು ಗಮನವರಿಸಬೇಕೆಂಬುದು ನನ್ನ ಅನಿಸಿಕೆ. ಆದುದರಿಂದ ಇವತ್ತು ಕನಿಷ್ಠ ಪಕ್ಷ 100 ಕೋಲ್ಡ್ ಸ್ಟೋರೇಜ್‌ಗಳನ್ನು ಪ್ರತಿ 7 ಜಿಲ್ಲೆಯಲ್ಲಿರುವಂತಹ ಹಾಪ್‌ಕಾಮ್ಸ್ ಸೆಂಟರ್‌ಗಳನ್ನು 20 ಜಿಲ್ಲೆಗಳಲ್ಲೂ ಮಾಡಬೇಕು. ಈ 20 ಜಿಲ್ಲೆಗಳಲ್ಲೂ ಮಿಲ್ಕ್, ಸಿಲ್ಕ್, ಮತ್ತೆ ತರಕಾರಿ ಈ ಮೂರಕ್ಕೂ ಹೆಚ್ಚು ಗಮನವನ್ನು ಕೊಟ್ಟರೆ, ರೈತರ ಆರ್ಥಿಕ ಪರಿಸ್ಥಿತಿ ಇನ್ನಷ್ಟು ಸುಧಾರಣೆಯಾಗುತ್ತದೆಂದು ನನ್ನ ಅನಿಸಿಕೆಯಾಗಿದೆ. ಬೆಂಗಳೂರು ನಗರದಲ್ಲಿ ಬೇರೆ ಬೇರೆ ರಾಜ್ಯಗಳಿಗೆ ಕಂಪೇರ್ ಮಾಡಿದರೆ ಬೆಂಗಳೂರಿನಲ್ಲಿರುವಂಥಾದ್ದು ಬಹಳ ಕಡಿಮೆಯಾಗಿದೆ. ಮಾನ್ಯ ಬಚ್ಚೇಗೌಡರಿಗೆ ಇದು ಬಹಳ ಚೆನ್ನಾಗಿ ಗೊತ್ತಿದೆ. ಅವರ ಭಾಗ ಕೋಲಾರ ಜಿಲ್ಲೆಯಲ್ಲಿ ರಸ್ತೆಗಳ

ಮೇಲೆಲ್ಲಾ ಹಾಕಿಕೊಂಡಿರುತ್ತಾರೆ., ಆದುದರಿಂದ ಅವರಿಗೆ ಕೋಲ್ಡ್ ಸ್ಟೋರೇಜ್ ವ್ಯವಸ್ಥೆಯನ್ನು ಕೊಟ್ಟರೆ ಅವರಿಗೆ ಸ್ವಲ್ಪ ಟೈಮ್ ಸಿಗುತ್ತದೆ. ಅವರಿಗೆ ಮಾಡುವುದಕ್ಕೆ ಸೆಂಟರ್ಸ್ ಕೊಟ್ಟರೆ ಮಧ್ಯವರ್ತಿಗಳು ಯಾರಿದ್ದಾರೆ, ಅವರಿಂದ ಈ ರೈತರನ್ನು ತಪ್ಪಿಸಬಹುದು, ಆದುದರಿಂದ ಕೋಲ್ಡ್ ಸ್ಟೋರೇಜ್ ಮಾಡುವುದರ ಕಡೆಗೆ ಹೆಚ್ಚು ಗಮನಹರಿಸಬೇಕು. ಮಾನ್ಯ ಕುರಿಯನ್‌ರವರು ಮಾನ್ಯ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದಾಗ ಬೆಂಗಳೂರಿಗೆ ಬಂದಿದ್ದರು. ಆಗ 3-4 ವರ್ಷಗಳ ಕಾಲ ತಾಳೆ ಎಣ್ಣೆಯ ಘಟಕ ನಮ್ಮ ಕರ್ನಾಟಕ ರಾಜ್ಯದಲ್ಲಿ ಉಳಿದುಹೋಗಿತ್ತು. 1991ರಲ್ಲಿ ಮಂಜೂರಾತಿಗಾಗಿ ಕಾಯುತ್ತಿದ್ದ 8 ಕಂಪೆನಿಗಳಿಗೆ 1993ರಲ್ಲಿ ಮಾಡಿತ್ತು. ಅದು ಮಲಪ್ರಭ ಘಟಪ್ರಭಾ ಪ್ರದೇಶದಲ್ಲಿ ಒಂದು ಮತ್ತೆ ಭದ್ರಾ ಅಣೆಕಟ್ಟಿನ ಹತ್ತಿರ, ಮೈಸೂರು ಹಾಸನ ಜಿಲ್ಲೆಯಲ್ಲಿ ಒಂದು ಮತ್ತು ಮಂಡ್ಯಾ ಜಿಲ್ಲೆ ಹೊಳೆನರಸಿಪುರದಲ್ಲಿ ಒಂದು ಬಳ್ಳಾರಿ, ರಾಯಚೂರು ರಾಯಚೂರು ಗಂಗಾವತಿ ವಿಭಾಗ ಹೀಗೆ 8 ಕಂಪೆನಿಗಳನ್ನು ರಾಜ್ಯದಲ್ಲಿ 1993ರಲ್ಲಿ ಕಳೆದ ಸರ್ಕಾರ ಮಂಜೂರಾತಿ ಮಾಡಿತು. ತಾಳೆ ಎಣ್ಣೆ ಕಬ್ಬು ಭತ್ತ ಅವಲಂಬಿಸಿವೆ. ರಾಯಚೂರು ಗಂಗಾವತಿಯಲ್ಲಿ ವಿಪ್ರೋ ಲಿಮಿಟೆಡ್‌ಗೆ ಲೈಸನ್ಸ್ ಕೊಟ್ಟರು. ಪುನಃ ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕ್ ಅನ್ನು ಸೇರಿಸಿಕೊಂಡು ಹೆಚ್ ಆರ್ ಪಿ ಅಸೋಸಿಯೆಟ್ಸ್‌ಗೆ ಕೊಟ್ಟರು. ಹಾಗೆ ನಮ್ಮದು ಎನ್ ಡಿ ಡಿ ಬಿಯವರಿಗೆ ಕೊಟ್ಟರು. ಶಿವಮೊಗ್ಗದಲ್ಲೂ ಸಹ ಪ್ರಾರಂಭವಾಗಿದೆ. ಡೆಪ್ಯೂಟಿ ಚೀಫ್ ಮಿನಿಸ್ಟರ್ ಅವರ ಏರಿಯಾದಲ್ಲಿ, ಈಗ 60 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿ ನರ್ಸರಿಯನ್ನು ಪ್ರಾರಂಭ ಮಾಡಿದ್ದಾರೆ. ಸ್ಲೋಪ್ರೋಗ್ರೆಸ್ ಎನ್.ಡಿ.ಡಿ.ಬಿ. ಬಗ್ಗೆ ನಾನು ಬೆಳಿಗ್ಗೆ ಹೇಳಿದೆ. ಒಂದು ಸಾವಿರ ಕೋಟಿ ರೂ.ಗಳು ಹಣ ಇತ್ತು. ನೀವು ಮಾನ್ಯ ಕುರಿಯನ್‌ರವರ ರೀತಿ ನೀತಿಗಳನ್ನು ಅರ್ಥಮಾಡಿಕೊಂಡು ನಮ್ಮ ಪ್ರೋಗ್ರೆಸ್ ನಮ್ಮ ಪ್ರಾಜೆಕ್ಟ್, ಅದರ ಯುಟಿಲಿಟಿಯನ್ನು ಅದು ಜನರಿಗೆ ಎಷ್ಟು ಅನುಕೂಲವಾಗುತ್ತದೆ. ರಾಜ್ಯದ ಸಂಪತ್ತು ಯಾವ ರೀತಿ ಹೆಚ್ಚಿಸುತ್ತೇವೆ. ಸಹಕಾರ ಕ್ಷೇತ್ರಗಳನ್ನು ಹೇಗೆ ಬೆಳೆಸುತ್ತೇವೆಂಬ ಬಗ್ಗೆ ನಾಲ್ಕೈದು ಅಂಶಗಳನ್ನು ಅವರಿಗೆ ಕ್ಲಾರಿಫೈ ಮಾಡಿದರೆ he is ready to invest more than Rs. 500 crores ನನ್ನ ಹತ್ತಿರ ಒಂದು ಮಾತನ್ನು ಹೇಳಿದರು. ನಾನು ನಿಮಗೆ ಕ್ಯಾಟಲ್ ಫೀಡ್ಸ್ ಪ್ಲಾಂಟ್ ಕೊಡುತ್ತೇವೆ. ನನಗೆ ಎನ್.ಡಿ.ಡಿ.ಬಿ ತಾಳೆ ಎಣ್ಣೆಯ ಘಟಕ ಕೊಡಿಸಿ ಎಂದು ಹೇಳಿದರು. ಮಾನ್ಯ ವೀರಪ್ಪಮೊಯಿಲಿಯವರು ಇಲ್ಲ.

ಲಾಸ್ಟ್ ಥ್ರೀ ಇಯರ್‌ನಿಂದ ಅದು ಪೆಂಡಿಂಗ್ ಇತ್ತು. ವಿಥ್ ಇನವನ್ ಡೇಯಲ್ಲಿ ಈ 8 ಕಂಪೆನಿಗಳಿಗೆ ಆರ್ಡರ್ ಮಾಡಿದರು. 1993ರಲ್ಲಿ ಆರ್ಥಿಕ ಸಚಿವರು ಗಮನಿಹರಿಸಬೇಕು, ತಾವು ಯುವಕರಾಗಿದ್ದೀರಿ. ಇಂತಹ ಕಡೆ ಮಂತ್ರಿಗಳು ನಾರ್ಮಲ್ ಆಗಿ ಕೆಲಸ ಮಾಡುವಂಥಾದ್ದು ಅಲ್ಲ, ದಯಮಾಡಿ ನಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರಬೇಕೆಂದರೆ, ಜನರಿಗೆ ಅನುಕೂಲವಾಗಬೇಕೆಂದು ಭಾವಿಸಿಕೊಂಡಿದ್ದರೆ ಇಂತಹ ಯಾವ ಯಾವ ಪ್ರಾಜೆಕ್ಟ್ ಇವೆ. ಆ ಕಡೆ ಹೆಚ್ಚು ಗಮನಹರಿಸಬೇಕು. ಇವತ್ತು ಎನ್.ಡಿ.ಡಿ.ಬಿ.ಯವರು ಮಂಡ್ಯ ಜಿಲ್ಲೆಗೆ ಹಣವನ್ನು ಕೊಡುವುದಕ್ಕೆ ತಯಾರಾಗಿದ್ದಾರೆ. ಅದನ್ನು ಹೆಚ್ಚು ಗಮನಹರಿಸಿ ಹೆಚ್ಚು ಮಾಡಬೇಕೆಂದು ನನ್ನ ಸಲಹೆಯನ್ನು ಸರ್ಕಾರಕ್ಕೆ ಕೊಡಲಿಚ್ಛಿಸುತ್ತೇನೆ. ಹಾಗೆಯೇ ಕ್ಯಾಟಲ್ ಫೀಡ್ ಹಾಸನದಲ್ಲಿ ಮಾಡುತ್ತೇವೆಂದು ಹೇಳಿದ್ದೀರಿ. ಹಾಸನದಲ್ಲಿ ಮಾಡಬೇಡಿ ಎಂದು ಹೇಳಲಿಲ್ಲ, ಅದು ಎನ್.ಡಿ.ಡಿ.ಬಿ.ಯವರ ದುಡ್ಡು ಅಲ್ಲ, ಕೆ.ಎಂ.ಎಫ್.ನವರ ದುಡ್ಡು ಅಲ್ಲ, ಜಿಲ್ಲಾ ಪಂಚಾಯತ್‌ರವರು ಮಾಡಿಕೊಂಡು ಮಾಡಿದ್ದಾರೆ. ಅದೇ ರೀತಿ ಮಾಸ್ಟರ್ ಪ್ಲಾನ್ ಎಷ್ಟು ಕ್ಯಾಟಲ್ಸ್. ಇದೆ, ಎಷ್ಟು ಕ್ಯಾಟಲ್ ಫೀಡ್ಸ್ ಪ್ಲಾಂಟ್ ಬೇಕು ಎಂಬ ಬಗ್ಗೆ, ಯೋಚಿಸಬೇಕು ಕೋಲಾರ ಜಿಲ್ಲೆಯಲ್ಲಿ ನಾಲ್ಕೈದು ಜಿಲ್ಲೆಗಳಲ್ಲಿ ಹಾಲಿನಿಂದಲೇ ಅವರ

ಜೀವನ ನಿಂತಿರುವುದು. ಇವತ್ತು 20 ಲಕ್ಷ ಲೀಟರ್ ಹಾಲು ಅಂದರೆ ಕೋಟ್ಯಾಂತರ ರೂಪಾಯಿ ಆಗುತ್ತದೆ. ಸಕ್ಕರೆ ಕಾರ್ಖಾನೆಗಿಂತ ನಿಮ್ಮ ಡೈರಿ ಬಿದ್ದು ಹೋಗುವುದಿಲ್ಲ, ಆದುದರಿಂದ ನೀವು ಅದನ್ನು ಸರ್ವೆ ಮಾಡಿಸಿ, ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಕ್ಯಾಟಲ್ ಫೀಡ್ಸ್‌ಪ್ಲಾಂಟ್ ಬೇಕಾಗುತ್ತದೆ. ಯಾವ ಯಾವ ಪ್ಲಾಂಟ್ ಹಾಕಬೇಕೆಂಬುದನ್ನು ತಮ್ಮ ಕಾಲದಲ್ಲಿ ಕೂಡಲೇ ಅದು ಸಹಕಾರಿ ಕ್ಷೇತ್ರದಲ್ಲಾಗಲಿ ಬೇರೆ ಯಾವ ಕ್ಷೇತ್ರದಲ್ಲೇ ಆಗಲಿ, ಜಿಲ್ಲಾ ಪಂಚಾಯತ್ ಬೇಕಾದರೂ ಮಾಡಿಕೊಳ್ಳಲಿ, ಇದರ ಬಗ್ಗೆ ಕ್ರಮ ಕೈಗೊಳ್ಳಬೇಕು. ಮಾನ್ಯ ಶಂಕರೇಗೌಡರು ಇದ್ದಾಗ ಸೊಸೈಟಿ ಮಾಡಿದಂತಹ ಕ್ಯಾಟಲ್ ಫೀಡ್ಸ್ ಪ್ಲಾಂಟ್ ನೋಡಿದ್ದೇವೆ. ತಾಲ್ಲೂಕು ಮಟ್ಟದ ಸೊಸೈಟಿಯವರು ಕ್ಯಾಟ್ಲ್ ಫೀಡ್ ಪ್ಲಾಂಟ್ ಮಾಡಿದರು. ಆದುದರಿಂದ ಆ ಕಡೆಗೆ ಕ್ಯಾಟಲ್ ಫೀಡ್ ಪ್ಲಾಂಟ್ ಮಾಡಬೇಕು. ಕಾರ್ಕಳ, ಮಳವಳ್ಳಿ ಈ ಎರಡು ಕ್ಯಾಟಲ್‌ಫೀಡ್ಸ್ ಪ್ಲಾಂಟ್ ಅನ್ನು ನಾವು ಏನು ಅಪ್ರೂವ್ ಮಾಡಿಸಿಕೊಂಡು ಬಂದಿದ್ದೇವೋ ಅದನ್ನು ನಿಮ್ಮ ಕಾಲದಲ್ಲಿ ಮಾಡಬೇಕು. ಅದನ್ನು ನೀವು ಅಷ್ಟಕ್ಕೇ ಕೈ ಬಿಡಬಾರದು. ನನಗೆ ಮಾನ್ಯ ಕುರಿಯನ್‌ರವರು ಹೇಳಿದರು. ನಾನು ಹಣವನ್ನು ಕೊಡುತ್ತೇನೆ. ನೀವು ಯೋಚನೆ ಮಾಡಿ ಬೇಡಿ. ಪ್ರಾಜೆಕ್ಟ್ ಕಳುಹಿಸಿಕೊಡಿ, I donot say expansion ಇಟ್ಟು ಕೊಳ್ಳಬೇಡಿ ಎಂದು.

ಹುಬ್ಬಳ್ಳಿ ಎಕ್ಸ್‌ಪಾನ್‌ಷನ್ ಇರಲಿ, ಕೆಪ್ಯಾಸಿಟಿಯನ್ನು ಇನ್‌ಕ್ರೀಸ್ ಮಾಡಿದರೆ ಕಾಸ್ಟ್ ಲೋವಾಗುತ್ತದೆ, ನಿಮಗೆ ಪ್ರೊಡಕ್ಷನ್ ಸಿಗುತ್ತದೆ. ನಿಮಗೆ ಎಲ್ಲಾ ಆಗುತ್ತದೆ. ಅದನ್ನು ಇಟ್ಟುಕೊಳ್ಳಿ. ಇದು ಟ್ರಾನ್ಸ್‌ಪೋರ್ಟ್ ಮಾಡಲು ಆಗದೇ ಇರುವಂತಹ ಸಂದರ್ಭದಲ್ಲಿ ತಾವು ದಯಮಾಡಿ ಈ ಎರಡು ಮೂರು ಪ್ರಾಜೆಕ್ಟ್ ಏನಿದೆ ಅವುಗಳನ್ನು ಮಾಡಬೇಕು. ನಿಮಗೆ ಬಹಳ ಪ್ರಾಮುಖ್ಯನಾದಂತಹ ಇದೆ ಪ್ರತಿ ಜಿಲ್ಲೆಗೂ ಮಿಲ್ಕ್ ಯೂನಿಯನ್ ತಾವು ಮಾಡ ಬೇಕು. ಡೆಪ್ಯೂಟಿ ಚೀಫ್ ಮಿನಿಸ್ಟರ್ ಕ್ಷೇತ್ರ ಶಿವಮೊಗ್ಗ ಮತ್ತು ಚಿತ್ರದುರ್ಗ ಬೈಫರ್‌ಕೇಷನ್ ಕೇಳಿಕೊಂಡು ಇವತ್ತಿನವರೆಗೂ ಕುಳಿತುಕೊಂಡಿದ್ದಾರೆ. ಉತ್ತರ ಕನ್ನಡ ಜಿಲ್ಲೆಯ ಮೂರು ತಾಲ್ಲೂಕುಗಳು ಧಾರವಾಡಕ್ಕೆ ಸೇರಿದೆ. ಉತ್ತರ ಕನ್ನಡ ಜಿಲ್ಲೆಯವರು ಧಾರವಾಡದ ಮೂಲೆ ಕಡೆ ಹೋಗಬೇಕು. ಆದುದರಿಂದ ನಾನು 19 ಜಿಲ್ಲೆಗಳಲ್ಲಿ ಮಿಲ್ಕ್ ಯೂನಿಯನ್ ಇರಬೇಕು. ನಿಮಗೆ ಎಲ್ಲೂ ಹಣಕಾಸಿನ ತೊಂದರೆ ಆಗುವುದಿಲ್ಲ. ಇವತ್ತು ಹಾಲಿನ ಬೆಲೆಯನ್ನು ಜಾಸ್ತಿ ಮಾಡಿದ್ದಾರೆ. ಅದು ಬಹಳ ಒಳ್ಳೆಯ ಕೆಲಸ ಮಾಡಿದ್ದೀರಿ. ಎಲ್ಲರೂ ಹೇಳುತ್ತಾರೆ. ಅವರು ಹೇಳುವುದಕ್ಕೆ ಬಹಳ ಸುಲಭ ಅಲ್ಲಿ ಪ್ರೊಡಕ್ಷನ್ ಕಡಿಮೆಯಾಗುತ್ತಿತ್ತು, ಬೆಲೆ ಜಾಸ್ತಿ ಮಾಡದೇ ಹೋಗಿದ್ದರೆ, ಹೋದಸಾರಿ ನಾವು 22-23 ಲಕ್ಷ ಹಾಲು ಸಂಗ್ರಹಣೆ ಮಾಡುತ್ತಿದ್ದೆವು. 60 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿತ್ತು. ಈಗ ಫೀಡ್ಸ್‌ರೇಟ್ ಮತ್ತೊಂದು ಜಾಸ್ತಿಯಾಗಿ, ಪ್ರೊಡಕ್ಷನ್.....

ಶ್ರೀ ಜೆ.ಹೆಚ್. ಪಟೇಲ್ : ಬಿಸಿಲೆರಿ ನೀರಿಗೆ ಹಣವನ್ನು ಕೊಡುವುದಕ್ಕೆ ಆಗುತ್ತದೆ. ಹಾಲಿಗೆ ಜಾಸ್ತಿ ಕೊಟ್ಟರೆ ಕೊಳ್ಳುವವರಿಗೆ ತೊಂದರೆಯಾಗಬಾರದು ನಿಜ, ಪಟ್ಟಣದಲ್ಲಿರುವವರೂ, ಮಕ್ಕಳಿಗೆ ಸಿಗದ ಹಾಗೆ ಆಗಬೇಕೆಂದು ಅಲ್ಲ, ನೀರಿಗೆ ಬೇಕಾದರೆ ಲೀಟರ್‌ಗೆ 16ರೂ. 18ರೂ.ಗಳನ್ನು ಕೊಡುತ್ತೇವೆ ಅದೇ ಹಾಲಿಗೆ ಕೊಡಬೇಕೆಂದರೆ ಗಲಾಟೆ ಮಾಡುತ್ತಾರೆ.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೆ, ಹಾಲು ಸಾಮಾನ್ಯ ಜನರು ಉಪಯೋಗಿಸುತ್ತಾರೆ. ನಿಮ್ಮ ಬಿಸಿಲೇರಿ ಕುಡಿಯುವವರು ಮೇಲಿರುವವರು, ಹಾಲು ಸಾಮಾನ್ಯ ಜನರಿಂದ ಹಿಡಿದು ಮೇಲಿನ ವರ್ಗದವರು ಉಪಯೋಗಿಸುವಂತಹ ಸಾಮಾನ್ಯ ವಸ್ತುವಾಗಿದೆ.

3.30 ಪಿ.ಎಂ.

ಶ್ರೀ ಜೆ.ಹೆಚ್. ಪಟೇಲ್ : ಇವರು ಯಾರು ಅವರು ಯಾರು ಅವರೆಷ್ಟು ಜನ, ಅವರೆಷ್ಟು ಜನ ಅಂತಲ್ಲ ಪ್ರೈಯಾರಿಟೀಸ್ ಹೇಳಿದ್ದುದು ನಾನು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಶಿವಪ್ಪನವರು ಹೇಳಿದಹಾಗೆ ಹಾಲನ್ನು ಎಲ್ಲರೂ ಕೂಡ ಉಪಯೋಗ ಮಾಡುತ್ತಾರೆ. ಚಹಾಗೆ ಬೇಕು, ಮಕ್ಕಳಿಗೆ ಬೇಕು ಮತ್ತು ನೀವು ಹೇಳಿದ ಹಾಗೆ ಸಿಟಿ ಮತ್ತು ಅರ್ಬನ್ ಏರಿಯಾದಲ್ಲೂ ಕೂಡ ಉಪಯೋಗ ಮಾಡುತ್ತಾರೆ. ಮತ್ತು ಇವತ್ತು ನಮ್ಮ ಮೂವತ್ತು ಪರ್ಸೆಂಟ್ ಪಾಪ್ಯೂಲೇಷನ್ ಅರ್ಬನ್ ಏರಿಯಾದಲ್ಲಿದ್ದಾರೆ ಆ ಮೂವತ್ತು ಪರ್ಸೆಂಟ್‌ನಲ್ಲೂ ಕೂಡ ಸುಮಾರು 20 ರಿಂದ 25 ಪರ್ಸೆಂಟ್ ಒಂದು ಐದೋ ಹತ್ತೋ ಪರ್ಸೆಂಟ್ ಇರಬಹುದು. ಎಲ್ಲಾದರೂ ನೀವು ಕಾನ್ಫರೆನ್ಸ್‌ಗಳಲ್ಲಿ, ಫೈವ್‌ಸ್ಟಾರ್ ಹೋಟೆಲುಗಳನ್ನು ಬಿಸಿಲೇರಿ ವಾಟರ್ ಇರುತ್ತದೆ. ಅವರಿಗೆ ನೀವು ಲೀಟರಿಗೆ ನೂರು ರೂಪಾಯಿ ಮಾಡಿದರೂ ತೆಗೆದುಕೊಳ್ಳುತ್ತಾರೆ ಆದರೆ ಉಳಿದವರಿಗೆ ತಾಪತ್ರಯ ಅಷ್ಟೆ.

ಶ್ರೀ ಜೆ.ಹೆಚ್. ಪಟೇಲ್ : ಯುರೋಪ್‌ಗೆ ಹೋಗುತ್ತೀರಲ್ಲಾ ಎಲ್ಲಿ ಹಾಲು ಬಹಳ ಸಂವೃದ್ಧವಾಗಿದೆ, ಅಲ್ಲಿ ಅವರು ಬಿಸಿಲೆರಿ ನೀರನ್ನು ಕುಡಿಯುವುದಿಲ್ಲ, ಒಳ್ಳೆಯ ಶುದ್ಧವಾದ ನೀರನ್ನು ಮುನಿಸಿಪಾಲಿಟಿಗಳೇ ಸರಬರಾಜು ಮಾಡುತ್ತವೆ. ಈಗ ಎಜ್ಯುಕೇಷನ್ ಬಗ್ಗೆ ಮಾನ್ಯ ಸದಸ್ಯರು ಹೇಳುತ್ತಾ ಇದ್ದರು. ನಾನು ಎರಡುಮೂರು ವರ್ಷಗಳ ಹಿಂದೆ ಚೈನಾಕ್ಕೆ ಹೋಗಿದ್ದೆ. ಚೈನಾದಲ್ಲಿ ಶೇಕಡ 5 ಭಾಗ ಜನ ಹೈಯರ್ ಎಜ್ಯುಕೇಷನ್‌ಗೆ ಹೋಗುವುದು. 95 ಭಾಗ ಜನರನ್ನು ಅವರು ಕೆಳಗಡೆ ಕಳುಹಿಸಿಯೇ ಬಿಡುತ್ತಾರೆ, ಅವರನ್ನು ಮೇಲೆ ಬಿಡುವುದೇ ಇಲ್ಲ, ಕಂಪಲ್‌ಸರಿಯಾಗಿ ಇಷ್ಟು ಜನ ಬಡಗಿಯರು ಬೇಕು, ಇಷ್ಟು ಜನ ಕಮ್ಮಾರರು ಬೇಕು, ಇಷ್ಟು ಜನ ಫಿಟ್ಟರ್ಸ್ ಬೇಕು, ಇಷ್ಟು ಜನ ವೆಲ್ಡರ್ಸ್ ಬೇಕು, ಹಾಗೆ ಅವರು ವೊಕೇಷನಲ್ ಜಾಬ್‌ಗೆ ಆದ್ಯತೆ ಕೊಡುತ್ತಾರೆ. ಅಂದರೆ ಪೊಲಿಟಿಕಲ್ ಸಿಸ್ಟಂ ಬೇರೆ ಅದೆಲ್ಲಾ ಒಪ್ಪಿಕೊಳ್ಳುತ್ತೇನೆ. ಆದರೆ ಹಾಗೆ ಮಾಡಿ ಶೇಕಡ 5 ಜನ ಮೇಲೆ ಹೋದಂತಹವರು applied mathematics ಇರಬಹುದು, astro-physics, ಇರಬಹುದು, astronomy ಇರಬಹುದು, ಅದರಲ್ಲಿ ಅವರು ಯಾರಿಗೂ ಕಡಿಮೆ ಇಲ್ಲ, ಅಮೇರಿಕನ್ಸ್‌ಗೂ ಕಡಿಮೆ ಇಲ್ಲ, ಮತ್ತೊಬ್ಬರಿಗೂ ಕಡಿಮೆ ಇಲ್ಲ, ಆದ್ದರಿಂದ ನಾವು ಪ್ರೈಮರಿ ಎಜುಕೇಷನ್‌ಗೆ ಎಷ್ಟು ಪ್ರಾಶಸ್ತ್ಯವನ್ನು ಕೊಡಬೇಕೊ ಅದನ್ನು ಕೊಡುವುದಿಲ್ಲ, ಆದರೆ ಹೈಯರ್ ಎಜುಕೇಷನ್‌ಗೆ ಕೊಡುತ್ತೇವೆ. ಹಾಲಿಗೆ ಏನು ಪ್ರಾಮುಖ್ಯತೆ ಕೊಡಬೇಕೊ ಅದನ್ನು ಕೊಡುವುದಿಲ್ಲ, ಬಿಸ್‌ಲೇರಿಗೆ ಕೊಡುತ್ತೇವೆ. In that context ನಾನು ಹೇಳಿದ್ದುದು.

ಶ್ರೀ ಬಿ.ಬಿ. ಶಿವಪ್ಪ : ನಾನು ಅದನ್ನು ವಿರೋಧ ಮಾಡಲಿಲ್ಲ, ರೈತನಿಂದ ಉತ್ಪಾದನೆ ಮಾಡತಕ್ಕ ವಸ್ತು ಅದು ಯಾವುದೇ ಇರಲಿ, ಅದು ಹಾಲು ಇರಲಿ, ತರಕಾರಿ ಇರಲಿ, ಭತ್ತ ಇರಲಿ, ರಾಗಿ ಇರಲಿ, ಜೋಳ ಇರಲಿ, ಎರಡು ಕಡೆ ನೋಡಬೇಕಾಗುತ್ತದೆ. ಗ್ರಾಹಕ ಮತ್ತು ಉತ್ಪಾದಕ ಈ ಎರಡೂ ಕಡೆ ಕಾಂಪನ್‌ಸೇಟ್ ಮಾಡಬೇಕಾದಂಥ ಪರಿಸ್ಥಿತಿ ಉದ್ಭವ ಆಗಿರುವುದರಿಂದ ಯಾವುದೇ ಸಂದರ್ಭದಲ್ಲಿ ಅತೀ ಹೆಚ್ಚಿಗೆ ಮಾಡಲಿಕ್ಕೂ ಆಗುವುದಿಲ್ಲ ಏಕೆಂದರೆ ಕೊಳ್ಳುವವರಿಗೆ ತೊಂದರೆಯಾಗುತ್ತದೆ, ಅತೀ ಕಡಿಮೆ ಮಾಡಲಿಕ್ಕೂ ಆಗುವುದಿಲ್ಲ ಇದರಿಂದ ಬೆಳೆಯುವವರಿಗೆ ತೊಂದರೆಯಾಗುತ್ತದೆ. ಈ ಒಂದು ಪರಿಸ್ಥಿತಿ ಇರುವುದರಿಂದ ಇದನ್ನು ಒಂದು ಸಮಾನತೆಯ ರೂಪಕ್ಕೆ ತರಬೇಕೆಂದರೆ ತುಂಬಾ ಶ್ರಮವಾದಂಥ ಕೆಲಸವೇ ಆದರೆ ಹಾಲಿಗೂ ಮತ್ತು ಬಿಸ್‌ಲೆರಿಗೂ ಹೋಲಿಸುವುದಕ್ಕಾಗುವುದಿಲ್ಲ ಎಂದು ನಾನು ಹೇಳಿದೆ ಅಷ್ಟೆ. ಬೇರೆ ಇನ್ನೇನಿಲ್ಲ.

ಶ್ರೀ ಜೆ.ಎಚ್. ಪಟೇಲ್: ಒಳ್ಳೆಯ ಹಾಲನ್ನೇ ಕಡಿಮೆ ಬೆಲೆಗೆ ಕೊಡುವುದಾದರೆ ನನ್ನದೇನೂ ಅಭ್ಯಂತರ ಇಲ್ಲ. ಆದ್ದರಿಂದ ಓವರ್ ಆಲ್ ಪ್ರೊಸಿಷನ್‌ನಲ್ಲಿ ನಾವು ಪ್ರೈಯಾರಿಟೀಸ್ ಅನ್ನು ಛೇಂಜ್ ಮಾಡುತ್ತಾ ಹೋಗಬೇಕಾಗುತ್ತದೆ ಎಂದು ಹೇಳಿದೆ ಅಷ್ಟೆ.

ಶ್ರೀ ಕೆ.ಎನ್.ನಾಗೇಗೌಡ : ಮಾನ್ಯ ಉಪಾಧ್ಯಕ್ಷರೆ, ದೆಹಲಿಯಲ್ಲಿ ಒಂದು ಲೀಟರ್ ಹಾಲಿಗೆ ಹನ್ನೊಂದೂವರೆ ರೂಪಾಯಿ ಇದೆ. ಸ್ವಾಮಿ ಹಾಗೆ ಮದ್ರಾಸ್ ತೆಗೆದುಕೊಳ್ಳಿ ಹೈದರಾಬಾದ್ ತೆಗೆದುಕೊಳ್ಳಿ, ಎಲ್ಲಾ ತೆಗೆದುಕೊಳ್ಳಿ.......

ಶ್ರೀ ಬಿ.ಎನ್. ಬಚ್ಚೇಗೌಢ : ಇಡೀ ರಾಷ್ಟ್ರದಲ್ಲೇ ಸ್ವಾಮಿ ಕರ್ನಾಟಕ ಕೊಡುವಂಥ ಕಡಿಮೆ ಬೆಲೆಗೆ ಹಾಲು ಅಂದರೆ ಒಂದು ಲೀಟರಿಗೆ ಏಳೂವರೆ ರೂಪಾಯಿಗೆ ಕೊಡುವಂತದ್ದು, ಎಂಟೂವರೆ ರೂಪಾಯಿ ಈ ಮೊನ್ನೆ ಜಾಸ್ತಿ ಮಾಡಿದ ಮೇಲೆ ಕೊಡುತ್ತಿದ್ದಾರೆ. ಆರೂವರೆ ರೂಪಾಯಿ ರೈತನಿಗೆ ಕೊಡುತ್ತಿದ್ದೇವೆ, ಅತಿ ಕಡಿಮೆ ಬೆಲೆಗೆ ಇವತ್ತು ಹಾಲನ್ನು ಕೊಡುತ್ತಿದ್ದೇವೆ. ಮಾನ್ಯ ನಾಗೇಗೌಡರು ತಿಳಿಸಿದಹಾಗೆ ನಾನು ಕಳೆದ ತಿಂಗಳು ಗುಜರಾತಿಗೆ ಹೋಗಿ ಬಂದೆ. ಅಲ್ಲಿಯೆ ಒಂಭತ್ತೂವರೆ ರೂಪಾಯಿಯಿಂದ fat content ಮೇಲೆ ಹದಿನಾಲ್ಕು ರೂಪಾಯಿಯವರೆಗೂ ಇದೆ. ದೆಹಲಿಯಲ್ಲಿ ಹತ್ತು ರೂಪಾಯಿಯಿಂದ ಹದಿನಾಲ್ಕು ರೂಪಾಯಿಗಳವರೆಗೆ ಇದೆ, ಮಹರಾಷ್ಟ್ರದಲ್ಲೂ ಹತ್ತು ರೂಪಾಯಿಯಿಂದ ಹದಿನಾಲ್ಕು ರೂಪಾಯಿಗಳವರೆಗೆ ಇದೆ. ಆಂಧ್ರಪ್ರದೇಶದಲ್ಲೂ ಸಹ ಅದೇ ರೀತಿ ಇದೆ. ಇಡೀ ರಾಜ್ಯದಲ್ಲಿ ನಮ ರಾಜ್ಯದಲ್ಲೇ ಅತಿ ಕಡಿಮೆ ಬೆಲೆಗೆ ಎಂಟೂವರೆ ರೂಪಾಯಿಗೆ ಉತ್ತಮ ಗುಣಮಟ್ಟದ ಹಾಲನ್ನು ಸರಬರಾಜು ಮಾಡುತ್ತಾ ಇರತಕ್ಕಂಥ ವ್ಯವಸ್ಥೆ ಇದೆ. ಮಾನ್ಯ ಶಿವಪ್ಪನವರು ತಿಳಿಸಿದ ಹಾಗೆ ಇವತ್ತು ನಾವು ಉತ್ಪಾದಕರು ಮತ್ತು ಗ್ರಾಹಕರ ಹಿತದೃಷ್ಟಿಯನ್ನು ಇಟ್ಟುಕೊಂಡು ಲಾಭ ನಷ್ಟ ಇಲ್ಲದೆ ನಡೆಸಿಕೊಂಡು ಹೋಗುವಂಥ ಸಹಕಾರಿ ತತ್ವದ ಮೇಲೆ ಇವತ್ತು ಹೋಗುತ್ತಾ ಇರತಕ್ಕಂಥ ವ್ಯವಸ್ಥೆ ಇದೆ. ಒಂದು ಲೀಟರ್ ಹಾಲು ಉತ್ಪಾದನೆ ಆಗಬೇಕಾದರೆ ಏಳು ರೂಪಾಯಿ ಹತ್ತು ಪೈಸೆ ಬೇಕು. ಏಳು ರೂಪಾಯಿ ಹತ್ತು ಪೈಸೆಗಿಂತ ಕಡಿಮೆ ಇವತ್ತು ಹಾಲು ಉತ್ಪಾದನೆ ಮಾಡುವುದಕ್ಕೆ ಆಗುವುದಿಲ್ಲ. ಪಟ್ಟಣಗಳಲ್ಲಿ ಮಾರುತ್ತಾ ಇರತಕ್ಕಂಥವರಿಗೆ ಇನ್ನೂ ಜಾಸ್ತಿಯಾಗಿದೆ. ಇವತ್ತು ನಮಗೆ ಸಗಣಿಯಲ್ಲಿ ಲಾಭ ಸಿಗುತ್ತದೆ ಗೊಬ್ಬರ ಸಿಗುತ್ತದೆ ಎಂಬ ಉದ್ದೇಶದಿಂದ ನಾವು ಆ ಉದ್ಯಮವನ್ನು ಮುಂದುವರೆಸಿಕೊಂಡು ಹೋಗುತ್ತಿದ್ದೇವೆ. ಇದಕ್ಕೆ ನಾವು ಎಷ್ಟೇ ಹಣವನ್ನು ಕೊಟ್ಟರೂ ಇದು ಲಾಭದಾಯಕವಾದುದಲ್ಲ, ಮಾನ್ಯ ಶಿವಪ್ಪನವರಿಗೆ ಗೊತ್ತಿದೆ.

ಶ್ರೀ ಕೆ.ಎನ್. ನಾಗೇಗೌಡ : ಅದಕ್ಕೆ ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಹೇಳಿದ ರೀತಿಯಲ್ಲಿ ಕರ್ನಾಟಕ ರಾಜ್ಯವೇ ಅತ್ಯಂತ ಕಡಿಮೆ ಬೆಲೆಗೆ ಹಾಲನ್ನು ಕೊಡುವಂಥದ್ದು. ನಾವು ಇವತ್ತು ಇಷ್ಟೆಲ್ಲಾ ಇದ್ದರೂ ಸಹ ನಮ್ಮೆಲ್ಲಾ ಡೈರಿಗಳಲ್ಲಿ 250 ಕೋಟಿ ರೂಪಾಯಿಯ ಟರ್ನ್ ಓವರ್ ಇದೆ. ಅದರಲ್ಲಿ ಒಂದ ಮೂರ್‍ನಾಲ್ಕು ಡೈರಿಗಳನ್ನು ಬಿಟ್ಟರೆ ಬೇರೆ ಎಲ್ಲೂ ಸಹ ನಷ್ಟ ಇಲ್ಲ, ಅದರೆ ಏನಾಗಿದೆ ಗ್ರಾಹಕರು ಮತ್ತು ಉತ್ಪಾದಕರು ಎರಡೂ ಬ್ಯಾಲೆನ್ಸ್ ಮಾಡಬೇಕೆಂದು ನೀವು ಹೇಳಿದ್ದೀರಿ.

ಶ್ರೀ ಬಿ.ಎನ್. ಬಚ್ಚೇಗೌಡ : 130 ಕೋಟಿ ರೂಪಾಯಿಗಳ ಬಂಡವಾಳದ ಜೊತೆಗೆ ಮಾನ್ಯ ನಾಗೇಗೌಡರು ತಿಳಿಸಿದ ಹಾಗೆ ನಾವು ರೈತರಿಗೆ ವಾಪಸ್ಸು ಕೊಡುವಂಥದ್ದು ಒಂದು ವರ್ಷಕ್ಕೆ ಮೂನ್ನೂರು ಕೋಟಿ ರೂಪಾಯಿಯ ಹಣ ಯಾವುದೇ ಉದ್ಯಮದಲ್ಲಿ ಇದು ಆಗುವುದಿಲ್ಲ, ಕೇವಲ ನಮ್ಮ ಹಣ ತೊಡಗಿಸಿರತಕ್ಕಂಥದ್ದು

130 ಕೋಟಿ ರೂಪಾಯಿ. ಅವರಿಗೆ ವಾಪಸ್ಸು ಹೋಗುವಂಥದ್ದು 12 ತಿಂಗಳಿಗೆ 300 ಕೋಟಿ ರೂಪಾಯಿಯ ಆದಾಯ ಇವತ್ತು ರೈತರಿಗೆ ವಾಪಸ್ಸು ಹೋಗುತ್ತದೆ.

ಶ್ರೀ ಕೆ.ಎನ್. ನಾಗೇಗೌಡ : ಆದ್ದರಿಂದ ಅದಕ್ಕೆ ಕಾರಣ ಏನು ಎಂದು ಹೇಳಿದರೆ ರಾಜ್ಯಸರ್ಕಾರದವರು 93-94ರಲ್ಲಿ ನಾವು ಡೈರಿ ಡೆಫಿಸಿಟ್ ಲಾಸ್ ಎಂದು ಕೊಟ್ಟೆವೋ ಆವಾಗ ಸುಮಾರು 9-10 ಕೋಟಿ ರೂಪಾಯಿ ಹೆಚ್ಚು ಕಡಿಮೆ ಕೊಟ್ಟಿದ್ದೇವೆ. ಈ ವರ್ಷ ನೀವು ಇನ್ನೊಂದು 9 ಕೋಟಿ ರೂಪಾಯಿಗಳನ್ನು ಡೈರಿ ಡಿಫಿಸಿಟ್‌ಗೆ ಕೊಡಿಸಬೇಕು. ಅದು ಗ್ರಾಂಟ್ ಇನ್‌ಪ್ಲಾನ್ ಸ್ಕೀಂ ಒಳಗಡೆ ಇರತಕ್ಕಂಥದ್ದು,ಬೇರೆ ಇಲ್ಲ, ಏತಕ್ಕೆ ಹೇಳುತ್ತಿದ್ದೇನೆಂದರೆ ನಮ್ಮ ರೈತರಿಗೂ ಸ್ವಲ್ಪ ಅನುಕೂಲ ಆಗಬೇಕು, ಹಾಗೂ ಗ್ರಾಹಕರಿಗೂ ತೊಂದರೆಯಾಗಬಾರದು. ನನ್ನ ದೃಷ್ಟಿಯಲ್ಲಿ ನೀವು ಬರುವ ವರ್ಷವೂ ಹಾಲಿನ ಬೆಲೆಯನ್ನು ಜಾಸ್ತಿ ಮಾಡಬೇಕಾಗುತ್ತದೆ. ಉದ್ಯಮ ಹೋಗಿಬಿಟ್ಟರೆ ಏನಾಗುತ್ತದೆ ಎಂಬುದನ್ನು ನೀವು ಯೋಚನೆ ಮಾಡಬೇಕು. ಇವತ್ತು ಕುರಿಯನ್‌ರವರು ನಾವು ಇದನ್ನು ಕೋ-ಆಪರೇಟಿವ್ ಸೆಕ್ಟಾರ್‌ನಿಂದ ಖಾಸಗೀಯವರಿಗೆ ಕೊಡಬಾರದು ಎಂದು ಹೇಳಿ ಬಹಳವರ್ಷಗಳಿಂದ ಫೈಟ್ ಮಾಡುತ್ತಿದ್ದಾರೆ. Milk & Milk products Act, Government of India ದವರು ಐವತ್ತು ಸಾವಿರ ಲೀಟರಿಗಿಂತ ಕಡಿಮೆ ಇರತಕ್ಕಂಥ ಕಡೆ ಪ್ರೈವೇಟ್‌ನವರು ಡೈರಿ ಮಾಡಿಕೊಳ್ಳಬಹುದು ಎಂದು ತಿದ್ದುಪಡಿಯನ್ನು ಮಾಡಿದರು. ಆ ತಿದ್ದುಪಡಿಗೆ ವಿರುದ್ಧವಾಗಿ ನಾವು ಇಲ್ಲಿ ಬಲರಾಂ ಜಾಖಡ್‌ರವರನ್ನು ಕರೆದುಕೊಂಡು ಬಂದು ಲಕ್ಷಾಂತರ ಜನ ರೈತರನ್ನು ಸೇರಿಸಿ. ನೀವು ರೈತರ ಜೊತೆಯಲ್ಲೇ ಇರಬೇಕು, ಸಹಕಾರ ಕ್ಷೇತ್ರದಲ್ಲಿ ಇರಬೇಕು, ನಾವು ಬೇರೆ ಖಾಸಗಿಯವರಿಗೆ ಕೊಡಬಾರದು ಎನ್ನತಕ್ಕಂಥ ದೃಷ್ಟಿಯಿಂದಲೇ ಇದನ್ನು ಮಾಡಿರತಕ್ಕಂಥದ್ದು. ಆದ್ದರಿಂದ ನಾನು ಹೇಳುವುದೇನೆಂದರೆ, ಇವತ್ತಿನದಿವಸ ನೀವು ಗ್ರಾಂಟನ್ನು ಪ್ಲಾನ್ ಸ್ಕೀಂ ಒಳಗಡೆ ಏನು ಕೊಡಬೇಕು ಅದನ್ನು ಕೊಟ್ಟುಬಿಟ್ಟರೆ ಒಳ್ಳೆಯದು ಬೈಫರ್‌ಕೇಷನ್ಸ್ ಶಿವಮೊಗ್ಗ ಬೈಫರ್‌ಕೇಷನ್ನು ಮತ್ತೆ ನಮ್ಮ ಉತ್ತರ ಕನ್ನಡ ಮತ್ತೆ ಧಾರವಾಡ ಜಿಲ್ಲೆ ಬೈಫರ್‌ಕೇಷನ್ನು, 19 ಜಿಲ್ಲೆಗಳಿಗೂ 19 ಡೈರಿಗಳನ್ನು ಮಾಡತಕ್ಕಂಥದ್ದು, ಈ ಯೋಜನೆ ಮಾಡಿದರೆ ತುಂಬಾ ಪ್ರಯೋಜನ ಆಗುತ್ತದೆ ಎಂಬತಕ್ಕಂಥದ್ದು ನನ್ನ ಅನಿಸಿಕೆ. ಇದನ್ನು ತಾವು ಮಾಡುತ್ತೀರಿ ಎಂಬ ನಂಬಿಕೆ ಇಟ್ಟುಕೊಂಡು ಯಾವುದೇ ಕಾರಣಕ್ಕೆ ನೀವು ಸ್ಟಾಂಡ್ ತೆಗೆದುಕೊಳ್ಳಬೇಕು. ಕೋ-ಆಪರೇಟಿವ್ ಸೆಕ್ಟಾರ್‌ನ ಖಾಸಗೀ ಸೆಕ್ಟಾರ್‌ಗೆ ಇದನ್ನು ಕೊಡುವುದಕ್ಕೆ ತಾವು ಒಪ್ಪಲೇ ಕೂಡದು. ದೆಹಲಿಯಲ್ಲಿ ಬಹಳಷ್ಟು ಲಾಭದಲ್ಲಿ ' ನಡೆಯುತ್ತಿವೆ.

ಅಲ್ಲಿ ನಿಂತೇ ಇಲ್ಲ, ಬಲರಾಂ ಜಖಾಡ್‌ರವರು ರೈತರಾದ್ದರಿಂದ, ಅವರಿಗೆ ಗೊತ್ತಿರುವುದರಿಂದ, ಕುರಿಯನ್‌ರವರು ಸಾಕಷ್ಟು ಪ್ರಭಾವಶಾಲಿಯುಳ್ಳ ವ್ಯಕ್ತಿಯಾದ್ದರಿಂದ ಅವೆಲ್ಲವನ್ನೂ ಬ್ಯಾಲೆನ್ಸ್ ಮಾಡಿಕೊಂಡು ಈ ಸೆಂಟರನ್ನು ಖಾಸಗಿಯವರಿಗೆ ಕೊಡದೆ ಇಟ್ಟುಕೊಂಡು ಬಂದಿದ್ದಾರೆ. ಅದಕ್ಕೆ ನಮ್ಮ ಸರ್ಕಾರದ ನಿಲುವು ಕೂಡ ಏನಿರಬೇಕೆಂದರೆ ಎಂ.ಎಂ.ಪಿ. ಆಕ್ಟ್ ಬಂದರೆ ನಾವು ಇಂಪ್ಲಿಮೆಂಟ್ ಮಾಡುವುದಿಲ್ಲ, ನಾವು ಕೋ-ಆಪರೇಟಿವ್ ಸೆಕ್ಟಾರನ್ನು ಚೆನ್ನಾಗಿ ನಡೆಸುತ್ತಿದ್ದೇವೆ ಎಲ್ಲಾ ಡೈರಿಗಳು ಲಾಭದಲ್ಲಿವೆ, ಸುಮಾರು 25 ಸಾವಿರ ಕೋ-ಆಪರೇಟಿವ್ ಸೊಸೈಟಿಗಳಲ್ಲಿ 20 ಸಾವಿರ ಸೊಸೈಟಿಗಳು ನಷ್ಟದಲ್ಲಿದ್ದಾವೆ. ಆದರ ಮಿಲ್ಕ್ ಸೊಸೈಟಿಗಳು ಶೇಕಡ 97ರಷ್ಟು ಲಾಭದಲ್ಲಿವೆ. No where in India, ಗುಜರಾತನ್ನು ಬಿಟ್ಟರೆ, ಆದ್ದರಿಂದ ಇಷ್ಟು ಚೆನ್ನಾಗಿರತಕ್ಕಂಥ ಉದ್ದಿಮೆಯನ್ನು, ಇದು ನಮ್ಮ ರೈತರ ಉದ್ಯಮ, ಹಳ್ಳಿಗಾಡಿನ ಜನರಿಗೆ ಉದ್ಯೋಗ ಸಿಗುವುದೇ ಇದರಲ್ಲಿ, ಆದ್ದರಿಂದ ನೀವು ಇದನ್ನು ಚೆನ್ನಾಗಿ ಕಾಪಾಡಿಕೊಂಡು ಬರುತ್ತೀರಿ ಎಂಬ ನಂಬಿಕೆ ಇದೆ, ಏಕೆಂದರೆ ನೀವು ರೈತರಿದ್ದೀರಿ ನಿಮಗೆ ಆ ವಿಚಾರವೆಲ್ಲಾ ಚೆನ್ನಾಗಿ ಗೊತ್ತಿದೆ, ನೀವು ಕಾಪಾಡುತ್ತೀರಿ ಆದ್ದರಿಂದ ಇದನ್ನು ತಾವು ನೋಡಿ

ಮಾಡಬೇಕು ಮತ್ತೆ ಎಂಟೂವರೆ ಕೋಟಿ ರೂಪಾಯಿಗಳನ್ನು ಮಾತ್ರ ತಾವು ಹಣಕಾಸಿನ ಮಂತ್ರಿಗಳಿಗೆ ಹೇಳಿ ಆ ಡಿಫಿಸಿಟ್ ಅನ್ನು ತಾವು ಮಾಡಿಕೊಳ್ಳಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ : ಇದರ ಜೊತೆಗೆ ಅವರು ಬ್ರೀಫಾಗಿ ನಷ್ಟದಲ್ಲಿರುವಂಥ ಸೊಸೈಟಿಗಳ ಬಗ್ಗೆ ಮತ್ತು ಡೈರಿಗಳ ಬಗ್ಗೆ ಹೇಳಿದರು. ತಾವು ಈ ಸ್ಕೂಲ್ ಮಿಲ್ಕ್‌ನಲ್ಲಿ ಒಂದು ಐದೂವರೆ ಕೋಟಿ ರೂಪಾಯಿಗಳನ್ನು ಸರ್ಕಾರ ಕೊಡುವುದು ಬಾಕಿ ಇದೆ. ಅದು ನಾಗೇಗೌಡರು ತಂದಿರತಕ್ಕ ಯೋಜನೆ. ಐದೂವರೆ ಕೋಟಿ ರೂಪಾಯಿಗಳನ್ನು ಸರ್ಕಾರ ಡೈರಿಗಳಿಗೆ ಕೊಡುವುದಿದೆ. ನೀವು ಕೊಟ್ಟುಬಿಟ್ಟರೆ ಅವೂ ಕೂಡ ಲಾಭಕ್ಕೆ ಬಂದುಬಿಡುತ್ತವೆ. ನೀವು ಬೇರೆ ಏನು ಅವರಿಗೆ ಅನುದಾನವನ್ನು ಕೊಡುವುದಾಗಲಿ ಅಥವಾ ಅವರಿಗೆ ನಷ್ಟ ತುಂಬಿಕೊಡುವಂಥ ಅವಕಾಶವೇ ಇರುವುದಿಲ್ಲ, ಬಹಳ ಚೆನ್ನಾಗಿ ನಡೆಯುತ್ತಿದೆ. ದಯಮಾಡಿ ಬೇಗ ಅದನ್ನು ತುಂಬಿಕೊಡಲಿಕ್ಕೆ ವ್ಯವಸ್ಥೆ ಮಾಡಿ ಅಥವಾ ಯಾವಾಗ ಕೊಡುತ್ತೀರಿ ಎಂಬುದನ್ನು ಹೇಳಿದರೆ ಅನುಕೂಲವಾಗುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ : ಅರಗರವರು ಹೇಳಿದಂಥ ಸಿ.ಎಂ.ಎಸ್ (ಚಿಲ್ಡ್ರನ್ ಮಿಲ್ಕ್ ಸ್ಕೀಂ) ಯೋಜನೆಯಲ್ಲಿ ಕೊಡಬೇಕಾದ ಬಾಕಿ ಇದೆ. ಕೆಲವಾರು ಒಕ್ಕೂಟಗಳಿಗೆ 10 ಲಕ್ಷ 20 ಲಕ್ಷ 60 ಲಕ್ಷ ಹೀಗೆ ಕೊಡುವಂತದ್ದು ಇದೆ. ಅದು ಈಗಾಗಲೇ ತಡ ಆಯಿತು. ಆದಷ್ಟು ಬೇಗ ಅದನ್ನು ಕೊಡುವ ವ್ಯವಸ್ಥೆ ಆಗುತ್ತದೆ, ಎಲ್ಲಾ ಒಕ್ಕೂಟಗಳಿಗೂ ಕೊಡುತ್ತೇವೆ, ಒಟ್ಟು ಆರು ಕೋಟಿ ರೂಪಾಯಿ ಬಾಕಿ ಇದೆ.

ಶ್ರೀ ಕೆ.ಎನ್. ನಾಗೇಗೌಡ : ಈ ಮಿಲ್ಕ್ ಸ್ಕೀಂನಲ್ಲಿ ಆರು ಕೋಟಿ ಎಪ್ಪತ್ತೇಳು ಲಕ್ಷ ತಾವು ಏನು ಕೊಡಬೇಕಾಗಿದೆ ಅದು ಒಂದು, ಗ್ರಾಂಟ್ ಇನ್ ಏಡ್ ಎರಡು ಕೋಟಿ ಹದಿನೆಂಟು ಲಕ್ಷ. ಅದಕ್ಕೆ ನಾನು ಹೇಳುವುದು ಸುಮಾರು ಎಂಟು ಕೋಟಿ ತೊಂಭತ್ತೈದು ಲಕ್ಷ ರೂಪಾಯಿಯಷ್ಟು ನೀವು ಕೊಡಬೇಕಾಗಿದೆ. ಅದು ಆಗ ನಾವು ಮಾಡಿದ ಉದ್ದೇಶ ಏನೆಂದು ಹೇಳಿದರೆ ಪ್ರತಿವರ್ಷ ಇರಬೇಕು ಎಂದಲ್ಲ, ಆ ವರ್ಷ ಇದಕ್ಕಿಂತಲೂ ಅಧಿಕವಾಗಿ ಹಾಲು ಬಂದಿದೆ ಎಲ್ಲಾ ರೈತರ ಮಕ್ಕಳು ಕುಡಿಯಗೊಳ್ಳಲಿ, ಸರ್ಕಾರದವರು ಹಣ ಕೊಟ್ಟರೆ ಸೊಸೈಟಿ ಉಳಿದುಕೊಳ್ಳುತ್ತವೆ ಎಂದು ಮಾಡಿದೆವು. ಈ ಸ್ಕೀಂನಲ್ಲಿ ಇವತ್ತು ಅಷ್ಟೊಂದು ಸಸ್ಟೈನ್ ಮಾಡಿಕೊಳ್ಳುವಂಥ ಸ್ಥಿತಿಯಲ್ಲಿ ರಾಜ್ಯಸರ್ಕಾರದ ಆರ್ಥಿಕ ಪರಿಸ್ಥಿತಿ ಇಲ್ಲ, ಪಾಪ ನಮಗೆ ಮೊಯಿಲಿಯವರು ಆ ಎರಡೂ ಕಾರ್ಯಕ್ರಮಗಳನ್ನು ಒಪ್ಪಿದರು. ಅವತ್ತು ನಮ್ಮ ಜ್ಞಾನೇಂದ್ರರವರು ಅಧ್ಯಕ್ಷರಾಗಿದ್ದರು. ಸೊಸೈಟಿಗಳಲ್ಲಿ ಇದರ ಪೇಮೆಂಟ್ ಕೊಡುವುದಕ್ಕಾಗುತ್ತಿಲ್ಲ. ನಾವು ಹಾಲನ್ನೂ ಕೊಂಡುಕೊಳ್ಳಲು ಆಗುತ್ತಿರಲಿಲ್ಲ. ಹಾಲಿಗೆ 5 ರೂ. ಕೊಟ್ಟು ಕೊಂಡು ಕೊಳ್ಳುವಂತಹ ಗತಿ ಇರುತ್ತಿರಲಿಲ್ಲ, ಆದುದರಿಂದ ತಾವು ಆವೆರಡನ್ನೂ ಮಾಡಿಕೊಡಬೇಕೆಂದು ಕೇಳಿಕೊಂಡು ನಾನು ಈ ವಿಷಯವನ್ನು ಇಷ್ಟಕ್ಕೇ ನಿಲ್ಲಿಸುತ್ತೇನೆ. ನಾನು ಒಂದು ಮಾತನ್ನು ನಮ್ಮ ಪಶುಸಂಗೋಪನಾ ಮಂತ್ರಿಗಳಿಗೆ ಹೇಳುತ್ತಿದ್ದೇನೆ. ಕಾಂಟ್ರಾಕ್ಟ್ ಬೇಸಿಸ್ ಮೇಲೆ ನೇಮಕಾತಿ ಮಾಡಿಕೊಳ್ಳಬೇಕೆಂದು 147 ನಿರುದ್ಯೋಗಿ ವೈದ್ಯರುಗಳ ಸಂದರ್ಶನವಾಗಿತ್ತು. ಈಗ ಅಲ್ಲಿ ಡಾಕ್ಟರ್ ಓದಿದವರೇ ಇಲ್ಲ. ನೀವು ಈಗಾಗಲೇ ಅವರನ್ನು ಸಂದರ್ಶನ ಮಾಡಿದ್ದೀರಿ. ಪ್ರತಿಯೊಂದನ್ನೂ ಕರ್ನಾಟಕ ಲೋಕಸೇವಾ ಆಯೋಗದಿಂದಲೇ ನೇಮಕಾತಿ ಮಾಡಬೇಕು ಎಂದು ಹೇಳುವುದರಿಂದ ಏನೂ ಪ್ರಯೋಜನ ಆಗುವುದಿಲ್ಲ.

ಲೋಕಸೇವಾ ಆಯೋಗದವರು ನೇಮಕಾತಿ ಪ್ರಕ್ರಿಯೆಯಲ್ಲಿ ಯಾವ ಯಾವ ಕ್ರಮಗಳನ್ನು ಅನುಸರಿಸುತ್ತಾರೋ, ಆ ಎಲ್ಲಾ ಕ್ರಮಗಳನ್ನು ಅನುಸರಿಸಿ ನಾವು ಸಂದರ್ಶನ ಮಾಡಿದ್ದೇವೆ. ತಾವು ದಯವಿಟ್ಟು ಆ ಬಗ್ಗೆ ಸಂಬಂಧಿಸಿದ ಫೈಲ್

ಅನ್ನು ತರಿಸಿಕೊಂಡು ನಿರುದ್ಯೋಗಿ ವೈದ್ಯರುಗಳನ್ನು ನೇಮಕಾತಿ ಮಾಡಿಕೊಂಡರೆ, ಇಡೀ ರಾಜ್ಯದಲ್ಲಿ ಒಬ್ಬರು ಸಹ ನಿರುದ್ಯೋಗಿ ಪಶು ವೈದ್ಯರು ಇರುವುದಿಲ್ಲ, ಓದಿದ ಎಲ್ಲರಿಗೂ ಕೆಲಸ ಕೊಟ್ಟಂತಾಗುತ್ತದೆ. ನಾನು ಸಚಿವನಾಗಿದ್ದ ಕೊನೆಯ ದಿನಗಳಲ್ಲಿ ಆ ನೇಮಕಾತಿಯ ಪ್ರಕ್ರಿಯೆಯನ್ನು ಆರಂಭಿಸಿದ್ದೆ. ಆ ಬಗ್ಗೆ ಸಂಬಂಧಿಸಿದ ಫೈಲ್ ಅನ್ನು ತಾವು ತರಿಸಿಕೊಂಡು ವೈದ್ಯರುಗಳ ನೇಮಕಾತಿ ಮಾಡುವ ಬಗ್ಗೆ ತಾವು ಆಸಕ್ತಿ ವಹಿಸಬೇಕು. ಇದರಿಂದ ನಿರುದ್ಯೋಗಿಗಳಿಗೆ ಅನುಕೂಲವಾಗುತ್ತದೆ ಎಂಬ ವಿಷಯವನ್ನು ಈ ಮೂಲಕ ತಮ್ಮ ಗಮನಕ್ಕೆ ತರುತ್ತಿದ್ದೇನೆ, ಇನ್ನು ಮೀನುಗಾರಿಕೆ ಬಗ್ಗೆ ಹೇಳುವುದಾದರೆ, 1995-96ನೇ ಸಾಲಿನಲ್ಲಿ ಮೀನುಗಾರರಿಗಾಗಿ 650 ಮನೆಗಳನ್ನು ಕಟ್ಟುವುದಕ್ಕಾಗಿ ಯೋಜನೆಯೊಂದನ್ನು ತಯಾರಿಸಲಾಗಿದೆ. ನನ್ನ ಕ್ಷೇತ್ರದಲ್ಲಿ 35 ಸಾವಿರ ಜನ ಮತದಾರಿದ್ದಾರೆ. ನನ್ನ ಮತ್ತು ಮಾನ್ಯ ಸದಸ್ಯರಾದ ಸೋಮಶೇಖರ್‌ರವರ ಎರಡೂ ಕ್ಷೇತ್ರಗಳು ಸೇರಿದರೆ ಒಟ್ಟು 35 ಸಾವಿರ ಜನ ಮತದಾರಿದ್ದಾರೆ. ಜನಸಂಖ್ಯೆಯಲ್ಲಿ ಇವರ ಕ್ಷೇತ್ರದಲ್ಲೇ 15-20 ಸಾವಿರ ಜನ ಮತದಾರರಿದ್ದಾರೆ. ನಮ್ಮ ಊರಿನಲ್ಲೇ 10-12 ಸಾವಿರ ಜನಸಂಖ್ಯೆ ಇದೆ. ಮಾನ್ಯ ಸದಸ್ಯರಾದ ವಿಜಯಲಕ್ಷ್ಮಿಯವರ ಕ್ಷೇತ್ರದಲ್ಲೂ ಸಹ ಬಹಳಷ್ಟು ಜನ ಮೀನುಗಾರರಿದ್ದಾರೆ. ಆದರೆ 95-96ನೇ ಸಾಲಿನಲ್ಲಿ 650 ಮನೆಗಳನ್ನು ಮಾತ್ರ ನಿರ್ಮಿಸುವುದಕ್ಕಾಗಿ ಯೋಜನೆ ತಯಾರಿಸಲಾಗಿದೆ. 10 ಮನೆಗಳಿಗೆ ಒಂದು ಕಮ್ಯೂನಿಟಿ ಸೆಂಟರ್ಸ್ ಎಂದು ಮಾಡಿದ್ದೀರಿ. ಆ ಕಮ್ಯೂನಿಟಿ ಸೆಂಟರ್ಸ್‌ನಲ್ಲಿ ಬೋರ್‌ವೆಲ್ ಹಾಕಿಸಿ ಕೊಡುವುದು ಎಜ್ಯುಕೇಷನ್ ಇನ್‌ಸ್ಟಿಟ್ಯೂಷನ್ ಮಾಡುವುದು, 10 ಜನ ಮೀನುಗಾರರನ್ನು ಹಿಡಿದುಕೊಂಡು ಬಂದು ಮನೆ ಕಟ್ಟಿಸಿ, ಅವರು ಉದ್ಯೋಗ ಮಾಡುವುದಕ್ಕೆ ಅನುಕೂಲ ಮಾಡುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಈ ಯೋಜನೆಯಡಿಯಲ್ಲಿ ಒಂದು ಸಾವಿರ ಮನೆಗಳನ್ನು ಕಟ್ಟಬೇಕೆಂದು ಉದ್ದೇಶಿಸಿ, 1994-95ರಲ್ಲಿ ಕೇಂದ್ರ ಸರ್ಕಾರದವರು 462 ಮನೆಗಳನ್ನು ನಿರ್ಮಿಸಲು ಅವಕಾಶ ಮಾಡಿದರು. ಆದರೆ ಅದು ಇದುವರೆವಿಗೂ ಕಾರ್ಯಗತವಾಗಿಲ್ಲ. ಜಾಗಗಳನ್ನು ಸೆಲೆಕ್ಟ್ ಮಾಡಿದ್ದಾರೆ. ಹಣ ಬಿಡುಗಡೆ ಮಾಡಿಲ್ಲ, ಬೆಳಗಾಂ, ಹಾಸನ ಮತ್ತು ಮೈಸೂರು ಈ ಮೂರು ಜಿಲ್ಲೆಗೆ ಮಾತ್ರ 462 ಮನೆಗಳನ್ನು ಮಂಜೂರು ಮಾಡಿದ್ದಾರೆ. ಈ ವರ್ಷದ ಬಡ್ಜೆಟ್ಟಿನಲ್ಲಿ 650 ಮನೆಗಳನ್ನು ಕಟ್ಟಲು ತಾವು ಅವಕಾಶ ಕಲ್ಪಿಸಿರುತ್ತೀರಿ. ಬೆಳಗಾಂ, ಹಾಸನ ಮತ್ತು ಮೈಸೂರು ಜಿಲ್ಲೆಯಲ್ಲಿ ಮನೆಗಳನ್ನು ನಿರ್ಮಿಸಿ ಎಂದು ಅಧಿಕಾರಿಗಳು ಹೇಳಿದರೆ ಮೇಲಿನವರು ಅದಕ್ಕೆ ಟಿಕ್ ಮಾರ್ಕ್ ಹಾಕಿ ಬಿಡುತ್ತಾರೆ. ಇದು ಈ ರೀತಿ ಆಗಿರಬೇಕೇ ಹೊರತು, ಇದರಲ್ಲಿ ಬೇರೆ ಏನೂ ಇಲ್ಲ, ಕೇಂದ್ರ ಸರ್ಕಾರದವರು ಒಂದು ಪ್ರಸ್ತಾವನೆ ಕಳುಹಿಸಿ ಎಂದು ಹೇಳಿದರು. ನಮ್ಮ ಅಧಿಕಾರಿಗಳು ಬೆಳಗಾಂ, ಮೈಸೂರು ಮತ್ತು ಹಾಸನ ಜಿಲ್ಲೆಯಲ್ಲಿ 462 ಮನೆಗಳನ್ನು ನಿರ್ಮಿಸಬೇಕೆಂದು ಪ್ರಸ್ತಾವನೆ ಕಳುಹಿಸಿದ್ದಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಈ ಬಾರಿ ಬಡ್ಜೆಟ್ಟಿನಲ್ಲಿ 650 ಮನೆಗಳನ್ನು ಕಟ್ಟಲು ಮಾತ್ರ ಅವಕಾಶವಿದೆ. ಇದಕ್ಕಾಗಿ ಒಟ್ಟು 1,717 ಅರ್ಜಿಗಳು ಬಂದಿವೆ. ಈ ಯೋಜನೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಲಾ ಶೇಕಡ 50ರಷ್ಟು ವೆಚ್ಚವನ್ನು ಭರಿಸುತ್ತವೆ. ನಾನು ಪುನಃ ಒಂದು ಪರಿಷ್ಕೃತ ಪಟ್ಟಿಯನ್ನು ಕೇಂದ್ರಕ್ಕೆ ಕಳುಹಿಸಿ ಮನೆಗಳಿಗಾಗಿ ಅರ್ಜಿ ಸಲ್ಲಿಸಿರುವ 1,717 ಜನರಿಗೂ ಮನೆಗಳು ಸಿಗುವಂತೆ ಅವಕಾಶ ಮಾಡಿಕೊಡಲು ಪ್ರಯತ್ನವನ್ನು ಮಾಡುತ್ತಿದ್ದೇನೆ.

ಶ್ರೀ ಕೆ.ಎನ್. ನಾಗೇಗೌಡ : ನಾನು ಹೇಳುವುದೇನೆಂದರೆ, ನಮ್ಮ ಜಿಲ್ಲೆಗೆ ಮೋಸ ಆಗಿದೆ ಎಂದು ಹೇಳಿ....

ಒಬ್ಬ ಮಾನ್ಯ ಸದಸ್ಯರು : ಹೇಗೆ ಆಯಿತು ಎಂಬುದನ್ನು ಹೇಳಿ.

ಉಪಾಧ್ಯಕ್ಷರು : ಈಗಾಗಲೇ ಅವರು ಅದನ್ನು ಹೇಳಿದ್ದಾರೆ.

ಶ್ರೀ ಕೆ.ಎನ್. ನಾಗೇಗೌಡ : ಆ ಜಿಲ್ಲೆಯವರು ಮಾಡಿಕೊಂಡಿದ್ದಾರೆ, ಆದ್ದರಿಂದ ಆಗಿದೆ. ಈಗ ನಮ್ಮ ಕ್ಯಾಟಲ್ ಫೀಡ್ ಪ್ಲಾಂಟ್ ಅನ್ನು ಆಗಲೇ ನಿಮ್ಮ ಜಿಲ್ಲೆಗೆ ತೆಗೆದುಕೊಂಡು ಬಿಟ್ಟಿದ್ದೀರಿ. ಹಾಸನ ಜಿಲ್ಲೆಯವರು ಬಹಳ ಬುದ್ಧಿವಂತರು ಸ್ವಾಮಿ. ನಾನು ನಿಮಗೆ ಹೇಳಿಕೊಡಬೇಕೇ? ನಾನು ನಮ್ಮವರೆಲ್ಲರ ಮೀಟಿಂಗ್ ಒಂದನ್ನು ಮಾಡಿ, ಬಹಳ ಖುಷಿಯಿಂದ ನಿಮ್ಮೆಲ್ಲರಿಗೂ ಮನೆಗಳು ಸಿಗುತ್ತದೆ, ನಾನು ಏನಾದರೂ ಮಾಡಿ 25-30 ಮನೆಗಳನ್ನಾದರೂ ಗಂಗಮತಸ್ಥರಿಗೆ ಕೊಡಿಸುತ್ತೇನೆ ಎಂದು ಭರವಸೆ ಕೊಟ್ಟಿದ್ದೆ. ಅವರೆಲ್ಲರೂ ಒಳನಾಡಿನ ಮೀನುಗಾರರು ಕೆರೆಗಳಲ್ಲಿ ಹೋಗಿ ಮೀನು ಹಿಡಿಯತಕ್ಕ ಜನ ಅವರು. ಅವರಿಗೆ ಯಾವುದೇ ಜಮೀನು ಇಲ್ಲ, ಅವರು ಜಮೀನಸ್ಥರು ಅಲ್ಲ. ಎಲ್ಲೋ 4-5 ಕುಟುಂಬಗಳಿಗೆ ಮಾತ್ರ ಜಮೀನು ಇದೆ. ನಾವು ಈ ತರಹದವರನ್ನೆಲ್ಲಾ ನೋಡಿ, ನಿಮ್ಮ ಆಫೀಸರ್‌ಗಳ ಹತ್ತಿರ ಹೋಗಿ ಕೇಳಿದರೆ, ಅವರು 402 ಮನೆಗಳನ್ನು ನಿರ್ಮಿಸಲು ಹೋದ ವರ್ಷ ಅಪ್ರೂವ್ ಮಾಡಿಸಿ ಕಳುಹಿಸಿಕೊಟ್ಟಿದ್ದೇವೆ, ಕೇವಲ ಮೂರು ಜಿಲ್ಲೆಗೆ ಮಾತ್ರ ಇವು ಸೀಮಿತವಾಗಿವೆ ಎಂದು ಹೇಳಿದರು. ಆದುದರಿಂದ ದಯವಿಟ್ಟು ತಾವು ನಮಗೆ ಈ ದಿಸೆಯಲ್ಲಿ ಸಹಾಯ ಮಾಡಬೇಕು. ಈ ಸಾರಿ ನೀವು 650 ಮನೆಗಳನ್ನು ನಿರ್ಮಿಸಲು ಏನು ಪ್ರಪೋಸಲ್ ಮಾಡಿದ್ದೀರಿ, ಅದನ್ನು ಆಯಾ ಜಿಲ್ಲೆಗಳ ಜನಸಂಖ್ಯೆಯನ್ನು ನೋಡಿಕೊಂಡು ಎಲ್ಲಾ ಜಿಲ್ಲೆಗೂ ಹಂಚಬೇಕು. ಸರ್ಕಾರದ ಸಂಬಂಧಪಟ್ಟ ಸಚಿವರು ಅಲ್ಲೆಲ್ಲಾ ಹೋಗಿ ಭೇಟಿ ನೀಡಿ, ಜನಸಂಖ್ಯೆಯ ಆಧಾರದ ಮೇಲೆ ಎಲ್ಲಾ ಜಿಲ್ಲೆಗಳಿಗೂ ಸರಿಸಮನಾಗಿ ಅದನ್ನು ಹಂಚಬೇಕು. ಎಷ್ಟೆಷ್ಟು ಮೀನುಗಾರರಿದ್ದಾರೆ ಎಂಬುದನ್ನು ನೋಡಿಕೊಂಡು ಮನೆಗಳನ್ನು ಹಂಚಬೇಕು. ಈಗ ನಿರ್ಮಿಸಲಾಗಿರುವ 650 ಮನೆಗಳನ್ನು ಎಲ್ಲಾ ಮೀನುಗಾರರಿಗೆ, ಜನಸಂಖ್ಯೆಗೆ ಆಧಾರವಾಗಿ, ವ್ಯವಸಾಯಕ್ಕೆ ಅನುಸಾರವಾಗಿ, ಮೀನುಗಾರರಾಗಿ ವೃತ್ತಿಯನ್ನು ಮಾಡತಕ್ಕವರ ಸಂಖ್ಯೆಗೆ ಅನುಗುಣವಾಗಿ ಅವರು ಜೀವನ ಮಾಡುತ್ತಿರುವುದನ್ನು ಆಧಾರವಾಗಿಟ್ಟುಕೊಂಡು, ಸ್ಟೇಟ್ ಆಧಾರವಾಗಿಟ್ಟುಕೊಂಡು, ಅಂತಹ ಮೀನುಗಾರರಿಗೆ ಮಾತ್ರ ಈ ಮನೆಗಳನ್ನು ಹಂಚಬೇಕು. ಆಗ ವೃತ್ತಿ ಬೆಳೆಯುತ್ತದೆ, ಅಲ್ಲಿ ಮೀನು ಸಾಕುವುದಕ್ಕೆ ಅವರು ವೃತ್ತಿಯನ್ನು ಅವಲಂಬಿಸಿಕೊಳ್ಳುತ್ತಾರೆ. ಆದ್ದರಿಂದ ತಾವು ಇದನ್ನು ಮಾಡಲೇಬೇಕು.

ಒಂದು ಮನೆಗೆ 30 ಸಾವಿರ ರೂಪಾಯಿಗಳನ್ನು ಕೊಡತಕ್ಕ ಯೋಜನೆ ಇದು. ಈ ಸಲ ಹೋಗಿ ನೀವು ಪ್ರಯತ್ನ ಮಾಡಿದರೆ ಹೆಚ್ಚು ಮನೆಗಳು ಸಿಗಬಹುದು. ನೀವು ಹೋಗಿ, ಏನಾದರೂ ಮಾಡಿ ಕೇಂದ್ರ ಸರ್ಕಾರದಲ್ಲಿ ಅಲ್ಲಿನ ಅಧಿಕಾರಿಗಳನ್ನು ಮೀಟ್ ಮಾಡಿ, ಅಲ್ಲಿಂದ ನೀವು ಜಾಸ್ತಿ ಹಣವನ್ನು ತೆಗೆದುಕೊಂಡು ಬಂದರೆ ಅನುಕೂಲವಾಗುತ್ತದೆ. ನೀವು ಒಂದು ಸಾವಿರ ಮನೆಗಳನ್ನು ನಿರ್ಮಿಸಬೇಕೆಂದಿದ್ದರೆ ಅದಕ್ಕೆ ಲಕ್ಷಾಂತರ ರೂಪಾಯಿಗಳ ಹಣ ನಿಮಗೆ ಬೇಕಾಗುತ್ತದೆ. ಕೇಂದ್ರ ಸರ್ಕಾರ ಹಣ ಕೊಡತಕ್ಕ ವ್ಯವಸ್ಥೆಯೊಳಗೆ ನೀವು ಹಣ ಪಡೆಯಲು ಪ್ರಯತ್ನಿಸಬೇಕು. ಇದರಿಂದ ಮೀನುಗಾರರ ಸಮುದಾಯಕ್ಕೆ ಬಹಳಷ್ಟು ಅನುಕೂಲವಾಗುತ್ತದೆ. ಅದನ್ನು ತಾವು ಖಂಡಿತವಾಗಿ ಮಾಡಬೇಕೆಂದು ನಾನು ತಮ್ಮಲ್ಲಿ ಕಳಕಳಿಯ ಮನವಿಯನ್ನು ಮಾಡುತ್ತಿದ್ದೇನೆ. ಇವತ್ತಿನ ದಿವಸ ಆ ಸ್ಕೀಮ್ ಬಗ್ಗೆ ನೀವು ಸ್ವಲ್ಪ ಯೋಚನೆ ಮಾಡಬೇಕು. 10 ಮನೆಗಳಿಗೆ ಒಂದು ಬ್ಲಾಕ್ ಎಂದು ಮಾಡಿದ್ದಾರೆ. ಈ ರೀತಿ 10 ಮನೆಗಳಿಗೆ ಒಂದೊಂದು ಬ್ಲಾಕ್‌ಗಳನ್ನು ಮಾಡುವುದಾದರೆ, ಕೆಲವೊಂದು ಹಳ್ಳಿಗಳಲ್ಲಿ 4-5 ಕುಟುಂಬಗಳು ಮಾತ್ರ ಇರುತ್ತವೆ. ಅಂದರೆ ಅಲ್ಲಿ ಒಂದು ಬ್ಲಾಕ್ ಮಾಡಲು 10 ಮನೆಗಳು ಸಿಗುವುದಿಲ್ಲ, ಆ ವರ್ಗ ಈ ಯೋಜನೆಯಿಂದ ವಂಚಿತವಾಗುತ್ತದೆ. ಆದುದರಿಂದ 10 ಮನೆಗಳಿಗೆ ಒಂದು ಬ್ಲಾಕ್ ಎಂಬುದನ್ನು ನೀವು ರಿಲ್ಯಾಕ್ಸ್

ಮಾಡಿಸಿಕೊಳ್ಳಬೇಕು. 10 ಮನೆಗಳಿಗೊಂದು ಬ್ಲಾಕ್ ಮಾಡುವಷ್ಟು ಮೀನುಗಾರರ ಕುಟುಂಬಗಳು ಎಲ್ಲಿ ಸಿಗುತ್ತವೆಯೋ ಅಲ್ಲಿಗೆ ನೀವು 'ಎ' ಗ್ರೂಪ್ ಎಂದು ಕರೆದುಕೊಳ್ಳಿ. ಎಲ್ಲಿ ಸಾಕಷ್ಟು ಮೀನುಗಾರರ ಕುಟುಂಬಗಳು ಸಿಗುವುದಿಲ್ಲವೋ ಅಲ್ಲಿ ಒಂದು ರಿಲಾಕ್ಸೇಷನ್ ಮಾಡಿ ಆ ಜನಾಂಗಕ್ಕೆ ಅನುಕೂಲ ಮಾಡಿ, ಮೀನುಗಾರರಿಗೆ ಸಿಂಗಲ್ ಹೌಸ್‌ಗಳನ್ನು ಕಟ್ಟಿಕೊಂಡು, ನಾವೇನು ಆಶ್ರಯ ಯೋಜನೆಯ ಅಡಿಯಲ್ಲಿ ಮಾಡುತ್ತೇವೆ, ಆ ರೀತಿ ತಾವು ಅದನ್ನು ಮಾಡಬೇಕು. ಈ ಬಗ್ಗೆ ಕೇಂದ್ರ ಸರ್ಕಾರದಿಂದ ಅನುದಾನ ಪಡೆಸಿಕೊಳ್ಳಬೇಕು ಎಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇನ್ನು ಕೆರೆಗಳ ಬಗ್ಗೆ ಹೇಳುವುದಾದರೆ, ನಮ್ಮ ಕ್ಷೇತ್ರದಲ್ಲಾಗಲಿ, ಮಾನ್ಯ ಸದಸ್ಯರಾದ ಸೋಮಶೇಖರ್ ಅಥವಾ ಪುಟ್ಟಣ್ಣಯ್ಯನವರ ಕ್ಷೇತ್ರಗಳಲ್ಲಾಗಲೀ ಬಹಳಷ್ಟು ಕೆರೆಗಳಿವೆ. ತೊಣ್ಣೂರು ಕೆರೆ ಎಂಬುದು ಅತ್ಯಂತ ಪ್ರಸಿದ್ಧವಾದಂತಹ ಕೆರೆಯಾಗಿದೆ. ಈ ಕೆರೆಗಳನ್ನು ಜಿಲ್ಲಾ ಪಂಚಾಯಿತಿಗೆ ತಾವು ವಹಿಸಿರುತ್ತೀರಿ.

ಜಿಲ್ಲಾ ಪಂಚಾಯಿತಿಗಳಿಗೆ ಅವುಗಳನ್ನು ವಹಿಸಬೇಡಿ ಎಂದು ನಾನು ಹೇಳುವುದಿಲ್ಲ, ನಾನು ಅದಕ್ಕೆ ವಿರುದ್ಧವಾಗಿಲ್ಲ; ಇದಕ್ಕಾಗಿ ಒಂದು ಲೀಸಿಂಗ್ ಪಾಲಿಸಿ ಇರಬೇಕು. ಪಾಲಿಸಿ ಇರುವುದೇ ಲೀಸಿಂಗ್ ಪಾಲಿಸಿ ಇರುವುದಿಲ್ಲ, ಇದು ತಮಗೂ ಗೊತ್ತಿರಬೇಕು. ಯಾರದೋ ಹೆಸರಿಗೆ ಟೆಂಡರ್ ಕೂಗಿಕೊಳ್ಳುತ್ತಾರೆ, ಅವರು ಸಬ್ ಕಾಂಟ್ರಾಕ್ಟ್ ಕೊಟ್ಟುಕೊಳ್ಳುತ್ತಾರೆ. ಅವರು ಅಲ್ಲಿ ಎಲ್ಲಾ ದುಡ್ಡು ಸಂಪಾದನೆ ಮಾಡಿಕೊಂಡು, ಅಲ್ಲಿ ಮೀನು ಹಿಡಿದು, ಬೆಂಗಳೂರು, ಮೈಸೂರು ಅಥವಾ ತಮಗೆ ಬೇಕಾದ ಕಡೆಗೆ ಅವರು ಮೀನುಗಳನ್ನು ಮಾರುತ್ತಾರೆ. ಅಥವಾ ಒಂದು ಅಸೋಸಿಯೇಷನ್ ಎಂದು ಮಾಡಿಕೊಳ್ಳುವುದು, ಅಸೋಸಿಯೇಷನ್‌ಗೆ ಲೀಸಿಂಗ್ ಕೊಟ್ಟು ಬಿಡುವುದು. ಈ ರೀತಿ ಮೀನುಗಳ ಕೆರೆಗಳನ್ನು ಗುತ್ತಿಗೆ ಪಡೆಯತಕ್ಕವರಲ್ಲಿ ಏನೊಂದು ಬೇನಾಮಿ ವ್ಯವಹಾರ ಮಾಡುತ್ತಾರೆ, ಅದನ್ನು ನಿಲ್ಲಿಸಬೇಕು. ಕೆರೆಗಳಲ್ಲಿ ಮೀನಿನ ಸಂಪತ್ತು ಹೆಚ್ಚಿನ ಪ್ರಮಾಣದಲ್ಲಿದೆ. ಯಾವ ಕೆರೆಗಳಲ್ಲಿ ಮೀನಿನ ಸಂಪತ್ತು ಇದೆ, ಅದು ಈ ರಾಷ್ಟ್ರದ ಸಂಪತ್ತು, ಈ ರಾಜ್ಯದ ಸಂಪತ್ತು. ಇದರಿಂದ ರಾಜ್ಯಕ್ಕೆ ಆದಾಯ ಬರುತ್ತದೆ. ಮೀನುಗಾರಿಕೆಯಿಂದಾಗಿ ರಾಜ್ಯಕ್ಕೆ ಒಟ್ಟು ಎಷ್ಟು ಆದಾಯ ಬರುತ್ತದೆ ಎಂಬ ಬಗ್ಗೆ ನನ್ನ ಬಳಿ ಕರಾರುವಾಕ್ಕಾದ ಅಂಕಿಅಂಶಗಳು ಇಲ್ಲ, ದಯವಿಟ್ಟು ತಾವು ಏನು ಮಾಡಬೇಕು ಎಂದರೆ, ಕೆರೆಗಳನ್ನು ಗುತ್ತಿಗೆ ಕೊಡತಕ್ಕ ಕಾಲದಲ್ಲಿ ಬಹಿರಂಗ ಹರಾಜು ಹಾಕತಕ್ಕ ವ್ಯವಸ್ಥೆ ಮಾಡಬೇಕು. ಎಲ್ಲಿ ಸಾಧ್ಯತೆ ಇದೆ, ಅಲ್ಲಿ ಒಂದು ಪಾಲಿಸಿ ಮಾಡಿ. ಕೆರೆಗಳನ್ನು 'ಎ' 'ಬಿ' 'ಸಿ' ಎಂದು ಕ್ಯಾಟಗಿರಿ ಮಾಡಿ. ಮಾನ್ಯ ಸದಸ್ಯರಾದ ಪುಟ್ಟಣ್ಣಯ್ಯನವರ ಕ್ಷೇತ್ರದಲ್ಲಿರುವಂತಹ ತೊಣ್ಣೂರು ಕೆರೆಯಲ್ಲಿ ಆಗಲೀ ಅಥವಾ ನನ್ನ ಕ್ಷೇತ್ರದಲ್ಲಿರುವಂತಹ ಕಿರುಗಾವಲು ಕೆರೆಯಲ್ಲಾಗಲೀ ಲಕ್ಷಾಂತರ ರೂಪಾಯಿಗಳಷ್ಟು ಬೆಲೆ ಬಾಳುವ ಮೀನುಗಳು ಸಿಗುತ್ತವೆ. ಯಾರೋ ಸಂಪಾದನೆ ಮಾಡಿಕೊಂಡು ಹೋಗುತ್ತಾರೆ. ಅದೇ ರೀತಿ ಮಳವಳ್ಳಿ ಕೆರೆ ಕೂಡ ಇದೆ. ಮೀನುಗಾರರಿಗೆ ಇದರಿಂದ ಅನುಕೂಲವಾಗುವುದೇ ಇಲ್ಲ, ಯಾರು ಮೀನು ಹಿಡಿಯುವ ವೃತ್ತಿಯನ್ನು ಅವಲಂಬಿಸಿಕೊಂಡಿದ್ದಾರೆ, ಅವರಿಗೇ ಮೀಸಲಾಗಿರತಕ್ಕವು ಈ ಕೆರೆಗಳು. ಅವರು ಅಲ್ಲಿ ತರಹದ ಮೀನುಗಾರಿಕೆ ಮಾಡಬೇಕು. ಯಾವ ರೀತಿ ನಾವು ಮಾನ್ಯ ದೇವರಾಜ್ ಅರಸ್‌ರವರ ಕಾಲದಲ್ಲಿ 'ಉಳುವವನಿಗೇ ಭೂಮಿ' ಎಂದು ಭೂ ಸುಧಾರಣಾ ಕಾಯಿದೆಯನ್ನು ಜಾರಿಗೆ ತೆಗೆದುಕೊಂಡು ಬಂದೆವೋ, ಅದೇ ಭೂ ಸುಧಾರಣೆ ಕಾಯ್ದೆಯನ್ನು ನೀವು ಮೀನುಗಾರಿಕೆಗೂ ಅಳವಡಿಸಿಕೊಳ್ಳಬೇಕು. ಹೇಗೆ ಎಂದರೆ, ಯಾರು ವೃತ್ತಿ ಮಾಡುತ್ತಿದ್ದಾರೋ ಅವನ ಕೈಗೇ ಹೋಗಬೇಕು. ಯಾರು ಗಂಗಾಮತಸ್ಥ ಮೀನುಗಾರಿಕೆ ಸಹಕಾರ ಸಂಘಗಳಿದ್ದಾವೆಯೋ, ಸಹಕಾರ ಸಂಘಗಳನ್ನು ಮಾಡಿಕೊಳ್ಳಲಿ, ನೀವು ಅವರಿಗೆ ಕೊಡಿ. ಎಲ್ಲಿ ಸಹಕಾರ ಸಂಘಗಳು ಇಲ್ಲ, ಅಲ್ಲಿ ಬಹಿರಂಗ ಹರಾಜು ಹಾಕಿ. ಬಹಿರಂಗ ಹರಾಜು ಹಾಕಿದಾಗ ಯೋಚನೆ ಮಾಡುತ್ತಾರೆ.

ಬರುವುದಕ್ಕೆ ಅದನ್ನು ನೀವು ಮಾಡಲೇಬೇಕು. ಒಂದು ಲೀಸಿಂಗ್ ಪಾಲಿಸಿಯನ್ನು ನೀವು ಜಲಾಶಯಗಳ ಕೆರೆಗಳಲ್ಲಿ....

ಶ್ರೀ ಎಲ್.ಆರ್. ಶಿವರಾಮೇಗೌಡ : ಈಗ ಜಿಲ್ಲಾ ಪಂಚಾಯಿತಿಯ ವ್ಯಾಪ್ತಿಯಲ್ಲಿ ಬರತಕ್ಕಂಥ ಸಣ್ಣ ಕೆರೆಗಳಲ್ಲಿ ಎಲ್ಲೂ ನೇರವಾಗಿ ಬಹಿರಂಗ ಹರಾಜು ಮಾಡುತ್ತಿಲ್ಲ. ಮೊದಲಿನಿಂದ ಯಾರೂ ಮಾಡಿಕೊಂಡು ಬರುತ್ತಿದ್ದರೋ ಅವರೇ ಅಧಿಕಾರಿಗಳನ್ನು ಅಡ್ಜಸ್ಟ್ ಮಾಡಿಕೊಂಡು ಪ್ರತಿ ವರ್ಷ ಅವರೇ ಮಾಡಿಕೊಂಡು ಹೋಗುತ್ತಾರೆ. ಆದುದರಿಂದ ದಯಮಾಡಿ ಬಹಿರಂಗ ಹರಾಜು ಮಾಡಿಯೇ ಕೆರೆಗಳಿಗೆ ಗುತ್ತಿಗೆ ಕೊಡತಕ್ಕ ವ್ಯವಸ್ಥೆ ಮಾಡಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಈ ಬಗ್ಗೆ ನಾವು ಈಗಾಗಲೇ ಒಂದು ಚರ್ಚೆಯನ್ನು ಮಾಡಿ ತೀರ್ಮಾನಕ್ಕೆ ಬಂದಿದ್ದೇವೆ. ಯಾವ ಯಾವ ಕೆರೆಗಳನ್ನು ಗುತ್ತಿಗೆಯಲ್ಲಿ ಕೊಡಬೇಕು, ಯಾವ ಕೆರೆಗಳನ್ನು ಬಹಿರಂಗ ಹರಾಜು ಗುತ್ತಿಗೆದಾರರಿಗೆ ಕೊಡಬೇಕು ಎಂಬ ಬಗ್ಗೆ ನಾವು ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಅದರ ಪ್ರಕಾರ ನಾವು ನಡೆದುಕೊಳ್ಳುತ್ತೇವೆ.

ಶ್ರೀ ಅರಗ ಜ್ಞಾನೇಂದ್ರ : ಹಾಲಿ ಮೀನುಗಾರಿಕೆ ತರಬೇತಿ ಸಂಸ್ಥೆ ಕೂಡ ಒಂದು ರೀತಿಯಲ್ಲಿ ಬೋಗಸ್ ಆಗಿ ನಡೆಯುತ್ತಿದೆ. ಅವರಿಗೆ 15 ದಿವಸ ತರಬೇತಿ ಕೊಟ್ಟು ಬಿಡುತ್ತಾರೆ. ಜೀವನ ಪೂರ್ತಿ ಅವರಿಗೇ ಆ ಕೆರೆ ಮೀಸಲಾಗಿರುತ್ತದೆ. ಅವರನ್ನು ಬಿಟ್ಟು ಬೇರೆಯವರಿಗೆ ಆ ಕೆರೆಯನ್ನು ಬಿಡುವುದಿಲ್ಲ. ನಾನು ಶಿವಮೊಗ್ಗ ಜಿಲ್ಲೆಯ ಜಿಲ್ಲಾ ಪಂಚಾಯಿತಿಯಲ್ಲಿ ವ್ಯವಸಾಯ ಉಪ ಸಮಿತಿಯ ಛೇರ್ಮನ್ ಆಗಿದ್ದೆ. ಆಗ ಅನೇಕರು ನಾನು ಇದನ್ನು ಸರಿ ಮಾಡುವುದಕ್ಕೆ ಹೋದರೆ ಹೈಕೋರ್ಟ್‌ನಿಂದ ಸ್ಟೇ ತಂದರು. ಆ ರೀತಿ ಅವರು ತಂದಿರುವ ತಡೆಯಾಜ್ಞೆ ಇವತ್ತೂ ಕೂಡ ಹಾಗೆಯೇ ಇದೆ. ಸರ್ಕಾರದ ಕಡೆಯಿಂದ ಹೈಕೋರ್ಟ್‌ನಲ್ಲಿ ಹೋಗಿ, ಆ ತಡೆಯಾಜ್ಞೆಯನ್ನು ತೆರವು ಮಾಡಿಸಿ, ಅದನ್ನು ದುರಸ್ತಿ ಮಾಡದೇ ಹೋದರೆ ಸರ್ಕಾರಕ್ಕೆ ಬರುವಂತಹ ಅಪಾರವಾದ ಸಂಪತ್ತು ತಪ್ಪಿ ಹೋಗುತ್ತದೆ. ಅದು ನಿಜವಾಗಿ ಮೀನುಗಾರರ ಕೈಯಲ್ಲಿ ಸಿಗಲಿ. ಇಲ್ಲದಿದ್ದರೆ ಕೈಯಲ್ಲಿ ಇರಲಿ. ಯಾರೋ ಮಧ್ಯವರ್ತಿಗಳು ಹೊಟ್ಟೆ ತುಂಬಿಸಿಕೊಳ್ಳುವಂಥಾದ್ದು ಆಗಬಾರದು. ಇದರಿಂದ ಆಗಬಾರದೆಂದು ನಾನು ಹೇಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ : ಆದುದರಿಂದ ತಾವು ಈ ಒಂದು ಲೀಸಿಂಗ್ ಪಾಲಿಸಿಯನ್ನು ಮಾಡಬೇಕು. ನಿನ್ನೆ ನಾನು ಮಂಗಳೂರಿಗೆ ಹೋಗಿದ್ದೆ. ನಾನು ಗ್ರಾನೈಟ್ ವಿಚಾರಕ್ಕೆ ಅಲ್ಲಿಗೆ ಹೋಗಿದ್ದಾಗ, ನನಗೆ ಬಂದು ಮಾಹಿತಿ ಪ್ರಕಾರ, ನನಗೆ ಆ ಬಗ್ಗೆ ಸರಿಯಾದಂತಹ ರೀತಿಯಲ್ಲಿ ಗೊತ್ತಿಲ್ಲ. ಮಂಗಳೂರಿನಲ್ಲಿ ಪೋರ್ಟ್ ಲ್ಯಾಂಡ್ ಏನಿದೆ ಅದನ್ನು ಪ್ರೈವೇಟ್‌ನವರಿಗೆ ಕೊಟ್ಟಿದ್ದಾರೆ. ನಾನು ಈ ಬಗ್ಗೆ ಪೋರ್ಟ್ ಆಫೀಸರ್ಸ್‌ಗಳನ್ನು ಹಾಗೂ ಮತ್ತಿತರನ್ನು ಕೇಳಿದರೆ, ನೀವು ಬಂದು ಬಿಟ್ಟರಿ, ನಾವು ಮತ್ತೆ ನಿಮ್ಮ ಜೊತೆ ಮೀಟ್ ಮಾಡಲಿಕ್ಕೆ ಆಗಲಿಲ್ಲ. ಆದುದರಿಂದ ಈ ಅವಕಾಶವನ್ನು ಉಪಯೋಗಿಸಿಕೊಂಡು ಆ ಪೋರ್ಟ್ ಲ್ಯಾಂಡ್ ಏನಿದೆ ಅದನ್ನು ಪ್ರೈವೇಟ್‌ನವರಿಗೆ ಕೊಡಬಾರದು. ಆ ರೀತಿ ಪ್ರೈವೇಟ್‌ನವರಿಗೆ ಕೊಡುವುದರಿಂದಲೇ ಇವೆಲ್ಲಾ ಆಗಿರುವುದು. ಈ ವ್ಯವಹಾರಗಳು ನಡೆಯುತ್ತಿವೆಯಲ್ಲಾ ಪೋರ್ಟ್‌ನಲ್ಲಿ, ಅವರು ಯಾರೋ ಕ್ಲಿಯರಿಂಗ್ ಏಜೆಂಟ್ಸ್‌ಗಳೇ ಇದನ್ನೆಲ್ಲಾ ಮಾಡುವುದು. ನೀವು ಅಲ್ಲಿ ಭದ್ರ ಮಾಡಿ ಬಿಟ್ಟರೆ ಇಲ್ಲಿ ಎಕ್ಸ್‌ಪೋರ್ಟ್ ಮಾಡತಕ್ಕ ಅನೇಕ ವಿಚಾರಗಳು ರೆಕಾರ್ಡ್ಸ್‌ಗೆ ಬಂದು ಬಿಡುತ್ತವೆ. ಯಾವುದೇ ಎಕ್ಸ್‌ಪೋರ್ಟ್ಸ್ ಮಾಡಲಿ, ಅವರಿಂದ ಪೋರ್ಟ್ ಲ್ಯಾಂಡ್ ಅನ್ನು ನಿಮ್ಮ ಇಲಾಖೆಯವರು ಪ್ರೈವೇಟ್‌ಗೆ ಕೊಡದಿರುವಂತೆ

ತಾವು ಏನಾದರೂ ಈ ಸಾರಿ ಅದಕ್ಕೆ ಒಂದು ರೀತಿಯಾದಂತಹ ವ್ಯವಸ್ಥೆ ಮಾಡುವುದಕ್ಕೆ.....

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಈ ಪೋರ್ಟ್ ಲ್ಯಾಂಡ್ ಅನ್ನು ನಮ್ಮ ಸರ್ಕಾರ ಬಂದ ಮೇಲೆ ಯಾವ ಪ್ರೈವೇಟ್ ಪಾರ್ಟಿಗೂ ಲೀಸಿಂಗ್‌ಗೆ ಕೊಟ್ಟಿಲ್ಲ, ಅದನ್ನು ಇನ್ನು ಮುಂದೆ ಕೊಡುವುದಿಲ್ಲ ಎಂದು ನಾವು ತೀರ್ಮಾನ ತೆಗೆದುಕೊಂಡಿದ್ದೇವೆ. ಈಗಾಗಲೇ ಕೊಟ್ಟಿರುವುದನ್ನು ಏನು ಮಾಡಬೇಕು ಎಂಬ ಬಗ್ಗೆ ನಾವು ಒಂದು ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಲೀಸಿಂಗ್ ಕಂಡೀಷನ್ಸ್ ವಾಯ್‌ಲೇಟ್ ಮಾಡಿರುವುದನ್ನು ಕ್ಯಾನ್ಸಲ್ ಮಾಡಬೇಕೇ ಹೇಗೆ ಎಂಬ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಕೆ.ಎನ್. ನಾಗೇಗೌಡ : ಅದನ್ನು ನೀವು ಮಾಡಬೇಕು. ಅಲ್ಲಿ ಎಷ್ಟೋ ಕೋಟ್ಯಾಂತರ ರೂಪಾಯಿಗಳ ಸಾಮಾನುಗಳಲ್ಲಿ ಏನೇನೋ ವ್ಯವಹಾರಗಳು ನಡೆಯುತ್ತಿವೆ. ನೀವು ಅದನ್ನು ಗೌರ್ನಮೆಂಟ್ ಆಥರೈಸ್ಡ್ ಪ್ಲೇಸ್ ಎಂದು ಮಾಡಿದರೆ, ಆ ಪ್ಲೇಸ್ ಮಿಸ್‌ಯೂಸ್ ಮಾಡಿದ್ದಾರೆಂದು ನೀವು ಯಾವುದೇ ಕೇಸ್ ಹಾಕುವುದಕ್ಕೆ ನಿಮಗೆ ಅನುಕೂಲವಾಗುತ್ತದೆ. ಈ ರೀತಿ ಗೌರ್ನಮೆಂಟ್ ಅಥರೈಸ್ಡ್ ಪ್ಲೇಸ್ ಎಂದು ನೀವು ಮಾಡಿಕೊಳ್ಳದೇ ಹೋದರೆ, ನೀವು ಅವರ ಮೇಲೆ ಏನೂ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

ಆದುದರಿಂದ ನೀವು ಆಥರೈಸ್ಡ್ ಪ್ಲೇಸ್ ಮಾಡಿಕೊಳ್ಳುವುದು ಸೂಕ್ತ, ಸರ್ಕಾರದ ಈ ನಿಟ್ಟಿನಲ್ಲಿ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಇನ್ನು ನಮ್ಮ ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮದಲ್ಲಿ ನಾನು ನೋಡಿದಂತೆ, ನೀವು ಈ ಮಾರುಕಟ್ಟೆ ವ್ಯವಸ್ಥೆ ನಿಗಮ ಹೀಗೆ ಎಲ್ಲವನ್ನೂ ಮಾಡಿಕೊಂಡಿದ್ದೀರಿ. (ಮೀನುಗಾರಿಕೆ ಮಂತ್ರಿಗಳು) ಸ್ವಲ್ಪ ಯುವಕರಾಗಿರುವುದರಿಂದ ಜಾಸ್ತಿ ಆಸಕ್ತಿಯನ್ನು ವಹಿಸಿ, ಈ ಸಾರಿ ಏನಾದರೂ ಕೂಡ ಹೆಚ್ಚು ಹಣವನ್ನು ಅದಕ್ಕೆ ಒದಗಿಸಿಕೊಳ್ಳಬೇಕು. ಮಾರುಕಟ್ಟೆ ವ್ಯವಸ್ಥೆ ಇಲ್ಲದೆ ಮೀನನ್ನು ಬೀದಿಗಳಲ್ಲಿ ಮಾರುತ್ತಾರೆ. ಅದು ನಮ್ಮ ಹಾರ್ಟಿಕಲ್ಚರ್ ಇಲಾಖೆಯವರು ಮಾಡುತ್ತಾರಲ್ಲಾ ಆ ರೀತಿಯಾಗಿದೆ. ಅದಕ್ಕೆ ನೀವು ಇದನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ಮಾಡಬೇಕಾದರೆ, ಮೀನು ಅಭಿವೃದ್ಧಿ ನಿಗಮದ ವೈಲಾಸ್ ಇಟ್ಟುಕೊಂಡು ಬೀದಿ ಬೀದಿಯಲ್ಲಿ ಸಿಕ್ಕ ಸಿಕ್ಕ ಕಡೆ ಮೀನು ಮಾರುವಂಥಹದ್ದು, ಅದಕ್ಕೆ ಕಾಂಪ್ಲೆಕ್ಸ್‌ಗಳಿಲ್ಲದೆ ಆ ಮಾರುಕಟ್ಟೆಗಳೆಲ್ಲಾ ಹಾಳಾಗಿರುವುದನ್ನೆಲ್ಲಾ ತಾವು ತಪ್ಪಿಸಬೇಕು; ಇದಕ್ಕೆ ಏನಾದರೂ ಒಂದು ಹೊಸ ಯೋಜನೆಯನ್ನು ಹಾಕಬೇಕು ಎನ್ನುವ ಮಾತನ್ನು ನಾನು ತಮಗೆ ಹೇಳುತ್ತೇನೆ. ಇನ್ನು ಕೊನೆಯದಾಗಿ, ಉಪ ಮುಖ್ಯಮಂತ್ರಿಗಳಾಗಿರತಕ್ಕಂತಹ ಮಾನ್ಯ ಜೆ.ಹೆಚ್. ಪಟೇಲ್‌ರವರ ಖಾತೆಯಾಗಿರತಕ್ಕಂತಹ ಇಂಧನ ಇಲಾಖೆಯ ಬಗ್ಗೆ ಹೇಳುವುದಾದರೆ, ಈ ಇಲಾಖೆ ಅತ್ಯಂತ ಮಹತ್ವವಾದಂಥ ಇಲಾಖೆಯಾಗಿದೆ. ಒಂದಾನೊಂದು ಕಾಲದಲ್ಲಿ ಕೆ.ಇ.ಬಿ. ಕಛೇರಿ ಎಂದು ಹೇಳಿದರೆ, ಆ ಇಲಾಖೆ ಬೇಡ ಅದನ್ನು ತೆಗೆದುಕೊಂಡು ಹೋಗಿ ಮೂಲೆಯಲ್ಲಿ ಹಾಕಿಬಿಡಪ್ಪ, ಅದು ಕೊನೆಯಲ್ಲಿದೆ ಅಲ್ಲಿ ಹೋಗಿ ಬಿಲ್ಲನ್ನು ಕಟ್ಟು ಎಂದು ನಾವು ಕಂಡಂತೆ ಹೇಳುತ್ತಿದ್ದೆವು. 30-35 ವರ್ಷದ ಹಿಂದೆ ಕೆ.ಇ.ಬಿ. ಕಛೇರಿ ಎಂದರೆ, ಅದಕ್ಕೆ ಕೊನೆಯಲ್ಲಿ ಹೋಗಬೇಕಾಗಿತ್ತು.

ಇವತ್ತು 30-35 ವರ್ಷಗಳಾದ ಮೇಲೆ ಆ ಇಲಾಖೆ ಸಾಕಷ್ಟು ಅಂದರೆ, ಅದಿಲ್ಲದೆ ನಾವು ಜೀವನವನ್ನು ನಡೆಸುವುದಕ್ಕೆ ಆಗುವುದಿಲ್ಲ ಎನ್ನುವ ಪರಿಸ್ಥಿತಿಗೆ ಬಂದಿದ್ದೇವೆ. ಆದುದರಿಂದ ಅದು ಅತ್ಯಂತ ಮಹತ್ವವಾದಂಥ ಇಲಾಖೆ, ನೀವು ಅವರಲ್ಲಿ ಸಾಕಷ್ಟು ಅನುಭವಸ್ಥರಿದ್ದೀರಿ. ಈ ವಿಚಾರದ ಬಗ್ಗೆ ನೀವು ಸಾಕಷ್ಟು ವರ್ಷಾನುಗಟ್ಟಲೆ ಮಾತನಾಡಿದ್ದೇವೆ, ಈ ಕುರಿತು ನಿಮಗೆಲ್ಲಾ ತಿಳುವಳಿಕೆ ಇದೆ, ಅದರ ಬಗ್ಗೆ ನಾನು

ಏನು ಹೇಳುವಂಥದ್ದು ಇಲ್ಲದೆ ಇದ್ದರೂ ಕೂಡ ಕೆಲವಾರು ವಿಚಾರಗಳನ್ನಾದರೂ ತಮ್ಮ ಗಮನಕ್ಕೆ ತಂದರೆ ನಿಮಗೆ ಸಹಕಾರಿಯಾಗಬಹುದೆನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಉತ್ಪಾದನೆಯ ಕಡೆಗೆಯೇ ನೀವು ಹೆಚ್ಚು ಗಮನವನ್ನು ಕೊಡಬೇಕಾಗಿರುವುದು. ನಾನು ನೋಡಿದೆ, ನಮ್ಮ ಪವರ್ ಕಾರ್ಪೊರೇಷನ್‌ರವರು ಬಹಳ ಅಚ್ಚುಕಟ್ಟಾಗಿ ಕೆಲಸ ಮಾಡುತ್ತಿದ್ದಾರೆ. ಅದು ಇವತ್ತಿನಿಂದಲ್ಲ, ನಮ್ಮ ಅದೃಷ್ಟ ಕರ್ನಾಟಕ ಪವರ್ ಕಾರ್ಪೊರೇಷನ್ ಬಹಳ ವರ್ಷಗಳಿಂದ, ಹಿಂದೆ ಕೆ.ಸಿ. ರೆಡ್ಡಿಯವರು ಇದ್ದಾಗಿನಿಂದಲೂ ನೋಡಿಕೊಂಡು ಬಂದಿದ್ದೇನೆ, ಬಹಳ ಜನ ಆ ಇಲಾಖೆಯ ಮಂತ್ರಿಗಳಾಗಿದ್ದವರು, ಅಧಿಕಾರಿಗಳೆಲ್ಲಾ ನನಗೆ ಆಪ್ತರಾಗಿದ್ದವರು. ನನ್ನ ಜೊತೆಯಲ್ಲಿ ಓದಿದಂಥ ಬೇಕಾದಷ್ಟು ಜನ ಇವತ್ತು ಅಲ್ಲಿ ಇಂಜಿನಿಯರ್‌ಗಳಾಗಿ ಕೆಲಸ ಮಾಡುತ್ತಿದ್ದಾರೆ. ನಾರಾಯಣರಾವ್‌ರವರ ಕಾಲದಲ್ಲೂ ಕೂಡ ಕೆ.ಇ.ಬಿ. ಒಂದು ಒಳ್ಳೆಯ ಸಂಸ್ಥೆಯಾಗಿತ್ತು. ನಮ್ಮ ಮಹಾರಾಷ್ಟ್ರದ ಎಲೆಕ್ಟ್ರಿಸಿಟಿ ಬೋರ್ಡ್ ಛೇರ್ಮನ್ ನಮ್ಮವರು. ಇವತ್ತು, ಬಾಂಬೆಯಲ್ಲಿ ವಿದ್ಯುತ್ ನಿರ್ವಹಣೆಯನ್ನು ಟಾಟರವರಿಗೆ ಕೊಟ್ಟು ವಿದ್ಯುತ್ ಒಂದು ನಿಮಿಷ ಕೂಡ ಪವರ್ ಆಫ್ ಆಗುವುದಿಲ್ಲವೆಂದು ನಾವೇನು ಮಾತನಾಡುತ್ತಿದ್ದೇವೆ, ಅದನ್ನು ನಿರ್ವಹಣೆ ಮಾಡುವವರು ಬಹುಮಂದಿ ನಮ್ಮವರೇ. ದೆಹಲಿಯಲ್ಲಿಯೂ ಕೂಡ ನಿಮಗೆ ನಮಗೆ ಗೊತ್ತಿರುವ ಹಾಗೆ ಡೆಪ್ಯೂಟಿ ಚೀಫ್ ಇಂಜಿನಿಯರ್ ಯಾರಿದ್ದಾರೆ ಅವರು ನಮ್ಮ ಕರ್ನಾಟಕದವರು ಇದರ ಅರ್ಥವೇನೆಂದರೆ ಕರ್ನಾಟಕದಲ್ಲಿ ಪವರ್ ಬಗ್ಗೆ ನಾವೇನು ಕೆ.ಜಿ.ಎಫ್.ಗೆ ವಿದ್ಯುಚ್ಛಕ್ತಿಯನ್ನು ಪೂರೈಸಿದ್ದೇವೆ, ಹಾಗೆ ಆವತ್ತಿನಿಂದ ಇವತ್ತಿನವರೆಗೆ ವಿದ್ಯುತ್‌ನಲ್ಲಿ ಅಗ್ರಸ್ಥಾನವನ್ನು ಗಳಿಸಿಕೊಂಡು ಬಂದವರು. 1902ನಲ್ಲೇ ನಮ್ಮ ಊರಿನಲ್ಲಿರುವ ಬ್ಲಫ್‌ನಿಂದ ವಿದ್ಯುತ್ ಉತ್ಪಾದನೆ ಮಾಡಿದ್ದು. ನಾವಿಬ್ಬರೂ ನೀರನ್ನು ಬೆಂಗಳೂರಿಗೆ ಕೊಡುತ್ತೇವೆ ನಮಗೆ ನೀರಿಲ್ಲ, ನಾವಿಬ್ಬರೂ ನಿಮಗೆ ವಿದ್ಯುತ್ ಕೊಡುತ್ತೇವೆ, ನಮಗೆ ವಿದ್ಯುತ ಇಲ್ಲ. ಆದುದರಿಂದ 1902ರಲ್ಲೇ ಬ್ಲಫ್‌ನಲ್ಲಿ ನೀರಿನಿಂದ ವಿದ್ಯುಚ್ಛಕ್ತಿಯನ್ನು ಇಂಜಿನಿಯವರು ಕಂಡುಹಿಡಿದಂಥ ಇತಿಹಾಸವಾದಂಥ ನಮ್ಮ ನಾಡು, ಅದು ಕರ್ನಾಟಕ ನಾಡು. ಅದು ಯಾವುದೇ ಊರಿಗೆ ಸೇರಿರಲಿ, ಅದು ನಮ್ಮ ಕರ್ನಾಟಕ ನಾಡು. ವಿದ್ಯುಚ್ಛಕ್ತಿಯಲ್ಲಿ ಅಂತಹ ಇತಿಹಾಸ ಹೊಂದಿರುವ ನಮ್ಮ ನಾಡು. ಕಾಶ್ಮೀರವನ್ನು ಬಿಟ್ಟರೆ ಮತ್ತೆ ನೀರಿನಿಂದ ವಿದ್ಯುತ್ ತಯಾರು ಮಾಡುವಂತಹ ಹೈಡ್ರೋ ಎಲೆಕ್ಟ್ರಿಕ್ ಇರುವಂತಹ second place is only to Karnataka ಇನ್ನಾವುದೂ ಕೂಡ ಇವತ್ತು ಇಲ್ಲ, ಇದಕ್ಕೆ ಇವತ್ತು ಬೇಕಾದಷ್ಟು ಕಾರಣಗಳಿವೆ. ಇದನ್ನೆಲ್ಲಾ ನಾನು ಹೇಳುವುದಕ್ಕೆ ಹೋಗುವುದಿಲ್ಲ, ಈಗಲೇ ಅವರ ಕೆರೆ ತುಂಬಿದೆ, ಅದೃಷ್ಟವಶಾತ್ ನಮ್ಮ ಕೆರೆ ತುಂಬದೇ ಹೋಗಿದ್ದರೆ, ನಮ್ಮ ಕಥೆಯೂ ಇಲ್ಲ ಅವರ ಕಥೆಯೂ ಇಲ್ಲ, ಬಾರಿ ಕಥೆಯಾಗುತ್ತಿತ್ತು. ದೇವರೇ ನಮ್ಮನ್ನು ಕಾಪಾಡಿದ್ದಾನೆ. ಅದು ನೀರಾವರಿಯಾಗಿರಲಿ ವಿದ್ಯುಚ್ಛಕ್ತಿಯಾಗಿರಲಿ ದೇವರು ನಮ್ಮನ್ನು ಕಾಪಾಡಿದ್ದಾನೆ. ಇವತ್ತು ಕೆರೆ ತುಂಬಲಿಲ್ಲವೆಂದು ಇಷ್ಟೊತ್ತಿಗೆ ಶೇಕಡ 50ರಷ್ಟು ವಿದ್ಯುತ್ ಕಡಿತವಾಗುತ್ತಿತ್ತು. ಹಿಂದೆ ನಮ್ಮ ಗುಂಡುರಾಯರು ತಮಾಷೆಗೆ ಹೇಳುತ್ತಿದ್ದರು. ಶೇಕಡ 100ರಷ್ಟು ವಿದ್ಯುತ್ ಕಡಿತ ಮಾಡಿದರೆ ನನಗೆ ತುಂಬಾ ಸಂತೋಷ ಎಂದು ಹೇಳುತ್ತಿದ್ದರು, ಏಕೆಂದರೆ ಶೇಕಡ 100 ರಷ್ಟು ವಿದ್ಯುತ್‌ನ್ನು ಕಡಿತಗೊಳಿಸಿದರೆ ಸಮಸ್ಯೆಯೇ ಇರುವುದಿಲ್ಲವಲ್ಲಾ. ಹಾಗೆ ನೀವು ಕೂಡ ಶೇಕಡ 50ರಷ್ಟು ವಿದ್ಯುತ್ ಕಡಿತ ಮಾಡುವ ಪರಿಸ್ಥಿತಿ ಬರುತ್ತಿತ್ತು. ಆದುದರಿಂದ ಅದೃಷ್ಟವಶಾತ್ ಕೆರೆಗಳು ತುಂಬಿಕೊಂಡವು, ಜೆ.ಹೆಚ್. ಪಟೇಲರು ನೆಮ್ಮದಿಯಾಗಿ ಸ್ವಲ್ಪ ಉಸಿರಾಡುವಂತೆ ಆಯಿತು. ಅಷ್ಟೊಂದು ಇಲ್ಲದಿದ್ದರೂ ಸ್ವಲ್ಪ ಉಸಿರಾಡುವಂಥ ಪರಿಸ್ಥಿತಿ ಉಂಟಾಯಿತು. ಅವರು (ಜೆ.ಹೆಚ್. ಪಟೇಲ್) ಕರೆಂಟ್ ಹೊಡೆಯದೇ ಇದ್ದಿದ್ದಕ್ಕೆ ಉಳಿದುಕೊಂಡಿದ್ದಾರೆಂದು ಪುಟ್ಟಣ್ಣಯ್ಯನವರು ಹೇಳುತ್ತಾರೆ. ಇಲ್ಲ ಅವರು ಕರೆಂಟ್ ಹೊಡೆದರೂ ಕೂಡ ತಡೆದುಕೊಳ್ಳುತ್ತಾರೆ. ಅವರ ಬ್ಯಾಟರಿ ಸ್ಟ್ರಾಂಗ್ ಇದೆ. ಅದನ್ನು ಜೆ.ಹೆಚ್. ಪಟೇಲರಿಗೆ ಬಿಡೋಣ,

ಅದನ್ನೆಲ್ಲಾ ನಾವು ಕೇಳುವುದಕ್ಕೆ ಹೋಗುವುದಿಲ್ಲ, ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಕರ್ನಾಟಕ ರಾಜ್ಯದಲ್ಲಿ ಮಳೆಗಾಲವಿರುವುದರಿಂದ, ನಮ್ಮ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್‌ಗಳಿರುವುದರಿಂದ ನಾವು ಸಂಕಷ್ಟದಿಂದ ಹೆಚ್ಚು ಬಚಾವ್ ಆಗಿದ್ದೇವೆ, ನಾನು ಇಲ್ಲವೆಂದು ಹೇಳುವುದಿಲ್ಲ.

ಆದರೆ ನಾವು ಇದೇ ರೀತಿಯಾಗಿ ಆಪತ್ತಿನಿಂದ ಪಾರು ಮಾಡಿಕೊಳ್ಳುವುದಕ್ಕೆ ಹೋಗಬಾರದು. ಮೊನ್ನೆ ಅವರು ನನಗೆ ಹೇಳಿದರು ನಾನು ಆ ಅಂಕಿ ಅಂಶವನ್ನು ಇಟ್ಟುಕೊಂಡಿದ್ದೇನೆ. ನಮಗೆ ಇನ್ನೂ ಐದು ಸಾವಿರ ಮೆಗಾ ವ್ಯಾಟ್‌ನ ವಿದ್ಯುಚ್ಛಕ್ತಿ ಬೇಕು. ಈಗ ನಾವು ಉತ್ಪಾದನೆ ಮಾಡುತ್ತಿರುವುದಕ್ಕಿಂತ ಜಾಸ್ತಿ ಬೇಕಾಗಿದೆ. 2000 ಇಸವಿಯ ಹೊತ್ತಿಗೆ 4000 ಮೆಗಾ ವ್ಯಾಟ್ಸ್ ವಿದ್ಯುತ್ ಬೇಕಾಗುತ್ತದೆ. ನಾನು ಈ ಐದು ಸಾವಿರ ಮೆಗಾವ್ಯಾಟ್‌ಗೆ ನಾನೊಂದು ವರದಿಯನ್ನು ತರಿಸಿದೆ. ಸಂಕ್ಷಿಪ್ತವಾಗಿ, ನಮ್ಮ ಕರ್ನಾಟಕ ಪವರ್ ಕಾರ್ಪೊರೇಷನ್ ಹಾಗೆ ಹಿಂದೆ ನಮ್ಮ ಹಳೆಯ ಕೆ.ಇ.ಬಿ. ಛೇರ್ಮನ್‌ರವರ ಜೊತೆ ಸುಮ್ಮನೆ ಮಾತನಾಡುತ್ತಾ ನೋಡಿದರೆ ಹದಿನೈದು ಸಾವಿರ ಕೋಟಿ ರೂಪಾಯಿಗಳು ವಿದ್ಯುತ್ ಸಂಬಂಧದಲ್ಲಿ ನಮಗೆ ಬೇಕಾಗಿದೆ. ನಮ್ಮದು ಎನರ್ಜಿಯಲ್ಲ, ನಾಲ್ಕು ಸಾವಿರ ಮೆಗಾ ವ್ಯಾಟ್ಸ್‌ಗೆ ಎರಡು ಸಾವಿರ ವರ್ಷದ ಹೊತ್ತಿಗೆ ಇನ್ನೂ 9 ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಅಪ್ರಾಕ್ಷಿಮೆಟಾಗಿ ನಮ್ಮಲ್ಲಿ ಒಂದು ಪವರ್ ಸರ್ವೇ ಮಾಡಿದ್ದಾರೆ, ಸರ್ವೇಯನ್ನು ಬಹಳಷ್ಟು ಸಾರಿ ಮಾಡಿದ್ದಾರೆ. ನಮ್ಮಲ್ಲಿ ನುರಿತ ಇಂಜನಿಯರ್‌ಗಳಿದ್ದಾರೆ, ಅದರಲ್ಲಿ ಯಾವುದೇ ವಿಚಾರ ಬೇಕಾಗಿಲ್ಲ, ಅವರು ಯಾವುದರಲ್ಲೂ ವಿಫಲರಾಗುವುದಿಲ್ಲ, ನಾವು ವಿಫಲರಾಗಿರುವುದು ಯಾವುದರಲ್ಲಿ ಎಂದರೆ ಹಣ ಒದಗಿಸುವುದರಲ್ಲೇ ವಿಫಲರಾಗಿದ್ದೇವೆ. ವಿದ್ಯುತ್ ವಿಷಯದಲ್ಲಿ ಇನ್ನಾವುದರಲ್ಲೂ ನಾವು ವಿಫಲರಾಗಿಲ್ಲ, ಅದು ಟಿ ಅಂಡ್ ಡಿ ಲಾಸ್ ಇರಲಿ, ಸಿಸ್ಟಂ ಇಂಪ್ರೂವ್‌ಮೆಂಟ್ ಇರಲಿ ಅಥವಾ ಬೇರೆ ಯಾವುದೇ ಇರಲಿ ನಾವು ಕೇವಲ ಹಣಕಾಸಿನ ಪ್ರೋತ್ಸಾಹ ಕೊಡುವುದರಲ್ಲಿ ಹಿಂದೆ ಬಿದ್ದಿದ್ದೇವೆ. ಈಗ 1995, ಇನ್ನು ಐದು ವರ್ಷ ಮಾತ್ರವಿದೆ. ಇನ್ನು 5 ವರ್ಷಕ್ಕೆ ವಿದ್ಯುಚ್ಛಕ್ತಿಯನ್ನು ನಾವು ನಾರ್ಮಲ್ ಆಗಿ ಇಟ್ಟುಕೊಳ್ಳಬೇಕಾದರೆ 15 ಸಾವಿರ ಕೋಟಿ ರೂಪಾಯಿಗಳು ಬೇಕು. ನಮ್ಮ ಪವರ್ ಸರ್ವೇ ರಿಪೋರ್ಟ್ ಪ್ರಕಾರವೇ 15 ಸಾವಿರ ರೂಪಾಯಿಗಳು ಬೇಕು. ಎಲ್ಲಿದೆ 15 ಸಾವಿರ ಕೋಟಿ ರೂಪಾಯಿಗಳು? ನಮಗಂತೂ ದುಡ್ಡನ್ನು ಮುದ್ರಣ ಮಾಡಲು ಅವಕಾಶವಿಲ್ಲ, ಹಣವನ್ನು ಮುದ್ರಣ ಮಾಡಿಕೊಳ್ಳಲು ರಾಜ್ಯಸರ್ಕಾರಗಳಿಗೆ ಅವಕಾಶವಿದ್ದರೆ ಇವತ್ತಿನ ದಿವಸ ಮಾಡಿಕೊಳ್ಳಬಹುದಾಗಿತ್ತು.

ಇಂತಹ ಪರಿಸ್ಥಿತಿಯಲ್ಲಿ ನಿಮಗೆ ಇರತಕ್ಕಂತಹ 10ಸಾವಿರ ಕೋಟಿ ರೂಪಾಯಿಯಲ್ಲಿ ಅಥವಾ 11 ಸಾವಿರ ಕೋಟಿ ಆದಾಯದಲ್ಲಿ 5 ಸಾವಿರ 6 ಸಾವಿರ ರೂಪಾಯಿಗಳನ್ನು ಸಿಬ್ಬಂದಿಗಳ ಸಂಬಳಕ್ಕೆ ಕೊಟ್ಟು ಇನ್ನು ಉಳಿಯತಕ್ಕಂತಹ 5-6 ಸಾವಿರ ಕೋಟಿ ರೂಪಾಯಿಗಳಲ್ಲಿ ಇಷ್ಟು ಯೋಜನೆಗಳನ್ನು ಹಾಕಿಕೊಂಡು ನಾವು ಮಾಡುವುದಕ್ಕೆ ಆಗುವುದೇ ಇಲ್ಲ, ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನಿಮ್ಮ ಇಂಟರ್‌ನಲ್ ಕೆಪ್ಯಾಸಿಟಿ ಏನೇ ಇರಲಿ, ನೀವು ಯಾವುದನ್ನಾದರೂ ಮಾಡಿಕೊಂಡು ಹೋಗಿ, ನೀವು ಇನ್ನು 15 ಸಾವಿರ ಕೋಟಿ ರೂಪಾಯಿಗಳನ್ನು ಇನ್ನು 5 ವರ್ಷದಲ್ಲಿ, ವರ್ಷ ಒಂದಕ್ಕೆ 3 ಸಾವಿರ ಕೋಟಿ ರೂಪಾಯಿಗಳಂತೆ ತಾವು ಒದಗಿಸುವುದಕ್ಕೆ ಆಗುವುದಿಲ್ಲ, ಇದನ್ನು ಖಚಿತವಾಗಿ ಹೇಳುತ್ತೇನೆ. ಇವತ್ತು ನಿಮ್ಮ ಬಡ್ಜೆಟರಿ ಸಪೋರ್ಟ್ ಕೆ.ಇ.ಬಿ.ಗೆ ಎಷ್ಟು? ಕೆ.ಸಿ.ಪಿ.ಗೆ ಎಷ್ಟು ಎಂದು ಹೇಳುವುದಕ್ಕೆ ಹೋಗುವುದೇ ಇಲ್ಲ, ಅದು ಎಷ್ಟೇ ಇರಲಿ, ಅದನ್ನು ಹಿಂದೆಯೂ ಕೊಟ್ಟಿಲ್ಲ, ಇಂದೂ ಕೊಡುತ್ತಿಲ್ಲ, ಮುಂದೆಯೂ ಕೊಡುವುದಕ್ಕಾಗುವುದಿಲ್ಲ. ನಾವು ಕೊಡಿ ಎಂದು ಹೇಳುತ್ತಿದ್ದೇವೆ. ಅದನ್ನು ಕೊಡುವುದಕ್ಕೆ ಆಗುತ್ತಿಲ್ಲ, ಕೆ.ಇ.ಬಿ.ನಲ್ಲಿ 1500 ಕೋಟಿ ರೂಪಾಯಿಗಳ ಟರ್ನ್

ಓವರ್ ಇದೆ. ಟರ್ನ್ ಓವರ್ 1500ಕೋಟಿ ರೂಪಾಯಿಗಳಿಗೆ ನಮ್ಮ ವಿದ್ಯುಚ್ಛಕ್ತಿಯನ್ನು ಮಾರಾಟ ಮಾಡಿದರೂ ಕೂಡ, ಕೆ.ಸಿ.ಪಿ.ಯಲ್ಲಿ ಇಷ್ಟೆಲ್ಲಾ ವ್ಯವಸ್ಥೆ ಇದ್ದರೂ ಕೂಡ, ನಾವು ಖಂಡಿತವಾಗಿಯೂ ಕೂಡ ಎರಡು ಸಾವಿರ ವರ್ಷದ ಹೊತ್ತಿಗೆ ಈ ಇಂಟರ್‌ನಲ್ ಕೆಪ್ಯಾಸಿಟಿಯನ್ನು 9000 ಮೆಗಾವ್ಯಾಟ್ಸ್ ಮಾಡಿಕೊಳ್ಳುವುದಕ್ಕೆ ನಾವು ಆ ಸ್ಥಿತಿಯಲ್ಲಿ ಇಲ್ಲ,

ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ನಾನು ನಿಮ್ಮ (ಜೆ.ಹೆಚ್. ಪಟೇಲ್) ಪದವನ್ನೇ ಉಪಯೋಗಿಸುತ್ತಿದ್ದೇನೆ, ಪ್ರೈಯಾರಿಟಿಯನ್ನು ಪ್ರೈವೇಟ್ ಸೆಕ್ಟಾರ್‌ಗೆ ಕೊಡಬೇಕು. ನೀವು ಪ್ರೈಯಾರಿಟಿ ಪ್ರೈವೇಟ್ ಸೆಕ್ಟಾರ್‌ಗೆ ಕೊಡದೆ ಹೋದರೆ ಕಷ್ಟ ಆಗುತ್ತದೆ. ನೋಡಿ, ಬೇಡ್ತಿ ಬಗ್ಗೆ ಹೀಗೆಯೇ, ತಮಗೆ ಜ್ಞಾಪಕವಿರಬೇಕು. 1983-94ರಲ್ಲಿ ಹಿಂದೆ ನಮಗೂ ನಿಮಗೆ ಬೆಡ್ತಿ ಯೋಜನೆ ಮಾಡಬೇಕೆಂದು ಹೇಳಿ ತೀವ್ರವಾದ ವಾಗ್ವಾದ ನಡೆಯಿತು. ನಾವು ಹೆಚ್.ವಿ. ನಾರಾಯಣ್‌ರಾವ್‌ರವರ ವರದಿಯನ್ನು ತೆಗೆದುಕೊಂಡು ಬಂದು ಇದೇ ಸದನನಲ್ಲಿ ಇಟ್ಟೆವು, ಸದನದಲ್ಲಿಟ್ಟು ಹೆಡ್ಡನ್ನು 50 ಅಡಿ ಕಡಿಮೆ ಮಾಡಿ, ಒಂದು ಐದು ಕಡಿಮೆ ಮಾಡಿ ಬೇಡ್ತಿ ಯೋಜನೆಯನ್ನು ಮಾಡಬೇಕೆಂದು ನಾವು ಜೆ.ಹೆಚ್. ಪಟೇಲ್‌ರವರನ್ನು ಬಹಳಷ್ಟು ಒತ್ತಾಯ ಮಾಡಿದ್ದೆವು. ಬೇಡ್ತಿ ಯೋಜನೆ ಮಾಡಬೇಕೆಂದು ನಾವು ಒಂದು ದಿವಸವೆಲ್ಲಾ ಬಹಳ ಬಹಳ ಒತ್ತಾಯ ಮಾಡಿದ್ದೆವು. 1983ರಲ್ಲಿ ನೀವು ಬೇಡ್ತಿ ಯೋಜನೆಯನ್ನು ಮಾಡಿದ್ದರೆ ಇವತ್ತು ನಿಮಗೆ ಎಷ್ಟೋ ಸಮಸ್ಯೆ ಬಗೆಹರಿಯುತ್ತಿತ್ತು ನಾವು ಯಾವುದೋ ದಾಕ್ಷಿಣ್ಯಕ್ಕೆ ನಮ್ಮ ಜಾಲಪ್ಪನವರ ಭಾಷೆಯಲ್ಲಿ ಹೇಳುವುದಾದರೆ ನೋಡಿ ಕೆರೆ ಕಟ್ಟಬೇಕಾದರೆ ಜಮೀನು ಮುಳುಗಡೆಯಾಗಲೇ ಬೇಕು, ರಸ್ತೆ ನಿರ್ಮಾಣ ಮಾಡಬೇಕೆಂದರೆ ಜಮೀನು ಹೋಗಲೇ ಬೇಕು. ನೀವು ಈ ರೀತಿ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಬೇಕಾದರೆ ಕೆಲವು ಕಡೆ ಪರಿಸರವನ್ನು ವಿರೋಧ ಮಾಡಿಕೊಳ್ಳಲೇ ಬೇಕಾಗುತ್ತದೆ. ಅಂದರೆ ಎಲ್ಲದರಲ್ಲೂ ನಾವು ವಿರೋಧ ಮಾಡಿಕೊಳ್ಳಬೇಕೆಂದು ನಾನು ಹೇಳುತ್ತಿಲ್ಲ, ಆದರೆ ನಾವು ಯೋಚನೆ ಮಾಡಬೇಕು, ಈ ರೀತಿ ಮಾಡದೇ ಹೋದರೆ ಇನ್ನು ಎಲ್ಲಿಂದ ನಿಮಗೆ ವಿದ್ಯುತ್ ಸಿಗುತ್ತದೆ? ಇವತ್ತು ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್‌ಗೆ ಬೇಡ್ತಿ ಬಿಟ್ಟರೆ ಬೇರೆ ಯಾವುದು ಇದೆ? ನಿಮ್ಮ ಕದರಹಳ್ಳಿಯದೊಂದು. ಈಗ ನಾವೆಲ್ಲ ನೋಡಿದ್ದೇವೆ, ಈಗ ಇರುವುದು ಒಂದು ಶರಾವತಿ ನಾಗಝರಿ ಮತ್ತೆ ನಮ್ಮ ರಾಯಚೂರು ಥರ್ಮಲ್ ಪ್ಲಾಂಟ್ಸ್ ಇವು ನಿಮಗೆ ಶೇಕಡ 60 ರಷ್ಟು ಇಂಟರನಲ್ ಕೆಪ್ಯಾಸಿಟಿಯನ್ನು ಹೆಚ್ಚು ಮಾಡಿರತಕ್ಕಂತಹ ಪ್ರಾಜೆಕ್ಟ್‌ಗಳು. ಈ ಮೂರು ಪ್ರಾಜೆಕ್ಟ್‌ಗಳನ್ನು ಬಿಟ್ಟರೆ ಬಾಕಿ ಎಲ್ಲೆಲ್ಲೂ ಇಲ್ಲ, ಶರಾವತಿ ಬಗ್ಗೆ ನಾನು ಒಂದು ಸಾರಿ ಪ್ರೊಸಿಡಿಂಗ್ಸ್ ಓದಿದಾಗ ನಿಮಗೆ ಹೇಳಿದ್ದೆ ಜ್ಞಾಪಕದಲ್ಲಿರಬಹುದು,

ಇನ್ನೊಂದು ಸಾರಿ ತಮಗೆ ಜ್ಞಾಪಿಸಲು ನಾನು ಇಚ್ಚೆಪಡುತ್ತೇನೆ. ಶರಾವತಿ ಯೋಜನೆ ಮಾಡುವಾಗ ನಮ್ಮ ವಿರೋಧಪಕ್ಷದ ನಾಯಕರುರಾದ ಎಸ್. ಶಿವಪ್ಪನವರು ಇಲ್ಲಿ ಭಾಷಣವನ್ನು ಮಾಡಿದ್ದಾರೆ. ಅವರು, 45 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಶರಾವತಿಯನ್ನು ಕಟ್ಟುತ್ತಿದ್ದೀರಿ, ಅಷ್ಟು ಹಣವನ್ನು ಖರ್ಚು ಮಾಡಿ ಅಷ್ಟೊಂದು ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುತ್ತೀರಲ್ಲಾ ಯಾವ ರಾಜ್ಯಕ್ಕೆ ಮಾರುತ್ತೀರಿ? ಇದು ಪ್ರೊಸಿಡಿಂಗ್ಸ್‌ನಲ್ಲಿದೆ. ಆ ದಿನದ ಮಾತಿಗೂ ಈ ದಿವಸಕ್ಕೂ ಎಷ್ಟು ವ್ಯತ್ಯಾಸವಿದೆ ಎನ್ನುವುದನ್ನು ನೋಡಿ. ಅದೇನೂ ನೂರಾರು ವರ್ಷದ ಮಾತಲ್ಲ, ಆವತ್ತು ನಿಜಲಿಂಗಪ್ಪನವರಿಗೆ, ಗೋವಕ್ಕೆ ನಾವು ವಿದ್ಯುತ್ ಕೊಡುತ್ತಿದ್ದೇವೆ, ಕೇರಳಕ್ಕೆ ನಾವು ವಿದ್ಯುತ್ ಕೊಡುತ್ತಿದ್ದೇವೆ, ಅಲ್ಲಿಗೆ ವಿದ್ಯುತ್‌ನ್ನು ಕೊಡುತ್ತಿದ್ದೇವೆ, ನಮ್ಮಲ್ಲಿ ಬೇಕಾದಷ್ಟು ವಿದ್ಯುತ್ ಇದೆ, ನೀವು ಶರಾವತಿಯನ್ನು ರಾಮಯ್ಯನವರನ್ನು ಬದುಕಿಸುವುದಕ್ಕೋಸ್ಕರ ಅದರ ಪಕ್ಷಕ್ಕೋಸ್ಕರ ಮಾಡುತ್ತಿದ್ದೀರಿ, ವಿದ್ಯುಚ್ಛಕ್ತಿಯನ್ನು ಯಾರಿಗೆ ಮಾರಾಟ ಮಾಡುತ್ತೀರಿ

ಎಂದು ಅವತ್ತು ತೀಕ್ಷ್ಣವಾದ ಟೀಕೆಯನ್ನು ಶಿವಪ್ಪನವರು ಮಾಡಿದ್ದಾರೆ. ಇವತ್ತು ಶರಾವತಿ ವಿದ್ಯುಚ್ಛಕ್ತಿ ಯೋಜನೆ ಇಲ್ಲದೆ ಹೋಗಿದ್ದರೆ ಕರ್ನಾಟಕ ರಾಜ್ಯ ಕತ್ತಲೆಯಾಗುತ್ತಿತ್ತು.

4.00 ಪಿ.ಎಂ.

ನಾಗ್ಝರಿ, ಶರಾವತಿ, ರಾಯಚೂರು ಥರ್ಮಲ್ ಪ್ಲಾಂಟ್ ಈ ಮೂರೂ ಇಲ್ಲದೇ ಹೋಗಿದ್ದರೆ, ನಿಮ್ಮ ಇಂಟರ್‌ನಲ್ ಕೆಪ್ಯಾಸಿಟಿ 70% ಮುಳುಗಿ ಹೋಗುತ್ತಾ ಇತ್ತು. The entire agriculture sector industrial sector and domestic sectors ಕ್ಲೋಸ್ ಆಗುತ್ತಿತ್ತು. ಆ ದೂರದೃಷ್ಟಿಯನ್ನು ನೀವು ಇಟ್ಟುಕೊಳ್ಳಬೇಕು ಎನ್ನತಕ್ಕಂಥ ದೃಷ್ಟಿಯಿಂದ ನಾನು ಹೇಳಿದೆ. ದಯವಿಟ್ಟು ತಾವು ಯಾವುದೇ ದೃಷ್ಟಿಯಿಂದ, ನಮ್ಮ ಡೀಸಲ್ ಎನರ್ಜಿ, 20,400 ಅಕ್ಷುಯಲಿ ಏನಿದೆ ಅದರಲ್ಲಿ ನೀವು ಪ್ರೈವೇಟ್‌ನವರಿಗೆ ಆದ್ಯತೆ ಕೊಡಲೇಬೇಕು. ಅಷ್ಟೇ ನನ್ನ ಒತ್ತು ಇದರಲ್ಲಿ, ಮೊನ್ನೆ ನಮ್ಮ ಮಾಜಿ ಮುಖ್ಯಮಂತ್ರಿಗಳು ಮಾತು ಹೇಳುತ್ತಿದ್ದರು, ಕೊಜೆಂಟ್ರಿಕ್ಸ್ ಬಗ್ಗೆ ಮಾತನಾಡಿದರು. ಕೊಜೆಂಟ್ರಿಕ್ಸ್ ಬಗ್ಗೆ ನಾವು ಇಷ್ಟು ನಿಧಾನ ಮಾಡುವುದೂ ತಪ್ಪು ಎಂಬುದು ನನ್ನದು ಅಭಿಪ್ರಾಯ.

ಶ್ರೀ ಜೆ.ಹೆಚ್. ಪಟೇಲ್ : ನಾವು ನಿಧಾನ ಮಾಡಲಿಲ್ಲ.

ಶ್ರೀ ಕೆ.ಎನ್. ನಾಗೇಗೌಡ : ನಾವು ನಿಧಾನ ಮಾಡಲಿಲ್ಲ, ಸರಿ. ಏಕೆಂದರೆ ಅವರು ಕಾಯುತ್ತಿದ್ದಾರೆ. ನಿನ್ನೆಯ ದಿನ ಮಾನ್ಯ ಸಾಲ್ವೆರವರ ಸ್ಟೇಟ್‌ಮೆಂಟ್ ಅನ್ನು ನಾನು ನೋಡಿದೆ, ಡೆಕ್ಕನ್ ಹೆರಾಲ್ಡ್‌ನಲ್ಲಿ ಬಂದಿದೆ. We are waiting for the KEB report. ಎಂದು ಕೇಳಿದ್ದಾರೆ. ಒಂದು ಪರ್ಚೇಸ್ ಅಗ್ರೀಮೆಂಟ್‌ನಲ್ಲೋ ಮತ್ತೊಂದರಲ್ಲೋ ಏನಾದರೂ ಒಂದು ನ್ಯೂನತೆ ಇರುತ್ತದೆ. ನೀವು ಆ ವಿಶ್ಲೇಷಣೆ ಯಾವಾಗ ಬೇಕಾದರೂ ರೆಕ್ಟಿಫೈ ಮಾಡಿಕೊಳ್ಳಬಹುದು. ನಮ್ಮ ಫಾರ್ಮರ್ ಡೆಪ್ಯುಟಿ ಚೀಫ್ ಮಿನಿಸ್ಟರ್ ಹೇಳಿದ್ದಾರೆ, ನಮ್ಮ ಪ್ರೆಸ್ ಕ್ಲಬ್‌ನಲ್ಲಿ, ನೀವು ಕೊಜೆಂಟ್ರಿಕ್ಸ್ ಬಗ್ಗೆ ತುರ ಮಾಡಬೇಡಿ, ನಿಧಾನ ಮಾಡಿರಿ. ಇಲ್ಲದಿದ್ದರೆ ಜನ ನಿಮ್ಮ ಮೇಲೆ ಡೌಟ್ ಬೀಳುತ್ತಾರೆ ಅನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಡೌಟ್ ಬೀಳಲಿ ಜನ. ನಿಜಲಿಂಗಪ್ಪನವರ ಮೇಲೂ ಡೌಟ್ ಬಿದ್ದರು, ಶರಾವತಿ ಕಟ್ಟುವಾಗ, ನಾಗಝರಿ ಕಟ್ಟುವಾಗ ಮತ್ತೊಮ್ಮೆ ಡೌಟ್ ಬಿದ್ದರು. ಬ್ಲಫ್ ಮೇಲೆ ಡೌಟ್ ಬಿದ್ದಿರಬೇಕು ಜನ. ಜನ ಡೌಟ್ ಬೀಳತಕ್ಕಂಥಾದ್ದು ಜನರ ತೀರ್ಮಾನಕ್ಕೆ ಬಿಡೋಣ. ಆದರೆ ಪ್ರಾಜೆಕ್ಟ್‌ಗಳನ್ನು ಮಾತ್ರ ಡಿಲೇ ಮಾಡಬಾರದು. ಇವತ್ತು ಮಹಾರಾಷ್ಟ್ರದವರು ಏನು ಕಳೆದುಕೊಂಡಿದ್ದಾರೆ, ಅವರು ಅದನ್ನು ಯಾವಾಗ ಯೋಚನೆ ಮಾಡುತ್ತಾರೆ ಎಂದು ಹೇಳಿದರೆ ಇನ್ನೂ 20 ವರ್ಷ ಹೋದ ಮೇಲೆ ಅವರಿಗೆ ಬಾಬಾ ಅಟಾಮಿಕ್ ಎನರ್ಜಿ ಸಿಕ್ಕಿತು. ಅವರಿಗೆ 2-3 ಥರ್ಮಲ್‌ಪ್ರಾಜೆಕ್ಟ್ ಸಿಕ್ಕಿದವು. ಅದೃಷ್ಟವಶಾತ್, ಹೋಂ ಸ್ಟೇಟ್ ಎಂದು 20% ಶೇರ್ ಜಾಸ್ತಿ ಸಿಕ್ಕಿತು ಅವರಿಗೆ. ಅವರು ಬಚಾವ್ ಆಗಿದ್ದಾರೆ. ನಮಗೆ ಇರತಕ್ಕಂಥಾದ್ದು ಕೈಗಾ. ಕೈಗಾ 1997ಕ್ಕೆ ಮುಗಿಯುತ್ತದೆ. 1997ಕ್ಕೆ ಕೈಗಾ ಮುಗಿದರೆ ನಿಮಗೆ 50% ಸಿಗುತ್ತದೆ, ಹೋಂ ಸ್ಟೇಟ್ ಅಂತ. ಕೈಗಾ ಒಂದು ಬಿಟ್ಟರೆ ನಿಮಗೆ ವರಾಹಿ ಎರಡನೆಯದು, ಅದು ಬಿಟ್ಟರೆ ಕದಿರಳ್ಳಿ. ಈ ಮೂರೂ ಬಿಟ್ಟರೆ ನಿಮಗೆ ಪ್ರಾಜೆಕ್ಟ್‌ಗಳೇ ಇಲ್ಲ, ಈ ಮೂರನ್ನೂ ಆನ್ ಗೋಯಿಂಗ್ ಪ್ರಾಜೆಕ್ಟ್ ಎಂದು 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಏನು ನೀವು ಇಟ್ಟುಕೊಂಡಿದ್ದೀರಿ. ಮೂರು ಪ್ರಾಜೆಕ್ಟ್‌ಗಳು, ಆ ಮೂರನ್ನೂ ನೀವು ಕಂಪ್ಲೀಟ್ ಮಾಡಿಬಿಡಬೇಕು ಎನ್ನುವುದು ಒಂದು. ರಾಯಚೂರು ಥರ್ಮಲ್ ಪ್ಲಾಂಟ್ 5 ಮತ್ತು 6ನೆಯದು ಮುಗಿಯಬೇಕು. ತಾವು 5-6ಕ್ಕೆ ಹೆಚ್ಚು ಗಮನ ಕೊಡಬೇಕು. ಕೊಟ್ಟಿದ್ದೀರಿ. ನಾನು ಕೊಟ್ಟಿಲ್ಲ ಎಂದು ಮಾತನಾಡುತ್ತಿಲ್ಲ, ಏಕೆ ಒತ್ತಿ ಹೇಳುತ್ತಿರುವುದು ಎಂದರೆ ನಿಮಗೆ ಕಿವಿಗೆ ಜಾಸ್ತಿ ಬೀಳಲಿ ಎಂದು ಅಷ್ಟೇನೇ. ನೀವು ಕೊಟ್ಟಿಲ್ಲ ಅನ್ನತಕ್ಕಂಥ ಮಾತು

ಏನೂ ಇಲ್ಲ ಇದರಲ್ಲಿ, ಅದನ್ನು ನೀವು ಮಾಡಬೇಕು ಮತ್ತು ಬೇಡ್ತಿ ಮಾತ್ರ, ನಾನು ವೈಯಕ್ತಿಕವಾಗಿ ಮನವಿ ಮಾಡಿಕೊಳ್ಳುತ್ತಿದ್ದೇನೆ ನಿಮಗೆ, ಯಾರು ಎಷ್ಟು ಬೇಕಾದರೂ ಬೇಸರ ಮಾಡಿಕೊಳ್ಳಲಿ. ಅದನ್ನು ನೀವು ಯಾರು ಇದ್ದಾರೆ, ಅನ್ನತಕ್ಕಂಥವರ ಜೊತೆ ಸ್ವಲ್ಪ ಕೂತು, ಕನ್ಸಲ್ಟ್ ಮಾಡಿ, ನೋಡಿ ಕೊಜೆಂಟ್ರಿಕ್ಸ್ ಈ ತರಹ ಆಗುತ್ತಿದೆ, ರಾಯಚೂರು ಈ ತರಹ ಆಗುತ್ತಿದೆ.....

ಶ್ರೀ ಜೆ.ಹೆಚ್. ಪಟೇಲ್ : ಈಗ ಬಹಳ ಅವಶ್ಯಕವಾಗಿ ಕೆಲವು ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಕೊಡುವುದಕ್ಕೆ ಇಚ್ಛಿಪಡುತ್ತೇನೆ. ಬೇಡ್ತಿ ಆಗ ಅವೈಜ್ಞಾನಿಕ ಕಾರಣಗಳಿಗೋಸ್ಕರ ಪರಿಸರವಾದಿಗಳ ಹೆಸರಿನಲ್ಲಿ ಅದು ರಾಜಕೀಯ ಚಳುವಳಿ ಮಾಡಿ ನಿಂತಿತು. ಬಾರ್‌ಪೊಳೆ ಕೂರ್ಗ್ ಜಿಲ್ಲೆಯಲ್ಲಿ, ಅದು ಅದೇ ಕಾರಣಕ್ಕೋಸ್ಕರ ನಿಂತಿತು. ಆಗ ಎಸ್ಟಿಮೇಟೆಡ್ ಜನರೇಟಿಂಗ್ ಕೆಪ್ಯಾಸಿಟಿ ಇದ್ದದ್ದು, ಒಂದು 600 ಮೆಗಾವ್ಯಾಟ್, ಇನ್ನೊಂದು 450 ಮೆಗಾವ್ಯಾಟ್. ಏನೇ ಕಾಂಟ್ರಾವರ್ಸಿ ಇರಲಿ, ನಾನು ಯಾರ ಬಗ್ಗೆಯೂ ಏನೂ ಕಾಮೆಂಟ್ ಮಾಡುವುದಕ್ಕೆ ಹೋಗುವುದಿಲ್ಲ, ಮಾನ್ಯ ಸದಸ್ಯರ ಸಲಹೆ ಏನಿದೆ, ಅದನ್ನು ಇವತ್ತು ಸರ್ಕಾರ ಎಷ್ಟು ತೀವ್ರವಾಗಿ ಪರಿಗಣಿಸುತ್ತದೆ ಅಂದರೆ ಖಾದ್ರ, ಕೊಡಸಳ್ಳಿ, ಗೇರುಸೊಪ್ಪ, ಬೇಡ್ತಿ ಮತ್ತು ದಾಂಡೇಲಿ ಇವು ಹೈಡಲ್ ಪ್ರಾಜೆಕ್ಟ್‌ಗಳು. ಖಾದ್ರ, ಕೊಡಸಳ್ಳಿ, ಗೇರುಸೊಪ್ಪಗಳಲ್ಲಿ ಕೆಲಸ ನಡೆಯುತ್ತಿದೆ. ಅದನ್ನು, ಮತ್ತೆ ನಾನು ಹೆಸರು ಹೇಳುವುದಕ್ಕೆ ಹೋಗುವುದಿಲ್ಲ, ಯಾರದೋ ಕಾಲದಲ್ಲಿ ಇದನ್ನು ಪ್ರೈವಟೈಸ್‌ಮಾಡಬೇಕು ಎಂದು ಹೋಗಿದ್ದರು. ನಾವು, ಬೇಡ, ಪ್ರೈವಟೈಸ್ ಮಾಡಕೂಡದು, ನಮ್ಮ ಪವರ್ ಕಾರ್ಪೊರೇಷನ್‌ನವರೇ ಮಾಡಬೇಕು ಎಂದು ನಾವು ಬಂದ ತಕ್ಷಣ ತೀರ್ಮಾನ ಮಾಡಿದೆವು. ಹಾಗೆಯೇ ರಾಯಚೂರು 5 ಮತ್ತು 6ನ್ನೂ ಪ್ರೈವೇಟಿಗೆ ಕೊಡಬೇಕು ಎಂದು ಇತ್ತು. ಅದನ್ನೂ ನಾವು ಇವತ್ತು ತಡೆದೆವು. ಪವರ್ ಕಾರ್ಪೊರೇಷನ್‌ಗೆ ಕೊಟ್ಟಿರತಕ್ಕ ಕೆಲಸ ಈ ಐದು - ಖಾದ್ರ, ಕೊಡಸಳ್ಳಿ, ಗೇರುಸೊಪ್ಪ, ರಾಯಚೂರಿನ 5 ಮತ್ತು 6ನೇ ಪ್ರಾಜೆಕ್ಟ್‌ಗಳು. ಇಲ್ಲಿ ಎರಡು ಪ್ರಾಜೆಕ್ಟ್‌ಗಳು - ಬೇಡ್ತಿ ಮತ್ತು ದಾಂಡೇಲಿ, ಹಿಂದೆ ಅಪ್ರೂವ್ ಆದ ಪ್ರಾಜೆಕ್ಟ್ ಅವು. ಈಗ ವಿನಾಕಾರಣ ಮತ್ತೊಂದು ಸಾರಿ ಅದನ್ನು ಅಪ್ರೂವಲ್‌ಗೆ ಕಳುಹಿಸಬೇಕಾಗಿದೆ, ನಾವು ಅಪ್ರೂವ್ ಮಾಡಿಸುತ್ತೇವೆ. ಈ ಏಳು ಪ್ರಾಜೆಕ್ಟ್‌ಗಳನ್ನು ಮಾತ್ರ ಮಾನ್ಯ ಸದಸ್ಯರು ಎಷ್ಟು ತೀವ್ರತೆಯಿಂದ ಮಾಡಬೇಕು ಅಂತ ಹೇಳುತ್ತಾರೋ, ಅದಕ್ಕಿಂತ ಹೆಚ್ಚು ತೀವ್ರತೆಯಿಂದ ನಾವು ಮಾಡುತ್ತೇವೆ. ಯಾರು ಏನಾದರೂ ಹೇಳಿಕೊಳ್ಳಲಿ ಹೇಳಿಕೊಳ್ಳುವವರ ಬಾಯಿ ಮುಚ್ಚಿಸುವುದಕ್ಕೆ ಏನೂ ಆಗುವುದಿಲ್ಲ. ಆದರೆ ನಾವು ಇದನ್ನು ಮಾಡಿಯೇ ತೀರುತ್ತೇವೆ, ರಾಜ್ಯದ ಹಿತದೃಷ್ಟಿಯಿಂದ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ಅವರು ಹೇಳಿದ್ದುದು ನಿಜ ದೆ. ಆದರೆ ಒಂದು ಮಾತು. ಏತಕ್ಕೆ ಈ ಮಾತನ್ನು ಒತ್ತಿ ಹೇಳುತ್ತಿದ್ದೇನೆ ಎಂದರೆ ನಮ್ಮ ಪ್ರೈವೇಟ್ ಸೆಕ್ಟಾರ್‌ನಲ್ಲಿ ಪವರ್ ಡೆವೆಲಪ್‌ಮೆಂಟ್‌ಗೆ ನಾವು, 3,093 ಮೆಗಾವ್ಯಾಟ್ಸ್‌ಗೆ ಸುಮಾರು ಏಳು ಜನಕ್ಕೆ ಅಂದರೆ 4 ಮೇಜರ್ ಥರ್ಮಲ್ ಪ್ಲಾಂಟ್, 8 ಡಿ.ಜಿ. ಸೆಟ್, 57 ಮಿನಿ ಅಂಡ್ ವಿಂಡ್ ಎನರ್ಜಿ ಪ್ರಾಜೆಕ್ಟ್ ಅಗ್ರಿಮೆಂಟ್ ಆಗಿದೆ. ಇವುಗಳು ಎಂ.ಓ.ಯು ಕೂಡ ಸೈನ್ ಆಗಿದೆ ಕೆಲವು ಕಡೆ. ಅದು ಹೊಸಪೇಟೆ ಡಿ.ಪಿ. ಇರಲಿ, ಮಂಗಳೂರು ಡಿ.ಪಿ. ಇರಲಿ, ನಮ್ಮ ಬಳ್ಳಾರಿ ಹೊಸಪೇಟೆ ಇರಲಿ ಅಥವಾ ಡೀಸೆಲ್ ಸೆಟ್ಸ್ ಇರಲಿ, ಇವೆಲ್ಲಾ ಏನು ಅಗ್ರಿಮೆಂಟ್ ಆಗಿದೆ, 4 ಮೇಜರ್ ಥರ್ಮಲ್ ಪ್ಲಾಂಟ್ ಇವೆಯಲ್ಲಾ, ಯಾವಾಗ ಸೈನ್ ಆಯಿತು ಎಂಬ ಬಗ್ಗೆ ಡೀಟೈಲ್ ಇದೆ. ಅದಕ್ಕೆ ಟೈಮ್ ಇಲ್ಲ, ಏಕೆಂದರೆ ನಿಮಗೆ ಚೆನ್ನಾಗಿ ಗೊತ್ತಿದೆಯಾದ್ದರಿಂದ ನಾನು ಹೇಳಬೇಕಾದ ಅವಶ್ಯಕತೆ ಇಲ್ಲ. ತಾವು ಇದನ್ನೆಲ್ಲಾ ಚೆನ್ನಾಗಿ ಸ್ಟಡಿ ಮಾಡಿದ್ದೀರಿ. ಅದನ್ನು ತಿಳಿದುಕೊಳ್ಳುವ ಶಕ್ತಿಯನ್ನು ದೇವರು ಚೆನ್ನಾಗಿ

ಕೊಟ್ಟಿದ್ದಾನೆ. ಆದ್ದರಿಂದ ಏನು ಇದೆ, ಈ ಪ್ರೈವೇಟ್ ಸೆಕ್ಟಾರ್‌ನಲ್ಲಿ ಸೈನ್ ಮಾಡಿ ಇಟ್ಟುಕೊಂಡಿದ್ದೀರಿ, ಇವನ್ನು ಏನಾದರೂ ಮಾಡಿ ಕಾರ್ಯಗತಗೊಳಿಸಲು ಪ್ರಯತ್ನ ಮಾಡಿ. ಉದಾಹರಣೆ ನಮ್ಮ ವಿಶ್ವೇಶ್ವರಯ್ಯ ಕೆರೆಗೋಡು ಹತ್ತಿರ, ಇವತ್ತಿನವರೆಗೂ ಆಗಿಲ್ಲ ನಮಗೆ. ಆ ತರಹದ ಸುಮಾರು 57 ಮಿನಿ ಪ್ರಾಜೆಕ್ಟ್, ಬರೋಕ, ಒಂದು ಆಗಿರಬೇಕು ಎಂದು ಕಾಣುತ್ತದೆ, ಬರೋಕ ಒಂದೇ ಒಂದು. ಒಂದೇ ಒಂದು ಮಿನಿ ಹೈಡಲ್ ಪ್ರಾಜೆಕ್ಟ್ ಆಗಿರತಕ್ಕಂಥಾದ್ದು ರಾಜ್ಯದಲ್ಲಿ, ನಾವು 5 ಮೆಗಾವ್ಯಾಟ್ಸ್, 4 ಮೆಗಾವ್ಯಾಟ್ಸ್, 3 ಮೆಗಾವ್ಯಾಟ್ಸ್, 10 ಮೆಗಾವ್ಯಾಟ್ಸ್, ನಾವು ಏನು ಹೇಳುವುದು ಒಂದು ಸ್ಕೀಮ್ ಇದೆ. ನಾವು ಏಕೆ ಕಳೆದುಕೊಂಡಿದ್ದೇವೆ ಇದನ್ನು ಹೇಳಿದರೆ 55 ಮೆಗಾವ್ಯಾಟ್ಸ್ ಎಂದು ಇರುವುದನ್ನು ಮೆಗಾ ಪ್ರಾಜೆಕ್ಟ್ ಎಂದು ಕರೆದುಕೊಳ್ಳುತ್ತೇವೆ. ಅದಕ್ಕಿಂತ ಹೈಡಲ್ ಪ್ರಾಜೆಕ್ಟ್‌ಗಳನ್ನು ನಾವು ಎಷ್ಟು ಬೇಕಾದರೂ ಮಾಡಿಕೊಳ್ಳಬಹುದು. ಈ ಮಿನಿ ಪ್ರಾಜೆಕ್ಟ್ ಏನು 50 ರಿಂದ 25ರವರೆಗೆ ನಾವು ಇಟ್ಟುಕೊಂಡಿದ್ದೇವೆ, 25ರವರೆಗೆ ಈ ಮಿನಿ ಹೈಡಲ್ ಪ್ರಾಜೆಕ್ಟ್‌ಗಳಿಗೆ ಅವಕಾಶ ಕೊಡಬೇಕು. ಈ 4 ಮೇಜರ್ ಥರ್ಮಲ್, 8 ಡಿ.ಜಿ.ಸೆಟ್, 57 ಮಿನಿ ಎನರ್ಜಿ ಪ್ರಾಜೆಕ್ಟ್‌ಗಳ ಬಗ್ಗೆ ಪ್ರೈವಟೈಸ್ ಏನು ಆಗಿದೆ ಎರಡು ವರ್ಷದೊಳಗೆ, ಇದನ್ನು ನೀವು ಮಾಡಿದರೆ ನಿಮ್ಮ ಇಂಟರ್‌ನಲ್ ಕೆಪ್ಯಾಸಿಟಿ will certainly increase by more than 40%.

ಅದರ ಕಡೆ ಜಾಸ್ತಿ ನೀವು ಗಮನ ಕೊಡಬೇಕು ಅನ್ನತಕ್ಕಂಥಾದ್ದು ತಮಗೆ ನನ್ನ ಮನವಿ. ಕೊನೆಯದಾಗಿ, ನಿಮ್ಮ ಕರ್ನಾಟಕ ಪವರ್ ಕಾರ್ಪೊರೇಷನ್ ಅನ್ನು ನಾವು ಮಾಡಿದ್ದು ಪ್ರಾಜೆಕ್ಟ್‌ಗಳಿಗೋಸ್ಕರ ಮಾತ್ರ, ಪವರ್ ಜನರೇಟ್ ಮಾಡತಕ್ಕಂಥ ಕಾರ್ಪೊರೇಷನ್ ನಾವು ಮಾಡಿದೆವು. ಕೆ.ಇ.ಬಿ. ಅವತ್ತು ಕೆಲವು ಕಡೆಗಳಲ್ಲಿ ಶಿಂಷಾ ಇವೆಲ್ಲಾ ಕೆ.ಇ.ಬಿ.ಯವರು ಮಾಡುತ್ತಿದ್ದಾರೆ. ಆದರೆ ಈಗ ದಯವಿಟ್ಟು ನೀವು ಏನು ಮಾಡಬೇಕು ಅಂದರೆ ಇಲ್ಲಿ ಕೆ.ಇ.ಬಿಯವರು ಕೆಲವು ಪವರ್ ಸ್ಟೇಷನ್ ಅವರ ಹತ್ತಿರ ಇಟ್ಟುಕೊಂಡಿದ್ದಾರೆ. ಏನೆಂದರೆ ಅದನ್ನು ಮರ್ಜ್ ಮಾಡಬೇಕು ಎಂದು ಕೆಲವು ಸಲ ಯೋಚನೆ ಮಾಡಿದರು. ಆದರೆ, ಆಮೇಲೆ ಅದು ಮರ್ಜ್ ಮಾಡುವುದು ಬೇಡ ಎಂದು ಆಲೋಚನೆ ಆಯಿತು. ಮರ್ಜ್ ಮಾಡದೇ ಇರತಕ್ಕಂಥಾದ್ದು ಸರಿ. ಡಿಸ್ಟ್ರಿಬ್ಯೂಷನ್, ಸೇಲ್ಸ್ ವಗೈರೆಗೆ ಕೆ.ಇ.ಬಿ. ಇಟ್ಟುಕೊಳ್ಳಿರಿ ಕರೆಕ್ಟ್ ಇದೆ. ಕೆ.ಪಿ.ಸಿ.ನ ಎಲ್ಲೆಲ್ಲಿ ಜನರೇಟಿಂಗ್ ಪ್ರಾಜೆಕಟ್ಸ್ ಇವೆ, either hydroelectric or thermal projects.

ಇವುಗಳು ಎಲ್ಲೆಲ್ಲಿ ಇದ್ದಾವೆ, ಇವೆಲ್ಲವನ್ನೂ ಮಾಡಿ, ಜನರೇಟ್ ಮಾಡತಕ್ಕಂಥ ಎಲ್ಲಾ ಪ್ರಾಜೆಕ್ಟ್‌ಗಳನ್ನೂ ಇನ್‌ಕ್ಲೂಡಿಂಗ್ ಶಿಂಷಾ, ಯಲಹಂಕ ಡೀಸಲ್ ಜನರೇಟಿಂಗ್ ಸ್ಟೇಷನ್. ಯಲಹಂಕ ಡೀಸಲ್ ಜನರೇಟಿಂಗ್ ಸ್ಟೇಷನ್ ಅನ್ನು ಕೆ.ಇ.ಬಿ. ಅವರು ಮೇಂಟೈನ್ ಮಾಡುವುದು, ಥರ್ಮಲ್ ರಾಯಚೂರನ್ನು ಕೆ.ಪಿ.ಸಿ.ಯವರು ಮಾಡುವುದು, ಅವರು ಇವರಿಗೆ ಕೊಡುವುದು, ಇವರು ಅವರಿಗೆ ಕೊಡುವುದು, ಹೀಗೆ ಮಾಡುವುದು ಬೇಡ. ಆದರೆ ನನ್ನ ಸಲಹೆ ಏನೆಂದರೆ, ನಿಮ್ಮ ಕಾಲದಲ್ಲಿ ಬಹಳ ಅತ್ಯಾವಶ್ಯಕವಾಗಿ ಆಗಬೇಕಾದದ್ದು, ಕೆ.ಇ.ಬಿ.ಯಲ್ಲಿ ಯಾವ್ಯಾವುದನ್ನು ಮೇಂಟೈನ್ ಮಾಡುತ್ತಿದ್ದಾರೆ ಇನ್‌ಕ್ಲೂಡಿಂಗ್ ಶಿವನಸಮುದ್ರ ಮತ್ತು ಬ್ಲಫ್, ಇವನ್ನೂ ಸೇರಿಸಿಕೊಂಡು ಎಲ್ಲವನ್ನೂ ನೀವು ಕೆ.ಪಿ.ಸಿ.ಗೆ ಟ್ರಾನ್ಸ್‌ಫರ್ ಮಾಡಿ. ಅವರ ಹತ್ತಿರ ದುಡ್ಡು ಇದೆ, ರಿಸೋರ್ಸಸ್ ಇದೆ. ನಾನು ಹೇಳಿದೆ, ಪ್ರೈವಟೈಸೇಷನ್‌ಗೆ ಕೊಡಬೇಕು ಎಂದು ಹೇಳಿ. ಅವರು ವರ್ಲ್ಡ್ ಬ್ಯಾಂಕಿನಿಂದ ತರಬಹುದು, ಮತ್ತೊಂದು ಮಾಡಬಹುದು. ಬೇಕಾದಷ್ಟು ಅವರಿಗೆ ರಿಸೋರ್ಸಸ್ ಇದೆ. ಕೆ.ಪಿ.ಸಿ. ಮಾಡಿಕೊಳ್ಳಬಹುದು, ದುಡ್ಡು ಸಮಸ್ಯೆ ಅಲ್ಲ, ಈ ಪ್ರಾಜೆಕ್ಟ್‌ಗಳನ್ನು ಕೆ.ಇ.ಬಿ. ನಡೆಸುತ್ತಾ ಇರತಕ್ಕಂಥ ಪ್ರಾಜೆಕ್ಟ್‌ಗಳನ್ನು ಕೆ.ಪಿ.ಸಿ.ಗೆ ಟ್ರಾನ್ಸ್‌ಫರ್ ಮಾಡಬೇಕು ಎನ್ನತಕ್ಕಂಥ ಮೂಲಭೂತವಾದಂಥ ಒಂದು

ಪಾಲಿಸಿಯನ್ನು ತಮ್ಮ ಕಾಲದಲ್ಲಿ ಮಾಡಬೇಕು. ಏಕೆಂದರೆ, ಇವರ ಮೈಂಟಿನೆನ್ಸ್ ಇಂಜಿನಿಯರ್ಸ್ ಬೇರೆ ಇರುತ್ತಾರೆ, ಅಲ್ಲಿ ಪ್ರಾಜೆಕ್ಟ್ ಇಂಜಿನಿಯರ್ಸ್ ಬೇರೆ ಇರುತ್ತಾರೆ. ಅವರಿಗೂ ಇವರಿಗೂ ಬಹಳಷ್ಟು ನಾಲೆಡ್ಜ್ ಬ್ಯಾಕಿಂಗ್ ಇರುತ್ತದೆ. ಅದನ್ನು ತಾವು ಮಾಡುತ್ತೀರಿ ಎಂದು ಹೇಳಿ ನಾನು ಅಂದುಕೊಂಡಿದ್ದೇನೆ. ಮತ್ತು ನಮ್ಮ ಇನ್ನೊಂದು ಬಹಳ ಪ್ರಾಮುಖ್ಯವಾದುದು, ನಮ್ಮ ಇಂಟರ್ ಸ್ಟೇಟ್ ಡಿಸ್ಪ್ಯೂಟ್‌ನಲ್ಲಿ ಇರತಕ್ಕಂಥ ಪ್ರಾಜೆಕ್ಟ್‌ಗಳನ್ನು ನೀವು ದಯವಿಟ್ಟು ಫೈನಲೈಸ್ ಮಾಡಬೇಕು. ಎಲ್ಲೆಲ್ಲಿ ಇಂಟರ್ ಸ್ಟೇಟ್ ಡಿಸ್ಪ್ಯೂಟ್ ಇದೆ, ಉದಾಹರಣೆಗೆ ಹೇಳುವುದಾದರೆ ನಮ್ಮ ಶಿವನಸಮುದ್ರದ್ದು ಒಂದು, ನಮ್ಮ ಹೈ ಪವರ್ ಕಮಿಟಿಯೊಳಗೆ, ಕೆ.ಸಿ. ರೆಡ್ಡಿಯವರ ಅಧ್ಯಕ್ಷತೆಯೊಳಗಡೆ ಒಂದು ಕಮಿಟಿ ಮಾಡಿದ್ದೀರಿ, ಅದರಲ್ಲಿ ನಾವೆಲ್ಲಾ ಇದ್ದೇವೆ. ಅಲ್ಲಿ ಕಾವೇರಿ ಜಲ ವಿವಾದ ಇರತಕ್ಕಂಥ ಸಂದರ್ಭದಲ್ಲಿ ನಾವು.....

ಶ್ರೀ ಜೆ.ಹೆಚ್. ಪಟೇಲ್ : ತಮಿಳುನಾಡಿನ ಯಾವುದೇ ಒಂದು ಹನಿ ನೀರನ್ನೂ ನಾವು ಹಿಡಿದುಕೊಳ್ಳುವುದಿಲ್ಲ, ಅದರಲ್ಲಿ ಕೇಂದ್ರ ಸರ್ಕಾರ ವಿನಾಕಾರಣ ಕನ್‌ಫ್ಯೂಷನ್ ಮಾಡುತ್ತಿದೆ. ಪವರ್ ಜನರೇಟ್ ಮಾಡಲಿಕ್ಕೆ, ನದಿ ದಂಡೆ ಹಾಕಿ, ಡ್ಯಾಮ್ ಹಾಕಿ ನಿಲ್ಲಿಸುವುದಿಲ್ಲ ನಾವು. ಈ ರನ್ ಆಫ್ ದಿ ರಿವರ್ ಅಂತ ಹೊಸ ಯೋಜನೆಯಲ್ಲಿ ಯಾವ ನೀರನ್ನು ಹಿಡಿದು ಅವರಿಗೆ ಬಿಡುತ್ತಿದ್ದೇವೆ, ಅದರೊಳಗೆ ಮಾಡಬೇಕೆಂದು ಯೋಜನೆ ಹಾಕಿ ಕೊಂಡಿದ್ದೇವೆ. ವಿನಾಕಾರಣ ಸೆಂಟ್ರಲ್ ಪವರ್‌ನವರ ಅಡ್ಡಿ ಬಂದಿದೆ. ಆದ್ದರಿಂದ ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ಇಷ್ಟೇ ಹೇಳುತ್ತೇನೆ ಹಾಗೂ ವಿನಾಕಾರಣ ತಮಿಳುನಾಡು ಅಬ್ಜಕ್ಷನ್ ಮಾಡುತ್ತಿರುವುದರಿಂದ ಇದನ್ನು ಮಾಡಿ ಕೇಂದ್ರ ಸರ್ಕಾರದ ಗಮನಕ್ಕೆ ತಂದು ಆ ಪ್ರಾಜೆಕ್ಟನ್ನು ಕೈಗೆತ್ತಿಕೊಳ್ಳಬೇಕು ಎನ್ನುವುದೇ ಈ ಸರ್ಕಾರದ ಉದ್ದೇಶ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ಬಹಳ ಸಂತೋಷ, ಈಗ ಏನು ನಮ್ಮ ಶಿವನಸಮುದ್ರದಲ್ಲಿ ಸೀಸನ್‌ನಲ್ಲಿ ರನ್ ಆಫ್ ದ ರಿವರ್‌ನಲ್ಲಿ 270 ಮೆಗಾವ್ಯಾಟ್ ಪ್ರಾಜೆಕ್ಟನ್ನು ತರಬೇಕು ಎಂದು ನಾವು ಮಾಡಿದ್ದೇವೆ ಇದಕ್ಕೆ ಕ್ಯಾಪಿಟಲ್ ಸಿಗುತ್ತದೆ ನಿಮಗೆ, ದೊಡ್ಡ ಏಜೆನ್ಸಿಗಳು ಬರುತ್ತವೆ. ವಿಶ್ವ ಬ್ಯಾಂಕ್‌ನಿಂದ ಅಸಿಸ್ಟೆನ್ಸ್ ಸಿಗುತ್ತದೆ. ನಮಗೆ 275 ಮೆಗಾವ್ಯಾಟ್ ಇಂದು ಮಾಡಿದರೆ ಒಳ್ಳೆಯದು. ಅದು ರನ್ ಆಫ್ ದಿ ರಿವರ್ ವಾಟರ್ ಡಿಸ್ಟ್ರಿಬ್ಯೂಟ್ ಪ್ರಶ್ನೆ ಬರುವುದಿಲ್ಲ, ನಾವು ನೀರನ್ನು ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ, ಇದರ ಜೊತೆಗೆ ತಮಗೆ ಇನ್ನೊಂದು ಸಲಹೆಯನ್ನು ಮಾಡುತ್ತೇನೆ. ನಮ್ಮ ಕಾವೇರಿ ಜಲವಿವಾದದ ಹಿನ್ನೆಲೆಯಲ್ಲಿ ಮೇಕೆದಾಟ್ ಹತ್ತಿರ 70 ಟಿ.ಎಂ.ಸಿ.ಯಷ್ಟು ನೀರನ್ನು ಸಂಗ್ರಹಿಸಲು ಒಂದು ಡ್ಯಾಮ್‌ನ್ನು ಮಾಡಿಕೊಂಡು ಅಲ್ಲಿಂದ ಅದನ್ನು ಹೈಡ್ರೋ ಎಲೆಕ್ಟ್ರಿಕಲ್ ಪ್ರಾಜೆಕ್ಟ್‌ಗಾಗಿ ಉಪಯೋಗಿಸಿಕೊಳ್ಳುತ್ತೇವೆ ಎನ್ನತಕ್ಕಂಥ ರೀತಿಯಲ್ಲಿ ಆಲೋಚನೆ ಮಾಡಿ ಮೇಕೆದಾಟ್ ಕೆಳಗಡೆ ತಮಗೆ ಗೊತ್ತಿರುವ ಹಾಗೆ ಸುಮಾರು 600-700 ಎಕರೆಯಷ್ಟು ಇರುವ ಭೂಮಿಯನ್ನು ಸರಿಮಾಡಿಕೊಂಡು ಇದನ್ನು ಮಾಡಬೇಕು. ಮೇಕೆದಾಟ್ ಹತ್ತಿರ ಮುಂದಕ್ಕೆ ಬಹಳಷ್ಟು ಸಮಸ್ಯೆಗಳು ಪರಿಹಾರವಾಗುತ್ತದೆ. ಈ ಹಿಂದೆಯೇ ಸುಮಾರು 20-30 ವರ್ಷಗಳ ಹಿಂದೆಯೇ ಮೇಕೆದಾಟ್ ಹತ್ತಿರ ಸುಮಾರು 60 ಟಿ.ಎಂ.ಸಿ. ನೀರನ್ನು ಸಂಗ್ರಹಿಸುವ ಸಲುವಾಗಿ ಒಂದು ಡ್ಯಾಮ್‌ನ್ನು ಮಾಡಿಕೊಂಡು ಅದನ್ನು ಹೈಡ್ರೋ ಎಲೆಕ್ಟ್ರಿಕಲ್‌ಪ್ರಾಜೆಕ್ಟ್‌ಗೆ ಉಪಯೋಗಿಸಿಕೊಳ್ಳುತ್ತೇವೆ ಎಂದು ಹೇಳಿ ಟ್ರಿಬ್ಯೂನಲ್‌ಮುಂದೆ ಅದನ್ನು ಇಟ್ಟು ಟ್ರಿಬ್ಯೂನಲ್ ಕ್ಲಿಯರೆನ್ಸ್ ತೆಗೆದುಕೊಂಡು ಭಾರತ ಸರ್ಕಾರದಿಂದ ಹಣವನ್ನು ತೆಗೆದುಕೊಂಡು ಮೇಕೆದಾಟ್ ಹತ್ತಿರ ಸಣ್ಣ ಕೆ.ಆರ್.ಎಸ್.ನ್ನು ಮಾಡಿಕೊಂಡಿದ್ದರೆ ಚೆನ್ನಾಗಿರುತ್ತಿತ್ತು, ನಾವು ಈಗಲೂ ಸಹ ಮೇಕೆದಾಟ್ ಹತ್ತಿರ 50 ಟಿ.ಎಂ.ಸಿ. ನೀರನ್ನು ಸಂಗ್ರಹಿಸಿಕೊಳ್ಳಬಹುದು.

ಹೊಗೆನ್‌ಕಲ್ ಇರಲಿ, ಮೇಕೆದಾಟ್ ಇರಲಿ, ಶಿವನ ಸಮುದ್ರವೇ ಇರಲಿ. ಆದರೆ ಈ ಮೇಕೆದಾಟ್ ಬಗ್ಗೆ ಈಗಾಗಲೇ ಆಲೋಚನೆಯನ್ನು ಮಾಡಿದ್ದೇವೆ. ಈ ಮೇಕೆದಾಟ್ ವಿಚಾರದಲ್ಲಿ ತಾವು ಅಲ್ಲೊಂದು 60 ಟಿ.ಎಂ.ಸಿ. ಸಾಮರ್ಥ್ಯವಿರತಕ್ಕಂಥ ಸ್ಟೋರೇಜ್ ಮಾಡತಕ್ಕಂಥ ಒಂದು ಡ್ಯಾಮ್ ಮತ್ತು ಅದರ ಮೇಲೆ 120 ಟಿ.ಎಂ.ಸಿ. ಸ್ಟೋರೇಜ್ ಮಾಡತಕ್ಕಂಥ ಡ್ಯಾಮ್. ಈ ಎರಡು ಡ್ಯಾಮ್‌ಗಳ ಬಗ್ಗೆ ಈಗಾಗಲೇ ಕಮಿಟಿಯ ವರದಿಯಲ್ಲಿ ಪ್ರಪೋಸಲ್ ಮಾಡಲಾಗಿದೆ. ಇವೆರಡರಲ್ಲಿ ಯಾವುದು ಸೂಕ್ತವಾಗುತ್ತದೆ, ಯಾವುದಕ್ಕೆ ಅರಣ್ಯ ಇಲಾಖೆಯವರು ಕ್ಲಿಯರೆನ್ಸ್ ಕೊಡುತ್ತಾರೆ ಮತ್ತು ಯಾವುದು ಮೇಜರ್ ವಾಟರ್ ಸಪ್ಲೈಗೆ ಮತ್ತು ಹೈಡ್ರೋ ಎಲೆಕ್ಟ್ರಿಕಲ್ ಪ್ರಾಜೆಕ್ಟ್‌ಗೆ ಅನುಕೂಲವಾಗುತ್ತದೆ ಎನ್ನತಕ್ಕಂಥದ್ದನ್ನು ನೋಡಿಕೊಂಡು ಮಾಡಬೇಕು ಎಂಬುದು ನನ್ನ ಸಲಹೆ. ಮತ್ತೆ ನಿಮ್ಮ ಮಹದಾಯಿ ಯೋಜನೆಗೆ ಗೋವಾ ಸರ್ಕಾರದ ಜೊತೆ ಡಿಸ್‌ಪ್ಯೂಟ್ ಇದೆ. ಅದು ಒಂದು ಇಂಟರ್ ಸ್ಟೇಟ್ ಡಿಸ್‌ಪ್ಯೂಟ್ ಆಗಿದ್ದು ಅದನ್ನೂ ತಾವು ಫೈನಲ್ ಮಾಡಿಕೊಳ್ಳಬೇಕು. ಅಲ್ಲಿಂದ ಕೂಡ 200 ಮೆಗಾವ್ಯಾಟ್ ವಿದ್ಯುಚ್ಛಕ್ತಿಯನ್ನು ಮಾಡಿಕೊಳ್ಳಲು ಬಹಳ ಸುಲಭವಾಗುತ್ತದೆ. ಇದರಿಂದ ಒಟ್ಟು ಮಾದಾಯಿ, ಮೇಕೆದಾಟ್, ಶಿವನಸಮುದ್ರ ರನ್ ಆಫ್ ದಿ ರಿವರ್ ಇವಿಷ್ಟನ್ನೂ ತಾವು ಮಾಡಿಕೊಟ್ಟರೆ ಬಹಳ ಅನುಕೂಲವಾಗುತ್ತದೆ....

ನಮ್ಮ ಇಂಟರ್‌ನಲ್ ಕೆಪ್ಯಾಸಿಟಿ ಇನ್‌ಕ್ರೀಸ್ ಮಾಡಿಕೊಂಡರೆ I am need not depend upon central Government projects. ಕೊನೆಯದಾಗಿ ಐ.ಪಿ. ಸೆಟ್‌ಗಳ ಬಗ್ಗೆ ಹೇಳಬೇಕು ಎಂದರೆ ಇವೊತ್ತು ನೀವು ಇದಕ್ಕೆ ಎಕ್ಸ್‌ಟೆಂಡ್ ಮಾಡಿದ್ದೀರಿ. 9 ಲಕ್ಷ ಐ.ಪಿ. ಸೆಟ್‌ಗಳನ್ನು ಮಾಡಿದ್ದೀರಿ, ಅದನ್ನು ಇಲ್ಲ ಎಂದು ನಾನು ಹೇಳುವುದಿಲ್ಲ, ಸಾಕಷ್ಟು ನಾವು ಕೊಟ್ಟುಬಿಟ್ಟಿದ್ದೇವೆ. ಇದನ್ನು ಕೊಟ್ಟಿಲ್ಲ ಎಂದು ನಾವು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಕಳೆದ ಎಳೆಂಟು ವರ್ಷದಲ್ಲಿ ಅದು ಕಾಂಪಿಟೇಶನ್‌ನಲ್ಲಿ ನಡೆದಿದೆ, ಈ ಸರ್ಕಾರದ ಆಜ್ಞೆ ಏನು, ಆ ಸರ್ಕಾರದ ಆಜ್ಞೆ ಏನು, ಇದನ್ನು ಕೊಡಬೇಕು ಅದನ್ನು ಕೊಡಬೇಕು ಎಂದು ಕೊಟ್ಟಿದ್ದೇವೆ.

ಆದರೆ ಇವೊತ್ತು ಆ ಸಿಸ್ಟಮ್‌ಗಳಿಗೆ ಏನಾಗಿದೆಯೆಂದರೆ, ಮೋಟಾರ್‌ಗಳೆಲ್ಲಾ ಸುಟ್ಟು ಹೋಗತಕ್ಕಂಥದ್ದು ಇತ್ಯಾದಿ ಅನೇಕ ವಿಚಾರಗಳು ತಮಗೆ ಗೊತ್ತಿದೆ. ಇದಕ್ಕೆ ತಾವು ಸ್ವಲ್ಪ ಗಮನ ಹರಿಸಿ ಟಿ ಅಂಡ್ ಡಿ ಲಾಸ್ ಸಿಸ್ಟಮ್ಸ್‌ಗೆ ಮೊನ್ನೆ ನೀವು ಏನು ನಮ್ಮ ಶಿವಕುಮಾರ್ ಕ್ಷೇತ್ರದಲ್ಲಿ ಮಾಡಿದ್ದೀರೋ ಅದೇ ರೀತಿಯಲ್ಲಿ ಸ್ವಲ್ಪ ಈ ಕಡೆ ಗಮನ ಕೊಡಬೇಕೆಂಬುದು ಒಂದು ವಿಚಾರ, ಎರಡನೆಯದಾಗಿ ಕೆ.ಇ.ಬಿ.ಯಲ್ಲಿ ಏನು 623 ಕೋಟಿ ರೂ.ಗಳು ಬಾಕಿ ಇದೆಯಲ್ಲಾ ಈಗಾಗಲೇ ನಿಮ್ಮ ವಿಷಯ ಸಮಿತಿಯ ವರದಿಯಲ್ಲಿ ಇದನ್ನು ತಿಳಿಸಿದ್ದಾರೆ ಈ 623 ಕೋಟಿ ರೂ.ಗಳ ಬಾಕಿಯಲ್ಲಿ ನೀವು ನೀರು ಸರಬರಾಜು ಮಂಡಳಿಯದು ಮತ್ತು ಮುನಿಸಿಪಾಲಿಟಿಯದನ್ನು ಬಿಟ್ಟು ಮತ್ತು ಐ.ಪಿ. ಸೆಟ್‌ನವರದ್ದನ್ನೂ ಬಿಟ್ಟು ಈ 623 ಕೋಟಿ ರೂ.ಗಳು ಕೆ.ಇ.ಬಿ.ಗೆ ಬರಬೇಕಾಗಿದೆ ಇದಕ್ಕೆ ಏನಾದರೂ ನೀವು ಒಂದು ಯೋಚನೆ ಮಾಡಿ ಈ ಬುಕ್‌ನ್ನು ಕ್ಲೋಸ್ ಮಾಡಬೇಕು. ಈ ಬುಕ್‌ನ್ನು ಕ್ಲೋಸ್ ಮಾಡದೇ ಹೋದರೆ ಪ್ರತಿ ವರ್ಷ ನಿಮ್ಮನ್ನು ಅಸೆಂಬ್ಲಿಯಲ್ಲಿ ಕೇಳುತ್ತಾರೆ, ಹೊರಗಡೆಯಲ್ಲಿ ಕೇಳುತ್ತಾರೆ. ಈ 623 ಕೋಟಿ ರೂ.ಗಳಲ್ಲಿ ಖಾಸಗಿಯರು ಎಷ್ಟಿದ್ದಾರೆ ಎಂಬುದನ್ನು ನಾನು ನೋಡಿದೆ. ಆದ್ದರಿಂದ ಇದರ ಬಗ್ಗೆ ತಾವು ಒಂದು ಆಲೋಚನೆಯನ್ನು ಮಾಡಬೇಕು. ಕೊನೆಯದಾಗಿ ನನ್ನ ಒಂದು ಸಲಹೆ ತಮಗೆ ಏನು ಅಂದರೆ ನಮ್ಮ ಆರ್‌ಇಸಿ ಪ್ರೋಗ್ರಾಂ ಹಳ್ಳಿ ಕಡೆ ಮಾಡುವ ಬಗ್ಗೆ ಮೊನ್ನೆ ತಮಗೆ ಹೇಳಿದೆ, ವಿಲೇಜ್ ಎಕ್ಸ್‌ಟೆನ್‌ಷನ್ ಏರಿಯಾಗಳಿಗೆ ಸ್ಟ್ರೀಟ್ ಲೈಟ್ ಕೊಡುತ್ತಿಲ್ಲ, ಆ ಸ್ಟ್ರೀಟ್ ಲೈಟ್

ಏಕೆ ಕೊಡುತ್ತಿಲ್ಲ ಎಂದರೆ ಕೆ.ಇ.ಬಿ.ಯಲ್ಲಿ ಬೋರ್ಡ್ ಒಂದು ರೆಸಲ್ಯೂಷನ್ ಮಾಡಿದ್ದಾರೆ, ಮೆಟೀರಿಯಲ್ಸ್ ಮತ್ತು ಇತರವುಗಳು ಬಹಳ ಶಾರ್ಟೇಜ್ ಇದೆ, ಪಂಚಾಯತಿಯವರು ಹಣವನ್ನು ಕಟ್ಟಿಲ್ಲ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದಾರೆ. ನಾನು ತಮಗೆ ಒಂದು ಸಲಹೆಯನ್ನು ಏನು ಕೊಡುತ್ತೇನೆಂದರೆ ಯಾವ ಪಂಚಾಯತಿಯವರು ಅವರ ಸ್ಟ್ರೀಟ್ ಲೈಟ್ ಬಾಕಿಯನ್ನು ಕಟ್ಟುತ್ತಾರೆ ಅವರಿಗೆ ಸ್ಟ್ರೀಟ್ ಲೈಟ್‌ನ್ನು ಕೊಡುತ್ತೇವೆ ಎನ್ನತಕ್ಕಂಥದ್ದನ್ನು ತಮ್ಮ ಉತ್ತರದಲ್ಲಿ ಹೇಳಬೇಕು. ಏಕೆಂದರೆ ಹಳ್ಳಿಗಳಲ್ಲಿ ಎಕ್ಸ್‌ಟೆನ್‌ಷನ್ ಏರಿಯಾದಲ್ಲಿ ಬಹಳ ಕಷ್ಟದಿಂದ ವಾಸ ಮಾಡಬೇಕಾಗಿರುತ್ತದೆ, ಅಲ್ಲಿ ಬಡವರು, ಹರಿಜನರು, ಕೂಲಿ ಜನರು ಇವರುಗಳೇ ಹೆಚ್ಚು ಇರತಕ್ಕಂಥದ್ದು.

ಅಲ್ಲಿ ಹೊರಗಡೆ ನಾಲೆಗಳು ಇರುತ್ತದೆ, ಅಲ್ಲೆಲ್ಲಾ ಹಾವುಗಳು ಇರುವುದರಿಂದ ಮಕ್ಕಳು ಮರಿಗಳು ಓಡಾಡುವುದಕ್ಕೆ ಆಗುವುದಿಲ್ಲ. ಈ ರೀತಿಯ ಅನೇಕ ತೊಂದರೆಗಳು ಇರುತ್ತದೆ ಹಳ್ಳಿಯ ಕಡೆ. ಆದ್ದರಿಂದ ಈ ಎಕ್ಸ್‌ಟೆನ್‌ಷನ್ ಕೊಡುವುದನ್ನು ಈ ಆರ್‌ಇಸಿ ಪ್ರೋಗ್ರಾಂನಲ್ಲಿ ಈಗ ಏನು ನಿಲ್ಲಿಸಿದ್ದೀರಲ್ಲಾ ಈ ವಿಚಾರದಲ್ಲಿ ವಿಲೇಜ್ ಪಂಚಾಯತ್‌ನವರು ಹಣ ಕಟ್ಟಿದವರು ಯಾರಿದ್ದಾರೆ; ಅವರಿಗೆ ಕೊಡಲು ಕಾರ್ಯಕ್ರಮ ಹಾಕಿಕೊಳ್ಳಬೇಕು. ಏಕೆಂದರೆ ನಾನೇ ನನ್ನ ಕ್ಷೇತ್ರದಲ್ಲಿ ಸುಮಾರು 20-25 ಹಳ್ಳಿಗಳಲ್ಲಿ ಹಣವನ್ನು ಕಟ್ಟಿಸಿಬಿಟ್ಟೆ, ನೀವು ಮೊದಲು ಹಣವನ್ನು ಕಟ್ಟಿ ನಾನು ಸ್ಟ್ರೀಟ್ ಲೈಟ್‌ನ್ನು ಕೊಡಿಸುತ್ತೇನೆ ಎಂದು ಹೇಳಿ ಹಣವನ್ನು ಕಟ್ಟಿಸಿಬಿಟ್ಟೆ. ಆದರೆ ಈಗ ಬೋರ್ಡ್ ರೆಸಲ್ಯೂಷನ್ ಆಗಿದೆ ಅದ್ದರಿಂದ ನಾವು ಕೊಡುವುದಕ್ಕೆ ಆಗುವುದಿಲ್ಲ ಎಂದು ಕುಳಿತುಬಿಟ್ಟಿದ್ದಾರೆ. ಇವೊತ್ತು ಬಹಳ ಮಹತ್ವವಾದ ಇಲಾಖೆ ನಮ್ಮ ವಿದ್ಯುಚ್ಛಕ್ತಿ ಇಲಾಖೆ. ಈ ಇಲಾಖೆಗೆ ಸಮರ್ಪಕವಾಗಿ ನಡೆಸಲು ಶಕ್ತರಾಗಿರತಕ್ಕಂಥ ಉಪ ಮುಖ್ಯಮಂತ್ರಿಗಳು ಇರುವುದರಿಂದ ಅವರು ಈಗ ಏನು ಗಮನ ಹರಿಸುತ್ತಿದ್ದಾರೆ ಅದಕ್ಕಿಂತ ಇನ್ನೂ ಶೇಕಡ 20ರಷ್ಟು ಹೆಚ್ಚು ಗಮನವನ್ನು ಹರಿಸಿದ್ದೇ ಆದರೆ ತಮ್ಮ ಬುದ್ಧಿ ಸಾಮರ್ಥ್ಯದಿಂದ ಇಡೀ ಕರ್ನಾಟಕವೇ ಬೆಳಕಾಗಿ ಬಿಡುತ್ತದೆ. ಅವರಿಗೆ ಹೆಚ್ಚು ಬುದ್ಧಿ ಇದೆ, ಆದರೆ ಅವರು ಹೆಚ್ಚು ಗಮನ ಕೊಡಬೇಕು ಅಷ್ಟೇ. ಸಮಯ ಕೊಟ್ಟರೆ ಅವರು he can do wonders.

ಅವರಿಗೆ ನಮಗೆ ಯಾವಾಗಲೂ ನಡೆಯುವಂಥ ಜಿಜ್ಞಾಸೆ ಏನು ಎಂದರೆ, ಇವೊತ್ತು ಆಡಳಿತ ಪಕ್ಷದಲ್ಲಿರಬಹುದು, ನಾಳೆ ವಿರೋಧ ಪಕ್ಷದಲ್ಲಿರಬಹುದು ಅದೆಲ್ಲಾ ಬೇಕಾಗಿಲ್ಲ, ವೈಯಕ್ತಿಕವಾಗಿ ನಮಗೆ ಅವರು ಹಿರಿಯರು, ಅವರ ಬಗ್ಗೆ ನಮಗೆ ಸುಮಾರು 20-25 ವರ್ಷಗಳ ವಿಶ್ವಾಸ ಇರುವುದರಿಂದ ಅವರಿಗೆ ತಲೆಯಲ್ಲಿ ಕೂದಲು ಇಲ್ಲದೇ ಇದ್ದರೂ ಕೂಡ ತಲೆ ಒಳಗಡೆ ದೇವರು ಕೊಟ್ಟಿರುವುದನ್ನು ಸರಿಯಾಗಿ ಸ್ಪಿರಿಟ್ಟಾಗಿ ಉಪಯೋಗಿಸಿದ್ದೇ ಆದರೆ ವಿದ್ಯುತ್ ಇಲಾಖೆಯಲ್ಲಿ ಅವರಿಗೆ ಒಳ್ಳೆಯ ಹೆಸರು ಬರುತ್ತದೆ, ನೀವು ಖಂಡಿತ ಒಳ್ಳೆಯ ಹೆಸರನ್ನು ತೆಗೆದುಕೊಳ್ಳಬೇಕು ಎಂಬುದೇ ನಮ್ಮ ಆಸೆ. ಈ ಮೇಲಿನ 3-4 ಜಟಿಲವಾದ ಸಮಸ್ಯೆಗಳು ಏನು ಇದೆ ಅವನ್ನು ಬಗೆಹರಿಸಿ ವಿದ್ಯುಚ್ಛಕ್ತಿಯ ಸಂಕಷ್ಟದಿಂದ ನಮ್ಮ ರೈತರನ್ನು ಮತ್ತು ಕೈಗಾರಿಕೋದ್ಯಮಿಗಳನ್ನು ಪಾರು ಮಾಡಬೇಕೆಂದು ಆ ನಂಬಿಕೆಯನ್ನು ನಾನು ನಿಮ್ಮ ಮೇಲೆ ಇಟ್ಟುಕೊಂಡು ಇವೊತ್ತು ಈ ಬೇಡಿಕೆಗಳ ಮೇಲೆ ಮಾತನಾಡಲು ಇಷ್ಟು ಹೊತ್ತು ಅವಕಾಶ ಕೊಟ್ಟಂಥ ನಮ್ಮ ಉಪಾಧ್ಯಕ್ಷರಿಗೆ, ವಿಶೇಷವಾಗಿ ರೈತರಾಗಿರತಕ್ಕಂಥ ಅವರಿಗೆ ವಂದಿಸಿ ಈ ಬೇಡಿಕೆಗಳಿಗೆ ನನ್ನ ಸಂಪೂರ್ಣವಾದಂಥ ಬೆಂಬಲವನ್ನು ಸೂಚಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಗೃಹ ಸಚಿವರು

ಸಚಿವರ ಹೇಳಿಕೆ

ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಖಾಸಗೀ ವಿಮಾನ ಅನಧಿಕೃತವಾಗಿ ಬಂದಿಳಿದಿರುವ ಬಗ್ಗೆ

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ಸದನದ ಸದಸ್ಯರಾಗಿರತಕ್ಕಂಥ ಶಿವರಾಮೇಗೌಡರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಸಂಬಂಧಪಟ್ಟ ಹಾಗೆ ಮಾನ್ಯ ಉಪ ಮುಖ್ಯಮಂತ್ರಿಗಳು ಸದನಕ್ಕೆ ಉತ್ತರವನ್ನು ಕೊಡಿಸುತ್ತೇನೆ ಎನ್ನುವಂಥ ಭರವಸೆಕೊಟ್ಟ ಮೇರೆಗೆ ತಮ್ಮ ಒಂದು ಅನುಮತಿಯನ್ನು ಕೋರಿ ಈ ಒಂದು ಹೇಳಿಕೆಯನ್ನು ಸದನದ ಮುಂದೆ ಇಡಲು ಬಯಸುತ್ತೇನೆ.

"Today at about 8.00 A.M. a small aircraft called jet Falcon 900 bearing register No.9 MBAD belonging to a private company from Kaulalampur landed at Bangalore airport with three crew members and the following four passengers:

Ananda Krishnan; Sowrama Appuswamy, Abdul Kalimalias- Abdul Hamid and Chowmeowheng.

These passengers are said to be scientists who came to visit ISRO, Bangalore. As the aircraft landed in a different place there was some confusion in clearing these passengers by the Immigration and Customs officials. The formalities, however, have been fulfilled. The scientists have visited ISRO and have returned to Bangalore Airport. They are scheduled to go to Delhi this evening.

ಆದುದರಿಂದ ಯಾವುದೇ ಸದಸ್ಯರಿಗೂ ಇದರ ಬಗ್ಗೆ ಆತಂಕವಾಗುವ ಅವಶ್ಯಕತೆ ಏನೂ ಇಲ್ಲ, ಈ ಸರ್ಕಾರ ಅಂತಹ ಆತಂಕಕಾರಿ ಪರಿಸ್ಥಿತಿಯನ್ನು ತರುವುದಕ್ಕೆ ಬಿಡುವುದಿಲ್ಲ, ಈ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ.

1995-96ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ (ಮುಂದುವರಿದುದು)

+ ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಅಧ್ಯಕ್ಷರೇ, ಇವೊತ್ತು ನಾವು 1995-96ನೇ ಸಾಲಿನ ಶಿಕ್ಷಣ, ಯುವಜನ ಸೇವೆ, ಕಾರ್ಮಿಕ, ವಿದ್ಯುತ್ ಯೋಜನೆ, ಕೃಷಿ, ಪಶು ಸಂಗೋಪನೆ ಇಲಾಖೆಗಳ ಬೇಡಿಕೆಗಳ ಮೇಲೆ ಚರ್ಚೆಯನ್ನು ಮಾಡುತ್ತಿದ್ದೇವೆ. ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ, ಹೊಸ ಮಂತ್ರಿಗಳೂ ಬಂದಿದ್ದಾರೆ. ಹೊಸ ನೀತಿ ಪ್ರಕಟವಾಗಬೇಕಾಗಿತ್ತು, ಆದರೆ ಅಧಿಕಾರಿಗಳೆಲ್ಲ ಹಿಂದಿನ ಸರ್ಕಾರದಲ್ಲಿ ಇದ್ದವರೇ ಅಂದರೆ ಬಾಟಲ್ ಹೊಸದು ಮದ್ಯ ಮತ್ರ ಹಳೆಯದೇ ಎನ್ನುವ ಮಾತನ್ನು ಹೇಳಿದರ ತಪ್ಪಾಗಲಿಕ್ಕಿಲ್ಲ, ಹಿಂದಿನ ಸರ್ಕಾರದ ಲೋಪದೋಷಗಳನ್ನೆಲ್ಲಾ ಹೇಳಿಕೊಂಡು ನಾವು ಆಯ್ಕೆಯಾಗಿ ಬಂದಿದ್ದೇವೆ. ಈ ಸದನದಲ್ಲಿ ಒಟ್ಟು 110 ಜನ ಹೊಸದಾಗಿ ಆಯ್ಕೆಯಾಗಿ ಬಂದಿದ್ದೇವೆ. ಹೊಸ ಸ್ಫೂರ್ತಿ, ಹೊಸ ಕಲ್ಪನೆ, ಹೊಸ ಉದ್ದೇಶದಿಂದ ಈ ಸದನವನ್ನು ಪ್ರವೇಶ ಮಾಡಿದ್ದೇವೆ. ಕಳೆದ ಹಲವಾರು

ದಿವಸಗಳಿಂದ ನಾವು ಇಲ್ಲಿ ಕಂಡುಕೊಂಡದ್ದು ಏನೆಂದರೆ ಹಳಬರನ್ನು, ನಾಲ್ಕು ಸಾರಿ ಆಯ್ಕೆಯಾದವರನ್ನು ನಾವೆಲ್ಲಾ ಗೌರವಿಸುತ್ತಾ ಬಂದಿದ್ದೇವೆ.

ನಮ್ಮ ಹೊಸಬರ ಚಿಂತನೆ ಮಾತ್ರ ಹಳಬರ ಚಿಂತನೆಗಿಂತ ತೀರ ಭಿನ್ನವಾಗಿದೆ. ಅಂದರೆ ನಾವು ನಮ್ಮ ಹಳಬರ ಎಲ್ಲಾ ಒಳ್ಳೆಯ ಚಿಂತನೆಯನ್ನು ಸ್ವೀಕಾರ ಮಾಡುವುದಕ್ಕೆ ಸಿದ್ಧರಿದ್ದೇವೆ. ಕಳೆದ ಹಲವಾರು ದಿನಗಳಿಂದ ಈ ಸದನದಲ್ಲಿ ನಾವು ಕಾಣುತ್ತಿರುವುದೇನೆಂದರೆ ಹಿಂದಿನ ಸರ್ಕಾರ ಮಾಡಿದ ತಪ್ಪೇನಿದೆ ಅದನ್ನೇ ಹೊಸ ಸರ್ಕಾರ ಮಾಡುತ್ತಿದೆಯೇನೋ ಎನ್ನುವ ಅನಿಸಿಕೆ. ಈಗ ನಾವು ಶಿಕ್ಷಣ ನೀತಿಯಿಂದ ಪ್ರಾರಂಭ ಮಾಡುವುದಾದರೆ ಶಿಕ್ಷಣ ನೀತಿಗೆ ಸಂಬಂಧಿಸಿದಂತೆ ನೂತನ ಸರ್ಕಾರ ಜವಾಬ್ದಾರಿಯನ್ನು ವಹಿಸಿಕೊಂಡ ಮೇಲೆ ಅದು ನಡೆದುಕೊಂಡು ಹೋಗುತ್ತಿರುವ ರೀತಿಯನ್ನು ನೋಡಿದರೆ ಹಿಂದಿನ ಸರ್ಕಾರ ಯಾವ ಲೋಪದೋಷಗಳನ್ನು ಮಾಡಿಕೊಂಡು ಬಂದಿತ್ತೋ ಅದನ್ನೇ ಇವರೂ ಕೂಡ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ ಎನ್ನುವಂಥ ಭಾವನೆ ಬರುತ್ತಿದೆ. ಇವೊತ್ತು ರಾಜ್ಯದಲ್ಲಿ ನಾವು 10 ಪ್ಲಸ್ 3 ಪ್ಲಸ್ 2 ವಿಧಾನದ ಶಿಕ್ಷಣದ ನೀತಿಯನ್ನು ಜಾರಿಗೆ ತಂದಿದ್ದೇವೆ. ಪ್ರಾಥಮಿಕ ಹಂತದಲ್ಲಿ ನಾವು ಒಳ್ಳೆಯ ಶಿಕ್ಷಣ ಕೊಡಬೇಕು ಎನ್ನುವಂಥ ಮಾತನ್ನು ಎಲ್ಲಾ ಕಡೆ ನಾವು ಹೇಳುತ್ತಾ ಬಂದಿದ್ದೇವೆ. ಇವೊತ್ತು ಹೊಸ ಸರ್ಕಾರ ಬಂದಮೇಲೆ ಒಂದು ರೀತಿಯ ಹೊಸ ನೀತಿಯನ್ನು ಪ್ರಕಟ ಮಾಡಬೇಕಾಗಿತ್ತು. ಆದರೆ ಹಿಂದಿನ ಸರ್ಕಾರ ಯಾವ ದಾರಿಯಲ್ಲಿ ನಡೆದುಕೊಂಡು ಹೋಗಿದೆ ಅದಕ್ಕಿಂತ ಭಿನ್ನವಾದಂಥ ಯಾವುದೇ ಲಕ್ಷಣಗಳನ್ನೂ ಕೂಡ ಇಲ್ಲಿ ಕಾಣುತ್ತಿಲ್ಲ.

ಉದಾಹರಣೆಗೆ ಹೇಳುವುದಾದರೆ ಪ್ರಾಥಮಿಕ ಹಂತದ ಅನಧಿಕೃತ ಶಾಲೆಗಳ ಬಗ್ಗೆ ಇತ್ತೀಚೆಗೆ ಮಾನ್ಯ ಶಿಕ್ಷಣ ಮಂತ್ರಿಗಳು ಒಂದು ಹೇಳಿಕೆಯನ್ನು ನೀಡಿ, ನಾವು ಅನಧಿಕೃತ ಶಾಲೆಗಳನ್ನೆಲ್ಲಾ ಮುಚ್ಚುತ್ತೇವೆ ಯಾವುದೇ ತಂದೆತಾಯಿಗಳು ತಮ್ಮ ಮಕ್ಕಳನ್ನು ಶಾಲೆಗಳಿಗೆ ಕಳುಹಿಸಬಾರದು, ಒಂದು ವೇಳೆ ಈ ಅನಧಿಕೃತ ಶಾಲೆಗಳನ್ನು ನಾವು ನಡೆಸಿಕೊಂಡು ಹೋಗುತ್ತೇವೆಂದು ಹೇಳುವುದಾದರೆ ಅಂಥಹ ಶಾಲಾ ಮುಖ್ಯಸ್ಥರನ್ನು ಜೈಲಿಗೆ ಹಾಕುತ್ತೇವೆ, ಫೈನ್ ಹಾಕುತ್ತೇವೆ ಎಂದು ಮುಂತಾಗಿ ಘೋಷಣೆಗಳನ್ನು ಹೇಳಿಕೆಗಳನ್ನು ಪತ್ರಿಕೆಗಳಲ್ಲಿ ಹೇಳಿದರು. ಎಲ್ಲಾ ವಿದ್ಯಾಧಿಕಾರಿಗಳೂ ಕೂಡ ಅನಧಿಕೃತ ಶಾಲೆಗಳ ಬಗ್ಗೆ ಒಂದು ಪಟ್ಟಿಯನ್ನು ಮಾಡಿ ಹೇಳಿದರು. ನಾನು ಒಂದು ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ಕಳೆದ 2-3 ತಿಂಗಳ ಹಿಂದೆ ಮಾನ್ಯ ಗೋವಿಂದೇಗೌಡರು ಅನಧಿಕೃತ ಶಾಲೆಗಳ ಬಗ್ಗೆ ಪತ್ರಿಕೆಗಳಲ್ಲಿ ಏನು ಪ್ರಕಟ ಮಾಡಿದ್ದರು ಅದನ್ನು 4 ವರ್ಷಗಳ ಹಿಂದೆಯೇ ನಮ್ಮ ಶಿಕ್ಷಣ ಮಂತ್ರಿಗಳಾಗಿದ್ದ ಮಾನ್ಯ ವೀರಪ್ಪಮೊಯ್ಲಿಯವರೂ ಹೇಳಿದ್ದರು. ಅನಂತರ ಬಂದ ಎಲ್ಲಾ ಮಂತ್ರಿಗಳೂ ಕೂಡ ಏಪ್ರಿಲ್-ಮೇ ತಿಂಗಳು ಬಂದಾಗ ಏನು ಹೇಳುತ್ತಾ ಬಂದರು ಎಂದರೆ ಅನಧಿಕೃತ ಶಾಲೆಗಳನ್ನು ನಾವು ಮುಚ್ಚುತ್ತೇವೆ, ನೀವು ಆ ಶಾಲೆಗಳಿಗೆ ಮಕ್ಕಳನ್ನು ಕಳುಹಿಸಬಾರದು ಎಂದು. ಆಯಿತು ತಮ್ಮ ಪ್ರಕಾರವೇ ಅನಧಿಕೃತ ಶಾಲೆಗಳನ್ನೆಲ್ಲಾ ಮುಚ್ಚಿಬಿಡೋಣ. ಈ ರಾಜ್ಯದಲ್ಲಿ ಇವತ್ತು ಸುಮಾರು 3 ಸಾವಿರಕ್ಕೂ ಹೆಚ್ಚು ಅನಧಿಕೃತ ಶಾಲೆಗಳಿವೆ. ಇಲ್ಲಿ ಕಲಿಯುತ್ತಿರುವಂಥ ವಿದ್ಯಾರ್ಥಿಗಳ ಸಂಖ್ಯೆ 15 ಲಕ್ಷಕ್ಕೂ ಜಾಸ್ತಿ ಇದೆ.

15-20 ಸಾವಿರ ಉಪಾಧ್ಯಾಯರು ಈ ಸಂಸ್ಥೆಗಳಲ್ಲಿ ದುಡಿಯುತ್ತಿದ್ದಾರೆ. ಇಂಥಹ ಶಾಲೆಗಳನ್ನು ಮುಚ್ಚುತ್ತೇವೆಂದು ಹೇಳುತ್ತಿದ್ದೀರಿ. ಒಂದು ಮಾತನ್ನು ಹೇಳುವುದಾದರೆ ಭಾಷಾ ಮಾಧ್ಯಮದ ವಿಚಾರದಲ್ಲಿ ಇದುವರೆಗೂ ಯಾವುದೇ ಒಂದು ಖಚಿತವಾದ ತೀರ್ಮಾನವನ್ನು ಸರ್ಕಾರ ತೆಗೆದುಕೊಂಡಿಲ್ಲ. ಒಂದು ವೇಳೆ ತಾವು ಈ ಶಿಕ್ಷಣ ಸಂಸ್ಥೆಗಳನ್ನು ಮುಚ್ಚುವುದಾದರೆ ಇದಕ್ಕೆ ಪರ್ಯಾಯ ವ್ಯವಸ್ಥೆ ಏನು? ಇವತ್ತು ಈ ರಾಜ್ಯಸರ್ಕಾರದಲ್ಲಿ ಪ್ರಾಥಮಿಕ ಶಾಲೆಗಳಿಗೆ ಕೊಡುವಂಥ ಸವಲತ್ತುಗಳು ಏನಿವೆ

ಅವುಗಳ ಪೈಕಿ ಮೊದಲನೆಯದು ಒಂದು ಶಾಲಾ ಕೊಠಡಿಯ ನಿರ್ಮಾಣದ ಬಗ್ಗೆ ಯೋಚನೆ ಮಾಡುವುದಾದರೆ 25 ಸಾವಿರ ರೂ.ಗಳನ್ನು ಸರ್ಕಾರ ಒದಗಿಸುವುದಕ್ಕೆ ಸಿದ್ಧವಾಗಿದೆ. ಉಳಿದ ಹಣವನ್ನು ಹೇಗೆ ಕ್ರೋಢೀಕರಿಸಬೇಕು? ಇವತ್ತು ಒಂದು ಶಾಲಾಕೊಠಡಿ ಆಗಬೇಕಾದರೆ ಕನಿಷ್ಠ ಪಕ್ಷ 1 ಲಕ್ಷ ರೂ. ಆದರೂ ಬೇಕಾಗುತ್ತದೆ. ಉಳಿದ ಹಣವನ್ನು ಆ ಶಾಲೆಯ ಅಧ್ಯಾಪಕರೂ, ಮಕ್ಕಳ ಪೋಷಕರು, ಎಲ್ಲ ಕೂಡಿಕೊಂಡು ಕಾಡಿ ಬೇಡಿ ಕಟ್ಟಡವನ್ನು ಕಟ್ಟಬೇಕಾಗುತ್ತದೆ. ತಮಗೆ ಒಂದು ಸಣ್ಣ ಉದಾಹರಣೆ ಕೊಡುವುದಾದರೆ, ನನ್ನ ಕ್ಷೇತ್ರವಾದ ಉಡುಪಿಯಲ್ಲಿ ಸುಮಾರು 15-20 ಸರ್ಕಾರೀ ಪ್ರಾಥಮಿಕ ಶಾಲೆಗಳಿವೆ. ಆ ಪೈಕಿ ಸುಮಾರು 10-15 ಶಾಲೆಗಳಿಗೆ ಕೊಠಡಿಗಳ ಅವಶ್ಯಕತೆ ಇದೆ. ಪ್ರತಿಯೊಂದು ಶಾಲೆಗೂ ಬೆಟರ್‌ಮೆಂಟ್ ಕಮಿತಿಯ ಅಧ್ಯಕ್ಷರನ್ನಾಗಿ ಆ ಶಾಸಕರನ್ನು ನಿಯುಕ್ತಿ ಮಾಡತಕ್ಕದ್ದು ಸರ್ಕರದ ಪದ್ಧತಿ. ಇವತ್ತು ಪ್ರತಿಯೊಂದು ಶಾಲೆಗೂ ನಾವು ಭೇಟಿಕೊಟ್ಟು ನೋಡಿದರೆ ನಮಗೆ ಶಾಲೆ ಕೊಠಡಿ ಇಲ್ಲ, ವಿದ್ಯಾರ್ಥಿಗಳು ಕುಳಿತುಕೊಳ್ಳುವುದಕ್ಕೆ ಬೆಂಚು ಕುರ್ಚಿ ಇಲ್ಲ, ಅಧ್ಯಾಪಕರಿಲ್ಲ ಎಂಬುದು ಕಂಡುಬರುತ್ತದೆ. ಮಾನ್ಯ ಸದಸ್ಯರಾದ ಚಿತ್ತರಂಜನ್‌ರವರು ಶಿಕ್ಷಣ ನೀತಿಯ ಬಗ್ಗೆ ಬಹಳ ಚೆನ್ನಾಗಿ ಮಾತನಾಡಿದರು. 400 ಮಕ್ಕಳಿಗೆ 4 ಜನ ಅಧ್ಯಾಪಕರು, 300 ಮಕ್ಕಳಿಗೆ 3 ಅಧ್ಯಾಪಕರು, ಇದ್ದಾರೆಂದು ಹೇಳಿದರು. ಇಂಥ ಸಂದರ್ಭದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಸರಿಯಾದ ರೀತಿಯಲ್ಲಿ ಕೊಡುವುದಕ್ಕೆ ನಮಗೆ ಸಾಧ್ಯವಾಗಿಲ್ಲ. ಇದು ಈ ಸರ್ಕಾರ ಅಷ್ಟೇ ಅಲ್ಲ ಹಿಂದಿನ ಸರ್ಕಾರ ಕೂಡ ಮಾಡಿದ್ದುದು ಇದೇ ಕೆಲಸ. ಅದೇ ಪದ್ಧತಿಯನ್ನೇ ಈ ಸರ್ಕಾರವೂ ಮುಂದುವರೆಸಿಕೊಂಡು ಹೋಗುತ್ತಿದೆ.

ಇದಕ್ಕೆ ಯಾವುದೇ ಪರ್ಯಾಯ ವ್ಯವಸ್ಥೆಯನ್ನೂ ಈ ಸರ್ಕಾರ ಸೂಚನೆ ಮಾಡಲಿಲ್ಲ. ಈ ಅನಧಿಕೃತ ಆಂಗ್ಲ ಮಾಧ್ಯಮ ಶಾಲೆಗಳ ಬಗ್ಗೆ ವಿಚಾರ ಮಾಡಬೇಕಾಗಿದೆ. ಇವತ್ತು ಕನ್ನಡದ ಬಗ್ಗೆ ನಾವೆಲ್ಲಾ ಸಾಕಷ್ಟು ಹೋರಾಟ ಮಾಡುತ್ತಿದ್ದೇವೆ. ಕನ್ನಡ ಶಾಲೆಗಳು ನಮಗೆ ಬೇಕೇಬೇಕು. ಸಾರ್ವಜನಿಕರ ದೃಷ್ಟಿಯಿಂದ ನಾವು ಇದನ್ನು ನೋಡಿದರೆ, ಶಾಸಕರಾದ ನಮಗೆ ಇಲ್ಲಿರುವ ಕ್ಯಾಂಟೀನ್‌ನಲ್ಲಿ ಕೊಡುತ್ತಿರುವ ಊಟ ತಿಂಡಿ ಚೆನ್ನಾಗಿಲ್ಲವೆಂದು ಕಾಮತ್ ಹೋಟೆಲ್‌ನವರನ್ನು ಇಲ್ಲಿಗೆ ಕರೆಯಿಸಿಕೊಂಡಿದ್ದೇವೆ. ಇನ್ನೂ ಕೆಲವರು ಅಶೋಕ ಹೋಟೆಲ್‌ಗೆ ಹೋಗಬಹುದು, ಉಡ್‌ಲ್ಯಾಂಡ್ಸ್‌ಗೆ ಹೋಗಬಹುದು. ಮೂಲಭೂತವಾಗಿ ಸೌಕರ್ಯವನ್ನುಈ ಆಹಾರ ನಮಗೆ ಒದಗಿಸುತ್ತದೆಯೋ ಅದೇ ರೀತಿ ನಮ್ಮ ಮಕ್ಕಳು ಒಳ್ಳೆಯ ವಿದ್ಯಾಭ್ಯಾಸ ಪಡೆಯಬೇಕೆಂಬ ಉದ್ದೇಶದಿಂದ ಸರ್ಕಾರಿ ಶಾಲೆಗಳಲ್ಲಿ ಇರತಕ್ಕ ಶಿಕ್ಷಣ ಪದ್ಧತಿ ಸರಿಯಿಲ್ಲ ಎನ್ನತಕ್ಕ ಕಾರಣದಿಂದಾಗಿ ಇವತ್ತು ಖಾಸಗೀ ವಲಯದ ಶಿಕ್ಷಣ ಸಂಸ್ಥೆಗಳು ಬೆಳೆದುಬರುವುದಕ್ಕೆ ಅವಕಾಶವಾಗಿದೆ. ಈ ಸರ್ಕಾರದಿಂದ ಸಾರ್ವಜನಿಕರಿಗೆ ಅವಶ್ಯಕವಾಗಿ ಬೇಕಾದಂಥ ಮೂಲಭೂತ ಸೌಕರ್ಯಗಳನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಇಂತಹ ಸಂದರ್ಭದಲ್ಲಿ ಖಾಸಗೀ ವಲಯದವರಿಗೆ ಅನುಮತಿ ಕೊಟ್ಟಿದ್ದರ ಬಗ್ಗೆ ನಾವು ಅಸೂಯೆಯನ್ನು ವ್ಯಕ್ತಪಡಿಸಿ ಏನು ಪ್ರಯೋಜನ? ಇದರ ಬಗ್ಗೆ ಒಂದು ನಿರ್ಧಾರಕ್ಕೆ ಬನ್ನಿ. ಇವತ್ತು ನಮ್ಮ ರಾಜ್ಯದಲ್ಲಿ 3000 ಅನಧಿಕೃತ ಆಂಗ್ಲ ಮಾಧ್ಯಮ ಶಾಲೆಗಳು ಇವೆ ಎನ್ನುವುದಾರೆ ಪ್ರತಿವರ್ಷ ಶಿಕ್ಷಣ ಮಂತ್ರಿಗಳು ಹೇಳಿಕೆ ಕೊಡುವುದು, ವಿದ್ಯಾಧಿಕಾರಿಗಳು ಪತ್ರಿಕೆಗಳಲ್ಲಿ ಹೇಳಿಕೆಗಳನ್ನು ಕೊಡುವುದು ಇದರಿಂದ ಏನು ಪ್ರಯೋಜನ? ಯಾವುದಾದರೊಂದು ಹೊಸ ರಚನಾತ್ಮಕ ನೀತಿಯನ್ನು ಈ ಹೊಸ ಸರ್ಕಾರದವರು ಹಾಕಿಕೊಳ್ಳಿ. ಈ 3 ಸಾವಿರ ಅನಧಿಕೃತ ಶಾಲೆಗಳನ್ನು ಏನು ಮಾಡುತ್ತೀರಿ? ನಾವು ಇವಕ್ಕೆ ಮಾನ್ಯತೆ ಮಾಡುತ್ತೇವೆ ಎಂದು ಹೇಳಿ, ಇಲ್ಲದಿದ್ದರೆ ಇಲ್ಲ ಎಂದು ಸ್ಪಷ್ಟವಾಗಿ ಹೇಳಿ.

ಈ ಶಾಲೆಗಳನ್ನು ಬಂದ್ ಮಾಡುವುದಕ್ಕೆ ಆಗದೆ, ಮುಂದುವರೆಸುವುದಕ್ಕೂ ಆಗದೇ ಇರತಕ್ಕ ಪರಿಸ್ಥಿತಿಯಲ್ಲಿ ತೆಗೆದುಕೊಂಡು ಹೋಗುತ್ತಿದ್ದೀರಿ. ಇನ್ನೊಂದು ವಿಚಾರ

ಹೇಳುವುದಾದರೆ, ಶಾಸಕರ ಭವನದಲ್ಲಿ ಶಾಸಕರಿಗೆ ಸರಿಯಾಗಿ ಕೂತುಕೊಳ್ಳಲು ಸ್ಥಳಾವಕಾಶ ಇಲ್ಲ ಎಂಬ ಕಾರಣದಿಂದ 3 ಕೋಣೆಗಳಿದ್ದುದನ್ನು 2 ಕೋಣೆಗಳಾಗಿ ಪರಿವರ್ತನೆ ಮಾಡುತ್ತಿದ್ದೇವೆ. ಆದರೆ ಅದೇ ನಮ್ಮನ್ನು ಅಲ್ಲಿ ಕೂತುಕೊಳ್ಳುವುದಕ್ಕಾಗಿ ಆರಿಸಿ ಕಳುಹಿಸಿದಂಥ ಆ ಜನಸಾಮಾನ್ಯರ ಮಕ್ಕಳು ವಿದ್ಯಾರ್ಜನೆಗೆ ಹೋಗಬೇಕಾದರೆ ಅಲ್ಲಿರತಕ್ಕ ಸೌಲಭ್ಯಗಳೇನು ಎಂಬುದರ ಬಗ್ಗೆ ನಾವು ವಿಮರ್ಶೆ ಮಾಡದಿದ್ದರೆ ಹಿಂದಿನ ಸರ್ಕಾರಗಳು ಮಾಡಿದಂಥ ಕೆಲಸವನ್ನೇ ಈ ಸರ್ಕಾರವೂ ಮುಂದುವರೆಸಿಕೊಂಡು ಹೋಗುವುದಾದರೆ, ನಾವು ಹೊಸತನವನ್ನು ಎಲ್ಲಿ ಕಾಣುತ್ತಿದ್ದೇವೆಂದು ಯೋಚನೆ ಮಾಡಬೇಕು. ಹೊಸ ಶಿಕ್ಷಣ ನೀತಿಯ ಬಗ್ಗೆ ನಾವೆಲ್ಲಾ ಬಹಳಷ್ಟು ರೀತಿಯಲ್ಲಿ ಮಾತನಾಡುತ್ತಿದ್ದೇವೆ. ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರೂಪಿಸಬೇಕೆಂಬ ಬಗ್ಗೆ ನಾವೆಲ್ಲಾ ಸಾಕಷ್ಟು ಮಾತನಾಡುತ್ತಾ ಬರುತ್ತಿದ್ದೇವೆ. ಇಲ್ಲಿ ನಾವು ನಿರ್ಧಾರ ಮಾಡಬೇಕಾದುದು ಇಷ್ಟೆ. ಈ ಅಧಿವೇಶನ ಅಲ್ಲದಿದ್ದರೆ, ಮುಂದಿನ ಅಧಿವೇಶನದಲ್ಲಾಗಲಿ ಏನಾದರೊಂದು ತೀರ್ಮಾನ ತೆಗೆದುಕೊಳ್ಳಬೇಕು. ಆಂಗ್ಲ ಮಾಧ್ಯಮ ಶಾಲೆಗಳ ಬಗ್ಗೆ ಒಂದು ನಿರ್ದಿಷ್ಟವಾದ ಕಾಯಿದೆಯನ್ನು ಜಾರಿಗೆ ತನ್ನಿ. ಅವುಗಳಿಗೆ ರೆಕಗ್ನಿಷನ್ ಕೊಡುವುದಾದರೆ ಕೊಡಿ, ಇಲ್ಲವಾದರೆ ಬೇಡ. ಒಂದು ಶಾಲೆಯನ್ನು, ಒಂದು ಕಾಲೇಜನ್ನು ಸ್ಥಾಪನೆ ಮಾಡಬೇಕಾದರೆ ಆ ಸಂಸ್ಥಾಪಕರಿಂದ ನಿರ್ದಾಕ್ಷಿಣ್ಯವಾಗಿ ನೀವು ಬರೆಸಿಕೊಳ್ಳುತ್ತಿದ್ದೀರಿ. ನಾವು ಯಾವುದೇ ರೀತಿಯಲ್ಲೂ ನಿಮ್ಮ ಸರ್ಕಾರದಿಂದ ಅನುದಾನವನ್ನು ಪಡೆಯುವುದಿಲ್ಲ ಎಂದು ಅವರು ಬರೆದುಕೊಟ್ಟರೂ ಕೂಡ ಅವರಿಗಿರತಕ್ಕ ಅವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ನಿಮಗೆ ಸಾಧ್ಯವಿಲ್ಲ ಎನ್ನುವುದಾದರೆ ಇನ್ನೆಷ್ಟು ವರ್ಷಗಳ ಕಾಲ ಈ ಅನಧಿಕೃತ ಶಾಲೆಗಳು ಅನಧಿಕೃತವಾಗಿಯೇ ಮುಂದುವರೆಯಬೇಕು?

ಶ್ರೀ ಡಿ. ಮಂಜುನಾಥ್ : ಮಾನ್ಯ ಉಪಾಧ್ಯಕ್ಷರೆ ತಮಗೆ ಗೊತ್ತಿದೆ. ಇಡೀ ಸಮಾಜಕ್ಕೇ ಈ ಸರ್ಕಾರ ವಿದ್ಯಾಭ್ಯಾಸವನ್ನು ಕೊಡುವುದಕ್ಕಾಗುವುದಿಲ್ಲ, ಅದಕ್ಕಾಗಿ ಖಾಸಗೀ ವಿದ್ಯಾ ಸಂಸ್ಥೆಗಳಿಗೆ ಅನುಮತಿಯನ್ನು ಸರ್ಕಾರ ಕೊಡುತ್ತಿದೆ. ಕೆಲವು ಖಾಸಗಿ ಸಂಸ್ಥೆಗಳು ಬಹಳ ಚೆನ್ನಾಗಿ ನಡೆಯುತ್ತಿವೆ. ಆದರೆ ಖಾಸಗಿಯವರು ಅನಧಿಕೃತವಾಗಿ ಏನು ಶಾಲೆಗಳನ್ನು ನಡೆಸುತ್ತಿದ್ದಾರೆ ಅಂಥವರ ವಿರುದ್ಧ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ. ತಮಗೆ ಒಂದು ಉದಾಹರಣೆ ಹೇಳುವುದಾದರೆ, ಟಿ.ಸಿ.ಹೆಚ್. ಮತ್ತು ಬಿ.ಎಡ್. ಕಾಲೇಜುಗಳನ್ನು ಬಹಳಷ್ಟು ಕಡೆಗಳಲ್ಲಿ ಅನಧಿಕೃತವಾಗಿ ನಡೆಸುತ್ತಿದ್ದರು. ಈ ರೀತಿ ಅನಧಿಕೃತ ಶಾಲೆಗಳನ್ನು ಪ್ರಾರಂಭ ಮಾಡಬಾರದೆಂಬುದು ಸರ್ಕಾರದ ಉದ್ದೇಶ. ಖಾಸಗಿಯವರಿಗೆ ಅನುಮತಿ ಕೊಡಬಾರದೆಂಬ ಉದ್ದೇಶ ನಮ್ಮದಲ್ಲ. ಅನಧಿಕೃತ ಕಾಲೇಜುಗಳನ್ನು ಸಕ್ರಮಗೊಳಿಸಿ ಮುಂದುವರೆಸಬೇಕೆಂದರೆ ಅದು ಬಹಳ ಕಷ್ಟವಾಗುತ್ತದೆಂಬ ಅಂಶವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಯು.ಆರ್. ಸಭಾಪತಿ : ಖಾಸಗಿ ಶಾಲೆಗಳ ಬಗ್ಗೆ ತಮ್ಮ ನಿರ್ಧಾರ ಏನೆಂಬುದನ್ನು ಮಾನ್ಯ ಮಂತ್ರಿಗಳು ಹೇಳಿದರು. ಖಾಸಗಿ ಶಾಲೆಗಳಿಗೆ ಕೊಡುತ್ತೇವೆಂದು ಹೇಳುತ್ತಿದ್ದೀರಿ. ಕನ್ನಡ ಮಾಧ್ಯಮ ಶಾಲೆಗಳಿಗೆ ತಾವು ಅನುಮತಿ ಕೊಡುತ್ತಿದ್ದೀರಿ. ಇಲ್ಲವೆಂದು ನಾನು ಹೇಳುವುದಿಲ್ಲ, ಈಗಾಗಲೇ ಇರತಕ್ಕ ಸುಮಾರು 3 ಸಾವಿರ ಆಂಗ್ಲ ಮಾಧ್ಯಮ ಶಾಲೆಗಳು ಕಳೆದ 5-16-15 ವರ್ಷಗಳಿಂದ ಅನಧಿಕೃತವಾಗಿ ನಡೆದುಕೊಂಡು ಬರುತ್ತಿವೆ. ನಾವು ಏನೇ ಕೇಳಿದರೂ ಅದು ಪಾಲಿಸಿ ಮ್ಯಾಟರ್. ಅದು ಇನ್ನೂ ಡಿಸೈಡ್ ಆಗಬೇಕೆಂದು ಹೇಳುತ್ತಿದ್ದೀರಿ. ಇದರ ಬಗ್ಗೆ ತಾವು ಏನು ಹೇಳುತ್ತೀರೆಂಬುದು ನಮಗೆ ಬೇಕು. ಪ್ರತಿವರ್ಷವೂ ಈ ಶಾಲೆಗಳು ಅನಧಿಕೃತ ಶಾಲೆಗಳೆಂದು ಎ.ಇ.ಓ.ಗಳಿಂದ ಪತ್ರಿಕೆಗಳಲ್ಲಿ ಪ್ರಕಟಗೊಳಿಸುತ್ತಿದ್ದೀರಲ್ಲವೇ? ಇವಕ್ಕೆ ಮುಕ್ತಾಯ ಎಂದು? ಅವರು ಏನು ಮಾಡಬೇಕು?

ಶ್ರೀ ಡಿ. ಮಂಜುನಾಥ್ : ಕನ್ನಡದಲ್ಲಿ ಶಾಲೆಗಳನ್ನು ತೆರೆದರೆ ಏನೂ ತೊಂದರೆ ಇಲ್ಲ, ಇದು ಸರ್ಕಾರದ ನೀತಿ. ಆದರೆ ಇಂಗ್ಲೀಷ್ ಶಾಲೆಗಳನ್ನು ಮಾಡಬಾರದು ಎಂಬುದು ನಮ್ಮ ಉದ್ದೇಶ. ಕನ್ನಡದ ಎಲ್ಲಾ ಅಭಿಮಾನಿಗಳೂ ಕೂಡ ನಮಗೆ ಕನ್ನಡ ಶಾಲೆಗಳು ಬೇಕು, ಆಂಗ್ಲ ಮಾಧ್ಯಮ ಶಾಲೆಗಳು ಬೇಡ ಎಂದು ಹೇಳುತ್ತಿದ್ದಾರೆ. ಆದರೆ ಇಂಗ್ಲೀಷ್ ಮೀಡಿಯಂ ಶಾಲೆಗಳನ್ನು ಬೀದಿ ಬೀದಿಗಳಲ್ಲಿ ತೆರೆದು ಸೇಂಟ್ ಜೋಸೆಫ್ ಇಂಗ್ಲೀಷ್ ಸ್ಕೂಲ್ ಎಂದು ಬೋರ್ಡ್ ಹಾಕಿಕೊಳ್ಳುವುದಕ್ಕೆ ಸರ್ಕಾರ ಅವಕಾಶ ಕೊಡುವುದಿಲ್ಲವೆಂದು ತಮ್ಮ ಮೂಲಕ ಹೇಳಬಯಸುತ್ತೇನೆ.

ಶ್ರೀ ಯು.ಆರ್. ಸಭಾಪತಿ : ನೀವು ಕೊಡುವುದಿಲ್ಲ ಎಂಬ ಬಗ್ಗೆ ನಾನು ಏನೂ ಮಾತನಾಡಲಿಲ್ಲ, ಆದರೆ ಕಳೆದ 10-15 ವರ್ಷಗಳಿಂದ ಅಸ್ತಿತ್ವದಲ್ಲಿರತಕ್ಕ ಆಂಗ್ಲ ಮಾಧ್ಯಮ ಶಾಲೆಗಳ ಬಗ್ಗೆ ತಾವು ಏನು ಮಾಡುತ್ತೀರೆಂಬ ಬಗ್ಗೆ ನಾನು ತಮ್ಮನ್ನು ಕೇಳುತ್ತಿದ್ದೇನೆ. ಅದಕ್ಕೆ ಪರ್ಯಾಯವಾಗಿ ಯಾವ ಶಾಲೆಗಳನ್ನು ಮಾಡುತ್ತೀರಿ?

ಶ್ರೀ ಹೆಚ್.ಸಿ. ಬಾಲಕೃಷ್ಣ : ಸುಮಾರು ವರ್ಷಗಳಿಂದ ಅನಧಿಕೃತ ಟಿ.ಸಿ.ಹೆಚ್. ಕಾಲೇಜ್‌ಗಳನ್ನು ಮತ್ತು ಬಿ.ಎಡ್.ಕಾಲೇಜುಗಳನ್ನು ಮುಚ್ಚುತ್ತೇವೆಂದು ಘೋಷಣೆಯನ್ನು ಮಾಡಿದ್ದರೂ ಕೂಡ ಇದುವರೆಗೆ ಯಾವುದೇ ಒಂದು ನಿರ್ಧಾರ ಬಂದಿಲ್ಲ, ಅನಧಿಕೃತವಾದಂತಹ ಈ ರೀತಿಯಾದಂತಹ ಕಾಲೇಜುಗಳನ್ನು ಅಧಿಕೃತ ಮಾಡುತ್ತೇವೆಂದು ಮಂತ್ರಿಗಳು ಹೇಳಿದರು. ಹಿಂದಿನ ಸರ್ಕಾರವಾದರೂ ಕೂಡ ಯಾವುದೇ ನಿರ್ಧಾರವನ್ನು ತೆಗೆದುಕೊಂಡಿಲ್ಲ, ಆದ್ದರಿಂದ ದಯಮಾಡಿ ಈ ಸರ್ಕಾರವಾದರೂ ಕೂಡ ಅದರ ಬಗ್ಗೆ ತಕ್ಷಣ ಗಮನ ಹರಿಸಿ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎನ್.ಆರ್. ಲಕ್ಷ್ಮಯ್ಯ : ಮಾನ್ಯ ಅಧ್ಯಕ್ಷರೇ, ಸರ್ಕಾರದ ಒಂದು ನಿಲುವು ಶ್ರೀ ಯು.ಆರ್. ಸಭಾಪತಿಯವರು ಬಹಳ ಪ್ರಸ್ತಾಪ ಮಾಡುತ್ತಿದ್ದಾರೆ. 10 ವರ್ಷಗಳಿಂದ ಮಾಡಿಕೊಂಡು ಬಂದಿರುವ ಪಾಪವನ್ನು ನಾನು ತೀರಿಸುವುದಕ್ಕೆ ಆಗುತ್ತದೆಯೇ ಸಮಾಧಾನದಿಂದ ಕೇಳಬೇಕು.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೇ, ನೀವು ಪಾಪ ಪುಣ್ಯಕ್ಕೆ ಹೋಗಿದ್ದೀರಿ ಲಕ್ಷ್ಮಯ್ಯನವರೇ, ಇಲ್ಲಿ ನಾವು ಪಾಪವನ್ನು ಮಾಡುತ್ತಿದ್ದೇವೆ.

(ಗೊಂದಲ)

ಶ್ರೀ ಯು.ಆರ್. ಸಭಾಪತಿ : ನಾನು ಏನು ಹೇಳುತ್ತಿದ್ದೇನೆಂದರೆ, ನಮಗೆ ಒಂದು ನೀತಿ ಬೇಕು. ನಾವು ಇಲ್ಲಿ ಪಾಪವನ್ನೇ ಮಾಡಲಿಕ್ಕೆ ಬಂದಿದ್ದೇವೆ ಎಂದು ಹೇಳಿದರೆ ಇಲ್ಲಿ ತಪ್ಪಾಗಲಿಕ್ಕಿಲ್ಲ. ಹಿಂದಿನವರು ಮಾಡಿರುವ ಪಾಪವನ್ನು ನಾವು ಹೊತ್ತುಕೊಂಡು ಹೋಗಬೇಕು ಎಂದು ಹೇಳುತ್ತೀರಿ? ಅದನ್ನು ನೀವು ಹೊತ್ತುಕೊಂಡು ಹೋಗುತ್ತಿದ್ದೀರಿ ಈಗ. ಅವರನ್ನು ಮಾಡು ಎಂದು ಹೇಳುವ ಪ್ರಶ್ನೆ ಇಲ್ಲ, ಈಗ ಪ್ರಶ್ನೆ ಏನು ಎಂದು ಹೇಳಿದರೆ, ಹೊಸ ಸರ್ಕಾರ ಬಂದಮೇಲೆ ಒಂದು ಹೊಸ ನೀತಿ ಪ್ರಕಟವಾಗಬೇಕು, ನಿಮ್ಮ ನಿಲುವು ಏನು? ಈ ಆಂಗ್ಲ ಶಾಲೆಗಳ ಬಗ್ಗೆ ಇವತ್ತು ನಿಮಗೆ ಒಂದು ನಿಲುವು ಬೇಕು. ಇವತ್ತು ಕನ್ನಡದ ಬಗ್ಗೆ ಒಂದು ಅನುಕಂಪ ಬೇಕೇಬೇಕು ಆದರೆ ಈಗಾಗಲೇ....

ಮಾನ್ಯ ಸದಸ್ಯರು : ಶ್ರೀ ವಾಟಾಳ್ ನಾಗರಾಜ್‌ರವರು ಬಂದಮೇಲೆ ನಿಲುವು ಹೇಳುತ್ತಾರೆ.

ಶ್ರೀ ಯು.ಆರ್. ಸಭಾಪತಿ : ಅದು ವಾಟಾಳ್ ನಾಗರಾಜ್‌ರವರ ನಿಲುವು, ನನಗೆ ಸರ್ಕಾರದ ನಿಲುವು ಏನು ಎನ್ನುವುದು ಬೇಕು. ಉನ್ನತ ಶಿಕ್ಷಣದ ಬಗ್ಗೆ ಹೇಳುವುದಾದರೆ ಇವತ್ತು ಸರ್ಕಾರಿ ಕಾಲೇಜುಗಳನ್ನೆಲ್ಲವನ್ನು ನೀವು ನಿರೂಪಿಸಿದ್ದೀರಿ.

ನಮ್ಮ ಉಡುಪಿಗೆ ಒಂದು ಕಾಲೇಜನ್ನು ಕೆಲವು ವರ್ಷಗಳ ಹಿಂದೆ ಕೊಟ್ಟಿದ್ದೀರಿ. ಏನು ಮಾಡಿದ್ದೀರಿ, ಒಂದು ಕಾಲೇಜು, ಒಬ್ಬ ಪ್ರಾಂಶುಪಾಲರು, 300 ಮಕ್ಕಳಿಗೆ ಒಬ್ಬ ಪ್ರಾಂಶುಪಾಲರು, ಅದಕ್ಕೆ

4.30 ಪಿ.ಎಂ.

ಕಟ್ಟಡವಿಲ್ಲ, ಅದಕ್ಕೆ ನಿವೇಶನವಿಲ್ಲ, ಗ್ರಂಥಾಲಯವಿಲ್ಲ, ಪ್ರಯೋಗ ಶಾಲೆ ಇಲ್ಲ. ನೀವು ಕಾಲೇಜು ಮಾಡಿ. ನಾವು ಮಾಡಿದ್ದೇವೆ. ಎಲ್ಲೋ ಶಾಲೆಯ ಮೂಲೆಯಲ್ಲಿ ಕುಳಿತುಕೊಂಡು ಯಾವುದೋ ಕೊಠಡಿಯಲ್ಲಿ ಕುಳಿತುಕೊಂಡು ಆ ಶಾಲೆಯನ್ನು ಮಾಡಿ ಮೂರು ವರ್ಷಗಳಾಯಿತು. 300 ವಿದ್ಯಾರ್ಥಿಗಳಿದ್ದಾರೆ. ಈ ವರ್ಷ ಹೊಸ ಸರ್ಕಾರ ಬಂದಮೇಲೆ ಒಂದೆರಡು ಅಧ್ಯಾಪಕರನ್ನು ಕಳುಹಿಸುವುದರಲ್ಲಿ ಯಶಸ್ವಿಯಾಗಿದ್ದೇನೆ. ಇವತ್ತು ಶಿಕ್ಷಣ ನೀತಿಯ ಬಗ್ಗೆ ನಾವು ಏಕೆ ಇಷ್ಟು ಪರಿಶ್ರಮವನ್ನು ವ್ಯಕ್ತಪಡಿಸುವುದಿಲ್ಲ? ಇವತ್ತು ಡೀಮ್ಡ್ ಯೂನಿವರ್ಸಿಟಿಯ ಬಗ್ಗೆ ಮಣಿಪಾಲದ ಬಗ್ಗೆ ಮಾನ್ಯ ಮೊಯಿಲಿಯವರು, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಎಲ್ಲರೂ ಬಹಳಷ್ಟು ಮಾತನಾಡಿದರು, ಮಣಿಪಾಲ್‌ರು ಹಣಮಾಡಿದ್ದರು, ಖಾಸಗಿ ಸಂಸ್ಥೆಯವರು ಇಷ್ಟು ಹಣ ಮಾಡಿದ್ದರು, ಮಣಿಪಾಲ್ ಇರುವುದು ನನ್ನ ಕ್ಷೇತ್ರ. ಆ ಕ್ಷೇತ್ರದಲ್ಲಿ ಮಣಿಪಾಲ್‌ನ ಡಾ। ಟಿ.ಎಂ. ಮಹದೇವ ಪೈಗಳು 50 ವರ್ಷಗಳ ಹಿಂದೆ ಅಕಾಡೆಮಿ ಆಫ್ ಜನರಲ್ ಎಜ್ಯುಕೇಷನ್‌ನ್ನು ಸ್ಥಾಪನೆ ಮಾಡಿದರು. ಸಾರ್ವಜನಿಕರ ಎಲ್ಲರ ಸಹಕಾರ ಪಡೆದುಕೊಂಡು ಸಂಸ್ಥೆಯನ್ನು ಕಟ್ಟಿದರು. ಎಲ್ಲಾ ಜನರು ಡೊನೇಷನ್ ಕೊಟ್ಟಿದ್ದರಿಂದ ಅಲ್ಲಿ ಸಂಸ್ಥೆ ಬೆಳೆಯಿತು. ಇವತ್ತು ಸ್ವಾಮಿ ತಮಗೆ ಹೇಳುತ್ತಿದ್ದೇನೆ ಮಣಿಪಾಲದ ಈ ಸಂಸ್ಥೆಯ ಅಡಿಯಲ್ಲಿ 53 ಸಂಸ್ಥೆಗಳು, 15,000ಕ್ಕೂ ಹೆಚ್ಚು ಉದ್ಯೋಗಾವಕಾಶ, 35,000 ವಿದ್ಯಾರ್ಥಿಗಳಿಗೆ ವಿದ್ಯೆ ಕೊಡುವಂತಹ ಅಂತರ್ ರಾಷ್ಟ್ರೀಯ ಮಟ್ಟದ ಖ್ಯಾತಿಯ ಒಂದು ಸಂಸ್ಥೆಯಾಗಿ ಬೆಳೆದಿದೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದರು ಅವರಿಗೆ ಗೊತ್ತಿಲ್ಲ, 20,000 ಜನಸಂಖ್ಯೆ ಇರತಕ್ಕಂತಹ ಪ್ರದೇಶದಲ್ಲಿರುವ ಈ ಒಂದು ಸಂಸ್ಥೆಯನ್ನು ಈವತ್ತು ಡೀಮ್ಡ್ ಯೂನಿವರ್ಸಿಟಿಯನ್ನಾಗಿ ಮಾಡಿದ್ದಾರೆ ಎಂದು ಹೇಳಿದರೆ, ನಾನು ಹೇಳುತ್ತೇನೆ ಮಣಿಪಾಲ್ ಸಂಸ್ಥೆ ಕೇವಲ ಮಣಿಪಾಲ್‌ನಲ್ಲಿ ಮಾತ್ರ ಇರುವುದಿಲ್ಲ, ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಶಿಕ್ಷಣ ಮತ್ತು ಆರ್ಥಿಕ ಕ್ರಾಂತಿಯಾಗಿದ್ದರೆ ಇದು ಮಣಿಪಾಲ್ ವಿದ್ಯಾ ಸಂಸ್ಥೆಗಳ ಅಸ್ತಿತ್ವದಿಂದ ಆಗಿದೆ ದಕ್ಷಿಣ ಕನ್ನಡ ಜಿಲ್ಲೆ ಇಷ್ಟೊಂದು ಆರ್ಥಿಕ ಅಭಿವೃದ್ಧಿ ಹೊಂದಲಿಕ್ಕೆ ಆಯಿತು. ಇವತ್ತು ಮಣಿಪಾಲ್ ಸಂಸ್ಥೆಗಳಿಂದ ಮೂರು ನರ್ಸರಿ ಶಾಲೆಗಳು, 8 ಪ್ರಾಥಮಿಕ ಶಾಲೆಗಳು, 9 ಹೈಸ್ಕೂಲ್‌ಗಳು, 7 ಕಾಲೇಜುಗಳು, 1 ರೆಸಿಡೆನ್‌ಷಿಯಲ್ ಸ್ಕೂಲ್, 2 ಮೆಡಿಕಲ್ ಕಾಲೇಜುಗಳು, 1 ಇಂಜಿನಿಯರಿಂಗ್ ಕಾಲೇಜು, 1 ಲಾ ಕಾಲೇಜು, 1 ಫಾರ್ಮಸಿ, 2 ದಂತ ವೈದ್ಯಕೀಯ ಕಾಲೇಜು, 1 ನರ್ಸಿಂಗ್ ಕಾಲೇಜು, 1 ಮ್ಯಾನೇಜ್‌ಮೆಂಟ್ ಇನ್ಸ್‌ಟಿಟ್ಯೂಷನ್, ಆಮೇಲೆ 1 ಬಿ.ಎಡ್. ಕಾಲೇಜು, 1 ಪಾಲಿಟೆಕ್ನಿಕ್ ಕಾಲೇಜು, 3 ಅಂತರ ರಾಷ್ಟ್ರೀಯ ಖ್ಯಾತಿಯನ್ನು ಪಡೆದಿರುವ ಆಸ್ಪತ್ರೆ, ಇಷ್ಟು ದೊಡ್ಡ ಸಂಸ್ಥೆಯನ್ನು ನಿಮ್ಮ ಸರ್ಕಾರ ಮಾಡಬೇಕಾದರೆ ನಿಮಗೆ ಎಷ್ಟು ಕೋಟಿ ರೂ.ಗಳು ವ್ಯವಸ್ಥೆಯಾಗಬೇಕು. ಸರ್ಕಾರಿ ಆಡಳಿತದ ಕಾಲೇಜನ್ನು ನೋಡೋಣ. ಮಣಿಪಾಲದ ಒಂದು ಪ್ರಾಥಮಿಕ ಶಾಲೆಯಲ್ಲಿರತಕ್ಕಂತಹ ಸವಲತ್ತುಗಳನ್ನು ಸರ್ಕಾರದ ವತಿಯಿಂದ ಒಂದು ಪ್ರಾಥಮಿಕ ಶಾಲೆಗೆ ಕೊಡಲಿಕ್ಕೆ ಆಗುತ್ತದೆಯೋ ಎಂದು ಮೊದಲು ಆತ್ಮವಿಮರ್ಶೆ ಮಾಡೋಣ.

ನಮ್ಮ ಇಡೀ ಕರ್ನಾಟಕಕ್ಕೆ ರಾಜಧಾನಿಯಾದ ಬೆಂಗಳೂರಿನಲ್ಲಿ ಒಂದು ದಂತ ವೈದ್ಯಕೀಯ ಕಾಲೇಜು ಇದೆ. ಅವ್ಯವಸ್ಥೆ ಏನು? ಅಲ್ಲಿ ಏನು ನಡೆಯುತ್ತಿವೆ ನೋಡಿ.

ಸಂಜಯಗಾಂಧಿ ಅಪಘಾತ ಆಸ್ಪತ್ರೆ ಎಂದು ಒಂದು ಇಲ್ಲಿ ಬಂತು. ಇಲ್ಲಿ ನಮ್ಮ ಮಾನ್ಯ ಆರೋಗ್ಯ ಸಚಿವರ ನೇರ ಆಡಳಿತದಲ್ಲಿ ಹಸ್ತಕ್ಷೇಪ ಇರತಕ್ಕಂತಹ ಒಂದು ಸಂಸ್ಥೆ ಅಲ್ಲಿ, ಏನು ಅನ್ಯಾಯ ನಡೆಯುತ್ತಿದೆ, ಅಲ್ಲಿ ಏನು ಮೂಲಭೂತವಾದಂತಹ ಸೌಕರ್ಯ ಇದೆ, ನಮ್ಮ ಸರ್ಕಾರದಿಂದ ಏನಾದರೂ ಒಂದು ಸೌಕರ್ಯವನ್ನು ಒದಗಿಸಲಿಕ್ಕೆ ಸಾಧ್ಯವಾಗಿದೆಯೇ? ಮಣಿಪಾಲ್ ಸಂಸ್ಥೆಗಳವರನ್ನು ಸಿಕ್ಕಿಂ, ನೇಪಾಳ, ಮಲೇಷಿಯ ರಾಷ್ಟ್ರದವರು ಕರೆಸಿಕೊಂಡು ಅವರಿಗೆ ಹಣಕೊಟ್ಟು ನಮ್ಮಲ್ಲಿ ವಿದ್ಯಾ ಸಂಸ್ಥೆಗಳನ್ನು ಮಾಡಿ ಎಂದು ಆಹ್ವಾನ ಮಾಡುತ್ತಿದ್ದಾರೆ. ಕೇವಲ ಕರ್ನಾಟಕದಲ್ಲಿ ಮಾತ್ರ ಅಲ್ಲ ಇಡೀ ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಆ ವಿದ್ಯಾ ಸಂಸ್ಥೆಗಳು ಬೆಳಗಿ ಬಂದಿರುವುದಕ್ಕೆ ನಾವು ದ್ವೇಷ ಅಸೂಯೆಯನ್ನು ಮಾಡುತ್ತಿದ್ದೇವೆ. ನಾವು 10 ವರ್ಷಗಳ ಹಿಂದೆ ಬೆಂಗಳೂರಿನಿಂದ ಮಂಗಳೂರಿಗೆ ಹೋಗುವಾಗ ಒಂದು ಬೋಳುಗುಡ್ಡೆಯೊಂದು ಆದಿಚುಂಚನಗಿರಿಯಲ್ಲಿ ಇತ್ತು. ಕಳೆದ 10 ವರ್ಷಗಳ ನಂತರ ಇಲ್ಲಿ ಏನಾಗಿದೆ ಸ್ವಾಮಿ? ತಮಗೆ ಗೊತ್ತಿರುವ ಹಾಗೆ. ಅಲ್ಲಿ ಆದಿಚುಂಚನಗಿರಿ ಸ್ವಾಮೀಜಿಯವರು ಕಟ್ಟಿದ ಸಂಸ್ಥೆಯನ್ನು ನಾವಿಂದು ನೋಡುವಾಗ ನಮಗೆ ಅವರ ಬಗ್ಗೆ ಅಸೂಯೆ ಬರುತ್ತದೆ. ಅವರ ಬಗ್ಗೆ ಏಕೆ ಕೋರ್ಟಿಗೆ ಹೋಗಬೇಕು? ಸಾಧ್ಯವಾದರೆ ಒಂದು ನೀವೂ ತೆಗೆದುಕೊಳ್ಳಿ. ನಿಮ್ಮಲ್ಲಿ ತಾಕತ್ತು ಇದ್ದರೆ ನೀವೂ ತೆಗೆದುಕೊಳ್ಳಿ, ಯಾರು ಬೇಡ ಎಂದವರು. ನಿಮ್ಮ ಹತ್ತಿರ ಇರುವಂತಹ ಸಂಸ್ಥೆಗಳನ್ನು ನಡೆಸಿಕೊಂಡು ಬರಲಿಕ್ಕೆ ನಿಮಗೆ ಇಲ್ಲ, ಇನ್ನು ಖಾಸಗಿ ಸಂಸ್ಥೆಗಳಿಂದ ವಿದ್ಯಾವಂತರಾಗಬೇಕೆಂದಿರುವ ನಮ್ಮ ಮಕ್ಕಳು ಒಳ್ಳೆಯ ವಿದ್ಯೆಯನ್ನು ಪಡೆಯಬೇಕು ಅನ್ನುವ ದೃಷ್ಟಿಯಿಂದ ನಾವು ಕಳುಹಿಸುತ್ತಿದ್ದರೆ ನೀವು ಅದಕ್ಕೆ ಆಕ್ಷೇಪಣೆ ಮಾಡುತ್ತೀರಿ. ನೀವು ಈ ವಿಧಾನ ಸಭೆಯಲ್ಲಿ ಅವರ ಬಗ್ಗೆ ತಮಾಷೆ ಮಾಡಿಕೊಂಡು ಕುಳಿತುಕೊಳ್ಳುತ್ತೇವೆ ನಾವುಗಳು. ಇದು ಸಲ್ಲದು ಎಂಬುದು ನನ್ನ ಅಭಿಪ್ರಾಯ.

ಇನ್ನು ರಾಷ್ಟ್ರೀಯ ಶಿಕ್ಷಣ ನೀತಿಯ ಬಗ್ಗೆ ಹೇಳುವುದಾದರೆ....

ಶ್ರೀ ಎಲ್.ಆರ್. ಶಿವರಾಮೇಗೌಡ : ಮಣಿಪಾಲ್‌ದಲ್ಲಿರತಕ್ಕ ಮಣಿಪಾಲ್ ವಿದ್ಯಾ ಸಂಸ್ಥೆಯವರು ತೆಗೆದುಕೊಳ್ಳತಕ್ಕಂತಹ ಡೊನೇಷನ್‌ನ್ನು ಇಡೀ ರಾಷ್ಟ್ರದಲ್ಲಿ ಯಾವ ಸಂಸ್ಥೆಯೂ ತೆಗೆದುಕೊಳ್ಳುವುದಿಲ್ಲ. ಬಡ ಬೋರೇಗೌಡರು ಯಾರೂ ಕೂಡ ಮಣಿಪಾಲ್ ಆಸ್ಪತ್ರೆಗೆ ಹೋಗುವಂತಿಲ್ಲ, ಅವರ ಕಾಲೇಜು ಇರಲಿ, ಅವರ ಆಸ್ಪತ್ರೆ ಒಳಗಡೆಗೆ ಹೋಗುವ ಹಾಗೆ ಇಲ್ಲ. ಮುಂದೆ ಚರ್ಚೆ ಮಾಡುವುದು ಇಲ್ಲಿ....

ಶ್ರೀ ಯು.ಆರ್. ಸಭಾಪತಿ : ಸ್ವಾಮಿ, ಅವರು ತಿಳುವಳಿಕೆ ಇಲ್ಲದೇನೇ. ಮಾತನಾಡುತ್ತಿದ್ದಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ದಯವಿಟ್ಟು ತಾವು ಹೀಗೆ ಹೇಳಿಬಿಟ್ಟರೆ, ಈ ಬಗ್ಗೆ ಪ್ರತಿಭಟನೆ ಮಾಡಬೇಕಾಗುತ್ತದೆ. ದಯವಿಟ್ಟು ಆ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : ಇವತ್ತು ಚರ್ಚೆಯಾಗಲಿ, ಆದಿಚುಂಚನಗಿರಿ ಕಾಲೇಜು ಸಹಿತ ಇದೆ. ಆದಿಚುಂಚನಗಿರಿ ಕಾಲೇಜಿಗೆ ಹೋಗತಕ್ಕಂಥವರು, ಆಸ್ಪತ್ರೆಗೆ ಹೋಗತಕ್ಕಂಥವರು ಬಡ ಬೋರೇಗೌಡನ ಮಕ್ಕಳು. ಮಣಿಪಾಲ್ ಆಸ್ಪತ್ರೆಗೆ ಹೋಗತಕ್ಕಂಥವರು ಮಣಿಪಾಲ್ ಸಂಸ್ಥೆಗಳಿಗೆ ಬಡ ಬೋರೇಗೌಡನ ಮಕ್ಕಳು ಹೋಗುವುದಿಲ್ಲ, ಯಾರಾದರೂ ಹೇಳಿ ಸ್ವಾಮಿ, ದಯಮಾಡಿ ನೀವು ಆ ಕಡೆ ವಾದ ಮಾಡಿ.

(ಗೊಂದಲ)

ಶ್ರೀ ಯು.ಆರ್. ಸಭಾಪತಿ : ನೋಡಿ ನನಗೆ ಕೊಟ್ಟಿರುವುದು 40 ನಿಮಿಷ. ದಯವಿಟ್ಟು ನಾನು ಮಾತನಾಡುವಾಗ ಅಡ್ಡಿ ಮಾಡಬೇಡಿ. ಇವರೆಲ್ಲಾ ಮಾತನಾಡುತ್ತಾ ಹೋದರೆ ತಾವು ಇದನ್ನು ಎಕ್ಸ್‌ಟೆಂಡ್ ಮಾಡಬೇಕಾಗುತ್ತದೆ.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : ಸನ್ಮಾನ್ಯ ಅಧ್ಯಕ್ಷರೇ, ತಾವು ರೂಲಿಂಗ್ ಕೊಡಬೇಕು. ತಾವು ಹೇಳತಕ್ಕದ್ದಕ್ಕೆ ನಾವು ಮನ್ನಣೆಯನ್ನು ಕೊಡುತ್ತೇವೆ. ಎರಡನೆಯ ಮಾತಿಲ್ಲ. ಇದೊಂದು ಪ್ರಮುಖವಾಗಿರತಕ್ಕಂಥ ಪ್ರಶ್ನೆಯನ್ನು ಮಾನ್ಯ ಸಭಾಪತಿಯವರು ಈ ಸದನದ ಮುಂದಿಟ್ಟಿದ್ದಾರೆ, ದಯವಿಟ್ಟು ಇದರ ಬಗ್ಗೆ ಚರ್ಚೆಯಾಗಲಿ ಮಣಿಪಾಲ್ ಸಂಸ್ಥೆಯ ಬಗ್ಗೆ ನನಗೆ ಅದರ ಬಗ್ಗೆ ವಿರೋಧವಿಲ್ಲ. ಸರ್ಕಾರಕ್ಕೂ ವಿರೋಧ ಇಲ್ಲ. ಮಣಿಪಾಲ್ ಸಂಸ್ಥೆಗೆ ಯಾವ ಬಡ ಬೋರೇಗೌಡನ ಮಗ ಹೋಗುತ್ತಿದ್ದಾನೆ? ಇಡೀ ರಾಜ್ಯದಲ್ಲಿ ಬಡ ಬೋರೇಗೌಡರ ಮಕ್ಕಳಿಗೆ ಮಣಿಪಾಲ್ ಸಂಸ್ಥೆಗೆ ಹಣ ಕೊಡುವ ಶಕ್ತಿ ಇದೆಯೇ? ಇದನ್ನು ಸಭಾಪತಿಯವರೇ ಹೇಳಲಿ ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಎಸ್.ಆರ್. ಲಕ್ಷ್ಮಯ್ಯ : ದಾರಿಯಲ್ಲಿ ಹೋಗಬೇಕಾದರೆ ಆದಿಚುಂಚನಗಿರಿ ಇವತ್ತು ಹುಟ್ಟಿದೆ ಆ ಸಂಸ್ಥೆ ಇದು ಇಡೀ ಕರ್ನಾಟಕದಲ್ಲಿ ಬಹಳ ದೊಡ್ಡ ಸಂಸ್ಥೆಯಾಗಿದೆ.

(ಗೊಂದಲ)

ಶ್ರೀ ಯು.ಆರ್. ಸಭಾಪತಿ : ಸನ್ಮಾನ್ಯ ಉಪಾಧ್ಯಕ್ಷರೇ, ಏನು ಇದು? ನೀವು ಅವರಿಗೆ ಕಂಟ್ರೋಲ್ ಮಾಡಲಿಕ್ಕೆ ಆಗದಿದ್ದರೆ ನಾನು ಏನು ಮಾಡಲಿ? ಈಗ ನನಗೆ 40 ನಿಮಿಷಗಳ ಕಾಲ ಕೊಟ್ಟಿದ್ದೀರಿ ನಾನು ಮಾತನಾಡುವುದು ಬೇಡವಾ? ನಮ್ಮ ಅಭಿಪ್ರಾಯವನ್ನು ನಾನು ವ್ಯಕ್ತಪಡಿಸುತ್ತಿದ್ದೇನೆ. ಅವರ ಅಭಿಪ್ರಾಯವನ್ನು ಅವರು ಮಾತನಾಡುವಾಗ ವ್ಯಕ್ತಪಡಿಸಲಿ. ಯಾರಿಗೂ ಅರ್ಥವಾಗಲಿಲ್ಲ, ನೀವು ಮಾತನಾಡುವುದು ಎಲ್ಲರಿಗೂ ಅರ್ಥವಾಗುತ್ತದೆ. ನಾನು ಏನು ಹೇಳಿದೆ ಸರ್ಕಾರದ ನೀತಿ ಒಂದಾಗಿದೆ....

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಸಭಾಪತಿಯವರು ಅವರ ಕ್ಷೇತ್ರದಲ್ಲಿರತಕ್ಕಂತಹ ಯಾವುದೋ ಸಂಸ್ಥೆಯ ಬಗ್ಗೆ ಅದು ಸರ್ಕಾರದ ಸಂಸ್ಥೆಗಳಿಗೆ ಹೋಲಿಸಿದರೆ ಬಹಳ ಎಫಿಷಿಯೆಂಟ್ ಆಗಿದೆ ಎಂದು ಹೇಳಿಕೊಳ್ಳಲಿ ಆದರೆ ಅವರು ಡೀಮ್ಡ್ ಯುನಿವರ್ಸಿಟಿ ಏಕೆ ಎಂದು ಒಪ್ಪುವುದಿಲ್ಲವೆಂದರೆ ಅದಕ್ಕೆ ಸಾಕಷ್ಟು ಕೋರ್ಟ್, ಕಛೇರಿ ಎಲ್ಲಾ ಸಾಕಷ್ಟು ಪುರಾವೆಗಳಿವೆ ಅವುಗಳಿಗೆಲ್ಲಾ ಹೋಗುವುದು ಬೇಡ. ಆ ಸಂಸ್ಥೆಗಳು ಬಹಳ ಚೆನ್ನಾಗಿ ಕೆಲಸ ಮಾಡುತ್ತವೆಂದು ಹೇಳಿದರೆ ಯಾರು ಬೇಡ ಎಂದು ಹೇಳುತ್ತಾರೆ. ಆದ್ದರಿಂದ ಅನಾವಶ್ಯಕವಾಗಿ ನೀವು ಕಂಪ್ಯಾರಿಟೀವ್ ಸ್ಟಡಿ ಮಾಡುವುದಕ್ಕೆ ಹೋಗಿ ಕಾನ್ಟ್ರವರ್ಸಿ ಬೇಡ. ನೀವು ನಿಮ್ಮ ಕ್ಷೇತ್ರದ ಬಗ್ಗೆ ಹೇಳಿ.

ಶ್ರೀ ಯು.ಆರ್. ಸಭಾಪತಿ : ನಾನು ಅನಾವಶ್ಯಕವಾಗಿ ಯಾವುದೇ ಮಾತು ಹೇಳಲೇ ಇಲ್ಲ. ಯಾವಾಗ ಸರ್ಕಾರದ ವತಿಯಿಂದ ಒಂದು ಒಳ್ಳೆಯ ರೀತಿಯಲ್ಲಿ ವಿದ್ಯಾ ಸಂಸ್ಥೆಗಳನ್ನು ನಡೆಸುವಂಥ * ನಮ್ಮ ಹತ್ತಿರ ಇಲ್ಲವೋ ಆಗ ನೀವು ಖಾಸಗಿ ಸಂಸ್ಥೆಗಳು ಉತ್ತಮವಾಗಿ ನಡೆಸುತ್ತೇವೆಂದರೆ, ಇವತ್ತು ಸಮಾಜಕ್ಕೆ ಉತ್ತಮ ವಿದ್ಯಾಭ್ಯಾಸ ಕೊಡತಕ್ಕ ಸಂಸ್ಥೆಗಳನ್ನು ನಡೆಸಿಕೊಂಡು ಹೋಗುವುದಕ್ಕೆ ಬಿಡದ್ದಿದ್ದರೆ, ನೀವು ಸರ್ಕಾರದವರು ಅವರ ಮಧ್ಯದಲ್ಲಿ ಬಾಯಿ ತೂರಿಸುವುದು ಏಕೆ ಎಂದು ನನ್ನ ಪ್ರಶ್ನೆ, ಬೇರೆ ಏನೂ ಇಲ್ಲ. ಒಂದು ನೀವು ಮಾಡಿ, ಒಂದು ಅವರು ಮಾಡುವುದಕ್ಕೆ ಬಿಡಿ. ಎರಡರಲ್ಲಿ ಒಂದು ನಿರ್ಧಾರಕ್ಕೆ ಬನ್ನಿ. ಅವರು ಎಷ್ಟು ಡೊನೇಷನ್ ತೆಗೆದುಕೊಳ್ಳುತ್ತಾರೆಂದು ನೋಡುವುದಕ್ಕೆ ನೀವು ನಮ್ಮ ಜೊತೆ ಬನ್ನಿ. ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್

ಪ್ರತಿನಿಧಿಗಳ ಮುಂದೆ ಏನು ರ್‍ಯಾಂಕ್‌ವೈಸ್, ಮೆರಿಟ್ ಪ್ರಕಾರ ಯಾವ ರೀತಿ ಕೆಲಸ ಮಾಡಿಕೊಂಡು ಹೋಗುತ್ತಿದ್ದಾರೆಂಬುದನ್ನು ನಾನು ತೋರಿಸುತ್ತೇನೆ. ನೀವು ಇಲ್ಲಿ ಕುಳಿತುಕೊಂಡು ಮಾತನಾಡಿದರೆ ಪ್ರಯೋಜನವಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸಭಾಪತಿಯವರು ಹಿಂದುಳಿದ ವರ್ಗದವರು, ಕೆ.ಸಿ.ಪಿ.ಯಿಂದ ಅವರು ಸದಸ್ಯರಾಗಿ ಬಂದಿದ್ದಾರೆ. ಮೊದಲನೇ ಸಾರಿ ವಿಧಾನಸಭೆಯನ್ನು ಅವರು ಪ್ರವೇಶ ಮಾಡಿದ್ದಾರೆ. ಅವರು ಮಾತನಾಡತಕ್ಕ ಸಂದರ್ಭದಲ್ಲಿ ಅವರ ಭಾಷಣವನ್ನು ಕೇಳಿದೆ, ಅಲ್ಲಿ ಯಾವುದೋ ಒಂದು ಸಂಸ್ಥೆ ಬಹಳ ಪರಮ ಪವಿತ್ರವಾದ ಸಂಸ್ಥೆ, ಬಡವರನ್ನು ಉದ್ಧಾರ ಮಾಡುತ್ತಿದ್ದಾರೆಂದು ಹೇಳುವುದಕ್ಕೆ ಅವರಿಗೆ ಅವಕಾಶ ಇದೆ, ಮಾತನಾಡಬಹುದು. ಆದರೆ ಬೇರೆಯವರ ಭಾವನೆಗಳಿಗೆ ಅವರು ಚುಚ್ಚು ಮಾತನಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬಾರದು, ಇದು ಒಂದು. ಎರಡನೆಯದಾಗಿ, ಬಹಳ ಮುಖ್ಯವಾದುದೆಂದರೆ, ಇಲ್ಲಿ ಕುಳಿತುಕೊಂಡು ಹೇಳುತ್ತಿದ್ದೀರೆಂಬ ಮಾತು ಹೇಳಬಾರದು. ಸರ್ಕಾರ ಕುಳಿತುಕೊಂಡಿಲ್ಲ, ಸರ್ಕಾರ 24 ಗಂಟೆ, ಎಲ್ಲಾ ಪಂಚೇಂದ್ರಿಯಗಳೂ ಸಹ ಕೆಲಸ ಮಾಡುತ್ತಿರುತ್ತವೆ. ನಾವು ಯಾವ ಸಂಸ್ಥೆ ಏನು ಮಾಡುತ್ತದೆ ಪರಿಶಿಷ್ಟ ವರ್ಗದವರಿಗೆ, ಪರಿಶಿಷ್ಟ ಜಾತಿಯವರಿಗೆ ಏನೆಲ್ಲ ಇವರು ಉದ್ಧಾರ ಮಾಡಿದ್ದಾರೆ, ಹಿಂದುಳಿದ ವರ್ಗದವರಿಗೆ ಏನು ಉದ್ಧಾರ ಮಾಡಿದ್ದಾರೆ, ಎಲ್ಲಿಂದ ದುಡ್ಡು ತಂದಿದ್ದಾರೆ, ಪ್ರವೇಶ ಹೇಗೆ ಮಾಡಿದ್ದಾರೆ, ಯಾವ ಯಾವ ಸಂಸ್ಥೆಗಳು ಏನು ಕೆಲಸ ಮಾಡಿವೆ, ಈ ರಾಷ್ಟ್ರದಲ್ಲಿ ಯಾವ ವರ್ಗದ ಜನರಿಗೆ ಆದ್ಯತೆ ಸಿಗಬೇಕು ಇವೆಲ್ಲಾ ನಮಗೆ ಗೊತ್ತಿರತಕ್ಕ ವಿಚಾರ. ಆದ್ದರಿಂದ ದಯವಿಟ್ಟು ಮಾನ್ಯ ಸದಸ್ಯರು ಮಾತನಾಡತಕ್ಕ ಸಂದರ್ಭದಲ್ಲಿ ಶ್ರೀ ಮಂಜುನಾಥ್ ಅವರ ಹಿನ್ನೆಲೆಯನ್ನು ತಾವು ತಿಳಿದುಕೊಳ್ಳಬೇಕು. ಈ ರಾಜ್ಯದ ಅತ್ಯಂತ ಗೌರವಾನ್ವಿತ ಸದಸ್ಯರು. ಈ ಸದನದ ಉಪಸಭಾಪತಿಗಳಿಗಾಗಿ 25 ವರ್ಷಗಳ ಹಿಂದೆ ಕೆಲಸ ಮಾಡಿದ್ದಾರೆ, ಹಾಲಿ ಶಿಕ್ಷಣ ಸಚಿವರಾಗಿದ್ದಾರೆ. ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಜನಾಂಗದವರು ಇದ್ದಾರೆ, ಮುಖಂಡರು ಇದ್ದಾರೆ, ನೀವು ಅವರ ಬಗ್ಗೆ ಮಾತನಾಡತಕ್ಕ ಸಂದರ್ಭದಲ್ಲಿ ಕನಿಷ್ಟ ಗೌರವ ತೋರಿಸದಿದ್ದರೆ ಹೇಗೆ? ನೀವು ಕುಳಿತುಕೊಂಡು ಇಲ್ಲಿ ಮಾತನಾಡಿದರೆ ಎಂದರೆ ನಾವು ನೊಂದುಕೊಂಡು ಹೇಳಬೇಕಾಗುತ್ತದೆ. ಎಲ್ಲಾ ಮಂತ್ರಿಗಳು ಕುಳಿತುಕೊಂಡೇ ಇರತಕ್ಕದ್ದು. ನಿಮಗೂ ಜಾಗ ಕೊಟ್ಟಿದ್ದಾರೆ, ಅವರಿಗೂ ಜಾಗ ಕೊಟ್ಟಿದ್ದಾರೆ. ತಾವು ಚೆನ್ನಾಗಿ ಮಾತನಾಡಿದ್ದೀರಿ. ಮಾತನಾಡತಕ್ಕ ಸಂದರ್ಭದಲ್ಲಿ ಬೇರೆಯವರ ಭಾವನೆಗಳಿಗೆ ದಯವಿಟ್ಟು.....

ಶ್ರೀ ಯು.ಆರ್. ಸಭಾಪತಿ : ನಾನು ಹಾಗೆ ಮಾತನಾಡಲೇ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಗೌರವಾನ್ವಿತ ಸದಸ್ಯರು ಮಂತ್ರಿಗಳು ಅಂದಾಕ್ಷಣ ಏನೋ ಅಪರಾಧ ಮಾಡಿ ನಾವು ಇಲ್ಲಿ ಕುಳಿತುಕೊಂಡಿಲ್ಲ. ಮಂತ್ರಿಗಳು ಅಂದಾಕ್ಷಣ ನಿಂತುಕೊಂಡೇ ಇರಬೇಕೇ? ನೀವು ಮಾತನಾಡತಕ್ಕ ಸಂದರ್ಭದಲ್ಲಿ ನಾವು ನಿಂತುಕೊಂಡು ಎಲ್ಲವನ್ನೂ ಬರೆದುಕೊಳ್ಳಬೇಕೇ? ನಾವು ಕುಳಿತುಕೊಂಡಿರುತ್ತೇವೆ, ಬರೆದುಕೊಳ್ಳುವುದಕ್ಕೆ ಇದ್ದಾರೆ ಜನ; ಅಧಿಕಾರಿಗಳು ಇದ್ದಾರೆ. ನಮ್ಮ ಕಣ್ಣು, ಕಿವಿ, ಮೂಗು ಎಲ್ಲಾ ಸರಿಯಾಗಿ ಕೆಲಸ ಮಾಡುತ್ತಿವೆ. ನಿಮ್ಮ ವಿಚಾರಗಳನ್ನು ನಾವು ತೆಗೆದುಕೊಳ್ಳುತ್ತೇವೆ. ಅವನ್ನು ಆದಷ್ಟು ನಾವು ಅಳವಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ತಾವು ಮಾತನಾಡುವಾಗ ಯಾವುದೇ ಸಂಸ್ಥೆಯನ್ನು ಹೊಗಳಿ, ನನ್ನದೇನೂ ತಕರಾರು ಇಲ್ಲ. ಹೊಗಳುವಾಗ ನಿಮಗೆ ಏನಾದರೂ ಅಥವಾ ದೇಶಕ್ಕೆ ಜನರಿಗೆ ಉಪಯೋಗವಾಗುವುದಾದರೆ ಮಾಡಿ. ಆದರೆ ನಮ್ಮ ಸರ್ಕಾರಕ್ಕೆ ಕೆಲವು ನೀತಿ ನಿಯಮಗಳು ಇವೆ. ನಾವು ಹಿಂದುಳಿದ ವರ್ಗದವರ ಪರವಾಗಿರುವವರು, ನಾವು ಪರಿಶಿಷ್ಟ ಜಾತಿಯವರ ಪರವಾಗಿರುವವರು, ನಾವು ಅಲ್ಪಸಂಖ್ಯಾತರ ಪರವಾಗಿರುವವರು. ಈ ಸರ್ಕಾರದ

ನೀತಿ ಅದು. ನಮ್ಮ ಬದ್ಧತೆ ಅದು. ಅದರಿಂದಾಗಿ ತಾವು ದಯವಿಟ್ಟು ಚುಚ್ಚಿ ಮಾತನಾಡಬೇಡಿ. ಅದರಿಂದ ಉಪಯೋಗವಾಗುವುದಿಲ್ಲ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಗೃಹ ಮಂತ್ರಿಗಳು ನನ್ನನ್ನು ತಪ್ಪು ತಿಳಿದುಕೊಂಡಿದ್ದಾರೆ. ನಾನು ಅದನ್ನು ಸ್ಪಷ್ಟಪಡಿಸುತ್ತಿದ್ದೇನೆ. ನಾನು ಏನು ಹೇಳಿದೆ, ನಾನು ಮಾನ್ಯ ಮಂಜುನಾಥ್ ಅವರ ಬಗ್ಗೆ ಮಾತನಾಡಲಿಲ್ಲ. ಅವರು ನನ್ನನ್ನು ಅರ್ಥ ಮಾಡಿಕೊಂಡಿಲ್ಲ. ನನ್ನ ಭಾಷೆ ಅರ್ಥವಾಗದಿದ್ದರೆ ನನ್ನ ಹತ್ತಿರ ಕೇಳಬಹುದಿತ್ತು. ನಾನು ಗೌರವ ಭಾವನೆಯಿಂದ ಹೇಳಿದೆ. ನಾನು ಹೇಳಿದೆ, ಇವತ್ತು ಸರ್ಕಾರದ ಅಧೀನದಲ್ಲಿರತಕ್ಕ ಯಾವ ಶಾಲೆಗಳು ವಿದ್ಯಾ ಸಂಸ್ಥೆಗಳು ಇವೆ ಅವು ಸರಿಯಾಗಿ ನಡೆಯುತ್ತಿಲ್ಲ. ಅವನ್ನು ನಾವು ಒಳ್ಳೆಯ ರೀತಿಯಲ್ಲಿ ನಡೆಸಿಕೊಂಡು ಹೋಗಬೇಕು. ಅದನ್ನು ಬಿಟ್ಟು ನಾವು ಖಾಸಗಿ ಸಂಸ್ಥೆಗಳ ಮೇಲೆ ಆರೋಪ ಮಾಡಿಕೊಂಡು ಕುಳಿತುಕೊಳ್ಳುವುದು ಸರಿಯಲ್ಲವೆಂದು ಹೇಳಿದೆ. ಅವರು ಇಲ್ಲಿ ಕುಳಿತುಕೊಂಡದ್ದಕ್ಕೆ ನಾನು ಆರೋಪ ಮಾಡಿದ್ದು ಅಲ್ಲ. ಅವರು ಕುಳಿತುಕೊಂಡು ಹೇಳುತ್ತಿದ್ದಾರೆಂದು ಹೇಳಿದ್ದೇ ಅಲ್ಲ. ನನ್ನನ್ನು ನೀವು ಅರ್ಥ ಮಾಡಿಕೊಳ್ಳಿ. ತಮ್ಮ ಸರ್ಕಾರದ ನೀತಿ ನಿಯಮಗಳು ಏನು? ಹೊಸದಾಗಿ ತಮ್ಮ ಸರ್ಕಾರ ಬಂದ ಮೇಲೆ ತಾವು ನಿರ್ದಿಷ್ಟವಾದ ನಿಯಮಗಳನ್ನು ಪ್ರಕಟಗೊಳಿಸಬೇಕು. ತಮ್ಮ ನೀತಿ ಏನು? ಹೊಸತನ ಯಾವುದರಲ್ಲಿ ಮೂಡಿತ್ತು. ಅದರ ಸ್ವಷ್ಟನ ಏನು? ನಿಮ್ಮ ವಿದ್ಯಾ ಇಲಾಖೆಯಲ್ಲಿ ಏನು ಹೊಸತನ ಸಾಧನೆ ಮಾಡಿದ್ದೀರಿ, ಹೊಸ ನೀತಿ ಏನು ಪ್ರಕಟಣೆ ಮಾಡಿದ್ದೀರಿ; ಅದನ್ನು ಹೇಳಿ; ನಾನು ಒಪ್ಪಿಕೊಳ್ಳುತ್ತೇನೆ. ಇವತ್ತು ಯಾವುದೇ ಹೊಸ ನೀತಿ ಇಲ್ಲ, ಅದೇ ಅಧಿಕಾರಿಗಳು, ಅದೇ ಅಧ್ಯಾಪಕರು, ಅದೇ ಶಿಕ್ಷಣ ಸಂಸ್ಥೆಗಳು.

ಶ್ರೀ ಡಿ. ಮಂಜುನಾಥ್ : ಅದನ್ನೆಲ್ಲಾ ನಾವು ಹೇಳುತ್ತೇವೆ, ನಮ್ಮ ಗತಿ ಏನು ಎಂದು. ಆದರೆ ಒಂದು ಮಾತು ಅವರು ಹೇಳಿದರು ನಿಮಗೆ ಯೋಗ್ಯತೆ ಇಲ್ಲ ಎಂದು. ಅಂದರೆ ಸರ್ಕಾರಕ್ಕೆ ಆ ಯೋಗ್ಯತೆ ಇಲ್ಲ ಎಂದು. ಅವರ ಮಟ್ಟದಲ್ಲಿ ನಡೆಸತಕ್ಕ ಸಂಸ್ಥೆಗಳು ಇವೆಯಲ್ಲಾ ಅವನ್ನು ಹೋಲಿಕೆ ಮಾಡಿ ಇವರಿಗೆ ಇಲ್ಲವೆಂಬ ಮಾತನ್ನು ಬಳಸಿದರು. ಈಗ ಸರ್ಕಾರಕ್ಕೆ ಎಲ್ಲಾ ಯೋಗ್ಯತೆ ಇದೆ. ಪ್ರಾರಂಭದಲ್ಲಿ ಸರ್ಕಾರದವರು ಸ್ವಲ್ಪ ಅವರಿಗೆ ಎಲ್ಲಾ ಕುಮ್ಮಕ್ಕು ಕೊಟ್ಟಿದ್ದರು ನನಗೆ ಎಲ್ಲಾ ಗೊತ್ತಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸರ್ಕಾರದ ಮಂತ್ರಿಗಳು ಯಾರು; ನೀವು ಅಟ್ಯಾಕ್ ಮಾಡತಕ್ಕ ಸಂದರ್ಭದಲ್ಲಿ ಇದೆಲ್ಲಾ ಎಕ್ಸ್‌ಪೋಸ್ ಆಗುತ್ತದೆ. ನೀವು ಯಾರ ಪರವಾಗಿ ಏನು ಹೇಳಿದ್ದೀರಿ ಏನು ಎಂಬುದು ಎಲ್ಲಾ ಗೊತ್ತಾಗುತ್ತದೆ. Please don't think otherwise, You are a new member. I am advising you. This will give a wrong signal about your personality on whom you are speaking, who is the man there? ಇವೆಲ್ಲಾ ಬರುತ್ತವೆ, ಆಗ ನಮಗೆ ನೋವಾಗುತ್ತದೆ.

ಶ್ರೀ ಜಿ.ಬಿ. ಶಿವಕುಮಾರ್ : ಮಾನ್ಯ ಸಿಂಧ್ಯಾರವರು ವಿರೋಧ ಪಕ್ಷದಲ್ಲಿ ಆಡಳಿತ ಪಕ್ಷದಲ್ಲಿ ಎಲ್ಲಾ ಏನಡೂ ಕಟು ಅನುಭವ ಪಡೆದಿರತಕ್ಕ ನುರಿತಂಥ ರಾಜಕಾರಣಿಗಳು, ನಾನು ಇಲ್ಲಿ ಕುಳಿತು ನೋಟೀಸ್ ಮಾಡಿದೆ. ಇಷ್ಟೆಲ್ಲಾ ಹೇಳಿದ ಮೇಲೆ ಸಭಾಪತಿಯವರ ಟೋನ್ ಹೇಗಿತ್ತು? ನಮಗೆ ಏನಾಗುತ್ತಿದೆ ಎಂದರೆ ಆಡಳಿತ ಪಕ್ಷದವರಿಗೆ ಒಂದು ಸ್ವರ, ವಿರೋಧ ಪಕ್ಷದವರಿಗೆ ಸ್ವರ ಪ್ಲಸ್ ಹಾವಭಾವ. ಇಲ್ಲಿ ಮಾತನಾಡತಕ್ಕದ್ದು ಪ್ರಾಯಶಃ ತಪ್ಪು ಗ್ರಹಿಕೆಗೆ ಅವಕಾಶ ಕೊಡಬಹುದೋ ಏನೋ? ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಹೇಳುವುದಿಷ್ಟೆ: ಹೇಳಬೇಕಾದುದನ್ನು ಸ್ವರದಲ್ಲಿ ಅಲ್ಲ, ಆವೇಶದಲ್ಲಿ ಅಲ್ಲ ಮಾತನಾಡತಕ್ಕದ್ದು. ಅರ್ಥಪೂರ್ಣವಾಗಿ ಮೆಲುಧ್ವನಿಯಲ್ಲಿ

ಹೇಳಿದರೂ ಅರ್ಥವಾಗುತ್ತದೆ. ನೀವು ಫೀಬಲ್‌ವಾಯ್ಸ್‌ನಲ್ಲಿ ಹೇಳಿದರೂ ಕೂಡ it will have its own meaning. ಆದ್ದರಿಂದ ಅವರು ಆ ಕೈ ಬಾಯಿ ಜೋರಾಗಿ ಆಡಿಸಿದರಲ್ಲಾ, ಅದೇನೋ ಬಹುಶಃ ನಮ್ಮಲ್ಲಿ ಗಧಾ ಪ್ರಹಾರ ಆದ ಹಾಗೆ ಆಗಿದೆ ಆದುದರಿಂದ ಎರಡೂ ಕಡೆ ಅನುಭವ ಇರತಕ್ಕ ನಮ್ಮ ಮಾನ್ಯ ಗೃಹ ಸಚಿವರು ಅದಕ್ಕೆ ಜಾಸ್ತಿ ಹೇಳತಕ್ಕದ್ದು ಬೇಡ.....

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಲಕ್ಷ್ಮಯ್ಯನವರ ಹಾಗೆ ಮಾತನಾಡಬೇಕೇ? ಸಭಾಪತಿಯವರಿಗೆ ಗೊತ್ತಿಲ್ಲ, ಹೊಸಬರು ಅವರು. ಲಕ್ಷಯ್ಯನವರ ಹಾಗೆ ಮಾತನಾಡಬೇಕು ಏಕೆ ಸಭಾಪತಿಯವರು.

ಶ್ರೀ ಎ. ರಾಮದಾಸ್ : ಹೊಸ ಸದಸ್ಯರು ಅಷ್ಟೇನು ತಪ್ಪು ಮಾಡುತ್ತಿಲ್ಲ. ಎಲ್ಲಾ ಹಳೆಯ ಸದಸ್ಯರು ತಪ್ಪು ಮಾಡುತ್ತಾರೆ. ಹಳೆಯ ಸದಸ್ಯರು ಕೂಡ ಯಾವುದೇ ವಿಷಯವನ್ನು ಹೇಗೆ ಪ್ರಸ್ತಾಪ ಮಾಡಬೇಕೆಂಬ ನಿಯಮ ಗೊತ್ತಿಲ್ಲದೆ ಇರತಕ್ಕವರು ಅನೇಕರು ಇದ್ದಾರೆ. ಮಾನ್ಯ ಸಿಂಧ್ಯರವರು ಅವರೆಲ್ಲರಿಗೂ ಹೇಳಬೇಕು. ಕೇವಲ ಹೊಸ ಸದಸ್ಯರನ್ನು ಉದ್ದೇಶಿಸಿ ಮಾತನಾಡುವುದಲ್ಲ. ಹಳೆಯ ಸದಸ್ಯರು ನಿಯಮ ಕಾನೂನು ಕಲಿತು ಬರಬೇಕು. ಹೊಸ ಸದಸ್ಯರಿಗೆ ಹೇಳುವುದು ದೊಡ್ಡ ಜಾಣತನವೇನೂ ಅಲ್ಲ.

ಶ್ರೀ ಯು.ಆರ್. ಸಭಾಪತಿ :

ಇವತ್ತು ನಾನು ಹೊಸಬ. ಆವೇಶದಲ್ಲಿ ಮಾತನಾಡಿದ್ದಕ್ಕೆ ನಾನು ನಿಮ್ಮ ಕ್ಷಮೆ ಯಾಚಿಸುತ್ತೇನೆ. ಎರಡನೆಯದಾಗಿ, ನಾನು ಯೋಗ್ಯತೆ ಎನ್ನುವ ಮಾತಿನಿಂದ ಸರ್ಕಾರದ ಹಿರಿಯ ಸದಸ್ಯರುಗಳು ಯಾರಿಗಾದರೂ ಅದರಿಂದ ಮನಸ್ಸಿಗೆ ನೋವಾಗಿದ್ದರೆ ಆ ಮಾತನ್ನು ನಾನು ಹಿಂದಕ್ಕೆ ಪಡೆಯುವುದಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ಡಿ. ಮಂಜುನಾಥ್ : ಮಂತ್ರಿಗಳಿಗೆ ಅನ್ವಯಿಸುವುದಿಲ್ಲ, ಸರ್ಕಾರಕ್ಕೆ ಇಲ್ಲವೆಂದು ಮಾತು ಬಳಿಸಿದ್ದೀರಿ.

ಶ್ರೀ ಯು.ಆರ್. ಸಭಾಪತಿ : ಅದೇ ನಾನು ಹೇಳಿದೆ. ಎಂಬ ಪದವನ್ನು ನಾನು ಹಿಂದಕ್ಕೆ ಪಡೆದುಕೊಳ್ಳುತ್ತೇನೆ. ನನ್ನಿಂದ ತಪ್ಪಾಗಿದ್ದರೆ ದಯವಿಟ್ಟು ಕ್ಷಮಿಸಿ.

ಒಬ್ಬ ಮಾನ್ಯ ಸದಸ್ಯರು : ಹೆಚ್ಚು ಕಡಿಮೆಯಾದರೆ ಅಪಾರ್ಥ ಮಾಡಿಕೊಳ್ಳುವುದು ಸರಿಯಲ್ಲ.

ಶ್ರೀ ಯು.ಆರ್. ಸಭಾಪತಿ : ರಾಷ್ಟ್ರೀಯ ಶಿಕ್ಷಣ ನೀತಿಯ ಬಗ್ಗೆ ಈ ದೇಶದಲ್ಲಿ ಸಾಕಷ್ಟು ಚರ್ಚೆಗಳು ಪ್ರಾರಂಭವಾಗಿವೆ.

(ಗೊಂದಲ)

ಶ್ರೀ ಸಿ.ಆರ್. ಸಗೀರ್ ಅಹಮದ್ : ಲಕ್ಷ್ಮಯ್ಯನವರು ಬೇರೆಯವರಿಗೆ ಮಾತನಾಡುವುದಕ್ಕೆ ಬಿಡುವುದಿಲ್ಲ, ಅವರಿಗೆ ಏನು ಬರುತ್ತದೆಯೋ ಅದನ್ನು ಮಾತನಾಡುವುದಕ್ಕೆ ಅವಕಾಶ ಇದೆ ಎಂದು ತಿಳಿಸಿದಿದ್ದಾರೆ. ಯಾವ ಆಸ್ಪತ್ರೆಯಲ್ಲಿ ಯಾರು ಹೋಗಿ ಸೇರಿದ್ದಾರೆಂಬುದು ಗೊತ್ತಿಲ್ಲ. ಪ್ರಾಯಶಃ ಲಕ್ಷ್ಮಯ್ಯನವರು ಸದ್ಯಕ್ಕೆ ಮಣಿಪಾಲ್ ಆಸ್ಪತ್ರೆಗೆ ಸೇರುತ್ತಾರೆಂದು ಕಾಣುತ್ತದೆ ಅಂದಾಜು ನೋಡಿದರೆ...

ಉಪಾಧ್ಯಕ್ಷರು : ನೀವು ಕುಳಿತುಕೊಳ್ಳಿ, ಲಕ್ಷ್ಮಯ್ಯನವರೇ, ಕುಳಿತುಕೊಳ್ಳಿ. ಈಗ ನಾನು ನಿಂತುಕೊಂಡಿದ್ದೇನೆ. ಸದನದ ಒಳಗೆ ಯಾರು ಬೇಕಾದರೂ ಯಾವಾಗ

ಬೇಕಾದರೂ ಎದ್ದು ನಿಂತು ಮಾತನಾಡುವುದಕ್ಕೆ ಅವಕಾಶ ಆಗತಕ್ಕದ್ದು ಅಲ್ಲ. ಆ ರೀತಿ ಮಾತನಾಡತಕ್ಕ ರೀತಿ ಸರಿಯಾದುದಲ್ಲ. ಮಾನ್ಯ ಸದಸ್ಯರು ಮಾತನಾಡಬೇಕೆಂದು, ಅಪೇಕ್ಷೆ ಇದ್ದರೆ ಮಾತನಾಡುತ್ತಿರುವವರ ಪರ್ಮಿಷನ್ ತೆಗೆದುಕೊಂಡು ಮಾತನಾಡಬೇಕು. ಇಲ್ಲದಿದ್ದರೆ ಅಧ್ಯಕ್ಷರ ಅನುಮತಿ ತೆಗೆದುಕೊಂಡು ಮಾತನಾಡಬೇಕು. ನಿಮ್ಮಷ್ಟಕ್ಕೆ ನೀವೇ ಎದ್ದು ನಿಂತುಕೊಂಡು ಮಾತನಾಡಿದರೆ ಸದನ ನಡೆಸುವುದಕ್ಕಾಗುವುದಿಲ್ಲ. ಈ ದಿಸೆಯಲ್ಲಿ ಎಲ್ಲಾ ಮಾನ್ಯ ಸದಸ್ಯರು ಸಹಕರಿಸಬೇಕೆಂದು ಕೋರುತ್ತೇನೆ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಉಪಾಧ್ಯಕ್ಷರೆ, ರಾಷ್ಟ್ರೀಯ ಶಿಕ್ಷಣ ನೀತಿ ಬಗ್ಗೆ ದೇಶದಲ್ಲಿ ಸಾರ್ವತ್ರಿಕವಾಗಿ ಚರ್ಚೆಯಾಗುವಂಥ ವಿಚಾರ. ತಮಗೆಲ್ಲರಿಗೂ ಗೊತ್ತಿದ್ದ ಪ್ರಕಾರ ಇವತ್ತು ಹೊಸ ಶಿಕ್ಷಣ ನೀತಿಯ ಬಗ್ಗೆ ಈ ದೇಶದಲ್ಲಿ ಸಾಕಷ್ಟು ವಿದ್ಯಾ ಮುಖಂಡರುಗಳು ಸರ್ಕಾರ ಚಿಂತನೆ ಮಾಡುವಂಥ ಕಾಲದಲ್ಲಿ ಇವತ್ತು ನಾವು 20ನೇ ಶತಮಾನದ ಬಗ್ಗೆ ಮಾತನಾಡುತ್ತಿದ್ದೇವೆ. ದಿವಂಗತ ಪ್ರಧಾನಮಂತ್ರಿಗಳಾದ ಶ್ರೀ ರಾಜೀವ್‌ಗಾಂಧಿಯವರು 20ನೇ ಶತಮಾನಕ್ಕೆ ಹೋಗುವ ಸಮಯದ ಬಹಳಷ್ಟು ಹೊಸ ಶಿಕ್ಷಣ ನೀತಿಯನ್ನು ಅಳವಡಿಸಬೇಕು ಎಂಬು ಮಾತನ್ನು ಹೇಳಿದ್ದರು. ನನಗೊಂದು ಆಶ್ಚರ್ಯ ಕಾಣುವುದೇನೆಂದರೆ ಮಾಜಿ ಮುಖ್ಯಮಂತ್ರಿಗಳಾದ ಶ್ರೀಮಾನ್ ವೀರಪ್ಪ ಮೊಯಿಲಿಯವರು 50 ವರ್ಷಗಳ ಹಿಂದೆ ಡಾಕ್ಟರ್ ಶಿವರಾಮ ಕಾರಂತರು ಬರೆದ "ಓಡುವ ಆಟ" ವನ್ನು ಇವತ್ತು ಇಂಟ್ರೊಡ್ಯೂಸ್ ಮಾಡಿದ್ದಾರೆ ಎಂದು ಹೇಳಿದ್ದಾರೆ ಆದರೆ ಇವತ್ತು ಅವರ ಹೊಸ ಶಿಕ್ಷಣ ನೀತಿಯ ಅಲೆ ಎಲ್ಲಿಗೆ ಬಂತು? ಡಾಕ್ಟರ್ ಶಿವರಾಮ ಕಾರಂತರ ಬಗ್ಗೆ ನನಗೆ ಅಪಾರವಾದ ಗೌರವವಿದೆ. ಆದರೆ ಅವರು 50 ವರ್ಷಗಳ ಹಿಂದೆ ಸ್ವಾತಂತ್ರ್ಯ ಪೂರ್ವದಲ್ಲಿ ಈ ಪುಸ್ತಕವನ್ನು ಬರೆದಿದ್ದರು. ಸ್ವಾತಂತ್ರ್ಯ ಪೂರ್ವ ಶಿಕ್ಷಣ ನೀತಿ ಬೇರೆ, ಸ್ವಾತಂತ್ರ್ಯ ನಂತರ ಶಿಕ್ಷಣ ನೀತಿ ಬೇರೆ. ಇವತ್ತು ಸ್ವಾತಂತ್ರ್ಯ ಪೂರ್ವದಲ್ಲಿ ಬರೆದಿರತಕ್ಕಂಥ ಪುಸ್ತಕವನ್ನು ಇವತ್ತು 20ನೇ ಶತಮಾನಕ್ಕೆ ಹೋಗಬೇಕು ಎನ್ನುವಂಥ ಅನ್ನಿಸಿಕೆಯಿಂದ ರಾಜೀವ್‌ಗಾಂಧಿಯವರ ಪಕ್ಷದ ನಾಯಕತ್ವವನ್ನು ಏನು ಮೊಯಿಲಿಯವರು ಹೊಂದಿದ್ದರೋ ಅವರ ಇವತ್ತಿನ ಈ ಉದ್ದೇಶ ನನಗೆ ಅರ್ಥವಾಗಲಿಲ್ಲ.

ಇವತ್ತು ಡಾಕ್ಟರ್ ಶಿವರಾಮ ಕಾರಂತರ 'ಓಡುವ ಆಟದ' ಬಗ್ಗೆ ಚರ್ಚೆಗೆ ಅಧ್ಯಕ್ಷರು ನಮಗೆ ಅವಕಾಶ ಕೊಟ್ಟಿದ್ದಾರೆ. ಆದರೆ ನಾವು ಈ ಸಂದರ್ಭದಲ್ಲಿ ಪಠ್ಯಪುಸ್ತಕವನ್ನು ಅಳವಡಿಸುವಾಗಲೂ ಕೂಡ ಒಂದು ನಿರ್ದಿಷ್ಟವಾದ ಧೋರಣೆಯನ್ನು ಇಟ್ಟೇ ನೋಡಬೇಕು. ಶಾಲೆ ಪ್ರಾರಂಭವಾಗುವ ಮೊದಲೇ ಇದರ ಬಗ್ಗೆ ನಿರಂತರವಾದ ಚಿಂತನೆ ಮಾಡಿ ಸುಮಾರು ಏಪ್ರಿಲ್ ಮೇನಲ್ಲಿ ಇದರ ಬಗ್ಗೆ ನಿರ್ಧಾರ ತೆಗೆದುಕೊಂಡು ಇಟ್ಟಿದ್ದರೆ ವಿದ್ಯಾರ್ಥಿಗಳಿಗೆ ಎರಡು ಮೂರು ತಿಂಗಳ ಕಾಲ ಈ ಪ್ರಾಥಮಿಕ ಹಂತದಲ್ಲಿ ಅವರಿಗೆ ಆಗಿರುವಂಥ ಅವ್ಯವಸ್ಥೆ, ಸಾಕಷ್ಟು ಗಲಾಟೆಗಳು, ಸಾಕಷ್ಟು ರೀತಿಯ ಪ್ರಚಾರಗಳು, ಇವುಗಳನ್ನು ನಾವು ತಡೆ ಹಿಡಿಯಬಹುದಾಗಿತ್ತು. ಅದರಿಂದಾಗಿ ಮುಂದಿನ ವರ್ಷದ ಸಂದರ್ಭದಲ್ಲಿ ಕೂಡ ಸರ್ಕಾರ ತಿದ್ದುಪಡಿ ಮಾಡಿ ಯಾವುದೇ ಹೊಸ ಪಠ್ಯಪುಸ್ತಕಗಳನ್ನು ಅಳವಡಿಸುವಾಗ ಒಂದು ನಿರ್ದಿಷ್ಟವಾದ ಧೋರಣೆಯನ್ನು ಇಟ್ಟು ಅದನ್ನು ಮಾರ್ಚ್ ಏಪ್ರಿಲ್ ತಿಂಗಳ ಒಳಗೆ ಅದರ ನಿರ್ಧಾರ ಮಾಡಬೇಕು. ಮೇ ಜೂನ್‌ನಲ್ಲಿ ಶಾಲೆ ಪ್ರಾರಂಭವಾಗುವಾಗಲೇ ಅದಕ್ಕೆ ಸರಿಯಾದ ವ್ಯವಸ್ಥೆಯನ್ನು ಮಾಡಬೇಕು ಎಂದು ಹೇಳಿ ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳುತ್ತೇನೆ. ಇನ್ನು ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಪರೀಕ್ಷೆ ಮೌಲ್ಯಮಾಪನದ ಬಗ್ಗೆ ನಾನು ಸ್ಪಷ್ಟವಾಗಿ ಹೇಳಬೇಕಾಗಿದೆ. ಇವತ್ತು ಪಿ.ಯು.ಸಿ., ಎಸ್.ಎಸ್.ಎಲ್.ಸಿ. ಮೌಲ್ಯಮಾಪನದಿಂದ ಎಷ್ಟು ದೊಡ್ಡ ಅನಾಹುತ ಎಂದರೆ ಕಳೆದ ಹಲವಾರು ವರ್ಷಗಳಿಂದ ಇಲ್ಲಿ ಕೆಲವು ಸ್ಕ್ಯಾಂಡಲ್ ನಡೆಯುತ್ತಾ ಬರುತ್ತಿದೆ. ಈ ವರ್ಷವಂತೂ

ಇದರ ಪ್ರಮಾದ ಬಹಳಷ್ಟು ಪಿ.ಯು.ಸಿ. ಮೌಲ್ಯಮಾಪನ ಮಾಡುವಾಗ, ವಿದ್ಯಾರ್ಥಿಗಳು ಶ್ರಮಪಟ್ಟು ಜೀವನದಲ್ಲಿ ಒಳ್ಳೆಯ ಅಂಕಗಳನ್ನು ಪಡೆಯಬೇಕೆಂದು ಅವರು ಉತ್ತರ ಬರೆಯುತ್ತಾರೆ. ಈ ಉತ್ತರ ಬರೆದಿದ್ದನ್ನು ಅಧ್ಯಾಪಕರು ಮೌಲ್ಯಮಾಪನ ಮಾಡುವಾಗ ಕೆಲವೊಂದು ಅಧ್ಯಾಪಕರುಗಳ ಬೇಜವಾಬ್ದಾರಿತನದಿಂದ ಎಷ್ಟು ಅನಾಹುತಗಳಾಗಿವೆ ಎಂಬುದನ್ನು ತಾವು ಈಗಾಗಲೇ ಗಮನಕ್ಕೆ ತೆಗೆದುಕೊಂಡಿರಬಹುದು. ನಾನು ಇಷ್ಟೇ ಹೇಳುವುದು. ಒಂದು ನಿರ್ದಿಷ್ಟವಾದ ಧೋರಣೆಯನ್ನು ಸರ್ಕಾರ ಮೌಲ್ಯಮಾಪನ ಬಗ್ಗೆ ಒಂದು ಪರಿಷ್ಕೃತವಾದ ವಿಧಾನವನ್ನು ಬಳಸಬೇಕೆಂದು ನಾನು ಹೇಳುತ್ತೇನೆ.

ಏಕೆಂದರೆ ಇವತ್ತು ಎಷ್ಟೋ ವಿದ್ಯಾರ್ಥಿಗಳು ರಿಸಲ್ಟ್ ಬರುವಾಗ ಅಲ್ಲಿ ಹೋಗಿ ನೋಡುತ್ತಾರೆ. ರಿಸಲ್ಟ್‌ನಲ್ಲಿ ಅವರ ಹೆಸರಿರುವುದಿಲ್ಲ. ಕೆಲವರು ಮನೆಗೆ ಯಾವ ರೀತಿ ಮುಖ ತೋರಿಸುವುದು ಎಂದು ಹೇಳಿ ನೇರವಾಗಿ ಆತ್ಮಹತ್ಯೆಯ ಆಲೋಚನೆ ಮಾಡಿ ಒಂದು ಹೊಳೆಗೋ ನದಿಗೋ ಹಾರಿ ಅಥವಾ ವಿಷಸೇವನೆ ಮಾಡಿ ಸಾಯುವಂಥ ಪ್ರಕರಣಗಳು ಇವತ್ತೂ ಕೂಡ ಅನೇಕ ಕಡೆ ನಡೆದಿವೆ. ಮತ್ತೆ ನೋಡುವಾಗ ಕಂಪ್ಯೂಟರ್ ಮಿಸ್ಟೇಕ್‌ನಿಂದ ಅವರದ್ದು ಫಲಿತಾಂಶ ಪ್ರಕಟ ಆಗಲಿಲ್ಲ ಎನ್ನುವ ಮಾತನ್ನು ಅಲ್ಲಿ ಪಿ.ಯು.ಸಿ ಮಂಡಳಿ ಅಧಿಕಾರಿಗಳು ಹೇಳಿದಾಗ ಆ ವಿದ್ಯಾರ್ಥಿ ಜೀವವನ್ನು ಮತ್ತೆ ತರುವುದಕ್ಕೆ ಸಾಧ್ಯವಿದೆಯೇ? ಇದರ ಬಗ್ಗೆ ಸನ್ಮಾನ್ಯ ಸಚಿವರು ವಿದ್ಯಾ ಸಚಿವರು, ಸರ್ಕಾರ ತೀವ್ರವಾಗಿ ಮೌಲ್ಯಮಾಪನದ ಬಗ್ಗೆ ಸಾಕಷ್ಟು ರೀತಿಯ ಒಂದು ಜಾಗ್ರತೆಯನ್ನು ವಹಿಸಬೇಕು. ಮೌಲ್ಯಮಾಪನದ ಜವಾಬ್ದಾರಿಯನ್ನು ಸಂಪೂರ್ಣವಾಗಿ ಹೊತ್ತುಕೊಳ್ಳಬೇಕೆಂದು ನಾನು ನಿಮ್ಮ ಮೂಲಕ ಅವರನ್ನು ಕೇಳಬಯಸುತ್ತೇನೆ. ಇನ್ನು ಮೌಲ್ಯಮಾಪನದಲ್ಲಿ ಆಗಿರತಕ್ಕ ವ್ಯತ್ಯಾಸಗಳನ್ನು ಪರೀಕ್ಷಣೆ ಮಾಡುವುದು. ಕೆಲವರು ಅನುತ್ತೀರ್ಣಗೊಳ್ಳುತ್ತಾರೆ. ಒಬ್ಬ ವಿದ್ಯಾರ್ಥಿ 80 ಮಾರ್ಕ್ಸ್ ಮ್ಯಾಥೆಮೆಟಿಕ್ಸ್‌ನಲ್ಲಿ 90 ಮಾರ್ಕ್ಸ್ ಸೈನ್ಸ್‌ನಲ್ಲಿ, 90 ಮಾರ್ಕ್ಸ್ ಸಮಾಜಶಾಸ್ತ್ರದಲ್ಲಿ ಪಡೆದಿದ್ದರೆ ಸಬ್ಜೆಕ್ಟ್‌ನಲ್ಲಿ 40-50 ಪರ್ಸೆಂಟ್ ಬಂದಿರುತ್ತದೆ.

ಅದು ನಿಜವಾಗಿಯೂ ಆ ಮೌಲ್ಯಮಾಪನ ಮಾಡಿರತಕ್ಕ ಅಧ್ಯಾಪಕರ ಬೇಜವಾಬ್ದಾರಿಯಿಂದ ಅದು ಆಗಿರಬಹುದು. ಆದರೆ ಒಂದು ಸಲ ಅಂಕಪಟ್ಟಿ ಹೊರಬಂದಮೇಲೆ ಆ ವಿದ್ಯಾರ್ಥಿಗೆ ರೀಟೋಟಲಿಂಗ್ ಮಾತ್ರ ಅವಕಾಶ ಇರುವುದು. ಉತ್ತರ ಪತ್ರಿಕೆಯನ್ನು ನೋಡುವಂಥ ಅವಕಾಶ ಇಲ್ಲ. ಇದರಿಂದಾಗಿ ಎಷ್ಟೋ ಅನಾಹುತಗಳು ನಡೆಯುತ್ತವೆ. ಒಳ್ಳೆಯ 90 ಪರ್ಸೆಂಟ್ ಬರತಕ್ಕ ವಿದ್ಯಾರ್ಥಿಗೆ ಒಂದು ಸಬ್ಜೆಕ್ಟ್‌ನಲ್ಲಿ 50 ಪರ್ಸೆಂಟ್ ಹೆಚ್ಚು ಕಡಿಮೆ ಆಯಿತು ಅಧ್ಯಾಪಕರ ಬೇಜವಾಬ್ದಾರಿಯಿಂದ ಮಾರ್ಕ್ಸ್ ಕಡಿಮೆ ಸಿಕ್ಕಿತು ಎಂದು ಹೇಳಿ ಆದರೆ ಅವನ ಇಡೀ ಭವಿಷ್ಯವೇ ಹಾಳಾಗುವಂಥ ಪರಿಸ್ಥಿತಿ ಉಂಟಾಗುತ್ತದೆ. ಅದಕ್ಕಾಗಿ ನಾನು ಸರ್ಕಾರವನ್ನು ಕೇಳುತ್ತೇನೆ ಈ ಮೌಲ್ಯಮಾಪನದ ವಿಧಿವಿಧಾನ ಏನಿದೆ ಅದನ್ನು ಸಂಪೂರ್ಣವಾಗಿ ಬದಲಾವಣೆ ಮಾಡಬೇಕು. ಅದಕ್ಕೆ ಕಳಕಳಿಯಿಂದ ಸರ್ಕಾರಕ್ಕೆ ನಾನು ಮನವಿ ಮಾಡಿಕೊಳ್ಳುವುದೇನೆಂದರೆ ಇನ್ನು ಮುಂದಿನ ವರ್ಷದಲ್ಲಿ ಸರ್ಕಾರ ಈ ಮೌಲ್ಯಮಾಪನದ ಬಗ್ಗೆ ಒಂದು ನೀತಿಯನ್ನು ಅಳವಡಿಸಿಕೊಳ್ಳಬೇಕೆಂದು ನನ್ನ ಬೇಡಿಕೆ. ನಮಗೆ ಅಂಕ ನೀಡಿಕೆಯಲ್ಲಿ ಪ್ರಮಾದವಾಗಿದೆ ಎಂದು ದೂರು ನೀಡುವ ವಿದ್ಯಾರ್ಥಿಯು ಅಂಕ ಮರುಪರಿಶೀಲನೆಯ ಬೇಡಿಕೆಯನ್ನು ಆತನ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು ಆತನ ಹಿಂದಿನ ಅಂಕಗಳಿಕೆಯ ಸಾಧನೆಯನ್ನು ಪರಿಗಣನೆಗೆ ತೆಗೆದುಕೊಂಡು ಅನುಮೋದಿಸಬೇಕು. ವಿದ್ಯಾರ್ಥಿಯ ಬೇಡಿಕೆಗೆ ಆತನ ಹಿಂದಿನ ಸಾಧನೆ ಖಂಡಿತವಾಗಿಯೂ ಆಧಾರವಾಗಿರಬೇಕು. ಇಂಥ ವಿದ್ಯಾರ್ಥಿಯಿಂದ ಒಂದು ಗೊತ್ತಾದ ಮೊತ್ತದ ಹಣವನ್ನು ಠೇವಣಿಯಾಗಿ ಸ್ವೀಕರಿಸಿ ಆತನ ಶಿಕ್ಷಣ ಸಂಸ್ಥೆಯ ಸಂಬಂಧಪಟ್ಟ ವಿಷಯದ ಮುಖ್ಯಸ್ಥರ ಸಮ್ಮುಖದಲ್ಲಿ ಉತ್ತರ ಪತ್ರಿಕೆಯನ್ನು ಪರೀಕ್ಷಾ ಮಂಡಳಿ ನೇಮಿಸುವ ಮತ್ತೊಬ್ಬರು ಸಮಗ್ರವಾಗಿ ಮರುಶೀಲನೆ ಮಾಡಿ ಪುನಃ ಅಂಕ ನೀಡಿ ಮರುಮೌಲ್ಯಮಾಪನ ಮಾಡುವಂಥ ಅವಕಾಶವನ್ನು ಕಲ್ಪಿಸಿಕೊಡಬೇಕು

ಎಂದು ಕೇಳುವುದರೊಂದಿಗೆ ಇಂಥ ಮರುಪರಿಶೀಲನೆ ಪ್ರಕರಣಗಳಲ್ಲಿ ವಿದ್ಯಾರ್ಥಿ ನೀಡಿದ ದೂರು ಸಕಾರಣವೆಂದು ಕಂಡು ಬಂದರೆ ಮರುಪರಿಶೀಲನೆಯ ಬಳಿಕದ ಅಂಕಗಳನ್ನು ಅಧಿಕೃತವಾಗಿ ಆತ ಗಳಿಸಿದ ಅಂಕಗಳೆಂದು ಘೋಷಿಸಬೇಕು. ಆತನ ಶೇವಣಿ ಹಣವನ್ನು ಆತನಿಗೆ ಮರಳಿಸಬೇಕು.

ಜೊತೆಗೆ ಅಂಕನೀಡಿಕೆಯ ಪ್ರಮಾದದಿಂದ ಆತನಿಗೆ ಆಗಿರುವ ಕಷ್ಟನಷ್ಟಗಳಿಗೆ ಸೂಕ್ತ ಪರಿಹಾರವನ್ನೂ ಪರೀಕ್ಷಾ ಮಂಡಳಿ ನೀಡಬೇಕು. ಮರುಮೌಲ್ಯಮಾಪನದಲ್ಲಿ ಪ್ರಮಾದಗಳು ರುಜುವಾತಾದ ಪ್ರಕರಣದಲ್ಲಿ ಉತ್ತರ ಪತ್ರಿಕೆಯನ್ನು ಈ ಮೊದಲು ತಿದ್ದಿದ ಅಧ್ಯಾಪಕರಿಗೆ ಮತ್ತು ಸಂಬಂಧಿಸಿದ ತಪ್ಪಿತಸ್ಥರಿಗೆ ಸೂಕ್ತ ದಂಡ ಯಾ ಶಿಕ್ಷೆ ವಿಧಿಸಬೇಕು. ವಿದ್ಯಾರ್ಥಿ ನೀಡಿದ ದೂರಿಗೆ ಮೂರು ಮರುಮೌಲ್ಯಮಾಪನದಲ್ಲಿ ಸಮರ್ಥನೆ ದೊರೆಯದೇ ಇದ್ದರೆ ಆತನ ಶೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು. ವಿನಾಕಾರಣ ಉತ್ತರ ಪತ್ರಿಕೆಗಳ ಮರುಮೌಲ್ಯಮಾಪನದ ಬೇಡಿಕೆಗಳು ಬಾರದಂತೆ ತಡೆಯಲು ಆತನ ಅಂಕ ಗಳಿಕೆಯ ಹಿಂದಿನ ಮೂರು ವರ್ಷಗಳ ಸಾಧನೆ ಮತ್ತು ಶೇವಣಿ ಹಣದ ಮೊತ್ತದ ಭದ್ರತೆಯನ್ನು ನಿಗದಿಪಡಿಸಬೇಕು. ಇದು ನಾನು ಸರ್ಕಾರಕ್ಕೆ ಈ ನೀತಿಯನ್ನು ಮುಂದಿನ ವರ್ಷದಲ್ಲಿಯಾದರೂ ಕೂಡ ಎಂದು ನಾನು ಕಳಕಳಿಯಿಂದ ವಿನಂತಿಸಿಕೊಳ್ಳುತ್ತೇನೆ. ಏಕೆ ಎಂದು ಹೇಳಿದರೆ ಅನೇಕ ಮಂದಿ ವಿದ್ಯಾರ್ಥಿಗಳ ಭವಿಷ್ಯ ಈ ಮೂಲಕ ಹಾಳಾಗಿಹೋಗುತ್ತಿದೆ. ಮತ್ತೆ ಕಳೆದುಕೊಂಡ ಜೀವವನ್ನು ತರುವುದಕ್ಕಾಗುವುದಿಲ್ಲ. ಒಂದು ವೇಳೆ ಆ ವಿದ್ಯಾರ್ಥಿ ಭ್ರಮನಿರಸನಗೊಂಡ ಅಂತ ಆದರೆ ಮುಂದಿನ ವರ್ಷ ಅವನು ಕಲಿಯುವ ವಿದ್ಯೆಯಲ್ಲಿಯೂ ಕೂಡ ಅನಾನುಕೂಲವಾಗುವಂಥ ಪರಿಸ್ಥಿತಿ ಬರುತ್ತದೆ. ಜಾನಪದ ಸಾಹಿತ್ಯ ಮತ್ತು ತುಳು ಅಕಾಡೆಮಿ ಬಗ್ಗೆ ಬಹಳಷ್ಟು ಚರ್ಚೆಯಾಗಿದೆ. ನಮ್ಮ ಉಡುಪಿಯಲ್ಲಿ ಎಂ.ಜಿ.ಎಂ. ಕಾಲೇಜಿನಲ್ಲಿ ತುಳು ಭಾಷೆಯ ಬಗ್ಗೆ ಒಂದು ತುಳು ಅಕಾಡೆಮಿಯನ್ನು ಸ್ಥಾಪನೆ ಮಾಡುವುದರೊಂದಿಗೆ ತುಳು ಸಾಹಿತ್ಯದ ಮೇಲೆ ಸಾಕಷ್ಟು ಅಧ್ಯಯನ ಮಾಡಿ ತುಳು ನಿಘಂಟನ್ನು ಕೂಡ ರೂಪಿಸಿದಂಥ ವಿಚಾರ ತಮಗೆಲ್ಲರಿಗೂ ಗೊತ್ತಿದೆ. ಸರ್ಕಾರ ತುಳು ನಿಘಂಟಿಗೆ 3 ಲಕ್ಷ ರೂಪಾಯಿಗಳನ್ನು ವಾರ್ಷಿಕವಾಗಿ ಕೊಟ್ಟಂಥ ಒಂದು ಪ್ರಕಟಣೆಯನ್ನೂ ಕೂಡ ಮಾಡಿದ್ದಾರೆ. ಇವತ್ತು ಆ ಜಾನಪದ ಸಾಹಿತ್ಯ ಹಾಗೂ ತುಳುವಿನಲ್ಲಿರತಕ್ಕ ಸಾಹಿತ್ಯದ ಬಗ್ಗೆ ನಾನು ಹೇಳಬಯಸುವುದಿದ್ದರೆ ತುಳು ಭಾಷೆ ಎನ್ನುವಂಥದ್ದು ಒಂದು ಉತ್ತಮ ಸಾಹಿತ್ಯ ಇರತಕ್ಕ ಭಾಷೆ. ತುಳುವಿನ ಲಿಪಿ ಕೂಡ ಅಧ್ಯಯನ ಮಾಡಿದ್ದಾರೆ. ಮಣಿಪಾಲ್‌ನ ಎಂ.ಜಿ.ಎಂ. ಕಾಲೇಜಿನ ಗೋವಿಂದ ಪೈ ಸ್ಮಾರಕ ಭವನದಲ್ಲಿ ಇದರ ಬಗ್ಗೆ ಅಧ್ಯಯನ ಕೇಂದ್ರವನ್ನು ಸ್ಥಾಪಿಸಿದ್ದೇ ಅಲ್ಲದೆ ಸಾಕಷ್ಟು ಇದರ ಬಗ್ಗೆ ಅನ್ವೇಷಣೆಗಳನ್ನೂ ಮಾಡಿದೆ. ಆದರಿಂದಾಗಿ ನಾನೂ ಪ್ರತ್ಯೇಕವಗಿ ಸರ್ಕಾರದೊಂದಿಗೆ ಭಿನ್ನವಿಸುವುದೇನೆಂದರೆ ಇವತ್ತು ತುಳು ಭಾಷಾ ಅಧ್ಯಯನಕ್ಕೆ ಅದರ ಸಾಹಿತ್ಯದ ಪ್ರಚಾರಕ್ಕೆ ಸಾಕಷ್ಟು ಸರ್ಕಾರದಿಂದ ಸಹಾಯವನ್ನು ಕೊಡಬೇಕು ಎನ್ನುವ ಮಾತನ್ನು ಒತ್ತಿ ಹೇಳುತ್ತೇನೆ.

5.00 ಪಿ.ಎಂ

(ಶ್ರೀ ಜಿ.ಬಿ. ಶಿವಕುಮಾರ್‌ರವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಯು.ಆರ್. ಸಭಾಪತಿ : ಇನ್ನು ಕಾರ್ಮಿಕ ಇಲಾಖೆಯ ಬಗ್ಗೆ ಒಂದು ಸ್ಪಷ್ಟವಾದ ಧೋರಣೆಯ ಬಗ್ಗೆ ಹೇಳಬಯಸುತ್ತೇನೆ. ನನಗೆ ನಮ್ಮ ರಾಜ್ಯದಲ್ಲಿ ನಾನು ಕಂಡುಕೊಂಡಂತಹ ಸತ್ಯ ಏನೆಂದರೆ ಬಾಲ ಕಾರ್ಮಿಕರು. ಈ ಬಗ್ಗೆ ಸನ್ಮಾನ್ಯ ಕಾರ್ಮಿಕ ಇಲಾಖೆಯ ಮಂತ್ರಿಗಳಿಗೆ ಪ್ರಶ್ನೆ ಕೇಳಿದಾಗ ಈ ರಾಜ್ಯದಲ್ಲಿ 11 ಲಕ್ಷ ಬಾಲ ಕಾರ್ಮಿಕರು ಇದ್ದಾರೆನ್ನುವ ಮಾತನ್ನು ಅವರು ಹೇಳಿದ್ದಾರೆ. ಬಾಲ ಕಾರ್ಮಿಕರು ಕೆಲಸ ಮಾಡುವುದನ್ನು ಸರ್ಕಾರ ಕಾಯಿದೆ ಬದ್ಧವಾಗಿ ಮಾಡಿದೆಯೇ ಎಂಬ ಪ್ರಶ್ನೆಗೆ ಅವರು ಉತ್ತರ ಕೊಟ್ಟಿದ್ದಾರೆ. ಇದು ಕಾನೂನು ಬಾಹಿರ ಎಂದು ಹೇಳಿ.

ನಾನು ಇಷ್ಟೇ ಕೇಳುವುದು ಕಾನೂನು ಬಾಹಿರ ಎಂದು ಆದರೆ, ಇವತ್ತು 11 ಲಕ್ಷ ಜನ ಬಾಲ ಕಾರ್ಮಿಕರು ಯಾವ ರೀತಿಯಲ್ಲಿ ದುಡಿಯುತ್ತಿದ್ದಾರೆ? ಇದನ್ನು ಯಾವ ರೀತಿಯಲ್ಲಿ ನಿಗ್ರಹಿಸುತ್ತೀರಿ? ನಮ್ಮ ಶಾಸಕರ ಭವನದ ಕಟ್ಟಡ ಕನಸ್ಟ್ರಕ್ಷನ್ ಆಗುತ್ತಾ ಇದೆ, ಅಲ್ಲಿ ಒಬ್ಬ ಪುಟಾಣಿ ಹುಡುಗ ತಲೆಯ ಮೇಲೆ ಸಿಮೆಂಟಿನ ಚೀಲವನ್ನು ಹೊತ್ತುಕೊಂಡು ಹೋಗುತ್ತಿದ್ದುದನ್ನು ಕಂಡಿದ್ದೇನೆ. ಸಣ್ಣ ಹುಡುಗ. ಆ ಬಾಲಕಾರ್ಮಿಕರಿಗೆ ಕೆಲವೊಂದು ಯೋಜನೆಗಳನ್ನು ರೂಪಿಸಬೇಕಾಗಿದೆ. ಅವರಿಗೆ ಬೇಕಾಗುವ ಸೌಲಭ್ಯಗಳ ನಿಯಮಗಳನ್ನು ಸರ್ಕಾರ ಕೆಲವು ಯೋಜನೆ ರೂಪದಲ್ಲಿ ತಂದಿದೆ ಎಂದು ಹೇಳಿದ್ದಾರೆ. ನನ್ನ ದೃಷ್ಟಿಯಲ್ಲಿ ಪರಿಣಾಮಕಾರಿಯಾಗಿ ಆ ಬಾಲ ಕಾರ್ಮಿಕರ ಬಗ್ಗೆ ಒಂದು ಒಳ್ಳೆಯ ರೀತಿಯ ಯೋಜನೆಯನ್ನು ಅವರು ರೂಪಿಸಿಲ್ಲ ಎನ್ನುವ ಒಂದು ಅನಿಸಿಕೆ. ರಚನಾತ್ಮಕವಾಗಿ ಆ ಮುದ್ದು ಮಕ್ಕಳು, ಬೆಳೆಯುವ ಹೊತ್ತು, ಅವರಿಗೆ ಬಡತನದ ಬೇಗೆಯಿಂದ ಹೊಟ್ಟೆ ಹಸಿವನ್ನು ತಾಳಲಾರದೆ, ಹೆತ್ತ ತಂದೆ-ತಾಯಿಗಳು ಅವರನ್ನು ದುಡಿಸಿ ತಿನ್ನುವಂತಹ ಪರಿಸ್ಥಿತಿ ಇದೆ. ಅಂತಹ ಸನ್ನಿವೇಶಗಳನ್ನು ಹೋಟೆಲ್‌ಗಳಲ್ಲಿ ನಾವು ಸಹ ನೋಡಬಹುದು. ಸಾಕಷ್ಟು ರೀತಿಯಲ್ಲಿ ಆ ಬಾಲಕಾರ್ಮಿಕರು ದುಡಿಯುತ್ತಿದ್ದಾರೆ.

ಅವರು ಬೆಳಗ್ಗೆಯಿಂದ 5 ಗಂಟೆಗೆ ಅವರನ್ನು ಎಬ್ಬಿಸುತ್ತಾರೆ. ರಾತ್ರಿ 12 ಗಂಟೆ ತನಕ ಅವರನ್ನು ದುಡಿಸುತ್ತಾರೆ. ಹೊಡೆಯುತ್ತಾರೆ, ಬಡಿಯುತ್ತಾರೆ, ಇದರ ಬಗ್ಗೆ ಸಾಕಷ್ಟು ಅನ್ವೇಷಣೆ ಮಾಡಿಲ್ಲ, ಸರ್ಕಾರ ಇದರ ಬಗ್ಗೆ ಗಮನ ಕೊಟ್ಟಿಲ್ಲ, ಆ ಬಾಲಕರ ಅವಸ್ಥೆಯನ್ನು ನೋಡುವಾಗ ಅವರಿಗೆ ಸರಿಯಾದ ಆಹಾರವನ್ನು ಕೊಡದೆ, ಅವರಿಂದ ದುಡಿಸಿ, ಕಡಿಮೆ ಸಂಬಳ, ಸಂಬಳವನ್ನೇ ಕೊಡುವುದಿಲ್ಲ ಕೆಲವು ಕಡೆಗಳಲ್ಲಿ, ಕೆಲವು ಹೋಟೆಲುಗಳಲ್ಲೆಲ್ಲ ಅವರಿಗೆ ತಿಂಡಿಯನ್ನು ಕೊಡುತ್ತಾರೆ. ಉಳಿದದ್ದನ್ನೆಲ್ಲಾ ಒಟ್ಟು ಮಾಡಿ 1 ಸಾಂಬಾರು, ಅದು ಇದು ಒಟ್ಟು ಮಾಡಿ ಒಂದು ಅನ್ನ ತೆಗೆದು ಬಿಸಾಡುತ್ತಾರೆ, ಹೋಗು ತಿನ್ನು ಎಂದು ಹೇಳಿ. ಹಳಸಿದ ದೋಸೆ ಇದ್ದರೆ, ನಿನ್ನೆಯದೋ, ಮೊನ್ನೆಯದೋ ಇದ್ದರೆ ತಿನ್ನುತ್ತಾರೆ.

ಅವರುಗಳು ತಿನ್ನುತ್ತಾರೆ, ಹೊಟ್ಟೆ ಹಸಿವಿಗೆ. ಆದರೆ ಆ 11 ಲಕ್ಷ ಬಾಲ ಕಾರ್ಮಿಕರ ಅವಸ್ಥೆ ಯಾವ ಪರಿಸ್ಥಿತಿಯಲ್ಲಿ ಹೋಗಬೇಕು? ಸರ್ಕಾರ ಇವತ್ತು ಅವರಿಗೋಸ್ಕರ ಒಂದು ಹೊಸ ಯೋಜನೆಯನ್ನು ತರಬಾರದೇ, ಅವರ ಉದ್ಧಾರಕ್ಕಾಗಿ. ಆ ಬಾಲಕಾರ್ಮಿಕರಿಗಾಗಿ, ಸಾಯಂಕಾಲದ ಹೊತ್ತಿಗೆ ಒಂದು ಸಂಜೆ ಶಾಲೆಗಳನ್ನು ಮಾಡುತ್ತೀರಿ ಎಂದು ಆದರೆ, ಎಲ್ಲೆಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಾಲ ಕಾರ್ಮಿಕರು ನಗರಪ್ರದೇಶಗಳಲ್ಲಿ ಕೆಲಸ ಮಾಡುತ್ತಿದ್ದಾರೆ, ಅವರಿಗೆ ಒಂದು ವಿದ್ಯಾ ಕೇಂದ್ರವನ್ನು ನೀವು ಸ್ಥಾಪನೆ ಮಾಡಿ. ಅವರಿಗೆ ವಿದ್ಯಾಭ್ಯಾಸದ ಅನುಕೂಲವನ್ನು ಮಾಡಿಕೊಡಿ. ಅವರಿಗೆ ಪೌಷ್ಟಿಕ ಅಂಶದ ಆಹಾರವನ್ನು ಕೊಡುವಂತಹ ಸೌಲಭ್ಯವನ್ನು ಮಾಡಿಕೊಡಿ. ಬಾಲಕಾರ್ಮಿಕರು ಕೆಲಸ ಮಾಡುವುದು ಕಾನೂನು ಬಾಹಿರ ಎಂದು ಹೇಳುತ್ತೀರಿ. ಆದರೆ, ಅವರ ತಂದೆತಾಯಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ, ಏಕೆಂದರೆ ಇದು ಸಮಾಜದ ಒಂದು ಪಿಡುಗು. ಇದರ ಬಗ್ಗೆ ಜನ ಜಾಗೃತಿಯನ್ನುಂಟು ಮಾಡಿ, ತಿಳುವಳಿಕೆ ಮಾಡಿಸಬೇಕೆಂದು ಹೇಳುತ್ತಿದ್ದೇನೆ. ಆದರೆ ಅದು ನಿಮ್ಮಿಂದ ಆಗುವುದಿಲ್ಲ, ಅದಕ್ಕೆ ಎಲ್ಲೆಲ್ಲಿ ಬಾಲಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಅವರಿಗೊಂದು ನೀತಿ ನಿಯಮವನ್ನು ರೂಪಿಸಿಬಿಡಿ. ಇಷ್ಟು ಗಂಟೆಯಿಂದ, ಇಷ್ಟು ಗಂಟೆಯವರೆಗೆ ಮಾತ್ರ ಬಾಲ ಕಾರ್ಮಿಕರು ಕೆಲಸ ಮಾಡಬೇಕೆನ್ನುವುದನ್ನು ಹೇಳಿ. ಇವತ್ತು ಶಕ್ತಿಶಾಲಿಯುತವಾದಂತಹ ಕಾರ್ಮಿಕರು, ಪ್ರಾಯಕ್ಕೆ ಬಂದಂತಹ ಕಾರ್ಮಿಕರು ಸಂಘಟನೆಗಳ ಮೂಲಕ ಅವರು ತಮ್ಮದೇ ಆದ ಬೇಡಿಕೆಯನ್ನು ಮಂಡನೆ ಮಾಡಿ, ಅವರ ಬೇಡಿಕೆಯನ್ನು ಈಡೇರಿಕೆಗೊಳಿಸುತ್ತಾರೆ. ಆದರೆ ನಾವು ಮಾತ್ರ ಈ ಬಾಲ ಕಾರ್ಮಿಕರ

ಬಗ್ಗೆ ಏನೂ ಮಾತನಾಡುವವರು ಅಲ್ಲ. ಅದರಿಂದಾಗಿ ನಾನು ತಮ್ಮ ಮೂಲಕ ಸನ್ಮಾನ್ಯ ಕಾರ್ಮಿಕ ಮಂತ್ರಿಗಳಲ್ಲಿ ಕೇಳುವುದು, ಈ 11 ಲಕ್ಷ ಬಾಲ ಕಾರ್ಮಿಕರಿಗಾಗಿ, ಈ ಹೊಸಸರ್ಕಾರ, ಒಂದು ಹೊಸ ಯೋಜನೆಯನ್ನು ರೂಪಿಸಿ, ಆ ಮೂಲಕ ಅವರಿಗೆ ವಿದ್ಯಾಭ್ಯಾಸ, ಅವರಿಗೆ ಪೌಷ್ಠಿಕ ಆಹಾರವನ್ನು ಕೊಟ್ಟು, ಅವರಿಗೆ ಒಳ್ಳೆಯ ರೀತಿಯ ಮಾರ್ಗದರ್ಶನವನ್ನು ಕೊಡುವಂತಹ ಯೋಜನೆಯನ್ನು ರೂಪಿಸಬೇಕೆಂದು ನಾನು ಕೇಳುತ್ತೇನೆ.

ಇನ್ನು ಕೃಷಿ, ತೋಟಗಾರಿಕೆ ಹಾಗೂ ಮೀನುಗಾರಿಕೆ ಇಲಾಖೆಯ ಬಗ್ಗೆ ಹೇಳುವುದಾದರೆ, ಇವತ್ತು ನಾವು ನಿರುದ್ಯೋಗ ಸಮಸ್ಯೆಯ ಬಗ್ಗೆ ಸಾಕಷ್ಟು ಮಾತನಾಡುತ್ತೇವೆ. ನಿರುದ್ಯೋಗ ಸಮಸ್ಯೆಯ ನಿವಾರಣೆಗೋಸ್ಕರ ನಾವು ಪಶುಸಂಗೋಪನಾ ಇಲಾಖೆ, ತೋಟಗಾರಿಕೆ ಇಲಾಖೆಯನ್ನು ನಾವು ಖಂಡಿತವಾಗಿ ಉಪಯೋಗಿಸಿಕೊಳ್ಳಬಹುದು ಎಂಬುದು ನನ್ನದೊಂದು ಅಪೇಕ್ಷೆ. ಏಕೆಂದರೆ ನಮ್ಮ ಜಿಲ್ಲೆಗಳಲ್ಲಿ ಬೃಹತ್ ಕೈಗಾರಿಕೆಗಳು ಬಂದರೆ ಮಾತ್ರ ಉದ್ಯೋಗಾವಕಾಶ ಸಿಗುವುದು ಎನ್ನುವ ಮಾತನ್ನು ಹೇಳುತ್ತಿದ್ದೇವೆ. ನಮ್ಮ ಜಿಲಲೆಯಲ್ಲಿ, ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿಯ 300 ಕಿ.ಮೀ. ಉದ್ದಕ್ಕೆ ಕರಾವಳಿಯಲ್ಲಿ ಮೀನುಗಾರಿಕೆಯೇ ಒಂದು ಉದ್ದಿಮೆ. ಅಂತಹ ಒಂದು ಉದ್ದಿಮೆಗೆ ಸರ್ಕಾರ ಕೊಡುವಂತಹ ಹಣ ಕೇವಲ 18 ಕೋಟಿ ರೂ. ಯಿಂದ 20 ಕೋಟಿ ರೂ. ವರೆಗೆ. ಆದರೆ ಅದನ್ನು ನಾವು ಎಲ್ಲಾ ಬಿಟ್ಟುಬಿಟ್ಟಿದ್ದೇವೆ. ನಾವು ಬೃಹತ್ ಕೈಗಾರಿಕೆ ಸ್ಥಾಪಿಸಲು ಯಾರ್ಯಾರೋ ಎಲ್ಲೆಲ್ಲಿದ್ದವರನ್ನೋ ತಂದು, ಅಲ್ಲಿ ನಿಜವಾಗಿಯೂ ಪರಿಸರ ಮಾಲಿನ್ಯ, ಜಲಮಾಲಿನ್ಯ ಆದರೂ ಕೂಡ 2000 ಕೋಟಿ, 3000 ಕೋಟಿ ಎಂದು ಹೇಳುವಂತಹ ಮಾತನ್ನು ಹೇಳಿ, 2000, 3000 ಸಾವಿರ ಎಕರೆ ಭೂಮಿಯನ್ನು ಕಬಳಿಸಿಕೊಂಡು, ಆ ಮೂಲಕ ಉದ್ಯೋಗಾವಕಾಶ ಕೊಡುತ್ತೇವೆ ಅನ್ನುವುದನ್ನು ನಾನು ಒಪ್ಪುವುದಿಲ್ಲ, ತೋಟಗಾರಿಕೆ ಇಲಾಕೆಯ ಬಗ್ಗೆ ನಮ್ಮ ಜಿಲ್ಲೆಯ ಬಗ್ಗೆ ಹೇಳುವುದಾದರೆ, ಮಲ್ಲಿಗೆ ಹೂವು, 5 ಸೆಂಟ್ಸ್ ಜಾಗದಲ್ಲಿ ಮಲ್ಲಿಗೆ ಹೂವು ಕೃಷಿ ಮಾಡಿದರೆ, ಅವನಿಗೆ ವಾರಕ್ಕೆ 500 ರೂ ಸಂಪಾದನೆ ಮಾಡಬಹುದು ಇವತ್ತು 5,000 ಕುಟುಂಬಗಳು, ಮಲ್ಲಿಗೆ ಬೆಳೆಯನ್ನು ನಮ್ಮ ಜಿಲ್ಲೆಯಲ್ಲಿ ಮಾಡುತ್ತಿದ್ದಾರೆ. ಇವತ್ತು ಅದಕ್ಕೇ ಪ್ರಚೋದನೆ ಕೊಡಿ. ಕೃಷಿ ಮೂಲವಾದಂತಹ ತೋಟಗಾರಿಕೆ ಮೂಲವಾದಂತಹ ಇಂತಹ ಒಂದು ಹೊಸ ಯೋಜನೆಗಳನ್ನು ತನ್ನಿ. ಆ ಮಲ್ಲಿಗೆ ಬೆಳೆಯನ್ನು ಅಭಿವೃದ್ಧಿ ಮಾಡಿ, ಆ ಮಲ್ಲಿಗೆಯಲ್ಲಿ ಬರತಕ್ಕ ಪರ್‌ಫ್ಯೂಂ ಏನಿದೆ, ಅದನ್ನು ಶೇಖರಣೆ ಮಾಡಿ, ಅಲ್ಲೊಂದು ಫರ್‌ಫ್ಯೂಂ ಫ್ಯಾಕ್ಟರಿ ಮಾಡುವ ಬಗ್ಗೆ ನೀವು ಯೋಚನೆ ಮಾಡಿದರೆ, ಖಂಡಿತವಾಗಿಯೂ ಇದಕ್ಕೆ ಅವಕಾಶ ಮಾಡಿಕೊಡಲಿಕ್ಕೆ ಆಗುತ್ತದೆ.

ಇನ್ನು ಪಶುಸಂಗೋಪನೆ ಪಶುಸಂಗೋಪನಾ ಇಲಾಖೆಯ ಬಗ್ಗೆ ನಾನು ಹೇಳುವುದಾದರೆ ಇದರ ಅನೇಕ ಕಾರ್ಯಕ್ರಮಗಳನ್ನು ನಾವು ಈ ನಿರುದ್ಯೋಗ ಸಮಸ್ಯೆಯ ಬಗ್ಗೆ ಉಪಯೋಗಿಸಕೊಳ್ಳಬಹುದು. 135 ಕಾಲೇಜುಗಳಿಗೆ 37 ಲಕ್ಷ ರೂ. ರಿಪೇರಿಯ ಬಗ್ಗೆ ಇಡಲಾಗಿದೆ ಎಂಬುದನ್ನು ಸನ್ಮಾನ್ಯ ನಾಗೇಗೌಡರು ಹೇಳಿದಾಗ ನನಗೆ ತೋಟಗಾರಿಕೆಯ ವರದಿಯನ್ನು ಮಾಡುವಾಗ ನನಗೊಂದು ನೆನಪು ಬಂತು. ನಮ್ಮ ಬೆಂಗಳೂರು ಸಿಟಿ ಒಳಗೆ ಇರತಕ್ಕ ಮಂತ್ರಿಗಳು, ಸರ್ಕಾರಿ ಕಛೇರಿಯ ಎದುರಿನಲ್ಲಿ, ಉದ್ಯಾನವನ ನಿರ್ಮಾಣ, ತೋಟ ನಿರ್ಮಾಣಕ್ಕೆ ವರ್ಷಕ್ಕೆ 45 ಲಕ್ಷ ರೂ.ಗಳನ್ನು ನಾವು ವಿಂಗಡಿಸಿಟ್ಟಿದ್ದೇವೆ. ಆದರೆ ಇಲ್ಲಿ ಇಡೀ ರಾಜ್ಯದ 135 ಕಾಲೇಜುಗಳ ಕಟ್ಟಡದ ರಿಪೇರಿಗಾಗಿ 37 ಲಕ್ಷ ಹೆಚ್ಚು ಅಂದರೆ ನಾನು ಈ ಬಗ್ಗೆ ಅಧಿಕಾರಿಗಳನ್ನು ಕೇಳಿದ ಕೂಡಲೇ ಅವರು ನಮ್ಮದು ಇಡೀ ರಾಷ್ಟ್ರದಲ್ಲೇ ಒಂದು

ಉದ್ಯಾನ ನಗರಿ ಎನ್ನುವ ಮಾತನ್ನು ಹೇಳಿದರು. ಅಂದರೆ ಹೊರಗೆ ತೋಟ ಶೃಂಗಾರ ಒಳಗೆ ಗೋಳಿ ಸೊಪ್ಪು ಎಂದು ಹೇಳಿದ ಹಾಗಾಯಿತು. ಮೂಲಭೂತವಾದಂತಹ ಸೌಕರ್ಯವನ್ನು ನಾವು ಅಳವಡಿಸುವುದರಲ್ಲಿ ಹಿಂದು-ಮುಂದು ನೋಡಬಾರದು. ಅರ್ಥ ಇಲಾಖೆಯ ಅಧಿಕಾರಿಗಳಿಗೆ ನಾನು ಹೇಳುವುದು, ಮೂಲ ಭೂತ ಸೌಕರ್ಯವನ್ನು ನಾವು ಎಲ್ಲಿ ಒದಗಿಸಿಕೊಡಬೇಕು ಅಲ್ಲಿ ಆರ್ಥಿಕ ತೊಡಕು ಎಂದು ಹೇಳಬಾರದು. ಇವತ್ತು ಯಾವ ರೀತಿ ಒಬ್ಬ ಶಾಸಕನಿಗೆ 2 ರೂಮುಗಳು ಇದ್ದುದನ್ನು ಒಡೆದು ಒಂದು ರೂಮು ಮಾಡುವಾಗ ಯಾವ ಆರ್ಥಿಕ ಸಮಸ್ಯೆಗಳೂ ಬರುವುದಿಲ್ಲ. ಆದರೆ, ಒಂದು ಶಾಲಾ ಕಟ್ಟಡ ಮಾಡಲಿಕ್ಕೆ ಅಥವಾ ಒಂದು ಊರಿನಲ್ಲಿ ಒಂದು ಬಾವಿಯನ್ನು ತೋಡಲಿಕ್ಕೆ ಹೋಗುವುದು ಇದ್ದರೆ, ಅದಕ್ಕೆ ನಮ್ಮಲ್ಲಿ ಹಣ ಇಲ್ಲ ಅನ್ನುವ ಮಾತು ಬರುತ್ತದೆ, ಇವತ್ತು ನಮ್ಮ ಕಾಲೇಜಿನ ಕಟ್ಟಡಗಳ ರಿಪೇರಿಗೆ ಹಣ ಇಲ್ಲ ಅಂದರೆ. ಇವತ್ತು ಮಂತ್ರಿಗಳ ಮತ್ತು ಸರ್ಕಾರಿ ಕಛೇರಿಯ ಮುಂದುಗಡೆ ಇರತಕ್ಕಂತಹ ತೋಟ ಶೃಂಗಾರಕ್ಕೆ ನಾವು 45 ಲಕ್ಷ ರೂ.ಗಳನ್ನು ವಾರ್ಷಿಕವಾಗಿ ಬಳಸುವುದಾದರೆ, ಇದರಲ್ಲಿ ಇರುವಂತಹ ವಿಪರ್ಯಾಸ ಏನು ಎಂಬುದನ್ನು ನಾವು ನೋಡಿಕೊಳ್ಳಬೇಕಾಗಿದೆ ಎಂಬ ಮಾತನ್ನು ನಾನು ಹೇಳಬೇಕಾಗಿದೆ. ನಾನು ಒಂದು ಮಾತನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ, ನಾನು ಅನೇಕ ಮಾತುಗಳನ್ನು ಉದ್ವೇಗದಿಂದ ಹೇಳಿದ್ದು ಇರಬಹುದು. ಅದು ಹೇಳಿದ್ದರೂ ಇಂತಹದ್ದಕ್ಕೆ ಹೇಳಿದ್ದೇನೆ, ಏಕೆಂದರೆ ಹೊಸ ಸರ್ಕಾರದ ಮೇಲೆ ಜನ ಭರವಸೆ ಇಟ್ಟುಕೊಂಡಿದ್ದಾರೆ ಹೊಸ ಸರ್ಕಾರದಿಂದ ಹೊಸತನ್ನು ಬಯಸಿದ್ದಾರೆ. ಅನೇಕ ವರ್ಷಗಳಿಂದ ನನೆಗುದಿಗೆ ಬಿದ್ದಿದ್ದಂತಹ ಸಮಸ್ಯೆಗಳ ಪರಿಹಾರ ಈ ಹೊಸ ಸರ್ಕಾರ ಬಂದ ಮೇಲೆ ಅರಿತುಕೊಂಡು ಅದಕ್ಕೆ ಏನಾದರೊಂದು ಮುಕ್ತಾಯ ಕಾಣಬಹುದು ಎನ್ನುವ ಭರವಸೆಯಿಂದ ಜನ ಅಭಿಪ್ರಾಯ ಪಟ್ಟು ಜನ ಇವತ್ತು ನಿಮ್ಮನ್ನು ಅಧಿಕಾರಕ್ಕೆ ತಂದಿದ್ದಾರೆ. ಅದರಂತೆ ನೀವು ಈ ಸದನಕ್ಕೆ ಬಂದಿದ್ದೀರಿ. ಹೊಸ ಚಿಂತನೆ, ಹೊಸ ಕಲ್ಪನೆ ಈ ವಿಧಾನ ಸಭೆಯಲ್ಲಿ ಹರಿದು ಬರುತ್ತಾ ಇದೆ. ಅದರಿಂದಾಗಿ ಮುಂದಿನ ವರ್ಷದ ಯಾವ ಬೇಡಿಕೆ, ವಾರ್ಷಿಕ ಮುಂಗಡದ ಪತ್ರ ಮಾಡುವಾಗ ಎಲ್ಲಾ ರೀತಿಯಲ್ಲೂ ಈ ಮೀನುಗಾರಿಕೆ ಇಲಾಖೆಗೆ ಪ್ರೋತ್ಸಾಹ ನೀಡಬೇಕು. ಕೇವಲ 20 ಕೋಟಿ ರೂ. ವ್ಯವಸ್ಥೆ ಏನು ಇದೆ, ಅದನ್ನು ತೆಗೆದು 100 ಕೋಟಿ ರೂ. ಯ ವ್ಯವಸ್ಥೆ ನೀವು ಮಾಡಿದರೆ, ಇನ್ನೊಂದು ಲಕ್ಷ ಜನ ಮೀನುಗಾರರಿಗೆ ಉದ್ಯೋಗ ಕೊಡುವಂತಹ ಅವಕಾಶ ಇದರಲ್ಲಿ ಬರುತ್ತದೆ. ಅದರಿಂದಾಗಿ ಮೂಲಭೂತವಾದ ಸೌಕರ್ಯವನ್ನು ಒದಗಿಸುವಲ್ಲಿ ಹೊಸ ಸರ್ಕಾರ ಯಶಸ್ವಿಯಾಗಲಿ ಎನ್ನುವ ಮಾತನ್ನು ಹೇಳಿ, ಇವತ್ತು ನನಗೆ ಈ ಸಂದರ್ಭದಲ್ಲಿ ಇಷ್ಟೊಂದು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ನಾನು ನಿಮಗೆ ತುಂಬಾ ಆಭಾರಿಯಾಗಿದ್ದೇನೆ. ಅದರ ಜೊತೆಗೆ ಅನೇಕ ಹಿರಿಯ ಸಚಿವರುಗಳೆಲ್ಲಾ, ಅದರ ಜೊತೆಗೆ ಶ್ರೀಮಾನ್ ಲಕ್ಷ್ಮಯ್ಯನವರು ಕೂಡ ನನ್ನ ಬಗ್ಗೆ ಸಭಾಪತಿಯವರು ಬಹಳ ಉದ್ವೇಗದಿಂದ ಮಾತನಾಡಲಿಕ್ಕೆ ಹೋದರೆ ...

ವೈಸ್ ಛೇರ್ಮನ್ : ಆ ವಿಷಯ ಮತ್ತೆ ಪ್ರಸ್ತಾಪ ಮಾಡಲಿಕ್ಕೆ ಹೋದರೆ, ಅದು ಸರಿಹೋಗುವುದಿಲ್ಲ.

ಶ್ರೀ ಯು.ಆರ್. ಸಭಾಪತಿ : ಇಲ್ಲ, ಅದು ನಮ್ಮ ಭಾವನೆ ಏನು ಅಂದರೆ, 20 ವರ್ಷ ಇವರೆಲ್ಲಾ ಒಳಗಿದ್ದರೂ ಕೂಡ, ನಾವು 20 ವರ್ಷ ಹೊರಗಿದ್ದು ಕೊಂಡು ಜನರ ಸಂಕಷ್ಟಗಳು, ಬವಣೆ ಬಗ್ಗೆ ಚಿಂತನೆ ಮಾಡಿ, ಇವತ್ತು ಒಳಗೆ ಬಂದು ಇಲ್ಲಿ ಏನು ನಡೆಯುತ್ತಿದೆ ಎಂಬುದನ್ನು ನೋಡಿದಾಗ ನಮಗೆ ಸ್ವಲ್ಪ ಉದ್ವೇಗ ಬರುತ್ತದೆ. ಆ ಉದ್ವೇಗದಲ್ಲಿ ಕೆಲವು ಮಾತುಗಳನ್ನು ಆಡಿದ್ದರೆ, ಅದರ ಬಗ್ಗೆ ಅನ್ಯಥಾ ಭಾವಿಸಬಾರದು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ Sri J.A. Fernandes (Nominated M.L.A) ಮಾನ್ಯ ಅಧ್ಯಕ್ಷರೆ, I would like to support the demands for both Primary and Secondary as well as Highér Education. I would like to take the opportunity of thanking the Government of Karnataka for a very attractive package of fee concessions. We are very grateful. The concept of education should be dealt within totality, from the point of view of the Management, the administrative staff teaching and the students. Students would require the creation of the atmosphere where there should be joy in learning. Teachers need an environment, where the teaching powers could blossom and the entire educational complex should be able to contribute to the environment not merely of learning, but of tolerance, fairplay and a spirit of dedication for the social and economic regeneration of the nation. Institutions must have dedicated staff, properly equipped laboratories, spacious playgrounds, very well ventillated classrooms, teaching aids, etc. Education as you know, Mr. Deputy Speaker, is the lifeline of the nation of the destiny of our country is being shaped in our schools and colleges. There is a hunger for knowledge for improvement, for intellectual growth, which is in-born in our people and which must be satisfied. But, what do we have on the educational landscape? This is a murky field full of uncertainties, lack of purpose and direction leading to stoppage of work, unrest on the campus and even the students and teaching faculty are involved in unnecessary disturbances. We have Education without excellence, I don't think our State deserves it.

Commercialisation of education has become a sordid reality in Karnataka State and the Life giving waters have been polluted at the very source. It is necessary that the government cleans up the argen stables before matters get out of hand because corruption of the best is the worst type of corruption. It is also responsible in so small measure for our student's indiscipline. How do government schools fare to-day? The Chief Minister only the other day blamed the government for the high drop-out rate in schools. It is 58% plus schools have no proper buildings. I am talking about government schools. No furniture Teaching staff are absent. Teaching aids, practically nil. Schools are not properly equipped even with ordinary furniture. Yet the AEOs seem to have a very aggressive attitude towards minority institutions which are playing a very important role in supplementing the educational efforts of the government. Literacy in Karnataka, I think we should be ashamed of the combined average of roughly 56% i.e., 1.1 : 1. Almost 50% of the population in Karnataka are illiterate and after 48 years of independence it is a very sad and sorry commentary on the efforts of somebody nice people. We doubt the education department have very intelligent people, good teachers, etc. But, why is it that we are unable to raise the level of literacy in our State.

Apparently, there is some dereliction of duty of some point or the other in the staff, whereas the private enterprise is looked down upon and the institutions cannot survive without government aid.

It is, therefore, necessary for us to take another look at our private institutions to consider them as partners in progress and both should grow and prosper. With a certain degree of competitiveness, I think we should be able to introduce what one would call competitive vitality to improve the educational system in the State. Government aid to private institutions is hardly enough to maintain them and yet it is grudgingly given. By the time the institution gets its grant, 7 years have to pass. I think this has to be changed, because if you wish to raise the level of literacy in education in this State, it is necessary that the grant should be given at the time of recognition. Recognition also should not be delayed. We have cases where even to accept the papers to look at, about appliction for recognition of schools, AEOs in certain parts of the State are demanding a very heavey bribes. I think this is one of the most important aspects of our education system and the manner in which it is administered by our government should be correct. these AEOs whom we think at the cutting edge of the administration, and if they are not corrected now, the situation can only deteriorate.

I don't know why minority institutions should be given step-motherly treatment when it comes to recongition, registration or aid. According to the new regulations every institution i.e., a minority institution has to produce a minority certificate. Some of our schools have been in existence for over 100 years. It is a good exercise to deal with them and yet to produce the minority certificate is another exercise. It think it is very simple for the government to accept these minority institutions, by its very nature you can see sisters and the priests who run these institutions and it is easy for the government to recognise them. if this is not acceptable, I would appeal to the Hon. Government, Hon. Chief Minister and the Hon. Ministers of the Education Department, through you Mr. Speaker Sir, that a simple norm should be adopted for the institutions to be recognised and classified as such. May be the Arch Bishops or the Bishops of the city could certify a minority institutions. As a matter of fact, the minorities warrant a greater deal of attention and consideration and a certain amount of understanding from you, from the government. Especially if we go back, a few years to the time of the Constitution being framed Sardar Vallabhai Patel was the Chairman of the Advisory Committee dealing with the question of minorities, has this to say, 'Nobody can be more interested than us in India in the protection of our minorities.

Our mission is to satisfy every interest and safeguard the interests of minorities to their satisfaction.' Unfortunately the feeling I get as I go along with my work is that the majority community can get anything they want put on the statute book. The minority want more than what the majority enjoys. Therefore, I think that attitude should change and we, as your smaller brothers, we need the help, the consideration, the kindness and the goodwill of the majority community for our very survival so that both are the same. The object of minority is to preserve the right of minorities to place them on an equal pedestal and withdrawal from the vicissitudes of political controversy. I won't say much more on that except to make a fervent appeal to our brothers, big brothers as I would like to call them to have a little consideration for us so that we too can prosper for a long with the others. The founding fathers, in providing minority rights, were convinced with distinctive thoughts that the religious and cultural identity of minorities like Muslims and Christians should not be swamped by the majority, but must be carefully cultivated, creating a lovely mosaic, of unity in variety. Of late, we have found a considerable erosion of our minority rights and one looks to the future with a great deal of apprehension if one considers the fact that the Education Department has introduced certain draconian measures. Any measure that is hurting the minorities is certainly going to hurt the majority as well. Our institutions are teaching all Kannadiga students in the State. It is out of proportion to the number of minorities that we have. May be in a total admission in the institution run by our minorities hardly 10 to 20% belong to minority christian community and yet over 80% are Kannadigas who are our very brothers and sisters in this State.

We are looked down up in every sphere of activity when it comes to getting certain jobs done at the government level. As I said registration and recognition are exercises which we can do well without. Our schools and colleges are situated as far as Bidar, Gulbarga and places like that. They have to come to Bangalore every time just to sort out a few small issues with petty officials as the local officials make it very difficult for them to operate with a resonable degree of efficiency and consideration. Now, recently there is a blatant infringement on the minority rights at the introduction of a system for TTIs i.e., Teachers' Training Institutes a representative is to be nominated to attend to admissions. I think this is a flagrant violation of minority rights and I would appeal to the government to please withdraw this particular circular so that we have the freedom guaranteed to us under article 30(1) of the Constitution. I understand that the number of admissions have been considerably reduced over the years and on the one hand we see

its reduction and on the other there is a dearth of teachers. There are thousands of teachers yet to be appointed even in the government schools. We are being restricted not only on the number of people to be admitted, but in having somebody imposed upon us to decided as to who should be admitted. This, my dear Speaker Sir, is another infringement on our rights.

The only purpose for which that officer is there is to ensure that some of his candidates get admission without any concern for the strict regulations that we follow in admission. Again I mention that it has to be removed. Economy measures have been taken off for the teachers. But, non-teaching staff are still in doldrums. Can, an institution operate without the necessary clerical and other subordinate staff as far as school's functioning is concerned. Even in the appointment of teachers when a vacancy arises instead of allowing a teacher to be appointed immediately when the vacancy has arisen, it takes two to three years for the vacancy to be approved and it is accepted Not on the date on which appointment is made but the date on which it is approved. Wh should there be such a long delay in paying a poor teacher for the noble service that he or she renders. This is another anomaly my dear Speake Sir, which should be removed from the scope of the education system. Government should accept automatic filling up of such posts and it should not try to monitor appointments but to approve them. In what way have we hurt the government?

Mr. Chairman : You have been allotted 10 minutes.

Sri J.A. Fernandes : I have been waiting for the last few days. I won't take more time. Within 5 minutes I will finish. I am now talking about donations. Donations, I agree some people may be complaining about donations. No organisation can operate without a certain degree of financial viability Any organisation must get some returns for the investment made on the man-power, material, buildings, etc. Some of the donations being asked are minimum. What about the capitation fees taken by the colleges which go into lakhs? None of these colleges are run by the christian institutions and hardly any of the institutions take any donation. Yet, this is mentioned to us. I think, if we look back, may be donations have to be taken sometimes to appease the officers and there who deal with the cases as we found cases, where they have refused to even accept papers for considerations, delaying transfer certificates, delaying grants, delaying teachers' appointment etc. So many opportunities they get to harass the institutions which I think this

government - as we have come into this government, - must remove from the education system.

I think the officers at the taluk level must be given a proper professional course in public relations, in decency and honesty in dealing with minority institutions. Even as far as a minority certificate is concerned, I think, an affidavit should be enough. The Education system in the rural areas cannot possible follow the same pattern of formal education that we have in the urban areas and cities. For instance, in a small farming locality, parents would necessarily need their children to work in the field. So, the education system should be built around the seasons in the rural areas and perhaps be given some agricultural type education so that the villagers do not migrate to the cities. Their talent can be developed to suit the agricultural economy in the State to develop agriculture into a better operational factor. About colleges, there was a University Review Commission which recommended autonomy for colleges. I think we should try to adopt that because there are liberal grants from the UGC. I think Rs. 15 lakhs per college is given. This matter should also engage the attention of the government, because Bangalore University has about 300 members on its Academic Council. It is very unwidely. So, autonomy for colleges is one, I think, the government should think of. In giving education, again particularly higher education, I think, the banks should be made more responsive for granting loans for higher education.

To-day, it is almost impossible for a student who may be brilliant, but does not have the financial means, to pay for college education. I think this government should set a new land-mark by ensuring that the banks encourage such students by giving them loans easily and soft loans at lower rate of interest and longer term loans. We all know that the economy is opening up. We are getting foreigners coming into this country. Bangalore seems to be a very happy place for them and the multi-national companies are coming in. There will be a demand for more and more highly qualified members of our State. Now, what do we have in the education system? I can tell you that there should be no mandatory provision that a particular language must be made compulsory. It should be left to the parents to decide in what medium of instruction the children should study. If we don't improve our language capabilities we in Karnataka State will have to accept class-III and class-IV jobs and probably neighbouring states will run away in our State itself with the management and other supervisory control jobs. So, we have to be a little more liberal.

Mr. Chairman : Your time is over. You are asking 5 or 10 minutes every time. You are allotted 10 minutes. You have already taken nearly 20 minutes.

Sri J.A. Fernandes : I am speaking for the first time in this Assembly.

Mr. Chairman : You have another 4 years. Please bear with the Chair. I have to accommodate other Members.

Sri J.A. Fernandes : Within a few minutes, I will finish. We have the Minorities Development Corporation. This was primarily intended for the development of the minorities. No doubt what is being done is being done with the good intention within thfe framework of a very limited amount of money. My appeal to the department, through you, is that the Minorities Development Corporation should be patterned on the same line as the SC/STs Development Corporation as far as subsidy component for any project is concerned. To-day in the Minorities Development Corporation there is no subsidy component for loans for enterpreneurs. This is an urgent necessity. I would also to suggest that it is brought on par with the SC/STs Corporation because the difference in number is merely 5% to 7% in the population of the SCs and the minorities. We are considerably down in the scale. It should be levelled up a little and perhaps made into a Financial Corporation as well. In other words it can be known as Karnataka State Minorities Finance and Development Corporation. I am not even talking about language problem, because it is an explosive situation.

ಶ್ರೀ ಎಸ್. ರಾಜಣ್ಣ : ಮಾನ್ಯ ಅಧ್ಯಕ್ಷರೇ ನನ್ನದೊಂದು ಸಲಹೆ ಏನೆಂದರೆ ಶ್ರೀ ಜೆ.ಎ. ಫರ್ನಾಂಡಿಸ್‌ರವರು ಆಂಗ್ಲೋ ಇಂಡಿಯನ್ ಶಾಲೆಗಳಲ್ಲಿ ದಿನ ಬೆಳಗಾದರೆ ಸಂಪರ್ಕ ಇಟ್ಟುಕೊಂಡಿದ್ದಾರೆ. ಆರ್ಚ್‌ಬಿಶಪ್ ಆಫ್ ಬೆಂಗಳೂರ್ ಸಿಟಿ ಅವರಿಗೂ ಇವರಿಗೂ ಒಳ್ಳೆಯ ರಿಲೇಶನ್‌ಶಿಪ್ ಇದೆ. ಅವರು ಹೇಳುತ್ತಿರುವುದು ಈ ವಿದ್ಯಾ ಸಂಸ್ಥೆ ಶುದ್ಧ ಆಗದಿದ್ದ ಬಗ್ಗೆ ಯಾವ ಸಂಸ್ಥೆಗಳಿಗೂ ಸಾಧ್ಯವಾಗಲಿಲ್ಲ. ಅದಕ್ಕೋಸ್ಕರ ಶುದ್ಧ ಮಾಡುವುದಗೋಸ್ಕರ ಪ್ರಯತ್ನ ಪಡುತ್ತಿದ್ದಾರೆ. ಆದಕಾರಣ ಅವರಿಗೆ ಇನ್ನೂ ಐದು ನಿಮಿಷ ಹೆಚ್ಚಿಗೆ ಕೊಡಿ.

I am requesting Hon. Speaker to allot him to speak another 10 minutes more.

(Mr. Deputy Speaker in the Chair)

5.30 ಪಿ.ಎಂ

Sri J.A. FERNANDEZ : I would also make an appeal to the Government to provide our Legislators with some financial assistance for the development of their independent or individual constituencies. The Members of Parliament get what they call Local Area Development Scheme of one crore per annum. Andhra Pradesh gives 50 lakhs to its MLAs. Why should Karnataka lag behind in this. This way the real controversy that exists between the MLAs and the Zilla Parishad Chairman, could possible levelled of a little because they will have the right to decide and have 50 lakhs worth of development

projects in their constituencies. I would strongly make this recommendation so that everybody can benefit from the Governments generosity and development can be a better proposition.

Last but not least. We the Christian are not represented in any of the Board; or Committees nor are we represented in the Legislative Council. My last request to this House, to the Hon'ble Chief Minister, Council of Ministers through you Mr. Speaker, Sir, is that some representation will be given to us, and one more point St. John Medical college should kindly be removed from the purview of CET because to the best of my knowledge St. John Medical Colleges comes under All India combined Test and I don't know the exact technical term - as they come under the All India Control I would ask you most sincerely to remove them from the purview of the CET and apart from thanking you for the privilege to speak I would also thank the Government for their fine gesture to us and also thank the Secretariat for being so kind and helpful to me. Thank you.

+ ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ (ಧಾರವಾಡ) : ಸನ್ಮಾನ್ಯ ಅಧ್ಯಕ್ಷರೇ, 1995-96ನೇ ಸಾಲಿನ ಉನ್ನತ ಶಿಕ್ಷಣ, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಮಹಿಳೆ ಮತ್ತು ಮಕ್ಕಳ ಕಲ್ಯಾಣ, ಯುವಜನಸೇವೆ, ವ್ಯವಸಾಯ, ತೋಟಗಾರಿಕೆ, ಪಶುಸಂಗೋಪನೆ, ಮೀನುಗಾರಿಕೆ, ವಿದ್ಯುಚ್ಛಕ್ತಿ ಯೋಜನೆಗಳು, ಪ್ರವಾಸೋದ್ಯಮ ಇವೇ ಮುಂತಾದ ವಿಷಯಗಳ ಮೇಲಿನ ಚರ್ಚೆ ಏನಿದೆ, ಇದು ಎಲ್ಲಾ ವಿಷಯಗಳಿಗೆ ಒಂದು ಪ್ರತ್ಯೇಕವಾದಂಥ ಚರ್ಚೆ ಆಗಬೇಕಾಗಿತ್ತು. ಆದರೂ ಸಹಿತ, ಈ ಎಲ್ಲಾ ವಿಷಯಗಳ ಪೈಕಿ ನಾನು ಕೆಲವೇ ವಿಷಯಗಳ ಮೇಲೆ ನನ್ನ ಅನಿಸಿಕೆಗಳನ್ನು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಯಪಡಿಸುತ್ತಿದ್ದೇನೆ. ಶಿಕ್ಷಣದ ಬಗ್ಗೆ ಸರ್ಕಾರದ ನೀತಿ ಮುಖ್ಯವಾಗಿ ಸಂವಿಧಾನದ ಪ್ರಕಾರ 14 ವರ್ಷದವರೆಗೆ ಕೊಡಬೇಕು ಎನ್ನುವುದು ಆಗಿತ್ತು. ಇದು ನಮ್ಮ ಸಂವಿಧಾನ ಒಪ್ಪಿಕೊಂಡಂಥ ಒಂದು ವಿಧಾನ. ಆದರೂ ಸಹಿತ ನಮ್ಮ ಸಂವಿಧಾನದಲ್ಲಿ ಜನತೆಗೆ ಕೊಟ್ಟಿರುವ ಭರವಸೆ ಪ್ರಕಾರ ಏನು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಇವೆರಡನ್ನೂ ಉಚಿತವಾಗಿ ಕೊಟ್ಟು ಅದು ನಮ್ಮ ದೇಶದ ಮಕ್ಕಳಿಗೆ ದೊರಕಬೇಕಾಗಿತ್ತು, ಅದನ್ನು ಇದುವರೆಗೂ ಕೊಡಲಿಕ್ಕೆ ಆಗಲಿಲ್ಲ. ಇನ್ನುವರೆಗೂ ಏನು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಎಷ್ಟೊಂದು ಮಹತ್ವವನ್ನು ಕೊಡಬೇಕಿತ್ತು, ಅಷ್ಟು ಮಹತ್ವವನ್ನು ಸರ್ಕಾರ ಕೊಟ್ಟಿಲ್ಲವೆಂದು ನಾನು ಹೇಳಬೇಕಾಗುತ್ತದೆ. ಏಕೆಂದರೆ ನಾನು ಧಾರವಾಡದ ಶಾಸಕನಾಗಿದ್ದೇನೆ.

ಧಾರವಾಡವು ಬೆಂಗಳೂರು ನಂತರ ಎರಡನೇ ಒಂದು ದೊಡ್ಡ ಮಹಾನಗರವಾಗಿದೆ. ಕೇವಲ ಎರಡನೇ ಮಹಾನಗರ ಅಷ್ಟೇ ಅಲ್ಲ, ಒಂದು ಶೈಕ್ಷಣಿಕವಾಗಿ ಸುಸಂಸ್ಕೃತಿಯುಳ್ಳ, ಸಾಂಸ್ಕೃತಿಕ ಕೇಂದ್ರ ಕೂಡ ಆಗಿದೆ. ಇಂತಹ ಕೇಂದ್ರದಲ್ಲಿ ನಾವು ಶಿಕ್ಷಣಕ್ಕೆ ಎಷ್ಟೊಂದು ಪ್ರಾಧಾನ್ಯತೆಯನ್ನು ಕೊಡಬೇಕಾಗಿದೆ, ಆ ಪ್ರಾಧಾನ್ಯತೆಯನ್ನು ಇಲ್ಲಿ ಎಂದರೆ, ನಮ್ಮ ಧಾರವಾಡ ನಗರದಲ್ಲಿ ಕೊಟ್ಟಿಲ್ಲ. ಅದರಲ್ಲೂ ಪ್ರಾಥಮಿಕ ಶಾಲೆಗೆ ನಾವು ಪ್ರಾಧಾನ್ಯತೆಯನ್ನು ಕೊಟ್ಟಿಲ್ಲ. ಪ್ರಾಥಮಿಕ ಶಾಲೆಗಳನ್ನು ಅಲ್ಲಿ ನೋಡುವುದಾದರೆ, ನನ್ನ ಮತಕ್ಷೇತ್ರದಲ್ಲಿ 43 ಪ್ರಾಥಮಿಕ ಶಾಲೆಗಳು ಇವೆ. ಆ ಶಾಲೆಗಳಲ್ಲಿ ಅನೇಕ ಶಾಲೆಗಳಲ್ಲಿ ಮಕ್ಕಳಿಗೆ ಕೊಡಲಿಕ್ಕೆ ಸ್ಥಳಾವಕಾಶ ಇಲ್ಲ. ಅಲ್ಲಿ ಕೊಠಡಿಗಳ ಕೊರತೆ ಇದೆ. ಅಷ್ಟೇ

ಅಲ್ಲ, ಒಂದೊಂದು ಕೊಠಡಿಯಲ್ಲಿ 40-50 ಮಂದಿ ಮಕ್ಕಳು ಇರಬೇಕಾದ ಕಡೆ, ಇಲ್ಲಿ ಒಂದು ಕೊಠಡಿಯಲ್ಲಿ ಒಂದು ನೂರು ಹುಡುಗರವರೆಗೆ ಸಹಿತ ಕೂಡಿಸುತ್ತಿದ್ದಾರೆ. ಇದರಿಂದ ಅಲ್ಲಿ ಏನು ಕಂಡುಬರುತ್ತದೆ ಎಂದರೆ, ಪ್ರಾಥಮಿಕ ಶಾಲಾ ಕೊಠಡಿಗಳು ದನದ ಕೊಟ್ಟಿಗೆಗೆ ಸಮಾನವಾಗಿ ಇರುವ ಸ್ಥಿತಿಯಲ್ಲಿ ಧಾರವಾಡ ನಗರದಲ್ಲಿ ಇದೆ. ಉಳಿದ ಬೇರೆ ಜಿಲ್ಲೆಗಳಲ್ಲಿ ಮತ್ತು ತಾಲ್ಲೂಕುಗಳಲ್ಲಿ ಯಾವ ಪರಿಸ್ಥಿತಿ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಇದೆ, ಅದನ್ನು ಇಲ್ಲಿ ಹೋಲಿಸಿದಾಗ ಬಹಳ ಕೆಟ್ಟ ಪರಿಸ್ಥಿತಿ ಇರುವುದನ್ನು ಮನಗಂಡಾಗ ಇದರ ಬಗ್ಗೆ ನಾವೆಲ್ಲರೂ ಯೋಚನೆ ಮಾಡಬೇಕಾಗಿದೆ.

ಇವತ್ತು ಸರ್ಕಾರ ನನಗೆ ಕೊಟ್ಟಿರುವ ಮಾಹಿತಿಯಲ್ಲಿ ಧಾರವಾಡ ನಗರದಲ್ಲಿ 145 ಕೊಠಡಿಗಳ ಕೊರತೆ ಇದೆ ಎಂದು ಇದೆ. ಇದು ವಿವರವನ್ನು ಸರ್ಕಾರದವರು ಕೊಟ್ಟಿದ್ದಾರೆ. ಆದರೆ ನನ್ನ ಮಾಹಿತಿ ಪ್ರಕಾರ ಕನಿಷ್ಟ 200ಕ್ಕಿಂತ ಹೆಚ್ಚು ಶಾಲಾ ಕೊಠಡಿಗಳು ಅಲ್ಲಿ ಸಧ್ಯ ಇರುವ ಮಕ್ಕಳಿಗಾಗಿ ಬೇಕಾಗಿವೆ. ಇವತ್ತು ಅಲ್ಲಿ ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿ ಶಿಫ್ಟ್ ಪ್ರಕಾರ ತರಗತಿಗಳು ನಡೆಯುತ್ತಿವೆ. ಬೆಳಿಗ್ಗೆ ಒಂದು ಹಂತದಲ್ಲಿ ಕೆಲವು ತರಗತಿಗಳು ಮತ್ತು ಮಧ್ಯಾಹ್ನ ಮೇಲೆ ಕೆಲವು ತರಗತಿಗಳು ನಡೆಯುತ್ತಿರುವುದನ್ನು ಕಾಣಬಹುದು. ಇದು ನಾವು ಶಿಕ್ಷಣಕ್ಕೆ ಕೊಡುತ್ತಿರತಕ್ಕಂಥ ಗಮನವಾಗಿದೆ. ಇದು ಶಿಕ್ಷಣಕ್ಕೆ ನಾವು ಕೊಡುತ್ತಿರುವಂಥ ಆದ್ಯತೆಯಾಗಿದೆ. ಇವತ್ತು ಎಲ್ಲರೂ ಸುಶಿಕ್ಷಿತರಾಗಬೇಕು, ವಿದ್ಯಾವಂತರಾಗಬೇಕು ಎನ್ನುವ ದೃಷ್ಟಿಯಲ್ಲಿ ಸರ್ಕಾರ ಮೊಟ್ಟಮೊದಲನೆಯ ಆದ್ಯತೆಯನ್ನು ಪ್ರಾಥಮಿಕ ಶಿಕ್ಷಣಕ್ಕೆ ಕೊಡಬೇಕಾಗಿದೆ. ಈ ದಿಸೆಯಲ್ಲಿ ಇದಕ್ಕೆ ಮೂಲಭೂತವಾಗಿ ಇರಬೇಕಾದ ಸೌಕರ್ಯಗಳು, ಕೊಠಡಿಗಳು ಅಲ್ಲಿ ಇಲ್ಲ, ಆಮೇಲೆ ಅಲ್ಲಿ ಮಕ್ಕಳಿಗೆ ಆಟ ಆಡಲಿಕ್ಕೆ ಆಟದ ಬಯಲು ಇಲ್ಲ, ಮಕ್ಕಳಿಗೆ ಬೇಕಾದಂಥ ಗ್ರಂಥಾಲಯ ವ್ಯವಸ್ಥೆ ಇಲ್ಲ. ಶಹರದಲ್ಲಿರುವಂಥ ಶಾಲೆಗಳಿಗೆ ಮಕ್ಕಳು ಹೋಗಿ ಅಲ್ಲಿ ಕಸ ಗುಡಿಸಬೇಕು. ಗ್ರಾಮಾಂತರ ಪ್ರದೇಶದಲ್ಲಿ ಇರತಕ್ಕಂಥ ಶಾಲೆಗಳಲ್ಲಿ ಹುಡುಗರೇ ಹೋಗಿ ಕೆಲಸ ಮಾಡುತ್ತಾರೆ ಆದರೆ ಶಹರಗಳಲ್ಲಿ ಈ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ನಗರಗಳಲ್ಲಿ ಪ್ರಾಥಮಿಕ ಶಾಲೆಗಳು ಕಸದ ಕೊಂಪೆಗಳಾಗುವಂಥ ಸ್ಥಿತಿ ನಿರ್ಮಾಣವಾಗಿದೆ. ನಮ್ಮಲ್ಲಿ ಮೊದಲು ಆಯಾಗಳು ಎಂದು ಇದ್ದರು.

ಒಬ್ಬೊಬ್ಬ ಮಹಿಳೆಯನ್ನು ಒಂದೊಂದು ಶಾಲೆಗೆ ಕೊಟ್ಟಿದ್ದರು. ಶಾಲೆಗಳನ್ನು ಶುಚಿ ಮಾಡುವುದಕ್ಕೆ, ನೀರು ಒದಗಿಸುವುದಕ್ಕೆ, ಸಣ್ಣ ಮಕ್ಕಳು ಇದ್ದರೆ ಅವರನ್ನು ಕರೆದುಕೊಂಡು ಹೋಗಿ ಬಿಡುವುದಕ್ಕೆ, ಕರೆದುಕೊಂಡು ಬರುವುದಕ್ಕೆ, ಅವರಿಗೆ ಏನಾದರೂ ಅಪಾಯವಾದರೆ ಅವರ ಶುಶ್ರೂಶೆ ನೋಡಿಕೊಳ್ಳುವುದಕ್ಕೆ ಎಂದು ಇವರು ಇದ್ದರು. ಆ ಪ್ರಕಾರ ಪ್ರಾಥಮಿಕ ಶಾಲೆಗಳಿಗೆ ಒಬ್ಬೊಬ್ಬ ಆಯಾ ಇರುವ ಹಾಗೆ ಮಾಡತಕ್ಕದ್ದು ಬಹಳ ಅಗತ್ಯ ಇದೆ. ಮತ್ತು ಅವರಿಗೆ ಸರಿಯಾದಂಥ ಪುಸ್ತಕಗಳನ್ನು ಇಡಲಿಕ್ಕೆ ಗ್ರಂಥಾಲಯ, ಆಟದ ಬಯಲು, ಇಂತಹ ಸಮಸ್ಯೆನ್ನು ಮಾಡಬೇಕಾಗಿದೆ. ಇವತ್ತು ಈ ಪ್ರಾಥಮಿಕ ಶಾಲೆಗಳ ಪರಿಸ್ಥಿತಿ ಈ ರೀತಿ ಇರುವುದರಿಂದಲೇ, ಎಲ್ಲಾ ಕಡೆ ಖಾಸಗಿಯಾಗಿ ಮತ್ತು ಆಂಗ್ಲ ಪ್ರಾಥಮಿಕ ಶಾಲೆಗಳನ್ನು ತೆರೆಯುತ್ತಿದ್ದಾರೆ. ನಮ್ಮ ಪ್ರಾಥಮಿಕ ಶಾಲೆಗಳು ಚೆನ್ನಾಗಿ ನಡೆಯುತ್ತಿದ್ದರೆ, ಅವುಗಳ ಸ್ಥಿತಿ ಚೆನ್ನಾಗಿದ್ದರೆ, ಸರಿಯಾದ ಶಾಲಾ ಕೊಠಡಿಗಳು, ಒಂದು ಕೊಠಡಿಯಲ್ಲಿ 40-50 ಮಕ್ಕಳು ಕೂಡಲಿಕ್ಕೆ ಬೆಂಚು, ಹಲಗೆ, ಅವರಿಗೆ ಬೇಕಾದಂಥ ಮೂಲಭೂತ ಸೌಕರ್ಯಗಳನ್ನು ಕನಿಷ್ಟಪಕ್ಷ ಕೊಟ್ಟಿದ್ದರೆ ಇವತ್ತು ಇಷ್ಟೊಂದು ಆಂಗ್ಲ ಶಾಲೆಗಳು ಪ್ರಾರಂಭವಾಗುತ್ತಿವೆ ಮತ್ತು ಇವುಗಳಲ್ಲಿ ಬಹುತೇಕ ಶಾಲೆಗಳು ಏನು ಅನಧಿಕೃತವಾಗಿ ನಡೆಯುತ್ತಿವೆ; ಇದು ನಡೆಯುವುದಕ್ಕೆ ಅವಕಾಶ ಇರುತ್ತಿರಲಿಲ್ಲ. ಈ ದೃಷ್ಟಿಯಿಂದ ಮೊಟ್ಟ ಮೊದಲನೆಯ

ಆದ್ಯತೆಯನ್ನು ಕನ್ನಡ ಪ್ರಾಥಮಿಕ ಶಾಲೆಗಳಿಗೆ ಸರ್ಕಾರ ಕೊಡಬೇಕಾಗಿದೆ ಎಂದು ನಾನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆ ಪಡುತ್ತೇನೆ.

ಇನ್ನು ಎಸ್.ಎಸ್.ಎಲ್.ಸಿ. ಪರೀಕ್ಷೆ ನಡೆಸಲು ಎಷ್ಟೋ ಕಡೆ ಎಸ್.ಎಸ್.ಎಲ್.ಸಿ. ಸೆಂಟರ್ಸ್‌ಗಳೆಂದು ಕೊಟ್ಟಿದ್ದಾರೆ. ಆದರೆ ಎಲ್ಲೆಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆ ಕೇಂದ್ರಗಳೆಂದು ಮಾಡಿದ್ದಾರೆ, ಅಲ್ಲೆಲ್ಲಾ ಮಾಸ್ ಕಾಪಿಯಿಂಗ್ ನಡೆಯುವ ವ್ಯವಸ್ಥೆ ಇದೆ. ಎಸ್.ಎಸ್.ಎಲ್.ಸಿ. ಸೆಂಟರ್‌ಗಳನ್ನು ಇಷ್ಟೊಂದು ಕಡೆಗೆ ಕೊಡುವಂಥ ಅಗತ್ಯವಾದರೂ ಇದೆಯೇ ಹೇಗೆ? ಈ ರೀತಿಯ ಶಿಕ್ಷಣವನ್ನು ಅವರಿಗೆ ಕೊಟ್ಟರೆ ಮುಂದಿನ ಗತಿ ಏನು? ಈ ಒಂದು ವ್ಯವಸ್ಥೆ, ಎಸ್.ಎಸ್.ಎಲ್.ಸಿ. ಸೆಂಟರ್‌ಗಳು ಏನಿವೆ, ಎಲ್ಲೆಲ್ಲಿ ಮಾಸ್ ಕಾಪಿಯಿಂಗ್ ನಡೆಯುತ್ತಿದೆ, ಇದನ್ನು ತಡೆಗಟ್ಟಲೇಬೇಕು. ಈ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕಾದರೆ ಈ ಮಾಸ್ ಕಾಪಿಯಿಂಗ್ ವ್ಯವಸ್ಥೆಯನ್ನು ತಡೆಗಟ್ಟಬೇಕಾದರೆ ತುರ್ತು ಕ್ರಮ ತೆಗೆದುಕೊಳ್ಳಬೇಕು. ಇಷ್ಟೊಂದು ಪ್ರಮಾಣದಲ್ಲಿ ಮಾಸ್ ಕಾಪಿಯಿಂಗ್ ನಡೆಯಬೇಕಾದರೆ, ಇದಕ್ಕೆ ಅನೇಕ ಶಿಕ್ಷಕರು ಕಾರಣರಿದ್ದಾರೆ ಮತ್ತು ಪಾಲಕರು ಕೂಡ ಕಾರಣರಿದ್ದಾರೆ ಎಂದು ನಾನು ಹೇಳುತ್ತೇನೆ. ಆದ್ದರಿಂದ ಮಾಸ್ ಕಾಪಿಯಿಂಗ್ ಮಾಡುವ ವ್ಯವಸ್ಥೆಯನ್ನು ಮೊದಲು ತಡೆಗಟ್ಟಬೇಕು. ಇದೇ ರೀತಿ ಪಿ.ಯು.ಸಿ. ಒಂದನೇ ಮತ್ತು ಎರಡನೇ ವರ್ಷದ ಪರೀಕ್ಷೆಗಳು ನಡೆಯುತ್ತವೆ.

ಎರಡನೇ ವರ್ಷದ ಪಿ.ಯು.ಸಿ. ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ತೆಗೆದುಕೊಳ್ಳತಕ್ಕಂಥ ಮಕ್ಕಳಿಗೆ ಹೆಚ್ಚಿನ ಉನ್ನತ ವಿದ್ಯಾಭ್ಯಾಸ ಅವಕಾಶ ಸಿಗುವುದರಿಂದ, ಎಲ್ಲಾ ಕಡೆಯಲ್ಲಿಯೂ ಸಹ ವ್ಯವಸ್ಥಿತವಾಗಿ ಕಾಪಿಯಿಂಗ್ ಮಾಡುವ ವ್ಯವಸ್ಥೆ ಎಲ್ಲಾ ಸೆಂಟರ್‌ಗಳಲ್ಲೂ ನಡೆಯುತ್ತಿದೆ. ಇದನ್ನು ಸರ್ಕಾರದವರು ಹೇಗೆ ತಡೆಗಟ್ಟುತ್ತಾರೆ? ಈ ವ್ಯವಸ್ಥೆಯನ್ನು ಸರಿಪಡಿಸಬೇಕಾದದ್ದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಇವತ್ತು ಕಂಪ್ಯೂಟರ್ ಮೂಲಕ ಅವರ ಮಾರ್ಕ್ಸ್‌ನ್ನು, ಅವರ ಮೆರಿಟ್‌ನ್ನು ಕಾಣುತ್ತಿದ್ದಾರೆ. ಇದರಲ್ಲೂ ಸಹಿತ ದೋಷಗಳು ಆಗಬಹುದು ಎಂಬ ಸಂಶಯ ಅನೇಕ ಜನರಿಗೆ ಇದೆ. ಇದನ್ನೆಲ್ಲಾ ತಪಾಸಣೆ ಮಾಡುವ ಆವಶ್ಯಕತೆ ಇದೆಯೆಂದು ನಾನು ಮಾನ್ಯ ಶಿಕ್ಷಣ ಸಚಿವರನ್ನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಇನ್ನು ಯೂನಿವರ್ಸಿಟಿ ವಿಶ್ವವಿದ್ಯಾನಿಲಯಗಳ ಶಿಕ್ಷಣದ ಬಗ್ಗೆ ಹೇಳುವುದಾದರೆ, ಈವತ್ತು ಕರ್ನಾಟಕದಲ್ಲಿ ಇಷ್ಟೊಂದು ಯೂನಿವರ್ಸಿಟಿ ವಿಶ್ವವಿದ್ಯಾನಿಲಯಗಳ ಅಗತ್ಯತೆ ಇದೆಯೇ ಹೇಗೆ ಎನ್ನುವಂಥ ಪ್ರಶ್ನೆ ಇದೆ. ಕರ್ನಾಟಕದಲ್ಲಿ ಇಷ್ಟೊಂದು ವಿಶ್ವವಿದ್ಯಾನಿಲಯಗಳ ಅವಶ್ಯಕತೆ ಇದೆಯೇ ಹೇಗೆ ಮತ್ತು ಪ್ರತಿಯೊಂದು ವಿಶ್ವವಿದ್ಯಾನಿಲಯಗಳಲ್ಲೂ ಎಷ್ಟು ವಿಷಯಗಳ ವಿಭಾಗಗಳು ಇವೆ, ಅಷ್ಟು ವಿಭಾಗಗಳಲ್ಲಿಯೂ ಸರಿಯಾದ ವಿದ್ಯಾರ್ಥಿಗಳ ಸಂಖ್ಯೆ ಇದೆಯೇ ಹೇಗೆ ಎನ್ನುವುದನ್ನು ನೋಡಬೇಕಾಗಿದೆ ಮತ್ತು ಅನೇಕ ವಿಭಾಗಗಳಲ್ಲಿ ವಿದ್ಯಾರ್ಥಿಗಳು ಇಲ್ಲ ಎನ್ನುವುದು ಕಂಡುಬಂದಿದೆ. ಇಂತಹ ವಿಭಾಗಗಳು ಎಲ್ಲಾ ಕಡೆ ಇರುವ ಅಗತ್ಯತೆ ಏನು? ಕೆಲವು ವಿಭಾಗಗಳ ಅಗತ್ಯತೆ ಇದ್ದರೆ ಕರ್ನಾಟಕ ಯೂನಿವರ್ಸಿಟಿಯಲ್ಲಿರಬಹುದು, ಬೆಂಗಳೂರು ಯೂನಿವರ್ಸಿಟಿಯಲ್ಲಿರಬಹುದು, ಅಥವಾ ಕೆಲವು ವಿಷಯಗಳ ವಿಭಾಗಗಳು ಮೈಸೂರು ಯೂನಿವರ್ಸಿಟಿಯಲ್ಲಿರಬಹುದು. ಇವತ್ತು ಈ ವಿಶ್ವವಿದ್ಯಾನಿಲಯಗಳ ಗುಣಮಟ್ಟವನ್ನು ಕಾಪಾಡುವುದಕ್ಕೆ ಹೆಚ್ಚು ಆದ್ಯತೆಯನ್ನು ಕೊಡಬೇಕಾಗಿದೆ. ಇವತ್ತು ಅನೇಕ ಕಡೆ ಉಪನ್ಯಾಸಕರ ಕೊರತೆಯನ್ನು ನೋಡುತ್ತಿದ್ದೇವೆ. ಇಂತಹ ಶಿಕ್ಷಣವನ್ನು ಕೊಡುವುದರಿಂದ, ಮಕ್ಕಳ ಮುಂದಿನ ಭವಿಷ್ಯಕ್ಕೆ ತೊಂದರೆಯಾಗುತ್ತದೆ.

ಮುಂದಿನ ಉದ್ಯೋಗಾವಕಾಶಗಳನ್ನು ಗಮನದಲ್ಲಿಟ್ಟುಕೊಂಡು ಹಾಗೂ ಅವುಗಳನ್ನು ಗುರುತಿಸಿ, ಇವತ್ತು ವಿಶ್ವವಿದ್ಯಾನಿಲಯದ ಶಿಕ್ಷಣವನ್ನು ನಾವು ಗಮನಹರಿಸಬೇಕಾಗಿದೆ. ಇವತ್ತು ಅನುದಾನ ಪಡೆಯುತ್ತಿರುವಂಥ ಕಾಲೇಜುಗಳಲ್ಲಾಗಲೀ ಅಥವಾ ಸರ್ಕಾರದ

ಕಾಲೇಜುಗಳಲ್ಲಾಗಲೀ ಸರಿಯಾಗಿ ಉಪನ್ಯಾಸಕರು ಇಲ್ಲ, ಪ್ರಯೋಗಾಲಯಗಳು ಇಲ್ಲ, ಗ್ರಂಥಾಲಯಗಳು ಇಲ್ಲ, ಇಂತಹ ಸ್ಥಿತಿಯಲ್ಲಿ, ಅನುದಾನ ಪಡೆಯುವಂಥ ಕಾಲೇಜುಗಳನ್ನು ಮೊಟ್ಟಮೊದಲ ಮಟ್ಟ ಹಾಕಬೇಕು. ಮತ್ತು ಸರ್ಕಾರದ ಕಾಲೇಜುಗಳ ಬಗ್ಗೆ ವ್ಯವಸ್ಥಿತವಾಗಿ, ಮೂಲಭೂತವಾದ ಅಗತ್ಯತೆಗಳನ್ನು ಕೊಡಬೇಕೆನ್ನುವ ವಿಚಾರವನ್ನು ಹೇಳುತ್ತೇನೆ. ಇವತ್ತಿನ ದಿವಸ ಮಕ್ಕಳಿಗೆ ತಾಂತ್ರಿಕ ಶಿಕ್ಷಣವನ್ನು ಕೊಡಬೇಕಾಗಿದೆ. ಅದರಲ್ಲಿ ಸ್ವಂತ ಕಾಲಮೇಲೆ ನಿಂತು, ಸ್ವಾವಲಂಬಿಗಳಾಗಿ ಸ್ವಾಭಿಮಾನದಿಂದ ಬದುಕುವಂಥ ಸಮಾಜವನ್ನು ನಿರ್ಮಾಣ ಮಾಡಬೇಕಾಗಿದೆ. ಇವತ್ತು ಸ್ವಾಭಿಮಾನದಿಂದ, ಸ್ವಾವಲಂಬಿಯಾಗಿ ಬದುಕುವಂಥ ಸಮಾಜವನ್ನು ನಿರ್ಮಾಣ ಮಾಡಬೇಕಾದರೆ, ಇವತ್ತು ಎಸ್.ಎಸ್.ಎಲ್.ಸಿ. ನಂತರ ಪಿ.ಯು.ಸಿ. ನಂತರ, ಎರಡು ವರ್ಷಗಳಲ್ಲಿ ಅವರು ಸ್ವಾವಲಂಬಿಗಳಾಗಿ ಸಮಾಜದಲ್ಲಿ ಬೇರೆ ಬೇರೆ ವೃತ್ತಿಯಲ್ಲಿ ತೊಡಗುವಂಥ ಡಿಪ್ಲೊಮೊಗಳಾಗಲೀ ಅಥವಾ ಐ.ಟಿ.ಐ. ಮುಂತಾದ ತಾಂತ್ರಿಕ ಶಿಕ್ಷಣವನ್ನು ಕೊಡಬೇಕಾಗಿದೆ. ಕರ್ನಾಟಕ ರಾಜ್ಯದಲ್ಲಿ 49 ಐ.ಟಿ.ಐ. ಕೇಂದ್ರಗಳಿವೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ, ಈ ಐ.ಟಿ.ಐ.ಗಳಲ್ಲಿ ಸರಿಯಾದ ಪ್ರಿನ್ಸಿಪಾಲರುಗಳು ಇಲ್ಲ, ಅರ್ಹತೆ ಪಡೆದಂಥ ಪ್ರಿನ್ಸಿಪಾಲರುಗಳು ಇಲ್ಲವೆಂದು ಕೇಳಿಕೊಂಡಿದ್ದೇನೆ. ಧಾರವಾಡ ನಗರದಲ್ಲಿ ಒಂದು ಐ.ಟಿ.ಐ. ಪ್ರಾರಂಭ ಮಾಡಬೇಕೆಂದು ಮಾನ್ಯ ಮಂತ್ರಿಗಳಾದ ಗುರುನಾಥ್‌ರವರನ್ನು ವಿನಂತಿ ಮಾಡಿಕೊಂಡಿದ್ದೇನೆ. ಅವರೂ ಕೂಡ ಇದೇ ವರ್ಷ ಪ್ರಾರಂಭ ಮಾಡಿಸುವ ಭರವಸೆಯನ್ನೂ ಕೊಟ್ಟಿದ್ದಾರೆ. ಇಂತಹ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ಕೊಡುವಂಥ ಅಗತ್ಯತೆ ಇದೆ.

ಅವರು ಸ್ವಾವಲಂಬಿಗಳಾಗಿ, ಸ್ವಾಭಿಮಾನದಿಂದ ಬದುಕುವುದಕ್ಕೆ ಐ.ಟಿ.ಐ. ಶಿಕ್ಷಣದ ಅಗತ್ಯತೆ ಇದೆಯೆಂದು ನಾನು ಹೇಳುತ್ತೇನೆ. ಮಕ್ಕಳಿಗೆ ಪ್ರಸಾದ ನಿಲಯಗಳ ಪರಿಸ್ಥಿತಿ ಏನಿದೆ ಎನ್ನುವ ಕಡೆಗೆ ಸರ್ಕಾರ ಗಮನಹರಿಸಬೇಕು. ಪ್ರಾಥಮಿಕ ಶಾಲೆ, ಪ್ರೌಢಶಾಲೆ ಅಥವಾ ಕಾಲೇಜುಮಟ್ಟದಲ್ಲಿ ಹಾಗೂ ಸ್ನಾತಕೋತ್ತರ ಮಟ್ಟದಲ್ಲಿ ಎಷ್ಟೋ ಹಾಸ್ಟಲುಗಳನ್ನು ಮಾಡಿದ್ದೇವೆ. ಆ ಹಾಸ್ಟಲುಗಳಿಗೆ ಸರಿಯಾದ ಸೌಲಭ್ಯ ಇದೆಯೇ ಹೇಗೆ, ಅಲ್ಲಿ ಮಕ್ಕಳಿಗೆ ಅರ್ಹತೆ ಪ್ರಕಾರ, ಯಾರಿಗೆ ಅರ್ಹತೆ ಇದೆ ಅಂತಹವರಿಗೆ ಅವಕಾಶ ಸಿಗಬೇಕು. ಇವತ್ತು ಆ ರೀತಿ ಸಿಗುತ್ತಿದೆಯೇ ಹೇಗೆ? ಇವತ್ತಿನ ದಿವಸ ಬೇರೆ ಬೇರೆ ಜನಾಂಗಕ್ಕೆ ಸಂಬಂಧಿಸಿದ ಹಾಸ್ಟಲುಗಳ ಅಗತ್ಯತೆ ಇದೆಯೇ ಹೇಗೆ? ಇದು ನನ್ನ ಮೂಲಭೂತ ಪ್ರಶ್ನೆ. ಇವತ್ತು ಇದು ಅಂಬೇಡ್ಕರ್ ಹಾಸ್ಟಲ್, ಇದೊಂದು ಲಿಂಗಾಯಿತರ ಹಾಸ್ಟಲ್, ಇದೊಂದು ವಾಲ್ಮೀಕಿ ಹಾಸ್ಟಲ್ ಹೀಗೆ ಬೇರೆ ಬೇರೆ ಜನಾಂಗಗಳನ್ನು ವಿಂಗಡಿಸುವಂಥ ಹಾಸ್ಟಲುಗಳನ್ನು ಮಾಡುವುದು ಸರಿಯಾದುದಲ್ಲ. ವಿದ್ಯೆಗೆ ಪ್ರಾಥಮಿಕ ಹಂತದಲ್ಲಿರುವಂಥ ಹಾಸ್ಟಲುಗಳು ಬೇರೆ, ಪ್ರೌಢಶಾಲೆಗಳಿಗೆ ಸಂಬಂಧಿಸಿದ ಹಾಸ್ಟಲುಗಳು ಬೇರೆ, ಕಾಲೇಜುಮಟ್ಟದಲ್ಲಿರುವಂಥ ಹಾಸ್ಟಲುಗಳು ಬೇರೆ. ಈ ವಿದ್ಯಾರ್ಥಿಗಳಿಗೆ, ಆಯಾ ಶಿಕ್ಷಣಕ್ಕೆ ಸಂಬಂಧಿಸಿದ ಹಾಸ್ಟಲುಗಳನ್ನು ಮಾಡಬೇಕೇ ವಿನಹ, ಒಂದೊಂದು ವರ್ಗಕ್ಕೆ, ಸಮಾಜಕ್ಕೆ ಸಂಬಂಧಪಟ್ಟ ಹಾಸ್ಟಲುಗಳನ್ನು ಮಾಡುವುದು ಸರಿಯಲ್ಲ.

ಇವತ್ತು ದೊಡ್ಡ ದೊಡ್ಡ ವಿಚಾರಗಳನ್ನು ಸಮಾಜದ ಮುಂದೆ ಹೇಳುವಂಥ ಸರ್ಕಾರ, ಈ ವಿಚಾರದಲ್ಲಿ ತಪ್ಪು ದಾರಿಯಲ್ಲಿ ನಡೆಯುತ್ತಿದೆ, ಇದರ ಬಗ್ಗೆ ಸರ್ಕಾರ ಗಮನಹರಿಸಬೇಕಾಗಿದೆ. ಇಷ್ಟೊಂದು ವಿಚಾರವನ್ನು ಶಿಕ್ಷಣದ ಬಗ್ಗೆ ಹೇಳುತ್ತಾ, ಇವತ್ತಿನ ದಿವಸ ಪ್ರಾಥಮಿಕ ಶಿಕ್ಷಣದ ಗುಣಮಟ್ಟ ಸುಧಾರಣೆಗಾಗಿ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಡೈಯಟ್ ಎಂದು ಇದೆ. ಈ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಅಭಿವೃದ್ಧಿ)ಗಳು ಪ್ರತಿ ಜಿಲ್ಲೆಗೂ, 20 ಸಂಸ್ಥೆಗಳು ಪ್ರಾರಂಭವಾಗಿದ್ದರೂ, ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಹಣವನ್ನು ಪೂರ್ಣ ಖರ್ಚುಮಾಡುತ್ತಾ ಇಲ್ಲವೆಂದು ನನಗೆ ತಿಳಿದುಬಂದಿದೆ. 20 ಜಿಲ್ಲೆಗಳಲ್ಲಿ ಒಂದೊಂದು ಸಂಸ್ಥೆ ಇದ್ದಾಗ್ಯೂ, ಕೇಂದ್ರ

ಸರ್ಕಾರ ಪೂರ್ಣ ಹಣ ಕೊಡುತ್ತದೆ. ಆ ಹಣವನ್ನು ಸರಿಯಾಗಿ ಉಪಯೋಗ ಮಾಡುತ್ತಾ ಇಲ್ಲವೆಂದು ಕಂಡು ಬರುತ್ತಿದೆ. ಪ್ರಾಥಮಿಕ ಶಿಕ್ಷಣಕ್ಕೆ ಮತ್ತು ಪ್ರೌಢಶಿಕ್ಷಣಕ್ಕೆ ಕೇಂದ್ರಸರ್ಕಾರ ಏನು ಹಣ ಕೊಡುತ್ತದೆ, ಅದು ಸರಿಯಾದ ರೀತಿಯಲ್ಲಿ ವಿನಿಯೋಗವಾಗಬೇಕು. ಮತ್ತು ಗುಣಮಟ್ಟದಲ್ಲಿ ಸಾಕಷ್ಟು ಸುಧಾರಣೆ ಮಾಡುವಂಥ ಕೆಲಸವನ್ನು ಸರ್ಕಾರ ಮಾಡಬೇಕೆಂದು ಹೇಳುತ್ತೇನೆ. ಈಗ ಜಾಗತಿಕ ಬ್ಯಾಂಕಿನ ಸಹಾಯದಿಂದ, ಕೆಲವು ಯೋಜನೆಗಳನ್ನು ಬೆಳಗಾವಿ, ರಾಯಚೂರು, ಕೋಲಾರ ಮತ್ತು ಮಂಡ್ಯ ಜಿಲ್ಲೆಗಳಲ್ಲಿ 1993 ರಿಂದಲೇ ಪ್ರಾರಂಭಿಸಿ, ನಡೆಯುತ್ತಿವೆ. ಆದರೆ, ಇದರ ಬಗ್ಗೆ ನಿಶ್ಚಿತ ಪ್ರಗತಿ ಏನೂ ಕಂಡುಬಂದಿಲ್ಲ. ಇಂತಹ ವ್ಯವಸ್ಥೆ ಇವತ್ತು ಶಿಕ್ಷಣ ಇಲಾಖೆಯಲ್ಲಿದೆ. ಇದರ ಬಗ್ಗೆ ಚಿಂತನೆ ಮಾಡಬೇಕು. ಮತ್ತು ಧಾರವಾಡ ನಗರದಲ್ಲಿ, 1984ರಲ್ಲಿ ವಸತಿ ಪ್ರೌಢಶಾಲೆಗಳನ್ನು ಸರ್ಕಾರ ಪ್ರಾರಂಭ ಮಾಡಿದೆ. ಅದೂ ಬಾಪೂಜಿಯವರ ಹೆಸರಿನಲ್ಲಿ, ಇಡೀ ರಾಜ್ಯದಲ್ಲಿ ವಿಭಾಗಕ್ಕೆ ಒಂದರಂತೆ, 4 ವಿಭಾಗಗಳಲ್ಲಿಯೂ ವಸತಿ ಪ್ರೌಢಶಾಲೆಗಳನ್ನು ಪ್ರಾರಂಭ ಮಾಡಿದೆ.

ಇವು ಗಂಡು ಮಕ್ಕಳಿಗೆ 4 ಮತ್ತು ಹೆಣ್ಣು ಮಕ್ಕಳಿಗೆ 4 ರಂತೆ ಇವೆ. ಧಾರವಾಡದಲ್ಲಿರುವಂಥ ಗಂಡುಮಕ್ಕಳ ವಸತಿ ಪ್ರೌಢಶಾಲೆಗೆ, ಮಕ್ಕಳಿಗೆ ಪಾಠ ಹೇಳುವುದಕ್ಕೆ ಸರಿಯಾದ ಸ್ವಂತ ಕಟ್ಟಡವಿಲ್ಲ, ಮಕ್ಕಳು ಉಳಿದುಕೊಳ್ಳುವುದಕ್ಕೆ ಸರಿಯಾದ ವಸತಿ ನಿಲಯವಿಲ್ಲ. ಅವರಿಗೆ ಬೇಕಾದ ಡಾರ್ಮಿಟರಿ ಇಲ್ಲ, ಪ್ರಸಾದನಿಲಯ ಇಲ್ಲ. ಇಂತಹ ಸ್ಥಿತಿಯಲ್ಲಿ ವಸತಿ ಪ್ರೌಢಶಾಲೆ, ಮಾದರಿ ಪ್ರೌಢಶಾಲೆ ಎಂದು ಪ್ರಾರಂಭ ಮಾಡಿದ್ದಾರೆ. ಇಂತಹ ಪ್ರೌಢಶಾಲೆಗಳಿಗೆ, ಗ್ರಾಮೀಣ ಪ್ರದೇಶದಿಂದ ಬರುವಂಥ, 7ನೇ ತರಗತಿಯಲ್ಲಿ ಪಾಸಾಗಿ, 90-95 ಅಂಕಗಳನ್ನು ಪಡೆದಂಥ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಂಡು, ಬರುತ್ತಿದ್ದಾರೆ. ಇಂತಹ ಮಕ್ಕಳಿಗೆ ಊಟಕ್ಕೆ 175 ರೂಪಾಯಿ ಕೊಡುತ್ತಾರೆ. ಒಂದು ತಿಂಗಳಿಗೆ, ಒಂದು ಮಗುವಿಗೆ 175 ರೂಪಾಯಿ ಕೊಡುತ್ತಾರೆ, ಇದರಲ್ಲಿ ಅವರಿಗೆ ಊಟ ಹಾಕುವುದಕ್ಕೆ ಆಗುತ್ತದೆಯೇ ಹೇಗೆ, ಅವರಿಗೆ ತಿಂಡಿ ಕೊಡುವುದಕ್ಕೆ ಆಗುತ್ತದೆಯೇ ಹೇಗೆ, ಅವರಿಗೆ ಪೂರ್ಣ ವ್ಯವಸ್ಥೆ ಮಾಡುವುದಕ್ಕಾಗುತ್ತದೆಯೇ ಎನ್ನುವುದನ್ನು ಸರ್ಕಾರ ವಿಚಾರ ಮಾಡಬೇಕೆನ್ನುವ ನನ್ನ ಅನಿಸಿಕೆಯನ್ನು ಅವರ ಮುಂದಿಡುತ್ತೇನೆ. ಇನ್ನು ಕೃಷಿ ಮತ್ತು ತೋಟಗಾರಿಕೆ ಇಲಾಖೆ ಬಗ್ಗೆ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಈ ದೇಶದಲ್ಲಿ ಇಲ್ಲಿಯವರೆಗೆ ಇಷ್ಟು ಆದ್ಯತೆಯನ್ನು ಕೊಡಬೇಕಾಗಿತ್ತೋ. ಅಷ್ಟು ಆದ್ಯತೆಯನ್ನು ಈ ಕೃಷಿ, ತೋಟಗಾರಿಕೆ, ಹೈನುಗಾರಿಕೆ ಮತ್ತು ರೇಷ್ಮೆ ಇಲಾಖೆಗೆ ಸರ್ಕಾರ ಕೊಟ್ಟಿಲ್ಲ, ಇಲ್ಲಿಯವರೆಗೆ ಕೇಂದ್ರ ಸರ್ಕಾರದ 8 ಪಂಚವಾರ್ಷಿಕ ಯೋಜನೆಗಳಾದರೂ ಸಹಿತ ಕೇಂದ್ರ ಸರ್ಕಾರವಾಗಲೀ, ರಾಜ್ಯ ಸರ್ಕಾರವಾಗಲೀ, ಇದಕ್ಕೆ ಆದ್ಯತೆಯನ್ನು ಕೊಟ್ಟಿಲ್ಲ. ಈ ದೇಶದಲ್ಲಿರುವಂಥ ಪ್ರತಿಶತ 70 ಜನರು ಈ ಕೃಷಿಗೆ ಸಂಬಂಧಿಸಿದ ಉದ್ದಿಮೆಯಲ್ಲಿ ಭಾಗಿಗಳಾಗಿದ್ದಾರೆ. ಅದಕ್ಕೆ ಆಧಾರವಾಗಿದ್ದಾರೆ. ಇವತ್ತು ಗ್ರಾಮೀಣ ಪ್ರದೇಶಗಳಿಂದ ಕೂಡಿದ ಈ ದೇಶದಲ್ಲಿ, ಈ ರಾಜ್ಯದಲ್ಲಿ ಮತ್ತು ಕೃಷಿ ಪ್ರಧಾನವಾದ ಈ ರಾಜ್ಯ ಮತ್ತು ಈ ರಾಷ್ಟ್ರದಲ್ಲಿ 70 ಪ್ರತಿಶತ ಜನರು ಕೃಷಿ ಮತ್ತು ಕೃಷಿಗೆ ಪೂರಕವಾದ ಉದ್ಯಮಗಳಲ್ಲಿ ತೊಡಗಿರಬೇಕಾದರೆ, ಇದಕ್ಕೆ ಸರ್ಕಾರ ಸಾಕಷ್ಟು ಗಮನವನ್ನು ಕೊಡಬೇಕಾಗಿತ್ತು. ನಾನು 1984ರಲ್ಲಿ ರಾಜಕೀಯಕ್ಕೆ ಬಂದಾಗ, ಕೃಷಿ ಉದ್ದಿಮೆಯನ್ನು ಬೆಳೆಸಬೇಕೆಂಬ ಆರ್ಟಿಕಲ್‌ನ್ನು ಅಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರಿಗೆ ಕೊಟ್ಟೆ.

ಇದು ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲೂ ಅರ್ಧ ಪೇಜ್ ಪ್ರಿಂಟಾಗಿದೆ. "ಕೃಷಿ ಉದ್ದಿಮೆ ಹೇಗೆ ಸಾಧ್ಯ" ಎಂದು ಹೇಳಿದ್ದೇನೆ. ಇದರ ಬಗ್ಗೆ ಆಗಿನಿಂದಲೂ ಪ್ರಯತ್ನ ಮಾಡಿದ್ದೇನೆ. ಇದು ಕೃಷಿ ವಾರ್ತೆ ಎಂಬ ಪತ್ರಿಕೆಯಲ್ಲೂ ಸಹಿತ ಪ್ರಿಂಟಾಗಿದೆ. ಈ ವಿಷಯದಲ್ಲಿ ಇವತ್ತಿನ ಸರ್ಕಾರ, ಕೃಷಿ ಒಂದು ಉದ್ಯಮ ಆಗಬೇಕೆಂಬ

ದೃಷ್ಟಿಯಲ್ಲಿ ಪ್ರಯತ್ನ ಮಾಡುತ್ತಾ ಇದೆ. ಬಹಳ ಸಂತೋಷ. ಆದರೆ, ಮೂಲಭೂತವಾಗಿ, ರೈತನಿಗೆ ಆದ್ಯತೆ ಕೊಡದೇಹೋದರೆ, ಅವನ ಅಭಿವೃದ್ಧಿಯನ್ನು ಮಾಡದೇಹೋದರೆ, ಈ ದೇಶದ ಅಭಿವೃದ್ಧಿಯಾಗುವುದಿಲ್ಲ. ಈ ದಿಸೆಯಲ್ಲಿ ನಮ್ಮ ಸರ್ಕಾರ ಮೊಟ್ಟಮೊದಲು ರೈತನ ಸಲುವಾಗಿ, ಸಾಕಷ್ಟು ಕಾರ್ಯಗಳನ್ನು ಮಾಡಬೇಕಾಗಿದೆ. ಅದರಲ್ಲೂ ಮುಖ್ಯವಾಗಿ ರೈತ ಇವತ್ತು ಸಾಲಗಾರನಾಗಿದ್ದಾನೆ. ರೈತ ಏಕೆ ಸಾಲಗಾರನಾಗಿದ್ದಾನೆಂದರೆ, ಅವನು ಬೆಳೆದಂಥ ಮಾಲಿಗೆ, ಸರಿಯಾದ ಬೆಲೆ ಸಿಗುತ್ತಾ ಇಲ್ಲ. ಆ ದೃಷ್ಟಿಯಿಂದ ರೈತ ಸಾಲಗಾರನಾಗಿದ್ದಾನೆ. ಇವತ್ತು ಕೃಷಿ ಕಾಯಕ ಏನಿದೆ, ಇದು ಬಹಳ ಪ್ರಾಮಾಣಿಕವಾದ ಕಾಯಕ. ಆ ಕಾಯಕಕ್ಕೆ ಆದ್ಯತೆ ಸಿಗದಿರುವುದಕ್ಕೆ, ಕೃಷಿಗೆ ಸರಿಯಾದ ಬೆಂಬಲ ಬೆಲೆ ಸಿಕ್ಕ, ಅದು ಲಾಭದಾಯಕ ಕೃಷಿ ಉದ್ದಿಮೆ ಆಗದೇ ಇದ್ದುದಕ್ಕೆ ಇವತ್ತು ಎಲ್ಲಾ ಜನರೂ ಉದ್ಯೋಗ ಬಯಸಿ ಶಹರಕ್ಕೆ ವಲಸೆ ಬರುತ್ತಿದ್ದಾರೆ. ಅವರೆಲ್ಲರನ್ನೂ ಹಳ್ಳಿಗಳಿಗೆ ಕಳುಹಿಸುವಂಥ ಅವಕಾಶವಿದೆ. ಏಕೆಂದರೆ, ಕೃಷಿಗೆ ಪ್ರಾಧಾನ್ಯತೆ ಕೊಟ್ಟು, ಕೃಷಿಯೂ ಒಂದು ಉದ್ದಿಮೆ ಎನ್ನುವಂಥ ಅವಕಾಶವನ್ನು ಕಲ್ಪಿಸಿಕೊಟ್ಟರೆ, ಇವತ್ತು ಶಹರಕ್ಕೆ ಬರುವಂಥ ವಲಸೆಯನ್ನು ತಪ್ಪಿಸಿ, ಮತ್ತೆ ಗ್ರಾಮೀಣ ಪ್ರದೇಶಕ್ಕೆ ಒಯ್ಯಲಿಕ್ಕೆ ಸಾಧ್ಯತೆ ಇದೆ. ಈ ದಿಸೆಯಲ್ಲಿ ಸರ್ಕಾರ ಆದ್ಯತೆಯನ್ನು ಕೊಟ್ಟು ಕಾರ್ಯ ಮಾಡಬೇಕಾಗಿದೆ. ಇವತ್ತು "ಕೋಟಿ ವಿದ್ಯೆಗಿಂತ, ಮೇಟಿ ವಿದ್ಯೆಯೇ ಲೇಸು" ಎಂದು ಹಿಂದಿನಿಂದ ಹಿರಿಯರು ಹೇಳಿಕೊಂಡು ಬಂದಿದ್ದಾರೆ. ಆದರೆ, ಆ ಮಾತಿಗೆ ಇವತ್ತು ಅಪವಾದ ಇಲ್ಲ. ಕನಿಷ್ಠ ಕೃಷಿ ಅನ್ನುವಂಥ ದೃಷ್ಟಿಯಿಂದ ಒಕ್ಕಲುತನವನ್ನು ಬಿಟ್ಟು, ಏನಾದರೊಂದು ಕೂಲಿ ಮಾಡಿಕೊಂಡು ಶಹರದಲ್ಲಿರಬೇಕು, ಒಂದು ಜವಾನ ನೌಕರಿಯಾಗಲೀ ಶಹರದಲ್ಲಿರಬೇಕು ಎನ್ನುವಂಥ ಸ್ಥಿತಿ ಬಂದಿದೆ. ಇದರ ಬಗ್ಗೆ ಸರ್ಕಾರ ತೀವ್ರ ಗಮನಕೊಟ್ಟು, ಪರಿಹರಿಸಬೇಕಾಗಿದೆ.

ಬೀಜ ಹಾಕುವುದರಿಂದ ಹಿಡಿದುಕೊಂಡು ರೈತರಿಗೆ ಗೊಬ್ಬರ ಹಾಕುವುದು ಬೆಳೆಸಲುವಾಗಿ ಬೇಕಾದಂತಹ, ವ್ಯವಸಾಯ ಮಾಡಲಿಕ್ಕೆ ಸರಿಯಾದ ಸೌಲಭ್ಯ ಮತ್ತು ಸಹಾಯವನ್ನು ಸರ್ಕಾರ ಒದಗಿಸಬೇಕಾಗುತ್ತದೆ. ಮೂಲಭೂತವಾಗಿ ರೈತರಿಗೆ ಬೇಕಾದ ಬೀಜವನ್ನು ಒದಗಿಸಬೇಕು. ಗೊಬ್ಬರ ಮತ್ತು ಸಾಗುವಳಿಗೆ ಬೇಕಾಗುವಂತಹ ಖರ್ಚು ಇವುಗಳನ್ನು ಸರ್ಕಾರ ನಿಯಮಿತವಾಗಿ ಒದಗಿಸಿದರೆ ಅವನು ತನ್ನ ಕಸಬು ಮಾಡಲಿಕ್ಕೆ ಸಾಧ್ಯವಾಗುತ್ತದೆ. ನಾವು ಈಗ ಉದ್ದಿಮೆಗಳಿಗೆ ಲಿಮಿಟ್ ಕೊಡುತ್ತೇವೆ. ಅವರಿಗೆ ಕ್ಯಾಷ್ ಲಿಮಿಟ್ ಇಷ್ಟು, ಹುಂಡಿ ಇಷ್ಟು ಎಲ್.ಸಿ. ಇಷ್ಟು, ಎಂದು ಕೊಡುತ್ತೇವೆ. ಹಾಗೆಯೇ ಒಬ್ಬ ರೈತ ಸಣ್ಣ ರೈತ ಇರಲಿ ಅವನು ನೀರಾವರಿ ಪ್ರದೇಶದಲ್ಲಿ ಇರಲಿ ಇವತ್ತು ಅವನು ಏನು ಬೆಳೆ ಬೆಳೆಯುತ್ತಿದ್ದಾನೆ ಅವನಿಗೆ ನೀರಾವರಿ ಸೌಲಭ್ಯ ಏನು ಇದೆ ಇದನ್ನೆಲ್ಲಾ ಇವತ್ತು ತಾವು ಅರಿತುಕೊಂಡು ಅವನಿಗೆ ನಾವು ಒಂದು ಲಿಮಿಟ್ ಕೊಡುವಂತಹ ವ್ಯವಸ್ಥೆ ಆಗಬೇಕು. ಅವನು ಬೇರೆ ಎಲ್ಲಿಯೂ ಸಾಲಕ್ಕೆ ಹೋಗಬಾರದು. ಗೊಬ್ಬರ ತೆಗೆದುಕೊಳ್ಳುವುದಕ್ಕೆ ಬೇರೆ ಎಲ್ಲಿಯೂ ಸಾಲಕ್ಕೆ ಹೋಗಬಾರದು. ಅವನು ಯಾವುದೇ ತರಹ ಆಗಲಿ ಬ್ಯಾಂಕಿನಿಂದ ಆಗಲಿ ಬೇರೆ ಕಡೆಯಿಂದ ಆಗಲಿ ಸಾಲ ಹುಟ್ಟಿಸಲಿಕ್ಕೆ ಹೋಗಬಾರದು. ಅವನ ಭೂಮಿಗೆ ಅವನು ಹಿಡುವಳಿಗೆ ಅನುಗುಣವಾಗಿ ಅವನಿಗೆ ಇರುವಂತಹ ನೀರಾವರಿ ಸೌಲಭ್ಯಕ್ಕೆ ಅನುಗುಣವಾಗಿ ಲಿಮಿಟ್ ಅನ್ನು ಫಿಕ್ಸ್ ಮಾಡಿಬಿಡಬೇಕು. ಬೆಳೆಸಾಲ ಎಂದು ಕೆಲವು ಹಣ ಫಿಕ್ಸ್ ಮಾಡಬೇಕು. ಸಣ್ಣ ಪುಟ್ಟ ಯಂತ್ರೋಪಕರಣಗಳನ್ನು ತೆಗೆದುಕೊಳ್ಳುವುದಕ್ಕೆ ಇಂತಿಷ್ಟು ಸಾಲ ಅಂತ ಫಿಕ್ಸ್ ಮಾಡಬೇಕು. ಡ್ರಿಪ್ ಇರಿಗೇಷನ್‌ಗೆ ಅಥವಾ ಸ್ಪ್ರಿಂಕ್ಲರ್ ಇರಿಗೇಷನ್‌ಗೆ ಅಥವಾ ಬೋರ್‌ವೆಲ್ ಹಾಕಿಸುವುದಕ್ಕೆ ಇಂತಿಷ್ಟು ಹಣ ಎಂದು ಲಿಮಿಟ್ ಫಿಕ್ಸ್ ಮಾಡಬೇಕು. ಮತ್ತು ನೀವು ಏನು ಪಂಪ್ ಸ್ಪ್ರೇಯರ್ಸ್ ಇಂತಹ ಉಪಕರಣಗಳು ಕೊಡುತ್ತೀರಿ ಸಸ್ಯ ಸಂರಕ್ಷಣೆ ಮಾಡಲಿಕ್ಕೆ ಇಂತಹ ಉಪಕರಣಗಳು ಏನು ಬೇಕಾಗಿವೆ ಇಂಥಾದ್ದಕ್ಕೆ ಮಧ್ಯಾಮಾವಧಿ ಸಾಲ ಎಂದು ಫಿಕ್ಸ್ ಮಾಡಬೇಕು.

ಇನ್ನು ಹೆಚ್ಚಿನ ದೊಡ್ಡ ದೊಡ್ಡ ಉಪಕರಣಗಳು ಬೇಕಾದರೆ ಅಥವಾ ಟ್ರ್ಯಾಕ್ಟರ್‌ಗಳು ಬೇಕಾದರೆ ಅದಕ್ಕೆ ದೀರ್ಘಾವಧಿ ಸಾಲವನ್ನು ಕೊಡುವಂತಹ ವ್ಯವಸ್ಥೆ ಆಗಬೇಕು. ಈ ಎಲ್ಲಾ ವ್ಯವಸ್ಥೆ ಆದರೆ ರೈತ ಚೆನ್ನಾಗಿ ಬೆಳೆಯುವುದಕ್ಕೆ ಅವಕಾಶ ಆಗುತ್ತದೆ. ನೀರಾವರಿ ಸೌಲಭ್ಯಗಳನ್ನು ಸರ್ಕಾರ ಆದ್ಯತೆ ಕೊಟ್ಟು ಮಾಡಿಕೊಡಬೇಕು. ನೀರಾವರಿ ಸೌಲಭ್ಯ ಕೊಟ್ಟ ಮೇಲೆ ಅವನಿಗೆ ಸರಿಯಾದಂತಹ ವಿದ್ಯುತ್ ಸೌಲಭ್ಯವನ್ನು ಸಹ ಕೊಡಬೇಕು. ಇವತ್ತು ವಿದ್ಯುತ್‌ನ ಪರಿಸ್ಥಿತಿ ಏನಾಗಿದೆ ಕರ್ನಾಟಕ ರಾಜ್ಯದಲ್ಲಿ ಉದ್ದಿಮೆಗಳಿಗೆ ನಾವು ಸಾಕಷ್ಟು ವಿದ್ಯುತ್ ಅನ್ನು ಕೊಡುತ್ತಿದ್ದೇವೆ. ಆದರೆ ರೈತರಿಗೆ ವಿದ್ಯುತ್ ಅನ್ನು ರಾತ್ರಿ ವೇಳೆ ಸಪ್ಲೈ ಮಾಡುತ್ತಿದ್ದೇವೆ. ರಾತ್ರಿ ವೇಳೆ ವಿದ್ಯುತ್ ಕೊಟ್ಟರೆ ಅವನು ಕೂಲಿಕಾರನನ್ನು ಕರೆದುಕೊಂಡು ತನ್ನ ಬೆಳೆಗೆ ನೀರು ಹಾಯಿಸಬೇಕು, ಯಾವ ಬೆಳೆಗೆ ಎಲ್ಲಿ ನೀರು ಹೋಗುತ್ತಿದೆ ಎನ್ನುವುದನ್ನು ಹೇಗೆ ಕಂಡುಕೊಳ್ಳಬೇಕು. ಆದ್ದರಿಂದ ಮೊಟ್ಟಮೊದಲ ಆದ್ಯತೆ ವಿದ್ಯುತ್ ರೈತನಿಗೆ ಕೊಡಬೇಕು. ಉದ್ದಿಮೆದಾರರಿಗೆ ತಾವು ವಿದ್ಯುತ್ ಅನ್ನು ರಾತ್ರಿ ವೇಳೆ ಕೊಟ್ಟರೂ ನಡೆಯುತ್ತದೆ ಎರಡನೇ ಷಿಫ್ಟ್ ಕೊಟ್ಟರೂ ನಡೆಯುತ್ತದೆ. ಬೆಳಗ್ಗೆ ಕೊಟ್ಟರೂ ನಡೆಯುತ್ತದೆ. ಆದರೆ ಕೃಷಿಗೆ ಮಾತ್ರ ತಾವು ಡೈ ಟೈಮ್‌ನಲ್ಲಿಯೇ ವಿದ್ಯುಚ್ಛಕ್ತಿಯನ್ನು ಕೊಡಬೇಕು.

ರೈತರಿಗೆ ವಿದ್ಯುಚ್ಛಕ್ತಿಯನ್ನು ಸರಾಗವಾಗಿ ಕೊಡಬೇಕು. ಯಾವುದೇ ತೊಂದರೆ ಇಲ್ಲದೆ ಕೊಡಬೇಕು. ಇದು ಬಹುತೇಕ ನಮ್ಮ ರೈತರಿಗೆ ಸಹಾಯ ಮಾಡಿದಂತೆ ಆಗುತ್ತದೆ. ಎಲ್ಲಾ ಸೌಲಭ್ಯಗಳನ್ನು ಇವತ್ತು ಈ ಸಂಘಟನೆಗಳು ಪಡೆಯುತ್ತಿವೆ. ಸಂಘಟಿತರಾಗಿರುವಂತಹ ಜನಾಂಗ ಪಡೆಯುತ್ತಿವೆ. ಕೃಷಿಗೆ ಸಂಘಟನೆ ಇಲ್ಲದೆ ಇರುವುದಕ್ಕೆ ಅವರನ್ನು ಸಂರಕ್ಷಣೆಮಾಡುವಂತಹ ವ್ಯವಸ್ಥೆ ಇಲ್ಲ, ಅವರನ್ನು ಇವತ್ತು ಯಾರೂ ಸರಿಯಾದ ದೃಷ್ಟಿಯಲ್ಲಿ ತೆಗೆದುಕೊಂಡು ಹೋಗುತ್ತಿಲ್ಲ, ಅವರು ಅತಿ ಚಿಕ್ಕ ರೈತರು ಇರಲಿ ದೊಡ್ಡ ರೈತರು ಇರಲಿ. ಸಾಲವನ್ನು ಒದಗಿಸಿ ಚಿಕ್ಕ ರೈತರಿಗೆ ಮತ್ತು ಅತಿ ಚಿಕ್ಕ ರೈತರಿಗೆ ಕೆಲವೊಂದು ರಿಯಾಯಿತಿಯನ್ನು ಕೊಡಿ. ಬಡ್ಡಿ ರಿಯಾಯಿತಿ ಕೊಡಿ. ಇದರಿಂದ ಚಿಕ್ಕ ರೈತ ಬಹಳ ಉತ್ಸಾಹದಿಂದ ಈ ಕಸಬು ಮಾಡುವುದಕ್ಕೆ ಅನುಕೂಲವಾಗುತ್ತದೆ. ಅವನು ಸಾಲದ ಮರುಪಾವತಿ ಸರಿಯಾಗಿ ಮಾಡುವಂತಹ ವ್ಯವಸ್ಥೆ ಮಾಡಿ. ಸಣ್ಣ ರೈತರು ಸಹ ಸರಿಯಾದ ಮರುಪಾವತಿ ಮಾಡಬೇಕು. ಅದಕ್ಕೆ ಸರಿಯಾದ ರಿಯಾಯಿತಿಯನ್ನು ಸಹ ಪಡೆಯಬೇಕು. ಈ ಒಂದು ವ್ಯವಸ್ಥೆಯನ್ನು ಸರ್ಕಾರ ಮಾಡಿದರೆ ಕೃಷಿ ಸಮುದಾಯಕ್ಕೆ ಹೆಚ್ಚಿನ ಅನುಕೂಲವಾಗುತ್ತದೆ. ಇವತ್ತು ಕೃಷಿಯಲ್ಲಿ ಯಂತ್ರೋಪಕರಣಗಳ ಉಪಯೋಗ ಸಹ ಆಗುತ್ತಿದೆ. ಸಂಸ್ಕರಣ ಮಾಡುವಂತಹ ಯಂತ್ರಗಳು ಇವತ್ತು ಕೃಷಿಯಲ್ಲಿ ಬಂದಿವೆ. ಅಂತಹ ಯಂತ್ರಗಳನ್ನು ರೈತರು ಕೊಳ್ಳುವುದಕ್ಕೆ ಸರ್ಕಾರ ಇವತ್ತು ಸೌಲಭ್ಯಗಳನ್ನು ಒದಗಿಸಬೇಕು. ಇವತ್ತು ಸರ್ಕಾರ 18 ಹೆಚ್.ಪಿ. ಟ್ರಾಕ್ಟರ್ ಕೊಂಡವರಿಗೆ ಮಾತ್ರ ಸಬ್ಸಿಡಿಯನ್ನು ಕೊಡುತ್ತಿದೆ. ಬರೀ 18 ಹೆಚ್.ಪಿ. ಟ್ರಾಕ್ಟರ್ ಕೊಂಡಂತಹ ರೈತರಿಗೆ ಏಕೆ ಸಬ್ಸಿಡಿಯನ್ನು ಕೊಡಬೇಕು? ದೊಡ್ಡ ಟ್ರಾಕ್ಟರ್ ತೆಗೆದುಕೊಂಡಂತಹ ರೈತರೂ ಸಹ ದೇಶಕ್ಕೆ ಉತ್ಪಾದನೆ ಮಾಡಿಕೊಡುತ್ತಿದ್ದಾರೆ. ದೇಶದ ಆರ್ಥಿಕ ಉತ್ಪಾದನೆ ಅವರೂ ಸಹ ಮಾಡುತ್ತಿದ್ದಾರೆ. ಅವರು ಬಹಳ ದೊಡ್ಡ ಪ್ರಮಾಣದಲ್ಲಿ ಯಂತ್ರಗಳನ್ನು ಉಪಯೋಗ ಮಾಡುತ್ತಿದ್ದಾರೆ. ಅವರಿಗೂ ಸಹ ಒಂದು ಲಿಮಿಟ್ ಒಳಗೆ ಸೌಲಭ್ಯಗಳನ್ನು ಸವಲತ್ತುಗಳನ್ನು ಕೊಡಬೇಕೆಂದು ನಾನು ನಿರ್ಧಾರಕ್ಕೆ ತಿಳಿಯಬಯಸುತ್ತೇನೆ. ಅದೂ ಅಲ್ಲದೇ ಬೆಳೆದಂತಹ ಮಾಲಿಗೆ ಮಾರಾಟ ಮಾಡುವಂತಹ ವ್ಯವಸ್ಥೆ ಈ ರಾಜ್ಯದಲ್ಲಿ ಈ ದೇಶದಲ್ಲಿ ಸರಿಯಾಗಿಲ್ಲ, ಅದಕ್ಕೆ ನಾನು ಸನ್ಮಾನ್ಯ ಮಾರುಕಟ್ಟೆ ಮಂತ್ರಿಗಳಲ್ಲಿ ಸಹ ವಿನಂತಿ ಮಾಡಿಕೊಂಡಿದ್ದೇನೆ ಮೊದಲು ನಮ್ಮ ಮಾರುಕಟ್ಟೆ ವ್ಯವಸ್ಥೆಯನ್ನು ಸರಿಪಡಿಸಬೇಕು. ರೈತ ಬೆಳೆದಂತಹ ಮಾಲು ತನ್ನ ಮನೆಯಲ್ಲಿಟ್ಟುಕೊಳ್ಳುವುದಕ್ಕೆ ಅವಕಾಶ ಇಲ್ಲ, ಅವನು ಬೆಳೆದಂತಹ ಬೆಳೆಗೆ ಸಾಲ ಸಹ ಇರುತ್ತದೆ.

ಶ್ರೀ ಎಸ್.ಆರ್. ಲಕ್ಷ್ಮಯ್ಯ : ಮಾನ್ಯ ಅಧ್ಯಕ್ಷರೇ, ಅವರು ಹಿರಿಯರು ನಮ್ಮ ಜೊತೆ ಇದ್ದವರು. ಈಗ ಆ ಕಡೆ ಹೋಗಿದ್ದಾರೆ, ಅವರ ಸರ್ಕಾರ ಬಹಳ ಕಡೆ ಉತ್ತರ ಭಾರತದಲ್ಲಿದೆ. ಅವರು ಅಲ್ಲಿ ರೈತರ ಬಗ್ಗೆ ಏನು ಕಾಳಜಿ ಹೊಂದಿದ್ದಾರೆ ಏನೇನು ಮಾಡಿದ್ದಾರೆಂದು. ಸ್ವಲ್ಪ ಹೇಳಿದರೆ ನಾವು ಕೇಳಿ ಸಂತೋಷ ಪಡುತ್ತೇವೆ. ನೀವು ಈ ಸರ್ಕಾರಕ್ಕೆ ಮಾಡಿ ಎಂದು ಹೇಳುತ್ತೀರಲ್ಲ, ನೀವು ಅಲ್ಲಿ ಏನು ಮಾಡಿದ್ದೀರಿ?

ಶ್ರೀ ಚಂದ್ರಕಾಂತ ಜಿ. ಬೆಲ್ಲದ : ಮಾನ್ಯ ಅಧ್ಯಕ್ಷರೇ, ಈಗ ಸರ್ಕಾರದ ನೀತಿ ಬರುತ್ತವೆ. ಆ ಸರ್ಕಾರದ ನೀತಿ ಬರಬೇಕಾದರೆ ನಮ್ಮದೂ ಆರ್ಟಿಕಲ್ ಇದೆ. 1984 ರಲ್ಲಿ ಕೊಟ್ಟಂತಹ ಆರ್ಟಿಕಲ್ 4 ಪೇಜು ಇದೆ. ಕೃಷಿ ಉದ್ದಿಮೆ ಆಗಬೇಕು ಎಂದು ಹೇಳಿ, ಇದು ಸಂಯುಕ್ತ ಕರ್ನಾಟಕದಲ್ಲಿ ಬಂದಿದೆ. ಡಾಕ್ಟರ್ ಅರಕೇರಿ ಮತ್ತು ಡಾಕ್ಟರ್ ಎಸ್.ಪಿ. ಪಾಟೀಲ್ ಅಂತಹ ಕೃಷಿ ತಜ್ಞರು ಇದ್ದರಲ್ಲಾ ಅವರು ತಮ್ಮ ಪತ್ರಿಕೆಯಲ್ಲಿ ಇದನ್ನು ಮೊದಲನೇ ಆರ್ಟಿಕಲ್ ಆಗಿ ಹಾಕಿದ್ದಾರೆ.

ಈ ಒಂದು ಕಾರ್ಯವನ್ನು ತಾವು ನಮ್ಮ ರಾಜ್ಯದಲ್ಲಿ ಮಾಡಿದರೆ ಅದರ ಹೆಗ್ಗಳಿಕೆ ನಿಮಗೆ ಬರುತ್ತದೆ. ಅದರ ಬಗ್ಗೆ ನೀವು ಏಕೆ ಚಿಂತನೆ ಮಾಡುತ್ತಿದ್ದೀರಿ? ತಾವು ಏನು ಕೃಷಿ ನೀತಿಯನ್ನು ತರುತ್ತಿದ್ದೀರಿ ಅದನ್ನು ನಾನು ಮೆಚ್ಚಿಕೊಂಡಿದ್ದೇನೆ. ಇದು ನಾನು ಸ್ವಾಗತ ಮಾಡಿದವನು. ಇದು ಹೆಚ್ಚು ಪರಿಣಾಮಕಾರಿಯಾಗಿ ನಮ್ಮ ರೈತರಿಗೆ ಸಹಾಯ ಆಗಲಿ ಎಂದು ಕೆಲವು ವಿಷಯಗಳನ್ನು ನಾನು ತಮ್ಮ ಮುಂದೆ ಇಡುತ್ತಿದ್ದೇನೆ. ಇವತ್ತು ಏನು ಇದೆ ನಮ್ಮ ಮಾರುಕಟ್ಟೆ ವ್ಯವಸ್ಥೆಯಲ್ಲಿ ರೈತ ಮಾರುಕಟ್ಟೆಗೆ ಮಾಲು ತೆಗೆದುಕೊಂಡು ಹೋದ ತಕ್ಷಣ ಕೈಗೆ ಸಿಕ್ಕಿದ ಬೆಲೆಗೆ ಅವನು ಮಾರಾಟ ಮಾಡಬೇಕು. ಇಲ್ಲ, ಅಂದರೆ ಸಾಲಗಾರರು ಅವನ ಬೆನ್ನು ಹತ್ತಿಬಿಟ್ಟಿರುತ್ತಾರೆ. ಅವನು ಆ ಮಾಲನ್ನು ಇಟ್ಟುಕೊಳ್ಳುವ ವ್ಯವಸ್ಥೆ ಮನೆಯಲ್ಲಿ ಇರುವುದಿಲ್ಲ, ಪ್ರತಿಯೊಂದು ಮಾರುಕಟ್ಟೆಯಲ್ಲಿ ಗೋಡೌನ್ ವ್ಯವಸ್ಥೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಸಾಧ್ಯವಿದ್ದಷ್ಟು ಪ್ರತಿಯೊಂದು ತಾಲ್ಲೂಕು ಲೆವೆಲ್‌ನಲ್ಲಿಯೂ ಕೂಡ ಗೋಡೌನ್ ವ್ಯವಸ್ಥೆ ಮಾಡಬೇಕು. ರೈತ ತೆಗೆದುಕೊಂಡು ಹೋದಂತಹ ಮಾಲನ್ನು ಅಲ್ಲಿ ಇಟ್ಟ ಮೇಲೆ ಅವನಿಗೆ ತೀವ್ರವಾಗಿ ಸಾಲ ಸಿಗುವಂತಹ ವ್ಯವಸ್ಥೆ ಮಾಡಬೇಕು. ಇವತ್ತು ಪೆರಿಷಬಲ್ ಗೂಡ್ಸ್ ಆದ ಹಣ್ಣು ಹಂಪಲು ತರಕಾರಿಗಳನ್ನು ಬೆಳೆಯುತ್ತಿದ್ದಾರೆ ಇವುಗಳಿಗೆ ಶೀತಾಗಾರಗಳು ಬೇಕು. ಆಗಲೇ ನಮ್ಮ ನಾಗೇಗೌಡರು ಹೇಳುತ್ತಿದ್ದರು ಗುಜರಾತಿನಲ್ಲಿ ಇಷ್ಟೊಂದು ಶೀತಾಗಾರಗಳು ಇವೆ ಎಂದು. ನಮ್ಮ ರಾಜ್ಯದಲ್ಲಿ ಎಷ್ಟು ಇವೆ. ನಾನು ಮೊದಲಿನಿಂದಲೂ ಶೀತಾಗಾರಗಳು ಬೇಕು ಎಂದು ಕೇಳಿಕೊಂಡು ಬಂದಿದ್ದೇನೆ. ಒಂದೊಂದು ಜಿಲ್ಲೆಗೆ ಒಂದೊಂದು ಶೀತಾಗಾರಗಳನ್ನು ಮಾಡಿ ಎಂದು. ನಾನು ಕೇಳುತ್ತಿದ್ದೇನೆ ಮಾದರಿಯಾದಂತಹ ಮಾರ್ಕೆಟ್ ಯಾರ್ಡ್‌ನಲ್ಲಿ ಪ್ರತಿಯೊಂದು ಕಡೆ ಒಂದೊಂದು ಶೀತಾಗಾರಗಳನ್ನು ಮಾಡಬೇಕು. ಈ ಪೆರಿಷಬಲ್ ಗೂಡ್ಸ್ ಏನು ಇವೆ ಹಣ್ಣು ಹಂಪಲು ತರಕಾರಿ ಇಂತಹ ಮಾಲಿಗೆ ಅವನು ಮಾರುಕಟ್ಟೆ ಹೋದರೆ ಸರಿಯಾದಂತಹ ಬೆಲೆ ಇರುವುದಿಲ್ಲ, ಕೈಗೆ ಬಂದಂತಹ ಬೆಲೆಗೆ ಅವನು ಕೊಟ್ಟುಬರಬೇಕಾಗುತ್ತದೆ. ಅಂತಾದ್ದನ್ನು ಶೇಖರಣೆ ಮಾಡುವುದಕ್ಕೆ ಸರ್ಕಾರ ಒಂದು ವ್ಯವಸ್ಥೆ ಮಾಡಿದ್ದೇ ಆದರೆ ರೈತನಿಗೆ ಸರಿಯಾದ ಬೆಲೆ ಸಿಕ್ಕಾಗ ಅವನು ಮಾರಾಟ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

ಆದ್ದರಿಂದ ಶೀತಾಗಾರಗಳನ್ನು ಎಲ್ಲಾ ಮಾರ್ಕೆಟ್ ಯಾರ್ಡ್‌ಗಳಲ್ಲಿ ಎಲ್ಲಾ ತಾಲ್ಲೂಕು ಪ್ರದೇಶಗಳಲ್ಲಿ ಮಾಡಬೇಕೆಂದು ನಾನು ಹೇಳುತ್ತಿದ್ದೇನೆ. ಇದನ್ನು ಸಂಸ್ಕರಣೆ ಮಾಡುವಂತಹ ಅನೇಕ ಯಂತ್ರೋಪಕರಣಗಳು ಕೂಡ ಮಾರ್ಕೆಟ್ ಯಾರ್ಡ್‌ನಲ್ಲಿ ಬೇಕಾಗಿವೆ. ನಮ್ಮ ದೇಶದಲ್ಲಿ ಎಲ್ಲ ಉತ್ತಮವಾದಂತಹ ಮಾರುಕಟ್ಟೆ ಇದೆ, ಅದನ್ನು ನೋಡಿಕೊಂಡು

ಬನ್ನಿ ಎಂದು ನಾನು ಮಾನ್ಯ ಮಂತ್ರಿಗಳಿಗೆ ಹೇಳಿದ್ದೇನೆ. ಆ ವ್ಯವಸ್ಥೆಯನ್ನು ನಮ್ಮ ರಾಜ್ಯದಲ್ಲಿಯೂ ಮಾಡಿ. ಹುಬ್ಬಳ್ಳಿ ಧಾರವಾಡದ ನಡುವೆ ಅಮರಗೋಳದಲ್ಲಿ ಒಂದು ದೊಡ್ಡ ಮಾರ್ಕೆಟ್ ಯಾರ್ಡ್ ಬರುತ್ತಿದೆ. ಬಸವೇಶ್ವರ ಮಾರುಕಟ್ಟೆ ಎಂದು ಹೇಳಿ. ಅದು ಏಷಿಯಾದಲ್ಲಿಯೇ ಒಂದು ದೊಡ್ಡ ಮಾರ್ಕೆಟ್ ಯಾರ್ಡ್. ಆ ಮಾರ್ಕೆಟ್ ಯಾರ್ಡ್‌ನ್ನು ಹೆಚ್ಚು ವ್ಯವಸ್ಥಿತವಾಗಿ ಮಾಡಿ ಎಂದು ಸನ್ಮಾನ್ಯ ಮಂತ್ರಿಗಳು ಬಂದಾಗ ನಾನು ಕಂಡು ಹೇಳಿದ್ದೇನೆ. ಬೇರೆ ರಾಷ್ಟ್ರಗಳಲ್ಲಿ ಏನು ಸುಸಜ್ಜಿತವಾದಂತಹ ಯಂತ್ರೋಪಕರಣಗಳು ಪ್ರೊಸಸಿಂಗ್ ಮಾಡುವಂತಹ ಯಂತ್ರಗಳನ್ನು ತಂದಿದ್ದಾರೆ. ಅಂತಹ ಯಂತ್ರೋಪಕರಣಗಳನ್ನು ತಂದು ಇಲ್ಲಿ ಹಾಕಿ. ಅಂತಹ ಯಂತ್ರೋಪಕರಣಗಳು ಇದ್ದವು ಅಂದರೆ ರೈತರು ಏನು ತೆಗೆದುಕೊಂಡು ಬರುತ್ತಾರೆ, ಆ ಉತ್ಪನ್ನಗಳನ್ನೆಲ್ಲಾ ಸಂಸ್ಕರಣ ಮಾಡಿ ಸರಿಯಾದ ರೀತಿಯಲ್ಲಿ ಮಾರಾಟ ಮಾಡುವುದಕ್ಕೆ ಆಗುತ್ತದೆ. ಇಲ್ಲ ಅಂದರೆ ಗೋಡೌನ್‌ನಲ್ಲಿ ಇರುವುದಕ್ಕೆ ಆಗುತ್ತದೆ. ಇಂತಹ ಒಂದು ವ್ಯವಸ್ಥೆ ಸರ್ಕಾರ ಮಾಡಬೇಕಾಗಿದೆ ಎನ್ನುವ ವಿಚಾರ ಹೇಳಿ ಇನ್ನು ಖಾಸಗಿಯವರಿಗೂ ಸಹ ತಾವು ಹೇಗೆ ಉದ್ದಿಮೆದಾರರಿಗೆ ಕಟ್ಟಡಕ್ಕೆ ಹಣ ಕೊಡುತ್ತೀರಿ, ಮೆಷಿನರಿಗಳಿಗೆ ಹಣ ಕೊಡುತ್ತೀರಲ್ಲಾ ಅದೇ ಪ್ರಕಾರ ಖಾಸಗಿಯವರು ಯಾರಾದರೂ ಮುಂದೆ ಬಂದರೂ ಸಹ ಅವರಿಗೆ ಹಣದ ಸಹಾಯ ಕೊಟ್ಟು ಗೋಡೌನ್ ಕಟ್ಟಿಸುವಂತಹ ವ್ಯವಸ್ಥೆ ಮಾಡಬೇಕು. ಮತ್ತು ಶೀತಾಗಾರಗಳನ್ನು ಕಟ್ಟಲು ಮುಂದೆ ಖಾಸಗಿಯವರು ಬಂದರೆ ಅಂತಹವರಿಗೂ ತಾವು ಹಣ ಕೊಡಬೇಕು, ಪ್ರೊಸಸಿಂಗ್ ಇಂಡಸ್ಟ್ರೀಗಳನ್ನು ಮಾಡುತ್ತೇವೆ ಅಂದರೆ ಅವರಿಗೆ ಹಣ ಕೊಡಬೇಕು, ಇಂತಾದ್ದೆಲ್ಲಾ ಮಾಡುವುದರಿಂದ ರೈತ ಬೆಳೆದಂತಹ ಬೆಳೆಗೆ ಸರಿಯಾದ ಬೆಂಬಲ ಬೆಲೆ ಸಿಗುತ್ತದೆ ರೈತ ಸಂವೃದ್ಧಿಯಾಗಿ ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ನಮ್ಮ ರಾಜ್ಯದಲ್ಲಿ ಇರುವಷ್ಟು ಅವಕಾಶ ಬೇರೆ ಯಾವ ದೇಶದಲ್ಲಿಯೂ ಈ ಅವಕಾಶ ಇಲ್ಲ, ನಮ್ಮಲ್ಲಿ ವಿಫಲವಾದಂತಹ ಅವಕಾಶ ಇದೆ. ಕೃಷಿ ಉತ್ಪಾದನೆ ಮಾಡಲಿಕ್ಕೆ ಇಲ್ಲಿ ಬೇಕಾದಷ್ಟು ಅವಕಾಶಗಳು ಇವೆ. ನಾವು ಬೇಳೆಕಾಳುಗಳನ್ನು ಹೊರದೇಶದಿಂದ ತರುತ್ತಿದ್ದೇವೆ, ಎಣ್ಣೆ ಕಾಳುಗಳನ್ನು ಹೊರದೇಶದಿಂದ ತರುತ್ತಿದ್ದೇವೆ. ಇದರ ಅಗತ್ಯತೆ ಇಲ್ಲ, ನಮ್ಮ ದೇಶದ ರೈತರಿಗೆ ನಾವು ಸಾಕಷ್ಟು ಅನುಕೂಲಗಳನ್ನು ಮಾಡಿಕೊಟ್ಟರೆ ನಾವು ನಮ್ಮ ರಾಷ್ಟ್ರಕ್ಕೆ ಅಲ್ಲ ಬೇರೆ ರಾಷ್ಟ್ರಗಳಿಗೂ ಕಳುಹಿಸಿಕೊಡುವುದಕ್ಕೆ ಸಾಧ್ಯತೆ ಇದೆ. ಅಂತಹ ಫಲವತ್ತಾದ ಭೂಮಿ ನಮ್ಮಲ್ಲಿದೆ. ರೈತರ ಬಗ್ಗೆ ನಾವು ಹೆಚ್ಚಿನ ಆದ್ಯತೆಯನ್ನು ಕೊಡಬೇಕಾಗಿದೆ. ಅದೇ ಪ್ರಕಾರ ತೋಟಗಾರಿಕೆ. ಕರ್ನಾಟಕ ರಾಜ್ಯದಲ್ಲಿ ಇರುವಷ್ಟು ಅವಕಾಶ ಬೇರೆ ಯಾವ ರಾಜ್ಯಗಳಲ್ಲಿಯೂ ಪಡೆದಿಲ್ಲ. ಇವತ್ತು ತೋಟಗಾರಿಕೆ ಇಲಾಖೆ ಎಷ್ಟೊಂದು ಸುಸಜ್ಜಿತವಾಗಿ ಕೆಲಸ ಮಾಡಬೇಕಾಗಿತ್ತೋ ಅಷ್ಟು ಸುಸಜ್ಜಿತವಾಗಿ ಕೆಲಸ ಮಾಡುತ್ತಿಲ್ಲ.

6.00 ಪಿ.ಎಂ.

ತೋಟಗಾರಿಕೆ ಇಲಾಖೆಯಲ್ಲಿರುವಂತಹ ಅವಕಾಶವನ್ನು ಸೌಲಭ್ಯಗಳನ್ನು ನಮ್ಮ ರೈತರಿಗೆ ಕೊಡಲು ಸಾಧ್ಯವಿದೆ. ಆ ನಿಟ್ಟಿನಲ್ಲಿ ಹೆಚ್ಚು ಅವಕಾಶ ಕೊಡಬೇಕು. ತೋಟಗಾರಿಕೆಯಿಂದ ಬಂದಂತಹ ಉತ್ಪನ್ನಗಳನ್ನು ಸಂಸ್ಕರಣ ಮಾಡಲು ಸಹ ಸಾಕಷ್ಟು ಉದ್ದಿಮೆಗಳನ್ನು ಇಲ್ಲಿ ಪ್ರಾರಂಭಿಸಬೇಕು. ತೋಟಗಾರಿಕೆ ಒಂದರಿಂದಲೇ ನಮ್ಮ ರೈತರ ಆರ್ಥಿಕ ಪರಿಸ್ಥಿತಿ ಬೆಳವಣಿಗೆ ಆಗಲಿಕ್ಕೆ ನಮ್ಮ ರಾಜ್ಯದಲ್ಲಿ ಸಾಧ್ಯವಿದೆ. ಅದರಂತೆ ನಮ್ಮ ಪಶುಸಂಗೋಪನೆ ಸಚಿವ ಬಚ್ಚೇಗೌಡರದು ನಾನು ಮಾತನಾಡಿದ್ದೇನೆ. ಅವರು ಇವತ್ತು ಕೆಎಂಎಫ್‌ಗೆ ಸಾಕಷ್ಟು ಆದ್ಯತೆ ಕೊಡಲಿ. ಈ ರಾಜ್ಯದಲ್ಲಿ ಹೈನುಗಾರಿಕೆ ಎಷ್ಟು ಅವಕಾಶವಿದೆಯೋ ಅಷ್ಟು ಬೇರೆ ಯಾವ ರಾಜ್ಯದಲ್ಲೂ ಇಲ್ಲ, ನಿರುದ್ಯೋಗಿಗಳಾಗಿರುವ ನಮ್ಮ ಜನರಿಗೆಲ್ಲಾ ಉದ್ಯೋಗ ಸಿಗಬೇಕಾದರೆ ಪಶುಸಂಗೋಪನೆ ತೋಟಗಾರಿಕೆ ಕೃಷಿ ಮೀನುಗಾರಿಕೆಗಳ ಮೇಲೆ ಹೆಚ್ಚಿನ ಆದ್ಯತೆ ಕೊಟ್ಟರೆ ಶೇಕಡ 70ರಷ್ಟು ಗ್ರಾಮೀಣ

ಜನರಿಗೆ ನಿರುದ್ಯೋಗಿಗಳಿಗೆ ಉದ್ಯೋಗ ಕೊಡಲು ಸಾಧ್ಯತೆಯಿದೆ. ಆ ದೃಷ್ಟಿಯಿಂದ ಹೆಚ್ಚಿನ ಆದ್ಯತೆಯನ್ನು ಪಶುಸಂಗೋಪನೆ ಹೈನು ಉದ್ಯಮಕ್ಕೆ ಮೀನುಗಾರಿಕೆ ರೇಷ್ಮೆಗೆ ಕರ್ನಾಟಕದಲ್ಲಿರುವ ಅವಕಾಶವನ್ನು ಸದುಪಯೋಗ ಮಾಡಿಕೊಳ್ಳಬೇಕು. ಅದಕ್ಕೆ ಸರಿಯಾದ ಯೋಜನೆಗಳನ್ನು ನಮ್ಮ ಸರ್ಕಾರ ತರಬೇಕೆಂದು ಹೇಳಿ ಇಷ್ಟು ಅವಕಾಶ ಕೊಟ್ಟದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ಸೂಕ್ತ ಕ್ರಮಗಳನ್ನು ಸರ್ಕಾರ ಕೈಗೊಳ್ಳುತ್ತದೆ ಎಂಬ ಭರವಸೆಯೊಂದಿಗೆ ನನ್ನ ನಾಲ್ಕು ಮಾತು ಮುಗಿಸುತ್ತೇನೆ.

ಶ್ರೀ ಗೋವಿಂದ ಕಾರಜೋಳ್ : ಅಧ್ಯಕ್ಷರೇ,......

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ಕಿರಿಯ ಸದಸ್ಯರಿಗೆ ಅವಕಾಶ ಕೊಡುತ್ತಲೇ ಇಲ್ಲ, ವಯಸ್ಸು ಚಿಕ್ಕದಾಗಿದೆಯೆಂದು ತಿಳಿದುಕೊಳ್ಳಬೇಡಿ, ನಾವು ಅನುಭವದಿಂದ ಮಾತನಾಡುತ್ತೇವೆ. ಮೊನ್ನೆ ವೀರಪ್ಪ ಮೊಯಿಲಿಯವರಿಗೆ 200 ನಿಮಿಷ ಕೊಟ್ಟಿದ್ದೀರಿ. You could have provided for 3 persons.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಬ್ಬರು ಆ ಕಡೆ ಯವರು ಮಾತನಾಡಿದ ಮೇಲೆ ಈ ಕಡೆಯ ನಮ್ಮ ಕಾಂಗ್ರೆಸ್‌ನವರಿಗೆ ಕೊಡಬೇಕಲ್ಲಾ,

(ಗೊಂದಲ)

ಉಪಾಧ್ಯಕ್ಷರು : ಕಾಂಗ್ರೆಸ್‌ನವರಿಗೆ ಇದ್ದ 144 ನಿಮಿಷದಲ್ಲಿ ಮೊಯಿಲಿಯವರು 170 ನಿಮಿಷ ಮಾತನಾಡಿದ್ದಾರೆ. 26 ನಿಮಿಷ ಎಕ್ಸ್‌ಸ್ ಆಗಿದೆ.

ಶ್ರೀಮತಿ ಪ್ರಮೀಳಾ ಎಸ್. ನೇಸರ್ಗಿ : 224 ಸದಸ್ಯರಲ್ಲಿ 5 ಹೆಂಗಸರಿದ್ದೇವೆ. ಆದ್ದರಿಂದ ನೀವು ಟೈಂ ಅಲಾಟ್ ಮಾಡುವಾಗ ನಮಗೂ ಅಲಾಟ್ ಮಾಡಿ.

ಉಪಾಧ್ಯಕ್ಷರು : ಈಗಿನ ವ್ಯವಸ್ಥೆಯಂತೆ ಪಕ್ಷದ ಮೇಲೆ ಟೈಂ ಡಿವೈಡ್ ಇದೆ, ಸೆಕ್ಸ್ ಮೇಲಿಲ್ಲ,

+ ಶ್ರೀ ಗೋವಿಂದ ಕಾರಜೋಳ (ಮುಧೋಳ್) : ಅಧ್ಯಕ್ಷರೇ, ಈ ರಾಜ್ಯದಲ್ಲಿ ಸ್ವಾತಂತ್ರ್ಯ ಬಂದನಂತರ ಇದುವರೆಗೂ ಪರಿಶಿಷ್ಟ ಜಾತಿ ಜನಾಂಗ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳಿಗಾಗಿ 464 ಕಟ್ಟಡಗಳನ್ನು ಕಟ್ಟಿಸಿದ್ದೆವು. ಆದರೆ ಮಾನ್ಯ ದೇವೇಗೌಡರು ಈ ರಾಜ್ಯದ ಮುಖ್ಯಮಂತ್ರಿಯಾದ ನಂತರ ಈ ವರ್ಗಗಳಿಗಾಗಿ ಒಟ್ಟು 210 ಹೊಸ ಹಾಸ್ಟೆಲ್ ಕಟ್ಟಡಗಳನ್ನು ಮಂಜೂರು ಮಾಡಿ 32 ಕೋಟಿ ಉಳಿಸಿದ್ದಕ್ಕೆ ಮೊಟ್ಟಮೊದಲಿಗೆ ಅವರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಪ್ರತಿ ರಾಜ್ಯದಲ್ಲೂ ಪರಿಶಿಷ್ಟ ಜಾತಿ ಜನಾಂಗಕ್ಕೆ ವಿಶೇಷ ಘಟಕ ಯೋಜನೆಯಲ್ಲಿ ಮತ್ತು ಗಿರಿಜನರ ಉಪಯೋಜನೆಯಡಿಯಲ್ಲಿ ಜನಾಂಗದ ಆಧಾರದಮೇಲೆ ಹಣವನ್ನು ಮೀಸಲಾಗಿರಬೇಕೆಂದು ಮಾರ್ಗಸೂಚಿ ಇದ್ದರೂ ಕೇವಲ 9.27 ಶೇಕಡ ಹಣ ಮೀಸಲಾಗಿಡಲಾಗಿತ್ತು. ಅದಕ್ಕೆ ಬದಲಾಗಿ ಶೇಕಡ 15.3ರಷ್ಟು ಹಣ ಆಯವ್ಯಯದಲ್ಲಿ ಇರಿಸಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಹಲವು ಇಲಾಖೆಗಳಲ್ಲಿ ಈ ವಿಶೇಷ ಘಟಕ ಯೋಜನೆಗಾಗಿ ಹಣವನ್ನು ಪ್ರತ್ಯೇಕವಾಗಿ ಇರಿಸುವುದಿಲ್ಲ, ಅದರಿಂದ ಪರಿಶಿಷ್ಟ ಜಾತಿ ಜನಾಂಗದವರಿಗೆ ಏನು ಹಣ ಖರ್ಚು ಮಾಡಬೇಕಾಗಿದೆ ಅದು ಮಾಡಿದರೋ ಇಲ್ಲವೋ ಎಂದು ನೋಡುವುದಕ್ಕಾಗುವುದಿಲ್ಲ, ಅದಕ್ಕಾಗಿ ತಮ್ಮ ಮೂಲಕ ವಿನಂತಿಸುತ್ತೇನೆ ಪ್ರತಿ ಇಲಾಖೆಯಲ್ಲೂ ವಿಶೇಷ ಘಟಕ ಯೋಜನೆಗೆ ಹಣ ಮೀಸಲಾಗಿಡಬೇಕು ಮತ್ತು ಆಯವ್ಯಯದಲ್ಲಿ ಪ್ರತ್ಯೇಕವಾಗಿ ತೋರಿಸಬೇಕೆಂದು ವಿನಂತಿಸುತ್ತೇನೆ. ಪರಿಶಿಷ್ಟ ಜಾತಿ ಜನಾಂಗದವರಿಗೆ ಪ್ರವೇಶ ಮತ್ತು ನೇಮಕಾತಿಯಲ್ಲಿ 1990ರ ಕಾಯಿದೆಯನ್ವಯ ಎಲ್ಲಾ ಕಚೇರಿಗಳಲ್ಲಿ ಹಾಗೂ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿಯನ್ನು ಜಾರಿಗೆ

ತರಬೇಕೆಂದು ಕೇಳಿಕೊಳ್ಳುತ್ತೇನೆ. ಕರ್ನಾಟಕದಲ್ಲಿ ಕ್ಯಾಟಗಿರಿ 1ರಲ್ಲಿ ಬರುವ ಹಿಂದುಳಿದ ವರ್ಗದವರಿಗೆ ವಿದ್ಯಾರ್ಥಿವೇತನಕ್ಕೆ ಆದಾಯ ನಿರ್ಬಂಧ ಯಾವುದೂ ಇರುವುದಿಲ್ಲ, ಆದರೆ ಪರಿಶಿಷ್ಟ ಜಾತಿ ಜನಾಂಗಕ್ಕೆ ವಿದ್ಯಾರ್ಥಿವೇತನ ಕೊಡುವಾಗ 18 ಸಾವಿರ ವಾರ್ಷಿಕ ವರಮಾನ ನಿಗದಿಮಾಡಲಾಗಿದೆ. ಇದು ಯಾವ ನ್ಯಾಯ? ದಯಮಾಡಿ ಸರ್ಕಾರ ಇದನ್ನು ವಾಪಸ್ ಪಡೆಯಬೇಕು.

ಈ ರಾಜ್ಯದಲ್ಲಿ ಕೆಲಸ ಮಾಡುವ ಸ್ವೀಪರ್ಸ್ ಕೂಡ 18 ಸಾವಿರಕ್ಕಿಂತ ಹೆಚ್ಚಿನ ವರಮಾನದವರಿದ್ದಾರೆ. ಈ ನಿರ್ಬಂಧ ಮಾಡುವುದರಿಂದ ಪರಿಶಿಷ್ಟ ಜಾತಿ ಜನಾಂಗದವರಿಗೆ ಅನ್ಯಾಯ ಮಾಡಿದಂತಾಗುತ್ತದೆ. ವಿದ್ಯಾರ್ಥಿನಿಲಯಗಳಲ್ಲಿ ಸರ್ಕಾರ ಊಟದ ವೆಚ್ಚಕ್ಕೆಂದು ಅನುದಾನ ಕೊಡುತ್ತಿರುವುದರ ಬದಲಾಗಿ ರಿಮಾಂಡ್ ಹೋಂ, ಸರ್ಟಿಫೈಡ್ ಸ್ಕೂಲ್ಸ್ ಜೈಲುಗಳಲ್ಲಿರುವ ಡಯಟ್ ಸ್ಕೇಲನ್ನು ನಿಗದಿ ಮಾಡಬೇಕು. ಊಟಕ್ಕೆಂದು ಕೊಡುತ್ತಿರುವ ಅನುದಾನ ಪ್ರಯೋಜನವಾಗುವುದಿಲ್ಲ, ಹಣದ ಕೊರತೆ ಬೀಳುವುದು ಎಂಬ ಕಾರಣದಿಂದ ವಿದ್ಯಾರ್ಥಿಗಳಿಗೆ ಪೌಷ್ಟಿಕ ಆಹಾರ ಸಿಗುವುದಿಲ್ಲ. ಅದರ ಬದಲಾಗಿ ರಿಮಾಂಡ್ ಹೋಂ ಸರ್ಟಿಫೈಡ್ ಸ್ಕೂಲ್‌ಗಳಲ್ಲಿ ಕೊಡುತ್ತಿರುವ ಡಯಟ್ ಸ್ಕೇಲ ಕೊಟ್ಟರೆ ವಿದ್ಯಾರ್ಥಿಗಳಿಗೂ ಉಪಯೋಗ ಇನ್ನು ರಾಜ್ಯದ ಎಲ್ಲಾ ಇಲಾಖೆಗಳಲ್ಲೂ ಪರಿಶಿಷ್ಟ ಜಾತಿ ಜನಾಂಗದವರಿಗಾಗಿ ಉಳಿದಿರುವ ಬ್ಯಾಕ್‌ಲಾಗ್ ವೇಕೆನ್ಸೀಸ್ ಏನಿವೆ ಅವನ್ನು ಸ್ಪೆಷಲ್ ರೂಲ್ಸ್ ಮೂಲಕ ಭರ್ತಿ ಮಾಡಬೇಕೆಂದು ವಿನಂತಿಸುತ್ತೇನೆ. ದಿವಂಗತ ದೇವರಾಜ ಅರಸರ ಸಚಿವ ಸಂಪುಟದಲ್ಲಿ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ರಾಜ್ಯದ ಪ್ರಾಥಮಿಕ ಶಿಕ್ಷಣ ಸಚಿವರಾಗಿದ್ದರು. ಆಗ ಅವರು ಆ ಇಲಾಖೆಯಲ್ಲಿದ್ದ ಪ್ರಾಥಮಿಕ ಶಿಕ್ಷಕರು ಹಾಗೂ ಇನ್ನಿತರ ಎಲ್ಲಾ ಹುದ್ದೆಗಳನ್ನೂ ಬ್ಯಾಕ್‌ಲಾಗ್ ವೇಕೆನ್ಸೀಸನ್ನು ಸ್ಪೆಶಲ್‌ರೂಲ್ಸ್ ಮೂಲಕ ನೇಮಕ ಮಾಡಿದರು. ಅದೇ ರೀತಿ ಸರ್ಕಾರ ಎಲ್ಲಾ ಇಲಾಖೆಗಳಿಂದ ಮಾಹಿತಿ ತರಿಸಿಕೊಂಡು ಆ ಕಾರ್ಯವನ್ನು 6ತಿಂಗಳಲ್ಲಿ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಅಷ್ಟೇ ಅಲ್ಲದೆ ಪರಿಶಿಷ್ಟ ಜಾತಿ ಜನಾಂಗದ ಹೆಸರಿನಲ್ಲಿ ಕೆಲವರು ಖಾಸಗಿ ಹಾಸ್ಟೆಲ್‌ಗಳನ್ನು ನಡೆಸುತ್ತಾರೆ. ಅವರು ಎಲ್ಲಿ ನಡೆಸುತ್ತಾರೆ ಸ್ಲಂಗಳಲ್ಲಿ, ದೊಡ್ಡ ಗಟಾರಗಳಲ್ಲಿ, ಒಂದು ನದಿ ಹೋಗುವಷ್ಟು ದೊಡ್ಡ ಪ್ರಮಾಣದ ಗಟಾರಗಳಿವೆ ಅದರ ಬಾಜು ಶೆಡ್‌ಗಳನ್ನು ಹಾಕಿ ಕೇವಲ ಅನುದಾನ ಪಡೆಯುವ ವಿಚಾರದಿಂದ ಬೋರ್ಡ್ ಹಾಕಿ ಅವ್ಯವಸ್ಥಿತವಾಗಿ, ಮಕ್ಕಳ ಆರೋಗ್ಯ ಸರಿಯಿರುವುದಿಲ್ಲ, ಇರಲಿಕ್ಕೆ ವ್ಯವಸ್ಥೆ ಇರುವುದಿಲ್ಲ, ಕುಡಿವ ನೀರಿನ ವ್ಯವಸ್ಥೆ ಇರುವುದಿಲ್ಲ ವಿದ್ಯುತ್ತಿಲ್ಲ - ಅಂತಹ ಹಾಸ್ಟೆಲ್‌ಗಳೇನಿವೆ ರಾಜ್ಯದಲ್ಲಿ ಹರಿಜನ ಗಿರಿಜನರ ಹೆಸರಿನಲ್ಲೇನು ಕೊಳ್ಳೆ ಹೊಡೆಯುತ್ತಾರೆ ಇದು ಅಬ್ಕಾರಿ ಲಾಬಿಗಿಂತ ಸ್ಟ್ರಾಂಗ್ ಲಾಬಿ ಅಡೆ ಅಧ್ಯಕ್ಷರೇ, ಪರಿಶಿಷ್ಟ ಜಾತಿ ಜನಾಂಗದ ಹೆಸರಿನಲ್ಲಿ ಹಾಸ್ಟೆಲ್ ನಡೆಸುವವರದು, ಅವನ್ನು ಮೊಟ್ಟಮೊದಲಿಗೆ ಸರ್ಕಾರ ವಹಿಸಿಕೊಳ್ಳಬೇಕು. ಏನು ತೊಂದರೆ ಇದೆ ಸರ್ಕಾರಕ್ಕೆ ವಹಿಸಿಕೊಳ್ಳುವುದಕ್ಕೆ? ಸರ್ಕಾರವೇ ಊಟದ ಅನುದಾನ ಕಟ್ಟಡದ ಬಾಡಿಗೆ ಕೊಡುತ್ತದೆ, ಬಟ್ಟೆಗಳನ್ನು ಕೊಡುತ್ತದೆ ಅವರ ಸಿಬ್ಬಂದಿ ವೆಚ್ಚವನ್ನೂ ರೀಂಬರ್ಸ ಮಾಡುವಾಗ ಇವುಗಳನ್ನೆಲ್ಲಾ ವಹಿಸಿಕೊಂಡು ಯೋಗ್ಯರೀತಿಯಲ್ಲಿ ನಡೆಸಲು ಸರ್ಕಾರಕ್ಕಿರುವ ತೊಂದರೆ ಆದರೂ ಏನು? ಸರ್ಕಾರಕ್ಕೆ ನಾನು ವಿನಂತಿಮಾಡಿಕೊಳ್ಳುತ್ತೇನೆ.

ಮೊಟ್ಟಮೊದಲೇ ಪರಿಶಿಷ್ಟ ಜಾತಿಯವರ ಕಲ್ಯಾಣಕ್ಕೆಂದು ಏನಾದರೂ ಯೋಜನೆ ಹಾಕಿಕೊಳ್ಳುತ್ತಿದ್ದರೆ ಈ ಕೆಲಸ ಮೊದಲಿಗೆ ಮಾಡಬೇಕು. ಖಾಸಗಿ ಅನುದಾನಿತ ಹಾಸ್ಟೆಲ್‌ಗಳೆಲ್ಲವನ್ನೂ ಸರ್ಕಾರವೇ ವಹಿಸಿಕೊಳ್ಳಬೇಕು. ಯೋಗ್ಯರೀತಿಯಲ್ಲಿ ನಡೆಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈ ರಾಜ್ಯದಲ್ಲಿ ಇನ್ನೊಂದು ದುರ್ದೈವದ ಸಂಗತಿಯೆಂದರೆ ರಾಜ್ಯಾಂಗದಲ್ಲಿ ಯಾವ ತತ್ವನೀತಿಸಿದ್ಧಾಂತದ ಮೇಲೆ ಪರಿಶಿಷ್ಟ ಜಾತಿ ಜನಾಂಗಕ್ಕಾಗಿ ಮೀಸಲಾತಿ ಒದಗಿಸಿಕೊಟ್ಟರೋ ಅದರ ದುರುಪಯೋಗ ನಡೆಯುತ್ತಿದೆ. ಖಾಸಗಿ

ಶಿಕ್ಷಣ ಸಂಸ್ಥೆಗಳಲ್ಲಂತೂ ಅದರ ದುರುಪಯೋಗ ಬಹಳ ಆಗುತ್ತಿದೆ. ಎಷ್ಟೋ ಖಾಸಗಿ ಶಿಕ್ಷಣ ಸಂಸ್ಥೆಗಳು ತಮಗೆ ಬೇಕಾದ ವೀರಶೈವಲಿಂಗಾಯಿತರಿಗೆ ಮತ್ತು ಇನ್ನೂ ಅನೇಕ ಜಾತಿಯವರಿಗೆ ನೇಮಕ ಮಾಡಿಕೊಳ್ಳುವ ಸಲುವಾಗಿ ಪರಿಶಿಷ್ಟ ಜಾತಿ ಜನಾಂಗದ ಹೆಸರಿನಲ್ಲಿ ಖೊಟ್ಟಿ ದಾಖಲಾತಿಗಳನ್ನು ಸೃಷ್ಟಿಸಿ ಎಲ್ಲ ಹುದ್ದೆಗಳನ್ನೂ ಮೇಲ್ಜಾತಿಯವರ ಪಾಲಾಗಿಸಿಕೊಂಡಿದ್ದಾರೆ. ಅದಕ್ಕಾಗಿ ಸರ್ಕಾರ ಒಂದು ವಿಶೇಷ ಕಾರ್ಯಕ್ರಮ ಹಾಕಿಕೊಳ್ಳಬೇಕು. ಉದಾಹರಣೆಗಾಗಿ ತಂದಿದ್ದೇನೆ, ಸದಾನಂದಯ್ಯ ಎಂಬುವರು ಚಿತ್ರದುರ್ಗ ಜಿಲ್ಲೆಯವರು ಅವರ ಜಾತಿ ಬೇಡ ಜಂಗಮ ಎಂದು ಬರುತ್ತದೆ, ಪ್ರಾಥಮಿಕ ಶಾಲೆಯಲ್ಲಿ ಅವರದು ಹಿಂದೂ ಲಿಂಗಾಯಿತ ಎಂದಿದೆ, ಹೈಸ್ಕೂಲಿನಲ್ಲಿ ಹಿಂದೂ ಲಿಂಗಾಯಿತ ಎಂದಿದೆ. 1971-72ರಲ್ಲಿ ಅವರು ಹೈಸ್ಕೂಲಿನಲ್ಲಿದ್ದಾಗ ಹಿಂದೂ ಲಿಂಗಾಯಿತ ಎಂದು ಬರೆದಿದ್ದಾರೆ. 85-86ರಲ್ಲಿ ಎ೦ಓ ಆದೇಶ ಮಾಡಿದರು ಎಂದು (ಕೆಳಗಡೆ ಬ್ರಾಕೆಟ್‌ನಲ್ಲಿ ಬೇಡ ಜಂಗಮ ಎಂದು ಬರೆದಿದೆ. ಈ ಎಲ್ಲಾ ಕಾಗದ ಪತ್ರಗಳನ್ನೂ ತಂದಿದ್ದೇನೆ ಅವನ್ನು ತಮಗೆ ಕಳುಹಿಸಿಕೊಡುತ್ತೇನೆ. ಈ ರೀತಿ ಜಾತಿ ತಿದ್ದುಪಡಿ ಮಾಡಲಿಕ್ಕೆ ವ್ಯವಸ್ಥೆಯನ್ನು ಸರ್ಕಾರ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಕೊಟ್ಟಿದೆಯೇ ಎಂದು ಗೊತ್ತಾಗುತ್ತಿಲ್ಲ, ಯಾವ ಆಧಾರದ ಮೇಲೆ ಅವರು ತಿದ್ದಿದರು, ಜಾತಿ ತಿದ್ದಲಿಕ್ಕೇನಾದರೂ ಆದೇಶಗಳಿವೆಯೇ? ಸಾಧ್ಯವಿದೆಯೇ? ಅದೇ ಸದಾನಂದಯ್ಯನವರು ಒಂದು ಅರ್ಜಿ ಕೊಟ್ಟು ಸ್ವಾಮಿ ನಾನು ಕೈತಪ್ಪಿನಿಂದಾಗಿ 23-10-89ರಲ್ಲಿ ಶಿಕ್ಷಣ ಇಲಾಖೆಗೆ ಅರ್ಜಿ ಕೊಟ್ಟು ಕೈತಪ್ಪಿನಿಂದಾಗಿ ಬೇಡ ಜಂಗಮ ಬದಲಾಗಿ ಲಿಂಗಾಯಿತ ಬರೆದಿದ್ದಾರೆ ಅದಕ್ಕಾಗಿ ತಿದ್ದಿ ಕೊಡಬೇಕೆಂದು, ಅದರ ಮೇಲೂ ತಿದ್ದುಪಡಿ ಮಾಡಿದ್ದಾರೆ. ಇದು ಎಂಥಾ ನ್ಯಾಯ? ಈ ರೀತಿಯ ಅನ್ಯಾಯ ಪರಿಶಿಷ್ಟರಿಗೆ ನಡೆಯುತ್ತದೆ ಎಂದರೆ ಸರ್ಕಾರ ಕಣ್ಮುಚ್ಚಿ ಕೂರುತ್ತದೆಯೇ ಹೇಗೆ? ಇವಕ್ಕಿಂತ ಹೆಚ್ಚಿನ ಡಾಕ್ಯುಮೆಂಟ್ಸ್ ಏನು ಬೇಕು? ಏಕೆ ಅವರನ್ನು ಅರೆಸ್ಟ್ ಮಾಡಿ ಜೈಲಿಗೆ ಹಾಕಬಾರದು? ಅವರಿಗೆ ನೋಟೀಸ್ ಕೊಟ್ಟು ಕೋರ್ಟ್‌ಗೆ ಹೋಗಲು ಅವಕಾಶವನ್ನು ಅಧಿಕಾರಿಗಳು ಮಾಡಿಕೊಡುತ್ತಾರೆ.

ನಿನ್ನ ಮೇಲೆ ಆಪಾದನೆ ಇದೆ ನೀವು ಬಂದು ಹೇಳಿಕೆ ಕೊಡಬೇಕು ಎಂದು, ಅದು ಏಕೆ ಬೇಕು? ಅಂಗೈಹುಣ್ಣಿಗೆ ಕನ್ನಡಿ ಏಕೆ ಬೇಕು? ಇಷ್ಟೆಲ್ಲಾ ವ್ಯವಸ್ಥೆ ಇದ್ದರೂ ಸರ್ಕಾರ ಕಣ್ಮುಚ್ಚಿಕೂಡುತ್ತದೆಂದರೆ ತಪ್ಪಾಗಲಿಕ್ಕಿಲ್ಲ, ಏಕೆ ಈ ರೀತಿ ನಡೆಯುತ್ತದೆ ರಾಜ್ಯದಲ್ಲಿ? ಬೇಡ ಪರಿಶಿಷ್ಟ ಜಾತಿ ಜನಾಂಗದ ಅವಶ್ಯಕತೆಯೇ ನಮಗಿಲ್ಲವೆಂದರೆ ದಯಮಾಡಿ ಹೇಳಿಬಿಡಬೇಕು, ನಿಮ್ಮ ಅವಶ್ಯಕತೆ ನಮಗಿಲ್ಲ, ನೀವು ನಮ್ಮ ಧರ್ಮದಲ್ಲಿ ಬೇಡ ನಮ್ಮ ದೇಶದಲ್ಲಿ ಬೇಡವೆಂದು ಹೊರಗೆ ಹಾಕುವಂತಹ ವ್ಯವಸ್ಥೆಯನ್ನಾದರೂ ಮಾಡಿಬಿಡಿ. ಒಂದ್ಸಲ ಮುಗಿದುಹೋಗಲಿ. ಯಾವ ಕಾರಣಕ್ಕಾಗಿ ಇಂತಹ ವ್ಯವಸ್ಥೆ ಮಾಡಿದಿರಿ? ಇಷ್ಟೆಲ್ಲಾ ಇದ್ದರೂ ಸರ್ಕಾರ ಏನೂ ಮಾಡಲಿಕ್ಕಾಗಿಲ್ಲ, ಎಲ್ಲಾ ಸೌಲಭ್ಯವನ್ನೂ ಪಡೆದಿದ್ದಾರೆ ಅವರು. ಇಂತಹ ಅನ್ಯಾಯ ತಡೆಗಟ್ಟಲಿಕ್ಕಾಗಿ ಈ ರಾಜ್ಯದಲ್ಲಿ ಒಂದು ಪರಿಶಿಷ್ಟ ಜಾತಿ ಜನಾಂಗದ ಪರ್ಮನೆಂಟ್ ಕಮೀಷನ್ ನೇಮಿಸಬೇಕೆಂದು ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ. ನಿಜವಾದ ಕಳಕಳಿ ಸರ್ಕಾರಕ್ಕಿದ್ದರೆ ಮೂರು ತಿಂಗಳೊಳಗೆ ಈ ಆಯೋಗ ನೇಮಿಸಬೇಕು. ಇಲ್ಲದಿದ್ದರೆ ಹರಿಜನರಿಗೇನು ಸಿಗಬೇಕಾದ ಸವಲತ್ತುಗಳಿವೆ ಅವೆಲ್ಲವನ್ನೂ ಕಬಳಿಸಿ ಹರಿಜನರಿಗೆ ನಾವಿಷ್ಟು ಕೊಟ್ಟಿದ್ದೇವೆ ಅಷ್ಟು ಕೊಟ್ಟಿದ್ದೇವೆ. 5 ವರ್ಷದಲ್ಲಿ 6 ಸಾವಿರ ಕೋಟಿ ಖರ್ಚು ಮಾಡಿದ್ದೇವೆ ಎಂದು ಸದನಕ್ಕೆ ಅಂಕಿಸಂಖ್ಯೆ ಒದಗಿಸುತ್ತೀರಿ ಅದು ಕೇವಲ ಅಂಕಿಯಾಗಿ ಉಳಿಯುತ್ತದೆ. ಈ ದೇಶದಲ್ಲಿರುವ ಹರಿಜನ ಗಿರಿಜನರು ಯಾರೂ ಮುಂದೆ ಬರಲಿಕ್ಕೆ ಸಾಧ್ಯವಿಲ್ಲ, 1947ಕ್ಕಿಂತ ಪೂರ್ವಕ್ಕಿಂತಲೂ ಪರಿಸ್ಥಿತಿ ಈಗ ಭಿನ್ನವಾಗಿದೆ. ಕಠಿಣವಾಗಿದೆ. ಅದನ್ನು ಯಾರೂ ನೋಡಿಲ್ಲ, ಕೇವಲ ಅಧಿಕಾರಿಗಳ ಮೂಲಕ ಅಂಕಿಸಂಖ್ಯೆ ತರಿಸುವುದು

ಸದನಕ್ಕೆ ವರದಿ ಕೊಡುವುದು ಪ್ರಕಟ ಮಾಡುವುದು - ಇಷ್ಟು ಕೆಲಸ ಮಾತ್ರ ರಾಜ್ಯದಲ್ಲಿ ನಡೆಯುತ್ತಿದೆ. ಅದಕ್ಕಾಗಿ ಹೊಸ ಸರ್ಕಾರಕ್ಕಾದರೂ ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಈ ಅನ್ಯಾಯವನ್ನು ಕೂಡಲೇ ತಡೆಗಟ್ಟಬೇಕು. ಇಲ್ಲದಿದ್ದರೆ ಈ ಜನಾಂಗ ರೊಚ್ಚಿಗೇಳುವಂತಹ ಒಂದು ಪ್ರಸಂಗ ಇದೆಯೆಂದು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸಿ ನನಗೆ ಈ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ವಸಂತ ವಿ. ಸಾಲಿಯಾನ (ಕಾಪು) : ಉಪಾಧ್ಯಕ್ಷರೇ, ನಾನು ಮೀನುಗಾರಿಕೆ ಇಲಾಖೆ ಬೇಡಿಕೆ ಬಗ್ಗೆ ಸರ್ಕಾರಕ್ಕೆ ತಮ್ಮ ಮೂಲಕ ಕೆಲವು ವಿಚಾರಗಳನ್ನು ತಿಳಿಸಲಿಕ್ಕೆ ಇಚ್ಛಿಪಡುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಸುಮಾರು 300 ಕಿ.ಮೀ. ಉದ್ದದ ಸಮುದ್ರವಿದೆ. ಸುಮಾರು 6 ಲಕ್ಷ ಮೀನುಗಾರರು ಇದ್ದಾರೆ. ಸುಮಾರು 3 ಲಕ್ಷ ಜನರು ಮೀನುಗಾರಿಕೆ ಉದ್ದಿಮೆಯಲ್ಲಿದ್ದಾರೆ. ಮೀನುಗಾರಿಕೆಯಲ್ಲಿ ಸಮುದ್ರ ಮೀನುಗಾರಿಕೆ ಒಳನಾಡು ಮೀನುಗಾರಿಕೆ ಇದರಲ್ಲಿ ಈ ವರ್ಷ ಸಮುದ್ರ ಮೀನುಗಾರಿಕೆಯಲ್ಲಿ ಸುಮಾರು 1.64 ಲಕ್ಷ ಮೆಟ್ರಿಕ್‌ಟನ್ ಮೀನು ಉತ್ಪಾದನೆಯಾಗಿದೆ. ಒಳನಾಡು ಪ್ರದೇಶದಲ್ಲಿ ಸುಮಾರು 56ಸಾವಿರ ಮೆಟ್ರಿಕ್‌ಟನ್ ಮೀನು ಉತ್ಪಾದನೆಯಾಗಿದೆ. ಇದರಲ್ಲಿ 95ರವರೆಗೆ ಸುಮಾರು 182 ಕೋಟಿ ರೂ.ಗಳ ವಿದೇಶಿ ವಿನಿಮಯ ತರುವ ಈ ಉದ್ದಿಮೆಗೆ ಮೀನುಗಾರಿಕೆ ಇಲಾಖೆಯಲ್ಲಿ ಕೇವಲ 20 ಕೋಟಿ ರೂ. ಬಜೆಟ್ ಏನಿದೆ ಇದನ್ನು ನೋಡಿದಾಗ ನನಗೆ ಬಹಳ ಆಶ್ಚರ್ಯವಾಗುತ್ತದೆ. ಯಾವುದೇ ಸರ್ಕಾರ ಇರಬಹುದು ಅನೇಕ ವರ್ಷಗಳಿಂದ 15, 18, 20 ಕೋಟಿ ಹೀಗೆ ಮೀನುಗಾರಿಕೆಗೆ ಕೊಟ್ಟಿದ್ದಾರೆ. ನನಗೆ ತಿಳಿದ ಹಾಗೆ ನಾನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ನಾನು ಬೇರೆ ರಾಜ್ಯಕ್ಕೆ ಭೇಟಿ ನೀಡಿದಾಗ ಅಲ್ಲಿ ಇದಕ್ಕೆ ಹೆಚ್ಚು ಬಡ್ಜೆಟ್ ಅನ್ನು ಇಟ್ಟಿರುವುದು ಕಂಡು ಬಂತು. ಉದಾಹರಣೆಗೆ ಹೇಳುವುದಾದರೆ ಗುಜರಾತ್ ರಾಜ್ಯಕ್ಕೆ ಸುಮಾರು ನೂರು ಕೋಟಿ ರೂಪಾಯಿ ಬಡ್ಜೆಟ್ ಇದೆ. ಅದೇ ರೀತಿ ಆಂಧ್ರಪ್ರದೇಶ, ಮಹಾರಾಷ್ಟ್ರ, ಒರಿಸ್ಸಾ ಇತರೆ ರಾಜ್ಯಗಳಿಗೆ ಹೋಲಿಸಿ ನೋಡಿದಾಗ ನಮ್ಮ ರಾಜ್ಯದ ಬಡ್ಜೆಟ್ ಏನು ಇದೆ ಇದು ಬಹಳ ಕಡಿಮೆಯಾಗಿದೆ. ಇದನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಪ್ರತಿ ವರ್ಷ ಕನಿಷ್ಠ ಹತ್ತು ಕೋಟಿಯನ್ನು ಹೆಚ್ಚಿಗೆ ಮಾಡಿ ನೂರು ಕೋಟಿಗೆ ಬರುವಂತಹ ರೀತಿಯಲ್ಲಿ ಸರ್ಕಾರ ಪ್ರಯತ್ನ ಮಾಡಬೇಕು. ಮತ್ತು ಅಷ್ಟು ಬಡ್ಜೆಟ್ ಅನ್ನು ಇಡಬೇಕೆಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತಿದ್ದೇನೆ. ಇವತ್ತು ನಿಮಗೆ ತಿಳಿದ ಹಾಗೆ ಕರ್ನಾಟಕ ರಾಜ್ಯದಲ್ಲಿ ಸುಮಾರು 378 ಪರ್ಸಿನ್ ಬೋಟುಗಳು ಇವೆ. 1043 ಗಿಲ್‌ನೆಟ್ಸ್ ಇವೆ. 2032 ಟ್ರಾಲ್ ಬೋಟುಗಳು ಇವೆ. ಅದೇ ರೀತಿಯಲ್ಲಿ 11759 ಟ್ರೆಡಿಷನಲ್ ಬೋಟ್ಸ್‌ಗಳು ಇವೆ. ಇವನ್ನೆಲ್ಲಾ ತಿಳಿಯುವಾಗ ಇವತ್ತು ನಾವು ಬಹಳಷ್ಟು ಪ್ರಗತಿಪಥದ ಹಾದಿಯಲ್ಲಿ ನಾವು ಹೋಗುತ್ತಿದ್ದೇವೆಂದು ಹೇಳಬಹುದು. ಅನೇಕ ವರ್ಷಗಳ ಹಿಂದೆ ಮೀನುಗಾರರು ಯಾವ ರೀತಿಯಲ್ಲಿದ್ದರು ಮತ್ತು ಯಾವ ರೀತಿಯಲ್ಲಿ ಬೇರೆ ಬೇರೆ ಯಾಂತ್ರಿಕ ದೋಣಿ ಅಳವಡಿಸಿಕೊಂಡು ಅವರ ಕಾರ್ಯಕ್ರಮವನ್ನು ಹಾಕಿಕೊಂಡು ಮುಂದೆ ಬಂದಿದ್ದಾರೆ.

ಸಮುದ್ರದಲ್ಲಿ ಅನೇಕ ತರಹದ ಮೀನುಗಳು ಇವೆ. ನದಿ ಪ್ರದೇಶಗಳಲ್ಲಿ ಅನೇಕ ತರಹದ ಮೀನುಗಳು ಇವೆ. ಒಂದು ಕಡೆಯಲ್ಲಿ ಬೇರೆ ಬೇರೆ ಉದ್ದಿಮೆಗಳು ಏನು ಇವೆ ಇದರಿಂದ ಜಲ ಮಾಲಿನ್ಯ ವಾಯು ಮಾಲಿನ್ಯದ ತೊಂದರೆಯಿಂದ ಅನೇಕ ನದಿಗಳಲ್ಲಿ ಸಮುದ್ರಗಳಲ್ಲಿ ಮೀನಿನ ಸಂತತಿ ನಾಶವಾಗುವಂತಹ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. ಅನೇಕ ಕಡೆಗಳಲ್ಲಿ ಬೇರೆ ಬೇರೆ ಜಿಲ್ಲೆಗಳಲ್ಲಿ ನೋಡಿದಾಗ ಜಲ ಮಾಲಿನ್ಯದಿಂದ ಅನೇಕ ಮೀನುಗಳು ನಾಶವಾದಂತಹ ಪರಿಸ್ಥಿತಿಯನ್ನು ನಾವು ನೋಡಿದ್ದೇವೆ. ಕಳೆದ ವರ್ಷ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನೇಕ ಮೀನುಗಾರರಿಗೆ

ತೊಂದರೆಯಾದಂತಹ ಪರಿಸ್ಥಿತಿಯಲ್ಲಿ ನದಿ ಮೀನುಗಳು ಸಮುದ್ರದ ಮೀನುಗಳು ಹಾಳಾಗಿತ್ತು, ಆ ಸಂದರ್ಭದಲ್ಲಿ ಅವರಿಗೆ ದಿನನಿತ್ಯಕ್ಕೆ ಆಹಾರವನ್ನು ಪಡೆಯುವಂತಹ ಸಂದರ್ಭ ಸಹ ಇರಲಿಲ್ಲ, ಅಂತಹ ಪರಿಣಾಮ ಇನ್ನು ಮುಂದೆ ಆಗಬಾರದು. ಅದಕ್ಕೋಸ್ಕರ ಯಾವುದೇ ಒಂದು ರೀತಿಯಲ್ಲಿ ಕರ್ನಾಟಕ ರಾಜ್ಯದಲ್ಲಿನ ಉದ್ದಿಮೆಗಿಂದ ಬರುವಂತಹ ಜಲ ಮಾಲಿನ್ಯವಾದಂತಹ ನೀರನ್ನು ಬಿಡುವಂತಹ ಪರಿಸ್ಥಿತಿಯಾದರೆ ಖಂಡಿತವಾಗಿ ಈ ಒಂದು ನಿಮಿಷ ಸಂತತಿಗೆ ತೊಂದರೆಯಾಗುತ್ತದೆ. ಸರ್ಕಾರ ಒಂದು ಕಟ್ಟುನಿಟ್ಟಿನ ಆಜ್ಞೆಯನ್ನು ಹೊರಡಿಸುತ್ತಾ, ಜೂನ್, ಜುಲೈ ಆಗಸ್ಟ್ ಈ ಮೂರು ತಿಂಗಳಲ್ಲಿ ಮೀನುಗಾರಿಕೆಯನ್ನು ಮಾಡಬಾರದೆಂದು ಅದರಲ್ಲಿ ತಿಳಿಸಿದೆ. ಇದರ ಬಗ್ಗೆ ಕಟ್ಟುನಿಟ್ಟಿನ ಆಜ್ಞೆ ಇದ್ದರೂ ಸಹ ಸಮುದ್ರದಲ್ಲಿ ಮೀನುಗಾರಿಕೆ ಕೆಲಸ ಇವತ್ತು ನಡೆಯುತ್ತಿದೆ. ನಾನು ಸರ್ಕಾರವನ್ನು ಮತ್ತು ಸಂಬಂಧಪಟ್ಟ ಮೀನುಗಾರಿಕಾ ಮಂತ್ರಿಯನ್ನು ಒತ್ತಾಯಿಸುತ್ತೇನೆ. ಮೀನಿನ ಸಂತತಿ ನಾಶವಾಗುವಂತಹ ಇನ್ನೊಂದು ಪದ್ಧತಿ ಅದು ನಿರ್ಮಾಣವಾಗುತ್ತದೆ. ಆ ರೀತಿಯಲ್ಲಿ ಕಟ್ಟುನಿಟ್ಟಿನ ಆಜ್ಞೆ ಇದ್ದರೂ ಸಹ ಹೆಚ್ಚಾಗಿ ಉತ್ತರ ಕನ್ನಡ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮುದ್ರ ಮೀನುಗಾರಿಕೆ ಸಂದರ್ಭದಲ್ಲಿ ಈ ಮೂರು ತಿಂಗಳಲ್ಲಿ ಆ ಮೀನಿನ ಮರಿಗಳು ಮೀನುಗಳು ಮರಿ ಇರುವಂಥಾದ್ದು ಎಲ್ಲರಿಗೂ ತಿಳಿದಂತಹ ವಿಷಯ. ಆ ಮೂರು ತಿಂಗಳಲ್ಲಿ ಮೀನುಗಳು ಸಮುದ್ರ ಕಿನಾರೆಗೆ ಬರುತ್ತವೆ, ಆ ಸಂದರ್ಭದಲ್ಲಿ ಕಡ್ಡಾಯವಾಗಿ ಮೀನುಗಾರಿಕೆ ನಡೆಯಬಾರದೆಂದು ಮತ್ತೊಂದು ಆಜ್ಞೆಯನ್ನು ಹೊರಡಿಸಬೇಕು. ಅದೇ ರೀತಿಯಲ್ಲಿ ಮೀನುಗಾರಿಕೆಗೆ ಬೇಕಾದಂತಹ ಬಂದರುಗಳು ಮಂಗಳೂರಿನಲ್ಲಿ, ಮಲ್ಪೆಯಲ್ಲಿ, ಗಂಗೊಳ್ಳಿಯಲ್ಲಿ ಹೊನ್ನಾವರದಲ್ಲಿ, ಕಾರವಾರದಲ್ಲಿ, ಕದಡಿಯಲ್ಲಿ ಮತ್ತು ಕಾರವಾರದಲ್ಲಿ ಇವೆ.

ಈ ಬಂದರಿನಲ್ಲಿ ಅನೇಕ ಲೋಪದೋಷಗಳು ಇವೆ. ಮಂಗಳೂರಿನಲ್ಲಿ ಅನೇಕ ಮೀನುಗಾರಿಕಾ ಬಂದರಿನಲ್ಲಿ ಅನೇಕ ಅಭಿವೃದ್ಧಿ ಕೆಲಸ ಬಾಕಿ ಇದೆ. ಅದನ್ನು ತಾವು ದಯವಿಟ್ಟು ಮುಂದಿನ ವರ್ಷಗಳಲ್ಲಿ ಮೀನುಗಾರರಿಗೆ ಪ್ರಯೋಜನವಾಗುವಂತಹ ರೀತಿಯಲ್ಲಿ ಎಲ್ಲಾ ಮೀನುಗಾರಿಕಾ ದೋಣಿಗಳು ನಿಲ್ಲುವಂತಹ ಪರಿಸ್ಥಿತಿಯನ್ನು ಮಾಡಿಸಬೇಕು. ಅಲ್ಲಿ ಎಲ್ಲಾ ಸೌಕರ್ಯವನ್ನು ಮೀನುಗಾರರಿಗೆ ಇಲ್ಲಿಯವರೆಗೆ ಕೊಟ್ಟಿದ್ದಾರೆ. ಇನ್ನೂ ಹೆಚ್ಚಿನ ರೀತಿಯ ಸೌಕರ್ಯ ಅವರಿಗೆ ದೊರಕಲಿಕ್ಕೆ ಇವತ್ತು ಕಾರ್ಯಕ್ರಮಗಳು ಇವೆ. ರಾಜ್ಯ ಸರ್ಕಾರದ, ಕೇಂದ್ರ ಸರ್ಕಾರದ ಕಾರ್ಯಕ್ರಮಗಳು ಇವೆ.

ಅದೇ ರೀತಿಯಲ್ಲಿ ಮಲ್ಪೆಯ ಮೀನುಗಾರಿಕಾ ಬಂದರಿನಲ್ಲಿ ಎರಡನೇ ಹಂತದ ಕೆಲಸ ಕೈಗೆ ಎತ್ತಿಕೊಳ್ಳಬೇಕಾಗುತ್ತದೆ. ಅದಕ್ಕೆ ಕೇಂದ್ರ ಸರ್ಕಾರದ ಅನುಮತಿ ಪಡೆಯಬೇಕಾಗುತ್ತದೆ. ಅದಕ್ಕೆ ಬೇಕಾದಂತಹ ಅನುದಾನವನ್ನು ಸಹ ತಾವು ಅಳವಡಿಸಬೇಕಾಗುತ್ತದೆ. ರಾಜ್ಯ ಸರ್ಕಾರದಲ್ಲಿ ಅದಕ್ಕೆ ಬೇಕಾದಂತಹ ಅನುದಾನವನ್ನು ಹಣವನ್ನು ಅಳವಡಿಸಿಕೊಂಡು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದರೆ ಮಾತ್ರ ಕೇಂದ್ರ ಸರ್ಕಾರ ಅದಕ್ಕೆ ಬೇಕಾದಂತಹ 50,000 ಅನುದಾನವನ್ನು ಕೊಡುತ್ತಾರೆ. ಅದೇ ರೀತಿಯಲ್ಲಿ ಮೀನುಗಾರಿಕೆಗೆ ಬೇಕಾದಂತಹ ತಂಗುದಾಣಗಳು ಜೆಟ್ಟಿಗಳನ್ನು ನಿರ್ಮಾಣ ಮಾಡುವಂತಹ ಕೆಲಸ ಬಹಳ ಪ್ರಾಮುಖ್ಯವಾಗಿವೆ. ಬೇರೆ ರಾಜ್ಯದಲ್ಲಿ ಮತ್ತು ಬೇರೆ ದೇಶದಲ್ಲಿ ನಾವು ಹೋಲಿಸಿದಾಗ ನಮ್ಮ ರಾಜ್ಯದಲ್ಲಿ ಸುಮಾರು 15 ಜೆಟ್ಟಿಗಳನ್ನು ನಿರ್ಮಾಣ ಮಾಡುವಂತಹ ಐಡೆಂಟಿಫಿಕೇಷನ್ ಅನ್ನು ಮಾಡಿದ್ದೇವೆ. ಅದರ ಬಗ್ಗೆ ಹಂತ ಹಂತವಾಗಿ ಒಂದು ವರ್ಷಕ್ಕೆ 5 ತಂಗು ದಾಣ ಅಂದರೆ ಜೆಟ್ಟಿಗಳನ್ನು ನಿರ್ಮಾಣ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳಬೇಕು. 5 ವರ್ಷದ ಯೋಜನೆಯಲ್ಲಿ ಕನಿಷ್ಠ ಪಕ್ಷ 15 ಜೆಟ್ಟಿಗಳನ್ನಾದರೂ ಉತ್ತರ ಕನ್ನಡ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಿರ್ಮಾಣ ಮಾಡಲಿಕ್ಕೆ ಕಾರ್ಯಕ್ರಮ ತೆಗೆದುಕೊಳ್ಳಬೇಕು.

ಹಂಗಾರು ಕಟ್ಟೆಯಲ್ಲಿ ಇವತ್ತು ಕಾರ್ಯಕ್ರಮ ನಡೆಯುತ್ತಿದೆ ಆದರೆ ಎಷ್ಟು ವೇಗವಾಗಿ ನಡೆಯಬೇಕು ಅಷ್ಟು ವೇಗವಾಗಿ ನಡೆಯುತ್ತಿಲ್ಲ, ತಾವು ಇದರ ಬಗ್ಗೆ ಗಮನ ಹರಿಸಬೇಕು. ಇದಕ್ಕೆ ಅನುದಾನ ಇಲ್ಲದಿದ್ದರೆ ಇದಕ್ಕೆ ಬೇಕಾದಂತಹ ಅನುದಾನವನ್ನು ಕೊಡಬೇಕು ಮತ್ತು ಆದಷ್ಟು ಬೇಗ ಹಂಗಾರು ಕಟ್ಟೆಯಲ್ಲಿ ಜಟ್ಟಿಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಹೆಜಮಾಡಿ ಕೋಡಿಯಲ್ಲಿ 1 ಕೋಟಿ ವೆಚ್ಚದಲ್ಲಿ ಒಂದು ಸಣ್ಣ ಮಿನಿ ಬಂದರು ಮಾಡಲಿಕ್ಕೆ ಈಗಾಗಲೇ ಯೋಜನೆ ಹಾಕಿ ಕೊಂಡಿದ್ದೇವೆ. ಇದರಲ್ಲಿ ಕೇವಲ ಲ್ಯಾಂಡ್ ಅಕ್ವಿಸಿಷನ್ ಮಾತ್ರ ಆಗಿದೆ. ಲ್ಯಾಂಡ್ ಅಕ್ವಸಿಷನ್ ಆದ ಮೇಲೆ ಅದಕ್ಕೆ ರಾಜ್ಯ ಸರ್ಕಾರ ಆಡಳಿತಾತ್ಮಕ ಮಂಜೂರಾತಿ ಕೊಡಬೇಕು ಕೇಂದ್ರ ಸರ್ಕಾರದ ಅನುಮತಿ ಸಹ ಬೇಕಾಗುತ್ತದೆ. ಮತ್ತು ಕೇಂದ್ರ ಸರ್ಕಾರದ ಹಣದ ಸಹಾಯ ಕೂಡ ಇದಕ್ಕೆ ಬೇಕಾಗುತ್ತದೆ. ಈ ಕೆಲಸವನ್ನು ಆದಷ್ಟು ಬೇಗ ಪ್ರಾರಂಭ ಮಾಡಲಿಕ್ಕೆ ತಮ್ಮ ಮುಖೇನ ಸರ್ಕಾರವನ್ನು ವಿನಂತಿ ಮಾಡುತ್ತಿದ್ದೇನೆ. ಅದೇ ರೀತಿಯಲ್ಲಿ ಉತ್ತರ ಕನ್ನಡ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ವರ್ಷಕ್ಕೆ ತಾವು ಉಳ್ಳಾಲದಲ್ಲಿ ಕಾಪುವಿನಲ್ಲಿ ನವ ಮಂಗಳೂರು ಬಂದರಿನ ಹತ್ತಿರ ಶಿರೂರು ಕುಮುಟಾ ಮತ್ತು ಬೆಳಿಕೆರೆ ಈ ಜಾಗದಲ್ಲಿ ಈಗಾಗಲೇ ನಾವು ಸರ್ವೆ ಮಾಡಿದ್ದೇವೆ. ಮೈಕ್ರೋ ಸರ್ವೆ ಸಹ ಮಾಡಿದ್ದೇವೆ. ಈ ಮೈಕ್ರೋ ಸರ್ವೆ ಯಾವ ರೀತಿ ನಡೆದಿದೆ ಮತ್ತು ಈ ವರ್ಷದಲ್ಲಿ ಜಟ್‌ಗಳನ್ನು ತೆಗೆದುಕೊಂಡು ಇದಕ್ಕೆ ಬೇಕಾದಂತಹ ರಾಜ್ಯ ಸರ್ಕಾರದ ಅನುದಾನ ಕೇಂದ್ರ ಸರ್ಕಾರದ ಅನುದಾನ ಇದ್ದು ಇದನ್ನು ತಾವು ಹಂತ ಹಂತವಾಗಿ ಇದನ್ನು ಮಾಡಬೇಕಾಗಿ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

(ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

6.30 ಪಿ.ಎಂ

ಶ್ರೀ ವಸಂತ ವಿ. ಸಾಲಿಯಾನ : ಇವತ್ತು ನಿಮಗೆ ತಿಳಿದಿರುವ ಹಾಗೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೇವಲ ಮಂಗಳೂರು ಮತ್ತು ಮಲ್ಪೆಯಲ್ಲಿ ಸಪ್ಟೆಂಬರ್, ಅಕ್ಟೋಬರ್ ಮತ್ತು ನವೆಂಬರ್ ಈ ಮೂರು ತಿಂಗಳಲ್ಲಿ ಹೆಚ್ಚಿಗೆ ಮೀನು ಉತ್ಪಾದನೆಯಾಗುತ್ತದೆ. ಮೀನು ಬರುತ್ತಾ ಇದೆ. ಆದರೆ ಇವತ್ತು ಮಾರಾಟ ಮತ್ತು ಲ್ಯಾಂಡಿಂಗ್ ಏನಿದೆ, ಅದು ಕೇವಲ ಮಲ್ಪೆ ಮತ್ತು ಮಂಗಳೂರಿನಲ್ಲಿ ಮಾತ್ರ ಆಗುತ್ತದೆ. ಅದರ ಮಧ್ಯದಲ್ಲಿ ಲ್ಯಾಂಡಿಂಗ್ ಸೆಂಟರ್ಸ್ ಅಂದರೆ ಜಟ್ಟಿ ನಿರ್ಮಾಣವಾಗಿದ್ದರೆ ಈ ಒಂದು ಮೀನಿಗೆ ಹೆಚ್ಚಿನ ಒಂದು ಬೆಲೆ ಬರುವ ಒಂದು ಕಾರ್ಯಕ್ರಮ ಸಹ ಇದೆ. ಅದೇ ರೀತಿಯಲ್ಲಿ ಬೇರೆ ಬೇರೆ ಕಡೆಗಳಲ್ಲಿ ಲ್ಯಾಂಡಿಂಗ್ ಸೆಂಟರ್ಸ್ ಇದ್ದರೆ ಸಾರ್ವಜನಿಕರಿಗೆ ಆದಷ್ಟು ಬೇಗ ಮುಟ್ಟಿಸುವಂಥ ಒಂದು ಕಾರ್ಯಕ್ರಮ ಸಹಾ ಅದರಲ್ಲಿ ಆಗುತ್ತದೆ. ಆದ್ದರಿಂದ ತಾವು ಇದರ ಬಗ್ಗೆ ಹೆಚ್ಚಿನ ಚಿಂತನೆಯನ್ನು ಮಾಡಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ 142 ಐಸ್ ಪ್ಲಾಂಟ್ ಇವೆ. ಈ ಐಸ್ ಪ್ಲಾಂಟ್ ಏತಕ್ಕೋಸ್ಕರ ಬೇಕು ಎಂದರೆ ಮೀನು ಹಿಡಿದಕೂಡಲೇ ಅದಕ್ಕೆ ಬೇಕಾದ ಐಸ್‌ಗಳನ್ನು ಹಾಕಿ ಅದನ್ನು ಟ್ರಾನ್ಸ್‌ಪೋರ್ಟ್ ಮಾಡುವುದಕ್ಕೆ ಅದು ಉಪಯೋಗವಾಗುತ್ತದೆ. ಆದರೆ ಈ 142 ಐಸ್ ಪ್ಲಾಂಟ್‌ಗಳ ಪರಿಸ್ಥಿತಿ ಏನಾಗಿದೆ, ನನಗೆ ತಿಳಿದಹಾಗೆ 142 ಐಸ್ ಪ್ಲಾಂಟ್‌ನಲ್ಲಿ 10 ಪರ್ಸೆಂಟ್ ಐಸ್ ಪ್ಲಾಂಟ್ ಸಹ ಸರಿಯಾಗಿ ನಡೆಯುತ್ತಿಲ್ಲ, ಹತ್ತು ಪರ್ಸೆಂಟ್ ಮಾತ್ರ ಎಫಿಷಿಯೆನ್ಸಿ ಇದೆ. ಅನೇಕ ಕಡೆಗಳಲ್ಲಿ ಐಸ್ ಪ್ಲಾಂಟಿನ ಮೆಷಿನರಿಗಳನ್ನು ತಾವು ಬದಲಾವಣೆ ಮಾಡಬೇಕಾಗುತ್ತದೆ. ಬೇರೆ ಬೇರೆ ಹಂತದಲ್ಲಿ ಅದಕ್ಕೆ ಬೇಕಾದಂಥ ಕಾರ್ಯಕ್ರಮಗಳನ್ನು ಸಹ ತಾವು ರೂಪಿಸಬೇಕಾಗುತ್ತದೆ.

ಈ 142 ಐಸ್ ಪ್ಲಾಂಟ್‌ನಲ್ಲಿ ತಮಗೆ ಎಷ್ಟು ಆದಾಯ ಬರುತ್ತದೆ? ಅದರ ಬಗ್ಗೆಯೂ ಸಹಾ ತಾವು ಚಿಂತನೆಯನ್ನು ಮಾಡಬೇಕಾಗುತ್ತದೆ. ಕೆಲವು ಕಡೆಗಳಲ್ಲಿ ಸರ್ಕಾರ ಗುತ್ತಿಗೆ ಕೊಟ್ಟಿರಬಹುದು. ಆ ಗುತ್ತಿಗೆಯನ್ನು ಯಾವ ಆಧಾರದಮೇಲೆ ಕೊಡಬೇಕಾಗುತ್ತದೆ. ಹೆಚ್ಚಿಗೆ ಬಿಡ್ ಯಾರು ಮಾಡುತ್ತಾರೆ, ಅವರಿಗೆ ಕೊಡಬೇಕಾಗುತ್ತದೆ. ಅದರಿಂದ ಸರ್ಕಾರಕ್ಕೆ ಯಾವುದೇ ರೀತಿಯಲ್ಲಿ ನಷ್ಟವಾಗದ ರೀತಿಯಲ್ಲಿ ಆ ಐಸ್ ಪ್ಲಾಂಟ್‌ಗಳನ್ನು ಅಥವಾ ಕೋಲ್ಡ್ ಸ್ಟೋರೇಜ್‌ಗಳನ್ನು ನಾವು ಗುತ್ತಿಗೆ ರೂಪದಲ್ಲಿ ಕೊಡಬೇಕಾಗುತ್ತದೆ. ಅದೇ ರೀತಿಯಲ್ಲಿ ಇವತ್ತು ಮೀನುಗಾರಿಕೆ ಹೇಗಿದೆ ಎಂದರೆ ಅನೇಕ ವರ್ಷಗಳಿಂದ ನಾವು ಮೀನುಗಾರಿಕೆಯನ್ನು ನಡೆಸುತ್ತಿದ್ದೇನೆ. ಅದರಲ್ಲಿ ಇಷ್ಟರವರೆಗೆ ನಾವು ನಮ್ಮ ರಾಜ್ಯದಲ್ಲಿ ಆಳ ಸಮುದ್ರ ಮೀನುಗಾರಿಕೆ ಬಗ್ಗೆ ಚಿಂತನೆಯನ್ನು ಮಾಡಲಿಲ್ಲ. ಅಂದರೆ ಕೇವಲ ನಾವು ಯಾಂತ್ರಿಕ ದೋಣಿ ಮುಖೇನ ಕೇವಲ 12 ಕಿಲೋಮೀಟರ್ ಮಾತ್ರ ನಾವು ಮೀನನ್ನು ಹಿಡಿಯುವಂಥ ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಆಳ ಸಮುದ್ರ ಮೀನುಗಾರಿಕೆಯಿಂದ ಸುಮಾರು 65 ಕಿಲೋಮೀಟರ್ ದೂರಕ್ಕೆ ಹೋಗಿ ಮೀನುಗಾರಿಕೆ ಮಾಡುವಂಥ ಒಂದು ಯೋಜನೆಯನ್ನೂ ಸಹ ನಾವು ಹಾಕಿಕೊಂಡಿದ್ದೇವೆ. ಅದಕ್ಕೆ ಬೇಕಾದಂಥ ಸಬ್ಸಿಡಿಯನ್ನೂ ಸಹ 1994ರಲ್ಲಿ ಸುಮಾರು ಹತ್ತು ಗ್ರೂಪ್ ಹತ್ತು ಬೋಟ್‌ಗಳಿಗೆ ಒಂದು ಬೋಟಿಗೆ ಎರಡು ಲಕ್ಷ ರೂಪಾಯಿ ಸಬ್ಸಿಡಿ ಮತ್ತು ಆ ಬೋಟಿಗೆ ಮೂರು ಎಕ್ವಿಪ್‌ಮೆಂಟ್, ಒಂದು fish finder; echo sounder and communication system.

ಇದಕ್ಕೋಸ್ಕರ ನಾವು 35 ಸಾವಿರ, ಒಂದು ಬೋಟಿಗೆ ಎರಡು ಲಕ್ಷದ ಮೂವತ್ತೈದು ಸಾವಿರ ರೂಪಾಯಿ ಸಬ್ಸಿಡಿ ಕೊಡುವಂಥ ಯೋಜನೆಯನ್ನು 1994ರಲ್ಲಿ ನಾವು ಹಾಕಿಕೊಂಡಿದ್ದವು. ಆ ಯೋಜನೆ ಇವತ್ತೇನಾಯಿತು? ಎಷ್ಟು ಜನರು ಮುಂದೆ ಬಂದಿದ್ದಾರೆ? ಎಷ್ಟು ಗ್ರೂಪ್‌ನವರು ಮುಂದೆ ಬಂದಿದ್ದಾರೆ. ನಮ್ಮ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಆಜ್ಞೆಯನ್ನು ಕೊಡಬೇಕಾಗುತ್ತದೆ. ಉತ್ತರ ಕನ್ನಡ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಒಂದು ಆಳ ಸಮುದ್ರ ಮೀನುಗಾರಿಕೆಗೋಸ್ಕರ ಯಾವ ರೀತಿಯಲ್ಲಿ ಜನರು ಮುಂದೆ ಬರಬೇಕು, ಅವರಿಗೆ ಡೆಮಾನ್‌ಸ್ಟ್ರೇಷನ್‌ನ್ನು ಈಗಾಗಲೇ ನಾವು ಕಳೆದ 1994ನೇ ಇಸವಿಯಲ್ಲಿ ಪ್ರಾರಂಭ ಮಾಡಿದ್ದೇವೆ. ತಾವೂ ಸಹ ಪ್ರಾರಂಭ ಮಾಡಿದ್ದೀರಿ. ಮುಂಚೆ 1994ನೇ ಇಸವಿಯಲ್ಲಿ ನಾನು ಮಂತ್ರಿಯಾದ ಸಂದರ್ಭದಲ್ಲಿ ಸಹಾ ಆಳ ಸಮುದ್ರ ಮೀನುಗಾರಿಕೆಯ ಬಗ್ಗೆ ಈ ಒಂದು ಮೀನುಗಾರರಿಗೆ ತರಬೇತಿ ಶಿಬಿರಗಳನ್ನು ಕಾರವಾರದ, ತದಡಿಯಲ್ಲಿ ಮಲ್ಪೆಯಲ್ಲಿ ಮತ್ತು ಮಂಗಳೂರಿನಲ್ಲಿ ಬೇರೆ ಬೇರೆ ಕಡೆ ಎಲ್ಲೆಲ್ಲಿ ತಂಗುದಾಣ ಇದೆ, ಅಲ್ಲಿ ಯೋಜನೆಯನ್ನು ಮೀನುಗಾರರಿಗೆ ಹಾಕಿಕೊಡಬೇಕು. ಮತ್ತು ಅವರಿಗೆ ಒಳ್ಳೆಯ ರೀತಿಯ ಒಂದು ತರಬೇತಿಯನ್ನೂ ಸಹ ತಾವು ಕೊಡಬೇಕೆಂದು ಹೇಳುತ್ತೇನೆ.

ಅದೇ ರೀತಿಯಲ್ಲಿ ನಿಮಗೆ ತಿಳಿದಹಾಗೆ ಮಂಗಳೂರು ಬಂದರಿನಲ್ಲಿ ಹೋದವರ್ಷ ಅಡೆತಡೆಗೋಡೆಗಳು ನಿರ್ಮಾಣವಾಗಿ ನಾವು ಮುಗಿಸಿದ್ದೇವೆ. ಇನ್ನೂ ಸಹ ಅದರ ಒಂದು ಪೇಮೆಂಟ್ ಏನಿದೆ, ಅದು ಆಗಲಿಲ್ಲ. ಅದರ ಬಗ್ಗೆ ತಾವು ಪೇಮೆಂಟ್‌ನ್ನೂ ಸಹ ಮಾಡಬೇಕಾಗಿದೆ. ಅದಕ್ಕೆ ತಾವು ಮಂಜೂರಾತಿ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಅದೇ ರೀತಿಯಲ್ಲಿ ನವಮಂಗಳೂರು ಅಂದರೆ ಮಂಗಳೂರು ಬಂದರಿನಲ್ಲಿ ಹೂಳೆತ್ತುವ ಕಾರ್ಯಕ್ರಮವನ್ನು ನಾವು 1994ನೇ ಇಸವಿಯಲ್ಲಿ ಸುಮಾರು ಹತ್ತು ಕೋಟಿ ಎಪ್ಪತ್ತೈದು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಪ್ರಾರಂಭ ಮಾಡಿದ್ದೇವೆ. ಈ ವ್ಯವಸ್ಥೆ ಏನಾಗಿದೆ, ಅದು ಯಾವ ಹಂತದಲ್ಲಿದೆ? ಎಷ್ಟು ಕೆಲಸವಾಗಿದೆ? ಎಷ್ಟು ಹಣವನ್ನು ತಾವು ಅದಕ್ಕೆ ಪೇಮೆಂಟ್ ಮಾಡಿದ್ದೀರಿ? ಯಾವ ಹಂತದಲ್ಲಿ ಈ ಕೆಲಸವಾಗುತ್ತಿದೆ? ಎಷ್ಟು ಖರ್ಚು ಮಾಡಬೇಕಾಗಿದೆ? ಏಕೆಂದರೆ 1996ರೊಳಗೆ

ಅದನ್ನು ಮುಗಿಸುವಂಥ ಒಂದು ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ. ಅದು ಯಾವ ಹಂತದಲ್ಲಿದೆ? ದಯವಿಟ್ಟು 96ರೊಳಗೆ ಅದನ್ನು ಮುಗಿಸುವಂಥ ಯೋಜನೆಯನ್ನು ಹಾಕಿಕೊಳ್ಳಬೇಕು. ಮತ್ತು ಅದಕ್ಕೆ ಬೇಕಾದಂಥ ಏನು ಡ್ರೆಡಿಜಂಗ್ ಮೆಷಿನ್ ಇದೆ, ಅದನ್ನು ಬೇರೆ ಬೇರೆ ಹಂತದಲ್ಲಿ ತಂದು ಅದನ್ನು ಮುಗಿಸಬೇಕಾಗಿ ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಅದೇ ರೀತಿಯಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ ಈ ಯೋಜನ 1978ನೇ ಇಸವಿಯಲ್ಲಿ ಪ್ರಾರಂಭವಾಯಿತು. ಕೇಂದ್ರದ ಪಾಲು 50 ಭಾಗ, ರಾಜ್ಯದ್ದು 50 ಭಾಗ ಇದಕ್ಕೆ ಬರುತ್ತದೆ. 1978ನೇ ಇಸವಿಯಲ್ಲಿ ಪ್ರಾರಂಭವಾದಾಗ ಕೇವಲ 18 ಸಾವಿರ ರೂಪಾಯಿ ಇತ್ತು. 1993ನೇ ಇಸವಿಯಲ್ಲಿ ಕರಾವಳಿ ಪ್ರದೇಶದ ಜನರಿಗೆ ಈ ಹದಿನೆಂಟು ಸಾವಿರದಲ್ಲಿ ಮನೆ ಕಟ್ಟಲಿಕ್ಕೆ ಆಗುವುದಿಲ್ಲ ಎನ್ನುವ ರೀತಿಯಲ್ಲಿ ಕೇಂದ್ರ ಸರ್ಕಾರಕ್ಕೆ ನಾವು ಮನವಿ ಮಾಡಿದಾಗ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಒಪ್ಪಿಗೆ ನೀಡಿ ಅದಕ್ಕೆ 30 ಸಾವಿರ ರೂಪಾಯಿ ಒಂದು ಮನೆಗೆಂದು ಕೊಡುತ್ತಿದ್ದಾರೆ. ಅದರಲ್ಲಿ 15 ಸಾವಿರ ರಾಜ್ಯಸರ್ಕಾರ ಮತ್ತು 15 ಸಾವಿರ ಕೇಂದ್ರ ಸರ್ಕಾರದವರು ಕೊಡುತ್ತಾರೆ. ಈ ಯೋಜನೆಯಡಿಲ್ಲಿ ನಮ್ಮ ರಾಜ್ಯಕ್ಕೆ ನನಗೆ ತಿಳಿದಹಾಗೆ ತಾವು ಈ ಬಾರಿ ಕನಿಷ್ಠ ಪಕ್ಷ ಒಂದು ಸಾವಿರದ ಐದು ನೂರು ಮನೆಗಳನ್ನು ಸಮುದ್ರ ಒಳನಾಡು ಪ್ರದೇಶಕ್ಕೆ ಮತ್ತು ಇವತ್ತು ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆಗೆ ಮತ್ತು ಹೊರನಾಡು ಪ್ರದೇಶದ ಮೀನುಗಾರರಿಗೆ 1500 ಮನೆಗಳನ್ನು ಮಾಡುವಂಥ ಯೋಜನೆ ಹಾಕಿಕೊಳ್ಳಬೇಕು. ಅದಕ್ಕೆ ಕೇಂದ್ರಸರ್ಕಾರ ಯಾವುದೇ ರೀತಿಯಲ್ಲಿ ಅಡ್ಡಿ ಬರುವುದಿಲ್ಲ, ಕೇಂದ್ರ ಸರ್ಕಾರ ಮಾನ್ಯಮಂತ್ರಿಗಳು ನಿಮಗೆ ಎಷ್ಟು ಮನೆ ಕಟ್ಟಲಿಕ್ಕೆ ಇದೆ. ನಾನು ಅದನ್ನು ಸಂಪೂರ್ಣವಾಗಿ ಕೊಡುತ್ತೇನೆಂದು ಭರವಸೆ ಕೊಟ್ಟಿದ್ದಾರೆ. ಅದರಿಂದ ದಯವಿಟ್ಟು ತಾವು ಕೇಂದ್ರಸರ್ಕಾರದ ಮಂತ್ರಿಗಳ ಜೊತೆ ಚರ್ಚೆ ಮಾಡಿ ನಮ್ಮ ರಾಜ್ಯಕ್ಕೆ ಈ ಬಾರಿ 1500 ಮನೆಗಳನ್ನು ಕಟ್ಟಿಕೊಡುವ ಯೋಜನೆಯನ್ನು ಖಂಡಿತವಾಗಿಯೂ ತಾವು ಹಾಕಿಕೊಳ್ಳಬೇಕು. ಇದರಿಂದಾಗಿ ಆರು ಲಕ್ಷ ಮೀನುಗಾರರು ನಮ್ಮ ರಾಜ್ಯದಲ್ಲಿ ಏನಿದ್ದಾರೆ, ಅವರಿಗೆ ಈ ಪ್ರಯೋಜನವಾಗುತ್ತದೆಂದು ಹೇಳುತ್ತೇನೆ.

ಅಧ್ಯಕ್ಷರು : ಮಾನ್ಯ ವಸಂತರವರೇ, ತಮಗೆ ಎಷ್ಟು ಸಮಯ ಬೇಕಾಗಬಹುದು?

ಶ್ರೀ ವಸಂತ ವಿ. ಸಾಲಿಯಾನ : 5 ನಿಮಿಷದಲ್ಲಿ ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಏನಾಗಿದೆ ಎಂದರೆ ನಿಮಗೆ ಈಗ ನಾವು ಕೊಟ್ಟಿರುವುದೆಲ್ಲಾ ಎಕ್ಸ್‌ಟ್ರಾ ಟೈಮ್. ನಿಮ್ಮ ಎಲ್ಲಾ ಇಡೀ ಪಕ್ಷದ ಸಮಯವನ್ನು ನಿಮ್ಮ ನಾಯಕರು ತಿಂದುಬಿಟ್ಟಿದ್ದಾರೆ. ಬೇಗ ಮುಗಿಸಿಬಿಡಿ.

ಶ್ರೀ ವಸಂತ ವಿ. ಸಾಲಿಯಾನ : ಮುಗಿಸುತ್ತೇನೆ.

ಅಧ್ಯಕ್ಷರು : ಅದಕ್ಕೆ ನಾನು ಹೇಳುವುದು, ಪಕ್ಷಗಳಲ್ಲಿ ಆಂತರಿಕ ಪ್ರಜಾಪ್ರಭುತ್ವ ಯಶಸ್ವಿಯಾಗಿ ಕೆಲಸ ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಏಕೋ ಜಗಳ ಹತ್ತಿಸಬೇಕೆಂದು ಮಾಡುವ ಹಾಗೆ ಇದೆ.

ಅಧ್ಯಕ್ಷರು : ಇಲ್ಲಾ ಪಾಪ, ಅವರಿಗೆ ತಿಳಿವಳಿಕೆ ಕೊಟ್ಟೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ನನ್ನದೇ ಒಂದು ವಿನಂತಿ ಏನೆಂದರೆ ಪ್ರೆಸ್ ಗ್ಯಾಲರಿಯಲ್ಲಿ ಯಾರೂ ಇಲ್ಲ, ಹಾಕಿಯಾದವರೂ

ಮಾಡಬಹುದು. ನಾವು ಎಲ್ಲಿಗೆ ರೆಡಿ ಇದ್ದೇವೆ ಎಂದರೆ 9 ಗಂಟೆಗೆ ಕರೆದರೂ ಬರುವುದಕ್ಕೆ ಸಿದ್ಧರಿದ್ದೇವೆ. ಅಟ್‌ಲೀಸ್ಟ್ ಆರು ಅಥವಾ ಆರೂವರೆ ಗಂಟೆಗೆ ಮುಗಿದರೆ ನಾವು ಏನು ಮಾತನಾಡುತ್ತೇವೆ, ಅವರ ಕ್ಷೇತ್ರದ ಹೆಸರು, ಇಂಥವರು ಮಾತನಾಡಿದರು ಎಂದೂ ಬರದಿದ್ದರೆ ತುಂಬಾ ಕಷ್ಟವಾಗುತ್ತದೆ.

ಅಧ್ಯಕ್ಷರು : ಅವರು ಇಲ್ಲದೇ ಹೋದರೂ ಇದನ್ನೆಲ್ಲಾ ಪತ್ರಿಕೆಯಲ್ಲಿ ಬರುವ ಹಾಗೆ ಮಾಡುವ ಜವಾಬ್ದಾರಿ ನನ್ನದು. ನಾನು ಮಾತನಾಡುತ್ತೇನೆ. ತಮಾಷೆಯಾಗಿ ಹೇಳುತ್ತಿಲ್ಲ, ನಾನು ಲಘುವಾಗಿ ಮಾತನಾಡುತ್ತಿಲ್ಲ, ಹೊಸ ಸದಸ್ಯರಿಗೆ ಅನುಕೂಲ ಮಾಡಿಕೊಡಬೇಕು ಎಂದು ನಾನು ಇಷ್ಟೆಲ್ಲಾ ಎಕ್ಸರ್‌ಸೈಜ್ ಮಾಡಿ ಲೇಟಾಗಿ ಕುಳಿತುಕೊಂಡು ಹಾಗೂ ಸದನದ ಕಲಾಪ ಸಮಿತಿಯಲ್ಲಿ ಕೂಡ ನಾನು ಎಷ್ಟೆಲ್ಲಾ ಪ್ರಯತ್ನ ಮಾಡಿದ್ದೇನೆ ಎಂಬುದು ತಮಗೆಲ್ಲಾ ಗೊತ್ತಿದೆ. ಅವರು ಮಾಡಿದ ಪ್ರಯತ್ನ ಪಾಪ ಇಷ್ಟೆಲ್ಲಾ ಮಾಡಿಕೊಂಡು ಬರುತ್ತಾರೆ. ಅವರಿಗೆ ಅವರದೇ ಆದ ತೊಂದರೆ ಇರುತ್ತದೆ. ರಿಪೋರ್ಟ್ ಕೊಡಿಸುವುದಕ್ಕೆ ಏರ್ಪಾಡು ಮಾಡುತ್ತೇವೆ. ಮೆಂಬರ್ಸ್‌ಗೆ ಎನ್‌ಕರೇಜ್ ಮಾಡುವ ವಿಚಾರದಲ್ಲಿ ನಾನು ಪೂರ್ಣವಾಗಿ ನಿಮ್ಮ ಅಭಿಪ್ರಾಯವನ್ನು ಅನುಮೋದನೆ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನೂ ಸಹ ಬೆಳಿಗ್ಗೆ 10 ಗಂಟೆಯಿಂದ ಕುಳಿತಿದ್ದೇನೆ..

ಅಧ್ಯಕ್ಷರು : 9 ಗಂಟೆಗೆ ಎಲ್ಲರೂ ಕುಳಿತುಕೊಳ್ಳಲು ಒಪ್ಪಿಕೊಂಡರೆ ನನ್ನದೇನೂ ತಕರಾರು ಇಲ್ಲ, ವಾಟಾಳ್ ನಾಗರಾಜ್ ಬರುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ವಾಟಾಳ್ ನಾಗರಾಜ್ ಅವರೂ ಬರುತ್ತಾರೆ. ಅವರಲ್ಲಿ ನಾನು ವಿನಂತಿ ಮಾಡುತ್ತೇನೆ. ಇಲ್ಲಿ ಕೇಳಿದರೆ ಅವರು ಒಪ್ಪಿಕೊಳ್ಳುವುದಿಲ್ಲ, ಹೊರಗಡೆ ವಿನಂತಿ ಮಾಡುತ್ತೇನೆ.

ಶ್ರೀ ಎನ್. ರಾಜಣ್ಣ : ದಯವಿಟ್ಟು ಆಗುವುದಿಲ್ಲ, ಬೆಂಗಳೂರಿನಲ್ಲಿ ಮಾತ್ರ ಬೆಳಿಗ್ಗೆ 9 ಗಂಟೆಗೆ ಬರುವುದಕ್ಕೆ ಆಗುವುದಿಲ್ಲ, ಹತ್ತು ಗಂಟೆಗೆ ಎಂದರೂ ಬರುವುದಕ್ಕೆ ಕಷ್ಟ ಆಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹಳ್ಳಿಯಿಂದ ಬಂದವರು ಮನೆ ಮಠ ಮಠ ಎಲ್ಲಾ ಬಿಟ್ಟು ಇಲ್ಲಿ ಕೆಲಸ ಮಾಡುವುದಕ್ಕೆ ಬಂದಿದ್ದಾರೆ. ಬೆಂಗಳೂರಿನವರು ಮನೆಯಿಂದ ಇಲ್ಲಿಗೆ ಬರಲು ಅರ್ಧ ಗಂಟೆ ಸಮಯ ತೆಗೆದುಕೊಳ್ಳಲಿ.

ಶ್ರೀ ಎನ್. ರಾಜಣ್ಣ : ಸಾವಿರಾರು ಜನ ಮನೆ ಮುಂದೆ ಇರುತ್ತಾರೆ. ಬೆಂಗಳೂರು ಲೋಕಲ್ ಎಂಎಲ್‌ಎಸ್ ಮನೆ ಮುಂದೆ ಬಹಳ ಜನ ಇರುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬಹುಶಃ ಇದರ ಬಗ್ಗೆ ಬಹಳ ಗಂಭೀರವಾಗಿ ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಎನ್. ರಾಜಣ್ಣ : ಸಾವಿರಾರು ಜನ ಮನೆ ಮುಂದೆ ಇರುತ್ತಾರೆ. 9 ಗಂಟೆಗೆ ಆಗುವುದಿಲ್ಲ ಸ್ವಾಮಿ. ಆದ್ದರಿಂದ ಕನಿಷ್ಠ ಪಕ್ಷ 10 ಅಥವಾ ಹತ್ತೂವರೆ ಗಂಟೆಗೆ ಬರುವುದಕ್ಕೇ ಆಗುತ್ತಿಲ್ಲ, ನೀವು ಹತ್ತು ಗಂಟೆಗೆ ಮಾಡಿದರೂ ಹಾಗೂ ನಾವು 10.30 ಇಲ್ಲಿಗೆ ಬರಲು ಆಗುತ್ತದೆ.

ಅಧ್ಯಕ್ಷರು : ದಿವಸಾ ಮನೆಗೆ ಏಕೆ ಹೋಗುತ್ತೀರಿ ಜನರ ಕೈಗೆ ಸಿಕ್ಕಿಹಾಕಿಕೊಳ್ಳಲು. ಬೇರೆ ಕಡೆ ಎಲ್ಲಾದರೂ ಹೋಗಿ.

ಶ್ರೀ ವಸಂತ ವಿ. ಸಾಲಿಯಾನ : ಮಾನ್ಯ ಅಧ್ಯಕ್ಷರೆ, ಮೀನುಗಾರಿಕೆ ರಸ್ತೆ ಬಗ್ಗೆ ಹೇಳುವುದಾದರೆ ಇವತ್ತು 1993-94ನೇ ಸಾಲಿನಲ್ಲಿ ಅನೇಕ ಮೀನುಗಾರಿಕೆ ರಸ್ತೆ ನಿರ್ಮಾಣ ಮಾಡುವಂತಹ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. 1993-94ನೇ ಇಸವಿಯಲ್ಲಿ 139 ಲಕ್ಷ ರೂ. ವೆಚ್ಚದಲ್ಲಿ ನಾವು ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಅದೇ ರೀತಿ 1994-95ನೇ ಸಾಲಿನಲ್ಲಿ ಸುಮಾರು 103 ಲಕ್ಷ ರೂಪಾಯಿ ವೆಚ್ಚದಲ್ಲಿ ಇವತ್ತು ಆನ್ ಗೋಯಿಂಗ್ ವರ್ಕ್ಸ್ ಮತ್ತು ಹೊಸ ಕಾಮಗಾರಿಗಳು ನಡೆಯುತ್ತಿವೆ. ತಾವು ದಯವಿಟ್ಟು ಹಿಂದೆ ಜಲ್ಲಿ ಹಾಕಿದಂತಹ ರಸ್ತೆ ಇರಬಹುದು, ಹಿಂದೆ ಪ್ರಾರಂಭ ಮಾಡಿದಂತಹ ರಸ್ತೆಗಳಿಗೆ ಸಂಪೂರ್ಣವಾದಂತಹ ಹಣವನ್ನು ಬಿಡುಗಡೆ ಮಾಡಲಿಕ್ಕೆ ತಾವು ಖಂಡಿತವಾಗಿ ಸಹಕಾರ ಮಾಡಬೇಕೆಂದು ನಾನು ತಮ್ಮಲ್ಲಿ ಬಹಳ ವಿನಯ ಪೂರ್ವಕವಾಗಿ ಕೇಳಿಕೊಳ್ಳುತ್ತಿದ್ದೇನೆ. ಅದೇ ರೀತಿಯಲ್ಲಿ ಅನೇಕ ವರ್ಷಗಳ ಹಿಂದೆ ಈ ಕಾಮಗಾರಿಗಳು ನಡೆಯುತ್ತಿರಲಿಲ್ಲ, ಪಿಡಬ್ಲ್ಯೂಡಿ ಇಲಾಖೆಯು ನಡೆಯುತ್ತಿತ್ತು ಅಥವಾ ಜಿಲ್ಲಾ ಪರಿಷತ್ ಇಲಾಖೆ ನಡೆಯುತ್ತಿತ್ತು.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಹಿಂದೆ ಹಾಕಿಕೊಂಡಿದ್ದ ಕಾರ್ಯಕ್ರಮ ಮುಂದುವರಿಸಿ ಎನ್ನುವುದರ ಬದಲು ಸ್ವಲ್ಪ ಕಾವುಗೆ ಜಾಸ್ತಿ ಕೊಡಿ ಎಂದು ಹೇಳಬಹುದಾಗಿತ್ತು.

ಶ್ರೀ ವಸಂತ ವಿ. ಸಾಲಿಯಾನ : ಈ ಕಾರ್ಯಕ್ರಮಗಳನ್ನು ತಾವು ಮುಂದುವರಿಸಿಕೊಂಡು ಹೋಗಬೇಕಾಗಿ ತಮ್ಮಲ್ಲಿ ವಿನಂತಿಯಿಂದ ಕೇಳಿಕೊಳ್ಳುತ್ತೇನೆ. ಅದೇ ರೀತಿಯಲ್ಲಿ ಈ ಮೀನುಗಾರಿಕೆ ರಸ್ತೆ ಏನು ಕರ್ನಾಟಕ ರಾಜ್ಯದಲ್ಲಿದೆ, ಅದನ್ನು ದುರಸ್ತಿ ಮೊದಲು ತಾವು ಹಣವನ್ನು ಇಡಲಿಲ್ಲ, ಅದಕ್ಕೋಸ್ಕರ ಕನಿಷ್ಟ ಪಕ್ಷ ಒಂದು ರಸ್ತೆಗೆ 20 ಲಕ್ಷ ರೂಪಾಯಿಯನ್ನಾದರೂ ಮೀನುಗಾರಿಕೆ ರಸ್ತೆಯ ದುರಸ್ತಿಗಾಗಿ ಇಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಅದೇ ರೀತಿಯಲ್ಲಿ ನಾಡ ದೋಣಿ ವಿಚಾರ. ಯಾಂತ್ರಿಕ ದೋಣಿಗಳಿಗೆ, ನಾಡ ದೋಣಿಗಳಿಗೆ ಮೋಟಾರ್ ಫಿಕ್ಸೇಷನ್ ಮಾಡುವಂತಹ ಒಂದು ಕಾರ್ಯಕ್ರಮ ಇದೆ. ಅದರಲ್ಲಿ ಸುಮಾರು 16,500 ರೂಪಾಯಿ ಸಬ್ಸಿಡಿ ಮೋಟರೈಸೇಷನ್ ಮಾಡುವವರಿಗೆ ನಾವು ಕೊಡುತ್ತಿದ್ದೇವೆ. ಈ ವರ್ಷ ತಾವು ಕನಿಷ್ಠ ಪಕ್ಷ ಒಂದು ಐದು ಸಾವಿರ ಕರ್ನಾಟಕ ರಾಜ್ಯದಲ್ಲಿ ಅಂದರೆ ಉತ್ತರ ಕನ್ನಡ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ಮಾತ್ರ ಬರುತ್ತದೆ, ಅದರಲ್ಲಿ ಐದು ಸಾವಿರ ದೋಣಿಗಳಿಗೆ ಯಾಂತ್ರೀಕೃತ ಮೋಟಾರನ್ನು ಫಿಕ್ಸ್ ಮಾಡುವಂತಹ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾಗಿ ತಮ್ಮಲ್ಲಿ ವಿನಂತಿ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಅದೇ ರೀತಿಯಲ್ಲಿ ಇವತ್ತು ಒಳನಾಡು ಮೀನುಗಾರಿಕೆ ಬಗ್ಗೆ ಬಹಳಷ್ಟು ನಾವು ಕಾರ್ಯಕ್ರಮ ಮಾಡಬೇಕಾಗುತ್ತದೆ. ಇವತ್ತು ಒಳನಾಡು ಮೀನುಗಾರಿಕೆಯಲ್ಲಿ ನಿಮಗೆ ತಿಳಿದ ಹಾಗೆ ಸುಮಾರು 1534 ದೊಡ್ಡ ಕೆರೆಗಳು ಇವೆ. ಅದೇ ರೀತಿಯಲ್ಲಿ 1324 ಸಣ್ಣ ಕೆರೆಗಳು ಇವೆ. ದೊಡ್ಡ ಕೆರೆ ಮತ್ತು ಸಣ್ಣ ಕೆರೆಗಳಲ್ಲಿ ಮೀನಿನ ಮರಿಯನ್ನು ಬಿಡಬೇಕಾಗುತ್ತದೆ. ಮೀನಿನ ಮರಿಯನ್ನು ಉತ್ಪಾದನೆ ಮಾಡಬೇಕಾಗಿದೆ ಒಂದು ಕಡೆಯಲ್ಲಿ, ಮತ್ತೊಂದು ಕಡೆ ಮೀನನ್ನು ಸೃಷ್ಟಿ ಮಾಡಲಿಕ್ಕೆ ಸರ್ಕಾರ ಸಬ್ಸಿಡಿ ಮೂಲಕ ಅವರಿಗೆ ಪ್ರೋತ್ಸಾಹ ಧನವನ್ನು ಕೊಡಬೇಕಾಗುತ್ತದೆ. ಆದರೆ ಒಂದು ವಿಚಾರ ತಮ್ಮ ಗಮನಕ್ಕೆ ತರಲು ಬಯಸುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಸುಮಾರು 22 ದೊಡ್ಡ ಜಲಾಶಯಗಳು ಇವೆ. ಅದರ ಬಗ್ಗೆ ನಾನು ಸರ್ಕಾರಕ್ಕೆ 1993-94ನೇ ಇಸವಿಯಲ್ಲಿ ಒಂದು ಸಲಹೆಯನ್ನು ಕೊಟ್ಟಿದ್ದೇನೆ. ಅದೇನೆಂದರೆ ಈ 22 ಜಲಾಶಯಗಳಲ್ಲಿ ನಾಲ್ಕು ಕೋಟಿ ಮೀನು ಮರಿಗಳನ್ನು ಬಿಟ್ಟರೆ ಅದಕ್ಕೆ ತಗಲುವ ವೆಚ್ಚ ಒಂದು ಕೋಟಿ ರೂಪಾಯಿ ಮಾತ್ರ. ಅದರಿಂದಾಗಿ ಇವತ್ತು ಒಬ್ಬ ಮೀನುಗಾರ, ಒಳನಾಡು ಮೀನುಗಾರನಿಗೆ ಹತ್ತು ರೂಪಾಯಿ ಸಂಪಾದನೆ

ಮಾಡುತ್ತಿದ್ದ, ಈ ಒಂದು ಕಾರ್ಯಕ್ರಮದಲ್ಲಿ ಕನಿಷ್ಠ ಪಕ್ಷ 150 ರೂಪಾಯಿ ಒಂದು ದಿವಸಕ್ಕೆ ಸಂಪಾದನೆ ಮಾಡುವಂತಹ ಬಹಳ ಒಳ್ಳೆಯ ಯೋಜನೆ. ತಾವು ದಯವಿಟ್ಟು ಈ ಯೋಜನೆಗೆ ಬಹಳಷ್ಟು ಪ್ರೋತ್ಸಾಹ ಕೊಡಬೇಕು.

ನಾನು ಮಂತ್ರಿಯಾದ ಸಂದರ್ಭದಲ್ಲಿ ಇದಕ್ಕೆ ಬಹಳಷ್ಟು ಪ್ರೋತ್ಸಾಹ ಕೊಟ್ಟಿದ್ದೆ. ಏಕೆಂದರೆ ಒಳನಾಡು ಮೀನುಗಾರರ ಪರಿಸ್ಥಿತಿಯನ್ನು ನಾನು ಸ್ವತಃ ನೋಡಿದ್ದೇನೆ, ಮಾನ್ಯ ನಾಗೇಗೌಡರು ನಮ್ಮ ಜೊತೆ ಬಂದಿದ್ದರು. ಅವರ ಪರಿಸ್ಥಿತಿ ನೋಡುವಾಗ ಅವನು ಕೇವಲ ಹತ್ತು ರೂಪಾಯಿ ಮಾಡುತ್ತಿದ್ದ. ಅವನ ಸಂಪಾದನೆಯನ್ನು ಒಬ್ಬ ಮಧ್ಯವರ್ತಿ ಹೋಗಿ ಲಾಭ ಪಡೆಯುತ್ತಿದ್ದ, ಅದಕ್ಕೋಸ್ಕರ ನಾವು ಏನು ಮಾಡಬೇಕು ಎಂದರೆ ಪ್ರತಿ ಒಂದು ಗ್ರಾಮ ಪಂಚಾಯತಿಯಲ್ಲಿ ಸಹಕಾರಿ ಸಂಘವನ್ನು ಸ್ಥಾಪನೆ ಮಾಡಬೇಕಾಗುತ್ತದೆ. ಅದು ಮಹಿಳಾ ಸಹಕಾರಿ ಸಂಘ ಇರಬಹುದು, ಮೀನುಗಾರರ ಸಹಕಾರಿ ಸಂಘ ಇರಬಹುದು. ಈ ಸಹಕಾರಿ ಸಂಘದ ಮುಖೇನ ಈ ಕೆರೆಗಳನ್ನು ಗುತ್ತಿಗೆಗೆ ಕೊಡಬೇಕಾಗುತ್ತದೆ. ಈ ಸಹಕಾರಿ ಸಂಘದಲ್ಲಿ ಸಾವಿರಾರು ಜನ ಮೆಂಬರ್ ಆಗುತ್ತಾರೆ. ಅದೇ ರೀತಿಯಲ್ಲಿ ಒಂದು ನೂರು ಜನ ಮೆಂಬರ್ ಆಗುತ್ತಾರೆ. ಯಾರು ಮೆಂಬರ್ ಆಗುತ್ತಾರೆ ಅವರು ಇದರ ಲಾಭವನ್ನು ಹಂಚಿಕೊಳ್ಳುವಂತಹ ಯೋಜನೆಯನ್ನು ನೋಡಿದ್ದೇವೆ. ಸನ್ಮಾನ್ಯ ನಾಗೇಗೌಡರು ಮತ್ತು ನಾನು ಒಂದು ಕಾರ್ಯಕ್ರಮಕ್ಕೆ ಹೋಗಿದ್ದೆವು, ಸುಮಾರು 65 ಎಕರೆಯ ಒಂದು ದೊಡ್ಡ ಕೆರೆ ಇತ್ತು. ಆ ಕೆರೆಯಲ್ಲಿ ಮೀನು ಹಿಡಿಯುವಂತಹ ಒಂದು ಅವಕಾಶ ನಮಗೆ ಸಿಕ್ಕಿತ್ತು. ಅಲ್ಲಿ ಒಂದು ಆ ಸಹಕಾರಿ ಸಂಘ ಕರ್ನಾಟಕ ರಾಜ್ಯದಲ್ಲಿ ಅಲ್ಲ, ಇಡೀ ದೇಶದಲ್ಲಿ ಒಂದು ಒಳ್ಳೆಯ ಸಂಘವಾಗಿ ಕಾರ್ಯಕ್ರಮ ಮಾಡುತ್ತಿದೆ. ಅಂತಹ ಸಂಸ್ಥೆಗಳನ್ನು ಬೆಳೆಸಲಿಕ್ಕೆ ಸರ್ಕಾರ ಇವತ್ತು ಉತ್ತೇಜನ ಕೊಡಬೇಕಾಗುತ್ತದೆ. ಅದಕ್ಕೋಸ್ಕರ ಈ ಮೀನು ಮರಿ ಉತ್ಪಾದನೆ ಮಾಡುವವರಿಗೆ ಮತ್ತು ಮೀನುಕೃಷಿ ಮಾಡುವವರಿಗೆ ಒಳ್ಳೆಯ ರೀತಿಯ ಒಂದು ಸಹಾಯಧನವನ್ನು ನಮ್ಮ ಸರ್ಕಾರ ಕೊಡಬೇಕಾಗುತ್ತದೆ. ಅದೇ ರೀತಿಯಲ್ಲಿ ಸೀಗಡಿ ಮೀನು.

ಅಧ್ಯಕ್ಷರು : ನೀವು ಎಷ್ಟು ವೆರೈಟಿ ಕೊಡುತ್ತಿದ್ದೀರಿ? ಮೀನು ಮರಿ ಇತ್ತಲ್ಲಾ ಯಾವ್ಯಾವ ವೆರೈಟಿ ಕೊಡುತ್ತಿದ್ದೀರಿ? ನಮಗೆ ಗೊತ್ತಿರುವ ಹಾಗೆ ಎರಡೇ ವೆರೈಟಿ. ಇನ್‌ಲ್ಯಾಂಡ್ ಫಿಷರೀಸ್‌ಗೆ ಕಾಟ್ಲಾ ಒಂದು, ಕಾಮನ್ ಕಾಟ್ಲಾ ಒಂದು. ಮೂರನೆಯದು ಇಲ್ಲವೇ ಇಲ್ಲ.

ಶ್ರೀ ವಸಂತ ವಿ. ಸಾಲಿಯಾನ : ಮೂರ್‍ನಾಲ್ಕು ವೆರೈಟಿ ಇರುತ್ತದೆ.

ಶ್ರೀ ಕೆ.ಎನ್. ನಾಗೇಗೌಡ : ಬ್ರಾಹ್ಮಣರಿಗೆ ಏಕೆ ಈ ಚಿಂತೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ನಿಮಗೆ ಏಕೆ ಎಂದರೆ ಹೇಗೆ? ಇದು ಎಲ್ಲರಿಗೂ ಸಂಬಂಧಪಟ್ಟಿದ್ದು. ಇದು ಕಾಮನ್ ಫುಡ್ ಇದ್ದ ಹಾಗೆ. ಅದಕ್ಕೆ ಸುಮ್ಮನೆ ನಿಮಗೆ ಏಕೆ ನಮಗೆ ಏಕೆ ಎಂದರೆ ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಅನೇಕರಿಗೆ ಗೊತ್ತಿಲ್ಲ, ಮೀನು ವೆಜಿಟೇರಿಯನ್ ಫುಡ್ ಎಂದು ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಯಡಿಯೂರಪ್ಪನವರು ಹೇಳಿದ ಮೇಲೆ ಅದನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು : ಅದು ವೆಜಿಟೇರಿಯನ್ ಅಲ್ಲದೇ ಇದ್ದಿದ್ದರೆ ವಾಟಾಳ್ ಅವರು ಉಪಯೋಗಿಸುತ್ತಿದ್ದರೇ?

ಶ್ರೀ ವಸಂತ ವಿ. ಸಾಲಿಯಾನ : ಮಾನ್ಯ ಅಧ್ಯಕ್ಷರೆ, ಇವತ್ತು ಸೀಗಡಿ ಕೃಷಿ ಬಗ್ಗೆ ಎರಡು ಮಾತು ಹೇಳುವುದಕ್ಕೆ ಇಚ್ಛಿಸಡುತ್ತಿದ್ದೇನೆ. ಸೀಗಡಿ ಕೃಷಿ ಬಹಳ ಪ್ರಾಮುಖ್ಯವಾದ ವಿಷಯ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸೀಗಡಿ ಮೀನು ವಾಸನೆ ಜಾಸ್ತಿ ತಿನ್ನಬೇಕಾದರೆ ಎಂದು ಹೇಳುತ್ತಾರೆ. ಅದೇನೋ ಗೊತ್ತಾಗಲಿಲ್ಲ.

ಅಧ್ಯಕ್ಷರು : ಸೀಗಡಿ ವಾಸನೆ ಜಾಸ್ತಿ ಎಂದು ವಾಟಾಳ್ ಅವರು ಉಪಯೋಗಿಸಲಾರರಲ್ಲವಾ ಎಂದರು.

ಶ್ರೀ ವಾಟಾಳ್ ನಾಗರಾಜ್ : ಎಲ್ಲವೂ ಅವರಿಗೇ ಬೇಕಾಗಿದೆ. ನನಗೆ ಎಲ್ಲಿ ವಾಸನೆ ಬರುತ್ತದೆ. ಈಗ ಅವರು ಹೇಳಿದ್ದುದು ನೋಡಿದರೆ ಸಂಪೂರ್ಣ ಅವರಿಗೆ ಬೇಕು ಎನ್ನುವ ಹಾಗೆ ಆಗಿದೆ.

ಅಧ್ಯಕ್ಷರು : ನೀವು ಇಬ್ಬರೂ ಜೊತೆಗೆ ಇರಿ.

ಶ್ರೀ ವಸಂತ ವಿ. ಸಾಲಿಯಾನ : ನಾನು ಒಂದೆರಡು ವಿಚಾರಗಳನ್ನು ತಮ್ಮ ಮುಖೇನ ಮಾನ್ಯ ಮಂತ್ರಿಗಳ ಗಮನಕ್ಕೆ ತರಲು ಇಚ್ಛಿಪಡುತ್ತೇನೆ. ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಒಂದು ಸೀಗಡಿ ಕೃಷಿ ಬಹಳ ಪ್ರಾಮುಖ್ಯವಾಗಿ ಬೆಳೆಯುತ್ತಿದೆ. ಸೀಗಡಿ ಮೀನು ಉತ್ಪಾದನೆ ಮಾಡುವಂತಹ ಒಂದೇ ಒಂದು ಘಟಕ ನಮ್ಮ ಕರ್ನಾಟಕ ರಾಜ್ಯದಲ್ಲಿ ಇದೆ. ಬೇರೆ ರಾಜ್ಯಕ್ಕೆ ಹೋಲಿಸುವಾಗ ಇದು ಏನೂ ಇಲ್ಲ.

ನಾನು 1994ರಲ್ಲಿ ಆಂಧ್ರಪ್ರದೇಶಕ್ಕೆ ಹೋದಂಥ ಸಂದರ್ಭದಲ್ಲಿ ಅಲ್ಲಿ ಕೇಂದ್ರ ಸರ್ಕಾರದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಒಂದು ಹ್ಯಾಚರಿ ನೋಡಿದೆ. ಆ ಹ್ಯಾಚರಿಗೂ ನಮ್ಮ ರಾಜ್ಯದಲ್ಲಿರುವ ಹ್ಯಾಚರಿಗೂ ಬಹಳಷ್ಟು ವ್ಯತ್ಯಾಸವಿದೆ. ಕುಮಟಾದಲ್ಲಿ ಸೀಗಡಿ ಮರಿಗಳ ಉತ್ಪಾದನೆ ಮಾಡುವಂಥ ಹ್ಯಾಚರಿ ಏನಿದೆ, ಅದು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಅಲ್ಲಿ ಸರಿಯಾಗಿ ಸಿಬ್ಬಂದಿಗಳಿಲ್ಲ. ನಾವು ಹೊರ ರಾಜ್ಯಗಳಾದ ಆಂಧ್ರಪ್ರದೇಶ, ಒರಿಸ್ಸಾ ಮುಂತಾದ ಬೇರೆ ಬೇರೆ ರಾಜ್ಯಗಳಿಂದ ಮತ್ತು ಅರಬ್ ವಿಮಾನಗಳ ಮೂಲಕವೂ ಬಹಳ ಕಷ್ಟದಿಂದ ಸೀಗಡಿ ಮರಿಗಳನ್ನು ತರಿಸಿಕೊಳ್ಳುತ್ತಿದ್ದೇವೆ. ನಮ್ಮ ರಾಜ್ಯದಲ್ಲಿ ಇಷ್ಟೆಲ್ಲಾ ಅಭಿವೃದ್ಧಿಗೊಳಿಸುವಾಗ ಕುಮಟಾದಲ್ಲಿ ಸೀಗಡಿ ಮರಿಗಳನ್ನು ಉತ್ಪಾದಿಸುವ ಘಟಕವೇನಿದೆ, ಇದನ್ನು 1993ನೇ ಇಸವಿಯಲ್ಲಿ ಪ್ರಾರಂಭಿಸಲಾಗಿದೆ. ಇನ್ನೊಂದು ಘಟಕವನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಾರಂಭಿಸುವುದಕ್ಕೆ ಈಗಾಗಲೇ ಯೋಜನೆ ಹಾಕಿಕೊಳ್ಳಲಾಗಿದೆ. ಸದರಿ ಘಟಕವನ್ನು ದಕ್ಷಿಣ ಕನ್ನಡ ಜಿಲ್ಲೆಯ ಯಾವುದೇ ತಾಲ್ಲೂಕಿನಲ್ಲಿ ಬೇಕಾದರೂ ಸ್ಥಾಪಿಸಬಹುದು. ಅದೇ ರೀತಿ ತಮಗೆ ತಿಳಿದಿರುವಂತೆ ನಮ್ಮ ರಾಜ್ಯದ ಬೇರೆ ಬೇರೆ ಕಡೆಗಳಲ್ಲಿ ಮತ್ಸ್ಯಾಲಯಗಳಿವೆ. ಗುಲ್ಬರ್ಗದಲ್ಲಿ ಈಗಾಗಲೇ ಮತ್ಸ್ಯಾಲಯ ಯೋಜನೆ ಮುಗಿಸಿದ್ದು, ಮೈಸೂರು, ಕೋಲಾರ, ಶಿವಮೊಗ್ಗ ಮತ್ತು ಹಾಸನದಲ್ಲಿ ಮತ್ಸ್ಯಾಲಯ ಸ್ಥಾಪಿಸುವಂಥ ಯೋಜನೆ ಇದ್ದು, ಸಂಪೂರ್ಣಗೊಳಿಸಬೇಕಾಗಿದೆ. ಹಾಗೂ ಮತ್ಸ್ಯಾಲಯ ಸ್ಥಾಪಿಸಲು ಈಗಾಗಲೇ, ಅಂದರೆ 1994ನೇ ಇಸವಿಯಲ್ಲಿಯೇ ಮಂಗಳೂರಿನ ಕದ್ರಿಗುಡ್ಡದಲ್ಲಿ ಸ್ಥಳ ನಿಗದಿಪಡಿಸಿಟ್ಟಿದ್ದೇವೆ. ಆದುದರಿಂದ, ತಾವು ಮಂಗಳೂರಿನಲ್ಲಿ ಒಂದು ದೊಡ್ಡ ಮತ್ಸ್ಯಾಲಯ ಸ್ಥಾಪಿಸುವುದಕ್ಕೆ ಖಂಡಿತವಾಗಿಯೂ ಯೋಜನೆ ಹಾಕಿಕೊಳ್ಳುತ್ತೀರೆನ್ನುವ ಭರವಸೆ ನನಗಿದೆ.

ಈ ಯೋಜನೆಯನ್ನು ತಾವು ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಇನ್ನು ರಾಯಚೂರಿನಲ್ಲಿ 1994ರಲ್ಲೇ ಎನ್‌ಸಿಡಿಸಿ ಕಾರ್ಯಕ್ರಮದ ಪ್ರಕಾರ ಒಂದು ಐಸ್ ಪ್ಲಾಂಟ್ ಮತ್ತು ಶೈತ್ಯಾಗಾರವನ್ನು ಸ್ಥಾಪಿಸಲು ಯೋಜನೆ ಹಾಕಿಕೊಳ್ಳಲಾಗಿದೆ. ಕೆಲಸ

ಪ್ರಾರಂಭಿಸಲಾಗಿದ್ದು, ಯಾವ ಹಂತದಲ್ಲಿದೆಯೆಂದು ತಿಳಿದಿಲ್ಲ. ಈ ಯೋಜನೆ ಮಾನ್ಯ ಉಪಾಧ್ಯಕ್ಷರ ಕ್ಷೇತ್ರದಲ್ಲಿ ನಡೆಯುತ್ತಿರುವುದರಿಂದ ಆದಷ್ಟು ಬೇಗ ಸದರಿ ಕೆಲಸವನ್ನು ಪ್ರಾರಂಭಿಸಬೇಕಾಗಿ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಹಾಗೂ ಮಂಗಳೂರಿನ ಎಲ್ಲಾ ಬಂದರುಗಳಲ್ಲೂ ಫ್ಯಾಕ್ಸ್ ಮೆಷಿನ್‌ಗಳನ್ನಿಡುವಂಥ ಯೋಜನೆ ಹಾಕಿಕೊಳ್ಳಬೇಕಾಗುತ್ತದೆ. ಅದೇ ರೀತಿ ಉಪಗ್ರಹದ ಮುಖಾಂತರ ಮೀನುಗಳನ್ನು ಕಂಡು ಹಿಡಿಯುವಂಥ ಯೋಜನೆಯಿದೆಯಲ್ಲದೆ, ಮೀನುಗಳನ್ನಿಡಿಯಲು ಸಮುದ್ರದಲ್ಲಿ ತುಂಬಾದೂರ ಹೋಗುವಂಥ ಮೀನುಗಾರರಿಗೆ 'ವಾಕಿ-ಟಾಕಿ' ಸೌಲಭ್ಯವೊದಗಿಸಿ ಸಂಪರ್ಕವಿಟ್ಟುಕೊಳ್ಳುವಂಥ ವ್ಯವಸ್ಥೆಯ ಯೋಜನೆಯನ್ನು ಹಿಂದಿನ ಸರ್ಕಾರ ಹಾಕಿಕೊಂಡಿತ್ತು. ಏಕೆಂದರೆ, ಸಮುದ್ರದಲ್ಲಿ ದೂರಕ್ಕೆ ಹೋದಂಥ ಸಂದರ್ಭದಲ್ಲಿ ಏನಾದರೂ ಗಂಡಾಂತರ ಬಂದಾಗ ದಡದಲ್ಲಿರುವವರಿಗೆ ಆ ಬಗ್ಗೆ ಏನೂ ಗೊತ್ತಾಗುವುದಿಲ್ಲವಾದ್ದರಿಂದ ಮೀನುಗಾರರಿಗೆ 'ವಾಕಿ-ಟಾಕಿ' ಸೌಲಭ್ಯವೊದಗಿಸುವ ಪದ್ಧತಿಯನ್ನು ನಾವು ಅಳವಡಿಸಿಕೊಂಡಿದ್ದೇವೆ. ಆದುದರಿಂದ, ಇವೊತ್ತು ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡದ ಎಲ್ಲಾ ಪ್ರದೇಶಗಳಲ್ಲಿರುವ ಎಲ್ಲಾ ದೋಣಿಗಳಿಗೆ ವಾಕಿ-ಟಾಕಿ ಸೌಲಭ್ಯಗಳನ್ನು ಅಳವಡಿಸುವಂಥ ಯೋಜನೆಯನ್ನು ತಾವು ಹಾಕಿಕೊಳ್ಳಬೇಕೆಂದು ಹೇಳುತ್ತಾ, ಇವೊತ್ತು ಮೀನುಗಾರಿಕೆಗೆ ಸಂಬಂಧಿಸಿದಂತೆ ಪ್ರತ್ಯೇಕವಾದ ಇಂಜಿನಿಯರಿಂಗ್ ಇಲಾಖೆ ಇದ್ದು ಸದರಿ ಇಲಾಖೆ ಯಾವ ರೀತಿಯಲ್ಲಿ ಕೆಲಸ ನಿರ್ವಹಿಸುತ್ತಿದೆ? ಏನು ಮಾಡುತ್ತಿದೆ? ಎಂಬುದರ ಬಗ್ಗೆ ತಾವು ಚಿಂತನೆ ಮಾಡಬೇಕು. ಇನ್ನು ಬಹಳ ದೊಡ್ಡ ಕೆಲಸ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡದ ಜಿಲ್ಲೆಗಳ ಸಮುದ್ರ ಕಿನಾರೆಯ 'ಸಮುದ್ರ ಕೊರೆತ' ಮತ್ತು ಸಣ್ಣ ನೀರಾವರಿಯಲ್ಲಿದೆಯೆಂಬುದು ನನ್ನ ಅಭಿಪ್ರಾಯವಾಗಿದೆ. ನಾನು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಸಮುದ್ರ ಕೊರೆತಕ್ಕೆ ಸಂಬಂಧಿಸಿದ ಕಾಮಗಾರಿಗಳನ್ನು ಮೀನುಗಾರಿಕೆ ಇಲಾಖೆಗೆ ವಹಿಸಿಕೊಟ್ಟರೆ ಖಂಡಿತವಾಗಿಯೂ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವುದಕ್ಕಾಗುತ್ತದೆಂಬ ಸಲಹೆಯನ್ನು ಕೊಡುತ್ತೇನೆ.

ಇನ್ನು ಪ್ರಥಮ ದರ್ಜೆ ಕಾಲೇಜು ಬಗ್ಗೆ ಒಂದು ವಿಚಾರವನ್ನು ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ನನ್ನ ಕ್ಷೇತ್ರವಾದ ಕಾಪುವಿನಲ್ಲಿ ಒಂಬತ್ತು ಸರ್ಕಾರಿ ಕಿರಿಯ ಪದವಿಪೂರ್ವ ಕಾಲೇಜುಗಳಿದ್ದು, ಆ ಕಾಲೇಜುಗಳಲ್ಲಿ ಬೋಧಕರ ಕೊರತೆಯಿರುವ ವಿಷಯವನ್ನು ನಾನು ಈಗಾಗಲೇ ತಮ್ಮ ಗಮನಕ್ಕೆ ತಂದಿದ್ದೇನೆ. ಕೆಲವು ಕಾಲೇಜುಗಳಲ್ಲಿ ಕೇವಲ ಪ್ರಾಂಶುಪಾಲರಿದ್ದು, ಇರುವ ಒಂಭತ್ತು ಕಿರಿಯ ಪದವಿಪೂರ್ವ ಕಾಲೇಜುಗಳಲ್ಲಿ ಬೋಧಕರ ಕೊರತೆಯಿರುವುದರಿಂದ ಬೋಧಕರನ್ನು ನೇಮಿಸುವುದಕ್ಕೆ ಅನುವು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಾ, ನನ್ನ ಕ್ಷೇತ್ರದಲ್ಲಿ ಒಂದೇ ಒಂದು ಪ್ರಥಮದರ್ಜೆ ಕಾಲೇಜು ಇದೆ. ಅಲ್ಲಿ ಹಮ್ಮಿಕೊಳ್ಳಬೇಕಾಗಿರುವ ಕಾರ್ಯಕ್ರಮದ ಬಗ್ಗೆ ನಾನು ಈಗಾಗಲೇ ತಮ್ಮಲ್ಲಿ ಮನವಿ ಮಾಡಿಕೊಂಡಿದ್ದು, ಕಟ್ಟಡಕ್ಕಾಗಿ ಸುಮಾರು 17 ಲಕ್ಷ ರೂಪಾಯಿಗಳ ಮೊದಲ ಕಂತಿನ ಹಣವನ್ನು ತಾವು ಮಂಜೂರು ಮಾಡಬೇಕೆಂದು ಕೇಳಿಕೊಂಡು ಇಷ್ಟು ಹೊತ್ತು ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡುವ ಅವಕಾಶ ಒಂದು ಕ್ಷಣ ಹಾರಿಹೋಗುವ ಹಾಗಿತ್ತು, ನನಗೆ ಮಾತನಾಡಲು ಅವಕಾಶವಿದ್ದು, ಸದನವನ್ನು ಮುಂದೂಡಿ ನಾಳೆ ನನಗೆ ಮಾತನಾಡಲು ಅವಕಾಶ ಕಲ್ಪಿಸಿಕೊಡುತ್ತೀರೇನೋ ಎನ್ನುವ ಒಂದು ಸಂದರ್ಭದಲ್ಲಿ ನನಗೆ ಈಗ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಮೊದಲು ನನ್ನ ಧನ್ಯವಾದಗಳನ್ನರ್ಪಿಸುತ್ತಾ, ಈ ದಿನ ಸಮಾಜ ಕಲ್ಯಾಣ ಇಲಾಖೆಯ ಬೇಡಿಕೆಗಳ ಬಗ್ಗೆ ಕೆಲವು ಮಾತಗಳನ್ನಾಡುವುದಕ್ಕೆ ನಾನು ಇಚ್ಛಿಸುತ್ತೇನೆ. ನಾವು ಸ್ವಾತಂತ್ರ್ಯ ಗಳಿಸಿದಂಥ 48 ವರ್ಷಗಳಿಂದಲೂ, ಈಗ

49ನೇ ವರ್ಷಕ್ಕೆ ಕಾಲಿಟ್ಟಿದ್ದು ಬೇಕಾದಷ್ಟು ಪ್ರಗತಿಪರ ಕಾರ್ಯಗಳನ್ನು ಸಮಾಜ ಕಲ್ಯಾಣ ಇಲಾಖೆ ಮುಖಾಂತರ ಮಾಡುತ್ತಿದ್ದೇವೆಂದು ಇದುವರೆವಿಗೂ ಬಂದು ಹೋಗಿರುವಂಥ ಎಲ್ಲಾ ಸರ್ಕಾರಗಳೂ ತಿಳಿದುಕೊಂಡಿವೆ. ಆದರೆ, ನನಗನ್ನಿಸುತ್ತದೆ: ಈ ಜನಾಂಗಕ್ಕೆ ಯಾವುದೇ ಸರ್ಕಾರವಾಗಲಿ ಸಂವಿಧಾನಬದ್ಧವಾಗಿ ಅಗತ್ಯವಾಗಿ ಮಾಡಬೇಕಾಗಿದ್ದಂಥ, ಮತ್ತು ಏನು ಸೌಲಭ್ಯ, ಸವಲತ್ತುಗಳನ್ನು ಕಲ್ಪಿಸಿಕೊಡಬೇಕಾಗಿತ್ತೋ, ಅಷ್ಟನ್ನೂ ಕೂಡ ಸರಿಯಾದ, ವ್ಯವಸ್ಥಿತ ರೀತಿಯಲ್ಲಿ ಕೊಡದೆ ಇವೊತ್ತಿಗೂ ಕೂಡ ಈ ಜನಾಂಗ 'ಮಲ ಹೊರುವ' ಪರಿಸ್ಥಿತಿಯಲ್ಲಿದೆಯೆಂದು ಹೇಳಿಕೊಳ್ಳಲು ನಾಚಿಕೆಯಾಗುತ್ತದೆ. ಯಾವುದೇ ಸರ್ಕಾರ ಬಂದರೂ ಕೂಡ ಈ ಅನಿಷ್ಟ ಪದ್ಧತಿಯನ್ನು ಇದುವರೆವಿಗೂ ತೊಡೆದು ಹಾಕಿ ದೂರ ಮಾಡಲಿಲ್ಲ, ಮಲ ಹೊರುವಂಥ ಪದ್ಧತಿಯನ್ನು ತೊಡೆದು ಹಾಕಬೇಕು. ಅದರ ಬಗ್ಗೆ ಬೇಕಾದಷ್ಟು ಸೌಲಭ್ಯಗಳು, ಯೋಜನೆಗಳು ನಮ್ಮಲ್ಲಿವೆಯೆಂದು ಮತ್ತು ಆ ಯೋಜನೆಯಲ್ಲಿ ಈ ಜನಾಂಗವನ್ನು ಮುಂದಕ್ಕೆ ತರಬೇಕೆಂಬ ಒಂದು ಕಳಕಳಿಯ ವಿಚಾರ ಹೇಳಿದರೇ ವಿನಹ ಅನಿಷ್ಟ ಪದ್ಧತಿಯನ್ನು ತೊಡೆದು ಹಾಕುವಂಥ, ನಿರ್ಮೂಲಗೊಳಿಸುವಂಥ ಸರ್ಕಾರ ಇದುವರೆವಿಗೂ ಬಾರದಿರುವುದು ಶೋಚನೀಯ. ಈ ಸಂದರ್ಭದಲ್ಲಿ ನಾನು ಸಮಾಜ ಕಲ್ಯಾಣ ಮಂತ್ರಿಗಳಲ್ಲಿ ತಮ್ಮ ಮೂಲಕ ಕೇಳಿಕೊಳ್ಳುವುದೇನೆಂದರೆ, ತಮ್ಮ ಆಡಳಿತದ ಅವಧಿಯಲ್ಲಾದರೂ, ಜನತೆ ತಮಗೆ ಎರಡನೆಯ ಬಾರಿಗೆ ಅಧಿಕಾರ ಕೊಟ್ಟಿರುವುದರಿಂದ ಈ ಸಂದರ್ಭದಲ್ಲಾದರೂ ಈ ಅನಿಷ್ಟ ಪದ್ಧತಿಯನ್ನು ಸಂಪೂರ್ಣವಾಗಿ ನಿರ್ಮೂಲನಗೊಳಿಸುವುದಕ್ಕೆ ಕಾರ್ಯಕ್ರಮ ಹಾಕಿಕೊಳ್ಳಬೇಕು. ಕೆ.ಜಿ.ಎಫ್. ಬೆಂಗಳೂರಿನಿಂದ 60 ಕಿಲೋಮೀಟರ್‌ಗಳಷ್ಟು ಕೂಡ ದೂರವಿಲ್ಲ, ಅಲ್ಲಿ ಮಲ ಹೊರುವಂಥ ಅಮಾನವೀಯ ಪದ್ಧತಿ ಇದೆ. ಇದು ತಮಗೇ ಗೊತ್ತೇ ಇಲ್ಲವೆಂದು ಮಂತ್ರಿಗಳು ಒಂದು ಸಾರಿ ಹೇಳಿರುವುದು ಪತ್ರಿಕೆಯಲ್ಲಿ ವರದಿಯಾಗಿದೆ. ತಾವು ಪ್ರಾಮಾಣಿಕವಾಗಿ, ಕಳಕಳಿಯಿಂದ ಚಿಂತನೆ ಮಾಡಿ ಮಲ ಹೊರುವ ವರ್ಗದವರನ್ನು ಇನ್ನು ಮೇಲಾದರೂ ಮೇಲೆತ್ತಬೇಕೆಂದು ನಾನು ಸನ್ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಇನ್ನು ಹರಿಜನ-ಗಿರಿಜನರಿಗೆ ತಾವು ಬೇಕಾದಷ್ಟು ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿದ್ದೀರಿ. ಆದರೆ, ಹರಿಜನ-ಗಿರಿಜನರ ಹೆಸರಿನಲ್ಲಿ ಆ ಸೌಲಭ್ಯಗಳನ್ನು ಬೇರೆಯವರು ಅನುಭವಿಸುತ್ತಿದ್ದಾರೆ.

ಈ ರೀತಿ ಸೌಲಭ್ಯಗಳನ್ನು ಅನುಭವಿಸುತ್ತಿರುವಂಥ ವ್ಯಕ್ತಿಗಳಿಗೆ ನೀವು ಪ್ರಶಸ್ತಿ ಪ್ರದಾನ ಮಾಡುತ್ತಿದ್ದೀರಿ. ಈ ಕುರಿತು ಪತ್ರಿಕೆಯಲ್ಲಿ ವರದಿಯಾಗಿದ್ದು, ಆ ಪತ್ರಿಕೆಯನ್ನು ನನ್ನ ಹತ್ತಿರವಿಟ್ಟುಕೊಂಡಿದ್ದೇನೆ. ಪತ್ರಿಕೆಯ 'ಬಾವಿ ಸೌಲಭ್ಯಕ್ಕಾಗಿ ದಲಿತರಾದ ಬ್ರಾಹ್ಮಣರು' ಎಂಬ ಶೀರ್ಷಿಕೆಯಡಿ ಸುದ್ದಿ ಪ್ರಕಟವಾಗಿದೆ. ಈ ವ್ಯಕ್ತಿ ತುಮಕೂರಿನವರಾಗಿದ್ದು, ಇವರಿಗೆ ತಿಂಗಳಿಗೆ ರೂ. 500 ಮಾಸಾಶನ ಬರುತ್ತಿದೆ. ದಶಲಕ್ಷ ಬಾವಿ ಯೋಜನೆಯಡಿ ಇವರು ಹರಿಜನರಾದರು! ಸದರಿ ಯೋಜನೆಯಡಿ ಅವರು ಬಾವಿ ಸೌಲಭ್ಯ ಪಡೆಯುತ್ತಾರೆ, ಮತ್ತು ಸರ್ಕಾರ ಅವರಿಗೆ ಕಣ್ಣುಮುಚ್ಚಿಕೊಂಡು ಪ್ರಶಸ್ತಿ ಕೊಡುತ್ತದೆ! ಅಲ್ಲದೆ, ಇವರ ಮೇಲೆ ಬೇಕಾದಷ್ಟು ಆಪಾದನೆಗಳು ಬರುತ್ತಿದ್ದರೂ ಸಹ ಸರ್ಕಾರವೇನಾದರೂ ಆ ಬಗ್ಗೆ ಕಿಂಚಿತ್ ಕಿವಿಗೊಟ್ಟಿದೆಯೇ? ಖಂಡಿತಾ ಇಲ್ಲ, ಈ ರೀತಿಯಾದರೆ ಸಮಾಜ ಕಲ್ಯಾಣ ಇಲಾಖೆ ನಿಜವಾಗಿಯೂ ಈ ಜನಾಂಗದ ಅಭ್ಯುದಯಕ್ಕಾಗಿ ಕೆಲಸ ಮಾಡುವುದಿಲ್ಲ, ಆದುದರಿಂದ, ನಾನು ಹೇಳುವುದೇನೆಂದರೆ, ದಯವಿಟ್ಟು ಇಂತಹವರನ್ನು ಹುಡುಕಿ ಉಗ್ರವಾದ ಶಿಕ್ಷೆ ವಿಧಿಸಿದಾಗಲೇ ಅವರಿಗೆ ಬುದ್ಧಿ ಬಂದು ಇಂತಹ ದರಿದ್ರ ಬ್ರಾಹ್ಮಣರು ದೂರವಾಗುತ್ತಾರೆ. ಈ ಸಂದರ್ಭದಲ್ಲಿ ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನನ್ನ ಮನಸ್ಸಿಗೆ ನೋವಾಗುತ್ತಿದೆ. ನಾನು ಪತ್ರಿಕೆಯನ್ನಿಟ್ಟುಕೊಂಡು ಹೇಳುತ್ತಿದ್ದೇನೆ. ಬ್ರಾಹ್ಮಣರೇ, ಈ ಸ್ಥಿತಿಗೆ ಇಳಿಯುತ್ತಾರೆಂದರೆ ಬೇರೆ ವರ್ಗದವರು ಏನು ಮಾಡುತ್ತಾರೆ? ತಮಗೆ ಬೇಕಾದರೆ ಪತ್ರಿಕೆಯನ್ನು ಕಳುಹಿಸಿಕೊಡುತ್ತೇನೆ. ತಾವು ಆ ಕುರಿತು ದಯವಿಟ್ಟು ತನಿಖೆ ನಡೆಸಿ ಆ ವ್ಯಕ್ತಿಯ

ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ, 'ಭಯದ ನೆರಳಿನಲ್ಲಿ ಬದುಕುತ್ತಿರುವ ಚೌಕಿ ತಾಂಡಾದ ಲಂಬಾಣಿಗಳು' ಎಂಬ ಶೀರ್ಷಿಕೆಯಡಿ ಸುದ್ದಿ ಪ್ರಕಟವಾಗಿರುವ ಪತ್ರಿಕೆ ಇದೆ. ಇವರಿಗೆ ರಕ್ಷಣೆ ಕೊಡುವುದಕ್ಕೆ ನಿಮಗೆ 48 ವರ್ಷಗಳು ಬೇಕೇ? ಕಳೆದ 48ವರ್ಷಗಳಿಂದ ಬೇಕಾದಷ್ಟು ಸೌಲಭ್ಯಗಳು, ಸವಲತ್ತುಗಳನ್ನು ಸಂವಿಧಾನಬದ್ಧವಾಗಿ ಡಾ॥ಬಿ.ಆರ್. ಅಂಬೇಡ್ಕರ್‌ರವರು ಕಲ್ಪಿಸಿಕೊಟ್ಟಿದ್ದಾರೆಂದು ಹೇಳಿದ್ದೀರಿ. ನೀವು ಏನು ಮಾಡಿದ್ದೀರಿ ಎಂದು ನಾನು ಕೇಳುತ್ತಿದ್ದೇನೆ. 48 ವರ್ಷಗಳಲ್ಲಿ ಎಷ್ಟು ಸರ್ಕಾರಗಳು ಬಂದು ಹೋಗಿವೆ? ಆದರೆ, ನೀವು ಇವರ ಬಗ್ಗೆ ಏನಾದರೂ ಕಿಂಚಿತ್ ಕಾಳಜಿ ವಹಿಸಿದ್ದೀರಾ? ಇಂತಹ ವಿಷಯಗಳು ಪತ್ರಿಕೆಗಳಲ್ಲಿ ಬರುತ್ತವೆ, ಹೋಗುತ್ತವೆ. ಆದರೆ, ಲಂಬಾಣಿ ತಾಂಡಾವನ್ನು ತಾವು ರಕ್ಷಿಸಲು ಹೋಗುವುದಿಲ್ಲ.

7.00 ಪಿ.ಎಂ.

ಇದು ನಡೆದಿರುವುದು 28-8-1995ರಂದು. ಚಿಂಚೋಳಿಯಲ್ಲಿ ಅರಣ್ಯ ಸಿಬ್ಬಂದಿಯಿಂದ ದೌರ್ಜನ್ಯಕ್ಕೆ ಒಳಗಾಗಿರತಕ್ಕ ಲಂಬಾಣಿಗಳ ತಂಡ ಇನ್ನೂ ಭಯದ ನೆರಳಿನಲ್ಲಿ ಬದುಕುತ್ತಿದೆ. ಈ ರೀತಿ ಲಂಬಾಣಿಗಳು ಭಯದಲ್ಲಿದ್ದಾರಲ್ಲಾ ಅದಕ್ಕೆ ಕಾರಣ ಈ ಅರಣ್ಯದ ಅಧಿಕಾರಿಗಳು. ಈ ಅಧಿಕಾರಿಗಳಿಗೆ ಸರಿಯಾಗಿ ಬುದ್ಧಿ ಕಲಿಸಿದರೆ ಮಾತ್ರ ನಮಗೆ ಸ್ವಾತಂತ್ರ ಬಂದು 50ನೇ ವರ್ಷಕ್ಕೆ ಹೋಗುತ್ತೇವಲ್ಲಾ ಆಗಲಾದರೂ ಸಹ ಆ ಜನರು ನಿಮ್ಮನ್ನು ನೆನಸಿಕೊಳ್ಳುತ್ತಾರೆ. ಆಗಲಾದರೂ ಸಹ ನೆಮ್ಮದಿಯಿಂದ ಬಾಳುತ್ತಾರೆ. ಇನ್ನು ಗಿರಿಜನ ಕೇಂದ್ರದಲ್ಲಿ ಕೆ.ಇ.ಬಿ.ನವರ ದಾಂದಲೆ. ಅರಣ್ಯದವರೇನೋ ಆ ರೀತಿ ದೌರ್ಜನ್ಯವನ್ನು ಮಾಡಿದರು. ಆದರೆ ಕೆ.ಇ.ಬಿ.ನವರಿಗೆ ಏನಾಗಿತ್ತು? ಇದು ನಡೆದಿರುವುದು ಬಿಳಿಗಿರಿ ರಂಗನ ಬೆಟ್ಟದಲ್ಲಿ, ಅಲ್ಲಿ ಡಾ। ಸುದರ್ಶನ್‌ರವರು ಗಿರಿಜನರ ಒಂದು ಕೇಂದರವನ್ನು ನಡೆಸುತ್ತಿದ್ದಾರೆ, ಆ ಪುಣ್ಯಾತ್ಮ ಗಿರಿಜನರಲ್ಲಿ ಬೆಳಕನ್ನು ತಂದಿದ್ದಾರೆ. ಆ ರೀತಿ ಬೆಳಕನ್ನು ಅವರಲ್ಲಿ ತಂದು ಈ ಜನತೆ ಮುಂದುಬರಬೇಕೆಂದು ಕಷ್ಟಪಡುತ್ತಿದ್ದಾರೆ ಅವರೇನು ಬೇರೆಯವರ ರೀತಿಯಲ್ಲಿ ಕೈಗಾರಿಕೆಗಳನ್ನಿಟ್ಟುಕೊಂಡು ಲಕ್ಷಾಂತರ ರೂಪಾಯಿಗಳ ವಿದ್ಯುತ್ತನ್ನೇನು ಕದ್ದು ನಷ್ಟ ಮಾಡುತ್ತಿಲ್ಲ, ತಾವು ವಿದ್ಯುತ್‌ನ್ನು ಕದಿಯುವವರನ್ನು ಹಿಡಿಯಿರಿ. ಆದರೆ ತಾವು ಮಾಡುತ್ತಿರುವುದು ಗಿರಿಜನರ ಕೇಂದ್ರಕ್ಕೆ ನೀಡಿದ್ದಂಥ ವಿದ್ಯುತ್ ಸಂಪರ್ಕವನ್ನು ಕಿತ್ತು ಹಾಕುತ್ತಿದ್ದೀರಿ. ದಯವಿಟ್ಟು ಇಂಥಹ ಕೆಲಸವನ್ನು ಎಂದೂ ಮಾಡಬೇಡಿ. ಇದರ ಬಗ್ಗೆ ತಾವು ಅಧಿಕಾರಿಗಳಿಗೆ ಸೂಕ್ತವಾದ ಎಚ್ಚರಿಕೆಯನ್ನು ಕೊಡಬೇಕು. ಯಾವ್ಯಾವ ಕೇಂದ್ರವನ್ನು ಕೆ.ಇ.ಬಿ.ನವರು ದಾಳಿ ಮಾಡಬೇಕೆಂಬುದನ್ನು ಹೇಳಿಕೊಡಿ. ಈ ರೀತಿ ಗಿರಿಜನರ ಕೇಂದ್ರಗಳ ಮೇಲೆ ದಾಳಿ ಮಾಡುವ ಅಭ್ಯಾಸವನ್ನು ದಯವಿಟ್ಟು ಬೆಳೆಸಿಕೊಳ್ಳಬೇಡಿ.

ಇನ್ನೊಂದು, ಲಂಬಾಣಿ ಸಂಘದ ಪದಾಧಿಕಾರಿಗಳಿಗೆ ಬೆತ್ತಲೆ ಸೇವೆ. ನಾವು ಸ್ವಾತಂತ್ರ್ಯ ಪಡೆದು 48 ವರ್ಷಗಳಾಗಿದ್ದರೂ ಸಹ ಈ ರೀತಿಯಾದ ಅವ್ಯವಸ್ಥೆ ಬೇಕೇ? ನಾನೇಕೆ ಪದೇ ಪದೇ ಸ್ವಾತಂತ್ರ್ಯ ಬಂದು 48 ವರ್ಷಗಳಾದರೂ ಸಹ ಎಂದು ಹೇಳುತ್ತಿದ್ದೇನೆಂದರೆ ತಮ್ಮ ಮನಸ್ಸು, ಕಣ್ಣು ಈಗಲಾದರೂ ತೆರೆಯಲಿ ಎಂದು ಆ ರೀತಿ ಹೇಳುತ್ತಿದ್ದೇನೆ. ಈ ರೀತಿಯಾದ ಬೆತ್ತಲೆ ಸೇವೆಯನ್ನು ಇನ್ನು ಮುಂದಾದರೂ ನಿಲ್ಲಿಸುತ್ತೀರೋ ಅಥವಾ ತಮಗೆ ಅಧಿಕಾರವಿರುವ ಇನ್ನೂ ಐದು ವರ್ಷದ ಅವಧಿಯಲ್ಲಿ ಇದನ್ನು ಮುಂದುವರೆಸಿಕೊಂಡು ಹೋಗುತ್ತೀರೋ? ಸಭಾಧ್ಯಕ್ಷರ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ ಈ ಬೆತ್ತಲೆ ಸೇವೆಯನ್ನು ಇನ್ನು ಮುಂದಾದರೂ ನಿಲ್ಲಿಸಿ ಆ ಜನರು ಮಾನಮರ್ಯಾದೆಯಿಂದ ಬದುಕತಕ್ಕ ವ್ಯವಸ್ಥೆಯನ್ನು ನಿರ್ಮಾಣ ಮಾಡಿ. ಹರಿಜನರು, ಗಿರಿಜನರು ಎಂದರೆ ಬಹಳಷ್ಟು ನಿಕೃಷ್ಠ ರೀತಿಯಲ್ಲಿ ಪ್ರತಿಯೊಂದು ಸರ್ಕಾರ ಕಾಣುತ್ತಿದೆ, ಅದಕ್ಕೆ ಕಡಿವಾಣವನ್ನು ಹಾಕಿ ಅದಕ್ಕ ಅಂತಿಮ ತೆರೆಯನ್ನೆಳೆದು ಅವರೂ ಮಾನವ ಸಮೂದಾಯದಲ್ಲಿ ಎಲ್ಲರಂತೆ ಬದುಕುವಂಥ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಎರಡನೆಯದಾಗಿ ಅರಣ್ಯ ಇಲಾಖೆಯ ಸಿಬ್ಬಂದಿಯಿಂದ ದಲಿತ ಮಹಿಳೆಯರ ಮೇಲೆ ದೌರ್ಜನ್ಯದ ಆರೋಪ. ಒಂದಲ್ಲ ಎರಡಲ್ಲ ಪ್ರತಿನಿತ್ಯದ ಪತ್ರಿಕೆಯನ್ನು ನೋಡಿದರೂ ಸಹ ಅರಣ್ಯದ ಸಿಬ್ಬಂದಿಯಿಂದ ಗಿರಿಜನರ ಮೇಲೆ ದೌರ್ಜನ್ಯದ ಆರೋಪವಿರುತ್ತದೆ ಮತ್ತು ಏಳು ಗ್ರಾಮದ ಹರಿಜನರಿಗೆ ಸಾಮಾಜಿಕ ಬಹಿಷ್ಕಾರ, ನಕಲಿ ಪ್ರಮಾಣ ಪತ್ರವನ್ನು ಇಷ್ಯೂ ಮಾಡಿದಮೇಲೆ ಯಾವುದೇ ಕ್ರಮವನ್ನು ತಾವು ತೆಗೆದುಕೊಳ್ಳುತ್ತಿಲ್ಲ, ವಿದ್ಯುತ್ ಶಾಕ್‌ನ್ನು ಹೊಡೆಸಿ ಹರಿಜನ ಯುವಕರನ್ನು ಸಾಯಿಸುತ್ತಿದ್ದಾರೆ. ನೀವೇನು ಕಣ್ಣುಮುಚ್ಚಿಕೊಂಡು ಕುಳಿತಿದ್ದೀರಾ? ಅವರ ಬಗ್ಗೆ ನೀವೇನು ಕ್ರಮ ತೆಗೆದುಕೊಂಡಿದ್ದೀರಾ? ಗೃಹ ಮಂತ್ರಿಗಳೇನು ಮಾಡುತ್ತಿದ್ದಾರೆ? ಹರಿಜನ ಗಿರಿಜನರಿಗೆ ವಿಶಿಷ್ಟವಾದ ಸ್ಥಾನ ಕೊಟ್ಟಿದ್ದೇವೆ. ಅವರ ರಕ್ಷಣೆಯೇ ನಮ್ಮ ರಕ್ಷಣೆ ಎನ್ನತಕ್ಕ ನಾಟಕೀಯವಾದ ಮಾತನ್ನು ಇನ್ನು ಮೇಲಾದರೂ ಆಡುವುದನ್ನು ಬಿಡಿ ಈ ರೀತಿ ಪತ್ರಿಕೆಗಳಲ್ಲಿ ವರದಿಗಳೂ ಬರುವುದನ್ನು ದಯವಿಟ್ಟು ನಿಲ್ಲಿಸಿ. ಆಗ ಜನರು ನೀವು ನಿಜವಾಗಿಯೂ ಗಿರಿಜನರ ಬಗ್ಗೆ ಪ್ರಮಾಣೀರಾಗಿದ್ದೀರಿ ಅವರ ಬಗ್ಗೆ ಕಳಕಳಿ ಇದೆ. ಅವರ ಸಲುವಾಗಿ ನೀವು ಹೋರಾಟ ಮಾಡುತ್ತಿದ್ದೀರಿ ಅವರ ರಕ್ಷಣೆಗೆ ನೀವು ನಿಂತಿದ್ದೀರಿ ಎಂದು ನಂಬುತ್ತಾರೆ. ಆದರಿಂದ ಈ ಸಂದರ್ಭದಲ್ಲಿ ಕೇಳಿಕೊಳ್ಳುವುದೇನೆಂದರೆ ದಯವಿಟ್ಟು ಗೃಹ ಖಾತೆಯ ಮಂತ್ರಿಯವರಿಗೆ ಇವರ ರಕ್ಷಣೆಗೆ ಮೊದಲು ದಾವಿಸಬೇಕೆಂದು ಹೇಳಬೇಕು. ಅಧ್ಯಕ್ಷರೇ ತಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದು ತಾವು ಅಲ್ಲಿಂದ ಬರುತ್ತೀರೋ ಗೊತ್ತಿಲ್ಲ, ತಮ್ಮ ಜಿಲ್ಲೆಗೆ ಸಂಬಂಧಪಟ್ಟಿದ್ದು ಅಲ್ಲಿ ಇಬ್ಬರಿಗೆ ಜಮೀನಿನ ಸಲುವಾಗಿ ವಿದ್ಯುತ್ ಶಾಕ್ ಹೊಡೆಸಿ ಅವರನ್ನು ಕೊಲೆ ಮಾಡಿದ್ದಾರೆ. ತಮ್ಮ ಅವಧಿಯಲ್ಲಾದರೂ ಸಹ ಇದು ನಿಲ್ಲಬೇಕು, ತಾವು ಇದಕ್ಕೆ ಸೂಕ್ತವಾದ ಗಮನಕೊಡಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಈ ರೀತಿ ಬೇಕಾದಷ್ಟು ಹರಿಜನರ ಮೇಲೆ ದೌರ್ಜನ್ಯ, ಆರೋಪ, ಅವರಿಗೆ ಕೊಟ್ಟಿರುವ ಭೂಮಿಯನ್ನು ಕಬಳಿಸುವ ಕೆಲಸವಾಗುತ್ತಿದೆ. ಇವತ್ತಿನ ಪತ್ರಿಕೆಯಲ್ಲಿ ಬಂದಿದೆ, ಹುಣಸೂರಿನಲ್ಲಿ 300 ಗೋಮಾಳ, ಪ್ರತಿಯೊಬ್ಬ ಗಿರಿಜನರಿಗೂ ಎರಡೆರಡು ಎಕರೆ ಎಂದು ಕೊಟ್ಟಿದ್ದಾರೆ. ಆದರೆ ಇವರು ಮಾಡಿದ್ದೇನು? ಸಕ್ರಮ ಮಾಡುತ್ತೀರಿ? ಆದರೆ ಯಾರ ಭೂಮಿಯನ್ನು ಸಕ್ರಮ ಮಾಡುತ್ತಿದ್ದೀರಿ? ಶ್ರೀಮಂತರು ಅವರಿಸಿಕೊಂಡಿರುವ ಜಾಗವನ್ನು ಸಕ್ರಮ ಮಾಡುತ್ತಿದ್ದೀರಿ, ಆದರೆ ಬಡವರಿಗೆ ಕೊಡಬೇಕಾಗಿರುವ ಯಾವುದೇ ಗೋಮಾಳದ ಬಗ್ಗೆ ಸರ್ಕಾರ ಶಿಫಾರಸ್ಸು ಮಾಡಿದರೂ ಸಹ ಬೇಡವೆಂದು ನೀವು ಬರೆದುಕೊಟ್ಟಿದ್ದೀರಿ. ಇವತ್ತು ತಾವು ಗಿರಿಜನರಿಗೆ, ಹರಿಜನರಿಗೆ ರಕ್ಷಣೆ ಕೊಟ್ಟು ಸೌಲಭ್ಯವನ್ನು ನೀಡುತ್ತಿರುವುದು ಇದೆಯೇ? ಈ ಸಂದರ್ಭದಲ್ಲಿ ತಮ್ಮ ಮೂಲಕ ನಾನು ಕೇಳಿಕೊಳ್ಳುವುದೇನೆಂದರೆ ಯಾವುದೇ ಗೋಮಾಳವನ್ನು ಹರಿಜನ, ಗಿರಿಜನರಿಗೆ ಎಂದು ಅಲ್ಲಿನ ಸಂಬಂಧಪಟ್ಟ ಅಧಿಕಾರಿಗಳು ಶಿಫಾರಸ್ಸು ಮಾಡುತ್ತಾರೋ ಅದು ಯಾವುದೇ ಕಾರಣಕ್ಕೂ ತಪ್ಪಕೂಡದು, ಹಿತಾಸಕ್ತಪಟ್ಟಂಥ ವ್ಯಕ್ತಿಗಳ ಕಪಿಮುಷ್ಠಿಯಿಂದ ಅದನ್ನು ಕಿತ್ತು ಜನತೆಗೆ ಕೊಟ್ಟು ಈಗಲಾದರೂ ಆ ಜನರು ನೆಮ್ಮದಿಯಿಂದ ಬಾಳಲು ಬಿಡಬೇಕೆಂದು ಮಾನ್ಯ ಮಂತ್ರಿಗಳನ್ನು ಸಭಾಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಇನ್ನು ತಾವು ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಿಗೇನು ಖರ್ಚು ಮಾಡುತ್ತಿದ್ದೀರಿ, ನಮಗೆ ಸ್ವಾತಂತ್ರ್ಯ ಬಂದು 48 ವರ್ಷಗಳಾಗಿದ್ದರೂ ಸಹ ಒಬ್ಬ ಭಿಕ್ಷುಕನಿಗೆ ದಿನಕ್ಕೆ ಏನು ಖರ್ಚು ಮಾಡುತ್ತಾರಲ್ಲ ಅಷ್ಟನ್ನೂ ಸಹ ಈ ವಿದ್ಯಾರ್ಥಿಗಳಿಗೆ ಖರ್ಚು ಮಾಡುತ್ತಿಲ್ಲವೆಂದು ನಾನು ಬಹಳ ನೊಂದು ಹೇಳಬೇಕಾಗಿದೆ. ಕೇಂದ್ರ ಕಾರಾಗೃಹದಲ್ಲಿರುವ ಖೈದಿಗೆ ಏನು ಖರ್ಚು ಮಾಡುತ್ತಿದ್ದಾರೆ ಅಷ್ಟನ್ನು ಸಹ ಒಬ್ಬ ವಿದ್ಯಾರ್ಥಿಗೆ ಇವರು ಖರ್ಚು ಮಾಡುತ್ತಿಲ್ಲ, ಇಷ್ಟೊಂದು ನಿಕೃಷ್ಟವಾಗಿ ಇದುವರೆಗೆ ಬಂದಂಥ ಸರ್ಕಾರಗಳು ನಡೆಸಿಕೊಂಡು ಹೋಗುತ್ತಿದೆ. ಇನ್ನು ಮುಂದೆ ಇದನ್ನು ನಿಲ್ಲಿಸಿ ತಾವೇನು ಭಿಕ್ಷುಕರಿಗೆ ಸೌಲಭ್ಯವನ್ನು ಕೊಡುತ್ತಿದ್ದೀರಲ್ಲಾ ಅದನ್ನು ಈ

ವಿದ್ಯಾರ್ಥಿಗಳಿಗಾದರೂ ಕೊಡಬೇಕು, ಆ ಜನರು ಆಗಲಾದರೂ ಸಹ ಸ್ವಲ್ಪ ಮೇಲ್ಪಟ್ಟದ ಜೀವನವನ್ನು ಸಾಗಿಸಲು ಸಾಧ್ಯವಾಗುತ್ತದೆ. ಸಮಾಜ ಕಲ್ಯಾಣ ಸಚಿವರು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಇದರಲ್ಲಿ ಬಹಳಷ್ಟು ಸುಧಾರಣೆಯನ್ನು ತರಲು ಯೋಚನೆ ಮಾಡಿದರು. ಅಂತರ್ಜಾತಿ ವಿವಾಹ ಪದ್ಧತಿಯನ್ನು ಜಾರಿಗೆ ತಂದಿದ್ದೀರಿ. ಆದರೆ ತಾವು ಅದನ್ನು ಯಾರಲ್ಲಿ ಮಾಡುತ್ತಿದ್ದೀರಿ? ಮಾತೆತ್ತಿದರೆ ಹರಿಜನರು, ಗಿರಿಜನರು ನಾವು ಅಣ್ಣತಮ್ಮಂದಿರೆಂದು ಹೇಳುತ್ತೀರಿ. ಆದರೆ ಎಲ್ಲಾದರೂ ಗಿರಿಜನರ ಬಗ್ಗೆ ಎಳ್ಳುಕಾಳಿನಷ್ಟು ಯೋಚನೆ ಮಾಡಿದ್ದೀರಾ? ಅಸ್ಪಶ್ಯತಾ ನಿವಾರಣೆ ಕಾರ್ಯಕ್ರಮವಿದೆ. ತಾವೇ ಎದೆಮುಟ್ಟಿಕೊಂಡು ಹೇಳಿ ಎಷ್ಟು ಜನ ಆ ಜಾತಿಯಲ್ಲಿ, ಸಮೂದಾಯದಲ್ಲಿ ಸೇರಿಕೊಂಡಿದ್ದಾರೆ. ಕೇವಲ ಬೆರಳೆಣಿಕೆಯಷ್ಟು ಜನ ಅಸ್ಪಶ್ಯರು ಮಾತ್ರ ಆ ಸಮೂದಾಯದಲ್ಲಿದ್ದಾರೆ.

ಆದರೆ ತಾವು ಅಂತರ್ಜಾತಿಯ ವಿವಾಹಕ್ಕೆ 20 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೀರಿ. ಇದು ಬೇಕೆ? ಗಿರಿಜನರಿಗೆ ಆ ಯೋಜನೆಯ ಅಡಿಯಲ್ಲಿ ಏಕೆ ಈ ರೀತಿ ಹಣವನ್ನು ಕೊಡುವುದಿಲ್ಲವೆಂದು ಕೇಳುತ್ತಿದ್ದೇನೆ? ಗಿರಿಜನರು ಕಾಡಿನಲ್ಲಿರುವವರನ್ನೇ ಮದುವೆಯಾಗಿ ಸಾಯಬೇಕೇ? ಅಥವಾ ಅವರುಗಳು ಈ ಸಮೂದಾಯದ ಜೊತೆಯಲ್ಲಿ ಸೇರಬಾರದೆಂದೇ? ಅವರಲ್ಲಿ ಅಸ್ಪಶ್ಯತೆಯನ್ನು ನಿವಾರಣೆ ಮಾಡಬಾರದೆಂದೇ? ತಾವು ಈ ರೀತಿಯಾದ ತಾರಾತಮ್ಯ ಮಾಡಬೇಡಿ. ದಯವಿಟ್ಟು ಈ ವ್ಯವಸ್ಥೆಗೆ ಕೊನೆಯನ್ನೇಳಬೇಕು. ನಿಮ್ಮ ಕಾಲದಲ್ಲಾದರೂ ಸಹ ಈ ತಾರಾತಮ್ಯಕ್ಕೆ ಕೊನೆಯನ್ನೆಳೆದರೆ ಮಾತ್ರ ಹರಿಜನರು ಗಿರಿಜನರು ತಾವು ಯಾವ ರೀತಿಯಲ್ಲಿ ಅವರು ಅಣ್ಣತಮ್ಮಂದಿರೆಂದು ಕಳಕಳಿಯನ್ನಿಟ್ಟದ್ದರೋ ಅದು ಖಂಡಿತವಾಗಿ ಸಾಧ್ಯವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ; ಹರಿಜನರಲ್ಲಿ ಒಬ್ಬ ಯುವಕ ಓದಿರುತ್ತಾನೆ, ಆತ ಒಳ್ಳೆಯ ಉದ್ಯೋಗದಲ್ಲಿರುತ್ತಾನೆ, ಆಗ ಮುಂದುವರೆದ ಕೋಮಿನವರು ನೋಡುತ್ತಾರೆ ಹುಡುಗ ಓದಿದ್ದಾನೆ, ಕೆಲಸದಲ್ಲಿದ್ದಾನೆ ಇವನನ್ನು ಮದುವೆ ಮಾಡಿದರೆ ಸರ್ಕಾರದವರು ಹಣ ಕೊಡುತ್ತಾರೆ, ಆ ಹುಡುಗ ಮದುವೆ ಮಾಡಿಕೊಂಡು ಆ ಮುಂದುವರೆದ ಕೋಮೀಗೆ ಸೇರಿಕೊಳ್ಳುತ್ತಾನೆ, ಆದರೆ ಸರ್ಕಾರವೇನು 20 ಸಾವಿರ ಕೊಡುತ್ತಾರೆ ಅದನ್ನು ಪಡೆದುಕೊಳ್ಳುತ್ತಾರೆ.

ಇಂಥಹ ವಿವಾಹಕ್ಕೆ ಪ್ರೋತ್ಸಾಹ ಕೊಡಬೇಡಿ, ಅದೇ ಹರಿಜನ ಕನ್ಯೆಯನ್ನು ಮದುವೆಯಾಗಲು ಮುಂದುವರೆದ ಕೋಮಿನವರು ಎಷ್ಟು ಜನರು ಮುಂದೆ ಬರುತ್ತಾರೆ ಅಂಥವರಿಗೆ ಆ ಸೌಲಭ್ಯವನ್ನು ಕೊಡಿ. ಆ ರೀತಿ ಮಾಡಿದರೆ ಮಾತ್ರ ತಾವು ಅಂತರ್ಜಾತಿಯ ವಿವಾಹ ಮಾಡುವುದರಿಂದ ಸಾರ್ಥಕತೆಯಾಗುತ್ತದೆ. ಅದನ್ನು ಬಿಟ್ಟು ತಾವು ಈ ಜನಾಂಗದವರನ್ನೇ ತುಳಿಯುತ್ತಿದ್ದೀರಿ. ಆ ರೀತಿ ಗಿರಿಜನರ ಕೋಮಿನ ಯುವಕ, ಓದಿದ್ದಂಥ ಯುವಕ ಅವನ ಕಾಲೋನಿಯನ್ನು ಬಿಟ್ಟು ಮುಂದುವರೆದ ಕೋಮಿನವರ ಜೊತೆ ಸೇರಿಕೊಳ್ಳುತ್ತಾನೆ. ಜೊತೆಗೆ ತಾವು ಕೊಡತಕ್ಕ ಇಪ್ಪತ್ತು ಸಾವಿರ ರೂಪಾಯಿಗಳನ್ನು ಇಟ್ಟುಕೊಳ್ಳುತ್ತಾನೆ. ಮಜವಾಗಿರುತ್ತಾನೆ. ದಯವಿಟ್ಟು ಈ ರೀತಿಯಾದ ಅಂತರ್ಜಾತಿಯ ವಿವಾಹಕ್ಕೆ ಪ್ರೋತ್ಸಾಹ ಕೊಡಬೇಡಿಯೆಂದು ಕೇಳಿಕೊಳ್ಳುತ್ತಿದ್ದೇನೆ. ನಾನು ಬರೀ ಸ್ವಾತಂತ್ರ್ಯ ಬಂದು 48, 49 ವರ್ಷಗಳಾಗುತ್ತಾ ಬಂದಿದೆಯೆಂದು ಆಗಾಗ್ಗೆ ಹೇಳುತ್ತಿರುವುದಕ್ಕೆ ಸಭಾಧ್ಯಕ್ಷರು ಕ್ಷಮಿಸಬೇಕು. ನಮ್ಮ ಪರಿಶಿಷ್ಟ ಪಂಗಡದವರಿಗೆ, ಸ್ವಾತಂತ್ರ್ಯ ಬಂದು 48 ವರ್ಷಗಳಾದರೂ ಸಹ ಏನು ಮಾಡಿದ್ದೀರಿ? 1991ರ ಜನಗಣತಿಯ ಪ್ರಕಾರ ಈ ಜನಾಂಗದವರು 4.29 ಅಂಶದ ಪ್ರಕಾರದಲ್ಲಿ ಈ ಜನಸಂಖ್ಯೆಯಲ್ಲಿ ಮಿಳಿತವಾಗಿದ್ದೇವೆ. ಈ ವಿಧಾನಸಭೆಯಲ್ಲಿ ನಮಗೆಷ್ಟು ಸ್ಥಾನವನ್ನು ಕೊಟ್ಟಿದ್ದೀರಿ? ಈ 48 ವರ್ಷದಲ್ಲಿ ಗಿರಿಜನರಿಗೆ ಕೇವಲ ಇಬ್ಬರಿಗೆ ಮಾತ್ರ ಕೊಟ್ಟಿದ್ದೇವೆ, ಪ್ರತಿಶತ ಅವರಿಗೆ ಮೂರು ಪ್ರಮಾಣ ಕೊಡಬೇಕಾಗಿತ್ತು; ಏಳು ಜನರು ಈ

ಸಭೆಗೆ ಸದಸ್ಯರಾಗಿ ಬರಬೇಕಾಗಿತ್ತೆಂದು ಯೋಚನೆ ಬರಲಿಲ್ಲ? ನೀವೂ ಕೂಡ ಮುಂದುವರೆದ ಕೋಮಿನವರ ಜೊತೆ ಸೇರಿಕೊಂಡು ಆ ಐದು ಸ್ಥಾನಕ್ಕೆ ಖನ್ನಾ ಹಾಕಿದಿರಿ. ನಾನು ನೊಂದು ಹೇಳುತ್ತಿದ್ದೇನೆ ಈ 48 ವರ್ಷಗಳಲ್ಲಿ ಈ ರೀತಿಯಾರೂ ಮಾತನಾಡಿಲ್ಲ, ಯಾರಾದರೂ ಇದರ ಬಗ್ಗೆ ಮಾತನಾಡಿದ್ದರೆ ಈ ವಿಧಾನಸಭೆಯಲ್ಲಿ ನಮ್ಮ ಪಂಗಡದ ಸಂಖ್ಯೆ ಎರಡರಿಂದ ಏಳಕ್ಕೆ ಹೋಗುತ್ತಿತ್ತು. ಆದರೆ ಯಾರೂ ಸಹ ಆ ಕೆಲಸವನ್ನು ಮಾಡಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಪ್ರತಿಸಲವು ಈ ಜನಾಂಗದವರ ಉದ್ಧಾರವೇ ನಮ್ಮ ಉದ್ಧಾರ, ಗಿರಿಜನರನ್ನು ಬೇಕಾದಷ್ಟು ರೀತಿಯಲ್ಲಿ ಉದ್ಧಾರ ಮಾಡುತ್ತೇವೆಂದು ಹೇಳುತ್ತಿರುತ್ತಾರೆ. ಸಮಾಜ ಕಲ್ಯಾಣ ಮಂತ್ರಿಗಳು ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಮನಸ್ಸನ್ನು ಒಲಿಸಿ ಗಿರಿಜನರಿಗೆ ಸಿಗುವಂಥ ಸೌಲಭ್ಯಗಳನ್ನು ಕೊಡಿಸಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಅಧ್ಯಕ್ಷರೇ, ತಾವೇನು ಸಲಹೆಯನ್ನು ಕೊಡುತ್ತಿದ್ದೀರಿ, ಅದು ರಾಜ್ಯ ಸರ್ಕಾರಕ್ಕೆ ಮಾಡಲು ಸಾಧ್ಯವಾಗುವುದಿಲ್ಲ. ಮೀಸಲಾತಿಯನ್ನು ನೀಡುವ ಬಗ್ಗೆ ಪ್ರಾಯಶಃ ಲೋಕಸಭೆಯಲ್ಲಿ ಹೇಳಬೇಕಾಗುತ್ತದೆ.

ಶ್ರೀ ಹೆಚ್.ಡಿ. ಬಸವರಾಜು : ಸಭಾಧ್ಯಕ್ಷರೆ, ನಾನು ಏನು ಕಳಕಳಿಯಿಂದ ಹೇಳುತ್ತಿದ್ದೇನೆಂದು ಮಾನ್ಯ ಮಂತ್ರಿಗಳು ಅರ್ಥ ಮಾಡಿಕೊಳ್ಳಲಿಲ್ಲ, ನಾನು ಏನು ಹೇಳಿದ್ದುದು. ಎಂದರೆ ಈ ಸಭೆ ಅದನ್ನು ಮಾಡುವುದಿಲ್ಲ, ಈ ಸಭೆ ಶಿಫಾರಸ್ಸು ಮಾಡಬೇಕು. ಅವರಿಗೆ ಕೊಟ್ಟಿರುವ ಅನ್ನವನ್ನು ಕಿತ್ತುಕೊಂಡು ನಾವು ತಿನ್ನುತ್ತಿದ್ದೇವೆ. ಆ ಎಂಜಲನ್ನು ನಾವು ತಿನ್ನುವುದು ಬಿಡಬೇಕು ಎನ್ನುವುದನ್ನು ಈ ಸಭೆಯಲ್ಲಿ ನಿರ್ಣಯ ಮಾಡಬೇಕೆಂದು ನಾನು ಈ ಸಭೆಯನ್ನು ಒತ್ತಾಯ ಮಾಡುತ್ತಿದ್ದೇನೆ. ನನಗೂ ಗೊತ್ತಿದೆ, ಕೇಂದ್ರ ಸರ್ಕಾರ ಇದನ್ನು ಮಾಡಬೇಕಾಗಿರುವುದು. ದಯವಿಟ್ಟು ಕೇಂದ್ರ ಸರ್ಕಾರಕ್ಕೆ ಈ ತರಹ ಆಗುತ್ತಾ ಇರುವ ಅನ್ಯಾಯವನ್ನು ದಯವಿಟ್ಟು ಅಲ್ಲಿ ಹೇಳಿ. ಇನ್ನು ಲೋಕಸಭೆಗೆ 10 ಜನರಿಗೆ ಮಾತ್ರ ಸ್ಥಾನ ಮೀಸಲಿಟ್ಟರು. ಗಿರಿಜನರಿಗೆ ಏನು ಆಗಿತ್ತು ಅವರು ಏನು ಪಾಪ ಮಾಡಿದ್ದರು? ಅವರ ಬಗ್ಗೆ ಮಾತನಾಡುವವರು ಯಾರು ಇರಲಿಲ್ಲವೇ?

ಒಬ್ಬ ಮಾನ್ಯ ಸದಸ್ಯರು : ಲೋಕ ಸಭೆಯಲ್ಲಿ ಕೂಡ ಗಿರಿಜನರಿಗೆ ಮೀಸಲಾತಿ ಇದೆ, ಈ ರಾಷ್ಟ್ರದಲ್ಲಿ ಆಂಧ್ರ ಪ್ರದೇಶ ಮತ್ತು ಒರಿಸ್ಸಾದಲ್ಲಿ ಜಾಸ್ತಿ ಇದೆ. ಅಸ್ಸಾಂ ಈ ಕಡೆ ಗುಡ್ಡ ಗಾಡು ಜನ ಇರುತ್ತಾರೆ. ಅಲ್ಲಿ ಮೀಸಲಾತಿ ಜಾಸ್ತಿ ಇದೆ. ಪರಿಶಿಷ್ಟ ಜಾತಿಯವರು ಕಡಿಮೆ ಲೋಕಸಭಯಲ್ಲಿ ಪ್ರಪೋರ್ಷನೇಟ್ ಅಲ್ಲಿ ಜಾಸ್ತಿ ಇದೆ.

ಶ್ರೀ ಹೆಚ್.ಡಿ. ಬಸವರಾಜ್ : ನನಗೂ ಗೊತ್ತಿದೆ, ನಾವು ಎಷ್ಟು ಜನ ಇದ್ದೇವೆ ಗೊತ್ತೇ 19 ಲಕ್ಷ 26,000 ಜನ ಇದ್ದೇವೆ. 19 ಲಕ್ಷ 26,000 ಜನರಿಗೆ ಒಬ್ಬ ಪ್ರತಿನಿಧಿ ಹೋಗಲಿಲ್ಲ ಎಂದರೆ ಅವರ ಬಗ್ಗೆ ಈ ಕರ್ನಾಟಕದಲ್ಲಿ ಇರತಕ್ಕಂತಹ ಆ ವ್ಯಕ್ತಿಗಳ ಬಗ್ಗೆ ಯಾರು ಹೋರಾಟ ಮಾಡುತ್ತಾರೆ? ಆಂಧ್ರದಲ್ಲಿ ಇದೆ, ಬಿಹಾರದಲ್ಲಿ ಇದೆ, ಬೇರೆ ದೇಶದಲ್ಲಿ ಇದೆ. ಅವೆಲ್ಲಾ ನಮಗೆ ಬೇಕಾಗಿಲ್ಲ, ಈ ಕರ್ನಾಟಕದಲ್ಲಿ ಎಲ್ಲಿ ಇದೆ. ಇದನ್ನು ತಾವು ಹೇಳಬೇಕು. ಈ ಕರ್ನಾಟಕದಲ್ಲಿ ಅವರಿಗೆ ವಂಚನೆ ಮಾಡುತ್ತಿದ್ದೀರಿ, ಈ ವಂಚನೆ ತಪ್ಪಿಸಿ ಅವರಿಗೆ ಒಬ್ಬ ಪ್ರತಿನಿಧಿಯನ್ನು ಕಳುಹಿಸಿ ಆ ಜನಾಂಗವನ್ನು ಉದ್ಧಾರ ಮಾಡುವ ಹಾಗೆ ಮಾಡಬೇಕು.

ಅಧ್ಯಕ್ಷರು : ನೀವು ಹೊಸಬರಿದ್ದೀರಿ, ಲೋಕಸಭೆ ಸ್ಥಾನಗಳನ್ನು ನಿಗಧಿ ಮಾಡುವಾಗ ರಾಜ್ಯದ ಜನಸಂಖ್ಯೆ ಗಮನಕ್ಕೆ ತೆಗೆದುಕೊಳ್ಳುತ್ತಾರೆ. ರಾಜ್ಯದ ಜನಸಂಖ್ಯೆ ಗಮನದಲ್ಲಿಟ್ಟುಕೊಂಡು ಎಷ್ಟು ಕ್ಷೇತ್ರಗಳು ಎಂದು ತೀರ್ಮಾನ ಮಾಡುತ್ತಾರೆ. ಆದಾದ

ಮೇಲೆ ಆಯಾಯ ಜನ ಸಂಖ್ಯೆ ಎಷ್ಟು ಇರುತ್ತದೆ ಎಂದು ಹೇಳಿ ಹರಿಜನ ಎಂದು ಮೀಸಲಾತಿ ಮಾಡುವುದಿಲ್ಲ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಎಂದು ಮಾಡುತ್ತಾರೆ. ಆ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅನುಸೂಚಿತ ಜಾತಿಗಳು ಮತ್ತು ಪಂಗಡಗಳ ಆ ಪಟ್ಟಿಯಲ್ಲಿ ಯಾವ ಯಾವ ಜಾತಿಗಳು ನಮೂದಿಸಿರುತ್ತಾರೆ ಅವರ ಜನಸಂಖ್ಯೆ ಎಷ್ಟು ಇರುತ್ತದೆ ಎಂದು ಗಮನಕ್ಕೆ ತೆಗೆದುಕೊಳ್ಳುತ್ತಾರೆ. ಅವರ ಜನ ಸಂಖ್ಯೆಗೆ ಅನುಗುಣವಾಗಿ ಇಷ್ಟು ಕ್ಷೇತ್ರಗಳು ಎಂದು ಪ್ರತಿ ರಾಜ್ಯದಲ್ಲೂ ಅವರು ಮೀಸಲಾತಿ ಮಾಡುತ್ತಾರೆ. ಬಹುಶಃ ಕರ್ನಾಟಕ ರಾಜ್ಯದಲ್ಲಿ ಅಗತ್ಯ ಇರುವಷ್ಟು ಪರಿಶಿಷ್ಟ ಪಂಗಡಗಳ ಜನಸಂಖ್ಯೆ ಇಲ್ಲದೇ ಇರುವ ಕಾರಣದಿಂದ ಮಾಡಿರುವುದಿಲ್ಲ. ನಿಮ್ಮನ್ನು ಇನ್ನು ಒಂದು ಸಾರಿ ಲೋಕಸಭೆಗೆ ಕಳುಹಿಸುವ ವ್ಯವಸ್ಥೆ ಮಾಡೋಣ. ಅಲ್ಲಿ ಇದೆಲ್ಲವನ್ನು ಮಾತನಾಡಿ. ಈಗ ಇಲ್ಲಿಗೆ ಸಂಬಂಧಪಟ್ಟಂತೆ ಮಾತನಾಡಿ. ನಿಮ್ಮ ಮನಸ್ಸನ್ನು ನಾವು ಅರ್ಥ ಮಾಡಿಕೊಳ್ಳುತ್ತೇವೆ.

ಶ್ರೀ ಹೆಚ್.ಡಿ. ಬಸವರಾಜು : ಅಧ್ಯಕ್ಷರು ನನ್ನನ್ನು ಲೋಕಸಭೆಗೆ ಕಳುಹಿಸಬೇಕೆಂದು ಹೇಳಿದ್ದಾರೆ, ಧನ್ಯವಾದಗಳು, ಆದರೆ ನಾನು ಲೋಕಸಭೆಗೆ ಹೋದರೆ ಈಗ ನಾನು ಪ್ರತಿಪಾದನೆ ಮಾಡುತ್ತಾ ಇರುವಂತಹ.......

ಶ್ರೀಮತಿ ಬಿ.ಟಿ. ಲಲಿತನಾಯಕ್ : ಮಾನ್ಯ ಸಭಾಧ್ಯಕ್ಷರೆ, ತಾವು ಹೇಳಿದ್ದುದು ನಿಜ. ಆದರೆ ಏನಾಗಿದೆ ಈ ಹಿಂದಿನ ಸರ್ಕಾರ ತಪ್ಪು ಮಾಹಿತಿ ಕೊಟ್ಟು ಗಿರಿಜನರು ಇಲ್ಲ ಎನ್ನುವ ತರಹ ಮಾಡಿ ವಂಚನೆ ಆಗಿದೆ. ಅವರು ಹೇಳುತ್ತಾ ಇರುವುದು ಸತ್ಯ ಇದೆ. ಈಗ ಸತ್ಯ ಹೊರಗೆ ಬರಬಹುದು. ಬಹುಶಃ ಅದಕ್ಕೆ ನ್ಯಾಯ ಸಿಗಲಿಲ್ಲ, ಎಷ್ಟು ಜನ ಸಂಖ್ಯೆ ಇದೆ ಎಂದು ನಾನು ಹಿಂದೆ ಕೇಳಿದ್ದಕ್ಕೆ 3,000 ಜನಸಂಖ್ಯೆ ಇದೆ ಎಂದು ಹೇಳಿದ್ದಾರೆ. ಇಡೀ ಕರ್ನಾಟಕ ರಾಜ್ಯದಲ್ಲಿ.

ಒಬ್ಬ ಮಾನ್ಯ ಸದಸ್ಯರು : ಹಿಂದಿನ ಸರ್ಕಾರ ಎಂದರೆ ತಮ್ಮ ಸರ್ಕಾರವೂ ಇತ್ತು.

ಶ್ರೀ ಹೆಚ್.ಡಿ. ಬಸವರಾಜ್ : ಅಧ್ಯಕ್ಷರೇ, ತಾವು ಅನುಸೂಚಿತ ಜಾತಿ ಮತ್ತು ಪಂಗಡಕ್ಕೆ ಆ ತರಹ ಜನ ಗಣತಿ ಪ್ರಕಾರ ಪ್ರಾತಿನಿಧ್ಯ ಸರ್ಕಾರದವರು ಹಂಚಿ ಕೊಡಬೇಕೆಂದು ಹೇಳಿದಿರಿ. ಇದರಲ್ಲಿ ನನ್ನದು ಎರಡು ಮಾತಿಲ್ಲ, ಆ ಮಾತಿಗೆ ನಾನು ತತ್ವಶಃ ಸಂಪೂರ್ಣವಾಗಿ ಬದ್ಧನಾಗಿದ್ದೇನೆ. ಒಪ್ಪುತ್ತೇನೆ. ಆದರೆ ನಾನು ಹೇಳಿದ್ದುದು 19 ಲಕ್ಷಕ್ಕೂ ಮೇಲ್ಪಟ್ಟು ಇರುವಾಗಲೂ ಕೂಡ ಕೇಂದ್ರ ಸರ್ಕಾರಕ್ಕೆ ಈ ಸಭೆಯ ಮೂಲಕ ಒತ್ತಾಯ ತರಲಿಲ್ಲ ಎಂದರೆ ಖಂಡಿತವಾಗಿ ಅವರು ನಮಗೆ ಪ್ರಾತಿನಿಧ್ಯಕೊಡುವುದಿಲ್ಲ, ಆದರಿಂದ ಈ ಸಮಾಜ ಕಲ್ಯಾಣ ಇಲಾಖೆ ನಮ್ಮ ಮನೆ ಬಾಗಿಲಲ್ಲಿ ಇರುವುದರಿಂದ ಈ ಇಲಾಖೆಯನ್ನು ತಮ್ಮ ಮೂಲಕ ನಾನು ಕೇಳಿಕೊಳ್ಳುತ್ತಾ ಇರುವುದು ಎಂದರೆ ಈ ಸಮುದಾಯದ ಒಂದು ಕೂಗನ್ನು ಅವರು ಸರ್ಕಾರದ ಮುಂದಿಟ್ಟು ಆ ಕ್ಯಾಬಿನೆಟ್ ಡಿಸಿಷನ್ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿದರೆ ಅವರು ಪಾಲಿಸುತ್ತಾರೋ ಇಲ್ಲವೋ, ಆದರೆ ನಾವು ಮಾಡುವ ಪ್ರಯತ್ನದಲ್ಲಿ ಪ್ರಾಮಾಣಿಕತೆ ಇದ್ದರೆ ಖಂಡಿತ ಈ ಜನಾಂಗಕ್ಕೆ ಪ್ರಾತಿನಿಧ್ಯ ಸಿಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಅಧ್ಯಕ್ಷರೆ, ನೀವು ಎಲ್ಲಾದರೂ ಗಿರಿಜನ ಸೀಟ್ ಕೊಟ್ಟರೆ ನಮಗೆ ಕೊಡಗಿಗೆ ಅನ್ಯಾಯವಾಗಿ ಬಿಡುತ್ತದೆ. ಅವರು ಎಮ್.ಪಿ.ಯಾಗಿ ಹೋಗಿಬಿಡಬಹುದು ಅಂತ.

ಶ್ರೀ ಹೆಚ್.ಡಿ. ಬಸವರಾಜ್ : ಅಧ್ಯಕ್ಷರೆ, ಯಾರ ಸೀಟನ್ನು ಯಾರೂ ಕಿತ್ತುಕೊಳ್ಳುವುದಕ್ಕೆ ನಾನು ಇಚ್ಛೆ ಪಡುವುದಿಲ್ಲ. ಈ ಸಭೆಯಲ್ಲಿ ಕೆಲವರಿಗೆ ಗೊತ್ತಿದೆಯೋ

ಇಲ್ಲ, ಗೊತ್ತಿಲ್ಲ, ಆರು ಜನ ಪರಿಶಿಷ್ಟ ಜಾತಿಯವರು, ನಾಲ್ಕು ಜನ ಜನರಲ್ ಸೀಟ್‌ನಿಂದ ಗೆದ್ದು ಬಂದಿದ್ದಾರೆ. ಅಥವಾ ತಮಗೆ ಗೊತ್ತಿದೆಯೋ ಇಲ್ಲವೋ ಈ ಸಂದರ್ಭದಲ್ಲಿ ನಾನು ಈ ಸಭೆಗೆ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಏಕೆಂದರೆ ನಮ್ಮಲ್ಲಿ ಪ್ರತಿಭೆ ಇತ್ತು ಎಂದರೆ ಯಾರ ಕೈಯಲ್ಲೂ ಕೂಡ ತಡೆಯುವುದಕ್ಕೆ ಸಾಧ್ಯವಿಲ್ಲ, ಪ್ರತಿಭಾವಂತ ಏಕಲವ್ಯನ ಹೆಬ್ಬೆಟ್ಟನ್ನು ಹೇಗೆ ಕಿತ್ತುಕೊಂಡರು, ಅಂತಹ ಸಾವಿರಾರು ಜನ, ಲಕ್ಷಾಂತರ ಜನ ಏಕಲವ್ಯಗಳು ಇದ್ದಾರೆ. ನಾವು ಅದನ್ನು ಮಾಡಿ ತೋರಿಸುತ್ತೇವೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. 1978ರಲ್ಲಿ ಕೆಲವಾರು ಸಿನಾನಿಮಸ್ ನೇಮ್ಸ್ ಅವರು ಏನು ಪಾಪ ಮಾಡಿದ್ದರು ಎಂಬುದು ಗೊತ್ತಾಗಲಿಲ್ಲ, ಸುಮಾರು ಆ ಸಮುದಾಯದವರಿಗೆ ಶಿಫಾರಸ್ಸು ಮಾಡಿದ್ದನ್ನು ಕಾರ್ಯಗತ ಮಾಡಿದರೆ 18 ವರ್ಷಗಳಿಂದ ಸೌಲಭ್ಯ ಪಡೆದು ಒಂದು ರೀತಿಯಲ್ಲಿ ಬಡತನ ರೇಖೆಯಿಂದ ಮೇಲಕ್ಕೆ ಬರಬಹುದಾಗಿತ್ತು. ಆದರೆ ಯಾರೊಬ್ಬರೂ ಕಾಳಜಿ ವಹಿಸಲಿಲ್ಲ ಮತ್ತು ಇದರ ಬಗ್ಗೆ ಚಕಾರವೂ ಎತ್ತಲಿಲ. ಸಿನಾನಿಮಸ್‌ನೇಮ್ ತಾನೇ ನೀವು ಒಂದು ರೆಪ್ರೆಸೆಂಟೇಷನ್ ಕೊಡಿ. ನಾವು ಅದನ್ನು ಕೇಂದ್ರಕ್ಕೆ ಕಳುಹಿಸುತ್ತೇವೆ, ಅವರು ಮಾಡುತ್ತಾರೆ. ಈ ತರಹ 18 ವರ್ಷಗಳಿಂದ ಇವರನ್ನು ವಂಚನೆ ಮಾಡಿದ್ದಾರೆ. ಇವತ್ತೂ ಕೂಡ ಈ ಸದನದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಇಲ್ಲ, ಸಂಬಂಧಪಟ್ಟ ಮಂತ್ರಿಗಳನ್ನೂ ತಮ್ಮ ಮೂಲಕ ನಾನು ಕೇಳಿಕೊಳ್ಳುವುದು ಏನೆಂದರೆ ಯಾವ್ಯಾವುದು ಅಂದರೆ ಈಗಾಗಲೇ ಶಿಫಾರಸ್ಸು ಮಾಡಿರುವಂಥದ್ದು ಮಾತ್ರ ದಯವಿಟ್ಟು ಇದಕ್ಕೆ ಒತ್ತು ಕೊಟ್ಟು ಹೇಳುತ್ತಿದ್ದೇನೆ.

ಈಗಾಗಲೇ ಶಿಫಾರಸ್ಸು ಮಾಡಿರುವಂಥ ಸಿನಾನಿಮ್ಸು ಎಂದರೆ ಪರ್ಯಾಯ ಜಾತಗಳನ್ನು ರೆಕಮೆಂಡೇಷನ್ ಕಳುಹಿಸಿರುವುದನ್ನು ಆ ರೆಕಮಂಡೇಷನ್ ತರಿಸಿಕೊಂಡು ಅವರನ್ನು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಪಟ್ಟಿಗೆ ಸೇರಿಸಿ ಈಗಲಾದರೂ ಅವರು ಬಡತನ ರೇಖೆಯಿಂದ ಮೇಲೆ ಬರುವಂತಹ ಪುಣ್ಯ ಕಾರ್ಯವನ್ನು ನಿಮ್ಮ ಸರ್ಕಾರದವರು ಮಾಡಬೇಕು. ಅದು ಪುಣ್ಯ ನಿಮಗೆ ಹೋಗಲಿ, ಬೇಡ ಎಂದು ಹೇಳಲಿಲ್ಲ, ಇದುವರೆಗೆ ಬೇರೆ ಸರ್ಕಾರದವರು ನಿಲ್ಲಿಸುತ್ತಾ ಬಂದರು, ಆದರೆ ಆ ಪುಣ್ಯವನ್ನು ನೀವು ಆದರೂ ಪಡೆಯಿರಿ ಎಂದು ಈ ಸಂದರ್ಭದಲ್ಲಿ ಸಭಾಧ್ಯಕ್ಷರ ಮೂಲಕ ನಾನು ಕೇಳಿಕೊಳ್ಳುತ್ತೇನೆ. ಮತ್ತು ಗಿರಿ ಜನರಲ್ಲೂ ಕೂಡ ಒಡೆದು ಆಳುವಂತಹ ನೀತಿಯನ್ನು ತಂದಿದ್ದಾರೆ. ಅದು ಏಕೆ ಮಾಡಿದರು ಎಂಬುದು ನನಗೆ ಅರ್ಥವಾಗುತ್ತಿಲ್ಲ, 49 ಜಾತಿ ಇದೆ, 49 ಜಾತಿಯಲ್ಲಿ ಒಂದೇ ಒಂದು ಜಾತಿಗೆ ಮಾತ್ರ ವಿಶಿಷ್ಟ ಸೌಲಭ್ಯ ಕೊಟ್ಟಿದ್ದೀರಿ, ಅವರು ಏನು ನಿಮಗೆ ಯಾವ ರೀತಿ ತಮ್ಮಲ್ಲಿ ಬಂದು ವಶೀಲಿ ಬಾಜಿ ಮಾಡಿದರು ಎಂದು ನನಗೆ ಅರ್ಥವಾಗುತ್ತಿಲ್ಲ, ಜೇನು ಕುರುಬರು ಮಾತ್ರ ಆ ಮಟ್ಟದಲ್ಲಿ ತಮ್ಮಲ್ಲಿ ಹೀಗೆ ಸವಲತ್ತನ್ನು ಪಡೆಯುವುದಕ್ಕೆ ಯಾವ ರೀತಿಯ ಪ್ರಭಾವವನ್ನು ಬೀರಿದರು ಎಂಬುದು ನನಗೆ ಗೊತ್ತಿಲ್ಲ, ಏಕೆಂದರೆ ಇನ್ನು 48 ಜನ ಅಮಾಯಕರು ಇರಬಹುದು ಅವರೊಬ್ಬರು ಬುದ್ಧಿವಂತರು ಇರಬಹುದು. 49 ಜಾತಿಗಳ ಪೈಕಿ ಎಂದರೆ ಪ್ರತಿನಿದಿಯಾಗಿದ್ದ ಕಡೆಯಲ್ಲಿ ಅವನು ಈ 48 ಜಾತಿಗಳನ್ನು ಪ್ರತಿನಿಧಿಸಬೇಕಾಗುತ್ತದೆ. ಈ ತಾರತಮ್ಯವನ್ನು ಕೇಂದ್ರ ಸರ್ಕಾರದವರು ತಪ್ಪಿಸಿ ಕೊಡುತ್ತಾರೆ ಎಂದು ಕೈ ತೊಳೆದುಕೊಳ್ಳ ಬೇಡಿ. ದಯಮಾಡಿ ಕೇಂದ್ರ ಸರ್ಕಾರಕ್ಕೆ ಬರೆಯಿರಿ 49 ಜಾತಿಗೆ ಈಗ ನಾವು ಏನು ಕೊಡುತ್ತಿದ್ದೇವೆ, ಆ ಸೌಲಭ್ಯ ಸಿಗಬೇಕು. ಆ ಸೌಲಭ್ಯ ಸಿಕ್ಕಾಗ ಮಾತ್ರ ಈ ಅರಣ್ಯ ವಾಸಿಗಳು ನಗರವಾಸಿಗಳು ಆಗುತ್ತಾರೆ. ಅಥವಾ ನಾಗರೀಕ ಜೀವನವನ್ನು ಮಾಡುವಂತಹ ವ್ಯಕ್ತಿಗಳ ಆಗುತ್ತಾರೆ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ಮಾತನಾಡುತ್ತಾ 49 ಪರಿಶಿಷ್ಟ ಪಂಗಡದ ಜೊತೆಯಲ್ಲಿ ಒಂದೇ ಒಂದು ಪಂಗಡದ ಜಾತಿಗೆ ಮಾತ್ರ

ನೀವು ಅವಕಾಶ ಮಾಡಿಕೊಟ್ಟಿದ್ದೀರಿ. ಸರ್ಕಾರ ಎಲ್ಲಿ ನೀವು ಯಾವ ಪ್ರಭಾವಕ್ಕೆ ಒಳಗಾಗಿದ್ದೀರಿ ನನಗೆ ಗೊತ್ತಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಆದರೆ ದಯವಿಟ್ಟು ನಾನು ಸುಮ್ಮನೆ ಕುಳಿತರೆ ನಾನು ಪ್ರಭಾವಕ್ಕೆ ಒಳಗಾಗಿದ್ದೇನೆ ಎನ್ನುವ ಅರ್ಥ ಬರುವ ರೀತಿಯಲ್ಲಿ ಅವರು ಹೇಳಿದ್ದಾರೆ. ಇದು ನಾನು ಮಾಡಿದ್ದುದು ಅಲ್ಲ, ನಾನು ಮಂತ್ರಿ ಆದಾಗ ಇದು ಆಗಿದ್ದುದು ಅಲ್ಲ. ಹಿಂದೆ ಯಾರು ಇದ್ದಾಗ ಮಾಡಿದರೋ ಅದು ಗೊತ್ತಿಲ್ಲ.ಇದನ್ನು ಮಾನ್ಯ ಸದಸ್ಯರ ಗಮನಕ್ಕೆ ತರುವುದುಕ್ಕೆ ಬಯಸುತ್ತೇನೆ.

ಶ್ರೀ ಹೆಚ್.ಡಿ. ಬಸವರಾಜ್ : ನನಗೆ ಸಂಪೂರ್ಣವಾಗಿ ಗೊತ್ತಿದೆ, ಇದನ್ನು ಮಾನ್ಯ ಜಿಗಜಿಣಗಿ ಸಾಹೇಬರು ಮಾಡಿದ್ದು ಅಲ್ಲ, ಯಾರ ಕಾಲದಲ್ಲೋ ಆಗಿದ್ದು ಯಾರೋ ಯಾವುದೋ ಸಂದರ್ಭದಲ್ಲಿ ಪ್ರಭಾವ ಬೀರಿದಾಗ ಆಗಿದೆ. ಆದರಿಂದ ನಾನು ಅವರಿಗೆ ಕೇಳಿಕೊಳ್ಳುತ್ತಾ ಇರುವುದು ನೀವು ಮಾಡಿದಿರಿ ಅದಕ್ಕೋಸ್ಕರ ನೀವೇ ಸರಿಪಡಿಸಿ ಎಂದು ಹೇಳುವುದು ಅಲ್ಲ, ಯಾರೋ ಮಾಡಿದ್ದ ಪಾಪ ನಿಮ್ಮ ಕಾಲದಲ್ಲಿ ಸರಿಪಡಿಸಿ ಎಂದು ಕೇಳಿಕೊಳ್ಳುತ್ತಿದ್ದೇನೆ. ಅದಕ್ಕೆ ನಾನು ಈ ಸಂದರ್ಭದಲ್ಲಿ ಸದನದಲ್ಲಿ ನಾನು ಮಾಡಲಿಲ್ಲ ಎಂದು ಹೇಳಿಕೊಳ್ಳುವುದು ಬೇಕಾಗಿಲ್ಲ. ಏಕೆಂದರೆ ಕುಂಬಳ ಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿದ ಹಾಗೆ ಎಂದರೆ ಏನು ತಿಳುದುಕೊಳ್ಳುತ್ತಾರೋ, ಅವರು ನಿಂತುಕೊಂಡ ತಕ್ಷಣ ಅವರೇ ಮಾಡಿದ್ದಾರೆ ಏನೋ ಎಂದು. ಮಾನ್ಯ ವಾಟಾಳ್ ನಾಗರಾಜ್‌ರವರು ಈ ಕಡೆ ನೋಡುತ್ತಾ ಇರುವುದನ್ನು ನೋಡಿದರೆ ಹಾಗೆ ಅನಿಸುತ್ತದೆ. ಅವರು ಮಾಡಿಲ್ಲ ಅಷ್ಟನ್ನು ನಾನು ಹೇಳುತ್ತಿದ್ದೇ. ಅವರು ಮಾಡಲಿಲ್ಲ, ಆದ್ದರಿಂದ ಈ ದೃಷ್ಟಿಯಲ್ಲಿ ನಾನು ಅವರಿಗೆ ಹೇಳಲಿಲ್ಲ,

ಅಧ್ಯಕ್ಷರು : ಕೈ ಹಾಗೆ ತೋರಿಸುತ್ತಾ ಹೋಗ ಬೇಡಿ. ಖರ್ಗೆಯವರು ಹಿಂದೆ ನೋಡುವುದಕ್ಕೆ ಆಗುತ್ತದೆಯೇ? ಖರ್ಗೆಯವರ ಕಡೆಗೆ ತೋರಿಸಿದರೆ ನೀವು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಮ್ಮ ಕಡೆ ತೋರಿಸಿದರೂ ಏನೂ ಆಗುವುದಿಲ್ಲ ಏಕೆಂದರೆ ನಾವು ಅವರಿಗೆ ಉತ್ತರ ಕೊಡುವುದಕ್ಕೂ ತಯಾರಿಲ್ಲ,

ಶ್ರೀ ಹೆಚ್.ಡಿ. ಬಸವರಾಜ್ : ಖರ್ಗೆ ಸಾಹೇಬರು ಬಹಳಷ್ಟು ಅದರ ವಿಚಾರ ಮಾತನಾಡುವುದಕ್ಕೆ ಹೋಗುವುದಿಲ್ಲ, ಏಕೆಂದರೆ ಅವರ ಸರ್ಕಾರ 48 ವರ್ಷ ಬಹಳಷ್ಟು ವರ್ಷ ಆಡಳಿತ ಮಾಡಿದೆ. ಅವರು ಅದರ ಪ್ರತಿನಿಧಿಗಳು ಆಗಿದ್ದರು. ಅವರೇ ಇದರ ಬಗ್ಗೆ ಚರ್ಚೆ ಮಾಡಿದರೋ ಇಲ್ಲವೋ ಅದರ ವಿಶ್ಲೇಷಣೆ ಬೇಡ.

ಆದರೆ ಆಗಿರುವ ಅನ್ಯಾಯವನ್ನು ಈ ಸಭೆಯಲ್ಲಿ ನಾವು ಮಂಡನೆ ಮಾಡೋಣ. ಏಕೆಂದರೆ ಒಬ್ಬೊಬ್ಬರಿಗೆ ಆ ಹಸಿವಿನ ತಾಪ ಹೇಗೆ ಎನ್ನುವುದು ಗೊತ್ತಾಗುವುದಿಲ್ಲ, ಒಬ್ಬರು ಅರೆ ಹೊಟ್ಟೆ ಉಂಡಿರುತ್ತಾರೆ, ಒಬ್ಬರು ಒಂದು ಚೂರು ಊಟವನ್ನೇ ಮಾಡದೇ ಇರಬಹುದು ಆ ರೀತಿ ಹಸಿವಿನ ಬಗ್ಗೆ ಎಲ್ಲರಿಗೂ ಗೊತ್ತಿರುತ್ತದೆ. ಆದರೆ ಆ ತಾಪದ ಬಗ್ಗೆ ಕೆಲವರಿಗೆ ಮಾತ್ರ ಕೆಲವು ಅನುಭವದ ಮೂಲಕ ಮಾತ್ರ ತಿಳಿದಿರುವುದರಿಂದ ಅವರ ಹತ್ತಿರ ವಿಶ್ಲೇಷಣೆ ಮಾಡುವುದು ಬೇಡ. ಇನ್ನು ಮುಂದೆ ಹೋಗಬೇಕು ಎಂದರೆ ಈ ಜೇನು ಕುರುಬರಿಗೆ ಸಿಗುತ್ತಿರುವಂತಹ ಸೌಲಭ್ಯ ಮಿಕ್ಕವರಿಗೂ ಸಿಗಲಿ, ಆ ಒಂದು ವ್ಯವಸ್ಥೆಯನ್ನು ಮಾಡಬೇಕು ಎಂದು ಈ ಸಂದರ್ಭದಲ್ಲಿ ನಾನು ಸಭಾಧ್ಯಕ್ಷರ ಮೂಲಕ ಸಂಬಂಧಪಟ್ಟ ಅಧಿಕಾರಿಗಳನ್ನು ನಾನು ಕೇಳಿಕೊಳ್ಳುತ್ತಿದ್ದೇನೆ. ಸ್ವಾಮಿ ತಾವು ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಹೆಸರು ಹೇಳಿಕೊಂಡು ಬೇಕಾದಷ್ಟು ಮನೆಗಳನ್ನು ಕಟ್ಟಿಸುತ್ತಿದ್ದೀರಿ. ಕಟ್ಟಿಸಿ, ಬೇಡ ಎಂದು ಹೇಳುವುದಿಲ್ಲ, ಹರಿಜನರು ನಮ್ಮ ಅಣ್ಣಂದಿರು ಇದ್ದ ಹಾಗೆ. ಆದರೆ ಗಿರಿಜನರಿಗೆ

ಎಷ್ಟು ಹಣ ಈ ವರ್ಷ ಮೀಸಲಿಟ್ಟಿದ್ದೀರಿ. ಮನೆ ಕಟ್ಟಿಸಿಕೊಡಬೇಕು ಎಂದು ಮೀಸಲಿಟ್ಟಿದ್ದೀರಿ. ಅದರ ಬಗ್ಗೆ ಕಾಳಜಿ ಇಲ್ಲ, ಇವತ್ತು ನನ್ನ ಪ್ರದೇಶದಲ್ಲಿ ಯಾವರೀತಿ ಕಷ್ಟಪಡುತ್ತಿದ್ದಾರೆ ಎಂದರೆ ಗಿರಿಜನರನ್ನು ಒಕ್ಕಲು ಎಬ್ಬಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ಹೀಗೆ ಡಿವೈಡ್ ರೂಲ್ ಪಾಲಿಸಿಯಾಗಬಾರದು. ತಾವು ತಿಳುದುಕೊಳ್ಳಬೇಕು. ಅಂಬೇಡ್ಕರ್ ಮನೆಗಳನ್ನು ಯಾವುದರಲ್ಲಿ ಕಟ್ಟಿದ್ದು. ಸ್ಪೆಷಲ್ ಕಾಂಪೋನೆಂಟ್ ಪ್ಲಾನ್‌ನಲ್ಲಿ ಸ್ಪೆಷಲ್ ಕಾಂಪೋನೆಂಟ್ ಪ್ಲಾನ್‌ನ ಫಂಡ್ ಏನಿದೆ ಅದನ್ನು ಟ್ರೈಬ್‌ಗೆ ಡೈವರ್ಟ್ ಮಾಡುವುದಕ್ಕೆ ಬರುವುದಿಲ್ಲ. ಅಥವಾ ಟ್ರೈಬಲ್ ಡೆವಲಪ್‌ಮೆಂಟ್ ಫಂಡ್‌ನ್ನು ಎಸ್‌ಸಿಗೆ ಡೈವರ್ಟ್ ಮಾಡುವುದಕ್ಕೆ ಬರುವುದಿಲ್ಲ, ಅದಕ್ಕಾಗಿ ಎಸ್‌ಸಿಪಿ ಫಂಡ್‌ನಲ್ಲಿ ಅಂಬೇಡ್ಕರ್ ಮನೆಗಳನ್ನು ಕಟ್ಟಿಸತಕ್ಕಂಥ ಯೋಜನೆ ತೆಗೆದುಕೊಂಡಿದ್ದಾರೆ. ಮತ್ತು ಟ್ರೈಬಲ್ ಡೆವಲಪ್‌ಮೆಂಟ್ ಫಂಡ್ ಅದು ಬೇರೆ. ಟ್ರೈಬಲ್ಸ್‌ನಲ್ಲಿ ಟಚಬಿಲಿಟಿ ಅನ್‌ಟಚಬಿಲಿಟಿ ಇರಬಹುದು. ಬೇರೆಯವರು ಇರಬಹುದು. ಅವರ ಫಂಡ್ ಸಪರೇಟ್ ಇದೆ. ಅದಕ್ಕಾಗಿ ಆ ರೀತಿ ಹೇಳಬೇಡಿ, ಅವರು ಏನು ಪಾಪ ಮಾಡಿದ್ದರು, ಇವರು ಏನು ಮಾಡಿದ್ದರು ಎಂದು. ಇದರಿಂದ ಏನಾಗುತ್ತದೆ ಎಂದರೆ ಏನೋ ಹಿಂದಿನ ಸರ್ಕಾರ ಶೆಡ್ಯೂಲ್ ಕ್ಯಾಸ್ಟ್‌ಗೆ ಒಂದು ಮಾಡಿತು, ಶೆಡ್ಯೂಲ್ ಟ್ರೈಬ್‌ಗೆ ಒಂದು ಮಾಡಿತು ಎನ್ನುವಂತಹ ಭಾವನೆ ಬರುತ್ತದೆ. ಎಸ್‌ಸಿಪಿ ಫಂಡ್ ಅನ್ನು ಪೂಲ್ ಮಾಡಿ, ಇದು ವೇಸ್ಟ್ ಆಗುವುದು ಬೇಡ, ಎಲ್ಲರಿಗೂ ಇಲ್ಲಿ ಮನೆ ಕಟ್ಟಿಸಿಕೊಡತಕ್ಕಂಥ ವ್ಯವಸ್ಥೆಯಾದರೂ ಆಗಲಿ ಎಂದು ಹೇಳಿ ಪೂಲ್ ಮಾಡಿದಂತಹ ಸಂದರ್ಭದಲ್ಲಿ ಈ ಸ್ಕೀಮ್ ಅನ್ನು ತಂದಿತು. ಇದಕ್ಕೆ ಸ್ಪೆಷಲ್ ಫಂಡ್ ಯಾರೂ ಕೊಟ್ಟಿಲ್ಲ, ನಾವು ಡಿವೈಡ್ ಮಾಡುವುದಕ್ಕೆ ಹೋಗಬಾರದು ಎಂದು ಕೇಳಿಕೊಳ್ಳುತ್ತೇನೆ. ಅದಕ್ಕಾಗಿ ತಾವು ಇದರ ಬಗ್ಗೆ ತಿಳಿದುಕೊಳುವುದು ಉತ್ತಮ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ಬೆನಿಫಿಷಿಯರಿಸ್‌ಗೆ ಏನು ಬರುತ್ತದೆ ಎನ್ನುವುದು ಗೊತ್ತಾಗುತ್ತಿಲ್ಲ, That has to be corrected ನನ್ನ ಕ್ಷೇತ್ರದಲ್ಲಿ ಸಾಕಷ್ಟು ಟ್ರೈಬಲ್ಸ್ ಇದ್ದಾರೆ. ಅವರಿಗೆ ಏನೇನು ಬೆನಿಫಿಟ್ ಇದೆ ಎನ್ನುವುದನ್ನು ಸರ್ಕಾರ ಸರಿಯಾಗಿ ಮುಟ್ಟಿಸುವಂತಹ ಕೆಲಸವನ್ನು ಮಾಡುವಂತಹ ಅವಶ್ಯಕತೆ ಜಾಸ್ತಿ ಇದೆ.

ಶ್ರೀ ಹೆಚ್.ಡಿ. ಬಸವರಾಜ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಖರ್ಗೆಯವರು ಹೇಳಿದರು ಸರಿಯಾಗಿ ತಿಳಿದುಕೊಳ್ಳಲಿ ಎಂದು, ನಾನು ಬಹಳ ಸಂತೋಷ ಪಡುತ್ತೇನೆ. ಏಕೆಂದರೆ ಈ ಸಭೆಗೆ ಅತ್ಯಂತ ಕಿರಿಯ ವ್ಯಕ್ತಿ ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ ರಾಜಕೀಯಕ್ಕೆ ನಾನು ತೀರಾ ಹೊಸಬ. ಯಾವುದೋ ಒಂದು ಸಂದರ್ಭದಲ್ಲಿ ಅಚಾನಕ್ ಆಗಿ ಬಂದಂತಹ ವ್ಯಕ್ತಿ ಎಂದು ಹೇಳಿಕೊಂಡರೂ ಕೂಡ ಈ ಸಂದರ್ಭದಲ್ಲಿ ತಪ್ಪಾಗಲಾರದು. ಈ ರೀತಿ ಇರುವಾಗ ನನ್ನಲ್ಲಿ ಅಪ್ರಬುದ್ಧತ್ವವಾಗಿತ್ತು ಎಂದರೆ ನಾನು ಅದಕ್ಕೆ ವಿಷಾದಿಸುತ್ತೇನೆ. ಆದರೆ ಹೇಳುತ್ತಿರುವುದು ಅದರಲ್ಲಿ ಅಪ್ರಬುದ್ಧತ್ವ ಇಲ್ಲ ಎಂದು ನಾನು ಹೇಳುತ್ತೇನೆ. ಹೇಗೆ ಎಂದು ನೀವು ಕೇಳಬಹುದು. ನನಗೂ ಗೊತ್ತಿದೆ. ವಿಶೇಷ ಘಟಕ ಯೋಜನೆ ಅವರಿಗೂ ಇದೆ, ಇವರಿಗೂ ಇದೆ. ಆದರೆ ವಿಶೇಷ ಘಟಕ ಯೋಜನೆಯನ್ನು ಇಂಪ್ಲಿಮೆಂಟ್ ಮಾಡುವಂತಹ ಅಧಿಕಾರ ವೃಂದ ಏನು ಮಾಡಿದ್ದಾರೆ ಅಂಬೇಡ್ಕರ್ ಹೆಸರು ಹೇಳಿ ಅವರಿಗೆ ಮಾತ್ರ ಮಾಡಿದರು, ಇವರಿಗೆ ಏಕೆ ಮಾಡಲಿಲ್ಲ, ಅದು ನನ್ನ ಪ್ರಶ್ನೆ. ಇವರೊಬ್ಬರಿಗೆ ಮಾಡಿದರು. ನಮ್ಮ ಅಣ್ಣಂದಿರರಿಗೆ ಮಾಡಿದರು, ನಮ್ಮ ತಮ್ಮಂದಿರರಿಗೆ ಏಕೆ ಬಿಟ್ಟು ಬಿಟ್ಟರು. ತಮ್ಮಂದಿರು ಕೇಳುವುದಿಲ್ಲ ಬಿಡು ಎನ್ನುವಂತಹ ಭಾವನೆ ಅವರಲ್ಲಿ ಬರಬಾರದಾಗಿತ್ತು. ಆ ವಿಶೇಷ ಘಟಕ ಯೋಜನೆಯಡಿಯಲ್ಲಿ ಇವರಿಗೆ ಟ್ರೈಬಲ್

ಸಬ್ ಪ್ಲಾನ್ ಇದೆಯಲ್ಲಾ ಅದರಲ್ಲಿ ಮಾಡಬಾರದಾಗಿತ್ತು. ಅದನ್ನು ಮಾಡಿ ಎಂದು ಮಾನ್ಯ ಸಭಾಧ್ಯಕ್ಷರ ಮೂಲಕ ನಾನು ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಅದು ನನ್ನ ವಿನಂತಿ ಅಷ್ಟೇ ಏಕೆಂದರೆ ಮಾನ್ಯ ಖರ್ಗೆಯವರು ಬಹಳಷ್ಟು ವರ್ಷಗಳಿಂದ ಜನರಿಗೋಸ್ಕರ, ದಲಿತರ ಉದ್ಧಾರಕ್ಕೋಸ್ಕರ ಕೆಲಸ ಮಾಡಿದ್ದಾರೆ. ಅದರಲ್ಲಿ ಎರಡು ಮಾತಿಲ್ಲ, ಆದರೆ ನನಗೆ ಅನಿಸುತ್ತದೆ. ಈ ಜನಾಂಗವನ್ನು ಬಿಟ್ಟುಬಿಟ್ಟಿದ್ದೀರಿ ಏನೋ ಎಂದು. ಅದುದರಿಂದ ಈ ರೀತಿ ಆಗುತ್ತಿದೆ. ಇನ್ನು ಮುಂದಕ್ಕೆ ಆ ತರಹ ಆಗಬಾರದು ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಇನ್ನು ಬೆಂಕಿ ದುರಂತ ಅಥವಾ ಇನ್ನಾವುದೇ ದುರಂತವಾಯಿತು ಎಂದರೆ ಬರೀ ಪರಿಶಿಷ್ಟ ಜಾತಿಯವರಿಗೆ ಮಾತ್ರ ದುಡ್ಡು ಕೊಡುತ್ತಾರೆ. ಏಕೆಂದರೆ ಅವರದು ಮಾತ್ರ ಮನೆ. ಪರಿಶಿಷ್ಟ ಪಂಗಡದವರು ಮನೆ ಅಲ್ಲ, ಈ ಅನ್ಯಾಯ ಏಕೆ ಸ್ವಾಮಿ? ಇದಕ್ಕೆ ತಾವು ಏನು ಹೇಳುತ್ತೀರಿ? ಮಾನ್ಯ ಖರ್ಗೆಯವರನ್ನು ನಾನು ಈ ರೀತಿ ಕೇಳಬಾರದು. ಮಾನ್ಯ ಸಭಾಧ್ಯಕ್ಷರ ಮೂಲಕ ನಾನು ಇದರ ಬಗ್ಗೆ ಒತ್ತುಕೊಟ್ಟು ಕೇಳುತ್ತಿದ್ದೇನೆ. ಇದಕ್ಕೆ ಏನು ಹೇಳುತ್ತಾರೆ ಅವರು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನ್ಯಾಚುರಲ್ ಕೆಲಮಿಟೀಸ್ ಫಂಡ್‌ನಲ್ಲಿ ಯಾರ ಮನೆ ಸುಟ್ಟರೂ ಕೊಡುತ್ತಾರೆ. ಹರಿಜನರ ಮನೆ ಸುಡಲಿ, ಗಿರಿಜನರ ಮನೆ ಸುಡಲಿ ಅಥವಾ ಜನರಲ್‌ರವರ ಮನೆ ಸುಡಲಿ ಅಥವಾ ಬೇರೆಯವರದೂ ಸುಟ್ಟರೂ ಕೂಡ ನ್ಯಾಚುರಲ್ ಕೆಲಮಿಟೀಸ್ ಫಂಡ್‌ನಲ್ಲಿ ಕೊಡಬೇಕು ಎಂದು ಇದೆ. ಕೊಡುತ್ತಾರೆ ಆ ಅದಕ್ಕೆ ವ್ಯತ್ಯಾಸ ಮಾಡು ಎಂದು ನಾನು ಹೇಳಿದ್ದೇನೋ?

ಅಧ್ಯಕ್ಷರು : ಸ್ವಲ್ಪ ದಿನ ಎಸ್‌ಸಿ, ಎಸ್‌ಟಿ ಇವರ್‍ಯಾರಿಗೂ ಕೆಲಮಿಟೀಸ್ ಬರುವುದು ಬೇಡ ಬೇರೆಯವರಿಗೆ ಬರಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕೆಲವು ಯೋಜನೆಗಳು ಈ ರೀತಿ ಇರುತ್ತದೆ. ಮಿಕ್ಸ್‌ಅಪ್ ಮಾಡುವುದಕ್ಕೆ ಬರುವುದಿಲ್ಲ, ಫಂಡ್ಸ್ ಅನ್ನು ಡೈವರ್ಟ್ ಮಾಡುವುದಕ್ಕೆ ಬಿಡುವುದಿಲ್ಲ. ಆ ಸಮಯದಲ್ಲಿ ಏನು ಮಾಡುತ್ತಾರೆ ಎಂದರೆ ಈ ಫಂಡ್ಸ್ ಅನ್ನು ಹೇಗೆ ಯೂಸ್ ಮಾಡಬೇಕು ಎಂದು ಹೇಳಿ ಡಾ|| ಅಂಬೇಡ್ಕರ್ ಹೆಸರಿನಲ್ಲಿ ಮನೆ ಕಟ್ಟಿರಿ ಎಂದು ಹೇಳಿ ಎಸ್‌ಸಿಪಿ ಮಾಡಿರಬೇಕು. ಟ್ರೈಬಲ್ ಸಬ್ ಪ್ಲಾನ್‌ನಲ್ಲಿ ಮನೆ ಕಟ್ಟಿಸತಕ್ಕಂಥ ಯೋಜನೆ ಇದೆ. ಇಲ್ಲಾ ಎಂದು ಅಲ್ಲ, ಬೇರೆ ಯೋಜನೆಗಳ ತೆಗೆದುಕೊಳ್ಳಬೇಕು ಮತ್ತೆ ಮನೆಗಳನ್ನು ಕಟ್ಟಿಸಬೇಕು ಎಂದು ಇದೆ. ಹೀಗಾಗಿ ಯಾವ ರೀತಿಯಾಗಿ ಸರ್ಕಾರದವರು ಕಾರ್ಯಕ್ರಮ ಹಾಕಿಕೊಳ್ಳುತ್ತಾರೆ ಆ ರೀತಿಯಾಗಿ ಹೋಗುತ್ತದೆ. ಈಗ ಅವರು ಮನೆ ಕಟ್ಟಿಸಿಕೊಡಬೇಕು ಎಂದು ಕಾರ್ಯಕ್ರಮ ಹಾಕಿಕೊಟ್ಟರೆ ಅದೇ ರೀತಿಯಾಗಿ ಹೋಗುತ್ತದೆ.

ಶ್ರೀ ಹೆಚ್.ಡಿ. ಬಸವರಾಜ್ : ಮಾನ್ಯ ಖರ್ಗೆಯವರಿಗೆ ನಾನು ಹೇಳಿದ್ದುದು ಸಮಾನ್ಯ ಸಭಾಧ್ಯಕ್ಷರೇ ಅವರು ಇದಕ್ಕೆ ಉತ್ತರ ಕೊಡಲಿ ಎಂದಲ್ಲ, ಸಮಾಜ ಕಲ್ಯಾಣ ಇಲಾಖೆ ವಾರ್ಷಿಕ ವರದಿ 1994-95ರ ವರದಿಯಲ್ಲಿ ಏನು ಕಟ್ಟಿದ್ದಾರೆ, ಪೇಜ್ ನಂ 24 ರಲ್ಲಿ ಗೃಹನಿರ್ಮಾಣಕ್ಕಾಗಿ ಸಹಾಯ ಧನ, ಬೆಂಕಿ ದುರಂತ ಪ್ರವಾಹ ಮುಂತಾದ ನೈಸರ್ಗಿಕ ಆಕಸ್ಮಿಕಗಳಲ್ಲಿ ಕಳೆದುಕೊಂಡು ಪ್ರಾಣ ಪರಿಶಿಷ್ಟ ಜಾತಿ ಕುಟುಂಬಗಳಿಗೆ ಪುನರ್ ವಸತಿ ನಿರ್ಮಾಣಕ್ಕಾಗಿ 900 ರೂಪಾಯಿ ಸಹಾಯ ಧನವನ್ನು ಮಂಜೂರು ಮಾಡಲಾಗುತ್ತದೆ. ನಾನು ನ್ಯಾಚುರಲ್ ಕೆಲಮಿಟೀಸ್ ಬಗ್ಗೆ ಇವತ್ತು ನಾನು ಮಾತನಾಡುತ್ತಿಲ್ಲ, ನಾನು ಕೇವಲ ಒಂದು ಸಮುದಾಯದ ಬಗ್ಗೆ ಮಾತ್ರ ಮಾತನಾಡುವುದಕ್ಕೆ ಇಚ್ಛೆ ಪಡುತ್ತೇನೆ. ಅದು ಏನಾಗಿದೆ ಕೆಲವು ಎವಿಡೆನ್ಸ್

ಎಂದರೆ ಸಾಕ್ಷ್ಯಾಧಾರಗಳನ್ನು ಇಟ್ಟುಕೊಂಡು ಆ ಮೂಲಕ ಈ ಸಭೆಯಲ್ಲಿ ನಾನು ಮಂಡನೆ ಮಾಡಿ ಪ್ರತಿಪಾದನೆ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಆದುದರಿಂದ ಈ ಸಭೆಯಲ್ಲಿ ಈ ತಾರತಮ್ಯವನ್ನು ತರಬೇಡಿ. ಅದು ಅಲ್‌ರೆಡಿ ಇದೆ. ಈ ಪುಸ್ತಕದಲ್ಲಿ ಇರುವುದನ್ನು ಕುರಿತು ನಾನು ಹೇಳುತ್ತಿದ್ದೇನೆ. ಅದು ಈ ಪುಸ್ತಕದ ವರದಿಯಲ್ಲಿ ಇದೆ. ಆದುದರಿಂದ ಈ ತಾರಮ್ಯ ನಿಲ್ಲಿಸಿ ಎಂದು ಸಭಾಧ್ಯಕ್ಷರ ಮೂಲಕ ತಮ್ಮನ್ನು ಕೇಳಿಕೊಳ್ಳುತ್ತಿದ್ದೇನೆ. ಮತ್ತು ಬಜೆಟ್ ಮಂಡನೆ ಸಮಯದಲ್ಲಿ ಮಾನ್ಯ ಮಂತ್ರಿಗಳಾದ ಶ್ರೀಮತಿ ಬಿ.ಟಿ. ಲಲಿತಾ ನಾಯಕ್ ಅವರನ್ನ ಕೇಳಿಕೊಂಡೆ. ಗಿರಿಜನರು ಬಹಳ ನಿಕೃಷ್ಟ ರೀತಿಯಲ್ಲಿ ಮಾನ ಮುಚ್ಚಿ ಕೊಳ್ಳುವುದಕ್ಕೆ ಆಗದೇ ಇರುವಂತಹ ಪರಿಸ್ಥಿತಿಯಲ್ಲಿ ಹೆಣ್ಣುಮಕ್ಕಳು ಇದ್ದಾರೆ. ಅವರಿಗೆ ನೀವು ಏನಾದರೂ ಉಚಿತವಾಗಿ ಸೀರೆ ಹಂಚುವಂತಹ ಸಹಾಯ ಮಾಡಬೇಕು ಎಂದು ಹೇಳಿದೆ. ಅದಕ್ಕೆ ಅವರು ಕಳಕಳಿಯಿಂದ ಹೇಳಿದರು, ನಾನು ಸಂಬಂಧಪಟ್ಟ ಮಂತ್ರಿಗಳವರ ಜೊತೆ ಹೇಳುತ್ತೇನೆ, ಹೇಗಾದರ ಮಾಡಿ ಒಂದು ಸಾವಿರ ಸೀರೆಗಳನ್ನು ಕೊಡಿಸುವಂತಹ ವ್ಯವಸ್ಥೆ ಮಾಡಿಸುತ್ತೇನೆ ಎಂದು ನನಗೆ ಈ ಮಾತನ್ನು ಬಹಳ ಖುಷಿಯಾಯಿತು. ನಾನು ಹೋಗಿ ನನ್ನ ಕ್ಷೇತ್ರದಲ್ಲಿ ಹೇಳಿಬಿಟ್ಟೆ; ನಿಮಗೆ ಒಂದು ಸಾವಿರ ಸೀರೆ ಬರುತ್ತದೆ ಎಂದು. ಆದರೆ ಎಂಟು ತಿಂಗಳು ಆಯಿತು ಸ್ವಾಮಿ ಅವರು ದಿನ ಕೇಳುತ್ತಾರೆ ಯಾವಾಗ ಸ್ವಾಮಿ ಸೀರೇಯನ್ನು ತಂದುಕೊಡುತ್ತೀರಿ ಎಂದು. ನಾನು ಮತ್ತೆ ಮಂತ್ರಿಗಳನ್ನು ಕೇಳಿದರೆ ಅವರು ಹೇಳುತ್ತಾರೆ, ಯಾವುದು ಬರುವುದಿಲ್ಲ, ಮಾರಾಯ, ಇದನ್ನು ನಾನು ಯಾವ ಯೋಜನೆಯ ಅಡಿಯಲ್ಲಿ ತೆಗೆದುಕೊಂಡು ಬರಲಿ ಎಂದು ಕೇಳುತ್ತಾರೆ, ನನಗೂ ಅವರು ಕೇಳುತ್ತಾರೆ, ಅಧಿಕಾರಿಗಳಿಗೂ ಅವರು ಕೇಳುತ್ತಾರೆ, ಅದಕ್ಕೆ ಯಾವುದಾದರೂ ಯೋಜನೆಯಲ್ಲೆ ತಂದು ಕೊಟ್ಟು ಬಿಡಿ. ನಮಗೆ ಈ ಕಷ್ಟ ಬೇಡ.

ಏಕೆಂದರೆ ನಿಮ್ಮ ಕೈಯಲ್ಲಿ ಒಪ್ಪಿಸಿಬಿಟ್ಟು ನಾನು ಅಲ್ಲಿಗೆ ಹೋಗಿ ಪಡುತ್ತಿರುವ ಪಾಡು ಸಾಕು ಎಂದೆ. ಕೊನೆಗೆ ಅವರು ಹೇಳಿದರು ನೋಡೋಣಪ್ಪ, ಯಾರಿಗಾದರೂ ಒಂದು ಮಾತು ಹೇಳುತ್ತೇನೆ ಎಂದರು. ಆದರೆ ಈ ವರದಿಯಲ್ಲಿ ಇದೆ. ಸ್ವಾಮಿ. ಸೀರೆ ಮತ್ತು ಧೋತಿ ಯೋಜನೆಗೆ 50 ಲಕ್ಷ ರೂಪಾಯಿ ಖರ್ಚು ಮಾಡಿದ್ದೀರಿ. ಇದು ಹೊಸ ಯೋಜನೆಯಲ್ಲ, ನನಗೆ ಗೊತ್ತಿರಲಿಲ್ಲ. ನಾನು ಕೇಳಿಬಿಟ್ಟೆ. ಆದರೆ ಅಧಿಕಾರಿಗಳೂ ಕೂಡ ಕೆಲವು ಯೋಜನೆ ಗೊತ್ತಿಲ್ಲ. ಆದುದರಿಂದ ಸಭಾಧ್ಯಕ್ಷರೆ ತಮ್ಮ ಮೂಲಕ ನಾನು ಕೇಳಿಕೊಳ್ಳುವುದು ಏನೆಂದರೇ ಅಧಿಕಾರಿಗಳಿಗೂ ಸಹ ಹರಿಜನರಿಗೆ, ಗಿರಿಜನರಿಗೆ, ಏನೇನು ಯೋಜನೆ ಇದೆ ಅದನ್ನು ಸಂಪೂರ್ಣವಾಗಿ, ಓದಲಿ, ಓದಿ ತಿಳಿದಕೊಂಡು ಅವರಿಗೆ ಏನೇನು ಸೌಲಭ್ಯ ಸಿಗುವುದಿದೆ ಅದನ್ನು ಕೊಡಿಸುವಂತಹ ವ್ಯವಸ್ಥೆಯನ್ನು ಮಾಡಿ. ದಯವಿಟ್ಟು ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಗಿರಿ ಜನರಿಗೆ ಸೀರೆ ಕೊಡುವಂತಹ ವ್ಯವಸ್ಥೆಯನ್ನು ಬಗ್ಗೆ ಗಂಭೀರವಾಗಿ ಗಮನವನ್ನು ಹರಿಸಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಇನ್ನು ಪ್ರಶಸ್ತಿ ಕೊಡುವಂತಹ ಒಂದು ವ್ಯವಸ್ಥೆ ಹರಿಜನರಿಗೆ ಮತ್ತು ಗಿರಿಜನರಿಗೆ ಇದೆ. ಆದರೆ ಬೆಂಗಳೂರಿನಲ್ಲಿ ಈ ಸಾಲಿನಲ್ಲಿ ನಡೆದಂತಹ ಘಟನೆ ಬಗ್ಗೆ ತಾವು ಕೇಳಿದರೆ ಆಶ್ಚರ್ಯ ಪಡುತ್ತೀರಿ. ಪ್ರಶಸ್ತಿ ಬಂದಿದ್ದು ಹರಿಜನರಿಗೆ ಎಷ್ಟು ಸ್ವಾಮಿ? ವಿದ್ಯಾ ಇಲಾಖೆಯವರಿಗೆ ನಾನು ಕೇಳುತ್ತಿರುವುದು. ಆ ವಿದ್ಯಾ ಇಲಾಖೆಯವರು ಏನೂ ಪರಿಗಣನೆ ಮಾಡುವುದಿಲ್ಲ, ಅವರು ಯಾರು ಇಲ್ಲ, ಉದಾಹರಣೆ ಕೊಡಬೇಕು ಎಂದರೆ ಒಬ್ಬರಿಗೆ ರಾಜ್ಯ ಪ್ರಶಸ್ತಿ ಗಳಿಸಿದ್ದಾರೆ. ಅವರು ರಾಷ್ಟ್ರ ಪ್ರಶಸ್ತಿಗೆ ಅರ್ಜಿ ಹಾಕುತ್ತಾರೆ. ಆ ಅರ್ಜಿ ಹಾಕಿದಂತಹ ಸಂದರ್ಭದಲ್ಲಿ ರಾಜ್ಯ ಪ್ರಶಸ್ತಿಯನ್ನು ನಾವು ಕೊಟ್ಟಿದ್ದೇವೆ. ರಾಷ್ಟ್ರ ಪ್ರಶಸ್ತಿಗೆ ಇವನು ಅರ್ಹನೆ ಇಲ್ಲವೇ ಎನ್ನುವುದನ್ನು ಪರಿಗಣನೆ ಮಾಡಬೇಕು. ಪರಿಗಣನೆ ಮಾಡಿದರೆ ಇಲ್ಲಿ? ಏನೂ ಇಲ್ಲ, ಅಧಿಕಾರಿಗಳನ್ನು ಹಿಡಿತದಲ್ಲಿ ಇಟ್ಟುಕೊಳ್ಳುವಂತಹ ವ್ಯವಸ್ಥೆಯೇನೇ ಇಲ್ಲದಂತಹ ಸ್ಥಿತಿಗೆ ಬೆಂಗಳೂರು

ಬಂದಿದೆ. ಅಧಿಕಾರಿಗಳು ಏನು ಹೇಳುತ್ತಾರೋ ಅದೇ ವೇದ ವಾಕ್ಯ. ಪ್ರಶಸ್ತಿ ಬಂತು; ಅದು ಸಮರ್ಪಕವಾಗಿರಲಿಲ್ಲ, ಅದರ ಬಗ್ಗೆ ಟೀಕೆ ಟಿಪ್ಪಣಿ ಏನೂ ಇಲ್ಲ. ನೀವು ಕಳುಹಿಸಿಲ್ಲ ಎಂದರೆ ಹೌದು ಕಳುಹಿಸಿಲ್ಲ, ಏನು ಮಾಡಿಕೊಳ್ಳುತ್ತೀರಿ? ಯಾರ ಹತ್ತಿರ ನೀವು ಹೇಳುತ್ತೀರಿ. ಹೇಳಿಕೋ, ಹೋಗಿ, ಈ ರೀತಿಯ ಉದ್ಧಟತನದ ಧೋರಣೆ, ಶಿಕ್ಷಣ ಇಲಾಖೆಯಲ್ಲೆ ನಡೆಯುತ್ತಿದೆ ಸ್ವಾಮಿ. ಈ ದಿನ ನೀವು ಪ್ರಶಸ್ತಿಯನ್ನು ರವಾನೆ ಮಾಡುವುದಕ್ಕೆ ನೀವು ಇಷ್ಟೊಂದು ಅಡತಡೆ ಹಾಕಿದಮೇಲೆ ನೀವು ಇನ್ನು ಹರಿಜನ ಗಿರಿಜನರಿಗೆ ನಿಜವಾಗಲೂ ಪ್ರಶಸ್ತಿಯನ್ನು ಕೊಡುತ್ತೀರಾ? ಇದರ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ಅದನ್ನು ನಾನು ಬಹಳ ನೊಂದುಕೊಂಡು ಹೇಳುತ್ತಿದ್ದೇನೆ. ಅಧಿಕಾರ ಶಾಹಿಗಳಲ್ಲಿ ಹರಿಜನ ಗಿರಿಜನರ ಮೇಲೆ ಪ್ರೀತಿ ಇರುವಂತೆ ಮನೋಧರ್ಮವನ್ನು ಬದಲಾಯಿಸಿ. ಅವರು ಕೂಡ ಪ್ರಶಸ್ತಿ ಗಳಿಸಬಹುದು, ಅವರು ಪ್ರಶಸ್ತಿಗೆ ಅರ್ಹರು. ಅದನ್ನು ಅವರು ಇನ್ನೊಂದು ಕಮಿಟಿ ಇದೆ ಅವರು ತೀರ್ಮಾನ ಮಾಡುತ್ತಾರೆ, ಅಲ್ಲಿಗೆ ನಾವು ಕಳುಹಿಸುವಂತಹ ವ್ಯವಸ್ಥೆ ಮಾಡುತ್ತೇವೆ ಎನ್ನುವುದನ್ನು ಅವರು ಮನಗಾಣಬೇಕು. ಆಗ ಮಾತ್ರ ಎಲ್ಲರೂ ಒಂದಾಗಿ ಬಾಳಬಹುದು. ಜಾತ್ಯಾತೀತ ರಾಷ್ಟ್ರದಲ್ಲಿ ಜಾತ್ಯಾತೀತ ಭಾರತೀಯನು ಆಗಿ ಇರಬಹುದು ಎನ್ನುವ ಭಾವನೆ ಬರುತ್ತದೆ. ಆದರೆ ಇಲ್ಲಿ ಆ ರೀತಿ ಅಗುತ್ತಿಲ್ಲ. ಒಡೆದು ಆಳುತ್ತಿದ್ದಾರೆ. ಆದುದರಿಂದ ಈ ಸಂದರ್ಭದಲ್ಲಿ

7.30 ಪಿ.ಎಂ.

ಮಾನ್ಯ ವಿದ್ಯಾ ಮಂತ್ರಿಗಳನ್ನು ತಮ್ಮ ಮೂಲಕ ನಾನು ಕೇಳಿಕೊಳ್ಳುತ್ತಿದ್ದೇನೆ, ಈಗ ಆಗಿರುವಂತಹ ಅನ್ಯಾಯದ ಬಗ್ಗೆ ಕೊನೇ ಪಕ್ಷ ತನಿಖೆ ಮಾಡಿದರೆ ಮುಂದೆ ಬರುವಂತಹವರಿಗೆ ಈ ರೀತಿ ಅನ್ಯಾಯ ಆಗುವುದಿಲ್ಲ. ಆದುದರಿಂದ ಅದಕ್ಕೆ ಕಿವಿಗೊಡಬೇಕು ಎಂದು ಈ ಸಂಧರ್ಭದಲ್ಲಿ ನಾನು ಕೇಳಿಕೊಳ್ಳುತ್ತಿದ್ದೇನೆ. ಇನ್ನು ಗಿರಿಜನಗಳನ್ನು ಓಡಿಸಬೇಕು. ಎಲ್ಲಿಗೆ ಸ್ವಾಮಿ ಓಡಿಸುತ್ತಾರೆ. ಅರಸು ಕಾಲದಲ್ಲಿ ಒಂದು ತತ್ವ ಇತ್ತು. ಅವರು ಏನು ಮಾಡಿದರು ಎಂದರೆ ಉಳುವವರಿಗೆ ಭೂಮಿಯನ್ನು ಕೊಟ್ಟಬಿಡಿ ಎಂದು ಮಾಡಿದರು. ತಲೆತಲಾಂತರದಿಂದ ಇವತ್ತು ಗಿರಿಜನರು ಬಾಳಿಕೊಂಡು ಬಂದಿರುವಂತಹ ಜಾಗ ದೇವರಾಜು ಅರಸುರವರ ತತ್ವದ ಪ್ರಕಾರ ಆಗಿದ್ದರೆ ಅವರಿಗೆ ಅರಣ್ಯ ಸೇರಬೇಕು. ಆದರೆ ಅವತ್ತು ಏನು ಮಾಡುತ್ತೀದ್ದೀರಿ? ಅರಣ್ಯವನ್ನು ನಾವು ಸಂರಕ್ಷಿಸಬೇಕು, ಈ ಸಂರಕ್ಷಿತ ಅರಣ್ಯದಲ್ಲಿ ಗಿರಿ ಜನರು ಇರಬಾರದು ಎಂದು. ಆದರೆ ಇವತ್ತು ಅರಣ್ಯಕ್ಕೆ ಬೆಂಕಿ ಬಿದ್ದರೆ ಆರಿಸುವುದು ಹೇಗೆ ಎಂದು ಯಾವ ಅಧಿಕಾರಿಗೂ ಗೊತ್ತಿಲ್ಲ, ಗಿರಿಜನರು ಎಲ್ಲಿ ಇದ್ದಾರೆ ಎಂದು ಅವರನ್ನು ಹುಡುಕಿ ಕೊಂಡು ಓಡಿಹೋಗುತ್ತಾರೆ, ನೀನು ಓಡಿ ಬಂದು ಆರಿಸು, 50 ರೂಪಾಯಿ ನೂರು ರೂಪಾಯಿ ಕೊಡುತ್ತೇನೆ. ಮೊದಲು ಬೆಂಕಿ ಹಬ್ಬದಂತೆ ನೋಡಿಕೋ ಎಂದು ಹೇಳುತ್ತಾರೆ. ಈ ವ್ಯವಸ್ಥೆ ಇರುವಂತಹ ಅಧಿಕಾರಿಗಳು ಅಲ್ಲಿ ತುಂಬಿಕೊಂಡಿದ್ದಾರೆ. ಆದರೆ ಅವರ ದಬ್ಬಾಳಿಕೆ ಏನು; ನೀನು ಇಲ್ಲಿ ಏನೂ ಮಾಡಬಾರದು; ಇಲ್ಲಿ ಮನೆಯನ್ನು ಕಟ್ಟುವ ಹಾಗೆ ಇಲ್ಲ, ಏಕೆಂದರೆ ಸಂರಕ್ಷಿತ ಅರಣ್ಯ, ಅಂದರೆ ಅವನು ಎಲ್ಲಿಗೆ ಹೋಗಬೇಕು? ನಾನು ಇಷ್ಟು ವರ್ಷದಿಂದ ಇಲ್ಲಿದ್ದೆನಲ್ಲಾ, ಅಂದರೆ ಅದಕ್ಕೆ ಉತ್ತರವಿಲ್ಲ, ನೀನು ಎಲ್ಲಾದರೂ ಬಿಟ್ಟು ಹೋಗು ಅಂದರೆ ಅವನು ಎಲ್ಲಿಗೆ ಹೋಗಬೇಕು. ಇದರ ಬಗ್ಗೆ ನಾವು ಸಂಬಂಧಪಟ್ಟ ಅಧಿಕಾರಿಗಳನ್ನು ಎಚ್ಚರಿಗೆ ಮಾಡುವುದೇನೆಂದರೆ ಆ ಅರಣ್ಯಾಧಿಕಾರಿಗಳಿಗೆ ಸೂಕ್ತವಾದಂತಹ ಎಚ್ಚರಿಕೆಯನ್ನು ನೀಡಿ, ಅವರ ಮೇಲೆ ಆಗುವಂತಹ ದಬ್ಬಾಳಿಕೆಯನ್ನು ತಪ್ಪಿಸಿ. ಅಷ್ಟು ಗಿರಿಜನರು ಅವರ ಮೇಲೆ ತಿರುಗಿ ನಿಂತರೆ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ನೀವು ಯೋಚನೆ ಮಾಡಿ, ನಾನು ಈ ಎಚ್ಚರಿಕೆಯನ್ನು ಏಕೆ ಕೊಡುತ್ತಿದ್ದೇನೆಂದರೆ

ಅವರು ಶೋಷಿತರಾಗಿ ಎಷ್ಟು ಬಗ್ಗಬೇಕೋ ಅಷ್ಟು ತಗ್ಗುತ್ತಾರೆ. ಅಲ್ಲಿಂದ ಆಚೆಗೆ ಅವರು ಬಗ್ಗುವುದಿಲ್ಲ. ಆದುದರಿಂದ ಆ ದಂಗೆಯನ್ನು ನಡೆಸುವಂತಹ ಪ್ರಯತ್ನಕ್ಕೆ ನೀವು ಹೋಗಬೇಡಿ. ಆ ದಂಗೆ ಬರುವಂತಹ ಪ್ರಯತ್ನವನ್ನು ನೀವು ಮಾಡಬೇಡಿ. ನೀವು ಅದನ್ನು ಅಷ್ಟಕ್ಕೆ ನಿಲ್ಲಿಸಿ.

+ ಶ್ರೀ ಸಿ. ಹೆಚ್. ವಿಜಯಶಂಕರ್ (ಹುಣಸೂರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಬಸವರಾಜ್‌ರವರು ಮಾತನಾಡುತ್ತಾ ಗಿರಿಜನರನ್ನು ಒಡೆದೆಬ್ಬಿಸುವಂತಹ ಪ್ರಯತ್ನ ನಡೆಯುತ್ತಿದೆ ಎಂಬ ಮಾತನ್ನು ಹೇಳಿದರು. ಆದರೆ ರೀ ಹ್ಯಾಬಿಲಿಟೇಷನ್ ಎಂಬ ಒಂದು ಕಾರ್ಯಕ್ರಮವಿದೆ. ಪುನರ್‌ವಸತಿ ಕೊಡುವಂತಹ ಯೋಜನೆ ಸರ್ಕಾರದಲ್ಲಿದೆ. ನಾವು ಸ್ವತಃ ಈ ವಿಚಾರದಲ್ಲಿ ವಿಷಯ ಸಮಿತಿಯ ಸದಸ್ಯರೆಲ್ಲರೂ ಕೂಡ ಅಲ್ಲಿಗೆ ಭೇಟಿ ಗಿರಿ ಜನರನ್ನು ಕಂಡು ಮಾತನಾಡಿದೆವು. ಯಾರನ್ನೂ ಕೂಡ ಒತ್ತಾಯ ಪೂರ್ವಕವಾಗಿ ಕಾಡಿನಿಂದ ಆಚೆಗೆ ಕಳುಹಿಸಬೇಕಾದಂತಹ ಯೋಚನೆ ಸರ್ಕಾರದಲ್ಲಾಗಲಿ, ಬೇರೆಯವರಲ್ಲಾಗಲಿ ಇಲ್ಲವೆಂಬುದನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಯಾರು ಕಾಡಿನಿಂದಾಚೆ ವಾಸಿಸುವುದಕ್ಕೆ ತಯಾರಾಗಿದ್ದಾರೆ, ಅವರು ನಾಗರೀಕರಾಗಿ ತಮ್ಮ ಬದುಕನ್ನು ನಡೆಸುವುದಕ್ಕೆ ತಯಾರಾಗಿದ್ದಾರೆ, ಅಂಥವರನ್ನು ಮಾತ್ರ ಸಂರಕ್ಷಿತ ಅರಣ್ಯ ಪ್ರದೇಶದಿಂದ ಆಚೆಗೆ ಬಂದು ಬದುಕಲಿಕ್ಕೆ ಬೇಕಾದಂತಹ ವ್ಯವಸ್ಥೆಯನ್ನು ಸರ್ಕಾರ ಮಾಡಿಕೊಡಬೇಕೆಂಬ ಯೋಜನೆ ಇದೆ. ಆದರೆ ಒಂದು ಈ ಸಂದರ್ಭದಲ್ಲಿ ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೇ ಆ ಯೋಜನೆ ವ್ಯವಸ್ಥಿತವಾಗಿ ಜಾರಿಯಾಗಬೇಕು. ತತ್‌ತಕ್ಷಣ ವ್ಯವಸ್ಥಿತವಾಗಿ ಯೋಜನೆ ಜಾರಿಗೆ ತರುವುದಕ್ಕೆ ಕ್ರಮ ಜರುಗಿಸಬೇಕು. ಈ ಪುನರ್‌ವಸತಿ ಯೋಜನೆಯ ಬಗ್ಗೆ ಜನರಲ್ಲಿ ಅದರಲ್ಲೂ ಈ ಗಿರಿಜನರಲ್ಲಿ ಒಂದು ಸಂಶಯ ವಾತಾವರಣ ಮೂಡುತ್ತಿದೆ ಸರ್ಕಾರ ಹೇಳುತ್ತದೆಯೋ ಹೊರತು ಮಾಡುವುದಿಲ್ಲ. ನಮ್ಮನ್ನು ಕರೆದುಕೊಂಡು ಆಚೆಗೆ ಬಿಡುವಂತಹ ಏಕೈಕೆ ಪ್ರಯತ್ನ ನಡೆಯುತ್ತದೆಯೇ ಹೊರತು ನಮ್ಮ ಬಗ್ಗೆ ಪ್ರಾಮಾಣಿಕವಾದಂತಹ ಚಿಂತನೆ ಇದರಲ್ಲಿ ಇಲ್ಲವೆನ್ನುವಂತಹ ಸಂಶಯ ಅವರಲ್ಲಿ ಮೂಡಿದೆ. ಆ ಸಂಶಯ ನಿವಾರಣೆ ಮಾಡಬೇಕಾದಂತಹ ಜವಾಬ್ದಾರಿ ಸರ್ಕಾರದಲ್ಲಿದೆ. ಅದನ್ನು ಆಳವಾಗಿ ಪ್ರಾಮಾಣಿಕವಾಗಿ ಚಿಂತನೆಯನ್ನು ಮಾಡಿ; ಈ ಪುನರ್ ವಸತಿ ಯೋಜನೆ ಏನಿದೆ. ಆ ಯೋಜನೆಯನ್ನು ಜಾಗ್ರತವಾಗಿ ಪ್ರಾಮಾಣಿಕವಾಗಿ ಜಾರಿಗೆ ಮಾಡುವಂತಹ ಕೆಲಸ ಮಾಡುವಂತಹ ಸಂದರ್ಭದಲ್ಲಿ ಬಹುಶಃ ಗಿರಿಜನರ ಬಂದುಗಳು ಸಂರಕ್ಷಿತ ಅರಣ್ಯದಲ್ಲಿ ಯಾರು ಇದ್ದಾರೆ, ಅವರು ಆಚೆ ಬಂದು ನಾಗರೀಕರಾಗಿ ಬದುಕಲು ತಯಾರಾಗಿದ್ದಾರೆ. ಆದುದರಿಂದ ದಯವಿಟ್ಟು ಸರ್ಕಾರ ಆದರ ಕಡೆಗೆ ಗಮನಕೊಟ್ಟ ಈ ಯೋಜನೆಯನ್ನು ಯಶಸ್ವಿಯಾಗಿ ಪ್ರಾಮಾಣಿಕವಾಗಿ ಆದಷ್ಟು ಬೇಗ ಜಾರಿಗೆ ಮಾಡಲಿಕ್ಕೆ ಪ್ರಾಮಾಣಿಕವಾಗಿ ಒಂದು ಕ್ರಮವನ್ನು ಜರುಗಿಸಬೇಕೆಂದು ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ರಮೇಶ್ ಸಿ ಜಿಗಜಿಣಗಿ : ಮಾನ್ಯ ಅಧ್ಯಕ್ಷರೇ, ನಾನು ಮೈಸೂರು ಜಿಲ್ಲೆಗೆ ಪ್ರವಾಸಕ್ಕೆ ಹೋದಾಗ ಬಿ ಆರ್ ಹಿಲ್ಸ್‌ಗೆ ಭೇಟಿ ಕೊಟ್ಟಿದ್ದೇನೆ. ಸುಮಾರು 5 ಕಿ.ಮೀ ಅಂತರದವರೆಗೂ ಕಾಲ್ನಡಿಗೆಯಲ್ಲಿ ನಡೆದು ಆ ಜನಗಳ ವಸ್ತುಸ್ಥಿತಿಯನ್ನು ಕಣ್ಣಾರೆ ಕಂಡಿದ್ದೇನೆ. ಆದರೆ ನಾನು ಪತ್ರಿಕೆಯಲ್ಲೂ ಹೇಳಿದ್ದೇನೆ. ನಾವು ಅವರನ್ನು ಒತ್ತಾಯ ಮಾಡಿ ಅವರನ್ನು ಕಾಡಿನಿಂದ ಹೊರಗೆ ಹಾಕುವುದಿಲ್ಲ, ಗೌರ್ವನಮೆಂಟ್ ಆಫ್ ಇಂಡಿಯಾದ Conservation of Reserve forest Act. ತಂದ ಮೇಲೆ ತಾವೆಲ್ಲ ಸಹಕಾರ ಮಾಡಬೇಕು. ಅವರಿಗೆ ಪುನರ್‌ವಸತಿ ಕೇಂದ್ರ ನಿರ್ಮಾಣ ಮಾಡುವುದಕ್ಕೆ ಸರ್ಕಾರ ಏನೇನು ಕ್ರಮ ತೆಗೆದುಕೊಳ್ಳಬೇಕೋ, ಆ ಕ್ರಮತೆಗೆದುಕೊಳ್ಳುತ್ತೇನೆಂಬ ಮಾತನ್ನು ನಾನು ಪ್ರಸ್ತಾಪ ಮಾಡಿದ್ದೇನೆ. ಈಗಲೂ ತಮ್ಮ ಮುಖಾಂತರ

ಮಾಡಿಕೊಳ್ಳುತ್ತೇನೆ. ಅವರು ಎಲ್ಲೆಲ್ಲಿ ಅವರಿಗೆ ಮನೆ ಬೇಕೆಂದು ಹೇಳಲಿ, ಅವರು ಕಾಡನ್ನು ಬಿಟ್ಟು ಹೊರಗೆ ಬರುತ್ತೇನೆಂದು ಹೇಳುತ್ತಾರೋ ಅವರಿಗೆ ಪುನರ್ ವಸತಿ ಕೇಂದ್ರಗಳನ್ನು ನಿರ್ಮಾಣ ಮಾಡಿ ಅವರಿಗೆ ಇರಲಿಕ್ಕೆ ಮನೆ ಆಗಿರಬಹುದು, ವಿದ್ಯುತ್ ಆಗಿರಬಹುದು, ಕುಡಿಯುವ ನೀರಿನ ವ್ಯವಸ್ಥೆಯಾಗಿರಬಹುದು; ಅವೆಲ್ಲವನ್ನೂ ಸರ್ಕಾರ ಮಾಡಿಕೊಡುವುದಕ್ಕೆ ಈ ಸಮದಲ್ಲೂ ಮಾಡಿಕೊಡಲು ಸಿದ್ದವಿದೆ ಎಂಬ ಮಾತನ್ನು ತಮ್ಮ ಮುಖಾಂತರ ಸದಸ್ಯರಿಗೆ ಹೇಳಲಿಕ್ಕೆ ಬಯಸುತ್ತೇನೆ.

ಶ್ರೀ ಹೆಚ್.ಡಿ. ಬಸವರಾಜ್ : ಮಾನ್ಯ ಅಧ್ಯಕ್ಷರೇ, ತಾವು ಪುನರ್‌ವಸತಿ ಯಾರಿಗೆ ಕಲ್ಪಿಸುತ್ತಿದ್ದೀರಿ? ಹೇಗೆ ಕಲ್ಪಿಸುತ್ತಿದ್ದೀರೀ ಎಂಬ ಯೋಚನೆ ತಮ್ಮಲ್ಲಿ ಇದೆಯೋ? ಪರಿಪಕ್ವತೆ ಇದೆಯೋ ನಾನು ನಿಮ್ಮನ್ನು ಒಂದು ಪ್ರಶ್ನೆಯನ್ನು ಹಾಕುತ್ತಿದ್ದೇನೆ. ಕೇಂದ್ರ ಸರ್ಕಾರದವರು ಒಂದು ಯೋಜನೆ ಹಾಕಿದರು. ಕೋಟಿ ಗಟ್ಟಲೆ ಹಣವನ್ನು ಕಳುಹಿಸಿದರು. ನೀವು ಒಂದು ಪ್ರದೇಶವನ್ನು ಆಯ್ಕೆ ಮಾಡಿದ್ದೀರಿ. ಬರಡು ಬೆಂಡು ಪ್ರದೇಶವನ್ನು ನೀವು ಆಯ್ಕೆ ಮಾಡಿದ್ದೀರಿ. ಎಲ್ಲರಿಗೂ ಎರಡೆರಡು ಎಕರೆ ಭೂಮಿ ಕೊಡುತ್ತೇವೆ ಬನ್ನಿ ಎಂದು ಹೇಳಿದ್ದೀರಿ. ವ್ಯವಸಾಯ ಮಾಡುವುದಕ್ಕೆ ಅವರಿಗೆ ಏನು ಅನುಭವವಿದೆ, ಇವರೂ ಕೊಡುತ್ತೇವೆನ್ನುವ ಪ್ರದೇಶ ಮೂಸು ನೋಡುವುದಕ್ಕೂ ಲಾಯಕ್ಕಿಲ್ಲ, ಕಲ್ಲು ಬರ್ಜ್ ಈ ತರಹ ತುಂಬಿರುವಂತಹ ಪ್ರದೇಶವನ್ನು ಇವರು ಆಯ್ಕೆ ಮಾಡಿಕೊಂಡು ನೀವು ಕಾಡು ಬಿಟ್ಟು ಬನ್ನಿ ಪುನರ್‌ವಸತಿಯನ್ನು ನಿಮಗೆ ಕಲ್ಪಿಸುತ್ತೇವೆಂದು ಹೇಳುತ್ತಾರೆ. ನೀವು ಪುನರ್‌ವಸತಿಯನ್ನು ಕಲ್ಪಿಸುವುದು ಏನೆಂದರೆ 15-20 ಸಾವಿರ ರೂ.ಗಳ ಒಂದು ಮನೆ, ಅದು ಬರಡು ಬೆಂಡಾಗಿರುವಂತಹ ಪ್ರದೇಶ. ಅವರಿಗೆ ಈಗಾಗಲೇ 50-60 ವರ್ಷಗಳಾಗಿದೆ. ಆ ಪ್ರದೇಶದಲ್ಲಿ ಒಂದೆ ಒಂದು ಸಾರಿ ಬೆಳೆಯನ್ನು ತೆಗೆಯಬೇಕಾದರೆ 10-15 ಕಷ್ಟ ಪಡಬೇಕು. ಈ 10-15 ವರ್ಷಗಳು ಸರ್ಕಾರ ದಿನನಿತ್ಯ ಊಟ ಕೊಡುತ್ತದೆಯೇ? ಅವರು ಏನು ಮಾಡಬೇಕು. ಒಂದು ವರ್ಷ ಎರಡು ವರ್ಷ ನೋಡುತ್ತಾರೆ. ಆಮೇಲೆ ಬೆಂಗಾರು ಭೂಮಿಗೆ ನಮ್ಮನ್ನು ಸಾಯಿಸಿಬಿಟ್ಟರು; ಸತ್ತು ಹೋಗಲಿ ಎಂದು ಕರೆದುಕೊಂಡು ಬಂದು ನಮ್ಮನ್ನು ಬಿಟ್ಟು ಹೊರಟು ಹೋಗುತ್ತಾರೆ. ಈ ತರಹ ಪುನರ್ ವಸತಿ ಮಾಡಬೇಡಿ.

ಅಧ್ಯಕ್ಷರು : ಮಾನ್ಯ ವೈ ರಾಮಕೃಷ್ಣರವರೇ, ನಿಮ್ಮ ಮೆಂಬರ್ ಎಲ್ಲಾ ದೆಹಲಿಗೆ ಸಂಬಂಧಪಟ್ಟದ್ದೇ ಮಾತನಾಡುತ್ತಾರೆ. ಏನು ಮಾಡುವುದು? ಮಾನ್ಯ ಖರ್ಗೆಯವರೇ, ಏನಾಗುತ್ತದೆ ಎಂದರೆ ಮಾನ್ಯ ಬಸವರಾಜ್ ಮಾತಿಗೆ ನಾನು ಅಡ್ಡಬರಬೇಕೆಂದಲ್ಲ, ನ್ಯಾಷನಲ್ ಕನ್ಸರ್ವೇಷನ್ ಆಫ್ ಫಾರೆಸ್ಟ್ ಆಕ್ಟ ಈ ದೇಶದಲ್ಲಿ ಚಾಲೂ ಇದೆ. ಅರಣ್ಯ ಪ್ರದೇಶವನ್ನು ಒಂದು ಇಂಚನ್ನು ಮಂಜೂರು ಮಾಡಿಕೊಡತಕ್ಕಂಥ ಅಧಿಕಾರ ರಾಜ್ಯಸರ್ಕಾರಕ್ಕೆ ಇಲ್ಲ, ಕೇಂದ್ರ ಸರ್ಕಾರ ಮಾಡಬೇಕು. ಅರಣ್ಯ ಮಧ್ಯದಲ್ಲಿ ಇರತಕ್ಕಂಥವರಿಗೆ ಪುನರ್ ವಸತಿಕೇಂದ್ರ ಅಂದರೆ ಎಲ್ಲಿ ಜಾಗವಿರುತ್ತದೆಯೋ ಅಲ್ಲಿಗೆ ಕರೆದುಕೊಂಡು ಬಂದು ಅವರಿಗೆ ಇರುವುದಕ್ಕೆ ಎಂದು ಮನೆ, ಕುಡಿಯುವುದಕ್ಕೆ ನೀರು, ಸ್ಕೂಲ್, ಉಳಿದ ವ್ಯವಸ್ಥೆ ಮಾಡಬಹುದು. ಆ ಜಮೀನನ್ನು ಅಲ್ಲೆ ಇಟ್ಟುಕೊಂಡು ಅವರು ಅಲ್ಲೇ ಸಾಗುವಳಿ ಮಾಡುವುದಕ್ಕೆ ಆಗುವುದಿಲ್ಲ, ಅದು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಮಧ್ಯ ಬಹಳ ವರ್ಷಗಳಿಂದ ನಡೆಯುತ್ತಿದೆ. ಈ ರೀತಿಯ ಸಮಸ್ಯೆಗಳು ನಮ್ಮಲ್ಲೂ ಅಲ್ಲಲ್ಲಿ ಇದೆ. ಅವರಿಗೆ ಬರಡು ಬೆಂಡು ಎಂದರೆ ಒಳ್ಳೆಯ ಜಾಗಗಳನ್ನು ತೋರಿಸಿ ಅಲ್ಲಿ ಪುನರ್ ವಸತಿ ಕೇಂದ್ರಗಳನ್ನು ಮಾಡಬೇಕು. ಏನು ಮಾಡುವುದು? ಇನ್ನು ನೀವು ಹೇಳುವ ಪ್ರಕಾರ ಮಾನ್ಯ ರಮೇಶ್ ಜಿಗಜಿಣಗಿಯವರು ಬುಲ್ಡೋಜರ್ ತೆಗೆದುಕೊಂಡು ಹೊರಡಬೇಕು. ಹೇಗೆ ಆಗುತ್ತದೆ.?

ಶ್ರೀ ಹೆಚ್.ಡಿ. ಬಸವರಾಜ್ : ಮಾನ್ಯ ಅಧ್ಯಕ್ಷರೇ, ತಾವು ಕೊಟ್ಟಂತಹ ಅಮೂಲ್ಯವಾದ ಸಲಹೆ ನಾನು ಸಂತೋಷಪಡುತ್ತೇನೆ. ಆದರೆ ರಾಜ್ಯ ಸರ್ಕಾರ ಆ ರೀತಿ ಮಾಡುತ್ತಿದೆಯೋ ನಾಲ್ಕು ದಿವಸಗಳ ಹಿಂದಿನ ಪೇಪರ್‌ಅನ್ನು ತೆಗೆದುನೋಡಿ. ದಾಂಡೇಲಿಯಲ್ಲಿ ನೀವು ಏನು ಮಾಡಿದ್ದೀರಿ? ಅದು ಸಂರಕ್ಷಿತ ಅರಣ್ಯ. ಅದನ್ನು ನೀವು ಗಣಿ ಕೈಗಾಕೆಗೆ ಬಿಟ್ಟು ಕೊಟ್ಟಿಲ್ಲವೇ? ನೀವು ಕೇಂದ್ರ ಸರ್ಕಾರವನ್ನು ಕೇಳಿದ್ದಿರೋ? ನಿಮಗೆ ಬೇಕು ಅಂದಾಗ ಕೇಂದ್ರ ಸರ್ಕಾರದ ಸ್ವಾಧೀನಕ್ಕೆ ಬರುತ್ತದೆ. ಅವರನ್ನು ಕೇಳಬೇಕೆಂದು ಹೇಳುತ್ತೀರಿ, ನಿಮಗೆ ಬೇಡವೆಂದಾಗ ಇಂತಹ ಗಣಿಕೈಗಾರಿಕೆಗಳನ್ನು ಮಾಡಬೇಕೆಂದಾಗ ಅವಾಗ ಕೇಂದ್ರ ಸರ್ಕಾರವಿರಲಿಲ್ಲವೇ? ದಾಂಡೇಲಿಯಲ್ಲಿ ನಾಲ್ಕು ದಿವಸಗಳ ಹಿಂದೆ,

ಅಧ್ಯಕ್ಷರು : ಹೇಳಿ, ನಮಗೂ ಗೊತ್ತಿಲ್ಲ.

ಶ್ರೀ ಹೆಚ್.ಡಿ. ಬಸವರಾಜ್ : ದಾಂಡೇಲಿ ಸಂರಕ್ಷಿತ ಅರಣ್ಯ ಪ್ರದೇಶ ಕೂಡ ಸಂರಕ್ಷಿತವಾದ ಅದರಲ್ಲಿ ಕೂಡ ತಾವು ಹೇಳಿದಂತಹ ಕೇಂದ್ರ ಸರ್ಕಾರದ ನೀತಿ ನಿಯಮವೆಲ್ಲಾ ಪಾಲನೆಯಾಗುತ್ತದೆ. ಆದರೆ ರಾಜ್ಯ ಸರ್ಕಾರ ಅದನ್ನು ಉಲ್ಲಂಘನೆ ಮಾಡಿದೆ. ಎಷ್ಟು ಸಂರಕ್ಷಿತ ಅರಣ್ಯವಿರಬೇಕಾಗಿತ್ತೋ, ಅದನ್ನೆಲ್ಲಾ ಗಾಳಿಗೆ ತೂರಿ ಇವತ್ತು ಅಲ್ಲಿ ಗಣಿಕೈಗಾರಿಕೆ ಮಾಡುವಂಥಾದ್ದಕ್ಕೆ ಅಲ್ಲಿ ಅಸ್ಪದ ಕೊಟ್ಟಿದೆ. ಇದು ಹೇಗೆ ಸಾಧ್ಯ?

ಶ್ರೀ ರಮೇಶ್ ಸಿ ಜಿಗಜಿಣಗಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಅರಣ್ಯಕ್ಕೆ ಸಂಬಂಧ ಪಟ್ಟದ್ದು ಎರಡನ್ನು ಹೇಳಿದ್ದಾರೆ. ಈ ಇಲಾಖೆ ಇರುವುದು ಎಸ್.ಸಿ. ಎಸ್.ಟಿ. ಜನರಿಗೆ ಬ್ಯಾಕ್‌ವರ್ಡ್ ಕ್ಲಾಸ್‌ಗೆ ಸಂಬಂಧಪಟ್ಟದ್ದು ಕೇಳಿದರೆ ಹೇಳುತ್ತೇನೆ. ಕಾಡು ಮತ್ತು ಗಣಿ ಕೇಳಿದರೆ ಅದರ ವಿವರ ಇಲ್ಲ, ಉತ್ತರ ಕೊಡುವಂತಹ ಸಮಯದಲ್ಲಿ ಹೇಳುತ್ತೇನೆ.

ಶ್ರೀ ಹೆಚ್.ಡಿ. ಬಸವರಾಜು : ಮಾನ್ಯ ಅಧ್ಯಕ್ಷರೇ, ಅವರಿಗೆ ಗೊತ್ತಿಲ್ಲವೆಂದರೆ ನಾನು ಏನು ಮಾಡಲಿ; ಈಗ ನನ್ನ ಚಿಂತನೆ ಇರುವುದು ಕಾಡಿನಲ್ಲಿರುವಂತಹ ಜನರನ್ನು ಕಾಡಿನಿಂದ ಹೊರಗೆ ಹಾಕಬೇಡಿ ಎಂದು ಹೇಳುವುದು. ಆ ದೃಷ್ಟಿಯಿಂದ ನಾನು ಹೇಳುತ್ತಿರುವುದು. ಅವಾಗ ಇವರು ಏನು ಹೇಳುತ್ತಾರೆಂದರೆ ಕೇಂದ್ರ ಸರ್ಕಾರದ ನೀತಿನಿಯಮ ಹೀಗೆ ಎಂದು ಹೇಳುತ್ತಾರೆ ಆದರೆ ನಾನು ಬೆಟ್ಟು ಮಾಡಿ ತೋರಸಬೇಕಾಗುತ್ತದೆ. ನಿಮ್ಮ ಸರ್ಕಾರ ಏನು ಮಾಡುತ್ತಿದೆ? ಅದೇ ನೀತಿ ನಿಯಮಗಳನ್ನು ಇಲ್ಲಿಗೂ ತನ್ನಿ ಎಂದು ನಾನು ಬೊಟ್ಟು ಮಾಡಿ ತೋರಿಸುವುದಕ್ಕೆ ಇಚ್ಛೆ ಪಡುತ್ತೇನೆ. ಆದುದರಿಂದ ನಾನು ಈ ಉದಾಹರಣೆಯನ್ನು ಇಲ್ಲಿ ತಂದೆ. ಅವರಿಗೆ ನೀವು ಪುನ್ ವಸತಿಯನ್ನು ಮಾಡುತ್ತೀರಾ? ಯಾವಾಗ 5 ವರ್ಷಕ್ಕೆ 2 ವರ್ಷಕ್ಕೆ ಮಾಡುತ್ತೀರೋ 10 ವರ್ಷಕ್ಕೆ 20 ವರ್ಷಕ್ಕೆ ಮಾಡುತ್ತೀರೋ ಅಲ್ಲಿಯವರೆಗೆ ಅವರು ಮನುಷ್ಯರಾಗಿ ಬದುಕುವುದು ಬೇಡವೇ? ಅವರಿಗೆ ಮನೆ ಬೇಡವೇ? ಅವರಿಗೆ ನೀರು, ಲೈಟ್ ಬೇಡವೇ? ಬರೀ ನಗರವಾಸಿಗಳಿಗೆ ಮಾತ್ರ ಬೇಕೇ?

ಅಲ್ಲಿ ಕಾಡಿನಲ್ಲಿ ಇರುವವರು ಅವರನ್ನು ಬಿಡಿಸುವವರಿಗೂ... ಅದರ ಜೊತೆಗೆ ಶನಿ ಹಿಡಿದಹಾಗೆ ಅದರ ಜೊತೆಗೆ ಹಾಗೆ ಸಾಯಬೇಕೆಂದು ತಾವು ನಿರ್ಧಾರ ಮಾಡಿದ್ದಿರೋ

ನಾನು ನೊಂದುಕೊಂಡು ಹೇಳುತ್ತಿದ್ದೇನೆ. ಅಲ್ಲಿ ಒಂದು ಗುಡಿಸಲನ್ನು ಕಟ್ಟುವುದಕ್ಕೆ ಇಲ್ಲದೆ ಇರುವಂತಹ ಕಾನೂನನ್ನು ತರುತ್ತಾರೆ. ಪಂಚತಾರಾ ಹೋಟೆಲ್ ಹಾಕುವುದಕ್ಕೆ ಕಾನೂನು ಇಲ್ಲವೇ? ಅದಕ್ಕೆ ಮಾತ್ರ ವಿನಾಯಿತಿ, ಇವರಿಗೆ ಏಕೆ ವಿನಾಯಿತಿ

ಕೊಟ್ಟಿಲ್ಲ? ನಾನು ಇವತ್ತು ಈ ಸಂದರ್ಭದಲ್ಲಿ ಒಂದು ಸಲಹೆಯನ್ನು ಕೊಡುತ್ತೇನೆ. ಅವರು ಅರಣ್ಯವನ್ನು ಬಿಟ್ಟು ಬರುವುದಕ್ಕೆ ಇಷ್ಟ ಪಡುವುದಿಲ್ಲ, ಅವರಿಗೆ ಎಂದು ಅರಣ್ಯದಲ್ಲಿ ಜಾಗವನ್ನು ತೆಗೆದು ಅವರನ್ನು ಆ ಪ್ರದೇಶಕ್ಕೆ ಕಳುಹಿಸಿಕೊಡಿ. ಅವರು ಸಂತೋಷವಾಗಿರುತ್ತಾರೆ. ಅವರು ನಿಮ್ಮಿಂದ ಅದು ಬೇಕು ಇದು ಬೇಕು ಎಂದು ಏನೂ ಕೇಳುವುದಿಲ್ಲ, ನೀವು ಅಂದುಕೊಂಡಿರುವಂತಹ ಕೋಟ್ಯಾಂತರ ರೂಪಾಯಿಗಳು ನಿಮಗೆ ಉಳಿಯುತ್ತದೆ. ನೀವು ಯಾವ ಯಾವುದೋ ಯೋಜನೆ ಹಾಕಿಕೊಂಡು ಯಾವ ಅಧಿಕಾರಿ ಇಷ್ಟು ಕೋಟಿ ರೂಪಾಯಿಗಳನ್ನು ಸಂಪಾದನೆ ಮಾಡಬಹುದು. ಇಷ್ಟು ಕೋಟಿ ರೂ.ಗಳು ಬರುತ್ತದೆ ಎಂದು ಕಾಯುತ್ತಿದ್ದಾರೋ ಅವರ ಬಾಯಿಗೆ ಮಣ್ಣು ಹಾಕಿದ ಹಾಗೆ ಆಗುತ್ತದೆ. ಇದರಿಂದ ಸರ್ಕಾರಕ್ಕೂ ಒಳ್ಳೆಯದಾಗುತ್ತದೆ. ಆದುದರಿಂದ ಅರಣ್ಯ ಪ್ರದೇಶದಲ್ಲಿ ಅವರಿಗೆ ಎಂದು ಒಂದಷ್ಟು ಜಾಗವನ್ನು ಮೀಸಲಿಟ್ಟು ಅವರನ್ನು ಅಲ್ಲಿ ವರ್ಗಾಯಿಸಿ, ಆ ಜನಸಮೂದಾಯವನ್ನು ನಾನು ಅಲ್ಲಿ ಕರೆದುಕೊಂಡು ಬರುತ್ತೇನೆ. ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಿಗೆ ಈ ಸಲಹೆಯನ್ನು ಕೊಡುತ್ತೇನೆ. ಇದರ ಬಗ್ಗೆ ಕೇಂದ್ರ ಸರ್ಕಾರದವರೊಡನೆ ಮಾತನಾಡಲಿ ಕೇಂದ್ರದ ನೀತಿ ನಿಯಮ ಏನು ಇದೆ. ಅದು ಬರೀ ನಾಗರಹೊಳೆ ಇದೆಯಲ್ಲಾ ಅದನ್ನು ಸಡಿಲಿಸಿ, ಏಕೆಂದರೆ ಅದು ದಾಂಡೇಲಿಗೆ ಇಲ್ಲವಲ್ಲಾ ಆದುದರಿಂದ ಇನ್ನು ಮೇಲಾದರೂ ದಾಂಡೇಲಿ ಅರಣ್ಯದಲ್ಲಿರುವಂತಹ ನೀತಿ ನಿಯಮವನ್ನು ನಾಗರಹೊಳೆಗೂ ತನ್ನಿ ಅಲ್ಲಿರುವಂತಹ ಅರಣ್ಯದಲ್ಲೇ ಇರುವಂತಹ ಒಂದು ವ್ಯವಸ್ಥೆಯಾಗಲಿ ಎಂದು ಕೇಳಿಕೊಳ್ಳುತ್ತೇನೆ.

ಎಲ್ಲಿಯವರಿಗೆ ಅವರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಅಡ್ಡಿ ಆತಂಕ ಇದೆ ಅದನ್ನೆಲ್ಲಾ ನಿವಾರಣೆ ಮಾಡಿ ಯಾವುದೇ ಅಧಿಕಾರಿ ಬಂದರೆ ಅವನನ್ನು ಒದ್ದೋಡಿಸಿ, ಆ ವ್ಯಕ್ತಿಗಳಿಗೆ ಮನೆ ಕಟ್ಟಿಸುವಂತಹ ವ್ಯವಸ್ಥೆ ಮಾಡಿ 48 ವರ್ಷ ಕಳೆದಮೇಲಾದರೂ ಸಹ ಒಂದು ಗೂಡಿನಲ್ಲಿ, ಚಳಿಗಾಲಿಯಿಂದ ಬೆಚ್ಚಗಿರುವಂಥ ಮನೆಯಲ್ಲಿ ಅವರು ಇರುವುದಕ್ಕೆ ಒಂದು ಅವಕಾಶವನ್ನು ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತಿದ್ದೇನೆ. ಸಭಾಧ್ಯಕ್ಷರೇ ಗಿರಿಜನರನ್ನು ನಾಗರಹೊಳೆಯಲ್ಲಿ ಒಕ್ಕಲೆಬ್ಬಿಸುವುದರ ಬಗ್ಗೆ ಎರಡೇ ಎಂದು ಮಾತುಗಳನ್ನಾಡಿದ್ದಾಯಿತು. ಇನ್ನು ಕೊನೆಯದಾಗಿ ಶಾಲಾ ಕಾಲೇಜುಗಳಲ್ಲಿ ನಡೆಯುತ್ತಿರುವಂಥ ರಿಸರ್ವೇಷನ್ ಎನ್ನುವ ಒಂದು ನಾಟಕದ ಬಗ್ಗೆ ನಾನು ಎರಡೇ ಎರಡು ಮಾತುಗಳನ್ನಾಡುವುದಕ್ಕೆ ಇಚ್ಛೆಪಡುತ್ತೇನೆ.

ಏನು ಸ್ವಾಮಿ, ಯಾವುದೇ ಒಂದು ಪ್ರತಿಷ್ಠಿತ ಕಾಲೇಜಿಗೆ ಹೋಗಿ, ಅವರು ಹೇಳುತ್ತಾರೆ ಎಷ್ಟಪ್ಪ ನಿನ್ನದು 60 ಪರ್ಸೆಂಟು, ಇಲ್ಲಿ ನಿನಗೆ ಅರ್ಜಿಯನ್ನು ಕೊಡುವುದಿಲ್ಲ, ಹೋಗು; ನಿನಗೆಷ್ಟಪ್ಪ ಅಪ್ಲಿಕೇಷನ್ನು, ಇಲ್ಲಿ 90 ಇದ್ದರೆ ಮಾತ್ರ ಬರಬೇಕು ಅಂದರು ಇವರಿಗೆಲ್ಲಾ ನೀವು ನೀತಿ ನಿಯಮ ಹಾಕಿಕೊಟ್ಟಿದ್ದೀರಾ; ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದವರಿಗೆ ನೀವು ಕೊಡಲೇ ಬೇಕು ಎಂದು ಇವರು ಅಪ್ಲಿಕೇಷನನ್ನು ಕೊಟ್ಟಿರಲ್ಲವೇ ಅಲ್ಲಿ ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡದವರು ಅಪ್ಲೈ ಮಾಡುವುದಕ್ಕಾಗುವುದು. ಕೊನೆಯಲ್ಲಿ ನೋಟಿಸ್‌ಬೋರ್ಡಿನಲ್ಲಿ ಹೇಳುತ್ತಾರೆ, ಪರಿಶಿಷ್ಟ ಜಾತಿ:ಪಂಗಡದವರು ಯಾರೊಬ್ಬರು ಅಪ್ಲೈ ಮಾಡಿಲ್ಲ, ಆದ್ದರಿಂದ ಅವರಿಗೆ ಯಾವುದು ಸೀಟ್ ಕೊಟ್ಟಿಲ್ಲ, ಆ ಸೀಟನ್ನು ಕನ್ವರ್ಟ್ ಮಾಡಲಿಕ್ಕೆ ತಾವು ಅನುಮತಿ ಕೊಡಬೇಕು ಇಷ್ಟು ಜನ ಮೆರಿಟ್‌ರವರೇ ಅಪ್ಲೈ ಮಾಡಿ ನಿಂತುಕೊಂಡಿದ್ದಾರೆ, ದಯವಿಟ್ಟು ನೀವು ಪ್ರತಿಭಾವಂತರಿಗೆ ಅನ್ಯಾಯ ಮಾಡಬೇಡಿ. ಎನ್ನುತ್ತಾರೆ ಏನು ಸ್ವಾಮಿ ಕ್ಯಾಪಿಟೇಷನ್ ಕೊಟ್ಟವನು 35 ಅಂಕ ಪಡೆದಿದ್ದರೂ ಅವನು ಡಾಕ್ಟರ್‌ಆಗಬಹುದು, ಆದರೆ ಪರಿಶಿಷ್ಟ ಜಾತಿಯವನು ಆಯಿತು ಅಂದರೆ ಅವನಲ್ಲಿ ಎಲ್ಲಿ ಪ್ರತಿಭೆ ಇದೆ ಆ 35 ಅಂಕಗಳನ್ನು ಪಡೆದುಕೊಂಡು

ಬಂದುಬಿಟ್ಟ, ಆದರೆ ಈ 35 ಪರ್ಸೆಂಟ್ ಕೊಟ್ಟು 2,3,5,6,8,10. ಲಕ್ಷ ಕೊಡುತ್ತಾನಲ್ಲ ಇವನಲ್ಲಿ ಏನು ಪ್ರತಿಭೆ ಇದೆ? ಇವನು ಕತ್ತರಿ ಚಾಕು ಹಿಡಿದರೆ ಎಷ್ಟು ಜನ ಮೇಲಕ್ಕೆ ಹೋಗುತ್ತಾರೆ. ಅದರ ಬಗ್ಗೆ ಯಾವುದಾದರೂ ಸರ್ಕಾರ ಗಂಭೀರವಾಗಿ ಯೋಚನೆ ಮಾಡಿದೆಯೇ ಏನೂ ಯೋಚನೆ ಮಾಡುವುದಿಲ್ಲ, ಈ ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡದವರಿಗೆ ಏನು ಇದೆ ಅದರ ಹತ್ತಿರ ಪ್ರತಿಭೆ ಎಲ್ಲಾ 35, ಅವು ರಿಸರ್ವೇಷನ್‌ನಲ್ಲಿ ಬಂದುಬಿಟ್ಟಿದ್ದಾರೆ ಎನ್ನುತ್ತಾರೆ. ಕ್ಯಾಪಿಟೇಷನ್ ಫೀಸ್ ಇಟ್ಟುಕೊಂಡು ಇಲ್ಲಿ ಏನು ನೀವು ಮಾನದಂಡ ಇಟ್ಟಿದ್ದೀರಿ? ಒಬ್ಬ ವ್ಯಕ್ತಿಯನ್ನು ನೀವು ಕರೆದುಕೊಂಡು ಬಂದು ಎನ್‌ಟ್ರೆನ್ಸ್ ಎಗ್ಸಾಮ್‌ನಲ್ಲಿ ಹಾಕಿ ಗೊತ್ತಾಗುತ್ತದೆ. ಅವನು ನಾಲ್ಕು ಐದು ಸಾರಿ ಡುಮ್ಕಿ ಹೊಡೆದವನು, ಅವರಪ್ಪ ಏನೋಕೋಟಿಗಟ್ಟಲೆ ಸಂಪಾದನೆ ಮಾಡಿದ್ದಾನೆ ಅದನ್ನು ಕೊಟ್ಟು ಬಿಟ್ಟು ಬಂದು ಅಲ್ಲಿ ಸೇರಿಕೊಳ್ಳುತ್ತಾನೆ. ಈ ರೀತಿ ಆಗುತ್ತಿರುವಂಥ ಅನ್ಯಾಯವನ್ನು ತಡೆಹಿಡಿಯಿರಿ. ಯಾವುದೇ ಒಂದು ಕಾಲೇಜು ಪರಿಶಿಷ್ಟ ಜಾತಿ : ಪಂಗಡದವರಿಗೆ ಅರ್ಜಿಯನ್ನು ಕೊಟ್ಟಿದ್ದಾರೆಯೇ ಇಲ್ಲವೇ ಎಂಬುದನ್ನು ಪರಿಶೀಲನೆ ಮಾಡಿ. ಎಷ್ಟು ಅರ್ಜಿಗಳು ಅವರಲ್ಲಿ ವಿತರಣೆಯಾಗಿದೆ. ಅವರಲ್ಲಿ ಎಷ್ಟು ಜನಕ್ಕೆ ಕೊಡಬಹುದು, ಆ ಸ್ಟಾಟಿಸ್ಟಿಕ್ ಅನ್ನು ತೆಗೆದುಕೊಂಡು ಪ್ರತಿ ವರ್ಷ ಕನಿಷ್ಠ ಬೆಂಗಳೂರಿನಲ್ಲಾದರೂ ಪ್ರಾರಂಭ ಮಾಡಿ ಸ್ವಾಮಿ. ಹೊರಗಡೆ ಬೇಡ. ಎಷ್ಟು ಪ್ರತಿಷ್ಠಿತ ಕಾಲೇಜುಗಳಿವೆ, ಒಬ್ಬರೂ ಕೂಡ ಮಾಡುತ್ತಿಲ್ಲ, ಪ್ರತಿಯೊಬ್ಬರೂ ಅನುದಾನಕ್ಕೆ ಬರುತ್ತಾರೆ. ನಮಗೆ ಮಾನ್ಯತೆ ದೊರೆತರೆ ಸಾಕು ಅನ್ನುತ್ತಾರೆ,, ಯಾವ ಮಂತ್ರಿ ಏನು ಷರತ್ತು ಹಾಕಿದರೂ ಅಷ್ಟಕ್ಕೂ ಒಪ್ಪಿಕೊಂಡು ಬಿಡುತ್ತಾರೆ. ಆದರೆ ಒಬ್ಬರೇ ಒಬ್ಬರೂ ಕೂಡ ಇಂಪ್ಲಿಮೆಂಟ್ ಮಾಡುತ್ತಾ ಇಲ್ಲ, ಇಂತಹವರಿಗೆಲ್ಲಾ ನೀವು ಕಡಿವಾಣ ಹಾಕಿ, ಪ್ರತಿ ವರ್ಷ ನೀವು ಚೆಕ್ ಮಾಡುವಂತಹ ಒಂದು ಜಾಗ್ರತದಳವನ್ನು ರೆಡಿಮಾಡಿ ಕಳುಹಿಸಿಕೊಡಿ. ಆಗ ಗೊತ್ತಾಗುತ್ತದೆ ಇವರ ಬಂಡವಾಳ ಏನು ಎಂಬುದು. ಪ್ರತಿಯೊಂದು ಜಾತಿಯಲ್ಲಿಯೂ ಪ್ರತಿಭಾವಂತರಿರುತ್ತಾರೆ, ಬರೀ ನಮ್ಮದು ಒಂದೇ ಎಂದಲ್ಲ, ನಮ್ಮದರಲ್ಲಿ ಏನೋ ಗ್ರಾಮೀಣ ಪ್ರದೇಶದಲ್ಲಿ ಬರುವವರು, ಈಗ ನಾಗರಹೊಳೆಯಲ್ಲಿ ಅವರು ಎಸ್.ಎಸ್.ಎಲ್.ಸಿ.ಯನ್ನು ಓದಿದರು ಅಂದರೆ ಐ.ಎ.ಎಸ್. ಓದಿದಹಾಗೆ ಗೊತ್ತಾ ಸ್ವಾಮಿ; ಆ ಪ್ರದೇಶಕ್ಕೆ ಬಂದು ನೋಡಿ, ಆ ಪರಿಸರ ನೋಡಿ, ಅದೇ ಇಲ್ಲಿರುವವರು ಯಾವ ತರಹ ಓದುತ್ತಾರೆ 90 ಪರ್ಸೆಂಟು. ಆ ವ್ಯಕ್ತಿಯೂ ಇವರ ಜೊತೆಗೆ ಸ್ಪರ್ಧೆ ಮಾಡಬೇಕು. ಈ ವ್ಯಕ್ತಿಯೂ ಅವರ ಜೊತೆ ಸ್ಪರ್ಧೆ ಮಾಡಬೇಕು. ಸಾಧ್ಯ ಇದೆಯೇ? ಅಜಗಜಾಂತರ. ನೀವು ಹೇಳುತ್ತಿರುವುದೇನು ಎಲ್ಲಾ ಪ್ರತಿಭಾವಂತರಿಗೆ ಮಾತ್ರವೇ ನಾವು ಕೊಡುವುದು. ಈ ತಾರತಮ್ಯವನ್ನು ತೆಗೆದುಹಾಕಿ ಅಲ್ಲಿಂದ ಬರುತ್ತಾರಲ್ಲಾ ಅವರಿಗೆ ಸ್ಪೆಷಲ್ ಸ್ಟೇಟಸ್ ಕೊಡಿ, ಅವರಿಗೆ ಸ್ಪೆಷಲ್ ಕೋಚಿಂಗ್‌ಕೊಡಿ. ಈ ನಲವತ್ತೆಂಟು ವರ್ಷ ಹೇಗೋ ಕಳೆದುಹೋಯಿತು. ಇನ್ನು ಮುಂದಕ್ಕಾದರೂ ಅವರು ಭಾರತದಲ್ಲಿ ಹುಟ್ಟಿದ್ದಕ್ಕೆ ಒಂದು ಸಾರ್ಥಕತೆಯನ್ನು ಪಡೆಯುವಂತಹ ಒಂದು ವ್ಯವಸ್ಥೆಯನ್ನು ಮಾಡಿ ಎಂದು ಈ ಸಂದರ್ಭದಲ್ಲಿ ಕೇಳುತ್ತಿದ್ದೇನೆ...

ಅಧ್ಯಕ್ಷರು : ರಿಸರ್ವೇಷನ್ ಇದೆಯಲ್ಲಾ, ನೀವು ಹೀಗೆಲ್ಲಾ ಮಾತನಾಡಿದರೆ ಹೇಗೆ? ರೂರಲ್ ಏರಿಯಾಸ್‌ಗೆ ರಿಸರ್ವೇಷನ್ ಇದೆ, ರೂರಲ್ ಏರಿಯಾಸ್‌ನಿಂದ ಬರತಕ್ಕಂಥ ಎಸ್.ಸಿ / ಎಸ್.ಟಿ.ಯವರಿಗೆ ಒಂದು ಕ್ಯಾಟಗರಿ ಇದೆ, ಅಲ್ಲಲ್ಲಿ ಕ್ಯಾಂಪಿಟೇಷನ್... ಎಲ್ಲಾ ಇಟ್ಟಿದ್ದಾರಲ್ಲಪ್ಪಾ, ನೀವು ಹೇಗೆ ಏನು ತಿಳಿದುಕೊಳ್ಳದೇ ಹೀಗೆ ದಡಬಡ ಎಂದು ಮಾತನಾಡುತ್ತಿದ್ದೀರಿ....

ಡಾ:: ಎಂ.ಪಿ. ಕರ್ಕಿ : ಅಪ್ಲಿಕೇಷನ್ ಫಾರಂ ಅನ್ನೇ ಕೊಡುವುದಿಲ್ಲ, ಅಪ್ಲಿಕೇಷನ್ ಫಾರಂ ಕೊಡತಕ್ಕಂಥದ್ದು ಅವರ ಕೈಯಲ್ಲಿ ಇರುತ್ತದೆ. They are not giving application forms.

ಶ್ರೀ ಹೆಚ್.ಡಿ. ಬಸವರಾಜು : ಮಾನ್ಯ ಅಧ್ಯಕ್ಷರೇ ತಮಗೆ ನೋವಾಗಿರಬಹುದು, ಏಕೆಂದರೆ ಮಾನ್ಯ ಬಂಗಾರಪ್ಪನವರ ಕಾಲದಲ್ಲಿ ಗ್ರಾಮೀಣ ಪ್ರದೇಶಗಳಿಂದ ಬಂದವರಿಗೆ 15 ಅಂಕಗಳನ್ನು ಕೊಟ್ಟರು, ಹೇಗೆ ಕೊಟ್ಟರು ಸಾರ್, ಅಲ್ಲಿ ಹೇಗೆ ತಾರತಮ್ಯ ಬಂತು? ಅಂದರೇ ಈ ತಾರತಮ್ಯ ಮೊದಲಿನಿಂದಲೂ ಇದೆ, ನಾನು ಹೊಸದಾಗಿ ಹೇಳುತ್ತಿಲ್ಲ, ದಯವಿಟ್ಟು ನಾನು ಹೇಳುತ್ತಿದ್ದೇನೆ ತಮ್ಮ ಮನಸ್ಸಿಗೆ ನೋವಾಯಿತು ಅಂದರೇ,

ಅಧ್ಯಕ್ಷರು : ಇಲ್ಲ..ಇಲ್ಲ...ನನಗೇನೂ ನೋವಾಗುವುದಿಲ್ಲ, ನಾನೇನು ಕಾಲೇಜನ್ನು ನಡೇಸುತ್ತೇನೆಯೇ ನೋವಾಗುವುದಕ್ಕೆ; ಸತ್ಯಾಂಶಗಳನ್ನು ಸರಿಯಾಗಿ ವ್ಯಕ್ತಪಡಿಸಬೇಕು. ಈಗ ಕಾಮನ್ ಎನ್‌ಟ್ರೆನ್ಸ್ ಟೆಸ್ಟ್ ಇದೆ, ಎಂ.ಬಿ.ಬಿ.ಎಸ್.ಗೆ ಬಿ.ಇ.ಗೆ ಹೋಗಬೇಕಾಗಿದ್ದವರೆಲ್ಲಾ ಕಾಮನ್ ಎನ್‌ಟ್ರೆನ್ಸ್ ಟೆಸ್ಟ್‌ಗೆ ಬರೆಯಬೇಕು.

ಡಾ: ಎಂ.ಪಿ. ಕರ್ಕಿ : ಪಿ.ಯು.ಸಿ., ಗ್ರಾಜುಯೇಟೆಡ್‌ನ ಕಾಮನ್ ಎನ್‌ಟ್ರಸ್ಸ್ ಟೆಸ್ಟ್‌ಗೆ ಫಾರಂ ಕೊಡಬೇಕಲ್ಲಾ, ಫಾರಂ ಕೊಡುತ್ತಾ ಇಲ್ಲ,

ಅಧ್ಯಕ್ಷರು : ಪಿ.ಯು.ಸಿ.ಗೆ ಕೊಡುತ್ತಾ ಇಲ್ಲ,

ಶ್ರೀ ಡಿ.ಮಂಜುನಾಥ್ : ಸರ್ಕಾರಿ ಕಾಲೇಜುಗಳಲ್ಲಿ ಈ ತರಹ ನೀವು ಹೇಳುವ ರೀತಿಯಲ್ಲಿ ಇಲ್ಲ, ಅಲ್ಲಿ ಇವರಿಗೆ ಸೀಟುಗಳು ಸಿಗುತ್ತಾ ಇದೆ. ಈಗ ನಾನು ಲೆಕ್ಕ ಹಾಕಿದೆ 20 ಪರ್ಸೆಂಟ್‌ವರೆಗೂ ಕೊಟ್ಟಿದ್ದಾರೆ. ನೀವು ಯಾವುದೋ ಪ್ರೈವೇಟ್ ಕಾಲೇಜ್‌ನಲ್ಲಿ ಕೊಡಲಿಲ್ಲ ಎಂದು ಹೇಳಿ ಈ ರೀತಿ ಮಾತನಾಡಿದರೆ ಹೇಗೆ? ಈಗ ಸರ್ಕಾರಿ ಕಾಲೇಜ್‌ನಲ್ಲಿ ಸಿಕ್ಕುತ್ತಾ ಇದೆ. ಆದರೆ ಪ್ರೊಫೆಷನಲ್ ಕಾಲೇಜ್‌ನಲ್ಲಿ ಅಂದರೆ ಇಂಜಿನಿಯರಿಂಗ್, ಮೆಡಿಕಲ್‌ಕಾಲೇಜ್‌ನಲ್ಲಿ ಟೆಸ್ಟ ಇದೆ. ಟೆಸ್ಟ ಪಾಸು ಮಾಡಬೇಕು,. ಆದರಲ್ಲೂ ರಿಸರ್ವೇಷನ್ ಇದೆ.

ಶ್ರೀ ಹೆಚ್.ಡಿ. ಬಸವರಾಜು : ಇದರ ಬಗ್ಗೆ ನಾನು ವಾದ ಮಾಡಲಿಕ್ಕೆ ಇಚ್ಛೆಪಡುವುದಿಲ್ಲ, ಈಗ ಅನುದಾನಿತ ಕಾಲೇಜು ಎಂದು ಇದೆ, ಅನುದಾನಿತ ಕಾಲೇಜಿನಲ್ಲಿ ಈ ವರ್ಷದ ಪಟ್ಟಿಯನ್ನು ಮಾನ್ಯ ಸಚಿವರು ತರಿಸಿನೋಡಲಿ ಎಷ್ಟು ಜನ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದವರಿಗೆ ಕೊಟ್ಟಿದ್ದಾರೆ ದಯವಿಟ್ಟು ಪಟ್ಟಿಯನ್ನು ತರಿಸಿ ನೋಡಿ ಆಯಿತು ನೀವು ಮಾಡುತ್ತಿದ್ದೇವೆ ಎಂದು ಹೇಳಿದರೆ ನಾವೇನೂ ಮಾಡುವದಕ್ಕಾಗುವುದಿಲ್ಲ, 48 ವರ್ಷ ಆಯಿತು 49 ಆಗುತ್ತದೆ 50 ಆಗುತ್ತದೆ, 51 ಆಗುತ್ತದೆ ಬಿಡಿ. ಇನ್ನೇನೂ ಯೋಚನೆ ಮಾಡುವುದಕ್ಕಾಗುವುದಿಲ್ಲ, ಇಷ್ಟು ವರ್ಷಗಳಿಂದ ಕಳೆದವರು ಇನ್ನು ಮುಂದಕ್ಕೆ ಕಳೆಯುವುದಕ್ಕೆ ಆಗುವುದಿಲ್ಲವೆ?

ಶ್ರೀ ಮಂಜುನಾಥ್ ಸಿ. ಕುನ್ನೂರ್ : ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಸನ್ಮಾನ್ಯ ಸದಸ್ಯರು ಮೇಲಿಂದ ಮೇಲೆ 48 ವರ್ಷ ಆಯಿತು ಅದನ್ನು ಮಾಡಿಲ್ಲ ಇದನ್ನು ಮಾಡಿಲ್ಲ ಎಂದು ಹೇಳುತ್ತಿದ್ದಾರೆ. ಇವತ್ತಿಗೂ ಪ್ರತಿ ಹತ್ತು ವರ್ಷಕ್ಕೊಂದು ಸಾರಿ 40 ವರ್ಷವೂ ಮೀಸಲಾತಿಯನ್ನು ಮುಂದುವರೆಸಿದ್ದಾರೆ. ಇವತ್ತಿಗೂ ಕೂಡ ಅನೇಕ ಯೋಜನೆಗಳನ್ನು ಸರ್ಕಾರದವರು ಜಾರಿಗೆ ತಂದಿದ್ದಾರೆ. ಜನಾಂಗ ಉಪಯೋಗ ಮಾಡಿಕೊಂಡಿದೆ. ಇನ್ನೂ ಹೆಚ್ಚಿನದನ್ನು ಮಾಡಲಿ ಎಂದು ಅವರು ಕೇಳಲಿ, ಆದರೆ

ಮಾಡಿಲ್ಲ ಎಂದು ದಯವಿಟ್ಟು ಅವರು ಅದನ್ನು ಹೇಳಬಾರದು ಎಂದು ತಮ್ಮ ಮುಖಾಂತರ ಸದಸ್ಯರನ್ನು ಕೇಳಿಕೊಳ್ಳುತ್ತೇನೆ.

ಡಾ: ಯು. ಆರ್. ಚಿತ್ತರಂಜನ್ : ಹೀಗೆ ಅವರು ಅಪ್ಲಿಕೇಷನ್ಸ್ ಅನ್ನು ಕೊಡುವುದೇ ಇಲ್ಲ ಎಂದು ಹೇಳುವುದಕ್ಕೆ ಸರ್ಕಾರದವರು ಈಗ ಒಂದು ವ್ಯವಸ್ಥೆಯನ್ನು ಮಾಡಿ. ಈಗ ಹೇಗೆ ಕಾಲೇಜ್‌ನಲ್ಲಿ ಶಿಕ್ಷರನ್ನು ನೇಮಕ ಮಾಡುವಾಗ When the Social Welfare Department says that we do not have a candidate then only it can be given to others.

ಹಾಗೆ ಪ್ರತಿ ಸಲ ಅಪ್ಲಿಕೇಷನ್ ಕೊಡುವಾಗ ಅವರು ಒಂದನ್ನ ಸರ್ಕಾರಿ ಅಧಿಕಾರಿಗಳಿಗೆ ಕೊಟ್ಟು ತನ್ಮೂಲಕ ಮಾಡುವಂಥ ಒಂದು ವ್ಯವಸ್ಥೆಯನ್ನು ಮಾಡಲಿಕ್ಕೆ ಸಾಧ್ಯವಾಗಬಹುದೇ ಎಂಬುದನ್ನು ಪರಿಶೀಲನೆ ಮಾಡಬೇಕು. ಅನುದಾನಿತ ಕಾಲೇಜುಗಳು they should give the application.

ಡಾ: ಎಂ.ಪಿ. ಕರ್ಕಿ : ಈಗ ನನಗೆ ಗೊತ್ತಿದಂತೆ ಪರ್ಸೆಂಟೇಜ್ ಮಾಡತಕ್ಕಂಥ ಕಾಲೇಜುಗಳಲ್ಲಿ ರೋಸ್ಟರ್ ಸಿಸ್ಟಂ ಅನ್ನು ಫಾಲೋ ಮಾಡಬೇಕು ಎಂದು ಹೇಳತಕ್ಕಂಥ ಕಡ್ಡಾಯ ನಿಯಮ ಇದೆ. ಕಡ್ಡಾಯ ನಿಯಮ ಎಂದು ಹೇಳಿದರೆ ಬ್ಯಾಕ್‌ವರ್ಡ್ ಕ್ಲಾಸಸ್‌ಗೆ ಇಷ್ಟು, ಪರಿಶಿಷ್ಟ ಜಾತಿ:ಪರಿಶಿಷ್ಟ ಜನಾಂಗಕ್ಕೆ ಇಷ್ಟು ಎಂದು ಹೇಳತಕ್ಕ ಕಡ್ಡಾಯ ಇದೆ. ಅದನ್ನು ಯಾವುದನ್ನು ಪಾಲಿಸುತ್ತಿಲ್ಲ, ಕೇಳಲ 80 ಪರ್ಸೆಂಟ್ ಮಾಡಿದವರು ಮಾತ್ರ ಫಾರಂ ತೆಗೆದು ಕೊಳ್ಳಬೇಕು, ಅವರು ಯಾವ ಜನಾಂಗಕ್ಕೆ ಸೇರಿದವರು ಎಂದು ಹೇಳಿಲ್ಲ, ಸರ್ಕಾರಿ ಕಾಲೇಜುಗಳಲ್ಲಿ ಹೇಳುತ್ತಿಲ್ಲ, ಪ್ರತಿಷ್ಠಿತ ಕಾಲೇಜುಗಳಲ್ಲಿ ಹೇಳುತ್ತಿದ್ದಾರೆ. ಪ್ರತಿಷ್ಠಿತ ಕಾಲೇಜುಗಳಲ್ಲೂ ಕೂಡ ಯಾವ ನಿಯಮ ಇದೆ ಆ ನಿಯಮವನ್ನು ಕಡ್ಡಾಯವಾಗಿ ಅನುಷ್ಠಾನ ಗೊಳಿಸತಕ್ಕದ್ದನ್ನು ಸರ್ಕಾರ ನೋಡಿಕೊಳ್ಳಬೇಕೆಂದು ಅವರು ಹೇಳುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಏನು ಹೇಳುತ್ತಿದ್ದಾರೆಂದರೇ, ಏಡೆಡ್ ಇನ್‌ಸ್ಟಿಟ್ಯೂಷನ್ ಏನು ಇರುತ್ತವೆ ಕೆಲವು ಪ್ರತಿಷ್ಠಿತ ಸಂಸ್ಥೆಗಳು ಇರುತ್ತವೆ. ಅಲ್ಲಿ ಏನು ಮಾಡುತ್ತಾರೆ ನಾವು 60 ಪರ್ಸೆಂಟ್ ಮೇಲೆ ತೆಗೆದುಕೊಳ್ಳುತ್ತೇವೆ, ೮೦ ಪರ್ಸೆಂಟ್ ಇದ್ದರೆ ಮಾತ್ರ ನಮ್ಮಲ್ಲಿ ಅಪ್ಲಿಕೇಷನ್ ತೆಗೆದುಕೊಳ್ಳಬಹುದು, ಅಂತಹ ಕಡೆ ಈಗ ಉದಾಹರಣೆಗೆ ಹೇಳಬೇಕೆಂದರೆ ಎಂ.ಇ.ಎಸ್. ಕಾಲೇಜ್ ಇದೆ; ವಿಜಯಾ ಕಾಲೇಜ್ ಇದೆ, ಇಂತಹ ಕಾಲೇಜುಗಳಲ್ಲಿ ನೇರವಾಗಿ ಹೋದತಕ್ಷಣವೇ ಅಪ್ಲಿಕೇಷನನ್ನು ಕೊಡುವುದಿಲ್ಲ, ನಮ್ಮಲ್ಲಿ ಮಿನಿಮಂ 80 ಪರ್ಸೆಂಟ್ ಇದ್ದರೆ ಕೊಡುತ್ತೇವೆ ಎಂದು ಹೇಳುತ್ತಾರೆ. ಹೀಗೆ ಅನೇಕ ಬೇರೆ ಜಿಲ್ಲೆಗಳಲ್ಲೂ ಕೂಡ ಈ ರೀತಿಯಾಗಿ ಪ್ರತಿಷ್ಠಿತ ಕಾಲೇಜುಗಳವರು ಅವರು ನೇರವಾಗಿ ತೆಗೆದುಕೊಳ್ಳುವುದಿಲ್ಲ, ಅಂತಹ ಕಡೆ ಇದನ್ನು ಮಾಡಬೇಕು ಎಂದು ಹೇಳಿ.

Mr. SPEAKER : As know in MES college- they observe the roster system.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಉದಾಹರಣೆಗೆ ಹೇಳಿದೆ. ಹೀಗೆ ಅನೇಕ ಕಡೆ ಜಿಲ್ಲೆಗಳಲ್ಲಿರತಕ್ಕ ರೆಪ್ಯೂಟೆಡ್ ಕಾಲೇಜುಗಳಲ್ಲಿ ನೇರವಾಗಿ ತೆಗೆದು ಕೊಳ್ಳುವುದಿಲ್ಲ, it is not Generally said.

Mr. SPEAKER : Agreed correct. But M.E.S. College is an exeption

ಶ್ರೀ ಡಿ. ಮಂಜುನಾಥ್ : ನಾನು ಅಲ್ಲಿಗೆ ಹೋದೆ.

ಹೋಗಿ ಅಡ್ಮಿಷನ್‌ಮಾಡಿಕೊಂಡಿರುವುದನ್ನು ತೆಗೆಸಿ ನೋಡಿದೆ 80 ಪರ್ಸೆಂಟ್ ಕೊಟ್ಟಿದ್ದರು. ಏನೆಂದರೆ ಅನುದಾನಿತ ಕಾಲೇಜುಗಳು ಏನಿದೆಯೋ ಅವುಗಳಿಗೆ ಸರ್ಕಾರದಿಂದ ಸ್ವಲ್ಪ ಕಂಟ್ರೋಲ್ ಇರುತ್ತದೆ. ಅಲ್ಲ ತಾವು ಉದಾಹರಣೆಯನ್ನು ಹೇಳಿದ್ದಕ್ಕಾಗಿ ಹೇಳುತ್ತಿದ್ದೇನೆ. ಅನುದಾನಿತ ಕಾಲೇಜುಗಳಲ್ಲಿ ಸರ್ಕಾರದ ಅನುದಾನವನ್ನು ಯಾರು ಪಡೆಯುತ್ತಾರೋ ಅವರಿಗೆಲ್ಲಾ ನಾವು ಹೇಳಿದ್ದೇವೆ. ಈ ವರ್ಷ ನೀವು ರೋಸ್ಟರ್ ಫಾಲೋ ಮಾಡಲೇಬೇಕು ಎಂದು. ಈಗ ಅಡ್ಮಿಷನ್ಸ್ ಬಗ್ಗೆ ಏನೂ ತೊಂದರೆ ಆಗಿಲ್ಲ, ಅಪಾಯಿಂಟ್‌ಮೆಂಟ್ ಕೊಡುವಲ್ಲಿ ಡಾ|| ಕರ್ಕಿಯವರು ಹೇಳಿದಹಾಗೆ ಅದರಲ್ಲಿ ಮೋಸ ಆಗಿದೆ. ಅದನ್ನು ಈ ಸಾರಿ ಕಡ್ಡಾಯವಾಗಿ ಹೇಳಿದ್ದೇವೆ. ನೇಮಕಾತಿಯನ್ನು ಮಾಡಿಕೊಳ್ಳುವುದರಲ್ಲಿ ಮೀಸಲಾತಿಯನ್ನು ಅನುಸರಿಸಿಲ್ಲ, ಅದನ್ನು ನಾನು ಒಪ್ಪುತ್ತೇನೆ. ಅದಕ್ಕೆ ಬೇರೆ ರೀತಿಯಲ್ಲಿ ನಾವು ಈ ಕ್ರಮವನ್ನು ತೆಗೆದುಕೊಂಡಿದ್ದು.

ಅಧ್ಯಕ್ಷರು : ಅನುದಾನಿತ ಕಾಲೇಜುಗಳಲ್ಲಿ, ಪದವಿಪೂರ್ವ ಹಂತದಲ್ಲಿ ರೋಸ್ಟರ್ ಅಡ್ಮಿಷನ್ ಮಾಡಿಕೊಳ್ಳುವಾಗ ಸಿಸ್ಟಂ ಅನ್ನು ಅನುಸರಿಸದೇ ಹೋದರೆ ಕೆಲವು ಪ್ರತಿಷ್ಠಿತ ಕಾಲೇಜುಗಳಲ್ಲಿ ನಿಮ್ಮ ಇಲಖೆಯ ಅಧಿಕಾರಿಗಳನ್ನು ಕಳುಹಿಸಿ ವೆರಿಫೈ ಮಾಡಿಸಿಕೊಳ್ಳಿ. ಅವರಿಗೆ ಅನುದಾನವನ್ನು ನಿಲ್ಲಿಸಿ, ಈಗ ಎಂ.ಇ.ಎಸ್. ಕಾಲೇಜ್‌ನಲ್ಲಿ ಪ್ರೊಫೆಸರ್ ಎಂ.ಪಿ.ಎಲ್. ಶಾಸ್ತ್ರಿಯವರು ಮೆಟಿಕ್ಯುಲಸ್ ಆಗಿ ರೋಸ್ಟರ್ ಸಿಸ್ಟಂ ಪ್ರಕಾರವೇ ಅವರು ಕೊಡುತ್ತಿದ್ದಾರೆ.

Prof. MPL Shastry was my teacher and I was a student of that school and the College both. I know this personally. But others are not doing that

ನಾವು ನಿಮ್ಮ ಕಮೀಷನರ್‌ಗೆ ಮುತ್ತಿತರ ಅಧಿಕಾರಿಗಳಿಗೆ ರಿಕ್ವೆಸ್ಟ್‌ಮಾಡಿಕೊಂಡು ಚೀಟಿಗಳನ್ನೆಲ್ಲಾ ಕಳುಹಿಸಿದರೂ, ಅವರು ಕೇರ್ ಮಾಡುವುದಿಲ್ಲ, ದುಡ್ಡು ತೆಗೆದುಕೊಂಡು ಸೀಟುಗಳನ್ನು ಕೊಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಒಮ್ಮೊಮ್ಮೆ ಹೀಗೂ ಆಗುತ್ತದೆ. ಯಾರು ಜನರಲ್ ಮೆರಿಟ್‌ನಲ್ಲಿ ಬರುತ್ತಾರೋ ಅವರಿಗೆ ಜನರಲ್ ಮೆರಿಟ್ನಲ್ಲೇ ಸೀಟು ಕೊಡಬೇಕು. ಯಾರು ಮೀಸಲಾತಿ ವ್ಯಾಪ್ತಿಯಲ್ಲಿ ಬರುತ್ತಾರೋ ಅವರಿಗೆ ಆ ಕ್ಯಾಟಗರಿಯಲ್ಲೇ ಸೀಟು ಕೊಡಬೇಕು. ಆದು ಕೆಲವು ಕಡೆ ಫಾಲೋ ಮಾಡುವುದಿಲ್ಲ, ಈ ಬಗ್ಗೆ ನಿಮಗೆ ನನ್ನದೊಂದು ಉದಾಹರಣೆ ಹೇಳುತ್ತೇನೆ. ನಮ್ಮ ಹುಡುಗ ನಿಯರ್‌ಲಿ ಶೇಕಡ 86ರಷ್ಟು ಅಂಕಗಳನ್ನು ತೆಗೆದುಕೊಂಡಿದ್ದಾನೆ. ಅವನು ಕಾಲೇಜಿಗೆ ಅಡ್ಮಿಷನ್‌ಗಾಗಿ ಅರ್ಜಿ ಸಲ್ಲಿಸಿದಾಗ, ಅದರಲ್ಲಿ ತನ್ನದು ಮೀಸಲಾತಿ ಕೋಟಾ ಎಂದು ಬರೆದಿಲ್ಲ, ಸ್ವಾಭವಿಕವಾಗಿ ಅವರ ಸ್ನೇಹಿತರೆಲ್ಲಾ ಏನು ಬರೆದಿದ್ದರೋ, ಅದೇ ರೀತಿ ಇವನೂ ಕೂಡ ಕೂಡ ಬರೆದಿದ್ದ. He is a student from Poornapragna School ಆತ ಜನರಲ್ಲಾಗಿ ಬರೆದು ಬಿಟ್ಟಿದ್ದಾನೆ. ಕ್ಯಾಸ್ಟ್ ಗೀಸ್ಟ್ ಏನೂ ಅರ್ಜಿಯಲ್ಲಿ ನಮೂದಿಸಿರಲಿಲ್ಲ, ಏಕೆಂದರೆ, ತನ್ನದು ಶೇಕಡ 86ರಷ್ಟು ಅಂಕಗಳಿವೆಯಾದ್ದರಿಂದ ನನಗೆ ಸೀಟು ಸಿಕ್ಕೇ ಸಿಗುತ್ತದೆ ಎಂದು ಆತ ಭಾವಿಸಿದ್ದ. ನಮ್ಮ ಹುಡುಗನದು ಶೇಕಡ 86ರಷ್ಟು ಅಂಕಗಳಿತ್ತು, ಆತ ಅರ್ಜಿ ಸಲ್ಲಿಸದ ಕಾಲೇಜಿನಲ್ಲಿ ಮೆರಿಟ್ ಸೀಟು ಶೇಕಡ 87ಕ್ಕೆ ನಿಂತಿತು. ಆಮೇಲೆ ನಾನು ವೆರಿಫೈ ಮಾಡಿದೆ, ಫೋನ್ ಏಕೆ ಮಾಡಬೇಕು, ನ್ಯಾಚುರಲಿ ಅವನಿಗೆ ಶೇಕಡ 86 ರಷ್ಟು ಅಂಕಗಳಿವೆ. ಅವನೂ ನನಗೆ ಹೇಳಲಿಲ್ಲ, ನಾನೂ ಅವನನ್ನು ಕೇಳಲಿಲ್ಲ, ಕೊನೆಗೆ ಒಂದೆರಡು ದಿವಸ

ಆದಮೇಲೆ ಬೇರೆಯವರಿಗೆಲ್ಲಾ ಸೀಟು ಸಿಕ್ಕಿತು, ಇವನಿಗೆ ಮಾತ್ರ ಸೀಟು ಸಿಕ್ಕಿರಲಿಲ್ಲ. ಏಕೆ ಸಿಕ್ಕಲಿಲ್ಲ ಎಂದು ನಾನು ಅವನನ್ನು ಕೇಳಿದಾಗ, ಅವನೇನೂ ಹೇಳಲಿಲ್ಲ. ಇನ್ನೂ ಎರಡನೇ ಆಯ್ಕೆ ಪಟ್ಟಿಯೊಂದನ್ನು ಕಾಲೇಜಿನವರು ಪ್ರಕಟಿಸಲಿರುವುದಾಗಿ ಹೇಳಿದ.

ಆಗ ನಾನು ಶೇಕಡ 86 ರಷ್ಟು ಅಂಕಗಳನ್ನು ತೆಗೆದುಕೊಂಡರೂ ಇವನಿಗೆ ಏಕೆ ಸೀಟು ಸಿಕ್ಕಲಿಲ್ಲ ಎಂದು ಕುತೂಹಲದಿಂದ ನಾನೇ ನೇರವಾಗಿ ಕಾಲೇಜಿಗೆ ಫೋನ್ ಮಾಡಿದೆ. ಫೋನ್ ಮಾಡಿದ ಮೇಲೆ, ನಿಮ್ಮ ಹುಡುಗ ತನ್ನ ಅರ್ಜಿಯಲ್ಲಿ ಕ್ಯಾಸ್ಟ್ ಏನೂ ನಮೂದಿಸಿದಂತೆ ಕಾಣುತ್ತಿಲ್ಲ ಎಂದು ಅಲ್ಲಿಯವರು ನನಗೆ ಹೇಳಿದರು. ಜನರಲ್ ಮೆರಿಟ್‌ನಲ್ಲೇ ಸೀಟು ಸಿಗುವ ಸಂಭವಿರುವಾಗ ಅವನು ಕ್ಯಾಸ್ಟ ಏಕೆ ನಮೂದಿಸಲು ಹೋಗುತ್ತಾನೆ. ಕ್ಯಾಸ್ಟ್ ಅವಶ್ಯಕತೆ ಎಲ್ಲಿ ಇದೆಯೋ ಅಲ್ಲಿ ಅದನ್ನು ಹೇಳಬಹುದು. ಅನಾವಶ್ಯಕವಾಗಿ ಕ್ಯಾಸ್ಟ್ ಹೆಸರು ಏಕೆ ಹೇಳಬೇಕು? ಕೊನೆಗೆ ರ್‍ಯಾಟಿಫೈ ಮಾಡಿದರು, ಆ ಮಾತು ಬೇರೆ. ಕೆಲವು ಸಲ ಹೀಗಾಗುತ್ತದೆ. ಕೆಲವರು ಜನರಲ್ ಮೆರಿಟ್‌ನಲ್ಲಿ ಮೀಟ್ ಮಾಡುವುದನ್ನು ಬಿಟ್ಟು ರಿಸರ್‌ವೇಷನ್‌ನಲ್ಲಿ ತೆಗೆದುಕೊಂಡು ಬಿಡುತ್ತಾರೆ.

ಶ್ರೀ ಅಶೋಕ್‌ಕಾಟ್ವೆ : ಅಡ್ಮಿನ್ ಪರ್ಸೆಂಟೇಜ್ ಹೆಚ್ಚಾಗಿ, 60-70 ಪರ್ಸೆಂಟೇಜ್ ಅಂಕಗಳನ್ನು ಪಡೆದವರಿಗೆ ಮಾತ್ರ ಅಪ್ಲಿಕೇಷನ್ ಕೊಡುವುದು ನಮ್ಮ ಹುಬ್ಬಳ್ಳಿಯಲ್ಲಿ ಕೂಡ ಆಗಿದೆ. ರೋಸ್ಟರ್ ಪದ್ಧತಿಯನ್ನು ಅಡ್ಮಿಷನ್ ನೀಡುವಲ್ಲಿ ಆ ಕಾಲೇಜುಗಳು ಅನುಸರಿಸಿಲ್ಲ. ಆ ಬಗ್ಗೆ ಮಂತ್ರಿಗಳು ಪರಿಶೀಲನೆ ಮಾಡಬೇಕು.

ಶ್ರೀ ಡಿ. ಮಂಜುನಾಥ್ : ಅನುದಾನ ಪಡೆಯತಕ್ಕ ಕಾಲೇಜುಗಳಲ್ಲಿ ಕಡ್ಡಾಯವಾಗಿ ರೋಸ್ಟರ್‌ಪದ್ಧತಿಯನ್ನು ಫಾಲೋ ಮಡಬೇಕೆಂದು ನಾವು ಸುತ್ತೋಲೆಯನ್ನು ಹೊರಡಿಸಿದ್ದೇವೆ. ನಾನು ಕೆಲವು ಕಾಲೇಜುಗಳಿಗೆ ಖುದ್ದಾಗಿ ಭೇಟಿ ಕೊಟ್ಟಾಗ ಅಡ್ಮಿಷನ್ ರಿಜಿಸ್ಟರ್ಸ್‌ಗಳನ್ನು ತರಿಸಿ ನೋಡಿದ್ದೇನೆ. ಆದರೆ ಅನುದಾನ ಪಡೆಯದಿರುವ ಕೆಲವು ಕಾಲೇಜ್‌ಗಳಲ್ಲಿ ಈ ರೀತಿ ಮಾಡುತ್ತಿದ್ದಾರೆ. ಸರ್ಕಾರದವರು ಯಾವ ಯಾವ ಕಾಲೇಜುಗಳಿಗೆ ಅನುದಾನ ಕೊಡುತ್ತಾರೋ, ಅಂತಹ ಕಾಲೇಜುಗಳ ಮೇಲೆ ಸರ್ಕಾರದ ಹಿಡಿತ ಇದೆ. ಬೇರೆ ಕಾಲೇಜುಗಳಲ್ಲಿ ನೀವು ಹೇಳಿದ ರೀತಿ ಮಾಡುತ್ತಿದ್ದಾರೆ ಎನ್ನುವುದಾದರೇ ಅದನ್ನು ಸರಿಪಡಿಸೋಣ.

ಶ್ರೀ ಅಶೋಕ್ ಕಾಟ್ವೆ : ಅನುದಾನ ಪಡೆದಂತಹ ಕಾಲೇಜ್‌ಗಳಲ್ಲೂ ಸಹ ಎಲ್ಲರಿಗೂ ಅಪ್ಲಿಕೇಷನ್ ಕೊಡುತ್ತಿಲ್ಲ, 60-80 ಶೇಕಡಾವಾರು ಅಂಕಗಳನ್ನು ತೆಗೆದು ಕೊಂಡವರಿಗೆ ಮಾತ್ರ ಅಡ್ಮಿಷನ್ ಕೊಡುತ್ತಿದ್ದಾರೆ. ಇದರಿಂದಾಗಿ ಕೆಲವು ಜನರಿಗೆ ಅನ್ಯಾಯವಾಗಿದೆ.

ಅಧ್ಯಕ್ಷರು: ಬೆಂಗಳೂರು, ಮೈಸೂರು ಹಾಗೂ ಹುಬ್ಬಳ್ಳಿ ಇಂತಹ ನಗರಗಳಲ್ಲಿ ಪ್ರೈವೇಟ್ ಕಾಲೇಜಿನವರು ಪಿ.ಯು.ಸಿ. ಲೆವೆಲ್‌ನಲ್ಲಿ ಏನು ಮಾಡುತ್ತಾರೆ ಎಂದರೆ, ಅಂತಹ ಕಾಲೇಜುಗಳ ಹೆಸರನ್ನು ಇಲ್ಲಿ ಪ್ರಸ್ತಾಪಿಸುವುದು ಬೇಡ, ದುಡ್ಡು ತೆಗೆದುಕೊಳ್ಳುವ ಸಲುವಾಗಿ ಉದ್ದೇಶಪೂರ್ವಕವಾಗಿಯೇ ಈಗಾಗಲೇ ಅಡ್ಮಿಷನ್ ಹೋಗಿದೆ, ಮುಗಿದು 80-88 ಶೇಕಡಾವಾರು ಅಂಕಗಳವರೆಗೆ ಅಡ್ಮಿಷನ್ ನೀಡಿದ್ದೇವೆ ಎಂದು ಹೇಳುತ್ತಾರೆ. ಆಮೇಲೆ, 15-20 ಸಾವಿರ ರೂಪಾಯಿಗಳನ್ನು ಕೊಟ್ಟರೆ ಸೀಟು ಎಲ್ಲರಿಗೂ ಕೊಡುತ್ತಾರೆ. ಹೀಗೆ ಜನರನ್ನು ಎಕ್ಸ್‌ಪ್ಲಾಯ್ಟ್ ಮಾಡುತ್ತಾ ಹೋಗುತ್ತಾರೆ. ನಿಮ್ಮ ಇಲಾಖೆಯವರು ಸ್ವಲ್ಪ ವಿಜಿಲೆಂಟ್ ಆಗಿ ಇರಬೇಕು. ನೀವು ಮತ್ತು ನಿಮ್ಮ ಅಧಿಕಾರಿಗಳು ವಿಜಿಲೆಂಟ್ ಆಗಿದ್ದರೆ ಈ ಸಮಸ್ಯೆ ಬಗೆಹರಿಯುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಅದಕ್ಕಿಂತ ಗ್ರಾಮೀಣ ಪ್ರದೇಶಗಳಲ್ಲಿ ಇರುವವರು ಹೆಚ್ಚುನಷ್ಟ ಅನುಭವಿಸುತ್ತಿದ್ದರೆ. ಕಾಲೇಜ್‌ನವರು ಶೇಕಡಾವಾರು ಅಂಕಗಳ ಆಧಾರದ ಮೇಲೆ ಸೀಟುಗಳನ್ನು ಹಂಚಿದಾಗ, ಬಡ ವಿದ್ಯಾರ್ಥಿಗಳಿಗೆ ದೂರದಲ್ಲಿರುವ ಕಾಲೇಜಿಗೆ ಬಸ್‌ನಲ್ಲಿ ಹೋಗುವುದಕ್ಕಾಗುವುದಿಲ್ಲ, ಅದಕ್ಕಾಗಿ ಆ ಕಮ್ಯೂನಿಟೀಸ್‌ನಲ್ಲಿರುವ ಸ್ಟೂಡೆಂಟ್ಸ್‌ಗಳಿಗೆ ಸೀಟು ಕೊಡುವ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಇಲ್ಲದಿದ್ದರೆ ದೂರದ ಕಾಲೇಜುಗಳಿಗೆ ಹೋಗುವುದಕ್ಕೆ ಕಷ್ಟವಾಗುತ್ತದೆ.

ಶ್ರೀ ಸಿ.ಹೆಚ್. ವಿಜಯಶಂಕರ್ ; ಕೆಲಸಕ್ಕೆ ತೆಗೆದುಕೊಳ್ಳುವಂತಹ ವಿಚಾರದಲ್ಲಿ ವ್ಯತ್ಯಾಸ ಮತ್ತು ತಾರತಮ್ಯ ಆಗುತ್ತಾ ಇದೆ ಎನ್ನುವಂತಹ ವಿಚಾರ ಇಲ್ಲಿ ಪ್ರಸ್ತಾಪ ಆಯಿತು. ನಾನು ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಸರ್ಕಾರದವರ ಗಮನಕ್ಕೆ ತರುತ್ತೇನೆ ಮೊದಲು ಸಂದರ್ಶನಕ್ಕೆ ಕರೆ ಕಳುಹಿಸುವ ಸಂದರ್ಭದಲ್ಲಿ 1:10 ಅನುಪಾತವನ್ನು ಅನುಸರಿಸುವ ವ್ಯವಸ್ಥೆ ಇತ್ತು. ಆದರೆ ಅದು ಈಗ 1:5 ಅನುಪಾತಕ್ಕೆ ಇಳಿಸಿದ್ದಾರೆ. ಈ ರೀತಿ ಆಗಬಾರದು. ಅವನಿಗೆ ಕೆಲಸ ಸಿಗುತ್ತದೆಯೋ ಅಥವಾ ಇಲ್ಲವೋ, ಕನಿಷ್ಟ ಪಕ್ಷ ಸಂದರ್ಶನಕ್ಕಾದರೂ ಅವರು ಬರುವಂತಹ ಅವಕಾಶವನ್ನು ಸರ್ಕಾರ ಮಾಡಿ ಕೊಡಬೇಕಾಗುತ್ತದೆ. ಹಿಂದಿನಂತೆ 1:10ರ ಅನುಪಾತದಲ್ಲಿ ಸಂದರ್ಶನಕ್ಕೆ ಕರೆ ಕಳುಹಿಸುವ ವ್ಯವಸ್ಥೆಯನ್ನು ಜಾರಿಗೊಳಿಸಬೇಕು. ಕನಿಷ್ಟ ಪಕ್ಷ ನಾನು ಸಂದರ್ಶನಕ್ಕಾದರೂ ಹಾಜರಾದೆ ಎನ್ನುವಂತಹ ಆತ್ಮ ತೃಪ್ತಿಯಾದರೂ ಸಿಗದಿರುವಂತಹ ವಾತಾವರಣ ಈಗ ನಿರ್ಮಾಣವಾಗಿದೆ. ದಯವಿಟ್ಟು ಅದನ್ನು ಬದಲಾಯಿಸಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಬೆಂಗಳೂರಿನಲ್ಲಿರತಕ್ಕ ಕಾಲೇಜುಗಳು ಯಾವ ರೀತಿ ಅಡ್ಮಿಷನ್ ಕೊಡಬೇಕು ಎಂಬ ಬಗ್ಗೆ ಆಲೋಚನೆ ಮಾಡಬೇಕು. ಈ ಶೈಕ್ಷಣಿಕ ವರ್ಷವಂತೂ ಆಗಿ ಹೋಗಿದೆ. ಬರುವ ಶೈಕ್ಷಣಿಕ ವರ್ಷದಲ್ಲಾದರೂ ಈಗಿರತಕ್ಕ ವಿಜಯ ಕಾಲೇಜ್,, ನ್ಯಾಷನಲ್ ಕಾಲೇಜ್, ಎಂ.ಇ.ಎಸ್. ಕಾಲೇಜ್, ರಾಷ್ಟ್ರೀಯ ವಿದ್ಯಾಲಯ ಅಂತಹ 10-15 ಕಾಲೇಜುಗಳು ಮತ್ತು ಮೈಸೂರಿನಲ್ಲಿರತಕ್ಕ ಚಾಮರಾಜೇಂದ್ರ ಕಾಲೇಜ್, ಸೆಂಟ್ ಮಾರ್ಕ್ಸ್ ಕಾಲೇಜ್, ಹಾಗೂ ಮರಿಮಲ್ಲಪ್ಪ ಕಾಲೇಜುಗಳು ಮತ್ತು ನಮ್ಮ ಹುಬಳ್ಳಿಯಲ್ಲಿ ಇಂತಹ ಎಷ್ಟು ಕಾಲೇಜುಗಳಿವೆಯೋ, ಅಂತಹ ಕಾಲೇಜುಗಳಿಗೆ ಆಯಾ ಯೂನಿವರ್ಸಿಟಿಗಳಿಗೆ ಪಿ.ಯು.ಸಿ. ಬೋರ್ಡ್‌ನಿಂದ ಪದವಿ ಪೂರ್ವ ಪ್ರವೇಶಕ್ಕಾಗಿ ಕಾಮನ್ ಅಪ್ಲಿಕೇಶನ್‌ಫಾರ್ಮ್ ಪ್ರಿಂಟ್ ಮಾಡಿಸಿ ಆ ಕಾಲೇಜುಗಳಿಗೆ ಕೊಡಬೇಕು. ಆ ರೀತಿ ನೀವು ಎಲ್ಲಾ ಕಾಲೇಜುಗಳಿಗೆ ಅನ್ವಯವಾಗುವಂತೆ ಕಾಮನ್ ಅಪ್ಲಿಕೇಷನ್ ಫಾರ್ಮ್ ಪ್ರಿಂಟ್ ಮಾಡಿಸಿ ಬಿಟ್ಟರೆ, you will have your own grip on those colleges. ಅಲ್ಲಿಂದ ಮುಂದಕ್ಕೆ ಪ್ರೋಸಸ್ ಮಾಡಿಕೊಂಡು ಹೋಗಬಹುದು. ಪದವಿ ಪೂರ್ವ ಪ್ರವೇಶಕ್ಕಾಗಿಯೇ ಕಾಮನ್ ಅಪ್ಲಿಕೇಶನ್ ಫಾರ್ಮ್ ಇರಬೇಕು. ಎಂ.ಇ.ಎಸ್. ಅಥವಾ ಇನ್ನಿತರ ಕಾಲೇಜುಗಳ ಅರ್ಜಿ ಫಾರಂಗಳು ಪ್ರತ್ಯೇಕವಾಗಿ ಇರಬಾರದು. ಈ ಬಗ್ಗೆ ನಮ್ಮ ಸ್ಪೀಕರ್ ಸಾಹೇಬರು ಬಹಳ ಚೆನ್ನಾಗಿ ಹೇಳಿದರು. ನನ್ನ ಅನುಭವದಲ್ಲಿ ಕಾಲೇಜುಗಳಲಿ ಸೀಟು ತೆಗೆದಕೊಳ್ಳುವುದರ ಬಗ್ಗೆ ಹೇಳುವುದಾದರೆ, ನಾನು 1962ರಲ್ಲಿ ವಿಜಯ ಕಾಲೇಜ್‌ನಲ್ಲಿ ಓದುತ್ತಿದ್ದೆ. ಆಗ ಅಲ್ಲಿ ವಿ.ಟಿ. ಶ್ರೀನಿವಾಸನ್ ಎಂಬುವವರು ಇದ್ದರು. ಆಗ ಪಿ.ಯು.ಸಿ.ಗೆ ಕಾಮನ್ ಅಪ್ಲಿಕೇಷನ್ಸ್ ಇತ್ತು. ಈಗ ನೀವೇನು ಮಾಡಬೇಕು ಅಂದರೆ, ಆಯಾ ಕಾಲೇಜುಗಳು ಅಪ್ಲಿಕೇಷನ್‌ಗಳನ್ನು ಪ್ರಿಂಟ್ ಮಾಡಲು ಬಿಡಬಾರದು. ಪಿ.ಯು.ಸಿ. ಬೋರ್ಡ್ ಅವುಗಳನ್ನು ಪ್ರಿಂಟ್ ಮಾಡಬೇಕು. ತಾವು ಯೂನಿವರ್ಸಿಟಿ ವೈಸ್ ಛಾನ್ಸಲರ್ ಅವರನ್ನು ಕರೆದು, ಈ ರೀತಿಯ ಒಂದು ವ್ಯವಸ್ಥೆ ಮಾಡಿದರೆ ಬಹಳ ಅನುಕೂಲವಾಗುತ್ತದೆ.

ಶ್ರೀ ಮಂಜುನಾಥ್ ಸಿ. ಕುನ್ನೂರು : ಮಾನ್ಯ ಅಧ್ಯಕ್ಷರೇ, ಮೀಸಲು ನೀತಿಯ ಬಗ್ಗೆ ಈ ಅಧಿವೇಶನ ಮುಗಿಯುವುದರೊಳಗಾಗಿ ಒಂದು ಪ್ರತ್ಯೇಕವಾದ ಚರ್ಚೆ ಮಾಡಿದರೆ ವಿದ್ಯಾರ್ಥಿಗಳಿಗೆ ನಾವು ದೊಡ್ಡ ಉಪಕಾರವನ್ನು ಮಾಡಿದಂತಾಗುತ್ತದೆ.

ಅಧ್ಯಕ್ಷರು : ಮಾಡೋಣ. ಇದು ಒಳ್ಳೆಯ ಸಲಹೆ.

ಶ್ರೀ ಹೆಚ್.ಡಿ. ಬಸವರಾಜ್ : ಮಾನ್ಯ ಅಧ್ಯಕ್ಷರೇ, ತಮ್ಮಲ್ಲಿ ನನ್ನ ಕಳಕಳಿಯ ಮನವಿ ಏನಿತ್ತು ಎಂದರೆ.....

ಅಧ್ಯಕ್ಷರು : ಮಾನ್ಯ ಬಸವರಾಜ್‌ರವರೇ, ಮಧ್ಯೆ ಇಂಟರ್‌ಫಿಯರ್ ಆಗಿರುವುದನ್ನು ಬಿಟ್ಟು ನೀವು ಈಗಾಗಲೇ ಒಟ್ಟು 54 ನಿಮಿಷ ಮಾತನಾಡಿದ್ದೀರಿ. ಇನ್ನೂ ಎಷ್ಟು ಹೊತ್ತು ಮಾತನಾಡುತ್ತೀರಿ ?

ಶ್ರೀ ಹೆಚ್.ಡಿ. ಬಸವರಾಜ್ : ಬೇಗ ಮುಗಿಸುತ್ತೇನೆ

ಅಧ್ಯಕ್ಷರು : ನೀವು ಹೆಚ್ಚು ಮಾತನಾಡಿದರೆ ಬೇರೆ ಸದಸ್ಯರಿಗೆ ಸಮಯ ಬಹಳ ಕಡಿಮೆಯಾಗುತ್ತದೆ ನಿಮ್ಮ ಪಕ್ಷದವರು ಯಾರೂ ಮಾತನಾಡಲಿಕ್ಕೇ ಆಗುವುದಿಲ್ಲ.

ಶ್ರೀ ಹೆಚ್.ಡಿ. ಬಸವರಾಜ್ : ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಮಂತ್ರಿಗಳಲ್ಲಿ ತಮ್ಮ ಮೂಲಕ ಮನವಿ ಮಾಡಿಕೊಳ್ಳುವುದೇನೆಂದರೆ, ಅನುದಾನಿತ ಕಾಲೇಜುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಯಾವ ರೀತಿ ಮೀಸಲಾತಿ ಕೊಡಬೇಕಾಗಿತ್ತೋ, ಪಿ.ಯು.ಸಿ. ಮಟ್ಟದಲ್ಲಾಗಲಿ, ಪ್ರೊಫೆಷನ್ ಕಾಲೇಜುಗಳ ಬಗ್ಗೆ ನಾನು ಮಾತನಾಡುತ್ತಿಲ್ಲ, ಅಥವಾ ಬೇರೆ ಇಂಜನಿಯರಿಂಗ್ ಕಾಲೇಜುಗಳ ಬಗ್ಗೆ ನಾನು ಮಾತನಾಡುತ್ತಿಲ್ಲ, ಅಲ್ಲಿ ಸರಿಯಾದ ವ್ಯವಸ್ಥೆ ಇಲ್ಲ, ದಯವಿಟ್ಟು ಆ ಬಗ್ಗೆ ಗಮನ ಕೊಡಿ ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಇಷ್ಟಕ್ಕೇ ಆ ವಿಷಯವನ್ನು ಬಿಡುತ್ತೇನೆ. ಇನ್ನು ಎರಡನೆಯದಾಗಿ, ಇನ್ನೊಂದು ಸಲಹೆ ಏನು ಕೊಡುತ್ತಿದ್ದೇನೆ ಎಂದರೆ, ಎಲ್ಲಿ ಕಾಲೇಜುಗಳು ಮೀಸಲಾತಿ ನಿಯಮವನ್ನು ಪಾಲಿಸುವುದಿಲ್ಲವೋ ಅಂತಹ ಸಂಸ್ಥೆಗಳ ಮನ್ನಣೆಯನ್ನು ದಯವಿಟ್ಟು ತೆಗೆದು ಹಾಕಿ. ಆಗ ಅವರಿಗೂ ಒಂದು ರೀತಿಯ ಭಯ ಬರುತ್ತದೆ ಮತ್ತು ಅವರು ಮೀಸಲಾತಿಯನ್ನು ಕಡ್ಡಾಯವಾಗಿ ಪಾಲಿಸುತ್ತಾರೆ. ನಿಮ್ಮ ದಾರಿಗೆ ಅವರೇ ಬರುತ್ತಾರೆ. ಅನುದಾನಿತ ಕಾಲೇಜುಗಳು ಮತ್ತು ಅನುದಾನಿತ ಸಂಸ್ಥೆಗಳು ಯಾವುದಿದೆ, ಅಂತಹ ಸಂಸ್ಥೆಗಳಲ್ಲಿ ಮೀಸಲಾತಿಯನ್ನು ಅವರು ಹೇಗೆ ಅನುಸರಿಸುತ್ತಿದ್ದಾರೆ ಎಂಬ ಬಗ್ಗೆ ನೋಡಬೇಕು. ಇಲ್ಲೂ ಕೂಡ ಇದೇ ರೀತಿಯ ವಂಚನೆ ನಡೆಯುತ್ತಿದೆ ಅನುದಾನ ಪಡೆಯುವಾಗ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಅಲ್ಪಸಂಖ್ಯಾತರ ಬಗ್ಗೆ ಮತ್ತು ಇತರ ಸಮುದಾಯದ ಬಗ್ಗೆ ವರ್ಗಗಳ ಬಗ್ಗೆ ಇದ್ದ ಕಾಳಜಿಯನ್ನು ಅವರಿಗೆ ಮನ್ನಣೆ ಸಿಕ್ಕ ತಕ್ಷಣ ಅವರುಗಳು ಮರೆತು ಬಿಡುತ್ತಾರೆ. ತಮಗೆ ಬೇಕಾದಂತಹ ವ್ಯಕ್ತಿಗಳನ್ನು ಅವರು ನೇಮಕಾತಿ ಮಾಡಿಕೊಳ್ಳುತ್ತಾರೆ. ಆ ವ್ಯಕ್ತಿಗಳನ್ನು ಮಾತ್ರ ಪೋಷಣೆ ಮಾಡುತ್ತಾರೆ. ಮಾನ್ಯ ಅಧ್ಯಕ್ಷರ ಮೂಲಕ ನಾನು ಸರ್ಕಾರಕ್ಕೆ ಕಿವಿ ಮಾತು ಹೇಳುವುದೇನೆಂದರೆ, ಅಂತಹ ಸಂಸ್ಥೆಗಳನ್ನು ನಿರ್ದಾಕ್ಷಿಣ್ಯವಾಗಿ ಡಿ-ರೆಕಗ್ನೈಸ್ ಮಾಡಿ. ಆಗ ಅವುಗಳು ನಿಮ್ಮ ಹತೋಟಿಗೆ ಬರುತ್ತವೆ. ನಿಮ್ಮ ಹಾದಿಗೆ ಬರುತ್ತಾರೆ ಹಾಗೂ ನೀವು ಹೇಳಿದಂತೆ ಕೇಳುತ್ತಾರೆ. ಈ ಸಂದರ್ಭದಲ್ಲಿ ಅಷ್ಟು ವಿಷಯವನ್ನು ಮಾತ್ರ ಈ ಬಗ್ಗೆ ಮಾತನಾಡುವುದಕ್ಕೆ ನಾನು ಇಚ್ಛೆ ಪಡುತ್ತೇನೆ. ಏಕೆಂದರೇ ಮಾನ್ಯ ಅಧ್ಯಕ್ಷರು ನನಗೆ ಟೈಮ್ ಲಿಮಿಟ್ ಹಾಕಿರುವುದರಿಂದ ನಾನು ಆದಷ್ಟು ಬೇಗ ಭಾಷಣವನ್ನು ಮುಗಿಸಬೇಕಾಗಿದೆ.

ಅಧ್ಯಕ್ಷರು : ನಾನು ಲಿಮಿಟ್ ಹಾಕಿದ್ದು ನಿಮ್ಮ ಪಕ್ಷಕ್ಕೆ ನಿಮಗಲ್ಲ.

ಶ್ರೀ ಹೆಚ್.ಡಿ. ಬಸವರಾಜ್ : ತಾವು ಹೇಳಿದ್ದುದು ನನಗೆ ಅರ್ಥವಾಯಿತು. ಕೊನೆಯದಾಗಿ ಬ್ಯಾಕ್‌ಲಾಗ್ ಅನ್ನು ಸರ್ಕಾರ ಬೇಗ ಫಿಲಪ್ ಮಾಡಿ ಎಂದು ಒತ್ತಾಯ ಮಾಡುತ್ತೇನೆ. ಬ್ಯಾಕ್‌ಲಾಗ್ ಫಿಲಪ್ ಆಗಿ ಈಗಾಗಲೇ ಬಹಳಷ್ಟು ವರ್ಷಗಳಾಗಿದೆ. ಇಲ್ಲೊಬ್ಬರು ಮಾನ್ಯ ಸದಸ್ಯರು 48 ವರ್ಷವಾಯಿತು ಎಂದು ಹೇಳಬೇಡಿ ಎಂದು ಹೇಳಿದರು. ಆದ್ದರಿಂದ ನಾನು ಅವನ್ನು ಹೇಳುವುದಕ್ಕೆ ಹೋಗುವುದಿಲ್ಲ, ಅದನ್ನೇ ಬೇರೆ ರೀತಿಯಿಂದ ಹೇಳುತ್ತಿದ್ದೇನೆ. ಬ್ಯಾಕ್‌ಲಾಗ್ ಅನ್ನು ಫಿಲಪ್ ಮಾಡುವಂತಾದ್ದು ಬೇಕಾದಷ್ಟು ಉಳಿದುಕೊಂಡಿದೆ. ತಮ್ಮ ಅವಧಿಯಲ್ಲಾದರೂ ದಯವಿಟ್ಟು ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸಿಗಬೇಕಾಗಿರುವಂತಹ ಸೌಲಭ್ಯ ಈಗಲಾದರೂ ಸಿಗುವಂತಹ ವ್ಯವಸ್ಥೆ ಮಾಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಅದೇ ರೀತಿ ಬಡ್ತಿ ವಿಚಾರದಲ್ಲಿ ಕೂಡ ಅವರು ಸರಿಯಾದ, ವ್ಯವಸ್ಥಿತವಾದಂತಹ ರೀತಿಯಲ್ಲಿ ಮಾಡುತ್ತಿಲ್ಲ. ಅವರಿಗೆ ಬೇಕಾದವರಿಗೆ ಬಡ್ತಿ ಕೊಡುತ್ತಿದ್ದಾರೆ, ಬೇಡದೇ ಇದ್ದದ್ದರ ಮೇಲೆ ಕ್ಷುಲ್ಲಕ ಆಪಾದನೆಗಳನ್ನು ಹೊರಿಸಿ, ಅವರನ್ನು ಬಡ್ತಿಯಿಂದ ದೂರ ಇರಿಸುತ್ತಿದ್ದಾರೆ. ದಯವಿಟ್ಟು ಅಂತಹ ಸಂದರ್ಭಗಳಲ್ಲಿ ಎಲ್ಲೆಲ್ಲಿ ಪರಿಪಾಲನೆ ಮಾಡುತ್ತಿಲ್ಲವೋ, ಬಡ್ತಿ ವಿಚಾರದಲ್ಲಿ ಅಂತಹ ವ್ಯಕ್ತಿಗೆ, ಅಂತಹ ಪ್ರಕರಣಗಳನ್ನು ಪತ್ತೆ ಮಾಡಿ, ದಯವಿಟ್ಟು ಅಂತಹ ಪ್ರಕರಣಗಳಲ್ಲಿ ನನ್ನ ಸಹೋದರರಿಗೆ ಆಗಿರುವಂತಹ ಅನ್ಯಾಯವನ್ನು ತಡೆಹಿಡಿಯಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಕೊನೆಯದಾಗಿ ಹೇಳುವುದಾದರೆ, ಜಿಲ್ಲಾ ಪಂಚಾಯಿತಿಯಲ್ಲಿ ಪರಿಶಿಷ್ಟ ಪಂಗಡದವರಿಗೆ ಬಹಳಷ್ಟು ಈ ಸರ್ಕಾರ ಅನ್ಯಾಯ ಮಾಡಿದೆ. ಇದನ್ನು ಪ್ರತಿ ಸಲ ನಾನು ಉಲ್ಲೇಖ ಮಾಡಿರಬಹುದು. ನಾನು ಈ ವಿಚಾರವನ್ನು ಕೊನೆಯ ಅಂಶವಾಗಿ ಹೇಳುತ್ತಿದ್ದೇನೆ. ದಯವಿಟ್ಟು ಈಗ ನೀವು ಮಾಡಿರುವಂತಹ ಅನ್ಯಾಯವನ್ನು ಮುಂದಿನ ವರೆಸಿಕೊಂಡು ಹೋಗಬೇಡಿ ಎಂದು ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರವನ್ನು ಕೇಳಿ ಕೊಳ್ಳುತ್ತಿದ್ದೇನೆ. ಏಕೆಂದರೆ ಹಾಸನ, ಬೆಂಗಳೂರು (ಗ್ರಾಮಾಂತರ) ಈ ಮೂರು ಜಿಲ್ಲೆಗಳಲ್ಲಿ ಪರಿಶಿಷ್ಟ ಪಂಗಡದವರನ್ನು ತಾವು ಸಂಪೂರ್ಣವಾಗಿ ತುಳಿದಿದ್ದೀರಿ. ಇದೇ ರೀತಿಯ ಪ್ರವೃತ್ತಿ ಮುಂದುವರೆದುಕೊಂಡು ಬಂತು ಎಂದರೆ, ಮುಂದಿನ ಚುನಾವಣೆಗಳಲ್ಲಿ ಅದರ ಪ್ರಖರತೆ ಏನು ಎಂಬುದು ತಮಗೆ ಗೊತ್ತಾಗುತ್ತದೆ. ಆದ್ದರಿಂದ ಮುಂಬರುವ ದಿನಗಳಲ್ಲಾದರೂ ತಾವು ಸುಧಾರಣೆ ಮಾಡಿಕೊಂಡು ಆ ಜನಾಂಗಕ್ಕೆ ಮೇಲೆ ಬರುವಂತಹ ಒಂದು ಕಾರ್ಯವನ್ನು ಹಾಕಿಕೊಂಡು ಆ ಜನಾಂಗವನ್ನು ಮೇಲೆತ್ತಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರ ಮೂಲಕ ತಮ್ಮನ್ನು ಕೇಳಿಕೊಳ್ಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರು ಇಷ್ಟು ಮಾತನಾಡಲು ಈ ದಿವಸ ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಾನು ಮತ್ತೊಮ್ಮೆ ನನ್ನ ಧನ್ಯವಾದ ಮತ್ತು ಕೃತಜ್ಞತೆಗಳನ್ನು ಅರ್ಪಿಸಿ ನನ್ನ [illegible]ನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಇವತ್ತಿನ ಕಡೇ ಭಾಷಣವನ್ನು ಮಾನ್ಯ ಸದಸ್ಯರಾದ ಶ್ರೀಶೈಲಪ್ಪರವರು ಮಾಡುತ್ತಾರೆ. ಮಾನ್ಯ ಸದಸ್ಯರುಗಳು ಇನ್ನೊಂದು ಸ್ವಲ್ಪ ಹೊತ್ತು ಸಹಕರಿಸಿ. ದಯವಿಟ್ಟು ನೀವು ಅವರಿಗೆ ಮಾತನಾಡಲು ಗಾಬರಿ ಉಂಟು ಮಾಡದೇ ಉತ್ಸಾಹ ತುಂಬಿ. ಮಾತನಾಡಲು ಅವಕಾಶ ಮಾಡಿಕೊಡಿ. ಅವರಿನ್ನೂ ಹೊಸ ಸದಸ್ಯರಿದ್ದಾರೆ. ನೀವು ಹಿರಿಯರೆಲ್ಲಾ ಅವರಿಗೆ ಮಾತನಾಡಲು ಅವಕಾಶ ಮಾಡಿಕೊಡಿ.

ಶ್ರೀ ವಾಟಾಳ್ ನಾಗರಾಜ್ : ನಾವು ನಿಮ್ಮ ಜೊತೆಯಲ್ಲಿ ಕುಳಿತಿದ್ದೇವೆ. ಮಾನ್ಯ ಸದಸ್ಯರುಗಳು ಬಹಳಷ್ಟು ಜನ ಎದ್ದು ಹೋಗಿದ್ದಾರೆ. ಸ್ವಲ್ಪ ನಮ್ಮ ಬಗ್ಗೆ ನಿಮ್ಮ ಕರುಣೆ ಇದೆಯೋ? ಹೇಗೆ?

ಅಧ್ಯಕ್ಷರು : ನಿಮಗೆ ನಾನು ಎಷ್ಟು ಗೌರವ ಕೊಡುತ್ತೇನೆ ಎಂಬುದು ಇಡೀ ಸದನಕ್ಕೇ ಗೊತ್ತು.

ಶ್ರೀ ವಾಟಾಳ್ ನಾಗರಾಜ್ : ಅದು ಇಡೀ ದೇಶಕ್ಕೆ ಗೊತ್ತು ಎಂದು ಮಾನ್ಯ ಸದಸ್ಯರಾದ ನಾಗೇಗೌಡರು ಹೇಳುತ್ತಿದ್ದಾರೆ.

8.00 ಪಿ.ಎಂ

+ ಶ್ರೀ ಶ್ರೀ ಶೈಲಪ್ಪ ವಿರೂಪಾಕ್ಷಪ್ಪ ಬಿದರೂರು (ರೋಣ) : ಸನ್ಮಾನ್ಯ ಅಧ್ಯಕ್ಷರೆ, 1995-96ನೇ ಸಾಲಿನ ಕೃಷಿ, ತೋಟಗಾರಿಕೆ ಮತ್ತು ಪಶುಸಂಗೋಪನಾ ಇಲಾಖೆಗಳ ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ನನ್ನ ಕೆಲವು ಅನಿಸಿಕೆಗಳನ್ನು ವ್ಯಕ್ತಪಡಿಸುವುದಕ್ಕೆ ಇಚ್ಛೆಪಡುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಕೃಷಿಯನ್ನು ಅವಲಂಬಿಸಿರತಕ್ಕಂತಹ ಶೇಕಡ 75 ರಷ್ಟು ಜನ ಇದ್ದು, ಆ ಜನರ ಆರ್ಥಿಕ ಮಟ್ಟವನ್ನು ಸುಧಾರಣೆ ಮಾಡುವಲ್ಲಿ, ಈ ಇಲಾಖೆಯ ಗಣನೀಯವಾದಂಥ ಪಾತ್ರವಿದೆ. ಕೃಷಿ ಅಭಿವೃದ್ಧಿ ತನ್ಮೂಲಕ ಗ್ರಾಮಗಳ ಅಭಿವೃದ್ಧಿಯಿಂದಾಗಿ ಆರ್ಥಿಕವಾಗಿ ಸಬಲವಾದ ರಾಜ್ಯವನ್ನು ನಾವು ಕಟ್ಟಲು ಸಾಧ್ಯ. ರೈತ ಈ ರಾಜ್ಯದ ಬೆನ್ನೆಲುಬು. ರೈತನ ಅಭಿವೃದ್ಧಿಗೆ ಪ್ರಥಮ ಸ್ಥಾನವನ್ನು ನೀಡಬೇಕಾದಂತಹದ್ದು ಸರ್ಕಾರದ ಆದ್ಯಕರ್ತವ್ಯವಾಗಿದೆ. ಈ ಇಲಾಖೆಗಳ ಮೇಲೆ ನನ್ನ ಸಂಪೂರ್ಣವಾದಂತ ಅನಿಸಿಕೆಗಳನ್ನು ಹೇಳುವುದಕ್ಕಿಂತ ಪೂರ್ವದಲ್ಲಿ ಕೆಲವು ವಿಷಯಗಳ ಮೇಲೆ ನಾನು ನನ್ನ ಅನಿಸಿಕೆಗಳನ್ನು ವ್ಯಕ್ತಪಡಿಸಬೇಕೆಂದು ಇಚ್ಛೆಪಡುತ್ತೇನೆ. ಮೊದಲನೆಯದಾಗಿ, ರೈತನಿಗೆ ಬೀಜ ನಂತರ ಪೋಸ್ಟ ಹಾರ್ವೆಸ್ಟ್ ಆಪರೇಷನ್, ಅಂದರೆ ಕೊಯಲಿನ ನಂತರದಲ್ಲಿ ಮಾಡಬೇಕಾದಂಥ ಕೆಲಸದ ಬಗ್ಗೆ ಮತ್ತು ರೈತನು ಉಪಯೋಗಿಸತಕ್ಕಂಥ ಪದಾರ್ಥಗಳ ಮೇಲಿನ ಅಗ್ರಿಕಲ್ಚರ್ ಇನ್‌ಪುಟ್ಸ್ ಮೇಲೆ ಕ್ವಾಲಿಟಿ ಕಂಟ್ರೋಲ್ ಮೇಲಿನ ವಿಷಯದಲ್ಲಿ ನಾನು ನನ್ನ ಅನಿಸಿಕೆಗಳನ್ನು ವ್ಯಕ್ತಪಡಿಸಲು ಇಚ್ಛೆಪಡುತ್ತೇನೆ.

ಇಂದು ರೈತನ ಪರಿಸ್ಥಿತಿ ಏನಾಗಿದೆ ಎಂದರೆ, ರೈತ ತಾನು ಬೆಳೆದ ಬೆಳೆಗೆ ಸೂಕ್ತ ಬೆಲೆ ಇಲ್ಲದೆ, ಬೀಜವನ್ನು ಕೊಳ್ಳುವುದರಿಂದ ಹಿಡಿದು, ಬೆಳೆಯನ್ನು ಮಾರಾಟ ಮಾಡುವವರೆಗೆ ಶೋಷಣೆಯ ಸುಳಿಯಲ್ಲಿ ಸಿಲುಕಿಕೊಂಡು ನರಳುವಂತಾಗಿದೆ. ರೈತ ಹಗಲು ರಾತ್ರಿ ಎನ್ನದೆ ದುಡಿದು ದಾರಿದ್ರ್ಯನಾಗುತ್ತಿದ್ದಾನೆಯೇ ಹೊರತು ಪ್ರಗತಿಯನ್ನು ಹೊಂದುತ್ತಿಲ್ಲ, ಮುಖ್ಯವಾದ ವಿಷಯವೇನೆಂದರೆ, ರೈತನ ಶೋಷಣೆಯನ್ನು ತಪ್ಪಿಸಲಿಕ್ಕೆ ಸರ್ಕಾರದ ಒಂದು ಖಚಿತವಾದಂಥ ನೀತಿ ನಿಯಮಗಳನ್ನು ರೂಪಿಸುವಂಥ ಅವಶ್ಯಕವಿದೆ ಇಂದು ರೈತನಿಗೆ ಅತೀ ಮುಖ್ಯವಾಗಿ ಸಕಾಲಕ್ಕೆ ಬೀಜ ವಿತರಣೆ ಬಹಳ ಪ್ರಮುಖವಾದದ್ದು. ಅದರಲ್ಲೂ ಉತ್ತಮಗುಣಮಟ್ಟದ ಬೀಜಗಳ ವಿತರಣೆಯಾಗಬೇಕಾಗಿದೆ. ಅನೇಕ ಸಾರಿ ರಾಜ್ಯ ಬೀಜ ನಿಗಮಗಳಾಗಲಿ ರಾಷ್ಟ್ರೀಯ ಬೀಜ ನಿಗಮಗಳಾಗಲಿ, ಖಾಸಗಿ ಕಂಪನಿಗಳು ಪೂರೈಸತಕ್ಕಂತಹ ಬೀಜದ ಗುಣಮಟ್ಟದ ಬಗ್ಗೆ ಹೇಳುವುದಾದರೆ, ರೈತರಿಗೆ ಕಳಪೆ ಗುಣಮಟ್ಟದ ಬೀಜಗಳನ್ನು ಕೊಟ್ಟಂತಹ ಹಲವಾರು ಸಂದರ್ಭಗಳಿದಂದಾಗಿ ರೈತ ತಾನು ವರ್ಷಾನುಗಟ್ಟಲೆ ಪಟ್ಟಂಥ ಶ್ರಮಕ್ಕೆ ಬೆಲೆ ಇಲ್ಲದಂಥ ಪರಿಸ್ಥಿತಿ ನಿರ್ಮಾಣ ಮಾಡಿದಂಥ ಹಲವಾರು ಉದಾಹರಣೆಗಳು ಇವತ್ತು ನಮ್ಮ ಕಣ್ಣಮುಂದಿದೆ. ಇವತ್ತು ಈ ಸಂದರ್ಭದಲ್ಲಿ, ಈ ದಿಕ್ಕಿನಲ್ಲಿ ನನ್ನ ಕೆಲವು ವಿಚಾರಗಳೇನೆಂದರೆ, ಮಾನ್ಯ ಕೃಷಿ ಸಚಿವರು, ಸರ್ಕಾರ, Truthful labelled seeds ಎಂದು ಏನು ವಿತರಣೆ ಮಾಡುತ್ತಿದ್ದಾರೆ, ಈ Truthful labelled seeds ಗಳನ್ನು ಬಂದ್ ಮಾಡಬೇಕು. ವಿಶೇಷವಾಗಿ ಸರ್ಟಿಫೈಡ್ ಬೀಜಗಳಿಗೆ ಮಾತ್ರವೇ ಆದ್ಯತೆಯನ್ನು ಕೊಡಬೇಕು. ಸರ್ಟಿಫೈಡ್ ಬೀಜಗಳನ್ನು ಮಾರಾಟ ಮಾಡುವಂಥ ವ್ಯವಸ್ಥೆ ಮಾಡಬೇಕು. ಬೀಜ ನಿಗಮಗಳಾಗಲಿ, ಖಾಸಗಿ ಸಂಸ್ಥೆಗಳಾಗಲಿ ಮತ್ತು ರಾಷ್ಟ್ರೀಯ ಬೀಜ ನಿಗಮಗಳಾಗಲಿ, ಸರ್ಕಾರದ್ದೇ ಸಂಸ್ಥೆಯಾಗಿರತಕ್ಕಂತಹ

ಕರ್ನಾಟಕ ರಾಜ್ಯ ಪ್ರಮಾಣ ಸಂಸ್ಥೆ ಪ್ರಮಾಣೀಕರಿಸಿದ ಬೀಜವನ್ನೇ ರೈತರಿಗೆ ಕೊಡತಕ್ಕಂತಹ ವ್ಯವಸ್ಥೆಯನ್ನು ಮಾಡಬೇಕೆನ್ನುವ ಮಾತನ್ನು ಈ ಸಂದರ್ಭಕದಲ್ಲಿ ಹೇಳುತ್ತೇನೆ.

ಈ ನಿಟ್ಟಿನಲ್ಲಿ ಎಲ್ಲಾದರೂ ಈ ಬೀಜ ನಿಗಮಗಳಾಗಲಿ, ಖಾಸಗಿ ಕಂಪನಿಗಳಾಗಲಿ, ಅವು ಕಡತಕ್ಕಂತಹ ಬೀಜಗಳಲ್ಲಿ ಏನಾದರೂ ವಿಫಲತೆ ಕಂಡುಬಂದಲ್ಲಿ, ಅದರಿಂದ, ರೈತನಿಗೆ ಉಂಟಾಗುವ ಆ ನಷ್ಟವನ್ನು ಭರಿಸತಕ್ಕಂತಹ ವಿಶೇಷವಾದ ಕಾನೂನನ್ನು ಮಾಡುವ ವ್ಯವಸ್ಥೆಯಾಗಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ದಿಕ್ಕಿನಲ್ಲಿ ನಮ್ಮ ಕೃಷಿ ವಿಶ್ವವಿದ್ಯಾಲಯಗಳು ಯಾವ ಪಾತ್ರವನ್ನು ವಹಿಸಬೇಕೆನ್ನುವುದರ ಬಗ್ಗೆ ನಾನು ಹೇಳುವುದಾಗರೆ, ಇವತ್ತು ಈ ಮೂಲ ಬೀಜಗಳನ್ನು ವಿತರಣೆ ಮಾಡುವ ಸಂಬಂಧದಲ್ಲಿ, ರಾಜ್ಯ ಬೀಜ ನಿಗಮಕ್ಕಾಗಲಿ - ಅಥವಾ ಬೀಜ ಉತ್ಪಾದನೆ ಮಾಡತಕ್ಕಂಥ ಹಲವಾರು ಸಂಸ್ಥೆಗಳಿಗಾಗಲಿ ಈ ಮೂಲ ಬೀಜಗಳನ್ನು ಅಂದರೆ ಪೇರೆಂಟ್ಸ್ ಮತ್ತು ನ್ಯೂಕ್ಲಿಯರ್ ಸೀಡ್ಸ್‌ಗಳನ್ನು ಒದಗಿಸುವುದರ ವಿಚಾರದಲ್ಲಿ ಈ ಕೃಷಿ ವಿಶ್ವವಿದ್ಯಾಲಯಗಳ ಪಾತ್ರ ಬಹಳ ದೊಡ್ಡದಿದೆ. ಅವುಗಳನ್ನು ಇವತ್ತಿನ ದಿವಸ ತೀರ್ಮಾನಿಸೇಕಾಗಿದೆ ಅತಿ ಮುಖ್ಯವಾದಂಥ ಹೈಬ್ರೀಡ್ ಬೀಜವನ್ನಾಗಲಿ, ಮೂಲ ಬೀಜವನ್ನಾಗಲಿ ತಯಾರು ಮಾಡುವುದಕ್ಕೆ ಅವುಗಳಿಗೆ ವಿಶೇಷವಾದ ಕಾರ್ಯಕ್ರಮವನ್ನು ಹಾಕಿ ಕೊಡಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಇತ್ತೀಚಿನ ದಿನಗಳಲ್ಲಿ ಅವಶ್ಯಕವಾದಂಥ ಹಳೆಯ ತಳಿಗಳನ್ನು ಮತ್ತು ಸುಧಾರಿತ ಬೀಜಗಳನ್ನು ತಯಾರು ಮಾಡುವಲ್ಲಿ ಮೂಲ ಬೀಜಗಳನ್ನು ಕಾಯ್ದಿಟ್ಟುಕೊಳ್ಳತಕ್ಕಂತಹದ್ದು. ನಾವೇನು ಇಂಪ್ರೂವ್ಡ್ ಸೆಲೆಕ್ಷನ್ಸ್‌ಗಳನ್ನು ಮಾಡುವಾಗ ಹಳೆಯ ಕಾಲದ ಬೀಜಗಳ ಗುಣಧರ್ಮಗಳನ್ನು ಹಾಗೂ ಅವುಗಳ ಇತಿಹಾಸವನ್ನು ಕಾಪಾಡುವುದಕ್ಕೆ ರಾಜ್ಯದಲ್ಲಿ ಅಂತಹ ಒಂದು ಉತ್ತಮವಾದಂಥ ಜೀನ್ ಬ್ಯಾಂಕಿನ ಅವಶ್ಯಕತೆ ಇದೆ. ಎರಡು ವಿಶ್ವವಿದ್ಯಾಲಯಗಳಲ್ಲಿ ಅಂತಹ ಜೀನ್‌ಬ್ಯಾಂಕ್ ಸ್ಥಾಪನೆ ಮಾಡುವುದರ ಬಗ್ಗೆ ಹೆಚ್ಚು ಒತ್ತು ಕೊಡುವುದು ಅವಶ್ಯಕವಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಇದೆಲ್ಲಕ್ಕಿಂತ ವಿಭಿನ್ನವಾದ ಇನ್ನೊಂದು ಸಮಸ್ಯೆ ಎಂದರೇ, ರೈತ ಬೆಳೆದ ಕೃಷಿ ಉತ್ಪನ್ನಗಳಿಗೆ ಉತ್ತಮವಾದ ಬೆಲೆ ಸಿಗುವುದಕ್ಕೆ ಅತ್ಯಂತ ಕನಿಷ್ಟವಾದಂತಹ ಒಂದು ಸೌಕರ್ಯವೆಂದರೆ, ಅವನು ಬೆಳೆದಂಥ ಮಾಲನ್ನು, ಕೆಡದಂತೆ, ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಇದ್ದಾಗ ಮಾರಾಟ ಮಾಡಲು ಅವಕಾಶ ಮಾಡಿಕೊಡಲು ಗ್ರಾಮೀಣ ಪ್ರದೇಶದಲ್ಲಿ ಗೋದಾಮುಗಳನ್ನು ಕಟ್ಟಿಸುವಂಥ ಅವಶ್ಯಕತೆ ಇದೆ. ಉದಾಹರಣೆಗೆ ಒಂದು ಗ್ರಾಮದಲ್ಲಿ ಸುಮಾರು ಬೆಳೆಯನ್ನು ಬೆಳೆಯುವಂಥ ಪ್ರದೇಶವನ್ನು ಗಣನೆಗೆ ತೆಗೆದುಕೊಂಡು ಅಲ್ಲಿ ಉತ್ಪಾದನೆಯಾಗುವಂಥ ಮಾಲುಗಳನ್ನು ಸಂಗ್ರಹ ಮಾಡುವುದಕ್ಕೆ ಉತ್ತಮವಾದ ಗೋದಾಮುಗಳನ್ನು ಕಟ್ಟಿಸುವಂತಹ ವ್ಯವಸ್ಥೆಯಾಗಬೇಕಾಗಿದೆ. ಬಹುಶಃ ಇಷ್ಟು ವರ್ಷಗಳ ನಂತರ, ನಾನು ತಿಳಿದಂತೆ, ರೈತ ಬೆಳೆದ ಎಲ್ಲಾ ಮಾಲುಗಳನ್ನು ಸಂಗ್ರಹ ಮಾಡುವ ವ್ಯವಸ್ಥೆ ಗ್ರಾಮಾಂತರ ಪ್ರದೇಶಗಳಲ್ಲಿ ಇರಲಾರದೆನ್ನುವ ಸಂಗತಿ ಬಹಳ ನೋವಿನ ಸಂಗತಿಯಾಗಿದೆ. ಬಹುಶಃ ತಾವು ಗ್ರಾಮಾಂತರ ಪ್ರದೇಶಗಳಲ್ಲಿ ಗೋದಾಮುಗಳನ್ನು ಕಟ್ಟಿಸುವುದರಿಂದ ಹೊಸ ಪರಿಣಾಮವೇನು ಎನ್ನುವುದರ ಬಗ್ಗೆ ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇವತ್ತು ರೈತ ತನ್ನ ಮನೆಯಲ್ಲಿ ಆ ಮಾಲುಗಳನ್ನು ಇಟ್ಟುಕೊಳ್ಳುವುದಕ್ಕೆ ಸ್ಥಳಾವಕಾಶವಿಲ್ಲದೆ, ಎಷ್ಟೊ ಜನ ರೈತರು ಮಾರುಕಟ್ಟೆಗೆ ಮಾಲನ್ನು ಸಾಗಾಣೆಗೆ ಮಾಡತಕ್ಕಂತಹದ್ದನ್ನು ನಾವು ನೋಡುತ್ತೇವೆ. ಇದರ ಮೇಲೆ ಆತನಿಗೆ ಕನಿಷ್ಟದ ಅಡಚಣೆಗಳಿರುವುದಿಲ್ಲ, ತಾನು ಬೆಳೆದಂಥ ಮಾಲಿನ ಮೇಲೆ ಶೇಕಡ 50 ರಷ್ಟು

ಅಡಚಣೆಗಳಿರುತ್ತವೆ. ಆ ಅಡಚಣೆಯ ಸಲುವಾಗಿ ಅವನು ಮಾರುಕಟ್ಟೆಗೆ ಹೋಗಬೇಕಾದಂಥ ಪರಿಸ್ಥಿತಿ ನಿರ್ಮಾಣವಾಗಿದೆ ದಳ್ಳಾಳಿಯ ಹತ್ತಿರ ಅವನು ಹೋಗಬೇಕಾದಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಇವತ್ತಿನ ದಿವಸ ಸರ್ಕಾರ ಆ ಗ್ರಾಮಗಳಲ್ಲಿ, ಅಲ್ಲಿ ಬೆಳೆಯತಕ್ಕಂತಹ ಒಟ್ಟು ಉತ್ಪಾದನೆಗೆ ಅನುಗುಣವಾಗಿ ಅಲ್ಲಿ ಗೋದಾಮುಗಳನ್ನು ಕಟ್ಟಿಸುವಂಥ ವ್ಯವಸ್ಥೆಯನ್ನು ಮಾಡಬೇಕಾಗಿದೆ. ಅಲ್ಲಿ ಸಂಗ್ರಹಣೆ ಮಾಡಿದ ವಸ್ತುಗಳ ಮೇಲೆ ಅಥವಾ ಅವನು ದಾಸ್ತಾನು ಮಾಡಿದಂತಹ ಮಾಲಿನ ಮೇಲೆ ಶೇಕಡ 50ಹಷ್ಟು ಆಗಲಿ ಅಥವಾ ಶೇಕಡ 75ರಷ್ಟಾದರೂ ಮುಂಗಡ ಹಣವನ್ನು, ಕನಿಷ್ಠ ನಮ್ಮ ರಾಷ್ಟ್ರೀಕೃತ ಬ್ಯಾಂಕ್‌ಗಳಾಗಲಿ, ನಮ್ಮ ಸಹಕಾರಿ ಬ್ಯಾಂಕ್‌ಗಳಾಗಲಿ ಕೊಡುವ ವ್ಯವಸ್ಥೆಯನ್ನು ಕಲ್ಪಿಸುವ ಅವಶ್ಯಕತೆ ಇದೆ. ಇದರಿಂದಾಗಿ ರೈತ ಮಾರುಕಟ್ಟೆಯಲ್ಲಿ ಯಾವಾಗ ಉತ್ತಮ ಬೆಲೆ ಇರುತ್ತದೆಯೋ ಆವತ್ತಿನ ದಿವಸ ತನ್ನ ಮಾಲುಗಳನ್ನು ಮಾರಾಟ ಮಾಡುವ ಒಂದು ವ್ಯವಸ್ಥೆ ಬರುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ

ಅದೇ ರೀತಿಯಾಗಿ ರೈತನದೃಷ್ಟಿಯಲ್ಲಿ ಈಗ ಇರುವ ಮತ್ತೊಂದು ಸಮಸ್ಯೆ ಏನೆಂದರೆ, ಗ್ರಾಮೀಣ ಮಟ್ಟದಲ್ಲಿ ಸೂಕ್ತಕಾಲದಲ್ಲಿ, ಸರಿಯಾದ ಸಮಯಕ್ಕೆ ಅವನಿಗೆ ಬೀಜ, ಗೊಬ್ಬರ, ಕೀಟನಾಶಕಗಳ ಸರಬರಾಜು ಮಾಡುವಲ್ಲಿ, ಬಹುಶಃ ನಾನು ಇವತ್ತು ಹೇಳುತ್ತೇನೆ, ಯಾವುದೋ ಒಂದು ಬಾಟಲ್‌ನಲ್ಲಿ ಯಾವುದೋ ಒಂದು ಔಷಧವನ್ನು ತುಂಬಿ, ಯಾವುದೋ ಒಂದು ಹೆಸರನ್ನು ಇಟ್ಟುಕೊಂಡು ಮಾರಾಟ ಮಾಡುವಂತಹ ಹಲವಾರು ಸಂಸ್ಥೆಗಳು ಈ ರಾಜ್ಯದಲ್ಲಿವೆ. ಗೊಬ್ಬರದ ಪರಿಸ್ಥಿತಿಯೂ ಕೂಡ ಅದೇ ಆಗಿದೆ. ಇವತ್ತು ಬರುವಂತಹ ಗೊಬ್ಬರದಲ್ಲಿ ಕಲಬೆರಕೆಯಾಗುತಕ್ಕಂತಹ ಹಲವಾರು ಉದಾಹಣೆಗಳನ್ನು ನಾವು ನೋಡಿದ್ದೇವೆ. ಕೃಷಿ ಇಲಾಖೆ, ತನ್ನ ಈ ಕೃಷಿ ನೀತಿಯಲ್ಲಿ ಸ್ಯಾಂಪಲನ್ನು ಡ್ರಾ ಮಾಡಿ, ಅವನ್ನು ಟೆಸ್ಟ ಮಾಡುವಂತಹ ದೂರದ ಲ್ಯಾಬೋರೇಟರಿಗಳಿಗೆ ಕಳುಹಿಸಿ, ಫಲಿತಾಂಶವನ್ನು ತರಿಸುವ ಹೊತ್ತಿಗೆ ರೈತ ನೆಲಸಮವಾಗಿರುತ್ತಾನೆ ಎನ್ನುವ ಪರಿಸ್ಥಿತಿ ಇದೆ. ಅದಕ್ಕಾಗಿ ನಾನು ನನ್ನ ಸಲಹೆ ಸೂಚನೆಗಳನ್ನು ಕೊಡುವುದೇನೆಂದರೆ, ಕನಿಷ್ಠ 4-6 ತಾಲ್ಲೂಕು ಮಟ್ಟಿಗಾದರೂ ಕ್ವಾಲಿಟಿ ಕಂಟ್ರೋಲ್ ಲ್ಯಾಬೋರೇಟರಿಗಳನ್ನು ತೆರೆದರೆ ನಾವು ಉಪಯೋಗಿಸುವಂಥ ಗೊಬ್ಬರವನ್ನು, ಸ್ವತಃ ರೈತ ಉಪಯೋಗಿಸುವಂತಹ ಗೊಬ್ಬರ, ಫೆಸ್ಟಿಸೈಡನ್ನು ಕ್ವಾಲಿಟಿ ಕಂಟ್ರೋಲ್ ಲ್ಯಾಬೋರೇಟರಿಗೆ ತೆಗೆದುಕೊಂಡು ಹೋಗಿ ರೈತ ಸ್ವತಃ ತನ್ನ ಎದುರಿಗೆ ಅವುಗಳನ್ನು ಪರೀಕ್ಷೆ ಮಾಡಿಸಿಕೊಂಡು ಉಪಯೋಗ ಮಾಡುವಂತಹ ವ್ಯವಸ್ಥೆ ಬಂದರೆ ಬಹಳ ಸೂಕ್ತವಾಗುತ್ತದೆ. ಅವಶ್ಯ ಬಿದ್ದಲ್ಲಿ ಸರ್ಕಾರ ಅದಕ್ಕೆ ಚಾರ್ಜ್ ಮಾಡಲಿ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ.

ಸುಮಾರು ಹತ್ತು ತಿಂಗಳ ಹಿಂದೆ ಬಯಲು ಸೀಮೆ ಅಭಿವೃದ್ಧಿ ಮಂಡಳಿಯನ್ನು ರಚಿಸಿದ್ದಾರೆ. ಅದರ ಬಗ್ಗೆ ಇದ್ದ ಸರ್ಕಾರಿ ಆದೇಶವನ್ನು ನಾನು ಈಗಾಗಲೇ ತೆಗೆದುಕೊಂಡಿದ್ದೇನೆ. ಸುಮಾರು 57 ತಾಲ್ಲೂಕುಗಳೊಳಗೆ ಎಲ್ಲಿ ರೈತ ಯಾವುದೇ ಆಶ್ರಯವಿಲ್ಲದೆ ಮಳೆಯನ್ನೇ ಅವಲಂಭಿಸಿ ಬಯಲು ಸೀಮೆಯಲ್ಲಿ ಬೇಸಾಯ ಮಾಡುತ್ತಿದ್ದಾನೆ ಅವನ ಅಭಿವೃದ್ಧಿಗೋಸ್ಕರ ಬಯಲು ಸೀಮೆ ಮಂಡಳಿಯನ್ನು ರಚಿಸಿದ್ದಾರೆ. ಸುಮಾರು ಹತ್ತು ತಿಂಗಳಾದರೂ ಕೂಡ ಇದುವರೆಗೆ ಯಾವುದೇ ರೀತಿಯ ಕೆಲಸ ಪ್ರಾರಂಭವಾಗಿಲ್ಲ ಎನ್ನತಕ್ಕಂಥ ವಿಷಯವನ್ನು ಕೃಷಿ ಇಲಾಖೆಗೆ ಹಾಗೂ ಸರ್ಕಾರಕ್ಕೆ ತಿಳಿಸಲಪೇಕ್ಷೆಪಡುತ್ತೇನೆ. ಆದಕಾರಣ ಮೈದಾನ ಅಭಿವೃದ್ಧಿ ಮಂಡಳಿಯ ಕಾರ್ಯಕ್ರಮವನ್ನು ಶೀಘ್ರವಾಗಿ ತರಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ತೋಟಗಾರಿಕೆ ಇಲಾಖೆಯ ಬಗ್ಗೆ ಹೆಚ್ಚು ಮಾತನಾಡುವುದಿಲ್ಲ, ಕೆಲವು ಸಮಸ್ಯೆಗಳ ಬಗ್ಗೆ ಮಾತ್ರ ಸಂಕ್ಷಿಪ್ತವಾಗಿ ಮಾತನಾಡುತ್ತೇನೆ. ತೋಟಗಾರಿಕೆ ಇಲಾಖೆಗೆ ಸಂಬಂಧಪಟ್ಟಂಥ ಬಹಳ ವಿಶೇಷವಾದ ಒಂದು ವಿಚಾರದ ಬಗ್ಗೆ ನಾನು ಸರ್ಕಾರದ

ಗಮನ ಸೆಳೆಯಬಯಸುತ್ತೇನೆ. At present horticultural crops are grown over an area of 12.9 lakh hectares with annual production of 97.75 lakh metric tonnes, which is valued at Rs.5,000crores.

ಇಂತಹ ಒಂದು ಹೆಚ್ಚು - ತೋಟಗಾರಿಕೆ ಉತ್ಪಾದನೆಗಳನ್ನು ಬೆಳೆಯತಕ್ಕಂಥ ಈ ರಾಜ್ಯದೊಳಗೆ ಯಾವ ರೀತಿ ವ್ಯವಸ್ಥೆಗಳನ್ನು ಇಟ್ಟಿದ್ದಾರೆ ಎಂಬುದನ್ನು ಹೇಳುತ್ತೇನೆ. ಈವತ್ತು ರೈತ ಅತ್ಯಂತ ಕಷ್ಟಕರ ಪರಿಸ್ಥಿತಿಯೊಳಗೆ ಇದ್ದಾಗ ತೋಟಗಾರಿಕೆ ಬೆಳೆಗಳನ್ನು ಬೆಳೆದರೆ ಅವನು ಅದನ್ನು ಸಂಸ್ಕರಣ ಮಾಡಿ ಶೇಖರಣೆ ಮಾಡಲು ಒಂದು ಒಳ್ಳೆಯ ವ್ಯವಸ್ಥೆ ಇಲ್ಲ, ಸರಿಯಾದದಂಥ ಮಾರ್ಕೆಟ್ ವ್ಯವಸ್ಥೆ ಇಲ್ಲ, ಇದ್ದಂಥ ಕೆಲವೇ ಕೆಲವು ಮಾರುಕಟ್ಟೆಗಳಲ್ಲಿ ಅವುಗಳನ್ನು ಕೆಲವು ದಿವಸ ಅವುಗಳನ್ನು ದಾಸ್ತಾನು ಮಾಡತಕ್ಕಂಥದ್ದು, ಅವುಗಳನ್ನು ಕೆಡದಂತೆ ಇಡಲಿಕ್ಕೆ ಯಾವುದೇ ವ್ಯವಸ್ಥೆ ಇಲ್ಲ ಎನ್ನತಕ್ಕಂಥದನ್ನು ಹೇಳುತ್ತೇನೆ. ಈ ಸರ್ಕಾರ ಕೆಲವು ವಿಷಯಗಳ ಬಗ್ಗೆ ಹೊಸ ಮಾರುಕಟ್ಟೆಗಳನ್ನು ಇವೊತ್ತು ಹೊಸ ರಫ್ತು ಆಧಾರಿತದ ಬಗ್ಗೆ ಎಕ್ಸ್‌ಪೋರ್ಟ್ ಕೌನ್ಸಿಲ್ ಎಂದು ಹಾರ್ಟಿಕಲ್ಚರ್ ಕ್ರಾಪ್ಸ್‌ಗಾಗಿ ಮಾಡಿದ್ದಾರೆ. ಅದರ ಬಗ್ಗೆ ಇನ್ನೂ ಹೆಚ್ಚು ಕೆಲಸ ಆಗಬೇಕಾದಂಥದ್ದು ಅವಶ್ಯಕವಾಗಿದೆ.

ಇನ್ನು ವಿಶೇಷವಾಗಿ ರಾಜ್ಯ ಸರ್ಕಾರ ತೋಟಗಾರಿಗೆ ಉತ್ಪಾದನೆಗಳನ್ನು ಹೆಚ್ಚಾಗಿ ರಫ್ತು ಮಾಡಲಿಕ್ಕೆ ಹೊಸ ಮಾರುಕಟ್ಟೆಗಳನ್ನು ಅನ್ವೇಷಣೆ ಮಾಡಲಿಕ್ಕೆ ವಿಶೇಷವಾದಂಥ ಆಸಕ್ತಿಯನ್ನು ವಹಿಸಬೇಕು. ಅದಕ್ಕಾಗಿ ಒಂದು ಸೆಪರೇಟ್ ಮಂಡಳಿಯನ್ನಾಗಲಿ, ಒಂದು ಸಮಿತಿಯನ್ನಾಗಲಿ ರಚಿಸಿದರೆ ಹೆಚ್ಚು ಸೂಕ್ತ ಎನ್ನತಕ್ಕಂಥ ಮಾತನ್ನು ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ತೋಟಗಾರಿಕೆ ಉತ್ಪಾದನೆಗಳನ್ನು ಪ್ರಾಥಮಿಕ ಹಂತದಲ್ಲಿ ತಾಲ್ಲೂಕು ಮಟ್ಟದಿಂದ ಹಿಡಿದು ಜಿಲ್ಲಾ ಮಟ್ಟದವರೆಗೆ ಯಾವ ರೀತಿ ಕೆ.ಎಮ್.ಎಫ್.ನಲ್ಲಿ ಇದೆ ಆ ರೀತಿ ಒಂದು ಒಕ್ಕೂಟದ ರಚನೆ ತಾಲ್ಲೂರು ಮಟ್ಟದಲ್ಲಿ ತೋಟಗಾರಿಕೆ ಬೆಳೆಗಾರು ಸಹಕಾರಿ ಸಂಘಗಳ ಮೂಲಕ, ಜಿಲ್ಲಾ ಮಟ್ಟದಲ್ಲಿ ಒಕ್ಕೂಟಗಳು ಮತ್ತು ರಾಜ್ಯಮಟ್ಟದಲ್ಲಿ ಒಂದು ಮಹಾಮಂಡಳಿಯನ್ನು ರಚಿಸಬೇಕು ಎನ್ನತಕ್ಕಂಥದ್ದು ನನ್ನ ಅನಿಸಿಕೆ. ಇವೊತ್ತು ವಿಶೇಷವಾಗಿ ಹಾರ್ಟಿಕಲ್ಚರ್ ಫೆಡರೇಷನ್ ಮಾಡಲಿಕ್ಕೆ ಸರ್ಕಾರ ಮುಂದೆ ಬರಬೇಕಾದಂಥ ಅವಶ್ಯಕತೆ ಇದೆ ಎಂದು ಕಾಣುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ : ಈಗ ಇಡೀ ರಾಜ್ಯಾದ್ಯಂತ ಹಾಪ್‌ಕಾಮ್ಸ್ ಇದೆ.

ಶ್ರೀ ಶ್ರೀಶೈಲಪ್ಪ ವಿರೂಪಾಕ್ಷಪ್ಪ ಬಿದನೂರು : ಸನ್ಮಾನ್ಯ ಅಧ್ಯಕ್ಷರೆ, Hopcoms is only for Bangalore and Bangalore Rural District. ಎಂಟೈರ್ ಸ್ಟೇಟ್ ನಿಮ್ಮ ಚೌಕಟ್ಟಿನಲ್ಲಿದೆ. ಹಾಪ್‌ಕಾಮ್ಸದ ಒಂದು ಸೆಂಟರ್‌ನ್ನು ಬಾಗಲ್‌ಕೋಟೆಯಲ್ಲಿ ಓಪನ್ ಮಾಡಲಿಕ್ಕೆ ಶ್ರೀ ಅಜಯ ಸರ್‌ನಾಯಕರ್‌ವರು ಸುಮಾರು ಎರಡು ವರ್ಷದಿಂದ ಬಡಿದಾಡುತ್ತಿದ್ದಾರೆ. ಅಲ್ಲಿ ಇವೊತ್ತು ಪರ್ಚೇಸ್ ಮಾಡುವಂಥ ಸೆಂಟರನ್ನು ಮಾಡುವಂಥ ಪರಿಸ್ಥಿತಿ ಅಲ್ಲಿ ಇಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ನಾನು ಪೋಸ್ಟ್ ಹಾರ್ವೆಸ್ಟ್ ಬಗ್ಗೆ ಆ ಮೇಲೆ ಮಾತನಾಡುತ್ತೇನೆ. ಆದರೆ ಇನ್ನೂ ಹಾರ್ಟಿಕಲ್ಚರ್ ಬಗ್ಗೆ ನನ್ನ ಅನಿಸಿಕೆ ಇದೆ. ಅಲ್ಲಿ ವಿಶೇಷವಾದಂಥ ಒಂದು ಲೆಂಡಿಂಗ್ ಏಜನ್ಸಿ ಅಥವಾ ಫೈನಾನ್ಸಿಂಗ್ ಏಜನ್ಸಿ ಬೇಕು. ಹಾರ್ಟಿಕಲಚರಿಸ್ಟರವರ ಯೋಜನೆಗಳಿಗೆ ಹಣಕಾಸನ್ನು ಒದಗಿಸಲ್ಲಿಕ್ಕೆ ಹಾರ್ಟಿಕಲ್ಚರ್ ಬ್ಯಾಂಕಿನ ಅವಶ್ಯಕತೆ ಇದೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳುವಂತಹ ವಿಷಯಕ್ಕೆ ಅವಶ್ಯಕತತೆ ಇಲ್ಲ, ಹಾರ್ಟಿಕಲ್ಚರಿಸ್ಟ್‌ಗೆ ಬ್ಯಾಂಕಿನ ಅವಶ್ಯಕತೆ

ಇಲ್ಲ, ಈಗ ಇದ್ದ ಬ್ಯಾಂಕಿನಲ್ಲೇ ಎಲ್ಲಾ ಅವಶ್ಯಕತೆಗಳನ್ನು ಕೊಡುತ್ತಿದ್ದೇವೆ. ಡಿ.ಸಿ.ಸಿ. ಬ್ಯಾಂಕಿನಲ್ಲಿ ಕೊಡುತ್ತಿದ್ದೇವೆ. ಲ್ಯಾಂಡ್ ಬ್ಯಾಂಕಿನಲ್ಲಿ ಕೂಡ ಎಲ್ಲಾ ಸವಲತ್ತುಗಳನ್ನು ಕೊಡುತ್ತಿದ್ದೇವೆ.

ಶ್ರೀ ಶ್ರೀಶೈಲಪ್ಪ ವಿರೂಪಾಕ್ಷಪ್ಪ ಬಿದನೂರು : ಈಗ ನೀವು ಏನು ಹೇಳಿದಿರಿ ಸಹಕಾರಿ ಸಂಘಗಳ ಮೂಲಕ ಕೊಡುತ್ತೇವೆ, ಸಹಕಾರಿ ಬ್ಯಾಂಕ್‌ಗಳ ಮೂಲಕ ಕೊಡುತ್ತೇವೆ ಎಂದು. ಇದನ್ನೆಲ್ಲಾ ನೀವು ರಾಜ್ಯಮಟ್ಟದಲ್ಲಿ ಕುಳಿತುಕೊಂಡು ಬರೀ ಅಂಕಿ ಅಂಶಗಳ ಮುಖಾಂತರ ನೋಡುತ್ತೀರಿ, ಕೃಷಿ ಕ್ಷೇತ್ರಕ್ಕೆ ಎಷ ಸಾಲ ಕೊಟ್ಟಿದ್ದೇವೆ ಎಂದು ನೋಡುತ್ತೀರಿ, ಮುಂಗಾರಿ ಹಿಂಗಾರಿನೊಳಗೆ ಜೂನ್ 30 ರೊಳಗೆ ಸಾಲ ಕೊಡಬೇಕಾದುದು ನೋಡುತ್ತೀರಿ, ಹಿಂಗಾರಿಗೆ ಅಕ್ಟೋಬರ್ 30 ರೊಳಗೆ ಸಾಲ ಹಂಚುವುದನ್ನು ಅಂಕಿ ಅಂಶಗಳ ಪ್ರಕಾರ ನೋಡುತ್ತೀರಿ ವಿನಹ ತೋಟಗಾರಿಕೆ ಬೇಳೆಗಳ ಮೇಲೆ ಏನು ಕೊಡುತ್ತಾರೆ ಎನ್ನತಕ್ಕಂಥದ್ದನ್ನು ತಾವು ವಿಚಾರ ಮಾಡುತ್ತಿಲ್ಲ. ಕೃಷಿಕರು ಹಾರ್ಟಿಕಲ್ಚರ್ ಕ್ರಾಪ್ಸ್ ಆದ ದ್ರಾಕ್ಷಿಯನ್ನು ಒಂದು ಎಕರೆಯಲ್ಲಿ ಬೆಳೆಯಬೇಕಾದರೆ ಅವನೇ ಪ್ರತಿವರ್ಷ ಸುಮಾರು 400 ರಿಂದ 50 ಸಾವಿರ ರೂಪಾಯಿಯನ್ನು ಬೆಳೆಗೆ ಖರ್ಚು ಮಾಡಬೇಕಾದ ಪರಿಸ್ಥಿತಿ ಇವೊತ್ತು ಇದೆ. ಅವರಿಗೆ ಬೆಳೆ ಸಾಲವನ್ನು ಕೊಡತಕ್ಕಂಥ ಅವಶ್ಯಕತೆ ಇವೊತ್ತು ಹೆಚ್ಚು ಇದೆ. ದಾಳಿಂಬರ ಬೆಳೆಯತಕ್ಕಂಥ ರೈತ ಪ್ರತಿವರ್ಷ ಸುಮಾರು 20 ರಿಂದ 30 ಸಾವಿರ ರೂಪಾಯಿ ಪ್ರತಿ ಎಕರೆಗೆ ಖರ್ಚು ಮಾಡತಕ್ಕಂಥ ಪರಿಸ್ಥಿತಿ ಇದೆ. ದ್ರಾಕ್ಷಿ ವೇಳೆಯಲ್ಲಿ ಮೊದಲನೇ ವರ್ಷ ಎಸ್ಟಾಬ್ಲಿಷ್‌ಮೆಂಟ್‌ಗೆ ಸುಮಾರು ಒಂದು ಲಕ್ಷ ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ದಾಳಿಂಬೆಗೆ ಸುಮಾರು ಮೂರು ವರ್ಷ ನಾವು ಸಹನೆಯಿಂದ ಇರಬೇಕಾದಂಥ ಪರಿಸ್ಥಿತಿ ಇದೆ. ಬೆಳೆಯನ್ನು ಉತ್ಪಾದನೆ ಮಾಡುವ ಕಾಲಕ್ಕೆ ಪ್ರತಿ ವರ್ಷ 20 ರಿಂದ 30ಸಾವಿರ ರೂಪಾಯಿಯ ನಾವು ಬೆಳೆ ಸಾಲವನ್ನು ಕೊಡತಕ್ಕಂಥ ಯೋಜನೆ ನಮ್ಮ ರಾಜ್ಯದಲ್ಲಿ ಇವೊತ್ತಿಲ್ಲ, ಇವೊತ್ತು ತೋಟಗಾರಿಗೆ ಬೆಳೆಗಳಿಗೆ ಬೆಳೆ ಸಾಲ ಕೊಡತಕ್ಕಂಥ ಯೋಜನೆ ಬೇಕಾಗಿದೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಪ್ರತಿ ವರ್ಷ ಬೆಳೆ ಸಾಲ ಕೊಡಬೇಕು ಎಂದು ಅವರೇನು ಹೇಳುತ್ತಿದ್ದಾರೆ, ಈಗ ಹಾರ್ಟಿಕಲ್ಚರ್ ಕ್ರಾಪ್‌ಗೆ ಅವನಿಗೆ ಬೆಳೆ ಬರುವುದಕ್ಕೆ ನಾವು ಅವನಿಗೆ ಲೋನ್ ಕೊಡುತ್ತಿದ್ದೇವೆ. ಉತ್ಪಾದನೆ ಬಂದಮೇಲೆ ಅದು ಕೊಡುವ ಅವಶ್ಯಕತೆ ಇಲ್ಲವೆಂದು ಕೊಡುವುದಿಲ್ಲ ಅಷ್ಟೆ.

ಶ್ರೀ ಶ್ರೀಶೈಲಪ್ಪ ವಿರೂಪಾಕ್ಷಪ್ಪ ಬಿದನೂರ್ : ಹಾರ್ಟಿಕಲ್ಚರ್ ಕ್ರಾಪ್‌ಗೆ ಏನು ಲೋನ್ ಕೊಡುತ್ತಾರೆ ಅದಕ್ಕೆ ಪೊರಾಟೇರಿಯಂ ಪೀರಿಯಡ್ ಇದೆ. ಆದರೆ ನಾನು ಹೇಳತಕ್ಕಂಥದ್ದು ಬೆಳೆ ಸಾಲಗಳ ಬಗ್ಗೆ ಒತ್ತು ಕೊಡಬೇಕು ಎನ್ನತಕ್ಕಂಥದ್ದು. ಅದಕ್ಕೆ ನೀವು ಟಾರ್ಗೆಟ್ಸ್ ಕೊಡಿ. ನೀವು ಬ್ಯಾಂಕ್ಸ್‌ಗಳಿಗೆ ಟಾರ್ಗೆಟ್ಸ್ ಕೊಡಿ. ಇವೊತ್ತು ಹಾರ್ಟಿಕಲ್ಚರ್ ಕ್ರಾಪ್ಸ್‌ಗೆ ಬೆಳೆ ಸಾಲವನ್ನು ಕೊಡುತ್ತಾ ಇಲ್ಲವೆನ್ನತಕ್ಕಂತ ಮಾತನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಆಮೇಲೆ ನಾನು ತೋಟಗಾರಿಕೆ ಬಗ್ಗೆ ಹೇಳತಕ್ಕಂಥದ್ದು ಪೋಸ್ಟ ಹಾರ್ವೆಸ್ಟ್ ಟೆಕ್ನಾಲಜಿ. ನಮ್ಮಲ್ಲಿ ಶೇಕಡಾ ಒಂದರಷ್ಟು ಕೂಡ ಸಾಧನೆ ಇಲ್ಲ. ಉದಾಹರಣೆಗೆ ಎರಡು ಲಕ್ಷ ಟನ್ ತೋಟಗಾರಿಕೆ ಉತ್ಪಾದನೆ ಸಾಮರ್ಥ್ಯವಿರುವ ಹರಿಯಾಣಾ ರಾಜ್ಯದಲ್ಲಿ 139 ಶೈತ್ಯಾಗಾರಗಳು ಇವೆ. ಈ ರಾಜ್ಯದೊಳಗೆ 97.5ಲಕ್ಷ ಮೆಟ್ರಿಕ್ ಟನ್ ಉತ್ಪಾದನೆ ಆಗತಕ್ಕಂಥ ತೋಟಗಾರಿಕೆ ಇರತಕ್ಕಂಥದ್ದು ಕೇವಲ 14 ಶೈತ್ಯಾಗಾರಗಳು, ಖಾಸಗಿಯನ್ನು ಒಟ್ಟುಗೂಡಿ. ತಾವು ವಿಚಾರ ಮಾಡಿ ಇವೊತ್ತು ನಮ್ಮಲ್ಲಿ ಎಷ್ಟು ಶೈತ್ಯಾಗಾರಗಳಿವೆ ಎನ್ನತಕ್ಕಂಥ ಮಾತನ್ನು.

ಅಧ್ಯಕ್ಷರು : ಇಲ್ಲಿ ಹಾರ್ಟಿಕಲ್ಚರ್ ಅಥವಾ ಅಗ್ರಿಕಲ್ಚರ್ ಆಫೀಸರ್ಸ್ ಯಾರಾದರೂ ಇದ್ದಾರೆಯೇ? ಅವರು ಇಲ್ಲದೇಹೋದರೆ ಪ್ರಯೋಜನವಿಲ್ಲ, ಇಲ್ಲೂ ಕೂಡ ಯಾರೂ ಮಂತ್ರಿಗಳೂ ಇಲ್ಲ, ಅವರು ಪರ್ಮಿಷನ್ ತೆಗೆದುಕೊಂಡಿದ್ದಾರೆ. ಏಕೆಂದರೆ ಅವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ, ಬಹಳ ಗಂಭೀರವಾದಂಥ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಅದು ವ್ಯರ್ಥವಾಗುವುದು ನನಗೆ ಇಷ್ಟವಿಲ್ಲ, ಬೇಕಾದರೆ ಮತ್ತೆ ನಾನು ಅವರಿಗೆ ಅವಕಾಶ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಸಚಿವರು ಇಲ್ಲ,

ಅಧ್ಯಕ್ಷರು : ನನ್ನ ಅನುಮತಿ ಪಡೆದು ಕೊಂಡು ಹೋಗಿದ್ದಾರೆ.

ಶ್ರೀ ವಾಟಾಳ್‌ನಾಗರಾಜ್ : ಹಾಗಲ್ಲ, ನಾನು ಹೇಳುವ ವಿಷಯವೇನೆಂದರೆ,

ಶ್ರೀ ರಮೇಶ್ ಸಿ ಜಿಗಜಿಣಗಿ : ನಾವು ಎಲ್ಲಾ ಇಲ್ಲಿದ್ದೇವೆ. ಬರೆದುಕೊಳ್ಳುತ್ತಾ ಇದ್ದೇವೆ. ಎಲ್ಲಾದಕ್ಕೂ ಹೀಗೇ ಮಾಡುತ್ತೀರಲ್ಲಾ,

ಶ್ರೀ ವಾಟಾಳ್ ನಾಗರಾಜ್ : ನೀವು ಏಕದಮ್ ಸಿಟ್ಟಿಗೇಳಬೇಡಿ. ತಾಳ್ಮೆಯಿಂದ ಇರಿ. ಶಾಂತಿಯಿಂದ ಇರಿ. ಇಷ್ಟು ಬೇಗ ನೀವು ತಪ್ಪಿಸಿಕೊಳ್ಳುವುದಕ್ಕೆ ಆಗುವುದಿಲ್ಲ, ಮಾನ್ಯ ಅಧ್ಯಕ್ಷರೇ, ಬರೆದುಕೊಳ್ಳುವುದಕ್ಕೆ ಅವರು ಇದ್ದಾರೆ ಎಂದು ಒಂದು ವಾದ. ಮತ್ತೊಂದು ಕಡೆ ಅಲ್ಲಿ ಅವರು ಅಧಿಕಾರಿಗಳು ಇದ್ದಾರೆ ಎಂದು ಹೇಳುತ್ತಿದ್ದಾರೆ. ಹಾಗಾದರೆ ಇವರೇಕೇ ಹೊರಟು ಹೋಗಿ ಆ ಕಡೆ. ಅವರು ಕೂತಿರೋದು ಬರೆದುಕೊಳ್ಳುತ್ತಾರೆ. ಅದಲ್ಲ ಅರ್ಥ ಅಲ್ಲ, ಹಾಗೆ ಮಾತನಾಡಬಾರದು.

ಅಧ್ಯಕ್ಷರು : ನನಗೆ ಬಹಳ ಆನಂದವಾಗುತ್ತಿದೆ. ಅವರು ಬಹಳ ಶ್ರಮಪಟ್ಟು ಅಭ್ಯಾಸ ಮಾಡಿ ತಯಾರಿ ಮಾಡಿಕೊಂಡು ಬಂದಿದ್ದಾರೆ. ಅವರು ಯಾವತ್ತೋ ಎದ್ದು ನಿಂತಿದ್ದನ್ನು ನೋಡಿಲ್ಲ, ಇವೊತ್ತು ಎದ್ದುನಿಂತಿದ್ದಾರೆ. ಅವರ ಹತ್ತಿರ ಇಂತಹ ಒಂದು ಚೈತನ್ಯ ಇದೆ ಎಂಬುದು ನಮಗೆಲ್ಲರಿಗೂ ಇವೊತ್ತೇ ಗೊತ್ತಾಗಿದೆ. ಅಂತಹವರಿಗೆ ಪ್ರೋತ್ಸಾಹ ಕೊಡುವುದು ನಮ್ಮೆಲ್ಲರ ಕರ್ತವ್ಯವಾಗುತ್ತದೆ. ಒಂದು ಕೆಲಸ ಮಾಡೋಣ ಶ್ರೀಶೈಲಪ್ಪನವರೇ, ನೀವು ದಯಮಾಡಿ ಇಲ್ಲಿಗೆ ನಿಲ್ಲಿಸಿ, ಮತ್ತೆ ನಿಮಗೆ ಮುಂದುವರಿಸುವುದಕ್ಕೆ ಅವಕಾಶ ಕೊಡುತ್ತೇನೆ.

ನಾಳೆ ಪುನಃ ನೀವು ಕಂಟಿನ್ಯೂ ಮಾಡಿ. ಸ್ವಲ್ಪ ಸಮಯ ತೆಗೆದುಕೊಂಡರೂ ಚಿಂತೆ ಇಲ್ಲ, ಇನ್ನೂ ಸ್ವಲ್ಪ ಅಭ್ಯಾಸಮಾಡಿಕೊಂಡು ಬರುವುದಾದರೆ ಬನ್ನಿ. ನಿಜವಾಗಲೂ ನನಗೆ ಬಹಳ ಸಂತೋಷ. ನೀವು ಬಹಳ ಚೆನ್ನಾಗಿ ತಯಾರಾಗಿ ಬಂದಿದ್ದೀರಿ. ನೀವು ನಾಳೆ ಮುಂದುವರೆಸಿ.

ಶ್ರೀ ಶ್ರೀಶೈಲಪ್ಪ ವಿರೂಪಾಕ್ಷಪ್ಪ ಬಿದನೂರ್ : ನನಗೆ ಅವಕಾಶ ಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಸದನವು ಮುಕ್ತಾಯಗೊಂಡು ನಾಳೆ ಬೆಳಿಗ್ಗೆ 10.00 ಗಂಟೆಗೆ ಸೇರುವುದು.

(ಸದನವು ರಾತ್ರಿ 8.10 ನಿಮಿಷಕ್ಕೆ ಮುಕ್ತಾಯಗೊಂಡು ನಾಳೆ ಪುನಃ ಬೆಳಿಗ್ಗೆ 10.00 ಗಂಟೆಗೆ ಸೇರಲು ನಿರ್ಧರಿಸಿತು).

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).

(B) 025205

ಸರ್ಕಾರಿ ಹೊರವಲಯ ಮುದ್ರಣಾಲಯ, ಬೆಂಗಳೂರು – ೫೬೦೦೫೯